# CRYSTALINFOSYSTEMS AND SERVICES

Bar Code

80722152

Bar Code

80722152

Bar Code

80722152

(B) 6003

Karnataka State Archives,
(Departmental Library) (B)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No.....6003
ದಿನಾಂಕ Date...............................

(... ...ry)
(... ...)
... Accession No. 6003
... Date..................

# TABLE OF CONTENTS

TO THE

# MYSORE LEGISLATIVE ASSEMBLY

**VolumeII—(1 to 10)**

*(From 7th April 1972 to 18th April 1972)*

---

CONTENTS

*Friday, 7th April 1972*

| | | PAGES |
|---|---|---|
| 1. | Obituary References *Re*: Demise of Sriyuts K. T. Dasappa and U. S. Nayak ... | 1 |
| 2. | Notice of adjournment Motion *re*: the Events at the N.G.E.F.—(Disallowed) ... | 1—23 |
| 3. | Motion for Election of Members to :— | |
| | (i) The Committee on Public Accounts ... | 23—27 |
| | (ii) The Committee on Estimates ... | |
| | (iii) The Committee on Public Undertakings ... | |
| | (iv) The Committee on Privileges ... | |
| | (v) The Committee on Subordinate Legislation ... | |
| | (vi) The Committee on Government Assurances ... | |
| | (vii) The Committee on Private Members' Bills and Resolutions ... | |
| | (viii) The Committee on Welfare of Scheduled Castes and Scheduled Tribes ... | |
| | (ix) House Committee ... | |
| | (x) The Senate of the Mysore University—(Adopted) ... | |
| 4. | Official Resolution *re*: Ratification of the Amendments to the Constitution of India by the Constitution (25th Amendment) Bill, 1971—(Adopted) ... | 27—50 |

PAGES

*Saturday, 8th April 1972*

1. Calling attention to a matter of urgent Public Importance *re* : Supply of Water from Tungabhadra Dam to Andhra Pradeh ... 51—54

2. Non-Official Resolutions :—

(i) *re* : Completion of the Cauvery Water Supply Scheme to bring water to Bangalore City—(Withdrawn) ... 54—77

(ii) *re* : Arresting the vagaries prevailing in the Silk Industry—(Withdrawn) ... 77—92

(iii) *re* : the steep fall in the prices of cotton resulting in hardship to the Cotton growers—(Debate not concluded) ... 92—93

*Monday, 10th April 1972*

1. Upholding the Election of Sri Veerendra Patil as Member of the Rajya Sabha ... 95

2. Calling Attention to a matter of urgent Public Importance *re* : assault on some persons by the Timber Smuggling Prevention Squad in Hosanagar ... 95—101

3. Statement by the Chief Minister *re* : Fire Accident in the Cotton Market Yard, Raichur ... 101—103

4. Extension of time for Election of Members to the Committees etc. ... 103

5. Motion of Thanks to the Governor's Address—(Debate not concluded) ... 103—150

6. Business of the House ... 150

*Tuesday, 11th April 1972*

1. Starred Questions and Answers ... 151—162

2. Calling Attention to a matter of urgent Public Importance *re* : Closure of Bhadigunda Mines ... 163

3. Motion of Thanks to the Governor's Address—(Debate not concluded) ... 163—195

PAGES

*Wednesday, 12th April 1972*

1. (i) Starred Questions and Answers ... 197—203
(ii) Short Notice Question and Answer ... 203—204

2. Calling Attention to a matter of urgent Public Importance *re*: Disturbances at Belgaum during Moharam Festival ... 205—207

3. Presentation of Petition by Sri T. R. Shamanna ... 207

4. (i) The Mysore Land Reforms (Amendment and Miscellaneous Provisions) Bill, 1972 (Introduced)... 208
(ii) The Mysore Land Revenue (Amendment) Bill, 1972 (Introduced) ... 208

5. (i) Notice of Privilege Motion *re*: Certain words used by Sri Vatal Nagaraj reflecting the conduct of Sri H. Siddaveerappa and others ... 208—223
(ii) Authority to the Newspapers not to publish the expunged proceedings ... 223—226

6. Motions of Thanks to the Governor's Address (Debate not concluded) ... 226—257

*Thursday, 13th April 1972*

1. Starred Questions and Answers ... 259—268

2. (i) Notice of a Motion *re*: Rights and Privileges of Members ... 269
(ii) Admission of Call Attention Notices in the List of Business under rules ... 269
(iii) Tours by some Ministers during the Sessions Period ... 269—272

3. Presentation of a Petition *re*: Grievences of Village Officers in Khanapur Taluk ... 272—273

4. Motion of Thanks to the Governor's Address—(Debate not concluded) ... 273—322

PAGES

*Friday, 14th April 1972*


1. Oath or Affirmation by a Member ... 323

2. Starred Questions and Answers ... 323—328

3. Stray Incidents at Gulbarga ... 329

4. Calling Attention to a matter of Urgent Public Importance *re*: Tractor Trolly Accident at Humnabad Taluk ... 330—333

5. (i) Notice of a Question of Privilege etc., *re*: The Incident on 12-4-1972 ... 333—338

   (ii) Speaker's Ruling on the question of Privilege ... 338—339

6. Motion of thanks to the Governor's Address—(Adopted) 339—397

7. Business of the House ... 397


*Saturday, 15th April 1972*


1. Starred Questions and Answers ... 399—414

2. Theft of Timber at Hosanagar and Sagar—Minister's Statement ... 414—416

3. Use of words "House full" in Vidhana Soudha ... 416

4. Notice of adjournment motion *re*: Suspensions made at the Office of the B. C. C.—(Consent Withheld) ... 417—419

5. Calling Attention to a Matter of Urgent Public Importance *re*: Failure of Crops in Afzalpur Taluk ... 420—422

6. Lockout in the Belgaum Amalgamated Electric Company ... 422

7. Papers Laid on the Table:

   Notifications issued under several Acts and Rules in forces in the State of Mysore ... 423—424

8. Mysore Land Reforms (Amendment and Miscellaneous Provisions) Bill, 1972—

   (i) Motion to Circulate for Eleciting opinion
   (ii) Motion to Consider (Debate not Concluded) } 424—448

PAGES

*Monday, 17th April 1972*


1. Starred Questions and Answers ... 449—456

2. Mysore Land Reforms (Amendment and Miscellaneous Provisions) Bill, 1972—

   (i) Motion to Circulate for eliciting Opinion—(Negatived) ... } 456—479

   (ii) Bill Passed as Amended ... }


*Tuesday, 18th April 1972*


1. (i) Starred Questions and Answers ... 481—488

   (ii) Short Notice Question and Answer on the day (but not taken up) ... 488—489

2. Notice of Adjournment Motion *re*: Strike at the Rubi Rubber Works, Bangalore—(Consent withheld) ... 489—490

3. (*a*) Raising the issue of the Mysore-Maharashtra Border—Statement by the Chief Minister ... 490—494

   (*b*) Collection of loan arrears ... 494—495

4. Calling Attention to a matter of urgent Public Importance *re*: Lockout in the Amalgamated Electricity Company, Belgaum ... 495—499

5. Papers laid on the Table :

   Notifications issued under the Mysore Land Revenue Act, 1964 and the Mysore Sales Tax Act, 1957. First List of Unstarred Questions and Answers ... 500

6. First List of Unstarred Questions and Answers ... 500—504

7. Private Members' Bill—

   City of Bangalore Corporation (Amendment) Bill, 1972—Motion to Introduce (Negatived) ... 505

8. Private Members' Resolution—

   (i) *re*: Fall in the prices of cotton resulting in hardship to the cultivators of cotton, etc.—(Withdrawn)... 505—522

   (ii) *re*: Steps to remove or to improve the Slums in Bangalore City—(Debate not concluded) ... 531

PAGES

9. Statement of the Minister for Finance *re*: Statement of the Chief inister about collection of loan arrears, etc. from poor people ... 531—532

10. Statement of the Minister for Agriculture and Forests *re*: Fire Accident in the Cotton Market at Raichur... 533

11. Election of Members to the following Legislature Committees and the Senate of Mysore University—(Results Announced):

(i) Committee on Public Accounts ...
(ii) Committee on Public Undertakings ...
(iii) Committee on Estimates ...
(iv) Committee on Government Assurances ...
(v) Committee on Welfare of Scheduled Castes and Scheduled Tribes ...
(vi) Committee on Privileges ...
(vii) House Committee ...
(viii) Committee on Subordinate Legislation ...
(ix) Senate of the Mysore University ...
(x) Committee on Private Members' Bills and Resolutions ...

533—536

12. House adjourned *sine die* ... 536

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Friday, 7th April 1972.*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## Obituary Reference *re*: Demise of Sriyuths K. T. Dasappa and U. S. Nayak

ಅಧ್ಯಕ್ಷರು.—ಕೆಲವು ಮಾಜಿ ವಿಧಾನಸಭೆಯ ಸದಸ್ಯರು ನಿಧನರಾಗಿದ್ದಾರೆ. ಅವರ ಬಗ್ಗೆ ಸಂತಾಪವನ್ನು ಸೂಚಿಸಬೇಕಾಗಿದೆ. ಆದ್ದರಿಂದ ಮೊದಲು ಈ ಕೆಲಸವನ್ನು ಮಾಡಿ ನಂತರ ಮುಂದಿನ ಕೆಲಸಕ್ಕೆ ಹೋಗೋಣ.

I regret to make a reference to the sad demise of two Ex-Members of this House Sriyuths K. T. Dasappa on 30th March 1972 and U. S. Nayak on 2nd April 1972. I request the House to stand in silence for a minute as a token of our respect to the memory of the deceased.

(*The House stood in silence for a minute*)

I shall convey the feelings of the House to the families of the bereaved.

## Notice of adjournment Motion *re*: The Events at the N.G.E.F.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷಿಣಿಯವರೇ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 50 ರ ಪ್ರಕಾರ ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ನನ್ನು ತಮಗೆ ಕಳುಹಿಸಿದ್ದೇನೆ. ತಾವು ದಯವಿಟ್ಟು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಇದರ ಬಗ್ಗೆ ಚರ್ಚೆಗೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷಿಣಿಯವರೇ ಎನ್.ಜಿ.ಇ.ಎಫ್. ಘಟನೆಯ ಬಗ್ಗೆ ನಾನು ಒಂದು ನಿಲುವಳಿ ಸೂಚನೆಯನ್ನು ಇವೊತ್ತು ಬೆಳಿಗ್ಗೆ ತಮಗೆ ಕಳುಹಿಸಿದ್ದೆ. ಎನ್.ಜಿ.ಇ.ಎಫ್. ಫ್ಯಾಕ್ಟರಿಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಪೋಲೀಸಿನವರು ಅಲ್ಲಿಗೆ ಪ್ರವೇಶ ಮಾಡಿ ಕಾರ್ಮಿಕರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಇದರಿಂದ ಅನೇಕರು ಗಾಯಗೊಂಡಿ

(ಶ್ರೀ ಎಂ. ಎಸ್. ಕೃಷ್ಣನ್)

ದ್ದಾರೆ. ಇದು ಎಣಿಸಲಾರದ ದುರಂತ. ನಾನು ಮ್ಯಾನೇಜ್‌ಮೆಂಟಿನವರೊಡನೆ ಈ ಬಗ್ಗೆ ಮಾತ ನಾಡಿದ್ದೇನೆ. ಮಾನ್ಯ ಕಾರ್ಮಿಕ ಶಾಖೆಯ ಮಂತ್ರಿಗಳೂ ಕೂಡ ಈ ಬಗ್ಗೆ ಮ್ಯಾನೇಜ್‌ಮೆಂಟಿನವ ರೊಡನೆ ಮಾತನಾಡಿದ್ದಾರೆಂದು ನನಗೆ ಗೊತ್ತಾಯಿತು. ಅಲ್ಲಿನ ಕಾರ್ಮಿಕರ ಮೇಲೆ ಪೋಲೀಸಿ ನವರಿಂದ ತೀವ್ರವಾದ ದಬ್ಬಾಳಿಕೆ ನಡೆದಿದೆ. ಈ ರೀತಿ ಏತಕ್ಕೋಸ್ಕರ ಪೋಲೀಸಿನವರು ದಬ್ಬಾಳಿಕೆ ಯನ್ನು ಮಾಡಿದ್ದಾರೆಯೋ ನನಗೆ ಗೊತ್ತಿಲ್ಲ. ಇದು ತೀರ ಖಂಡನೀಯ ಎಂದು ನಮ್ಮ ಅಭಿಪ್ರಾಯ. ಇದು ಒಂದು ಸಣ್ಣ ಪ್ರಶ್ನೆ. ಇದನ್ನು ದೊಡ್ಡದು ಮಾಡಿದ್ದಾರೆ. ಸ್ಟೇಟ್ ಸೆಕ್ಟರಿನ ಕೈಗಾರಿಕೆಯಲ್ಲಿ ಈ ರೀತಿ ಮಾಡಿರುವುದು ಸರಿಯಾದ್ದಲ್ಲ. ಕಾರ್ಮಿಕರ ಬಗ್ಗೆ ಮ್ಯಾನೇಜ್‌ಮೆಂಟಿನವರು ಯಾವ ರೀತಿ ನಡೆದುಕೊಳ್ಳಬೇಕೆಂದು ಸರ್ಕಾರದ ಒಂದು ನೀತಿ ನಿಯಮ ಇದ್ದರೂ ಸಹ ಈ ರೀತಿಯ ಒಂದು ಘಟನೆ ನಡೆದಿರುವುದು ಸರಿಯಾದ್ದಲ್ಲ. ಸುಮಾರು 84 ಜನ ಕಾರ್ಮಿಕರನ್ನು ಈ ಸಂಬಂಧ ದಲ್ಲಿ ಅರೆಸ್ಟ್ ಮಾಡಿದ್ದಾರೆ. ಮತ್ತು ಅವರ ಮೇಲೆ ಕೇಸು ಹಾಕಿದ್ದಾರೆ. ಈಗ ಅವರುಗಳನ್ನೆಲ್ಲಾ ಬಿಡುಗಡೆ ಮಾಡಬೇಕಾಗಿದೆ. ಈ ಘಟನೆಯಲ್ಲಿ ಪೋಲೀಸ್ ಅಧಿಕಾರಿಗಳ ವರ್ತನೆ ಸರಿಯಾದ್ದಲ್ಲ ಎಂದು ನಮ್ಮ ಅಭಿಪ್ರಾಯ ಇದೆ. ಇದನ್ನು ವಿಚಾರಣೆ ನಡೆಸಬೇಕು. ಅದಕ್ಕೋಸ್ಕರ ನಾನು ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ಈಗ ಈ ಸಭೆಯ ಎಲ್ಲಾ ಕಾರ್ಯ ಕಲಾಪಗಳನ್ನು ನಿಲ್ಲಿಸಿ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶಮಾಡಿಕೊಡ ಬೇಕು. ಎನ್.ಜಿ.ಇ.ಎಫ್. ಸರ್ಕಾರಿ ಕೈಗಾರಿಕೆ. ಇದಕ್ಕೆ ಸಂಬಂಧಪಟ್ಟಂತೆ ಕೈಗಾರಿಕೆ ಮಂತ್ರಿ ಗಳು, ಕಾರ್ಮಿಕ ಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಮಂತ್ರಿಗಳು, ಈ ರೀತಿ ಒಟ್ಟು ಮೂರು ಜನ ಮಂತ್ರಿಗಳು ಇದ್ದಾರೆ.......

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು. ಈ ಬಗ್ಗೆ ಸರ್ಕಾರ ದವರು ಏನು ಹೇಳುತ್ತಾರೆ ಎಂಬುದನ್ನು ಕೇಳಿಕೊಂಡು ಮುಂದೆ ಏನು ಮಾಡಬೇಕು ಎಂಬುದನ್ನು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ನಿಲುವಳಿ ಸೂಚನೆಯನ್ನು ನಾವೇನು ತಮಗೆ ಕಳುಹಿಸಿ ಕೊಟ್ಟಿದ್ದೇವೆ ಅದರ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡಿ. ನಂತರ ಸರ್ಕಾರದವರು ಕೊನೆಯಲ್ಲಿ ಉತ್ತರ ಹೇಳಲಿ. ಈಗ ಆ ಕಾರ್ಖಾನೆಯಲ್ಲಿ ಏನು ದುರಂತ ನಡೆದಿದೆ, ಏನೇನು ಆಗಿದೆ, ಅದಕ್ಕೆಲ್ಲಾ ಕಾರಣರು ಯಾರು ಇವುಗಳನ್ನೆಲ್ಲಾ ನಾವು ಹೇಳಬೇಕಾ ಗಿದೆ. ಆದ್ದರಿಂದ ಅದಕ್ಕೆ ತಾವು ನಮಗೆ ಅವಕಾಶವನ್ನು ಕೊಡಬೇಕು. ಅಲ್ಲಿ ನಡೆದಿರತಕ್ಕ ದುರಂತದ ಬಗ್ಗೆ ಪತ್ರಿಕೆಗಳಲ್ಲೂ ಕೂಡ ಕೆಲವು ವಿಚಾರ ಬಂದಿದೆ. ಇದನ್ನು ಮಾನ್ಯ ಮುಖ್ಯಮಂತ್ರಿ ಗಳು ಪತ್ರಿಕೆಯಲ್ಲಿ ನೋಡಿದ ಮೇಲೆ ಈ ಬಗ್ಗೆ ಪೋಲೀಸಿನವರಿಂದ ವರದಿಯನ್ನು ಕೂಡ ತರಿಸಿ ಕೊಂಡಿದ್ದಾರೆ ಎಂದು ಕಾಣುತ್ತದೆ. ಆ ಕಾರ್ಖಾನೆಯಲ್ಲಿ ಮರಣ ಹೊಂದಿದಂತಹ ಕಾರ್ಮಿಕನ ಬಗ್ಗೆ ಮಾನ್ಯ ಮಂತ್ರಿಗಳು ಕಣ್ಣೀರು ಸುರಿಸಿದ್ದಾರೆ ಎಂದು ಪತ್ರಿಕೆಯಲ್ಲಿ ಕೂಡ ಬಂದಿದೆ. ಈಗ ಆ ಘಟನೆಯ ಸಂಬಂಧದಲ್ಲಿ ದಸ್ತಗಿರಿ ಆಗಿರುವವರ ಪೈಕಿ ಕಾರ್ಮಿಕರು ಮತ್ತು ಮಹಿಳಾ ಕಾರ್ಮಿಕರು ಎಲ್ಲರೂ ಇದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಎಲ್ಲಾ ವಿಷಯವನ್ನು ಈ ಸಭೆಯ ಮುಂದೆ ಇಡುವುದಕ್ಕೆ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಕಳಕಳಿ ಯಿಂದ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ರೂಲ್ ನಂಬರ್ 50 ರ ಪ್ರಕಾರ ಒಂದು ಅಡ್ಜರ್ನ್ ಮೆಂಟ್ ಮೋಷನ್ ಅನ್ನು ತಮಗೆ ಕಳುಹಿಸಿದ್ದೇನೆ. ಇದರಲ್ಲಿ......

ಅಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣ ಮಾಡುವುದಕ್ಕೆ ಶುರು ಮಾಡಿದಿರಿ. ಮೊದಲು ಸರ್ಕಾರದವರು ಏನು ಹೇಳುತ್ತಾರೆ ಎಂಬುದನ್ನು ಕೇಳಿಕೊಂಡು ನಂತರ ಏನು ಮಾಡಬೇಕೆಂಬು ದನ್ನು ನಿರ್ಧಾರ ಮಾಡೋಣ.

Sri T. R. SHAMANNA.—I am moving the adjournment motion according to rules, and it is for the Chair to allow it or disallow it. I have every right to move the motion and therefore I may be permitted to move the motion.

**MADAM SPEAKER.**—Let me hear the Government first.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸಿಪುರ).—ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳುವ ಸಂಬಂಧದಲ್ಲಿ ಸರ್ಕಾರದ ಅಭಿಪ್ರಾಯ ತಿಳಿದುಕೊಂಡು ಈ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳುತ್ತೀರಾ, ಹೇಗೆ ?

ಅಧ್ಯಕ್ಷರು.—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಬಗ್ಗೆ ಏನು ಹೇಳುತಾರೆ ಎಂಬುದನ್ನು ಈಗ ತಿಳಿಯೋಣ.

† ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ವಾಣಿಜ್ಯ ಶಾಖೆಗಳ ಮಂತ್ರಿಗಳು).—ನಿನ್ನೆ ಮತ್ತು ಮೊನ್ನೆ ಎನ್.ಜಿ.ಇ.ಎಫ್. ಕಾರ್ಖಾನೆಯಲ್ಲಿ ನಡೆದ ದುರದೃಷ್ಟಕರವಾದ ಘಟನೆಗಳ ಬಗ್ಗೆ ಈ ಸಭೆ ಬಹು ತೀವ್ರವಾಗಿ ಪರಿಶೀಲನೆ ಮಾಡಬೇಕಾಗಿದೆ. ಈ ಬಗ್ಗೆ ನಿಲುವಳಿ ಸೂಚನೆಯನ್ನು ಶ್ರೀಮಾನ್ ಟಿ. ಆರ್. ಶಾಮಣ್ಣನವರು, ಶ್ರೀ ಎಂ. ಎಸ್. ಕೃಷ್ಣನ್ ಅವರು ಮತ್ತು ಶ್ರೀಮಾನ್ ಬಂಗಾರಪ್ಪನವರು ಈ ಸಭೆಯ ಮುಂದೆ ತಂದು ಈ ಸಭೆಯ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಸಭೆ ಮತ್ತು ತಾವು ಅಪ್ಪಣೆ ಕೊಡುವುದಾದರೆ ಈ ಬಗ್ಗೆ ಒಂದು ಹೇಳಿಕೆಯನ್ನು ಈ ಸಭೆಯ ಮುಂದೆ ಮಂಡಿಸುವುದಕ್ಕೆ ಸರ್ಕಾರ ಸಿದ್ಧವಿದೆ.

**Sri H. D. DEVE GOWDA.**—I want to know whether the Chair is going to concede to our request.

**MADAM SPEAKER.**—Let the Hon. Minister conclude the statement first. Then, I will consider its urgency and decide whether the adjournment motion is admissible or not.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಅಧ್ಯಕ್ಷಿಣಿಯವರನ್ನು ಕೇಳಿಕೊಂಡಿರುವುದು ಇಷ್ಟೆ. ನಾರ್ಮಲ್ ಪ್ರೋಸೀಜರ್ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ಕಳಿಸಿದರೆ, It is a matter of very urgent public importance. Immediately the Speaker should decide whether it should be permitted or not, I do not know whether a statement has to be made by the Minister on the floor of the House and then the Chair has to decide the admissibility on the floor of the House itself.

ಏಕೆಂದರೆ ನಾಳೆ ಒಂದು ತಕರಾರು ಬರುತ್ತದೆ. ನಾವು ಹೇಳುವುದು ನ್ಯಾಯವಾದುದೇ ಅಥವಾ ಅನ್ಯಾಯವಾದುದೇ ಎಂಬ ಯಾವ ವಿಚಾರವನ್ನೂ ನಮ್ಮ ಕಡೆಯಿಂದ ಕೇಳದೆ ಆ ತರಹ ಇತ್ಯರ್ಥ ಮಾಡುವುದು ಸರಿಯಲ್ಲ. ಆದರೆ ತಾವು ಬರೀ ಸರ್ಕಾರದ ಕಡೆಯವರಿಂದ ಉತ್ತರವನ್ನು ಕೇಳಿ ಈ ವಿಚಾರವನ್ನು ಇತ್ಯರ್ಥ ಮಾಡುವುದಾದರೆ ಅದು ರೂಲ್ಸ್ ಆಫ್ ಪ್ರೋಸೀಜರಿಗೆ ವಿರೋಧವಾಗುತ್ತದೆ. ಮೊದಲು ತಾವು ನಿಲುವಳಿ ಸೂಚನೆಗೆ ಅನುಮತಿ ಕೊಡುತ್ತೀರಾ ಅಥವಾ ತಳ್ಳಿ ಹಾಕುತ್ತೀರಾ ಎಂಬುದು ಇತ್ಯರ್ಥವಾಗಬೇಕು.

ಶ್ರೀ ವಾಟಾಳ್ ನಾಗರಾಜ್.—ತಮಗೆ ಹಿಂದಿನ ಸಭೆಯಲ್ಲಿ ಯಾವ ರೀತಿ ಇಂತಹ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಿದ್ದರು ಎಂಬುದು ಗೊತ್ತಿದೆ. ಇಂತಹ ಅಡ್ಜರ್ನ್‌ಮೆಂಟ್ ಮೋಷನಿಗೆ ಅವಕಾಶ ಕೊಡಬೇಕೇ ಅಥವಾ ಬಿಡಬೇಕೇ ಎಂಬುದು ತೀರ್ಮಾನವಾದಮೇಲೆ ಬೇಕಾದರೆ ಸರ್ಕಾರದ ವತಿಯಿಂದ ಒಂದು ಸ್ಟೇಟ್‌ಮೆಂಟ್ ಮಾಡಲಿ. ಅದನ್ನು ಬಿಟ್ಟು ತಾವು ಈ ತರಹ ತಿರುಗಿಸಿ ಹೇಳುವುದು ಸರಿಯಲ್ಲ, ಮತ್ತು ಆದರ ಬಗ್ಗೆ ಒಂದು ರೂಲಿಂಗ್‌ನ್ನು ತಾವು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ನಾನು ಇಲ್ಲಿ ಸ್ಟೇಟ್‌ಮೆಂಟ್ ಮಂಡಿಸಿದ ಮೇಲೆ ಮಾನ್ಯ ಸದಸ್ಯರಿಗೆ ಉದ್ಭವಿಸಬಹುದಾದ ಯಾವುದಾದರೂ ಶಂಕೆಗಳನ್ನು ನಿವಾರಣೆ ಮಾಡುವುದಕ್ಕೆ ನನ್ನ ಶಕ್ತಿ ಮೀರಿ ನಾನು ಪ್ರಯತ್ನ ಮಾಡುತ್ತೇನೆ. ಆದರೆ ನನ್ನ ಹೇಳಿಕೆಯನ್ನೇ ಕೇಳದೆ ಹೋದರೆ ಹೇಗೆ ?

---

† Indicates that the remarks or speeches have not been revised by the member concerned.

† Sri T. R. SHAMANNA.—I raise a point of order, Sir. According to Rule 50, the Speaker has to give consent for moving an adjournment motion and notice of adjournment motion has to be given two hours earlier to the commencement of the session. According to this rule, I have given notice of adjournment motion two hours earlier. Rule 54 says; "The Speaker, if he or she, gives consent under Rule 50 and hold that the matter proposed to be discussed is in order, shall, after the questions and before the list of business is entered upon, call the member concerned who shall rise in his place and ask for leave to move the adjournment of the Assembly". According to this rule, you are aware, Madam, that there is no procedure whatsover that the Minister has to make a statement before hand and I have to explain my contention regarding the motion and then it is left to you whether to admit it or not. If objection to leave being granted is taken, the Speaker shall request those members who are in favour of leave being granted to rise in their places, and if not less than twenty members rise accordingly, the Speaker shall intimate that leave is granted. If less than twenty members rise, the Speaker shall inform the member that he has not the leave of the Assembly. If you rule it out as out of order, then as a matter of grace, you can ask the Minister to make a statement, and there would be no opportunity to discuss the matter. There is no provision for the Minister to make a statement in this regard.

MADAM SPEAKER.—I want to hear the views on the other side also. Let me hear the Government's view and then decide its addmissibility.

ಶ್ರೀ ವಾಟಾಳ್ ನಾಗರಾಜ್.—ಇವತ್ತು ಯಾರು ತಪ್ಪು ಮಾಡುತ್ತಾರೆ. ಅವರಿಗೆ ಸಂಬಂಧಪಟ್ಟ ಪಾನ್ಯ ಮಂತ್ರಿಗಳ ಕೈಯಲ್ಲಿ ಸ್ಟೇಟ್‌ಮೆಂಟ್ ಮೊದಲು ಮಾಡಿಸುತ್ತೇನೆಂದು ತಾವು ಹೇಳುತ್ತಿರುವುದು ಸರಿಯಿಲ್ಲ. ಏಕೆಂದರೆ ಅದು ಸರ್ಕಾರಿ ಕೈಗಾರಿಕೆ. ಕೈಗಾರಿಕೆ ಶಾಖೆ ಮತ್ತು ಗೃಹ ಶಾಖೆಗಳಿಗೆ ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಜವಾಬ್ದಾರರು. ಪೋಲಿಸರು ಅಲ್ಲಿ ಕಾರ್ಮಿಕರ ಮೇಲೆ ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ. ಅಲ್ಲಿ ನಡೆದ ದುರಂತದ ಬಗ್ಗೆ ಚರ್ಚೆ ಮಾಡಲು ಇಲ್ಲಿ ಅವಕಾಶ ಕೊಡಬೇಕೆಂದು ಕೇಳುತ್ತಿದ್ದೇವೆ. ಅದು ಬಿಟ್ಟು ಇದನ್ನು ತೋಳ ಕುರಿಮರಿಯ ಕತೆಯು ಹಾಗೆ ಮಾಡಿದರೆ ಹೇಗೆ! ಇಲ್ಲಿ ತೋಳನಿಗೆ ಅವಕಾಶ ಕೊಡುತ್ತೀರಿ; ಕುರಿಮರಿಗೆ ಸ್ಥಾನವಿಲ್ಲದ ಹಾಗೆ ಮಾಡುತ್ತಿದ್ದೀರಿ.

Sri C. M. ARUMUGHAM (Kolar Gold Fields).—Under Rules 50 of the Rules of Procedure, the adjournment motion has to be placed before this House. The Speaker can act under Rule 54 for its admissibility. According to proviso of this Rule, you can either reject it or allow it. There is no provision to consult the Chief Minister. Now that you have already allowed some of the Members to speak on this motion, I request you Madam Speaker to kindly allow Shri M. S. Krishnan to move his adjournment motion under the rules. Besides, you have not even read out the adjournment motion. The best thing for the Madam Speaker is to allow the adjournment motion and allow the discussion on this subject.

MADAM SPEAKER.—I shall do that after hearing both the sides.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷಿಣಿಯವರೇ, ನಾವು ತಂದಿರತಕ್ಕಂತಹ ಅಡ್‌ಜರ್ನ್‌ಮೆಂಟ್ ಮೋಷನ್ ವಿಚಾರಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ರೂಲ್ಸ್ ಆಫ್ ಪ್ರೊಸೀಜರಿನಲ್ಲಿ ರೂಲ್ 50 ರಿಂದ 58ರ ತನಕ ಅದರ ಬಗ್ಗೆ ಹೇಳಿದ್ದಾರೆ. ರೂಲ್ 54 ರಂತೆ ಮಾನ್ಯ ಶಾಮಣ್ಣನವರು ಕೂಡ ವಿಸ್ತಾರವಾಗಿ ಹೇಳಿದ್ದಾರೆ. ಈ ಅಜರ್ನ್‌ಮೆಂಟ್ ಮೋಷನನ್ನು ಮೂವ್ ಮಾಡಬೇಕಾದರೆ, ಯಾವ ಸದಸ್ಯನಾದರೂ ತಮ್ಮ ಅಪ್ಪಣೆಯಿಲ್ಲದೆ ಮೂವ್ ಮಾಡುವ ಹಾಗಿಲ್ಲ. ಅದೇ ರೀತಿ ಅದರ ಬಗ್ಗೆ ತಾವು ಕೂಡ ಅದನ್ನು ಯಾವ ರೀತಿ ಡಿಸೈಡ್ ಮಾಡಬೇಕೆಂಬುದರ ಬಗ್ಗೆ ಹೇಳಿದ್ದಾರೆ. ತಾವು ಅನುಮತಿ ಕೊಟ್ಟು ಅದನ್ನು ಮೂವ್ ಮಾಡಿದ್ದೇ ಆದರೆ, ಬಾಕಿ ವಿಚಾರಗಳನ್ನು ಬದಿಗೊತ್ತಿ ಈ ಮೋಷನನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಯವರಾದ ಕೃಷ್ಣ ರವರಿಗೆ ರೂಲ್ 50 ರಂತೆ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಅವಕಾಶ ಇಲ್ಲ. ತಾವು ಅದು ಮುಖ್ಯವಾದ ವಿಷಯವೆಂದು ಸರ್ಕಾರದವರಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಟ್ಟರೆ, ಅದು ರೂಲ್ಸ್ ಆಫ್ ಪ್ರೊಸೀಜರಿಗೆ ವಿರುದ್ಧವಾಗುತ್ತದೆ. ಅದರಿಂದ ಮಾನ್ಯ ಸದಸ್ಯರಿಗೆ ತೃಪ್ತಿಯಾಗುತ್ತದೆಂದು ತಾವು ಭಾವಿಸಬಹುದು ಆದರೆ ರೂಲ್ಸ್ ಪ್ರಕಾರ ತಾವು ಹಾಗೆ ಮಾಡುವುದಕ್ಕಾಗುವುದಿಲ್ಲ. ಎರಡನೆಯದು ಏನೆಂದರೆ ಒಂದು ವೇಳೆ ನೀವು ಮಾನ್ಯ ಮಂತ್ರಿಯವರಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅಪ್ಪಣೆ ಕೊಡುವುದಾದರೆ, ಮೊದಲು ಈ ಕಡೆಯಿಂದ ಯಾರ್ಯಾರು ಅದರ ಬಗ್ಗೆ ಮೋಷನ್ ಕಳಿಸಿದ್ದಾರೆ, ಅವರಿಗೆ ಈ ವಿಚಾರದಲ್ಲಿ ಮಾತನಾಡಲು ಅವಕಾಶ ಕೊಡಬೇಕು. ಈ ವಿಚಾರದಲ್ಲಿ ಇನ್ನೂ ಅನೇಕ ಮಾನ್ಯ ಸದಸ್ಯರು ನಿಲುವಳಿ ಸೂಚನೆಗಳನ್ನು ಕಳುಹಿಸಿದ್ದಾರೆ. ನಾನೂ ಕೂಡ ಅದರ ಬಗ್ಗೆ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಈಗ ನಮಗೆ ಮೊದಲು ಆ ವಿಚಾರದಲ್ಲಿ ಚರ್ಚೆ ಮಾಡಲು ಅವಕಾಶಕೊಡದೆ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶಮಾಡಿಕೊಟ್ಟರೆ ನಾಳೆ ಅದು ಪತ್ರಿಕೆಯಲ್ಲಿ ಬರುತ್ತದೆ. ಆಗ ಸರ್ಕಾರದ ನಿಲುವು ಸ್ಪಷ್ಟವಾಗುತ್ತದೆ. ಆಮೇಲೆ ನಾವು ಏನೋ ಒಂದೆರಡು ಉಪಪ್ರಶ್ನೆಗಳನ್ನು ಕೇಳಿ ಸರ್ಕಾರದಿಂದ ಉತ್ತರ ಪಡೆದರೂ ಅದು ಜನತಾ ದೃಷ್ಟಿಯಲ್ಲಿ ಸರ್ಕಾರದ ಹೇಳಿಕೆಯೇ ಸರಿಯೆಂಬುದಾಗಿ ಕಲ್ಪನೆಯಾಗುತ್ತದೆ ಮತ್ತು ಆ ರೀತಿಯಾಗಿ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಅದರ ಅರ್ಥ ಏನು ಬರುತ್ತದೆಂದರೆ, ಈ ಸಭೆಯಲ್ಲಿ ನಿಲುವಳಿ ಸೂಚನೆಯನ್ನು ಯಾರು ಕಳುಹಿಸಿದ್ದಾರೋ ಅವರ ಹೇಳಿಕೆ ಸಂಪೂರ್ಣವಾಗಿ ಈ ಸಭೆಗೆ–ಜನತೆಗೆ ಗೊತ್ತಾಗದೆ ಸರ್ಕಾರದ ಒನ್‌ಸೈಡೆಡ್ ಹೇಳಿಕೆ ಜನರ ಅವಗಾಹನೆಗೆ ಬರುತ್ತದೆ. ಈ ನಿಲುವಳಿ ಸೂಚನೆಯನ್ನು ಈ ಸಭೆಯಲ್ಲಿ ಮಂಡಿಸುವುದಕ್ಕೆ ಒಪ್ಪಿಗೆ ಕೊಡುವುದು ಬಿಡುವುದು ತಮಗೆ ಸೇರಿದ್ದು. ನಾನು ಮೊದಲು ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ನಿಲುವಳಿ ಸೂಚನೆ ಕಳುಹಿಸಿದ್ದೇನೆ. ಹಾಗೆಯೇ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ರವರು ಮತ್ತು ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ನಿಲುವಳಿ ಸೂಚನೆಗಳನ್ನೂ ಸಹ ಕಳುಹಿಸಿದ್ದಾರೆ. ತಾವು ಯಾರಿಗಾದರೂ ಈ ವಿಷಯದಲ್ಲಿ ಚರ್ಚೆಮಾಡಲು ಅವಕಾಶ ಕೊಡಬಹುದು. ಅಲ್ಲಿ ಏನು ನಡೆದಿದೆ ಎನ್ನುವ ಬಗ್ಗೆ ಸಂಪೂರ್ಣ ವರದಿ ಈ ಸಭೆಗೆ ಗೊತ್ತಾಗಬೇಕು. ಅನಂತರ ಮಂತ್ರಿಗಳಿಂದ ಈ ಸಭೆಗೆ ಹೇಳಿಕೆ ಕೊಡಿಸುವ ವಿಷಯ ತಮಗೆ ಸೇರಿದ್ದು. ತಾವು ಅನುಸರಿಸುತ್ತಿರುವ ರೀತಿಗೆ ರೂಲ್ಸ್ ಪ್ರಕಾರ ಅವಕಾಶವಿಲ್ಲವೆಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದ್ದರಿಂದ ನನ್ನ ಕ್ರಿಯಾಲೋಪವನ್ನು ತಾವು ಒಪ್ಪಬೇಕು. ಇಲ್ಲದಿದ್ದರೆ, ಅದು ಒಂದು ಬ್ಯಾಡ್ ಪ್ರಿಸೀಡೆಂಟ್ ಆಗುತ್ತದೆ. ಮೊದಲು ನಮಗೆ ಈ ವಿಚಾರದಲ್ಲಿ ಪರವಾನಿಗೆ ಕೊಟ್ಟು ಆಮೇಲೆ ಆ ಕಡೆಯವರಿಗೆ ಅವಕಾಶಕೊಟ್ಟರೆ ಒಳ್ಳೆಯದು.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಅಧ್ಯಾಯ 8ರಲ್ಲಿ ಪುಟ 50ರಿಂದ 54ರ ವರೆಗೆ ಕೆಲವಾರು ರೂಲ್ಸ್ ಇವೆ. ಅದರ ಒಟ್ಟಿನ ಸಾರಾಂಶ ನೋಡಿದರೆ ಮಾನ್ಯ ಅಧ್ಯಕ್ಷರು ಇಂತಹ ವಿಚಾರಗಳಲ್ಲಿ ಪೂರ್ಣ ಹಕ್ಕನ್ನು ಪಡೆದಿದ್ದಾರೆ. ಇತಂಹ ಮೋಷನ್ನನ್ನು ಆರೋ ಮಾಡಬೇಕೇ ಅಥವಾ ಇಲ್ಲವೇ ಎನ್ನುವುದು ಅಧ್ಯಕ್ಷರಿಗೆ ಸೇರಿದ್ದು. ಅಧ್ಯಕ್ಷರ ಅಪ್ಪಣೆ ಇಲ್ಲದೆ ಈ ಸಭೆಯಲ್ಲಿ ಯಾರೂ ನಿಲುವಳಿ ಸೂಚನೆಯನ್ನು ತರಲು ಸಾಧ್ಯವಿಲ್ಲ. ಹಿಂದೆ ನಮ್ಮ ಈ ಅಸೆಂಬ್ಲಿಯಲ್ಲಿ ಇಂತಹ ಸಂದರ್ಭಗಳಲ್ಲಿ ಅಧ್ಯಕ್ಷರು ಈ ಮನೆಯ ಸದಸ್ಯರ ಅಭಿಪ್ರಾಯಗಳನ್ನು ತಿಳಿದುಕೊಂಡು ಅವರ ಒಪ್ಪಿಗೆಯನ್ನು ಕೊಡುವುದು ಬಿಡುವುದು ಎಂಬುದನ್ನು ನಿರ್ಧರಿಸಿದ ಅನೇಕ ಪ್ರಸಂಗಗಳು ಇವೆ. ಅದರಲ್ಲಿಯೂ ಮುಖ್ಯವಾಗಿ ಈ ಮನೆಯ ಲೀಡರ್ ಅವರಲ್ಲಿಯೂ ಮತ್ತು ವಿರೋಧಪಕ್ಷದ ನಾಯಕರಲ್ಲಿಯೂ ಇಂತಹ ಸನ್ನಿವೇಶಗಳಲ್ಲಿ ಅಧ್ಯಕ್ಷರು ಪ್ರತ್ಯೇಕವಾಗಿ ಮಾತನಾಡಿ ಉಭಯತ್ರರ ಅಭಿಪ್ರಾಯ ತಿಳಿದು ಕೊನೆಗೆ ನಿರ್ಧಾರ ಮಾಡಿದಂತಹ ಸನ್ನಿವೇಶಗಳೂ ಇವೆ. ಇಂತಹ ಸನ್ನಿವೇಶಗಳಲ್ಲಿ ರೂಲಿಂಗ್ ಕೊಡತಕ್ಕ ವಿಚಾರವಾಗಿ ಪೂರ್ಣ ಹಕ್ಕು ತಮಗೆ ಇದೆ. ತಾವು ಅದನ್ನು ಈಗಲೇ

(ಶ್ರೀ ಡಿ. ದೇವರಾಜ್ ಅರಸ್)

ಕೊಡಬಹುದು ಅಥವಾ ಅದರ ಮೇಲೆ ಚೆನ್ನಾಗಿ ಯೋಚನೆಮಾಡಿ ಈ ಸಭೆಯಲ್ಲಿ ಎಲ್ಲರ ಅಭಿಪ್ರಾಯವನ್ನು ಕ್ರೋಢೀಕರಿಸಿಯಾದರೂ ತಮ್ಮ ತೀರ್ಮಾನವನ್ನು ಕೊಡಬಹುದು. ಆದರೆ ತಮ್ಮ ತೀರ್ಮಾನವನ್ನು ಈಗಲೇ ಕೊಡಬೇಕೆಂದು ಛಲ ಮಾಡುವುದಕ್ಕೆ ಸಾಧ್ಯವಿಲ್ಲ. ನಮಗೆ ಹೇಳಿಕೆಯನ್ನು ಕೊಡಬೇಕೆಂಬ ಆತುರವಿಲ್ಲ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ತಾವು ಹೇಳಬಹುದು. ಇದರ ಬಗ್ಗೆ ನೇರವಾಗಿ ರೂಲಿಂಗ್ ಕೊಡಬೇಕೆಂದರೆ ಪೂರ್ಣಾಧಿಕಾರ ತಮಗೆ ಇದೆ. ಇದುವರೆಗೆ ನಡೆದು ಬಂದ ರೀತಿಯಲ್ಲಿ ತಮ್ಮನ್ನು ಆಡಳಿತ ಪಕ್ಷದ ನಾಯಕರು ಮತ್ತು ವಿರೋಧಪಕ್ಷದ ನಾಯಕರು ಸಂದರ್ಶಿಸಿ ಮಾತನಾಡಿದ ಮೇಲೆ ತಾವು ಅದರ ಬಗ್ಗೆ ತಮ್ಮ ಗಮನಕ್ಕೆ ಬಂದಂಥ ವಿಷಯಗಳನ್ನು ಪರಿಶೀಲನೆಮಾಡಿ ಒಂದು ತೀರ್ಮಾನ ತೆಗೆದುಕೊಂಡರೆ ಆಗ ಯಾರದೂ ಅಬ್ಜೆಕ್ಷನ್ ಇಲ್ಲ. ಈ ವಿಚಾರದಲ್ಲಿ ತಾವು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ತೀರ್ಮಾನಮಾಡುವುದು ಅದು ತಮಗೇ ಸೇರಿದ್ದು.

ಅಧ್ಯಕ್ಷರು.—ಈಗಾಗಲೇ ಮಾನ್ಯ ಶ್ರೀ ಕೃಷ್ಣನ್ ಅವರು ಮತ್ತು ಮಾನ್ಯ ಶ್ರೀ ಬಂಗಾರಪ್ಪನವರು ಈ ವಿಚಾರದಲ್ಲಿ ಕೆಲವಾರು ವಿಷಯಗಳನ್ನು ತಿಳಿಸಿದ್ದಾರೆ. ಸರ್ಕಾರದವರು ಆ ವಿಚಾರದಲ್ಲಿ ಏನು ಹೇಳುತ್ತಾರೋ ಅದನ್ನು ತಿಳಿದುಕೊಂಡು ಒಂದು ತೀರ್ಮಾನವನ್ನು ಕೊಡಬಹುದು. ಆದ್ದರಿಂದ ಸರ್ಕಾರದವರು ಏನು ಹೇಳುತ್ತಾರೋ ಅದನ್ನು ತಾವು ಸಮಾಧಾನದಿಂದ ಕೇಳುವುದು ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್.—ಸರ್ಕಾರದವರು ಹೇಳಿದ್ದನ್ನು ಕೇಳಿಕೊಂಡು ಹೋಗುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ಈ ಕಡೆಯವರು ಹೇಳಿದ್ದನ್ನು ಸರ್ಕಾರದವರು ಕೇಳಬೇಕೆಂದು ನೀವು ಸೂಚಿಸಿ.

ಶ್ರೀ ಎಸ್. ಬಂಗಾರಪ್ಪ.—ನಾನು ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಹೇಳಿದ್ದನ್ನು ಸಮರ್ಥಿಸುತ್ತಾ ತಾವು ಹೇಳಿದ ಹಾಗೆ ನಾವು ಸರ್ಕಾರದವರು ಹೇಳಿದ್ದನ್ನು ಕೇಳುವುದಕ್ಕೆ ಇಲ್ಲಿಗೆ ಬಂದಿಲ್ಲ. ಆ ರೀತಿ ತಾವು ಹೇಳಿದ್ದು ನನಗೆ ಸಮಂಜಸವಾಗಿದೆಯೆಂದು ಕಾಣಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಒಂದು ನಿಲುವಳಿ ಸೂಚನೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ ಎಂದು ನಾವು ಈಗ ಒತ್ತಾಯಮಾಡುತ್ತಿದ್ದೇವೆ. ಆದರೆ ಇದುವರೆಗೆ ಚರ್ಚೆಯ ವ್ಯಾಪ್ತಿ ಏನಿದೆ ಎಂಬ ಬಗ್ಗೆ ಯಾರೂ ಮಾತನಾಡಲಿಲ್ಲ. ತಾವು ಸರ್ಕಾರ ಹೇಳುವುದನ್ನು ಕೇಳಿ ಎಂಬುದಾಗಿ ಹೇಳುತ್ತೀರಿ. ನಾವು ಇಲ್ಲಿ ಬಂದಿರುವುದು ಅವರು ಹೇಳಿದ್ದನ್ನು ಕೇಳುವುದಕ್ಕೆ ಮಾತ್ರ ಇಲ್ಲಿಗೆ ಬಂದಿಲ್ಲ. ನಾವು ಈಗಾಗಲೇ ತಮಗೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಆ ನಿಲುವಳಿ ಸೂಚನೆಯ ಬಗ್ಗೆ ಏನೇನು ದುರಂತ ನಡೆದಿದೆ ಎಂಬ ಚಿತ್ರವನ್ನು ತಮ್ಮ ಮೂಲಕ ಸರ್ಕಾರಕ್ಕೆ ನಾವು ನೀಡುತ್ತೇವೆ. ಅದನ್ನು ಬೇಡಿ ಎಂದು ಹೇಳಿದರೆ ಹೇಗೆ ? ಅವರು ಹೇಳಿಕೆ ಕೊಡುವುದನ್ನು ಕೊಟ್ಟೇ ಕೊಡುತ್ತಾರೆ. ಇಲ್ಲಿ ಹೋಂ ಸೆಕ್ರೆಟರಿಗಳು ಬಂದಿದ್ದಾರೆ. ಎಸ್. ಜಿ. ಇ. ಎಫ್. ಅಧಿಕಾರಿಗಳು ಬೇರೆ ಬಂದಿದ್ದಾರೆ. ಅವರು ಏನು ಬರೆದು ಕೊಡುತ್ತಾರೋ ಅದೇ ಉಪ್ಪಿನಕಾಯಿ. ಅಂತಹ ಉಪ್ಪಿನಕಾಯಿಯನ್ನು ಸೇವಿಸುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ. ನಿಮ್ಮ ಹೇಳಿಕೆ ಆದರ ಆಧಾರದ ಮೇಲೆ ಮಾತ್ರ ಇರುತ್ತದೆ. ಆದ್ದರಿಂದ ಅಲ್ಲಿ ಏನು ನಡೆದಿದೆ ಎಂಬುದನ್ನು ಹೇಳುವುದಕ್ಕೆ ತಾವು ಇಲ್ಲಿ ನಮಗೆ ಅವಕಾಶ ಕೊಡದಿದ್ದರೆ ಹೇಗೆ ! ತಾವು ಸುಮ್ಮನೆ ನಮ್ಮ ನಿಲುವಳಿ ಸೂಚನೆಯನ್ನು ಮುಗಮ್ಮಾಗಿ, ಗುಟ್ಟಾಗಿ ನಿಮ್ಮಲ್ಲಿಯೇ ಇಟ್ಟುಕೊಂಡು ಸುಮ್ಮನೆ ನಾವು ಅವರು ಹೇಳಿದ್ದನ್ನು ಕೇಳಬೇಕೆಂದು ಹೇಳಿದರೆ ಅದರಿಂದ ಬಹಳ ದುಃಖವಾಗುತ್ತದೆ. ತಮ್ಮ ಬಾಯಿಂದ ಆ ಮಾತುಕೇಳಿ ನನಗೆ ಬಹಳ ಸಂಕಟವಾಗುತ್ತಿದೆ. ತಾವು ದಯವಿಟ್ಟು ಈ ವಿಚಾರದಲ್ಲಿ ಚರ್ಚೆಮಾಡಲು ಮೊದಲು ನಮಗೆ ಅವಕಾಶಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ.

ಶ್ರೀ ಡಿ. ದೇವರಾಜ್ ಅರಸ್.—ಸದಸ್ಯರ ಮಾತುಗಳನ್ನೇ ಕೇಳಬೇಕೆಂದು ಸ್ಪೀಕರ್ ಅವರನ್ನು ಬೆದರಿಸಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದರೆ ಅದು ಖಂಡಿತ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಸ್ಪೀಕರ್ ಅವರು ನಿಮ್ಮ ಸೂತ್ರದ ಗೊಂಬೆಯಲ್ಲ ನಾವು ಅವರನ್ನು ಸೌಜನ್ಯದಿಂದ ಈ ವಿಷಯದ ಮೇಲೆ ಚರ್ಚೆಮಾಡಲು ಅವಕಾಶಮಾಡಿಕೊಡಿ ಎಂಬುದಾಗಿ ಪ್ರಾರ್ಥನೆಮಾಡುತ್ತೇವೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಮೊದಲೇ ಈ ವಿಚಾರದಲ್ಲಿ ಅಧ್ಯಕ್ಷರಿಗೆ ಪೂರ್ಣ ಅಧಿಕಾರ ಇದೆಯೆಂದು ಹೇಳಿದ್ದೇನೆ. ಆ ವಿಚಾರದಲ್ಲಿ ನನ್ನನ್ನು ಏನಾದರೂ ಕೇಳಬೇಕೆಂದರೆ ನನ್ನ ಅಭ್ಯಂತರವಿಲ್ಲ. ಈ ವಿಚಾರ ಅಧ್ಯಕ್ಷರ ಪೂರ್ಣಾಧಿಕಾರದ ವ್ಯಾಪ್ತಿಯಲ್ಲಿದೆ. ಅಧ್ಯಕ್ಷರು ಇದರ ಬಗ್ಗೆ ಈಗಲೇ ಬೇಕಾದರೂ ತೀರ್ಮಾನ ಮಾಡಬಹುದು. ಇಲ್ಲವೆ ಯಾವ ಕಾಲದಲ್ಲಿ ಇದಕ್ಕೆ ಉತ್ತರ ಕೊಡಬೇಕು ಎನ್ನುವ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಅಧ್ಯಕ್ಷರಿಗೆ ಇದೆ.

ಶ್ರೀ ವಾಟಾಳ್ ನಾಗರಾಜ್.—ಇದರ ಬಗ್ಗೆ ಚರ್ಚೆ ಮುಗಿದ ನಂತರ ಸರ್ಕಾರದವರು ಉತ್ತರ ಕೊಡಲಿ. ಈಗ ಮೊದಲು ಅಧ್ಯಕ್ಷರು ನೋಟಿಸನ್ನು ಅಂಗೀಕರಿಸಿದ್ದಾರೆಯೋ ಇಲ್ಲವೋ ಎನ್ನುವುದೇ ಗೊತ್ತಾಗಲಿಲ್ಲವಲ್ಲ !

1-30 P. M.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಈ ಸಂದರ್ಭದಲ್ಲಿ ಸರ್ಕಾರದವರು ಹೇಳಿದ್ದನ್ನು ಕೇಳಿಕೊಂಡು ಹೋಗುವುದಕ್ಕೆ ಬಂದಿಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ನಿಲುವಳಿ ಸೂಚನೆಯ ಬಗ್ಗೆ ಯಾವರೀತಿ ನಡೆದುಕೊಳ್ಳಬೇಕು ಎನ್ನತಕ್ಕ ವಿಚಾರದಲ್ಲಿ ನಿಯಮಾವಳಿಯ ರೂಲು 54ರಲ್ಲಿ ಈ ರೀತಿ ಇದೆ. Rule 54 (1) "The Speaker; if he gives consent under Rule 50 and holds that the matter proposed to be discussed is in order, shall after the questions and before the list of business is entered upon, call the member concerned who shall rise in his place and ask for leave to move the adjournment of the Assembly" ಇಲ್ಲಿ ಹೀಗೆ ಹೇಳಿರತಕ್ಕ ಪ್ರಕಾರ ಈ ನಿಲುವಳಿ ಸೂಚನೆ ಕ್ರಮಬದ್ಧವಾಗಿದ್ದರೆ. ಇದನ್ನು ಚರ್ಚೆಗೆ ತೆಗೆದುಕೊಳ್ಳಬಹುದೆಂದು ಅಧ್ಯಕ್ಷರು ಆಜ್ಞೆ ಮಾಡಬಹುದು. ಕ್ರಮಬದ್ಧವಾಗಿಲ್ಲದಿದ್ದರೆ ಇದನ್ನು ತಳ್ಳಿಹಾಕುವುದಕ್ಕೂ ಅವರಿಗೆ ಅವಕಾಶವಿದೆ. ಅಧ್ಯಕ್ಷರು ಈ ನಿಲುವಳಿ ಸೂಚನೆಯನ್ನು ಅಂಗೀಕರಿಸಿದ ನಂತರ ಸೂಚನೆಯನ್ನು ಮೂವ್ ಮಾಡಿದನಂತರ ಸರ್ಕಾರದವರು ಆಗ ಏನು ಬೇಕಾದರು ಹೇಳಬಹುದು. ಆದರೆ ಆ ನಿಲುವಳಿ ಸೂಚನೆ ಮೂವ್ ಮಾಡದೆ ಇದ್ದಾಗ ಸರ್ಕಾರ ಒಂದು ಹೇಳಿಕೆ ಕೊಡಬಹುದು ಎನ್ನತಕ್ಕ ವಿಚಾರದಲ್ಲಿ ಏನನ್ನೂ ಹೇಳಿಲ್ಲ.

Sri S. M. KRISHNA.—There are three stages when an Adjournment Motion is placed before the House. The first stage is that a notice must be given two hours before the House assembles. This has been conceded. In the second stage, it is the discretion of the Speaker to allow or not to allow an Adjournment Motion. The Speaker is seized of the Adjournment Motion. Now, the Speaker is considering whether to allow the Adjournment Motion or to disallow it. The Speaker must be satisfied that it is a matter of urgent public importance. Now the Speaker will have to give a ruling whether she is to admit the Adjournment Motion or not.

ಶ್ರೀ ವಾಟಾಳ್ ನಾಗರಾಜ್—ಈಗ ಮಾನ್ಯ ಸಚಿವರು ಏನು ಹೇಳುತ್ತಿದ್ದಾರೋ ಅವನ್ನು ನಾವೂ ಕೂಡ ಮಾನ್ಯ ಅಧ್ಯಕ್ಷರಿಗೇ ಬಿಟ್ಟಿದ್ದೇವೆ.

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿಯತನಕ ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಕೇಳಿದೆ. ಈಗ ನಾನು ಹೇಳುತ್ತಿರುವುದನ್ನು ಮಾನ್ಯ ಸದಸ್ಯರು ದಯವಿಟ್ಟು ಕೇಳಬೇಕು,

ಶ್ರೀ ಎಸ್. ಬಂಗಾರಪ್ಪ.—ಇದನ್ನು ಅಲೋ ಮಾಡಬೇಕೇ ಅಥವಾ ಬೇಡವೇ ಅನ್ನುವ ಸ್ಟೇಜಿನಲ್ಲಿ ಈಗ ಅಧ್ಯಕ್ಷರಿದ್ದಾರೆ.

Sri H. M. CHANNABASAPPA (Minister for Public Works).—The question of admissibility or otherwise of the Adjournment Motion rests with the Chair and it is open to the Chair to ask for further elucidation of facts both from members on this side of the House and

(SRI H. M. CHANNABASAPPA)

that side of the House. After hearing them it is open to the Speaker to give such decision as the Chair thinks fit. Under Rule 306 of the Rules of Procedure and Conduct of Busine.s in the Mysore Legislative Assembly, a statement may be made by a Minister on a matter of public importance with the consent of the Speaker, but no questian shall be asked at the time the statement is made. So, the Government is not prevented or prohibited from making a statement on a matter of public improitance; at any stage of the debate, provided the Speaker gives permission to the Minister to make a statement, it is open to the Government to make a statement in pursuance of Rule 306.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈ ನಿಲುವಳಿ ಸೂಚನೆಯನ್ನು ಅಲೋ ಮಾಡಬೇಕೆಂದರೆ ತಾವು ಅಲೋ ಮಾಡಬಹುದು. ಬೇಡ ಎಂದರೆ ಇದನ್ನು ತಾವು ತಳ್ಳಿಹಾಕಬಹುದು. ಆದರೆ ತಾವು ಆ ತೀರ್ಮಾನವನ್ನು ಇನ್ನೂ ಈ ಸಭೆಗೆ ತಿಳಿಸಿಲ್ಲ. ಹಾಗೆ ತಿಳಿಸದೆ ಇದ್ದಾಗ ನೋಟೀಸಿನ ಪರಿಣಾಮ ಏನಾಗಿದೆ ಎಂಬುದೇ ನಮಗಿನ್ನೂ ತಿಳಿಯದಿದ್ದಾಗ ಸರ್ಕಾರದವರು ಹೇಳಿಕೆ ಮಾಡುವುದೆಲ್ಲಿದೆ ?

SRI H. M. CHANNABASAPPA.—It is open to the Speaker to permit the Government to make a statement or not to give such permission. Once the Speaker gives permission to a Minister to make a statement, it is not open to any Member of this august House to question the decision of the Speaker. Such being the case, now that the Speaker has permitted the Hon. Minister for Industries to make a statement, I take it that none of us can question the discretion of the Speaker and prevent the Minister from making a statement. So far as the Adjournment Motion is concerned, the Speaker is seized of the matter and it is open to the Speaker to ask Members on this side as well as on that side of the House and give a decision on such lines as the Speaker may think it fit.

ಅಧ್ಯಕ್ಷರು.—ಈಗ ಈ ವಿಷಯದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಇನ್ನು ಇದರ ಬಗ್ಗೆ ಹೆಚ್ಚು ಚರ್ಚೆ ಅನವಶ್ಯಕ.

(ಸಭೆಯಲ್ಲಿ ಶ್ರೀ ವಾಟಾಳ್ ನಾಗರಾಜ್, ಶ್ರೀ ಎಸ್. ಬಂಗಾರಪ್ಪ, ಶ್ರೀ ದೇವೇಗೌಡ ಮತ್ತು ಎಂ. ಎಸ್. ಕೃಷ್ಣನ್ ಅವರೆಲ್ಲರೂ ಮಾತನಾಡಲು ನಿಂತಿದ್ದರು)

ಒಬ್ಬೊಬ್ಬರಾಗಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಈಗತಾನೆ ಮಾನ್ಯ ಕಾಮಗಾರಿ ಸಚಿವರು ರೂಲ್ 306 ಪ್ರಕಾರ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬಹುದೆಂದು ಹೇಳಿದರು. ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವೇನೂ ಇಲ್ಲ. ಆದರೆ ಅವರು ಸಭೆಯಲ್ಲಿ ಯಾವುದರ ಬಗ್ಗೆ ತಮ್ಮ ವಾದವನ್ನು ಇಡುತ್ತಾರೆಂಬುದು ನಮಗೆ ತಿಳಿಯದಾಗಿದೆ. ಆದರೆ ಸಭೆಯಲ್ಲಿ ಚರ್ಚೆಗೆ ಅವಕಾಶ ಕೋರಿ ಒಂದೆರಡು ಜನ ಸದಸ್ಯರು ನೋಟೀಸನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಅಧ್ಯಕ್ಷರಿನ್ನೂ ತೀರ್ಮಾನವನ್ನು ಕೈಗೊಂಡಿಲ್ಲ. ಹಾಗೆ ತೀರ್ಮಾನ ಕೈಗೊಳ್ಳುವುದಕ್ಕೆ ಮೊದಲೇ ಸಚಿವರು ಒಂದು ಹೇಳಿಕೆಯನ್ನು ಕೊಡಬಹುದೆ ? ಹಾಗೆ ಮಾಡಬಹುದಾಗಿದ್ದರೆ ತೀರ್ಮಾನವಾಗದ ವಿಷಯದ ಬಗ್ಗೆ ಅವರು ಸ್ಟೇಟ್‌ಮೆಂಟನ್ನು ಮಾಡಬಹುದು ?

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೆ ತಮ್ಮಲ್ಲಿ ನಾನು ಒಂದು ವಿಷಯ ಕೇಳಬೇಕಾಗಿದೆ. ಶ್ರೀಮಾನ್ ಚನ್ನಬಸಪ್ಪನವರು ರೂಲ್ 306 ಪ್ರಕಾರ ಸಚಿವರಿಗೆ ಹೇಳಿಕೆ ಕೊಡುವುದಕ್ಕೆ ಒಂದು ಅವಕಾಶ ಇದೆ ಎಂಬುದನ್ನು ಹೇಳಿದ್ದಾರೆ. ಅದರ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಇಲ್ಲ

ನಿಲುವಳಿ ಸೂಚನೆಯನ್ನು ಅಂಗೀಕರಿಸುವ ವಿಷಯದಲ್ಲಿ ನಾವು ಹೇಳುವುದನ್ನು ತಾವು ಕೇಳಿದರೂ ಕೇಳಿ ಇಲ್ಲವಾದರೆ ಬಿಡಿ. ಅಂತೂ ಸರ್ಕಾರದವರಿಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಟ್ಟಮೇಲೆ ನಮಗೂ ಹೇಳುವುದಕ್ಕೆ ಅವಕಾಶ ಕೊಡಿ. ಈಗ ಸರ್ಕಾರದವರು ಕೊಡತಕ್ಕ ಹೇಳಿಕೆಯಲ್ಲಿ ಪೋಲೀಸಿನವರ ಹಾಗೂ ಸಿ.ಐ.ಡಿ.ಗಳವರ ದೀರ್ಘವಾದ ವರದಿಗಳಿರಬಹುದು. Even before the Speaker gives consent to the Minister to make a statement, the question whether the Adjournment Motion should be allowed or not, that itself is in question. ಇದು ಮುಖ್ಯವಾದ ವಿಷಯ ಎಂದು ಮಾತ್ರ ನಾನು ಹೇಳಿದ್ದೇನೆ. ವಿಷಯ ಏನು ಎಂದು ತಿಳಿಸಿಲ್ಲ, ಅದನ್ನು ತಿಳಿಸುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದರೆ ಅದನ್ನು ಕೂಡ ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಂಡು ಉತ್ತರ ಕೊಡಬಹುದಾಗಿತ್ತು ಮತ್ತು ಅದರಿಂದ ನಮಗೂ ಕೂಡ ತೃಪ್ತಿ ಆಗುತ್ತಿತ್ತು ಎಂದು ಕಾಣುತ್ತದೆ. ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದ ಮಾತು ಇಲ್ಲಿ ಉದ್ಭವಿಸುವುದಿಲ್ಲ. ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡುವುದು ಬೇರೆ, ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪರ್ಮಿಷನ್ ಕೊಡುವುದು ಬೇರೆ. ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುವುದಾದರೆ ಮಾಡಲಿ, ಆದರೆ ಈ ರೂಲ್ಸ್ ಪ್ರಕಾರ ನಾವು ಅದರ ಮೇಲೆ ಏನೂ ಕ್ಲಾರಿಫಿಕೇಷನ್ ಕೇಳುವ ಹಾಗೆ ಇಲ್ಲ; ತಮಗೆ ರೂಲ್ ವೇವ್ ಮಾಡುವುದಕ್ಕೆ ಡಿಸ್ಕ್ರಿಷನ್ ಇದೆ. ಈ ಡಿಸ್ಕ್ರಿಷನ್ ತಾವು ಉಪಯೋಗಮಾಡಿಕೊಂಡು ಕ್ಲಾರಿಫಿಕೇಷನ್‌ಗೆ ಉತ್ತರ ಕೊಡುವುದಕ್ಕೆ ಅವಕಾಶಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಚೆನ್ನಬಸಪ್ಪನವರು ಹೇಳಿದ ರೂಲ್ 306ರ ಬಗ್ಗೆ ಒಂದು ವಿಷಯ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ರೂಲ್ 306 ಈ ರೀತಿ ಇದೆ.

"A Statement may be made by a Minister on a matter of public importance with the consent of the Speaker, but no question shall be asked at the time the statement is made."

ಮಾನ್ಯ ಚನ್ನಬಸಪ್ಪನವರು "At any stage of the proceeding" Statement ಮಾಡಬಹುದು ಎಂದು ಹೇಳಿದರು. ಅಧ್ಯಕ್ಷರು ಕನ್‌ಸೆಂಟ್ ಕೊಟ್ಟರೂ "At any stage Statement can be made" ಅಂತ ರೂಲ್ಸ್‌ನಲ್ಲಿ ಇಲ್ಲ.

**Sri D. DEVARAJ URS.**—With the consent of the Speaker, hon. Member can also put questions at the time of making the Statement.

ಪ್ರಶ್ನೆ ಕೇಳಬೇಡಿ ಎಂದು ಎಲ್ಲಿ ಇದೆ ?

ಶ್ರೀ ಎಸ್. ಬಂಗಾರಪ್ಪ.—ರೂಲ್ 306ರ ಪ್ರಕಾರ ಸ್ಟೇಟ್‌ಮೆಂಟ್ ಕೊಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಮಾನ್ಯ ಸಚಿವರಾದ ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದ್ದು ಸರಿಯಾಗಿಲ್ಲ. ಎರಡನೆಯದು ಸಭಾನಾಯಕರೂ ಮತ್ತು ಮುಖ್ಯಮಂತ್ರಿಗಳು ಆದಂಥ ಶ್ರೀಮಾನ್ ದೇವರಾಜ್ ಅರಸ್‌ರವರು ಹೇಳಿದರು ನಾವು ಬೆದರಿಕೆ ಹಾಕುತ್ತೇವೆಂದು. ಈ ಮಾತನ್ನು ಅಧ್ಯಕ್ಷರ ಗಮನಕ್ಕೆ ತರಬಯಸುತ್ತೇನೆ. ಜನರು ನಮ್ಮನ್ನು ಬೆದರಿಸುವ ಕೆಲಸಕ್ಕೆ ಕಳುಹಿಸಿಲ್ಲ, ಆ ಕೆಲಸ ಏನಾದರೂ ಮಾಡಿದರೆ ನೀವೇ ಮಾಡಬೇಕು. ಬೆದರಿಕೆ ಮಾಡುವುದಕ್ಕೆ ವಿರೋಧ ಪಕ್ಷದವರು ಬಂದಿಲ್ಲ. ದಯವಿಟ್ಟು ಸಭಾನಾಯಕರು ಈ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈಗ ಮಂತ್ರಿಗಳಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡಬೇಕೆ ಬೇಡವೇ ಎನ್ನುವ ಪ್ರಶ್ನೆ. ಸ್ಟೇಟ್‌ಮೆಂಟ್ ಮಾಡಲು ಮಂತ್ರಿಗಳಿಗೆ ಅವಕಾಶ ಕೊಟ್ಟಿದ್ದಾರೆ. ಶ್ರೀಮಾನ್ ಚೆನ್ನಬಸಪ್ಪನವರು ಹೇಳಿದರು, ರೂಲ್ 306ರ ಪ್ರಕಾರ ಮಂತ್ರಿಗಳು ಸ್ಟೇಟ್‌ಮೆಂಟ್ ಕೊಡಬಹುದು ಎಂದು. ಸ್ಪೀಕರ್‌ರವರ ಅಧಿಕಾರವನ್ನು ನಾನು ಪ್ರಶ್ನೆ ಮಾಡುತ್ತಾ ಇಲ್ಲ; ಸಭೆಯ ಕಾರ್ಯಕಲಾಪಗಳು ನಾವೇ ನಿರೂಪಿಸಿರುವ ನಿಯಮದ ಪ್ರಕಾರ ಆಗಬೇಕು ಎನ್ನುವುದನ್ನು ಸಭಾನಾಯಕರು ಒಪ್ಪಿದ್ದಾರೆ. ಈ ಅಡ್ಜರ್ನ್‌ಮೆಂಟ್ ಮೋಷನ್ ತರುವುದಕ್ಕೆ ನಿಯಮಗಳಿವೆ. ಅದಕ್ಕೆ ತಾವು ಕನ್‌ಸೆಂಟ್ ಕೊಡಬಹುದು ಅಥವಾ ರಿಜೆಕ್ಟ್ ಮಾಡಬಹುದು ಅಥವಾ ಕಾಲ ತೆಗೆದುಕೊಂಡು ಆಲೋಚನೆ ಮಾಡಿ ಆಮೇಲೆ ನಿರ್ಧಾರ ತೆಗೆದುಕೊಳ್ಳಬಹುದು.

ಶ್ರೀ ಡಿ. ದೇವರಾಜ್ ಅರಸ್.—ಇನ್ನೊಂದು ಮಾತನ್ನು ಹೇಳಿದ್ದೇನೆ. ಮಾನ್ಯ ಅಧ್ಯಕ್ಷರು ಈಪೊತ್ತು ಏನು ಪ್ರೊಸೀಜರ್ ಅಡಾಪ್ಟ್ ಮಾಡುತ್ತಿದ್ದಾರೆ ಅದು ಈ ಸಭೆಗೆ ಹೊಸದಲ್ಲ. ಈ ರೀತಿ ಅಡ್ಜರ್ನ್‌ಮೆಂಟ್ ಮೋಷನ್ ಬಂದಾಗ ಸರ್ಕಾರದವರು ಹೇಳುವುದನ್ನು ಕೇಳಿ ಆಮೇಲೆ ತೀರ್ಮಾನ ತೆಗೆದುಕೊಂಡಿರತಕ್ಕ ನಿದರ್ಶನಗಳು ಬೇಕಾದಷ್ಟು ಇವೆ. ಕಾಲಾವಕಾಶ ಕೊಟ್ಟರೆ ಅಂಥ ನಿದರ್ಶನಗಳನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರುಗಳಿಗೆ ತೋರಿಸುತ್ತೇನೆ. ಇನ್ನೂ ಮೂರು ವಿಚಾರಗಳನ್ನು ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಕನ್‌ಸೆಂಟ್ ಕೊಡುವ ಬಗ್ಗೆ ಮತ್ತು ಸರ್ಕಾರದ ಅಭಿಪ್ರಾಯ ತೆಗೆದುಕೊಳ್ಳುವ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಆದರೆ ನಿನ್ನೆ ನಡೆದಂಥ ಘಟನೆಯ ಬಗ್ಗೆ ಪೂರ್ಣ ವಿವರವಾದ ಹೇಳಿಕೆಯನ್ನು ಮಾಡಲು ಅವಕಾಶ ಕೊಡತಕ್ಕದ್ದು ಸರಿಯಾದುದಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಮತ್ತೊಂದು ವಿಷಯ ಸ್ಪಷ್ಟಪಡಿಸುತ್ತೇನೆ. ಈ ತರಹ ಸರ್ಕಾರವನ್ನು ಕೇಳುವ ವಿಚಾರ ಹೊಸದಲ್ಲ. ಅನೇಕ ವೇಳೆ ಅಡ್ಜರ್ನ್‌ಮೆಂಟ್ ಮೋಷನ್ ಬಂದಾಗ ಚರ್ಚೆ ನಡೆದು, ಅಧ್ಯಕ್ಷರು ರೂಲಿಂಗ್ ಕೊಟ್ಟಿರುವುದು ನನ್ನ ಜ್ಞಾಪಕದಲ್ಲಿದೆ. ಅಡ್ಜರ್ನ್‌ಮೆಂಟ್ ಮೋಷನ್ ಅಡ್ಮಿಷನ್ ಬಗ್ಗೆ ಮೂರು ಇನ್‌ಗ್ರೀಡಿಯಂಟ್ಸ್ ಇವೆ. ಅವುಗಳು ಏನೆಂದರೆ.—

1. It must be a matter of public importance.
2. It must be of recent occurance.
3. It must be of urgent nature.

ಈ ಮೂರರಲ್ಲಿ ಯಾವುದೂ ಹೆಚ್ಚು ಕಡಿಮೆಯಾದರೂ ಅಧ್ಯಕ್ಷರು ಆಬ್ಜೆಕ್ಟರು ತೀರ್ಮಾನಕೊಡಬೇಕು, ಪಬ್ಲಿಕ್ ಇಂಪಾರ್ಟೆನ್ಸ್ ಇರಬಹುದು, ಅರ್ಜೆನ್ಸಿಯ ಬಗ್ಗೆಯೂ ಕೂಡ ಯೋಚನೆ ಮಾಡಬೇಕಾಗಿ ಬರುತ್ತದೆ. ಹಿಂದೆ ಇಂಥ ಸಂದರ್ಭಗಳು ಬಂದಾಗ ಸರ್ಕಾರದವರು ಇಂಥ ವಿಚಾರಗಳಲ್ಲಿ ಏನು ಹೇಳುತ್ತಾರೆ ಎಂದು ಕೇಳಿಕೊಂಡು ತೀರ್ಮಾನಕೊಟ್ಟಿರುವ ನಿದರ್ಶನಗಳು ಇವೆ. ಅಧ್ಯಕ್ಷರು ಯಾವ ರೀತಿ ತೀರ್ಮಾನಕೊಟ್ಟರೂ ಅದರಂತೆ ನಾವು ನಡೆಯುವುದಕ್ಕೆ ಬದ್ಧರಾಗಿದ್ದೇವೆ. ಮಾನ್ಯ ಚೆನ್ನಬಸಪ್ಪನವರು ಹೇಳಿದ್ದು, ಅಧ್ಯಕ್ಷರು ಹೇಳಿರುವುದು ಸರಿಯಾಗಿದೆ, ದಯವಿಟ್ಟು ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಹೇಳುವುದಕ್ಕೆ ಅಲೋ ಮಾಡುವುದು ಒಳ್ಳೆಯದು.

ಶ್ರೀ ಟಿ. ಆರ್. ಶಾಮಣ್ಣ.—ತಾವು ಈಗ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಅವರ ಸಲಹೆ ತೆಗೆದುಕೊಂಡರೆ, ತಮ್ಮ ತೀರ್ಮಾನದಲ್ಲಿ ವ್ಯತ್ಯಾಸವಾಗಬಹುದು.

ಅಧ್ಯಕ್ಷರು.—ನನ್ನನ್ನು ನಂಬುತ್ತೀರೋ ಇಲ್ಲವೋ ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಇದು ಅಪನಂಬಿಕೆಯ ಪ್ರಶ್ನೆಯಲ್ಲ.

ಅಧ್ಯಕ್ಷರು.—ನನ್ನನ್ನು ನಂಬಿ. Now let us listen to what the Hon. Minister for Industries says.

†SRI S. M. KRISHNA.—Madam Speaker, one temporary worker by name Shri Amalnathan, who had less than one year's service was cleaning the top surface of a transformer tank frame, after the tank had been painted. After about 5 minutes, the Chief of the Department saw this worker inside the tank which he was cleaning with his head drooping. The worker was taken out of the tank and was rushed to the dispensary where the Doctor, after examining him declared him dead.

Immediately, report was made to all the concerned authorities. The Police came over immediately and took up conduct of mahazar over the dead body. The close relatives of the deceased were also sent for.

At about 1-15 P.M., the workers of the factory started visiting the dispensary in groups. After some time without any provocation, the groups of workers started shouting slogans and used abusive language against the officers and the Management.

When the mahazar was going on, about 200 agitating workers gathered and some of the office bearers of the NGEF Employees' Union were addressing the gathering. Then the workers belonging to the two Unions, *viz.* Employees' Union and the Workers' Union started quarreling among themselves. They were also instigated by some body to attack Shri C. S. Ramachandra, Technical Superintendent of the General Shops. However, some workers smelling trouble whisked away Shri Ramachandra, to one of the nearby foreman's cabins and closed the door. There was some confussion prevailing and the General Manager immediately appeared on the scene and tried to reason out with the workers. He promised all reasonable compensation to the family of the deceased. The Managing Director also came out to the spot and assured compensation of Rs. 2,500 and also promised to give any compensation which is normally given in such cases by other factories. He also assured that a member of the family of the deceased would be offered a suitable job in the factory. After a good deal of persuasion the workers dispersed at about 7-15 P M. The factory could not work Second and the Third Shifts.

On the following morning that is 6th April 1972, the workers reported to their respective work places as usual but did not resume work. Some of the workers started going round the several workshops and started instigating the workers not to work and compelled them to come out of the work places. By about 8-00 A.M. all the workers gathered before the Switchgear Factory and started shouting slogans and tension was building up. There was a scuffle among the two groups of workers and in that scuffle the Vice-President of the NGEF Workers' Union Shri Maribasavachar was severely manhandled and he became unconscious. He was physically taken away towards the Switchgear Factory and protection was given to him. The crowd then became very unruly and uncontrolable. The safety of men and property were at stake and the Police was requested to intervene.

The Police took necessary steps and using minimum force dispersed the violent crowd.

There appears to be no responsible leader coming forward for a discussion with the Management. The Management is waiting for leaders to start a dialogue and to see that tempers cool down. All efforts are being made to see that the workers resume work peacefully.

The Police had to resort to lathi charge and bursting of tear gas shells, as the mob had become very unruly. 11 Cars and one motor cycle were damaged and several window pans and glass shutters were damaged. The damage to other properties of the factory are yet to be ascertained. The mob also made attempts to set fire to the factory property. Fire brigade came and put out two fires. The Police had therefore, no alternative but to use force.

(SRI S. M. KRISHNA)

It is reported that 28 Police Officers and men including 1 Assistant Superintendent of Police and 58 workers were hurt. One of the worker was taken as an impatient in the hospital for observations and others were treated as out patients.

It is reported that the death of the worker Shri Amalnathan was due to natural causes. The formal post-mortem report is awaited.

A sum of Rs. 2,500 has been paid as ex-gratia payment to the mother of the deceased.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ಕೃಷ್ಣರವರು ಕೊಟ್ಟ ಹೇಳಿಕೆಯು ಬಹಳ ಆಶ್ಚರ್ಯವನ್ನೂ ಮತ್ತು ಖೇದವನ್ನೂ ಉಂಟು ಮಾಡುತ್ತದೆ. ಏಕೆಂದರೆ ಅವರು ಇವತ್ತಿನದಿವಸ ಮೊದಲೇ ಈ ಕಡೆಯವರು ಹೇಳಿದಹಾಗೆ ಪೋಲೀಸ್ ವರದಿಯನ್ನು ನೋಡಿ ಹೇಳಿಕೆ ಕೊಟ್ಟಿರುವಂತೆ ಕಂಡುಬರುವುದು. ಎರಡು ಮೂರು ಪ್ರಶ್ನೆಗಳನ್ನು ಅಧ್ಯಕ್ಷರ ಮುಂದಿಟ್ಟು ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಅವರ ಮೂಲಕ ಕೇಳಿಕೊಳ್ಳುತ್ತೇನೆ.

Sri D. B. KALMANKAR (Afzalpur).—There is a point of order. When a statement is made under Rule 306 on a matter of public importance, the hon. Member cannot put a question.

MADAM SPEAKER. I have permitted.

†ಶ್ರೀ ಎಂ. ಎಸ್. ಕೃಷ್ಣನ್.—ಪೋಲೀಸರ ವರದಿಯನ್ನು ಆಧಾರವಾಗಿಟ್ಟುಕೊಂಡು ಸಚಿವರು ಸ್ಟೇಟ್‌ಮೆಂಟ್ ಕೊಡುವುದು ಸರಿಯೇ ? ಹಾಗೆ ಮಾಡಿರುವಂತೆ ಕಂಡುಬರುವುದರಿಂದ ಉದ್ವೇಗ ಬರುತ್ತದೆ. ಆದುದರಿಂದ ಮಾತನಾಡಬೇಕಾಗಿದೆ. ಮಂತ್ರಿಗಳು ಹೀಗೆ ಹೇಳಿದರೆ ಹೇಗೆ ! ಮೊದಲನೆಯದಾಗಿ ಅಮಲನಾಥನ್ ನಿಧನ ವಾಗಿರುವುದು ನ್ಯಾಚುರಲ್ ಕಾಸ್‌ನಿಂದ ಎಂದು ಹೇಳಿದರು. ಅದು ಸರಿಯೇ ಎಂದು ಕೇಳಬೇಕಾಗಿದೆ. ಅದರ ಬಗ್ಗೆ ಸಚಿವರೇನಾದರೂ ವಿಚಾರ ಮಾಡಿರುವರೇ ? ಕೆಲಸಗಾರರನ್ನು ಕೇಳಿದರೆ ಕಾರಣ ಗೊತ್ತಾಗುವುದು. ನನಗೆ ತಿಳಿದಹಾಗೆ ನ್ಯಾಚುರಲ್ ಕಾಸ್‌ನಿಂದ ಆತ ಸತ್ತಿಲ್ಲ. ಫ್ಯೂಮ್ಸ್‌ನಿಂದ ಸತ್ತಿದ್ದಾನೆ. ಆ ಸಮಯದಲ್ಲಿ ಸೂಪರಿಂಟೆಂಡೆಂಟರಿಗೆ ಏಟು ಬತ್ತು. ಕೆಲಸಗಾರರಿಗೆ ಅವರಮೇಲೆ ಬಹಳ ಖಾರವಿದೆ. ಅವರು ಕೆಲಸಗಾರರಿಗೆ ಒಳಗೆ ಹೋಗಿ ಕೆಲಸಮಾಡಬೇಕೆಂದು ಹೇಳಿದರು. ಅದಕ್ಕೆ ಕೆಲಸಗಾರರು ಒಪ್ಪಲಿಲ್ಲ. ಫ್ಯೂಮ್ಸ್ ಜಾಸ್ತಿಯಾಗಿ ಸಫೋಕೇಟ್ ಆಗಿ ಕೆಲಸಗಾರ ಒಬ್ಬ ಸತ್ತ ಎಂಬುದು ಅವರಿಗೆ ಗೊತ್ತಾಯಿತು. ಅದನ್ನು ಯಾವುದಾದರೂ ಆಫೀಸರಾಗಲಿ, ಫೋರ್ಮನ್ ಆಗಲಿ ನೋಡಲಿಲ್ಲ, ಗ್ರೌಂಡ್ ಆಪರೇಟರ್ ಮೇಲಿಂದ ನೋಡಿದ. ಆಮೇಲೆ ಕೆಲಸಗಾರರೇ ಸತ್ತವನನ್ನು ಆಸ್ಪತ್ರೆಗೆ ತಗೆದುಕೊಂಡುಹೋದರು. ಆದುದರಿಂದ ಮಾನ್ಯ ಸಚಿವರು ಮಾಡಿರುವ ಸ್ಟೇಟ್‌ಮೆಂಟ್ ವಿರೋಧವಾಗಿದೆ, ಅವರು ಸರಿಯಾಗಿ ವಿಚಾರಿಸಿಲ್ಲ.

ಇನ್ನು ಎರಡನೆಯದು ಕಾಂಪೆನ್‌ಸೇಷನ್ ಕೊಡುವ ವಿಚಾರ. ನ್ಯಾಯವಾದ ಪರಿಹಾರ ಕೊಡಬೇಕೆಂದು ಕೇಳಿದರು. ಈ ಸಂಬಂಧದಲ್ಲಿ ವಿಚಾರಮಾಡಬೇಕಾಗಿರುವುದು. ಇದು ಸ್ಟೇಟ್ ಸೆಕ್ಟಾರ್ ಇಂಡಸ್ಟ್ರಿ. ಸಾರ್ವಜನಿಕರ ಹಣದಿಂದ ಈ ಕೈಗಾರಿಕೆ ನಡೆಯುತ್ತಿದೆ. ಇದರ ಆಡಳಿತದ ವಿಚಾರಗಳಲ್ಲಿ ಕಾರ್ಮಿಕರೂ ಸಹ ಭಾಗವಹಿಸಲು ಅವಕಾಶವಿರಬೇಕೆಂದು ಅನೇಕಸಲ ಶ್ರೀ ಕೃಷ್ಣರವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಹಾಗಿರುವಾಗ ಈ ಸಂದರ್ಭದಲ್ಲಿ ಈ ಕೈಗಾರಿಕೆಯಲ್ಲಿದ್ದವರು ಸತ್ತಾಗ ಯಾವರೀತಿ ಪರಿಹಾರ ಕೊಡಬೇಕೆಂಬುದನ್ನು ಮ್ಯಾನೇಜ್‌ಮೆಂಟಿನವರು ಸರಿಯಾಗಿ ಪರಿಶೀಲಿಸಬೇಕಾಗಿತ್ತು. ಅಲ್ಲದೆ ಪರಿಹಾರ ಕೊಡುವ ವಿಚಾರವನ್ನು ಚಾಕಚಕ್ಯತೆಯಿಂದ ಇತ್ಯರ್ಥ ಮಾಡಬೇಕಾಗಿತ್ತು. ಹಾಗೆ ಮಾಡಿರುವರೇ ಎಂದು ವಿಚಾರ ಮಾಡಿದ್ದೀರಾ ? ಎರಡು ಯೂನಿಯನ್ ನಾಯಕರು ಯಾರೂ ಬರಲಿಲ್ಲ ಎಂದು ಆರೋಪ ಮಾಡಿದರು. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಪ್ರಕಾರ 5 ಜನರನ್ನು ಚುನಾಯಿಸಿ ಚರ್ಚಿಸಿ ತೀರ್ಮಾನಮಾಡಿದ್ದರೆ ಈ ಘಟನೆಯಾಗುತ್ತಿರಲಿಲ್ಲ. ಈ ರೀತಿ ವಿಪರೀತವಾಯಿಂದ ಮ್ಯಾನೇಜ್‌ಮೆಂಟ್ ವರ್ತಿಸಿಲ್ಲ. ಇದಕ್ಕೆ ಉತ್ತರ ಕೊಡಬೇಕು.

ಮೂರನೆಯ ವಿಷಯ. ಈಗ ಪೋಲೀಸರು ಮೈಲ್ಡ್ ಲಾಠಿಛಾರ್ಜ್ ಮಾಡಿದರೆಂದು ಹೇಳಿದರು. ಕೂಲಿಗಳ ಪೈಕಿ 58 ಜನರಿಗೆ ಮತ್ತು ಪೋಲೀಸರಲ್ಲಿ 24 ಜನರಿಗೆ ಏಟು ಬಿತ್ತು ಎಂದು ಸಚಿವರು ಹೇಳಿರುವುದು ಬಹಳ ಆಶ್ಚರ್ಯಕರವಾಗಿದೆ. ಅವರು ಪೋಲೀಸ್ ವರದಿಯೇ ಇದೆ ಅದನ್ನು ಓದಿರುವುದು ನ್ಯಾಯವಲ್ಲ. ನಾನು ಈ ವಿಷಯವನ್ನು ಪರಿಶೀಲಿಸಿದ್ದೇನೆ. ಪೋಲೀಸರು ಮೈಲ್ಡ್ ಲಾಠಿ ಛಾರ್ಜ್ ಮಾಡಿಲ್ಲ, ಏಟು ತಿಂದವರ ಮೈಮೇಲೆ ಬೊಬ್ಬೆ ಎದ್ದಿದೆ. ನೋಡಬಹುದು. ಇದರಿಂದ ಮೈಲ್ಡ್ ಲಾಠಿ ಛಾರ್ಜ್ ಅಲ್ಲವೆಂಬುದು ವ್ಯಕ್ತವಾಗುವುದು. ದನಗಳಿಗೆ ಹೊಡೆಯುವಂತೆ ಹೊಡೆದಿದ್ದಾರೆ. ಆದುದರಿಂದ ಸಚಿವರು ಹೇಳಿರುವುದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ರೀತಿ ಲಾಠಿ ಛಾರ್ಜ್ ಮಾಡಲು ಅವಕಾಶ ಕೊಟ್ಟದ್ದು ಸರಿಯಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಿರುವರೇ? ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಚಾಕಚಕ್ಯತೆಯಿಂದ ನಡೆದುಕೊಂಡಿದ್ದರೆ ಪೋಲೀಸರನ್ನು ಕರೆಸಬೇಕಾಗಿಯೇ ಇರಲಿಲ್ಲ. ಪೋಲೀಸರನ್ನು ಕರೆಸಬೇಕೆಂದಿದ್ದರೆ ಅವರನ್ನು ಕರೆಸುವುದಕ್ಕೆ ಮುಂಚೆ ವಾರನ್ ಮಾಡಲಿಲ್ಲ. ಅರ್ಧ ಗಂಟೆಯೊಳಗೆ ಹೋಗದಿದ್ದರೆ ಲಾಠಿ ಛಾರ್ಜ್ ಮಾಡುವುದಾಗಿ ಹೇಳಿ ಕೆಲಸಗಾರರು ಹೋಗದಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ನೇರವಾಗಿ ಬಂದು ಲಾಠಿ ಛಾರ್ಜ್ ಮಾಡಿದ್ದರಿಂದ ಹೆಂಗಸರು ಮತ್ತು ಗಂಡಸರು, ಕೂಲಿಗಾರರೆಲ್ಲ ಇದ್ದಾಗ ಹೊಡೆದುದರಿಂದ ಸುಮಾರು ನೂರು ಕೆಲಸಗಾರರಿಗೆ ಏಟು ಬಿತ್ತು. ನನ್ನ ಪ್ರಶ್ನೆ ಏನೆಂದರೆ Police interference was not called for. It is not justified. ಇದರಲ್ಲಿ ಸರ್ಕಾರದವರು ಯೋಚನೆ ಮಾಡಬೇಕಾದ್ದು ಏನೆಂದರೆ ಕಾರ್ಮಿಕರಿಗೂ ಮತ್ತು ಮ್ಯಾನೇಜ್‌ಮೆಂಟ್‌ಗೂ ವಿವಾದಗಳು ಬೇಕಾದಷ್ಟು ಬರುತ್ತವೆ. ಮುಂದೆಯೂ ಬರುತ್ತವೆ. ಆದುದರಿಂದ ಈ ರೀತಿ ಪ್ರಸಂಗಗಳು ಬಂದಾಗ ಪೋಲೀಸಿನವರನ್ನು ಮಧ್ಯ ಕಳುಹಿಸಿ ಕೆಲಸಗಾರರನ್ನು ಸದೆ ಬಡಿಯುವುದು ಸರಿಯೇ ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

2-00 P.M.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಕೈಗಾರಿಕಾ ಸಚಿವರು ಯಾರು ಎಂದು ನನಗೆ ಗೊತ್ತು. ಈ ಸಭೆಯಲ್ಲಿ ನಾನು ಹೋದಸಾರಿ ಇದ್ದೆ. ಮಾನ್ಯ ಸಚಿವರು ಪೋಲೀಸಿನವರಿಂದ ಬಂದಂಥ ವರದಿಯನ್ನ ಸಭೆಯಮುಂದೆ ಇಟ್ಟಿದ್ದಾರೆ. ಸರ್ಕಾರ ಅವರೇ ನಡೆಸುತ್ತಾ ಇರುವುದರಿಂದ ಆ ಅಧಿಕಾರಿಗಳು ಕೊಟ್ಟ ವರದಿಯನ್ನೇ ಇಲ್ಲಿ ಓದಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ಸರ್ಕಾರ ಬಂದಾಗ ಯಾವ ಅಧಿಕಾರಿಗಳನ್ನೂ ಇಟ್ಟು ಕೊಳ್ಳಬೇಡಿ. ನೀವು ಒಬ್ಬರೇ ನಡೆಸಿ.

† ಶ್ರೀ ವಾಟಾಳ್ ನಾಗರಾಜ್.—ಸಮಾಜವಾದದ ಸುಳ್ಳು ಘೋಷಣೆ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ನೀವೇ ಇರುತ್ತೀರಿ. ನಿಮ್ಮ ಅನ್ಯಾಯವನ್ನು ಸರಿಪಡಿಸುವುದಕ್ಕೆ ನಾವು ಇರಲೇ ಬೇಕು.

ಈಗ ವಿಷಯ ಏನೆಂದರೆ ಮಾನ್ಯ ಕೈಗಾರಿಕಾ ಸಚಿವರು ಪೋಲೀಸಿನವರು ಕೊಟ್ಟಂಥ ವರದಿಯನ್ನು ಈ ಸಭೆಯ ಮುಂದೆ ಇಟ್ಟರು. ಗೃಹಖಾತೆ ಕಾರ್ಯದರ್ಶಿಗಳು ಇಲ್ಲಿಗೆ ಬಂದಿದ್ದಾರೆ. ಈಗ ನೀವು ಮಾಡಿದ ಸ್ಟೇಟ್‌ಮೆಂಟ್ ಸರಿಯೋ ಅಲ್ಲವೇ ಎಂದು ಹೇಳಬೇಕಾಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅವರು ಓದಿರುವುದು ಪೋಲೀಸಿನವರ ಸ್ಟೇಟ್‌ಮೆಂಟ್ ಅಲ್ಲ ಅವರು ಕೈಗಾರಿಕಾ ಮಂತ್ರಿಗಳಾಗಿ ಎನ್. ಜಿ. ಇ. ಎಫ್. ಎಸ್ಟಾಬ್ಲಿಷ್‌ಮೆಂಟ್‌ನವರಿಂದ ರಿಪೋರ್ಟ್ ತರಿಸಿಕೊಂಡು ಅಲ್ಲಿಯ ವಿಚಾರ ಏನು ಎನ್ನುವುದನ್ನು ನೋಡಿ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಪೋಲೀಸಿನವರ ಮಿನಿಮಮ್ ಫೋರ್ಸ್ ಎಂದರೆ ಟಿಯರ್ ಗ್ಯಾಸ್ ಮತ್ತು ಲಾಠಿ ಛಾರ್ಜು. ಈಪೊತ್ತು ಅಲ್ಲಿ 85 ಜನ ಕಾರ್ಮಿಕರ ಮೇಲೆ ನಡೆದಂಥ ಹಲ್ಲೆ ದುರಂತ ಕೃತ್ಯ, ಅನಾಚಾರ, ಅನ್ಯಾಯ, ಗುಂಡಾಗಿರಿಗೆ ಕಾರಣವಾಗಿದೆ. ರಕ್ತ ಕ್ರಾಂತಿಯಾಗಿದೆ. ತಾವು ಇದನ್ನು ನೋಡಿಲ್ಲ. ತಾವು ಮಂತ್ರಿಗಳಾಗಿ ಬಂದಮೇಲೆ ರಾಜ್ಯದಲ್ಲಿ ನಡೆದ ಘಟನೆ ಇದೇ ಪ್ರಥಮ ಘಟನೆ, ಕಾರ್ಮಿಕರ ಮೇಲೆ ನಡೆದ ದಬ್ಬಾಳಿಕೆ ಎಂದು ಅಧ್ಯಕ್ಷರ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಎದ್ದು ನಿಂತಿರುವಾಗ ಮಾನ್ಯ ಸದಸ್ಯರುಗಳು ಕುಳಿತು ಕೊಳ್ಳಬೇಕು. ಮೊದಲು ತಾವು ಅರಿತುಕೊಳ್ಳಬೇಕಾದಂಥ ನಿಬಂಧನೆ ಇದು. ಈಗ ಸಂಬಂಧಪಟ್ಟ ವಿಷಯಗಳ ಬಗ್ಗೆ ತಾವು ಏನಾದರೂ ಕ್ಲಾರಿಫಿಕೇಷನ್ ಇದ್ದರೆ ಕೇಳಬೇಕು, ಮುಂದೆ ಗೌರ್ನರ್ ಅಡ್ರೆಸ್ ಚರ್ಚೆಗೆ ಬಂದಾಗ ಮಾತನಾಡಲು ಬೇಕಾದಷ್ಟು ಅವಕಾಶ ಇರುತ್ತದೆ. ಈಗ ನೇರವಾದ ಪ್ರಶ್ನೆ ಕೇಳಿದರೆ ಅವರು ಉತ್ತರ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್.—ತಮ್ಮನ್ನು ಅಧ್ಯಕ್ಷರು ಎಂದು ಕರೆಯಬೇಕೇ ಅಥವಾ ಅಧ್ಯಕ್ಷಿಣಿಯವರು ಎಂದು ಕರೆಯಬೇಕೇ ?

ಅಧ್ಯಕ್ಷರು.—ಯಾವರೀತಿ ಬೇಕಾದರೂ ಕರೆಯಬಹುದು.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಲ್ಲಿ ಒಂದು ವಿನಂತಿ. ಈ ಸಭೆಯನ್ನು ಮುಂದಕ್ಕೆ ಹಾಕಿ. ಆಸ್ಪತ್ರೆಯಲ್ಲಿರುವ ಕಾರ್ಮಿಕರನ್ನೂ ಮತ್ತು ಸತ್ತ ಕುಟುಂಬವನ್ನೂ ಹೋಗಿ ನೋಡಿದರೆ ತಮಗೆ ಕಣ್ಣೀರು ಸುರಿಯುತ್ತದೆ ಎಂದು ನನ್ನ ಭಾವನೆ. ಸಾರ್ವಜನಿಕರ ಒಂದು ಕಾರ್ಖಾನೆಯಲ್ಲಿ ಅಂದರೆ ಸರ್ಕಾರವೇ ನಡೆಸತಕ್ಕಂಥ ಈ ಕಾರ್ಖಾನೆಯಲ್ಲಿ ಯಾವುದೇ ವಾದ ವಿವಾದಗಳು ಇದ್ದರೂ ಕಾರ್ಮಿಕರ ದೃಷ್ಟಿಯಿಂದ ಶಾಂತರೀತಿಯಿಂದ ಬಗೆಹರಿಸಬೇಕೇ ವಿನಃ ಇವರು ಮಾಡುವ ತಪ್ಪನ್ನು ಕಾರ್ಮಿಕ ಮುಖಂಡರ ಮೇಲೆ ಗೂಬೆ ಕೂರಿಸುವಂಥ ಪ್ರವೃತ್ತಿಗೆ ಹೋಗಬಾರದು. ಒಂದು ವೇಳೆ ಅವರು ಸತ್ಯಾಗ್ರಹ ನಡೆಸಿದ್ದರೂ ಪೋಲೀಸಿನವರು ಈ ಗೂಂಡಾಗಿರಿಯನ್ನು ನಿಲ್ಲಿಸಿದ್ದರೆ ಇಷ್ಟೊಂದು ರಕ್ತಪಾತ ಆಗುತ್ತಿರಲಿಲ್ಲ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಮುಖ್ಯಮಂತ್ರಿಗಳು ತಾವು ಇದನ್ನು ನೋಡಿ ಎಂದು ಕೈ ಮುಗಿದು ಕೇಳಿಕೊಳ್ಳುತ್ತೇನೆ.

(ತಾವು ತಂದಿದ್ದ ಪೊಟ್ಟಣವನ್ನು ಬಿಚ್ಚಿ ರಕ್ತದ ಕಲೆಯಿದ್ದ ಬಟ್ಟೆಯನ್ನು ಬಿಚ್ಚಿದರು) ಈ ಸರ್ಕಾರಿ ಕಾರ್ಖಾನೆಯ ಕಾರ್ಮಿಕರ ಮೇಲೆ ನಡೆಸಿದಂಥ ಹಲ್ಲೆಯ ಪರಿಣಾಮವಾಗಿ ಕಾರ್ಮಿಕನೊಬ್ಬನ ರಕ್ತದ ಕಲೆಯಿರುವ ಬಟ್ಟೆಯನ್ನು ಕೊಟ್ಟು ಹೋಗುತ್ತೇನೆ. ಇದು ಹೊಸ ಸರ್ಕಾರದ ಪ್ರಥಮ ಕೊಡುಗೆ. ಈ ರಕ್ತಪಾತದ ಬಟ್ಟೆ ನೋಡಿದರೆ ಕಣ್ಣಿನಲ್ಲಿ ರಕ್ತ ಬರುತ್ತದೆ ಮತ್ತು ಅತೀವ ದುಃಖವಾಗುತ್ತದೆ. ನನಗೆ ಅದನ್ನು ನೋಡಲು ಸಾಧ್ಯವಾಗುತ್ತಿಲ್ಲ. ನನಗೆ ಏನು ಮಾತನಾಡುವುದಕ್ಕೂ ಮನಸ್ಸು ಬರುತ್ತಾ ಇಲ್ಲ.

(ನಂತರ ಅವರು ಅಧ್ಯಕ್ಷರ ಬಳಿ ಬಂದು ಅವರ ವೇದಿಕೆ ಮೇಲೆ ರಕ್ತದ ಕಲೆಯಿದ್ದ ಬಟ್ಟೆಯನ್ನು ಇಟ್ಟು ಸಭಾತ್ಯಾಗ ಮಾಡಿದರು).

(ಪ್ರೇಕ್ಷಕರು ಚಪ್ಪಾಳೆ ತಟ್ಟಿದರು)

ಅಧ್ಯಕ್ಷರು.—ಪ್ರೇಕ್ಷಕರು ಇನ್ನೊಮ್ಮೆ ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟಕೂಡದು. ಹಾಗೇನಾದರೂ ಮಾಡಿದರೆ ಅವರನ್ನು ಹೊರಗೆ ಕಳುಹಿಸುತ್ತೇವೆ. ಗ್ಯಾಲರಿಯಲ್ಲಿ ಚಪ್ಪಾಳೆ ತಟ್ಟುವ ಶಬ್ದ ಈ ಸಭೆಯಲ್ಲಿ ಕೇಳಕೂಡದು.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕಂಥ ಹೇಳಿಕೆ ಮತ್ತು ಶ್ರೀ ವಾಟಾಳ್ ನಾಗರಾಜ್ ಅವರು ಕಾರ್ಮಿಕರಿಗೆ ಆದಂಥ ಗಾಯಗಳು ಮತ್ತು ರಕ್ತದ ಕಲೆಗಳು ಇರತಕ್ಕಂಥ ಬಟ್ಟೆಗಳು ಇವುಗಳನ್ನು ತಮ್ಮ ಅವಗಾಹನೆಗೆ ತಂದಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ ಇದರ ಬಗ್ಗೆ ಒಂದೆರಡು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ.

ಮೊದಲನೆಯದಾಗಿ ಮಾನ್ಯ ಸಚಿವರು ನೀಡಿರುವ ಹೇಳಿಕೆಯಲ್ಲಿ ಲಾಠಿ ಛಾರ್ಜ್ ಮತ್ತು ಟಿಯರ್‌ಗ್ಯಾಸ್ ಪ್ರಯೋಗ ಮಾಡಿದ್ದಾರೆ ಎಂದು ಹೇಳಿದ್ದಾರೆ. ನಾನು ಆ ಕಾರ್ಖಾನೆಯ ಒಬ್ಬ ಕಾರ್ಮಿಕನ ಸಾವಿನ ಬಗ್ಗೆ ಕೇಳುತ್ತೇನೆ. ಇದರ ಬಗ್ಗೆ ಪೋಸ್ಟ್ ಮಾರ್ಟಂ ರಿಪೋರ್ಟ್ ಬರದೇ ಆತನು ನ್ಯಾಚುರಲ್ ಡೆತ್‌ನಿಂದ ಸತ್ತ ಎಂದು ಹೇಳುವುದು ನಾನು ಒಪ್ಪುವುದಿಲ್ಲ. ಆದುದರಿಂದ ಅವರು ಏನು ಹೇಳಿದ್ದಾರೆ. ನ್ಯಾಚುರಲ್ ಡೆತ್‌ನಿಂದ ಸತ್ತ ಎಂದು ಹೇಳುವುದು ತಪ್ಪು. ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿದ್ದರೆ ಅದನ್ನು ಒಪ್ಪಬಹುದಾಗಿತ್ತು. ಈಗ ಅವರ ಹೇಳಿಕೆ ಪ್ರಕಾರದ್ವಂದ್ವ ಅಭಿಪ್ರಾಯಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಕಾರ್ಮಿಕನ ಸಾವಿನ ಬಗ್ಗೆ ಸರಿಯಾದ ಒಂದು ಉತ್ತರ ಕೊಡಬೇಕು ಎಂದು ಕೇಳುತ್ತೇನೆ.

ಎರಡನೆಯದಾಗಿ 2,500 ರೂಪಾಯಿಗಳ ಪರಿಹಾರವನ್ನು ಅತನ ಕುಟುಂಬದವರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಉಳಿದ ಗಾಯಗೊಂಡ ಕಾರ್ಮಿಕರು ಏನು ಇದ್ದಾರೆ ಅವರಿಗೆ ಏನಾದರೂ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರದವರು ಯೋಚನೆ ಮಾಡಿದ್ದಾರೆಯೇ ಎನ್ನುವುದಕ್ಕೆ ತಾವು ಉತ್ತರ ಕೊಡಬೇಕು.

ಮೂರನೆಯದಾಗಿ ಈಗತಾನೆ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಈ ವರದಿ ಎನ್. ಜಿ.ಇ.ಎಫ್. ಮ್ಯಾನೇಜ್‌ಮೆಂಟ್‌ನವರಿಂದ, ಅವರ ಎಸ್ಟಾಬ್ಲಿಷ್‌ಮೆಂಟ್‌ನಿಂದ ಬಂದಿದೆ, ಇದು ಪೋಲೀಸಿನವರ ರಿಪೋರ್ಟ್ ಅಲ್ಲ ಎಂದು. ಅವರು ಹಾಗೆ ಹೇಳುವುದನ್ನು ಒಪ್ಪೋಣ. ಮ್ಯಾನೇಜ್‌ಮೆಂಟ್‌ನವರ ಹೇಳಿಕೆಯನ್ನೂ ತೆಗೆದುಕೊಳ್ಳೋಣ. ಆದರೆ ಅವರು ತಮ್ಮ ಅಭಿಪ್ರಾಯವನ್ನು ಸಕಾರಣವಾಗಿ ಕೊಡಬೇಕು. ಅವರು ಕೊಟ್ಟಿರುವ ವರದಿಯನ್ನು ಈ ಸಭೆಯಲ್ಲಿ ಓದಿದ್ದೀರಿ. ಅದನ್ನು ಒಪ್ಪುತ್ತೇವೆ. ಆದರೆ ಆ ವರದಿಯನ್ನು ಕೈಗಾರಿಕಾ ಮಂತ್ರಿಗಳು ಓದಿದ್ದಾರೆ. ಅಲ್ಲದೆ ಇದಕ್ಕೆ ಸಂಬಂಧಪಟ್ಟ ಲೇಬರ್ ಮಿನಿಸ್ಟರ್ ಈ ಸದನಕ್ಕೆ ಬರುತ್ತಾ ಇಲ್ಲ. ಬಂದರೂ ಕೂಡ 1-2 ನಿಮಿಷ ಇರುತ್ತಾರೆ. ಅದಕ್ಕೆ ನಾನು ಕೇಳುವುದು ಇಷ್ಟೆ. ಇದಕ್ಕೆ ಸಂಬಂಧಪಟ್ಟ ಕಾರ್ಮಿಕ ಮಂತ್ರಿಗಳು ಮತ್ತು ಕೈಗಾರಿಕಾ ಮಂತ್ರಿಗಳು ಇಬ್ಬರೂ ಕೂಡ ಫ್ಯಾಕ್ಟರಿಗೆ ಹೋಗಿ ವಿಚಾರಣೆ ಮಾಡಿದ್ದೀರಾ! ತಾವು ಇಬ್ಬರೂ ಖುದ್ದಾಗಿ ಹೋಗಿ ವಿಚಾರಣೆ ಮಾಡಲಿಲ್ಲ ಎಂದು ನನಗೆ ಅನಿಸುತ್ತದೆ. ಮೃತಪಟ್ಟ ಕಾರ್ಮಿಕನ ಕುಟುಂಬಕ್ಕೆ 2500 ರೂಪಾಯಿ ಪರಿಹಾರವನ್ನು ಕೊಡುವುದಾಗಿ ಹೇಳಿದ್ದಾರೆ. ಮೃತನ ಕುಟುಂಬದವರಿಗೆ ದುಃಖ ಸೂಚಕ ಪತ್ರವನ್ನು ಕಳುಹಿಸುವುದಲ್ಲ, ಮಾನ್ಯ ಮಂತ್ರಿಗಳೇ ಖುದ್ದಾಗಿ ಹೋಗಿ ಮೃತರ ಕುಟುಂಬದವರಿಗೆ ತಮ್ಮ ಕಣ್ಣೀರು ಸುರಿಸಿ ಸಮಾಧಾನ ಹೇಳಿ ಬರುವುದಕ್ಕೆ ಆಗಲಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ನಾನು ಹೋಗಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ. ಕಾರ್ಮಿಕರ ಮೇಲೆ ಮಿನಿಮಮ್ ಫೋರ್ಸ್ ಉಪಯೋಗಿಸಲಾಯಿತು ಎಂದು ಹೇಳಿರುವ ವಿಚಾರ. ಮಾನ್ಯ ಮಂತ್ರಿಗಳಾದ ಕೃಷ್ಣ ಅವರು ಈ ಕಡೆ ಇದ್ದಾಗ ಇಂಥ ವಿಷಯಗಳ ಬಗ್ಗೆ ಹೆಚ್ಚಾಗಿ ಹೇಳಿದ್ದಾರೆ. ಅವರಲ್ಲಿ ಬದಲಾವಣೆಯಾಗಿರಬಹುದು, ಆದರೆ ಪೋಲೀಸಿನವರಲ್ಲಿ ಏನೂ ಬದಲಾವಣೆಯಾಗಿಲ್ಲ. ಲಾಠಿ ಚಾರ್ಜ್ ಎಂದರೆ ಮಿನಿಮಂ ಫೋರ್ಸ್ ಎಂದರೂ ಸಾಯುವವರೆಗೂ ಹೊಡೆಯುವುದು. ಅದೇ ಅವರಿಗೆ ಮಿನಿಮಂ ಫೋರ್ಸ್. ಅಂಥ ಪೋಲೀಸ್ ಇಲಾಖೆಯವರು ಕೊಟ್ಟಿರುವ ಹೇಳಿಕೆಯನ್ನು ತಂದು ಮಾನ್ಯ ಸಭೆಯಲ್ಲಿ ನಮ್ಮ ಮಂತ್ರಿಗಳು ಓದುತ್ತಾರಲ್ಲ. ಇದರ ಬಗ್ಗೆ ಅವರೇನಾದರೂ ವಿಚಾರಣೆ ಮಾಡಿದ್ದಾರೆಯೇ! ಸಾಯುವವರೆಗೂ ಹೊಡೆಯುವುದು ಮಿನಿಮಂ ಫೋರ್ಸ್ ಎನ್ನುವುದು ತಮಗೆಲ್ಲಾ ಗೊತ್ತಿದೆ. ನಿಮಗೆ ಸರ್ಕಾರವನ್ನು ನಡೆಸುವುದಕ್ಕೆ ನಾಚಿಕೆಯಾಗುವುದಿಲ್ಲವೇ? ಏಕೆ ಈ ರೀತಿಯ ಆಡಳಿತವನ್ನು ನಡೆಸುತ್ತೀರಿ? ಸಭೆಗೆ ವಂಚನೆ ಮಾಡುವ ಹೇಳಿಕೆಯನ್ನು ಕೊಡುತ್ತಿದ್ದೀರಿ? ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಕೊಡುತ್ತಿದ್ದೀರಿ!

**Sri D. DEVARAJ URS.**—I take objection to the statement made. This is not the occasion to make statement. The hon. Member can ask for any clarification. If any comments have to be made, there are other occasions.

ಶ್ರೀ ಎಸ್. ಬಂಗಾರಪ್ಪ.—ಬೇರೆ ಬೇರೆ ವಿಷಯಗಳು ಚರ್ಚೆಗೆ ಬರುವವರೆಗೂ ನಾವು ಕಾಯುತ್ತ ಕುಳಿತಿರುವುದಕ್ಕಾಗುವುದಿಲ್ಲ. ಮಿನಿಮಂ ಫೋರ್ಸ್ ಎಂದರೆ ಎಷ್ಟು ಫೋರ್ಸ್ ಪ್ರಯೋಗ ಮಾಡಿದರು.........

**Sri D. DEVARAJ URS.**—This is not in order. He can ask for clarifications.

ಶ್ರೀ ಎಸ್. ಬಂಗಾರಪ್ಪ.—ನಾನು ಯೀಲ್ಡ್ ಆಗಿಲ್ಲ. ಮಾನ್ಯ ಸಭಾ ನಾಯಕರಿಗೆ ಇಷ್ಟೂ ಸಹನೆ ಇಲ್ಲವೆನ್ನುವುದಾದರೆ.........

ಶ್ರೀ ಡಿ. ದೇವರಾಜ್ ಅರಸ್.—ನಾನು ಕ್ರಿಯಾಲೋಪವನ್ನು ಎತ್ತಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಅಫ್ ಆರ್ಡರ್ ದುರುಪಯೋಗ ಪಡಿಸಿಕೊಳ್ಳುತ್ತೀರಿ.

ಶ್ರೀ ಡಿ. ದೇವರಾಜ್ ಅರಸ್.—ನಾನು ದುರುಪಯೋಗಪಡಿಸುತ್ತಿಲ್ಲ, ತಾವು ದುರುಪಯೋಗ ಪಡಿಸುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಪಾಯಿಂಟ್ ಆಫ್ ಆರ್ಡರ್ ಎತ್ತುತ್ತೇನೆಂದು ತಾವು ಹೆದರಿಸುತ್ತಿದ್ದೀರಿ. ತಾವು ದುರುಪಯೋಗಪಡಿಸುತ್ತಿದ್ದೀರಿ ಎಂದು ನಾನು ಸಭಾಧ್ಯಕ್ಷರ ಮೂಲಕ ತಮ್ಮ ಅವಗಾಹನೆಗೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆ.

ಮಿನಿಮಂ ಫೋರ್ಸ್ ಎಂದು ಉಪಯೋಗ ಮಾಡಿದ್ದಾರಲ್ಲ ಅದು ಬಹಳ ಅನ್ಯಾಯ, ಈ ನಾಲ್ಕು ವಿಷಯಗಳ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† **Sri C. M. ARUMUGHAM.**—Madam, I was carefully listening when our Minister S. M. Krishna was saying that the Trade Unions' representatives were not forthcoming. In this connection I want to make a reference. Did you send for labour machinery—did the Assistant Commissioner for Labour or the Commissioner for Labour who is in Bangalore, was summoned to discuss the issue on behalf of labour? The second point is, you were pleased to say that there was some lathi charge and some 58 persons, police Superintendent and some constables were injured. I want to know through the Chair whether any worker, man or woman worker, was arrested, whether there was any prosecution in this behalf? I want to know out of 58 who were assaulted, whether any woman workers were there.

I have one information. It appears though this is a public sector management, they were not diplomatic enough in dealing with the workers on that day. I was told by the workers that there are two unions, one is the INTUC and another controlled by the Jan Sangh. Though I belong to the Republic Party of India my union is affiliated to the INTUC. I am told that the officers there are a bit lenient to the Union controlled by the Jan Sangh and that is the reason why the workers of that factory are not coming forward and the officers are insisting the workers that they should have a common union. You are proclaiming to have a socialist society. Whenever there is a dispute in an industry you should not indent on the police to disperse the crowd. It is highly irregular. I want to know whether the police in the discharge of their duties went out of their way. I want to know the number of persons who have been prosecuted or arrested.

† ಶ್ರೀ ಎಚ್. ಡಿ. ದೇವೇಗೌಡ.—ನನಗೆ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ. ಏನೆಂದರೆ, ಅವರ ಹೇಳಿಕೆಯನ್ನು ಪೋಲೀಸಿನವರ ವರದಿಯ ಆಧಾರದ ಮೇಲೆ ಮಾಡಿದ್ದಲ್ಲ, ಕೈಗಾರಿಕೆಯ ಮ್ಯಾನೇಜ್‌ಮೆಂಟಿನವರು ಕೊಟ್ಟಿರುವ ರಿಪೋರ್ಟ್ ಎಂದು ಹೇಳಿದರು. ಮಾನ್ಯ ಮಂತ್ರಿಗಳು ಎಲ್ಲ ವಿಚಾರಗಳನ್ನೂ ಸರಿಯಾಗಿ ವಿಚಾರಿಸಿ ಹೇಳಿಕೆಯನ್ನು ಮಾಡಿದ್ದಾರೆಯೇ? ಹಿಂದೆ ಗುಲ್ಬರ್ಗದಲ್ಲಿ ನಡೆದ ಒಂದು ಘಟನೆಯ ಬಗ್ಗೆ ಉತ್ತರ ಕೊಡುತ್ತ ಆ ಘಟನೆ ಸಂಬಂಧದಲ್ಲಿ ವಿಚಾರಣೆ ಆಗಬೇಕಾದ್ದಿಲ್ಲ ಎಂದು ಹೇಳಿದರು. ಆದರೆ ಅವರ ಸಹೋದ್ಯೋಗಿ ಮಂತ್ರಿಯವರು ಗುಲ್ಬರ್ಗಕ್ಕೆ ಹೋಗಿ, ಸ್ಥಳ ಸನ್ನಿವೇಶ ಪರಿಶೀಲನೆ ಮಾಡಿಕೊಂಡು ಬಂದು ವಿಚಾರಣೆ ಆಗಬೇಕೆಂದು ಒತ್ತಾಯ ತಂದುದರಿಂದ ವಿಚಾರಣೆಯನ್ನು ನಡೆಸಲು ಒಬ್ಬ ಅಧಿಕಾರಿಯನ್ನು ನೇಮಿಸಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಿಲ್ಲ ಎಂದು ಹೇಳಿದ್ದೆ.

ಶ್ರೀ ಎಚ್. ಡಿ. ದೇವೇಗೌಡ.—ಜುಡಿಷಿಯಲ್ ಎನ್‌ಕ್ವೈರಿಯೇ ಅಥವಾ ಐ.ಎ.ಎಸ್. ಅಧಿಕಾರಿಯಿಂದ ವಿಚಾರಣೆಯೇ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ಮಾಡಿರಲಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಕೇಳಿದ್ದು ಜುಡಿಷಿಯಲ್ ಎನ್‌ಕ್ವೈರಿ ಎಂದು. ಅದರ ಬಗ್ಗೆ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೇವಲ ಅಧಿಕಾರಿಗಳ ರಿಪೋರ್ಟ್ ಮೇಲೆ ಮುಖ್ಯ ಮಂತ್ರಿಗಳು ಈ ಸಭೆಯ ಗಮನಕ್ಕೆ ವಿಷಯವನ್ನು ತರುವಾಗ, ವಿಚಾರಣೆ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಅದೇ ರೀತಿ ಕೈಗಾರಿಕಾ ಮಂತ್ರಿಗಳು ಅಧಿಕಾರಿಗಳ ವರದಿಯನ್ನು ಆಧಾರವಾಗಿಟ್ಟುಕೊಂಡು ಈ ಹೇಳಿಕೆಯನ್ನು ಕೊಟ್ಟಿದ್ದಾರೆಯೇ ಎನ್ನುವ ವಿಚಾರದಲ್ಲಿ ವಿಷಯ ಉದ್ಭವವಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ಹೇಳಿಕೆಯನ್ನು ಮಾಡುವುದಕ್ಕೆ ಯಾವುದಾದರೂ ಒಂದು ಆಧಾರ ಬೇಕು.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಅಧಿಕಾರಿಗಳು ಕೊಟ್ಟಿರುವ ವರದಿಯನ್ನು ನಂಬಿ ವಿಚಾರಣೆ ಮಾಡುವುದಿಲ್ಲವೆಂದು ಹೇಳಿ ಇನ್ನೊಬ್ಬ ಮಂತ್ರಿಗಳು ಒತ್ತಾಯ ತಂದುದರಿಂದ ವಿಚಾರಣೆಗೆ ಒಪ್ಪಿಗೆ ಕೊಟ್ಟಿದ್ದಾರೆ. ನಮಗೆ ಇದು ಒಂದು ಅನುಭವವಾಗಿದೆ. ಇಲ್ಲಿ ಪೋಲೀಸು ಎಕ್ಸೆಸ್ ಆಗಿದೆ ಎಂದು ಕೆಲ ಮಾನ್ಯ ಸದಸ್ಯರು ತಿಳಿಸುತ್ತಾ ಈ ಸಭೆಯ ಮುಂದೆ ರಕ್ತದ ಕರೆಯುಳ್ಳ ಬಟ್ಟೆಗಳನ್ನೂ ಪ್ರದರ್ಶನ ಮಾಡಿ ತೋರಿಸಿದರು. ಇದರ ಬಗ್ಗೆ ನಾನು ಹೆಚ್ಚು ಏನೂ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡುತ್ತಾರೋ ಇಲ್ಲವೇ ಸೀನಿಯರ್ ಐ.ಎ.ಎಸ್. ಅಧಿಕಾರಿಗಳ ಎನ್‌ಕ್ವೈರಿ ಮಾಡುತ್ತಾರೋ ಅದು ನನಗೆ ಗೊತ್ತಿಲ್ಲ. ನನಗೆ ಗೊತ್ತಿರುವ ಹಾಗೆ ಸುಮಾರು ಮೂರು ತಿಂಗಳಿಗೆ ಮುಂಚೆಯೇ ಇಂತಹ ಒಂದು ಅನಾಹುತವಾಗುತ್ತಿತ್ತು ಎಂದು ಕೇಳಿದ್ದೇನೆ. ಅಧಿಕಾರಿಗಳಿಗೆ ಇದು ತಿಳಿದಿದ್ದರೂ ಇದರ ಬಗ್ಗೆ ಯಾವುದೇ ಮುಂಜಾಗರೂಕತೆ ಕ್ರಮಗಳನ್ನು ಏತಕ್ಕಾಗಿ ತೆಗೆದುಕೊಳ್ಳಲಿಲ್ಲ? ಇಲ್ಲಿ ಮರಣ ಹೊಂದಿದ ಕಾರ್ಮಿಕ ಸುಮಾರು 11 ಗಂಟೆಗೆ ಅನ್‌ಕಾನ್‌ಷಸ್ ಆಗಿ ಇದ್ದರೂ ಅಲ್ಲಿ ಮೂರು ಗಂಟೆ ಕಾಲದವರೆಗೆ ಯಾವ ಒಂದು ವ್ಯಾನೂ ಕೊಡಲಿಲ್ಲ ಎಂದು ಕೇಳುತ್ತೇನೆ. ಇದರಲ್ಲಿ ತಮ್ಮ ಅಧಿಕಾರಿಗಳು ಮಾಡಿರುವ ಕೆಲಸಗಳನ್ನು ಸಮರ್ಥನೆ ಮಾಡಿಕೊಳ್ಳುವಂತಹ ಹೇಳಿಕೆ ಇಲ್ಲಿ ಕೊಡಲಾಗಿದೆ. ಇದರ ಬಗ್ಗೆ ನಮ್ಮ ಕಡೆ ಇರುವ ಸದಸ್ಯರುಗಳಿಗೆ ಸಾಕಷ್ಟು ಮಾಹಿತಿಗಳೂ ಇವೆ. ಆದುದರಿಂದ ಇಲ್ಲಿ ಎಲ್ಲರಿಗೂ ನಂಬಿಕೆ ಬರುವಂತಹ ಒಂದು ಆಶ್ವಾಸನೆಯನ್ನು ಸಭಾ ನಾಯಕರು ಕೊಡುತ್ತಾರೆಯೇ?

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—ಇಲ್ಲಿ ಎರಡು ಯೂನಿಯನ್‌ಗಳು ಇವೆ ಎಂದು ತಿಳಿದುಬರುತ್ತದೆ. ಇದರಲ್ಲಿ ಒಂದಕ್ಕೊಂದು ಘರ್ಷಣೆಗಳು ಆಗಾಗ್ಗೆ ನಡೆಯುತ್ತಿತ್ತು ಎಂದು ಕೇಳುತ್ತೇವೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸುತ್ತಾರೆಯೇ?

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಇಲ್ಲಿ ಎರಡು ಕಾರ್ಮಿಕ ಸಂಘಗಳು ಇದ್ದವು ಎಂದು ಹೇಳಿರುವುದರಿಂದ ಇದರಲ್ಲಿ ಯಾರಿಂದಲಾದರೂ ಪ್ರಚೋದನೆ ನಡೆದು ಇಂತಹ ಗಲಭೆಗಳಿಗೆ ಅವಕಾಶವಾಯಿತೇ ಎಂಬುದನ್ನು ತಾವು ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಇದರಲ್ಲಿ ಎರಡು ಕಡೆಯಿಂದಲೂ ಪ್ರಚೋದನೆಗಳು ಆದವು ಎಂದು ಸರ್ಕಾರದವರು ತಮ್ಮ ಹೇಳಿಕೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ತಮಗೆ ಇದರಲ್ಲಿ ಪ್ರಚೋದನೆ ನಡೆಯುತ್ತಿದೆ ಎಂದು ಗೊತ್ತಾದ ಮೇಲೆ ಇಂತಹ ಪ್ರಚೋದಕರ ಮೇಲೆ ಮುಂಜಾಗರೂಕತೆಗಾಗಿ ತಕ್ಕ ಕಾರ್ಯಕ್ರಮವನ್ನು ಏಕೆ ಕೈಗೊಳ್ಳಲಿಲ್ಲ? ಇಲ್ಲಿ ಸತ್ತ ಕಾರ್ಮಿಕನು ಸಾಯುವುದಕ್ಕೇನು ಕಾರಣ ಎನ್ನುವುದನ್ನೂ ಕೊಡಲಿಲ್ಲ. ತಮ್ಮ ಹೇಳಿಕೆಯಿಂದ ಏನು ಅರ್ಥವಾಗುತ್ತೆ ಎಂದರೆ ಇಲ್ಲಿರುವವರೆಲ್ಲಾ ಬರೀ ಪುಂಡರು ಎನ್ನುವ ಅನುಮಾನ ಬರುತ್ತದೆ ಮತ್ತು ನಿಮ್ಮ ಅಧಿಕಾರಿಗಳು ಏನು ಇದರಲ್ಲಿ ಮ್ಯಾನೇಜು ಮಾಡುತ್ತಿದ್ದಾರೆ ಅವರ ಜವಾಬುದಾರಿ ಏನೂ ಇಲ್ಲಲ್ಲ ಎಂದು ಹೇಳುವುದು ತಪ್ಪು ಆಗುತ್ತದೆ. ಇಲ್ಲಿನ ಕಾರ್ಮಿಕರಲ್ಲಿ ಒಬ್ಬರಿಗೊಬ್ಬರಿಗೆ ಹೊಡೆದಾಟವಾಗಿ ಇಂತಹ ಒಂದು ಭಯಂಕರ ಪರಿಸ್ಥಿತಿ ಬಂದಿದೆ. ಆದರೆ ಇದರಲ್ಲಿ ಇದ್ದ ಅಧಿಕಾರಿಯಾಗಿರುವವರು ಯಾವಾಗ ಕಾರ್ಮಿಕನನ್ನು ಕೆಲಸಕ್ಕೆ ನೇಮಿಸಿದರೋ ಅವರ ಹೊಣೆಗಾರಿಕೆ ಏನು ಇದರಲ್ಲಿ ಎನ್ನುವುದನ್ನು ಅವರ ಮೇಲೆ ಹೊರಿಸಲಿಲ್ಲ. ಯಾವ ಅಧಿಕಾರಿಯ ಹೊಣೆಗಾರಿಕೆಯೂ ಇದರಲ್ಲಿ ಇಲ್ಲ ಎನ್ನುವುದು ಇದರಲ್ಲಿ ಗೊತ್ತಾಗುತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮೀ ಇದರಲ್ಲಿ ಒಬ್ಬ ಕಾರ್ಮಿಕ ಸತ್ತ ಎಂದು ಹೇಳಿದ್ದಾರೆ. ಆದರೆ ಯಾವ ರೀತಿ ಸತ್ತನು ಎನ್ನುವ ವಿವರಗಳು ಬಂದಿಲ್ಲ, ಇದರಲ್ಲಿ ಮ್ಯಾನೇಜುಮೆಂಟಿನವರು ಮೈಲ್ಡ್ ಲಾಠಿ ಚಾರ್ಜು ಎಂದು ಹೇಳುತ್ತಾರೆ ಆದರೆ ಇಲ್ಲಿ ಆಗಿರುವುದು ನೋಡಿದರೆ ಜನರ ಮೈ ಮೇಲೆ ಸಿಕ್ಕಾಪಟ್ಟೆ ಹೊಡೆದಿರುತ್ತಾರೆ. ಇದು ಸರಿಯೇ?

(ಶ್ರೀ ಟಿ. ಆರ್. ಶಾಮಣ್ಣ)

ಎರಡನೆಯದು ಇದರಲ್ಲಿ ಎರಡು ಕಾರ್ಮಿಕರ ಯೂನಿಯನ್‌ಗಳಿವೆ. ಒಂದು ಯೂನಿಯನ್‌ನವರಿಂದ ಬೇಕೆಂತಲೇ ಹೊಡೆದರು ಎನ್ನುವ ಆರೋಪ ಬಂದಿದೆ, ಇದು ಸರಿಯೇ? ಮತ್ತು ಪೋಲೀಸರು ಇಲ್ಲಿ ಟಿಯರು ಗ್ಯಾಸ್ ಉಪಯೋಗಿಸಿ ಜನರ ಮೇಲೆ ಚದುರಿಸಿದರು ಎಂದು ಹೇಳುತ್ತಾರೆ. ಆದರೆ ಇದರಲ್ಲಿ ಹೆಚ್ಚು ಜನರನ್ನು ಹೊಡೆದಿದ್ದಾರೆ ಮತ್ತು ಇದರಲ್ಲಿ ಸುಮಾರು 68 ಮಂದಿಯನ್ನು ಇಂದು ಕೋರ್ಟಿಗೆ ಕರೆದು ತಂದಿದ್ದರು ಎಂದು ಕೇಳುತ್ತೇನೆ. ಇದರಲ್ಲಿ ಕೆಲವರು ನಿರ್ದೋಷಿಗಳೂ ಇದ್ದಾರೆ ಮತ್ತು ಇಲ್ಲಿ ಹೆಂಗಸರ ಮೇಲೆ ಹೊಡೆದಿರುವ ವಿಚಾರಗಳಿವೆ. ಇದರ ಬಗ್ಗೆ ಸರಿಯಾದ ವಿವರ ಕೊಡುತ್ತಾರೆಯೇ?

ಶ್ರೀ ಎಸ್. ಎಂ. ಕೃಷ್ಣ.—ಸ್ವಾಮಿ, ಇದರಲ್ಲಿ ಹಲವಾರು ಪ್ರಸಂಗಗಳನ್ನು ಮಾನ್ಯ ಸದಸ್ಯರು ಸೂಚಿಸಿದ್ದಾರೆ ಮತ್ತು ಕೆಲವು ಆಧಾರರಹಿತವಾದ ಅಪಾದನೆಗಳನ್ನೂ ಮಾಡಿದ್ದಾರೆ ಮತ್ತು ನಮ್ಮ ಮಾದರಿ ಸಮಾಜವಾದವನ್ನು ಅಣಕಿಸಿಯೂ ಮಾತಾಡಿದ್ದಾರೆ. ಇದರ ಬಗ್ಗೆ ವಿಶ್ಲೇಷಣೆ ಮಾಡಲು ನಾನು ಈ ಗಂಭೀರ ಸಮಯವನ್ನು ಉಪಯೋಗಿಸಿಕೊಳ್ಳುವುದಕ್ಕೆ ಇಷ್ಟ ಪಡುವುದಿಲ್ಲ. ಶ್ರೀ ಅಮಲನಾಥನ್‌ರವರ ನಿಧನಕ್ಕೆ ಕಾರಣವೇನು; ಇದು ಸ್ವಾಭಾವಿಕವಾಗಿ ಬಂದ ಮರಣವೇ ಇಲ್ಲವೇ ಅಸ್ವಾಭಾವಿಕವಾದ ಮರಣವೇ, ಇವೆಲ್ಲಾ ಪ್ರಸಂಗಗಳು ಇಲ್ಲಿ ಎದ್ದು ಕಾಣುವ ಅಂಶ. ಅಮಲನಾಥನ್‌ರವರು ಮಾಡುತ್ತಿದ್ದ ಕೆಲಸ ಏನು ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡಬೇಕು. ಇವರು ಇಲ್ಲಿದ್ದ ಒಂದು ಟ್ರಾನ್ಸ್‌ಫಾರ್ಮರ್ ಮೇಲಿರುವ ಲಿಡ್ ಎಂದರೆ ಮುಚ್ಚಳ ಕ್ಲೀನು ಮಾಡುತ್ತಿದ್ದರು, ಆಗ ಟ್ರಾನ್ಸ್‌ಫಾರ್ಮರು ಕೆಲಸ ಮಾಡುತ್ತಿರಲಿಲ್ಲ. ಅವರು ಕೇವಲ ನಾಲ್ಕು ಅಡಿ ಎತ್ತರದಲ್ಲಿ ಕೆಲಸ ಮಾಡುತ್ತಿದ್ದರು. ನಮಗೆ ಬಂದಿರತಕ್ಕ ವರದಿ ಪ್ರಕಾರ ಶ್ರೀ ಅಮಲನಾಥನ್ ರವರಿಗೆ ಫಿಟ್ಸ್ ಎನ್ನುವ ರೋಗ ಆಗಾಗ್ಗೆ ಬರುತ್ತಿತ್ತು ಎಂದು ಇದೆ.

(ಇಂಟರಪ್‌ಷನ್ಸ್)

ನಾನು ಹೇಳುವ ಮಾತನ್ನು ಕೇಳುವ ಸೌಜನ್ಯವನ್ನು ತಾವೇಕೆ ತೋರಿಸುತ್ತಿಲ್ಲ?

ಶ್ರೀ ಡಿ. ದೇವರಾಜಅರಸ್.—ತಾವೆಲ್ಲಾ ಸರಕಾರ ಹೇಳುವ ಮಾತುಗಳು ಸರಿಯೇ ಅಲ್ಲ ಎನ್ನುವ ತೀರ್ಮಾನಕ್ಕೆ ಬಂದ ಹಾಗೆ ಕಾಣುತ್ತದೆ. ತಾವು ಯಾವ ಮಾಹಿತಿಗಳನ್ನು ಪಡೆದು ಕೊಂಡು ಬಂದು ಇಲ್ಲಿ ಹೇಳಿದ್ದೀರೋ ತಾವು ಆ ರೀತಿ ಹೇಳಿರುವುದನ್ನು ನಾವು ನಮ್ಮ ಸರಕಾರದ ವತಿಯಿಂದ ಎಕ್ಸಾಮಿನ್ ಮಾಡಿಸಿ ಸರಕಾರದ ಪರವಾಗಿ ಇಲ್ಲಿ ಹೇಳುತ್ತಿದ್ದೇವೆ. ಒಂದು ವೇಳೆ ನಾವು ಇಷ್ಟು ಹೇಳಿದರೂ ಇದರಲ್ಲಿ ನಿಜಾಂಶವಿಲ್ಲ ಎನ್ನುವ ಅನುಮಾನ ಬಂದರೆ ತಮಗೆ ದೊರೆತಿರುವ ವಿವರಗಳನ್ನು ಸರಕಾರದ ಕಡೆಗೆ ಕಳುಹಿಸಬಹುದು. ನಮಗಿರುವ ಮೆಷಿನರಿಗಳ ಮೂಲಕ ನಾವು ಕೊಡುವುದು ಅಧಿಕೃತ ವಿವರಗಳು. ಇದರಲ್ಲಿ ನಾವು ಹೇಳುವುದು ಸರಿಯಿಲ್ಲ ನೀವು ಹೇಳುವುದೇ ಸರಿ ಎನ್ನುವ ಸಿದ್ಧಾಂತಕ್ಕೆ ತಾವು ಬಂದರೆ ನಾವೇನು ಹೇಳುವುದು; ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಏನೋ ಒಂದು ಉದ್ದೇಶವನ್ನು ಇಟ್ಟುಕೊಂಡು ಅಧಿಕಾರಿಗಳು ತಪ್ಪು ಮಾಡಿದ್ದರೂ ಅವರನ್ನು ಮುಚ್ಚಿಟ್ಟುಕೊಂಡು ಹೋಗುತ್ತಾರೆ ಎಂದು ಇಲ್ಲಿ ಹೇಳುತ್ತಾರೆ. ಇದರಲ್ಲಿ ತಪ್ಪೇ ಸಾಧಿಸಬೇಕು ಎಂದು ಇಲ್ಲಿ ನಾವು ಹೇಳುತ್ತಿಲ್ಲ. ನಮಗೆ ಪ್ರಾಮಾಣಿಕವಾಗಿ ನಮ್ಮ ಮುಂದೆ ಇದುವರೆಗೆ ಗೊತ್ತಿರುವ ವಿಚಾರಗಳನ್ನೆಲ್ಲಾ ಹೇಳಲು ಪ್ರಯತ್ನ ಮಾಡಿದ್ದೇವೆ. ಹಾಗೆ ನಾವು ಹೇಳಿರುವುದೆಲ್ಲಾ ಸರಿಯಿಲ್ಲ ಎಂದು ಹೇಳಿದರೆ ಇದಕ್ಕಿಂತ ಹೆಚ್ಚಿಗೆ ಹೇಳುವುದೇನಿದೆ? ಹೊಸ ವಿಚಾರಗಳನ್ನು ಗೊತ್ತಿರುವುದನ್ನು ಹೇಳಿದ್ದೇವೆ. ತಾವು ಇಲ್ಲಿ ಇಂತಹ ಪ್ರಶ್ನೆಗಳನ್ನು ಕೇಳುತ್ತೀರಿ ಎಂದು ನಾವು ನಿರೀಕ್ಷೆ ಮಾಡಿರಲಿಲ್ಲ. ಎಲ್ಲದರಲ್ಲೂ ತಾವು ಅನುಮಾನ ಪಡುವುದಾದರೆ ನಾವು ಹೇಳುವುದೇನಿದೆ? I must thank my friend Sri Arumugam, who while asking questions supplied us the information that there is a big rivalry between the two unions, the I.N.T.U.C. and the Jan Sangh.

2-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕೈಗಾರಿಕಾ ಸಚಿವರಲ್ಲಿ ಒಂದು ವಿನಂತಿ ಏನೆಂದರೆ, ಟ್ಯಾಂಕ್ ಕ್ಲೀನ್ ಮಾಡುತ್ತಿದ್ದ ನೌಕರನಿಗೆ ರೋಗ ಬರುತ್ತಿತ್ತು ಎಂಬುದು ತಿಳಿದಿದ್ದ ಮೇಲೆ, ಆತನ ಬಗ್ಗೆ ಮೊದಲೆ ಏತಕ್ಕೆ ಗಂಭೀರವಾಗಿ ಯೋಚನೆ ಮಾಡಬಾರದಾಗಿತ್ತು ಎಂಬುದು ನನ್ನ ಪ್ರಶ್ನೆ.

ಶ್ರೀ ಎಸ್. ಎಂ. ಕೃಷ್ಣ.—3 ತಿಂಗಳ ಕೆಳಗೆ ಅಮಲನಾಥನ್ ಅವರನ್ನು ಡಾಕ್ಟರ್ ಹತ್ತಿರ ಪರೀಕ್ಷೆಗೆ ಕರೆದುಕೊಂಡು ಹೋಗುವಾಗ ಅವರು ಡಾಕ್ಟರ್ ಮುಂದೆ ಹೋಗುವುದಕ್ಕೆ ಹಿಂಜರಿದರು. ಬಲಾತ್ಕಾರವಾಗಿ ಅವರನ್ನು ಡಾಕ್ಟರ್ ಮುಂದೆ ಹಾಜರ್ ಮಾಡಲಾಯಿತು. ಶ್ರೀ ಅಮಲನಾಥನ್ ಅವರು 12-15 ಗಂಟೆ ಸಮಯದಲ್ಲಿ ಕ್ಲೀನ್ ಮಾಡುತ್ತಿದ್ದಾಗ ಆತನನ್ನು ಟೆಕ್ನಿಕಲ್ ಸೂಪರಿಂಟೆಂಡೆಂಟ್ ನೋಡಿದರು. ಅದು ಆದ ಅರ್ಧ ಗಂಟೆಯೊಳಗೆ ಆತ ತನ್ನ ತಲೆಯನ್ನು ಟ್ಯಾಂಕ್‌ನೊಳಗೆ ಇಟ್ಟುಕೊಂಡಿದ್ದನ್ನು ಅನುಮಾನದ ಮೇಲೆ ಇನ್ನೊಬ್ಬರು ನೋಡಿದಾಗ, ಅವರ ಬಾಯಿಯಲ್ಲಿ ಜೊಲ್ಲು ಬರುತ್ತಿತ್ತು ಎಂದು ವರದಿಯಾಗಿದೆ. ಇದು ಸ್ವಾಭಾವಿಕವಾದ ಮರಣವೇ ಅಥವಾ ಅಸ್ವಾಭಾವಿಕವಾದ ಮರಣವೇ ಎಂಬುದನ್ನು ಹೇಳಬೇಕಾದರೆ ಇನ್ನು 8-10 ದಿವಸ ಬೇಕಾಗುತ್ತದೆ. ಡಾಕ್ಟರ್ ಅವರ ಕೆಮಿಕಲ್ ಎಕ್ಸಾಮಿನೇಷನ್‌ಗೆ ಅದನ್ನು ಕಳಿಸಿದ್ದಾರೆ. ಆ ವರದಿ ಬರಬೇಕಾದರೆ ಇನ್ನು ಹತ್ತು ದಿವಸ ಬೇಕಾಗುತ್ತದೆ. ಆ ವರದಿ ಬರುವುದಕ್ಕೆ ಮುನ್ನ ಈಗ ಬಂದಿರುವ ಡಾಕ್ಟರ್ ಅವರ ಅಭಿಪ್ರಾಯವೆಂದರೆ, ಇದು ಸ್ವಾಭಾವಿಕವಾದಂಥ ಮರಣವೇ ಹೊರತು, ಅಸ್ವಾಭಾವಿಕ ವಾದ ಮರಣವಲ್ಲ ಎಂಬುದು. ಆದರೆ ಆತ ತಿಂದಂಥ ಊಟದಲ್ಲಿ ಏನಾದರು ಪಾಯಿಸನ್ ಇತ್ತೆ ಎಂಬುದನ್ನು ಪರೀಕ್ಷೆ ಮಾಡಲು ಕೆಮಿಕಲ್ ಪರೀಕ್ಷೆಗೆ ಕಳುಹಿಸಲಾಗಿದೆ. ಅದರ ವರದಿ ಇನ್ನು ಹತ್ತು ದಿವಸಗಳಲ್ಲಿ ಬರುತ್ತದೆ, ಅದನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಊಟದಲ್ಲಿ ಏನಾದರು ಪಾಯಿಸನ್ ಇತ್ತೇ ಎಂಬುದನ್ನು ಪರೀಕ್ಷೆ ಮಾಡಲು ಕೆಮಿಕಲ್ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಅದರ ವರದಿ ಬರುವುದಕ್ಕೆ ಮೊದಲೇ ಇದು ಸ್ವಾಭಾವಿಕವಾದ ಮರಣ ಎಂದು ಡಾಕ್ಟರ್ ಅವರು ಹೇಳುವುದು ಸರಿಯೇ? ಅದು ಅವರ ಅವಿವೇಕತನವನ್ನು ತೋರಿಸುವುದಿಲ್ಲವೇ? ಈ ರೀತಿ ಸ್ಟೇಟ್‌ಮೆಂಟ್ ಮಾಡುವುದು ಕಾನೂನು ಬಾಹಿರವಲ್ಲವೇ? ಆದ್ದರಿಂದ ಇಲ್ಲಿ ಮಾನ್ಯ ಮಂತ್ರಿ ಗಳು ಒಂದಕ್ಕೊಂದು ಸಂಬಂಧವಿಲ್ಲದ ವಿಷಯಗಳನ್ನು ಹೇಳುವುದು ಸರಿಯಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಎರಡನೆಯ ವಿಚಾರವೆಂದರೆ ಪರಿಹಾರದ ವಿಚಾರ, ಮಾನ್ಯ ಕೃಷ್ಣನ್ ಅವರು ಹಲವಾರು ಕಾರ್ಮಿಕ ಸಂಘಗಳ ಅಧ್ಯಕ್ಷರಾಗಿದ್ದಾರೆ. ಕಾರ್ಖಾನೆಯಲ್ಲಿ ಕೆಲಸದ ಮೇಲೆ ಹಾಜರಾದಂಥ ಕಾಲದಲ್ಲಿ ಇಂತಹ ಅಪಘಾತಿಗಳಿಗೆ ತುತ್ತಾಗಿ ಯಾರಾದರು ಮರಣ ಹೊಂದಿದರೆ ಅವರ ಬಗ್ಗೆ ನಾವೆಲ್ಲರೂ ನಮ್ಮ ಸಂತಾಪ ಸೂಚಿಸತಕ್ಕದ್ದು ನಮ್ಮಗಳ ಮೊದಲ ಕರ್ತವ್ಯ. ಈ ರಾಜ್ಯ ಅವರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿರುವುದು ಅಗತ್ಯವಿದೆ. ಇದರಲ್ಲಿ ಎರಡು ಅಭಿಪ್ರಾಯಗಳಿಲ್ಲ. ಯಾವುದೇ ಕಾರ್ಖಾನೆಯಲ್ಲಿ ಕಾನೂನು ಪ್ರಕಾರ ಏನು ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್ ಸ್ಕೀಮ್ ಇರುತ್ತದೆಯೋ, ಅದರ ಪ್ರಕಾರ ಪರಿಹಾರವನ್ನು ಕೊಡಬೇಕು ಎಂಬುದು ಕಾನೂನು ಚೌಕಟ್ಟಿನಲ್ಲಿ ನಿಗದಿಯಾಗಿರುವ ವಿಚಾರ. ಆದರೆ ನಾವು ಈ ವಿಷಯದಲ್ಲಿ ಕೂಡಲೆ ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್‌ಗೆ ಶರಣು ಹೊಡೆಯಲಿಲ್ಲ. ಆತ ಸತ್ತ ಕೂಡಲೆ ಕಾರ್ಖಾನೆಯ ಮೇನೇಜಿಂಗ್ ಡೈರೆಕ್ಟರ್ ಅವರು ಮೃತರ ಸಂಬಂಧಿಕರನ್ನು ಕರೆಸಿ, ನಾವು ಇನ್ಶೂರೆನ್ಸ್‌ಗೆ ಕಾಯುವುದಿಲ್ಲ, ಈ ಕ್ಷಣದಲ್ಲೇ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಮತ್ತು ಮುಂದೆ ಹೆಚ್ಚು ಕೊಡಬೇಕೆಂದರೆ ಸರ್ಕಾರದ ಅಪ್ಪಣೆ ಪಡೆದುಕೊಂಡು ಇನ್ನೂ ಹೆಚ್ಚು ಸಹಾಯ ಮಾಡಬೇಕೆಂದು ನಿರೀಕ್ಷೆ ಇದ್ದರೆ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ ಎಂಬ ಭರವಸೆಯನ್ನು ಕೊಟ್ಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.— ಹತ್ತು ಸಾವಿರ ರೂಪಾಯಿ ಕೊಡಿ.

ಶ್ರೀ ಎಸ್. ಎಂ. ಕೃಷ್ಣ.—ಅವರು ಹತ್ತು ಸಾವಿರ ರೂಪಾಯಿ ಕೇಳಿದ್ದಾರೆ. ಅದನ್ನು ಮಾನವೀಯ ದೃಷ್ಟಿಯಿಂದ ನೋಡಿ ಎಷ್ಟು ಕೊಡಬಹುದು ಎಂಬುದನ್ನು ತೀರ್ಮಾನ ಮಾಡಿ, ಅಷ್ಟನ್ನೂ ಕೊಡುತ್ತೇವೆಂಬ ಭರವಸೆಯನ್ನು ಬಹು ಗಂಭೀರವಾದ ಈ ಸಮಯದಲ್ಲಿ ಕೊಡಬಯಸು ತ್ತೇನೆ. ಮೃತರ ಸಂಬಂಧಿಕರಿಗೆ ಕಾರ್ಖಾನೆಯಲ್ಲಿ ಬದಲಿ ನೌಕರಿಯನ್ನು ಕೊಡತಕ್ಕ ಆಶ್ವಾಸನೆ ಯನ್ನು ಕೂಡ ನಾವು ಮೃತರ ಕುಟುಂಬಕ್ಕೆ ಕೊಟ್ಟಿದ್ದೇವೆ. ನಾನು ನೆನ್ನೆ ತಾನೆ ದೆಹಲಿಯಿಂದ ಬಂದೆ. ಬಂದ ತಕ್ಷಣವೇ ಈ ಒಂದು ವಿಷಾದವಾದಂಥ ಘಟನೆ ನಡೆದಿದ್ದು ನನಗೆ ತಿಳಿದುಬಂತು. ಆ ರೀತಿ ತಿಳಿದ ಮೇಲೆ ನನ್ನ ಮನಸ್ಸಿಗೆ ಹೊಳೆದ ಪ್ರಥಮವಾದ ಒಂದು ಕಾರ್ಯಕ್ರಮವೆಂದರೆ, ಮೃತರ ಮನೆಗೆ ಹೋಗಿ ಮೃತರ ತಂದೆತಾಯಿಗಳಿಗೆ, ಅಣ್ಣತಮ್ಮಂದಿರಿಗೆ, ಅಕ್ಕತಂಗಿಯರಿಗೆ ಸರ್ಕಾರದ ಪರವಾಗಿ ನಮ್ಮ ಸಂತಾಪವನ್ನು ಸೂಚಿಸಬೇಕೆಂಬುದು; ಅದರಂತೆ ನಾನು ಜನರಲ್ ಮ್ಯಾನೇಜರ್ ಮತ್ತು ಮೇನೇಜಿಂಗ್ ಡೈರೆಕ್ಟರ್ ಅವರ ಜೊತೆಯಲ್ಲಿ ಮೃತರ ಕುಟುಂಬದವರು ವಾಸವಾಗಿರತಕ್ಕಂಥ ಜೀವನಹಳ್ಳಿಗೆ ಹೋಗಿ ಅವರನ್ನು ಸಂತೈಸಿ, ಎಲ್ಲ ವಿಧವಾದಂಥ ಅನುಕೂಲ

(ಶ್ರೀ ಎಸ್. ಎಂ. ಕೃಷ್ಣ)

ಗಳನ್ನು ಸರ್ಕಾರದ ಪರವಾಗಿ ಕೊಡುವುದಾಗಿ ಆಶ್ವಾಸನೆಯನ್ನು ಕೊಟ್ಟೆನು. ಈ ವಿಷಯವನ್ನು ಮಾನ್ಯ ಸಭೆ ಗಮನಿಸಬೇಕೆಂದು ನಾನಾದರೂ ಪ್ರಾರ್ಥನೆ ಮಾಡುತ್ತೇನೆ. ಕಾರ್ಖಾನೆಯ ಹತ್ತಿರ ನಡೆದಂಥ ಲಾಠಿ ಪ್ರಹಾರ ಲಘು ಲಾಠಿ ಪ್ರಹಾರವೋ ಅಥವಾ ತೀವ್ರವಾದಂಥ ಲಾಠಿ ಪ್ರಹಾರವೋ ಎಂದು ಅನೇಕ ಮಾನ್ಯ ಸದಸ್ಯರು ಕೇಳಿದರು. ಒಂದು ವಿಷಯವನ್ನು ಮಾನ್ಯ ಸದಸ್ಯರು ಗಮನದಲ್ಲಿ ಇಟ್ಟುಕೊಳ್ಳಬೇಕು. ಯಾವುದೇ ರಂಗಿನ ಸರ್ಕಾರ ಅಧಿಕಾರಕ್ಕೆ ಬರಲಿ, ನಾನು ಆ ಕಡೆ ಕುಳಿತ್ತಿದ್ದಾಗ ಯಾವುದಾದರು ಒಂದು ನಿಲುವಳಿ ಸೂಚನೆಯನ್ನು ದಿನನಿತ್ಯವೂ ಸರ್ಕಾರದ ಗಮನಕ್ಕೆ ತರುತ್ತಿದ್ದೆ. ಕಾರ್ಮಿಕರ ಬಗ್ಗೆ ಏನು ತೀವ್ರವಾದಂಥ ಅನುಕಂಪವನ್ನು ಮತ್ತು ಕಳಕಳಿಯನ್ನು ಆ ಕಡೆಯ ಸದಸ್ಯರು ತಳೆದಿದ್ದಾರೋ, ಅಷ್ಟೇ ತೀವ್ರವಾದಂಥ ಮತ್ತು ಅದಕ್ಕೂ ಮಿಗಿಲಾದ ಅನುಕಂಪವನ್ನು ಈ ಕಡೆ ಕುಳಿತಿರುವ ಸದಸ್ಯರು ಸಹ ತಳೆದಿದ್ದಾರೆ. ಮೃತರನ್ನು ನೋಡುವುದಕ್ಕೆ ಆ ಕಡೆಯ ಸದಸ್ಯರು ಯಾರಾದರು ಹೋಗಿದ್ದೀರಾ ?

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ತಾವು ಈ ಕಡೆ ಕುಳಿತುಕೊಂಡಿದ್ದ ಸಂದರ್ಭದಲ್ಲಿ ಇಂತಹ ಘಟನೆಗಳು ನಡೆದಾಗ ಮೃತರನ್ನು ನೋಡುವುದಕ್ಕೆ ಹೋಗಿದ್ದೀರಾ ?

ಶ್ರೀ ಎಸ್. ಎಂ. ಕೃಷ್ಣ.—ರಕ್ತಸಹಿತವಾದಂಥ ಬಟ್ಟೆಗಳನ್ನು ಪ್ರದರ್ಶನ ಮಾಡಿದಂಥ ಸದಸ್ಯರು, ಯಾರು ತೀರಿಹೋಗಿದ್ದಾರೆ, ಅವರನ್ನು ನೋಡಿಕೊಂಡು ಬರಲು ಹೋಗಬಹುದಿತ್ತು. ನಾನು ಬೌರಿಂಗ್ ಆಸ್ಪತ್ರೆ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಿಗೆ ಹೋಗಿ ನೊಂದ ನೌಕರರನ್ನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಜವಾಬ್ದಾರಿಯನ್ನು ನಮ್ಮ ಮೇಲೆ ಹಾಕಿ, ನಾವು ಏತಕ್ಕೆ ನೋಡಿಕೊಂಡು ಬರುವುದಕ್ಕೆ ಹೋಗಲಿಲ್ಲವೆಂದು ಕೇಳಿದರು. ಇದು ಸರಿಯಾದ ಉತ್ತರವಲ್ಲವೆಂದು ಹೇಳುತ್ತೇನೆ. ತಾವು ಮಾಡಿರತಕ್ಕಂಥ ಕರ್ತವ್ಯಲೋಪವನ್ನು ನಮ್ಮ ಮೇಲೆ ಹಾಕುತ್ತಿದ್ದೀರಿ. ನಮಗೂ ಸರ್ಕಾರದವರು ವಾಹನಗಳ ಸೌಕರ್ಯವನ್ನು ಒದಗಿಸಿದ್ದರೆ ಹೋಗಿ ನೋಡಿಕೊಂಡು ಬರುತ್ತಿದ್ದೆವು. ಕಾರ್ಮಿಕ ಮಂತ್ರಿಗಳು ಏನಾದರು ಹೋಗಿ ನೋಡಿಕೊಂಡು ಬಂದಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.— ತಾವು ಒಳ್ಳೆಯ ಭಾಷಣಕಾರರು ಎಂಬುದು ನನಗೆ ಗೊತ್ತಿದೆ. ತಾವು ಈ ಕಡೆಯ ಸದಸ್ಯರ ಕಡೆ ಕೈತೋರಿಸಿ ನಮಗೆ ಕಾರ್ಮಿಕರ ಬಗ್ಗೆ ಅನುಕಂಪ ಇಲ್ಲ ಎಂದು ಹೇಳಿದಿರಿ. ಮೃತರನ್ನು ನೋಡಿಕೊಂಡು ಬರತಕ್ಕ ಸೌಜನ್ಯತೆ ಈ ಕಡೆಯ ಸದಸ್ಯರಿಗೆ ಇಲ್ಲ ಎಂದು ಹೇಳಿದಿರಿ. ತಾವು ಮೃತರ ಮನೆಗೆ ಹೋಗಿ ಸಮಾಧಾನ ಮಾಡಿ ಕಣ್ಣೀರು ಹಾಕಿದ್ದು ಮೊಸಳೆ ಕಣ್ಣೀರು ಎಂದು ಹೇಳುತ್ತೇನೆ. ಆದಕಾರಣ ನಮಗೆ ಸೌಜನ್ಯತೆ ಇಲ್ಲ ಎಂದು ಹೇಳುವುದು ಅನುಚಿತ ಎಂದು ಹೇಳಬೇಕಾಗುತ್ತದೆ.

ಶ್ರೀ ಎಸ್. ಎಂ. ಕೃಷ್ಣ.—ನನ್ನ ಮಾನ್ಯ ಹಳೆಯ ಸ್ನೇಹಿತರಾದ ಶ್ರೀಮಾನ್ ದೇವೇಗೌಡರು ನನ್ನ ಬಾಯಿಯಲ್ಲಿ ಬಾರದೆ ಇರತಕ್ಕಂಥಾ ಮಾತುಗಳನ್ನು ನನ್ನ ಬಾಯಿಯಲ್ಲಿ ಹಾಕಬಾರದು ಎನ್ನುವ ಮಾತನ್ನು ನಾನು ಅವರಿಗೆ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ನಮ್ಮ ಮೇಲೆ ಒಂದು ಗಂಭೀರವಾದ ಆರೋಪಣೆಯನ್ನು ಮಾಡಿದ್ದಾರೆ. ನಾನು ಅವರಿಗೆ ಹೇಳುತ್ತೇನೆ, ನಾನು ಆ ಮರಣ ಹೊಂದಿದ ಕಾರ್ಮಿಕರ ಮನೆಗೆ ಹೋಗಿ ಆ ಕಾರ್ಮಿಕನನ್ನು ನೋಡಿಕೊಂಡು ಬಂದಿದ್ದೇನೆ. ಮಂತ್ರಿಗಳು ನೋಡಿಕೊಂಡು ಬರುವುದಕ್ಕೆ ಹೋದದ್ದು ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರುತ್ತದೆ. ಆದರೆ ನಾವು ಹೋದದ್ದು ಪತ್ರಿಕೆಗಳಲ್ಲಿ ಬರುವುದಿಲ್ಲ. ಹೀಗಿರುವಾಗ ಮಾನ್ಯ ಮಂತ್ರಿಗಳು ನಮ್ಮ ಮುಖಕ್ಕೆ ಮಸಿ ಬಳಿಯುವುದಕ್ಕೆ ಪ್ರಯತ್ನ ಮಾಡಬಾರದು.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಈಗ ಅಲ್ಲಿ ನಡೆದಿರತಕ್ಕಂಥಾ ಘಟನೆ ಏನಿದೆ ಅದು ತೀವ್ರವಾದ ಮತ್ತು ಎಲ್ಲರ ಗಮನವನ್ನೂ ಸೆಳೆಯುತಕ್ಕಂಥಾ ವಿಷಯವಾಗಿದೆ. ಈ ಸಂದರ್ಭದಲ್ಲಿ ಈ ಸಮಸ್ಯೆ ಏನಿದೆ ಇದೂ ನಿಗಾ ಇಟ್ಟು ಯೋಚನೆ ಮಾಡತಕ್ಕ ಗಂಭೀರವಾದ ವಿಷಯವಾಗಿದೆ. ಆ ಫ್ಯಾಕ್ಟರಿಯಲ್ಲಿ ಒಬ್ಬ ಕಾರ್ಮಿಕ ಮೃತಪಟ್ಟಿದ್ದಾನೆ. ಕಾರ್ಮಿಕರ ಮೇಲೆ ಪೋಲೀಸಿನವರು ಲಾಠಿ ಛಾರ್ಜ್ ಮಾಡಿದ್ದಾರೆ. ಈ ವಿಚಾರವಾಗಿ ಪೋಲೀಸಿನವರಿಂದ ಬಂದ ವರದಿಯನ್ನು ಮಾನ್ಯ ಮಂತ್ರಿಗಳು ಈ ಸಭೆಯಮುಂದೆ ಹೇಳಿದ್ದಾರೆ. ಪೋಲೀಸಿನವರ ವರದಿ ಹೇಗಿದೆ ಎಂದರೆ ಒಂದು ಕೇಸನ್ನು

ಮಹಜರ್ ನಡೆಸಿದಂತಿದೆ. ಕಾರ್ಮಿಕರ ವಿಚಾರವನ್ನು ನಿರಾಕರಿಸದೆ ಅದು ಯೋಚನೆ ಮಾಡಬೇಕಾದ ವಿಚಾರ ಎನ್ನುವುದನ್ನು ಅವರು ಕಂಡುಕೊಂಡಿದ್ದಾರೆ. ಇದು ಬಹಳ ಸಂತೋಷದ ವಿಚಾರ. ಈ ಘಟನೆ ಆಗಬಾರದಾಗಿತ್ತು. ಈಗ ಅದು ನಡೆದು ಹೋಗಿದೆ. ಕೆಲವು ಕಾರ್ಮಿಕರು ಆಸ್ಪತ್ರೆಯಲ್ಲಿ ಇದ್ದಾರೆ. ಈ ಸಂಬಂಧದಲ್ಲಿ ನಿರಪರಾಧಿಗಳು ಯಾರು ಇದ್ದಾರೆ ಅವರುಗಳನ್ನು ಕೋರ್ಟಿಗೆ ಹಾಕದಂತೆ ಮಾಡಬೇಕು. ಇಂದಿರಾಗಾಂಧಿಯವರ ನೇತೃತ್ವದಲ್ಲಿರತಕ್ಕ ಸರ್ಕಾರ ಕಾರ್ಮಿಕರ ಕಷ್ಟಸುಖಗಳನ್ನು ವಿಚಾರಿಸುವಂತಹ ಒಂದು ಆಶ್ವಾಸನೆಯನ್ನು ಕೊಡಬೇಕು. ಇಂಥಾ ಘಟನೆಗಳು ನಡೆಯದ ಹಾಗೆ ನೋಡಿಕೊಳ್ಳಬೇಕು, ಮತ್ತು ಪೋಲೀಸಿನವರ ದೌರ್ಜನ್ಯ ನಡೆಯದ ಹಾಗೆ ಸರ್ಕಾರ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಶ್ರೀಮಾನ್ ಮಂಜುನಾಥ್ ಅವರು ಹೇಳಿದಂತಹ ವಿಚಾರವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬಹುದಾಗಿದೆ, ಪೋಲೀಸಿನವರ ಲಾಠಿ ಪ್ರಹಾರದ ವಿಷಯದಲ್ಲಿ ಸಾಕಷ್ಟು ಮಾನ್ಯಸದಸ್ಯರು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಪೋಲೀಸಿನವರು ಈ ದೇಶದಲ್ಲಿ ಈಗಿರತಕ್ಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕಾರ್ಮಿಕರ ಮೇಲಾಗಲೀ ವಿದ್ಯಾರ್ಥಿಗಳ ಮೇಲಾಗಲೀ, ಯಾವುದೇ ಗುಂಪಿನ ಮೇಲಾಗಲೀ, ತಮ್ಮ ಅಸ್ತ್ರವನ್ನು ಉಪಯೋಗಿಸುವಾಗ ದೀರ್ಘವಾಗಿ ಆಲೋಚನೆ ಮಾಡಿ ಉಪಯೋಗಿಸಬೇಕು ಎನ್ನತಕ್ಕಂಥಾ ಸಿದ್ಧಾಂತಕ್ಕೆ ಸರ್ಕಾರ ಕಟ್ಟುಬದ್ಧಿದೆ. ಆದ್ದರಿಂದ ಪೋಲೀಸಿನವರು ಎಲ್ಲೇ ಮೀರಿ ವರ್ತಿಸಿದ್ದಾರೆ ಎನ್ನತಕ್ಕಂಥಾ ಅನುಮಾನ ಬಂದರೆ ಅವರ ಮೇಲೆ ತೀವ್ರವಾದ ಕ್ರಮವನ್ನು ಜರುಗಿಸುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ತಮಗೆ ಕೊಡುತ್ತೇನೆ.

ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಒಂದು ಪ್ರಶ್ನೆಯನ್ನು ಹಾಕಿದರು ; ದುರದೃಷ್ಟವಶಾತ್ ಈ ಒಂದು ಘಟನೆ ನಡೆದಿದೆ. ಎನ್. ಜಿ. ಇ. ಎಫ್. ಏನಿದೆ ಇದು ಸರ್ಕಾರಿ ಕ್ಷೇತ್ರದ ಉದ್ದಿಮೆಗಳಲ್ಲಿ ಅತ್ಯಂತ ಪ್ರಾಮುಖ್ಯವಾದ ಉದ್ದಿಮೆ. ಕಳೆದ ಹಲವಾರು ವರ್ಷಗಳಿಂದ ಸಹಸ್ರಾರು ಕಾರ್ಮಿಕರು ಇದಕ್ಕೆ ತಮ್ಮ ಬೆವರನ್ನು ಸುರಿಸಿದ್ದರಿಂದ ಇವೊತ್ತು ಕೊಂಚ ಮಟ್ಟಿಗೆ ಲಾಭ ಬರತಕ್ಕಂಥಾ ಸನ್ನಿವೇಶದಲ್ಲಿ ಈ ಒಂದು ಪರಿಸ್ಥಿತಿ ಒದಗಿ ಬಂದಿರುವುದಕ್ಕೆ ಮೂಲ ಕಾರಣವೇನೆಂದರೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮತ್ತು ಶ್ರೀಮಾನ್ ಆರ್ಮುಗಂ ಅವರು ಹೇಳಿದಹಾಗೆ ಈ ಫಾಕ್ಟರಿಯಲ್ಲಿ ಎರಡು ಯೂನಿಯನ್‌ಗಳು ಇವೆ. ಒಂದು ಎಂಪ್ಲಾಯೀಸ್ ಯೂನಿಯನ್ ಮತ್ತೊಂದು ವರ್ಕರ್ಸ್ ಯೂನಿಯನ್. ಹೀಗೆ ಅಲ್ಲಿ ಎರಡು ಯೂನಿಯನ್‌ಗಳು ಇವೆ. ಈ ಯೂನಿಯನ್‌ನಲ್ಲಿ ಒಂದು ವ್ಯಾಜ್ಯ ಪ್ರಾರಂಭವಾಗಿ ಆಫೀಸ್ ಬೇರರ್‌ಗಳು ಕೆಲವು ಜನ ಕಾರ್ಮಿಕರನ್ನು ಪ್ರಚೋದನೆ ಮಾಡಿದ್ದರಿಂದ ಈ ಒಂದು ಪ್ರಸಂಗ ನಡೆದಿದೆ ಎಂದು ಗೊತ್ತಾಗಿದೆ. ಈ ಫ್ಯಾಕ್ಟರಿ ನೇರವಾಗಿ ಯಾವ ಯೂನಿಯನ್ ಕಂಟ್ರೋಲ್‌ನಲ್ಲಿರಬೇಕು ಎನ್ನುವ ಬಗ್ಗೆ ಸಾಕಷ್ಟು ಜಿಜ್ಞಾಸೆ ಬಂದು ಈ ಒಂದು ದುರದೃಷ್ಟ ಘಟನೆ ನಡೆದಿದೆ. ಇದರ ಬಗ್ಗೆ ನಾವು ತೀವ್ರವಾಗಿ ಆಲೋಚನೆ ಮಾಡಬೇಕು. ಅಲ್ಲಿ ಸುಮಾರು 80 ಜನರನ್ನು ಪೋಲೀಸ್ ಕಷ್ಟಡಿಗೆ ತೆಗೆದುಕೊಂಡಿದ್ದರು. ಇವೊತ್ತು ಅವರೆಲ್ಲರನ್ನೂ ಬಿಡುಗಡೆ ಮಾಡಿದ್ದಾರೆ. ಕೆಲವರ ಮೇಲೆ ಮೊಕದ್ದಮೆಗಳನ್ನು ಕೋರ್ಟಿನಲ್ಲಿ ಹಾಕುವುದಕ್ಕೆ ಏರ್ಪಾಡು ಮಾಡುತ್ತಿದ್ದಾರೆ. ಶ್ರೀಮಾನ್ ಆರ್ಮುಗಂ ಅವರು ಒಂದು ಪ್ರಶ್ನೆಯನ್ನು ಕೇಳಿದರು. ಅದೇನೆಂದರೆ ಎನ್. ಜಿ. ಇ. ಎಫ್. ಮ್ಯಾನೇಜಮೆಂಟ್‌ನವರು ಜನಸಂಘದ ನಾಯಕತ್ವವನ್ನು ಪಡೆದಿರತಕ್ಕ ಯೂನಿಯನ್ನಿಗೆ ಪರೋಕ್ಷವಾಗಿಯೋ ಅಥವಾ ಅಪರೋಕ್ಷವಾಗಿಯೋ ಪ್ರೋತ್ಸಾಹವನ್ನು ಕೊಡುತ್ತಿದ್ದಾರೆ ಎಂದು ಹೇಳಿದರು. ನಾನು ಆ ಅಪಾದನೆಯನ್ನು ತೀವ್ರವಾಗಿ ಅಲ್ಲಗಳೆಯುತ್ತೇನೆ. ಇದಕ್ಕೆ ಸಾಕಷ್ಟು ಆಧಾರ ಇಲ್ಲ ಎನ್ನತಕ್ಕಂಥಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶ್ರೀಮಾನ್ ಮರಿಬಸವಾಚಾರಿ ಎನ್ನುವ ಒಂದು ಯೂನಿಯನ್ನಿನ ಉಪಾಧ್ಯಕ್ಷರನ್ನು ದಾಖಲು ಮಾಡಿದ್ದಾರೆ. ನಾನು ಅವರನ್ನು ಕಂಡು ಬಂದೆ. ನಾವು ಎರಡು ಯೂನಿಯನ್ನಿನ ಪದಾಧಿಕಾರಿಗಳ ಜೊತೆಯಲ್ಲಿಯೂ ಬಹಿರಂಗವಾಗಿ ಮಾತುಕತೆ ನಡೆಸಿದ್ದೇವೆ. ಮತ್ತು ಮ್ಯಾನೇಜ್‌ಮೆಂಟಿನವರ ಜೊತೆಯಲ್ಲಿಯೂ ಮಾತುಕತೆ ನಡೆಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ನಮ್ಮ ಮತ್ತು ಈ ರಾಜ್ಯದ ಹಿತದೃಷ್ಟಿಯಿಂದ ಈ ಒಂದು ಕೆಟ್ಟ ವಾತಾವರಣ ಮಾಯವಾಗಿ ಈ ಎನ್. ಜಿ. ಇ. ಎಫ್. ಫಾಕ್ಟರಿಯಲ್ಲಿ ಒಂದು ಸುಮಧುರ ವಾತಾವರಣ ಉಂಟಾಗಬೇಕು ಎನ್ನತಕ್ಕಂಥಾ ಈ ಸಭೆಯ ಹಾರೈಕೆಯನ್ನು ನಾವು ಗಮನದಲ್ಲಿಟ್ಟುಕೊಂಡು ಆ ಒಂದು ಪ್ರಯತ್ನವನ್ನು ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಈ ಸದನಕ್ಕೆ ಕೊಡುತ್ತೇನೆ.

ಅಧ್ಯಕ್ಷರು.—ಈಗ ಸರ್ಕಾರದ ಹೇಳಿಕೆ ಮತ್ತು ಅದರ ಬಗ್ಗೆ ಕ್ಲಾರಿಫಿಕೇಶನ್ಸ್ ಕೇಳಿದ ಮೇಲೆ ನಾನು ಎಲ್ಲಾ ಅಡ್‌ಜರ್ನ್‌ಮೆಂಟ್ ಮೋಷನುಗಳನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರವರೆ, ನಾನು ಪುನಃ ಮತ್ತೊಂದು ಅಡ್‌ಜರ್ನ್‌ಮೆಂಟ್ ಮೋಷನನ್ನು ತಮ್ಮ ಒಪ್ಪಿಗೆಗೋಸ್ಕರ ಕಳಿಸಿದ್ದೆ. ಅದು ಮೊನ್ನೆ 3-4-72ನೇ ತಾರೀಖಿನ ದಿವಸ ಸಾಯಂಕಾಲ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲೂಕಿನಲ್ಲಿ ನಡೆದ ಘಟನೆಯ ಬಗ್ಗೆ.

ಅಧ್ಯಕ್ಷರು.—ಅದು ನನ್ನ ಹತ್ತಿರ ಬಂದಿದೆ ; ತಾವು ಅದರ ಬಗ್ಗೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ತಾವು ಅಪ್ಪಣೆ ಕೊಡುವುದಾದರೆ ಹೇಳುತ್ತೇನೆ. ನಾನು ಈಗಾಗಲೇ ತಿಳಿಸಿದ ಹಾಗೆ ತಾರೀಕು 3-4-72ನೇ ದಿವಸ ಸಾಯಂಕಾಲ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ರಿಪ್ಪನ್‌ಪೇಟೆಯ ಗರ್ತಿಕೆರೆ ಎಂಬ ಒಂದು ಹಳ್ಳಿಯಲ್ಲಿ ಶಿವಮೊಗ್ಗದ ಟಿಂಬರ್ ಸ್ಮಗ್ಲಿಂಗ್ ಪ್ರಿವೆನ್‌ಶನ್ ಸ್ಕ್ವಾಡ್—ಇವರು ಕಳ್ಳನಾಟ ಹಿಡಿಯುವುದಕ್ಕೆಂದು ಅಲ್ಲಿ ಹೋಗಿದ್ದಾರೆ. ಅಲ್ಲಿ ಹೋದಾಗ ಯಾರು ಇದನ್ನು ಮಾಡಿದ್ದಾರೆ, ಅವರನ್ನು ಹಿಡಿಯಬಹುದಿತ್ತು. ಆದರೆ ಅವರು ಅಲ್ಲಿ ನಮ್ಮ ಪಕ್ಷದ ಹಾಗೂ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರೂ ಆದ ಶ್ರೀ ಸ್ವಾಮಿರಾವ್ ಮತ್ತು ತಾಲ್ಲೂಕು ಬೋರ್ಡ್ ಸದಸ್ಯರೂ ಆದ ಶ್ರೀ ಬಿ. ಎಸ್. ಪುರುಷೋತ್ತಮ ಎಂಬ ಇಬ್ಬರನ್ನು ವ್ಯಾನಿನಲ್ಲಿ ಹಾಕಿಕೊಂಡು ಅರಸಾಳು ಎಂಬ ಜಾಗದ ರೇಂಜರ್‌ರವರ ಬಂದೂಕು ಎಲ್ಲಾ ತೆಗೆದುಕೊಂಡು ಚೆನ್ನಾಗಿ ಹೊಡೆದು ಬಡಿದು ಅವರನ್ನು ಸಿಕ್ಕಾಪಟ್ಟೆ ಥಳಿಸಿದ್ದಾರೆ. ಅವರನ್ನು ವ್ಯಾನಿನಲ್ಲಿ ಹಾಕಿ ಈ ಅಧಿಕಾರಿಗಳು ತಮ್ಮ ಬೂಟ್ಸ್‌ನಿಂದ ಒದೆದಿದ್ದಾರೆ. ಮತ್ತು ಇದರಿಂದ ವಿಪರೀತವಾಗಿ ಗಾಯಗೊಂಡ ಸ್ವಾಮಿ ರಾವ್ ಎಂಬವರನ್ನು ಸಾಗರ ಆಸ್ಪತ್ರೆಯಲ್ಲಿ ಇನ್‌ಪೇಶಂಟ್ ಆಗಿ ಅಡ್ಮಿಟ್ ಮಾಡಿದ್ದಾರೆ. ಅವರಿಗೆ ಮೈ ಕೈಗೆ ಎಲ್ಲಾ ಗಾಯವಾಗಿ ಬಟ್ಟೆಯಲ್ಲಿ ರಕ್ತವಾಗಿದೆ. ಇದರಿಂದ ನಮ್ಮ ಸರ್ಕಾರದ ಅಧಿಕಾರಿಗಳು ಬಡ ಸಾಮಾನ್ಯ ಜನರಿಗೆ ಯಾವ ರೀತಿಯಲ್ಲಿ ಅನ್ಯಾಯ ಮಾಡಿ ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸುತ್ತಿದ್ದಾರೆಂಬುದನ್ನು ನಾವು ನೋಡಬೇಕಾಗಿದೆ. ಈ ರೀತಿ ಅಧಿಕಾರಿಗಳು ನಿರಪರಾಧಿ ಜನರನ್ನು ಥಳಿಸಿ ಹೊಡೆದು ಸಾಯಿಸುತ್ತಿದ್ದಾರೆ.

ಅಧ್ಯಕ್ಷರು.—ತಾವು ಈಗ ಹೇಳಿದ್ದು ಸಾಕು ; ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ತಾವು ಕುಳಿತುಕೊಳ್ಳಿ ನನಗೆ ಮಾತನಾಡಲು ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಯಾವಾಗಲೂ ತಾವು ಈ ರೀತಿ ಡಿಸ್‌ಒಬೇ ಮಾಡಬಾರದು. ತಾವು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ನಾನು ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ತಮ್ಮ ಅನುಮತಿ ಕೇಳಿ ಮಾತನಾಡುತ್ತಿದ್ದೇನೆ. ಆ ಅಧಿಕಾರಿ ಉರ್ದುವಿನಲ್ಲಿ ಮತ್ತು ಇಂಗ್ಲೀಷ್‌ನಲ್ಲಿ ಮಾತನಾಡುವಾಗ, ಇವರು ನೀವು ಕನ್ನಡದಲ್ಲಿ ಮಾತನಾಡಿ ಎಂದು ಹೇಳಿದರಂತೆ. ಅದಕ್ಕೆ ಅವರು "ನೀನೇನು ವಾಟಾಳ್ ನಾಗರಾಜ್ ಆಗಿದ್ದೀಯೋ ನಿನಗೆ ಕನ್ನಡ ಭಾಷಾಭಿಮಾನ ಇದೆಯೇ" ಎಂದೆಲ್ಲಾ ಹೇಳಿ ಬೇಡವಾದ ಅವಾಚ್ಯ ಶಬ್ದಗಳನ್ನು ಉಪಯೋಗಿಸಿ ಇವರಿಗೆ ಬೈಯ್ದಿದ್ದಾರೆ. ಅದಲ್ಲದೆ ನೀನೇನು ಅಸೆಂಬ್ಲಿ ಸದಸ್ಯನಾಗಲು ಹೊರಟಿದ್ದೀಯೋ ಎಂದೆಲ್ಲಾ ಹೇಳಿ ಸಿಕ್ಕಿದ ದೊಣ್ಣೆಯಲ್ಲಿ ಮತ್ತು ಬೂಟಿನಲ್ಲಿ ಹೊಡೆದಿದ್ದಾರೆ. ರಾಜ್ಯದಲ್ಲಿ ಇಂತಹ ಅಕ್ರಮ ಮತ್ತು ಅನ್ಯಾಯಗಳು ನಡೆಯುತ್ತಿರುವಾಗ ನಮ್ಮ ಸರ್ಕಾರದ ಟ್ರೆಜರಿ ಬೆಂಚಿನವರು ಸುಮ್ಮನೆ ಕೂತುಕೊಂಡಿದ್ದಾರೆ. ಆದ್ದರಿಂದ ನನ್ನ ಈ ಅರ್ಜನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡಬೇಕು ಮತ್ತು ಅಧಿಕಾರಿಗಳು ಜನತೆಯ ಮೇಲೆ ನಡೆಸತಕ್ಕ ದೌರ್ಜನ್ಯದ ಕೃತ್ಯಗಳನ್ನು ತಡೆಗಟ್ಟಬೇಕಾಗಿದೆ. ಈ ರೀತಿಯ ಘಟನೆ ಇವತ್ತು ಸಾಗರದಲ್ಲಿ ನಡೆಯಬಹುದು ; ನಾಳೆ ದೇವರಾಜ ಅರಸರ ಹುಣಸೂರಿನಲ್ಲಿ ಬೇಕಾದರೂ ನಡೆಯಬಹುದು. ಆದ್ದರಿಂದ ಇದಕ್ಕೆ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದು ಅಂತಹ ಪ್ರಾಮುಖ್ಯವಾದ ವಿಚಾರವಲ್ಲ. ಆದ್ದರಿಂದ ಇದನ್ನು ಅಡ್ಜರ್ನ್‌ಮೆಂಟ್ ಮೋಷನ್ ಆಗಿ ಸ್ವೀಕರಿಸುವ ಬದಲು ಕಾಲಿಂಗ್ ಅಟೆನ್‌ಷನ್ ಮೋಷನ್ ಆಗಿ ಟ್ರೀಟ್ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇದಕ್ಕೊಂದು ಹೇಳಿಕೆಯನ್ನು ಸರ್ಕಾರದವರು ಕೊಡಬೇಕು.

Sri D. DEVARAJ URS. -This is not the way to speak.

MADAM SPEAKER.—I except better behaviour from the hon. Member Sri Bangarappa.

ಶ್ರೀ ಎಸ್. ಬಂಗಾರಪ್ಪ.—ತಾವು ಕೂತುಕೊಳ್ಳಿ ಎಂದು ನಾನು ಹೇಳಿದ್ದೆ, ಅಷ್ಟೆ.

Sri D. DEVARAJ URS.—The hon. Member can't order the Speaker.

ಶ್ರೀ ಎಸ್. ಬಂಗಾರಪ್ಪ.—ತಾವು ದಯವಿಟ್ಟು ನನಗೆ ಮಾತನಾಡಲು ಅವಕಾಶ ಕೊಡಿ ಎಂದು ಅಧ್ಯಕ್ಷಣಿಯವರನ್ನು ಕೇಳಿದ್ದೇನೆ. ನೀವು ಮುಖ್ಯಮಂತ್ರಿಯವರು; ಜವಾಬ್ದಾರಿ ಸ್ಥಾನದಲ್ಲಿರುವವರು. ಅದೇ ರೀತಿ ಈ ಸದನದಲ್ಲಿ ನನಗೂ ಜವಾಬ್ದಾರಿ ಇದೆ. ಆದ್ದರಿಂದ ದಯವಿಟ್ಟು ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿಕೊಂಡು ಮಾತನಾಡುತ್ತಿದ್ದೆ.

ಅಧ್ಯಕ್ಷರು.—ನೀವು ಇಬ್ಬರೂ ಈಗ ಕೂತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ನಾನು ಹೇಳಿದ್ದಕ್ಕೆ ತಾವು ಗಮನ ಕೊಡಬೇಕು.

ಅಧ್ಯಕ್ಷರು.—ಮುಂದಿನ ವಿಷಯ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಹೆಸರಿಗೆ ಇರವು ಮೋಷನನ್ನು ಮೂವ್ ಮಾಡಬಹುದು.

## Motion to Elect Members to—

### (i) The Committee on Public Accounts.

Sri D. DEVARAJ URS (Chief Minister).—I beg to move:

"That this Assembly do proceed to elect twelve Members to the Committee on Public Accounts in accordance with sub-rule (1) of Rule 251 of the Rules of Procedure and Conduct of Business in the Mysore Legislative Assembly".

MADAM SPEAKER.—The question is:

"That this Assembly do proceed to elect twelve Members to the Committee on Public Accounts in accordance with sub-rule (1) of Rule 251 of the Rules of Procedure and Conduct of Business in the Mysore Legislative Assembly".

*The motion was adopted.*

The Calendar of events for the election is being circulated seperately.

### (ii) The Committee on Estimates.

Sri D. DEVARAJ URS .—I beg to move:

"That this Assembly do proceed to elect fifteen Members to the Committee on Estimates in accordance with sub-rule (1) of Rule 254 of the Rules of Procedure and Conduct of Business in the Mysore Legislative Assembly,"

MADAM SPEKER.—The question is :

"That this Assembly do proceed to elect fifteen Members to the Committee on Estimates in accordance with sub-rule (1) of Rule 254 of the Rules of Procedure and Conduct of Business in the Legislative Assembly".

*The motion was adopted.*

The calendar of events for the election is being circulated seperately.

### (iii) The Committee on Public Undertakings.

Sri D. DEVARAJ URS.—I beg to move :

"That this Assembly do proceed to elect nine Members to the Committee on Public Undertakings, in accordance with sub-rule (1) (a) of Rule 2 6-B of the Rules of Procedure and Conduct of Business in the Mysore Legislative Assembly."

MADAM SPEAKER.—The question is :

"That this Assembly do proceed to elect nine Members to the Committee on Public Undertakings, in accordance with sub-rule (1) (a) of Rule 256-B of the Rules of Procedure and Conduct of Business in the Mysore Legislative Assembly."

*The motion was adopted.*

Calendar of events for election is being circuleted separetaly.

### (iv) The Committee on Privileges

Sri D. DEVARAJ URS.—I beg to move :

"That this Assembly do proceed to elect seven Members to the Committee of Privileges in accordance with sub-rule (1) of Rule 257 of the Rules of Procedure and Conduct of Business in the Mysore Legislative Assembly."

MADAM SPEAKER.—The question is :

"That this Assembly do proceed to elect seven Members to the Committee of Privileges in accordance with sub-rule (1) of Rule 257 of the Rules of Procedure and Conduct of Business in the Mysore Legislative Assembly."

*The motion was adopted.*

Calendar of events for the election is being circulated seperately.

### (v) The Committee on Subordinate Legislation

SRI D. DEVARAJ URS.—I beg to move :

"That this Assembly do proceed to elect eight Members to the Committee on Subordinate Legislation in accordance with sub-rule (1) of Rule 262 of the Rules of procedure and Conduct of Business in the Mysore Legislative Assembly".

MADAM SPEAKER.—The question is :

"That this Assembly do proceed to elect eight Members to the Committee on Subordinate Legislation in accordance with sub-rule (1) of Rule 262 of the Rules of Procedure and Conduct of Business in the Mysore Legislative Assembly".

*The motion was adopted.*

Calendar of events for the election is being circulated separately.

### (vi) The Committee on Government Assurances

SRI DEVARAJ URS.—Sir, I beg to move :

"That this Assembly do proceed to elect eight Members to the Committee on Government Assurances in accordance with sub-rule (1) of Rule 267 of the Rules of Procedure and Conduct of Business in the Mysore Legislative Assembly".

MADAM SPEAKER.—The question is :

"That this Assembly do proceed to elect eight Members to the Committee on Government Assurances in accordance with sub-rule (1) of Rule 267 of the Rules of Procedure and Conduct of Business in the Mysore Legislative Assembly".

*The motion was adopted.*

Calendar of events for the election is being circulated separately.

### (vii) The Committee on Private Members' Bills and Resolutions

SRI D. DEVARAJ URS.—Sir, I beg to move :

"That this Assembly do proceed to elect ten Members to the Committee on Private Members Bills and Resolution in accordance with sub-rule (1) of Rule 267-A of the Rules of Procedure and Conduct of Business in the Mysore Legislative Assembly".

MADAM SPEAKER.—The question is:

"That this Assembly do proceed to elect ten Members to the Committee on private Members Bills and Resolutions in accordance with sub-rule (1) of Rule 267-A of the Rules of Procedure and Conduct of Business in the Mysore Legislative Assembly".

*The motion was adopted.*

Calendar of events for the election is being circulated separately

### (viii) The Committee on the Welfare of SCs. and STs.

Sri D. DEVARAJ URS.—Sir, I beg to move:

"That this Assembly do proceed to elect nine Members to the Committee on the Welfare of Scheduled Castes/Scheduled Tribes in accordance with Rule 267D of the Rules of Procedure and Conduct of Business in the Mysore Legislative Assembly".

MADAM SPEAKER.—The question is:

"That this Assembly do proceed to elect nine Members to the Committee on the Welfare of Scheduled Castes/Scheduled Tribes in accordance with Rule 267D of the Rules of Procedure and Conduct of Business in the Mysore Legislative Assembly."

*The motion was adopted.*

Calendar of events for the election is being circulated Separately

### (ix) House Committee

Sri D. DEVARAJ URS.—Sir, I beg to move:

"That this Assembly do proceed to elect eight Members to the House Committee in accordance with sub-rule (2) of Rule 332 of the Rules of Procedure and Conduct of Business in the Mysore Legislative Assembly."

MADAM SPEAKER.—The question is:

"That this Assembly do proceed to elect eight Members to the House Committee in accordance with sub-rule (2) of Rule 332 of the Rules of Proceedure and Conduct of Business in the Mysore Legislative Assembly."

*The motion was adopted.*

Calendar of events for the election is being circulated seperately.

### (x) The Senate of the Mysore University

SRI D. DEVARAJ URS.—Sir, I beg to move :

" That this Assembly do proceed to elect Six members to the Senate of the Mysore University in accordance with Section 15 of the Mysore University."

MADAM SPEAKER.—The question is :

"That this Assembly do proceed to elect Six members to the Senate of the Mysore University in accordance with Section 15 of the Mysore University".

*The motion was adopted.*

Calendar of events for the election is being circulated separately.

## Official Resolution

### *re* : Ratification to the amendments to the Constitution of India (25th Amendment) Bill, 1971.

SRI D. K. NAIKAR (Minister for Law and Parliamentary Affairs).— I beg to move :

"That this House ratifies the amendments to the Constitution of India falling within the purview of the proviso to Clause (2) of Article 368 thereof, proposed to be made by the Constitution (Twenty-fifth Amendment) Bill, 1971, as passed by the two Houses of Parliament."

MADAM SPEAKER.—Motion moved:

"That this House ratifies the amendments to the Constitution of India falling within the purview of the proviso to Clause (2) of article 368 thereof, proposed to be made by the Constitution (Twenty-fifth Amendment) Bill, 1971, as passed by the two Houses of Parliament."

ಈಗ ಮಾನ್ಯ ಮಂತ್ರಿಗಳು ಈ ಒಂದು ತಿದ್ದುಪಡಿಯ ವಿಧೇಯಕದ ಮೇಲೆ ಮಾತನಾಡುತ್ತಾರೆ. ನಂತರ ಸದಸ್ಯರು ಮಾತನಾಡಬಹುದು. ಈ ತಿದ್ದುಪಡಿ ಪ್ರತಿಗಳು ಈಗಾಗಲೇ ಮಾನ್ಯ ಸದಸ್ಯರಿಗೆ 1—4—72ರಲ್ಲಿಯೇ ಕಳುಹಿಸಲಾಗಿದೆ. ಸದಸ್ಯರ ಅನುಕೂಲಕ್ಕೋಸ್ಕರ ಈಗಲೂ ಅದರ ಒಂದು ಪ್ರತಿಯನ್ನು ಸಭೆಯ ಮುಂದೆ ಇಡಲಾಗಿದೆ.

3-00 P.M.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ವಿಷಯದಲ್ಲಿ ನಾನು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್ ಏನಿವೆಯೋ ಅದನ್ನು ಓದಲಿಕ್ಕೆ ಬಯಸುತ್ತೇನೆ.

Article 31 of the Constitution as it stands specifically provides that no Law providing for the compulsory acquisition or requisitioning of property which either fixes the amount of compensation or specifies

(ಶ್ರೀ ಡಿ. ಕೆ. ನಾಯ್ಕರ್)

the principles on which and the manner in which the compensation is to be determined and given shall be called in question in any court on the ground that the compensation provided by that law is not adequate. In the Bank Nationalisation case (1970, 3 S.C.R. 530), the Supreme Court has held that the Constitution guarantees right to compensation that is, the equivalent in money of the property compulsorily acquired. Thus in effect the adequacy of compensation and the relevancy of the principles laid down by the Legislature for determining the amount of compensation have virtually become justifiable in as much as the Court can go into the question whether the amount paid to the owner of the property is what may be regarded reasonably as compensation for loss of property. In the same case, the Court has also held that a law which seeks to acquire or requisition property for a public purpose should also satisfy the requirements of article 19 (1) (f).

2. The Bill seeks to surmount the difficulties placed in the way of giving effect to the Directive Principles of State Policy by the aforesaid interpretation. The word "compensation" is sought to be omitted from article 31 (2) and replaced by the word "amount". It is being clarified that the said amount may be given otherwise than in cash. It is also proposed to provide that article 19 (1) (f) shall not apply to any law relating to the acquisition or requisitioning of property for a public purpose.

3. The Bill further seeks to introduce a new article 31C which provides that if any law is passed to give effect to the Directive Principles contained in clauses (b) and (c) of article 39 and contains a declaration to that effect, such law shall not be deemed to be void on the ground that it takes away or abridges any of the rights contained in article 14, 19 or 31 and shall not be questioned on the ground that it does not give effect to those principles.

Sri S. BANGARAPPA.—Madam Speaker, I want to move this amendment to the Official Resolution relating to the Twenty-fifth Amendment Bill. –

> "That this House disapproves the Official Resolution relating to Constitution Bill 1971 (25th Amendment) on the ground that it does not reflect or propagate socialistic ideas and democratic notions."

ನನಗೆ ಈಗ ಇದರ ಮೇಲೆ ನಾಲ್ಕಾರು ವಿಷಯಗಳನ್ನು ಹೇಳಬೇಕೆಂಬ ಆಶೆ ಇದ್ದರೂ ಕೂಡ ಮಾನ್ಯ ಮಂತ್ರಿಗಳು ಈ ತಿದ್ದುಪಡಿ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ್ ಅಂಡ್ ರೀಜನ್ಸ್‌ಗಳನ್ನು ಓದಿದ ಮೇಲೆ, ಅದರ ನಕಲನ್ನು ಮಾನ್ಯ ಸದಸ್ಯರಿಗೆ ಮೊದಲೇ ಸರ್ಕ್ಯುಲೇಟ್ ಮಾಡಿಸಿದ್ದರೆ ಬಹಳ ಚೆನ್ನಾಗಿತ್ತು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಅಧ್ಯಕ್ಷರು.—ಅದರ ಪ್ರತಿಯೊಂದನ್ನು ಮಾನ್ಯ ಸದಸ್ಯರ ಅವಗಾಹನೆಗಾಗಿ ಈ ಸಭೆಯ ಮುಂದೆ ಇಟ್ಟಿದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಈ ಸಭೆಗೆ ಇಲ್ಲಿ ಬಂದ ಮೇಲೆ ಅದು ನನಗೆ ಸಿಕ್ಕಿದೆ. ಅನೇಕ ಸದಸ್ಯರೂ ಸಹ ಅದರ ಪ್ರತಿ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಈ ತಿದ್ದುಪಡಿ ಮಸೂದೆಯ ಮೇಲೆ ನಾನು ಈಗಾಗಲೇ ಒಂದು ತಿದ್ದುಪಡಿಯನ್ನು ಮಂಡಿಸಿದ್ದೇನೆ. ಇದರ ಬಗ್ಗೆ ಚರ್ಚೆ ಮಾಡಲು ಇಲ್ಲಿ ಹೆಚ್ಚಿಗೆ ಕಾಲಾವಕಾಶ ಕೊಡಬೇಕು.

MADAM SPEAKER.—This is a negative Amendment. This cannot be allowed.

ಶ್ರೀ ಎಸ್. ಬಂಗಾರಪ್ಪ.—ನನಗೆ ಈಗ ಅದು ಸಿಕ್ಕಿದೆ. ಆದ್ದರಿಂದ ಇದರ ಬಗ್ಗೆ ನಾನು ಮಾತನಾಡಬೇಕಾಗಿದೆ.

ಶ್ರೀ ಡಿ. ದೇವರಾಜ್ ಅರಸ್.—ಆ ಒಂದು ಕಾರಣದಿಂದ ಈ ವಿಚಾರದ ಬಗ್ಗೆ ಚರ್ಚೆಯನ್ನು ಮುಂದಕ್ಕೆ ಹಾಕುವುದಕ್ಕಾಗುವುದಿಲ್ಲ. ಸದಸ್ಯರು ಮಾನ್ಯ ಮಂತ್ರಿಗಳು ಮಂಡಿಸಿರುವ ತಿದ್ದುಪಡಿ ಮೇಲೆ ಬೇಕಾದರೆ ಚರ್ಚೆಮಾಡುವುದಾದರೆ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ಈ ತಿದ್ದುಪಡಿ ಮಸೂದೆಯಲ್ಲಿ ಪ್ರಾಪರ್ಟಿ ವಿಷಯ ಮತ್ತು ಕಂಪೆನ್ಸೇಷನ್ ವಿಷಯಗಳಿವೆ. ಆದ್ದರಿಂದ ಅವುಗಳ ಬಗ್ಗೆ ನಾವು ಚರ್ಚೆಮಾಡಬೇಕಾಗಿದೆ ಆರ್ಟಿಕಲ್ 31 (ಸಿ) ಪ್ರಕಾರ ಹೊಸದಾಗಿ ಇದರಲ್ಲಿ ಏನಾದರೂ ಸೇರಿಸಬೇಕೆಂಬ ಆಶೆ ಇದ್ದರೂ ಅದನ್ನು ಇಲ್ಲಿ ಹೇಳುವುದಕ್ಕೆ ನಮಗೆ ಅವಕಾಶವಿದೆ. ಆದರೆ ಮಂತ್ರಿಗಳು ಹೇಳಿದ ಹೇಳಿಕೆಯನ್ನು ನೋಡಿದರೆ ನಾವು ಆ ವಿಚಾರದಲ್ಲಿ ಏನೂ ಹೇಳುವ ಪರಿಸ್ಥಿತಿಯಲ್ಲಿಲ್ಲ. ಆದ್ದರಿಂದ ಆ ವಿಚಾರದಲ್ಲಿ ಚರ್ಚೆಮಾಡಲು ನಮಗೆ ಕಾಲಾವಕಾಶಬೇಕು. ಇದು ಬಹಳ ಮುಖ್ಯವಾದ ಹಾಗೂ ಗಹನವಾದ ಪ್ರಶ್ನೆ. ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟಿಗೆ ಸಂಬಂಧಪಟ್ಟ ವಿಷಯ. ಆದ್ದರಿಂದ ನಮಗೆ ಸಾಕಷ್ಟು ಕಾಲಾವಕಾಶವನ್ನು ಅಧ್ಯಕ್ಷರು ಕೊಟ್ಟು ಅದರ ಬಗ್ಗೆ ಚರ್ಚೆಮಾಡಲು ಅನುಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Sri D. DEVARAJ URS.—We can adjourn for half an hour.

MADAM SPEAKER.—The House will now rise and meet again after half an hour.

*The House adjourned at Five Minutes past Three of the Clock and reassembled at Thirty Five Minutes past Three of the Clock.*

---

[MADAM SPEAKER in the Chair]

† ಶ್ರೀ ಎಚ್. ಡಿ. ದೇವೇಗೌಡ.—ಸಭೆಯ ಮುಂದೆ ರ್‍ಯಾಟಿಫಿಕೇಷನ್‌ಗಾಗಿ ತಂದಿರತಕ್ಕ 25ನೇ ಅಮೆಂಡ್‌ಮೆಂಟ್ ಏನು ಇದೆ ಅದನ್ನು ನಾನು ಸ್ವಾಗತಮಾಡುತ್ತೇನೆ. ಇದರ ಬಗ್ಗೆ ಹೆಚ್ಚು ಭಾಷಣ ಮಾಡುವ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡಿದ್ದೇನೆ. ಈಗಾಗಲೇ ಇದು ಪಾರ್ಲಿಮೆಂಟಿನಲ್ಲಿ ಅಂಗೀಕೃತವಾಗಿದೆ. ಈ ರಾಜ್ಯ ಶಾಸನಸಭೆಗಳು ಒಂದು ಸಮ್ಮತಿಯನ್ನು ಸೂಚಿಸತಕ್ಕ ಬಗ್ಗೆ ಏನು ಸಭೆಯ ಮುಂದೆ ಇಟ್ಟಿದ್ದಾರೆ ಅದನ್ನು ನಾನು ಪೂರ್ಣವಾಗಿ ಸ್ವಾಗತಮಾಡುತ್ತೇನೆ. ಒಂದು ಪ್ರಗತಿಪರವಾದ ಹೆಜ್ಜೆಯನ್ನು ಇಡತಕ್ಕ ಕಾಲದಲ್ಲಿ ಕೆಲವು ಲೋಪದೋಷಗಳು ಇದ್ದು ಸುಪ್ರೀಮ್ ಕೋರ್ಟಿನಲ್ಲಿ ಬ್ಯಾಂಕ್ ನ್ಯಾಷನಲೈಜೇಷನ್ ಕೇಸಿನಲ್ಲಿ ಒಂದು ಗೊಂದಲವಾಯಿತು. ಅದರ ಬಗ್ಗೆ ಕೊಟ್ಟಂತ ನಿರ್ಣಯ ಏನು ಇದೆ ಅದನ್ನು ಓವರ್ ಕಮ್ ಮಾಡಬೇಕಾದರೆ ಈ ತಿದ್ದುಪಡಿ ಅವಶ್ಯಕವಾಯಿತು. ಅದು ಪಾರ್ಲಿಮೆಂಟಿನಲ್ಲಿ ಪಾಸಾಗಿದೆ. ಈ ಸಭೆ ರ್‍ಯಾಟಿಫೈ ಮಾಡುವ ಬಗ್ಗೆ ನಾನು ಸಂಪೂರ್ಣವಾಗಿ ಒಪ್ಪಿಗೆಯನ್ನು ನನ್ನ ವತಿಯಿಂದ ಪಕ್ಷದ ವತಿಯಿಂದ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಕಾಂಪನ್‌ಸೇಷನ್ ಕೊಡುವ ಬಗ್ಗೆ ಏನು ಅಧಿಕಾರಿಗಳಿಗೆ ಬಿಟ್ಟಿದ್ದಾರೆ ಅದನ್ನು ನ್ಯಾಯಾಸ್ಥಾನದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದ್ದಾರೆ ಈ ಒಂದು ವಿಷಯದಲ್ಲಿ ಮಾತ್ರ ನಾನು ಕೆಲವು

(ಶ್ರೀ ಎಚ್. ಡಿ. ದೇವೇಗೌಡ)

ವಿಚಾರ ಹೇಳಲು ಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಸರಿಯಾಗಿ ವಿವೇಚನೆ ಉಪಯೋಗಿಸದೆ ಹೋದರೆ ಸಣ್ಣ ಸಣ್ಣ ಹಿಡುವಳಿದಾರರಿಗೆ ತೊಂದರೆಯಾಗಬಹುದು. ಉದಾಹರಣೆಗೆ ಹೇಳುವುದಾದರೆ ಊರು ಪಕ್ಕದಲ್ಲಿ ಒಂದೆರಡು ಎಕರೆ ಜಮೀನನ್ನು ಸ್ಕೂಲು ಬಿಲ್ಡಿಂಗ್‌ಗೆ ಅಕ್ವೈರ್ ಮಾಡುವ ಪ್ರಶ್ನೆ ಬಂದಾಗ ಅದರ ಬಗ್ಗೆ ಅಧಿಕಾರಿಗಳು ಅವಾರ್ಡ್ ಕೊಡುವಾಗ ಸರಿಯಾದ ರೀತಿಯಲ್ಲಿ ನಿಷ್ಪಕ್ಷಪಾತವಾಗಿ ಮಾಡದೆ ಹೋದರೆ, ಅಂತಹ ಸನ್ನಿವೇಶದಲ್ಲಿ ಎಡರು ತೊಡರುಗಳು ಆಗಬಹುದು. ಸರ್ಕಾರ ಅದರ ಕಡೆ ಹೆಚ್ಚು ಗಮನ ಇಟ್ಟುಕೊಳ್ಳಬೇಕೆಂದು ಸೂಚನೆ ಕೊಟ್ಟು ಈ ತಿದ್ದುಪಡಿ ಏನು ಇದೆ ಇದಕ್ಕೆ ಸಭೆಯು ಒಪ್ಪಿಗೆ ಕೊಡುವ ಬಗ್ಗೆ ಸಂಪೂರ್ಣ ಬೆಂಬಲ ಕೊಡಲು ಇಚ್ಛೆಪಡುತ್ತೇನೆ.

4-00 P.M.

†ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು The Constitution (Twenty-fifth Amendment) Bill, 1971 ಇದಕ್ಕೆ ಕೆಲವು ದೃಷ್ಟಿಕೋನಗಳ ಆಧಾರದ ಮೇಲೆ ಸ್ವಾಗತ ಬಯಸುವುದಾದರೂ ಕೂಡ, ಒಂದೆರಡು ಪ್ರಾಮುಖ್ಯವಾದ ವಿಷಯಗಳನ್ನು ಈ ಬಿಲ್ಲಿನಲ್ಲಿ ತಂದಿಲ್ಲವಲ್ಲಾ ಎನ್ನುವ ಆಧಾರದ ಮೇಲೆ ವಿರೋಧ ಮಾಡಬೇಕಾಗಿದೆ. ಇದಕ್ಕೆ ಕಾರಣ ಇಷ್ಟೆ. ಇದರಲ್ಲಿ ಎರಡು ಐಟಂಗಳು ಇವೆ. ಒಂದನೆಯದು ಕಾಂಪನ್‌ಸೇಷನ್ ಮತ್ತು ಪ್ರಾಪರ್ಟಿ ವಿಷಯ, ಎರಡನೆಯದು ಸಿವಿಲ್ ಲಿಬರ್ಟಿ ವಿಷಯ. ಇದರಲ್ಲಿ ಆರ್ಟಿಕಲ್ 31ರ ಪ್ರಕಾರ ಯಾವುದೇ ಒಂದು ಸ್ವತ್ತನ್ನು ಪಬ್ಲಿಕ್ ಪರ್ಪಸ್‌ಗೆ ಅಕ್ವೈರ್ ಮಾಡಿದಾಗ ಅದಕ್ಕೆ ತಕ್ಕ ಕಾಂಪನ್‌ಸೇಷನ್‌ನ್ನು ರಾಜ್ಯ ಸರ್ಕಾರದವರು ನಿಗದಿ ಮಾಡುತ್ತಾ ಇದ್ದರು. ಹಾಗೆ ಕಾಂಪನ್‌ಸೇಷನ್ ಕೊಡುವಾಗ ಸಕಾರಣವಾಗಿ ಸರ್ಕಾರದವರು ಫಿಕ್ಸ್ ಅಪ್ ಮಾಡದೇ ಹೋದರೆ ಕೋರ್ಟಿನಲ್ಲಿ ಪ್ರಶ್ನೆಯನ್ನು ಮಾಡುತ್ತಾ ಇದ್ದರು. ಕಾನೂನಿನ ಪ್ರಕಾರ ಸರ್ಕಾರದ ಮೇಲೆ ಕೇಸು ಹಾಕಿ ಎಷ್ಟು ಫಿಕ್ಸ್ ಮಾಡುತ್ತಿದ್ದರೋ ಅದರ 2-3-4 ರಷ್ಟು ಕೋರ್ಟಿನಲ್ಲಿ ಕಾಂಪನ್‌ಸೇಷನ್ ತೆಗೆದುಕೊಳ್ಳುತ್ತಿದ್ದರು. ಈಗ ರಾಜ್ಯಾಂಗದ ಪ್ರಕಾರ ಅಷ್ಟೊಂದು ಕಾಂಪನ್‌ಸೇಷನ್‌ನ್ನು ಕೇಳುವುದಕ್ಕಾಗುವುದಿಲ್ಲ. ಉದಾಹರಣೆ ಹೇಳುವುದಾದರೆ ಒಂದು ಎಕರೆ ಜಮೀನು ಅಕ್ವೈರು ಮಾಡಿಕೊಂಡು 500-1000 ರೂಪಾಯಿ ಕೊಟ್ಟರೆ ಕೋರ್ಟಿಗೆ ಹೋಗಿ ಆಯಾಯ ಜಮೀನಿಗೆ ತಕ್ಕಂತೆ 2 ಸಾವಿರ, 3 ಸಾವಿರ, 4 ಸಾವಿರ, 10 ಸಾವಿರ ರೂಪಾಯಿಯವರೆಗೂ ಪಡೆಯುತ್ತಿದ್ದರು. ಈಗ ತಂದಿರುವ ಅಮೆಂಡ್‌ಮೆಂಟ್ ಬಿಲ್ ಅರ್ಥ ಏನಾಗುತ್ತದೆ ಎಂದರೆ ಒಬ್ಬ ಮನುಷ್ಯನಿಗೆ 1000 ಎಕರೆ ಜಮೀನು ಇದೆ ಎಂದು ಇಟ್ಟುಕೊಳ್ಳೋಣ. ಅದನ್ನು ಪಬ್ಲಿಕ್ ಪರ್ಪಸ್‌ಗೆ ಅಕ್ವೈರ್ ಮಾಡಿಕೊಂಡರೆ ಆ ವ್ಯಕ್ತಿ ಅವೆಲ್ಲದಕ್ಕೂ ಕಾಂಪನ್‌ಸೇಷನ್ ಕೇಳುವುದಕ್ಕೆ ಸರ್ಕಾರಿ ಅಧಿಕಾರಿಗಳ ಹತ್ತಿರ ಬರಬೇಕಾಗುತ್ತದೆ. ಇದಕ್ಕೆ ಒಂದು ತಿದ್ದುಪಡಿ ತರುವುದು ಅಗತ್ಯ. ಇದನ್ನು ಮೆಚ್ಚತಕ್ಕವಿಚಾರ. ಇದರಲ್ಲಿ ಸೋಷಿಯಾಲಿಸಂ ಏನಾಯಿತು ಎಂದು ಕೇಳುತ್ತೇನೆ. ನಮ್ಮ ಗೆಳೆಯರು ಇದನ್ನು ಯೋಚನೆ ಮಾಡಬೇಕು. ಈ ಬಿಲ್ಲನ್ನು ಪಾರ್ಲಿಮೆಂಟ್‌ನಲ್ಲಿ ತಂದಿದ್ದಾರೆ. ಇಲ್ಲಿ ಸ್ಟೇಟ್ ಲೆಜಿಸ್ಲೇಚರ್‌ನಲ್ಲಿ ನಮ್ಮ ರ್ಯಾಟಿಫಿಕೇಷನ್‌ಗೆ ಇಟ್ಟಿದ್ದಾರೆ ಎಂದು ನನಗೆ ಅನಿಸುತ್ತದೆ. ಸಮಾಜವಾದ ತರತಕ್ಕಂಥ ಈ ಆಡಳಿತ ವರ್ಗದವರು ಒಂದು ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಶ್ರೀಮಾನ್ ದೇವರಾಜ್ ಅರಸ್‌ರವರು ಯೋಚನೆ ಮಾಡಬೇಕು. ಉದಾಹರಣೆ ಹೇಳುವುದಾದರೆ ಈಗ ಒಬ್ಬ ಮನುಷ್ಯನ ಹತ್ತಿರ ಒಂದು ಸಾವಿರ ಎಕರೆ ಜಮೀನು ಇದೆ ಎಂದು ಇಟ್ಟುಕೊಳ್ಳೋಣ. ಅದನ್ನು ಪಬ್ಲಿಕ್ ಪರ್ಪಸ್ ಎಂದು ಅಕ್ವೈರ್ ಮಾಡಿಕೊಂಡ ಮೇಲೆ ಕಾಂಪನ್‌ಸೇಷನ್ ಹೆಚ್ಚು ಮಾಡಿಕೊಳ್ಳುವುದಕ್ಕೆ ಈಗಿನ ರೂಲು ಪ್ರಕಾರ ಕೋರ್ಟಿಗೆ ಅಧಿಕಾರವಿಲ್ಲದಿದ್ದರೂ ಸರ್ಕಾರದ ಅಧಿಕಾರಿಗಳ ಹತ್ತಿರ ಬರುತ್ತಾನೆ. ಅವನಿಗೆ ಪ್ರತಿ ಒಂದು ಸಾವಿರ ಎಕರೆಗೂ ಕಾಂಪನ್‌ಸೇಷನ್ ಕೇಳುವ ಅಧಿಕಾರ ಇದೆ. ಅದಕ್ಕಾಗಿ ನಾನು ನಿಮಗಿಂತಲೂ ಒಂದು ಹೆಜ್ಜೆ ಮುಂದೆ ಇಟ್ಟು ಹೇಳಬೇಕಾಗುತ್ತದೆ. ಆರೀತಿ ಅವನು ಕಾಂಪನ್‌ಸೇಷನ್ ಕ್ಲೇಮ್ ಮಾಡಿದಾಗ you continue him as a capitalist. ಎಂದಮೇಲೆ ಸೋಷಿಯಾಲಿಸಂ ಎಲ್ಲಿ ಅನುಕರಣೆ ಮಾಡಿದಂತಾಗುತ್ತದೆ? ಇದು ತಪ್ಪು ಪ್ರೊಸೀಜರ್ ಆಗುತ್ತದೆ. ಅದಕ್ಕೆ ನಾನು ಹೇಳುವುದು ಈಗ ಒಂದು ಸಾವಿರ ಎಕರೆ ಜಮೀನು ಅಕ್ವೈರ್ ಮಾಡಿಕೊಂಡರೆ ಅಂಥವರಿಗೆ ಕಾಂಪನ್‌ಸೇಷನ್ ಕೊಡಬಾರದು. ಅದಕ್ಕೆ ಬದಲಾಗಿ ರಿಹ್ಯಾಬಿಲಿಟೇಟ್‌ಮಾಡಬೇಕು. ಈಗ ಮೈಸೂರು ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರ ಹತ್ತಿರ ಒಂದು ಸಾವಿರ ಎಕರೆ ಜಮೀನನ್ನು ಅಕ್ವೈರ್ ಮಾಡಿಕೊಂಡರೆ ಅವರು

ಪೂರ್ತಾ ಆ ಒಂದು ಸಾವಿರ ಎಕರೆಗೂ ಕಾಂಪನ್ಸೇಷನ್ ಕೊಡಿ ಎಂದು ಕೇಳುವ ಅಧಿಕಾರ ಇದೆ. ಅದಕ್ಕೆ ನಾನು ಹೇಳುವುದು ಏನೆಂದರೆ ಈ ಮೈಸೂರು ಮಹಾರಾಜರಿಗೆ ಜೀವನಕ್ಕೆ ಏನು ತೊಂದರೆ ಇದೆ? ಜೀವನಕ್ಕೆ ತೊಂದರೆ ಇದ್ದರೆ ಕೊಡೋಣ. ಆರೀತಿ ಕಾಂಪನ್ಸೇಷನ್ ಕೊಡುವಾಗ ಅವರಿಗೆ ಎಷ್ಟು ಅಗತ್ಯವೋ ಅಷ್ಟು ಕೊಡಬೇಕು. ದೊಡ್ಡ ದೊಡ್ಡವರಿಗೆ ಕಾಂಪನ್‌ಸೇಷನ್ ಕೊಡ ಕೂಡದು, ರೀಹ್ಯಾಬಿಲಿಟೇಟ್ ಮಾಡಬಹುದು. ಕಾಂಪನ್ಸೇಷನ್ ಕೊಡುವ ವಿಚಾರದಲ್ಲಿ ಬಡವರಿಗೆ ಮಧ್ಯಮ ವರ್ಗದವರಿಗೆ ಎಷ್ಟು ಕಾಂಪನ್ಸೇಷನ್ ಕೊಡಬೇಕು, ಯಾವರೀತಿ ಕೊಡಬೇಕು ಎನ್ನುವ ಅಂಶ ಈ ಬಿಲ್ಲಿನಲ್ಲಿ ತಂದಿಲ್ಲ. ಇದರಲ್ಲಿ ಆ ಒಂದು ಅಂಶ ತಂದಿದ್ದರೆ ಚೆನ್ನಾಗಿತ್ತು. ಈ ದೃಷ್ಟಿಯಿಂದ ಈ ಬಿಲ್ಲನ್ನು ಸ್ವಾಗತ ಮಾಡಿದರೂ ಕಾಂಪನ್ಸೇಷನ್ ಕೊಡುವ ವಿಚಾರದಲ್ಲಿ ನಾನು ವಿರೋಧ ಮಾಡಬೇಕಾಗಿದೆ.

ಇನ್ನು 2ನೆಯದಾಗಿ ಆರ್ಟಿಕಲ್ 31 (ಸಿ) ನಲ್ಲಿ ಈರೀತಿ ಇದೆ:—

"Notwishstanding anything contained in article 13, no law giving effect to the policy of the State towards securing the principles specified in clause (b) or clause (c) of articls 39 shall be deemed to be void on the ground that it is inconsistent with, or takes away or abridges any of the rights conferred by article 14, article 19 or article 31; and no law containing a declaration that it is for giving effect to such policy shall be called in question in any court on the ground that it does not give effect to such policy :

Provided that where scnh law is made by the Legislature of a State, the provisions of this article shall not apply thereto unless such law, having, been reserved for the consideration of the President, has received his assent."

ಆದುದರಿಂದ 31 (ಸಿ) ಅದನ್ನು ಒಪ್ಪುವುದಾದರೆ ಸಿವಿಲ್ ಲಿಬರ್ಟಿಯನ್ನು ಮೊಟಕು ಮಾಡಿದಂತಾಗುತ್ತದೆ. ಈ ಸಿವಿಲ್ ಲಿಬರ್ಟಿಯನ್ನು ಮೊಟಕುಮಾಡದೇ ಇರುವ ರೀತಿಯಲ್ಲಿ ಅಮೆಂಡ್‌ಮೆಂಟ್ ಮಾಡಬೇಕಾಗಿದೆ. ಆರ್ಟಿಕಲ್ 31 (ಸಿ) ಅದಕ್ಕೂ ಆರ್ಟಿಕಲ್ 19ಕ್ಕೂ ಒಪ್ಪಿಗೆ ಕೊಟ್ಟರೆ ಸಿವಿಲ್ ಲಿಬರ್ಟಿಗೆ ಮೊಟಕು ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ. ಸಿವಿಲ್ ಲಿಬರ್ಟಿ ಹಾಳಾಗಿಹೋಗುವುದೆಂಬ ಸಂದೇಹವಿರುವುದರಿಂದ ನಾನು ಕಳಿಸಿರುವ ತಿದ್ದುಪಡಿ ಒಪ್ಪಬೇಕೆಂದು ಹೇಳುತ್ತೇನೆ. ಆರ್ಟಿಕಲ್ 14ರಲ್ಲಿ ಗ್ಯಾರಂಟಿ ಉಳಿಯುವುದಾದರೆ ಸಂಪೂರ್ಣವಾಗಿ ನಾವು ಸಹಕಾರ ನೀಡುತ್ತೇವೆ. ಇನ್ನೂ ಬಿಗಿಯಾಗಿ ತಿದ್ದುಪಡಿ ಮಾಡಬಹುದಾಗಿತ್ತು ಆರೀತಿಯ ತಿದ್ದುಪಡಿತಂದಿಲ್ಲ ಎಂದು ಹೇಳಿ ಕೋಪದಿಂದ ಈಗ ತಂದಿರುವ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ. ಪರಿಹಾರದ ವಿಚಾರ ಆಗಲೇ ಹೇಳಿದೆ. ಅದನ್ನು ಒಂದು ಸಾವಿರ ಎಕರೆ ಇರುವವರಿಗೇಕೆ ಕೊಡಬೇಕು? ಕೊಡಬೇಕಾದವರಿಗೆ ಕೊಡಿ. ಸಮತಾವಾದವನ್ನು ಸರಿಸುವಾಗ ಹೆಚ್ಚು ಅನುಕೂಲಸ್ಥರಿಂದ ಹೆಚ್ಚಿಗೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಅವರಿಗೆ ಪರಿಹಾರ ಕೊಡುವುದು ಉಚಿತವಲ್ಲ. ಕೇಂದ್ರ ಸರಕಾರದೊಡನೆ ಮಾತನಾಡಿ ಈ ವಿಚಾರ ತಿಳಿಸಬೇಕಾಗಿತ್ತು.

† ಶ್ರೀ ಡಿ. ದೇವರಾಜ್ ಅರಸ್.—ಅಧ್ಯಕ್ಷರೇ, ಈಗ ನಮ್ಮ ಮುಂದಿರುವುದು ರಾಜ್ಯಾಂಗದ ತಿದ್ದುಪಡಿ. ಇದನ್ನು ತರುವಾಗ ಅದೆಲ್ಲಾ ಬರುವುದಿಲ್ಲ. ಪರಿಹಾರವನ್ನು ಒಂದು ಸಾವಿರ ಎಕರೆಗೆ ಕೊಡಬೇಕೇ, ಅಥವ ಒಂದು ನೂರು ಎಕರೆಗೆ ಕೊಡಬೇಕೇ ಇದೆಲ್ಲವೂ ಬೇರೆ ಕಾನೂನು ತರುವಾಗ ಬರುವುದು. ಹಿಂದಿದ್ದ ಹಾಗೆ ಯಾವುದಾದರೂ ಆಸ್ತಿಯನ್ನು ಸರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ವಹಿಸಿಕೊಳ್ಳುವಾಗ ಅದಕ್ಕೆ ಕೊಡಬೇಕಾದ ಮೊತ್ತವನ್ನು ನಿಗದಿ ಮಾಡುವ ಅಧಿಕಾರ ಕೋರ್ಟಿಗಿತ್ತು, ಆದರಿಂದ ನಮ್ಮ ಅನುಭವದ ಪ್ರಕಾರ ಕೋರ್ಟಿಗೆ ಹೋದಾಗ ಹೆಚ್ಚು ಪರಿಹಾರ ಕೊಡಬೇಕಾಗುವುದು. ಅಂಥ ನಿದರ್ಶನಗಳಿವೆ. ಸಾರ್ವಜನಿಕರ ಭೂಮಿಯನ್ನಾಗಲಿ ಅಥವ ಮನೆಯನ್ನಾಗಲಿ ಅಥವ ಬೇರೆ ಖಾಸಗಿ ಆಸ್ತಿಯನ್ನಾಗಲಿ ಸಾರ್ವಜನಿಕ ಹಿತದೃಷ್ಟಿಯಿಂದ ಸರಕಾರ ಸ್ವಾಧಿನಪಡಿಸಿಕೊಳ್ಳಬೇಕಾದಾಗ ದೊಡ್ಡ ಪ್ರಮಾಣದಲ್ಲಿ ಪರಿಹಾರ

(ಶ್ರೀ ಡಿ. ದೇವರಾಜ್ ಅರಸ್)

ಕೊಟ್ಟರೆ ಜನರ ಹಿತ ಸಾಧಿಸುವುದು ಕಷ್ಟ. ಆ ಕಾರಣದಿಂದ ರಾಜ್ಯಾಂಗದಲ್ಲಿದ್ದ ನಿಬಂಧನೆಯನ್ನು ಬದಲಾಯಿಸಿ ಕೋರ್ಟಿಗೆ ಹೋಗದಂತೆ ಮಾಡಿ ಎಗ್ಸಿಕ್ಯೂಟಿವ್ ಕೈಗೆ ಅಧಿಕಾರ ಕೊಟ್ಟಿದ್ದೇವೆ. ಅದನ್ನು ಓದಿ ಸಭೆಯ ಅವಗಾಹನೆಗೆ ತರುತ್ತೇನೆ.

> "No property shall be compulsorily acquired or requisitioned save for a public purpose and save by authority of a law which provides for acquisition or requisitioning of the property for an amount which may be fixed by such law or which may be determined in accordance with such principles and given in such manner as may be specified in such law; and no such law shall be called in question in any court on the ground that the amount so fixed or determined is not adequate or that the whole or any part of such amount is to be given otherwise than in cash".

ಈ ಎರಡು ವಿಚಾರಗಳನ್ನು ಗಮನಿಸಿದರೆ ಬಹುಶಃ ವಿರೋಧ ವ್ಯಕ್ತಮಾಡುವ ಪ್ರಮೇಯ ವಿರುವುದಿಲ್ಲವೆಂಬ ನಂಬಿಕೆ ಇದೆ. ಸಾಮಾನ್ಯವಾಗಿ ಹಿಂದೆ ಯಾವುದಾದರೂ ಖಾಸಗಿ ಆಸ್ತಿ ಪಾಸ್ತಿಯನ್ನು ಸರಕಾರ ಆಕ್ವೈರ್ ಮಾಡಿದಾಗ ಸರಕಾರ ನಿಗದಿಮಾಡುವ ಪರಿಹಾರ ಸಾಲದೆಂದು ಸಂಬಂಧ ಪಟ್ಟ ಮಾಲೀಕರು ಕೋರ್ಟುಗಳಿಗೆ ಹೋದರೆ ಕೋರ್ಟಿನ ತೀರ್ಮಾನವೇ ಆಖೈರು ಆಗುತ್ತಿತ್ತು. ಈಗ ಅದನ್ನು ತಪ್ಪಿಸಲು ರಾಜ್ಯಾಂಗಕ್ಕೆ ತಿದ್ದುಪಡಿ ತರಲಾಗಿದೆ. ರಾಜ್ಯಾಂಗದಲ್ಲಿ ಮಾನ್ಯ ಸದಸ್ಯರು ಹೇಳುವುದನ್ನೆಲ್ಲಾ ಅಳವಡಿಸುವುದಕ್ಕೆ ಸಾಧ್ಯವಿಲ್ಲ. ಇದನ್ನು ಮಾನ್ಯ ಸದಸ್ಯರು ಬಹುಶಃ ಒಪ್ಪುವರು. ಅದಕ್ಕೆಲ್ಲಾ ಬೇರೆ ಕಾನೂನು ಮಾಡಬೇಕು. ಈಗ ತಂದಿರುವ ರಾಜ್ಯಾಂಗದ ತಿದ್ದುಪಡಿಯಾದರೆ ಮುಂದೆ ಸರಕಾರದ ತೀರ್ಮಾನವನ್ನು ಕೋರ್ಟಿಗೆ ಹೋಗಿ ಪ್ರಶ್ನೆ ಮಾಡಲು ಅಧಿಕಾರವಿಲ್ಲ. ಇದಕ್ಕಾಗಿ ಈ ತಿದ್ದುಪಡಿ ಅಂಗೀಕಾರವಾದಮೇಲೆ ಬೇರೆ ಕಾನೂನು ತರಬೇಕಾಗುವುದು. ಅದರ ಪ್ರಕಾರ ಸರ್ಕಾರ ಪರಿಹಾರ ನಿಗದಿಮಾಡುವುದು. ಹಾಗೆ ಕಾನೂನು ಮಾಡಿದಮೇಲೆ ಸಂಬಂಧಪಟ್ಟ ಆಸ್ತಿಯ ಮಾಲೀಕರು ಕೋರ್ಟುಗಳಿಗೆ ಹೋಗಿ ಛಾಲೆಂಜ್ ಮಾಡಲು ಅವಕಾಶವಿರುವುದಿಲ್ಲ. ಈಗ ಸಭೆಯ ಮುಂದಿರುವ ತಿದ್ದುಪಡಿ ಇಷ್ಟಕ್ಕೆ ಅವಕಾಶಮಾಡಿ ಕೊಡುವುದು. ಆದುದರಿಂದ ಇದರಮೇಲೆ ಹೆಚ್ಚು ವ್ಯಾಖ್ಯಾನ ಮಾಡಬೇಕಾದ ಅಗತ್ಯವಿಲ್ಲ. ಇದು ಸ್ಪಷ್ಟವಾಗಿದೆ. ಆದುದರಿಂದ ಎಲ್ಲರೂ ಇದಕ್ಕೆ ಒಪ್ಪಿಗೆ ಕೊಡಬಹುದು.

ಶ್ರೀ ಎಸ್. ಬಂಗಾರಪ್ಪ.--ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವುದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ವ್ಯಾಖ್ಯಾನ ಮಾಡಲು ಅವಕಾಶವಿರುತ್ತಿರಲಿಲ್ಲ. ಅವರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಪರಿಹಾರ ನಿಗದಿಮಾಡುವ ಅಧಿಕಾರವನ್ನು ಎಗ್ಸಿಕ್ಯೂಟಿವ್‌ಗೆ ಕೊಡಲು ಕಾನೂನು ಮಾಡುತ್ತೀರಿ, ಸರಿ. ನಾನು ಹೇಳುವುದು ಅದಲ್ಲ. ಒಬ್ಬ ಮನುಷ್ಯನಿಂದ ಅವನ ಆಸ್ತಿಯನ್ನು ಆಕ್ವೈರ್ ಮಾಡುವಾಗ ರಾಜ್ಯಾಂಗದಲ್ಲಿ ರೀಹ್ಯಾಬಿಲಿಟೇಷನ್ನಿಗೆ ಅವಕಾಶಮಾಡಬೇಕು. ಹಾಗೆ ಮಾಡಲು ಅವಕಾಶವಿತ್ತು. ಅಕ್ವೈರ್ ಮಾಡುವವರು ಪುನರ್ವಸತಿಗೆ ಬೇಕಾಗುವಷ್ಟು ಪರಿಹಾರ ಕೊಡಬಹುದಾಗಿತ್ತು. ರೀಹ್ಯಾಬಿಲಿಟೇಷನ್‌ಗೆ ಸಂಬಂಧ ಪಟ್ಟುದನ್ನು ಈ ತಿದ್ದುಪಡಿಯಲ್ಲಿ ಅಳವಡಿಸಿದ್ದರೆ ಒಳ್ಳೆಯದಾಗಿತ್ತು. ಈ ಸದನದಲ್ಲಿ ತರತಕ್ಕ ಕಾನೂನಿನಲ್ಲಿ ರೀಹ್ಯಾಬಿಲಿಟೇಷನ್ ಎಂದರೆ ಏನು ಎನ್ನುವುದಕ್ಕೆ ವಿವರಣೆಯನ್ನು ಕೊಡಬಹುದಾಗಿತ್ತು. ಅದನ್ನು ಕೊಟ್ಟಿಲ್ಲ ಎಂದು ನನ್ನ ಅಭಿಪ್ರಾಯ.

Sri D. DEVARAJ URS.—Even now I would request the hon. Member to think over the matter. The principle to which the hon. Member is referring connot be adumbrated in the Constitution. The Constitution has enabled the Legislature to make its own legislation and give the power to the Executive to define the manner and principles on which the compensation could be fixed.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾ ನಾಯಕರಿಂದ ಒಂದು ಉತ್ತರವನ್ನು ನಿರೀಕ್ಷೆ ಮಾಡಬಹುದು ಎಂದು ಕಾಣುತ್ತದೆ. ರೀಹ್ಯಾಬಿಲಿಟೇಷನ್ ಎನ್ನತಕ್ಕ ಮಾತನ್ನು ನನ್ನ ಅರ್ಥದಲ್ಲಿ ಪ್ರಯೋಗ ಮಾಡುತ್ತಿದ್ದೇನೆ. ಅದು ಇಲ್ಲಿ ಬೇಕಾಗಿಲ್ಲ, ಮುಂದೆ ಬರತಕ್ಕ ಕಾನೂನಿನಲ್ಲಿ ಬರುತ್ತದೆ ಎನ್ನುವ ಗ್ಯಾರಂಟಿ ಕೊಟ್ಟರೆ; ವ್ಯಕ್ತಿಯಿಂದ ಎಷ್ಟು ಜಮೀನು ತೆಗೆದುಕೊಂಡರೂ ಕೂಡ .......

Sri D. DEVARAJ URS.—It is not a question of my giving that guarantee. I do appreciate the anxiety of the hon. member whether we can treat both the persons with large properties and the small holders of property as one and the same, and also give the same compensation. It would not be fair from the point of view of meeting out social justice. I wholly agree with that. But the hon. member thinks that this could be adumbrated in the Constitution itself. But I am saying that it is not possible. This matter could be taken up at the time of enacting the legislation. Further the proposal to distinguish between the poor man and the rich man whose property is likely to be acquired and the quantum of compensation etc. could also be dealt with at the appropriate time. I don't think any property could be acquired whithout paying any compensation. We may have to pay some compensation. Perhaps the view of the hon. Member is that compensation should not be more and it should not be for all the the properties possessed by a person. All these things could be discussed and a decision arrived at the time we take up the legislation in this regard.

ಶ್ರೀ ಎಸ್. ಬಂಗಾರಪ್ಪ.—ಬಹಳ ಸಂತೋಷ. ಆದರೆ ಕಾನ್‌ಸ್ಟಿಟ್ಯೂಷನ್‌ನಲ್ಲಿ ಒಬ್ಬ ಮನುಷ್ಯನನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಎಷ್ಟು ಪರಿಹಾರ ಕೊಡಬೇಕು ಎನ್ನುವುದನ್ನು ನಿಯಮಿತ ಮಾಡದೆ, ಒಂದು ಕಾನೂನನ್ನು ರಾಜ್ಯದಲ್ಲಿ ಮಾಡಿದರೆ, ಅದನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿ ಆ ರೀತಿ ಮಾಡಿರುವುದರ ಔಚಿತ್ಯವನ್ನು ಪ್ರಶ್ನೆ ಮಾಡಬಹುದು. ಅಂತೂ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಕಾನೂನು ತರುತ್ತೇವೆಂದು ಗ್ಯಾರಂಟಿ ಕೊಟ್ಟಿರುವುದು ಬಹಳ ಸಂತೋಷ.

ಎಕ್ಸಿಕ್ಯೂಟಿವ್‌ಗೆ ಅಧಿಕಾರ ಕೊಡುತ್ತಿದ್ದೀರಿ. ಇದು ಬಹಳ ಪ್ರಾಮುಖ್ಯವಾದ ವಿಷಯ. ಮಾನ್ಯ ದೇವರಾಜ್ ಅರಸ್ ಅವರು ಒಂದು ವಿಷಯದ ಕಡೆಗೆ ಹೆಚ್ಚು ಗಮನ ಕೊಡಬೇಕಾಗಿದೆ. ಎಕ್ಸಿಕ್ಯೂಟಿವ್‌ಗೆ ಕಾಂಪೇನ್‌ಷನ್ ಕೊಡುವ ಅಧಿಕಾರವನ್ನು ಕೊಡುವುದರಿಂದ ಕರಪ್ಟ್ ಪ್ರಾಕ್ಟಿಸಸ್ ಜಾಸ್ತಿಯಾಗುವುದಕ್ಕೆ ಅವಕಾಶವಾಗುತ್ತದೆ. ಅವರ ಮೇಲೆ ಎಷ್ಟು ಹಿಡಿತವನ್ನು ತರಬಹುದೋ, ಅದರ ಬಗ್ಗೆ ಮುಂದೆ ಶಾಸನವನ್ನು ಮಾಡುವಾಗ ಲಂಚ ರುಷುವತ್ತುಗಳಿಗೆ ಅವಕಾಶವಿಲ್ಲದೆ, ಯಾವ ವ್ಯಕ್ತಿಗೂ ಅನ್ಯಾಯವಾಗದಂತೆ ಅವನಿಗೆ ಕಾನೂನುಬದ್ಧವಾಗಿ, ನ್ಯಾಯಸಮ್ಮತವಾಗಿ ಎಷ್ಟು ಕಾಂಪೆನ್‌ಸೇಷನ್ ಕೊಡಬಹುದೋ ಅದರ ಬಗ್ಗೆ ಗಮನಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಮಾತುಗಳನ್ನು ಹೇಳಿ, ಕಾನ್‌ಸ್ಟಿಟ್ಯೂಷನ್‌ಗೆ ತಂದಿರುವ 25ನೇ ತಿದ್ದುಪಡಿಗೆ ಒಮ್ಮತವಾದ ಬೆಂಬಲವನ್ನು ಕೊಡುತ್ತೇನೆ.

† Sri T. R. SHAMANNA.—Madam Speaker, permit me to say a few words in respect of the constitution (Twenty-fifth Amendment) Bill which is placed before us for ratification.

At the outset, I oppose the amendments of Constitution that are being brought before us, from time to time, particularly, the amendment of the fundamental rights that have been guaranteed to us by the Constitution. I am not one who advocate accumulation of wealth in certain individuals. I agree that the level between the rich and the poor should be narrowed down to the minimum extent and there should be social justice and happiness prevailing in the country or there should be what is called by Gandhiji a 'Ramarajya'.

(SRI T. R. SHAMANNA)

I am particularly afraid to notice that in place of 'compensation' an important change has been made by inserting a single word, *viz.*, "amount". Compensation is meant for giving some adequate relief to the person whose property is acquired. By substituting the word 'compensation' with the word 'amount' and giving that extraordinary authority to the Executive is a dangerous thing because it is the Constitution that we are amending. It may be that you are in power now and some other party may be in power later. But if such an authority were to be given to the Executive they may fix the amount that is to be paid to any extent. Two years ago when Travancore Yuvaraja's property had to be acquired the Judiciary fixed some 18 lakhs of rupees or so as compensation. Now instead of compensation to be judged and fixed in a court of law, if the executive were to fix the amount they may fix any amount they like. Further more, regarding classification as to whether the property to be acquired is for the public purpose or not, there is no discretion and they may acquire any property merely under the guise of public purpose. It would have been better if some provision had been made to overcome this unbridled power that has been given to the executive in the matter of acquiring property and also in fixing up the amount that has to be paid.

Further you are changing an important Article in the constitution, *i.e.* article 31 by simply adding an additional clause 31C. The constitution makers deeply considered all aspects of the case and had given a model Constitution to our country. This constitution is being torn into pieces and the very essence of it is being taken away by amending the constitution one after the other. Here the whole thing has been brought before us for post-mortem and whatever we say will only be a cry in the wilderness. But permit me to mention here that all these amendments with all the slogans, I am definitely sure, that the country will not at any time feel that they are in a Ramarajya or in happiness. You have not been able to solve unemployment; you have not been able to check the rising prices and you have not taken steps to see that counterfiet currency which is being multiplied in large scale is put an end to. Unless you check the rising prices and solve the unemployment problem it is impossible for you to bring happiness to the people. On the one side you are allowing inflation and on the other you are allowing rapid increase in prices. Unless these problems are solved what is the good of making amendments to the Constitution? If the unemployment and other problems are not solved I am afraid you will not have anything to gain. You will have more sufferings rather than gains to the people. I feel that if a country—our country particularly—has to gain some peace and happiness, we have to follow Gandhian principles only. At one time, we said that Gandhiji is our leader and whatever he has said is the gospel truth. Now, you have thrown to the winds all the principles enunciated by Gandhiji. We can achieve

something only when we improve our moral standards. Unless and until we improve our moral standards, it is impossible for us to build up the country on healthy lines. We encourage gambling on one side and on the other drinking and development of all voices. Without moral standards, it is impossible for any country to build up a reputation for happiness. Instead of slowly leading to communism, I am now appealing to the leaders of the country to bring in communism once for all; instead of giving slow poison, bring in communism once for all. These half-hearted methods will not give any scope for development. There are certain people, who will convert themselves into the party that is in power. With such people, it is impossible to bring about happiness in the country. That is why I said: 'bring in communism once for all', because these slow methods will not do anything good for the country. China and Russia have made some improvement because they took rapid action in that direction. Particulary, with the set of people who change according to circumstances, it will be impossible for us to bring about social change in the country. That is why I appeal to you to take either this side or that side, but the action should be rapid.

4-30 P.M.

As I have already said, the first thing that any Government in power has to do, is to improve the moral standards, and the next thing is to make them learn how to work hard and honestly. Unless people work hard, it is impossible to build up any structure that will be usefull to the country. Therefore, in addition to moral standards, people should be taught to work hard. Unless people work hard and honestly in the interest of the country, it will be impossible for any country to develop itself. We have no standards at all as far as work is concerned. We want to bring in happiness, but at the same time we are bringing in all sorts of hurdles. Gandhiji had taught us that we should lead a simple life. But, all those teachings have been washed away. Therefore, I am appealing to the Ministers to set up a standard now and to lead a life which will be a model to others. If the country has to prosper, their mode of living and their method of administration should be a model to others.

Lastly, I would like to make an appeal to brother legislators also. Each one of us represent at least one lakh of people. If the so-called representatives of the people, the hon. members, do not behave properly, it is impossible for us to see that standards are maintained which are very essential for the prosperity of the country. Therefore, I earnestly appeal to the leaders to set up standards so that others may follow.

With these words, I do not either oppose or support the amendment that is brought forward, because such amendments will not do any good to the people.

Sri B. B. SAYANAK (Belgaum).—Madam Speaker, I rise to fully support this Constitution XXV Amendment Bill, 1971. This is the architecture of late barrister Sri Nath Pai. There is the Golaknath case, which was decided by the Supreme Court, wherein the Chief Justice Sri K. Subba Rao has stated that judiciary is supreme. When the Government of India wanted to nationalise the Banks, there were so many difficulties, and therefore, the Central Government has brought this Constitution (Twenty-fifth Amendment) Bill, 1971. This is a radical change, and according to this Bill, the parliament is Supreme and the parliament can amend any Article of the constitution. Even the parliament can amend the fundamental rights of the constitution. The Government has every right to acquire the property. I request the Government that while acquiring property, the market value of the property should be given, and only properties which are suitable should be acquired. They should not acquire properties only of persons belonging to Opposition parties. When properties are acquired, the owners of such properties should be paid the market value in cash, but not in bonds.

I thank the Chair for giving me an opportunity to speak.

†Sri M. S. KRISHNAN (Malleswaram).—Madam Speaker, I rise to support the twenty-fifth amendment to the Constitution. I heard the remarks which were made by my good friend Sri T. R. Shamanna and also my good maharashtrian friend Sri B. B. Sayanak. I thought that Sri Sayanak was fully supporting the Bill while speaking on this. But, by saying that compensation must be paid at market value, he completely negates the purpose of the Bill and really opposes the Bill and joins hands with multi-millionaires and monopolists.

I am only sorry that my learned friend did not think of this aspect but he has full freedom to support it or to oppose it. On the question of this Bill, there are two aspects which I would like to bring to your notice. This Bill cannot be considered as a revolutionary Bill, but it raises certain fundamental questions. One fundamental question which arises is whether the right to property is sacrosanct; how should we view it? As you know Madam Speaker, this question of right to property has been debated and discussed in our country for quite a long time. Of course, you may say, that this is not actually relevant to the Bill but I consider this as relevant to this extent that this Bill seeks to pay amount instead of compensation. There is a controversy in regard to payment of compensation—whether it should be amount or compensation. In our countary, the monopolists, the capatalists, the big zamindars etc., who were making black monies, wanted compensation at market value. Then the question arose, whether this is correct or incorrect. That was based upon the reasoning which was made by the supreme Court that the fundamental right to the property cannot be questioned. On that basis, these very precepts regarding the property and compensation and amount etc., have arisen. That is why

I say that whether this right to property is sacrosanct, becomes an important point. I do not think that that is the idea of persons who have brought this Bill to say that every person who has got property must be dispossessed of his property. That is not the fundamental idea at all. The understanding is that those people in whose hands there has been concentration of wealth in our country and those people who are playing the role of economists, of politics, etc., in our country by having concentration of wealth in their hands, it is the right of such people to get the benefits. This is the understanding of all persons who want to take the country from the present capitalist path of development to the real socialist path of development which the Congress (R) wants to do. The question of concentration of wealth has been debated even in the debates of Lok Sabha and they have given the figures from the Monopolists Enquiry Commission and it is very clear from that Commission's Report that there are 75 monopoly Houses of which the Tatas and the Birlas have made more and more money and how during the course of only 3 years the assets of Birlas who is one of the big monopolists of our country has increased from Rs. 250 crores to 500 crores. Similarly it has also been pointed out in another place how the monopolists are acquiring property more and more and how they have become a menace to the society as such in our country and how they have become a menace to the progress of our country. My understanding is that this amendment is brought in order to see that these people's right is curtailed and unless this is brought, it would not be possible to make any progress. This was the very fact which was questioned in the earlier cases of the Supreme Court. The zamindars of our country had gone to the Supreme Court on this question. Another question which arose was whether the Parliament has a right to question the right to property and whether to give compensation or not and whether they can acquire property and if so, what compensation to be paid. All these questions came up before the Supreme Court and the Supreme Court, as you very well remember, held in the famous Golaknath Case that the Parliament has no right. Now it is clear from the amendment that has been brought that the Parliament is supreme and nobody else is supreme. This is a very very important concept in our country because an attack was made by the Judiciary. With due respect to the Judiciary—whether they are in the Supreme Court or in the High Court, they feel that they are endowed with supreme intelligence and their wisdom cannot be questioned at all. I must point out here that even on this question of compensation, unfortunately, the Supreme Court gloated from one position to another from the very beginning. In the beginning the Supreme Court held that the question of compensation is justiceable, but later on the Supreme Court itself reversed this decision and they gave a further decision which went against this concept of justiceability of this compensation. Even on the question of compensation, they said that compensation should not be ephemeral in character and practical difficulties must be taken into consideration and then we must see that as much as compensation should

(SRI M. S. KRISHNAN)

be paid considering the position etc. etc. The monopolists who had acquired more property wanted more and more compensation and thus they wanted to defeat the very purpose of the constitution which is adumbrated in the Directive Principles. Unfortunately the Supreme Court later on went to the extent of saying that market value has to be given. In the case of Bank Nationalisation, the question of compensation came up and it was said that the market value has to be paid. Now if the market value has to be paid, where is the money for the country to pay all these people who have sucked the blood of the people of our country? The 75 monopolists and the biggest zamindars of our country have exploited the people of our country and they have changed the entire social fabric of our economy. These people are now asking the government to pay them at the market value. Who is to pay such enormous sums of money? Our people are already exploited and the down-trodden people are exploited to the maximum extent.

Sri B. B. SAYANAK.—If you are going to acquire the property of a poor man, then what are going to do?

Sri M. S. KRISHNAN.—I am thankful for the amendment which he has made to his speech, because in the first instance he said that market value may be paid and now he says don't give them market value. Why I am against those people is that they have exploited our country in the name of being rich, holding social posititian or the political position. Justice Subba Rao who was then the Chief Justice of India unfortunately said that market value has to be given to those whose property is acquired. It is only because of this stand taken by the Supreme Court, this amendment had to be brought forward. Even this amendment has been brought too late because they have already paid compensation to quite a lot of people. The Communist Party has been demanding from the very beginning that an amendment to the Constitution should be brought. Even Pandit Jawaharlal Nehru once said that the Supreme Court is behaving in a rather amazing manner. If it came in the way of implementing the Directive Principles of the Constitution, then it becomes necessary for us to amend the Constitution itself. Unfortunately he could not do it. Now an amendment has been brought. The question is it does not say there is no compensation. Some people say compensation has to be paid to the poor people and the compensation should not be paid to the rich people. It is not specific about this point. So far as we are concerned, no compensation should be paid to those who have got means of production through exploitation of the working class. There are 75 monopoly Houses. These houses have to be nationalised and taken over by the Government. I do not know whether our Chief Minister will have courage and I wish he gets courage and go ahead with this work.

**Sri D. DEVARAJ URS.**—It is not the question of courage. It is a question of wisdom. I can assure him that I have got as much courage as he is having. But I can only draw the attention of Sri M. S. Krishnan that even in a country like Russia they are taking the help of other countries where the communism does not exist.

**Sri M. S. KRISHNAN.**—I am glad that the Hon. Chief Minister has imparted a new knowledge to me about the Soviet Russia. I request him to go deep into the Constitution of Russia. It is a fact that this country has agreed to co-operate with the countries which have not adopted the communism. I am not questioning that. I am questioning what you do in your own country? If Lenin says that compensation should be paid, it is a different matter. The Chief Minister will agree with me in this regard.

**Sri D. DEVARAJ URS.**—The Hon. Member should know there will be many more amendments on this.

**Sri M. S. KRISHNAN.**—I am one of those who support the fundamental principles of the Constitution. I have got full regard to the parliamentary system of democracy. I know the parliamentary democracy will bring about a social order. I am not opposed to it. I am making a fundamental proposition. In our country if you want to make the country prosperous it is very necessary that monopolists should be properly taken care of as I said earlier. There is socialist forum for socialistic action.

**Sri D. DEVARAJ URS.**—Let us not be misunderstood. At one stage you say that there is social forum and there should be socialism and at another point you say another thing. It is not clearly under stood by me. The Hon'ble Member says that the monopolists should cease to exist. He says that the property of all these people should be taken away and nationalised. Let him not mix up the issues. He should be clear in his points. I am not quarreling with him. As for as we are concerned, we are not monopolising or nationalising these 75 houses. This is one of the causes for this criticism by him. I am sorry I am not accepting it.

**Sri M. S. KRISHNAN.**—I do not know whether it is correct or not But our policy is that compensation should not be paid, if the country has to progress, to those monopalists from whom the property is acquired. This is our position. Then only we can progress. This is a matter of controversy and I will leave it to the Chief Minister.

I would like to point out another aspect in this connection. There has been discussion saying that this amendment abridges the rights and takes away the right. The Chief Minister said while explaining that it does not mean 'we will give them compensation.' The purpose of this

(Sri M. S. Krishnan)

very amendment seems to be slightly different. I would like to refer to 31(C.) It reads thus.

> "31C. Not withstanding anything contained in Art. 13, no law giving effect to the policy of the State towards securing the the principles specified in clause (b) or clause (c) of Art. 39 shall be deemed to be void on the ground that it is inconsistent with, or takes away or abridges any of the rights conferred by article 14, article 19 or article 31; and no law containing a declaration that it is for giving effect to such policy shall be called in question in any court on the ground that it does not give effect to such policy."

This is inconsistent with the ideas and ideologies of the general masses. That is why I say this inconsistancy should be avoided. This is quite contradictory to the directive principles of the Constitution. There had been discussion in Parliament and the Supreme Court has held a different view. The Supreme Court has come in the way of the views of the Parliament and it has held that Parliament is not supreme and Judiciary alone is supreme. The Parliament is supreme and the views of the Parliament should be implemented according to the interpretation of many legal experts. Authority is entrusted to Parliament and thereofore it is supreme and the views of the Parliament should be implemented and this is the view of the experts. I do not subscribe to the view which abridges the fundamental rights which are adumbrated in the Constitution. Now 31 (c) has been brought.

5-00 P. M.

Sri D. DEVARAJ URS.—I did not quite follow you.

Sri M. S. KRISHNAN.—The point is: 'Why is it that this Artiele 31 (c) has been brought?. That was the question I was trying to force. That has been brought in order to see that the right is given to the Parliament to implement those things which are stated in the Directive Principles of the State policy. I think this is correct. My friend cast a doubt on this Amendment and stated that it opposes the fundamental rights which are adumbrated in the Constitution and that nothing should be done against the fundamental rights There is nothing to show that it goes against the fundamental rights of the Constitution. And I come to the last point. This amendment has been made. Amendments are good, particularly 31 (c) is good, but the question is that it is not very revolutionary. The question that arises is that it throws a very big responsibility upon the Parliament and the Legislatures; upon the Governments of the State and the Central Government. Many things have been said.-that untouchability must go; unemployment mustgo; land should be given to the landless and so on. Till now,

it was being stated by the rulers of the country that the Supreme Court is coming in the way and they are not in a position to implement such laws as would enable them to implement those things, that have been stated in the Constitution. Now that objection cannot any longer be taken by any Government, but it throws a very big responsibility on them. It behaves upon them how far they are going to implement them. Implementation is more important than slogan mongering. Mr. Devaraj Urs has been speaking about land reforms. There are so many issues involved. What is the ceiling? What is the acreage? what about agricultural labour? All these questions will arise and we are going to watch. Only on that basis we support him or oppose him. With these words, I support the 25th Amendment to the Constitution.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ). – ಸನ್ಮಾನ್ಯ ಸಭಾಧ್ಯಕ್ಷಣಿಯವರೆ, ಈ ರಾಜ್ಯಾಂಗ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ನಿಲುವನ್ನು ಅನೇಕ ಸಾರಿ ಅಪಾರ್ಥ ಮಾಡಿಕೊಂಡಿರತಕ್ಕ ಸಂದರ್ಭ ಕೂಡ ಇದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ. ನಾವು ಈ ತಿದ್ದುಪಡಿಯನ್ನು ವಿರೋಧ ಮಾಡತಕ್ಕವರಲ್ಲ. ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಇದರಲ್ಲಿ ಕೆಲವು ಹೆದರಿಕೆಗಳು ನಮಗೆ ಇವೆ. ಅವುಗಳನ್ನು ತಾವು ಎಷ್ಟು ಮಟ್ಟಿಗೆ ರಕ್ಷಣೆ ಮಾಡಿಕೊಡುತ್ತೀರಿ ಎನ್ನುವುದೇ ನಮಗೆ ಇರತಕ್ಕ ಹೆದರಿಕೆ. ಮುಖ್ಯವಾಗಿ ರಾಜ್ಯಾಂಗಕ್ಕೆ ತಿದ್ದುಪಡಿ ಮಾಡುವುದರ ಮುಖಾಂತರ ರಾಷ್ಟ್ರದಲ್ಲಿ ಸಮಾಜವಾದ ಸ್ಥಾಪನೆ ಮಾಡುವ ಕಲ್ಪನೆ ಕೊಟ್ಟಿದ್ದಾರೆ. ಈ ಮಾತನ್ನು ಹೇಳುವಾಗ ನಮಗೂ ಒಂದು ತರದ ಆಶೆ ಬಂದಿದೆ. ಇವತ್ತು ಏನಾದರೂ ಹೊಸ ವ್ಯವಸ್ಥೆ ದೇಶದಲ್ಲಿ ಬರಬಹುದೆಂಬ ಕಲ್ಪನೆ ಕೂಡ ನಮಗೆ ಇದೆ. ಅದನ್ನು ಮಾನ್ಯ ಸದಸ್ಯರಾದಂತಹ ಕೃಷ್ಣನ್‌ರವರು ಈಗ ತಾನೇ ಹೇಳಿದರು; ಕೇವಲ ಘೋಷಣೆಯಲ್ಲೇ ನಮ್ಮ ಕೆಲಸ ಇರಬಾರದು; ಅದು ಕಾರ್ಯರೂಪದಲ್ಲೂ ಬಂದರೆ ಒಳ್ಳೆಯದು ಎಂದು. ಆದ್ದರಿಂದ ತಾವು ಇದನ್ನು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕು. ಇದು ಕಾರ್ಯರೂಪಕ್ಕೆ ಬಂದರೆ ದೇಶಕ್ಕೆ ಮತ್ತು ನಂಬಿದವರಿಗೆ ಒಳ್ಳೆಯದಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಮುಖ್ಯವಾದ ಪ್ರಶ್ನೆ ಏನೆಂದರೆ, ಈ ತಿದ್ದುಪಡಿ ಪ್ರಕಾರ ಯಾವುದೇ ಆಸ್ತಿಯನ್ನು ಸರ್ಕಾರ ವಶಪಡಿಸಿಕೊಂಡಾಗ ಕೊಡಬೇಕಾದಂತಹ ಪರಿಹಾರದ ವಿಚಾರ. ನಮ್ಮ ಮಿತ್ರರಾದ ಶ್ರೀ ಬಂಗಾರಪ್ಪನವರು ಆಸ್ತಿಯನ್ನು ವಶಪಡಿಸಿಕೊಳ್ಳುವಾಗ ಪರಿಹಾರವನ್ನು ಕೊಟ್ಟು ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಬದಲು ರಿಹ್ಯಾಬಿಲಿಟೇಶನ್ ಸ್ಕೀಮನ್ನು ಮಾಡಿ ಆ ನೀತಿಯ ಪ್ರಕಾರ ಆಸ್ತಿಯನ್ನು ವಶಪಡಿಸಿಕೊಳ್ಳಬೇಕೆಂದು ಹೇಳಿದರು. ಆದರೆ ಆಸ್ತಿಯನ್ನು ವಶಪಡಿಸಿಕೊಳ್ಳುವಾಗ ಅದಕ್ಕೆ ಏನು ಪರಿಹಾರವನ್ನು ಕೊಡಬೇಕೋ, ಅದನ್ನು ಸರ್ಕಾರ ಒಂದು ಕಾನೂನು ಮುಖಾಂತರ ಜಾರಿಗೆ ತಂದು ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಅಲ್ಲಿ ನಮಗೆ ಇರತಕ್ಕ ಭಯ ಏನೆಂದರೆ, ಇವರು ಪರಿಹಾರ ಕೊಡುವ ಒಂದು ವಿಚಾರದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕಾದರೆ, ಇವರ ಮಿತ್ರರೆಲ್ಲರ ಒಪ್ಪಿಗೆ ಪಡೆದುಕೊಂಡೇ ಆ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿದೆ. ಇವರ ಮಿತ್ರರಲ್ಲಿ ಅನೇಕರಿಗೆ, ಇವರು ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುತ್ತಿದ್ದರೂ ಕೂಡ, ಅಪಾರವಾದಂತಹ ಸಂಪತ್ತು ಮತ್ತು ಆಸ್ತಿಯನ್ನು ಹೊಂದಿರತಕ್ಕವರು ಇದ್ದಾರೆ. ಇಂತಹ ಸ್ನೇಹಿತರು ನಿಮ್ಮಲ್ಲಿರುವಾಗ ನಾಳೆ ನೀವು ಕಡಿಮೆ ಪರಿಹಾರ ಕೊಡುತ್ತೇವೆ ಅಥವಾ ಪರಿಹಾರವಿಲ್ಲದೆಯೇ ಆಸ್ತಿಯನ್ನು ವಶಪಡಿಸಿಕೊಳ್ಳುತ್ತೇವೆಂದು ಹೇಳುವುದು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ? ಮತ್ತು ಇದನ್ನು ಮಾಡಲು ನಿಮ್ಮ ಸ್ನೇಹಿತರು ಎಷ್ಟು ಮಟ್ಟಿಗೆ ನಿಮ್ಮನ್ನು ಬಿಟ್ಟಾರು ಎಂಬುದು ನಮಗಿರುವ ಭಯ. ನಮ್ಮ ಸಮಾಜವಾದ ಕೂಡ ಹೇಳುವುದು ಏನೆಂದರೆ, ಪರಿಹಾರವಿಲ್ಲದೆ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದು. ಆದರೆ ಆ ವಾದವನ್ನು ತಾವು ಇನ್ನೂ ಒಪ್ಪಿಲ್ಲ. ಪರಿಹಾರ ಎಷ್ಟು ಕೊಡಬೇಕೆಂಬುದನ್ನು ಸರ್ಕಾರಕ್ಕೆ ಪುನಃ ಬಿಟ್ಟಿದ್ದಾರೆ. ಇದನ್ನು ಕೂಡ ರಾಜ್ಯಾಂಗದಲ್ಲಿ ಎಷ್ಟು ಪರಿಹಾರ ಕೊಡಬೇಕೆಂದು ಹೇಳಿದ್ದರೆ, ನಾವು ಇವತ್ತು ಇಷ್ಟು ಸಂಶಯಪಡಬೇಕಾದ ಪರಿಸ್ಥಿತಿ ಇರಲಿಲ್ಲ. ಪರಿಹಾರ ಕೊಡುವ ಬಗ್ಗೆ ಕಾನೂನು ಮಾಡಿ ಜಾರಿಗೆ ತರುವ ಕೆಲಸ ನಾಳೆ ನಿಮ್ಮ

(ಶ್ರೀ ಕಾಗೋಡು ತಿಮ್ಮಪ್ಪ)

ಮುಂದೆ ಬರುತ್ತದೆ. ಆಗ ನೀವು ಅದಕ್ಕೆ ಒಂದು ಪ್ರತ್ಯೇಕವಾದ ಕಾನೂನನ್ನು ತರುತ್ತೀರಿ. ಆಗ ನಿಮ್ಮ ಬಂಡವಾಳಶಾಹಿ ಸ್ನೇಹಿತರು ನೀವು ಪರಿಹಾರವನ್ನು ಸೂಚಿಸುವಾಗ ನಿಮ್ಮನ್ನು ಒಂದು ಹಿಡಿತಕ್ಕೆ ಸಿಕ್ಕಿಸಿ ಹಾಕಿ ನೀವು ಮಾರ್ಕೆಟ್ ಬೆಲೆಯನ್ನು ಕೊಡುವ ಹಾಗೆಯೇ ಸೂಚಿಸುತ್ತಾರೆ ಎಂಬ ಹೆದರಿಕೆ ನಮಗೆ ಇದೆ. ಏಕೆಂದರೆ ನಿಮ್ಮಲ್ಲಿ ಇವತ್ತು ಬಂಡವಾಳಶಾಹಿಗಳು, ಜಮೀನ್ದಾರರು ಮತ್ತು ಇತರ ಆಸ್ತಿವಂತರು ಬೇಕಾದಷ್ಟು ಜನ ಇದ್ದಾರೆ. ಅವರು ಕೂಡ ಸಮಾಜವಾದ ಜಾರಿಗೆ ತರುತ್ತೇವೆಂದು ಹೇಳುತ್ತಿದ್ದಾರೆ. ಒಂದು ವೇಳೆ ನೀವು ಅವರ ಆಸ್ತಿಗೆ ಕೈಹಾಕಿದಾಗ ನೀವು ಕೂಡ ನಿಮ್ಮ ರಕ್ಷಣೆ ನೋಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರು ನಿಮ್ಮನ್ನು ಆ ಕಡೆ ಈ ಕಡೆ ಎಳೆಯುವುದಕ್ಕೆ ಶುರು ಮಾಡಿದರೆ, ಯಥಾ ಪ್ರಕಾರ ನೀವು ಹೇಳಿರತಕ್ಕಂತಹ ಮಾತುಗಳು ಕನಸಾಗಿಯೇ ಉಳಿದು ನೀವು ಮಾರ್ಕೆಟ್ ಬೆಲೆಯನ್ನು ಕೊಡುವುದಕ್ಕೆ ಮುಂದಾಗುತ್ತೀರಿ. ಇದರಿಂದ ಏನು ಪ್ರಯೋಜನವಾದ ಹಾಗೆ ಆಗುತ್ತದೆ? ಇವೊತ್ತಿನ ದಿವಸ ಕೆಲವು ಕುಟುಂಬಗಳಲ್ಲಿ ಸಂಪತ್ತು ಹೇರಳವಾಗಿ ಶೇಖರಣೆಯಾಗಿದೆ. ಅಂತಹ ಸಂಪತ್ತುಗಳನ್ನು ವಿತರಣೆ ಮಾಡಬೇಕಾದರೆ ಮತ್ತು ವಶಪಡಿಸಿಕೊಳ್ಳ ಬೇಕಾದರೆ, ನಿಮ್ಮಲ್ಲಿ ವಜ್ರದಂತಹ ಮುಷ್ಟಿ ಇರಬೇಕಾಗುತ್ತದೆ. ಅದರ ಜೊತೆಗೆ ನಿಮ್ಮ ರಟ್ಟೆಯಲ್ಲಿ ಬೇಕಾದಂತಹ ಶಕ್ತಿ ಇರಬೇಕಾಗುತ್ತದೆ. ಆದರೆ ನಿಮ್ಮಲ್ಲಿರತಕ್ಕಂತಹ ಶಕ್ತಿಯಿಂದ ಅದನ್ನು ಮಾಡುವುದಕಾಗುತ್ತದೆಯೇ ಎಂಬ ಶಂಕೆ ನಮಗೆ ಇದೆ. ನಿಮ್ಮಲ್ಲಿ ಉದಾಹರಣೆಗೆ ಬದ್ರಿನಾರಾಯಣರಂತಹ ಸ್ನೇಹಿತರು ಇದ್ದಾರೆ. ಇಂತಹ ಸ್ನೇಹಿತರು ನೀವು ಪರಿಹಾರವನ್ನು ನಿಗದಿಮಾಡುವ ನಿಮ್ಮನ್ನು ಖಂಡಿತವಾಗಿಯೂ ಬಿಡುವುದಿಲ್ಲ ಎನ್ನತಕ್ಕ ಸಂಶಯ ನಮಗೆ ಇದೆ. ಆದ್ದರಿಂದ ಇಂತಹ ಅಪಾಯದಿಂದ ಹೇಗೆ ಪಾರಾಗಿ ಬರುತ್ತೀರೆಂಬುದನ್ನು ಕಾದು ನೋಡಬೇಕಾಗಿದೆ. ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳುತ್ತೇನೆ. ಯಾವುದು ಮೀನ್ಸ್ ಆಫ್ ಪ್ರೊಡಕ್ಷನ್ ಅಥವಾ ಉತ್ಪಾದನೆ ಕ್ಷೇತ್ರವಾಗಿರತಕ್ಕ ಆಸ್ತಿ ಇದೆಯೋ ಅದನ್ನು ವಶಪಡಿಸಿಕೊಳ್ಳುವಾಗ ಅದಕ್ಕೆ ಪರಿಹಾರಧನ ಕೊಡದೇ ವಶಪಡಿಸಿಕೊಳ್ಳಬೇಕು. 47ನೇ ಇಸವಿಯಲ್ಲಿ ಭೂಸುಧಾರಣೆ ತಂದು ರೈತರಿಗೆ ಖಾತೆಹಾಕಿಸುವ ಮಾತನ್ನು ಕಾಂಗ್ರೆಸ್ ಕೊಟ್ಟಿತ್ತು. ಆ ಕೆಲಸವನ್ನು ಹಿಂದೆಯೇ ಮಾಡಿದ್ದಿದ್ದರೆ ಇಷ್ಟು ವರ್ಷದೊಳಗೆ ಪರಿಹಾರ ಕೊಟ್ಟು ಗೇಣಿ ರೈತರು ಖಾತೇದಾರರಾಗುತ್ತಿದ್ದರು. ಅವತ್ತಿನಿಂದ ಇವತ್ತಿನವರೆಗೂ ಗೇಣಿ ಕೊಡುವುದೇ ಆಗಿದೆ. ಮತ್ತೆ ಈಗ ಪರಿಹಾರ ಕೊಡಬೇಕೆಂದು ಹೇಳಿದರೆ ಇನ್ನೂ 20 ವರ್ಷಗಳ ಕಾಲ ಅವರು ಗೇಣೀದಾರರಾಗಿಯೇ ಉಳಿಯಬೇಕಾಗುತ್ತದೆ. ಗೇಣಿಯ 15 ಪಟ್ಟು 20 ಕಂತುಗಳಲ್ಲಿ ಕೊಡಬೇಕೆಂದು ಪರಿಹಾರ ನಿಗದಿಮಾಡಿದ್ದೀರಿ. ಹೆಚ್ಚು ಕಡಿಮೆ ಗೇಣಿಯನ್ನು ಲೆಕ್ಕ ಹಾಕಿದರೆ ಆ 15 ಪಟ್ಟನ್ನು ಗುಣಿಸಿದರೆ 20 ವರ್ಷಗಳಿಗೆ ಪುನಃ ಗೇಣಿ ಕೊಟ್ಟಹಾಗೆ ಆಗುತ್ತದೆ. ಇಂತಹ ಪರಿಹಾರಧನವನ್ನು ಕೊಟ್ಟು ಜಮೀನು ಪಡೆಯುವಂತಹ ಕೆಲಸವನ್ನು ಮಾಡಬೇಡಿ.

ಇನ್ನು ಆರ್ಟಿಕಲ್ 31(ಸಿ). ಇದು ನಮಗೆ ಸ್ವಲ್ಪ ಅಪಾಯವನ್ನು ತೋರಿಸುತ್ತಿದೆ. ಆರ್ಟಿಕಲ್ 19ರಲ್ಲಿ ಹೇಳಿರುವ ಆಸ್ತಿ ಸಂಚಯನದ ಹಕ್ಕನ್ನು ಮೂಲಭೂತ ಹಕ್ಕಿನೊಡನೆ ಅಳವಡಿಸಿದ್ದಾರೆ. ಇದನ್ನು ತೆಗೆದುಹಾಕಿ. ಈಗಲೇ ಇದನ್ನು ತೆಗೆದುಹಾಕಿ, ಪರಿಹಾರಧನವನ್ನು ಈಗ ಸರ್ಕಾರ ನಿಗದಿ ಮಾಡಿದರೆ ಅದನ್ನು ಯಾವ ಕೋರ್ಟೂ ಕೂಡ ಪ್ರಶ್ನೆಮಾಡುವುದಕ್ಕಾಗುವುದಿಲ್ಲ. ಆಸ್ತಿ ಸಂಚಯನದ ಹಕ್ಕು ಮೂಲಭೂತ ಹಕ್ಕು ಆಗಿರುವುದರಿಂದ ಅಂತಹ ಹಕ್ಕನ್ನು ಮೂಲಭೂತ ಹಕ್ಕಿನ ಅಧ್ಯಾಯದಿಂದ ತೆಗೆದುಹಾಕಿ.

ಇನ್ನು ಆರ್ಟಿಕಲ್ 14ರಿಂದ 19ರವರೆಗೆ ಕೆಲವು ಮೂಲಭೂತವಾದ ಹಕ್ಕುಗಳಿವೆ. ಅವು ಕೇವಲ ಆಸ್ತಿಗೆ ಸಂಬಂಧಪಟ್ಟ ಹಕ್ಕು ಅಲ್ಲ. ಆಸ್ತಿಗೆ ಸಂಬಂಧಪಟ್ಟಂಥ ಮೂಲಭೂತ ಹಕ್ಕನ್ನು ಸಂಪೂರ್ಣವಾಗಿ ಮುಳುಗಿಸಿ, ಅದನ್ನು ನಾವು ಕೇಳುವುದಕ್ಕೆ ಬರುವುದಿಲ್ಲ. ಆದರೆ ನಮ್ಮ ಸ್ವಾತಂತ್ರ್ಯದ ಹಕ್ಕು, ಮತ ಸ್ವಾತಂತ್ರ್ಯದ ಹಕ್ಕು ಮತ್ತು ವಾಕ್ ಸ್ವಾತಂತ್ರ್ಯದ ಹಕ್ಕು ಅಲ್ಲದೆ ಇನ್ನೂ ಉಳಿದಂತ ಮೂಲಭೂತ ಹಕ್ಕುಗಳು ಏನಿವೆಯೋ ಅವನ್ನು ಸಂಪೂರ್ಣವಾಗಿ ರಕ್ಷಣೆ ಮಾಡುತ್ತೇವೆಂಬ ಭರವಸೆ ಇಲ್ಲಿ ಬಂದಿಲ್ಲ. ಆದೇ ನಮಗೆ ಇರತಕ್ಕ ಭಯ. ಇವನ್ನು ನೋಡಿದರೆ, ನನಗೆ ಈದಿನ ಹಿಟ್ಲರನ ನೆನಪು ಬರುತ್ತದೆ. ಸಮಾಜವಾದದ ಹೆಸರಿನಲ್ಲಿ ಮೂಲಭೂತ ಹಕ್ಕುಗಳನ್ನು ತಿದ್ದುಪಡಿ ಮಾಡುವ ಅವಕಾಶವನ್ನು ಪಾರ್ಲಿಮೆಂಟಿಗೆ ಪಡೆದುಕೊಂಡು ಅನಂತರ ಪಾರ್ಲಿಮೆಂಟಿನಿಂದಲೇ ರಾಜ್ಯಾಂಗವನ್ನು ಮುರಿದು ಪ್ರಜಾಪ್ರಭುತ್ವವನ್ನು ಅಂತ್ಯಗೊಳಿಸಿ

ಸಂಚಯನದ ಹಕ್ಕನ್ನು ಮೊಟಕು ಮಾಡುತ್ತೀರಿ. ನಾಳೆ ನಿಮಗೆ, ನಿಮ್ಮ ಅಧಿಕಾರಕ್ಕೆ ಅಪಾಯ ತಗಲಿದರೆ ಮತ್ತು ಏನಾದರೂ ಭಯ ಉಂಟಾದರೆ, ಉಳಿದ ಎಲ್ಲಾ ಸ್ವಾತಂತ್ರ್ಯಗಳನ್ನು ಅಪಹರಣ ಮಾಡುವುದಕ್ಕೆ ಕೈ ಹಾಕಬಹುದು. ಆದ್ದರಿಂದ ಆಸ್ತಿ ಸಂಚಯನದ ಹಕ್ಕನ್ನು ಬಿಟ್ಟು ಉಳಿದ ನಾಗರಿಕ ಹಕ್ಕುಗಳು ರಾಜ್ಯಾಂಗದಲ್ಲಿ ರಕ್ಷಣೆಯಾಗಿ ಉಳಿಯಬೇಕು. ಇವತ್ತು ಸೆಕ್ಷನ್ 31 (ಸಿ) ಯಲ್ಲೇ ಸಾಕಷ್ಟು ಭಯವನ್ನು ನಮಗೆ ಹುಟ್ಟಿಸಿದೆ, ಆದ್ದರಿಂದಲೇ ನಾನು ನಮ್ಮ ನಾಗರೀಕ ಮೂಲಭೂತ ಹಕ್ಕುಗಳನ್ನು ನಮಗೆ ಉಳಿಸಿಕೊಡಬೇಕೆಂದು ಒಂದು ತಿದ್ದುಪಡಿಯನ್ನು ಕಳುಹಿಸಿದ್ದು. ನಾಗರಿಕ ಮೂಲಭೂತ ಹಕ್ಕುಗಳು ಯಾವ ರೀತಿಯಿಂದಲೂ ಚ್ಯುತಿಯಾಗದಂತೆ ನೋಡಿಕೊಳ್ಳಬೇಕು. ಇವತ್ತು ನಾನು ಕಳಕಳಿಯಿಂದ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ಮೂಲಭೂತ ಎಲ್ಲಾ ನಾಗರೀಕ ಸ್ವಾತಂತ್ರ್ಯಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ರಾಜ್ಯಾಂಗದಲ್ಲಿ ಅದಕ್ಕೆ ತಕ್ಕ ಅವಕಾಶ ಕಲ್ಪಿಸಿ ಕೊಡಬೇಕೆಂದು ಕೇಳಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಣಿಯವರೇ, ನಾವು ಸಮಾಜವಾದದ ಕನಸು ಕಟ್ಟಿಕೊಂಡು ಬಂದಿರುವ ಜನ. ಕುವೆಂಪು ಅವರು ಹಾಡಿರುವ ಹಾಗೆ ಸರ್ವರಿಗೆ ಸಮ ಬಾಳು, ಸಮ ಪಾಲು ಎಂದು ಹೇಳುವ ಜನ ನಾವು. ಇದು ನಮ್ಮ ನಾಡು ಎಂದು ಹೇಳಿ ಮನಸ್ಸಿನಲ್ಲಿ ಆ ಒಂದು ಕಲ್ಪನೆಯನ್ನು ಕಟ್ಟಿಕೊಂಡು ಬಂದಂಥ ಜನ ನಾವು. ಸಮಾಜವಾದದಲ್ಲಿ ಸರ್ವರಿಗೂ ಸಮ ಪಾಲು ಎನ್ನುವ ಗುರಿಯನ್ನು ಹೊಂದಿರುವವರು ನಾವು. ಸ್ವಾತಂತ್ರ್ಯ ಬಂದ ದಿನದಿಂದ ನಮ್ಮ ಪ್ರಜಾಪ್ರಭುತ್ವದ ಪದ್ಧತಿಯಲ್ಲಿ ಅಧಿಕಾರದ ಗದ್ದುಗೆಯನ್ನು ಏರಿದ ದಿವಂಗತ ಪಂಡಿತ ಜವಹರ್ ಲಾಲ್ ನೆಹರೂ ಅವರು ಮತ್ತು ಅವರ ಸರ್ಕಾರದಲ್ಲಿ ನಮ್ಮ ಪಕ್ಷದ ನಾಯಕರಾದಂಥ ಡಾ : ಲೋಹಿಯಾ ಅವರು ಈ ಆಸ್ತಿ ವಿಚಾರದಲ್ಲಿ ಒಂದು ಸಮಾನತೆಯನ್ನುಂಟು ಮಾಡುವ ಸಲುವಾಗಿ ರಾಜ್ಯಾಂಗವನ್ನೇ ತಿದ್ದುಪಡಿ ಮಾಡಬೇಕೆಂದು ಹೇಳಿದ್ದನ್ನು ಆನಂದದಿಂದ ಸಾರಿಕೊಂಡು ಬಂದವರು ನಾವು. ನಾವು ಆ ತಿದ್ದುಪಡಿಗೆ ವಿರೋಧಿಗಳಲ್ಲ. ನನ್ನ ಸ್ನೇಹಿತರಾದಂಥ ನನ್ನ ಗೆಳೆಯ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ವ್ಯಕ್ತಪಡಿಸಿದರು. ಇನ್ನೂ ಉಳಿದಂಥ ನಮ್ಮ ಮೂಲಭೂತವಾದ ನಾಗರೀಕ ಹಕ್ಕುಗಳಿಗೆ ಎಲ್ಲಿ ಈಗಿನ ಒಂದು ತಿದ್ದುಪಡಿಯಿಂದ ಕೊಡಲಿ ಪೆಟ್ಟು ಬಿದ್ದೀತೋ ಎನ್ನುವ ಭಯ ನಮಗೆ ಇರುವುದೆಂದು ಹೇಳಿದರು. ಏಕೆಂದರೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಪೀಪಲ್ಸ್ ಡೆಮೊಕ್ರಸಿ ಎಂಬ ಹೆಸರಿನಲ್ಲಿ ಸರ್ವಾಧಿಕಾರ ನೆರೆ ರಾಷ್ಟ್ರಗಳಲ್ಲಿ ಬಂದಿರುವಂತೆ ನಮ್ಮಲ್ಲಿ ನಾವು ಕಂಡಿದ್ದೇವೆ. ಸಮಾಜದ ಉನ್ನತಿ ಸರ್ವರಿಗೂ ಸುಭಿಕ್ಷದಂತಾಗಬೇಕೆನ್ನುವ ಒಂದು ದೊಡ್ಡ ಘೋಷಣೆಯನ್ನು ಮಾಡಿ ಬಡವರಿಗೆ ಇದರಿಂದ ಹೆಚ್ಚು ಆಸೆ ಹುಟ್ಟಿಸುವ ಘೋಷಣೆಯನ್ನು ಮಾಡಿಕೊಂಡು ಬಂದು ಜನತಾ ಪ್ರಜಾಪ್ರಭುತ್ವ ಎಂಬ ಹೆಸರಿನಲ್ಲಿ ಸರ್ವಾಧಿಕಾರಿಗಳಾಗಿ ಇವತ್ತು ಜಗತ್ತಿನ ಕೆಲವು ರಾಷ್ಟ್ರಗಳಲ್ಲಿ ಅವರು ಅಧಿಕಾರಗಳನ್ನು ನಡೆಸುವುದನ್ನು ನಾವು ಕಂಡಿದ್ದೇವೆ. ಅಂತಹ ಒಂದು ಅಪಾಯದ ಕಡೆಗೆ ನಮ್ಮ ರಾಷ್ಟ್ರ ಎಲ್ಲಿ ಮುಟ್ಟುವುದೋ ಎನ್ನುವ ಭಯ ನನಗೆ ಉಂಟಾಗಿದೆ. 19 (ಎಫ್) ವಿಧಿಯನ್ನು ಬಿಟ್ಟು ಉಳಿದ ಮೂಲಭೂತ ನಾಗರೀಕ ಹಕ್ಕುಗಳು ಏನಿವೆಯೋ ಅವುಗಳನ್ನು ನಾವು ಇಲ್ಲಿ ಮತ್ತು ಮುಂದೆ ಮುಟ್ಟುವುದಿಲ್ಲ, ತಿದ್ದುಪಡಿ ಮಾಡುವುದಿಲ್ಲವೆಂಬ ಭರವಸೆಯನ್ನು ತಾವು ಕೊಡಬೇಕೆಂದು ಕೋರುತ್ತಿದ್ದೇನೆ. ಈ ಹಕ್ಕುಗಳನ್ನು ಕಾಪಾಡಿಕೊಂಡು ಬರುವ ಭರವಸೆಯನ್ನು ರಾಜ್ಯಾಂಗದತ್ತವಾಗಿ ಕೊಡಬೇಕೆಂಬ ಅವಶ್ಯಕತೆಯನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಈ ತಿದ್ದುಪಡಿ ಏನಿದೆಯೋ ಇದು ಯಾವತ್ತೋ ಬರಬೇಕಾಗಿತ್ತು. ಕನಿಷ್ಠ 20 ವರ್ಷಗಳ ಹಿಂದೆ ಈ ತಿದ್ದುಪಡಿ ಬಂದಿದ್ದರೆ ಇವತ್ತು ನಮ್ಮ ರಾಷ್ಟ್ರದಲ್ಲಿರುವ ಕೇವಲ 75 ಕುಟುಂಬಗಳ ಕೈಲಿ ನಮ್ಮ ರಾಷ್ಟ್ರದ ಸಂಪತ್ತು ಇರಬೇಕಾಗಿರಲಿಲ್ಲ. ಇದನ್ನು ಬಹಳ ವಿಳಂಬವಾಗಿ ಗಜಗಮನದಂತೆ ತಂದಿದ್ದಾರೆ. ಬಡವರಿಗೆ ಸದಾ ಕಾಲದಲ್ಲಿಯೂ ಸಮಾಜವಾದ, ಸೋಷಿಯಲಿಸ್ಟಿಕ್ ಪ್ಯಾಟರನ್, ಮುಂತಾದ ಪದಗಳನ್ನೆಲ್ಲಾ ಹೇಳಿಕೊಂಡು ಯಾವಾಗಲೂ ಅವರಿಗೆ ವಂಚನೆ ಮಾಡುತ್ತಲೇ ಬಂದಿದ್ದಾರೆ. ಹೀಗೆಯೇ 20 ವರ್ಷಗಳಿಂದಲೂ ಮೋಸ ಮಾಡಿಕೊಂಡೇ ಬಂದಿದ್ದಾರೆ. ಕೊನೆಗೆ ಅಂತೂ ಈ ದಿನವಾದರೂ ಇಂತಹ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಅದಕ್ಕೋಸ್ಕರ ನಾನು ಸಂತೋಷಪಡುತ್ತೇನೆ. ಹಿಂದೆ ರಾಜಧನ ರದ್ದು ಆಗಬೇಕೆಂದು ನಾವು ಕೇಳಿದಾಗ ಒಪ್ಪಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಅವರೇ ಇದನ್ನು ತಂದಾಗ ನಮ್ಮ ಪಕ್ಷದವರು ಲೋಕಸಭೆಯಲ್ಲಿ ಇದಕ್ಕೆ ಬೆಂಬಲ ಕೊಟ್ಟರು. ಆದರೆ 21ನೇ ತಿದ್ದುಪಡಿಯ ಮೇಲೆ ನಮ್ಮ ಪಕ್ಷದವರು ಹಾಗೂ ನಮ್ಮ ಪಕ್ಷದ ನಾಯಕರು ಅದರ ಬಗ್ಗೆ ತೀವ್ರತರವಾದ ತಿದ್ದುಪಡಿಯನ್ನು ತಂದಾಗ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ವಿರೋಧಿಸಿದರು. ಇವತ್ತು ಅವರೇ ಇಂತಹ ಒಂದು

(ಶ್ರೀ ಕೋಣಂದೂರು ಲಿಂಗಪ್ಪ)

ತಿದ್ದುಪಡಿಯನ್ನು ತಂದಿದ್ದಾರೆ. ನಮ್ಮ ಅಭಿಪ್ರಾಯದಲ್ಲಿ ಅದು ಒಳ್ಳೆಯದೆಂದು ಕಂಡುಬಂದರೆ ಅದನ್ನು ಒಪ್ಪಿಯೇ ಒಪ್ಪುತ್ತೇವೆ. ಒಳ್ಳೆಯದಕ್ಕೆ ನಾವು ಬೆಂಬಲ ಕೊಡುತ್ತೇವೆ. ಆದರೆ ತಮ್ಮ ಪರವಾಗಿ ಪರವಾನೆ ಕೊಂಡೊಯ್ಯುವ ಜನ ನಾವಲ್ಲ.

ಈ ತಿದ್ದುಪಡಿಯ ಬಗ್ಗೆ ನಾಥ ಪೈ ಮತ್ತು ಮಧುಲಿಮೆ ಇಂಥವರೆಲ್ಲಾ ಹೇಳಿದರು. ಆದರೆ ಆಗ ಬದಲಾಯಿಸಲಿಲ್ಲ. ಆ ಕಾರಲ್ ಮಾರ್ಕ್ಸ್ ಕಮ್ಯುನಿಜಂಗೂ ನಮ್ಮ ಸೋಷಿಯಲಿಜಂಗೂ ಬಹಳ ವ್ಯತ್ಯಾಸವಿದೆ. ಆ ಕಾರಲ್ ಮಾರ್ಕ್ಸರ ಸಿದ್ಧಾಂತ ಭಾರತದ ನೆಲಕ್ಕೂ ಜಲಕ್ಕೂ ಜನಕ್ಕೂ ಸರಿಹೊಂದುವುದಿಲ್ಲ. ಹಿಂದೆ ಶ್ರೀ ಶ್ಯಾಮಣ್ಣನವರು ಕಮ್ಯುನಿಜಂ ಅನ್ನು ತಂದುಬಿಡಿ ಎಂದು ಹೇಳಿದುದಕ್ಕೆ ನಾನು ಇದನ್ನು ಹೇಳಬೇಕಾಯಿತು. ಏಕೆಕ್ಕೆ ಆ ಕಾರಲ್ ಮಾರ್ಕ್ಸರವರ ಸಿದ್ಧಾಂತ ನಮಗೆ ಅಂಟುವುದಿಲ್ಲ ಎಂದರೆ ನಮ್ಮ ಭಾರತ ಕಳೆದ ಐದುಸಾವಿರ ವರ್ಷಗಳಿಂದ ಜಾತಿ ವಿಜಾತಿ ಧರ್ಮ ಇತ್ಯಾದಿಗಳ ಗೊಂದಲದಲ್ಲಿ ಬೆಳೆದು ಬಂದ ದೇಶ ಇದು. ಆದ್ದರಿಂದ ನಮ್ಮ ಭಾರತ ದಲ್ಲಿ ಜಾತೀಯತೆ ಜಾಡ್ಯ ತೊಲಗದ ಹೊರತು ಇಲ್ಲಿ ಸಮಾಜವಾದಕ್ಕೆ ಅವಕಾಶವಿಲ್ಲ. ನಮ್ಮ ಪಕ್ಷದ ನೆಚ್ಚಿನ ನಾಯಕರಾದ ಲೋಹಿಯಾರವರ ಸಾಮಾಜಿಕ ಸಿದ್ಧಾಂತದ ಆಧಾರದ ಮೇಲೆ ನಮ್ಮ ಸಮಾಜ ಸುಧಾರಣೆಯನ್ನು ಮಾಡುವುದಾದರೆ ನಮ್ಮ ಸರ್ಕಾರಕ್ಕೆ ನಾವು ಏನು ಬೆಂಬಲ ಬೇಕಾದರೂ ಕೊಡಲಿಕ್ಕೆ ಸಿದ್ಧವಾಗಿದ್ದೇವೆ. ಇದು ಬಹಳ ತೀವ್ರತರದಲ್ಲಿ ಸುಧಾರಣೆ ಆಗಬೇಕು.

ಆದರೆ ನಾನು ಇಲ್ಲಿ ಒಂದು ಅಂಶವನ್ನು ವಿಮರ್ಶೆಮಾಡಬೇಕಾಗಿದೆ: ನಮ್ಮ ಈ ಸಂವಿಧಾನ ತಿದ್ದುಪಡಿಯಲ್ಲಿ :—

> "provided that in making any law providing for the compulsory acquisition of any property for any educational institution established and administered by minorities."

ಅಂತ ಇದೆ. ಇಲ್ಲಿ ಈ ಪ್ರೈನಾರ್ಟಿ—ಎಂಬ ಪದವನ್ನು ಹಾಕಿ ಇವರು ಎಸ್ಟಾಬ್ಲಿಷ್ ಮಾಡತಕ್ಕ ವಿದ್ಯಾ ಸಂಸ್ಥೆಗಳೇನಿವೆ ಅವುಗಳನ್ನು ಸೇಫ್‌ಗಾರ್ಡ್ ಮಾಡುವ ಒಂದು ವಿಚಾರ ಇದರಲ್ಲಿ ಅಡಕವಾಗಿದೆ. ಆ ಪಾರ್ಲಿಯಮೆಂಟಿನಲ್ಲಿ ಸದಸ್ಯರಾಗಿರತಕ್ಕ ಶ್ರೀ ಫ್ರಂಕ್ ಆಂತೋಣಿಯವರು ಒತ್ತಾಯಕ್ಕಾಗಿ ಇಲ್ಲಿ ಇಂಥ ಒಂದು ಕ್ಲಾಜನ್ನು ಸೇರಿಸಿರಬಹುದೆಂದು ನನಗೆ ಅನಿಸುತ್ತದೆ. ಆ ಕಾಲಕ್ಕೆ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಅಲ್ಲಿದ್ದರು. ಅವರಿಗೆ ಈ ವಿಚಾರ ಚೆನ್ನಾಗಿ ಗೊತ್ತಿರಬೇಕು. ಅದರೆ ಅವರ ಒಂದು ವಿದ್ಯಾಸಂಸ್ಥೆಗಳಿಗೆ ಇಂಥ ಒಂದು ವಿಶೇಷ ಸೌಲತ್ತನ್ನು ಒದಗಿಸಿ ಕೊಡುವುದರಿಂದ ಮುಂದೆ ನಮ್ಮ ಸಮಾಜಕ್ಕೆ ಎಂಥಾ ಅಪಾಯಕಾರಿ ಆಗಿ ಅದು ನಿಲ್ಲುತ್ತದೆ ಎನ್ನುವುದಕ್ಕೆ ನಮ್ಮ ಹಿಂದಿನ ಚರಿತ್ರೆಗಳೇ ಸಾಕ್ಷಿಯಾಗಿವೆ. ಇಂಗ್ಲೀಷನ್ನು ಈ ಕಾನ್‌ವೆಂಟ್ ಮತ್ತು ನರ್ಸರಿ ಶಾಲೆಗಲ್ಲಿ ಕಲಿಸುತ್ತಿರುವುದನ್ನು ಸಾರ್ವೋದ್ಧಾರವಾಗಿ ಉಳಿಯುವಂತೆ ಮಾಡುವುದಕ್ಕಾಗಿ ಇಲ್ಲಿ ಹೀಗೆ ಹೇಳಿದ್ದಾರೆಂದು ಗೊತ್ತಾಗುತ್ತದೆ. ಇದರಲ್ಲಿ ಅಡಗಿರತಕ್ಕ ಮುಖ್ಯಾಂಶ ಏನೆಂದರೆ ಇಲ್ಲಿ ಇಂಗ್ಲಿಷನ್ನು ಶಾಶ್ವತವಾಗಿ ಉಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರ. ಇದರಿಂದ ಪ್ರಾಂತೀಯ ಭಾಷೆಗಳಿಗೆ ಬಹಳ ಧಕ್ಕೆ ಬರುತ್ತದೆ; ದೊಡ್ಡ ಆತಂಕವಿದೆ. ಇಲ್ಲಿ ಹೀಗೆ ಇಂಗ್ಲೀಷಿಗೆ ಒಂದು ರಕ್ಷಣೆಯನ್ನು ಕೊಡಲು ಹೊರಟಿರುವುದರಿಂದ ನಾವು ಇದನ್ನು ಬಹಳ ತೀವ್ರವಾಗಿ ಪರ್ಯಾಲೋಚಿಸಬೇಕಾಗಿದೆ. ಆದರೆ ವಿದ್ಯಾಭ್ಯಾಸದ ಕಾರ್ಯವನ್ನು ಯಾವ ಖಾಸಗೀ ಶಾಲೆಗಳಿಗೂ ಕೊಡಬಾರದು ಎನ್ನುವುದು ನಮ್ಮ ಪಕ್ಷದ ಸಿದ್ಧಾಂತ. ಆದ್ದರಿಂದ ಈ ಸಂಸ್ಥೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಆದರೆ ಈಗ ತರತಕ್ಕ ಈ ತಿದ್ದುಪಡಿಗಳು ಇಲ್ಲಿಗೆ ಕಾಲುಶತಮಾನದ ಹಿಂದೆಯೇ ಬರಬೇಕಾಗಿತ್ತು. ಆದರೆ ಬರಲಿಲ್ಲ. ಬಹಳ ನಿಧಾನವಾಗಿಯಾದರೂ ಈಗ ಬಂದುದಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ; ಈ ಸಂದರ್ಭದಲ್ಲಿ ನನಗೆ ಉಂಟಾಗಿ ರತಕ್ಕ ಒಂದು ಆನಂದವೇನೆಂದರೆ ನಮ್ಮ ಪಕ್ಷ ಅಂದರೆ ಈಗ ಆಡಳಿತವನ್ನು ನಡೆಸುತ್ತಿರುವ ಪಕ್ಷ ಈಗ ಸಭೆಯ ಮುಂದೆ ಏನು ಒಂದು ಸೂಚನೆಯನ್ನು ಮಂಡಿಸಿದೆ ಅಥವಾ ಒಂದು ಠರಾವನ್ನು ಮಂಡಿಸಿದೆ ಅಂಥ ಒಂದು ಠರಾವನ್ನು ಮಂಡಿಸಲು ನನಗೆ ಅವಕಾಶ ಸಿಕ್ಕಿದ್ದು ಒಂದು ದೊಡ್ಡ ಸುದೈವ. ಆದುದರಿಂದ ಈ ಠರಾವನ್ನು ಸಭೆಯ ಅನುಮೋದನೆಗೆ ಇಡತಕ್ಕ ಕಾರ್ಯವನ್ನು ನಾನು ಬಹಳ ಸಂತೋಷದಿಂದ ಮಾಡುತ್ತೇನೆ.

ನಾನು ಈ ಹಿಂದೆ ನಮ್ಮ ಸಮಾಜ ಸುಧಾರಣೆಗೆ ಇರತಕ್ಕ ಅಡ್ಡಿಗಳೇನು ಅಡಚಣೆಗಳೇನು ಎಂಬುದನ್ನು ಹೇಳಿದ್ದೇನೆ. ಅವುಗಳನ್ನು ದೂರ ಮಾಡುವ ದೃಷ್ಟಿಯಿಂದ ಈಗ ನಮ್ಮ ಸಂವಿಧಾನಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದ್ದುದು ಬಹಳ ಅಗತ್ಯವಾಗಿತ್ತು. ಅದನ್ನು ಮಾಡುತ್ತೇವೆಂದು ನಮ್ಮ ಪಕ್ಷ ಮೊನ್ನೆತಾನೆ ಪಾರ್ಲಿಯಮೆಂಟಿಗೆ ನಡೆದ ಮಧ್ಯಾಂತರ ಚುನಾವಣೆಗಳ ಕಾಲದಲ್ಲಿ ದೇಶದ ಜನತೆಗೆ ಒಂದು ಘೋಷಣೆಯನ್ನು ಹೊರಡಿಸಿತ್ತು. ಅದರಂತೆ ನಮ್ಮ ಪಾರ್ಟಿ ಗೆದ್ದು ದೇಶಾದ್ಯಂತ ಅಧಿಕಾರಕ್ಕೆ ಬಂದಿದೆ. ಆದ್ದರಿಂದ ಆ ನಮ್ಮ ಘೋಷಣೆಯನ್ನು ಕಾರ್ಯ ರೂಪಕ್ಕೆ ತರಬೇಕಾದ್ದು ನಮ್ಮ ಆದ್ಯ ಕರ್ತವ್ಯ. ಅಲ್ಲದೆ ನಮ್ಮ ರಾಜ್ಯದಲ್ಲಿ ಪಾರ್ಲಿಯಮೆಂಟಿಗೆ ಇರತಕ್ಕ 27 ಸ್ಥಾನಗಳಿಗೂ ನಮ್ಮ ಪಕ್ಷದ ಅಭ್ಯರ್ಥಿಗಳಿಗೆ ಜಯವನ್ನುಂಟು ಮಾಡುವಂತೆ ಶ್ರಮಿಸಿದ ಹಾಗೂ ನಮ್ಮ ಪಕ್ಷಕ್ಕೆ ಸಂಪೂರ್ಣ ಬೆಂಬಲನೀಡಿದ ಜನತೆಗೆ ನಾವೇನು ಒಂದು ಆಶ್ವಾಸನೆಯನ್ನು ನೀಡಿದ್ದೆವೋ ಅದನ್ನು ನಡೆಸಿಕೊಡತಕ್ಕ ಮಾರ್ಗದಲ್ಲಿ ನಾನು ಈ ದಿವಸ ಈ ಠರಾವುಗಳನ್ನು ಸಭೆಯ ಮುಂದೆ ಮಂಡಿಸುವುದಕ್ಕೆ ಈ ಒಂದು ಅವಕಾಶ ಸಿಕ್ಕಿದುದಕ್ಕಾಗಿ ನಾನು ಸಂತೋಷವನ್ನು ವ್ಯಕ್ತಪಡಿಸುತ್ತೇನೆ.

ಆದರೆ ಈಗಾಗಲೇ ಮಾತನಾಡಿದ ಕೆಲವು ಸ್ನೇಹಿತರು ತಮ್ಮ ಅಭಿಪ್ರಾಯಗಳನ್ನು ಯಾವ ರೀತಿಯಲ್ಲೇ ವ್ಯಕ್ತಪಡಿಸಿರಲಿ ಅವರು ಈ ಠರಾವುಗಳಿಗೆ ಸಂಪೂರ್ಣ ಬೆಂಬಲವನ್ನು ನೀಡಿದ್ದಾರೆ. ಅದಕ್ಕಾಗಿ ಅವರಿಗೆಲ್ಲಾ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಇನ್ನು ಒಬ್ಬ ಮಾನ್ಯ ಸದಸ್ಯರು ಅಂದರೆ ಶ್ರೀ ಶ್ಯಾಮಣ್ಣನವರು—ಈ ಠರಾವನ್ನು ಅನುಮೋದಿಸುವುದಕ್ಕೂ ಅವರಿಗೆ ಧೈರ್ಯವಿಲ್ಲ, ವಿರೋಧಿಸುವುದಕ್ಕೂ ಧೈರ್ಯವಿಲ್ಲ, ಯಾವರೀತಿ ಮಾಡಬೇಕೆಂಬುದು ತೋಚದೆ ಗಾಬರಿಯಾಗಿ—ನಾನು ಇಲ್ಲಿರುವುದೇ ಬೇಡ ಎಂದು ಸಭೆಯಿಂದ ಎದ್ದು ಹೋಗಿದ್ದಾರೆಂದು ಕಾಣುತ್ತದೆ.

5–30 P. M.

ಅವರು ಗಾಂಧಿ ತತ್ವವನ್ನು ನಮಗೆ ಹೇಳಿದರು. ದೇಶದಲ್ಲಿ ಮಾರಲ್ ಸ್ಟ್ಯಾಂಡರ್ಡ್ಸ್ ಉತ್ತಮಗೊಳ್ಳಬೇಕು, ಇನ್ನು ಬೇರೆ ಕೆಲಸ ಕಾರ್ಯಗಳು ಆಗಬೇಕು, ಬಡವರ ಕಲ್ಯಾಣವಾಗಬೇಕು, ನಿರುದ್ಯೋಗ ಮುಂತಾದ ಅನೇಕ ಸಮಸ್ಯೆಗಳಿವೆ. ಈ ಸಮಸ್ಯೆಗಳನ್ನೆಲ್ಲಾ ನಾವು ಬಗೆಹರಿಸಬೇಕು, ಅದು ಬಿಟ್ಟು ಈ ಅಮೆಂಡ್‌ಮೆಂಟ್ ವಗೈರೆ ತಂದು ಒಂದು ರೀತಿಯ ಗೊಂದಲಕ್ಕೀಡುಮಾಡಿದ್ದಾರೆ ಎಂದು ಹೇಳಿದರು. ಅವರ ಅಭಿಪ್ರಾಯಕ್ಕೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ ಯಾವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಹೇಳುತ್ತಿದ್ದೇವೋ ಆ ಸಮಸ್ಯೆಗಳನ್ನು ಬಗೆಹರಿಸುವುದಕ್ಕೋಸ್ಕರ ಈ ಅಮೆಂಡ್‌ಮೆಂಟ್‌ನ್ನು ತಂದಿರತಕ್ಕದ್ದು ಎಂದು ಅವರು ತಿಳಿದುಕೊಂಡರೆ ಚೆನ್ನಾಗಿತ್ತು. ಯಾವ ಮನೆ ಕಟ್ಟಬೇಕಾದರೂ ಇದು ತಳಪಾಯದಂತೆ ಇದೆ. ಕಾನ್ಸಿಟ್ಯೂಷನ್‌ನಲ್ಲಿ ಈಗ ಇದ್ದಂತಹ ರೀತಿಯಲ್ಲಿ ನಾವು ಸಮಾಜವಾದದ ತತ್ವದ ಆಧಾರದ ಮೇಲೆ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಸಾಧ್ಯವಿಲ್ಲ. Inequality between man and man with regard to wealth ಇದನ್ನು ನಾವು ಮೊದಲು tackle ಮಾಡಬೇಕಾದದು ಇದೆ. ಒಬ್ಬರಿಗೊಬ್ಬರಿಗಿರುವ ಏರುಪೇರುಗಳನ್ನು ತಗ್ಗಿಸಬೇಕಾದರೆ ಕಾನ್ಸಿಟ್ಯೂಷನ್‌ನಲ್ಲಿ ಈಗ ಇರತಕ್ಕಂಥ ರೀತಿಯಲ್ಲಿ ಸಾಧ್ಯವಿಲ್ಲ. ಅದಕ್ಕೋಸ್ಕರವೇ ಬದಲಾವಣೆ ಮಾಡಬೇಕಾಗಿದೆ. ನಮ್ಮ ಸ್ನೇಹಿತರು ಹೇಳಿದ ಹಾಗೆ, ಸಂಪನ್ಮೂಲಗಳು ಯಾವುವು ಇವೆ, ಸಂಪತ್ತುಗಳನ್ನು ಉತ್ಪಾದನೆ ಮಾಡತಕ್ಕ ಮೂಲ ಆಸ್ತಿ, ವಸ್ತು ಯಾವುದೇ ಆಗಲೀ ಅದನ್ನು ಸರ್ಕಾರ ಒಂದಲ್ಲ ಒಂದು ರೀತಿಯಲ್ಲಿ ಹತೋಟಿಯಲ್ಲಿಟ್ಟುಕೊಂಡರೆ, ಇಂತಹ ಸಂಪತ್ತನ್ನು ಜಾಸ್ತಿ ಉತ್ಪಾದನೆ ಮಾಡುವುದರ ಜೊತೆಗೆ ಸಂಪತ್ತಿನ ಹಂಚಿಕೆ ಕೂಡ ಸರಿಯಾದ ರೀತಿಯಲ್ಲಿ ದೇಶದಲ್ಲಿ ನಡೆಯುವಂತೆ ಒಂದು ಕಾರ್ಯಕ್ರಮ ಜರುಗಿಸುವುದಕ್ಕೋಸ್ಕರ ಈ ಕಾನ್ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ತಂದಿರತಕ್ಕಂಥದ್ದು. ಇದನ್ನು ಶ್ರೀಮಾನ್ ಶಾಮಣ್ಣನವರು ಪಾಪ ಅರ್ಥಮಾಡಿಕೊಂಡಿಲ್ಲ. ಅರ್ಥಮಾಡಿಕೊಂಡಿಲ್ಲ ಎಂದು ಅವರ ಮೇಲೆ ಬೇಜಾರು ಮಾಡುವುದಿಲ್ಲ. ಅವರಿಗೂ ಮತ್ತು ಅವರ ಸ್ನೇಹಿತರಿಗೂ ಇದು ಅರ್ಥವಾಗುವುದಿಲ್ಲ ಎಂದು ನನ್ನ ಭಾವನೆ. ಆದ್ದರಿಂದ ಸ್ವಲ್ಪ ವ್ಯಥೆಯಿಂದ ಹೇಳುತ್ತಿದ್ದೇನೆ, ಅವರಿಗೆ ಇದು ಅರ್ಥವಾಗಬೇಕಾದರೆ ಸ್ವಲ್ಪ ಕಷ್ಟ. ಅವರು ಗಾಂಧಿವಾದಿ ಅಂತ ತಿಳಿದುಕೊಂಡು ಗಾಂಧಿ ತತ್ವಗಳನ್ನು ಹೇಳಿದರು. ಗಾಂಧಿಜಿಯವರು ಹೇಳಿರುವ ಮಾತನ್ನು ಈ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮುಖೇನ ಈ ಸಭೆಯ ಗಮನಕ್ಕೆ ತರುತ್ತೇನೆ. ಒಂದು

(ಶ್ರೀ ಡಿ. ದೇವರಾಜ್ ಅರಸ್)

ಸಂದರ್ಭದಲ್ಲಿ ಗಾಂಧೀಜಿಯವರು "Even God dare not appear before the poor except in the form of bread" ಎಂದು ಹೇಳಿದ್ದಾರೆ. ಮಾರಲ್ ಸ್ಟ್ಯಾಂಡರ್ಡ್ ಒಂದು ಕಡೆ ಇರಲಿ, ದೇವರು ಬಡವರ ಹತ್ತಿರ ಹೋಗಬೇಕಾದರೆ ಹೆದರುತ್ತಾನೆ. ದೇವರು ಬಡವರ ಹತ್ತಿರ ಬರೀ ರೊಟ್ಟಿ ರೂಪದಲ್ಲಿ ಹೋಗಬೇಕು. ಈ ದೇಶದಲ್ಲಿ ರೊಟ್ಟಿ ಇಲ್ಲದಿರುವಂಥ ಜನರಿಗೆ ಮಾರಲ್ ಸ್ಟ್ಯಾಂಡರ್ಡ್ ಬರುವುದು ಕಷ್ಟ. ಮೊದಲು ಇಕನಾಮಿಕ್ ಸ್ಟ್ಯಾಂಡರ್ಡ್ ಇಂಪ್ರೂವ್ ಆದರೆ ಅದರ ಜೊತೆಗೆ ಮಾರಲ್ ಸ್ಟ್ಯಾಂಡರ್ಡ್ ಬರುತ್ತದೆ, ಮತ್ತೆ ಅವರು ನಮಗೆ ಉಪದೇಶ ಹೇಳಿದರು, ಮಂತ್ರಿಗಳು ಮತ್ತು ಸಭಾಸದಸ್ಯರು ಅವರ ಆಸ್ತಿಯನ್ನು ಬಿಟ್ಟುಬಿಟ್ಟರೆ ಎಲ್ಲಾ ಸರಿ ಹೋಗುತ್ತದೆ ಎಂದು. ಅಷ್ಟರಲ್ಲಿ ಇದು ಸರಿಹೋಗುವುದಾದರೆ ನಮ್ಮ ಪಕ್ಷದಲ್ಲಿರುವ ಮಂತ್ರಿಗಳ ಮತ್ತು ಸದಸ್ಯರ ಆಸ್ತಿಯನ್ನೆಲ್ಲಾ ತೆಗೆದುಕೊಂಡು ಬಿಡಿ. ಅದರಿಂದ ದೇಶದ ಸಮಸ್ಯೆ ಸರಿ ಹೋಗುವುದಾದರೆ ಸಂತೋಷ. ಬರೀ ಆಸ್ತಿ ತೆಗೆದುಕೊಂಡರೆ ಸರಿ ಹೋಗುವುದಿಲ್ಲ. ಆಸ್ತಿಯನ್ನು ಇಟ್ಟುಕೊಂಡಿರುವವರು ಬಿಟ್ಟುಬಿಟ್ಟರೆ ನಮಗೆ ಕೊಡಿ ಎಂದು ಕಿತ್ತುಕೊಂಡು ನಮ್ಮನ್ನು ಕಳುಹಿಸುತ್ತಾರೆ. ಇದರಿಂದ ದೇಶದ ಎಲ್ಲಾ ಜನರ ಹಿತವನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲ. ಇಂಥ ಆಸ್ತಿಯನ್ನು ಕೊಂಡುಕೊಳ್ಳುವುದಕ್ಕೆ ಅನೇಕರು ತಯಾರಿದ್ದಾರೆ. ಇದು ಒಂದು ಕನ್‌ಫ್ಯೂಷನ್ ಆಫ್ ಇಷ್ಯೂಸ್ ಅಷ್ಟೇ. ಸ್ವಲ್ಪ ಅನಲೈಸ್ ಮಾಡಿ ಅರ್ಥ ಮಾಡಿಕೊಂಡರೆ ಬಹುಶಃ ನಮ್ಮ ಮಾನ್ಯ ಸ್ನೇಹಿತರು ವಿರೋಧ ಮಾಡುತ್ತಾ ಇರಲಿಲ್ಲ, ಒಪ್ಪುತ್ತಾ ಇದ್ದರು ಎಂದು ನನ್ನ ಭಾವನೆ. ಅವರು ಒಬ್ಬರ ವಿನಾ ಈ ಸಭೆಯಲ್ಲಿ ಇದನ್ನು ಬೇರೆ ಯಾರೂ ವಿರೋಧ ಮಾಡಿಲ್ಲ. ಅವರೂ ಕೂಡ ಕೊನೆಯಲ್ಲಿ ಒಂದು ಮಾತಿನಲ್ಲಿ ವಿರೋಧವೂ ಇಲ್ಲ ಪರವೂ ಇಲ್ಲ ಎಂದು ಹೇಳಿದರು.

ಕಮ್ಯೂನಿಸ್ಟ್ ಸದಸ್ಯರಾದ ಶ್ರೀಮಾನ್ ಕೃಷ್ಣನ್‌ರವರು ಈ ಠರಾವಿಗೆ ಒಪ್ಪಿಗೆಯನ್ನು ಕೊಡುತ್ತಾ ಇದು ಬಹಳ ಕ್ರಾಂತಿಕಾರಕವಾದಂಥ ಹೆಜ್ಜೆಯಲ್ಲ ಎನ್ನುವುದನ್ನು ತಿಳಿಸಿದರು. ಅವರ ದೃಷ್ಟಿಯಲ್ಲಿ ಕ್ರಾಂತಿಕಾರಕ ಹೆಜ್ಜೆಯಾವುದು ಎಂದು ನಾನು ತಿಳಿಯುವುದಕ್ಕೆ ಪ್ರಯತ್ನ ಪಟ್ಟಿದ್ದೇನೆ. ಆಸ್ತಿಯ ಮೂಲ ಹಕ್ಕು ವ್ಯಕ್ತಿಶಃ ಇರಬಾರದು ಎನ್ನುವುದು ಅವರ ವಾದ. ಮಾರ್ಕಿಸ್ಟ್ ವಾದದ ಪ್ರಕಾರ ಆಸ್ತಿ ಎಲ್ಲವೂ ಕೂಡ ಸ್ಟೇಟ್‌ಗೆ ಸೇರಿದ್ದು. ಯಾವುದೇ ರೂಪದ ಆಸ್ತಿಯನ್ನು ವ್ಯಕ್ತಿಗೆ ಕೊಡಬೇಕಾದರೆ ಸರ್ಕಾರ ಅಥವಾ ಸ್ಟೇಟ್ ಮಿತಿಗೊಳಿಸಿ ಇಷ್ಟೇ ಇಟ್ಟುಕೊಳ್ಳಬಹುದು ಎಂದು ಬಹಳ ಕಡಿಮೆ ಪ್ರಮಾಣದಲ್ಲಿ ಇಟ್ಟುಕೊಳ್ಳುವಂಥ ಒಂದು ಹಕ್ಕು ಕೊಡಬಹುದು. ಇನ್ನು ಭೂಮಿಯ ಹಕ್ಕು ಯಾವ ವ್ಯಕ್ತಿಗೂ ಇರಬಾರದು, ಪೂರ್ತಿ ಸ್ಟೇಟ್‌ನ ಆಸ್ತಿಯಾಗಿರಬೇಕು. ನಾನು ವ್ಯಕ್ತಿಶಃ ಅಥವಾ ವೈಯಕ್ತಿಕವಾಗಿ ಇದನ್ನು ಒಪ್ಪುತ್ತೇನೆ. ಈ ದೇಶದಲ್ಲಿ ಎಲ್ಲಾ ಆಸ್ತಿಯನ್ನು ಮತ್ತು ಅವರ ಹಕ್ಕನ್ನು ಸಮಾಜಕ್ಕೆ ಬಿಟ್ಟು ಬಿಡೋಣ. ಅದು ತಾತ್ವಿಕವಾಗಿ ಬಹಳ ಒಳ್ಳೆಯದು. ನಾನು ಇದಕ್ಕೆ ಯಾವ ರೀತಿಯಲ್ಲೂ ವಿರೋಧ ಮಾಡುವವನಲ್ಲ. ಆದರೆ ಇದು ವಾಸ್ತವಿಕವಾಗಿ ನಮ್ಮ ದೇಶದಲ್ಲಿ ಮಾಡುವುದಕ್ಕೆ ಸಾಧ್ಯವೇ ? ಅಂಥ ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ನಾವು ದೇಶದಲ್ಲಿ ಮಾಡುವುದಕ್ಕೆ ಸಾಧ್ಯಾ, ಸಾಧ್ಯತೆಗಳು ಏನು ಎನ್ನುವುದನ್ನು ಗಮನಿಸಿ ಜನತೆಯೂ ಕೂಡ ತೀರ್ಮಾನಕೊಟ್ಟಿದ್ದಾರೆ. ನಮ್ಮ ಕಮ್ಯೂನಿಸ್ಟ್ ಸ್ನೇಹಿತರು ಅಂಥ ಕ್ರಾಂತಿಯನ್ನು ಮಾಡಬೇಕೆಂದು ಹೊರಟು ಕೆಲವು ಕಾಲ ಜನರು ಅವರಿಗೆ ಸಹಾಯ ಮಾಡಿ ಅವರಿಂದ ಸಾಧ್ಯವಾಗುವುದಿಲ್ಲ ಎಂದು ತಿಳಿದುಕೊಂಡು, ಈಗಿನ ಚುನಾವಣೆಗಳಲ್ಲಿ ಏನಾಗಿದೆ ಎನ್ನುವುದು ಗೊತ್ತಾಗಿದೆ. ನಮ್ಮ ಸಂಸ್ಕೃತಿ, ನಮ್ಮ ಅನುಚಾನವಾಗಿ ಬಂದಿರತಕ್ಕ ಪದ್ಧತಿಗಳು, ನಮ್ಮ ನಡೆ, ನುಡಿಗಳು, ಅನೇಕ ಛಿದ್ರಕಾರಕವಾದಂಥ ಶಕ್ತಿಗಳು ಭಿನ್ನ ಭಿನ್ನವಾಗಿ ಮಾಡತಕ್ಕ ಶಕ್ತಿಗಳು, ಎಲ್ಲವನ್ನೂ ಗಮನಿಸುವುದಾದರೆ, ಈ ಭಾರತದ ಜಿನಿಯಸ್ ಏನಿದೆ ಅದರಿಂದ ಅಂಥ ಕ್ರಾಂತಿಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅಂಥ ಕ್ರಾಂತಿಕಾರಕವಾದ ಬದಲಾವಣೆಯನ್ನು ಮಾಡಬೇಕಾದರೆ ಅದು ಪ್ರಜಾ ಸತ್ತೆಯ ಮುಖಾಂತರವೇ ಆಗಬೇಕು ; ಅದು ಕ್ರಾಂತಿಯಾಗುವುದಿಲ್ಲ. ಹಠಾತ್ತನೆ ಮಾಡುವುದಕ್ಕಾಗುವುದಿಲ್ಲ. ಸ್ಟೇಜ್ ಬೈ ಸ್ಟೇಜ್ ಇವಲ್ಯೂಷನ್ ಸರಿಯಾಗಿ ಹೋಗಬೇಕು. ಆದ್ದರಿಂದ ಇದು ಅವರ ದೃಷ್ಟಿಯಲ್ಲಿ ಬಹಳ ದೊಡ್ಡ ಕ್ರಾಂತಿಯಾಗಲಿಲ್ಲ ಎಂದು ಅವರು ಹೇಳಿದರೆಂದು ನಾನು ತಿಳಿಯುತ್ತೇನೆ. ಈ ಭಾರತ ದೇಶದಲ್ಲಿ ಹಿಂದೆ ನಡೆದುಕೊಂಡು ಬಂದಿರತಕ್ಕ ವಿಚಾರಗಳನ್ನು ನಾವು ಗಮನಿಸುವುದಾದರೆ, ಇದು ದೊಡ್ಡ ಕ್ರಾಂತಿಕಾರಕ ಬದಲಾವಣೆ ಎಂದು ನಾವು ತಿಳಿಯಬಹುದು. ನಮ್ಮ ಫಂಡಮೆಂಟಲ್ ರೈಟ್ಸ್ ಚಾಪ್ಟರ್‌ನಲ್ಲಿ ಆರ್ಟಿಕಲ್ 12 ರಿಂದ 39, 40ರ ವರೆಗೂ ಫಂಡಮೆಂಟಲ್ ರೈಟ್ಸ್ ಏನು ಏನು ಎಂದು ಹೇಳಿದ್ದಾರೆ

ಈ ಆಸ್ತಿಗೆ ಸಂಬಂಧಪಟ್ಟ ಮೂಲಭೂತವಾದ ಹಕ್ಕು ಏನಿದೆ ಇದರ ಬಗ್ಗೆ ಚುನಾವಣೆಯ ಕಾಲದಲ್ಲಿ ಯಾವ ಯಾವ ಪಕ್ಷದವರು ಏನು ಏನು ಹೇಳಿದ್ದಾರೆ ಎನ್ನುವುದು ಮಾನ್ಯ ಅಧ್ಯಕ್ಷರಿಗೆ ಗೊತ್ತಿದೆ. ಆಸ್ತಿಯನ್ನು ಮಿತಿಗೊಳಿಸಿ ಆ ಹಕ್ಕನ್ನು ಕಿತ್ತುಕೊಂಡು ಹೋಗುವುದಕ್ಕೆ ಹೊರಟಿದ್ದಾರೆ. ಕೊನೆಗೆ ಕಾಂಗ್ರೆಸ್ (ಆರ್) ಪಕ್ಷದವರು ಇಂದಿರಾಗಾಂಧಿಯ ಕಡೆಯವರು They are going to take your hearths and homes. ಈ ಫಂಡಮೆಂಟಲ್ ಚಾಪ್ಟರ್ ಬದಲಾವಣೆ ಮಾಡುವುದಕ್ಕೆ ಹೊರಟಿದ್ದಾರೆ, ದೇಶವಲ್ಲ ಇಷ್ಟೊಂದು ಗಾಬರಿ ಹುಟ್ಟುವ ರೀತಿಯಲ್ಲಿ ಹೇಳಿದರು. ಯಾರು ಗಾಬರಿ ಹುಟ್ಟುವ ರೀತಿಯಲ್ಲಿ ಹೇಳಿದರೂ ಜನತೆ ಎಷ್ಟು ಪ್ರಮಾಣದಲ್ಲಿ ತಿಳಿದುಕೊಳ್ಳಬೇಕೋ ಅಷ್ಟು ತಿಳಿದುಕೊಂಡಿದ್ದಾರೆ. ಅವರು ಹೇಳಿದ್ದಕ್ಕೆ ಯಾರೂ ಗಾಬರಿಯಾಗಬೇಕಾಗಿಲ್ಲ.

ಆಸ್ತಿ ಯಾರಿಗೆ ಬಲವಾಗಿದೆಯೋ ಅವರಿಗೆ ಗಾಬರಿಯಾಯಿತು. ಇಷ್ಟೊಂದು ಬದಲಾವಣೆ ಮನೆ ಮಠವೆಲ್ಲಾ ಕಿತ್ತುಕೊಂಡು ಹೋಗುವ ರೂಪದಲ್ಲಿ ಇವೆ ಎಂದು ಹೇಳಿದ ಮೇಲೆ ಈ ಬದಲಾವಣೆ ಮಾಡಿರಬೇಕಾದರೆ ಇದು ಕ್ರಾಂತಿಕಾರಕವಾದ ಬದಲಾವಣೆ ಹೌದೋ ಅಲ್ಲವೋ ತಾವೇ ನಿರ್ಣಯಿಸಿ. ಆರ್ಟಿಕಲ್ 19ರ ಪ್ರಕಾರ ಕಾಗೋಡು ತಿಮ್ಮಪ್ಪನವರು ಮತ್ತು ಅವರ ಪಕ್ಷದ ಸದಸ್ಯರು ಒಂದು ಅನುಮಾನ ವ್ಯಕ್ತಪಡಿಸಿ ಹೇಳಿದರು. ಆರ್ಟಿಕಲ್ 19(ಇ) ನಲ್ಲಿರುವ acquire, hold and dispose of property ಇದು ಮಾತ್ರ ಬೇಡ ಇದನ್ನು ಫಂಡಮೆಂಟಲ್ ರೈಟ್ಸ್ ಅಮೆಂಡ್ ಮಾಡಿ ತೆಗೆದುಹಾಕಬಹುದಾಗಿತ್ತು. ಬಾಕಿದು ಎಲ್ಲಾ ಉಳಿಸಿಕೊಳ್ಳಬಹುದು ಎಂದು ಹೇಳಿದರು. ಆ ರೀತಿ ಹೇಳಿದಿರಿ ಎಂದು ನನ್ನ ತಿಳುವಳಿಕೆ. ಹಾಗಾದರೆ ತಾವು ಒಂದು ಕಡೆ ಹೇಳಿದಿರಿ ಶ್ರೀ ಕೃಷ್ಣನ್ ಅವರ ವಾದ ನಾವು ಒಪ್ಪುವುದಕ್ಕಾಗುವುದಿಲ್ಲ ಎಂದು. ಮಾರ್ಕಿಸ್ಟರ ವಾದ ಸರಿಯಲ್ಲ ಎಂದು ಒಂದು ಕಡೆ ಹೇಳುತ್ತೀರಿ, ಆದರೆ ನೀವು ಈಗ ಅವರ ಜಾಡಿಗೆ ಬೀಳುತ್ತಾ ಇದ್ದೀರಿ. ತಾವು ಸ್ವಲ್ಪ ಅನಲೈಸ್ ಮಾಡಿ ನೋಡಿರಿ.

ಶ್ರೀ ಕೋಣಂದೂರು ಲಿಂಗಪ್ಪ.—ಸಮಾನತೆಯ ತತ್ವ ಯಾರದೂ ಮನಾಪಲಿ ಅಲ್ಲ.

ಶ್ರೀ ಡಿ. ದೇವರಾಜ್ ಅರಸ್.—ವಿಷಯಗಳನ್ನು ತಿಳಿದುಕೊಂಡು ಸರಿಯಾಗಿ ವಿನಿಮಯ ಮಾಡಿಕೊಳ್ಳೋಣ. ಸಿದ್ಧಾಂತಗಳಲ್ಲಿ ನನ್ನದು ತಪ್ಪು ಇದ್ದರೆ ತಿದ್ದುಕೊಳ್ಳಬಹುದು. ಸಿದ್ಧಾಂತಗಳು ಎಲ್ಲಿ ಸರಿಯಾಗಿ ಗೊತ್ತಿಲ್ಲವೋ ಅಲ್ಲಿ ಕನ್‌ಫ್ಯೂಷನ್ ಉಂಟಾಗುತ್ತದೆ. ಶ್ರೀ ಕೃಷ್ಣನ್ ಅವರು ಹೇಳಿದ ಮಾತು ಅರ್ಥವಾಯಿತು. ನೀವು ಹೇಳುವ ಮಾತು ಅರ್ಥವಾಗುವುದಿಲ್ಲ ಅವರು ಹೇಳುತ್ತಾರೆ ಪ್ರಾಪರ್ಟಿ, ಸ್ಟೇಟ್ ಪ್ರಾಪರ್ಟಿ ಆಗಬೇಕು ಎಂದು. ಅದು ಎಲ್ಲರಿಗೂ ಗೊತ್ತಿರುವ ವಿಚಾರ. ಅದನ್ನು ಭಾರತ ದೇಶಕ್ಕೆ ಪ್ರಜಾತಂತ್ರದಲ್ಲಿ ಅನ್ವಯಿಸುವುದು ಕಷ್ಟ ಎಂದು ಹೇಳುತ್ತೇನೆ. ಅದು ಒಂದು ರೀತಿಯಲ್ಲಿ ಹೌದು ಎಂದು ಅವರು ಒಪ್ಪಿಕೊಂಡು ನಮ್ಮ ಜೊತೆಯಲ್ಲಿ ಬರುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿ ಹೇಳಲಿಲ್ಲ. ಒಂದೇ ಸಲ ಇದನ್ನು ತರುವುದಕ್ಕೆ ತಮಗೆ ತೊಂದರೆ ಆದರೆ ಸ್ವಲ್ಪ ಟೈಂ ಕೊಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಸಭೆಯಲ್ಲಿ ಹೇಳುವ ವಿಷಯವಲ್ಲ. ಇಬ್ಬರೂ ಸೇರಿ ಮಾತನಾಡುವ ವಿಷಯ.

ಶ್ರೀ ಎಸ್. ಬಂಗಾರಪ್ಪ.—ಏನೇನು ಹೇಳಬೇಕು ಎನ್ನುವುದನ್ನು ಗುಟ್ಟಿನಲ್ಲಿ ಮಾತನಾಡಿ ಕೊಳ್ಳಿ ಎಂದು ನಮ್ಮ ಸ್ನೇಹಿತರು ಹೇಳಿದರು.

ಶ್ರೀ ಡಿ. ದೇವರಾಜ್ ಅರಸ್.—ನಾನು ನನ್ನ ಸೋಷಿಯಲಿಸ್ಟ್ ಮಿತ್ರರಲ್ಲಿ ಹೇಳುವುದು ಇಷ್ಟೇ. ನಿಮ್ಮ ಉದ್ದೇಶ ಸರಿ ಎನ್ನುವುದಾದರೆ ನೀವು ಹೇಳುವಂತೆ ಪದಗಳನ್ನು ತೆಗೆದು ಹಾಕಿದರೆ ಸರಿಹೋಗುವುದಿಲ್ಲ. ಒಂದು ವೇಳೆ ತೆಗೆದುಹಾಕಿದರೆ ಶ್ರೀಮಾನ್ ಕೃಷ್ಣನ್ ಅವರ ವಾದವನ್ನು ಒಪ್ಪಿದ ಹಾಗಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಫಂಡಮೆಂಟಲ್ ರೈಟ್ಸ್‌ಗೂ ಮತ್ತು ಆರ್ಡಿನರಿ ರೈಟ್ಸ್‌ಗೂ ಏನು ವ್ಯತ್ಯಾಸ? ಫಂಡಮೆಂಟಲ್ ರೈಟ್ಸಿನಲ್ಲಿ ಇದು ಬೇಡ ಎಂದು ನಾವು ಹೇಳಿದ್ದು.

ಶ್ರೀ ಡಿ. ದೇವರಾಜ್ ಅರಸ್.—ಅದು ನಾವು ನೀವು ಮಾಡುವುದಕ್ಕೆ ಹೊರಟಿರುವ ವಿಚಾರ. ಈಗ ತಿದ್ದುಪಡಿ ಮಾಡುವುದಕ್ಕೆ ನಮಗೆ ಅಧಿಕಾರವಿದೆ. ಅದನ್ನು ತೆಗೆದುಕೊಂಡಿದ್ದೇವೆ.

(ಶ್ರೀ ಡಿ. ದೇವರಾಜ್ ಅರಸ್)

ತಾವು ಹೇಳುವ ಶಂಕೆ ಅಮೆಂಡ್‌ಮೆಂಟ್ ಆಗುವುದಕ್ಕೆ ಮುಂಚೆ ಇದ್ದದ್ದು. ಆಗ ಏನು ಮಾಡುವುದಕ್ಕೂ ಆಗುತ್ತಿರಲಿಲ್ಲ. ಗೋಲಕ್‌ನಾಥ್ ಕೇಸಿನಲ್ಲಿ ನಮಗೆ ಅಧಿಕಾರ ಇಲ್ಲ ಎಂದು ಹೇಳಿದರು. ನಮಗೆ ಅಧಿಕಾರ ಇದೆ ಎಂದು ಅಮೆಂಡ್‌ಮೆಂಟ್ ತಂದಾಗಿದೆ. ಆ ಅಧಿಕಾರ ಇದೆ ಎಂದು ಜನತೆ ನಮಗೆ ಮ್ಯಾನ್‌ಡೇಟ್ ಕೊಟ್ಟಿದೆ. ಇನ್ನು ಏತಕ್ಕೆ ಶಂಕೆಯನ್ನು ವ್ಯಕ್ತ ಪಡಿಸುತ್ತೀರಿ ? ನಮ್ಮ ಜೊತೆಗೆ ಒಪ್ಪಿ ಬನ್ನಿ.

ಶ್ರೀ ಎಸ್. ಬಂಗಾರಪ್ಪ.—ಜನತೆ ಯಾವಾಗ ಒಪ್ಪಿಗೆ ಕೊಟ್ಟರು !

ಶ್ರೀ ಡಿ. ದೇವರಾಜ್ ಅರಸ್.—ಚುನಾವಣೆಯಲ್ಲಿ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಜೊತೆಗೆ ಸೇರಿ ಆಯಿತು.

ಶ್ರೀ ಡಿ. ದೇವರಾಜ್ ಅರಸ್.—ಹೌದು ನಮ್ಮ ಜೊತೆಗೆ ಸೇರಿ ಆಯಿತು. ಅಪ್ಪಿ ತಪ್ಪಿ ನೀವು ಒಬ್ಬಿಬ್ಬರು ಆಕಡೆ ತೂರಿಕೊಂಡು ಬಂದಿದ್ದೀರಿ. ಗಾಳಿ ಬೀಸಿಕೊಂಡು ಬರುವಾಗ ಇತ್ತ ಕಡೆ ಬರುವುದಕ್ಕೆ ಆಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಏನು ಕೆಲಸಕಾರ್ಯಗಳನ್ನು ಕೈಗೊಳ್ಳುತ್ತೀರಿ ಎಂದು ಮುಂದೆ ಜನತೆ ನೋಡುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.—1952ನೇ ಇಸವಿಯಿಂದಲೂ ಜನ ನಿರ್ಧರಿಸಿಕೊಂಡು ಬಂದಿದ್ದಾರೆ. ನಮ್ಮ ಕಾರ್ಯ ನೋಡಿದ್ದಾರೆ. ಜನಕ್ಕೆ ನಿಮ್ಮ ಕಾರ್ಯ ನೋಡುವುದಕ್ಕೆ ಆಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ಬರಬಹುದು.

ಶ್ರೀ ಡಿ. ದೇವರಾಜ್ ಅರಸ್.—ಮುಂದೆ ಬಂದಾಗ ನೋಡೋಣ.

ಶ್ರೀ ಎಸ್. ಬಂಗಾರಪ್ಪ.—ನೋಡೋಣ.

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಆರ್ಟಿಕಲ್ 31 (ಸಿ) ಬಗ್ಗೆ ಏನು ಒಂದು ಶಂಕೆ ವ್ಯಕ್ತಪಡಿಸಿದ್ದೀರಿ ಅದಕ್ಕೆ I think Mr. Krishnan has already clarified. It needs no clarification on my part. ಇನ್ನು ಆರ್ಟಿಕಲ್ 19ರಲ್ಲಿ ಮತ್ತು ಬೇರೆ ಬೇರೆ ಆರ್ಟಿಕಲ್ಸ್‌ನಲ್ಲಿ ಇರತಕ್ಕಂಥಾದ್ದನ್ನು ಜಾರಿಗೆ ತರಬೇಕಾದರೆ, ಜಾರಿಗೆ ತರುವ ಕಾಲದಲ್ಲಿ ಯಾವ ಒಂದು ಅಡಚಣೆಯೂ ಇರಬಾರದು ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಇದರ ಬಗ್ಗೆ ಹೈಕೋರ್ಟಿಗೆ ಮತ್ತು ಸುಪ್ರೀಂಕೋರ್ಟ್‌ಗೆ ರಿಟ್ ಪಿಟಿಷನ್ಸ್ ಬಗ್ಗೆ ಇರತಕ್ಕ ಪವರ್ಸ್‌ನ್ನು ತೆಗೆದು ಹಾಕಿದ್ದಾರೆ. ಯಾವ ಕೋರ್ಟ್‌ಗೂ ಇದರ ಬಗ್ಗೆ ನಿರ್ಣಯ ಕೊಡುವ ಅಧಿಕಾರವನ್ನು ಕೋರ್ಟಿಗೆ ಹೋಗುವ ಅಧಿಕಾರವನ್ನು ತೆಗೆದು ಹಾಕಿಬಿಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನು ಅವರು ಬ್ರಹ್ಮ ಆಗುವ ಹಾಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಅದು ತಪ್ಪಿ ಹೋಯಿತು. ಇನ್ನು ಕಾಂಪನ್ಸೇಷನ್ ಕೊಡುವ ವಿಚಾರದ ಬಗ್ಗೆ ಮಾನ್ಯ ಸದಸ್ಯರೊಬ್ಬರು ಹೇಳುತ್ತಾ, ಕಾಂಪನ್ಸೇಷನ್ ಯಾತಕ್ಕೆ ಕೊಡಬೇಕು ಎನ್ನುವ ಒಂದು ವಾದವನ್ನು ಇಟ್ಟ ಹಾಗೆ ಇದೆ. ಯಾರಿಗೆ ಎಂದರೆ, ಒಂದು ಪ್ರಮಾಣಕ್ಕಿಂತ ಹೆಚ್ಚಿಗೆ ಆಸ್ತಿ ಇರತಕ್ಕವರಿಗೆ ಕಾಂಪನ್ಸೇಷನ್ ಕೊಡದೆ ನಾವು ಆಸ್ತಿಯನ್ನು ಏತಕ್ಕೆ ತೆಗೆದುಕೊಂಡು ಬಿಡಬಾರದು ಎಂದು ಕೇಳಿದ್ದಾರೆ. ನಾನು ತಮ್ಮಲ್ಲಿ ವಿನಂತಿಸುತ್ತೇನೆ. ನಾನು ತಿಳಿದಿರುವ ಹಾಗೆ ನಾವು ಪೂರ್ಣ ಎಕ್ಸ್‌ಪ್ರೋಪ್ರಿಯೇಟ್, ಕಾನ್‌ಫಿಸ್ಕೇಟ್ ಮಾಡುವ ತತ್ವದ ಮೇಲೆ ಹೋಗುತ್ತಾ ಇಲ್ಲ.

Sri M. S. KRISHNAN.—The fundamental principle of Socialism as I have understood is the expropriation of the expropriator. ತಾವು ಎಕ್ಸ್‌ಪ್ರೋಪ್ರಿಯೇಷನ್ ಮಾಡುವುದಿಲ್ಲ ಎಂದರೆ ನಾವು ಏನು ಹೇಳುವುದಕ್ಕಾಗುತ್ತದೆ?

ಶ್ರೀ ಡಿ. ದೇವರಾಜ್ ಅರಸ್.—ನಾನು ಮೊದಲೇ ಹೇಳಿಬಿಟ್ಟಿದ್ದೇನೆ. ಎಕ್ಸ್‌ಪ್ರೋಪ್ರಿಯೇಷನ್ ಥಿಯರಿ ತಿಳಿದುಕೊಳ್ಳುವುದಕ್ಕೆ ಹೊರಟರೆ ದೇಶದಲ್ಲಿ ಆಸ್ತಿ ಹಕ್ಕು ಫಂಡಮೆಂಟಲ್ ರೈಟ್ಸಿನಲ್ಲಿ ಇರಬೇಕಾದ್ದಿಲ್ಲ. ಆಸ್ತಿಪಾಸ್ತಿಗಳೆಲ್ಲಾ ಸ್ಟೇಟ್ ಪ್ರಾಪರ್ಟಿ ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಹೇಳಿದ್ದು ಎಕ್ಸ್‌ಪ್ರೋಪ್ರಿಯೇಷನ್ ಆಫ್ ದಿ ಎಕ್ಸ್‌ಪ್ರೋಪ್ರಿಯೇಟರ್ ಎಂದು.

ಶ್ರೀ ಡಿ. ದೇವರಾಜ್ ಅರಸ್.—ಆ ಒಂದು ವಿಚಾರದಲ್ಲಿ ಯಾವರೀತಿ ಮಾಡಬಹುದು ಎನ್ನುವುದನ್ನು ತಮ್ಮ ಮುಂದೆ ಇರತಕ್ಕಂಥ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ನಮೂದು ಮಾಡಿದೆ. ನಾನು ಮತ್ತೆ ಇದರ ಬಗ್ಗೆ ಹೆಚ್ಚು ಲಂಬಿಸಿ ಹೇಳಬೇಕಾಗಿಲ್ಲ. ಎಗ್ಸಿಕ್ಯುಟಿವ್‌ಗೆ ಅಧಿಕಾರ ಕೊಟ್ಟರೆ ದುರುಪಯೋಗವಾಗಬಹುದು ಎಂಬ ಶಂಕೆ ಇರಬಹುದು. ಈಗ ಎಗ್ಸಿಕ್ಯೂಟಿವಗೆ ಅಧಿಕಾರವಿಲ್ಲದಿಲ್ಲ. ಮುಂದೆ ಇಲ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಎರಡೂ ಕಡೆ ಶಾಸನ ಮಾಡಬೇಕಾಗಿದೆ, ಆಗ ತಮ್ಮ ಮುಂದೆಬರುತ್ತದೆ. ಒಂದು ಪ್ರಮಾಣಕ್ಕಿಂತ ಹೆಚ್ಚು ಪರಿಹಾರ ಕೊಡಬಾರದು, 50 ಮನೆಗಳಿದ್ದರೆ ಆ ಆಸ್ತಿಯನ್ನು ವಶಪಡಿಸಿಕೊಳ್ಳುವಾಗ ಪರಿಹಾರ ಕೊಡಬೇಕಾದಾಗ 50 ಮನೆಗಳಿಗೂ ಕೊಡಬೇಕೇ ಅಥವ ಹಂತಹಂತವಾಗಿ ಒಂದು ಮನೆಗಿಷ್ಟು 50 ಮನೆಗಳಿಗಿಷ್ಟು ಎಂದು ಸ್ಲ್ಯಾಬ್ ಸಿಸ್ಟಂ ಪ್ರಕಾರ ನಿಗದಿಮಾಡಬೇಕೇ ಎಂಬುದಕ್ಕೆಲ್ಲಾ ತಮಗೆ-ಅಧಿಕಾರವಿರುವಾಗ ಶಂಕೆಯೇಕೆ ಆ ರೀತಿಯ ಅಧಿಕಾರ ತಮಗಿರುವಾಗ ತಾವು ಇದರ ಬಗ್ಗೆ ಶಂಕೆ ಪಡಬೇಕಾಗಿಲ್ಲ. ಈಗ ನಮ್ಮ ಮಿತ್ರರು ರಾಜ್ಯಾಂಗದಲ್ಲಿ ಇದನ್ನೆಲ್ಲಾ ಬರೆಯಬೇಕಾಗಿತ್ತು ಎಂದು ಹೇಳುತ್ತಾರೆ. ಅದು ನಮಗೆ ಅರ್ಥವಾಗಿಲ್ಲ. ಇದನ್ನು ರಾಜ್ಯಾಂಗದಲ್ಲಿ ಬರೆಯುವುದಕ್ಕಾಗುವುದಿಲ್ಲ, ಇದಕ್ಕೆ ಪ್ರತ್ಯೇಕ ಕಾನೂನು ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ.—ಒಂದು ತತ್ವವನ್ನನುಸರಿಸಿ ಪುನರ್ವಸತಿಗೆ ಎಷ್ಟು ಬೇಕೋ ಅಷ್ಟಕ್ಕೆ ಅವಕಾಶಮಾಡಬಹುದು.

ಶ್ರೀ ಡಿ. ದೇವರಾಜ್ ಅರಸ್.—ತಾವು ಕಾನೂನು ಮಾಡುವಾಗ ಅದಕ್ಕೆಲ್ಲಾ ಅವಕಾಶ ಕಲ್ಪಿಸಬಹುದು. ಇಷ್ಟು ಹೇಳಿ ಒಟ್ಟಿನಲ್ಲಿ ನಮ್ಮ ವಿರೋಧ ಪಕ್ಷದ ಎಲ್ಲ ಸದಸ್ಯರೂ ಇದಕ್ಕೆ ಬೆಂಬಲ ಕೊಟ್ಟಿದ್ದಾರೆ, ಶ್ರೀ ವಾಟಾಳ್ ನಾಗರಾಜ್‌ರವರೂ ಕೂಡ ವಿರೋಧ ಮಾಡಿಲ್ಲ, ಎಲ್ಲರೂ ಇದನ್ನು ಒಪ್ಪುತ್ತಾರೆ ಎಂದು ಭಾವಿಸುತ್ತೇನೆ. ಇದು ಚಾರಿತ್ರಿಕವಾದ ದಿನ ಆಗಿದೆ, ಈ ನಿರ್ಣಯ ಒಪ್ಪುತ್ತಿದ್ದೇವೆ, ಹೀಗೆ ಮಾಡಿ ನಾಳೆ ದೇಶದಲ್ಲಿ ಮಾಡುವ ಕೆಲವು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳಿಗೆ ಒಂದು ಬುನಾದಿ ಹಾಕುತ್ತಿದ್ದೇವೆ ಎಂದು ಹೇಳಿ ತಮ್ಮೆಲ್ಲರ ಬೆಂಬಲವನ್ನು ಅಧ್ಯಕ್ಷರ ಮುಖೇನ ಕೋರುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ವಿಷಯ ಕೇಳಬೇಕಾಗಿದೆ. ಎಷ್ಟು ಕಾಲದೊಳಗೆ ಇದರ ಕೆಲಸ ಪೂರ್ಣವಾಗುವುದು ಎಂದು ಹೇಳಿದರೆ ಉತ್ತಮ, ಮುಂದೆ ಹೇಳಿದರೂ ಪರವಾಗಿಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಭೂಸುಧಾರಣೆ ವಿಚಾರದಲ್ಲಿ ತಕ್ಷಣ ಟೆನೆಂಟ್ಸ್‌ಗೆ ರಿಲೀಫ್ ಕೊಡಲು ನಾಳೆನಾಡಿದ್ದರಲ್ಲಿ ಒಂದು ತಿದ್ದುಪಡಿಯನ್ನು ತರುವುದರಲ್ಲಿದ್ದೇವೆ. ಆ ವಿಚಾರ ಬಂದಾಗ ಹೇಳೋಣವೆಂದಿದ್ದೆ. ಸುಧಾರಣೆ ಬೇಗ ಆಗಬೇಕೆಂಬ ಕಾತುರ ತಮಗೆ ಹೇಗಿದೆ ಹಾಗೆ ನಮಗೂ ಇದೆ, ಆ ರೀತಿ ಮಾಡಲು ನಾವು ಸಿದ್ಧವಾಗಿದ್ದೇವೆ. ತಾವೆಲ್ಲರೂ ಅದಕ್ಕೆ ಸಹಕಾರ ನೀಡಬೇಕು ಎಂದು ಕೇಳಿಕೊಳ್ಳುತ್ತೇನೆ.

MADAM SPEAKER.—Now I put the motion to the vote of the House. The question is:

"That this House ratifies the amendments to the Constitution of India falling within the purview of the proviso to Clause (2) of Article 368 thereof, proposed to be made by the Constitutio (Twenty-fifth Amendment) Bill, 1971, as passed by the two Houses of Parliament."

*The motion was adopted unanimously.*

MADAM SPEAKER.—Now the House will rise and meet again tomorrow at 9-00 A. M.

---

*The House adjourned at Fifty-five Minutes past Five of the Clock to meet again at Nine of the Clock on Saturday, the 8th April 1972.*

---

WD 17242—GPB—550—18-5-72

ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Saturday, 8th April 1972*

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

---

## Calling Attention to a Matter of Urgent Public Importance *re* : Supply of water from Tungabhadra Dam to Andhra Pradesh

MADAM SPEAKER.—The Hon. Member Sri T. R. Shamanna and Sri H. D. Devegowda, may call the attention of the Minister for Major Irrigation.

Sri T. R. SHAMANNA (Fort).—I call the attention of the Hon. Chief Minister to supply of water from Tungabhadra Dam to the Andhra Pradesh.

Sri H. D. DEVEGOWDA (Holenarasipur).—I also call the attention of the Hon. Minister for Major Irrigation with regard to the supply of water from Tungabhadra Dam to the Andhra Pradesh. In the meanwhile, I would like to ask one clarification from the Hon. Minister. Yesterday, he has made a statement in the Legislative Council, on this subject. I do not know why he made a similar statement in that House.

Sri H. N. NANJEGOWDA (Minister of State for Major Irrigation).—I made a statement in the other House because there was a calling attention notice in that House. If the hon. leader of the Opposition is satisfied with that statement, he need not pursue this matter in this House.

Sri M. S. KRISHNAN (Malleswaram).—I do not like the tenor of the Hon. Minister. I take objection to the remarks "If the hon. Leader of the opposition is satisfied with that statement, he need not pursue this matter in this House. This remark amounts to an arrogance of the Minister. It is unfortunate that the Minister should say so.

Sri H. N. NANJEGOWDA.—In reply to the call Attention notice, I state as follows :—

The Chairman, Tungabhadra Board, in his letter dated 20th March 1972 informed the Secretary to Governmenr of Mysore, Pubiic works and Electricity Deppartment, that the Government of Andhra Pradesh have requested him for release of 3,500 Cusecs of water from the Tungabhadra Reservoir for a period of 15 days from 23rd March 1972 as assistance for the standing second crop of over 4 lakh acres in Krishna Delta in Andhra Pradesh. The Secretary to Government of Andhra Pradesh in his letter dated 25th March 1972 requested that the release of the water may be agreed to as an *ad hoc* arrangement without any prejudice to the rights of the two State Governments of Mysore and Andhra Pradesh in any manner. The Chief Minister of Andhra Pradesh also made a request to the same effect in his letter to the Chief Minister of Mysore.

The matter was examined in detail. The implications of complying with the request of Andhra Pradesh after making full provision for the standing summer crops under the Left Bank Canal were technically examined. It was found that if water is let down as requested by Andhra Pradesh, the reservoir position as at the beginning of June, 1972, would be just adequate to meet the irrigation needs under the Tungabhadra Canals provided adequate inflows of the order of 8 T. M. Cft. of water were received during June. In case there is delayed monsoon or inadequate rains during the month, the Khariff Irrigation under the canals would be postponed. For this reason, a decision was taken that it would not be possible to accommodate the request of Andhra Pradesh.

The Union Minister for Irrigation and Power arrived in Bangalore on the 5th of April for a discussion on the situation arising out of our above decision. He pointed out during ths discussions that it would be adequate if water is let down for 10 days instead of 15 days as originally demanded and with this assistance Andhra Pradesh would be able to save crops in $1\frac{1}{2}$ lakh acres. He agreed with our contention that Khariff Irrigation under Tungabhadra Left and Right Bank Canals should not be allowed to be adversely affected. For this purpose he agreed with our contention that a first charge to the extent of 3 T. M. Cft. of water now being released should be created in favour of Mysore in the Tungabhadra Reservoir at the beginning of June and water shall be released to Andhra Pradesh on the Right Bank only after this condition is fulfiled and after the reservoir position became favourable. After taking into account all these facts, Government reconsiderd its earlier decision and decided to release water for 10 days purely as an *ad hoc* arrangement and as a measure of emergent relief to Andhra Pradesh. Water has accordingly been released from the reservoir on 6th April 1972.

It has been made clear to the Union Government, the Government of Andhra Pradesh and the Tungabhadra Board that the release of water is purely on an *ad hoc* basis and that it shall not prejudice the rights or interests of Mysore in any manner.

Sri T. R. SHAMANNA.—May I ask the Hon. Minister as to the reasons why in the beginning a clear refusal was given and thereafter an arrangement was made whereby it was agreed to release 3500 Cusecs of water. Is it on account of the pressure of the Central Government or on account of the goodwill that the Mysore Government has to show towards its neighbour—Andhra Pradesh ?

† Sri D. DEVARAJ URS (Chief Minister).—In these matters, there is no question of Central Government pressurising us. It is a measure of goodwill which prompted ultimately for the release of this quantum of water.

ಶ್ರೀ ಎಚ್. ಡಿ. ದೇವೇಗೌಡ.—ಈಗ ತಾವು "it is a measure of good will," ಎಂದು ಹೇಳಿದ್ದೀರಿ. ತಾವು ಕ್ಯಾಬಿನೆಟ್‌ನಲ್ಲಿ ನಿರ್ಣಯ ತೆಗೆದುಕೊಂಡದ್ದು ಪತ್ರಿಕೆಯಲ್ಲಿ ಕೂಡ ಬಂದಿದೆ. ನಮ್ಮ ಬೆಳೆಗಳಿಗೆ ಸರಿಯಾದ ನೀರು ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆಂದು ತಜ್ಞರು ಅಭಿಪ್ರಾಯ ಕೊಟ್ಟಿದ್ದಾರೆ. ಅದರ ಪ್ರಕಾರ ಮೊದಲು ಒಂದು ನಿರ್ಣಯ ತೆಗೆದುಕೊಂಡು ಪುನಃ ಅದನ್ನು ಬದಲಾವಣೆ ಮಾಡುವುದಕ್ಕೆ ಮಹತ್ತರವಾದ ಕಾರಣಗಳು ಏನು ?

ಶ್ರೀ ಡಿ. ದೇವರಾಜ್ ಅರಸ್.—ಮೊದಲು ನಾಲ್ಕು ಲಕ್ಷ ಎಕರೆಗಳಿಗೆ 15 ದಿವಸಕ್ಕಾದರೂ ನೀರು ಬೇಕಾಗುತ್ತದೆಂದು ಅವರು ಕೇಳಿದರು. ಆದರೆ ಜೂನಿನಲ್ಲಿ ನಮ್ಮ ಕಾರಿಫ್ ಬೆಳೆಗೆ ತೊಂದರೆಯಾಗುತ್ತದೆಂದು ಅಷ್ಟಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ನಾವು ನಿರ್ಣಯ ತೆಗೆದುಕೊಂಡಿದ್ದೆವು. ಅವರು ಮೊದಲನೆಯ ಸಾರಿ ಕೇಳಿದಾಗ, ನಾವು ಕೊಡತಕ್ಕ ನೀರನ್ನು ಜೂನಿನಲ್ಲಿ ನಮಗೆ ಅವರು ಕೊಡುತ್ತಾರೆ ಎಂಬ ಪ್ರಶ್ನೆ ನಮ್ಮ ಮುಂದೆ ಇರಲಿಲ್ಲ. ಪುನಃ ಕೆ. ಎಲ್. ರಾಯರು ಬಂದಮೇಲೆ ಆ ಕಾಲಾವಧಿಯನ್ನು ಕಡಿಮೆ ಮಾಡಿ 10 ದಿವಸಕ್ಕಾದರೂ ಒಂದಕ್ಕಾದರೂ ಒಂದೂವರೆ ಲಕ್ಷ ಎಕರೆಗೆ ಸಾಕಾಗುವಷ್ಟು ನೀರನ್ನು ಕೊಡಿ ಎಂದು ಕೇಳಿದರು. ಅದರ ಜೊತೆಗೆ ಒಂದು ಕಂಡಿಶನ್ ಕೂಡ ಈಗ ಸ್ಟೇಟ್‌ಮೆಂಟಿನಲ್ಲಿ ಓದಿ ಹೇಳಿದಂತೆ ಹಾಕಿದ್ದೇವೆ. ಅದರ ಪ್ರಕಾರ ನಾವು ಅದನ್ನು ಪುನರ್‌ವಿಮರ್ಶೆ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತಿನ ದಿವಸ ಏನು ಕೊಡುತ್ತೀರೋ ಅದನ್ನು ಜೂನಿನಲ್ಲಿ ಸರಿದೂಗಿಸುತ್ತಾರೆಂದು ಹೇಳಿದ್ದೀರಿ. ಜೂನಿನಲ್ಲಿರುವಂತಹ ಇನ್‌ಫ್ಲೋವನ್ನು ಹೇಗೆ ನಿರೀಕ್ಷಣೆ ಮಾಡುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ಇನ್‌ಫ್ಲೋ ಬೇಕಾದಷ್ಟು ಇರುತ್ತದೆಯೋ ಇಲ್ಲವೋ ಎಂಬುದು ಮಾನ್‌ಸೂನಿನಲ್ಲಿ ಗೊತ್ತಾಗುತ್ತದೆ. ಜೂನಿನಲ್ಲಿಯೂ ಅಲ್ಲಿ ಸ್ವಲ್ಪ ಬೆಳೆಯಾಗುತ್ತದೆ. ಮಳೆ ಕೆಲವು ವರ್ಷ ಸರಿಯಾದ ಕಾಲದಲ್ಲಿ ಬರುತ್ತದೆ; ಕೆಲವು ವರ್ಷ ಸರಿಯಾದ ಕಾಲದಲ್ಲಿ ಬರುವುದಿಲ್ಲ ಸ್ವಲ್ಪ ನಿಧಾನವಾಗಿ ಆಗುತ್ತದೆ. ಹೀಗೆ ನಿಧಾನವಾದರೆ ತೊಂದರೆಯಾಗುತ್ತದೆ. ಆದರೆ ಮಳೆ ಬರುವುದು ನಿಧಾನವಾದರೂ ನಾವು ಏನು ಕಾಯಬೇಕಾಗಿಲ್ಲ. ನಮಗೆ ಬೇಕಾದಷ್ಟು ನೀರನ್ನು ಇಟ್ಟು ಕೊಂಡಿದ್ದೇವೆ. ಅದರಲ್ಲಿ ನಮ್ಮ ರೈತರಿಗೂ ಕೊಡಬೇಕಾಗಿತ್ತು; ಆಂಧ್ರದವರಿಗೂ ಕೊಡಬೇಕಾಗಿತ್ತು. ಈಗ ಅವರಿಗೆ ಕೊಡುವುದರಿಂದ ನಮಗೆ ಯಾವ ರೀತಿಯ ತೊಂದರೆಯೂ ಆಗುವುದಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮೈಸೂರು ದೇಶದ ರೈತರಿಗೆ ಯಾವ ರೀತಿಯಲ್ಲೂ ಧಕ್ಕೆಯಾಗುವುದಿಲ್ಲ ಎಂಬುದರ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ರೈತರಿಗೆ ಧಕ್ಕೆಯಾಗದ ರೀತಿಯಲ್ಲಿ ಅದನ್ನು ಪರಿಶೀಲನೆ ಮಾಡಿಕೊಂಡು ಒಪ್ಪಿದ್ದೇವೆ.

---

† Indicates that the remarks or speeches have not been revised by the member concerned.

ಶ್ರೀ ಎಂ. ಎಸ್. ಕೃಷ್ಣನ್.— ನೀವು ಜೂನಿನಲ್ಲಿ ಇನ್‌ಫ್ಲೋ ಇರುವುದು ಮಾನ್‌ಸೂನ್ ಮೇಲೆ ಹೊಂದಿಕೊಂಡಿದೆ ಎಂದು ಹೇಳಿದ್ದೀರಿ. ಜೊತೆಗೆ ಅವರು ಉಪಯೋಗ ಮಾಡುವ ನೀರನ್ನು ನಾವು ವಾಪಸ್ಸು ಪಡೆಯುದಕ್ಕೆ ಸಾಧ್ಯವಿದೆ ಎಂದು ಕೂಡ ಹೇಳಿದ್ದೀರಿ; ಅದು ಒಂದಕ್ಕೊಂದು ಹೇಗೆ ಸರಿಹೋಗುತ್ತದೆ ?

Sri D. DEVARAJ URS.—I have already stated that for June crop also, we have kept some water in the reservoir. This water is meant not only to Mysore but also to Andhra Pradesh during June. I make this point quite clear to the hon. members.

Sri M. S. KRISHNAN.—That means, in case there is no inflow in the month of June, whatever share that has been given to the Andhra Pradesh will be taken away by this State.

Sri D. DEVARAJ URS.—This 3 T. M. Cft. of water is almost like loaning which will be taken away at that time. This question does not so much affect us provided the monsoon is in time. Even if the monsoon is delayed, we cannot delay raising of crops. The season has to commence. Now we have clearly stated and they have agreed that in the event of monsoon being delayed, this much of water given to them, will be utilised by us from their portion.

ಶ್ರೀ ಎಚ್. ಡಿ. ದೇವೇಗೌಡ.—ನಾನು ಏನೂ ಒಂದು ಇನ್‌ಸಿನ್ಯುಯೇಶನ್ ಪ್ರಶ್ನೆ ಕೇಳುತ್ತಾ ಇಲ್ಲ. ಆಂಧ್ರಪ್ರದೇಶದ ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿಯವರಿಗೆ ಮೊದಲು ತಿಳಿಸಿ, ಅವರು ಕೆ. ಎಲ್. ರಾಯರಿಗೆ ತಿಳಿಸಿ, ಆ ಮೇಲೆ ನಮ್ಮ ಸರ್ಕಾರಕ್ಕೆ ಹೇಳಿದ್ದಾರೆ. ಅದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀ ಡಿ. ದೇವರಾಜ್ ಅರಸ್.—ಈ ವಿಚಾರದಲ್ಲಿ ಕೇಂದ್ರಸರ್ಕಾರದವರು ಹೇಳುವುದಕ್ಕೆ ಮೊದಲು ನಾವು ನಿರಾಕರಿಸಿದ್ದೆವು. ನಮ್ಮ ಶರತ್ತುಗಳನ್ನು ಅವರು ಒಪ್ಪಿಕೊಂಡ ಮೇಲೆ, 4 ಲಕ್ಷ ಎಕರೆಗಳಿಗೆ ಬದಲಾಗಿ ಒಂದೂವರೆ ಲಕ್ಷ ಎಕರೆಗಳಿಗಾದರೂ ತೆಲಂಗಾಣದ ಡ್ರೈಬೆಲ್ಟ್ ಏರಿಯಾವನ್ನು ಸೇವ್ ಮಾಡುವುದಕ್ಕೆ ನೀರು ಕೊಡಬೇಕೆಂದು ಹೇಳಿದಮೇಲೆ, we have to take generous attitude.

## Non-Official Resolution (i) *re*: Completion of the Cauvery Water Supply Scheme to bring water to Bangalore City.

Sri T. R. SHAMANNA.—I beg to move :

"That this Assembly is of the opinion that immediate steps be taken to complete the Cauvery Water Supply Scheme to bring water to Bangalore City".

MADAM SPEAKER.—Resolution moved :

"That this Assembly is of the opinion that immediate steps be taken to complete the Cauvery Water Supply Scheme to bring water to Bangalore City."

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈ ದಿನ ನಾನು ಈ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯ ನಾನು ಕೊಟ್ಟಿದ್ದಕ್ಕೂ ತಾವು ತಿದ್ದುಪಡಿಮಾಡಿ ಇಟ್ಟಿರುವುದಕ್ಕೂ ಬಹಳ ವ್ಯತ್ಯಾಸವಿದೆ. ಆದರೂ ಕೂಡ ಈ ನಿರ್ಣಯದ ಬಗ್ಗೆ ಮಾತನಾಡುವಾಗ ಮುಖ್ಯವಾದ

ಅಂಶವೇನೆಂದರೆ ಈಗ ಬೆಂಗಳೂರು ನಗರಕ್ಕೆ ಕಾವೇರಿಯಿಂದ ಒದಗಿಸುವ ನೀರಿನ ದರವನ್ನು ಬಹಳವಾಗಿ ಹೆಚ್ಚಿಸಕೂಡದೆಂದು ನಾನು ನನ್ನ ನಿರ್ಣಯದಲ್ಲಿ ತಿಳಿಸಿದ್ದರೂ ಕೂಡ ತಾವು ಅದನ್ನು ತಿದ್ದುಪಡಿಮಾಡಿ ಅದರಲ್ಲಿ ಕೆಲವಾರು ಅಂಶಗಳನ್ನು ಮಾರ್ಪಾಟುಮಾಡಿದ್ದೀರಿ. ಆದರೂ ಪರವಾಗಿಲ್ಲ. ಈ ನಿರ್ಣಯದ ಉದ್ದೇಶವಾದರೂ ಇಷ್ಟೇ. ಕಾವೇರಿಯಿಂದ ಬೆಂಗಳೂರು ನಗರಕ್ಕೆ ನೀರನ್ನು ಒದಗಿಸುವ ಒಂದು ಯೋಜನೆ ಏನಿದೆಯೋ ಅದು 1971ನೇ ಇಸವಿಯಲ್ಲಿ ಪೂರೈಸುತ್ತದೆಂದು ಈ ಯೋಜನೆಯನ್ನು ತೆಗೆದುಕೊಂಡಾಗ ಆಶ್ವಾಸನೆಯನ್ನು ನೀಡಲಾಗಿತ್ತು. ಆದರೆ 1971ರಲ್ಲಿ ಈ ಕೆಲಸ ಆರಂಭವಾಯಿತು. ಈಗಾಗಲೇ 6 ವರ್ಷಗಳ ಕಾಲ ಅನಾವಶ್ಯಕವಾಗಿ ವ್ಯರ್ಥವಾಗಿ ಕಳೆದಿದೆ. ಮೊದಲೇ ಈ ಕೆಲಸವನ್ನು ಆರಂಭಮಾಡುವುದಕ್ಕೆ ಅದಷ್ಟು ತ್ವರಿತ ರೀತಿಯಿಂದ ಕ್ರಮ ಕೈಗೊಳ್ಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈ ನಿರ್ಣಯಕ್ಕೆ ಸಂಬಂಧಪಟ್ಟ ಮಂತ್ರಿಗಳಾದ ಮಾನ್ಯ ಶ್ರೀ ಬಿ. ಬಸವಲಿಂಗಪ್ಪನವರು ಈ ಸಭೆಯಲ್ಲಿ ಈ ವಿಚಾರದಲ್ಲಿ ಚರ್ಚೆಯಾಗುವ ಸಂದರ್ಭದಲ್ಲಿ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ಏಕೆಂದರೆ ಈ ವಿಷಯ ಅವರಿಗೆ ಸಂಬಂಧಪಟ್ಟದ್ದು.

ಶ್ರೀ ಎಚ್. ಡಿ. ದೇವೇಗೌಡ. ಮಾನ್ಯ ಶ್ರೀ ನಂಜೇಗೌಡರು ಈ ಕಡೆ ಇದ್ದಾಗ್ಗೆ ಅದರ ಬಗ್ಗೆ ಅನೇಕ ಟೀಕೆಗಳನ್ನು ಮಾಡಿದ್ದಾರೆ. ಆ ವಿಚಾರದಲ್ಲಿ ಆಗ ವಿಮರ್ಶೆ ಮಾಡುವ ಕಾಲ ಬಂದಿರಲಿಲ್ಲ. ಅದು ಈಗ ಬಂದಿದೆ.

Sri H. M. CHANNABASAPPA (Minister for Public Works).—I may submit that whatever details are required by the Hon. Members will be prepared and supplied to the House at appropriate time.

ಶ್ರೀ ಎಚ್. ಡಿ. ದೇವೇಗೌಡ.—ನಾವು ಅದರ ಬಗ್ಗೆ ಈ ಸಭೆಯಲ್ಲಿ ಅಪಾದನೆಗಳನ್ನು ಮಾಡುವಾಗ ಅದರ ಹಿಂದಿನ ಹಾಗೂ ಮುಂದಿನ ಚರಿತ್ರೆಯ ಹಿನ್ನೆಲೆಯನ್ನು ಮಾನ್ಯ ಮಂತ್ರಿಗಳು ತಿಳಿಯುವುದು ಅವಶ್ಯಕ.

Sri H. M. CHANNABASAPPA —The Government is aware of the past history and the present situation also.

Sri H. D. DEVE GOWDA.—This is the right time to take action.

Sri H. M. CHANNABASAPPA.—We are at it.

ಶ್ರೀ ಟಿ. ಆರ್. ಶಾಮಣ್ಣ.—ಬೆಂಗಳೂರು ನಗರ ಬಹಳ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಾ ಇರತಕ್ಕ ಅಂಶ ತಮೆಲ್ಲರಿಗೂ ಗೊತ್ತಿದೆ. 1961ರ ಜನಗಣತಿ ಪ್ರಕಾರ ಜನಸಂಖ್ಯೆ 11 ಲ ಇದ್ದದ್ದು 1971ರಲ್ಲಿ 17 ಲಕ್ಷಕ್ಕೂ ಮಿತಿಮೀರಿದ ಜನಸಂಖ್ಯೆ ಬೆಂಗಳೂರಿನಲ್ಲಿದೆ. ಇದರ ಜೊತೆಗೆ ಬೆಂಗಳೂರು ನಗರ 1938ನೇ ಇಸವಿಯಲ್ಲಿ 18 ಚದುರಮೈಲಿ ಇದ್ದದ್ದು ಈಗ 50 ಚದುರಮೈಲಿಗಿಂತ ಜಾಸ್ತಿಯಾಗಿದೆ. ಇನ್ನು ಬೆಂಗಳೂರು ನಗರದ ಪರಿಸ್ಥಿತಿ ಹೇಗಿದೆಯೆಂದರೆ, ಬೆಂಗಳೂರು ನಗರವಲ್ಲಿ ಕಾರ್ಪೊರೇಷನ್ನಿನವರು ಅಸೆಸ್ ಮಾಡಿರತಕ್ಕ ಮನೆಗಳು ಒಂದು ಲಕ್ಷ 8 ಸಾವಿರ. ಇನ್ನೂ ಅನೇಕ ಮನೆಗಳು ಗಣನೆಗೆ ಬಂದಿಲ್ಲ. ಅದರಲ್ಲಿ ಕೇವಲ 58 ಸಾವಿರ ಮನೆಗಳಿಗೆ ಮಾತ್ರ ನೀರಿನ ಸೌಕರ್ಯವನ್ನು ಒದಗಿಸಲಾಗಿದೆ. ಬಾಕಿ ಸುಮಾರು ಅಧಿಕೃತವಾಗಿ 50 ಸಾವಿರ ಮನೆಗಳಿಗೆ ನೀರಿನ ವಸತಿ ಸೌಕರ್ಯವಿಲ್ಲ. ಅದರ ಜೊತೆಗೆ ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಒಂದೊಂದು ಮನೆಗೆ 12 ಗ್ಯಾಲನ್ ನೀರನ್ನು ಉಪಯೋಗಿಸುತ್ತಾರೆ. ಈಗ ಬೆಂಗಳೂರು ನಗರಕ್ಕೆ ಸುಮಾರು 40 ಲಕ್ಷ ಗ್ಯಾಲನ್ ಒದಗಿಸಬೇಕೆಂಬ ಯೋಜನೆಯನ್ನು ಇಟ್ಟು ಕೊಂಡಿದ್ದಾರೆ. ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಅನೇಕ ಕಡೆಗಳಲ್ಲಿ ಬಡಾವಣೆಗಳು ವಿಶೇಷವಾಗಿ ಬೆಳೆಯುತ್ತಾ ಇವೆ. ಅಂತಹ ಬಡಾವಣೆಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಸಾಕಷ್ಟು ನೀರಿನ ಸೌಲಭ್ಯವಿಲ್ಲ. ಅದನ್ನು ಒದಗಿಸದೇ ಇರುವುದರಿಂದ ಮನೆಗಳನ್ನು ಕಟ್ಟಿಸುವ ವ್ಯವಸ್ಥೆ ಬಹಳ ನಿಧಾನವಾಗಿದೆ. ಇತ್ತೀಚೆಗಂತೂ ಬೆಂಗಳೂರಿನಲ್ಲಿ ಮನೆಗಳು ಸಿಗುವುದು ಬಹಳ ಕಷ್ಟವಾಗಿದೆ. ಈಗಿನ ಪರಿಸ್ಥಿತಿಯಲ್ಲಿ ಬೆಂಗಳೂರು ನಗರದಲ್ಲಿ ನೀರಿನ ವ್ಯವಸ್ಥೆ ಅತಿ ಮುಖ್ಯವಾದಂಥ ಸಮಸ್ಯೆಯೆಂದು ನಾನು ತಿಳಿದುಕೊಂಡಿದ್ದೇನೆ. ಬೆಂಗಳೂರು ನಗರಕ್ಕೆ ಕೊಳಾಯಿಗಳ ಮುಖಾಂತರ ನೀರನ್ನು 1891ರಲ್ಲಿ ಒದಗಿಸಿಕೊಳ್ಳುತ್ತಿದ್ದರು, ನಂತರ 2.5 ಮಿಲಿಯನ್ ಗ್ಯಾಲನ್ ನೀರು ಬರುವ ವ್ಯವಸ್ಥೆಯಾಯಿತು. ಜನಸಂಖ್ಯೆ ಬೆಳೆಯುತ್ತ ಹೋದ ಹಾಗೆಲ್ಲಾ 1933ರಿಂದ ತಿಪ್ಪಗೊಂಡನಹಳ್ಳಿಯಿಂದ ನೀರನ್ನು ತರುವುದಕ್ಕೆ ವ್ಯವಸ್ಥೆಮಾಡಿದರು.

(ಶ್ರೀ ಟಿ. ಆರ್. ಶಾಮಣ್ಣ)

ಆಗ ಸುಮಾರು 12 ಮಿಲಿಯನ್ ಗ್ಯಾಲನ್ ನೀರು ಬರುತ್ತಿತ್ತು, ಅದು ಸಾಲದು ಎಂದು 1957 ರಲ್ಲಿ ನೀರಿನ ಸರಬರಾಜನ್ನು ಹೆಚ್ಚು ಮಾಡಿದರು. ಈಗ ಸುಮಾರು 2.5 ಮಿಲಿಯನ್ ಗ್ಯಾಲನ್ ನೀರು ದಿನಕ್ಕೆ ಹೆಸರಘಟ್ಟದಿಂದ ಬರುತ್ತಿದೆ. ತಿಪ್ಪಗೊಂಡನಹಳ್ಳಿಯಿಂದ 30 ಲಕ್ಷ ಗ್ಯಾಲನ್ ನೀರು ಬರುತ್ತಿದೆ. ಒಟ್ಟಿನಲ್ಲಿ ಸುಮಾರು 30-32 ಮಿಲಿಯನ್ ಗ್ಯಾಲನ್ ನೀರು ಬೆಂಗಳೂರು ನಗರಕ್ಕೆ ಒದಗಿಸಲಾಗುತ್ತಿದೆ. ಆದರೆ ನೀರಿನ ವ್ಯವಸ್ಥೆ ಸ್ವಲ್ಪವೂ ಸಮರ್ಪಕವಾಗಿಲ್ಲದೇ ಇದ್ದಾಗ, ಬೆಂಗಳೂರು ನಗರ ಬೆಳೆದು ಇಲ್ಲಿ ಹೆಚ್ಚಿಗೆ ಕೈಗಾರಿಕೆಗಳು ಅಭಿವೃದ್ಧಿಯಾಗಬೇಕಾದರೆ ನೀರಿನ ವ್ಯವಸ್ಥೆ ಅತಿ ಅಗತ್ಯವಾಗಿ ಆಗಬೇಕು. ಕಾವೇರಿಯಿಂದ ಅಥವಾ ಬೇರೆ ಕಡೆಯಿಂದ ನೀರಿನ ಸೌಕರ್ಯವನ್ನು ಒದಗಿಸಬೇಕಾಗಿದೆ. ಅದಕ್ಕಾಗಿ ಅರ್ಕಾವತಿಯಿಂದ, ಹೇಮಾವತಿಯಿಂದ ಮತ್ತು ಶಿಂಷಾನಿಂದ ನೀರು ತರಬೇಕೆಂದು ಮಾಡಿ ಎಲ್ಲಕ್ಕಿಂತಲೂ ಮುಖ್ಯವಾಗಿ ಕಾವೇರಿಯಿಂದಲೇ ನೀರು ತರಬೇಕೆಂದು 1963ರಲ್ಲಿಯೇ ತೀರ್ಮಾನ ಮಾಡಿದರು. 1971ರವರೆಗೂ ಕಾವೇರಿಯಿಂದ ನೀರು ತರುವ ಯೋಜನೆ ಏನಿತ್ತೋ ಅದಕ್ಕೆ ಸ್ವಲ್ಪಮಟ್ಟಿಗೆ ಕಷ್ಟವಾಯಿತು. ಮೊದಲನಿಂದಲೇ ವರ್ಲ್ಡ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಈ ಯೋಜನೆಯನ್ನು ಪೂರೈಸಬೇಕೆಂದು ತೀರ್ಮಾನವಾಗಿತ್ತು. ಆಗ ಸುಮಾರು 60 ಮಿಲಿಯನ್ ಗ್ಯಾಲನ್ ನೀರು ಒದಗಿಸುವುದಕ್ಕೆ ಸುಮಾರು 30 ಕೋಟಿ ರೂಪಾಯಿಗಳ ಅಂದಾಜಿನಲ್ಲಿ ಒಂದು ಯೋಜನೆಗೆ ವರ್ಲ್ಡ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕೆಂದು ತೀರ್ಮಾನಮಾಡಿದರು. ಆಗ ಮಾನ್ಯ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದರು. ಅವರು ಈ ವಿಚಾರದಲ್ಲಿ ಯಾವ ಒಂದು ಕ್ರಮವನ್ನು ತೆಗೆದುಕೊಳ್ಳದೆ ಐದು ವರ್ಷಗಳ ಕಾಲ ವ್ಯರ್ಥವಾಗಿ ಕಾಲ ಕಳೆದರು. ಬೆಂಗಳೂರಿನ ನಾಗರೀಕರು ಸುಮಾರು 4 ವರ್ಷಗಳ ಕೆಳಗೇ ಉಚಿತ ನೀರಿನ ಸೌಲಭ್ಯವನ್ನು ಕೊಡಬೇಕೆಂದು ಕೇಳಿದ್ದರೂ ನೀರಿನ ದರ ಜಾಸ್ತಿಯೇ ಆಯಿತು, ಆಗ ದೊಡ್ಡ ಹೋರಾಟವೇ ನಡೆಯಿತು. ಆಗ ಅಸೆಂಬ್ಲಿ ಮೂಲಕ ಎಸ್ಟಿಮೇಟ್ ಕಮಿಟಿಗೆ ಈ ವಿಚಾರದಲ್ಲಿ ಒಂದು ಮನವಿಯನ್ನು ಕೊಡಲಾಯಿತು. ಆಗ ಎಸ್ಟಿಮೇಟ್ ಕಮಿಟಿಗೆ ಮಾನ್ಯ ಶ್ರೀ ಎಂ. ವೈ. ಘೋರ್ಪಡೆಯವರು ಚೇರಮನ್ ಆಗಿದ್ದರು ಅವರ ಅಧ್ಯಕ್ಷತೆಯಲ್ಲಿ ಈ ಸಮಸ್ಯೆಯನ್ನು ಪರಿಹಾರಮಾಡಿ ತಾತ್ಕಾಲಿಕವಾಗಿ ಸ್ವಲ್ಪ ಪರಿಹಾರವನ್ನು ಕೊಡಲಾಯಿತು. ಆದರೂ ಕೂಡ ಇಲ್ಲಿಯವರೆಗೆ ನೀರಿನ ಸಮಸ್ಯೆಯಂತೂ ಬಗೆಹರಿಯಲಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ಹೀಗೆ ಐದು ವರ್ಷಗಳು ವ್ಯರ್ಥವಾಗಿ ಕಳೆದಮೇಲೆ ಕಾವೇರಿಯಿಂದ ನೀರನ್ನು ದಿನಕ್ಕೆ 60 ಮಿಲಿಯನ್ ಗ್ಯಾಲನ್‌ಗಳಷ್ಟು ತರಿಸುವುದಕ್ಕೆ ಪ್ರಯತ್ನ ಮಾಡಿದರು. ಈಗ ಅದನ್ನು ಪುನಃ ಇಳಿಸಿ 30 ಮಿಲಿಯನ್ ಗ್ಯಾಲನ್‌ಗಳಷ್ಟು ತರಬೇಕೆಂದು ತೀರ್ಮಾನಮಾಡಿದ್ದಾರೆ. ಅದಕ್ಕೆ 20 ಕೋಟಿ ರೂಪಾಯಿಗಳ ಅಂದಾಜು ಮಾಡಿದ್ದಾರೆ. ಆದ್ದರಿಂದ ಮೊದಲನೆಯ ಸ್ಟೇಜಿನಲ್ಲಿ 30 ಮಿಲಿಯನ್ ಗ್ಯಾಲನ್ ತರುವುದಕ್ಕೆ ಏರ್ಪಾಡುಮಾಡಿದೆ. ಈ 30 ಮಿಲಿಯನ್ ಗ್ಯಾಲನ್ ನೀರು ತರುವುದಕ್ಕೆ ಒಂದು ವ್ಯವಸ್ಥೆಮಾಡಿ ಅದನ್ನು ಆರಂಭಮಾಡಿದಾಗ ಒಂದು ತೊಡಕು ಬಂದಿದೆ. ಮೊದಲು ಮಾಡಿದ ಯೋಚನೆಯಂತೆ ಕಾನ್‌ಕ್ರೀಟ್ ಪೈಪುಗಳನ್ನು ತರಬೇಕೆಂದು ಸಿದ್ಧತೆಗಳು ಆಗಿದ್ದುವು. ಅದರ ಬಗ್ಗೆ ಸರ್ಕಾರದವರು ತೀರ್ಮಾನವನ್ನು ಕೊಟ್ಟಿದ್ದರು. ಆದರೆ ಇದ್ದಕ್ಕಿದ್ದ ಹಾಗೆ ಯಾವುದೋ ಒಂದು ಒತ್ತಡದಿಂದ ಈಗ ಸ್ಟೀಲ್ ಪೈಪ್ ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿರುವರು. ಹೀಗೆ ಕಾಲ ವಿಳಂಬವಾದುದರಿಂದಲೂ ಮತ್ತು ಪೈಪುಗಳ ಬದಲಾವಣೆಯಿಂದಲೂ ಖರ್ಚಿನಲ್ಲಿ 3-4 ಕೋಟಿ ರೂಪಾಯಿಗಳ ವ್ಯತ್ಯಾಸವಾಯಿತು. ಸುಮಾರು 8 ಕೋಟಿ ರೂಪಾಯಿಗಳಲ್ಲಾಗತಕ್ಕ ಕೆಲಸಕ್ಕೆ ಈಗ 12-13 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಹೀಗೆ ಈ ಯೋಜನೆಯ ವೆಚ್ಚ ಏರಿತು. ಹೀಗೆ ಕೆಲಸ ಕೈಗೊಳ್ಳುದರಲ್ಲಿ ಆದ ನಿಧಾನದಿಂದಲೂ ಮತ್ತು ಈ ವಿಚಾರದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದರಲ್ಲಿ ಕಾಲವಿಳಂಬವಾದುದರಿಂದಲೂ ಬೆಂಗಳೂರಿನ ನಾಗರೀಕರಿಗೆ ನೀರಿನ ದರ ಹೆಚ್ಚಾಗುವುದಕ್ಕೆ ಕಾರಣ ಆಯಿತು. ಹೀಗೆ ನೀರಿನ ದರ ಹೆಚ್ಚಾದ ನಂತರ ಬೆಂಗಳೂರಿನ ನಾಗರೀಕರು ಸುಮಾರು ಒಂದು ಸಾವಿರ ಗ್ಯಾಲನ್ ನೀರಿಗೆ ಈಗ 4 ರೂಪಾಯಿಗಳನ್ನು ಕೊಡಬೇಕಾಗಿದೆ. ಈ ದರ ಹಿಂದೆ ಕೊಡುತ್ತಿದ್ದ ದರಕ್ಕೆ ಮೂರರಷ್ಟು ಜಾಸ್ತಿಯಾಗಿದೆ. ಹೀಗೆ ಬೆಂಗಳೂರಿನ ನಾಗರೀಕರು 4 ರೂಪಾಯಿಗಳ ನೀರಿನ ದರವನ್ನು ಕೊಟ್ಟು ನೀರನ್ನು ಉಪಯೋಗಿಸಬೇಕೆಂದರೆ ಅವರಿಗೆ ಬಹಳ ಕಷ್ಟವಾಗಿರುತ್ತದೆ. ಈಗ ಈ ಯೋಜನೆಯನ್ನೇನೋ ವಾಟರ್ ಬೋರ್ಡಿನವರು 1973 ರೊಳಗಾಗಿ ಪೂರೈಸುತ್ತೇವೆ ಎಂದು ಭರವಸೆಯನ್ನೇನೊ ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಒಂದು ಶಂಕೆ ಮೂಡಿದೆ. ಕಾರಣ ಸರ್ಕಾರದವರು ಇದರ ಬಗ್ಗೆ ಆಸಕ್ತಿ ವಹಿಸಿ ಇದಕ್ಕೆ ಸಾಕಷ್ಟು ಹಣವನ್ನು ಒದಗಿಸದಿದ್ದರೆ ಈ ಕಾರ್ಯ ನಿಗದಿಯಾದ ವೇಳೆಯಲ್ಲಿ

ಮಾಗಿಯುತ್ತದೆಂಬುದರ ಬಗ್ಗೆ ನಮಗೆಲ್ಲಾ ಬಹಳ ಸಂಶಯವುಂಟಾಗಿದೆ. ಈ ಕಾರ್ಯ ನಿರಾತಂಕವಾಗಿ ಸಾಗುವುದಕ್ಕೆ ಇರತಕ್ಕ ಮುಖ್ಯ ತೊಡಕೆಂದರೆ ಅದು ಹಣದ ಸರಬರಾಯಿಗೆ ಸಂಬಂಧಪಟ್ಟಿದ್ದು. ಈ ಯೋಜನೆಗೆ ಒಟ್ಟು 25 ಕೋಟಿ ರೂಪಾಯಿಗಳು ಬೇಕು. ಅದರೆ ಆ ಬಗ್ಗೆ ಇಲ್ಲಿಯವರೆಗೆ ವ್ಯವಸ್ಥೆಯಾಗಿರತಕ್ಕ ಹಣ 8–9 ಕೋಟಿ ರೂಪಾಯಿಗಳು ಮಾತ್ರ. ಇನ್ನೂ 17-18 ಕೋಟಿ ರೂಪಾಯಿಗಳ ವ್ಯವಸ್ಥೆಯಾಗಬೇಕಾಗಿದೆ. ಇಷ್ಟು ಹಣವನ್ನು ಒದಗಿಸುವುದಕ್ಕೆ ಸರ್ಕಾರ ಏನು ವ್ಯವಸ್ಥೆಯನ್ನು ಮಾಡಿದೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ನೀರಿನ ವ್ಯವಸ್ಥೆ ಬೇಗ ಪೂರೈಸಬೇಕಾಗಿದ್ದರೆ ಸರ್ಕಾರ ಅತ್ತ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಈಗಾಗಲೆ ಈ ನಗರದ ಜನಸಂಖ್ಯೆ 20 ಲಕ್ಷಕ್ಕೆ ಏರಿದೆ. ಅನೇಕ ಕಡೆಗಳಲ್ಲಿ ಜನರಿಗೆ ನೀರಿನ ಅಭಾವ ಉಂಟಾಗಿದೆ. ಮಹಡಿಯ ಮೇಲೆ ವಾಸಮಾಡತಕ್ಕ ಜನರಿಗೆ ನೀರು ಸರಾಗವಾಗಿ ಏರುತ್ತಿಲ್ಲ. ಈ ನಾನಾ ತೊಂದರೆಗಳನ್ನು ನಿವಾರಣೆ ಮಾಡಲು ಸರ್ಕಾರ ಅತ್ತ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಈ ನೀರು ಸರಬರಾಯಿ ವಿಚಾರದಲ್ಲಿ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಿಸುವುದಕ್ಕೆ ಏರ್ಪಾಡನ್ನು ಮಾಡುವುದಕ್ಕೆ ಪ್ರಯತ್ನಮಾಡಬೇಕೆಂಬ ಉದ್ದೇಶವಿತ್ತು. ಆದರೆ ಅದರಿಂದೇನಾದರೂ ಅಡಚಣೆ ಉಂಟಾದೀತೆಂಬ ಶಂಕೆಯಿಂದ ಅದನ್ನೂ ಕೂಡ ನಾವು ಕೈಬಿಟ್ಟೆವು. ಬೆಂಗಳೂರಿಗೆ ಈ ನೀರಿನ ಸಮಸ್ಯೆ ಒಂದು ಬಹಳ ದೊಡ್ಡ ಸಮಸ್ಯೆ. ನಗರವು ಬಹಳ ವೇಗವಾಗಿ ಬೆಳೆಯುತ್ತಿದೆ. 1934ರಲ್ಲಿ ಇದರ ಜನಸಂಖ್ಯೆ ಕೇವಲ 4 ಲ ಮಾತ್ರ ಇತ್ತು. ಈಗ ಇದರ ಜನಸಂಖ್ಯೆ 17 ಲಕ್ಷಕ್ಕೇರಿದೆ. ಇದಕ್ಕೆ ಕಾರಣವೇನೆಂಬುದನ್ನು ನಾವು ಆಲೋಚನೆ ಮಾಡಿ ನೋಡಿದರೆ ಈ ಬೆಂಗಳೂರು ನಗರ ವಿಶಾಲ ಕರ್ಣಾಟಕದ ರಾಜಧಾನಿಯಾದ ನಂತರ ಬಹಳ ಹೆಚ್ಚಾಗಿ ಬೆಳೆಯುವುದಕ್ಕೆ ಪ್ರಾರಂಭವಾಯಿತು. ಅಷ್ಟೇ ಅಲ್ಲದೆ ಇಲ್ಲಿ ನಾನಾ ಕಾರಣಗಳಿಂದ ಅನೇಕ ಕಡೆಯ ಜನರು ಬಂದು ನೆಲೆಸುವುದಕ್ಕೆ ಕಾರಣ ಇಲ್ಲಿ ಅನೇಕ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಕಾರ್ಖಾನೆಗಳು ಇರುವುದೇ ಆಗಿದೆ. ಇವೆಲ್ಲಾ ಇಲ್ಲದೆ ಇದ್ದಿದ್ದರೆ ನಮಗೆ ನೀರಿನ ವೆಚ್ಚ ಇಷ್ಟು ಜಾಸ್ತಿಯಾಗುತ್ತಿರಲಿಲ್ಲ. ಅಂದರೆ ನಮಗೆ ಈ ಸೌಕರ್ಯಗಳೆಲ್ಲಾ ಬೇಡ ಅಂತ ಹೇಳುತ್ತಿಲ್ಲ. ಈ ನಮ್ಮ ನಗರ ಎಷ್ಟು ದೊಡ್ಡದಾಗಿ ಬೆಳೆದರೆ ನಮಗೆ ಅಷ್ಟೂ ಅನುಕೂಲ. ಆದರೆ ಈ ನಗರಕ್ಕೆ ಕುಡಿಯುವ ನೀರನ್ನು ಒದಗಿಸತಕ್ಕದ್ದು ಸರ್ಕಾರದವರ ಕರ್ತವ್ಯ; ಇದು ಅವರ ಹೊಣೆ.

ಇನ್ನು ಸರ್ಕಾರದವರು ವಾಟರ್ ಸಪ್ಲೈಬೋರ್ಡಿಗೆ ತಮ್ಮ ಆಸ್ತಿಯನ್ನು ವರ್ಗಾವಣೆ ಮಾಡತಕ್ಕ ಕಾಲದಲ್ಲಿ ಆಸ್ತಿಯ ಬೆಲೆಯನ್ನು ಒಂದಕ್ಕೆ ಎರಡರಷ್ಟು ಜಾಸ್ತಿಮಾಡಿ ವರ್ಗಾವಣೆ ಮಾಡಿದ್ದಾರೆ. ಇದರಿಂದಲೂ ನಮಗೆ ನೀರಿನ ದರ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ಮೊದಲು ಸರ್ಕಾರ ವರ್ಗಾವಣೆ ಮಾಡಿದ ಆಸ್ತಿಯ ಬೆಲೆಯನ್ನು 9 ಕೋಟಿಗೆ ನಿಗದಿ ಮಾಡಿದ್ದುದನ್ನು ಶ್ರೀ ಘೋರ್ಪಡೆಯವರ ಸಮಿತಿಯಲ್ಲಿ 5 ಕೋಟಿಗೆ ಇಳಿಸಲಾಯಿತು. ಆದರೂ ಅದರ ಬೆಲೆ ಅಷ್ಟಾಗುವುದಿಲ್ಲ ಆದರೆ ಅದೇ ರೀತಿ ಕಾರ್ಪೊರೇಷನ್ನಿನ ಆಸ್ತಿಯನ್ನು ತೆಗೆದುಕೊಂಡಾಗ ಅದಕ್ಕೆ ಏನೂ ಬೆಲೆಯನ್ನೇ ಕೊಡಲಿಲ್ಲ---ಅದೂ ಮೂರು ಕೋಟಿ ರೂಪಾಯಿಗಳಷ್ಟು ಆಸ್ತಿಯಿತ್ತು. ಇದನ್ನೂ ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು.

ಇನ್ನು ಹಾಲಿ ಬೆಂಗಳೂರು ನಗರಕ್ಕೆ ಸರಬರಾಯಿ ಆಗುತ್ತಿರುವ ನೀರಿನ ಪ್ರಮಾಣದಲ್ಲಿ ಶೇಕಡಾ 30 ರಷ್ಟು ನೀರು ಲೆಕ್ಕಕ್ಕೆ ಸಿಕ್ಕದೆ ವ್ಯಯವಾಗುತ್ತಿದೆ—ವೇಸ್ಟಾಗುತ್ತಿದೆ. ಇದಕ್ಕೆ ಯಾವ ವಂವಾನವೂ ಬರುತ್ತಿಲ್ಲ. ಈ ಎಲ್ಲ ಕಾರಣಗಳನ್ನೂ ಗಮನಕ್ಕೆ ತೆಗೆದುಕೊಂಡು ನೀರಿನ ದರವನ್ನು ಕಡಮೆ ಮಾಡಬೇಕೆಂದು ಹೇಳುತ್ತಿದ್ದೇನೆ. ಸರ್ಕಾರದವರು ವಾಟರ್ ಸಪ್ಲೈ ಬೋರ್ಡಿಗೆ ವರ್ಗಾಯಿಸಿದ ಆಸ್ತಿಯಲ್ಲಿ 50-60 ವರ್ಷ ವಯಸ್ಸಾದ ಆಸ್ತಿ ಕೂಡ ಇದೆ. ಆದ್ದರಿಂದ ಅದರ ಬೆಲೆ 5 ಕೋಟಿ ರೂಪಾಯಿಗಳೂ ಕೂಡ ಆಗುವುದಿಲ್ಲ. ಹಿಂದೆ ಹೆಸರುಘಟ್ಟದ ನೀರುಸರಬರಾಯಿಯ ವ್ಯವಸ್ಥೆಯನ್ನು ಇವರಿಗೆ ಬಿಟ್ಟುಕೊಟ್ಟಾಗ ಅದಕ್ಕೆ ಮಹಾರಾಜರವರು ಏನನ್ನೂ ತೆಗೆದುಕೊಳ್ಳಲಿಲ್ಲ. ಅದನ್ನು ಸರ್ಕಾರಕ್ಕೆ ಉಚಿತವಾಗೇ ಕೊಟ್ಟರು. ಆದ್ದರಿಂದ ಸರ್ಕಾರದವರೇನು ಈಗ ವಾಟರ್ ಸಪ್ಲೈಬೋರ್ಡಿಗೆ ಆಸ್ತಿಯನ್ನು ವರ್ಗಾಯಿಸಿದ್ದಾರೆ ಅದು 50-60 ವರ್ಷಕ್ಕೂ ಹೆಚ್ಚಿನ ವಯಸ್ಸಾದ ಆಸ್ತಿಯಾಗಿರುವುದರಿಂದ ಅದನ್ನು ಉಚಿತವಾಗಿ ಬೋರ್ಡಿಗೆ ಬಿಟ್ಟುಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಬೆಂಗಳೂರಲ್ಲಿ ಕೇಂದ್ರ ಸರ್ಕಾರದ ಕಾರ್ಖಾನೆಗಳೂ ಮತ್ತು ಮಿಲಿಟರಿ ಶಿಬ್ಬಂದಿ ಹಾಗೂ ರಾಜ್ಯ ಸರ್ಕಾರದ ಕಾರ್ಖಾನೆಗಳೂ ಮತ್ತು ಇವರ ಅನೇಕ ಶಿಬ್ಬಂದಿಗಳೂ ಇರುವುದರಿಂದ ಈ ವ್ಯವಸ್ಥೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳವರು ಹೆಚ್ಚಿನ ರೀತಿಯಲ್ಲಿ ಧನ ಸಹಾಯಮಾಡಬೇಕು. ಇನ್ನು ಮುಂದಕ್ಕೆ ಬೆಂಗಳೂರಿನ ನಾಗರೀಕರು ಸಾವಿರ ಗ್ಯಾಲನ್ನಿಗೆ 4 ರೂಪಾಯಿಗಳ ದರವನ್ನು ಕೊಟ್ಟು ಕೊಳ್ಳುವುದಕ್ಕೆ ಸಾಧ್ಯವಿರುವುದಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಕಾವೇರಿ ನೀರಿಗೆ ಉಚಿತ ನೀರಿನ ಸೌಲಭ್ಯಕ್ಕಾಗಿ ಸರ್ಕಾರದವರು 2 ಕೋಟಿ ರೂಪಾಯಿಗಳನ್ನಾದರೂ ಕೊಡ

(ಶ್ರೀ ಟಿ. ಆರ್. ಶಾಮಣ್ಣ)

ಬೇಕಾಗುತ್ತದೆಂದು ಹೇಳುತ್ತೇನೆ. ಕಾರ್ಪೊರೇಷನ್ನಿಗೂ ಕೂಡ ಇನ್ನು ಮುಂದಕ್ಕೆ ಈ ವಿಚಾರದಲ್ಲಿ ಹೆಚ್ಚಿನ ಹೊರೆಯನ್ನು ಹೊರುವುದಕ್ಕೆ ಸಾಧ್ಯವಾಗುವುದಿಲ್ಲ. ಅಂದಾಗ ಬೆಂಗಳೂರು ನಗರ ಜನ ಸಾಮಾನ್ಯರಿಗೆ ಕಾವೇರಿ ನೀರನ್ನು ಪಡೆಯುವುದರ ಬಗ್ಗೆ ಬಹಳ ಕಷ್ಟದಾಗುತ್ತದೆ. ಬೆಂಗಳೂರು ನಗರದಲ್ಲಿ ಅನೇಕ ಇಂಡಸ್ಟ್ರಿಯಲ್ ಕಾರ್ಪೊರೇಷನ್ನುಗಳು ಇವೆ. ಫೈನಾನ್ಷಿಯಲ್ ಕಾರ್ಪೊರೇಷನ್ನಿನಿಂದ ಹಣವನ್ನು ಪಡೆಯೋಣವೆಂದರೆ ಅವಕ್ಕೆ ಹೆಚ್ಚಿನ ಬಡ್ಡಿಯನ್ನು ತೆರಬೇಕಾಗುತ್ತೆ. ಆದುದರಿಂದ ನಮ್ಮ ಬೆಂಗಳೂರು ನಗರದ ಸುತ್ತಮುತ್ತಲು ಆವರಿಸಿರತಕ್ಕ ಕೇಂದ್ರ ಹಾಗೂ ರಾಜ್ಯ ಸರ್ಕಾರದ ದೊಡ್ಡ ದೊಡ್ಡ ಕಾರ್ಖಾನೆಗಳೇನಿವೆ ಅವುಗಳಿಂಥ ಸ್ವಲ್ಪ ಹಣವನ್ನು ಮುಂಗಡವಾಗಿ ಪಡೆಯತಕ್ಕ ಒಂದು ಅವಕಾಶವನ್ನು ಸರ್ಕಾರದವರು ಮಾಡಿದರೆ ಅನಕೂಲವಾಗುತ್ತದೆ. ಇದರಿಂದ ನೀರಿನ ದರವನ್ನು ಇಳಿಸುವುದಕ್ಕೂ ಕೂಡ ಸಾಧ್ಯವಾಗುತ್ತದೆ. ಹೀಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಿದರೇನೇ ಕಾವೇರಿ ನೀರು ಜನಕ್ಕೆ ಕಣ್ಣೀರಾಗದೆ ಕುಡಿಯುವ ನೀರಾಗುತ್ತದೆಂದು ಒತ್ತಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಲಿ ಇರತಕ್ಕ ನೀರಿನ ದರವನ್ನು ಕೂಡಲೇ ಇಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಬೆಂಗಳೂರಿನ ದೊಡ್ಡ ಸಮಸ್ಯೆಯಾದ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇಷ್ಟನ್ನು ಹೇಳಿದ ನಂತರ ಬೆಂಗಳೂರು ನಗರಕ್ಕೆ ಇರತಕ್ಕ ಬೇರೆ ತೊಂದರೆಗಳನ್ನೂ ಕೂಡ ಸಭೆಯ ಗಮನಕ್ಕೆ ತರಬೇಕಾಗಿದೆ.

ನಗರದಲ್ಲಿ ಇತ್ತೀಚೆಗೆ ಸೊಳ್ಳೆಗಳ ಕಾಟ ವಿಪರೀತವಾಗಿದೆ. ಆದರೂ ಇದು ಹೆಸರಿಗೆ ಮಾತ್ರ ಮಾದರೀ ನಗರವಂತೆ. ಇಲ್ಲಿ ಹವಾ ಉತ್ತಮವಾದದ್ದು, ಆಹಾರ ಉತ್ತಮವಾದದ್ದು. ಆದರೆ ಇಲ್ಲಿರತಕ್ಕ ಸೊಳ್ಳೆಗಳ ಕಾಟವನ್ನು ನೋಡಿದರೆ ನಾವೇಕೆ ಇಲ್ಲಿರಬೇಕು ಎಂದು ಜನರು ಬೇಜಾರಾಗುವಷ್ಟು ಸೊಳ್ಳೆಗಳ ಕಾಟ ಹೆಚ್ಚಿದೆ. ತತ್ರಾಪಿ ಜಯನಗರ, ವಿಲ್ಸನ್‌ಗಾರ್ಡನ್, ಕಂಟೋನ್‌ಮೆಂಟ್, ಮಾಗಡಿ ರಸ್ತೆ ಇತ್ಯಾದಿ ಬಡಾವಣೆಗಳಲ್ಲಿ ಸೊಳ್ಳೆಕಾಟ ಜಾಸ್ತಿಯಾಗಿದೆ. ಮಲ್ಲೇಶ್ವರದಲ್ಲೂ ಜಾಸ್ತಿಯಾಗಿದೆ ಎಂದು ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದಾರೆ. ಈ ಸೊಳ್ಳೆಗಳ ಕಾಟ ಎಂದರೆ ಮಲಗುವುದಕ್ಕೆ ಹೋದಾಗ ನಿದ್ರೆಗೆ ಅವಕಾಶ ಕೊಡದಂತೆ ಕಿವಿಯ ಹತ್ತಿರ ಬಂದು ಸಂಗೀತ ಹಾಡುತ್ತವೆ, ಊಟಕ್ಕೆ ಕುಳಿತಾಗ ಬಾಯಿನೊಳಕ್ಕೆ ಹೋಗುತ್ತವೆ. ಹೀಗಾಗಿ ಇವುಗಳ ಕಾಟ ನಾಗರೀಕರಿಗೆ ಒಂದು ದೊಡ್ಡ ರೋಗವಾಗಿ ಪರಿಣಮಿಸಿದೆ.

9-30 A.M.

ಸೊಳ್ಳೆ ಕಾಟ ಬೆಂಗಳೂರಿನಲ್ಲಿ ಹಾಗೆಯೇ ಇದೆ, ಬೆಂಗಳೂರು ನಗರದ ಸಿವರೇಜ್ ಸಿಸ್ಟಂ ಸಾಕಷ್ಟು ಸಮರ್ಪಕವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಬೆಂಗಳೂರಿನ ಅರ್ಧ ಭಾಗಗಳಿಗೆ ಸಿವರೇಜ್ ವ್ಯವಸ್ಥೆಯಾಗಿಲ್ಲ ಎನ್ನುವುದನ್ನು ಒತ್ತಿ ಹೇಳಬೇಕಾಗಿದೆ. ಕಾವೇರಿ ಸ್ಕೀಂನಲ್ಲಿ ಸಿವರೇಜ್ ಸಿಸ್ಟಂ ಸೇರಿದೆ. ವಾಟರ್ ಸಪ್ಲೈ ಬೋರ್ಡಿನವರೂ ಎಲ್ಲಿ ಕಂದಾಯಕೊಡುತ್ತಾರೋ ಎಲ್ಲಿ ಅನುಕೂಲಸ್ಥರಿದ್ದಾರೋ ಅಂಥ ಕಡೆಗಳಲ್ಲಿ ಮಾತ್ರ ಸಿವರೇಜ್ ಹಾಕಿದ್ದಾರೆ. ಸ್ಲಂ ಮತ್ತು ರೆವಿನ್ಯೂ ಲೇಔಟ್‌ಗಳು ಇರತಕ್ಕ ಜಾಗಗಳಲ್ಲಿ ಸಿವರೇಜ್ ಇಲ್ಲದೆ ಇರುವುದರಿಂದ ಜನಗಳಿಗೆ ಬಹಳ ಕಷ್ಟವಾಗಿದೆ. ವಾಟರ್ ಸಪ್ಲೈ ಬೋರ್ಡಿನವರು ಹಿಂದುಳಿದ ಪ್ರದೇಶಗಳಿಗೆ ಸಿವರೇಜ್ ಸಿಸ್ಟಂ ಮಾಡದೆ ಹೋದ ಪಕ್ಷದಲ್ಲಿ ಸೊಳ್ಳೆ ಕಾಟ ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಇದನ್ನು ಅವರ ಸ್ಕೀಂನಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಒಂದಾನೊಂದು ಕಾಲದಲ್ಲಿ ನಾನು ಶ್ರೀಮಾನ್ ಮಗ್ಗುಂ ರವರನ್ನು ಸಾಕಷ್ಟು ಟೀಕೆ ಮಾಡಿದ್ದೇನೆ. ಬೇರೆ ವಿಚಾರದಲ್ಲಿ ಅವರನ್ನು ಟೀಕೆ ಮಾಡಿದರೂ, ಅಲ್ಲಿ ಸಾಕಷ್ಟು ದಕ್ಷತೆಯಿಂದ ಕೆಲಸಗಳು ನಡೆಯುತ್ತಿವೆ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ಅವರು ಅಧ್ಯಕ್ಷರಾದ ಮೇಲೆ ಸಾಕಷ್ಟು ತ್ವರಿತವಾಗಿ ಕೆಲಸಗಳನ್ನು ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಬೇಕಾದಂಥ ಸ್ಟೀಲ್ ಒದಗಿದೆಯೇ ಎಂದು ನೋಡಬೇಕು. ಬೇಕಾದಂಥ ಮೋಟಾರ್ ಪಂಪ್ ಸೆಟ್ಟುಗಳು ಒದಗಿವೆಯೇ ಎಂದು ನೋಡಬೇಕು. ಅನೇಕ ಸಂದರ್ಭಗಳಲ್ಲಿ ನೀರಿನ ವ್ಯವಸ್ಥೆ ಇದ್ದರೂ ಕೂಡ ಪಂಪ್ ಸೆಟ್ಟುಗಳಿಲ್ಲದೆ ತಿಪ್ಪಗೊಂಡನಹಳ್ಳಿಯಿಂದ ಬೆಂಗಳೂರಿಗೆ ನೀರು ಬರುವುದು 2-3 ವರ್ಷ ತಡವಾಯಿತು. ಪಂಪುಸೆಟ್ಟುಗಳ ಬಗ್ಗೆ ಅವಕ್ಕೆ ಬೇಕಾದಂಥ ಸ್ಟೀಲ್ ಬಗ್ಗೆ ಮತ್ತು ಹಣದ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸದೆ ಹೋದ ಪಕ್ಷದಲ್ಲಿ ನೀರು ಸರಬರಾಜು ಮಾಡುವುದು ಮುಂದೆ ಮುಂದೆ ಹೋಗುವ ಸಂದರ್ಭವಿದೆ. ಆದ್ದರಿಂದ ಈ ಕೆಲಸವನ್ನು ಬೇಗ ತೆಗೆದುಕೊಂಡು ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ನನಗೆ ಇರತಕ್ಕ ಒಂದು ದೊಡ್ಡ ಶಂಕೆ ಏನೆಂದರೆ, ಕಾವೇರಿ ಸ್ಕೀಂ ಪೂರ್ತಿಯಾಗುವ

ಹೊತ್ತಿಗೆ 23 ಕೋಟಿ ರೂಪಾಯಿ ಅಂದಾಜು ಇದ್ದುದ್ದು 28 ಕೋಟಿ ರೂಪಾಯಿಗೆ ಹೋಗಬಹುದು. 28 ಕೋಟಿ ರೂಪಾಯಿಗಳಿಗೆ ಹೋದಾಗ, ಆ ಹೊರೆಯನ್ನು ಬೆಂಗಳೂರು ನಾಗರೀಕರ ಮೇಲೆ ಹೊರಿಸುವ ಸಂದರ್ಭ ಬರುತ್ತದೆ. ಈ ಸಂದರ್ಭದಲ್ಲಿ ನಾಗರೀಕರು ಬಹಳ ಕಷ್ಟ ಪಡಬೇಕಾಗುತ್ತದೆ. ನಮ್ಮ ಜಲಮಂಡಳಿಗೆ ಸಂಬಂಧಪಟ್ಟ ಮಂತ್ರಿಗಳಿಗೆ ಬೆಂಗಳೂರು ನೀರಿನ ಸಮಸ್ಯೆ ಗೊತ್ತಿದೆ. ಅವರು ಅವರ ಬಗ್ಗೆ ಸಾಕಷ್ಟು ಆಸಕ್ತಿವಹಿಸುವುದಾಗಿ ಭರವಸೆ ಕೊಟ್ಟಿದ್ದಾರೆ. ಈಗಲಾದರೂ ಕೂಡ ಬೆಂಗಳೂರಿಗೆ ನೀರು ತರುವ ಬಗ್ಗೆ ಒಳಚರಂಡಿಯ ವ್ಯವಸ್ಥೆಯ ಬಗ್ಗೆ ಸಾಕಷ್ಟು ಶ್ರದ್ಧೆ ವಹಿಸಬೇಕು ಎಂದು ಹೇಳುತ್ತೇನೆ. ಬೆಂಗಳೂರು ಮಿತ್ರರು ಅನೇಕರು ಮಾತನಾಡಬಹುದಾದ್ದರಿಂದ ನಾನು ಹೆಚ್ಚುಕಾಲ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ಹೇಳಬೇಕಾದರೆ ಕಾವೇರಿ ನೀರು ಬೆಂಗಳೂರಿಗೆ 1971ರಲ್ಲಿ ಬರಬೇಕಾಗಿತ್ತು. ಜಲಮಂಡಳಿಯ ಅಧ್ಯಕ್ಷರು ಭರವಸೆ ಕೊಟ್ಟಿರುವ ಹಾಗೆ 1973 ರ ಹೊತ್ತಿಗೆ ಕಾವೇರಿ ನೀರು ಬೆಂಗಳೂರು ನಗರಕ್ಕೆ ಬರದೆ ಹೋದ ಪಕ್ಷದಲ್ಲಿ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರಿಗೂ ಕೂಡ ವಿಪರೀತ ತೊಂದರೆ ಬರುತ್ತದೆ. 1973ರ ಹೊತ್ತಿಗೆ ನೀರಿನ ವ್ಯವಸ್ಥೆ ಪೂರ್ತಿಯಾಗುವುದಕ್ಕೆ ಏನು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅವುಗಳನ್ನೆಲ್ಲಾ ತೆಗೆದುಕೊಳ್ಳುವುದು ಮೊದಲನೆಯದು. ಎರಡನೆಯದು ಬೆಂಗಳೂರಿನ ಎಲ್ಲಾ ಭಾಗಗಳಲ್ಲೂ ಒಳಚರಂಡಿಯ ವ್ಯವಸ್ಥೆ ಮಾಡದೆ ಹೋದಪಕ್ಷದಲ್ಲಿ ಸೊಳ್ಳೆಕಾಟ ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸೊಳ್ಳೆ ಕಾಟ ತಪ್ಪಿಸದೆ ಹೋದರೆ ಬೆಂಗಳೂರು ಜನ ವಾಸಮಾಡುವುದಕ್ಕೆ ಕಷ್ಟವಾಗುತ್ತದೆ. ಬಡವರು ವಾಸ ಮಾಡುವ ಕಡೆ ಒಳಚರಂಡಿಯನ್ನು ಅದಷ್ಟು ಬೇಗ ಮಾಡಬೇಕು. ಜಲ ಮಂಡಳಿಯವರೂ ನಮ್ಮ ಏರಿಯಾದಲ್ಲಿ ನಾಲ್ಕು ಲಕ್ಷ ರೂಪಾಯಿಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಅದಕ್ಕೆ ನಾನು ಜಲಮಂಡಲಿ ಅಧಿಕಾರಿಗಳಿಗೆ ಕೃತಜ್ಞನಾಗಿದ್ದೇನೆ. ನಮ್ಮ ಬಡಾವಣೆಯಲ್ಲಿ ಮಾಡಿದ ಹಾಗೆ ಬೇರೆ ಎಲ್ಲಾ ಕಡೆಗಳಲ್ಲೂ ಸೊಳ್ಳೆಯ ಉಪದ್ರವ ತಪ್ಪಿಸಲು ಒಳಚರಂಡಿ ವ್ಯವಸ್ಥೆಯನ್ನು ಮಾಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ನೀರಿನ ದರ ಕಡಿಮೆ ಮಾಡುವುದಕ್ಕೆ ಸಾಧ್ಯವಾದ ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ ಒಂದು ಸಾವಿರ ಗ್ಯಾಲನ್‌ಗೆ ನಾಲ್ಕು ರೂಪಾಯಿ ಕೊಟ್ಟು ಖಂಡಿತವಾಗಿಯೂ ಕಾವೇರಿ ನೀರನ್ನು ಉಪಯೋಗಿಸುವುದಕ್ಕಾಗುವುದಿಲ್ಲ. ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಒಂದನೆಯದು ಕಾವೇರಿ ನೀರನ್ನು ಬೆಂಗಳೂರಿಗೆ ತರುವುದು, ಎರಡನೆಯದು ಒಳಚರಂಡಿಯನ್ನು ಪೂರ್ಣವಾಗಿ ಬೆಂಗಳೂರು ನಗರದಲ್ಲಿ ಹಾಕತಕ್ಕದ್ದು, ಮೂರನೆಯದು ನೀರಿನ ದರ ಆದಷ್ಟು ಕಡಿಮೆಯಾಗಿ ಬೆಂಗಳೂರು ನಾಗರೀಕರು ಕಾವೇರಿ ನೀರು ಬಂದು ಸುಖವಾಗಿದ್ದೇವೆ ಎನ್ನುವಂತಾಗಬೇಕು. ಒಟ್ಟಿನಲ್ಲಿ ಹೇಳಬೇಕಾದರೆ ಬೆಂಗಳೂರಿನಲ್ಲಿ ನಲ್ಲಿ ತಿರುಗಿಸಿದರೆ ನೀರು ಬರುತ್ತದೆ, ಟ್ಯೂಬ್ ಲೈಟ್ ಮತ್ತು ಎಲ್ಲಾ ಸೌಕರ್ಯಗಳು ಇವೆ. ಬೆಂಗಳೂರಿನ ನಾಗರೀಕರು ಸುಖವಾಗಿದ್ದಾರೆ ಎಂದು ಅನೇಕ ಸದಸ್ಯರು ಅಸೂಯೆ ಪಡಬಾರದು. ವಿಧಾನಸೌಧದ ಸುತ್ತ ಮುತ್ತ ನೋಡಿ ಬೆಂಗಳೂರು ನಗರ ಎಲ್ಲಾ ಹೀಗೆಯೇ ಇದೆ ಎಂದು ಶಾಸಕರು ಭಾವಿಸಕೂಡದು. ರಾಜ್ಯದ ಎಲ್ಲಾ ಭಾಗದ ಜನರು ಬೆಂಗಳೂರಿಗೆ ಬರುತ್ತಾರೆ. ಬೆಂಗಳೂರು ಬೆಂಗಳೂರಿನ ಜನಕ್ಕೆ ಸೇರಿದ್ದಲ್ಲ ರಾಜ್ಯದ ಎಲ್ಲಾ ಜನಕ್ಕೂ ಸೇರಿದ್ದು ಎಂಬುದನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಬೆಂಗಳೂರು ನಗರಕ್ಕೆ ಅನೇಕ ರೀತಿಯಲ್ಲಿ ಹಣ ಸಹಾಯ ಮಾಡಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಸಭಾಪತಿಗಳೇ, ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ನೀರು ತರುವಂಥ ವಿಷಯ ಅತಿ ಮುಖ್ಯವಾದ ಹಾಗೂ ಗಹನವಾದ ವಿಷಯ ಎಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಹಿಂದೆ ಇದ್ದ ವಿಧಾನ ಸಭೆಯಲ್ಲೂ ಸಹ ಇದರ ಬಗ್ಗೆ ತೀವ್ರವಾದ ಚರ್ಚೆ ನಡೆದಿದೆ. ಹೋದ ವಿಧಾನಸಭೆಯಲ್ಲೂ ಸಹ ಸುಮಾರು 3–4 ಗಂಟೆಗಳ ಕಾಲ ನಾವು ಇದರ ಬಗ್ಗೆ ಮಾತನಾಡಿ, ಮುಖ್ಯಮಂತ್ರಿಗಳಾದಿಯಾಗಿಯೂ ಅನೇಕ ಜನ ನಮ್ಮ ಮಿತ್ರರು ಈಗ ಆಕಡೆ ಕುಳಿತಿದ್ದಾರೆ, ಅವರೆಲ್ಲರೂ ಸಹ ಜಲ ಮಂಡಲಿಯ ವ್ಯವಹಾರವನ್ನು ಬಹಳ ಕಟುವಾಗಿ ಟೀಕೆ ಮಾಡಿದ್ದರು. ಆ ದಿನ ಜಲಮಂಡಲಿಯವರು ಏನು ಒಂದು ಅಕ್ರಮವಾಗಿ ಇ.ಸಿ.ಸಿ. ಕಂಪನಿಯವರ ಜೊತೆಗೆ ಒಂದು ಕಂಟ್ರಾಕ್ಟ್ ಮಾಡಿಕೊಂಡಿದ್ದಾರೆ ಅದರ ಬಗ್ಗೆ ಬಹಳ ತೀವ್ರವಾದ ಚರ್ಚೆ ನಡೆಯಿತು. 30 ಲಕ್ಷ ರೂಪಾಯಿಗಳ ಅಡ್ವಾನ್ಸ್ ಆ ಕಂಪನಿಗೆ ಕೊಡಕೂಡದು ಎಂದು ಒತ್ತಾಯ ಮಾಡಿದೆವು. ಮೊದಲನೆಯ ಹಂತದಲ್ಲಿ ಪ್ರಿಸ್ಟ್ರೆಸ್ಡ್ ಪೈಪ್ ಬದಲು ಸ್ಟೀಲ್ ಪೈಪ್ಸ್ ಉಪಯೋಗಿಸಲು 5 ಕೋಟಿ ರೂಪಾಯಿ ಇದ್ದುದು ಇ. ಸಿ. ಸಿ. ಕಂಪನಿಯವರಿಗೆ ಕಂಟ್ರಾಕ್ಟ್ ಕೊಟ್ಟರೆ ಹದಿಮೂರು ಕೋಟಿ ರೂಪಾಯಿಗಳಾಗುತ್ತದೆ. ಆದ್ದರಿಂದ ಎಂಟು ಕೋಟಿ ರೂಪಾಯಿ ನಷ್ಟವಾಗುತ್ತದೆ. ಇದರ ಪರಿಣಾಮವಾಗಿ ನೀರಿನ ದರವೂ ಕೂಡ ಜಾಸ್ತಿ ಆಗುತ್ತದೆ.

(ಶ್ರೀ ಎಂ. ಎಸ್. ಕೃಷ್ಣನ್)

ಇದು ಆಗಕೂಡದು ಎಂದು ಬಹಳ ಆಗ್ರಹ ಪೂರ್ವಕವಾಗಿ ನಾವೆಲ್ಲರೂ ಒತ್ತಾಯ ಪಡಿಸಿದೆವು. ಈಗ ಪೌರಾಡಳಿತ ಮಂತ್ರಿಗಳಾಗಿರುವ ಶ್ರೀಮಾನ್ ಬಸವಲಿಂಗಪ್ಪನವರು ಆಗ ಇರಲಿಲ್ಲ, ಅವರು ಈ ವಿಷಯ ತಿಳಿದುಕೊಂಡಿದ್ದಾರೆ ಎಂದು ನನ್ನ ನಂಬಿಕೆ. ಜಲಮಂಡಲಿಯ ಅಧ್ಯಕ್ಷರ ಮೇಲೂ ಮತ್ತು ಸರ್ಕಾರದ ಮೇಲೂ ಗುರುತರವಾದ ಆರೋಪಣೆ ಹೊರಿಸಿದವರಲ್ಲಿ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸುರವರೂ ಒಬ್ಬರು. ಶ್ರೀಮಾನ್ ನಂಜೇಗೌಡರು ಮತ್ತು ಶ್ರೀ ಸಿದ್ದವೀರಪ್ಪನವರು ಒಬ್ಬರಾಗಿದ್ದರೆಂದು ಕಾಣುತ್ತದೆ. ಅವರ ಪೈಕಿ ಶ್ರೀ ಮಾನ್ ಚನ್ನಬಸಪ್ಪನವರೂ ಒಬ್ಬರು ಆಗಿದ್ದಾರೆ.

Sri H. M. CHANNABASAPPA.—If the hon. Member will kindly yield, the issue before the House is the immediate steps to be undertaken to expedite the water supply Scheme to provide drinking water to Bangalore City. But the hon. Member is trying to raise a controversy between steel pipes and pre-stressed pipes. If this subject can be brought up at the proper time, we can discuss that subject. But now the question before the House is very specific, namely to expedite the scheme for Water Supply to Bangalore City.

ಶ್ರೀ ಎಂ. ಎಸ್. ಕೃಷ್ಣನ್.—ಅದಕ್ಕೂ ಇದಕ್ಕೂ ಸಂಬಂಧ ಇದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮೊದಲು ನೀರು ಬರುವುದಕ್ಕೆ ಸಂದೇಹ ಇತ್ತು. ಅದರ ಜೊತೆಗೆ 4–5 ಕೋಟಿರೂಪಾಯಿಗಳು ಹೆಚ್ಚಾಗಿ ಖರ್ಚುಆಗುತ್ತದೆ. ಆದ್ದರಿಂದ ಇದರ ಬಗ್ಗೆ ಅಕ್ರಮಗಳಿಗೆ ಅವಕಾಶ ಕೊಡಬೇಡಿ. ಈ ವಿಷಯವನ್ನು ಹಿಂದೆ ನೀವೂ ಹೇಳಿದಿರಿ, ನಾವೂ ಹೇಳಿದೆವು. ಈ ದೃಷ್ಟಿಯಿಂದ ಮಾನ್ಯ ಬಸವಲಿಂಗಪ್ಪನವರಿಗೆ ತಿಳಿಸಿದೆನೇ ವಿನಃ ಬೇರೆ ದೃಷ್ಟಿಯಿಂದ ಅಲ್ಲ. ಅದಕ್ಕೆ ರೆಲವೆನ್ಸಿ ಹೇಗಿದೆ ಎಂದು ನಿಮಗೆ ತೋರಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.— ರೆಲವೆನ್ಸಿ ಇಲ್ಲ ಎಂದು ಹೇಳುವ ಹಾಗೆ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸ್ಟೀಲ್ ಪೈಪ್ ಹಾಕುವುದಕ್ಕೆ ಟೆಂಡರ್ ಕೊಟ್ಟುಬಿಟ್ಟಿದ್ದಾರೆ. ದುಡ್ಡು ನುಂಗಿ ಹಾಕಿಬಿಟ್ಟಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಯಾರು ಮಾಡಿದ್ದಾರೆ ಅವರನ್ನು ಹಿಡಿದುಕೊಳ್ಳಿ.

ಶ್ರೀ ಎಂ, ಎಸ್. ಕೃಷ್ಣನ್.—ಹಿಡಿಯುವಕೆಲಸ ನಿಮ್ಮದು.

ಶ್ರೀ ಎಚ್. ಸಿದ್ದವೀರಪ್ಪ.—ನಮಗೆ ಸಹಾಯ ಮಾಡಿ.

ಶ್ರೀ ಎಂ. ಎಸ್. ಕೃಷ್ಣನ್—ಖಂಡಿತ ಸಹಾಯ ಮಾಡುತ್ತೇವೆ. ಮುಖ್ಯವಾಗಿ ಬೆಂಗಳೂರು ಬೃಹದಾಕಾರವಾಗಿ ಬೆಳೆಯುತ್ತಿರುವ ನಗರ. ರಾಜಧಾನಿಗೆ ಸರಿಯಾದ ನೀರಿನ ವ್ಯವಸ್ಥೆ ಇಲ್ಲದೇ ಹೋದರೆ ಹೊರಗಡೆಯಿಂದ ಬರತಕ್ಕಂಥಾ ಶಾಸಕರಿಗೆ, ಜನಗಳಿಗೆ ತೊಂದರೆ ಆಗುವುದು ಮಾತ್ರವಲ್ಲ ಇಡೀ ರಾಜ್ಯದಜನತೆಗೆ ತೊಂದರೆ ಯಾಗುವ ಸಂದರ್ಭ ಬರುತ್ತದೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕು ಎಂದು ಹೇಳಿದೆ.

ಇನ್ನೊಂದು ಅಭಿಪ್ರಾಯ ಏನೆಂದರೆ ಕಾವೇರಿ ನೀರಿನ ಬಗ್ಗೆ ಕೆಲವು ದಿನಗಳಿಂದ ಬಹಳವಾಗಿ ಪ್ರಚಾರ ನಡೆದಿದೆ. ಪತ್ರಿಕೆಯಲ್ಲೂ ಕೂಡ ಬಂದಿರುವುದನ್ನು ಓದಿದರೆ ಬಹಳ ಆಶ್ಚರ್ಯವಾಗುತ್ತದೆ. 1973 ನೇ ಇಸವಿಯೊಳಗೆ ಈ ಕಾರ್ಯವನ್ನು ನಾವು ಮುಗಿಸಿ ಕೊಡುತ್ತೇವೆ ಎಂದು ಜಲಮಂಡಲಿ ಅಧ್ಯಕ್ಷರಾದ ಶ್ರೀಮಾನ್ ಮಗ್ದುಂರವರು ಅಪ್ಪಣೆ ಕೊಡಿಸಿದ್ದಾರೆ. ಅವರಿಗೆ ಡೈನಾಮಿಕ್ ಲೀಡರ್‌ಷಿಪ್ ಇದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ಬಸವಲಿಂಗಪ್ಪನವರು ಒಂದು ಸಮಾರಂಭದಲ್ಲಿ ಮಾತನಾಡುತ್ತಾ ಹೀಗೆ ಹೇಳಿದ್ದಾರೆ.

> "He commended the efficient working of the board headed by dynamic Chairman, I. M. Magdum and hoped they would complete the project far ahead of schedule and get the blessings of God and the people".

ಶ್ರೀ ಎಚ್. ಸಿದ್ಧವೀರಪ್ಪ.—ಆ ವಿಚಾರದಲ್ಲಿ ಶ್ರೀ ಶಿವಣ್ಣನವರೂ ಕೂಡ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

Sri M. S. KRISHNAN.—I am not prepared to agree with them in so far as this commendation is concerned. ಇದೇ ಸಂದರ್ಭದಲ್ಲಿ ಶ್ರೀ ಟಿ. ಎ. ಪೈ ಮತ್ತು ಕೆ. ಆರ್. ಪುರಿ ಅವರ ಭಾಷಣವೂ ಪತ್ರಿಕೆಯಲ್ಲಿ ಬಂದಿದೆ. ಅವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ, ಎಫಿಷಿಯೆಂಟ್ ಆಗಿ ಕೆಲಸ ಮಾಡಿದ್ದಾರೆ, ಡೈನಾಮಿಕ್ ಆಗಿದ್ದಾರೆ, ಹಾಗೆ ಹೀಗೆ ಎಂದು ಹೊಗಳಿಕೆ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಈಗ ಸಭೆಯ ಮುಂದೆ ಇರುವ ವಿಷಯದ ಮೇಲೆ ಮಾತನಾಡಿ ಆಫೀಸರ್ಸ್ ಮೇಲೆ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಅವರು ಹೇಳುವುದು ಅರ್ಥವಾಗುವುದಿಲ್ಲ. ವೈಯಕ್ತಿಕವಾಗಿ ಏನೂ ಭಿನ್ನಾಭಿಪ್ರಾಯ ಇಲ್ಲ. ಅವರಿಗೂ ನನಗೂ ಏನೂ ಸಂಬಂಧವಿಲ್ಲ. ಜಲಮಂಡಲಿಯ ಅಧ್ಯಕ್ಷರ ಅಭಿಪ್ರಾಯದ ಮೇಲೆ ಹೇಳುತ್ತಿದ್ದೇನೆಯೇ ಹೊರತು ಅವರು ಹೇಳಿದ ಹಾಗೆ ಆಫೀಸರ್ಸ್ ಮೇಲೆ ಹೇಳಿಲ್ಲ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಅವರನ್ನು ಬೇಕಾದರೆ ಹೊಗಳಿ, ಕ್ರಿಟಿಸೈಜ್ ಮಾಡಬೇಡಿ ಎಂದು ಅವರು ಹೇಳಿದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೆಯ ಕೆಲಸ ಮಾಡಿದವರಿಗೆ ಶಹಭಾಸ್‌ಗಿರಿ ಕೊಡೋಣ. ಇದರಲ್ಲಿ ವೈಯಕ್ತಿಕವಾಗಿ ಭಿನ್ನಾಭಿಪ್ರಾಯ ಏನೂ ಇಲ್ಲ. ಪೇಪರ್‌ನಲ್ಲೂ ಬಂದಿರತಕ್ಕಂಥ ಪಬ್ಲಿಸಿಟಿ ನೋಡಿದರೆ ಒಂದು ಕಡೆ ನೀರು ಬಂದೇ ಬಿಡುತ್ತದೆ ಎಂದು ಹೇಳಿದ್ದಾರೆ. ಅಲ್ಲದೆ ಇನ್ನೊಂದು ಕಡೆ ಬೇಸಿಗೆ ಕಾಲಕ್ಕೆ ನೀರಿಗೆ ತೊಂದರೆ ಇಲ್ಲ ಎಂದು ಹೇಳಿದ್ದಾರೆ. ಕಾವೇರಿ ನೀರು ಬಂದರೆ ಬೆಂಗಳೂರಿಗೆ ಮಾತ್ರವಲ್ಲ, ಪಕ್ಕದ ಹಳ್ಳಿಗಳಿಗೂ ಕೊಟ್ಟು ಬಿಡುತ್ತೇವೆ ಎಂದು ಹೇಳಿದ್ದಾರೆ. ಇದು ಟಾಲ್ ಆರ್ಡರ್. ನಿಜಾಂಶ ಇದೆ ಅನ್ನುವುದಕ್ಕೆ ಬ್ಯಾಕ್‌ಗ್ರೌಂಡ್ ಕೊಟ್ಟಿಲ್ಲ. ನನಗೆ ತಿಳಿದವಟ್ಟಿಗೆ ಇದನ್ನು ಪಬ್ಲಿಸಿಟಿಗೆ ಕೊಟ್ಟಿದ್ದೀರಾ? ಆ ರಿಪೋರ್ಟಿನ ಬಗ್ಗೆ ನಿಜಾಂಶ ಕಂಡು ಹಿಡಿಯಲು ಒಂದೆರಡು ಅಂಶಗಳನ್ನು ಹೇಳುತ್ತೇನೆ.

ಮೊದಲನೆಯದಾಗಿ ಪೈಪು ಹಾಕಬೇಕಾದರೆ ಸುಮಾರು 60 ಮೈಲಿ ಹಾಕಬೇಕು. ಅದಕ್ಕೆ ಸರ್ವೆ ಮಾಡಿದ್ದೀರಾ? ನನಗೆ ತಿಳಿದುಬಂದಿರುವುದು ತೊರೆಕಾಡನ ಹಳ್ಳಿಯಿಂದ ಬೆಂಗಳೂರಿಗೆ ಹಾಕಬೇಕು. ಅಲ್ಲಿಂದ ಶಿಂಷಾಕ್ಕೆ ಹೋಗಬೇಕು. ಈಗ ತೊರೆಕಾಡನ ಹಳ್ಳಿಯಿಂದ ಹೋಗುವುದಕ್ಕೆ ಪ್ರಾರಂಭಿಸಿದ್ದಾರೆ. ಕಾಲುವೆ ಕಟ್ಟಿ ಚರಂಡಿ ಅಗೆದಿದ್ದಾರೆ. ಪೈಪುಗಳನ್ನು ಹಾಕುತ್ತಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಇನ್ನೊಂದು ನಿದರ್ಶನ ಕೊಡುತ್ತೇನೆ. ಅದೇರೀತಿ ಈ ಕಡೆ ಅಂದರೆ ಶಿಂಷಾ ಕಡೆ ಹೋದರೆ 1/3 ಭಾಗದಷ್ಟು ಪೈಪ್ ಹಾಕಿಲ್ಲ. ಯಾವ ಕೆಲಸವೂ ನಡೆದಿಲ್ಲ. ಎರಡು ಪಿಲ್ಲರ್ ಹಾಕಿದ್ದಾರೆ. ಇನ್ನೂ ಬ್ರಿಡ್ಜು ಕಟ್ಟಿ ಪೈಪ್ ಹಾಕಿ ಮಾಡಬೇಕಾದರೆ ಬಹಳಷ್ಟು ಕಾಲ ತೆಗೆದುಕೊಳ್ಳುತ್ತದೆ. ಈ ರೀತಿ ಪರಿಸ್ಥಿತಿ ಇರುತ್ತದೆ. ಹೀಗಿರುವಲ್ಲಿ ಅದನ್ನು ಒಂದೆರಡು ತಿಂಗಳಿನಲ್ಲಿ ಮುಗಿಸಿಬಿಡುತ್ತೇವೆ ಅಥವಾ 1973 ನೇ ಇಸವಿಯೊಳಗೆ ಮಾಡುತ್ತೇವೆ ಎಂದರೆ ಸಂಶಯಾಸ್ಪದವಾಗುತ್ತದೆ. ಅದಕ್ಕೆ ನಾನು ಹೇಳಿದೆ. ಇದೇ ರೀತಿಯಲ್ಲಿ ಪೇಪರ್ ರಿಪೋರ್ಟ್ ಪ್ರಕಾರ 4 ನೇ ತಾರೀಖು ಡೆಕ್ಕನ್ ಹೆರಾಲ್ಡ್‌ನಲ್ಲಿ ಈ ರೀತಿ ಬಂದಿದೆ—

> "Mr. Basavalingappa was presiding over a function organised in connection with the laying of foundations for three units constituting the very "heart of the water supply complex." The foundations for clarifloculators, filters of water treatment unit and the flash-mixer unit were laid by Mr. Basavalingappa, Mr. T. A. Pai, former LIC Chairman, and Mr. K. R. Puri, Chairman of the L.I.C. respectively. Mr. Joshi, Secretary of the LIC, investment Division, was present."

ಶ್ರೀ ಟಿ. ಎ. ಪೈ ಮತ್ತು ಕೆ. ಆರ್. ಪುರಿ ಅವರುಗಳು ಈ ಸಮಾರಂಭದಲ್ಲಿ ಭಾಗವಹಿಸಿ (1) clarifloculatory foundation (2) filters of water treatment unit

(ಶ್ರೀ ಎಂ. ಎಸ್. ಕೃಷ್ಣನ್)

(3) flash-mixer unit ಈ ಮೂರಕ್ಕೂ ಶಂಕುಸ್ಥಾಪನೆ ಹಾಕಿದ್ದಾರೆ. ಇದರ ಉಪಯೋಗವನ್ನು ಬೆಂಗಳೂರಿನ ಜನತೆ ಪಡೆಯುವುದಕ್ಕೆ ಇನ್ನು ಎಷ್ಟು ದಿನವಾಗುತ್ತದೆ ಎಂದು ಹೇಳುವುದಕ್ಕೆ ತಯಾರಾಗಿಲ್ಲ. ಶಂಕುಸ್ಥಾಪನೆಯನ್ನು ಅನೇಕ ಜನ ಅನೇಕ ಸಲ ಮಾಡಿದ್ದುಂಟು. ಒಂದು ಉದಾಹರಣೆ ಹೇಳುವುದಾದರೆ ನಮ್ಮ ಮನೆಯ ಎದುರಿಗೆ ತಿರುಪತಿ ದೇವಸ್ಥಾನ ಛತ್ರ ಕಟ್ಟಿಸುವುದಕ್ಕೆ ಎಂದು ಒಂದು ಸ್ಕೀಮು ಮಾಡಿದರು. ಅದು ಬಹುಶಃ 150 × 200 ಅಡಿ ಇರಬಹುದು. ಮೊದಲನೇ ಸಾರಿ ಹಿಂದೆ ಮಂತ್ರಿಯಾಗಿದ್ದವರು ಒಬ್ಬರು ಬಂದು ಶಂಕುಸ್ಥಾಪನೆ ಮಾಡಿ ಹೋದರು. ಅವರು ಶಂಕುಸ್ಥಾಪನೆ ಮಾಡಿದ ಮೇಲೆ ಎರಡು ಚರಂಡಿ ಅಗೆದರು. ಇನ್ನೊಬ್ಬರು ಆಂಧ್ರದ ಮುಖ್ಯ ಮಂತ್ರಿಗಳನ್ನು ಕರೆಸಿ ಇನ್ನೊಂದು ಶಂಕುಸ್ಥಾಪನೆ ಮಾಡಿಸಿದರು. ಅವರು ಶಂಕುಸ್ಥಾಪನೆ ಮಾಡಿದ ಮೇಲೆ ಇನ್ನೊಂದೆರಡು ಚರಂಡಿ ಅಗೆದರು. ಆ ಚರಂಡಿಯಲ್ಲಿ ಈಗ ನೀರು ತುಂಬಿದೆ. ಆ ನೀರನ್ನು ಬೇಕಾದಷ್ಟು ಜನ ಬೇಕಾದಷ್ಟು ರೀತಿಯಲ್ಲಿ ಉಪಯೋಗ ಮಾಡುತ್ತಿದ್ದಾರೆ. ದನ ತೊಳೆಯುವುದಕ್ಕೆ, ಮೈ ತೊಳೆಯುವುದಕ್ಕೆ ಎಲ್ಲಾ ಕಸಬುಗಳಿಗೂ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅಂತೂ ಅಲ್ಲಿ ತಿರುಪತಿ ದೇವಸ್ಥಾನದ ಛತ್ರ ಬರಲಿಲ್ಲ. ಇದೂ ಕೂಡ ಆ ರೀತಿ ಆಗಕೂಡದು ಎಂದು ನಾನು ಕೇಳಿಕೊಳ್ಳುತ್ತೇನೆ. ಆ ರೀತಿ ಆಗುತ್ತದೆಯೋ ಏನೋ ಎಂಬ ಸಂಶಯ ವಿರುವುದರಿಂದ ನಾನು ಹೇಳುತ್ತಿದ್ದೇನೆ. ಅಷ್ಟೇ ಅಲ್ಲದೆ ಇನ್ನೊಂದು ಮುಖ್ಯವಾದ ವಿಷಯವಿದೆ, ಅದು ಪೈಪುಗಳನ್ನು ಹಾಕುವುದಕ್ಕೆ ಸಂಬಂಧಪಟ್ಟದ್ದು. 60 ಮೈಲಿ ಪೈಪು ಹಾಕಬೇಕಾಗಿದೆ. ಸ್ಟೀಲ್ ಪೈಪನ್ನು ತಯಾರಿಸುವ ವಿಚಾರ ಬಹು ಮುಖ್ಯವಾದುದು, ಅದನ್ನು ತಯಾರಿಸಲು ಇ ಸಿ ಸಿ ಕಂಪೆನಿಗೆ ಕಂಟ್ರಾಕ್ಟ್ ಕೊಟ್ಟು ಒಪ್ಪಂದ ಮಾಡಿಕೊಂಡಿದ್ದಾರೆ, ಹಳೆಯ ವಿಚಾರ ಈಗ ಬೇಡ, ಅದು ಮುಗಿದುಹೋಗಿದೆ. ಆ ದುರಂತ ನೆನೆಸಬಾರದು. ಈಗ ಮುಖ್ಯವಾಗಿರುವುದು ಎರಡು ವಿಷಯ, ನೀರಿನ ದರ ಜಾಸ್ತಿಯಾಗಬಹುದೆಂಬ ಹೆದರಿಕೆಯಿದೆ. ಇ ಸಿ ಸಿ ಕಂಪನಿ ಕೆಲಸ ಮಾಡಲು, ಕಾರ್ಖಾನೆ ಸ್ಥಾಪಿಸಲು ಅದಕ್ಕೆ ತೊರೆಕಾಡನಹಳ್ಳಿಯಲ್ಲಿ ಜಾಗ ಕೊಡಲಾಗಿದೆ, ಅದಕ್ಕೆ 60 ಲಕ್ಷ ರೂಪಾಯಿ ಕೊಡಲಾಗಿದೆ ಎಂದು ಹೇಳುತ್ತಾರೆ. ಹಾಗೆ ಬೋರ್ಡಿನವರು ಕೊಟ್ಟಿದ್ದರೆ ಯಾವ ಆಧಾರದಮೇಲೆ ಕೊಟ್ಟರು? ಅದರ ಹೊರೆ ನಮ್ಮ ಮೇಲೆ ಬೀಳುವುದು, ಇದನ್ನು ಯೋಚನೆಮಾಡಬೇಕಾಗಿದೆ. ಹಿಂದೆ ಹೀಗೆ ಮಾಡುವರೆಂಬ ವಿಚಾರ ನಮಗೆ ಗೊತ್ತಿರಲಿಲ್ಲ. ಹಿಂದೆ ಬೋರ್ಡಿನವರೇ ಸ್ಟೀಲನ್ನು ಕೊಡುವರು, ಉಳಿದ ಖರ್ಚು ಇ ಸಿ ಸಿ ಕಂಪೆನಿಗೆ ಸೇರುವುದು ಎಂದು ಹೇಳಲಾಗಿತ್ತು. ಈಗ ನೋಡಿದರೆ ತಯಾರಿಕೆಗೆ ಬೇಕಾದ ಖರ್ಚಿಗೆ 60 ಲಕ್ಷ ರೂಪಾಯಿ ಬೋರ್ಡಿನಿಂದ ಕೊಡಲಾಗಿದೆ. ಇದರಿಂದ ಜನರಿಗೆ ಹೊರೆಯಾಗುವುದೇ ಎಂದು ಯೋಚನೆಮಾಡಬೇಕಾಗಿದೆ. ಇಷ್ಟೇ ಅಲ್ಲ, ಪೈಪು ಹಾಕುವುದು ಮುಂತಾದ್ದಕ್ಕೆ ಟೆಂಡರು ಕರೆಯುತ್ತಿದ್ದರು. ನನಗೆ ತಿಳಿದಿರುವಂತೆ ಟೆಂಡರು ವಾಲ್ಯೂಗಿಂತ ಸೇಕಡ 150ರಷ್ಟು ಜಾಸ್ತಿ ಕೊಡುತ್ತಿದ್ದಾರೆ. ಇದರಿಂದ ನೀರಿನ ದರ ಹೆಚ್ಚಾಗಬಹುದೆಂಬ ಭೀತಿ ಇದೆ. ಹೀಗೆ ಮಾಡಿದರೆ ಸರಕಾರಿ ಹಣ ಪೋಲಾಗುವುದಿಲ್ಲವೇ? ಜನರಿಗೆ ಹೊರೆಯಾಗುವುದಿಲ್ಲವೇ? ಹೀಗೆ ಜನರಿಗೆ ಹೊರೆ ಹೊರಿಸುವುದು ನ್ಯಾಯವೇ? ಇದರ ಬಗ್ಗೆ ಗಮನಕೊಡಬೇಕು. ನನಗೆ ಈ ವಿಚಾರದಲ್ಲಿ ಅನುಮಾನವಿದೆ. 25 ಕೋಟಿ ರೂಪಾಯಿ ಖರ್ಚಿನಲ್ಲಿ ಕಾವೇರಿ ನೀರನ್ನು ಸರಬರಾಜು ಮಾಡುವುದಾಗಿ ಹೇಳುತ್ತಿದ್ದರು. ಈಗ ಅದಕ್ಕೆ ಬದಲಾಗಿ 28 ಅಥವ 30 ಕೋಟಿ ಖರ್ಚಾಗಬಹುದೆಂಬ ಅನುಮಾನವಿದೆ. ಹೋದ ಅಧಿವೇಶನದಲ್ಲೂ 30 ಕೋಟಿ ಇದಕ್ಕೆ ಖರ್ಚಾಗಬಹುದೆಂದು ಕೆಲವರು ವಾದಿಸಿದರು. ನನಗೆ ತಿಳಿದಮಟ್ಟಿಗೆ ಲೆಕ್ಕಾಚಾರ ಯಾವ ರೀತಿ ಆಗುತ್ತದೆ ಎಂದು ಹೇಳಬಹುದು. 1960ರಲ್ಲಿ 10 ಕೋಟಿ ಇದ್ದುದು 61ರಲ್ಲಿ 15.82 ಕೋಟಿ ಆಗಿ 66ರಲ್ಲಿ ಸುಮಾರು 22 ಕೋಟಿ ಆಗಿದೆ, 1970ಕ್ಕೆ 30 ಕೋಟಿ ಆಗುವುದು ಎಂದು ಸರಕಾರದವರಿಗೆ ಹೇಳಿದ್ದಾರೆ. ಇದರ ಪ್ರಕಾರ ಈಗಿನ ಖರ್ಚುವೆಚ್ಚ ನೋಡಿದರೆ ನೀರಿನ ದರ 4 ರೂಪಾಯಿಗಿಂತ ಜಾಸ್ತಿಯಾಗುವುದು. ಈ ಅನುಮಾನವಿದೆ. ಆದುದರಿಂದ ಯೋಚನೆ ಮಾಡಬೇಕು. ಏಕೆ ಹೀಗೆ ಮಾಡಿ ಬೆಂಗಳೂರಿನ ಜನರು ಏನಿದ್ದಾರೆ ಅವರ ಮೂಗಿಗೆ ಮಸಿಬಳಿಯುವ ಕೆಲಸ ಮಾಡುತ್ತಿದ್ದಾರೆ? ಇದಾಗಬಾರದು. ಕಾವೇರಿ ಯೋಜನೆ ಬರೀ ಕಂಟ್ರಾಕ್ಟರುಗಳನ್ನು ನಂಬಿದರೆ ಅಥವ ಒಬ್ಬೊಬ್ಬರು ಇಂಜಿನಿಯರುಗಳಿದ್ದರೆ ಯಶಸ್ವಿಯಾಗಿ ಕಾರ್ಯಗತವಾಗುವುದಿಲ್ಲ. ಅದಕ್ಕೆ ಎಲ್ಲರ ಸಹಕಾರ ಬೇಕು, ಸಮಸ್ತ ಸಿಬ್ಬಂದಿಯೂ ಸಹಕರಿಸಿ ಕೆಲಸ ಮಾಡಬೇಕು. ಅದಕ್ಕೆ ತಕ್ಕಂತೆ ವರ್ತಿಸಬೇಕೆಂಬ ಮನೋಭಾವ ಛೇರ್ಮನ್ನರಿಗಿಲ್ಲ. ಇದರಿಂದ ತೊಂದರೆಯಾಗುತ್ತಿದೆ. ಈ ವಿಚಾರ ಗಮನಿಸಿ ಸೂಕ್ತಕ್ರಮ ಕೈಗೊಳ್ಳದಿದ್ದರೆ 73ರಲ್ಲಿ ಈ ಯೋಜನೆ ಪೂರ್ಣವಾಗುವುದಿಲ್ಲ, ನೀರಿನ ದರ 4 ರೂಪಾಯಿಗಿಂತ ಜಾಸ್ತಿಯಾಗಬಹುದು. ಒಂದು ರೂಪಾಯಿಗೆ ಒಂದು ಸಾವಿರ ಗ್ಯಾಲನ್‌ನಂತೆ ದರವಿತ್ತು. ಶ್ರೀ ಘೋರ್ಪಡೆಯವರು ಎಸ್ಟಿಮೇಟ್ ಕಮಿಟಿ

ಛೇರ್ಮನ್ ಆಗಿದ್ದಾಗ ಇದರ ವಿಷಯ ಚರ್ಚಿಸಲ್ಪಟ್ಟಿದೆ. ಆಗ ಸರ್ವಾನುಮತದ ವರದಿ ಬಂದು ಒಂದು ರೂಪಾಯಿಗೆ ಒಂದು ಸಾವಿರ ಗ್ಯಾಲನ್ನಿನಂತೆ ಒದಗಿಸಲು ಸಾಧ್ಯವಾಯ್ತು. ಎಲ್ಲವೂ ಸರಿಯಾಗಿ ನಡೆದರೆ ನೀರಿನ ದರ ಇದೇ ರೀತಿ ಮುಂದುವರೆಯಬಹುದು ಎಂದು ಹಿಂದೆ ಕಮಿಟಿಯ ಅಧ್ಯಕ್ಷರು ಹೇಳಿದ್ದರು. ಹಾಗಿಲ್ಲದಿದ್ದರೆ ದರ ಜಾಸ್ತಿಯಾಗಬಹುದು ಎಂದು ತಿಳಿಸಿದ್ದರು. ಈಗಿನ ಸನ್ನಿವೇಶ ನೋಡಿದರೆ ಒಂದಕ್ಕೆ ನಾಲ್ಕರಷ್ಟು ದರ ಜಾಸ್ತಿ ಆಗಬಹುದೆಂಬ ಶಂಕೆ ಇದೆ, ಹಾಗಾದರೆ ಜನರು ಗಲಾಟೆ ಮಾಡುವರು. ಇದಕ್ಕೆ ಅವಕಾಶವಾಗಬಾರದು. ಯಾವುದಕ್ಕೂ ಜನರ ಮತ್ತು ನೌಕರರ ಸಹಕಾರ ಬೇಕು. ಟೆಂಡರು ವ್ಯಾಲ್ಯೂ ಜಾಸ್ತಿಮಾಡುವುದು, ಇ ಸಿ ಸಿ ಕಂಪೆನಿಗೆ ಹೆಚ್ಚು ಹಣ ಕೊಡುವುದು. ಬೇಕಾದವರ ಸಹಕಾರ ಪಡೆಯದಿರುವುದು ಇದೆಲ್ಲಾ ಅವ್ಯವಸ್ಥೆಗೆ ಕಾರಣ ವಾಗಿದೆ. ಪಬ್ಲಿಸಿಟಿ ವಿಚಾರದಲ್ಲಿ ಕೂಡ ಸಾಕಷ್ಟು ಗಮನ ಕೊಟ್ಟಿಲ್ಲ ಪರಿಸ್ಥಿತಿ ಹೀಗಿರುವುದರಿಂದ ಮಂತ್ರಿಗಳು ಇನ್ನೂ ಆಳವಾಗಿ ಇದರ ವಿಚಾರವನ್ನು ಅಭ್ಯಾಸ ಮಾಡಿ ಬೇಕಾದವರ ಸಹಕಾರ ಪಡೆಯಲು ಧೈರ್ಯದಿಂದ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ರಾಜ್ಯದಲ್ಲೂ ಮತ್ತು ಕೇಂದ್ರ ಸರಕಾರದಲ್ಲೂ ಕೆಲವು ಅಧಿಕಾರಿಗಳಿರುವರು ಅವರು ಯಾವ ಮಂತ್ರಿಗಳು ಬಂದರೂ ಸರಿ ಮಾಡಿಕೊಳ್ಳುವರು, ಅಂಥ ಮೇಧಾವಿಗಳು ಅವರು. ಅದಕ್ಕೆ ಅವಕಾಶವಿರಬಾರದು.

10-00 A.M.

ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಇನ್ನೊಂದು ಮಾತೇನೆಂದರೆ, ಕಾವೇರಿ ನದಿ ನೀರನ್ನು ಬೆಂಗಳೂರಿಗೆ ತರುವುದಕ್ಕೆ ಮಾತ್ರ ಅದರ ಕೆಲಸವನ್ನು ಸೀಮಿತವಾಗಿಡಿ; ನೀರು ಹಂಚಿಕೆ ಕೆಲಸ ವನ್ನು ಅವರಿಗೆ ಕೊಡಬೇಡಿ ಎಂದು ನಾನು ಕೇಳಿಕೊಳ್ಳಬೇಕಾಗಿದೆ. ನೀರು ಹಂಚಿಕೆಯ ವ್ಯವಸ್ಥೆ ಯನ್ನು ನಗರ ಕಾರ್ಪೊರೇಷನ್ನಿಗೆ ಕೊಡುವುದು ಒಳ್ಳೆಯದು. ಇದನ್ನು ಸರ್ಕಾರದವರು ಮಾಡ ಬೇಕಾಗಿದೆ. ನೀರು ಹಂಚಿಕೆ ಮಾಡುವವರು ಬೋರ್ಡಿನವರಾದರೆ, ಪ್ರತಿಯೊಂದು ಕೆಲಸದ ಮಂಜೂರಾತಿಗೂ ಕಾರ್ಪೊರೇಷನ್ ಹತ್ತಿರ ಹೋಗಬೇಕು. ಇದರಲ್ಲಿ ತೊಂದರೆ ಬರುವುದು ಜನಗಳಿಗೆ. ನಾನು ಒಂದೇ ಒಂದು ಉದಾಹರಣೆಯನ್ನು ಸಭೆಯ ಗಮನಕ್ಕೆ ತರುತ್ತೇನೆ. ಮಿಲ್ಕ್ ಕಾಲೋನಿಯಲ್ಲಿ ಮೂರು ಸಾವಿರ ಮನೆಗಳಿವೆ. ರಾಮನವಮಿ ಸಂದರ್ಭದಲ್ಲಿ ಆ ಪ್ರದೇಶ ದಲ್ಲಿ ಮೂರು ದಿನ ನೀರೇ ಇರಲಿಲ್ಲ. ಪಬ್ಲಿಕ್ ಫೌಂಟನ್‌ಗಳಲ್ಲಿ ನೀರು ಬರುತ್ತಿರಲಿಲ್ಲ. ಮನೆಗಳಿಗೆ ನೀರು ಕೊಡಿ ಎಂದರೆ, ಕನೆಕ್ಷನ್ ಕೊಡುವುದಕ್ಕೆ ಜಲಮಂಡಲಿಯವರು ತಯಾರಿಲ್ಲ. ಸದಾಶಿವ ನಗರ ಮುಂತಾದ ಕಡೆ, ದೊಡ್ಡ ದೊಡ್ಡ ಬಂಗಲೆಗಳಿರುವ ಕಡೆ ನೀರನ್ನು ಒದಗಿಸುತ್ತಾರೆ. ನಲ್ಲಿ ಕಿತ್ತುಹಾಕಿದ್ದರಿಂದ ಆ ಪ್ರದೇಶಕ್ಕೆ ನೀರು ಬರುತ್ತಿಲ್ಲವೆಂದು ಜಲಮಂಡಲಿಯವರನ್ನು ಕೇಳಿದರೆ, ಟ್ರಸ್ಟ್ ಬೋರ್ಡಿನವರನ್ನು ಕೇಳಿ, ಅವರಿಂದ ನಮಗೆ ಬಹಳ ಹಣ ಹಾಕಿ ಬರಬೇಕಾಗಿದೆ, ಹಣ ಬಾಕಿ ಇರುವುದರಿಂದ ನೀರನ್ನು ಕೊಟ್ಟಿಲ್ಲ. ನಿಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ಟ್ರಸ್ಟ್ ಬೋರ್ಡಿನವರು ಹಣ ಕೊಡಲಿಲ್ಲವೆಂದು ಜನಗಳಿಗೆ ತೊಂದರೆಯಾಗುವಂತೆ ನೀರನ್ನು ನಿಲ್ಲಿಸಿದರೆ ಇದು ಸರ್ಕಾರ ದಲ್ಲಿರುವ ದಕ್ಷತೆಯನ್ನು ತೋರಿಸುತ್ತದೆ, ಒಬ್ಬರಿಗೊಬ್ಬರಿಗೆ ಇರುವ ಕೋ-ಆರ್ಡಿನೇಷನ್ ತೋರಿಸು ತ್ತದೆ. ಒಂದು ಸಂಸ್ಥೆ ಕೊಡಬೇಕಾದ ಹಣವನ್ನು ಯಾವಾಗ ಬೇಕಾದರೂ ಪಡೆಯಬಹುದು. ಎರಡೂ ಸರ್ಕಾರಿ ಸಂಸ್ಥೆಗಳು. ಹೀಗಿರುವಾಗ ಗಂಡ ಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಂತೆ ಜಲಮಂಡಲಿ ಮತ್ತು ನಗರಾಭಿವೃದ್ಧಿ ಮಂಡಲಿ ಎರಡೂ ಹೊಂದಾಣಿಕೆಯಿಂದ ಕೆಲಸ ಮಾಡದೆ, ನಗರಾಭಿವೃದ್ಧಿ ಮಂಡಲಿ ಜಲಮಂಡಲಿಗೆ ಹಣವನ್ನು ಕೊಡಲಿಲ್ಲವೆಂಬ ಕಾರಣದ ಮೇಲೆ ಜನತೆಗೆ ನೀರನ್ನು ಒದಗಿಸದೆ ಇವರಿಬ್ಬರ ಜಗಳದಲ್ಲಿ ಜನತೆಯೆಂಬ ಕೂಸು ನೀರಿಲ್ಲದೆ ತೊಂದರೆ ಪಡ ಬೇಕಾಯಿತು. ಆದುದರಿಂದ ಬೆಂಗಳೂರಿಗೆ ಕಾವೇರಿ ನೀರನ್ನು ತರುವ ಯೋಜನೆಯನ್ನು ಕಾರ್ಯ ಗತ ಮಾಡುವುದನ್ನು ಜಲಮಂಡಲಿಗೇ ಬಿಟ್ಟು, ನೀರು ಹಂಚಿಕೆ ಕೆಲಸವನ್ನು ಕಾರ್ಪೊರೇಷನ್ನಿಗೆ ಕೊಡಿ. ಅದಕ್ಕೆ ಸಂಬಂಧಪಟ್ಟ ನೌಕರರನೂ ಕಾರ್ಪೊರೇಷನ್ನಿಗೇ ಕಳುಹಿಸಿ. ಅವರೂ ನೆಮ್ಮದಿ ಯಾಗಿರುತ್ತಾರೆ, ಎಲ್ಲರೂ ನೆಮ್ಮದಿಯಾಗಿರುತ್ತಾರೆ. ಹಾಗೆ ಮಾಡುವುದು ಸೂಕ್ತ.

ಕಡೆಯದಾಗಿ ನಾನು ಸೂಚನೆ ಕೊಡುವುದೇನೆಂದರೆ, ಯಾವ ಯಾವ ಕೆಲಸಗಳು ನಡೆಯು ತ್ತಿವೆ ಎನ್ನುವುದನ್ನು ಹೇಳಬೇಕು. ನಿಜವಾಗಿ ಯಾವ ಕೆಲಸ ನಡೆಯುತ್ತಿದೆ? ಅಲ್ಲಿರುವ ನೌಕರ ಶಾಹಿ ಮತ್ತು ಕೆಲಸಗಾರರ ಮೇಲೆ ನಡೆಯುವ ದಬ್ಬಾಳಿಕೆ ನಿಲ್ಲಿಸಿ ಕಾರ್ಮಿಕರ, ನೌಕರರ ಮತ್ತು ಎಲ್ಲರ ಸಹಕಾರ ಪಡೆಯಬೇಕಾಗಿದೆ. ಎಲ್ಲರ ಸಹಕಾರದಿಂದ ಮಾತ್ರ ನಗರಕ್ಕೆ ನೀರು ಬೇಗ ಬರು ತ್ತದೆ. ನಾಲ್ಕು ರೂಪಾಯಿಗೆ ಕಡಮೆ ದರದಲ್ಲಿ ನೀರನ್ನು ಒದಗಿಸುವುದಕ್ಕಾಗುವುದಿಲ್ಲವೇ? ಈ ಎಲ್ಲ ಅಂಶಗಳ ಬಗ್ಗೆಯೂ ಉತ್ತರ ಕೊಡಬೇಕೆಂದು ಹೇಳಿ ನನ್ನ ಎರಡು ಮಾತನ್ನು ಮುಗಿಸು ತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಕಾವೇರಿ ನೀರನ್ನು ಬೆಂಗಳೂರಿಗೆ ತರತಕ್ಕ ವಿಚಾರದಲ್ಲಿ ಪೂರ್ಣ ಚರಿತ್ರೆಯನ್ನು ಮಾನ್ಯ ಸ್ನೇಹಿತರಾದ ಶಾಮಣ್ಣ ಅವರು ವಿಶದವಾಗಿ ಹೇಳಿದ್ದಾರೆ. ನಾನು ಒಂದೆರಡು ವಿಷಯಗಳನ್ನು ಮಾತ್ರ ಸರ್ಕಾರದ ಅವಗಾಹನೆಗೆ ತರಲು ಇಚ್ಛೆ ಪಡುತ್ತೇನೆ.

ಮೊದಲನೆಯದಾಗಿ ಈಗತಾನೇ ಮಾನ್ಯ ಕೃಷ್ಣನ್ ಅವರು ಹೇಳಿದ ಹಾಗೆ ಜಲಮಂಡಲಿ ಕೆಲಸವನ್ನು ಬರೀ ಕಾವೇರಿ ನೀರನ್ನು ಬೆಂಗಳೂರಿಗೆ ತರುವುದಕ್ಕೆ ಮಾತ್ರ ಸೀಮಿತವಾಗಿರಿಸಿ, ಬೆಂಗಳೂರು ನೀರು ಹಂಚಿಕೆಯನ್ನು ಹಿಂದೆ ಇದ್ದ ಹಾಗೆ ಕಾರ್ಪೋರೇಷನ್ನಿಗೇ ವಹಿಸಬೇಕು. ಕಾರಣವೇನೆಂದರೆ, ಹಿಂದೆ ಇದ್ದಂಥ ಸರ್ಕಾರ 1956ನೇ ಇಸವಿಯಲ್ಲಿ ಬೆಂಗಳೂರು ನಗರದ ನೀರಿನ ಪ್ರಶ್ನೆಯನ್ನು ಎತ್ತಿಕೊಂಡು ನೀರಿಗೆ ಜಾಸ್ತಿ ದರವನ್ನು ಕೊಡಬೇಕೆಂದು ಕೇಳಿದಾಗ, ಕಾರ್ಪೋರೇಷನ್ನಿನವರು ಹಾಗೆ ಕೊಡಲು ಸಾಧ್ಯವಿಲ್ಲ, ಸರ್ಕಾರಕ್ಕೆ ನೀರು ಸರಬರಾಜು ಮಾಡಲು ಎಷ್ಟು ಖರ್ಚಾಗುತ್ತದೆ, ನೀರಿನ ದರ ಎಷ್ಟಾಗುತ್ತದೆ ಅಷ್ಟನ್ನು ಮಾತ್ರ ಕೊಡುವುದಕ್ಕೆ ತಯಾರು ಎಂದು ಹೇಳಿದಾಗ, ಶ್ರೀಮಾನ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರ ನೇಮಕ ಮಾಡಿತು. ಆಗ ಶ್ರೀ ಹನುಮಂತಯ್ಯನವರು ಒಂದು ಸಾವಿರ ಗ್ಯಾಲನ್ ನೀರಿಗೆ ಎಂಟೂವರೆ ಆಣೆ ಖರ್ಚಾಗುತ್ತದೆ, ಅದನ್ನು ಕೊಡಬೇಕು ಎಂದು ಹೇಳಿದರು. ಸರ್ಕಾರದವರು ಹತ್ತಾಣೆ ಪ್ರಕಾರ ಕೊಡಬೇಕೆಂದು ಕಾರ್ಪೋರೇಷನ್ನಿನಿಂದ ವಸೂಲು ಮಾಡುವುದಕ್ಕೆ ಪ್ರಯತ್ನ ಪಟ್ಟರೂ ಕೂಡ ಕಾರ್ಪೋರೇಷನ್ನಿನವರು ಎಂಟೂವರೆ ಆಣೆಯಂತೆಯೇ ಕೊಡುತ್ತ ಬಂದರು. ಜಲಮಂಡಲಿಗೆ ನೀರನ್ನು ತರುವುದಕ್ಕೆ ಏನು ಖರ್ಚು ಬೀಳುತ್ತದೆ ಆ ಪ್ರಕಾರ ಕಾರ್ಪೋರೇಷನ್ನಿಗೆ ನೀರನ್ನು ಒದಗಿಸಿದರೆ ಒಂದು ಸಾವಿರ ಗ್ಯಾಲನ್ನಿಗೆ ಮೂರು ರೂಪಾಯಿ ಅಥವಾ ನಾಲ್ಕು ರೂಪಾಯಿ ದರ ವಿಧಿಸುವ ಪ್ರಶ್ನೆ ಬರುವುದಿಲ್ಲ. ಎಷ್ಟು ಖರ್ಚು ಬೀಳುತ್ತದೆ ಅಷ್ಟನ್ನು ಕಾರ್ಪೋರೇಷನ್ ಕೊಡುವುದಕ್ಕೆ ತಯಾರಿದೆ. ಜಲಮಂಡಲಿಗೆ ನೀರು ಹಂಚಿಕೆ ಕಾರ್ಯವನ್ನು ಖಂಡಿತವಾಗಿ ಕೊಡಬಾರದು. ಮಾನ್ಯ ಪುಟ್ಟಸ್ವಾಮಿಯವರು ಮಂತ್ರಿಗಳಾಗಿಯೂ ನಾನು ಕಾರ್ಪೋರೇಷನ್ ಮೇಯರ್ ಆಗಿಯೂ ಇದ್ದಾಗ ನೀರು ದರದ ಪ್ರಶ್ನೆ ಬಂದು ಒಂದು ರೂಪಾಯಿ ಮುವ್ವತ್ತು ಪೈಸೆ ಅಥವಾ ಅದಕ್ಕಿಂತ ಹೆಚ್ಚಾಗಿ ಕೊಡಬೇಕೆಂದು ಕೇಳಿದಾಗ, ಹಾಗೆ ಕೊಡಲು ಸರ್ವಥಾ ಸಾಧ್ಯವಿಲ್ಲ, ಬೆಂಗಳೂರಿನ ಜನತೆ ಆ ದರವನ್ನು ಕೊಡುವುದಕ್ಕೆ ತಯಾರಿಲ್ಲ, ಎಷ್ಟು ಖರ್ಚಾಗುತ್ತದೆಯೋ ಅದೇ ದರಕ್ಕೆ ನೀರನ್ನು ಒದಗಿಸಬೇಕೆಂದು ನಾನು ಹೇಳಿದ್ದು ಜ್ಞಾಪಕವಿದೆ. ಈಗ ಬೆಂಗಳೂರು ನಗರಕ್ಕೆ ನೀರನ್ನು ತರುವುದರ ಜೊತೆಗೆ, ಅದಕ್ಕೆ ಬೀಳುವ ಖರ್ಚನ್ನು ನಿಗದಿ ಮಾಡುವುದು. ಆದರೆ ಬೆಲೆ ನಿಗದಿ ಮಾಡುವಾಗ ಜಲಮಂಡಲಿಯವರು ಎಷ್ಟು ವೃಥಾ ಖರ್ಚು ಮಾಡುತ್ತಾರೆಯೋ ಅದೆಲ್ಲ ಬೆಂಗಳೂರಿನ ಜನತೆಯ ಮೇಲೆ ಬೀಳುವ ಪರಿಸ್ಥಿತಿ ಇದೆ. ಬೆಂಗಳೂರು ನಗರದ ಜನತೆ ಯಾವತ್ತೂ ನೀರಿನ ದರವನ್ನು ಹೆಚ್ಚಾಗಿ ಕೊಡುವುದಕ್ಕೆ ತಯಾರಾಗಿಲ್ಲ. ಏಕೆಂದರೆ ಬೆಂಗಳೂರು ನಗರದ ಜನತೆಗೆ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟದಿಂದ ಬರತಕ್ಕ ನೀರು ಸಾಕಾಗುತ್ತದೆ. ಆದರೂ ಕೂಡ ಬೆಂಗಳೂರು ನಗರಕ್ಕೆ ಹೆಚ್ಚು ನೀರು ಏಕೆ ಬೇಕು ಎಂದರೆ ಮಾನ್ಯ ಶಾಮಣ್ಣ ಅವರು ಹೇಳಿದ ಹಾಗೆ ಕೇಂದ್ರ ಸರ್ಕಾರದ ಕಾರ್ಖಾನೆಗಳು, ಹೊರಗಡೆಯ ಜನಗಳೂ ಎಲ್ಲ ಬಂದು ಬೆಂಗಳೂರು ನಗರದಲ್ಲಿ ನೆಲೆಸಿರುವುದರಿಂದ ಹೆಚ್ಚಿನ ನೀರು ಬೇಕಾಗುತ್ತದೆ. ಕೇಂದ್ರ ಸರ್ಕಾರದ ಕಾರ್ಖಾನೆಗಳಿಂದ ಮತ್ತು ಎಲ್ಲ ಬಾಬುಗಳಿಂದ ಸರ್ಕಾರಕ್ಕೆ ಬೇಕಾದಷ್ಟು ವರಮಾನ ಬರುತ್ತದೆ. ಕಾರ್ಪೋರೇಷನ್ನಿಗೆ ವರಮಾನದಲ್ಲಿ ಯಾವ ಭಾಗವೂ ಇಲ್ಲ. ಹೀಗಿರುವಾಗ ಬೆಂಗಳೂರು ಜನತೆಗೆ ಬೇಕಾಗುವ ನೀರನ್ನು ಉಚಿತವಾಗಿ ಒದಗಿಸಬೇಕಾದ್ದು ಸರ್ಕಾರದ ಕರ್ತವ್ಯವೆಂದು ನಾನು ಭಾವಿಸುತ್ತೇನೆ.

ಬೆಂಗಳೂರಿನ ಜನತೆಗೆ ಸರ್ಕಾರದ ಮೇಲೆ ಒಂದು ಆಪಾದನೆ ಇದೆ. ಯಾವ ಸರ್ಕಾರ ಬಂದರೂ ಕೂಡ ಹಳ್ಳಿಗಳ ಕಡೆ ಹೆಚ್ಚು ಗಮನ ಕೊಡುತ್ತಾರೆಯೇ ಹೊರತು ನಗರದಲ್ಲಿರತಕ್ಕವರ ಕಡೆ ಹೆಚ್ಚು ಗಮನ ಕೊಡುತ್ತಿಲ್ಲ, ಬೆಂಗಳೂರಿನ ಜನತೆಯನ್ನು ಕಡೆಗಣ್ಣಿನಿಂದ ನೋಡುತ್ತಿದ್ದಾರೆ, ಮಲತಾಯಿ ಧೋರಣೆಯನ್ನು ತೋರಿಸುತ್ತಿದ್ದಾರೆ ಎನ್ನುವ ಆಪಾದನೆ ಇದೆ. ಇದು ವಾಸ್ತವಾಂಶಕ್ಕೆ ದೂರವಾದುದಲ್ಲ. ಹೀಗೆ ಹೇಳುವಾಗ ಹಳ್ಳಿಗಳಿಗೆ ಅನುಕೂಲ ಮಾಡಬೇಡಿ ಎಂದು ನಾನು ಹೇಳುವವನಲ್ಲ, ಹಳ್ಳಿಗಳಿಗೆ ಬೇಕಾದ ಅನುಕೂಲವನ್ನು ಮಾಡಿಕೊಡಿ. ಆದರೆ ಬೆಂಗಳೂರು ನಗರದ ಜನತೆಯನ್ನು ಕಡೆಗಣ್ಣಿನಿಂದ ನೋಡಬೇಡಿ. ಸರ್ಕಾರಕ್ಕೆ ಬರುವ 57 ಕೋಟಿ ರೂಪಾಯಿ ಮಾರಾಟ ತೆರಿಗೆಯ ವರಮಾನದಲ್ಲಿ 27 ಕೋಟಿ ರೂಪಾಯಿ ಬೆಂಗಳೂರು ನಗರದಿಂದ ಬರುತ್ತದೆ. ಆದ್ದರಿಂದ ಬೆಂಗಳೂರು ನಗರದ ಬಗ್ಗೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ.

ನಾನು ತಮಗೆ ಹೇಳುವುದೇನೆಂದರೆ ಜಲಮಂಡಲಿಯವರು ಬೆಂಗಳೂರು ಜನರ ಮೇಲೆ ನೀರಿನ ಹಂಚುವಿಕೆ ವಿಚಾರದಲ್ಲಿ ಈಗಿರುವುದಕ್ಕಿಂತ ಹೆಚ್ಚು ನೀರಿನ ದರವನ್ನು ಹೊರಿಸಿದರೆ ಜನರು ಅದನ್ನು ಕೊಡುವುದಕ್ಕೆ ತಯಾರಾಗಿಲ್ಲ ಮತ್ತು ಸಿದ್ಧರಾಗಿಲ್ಲ. ಜಲಮಂಡಲಿಯವರಿಗೆ ಹಣ ಬೇಕಾದರೆ ತಾವು ಕೇಂದ್ರ ಸರಕಾರದವರ ಮೂಲಕ ಪಡೆದು ಹಾಗೂ ನಮ್ಮ ಸರಕಾರ ಅರ್ಧ ಭಾಗವನ್ನು ಹಂಚಿಕೊಂಡು ಕಾವೇರಿ ನದಿ ನೀರನ್ನು ತರಲು ಪ್ರಯತ್ನ ಮಾಡಬಹುದು. ನಮ್ಮ ಜನರಿಗೆ ಉಚಿತವಾಗಿ ನೀರನ್ನು ಹಂಚುವ ಹೊಣೆ ಸರಕಾರಕ್ಕೆ ಸೇರಿದುದು. ಇದಕ್ಕಾಗಿ ಜಲಮಂಡಲಿಯವರು ಬೆಂಗಳೂರು ನಗರದ ಜನರಿಗೆ ಉಚಿತವಾಗಿ ನೀರನ್ನು ಹಂಚಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ವೇಳೆ ಮೂರು ನಾಲ್ಕು ರೂಪಾಯಿಗಳಷ್ಟು ಮಾತ್ರ ಹೆಚ್ಚು ನೀರಿನ ತೆರಿಗೆ ಹೊರಿಸುತ್ತೇವೆಂದು ಹೇಳಿದರ ನಾನು ತಮಗೆ ಈ ದಿವಸವೇ ಹೇಳುತ್ತೇನೆ ಬೆಂಗಳೂರು ಜನರು ರೊಚ್ಚಿಗೆದ್ದು ಒಂದು ದೊಡ್ಡ ಚಳುವಳಿಯನ್ನೇ ಮಾಡುತ್ತಾರೆ. ಸುಮಾರು ನಮ್ಮ ಬೆಂಗಳೂರಿನಲ್ಲಿ 15 ಲಕ್ಷ ಜನರಿದ್ದಾರೆ. ಇಷ್ಟು ಜನರಿಗೂ ಸರಕಾರವೇ ನೀರನ್ನು ಹಂಚಬೇಕು ಮತ್ತು ಇದು ಸರಕಾರದ ಕರ್ತವ್ಯ. ಬೇರೆ ವಿಧದಿಂದ ಸರಕಾರಕ್ಕೆ ವರಮಾನ ಬರುತ್ತಿರುವುದರಿಂದ ನೀರಿಗೆ ಈಗ ಹೆಚ್ಚು ದರ ಹಾಕುವುದು ಸರಿಯಲ್ಲ. ಈಗಿರತಕ್ಕ ದರವನ್ನು ಯಾವುದೇ ಕಾರಣದಿಂದ ಜಾಸ್ತಿ ಮಾಡಿದರೆ ಬೆಂಗಳೂರು ಜನ ರೊಚ್ಚಿಗೆದ್ದು ಚಳುವಳಿ ಮಾಡುತ್ತಾರೆ ಎಂದು ನಾನು ತಮಗೆ ಇಲ್ಲಿ ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರು ಬೆಂಗಳೂರು ಜನರಿಗೆ ಎಲ್ಲ ಸೌಲಭ್ಯಗಳನ್ನೂ ಸರಕಾರವೇ ಮಾಡಿಕೊಡಬೇಕು ಎನ್ನುವುದಕ್ಕೆ ಇಲ್ಲಿ ಒಂದು ಕೇಸು buildup ಮಾಡುತ್ತಿದ್ದಾರೆ. ಇದೇ ತತ್ವವನ್ನು ಎಲ್ಲದಕ್ಕೂ ಅನ್ವಯಿಸುವಂತೆ ಮಾತನಾಡಲಿ ಎಂದು ಸಲಹೆ ಮಾಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಇದು ಕುಡಿಯುವ ನೀರಿನ ಪ್ರಶ್ನೆ. ಇದೇ ಮೈಸೂರಿನ ಜನರಿಗೂ ಈ ಸೌಲಭ್ಯ ಕೊಟ್ಟರೆ ನನಗೂ ತುಂಬಾ ಸಂತೋಷ. ಬೆಂಗಳೂರು ನಗರದ ಜನರು ಕುಡಿಯುವ ನೀರಿಗಾಗಿ ಜಲಮಂಡಲಿಯವರಿಗೆ ಹೆಚ್ಚು ಹಣ ಏಕೆ ಕೊಡಬೇಕು ಎನ್ನುವ ಪ್ರಶ್ನೆ ಇಲ್ಲಿ ಬಂದಿರುವುದು. ಮತ್ತೊಮ್ಮೆ ನಾನು ಮನವರಿಕೆಯ ರೀತಿಯಲ್ಲಿ ಸರಕಾರಕ್ಕೆ ಹೇಳುವುದು ಹೆಚ್ಚಿಗೆ ದರವನ್ನು ಜನರ ಮೇಲೆ ಹೊರಿಸಬೇಡಿ ಮತ್ತು ಇದನ್ನು ಕೊಡಲು ತಯಾರಾಗಿಲ್ಲ ಮತ್ತು ಖಂಡಿತ ಇಂತಹ ಕೆಲಸವನ್ನು ಮಾಡಲು ಹೋಗಬೇಡಿ. ಜಲಮಂಡಲಿಯವರಿಗೆ ಹಣ ಬೇಕಾದರೆ ಕೇಂದ್ರದವರು ಮತ್ತು ರಾಜ್ಯ ಸರಕಾರದವರು ಸೇರಿಕೊಂಡು ಸಹಾಯವನ್ನು ಒದಗಿಸಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ನಮ್ಮ ಕರ್ಣಾಟಕದ ರಾಜಧಾನಿಯಾದ ಬೆಂಗಳೂರು ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡುವ ವಿಚಾರದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಸೂಚನೆ ಮಾಡಿರುವ ನಿರ್ಣಯದ ಬಗ್ಗೆ ನಾನು ಎರಡು ಮಾತುಗಳನ್ನು ಆಡುವುದಕ್ಕೆ ಅಪೇಕ್ಷೆ ಮಾಡುತ್ತೇನೆ. ಕಾರಣ ಬೆಂಗಳೂರು ನಗರ ನಮ್ಮ ಕರ್ಣಾಟಕದ ರಾಜಧಾನಿಯಾಗಿದೆ ಮತ್ತು ನಾನೂ ಅನೇಕ ವರ್ಷಗಳಿಂದ ಇಲ್ಲೇ ಇದ್ದೆ ಮತ್ತು ಈಗಲೂ ಇದ್ದೇನೆ. ಸ್ವಲ್ಪ ಕಾಲದ ಹಿಂದೆ ಜಲಮಂಡಲಿಯ ವಿರುದ್ಧ ನೀರಿನ ಸಮಸ್ಯೆ ಬಗ್ಗೆ ಆಗಿನ ಸರಕಾರ ಮತ್ತು ಕಾರ್ಪೊರೇಷನ್ ಅಧಿಕಾರಿಗಳು ಬೆಂಗಳೂರು ಜನರ ಮೇಲೆ ನೀರಿನ ತೆರಿಗೆ ಹಾಕಿದಾಗ ಆಗ ನಮ್ಮ ಮೇಯರಾಗಿದ್ದ ಶ್ರೀಮಾನ್ ನಾಗಣ್ಣನವರ ನೇತೃತ್ವದಲ್ಲಿ ಹೋರಾಟ ಮಾಡಿದಾಗ ಅವರೊಡನೆ ಕುಳಿತು ಹೋರಾಟ ನಡೆಸಿ ಜೈಲಿಗೆ ಹೋದವರಲ್ಲಿ ನಾನೂ ಒಬ್ಬ. ಆ ಕಾಲದಿಂದಲೂ ನಮ್ಮ ರಾಜಧಾನಿಗೆ ನೀರಿನ ಸಮಸ್ಯೆ ಇರುವುದನ್ನು ನಾನು ಮನಗಂಡಿದ್ದೇನೆ. ವಿಚಿತ್ರವಾದ ವಿಷಯ ಎಂದರೆ ಸಮಾಜವಾದಿ ಸರಕಾರ ಬಂದರೆ ಬಡವರನ್ನು ಉದ್ಧಾರ ಮಾಡುತ್ತೇವೆ, ಬಡ ಜನರಿಗೆ ಟ್ಯಾಕ್ಸ್ ಹಾಕುವುದಿಲ್ಲ ಎಂದು ಹೇಳಿ ನೀರಿನ ಮೇಲೆ ತೆರಿಗೆ ಹಾಕಿದರೆ ಯಾವ ರೀತಿ ಇದು ಸಮಾಜವಾದೀ ಸರಕಾರ ಎಂದು ಕೇಳಬಯಸುತ್ತೇನೆ. ಇದನ್ನು ವಿಚಾರ ಮಾಡಬೇಕು. ಹೆಚ್ಚು ಖರ್ಚು ಬೀಳುತ್ತದೆ, ಇದು ಅತ್ಯಂತ ಅವಶ್ಯಕವಿದೆ ಎಂದು ಹೇಳಬಹುದು. ವಿದ್ಯಾಭ್ಯಾಸ ಹೇಗೋ ಹಾಗೆ ಅದಕ್ಕಿಂತ ಮುಖ್ಯವಾದದ್ದು ಈ ನೀರಿನ ಸಮಸ್ಯೆ. ವಿದ್ಯಾಭ್ಯಾಸವನ್ನು ಸರಕಾರ ಉಚಿತವಾಗಿ ಕೊಡಬೇಕೆಂದು ಯಾವ ರೀತಿ ಖರ್ಚು ಮಾಡುತ್ತಿದೆಯೋ ಆ ರೀತಿಯಾಗಿ ಜನರಿಗೆ ಪುಕ್ಕಟೆಯಾಗಿ ನೀರನ್ನೂ ಸರಕಾರ ಕೊಡಬೇಕಾದುದು ಅಗತ್ಯ. ದೇವರು ಕೊಟ್ಟಿರುವ ನೀರಿನ ಮೇಲೆ ತೆರಿಗೆ ಹಾಕುವುದಾದರೆ ಇದು ಯಾವ ರೀತಿಯ ಸಮಾಜವಾದ? ಗರೀಬೀ ಹಠಾವೋ ಎಂದು ಹೇಳಿಕೊಂಡು ಬಡಜನರನ್ನು ಉದ್ಧಾರ

(ಶ್ರೀ ಕೋಣಂದೂರು ಲಿಂಗಪ್ಪ)

ಮಾಡುತ್ತೇವೆ ಎಂದು ನೀರಿನ ಮೇಲೆ ಟ್ಯಾಕ್ಸ್ ಹಾಕುವುದು ಎಂದರೆ ಇದು ನನಗೆ ಅರ್ಥವಾಗುತ್ತಿಲ್ಲ. ಬೆಂಗಳೂರಿಗೆ ನೀರನ್ನು ತರಬೇಕೆಂದು ಬಹು ಕಾಲದಿಂದಲೂ ಪ್ರಯತ್ನ ನಡೆಯುತ್ತಿತ್ತು. ನಮ್ಮ ಮಾನ್ಯ ಕವಿಗಳಾದ ಶ್ರೀ ಬೇಂದ್ರೆಯವರು ಅವರ 'ಗಂಗಾವತರಣ' ಎಂಬ ಕವನದಲ್ಲಿ

"ಇಳಿದು ಬಾತಾಯಿ, ಇಳಿದು ಬಾ,
ಹರನ ಜಡೆಯಿಂದ ಹರಿಯ ಅಡಿಯಿಂದ
ಋಷಿಯ ತೊಡೆಯಿಂದ
ಇಳಿದು ಬಾ ತಾಯಿ, ಇಳಿದು ಬಾ"

ಎಂದು ಹಾಡಿದ್ದಾರೆ. ಅದೇ ರೀತಿ ಬೆಂಗಳೂರು ಜನರು ನೀರು ಬೇಕೆಂದು ಕೇಳುತ್ತಿದ್ದಾರೆ. ಆದರೆ ಇನ್ನೂ ಆ ನೀರು ಇಳಿದು ಬಂದಿಲ್ಲ. ಈಗೇನೋ ಪಂಪುಗಳು ಬಂದಿವೆಯಂತೆ. ಇದರ ವಿಷಯ ನಾನು ಇನ್ನೂ ತಿಳಿದುಕೊಂಡಿಲ್ಲ, ಇರಬಹುದು. ಇಷ್ಟು ಜನರ ಮೇಲೆ ತೆರಿಗೆ ಹೊರಿಸಿ ನೀರನ್ನು ತರುವುದು ತಪ್ಪು. ಮಾನ್ಯ ಕವಿಗಳಾದ ಶ್ರೀ ಬೇಂದ್ರೆಯವರು ಮುಂದುವರಿದು :

"ನಾಡ ನುಡಿಯನು ಸುತ್ತು ಬಾ
ನಮ್ಮ ನಾಡನ್ನೇ ಸುತ್ತ ಬಾ
ಸತ್ತ ಜನರನ್ನು ಎತ್ತ ಬಾ"

ಎಂದು ಹೇಳುತ್ತಾರೆ. ರಾಜಧಾನಿಯ ಜನ ಸತ್ತಿಲ್ಲ. ಹೋರಾಟ ಮಾಡುತ್ತಾರೆ, ತೆರಿಗೆ ವಿರುದ್ಧ ಹೋರಾಡುತ್ತಾರೆ. ನನ್ನ ಅಭಿಪ್ರಾಯದಲ್ಲಿ ಸರಕಾರ ನೀರಿನ ಮೇಲೆ ಹಾಕಬೇಕೆಂದಿರುವ ತೆರಿಗೆಯನ್ನು ರದ್ದು ಮಾಡಬೇಕು. ಇದು ಅತ್ಯಂತ ಅವಶ್ಯಕ. ಇದೊಂದು ಮೂಲಭೂತವಾದ ವಿಚಾರ. ಇದನ್ನು ತಾವು ಮಾಡಲೇಬೇಕು ಎಂದು ಕೇಳಿಕೊಳ್ಳುತ್ತೇನೆ. ಆದರೆ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರು ಮಾತನಾಡುವಾಗ ಹಳ್ಳಿಗಳ ಕಡೆಗೆ ಸರಕಾರ ಹೆಚ್ಚು ಗಮನ ಕೊಡುತ್ತಿದೆ, ಬೆಂಗಳೂರು ನಗರದ ಕಡೆ ಗಮನ ಕೊಡುತ್ತಿಲ್ಲ ಎಂದು ಅವರು ಹೇಳುವ ಮಾತನ್ನು ನಾನು ಸಂಪೂರ್ಣವಾಗಿ ಒಪ್ಪುವುದಿಲ್ಲ, ಬೆಂಗಳೂರು ನಗರದಲ್ಲಿ ಒಂದು ರಸ್ತೆಗೆ ಆಗುವ ಖರ್ಚು ಏನಾಗುತ್ತದೆ ಅವನ್ನು ನಮ್ಮ ಕಡೆ ಇರುವ ಹತ್ತಾರು ಹಳ್ಳಿಗಳಿಗೆ ಕೊಟ್ಟರೆ ನಮ್ಮ ಹಳ್ಳಿಗಳು ಸ್ವರ್ಗಲೋಕದಂತಾಗುತ್ತವೆ. ಇವೊತ್ತು ನೋಡಿದರೆ ನೂರಾರು ಹಳ್ಳಿಗಳಲ್ಲಿ ಜನಕ್ಕೆ ಮನೆ ಇಲ್ಲ ಹತ್ತಾರು ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲ. ಆದರೆ ಇಂದು ಬೆಂಗಳೂರಿನಲ್ಲಿ ಇರುವ ಅಶೋಕ ಹೋಟಲನ್ನು ನೋಡಿ. ಇದು ಯಾವ ರೀತಿಯ ಸಮಾಜವಾದ ? ಇದು ಯಾರನ್ನು ಉದ್ಧಾರ ಮಾಡಲಿಕ್ಕಾಗಿ ಮಾಡಲಾಗಿದೆ ! ಇದನ್ನು ಪರದೇಶದವರ ಅನುಕೂಲಕ್ಕಾಗಿ ಮಾಡಲಾಗಿದೆ ಎಂದು ಹೇಳಬಹುದು. ಕೇಂದ್ರದಲ್ಲಿರುವ ಶ್ರೀಮತಿ ಇಂದಿರಾ ಗಾಂಧಿಯವರ ಸರಕಾರ ಹೇಳಿರಬಹುದು. ಆದರೆ ಪರದೇಶದವರಿಗೆ ಇಂತಹ ಅಶೋಕ ಹೋಟೆಲ್ಲೇ ಬೇಕೇನು ? ನಮ್ಮ ದೇಶಕ್ಕೆ ಬಂದಾಗ ನಮ್ಮಲ್ಲಿ ಇರುವ ರೀತಿನೀತಿಗಳನ್ನು ಅರಿತುಕೊಂಡು ಕೆಲಸ ಕಾರ್ಯಗಳನ್ನು ಮಾಡಬೇಕು, ಇದರಿಂದ ಪರದೇಶದವರಿಗೆ ನಮ್ಮ ಪರಿಚಯವೂ ಆಗುತ್ತದೆ. ನಮ್ಮ ರಾಷ್ಟ್ರಕ್ಕೆ ಹೊರದೇಶದವರು ಬರುತ್ತಾರೆಂದು ಇಂತಹ ಅಶೋಕ ಹೋಟಲ್ಲಿಗಾಗಿ ಖರ್ಚು ಮಾಡುವುದು ನಮ್ಮ ತಲೆಯ ಮೇಲೆ ಹಾಗೂ ಸರಕಾರದ ಮೇಲೆ ಬೀಳುವ ಹೊರೆ, ಇದಕ್ಕೆ ನಾವು ಸಾಕ್ಷಿಯಾಗಬೇಕಾಗುತ್ತದೆ. ಇಂತಹ ಅದ್ದೂರಿಯ ಆಡಂಬರಕ್ಕಾಗಿ ಖರ್ಚು ಮಾಡಿ ಅದನ್ನು ಬೆಂಗಳೂರಿನ ಜನರ ಮೇಲೆ ಹೇರಿ ಕುಡಿಯುವ ನೀರಿಗೆ ತೆರಿಗೆ ಹಾಕುವುದು ಎಂದರೆ ಇದು ಸರಿಯೇ ? ಇಂತಹ ಆಡಂಬರಗಳಿಗಾಗಿ ಹಾಗೂ ವೈಭವಗಳಿಗಾಗಿ ಖರ್ಚು ಮಾಡುವುದನ್ನು ತಪ್ಪಿಸಿದರೆ ಲಕ್ಷಾಂತರ ರೂಪಾಯಿಗಳಷ್ಟು ಹಣ ಉಳಿತಾಯವಾಗುತ್ತದೆ. ಇದರ ಬಗ್ಗೆ ಅಂಕೆ ಅಂಶಗಳನ್ನು ಕೊಡುತ್ತೇನೆ. ಇದು ತಮಗೂ ಗೊತ್ತಿದೆ. ಇದೆಲ್ಲಾ ಹಣವನ್ನು ಒಟ್ಟು ಮಾಡಿ ಬೆಂಗಳೂರು ನಗರದಲ್ಲಿ ರಾಜಧಾನಿಯಲ್ಲಿರತಕ್ಕಂಥ ಜನರಿಗೆ ಕುಡಿಯುವ ನೀರನ್ನು ಪುಕ್ಕಟೆಯಾಗಿ ಒದಗಿಸಬೇಕು. ಆ ರೀತಿ ಪುಕ್ಕಟೆ ಒದಗಿಸುವುದಕ್ಕೆ ಸಾಧ್ಯವಿಲ್ಲದಿದ್ದರೆ ಯಾವ ರೀತಿ ಸಮಾಜವಾದವನ್ನು ಜಾರಿಗೆ ತರುತ್ತೀರಾ ಮತ್ತು ಬಡತನವನ್ನು ನಿವಾರಣೆ ಮಾಡುತ್ತೀರಾ ಎಂಬುದನ್ನು ಕೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಬೆಂಗಳೂರು ನಗರದಲ್ಲಿ ಪುಕ್ಕಟೆ ನೀರು ಬಹಳ ಜನರಿಗೆ ಸಿಗುತ್ತಿದೆ. ಆಳವಾಗಿ ನೋಡಿದರೆ ಬೆಂಗಳೂರು ನಗರದ ಜನರಿಗೆ ಫ್ರೀ ಅಲೋಯನ್ಸ್ ಇದೆ. ನೀರಿಗಾಗಿ ಬಡ ಜನರು ಒಂದು ಕಾಸೂ ಸಹ ಕೊಡುತ್ತಿಲ್ಲ. ಶ್ರೀಮಂತರು ಹೆಚ್ಚು ನೀರನ್ನು ಉಪಯೋಗಿಸುವುದರಿಂದ, ಅವರು ಹಣ ಕೊಡಬೇಕಾಗಿದೆ. ಬಡ ಜನರು ಒಂದು ಕಾಸೂ ಕೊಡುತ್ತಿಲ್ಲ. ಈ ಕಾರಣದಿಂದ ಬೆಂಗಳೂರು ನಗರದಲ್ಲಿ ನೀರಿನ ರೇಟಿನ ಬಗ್ಗೆ ಚಳುವಳಿಯಾಗುವುದಿಲ್ಲ. ನೀರಿನ ರೇಟನ್ನು ಯಾವ ರೀತಿ ಕ್ಯಾಲ್‌ಕ್ಯುಲೇಟ್ ಮಾಡಬೇಕು ಎಂಬ ಬಗ್ಗೆ ಸಾಕಷ್ಟು ವಿವರಣೆ ಎಸ್ಟಿಮೇಟ್ ಕಮಿಟಿ ರಿಪೋರ್ಟ್‌ನಲ್ಲಿ ಇದೆ. ಆ ರಿಪೋರ್ಟನ್ನು ಸರ್ಕಾರ ಕೂಡ ಒಪ್ಪಿದೆ. ಫ್ರೀ ಅಲೋಯನ್ಸ್ ಎಂಬುದಾಗಿ ಏನಿದೆ ಅದು ಬಡವರಿಗೆ ಅನ್ವಯವಾಗುವುದಿಲ್ಲ. ಆದಕಾರಣ ಇಂದು ಬೆಂಗಳೂರಿನಲ್ಲಿ ನೂರಕ್ಕೆ 90ರಷ್ಟು ಜನರು ನೀರಿಗಾಗಿ ಒಂದು ಕಾಸೂ ಕೂಡ ಕೊಡುತ್ತಿಲ್ಲ. ಇಂತಹ ಒಂದು ಅನುಕೂಲ ನಮ್ಮ ದೇಶದ ಯಾವ ಪಟ್ಟಣದಲ್ಲಿಯೂ ಇಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಮಂತ್ರಿಗಳು ಹೇಳುವುದನ್ನು ನೋಡಿದರೆ ಕಾವೇರಿ ನೀರು ಬೆಂಗಳೂರಿಗೆ ಬಂದ ಮೇಲೂ ಕೂಡ ಈ ಫ್ರೀ ಅಲೋಯನ್ಸ್ ಇರುತ್ತದೆಂದು ಕಾಣುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಮುಂದೆ ಏನಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅದರ ಬಗ್ಗೆ ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ನಾವು ಸದ್ಯದ ಪರಿಸ್ಥಿತಿ ಬಗ್ಗೆ ಕೇಳುತ್ತಿಲ್ಲ. ಕಾವೇರಿ ನೀರು ಬಂದ ಮೇಲೆ ಏನಾಗುತ್ತದೆ ಎಂಬುದನ್ನು ಕೇಳುತ್ತಿದ್ದೇವೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಉಚಿತ ನೀರಿನ ಸೌಲಭ್ಯ ಬೆಂಗಳೂರು ನಿವಾಸಿಗಳಿಗೆ ಸಿಗಬೇಕೆಂದು ವಾದಿಸುವುದಾದರೆ ಅದನ್ನು ಎಲ್ಲ ಹಳ್ಳಿಯ ಜನರಿಗೂ ಕೊಡಬೇಕಾಗುತ್ತದೆ.

ಶ್ರೀ ಕೆ. ಎಂ. ನಾಗಣ್ಣ.—ಮುಖ್ಯವಾಗಿ ಕುಡಿಯುವ ನೀರನ್ನು ರಾಜ್ಯದ ಎಲ್ಲ ಜನತೆಗೂ ಉಚಿತವಾಗಿಯೇ ಸರ್ಕಾರದವರು ಪೂರೈಸಬೇಕು.

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ)—ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜನತೆಗೆ ನೀರನ್ನು ಸುಗಮವಾಗಿ ಹಂಚಬೇಕು ಎಂಬ ಬಗ್ಗೆ ಬಹಳ ಜನ ಶಾಸಕರು ಮಾತನಾಡಿದ್ದಾರೆ. ಇದರಲ್ಲಿ ನಗರ ಮತ್ತು ಹಳ್ಳಿಗಳ ಭೇದಭಾವನೆ ಇಲ್ಲ. ಶ್ರೀ ಚೆನ್ನಬಸಪ್ಪನವರಿಗೆ ಹಳ್ಳಿಗಳ ಬಗ್ಗೆ ಎಷ್ಟು ಅಭಿಮಾನ ಇದೆಯೋ ಅದಕ್ಕಿಂತ ತೀವ್ರವಾದ ಅಭಿಮಾನ ನಮಗೂ ಇದೆ. ನಾವು ಏನು ಸೌಲಭ್ಯವನ್ನು ಕೇಳುತ್ತಿದ್ದೇವೋ ಅದೇ ಸೌಲಭ್ಯವನ್ನು ಅವರಿಗೂ ಕೊಡಿ. ಅವರೂ ಜನರೇ, ನಾವೂ ಜನರೇ. ನಮಗೇನು ಎರಡು ತಲೆ, ನಾಲ್ಕು ಕಾಲುಗಳು ಇಲ್ಲ. ಇದರಲ್ಲಿ ವಾದ ವಿವಾದ ಏನೂ ಇಲ್ಲ. ಹಳ್ಳಿಯವರು, ಸಿಟಿಯವರು ಎಂದು ತಾರತಮ್ಯ ಮಾಡುವುದಕ್ಕೆ ಯಾರೂ ಹೋಗುವುದಿಲ್ಲ. ಬೆಂಗಳೂರು ನಗರಸಭೆಯಿಂದ 8 ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವಸೂಲಿ ಮಾಡುತ್ತಿರುವುದರಿಂದ, ಇಲ್ಲಿಯ ಜನರಿಗೆ ನೀರಿನ ಸೌಲಭ್ಯ ಕೊಡಿ ಎಂದು ನಾವು ಕೇಳುತ್ತಿದ್ದೇವೆ. ಇದು ನಮ್ಮ ಧರ್ಮ. ಬೆಂಗಳೂರು ನಗರದ ಜನರಿಗೆ ಉಚಿತವಾಗಿ ನೀರನ್ನು ಕೊಡುವುದು ಮತ್ತು ಕಾವೇರಿ ನೀರನ್ನು ನಗರಕ್ಕೆ ತರುವ ಬಗ್ಗೆ ನಾಲ್ಕು ಜನ ಮಂತ್ರಿಗಳು ಬಂದು ಹೋದರು. ಮೊದಲನೆಯವರೆಂದರೆ ಶ್ರೀಮಾನ್ ಪುಟ್ಟಸ್ವಾಮಿಯವರು. ಅವರ ಕಾಲದಲ್ಲಿ ಇದು ಪ್ರಾರಂಭವಾಯಿತು. ಅವರ ನಂತರ ಶ್ರೀಮಾನ್ ಆರ್. ಎಂ. ಪಾಟೀಲರು ಬಂದರು. ಅವರ ಕಾಲದಲ್ಲಿ ಆ ಕೆಲಸವಾಗಲಿಲ್ಲ. ಅವರ ನಂತರ ಬಂದ ಶ್ರೀಮಾನ್ ಬಿ. ಎಂ. ಪಾಟೀಲರ ಕಾಲದಲ್ಲಿಯೂ ಕೂಡ ಕಾವೇರಿ ನೀರು ನಗರಕ್ಕೆ ಬರಲಿಲ್ಲ. ಈಗ ಬಸವಲಿಂಗಪ್ಪನವರು ಬಂದಿದ್ದಾರೆ. 'ಪಾಪ' ಅವರ ಕಾಲದಲ್ಲಿಯಾದರೂ...

ಶ್ರೀ ಬಿ. ಬಸವಲಿಂಗಪ್ಪ.—ನನಗೆ ಪಾಪ ಎಂದು ಏಕೆ ಹೇಳುತ್ತೀರಿ !

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಬಗ್ಗೆ ನನಗೆ ಅಭಿಮಾನ, ಅನುಕಂಪ ಮತ್ತು ವಿಶ್ವಾಸ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಅದು ಒಂದೂ ಬೇಡ.

ಶ್ರೀ ವಾಟಾಳ್ ನಾಗರಾಜ್.—ಕರ್ಣನೇ ಬಿದ್ದು ಹೋದ. ಇನ್ನು ತಮ್ಮದೇನು ?

ಶ್ರೀ ಬಿ. ಬಸವಲಿಂಗಪ್ಪ.—ಅವನು ಸೂತ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅಧ್ಯಕ್ಷರೇ, ತಾವು ಮಾತೆಯ ಸ್ವರೂಪದಲ್ಲಿ ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದೀರಿ. ಬೆಂಗಳೂರು ನಗರದಲ್ಲಿ ಹೆಂಗಸರು ನೀರಿಗಾಗಿ ಪಡುತ್ತಿರುವ ಕಷ್ಟವನ್ನು ತಾವು ನೋಡಿದರೆ ನಿಜವಾಗಿಯೂ ಅದು ಕಣ್ಣೀರ ಕಥೆ ಎಂದು ಹೇಳಬಹುದು. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ, ಮಾನ್ಯ ಬಸವಲಿಂಗಪ್ಪನವರು ಗಮನವಿಟ್ಟು ಕೇಳಬೇಕು. ಮಾನ್ಯ ಮಂತ್ರಿಗಳಿಗೆ ಬೆಂಗಳೂರುನಗರದ ಬಗ್ಗೆ ಬಹಳ ಆಸಕ್ತಿ ಇದೆ. ಅವರು ಸಹ ನಗರಸಭೆಯ ಸದಸ್ಯರಾಗಿದ್ದರು. ನನಗೆ ಅವರು ಬಹಳ ತೀರ ಹತ್ತಿರದ ಆಪ್ತರು. ನನಗೂ ಅವರಿಗೂ ಸ್ನೇಹ ಮತ್ತು ವಿಶ್ವಾಸ ಬಹಳ ದೀರ್ಘವಾಗಿ ಇದೆ. ಬೆಂಗಳೂರಿನ ಜನತೆಗೆ ಒಳ್ಳೆಯದನ್ನು ಮಾಡಬೇಕೆಂಬ ಬಯಕೆ ಉದ್ದೇಶ ಏನು ತಮ್ಮಲ್ಲಿ ಇದೆ ಅದನ್ನು ತಮ್ಮ ಅಧಿಕಾರಾವಧಿಯಲ್ಲಿ ಯಾವ ರೀತಿ ಕಾರ್ಯ ರೂಪಕ್ಕೆ ತರುತ್ತೀರಿ, ಎಂಬುದನ್ನು ನಾವು ನೋಡುತ್ತೇವೆ. ನೀವು ಇಟ್ಟುಕೊಂಡಿರುವ ಗುರಿ ಎಷ್ಟರ ಮಟ್ಟಿಗೆ ಸಫಲವಾಗುತ್ತದೆಂಬುದನ್ನು ನಾವು ಕಾದು ನೋಡಬೇಕಾಗಿದೆ. ಮಾನ್ಯ ಪುಟ್ಟಸ್ವಾಮಿ ಅವರು ಮಂತ್ರಿಗಳಾಗಿದ್ದಾಗ ಬೆಂಗಳೂರಿನ ಸುತ್ತಮುತ್ತಲಲ್ಲಿ ಇರುವ ಸುಮಾರು 35 ಹಳ್ಳಿಗಳನ್ನು ಕಾರ್ಪೊರೇಷನ್ನಿಗೆ ಸೇರಿಸಿದರು. ಆದರೆ ಇದುವರೆಗೂ ಕೂಡ ಆ ಹಳ್ಳಿಗಳಿಗೆ ಸಿಟಿಯಲ್ಲಿರತಕ್ಕ ಅನುಕೂಲಗಳನ್ನು ಒದಗಿಸಿಕೊಟ್ಟಿಲ್ಲ. ಆದರೆ ತೆರಿಗೆಯನ್ನು ಮಾತ್ರ ಸಿಟಿಯಷ್ಟೇ ವಸೂಲ ಮಾಡುತ್ತಿದ್ದಾರೆ. ತಾವು ಕಾಲಾವಕಾಶ ಮಾಡಿಕೊಂಡು ಬರುವುದಾದರೆ ನಾನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಯಾವ ಅನುಕೂಲಗಳು ಸಹ ಅಲ್ಲಿ ಇಲ್ಲ. ಇದಕ್ಕೆ ಒಂದು ನಿದರ್ಶನ ಕೊಡುತ್ತೇನೆ. ಬಿನ್ನಿಪೇಟೆ ಪಕ್ಕದಲ್ಲಿರುವ ಹರಿಕುಂಟೆಯಲ್ಲಿ ಹರಿಜನರ ಒಂದು ಕಾಲೋನಿ ಇದೆ. ಖಾಸಗೀ ಜಮೀನಿನಲ್ಲಿ ಹರಿಜನರು ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಸುಮಾರು 80 ಗುಡಿಸಲುಗಳು ಇವೆ. ಅವರು ಬಡವರು ಮತ್ತು ನಿರ್ಗತಿಕರಾಗಿದ್ದಾರೆ. ಅವರು ಕಳೆದ 20 ವರ್ಷಗಳಿಂದ ಅಲ್ಲಿ ವಾಸ ಮಾಡುತ್ತಿದ್ದರೂ ಕೂಡ ಇವತ್ತಿನವರೆಗೂ ಕೂಡ ಅಲ್ಲಿ ಅವರಿಗೆ ಕುಡಿಯುವುದಕ್ಕೆ ನೀರಿನ ಸೌಕರ್ಯವನ್ನು ಒದಗಿಸಿಲ್ಲ. ದೀಪದ ವ್ಯವಸ್ಥೆ ಕೂಡ ಇಲ್ಲ. ಮಹಾತ್ಮ ಗಾಂಧಿಯವರು ಈ ದೇಶಕ್ಕೆ ಸ್ವಾತಂತ್ರ್ಯತಂದುಕೊಟ್ಟು ನಿಮಗೆ ಮಂತ್ರಿಗಳಾಗುವುದಕ್ಕೆ ಅವಕಾಶ ಮಾಡಿಕೊಟ್ಟರು. ಆದರೆ ನೀವು ಹರಿಜನರಿಗೆ ಬೇಕಾದ ನೀರು ಮತ್ತು ದೀಪದ ವ್ಯವಸ್ಥೆಯನ್ನು ಇನ್ನೂ ಮಾಡಿಕೊಟ್ಟಿಲ್ಲ. ಆ ಜಾಗಕ್ಕೆ ಶ್ರೀ ಕೆ. ಸಿ. ರೆಡ್ಡಿಯವರು, ಶ್ರೀ ಹನುಮಂತಯ್ಯನವರು ಹೋಗಿ ನೋಡಿ ಎಲ್ಲ ಅನುಕೂಲಗಳನ್ನು ಮಾಡಿಕೊಡುವುದಾಗಿ ಆಶ್ವಾಸನೆ ಕೊಟ್ಟು ಹಾರ ಹಾಕಿಸಿಕೊಂಡು ಬಂದಿದ್ದಾರೆ. ಆದರೆ ಇವೊತ್ತಿನವರೆಗೂ ನೀರಿನ ಮತ್ತು ದೀಪದ ವ್ಯವಸ್ಥೆ ಆಗಿಲ್ಲ. ಇಂತಹ ಅನೇಕ ಉದಾಹರಣೆಗಳನ್ನು ಬೇಕಾದರೆ ಕೊಡುತ್ತೇನೆ. ಜಿ. ಇ. ಕಾರ್ಖಾನೆ ಹತ್ತಿರ 180 ಗುಡಿಸಲು ಇರುವ ಹರಿಜನರ ಕಾಲೋನಿ ಇದೆ. ಅಲ್ಲಿ ಹೆಂಗಸರಿಗೆ ಶೌಚಕ್ಕೆ ಹೋಗಲು ಬೇಕಾದ ಅನುಕೂಲ ಇಲ್ಲ. ಇದು ನಾಚಿಕೆಗೇಡಿನ ಪ್ರಸಂಗ. ಆ ಜಾಗದ ಹೆಂಗಸರಾಗಲೀ ಗಂಡಸರಾಗಲೀ ಶೌಚಕ್ಕೆ ಹೋಗಬೇಕಾದರೆ ಬೆಳಕು ಇಲ್ಲದ ಜಾಗಕ್ಕೆ ಹೋಗಬೇಕು, ಇಲ್ಲದಿದ್ದರೆ ರಾತ್ರಿ ಸಮಯದಲ್ಲಿ ಹೋಗಬೇಕಾದ ಸಂದರ್ಭ ಇದೆ. ಇದು 1972ನೇ ಇಸವಿಯ ಸಮಾಜವಾದ. ಬಡವರನ್ನು ಉದ್ಧಾರ ಮಾಡುತ್ತೇವೆ, ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಹೇಳುವುದು ಬರೀ ಬೊಗಳೆ ಘೋಷಣೆಯಾಗಿದೆ. ಇವರ ಆಡಳಿತದಲ್ಲಿ ಹೆಂಗಸರು ಮತ್ತು ಗಂಡಸರು ಶೌಚಕ್ಕೆ ಹೋಗಲು ತಕ್ಕ ವ್ಯವಸ್ಥೆಯಾಗದೆ ಅವರು ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಆ ಭಾಗಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ. ನೀರಿನ ವ್ಯವಸ್ಥೆಯಿಲ್ಲ. ಇದನ್ನೆಲ್ಲಾ ನೋಡಿ ನಾನು ಆ ಭಾಗದ ಹೆಂಗಸರ ಕೈಯಲ್ಲಿ ಖಾಲಿ ಬಿಂದಿಗೆಯ ಮೆರವಣಿಗೆಯನ್ನು ಕಾರ್ಪೊರೇಷನ್ ಕಛೇರಿಯವರೆಗೂ ಮಾಡಿಸಿದೆ. ಆಗ ಕಮಿಷನರ್‌ಆಗಿದ್ದ ಶ್ರೀ ಹನುಮಂತಪ್ಪನವರು ಒಬ್ಬ ದಕ್ಷ ಅಧಿಕಾರಿಗಳಾಗಿದ್ದರು. ಅವರ ಬಳಿ ಹೋಗಿ ಈ ಜನರ ಕಷ್ಟ ಹೇಳಿದಾಗ, ಅವರು ನಿಮ್ಮ ರಾಜಕೀಯ ಏನೇ ಇರಲಿ, ಈ ಜನರು ವಾಸ ಮಾಡುತ್ತಿರುವ ಜಾಗ ಖಾಸಗೀಯದ್ದು ಆದರೂ ಚಿಂತೆಇಲ್ಲ, ಅವರ ಕಷ್ಟ ಬಗೆಹರಿದರೆ ಸಾಕು ಎಂದು ಹೇಳಿ ಈಗ 6 ತಿಂಗಳ ಕೆಳಗೆ ಮೂರು ಮೂರು ನಲ್ಲಿಗಳನ್ನು ಹಾಕಿಸಿದರು. ನೀರಿನ ಹಂಚಿಕೆ ಇಂದು ನಗರದಲ್ಲಿ ಸುಗಮವಾಗಿ ಆಗುತ್ತಿಲ್ಲ. 35 ಹಳ್ಳಿಗಳಲ್ಲಿಯೂ ಕೂಡ ನೀರಿನ ತೊಂದರೆ ಇದೆ. ಸಿಟಿಯಲ್ಲಿ ಕೆಲವುಕಡೆ ವಾರಗಟ್ಟಲೇ ನೀರೇ ಬರುವುದಿಲ್ಲ. ಕಾರ್ಪೊರೇಷನ್‌ಗೆ ವಹಿಸಿಕೊಂಡಿರುವ 35 ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆ ಆಗಿಲ್ಲ. ಆ ಹಳ್ಳಿಗಳ ಹೆಂಗಸರಿಗೆ ಬಹಳ ತೊಂದರೆಯಾಗುತ್ತಿದೆ. ಮಾನ್ಯ ಅಧ್ಯಕ್ಷರು ಬರುವುದಾದರೆ ತಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ತೋರಿಸುತ್ತೇನೆ. ತಾವು ಅಲ್ಲಿಗೆ ಬಂದರೆ ಹೆಂಗಸರು ಮುತ್ತಿಗೆ ಹಾಕುತ್ತಾರೆ. ನಿಮ್ಮ ಉದ್ದ ಹಾರ ಬೇಕಾದರೂ ಹಾಕಿಸುತ್ತೇನೆ, ತಾವು ಬಂದು ಅವರ ಕಷ್ಟವನ್ನು ನೋಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರು ಅಲ್ಲಿಗೆ ಬಂದರೆ ಮಾನ್ಯ ನಾಗರಾಜ್‌ಅವರು ಅವರಿಗೆ ರಕ್ಷಣೆ ಕೊಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ನಿರ್ಣಯದ ಮೇಲೆ ಮಾತ್ರ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್.—ಆ 35 ಹಳ್ಳಿಗಳಲ್ಲಿ ಒಳಚರಂಡಿ ವ್ಯವಸ್ಥೆ ಇದುವರೆಗೆ ಆಗಿಲ್ಲ. ಇದರಿಂದ ಸೊಳ್ಳೆ ಕಾಟ ಜಾಸ್ತಿಯಾಗಿದೆ. ಮಾನ್ಯ ಬಸವಲಿಂಗಪ್ಪನವರು ಬಹಳ ಶಕ್ತಿವಂತರು ಹಿಂದಿನವರು ಸೊಳ್ಳೆ ಕಾಟ ತಪ್ಪಿಸಲು ಏನು ಮಾಡಿದರು ಎಂಬುದು ಮುಖ್ಯವಲ್ಲ, ತಮ್ಮ ಕಾಲದಲ್ಲಿಯಾದರೂ ಈ ಸೊಳ್ಳೆ ಕಾಟವನ್ನು ತಪ್ಪಿಸಬೇಕು. ತಾವು ನಿಜವಾಗಿಯೂ ಶಕ್ತಿವಂತರೇ ಆಗಿದ್ದರೆ ಇನ್ನು ಒಂದು ತಿಂಗಳೊಳಗೆ ಈ 35 ಹಳ್ಳಿಗಳಿಗೆ ಸಂಪೂರ್ಣವಾಗಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿಸಿ ಅಲ್ಲಿನ ಜನರಿಗೆ ಇರುವ ಸೊಳ್ಳೆಯ ಕಾಟವನ್ನು ತಪ್ಪಿಸಬೇಕು. ಮತ್ತು ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇ ಆದರೆ ನಿಮ್ಮ ಶಕ್ತಿಯನ್ನು ನಾನು ಒಪ್ಪುತ್ತೇನೆ. ಕೆಲಸಗಳನ್ನು ಮಾಡದೆ, ಸುಮ್ಮನೆ ನಿಮ್ಮ ಶಕ್ತಿಯನ್ನು ಪ್ರದರ್ಶನ ಮಾಡುವುದಾದರೆ, ನಿಮ್ಮ ಬಗ್ಗೆ ನನಗೆ ಇರತಕ್ಕ ವಿಶ್ವಾಸದಲ್ಲಿ 50 ಪರ್‌ಸೆಂಟ್ ಕಡಿಮೆಯಾಗಬಹುದು.

ಶ್ರೀ ಬಿ. ಬಸವಲಿಂಗಪ್ಪ.—ತಾವು ಸ್ವಲ್ಪ ತಾಳ್ಮೆಯಿಂದ ಇರಿ.

ಶ್ರೀ ವಾಟಾಳ್ ನಾಗರಾಜ್.—ನಾವು ಕಳೆದ 25 ವರ್ಷಗಳಿಂದ ತಾಳ್ಮೆಯಿಂದ ಇದ್ದೇವೆ.

10-30 A.M.

ನೀವು ಕಳೆದ 25 ವರ್ಷಗಳಿಂದ ಜನಕ್ಕೆ ಟೋಪಿಯನ್ನು ಹಾಕುತ್ತ ಬಂದಿದ್ದಾಗ್ಯೂ ಜನರಿನ್ನೂ ತಾಳ್ಮೆ ಕೆಟ್ಟಿಲ್ಲ. ನಿಮ್ಮಲ್ಲಿ ವಿಶ್ವಾಸ ಕಡಿಮೆಯಾಗತಕ್ಕ ಕಾಲ ಸಧ್ಯದಲ್ಲೇ ನಿಮ್ಮ ಈ ಅಧಿಕಾರಾವಧಿಯಲ್ಲೇ ಬರಬಹುದು. ಜನರು ಬೀದಿಗಿಳಿಯತಕ್ಕ ಕಾಲ ಬಹು ಬೇಗ ಸನ್ನಿಹಿತವಾಗುತ್ತ ಬರುತ್ತಿದೆ. ಬೆಂಗಳೂರು ನಗರದ ನಾಗರಿಕರಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ಸಂಕಲ್ಪ ಮಾಡಿಕೊಂಡ ಕಾವೇರಿ ಯೋಜನೆ 1963 ರಲ್ಲೇ ಪ್ರಾರಂಭವಾದರೂ ಆ ಕೆಲಸ 1972 ಬಂದರೂ ಇನ್ನೂ ಮುಗಿಯಲಿಲ್ಲ. ಇದೇಕೋ ಭಗೀರಥನ ಕಥೆಯಾಗಿದೆ. ಶ್ರೀಮಾನ್ ಬಸವಲಿಂಗಪ್ಪನವರು ಇಂಥ ಕಥೆಗಳನ್ನು ಕಟ್ಟುವುದರಲ್ಲಿ—ಹೇಳುವುದರಲ್ಲಿ ಚೆನ್ನಾಗಿ ನುರಿತಿದ್ದಾರೆ. ಅವರೀಗ ಕಾವೇರಿ ನೀರನ್ನು ತರಲು ಭಗೀರಥ ಪ್ರಯತ್ನದಲ್ಲಿದ್ದಾರಂತೆ. ಜಲಮಂಡಲಿ ನೀರಿನ ಹಂಚಿಕೆ ವ್ಯವಸ್ಥೆಯನ್ನು ಕೈಗೊಂಡ ಕಾಲದಿಂದಲೂ ಬೆಂಗಳೂರು ನಗರದ ನಾಗರೀಕರಿಗೆ ನೀರಿನ ಸರಬರಾಯಿ ಸರಿಯಾಗಿ ನಡೆಯುತ್ತಿಲ್ಲ. ಇದಕ್ಕೆ ಕಾರಣಗಳೂ ಅನೇಕ ಇವೆ. ಈ ನೀರು ಸರಬರಾಯಿ ಮಾಡತಕ್ಕ ಕಾರ್ಯ ಒಬ್ಬರ ಕೈಲಿಲ್ಲ. ಮೂರು ಏಜೆನ್ಸಿಗಳ ಕೈಲಿದೆ. ನಲ್ಲಿಗಳನ್ನು ರಿಪೇರಿ ಮಾಡತಕ್ಕವರು ಒಬ್ಬರಾದರೆ, ಆ ನಲ್ಲಿಗಳನ್ನು ಎಲ್ಲೆಲ್ಲಿ ಹಾಕಬೇಕು ಎನ್ನುವುದರ ಬಗ್ಗೆ ಆರ್ಡರನ್ನು ಕೊಡತಕ್ಕವರು ನಗರಸಭೆಯವರು. ನೀರು ಸರಬರಾಯಿ ಕೊಡತಕ್ಕವರು ಇನ್ನೊಬ್ಬರು. ಹೀಗೆ ಮೂರು ಏಜನ್ಸಿಗಳು ಕೂಡಿ ಈ ಕೆಲಸವಾಗಬೇಕಾಗಿದೆ. ಈ ಮೂರು ಏಜನ್ಸಿಗಳ ಹತ್ತಿರ ಜನರು ಅಲೆದೂ ಅಲೆದೂ ಕೆಲಸವಾಗದೆ ಕಣ್ಣೀರಿಡತಕ್ಕ ಪರಿಸ್ಥಿತಿ ಬಂದಿದೆ. ಇನ್ನು ಮುಂದಕ್ಕಾದರೂ ಈ ನೀರಿನ ಹಂಚಿಕೆಯ ಕೆಲಸ ಸುಗಮವಾಗಿ ನಡೆಯಬೇಕಾಗಿದ್ದರೆ ಬಹುಶಃ ಇದನ್ನು ನಗರಸಭೆಯವರಿಗೆ ವಹಿಸಿದರೆ ಅನುಕೂಲವಾಗಬಹುದೆಂದು ನನ್ನ ಆಸೆ. ಈ ನೀರಿನ ಹಂಚಿಕೆ ವ್ಯವಸ್ಥೆಯ ಬಗ್ಗೆ ನಗರಸಭೆಯವರು 35 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಮುಂದೆ ಇದು ಕಾವೇರಿ ನೀರು ಬಂದಾಗ ಒಂದೂ ಒಂದೂವರೆ ಕೋಟಿಗೆ ಏರಬಹುದು. ಆದರೆ ನಗರಸಭೆಯವರಿಗೆ ಜನರು ತೆರಿಗೆ ಹೊರೆಯನ್ನು ಕೊಡಲಾರದೆ ತೊಂದರೆಪಡುತ್ತಿದ್ದಾರೆ. ಅಂದಾಗ ಮುಂದೆ ತೆರಿಗೆಯನ್ನು ಹೆಚ್ಚಿಸಿದಾಗ ಸರ್ಕಾರದವರು ಜನರ ಕಲ್ಯಾಣವನ್ನು ಮಾಡಿದಂತಾಗುವುದಿಲ್ಲ. ಇಂದು ಬೆಂಗಳೂರು ನಗರದ ಸುತ್ತಮುತ್ತಲೂ ಇರತಕ್ಕ ಕೈಗಾರಿಕಾ ಸಂಸ್ಥೆಗಳೇನಿವೆ—ಇವು ಕಾರ್ಮಿಕರನ್ನು ಶೋಷಣೆಮಾಡಿ ಅಪಾರವಾಗಿ ಹಣವನ್ನು ಗಳಿಸುತ್ತಿವೆ. ಅಂಥ ಕಾರ್ಖಾನೆಗಳ ಮೇಲೆ ಎಷ್ಟು ಬೇಕಾದರೂ ತೆರಿಗೆಯನ್ನು ಹಾಕಿ, ನಾವು ಬೇಡವೆನ್ನುವುದಿಲ್ಲ. ಅವರಿಗೆ ನೀರಿನ ಸೌಲಭ್ಯ ಕೊಡುವುದರ ಬಗ್ಗೆ ಹೆಚ್ಚಿನ ತೆರಿಗೆ ಹಾಕುವುದರಲ್ಲಿ ತೊಂದರೆಯೇನೂ ಬರಲಾರದು. ಇನ್ನು ತ್ಯಾಗಮೂರ್ತಿ ಸದಾಶಿವರಾಯರ ಹೆಸರಿನಲ್ಲಿ ಮಾಡಿರತಕ್ಕ ಬಡಾವಣೆ ಅಂದರೆ ಸದಾಶಿವನಗರದ ಬಡಾವಣೆಯಲ್ಲಿರತಕ್ಕ ರಾಜಮಹಾರಾಜರುಗಳಿಗೂ ಮತ್ತು ಮಂತ್ರಿಗಳ ಮೊಹಲ್ಲಾಗಳಿಗೂ, ಮಾಜಿ ಮಂತ್ರಿಗಳ ಮೊಹಲ್ಲಾಗಳಿಗೂ ನೀರಿನ ಸರಬರಾಯಿ ಬಗ್ಗೆ ಇಷ್ಟೂ ತೊಂದರೆ ಆಗದಂತೆ ನೋಡಿಕೊಳ್ಳಲು ನೀರಿನ ಬೋರ್ಡಿನ ಛೇರ್ಮನ್ನರು ಬಹಳ ಎಚ್ಚರಿಕೆ ತೆಗೆದುಕೊಂಡು ಇನ್ನುಳಿದ ಜನಸಾಮಾನ್ಯರ ಗೋಳಿನತ್ತ ಕಿವಿಕೊಡುತ್ತಿಲ್ಲ. ಆ ಬಡಜನರ ಕೂಗು ಅರಣ್ಯರೋದನವಾಗಿದೆ. ಇನ್ನು ಮುಂದಕ್ಕಾದರೂ ಪ್ರಸಕ್ತ ಸರ್ಕಾರದವರ ಕಾಲದಲ್ಲಿ ಅವರು ಗೋಳು ಗೊಳಗುಮ್ಮಟವಾಗದಿರಲಿ ಎಂದು ಆಶಿಸುತ್ತೇನೆ. ಇದೇ ಸಂದರ್ಭದಲ್ಲಿ ಒಂದು ಕಥೆ ಹೇಳಿ ನನ್ನ ಮಾತುಗಳನ್ನು ಮುಗಿಸಲಿದ್ದೇನೆ.

(ಶ್ರೀ ವಾಟಾಳ್ ನಾಗರಾಜ್)

ಒಂದು ಹುಲಿ ನಮ್ಮ ಕ್ಷೇತ್ರವಾದ ಚಾಮರಾಜಪೇಟೆಗೆ ಬಂತು. ಪಕ್ಕದ ಮನೆಯವರು ತಕ್ಷಣ ಪೋಲೀಸ್ ಸ್ಟೇಷನ್‌ಗೆ ಫೋನು ಮಾಡಿದರು 'ನಮ್ಮ ಮನೆ ಮುಂದೆ ಹುಲಿ ಬಂದಿದೆ ಏನು ಮಾಡುವುದು' ಎಂದು. ಅದಕ್ಕೆ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಕೇಳಿದರು 'ಎಲ್ಲಿ' ಎಂದು. 'ಮೂರನೇ ಬೀದಿ' ಎಂದು ಹೇಳಿದರು. ಅದಕ್ಕೆ ಅವರು 'ಆ ಭಾಗವು ನಮಗೆ ಸೇರಿಲ್ಲ, ಬೇರೆ ಸ್ಟೇಷನ್‌ಗೆ ಫೋನ್ ಮಾಡಿ' ಎಂದರು.. ಸಂಬಂಧಪಟ್ಟ ಸ್ಟೇಷನ್‌ಗೆ ಫೋನ್ ಮಾಡಿದರು. ಫೋನ್ ಮಾಡಿದ ತಕ್ಷಣ ಆ ಸ್ಟೇಷನ್ನಿನ ಸಬ್‌ಇನ್‌ಸ್ಪೆಕ್ಟರ್ ಹುಲಿ ಏನೋ ಬಂದಿದೆ, ಆ ಹುಲಿ ನಮ್ಮ ಊರಿನ ಹುಲಿಯಲ್ಲ, ಮದ್ರಾಸ್ ಹುಲಿ' ಎಂದು ಹೇಳಿದರು. ಅಷ್ಟರೊಳಗೆ ಅದು ಮೂರು ಜನರನ್ನು ತಿಂದು ಮುಗಿಸಿತ್ತು. ನಂತರ ಮದ್ರಾಸ್ ಸರ್ಕಾರಕ್ಕೆ ಫೋನು ಮಾಡಿದರು ನಿಮ್ಮ ಊರು ಹುಲಿ ಬಂದಿದೆ ಏನು ಮಾಡುವುದು, ಎಂದು ಅವರು ಅದಕ್ಕೆ ಹುಲಿ ಬಂದಿರುವುದು ನಿಜ, ನಮ್ಮ ಊರಿನಿಂದ ಕೂಗಾಡಿಕೊಂಡು ಬಂದಿದೆ. ಇಲ್ಲಿ ವನ್ಯ ಪ್ರಾಣಿ ನಿರೋಧ ಸಪ್ತಾಹ ಮಾಡುತ್ತಿದ್ದೇವೆ. ಅದ್ದರಿಂದ ಪ್ರಾಣಿಯನ್ನು ಕೊಲ್ಲಬಾರದೆಂದು ಹೇಳಿದ್ದಾರೆ, ಆದುದರಿಂದ ಬಿಟ್ಟು ಬಿಟ್ಟಿದ್ದೇವೆ, ಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರು. ನೀರಿನ ಕತೆ ಯಾರಿಗೆ ಹೇಳಬೇಕು ? ನೀರಿನ ನಲ್ಲಿ ರಿಪೇರಿ ಮಾಡುವವನಿಗೆ ಹೇಳಬೇಕೇ ? ನೀರು ಕೊಡುವವನಿಗೆ ಹೇಳಬೇಕೇ ? ಕಾರ್ಪೊರೇಷನ್‌ಗೆ ಹೇಳಬೇಕೇ ದೊರೆ ತನಕ ದೂರು ಎಂದು ರಾಜ್ಯಪಾಲರಿಗೆ ಹೇಳಬೇಕೇ ! ಅಥವಾ ಮಾನ್ಯ ಶ್ರೀ ಬಸವಲಿಂಗಪ್ಪನವರಿಗೆ ಹೇಳಬೇಕೆ ! ತಿರುಗಿ ತಿರುಗಿ ಸಾಕಾಗಿ ರೂಟ್ ನಂಬರ್ ನಾಲ್ಕು ಹಿಡಿದು ಹುಚ್ಚಾಸ್ಪತ್ರೆಗೆ ಹೋಗಬೇಕಾಗುತ್ತದೆ. ಆ ರೀತಿ ಪರಿಸ್ಥಿತಿ ಆಗದೆ ಇರಲಿ. ಸಮಾಜವಾದಿಗಳು, ಬಡವರ ಪರವಾಗಿ ಇರುವವರು ಎಂದು ಗಂಟೆಗಟ್ಟಲೆ ಜನಗಳಿಗೆ ಹೇಳಿ ಅರೆದು ತುಂಬಿ ಬಿಟ್ಟಿದ್ದೀರಿ. ಜನ ನಿಮ್ಮ ಮಾತುಗಳನ್ನು ಕೇಳಿ ಮರುಳಾಗಿಬಿಟ್ಟು ಹಾಳಾಗಿದ್ದಾರೆ. ಜನಗಳಿಗೆ ನಾವು ಏನು ಮಾಡೋಣ ? ನಾವು ಏನು ಮಾಡುವುದಕ್ಕೂ ಆಗುವುದಿಲ್ಲ. ಮಾನ್ಯ ಹಣಕಾಸಿನ ಸಚಿವರಾದ ಶ್ರೀ ಘೋರ್ಪಡೆಯವರಿಗೂ ಹೇಳುತ್ತೇನೆ, ಏಕೆಂದರೆ ನೀವು ಬಸವಲಿಂಗಪ್ಪನವರಿಗೆ ಹಣ ಕೊಡಬೇಕಾಗುತ್ತದೆ. ಈ ಸಭೆಯಲ್ಲಿ ಹೇಳಿ ಹೇಳಿ ಶಾಮಣ್ಣನವರಿಗೆ ತಲೆ ಕೂದಲು ಬಿಳಿಯಾಯಿತು. ಕೇಳಿ ಕೇಳಿ ಶ್ರೀಮಾನ್ ನಾಗಣ್ಣನವರಿಗೆ ವಯಸ್ಸಾಯಿತು, ನಾನು ಕೂಗಿ ಕೂಗಿ ಪೋಲೀಸ್ ಒದೆ ತಿಂದು ಸಾಕಾಗಿ ಹೋಯಿತು. ಯಾವತ್ತು ನೀವು ಜನತೆಗೆ ನೀರನ್ನು ಹಂಚುತ್ತೀರೋ ಎನ್ನುವುದೇ ಪ್ರಶ್ನೆ. ಮಾತೆತ್ತಿದರೆ ನಾವು ಮೆರವಣಿಗೆ ಮಾಡಿದ್ದು ಆಯಿತು, ನೀವು ಬೇಡಿಕೆ ಕೇಳಿದ್ದು ಆಯಿತು. ಪತ್ರಿಕೆಯವರು ಬರೆದಿದ್ದು ಆಯಿತು. ಬೆಂಗಳೂರು ಜನತೆಗೆ ಪತ್ರಿಕೆಯವರು ಕ್ರೂರವಾದ ಸೇವೆ ಮಾಡಿದ್ದಾರೆ. ಆದರೆ ಬೆಂಗಳೂರಿನ ಕರ್ಮ ಕತೆ, ಕಣ್ಣೀರಿನ ಕತೆ ತಪ್ಪಲಿಲ್ಲವೆಂದು ಅಧ್ಯಕ್ಷಿಣಿಯವರಿಗೆ ಹೇಳುತ್ತಿದ್ದೇನೆ. ಎಲ್ಲಕ್ಕಿಂತ ಹೆಚ್ಚಿಗೆ ತೊಂದರೆ ಇರತಕ್ಕದ್ದು ಬೆಂಗಳೂರಿನ ಹೆಂಗಸರಿಗೆ, ಶ್ರೀಮತಿ ಈವಾಸ್ ಅವರು ನಮ್ಮ ಜೊತೆಯಲ್ಲಿ ಕಾರ್ಪೊರೇಟರಾಗಿದ್ದರು. ನನ್ನ ಜೊತೆಯಲ್ಲಿ ನೀರಿನ ಬಗ್ಗೆ ಮನವಿ ಮಾಡಲು ಬರುತ್ತೇನೆಂದು ಆಶ್ವಾಸನೆ ಕೊಟ್ಟಿದ್ದರು. ಆದುದರಿಂದ ತಮಗೆಲ್ಲಾ ನಾನು ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಸಭೆಯ ಮೂಲಕ ಮಾನ್ಯ ಸಚಿವರನ್ನು ಅವರ ಕಾಲದಲ್ಲಿ ಸುಭದ್ರವಾದ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ, ಇಲ್ಲದೆ ಹೋದರೆ ನಮ್ಮ ಚಳುವಳಿಯನ್ನು ಪ್ರಾರಂಭಿಸುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ.—ಎಲ್ಲ ವ್ಯವಸ್ಥೆ ಆದರೆ ಆಗ ನಿಮಗೆ ಕೆಲಸ ಇಲ್ಲದ ಹಾಗೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್. -ಹೌದು ಆಗದೇ ಹೋದರೆ ನಮಗೆ ಬೇರೆ ಕೆಲಸವಿಲ್ಲ, ಇದೇ ಕೆಲಸ.

ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ, 14 ವರ್ಷದ ಮೊದಲು ಕಾವೇರಿ ನೀರು ಬೆಂಗಳೂರಿಗೆ ತರಬೇಕು ಎಂದು ಯೋಜನೆ ಮಾಡಿದರು. 1958-59 ನೇ ಇಸವಿಯಲ್ಲಿ ಸ್ಥಳಪರೀಕ್ಷೆ ಮಾಡಿ ಅಲ್ಲಿಂದ ಇಲ್ಲಿಯವರೆಗೂ ಕೂಡಾ ಬಹುಶಃ ಬೆಂಗಳೂರಿಗೆ ನೀರು ತರುವುದರಲ್ಲಿದ್ದಾರೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. 14 ವರ್ಷಗಳಾದರೂ 60 ಮೈಲಿ ದೂರದಿಂದ ನೀರನ್ನು ತರತಕ್ಕ ವ್ಯವಸ್ಥೆ ತ್ವರಿತವಾಗಿ ನಡೆಯಲಿಲ್ಲ. ಅನೇಕ ದೊಡ್ಡ ದೊಡ್ಡ ವಿಷಯಗಳು ನಮ್ಮ ಮುಂದೆ, ದೇಶದ ಮುಂದೆ ಇವೆ, ಅವುಗಳನ್ನು ಎಷ್ಟರಮಟ್ಟಿಗೆ ಬೇಗನೆ ಮಾಡಿ ಮುಗಿಸುತ್ತೇವೆ ಎನ್ನುವುದು ಯೋಚನೆ ಮಾಡತಕ್ಕಂಥ ವಿಷಯ. ಶ್ರೀಮಾನ್ ಶಾಮಣ್ಣನವರು ಸುಮಾರು 12 ಗ್ಯಾಲನ್ನುಗಳಷ್ಟು ನೀರು ಪ್ರತಿಯೊಂದು ಮನೆಗೂ ಸಿಕ್ಕುತ್ತಿದೆ ಎಂದು ಹೇಳಿದರು. ಬಹುಶಃ ಯಾರು ಸ್ವೈಟು ತೆಗೆದುಕೊಂಡು ಮನೆ ಕಟ್ಟಿ ವಾಸಿಸುತ್ತಾರೋ ಅಂತಹವ

ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಕಾಣುತ್ತದೆ. ಒತ್ತಡವಾಗಿ ಕಾರ್ಮಿಕರು, ಹರಿಜನರು ತೀರ ಬಡವರು ವಾಸಿಸತಕ್ಕ ಕಡೆಗಳಲ್ಲಿ ಇರತಕ್ಕ ಸ್ಥಳಗಳಲ್ಲಿ ಇವೊತ್ತು ಮೂರು ನಾಲ್ಕು ಗ್ಯಾಲನ್ನುಗಳಷ್ಟು ನೀರು ಕೂಡ ಅವರಿಗೆ ಸಿಕ್ಕುವುದಿಲ್ಲ. ಒಂದು ಕಡೆ ದೊಡ್ಡ ದೊಡ್ಡ ಬಂಗಲೆಗಳಲ್ಲಿ ಕಾಂಪೌಡು ಕಟ್ಟಿ ನಲ್ಲಿ ನೀರು ಉಪಯೋಗಿಸಿ ತೋಟಗಾರಿಕೆ ಮಾಡುತ್ತಾರೆ. ಇನ್ನೊಂದು ಕಡೆ ಮೂರು ಗ್ಯಾಲನಿನಷ್ಟು ನೀರು ಸಿಕ್ಕುವುದಿಲ್ಲ. 14 ವರ್ಷಗಳ ಹಿಂದೆ ಒಂದು ಸಲ ದಿವಂಗತ ನೆಹರೂರವರು ಬೆಂಗಳೂರಿಗೆ ಬಂದಾಗ ಒಂದು ಮಾತು ಹೇಳಿದರು. ಬೆಂಗಳೂರಿನಲ್ಲಿ ದೊಡ್ಡ ರೋಡುಗಳು ಇರಬಹುದು, ಆ ರೋಡುಗಳ ಪಕ್ಕದಲ್ಲಿ ಗುಡಿಸಲು ಇದ್ದರೂ ಚಿಂತೆಯಿಲ್ಲ. ಆ ಗುಡಿಸಲುಗಳಿಗೆ ಮತ್ತು ಜೋಪಡಿಗಳಿಗೆ ಕುಡಿಯುವ ನೀರು, ಆರೋಗ್ಯವಾದ ಗಾಳಿ ಇವೆರಡನ್ನಾದರೂ ಒದಗಿಸಿ ಕೊಡಬೇಕು ಎಂಬ ಈ ಮಾತನ್ನು ದಿವಂಗತ ನೆಹರೂರವರು 1956 ರಲ್ಲಿ ಹೇಳಿದರು. ಆದರೆ ಇವೊತ್ತು ನೋಡಿ ಗುಡಿಸಲುಗಳಲ್ಲಿ ವಾಸಿಸುವ ಜನ ಬಹುಶಃ ನರಕದಲ್ಲಿದ್ದಾರೆ ಎಂದು ಹೇಳಬಹುದು. ಯಾರಾದರೂ ಸದಸ್ಯರಾಗಲಿ, ಮಂತ್ರಿಗಳಾಗಲಿ ಗುಡಿಸಲುಗಳು ಇರತಕ್ಕ ಸ್ಥಳವನ್ನು ಖುದ್ದಾಗಿ ನೋಡಿ ಅವರು ವಾಸಿಸತಕ್ಕ ಸ್ಥಳವನ್ನು ಪರಿಶೀಲನೆ ಮಾಡಿದರೆ ಆ ಜನರಿಗೆ ನೀರನ್ನು ಎಷ್ಟು ಒದಗಿಸುತ್ತಾರೆಂದು ತಿಳಿದುಕೊಳ್ಳಬಹುದು. ಆ ಸ್ಥಳಗಳನ್ನು ನೋಡದೆ ಪರೀಕ್ಷೆ ಮಾಡದೆ ಯಾವುದೇ ವಿಷಯ ಮಾತನಾಡಿದರೂ ಬಹುಶಃ ಸತ್ಯಕ್ಕೆ ದೂರವಾದ ವಿಷಯವಾಗುತ್ತದೆ. ಪ್ರತ್ಯಕ್ಷವಾಗಿ ನೋಡದೆ ಸಭೆ ಮುಂದೆ ಇಷ್ಟೇ ನೀರು ಒದಗುತ್ತದೆ ಎಂದು ಹೇಳಿದರೆ ಅದು ಊಹೆ ಮೇಲೆ ಮಾತನಾಡಿದಂತಾಗುತ್ತದೆ. 25 ವರ್ಷಗಳಿಂದ ನಾವು ಮಾಡಬೇಕಾದ ಪ್ರಮಾಣದಲ್ಲಿ ಕೆಲಸವನ್ನು ಮಾಡಲಿಕ್ಕೆ ಆಗಲಿಲ್ಲ ಎಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. 7 ನೇ ಡಿವಿಜನ್ ಮುನೇಶ್ವರಬ್ಲಾಕ್‌ನಲ್ಲಿ ಪೈಪ್ ಲೈನ್ ಬರುತ್ತಿದೆ. ಅಲ್ಲಿಂದ ಇಡೀ ಬೆಂಗಳೂರಿಗೆ ನೀರು ಸಪ್ಲೈಯಾಗುತ್ತಿದೆ. ಆದರೆ ಅಲ್ಲಿ ಇರತಕ್ಕ ಸಾವಿರಾರು ಮನೆಗಳಿಗೆ 3 ಇಂಚು ಪೈಪು ಇಲ್ಲದೆ ನೀರಿನ ಸಪ್ಲೈ ಆಗುತ್ತಾ ಇಲ್ಲ. ಹೀಗೆಯೇ ಸ್ವತಂತ್ರಪಾಳ್ಯ, ತೆಗೆದುಕೊಳ್ಳಿ, ಗೋಪಾಲಪುರ, ಶ್ರೀರಾಮಪುರ ಮತ್ತು ಲೇಬರ್ ಕಾಲೋನಿ, ಇಲ್ಲಿ ನೀರು ಸರಿಯಾಗಿ ಒದಗಿಸುತ್ತಾ ಇಲ್ಲ, ಹೀಗೆ ಹೇಳುತ್ತಾ ಹೋದರೆ ಇಡೀ ಬೆಂಗಳೂರಿನಲ್ಲೇ ತೀರ ಕಮ್ಮಿ ನೀರಿನ ಉಪಯೋಗವಾಗುತ್ತಿದೆ. ಬೆಂಗಳೂರಿನಲ್ಲಿ ತೋಟಗಾರಿಕೆಗೆ ನೀರು ಉಪಯೋಗ ಮಾಡುತ್ತಾರೆ. ಅವರು ಕೊಡತಕ್ಕ ದುಡ್ಡಿನಿಂದ ಗೊತ್ತಾಗುತ್ತದೆ. ದುಡ್ಡು ಇದ್ದವರು ನಲ್ಲಿ ನೀರನ್ನು ಉಪಯೋಗಮಾಡುತ್ತಾರೆ. ನೀರಿನ ತೆರಿಗೆ, ವಿದ್ಯಾಭ್ಯಾಸ ತೆರಿಗೆ ಇತ್ಯಾದಿಗಳನ್ನು ಜನರಿಂದ ತೆಗೆದುಕೊಳ್ಳುತ್ತಾರೆ. ಅವರಿಗೆ ಕುಡಿಯುವುದಕ್ಕೆ ನೀರು ಕೊಡದೆ ಇದ್ದರೆ ಸರಿ ಹೋಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೆಚ್ಚಿಗೆ ಗಮನಕೊಟ್ಟು ಕಾವೇರಿ ನೀರು 14 ವರ್ಷಗಳಿಂದ ಏನು ಬಾರದೆ ಇದೆ, ಅದು ಬೇಗನೆ ಬರುವಂತೆ ಪ್ರಯತ್ನ ಮಾಡಬೇಕು. ಬೆಂಗಳೂರಿನಲ್ಲಿ ತೋಟ ಮಾಡಲು ಉಪಯೋಗವಾಗುವ ನೀರನ್ನು ಕಡಿಮೆ ಮಾಡಿ ಬಡವರಿಗೆ ಅದನ್ನೂ ಕೊಡಬೇಕು ಎಂದು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಾಗರೀಕರಿಗೆ ನೀರಿನ ಸೌಲಭ್ಯವನ್ನು ಮಾಡುವ ದೃಷ್ಟಿಯಿಂದ ಕಾವೇರಿ ನದಿ ನೀರನ್ನು ಜರೂರಾಗಿ ತರಬೇಕೆನ್ನುವುದರ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಅರಿಕೆ ಮಾಡಿಕೊಂಡಿದ್ದಾರೆ. ಇದು ಬಹಳ ಹಳೆಯ ಕತೆ. ಬೆಂಗಳೂರು ನಾಗರೀಕರಿಗೆ ಕಾವೇರಿ ನದಿ ನೀರನ್ನು ಒದಗಿಸಬೇಕು ಎಂದು ಅತ್ಯಂತ ಕಳಕಳಿಯಿಂದ ಹಿಂದೆ ಮಾತನಾಡಿದಂಥ ಮಾನ್ಯ ಸದಸ್ಯರು ಈಗಾಗಲೇ ಸರ್ಕಾರದ ಮಂತ್ರಿಗಳಾಗಿದ್ದಾರೆ.

ಅವರಿಗೆ ಈ ಬಗ್ಗೆ ಹೆಚ್ಚು ಲಕ್ಷ್ಯ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಗರ ಪ್ರದೇಶಗಳಿಗೆ ನೀರನ್ನು ಒದಗಿಸತಕ್ಕ ಸಮಸ್ಯೆ ಏನು ಇದೆ ಅದು ಬೆಂಗಳೂರು ನಗರಕ್ಕೆ ಅಷ್ಟೇ ಅಲ್ಲ, ಎಲ್ಲಾ ನಗರಕ್ಕೂ ಕೂಡ ಅನ್ವಯಿಸತಕ್ಕ ಪ್ರಶ್ನೆ. ಬೆಂಗಳೂರು ನಗರ ಪ್ರದೇಶದಲ್ಲಿ ಪ್ರತಿವರ್ಷವೂ ಜನಸಂಖ್ಯೆ ಜಾಸ್ತಿ ಆಗುತ್ತಾ ಇದೆ. ಆದ್ದರಿಂದ ಈವೊತ್ತು ಕಾವೇರಿ ನೀರನ್ನು ತಂದು ಉಪಯೋಗ ಮಾಡಿಕೊಟ್ಟರೂ ಇನ್ನೂ 10 ವರ್ಷ ಕಳೆದ ಮೇಲೆ ಈ ನೀರಿನ ಅಭಾವ ಮತ್ತೆ ತಲೆದೋರುತ್ತದೆ. ಕಾರಣ ಏನೆಂದರೆ ಬೆಂಗಳೂರು ನಗರದಲ್ಲಿ ಪ್ರಾಂತ ವಿಭಜನೆ ಆಗುವ ಮುನ್ನ 11 ಲಕ್ಷ ಜನಸಂಖ್ಯೆ ಇದ್ದುದು ಈವೊತ್ತು 17 ಲಕ್ಷಕ್ಕೆ ಏರಿದೆ. ಮುಖ್ಯವಾಗಿ ವಿಶಾಲ ಮೈಸೂರು ಆದ ಮೇಲೆ ವಿಪರೀತ ಜನಸಂಖ್ಯೆ ಆಯಿತು. ಜೊತೆಗೆ ಕಾರ್ಖಾನೆಗಳೂ ಕೂಡ ಬೇಕಾದಷ್ಟು ಆಗಿವೆ. ಕಳೆದ 25 ವರ್ಷಗಳಿಂದಲೂ ಕೂಡ ಈ ನಗರಗಳನ್ನು ಬೆಳೆಸತಕ್ಕಂಥ ರೀತಿ ನೀತಿಗಳು ಏನು ಇವೆ, ಈ ಅಸಮಾನತೆಗಳು ಏನು ಇವೆ, ಬಡತನ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರತಕ್ಕ ಅಸಮಾನತೆಗಳು ಏನು ಇವೆ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಕಂಡು ಬರತಕ್ಕ ಅಸಮಾನತೆಗಳು ಏನು ಇವೆ,

(ಶ್ರೀ ಕಾಗೋಡು ತಿಮ್ಮಪ್ಪ)

ಇವನ್ನು ತಡೆಗಟ್ಟಬೇಕಾದರೆ ನಗರ ಬೆಳೆಯುತ್ತಾ ಇರುವುದನ್ನು ತಡೆಗಟ್ಟಬೇಕು. ಬೆಂಗಳೂರು ನಗರದಲ್ಲಿ ಮೊದಲು ಎಷ್ಟು ಜನಸಂಖ್ಯೆ ಇತ್ತು? ಈಗ ಎಷ್ಟಾಗಿದೆ ಎನ್ನುವುದನ್ನು ಯೋಚಿಸಬೇಕು. ಇದಕ್ಕೆ ಕಾರಣ ಬೆಂಗಳೂರು ನಗರದಲ್ಲಿ ಬೇಕಾದಷ್ಟು ಸೌಕರ್ಯಗಳು ಇರುವುದರಿಂದ ನಗರ ಬೆಳವಣಿಗೆ ಆಗುತ್ತಾ ಇದೆ. ಈ ರೀತಿ ನಗರ ಬೆಳೆಯುತ್ತಾ ಹೋದರೆ ಈಗ ಕಾವೇರಿ ನೀರಿನ ಯೋಜನೆಯನ್ನು ಪೂರೈಸಿದರೂ ಕೂಡ ಮುಂದೆ ಇದೂ ಸಾಕಾಗದೆ ಮತ್ತೊಂದು ನೀರಿನ ಯೋಜನೆಯನ್ನು ಮಾಡಬೇಕಾಗುತ್ತದೆ. ಆದುದರಿಂದ ಹೀಗೆ ಆಗುವುದನ್ನು ತಡೆಗಟ್ಟುವ ಯೋಜನೆ ಮಾಡಬೇಕು. ಮುಂದೆ ಈ ನಗರ ಇನ್ನೂ ಹೆಚ್ಚಾಗಿ ಬೆಳೆಯದೇ ಇರುವ ರೀತಿಯಲ್ಲಿ ಮಾಡಿದರೆ ಈವೊತ್ತು ಏನು ನೀರನ್ನು ಒದಗಿಸುತ್ತೀರೋ ಅದನ್ನು ಕೊನೆಯವರೆಗೂ ಉಳಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ನಗರ ಬೆಳೆದು ನೀರಿನ ಅಭಾವ ಆಗುವುದು ಒಂದೇ ಅಲ್ಲ. ನಮ್ಮ ಊರಿಗೆ ಹೋಗಿದ್ದಾಗ ನಾನು ನೋಡಿದ್ದು, ಹೋದ ವರ್ಷ ತೆಗೆಸಿದ ಬಾವಿಯಲ್ಲಿ ಈ ಸಲ ಒಂದು ತೊಟ್ಟು ನೀರೂ ಇಲ್ಲ. ನೀರನ್ನು ತರಬೇಕಾದರೆ 1 ಫರ್ಲಾಂಗ್, 2 ಫರ್ಲಾಂಗ್ ಹೋಗಿ ತರುತ್ತಾರೆ. ಬೆಂಗಳೂರಿನಲ್ಲಿ ಆದರೆ ಒಂದು ಮಾರು, ಎರಡು ಮಾರು ಹೋದರೆ ಸಾಕು, ನಲ್ಲಿ ನೀರು ಸಿಕ್ಕುತ್ತದೆ. ಅಲ್ಲಿ ಹೋಗಿ ತರುತ್ತಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಈ ನಗರಕ್ಕೆ ನೀರನ್ನು ಪೂರೈಕೆ ಮಾಡುವುದರ ಜೊತೆಗೆ ನಗರ ಪ್ರದೇಶದ ಬೆಳವಣಿಗೆಯನ್ನೂ ಕೂಡ ತಡೆಗಟ್ಟುವ ವಿಧಾನವನ್ನು ಜಾರಿಗೆ ತರಬೇಕು. ಈ ನಗರವನ್ನು ಒಂದು ಹಂತದವರೆಗೆ ಮಾತ್ರ ಬೆಳೆಸುವುದಕ್ಕೆ ಒಂದು ಸ್ಪಷ್ಟವಾದ ಯೋಜನೆ ಮಾಡಿದರೆ ಈ ನಗರ ಬೆಳವಣಿಗೆಯನ್ನು ತಡೆಗಟ್ಟುವುದಕ್ಕೆ ಅನುಕೂಲವಾಗುತ್ತದೆ. ಈವೊತ್ತು ಬರುವವರು ಯಾರೇ ಇರಲಿ, ಯಾರೇ ಇರಲಿ, ಅವರು ದೊಡ್ಡ ಮನುಷ್ಯರು ಎಂದು ಅವರಿಗೂ ಜಾಗ ಇಲ್ಲಿ ಕೊಡುತ್ತಿದ್ದೀರಿ. ಬೆಂಗಳೂರಿನಲ್ಲಿ ಹವಾಮಾನ ಚೆನ್ನಾಗಿದೆ, ಎಲ್ಲಾ ಸೌಕರ್ಯಗಳೂ ಇವೆ ಎಂದು ಅವರುಗಳು ಇಲ್ಲಿಗೆ ಬರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಅದರಿಂದಾಗಿ ಎಲ್ಲಾ ಕಾರ್ಖಾನೆಗಳೂ ಕೂಡ ಇಲ್ಲಿ ಬಂದು ಸೇರುತ್ತವೆ. ಈಗ ನಮ್ಮ ಮಲೆನಾಡಿನಲ್ಲಿ ಅಗಾಧವಾದ ಮರಗಳು ಸಿಕ್ಕುತ್ತದೆ. ಇದಕ್ಕೆ ಸಂಬಂಧಪಟ್ಟಂಥ ಕಾರ್ಖಾನೆಗಳನ್ನು ಅಲ್ಲಿ ಸ್ಥಾಪಿಸಲು ಒಳ್ಳೆಯ ಅವಕಾಶಗಳು ಇದ್ದರೂ ಕೂಡ ಬೆಂಗಳೂರಿಗೆ ಬಂದು ಆ ಕಾರ್ಖಾನೆಗಳನ್ನು ಪ್ರಾರಂಭಿಸುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಈಗ ಇರತಕ್ಕಂಥ ಜನಸಂಖ್ಯೆಗೆ ನೀರು ಮತ್ತು ವಸತಿ ಸೌಕರ್ಯವನ್ನು ಕಲ್ಪಿಸಿಕೊಟ್ಟರೆ ಸಾಕು. ಆದುದರಿಂದ ಇನ್ನು ಮುಂದೆ ಬರತಕ್ಕಂಥ ಕಾರ್ಖಾನೆಗಳನ್ನು ನಗರ ಪ್ರದೇಶದಲ್ಲಿ ಮಾಡಲು ಅವಕಾಶ ಕೊಡದೆ ಬೇರೆ ಕಡೆ ವರ್ಗಾಯಿಸುವುದಕ್ಕೆ ಅವಕಾಶ ಮಾಡಿಕೊಡಿ. ಡೀಕನ್ಸನ್ಟ್ರೇಷನ್ ಆಫ್ ಇಂಡಸ್ಟ್ರೀಸ್ ಏನು ಇದೆಯೋ ಅದನ್ನು ಜಾರಿಗೆ ತರಲು ನಗರ ಪ್ರದೇಶದಲ್ಲಿ ಕೈಗಾರಿಕೆಗಳು ಬೆಳೆಯುವುದಕ್ಕೆ ಸ್ವಲ್ಪ ನಿರ್ಬಂಧಗಳನ್ನು ಹಾಕುವುದಾದರೆ ಈ ನೀರಿನ ಪೂರೈಕೆಯನ್ನೂ ಕೂಡ ಯಶಸ್ವಿಯಾಗಿ ಪೂರೈಸಬಹುದು ಎಂದು ನಾನು ನಂಬುತ್ತೇನೆ.

Sri B. B. SAYANAK (Belgaum).—(*Marathi*)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರಿಗೆ ಮರಾಠಿ ಅರ್ಥವಾಗುವುದಿಲ್ಲ ಎಂದು ನನಗೆ ಗೊತ್ತಿದೆ.

ಅಧ್ಯಕ್ಷರು.— ನನಗೆ ಅರ್ಥವಾಗುತ್ತದೆ.

Sri B. B. SAYANAK.—(*Marathi*)

ಶ್ರೀ ವಾಟಾಳ್ ನಾಗರಾಜ್.—ಅವರು ಎಲ್ಲವನ್ನೂ ಮಹಜನ್ ರಿಪೋರ್ಟ್ ಎಂದು ತಿಳಿದುಕೊಂಡಿದ್ದಾರೆ. ಅವರು ಮಾತನಾಡುವ ಭಾಷೆ ನಮಗೆ ಅರ್ಥವಾಗುವುದಿಲ್ಲ. ಅರ್ಥವಾಗುವ ಭಾಷೆಯಲ್ಲಿ ಮಾತನಾಡಿಸಿ.

Sri B. B. SAYANAK.—(*Marathi*)

Sri M. Y. GHORPADE (Minister for Finance).—Why does the hon. Member not speak in English so that everybody can understand him? All his good points are being wasted. Let him kindly speak in English or if possible in Kannada.

Sri B. B. SAYANAK.—(*Marathi*)

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಭೆಯಲ್ಲಿ ಅವರಿಗೆ ಹೆಚ್ಚು ಪ್ರಯೋಜನಕಾರಿಯಾಗ ಬೇಕಾದರೆ ರಾಜ್ಯದ ಭಾಷೆಯಾದ ಕನ್ನಡದಲ್ಲಿ ಮಾತನಾಡಿದರೆ ಹೆಚ್ಚು ಉಪಯೋಗವಾಗುತ್ತದೆ.

**Sri B. B. SAYANAK.**—(*Marathi*)

ಶ್ರೀ ವಾಟಾಳ್ ನಾಗರಾಜ್.—ಅವರಿಗೆ ಕನ್ನಡ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಸಭೆಯಲ್ಲಿ ಮರಾಠಿಯಲ್ಲಿ ಮಾತನಾಡಿದರಲ್ಲಾ ಎಂದು ಅವರ ಪ್ರದೇಶದವರು ಶಹಬಾಷ್‌ಗಿರಿ ಕೊಡಲಿ ಎಂದು ಇಲ್ಲಿ ಅವರ ಭಾಷೆಯಲ್ಲಿ ಮಾತನಾಡುತ್ತಾರೆ.

**Sri B. B. SAYANAK.**—(Spoke in *Marathi*)

† ಶ್ರೀ ಬಿ. ಬಸವಲಿಂಗಪ್ಪ (ನಗರಾಡಳಿತ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಟಿ. ಆರ್. ಶಾಮಣ್ಣನವರು ಬೆಂಗಳೂರು ನಗರಕ್ಕೆ ನೀರು ತರುವಂತಹ ಕಾವೇರಿ ನದೀ ನೀರಿನ ಸರಬರಾಜು ಯೋಜನೆಯನ್ನು ಪೂರ್ತಿಗೊಳಿಸಲು ತ್ವರಿತ ಕ್ರಮಕೈಗೊಳ್ಳಬೇಕೆಂದು ಈ ಸಭೆಯ ಮುಂದೆ ತಂದಿರತಕ್ಕ ಈ ನಿರ್ಣಯವನ್ನು ನೋಡಿದರೆ ಅವರ ಹೃದಯಾಂತರಾಳದಲ್ಲಿ ಅಡಗಿರತಕ್ಕ ತೀವ್ರತೆ ಏನಿದೆ ಎಂಬುದು ಭಾಸವಾಗುತ್ತದೆ. ಅವರು ಕಾರ್ಪೊರೇಷನ್ ಪ್ರದೇಶದಲ್ಲಿ ವಾಸವಾಗಿದ್ದು ಕಾರ್ಪೊರೇಷನ್ ಸದಸ್ಯರಾಗಿ ಮತ್ತು ಈ ವಿಧಾನ ಸಭೆಯ ಸದಸ್ಯರಾಗಿ, ಸಮಾಜದ ಕಾರ್ಯಕರ್ತರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಅವರಿಗೆ ಈ ಬೆಂಗಳೂರು ನಗರದಲ್ಲಿ ಇರತಕ್ಕಂಥಾ ಕೊರತೆಗಳ ಬಗ್ಗೆ ಬಹಳ ಪರಿಚಯ ಇದೆ. ನಾನೂ ಕೂಡ ನಗರದಲ್ಲಿ ಕಾರ್ಪೊರೇಷನ್ ಸದಸ್ಯನಾಗಿದ್ದು ಅವರ ಜೊತೆಯಲ್ಲಿ ಕೆಲಸ ಮಾಡತಕ್ಕಂಥಾ ಒಂದು ಸುಯೋಗ ಸಿಕ್ಕಿದ್ದರೂ ಕೂಡ ನಾವು ಇಬ್ಬರೂ ಕಾರ್ಪೊರೇಷನ್ ಕ್ಷೇತ್ರದಲ್ಲಿ ಕೆಲಸ ಮಾಡಿ ನಗರಜೀವನದ ಕುಂದುಕೊರತೆಗಳನ್ನೂ, ಮತ್ತು ಜನಗಳು ಪಡತಕ್ಕಂಥಾ ಕಷ್ಟಸುಖಗಳನ್ನೂ ಅನುಭವಿಸಿದ್ದೇವೆ. ಈ ಒಂದು ಪೌರಾಡಳಿತ ಖಾತೆ ನನ್ನ ಕೈಯಲ್ಲಿ ಬಂದಾಗ ನಗರದ ಜನತೆಗೆ ಅತ್ಯವಶ್ಯಕವಾಗಿ ಬೇಕಾದ ಪೌರ ಸೌಲಭ್ಯಗಳನ್ನು ಯಾವ ರೀತಿ ಪೂರೈಕೆ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ ಎನ್ನತಕ್ಕ ನಿರೀಕ್ಷೆ ಸದಸ್ಯರಲ್ಲಿ ಇರತಕ್ಕಂಥಾದ್ದು ಸಹಜವಾದ ಮಾತು. ಈ ಕಾವೇರಿ ಯೋಜನೆ ನಿಗದಿಯಾಗಿರತಕ್ಕ ಕಾಲದಲ್ಲಿ ಪೂರೈಸುವುದಿಲ್ಲ ಎನ್ನುವ ಕಾತುರತೆ ನಮ್ಮ ಮಾನ್ಯ ಸದಸ್ಯರಲ್ಲಿ ಇರಬಹುದು ಎಂದು ಕಾಣುತ್ತದೆ. ಅವರ ಮನಸ್ಸಿನಲ್ಲಿರತಕ್ಕ ಕಾತುರತೆಯ ಬಗ್ಗೆ ಸರ್ಕಾರಕ್ಕೆ ಭಿನ್ನಾಭಿಪ್ರಾಯ ಇಲ್ಲ. ಈ ಯೋಜನೆಯನ್ನು ತ್ವರಿತಗೊಳಿಸಬೇಕು, ಇದಕ್ಕೆ ನಿಮಿತವಾಗಿರತಕ್ಕ ಕಾಲದಲ್ಲೇ ಈ ಕಾರ್ಯಕ್ರಮವನ್ನು ಪೂರೈಸಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಅದರಲ್ಲಿಯೂ ಮುಖ್ಯವಾಗಿ ನನಗೆ ಈ ವಿಚಾರದಲ್ಲಿ ಬಹಳ ಕಾತುರತೆ ಇದೆ. ಈ ಖಾತೆಯ ಅಧಿಕಾರವನ್ನು ವಹಿಸಿಕೊಂಡು ಸ್ವಲ್ಪ ದಿವಸಗಳೇ ಆಗಿದ್ದರೂ ಕೂಡ ಈ ಬಗ್ಗೆ ಎಲ್ಲಾ ವಿಚಾರಗಳನ್ನೂ ನಾನು ತಿಳಿದುಕೊಂಡಿದ್ದೇನೆ. ಇದು ಗರ್ವದ ಮಾತು ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬಾರದು. ಈ ಯೋಜನೆಯ ಸಂಬಂಧದಲ್ಲಿ ಯಾರು ಯಾರು ಏನೇನು ಕೆಲಸ ಮಾಡುತ್ತಿದ್ದಾರೆ, ಅವರು ಈ ಯೋಜನೆಯನ್ನು ನಿಮಿತವಾಗಿರತಕ್ಕ ಕಾಲದಲ್ಲಿ ಪೂರೈಸುತ್ತಾರೆಯೋ, ಇಲ್ಲವೋ ಎನ್ನುವ ಬಗ್ಗೆ ನಾನು ಆಳವಾಗಿ ಅಭ್ಯಾಸ ಮಾಡುತ್ತಿದ್ದೇನೆ. ಈ ಒಂದು ಯೋಜನೆಯನ್ನು ನಿಮಿತಕಾಲದಲ್ಲಿ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಸಂಶಯ ಪಡಬೇಕಾಗಿಲ್ಲ. ಈ ಯೋಜನೆಯನ್ನು ಪ್ರಾರಂಭ ಮಾಡುವುದರಲ್ಲಿ ಬಹಳ ಅಡ್ಡಿ ಆತಂಕಗಳು ಇದ್ದುವು. ಮಾನ್ಯ ಸದಸ್ಯರಿಗೆ ಗೊತ್ತಿದೆ, 1964 ನೇ ಇಸವಿಯಲ್ಲಿ ವಾಟರ್‌ಸಪ್ಲೈ ಬೋರ್ಡು ಅಸ್ತಿತ್ವಕ್ಕೆ ಬಂದಾಗ್ಯೂ ಕೂಡ ಕಾವೇರಿ ಯೋಜನೆಯನ್ನು ಪ್ರಾರಂಭ ಮಾಡುವುದರಲ್ಲಿ ಬಹಳ ಎಡರುತೊಡರುಗಳನ್ನು ಎದುರಿಸತಕ್ಕಂಥಾ ಒಂದು ಪರಿಸ್ಥಿತಿ ಇತ್ತು. ಇದಕ್ಕೆ ಸಿಮೆಂಟ್ ಪ್ರೀಸ್ಟ್ರೆಸ್ಡ್ ಕಾನ್‌ಕ್ರೀಟ್ ಪೈಪ್ ಹಾಕಬೇಕೇ ಅಥವಾ ಸ್ಟೀಲ್‌ಪೈಪ್ ಹಾಕಬೇಕೇ ಎನ್ನುವ ವಿಚಾರದಲ್ಲಿ ವಾದವಿವಾದಗಳು ಬಹಳ ದಿವಸ ಆಯಿತು. ಇದು ಎಲ್ಲರಿಗೂ ಗೊತ್ತಿದೆ. ಈ ಒಂದು ವಾದ ವಿವಾದದಲ್ಲಿ ಕೆಲಸವನ್ನು ಪ್ರಾರಂಭ ಮಾಡುವುದರಲ್ಲಿ ಅಡ್ಡಿ ಅತಂಕಗಳು ಉಂಟಾಗಿ ಅದನ್ನು ಒಂದು ಸ್ಟೇಜಿಗೆ ತರಲು ನಮಗೆ ಕಷ್ಟವಾಯಿತು. ಆ ಕೆಲಸವನ್ನು ಪ್ರಾರಂಭ ಮಾಡಿದಮೇಲೆ ಯಾವರೀತಿ ಕೆಲಸ ನಡೆಯುತ್ತಿದೆ ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರಿಗೆ ತಿಳಿಸುವುದಾದರೆ ಆ ಬಗ್ಗೆ ಅವರು ಸಂತೋಷಪಟ್ಟು ತೃಪ್ತಿಪಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಒಂದು ಯೋಜನೆಯ ಮೊದಲನೆಯ ಹಂತದಲ್ಲಿ ಮಾಡಿದಂತಹ ಅಂದಾಜುಗಳು ಇವೆ. ಅದರ ಬಗ್ಗೆ ನಾನು ಈಗ ಹೋಗುವುದಿಲ್ಲ. ಏತಕ್ಕೆಂದರೆ ಅದು ವಿಳಂಬವಾಯಿತು. ಏನೇನೋ ಕಾರಣಗಳಿಂದ ಆ ಅಂದಾಜುಗಳನ್ನು ರಿವೈಜ್ ಮಾಡತಕ್ಕ ಪರಿಸ್ಥಿತಿ ಉಂಟಾಯಿತು. ಈಗ ಮೊದಲನೇ ಹಂತದಲ್ಲಿ 30 ಕೋಟಿ ರೂಪಾಯಿಗಳ

(ಶ್ರೀ ಬಿ. ಬಸವಲಿಂಗಪ್ಪ)

ಅಂದಾಜು ಆಗಿದೆ. ಶ್ರೀಮಾನ್ ಶಾಮಣ್ಣನವರು ಈ ಯೋಜನೆಗೆ ಹಣವನ್ನು ಒದಗಿಸುವ ಬಗ್ಗೆ ಸ್ವಲ್ಪ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಈ ಸಂದೇಹ ಅವರಿಗೆ ಬೇಡ. ಸರ್ಕಾರ ಸೀಮಿತ ವಾಗಿರತಕ್ಕ ಕಾಲದಲ್ಲಿ ಈ ಯೋಜನೆಯನ್ನು ಪೂರೈಸುತ್ತದೆ. ಅದಕ್ಕೆ ಸರ್ಕಾರ ಹಣ ಹೇಗೆ ಒದಗಿಸುತ್ತದೆ ಎನ್ನುವ ವಿಚಾರ ಅವರಿಗೆ ಬೇಡ. ಇದರ ಬಗ್ಗೆ ಯೋಚನೆ ಮಾಡಿ ಈ ವಿಚಾರದಲ್ಲಿ ಏನು ಕುಂದುಕೊರತೆಗಳು ಇವೆ ಅವುಗಳನ್ನು ನಿವಾರಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಯೋಜನೆಗೆ ಹಣವನ್ನು ಒದಗಿಸಲು ಎಲ್. ಐ. ಸಿ. ಯವರು ಮುಂದೆ ಬಂದಿದ್ದಾರೆ. ಈ ಯೋಜನೆಗೆ 33 ಸಾವಿರ ಟನ್ ಸ್ಟೀಲ್‌ಪೈಪ್ ಬೇಕಾಗುತ್ತದೆ. ಇದರಲ್ಲಿ ಈಗ 16 ಸಾವಿರ ಟನ್ ಸ್ಟೀಲ್ ನಮ್ಮ ಹತ್ತಿರ ಇದೆ. ಉಳಿದದ್ದನ್ನು ಇಂಪೋರ್ಟ್ ಮಾಡಬೇಕಾಗುತ್ತದೆ. ಇಂಪೋರ್ಟ್ ಮಾಡತಕ್ಕ ಲೈಸೆನ್ಸನ್ನು ತರುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. 5,500 ಟನ್ ಸ್ಟೀಲನ್ನು ಇಂಪೋರ್ಟ್ ಮಾಡುವುದಕ್ಕೆ ಲೈಸೆನ್ಸ್ ಸಿಕ್ಕಿದೆ. ಇನ್ನೂ 11 ಸಾವಿರ ಟನ್ ಸ್ಟೀಲ್ ಬೇಕಾಗಿದೆ, ತೀವ್ರವಾಗಿ ಇಂಡಿಯಾ ಸರ್ಕಾರದೊಡನೆ ವ್ಯವಹಾರ ನಡೆಸಿ ಅದನ್ನು ತರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಈ ಒಂದು ಯೋಜನೆ 89 ಕಿಲೋಮೀಟರ್‌ದು ಇದೆ. ಈಗ ನಮ್ಮಲ್ಲಿರತಕ್ಕ ಸ್ಟೀಲು 26 ಕಿಲೋಮೀಟರುಗಳಿಗೆ ಆಗುತ್ತದೆ. ಈಗಾಗಲೇ 20 ಕಿಲೋ ಮೀಟರ್ ಪೈಪ್ ಹಾಕಿದ್ದೇವೆ. ಇನ್ನೂ 63 ಕಿಲೋಮೀಟರ್ ಪೈಪ್ ಹಾಕಬೇಕಾಗಿದೆ. ಪ್ರತಿ ತಿಂಗಳು 5 ಕಿಲೋಮೀಟರ್ ಪೈಪು ಹಾಕಬೇಕೆಂಬ ಯೋಜನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇನ್ನು ಒಂದು ವರ್ಷದಲ್ಲಿ ಪೈಪು ಹಾಕುವುದನ್ನು ಪೂರೈಸುತ್ತೇವೆ. ಈ ಬಗ್ಗೆ ಮಾನ್ಯ ಸದಸ್ಯರು ಏನಾದರೂ ಸಲಹೆಗಳನ್ನು ಕೊಟ್ಟರೆ ಅದನ್ನು ನಾವು ತೆಗೆದುಕೊಳ್ಳುತ್ತೇವೆ. ನಾವು ಮುಂದಿನ ವರ್ಷ ಎಂದರೆ 1973 ನೇ ಇಸವಿ ಡಿಶೆಂಬರ್ 31ರ ಒಳಗೆ ಈ ಬಂದು ಯೋಜನೆಯನ್ನು ಕಾರ್ಯ ಗತ ಮಾಡಬೇಕು ಎಂದು ಆಶೆಯನ್ನು ಇಟ್ಟುಕೊಂಡು ಅಂದಾಜು ಮಾಡಿಕೊಂಡು ಬಹಳ ತ್ವರಿತವಾಗಿ ಕೆಲಸ ಮಾಡುತ್ತಿದ್ದೇವೆ.

ನಂತರ ಶ್ರೀ ಟಿ. ಆರ್. ಶಾಮಣ್ಣನವರು, ಎಂ. ಎಸ್. ಕೃಷ್ಣನ್‌ನವರು, ಶ್ರೀ ನಾಗಣ್ಣನವರು, ಕೋಣಂದೂರು ಲಿಂಗಪ್ಪನವರು, ವಾಟಾಳ್ ನಾಗರಾಜರು, ಶ್ರೀರಾಮುಲುರವರು, ಕಾಗೋಡು ತಿಮ್ಮಪ್ಪನವರು ಮತ್ತು ನಯನಕ್‌ರವರು ಈ ನಿರ್ಣಯದಲ್ಲಿ ಮಾತನಾಡಿ ಹಲವು ಸಲಹೆಗಳನ್ನು ಕೊಟ್ಟಿದ್ದಾರೆ. ಒಂದನೆಯ ಸಲಹೆ ಏನೆಂದರೆ ಅಂಡರ್ ಗ್ರೌಂಡ್ ಡ್ರೈನೇಜನ ಕಾರ್ಯವನ್ನು ತ್ರೀವ್ರಗೊಳಿಸಬೇಕೆಂದು. ಇದರ ಬಗ್ಗೆ ಹೇಳುವುದಾದರೆ, ಅದನ್ನು ಅದಷ್ಟು ತೀವ್ರತೆಯಿಂದ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತು ಸೊಳ್ಳೆಗಳ ಕಾಟದ ವಿಚಾರದಲ್ಲಿ ಕೂಡ ಹೇಳಿದ್ದಾರೆ. ಅದನ್ನು ಕೂಡ ನಿವಾರಣೆ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಮತ್ತು ರೇಟ್ ವಿಚಾರದಲ್ಲಿ ಕೆಲವು ಸಂದೇಹಗಳನ್ನು ವ್ಯಕ್ತಪಡಿಸಿದ್ದಾರೆ. ಈಗ ಬಡವರು ಏನಿದ್ದಾರೆ ಅವರಿಗೆ ಉಚಿತವಾಗಿ ವಾಟರ್ ಸಪ್ಲೈ ಸಿಗುತ್ತಾ ಇದೆ. ಈ ರೇಟ್ ಯಾರಿಗೆ ಬೀಳುತ್ತದೆ ಅಂದರೆ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಕೊಂಡು, ಸಾಹುಕಾರರಾಗಿರತಕ್ಕಂತಹ ಜನರಿಗೆ ಬೀಳುತ್ತದೆ. ಆದ್ದ ರಿಂದ ಈ ಸಂದೇಹವನ್ನು ತಮ್ಮ ಮನಸ್ಸಿನಿಂದ ಹೋಗಲಾಡಿಸಿ ಎಂದು ಹೇಳುತ್ತೇನೆ. ಆದೇ ರೀತಿ ಯಾರು ದೊಡ್ಡ ದೊಡ್ಡ ಹೋಟೇಲುಗಳನ್ನು ಇಟ್ಟು ಕೊಂಡಿದ್ದಾರೆ, ಅವರಿಗೆ ಶಕ್ತಿ ಇದೆ; ಅಂಥ ವರಿಗೆ ಇದನ್ನು ಹಾಕುತ್ತೇವೆ. ಇನ್ನೊಂದು ವಿಚಾರವೇನೆಂದರೆ, ನಾವು ಒಂದು ಯೋಜನೆಗೆ 30 ಕೋಟಿ ರೂಪಾಯಿ ಖರ್ಚು ಮಾಡುವಾಗ ಅದರ ಪ್ರತಿಫಲ ನಮಗೆ ಸಿಗದೆ ಹೋದರೆ, ಮುಂದೆ ನಮ್ಮ ಸರ್ಕಾರ ಬೇರೆ ಯೋಜನೆಗಳಿಗೆ ಹೇಗೆ ಕೈಹಾಕುವುದು ! ಮತ್ತು ಅದನ್ನು ಸರಿದೂಗಿಸಿಕೊಂಡು ಹೋಗುವುದು ಹೇಗೆ ? ಆದ್ದರಿಂದ ಬರೀ ಹಾಗೆ ಖರ್ಚು ಮಾಡಿಬಿಟ್ಟು ಆ ಹಣವನ್ನು ಚರಂಡಿಯಲ್ಲಿ ಹೋಗಲಿಕ್ಕೆ ಬಿಡುವುದಿಲ್ಲ. ಅದರಿಂದ ಸರ್ಕಾರಕ್ಕೂ ಸ್ವಲ್ಪ ಪ್ರತಿಫಲ ಬರಬೇಕು ; ಅದರ ಜೊತೆಗೆ ಜನರಿಗೂ ಅದರಿಂದ ಅನುಕೂಲವಾಗಬೇಕು. ಹೀಗೆ ನಾವು ಇಂತಹ ಯೋಜನೆಗಳನ್ನು ಹಾಕಿಕೊಂಡು ಮುಂದುವರಿದರೆ ಮುಂದೆ ನಮ್ಮ ಮೈಸೂರು ರಾಜ್ಯದ ಇತರ ಕಡೆಗಳಲ್ಲಿರುವ ಪಟ್ಟಣಗಳಲ್ಲಿ ಕೂಡ ಇಂತಹ ಯೋಜನೆಗಳನ್ನು ಮಾಡಿ ಜನರಿಗೆ ಅನುಕೂಲವನ್ನು ಒದಗಿಸಬಹುದೆಂದು ಭಾವಿಸುತ್ತೇನೆ. ಆ ಮೇಲೆ ವಾಟಾಳ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಹರಿಗುಂಟೆಯಲ್ಲಿ ನೀರು ಸರಿಯಾಗಿ ಸರಬರಾಜು ಆಗುತ್ತಾ ಇಲ್ಲ ಎಂದು. ಸುಮಾರು 35 ಹಳ್ಳಿಗಳಲ್ಲಿ ನೀರು ಸರಬರಾಜು ಸರಿಯಾಗಿ ಆಗುವುದಿಲ್ಲವೆಂದು ನನ್ನ ಗಮನಕ್ಕೂ ಬಂದಿದೆ. ಅದನ್ನು ಮೂರು ನಾಲ್ಕು ತಿಂಗಳಲ್ಲಿ ಸರಿಯಾಗಿ ಆಗುವಂತೆ ಮಾಡುವ ಭರವಸೆಯನ್ನು ನಾನು ಕೊಡುತ್ತೇನೆ. ಅದೇ ರೀತಿ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಪ್ರಶ್ನೆ ಮಾಡಿದ್ದಾರೆ. ನೀವು ಈಗ ಏನೊಂದು ಯೋಜನೆ ಮಾಡಿದ್ದೀರಿ, ಅದು 10 ವರ್ಷ ಆದ ಮೇಲೆಯೂ ಸಾಕಾಗುತ್ತದೆಯೇ ಎಂದು ಕೇಳಿದ್ದಾರೆ. ಅದು ಒಳ್ಳೆಯ ಪ್ರಶ್ನೆ

ಅದಕ್ಕೆ ಇನ್ನೊಂದು ಯೋಜನೆ ಇದೆ. ಆ ಒಂದು ಮುಂಜಾಗ್ರತೆ ಇಟ್ಟುಕೊಂಡೇ ನಾವು ಕೆಲಸ ಮಾಡುತ್ತಿದ್ದೇವೆಂಬುದನ್ನು ಅವರಿಗೆ ಹೇಳಬಯಸುತ್ತೇವೆ.

ಇನ್ನು ನಮ್ಮ ಈ ಒಂದು ಬೋರ್ಡಿನಲ್ಲಿ ಕೆಲಸ ಮಾಡತಕ್ಕಂತಹ ವ್ಯಕ್ತಿಗಳ ಬಗ್ಗೆ ಹೊಗಳಿಕೆಯೂ ಆಯ್ತು, ತೆಗಳಿಕೆಯೂ ಆಯ್ತು, ಅದರ ಬಗ್ಗೆ ಒಂದು ಮಾತು ಹೇಳುತ್ತೇನೆ. ಅಲ್ಲಿ ಕೆಲಸ ಮಾಡತಕ್ಕಂತಹ ಜನರು ಬಹಳ ದಕ್ಷರು ಇದ್ದಾರೆ; ದೇಶಾಭಿಮಾನಿಗಳೂ ಆಗಿದ್ದಾರೆ. ಈ ಒಂದು ನಗರಕ್ಕೆ ನೀರು ಸರಬರಾಜು ಅತಿ ಜಾಗ್ರತೆಯಾಗಿ ಮಾಡಬೇಕೆಂದು ಆಸಕ್ತಿಯನ್ನು ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆಲ್ಲಾ ಆಸ್ಪದ ಇದ್ದರೆ ನಾನು ಸ್ವತಃ ಎಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ಅಲ್ಲಿಯ ಪ್ರೋಗ್ರೆಸ್ಸನ್ನು ತೋರಿಸಲು ತಯಾರಿದ್ದೇನೆ. ಮತ್ತು ನನ್ನ ಬಗ್ಗೆ ಕೆಲವು ಮಾತುಗಳನ್ನು ಮಾನ್ಯ ವಾಟಾಳ್ ನಾಗರಾಜರು ಹೇಳಿದ್ದಾರೆ. ಅದರ ಬಗ್ಗೆ ನಾನು ಉತ್ತರ ಕೊಡುವುದಿಲ್ಲ; ಆದರೆ ಅದನ್ನು ಕಾರ್ಯತಃ ಮಾಡಿ ತೋರಿಸಿದರೆ ಅವರಿಗೆ ಸಮಾಧಾನವಾಗಬಹುದೆಂದು ತಿಳಿದು ಕೊಂಡಿದ್ದೇನೆ. ಇಷ್ಟು ಮಾತುಗಳನ್ನು ಹೇಳಿದ ಮೇಲೆ ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ವಾಪಸು ತೆಗೆದುಕೊಳ್ಳುತ್ತಾರೆಂದು ತಿಳಿದುಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಈಗ 30 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅದನ್ನು ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರದವರಿಗೆ ಕೊಡಲಿ; ಅದನ್ನು ಜನರ ಮೇಲೆ ಹೊರಿಸಬೇಡಿ ಎಂದು ಹೇಳಿದೆ. ಅದರ ಬಗ್ಗೆ ಸ್ವಲ್ಪ ಹೇಳಬೇಕು. ಎರಡನೇಯದಾಗಿ ಬಡವರಿಗೆ ತೆರಿಗೆ ಹೆಚ್ಚು ಬೀಳುವುದಿಲ್ಲ ಎಂದು ಅರ್ಥ ಮಂತ್ರಿಯವರು ಹೇಳಿದ್ದಾರೆ, ತಾವೂ ಹೇಳಿದ್ದೀರಿ. ಈಗ ಉಚಿತ ನೀರಿನ ಸೌಲಭ್ಯ ಹಾಗೇ ಇರುತ್ತದೆ ಎಂದರೆ, 25 ಸಾವಿರ ಲೀಟರ್ ಎಗ್ಸೆಮ್ಪಶನ್ ಮುಂದೆಯೂ ಇರುತ್ತದೆ; ದೊಡ್ಡ ದೊಡ್ಡ ಸೌಧದಲ್ಲಿರುವವರಿಗೆ, ಹೋಟೇಲಿನವರಿಗೆ ತೆರಿಗೆ ಹಾಕುತ್ತೇವೆಂದು ಹೇಳುತ್ತಿದ್ದೀರಿ. ಇದು ರಿಕಾರ್ಡಿನಲ್ಲಿ ಹೋಗಲಿ, ಏಕೆಂದರೆ ಮುಂದೆ ಮಂತ್ರಿಯವರು 25 ಸಾವಿರ ಲೀಟರ್ ಎಗ್ಸೆಮ್ಪಶನ್ ಕೊಡುವುದಿಲ್ಲವೆಂದು ಹೇಳಬಹುದು.

ಶ್ರೀ ಬಿ. ಬಸವಲಿಂಗಪ್ಪ.—ಈಗ ಸರ್ಕಾರದವರು ಏನೊಂದು ಖರ್ಚು ಮಾಡುತ್ತಾರೆ ಅದಕ್ಕೆ ಸ್ವಲ್ಪ ಪ್ರತಿಫಲ ಬರಬೇಕೆಂದು ನಾನು ಆಗಲೇ ಹೇಳಿದ್ದೇನೆ. ಸುಮ್ಮನೆ ಚರಂಡಿಯಲ್ಲಿ ಅದನ್ನು ಹಾಕುವುದಕ್ಕಾಗುವುದಿಲ್ಲ. ಆದರೆ ಯಾರು ದೇಶದಲ್ಲಿ ಕಷ್ಟ ಪಡುತ್ತಾರೆ, ಮತ್ತು ಯಾರು ಬಡ ಜನರು ಇದ್ದಾರೆ ಅಂಥವರಿಗೆ ತೆರಿಗೆ ಹಾಕುವುದಿಲ್ಲ. ಆದರೆ ದೊಡ್ಡ ದೊಡ್ಡ ಬಂಗಲೆಯವರಿಗೆ, ಹೋಟೇಲಿನವರಿಗೆ ಹಾಕುತ್ತೇವೆ. ಆದ್ದರಿಂದ ಬಡವರಿಗೆ ಹಾಕುವುದಕ್ಕೆ ಹೋಗುವುದಿಲ್ಲ; ಯಾರಿಗೆ ಚೈತನ್ಯ ಇದೆ ಅಂಥವರಿಗೆ ಹಾಕುತ್ತೇವೆ. ದಯವಿಟ್ಟು ಆ ಸಂಶಯವನ್ನು ಇಟ್ಟುಕೊಳ್ಳಬೇಡಿ ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಸ್ವಾಮಿ, ಎರಡು ಗಂಟೆ ಮುಂಚೆ ಮಂಡಿಸಿದಂತಹ ನಿರ್ಣಯದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು ಸೂಕ್ತವಾದಂತಹ ಸಲಹೆಗಳನ್ನು ಕೊಟ್ಟು ಈ ನಿರ್ಣಯದ ಬಗ್ಗೆ ಬಹಳ ಮಾತನಾಡಿದ್ದಾರೆ. ಮಾನ್ಯ ಮಂತ್ರಿಯವರು ಕೂಡ ನಾನು ಹೇಳಿದ ಅಂಶಗಳ ಬಗ್ಗೆ ಸಹಾನುಭೂತಿಯನ್ನು ತೋರಿಸಿ ಮಾತನಾಡಿದ್ದಾರೆ. ಆದರೆ ಒಂದು ಅಂಶವನ್ನು ತಮ್ಮ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಾಗರೀಕರಿಗೆ ಉಚಿತವಾಗಿ ನೀರನ್ನು ಕೊಡುತ್ತಾರೆ ಎನ್ನತಕ್ಕಂತಹ ವಾದ ಒಂದು ಟೊಳ್ಳು ವಾದ. ಯಾವ ರೀತಿಯಲ್ಲೂ ಅವರು ಉಚಿತವಾಗಿ ನೀರನ್ನು ಕೊಡುತ್ತಾ ಇಲ್ಲವೆಂದು ಹೇಳುತ್ತೇನೆ. ವಾಟರ್ ಸಪ್ಲೈ ಬೋರ್ಡ್‌ನವರು ಬೆಂಗಳೂರು ನಾಗರೀಕರಿಗೆ ಕೊಡತಕ್ಕಂತಹ ಪ್ರತಿಯೊಂದು ತೊಟ್ಟು ನೀರಿಗೂ ಹಣವನ್ನು ವಸೂಲು ಮಾಡುತ್ತಿದ್ದಾರೆ. ಮನೆ ಕಂದಾಯದ ಜೊತೆ ಖುಲ್ಲ ಶೇಕಡಾ 5 ರಷ್ಟು ಉಚಿತ ನೀರಿಗಾಗಿ ಜನರಿಂದ ತೆರಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಹೀಗೆ 65 ಲಕ್ಷ ರೂಪಾಯಿಗಳನ್ನು ಕಂದಾಯ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಅದರ ಜೊತೆಗೆ ಇನ್ನೂ 10 ಲಕ್ಷ ರೂಪಾಯಿಗಳನ್ನು ಸೇರಿಸಿ 75 ಲಕ್ಷ ರೂಪಾಯಿಗಳನ್ನು ಕಾರ್ಪೋರೇಶನಿನವರು ಬೋರ್ಡಿಗೆ ಕೊಡುತ್ತಿದ್ದಾರೆ. ಮನೆಗಳಿಂದ ಹೀಗೆ ಮನೆ ಕಂದಾಯದ ಜೊತೆಗೆ ನೀರಿಗೂ ಕೂಡ ದುಡ್ಡು ವಸೂಲು ಮಾಡುತ್ತಿದ್ದಾರೆ. ಹೆಚ್ಚಿನ ತೆರಿಗೆಯನ್ನು ತೆಗೆದುಕೊಂಡು ಬಡವರಿಗೆ ಉಚಿತವಾಗಿ ನೀರು ಕೊಡತಕ್ಕದ್ದು ಇದೆ. ಬೆಂಗಳೂರಿನಲ್ಲಿ ಶೇಕಡಾ 70 ಮನೆಗಳು ಯಾವ ವಿಧವಾದ ತೆರಿಗೆಯನ್ನು ನೀರಿಗೆ ಕೊಡಬೇಕಾದ್ದಿಲ್ಲ. ಈಗ ನೀರಿನ ಸೌಲಭ್ಯವನ್ನು ಕಾರ್ಪೋರೇಷನ್ ವಸೂಲುಮಾಡುವ ತೆರಿಗೆಯ ಹಣದಿಂದ ಕೊಡುತ್ತಿದ್ದೇವೆ. ಸರ್ಕಾರವಾಗಲೀ ಅಥವಾ ಇತರ ಯಾವ ಇಲಾಖೆಯೇ ಆಗಲೀ ಈ ಸೌಕರ್ಯವನ್ನು ಜನತೆಗೆ ಕೊಡುತ್ತಾ ಇಲ್ಲ. ನಾಲ್ಕು ರೂಪಾಯಿಗಳ ತೆರಿಗೆ ಕೊಡತಕ್ಕ ಶಕ್ತಿ ಬೆಂಗಳೂರಿನ

(ಶ್ರೀ ಟಿ. ಆರ್. ಶಾಮಣ್ಣ)

ನಾಗರೀಕರಿಗೆ ಇಲ್ಲ. ಬೆಂಗಳೂರಿನಲ್ಲಿ ಮೊದಲಿದ್ದ ಪ್ರಜಾಸಂಖ್ಯೆ ಇದ್ದಿದ್ದರೆ ನಾವು ಈ ರೀತಿಯಾಗಿ ಕೇಳುತ್ತಿರಲಿಲ್ಲ. 30 ಮಿಲಿಯನ್ ಗ್ಯಾಲನ್ ನೀರು ಬಂದರೆ ಏನೂ ಸಾಕಾಗುವುದಿಲ್ಲ. ನಮಗೆ ಈಗ ಬೇಕಾಗಿರತಕ್ಕದ್ದು 60 ಮಿಲಿಯನ್ ಗ್ಯಾಲನ್ ನೀರು. ಇದರ ಒಂದು ಅವಶ್ಯಕತೆ ಉಂಟು ಮಾಡಿರುವವರು ಇಡೀ ರಾಜ್ಯದ ಎರಡೂವರೆ ಕೋಟಿ ಜನಗಳು. ಬೆಂಗಳೂರಿನ ನಾಗರಿಕರು ಮಾತ್ರವಲ್ಲ, ನಾವು ಹಳ್ಳಿಯವರಿಗೆ ನೀರಿನ ಸೌಕರ್ಯವನ್ನು ಕೊಡಬೇಡಿ ಎಂದು ಹೇಳುವುದಿಲ್ಲ. ನೀರಿನ ಸೌಕರ್ಯವನ್ನು ಕೇವಲ ಪಟ್ಟಣದ ವಾಸಿಗಳಿಗೇ ಕೊಡಿ ಎಂಬುದಾಗಿಯೂ ಹೇಳುವುದಿಲ್ಲ. ರಾಜ್ಯದ ಒಟ್ಟು ಕಂದಾಯ ವರಮಾನದಲ್ಲಿ ಬೆಂಗಳೂರು ನಗರದಲ್ಲಿಯೇ ಶೇಕಡ 25ರಷ್ಟು ಬೆಂಗಳೂರು ನಗರದ ನಾಗರಿಕರಿಂದಲೇ ವಸೂಲು ಮಾಡುತ್ತಾರೆ. ಅವರಿಗೆ ಸರ್ಕಾರದವರು ಯಾವ ವಿಧವಾದ ಸಹಾಯವನ್ನು ಮಾಡುತ್ತಾರೆ? ಆದ್ದರಿಂದ ಮೊದಲನೆಯ ಬಾರಿಗೆ ಬೆಂಗಳೂರು ನಾಗರೀಕರಿಗೆ ಸಹಾಯ ಮಾಡಿ ಎಂಬುದಾಗಿ ನಾನು ಹೇಳುತ್ತೇನೆ. ಹಳ್ಳಿಯವರಿಗೆ ಅನಾನುಕೂಲಮಾಡಿ ಪಟ್ಟಣದಲ್ಲಿರುವವರಿಗೆ ಮಾತ್ರ ಅನುಕೂಲಮಾಡಿ ಕೊಡಿ ಎಂದು ಹೇಳುವುದಿಲ್ಲ. ಕೇವಲ 4 ರೂಪಾಯಿಗಳಷ್ಟು ತೆರಿಗೆಯನ್ನೂ ಸಹ ನಮ್ಮ ನಾಗರೀಕರು ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಆ ರೀತಿ ತೆರಿಗೆಯನ್ನು ಅವರು ಕೊಡಬೇಕಾದರೆ ಅವರಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಬೇಕು.

ಇನ್ನು ಜಲಮಂಡಲಿಯ ಅಧ್ಯಕ್ಷರ ಬಗ್ಗೆ ಎರಡು ಒಳ್ಳೆಯ ಮಾತುಗಳನ್ನು ಆಡಿದ್ದಾರೆ. ನಾನೂ ಸಹ ಹೇಳಿದ್ದೇನೆ. ಆದರೆ ಅವರನ್ನು ಮೆಚ್ಚಿಸಬೇಕೆಂದು ಹೇಳಲಿಲ್ಲ. ಈ ಯೋಜನೆ ಸುವ್ಯವಸ್ಥಿತವಾಗಿ ನಡೆದು 1973ನೇ ಡಿಸೆಂಬರ್‌ನೊಳಗೆ ಪೂರ್ತಿಯಾಗಿ ಕಾರ್ಯಗತ ಮಾಡುತ್ತೇವೆಂದು ಈ ಸಭೆಯಲ್ಲಿ ಸರ್ಕಾರದ ಪರವಾಗಿ ಮಂತ್ರಿಗಳು ಭರವಸೆ ಕೊಟ್ಟರೆ ನಾನು ನನ್ನ ಈ ನಿರ್ಣಯಕ್ಕೆ ಒತ್ತಾಯ ಮಾಡುವುದಿಲ್ಲ. ಏಕೆಂದರೆ ಈ ನಿರ್ಣಯ ಇಲ್ಲಿ ಪಾಸ್ ಆದರೂ ಪ್ರಯೋಜನವಾಗುವುದಿಲ್ಲ. 1973ನೇ ಡಿಸೆಂಬರ್ ಹೊತ್ತಿಗೆ ಕಾವೇರಿಯಿಂದ ನೀರನ್ನು ಸರಬರಾಜು ಮಾಡುತ್ತೇವೆಂದು ಈ ಸಭೆಯಲ್ಲಿ ಸರ್ಕಾರದವರು ಪೂರ್ಣ ಭರವಸೆ ಕೊಟ್ಟರೆ ನಾನು ಖಂಡಿತವಾಗಿಯೂ ಈ ನಿರ್ಣಯಕ್ಕೆ ಒತ್ತಾಯ ಮಾಡುವುದಿಲ್ಲ. ಒಂದು ವಿಷಯವನ್ನು ಮಾತ್ರ ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಬೆಂಗಳೂರು ನಗರದಲ್ಲಿ ಮುಂದೆ ನೀರಿನ ದರವನ್ನು ಹೆಚ್ಚಿಸಿದರೆ, ಹಿಂದೆ ಇದರ ಬಗ್ಗೆ ಹೋರಾಟಮಾಡಿದ್ದಕ್ಕಿಂತ ಜಾಸ್ತಿಯಾಗಿ ಹೋರಾಟ, ಚಳುವಳಿಗಳನ್ನು ನಡೆಸುತ್ತೇವೆ. ನೀವು ಹೆಚ್ಚಿನ ದರವನ್ನು ಯಾರ ಹತ್ತಿರ ವಸೂಲುಮಾಡಿಕೊಳ್ಳುತ್ತೀರೋ ಅವರ ಹತ್ತಿರ ವಸೂಲುಮಾಡಿಕೊಳ್ಳಿ. ಆದರೆ ಬಡವರ ಹತ್ತಿರ ಹಾಗೂ ಮಧ್ಯಮ ವರ್ಗದವರ ಹತ್ತಿರ ಮಾತ್ರ ಆ ರೀತಿ ವಸೂಲು ಮಾಡಬೇಡಿ. ನಾನು ಹೇಳಿದಂತೆ ನನಗೆ ಸರ್ಕಾರದವರು ಭರವಸೆ ಕೊಡುತ್ತಾರೆಂದು ನಂಬಿ ನಾನು ನನ್ನ ನಿರ್ಣಯ ಪಾಸಾಗಲು ಒತ್ತಾಯ ಮಾಡುವುದಿಲ್ಲ. ಒಟ್ಟಿನಲ್ಲಿ ನಾನು ಕೇಳಿದ ಪ್ರಕಾರ ಸರ್ಕಾರ ಭರವಸೆ ಕೊಟ್ಟಮೇಲೆ ನನ್ನ ನಿರ್ಣಯ ಪಾಸಾಯಿತೆಂದು ನಾನು ತಿಳಿದುಕೊಳ್ಳುತ್ತೇನೆ.

**MADAM SPEAKER.**—Would the hon. member like to withdraw the Resolution ?

**Sri T. R. SHAMANNA.**—The question of withdrawal does not arise. The Hon. Minister has stated it will be completed by the end of December 1973.

**Sri K. H. PATIL.**—When an assurance has been given by the Hon. Minister, what is the use of pursuing the resolution ? I would like the hon. Member kindly to withdraw it.

**Sri T. R. SHAMANNA.**—Government has accepted to do it and therefore my purpose is served. But I do not feel there is any need to withdraw my resolution.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದಲ್ಲಿ ಈಗ ನಡೆಯುತ್ತಿರತಕ್ಕ ರೀತಿನೀತಿ ನೋಡಿದರೆ, ನೀರಿನ ದರ ಜಾಸ್ತಿಯಾಗಬಹುದೆಂದು ನನ್ನ ಅಭಿಪ್ರಾಯ. ನೀರಿನ ದರವನ್ನು ಕಡಿಮೆ ಮಾಡುವುದಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಕಮ್ಯೂನಿಸ್ಟ್ ಪಾರ್ಟಿಗೆ ಸೇರಿದವರು. ಅವರಿಗೆ ಬಡವರು ಅಂದರೆ ಬಹಳದಯೆ. ಆ ದಯೆಯಲ್ಲಿ ನಾನು ಕೂಡ ಸಹಭಾಗಿ. ಇದರಿಂದ ಬಡವರ ಮೇಲೆ ಅಷ್ಟು ಹೊರೆ ಬರುವುದಿಲ್ಲ. ಸಾಹುಕಾರರ ಮೇಲೆ ಹೊರೆಯಾದರೆ ನಿಮಗೇನು ?

ಶ್ರೀ ವಾಟಾಳ್ ನಾಗರಾಜ್,—35 ಹಳ್ಳಿಗಳಿಗೆ ನೀವು ನೀರಿನ ವ್ಯವಸ್ಥೆ ಮತ್ತು ಒಳಚರಂಡಿ ವ್ಯವಸ್ಥೆ ಮಾಡಿದರೆ ಸಾಕು. ಇದು ಬೋರ್ಡಿಗೆ ಸಂಬಂಧಪಟ್ಟ ವಿಷಯವಾದರೂ ಈ ವಿಚಾರ ಬೆಂಗಳೂರು ನಾಗರೀಕರಿಗೆ ಸಂಬಂಧಪಟ್ಟದ್ದು. ಸೊಳ್ಳೆಗಳ ಕಾಟವನ್ನು ಯಾವರೀತಿ ತಪ್ಪಿಸುತ್ತೀರಿ ಎಂಬ ಬಗ್ಗೆ ಉತ್ತರದಲ್ಲಿ ಏನೂ ಹೇಳಿಲ್ಲ. ಆ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಒಳಚರಂಡಿ ವ್ಯವಸ್ಥೆ ಮತ್ತು ಅದರ ಔಟ್ ಫ್ಲೋನಿಂದ ಗೊಬ್ಬರ ತಯಾರು ಮಾಡುವುದಕ್ಕೆ ಸೂಕ್ತ ಕ್ರಮವನ್ನು ತಗೆದುಕೊಳ್ಳಲಾಗುತ್ತದೆ. ಕೊಳದೆ ಪ್ರದೇಶಗಳಲ್ಲಿ ನೀರು ನಿಂತು ಸೊಳ್ಳೆಗಳು ಹೆಚ್ಚಾಗುವುದರಿಂದ, ಅದಕ್ಕೆ ತಕ್ಕ ವ್ಯವಸ್ಥೆಮಾಡಿ ಆ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ನೀವು ಬಡವರ ಪರವಾಗಿ ಮಾತನಾಡುವವರು. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ಪರಿಶೀಲನೆಮಾಡಿ ಒಂದು ನಿರ್ಣಯಕ್ಕೆ ಬರುತ್ತಾರೆಂದು ಆಶ್ವಾಸನೆಯನ್ನು ಕೊಡುತ್ತೇನೆ.

MADAM SPEAKER.—Now I think Sri Shamanna will withdraw the Resolution.

Sri T. R. SHAMANNA.—Yes.

*The resolution was by leave withdrawn.*

## (2) *re*: Arresting the vagaries prevailing in the Silk Industry.

MADAM SPEAKER.—Sri K. M. Naganna to move the Next Resolution.

Sri K. M. NAGANNA (Chickpet).—I beg to move :

"That this Assembly is of the opinion that immediate steps be taken to arrest the vagaries prevailing in the Silk Industry, particularly, the steep rise in the rate of raw silk brought about by middlemen and other agencies, which is causing undue suffering to the poor weavers and other silk artisans."

MADAM SPEAKER.—Resolution moved :

"That this Assembly is of the opinion that immediate steps be taken to arrest the vagaries prevailing in the Silk Industry, particularly the steep rise in the rate of raw silk brought about by middlemen and other agencies, which is causing undue suffering to the poor weavers and other silk artisans."

[MR. CHAIRMAN (SRI. G. RAME GOWDA) in the Chair]

† ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷಣಿಯವರೇ, ಇಡೀ ಭಾರತ ದೇಶದಲ್ಲಿ ಉತ್ಪನ್ನವಾಗುವಂಥ ರೇಷ್ಮೆಯಲ್ಲಿ ಸೇಕಡ 70-80ರಷ್ಟು ಮೈಸೂರಿನಲ್ಲಿ ಮಾತ್ರ ಉತ್ಪನ್ನವಾಗುತ್ತದೆ. ಹೀಗಿದ್ದರೂ ಕೂಡ ಬೆಂಗಳೂರು ನಗರದಲ್ಲಿ ಮತ್ತು ಇತರ ಕೇಂದ್ರಗಳಲ್ಲಿ ರೇಷ್ಮೆಯ ಖರ್ಚು ಜಾಸ್ತಿ ಇದೆ. ರೇಷ್ಮೆ ಬಟ್ಟೆಗಳನ್ನು ತಯಾರು ಮಾಡುವ ಕಾರ್ಮಿಕರು ನಮ್ಮ ದೇಶದಲ್ಲಿ ಲಕ್ಷಾಂತರ ಜನರು

(ಶ್ರೀ ಕೆ. ಎಂ. ನಾಗಣ್ಣ)

ಇದ್ದಾರೆ. ಆದರೆ ಈಗ ರೇಷ್ಮೆ ಬೆಲೆ ವಿಪರೀತ ಜಾಸ್ತಿಯಾಗಿದ್ದರೂ ಅದರಿಂದ ತಯಾರು ಮಾಡುವ ಬಟ್ಟೆಗಳ ಬೆಲೆ ಬಹಳ ಕಡಿಮೆಯಾಗಿದೆ. ಇದರಿಂದ ಲಕ್ಷಾಂತರ ಮಂದಿ ಜನರಿಗೆ ನಿರುದ್ಯೋಗ ಸಮಸ್ಯೆ ಬರುವ ಸಂಭವವೂ ಹೆಚ್ಚಾಗಿದೆ. ಬೆಂಗಳೂರು ನಗರದಲ್ಲಿ ಸ್ವಲ್ಪ ಹೆಚ್ಚುಕಡಿಮೆ ಕೈಮಗ್ಗಗಳು ಏಳೆಂಟು ಸಾವಿರ ಇವೆ, ಪವರ್ ಲೂಮ್ಸ್ ಸಹ ಇವೆ. ರೇಷ್ಮೆ ಕಾರ್ಮಿಕರಿಗೆ ಇಷ್ಟೊಂದು ತೊಂದರೆಯಾಗುತ್ತಿದ್ದರೂ, ಇಷ್ಟೊಂದು ಬೆಲೆ ರೇಷ್ಮೆಗೆ ಜಾಸ್ತಿ ಆಗಿರುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಇದುವರೆಗೂ ಕಂಡುಹಿಡಿಯಲಿಲ್ಲ. ಈಗ ಇಂಡಿಯಾ ಸರ್ಕಾರದವರು ರೇಷ್ಮೆ ಬೆಳೆಯನ್ನು ಹೆಚ್ಚಿಸುವುದಕ್ಕೋಸ್ಕರ 110 ಕೋಟಿ ರೂಪಾಯಿಗಳನ್ನು ಸಹಾಯಧನವಾಗಿ ಕೊಡುತ್ತಾರೆಂದು ಇತ್ತೀಚೆಗೆ ಕೇಳಿಬರುತ್ತಿದೆ. ಇಷ್ಟೆಲ್ಲಾ ಸರ್ಕಾರದವರ ಅನುಕಂಪ ರೇಷ್ಮೆ ಬೆಳೆಯ ಅಭಿವೃದ್ಧಿಯ ಮೇಲಿದ್ದರೂ, ಈಗ ರೇಷ್ಮೆ ಕೆಲಸಗಾರರಿಗೆ ಸಾಕಷ್ಟು ಉಣ್ಣುವುದಕ್ಕೆ ಕೂಲಿ ಕೂಡ ಬರುತ್ತಿಲ್ಲ. ರೇಷ್ಮೆ ಬೆಲೆ ನಿಗದಿ ಮಾಡುವಾಗ ಸರಕಾರ ಸರಿಯಾದ ಒಂದು ಕ್ರಮ ಹಾಕಿಕೊಳ್ಳಬೇಕು. ಯಾವುದಾದರೂ ದಿನಸಿ ಬೆಲೆ ಹೆಚ್ಚು ಕಡಿಮೆಯಾದಾಗ ಯಾವ ರೀತಿ ಹತೋಟಿ ಮಾಡಲು ಸರಕಾರ ಎಲ್ಲಾ ದಿನಸಿಗಳನ್ನೂ ಕೊಂಡುಕೊಳ್ಳುತ್ತದೋ ಅದೇ ರೀತಿ ಮಾಡಿ ರೇಷ್ಮೆ ಬೆಲೆಗಳನ್ನೂ ಸರಿಯಾಗಿ ನಿಗದಿ ಮಾಡಿ ರೇಷ್ಮೆ ಬೆಲೆ ಜಾಸ್ತಿಯಾಗುವುದನ್ನು ತಪ್ಪಿಸಬೇಕೆಂದು ಸಲಹೆ ಮಾಡುತ್ತೇನೆ. ರೇಷ್ಮೆ ಬೆಲೆ ಕಡಿಮೆ ಮಾಡಿದರೆ ನಮ್ಮ ಜನಕ್ಕೆ ಸುಲಭ ಬೆಲೆಯಲ್ಲಿ ರೇಷ್ಮೆ ಬಟ್ಟೆ ಸಿಗಲು ಅನುಕೂಲವಾಗುತ್ತದೆ. 1970ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ರೇಷ್ಮೆ ನೇಕಾರರ ಬಗ್ಗೆ ಒಂದು ಚಳುವಳಿ ಮಾಡಿ ಆಗಿದ್ದ ಮುಖ್ಯ ಮಂತ್ರಿಗಳಿಗೆ ಹಾಗೂ ಕೇಂದ್ರ ಸರಕಾರಕ್ಕೆ ನಮ್ಮ ಮನವಿಗಳನ್ನು ಸಲ್ಲಿಸಲಾಗಿತ್ತು. ಅದರಲ್ಲಿ ರೇಷ್ಮೆ ಕೆಲಸಗಾರರಿಗೆ ಸಾಕಷ್ಟು ಪರಿಹಾರಗಳನ್ನು ಕೊಡಬೇಕೆಂದು ಕೋರಲಾಗಿತ್ತು. ಇದುವರೆಗೂ ಸರಕಾರ ಇದರ ಬಗ್ಗೆ ತಕ್ಕ ಕ್ರಮ ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ಇದು ತುಂಬಾ ಶೋಚನೀಯವಾದ ಅಂಶವಾಗಿದೆ. ರೇಷ್ಮೆ ಬೆಲೆ ಹೆಚ್ಚು ಕಡಿಮೆ ಹೇಗೆ ಆಗುತ್ತದೆ ಎನ್ನುವುದಕ್ಕೆ ಕೆಲವು ಕಾರಣಗಳನ್ನು ನಾನು ತಮ್ಮ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

11-30 A.M.

ಮೊದಲನೆದಾಗಿ ಈ ದೇಶದಲ್ಲಿ ನಮ್ಮ ಸರಕಾರದ ಏಳು ಫಿಲೇಚರು ಕಾರ್ಖಾನೆಗಳು ಇವೆ. ಇವುಗಳಲ್ಲಿ ಕೆಲ ಜನರಿಗೆ ಉದ್ಯೋಗಗಳು ಸಿಕ್ಕಿವೆ ಮತ್ತು ಈ ಕಾರ್ಖಾನೆಗಳಿಂದ ಸರಕಾರಕ್ಕೆ ಪ್ರತಿ ವರ್ಷವೂ ಸುಮಾರು 30 ಲಕ್ಷದಷ್ಟು ಲುಕ್ಸಾನು ಆಗುತ್ತಿದೆ. ಮತ್ತು ಇದರಲ್ಲಿ ಸುಮಾರು 15-20 ಸಾವಿರ ಜನಕ್ಕೆ ಅನುಕೂಲವಾಗುತ್ತಿದೆ ಎಂದು ಸರಕಾರ ಇಷ್ಟು ಲುಕ್ಸಾನನ್ನೂ ಭರಿಸುತ್ತಿದೆ. ಇದರಲ್ಲಿ ಸರಿಯಾಗಿ ಕೆಲಸಗಳು ಆಗದೇ ಇರಲು ಇಲ್ಲಿರುವ ಅಧಿಕಾರಿಗಳೇ ಕಾರಣ. ಇದನ್ನು ಸರಿಯಾಗಿ ಸರಕಾರ ಗಮನಿಸಬೇಕು. ಇನ್ನು ಸ್ಟೇಟ್ ಸಿಲ್ಕ್ ಮಾರ್ಕೆಟಿಂಗು ಸೊಸೈಟಿ ಎಂದು ಇದೆ. ಇದನ್ನು ರೇಷ್ಮೆ ತಯಾರು ಮಾಡುವವರಿಗಾಗಿ ಇಲ್ಲಿ ಮಾಡಿದ್ದಾರೆ. ಇದಕ್ಕೆ ಸರಕಾರ ಹಣ ಕೊಟ್ಟು ಸಹಾಯ ಮಾಡುತ್ತಿದೆ. ಇದರಲ್ಲಿ ಕೂಡ ಒಂದು ರಹಸ್ಯ ಇದೆ. ಇಲ್ಲಿ ತಯಾರಾದ ಬಟ್ಟೆಗಳನ್ನು ಪೇಟೆಗೆ ತಂದು ಆಗಲೇ ಮಾರಲು ಅವಕಾಶ ಕೊಡುತ್ತಿಲ್ಲ. ಸುಮಾರು ಐದಾರೂ ತಿಂಗಳು ಕಾಲ ಸೊಸೈಟಿಯವರು ಬಟ್ಟೆಗಳನ್ನು ಇಟ್ಟುಕೊಂಡು ಹೆಚ್ಚು ಬೆಲೆ ಪೇಟೆಯಲ್ಲಿ ಬಂದಾಗ ಮಾರಲು ಹೊರಗೆ ಕಳುಹಿಸುತ್ತಾರೆ. ಇದರಿಂದಾಗಿ ರೇಷ್ಮೆ ಬಟ್ಟೆ ಬೆಲೆ ಏರಲು ಅವಕಾಶವಾಗುತ್ತಿದೆ. ಮಾರ್ಕೆಟಿಂಗ್ ಸೊಸೈಟಿಗಳವರು ತಯಾರಾದ ಬಟ್ಟೆಗಳನ್ನು ತಮ್ಮಲ್ಲಿ ಇಟ್ಟುಕೊಂಡು ಪೇಟೆಯಲ್ಲಿ ಬೆಲೆ ಜಾಸ್ತಿ ಬಂದಾಗ ಮಾರಲು ಅವಕಾಶ ಕೊಡುವುದು ತಪ್ಪು. ಇದರಿಂದ ಸಾಮಾನ್ಯ ಜನರು ರೇಷ್ಮೆ ಬಟ್ಟೆ ಕೊಳ್ಳಲು ಆಗುವುದಿಲ್ಲ ಏಕೆಂದರೆ ಬೆಲೆ ಹೆಚ್ಚು ಆಗುತ್ತದೆ ಎಂದು ಅವರು ಕೊಳ್ಳುತ್ತಿಲ್ಲ ಮತ್ತು ನಮ್ಮ ರೇಷ್ಮೆ ಬಟ್ಟೆಗಳು ಹೆಚ್ಚಾಗಿ ಬನಾರಸ್‌ಗೆ ವ್ಯಾಪಾರಕ್ಕೆ ಹೋಗುತ್ತಿವೆ. ಇದರಿಂದ ಇಲ್ಲಿ ತಯಾರಾದ ಮಾಲನ್ನು ಇಲ್ಲಿನ ಜನಕ್ಕೆ ಹಂಚಲು ಅವಕಾಶವಾಗುವುದಿಲ್ಲ, ಎಲ್ಲ ಹೊರಗಡೆ ಜನರಿಗೇ ಹೋಗುತ್ತಿವೆ.

ಇದರಲ್ಲಿ ಇನ್ನೊಂದು ಲೋಪ ಎಂದರೆ, ನ್ಯಾಷನಲೈಸ್ಡ್ ಬ್ಯಾಂಕುಗಳು ರೇಷ್ಮೆ ವ್ಯಾಪಾರಗಾರರು ಎಂದರೆ ಹೋಲ್‌ಸೇಲರುಗಳಿಗೆ ರೇಷ್ಮೆ ಬಟ್ಟೆ ಹಾಗೂ ದಾರಗಳನ್ನು ಇಟ್ಟುಕೊಂಡು ಹಣ ಕೊಡುತ್ತಾರೆ. ಮತ್ತು ಅವರೂ ಕೂಡ ವ್ಯಾಪಾರಕ್ಕೆ ಬಟ್ಟೆಗಳನ್ನು ರಿಲೀಸು ಮಾಡದೆ ತಡೆ ಹಿಡಿಯುತ್ತಾರೆ. ಆದುದರಿಂದ ನ್ಯಾಷನಲೈಸ್ಡ್ ಬ್ಯಾಂಕುಗಳವರು ಇಂತಹ ಹೋಲ್‌ಸೇಲರುಗಳ ಕೈಗೆ ಹಣ ಕೊಡುವುದನ್ನು ತಪ್ಪಿಸಬೇಕು. ಬ್ಯಾಂಕುಗಳು ಅವರಿಗೆ ದುಡ್ಡು ಕೊಡಲೇಕೂಡದು. ಹಾಗೆ ಮಾಡಿದರೆ ಬೆಲೆ ಹೆಚ್ಚಲು ಅವಕಾಶ ಇರುವುದಿಲ್ಲ.

ಇನ್ನೊಂದು ನಮ್ಮ ರಾಜ್ಯದಲ್ಲಿ ತಯಾರಾಗುತ್ತಿರುವ ರೇಷ್ಮೆಯಲ್ಲಿ ಶೇಕಡಾ ಎಂಬತ್ತು ಭಾಗ ಈ ದೇಶದಿಂದ ಹೊರಕ್ಕೆ ಹೋಗುತ್ತದೆ. ನಮ್ಮ ರಾಜ್ಯಕ್ಕೆ ಶೇಕಡಾ ಇಪ್ಪತ್ತರಷ್ಟು ಮಾತ್ರ ಉಳಿಯುತ್ತದೆ. ಇದರಿಂದಾಗಿ ನಮ್ಮ ಜನಕ್ಕೆ ರೇಷ್ಮೆ ಬಟ್ಟೆ ಸಿಗುವುದೂ ಕಷ್ಟ ಮತ್ತು ಬೆಲೆಯೂ ಹೆಚ್ಚಾಗುತ್ತಿದೆ. ಇದರಲ್ಲಿ ಇನ್ನೊಂದು ವಿಚಾರವೂ ಇದೆ. ನಮ್ಮ ರಾಜ್ಯದಿಂದ ಹೊರಗಡೆ ರೇಷ್ಮೆಯನ್ನು ಕಳುಹಿಸುವಾಗ ಟ್ವಿಸ್ಟ್ ಮಾಡಿ ಕಳುಹಿಸಿದರೆ ಅದಕ್ಕೆ ಸೇಲ್ಸ್ ಟ್ಯಾಕ್ಸು 7 ಅಥವಾ 8 ಪರ್ಸೆಂಟು ಕೊಡಬಹುದು. ಆದರೆ ರೇಷ್ಮೆ ಕಳುಹಿಸುವಾಗ ರಾ ಸಿಲ್ಕ್ ಕಳುಹಿಸಿದರೆ ಅದಕ್ಕೆ ಶೇಕಡಾ ಒಂದರಷ್ಟು ಸೇಲ್ಸ್ ಟ್ಯಾಕ್ಸು ಇದೆ. ಆದ್ದರಿಂದ ಇಲ್ಲಿಂದ ಹೊರಕ್ಕೆ ಕಳುಹಿಸುವವರು ಟ್ವಿಸ್ಟ್ ಸಿಲ್ಕು ಕಳುಹಿಸಿದರೂ ಅದನ್ನು ರಾ ಸಿಲ್ಕ್ ಎಂದೇ ಕಳುಹಿಸುತ್ತಿದ್ದಾರೆ. ಇದನ್ನು ತಡೆಗಟ್ಟಬೇಕು. ಇದರಿಂದ ರೇಷ್ಮೆ ಬೆಳೆಯುವವರಿಗೆ ಲಾಭವೇನೂ ಆಗುತ್ತಿಲ್ಲ. ಮಧ್ಯದಲ್ಲಿ ಇರುವ ವರ್ತಕರು ಲಾಭ ಸಂಪಾದನೆ ಮಾಡಿಕೊಳ್ಳಲು ಇದರಿಂದ ಅವಕಾಶವಾಗಿದೆ. ಸರಕಾರ ಇದಕ್ಕೆ ಗಮನ ಕೊಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ವಿಚಾರ ಎಂದರೆ ನಮ್ಮ ರಾಜ್ಯದಲ್ಲಿರುವ ಏಳು ಕಾರ್ಖಾನೆಗಳಲ್ಲೂ ತಯಾರಾಗುವ ಬಟ್ಟೆಗಳನ್ನು ಪೇಟೆಗೆ ಮಾರಲು ಇಲ್ಲಿನ ಅಧಿಕಾರವರ್ಗದವರು ಅವಕಾಶ ಕೊಡುವುದಿಲ್ಲ. ತಯಾರಾದ ಬಟ್ಟೆಗಳನ್ನು ಆಗಲೇ ಮಾರಲು ಪೇಟೆಗೆ ಕಳುಹಿಸಿದರೆ ಜನಕ್ಕೆ ಸುಲಭ ಬೆಲೆಗೆ ಬಟ್ಟೆ ಸಿಗುತ್ತದೆ. ಆದರೆ ಇಲ್ಲೂ ಕೂಡ ಬಟ್ಟೆಗಳನ್ನು ಕಾರ್ಖಾನೆಗಳವರು ತಮ್ಮಲ್ಲೇ ಇಟ್ಟುಕೊಂಡು ಪೇಟೆಯಲ್ಲಿ ಹೆಚ್ಚು ಬೆಲೆ ಬಂದಾಗ ತಮ್ಮ ಬಟ್ಟೆಗಳನ್ನು ಮಾರಲು ಕಳುಹಿಸಿ ಹೆಚ್ಚು ಲಾಭ ಸಂಪಾದನೆ ಮಾಡುತ್ತಿದ್ದಾರೆ. ಇದರಿಂದಾಗಿ ಇಲ್ಲಿ ಕೂಡ ಸರಕಾರಕ್ಕೆ ಸುಮಾರು 30 ಲಕ್ಷದಷ್ಟು ಲುಕ್ಸಾನು ಆಗುತ್ತಿದೆ. ಇದರ ಬಗ್ಗೆ ಸರಕಾರ ತೀವ್ರ ರೀತಿ ಗಮನ ಕೊಡಬೇಕು.

ಇನ್ನು ಕಕೂನುಗಳನ್ನು ಎಂದರೆ ಮೊಟ್ಟೆಗಳನ್ನು ಕೊಳ್ಳುವಾಗ ಸರಕಾರ ಒಂದು ತಪ್ಪು ಮಾಡುತ್ತಿದೆ. ಬೆಲೆಯನ್ನು ಜಾಸ್ತಿ ಕೊಟ್ಟು ಸರಕಾರವೇ ಕೊಳ್ಳುತ್ತಿದೆ. ಇದನ್ನು ಕೊಳ್ಳುವ ಅಧಿಕಾರಿಗಳು ಕೆಲಸಕ್ಕೆ ಬಾರದ ಮೊಟ್ಟೆಗಳನ್ನು ಜಾಸ್ತಿ ಬೆಲೆಗೆ ಕೊಂಡು ತಮ್ಮ ಕಾರ್ಖಾನೆಗೆ ತರುತ್ತಿರುವುದರಿಂದಾಗಿ ಓಪನ್ ಮಾರ್ಕೆಟ್ಟು ರೇಟೂ ಕೂಡ ಜಾಸ್ತಿಯಾಗಲು ಅವಕಾಶವಾಗಿದೆ ಮತ್ತು ಸಿಲ್ಕು ಮಾರ್ಕೆಟಿಂಗ್ ಸೊಸೈಟಿಯವರೂ ಕೂಡ ಸ್ಟಾಕು ಮಾಡುತ್ತಾರೆ ಮತ್ತು ಕಾರ್ಖಾನೆಗಳಲ್ಲಿ ಸರಿಯಾಗಿ ಉತ್ಪಾದನೆಯಾಗದೆ ಸುಮಾರು 30 ಲಕ್ಷದಷ್ಟು ಲುಕ್ಸಾನು ಬರುತ್ತಿದೆ. ಇದಕ್ಕೆ ಸರಕಾರ ಕೊಡುವ ಕಾರಣ ಇಲ್ಲಿ ಸುಮಾರು 20 ಸಾವಿರ ಕೆಲಸಗಾರರುಗಳಿಗೆ ಕಷ್ಟವಾಗುತ್ತದೆ. ಇದಕ್ಕಾಗಿ ಮುಂದುವರಿಸಬೇಕಾಗಿ ಬಂದಿದೆ ಎಂದು ಹೇಳಬಹುದು. ಸೊಸೈಟಿಗಳವರು ಹೆಚ್ಚು ದಾಸ್ತಾನು ಮಾಡದೆ ಅವರಲ್ಲಿಗೆ ಬಂದ ಬಟ್ಟೆಗಳನ್ನು ಕೂಡಲೇ ಮಾರಾಟಕ್ಕೆ ಬಿಡುಗಡೆ ಮಾಡಬೇಕು. ಇದರಿಂದ ರೇಷ್ಮೆ ಬೆಲೆ ಜಾಸ್ತಿಯಾಗುವುದನ್ನು ತಪ್ಪಿಸಬಹುದು.

ಇನ್ನು ರೇಷ್ಮೆಯನ್ನು ಹೊರದೇಶಗಳಿಗೆ ಕಳುಹಿಸುವಾಗ ಭಾರತ ಸರಕಾರದವರು ಒಂದು ರೀತಿಯಾದ ಇನ್‌ಸೆಂಟಿವ್ ಕೊಡುತ್ತಿದ್ದಾರೆ. ನಮ್ಮ ರಾಜ್ಯದಿಂದ ಹೊರದೇಶಕ್ಕೆ ರೇಷ್ಮೆಯನ್ನು ಕಳುಹಿಸುವಾಗ ಅದಕ್ಕೆ ಬದಲು ಬೇರೆ ವಸ್ತುಗಳನ್ನು ತರಿಸಿಕೊಳ್ಳುವಾಗ ಕೇಂದ್ರಸರಕಾರದವರು ಆ ಪರದೇಶದ ಯಾವ ಪದಾರ್ಥಕ್ಕೆ ಇಲ್ಲಿನ ಗಿರಾಕಿ ಜಾಸ್ತಿ ಇದೆಯೋ ಅಂತಹ ಪದಾರ್ಥಗಳನ್ನು ತರಿಸಿಕೊಳ್ಳಲು ಒಪ್ಪಿಗೆ ಕೊಡುತ್ತಾರೆ. ಇದರಿಂದಾಗಿ ಅವರು ನಮ್ಮ ರೇಷ್ಮೆ ಬಟ್ಟೆಗೆ ಬದಲು ಅವರ ದೇಶದ ರೇಷ್ಮೆ ಬಟ್ಟೆ ಕಳುಹಿಸುತ್ತಿಲ್ಲ. ಹೀಗೆ ಎಷ್ಟೋ ಕೋಟಿ ರೂಪಾಯಿಗಳ ರೇಷ್ಮೆಬಟ್ಟೆ ಹೊರದೇಶಗಳಿಗೆ ಹೋಗುತ್ತಿದೆ: ಇದಕ್ಕಾಗಿ ರಾಜ್ಯ ಸರಕಾರ ಕೇಂದ್ರದೊಡನೆ ವ್ಯವಹರಿಸಿ ನಮ್ಮ ಕಡೆಯಿಂದ ರೇಷ್ಮೆ ಬಟ್ಟೆ ಕಳುಹಿಸುವಾಗ ಆ ದೇಶದವರು ಅವರ ದೇಶದ ರೇಷ್ಮೆ ಬಟ್ಟೆಯನ್ನೇ ಕಳುಹಿಸಬೇಕೆಂದು ಕಡ್ಡಾಯ ಮಾಡಬೇಕು ಹಾಗೆಮಾಡಿದರೆ, ಆ ದೇಶಗಳಿಂದ ರೇಷ್ಮೆ ಬಟ್ಟೆ ಬಂದರೆ ಆಗ ಇಲ್ಲೂ ಕೂಡ ರೇಷ್ಮೆ ಬಟ್ಟೆಗಳ ಬೆಲೆ ಕಡಿಮೆಯಾಗಲು ಅನುಕೂಲವಾಗುತ್ತದೆ. ಮತ್ತು ಇದರ ಬೆಲೆಯನ್ನೂ ನಿಗದಿ ಮಾಡಲು ಸಾಧ್ಯವಾಗುತ್ತದೆ. ಯಾವಾಗ ಪರದೇಶದಿಂದ ರೇಷ್ಮೆ ಬಟ್ಟೆಗಳು ಬರುತ್ತವೆ ಆಗ ನಮ್ಮ ದೇಶದಲ್ಲಿ ರೇಷ್ಮೆ ಬೆಲೆ ಜಾಸ್ತಿಯಾಗುವುದಿಲ್ಲ. ಇದರ ಬಗ್ಗೆ ರಾಜ್ಯ ಸರಕಾರ ಕೇಂದ್ರದೊಡನೆ ವ್ಯವಹರಿಸಿ ಸರಿಯಾದ ಬೆಲೆಗಳಲ್ಲಿ ರೇಷ್ಮೆ ಬಟ್ಟೆ ಸಿಗಲು ವ್ಯವಸ್ಥೆ ಮಾಡಬೇಕು. ನಾವು ಇಲ್ಲಿಂದ ರೇಷ್ಮೆ ಬಟ್ಟೆಗಳನ್ನು ಹೊರದೇಶಗಳಿಗೆ ಕಳುಹಿಸಿದ ಮೇಲೆ ಅದರ ಬದಲಿಗೆ ಬೇರೆ ವಸ್ತುಗಳನ್ನು ತರಿಸುವುದಕ್ಕೆ ಸರ್ಕಾರದವರು ಅನುಮತಿ ಕೊಡದೆ ರೇಷ್ಮೆಯನ್ನೇ ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕು ?

ಶ್ರೀ ಸಿ. ಬೈರೇಗೌಡ.—ಹೊರದೇಶಗಳಿಂದ ನಾವು ರೇಷ್ಮೆಯನ್ನು ತರಿಸಿದರೆ ಇಲ್ಲಿ ಬೆಳೆಯುವ ರೇಷ್ಮೆಯನ್ನು ಏನು ಮಾಡಬೇಕು ?

ಶ್ರೀ ಕೆ. ಎಂ. ನಾಗಣ್ಣ.—ನಾವು ಬೆಳೆಯುತ್ತಿರುವುದು ನಮಗೆ ಸಾಲುತ್ತಿಲ್ಲ. ಇದೇ ಕಾರಣದಿಂದ ರೇಷ್ಮೆ ಬೆಲೆ ಕೆ.ಜಿ.ಗೆ 180 ರೂಪಾಯಿಗಳಿಂದ 200 ರೂಪಾಯಿಗಳವರೆಗೆ ಜಾಸ್ತಿಯಾಗಿದೆ. ಈ ಕಾರಣದಿಂದ ನಾವು ಹೊರದೇಶಗಳಿಂದ ರೇಷ್ಮೆಯನ್ನು ತರಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ.—ನಮ್ಮ ರೈತರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಇಲ್ಲಿಯೇ ಜಾಸ್ತಿ ರೇಷ್ಮೆಯನ್ನು ಉತ್ಪತ್ತಿ ಮಾಡಿದರೆ ಹೊರದೇಶದಿಂದ ತರಿಸುವ ಪ್ರಮೇಯವೇ ಬರುವುದಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಈಗಿನ ಸದ್ಯದ ಪರಿಸ್ಥಿತಿಯಲ್ಲಿ ಹೊರದೇಶಗಳಿಗೆ ಏನು ರೇಷ್ಮೆ ಬಟ್ಟೆಗಳನ್ನು ಕಳುಹಿಸಲಾಗುತ್ತಿದೆ, ಅದರ ಬದಲು ಬೇರೆ ಸರಕು ತರಿಸುವುದಕ್ಕೆ ಸರ್ಕಾರದವರು ಅವಕಾಶ ಕೊಡದೆ ರೇಷ್ಮೆಯನ್ನೇ ತರಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಸಾಮಾನ್ಯವಾಗಿ ಹೊರದೇಶಗಳಿಗೆ ಕೈಮಗ್ಗದ ಸರಕುಗಳನ್ನೇ ಕಳಿಸಬೇಕೆಂದು ವಿಧೇಯಕವಿದೆ. ಆದರೆ ಅಧಿಕಾರಿಗಳು ಏನು ಮಾಡುತ್ತಾರೆಂದರೆ, ವಿದ್ಯುತ್‌ಚಾಲಿತ ಮಗ್ಗಗಳಿಂದ ತಯಾರಾದ ಬಟ್ಟೆಗಳನ್ನು ಕೈಮಗ್ಗದಿಂದ ತಯಾರಾದವು ಎಂದು ಸರ್ಟಿಫೈ ಮಾಡಿ ಹೊರದೇಶಗಳಿಗೆ ಕಳಿಸುತ್ತಿದ್ದಾರೆ. ಇದರಿಂದ ಕೈಮಗ್ಗದವರಿಗೆ ಬಹಳ ನಷ್ಟವಾಗುತ್ತಿದೆ. ಇನ್ನು ಮುಂದೆಯಾದರೂ ಕೂಡ ಕೈಮಗ್ಗದವರಿಗೆ ಅನುಕೂಲವಾಗುವಂತೆ, ಕೈಮಗ್ಗದ ಬಟ್ಟೆಗಳನ್ನೇ ಹೊರದೇಶಗಳಿಗೆ ಕಳಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಇದರಿಂದ ಲಕ್ಷಾಂತರ ಜನ ಕೈ ಮಗ್ಗದ ನೇಕಾರರಿಗೆ ಜೀವನ ನಡೆಸಲು ಅನುಕೂಲ ಮಾಡಿದಂತಾಗುತ್ತದೆ. ಮತ್ತು ಇವರು ತಯಾರು ಮಾಡಿದ ಬಟ್ಟೆಗಳಿಗೆ ಬೆಲೆಯೂ ಬರುತ್ತದೆ. ಈ ವಿಷಯದ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅವರು ಈ ಅಂಶವನ್ನೆಲ್ಲಾ ಗಮನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಈಗ ಸರ್ಕಾರದವರು ಕಕೂನ್ ತಯಾರು ಮಾಡುವವರಿಗೆ ಎಲ್ಲ ರೀತಿಯ ರಕ್ಷಣೆಯನ್ನು ಕೊಟ್ಟಿದ್ದಾರೆ. ಇದೇ ರೀತಿ ರೇಷ್ಮೆಯನ್ನು ತಯಾರು ಮಾಡುವವರಿಗೆ ಕೋಆಪರೇಟಿವ್ ಸೊಸೈಟಿ ಮೂಲಕ ಮುಂಗಡವಾಗಿ ಹಣ ಕೊಟ್ಟು ಅವರಿಗೆ ಸಹಾಯ ಮಾಡಲಾಗುತ್ತಿದೆ. ಆದರೆ ಇಂದು ರೇಷ್ಮೆಯಾಗಲೀ, ಕಕೂನ್ ಆಗಲೀ ಹೊರದೇಶಕ್ಕೆ ಹೋಗುತ್ತಿಲ್ಲ, ಕೇವಲ ಬಟ್ಟೆಗಳು ಮಾತ್ರ ಹೋಗುತ್ತಿವೆ. ಈ ರೇಷ್ಮೆ ಬಟ್ಟೆಗಳನ್ನು ಕಳಿಸುವವರಿಗೆ ಸರ್ಕಾರದವರು ಯಾವ ವಿಧವಾದಂಥ ಸೌಕರ್ಯವನ್ನು ಒದಗಿಸಿಲ್ಲ. ಈಗ ಕೋಆಪರೇಟಿವ್ ಸೊಸೈಟಿ ಮೂಲಕ ರೇಷ್ಮೆ ತಯಾರು ಮಾಡುವವರಿಗೆ ರಕ್ಷಣೆ ಕೊಟ್ಟು ಅವರ ಅಗತ್ಯಗಳನ್ನು ಸರ್ಕಾರದವರು ಯಾವ ರೀತಿ ನೋಡಿಕೊಳ್ಳುತ್ತಿದ್ದಾರೋ, ಅದೇ ರೀತಿ ಕೈಮಗ್ಗದ ಬಟ್ಟೆಗಳನ್ನು ತಯಾರ. ಮಾಡುವವರಿಗೆ ಅಲ್ಲಲ್ಲಿ ಕೋಆಪರೇಟಿವ್ ಸೊಸೈಟಿಗಳನ್ನು ತೆರೆದು ಅನುಕೂಲ ಮಾಡಿಕೊಡಬೇಕು. ಅಂದರೆ ಅವರು ತಯಾರು ಮಾಡಿದ ಕೈಮಗ್ಗದ ಬಟ್ಟೆಗಳಿಗೆ ಬೆಲೆ ಇಲ್ಲದ ಸಮಯದಲ್ಲಿ ಸರ್ಕಾರದವರೇ ಅವರ ಸರಕನ್ನು ಮುಂಗಡವಾಗಿ ಹಣವನ್ನು ಕೊಟ್ಟು ಕೊಂಡುಕೊಂಡು, ಮದುವೆ ಸಮಯದಲ್ಲಿ ಮತ್ತು ಹೊರದೇಶಗಳಿಂದ ಬೇಡಿಕೆ ಬಂದಾಗ ಸೊಸೈಟಿಗಳ ಮೂಲಕ ಮಾರಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಆದ್ದರಿಂದ ತಕ್ಷಣವೇ ಕೋಆಪರೇಟಿವ್ ಸೊಸೈಟಿಗಳನ್ನು ತೆರೆದು ಲಕ್ಷಾಂತರ ಕೈಮಗ್ಗದ ನೇಕಾರರಿಗೆ ಸಹಾಯ ಮಾಡಬೇಕೆಂದು ಮತ್ತು ನಾನು ಇದುವರೆಗೆ ಹೇಳಿದಂಥ ಅಂಶಗಳಲ್ಲಿ ಯಾವು ಯಾವುದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತದೆ ಅವುಗಳನ್ನು ಜಾಗ್ರತೆ ಜಾರಿಗೆ ತರಬೇಕೆಂದು ಮತ್ತೊಮ್ಮೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾಗಣ್ಣನವರು ಇದುವರೆಗೆ ನಮ್ಮ ದೇಶದಲ್ಲಿ ಆಗುತ್ತಿರುವ ರೇಷ್ಮೆಯ ಉತ್ಪತ್ತಿಯನ್ನು ಮತ್ತು ಅದರಿಂದ ಬರುತ್ತಿರುವ ವಿದೇಶಿವಿನಿಮಯದ ವಿಷಯವನ್ನು ಹೇಳಿದರು. ಅವರು ರೇಷ್ಮೆ ಮಾರ್ಕೆಟ್ ವಿಚಾರದಲ್ಲಿ ಹೆಚ್ಚಿಗೆ ಹೇಳಿದರು. ರೇಷ್ಮೆ ಬಟ್ಟೆ ತಯಾರಾಗಬೇಕಾದರೆ ಮೊಟ್ಟೆಯಿಂದ ಹಿಡಿದು ರೇಷ್ಮೆ ಹುರಿ ಆಗುವವರೆಗೆ ಅನೇಕ ಕೆಲಸಗಳು ಆಗಬೇಕಾಗುತ್ತದೆ. ರೇಷ್ಮೆ ಬೆಳೆ ಚೆನ್ನಾಗಿ ಆದರೆ ಅದರ ಬೆಲೆ ಹೆಚ್ಚುವುದಕ್ಕೆ ಅವಕಾಶವಾಗುವುದಿಲ್ಲ. ಒಂದು ವರ್ಷದ ಹಿಂದೆ ಕೋಲಾರ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ರೇಷ್ಮೆ ಬೆಳೆ ಸರಿಯಾಗಿ ಆಗದೆ ಲಕ್ಷಾಂತರ ಜನರಿಗೆ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವಾಯಿತು. ಇದಕ್ಕೆ ಮುಖ್ಯವಾದ ಕಾರಣವೆಂದರೆ, ರೈತರಿಗೆ ಉತ್ತಮವಾದ ಬಿತ್ತನೆ ಬೀಜವನ್ನು ಸರಬರಾಜು ಮಾಡದೇ ಇದ್ದುದು. ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ಅದಕ್ಷತೆಯಿಂದ ಈ ರೀತಿಯಾಯಿತು. ನಮ್ಮ ಏರಿಯಾದಲ್ಲಿ ಉತ್ತಮವಾದಂಥ ತಳಿಗಳನ್ನು ಸರಬರಾಜು ಮಾಡದಿದ್ದುದರಿಂದ ಅನೇಕ ರೈತರಿಗೆ ನಷ್ಟವಾಗುವುದಕ್ಕೆ ಕಾರಣ

ವಾಯಿತು. ಇತ್ತೀಚೆಗೆ ಹೊಸದಾಗಿ ಅನೇಕ ಉತ್ತಮ ತಳಿಗಳು ಬರುತ್ತಿವೆ, ನೂರು ಮೊಟ್ಟೆಗೆ ಸುಮಾರು 30-40 ಕೇಜಿಯಷ್ಟು ಬೆಳೆಯುವ ತಳಿಗಳು ಬರುತ್ತಿವೆ. ರೇಷ್ಮೆ ಬೆಳೆ ಎಂಬುದು ಸೆನ್‌ಸೆಟಿವ್ ಕ್ರಾಪ್. ಇದನ್ನು ಸಾಕುವಾಗ ಸ್ವಲ್ಪ ಉಷ್ಣಾಂಶ ಜಾಸ್ತಿಯಾದರೂ ಕೂಡ ಬಹಳ ನಷ್ಟವಾಗುತ್ತದೆ. ಅಂದರೆ ಉಷ್ಣಾಂಶ ಜಾಸ್ತಿಯಾದಾಗ ರೇಷ್ಮೆ ಹುಳಗಳಿಗೆ ರೋಗ ಬರುತ್ತದೆ. ಆಗ ಅವು ಚಂದ್ರಿಕೆ ಮೇಲೆ ನಿಲ್ಲುವುದಿಲ್ಲ, ಉತ್ಪತ್ತಿಯಲ್ಲಿ ಕಡಿಮೆಯಾಗುತ್ತದೆ. ಮೊಟ್ಟೆ ತಯಾರು ಮಾಡುವಾಗ ಸ್ವಲ್ಪ ವ್ಯತ್ಯಾಸವಾದರೂ ಕೂಡ ಕೆಟ್ಟುಹೋಗುತ್ತದೆ. ಇದರ ಪರಿಣಾಮ ರೇಷ್ಮೆಯ ಬೆಲೆ ಜಾಸ್ತಿಯಾಗುತ್ತದೆ. ಅಲ್ಲದೆ ಬೆಳೆಯುವವರಿಗೂ ಕೂಡ ದೊಡ್ಡ ನಷ್ಟವಾಗುತ್ತದೆ. ಇದೆಲ್ಲಾ ಕಾರಣಗಳಿಂದ ಸರ್ಕಾರದವರಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ, ರೋಗ ಇಲ್ಲವೇ ಇರತಕ್ಕಂಥ ಬಿತ್ತನೆ ಬೀಜವನ್ನು ರೈತರಿಗೆ ಸರಬರಾಜು ಮಾಡಬೇಕು. ಎರಡನೆಯದಾಗಿ ಉತ್ತಮವಾದಂಥ ತಳಿಗಳು ಏನು ಈಗ ಬರುತ್ತಿವೆ, ಅವುಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಅದರಿಂದ ಅನುಕೂಲ ಕಂಡುಬಂದರೆ, ಅವುಗಳನ್ನು ರೈತರಿಗೆ ಒದಗಿಸಬೇಕು. ಹೊಸ ತಳಿಗಳನ್ನು ಬೆಳೆಸುವಂತೆ ರೈತರಿಗೆ ಪ್ರೋತ್ಸಾಹ ಕೊಡಬೇಕು. ಗೂಡು ಬೆಳೆದ ಮೇಲೆ ಅದನ್ನು ಮಾರಾಟ ಮಾಡಲು ಮಾರ್ಕೆಟ್‌ಗೆ ರೈತರು ತರುತ್ತಾರೆ. ಈಗಾಗಲೇ ಕಕೂನ್ ಮಾರ್ಕೆಟಿಂಗ್ ಆಕ್ಟ್ ಜಾರಿಗೆ ಬಂದಿದೆ. ಸರ್ಕಾರದವರು ಎಲ್ಲ ಕಡೆಯೂ ಮಾರ್ಕೆಟ್‌ಗಳನ್ನು ತೆರೆದಿದ್ದಾರೆ. ಆದರೆ ತಂದಂಥ ಗೂಡುಗಳನ್ನು ಇಡಲು ಅಲ್ಲಿ ಜಾಗವೇ ಇರುವುದಿಲ್ಲ. ನಮ್ಮ ಜಿಲ್ಲೆಯಲ್ಲಿಯೂ ಕೂಡ 5-6 ಕಡೆ ಇಂತಹ ಮಾರ್ಕೆಟ್‌ಗಳಿವೆ. ಅಲ್ಲಿಯ ಅವ್ಯವಸ್ಥೆಯನ್ನು ಹೇಳುವುದಕ್ಕಾಗುವುದಿಲ್ಲ. ತಂದಂಥ ಗೂಡುಗಳನ್ನು ಇಡಲು ಜಾಗವೇ ಇರುವುದಿಲ್ಲ. ದೊಡ್ಡ ಸಂತೆ ಇದ್ದ ಹಾಗೆ ಇರುತ್ತದೆ. ಗೂಡುಗಳನ್ನು ಕಾಲಲ್ಲಿ ತುಳಿಯುತ್ತಿರುತ್ತಾರೆ. ಒಬ್ಬ ರೈತ 20-30 ಕೇಜಿಗಳಷ್ಟು ಗೂಡನ್ನು ತಂದು ಅಲ್ಲಿ ಇಟ್ಟರೆ, ಅದರಲ್ಲಿ ಸುಮಾರು 4-5 ಕೆ.ಜಿ.ಗಳಷ್ಟು ಗೂಡು ಜನರ ತುಳಿತದಿಂದಲೇ ಹಾಳಾಗಿ ಹೋಗುತ್ತದೆ. ಒಂದು ಕೆ.ಜಿ. ಗೂಡಿಗೆ 10-12 ರೂಪಾಯಿ ಬೆಲೆ ಆದರೆ, ನಾಲ್ಕೈದು ಕೆ.ಜಿ.ಗಳಷ್ಟು ತುಳಿತದಿಂದ ಹಾಳಾದರೆ ಅತನಿಗೆ ಸುಮಾರು 40-50 ರೂಪಾಯಿಗಳಷ್ಟು ನಷ್ಟವಾಗುತ್ತದೆ. ಇದು ವಾಸ್ತವವಾದಂಥ ಪರಿಸ್ಥಿತಿ. ಇದನ್ನು ತಪ್ಪಿಸಲು ಸರ್ಕಾರದವರು ಗೂಡುಗಳನ್ನು ಇಡಲು ಕಟ್ಟಡಗಳನ್ನು ಜಾಗ್ರತೆ ಕಟ್ಟಿಸಿದರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ರೈತರು ಬೆಳೆದಂಥ ಬೆಳೆಗೆ ಉತ್ತಮ ಬೆಲೆ ಸಿಗಬೇಕಾದರೆ ಈಗ ಇರತಕ್ಕಂಥ ಮಧ್ಯವರ್ತಿ ಜನರನ್ನು ತೆಗೆದು, ಸರ್ಕಾರದವರೇ ನೇರವಾಗಿ ರೈತರೊಡನೆ ವ್ಯವಹಾರ ಮಾಡಬೇಕು. ಇದರಿಂದ ರೈತರಿಗೂ ಉತ್ತಮವಾದ ಬೆಲೆ ಸಿಗುತ್ತದೆ, ರೇಷ್ಮೆ ಬಟ್ಟೆಯ ಬೆಲೆಯೂ ಕೂಡ ಕಡಿಮೆಯಾಗುತ್ತದೆ. ಗೂಡು ತಯಾರಿಕೆಯಿಂದ ಹಿಡಿದು ಬಟ್ಟೆ ತಯಾರು ಆಗುವವರೆಗೆ ಅನೇಕ ಮಧ್ಯವರ್ತಿ ಜನರು ವ್ಯವಹಾರ ನಡೆಸುವುದರಿಂದ ಈ ಬಟ್ಟೆಯ ಬೆಲೆ ಜಾಸ್ತಿಯಾಗುತ್ತಿದೆ. ಒಂದೊಂದು ಕೈ ದಾಟುವಾಗಲೂ ಕೂಡ ಬೆಲೆ ಏರುತ್ತಾ ಹೋಗುತ್ತದೆ. ಇದರಿಂದ ಬೆಳೆಗಾರರಿಗೂ ಅನುಕೂಲವಿಲ್ಲ, ಬಳಕೆದಾರರಿಗೂ ಅನುಕೂಲವಿಲ್ಲ. ಆದ್ದರಿಂದ ಈ ಮಧ್ಯವರ್ತಿ ಜನರನ್ನು ಮೊದಲು ಕಿತ್ತುಹಾಕಬೇಕು. ಆ ರೀತಿ ಮಾಡಿದ್ದೇ ಆದರೆ ರೇಷ್ಮೆ ಉತ್ಪಾದನೆ ಜಾಸ್ತಿಯಾಗುತ್ತದೆ, ಕೊಂಡುಕೊಳ್ಳುವವರಿಗೆ ಕಡಿಮೆ ಬೆಲೆಯಲ್ಲಿ ಬಟ್ಟೆ ಸಿಗುತ್ತದೆ, ರೇಷ್ಮೆ ಉದ್ಯಮವೂ ಕೂಡ ಮುಂದುವರೆಯುತ್ತದೆ. ಆದಕಾರಣ ಸರ್ಕಾರದವರೇ ನೇರವಾಗಿ ಈ ಉದ್ಯಮಕ್ಕೆ ಇಳಿಯಬೇಕು.

ಶ್ರೀಮಾನ್ ನಾಗಣ್ಣನವರು ಇನ್ನೊಂದು ವಿಷಯ ಹೇಳಿದರು. ಅದೇನೆಂದರೆ ಸರ್ಕಾರಿ ಸಿಲ್ಕ್ ಫಿಲೇಚರ್ ಕೈಗಾರಿಕೆಯಿಂದ ವರ್ಷೇ ವರ್ಷೇ 30 ಲಕ್ಷರೂಪಾಯಿಗಳು ನಷ್ಟವಾಗುತ್ತದೆ ಎಂದು. ಖಂಡಿತವಾಗಿಯೂ ಇದು ಬಹಳ ಶೋಚನೀಯವಾದ ವಿಚಾರ. ಸಿಲ್ಕ್‌ಫಿಲೇಚರ್ ಕಾರ್ಖಾನೆಯಲ್ಲಿ 27 ಸಾವಿರ ಜನ ಕಾರ್ಮಿಕರು ಇರಬಹುದು ಎಂದು ಕಾಣುತ್ತದೆ, ಆ ಕಾರ್ಖಾನೆಯನ್ನು ಮುಚ್ಚಿದರೆ ಅಲ್ಲಿರತಕ್ಕ ಕಾರ್ಮಿಕರೆಲ್ಲರೂ ನಿರುದ್ಯೋಗಿಗಳಾಗುತ್ತಾರೆನ್ನುವ ವಿಷಯವನ್ನು ಶ್ರೀಮಾನ್ ನಾಗಣ್ಣನವರು ತಿಳಿಸಿದರು. ಆ ಕಾರ್ಖಾನೆಯನ್ನು ದಕ್ಷತೆಯಿಂದ ನಡೆಸಿದರೆ ನಷ್ಟವಾಗುವುದಕ್ಕೆ ಕಾರಣವಿಲ್ಲ. ಇವೊತ್ತಿನ ದಿವಸ ಖಾಸಗಿಯವರು ಸಣ್ಣ ಸಣ್ಣ ಉದ್ದಿಮೆಗಳನ್ನು ನಡೆಸಿ ದೊಡ್ಡ ದೊಡ್ಡ ಬಂಡವಾಳಗಾರರಾಗುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರು ಏಕೆ ಆ ರೀತಿ ಲಾಭದಾಯಕವಾಗಿ ಆ ಉದ್ದಿಮೆಯನ್ನು ನಡೆಸುವುದಕ್ಕಾಗುವುದಿಲ್ಲ? ಈಗ ಆ ಸಿಲ್ಕ್ ಫಿಲೇಚರ್ ಕಾರ್ಖಾನೆಯಲ್ಲಿ 30 ಲಕ್ಷ ರೂಪಾಯಿಗಳು ಏನು ನಷ್ಟವಾಗುತ್ತಿದೆ ಅದನ್ನು ಆದಷ್ಟು ಬೇಗ ಕಡಿಮೆ ಮಾಡಿ ಅದು ಲಾಭದಾಯಕವಾಗಿ ನಡೆಯುವ ಹಾಗೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಪ್ರಮುಖವಾಗಿ ರೈತರಿಗೆ ಏನಾದರೂ ಹಣ ಸಿಕ್ಕುತ್ತದೆ ಎನ್ನುವ ಒಂದು ಆಶೆ ಇದ್ದರೆ ಅದು ರೇಷ್ಮೆ ವ್ಯವಸಾಯದಿಂದ ಮಾತ್ರ. ಹೀಗಿರುವಾಗ ಕೋಲಾರ ಜಿಲ್ಲೆ

(ಶ್ರೀ ಸಿ. ಬೈರೇಗೌಡ)

ಯಲ್ಲಿ ಸರ್ಕಾರದವರು ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡಿಲ್ಲ. ಆ ಜಿಲ್ಲೆಯಲ್ಲಿ ಏನು ರೇಷ್ಮೆ ಉತ್ಪಾದನೆಯಾಗುತ್ತದೆ ಅದನ್ನು ಮಾರಾಟ ಮಾಡುವುದಕ್ಕೆ ಬೆಂಗಳೂರಿಗೆ ತರಬೇಕು. ಆದ್ದರಿಂದ ರೇಷ್ಮೆ ವ್ಯಾಪಾರಕ್ಕೆ ಬೆಂಗಳೂರಿಗೆ ಬರುವುದನ್ನು ತಪ್ಪಿಸಿ ಕೋಲಾರದಲ್ಲಿ ರೇಷ್ಮೆ ಬಟ್ಟೆ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ಉದ್ಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ರಾಷ್ಟ್ರದ ಹಿತದೃಷ್ಟಿಯಿಂದ, ಇದಕ್ಕೆ ಫಾರಿನ್ ಎಕ್ಸ್‌ಛೇಂಜ್ ಸಿಕ್ಕುವುದರಿಂದ ಕೋಲಾರದಲ್ಲಿ ರೇಷ್ಮೆ ಸಂಸ್ಕರಣ ಕಾರ್ಖಾನೆ ಮತ್ತು ರೇಷ್ಮೆ ಬಟ್ಟೆಯನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ಕಾರ್ಖಾನೆ ಸ್ಥಾಪಿಸಲು ವ್ಯವಸ್ಥೆ ಮಾಡಬೇಕು. ರಾಷ್ಟ್ರದಲ್ಲಿ ಉತ್ಪತ್ತಿಯಾಗುವ ಸಿಲ್ಕ್‌ನಲ್ಲಿ ಶೇಕಡಾ 75 ರಷ್ಟು ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸೆಂಟ್ರಲ್ ಸಿಲ್ಕ್‌ಬೋರ್ಡ್ ಛೇರ್ಮನ್ ಆಗಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅವರು ಮನಸ್ಸು ಮಾಡಿದರೆ ಕೋಲಾರ, ಬೆಂಗಳೂರು ಮತ್ತು ಮೈಸೂರು ಈ ಜಿಲ್ಲೆಗಳನ್ನು ಹಿಂದೆ ಕನ್ನಡ ನಾಡು ಚಿನ್ನದ ನಾಡು ಎಂದೇನು ಹೇಳುತ್ತಿದ್ದರು ಆ ಚಿನ್ನದ ನಾಡನ್ನು ಈಗ ಮಾಡಬಹುದು. ಆ ರೀತಿ ಮಾಡುವುದಕ್ಕೆ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ರೇಷ್ಮೆಯನ್ನು ಮಾರಾಟ ಮಾಡುವುದಕ್ಕೆ ರೈತರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಮಾರ್ಕೆಟ್ಟಿಗೆ ಹೋಗಿ ಬರಬೇಕಾಗಿದೆ. ಅಲ್ಲಿ ರೈತರಿಗೆ ತುಂಬಾ ಕಷ್ಟ ಇದೆ, ರೈತರು ತಾವು ಮಾರಾಟಕ್ಕಾಗಿ ತಂದಂತಹ ರೇಷ್ಮೆಯನ್ನು ಇಟ್ಟುಕೊಳ್ಳುವುದಕ್ಕೆ ಸ್ಥಳ ಇರುವುದಿಲ್ಲ. ಆದ್ದರಿಂದ ಮಾರಾಟಕ್ಕಾಗಿ ತಂದಂತಹ ರೇಷ್ಮೆಯನ್ನು ಜನಗಳು ಕಾಲಿನಲ್ಲಿ ತುಳಿದು 4-5 ಕೆ.ಜಿ. ರೇಷ್ಮೆ ನಷ್ಟವಾಗುತ್ತದೆ. ಅದನ್ನು ಸರ್ಕಾರದವರು ತಪ್ಪಿಸಬೇಕು. ರೈತರಿಗೆ ಮಾರುಕಟ್ಟೆಯ ಸೌಕರ್ಯ ಒದಗಿಸಬೇಕು. ಕೋಲಾರದಲ್ಲಿ ಸಿಲ್ಕ್ ಫಿಲೇಚರ್ ಸ್ಥಾಪನೆ ಮಾಡಬೇಕು. ರೇಷ್ಮೆ ಬಟ್ಟೆ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಡಬೇಕು. ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಸರ್ಕಾರದವರನ್ನು ಪ್ರಾರ್ಥಿಸಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಳಿಗೆರೆ).—ಮಾನ್ಯ ಅಧ್ಯಕ್ಷರೇ, ರೇಷ್ಮೆ ಕೈಗಾರಿಕೆ ಮೈಸೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ನಡೆಯುತ್ತಿದೆ. ರೈತ ಸಾಲಸೋಲ ಮಾಡಿ ರೇಷ್ಮೆ ಹುಳುವಿನ ಮೊಟ್ಟೆಯನ್ನು ತಂದು ರೇಷ್ಮೆ ಹುಳುವನ್ನು ಮೇಯಿಸುವುದಕ್ಕೆ ಬೇಕಾದ ಹಿಪ್ಪನೇರಳೆ ಸೊಪ್ಪನ್ನು ಗುತ್ತಿಗೆ ಮುಖಾಂತರ ತಂದು ಕಷ್ಟಪಟ್ಟು 28 ದಿವಸಗಳು ರೇಷ್ಮೆ ಹುಳುವನ್ನು ಮೇಯಿಸುತ್ತಾನೆ. ನಂತರ ಹುಳು ಹಣ್ಣಾದಾಗ ಅವುಗಳನ್ನು ಚಂದ್ರಿಕೆಯ ಮೇಲೆ ಬಿಡುತ್ತಾನೆ. ಕೆಲವು ವೇಳೆ ಮೊಟ್ಟೆಗಳು ಕೆಟ್ಟು ಹೋಗುವ ಸಂದರ್ಭವೂ ಉಂಟು. ಅಂಥಾ ಸಂದರ್ಭದಲ್ಲಿ ಸಾಲ ಸೋಲ ಮಾಡಿ ಮೊಟ್ಟೆಯನ್ನು ತಂದು ರೇಷ್ಮೆ ಬೆಳೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದಂತಹ ರೈತ ತುಂಬಾ ತೊಂದರೆಗೆ ಒಳಗಾಗುತ್ತಾನೆ. ಆದ್ದರಿಂದ ಈ ರೇಷ್ಮೆ ಬೆಳೆಗೆ ಇನ್‌ಷ್ಯೂರೆನ್ಸ್ ಮಾಡಿಸುವ ಒಂದು ಪದ್ಧತಿಯನ್ನು ಸರ್ಕಾರದವರು ಜಾರಿಗೆ ತಂದು ರೇಷ್ಮೆ ಬೆಳೆ ಕೆಟ್ಟು ಹೋದಾಗ ಆ ರೈತನಿಗೆ ಅವನು ಆ ಬೆಳೆಗಾಗಿ ಮಾಡಿದ ಖರ್ಚಾದರು ಬರುವ ಹಾಗೆ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರೈತ ರೇಷ್ಮೆ ಹುಳುವನ್ನು ಸಾಕಿದ್ದಕ್ಕೆ ಖರ್ಚಾದರೂ ಅವನಿಗೆ ಬರುವ ಹಾಗೆ ಮಾಡಿದರೆ ರೇಷ್ಮೆ ಬೆಳೆಗೆ ಅನುಕೂಲವಾಗುತ್ತದೆ. ರೇಷ್ಮೆ ಮಾರ್ಕೆಟ್‌ಗಳಲ್ಲಿ ಬಹಳ ಅನ್ಯಾಯವಾಗುತ್ತಿದೆ. ಸ್ಥಳದಲ್ಲಿ ಇರುವವರು ರೇಷ್ಮೆಯನ್ನು ಮಾರ್ಕೆಟ್ಟಿಗೆ ತಂದರೆ ಒಂದು ತರಹ ರೇಟು ರೈತ ಮಾರ್ಕೆಟ್ಟಿಗೆ ಮಾರುವುದಕ್ಕೆ ರೇಷ್ಮೆಯನ್ನು ತಂದರೆ ಒಂದು ರೇಟು ಆಗುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರದವರು ನಿಗಾ ಇಟ್ಟು ರೈತರಿಗೆ ಆಗತಕ್ಕಂಥಾ ಅನ್ಯಾಯವನ್ನು ಸರಿಪಡಿಸಬೇಕು.

ಎರಡನೆಯದಾಗಿ ಸಾಮಾನ್ಯವಾಗಿ ರೇಷ್ಮೆ ಬೆಳೆಗೆ ಇನ್‌ಕಂಟ್ಯಾಕ್ಸ್ ಹಾಕುತ್ತಾರೆ. ಸಾಮಾನ್ಯವಾಗಿ ರೇಷ್ಮೆ ಬೆಳೆಯನ್ನು ಖುಷ್ಕಿ ಜಮೀನಿನಲ್ಲಿ ಹೆಚ್ಚು ಬೆಳೆಯುತ್ತಾರೆ. ಬಡ ರೈತರು ಖುಷ್ಕಿ ಜಮೀನನ್ನು ಇಟ್ಟುಕೊಂಡಿರುತ್ತಾರೆ. ಅವರು ಆ ಜಮೀನಿನಲ್ಲಿ ರಾಗಿ ಜೋಳ ಇತ್ಯಾದಿ ಗಳನ್ನು ಬೆಳೆಯುವುದಿಲ್ಲ. ಅವರು ರೇಷ್ಮೆ ಬೆಳೆಯಿಂದರೇ ಜೀವನವನ್ನು ನಡೆಸುವುದರಿಂದ ಆ ಖುಷ್ಕಿ ಜಮೀನಿನಲ್ಲಿ ಹಿಪ್ಪನೇರಳೇ ಸೊಪ್ಪನ್ನು ಬೆಳೆಯುತ್ತಾರೆ. ಈ ರೇಷ್ಮೆ ಬೆಳೆಗೆ ಇನ್‌ಕಂ ಟ್ಯಾಕ್ಸ್ ಅನ್ನು ಸರ್ಕಾರದವರು ಹಾಕುವುದಾದರೆ ಅವರು ಆ ಬೆಳೆಯನ್ನು ಕೈಬಿಡುವಂತಹ

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY



ಸಂದರ್ಭ ಬರುತ್ತದೆ. ಆದ್ದರಿಂದ ರೇಷ್ಮೆ ಬೆಳೆಗೆ ಕಡಿಮೆ ಇನ್‌ಕಂಟ್ಯಾಕ್ಸ್ ಹಾಕುವ ಹಾಗೆ ಮಾಡಿದರೆ ರೇಷ್ಮೆ ಬೆಳೆಯನ್ನು ಬೆಳೆಯುವವರಿಗೆ ಅನುಕೂಲವಾಗುತ್ತದೆ. ಮತ್ತು ರೇಷ್ಮೆ ಬೆಳೆಯನ್ನು ಬೆಳೆಯುವವರಿಗೆ ಬ್ಯಾಂಕುಗಳಲ್ಲಿ ಹೆಚ್ಚು ಸೌಲಭ್ಯ ಸಿಕ್ಕುವ ಏರ್ಪಾಡು ಮಾಡಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ನೇಕಾರರಲ್ಲಿ ಹೆಚ್ಚು ಸಂಬಂಧವನ್ನು ಇಟ್ಟುಕೊಂಡಿರತಕ್ಕ ಶ್ರೀಮಾನ್ ನಾಗಣ್ಣನವರು ಮತ್ತು ಇದರ ಜೊತೆಗೆ ಸಿಲ್ಕ್ ಬಟ್ಟೆಗೆ ಸಂಬಂಧಪಟ್ಟ ಕಕೂನ್ ತಯಾರು ಮಾಡತಕ್ಕಂಥಾ ರೈತರ ಬಗ್ಗೆ ಸಾಕಷ್ಟು ಅನುಭವವುಳ್ಳ ಕೆಲವು ಮಿತ್ರರು ಮಾತನಾಡಿದ್ದಾರೆ. ರೇಷ್ಮೆ ಬೆಲೆ ಆಗಿಂದಾಗ್ಗೆ ಏರುಪೇರು ಆಗತಕ್ಕಂಥಾದ್ದು. ಇದನ್ನು ಬೆಳೆ ಮಾಡತಕ್ಕ ರೈತನಿಗೂ ಮತ್ತು ರೇಷ್ಮೆ ಬಟ್ಟೆಯನ್ನು ಉಪಯೋಗಿಸತಕ್ಕಂಥಾ ಬಳಕೆದಾರರಿಗೂ ತೊಂದರೆಯಾಗುತ್ತದೆ. ಈ ತೊಂದರೆಗೆ ಹೆಚ್ಚು ಕಾರಣ ಮಧ್ಯೆ ಇರತಕ್ಕಂಥಾ ಲಾಭ ಸಂಪಾದನೆ ಮಾಡತಕ್ಕ ಜನರ ಕೈವಾಡ ಎಂದು ಹೇಳಿ ನನಗೆ ತಿಳಿದಮಟ್ಟಿಗೆ ಗೊತ್ತಾಗಿದೆ. ಬೆಂಗಳೂರಿನಲ್ಲಿ ಇರತಕ್ಕ ಮಾರ್ಕೆಟಿಂಗ್ ಸೊಸೈಟಿಗಳಲ್ಲಿರತಕ್ಕ ಅಧಿಕಾರಿಗಳು ವ್ಯಾಪಾರಗಾರರ ಏಜೆಂಟರುಗಳನ್ನು ಜೊತೆಯಲ್ಲಿ ಇಟ್ಟುಕೊಂಡು ಕೆಲಸ ಮಾಡುತ್ತಿರುವುದರಿಂದ ಈ ರೇಷ್ಮೆ ಬೆಲೆ ಏರುಪೇರಾಗುವುದಕ್ಕೆ ಹೆಚ್ಚು ಸಹಕಾರಿಯಾಗಿದೆ. ಜನವರಿ 24ನೇ ತಾರೀಖು ಎಂದರೆ ಮಾರ್ಕೆಟಿಂಗ್ ಸೊಸೈಟಿಯ ಮೀಟಿಂಗಿನ ಹಿಂದಿನ ದಿನ ರೇಷ್ಮೆ ಬೆಲೆ 145 ರೂಪಾಯಿಗಳಿಗೆ ಇಳಿದು ಮೀಟಿಂಗ್ ಆದಮೇಲೆ 185 ರೂಪಾಯಿಗಳಿಗೆ ಏರಿದ ಸಂದರ್ಭದಲ್ಲಿ ಅದರಲ್ಲಿ ಮಾರ್ಕೆಟಿಂಗ್ ಸೊಸೈಟಿಯ ಕೆಲವರ ಕೈವಾಡ ಇದೆಯೆಂದು ಕೆಲವರು ಹೇಳಿದರು. ಈ ರೀತಿ ಒಂದೇ ದಿವಸಕ್ಕೆ 20-30 ರೂಪಾಯಿಗಳು ಬೆಲೆಯಲ್ಲಿ ಏರುವುದಕ್ಕೆ ಏಜೆಂಟರೇ ಕಾರಣ ಎಂದು ಗೊತ್ತಾಗಿದೆ. ಇದರಲ್ಲಿ ಮಧ್ಯಸ್ಥಗಾರರು ಲಾಭ ಮಾಡಿಕೊಳ್ಳುತ್ತಾರೆ. ಕನ್‌ಸ್ಯೂಮರ್ಸ್‌ಗೆ ಅನಾನುಕೂಲವಾಗುತ್ತದೆ, ಪ್ರೊಡ್ಯೂಜರ್ಸ್‌ಗೂ ಅನಾನುಕೂಲವಾಗುತ್ತದೆ. ಈಗ ಸರ್ಕಾರದವರು ಈ ಉದ್ದಿಮೆಯನ್ನು ಬೆಳೆಸಬೇಕು ಎಂದು ನಾನಾವಿಧವಾದ ಉತ್ತೇಜನವನ್ನು ರೈತರಿಗೆ ಕೊಡುತ್ತಿದ್ದಾರೆ. ಆದರೆ ಇದರಲ್ಲಿ ಮಧ್ಯೆ ಇರತಕ್ಕವರು ಲಾಭ ಮಾಡುವುದನ್ನು ತಪ್ಪಿಸಿದರೆ ಬೆಲೆಗಳು ಏರುಪೇರಾಗುವುದು ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಹೇಳುತ್ತೇನೆ.

ಈ ರೇಷ್ಮೆ ಬೆಳೆಯನ್ನು ಮಾಡುವಾಗ ಉತ್ತಮ ದರ್ಜೆಯ ಕಕೂನ್ಸ್, ಉತ್ತಮ ದರ್ಜೆಯ ಬಿತ್ತನೆ ಬೀಜವನ್ನು ಒದಗಿಸುವುದಕ್ಕೆ ಬದಲಾಗಿ ಕೆಳಮಟ್ಟದ ಕಕೂನ್ಸ್ ಕೆಳ ಮಟ್ಟದ ಬಿತ್ತನೆ ಬೀಜವನ್ನು ಕೆಲವರು ಕೊಡುತ್ತಾರೆ. ಇದರಿಂದ ರೇಷ್ಮೆ ಬೆಳೆ ಸರಿಯಾಗಿ ಆಗುವುದಿಲ್ಲ. ಆದ್ದರಿಂದ ಉತ್ತಮ ದರ್ಜೆಯ ಕಕೂನ್ಸ್, ಉತ್ತಮ ದರ್ಜೆಯ ಬಿತ್ತನೆ ಬೀಜವನ್ನು ರೈತನಿಗೆ ಒದಗಿಸುವಂತಹ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಈ ರೇಷ್ಮೆ ವ್ಯವಸಾಯದಲ್ಲಿ ರೈತನಿಗೆ ಬೇಕಾದಂತಹ ಉತ್ತೇಜನವನ್ನು ಕೊಟ್ಟು ನ್ಯಾಯವಾಗಿ ಅವನಿಗೆ ಸಲ್ಲಬೇಕಾದಂತಹ ಒಂದು ಲಾಭ ಸಿಕ್ಕುವಂತಾಗಬೇಕು. ಕನ್‌ಸ್ಯೂಮರ್ಸ್‌ಗೆ ಹೆಚ್ಚು ಬೆಲೆ ಆಗದಂತೆ ಮಾಡಬೇಕು, ಮಧ್ಯಸ್ಥಗಾರರು ಏನು ಲಾಭವನ್ನು ಮಾಡಿಕೊಳ್ಳುತ್ತಿದ್ದಾರೆ ಅದನ್ನು ತಡೆಗಟ್ಟಬೇಕು ಎಂದು ಹೇಳಿ ನನಗೆ ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

12-00 NOON

† ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ನಾಗಣ್ಣನವರು ಒಂದು ನಿರ್ಣಯವನ್ನು ತಂದು ನಮ್ಮ ದೇಶದಲ್ಲಿ ಕೈಮಗ್ಗದ ಜನರು ಯಾರಿದ್ದಾರೆ ಅವರಿಗೆ ರೇಷ್ಮೆ ಬೆಲೆಯ ಏರಿಳಿತದಿಂದ ತುಂಬಾ ತೊಂದರೆಯಾಗಿದೆ ಎಂಬುದನ್ನು ಮುಖ್ಯವಾಗಿ ಮನಸ್ಸಿನಲ್ಲಿಟ್ಟುಕೊಂಡು, ಈ ಕೈಗಾರಿಕೆಯಲ್ಲಿ ಕೊಳ್ಳುವವರಿಗೆ ಏರುಪೇರು ಬೆಲೆಗಳಿಂದ ಆಗುತ್ತಿರುವ ಅನಾಹುತವನ್ನು ಸರಕಾರದ ಗಮನಕ್ಕೆ ತಂದು ಲೋಪದೋಷಗಳನ್ನು ಸರಿಪಡಿಸಬೇಕೆಂದು ಸೂಚಿಸಿದ್ದಾರೆ. ಈ ಕೈಗಾರಿಕೆಯ ವಿಚಾರವನ್ನು ನಾನು ಶಕ್ಯಮಟ್ಟಿಗೆ ಅಧ್ಯಯನ ಮಾಡಿದ್ದೇನೆ. ಹಿಂದೆ ಮಂತ್ರಿಯಾಗಿ ಈ ಕೈಗಾರಿಕಾ ಖಾತೆ ನನ್ನಲ್ಲಿದ್ದಾಗ ಇದರ ಬಗ್ಗೆ ಸಾಕಷ್ಟು ತಿಳಿಯುವುದಕ್ಕೆ ಪ್ರಯತ್ನಮಾಡಿದ್ದೇನೆ. ಆಮೇಲೆ ಕೇಂದ್ರ ರೇಷ್ಮೆ ಮಂಡಲಿಯ ಅಧ್ಯಕ್ಷನಾಗಿ ಕೂಡ ಇದರ ಬಗ್ಗೆ ಅಧ್ಯಯನಮಾಡಿ ನಮ್ಮ ದೇಶದಿಂದ ಹೋಗುವ ರೇಷ್ಮೆ ಮಾಲಿನಲ್ಲಿ ನ್ಯೂನತೆಯೇನಿದೆ ಎಂದು ಪರಿಶೀಲಿಸಿದೆ ನಮ್ಮ ದೇಶದ ರೇಷ್ಮೆ ಬಟ್ಟೆ ಹೆಚ್ಚು ಹೊರಗಡೆಗೆ ಹೋಗದಿರಲು ಕಾರಣವೇನು ಎಂದು ತಿಳಿಯಲು ಭಾರತದಿಂದ ಹೊರಕ್ಕೂ ಸಹ ಹೋಗಿಬಂದೆ. ಬಹಳ ವರ್ಷಗಳಿಂದ ರೇಷ್ಮೆಗೆ

(ಶ್ರೀ ಡಿ. ದೇವರಾಜ್ ಅರಸ್)

ತೌರುಮನೆಯಾಗಿರುವ ಜಪಾನಿಗೆ ಹೋಗಿ ಅಲ್ಲಿಯ ವಿಷಯವನ್ನೂ ತಿಳಿದಿದ್ದೇನೆ. ಈ ಎಲ್ಲಾ ಅನುಭವದಿಂದ ನಾನು ತಮಗೆ ಹೇಳುವುದಾದರೆ ಇದರ ವಿಚಾರ ಹೆಚ್ಚುಹೆಚ್ಚಾಗಿ ತಿಳಿದಷ್ಟೂ ಇದು ಕಠಿಣವಾದ ಸಮಸ್ಯೆ ಎಂದು ಗೊತ್ತಾಗುವುದು. ತಿಳಿಯದಿದ್ದಾಗ ಸುಲಭವಾಗಿ ಹೇಳಬಹುದು. ಹೆಚ್ಚು ಹೆಚ್ಚು ಇದರ ವಿಷಯವನ್ನು ಅಭ್ಯಾಸಮಾಡಿದಾಗ ಇದನ್ನು ಹತೋಟಿಗೆ ತರುವುದು ಹೇಗೆ ಎಂಬ ಸಮಸ್ಯೆ ಉದ್ಭವವಾಗುವುದು. ಇನ್ನೂ ಕೂಡ ಇದರ ವಿಚಾರದಲ್ಲಿ ಪೂರ್ಣವಾದ ಹತೋಟಿ ಇಟ್ಟುಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಮನಸ್ಸಿಲ್ಲವೆಂದಲ್ಲ. ಈ ದೊಡ್ಡ ಕೈಗಾರಿಕೆ ನಮ್ಮ ದೇಶದಲ್ಲಿ ನೂರಾರು ವರ್ಷಗಳಿಂದಲೂ ಇದೆ. ಇದರ ಬೆಳವಣಿಗೆಯ ಜೊತೆಯಲ್ಲೇ ನಾನಾ ರೀತಿಯ ವೆಸ್ಟೆಡ್ ಇಂಟರೆಸ್ಟ್ಸ್ ಕೂಡ ಬೆಳೆದುಬಂದಿವೆ. ಈ ಕೈಗಾರಿಕೋದ್ಯಮ ಯಾವುದೋ ಒಂದು ಟ್ರೇಡ್ ಛಾನಲ್‌ನಲ್ಲಿ ಹೋಗುತ್ತಿದೆ, ಎಲ್ಲಾ ಬದಲಾಯಿಸುವುದು ಬಹಳ ಕಠಿಣವಾಗಿದೆ ಮತ್ತು ಈ ದಾರಿ ಬದಲಾಯಿಸಬೇಕಾದರೆ ಸಾಕಷ್ಟು ಬಂಡವಾಳ ಬೇಕು. ಒಂದು ಕಡೆ ಬಹಳ ದಿವಸಗಳಿಂದ ಪಟ್ಟಭದ್ರಹಿತಗಳು ಬೆಳೆದುಕೊಂಡು ಬಂದಿವೆ, ಇನ್ನೊಂದು ಕಡೆ ಸಾಕಷ್ಟು ಬಂಡವಾಳ ಒದಗಿಸಿಲ್ಲ. ಈ ಎರಡು ಕಾರಣಗಳಿಂದ ಮಾಮೂಲಾಗಿ ಹಿಂದಿನಿಂದ ಒಂದು ದಾರಿಯಲ್ಲಿ ಹೋಗುತ್ತಿದೆ. ಇದರಿಂದ ಯಾರಿಗೆ ತೊಂದರೆಯಿತ್ತೋ ಅದು ಇದ್ದೇಇದೆ, ಲಾಭ ಪಡೆಯುವವರು ಹೆಚ್ಚು ಪಡೆಯುತ್ತಿದ್ದಾರೆ. ಇದನ್ನು ಬದಲಾಯಿಸಬೇಕಾದರೆ ಮೊದಲು ಹಣದ ಪ್ರಶ್ನೆ ಬರುವುದು. ಮೈಸೂರಿನಲ್ಲಿ ನಾವು ಶೇಕಡ 75-80 ರಷ್ಟು ಹಣ ಒದಗಿಸಿದ್ದೇವೆ, ಪೂರ್ಣವಾಗಿ ಇದಕ್ಕೆ ಬೇಕಾಗುವಷ್ಟು ಹಣ ಒದಗಿಸುವುದಕ್ಕಾಗಿಲ್ಲ. ಇನ್ನೂ ಹೆಚ್ಚು ಹಣ ಒದಗಿಸಿದರೆ ಈ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಅವಕಾಶವಿದೆ. ಆದರೆ ನಾನಾ ಕಾರಣಗಳಿಂದ ಸಾಕಷ್ಟು ಹಣ ಒದಗಿಸುವುದಕ್ಕಾಗಿಲ್ಲ.

ನಿರ್ಣಯದಲ್ಲಿ ಬೆಲೆಗಳ ಏರಿಳಿತದ ವಿಚಾರವಿದೆ. ಅದಕ್ಕೆ ಹಲವಾರು ಕಾರಣಗಳಿವೆ. ಹಂತ ಹಂತವಾಗಿ ನೋಡುವುದಾದರೆ ಮೊದಲು ನಮ್ಮ ದೇಶದಲ್ಲಿ ರೇಷ್ಮೆ ಬೆಳೆಯುವವರು ಯಾರು, ಅವರ ಸ್ಥಿತಿಗತಿಯೇನು ಎಂಬುದನ್ನು ನೋಡೋಣ. ನಮ್ಮ ರಾಜ್ಯದಲ್ಲಿ ಸುಮಾರು ಎರಡು ಲಕ್ಷ ಎಕರೆಗಳಲ್ಲಿ ಈ ಬೆಳೆಯಿದೆ. ಅದರಲ್ಲಿ ಒಂದು ಲಕ್ಷ 60 ಸಾವಿರ ಎಕರೆಗಳಲ್ಲಿ ಮಳೆಗಾಲದಲ್ಲಿ ಬೆಳೆ ಇಡುವರು. ಮಳೆ ಇಲ್ಲದಿದ್ದರೆ ಅಲ್ಲಿ ಬೆಳೆಯಿಲ್ಲ. ಇನ್ನುಳಿದ 40 ಸಾವಿರ ಎಕರೆಗಳಲ್ಲಿ ಬಾವಿಯ ನೀರನ್ನು ಉಪಯೋಗಿಸಿ ವರ್ಷವೆಲ್ಲಾ ರೇಷ್ಮೆ ಬೆಳೆಯುವರು. ಕೋಲಾರ ಮತ್ತು ಬೆಂಗಳೂರು ಜಿಲ್ಲೆ ಕೆಲವು ಭಾಗಗಳಲ್ಲಿ ಈ ಬೆಳೆ ಇದೆ. ಎಲ್ಲಿ ಬಾವಿ ನೀರನ್ನುಪಯೋಗಿಸಿ 365 ದಿವಸಗಳು ಬೆಳೆಯುತ್ತಿದ್ದಾರೋ ಅಲ್ಲಿ ತುಂಬ ಲಾಭವಿಲ್ಲದಿದ್ದರೂ ಮಳೆಗಾಲದಲ್ಲಿ ಬೆಳೆದು ಬೇಸಗೆಯಲ್ಲಿ ಬೆಳೆಯದಿರುವವರಿಗಿಂತ ಸ್ವಲ್ಪ ಉತ್ತಮ. ಅವರು ಹೆಚ್ಚು ಕಷ್ಟಪಡುತ್ತಿಲ್ಲ. ಒಟ್ಟಿನಲ್ಲಿ ರೇಷ್ಮೆ ಬೆಳೆಗೆ ಏನು ಖರ್ಚು ಮಾಡುತ್ತಿದ್ದಾರೋ ಅದಕ್ಕೆ ತಕ್ಕಂತೆ ಒಂದೊಂದು ಸಾರಿ ಬೆಲೆ ಸರಿಯಾಗಿ ಬರುವುದರಿಂದ ಖರ್ಚು ಗಿಟ್ಟಿ ಲಾಭ ಬರುವುದು. ಕೆಲವು ಸಲ ಖರ್ಚು ಸಹ ಗಿಟ್ಟುವುದಿಲ್ಲ.

ಒಂದೊಂದು ಸಂದರ್ಭದಲ್ಲಿ ಹುಳ ಕೊಳ್ಳುವಾಗ ಅದಕ್ಕೆ ರೋಗವಿದ್ದರೆ ಅಥವ ಯಾವುದೇ ಸಾಕುವ ಪ್ರದೇಶ ನಿರ್ಮಲವಾಗಿ ಅಥವ ಸೈಂಟಿಫಿಕ್ಕಾಗಿ ಇಲ್ಲದಿದ್ದರೆ ಬೆಳೆ ಕೆಡುವುದು. ಏನಾದರೂ ಲೋಪದೋಷವುಂಟಾದರೆ ಬೆಳೆ ಹೋದರೆ ಪೂರ್ಣವಾಗಿ ನಷ್ಟವಾಗುವುದು. ಹೀಗೆ ನಷ್ಟವಾಗುವುದಕ್ಕೆ ಕಾರಣ ಒಂದು ರೀತಿಯಲ್ಲಿ ನಾವಿನ್ನೂ ಸಮರ್ಪಕವಾಗಿ ರೈತರಿಗೆ ರೋಗರಹಿತವಾದ ಬಿತ್ತನೆಯನ್ನೊದಗಿಸುವುದಕ್ಕಾಗಿಲ್ಲ ಎಂಬುದನ್ನು ಒಪ್ಪುತ್ತೇನೆ. ಇದಕ್ಕೆ ತಕ್ಕ ವ್ಯವಸ್ಥೆಮಾಡಬೇಕು. ಇದಕ್ಕೆ ಬೇರೆಬೇರೆ ಕಾರಣಗಳಿವೆ. ಪಾಶ್ಚಾತ್ಯ ದೇಶದಲ್ಲಿ ಇತ್ತೀಚೆಗೆ ಏನು ಮಾಡುತ್ತಿದ್ದಾರೆಂದರೆ ರೈತರಿಗೆ ರೇಷ್ಮೆ ಮೊಟ್ಟೆ ಒದಗಿಸುತ್ತಿದ್ದಾರೆ, ನಮ್ಮ ಹಾಗೆ ನೂರು ಅಥವ ಇನ್ನೂರು ಕೊಟ್ಟರೆ ಸಮಾಧಾನವಾಗುವುದಿಲ್ಲ. ಅಲ್ಲಿ ದೊಡ್ಡ ಕಂಪೆನಿ ಇದೆ, ಅದು ಕೋಟಿಗಟ್ಟಲೆ ಶಾಸ್ತ್ರೀಯವಾಗಿ ತಯಾರಿಸಿ ರೋಗರಹಿತವಾದುದನ್ನು ಟೆಸ್ಟ್‌ಮಾಡಿ ರೈತರಿಗೆ ಕೊಡುವುದು. ನಮ್ಮಲ್ಲೂ ಒಂದು ವ್ಯವಸ್ಥೆಯಿದ್ದರೂ ಅಷ್ಟೊಂದು ಶಾಸ್ತ್ರೀಯವಾಗಿ ಆ ಪ್ರಮಾಣದಲ್ಲಿ ಮಾಡುತ್ತಿದ್ದೇವೆಂದು ಹೇಳುವ ಧೈರ್ಯ ನಮಗಿಲ್ಲ. ನಮ್ಮಲ್ಲಿ ಅನೇಕ ಲೋಪದೋಷಗಳಿವೆ, ಒಂದು ಕಡೆ ಲೈಸೆನ್ಸ್ ಎಲ್ಲರಿಗೂ ಕೊಡಲಾಗಿದೆ, ಗ್ರೈನ್ಯೂರ್ಸ್ ಎಂದು 600 ಜನರಿದ್ದಾರೆ, ಹಾಗಿರುವಾಗ ಏಕೆ ವ್ಯವಸ್ಥಿತವಾಗಿ ಮಾಡಬಾರದು ಎನ್ನಬಹುದು. ಒಂದು ಕಾಲದಲ್ಲಿ ಸರಕಾರ ಒಂದು ತೀರ್ಮಾನ ಮಾಡಿ ಇಲಾಖೆ ಪೂರ್ಣವಾಗಿ ಮಾಡುವುದಕ್ಕಾಗುವುದಿಲ್ಲ, ಮಾರ್ಕೆಟ್ಟಿನಿಂದ ಒದಗಿಸಬೇಕೆಂದು ಗೊತ್ತು ಮಾಡಲಾಯಿತು. ನಾವೇನು ತಪ್ಪುಮಾಡುತ್ತೇವೆ ಎಂದು ಗ್ರೈನ್ಯೂರ್ಸ್ ಹೇಳುವರು, ಇಲಾಖೆ ಕೂಡ ಮೊಟ್ಟೆ ತಯಾರಿಸುವಾಗ ಅನೇಕ ಲೋಪ ಮಾಡುವುದು, ಅದರಿಂದ ಖಾಯಿಲೆ ಬರುವುದು,

ಎಂದು ದೂರುವರು. ಖಾಸಗಿಯವರು ಸರಿಯಾಗಿ ಮಾಡುತ್ತಿಲ್ಲ, ಸರಕಾರ ಸರಿಯಾಗಿ ಮಾಡುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲರಲ್ಲೂ ಲೋಪದೋಷವಿದೆ. ಒಟ್ಟಿನ ಪರಿಣಾಮವೇನೆಂದರೆ ರೋಗರಹಿತ ಮೊಟ್ಟೆಗಳನ್ನು ನೂರಕ್ಕೆ ನೂರರಷ್ಟು ಕೊಡುತ್ತಿದ್ದೇವೆ ಎಂದು ನಿಮ್ಮ ಮುಂದೆ ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ಅದರ ಕಡೆಗೂ ಲಕ್ಷ್ಯ ಕೊಟ್ಟಿದ್ದೇವೆ. ಒಟ್ಟಿನಲ್ಲಿ ನಮ್ಮ ರೈತರಿಗೆ ಖಾಸಗಿಯವರ ಮುಖಾಂತರವಾಗಲೀ, ಇಲಾಖೆಯ ಮುಖಾಂತರವಾಗಲೀ, ಪ್ರಥಮತಃ ರೋಗ ರಹಿತ ಮೊಟ್ಟೆಗಳು ದೊರೆಯುವಂತೆ ಮಾಡಬೇಕಾದ್ದು ನಮ್ಮ ಕರ್ತವ್ಯ. ಇಷ್ಟಾದರೂ ಮಾಡಿದರೆ ರೈತರಿಗೆ ಆಗುತ್ತಿರುವ ನಷ್ಟವನ್ನು ಸ್ವಲ್ಪಮಟ್ಟಿಗಾದರೂ ತೂಗಿದ ಹಾಗಾಗುತ್ತದೆ.

ಇಲ್ಲಿಯವರೆಗೂ ಮುಕ್ಕಾಲು ಭಾಗದ ರೇಷ್ಮೆ ಬೆಳೆ ಎಂದರೆ ಹಿಪ್ಪನೇರಳೆ ತೋಟಗಳು ಮಳೆಯನ್ನೇ ನಂಬಿಕೊಂಡಿರುತ್ತವೆಯಾದ್ದರಿಂದ ಅದನ್ನು ಎಕನಾಮಿಕ್ ಆಗಿ ಮಾಡುವುದಕ್ಕಾಗುವುದಿಲ್ಲ. ಎಷ್ಟು ಹೆಚ್ಚು ಬೆಳೆ ಬಂದರೆ ನಮಗೆ ಅಷ್ಟು ಲಾಭ ಸಿಕ್ಕೀತು ಎಂದು ರೈತರು ಇರುತ್ತಾರೆ. ಗೂಡಿಗೆ ಐದು ರೂಪಾಯಿ ದರವಿತ್ತು ಎನ್ನುವುದು ತಮಗೆಲ್ಲರಿಗೂ ಗೊತ್ತಿರಬಹುದು. ಒಂದು ವರ್ಷದ ಹಿಂದೆ ಗೂಡಿನ ಬೆಲೆ ನಾಲ್ಕು ರೂಪಾಯಿಗೆ ಇಳಿಯಿತು. ಕೋಲಾರದ ಭಾಗದಲ್ಲಿ 15 ರೂಪಾಯಿ ಇದ್ದುದು ಆರೇಳು ರೂಪಾಯಿಗಳಿಗೆ ಇಳಿಯಿತು. ಆವಾಗ ರೈತರು ಹಾಹಾಕಾರ ಮಾಡಿದರು. ಮುಂದೆ ರೇಷ್ಮೆ ಬೆಳೆ ಏಕೆ ಇಡಬೇಕು ಎನ್ನುವ ಭಾವನೆ ಬಂತು. ಗೂಡಿನ ಬೆಲೆ ಇಳಿದುದರಿಂದ ಅದಕ್ಕೆ ಮಾಡುವ ಖರ್ಚೂ ಬರುವುದಿಲ್ಲ ಎಂದು ರೇಷ್ಮೆ ವ್ಯವಸಾಯವನ್ನು ಬಿಟ್ಟರು. ಎರಡು ವರ್ಷಗಳ ಹಿಂದೆ ಹಠಾತ್ತಾಗಿ ನಮ್ಮ ದೇಶದ ರಫ್ತು ವ್ಯಾಪಾರ ರೇಷ್ಮೆಯಲ್ಲಿ ಏಳೆಂಟು ಕೋಟಿ ರೂಪಾಯಿ ಇದ್ದುದು ಒಂದೇ ವರ್ಷದಲ್ಲಿ 15 ಕೋಟಿ ರೂಪಾಯಿಗಳಿಗೆ ಏರಿತು. ಯಾವಾಗ ಹೊರಗಡೆಗೆ ರೇಷ್ಮೆ ಬಟ್ಟೆ ದೊಡ್ಡ ಪ್ರಮಾಣದಲ್ಲಿ ರಫ್ತು ಆಯಿತು ಆವಾಗ ರೇಷ್ಮೆ ಬೆಲೆ ಜಾಸ್ತಿಯಾಯಿತು. ರೇಷ್ಮೆಗೆ ಬೆಲೆ ಜಾಸ್ತಿ ಬಂದಾಗ ಗೂಡಿಗೂ ಜಾಸ್ತಿ ಬೆಲೆ ಬಂತು. ಮೈಸೂರು ದೇಶದಲ್ಲಿ 13 ಲಕ್ಷ ಚಿಲ್ಲರೆ ಕೆ. ಜಿ. ರೇಷ್ಮೆ ಒಂದು ವರ್ಷದಲ್ಲಿ ತಯಾರಾಗುತ್ತಿದ್ದುದು 18 ಲಕ್ಷ ಚಿಲ್ಲರೆ ಕೆಜಿಗೆ ಏರಿತು. ಒಂದು ಕಡೆ ಹಠಾತ್ತಾಗಿ ಯಾವಾಗ ಹೆಚ್ಚುವರಿ ಆಯಿತೋ, ಇನ್ನೊಂದು ಕಡೆ ಆದ ಪರಿಣಾಮವೇನು ಎಂದು ನಾವು ನೋಡೋಣ. ಒಂದು ವರ್ಷದಲ್ಲಿ ಏಳೆಂಟು ಕೋಟಿ ರೂಪಾಯಿನಿಂದ ರಫ್ತು ವ್ಯಾಪಾರ 15 ಕೋಟಿ ರೂಪಾಯಿಗೆ ಹೋಗಿ ಪುನಃ ಇನ್ನೊಂದು ವರ್ಷ 8 ಕೋಟಿ ರೂಪಾಯಿಗೆ ಇಳಿಯಿತು. ಇದನ್ನು ಮಾನ್ಯ ಸದಸ್ಯರು ಸ್ವಲ್ಪ ಗಮನಿಸಬೇಕು. ಏಕೆ ಹೀಗಾಯಿತು ಏನ್ನುವುದಕ್ಕೆ ಅನೇಕ ಕಾರಣಗಳಿವೆ. ಎಕ್ಸ್‌ಪೋರ್ಟ್ ವಿಚಾರ ಗಂಟೆಗಟ್ಟಲೆ ಮಾತನಾಡಬಹುದು. ಹೆಣ್ಣು ಮಕ್ಕಳು ಕಟ್ಟಿಕೊಳ್ಳತಕ್ಕ ಚೌಕಗಳು, ಸ್ಕಾರ್ಫ್‌ಗಳಿಗೆ ಏಕ'ದಂ ಇಂಗ್ಲೆಂಡಿನಲ್ಲಿ ಮತ್ತು ಅಮೆರಿಕಾದಲ್ಲಿ ಬಹಳ ಡಿಮ್ಯಾಂಡ್ ಬಂತು. ಏಳೆಂಟು ಕೋಟಿ ರೂಪಾಯಿ ಬೆಲೆ ಬಾಳುವ ವಸ್ತುಗಳು ಒಂದೇ ಸಾರಿಗೆ ರವಾನೆಯಾಯಿತು. ಯಾವಾಗ ಒಂದೇ ಸಲ ಹೆಚ್ಚು ಸರಕು ರವಾನೆಯಾಗಬೇಕಾಯಿತು, ಆವಾಗ ನಮ್ಮ ದೇಶದಲ್ಲಿ ರಫ್ತು ವ್ಯಾಪಾರದಲ್ಲಿರುವವರು ಸಿಕ್ಕಾಬಟ್ಟೆ ಸಬ್ ಸ್ಟ್ಯಾಂಡರ್ಡ್ ಗೂಡ್ಸ್ ಎಲ್ಲ ಕಳುಹಿಸಿದರು. ಅದು ಹೋಗಿ ಬೀದಿ ಬೀದಿಯಲ್ಲಿ ಬಿತ್ತು. ಅಲ್ಲಿ ಹೋಗಿ ನೋಡಿದರೆ, ನಿಗದಿ ಬೆಲೆಗಿಂತ ಕಡಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಹುಳ ತಿಂದದ್ದು, ಸರಿಯಾಗಿ ನೇಯದೆ ಇದ್ದದ್ದು ಇಂಥವೆಲ್ಲ ಇತ್ತು. ಇಂಡಿಯಾ ದೇಶದಿಂದ ಇಂಥ ವಸ್ತುಗಳನ್ನು ಕಳುಹಿಸಿದ್ದನ್ನು ನೋಡಿ ಆಮದು ಮಾಡಿಕೊಳ್ಳುವುದನ್ನು ಅಲ್ಲಿಯ ಜನ ಕಡಮೆ ಮಾಡಿದರು. ಯೂರೋಪ ದೇಶಕ್ಕೆ ಹೋಗಿದ್ದಾಗ ಮಾರುಕಟ್ಟೆಯಲ್ಲಿ ಎಲ್ಲ ಕಡೆಯೂ ಇದ್ದ ಪರಿಸ್ಥಿತಿಯನ್ನು ನಾನು ನೋಡಿದೆ; ತಜ್ಞರು ಹೇಳುವ ಪ್ರಕಾರ ಅಲ್ಲಿ ಕೂಡ ಎಕನಾಮಿಕ ಡಿಪ್ರೆಸನ್ ಇದ್ದು, ರೇಷ್ಮೆ ಉಪಯೋಗ ಮಾಡುವವರು ಕಡಮೆಯಾದರು. ಒಟ್ಟಿನಲ್ಲಿ ಹೊರಗಡೆ ಹೋಗುವ ಮಾಲು ಕಡಮೆಯಾಗಿ ನಮ್ಮ ದೇಶದಲ್ಲಿಯೂ ರೇಷ್ಮೆಯ ಬೆಲೆ ಕಡಮೆಯಾಗಲು ಕಾರಣವಾಯಿತು. ಅಲ್ಲಿಯವರೆಗೂ ಗೂಡಿನ ಬೆಲೆ 10-12 ರೂಪಾಯಿ ಮತ್ತು ಕೋಲಾರದಲ್ಲಿ 15 ರೂಪಾಯಿವರೆಗೂ ಇದ್ದದ್ದು ಆರೇಳು ರೂಪಾಯಿಗಳಿಗೆ ಇಳಿಯಿತು. ಯಾವಾಗ ಬೆಲೆ ಇಳಿಯಿತು, ರೈತರೆಲ್ಲ ಹೆದರಿ ಈ ಬೆಳೆ ಬೆಳೆಯುವುದು ಏಕೆ, ಇನ್ನು ಯಾವುದಾದರೂ ಬೆಳೆಯನ್ನು ಬೆಳೆಯೋಣ ಎಂದು ಬೇರೆ ಕಡೆಗೆ ಸ್ವಲ್ಪ ಗಮನ ತಿರುಗಿಸಿದರು. ಆದರಿಂದ ಈಗ ಮತ್ತೆ ನಮ್ಮ ರೈತರು ಬೆಳೆ ಕಡಮೆ ಮಾಡಿದ್ದಾರೆ ಇದರಿಂದ ಬೆಲೆ ಸ್ವಲ್ಪ ಜಾಸ್ತಿಯಾಗಿದೆ.

ನಮ್ಮ ರೇಷ್ಮೆ ಎಲ್ಲಾ ಉತ್ತರ ಇಂಡಿಯಾಕ್ಕೆ ಹೋಗುತ್ತದೆ ಎಂದು ಮಾನ್ಯ ನಾಗಣ್ಣ ಅವರು ಹೇಳಿದರು. ಅದು ಹೋಗದೆ ಹೋದರೆ ಏನಾಗುತ್ತದೆ ಎಂಬುದನ್ನು ತಿಳಿದುಕೊಳ್ಳಿ. ಬೇರೆ ಕಡೆಗೆ ಹೋಗದೆ ಇದ್ದರೆ ಬೆಲೆ ಕಡಮೆಯಾಗುತ್ತದೆ. ಯಾವಾಗ ಬೇರೆ ಕಡೆಗಳಿಗೆ ಹೋಗುತ್ತದೆ ಆವಾಗ ಬೆಲೆ ಕುದುರುತ್ತದೆ. ಏಳೆಂಟು ತಿಂಗಳು, ಒಂದು ವರ್ಷ, ಬೆಂಗಳೂರಿನಿಂದ ಹೊರಗಡೆ ರೇಷ್ಮೆ ಹೋಗುವುದು ಕಡಿಮೆಯಾಯಿತು. ಉತ್ತರ ಇಂಡಿಯಾದಲ್ಲಿ ಡಿಸ್ಟರ್ಬ್ಡ್ ಕಂಡೀಷನ್ಸ್ ಬಂತು,

(ಶ್ರೀ ಡಿ. ದೇವರಾಜ್ ಅರಸ್)

ಪಾಕಿಸ್ತಾನದೊಡನೆ ಯುದ್ಧ, ಅದಕ್ಕಿಂತ ಮುಂಚೆ ಬಂಗಾಳದಿಂದ ನಿರಾಶ್ರಿತರು ಬಂದರು. ನೇಕಾರರು ಇರುವ ಕೆಲವು ಭಾಗ ಬಿಹಾರ ಮತ್ತು ಬಂಗಾಳದಲ್ಲಿದೆ. ಮೂರು ಸಾವಿರ, ನಾಲ್ಕು ಸಾವಿರ ಕೈಮಗ್ಗಗಳಿರುವ ಪ್ರದೇಶದಲ್ಲಿ ಕೈಮಗ್ಗಗಳೊಂದೂ ನಡೆಯಲಿಲ್ಲ, ಯಾವಾಗ ಕೈಮಗ್ಗಗಳು ನಡೆಯುವುದು ನಿಂತು ಹೋಯಿತೋ ಆವಾಗ ನಮ್ಮ ರೇಷ್ಮೆಯನ್ನು ಅವರು ಕೊಳ್ಳುವುದು ಕಡಿಮೆಯಾಯಿತು. ಹೀಗಾಗಿ ಒಂದಕ್ಕೊಂದಕ್ಕೆ ಲಿಂಕ್ ಇದೆ. ಯಾವಾಗ ಕೊಳ್ಳುವುದು ಕಡಿಮೆಯಾಯಿತೋ ಇಲ್ಲಿ ಬೆಲೆ ಬಿದ್ದು ಹೋಯಿತು. ಬೆಲೆ ಬಿದ್ದಾಗ ಹಾಹಾಕಾರ ವುಂಟಾಯಿತು. ಆವಾಗಲೇ ಹೊರದೇಶಗಳಿಗೆ ಹೋಗಿ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಏನೇನು ಸಾಧ್ಯತೆಗಳಿವೆ ಎಂದು ರೇಷ್ಮೆ ಮಂಡಲಿಯ ಅಧ್ಯಕ್ಷನಾಗಿ ನಾನು ನೋಡುವುದಕ್ಕೆ ಹೋಗಿದ್ದುದು. ಇದು ಕೇವಲ ಯಾವುದೋ ಒಂದು ಬೆಂಗಳೂರು ಪಟ್ಟಣದಲ್ಲಿರುವ ಸೊಸೈಟಿಯಲ್ಲಾಗಲಿ, ಮೈಸೂರು ಸರ್ಕಾರದ ಫಿಲೇಚರ್‌ನಲ್ಲಾಗಲೀ ಒಂದು ಕಡೆ ಕೂಡಿಟ್ಟಿರುವುದು, ಸಮಯ ಬಂದಾಗ ಮಾರುಕಟ್ಟೆಗೆ ಬಿಡುಗಡೆ ಮಾಡುವುದು ಎಂದು ಯಾರೊಬ್ಬರೂ ತಿಳಿಯಬಾರದು. ಬೆಂಗಳೂರು ನಗರದಲ್ಲಿ ಒಂದು ಸೊಸೈಟಿ ಇದೆ. ಆ ಸೊಸೈಟಿಗೆ ರೈತರು ಗೂಡನ್ನು ಮಾರುತ್ತಾರೆ. ರೀಲರ್ಸ್ ಎಂದರೆ, ಗೂಡಿನಿಂದ ರೇಷ್ಮೆ ತೆಗೆಯುವ ಜನ ಯಾರಿದ್ದಾರೆ ಅವರು ಅದನ್ನು ಕೊಂಡುಕೊಳ್ಳಬೇಕು. ಅವರು ದೊಡ್ಡ ದೊಡ್ಡ ಜನರಲ್ಲ, ಐದು, ಹತ್ತು, ಇಪ್ಪತ್ತು, ರಾಟೆಗಳನ್ನು ಇಟ್ಟುಕೊಂಡಿರುವವರು. ಕೂಲಿ ಕೊಟ್ಟು ಕೆಲಸ ಮಾಡಿಸುವವರು ಕೆಲವರು ಮತ್ತು ಸ್ವತಃ ತಾವೇ ಮಾಡುವವರು ಕೆಲವರು. ಗೂಡನ್ನು ಕೊಳ್ಳುವವರು ಇಂಥ ಒಂದು ವರ್ಗದ ರೀಲರ್ಸ್. ದೊಡ್ಡ ವ್ಯಾಪಾರಸ್ಥರುಗಳು, ಗೂಡನ್ನು ಕೊಳ್ಳುವವರು ಎಂದರೆ ಸರ್ಕಾರದವರು. ಫಿಲೇಚರ್ಸ್ ಎಂದು ಏನು ಸರ್ಕಾರದಿಂದ ನಡೆಸುತ್ತಿದ್ದೇವೆ—ಕೊಳ್ಳೇಗಾಲದಲ್ಲಿ, ಕನಕಪುರದಲ್ಲಿ, ಮೈಸೂರಿನಲ್ಲಿ, ಟಿ. ನರಸೀಪುರದಲ್ಲಿ, ಚಾಮರಾಜನಗರದಲ್ಲಿ, ಆ ಫಿಲೇಚರ್ಸ್‌ನವರು ಇದನ್ನು ಕೊಂಡುಕೊಳ್ಳತಕ್ಕ ದೊಡ್ಡ ವ್ಯಾಪಾರಿಗಳು. ನಾವು ಗೂಡನ್ನು ಕೊಂಡುಕೊಳ್ಳುವುದಿಲ್ಲವೆಂದರೆ ಹಠಾತ್ತನೆ ಬೆಲೆ ಕಡಮೆಯಾಗುತ್ತದೆ. ಫಿಲೇಚರ್ಸ್‌ನಲ್ಲಿ ನಷ್ಟವಾಗುತ್ತಿದೆ ನಿಜ. ಆದರೂ ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಈಗಿರುವ ಪರಿಸ್ಥಿತಿಯಲ್ಲಿ ಯಾವ ರೀತಿ ಇದನ್ನು ತಿಳಿದುಕೊಂಡರೂ ಪರವಾ ಇಲ್ಲ. ನಿಲ್ಲಿಸುವುದು ಕಷ್ಟ. ನಿಲ್ಲಿಸುವುದು ಎಂದರೆ ಕಾರ್ಖಾನೆಯನ್ನು ಮುಚ್ಚಿಬಿಟ್ಟರೆ ಆಯಿತು. ಅದನ್ನು ಮುಚ್ಚಿದರೆ ಅದರ ಪರಿಣಾಮವೇನಾಗುತ್ತದೆ ಎನ್ನುವುದು ಕೇವಲ ಅಲ್ಲಿರತಕ್ಕ ಕಾರ್ಮಿಕರಿಗೆ ಕೆಲಸವಿಲ್ಲದೆ ಹೋಗುವುದು ಒಂದೇ ಅಲ್ಲ, ಇಡೀ ರೇಷ್ಮೆ ಕೈಗಾರಿಕೆಗೆ ಒಂದು ಕೊಡಲಿ ಪೆಟ್ಟು ಆಗುತ್ತದೆ. ನಷ್ಟವಾದರೂ ಫಿಲೇಚರುಗಳನ್ನು ನಡೆಸಿಕೊಂಡು ಬರಬೇಕು. ನಷ್ಟ ತುಂಬುವುದಕ್ಕೆ ಸಾಧ್ಯವಿಲ್ಲವೆಂದರೆ ಹೇಗೆ, ನಮ್ಮಲ್ಲಿರುವ ಯಂತ್ರೋಪಕರಣಗಳನ್ನು ಮಾಡರನೈಸ್ ಮಾಡಬೇಕು ಎನ್ನುವ ಒಂದು ಮಾತು ಇದೆ. ಯಾವುದೋ ಕಾಲದಿಂದ ತಂದು ಇಟ್ಟುಕೊಂಡಿರತಕ್ಕ ಯಂತ್ರೋಪಕರಣಗಳು, ಅದರ ಎಫಿಷಿಯೆನ್ಸಿ ಇಲ್ಲ, ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಪಾಶ್ಚಿಮಾತ್ಯ ದೇಶಗಳಲ್ಲಿ ಆಧುನಿಕ ಯಂತ್ರಗಳೇನಿವೆ ಅದನ್ನು ನೋಡಿದಾಗ ನಾವು ನೂರು ವರ್ಷಗಳ ಹಿಂದೆ ಇದ್ದೇವೆ, ಅವರು ಅಷ್ಟು ಮುಂದುವರಿದಿದ್ದಾರೆ. ಆದುದರಿಂದ ನಾವು ಅವರೊಡನೆ ಪೈಪೋಟಿ ಮಾಡುವುದಕ್ಕಾಗುತ್ತಿಲ್ಲ.

ಇಲ್ಲಿ ಲಾಭಬರುವುದೇ ಬಹಳ ಕಷ್ಟ. ಕೂಲಿಯನ್ನು ಹೆಚ್ಚಿಗೆ ಕೊಡಬೇಕು. ಹೀಗೆ ಇದು ಒಂದಕ್ಕೊಂದಕ್ಕೂ ಸಂಬಂಧವಿದೆ. ಅಲ್ಲದೆ ನಮ್ಮಲ್ಲಿ ತಯಾರಾಗತಕ್ಕ ಗೂಡುಗಳೇನಿವೆ ಅವು ಅಷ್ಟು ಸ್ಟಾಂಡರ್ಡ್ ಅಲ್ಲ. ನಮ್ಮಲ್ಲಿ ರೈತ ಬೆಳೆಯುತಕ್ಕ ರೇಷ್ಮೆ ಗೂಡುಗಳೇನಿವೆ ಅವುಗಳನ್ನು ಗ್ರೇಡವಾರ್ ವಿಂಗಡಿಸಿದರೆ ಸುಮಾರು ಸಾವಿರ ಜನ ರೈತರು ಬೆಳೆದ ಗೂಡುಗಳನ್ನು ಸಾವಿರ ಗ್ರೇಡಾಗೆ ವಿಂಗಡಿಸಬೇಕಾಗುತ್ತದೆ. ಅಂದರೆ ನಮ್ಮಲ್ಲಿ ಬೆಳೆಯುತಕ್ಕ ರೇಷ್ಮೆ ಅಷ್ಟು ಒಳ್ಳೇ ಗ್ರೇಡಿನ ರೇಷ್ಮೆ ಅಲ್ಲ. ಇಟಲಿ ಮತ್ತು ಜಪಾನುಗಳಲ್ಲಿ ಎಷ್ಟೇ ಜನ ರೈತರು ಬೆಳೆಯಲಿ, ಅಲ್ಲಿ ಬೆಳೆಯುತಕ್ಕ ರೇಷ್ಮೆಯನ್ನು ಕೇವಲ ಒಂದೆರಡು ಗ್ರೇಡುಗಳನ್ನಾಗಿ ವಿಂಗಡಿಸಬಹುದು. ನಮ್ಮಲ್ಲಿ ಸಾವಿರ ಜನ ಬೆಳೆದರೆ ಸಾವಿರ ಗ್ರೇಡುಗಳನ್ನಾಗಿ ಮಾಡಬೇಕಾಗುವುದು. ಹೊರದೇಶಗಳಲ್ಲಿ ಬೆಳೆಯುತಕ್ಕ ರೇಷ್ಮೆ ಅಷ್ಟು ಉತ್ತಮವಾದುದಾಗಿ ಏಕೆ ಇರುತ್ತದೆಂದರೆ ಅಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳಿವೆ, ರಿಸರ್ಚ್ ಸೆಂಟರುಗಳಿವೆ. ನಾವೇನು ಇಲ್ಲಿ ಒಂದು ದೊಡ್ಡ ರೇಷ್ಮೆ ಕಾರ್ಖಾನೆಗೆ ದುಡ್ಡನ್ನು ಹಾಕಿರುತ್ತೇವೋ ಅಷ್ಟು ಹಣವನ್ನು ಅಲ್ಲಿ ಒಂದು ರಿಸರ್ಚ್ ಸೆಂಟರಿಗೆ ಹಾಕಿರುತ್ತಾರೆ. ಅಲ್ಲಿ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿಯುತ್ತಿದ್ದಾರೆ. ಅಲ್ಲಿಯ ಸ್ಟಾಂಡರ್ಡ್ ಆಗಲೇ ಬಹಳ ಪಾಪ್ಯುಲರೈಸಾಗಿದೆ. ಅದಕ್ಕೆಲ್ಲಾ ಅಲ್ಲಿ ಅವಕಾಶವುಂಟು. ನಮ್ಮಲ್ಲಿ ಏನಿದ್ದರು ಬರೀ ಟಚ್ ಅಂಡ್ ಗೋ ಅನ್ನುವ ರೀತಿಯಲ್ಲಿ ಇಲ್ಲಿ ಇದು ನಡೆಯುತ್ತಿದೆ. ನನಗೆ ನಿಜವಾಗಿಯೂ ಹೇಳಬೇಕೆಂದರೆ ಈ ಬಾಬಿನಲ್ಲಿ ನಮಗೆ ಅಷ್ಟು ಆಳವಾದ ಜ್ಞಾನವಿದೆಯೇ ಅನ್ನುವುದರಲ್ಲಿ ನನಗೆ ಸಂಶಯವಿದೆ. ಅಷ್ಟು ಆಳವಾದ

ಜ್ಞಾನವೂ ಇಲ್ಲ—ವ್ಯವಧಾನವೂ ಇಲ್ಲ; ದುಡ್ಡೂ ಇಲ್ಲ. ನಾವು ಎಲ್ಲವನ್ನೂ ಮಾಡುವುದಕ್ಕೆ ಹೋಗುತ್ತೇವೆ. ಆದರೆ ಯಾವುದರಲ್ಲೂ ಸರಿಯಾಗಿ ಸ್ಪೈ ಅನ್ನಿಸಿಕೊಳ್ಳುವುದಕ್ಕಾಗುವುದಿಲ್ಲ. ನಾವು ಇಲ್ಲಿಯವರೆವಿಗೂ ಎಷ್ಟೋ ತಜ್ಞರ ಸಮಿತಿಗಳನ್ನು ಮಾಡಿದ್ದಾಯಿತು ಅವು ರೆಕ್ಕವಿಲ್ಲದಷ್ಟಿವೆ. ನಾನೂ ಕೂಡ ಅನೇಕ ವರದಿಗಳನ್ನು ಓದಿದೆ. ಆದರೆ ನಾನು ಮುಖ್ಯಮಂತ್ರಿಯಾಗಿದ್ದರೂ ಏಕೆ ಈ ರೇಷ್ಮೇ ಬಾಬನ್ನು ನನ್ನ ಕೈಲೇ ಇಟ್ಟುಕೊಂಡೆ ಎಂದರೆ ಇದನ್ನು ಏನಾದರೂ ಮಾಡಿ ಚೆನ್ನಾಗಿ ನಡೆಯುವಂತೆ ಮಾಡಲೇಬೇಕೆಂಬ ಒಂದು ಹಟಕ್ಕಾಗಿ ಇಟ್ಟುಕೊಂಡಿದ್ದೇನೆ. ನಾನು ಹಿಂದೆ ಇದೇ ಬೋರ್ಡಿಗೆ ಛೇರ್ಮನ್ನಾಗಿದ್ದೆ. ಹಾಗೆ ಛೇರ್ಮನ್ ಆದವರು ಇದರ ಬಗ್ಗೆ ಏನು ಮಾಡಬಹುದು ಎಂಬುದನ್ನು ನಾನು ತಿಳಿದುಕೊಂಡಿದ್ದಾಯಿತು. ನನಗೆ ಆಗ ಅಲ್ಲಿ ಏನು ಮಾಡುವುದಕ್ಕೂ ಸಾಧ್ಯವಾಗಲಿಲ್ಲ. ಕಾರಣ 1948 ರಲ್ಲಿ ಮಾಡಿದ ಆಕ್ಟೇ ಇನ್ನೂ ಹಾಗೇ ಅಲ್ಲಿ ಕುಳಿತಿದೆ. ಆ ಆಕ್ಟ್ ಇರುವತನಕ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಈ ಬೋರ್ಡು ಅಲ್ಲಿಯವರೆಗೂ ಒಂದು ಕೇವಲ ನಾಮಕಾವಾಸ್ತೆ ಬೋರ್ಡಾಗಿರುತ್ತೆ. ನಾನು ಅದಕ್ಕೆ ಅಧ್ಯಕ್ಷನಾದಮೇಲೆ ಆ ಹಳೇ ಆಕ್ಟನ್ನು ಕೂಡಲೇ ತಿದ್ದುಪಡಿ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದೆ. ಆ ಹಳೇದನ್ನೇ ಮುಂದುವರಿಸುತ್ತಿರುವುದು ಒಳ್ಳೆಯದಲ್ಲ—ಸರಿಯಲ್ಲ ಎಂದು ಹೇಳಿದ್ದೇನೆ. ಮತ್ತು ಆ ಬಾಬಿನಲ್ಲಿ ಕೇಂದ್ರ ಸರ್ಕಾರ ಸಾಕಷ್ಟು ಹಣವನ್ನು ಕೂಡ ಒದಗಿಸಬೇಕೆಂದು ಒತ್ತಾಯ ಮಾಡಿದ್ದೇನೆ. ಆದರೆ ನಾವು ಹಿಂದಿನಿಂದಲೂ ಇದನ್ನು ಹೀಗೇ ಬಿಟ್ಟುಕೊಂಡು ಬಂದಿದ್ದೇವೆ. ನಮ್ಮಲ್ಲಿ ಈಗತಾನೆ ಈ ರಿಸರ್ಚಿಗೆ ಗಮನ ಕೊಡುತ್ತಿದ್ದೇವೆ. ನಮ್ಮಲ್ಲಿ ರೇಷ್ಮೇ ತಯಾರಾಗತಕ್ಕ ವಿಚಾರದಲ್ಲಿ ಮೂರು ಮುಖ್ಯವಾದ ಹಂತಗಳಿವೆ. ರೇಷ್ಮೇಯನ್ನು ಬೆಳೆಯುತಕ್ಕ ರೈತವರ್ಗ ಒಂದು. ಎರಡನೆಯದು ರೀಲರ್ಸ್ ಮತ್ತು ಮೂರನೇ ವರ್ಗ ವೀವರ್ಸ್. ಈ ಮೂರು ವರ್ಗಗಳಲ್ಲಿ ಬಹಳ ತೊಂದರೆ ಇರತಕ್ಕದ್ದು ಈ ವೀವರ್ಸುಗಳಿಗೆ. ಆದರೆ ಬೆಳೆಗಾರರಿಗೂ—ರೀಲರ್ಸಿಗೂ ಮತ್ತು ವೀವರ್ಸುಗಳಿಗೂ ಮಧ್ಯೆ ದಳ್ಳಾಳಿಗಳಿದ್ದಾರೆ. ಇವರು ವ್ಯಾಪಾರದ ಕೋಠಿಗಳನ್ನು ಮಾಡಿಕೊಂಡಿದ್ದಾರೆ. ಮತ್ತೆ ಈ ವ್ಯಾಪಾರಿ ಕೋಠಿಗಳಲ್ಲೂ ಎರಡು ವಿಧ. ಒಂದು ಟ್ವಿಸ್ಟಿಂಗ್ ಎಂತ ಇದೆ. ಬರೀ ರಾ ಸಿಲ್ಕಿನಿಂದ ಬಟ್ಟೆ ಮಾಡುವುದಕ್ಕಾಗುವುದಿಲ್ಲ. ಈ ಟ್ವಿಸ್ಟಿಂಗ್ ಫ್ಯಾಕ್ಟರಿಯವರ ಮತ್ತು ವೀವರ್ಸುಗಳ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈ ಬಟ್ಟೆ ಮಾರಾಟದಲ್ಲಿಯಾದರೂ ಒಂದು ಸರಿಯಾದ ವ್ಯವಸ್ಥೆ ಇಲ್ಲ. ಅಲ್ಲಿಯೂ ಮಧ್ಯವರ್ತಿ ಜನರ ಕಿರುಕುಳ. ಇದನ್ನು ತಪ್ಪಿಸೋಣ ಎಂದು ಸರ್ಕಾರ ಏನಾದರೂ ಕೈಹಾಕಿದರೆ ತಾನೇ ಆ ಬಲೆಯಲ್ಲಿ ಸಿಕ್ಕಿಕೊಳ್ಳಬೇಕಾಗುತ್ತದೆ. ಅದಕ್ಕೆ ಆಗ ಸರ್ಕಾರ ಸಾಕಷ್ಟು ಬಂಡವಾಳವನ್ನು ಹಾಕಲೇಬೇಕು. ಇಲ್ಲದಿದ್ದರೆ ಆ ಮಧ್ಯವರ್ತಿ ಜನರನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸರ್ಕಾರ ರೀಲರ್ಸಿಗೆ ಮತ್ತು ವೀವರ್ಸಿಗೆ ಸಾಕಷ್ಟು ಹಣ ಒದಗಿಸಬೇಕಾಗುವುದು. ಹಾಗೆ ಒದಗಿಸದೆ ಇದ್ದಾಗ ಒಬ್ಬ ರೀಲರ ತನ್ನ ಸರಕನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಹೋದಾಗ ಅಲ್ಲಿ ವರ್ತಕನು ಕೇಳಿದ ಬೆಲೆಗೆ ಕೊಟ್ಟರೆ ಮಾತ್ರ ಅವನಿಗೆ ಕೈಗೆ ಹಣಸಿಕ್ಕುತ್ತೆ—ಇಲ್ಲದಿದ್ದರೆ ಇಲ್ಲ. ರೀಲರನಿಗೆ ತನ್ನ ಮಾಲು ಹೋದರೇನೆ ಕೈಗೆ ದುಡ್ಡು, ಇಲ್ಲದಿದ್ದರಿಲ್ಲ. ಆದರೆ ಹಾಗೆ ಮಾರಾಟ ಮಾಡತಕ್ಕ ಕಾಲದಲ್ಲಿ ರೀಲರನಿಗೆ ಸರಿಯಾದ ಬೆಲೆ ಸಿಕ್ಕಿದರೇನೇ ತನಗೆ ತನ್ನ ಕೂಲಿ ಗಿಟ್ಟಿ ತನಗೆ ನಾಲ್ಕು ಕಾಸು ಸಿಕ್ಕುತ್ತೆ. ಇಲ್ಲದಿದ್ದರೆ ಅವನಿಗೆ ನಷ್ಟವೇ. ರೀಲರನಿಗೆ 110 ರೂಪಾಯಿಗಳು ಬದ್ದಿರತಕ್ಕ ಸರಕನ್ನು 100ಕ್ಕೆ ಕೇಳಿದರೆ ಅವನಿಗೆ ತುರ್ತು ಹಣಬೇಕಾಗಿದ್ದಾಗ ಲಾಭದ ಪ್ರಶ್ನೆಯೇ ಇಲ್ಲ. ಅವನು ನಷ್ಟಕ್ಕೇ ಮಾರಾಟ ಮಾಡಬೇಕಾಗುವುದು. ಏಕೆಂದರೆ ಅವನಲ್ಲಿ ಅಷ್ಟು ಬಂಡವಾಳವಿರುವುದಿಲ್ಲ. ಕೊಳ್ಳತಕ್ಕವನು ಕೇಳಿದ ಬೆಲೆಗೇ ಕೊಡಬೇಕು. ಇಂಥ ತೊಂದರೆಗಳನ್ನು ತಪ್ಪಿಸಲು ಈ ಮೊದಲನೇ ಹಂತದಲ್ಲಿ ರೀಲರನಿಗೆ ಹೇಗೆ ಹಣವನ್ನು ಒದಗಿಸಬೇಕು ? ಬ್ಯಾಂಕಿನ ಮೂಲಕವೇ ? ಅಥವಾ ನ್ಯಾಷನಲೈಸ್ಡ್ ಬ್ಯಾಂಕುಗಳ ಮೂಲಕ ಐವತ್ತು ಸಾವಿರ ರೂಪಾಯಿಗಳ ಸಾಲವನ್ನು ಕೊಡಿಸುವುದಕ್ಕೆ .......

ಶ್ರೀ ಎಸ್. ಬಂಗಾರಪ್ಪ.—ರೀಲರ್ಸ್ ಮತ್ತು ವೀವರ್ಸುಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದಲೂ ಮತ್ತು ಮಧ್ಯವರ್ತಿಗಳನ್ನು ನಿರ್ಮೂಲ ಮಾಡುವ ದೃಷ್ಟಿಯಿಂದಲೂ ಸರ್ಕಾರ ಕೆಲವು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿದೆಯೇ ?

ಶ್ರೀ ಡಿ. ದೇವರಾಜ್ ಅರಸ್.—ಹೌದು. ಅದನ್ನೇ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ನಿಮಗೂ ನಮಗೂ ಏನೂ ಭಿನ್ನಾಭಿಪ್ರಾಯವೇ ಇಲ್ಲ. ಇವೆರೆಲ್ಲರ ವಿಚಾರದಲ್ಲಿ ನಿಮಗೆಷ್ಟು ಉದ್ವೇಗವಿದೆಯೋ ಅಷ್ಟೇ ಸರ್ಕಾರಕ್ಕೂ ಇದೆ.

(ಶ್ರೀ ಡಿ. ದೇವರಾಜ್ ಅರಸ್)

12-30 P. M.

ಆದಾದಮೇಲೆ ಬೆಂಗಳೂರಿನಲ್ಲಿ ಕೋರಿಯುವರು ಇದ್ದಾರೆ. ರೇಷ್ಮೆಯನ್ನು ಕೊಂಡುಕೊಳ್ಳ ತಕ್ಕವರು ಇವರೇ. ಈ ಕೋರಿಯುವರು ಇಷ್ಟಬಂದ ಹಾಗೆ ಪ್ರೈಸ್ ಕೋಟ್ ಮಾಡುತ್ತಾರೆ. ಇವರು ಎರಡು ಡಜನ್ ಇರಬಹುದು. ಇಡೀ ರಾಜ್ಯದ ರೇಷ್ಮೆಯನ್ನು ಕೊಳ್ಳುವವರೇ ಇವರು, ಮತ್ತು ಈ ರೇಷ್ಮೆ ಇವರ ಮುಖಾಂತರ ಬೇರೆ ರಾಜ್ಯಕ್ಕೆ ಹೋಗುತ್ತದೆ. ಇವರ ಹತ್ತಿರ ಬಂಡವಾಳ ವಿದೆ. ಆದ್ದರಿಂದ ರೇಷ್ಮೆ ಬೆಳೆಯುತಕ್ಕವನು ಈ ಕೋರಿಯುವರು ಕೋಟ್ ಮಾಡತಕ್ಕ ಪ್ರೈಸ್‌ನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಅವರಿಗೆ ಬಸ್‌ನಲ್ಲೂ ಹೋಗಲು ಕೂಡ ಚಾರ್ಜ್ ಇರು ವುದಿಲ್ಲ. ಈಗಲೂ ಸಹ ರೇಷ್ಮೆಯನ್ನು ಅಂಗಡಿಯಲ್ಲಿ ಇಟ್ಟುಬಿಟ್ಟು ದುಡ್ಡು ಎಷ್ಟಾದರೂ ಕೊಡಿ ಎಂದು ಅಲ್ಲಿಯೇ ಕೂತು ಬಿಡುತ್ತಾರೆ. ಏಕೆಂದರೆ ಬಂಡವಾಳದ ಶಕ್ತಿ ಇವರ ಕೈಯಲ್ಲಿ ಇದೆ. ಇವರು ಕೋಟಿಗಟ್ಟಲೆ ವ್ಯಾಪಾರ ಮಾಡುತ್ತಾರೆ. ಏತಕ್ಕೆ ಇದನ್ನು ಇವರ ಕೈಯಿಂದ ತಪ್ಪಿಸ ಬಾರದು ಎಂಬುದು ನನ್ನ ಮನಸ್ಸಿನಲ್ಲಿದೆ. ಹೇಗೆ ತಪ್ಪಿಸಬೇಕು ? ಮೊದಲು ಬಂಡವಾಳ ಒದಗಿಸ ಬೇಕು, ಇಲ್ಲವೇ ಯಾವ ರೂಪದಲ್ಲಾದರೂ ಹಣ ಒದಗಿಸಬೇಕಾಗಿದೆ. ಸರ್ಕಾರದವರು ಒಂದು ಹಂತದಲ್ಲಿ ಸೊಸೈಟಿ ಎಂದು ಮಾಡಿದರು. ರೀಲರ್ಸ್ ಅಥವಾ ಬೆಳೆಗಾರರು ರೇಷ್ಮೆಯನ್ನು ತಂದು ಯಾವಾಗ ಬೆಲೆ ಬಹಳ ಬಿದ್ದು ಹೋಗಿರುತ್ತದೋ ಅವಾಗ ಕೋರಿಯುವರ ಹತ್ತಿರ ಹೋಗಿ 50 ರೂಪಾಯಿ ಬೆಲೆ ಬಾಳುವ ರೇಷ್ಮೆಯನ್ನು 30 ರೂಪಾಯಿಗೆ ಕೊಡುವ ಪರಿಸ್ಥಿತಿ ಏನು ಇದೆ ಇದನ್ನು ಸುಧಾರಿಸಲು, ಕೋ ಆಪರೇಟೀವ್ ಸೊಸೈಟಿಗಳನ್ನು ತಾಲ್ಲೂಕು ಮಟ್ಟದಲ್ಲಿ ಮಾಡಿ ಸುಗ್ಗಿಕಾಲದಲ್ಲಿ ಅಗ್ಗವಾದಾಗ ರೈತರ ಪದಾರ್ಥ ಆಧಾರ ಇಟ್ಟು 100 ರೂಪಾಯಿ ಬೆಲೆಗೆ 75 ರೂಪಾಯಿ ತೆಗೆದುಕೊಂಡು ಹೋಗಬಹುದು ಎಂದು ಏನು ಮಾಡಿದ್ದಾರೋ ಅದೇ ತತ್ವದ ಮೇಲೆ ರೇಷ್ಮೆಯನ್ನು ಇಟ್ಟು ಸರಿಯಾದ ಬೆಲೆ ಸಿಕ್ಕಿದಾಗ ಮಾರಾಟ ಮಾಡಿ ಅಲ್ಲಿಯವರೆಗೆ ಹಣ ಬೇಕೆಂದರೆ 100 ರೂಪಾಯಿ ಮಾಲಿಗೆ 70-80 ರೂಪಾಯಿ ದುಡ್ಡು ಒದಗಿಸಲು ಈ ಸೊಸೈಟಿಗಳನ್ನು ಮಾಡಿದೆವು. ಈಗ ಶಾಮಣ್ಣನವರಲ್ಲಿ ಪ್ರಾರ್ಥನೆ ಮಾಡುವುದು ಇಷ್ಟೆ, ತಾವು ಆರೋಪ ಮಾಡುವು ದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಒಂದು ವೇಳೆ ಆರೋಪ ಮಾಡಬೇಕೆಂಬ ಮನಸಿದ್ದರೆ ಚೆನ್ನಾಗಿ ವಿಷಯಗಳನ್ನು ತಿಳಿದುಕೊಂಡು ಆರೋಪ ಮಾಡಿ. ಅನೇಕರು ಅನೇಕ ಕಾರಣಗಳಿಂದ ಅವರಿಗೆ ಇಷ್ಟ ಬಂದಂತೆ ಮಾತನಾಡುತ್ತಾರೆ. ತಮ್ಮಂತಹ ಜವಾಬ್ದಾರಿಯ ಜನರು ಇಷ್ಟಕ್ಕೆ ಕಿವಿಕೊಡ ಬಾರದು. ಪರೀಕ್ಷೆ ಮಾಡಿ, ಮೋಸ ಮಾಡಿದ್ದಾರೆ, ತೊಂದರೆ ಮಾಡಿದ್ದಾರೆ, ಅಥವಾ ಇನ್ನು ಯಾವ ರೀತಿಯಲ್ಲಿ ಹಣ ಪೋಲು ಮಾಡಿದ್ದಾರೆ ಎಂದು ಕಂಡುಬಂದರೆ, ತಾವು ಯಾವಾಗಲಾದರೂ ಸರ್ಕಾರದ ಗಮನಕ್ಕೆ ತಂದರೆ, ಯಾರಾದರೂ ಸರಿಯೆ, ಅವರಿಗೆ ಶಿಕ್ಷೆ ಮಾಡೋಣ. ಈಗ ಯಾರಿಗೆ ತೊಂದರೆಯಾಯಿತು ಎಂದರೆ ವೀವರ್ಸ್‌ಗೆ ತೊಂದರೆಯಾಯಿತು. ರೇಷ್ಮೆ ಬಟ್ಟೆಗಳನ್ನು ಇಟ್ಟು ಕೊಂಡು ಮಾರಾಟ ಮಾಡುವವರಿಗೆ ಹೆಚ್ಚು ತೊಂದರೆಯಾಗಿಲ್ಲ. ಎಂದರೆ, ಅವರು ರೇಷ್ಮೆ ಬೆಲೆ ಕಡಿಮೆ ಬಿದ್ದಾಗ ಕೊಂಡು ಕೊಂಡರೂ ಸೀರೆ ಬಟ್ಟೆ ಬೆಲೆ ಕಡಿಮೆ ಮಾಡಿಲ್ಲ. ಫ್ಲಕ್ಚುಯೇಷನ್ಸ್ ಆಗಲೀ, ಬಿಡಲಿ, ಸೀರೆಗಳ ಬೆಲೆಗಳನ್ನು ಏರಿಸಿಕೊಂಡು ಬರುತ್ತಿರುತ್ತಾರೆ. ಮದುವೆ ಸೀಸನ್ ಬಂತು ಎಂದರೆ ರೇಷ್ಮೆ ಬಟ್ಟೆಗಳ ಬೆಲೆಯನ್ನು ಚೆನ್ನಾಗಿ ಏರಿಸಿಬಿಡುತ್ತಾರೆ. ತೊಂದರೆ ಅನುಭವಿಸು ವವರು ರೀಲರ್ಸ್; ಆಮೇಲೆ ವೀವರ್ಸ್. ಇವರಲ್ಲಿ ಎರಡು ವಿಧ. ಕೆಲವರು ಪವರ್‌ಲೂಮ್ ಇಟ್ಟುಕೊಂಡಿರುತ್ತಾರೆ, ಮತ್ತೆ ಕೆಲವರು ಸ್ವಂತವಾಗಿ ಕೈಮಗ್ಗಗಳನ್ನು ಇಟ್ಟುಕೊಂಡಿರುತ್ತಾರೆ. ಪವರ್ ಲೂಮ್ಸ್‌ಗಳ ಮಾಲೀಕರು ನೇರವಾಗಿ ಕೂಲಿ ಕೊಡುತ್ತಾರೆ ಮತ್ತು ಬಂಡವಾಳವನ್ನು ಒದಗಿಸಿಕೊಳ್ಳುತ್ತಾರೆ. ಒಂದು ಕೈಮಗ್ಗದಲ್ಲಿ ಸಾವಿರಾರು ಜನರು ಇರುವುದು ಅಪರೂಪ. ದೊಡ್ಡ ಪ್ರಮಾಣದಲ್ಲಿ ಎಂದರೆ 15-20 ಜನ ಮಾತ್ರ ಇರುತ್ತಾರೆ. 1-2 ಕೈ ಮಗ್ಗ ಇಟ್ಟುಕೊಂಡಿ ರುವವರಿಗೆ ಏನಾಗಿದೆ ಎಂದರೆ, ಇವರು ಬಟ್ಟೆ ಮಾಡುವುದಕ್ಕೆ ರೇಷ್ಮೆಯನ್ನು ಕೊಳ್ಳಬೇಕು, ಕೊಳ್ಳುವುದಕ್ಕೆ ಬಂಡವಾಳವಿಲ್ಲ. ಆದ್ದರಿಂದ ಬಂಡವಾಳಗಾರರ ಹತ್ತಿರ ಅವರು ಹೇಳಿದ ಬೆಲೆಗೆ ಕೊಳ್ಳಬೇಕು. ಇದರಿಂದ ಸೀರೆ ಬಟ್ಟೆಗಳನ್ನು ಮಾಡಿ ಮಾರಾಟ ಮಾಡಿದರೆ ಒಂದು ದಿವಸಕ್ಕೆ ಆಗುವ ಕೂಲಿ ಗಿಟ್ಟುವುದಿಲ್ಲ. ಶ್ರಮ ವಹಿಸಿ ಮಾಡಿದರೂ ಕೂಲಿ ಗಿಟ್ಟದಿರುವ ಸನ್ನಿವೇಶ ಇದೆ. ಪೇಟೆಯಲ್ಲಿ ಮಾರುವುದಕ್ಕೂ ತೊಂದರೆಗಳು ಇವೆ. ಯಾವುದಾದರೂ ಒಂದು ಕೈಮಗ್ಗ ಒಂದೆರಡು ಸೀರೆ ಮಾಡುವುದಕ್ಕೆ 5 ದಿವಸ ಅಥವಾ ಒಂದುವಾರ ಬೇಕಾಗುತ್ತದೆ. ಸೀರೆಗಳನ್ನು ತೆಗೆದುಕೊಂಡು ಮಾರುವುದು ಎಲ್ಲಿ ? ಬೆಂಗಳೂರಿನಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿರುವ ಅಂಗಡಿಯ ಮಾಲೀ ಕರು ರೇಷ್ಮೆ ವ್ಯಾಪಾರ ಮಾಡುವ ಸಿಲ್ಕ್ ಹೌಸ್‌ಗಳವರ ಹತ್ತಿರ ಮಾರಾಟ ಮಾಡಬೇಕು. ಅವರ

ಹತ್ತಿರ ಹೋದರೆ, ನಮ್ಮಲ್ಲಿರುವ ಬಟ್ಟೆಯೇ ಮಾರಾಟವಾಗುವುದಿಲ್ಲ, ನಿಮ್ಮದನ್ನು ತೆಗೆದುಕೊಂಡು ಏನು ಮಾಡೋಣ ಎಂದು ಹೇಳುತ್ತಾರೆ. ಇಂತಹ ಮಾಲೀಕರು ಮಗ್ಗದವರ ಮೇಲೆ ಹತೋಟಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ. ಈ ತೊಂದರೆಗಳನ್ನು ನಿವಾರಿಸಲು ಅವರು ಒಂದು ಸಲಹೆ ಹೇಳಿದರು. ಏನೆಂದರೆ ಈ ವೀವರ್ಸ್ ಯಾರಿದ್ದಾರೆ ಅವರದೇ ಒಂದು ಸೊಸೈಟಿಯನ್ನು ಮಾಡಿ, ಮಾರಾಟ ಮಾಡುವಂತೆ ವ್ಯವಸ್ಥೆ ಏತಕ್ಕೆ ಮಾಡಬಾರದು ಎಂದು. ಇದು ಒಳ್ಳೆಯ ಸಲಹೆ. ನಾವೂ ಸಹ ಒಂದೆರಡು ಕಡೆ ಈ ಸೊಸೈಟಿಗಳನ್ನು ಮಾಡಿದ್ದೇವೆ. ಇದು ಸರಿಯಾಗಿ ನಡೆಯಲಿ ಬಿಡಲಿ, ಇದಕ್ಕೆ ಇರತಕ್ಕ ಮಾರ್ಗ ಒಂದೇ. ಅದನ್ನು ಮತ್ತೆ ಅಭ್ಯಾಸ ಮಾಡೋಣ. ಸೊಸೈಟಿಗಳನ್ನು ಮಾಡಿಸುವುದಕ್ಕೆ ಸಾಧ್ಯವಾದಷ್ಟು ಪ್ರಯತ್ನ ಮಾಡಬೇಕು. ಇದರಲ್ಲಿ ಅನೇಕ ಡಿಫಿಕಲ್ಟೀಸ್ ಇವೆ. ಮಾರಾಟ ಮಾಡತಕ್ಕ ಬಟ್ಟೆಗಳು ನಮ್ಮದೇಶದಲ್ಲಿ ಎಷ್ಟು ವಿಧ ಎಂದು ಲೆಕ್ಕ ಗೊತ್ತಾಗುವುದಿಲ್ಲ. ಹತ್ತಿಯ ಬಟ್ಟೆಯಾಗಲೀ, ರೇಷ್ಮೆಯ ಬಟ್ಟೆಯಾಗಲೀ ವಿಧವಿಧವಾದ ಬಟ್ಟೆಗಳನ್ನು ತಯಾರುಮಾಡುತ್ತಾರೆ. ಮಾರ್ಕೆಟ್‌ನಲ್ಲಿ ಯಾವ ಬಟ್ಟೆ ಹೋಗುತ್ತದೆ ಎಂಬುದು ಗೊತ್ತಾಗುವುದಿಲ್ಲ. ಟೇಸ್ಟ್, ಫ್ಯಾಶನ್ ಬದಲಾಯಿಸುತ್ತಾ ಇರುತ್ತದೆ. ಒಂದು ಕಡೆ ಟೇಸ್ಟ್‌ಗೆ ಮಾಡಿದಂತಹ ಬಟ್ಟೆ ಮಾರಾಟವಾಗಿಲ್ಲ ಎಂದರೆ ನಷ್ಟವನ್ನು ಯಾರು ವಹಿಸಿಕೊಳ್ಳುವರು? ಹೀಗೆಲ್ಲಾ ಬಹಳ ಕಾಂಪ್ಲಿಕೇಟೆಡ್ ಇಷ್ಯೂಸ್ ಇವೆ. ಹೇಗೆ ಸ್ಟ್ಯಾಂಡರೈಸ್ ಮಾಡಬೇಕು ಎಂದು ರೇಷ್ಮೆ ಮಂಡಲಿಯವರು ಗಮನದಲ್ಲಿಟ್ಟುಕೊಂಡು ಕೆಲವು ಸಿಫಾರಸ್‌ಗಳನ್ನು ಈಗಾಗಲೇ ಮಾಡಿದ್ದಾರೆ. ಬೆಲೆಗಳನ್ನು ಹತೋಟಿ ಮಾಡುವುದಕ್ಕೆ ಯಾವ ಯಾವ ಹಂತದಲ್ಲಿ ಏನು ಏನು ಕಾರ್ಯಕ್ರಮ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಸಮಿತಿಯವರು ಕೆಲವು ಶಿಫಾರಸ್‌ಗಳನ್ನು ಮಾಡಿದ್ದಾರೆ. ಸಾಧ್ಯವಾದಷ್ಟು ಬೇಗ ಯೋಜನೆಗಳನ್ನು ಮಾಡುವವರಿದ್ದಾರೆ. ಕೇಂದ್ರಮಂಡಲಿಯಲ್ಲಿ ಮೈಸೂರಿನವರೂ ಇದ್ದಾರೆ, ಮತ್ತು ಹೊರಗಡೆಯವರೂ ಇದ್ದಾರೆ. ಒಂದು ರಾ ಮೆಟೀರಿಯಲ್ ಬ್ಯಾಂಕ್ ಮಾಡುವುದು ಎಂಬ ತೀರ್ಮಾನಕ್ಕೆ ನಾವು ಬಂದಿದ್ದೇವೆ. ಆಗ ಕೈಮಗ್ಗದವರು ಮಾಡಿದ ರೇಷ್ಮೆ ಬಟ್ಟೆಗೆ, ಬೆಲೆ ಇಲ್ಲದಾಗ ಹಣ ಕೊಡುವುದಕ್ಕೆ ಸಾಧ್ಯವಾಗುತ್ತದೆ. ರೈತರು ಬೆಲೆಗಳ ಏರು ಪೇರುಗಳಿಂದ ಈ ಕೈಗಾರಿಕೆಯನ್ನು ಬಿಡುವುದನ್ನು ತಪ್ಪಿಸಿದ ಹಾಗಾಗುತ್ತದೆ. ರಾ ಮೆಟೀರಿಯಲ್ ಬ್ಯಾಂಕಿಗೆ ಕೇಂದ್ರಕ್ಕೆ ಶಿಫಾರಸ್‌ಮಾಡಿ ಇಷ್ಟು ಕೋಟಿ ರೂಪಾಯಿಗಳು ಬೇಕು ಎಂದು ಕೇಳಿದಾಗ ಇದು ಕೇಂದ್ರದಲ್ಲಿ ಒದ್ದಾಡುತ್ತಾ ಕುಳಿತಿದೆ.

ಶ್ರೀ ಸಿ. ಬೈರೇಗೌಡ.—ಕಾಫೀ ಬೋರ್ಡ್ ತರಹ ಏತಕ್ಕೆ ವ್ಯವಸ್ಥೆ ಮಾಡಬಾರದು?

ಶ್ರೀ ಡಿ. ದೇವರಾಜ್ ಅರಸ್.—ನಾನು ಇರತಕ್ಕದ್ದು ರೇಷ್ಮೆ ಬೋರ್ಡ್‌ನಲ್ಲಿ, ಇದು 1948ನೇ ಇಸವಿಯಲ್ಲಿ ಆದಂಥ ಕಾನೂನಿನ ಪ್ರಕಾರ ಏರ್ಪಡಾದದ್ದು. ಪ್ಲಾನನಲ್ಲಿ ಅಲ್ಲಿ ಇಷ್ಟು ಹಣ, ಇಲ್ಲಿ ಅಷ್ಟು ಹಣ ಒದಗಿಸಿ ಕೈಬಿಡುತ್ತಾರೆ. ನಮಗೆ ಬೇರೆ ಯಾವ ರೀತಿಯ ಹಣವೂ ಇಲ್ಲ. ಕಾಫೀ ಬೋರ್ಡ್, ಟೀ ಬೋರ್ಡ್ ಇತ್ತೀಚೆಗೆ ಆದುವು. ಇಂಡಿಪೆಂಡೆಂಟ್ ಪವರ್ ಅವರಿಗೆ ಇದೆ. ನಮಗೆ ಇಲ್ಲ. ರೇಷ್ಮೆ ಬೋರ್ಡಿಗೆ ಬರೀ ಸ್ಟ್ಯಾಟ್ಯುಟರಿ ಪವರ್ಸ್ ಇದೆ. ಹಣವಿಲ್ಲದೆ ಇರುವುದರಿಂದ It is as good as not giving any powers. ಬರೀ ಶಿಫಾರಸ್ ಮಾಡುತ್ತಾ ಕುಳಿತಿದ್ದೇವೆ. ಆದ್ದರಿಂದ ಕೆಲವು ಅಮೆಂಡ್‌ಮೆಂಟ್ ಮಾಡಿ ಫೈನಾನ್‌ಷಿಯಲ್ ಪವರ್ಸ್, ಇಂಡಿಪೆಂಡೆಂಟ್ ಪವರ್ಸ್ ಕೊಡಬೇಕು ಎಂದು ಶಿಫಾರಸ್ ಮಾಡಿದ್ದೇವೆ. ಅದು ಏನೇ ಇರಲಿ ರಾ ಮೆಟೀರಿಯಲ್ ಬ್ಯಾಂಕ್ ಮಾಡುವುದನ್ನು ನಾವು ತೀವ್ರವಾಗಿ ಆಲೋಚನೆಯಲ್ಲಿಟ್ಟುಕೊಂಡಿದ್ದೇವೆ.

ಕಕೂನ್ಸ್ ಮಾರ್ಕೆಟ್‌ಗೆ ಅನೇಕ ತೊಂದರೆಗಳು ಇವೆ ಎನ್ನುವುದು ನಿಜ. ಇದು ಏತಕ್ಕೆ ಹೀಗೆ ಆಯಿತು? ತಮಗೆ ಗೊತ್ತಿದೆ. ಮಾರ್ಕೆಟ್‌ಗಳು ಆಗಬೇಕು, ಅಲ್ಲಿ ವ್ಯಾಪಾರ ನಡೆಯಬೇಕು ಎಂದು ಕಾನೂನು ಮಾಡಿ 6-7 ವರ್ಷದ ಮೇಲೆ ಆಯಿತು. ಈ ಕಾನೂನಿನ ಬಗ್ಗೆ 4-6 ಸಲ ಕೋರ್ಟಿಗೆ ಹೋಗಿ ಅದು ಇತ್ಯರ್ಥವಾಗಿ ಈ ವರ್ಷ ಪ್ರಾರಂಭ ಮಾಡಿದ್ದಾರೆ. ಈ ಕೆಲಸವನ್ನು ಪೂರ್ಣವಾಗಿ ನಾವು ಮಾಡುವುದಕ್ಕೆ ಇನ್ನೂ ಹೊರಟಿಲ್ಲ. ಅರ್ಧಮರ್ಧ ಮಾಡಿ ಬಿಟ್ಟಿದೆ. ಮಾರ್ಕೆಟ್ ಮಾಡಬೇಕು ಎಂದು ಹೇಳಿದ ಮೇಲೆ ಮಾರ್ಕೆಟ್‌ಗಳನ್ನು ದೊಡ್ಡದಾಗಿ ಕಟ್ಟಿಸಬೇಕು. ಈಗ ಕಟ್ಟಡಗಳನ್ನು ಬಾಡಿಗೆ ತೆಗೆದುಕೊಂಡು ಚಿಕ್ಕದಾಗಿ ಮಾರ್ಕೆಟ್ ಮಾಡಲು ಹೊರಟಿದ್ದಾರೆ, ನೀವೆಲ್ಲರೂ ಹೇಳಿದ ತೊಂದರೆಗಳು, ಕಷ್ಟಗಳು ಗೊತ್ತಾಗಿದೆ. ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಿ ದೊಡ್ಡ ಮಾರ್ಕೆಟ್ ಮಾಡಿ ರೈತರು ತಮ್ಮ ಪದಾರ್ಥಗಳನ್ನು ಇಡುವ ವ್ಯವಸ್ಥೆ ಮಾಡಿದರೆ ಎಲ್ಲರಿಗೂ ಸಮಾಧಾನವಾಗುತ್ತದೆ. ಮಾರ್ಕೆಟ್ ತೊಂದರೆ ನಿವಾರಣೆ ಮಾಡುವುದು ಇದೆ. ಮೆಟೀರಿಯಲ್ಸ್ ಬ್ಯಾಂಕ್ ಮಾಡಿ ಫ್ಲಕ್ಚುಯೇಷನ್ ಆಫ್ ಪ್ರೈಸಸ್ ಎಂದು ಏನು ಹೇಳುತ್ತೀರಿ ಅದನ್ನು ಹತೋಟಿಯಲ್ಲಿ ಇಡಬೇಕಾದ್ದು ಇದೆ. ಇದೇ ರೀತಿ ಸಿಲ್ಕಿಗೆ ಮಧ್ಯವರ್ತಿ ವರ್ತಕರು

(ಶ್ರೀ ಡಿ. ದೇವರಾಜ್ ಅರಸ್)

ಹೆಚ್ಚುಜನ ಇದ್ದಾರೆ ಎಂದು ಹೇಳುತ್ತಿದ್ದಾರೆ. ದಳ್ಳಾಳಿಗಳು, ದೊಡ್ಡ ದೊಡ್ಡ ವ್ಯಾಪಾರಸ್ಥರು ಅವರ ಕೈಯಿಂದ ತಪ್ಪಿಸುವುದಕ್ಕೆ ಎಷ್ಟು ಸಾಧ್ಯವೋ ಅದನ್ನೂ ಕೂಡ ನಾವು ಯೋಚನೆ ಮಾಡುತ್ತಿದ್ದೇವೆ. ಅದೇ ರೀತಿ ಕಕೂನ್ಸ್ ಗ್ರೇಡ್‌ಮಾಡಿ ಮಾರಾಟ ಮಾಡುವುದು ರೈತರಾಗಿ ಇರತಕ್ಕವರಿಗೆ ಗೊತ್ತಿದೆ. ಆ ರೀತಿ ಗ್ರೇಡ್ ಮಾಡುವುದಕ್ಕೆ ಆಗಿಲ್ಲ. ಒಂದು ಸ್ಟೇಜಿನಲ್ಲಿ ಮಾಡಬೇಕು ಎಂದು ಹೋಗಿ ಹಾಗೆಯೇ ಬಿಟ್ಟುಬಿಟ್ಟಿದ್ದಾರೆ. ಯಾವ ದೇಶದಲ್ಲೂ ಕಕೂನ್ಸ್ ವ್ಯಾಪಾರ ಗ್ರೇಡಿಂಗ್ ಇಲ್ಲದೇ ಮಾಡುತ್ತಾ ಇಲ್ಲ. ನಮ್ಮಲ್ಲಿ ಗ್ರೇಡಿಂಗ್ ಇಲ್ಲದೆ ನಡೆಯುತ್ತಿದೆ. ಒಳ್ಳೆಯದಕ್ಕೂ ಒಂದೇ ಬೆಲೆ, ಕೆಟ್ಟದ್ದಕ್ಕೂ ಒಂದೇ ಬೆಲೆ. ಅದಕ್ಕೂ ಇದಕ್ಕೂ ಒಂದೆರಡು ರೂಪಾಯಿ ಹೆಚ್ಚು ಕಡಿಮೆ ಇರುತ್ತದೆ. ಒಂದು ಪ್ರಮಾಣದಲ್ಲಿ ನೂಲು ಬರಬೇಕಾದರೆ ಎಷ್ಟು ಗೂಡು ಹಾಕಿದರೆ ಬರುತ್ತದೋ ಅದಕ್ಕೆ ರಂಡೆಟಾ ಎಂದು ಹೇಳುತ್ತಾರೆ. ನಮ್ಮಲ್ಲಿ 8-10-12 ರೆಂಡೆಟಾ ಬರತಕ್ಕದ್ದು ಇದ್ದರೆ ಇನ್ನೊಂದು ಕಡೆ 17-18 ಬರುತ್ತದೆ. 17-18 ರೆಂಡೆಟಾ ಬರುವುದಕ್ಕೆ 5 ರೂಪಾಯಿ ಇದ್ದರೆ 8-10 ರೆಂಡೆಟಾ ಬರುವುದಕ್ಕೆ 7-8 ರೂಪಾಯಿ ಕೊಟ್ಟರೆ ಆಯಿತು. ಇದಕ್ಕೆ ಗ್ರೇಡಿಂಗ್ ಇಲ್ಲ. ಗ್ರೇಡಿಂಗ್‌ನ್ನು ಮಾರ್ಕೆಟ್‌ನಲ್ಲಿ ಇಂಟ್ರಡ್ಯೂಸ್ ಮಾಡಬೇಕಾದ್ದು ಇದೆ. ನನ ಮನಸ್ಸಿನಲ್ಲಿ ಎೂ ಇದೆ. ಕೇಂದ್ರ ರೇಷ್ಮೆ ಮಂಡಲಿಯಿಂದ ಶಿಫಾರಸು ಮಾಡಿದ್ದಾರೆ. ಹೀಗೆ ನಾನಾ ಮುಖ ಸಮಸ್ಯೆಗಳು ಏನು ಇವೆ ಅವೆಲ್ಲವೂ ನಮ್ಮ ಗಮನಕ್ಕೆ ಬಂದಿಲ್ಲ ಎಂದು ತಿಳಿಯಬಾರದು. ನಮ್ಮ ಗಮನಕ್ಕೆ ಬಂದಿವೆ, ಇವರ ಬಗ್ಗೆ ಅಭ್ಯಾಸ ಸಾಕಷ್ಟು ಮಾಡಿದ್ದೇವೆ. ಅದರ ಕಡೆ ಪ್ರಯತ್ನ ಮಾಡಬೇಕಾಗಿದೆ. ಈ ಸಭೆಯಲ್ಲಿ ಹೇಳುವುದು ಏನೆಂದರೆ ನಮ್ಮಲ್ಲಿ ರೇಷ್ಮೆ ಕೈಗಾರಿಕೆ ಉದ್ಯಮಕ್ಕೆ ನಾವು ಬಹಳ ಹಣವನ್ನು ಎಷ್ಟು ಕಷ್ಟಪಟ್ಟಾದರೂ ಒದಗಿಸಬೇಕು. ಕಾರಣ ಇಷ್ಟೆ. ಮೈಸೂರು ರಾಜ್ಯದಲ್ಲಿ ನನ್ನ ಒಂದು ತಿಳುವಳಿಕೆ ಪ್ರಕಾರ ಹಳ್ಳಿಯಲ್ಲಿರತಕ್ಕ ಸಣ್ಣಪುಟ್ಟ ರೈತರ ಒಂದು ಜೀವನ ಉತ್ತಮಗೊಳ್ಳಬೇಕಾದರೆ, ಅವರ ಸಂಪಾದನಾ ಶಕ್ತಿ ಸ್ವಲ್ಪಮಟ್ಟಿಗೆ ಹೆಚ್ಚಬೇಕಾದರೆ ಮೈಸೂರಿನ ಎಲ್ಲಾ ಭಾಗದಲ್ಲಿ ಅಲ್ಲದಿದ್ದರೂ 7-8 ಜಿಲ್ಲೆಯಲ್ಲಿರತಕ್ಕ ರೈತರಿಗೆ ರೇಷ್ಮೆ ಕೈಗಾರಿಕೆ ಬಿಟ್ಟರೆ ಅದಕ್ಕಿಂತ ಸಣ ಪುಟ್ಟ ಕೈಗಾರಿಕೆ ಅಥವಾ ಗೃಹ ಕೈಗಾರಿಕೆಗಿಂತಲೂ ಬೇರೆ ಒಂದು ಇಲ್ಲ. ಲೇಬರ್ ಇನ್‌ಸೆನ್‌ಟೀವ್ ಎಂದು ಹೇಳುತ್ತೇವೆ. ಒಂದು ಎಕರೆ ಮಲ್ಬರಿ ಇದ್ದರೆ ಅದರಿಂದ 4-6 ಸಂಸಾರಗಳು ಜೀವನ ಮಾಡಬಹುದು. ಇದು 365 ದಿವಸವೂ ಕೂಲಿ ಸಿಗುವ ಕೈಗಾರಿಕೆ. ಈ ಕೈಗಾರಿಕೆಗೆ ಸಮನಾದ ಕೈಗಾರಿಕೆ ಬೇರೊಂದಿಲ್ಲ. ನನ್ನ ಮನಸ್ಸಿನಲ್ಲಿ ಪೂರ್ಣ ನಂಬಿಕೆ ಇರುವುದು. ಮೈಸೂರು ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಹೆಚ್ಚು ಹೆಚ್ಚು ಹಣ ಒದಗಿಸಬೇಕು. ಕೈಗಾರಿಕೆ ಅಭಿವೃದ್ಧಿ ಮಾಡಬೇಕು. ಇದಕ್ಕೆ ಎಲ್ಲಾ ಹಂತದಲ್ಲೂ ದೋಷಗಳು ಏನು ಇವೆ, ನ್ಯೂನತೆಗಳು ಏನು ಇವೆ ಅವನ್ನು ತಪ್ಪಿಸಬೇಕಾದುದು ನಮ್ಮ ಮುಂದೆ ಇರುವ ಕರ್ತವ್ಯ. ಇಷ್ಟು ವಿಚಾರಗಳನ್ನು ತಿಳಿಸಿ ನಮ್ಮ ಮಾನ್ಯ ಸ್ನೇಹಿತರಾದ ಶ್ರೀಮಾನ್ ನಾಗಣ್ಣನವರು ಕೆಲವು ಸಲಹೆಗಳನ್ನು ಏನು ಕೊಟ್ಟಿದ್ದಾರೆ ಅವೆಲ್ಲವನ್ನೂ ಲಕ್ಷ್ಯದಲ್ಲಿಟ್ಟುಕೊಂಡು ಅಲ್ಲದೆ ಇನ್ನೂ ಉಳಿದ ಕೈಗಾರಿಕೆಗಳಲ್ಲಿ ಇರತಕ್ಕ ತೊಂದರೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ, ಎಂದು ತಮ್ಮ ಮುಖೇನ ಈ ಸಭೆಗೆ ಭರವಸೆ ಕೊಟ್ಟು ಈ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ಮನಸ್ಸು ಮಾಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಅಧ್ಯಕ್ಷರೇ, ಈ ನಿರ್ಣಯ ವಾಪಸ್ಸು ತೆಗೆದುಕೊಳ್ಳುವುದಕ್ಕೆ ತಯಾರು ಇದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ರೇಷ್ಮೆ ಉದ್ಯಮಗಳ ಬಗ್ಗೆ ಬಹಳ ಮಟ್ಟಿಗೆ ಅಧ್ಯಯನ ಮಾಡಿದ್ದಾರೆ. ಅವರ ಹೇಳಿಕೆಯಿಂದ ನನಗೂ ಸ್ವಲ್ಪ ಅನುಭವ ಜಾಸ್ತಿ ಬಂದಿದೆ. ನನ್ನ ಮುಖ್ಯ ಪ್ರಶ್ನೆ ಏನೆಂದರೆ ಒಂದು ವಿಷಯದಲ್ಲಿ ಮಾತ್ರ ಸಾಕಷ್ಟು ಶ್ರಮವಹಿಸಿ ಉತ್ತರ ಹೇಳಲಿಲ್ಲ. ಅದು ಏನೆಂದರೆ ರೇಷ್ಮೆ ಬೆಳೆ ಜಾಸ್ತಿಯಾಗಿರುವುದನ್ನು ಕಡಿಮೆ ಮಾಡುವುದು ರೇಷ್ಮೆ ಬೆಳೆ ಜಾಸ್ತಿ ಆಗಿರುವುದರಿಂದ ಲಕ್ಷಾಂತರ ಮಂದಿ ಕೈ ಮಗ್ಗದವರು ನಿರುದ್ಯೋಗಿಗಳಾಗಬಾರದು. ಅದರ ನಿವಾರಣೆ ಹೇಗೆ ? ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಮೊದಲನೆಯದಾಗಿ ಯಾವರೀತಿಯಾಗಿ ರೇಷ್ಮೆ ರೀಲರ್ಸ್‌ಗೆ ಸಹಾಯ ಒದಗಿಸುತ್ತಿದ್ದೀರೋ ಅದೇ ರೀತಿ ಕೈಮಗ್ಗದವರಿಗೆ ಸಹಾಯ ಒದಗಿಸಿ, ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಏನು ಅನುಮಾನ ಪಡುತ್ತಿದ್ದಾರೆ ಎಂದರೆ ಅನೇಕ ವಿಧವಾದ ಬಟ್ಟೆಗಳು ತಯಾರಾಗುತ್ತಾ ಇವೆ, ಯಾವುದಕ್ಕೆ ಗಿರಾಕಿ ಇದೆ ಯಾವುದಕ್ಕೆ ಮಾರ್ಕೆಟ್ ಇಲ್ಲ ಎನ್ನುವುದನ್ನು ನಿರ್ಧರಿಸುವುದಕ್ಕೆ ಕಷ್ಟವಾಗುತ್ತದೆ ಎಂದು. ನಾನು ಅವರಿಗೆ ಸಲಹೆ ಮಾಡುತ್ತೇನೆ. ಹೊರದೇಶಕ್ಕೆ ರಫ್ತು ಆಗುವ ಮಾಲುಗಳು ಕೈಮಗ್ಗದಿಂದ ತಯಾರಾಗಬೇಕು. ವಿದ್ಯುತ್ ಚಾಲಿತ ಮಗ್ಗದಿಂದ ತಯಾರಾದ ಮಾಲುಗಳನ್ನು ಕಳುಹಿಸುವುದು ಬೇಡ. ಆದ್ದರಿಂದ ಕೈಮಗ್ಗದವರಿಗೆ ಸೊಸೈಟಿಗಳ ಮೂಲಕ ಇಂತಹ ಬಟ್ಟೆ ತಯಾರು ಮಾಡಬೇಕೆಂದು ಹೇಳಿ

ಅವರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ತಾವು ಅವರ ಜೀವನೋಪಾಯಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಅವರ ಜವಳಿಯನ್ನು ಸರ್ಕಾರದವರು ಕೊಂಡು ಕೊಂಡು ವರ್ತಕರಿಗೆ ಹೊರದೇಶಕ್ಕೆ ರಪ್ತು ಮಾಡುವ ಅವಕಾಶವನ್ನು ಮಾಡಿದರೆ ಸರ್ಕಾರಕ್ಕೆ ಫಾರಿನ್ ಎಕ್ಸ್‌ಛೇಂಜ್ ಗಳಿಸಿದ ಹಾಗಾಗುತ್ತದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮುಖ್ಯ ಪ್ರಶ್ನೆ ಏನೆಂದರೆ ಈಗ ರೇಷ್ಮೆ ಬೆಳೆ ಕೇಂದ್ರಿಕೃತವಾಗಿರುವುದರಿಂದ ಬಡ ಕೈಮಗ್ಗದವರ ಜೀವನಕ್ಕೆ ಕಷ್ಟವಾಗಿರುವುದರಿಂದ ಅವರು ತಯಾರಿಸಿದ ಜವಳಿಗೆ ಸಾಕಷ್ಟು ಬೆಲೆ ಸಿಗದೇ ಇರುವುದರಿಂದ ಅವರಿಗೆ ಯಾವ ರೀತಿ ಸರ್ಕಾರದವರು ನೆರವು ಕೊಡಬಹುದು ಎನ್ನುವುದನ್ನು ಯೋಚನೆಮಾಡಿ ಅವರ ನೆರವಿಗೆ ಬರಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನು ಸಾಕಷ್ಟು ಹೇಳಿದೆ ಎಂದು ತಿಳಿದುಕೊಂಡಿದ್ದೆ. ಅವರ ಅನುಮಾನವನ್ನೂ ಕೂಡ ಬಗೆಹರಿಸುವುದಕ್ಕೆ ಪ್ರಯತ್ನಮಾಡುತ್ತೇನೆ. ಸೊಸೈಟಿಗಳನ್ನು ಮಾಡಬಾರದು ಎಂದು ಹೇಳಲಿಲ್ಲ. ಹೀಗೆ ನಾನಾಮುಖವಾದ ಸಮಸ್ಯೆಗಳು ಇವೆ ಎಂದು ಹೇಳಿದೆ. ಅಂಥಾ ಸೊಸೈಟಿಗಳನ್ನು ಮಾಡುವುದಕ್ಕೆ ನಾವೂ ಕೂಡ ಯೋಚನೆ ಮಾಡುತ್ತಿದ್ದೇವೆ. ವೀವರ್ಸ್ ಎಲ್ಲರೂ ಸೇರಿ ಅವರ ಸೊಸೈಟಿಗಳ ಮುಖಾಂತರ ಅವರು ಮಾಡಿದಂಥ ಪದಾರ್ಥಗಳನ್ನು ಮಾರುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾದರೆ ಮಾಡೋಣ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಹೇಳುವುದಾದರೆ ವೀವರ್ಸ್ ಎಲ್ಲಾ ಸೇರಿ ಹೊರಗಡೆ ದೇಶಕ್ಕೆ ಮಾಲುಗಳನ್ನು ಕಳುಹಿಸುವ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾದರೆ ಮಾಡೋಣ. ಸಾಧ್ಯವಾದರೆ ಎಂದು ಯಾತಕ್ಕೆ ಹೇಳುತ್ತಿದ್ದೇನೆ ಎಂದರೆ ತಮಗೆ ವ್ಯವಹಾರಗಳು ಗೊತ್ತು. ವೀವರ್ಸ್ ಫಾರಿನ್‌ಗೆ ಬಟ್ಟೆ ಕಳುಹಿಸಬೇಕಾದರೆ ಮೊದಲು ಯಾರಿಗೆ ಕಳುಹಿಸಬೇಕು ಎಂಬುದು ಗೊತ್ತಾಗಬೇಕು. ಹೊರಗಡೆ ದೇಶದ ವ್ಯಾಪಾರಿಗಳಿಗೂ ಇಲ್ಲಿ ಬಟ್ಟೆ ಕಳುಹಿಸುವ ವ್ಯಾಪಾರಗಳಿಗೂ ಇಬ್ಬರಿಗೂ ಸಂಪರ್ಕ ಬೆಳೆದಿರಬೇಕು, ರಿಲೇಷನ್‌ಷಿಪ್ ಬೆಳೆದಿರಬೇಕು. ಅದಿಲ್ಲದೆ ಯಾರಿಗೆ ಕಳುಹಿಸುವುದು ? It is not like coffee ಕೊಂಡುಕೊಳ್ಳುವವರ ಟೇಸ್ಟ್, ಮಾರುವವರ ಮಾಡ್ರನ್ ಟ್ರೆಂಡ್ಸ್, ಫ್ಯಾಷನ್ ಎಲ್ಲಾ ತಿಳಿದಿರಬೇಕು. ಸೀಸನಲ್ ಫ್ಯಾಷನ್ಸ್ ಇರುತ್ತವೆ. ರೇಷ್ಮೆ ಬಟ್ಟೆ ಏನು ಇದೆ, ಅದನ್ನು ನಾವು ಬಡವರು ಮದುವೆ ಕಾಲಕ್ಕೆ ತೆಗೆದುಕೊಳ್ಳುವುದರಿಂದ ಸೀರೆ, ಬಟ್ಟೆ ಉಪಯೋಗಿಸುವುದರಿಂದ ಆ ವ್ಯಾಪಾರ ಇಲ್ಲಿಯವರೆಗೂ ಉಳಿದುಕೊಂಡು ಬಂದಿದೆ.

ಹೊರ ದೇಶಗಳಲ್ಲಿ ಹಾಗೇನೂ ಇಲ್ಲ. ಅಲ್ಲಿ ಫ್ಯಾಶನ್ ದಿನೇ ದಿನೇ ಬೆಳೆಯುತ್ತದೆ. ನಿಮ್ಮ ಬೆಲೆ ಜಾಸ್ತಿಯಾದರೆ ಅವರು ಅದನ್ನು ಮುಟ್ಟುವುದೂ ಇಲ್ಲ. ಮತ್ತು ಫ್ಯಾಶನ್ ಉಂಟುಮಾಡುವುದಕ್ಕೆ ಲಕ್ಷಗಟ್ಟಲೆ ರೂಪಾಯಿ ಬೇಕಾಗುತ್ತದೆ. ಅದರ ಬಗ್ಗೆ ಮಾತನಾಡುವುದಾದರೆ ಬೇಕಾದಷ್ಟು ಇದೆ. ನಾನು ಅದನ್ನೆಲ್ಲಾ ನೋಡಿಕೊಂಡು ಬಂದಿದ್ದೇನೆ. ಆದ್ದರಿಂದ ನಮ್ಮ ಸಾಮಾನು ಕೊಂಡುಕೊಳ್ಳುವವರು ಯಾರು ಎಂದು ತಿಳಿದುಕೊಳ್ಳದೆ ನಾವು ಪ್ಲಾನ್ ಹಾಕುವುದಕ್ಕಾಗುವುದಿಲ್ಲ. ಉದಾಹರಣೆಗೆ ಸ್ಕಾರ್ಫ್ ಟೈಸ್ ಇತ್ಯಾದಿ. ಅದರಲ್ಲಿ ಕೂಡ ನಾನಾ ತರಹ ಇವೆ. ಇಟಾಲಿಯನ್ ಸ್ಕಾರ್ಫ್ ಅಂದರೆ ಬಹಳ ಹೆಸರುವಾಸಿ. ಅದು ಇರುವಾಗ ಇಂಡಿಯನ್ ಸ್ಕಾರ್ಫನ್ನು ಯಾರೂ ಮುಟ್ಟುವುದಿಲ್ಲ. ಆದರ ಬಗ್ಗೆ ದೊಡ್ಡ ವ್ಯಾಖ್ಯಾನಗಳನ್ನು ಮಾಡಬಹುದು. ಅಲ್ಲಿ ದೊಡ್ಡ ದೊಡ್ಡ ಲೈಬ್ರರಿಯೇ ಇದರ ಬಗ್ಗೆ ಇದೆ. ಅಲ್ಲಿ ಒಂದೊಂದು ಫ್ಯಾಶನಿಗೆ 30—40 ಲಕ್ಷ ಡಾಲರ್ಸ್ ಖರ್ಚು ಮಾಡುತ್ತಿದ್ದಾರೆ. ಅಷ್ಟೊಂದು ಸೋಫಿಸ್ಟಿಕೇಟೆಡ್ ಆಗಿದೆ. ಆ ಕಾರಣದಿಂದ ಹೊರಗೆ ಕಳುಹಿಸುವ ವ್ಯವಸ್ಥೆ ಮಾಡಬಾರದು ಎಂದು ಏನೂ ನಾನು ಹೇಳುವುದಿಲ್ಲ. ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ವೀವರ್ಸ್‌ಗಳಲ್ಲಿ ಕೂಡ ಚೆನ್ನಾಗಿ ತಿಳಿದಂತವರನ್ನು ಇಲಾಖೆಯವರು ಕರೆಸಿ ಮಾತನಾಡಬಹುದು. ಅದನ್ನು ಇಲಾಖೆಯವರಿಗೆ ತಿಳಿಸುತ್ತೇವೆ. ಹಾಗೆ ಅವರ ಸಲಹೆಗಳನ್ನು ತೆಗೆದುಕೊಂಡು ಇರುವ ಸಮಸ್ಯೆಯನ್ನು ಬಗೆಹರಿಸಲು ಏನು ಮಾಡಬೇಕೋ ಅದನ್ನು ಮಾಡೋಣ. ಅಲ್ಲದೆ ಏಕಾಏಕಿ ಈ ಫ್ಲಕ್ಚುಯೇಟಿಂಗ್ ಪ್ರೈಸ್‌ನ್ನು ನಿಲ್ಲಿಸುತ್ತೇನೆಂದು ನಾನು ಹೇಳಿದರೆ, ಅದನ್ನು ನಿಲ್ಲಿಸುವುದಕ್ಕಾಗುತ್ತದೆಯೇ ? ಅಥವಾ ಅದಕ್ಕೆ ಇಂತಿಷ್ಟೇ ಬೆಲೆ ಬರಬೇಕೆಂದು ಒಂದು ಆರ್ಡರ್ ಮಾಡಿದರೂ ಆಗುತ್ತದೆಯೇ ? ಹಾಗೆ ಮಾಡಿದರೆ ರೈತರು ಕೂಡ ನಾಳೆ ಗಲಾಟೆ ಶುರು ಮಾಡುತ್ತಾರೆ. ಹಿಂದೆ 140ರೂ. ರೇಶ್ಮೆಗೆ ಬೆಲೆ ಇತ್ತು. ಆಗ ರೈತರು ಒಂದು ಹಾಹಾಕಾರವನ್ನೇ ಎಬ್ಬಿಸಿದರು. ನಾನು ಹೋದ ಕಡೆಗಳೆಲ್ಲಾ ಅದನ್ನು ಹೇಳುತ್ತಿದ್ದರು. ಆದರೆ ಈಗ 180 ರೂಪಾಯಿ ಬೆಲೆ ಇದೆ. ಈ 180 ರೂಪಾಯಿ ಪೂರ್ತಿ ರೈತನ ಕೈಗೆ ಸೇರದೆ ಇರಬಹುದು. ಈಗ ವೀವರ್ಸಿಗೆ ಸ್ವಲ್ಪ ತೊಂದರೆಯಾಗಿದೆ, ಆದ್ದರಿಂದ ಅವರ ಸಲಹೆಯನ್ನು ತೆಗೆದುಕೊಂಡು ಇದನ್ನು ಬಗೆಹರಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಆಲೋಚನೆ ಮಾಡೋಣ ಎಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಈಗ ಬೆಲೆ 150 ರಿಂದ 500 ರೂಪಾಯಿ ಇದ್ದರೂ ನನ್ನ ಆಕ್ಷೇಪಣೆ ಇಲ್ಲ. ಆದರೆ ರೇಶ್ಮೆಯಲ್ಲಿ ತಯಾರಾದ ಬಟ್ಟೆಗೆ ಸರಿಯಾದ ಬೆಲೆ ಬರುವುದಕ್ಕೆ ಸರ್ಕಾರದವರು ಒಂದು ವ್ಯವಸ್ಥೆ ಮಾಡಬೇಕು. ಹಿಂದೆ ಕೆ. ಎಚ್. ರಾಮಯ್ಯನವರ ಒಂದು ಕೋಪರೇಟಿವ್ ಸೊಸೈಟಿ ಇತ್ತು. ನಾನೂ ಅಲ್ಲಿ ಹುಡುಗನಾಗಿದ್ದಾಗ ಕೆಲಸ ಮಾಡಿದ್ದೆ. ಆಗ ಯಾವ ಮದುವೆ ಮುಂಜಿಗಾದರೂ ಜನರು ಅದರ ಮುಖಾಂತರವೇ ಬಟ್ಟೆ ಬರೆಗಳನ್ನು ಕೊಂಡುಕೊಳ್ಳುತ್ತಿದ್ದರು. ಅವರು ಕೇವಲ ರೂಪಾಯಿಯಲ್ಲಿ ಒಂದು ಆಣೆ ಲಾಭ ಇಟ್ಟುಕೊಂಡಿದ್ದರು. ಅದು ಚೆನ್ನಾಗಿ ನಡೆಯುತ್ತಿತ್ತು. ಆ ಕಾಲದಲ್ಲಿ ಜನಸಂಖ್ಯೆ ಕಡಿಮೆ ಇದ್ದಾಗ, ಮಗ್ಗಗಳು ಕಡಿಮೆ ಇದ್ದಾಗ ಅನೇಕ ಜನರಿಗೆ ಅದು ಸಹಾಯಕವಾಗಿತ್ತು ಆದ್ದರಿಂದ ರೇಶ್ಮೆ ಒಂದು ಕೆ. ಜಿ.ಗೆ ಒಂದು ಸಾವಿರ ರೂಪಾಯಿ ತೆಗೆದುಕೊಂಡರೂ ಅವರಲ್ಲಿ ತಯಾರಾದಂತಹ ಬಟ್ಟೆಗೆ ಸರಿಯಾದ ಬೆಲೆ ಸಿಗುವಂತೆ ಒಂದು ಏರ್ಪಾಡನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**Sri D. DEVARAJ URS.**—I have already said that I am going to invite all these persons who are affected and who have knowledge of special conditions with regard to this trade. Let us have a sort of dicsussion. ತಮ್ಮನ್ನು ಕರೆಸುತ್ತೇನೆಂದು ಆಗಲೇ ಹೇಳಿದ್ದೇನೆ. ಅದರ ಬಗ್ಗೆ ಯಾವ ರೀತಿಯಲ್ಲಿ ಮಾಡಬೇಕೆಂಬುದರ ಬಗ್ಗೆ ತಮ್ಮ ಸಲಹೆಗಳನ್ನು ತೆಗೆದುಕೊಂಡು ಮಾಡೋಣ ಎಂದು ಹೇಳಿದ್ದೇನೆ.

**Sri K. M. NAGANNA.**—In view of the assurance given by the Chief Minister, I seek permission of the House to withdraw the resolution

*The Resolution was by leave withdrawn.*

**Mr. CHAIRMAN.**—Next Resolution by Sri Gopinath R. Sandra.

## *re* : (3) the Steep fall in the Prices of Cotton Resulting in hardships to the Cotton growers.

ಶ್ರೀ ಗೋಪಿನಾಥ್ ಆರ್. ಸಂದ್ರ (ಹುಬ್ಬಳ್ಳಿ-ಗ್ರಾಮಾಂತರ).—ಸ್ವಾಮಿ ನಾನು ಈ ನಿರ್ಣಯವನ್ನು ಇಲ್ಲಿ ಮಂಡಿಸುತ್ತೇನೆ.

> " ರಾಜ್ಯದಲ್ಲಿನ ಹತ್ತಿ ಬೆಲೆಯ ಕುಸಿತದಿಂದಾಗಿ ಹತ್ತಿ ಬೇಸಾಯಗಾರರಿಗೆ ತೊಂದರೆಯುಂಟಾಗಿರುವ ಬಗ್ಗೆ ಈ ಸಭೆಯವರು ವಿಷಾದವನ್ನು ವ್ಯಕ್ತಪಡಿಸಿ ಹತ್ತಿಯನ್ನು ಕೊಂಡುಕೊಳ್ಳುವಂತೆ ವ್ಯವಸ್ಥೆ ಮಾಡುವ ಮೂಲಕ ರಾಜ್ಯದಲ್ಲಿನ ಹತ್ತಿ ಬೇಸಾಯಗಾರರ ತೊಂದರೆಗಳನ್ನು ನಿವಾರಿಸುವಂತೆ ಭಾರತ ಸರ್ಕಾರ ಹಾಗೂ ಭಾರತದ ಹತ್ತಿ ಸಂಸ್ಥೆಯವರಿಗೆ ಶಿಫಾರಸು ಮಾಡಬೇಕೆಂದು ಈ ಸಭೆಯವರು ಸರ್ಕಾರದವರನ್ನು ಒತ್ತಾಯಪಡಿಸುತ್ತಾರೆ."

**Mr. CHAIRMAN.**—Resolution moved :

> " that this Assembly views with great concern the steep fall in the prices of cotton, resulting in hardship to the cultivators of cotton, and urges upon the Government to recommend to the Government of India and the Cotton Corporation of India to arrange for buying the cotton grown in the State in order to alleviate the distress of the cotton growers in the State."

† ಶ್ರೀ ಗೋಪಿನಾಥ್ ಆರ್. ಸಂದ್ರ.—ಸ್ವಾಮಿ, ನಾನು ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಹತ್ತಿ ಬೆಳೆಯತಕ್ಕಂತಹ ಹುಬ್ಬಳ್ಳಿ ಗ್ರಾಮಾಂತರ ಪ್ರದೇಶದಿಂದ ಬಂದಿರುವವನಾಗಿದ್ದೇನೆ. ಧಾರವಾಡ ಜಿಲ್ಲೆಯಲ್ಲಿ ಯಾವತ್ತೂ ಹತ್ತಿ ಬೆಳೆಯುವುದಕ್ಕೆ ಪ್ರಾಶಸ್ತ್ಯ ಕೊಟ್ಟುಕೊಂಡು ಬಂದಿದ್ದಾರೆ. ಅದರೆ ಅಲ್ಲಿ ಈಗ ಇರತಕ್ಕಂತದ್ದು ಒಂದು ಜಟಿಲವಾದ ಪ್ರಶ್ನೆಯಾಗಿದೆ. ಹತ್ತಿ ಬೆಳೆದಂತಹ ರೈತರು ಇವೊತ್ತಿನ ದಿವಸ ನಮ್ಮ ಮೈಸೂರು ರಾಜ್ಯದಲ್ಲಿ ಬಹಳ ಮಂದಿ ಇದ್ದಾರೆ. ಸುಮಾರು 10 ಲಕ್ಷ ಎಕರೆಗಳಲ್ಲಿ ಈ ಬೆಳೆಯನ್ನು ಮಾಡುತ್ತಿದ್ದಾರೆ. ದುರ್ದೈವದಿಂದ ಈ ಒಂದು ಸಮಸ್ಯೆ ಬಹು ದೊಡ್ಡ ಸಮಸ್ಯೆಯಾಗಬಾರದಾಗಿತ್ತು. ಕಳೆದ ಎರಡು ವರ್ಷಗಳಿಂದ ಈ ಸಮಸ್ಯೆ ಉದ್ಭವವಾಗಿದೆ. ಕಳೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ನಮ್ಮ ಪಕ್ಷದವರು ಗೆದ್ದಾಗ ಬಹಳವಾದ ಆಶ್ವಾಸನೆಗಳನ್ನು ಜನರಿಗೆ ಕೊಟ್ಟಿದ್ದೇವೆ. ರೈತರ ಅಭಿವೃದ್ಧಿಗೋಸ್ಕರ ಅವರನ್ನು ಉದ್ಧಾರ ಮಾಡುವುದಕ್ಕೋಸ್ಕರ ನಾವು ಕೆಲಸ ಮಾಡುತ್ತೇವೆಂದು ಆಶ್ವಾಸನೆಗಳನ್ನು ಕೊಟ್ಟಿದ್ದೇವೆ. ಚುನಾವಣೆ ಆದಮೇಲೆ ಜನರು ನಮ್ಮನ್ನು ಕೇಳಲಿಕ್ಕೆ ಸುರು ಮಾಡಿದ್ದಾರೆ. ಅಲ್ಲದೆ ರೈತರು ತಾವು ಬೆಳೆದ ಹತ್ತಿಯನ್ನು ಬಜಾರಿಗೆ ತೆಗೆದುಕೊಂಡು ಹೋದಾಗ ಅಲ್ಲಿರುವ ದಳ್ಳಾಳಿಗಳು ನೀವು ಇಂದಿರಾ ಗಾಂಧಿಯವರ ಹತ್ತಿರ ಹೋಗಿ- ಅವರು ನಿಮ್ಮ ಹತ್ತಿಯನ್ನು ಕೊಂಡುಕೊಳ್ಳುತ್ತಾರೆ ಎಂದೆಲ್ಲಾ ಹೀಯಾಳಿಸಿ ಬೈಯ್ಯುದ್ದಾರೆ. ಹಾಗೆ ಅಲ್ಲಿರುವ ಜನರು ಆಡಿದ ಮಾತುಗಳನ್ನು ನಮ್ಮ ನಾಯಕರಾದ ಶ್ರೀ ದೇವರಾಜ ಅರಸರಿಗೂ ಕೂಡ ತಿಳಿಸಿದ್ದೇವೆ. ದುರ್ದೈವದಿಂದ ಆಗ ರಾಷ್ಟ್ರಪತಿ ಆಡಳಿತ ನಮ್ಮ ರಾಜ್ಯದಲ್ಲಿ ಇತ್ತು. ಆಗ ನಮ್ಮ ಉದ್ದೇಶವನ್ನು ಏನೂ ಸಾಧಿಸಲಾಗಲಿಲ್ಲ. ನಮ್ಮ ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷದವರು ಚುನಾವಣೆಯ ಪ್ರಣಾಳಿಕೆಯಲ್ಲಿ ರೈತರ ಸೇವೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದನ್ನು ಈಗ ನಮ್ಮ ಸರ್ಕಾರದವರು ಮಾಡಬೇಕೆಂದು ರೈತರು ಕೇಳುತ್ತಿದ್ದಾರೆ. ಇದು 10 ಲಕ್ಷ ಎಕರೆ ಜಮೀನಿನಲ್ಲಿ ಬೆಳೆ ತೆಗೆಯತಕ್ಕ ರೈತರಿಗೆ ಸಂಬಂಧಪಟ್ಟ ಪ್ರಶ್ನೆಯಾಗಿದೆ. ಇವೊತ್ತಿನದಿವಸ ರೈತರ ಮನೆಗಳಲ್ಲಿ ಹಣದ ಮುಗ್ಗಟ್ಟಿನಿಂದ ಜರುಗಬೇಕಾದಂತಹ ಲಗ್ನಗಳು ಆಗುತ್ತಾ ಇಲ್ಲ; ಒಕ್ಕಲುತನದ ಅಭಿವೃದ್ಧಿಗೋಸ್ಕರ ಹಣ ದೊರಕದೆ ಎಲ್ಲರೂ ಬಹಳ ಕಳವಳದಿಂದ ಇದ್ದಾರೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕೆನ್ನುವ ವಿಚಾರದಲ್ಲಿ ಸರ್ಕಾರದವರು ಕೂಡಲೇ ಒಂದು ಕ್ರಮವನ್ನು ತೆಗೆದುಕೊಂಡು, ಇದನ್ನು ಹೋಗಲಾಡಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN.—The House will now rise and meet on Monday, the 10th April 1972, at 1-00 P.M.

---

*The House adjourned at One of the Clock to meet again at one of the Clock on Monday, the 10th April 1972.*

---

Karnataka State Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
Accession No.
Date
6003

WD 17260—GPB—550—10-7-1972

Archives
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪ್ರವೇಶ ಕ್ರಮಾಂಕ Accession No. 6008
ದಿನಾಂಕ Date........................

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Monday, the 10th April 1972*

The House met in the Assembly Chamber, Vidhana Soudha, Bangalore, at One of the Clock.

MADAM SPEAKER (SMT. K. S. NAGARATHNAMMA) in the Chair.

---

## Upholding the Election of Sri Veerendra Patil as Member of the Rajyasabha.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಒಂದು ಸಂತೋಷದ ಸುದ್ದಿ. ಮೊನ್ನೆಯ ದಿನ ನಡೆದಂಥ ರಾಜ್ಯಸಭೆಯ ಚುನಾವಣೆಯಲ್ಲಿ ನಮ್ಮ ವಿರೋಧಪಕ್ಷದ ಅಭ್ಯರ್ಥಿಯಾಗಿ ಆರಿಸಿ ಬಂದಂಥ ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರಿಗೆ ಇಡೀ ರಾಜ್ಯದ ಪರವಾಗಿ ಈ ಸಭೆಯಲ್ಲಿ ಸ್ವಾಗತ ಬಯಸುತ್ತೇನೆ. ಆ ಕಡೆ ಪಕ್ಷದವರಲ್ಲಿ ಅವರಿಗೆ ಹೆಚ್ಚಿಗೆ ಮತಗಳನ್ನು ಕೊಟ್ಟಂಥ ಎಲ್ಲ ಸದಸ್ಯರಿಗೂ ನಾನು ಮೊಟ್ಟಮೊದಲನೆಯದಾಗಿ ಅಭಿನಂದಿಸುತ್ತೇನೆ.

ಅಧ್ಯಕ್ಷರು.—ತಾವು ಕೂತುಕೊಳ್ಳಿ. ತಮಗೆ ಆಮೇಲೆ ಮಾತನಾಡಲು ಅವಕಾಶ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ವಿರೋಧಪಕ್ಷವನ್ನು ದಮನ ಮಾಡಬೇಕೆಂಬ ನೀತಿಯನ್ನು ಇಟ್ಟುಕೊಂಡಿದ್ದರೂ ವಿರೋಧಪಕ್ಷದ ಅಭ್ಯರ್ಥಿಗೆ ಹೆಚ್ಚು ಬಹುಮತಗಳನ್ನು ಕೊಟ್ಟಿದ್ದಕ್ಕೆ ನಮ್ಮೆಲ್ಲರಿಗೂ ಸಂತೋಷ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷವನ್ನು ತುಳಿಯಬೇಕೆಂದು ಏನೊಂದು ಮಾರ್ಗದಿಂದ ಅವರು ಹೊರಟಿದ್ದಾರೋ ಅವನ್ನು ನಿವಾರಿಸಿ ಆರಿಸಿ ಬಂದಂಥ ಮಾನ್ಯ ಶ್ರೀ ವೀರೇಂದ್ರಪಾಟೀಲರಿಗೆ ವಿರೋಧ ಪಕ್ಷದಪರವಾಗಿ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

## Calling attention to a matter of urgent Public Importance

## *re* : Assault on some persons by the Timber Smuggling Prevention Squad in Hosanagar Taluk.

SRI S. BANGARAPPA (Sorab).—I call the attention of the Chief Minister to the alleged assault on some persons by the Timber smuggling prevention Squad in Hosanagar Taluk.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ನನ್ನ ಗೆಳೆಯ ಮಾನ್ಯ ಶ್ರೀ ಬಂಗಾರಪ್ಪನವರು ಕೇಳಿರುವುದಕ್ಕೆ ನನ್ನ ಒಪ್ಪಿಗೆ ಇದೆ.

Sri D. DEVARAJ URS (Chief Minister).—On 4th April 1972 the Range Officer, Arasalu lodged a complaint at Ripponpet Police Station to the effect that on 3rd April 1972 he (Range Forest Officer) and the Timber Smuggling Prevention Staff apprehended 4 persons at Dade Village while they were sawing Government timber illicitly and that Sri Purushotham, Sri Swamy Rao and 13 others armed with lathies, stones, attacked the Timber Smuggling Prevention Sqaud at Gerthikere Village, stopped their vehicle, pulled out the staff from the vehicle and assaulted them while they were in the discharge of their duty. A case in Cr. No. 15/72, U/ss, 143, 144, 147, 148, 149, 332 and 353 I. P. C. has been registered against Sri Purushotham and others in the Ripponpet Police Station and is being investigated.

On 4th April 1972 Sri Swamy Rao lodged a complaint at the Police Station alleging that himself and Sri Purushotham were attacked by the Timber Smuggling Prevention Staff at Gerthikere, that they were assaulted with clubs and were forcibly made to sit in the van and were taken to Shimoga, ill-treating them throughout the journey and that a cash of Rs. 600 was robbed from Sri Purushotham. On this complaint, a case in Cr. No. 16/72, u/s, 341, 395, 324 read with 34 of I.P.C. has been registered in the Ripponpet Police Station against the Forest Officials.

Sri Nageshappa, brother of Sri Purushotham has also lodged a complaint alleging that the Range Forest Officer and his staff trespassed into his house and committed theft of timber, bullock cart and bullocks. On this complaint, a case has been registered.

All the three cases are being investigated and the guilty persons will be dealt with according to law.

ಶ್ರೀ ಎಸ್. ಬಂಗಾರಪ್ಪ.—ಈ ಕೇಸಿಗೆ ಸಂಬಂಧಪಟ್ಟಂತೆ ಮಾನ್ಯ ಶ್ರೀ ಸ್ವಾಮಿರಾವ್ ಮತ್ತು ಶ್ರೀ ಪುರುಷೋತ್ತಮ್ ಇವರುಗಳಿಗೆ ಗಾಯವಾಗಿರುವ ವಿಷಯ, ಶ್ರೀ ಸ್ವಾಮಿರಾವ್ ಅವರನ್ನು ಆಸ್ಪತ್ರಿಯಲ್ಲಿ ಅಡ್ಮಿಟ್ ಮಾಡಿರುವ ವಿಷಯ ತಮಗೆ ಬಂದಿಲ್ಲವೇ ? ಶ್ರೀ ಸ್ವಾಮಿರಾವ್ ಅವರ ಮೈಮೇಲೆ ಇಂಜರೀಸ್ ಆಗಿವೆ. ಅದರ ಬಗ್ಗೆ ಡಾಕ್ಟರ್ ಸರ್ಟಿಫಿಕೇಟ್‌ಗಳಿವೆ. ಇದರ ಬಗ್ಗೆ ಇನ್‌ವೆಸ್ಟಿಗೇಷನ್ ಮಾಡಿ ಏನು ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ ? ಇಂಜರೀಸ್ ವಿಷಯವನ್ನು ನಿಮಗೆ ಅಧಿಕಾರಿಗಳು ಏಕೆ ತಿಳಿಸಲಿಲ್ಲ ?

ಶ್ರೀ ಡಿ. ದೇವರಾಜ್ ಅರಸ್.—ಅವರಿಗೆ ಗಾಯಗಳಾಗಿರುವುದು, ಮತ್ತೊಂದು ಏನೂ ಮಾಹಿತಿ ಬಂದಿಲ್ಲ. ಈಗ ತಾವು ಹೇಳುತ್ತಾ ಇದ್ದೀರಿ. ಅದರ ಬಗ್ಗೆ ವರದಿ ತರಿಸಿಕೊಂಡು ವಿಚಾರ ಮಾಡೋಣ. ಈಗಾಗಲೇ ಅವರೇ ಕೊಟ್ಟಿರತಕ್ಕಂಥ ಕಂಪ್ಲೇಂಟನ್ನು ಪೋಲೀಸ್ ಸ್ಟೇಷನ್ನಿನಲ್ಲಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಇನ್‌ವೆಸ್ಟಿಗೇಷನ್ ನಡೆಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಅದು ಪೋಲೀಸ್ ವರದಿ. ಅವರ ಒಂದು ವರದಿ ಪ್ರಕಾರ ಇವರು ಇಲ್ಲಿ ಕೊಡುವ ಹೇಳಿಕೆ ಇದು.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ಹೇಳಿಕೆಯನ್ನು ವಾಪಸ್ಸು ತೆಗೆದುಕೊಳ್ಳಿ. ತಾವು ಅಧಿಕಾರಿಗಳ ಗುಲಾಮರಾಗಿ ವರ್ತಿಸಬೇಡಿ. ಜನರ ಪ್ರತಿನಿಧಿಗಳ ಮುಂದೆ ಬಂದು, ಅಧಿಕಾರಿಗಳು ಹೇಳಿದ್ದನ್ನೇ ಅವರಿಗೆ ಗುಲಾಮರಾಗಿ ಈ ಸಭೆಯಲ್ಲಿ ಹೇಳಬೇಡಿ.

ಶ್ರೀ ಡಿ. ದೇವರಾಜ ಅರಸ್.—ಅದು ಅವರ ಅಭಿಪ್ರಾಯದ ಮಾತು. ಈ ಕೇಸಿನಲ್ಲಿ ಇಬ್ಬರ ಮೇಲೂ ಅಲಿಗೇಷನ್ಸ್ ಇರತಕ್ಕದ್ದು ಎಂಬುದಾಗಿ ಈ ಕೇಸನ್ನು ಲಾಡ್ಜ್ ಮಾಡಿರತಕ್ಕದ್ದಾಗಿದೆ. ಅವರು ಸರ್ಕಾರದ ಮರವನ್ನು ಕದ್ದು ಕೊಂಡೊಯ್ಯುತ್ತಿರುವಾಗ ಅವರನ್ನು ಹಿಡಿದಿದ್ದಾರೆ. ಇದು ಇನ್‌ವೆಸ್ಟಿಗೇಷನ್ ನಡೆಯುತ್ತಿದೆ. ಅದು ಸುಳ್ಳು, ನಿಜವೆಂಬುದು ಆಮೇಲೆ ಪ್ರೂವ್ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಪೋಲೀಸಿನವರು ಯಾರ ಮೇಲಾದರೂ ಏನು ಬೇಕಾದರೂ ಕೇಸ್ ಹಾಕುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಇದು ಪೋಲೀಸಿನವರ ಕೇಸಲ್ಲ. ಇದಕ್ಕಾಗಿ ಒಂದು ಸ್ಕ್ವಾಡ್ ಇಟ್ಟಿದ್ದಾರೆ. ಅವರು ಅವರನ್ನು ಹಿಡಿದು ಹಾಕಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಈ ಪೋಲೀಸ್ ವರದಿಯು ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳತಕ್ಕ ಧಾಟಿಯಲ್ಲಿ ನಿಜವಾಗಿ ಈ ಸಭೆ ಒಪ್ಪುತ್ತದೆಂಬುದಾಗಿ ನಾನು ಭಾವನೆ ಮಾಡುವುದಿಲ್ಲ. ನೀವು ಈ ಒಂದು ವಿಷಯದಲ್ಲಿ ಸ್ಮಗಲರ್ಸ್ ಬಗ್ಗೆ ಅಲಿಗೇಷನ್ಸ್ ಇವೆಯೆಂಬುದಾಗಿ ಹೇಳಿದ ನಿಮ್ಮ ಮಾತಿನ ನಮೂನೆಯನ್ನು ಸ್ವಲ್ಪಮಟ್ಟಿಗೆ ತಿದ್ದುಪಾಟು ಮಾಡಬೇಕು.

Sri D. DEVARAJ URS.—I have stated it is alleged they are smugglers.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶ್ರೀ ಸ್ವಾಮಿರಾವ್ ಅವರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರು, ಹೊಸನಗರ ಬ್ಯಾಂಕಿನ ಅಧ್ಯಕ್ಷರು. ಆದ್ದರಿಂದ ನೀವು ಹೇಳುವುದು ಸ್ಮಗಲರ್ಸ್ ವಿಷಯವಲ್ಲವೆಂದು ನನಗೆ ಸಂದೇಹವಿದೆ. I am doubtful whether you are submitting this information as a Leader of this House. You expect us to accept this information. We are not here to accept what you say. ಯಾರು ಕಂಪ್ಲೇಂಟ್ ಕೊಟ್ಟರೋ ಅವರನ್ನು ತಕ್ಷಣ ಹಿಡಿದಿದ್ದಾರೆ. ಶಿವಮೊಗ್ಗಾಕ್ಕೆ ಬರುವವರೆಗೂ ಬೂಟ್ಸಿನಿಂದ ಒದ್ದಿದ್ದಾರೆ. ಅಂದಮೇಲೆ ಈ ಸಭೆಗೆ ನಾಯಕರಾಗಿ ಹಾಗೂ ಮುಖ್ಯ ಮಂತ್ರಿಗಳಾಗಿ ಈ ವಿಚಾರದಲ್ಲಿ ಕೇವಲ ನಾಲ್ಕು ಮಾತುಗಳನ್ನು ಓದಿ ಹೇಳಿಬಿಟ್ಟರೆ ಯಾರು ಅದಕ್ಕೆ ಈಲ್ಡ್ ಆಗುತ್ತಾರೆ? ಕೇವಲ ನೌಕರರು ಸಪ್ಲೈ ಮಾಡುವ ವಿಷಯನ್ನು ಕೇಳಿಕೊಂಡು ಇರುವುದಕ್ಕೆ ನಾವು ಇಲ್ಲಿ ಬಂದಿಲ್ಲ. ದಯವಿಟ್ಟು ಅವರಿಗೆ ಸರಿಯಾಗಿ ತಾವು ನಿರ್ದೇಶನ ಕೊಡುತ್ತೀರೆಂದು ಭಾವಿಸುತ್ತೇನೆ. ಮಾನ್ಯ ಪುರುಷೋತ್ತಮ ಎನ್ನುವವರು ತಾಲ್ಲೂಕು ಡೆವಲಂಪ್‌ಮೆಂಟ್ ಬೋರ್ಡ್‌ ಮೆಂಬರು.

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಕೊಟ್ಟಿರುವ ಕಾಲ್ ಅಟೆನ್‌ಷನ್ ಸೂಚನೆಯ ಮೇಲೆ ಮಾತ್ರ ಪ್ರಶ್ನೆ ಕೇಳಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಈ ಸಭೆಯ ನಾಯಕರಾಗಿ ಹಾಗೂ ಮುಖ್ಯ ಮಂತ್ರಿಯಾಗಿ ಈ ವಿಚಾರದಲ್ಲಿ ಸರಿಯಾಗಿ ಉತ್ತರ ಕೊಡುವುದು ಅವರ ಜವಾಬ್ದಾರಿಯಲ್ಲವೇ? ಕೇವಲ ನಾಲ್ಕು ಲೈನ್ ಸ್ಟೇಟ್‌ಮೆಂಟ್ ಮಾಡಿದರೆ ಸಾಕೆ? ಈ ರೀತಿಯಾಗಿ ಉತ್ತರ ಕೊಡುವುದಕ್ಕೆ ಅವರಿಗೆ ನಾಚಿಕೆಯಾಗುವುದಿಲ್ಲವೇ? ಮುಖ್ಯ ಮಂತ್ರಿಗಳು ಅವರನ್ನು ಸ್ಮಗ್ಲರ್ಸ್ ಅಂತ ಹೇಳಿದ್ದನ್ನು ನಾನು ಪ್ರತಿಭಟಿಸುತ್ತೇನೆ. ಅದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಅವರು ತಮ್ಮ ಈ ಹೇಳಿಕೆಯನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಈ ವಿಚಾರದಲ್ಲಿ ಅಧ್ಯಕ್ಷರು ನಮಗೆ ರಕ್ಷಣೆ ಕೊಡಬೇಕು. ಈಗತಾನೆ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಓದಿದ ಹೇಳಿಕೆ ಏನಿದೆ ಅದರ ಪ್ರತಿಗಳು ಕೂಡ ನಮಗಿನ್ನೂ ಬಂದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ತಾವೂ ಸಹಾ ಈ ದಿವಸದ ಪತ್ರಿಕೆಯಲ್ಲಿ ಇದೇ ವಿಚಾರದಲ್ಲಿ ಬಂದಿರತಕ್ಕ ವರದಿಗಳನ್ನು ಓದಬಹುದು. ಹಾಗೇ ಆ ವರದಿಗಳನ್ನೆಲ್ಲಾ ಮಾನ್ಯ ಗೃಹಮಂತ್ರಿಗಳೂ ಮತ್ತು ಮುಖ್ಯಮಂತ್ರಿಗಳೂ ಕೂಡ ಗಮನಿಸಿರುತ್ತಾರೆಂದು ನಾನು ಭಾವಿಸುತ್ತೇನೆ. ಇಡೀ ಮಲೆನಾಡಿಗೇ ಬಹಳ ಪ್ರಾಮುಖ್ಯವಾದಂಥ ಹಾಗೂ ವಿಶೇಷ ಗೌರವಾನ್ವಿತ ದೊಡ್ಡ ಮನುಷ್ಯರಿಗೆ ಅರಣ್ಯ ಇಲಾಖೆಯವರು ಮಾನಭಂಗ ಮಾಡಿದ್ದಾರೆ. ಅವರ ಮೇಲೆ ಕೈ ಮಾಡಿರತಕ್ಕ ಆ ಅರಣ್ಯ ಇಲಾಖೆಯ ಹದಿಮೂರು ಜನ ಅಧಿಕಾರಿಗಳೇನಿದ್ದಾರೆ ಅವರು ದರೋಡೆಕೋರರು—ಕೊಲೆಪಾತಕರು—ಮಹಾ ನೀಚರು ಅಂಥ ಅಧಿಕಾರಿಗಳನ್ನು ಸರ್ಕಾರದವರಿನ್ನೂ ಸಸ್ಪೆಂಡ್ ಮಾಡಿದ್ದಾರೋ ಇಲ್ಲವೋ ತಿಳಿಯದಾಗಿದೆ. ಈ ವಿಚಾರ ಇಡೀ ಮಲೆನಾಡಿಗೇ ಒಂದು ಬಹಳ ಪ್ರಾಮುಖ್ಯವಾದಂಥ ವಿಚಾರವಾಗಿದೆ......

(ಸಭೆಯಲ್ಲಿ ಮಾತನಾಡಲು ಶ್ರೀ ವಾಟಾಳ್ ನಾಗರಾಜ್ ಶ್ರೀ ಬಂಗಾರಪ್ಪನವರು ಮತ್ತು ಶ್ರೀ ಎಂ. ಎಸ್. ಕೃಷ್ಣನ್ ಇವರೆಲ್ಲಾ ನಿಂತಿದ್ದರು)

ಅಧ್ಯಕ್ಷರು.—ಈಗೆ ಇಷ್ಟು ಜನ ಸದಸ್ಯರೂ ಏಕಕಾಲಕ್ಕೆ ಎದ್ದು ನಿಂತರೆ ಏನು ಹೇಳಬೇಕು ? ಈಗ ತಮಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾತ್ರ ಅವಕಾಶವಿದೆ. ಇದರ ಬಗ್ಗೆ ತಮಗೆ ಏನಾದರೂ ಮಾತನಾಡಬೇಕೆಂಬ ಕುತೂಹಲವಿದ್ದರೆ, ಮುಂದೆ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುವಾಗ ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನೂ ಕೂಡ ಆಗ ತಿಳಿಸಬಹುದು. ಆದ್ದರಿಂದ ಮೊದಲು ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಇದು ಬಹಳ ಗುರುತರವಾದ ವಿಷಯ ಈಗ ತಾನೆ ಮಾನ್ಯ ಮಂತ್ರಿಗಳೇನು ಒಂದು ಹೇಳಿಕೆಯನ್ನು ಈ ಸಭೆಯಲ್ಲಿ ಓದಿದರು ಅದು ಆ ಅರಣ್ಯ ಇಲಾಖೆಯ ಅಧಿಕಾರಿಗಳು ಬರೆದುಕೊಟ್ಟಿದ್ದ ಒಂದು ಹೇಳಿಕೆ ಮಾತ್ರ. ಅದನ್ನು ಮುಖ್ಯ ಮಂತ್ರಿಗಳು ಕಣ್ಣುಮುಚ್ಚಿಕೊಂಡು ಓದಿಬಿಟ್ಟರಾಯಿತೇ ? ಆದರೆ ನನಗೆ ಮುಖ್ಯಮಂತ್ರಿಗಳ ವಿಚಾರದಲ್ಲಿ ಅಭಿಮಾನ ಗೌರವಗಳಿವೆ. ಇದ್ದಾಗ್ಯೂ ಈ ಹೇಳಿಕೆ ಕೊಡತಕ್ಕ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಸಭೆಯಲ್ಲಿ ಎದ್ದುನಿಂತ ಅವರ ಧಾಟಿ, ಅವರ ವರ್ತನೆ ಅವರಿಗೂ ಮತ್ತು ಈ ಮಾನ್ಯ ಸಭೆಗೂ ಗೌರವ ತರತಕ್ಕದ್ದಾಗಿ ಕಾಣಲಿಲ್ಲ ಎಂದು ಹೇಳಲು ನನಗೆ ಬಹಳ ದುಃಖವಾಗುತ್ತದೆ. ಅವರು ಯಾರದೋ ಮೇಲಿನ ಕೋಪವನ್ನು ಅವರ ಮೇಲೆ ತೋರಿಸುವುದಕ್ಕೆ ಸಾಧ್ಯವಾಗದಿದ್ದಾಗ ಆ ಕೋಪವನ್ನು ಈ ಸಭೆಯಲ್ಲಿ ಆ ಸ್ವಾಮಿರಾವ್ ಅವರ ಬಗ್ಗೆ ತೋರಿಸಿದ್ದು ಸರ್ವಥಾ ಸರಿಯಾದ್ದಲ್ಲ. ಸ್ವಾಮಿರಾವ್ ಬಹಳ ಸತ್ಯವಂತ ವ್ಯಕ್ತಿ ಎಂದು ಇಡೀ ಜಿಲ್ಲೆಯ ಜನರೇ ಹೇಳುತ್ತಾರೆ. ಅಂಥವರು ಟಿಂಬರನ್ನು ಸ್ಮಗಲ್ ಮಾಡುತ್ತಿದ್ದರೆಂಬುದು ನಂಬತಕ್ಕ ವಿಷಯವಲ್ಲ. ಅವರು ಅಂಥ ಒಬ್ಬ ಗಣ್ಯ ವ್ಯಕ್ತಿ, ಗೌರವ ವ್ಯಕ್ತಿ ಆಗದೆ ಇದ್ದಿದ್ದರೆ ಇಷ್ಟೆಲ್ಲಾ ಪತ್ರಿಕೆಗಳಲ್ಲಿ ಬರುತ್ತಿರಲಿಲ್ಲ. ಬೆಳಗಿನ ಜಾಮದಲ್ಲಿ ಹೋಗುತ್ತಿದ್ದವರ ಮೇಲೆ ಬಿದ್ದು ಹೀಗೆ ಹೇಳುತ್ತಿರುವುದು ಸರಿಯಾದ್ದಲ್ಲ. ಅವರನ್ನು ಪ್ರಾಣಹೋಗುವಂತೆ ಹೊಡೆದಿದ್ದಾರೆ.......

ಅಧ್ಯಕ್ಷರು.—ಇದೇನು ಕ್ಲಾರಿಫಿಕೇಷನ್ ಕೇಳತಕ್ಕ ವಿಧಾನವೇ ?

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಅಧ್ಯಕ್ಷರೇ, ಈಗತಾನೇ ಮಾನ್ಯ ಮುಖ್ಯ ಮಂತ್ರಿಗಳು ಓದಿದ ವರದಿಯೇ ಒಂದು. ಇಲ್ಲಿ ಮಾನ್ಯ ಸದಸ್ಯರು ಕೇಳುತ್ತಿರುವುದೇ ಇನ್ನೊಂದು. ಹೀಗೆ ಒಂದಕ್ಕೊಂದಕ್ಕೆ ಸಂಬಂಧವಿದ್ದ ಹಾಗೆ ಕಾಣುವುದಿಲ್ಲ. ಈ ಕೃತ್ಯದಲ್ಲಿ ದೊಡ್ಡ ಗಣ್ಯ ವ್ಯಕ್ತಿಗಳು ಸಿಕ್ಕಿಕೊಂಡಿದ್ದಾರೆ, ಅವರನ್ನು ಹೊಡೆದುಬಡಿದು ಅವರಿಗೆ ಬಹಳ ವಿಚಿತ್ರಕರವಾದ ಹಿಂಸಾ ಕೃತ್ಯಗಳನ್ನು ಮಾಡಿದ್ದಾರೆಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ದಯವಿಟ್ಟು ಈ ವಿಚಾರದಲ್ಲಿ ಆಳವಾಗಿ ವಿಚಾರಣೆ ನಡೆಸಿ, ಇನ್‌ವೆಸ್ಟಿಗೇಷನ್ ನಡೆಸಿ ತಪ್ಪಿತಸ್ಥರ ಬಗ್ಗೆ ತೀವ್ರ ಕ್ರಮ ಕೈಗೊಳ್ಳುತ್ತೀವೆಂಬ ಬಗ್ಗೆ ಇನ್ನೊಂದು ವಿಚಾರಣೆಗೆ ಅವಕಾಶ ಮಾಡಿಕೊಡುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ನಮಗೆ ಇಲ್ಲಿಯವರೆಗೂ ಗೊತ್ತಿರುವಂತೆ ಸ್ವಾಮಿರಾವ್ ಎನ್ನತಕ್ಕವರು ಆಸ್ಪತ್ರೆಯಲ್ಲಿ ಅಡ್ಮಿಟ್ಟಾಗಿ ಇನ್‌ಪೇಷಂಟಾಗಿ ಟ್ರೀಟ್‌ಮೆಂಟ್ ಪಡೆಯುತ್ತಿದ್ದಾರೆಂದು ಮತ್ತು ಪುರುಷೋತ್ತಮರಾವ್ ಇವರು ಔಟ್ ಪೇಷಂಟಾಗಿ ಟ್ರೀಟ್‌ಮೆಂಟನ್ನು ಪಡೆಯುತ್ತಿದ್ದಾರೆಂದು ತಿಳಿದು ಬಂದಿದೆ. ಆದರೆ ಅವರನ್ನು ಫಾರೆಸ್ಟ್ ಇಲಾಖೆಯ ನೌಕರರು ಹೊಡೆದಿದ್ದು ನಿಜವೋ ಸುಳ್ಳೋ ಅದು ನಮಗೆ ತಿಳಿಯದ ವಿಷಯ; ಅದು ನಮಗೆ ಗೊತ್ತಿಲ್ಲ ಈ ಉಭಯ ಪಾರ್ಟಿಗಳೂ ಪೋಲೀಸ್ ಸ್ಟೇಷನ್ನಿಗೆ ಹೋಗಿ ಕಂಪ್ಲೇಂಟುಗಳನ್ನು ಕೊಟ್ಟಿರುತ್ತಾರೆ. ಅಲ್ಲಿ ಪೋಲೀಸಿನವರು ಈ ಎರಡೂ ಪಾರ್ಟಿಯ ಕೇಸುಗಳನ್ನು ರಿಜಿಸ್ಟರು ಮಾಡಿಕೊಂಡಿದ್ದಾರೆ. ಅವರು ಆ ಎರಡೂ ಕೇಸುಗಳನ್ನು ಇನ್‌ವೆಸ್ಟಿಗೇಟ್ ಮಾಡುತ್ತಾರೆ. Ti l a man is proved to be guilty, everybody is supposed to be innocent. That is why I repeat my statement that it is an allegation made against such and such a person. When the whole thing is under investigation, what is the point in asserting by my friend that he is innocent ? You cannot prove that he is innocent here.

ಶ್ರೀ ಕೋಣಂದೂರು ಲಿಂಗಪ್ಪ.—ನೀವು ಕಣ್ಣಾರೆ ಹೋಗಿ ನೋಡಿಕೊಂಡು ಬಂದಿದ್ದೀರಾ ?

ಶ್ರೀ ಡಿ. ದೇವರಾಜ ಅರಸ್.—ಆ ಕೃತ್ಯನಡೆದಾಗ ಮಾನ್ಯ ಸದಸ್ಯರೂ ಕೂಡ ಅಲ್ಲಿರಲಿಲ್ಲ.

† Indicates that the remarks or speeches have not been revised by the member concerned.

† ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಸರ್ಕಾರ ಅಂತ ಏತಕ್ಕಿರಬೇಕು ?

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುವುದನ್ನು ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಕೇಳಬೇಕು. ಇಂಥ ವ್ಯವಹಾರಗಳನ್ನು ತೀರ್ಮಾನಮಾಡುವುದು ಇದೊಂದೇ ಶಾಸನ ಸಭೆಯಲ್ಲಿ ಇಂಥ ಕೃತ್ಯಗಳನ್ನು ವಿಚಾರಣೆ ಮಾಡಿ ಒಂದು ತೀರ್ಮಾನ ಕೊಡತಕ್ಕ ಅವಕಾಶ ನ್ಯಾಯಾಲಯಗಳಿಗಿದೆ. ಕಾನೂನಿಗೆ ಪ್ರತಿಯಾಗಿ ಯಾರೇ ನಡೆದಿರಲಿ ಅವರು ಪೋಲಿಸಿನವರಾಗಿರಲಿ ಅಥವಾ ಇನ್ನೊಬ್ಬ ಅಧಿಕಾರಿಗಳಾಗಿರಲಿ ಅವರ ಬಗ್ಗೆ ಆ ನ್ಯಾಯಾಲಯ ಒಂದು ತೀರ್ಮಾನವನ್ನು ಕೊಟ್ಟೇ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಕೈಕೆಳಗಿರತಕ್ಕ ಸಿಬ್ಬಂದಿವರ್ಗ ತಪ್ಪು ನಡೆಸಿದ್ದರೆ ಕ್ರಮ ಕೈಗೊಳ್ಳುವುದಕ್ಕೆ ನಿಮಗೆ ಅಧಿಕಾರವಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದ ಸ್ವತ್ತು ಕಳುವಾಗುತ್ತ ಇದ್ದಾಗ ಅದನ್ನು ಅವರು ತಡೆಗಟ್ಟಲೇಬೇಕು. ಇಂಥ ವಿಚಾರದಲ್ಲಿ ನೀವೂ ನಾವೂ ಯಾರೂ ಸತ್ಯ ಸಂಗತಿಯನ್ನು ಮುಚ್ಚುವುದಕ್ಕೆ ಹೋಗಬಾರದು. ಅಲ್ಲಿ ಈಗ ಪೋಲಿಸಿನವರು ತನಿಖೆ ನಡೆಸುತ್ತಿದ್ದಾರೆ. ಆ ತನಿಖೆಯಲ್ಲಿ ಏನಾಗುತ್ತದೆಂಬುದನ್ನು ಎಲ್ಲರೂ ಸ್ವಲ್ಪ ಕಾದುನೋಡೋಣ. ಶ್ರೀ ಕೃಷ್ಣನ್ ಅವರು ಹೇಳಿದಂತೆ ಇದರ ಬಗ್ಗೆ ಹೆಚ್ಚಿನ ಸತ್ಯಾಂಶಗಳನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯವಾಗಿ ಇದು ಮಲೆನಾಡಿನ ಇಬ್ಬರು ಗಣ್ಯವ್ಯಕ್ತಿಗಳಿಗೆ ಸಂಬಂಧಪಟ್ಟ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಈಗತಾನೆ ಏನು ಓದಿದರು ಅದು ಅಲ್ಲಿನ ಸ್ಥಳೀಯ ಅಧಿಕಾರಿಗಳು ಕಳುಹಿಸಿಕೊಟ್ಟಿರುವಂಥ ಒಂದು ವರದಿ ಮಾತ್ರ. ಆದರೆ ಈಚೆಗೆ ಇದರ ಬಗ್ಗೆ ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆಂದು ಹೇಳಿದ್ದಾರೆ. ತಾವು ಈ ವಿಚಾರಣೆಯನ್ನು ಸ್ಥಳೀಯ ಅಧಿಕಾರಿಗಳ ಮೇಲೆ ಬಿಡುವುದಕ್ಕೆ ಬದಲಾಗಿ ಉನ್ನತ ಮಟ್ಟದ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ವಿಚಾರಣೆ ನಡೆಸಿ ಇದರ ಬಗ್ಗೆ ಸತ್ಯಾಂಶ ಏನು ಇದೆ ತಿಳಿದು ಸಭೆಯಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಒಂದು ವಿಚಾರ ಸಭೆಯ ಗಮನಕ್ಕೆ ತರುತ್ತೇನೆ. ಅಧಿಕಾರಿಗಳು ಕೆಟ್ಟವರು, ಅವರು ಹೇಳುವುದು ಸುಳ್ಳು, ಬೇರೆಯವರು ಹೇಳುವುದು ನಿಜ ಎನ್ನುವ ಪ್ರಿಮೈಸ್ ಮೇಲೆ ಹೋಗುವುದು, ಸರ್ಕಾರ ನಡೆಸುವುದಕ್ಕೆ ಅನುಗುಣವಾದ ವಿಚಾರವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಾ ಅಧಿಕಾರಿಗಳು ಕೆಟ್ಟವರು ಎಲ್ಲಾ ಮಂತ್ರಿಗಳು ಲಂಚಕೋರರು ಅಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಗಾಬರಿ ಬೀಳಬೇಡಿ. ಸಮಾಧಾನವಾಗಿರಿ.

ಶ್ರೀ ಎಸ್. ಬಂಗಾರಪ್ಪ.—ಸಮಾಧಾನವಾಗಿ ಸೊಂಟ ಮುರಿಸಿಕೊಳ್ಳಿ. ತಲೆ ಹೊಡಿಸಿಕೊಳ್ಳಿ, ಚರ್ಮ ಸುಲಿಸಿಕೊಳ್ಳಿ, ಜೀವ ಕಳೆದುಕೊಳ್ಳಿ ಎಂದು ಹೇಳುತ್ತಿದ್ದೀರಿ. ನನಗೆ ವೈಯಕ್ತಿಕವಾಗಿ ವಿಷಯ ಗೊತ್ತಿರುವುದರಿಂದ, ನಾನು ಖುದ್ದಾಗಿ ಕಣ್ಣಾರೆ ಕಂಡಿರುವುದರಿಂದ ಈ ವಿಷಯ ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನೂ ಅಷ್ಟೇ ಜವಾಬ್ದಾರಿಯಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ವಿಷಯವನ್ನು ತಿಳಿದುಕೊಂಡೇ ಮಾತನಾಡುವುದು. ಮಾನ್ಯ ಎದುರು ಪಕ್ಷದ ನಾಯಕರು ಹೇಳಿದಂಥ ಮಾತು ನಾನು ಒಪ್ಪುತ್ತೇನೆ. ಯಾರೇ ಅಧಿಕಾರಿಗಳು ಹೇಳತಕ್ಕಂಥದ್ದರಲ್ಲಿ ಅನುಮಾನವಿದ್ದರೆ ಅದನ್ನು ಇನ್ನೂ ಆಳವಾಗಿ ನೋಡುವುದು ಸೂಕ್ತ; ನೋಡಿಸೋಣ. ತಮ್ಮ ಅನುಮಾನ ಇರತಕ್ಕದ್ದು ಫಾರೆಸ್ಟ್‌ನಲ್ಲಿ ನಡೆದಿರತಕ್ಕ ಅಫೆನ್ಸ್‌ಗೆ ಸಂಬಂಧಪಟ್ಟಂತೆ ಗಣ್ಯ ವ್ಯಕ್ತಿಗಳಿದ್ದಾರೆ, ಅವರ ಮೇಲೆ ಆರೋಪ ಬಂದಿದೆ ಎನ್ನುವುದು. ಅನೇಕ ಸಂದರ್ಭಗಳಲ್ಲಿ ಆರೋಪಗಳಾಗಲಿ, ನಡೆದಿರತಕ್ಕ ಅಫೆನ್ಸ್ ಆಗಲೀ ಗಣ್ಯವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದರೆ ಅದನ್ನು ಬಿಡಬೇಕೆಂದಿಲ್ಲ. ಆದ್ದರಿಂದ ಪ್ರಿಮೈಸಿಸ್ ಏನು ಇಟ್ಟುಕೊಂಡು ನೀವು ಹೇಳುತ್ತಿದ್ದೀರಿ; ಅವರು ಗಣ್ಯವ್ಯಕ್ತಿಗಳು ಅವರಮೇಲೆ ಈ ರೀತಿ ಮಾಡಿದ್ದಾರೆ ಎಂದು ಅದು ಏನೇ ಇದ್ದರೂ ವಿಚಾರಣೆ ನಡೆಸಬೇಕಾಗುತ್ತದೆ. ಒಂದು ವಿಚಾರ ಹೇಳುತ್ತೇನೆ. ತಾವು ಇವೊತ್ತು ಏನು ಹೇಳುತ್ತೀರಿ ಯಾವುದೋ ರಾಜಕೀಯ ಪಕ್ಷಗಳಿಗೆ ಸೇರಿದವರು, ಅದಕ್ಕಾಗಿ ಹೀಗೆ ಮಾಡುವುದಕ್ಕೆ ಹೊರಟಿದ್ದಾರೆಂದು. ಆ ರೀತಿ ತಮ್ಮ ಮನಸ್ಸಿನಲ್ಲಿ ಇದ್ದ ಪಕ್ಷದಲ್ಲಿ ತಮ್ಮಲ್ಲಿ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ, ನಿಮ್ಮ ಪಕ್ಷ ಅಥವಾ ಇನ್ನೊಂದು ಪಕ್ಷ ಎನ್ನುವ ಕಾರಣದಿಂದ ಹೀಗೆ ಮಾಡಬೇಕೆಂಬ ಉದ್ದೇಶ ಇದು ಇಲ್ಲ. ಸಾರ್ವಜನಿಕರ ಸ್ವತ್ತನ್ನು ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಿದರೆ ಯಾವ ಪಕ್ಷದವರೇ ಆಗಲಿ ನಿಮ್ಮ ಪಕ್ಷದವರಾದರೂ ಬಿಡುವುದಿಲ್ಲ, ನಮ್ಮ ಪಕ್ಷದವರಾದರೂ ಬಿಡುವುದಿಲ್ಲ.

(SRI D. DEVARAJ URS)

Immediately on receipt of information, the Minister for Agriculture, left Bangalore for Raichur on the night of 8-4-1972 to study the situation on the spot and to discuss the matter with the local officers, non-officials and others.

I wish to take this opportunity to thank the Government of Andhra Pradesh for having readily responded to our request for assistance.

I have to bring to the notice of this House that the Minister of State for Finance, from Raichur Sri Shivanna Bhimappa, has also gone on the same night to look into this matter. Sri Shivanna, has come down now. The Minister for Agriculture and Forests, I think, is yet on his way; he is yet to come.

So far as other details like whether those commodities were insured or not insured, what is the exact loss and in what manner relief could be given to the people are concerned, I am not in a position to state just now. I can tell the House that the Government will take all possible steps to see that the effects of this fire accident are minimised as far as possible. I take this opportunity to thank once again our neighbouring Government, the Andhra Pradesh Government, who readily responded to our call to rush Fire Brigade help from the neighbouring areas to bring the fire under control.

ಶ್ರೀ ಶರಣಪ್ಪ.—ಈ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ತುಕಡಿ 8 ಮತ್ತು 9 ರಲ್ಲಿ 16 ಅಂಗಡಿಗಳು ಸುಟ್ಟು ಹೋಗಿವೆ. ಇದರಿಂದ 5 ಸಾವಿರ ಮೇಲ್ಪಟ್ಟು ಹತ್ತಿ ಬೇಲ್‌ಗಳು ಸುಟ್ಟುಹೋಗಿವೆ. ಮತ್ತು 3—4 ಸಾವಿರ ಚೀಲದಷ್ಟು ಅಕ್ಕಿಕಾಳು ಮತ್ತು ಶೇಂಗಾ ಕಾಳು ಸುಟ್ಟು ಹೋಗಿವೆ. ಇದು ಕೇವಲ ಬಡ ರೈತರದ್ದಾಗಿರುವುದರಿಂದ ಇದರ ಬಗ್ಗೆ ಎಷ್ಟು ಇನ್ಶೂರ್ ಆಗಿದೆ ಎಂಬ ವಿವರ ಕೊಡುತ್ತೀರಾ? ಇವರ ಬಗ್ಗೆ ತನಿಖೆ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ? ಬಡ ರೈತರಿಗೆ ಇದರಲ್ಲಿ ಬಹಳ ನಷ್ಟವಾಗಿದೆ. ಅದು ಯಾವರೀತಿಯದ್ದೋ ನಷ್ಟವಾಗಿರಲಿ ಅದಕ್ಕೇನಾದರೂ ಸರ್ಕಾರದವರು ಪರಿಹಾರ ಕೊಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಅನಾಹುತ ಆಗಿರುವುದು "due to short circuit of electricity", ಅಂತ ವರದಿ ಆಗಿದೆ. ಎಷ್ಟೇ ಬಂದೋಬಸ್ತು ಮಾಡಿದರೂ ತಕ್ಷಣ ಅದನ್ನು ನಂದಿಸುವುದಕ್ಕೆ ಆಗಲಿಲ್ಲ. ಬೇಸಿಗೆ ಕಾಲದಲ್ಲಿ ಬೆಂಕಿ ಹತ್ತಿಕೊಂಡರೆ ಏನಾಗುತ್ತದೆ ಎಂದು ತಮಗೆ ಗೊತ್ತಿದೆ. ಇದು ಇನ್ಶೂರ್ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ವರದಿ ಬಂದ ಮೇಲೆ ನೋಡೋಣ.

ಶ್ರೀ ಬಾಪೂಗೌಡ ರಾಯಪ್ಪ (ಷಹಾಪುರ).—ಮಾನ್ಯ ಮುಖ್ಯಮಂತ್ರಿಗಳು 30—35 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಹೇಳಿಕೆ ಕೊಟ್ಟರು. ಎಷ್ಟು ಇನ್ಶೂರ್ ಆಗಿದೆ, ಎಷ್ಟು ಪೇಮೆಂಟ್ ಆಗಿದೆ ಅದರ ಬಗ್ಗೆ ಇನ್ನೊಂದು ಸ್ಟೇಟ್‌ಮೆಂಟನ್ನು ಕೊಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ನಿನ್ನೆ ಸುದ್ದಿ ಬಂದ ಕೂಡಲೇ ಸಂಬಂಧಪಟ್ಟ ಮಂತ್ರಿಗಳನ್ನು ಇಲ್ಲಿಂದ ಕಳುಹಿಸಿಕೊಡಲಾಗಿದೆ. ಅವರು ಅಲ್ಲಿ ಪ್ರವಾಸ ಮಾಡಿ ನೋಡಿಕೊಂಡು ಬರುವವರು ಇದ್ದಾರೆ. ಅವರ ರಿಪೋರ್ಟ್ ತರಿಸಿಕೊಂಡು ನೋಡಿ ಅದನ್ನು ತಮ್ಮ ಮುಂದೆ ಇಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಈ ಬೆಂಕಿಗೆ ಕಾರಣ "due to short circuit of electricity" ಎಂದು ಹೇಳಿದಿರಿ. ಹಾಗಿದ್ದರೆ ಇದು ಆವದ್ದು ಎಲೆಕ್ಟ್ರಿಸಿಟಿ ಬೋರ್ಡ್‌ನವರು ಬೇಜವಾಬ್ದಾರಿಯಿಂದ ಅಲ್ಲವೇ? ಅಥವಾ ಮಾರ್ಕೆಟಿಂಗ್ ಸೊಸೈಟಿಯವರದ್ದೂ ಏನಾದರೂ ಕೈವಾಡ ಇದೆಯೇ?

† ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಸರ್ಕಾರ ಅಂತ ಏತಕ್ಕಿರಬೇಕು ?

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುವುದನ್ನು ಮಾನ್ಯ ಸದಸ್ಯರು ಸ್ವಲ್ಪ ಸಾವಧಾನದಿಂದ ಕೇಳಬೇಕು. ಇಂಥ ವ್ಯವಹಾರಗಳನ್ನು ತೀರ್ಮಾನಮಾಡುವುದು ಇದೊಂದೇ ಶಾಸನ ಸಭೆಯಲ್ಲಿ ಇಂಥ ಕೃತ್ಯಗಳನ್ನು ವಿಚಾರಣೆ ಮಾಡಿ ಒಂದು ತೀರ್ಮಾನ ಕೊಡತಕ್ಕ ಅವಕಾಶ ನ್ಯಾಯಾಲಯಗಳಿಗಿದೆ. ಕಾನೂನಿಗೆ ಪ್ರತಿಯಾಗಿ ಯಾರೇ ನಡೆದಿರಲಿ ಅವರು ಪೋಲಿಸಿನವರಾಗಿರಲಿ ಅಥವಾ ಇನ್ನೊಬ್ಬ ಅಧಿಕಾರಿಗಳಾಗಿರಲಿ ಅವರ ಬಗ್ಗೆ ಆ ನ್ಯಾಯಾಲಯ ಒಂದು ತೀರ್ಮಾನವನ್ನು ಕೊಟ್ಟೇ ಕೊಡುತ್ತದೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಕೈಕೆಳಗಿರತಕ್ಕ ಶಿಬ್ಬಂದಿವರ್ಗ ತಪ್ಪು ನಡೆಸಿದ್ದರೆ ಕ್ರಮ ಕೈಗೊಳ್ಳುವುದಕ್ಕೆ ನಿಮಗೆ ಅಧಿಕಾರವಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಸರ್ಕಾರದ ಸ್ವತ್ತು ಕಳುವಾಗುತ್ತ ಇದ್ದಾಗ ಅದನ್ನು ಅವರು ತಡೆಗಟ್ಟಲೇಬೇಕು. ಇಂಥ ವಿಚಾರದಲ್ಲಿ ನೀವೂ ನಾವೂ ಯಾರೂ ಸತ್ಯ ಸಂಗತಿಯನ್ನು ಮುಚ್ಚುವುದಕ್ಕೆ ಹೋಗಬಾರದು. ಅಲ್ಲಿ ಈಗ ಪೋಲಿಸಿನವರು ತನಿಖೆ ನಡೆಸುತ್ತಿದ್ದಾರೆ. ಆ ತನಿಖೆಯಲ್ಲಿ ಏನಾಗುತ್ತದೆಂಬುದನ್ನು ಎಲ್ಲರೂ ಸ್ವಲ್ಪ ಕಾದುನೋಡೋಣ. ಶ್ರೀ ಕೃಷ್ಣನ್ ಅವರು ಹೇಳಿದಂತೆ ಇದರ ಬಗ್ಗೆ ಹೆಚ್ಚಿನ ಸತ್ಯಾಂಶಗಳನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮುಖ್ಯವಾಗಿ ಇದು ಮಲೆನಾಡಿನ ಇಬ್ಬರು ಗಣ್ಯವ್ಯಕ್ತಿಗಳಿಗೆ ಸಂಬಂಧಪಟ್ಟ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಈಗತಾನೆ ಏನು ಓದಿದರು ಅದು ಅಲ್ಲಿನ ಸ್ಥಳೀಯ ಅಧಿಕಾರಿಗಳು ಕಳುಹಿಸಿಕೊಟ್ಟಿರುವಂಥ ಒಂದು ವರದಿ ಮಾತ್ರ. ಆದರೆ ಈಚೆಗೆ ಇದರ ಬಗ್ಗೆ ಪೋಲೀಸಿನವರು ತನಿಖೆ ನಡೆಸುತ್ತಿದ್ದಾರೆಂದು ಹೇಳಿದ್ದಾರೆ. ತಾವು ಈ ವಿಚಾರಣೆಯನ್ನು ಸ್ಥಳೀಯ ಅಧಿಕಾರಿಗಳ ಮೇಲೆ ಬಿಡುವುದಕ್ಕೆ ಬದಲಾಗಿ ಉನ್ನತ ಮಟ್ಟದ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಿ ವಿಚಾರಣೆ ನಡೆಸಿ ಇದರ ಬಗ್ಗೆ ಸತ್ಯಾಂಶ ಏನು ಇದೆ ತಿಳಿದು ಸಭೆಯಮುಂದಿಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಒಂದು ವಿಚಾರ ಸಭೆಯ ಗಮನಕ್ಕೆ ತರುತ್ತೇನೆ. ಅಧಿಕಾರಿಗಳು ಕೆಟ್ಟವರು, ಅವರು ಹೇಳುವುದು ಸುಳ್ಳು, ಬೇರೆಯವರು ಹೇಳುವುದು ನಿಜ ಎನ್ನುವ ಪ್ರಿಮೈಸ್ ಮೇಲೆ ಹೋಗುವುದು, ಸರ್ಕಾರ ನಡೆಸುವುದಕ್ಕೆ ಅನುಗುಣವಾದ ವಿಚಾರವಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಎಲ್ಲಾ ಅಧಿಕಾರಿಗಳು ಕೆಟ್ಟವರು ಎಲ್ಲಾ ಮಂತ್ರಿಗಳು ಲಂಚಕೋರರು ಅಲ್ಲ.

ಶ್ರೀ ಡಿ. ದೇವರಾಜ್ ಅರಸ್.—ಗಾಬರಿ ಬೀಳಬೇಡಿ ಸಮಾಧಾನವಾಗಿರಿ.

ಶ್ರೀ ಎಸ್. ಬಂಗಾರಪ್ಪ.—ಸಮಾಧಾನವಾಗಿ ಸೊಂಟ ಮುರಿಸಿಕೊಳ್ಳಿ. ತಲೆ ಹೊಡಿಸಿಕೊಳ್ಳಿ, ಚರ್ಮ ಸುಲಿಸಿಕೊಳ್ಳಿ, ಜೀವ ಕಳೆದುಕೊಳ್ಳಿ ಎಂದು ಹೇಳುತ್ತಿದ್ದೀರಿ. ನನಗೆ ವೈಯುಕ್ತಿಕವಾಗಿ ವಿಷಯ ಗೊತ್ತಿರುವುದರಿಂದ, ನಾನು ಖುದ್ದಾಗಿ ಕಣ್ಣಾರೆ ಕಂಡಿರುವುದರಿಂದ ಈ ವಿಷಯ ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ನಾನೂ ಅಷ್ಟೇ ಜವಾಬ್ದಾರಿಯಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ವಿಷಯವನ್ನು ತಿಳಿದುಕೊಂಡೇ ಮಾತನಾಡುವುದು. ಮಾನ್ಯ ಎದುರು ಪಕ್ಷದ ನಾಯಕರು ಹೇಳಿದಂಥ ಮಾತು ನಾನು ಒಪ್ಪುತ್ತೇನೆ. ಯಾರೇ ಅಧಿಕಾರಿಗಳು ಹೇಳತಕ್ಕಂಥದ್ದರಲ್ಲಿ ಅನುಮಾನವಿದ್ದರೆ ಅದನ್ನು ಇನ್ನೂ ಆಳವಾಗಿ ನೋಡುವುದು ಸೂಕ್ತ; ನೋಡಿಸೋಣ. ತಮ್ಮ ಅನುಮಾನ ಇರತಕ್ಕದ್ದು ಫಾರೆಸ್ಟಿನಲ್ಲಿ ನಡೆದಿರತಕ್ಕ ಅಫೆನ್ಸ್‌ಗೆ ಸಂಬಂಧಪಟ್ಟಂತೆ ಗಣ್ಯ ವ್ಯಕ್ತಿಗಳಿದ್ದಾರೆ, ಅವರ ಮೇಲೆ ಆರೋಪ ಬಂದಿದೆ ಎನ್ನುವುದು. ಅನೇಕ ಸಂದರ್ಭಗಳಲ್ಲಿ ಆರೋಪಗಳಾಗಲಿ, ನಡೆದಿರತಕ್ಕ ಅಫೆನ್ಸ್ ಆಗಲೀ ಗಣ್ಯವ್ಯಕ್ತಿಗಳಿಗೆ ಸಂಬಂಧಪಟ್ಟಿದ್ದರೆ ಅದನ್ನು ಬಿಡಬೇಕೆಂದಿಲ್ಲ. ಆದ್ದರಿಂದ ಪ್ರಿಮೈಸಿಸ್ ಏನು ಇಟ್ಟುಕೊಂಡು ನೀವು ಹೇಳುತ್ತಿದ್ದೀರಿ, ಅವರು ಗಣ್ಯವ್ಯಕ್ತಿಗಳು ಅವರಮೇಲೆ ಈ ರೀತಿ ಮಾಡಿದ್ದಾರೆ ಎಂದು ಅದು ಏನೇ ಇದ್ದರೂ ವಿಚಾರಣೆ ನಡೆಸಬೇಕಾಗುತ್ತದೆ. ಒಂದು ವಿಚಾರ ಹೇಳುತ್ತೇನೆ. ತಾವು ಇವೊತ್ತು ಏನು ಹೇಳುತ್ತೀರಿ ಯಾವುದೋ ರಾಜಕೀಯ ಪಕ್ಷಗಳಿಗೆ ಸೇರಿದವರು, ಅದಕ್ಕಾಗಿ ಹೀಗೆ ಮಾಡುವುದಕ್ಕೆ ಹೊರಟಿದ್ದಾರೆಂದು. ಆ ರೀತಿ ತಮ್ಮ ಮನಸ್ಸಿನಲ್ಲಿ ಇದ್ದ ಪಕ್ಷದಲ್ಲಿ ತಮ್ಮಲ್ಲಿ ಅತ್ಯಂತ ವಿನಯದಿಂದ ಹೇಳುತ್ತಿದ್ದೇನೆ, ನಿಮ್ಮ ಪಕ್ಷ ಅಥವಾ ಇನ್ನೊಂದು ಪಕ್ಷ ಎನ್ನುವ ಕಾರಣದಿಂದ ಹೀಗೆ ಮಾಡಬೇಕೆಂಬ ಉದ್ದೇಶ ಇದು ಇಲ್ಲ. ಸಾರ್ವಜನಿಕರ ಸ್ವತ್ತನ್ನು ಸಾರ್ವಜನಿಕರ ಹಣವನ್ನು ದುರುಪಯೋಗ ಮಾಡಿದರೆ ಯಾವ ಪಕ್ಷದವರೇ ಆಗಲಿ ನಿಮ್ಮ ಪಕ್ಷದವರಾದರೂ ಬಿಡುವುದಿಲ್ಲ, ನಮ್ಮ ಪಕ್ಷದವರಾದರೂ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮವರು ತಗಲಿ ಹಾಕಿಕೊಳ್ಳುತ್ತಾರೋ ನಮ್ಮವರು ತಗಲಿ ಹಾಕಿಕೊಳ್ಳುತ್ತಾರೋ, ಅದು ಗೊತ್ತಿದೆ. ನಾನು ಹೇಳುತ್ತಿರುವುದು ಅದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಕೆಳಗೆ ಇರತಕ್ಕ ಅಧಿಕಾರಿಗಳನ್ನು ನಂಬಕೂಡದು ಎಂದಲ್ಲ. ಅವರು ನಿಷ್ಠಾವಂತರು ಅಲ್ಲ, ನಂಬಿಕಸ್ಥರು ಅಲ್ಲ, ಬೇರೆ ರಾಜ್ಯದವರನ್ನು ಕರೆಸಿ ಅಥವಾ ನ್ಯಾಯಾಂಗ ವಿಚಾರಣೆ ಮಾಡಿ ಎಂದು ಹೇಳಲಿಲ್ಲ. ಮೇಲ್ಮಟ್ಟದ ಅಧಿಕಾರಿಗಳನ್ನು ಕಳುಹಿಸಿ ತನಿಖೆಮಾಡಿ ಎಂದು ಹೇಳುತ್ತಿದ್ದೇನೆ. ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಅಧಿಕಾರಿಗಳ ವರದಿಯನ್ನು ಆಧಾರವಾಗಿಟ್ಟು ಕೊಂಡು ಹೇಳುವುದು ಬೇಡ. ಸೀನಿಯರ್ ಆಫೀಸರ್ಸ್ ಇದ್ದಾರೆ, ಡಿ.ಸಿ. ಇದ್ದಾರೆ, ಎಸ್.ಪಿ. ಇದ್ದಾರೆ. ಅವರನ್ನು ಕಳುಹಿಸಿ ಇನ್‌ವೆಸ್ಟಿಗೇಷನ್ ಮಾಡಿ ಎಂದು ನಾನು ಹೇಳುತ್ತೇನೆ.

Sri D. DEVARAJ URS.—I have no objection to satisfy myself further, by sending any one of the other officers and find out what exactly is the matter.

ಶ್ರೀ ಕೋಣಂದೂರು ಲಿಂಗಪ್ಪ.—ಘಟನೆ ಸುಮಾರು 7 ಗಂಟೆಯಲ್ಲಿ ನಡೆದಿದೆ. 7 ಗಂಟೆಯಲ್ಲಿ ನಡೆದರೂ ಕೂಡ ರಾತ್ರಿ 2 ಗಂಟೆಯವರೆಗೆ ಅವರನ್ನು ಎಲ್ಲಿಗೆ ಕರೆದುಕೊಂಡು ಹೋಗಿದ್ದರೋ ಗೊತ್ತಿಲ್ಲ. ಶಿವಮೊಗ್ಗ ಎಸ್.ಪಿ. ಯವರ ಹತ್ತಿರ ನಡೆದಂತಹ ಘಟನೆಯನ್ನು ವಿವರಿಸಿ ಹೇಳಿದ್ದಾರೆ ಮತ್ತು ಗಾಯಗಳನ್ನು ತೋರಿಸಿದ್ದಾರೆ. ಡಿ. ವೈ. ಎಸ್. ಪಿ. ಹತ್ತಿರ ಸಾಗರಕ್ಕೆ ಬೆಳಿಗ್ಗೆ ಆರೂವರೆ ಗಂಟೆಗೆ ಕರೆದುಕೊಂಡು ಬಂದಿದ್ದಾರೆ. ಅಲ್ಲಿಯವರೆಗೂ ಎಲ್ಲಿ ಹೋಗಿದ್ದರು ? ಆರೂವರೆ ಗಂಟೆಗೆ ಯಾವ ಪೋಲೀಸ್ ಸ್ಟೇಷನ್ನಿಗೂ ದೂರು ಕೊಟ್ಟಿಲ್ಲ. ಎಸ್. ಪಿ. ಯವರ ರಿಪೋರ್ಟು ತಮಗೆ ಏನಾದರೂ ಬಂದಿದೆಯೆ ? ಇನ್‌ವೆಸ್ಟಿಗೇಷನ್ ನಡೆಯುತ್ತಿದೆಯೇ ? ಸಂಬಂಧಪಟ್ಟ ಅಧಿಕಾರಿಗಳನ್ನು ಏಕೆ ಸಸ್‌ಪೆಂಡ್ ಮಾಡಿಲ್ಲ ? ಸ್ವಾಮಿ ಅಧ್ಯಕ್ಷರೇ, ಒಂದು ವಿಷಯ ನಾನು ಹೇಳುತ್ತೇನೆ.

ಅಧ್ಯಕ್ಷರು.—ಎಲ್ಲಾ ವಿಷಯಗಳನ್ನು ತಿಳಿದುಕೊಂಡು ಹೇಳುತ್ತೇನೆಂದು ಮುಖ್ಯಮಂತ್ರಿಗಳು ಆಗಲೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯದಲ್ಲೇ ಕೇಳುತ್ತೇನೆ. ಈಗ ಮುಖ್ಯಮಂತ್ರಿಗಳು ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕು ಎಂದು. ಹೇಳಿಕೆ ಕೊಟ್ಟಿದ್ದಾರೆ ನಾನು ಬೇಡವೆಂದು ಹೇಳುವುದಿಲ್ಲ. ಅದಕ್ಕಿಂತ ಮೊದಲು ನಾವೆಲ್ಲಾ ಸದಸ್ಯರು ವ್ಯಕ್ತ ಮಾಡಿರುವ ಅಂಶಗಳನ್ನು ತನಿಖೆ ಮಾಡಿ ವಿಷಯ ಸಂಗ್ರಹಮಾಡಿ ಮಾನ್ಯ ಮುಖ್ಯಮಂತ್ರಿಗಳು ಈ ಸದನ ಮುಗಿಯುವುದರೊಳಗಾಗಿ ಫರ್ದರ್ ಸ್ಟೇಟ್‌ಮೆಂಟ್ ಮಾಡಲು ಭರವಸೆ ಕೊಡಲಿ ಎಂದು ನಾನು ಹೇಳುತ್ತೇನೆ.

Sri D. DEVARAJ URS.—Further Statement if it is necessary and if I am to give, I will give.

Sri S. BANGARAPPA.—It is necessary, ಉಳಿದ ವಿಷಯಗಳನ್ನು ಒಳಗೊಂಡ ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಏನು ತೊಂದರೆ ಇದೆ ?

ಶ್ರೀ ಡಿ. ದೇವರಾಜ್ ಅರಸ್.—ನಾನು ಆಗಲೇ ಹೇಳಿದ್ದೇನೆ. ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ನಡೆದಂಥ ಎಷ್ಟೋ ಪ್ರಕರಣಗಳಲ್ಲಿ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟು ತನಿಖೆಮಾಡಿದ್ದಾರೆ. ಅದೇ ರೀತಿ ಈಗಲೂ ಅಧಿಕಾರಿಗಳನ್ನು ಸಸ್ಪೆಷನ್‌ನಲ್ಲಿಟ್ಟು ತನಿಖೆಮಾಡಬೇಕು. ಇಲ್ಲದೆ ಹೋದರೆ ಕಾನೂನು ಪ್ರಕಾರ ಸಾರ್ವಜನಿಕರು ಒಪ್ಪತಕ್ಕ ರೀತಿಯಲ್ಲಿ ತನಿಖೆಯಾಗುವುದಿಲ್ಲ. ದಯವಿಟ್ಟು ಮುಖ್ಯಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆನ್‌ಷನ್ನಿನಲ್ಲಿ ಇಡುವ ಆಶ್ವಾಸನೆಯನ್ನು ಈ ಸಭೆಯಲ್ಲಿ ಕೊಡಬೇಕು. ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು.—ಅವರು ಇನ್ನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ ಎಂದು ಹೇಳಿದ್ದಾರೆ. I cannot force the Government.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳಿಗೆ ತಾವು ತಿಳಿಸ ಬೇಕು. ಮುಖ್ಯ ಮಂತ್ರಿಗಳ ನೀತಿಗೆ ಮತ್ತು ಅಟಿಟ್ಯೂಡ್‌ಗೆ ನಾನು ವಿರೋಧ ವ್ಯಕ್ತಪಡಿಸುತ್ತೇನೆ. ಅಧಿಕಾರಿಗಳ ಹೇಳಿಕೆಯನ್ನು ತಾವು ಓದತಕ್ಕ ಮಂತ್ರಿಗಳಾಗಿದ್ದೀರಿ. You have become almost a stooge in the hands of the Officials. ಬ್ಯೂರೊಕ್ರೇಸಿಗೆ ಮನ್ನಣೆ ಕೊಡತಕ್ಕ ಜನ ನೀವು, ಜನತಾ ಪ್ರತಿನಿಧಿಗಳಿಗೆ ಮತ್ತು ಸಭೆಗೆ ಮಾನ್ಯತೆ ಕೊಟ್ಟು ನಾವು ಹೇಳತಕ್ಕ ಮಾತು ಗಳಿಗೆ ಬೆಲೆ ಕೊಡದ ರಾಜಕಾರಣಿಗಳು ಮತ್ತು ಮುಖ್ಯ ಮಂತ್ರಿಗಳು ಆಗಿದ್ದೀರಿ. ತಮ್ಮ ಅಧಿ ಕಾರಕ್ಕೆ ಧಿಕ್ಕಾರ ಹಾಕುತ್ತೇವೆ. ನಿಮ್ಮ ನೀತಿಗೆ ವಿರೋಧ ಸೂಚನೆ ಮಾಡಿ ಸಭೆಯಿಂದ ಸಭಾತ್ಯಾಗ ಮಾಡುತ್ತೇವೆ.

(ಶ್ರೀಯುತರಾದ ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ ಮತ್ತು ಪಾಟಾಳ್ ನಾಗರಾಜ್ ಅವರು ಸಭೆಯಿಂದ ಹೊರಗೆ ಹೋದರು).

## Statement by the Chief Minister *re* : Fire Accident in the Cotton Market Yard, Raichur.

ಶ್ರೀ ಶರಣಪ್ಪ (ದೇವದುರ್ಗ).—ರಾಯಚೂರು ನಗರದಲ್ಲಿ 2ನೇ ತಾರೀಖಿನ ದಿವಸ ಬೆಂಕಿ ಅನಾಹುತ ನಡೆದು ಸಾಮಾನ್ಯ ಜನರ ಮತ್ತು ರೈತರ 50 ಲಕ್ಷ ರೂಪಾಯಿಯ ಮಾಲು ಸುಟ್ಟು ಹೋಗಿದೆ. ಅದರ ಬಗ್ಗೆ ನಾನು ಒಂದು ನೋಟೀಸನ್ನು ಕೊಟ್ಟಿದ್ದೆ.

ಅಧ್ಯಕ್ಷರು.—ಇವೊತ್ತು ತಾನೇ ನೋಟೀಸ್ ಬಂದಿದೆ ಅದನ್ನು ನೋಡುತ್ತಿದ್ದೇನೆ.

1-30 P. M.

If the Hon' ble Chief Minister has got information, he can give it.

† SRI D. DEVARAJ URS.—On 8-4-1972 a major fire accident took place in the Cotton Market, Raichur. It is reported that at about 2-00 p. m. the fire broke out suddenly due to short circuit of electricity and that about 5,000 bales of cotton, groundnuts, cotton seeds, jowar, etc., stored in front of Raichur Agriculture Produce Marketing Society and other adjacent shops caught fire. About four shops were partially burnt. Immediately on receipt of information, the Deputy Commissioner, Police and Fire Brigade rushed to the spot. As the fire was spreading rapidly, arrangements were made to control it by using three Fire Fighters available at Raichur, and additional fire fighting units were subsequently obtained from Bellary. The Government of Andhra Pradesh who were also approached for help were kind enough to despatch their fire engines from Mahboobnagar and Gadwal. Water supply arrangements were made through tankers belonging to the P. W. D., Municipality and the local Coir Industries.

The Fire Fighting Units of Raichur, Bellary, Mehboobnagar and Gadwal were in action throughout the night and the fire was brought under control by about 3-00 a. m. on 9-4-1972. There was no loss of life due to this fire accident. Loss of property is estimated to be between Rs. 30 and 35 lakhs.

The Police have made proper security arrangements and situation is peaceful.

(SRI D. DEVARAJ URS)

Immediately on receipt of information, the Minister for Agriculture, left Bangalore for Raichur on the night of 8-4-1972 to study the situation on the spot and to discuss the matter with the local officers, non-officials and others.

I wish to take this opportunity to thank the Government of Andhra Pradesh for having readily responded to our request for assistance.

I have to bring to the notice of this House that the Minister of State for Finance, from Raichur Sri Shivanna Bhimappa, has also gone on the same night to look into this matter. Sri Shivanna, has come down now. The Minister for Agriculture and Forests, I think, is yet on his way; he is yet to come.

So far as other details like whether those commodities were insured or not insured, what is the exact loss and in what manner relief could be given to the people are concerned, I am not in a position to state just now. I can tell the House that the Government will take all possible steps to see that the effects of this fire accident are minimised as far as possible. I take this opportunity to thank once again our neighbouring Government, the Andhra Pradesh Government, who readily responded to our call to rush Fire Brigade help from the neighbouring areas to bring the fire under control.

ಶ್ರೀ ಶರಣಪ್ಪ.—ಈ ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ತುಕಡಿ 8 ಮತ್ತು 9 ರಲ್ಲಿ 16 ಅಂಗಡಿಗಳು ಸುಟ್ಟು ಹೋಗಿವೆ. ಇದರಿಂದ 5 ಸಾವಿರ ಮೇಲ್ಪಟ್ಟು ಹತ್ತಿ ಬೇಲ್‌ಗಳು ಸುಟ್ಟುಹೋಗಿವೆ. ಮತ್ತು 3 —4 ಸಾವಿರ ಚೀಲದಷ್ಟು ಅಕ್ಕಿಕಾಳು ಮತ್ತು ಶೇಂಗಾ ಕಾಳು ಸುಟ್ಟು ಹೋಗಿವೆ. ಇದು ಕೇವಲ ಬಡ ರೈತರದ್ದಾಗಿರುವುದರಿಂದ ಇದರ ಬಗ್ಗೆ ಎಷ್ಟು ಇನ್ಶೂರ್ ಆಗಿದೆ ಎಂಬ ವಿವರ ಕೊಡುತ್ತೀರಾ? ಇದರ ಬಗ್ಗೆ ತನಿಖೆ ಕಾರ್ಯಕ್ರಮ ತೆಗೆದು ಕೊಂಡಿದ್ದೀರಾ? ಬಡ ರೈತರಿಗೆ ಇದರಲ್ಲಿ ಬಹಳ ನಷ್ಟವಾಗಿದೆ. ಅದು ಯಾವರೀತಿಯದ್ದೇ ನಷ್ಟವಾಗಿರಲಿ ಅದಕ್ಕೇನಾದರೂ ಸರ್ಕಾರದವರು ಪರಿಹಾರ ಕೊಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಅನಾಹುತ ಆಗಿರುವುದು "due to short circuit of electricity", ಅಂತ ವರದಿ ಆಗಿದೆ. ಎಷ್ಟೇ ಏರ್ಪಾಟು ಮಾಡಿದರೂ ತಕ್ಷಣ ಅದನ್ನು ನಂದಿಸುವುದಕ್ಕೆ ಆಗಲಿಲ್ಲ. ಬೇಸಿಗೆ ಕಾಲದಲ್ಲಿ ಬೆಂಕಿ ಹತ್ತಿಕೊಂಡರೆ ಏನಾಗುತ್ತದೆ ಎಂದು ತಮಗೆ ಗೊತ್ತಿದೆ. ಇದು ಇನ್ಶೂರ್ ಆಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ವರದಿ ಬಂದ ಮೇಲೆ ನೋಡೋಣ.

ಶ್ರೀ ಬಾಪೂಗೌಡ ರಾಯಪ್ಪ (ಷಹಾಪುರ).—ಮಾನ್ಯ ಮುಖ್ಯಮಂತ್ರಿಗಳು 30—35 ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎಂದು ಹೇಳಿಕೆ ಕೊಟ್ಟರು. ಎಷ್ಟು ಇನ್ಶೂರ್ ಆಗಿದೆ, ಎಷ್ಟು ಪೇಮೆಂಟ್ ಆಗಿದೆ ಅದರ ಬಗ್ಗೆ ಇನ್ನೊಂದು ಸ್ಟೇಟ್‌ಮೆಂಟನ್ನು ಕೊಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ನಿನ್ನೆ ಸುದ್ದಿ ಬಂದ ಕೂಡಲೇ ಸಂಬಂಧಪಟ್ಟ ಮಂತ್ರಿಗಳನ್ನು ಇಲ್ಲಿಂದ ಕಳುಹಿಸಿಕೊಡಲಾಗಿದೆ. ಅವರು ಅಲ್ಲಿ ಪ್ರವಾಸ ಮಾಡಿ ನೋಡಿಕೊಂಡು ಬರುವವರು ಇದ್ದಾರೆ. ಅವರ ರಿಪೋರ್ಟ್ ತರಿಸಿಕೊಂಡು ನೋಡಿ ಅದನ್ನು ತಮ್ಮ ಮುಂದೆ ಇಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಈ ಬೆಂಕಿಗೆ ಕಾರಣ "due to short circuit of electricity" ಎಂದು ಹೇಳಿದಿರಿ. ಹಾಗಿದ್ದರೆ ಇದು ಅವರ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಬೇಜವಾಬ್ದಾರಿಯಿಂದ ಅಲ್ಲವೇ? ಅಥವಾ ಮಾರ್ಕೆಟಿಂಗ್ ಸೊಸೈಟಿಯವರದ್ದೂ ಏನಾದರೂ ಕೈವಾಡ ಇದೆಯೇ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಹೇಳಬೇಕಾದರೆ ಇದರಲ್ಲಿ ಮಾರ್ಕೆಟಿಂಗ್ ಸೊಸೈಟಿಯವರದ್ದೇ ಆಗಲಿ ಇಲಾಖೆಯವರದ್ದೇ ಆಗಲಿ ಅವರ ಬೇಜವಾಬ್ದಾರಿ ಪ್ರಶ್ನೆ ಬರುವುದಿಲ್ಲ. ಕೆಲವು ಸಾರಿ ಹಾಕಿರತಕ್ಕಂಥ ವೈರ್‌ಗಳನ್ನು ಇಲಿ ತಿಂದು ಹಾಕಿದರೂ ಷಾರ್ಟ್ ಸರ್ಕ್ಯೂಟ್ ಆಗುತ್ತದೆ. ವೈರ್‌ಗಳು ಏನಾದರೂ ಸಿಕ್ಕಿ ಹಾಕಿಕೊಂಡರೂ ಕೂಡ ಷಾರ್ಟ್ ಸರ್ಕ್ಯೂಟ್ ಆಗುತ್ತದೆ. ಇದರಲ್ಲಿ ಇಲಾಖೆಯವರ ಬೇಜವಾಬ್ದಾರಿ ಇಲ್ಲ.

SRI B. B. SAYANAK.—I have given a Call Attention Notice on the 26th of last month. That question has not come up as yet.

MADAM SPEAKER.—I have received it and we will take it up as early as possible.

## Extension of time for Election of members to the Committees, etc.

MADAM SPEAKER.—Request have been made to me by hon. members on both sides of the House that the time for filing nominations for election of members to several Committees should be extended. I have therefore fixed it as 3-00 p. m. on Wednesday the 12th April 1972 as the last hour and date for receipt of nominations to the several Committees and Senate of the Mysore University. The last hour and date for withdarwal of nominations will now be 3-00 p. m. on Thursday the 13th April. In case there is election, the date of poll and calendar of events will be intimated to hon. members in due course.

## Motion of Thanks to the Governor's Address.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ನನ್ನ ಪ್ರಸ್ತಾವ ಈ ರೀತಿ ಇದೆ :

"ದಿನಾಂಕ ಮಾರ್ಚಿ 24, 1972 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಶ್ರೀ ಆರ್. ಗುಂಡೂರಾವ್ (ಸೋಮವಾರ ಪೇಟೆ).—ನಾನು ಈ ಸೂಚನೆಯನ್ನು ಸಮರ್ಥಿಸುತ್ತೇನೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ಮಂಡಿಸಿದ ಪ್ರಸ್ತಾವ ಈ ರೀತಿ ಇದೆ.

"ದಿನಾಂಕ ಮಾರ್ಚಿ 24, 1972 ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರವರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಮಾನ್ಯ ಸದಸ್ಯರು ಪ್ರಸ್ತಾವವನ್ನು ಮಂಡಿಸಿದ್ದಾರೆ. ಈಗ ಈ ಪ್ರಸ್ತಾವದ ಮೇಲೆ ಸಭೆ ಚರ್ಚಿಸಬಹುದು.

†ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರು ಈ ಸಭೆಯಲ್ಲಿ 24ರ ಮಾರ್ಚ್ 1972ರಂದು ಎಲ್ಲಾ ಸದಸ್ಯರನ್ನೂ ಉದ್ದೇಶಿಸಿ ಮಾಡಿದ ಭಾಷಣಕ್ಕೆ ನಾನು ಹೃತ್ಪೂರ್ವಕವಾಗಿ ವಂದನೆಗಳನ್ನರ್ಪಿಸುತ್ತೇನೆ. ಶ್ರೀ ರಾಜ್ಯಪಾಲರು ನನಗೇನೂ ವೈಯಕ್ತಿಕವಾಗಿ ಅಷ್ಟು ಪರಿಚಯಸ್ಥರಲ್ಲ. ಅವರನ್ನು ನೋಡಿದರೆ ಒಳ್ಳೆಯ ಮೇಧಾವಿಗಳು, ಆಡಳಿತವನ್ನು ಚೆನ್ನಾಗಿ ದಕ್ಷತೆಯಿಂದ ನಡೆಸಿ ಹೆಸರು ಪಡೆದಿದ್ದಾರೆ, ಕೀರ್ತಿ ಪಡೆದಿದ್ದಾರೆ. ಅವರು ಅನೇಕ ವರ್ಷಗಳಕಾಲ ಮುಖ್ಯಮಂತ್ರಿಗಳಾಗಿದ್ದು ದಕ್ಷರೆಂದು ಹೆಸರು ಪಡೆದಿದ್ದಾರೆ ಎಂದು ತಿಳಿದಿದ್ದೇನೆ. ಮುಖ್ಯಮಂತ್ರಿಗಳಾಗತಕ್ಕದ್ದು ಬಹಳ ಕಷ್ಟ. ಆದರೂ ಕೂಡ ಅವರು ಮುಖ್ಯಮಂತ್ರಿಯಾಗಿ ಬಹಳ ವರ್ಷ ಕಾಲ ಕೆಲಸ ನಿರ್ವಹಿಸಿದ್ದಾರೆ. ಅಂಥ ಒಬ್ಬ ಶಕ್ತಿಯುತರಾದ ರಾಜಕೀಯ ವ್ಯಕ್ತಿಗಳು ನಮಗೆ ರಾಜ್ಯಪಾಲರಾಗಿರುವುದು ಬಹಳ ಸಂತೋಷದ ವಿಚಾರ. ಅವರಿಗೆ ಇನ್ನುಮುಂದೆ ಒಳ್ಳೆಯ ಹೆಚ್ಚಿನ ಸ್ಥಾನಮಾನಗಳು ಬರುವ ಒಂದು ಪ್ರಮೇಯ ಕೂಡ ಇರಬಹುದು ಎಂದು ನೆನೆಸುತ್ತೇನೆ.

ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯಪಾಲರು ಭಾಷಣವನ್ನು ಪ್ರಾರಂಭಿಸಿದಾಗ ಕನ್ನಡದಲ್ಲಿ ಮಾತನಾಡಿದರು. ಅವರಿಗೆ ಕನ್ನಡ ಸರಿಯಾಗಿ ಬಾರದಿದ್ದರೂ ಅವರು ಭಾಷಣವನ್ನು ಕನ್ನಡದಲ್ಲಿ ಪ್ರಾರಂಭಿಸಿದ್ದು ನೋಡಿದರೆ ಅವರಿಗೆ ಈ ಭಾಷೆಯಮೇಲೆ ಆಸಕ್ತಿಯಿದೆ, ಒಂದು ಅಭಿಮಾನವಿದೆ ಎಂದು ನನಗನ್ನಿಸುವುದು. ಕನ್ನಡಭಾಷೆಯನ್ನು ಆಡಳಿತ ಭಾಷೆಯಾಗಿ ಮಾಡುವ ಉದ್ದೇಶವಿದೆ ಎಂದು ತಿಳಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—(ವಿಸಿಟರ್ಸ್ ಗ್ಯಾಲರಿ ಕುರಿತು) ಬಹಳ ಜನ ಹೊರಗಡೆ ಇದ್ದಾರೆ, ಇನ್ನೂ ಕೆಲವರನ್ನು ಕೂಡಿಸಬಹುದು.

ಶ್ರೀ ಜಿ. ರಾಮೇಗೌಡ.—ಅವರ ಭಾಷಣದಲ್ಲಿ ತಾಲ್ಲೂಕು ಮಟ್ಟದಲ್ಲಿ ಮತ್ತು ಸಬ್‌ಡಿವಿಜನ್ ಮಟ್ಟದಲ್ಲಿ ಕನ್ನಡಭಾಷೆಯನ್ನು ಆಡಳಿತ ಭಾಷೆ ಮಾಡಿದೆ ಎಂದು ಹೇಳಿದ್ದಾರೆ. ಅವರಿಗೆ ಕನ್ನಡ ಭಾಷೆಯ ವಿಚಾರದಲ್ಲಿ ಹೆಚ್ಚು ಆಸಕ್ತಿಯಿರಬೇಕೆಂದು ಬಹಳವಾಗಿ ಆಸೆಪಟ್ಟಿದ್ದೇವೆ. ಕನ್ನಡ ಎಲ್ಲ ಮಟ್ಟದಲ್ಲೂ ಆಡಳಿತಭಾಷೆಯಾಗಬೇಕು, ಅದು ಅತಿ ಜಾಗ್ರತೆಯಾಗಿ ಕಾರ್ಯರೂಪಕ್ಕೆ ಬರಬೇಕು, ಬರುವುದು ಬಹಳ ಒಳ್ಳೆಯದು. ಎಲ್ಲರಿಗೂ ಇದರಲ್ಲಿ ಬಹಳ ಆಸಕ್ತಿ ಇರಬೇಕು. ಈ ವಿಚಾರವನ್ನು ಸರಕಾರದವರು ಅರಿತಿದ್ದಾರೆ. ಅಧಿಕಾರಿಗಳು ಕನ್ನಡವನ್ನು ಉಪಯೋಗಿಸಬೇಕು ಎಂದಿದೆ, ಅದನ್ನು ಕಾರ್ಯರೂಪಕ್ಕೆ ತರುವ ಅಗತ್ಯ ಬಹಳವಾಗಿದೆ.

Sri B. B. SAYANAK.—There is a hue and cry in the Visitors' Gallery.

ಶ್ರೀ ಡಿ. ದೇವರಾಜ ಅರಸ್.—ಈ ರೀತಿ ಗಲಾಟೆ ಮಾಡುವುದು ಸರಿಯಲ್ಲ. ಈ ಮನೆಯ ಕೆಲಸವನ್ನು ತಾವೆಲ್ಲರೂ ಸಹಕರಿಸಿ ನ್ಯಾಯರೀತಿಯಿಂದ ನಡೆಸಬೇಕಾಗಿದೆ. ಇದು ಕೇವಲ ಒಬ್ಬರಿಗೆ ಸೇರಿದ್ದಲ್ಲ. ಸುಮ್ಮನೆ ಎಲ್ಲರನ್ನೂ ಗ್ಯಾಲರಿಯೊಳಗೆ ಬಿಡಿಸಬೇಕೆಂದರೆ ಹೇಗೆ ಸಾಧ್ಯ? ಈ ವಿಚಾರದಲ್ಲಿ ರೆಗ್ಯುಲೇಟ್ ಮಾಡಲೇಬೇಕು ಎಂದು ಅಧ್ಯಕ್ಷರಲ್ಲಿ ಮನವಿಮಾಡುತ್ತೇನೆ. ಇಲ್ಲಿ ಬಂದು ಕೂಗಾಟಮಾಡುವುದು, ಎಲ್ಲರನ್ನೂ ಗ್ಯಾಲರಿಗೆ ಬಿಡಬೇಕೆಂದು ಹೇಳುವುದು ಅರ್ಥವಾಗುವು ದಿಲ್ಲ. ಅಲ್ಲಿ ಅಲೋ ಮಾಡುವ ಅಧಿಕಾರ ಅಧ್ಯಕ್ಷರಿಗೆ ಸೇರಿದ್ದು. ಹಿಂದಿನಿಂದ ಬಂದಿರುವ ಸಾಂಪ್ರದಾಯ ದಂತೆ ಒಂದು ನಿರ್ಬಂಧಕ್ಕೊಳಪಟ್ಟು ಈ ಕೆಲಸ ನಡೆಯಬೇಕು. ಆದುದರಿಂದ ಇಲ್ಲಿ ಕುಳಿತು ಎಲ್ಲರನ್ನೂ ಬಿಡಬೇಕೆಂದು ಹೇಳುವುದು ಬೇಡ ಎಂದು ಪ್ರಾರ್ಥಿಸಿಕೊಳ್ಳುತ್ತೇನೆ. ಬಿಡಲಿಲ್ಲವೆಂದು ಯಾರೂ ಗಲಾಟೆ ಮಾಡಬಾರದು. ಒಂದು ಸಾವಿರ ಜನರಿಗೆ ಜಾಗವಿದ್ದರೆ ಎರಡು ಸಾವಿರ ಜನರು ಬಂದರೆ ಹೇಗೆ ಬಿಡುವುದು?

ಶ್ರೀ ಎಚ್. ಡಿ. ದೇವೇಗೌಡ.—ಗಲಾಟೆಗೆ ಅವಕಾಶ ಬೇಡ. Let us leave the whole matter to the Speaker.

Sri B. B. SAYANAK.—Why not they restrict the passes?

Sri D. DEVARAJ URS.—That is what they have done.

ಶ್ರೀ ಜಿ. ರಾಮೇಗೌಡ.—ಸುಮಾರು ಒಂದು ವರ್ಷ ಕಾಲ ರಾಜ್ಯಪಾಲರ ಆಡಳಿತ ನಮ್ಮ ರಾಜ್ಯದಲ್ಲಿತ್ತು. ಆಗ ನಾವು ಅನೇಕ ವಿಧವಾದ ತೊಂದರೆಗಳನ್ನನುಭವಿಸಿದ್ದೇವೆ, ನಮ್ಮ ರಾಜ್ಯದಲ್ಲಿ ಆಗ ಪ್ರಜಾಪ್ರಭುತ್ವಕ್ಕನುಗುಣವಾದ ಸರಕಾರವಿಲ್ಲದೆ ಏನು ಅನ್ಯಾಯವಾಗಿದೆ ಮತ್ತು ಕಷ್ಟನಷ್ಟಗಳಾಗಿವೆ ಎಂಬುದನ್ನು ಕೂಡ ನಾವು ಅರಿತಿದ್ದೇವೆ. ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರ ಆಡಳಿತಕ್ಕೆ ಅವಕಾಶವಿರಬಾರದು, ಮುಂದೆ ಈ ರೀತಿಯಾಗಬಾರದು.

ಅನೇಕ ತಾಲ್ಲೂಕುಗಳಲ್ಲಿ ಬರಗಾಲದ ಪರಿಸ್ಥಿತಿ ಇದ್ದು ರೈತರು ತುಂಬ ಕಷ್ಟನಷ್ಟ ಅನುಭವಿಸಿದರು. ಒಂದು ಕಾಲದಲ್ಲಿ ಬರಗಾಲ ಅತ್ಯಂತ ತೀವ್ರವಾಗಿದ್ದಾಗ ಸುಮಾರು 3 ಕೋಟಿ ರೂಪಾಯಿಗಳವರೆಗೆ ಉತ್ತಮವಾದ ಕಾರ್ಯಕ್ಕಾಗಿ ಖರ್ಚುಮಾಡಿರುವುದಾಗಿ ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಆದರೆ ನನ್ನ ಅನುಭವದಿಂದ ಹೇಳುವುದಾದರೆ ತಕ್ಷಣ ಅನುಕೂಲವಾಗುವಂತೆ ತಕ್ಕ ಕಾರ್ಯಕ್ರಮ ಅನೇಕ ಕಡೆ ಕೈಕೊಂಡಿಲ್ಲ. ಆದ ಕಾರಣ ದಯೆಯಿಟ್ಟು ಬರಗಾಲದಲ್ಲಿ ಜನತೆಗಾಗುವ ಕಷ್ಟವನ್ನರಿತು ಬಹಳ ಮುಖ್ಯವಾಗಿ ಮಳೆಬಾರದಿರುವಾಗ ಬರಗಾಲ ಬರುವುದನ್ನರಿತು, ಆ ಸಮಯದಲ್ಲಿ ಕುಡಿಯುವ ನೀರು ಮತ್ತು ದನಗಳ ಮೇವು— ಇವುಗಳಿಗೆ ಬಹಳ ತೊಂದರೆಯಾಗುವುದೆಂಬುದನ್ನರಿತು ಅದನ್ನೊದಗಿಸಲುತಕ್ಕ ಕ್ರಮ ಕೈಕೊಳ್ಳ ಬೇಕು. ಇದಾದನಂತರ ಇತರ ಸೂಕ್ತ ಕಾರ್ಯಕ್ರಮಗಳನ್ನು ಆಸಕ್ತಿ ವಹಿಸಿ ನಡೆಸಿಕೊಂಡು ಹೋಗ ಬೇಕು. ಜನರಿಗೆ ಆ ಸಮಯದಲ್ಲಿ ಕೆಲಸ ಒದಗಿಸಬೇಕು. ಮಳೆಯಿಂದ ಬರುವ ನೀರನ್ನು ಶೇಖರಿಸಿ ಜನತೆಗೆ ನೀರಾವರಿ ಕೆಲಸ ಮುಂತಾದ್ದಕ್ಕೆ ಅನುಕೂಲ ಮಾಡಿಕೊಡಲು ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳಬೇಕು ಎಂಬುದು ನನ್ನ ಸಲಹೆ. ಇದಕ್ಕೆ ಸಂಬಂಧಪಟ್ಟ ರೆವಿನ್ಯೂ ಆಡಳಿತಗಾರರು, ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಮತ್ತು ಲೋಕೋಪಯೋಗಿ ಇಲಾಖೆ ಯವರು ಎಲ್ಲರೂ ಸೇರಿ ಸಹಕಾರದಿಂದ ಈ ಕೆಲಸವನ್ನು ನಡೆಸಿಕೊಂಡು ಹೋದರೆ ಕೆಲವೇ ದಿವಸ ಗಳಲ್ಲಿ ಖರ್ಚು ಮಾಡಬೇಕಾಗಿರತಕ್ಕ ಹಣವೇನಿರುತ್ತದೆ ಅದನ್ನು ಸಂಪೂರ್ಣವಾಗಿ ಖರ್ಚು ಮಾಡತಕ್ಕ ಅನುಕೂಲ ನಮಗೆ ಒದಗುತ್ತದೆ. ಮಾರ್ಚಿ ತಿಂಗಳಿನಲ್ಲಿ, ರಸ್ತೆಗಳಿಗೆ ಕೊಟ್ಟ ಹಣ, ಬಾವಿಗಳಿಗೆ ಕೊಟ್ಟ ಹಣ ಇವೆಲ್ಲವನ್ನೂ ವಾಪಸು ಪಡೆದರೆ ಪ್ರೀತಿಯಿಂದ, ವಿಶ್ವಾಸದಿಂದ ಕೊಟ್ಟಿರತಕ್ಕ ಮೂರು ಕೋಟಿ ರೂಪಾಯಿಗಳು ಜನಗಳ ಅನುಕೂಲಕ್ಕೆ ಏನು ಖರ್ಚಾದೀತು ಎನ್ನುವುದನ್ನು ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಬರಗಾಲ ಪರಿಸ್ಥಿತಿಯನ್ನು ನೋಡಿ ಕೊಟ್ಟಂಥ ಹಣ ಜನಗಳ ಹಿತಕ್ಕಾಗಿ ಖರ್ಚು ಮಾಡಬೇಕಾಗಿದೆ ಮತ್ತು ಬಹಳ ಜಾಗ್ರತೆಯಾಗಿ ಖರ್ಚಾಗತಕ್ಕ ಕೆಲಸಗಳನ್ನು ತೆಗೆದುಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಕುಡಿಯುವ ನೀರಿನ ಬಾವಿಯನ್ನು ತೆಗೆಸಬೇಕಾಗಿದ್ದರೆ, ಈ ಕಾಲದಲ್ಲಿ ಸುಮಾರು ನಾಲ್ಕು ತಿಂಗಳ ಅವಧಿ ಬೇಕು. ಅದಕ್ಕೆ ಬದಲಾಗಿ ವೇಗವಾಗಿ ಬಾವಿಗಳನ್ನು ತೋಡತಕ್ಕ ರಿಗ್ಸ್ ಉಪಯೋಗಿಸಿ ಒಂದೇ ದಿನದಲ್ಲಿ ಬಾವಿಯನ್ನು ತೋಡಿಸಿ, ಪಂಪ್ ಹಾಕಿಸಿ, ಜನಗಳಿಗೆ ನೀರನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡ ಬೇಕು. ಆದರೆ ಜನಗಳಿಗೆ ಕೆಲಸವನ್ನು ಒದಗಿಸತಕ್ಕ ಕೆಲಸಕ್ಕೆ ಹಣವನ್ನು ಖರ್ಚು ಮಾಡಿದಂತಾಗ ಲಿಲ್ಲವೆಂದು ಹೇಳಬಹುದು. ಜನಗಳಿಗೆ ಕೆಲಸ ಕೊಡತಕ್ಕ ವ್ಯವಸ್ಥೆಯಾದರೂ ಕೂಡ, ಫಲಿತಾಂಶ ಏನೂ ಆಗದೇ ಇರುವುದರಿಂದ ಈ ಒಂದು ಕ್ರಮಕ್ಕೆ ಬದಲಾಯಿಸಿಕೊಳ್ಳುವುದು ಬಹಳ ಉತ್ತಮ ವೆಂದು ನಾನು ಸಲಹೆ ಮಾಡುತ್ತಿದ್ದೇನೆ. ರೆವಿನ್ಯೂ ಇಲಾಖೆಯವರು ಈ ಕಾಲದಲ್ಲಿ ಹಲವಾರು ವ್ಯವಸ್ಥೆಗಳನ್ನು ಮಾಡಬೇಕಾಗಿರುವುದರಿಂದ, ರೆವಿನ್ಯೂ ಅಧಿಕಾರಿಗಳಿಗೆ ಇದರಲ್ಲಿ ಹೆಚ್ಚು ಆಸಕ್ತಿ ಯುಂಟಾಗುವಂತೆ ಕೂಡ ಮಾಡಬೇಕು. ಈ ಮೂರು ಇಲಾಖೆಗಳಲ್ಲಿ ಸಹಕಾರ ದೊರಕದೆ ಹೋದರೆ ಅದರಿಂದ ಬಹಳ ಮಟ್ಟಿಗೆ ನಮ್ಮ ಜನತೆಗೆ ಅನಾನುಕೂಲವಾಗುತ್ತದೆ, ಅನುಕೂಲವಾಗು ವುದಿಲ್ಲ ಎನ್ನುವುದನ್ನು ನನ್ನ ಅನುಭವದ ಮೂಲಕ ಹೇಳುತ್ತಿದ್ದೇನೆ.

ರೆವಿನ್ಯೂ ಆಡಳಿತದ ವಿಚಾರವಾಗಿ ರಾಜ್ಯಪಾಲರು ಬಹಳ ಹೇಳಿದ್ದಾರೆ. ಅನೇಕ ಸರ್ಕಾರ ಗಳು ಶ್ರೀ ನಿಜಲಿಂಗಪ್ಪನವರ ಸರ್ಕಾರ, ಶ್ರೀ ವೀರೇಂದ್ರ ಪಾಟೀಲರ ಸರ್ಕಾರ, ಈ ಎಲ್ಲ ಸರ್ಕಾರ ಗಳೂ ಹೇಳಿದ ಹಾಗೆ ನಮ್ಮ ರಾಜ್ಯಪಾಲರೂ ಹೇಳಿದ್ದಾರೆ. ರೈತರಿಗೆ ಪಟ್ಟಾಗಳು ಕೊಡುತ್ತೇವೆ, ಖಾತೆಗಳನ್ನು ಬರೆಯಿಸಿಕೊಡುತ್ತೇವೆ, ಸಹಕಾರ ಸಂಘಗಳಲ್ಲಿ ಮತ್ತು ಷೆಡ್ಯೂಲ್ ಬ್ಯಾಂಕುಗಳಲ್ಲಿ ಸಾಲ ಪಡೆಯುವುದಕ್ಕೆ ಅನುಕೂಲವಾಗಿರುವಂತೆ ವ್ಯವಸ್ಥೆಯನ್ನು ನಾವು ಜಾಗ್ರತೆ ಮಾಡು ತ್ತೇವೆ ಎಂದು ಹೇಳಿದ್ದಾರೆ. ಇದು ಖಂಡಿತವಾಗಿ ಕಾರ್ಯರೂಪಕ್ಕೆ ಬಂದಿಲ್ಲ. ಆದರೆ ರಾಜ್ಯ ಪಾಲರು ಹೇಳಿರುವುದನ್ನು ನೋಡಿದರೆ ಮುಂದಿನ ಸರ್ಕಾರದಲ್ಲಿ ಈ ವ್ಯವಸ್ಥೆ ಇರಬಹುದು ಎಂದು ಅವರು ತಿಳಿದುಕೊಂಡಿರಬಹುದು. ನಮ್ಮ ಅದೃಷ್ಟಕ್ಕೆ ಒಬ್ಬ ರೈತಪುತ್ರನೇ ಈ ಸರ್ಕಾರದಲ್ಲಿ ಕಂದಾಯ ಮಂತ್ರಿಯಾಗಿದ್ದಾರೆ, ಅವರು ಹಿಂದೆ ಕೂಡ ರೈತರ ಕಷ್ಟ ನಿಷ್ಠೂರಗಳು ಏನಿದ್ದುವು ಎನ್ನುವುದನ್ನು ಅರಿತುಕೊಂಡಿದ್ದಾರೆ. ಅವರೂ ಕೂಡ ಪತ್ರಿಕೆಗಳಿಗೆ ಒಂದು ಹೇಳಿಕೆಯನ್ನು ಕೊಟ್ಟು ಬಹಳ ಜಾಗ್ರತೆ ಕೆಲಸ ಮಾಡಬೇಕಾಗಿದೆ, ರೈತರ ಕಷ್ಟಗಳೇನು ಎನ್ನುವುದನ್ನು ಅರಿತುಕೊಂಡಿದ್ದೇನೆ, ಇದಕ್ಕೆ ಆದಷ್ಟು ಜಾಗ್ರತೆ, ಕೇವಲ ಒಂದು ವರ್ಷದ ಒಳಗಾಗಿ ಪ್ರತಿಯೊಬ್ಬ ರಿಗೂ ಒಂದು ಪಟ್ಟಿ ತಯಾರು ಮಾಡಿ ಕೊಡಿಸುತ್ತೇನೆಂದು ಹೇಳಿದ್ದಾರೆ. ಅದನ್ನು ಮಾಡಿದ್ದೇ ಆದರೆ ನಮ್ಮ ರೈತರಿಗೆ ಅಗಾಧ ಸಹಾಯವನ್ನು ಮಾಡಿದಂತಾಗುತ್ತದೆ: ಸರ್ಕಾರಕ್ಕೆ ಕೀರ್ತಿ ಬರುತ್ತದೆ, ರೈತರು ಸಹಕಾರ ಸಂಘಗಳಲ್ಲಿ ಅಥವಾ ಷೆಡ್ಯೂಲ್ ಬ್ಯಾಂಕುಗಳಲ್ಲಿ ಸಾಲ

(ಶ್ರೀ ಜಿ. ರಾಮೇಗೌಡ)

ಪಡೆದು ತಮ್ಮ ವ್ಯವಸಾಯವನ್ನು ಅಭಿವೃದ್ಧಿ ಪಡೆಸಿಕೊಳ್ಳುವುದಕ್ಕೆ ತುಂಬ ಸಹಾಯವಾಗುತ್ತದೆ. ಅದನ್ನು ಅದಷ್ಟು ಜಾಗ್ರತೆ ಮಾಡಿಸಬೇಕಾದ ಕಾರ್ಯ ಮಾನ್ಯ ಮಂತ್ರಿಗಳಿಗೆ ಇದೆ ಎಂದು ನಾನು ಭಾವಿಸುತ್ತೇನೆ. ಇದು ಬಹಳ ಮುಖ್ಯವಾದುದು ಮತ್ತು ಇದರಲ್ಲಿರತಕ್ಕ ಹಲವಾರು ಕುಂದುಕೊರತೆಗಳೇನಿವೆ ಅವೆಲ್ಲ ನಿವಾರಣೆಯಾಗಬೇಕು. ಅದರಲ್ಲೂ ಕೂಡ ಏನು ಸಣ್ಣ ಹಿಡುವಳಿದಾರರಿದ್ದಾರೆ, ನಾವು ಕಾವಸ್ತೆ ಮಾರ್ಜಿನಲ್ ಫಾರ್ಮರ್‌ಸ್ ಎಂದು ಇದ್ದಾರೆ ಅವರುಗಳಿಗೆ ಕೂಡ ತುಂಬ ಅನುಕೂಲವಾಗುತ್ತದೆ. ಈ ಹೊತ್ತು ಸರ್ಕಾರದಿಂದ ದೊರೆಯಬೇಕಾದ ಅನೇಕ ಅನುಕೂಲಗಳನ್ನು ಮತ್ತು ಸಹಾಯವನ್ನು ಈ ಸಣ್ಣ ರೈತರು ಪಡೆಯುವುದಕ್ಕೆ ತುಂಬ ಕಷ್ಟವಾಗಿದೆ. ಅದಕ್ಕೆ ಮೂಲ ಕಾರಣ ಅವರಿಗೆ ಪಟ್ಟ ಮಾಡಿ ಕೊಡದೆ ಇರುವುದು. ಎರಡು ಎಕರೆಗೆ ಮೇಲ್ಪಟ್ಟು ಐದು ಎಕರೆ ಒಳಗೆ ಭೂಮಿ ಇದೆ ಎಂದು ಖಚಿತವಾಗಿ ಹೇಳತಕ್ಕ ಅವಕಾಶವಿಲ್ಲದೆ ಇರುವುದರಿಂದ ರಾಜ್ಯದಲ್ಲಿ ಸಹಸ್ರಾರು ಮಂದಿ ಬಡ ರೈತರಿಗೆ ಅನುಕೂಲ ದೊರೆಯದೆ ನಿರಾಶರಾಗಿದ್ದಾರೆ. ಆದುದರಿಂದ ಈ ವ್ಯವಸ್ಥೆ ಬಹಳ ಜಾಗ್ರತೆಯಾಗಿ ಆಗಬೇಕು ಮತ್ತು ಸರ್ಕಾರದಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಭಾವಿಸುತ್ತೇನೆ.

ರಾಜ್ಯಪಾಲರ ಆಡಳಿತದಲ್ಲಿ ಭೂಮಿಯನ್ನು ಕೊಡತಕ್ಕ ಸಮಿತಿಗಳನ್ನು ರದ್ದು ಮಾಡಿದ್ದಾರೆ. ಆಯಾ ತಾಲ್ಲೂಕುಗಳಲ್ಲಿ ಒಂದು ಸಮಿತಿ ರಚನೆಯಾಗಿ ತಾಲ್ಲೂಕಿನಲ್ಲಿರುವ ಯೋಗ್ಯವಾದ ಭೂಮಿ, ಅರಣ್ಯ ಶಾಖೆಗೆ ಸೇರಿದ ಭೂಮಿ. ಯಾವುದಾದರೂ ಇರಲಿ ಅವುಗಳಿಗಾಗಿ ಬಂದಂಥ ಅರ್ಜಿಗಳನ್ನು ಪರಿಶೀಲನೆಮಾಡಿ ಸ್ಥಳದಲ್ಲಿಯೇ ಯಾರಿಗೆ ಭೂಮಿ ಇಲ್ಲ ಅವರಿಗೆ, ವ್ಯವಸಾಯ ಮಾಡುವುದಕ್ಕೆ ಶಕ್ತಿ ಇರುವಂತ ರೈತರಿಗೆ ಕೊಡಬೇಕು ಎಂದು ಆಲೋಚನೆ ಮಾಡತಕ್ಕ ಒಂದು ಶಕ್ತಿಯುತವಾದ ಸಮಿತಿಯನ್ನು ರಾಜ್ಯಪಾಲರು ತೆಗೆದು ಹಾಕಿದ್ದಾರೆ. ಇದರ ಹಿಂದೆ ಏನೋ ಆಲೋಚನೆ ಇರಬೇಕು ಎಂದು ಕಾಣಿಸುತ್ತದೆ. ಆದರೆ ಒಂದು ವರ್ಷದೊಳಗೆ ಸಹಸ್ರಾರು ಎಕರೆ ಭೂಮಿಯನ್ನು ವಿತರಣೆ ಮಾಡಿದ್ದಾರೆ. ಇದು ಯಾರು ಯಾರಿಗೆ ಹೋಗಿದೆ, ಎಲ್ಲೆಲ್ಲಿ ಸೇರಿದೆ, ಭೂಮಿ ಇರುವವರಿಗೆ ಸೇರಿದೆಯೇ ಎನ್ನುವುದು ನಮಗೆ ಅರ್ಥವಾಗುವುದಿಲ್ಲ. ಇದನ್ನು ಘನ ಸರ್ಕಾರದವರು ಸ್ವಲ್ಪ ಪರಿಶೀಲನೆ ಮಾಡಬೇಕು. ಯಾರು ಊರಿನಲ್ಲಿ ಇಲ್ಲದೆ ಇದ್ದು, ಯಾರಿಗೆ ಹೆಚ್ಚು ಭೂಮಿ ಇದ್ದು, ಅಂಥವರಿಗೆ ಭೂಮಿಯನ್ನು ಕೊಟ್ಟಿದ್ದರೆ ಅದಕ್ಕೆ ತಡೆ ಆಜ್ಞೆ ಕೊಡಬೇಕು. ಆ ಭೂಮಿಯನ್ನು ಊರಿನಲ್ಲಿರುವ, ವ್ಯವಸಾಯ ಮಾಡಲು ಆಸಕ್ತಿ ಇರತಕ್ಕ ಭೂ ಹೀನರಿಗೆ ಮಾತ್ರ ಕೊಡಬೇಕಾದ್ದು ಅತ್ಯಾವಶ್ಯಕವೆಂದು ನಾನು ಒತ್ತಿ ಹೇಳುತ್ತಿದ್ದೇನೆ. ಈ ವಿಷಯವನ್ನು ಮಾನ್ಯ ರೆವಿನ್ಯೂ ಮಂತ್ರಿಗಳು ಪರಿಶೀಲಿಸಬೇಕು ಮತ್ತು ಅದಕ್ಕೆ ಹೆಚ್ಚಿನ ಗಮನಕೊಡಬೇಕು ಎಂದು ನಾನು ಆಶಿಸುತ್ತೇನೆ.

ನಿರುದ್ಯೋಗದ ವಿಚಾರವಾಗಿ ರಾಜ್ಯಪಾಲರು ಹೇಳಿದ್ದಾರೆ. ಇಂಜಿನಿಯರಿಂಗ್ ಪದವೀಧರರು, ಡಿಪ್ಲೊಮಾದಾರರು ಮತ್ತು ಇತರ ಎಲ್ಲ ಪದವೀಧರರಿಗೆ ಒಳ್ಳೆಯ ತರಪೇತಿ ಕೊಡುತ್ತೇವೆಂದೂ, ಅವರಿಗೆ ಉದ್ಯೋಗವನ್ನೂ ಒದಗಿಸುತ್ತೇವೆಂದೂ ಹೇಳಿದ್ದಾರೆ. ಇದು ಬಹಳ ಸಂತೋಷದ ವಿಚಾರ. ನಮ್ಮ ದೇಶದ ಮುಂದೆ ದೊಡ್ಡ ಆಸೆ ಇದ್ದು ಅದನ್ನು ಈಡೇರಿಸತಕ್ಕ ಕಾಲ ಬಂದಿದೆ ಎಂದು ನಾನು ಆಶಿಸುತ್ತೇನೆ. ಆದರೆ ಇದನ್ನು ಕಾರ್ಯರೂಪಕ್ಕೆ ತರಬೇಕಾಗಿದ್ದರೆ ಏನು ವ್ಯವಸ್ಥೆಯಾಗಿದೆ ಎಂದು ಗೊತ್ತಾಗಿಲ್ಲ. ಈ ಹೊತ್ತು ಬಹಳ ವಿದ್ಯಾವಂತರು ನಿರುದ್ಯೋಗಿಗಳಾಗಿ ಬಹಳ ಕಷ್ಟಕರವಾದ ಪರಿಸ್ಥಿತಿ ಇದೆ. ಇವರ ಜೊತೆಗೆ ಹಳ್ಳಿಗಳಲ್ಲಿ ಗ್ರಾಮಾಂತರಗಳಲ್ಲಿ ಉದ್ಯೋಗವಿಲ್ಲದೆ ಇರತಕ್ಕ ಕಾರ್ಮಿಕರು ಕೂಡ ಅನೇಕ ಮಂದಿ ಇದ್ದಾರೆ. ಇದೆಲ್ಲ ದೊಡ್ಡ ಸಮಸ್ಯೆ. ಇಂಜಿನಿಯರಿಂಗ್ ಪದವೀಧರರಾಗಲೀ, ವ್ಯವಸಾಯ ಪದವೀಧರರಾಗಲೀ, ಡಿಪ್ಲೊಮಾದಾರರಾಗಲೀ, ಯಾರೇ ಆಗಲೀ ಕೆಲಸ ಮಾಡಲೇ ಬೇಕೆಂದ ಒಬ್ಬ ವ್ಯಕ್ತಿ ಮುಂದೆ ಬಂದು, ತನ್ನಲ್ಲಿರುವ ಶಕ್ತಿಯನ್ನು ಹೇಳಿ, ನನಗೆ ಇಷ್ಟು ಸಂಬಳವನ್ನು ಕೊಟ್ಟರೆ, ಇಷ್ಟು ಕಾರ್ಯ ವ್ಯವಸ್ಥೆಯನ್ನು ನಾನು ಮಾಡಿ, ಒಂದು ಯೋಜನೆಯನ್ನು ಹಾಕಿ, ಇಷ್ಟು ರೂಪಾಯಿಗಳ ಆದಾಯವನ್ನು ತೋರಿಸುತ್ತೇನೆ ಎಂದು ಧೈರ್ಯವಾಗಿ ಹೇಳತಕ್ಕ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟುಮಾಡಬೇಕಾಗಿದೆ. ಈ ಹೊತ್ತು ಹಳ್ಳಿಗಳಲ್ಲಿ, ಗ್ರಾಮಾಂತರಗಳಲ್ಲಿ ನಾವು ನೋಡುವುದೇ ಬೇರೆ. ಕೈಕಾಲು ಇರತಕ್ಕ ಮನುಷ್ಯ ಬಂದು ಉದ್ಯೋಗ ಬೇಕು ಎಂದು ಕೇಳಿದರೆ, ಅವನು ಉದ್ಯೋಗ ಪಡೆದುಕೊಂಡರೆ ಏನು ಮಾಡಬಹುದು ಎನ್ನುವ ಅನುಮಾನ ಕೂಡ ಬರುತ್ತದೆ. ವ್ಯವಸಾಯದ ಕಾರ್ಮಿಕರಿಗೆ ಮೂರು ರೂಪಾಯಿ ಕೂಲಿ ಕೊಡಬೇಕು ಎಂದು ಇದೆ. ಕೂಲಿ ಎಷ್ಟಾದರೂ ಕೊಡಬಹುದು. ಆದರೆ ಅದಕ್ಕೆ ತಕ್ಕಂತೆ ಅವನಿಗೆ ವ್ಯವಸಾಯ ಮಾಡುವ ಅನುಭವವಿದೆಯೋ ಇಲ್ಲವೇ ಎನ್ನುವುದನ್ನು ನಾವು ಶೋಧಿಸಿ ನೋಡಬೇಕು ; ಅನೇಕ ತಿಂಗಳು ಕೆಲಸ ಮಾಡಿದನಂತರ ಅರ್ಥ

ಮಾಡಿಕೊಳ್ಳಬೇಕು. ಆದುದರಿಂದ ಹಳ್ಳಿಗಳಲ್ಲಿ ಕೂಡ ರೈತರಿಗೆ ತರಬೇತಿ ಕೇಂದ್ರ ಬೇಕಾಗುತ್ತದೆ. ಉಳುವುದು, ಬಿತ್ತನೆ ಹಾಕುವುದು ಇದನ್ನೆಲ್ಲ ಹೇಳಿಕೊಡಬೇಕಾಗುತ್ತದೆ. ಇದು ಅಷ್ಟು ಸುಲಭ ವಾದ ಕೆಲಸವಲ್ಲ. ಯಾರಾದರೂ ಇದು ಸುಲಭವಾದ ಕೆಲಸವೆಂದು ತಿಳಿದಿದ್ದರೆ, ಈ ಹೊತ್ತು ಯಾವ ಕಾರಣದಿಂದ ನಾವು ವ್ಯವಸಾಯದಲ್ಲಿ ಹಿಂದುಳಿದಿದ್ದೇವೆಯೋ ಅದಕ್ಕೆ ಇದೇ ಮೊದಲನೆಯ ಕಾರಣವೆಂದರೆ ತಪ್ಪಾಗಲಾರದು. ಒಬ್ಬ ಮನುಷ್ಯನಿಗೆ ಗಟ್ಟಿ ಶರೀರವಿದ್ದಮಾತ್ರಕ್ಕೆ ಚೆನ್ನಾಗಿ ವ್ಯವಸಾಯ ಮಾಡುತ್ತಾನೆ ಎನ್ನುವ ಅಭಿಪ್ರಾಯ ತಪ್ಪು.

2-00 P.M.

ಉಳುಮೆಯಲ್ಲಿ, ಬದುವಿಗೆ ಮಣ್ಣು ಹಾಕುವುದರಲ್ಲಿ, ಬಿತ್ತನೆಯಲ್ಲಿ ಹಾಗೂ ಇನ್ನಿತರ ಕೆಲಸ ಗಳಲ್ಲಿ ತರಬೇತಿ ಹೊಂದಿರತಕ್ಕ ಕೂಲಿ ಆಳುಗಳು ಸಿಗುವುದೇ ಕಷ್ಟವಾಗಿದೆ. ಇದು ತುಂಬಾ ವಿಷಾದವಾದ ಸಂಗತಿ. ಇನ್ನೊಂದು ಕೆಲಸ ಎಂದರೆ ನಿರುದ್ಯೋಗ ನಿವಾರಣೆಗಾಗಿ ಪ್ರತಿ ಹಳ್ಳಿ ಗಳಲ್ಲೂ ಭೂಸೇನೆಯನ್ನು ಮಾಡಬೇಕೆಂದು ಪ್ರತಿ ತಾಲ್ಲೂಕಾ ಬೋರ್ಡಿನಲ್ಲಿ ವ್ಯವಸ್ಥೆ ಮಾಡುತ್ತಿರು ವುದರಿಂದ ಅನೇಕರಿಗೆ ಸಣ್ಣ ಸಣ್ಣ ಕೆಲಸಗಳು ಸಿಗುವ ಅನುಕೂಲವಾಗುತ್ತದೆ ಎಂದು ಸರಕಾರ ಮಾಡುತ್ತಿದೆ. ಆದರೆ ವ್ಯವಸಾಯದಲ್ಲಿ ಕೂಲಿಗಾರರು ತರಬೇತಿಯಾಗಿರುವವರು ಸಿಗುವುದು ಕಷ್ಟ ವಾಗಿದೆ. ಇದಕ್ಕಾಗಿ ತರಬೇತಿ ಕೇಂದ್ರಗಳನ್ನು ತಾಲ್ಲೂಕಾ ಮಟ್ಟದಲ್ಲಿ ಆಗಲೀ ಇಲ್ಲವೇ ಜಿಲ್ಲಾ ಮಟ್ಟದಲ್ಲಾಗಲೀ ಮಾಡಿದರೆ ಕೂಲಿ ಆಳುಗಳಿಗೆ ಅನುಕೂಲವಾಗಬಹುದು. ಆದರೆ ಈಗ ತರಬೇತಿ ಕೇಂದ್ರಗಳು ಅಲ್ಲಿ ಇಲ್ಲಿ ಒಂದೆರಡು ಇರಬಹುದು. ಇದರಿಂದ ತರಬೇತಿಯಾಗಿ ಬರುವವರು ಬಹು ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇಂತಹ ಕೂಲಿಯಾಳುಗಳ ತರಬೇತಿ ಕೇಂದ್ರಗಳನ್ನು ಹತ್ತಾರು ಕಡೆ ಗಳಲ್ಲಿ ಮಾಡಿ ಇದರ ಬಗ್ಗೆ ಸರಿಯಾದ ವ್ಯವಸ್ಥೆ ಏರ್ಪಾಡು ಮಾಡಬೇಕಾಗಿದೆ. ಇತ್ತೀಚೆಗೆ ನಮ್ಮ ಜನರಲ್ಲಿ ಎಸ್.ಎಸ್.ಎಲ್.ಸಿ. ಪಾಸು ಮಾಡಿದ ಕೂಡಲೇ ಅವರಿಗೆ ಸರಕಾರದಲ್ಲಿ ಕೆಲಸ ಮಾಡ ಬೇಕು, ಅದರಲ್ಲೂ ಬೆಂಗಳೂರು ನಗರದಲ್ಲೇ ಇರಬೇಕು, ಬೆಂಗಳೂರು ನಗರದಿಂದ ಹೊರಗಡೆ ಕೆಲಸ ಮಾಡುವುದು ಬೇಡ ಎಂದು ಒಂದು ವಿಧವಾದ ಭಾವನೆ ಪ್ರತಿಯೊಬ್ಬ ಎಸ್. ಎಸ್. ಎಲ್. ಸಿ. ಪಾಸಾದ ಜನರಲ್ಲಿ ಬರುತ್ತಿದೆ. ಇಂತಹ ಜನರಲ್ಲಿ ಯಾವ ಉದ್ಯೋಗದಲ್ಲಿ ಆಸಕ್ತಿ ಇದೆಯೋ ಅದಕ್ಕೆ ತಕ್ಕಂತೆ ಉದ್ಯೋಗ ಕೊಡಲು ಸರಿಯಾದ ತರಬೇತಿ ಕೇಂದ್ರಗಳು ಇಲ್ಲ. ಈ ದೇಶದಲ್ಲಿ ಇಂತಹ ತರಬೇತಿ ಕೇಂದ್ರಗಳನ್ನು ಮಾಡಿ ಜನರಿಗೆ ಯಾವ ಯಾವ ಕೆಲಸದಲ್ಲಿ ಆಸಕ್ತಿ ಇದೆಯೋ ಅಂತಹ ಕೆಲಸದಲ್ಲಿ ತರಬೇತಿ ಕೊಟ್ಟರೆ ನಿರುದ್ಯೋಗ ಸ್ವಲ್ಪ ಮಟ್ಟಿಗೆ ನಿವಾರಣೆಯಾಗಬಹುದು ಇಲ್ಲದೆ ಇದ್ದರೆ ನಿರುದ್ಯೋಗವನ್ನು ನಿವಾರಣೆ ಮಾಡುವುದು ಕಷ್ಟವಾಗುತ್ತದೆ. ಇದಕ್ಕೆ ನಾವು ಮೊದಲು ಗಮನ ಕೊಡಬೇಕಾಗಿದೆ. ಇನ್ನು ದೇಶದಲ್ಲಿ ಭೂ ಸೈನ್ಯ ಎಂದು ಮಾಡಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ವರ್ಷಕ್ಕೆ ಹತ್ತು ತಿಂಗಳ ಕಾಲ ಸುಮಾರು ಒಂದು ಸಾವಿರ ಜನರಿಗೆ ಉದ್ಯೋಗ ಒದಗಿಸುವಂತೆ ಒಂದು ಕೆಲಸ ಆರಂಭ ಮಾಡಿದ್ದೇವೆಂದು ಇದರಲ್ಲಿ ಹೇಳಿದ್ದಾರೆ. ಇದನ್ನು ಇನ್ನೂ ಹೆಚ್ಚಾಗಿ ಮಾಡಬೇಕು. ತಾಲ್ಲೂಕಾ ಮಟ್ಟದಲ್ಲಿ ಹಾಗೂ ಎಲ್ಲಿ ಜನರು ಹೆಚ್ಚು ಆಸಕ್ತಿಯಿಂದ ಬರುತ್ತಾರೋ ಅಂತಹ ಕಡೆಗಳಲ್ಲಿ ಮಾಡಿದರೆ ಉತ್ತಮವಾದ ಕಾರ್ಯಗಳನ್ನು ಮಾಡಬಹುದು. ಇಂತಹ ಕೆಲಸಗಳನ್ನು ಸರಕಾರ ಇನ್ನೂ ಹೆಚ್ಚು ಮಾಡುವ ಅವಶ್ಯಕತೆ ಇದೆ ಎಂದು ಇಲ್ಲಿ ಒತ್ತಾಯವಾಗಿ ಹೇಳಬಯಸುತ್ತೇನೆ. ಮತ್ತೆ ಸಣ್ಣ ಪುಟ್ಟ ರೈತರುಗಳು ಖುಷ್ಕಿ ಬೇಸಾಯ ಮಾಡುವವರು ಹೆಚ್ಚಾಗಿಲ್ಲ. ನಮ್ಮ ರಾಜ್ಯದಲ್ಲಿ ಖುಷ್ಕಿ ಬೇಸಾಯ ಮಾಡುವವರು ಎರಡು ಎಕರೆಯಿಂದ ಐದು ಎಕರೆಯವರೆಗೆ ಮಾಡುತ್ತಿರಬಹುದು, ಆದರೆ ಇವರಿಗೆ ಸರಿಯಾದ ಅನುಕೂಲಗಳು ಸಿಗುತ್ತಿಲ್ಲ. ನೀರಾವರಿಯ ಸಹಾಯದಿಂದ ಬೇಸಾಯ ಮಾಡುವ ರೈತರಿಗೆ ಸಿಗುವ ಅನುಕೂಲಗಳು ಇವರಿಗೆ ಇಲ್ಲ. ಇದಕ್ಕೆ ಸರಿಯಾದ ಸಹಾಯ ಸೌಕರ್ಯಗಳನ್ನು ಒದಗಿಸಿ ಕೊಡಬೇಕು.

ಇನ್ನು ರೈತರಿಗೆ ಬೇಕಾದಷ್ಟು ಸಹಾಯಗಳನ್ನು ಸರಕಾರ ಕೊಡುತ್ತಿದೆ. ಇದರಲ್ಲಿ ಮುಖ್ಯ ವಾಗಿ, ಭೂಸಾರ ಸಂರಕ್ಷಣೆಗೆ ಸಾಕಷ್ಟು ಅನುಕೂಲಗಳನ್ನು ಸರಕಾರ ಮಾಡುತ್ತಿಲ್ಲ. ಕಳೆದ ಹತ್ತು ವರ್ಷಗಳಿಂದ ನಾನು ನೋಡುತ್ತಿರುವಂತೆ ಈ ದಿಸೆಯಲ್ಲಿ ಲೇಶಮಾತ್ರವೂ ಸರಕಾರ ಸಹಾಯ ಮಾಡುತ್ತಿಲ್ಲ ಮತ್ತು ಇದರ ಕಡೆಗೆ ತಕ್ಕ ಕೆಲಸ ಮಾಡಲಿಲ್ಲ ಎಂದು ಇಲ್ಲಿ ಒತ್ತಿ ಹೇಳ ಬಯಸುತ್ತೇನೆ. ಇವೊತ್ತು ಈ ದೆಸೆಯಲ್ಲಿ ರೈತರಿಗಾಗಿ ಅನೇಕ ವಿಧವಾದ ಸಹಾಯಗಳನ್ನು ಎಂದರೆ ರೈತರಿಗೆ ಸಾಲ ಕೊಟ್ಟು ಬಾವಿ ತೆಗೆಸಲು, ಪಂಪುಸೆಟ್ಟು ಕೊಳ್ಳಲು, ಭೂಮಿ ಮಟ್ಟವನ್ನು ಸರಿ ಮಾಡಲು ಇವಕ್ಕೆಲ್ಲ ಸಾಲ ಕೊಟ್ಟು ಸಹಾಯ ಮಾಡುತ್ತಿದ್ದಾರೆ. ಇದರಲ್ಲಿ ಭೂ ಸಾರ ಸಂರಕ್ಷಣೆ ಮಾಡುವುದು ಬಹಳ ಮುಖ್ಯವಾದುದು. ಖುಷ್ಕಿ ಭೂಮಿಗಳಲ್ಲಿ ಬಾವಿ ತೆಗೆಸಿ ಅದರ

(ಶ್ರೀ ಜಿ. ರಾಮೇಗೌಡ)

ಮೂಲಕ ವ್ಯವಸಾಯ ಮಾಡಬೇಕಾಗುತ್ತೆ. ಆದರೆ ಕೆಲವು ಕಡೆಗಳಲ್ಲಿ ಭಾವಿಗಳಲ್ಲಿ ನೀರು ಇರುವುದಿಲ್ಲ. ಮತ್ತು ಸಕಾಲದಲ್ಲಿ ನೀರು ಸಿಗದೇ ಇದ್ದರೆ ರೈತರು ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಸರಕಾರ ಕೋಟಿಗಟ್ಟಲೆ ಖರ್ಚು ಮಾಡಿದರೂ ಅದು ನಿಷ್ಪ್ರಯೋಜನವಾಗುತ್ತದೆ. ಸರಕಾರ ಯಾವ ರೀತಿಯಿಂದ ರೈತರಿಗೆ ಉಪಕಾರ ಮಾಡಬೇಕೆಂದು ಪ್ರಯತ್ನ ಮಾಡಿದರೂ ಅದರಿಂದ ಹೆಚ್ಚು ಸೌಕರ್ಯಗಳು ಸಿಗದೇ ಇರುವುದನ್ನು ನಾವು ನೋಡುತ್ತಿದ್ದೇವೆ. ನಮ್ಮಲ್ಲಿ ಕೆಲವು ಕಡೆ 25 ಇಂಚು ಅಥವಾ 30 ಇಂಚು ಮಳೆ ಬೀಳದೆ ಇರುವ ಕಡೆಗಳಲ್ಲಿ ಬಾವಿಗಳನ್ನು ತೆಗೆಸಿದರೂ ಅಲ್ಲಿ ನೀರು ಸಿಗದೆ ಕಷ್ಟವಾಗಿದೆ. ಇದಕ್ಕಾಗಿ ರೈತರಿಗೆ ಮುಖ್ಯವಾದ ಭೂ ಸಾರ ಸಂರಕ್ಷಣೆಯ ಕಾರ್ಯವನ್ನು ಮಾಡಲು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಕಳೆದ ಹತ್ತು ವರ್ಷಗಳಿಂದಲೂ ನಾನು ಈ ಮಾನ್ಯ ಸಭೆಯ ಸದಸ್ಯರಲ್ಲಿ ಒಬ್ಬನಾಗಿ ವ್ಯವಸಾಯದ ಇಲಾಖೆ ಇದರ ಬಗ್ಗೆ ಏನು ಕೆಲಸ ಮಾಡುತ್ತಿದೆ ಎಂದು ನೋಡುತ್ತಿದ್ದೇನೆ. ಅದರಲ್ಲೂ ಬೆಂಗಳೂರು, ಕೋಲಾರ ಹಾಗೂ ತುಮಕೂರು ಈ ಜಿಲ್ಲೆಗಳಲ್ಲಿ ಈ ದಿಸೆಯಲ್ಲಿ ಯಾವ ರೀತಿಯಾದ ಉತ್ತಮವಾದ ಕಾರ್ಯವನ್ನು ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಭೂಸಾರ ಸಂರಕ್ಷಣೆಯ ಕಾರ್ಯ ಬಹು ಅತ್ಯಾವಶ್ಯಕ. ಸರಕಾರ ಇದರ ಕಡೆಗೆ ಗಮನ ಹರಿಸಿ ಆದಷ್ಟು ಜಾಗ್ರತೆ ತಕ್ಕ ಕ್ರಮಗಳನ್ನು ತೆಗೆದುಕೊಂಡು ಪ್ರತಿಯೊಂದು ತಾಲ್ಲೂಕಿನಲ್ಲೂ ಈ ಕಾರ್ಯ ಹೆಚ್ಚಿಗೆ ನಡೆಯುವಂತೆ ಮಾಡಬೇಕು. ಅಲ್ಲದೆ ಸರಕಾರ ಭೂಸಾರ ಸಂರಕ್ಷಣೆಗಾಗಿ ಕೂಲಿಗಳನ್ನು ತೆಗೆದುಕೊಳ್ಳುವಾಗ ಬಹು ಕಡಿಮೆ ದರದ ಕೂಲಿ ಕೊಡುತ್ತಾರೆ. ಆದರೆ ಪಿ.ಡಬ್ಲ್ಯು.ಡಿ. ಕೆಲಸಗಳಲ್ಲಿ ಆಳುಗಳು ಕೆಲಸ ಮಾಡಿದರೆ ಅಲ್ಲಿ ಹೆಚ್ಚು ಕೂಲಿ ಕೊಡುತ್ತಿದ್ದಾರೆ. ಇದು ಸರಿಯಲ್ಲ ಎಲ್ಲಿ ಕೂಲಿ ಹೆಚ್ಚು ಸಿಗುತ್ತೋ ಆಳುಗಳು ಅಲ್ಲಿಗೇ ಹೆಚ್ಚು ಹೋಗುತ್ತಾರೆ, ಭೂಸಾರ ಸಂರಕ್ಷಣೆ ಕಾರ್ಯಕ್ಕೆ ಬರುವ ಆಳುಗಳು ಕಡಿಮೆ. ಇದಕ್ಕಾಗಿ ಸರಕಾರ ಪ್ರಮುಖವಾಗಿ ಮಾಡಬೇಕಾದ ಕೆಲಸ ಎಂದರೆ ಪಿ.ಡಬ್ಲ್ಯು.ಡಿ. ಕೆಲಸಗಳನ್ನು ಮಾಡುವ ಆಳುಗಳಿಗೆ ಯಾವ ರೀತಿಯಾಗಿ ಮೂರು ರೂಪಾಯಿಗಳಷ್ಟು ಕೂಲಿ ಕೊಡುತ್ತಾರೆ, ಭೂಸಾರ ಸಂರಕ್ಷಣೆ ಕೆಲಸ ಮಾಡುವ ಆಳುಗಳಿಗೂ ಇದೇ ದರದಲ್ಲಿ ಕೊಟ್ಟು ಸಹಾಯ ಮಾಡಬೇಕು. ಇಲಾಖೆಯವರು ಭೂಸಾರ ಸಂರಕ್ಷಣೆ ಕೆಲಸಗಳಿಗೆ ಬರುವ ಆಳುಗಳಿಗೆ ಕೇವಲ ಒಂದೂವರೆ ರೂಪಾಯಿಗಳು ಕೂಲಿ ಎಂದು ಕೊಡುತ್ತಿದ್ದಾರೆ. ಇದನ್ನು ಹೆಚ್ಚು ಮಾಡಬೇಕು. ಇಂತಹ ಅಗತ್ಯವಾದ ಕೆಲಸಕ್ಕೆ ಸ್ವಲ್ಪ ಹಣ ಹೆಚ್ಚು ಖರ್ಚು ಮಾಡಬೇಕಾದರೂ ಚಿಂತೆ ಇಲ್ಲ. ಇಂತಹ ಮುಖ್ಯವಾದ ಭೂಸಾರಸಂರಕ್ಷಣೆಯ ಕೆಲಸಗಳನ್ನು ನಮ್ಮ ರಾಜ್ಯದಲ್ಲಿ ಜಿಲ್ಲಾ ಮಟ್ಟದಲ್ಲಿ ಹಾಗೂ ಎಲ್ಲೆಲ್ಲಿ ಈ ಕೆಲಸಗಳು ಆಗಿಲ್ಲವೋ ಅಲ್ಲಿ ವಿಸ್ತರಣೆ ಮಾಡಿ ರೈತರಿಗೆ ಅನುಕೂಲ ಮಾಡಿಕೊಡಲು ಸಹಾಯ ಮಾಡಬೇಕು. ಭೂಮಿಯ ಮೇಲೆ ಬೀಳುವ ಪ್ರತಿಯೊಂದು ಹನಿ ಮಳೆ ನೀರನ್ನೂ ಉಪಯೋಗಿಸಲು ಇಲಾಖೆ ಅಧಿಕಾರಿಗಳು ಯತ್ನ ಮಾಡಬೇಕು. ಆದರೆ ಇಲ್ಲಿರತಕ್ಕ ಅಧಿಕಾರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಆದರೆ ಈ ಅಧಿಕಾರಿಗಳಲ್ಲಿ ಕೇವಲ ದಿನಕ್ಕೆ ನಾಲ್ಕು ಗಂಟೆಗಳ ಕಾಲ ಕೆಲಸ ಮಾಡಿದರೆ ಸಾಕು ಎನ್ನುವ ಅಭಿಪ್ರಾಯವಿದೆ. ಇದೇ ಸಾಕು ಎಂದು ಅವರು ಹೇಳುತ್ತಾರೆ. ರೈತರಿಗೆ ಒಂದು ವರ್ಷದಲ್ಲಿ ಪೂರ್ತಿ ಕಾಲ ಕೆಲಸಗಳು ಇದ್ದರೂ ಮಾಡಲು ಸಿದ್ಧರಾಗಿರುತ್ತಾರೆ. ಆದರೆ ಇದಕ್ಕೆ ಅಧಿಕಾರಿಗಳು ಸಹಾಯ ಮಾಡಬೇಕು. ಇದಕ್ಕಾಗಿ ಐದುವರ್ಷಗಳ ಒಂದು ಯೋಜನೆ ಮಾಡಿ ಇಡೀ ರಾಜ್ಯದಲ್ಲಿ ಒಂದೊಂದು ಎಕರೆಯಷ್ಟು ಭೂಮಿಯಲ್ಲೂ ಭೂಸಾರ ಸಂರಕ್ಷಣೆ ಕೆಲಸ ಮಾಡಿದರೆ ಹೆಚ್ಚು ಬೆಳೆಯಲು ಸಹಾಯವಾಗುತ್ತದೆ ಮತ್ತು ರೈತರ ಆರ್ಥಿಕ ಸ್ಥಿತಿಯೂ ಉತ್ತಮವಾಗುತ್ತದೆ. ಇವೆಲ್ಲ ಅಂಶಗಳನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳುತ್ತದೆ ಎಂದು ಆಶಿಸುತ್ತೇನೆ.

ವ್ಯವಸಾಯ ಇಲಾಖೆಯವರು ರೈತರಿಗಾಗಿ ಬೇಕಾದಷ್ಟು ಸಾಲ ಕೊಡುತ್ತಿದ್ದಾರೆ. ಸಹಕಾರ ಇಲಾಖೆಯವರು ಬೇಕಾದಷ್ಟು ಹಣ ಕೊಡುತ್ತಿದ್ದಾರೆ ಮತ್ತು ಎಲ್ಲ ಷೆಡ್ಯೂಲ್ಡ್ ಹಾಗೂ ನ್ಯಾಷನಲೈಸ್ಡ್ ಬ್ಯಾಂಕುಗಳು ಕೂಡ ಬೇಕಾದಷ್ಟು ಹಣ ಕೊಡುತ್ತಿವೆ ಎಂದು ಹೇಳುತ್ತಿದ್ದಾರೆ. ಆದರೆ ನಾನು ವೈಯಕ್ತಿಕವಾಗಿ ಹೇಳುವುದು ಬೇಸಾಯ ಮಾಡತಕ್ಕ ರೈತರಿಗೆ ಸರಕಾರ ಕೊಡುತ್ತಿರುವ ಹಣದಿಂದ ಸಾಕಾದಷ್ಟು ಸೌಕರ್ಯಗಳು ಸಿಗುತ್ತಿಲ್ಲ. ಇದರ ಬಗ್ಗೆ ನನ್ನಲ್ಲಿ ಅಂಕಿ ಅಂಶಗಳಿವೆ. ರಾಜ್ಯದಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ರೈತರಿಗೆ ಈ ಹಣದ ಸಹಾಯ ದೊರಕುತ್ತಿಲ್ಲ. ಇದಕ್ಕೆ ಕಾರಣಗಳೇನಿವೆ ಎನ್ನುವುದನ್ನು ವಿಚಾರ ಮಾಡಬೇಕು. ನೂರಕ್ಕೆ ನೂರರಷ್ಟು ರಾಜ್ಯದಲ್ಲಿ ಕೊಡುವ ಹಣ ರೈತರಿಗೆ ದೊರಕುತ್ತಿದೆ ಎಂದು ಹೇಳುತ್ತಾರೆ. ಇದರಲ್ಲಿ

ಎರಡರಿಂದ ಐದು ಎಕರೆ ಖುಷ್ಕಿ ಇರುವ ರೈತರಿಗೆ ಹಾಗೂ ಒಂದೆರಡು ಎಕರೆ ತರಿ ಭೂಮಿ ಇರುವವರಿಗೆ ಸಾಕಷ್ಟು ಹಣ ಒದಗಿಸಿದರೆ ಸಕಾಲದಲ್ಲಿ ಹೆಚ್ಚು ಉತ್ಪತ್ತಿ ಪಡೆಯಲು ಅನುಕೂಲವಾಗುತ್ತದೆ. ಇದರ ಬಗ್ಗೆ ಬೇಕಾದಷ್ಟು ಕಾರ್ಯಕ್ರಮಗಳು ಇದ್ದರೂ ಅವು ಕಾರ್ಯಗತವಾಗುತ್ತಿಲ್ಲ. ಇದನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನ ತೀವ್ರವಾಗಿ ಆಗಬೇಕು, ಈ ಪ್ರಯತ್ನ ಆಗದೆ ಇರುವುದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ರೈತ ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಲೆ ಕೂಡ ಸಿಗುತ್ತಿಲ್ಲ. ಈ ಬಗ್ಗೆ ಮಾಡಬೇಕಾದ ಕೆಲಸಗಳೇನು ಎನ್ನುವುದು ಇಲಾಖೆಯವರಿಗೆ ಅರ್ಥವಾಗಿದೆ. ಇದನ್ನು ಯಾವ ರೀತಿ ಪರಿಹಾರ ಮಾಡಬೇಕು ಎನ್ನುವುದನ್ನು ಆಲೋಚನೆ ಮಾಡುವುದಕ್ಕೆ ನಮ್ಮ ಸರಕಾರಕ್ಕೆ ಈಗ ಸ್ವಲ್ಪ ಕಾಲ ಕಡಿಮೆಯಾಗಿದೆ. ಮತ್ತು ಇವೆಲ್ಲಾ ಆಗುವ ಕಾಲವೇನೋ ಬಂದಿದೆ. ಚುನಾವಣೆ ಕಾಲದಲ್ಲಿ ಜನರ ಮುಂದೆ ಹೋದಾಗ ನಾವು ಕೊಟ್ಟಿರುವ ಭರವಸೆಗಳೇನು ಎನ್ನುವುದು ಗೊತ್ತು. ಇದನ್ನು ಎಷ್ಟುಮಟ್ಟಿಗೆ ಕಾರ್ಯಗತಮಾಡಬೇಕು ಎನ್ನುವುದಕ್ಕೆ ದಾರಿಗಳಿವೆ. ಈಗ ಎರಡು ಎಕರೆ ಭೂಮಿಯಲ್ಲಿ ನಾಲ್ಕು ಪಲ್ಲ ಬೆಳೆಯುತ್ತಿರುವಾಗ ಮುಂದೆ ಎಂಟು ಪಲ್ಲ ಬೆಳೆ ಬೆಳೆಯುವ ಶಕ್ತಿ ನಮ್ಮ ರೈತರಿಗೆ ಬರುತ್ತದೆ. ಮತ್ತು ಈ ರೈತರಿಗೆ ಬೇಕಾಗುವ ಬಾವಿ, ಪಂಪು ಸೆಟ್ಟುಗಳು ಮತ್ತು ಅದಕ್ಕೆ ಬೇಕಾದ ಹಣ ಗೊಬ್ಬರ ಹಾಗೂ ಇನ್ನಿತರ ಔಷಧಿಗಳ ಸರಬರಾಜು ಇವೆಲ್ಲವನ್ನೂ ಮಾಡಲು ನಮ್ಮ ಸರಕಾರ ಸಿದ್ಧವಾಗಿದೆ. ಅಷ್ಟೇ ಅಲ್ಲದೆ ನಮ್ಮ ಜನರಿಗೂ ಕೂಡ ಇವೆಲ್ಲ ಈಗ ಅರ್ಥವಾಗಿದೆ. ಇದರಲ್ಲಿ ಈಗ ಯಾವ ಗೊಂದಲಗಳೂ ಇಲ್ಲ. ನಿಜವಾಗಿ ಇವೆಲ್ಲ ಕಾರ್ಯಕ್ರಮಗಳು ಕಾರ್ಯಗತವಾದರೆ ರೈತರಿಗೆ ಇನ್ನುಮುಂದೆ ಬೇಕಾಗುವ ಸೌಕರ್ಯಗಳು ಖಂಡಿತ ದೊರೆಯುತ್ತವೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

ಆದರೆ ಇವೆಲ್ಲವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಅದಕ್ಕೆ ಮಾರ್ಗವಿದೆಯೆಂದು ನನಗನ್ನಿಸುತ್ತದೆ. ಇದರಿಂದ ರೈತರಿಗೆ ಪ್ರಯೋಜನವಾಗುತ್ತದೆ ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ನೀರಾವರಿ ಅನುಕೂಲಗಳು ಕಡಿಮೆ ಇವೆಯೋ ಅಲ್ಲಿ ಬೇರೆ ವಿಧಾನದಿಂದ ವ್ಯವಸಾಯಗಾರರಿಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡುವುದಕ್ಕೆ ಅವಕಾಶವಿವೆ. ಉದಾಹರಣೆಗೆ ಬೆಂಗಳೂರು, ತುಮಕೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ 65ಲಕ್ಷ ಜನಸಂಖ್ಯೆ ಇದೆ. ಈ ಜಿಲ್ಲೆಗಳಲ್ಲಿ ಶೇಕಡ ಏಳೂವರೆಯಷ್ಟು ಮಾತ್ರ ನೀರಾವರಿಯಾಗುತ್ತದೆ. ಮಳೆ ವರ್ಷಕ್ಕೆ 25 ಇಂಚಿಗಿಂತಲೂ ಕಡಿಮೆ ಯಾಗುತ್ತದೆ. ಈ ಮೂರು ಜಿಲ್ಲೆಗಳಲ್ಲಿರುವ ಜನಸಂಖ್ಯೆಯು ನಮ್ಮ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಕಾಲು ಭಾಗ ಇದೆ. ಈ ಜಿಲ್ಲೆಗಳಲ್ಲಿ ನಾವು ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದೇ ಆದರೆ ರೈತರಿಗೆ ಮಹದುಪಕಾರ ಮಾಡಿದಂತಾಗುತ್ತದೆಂದು ನಾವು ಅರ್ಥಮಾಡಿಕೊಂಡಿದ್ದೇವೆ. ಮಂತ್ರಿಗಳಿಗೂ ಇದು ಅರ್ಥವಾಗಿದೆ. ಆದರೂ ಈ ಹೈನುಗಾರಿಕೆಗೆ ಏತಕ್ಕೆ ಬೆಂಬಲ ಕೊಡಲಿಲ್ಲ ಎಂಬುದನ್ನು ಆಲೋಚನೆ ಮಾಡಿದರೆ, ಈ ಬಗ್ಗೆ ಮಂತ್ರಿಗಳು ಮನಸ್ಸು ಮಾಡಲಿಲ್ಲವೋ ಅಥವಾ ಈ ಬಾಬಿಗೆ ಇಟ್ಟ ಹಣ ಖರ್ಚು ಆಗದೆ ದುರುಪಯೋಗವಾಯಿತೋ ಎಂಬುದು ನಮ್ಮ ಮನಸ್ಸಿಗೆ ಹೊಳೆಯುತ್ತಿಲ್ಲ. ಬೆಂಗಳೂರು ನಗರದಲ್ಲಿ 15 ಲಕ್ಷ ಜನಸಂಖ್ಯೆ ಇದೆ. ಇಷ್ಟು ಜನಸಂಖ್ಯೆಗೆ ಎರಡು ಲಕ್ಷ ಲೀಟರ್ ಹಾಲನ್ನು ಖರ್ಚು ಮಾಡುವ ವ್ಯವಸ್ಥೆ ಮಾಡಬೇಕೆಂದು ಕಳೆದ 8 ವರ್ಷಗಳಿಂದ ಪ್ರಯತ್ನಪಟ್ಟರೂ ಸಹ 45 ಸಾವಿರ ಲೀಟರ್ ಮೇಲೆ ಖರ್ಚು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಇದಕ್ಕೆ ಒಂದನೆಯ ಕಾರಣವೆಂದರೆ ಮನಸ್ಸು ಇಲ್ಲದಿರುವುದು, ಮತ್ತೊಂದು ಕಾರಣವೆಂದರೆ, ಮಾಡಿದ ಕಾರ್ಯವನ್ನು ಚೆನ್ನಾಗಿ ಯಶಸ್ವಿಯಾಗಿ ದಕ್ಷತೆಯಿಂದ ಮಾಡದೇ ಇರುವುದು. ಮನಸ್ಸು ಮಾಡಿದ್ದೇ ಆದರೆ ಈ ಕೆಲಸವನ್ನು ನಾವು ಸುಲಭವಾಗಿ ಸಾಧಿಸಬಹುದು. ನಾನು ಹೇಳಿದ ಮೂರು ಜಿಲ್ಲೆಗಳಲ್ಲಿ ಲಕ್ಷಾಂತರ ಜನ ಸಣ್ಣ ಹಿಡುವಳಿದಾರರಿದ್ದಾರೆ. ಪ್ರತಿಯೊಬ್ಬರಿಗೂ ಒಂದೊಂದು ಹಸು ಕೊಡಿಸಿದರೆ, ದಿನಕ್ಕೆ 5 ರಿಂದ 10 ಲೀಟರ್ ಹಾಲು ಉತ್ಪತ್ತಿಯಾಗುತ್ತದೆ. ಈ ಹಾಲನ್ನು ಬೆಂಗಳೂರು ನಗರಕ್ಕೆ ತರುವ ಶಕ್ತಿ ರೈತರಿಗೆ ಇದೆ. ಆದರೆ ಅದಕ್ಕೆ ಅವಕಾಶ ಮಾಡಿಕೊಡಬೇಕು. ಹಸು ಕೊಂಡುಕೊಳ್ಳುವುದಕ್ಕೆ, ಉತ್ಪತ್ತಿ ಮಾಡಿದ ಹಾಲನ್ನು ಶೇಖರಿಸುವುದಕ್ಕೆ. ಶೇಖರಿಸಿದ ಹಾಲನ್ನು ಬೆಂಗಳೂರು ನಗರಕ್ಕೆ ತಂದು ಮಾರಾಟ ಮಾಡುವುದಕ್ಕೆ ಒಂದು ವ್ಯವಸ್ಥೆ ಮಾಡಿದರೆ ರೈತರಿಗೆ ಎಲ್ಲ ಅನುಕೂಲಗಳನ್ನು ದೊರಕಿಸಿಕೊಟ್ಟಂತಾಗುತ್ತದೆ. ಇದು ಸುಲಭವಾದ ಕೆಲಸ. ನಮ್ಮ ಶಕ್ತಿಗೆ ಒಳಪಟ್ಟಿರತಕ್ಕಂಥದ್ದು. ಇದಕ್ಕೆ ಹಣವನ್ನು ಬಡ್ಜೆಟ್‌ನಲ್ಲಿ ಮಂಜೂರು ಮಾಡಬೇಕಾಗಿಲ್ಲ. ರೈತರಿಗೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಮತ್ತು ಕೋಅಪರೇಟಿವ್ ಸೊಸೈಟಿಗಳಿಂದ ಹಣವನ್ನು ಸಾಲವಾಗಿ ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬಹುದು. ಬೆಂಗಳೂರು ಡೈರಿಗೆ ಪ್ರತಿ ದಿನ

(ಶ್ರೀ ಜಿ. ರಾಮೇಗೌಡ)

ಒಂದು ಲಕ್ಷದಿಂದ ಎರಡು ಲಕ್ಷ ಲೀಟರ್‌ವರೆಗೆ ಹಾಲನ್ನು ಸರಬರಾಜು ಮಾಡಿ ಬೆಂಗಳೂರಿನ ಎಲ್ಲ ಜನರೂ ಹಾಲನ್ನು ಕುಡಿಯುವಂತೆ ವ್ಯವಸ್ಥೆಮಾಡಿದರೆ ರೈತರಿಗೆ ದೊಡ್ಡ ಉಪಕಾರ ಮಾಡಿದಂತಾಗುತ್ತದೆ. ಈ ರೀತಿ ಮಾಡಿದರೆ ಈ ಮೂರು ಜಿಲ್ಲೆಯ ಜನರಿಗೆ ತಮ್ಮ ವ್ಯವಸಾಯವನ್ನು ಅಭಿವೃದ್ಧಿ ಮಾಡಿಕೊಂಡು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಬೆಂಗಳೂರು ಪಟ್ಟಣದಲ್ಲಿ ಒಂದು ಲಕ್ಷ ಹಸುಗಳಿವೆ. 1960ನೇ ಇಸವಿಯಲ್ಲಿ ಸರ್ಕಾರದವರು ಒಂದು ಕಾನೂನನ್ನು ತಂದು, ಬೆಂಗಳೂರು ಪಟ್ಟಣದಲ್ಲಿ ರತಕ್ಕ ಎಲ್ಲ ಹಸುಗಳನ್ನು ನಗರದ ಹೊರಗಡೆಗೆ ಸಾಗಿಸಿ, ಅಲ್ಲಿ ಒಂದು ಕಾಲೋನಿಯನ್ನು ಮಾಡಿ ಅಲ್ಲಿ ಹಾಲಿನ ಉತ್ಪತ್ತಿ ಮಾಡಿ, ಅಲ್ಲಿಂದ ಬೆಂಗಳೂರಿನ ನಾಗರೀಕರಿಗೆ ಒಳ್ಳೆಯ ಹಾಲನ್ನು ಒದಗಿಸಬೇಕೆಂದು ಪ್ರಯತ್ನ ಮಾಡಿದಾಗ, ಶ್ರೀ ಶಾಮಣ್ಣನವರು ಆ ರೀತಿ ಮಾಡುವುದು ಬೇಡವೆಂದು ಒತ್ತಾಯ ಮಾಡಿದ್ದರಿಂದ ಅದು ಹಾಗೆಯೇ ನಿಂತಿತು. ಈಗ ಪಟ್ಟಣದಲ್ಲಿಯೇ ಹಸುಗಳನ್ನು ಸಾಕುತ್ತಿರುವುದರಿಂದ ಬೆಂಗಳೂರಿನ ಅನೇಕ ಭಾಗಗಳು ಕೊಳಚೆ ಪ್ರದೇಶಗಳಾಗಿ ಬಿಟ್ಟಿವೆ. ಇದರಿಂದ ಜನರ ಆರೋಗ್ಯವೂ ಕೆಡುವುದಕ್ಕೆ ಅವಕಾಶವಾಗಿದೆಯಲ್ಲದೆ ಒಳ್ಳೆಯ ಹಾಲು ಸಿಗುವುದು ಕಷ್ಟವಾಗಿದೆಯೆಂದು ಹೇಳಬಹುದು. ಪಕ್ಕದ ಮನೆಯಲ್ಲಿ ಶೇಕಡ 50 ಭಾಗದಷ್ಟು ನೀರನ್ನು ಬೆರೆಸಿಕೊಟ್ಟರೂ ಸಹ ಅದೇ ಹಾಲನ್ನು ಅಕ್ಕಪಕ್ಕದವರು ಕೊಳ್ಳುತ್ತಾರೆಯೇ ಹೊರತು ನೀರು ಇಲ್ಲದ ಹಾಲನ್ನು ಸ್ವಲ್ಪದೂರ ಹೋಗಿ ಕೊಂಡುಕೊಳ್ಳುವುದಿಲ್ಲ. ಸರ್ಕಾರದವರು ಅದರೂ ಕೂಡ ಉತ್ತಮವಾದ ಹಾಲನ್ನು, ಪಾಶ್ಚರೈಸ್ ಆದ ಹಾಲನ್ನು, ಗರ್ಭಿಣಿಯರಿಗೆ ಕೊಡುವ ಹಾಲನ್ನು, ಮಕ್ಕಳಿಗೆ ಕೊಡುವ ಹಾಲನ್ನು ತಯಾರು ಮಾಡಿ ಸುಲಭವಾದ ಬೆಲೆಗೆ ಮಾರುವ ವ್ಯವಸ್ಥೆಯನ್ನು ಇದುವರೆಗೆ ಮಾಡದಿರುವುದು ನಮ್ಮ ದೇಶದ ದುರಾದೃಷ್ಟವೆಂದು ಹೇಳಬಹುದು. ಈ ಬಗ್ಗೆ ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಶ್ರೀ ಶಾಮಣ್ಣನವರು, ಶ್ರೀ ನಾಗಣ್ಣನವರು ತಮ್ಮ ಒಪ್ಪಿಗೆ ಕೊಡುತ್ತಾರೆ. ಮಾನ್ಯ ನಾಗಣ್ಣನವರು ಸಹ ನನ್ನ ಹತ್ತಿರ ಮಾತನಾಡುತ್ತಾ ಬೆಂಗಳೂರಿನ 15 ಲಕ್ಷ ಜನರ ಆರೋಗ್ಯವನ್ನು ಕಾಪಾಡುವುದಕ್ಕೆ ಏನು ಬೇಕಾದರೂ ಸಹಾಯ ಕೊಡುತ್ತೇವೆಂದು ಹೇಳಿದ್ದಾರೆ. ಆದಕಾರಣ ಬೆಂಗಳೂರು ಪಟ್ಟಣದೊಳಗೆ ಇರುವ ಒಂದು ಲಕ್ಷ ಹಸುಗಳನ್ನು ಹೊರಗಡೆಗೆ ಸಾಗಿಸಿ, ಊರ ಹೊರಗೆ ಒಂದು ದೊಡ್ಡ ಕಾಲೋನಿಯನ್ನು ನಿರ್ಮಿಸಬೇಕು. ಆ ಕಾಲೋನಿ ಮೂಲಕ ಬೆಂಗಳೂರು ನಾಗರೀಕರಿಗೆ ಉತ್ತಮವಾದ ಹಾಲನ್ನು, ಪಾಶ್ಚರೈಸ್ ಆದ ಹಾಲನ್ನು ಒದಗಿಸುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಈಗ ಬೆಂಗಳೂರಿನಲ್ಲಿ ಹಾಲಿನ ವ್ಯಾಪಾರವಾಗಬೇಕಾದರೆ ಬಹಳ ಕಷ್ಟವಿದೆ. ಏಕೆಂದರೆ ಪಟ್ಟಣದಲ್ಲಿ ಪೈಪೋಟಿ ಇದೆ. ಈ ಪೈಪೋಟಿ ತಪ್ಪಬೇಕಾದರೆ ನಾನು ಹೇಳಿದಂತಹ ಕಾರ್ಯವನ್ನು ಮಾಡಬೇಕು. ಬೆಂಗಳೂರು ನಗರದ ಎಲ್ಲ 15 ಲಕ್ಷ ಜನರಿಗೂ ಪಾಶ್ಚರೈಸ್ ಆದ ಹಾಲನ್ನು ಪೂರೈಸುವುದಾದರೆ, ಈಗ ಏನು ಬೆಂಗಳೂರು ನಗರದಲ್ಲಿ ನೀರು ಬೆರಸಿ, ಮೈದಾಹಿಟ್ಟು ಬೆರೆಸಿ, ಸೋಡ ಬೆರೆಸಿ, ಮತ್ತು ಸಕ್ಕರೆ ಬೆರೆಸಿ ಹಾಲನ್ನು ಮಾರಾಟ ಮಾಡುತ್ತಿದ್ದಾರೆ ಅದು ನಿಲ್ಲುತ್ತದೆ. ಎಲ್ಲ ರೈತರಿಗೂ ಹಸುಗಳನ್ನು ಒದಗಿಸುವುದಕ್ಕೆ ಸರ್ಕಾರಕ್ಕೆ ಅನುಕೂಲವಿದೆ. ಬೇಕಾದರೆ ನಾನು ಅಂಕಿಅಂಶಗಳನ್ನು ಕೊಟ್ಟು ಹೇಳುತ್ತೇನೆ. ಇದನ್ನು ಸರ್ಕಾರದವರು ಗಮನಿಸಿ ಹೈನುಗಾರಿಕೆಗೆ ಹೆಚ್ಚಿನ ಅನುಕೂಲಗಳನ್ನು ಬೆಂಗಳೂರು, ಕೋಲಾರ, ತುಮಕೂರು ಜಿಲ್ಲೆಗಳ ನಿವಾಸಿಗಳಿಗೆ ಒದಗಿಸಿಕೊಡಬೇಕು. ಮಳೆಗಾಲದಲ್ಲಿ ಸ್ವಾಭಾವಿಕವಾಗಿ ಹಸಿರು ಮೇವು ಜಾಸ್ತಿ ಇರುತ್ತದೆ. ಇದನ್ನು ತಿಂದ ಹಸುಗಳು ಜಾಸ್ತಿ ಹಾಲನ್ನು ಕೊಡುತ್ತವೆ. ಈ ಹೆಚ್ಚಿನ ಹಾಲನ್ನು ಬೆಂಗಳೂರು ಡೈರಿಯವರು ತೆಗೆದುಕೊಳ್ಳಲು ನಿರಾಕರಿಸುವುದರಿಂದ ರೈತರಿಗೆ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಬೇಸಿಗೆಯಲ್ಲಿ ಮಾತ್ರ ಎಷ್ಟು ಬೇಕಾದರೂ ಹಾಲನ್ನು ಕೊಂಡುಕೊಳ್ಳುತ್ತೇವೆಂದು ಹೇಳುವ ಡೈರಿಯವರು ಮಳೆಗಾಲಬಂದಾಗ ಮಾತ್ರ ನಮಗೆ 45 ಸಾವಿರ ಲೀಟರ್ ಹಾಲು ಸಾಕು. ಉಳಿದಿದ್ದು ಬೇಡ ಎಂದು ಹೇಳುತ್ತಾರೆ. ಇದರಿಂದ ಸುಮಾರು 45 ಸಾವಿರಲೀಟರ್‌ನಷ್ಟು ಹಾಲು ರೈತರ ಬಳಿಯಲ್ಲಿಯೇ ಮಳೆಗಾಲದಲ್ಲಿ ಉಳಿದು ಅವರಿಗೆ ವಿಪರೀತ ನಷ್ಟವಾಗುತ್ತದೆ. ಈ ಒಂದು ನಷ್ಟವನ್ನು ನಿವಾರಣೆ ಮಾಡತಕ್ಕ ಸಲಹೆ ಒಂದು ಇದೆ. ಅದೇನಂದರೆ ಹಾಲಿನ ಪುಡಿಯನ್ನು ತಯಾರು ಮಾಡತಕ್ಕ ಯಂತ್ರವನ್ನು ಸ್ಥಾಪಿಸಬೇಕು. ಇದರ ಬೆಲೆ 3-4 ಲಕ್ಷ ರೂಪಾಯಿಗಳಾಗಬಹುದು. ಈ ಯಂತ್ರವನ್ನು ಸ್ಥಾಪನೆ ಮಾಡಿದರೆ ಉಪಯೋಗವಾಗದ ಹಾಲನ್ನು ಪುಡಿಯನ್ನಾಗಿ ಮಾರ್ಪಡಿಸಿ, ಇಟ್ಟುಕೊಂಡು ಬೇಸಿಗೆ ಕಾಲದಲ್ಲಿ ಅದರಿಂದ ಹಾಲನ್ನು ತಯಾರು ಮಾಡಿಕೊಳ್ಳಬಹುದು. ನಮ್ಮ ರೈತರೇ ದೇಶದ ಬೆನ್ನೆಲಬು ಎಂದು ಎಲ್ಲರೂ ಹೇಳುತ್ತಾರೆ. ಆದರೆ ಈ ಕಾರ್ಯವನ್ನು ಸರ್ಕಾರದವರು ಇನ್ನೂ ಮಾಡಿಲ್ಲ. ಇಂದಿರಾಗಾಂಧಿಯವರು ಸಹ ರೈತರ

ಅಭಿವೃದ್ಧಿಯಾಗಬೇಕೆಂದು ಬಾಯಿ ಮಾತಿನಲ್ಲಿ ಹೇಳುತ್ತಾರೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವ ಶಕ್ತಿಯನ್ನು ಅವರಿಗೆ ಕೊಟ್ಟಿಲ್ಲ. ಈ ಮೂರು ಜಿಲ್ಲೆಗಳಲ್ಲಿ ತಳಿಗಳ ಅಭಿವೃದ್ಧಿ ಮಾಡಿ ಆ ಮೂಲಕ ಉತ್ತಮ ಹಾಲನ್ನು ಉತ್ಪತ್ತಿ ಮಾಡಿ ಒಳ್ಳೆಯ ಬೆಲೆಗೆ ಬೆಂಗಳೂರಿನ ನಾಗರೀಕರಿಗೆ ಒದಗಿಸಿದ್ದೇ ಆದರೆ ಈ ಮೂರು ಜಿಲ್ಲೆಯ ರೈತರಿಗೆ ಮಹದುಪಕಾರ ಮಾಡಿದಂತಾಗುತ್ತದೆ. ಆದ್ದರಿಂದ ತಳಿ ಅಭಿವೃದ್ಧಿ ಮೊದಲು ಆಗಬೇಕು. ಈ ಕೆಲಸ ವೆಟರ್ನರಿ ಇಲಾಖೆಗೆ ಸೇರಿದೆ. ಈ ಇಲಾಖೆಗೆ ಸೇರಿದಂಥ ಮಂತ್ರಿಗಳು ವ್ಯವಸಾಯ ಪದವೀಧರರಾಗಿದ್ದಾರೆ. ಪ್ರಪಂಚವನ್ನೆಲ್ಲಾ ನೋಡಿಕೊಂಡು ಬಂದಿದ್ದಾರೆ. ಡೆನ್ಮಾರ್ಕ್ ಮತ್ತು ಅಮೇರಿಕಾ ದೇಶಗಳಿಗೆ ಹೋಗಿ, ಅಲ್ಲಿ ಎಷ್ಟರಮಟ್ಟಿಗೆ ಹಾಲು ಕರೆಯುತ್ತಾರೆ, ಹಾಲು ಕುಡಿದ ಜನ ತಮ್ಮ ಆರೋಗ್ಯವನ್ನು ಎಷ್ಟರ ಮಟ್ಟಿಗೆ ಇಟ್ಟುಕೊಂಡಿದ್ದಾರೆ, ಹಾಲು ಕುಡಿದವರ ಬುದ್ಧಿ ಎಷ್ಟು ಸೂಕ್ಷ್ಮವಾಗಿದೆ, ಪ್ರಪಂಚದಲ್ಲೇ ಅವರು ಎಷ್ಟು ಬಲಶಾಲಿಗಳಾಗಿದ್ದಾರೆ ಎಂಬುದನ್ನೆಲ್ಲಾ ತಿಳಿದುಕೊಂಡು ಬಂದಿದ್ದಾರೆ. ಇಂತಹವರು ಮಂತ್ರಿಗಳಾಗಿರುವುದು ನಮ್ಮ ರಾಜ್ಯದ ಅದೃಷ್ಟವೆಂದು ಹೇಳುತ್ತೇನೆ. ಅವರು ಈ ಯೋಜನೆಗಳನ್ನು ಅರ್ಥ ಮಾಡಿಕೊಂಡಿದ್ದಾರೆ. ಆದರೆ ಅದನ್ನು ಕಾರ್ಯ ರೂಪದಲ್ಲಿ ತರುವುದಕ್ಕೆ ಏನು ಅಡ್ಡಿ ಇದೆ ಎಂದು ನನಗೆ ಗೊತ್ತಾಗುವುದಿಲ್ಲ. ನಾವು ಕಾದು ನೋಡಬೇಕಾಗಿದೆ. ಅವರು ಸಾಧನೆ ಮಾಡಿ ತೋರಿಸುತ್ತಾರೆಂದು ನನಗನ್ನಿಸುತ್ತದೆ. ಎಲ್ಲಿಯವರೆಗೆ ತಳಿಯ ಅಭಿವೃದ್ಧಿಯಾಗುವುದಿಲ್ಲವೋ ಅಲ್ಲಿಯವರೆಗೆ. ಹೈನುಗಾರಿಕೆ ಮುಂದುವರಿಯುವುದಿಲ್ಲವೆಂದು ನನ್ನ ಅಭಿಪ್ರಾಯ. ಉತ್ತಮವಾದ ಹಾಲು ಜನರಿಗೆ ಸಿಗಬೇಕಾದರೆ ತಳಿಯ ಅಭಿವೃದ್ಧಿ ಹೆಚ್ಚು ಹೆಚ್ಚು ಆಗಬೇಕು. ಆಗ ಬೆಂಗಳೂರು ಡೈರಿಯೂ ಸಹ ಪ್ರಗತಿಗೆ ಬರುತ್ತದೆ. ಇದನ್ನು ಸರ್ಕಾರ ಗಮನಿಸಬೇಕು. ಈಗ ಉತ್ತಮ ತಳಿಗಳು ಸಿಗದಿರುವುದರಿಂದ, ಸಣ್ಣ ಹಿಡುವಳಿದಾರರು ಉತ್ತಮ ತಳಿಗಳನ್ನು ತರಲು ರಾಜ್ಯದ ಹೊರಗೆ ಹೋಗಬೇಕಾಗಿದೆ. ನೀಲಗಿರಿ ಮುಂತಾದ ಕಡೆ ಹೋಗಿ ಅಲ್ಲಿ ತಳಿ ಸಿಗುವವರೆಗೂ ಸಹ ಕಾಯ್ದುಕೊಂಡು ಇರಬೇಕು. ಕೆಲವು ಸಲ ದಳ್ಳಾಳಿಗಳ ಕೈಗೆ ಸಿಕ್ಕಿ ಮೋಸ ಹೋಗುವುದು ಉಂಟು. ಇಂತಹ ಹಿಡುವಳಿದಾರರು ತಳಿಯನ್ನು ಸಾಕುವ ಉತ್ಸಾಹವನ್ನು ಬಿಟ್ಟುಬಿಟ್ಟಿದ್ದಾರೆ. ಆದ್ದರಿಂದ ರಾಜ್ಯದಲ್ಲಿಯೇ ಉತ್ತಮವಾದ ತಳಿಗಳನ್ನು ಅಭಿವೃದ್ಧಿಪಡಿಸಿ ರೈತರಿಗೆ ಮಾರಾಟ ಮಾಡುವ ವ್ಯವಸ್ಥೆಯಾಗಬೇಕು. ವ್ಯವಸಾಯ ಅಭಿವೃದ್ಧಿ ಮಾಡುತ್ತೇವೆ, ಹೈನುಗಾರಿಕೆ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿರುವ ನಾವು ಈ ದಿಶೆಯಲ್ಲಿ ತೀವ್ರವಾಗಿ ಪುನರ್ ಪರಿಶೀಲನೆ ಮಾಡಬೇಕಾದ ಕಾಲ ಬಂದಿದೆ.

ಈಗಲಾದರೂ ಒಂದು ಕರುಗಳ ಕೇಂದ್ರವನ್ನು ಏರ್ಪಾಡು ಮಾಡಿ ಉತ್ತಮ ತಳಿಯ ಸಾವಿರಾರು ಕರುಗಳನ್ನು ಆ ಕೇಂದ್ರದಲ್ಲಿ ಇಟ್ಟುಕೊಂಡು ಅವುಗಳಿಗೆ ತಿಂಡಿಯನ್ನು ಹಾಕಿ ಬೆಳೆಸಿ ಗರ್ಭ ಆದನಂತರ ಅವುಗಳನ್ನು ರೈತರಿಗೆ ಸುಲಭ ದರದಲ್ಲಿ ಮಾರಾಟ ಮಾಡಬೇಕಾಗಿದೆ. ಆದ್ದರಿಂದ ಅಂಥಾ ಒಂದು ಕರುಗಳ ಕೇಂದ್ರವನ್ನು ಸರ್ಕಾರದವರು ಸ್ಥಾಪನೆ ಮಾಡಬೇಕು. ಈ ಬಗ್ಗೆ ಅನೇಕ ಸಲಹೆಗಳನ್ನು ಅನೇಕ ಸಂಘಸಂಸ್ಥೆಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ನಾನು ಸಹ ವೈಯಕ್ತಿಕವಾಗಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೂ ಕೂಡ ಆ ಕಾರ್ಯ ಪರಿಣಾಮಕಾರಿಯಾಗಿ ಆಗದೇ ಇರುವುದು ನಮ್ಮ ರಾಜ್ಯದ ದುರಾದೃಷ್ಟ ಎಂದು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ಈಗಲಾದರೂ ಕೂಡ ಹೈನು ಪ್ರಗತಿಯಾಗುವ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟರೆ ಒಂದು ಮಳೆಯಾಗದೆ ಬೆಳೆ ಹೋದರೂ ಕೂಡ ರೈತ ಈ ಒಂದು ಹೈನುಗಾರಿಕೆಯಿಂದ ತನ್ನ ಸಂಸಾರವನ್ನು ಸುಧಾರಿಸಿಕೊಳ್ಳಬಹುದು. ಆದ್ದರಿಂದ ಇದನ್ನು ಸರ್ಕಾರದವರು ಗಮನಿಸಬೇಕು, ಮತ್ತು ಹೈನುಗಾರಿಕೆಗೆ ಅನುಕೂಲತೆಗಳನ್ನು ಒದಗಿಸಿಕೊಡಬೇಕೆಂದು ನಾನು ಸರ್ಕಾರದವರನ್ನು ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ವ್ಯವಸಾಯದ ವಿಚಾರದಲ್ಲಿ ಹೇಳುವುದಾದರೆ ವ್ಯವಸಾಯದಲ್ಲಿ ಹಲವಾರು ಬಾಬುಗಳ ಮೇಲೆ ವ್ಯವಸಾಯ ನಡೆಯುತ್ತದೆ. ಈಗ ಉದಾಹರಣೆಗೆ ಹೇಳುವುದಾದರೆ ಮೈಸೂರು ಸೆಂಟ್ರಲ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ಕಳೆದ ಕೆಲವಾರು ವರ್ಷಗಳಿಂದ ಉತ್ತಮವಾದ ಕೆಲಸವನ್ನು ಮಾಡುತ್ತಿದೆ. ಅವರು ಸಾವಿರಾರು ಬಾವಿಗಳನ್ನು ತೆಗೆಯುವುದಕ್ಕೆ, ಬಾವಿಗಳಿಗೆ ಪಂಪುಸೆಟ್ಟುಗಳನ್ನು ಹಾಕಿಸುವುದಕ್ಕೆ ಹಣ ಸಹಾಯ ಮಾಡಿದ್ದಾರೆ. ತೆಂಗು ಬೆಳೆಯುವುದಕ್ಕೆ ದ್ರಾಕ್ಷಿ ಬೆಳೆಯುವುದಕ್ಕೆ ಗೋಡಂಬಿಯನ್ನು ಬೆಳೆಯುವುದಕ್ಕೆ ಹಣ ಸಹಾಯವನ್ನು ಮಾಡಿದ್ದಾರೆ. ಭೂಮಿಯನ್ನು ಮಟ್ಟಮಾಡುವುದಕ್ಕೆ ಹಣವನ್ನು ಕೊಟ್ಟಿದ್ದಾರೆ. ಬಾವಿಗಳನ್ನು ತೆಗೆಯಲು ಹಣವನ್ನು ಕೊಟ್ಟಿದ್ದಾರೆ. ಆದರೆ ಬಾವಿಗಳನ್ನು ತೆಗೆಯುವುದಕ್ಕೆ ಹಣಕೊಟ್ಟಿರುವುದು ಎಷ್ಟರಮಟ್ಟಿಗೆ ಫಲಕಾರಿಯಾಗಿದೆ ಎಂಬುವನ್ನು ಸ್ಥೂಲವಾಗಿ ಪರಿಶೀಲನೆ ಮಾಡಿ ನೋಡುವುದಾದರೆ. ಸರ್ಕಾರದವರು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ 100ಕ್ಕೆ 60 ಬಾವಿಗಳು ಪೂರ್ಣವಾಗಿವೆ. 100ಕ್ಕೆ 40 ರಷ್ಟು

(ಶ್ರೀ ಜಿ. ರಾಮೇಗೌಡ)

ಬಾವಿಗಳು ಪೂರ್ಣವಾಗಿಲ್ಲ. ರೈತ ಸಾಲವನ್ನೇನೋ ತೆಗೆದುಕೊಂಡ, ಬಾವಿ ಪೂರ್ತಿಯಾಗಲಿಲ್ಲ. ಆದರೆ ಅವನು ಸಾಲ ತೆಗೆದುಕೊಂಡ ಹಣವನ್ನು ವಾಪಸ್ಸು ಮಾಡದೇ ಹೋದರೆ ಅವನ ಆಸ್ತಿಯನ್ನು ಜಪ್ತಿ ಮಾಡುತ್ತಾರೆ. ಇಂಥಾ ಒಂದು ತೊಂದರೆಗೆ ರೈತ ಒಳಗಾಗುತ್ತಾನೆ. ಆದ್ದರಿಂದ ಪೂರ್ಣವಾಗದೇ ಉಳಿದಿರತಕ್ಕ 40 ಪರ್ಸೆಂಟ್ ಬಾವಿಗಳನ್ನು ಪೂರ್ಣ ಮಾಡುವುದಕ್ಕಾಗಿ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ರೈತ ಎಲ್ಲಿ ಬಾವಿಯನ್ನು ತೆಗೆದು ನೀರು ಬಂದಿಲ್ಲ ಅಂಥಾ ಕಡೆ ಬೋರ್ ಹಾಕಿಸುವುದಕ್ಕೆ ಪ್ರಯತ್ನ ಮಾಡಬೇಕು. ಮೊದಲು ಬಾವಿಯನ್ನು ತೆಗೆಯುವುದಕ್ಕೆ ಹಣವನ್ನು ಕೊಡುವಾಗ ಯಾವ ಜಮೀನನ್ನು ಆಧಾರ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿದ್ದರೋ ಅದೇ ವ್ಯವಸ್ಥೆಯನ್ನೇ ಬೋರ್ ಹಾಕಿಸುವುದಕ್ಕೂ ಮಾಡಬೇಕು. ಆ ರೀತಿ ಸರ್ಕಾರದವರು ಬೋರ್ ಹಾಕಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುವುದಾದರೆ ಆದರಿಂದ ರೈತನಿಗೆ ಸಾಲ ತೀರಿಸುವುದಕ್ಕೆ ಶಕ್ತಿ ಬರುತ್ತದೆ. ಆ ರೀತಿ ಅರ್ಧಂಬರ್ಧವಾಗಿರತಕ್ಕ ಬಾವಿಗಳನ್ನು ಪೂರ್ತಿ ಮಾಡುವುದಕ್ಕೆ ಹಣವನ್ನು ಸಾಲಕೊಡುವಾಗ ಅವುಗಳನ್ನು ಪೂರ್ಣಮಾಡುವುದಕ್ಕೆ ಎಷ್ಟು ಹಣಬೇಕೋ ಅಷ್ಟು ಹಣವನ್ನು ಮಾತ್ರ ಸಾಲ ಕೊಡಬೇಕು. ಇದನ್ನು ಸರ್ಕಾರದವರು ಗಮನಿಸಬೇಕು.

ಈಗ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವುದಕ್ಕೆ ಯಾವ ಒಂದು ವಿಧಾನವನ್ನನುಸರಿಸುತ್ತಿದ್ದಾರೆಯೋ ಆ ಒಂದು ವಿಧಾನದಿಂದ ರೈತರಿಗೆ ತೊಂದರೆಯಾಗುತ್ತಿದೆ. ಈಗ ರೈತರಿಗೆ ಪಂಪುಸೆಟ್ಟುಗಳನ್ನು ಒದಗಿಸುವುದಕ್ಕಾಗಿ ಷೆಡ್ಯೂಲ್ ಬ್ಯಾಂಕುಗಳಿಂದಲೋ, ಕೋ ಆಪರೇಟಿವ್ ಸೊಸೈಟಿಗಳಿಂದಲೋ ಅಥವಾ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಿಂದಲೋ ಹಣವನ್ನು ಸಾಲಕೊಟ್ಟರೆ ಎಂ. ಎಸ್. ಇ. ಬಿ. ಯವರು ಕಂಟ್ರಾಕ್ಟರುಗಳ ಮುಖಾಂತರ ಆ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡುವ ವ್ಯವಸ್ಥೆ ಮಾಡುತ್ತಿದ್ದಾರೆ. ಈ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡಬೇಕಾದರೆ ಕಂಟ್ರಾಕ್ಟರು ರೈತರಿಗೆ ಕೊಡತಕ್ಕಂಥಾ ಕಷ್ಟ ಅಷಿಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಕಂಟ್ರಾಕ್ಟರಿಗೆ ನೂರಾರು ರೂಪಾಯಿಗಳ ಅಡ್ವಾನ್ಸ್ ಕೊಡಬೇಕು. ಅವರ ಹತ್ತಿರ ಅನೇಕ ಸಾರಿ ತಿರುಗಬೇಕು. ಹೀಗಾಗಿ ತಿಂಗಳಾನುಗಟ್ಟಲೇ ಪಂಪುಸೆಟ್ಟುಗಳಿಗೆ ಸರ್ವೀಸ್ ಕೊಡದೆ ಇರತಕ್ಕಂಥಾ ಸಂದರ್ಭಗಳು ಬೇಕಾದಷ್ಟು ಇವೆ. ಅದಕ್ಕಾಗಿ ಈ ಬಗ್ಗೆ ನನ್ನ ಒಂದು ಸಲಹೆ ಏನೆಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕು ರೈತನಿಗೆ ಪಂಪುಸೆಟ್ಟು ಕೊಡುವುದಕ್ಕಾಗಿ ಹಣವನ್ನು ಮಂಜೂರು ಮಾಡಿ ರೈತನಿಗೆ ಪಂಪುಸೆಟ್ಟು ಸಿಕ್ಕಿದ ತಕ್ಷಣ ಆ ಪಂಪುಸೆಟ್ಟಿಗೆ ಸರ್ವೀಸ್ ಕೊಡುವಂತಹ ಒಂದು ವ್ಯವಸ್ಥೆಯಾಗಬೇಕಾದರೆ ಆ ಒಂದು ಕೆಲಸವನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿಗೆ ವಹಿಸಬೇಕು. ಇಲ್ಲದೇ ಹೋದರೆ ಬೇರೆ ಯಾವುದಾದರೂ ಒಂದು ಸಂಸ್ಥೆಗೆ ಈ ಕೆಲಸವನ್ನು ವಹಿಸಬೇಕು. ಆ ರೀತಿ ಮಾಡದೆ ಹೋದರೆ ರೈತ ಸಾಲ ತೆಗೆದುಕೊಂಡು ಬಾವಿಯನ್ನು ತೋಡಿ ಅದಕ್ಕೆ ಪಂಪುಸೆಟ್ಟು ಹಾಕಿಸಿಕೊಂಡು ಪಂಪುಸೆಟ್ಟಿಗೆ ಸರ್ವೀಸ್ ಸಿಕ್ಕದೇ ಹೋದರೆ ಆದರಿಂದ ರೈತರಿಗೆ ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ರೈತನಿಗೆ ತೊಂದರೆಯಾಗದಂತೆ ಅವನು ಸಾಲನ್ನು ವಾಪಸ್ಸು ಕೊಡುವುದಕ್ಕೆ ಅನುಕೂಲವಾಗುವ ಹಾಗೆ ಮಾಡಬೇಕು. ಈ ರೀತಿ ಮಾಡಿ ರೈತ ಜಾಗ್ರತೆಯಾಗಿ ಬಾವಿಯಿಂದ ನೀರನ್ನು ಉಪಯೋಗಿಸಿಕೊಂಡು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಮಾಡಿ ಕೊಡಬೇಕು. ಈ ದೃಷ್ಟಿಯಿಂದ ಸರ್ಕಾರದವರು ಇದನ್ನು ಗಮನಿಸಬೇಕು. ಈ ವಿಚಾರದಲ್ಲಿ ನಮ್ಮ ಹಿರಿಯ ಮಂತ್ರಿವರ್ಯರಾದ ಶ್ರೀ ಶಂಕರಅಳ್ವ ಅವರು ಮನಸ್ಸು ಮಾಡಿದರೆ ಇದು ಸರಿಹೋಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ನಮ್ಮ ರಾಜ್ಯದಲ್ಲಿ ಈಗ ರಾಜ್ಯಮಟ್ಟದಲ್ಲಿ ಮಾತ್ರ ಮಾರ್ಕೆಟಿಂಗ್ ಸೊಸೈಟಿ ಫೆಡರೇಷನ್ ಇದೆ. ಇದೇ ರೀತಿ ಪ್ರತಿ ಜಿಲ್ಲಾ ಮಟ್ಟದಲ್ಲಿಯೂ ಒಂದು ಮಾರ್ಕೆಟಿಂಗ್ ಸೊಸೈಟಿ ಫೆಡರೇಷನ್ ಇರುವುದು ಒಳ್ಳೆಯದು. ಈಗ ತಾಲ್ಲೂಕು ಮಟ್ಟದಲ್ಲಿರುವ ಮಾರಾಟ ಸಹಕಾರ ಸಂಘಗಳು ಆಹಾರ ಉತ್ಪನ್ನಗಳನ್ನು ಶೇಖರಿಸಿ ಮಾರಾಟಮಾಡುತ್ತಿಲ್ಲ. ಈ ಕೆಲಸವನ್ನು ರಾಜ್ಯಮಟ್ಟದಲ್ಲಿ ಇರತಕ್ಕ ಮಾರ್ಕೆಟಿಂಗ್ ಸೊಸೈಟಿಯ ಫೆಡರೇಷನ್ ಕೂಡ ಮಾಡುತ್ತಿಲ್ಲ. ಇದು ಬಹಳ ಅಗತ್ಯವಾಗಿ ಮಾಡಬೇಕಾದ ಕೆಲಸ ಮತ್ತು ಜರೂರಾಗಿ ಮಾಡಬೇಕಾದ ಕೆಲಸ. ಈ ಸಂಸ್ಥೆಗಳು ತಾವು ಮುಖ್ಯವಾಗಿ ಮಾಡಬೇಕಾದ ಕೆಲಸವನ್ನು ಬಿಟ್ಟು ಅದಕ್ಕೆ ಬದಲಾಗಿ ಹೊರಗಡೆಯಿಂದ ಗೊಬ್ಬರವನ್ನು ತರಿಸುವುದು, ಒಣಗಿದ ಹಣ್ಣನ್ನು ತರಿಸುವುದು, ಏಲಕ್ಕಿ ಲವಂಗವನ್ನು ತರಿಸುವುದು ಇತ್ಯಾದಿ ಕೆಲಸಗಳನ್ನು ಮಾಡುತ್ತಿವೆ. ಮಾರಾಟ ಸಹಕಾರ ಸಂಘಗಳು ಏನಿವೆ ಅವು ಫೆಡರೇಷನ್ನಿಗೆ ಸೇರಿದಮೇಲೆ ಅವುಗಳ

ಕರ್ತವ್ಯ ಏನು ಎಂಬುದನ್ನು ಅವು ಅರ್ಥ ಮಾಡಿಕೊಳ್ಳಬೇಕು. ಇವೊತ್ತು ಈ ಮಾರಾಟ ಸಹಕಾರ ಸಂಘಗಳು ಕೋಟ್ಯಾಂತರ ರೂಪಾಯಿಗಳ ವ್ಯಾಪಾರ ಮಾಡಿ ಲಾಭವನ್ನು ಸಂಪಾದನೆ ಮಾಡತಕ್ಕ ವ್ಯಾಪಾರಗಾರರಿಗೆ ಅನುಕೂಲವಾಗತಕ್ಕಂಥಾ ಕೆಲಸವನ್ನು ಮಾಡುತ್ತಿವೆ. ಆದರೆ ಅವು ಆಹಾರೋತ್ಪನ್ನ ಪದಾರ್ಥಗಳನ್ನು ತರಿಸಿ ಮಾರಾಟ ಮಾಡುತ್ತಿಲ್ಲ. ಈಗ ನಮ್ಮಲ್ಲಿ ಕನ್‌ಸ್ಯೂಮರ್ಸ್ ಫೆಡರೇಷನ್ ಏನಿದೆ ಅದು ಪದಾರ್ಥಗಳನ್ನು ತರಿಸಿ ಹೋಲ್‌ಸೇಲ್ ಡೀಲರ್ಸ್‌ಗೆ ಮಾರಾಟ ಮಾಡುತ್ತಿದೆ. ಅದನ್ನು ನಿಲ್ಲಿಸಬೇಕು ಸ್ಟೇಟ್ ಫೆಡರೇಷನ್ ಇರುವಾಗ ಕನ್‌ಸ್ಯೂಮರ್ಸ್ ಫೆಡರೇಷನ್ ಬೇರೆ ಏತಕ್ಕೆ ಬೇಕು ಎಂಬುದು ನನಗೆ ಅರ್ಥವಾಗುವುದಿಲ್ಲ. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಬಹುಮುಖ್ಯವಾಗಿ ಮಾರ್ಕೆಟಿಂಗ್ ಸೊಸೈಟಿ ಫೆಡರೇಷನ್‌ಗಳು ಆಹಾರೋತ್ಪನ್ನ ಪದಾರ್ಥಗಳನ್ನು ತರಿಸಿ ಮಾರಾಟ ಮಾಡತಕ್ಕಂಥಾದ್ದು ಬಹಳ ಅಗತ್ಯ. ಸರ್ಕಾರ ಇದರ ಕಡೆಗೆ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ.

ಇವೊತ್ತು ಪ್ರತಿಜಿಲ್ಲೆಯಲ್ಲಿಯೂ ಇರತಕ್ಕಂಥಾ ಡಿಸ್ಟ್ರಿಕ್ಟ್ ಹೋಲ್‌ಸೇಲ್ ಸ್ಟೋರ್‌ಗಳು ಏನಿವೆ ಅವು ಮುಳುಗುವ ಪರಿಸ್ಥಿತಿಯಲ್ಲಿವೆ. ಇವು ಅಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಾ ಇಲ್ಲ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಇರತಕ್ಕ ಹೋಲ್‌ಸೇಲ್ ಸ್ಟೋರ್‌ಗಳ ಲೆಕ್ಕ ಪತ್ರಗಳನ್ನು ಸರ್ಕಾರದವರು ತರಿಸಿಕೊಂಡು ನೋಡಿದರೆ ಅವುಗಳ ಪರಿಸ್ಥಿತಿ ಏನಿದೆ ಎಂಬುದು ಗೊತ್ತಾಗುತ್ತದೆ. ಅವು ಬರೀ ನೆಪ ಮಾತ್ರಕ್ಕೆ ಮಾತ್ರ ಇವೆಯೇ ಹೊರತು ಅವು ನಿಜವಾಗಿ ತಮ್ಮದೇ ಆದ ಒಂದು ಶಕ್ತಿಯನ್ನು ಬೆಳೆಸಿಕೊಂಡು ಬಂದಿಲ್ಲ. ಜನತಾಬಜಾರ್‌ಗಳು ಒಳ್ಳೆಯ ಸ್ಥಾನಮಾನಗಳನ್ನು ಗಳಿಸಿಕೊಂಡಿವೆ. ಮತ್ತು ಅವು ಒಳ್ಳೆಯ ಸೇವೆಯನ್ನೂ ಮಾಡಿ ಲಾಭವನ್ನು ಸಂಪಾದನೆ ಮಾಡಿವೆ ಎಂದು ನಾನು ಹೇಳುತ್ತೇನೆ. ದಯವಿಟ್ಟು ಸರ್ಕಾರದವರು ರೈತರು ಬೆಳೆಯತಕ್ಕ ಎಲ್ಲಾ ಪದಾರ್ಥಗಳನ್ನೂ ಫೆಡರೇಷನ್ ಮೂಲಕವೇ ಮಾರಾಟ ಮಾಡಿ ರೈತರಿಗೆ ಹೆಚ್ಚು ಬೆಲೆ ಸಿಕ್ಕುವಂತೆ ಮಾಡಬೇಕು. ಮತ್ತು ಗ್ರಾಹಕರಿಗೆ ಹೊರಗಡೆಗಿಂತ 10—15 ಪರ್ಸೆಂಟ್ ಕಡಿಮೆ ಬೆಲೆಗೆ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕು. ಈ ದೃಷ್ಟಿಯಿಂದ ಸರ್ಕಾರದವರು ಈ ಬಗ್ಗೆ ಗಮನಕೊಟ್ಟರೆ ಅನುಕೂಲವಾಗುತ್ತದೆ.

ಸೇವಾ ಸಹಕಾರ ಸಂಘಗಳು ಸಾಕಷ್ಟು ಇವೆ. ಈ ಸಹಕಾರ ಇಲಾಖೆ ಬಹಳ ಚೆನ್ನಾಗಿ ಬೆಳೆದಿದೆ. ಈ ಸಹಕಾರ ಇಲಾಖೆಯ ವಿಷಯದಲ್ಲಿ ನಮ್ಮ ನಾಯಕರಾದ ಶ್ರೀಮತಿ ಇಂದಿರಾಗಾಂಧಿಯವರು ಒಂದು ಕಡೆ ಹೇಳಿದ್ದಾರೆ. ಅದು ಈ ರೀತಿ ಇದೆ:

> "No other Instrument is so potentially powerful and full of social purposes as the Co-operative movement is and further it is the only instrument capable of securing economies of large scale work without generating the evil consequences of concentration of economic power."

ಎಂದು ಹೇಳಿದ್ದಾರೆ. ಅದನ್ನು ಪ್ರಿಂಟ್ ಮಾಡಿಸಿ ಎಲ್ಲರಿಗೂ ಹಂಚಿದ್ದಾರೆ. ಆದರೆ ಇದನ್ನು ಕಾರ್ಯರೂಪಕ್ಕೆ ತರತಕ್ಕ ವಿಚಾರದಲ್ಲಿ ಏನೂ ಮಾಡಿಲ್ಲ. ಸರ್ವೀಸ್ ಕೋ-ಅಪರೇಟೀವ್ ಸೊಸೈಟಿಗಳು ಗ್ರಾಮಪಂಚಾಯತಿ ಮಟ್ಟದಲ್ಲಿ ಜನತೆಯ ಹಿತದೃಷ್ಟಿಯಿಂದ ಸಮಾಜವಾದದ ಆಧಾರದ ಮೇಲೆ ಜನತೆಯ ಸೇವೆಯನ್ನು ಮಾಡತಕ್ಕಂಥ ಸಂಸ್ಥೆಗಳು. ಆದರೆ ಇದರಲ್ಲಿ ಯಾರು ಸರಿಯಾಗಿ ಕೆಲಸ ಮಾಡುತ್ತಾರೆ, ಯಾರು ಸರಿಯಾಗಿ ಕೆಲಸಮಾಡವುದಿಲ್ಲ. ಎನ್ನುವುದನ್ನು ನೋಡಿಕೊಂಡು ಅಲ್ಲಿರತಕ್ಕವರಿಗೆ ಸರಿಯಾದ ತಿಳುವಳಿಕೆಯನ್ನು ಹೇಳತಕ್ಕ ಅಧಿಕಾರ ವರ್ಗ ಕೂಡ ಇಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಧಿಕಾರದಲ್ಲಿದ್ದಾಗ ರೆವಿನ್ಯೂ ಇಲಾಖೆ ಯಾವ ರೀತಿ ಇದೆಯೋ ಆ ರೀತಿ ಇದನ್ನು ಮಾಡುತ್ತೇನೆ ಎಂದು ಒಂದು ದೊಡ್ಡ ಭಾಷಣವನ್ನು ಮಾಡಿದ್ದರು. ಆದರೆ ಅವರು ಮಾಡಿದ್ದು ಬೇರೆ.

2-30. P.M.

ಅವರು ಅಧಿಕಾರದಲ್ಲಿ ಇದ್ದಾಗ ರೆವಿನ್ಯೂ ಇಲಾಖೆಯಲ್ಲಿ ಯಾವ ರೀತಿ ಅಧಿಕಾರಿಗಳ ವರ್ಗ ಇದೆಯೋ ಆ ರೀತಿ ಅಧಿಕಾರಿಗಳ ಒಂದು ವರ್ಗವನ್ನು ಇಟ್ಟುಬಿಟ್ಟು ಹೋದರು. ಆದರೆ ನಮ್ಮ ಮಂತ್ರಿಯವರು ಇದನ್ನು ಸ್ವಲ್ಪ ಗಮನಿಸಬೇಕು. ಏಕೆಂದರೆ, ಈ ಸಹಕಾರಿ ಚಳುವಳಿಯನ್ನು ಬಲಪಡಿಸದೇ ಹೋದರೆ ನಾವು ಸಮಾಜವಾದವನ್ನು ಕಾರ್ಯರೂಪಕ್ಕೆ ತರುವುದು ಕಷ್ಟವಾಗುತ್ತದೆ. ಇದನ್ನು ಮಾಡಿದರೆ ನಮಗೆ ಸಮಾಜವಾದವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸುಲಭವಾಗುತ್ತದೆ

(ಶ್ರೀ ಜಿ. ರಾಮೇಗೌಡ)

ಆದ್ದರಿಂದ ಗ್ರೂಪ್ ಪಂಚಾಯತ್ ಮಟ್ಟದಲ್ಲಿರತಕ್ಕಂತಹ ಸಂಸ್ಥೆಗೆ ಏನೋ ಕಾರ್ಯದರ್ಶಿ ಇದ್ದಾನೆ, ಅವನು ಸಂಬಳ ತೆಗೆದುಕೊಳ್ಳುವ ಕಾರ್ಯದರ್ಶಿಯನ್ನಾಗಿ ಮಾಡಿದ್ದೇ ಆದರೆ, ನಾವು ಮೊದಲನೆಯ ಕೆಲಸ ಮಾಡಿದ ಹಾಗೆ ಆಗುತ್ತದೆ. ಇವತ್ತು ಯಾವುದೇ ಜಿಲ್ಲಾ ಯೂನಿಯನ್ನಾಗಲಿ, ಅಥವಾ ಇತರ ಸಂಸ್ಥೆಗಳಾಗಲಿ, ಕಾರ್ಯದರ್ಶಿಯವರನ್ನು ತೆಗೆದು ಕೊಳ್ಳಿ ಎಂದು ಕೇಳಿದರೆ, ನಾವು ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಕಡ್ಡಾಯವಾಗಿ ತೆಗೆದು ಕೊಳ್ಳಬೇಕೆಂದು ನಿಬಂಧನೆಯನ್ನು ಹಾಕಿದರೆ ಆಗ ಸರಿಹೋಗುತ್ತದೆ. ಹೀಗೆ ಮಾಡಿದರೆ, ಅವರು 8 ಗಂಟೆಗಳ ಕಾಲ ಚೆನ್ನಾಗಿ ಕೆಲಸ ಮಾಡಿ ಜನರಿಗೆ ಉಪಕಾರವಾಗುತ್ತದೆ. ಕೆಲವರ ಅಭಿಪ್ರಾಯ ಏನೆಂದರೆ, ಅಲ್ಲಿ ಟ್ರೈನಿಂಗ್ ಆದಂತಹ ಕೆಲಸಗಾರರು ಇಲ್ಲ ಎಂದು. ಆದರೆ ಆ ವ್ಯವಸ್ಥೆಯನ್ನು ಮಾಡುವ ಶಕ್ತಿ ಸಾಮರ್ಥ್ಯ ನಮ್ಮಲ್ಲಿ ಇದೆ. ಏಕೆಂದರೆ ಕಾರಣಾಂತರಗಳಿಂದ ಕೋಟಿಗಟ್ಟಲೆ ರೂಪಾಯಿ ಸಾಲಗಳು ನಿಂತು ಹೋಗುವ ಸಂದರ್ಭ ಬಂದಾಗ ಅದನ್ನು ವಸೂಲು ಮಾಡಬೇಕಾದರೆ ಕಾನೂನು ಪ್ರಕಾರ ಸರ್ಕಾರದ ಸಹಾಯ ಬೇಕಾಗುತ್ತದೆ. ಸರ್ಕಾರದ ಅಧಿಕಾರಿಗಳು ಹೋಗಿ ಜಪ್ತಿ ಮಾಡಿಸಿ ಕೊಟ್ಟ ಸಾಲವನ್ನು ವಾಪಸ್ಸು ಪಡೆಯುವ ಅಧಿಕಾರ ಇದೆ. ಆದರೆ ನಾವು ಡಿಕ್ರಿ ಮಾಡಿ ಸರ್ಕಾರದ ಅಧಿಕಾರಿಗಳಿಗೆ ಕೊಟ್ಟರೆ ನೀವು ಮಾಡಲಾರದ ಕೆಲಸ ನಮಗೆ ಕೊಟ್ಟಿದ್ದೀರಿ ಎಂದು ಅಪಾದನೆ ಮಾಡುತ್ತಾರೆಯೇ ವಿನಹ ತಮ್ಮ ಅಧಿಕಾರ ಉಪಯೋಗಿಸಿಕೊಂಡು ಸಾಲವನ್ನು ವಸೂಲು ಮಾಡಬೇಕೆಂದು ಮನಸ್ಸು ಮಾಡುವುದಿಲ್ಲ. ಆದ್ದರಿಂದ ಈ ಕೆಲಸವನ್ನು ಸರ್ಕಾರದವರು ಮಾಡಲೇ ಬೇಕಾಗಿದೆ. ಇದಕ್ಕೆ ಜಿಲ್ಲಾ ಬ್ಯಾಂಕುಗಳನ್ನು ಸುಧಾರಿಸಿದರೆ, ಎಲ್ಲಾ ಮಟ್ಟದಲ್ಲಿರತಕ್ಕಂತಹ ಸರ್ವಿಸ್ ಸೊಸೈಟಿಗಳಿಗೆ ಸಹಾಯ ಮಾಡಲು ಬರುತ್ತದೆ. ಇನ್ನೊಂದು ವಿಷಯ ಏನೆಂದರೆ, ಸರ್ಕಾರದವರು ಈ ಸೊಸೈಟಿಗಳ ಬ್ಯಾಡ್ ಡೆಟ್ಟನ್ನು ನಿವಾರಿಸಲು ಸಾಕಷ್ಟು ಸಹಾಯ ಕೊಡದಿದ್ದರೆ ಷೇರು ಬಂಡವಾಳ ಹೆಚ್ಚಿಸದೆ ಇದ್ದರೆ, ಹೇಗೆ ಅದು ಸರಿಯಾಗಿ ನಡೆಯುವುದಕ್ಕಾಗುತ್ತದೆ? ವಸೂಲಾತಿ ವಿಧಾನವಾದರೂ ಸೇವಾ ಸಹಕಾರ ಸಂಘಗಳಿಗೆ ಹೆಚ್ಚು ಸಹಾಯ ಮಾಡಬೇಕಾಗುತ್ತದೆ.

ಇನ್ನು ಈ ಆಡಿಟ್ ಸೆಕ್ಷನ್ ಏನಿದೆ, ಅದನ್ನು ಬಲಪಡಿಸಬೇಕೆಂದು ಹೇಳಿದ್ದಾರೆ.

**Sri C. M. ARUMUGHAM** (Kolar Gold Fields).—The hon. Member is making very good points on the Governor's Address I see none of the Ministers ever take any interest in noting down the points. The Ministers here are attending to their files. It is useful to them to note down the points to reply at the end of the discussion. The hon. Member is giving very important points on Revenue, as well as on Animal Husbandry.

**MADAM SPEAKER.**—The Minister for Agriculture, and the Minister for Finance are attending to this.

ಶ್ರೀ ಜಿ. ರಾಮೇಗೌಡ.—ಈ ಸಹಕಾರಿ ಇಲಾಖೆಯಲ್ಲಿ ಆಡಿಟ್ ವಿಭಾಗವನ್ನು ಬಲಪಡಿಸಬೇಕೆಂದು ಹೇಳಿದ್ದಾರೆ. ನನಗೆ ತಿಳಿದಿರತಕ್ಕಂತಹ ವದಂತಿಯ ಪ್ರಕಾರ ಸ್ಟೇಟ್ ಅಕೌಂಟ್ಸ್ ಇದರ ಆಡಿಟ್ ಮಾಡಬೇಕೆಂದು ಕೇಳಿಬರುತ್ತಿದೆ. ಈ ಒಂದು ಬದಲಾವಣೆಯಿಂದ ಆಡಿಟ್ ವಿಭಾಗವನ್ನು ಭದ್ರಪಡಿಸುವುದು ಸಾಧ್ಯವಿಲ್ಲವೆಂದು ಹೇಳಬಹುದು. ಏಕೆಂದರೆ ಯಾವಾಗ ಒಂದು ಹೊಸ ವಿಭಾಗ ಅಲ್ಲಿ ಬಂತೋ, ಆಗ ಅಲ್ಲಿ ಇನ್‌ಕ್ರಿಮೆಂಟ್ಸ್, ಆ ವಸತಿ, ಈ ವಸತಿ ಎಂದೆಲ್ಲಾ ಹೇಳಿ ಸರ್ಕಾರಕ್ಕೆ ಭಾರಿ ಒಂದು ಹೊರೆಯಾಗುತ್ತದೆಯೇ ವಿನಹ ಆಡಿಟ್ ಕೆಲಸವೇನೂ ಚೆನ್ನಾಗಿ ನಡೆಯಲಾರದೆಂದು ನನ್ನ ಅಭಿಪ್ರಾಯ. ಆದ್ದರಿಂದ ಇದರ ಬಗ್ಗೆ ನನ್ನ ಸೂಕ್ತವಾದ ಸಲಹೆ ಏನೆಂದರೆ ಈಗ ನಮ್ಮಲ್ಲಿರತಕ್ಕಂತಹ ಅಧಿಕಾರಿ ವರ್ಗದವರಿಂದಲೇ ನೀವು ಉತ್ತಮವಾದ ಕೆಲಸವನ್ನು ಮಾಡಿಸಿ ಕೊಳ್ಳಬೇಕು. ಅವರಿಗೆ ಒಂದು ಷೆಡ್ಯೂಲ್ ಆಫ್ ವರ್ಕ್ ಎಂದು ಮಾಡಿಕೊಡಬೇಕು. ಒಬ್ಬ ಆಡಿಟರ್ ಒಂದು ವರ್ಷದಲ್ಲಿ ನಾಲ್ಕಾರು ಸಾರಿ ಅಲ್ಲಿಯ ಲೆಕ್ಕಗಳನ್ನು ಪರಿಶೀಲಿಸಬೇಕು. ಎಷ್ಟು ಸಹಕಾರಿ ಸಂಸ್ಥೆಗಳು ಇವೆ, ಅವುಗಳಿಗೆ ಆಡಿಟರುಗಳನ್ನು ನೇಮಿಸಿ ಅವರು ಕೆಲಸಗಳನ್ನು ಸರಿಯಾಗಿ ಮಾಡಿದರೆ ಬಹಳ ಉಪಯುಕ್ತವಾದ ಕೆಲಸಗಳನ್ನು ಮಾಡಿದಹಾಗೆ ಆಗುತ್ತದೆ. ಇವಲ್ಲಿವೆ ವರ್ಷಕ್ಕೊಮ್ಮೆ ಸರ್ವಿಸ್ ಸೊಸೈಟಿಗಳ ಆಡಿಟ್ ಆಗುವುದನ್ನು ನಿಲ್ಲಿಸಬೇಕು. ವರ್ಷಕ್ಕೆ 3–4 ಸಾರಿ ಆಡಿಟರ್ ಹೋಗಿ ಅಲ್ಲಿ ಆಡಿಟ್ ಮಾಡತಕ್ಕ ಪದ್ಧತಿಯನ್ನು ಇಟ್ಟುಕೊಳ್ಳಬೇಕು. ಅಲ್ಲಿ ಏನಾದರೂ

ಅನಾಚಾರ ಅಥವಾ ದುರುಪಯೋಗವಾಗಿದ್ದರೆ ಅದರ ಬಗ್ಗೆ ಕೂಡಲೇ ರಿಪೋರ್ಟು ಕೊಟ್ಟು ಅದನ್ನು ಸರಿಪಡಿಸಬೇಕಾಗುತ್ತದೆ. ಅದಲ್ಲದೆ ಒಂದು ವರ್ಷದಲ್ಲಿ ಆದ ವಿಚಾರವನ್ನು ಎರಡನೇ ವರ್ಷ ಆಡಿಟ್ ಮಾಡಿಸಿ, ಮೂರನೆಯ ವರ್ಷ ಅದರ ರಿಪೋರ್ಟಿನ ಮೇಲೆ ಕ್ರಮ ತೆಗೆದುಕೊಂಡರೆ, ಆಗತಕ್ಕ ಅನಾಹುತ ಇನ್ನೂ ಜಾಸ್ತಿಯಾಗುತ್ತದೆ. ಆದ್ದರಿಂದ ವರ್ಷಕ್ಕೆ 3–4 ಸಾರಿ ಆಡಿಟ್ ಮಾಡಿಸಿ ಅದರಲ್ಲಿರತಕ್ಕ ಲೋಪದೋಷಗಳನ್ನು, ಸಂಬಂಧಪಟ್ಟ ಅಧಿಕಾರಿಗಳ ಮತ್ತು ಸರ್ಕಾರದ ಗಮನಕ್ಕೆ ತಂದರೆ ಅಲ್ಲಿ ಕೆಲಸಗಳನ್ನು ಇನ್ನೂ ಚೆನ್ನಾಗಿ ಸಾಧಿಸಬಹುದು. ಪರದೇಶಗಳಲ್ಲಿ ಪ್ರತಿದಿನವೂ ಸಂಘಸಂಸ್ಥೆಗಳನ್ನು ಆಡಿಟ್ ಮಾಡಿಸುತ್ತಾರೆಂದು ನಾನು ತಿಳಿದಿದ್ದೇನೆ. ಹಾಗಿರುವಾಗ ನಾವು ಮೂರು ತಿಂಗಳಿಗೊಮ್ಮೆಯಾದರೂ ಆಡಿಟ್ ಮಾಡತಕ್ಕ ವ್ಯವಸ್ಥೆ ಮಾಡದೆ ಹೋದರೆ, ನಾವು ಏನು ಪ್ರಜಾಪ್ರಭುತ್ವದಲ್ಲಿ ಸಹಕಾರ ತತ್ವವನ್ನು ಅನುಸರಿಸಿಕೊಂಡು ಅದರ ಬೆಳವಣಿಗೆಗೆ ಹಣ ಕೊಡುತ್ತಿದ್ದೇವೆ, ಅದು ಸುಲಭವಾಗಿ ದುರುಪಯೋಗವಾಗುವ ಕಾಲ ಬರುತ್ತದೆ. ಆದ್ದರಿಂದ ಈ ಆಡಿಟ್‌ನ್ನು ಸರ್ಕಾರದವರು ಸ್ಟೇಟ್ ಅಕೌಂಟೆಂಟ್‌ನವರಿಂದ ಮಾಡಿಸುವುದಾದರೆ ಅದರಿಂದ ಯಾವ ತರದ ಪ್ರಯೋಜನವೂ ಆಗುವುದಿಲ್ಲ ಅದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

ಪಂಚಾಯಿತಿಗಳು ಸಹಕಾರ ಸಂಘಗಳಲ್ಲಿ ಹೆಚ್ಚು ಆಸಕ್ತಿ ವಹಿಸುವುದಿಲ್ಲ. ಮತ್ತು ತಾಲೂಕು ಬೋರ್ಡು ಮತ್ತು ಪಂಚಾಯಿತಿಗಳ ಸಂಬಂಧ ಏನಿದೆ ಈ ಸಂಬಂಧದಲ್ಲಿ ಪಂಚಾಯಿತಿಗಳ ಮೇಲ್ವಿಚಾರಣೆ ತಾಲೂಕು ಬೋರ್ಡಿಗೆ ಸೇರಿದೆ. ಇವೊತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ ಅತ್ಯಾವಶ್ಯಕವಾಗಿ ಆಗಬೇಕಾಗಿರುವುದು ಗ್ರಾಮ ಪಂಚಾಯಿತಿ ಕೆಲಸಗಳು. ಮಹಾತ್ಮಾ ಗಾಂಧಿಯವರು ಮತ್ತು ಇತರ ಎಲ್ಲಾ ನಾಯಕರು ಹೇಳಿದಂತಹ ಮಾತುಗಳು ಇವು. ಯಾವಾಗ ಗ್ರಾಮ ಸಂಸ್ಥೆಗಳು ಉತ್ತಮವಾಗಿ ಕೆಲಸ ಮಾಡಿಲ್ಲ, ಯಾವಾಗ ತಾಲ್ಲೂಕು ಅಭಿವೃದ್ಧಿ ಮಂಡಲಿಯವರು ಸೂಪರ್‌ವಿಜನ್ ಮಾಡತಕ್ಕದ್ದು ಕ್ರಮಬದ್ಧವಾಗಿ ನಡೆಯಲಿಲ್ಲ; ಆಗ ಪ್ರಜಾಪ್ರಭುತ್ವದಲ್ಲಿ ನಡೆಯತಕ್ಕಂತಹ ಸಂಸ್ಥೆಗಳು ಏನಿವೆ, ಅವು ಸಂಪೂರ್ಣವಾಗಿ ನಾಶ ಆಗತಕ್ಕ ಕಾಲ ಬರುತ್ತದೆ. ಇವತ್ತು ನಾವು ಪಂಚಾಯಿತಿಯವರ ಆರ್ಥಿಕ ಮಟ್ಟವನ್ನು ಉತ್ತಮಪಡಿಸಬೇಕಾಗಿದೆ. ಹಾಗಿರುವಾಗ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಪ್ರಜಾಪ್ರಭುತ್ವದ ಮೂಲ ಹಕ್ಕನ್ನು ನಿರ್ನಾಮ ಮಾಡತಕ್ಕ ರೀತಿಯಲ್ಲಿ ಪಂಚಾಯಿತಿಗಳು ಕೆಲಸ ಮಾಡುವುದಕ್ಕೆ ಅವಕಾಶ ಕೊಡಬಾರದು. ಆದ್ದರಿಂದ ಸರ್ಕಾರದವರು ಹೆಚ್ಚಿನ ಅಧಿಕಾರವನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಗೆ ಕೊಟ್ಟು ಅದರ ಕೆಳಗಡೆ ಇರುವ ಸಂಸ್ಥೆಗಳು ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೀರಾವರಿ ಕಾಮಗಾರಿಗಳ ಬಗ್ಗೆ ಮಾನ್ಯ ರಾಜ್ಯಪಾಲರು ಬಹಳ ಚೆನ್ನಾಗಿ ಹೇಳಿದ್ದಾರೆ. ಘಟಪ್ರಭಾ, ಮಲಪ್ರಭಾ, ಕಬಿನಿ ಮತ್ತು ಹೇಮಾವತಿ ಮುಂತಾದ ಕೆಲಸಗಳು ತೃಪ್ತಿಕರವಾಗಿವೆ ಎಂದು ಹೇಳಿದ್ದಾರೆ. ಆದರೆ ಬಡವರಿಗೆ ಬೇಕಾದದ್ದು ಸಣ್ಣ ನೀರಾವರಿ ಅದನ್ನು ಮರೆತುಬಿಟ್ಟಿದ್ದಾರೆ. ಇದರ ಬಗ್ಗೆ ಯಾವ ವಿಚಾರವನ್ನೂ ಹೇಳಿಲ್ಲ. ಇವತ್ತು ನನಗನಿಸುತ್ತದೆ, ಸಣ್ಣ ನೀರಾವರಿ ಕಾರ್ಯಕ್ರಮಗಳು ಚೆನ್ನಾಗಿ ನಡೆಸದೆ ಇದ್ದರೆ ಏನು ಸ್ವಲ್ಪ ಮಳೆ ಬೀಳುತ್ತದೆ ಮತ್ತು ಅದರಿಂದ ಏನೊಂದು ಉಪಯೋಗವನ್ನು ಮಾಡಿಕೊಳ್ಳಬಹುದು, ಅದು ಇಲ್ಲದಂತಾಗುತ್ತದೆ. ಅದನ್ನು ಉಪಯೋಗಿಸಿಕೊಳ್ಳುವುದಾದರೆ, ಈ ಸಣ್ಣ ನೀರಾವರಿ ಯೋಜನೆಯಲ್ಲಿ, ಇವೊತ್ತಿನ ದಿವಸ ಸಹಸ್ರಾರು ಕೆರೆಗಳ ತೂಬು ರಿಪೇರಿಯಾಗಿಲ್ಲ. ಮತ್ತು ಅವುಗಳ ಹೂಳು ತೆಗೆದಿಲ್ಲ. ದೊಡ್ಡ ನೀರಾವರಿಗೆ ನೀವು ಕೋಟಿಗಟ್ಟಲೆ ಖರ್ಚು ಮಾಡಿದರೂ ನನಗೆ ಏನೂ ಸಂಕಟವಿಲ್ಲ. ಆದರೆ ಸಣ್ಣ ನೀರಾವರಿಗೂ ಗಮನ ಕೊಟ್ಟು ಕೆರೆಗಳನ್ನು ರಿಪೇರಿ ಮಾಡತಕ್ಕ ಕೆಲಸ ಆಗಬೇಕೆಂದು ಹೇಳುತ್ತೇನೆ. ಅದು ಆಗದೆ ಹೋದರೆ ನೀರಾವರಿಯ ಪ್ರಯೋಜನ ನಮ್ಮ ರೈತರಿಗೆ ದೊರಕದೆ ತುಂಬಾ ನಿರಾಶರಾಗಿ ನಿಮಗೆ ಏನು ಕಂದಾಯವನ್ನು ಅವರು ಕೊಡುತ್ತಿದ್ದಾರೆ ಅದನ್ನು ಕೊಡತಕ್ಕ ಶಕ್ತಿ ಕಳೆದುಕೊಳ್ಳುತ್ತಾರೆಂದು ಕಳಕಳಿಯಿಂದ ಹೇಳುತ್ತೇನೆ.

ಮಾನ್ಯ ಶ್ರೀ ನಿಜಲಿಂಗಪ್ಪನವರ ಸರ್ಕಾರದಲ್ಲಿ ಮಾನ್ಯ ಶ್ರೀ ಚನ್ನಬಸಪ್ಪನವರು ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಬಹಳ ಚೆನ್ನಾಗಿ ಹೇಳಿದ್ದಾರೆ. ನಾನು ಈ ಸಭೆಯಲ್ಲಿ ಅದನ್ನು ಪದೇಪದೇ ಹೇಳುತ್ತಿದ್ದೇನೆ. ಅದೇನೆಂದರೆ, ಭಗವಂತನ ದಯೆಯಿಂದ, ಶಿವನ ಆಶೀರ್ವಾದದಿಂದ ಭೂಮಿಯ ಮೇಲೆ ಬೀಳತಕ್ಕ ಪ್ರತಿಯೊಂದು ಹನಿಯನ್ನು ಈ ರಾಜ್ಯದ ಮಂತ್ರಿಯಾಗಿ ಅಲ್ಲಲ್ಲಿ ಅಡ್ಡಗೋಡೆ ಹಾಕಿ ಅಲ್ಲಿಯೇ ನಿಲ್ಲಿಸಿ ರೈತರಿಗೆ ಕೊಡುತ್ತೇನೆಂದು ಹೇಳಿದರು. ಅವರು ಈ ಹೇಳಿಕೆ ನೀಡಿದ ಮೂರು ತಿಂಗಳಿಗೆ ಅವರ ಖಾತೆ ಬದಲಾಗಿ ಹೋಂ ಮಿನಿಸ್ಟರ್ ಆಗಿ ಹೋದರು. ಅವರ ಆ ಒಂದು ಹೇಳಿಕೆ ಏನಾಯಿತೋ ಗೊತ್ತಾಗಲಿಲ್ಲ. ಈಗ ಮತ್ತೆ ಅದೇ ಮಂತ್ರಿ ಸ್ಥಾನಕ್ಕೆ ಬಂದಿದ್ದಾರೆ. ಪರಮಾತ್ಮನ ಕೃಪೆಯಿಂದ, ಅವರು ಮನಸ್ಸು ಮಾಡಿದರೆ ಅವರು ಕೊಟ್ಟ ಹೇಳಿಕೆಯನ್ನು ನಡೆಸೇ ನಡೆಸು

(ಶ್ರೀ ಜಿ. ರಾಮೇಗೌಡ)

ತ್ತಾರೆ. ಯಾವ ರೈತನೂ ಕೂಡ ನನ್ನ ಕೆರೆ ರಿಪೇರಿ ಮಾಡಬೇಕು ಎಂಬುದಾಗಿ ಅಧಿಕಾರಿಗಳ ಹತ್ತಿರ ಹೋಗಿ ಕೇಳುವ ಪ್ರಸಂಗವೇ ಇಲ್ಲದಂತೆ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಈ ವಿಚಾರಗಳ ಬಗ್ಗೆ ಒಂದು ಕ್ರಮವನ್ನು ನಮ್ಮ ಲೋಕೋಪಯೋಗಿ ಇಲಾಖೆಯವರು ಮಾಡಬೇಕು. ಸಣ್ಣ ನೀರಾವರಿ ಕಡೆಗೆ ಹೆಚ್ಚಿನ ಗಮನ ಕೊಡಬೇಕು. ಕೆರೆ ಏರಿ, ತೂಬು ಒಡೆದುಹೋಗಿದ್ದರೆ ರಿಪೇರಿ ಮಾಡಲು ತಕ್ಕ ಗಮನವನ್ನು ಕೂಡಲೇ ಕೊಡಬೇಕೆಂದು ನಾನು ಮಂತ್ರಿಯವರಿಗೆ ಮನವಿ ಮಾಡುತ್ತೇನೆ.

ಇನ್ನು ಅಗತ್ಯವಾದ ಮತ್ತೊಂದು ವಿಚಾರವೇನೆಂದರೆ, ಸಮಾಜ ಕಲ್ಯಾಣದ ವಿಚಾರ, ಇದರ ಬಗ್ಗೆ ರಾಜ್ಯಪಾಲರದು ಏನೂ ತಪ್ಪು ಇಲ್ಲವೆಂದು ಹೇಳಬಹುದು. ಅವರ ಭಾಷಣದಲ್ಲಿ ಈ ಬಾಬಿನಲ್ಲಿ ಒಂದು ದೊಡ್ಡ ಉಪಕಾರವನ್ನು ಮಾಡುತ್ತೇವೆಂದು ಹೇಳಿರುವುದು ಏನೆಂದರೆ, ಹರಿಜನರು ಮತ್ತು ಗಿರಿಜನರಿಗೆ ಸಾಲ ಕೊಡಬೇಕಾಗಿದ್ದರೆ ಅವರಿಗೆ ಷೇರು ಬಂಡವಾಳಕ್ಕೆ ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಆ ರೀತಿ ಅವರಿಗೆ ಸಹಾಯ ಮಾಡುವುದಕ್ಕೆ ಸಾಲ ಕೊಡುವವರು ಯಾರು ? ಸಹಕಾರ ಸಂಘಗಳು ಲಕ್ಷಾಂತರ ರೂಪಾಯಿಗಳನ್ನು ಅವರಿಗೆ ಸಾಲ ಕೊಟ್ಟರೆ ಏನು ಮಾಡುತ್ತಾರೆಂದರೆ, ಕೆಲವರು ಅರ್ಧ ಮನೆ ಕಟ್ಟುತ್ತಾರೆ, ಮತ್ತೆ ಕೆಲವರು ಪಾಯ ಹಾಕಿಸಿ ಹಾಗೆಯೇ ಬಿಡುತ್ತಾರೆ. ಇನ್ನು ಕೆಲವರು ಆ ರೀತಿ ಸಹಾಯ ಮಾಡಿದ ದುಡ್ಡನ್ನು ಬೇರೆ ಯಾವುದಕ್ಕೋ ಖರ್ಚುಮಾಡಿಬಿಡುತ್ತಾರೆ. ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಲಕ್ಷ ರೂಪಾಯಿಗಳು ವಸೂಲಿಯಾಗಬೇಕಾಗಿದ್ದರೂ, ಒಂದು ಕ್ರಮವಿದ್ದರೂ ಆ ರೀತಿ ಸರಿಯಾಗಿ ಆಗುತ್ತಿಲ್ಲ. ಈಗಾಗಲೇ ಅನೇಕ ತಾಲ್ಲೂಕುಗಳಲ್ಲಿರತಕ್ಕ ಸಂಘಗಳು ಸುಸ್ತಿಯಾಗಿವೆ. ಅಂತಹ ಸುಸ್ತಿಯಾದ ಸಂಘಗಳಿಗೆ ಪುನಃ ಸಾಲವನ್ನು ಕೊಡಬಾರದು. ಯಾವ ಮನುಷ್ಯನೇ ಆಗಲಿ ಅವನು ಆ ಸಂಘದಲ್ಲಿ ಷೇರು ಬಂಡವಾಳವನ್ನು ಇಟ್ಟಿದ್ದರೆ ಅಂತಹವನಿಗೆ ಮಾತ್ರ ಸಾಲ ಅಲ್ಲಿ ದೊರಕಬೇಕು. ಆದರೆ ಸಾಲ ಪಡೆಯದೆ ಯಾವನೂ ಮನೆ ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ಬಡವರ ಕೈಗೆ ಹಣ ಕೊಡುವುದು ನಮ್ಮದು ಬಹಳ ದೊಡ್ಡ ತಪ್ಪು. ಸರ್ಕಾರಕ್ಕೆ ಈ ಯೋಚನೆ ಚೆನ್ನಾಗಿ ಇರಬೇಕು. ಸಾಮಾನ್ಯವಾಗಿ ಒಬ್ಬನಿಗೆ ಸುಮಾರು 4 ಚದುರದ ಒಂದು ಮನೆಯನ್ನು ಕಟ್ಟಿಸಬೇಕೆಂಬ ಆಸೆ ಇದ್ದರೆ, ಅವರ ಬಗ್ಗೆ ಮೊದಲು ಎಸ್ಟಿಮೇಟ್, ಎಷ್ಟು ಮೊಬಲಗು ಖರ್ಚಾಗುತ್ತದೆಂಬುದನ್ನು ಮಾಡಬೇಕು. ಆಮೇಲೆ ಹೌಸಿಂಗ್ ಬೋರ್ಡಿಗೋ ಅಥವಾ ಡಿಸ್ಟ್ರಿಕ್ಟ್ ಬೋರ್ಡಿಗೋ ಹೋಗಿ ನನಗೆ ಮನೆ ಕಟ್ಟಿಸಿಕೊಡಬೇಕೆಂದು ಕೇಳಿದರೆ, ಅದರ ಬಗ್ಗೆ ಏನಾದರೂ ಸೂಕ್ತ ಕ್ರಮವನ್ನು ಅವರೇ ತೆಗೆದುಕೊಳ್ಳುತ್ತಾರೆ, ಅವನಿಗೆ ಮನೆ ಉಳಿಯುತ್ತದೆ. ಇಲ್ಲದೇ ಹೋದರೆ ಈ ಸರ್ಕಾರದಲ್ಲಿ ಯಾವ ಅಧಿಕಾರಿ ಬಂದರೂ ಸಹ ಈ ಸಮಸ್ಯೆಯಂತೂ ಬಗೆಹರಿಸುವುದಕ್ಕಾಗುವುದಿಲ್ಲ. ಮತ್ತು ಯಾವತ್ತೂ ನಿತ್ಯ ಜೀವನದಲ್ಲಿ ಆಯಾಕಾಲದಲ್ಲಿ ಆಗಬೇಕಾದಂಥ ಖರ್ಚುವೆಚ್ಚಗಳಿಗೆ ಆ ಹಣವನ್ನು ಅವನು ವಿನಿಯೋಗಿಸುತ್ತಾನೆಯೇ ಹೊರತು ಮನೆ ಕಟ್ಟುವುದಕ್ಕೆ ಹೋಗುವುದಿಲ್ಲ. ನಾನು ಅದನ್ನು ಚೆನ್ನಾಗಿ ಅರಿತಿದ್ದೇನೆ. ನಿಜವಾಗಿ ಬಡವರಿಗೆ ಈ ಬಾಬಿನಲ್ಲಿ ಉಪಕಾರ ಮಾಡಬೇಕೆಂಬ ಮನಸ್ಸು ಸರ್ಕಾರಕ್ಕೆ ಇದ್ದರೆ ದಯವಿಟ್ಟು ಒಂದು ಯೋಜನೆಯನ್ನು ರೂಪಿಸಿ, ಎಲ್ಲಾ ಹರಿಜನರಿಗೂ, ಗಿರಿಜನರಿಗೂ ಉಪಯುಕ್ತವಾದ ಮನೆಯನ್ನು ಕಟ್ಟುವುದಕ್ಕೆ ಒಂದು ಅಂದಾಜು ಮಾಡಿಸಿ ಹೌಸಿಂಗ್ ಬೋರ್ಡಿಗೆ ಈ ಕಾರ್ಯವನ್ನು ವಹಿಸಿದರೆ, ಅದರಿಂದ ಖಂಡಿತವಾಗಿ ಅವರಿಗೆ ಉಪಯೋಗವಾಗುತ್ತದೆ. ಇಲ್ಲದೇ ಹೋದರೆ ಈಗಿನ ಕಾನೂನು ಕ್ರಮದಲ್ಲಿ ಯಾರಿಗೂ ಉಪಕಾರ ಮಾಡುವುದಕ್ಕಾಗುವುದಿಲ್ಲ. ಯಾವಾಗ ತಾಲ್ಲೂಕಿನ ಸಹಕಾರ ಸಂಘ ಸುಸ್ತಿಯಾಯಿತೋ ಆಗ ಅವಕ್ಕೆ ಹರಿಜನರಿಗೆ ಸಾಲ ಕೊಡತಕ್ಕ ಶಕ್ತಿಯೇ ಹೋಗಿರುತ್ತದೆ. ಈಗಾಗಲೇ ಎಷ್ಟೋ ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳು ಸರ್ಕಾರಕ್ಕೆ ಬರೆದಿದ್ದಾರೆ. ನಮ್ಮ ಸಹಕಾರ ಸಂಘ ಸುಸ್ತಿಯಲ್ಲಿರುವುದರಿಂದ, ನಮಗೆ ಉಪಕಾರ ಮಾಡುವ ಶಕ್ತಿ ಇಲ್ಲ, ಕೊಟ್ಟಿರುವ ಸಾಲವನ್ನು ವಸೂಲು ಮಾಡುವ ಶಕ್ತಿ ಇಲ್ಲವೆಂದು ಹೇಳಿ, ನಮ್ಮ ಸಂಘಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಸರ್ಕಾರಕ್ಕೆ ಬರೆದಿರುವುದು ನಮಗೆ ತಿಳಿದುಬಂದಿದೆ. ಇಂತಹ ಒಂದು ದೊಡ್ಡ ಸಮಸ್ಯೆಯನ್ನು ಸರ್ಕಾರದವರು ಗಮನಿಸಿ, ಏನಾದರೂ ಒಂದು ಉಪಕಾರ ಮಾಡಬೇಕಾಗಿದ್ದರೆ, ಹೌಸಿಂಗ್ ಬೋರ್ಡಿಗೆ ಈ ಕಾರ್ಯಕ್ರಮವನ್ನು ವಹಿಸುವುದು ಬಹಳ ಒಳ್ಳೆಯದು ಮತ್ತು ಹೆಚ್ಚು ಉಪಕಾರಮಾಡಿದಂತಾಗುತ್ತದೆ. ಈ ವಿಷಯದ ಕಡೆಗೆ ಮಂತ್ರಿಗಳು ಗಮನ ಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನೊಂದು ಬಹಳ ಮುಖ್ಯವಾದಂಥ ವಿಚಾರ, ವಿದ್ಯಾಭ್ಯಾಸ. ನಮ್ಮ ರಾಜ್ಯಪಾಲರು ಬಹಳ ವಿನಯ ಮತ್ತು ಗಾಂಭೀರ್ಯದಿಂದ ಈ ವಿಚಾರವಾಗಿ ಹೇಳಿದ್ದಾರೆ. ಪ್ರೈಮರಿ ವಿದ್ಯಾಭ್ಯಾಸ

ನಮ್ಮ ರಾಜ್ಯದಲ್ಲಿ ಕಡ್ಡಾಯವಾಗಿದೆಯೆಂದು ಹೇಳಿದ್ದಾರೆ. ಈ ಕಡ್ಡಾಯ ಎನ್ನುವುದರ ಅರ್ಥ ನನಗಾಗಲಿಲ್ಲ. ಇವತ್ತು ಒಂದು ಹಳ್ಳಿಗೆ ಬನ್ನಿ. ಹರಿಜನರು, ಗಿರಿಜನರಲ್ಲಿ ಕೇವಲ ಶೇಕಡ ಐದರಷ್ಟಾದರೂ ಸಹ ಪಾಠಶಾಲೆಗಳಿಗೆ ಹೋಗುತ್ತಾರೋ ಏನೋ ಗೊತ್ತಿಲ್ಲ. ಅವರಿಗೆ ಇರತಕ್ಕ ಬಡತನದ ಹಾವಳಿಯಿಂದರೇ ಅವರ ಮಕ್ಕಳಿಗೆ ಶಿಕ್ಷಣವನ್ನು ಸರಿಯಾಗಿ ಕೊಡುವುದಕ್ಕಾಗುತ್ತಾ ಇಲ್ಲ. ಯಾವುದೋ ಒಂದು ನೌಕರಿ ವಹಿಸಿದ್ದರಿಂದ ಅವರಿಗೆ ಸಾಕಷ್ಟು ವಿದ್ಯಾಭ್ಯಾಸವಿಲ್ಲ. ರಾಜ್ಯಪಾಲರ ಭಾಷಣದಲ್ಲಿ, ಸರ್ಕಾರದವರ ವರದಿಗಳಲ್ಲಿ, ಕಡ್ಡಾಯ ಶಿಕ್ಷಣ ಇದೆಯೆಂಬ ಮಾತನ್ನು ನಾವು ಕೇಳುತ್ತಿದ್ದೇವೆ ಮತ್ತು ಓದುತ್ತಿದ್ದೇವೆ. ಆದ್ದರಿಂದ ಈಗಲಾದರೂ 12 ವರ್ಷಗಳವರೆಗೆ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ವಿದ್ಯಾಭ್ಯಾಸವನ್ನು ಕೊಡುವುದು ಒಳ್ಳೆಯದು ಎಂಬುದಾಗಿ ಹೇಳುತ್ತೇನೆ. ಹಳ್ಳಿಗಳಲ್ಲಿ ಬೆಟರ್‌ಮೆಂಟ್ ಕಮಿಟಿ ಎಂದೇನಿವೆಯೋ ಅವುಗಳಿಗೆ ಹೆಚ್ಚಿನ ನಿಬಂಧನೆಗಳನ್ನು ಹಾಕಿ, ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ಕೊಡಬೇಕು. ಏನಾದರೂ ಅಪಾದನೆಗಳು ಬಂದರೆ, ಅಂತಹ ಸಂದರ್ಭಗಳಲ್ಲಿ ಶಿಕ್ಷೆ ಕೊಡುವ ಮಟ್ಟಕ್ಕೆ ಹೋದರೂ ಚಿಂತೆ ಇಲ್ಲ. ಏಕೆಂದರೆ ವಿದ್ಯಾಭ್ಯಾಸ ಬಹಳ ಅಗತ್ಯವಾಗಿ ಈಗ ಬೇಕು. ವಿದ್ಯಾಭ್ಯಾಸ ಎನ್ನುವುದು ಬಡವರ ಮಕ್ಕಳಿಗಂತೂ ಒಂದು ದೊಡ್ಡ ಆಸ್ತಿ. ಬೇರೆಯವರಿಗೆ ಆಧಾರ ಮಾಡದೇ ಇರುವಂತಹ ವಿದ್ಯಾಭ್ಯಾಸವನ್ನು ಕೊಡಿ. ಅಂತಹ ವಿದ್ಯಾಭ್ಯಾಸವನ್ನು ಅವರಿಗೆ ಕೊಡುವುದಕ್ಕೆ ನಾವು ಸಾಕಾದಷ್ಟು ಅರಿತು ಕೊಂಡಿದ್ದೇವೆಂದು ಕೇವಲ ಪದಗಳಲ್ಲಿ ಹೇಳುತ್ತೇವೆ. ಅದು ಕಾರ್ಯರೂಪದಲ್ಲಿ ಜಾರಿಗೆ ಬರುವಂತಹ ಯೋಜನೆಯಾಗಬೇಕು. ಇನ್ನು ಹಳ್ಳಿಗಳಲ್ಲಿ ನಡೆಯುವ ಕ್ರಮವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈ ವಿಚಾರದಲ್ಲಿ ಪ್ರತಿಯೊಂದು ಹಳ್ಳಿಗೂ ಹೋಗಿ ವಿಚಾರ ಮಾಡಿದರೆ ಒಳ್ಳೆಯದು. ರಾಜ್ಯಮಟ್ಟದಲ್ಲಿ ಕೇವಲ ವರದಿಗಳನ್ನು ತರಿಸಿಕೊಂಡರೆ, ಅದರಿಂದೇನೂ ಪ್ರಯೋಜನವಾಗಲಾರದು. ಎಷ್ಟೋ ವರ್ಷಗಳಿಂದ ವರ್ಷದ ಅವಿಯಲ್ಲಿ ಸೆನ್ಸಸ್ ಮಾಡುತ್ತಾರೆ. ಅದರ ಪ್ರಕಾರ ಮಕ್ಕಳು ಪಾಠಶಾಲೆಗೆ ಬರುವುದೇ ಇಲ್ಲ. ಆ ರೀತಿ ಬಾರದಿದ್ದರೂ ಅಟೆಂಡೆನ್ಸ್‌ನಲ್ಲಿ ಇದ್ದಾರೆಂದು ಬರೆಯತಕ್ಕ ಪಾಠಶಾಲೆಗಳನ್ನೂ ಸಹ ನಾನು ನೋಡಿದ್ದೇನೆ. ಇದು ಬಹಳ ದುರದೃಷ್ಟಕರ. ಅಲ್ಲಿ ಮಾಡಬಾರದ್ದನ್ನೆಲ್ಲಾ ಮಾಡುತ್ತಾರೆ. ನಮ್ಮ ಮಕ್ಕಳನ್ನು ನಾವೇ ಕೊಲೆ ಮಾಡುವ ಪರಿಸ್ಥಿತಿ ಆಗಬಾರದು. ಯಾರು ನಮ್ಮ ದೇಶದ ಆಸ್ತಿಯೆಂದು ನಾವು ತಿಳಿದಿದ್ದೇವೋ ಅಂತಹವರಿಗೆ ಒಳ್ಳೆಯ ಶಿಕ್ಷಣಕೊಡುವುದು ನಮ್ಮ ಸರ್ಕಾರದ ಜವಾಬ್ದಾರಿ. ಅವರಿಗೆ ಕೊಡುವ ವಿದ್ಯಾಭ್ಯಾಸ ಉತ್ತಮದರ್ಜೆಯದ್ದಾಗಿರಬೇಕು. ಪ್ರೈಮರಿ ಪಾಠಶಾಲೆಗಳ ಕಮಿಟಿಯಲ್ಲಿ ಅನ್ಯಾಯ ಏನು ನಡೆಯುತ್ತಿದೆಯೋ ಅದು ನಡೆಯದಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬೇಕು. ಮಕ್ಕಳನ್ನು ಪಾಠಶಾಲೆಗೆ ಕಾಲಕ್ಕೆ ಸರಿಯಾಗಿ ತಾಯಿ ತಂದೆಗಳು ಕಳುಹಿಸುವ ವ್ಯವಸ್ಥೆಯ ಬಗ್ಗೆ ಆ ಕಮಿಟಿಯವರು ಹೆಚ್ಚು ನಿಗಾ ಕೊಡಬೇಕು. ಕಮಿಟಿಗೆ ಯಾವ ಅಧಿಕಾರಗಳನ್ನು ಕೊಟ್ಟಿದ್ದೀರಿ ಎಂದು ನಾನು ಪ್ರಶ್ನೆಮಾಡಬೇಕಾಗಿದೆ. ಒಬ್ಬ ತಾಯಿ ತಂದೆ ಅವರ ಒಬ್ಬ ಮಗನನ್ನು ಪಾಠಶಾಲೆಗೆ ಕಳುಹಿಸದೇ ಇದ್ದರೆ ಕೂಡಲೇ ಅವರಿಗೆ ನೋಟಿಸ್ ಕೊಟ್ಟು ವಿಚಾರಮಾಡಿ, ಅವರಿಗೆ ಶಿಕ್ಷೆ ಮಾಡುವ ಅಧಿಕಾರವನ್ನು ಆ ಸಮಿತಿಗೆ ಕೊಟ್ಟಿದ್ದಾರೆಯೇ? ಇಡೀ ರಾಜ್ಯದಲ್ಲಿ ಅಂಥಾದ್ದು ಏನಾದರೂ ಒಂದು ನಡೆದಿದ್ದರೆ ನಾನು ಅದನ್ನು ಕೇಳಿ ತುಂಬಾ ಸಂತೋಷಪಡುತ್ತಿದ್ದೆ. ಆದ್ದರಿಂದ ವಿದ್ಯಾ ಮಂತ್ರಿಗಳು ಈ ವಿಚಾರವನ್ನು ಚೆನ್ನಾಗಿ ಆಲೋಚನೆ ಮಾಡಿ ಸಣ್ಣ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡಬೇಕೆಂದು ನಾನು ಮನವಿ ಮಾಡುತ್ತೇನೆ.

ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ವಿಷಯವಾಗಿ ನಾನು ಸ್ವಲ್ಪಮಟ್ಟಿಗೆ ಹೇಳಬಯಸುತ್ತೇನೆ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ನಮ್ಮ ರಾಜ್ಯದಲ್ಲಿ ಎಲ್ಲಿವೆಯೋ ನನಗೇ ಗೊತ್ತಿಲ್ಲ. ಈ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಹುದ್ದೆ ಏನಿತ್ತು ಅದನ್ನು ಈಗ ಸರ್ಕಾರದವರು ತೆಗೆದುಹಾಕಬೇಕೆಂದಿದ್ದಾರೆ. ಅಲ್ಲಿ ಸಮಾಜವಾದವನ್ನು ತರಬೇಕೆಂದಿದ್ದಾರೆ. ಅಲ್ಲಿ ತಕ್ಕಮಟ್ಟಿನ ಅಭಿವೃದ್ಧಿ ಮಾಡಬೇಕೆಂದಿದ್ದಾರೆ. ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಬೇಕೆಂದಿದ್ದಾರೆ. ಈ ಇಲಾಖೆಯಲ್ಲಿ ಒಬ್ಬ ಡೆಪ್ಯುಟಿ ಡೈರೆಕ್ಟರ್ ಇದ್ದು ಅವರು ಪ್ರತಿಯೊಂದು ತಾಲ್ಲೂಕಿನ ಯೋಜನೆಗಳನ್ನು ತಯಾರಿಸಬೇಕು. ಎಲ್ಲೆಲ್ಲಿ ಅವರು ಕೆಲಸಮಾಡುವುದಕ್ಕೆ ಅನುಕೂಲಗಳಿವೆಯೋ ಅಲ್ಲಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳನ್ನು ಪ್ರಾರಂಭಮಾಡಿ ಅಲ್ಲಿ ತಯಾರಾಗುವ ಪದಾರ್ಥಗಳನ್ನು ಮಾರಾಟ ಮಾಡಲು ತಕ್ಕ ಅನುಕೂಲಗಳು ಆಗಬೇಕು. ಈಗ ನಿರುದ್ಯೋಗ ನಿವಾರಣೆಯಾಗಬೇಕು. ಆರ್ಥಿಕ ಪ್ರಗತಿಯಾಗಬೇಕು. ಹಾಗೆ ಮಾಡದೆ ಯಾವಾಗಲೂ ದೊಡ್ಡ ದೊಡ್ಡ ಇಂಡಸ್ಟ್ರೀಸ್‌ಗೆ ಪ್ರಾಶಸ್ತ್ಯ ಹಾಗೂ ಪ್ರಾತಿನಿಧ್ಯವನ್ನು ಕೊಟ್ಟುಕೊಂಡು ನಡೆಸಿಕೊಂಡು ಹೋದರೆ, ಅದರಿಂದ ಬಹಳ ತಪ್ಪಾಗುತ್ತದೆ. ಸರ್ಕಾರದಲ್ಲಿ ಏನೇನು ಉದ್ದಿಮೆಗಳಿವೆ, ಅವುಗಳಿಗೆ ಏನೇನು

(ಶ್ರೀ ಜಿ. ರಾಮೇಗೌಡ)

ಅನಾನುಕೂಲಗಳಿವೆಯೋ ಅವನ್ನು ಸರಿಪಡಿಸುತ್ತೇವೆಂದು ರಾಜ್ಯಪಾಲರು ಹೇಳಿದ್ದಾರೆ. ಈ ಸಭೆಯಲ್ಲಿ ಮಾನ್ಯ ಅರ್ಥಸಚಿವರು ಇದ್ದಾರೆ. ಅವರು ಎಸ್ಟಿಮೇಟ್ ಕಮಿಟಿಯ ಚೇರ್‌ಮನ್ ಆಗಿದ್ದರು. ನಾನೂ ಸಹ ಆ ಕಮಿಟಿಯ ಒಬ್ಬ ಸದಸ್ಯನಾಗಿದ್ದೆನು. ನಾನೂ ಮತ್ತು ಚೇರ್‌ಮನ್ ಅವರು ಒಂದು ಸಾರಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಭೇಟಿ ಕೊಟ್ಟಾಗ್ಗೆ ಅಲ್ಲಿ ನಡೆದಿರತಕ್ಕಂಥ ಘಟನೆಗಳ ಬಗ್ಗೆ ವಿಚಾರಮಾಡಿದ ಮೇಲೆ ಎಷ್ಟೋ ಕೋಟಿ ರೂಪಾಯಿಗಳ ವ್ಯವಹಾರ ನಡೆಸುತ್ತಿರುವ ಆ ಕಾರ್ಖಾನೆಯ ಬಗ್ಗೆ ಉತ್ತಮವಾದ ಆಡಳಿತ ನಡೆಸಬೇಕೆಂದೂ, ಅದನ್ನು ಇನ್ನೂ ಉತ್ತಮ ಪಡಿಸುವುದಕ್ಕೆ ಏನೇನು ಮಾಡಬೇಕೆಂಬುದನ್ನು ಅವರದೇ ಆದ ಒಂದು ಶೈಲಿಯಲ್ಲಿ ಒಂದು ವಿವರಣೆಯನ್ನು ಕೊಟ್ಟರು ಮತ್ತು ಅಲ್ಲಿ ಹೋಗಿ ಯಾರು ನೋಡಿದರೂ ಅಲ್ಲಿನ ವಿಷಯಗಳು ಚೆನ್ನಾಗಿ ಅರ್ಥವಾಗುವ ರೀತಿಯಲ್ಲಿ ಅವರೇ ಬರೆದುಕೊಟ್ಟರು.

ಆ ದಿವಸ ಆ ಸಮಿತಿಯ ಅಧ್ಯಕ್ಷರಾಗಿದ್ದವರು ಇಂದು ಹಣಕಾಸಿನ ಮಂತ್ರಿಗಳಾಗಿದ್ದಾರೆ. ಇವರು ದೊಡ್ಡ ವಿದ್ಯಾವಂತರು, ಮೇಧಾವಿಗಳು, ದಕ್ಷರು ಮತ್ತು ಶಕ್ತಿವಂತರು. ಇವರು ಈಗ ನಾನು ಹೇಳಿದ ನ್ಯೂನತೆಗಳನ್ನೆಲ್ಲಾ ಸರಿಪಡಿಸಬಲ್ಲರೆಂಬ ನಂಬಿಕೆ ನನಗಿದೆ. ಈ ವಿಚಾರದಲ್ಲಿ ಮಾನ್ಯ ಹಣಕಾಸಿನ ಸಚಿವರೂ ಮತ್ತು ಮಾನ್ಯ ಕೈಗಾರಿಕಾ ಸಚಿವರೂ ಮತ್ತು ಮಾನ್ಯ ಸಹಕಾರ ಸಚಿವರೂ ಒಟ್ಟಾಗಿ ಸೇರಿ ಈ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಒಂದು ಸರಿಯಾದ ಮಾರ್ಗವನ್ನು ಹಾಕುತ್ತಾರೆಂದು ನಂಬಿದ್ದೇನೆ. ಆದರೆ ಈ ಇಂಡಸ್ಟ್ರಿಯಲ್ ಸಹಕಾರ ಸಂಘಗಳ ವಿಚಾರ ಹೇಳುವುದಾದರೆ ನಮ್ಮ ದೊಡ್ಡಬಳ್ಳಾಪುರದ ಟೌನೊಂದರಲ್ಲಿಯೇ ಸುಮಾರು 7,000 ಪವರ್ ಲೂಮುಗಳಿವೆ. ಅಲ್ಲಿ 8 ಸಹಕಾರಿ ಇಂಡಸ್ಟ್ರಿಯಲ್ ಸಂಘಗಳಿವೆ. ಇವು ಆ ಲೂಮುಗಳವರಿಗೆ ಯಾವ ರೀತಿ ಮಾನ್ಯತೆ ಕೊಡುತ್ತಿದ್ದಾರೋ ಅವುಗಳನ್ನು ಯಾವ ರೀತಿ ಡೆವಲಪ್‌ಮೆಂಟ್ ಮಾಡುತ್ತಿದ್ದಾರೋ ಅದು ನನಗೆ ತಿಳಿಯುತ್ತಿಲ್ಲ. ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಪ್ರತಿ ತಿಂಗಳೂ 5 ಲಕ್ಷ ಕೇಜಿ ಇಂಡಿಜಿನಸ್ ರಾ ಸಿಲ್ಕ್ ಪವರ್‌ಲೂಮುಗಳವರಿಗೆ ಸಪ್ಲೈ ಆಗುತ್ತಿದ್ದರೂ ಅದೆಲ್ಲಾ ಯಾರದೋ ಒಬ್ಬರ ಮನೆಗೆ ಬಂದು ಬಿದ್ದು ಅಲ್ಲಿ ಅದು ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಯಾರು ಪವರ್ ಲೂಮಿನ ಮೇಲೆ ನಿಂತು ಕೆಲಸ ಮಾಡುತ್ತಾರೋ ಅಂಥವರಿಗೆ ಒಂದು ಕೇಜಿ ಕೂಡ ಸಪ್ಲೈಯಾಗುತ್ತಿಲ್ಲ. ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಅನೇಕ ಕಾಗದ ಪತ್ರಗಳನ್ನು ಬರೆದುದಾಯಿತು. ಮೂರು ತಿಂಗಳಿಗೆ ಈ ರಾಜಕ್ಕೆ 5 ಲಕ್ಷ ಕೇಜಿ ಇಂಡಿಜಿನಸ್ ರಾ ಸಿಲ್ಕ್ ಸಪ್ಲೈಯಾಗುತ್ತಿದೆ. ಪವರ್ ಲೂಮಿನ ಮೇಲೆ ನಿಂತು ಕೆಲಸಮಾಡತಕ್ಕವರಿಗೆ ಒಂದು ಮೊಳ ನೂಲು ಕೂಡ ಸಿಕ್ಕುತ್ತಿಲ್ಲ. ಕೇಜಿ ಒಂದಕ್ಕೆ 10 ರೂಪಾಯಿಗಳ ಲಾಭದಂತೆ ಕಾಳಸಂತೇಲಿ ಮಾರಾಟವಾಗುತ್ತಿದೆ. ಯಾವ ಕಾರ್ಮಿಕನಿಗೂ ಇದನ್ನು ಕೊಡುತ್ತಿಲ್ಲ. ಇದನ್ನು ಕೂಡಲೆ ಸರಿಪಡಿಸತಕ್ಕ ಬಗ್ಗೆ ನಾನಾಗಲೇ ಹೇಳಿದ ಮೂವರೂ ಮಂತ್ರಿಗಳು ಸೇರಿ ಒಂದು ಸಮಿತಿಯನ್ನು ಮಾಡಿ ಈ ನ್ಯೂನತೆಯನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಹಂಚಿಕೆಯ ಬಗ್ಗೆ ಸೊಸೈಟಿಗಳಿದ್ದರೂ ಏಕೆ ಇದರ ಹಂಚಿಕೆಯಾಗುತ್ತಿಲ್ಲ? ಈ ಅನ್ಯಾಯ ಶೋಷಣೆಗೆ ಯಾರು ಜವಾಬ್ದಾರರು ಎಂಬುದನ್ನು ಕೂಡಲೆ ಕಂಡುಹಿಡಿದು ಸೂಕ್ತ ಕ್ರಮ ಕೈಗೊಳ್ಳಬೇಕು. 5 ಲಕ್ಷ ಕೇಜಿ ಸಪ್ಲೈಯಾಗುತ್ತಿರುವಾಗ ಕೇಜಿ ಒಂದಕ್ಕೆ ಒಂದು ರೂಪಾಯಿನಂತೆ ಲಾಭಕ್ಕೆ ಮಾರಾಟ ಮಾಡಿದರೂ 5 ಲಕ್ಷ ಕೇಜಿಗೆ 5 ಲಕ್ಷ ರೂಪಾಯಿ ಲಾಭ ಬಂತು. ಹೀಗೆ ಇಲ್ಲಿ ಬಹಳ ಅನ್ಯಾಯ ನಡೆಯುತ್ತಿದೆ. ಆದರೆ ಈ ವಿಚಾರದಲ್ಲಿ ರೀಜನಲ್ ಸಮಿತಿಗಳನ್ನು ಮಾಡಿದ್ದಾರೆ. ಅದರಲ್ಲಿ ನಮ್ಮ ಸರ್ಕಾರದ ಅಧಿಕಾರಿಗಳು ಯಾರೂ ಇರುವುದಿಲ್ಲ. ಆದ್ದರಿಂದ ಇದನ್ನು ಸರಿಯಾಗಿ ವಿತರಣೆ ಮಾಡತಕ್ಕ ಹಾದಿಯಲ್ಲಿ ನಿಗಾ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಹೀಗಾಗಿ ಈ ಲೂಮುಗಳ ಮೇಲೆ ಕೆಲಸ ಮಾಡತಕ್ಕವರಿಗೆ ನೂಲು ಸರಬರಾಯಿ ಆಗದೆ ಇದ್ದ ಕಾರಣ ಅವರು ತಮ್ಮ ಹೊಟ್ಟೆಪಾಡಿಗೆ ಬೇರೆ ಜನರಲ್ಲಿ ಕೂಲಿಗೆ ಹೋಗಿ ಅವರು ಕೊಡತಕ್ಕ 1-2 ರೂಪಾಯಿಗಳಲ್ಲೇ ತೃಪ್ತಿಪಟ್ಟುಕೊಳ್ಳಬೇಕಾಗಿದೆ. ಅಂತೂ ಈ ನಾನಾ ಕಾರಣಗಳಿಂದ ಈ ನೇಯ್ಗೆಯವರ ಗೋಳನ್ನು ಹೇಳತೀರವಾಗಿದೆ—ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಈ ವಿಚಾರದಲ್ಲಿ ಶ್ರೀಮಾನ್ ನಾಗಣ್ಣನವರು ಅವರದೇ ಆದ ಧಾಟಿಯಲ್ಲಿ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿಸುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಈ ವಿಚಾರದಲ್ಲಿ ಹೆಚ್ಚಿಗೆ ಮಾತನಾಡುವುದಕ್ಕೆ ನಾನು ಇಷ್ಟ ಪಡುವುದಿಲ್ಲ. ನಾವು ಇಲ್ಲಿ ಪ್ರಜಾಪ್ರಭುತ್ವದ ಆಧಾರದ ಮೇಲೆ ಸಮತಾವಾದ ಸಮಾಜವನ್ನು ಹಾಗೂ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕೆಂದು ಸಂಕಲ್ಪ ಮಾಡಿಕೊಂಡು ಹೊರಟಿದ್ದೇವೆ. ಇದೇ ವಿಚಾರವನ್ನು ನಮ್ಮ ನಾಯಕರೂ ಮತ್ತು ನನ್ನ ಇತರ ಗೆಳೆಯರೆಲ್ಲರೂ ಹೇಳುತ್ತಿದ್ದಾರೆ. ಅದರಂತೆ ಅದನ್ನೇ

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY

ನಾನೂ ಕೂಡ ಹೇಳುವುದಕ್ಕೆ ಹೊರಟಿದ್ದೇನೆ. ಆದರೆ ನಾವೆಲ್ಲರೂ ಇಲ್ಲಿ ಮುಖ್ಯವಾಗಿ ಆಲೋಚನೆ ಮಾಡತಕ್ಕ ಒಂದು ವಿಷಯವೇನೆಂದರೆ ನಾನಾಗಲೇ ಹೇಳಿದ ಆ ಮೂರು ವಿಚಾರಗಳಲ್ಲಿ ಜನತೆಗೇನೊಂದು ಆಶ್ವಾಸನೆಯನ್ನು ಕೊಟ್ಟು ನಾವು ಇಲ್ಲಿಗೆ ಅವರಿಂದ ಆರಿಸಿ ಚುನಾಯಿತರಾಗಿ ಬಂದಿದ್ದೇವೋ ಅದನ್ನು ನಾವೀಗ ಕಾರ್ಯರೂಪಕ್ಕೆ ತರಬೇಕಾಗಿದೆ. ಈ ಕಾರ್ಯವನ್ನು ನಡೆಸಿ ಕೊಡಬೇಕಾದುದು ನಮ್ಮ ಪಕ್ಷದವರ ಹಾಗೂ ನಮ್ಮ ಸರ್ಕಾರದ ಒಂದು ದೊಡ್ಡ ಜವಾಬ್ದಾರಿ. ಜನರು ನಮ್ಮ ಕಾರ್ಯಗಳನ್ನೇ ಬಹಳ ಕಾತುರತೆಯಿಂದ ಎದುರು ನೋಡುತ್ತಿದ್ದಾರೆ. ಅವರೂ ಕೂಡ ಬಹಳ ಆಶಾವಾದಿಗಳಾಗಿದ್ದಾರೆ. ನಮ್ಮ ಮಾತಿನಲ್ಲಿ ಅವರು ಬಹಳ ಭರವಸೆಯನ್ನು ಇಟ್ಟುಕೊಂಡು ಕಾಯುತ್ತಿದ್ದಾರೆ. ಈ ದಿವಸ ರಾಜ್ಯದಲ್ಲಿರತಕ್ಕ ಒಬ್ಬ ಸಾಮಾನ್ಯ ಪ್ರಜೆಯೂ ಕೂಡ ಸಮಾಜವಾದ ಎಂದರೇನು ಎಂಬುದನ್ನು ಬಹಳ ಚೆನ್ನಾಗಿ ನಮಗಿಂತ ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಯಾರಿಗೆ ತಿನ್ನಲು ಹೊಟ್ಟೆಗಿಲ್ಲವೋ ಅವರು ಈ ಸಮಾಜವಾದವನ್ನು ಇನ್ನೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಒಂದು ದಿನ ಒಬ್ಬ ತೀರಾ ಬಡವನಾಗಿರತಕ್ಕ ವ್ಯಕ್ತಿ ನನ್ನ ಹತ್ತಿರ ಬಂದು ಏನು ಸ್ವಾಮಿ ನಮ್ಮ ರಾಜ್ಯದಲ್ಲಿ ಸಮಾಜವಾದವನ್ನು ತರುತ್ತಾರಂತೆ ನಿಜವೇ; ಸಮಾಜವಾದ ಎಂದರೆ ಈಗ ನಿಮ್ಮ ಮನೆಯಲ್ಲಿ ಹತ್ತು ಜೊತೆ ಎತ್ತುಗಳಿದ್ದು— ನನ್ನ ಮನೆಯಲ್ಲಿ ಒಂದು ಜೊತೆ ಎತ್ತು ಕೂಡ ಇಲ್ಲದಿದ್ದರೆ ನಿಮ್ಮ 10 ಜೊತೆ ಎತ್ತಿನಲ್ಲಿ ನನಗೆ ಐದು ಜೊತೆ ಎತ್ತುಗಳನ್ನು ಕೊಡಿಸುತ್ತಾರಂತೆ, ಹೌದೆ ಎಂದು ಕೇಳುತಿದ್ದ. ಅದೇ ರೀತಿ ತಮಗೆ 50 ಎಕ್ರೆ ಜಮೀನಿದ್ದರೆ 30 ಎಕರೆಗಳನ್ನು ತಮಗೆ ಬಿಟ್ಟು ಇನ್ನುಳಿದ 20 ಎಕರೆಗಳನ್ನು ಭೂಹೀನ ರೈತರಿಗೆ ಕೊಡಿಸುತ್ತಾರಂತೆ, ಅಂಥ ಸರ್ಕಾರ ಬರುತ್ತಂತೆ ನಿಜವೇ ಸ್ವಾಮಿ ಅಂತ ಕೇಳುತ್ತಿದ್ದ. ಆ ದಿವಸ ನಾನು ಆತನಿಗೆ ಈ ಚುನಾವಣೆಗಳಲ್ಲಿ ನಾನು ಮತ್ತು ನಮ್ಮ ಇಂದಿನ ಮುಖ್ಯ ಮಂತ್ರಿಗಳೂ ಗೆದ್ದು ಬಂದರೆ ಅಂಥ ಸರ್ಕಾರವನ್ನು ಜಾರಿಗೆ ತರಬೇಕೆಂಬ ಇರಾದೆ ನಮಗಿರುತ್ತೆಂದು ಹೇಳಿದ್ದೆ. ಅಂತೂ ಜನ ಸಮಾಜವಾದ ಎಂದರೇನು ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ನಾನು ದೇವರಲ್ಲಿ ನಂಬಿಕೆಯುಳ್ಳಂಥ ಒಬ್ಬ ಮನುಷ್ಯ. ನಮ್ಮ ಸರ್ಕಾರಕ್ಕೆ ಹಾಗೂ ನಮ್ಮ ಮುಖ್ಯ ಮಂತ್ರಿಗಳಿಗೆ ಭಗವಂತನು ಅಂಥ ಒಂದು ಶಕ್ತಿಯನ್ನು ಕೊಟ್ಟು ನಾವು ಕೊಟ್ಟಿರತಕ್ಕ ವಚನವನ್ನು ಪರಿಪಾಲಿಸುವಂತೆ ಮಾಡಲೆಂದು ಆಶಿಸುತ್ತೇವೆ. ಶ್ರೀ ಮಹಾ ವಿಷ್ಣುವಿಗೆ ಪ್ರಾರಂಭದಲ್ಲಿ ಕೇವಲ ಎರಡು ಕೈಗಳು ಮಾತ್ರ ಇದ್ದವು. ಒಂದು ಕೈಲಿ ಅಭಯಾಸ್ತ್ರ—ಇನ್ನೊಂದು ಕೈಲಿ ಶಂಖ ಇಷ್ಟೇ ಇದ್ದದ್ದು. ಆಗ ಜನರೆಲ್ಲರೂ ಬಹಳ ಸುಖವಾಗಿದ್ದರು. ಆದರೆ ಇತ್ತೀಚೆಗೆ ಪ್ರಪಂಚದಲ್ಲಿ ಪುಂಡರ, ಪುಡಾರಿ ಜನರ ಸಂಖ್ಯೆ ಬಹಳ ಹೆಚ್ಚಾಗಿ, ಇವರ ಅವಾಂತರವನ್ನು ತಡೆಗಟ್ಟಲು ಅವನು ನಾಲ್ಕು ಕೈಗಳನ್ನು ಹೊಂದಬೇಕಾಯಿತು. ಸಜ್ಜನರನ್ನು ರಕ್ಷಿಸಿ ದುರ್ಜನರನ್ನು ಶಿಕ್ಷಿಸುವುದಕ್ಕಾಗಿ ಒಂದು ಗಧೆ ಮತ್ತು ಒಂದು ಚಕ್ರ ಇಷ್ಟನ್ನು ಇಟ್ಟುಕೊಳ್ಳಬೇಕಾಯಿತು. ಹಾಗೇನೆ ನಾವು ನಮ್ಮ ಜನಕ್ಕೆ ಕೊಟ್ಟಿರತಕ್ಕ ವಚನವನ್ನು ನಡೆಸತಕ್ಕ ದಿಶೆಯಲ್ಲಿ ನಮ್ಮ ಸರ್ಕಾರಕ್ಕೂ ಮತ್ತು ನಮ್ಮ ಮುಖ್ಯ ಮಂತ್ರಿಗಳಿಗೂ ಅಂಥ ಒಂದು ಅಪಾರ ಶಕ್ತಿಯನ್ನು ದೇವರು ಕೊಡಲಿ, ಇವರಿಗೆ ಅಧಿಕಾರ ಕೈಗೆ ಬಂದು ಸ್ವಲ ದಿನಗಳೇ ಆಗಿದ್ದರೂ ಆ ಸಮಾಜವಾದದ ತಿರುಳನ್ನು ಜನಕ್ಕೆ ತಂದುಕೊಟ್ಟು ತಮ್ಮ ವಾಗ್ದಾನವನ್ನು ಸಂಪೂರ್ಣವಾಗಿ ನಡೆಸಿಕೊಡುತ್ತಾರೆಂದು ನಂಬಿ ನಾನು ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದ ಬಗ್ಗೆ ಅವರಿಗೆ ನನ್ನ ಕೃತಜ್ಞತ ಪೂರ್ವಕವಾದ ಅಭಿನಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಸೋಮವಾರಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೇ ರಾಜ್ಯಪಾಲರು ಭಾಷಣವನ್ನು ನಾನು ಅನುಮೋದಿಸುತ್ತೇನೆ. ಅಲ್ಪ ಸಮಯದಲ್ಲಿ ಇಷ್ಟೊಂದು ಅನೇಕ ರೀತಿಯ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ. ಮುಖ್ಯವಾಗಿ ಬಾಂಗ್ಲಾ ದೇಶದ ವಿಚಾರವಾಗಿ ಯುದ್ಧದಲ್ಲಿ ಮಡಿದ ಸೈನಿಕರ ಕುಟುಂಬದವರಿಗೆ ಮತ್ತು ಯುದ್ಧದಲ್ಲಿ ಭಾಗವಹಿಸಿದಂತಹ ನಮ್ಮ ಅನೇಕ ಸೈನಿಕರಿಗೆ ಅನೇಕ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರ ಘೋಷಣೆ ಮಾಡಿರುವುದು ಬಹಳ ಸ್ವಾಗತಿಸುವಂಥಾದ್ದು. ಅನೇಕ ವರ್ಷಗಳಿಂದಲೂ ಸಹ ನಾವು ಸೈನ್ಯದಲ್ಲಿ ಕೆಲಸ ಮಾಡಿದಂತಹವರಿಗೆ ಯಾವ ರೀತಿ ಗೌರವವನ್ನು ಕೊಡಬೇಕಾಗಿತ್ತೋ, ಯಾವ ರೀತಿಯ ಸೌಲಭ್ಯವನ್ನು ಕೊಡಬೇಕಾಗಿತ್ತೋ ಅದನ್ನು ನಾವು ಕೊಡುತ್ತಾ ಇರಲಿಲ್ಲ. ಕಳೆದ ಪಾಕಿಸ್ತಾನದ ಯುದ್ಧದಲ್ಲಿ ಮತ್ತು ಚೈನಾದ ಜೊತೆಗೆ ಯುದ್ಧವಾದ ಮೇಲೆ ಸೈನಿಕರಿಗೆ ಏನು ಬೇಕು ಕೊಡಬೇಕು ಮತ್ತು ಅವರ ಕುಟುಂಬದವರಿಗೆ ಯಾವ ತರಹ ಸಹಾಯ ಮಾಡಬೇಕು ಎನ್ನುತಕ್ಕಂಥಾದ್ದಕ್ಕೆ ನಮ್ಮ ಸರ್ಕಾರ ಗಮನಕೊಟ್ಟಿರುವುದು ಸ್ವಾಗತಾರ್ಹವಾದ ವಿಷಯ. ಯುದ್ಧದಲ್ಲಿ ಮಡಿದಂಥ ಮತ್ತು ಯುದ್ಧಕ್ಕೆ ಹೋದಂಥ ಸೈನಿಕರ ಕುಟುಂಬದವರು ಬಹಳ ಕಷ್ಟಕ್ಕೆ ಈಡಾಗಿರುವುದು ನನಗೆ ಚೆನ್ನಾಗಿ ಗೊತ್ತು. ಏಕೆಂದರೆ ನಮ್ಮ ಜಿಲ್ಲೆಯಲ್ಲಿ ಬಹುಶಃ ಮೈಸೂರು ದೇಶದಲ್ಲಿ 100ಕ್ಕೆ 80ಜನ ಸೈನಕ್ಕೆ ಸೇರಿದ್ದಾರೆ ಎಂದರೆ ಅದು ನಮ್ಮ ಕೊಡಗು ಜಿಲ್ಲೆಯಲ್ಲೇ. ಆದರೆ ಸೈನ್ಯದಲ್ಲಿ ಮಡಿದಂಥವರ ಕುಟುಂಬದವರು

(ಶ್ರೀ ಆರ್. ಗುಂಡೂರಾವ್)

ನಾಲ್ಕು ಎಕರೆ ಅಥವಾ ಐದು ಎಕರೆ ಜಾಗಕ್ಕೆ ಅವರು ಪಡತಕ್ಕ ಕಷ್ಟ ನೆನೆಸಿಕೊಂಡರೆ ಬೇಜಾರು ಆಗುತ್ತದೆ. ಅವರು ಕೇವಲ ನಾಲ್ಕು ಎಕರೆ ಜಾಗಕ್ಕೆ ತಹಸೀಲ್ದಾರರ ಆಫೀಸು, ಡೆಪ್ಯೂಟಿ ಕಮಿಷನರ್ ರವರ ಆಫೀಸಿಗೆ ಹೋಗಿ ಅವರು ಪಡುವ ಕಷ್ಟ ನೆನೆಸಿಕೊಂಡರೆ ನಿಜವಾಗಿಯೂ ಸರ್ಕಾರ ಅವರಿಗೆ ಯಾವರೀತಿಯಲ್ಲಿ ಒಂದು ಸೌಲಭ್ಯವನ್ನು ಕೊಡಬೇಕೋ ಅದನ್ನು ಕೊಡುತ್ತಾ ಇರಲಿಲ್ಲ ಎಂದು ಕಂಡು ಬರುತ್ತದೆ. ಇತ್ತೀಚೆಗೆ ಸರ್ಕಾರದವರು ಅವರ ಕಷ್ಟವನ್ನು ಮನಗಂಡು ಅವರ ಕುಟುಂಬದವರಿಗೆ ಸಾಲದ ರೂಪದಲ್ಲಿ ಹಣಸಹಾಯ ಮಾಡುತ್ತಿದ್ದಾರೆ. ಇವರಿಗೆ ಜಾಗ ಕೊಡುವುದಕ್ಕೆ, ಇವರ ಮಕ್ಕಳಿಗೆ ಉಚಿತವಾಗಿ ವಿದ್ಯಾಭ್ಯಾಸ ಕೊಡುವುದಕ್ಕೆ, ಮತ್ತು ಇನ್ನೂ ಹೆಚ್ಚಿನ ಸೌಲಭ್ಯವನ್ನು ಒದಗಿಸಿಕೊಡುವುದಕ್ಕೆ ಸರ್ಕಾರದ ಮಟ್ಟದಲ್ಲಿ ಒಂದು ಅಧಿಕಾರಿಗಳ ಕಮಿಟಿಯನ್ನು ನೇಮಕ ಮಾಡಿ ಯಾವ ಯಾವ ಸೈನಿಕರು ಎಲ್ಲಿದ್ದಾರೆ ಅವರ ಕುಟುಂಬದವರಿಗೆ ಯಾವ ತರಹ ತೊಂದರೆಗಳಾಗುತ್ತಿವೆ ಎನ್ನುವುದನ್ನು ತಿಳಿಯಬೇಕು. ಇವರಿಗೆ ತಹಸೀಲ್ದಾರರ ಆಫೀಸಿನಿಂದ, ಡೆಪ್ಯೂಟಿ ಕಮಿಷನರ್ ರವರ ಆಫೀಸಿನಿಂದ, ಮತ್ತು ಡಿವಿಜನಲ್ ಕಮಿಷನರ್‌ರವರ ಆಫೀಸಿನಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಆದ್ದರಿಂದ ಒಂದು ಕಮಿಟಿ ಮಾಡಿ ಸೈನಿಕ ಕುಟುಂಬದವರಿಗೆ ನಾವು ಹೆಚ್ಚಿನ ಒಂದು ಸೌಲಭ್ಯ ಕೊಟ್ಟರೆ ನಮ್ಮ ದೇಶದ ಭದ್ರತೆ, ನಮ್ಮ ದೇಶದ ಗೌರವ ಇನ್ನೂ ಹೆಚ್ಚಿನ ಮಟ್ಟಕ್ಕೆ ಹೋಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಈ ಒಂದು ಸಲಹೆ ಮಾಡಲಿಕ್ಕೆ ಇಷ್ಟಪಡುತ್ತೇನೆ.

ಅದೇ ರೀತಿಯಲ್ಲಿ ರಾಜ್ಯಪಾಲರು ಕನ್ನಡವನ್ನು ಒಂದು ಸರ್ಕಾರಿ ಭಾಷೆಯನ್ನಾಗಿ ಮಾಡುವ ವಿಚಾರದಲ್ಲಿ ಸೂಕ್ತವಾದಂಥ ವಿಚಾರವನ್ನು ತಿಳಿಸಿದ್ದಾರೆ. ಆದಷ್ಟು ಬೇಗ ಸರ್ಕಾರದವರು ಕನ್ನಡವನ್ನು ರಾಜ್ಯದಲ್ಲಿ ಅಧಿಕೃತ ಭಾಷೆಯನ್ನಾಗಿ ಅಂಗೀಕರಿಸಿ ಎಲ್ಲಾ ಮಟ್ಟದಲ್ಲಿ ಮಾಡಬೇಕು. ರಾಜ್ಯಪಾಲರ ಭಾಷಣದ ಪ್ರಕಾರ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲ ರಾಜ್ಯ ಮಟ್ಟದಲ್ಲೂ ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರುವುದಕ್ಕೆ ಆದಷ್ಟು ಬೇಗ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಆಮೇಲೆ ಲ್ಯಾಂಡ್ ರಿಫಾರಮ್ಸ್ ಮತ್ತು ರೆವಿನ್ಯೂ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ರಾಜ್ಯಪಾಲರು ಹೇಳಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಸರ್ಕಾರಿ ಜಾಗ ಎಷ್ಟುಮಟ್ಟಿಗೆ ದುರುಪಯೋಗವಾಗುತ್ತಿದೆ ಎನ್ನುವುದನ್ನು ಪರಿಶೀಲಿಸಲು ಒಂದು ಸ್ಟೇಟ್ ಕಮಿಟಿ ನೇಮಕ ಮಾಡಬೇಕೆಂದು ರೆವಿನ್ಯೂ ಮಂತ್ರಿಗಳನ್ನೂ ಮತ್ತು ಮುಖ್ಯಮಂತ್ರಿಗಳನ್ನೂ ಕೇಳಿ ಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಏಕೆಂದರೆ ಯಾವ ಹರಿಜನರಿಗೆ ಗಿರಿಜನರಿಗೆ, ಬಡವರಿಗೆ ಮತ್ತು ಜಾಗ ಇಲ್ಲದವರಿಗೆ ಜಾಗ ಕೊಡಬೇಕು ಎಂದು ತೀರ್ಮಾನವನ್ನು ಮಾಡಿತ್ತೋ, ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿತ್ತೋ, ಆ ಕಾರ್ಯಕ್ರಮಕ್ಕೆ ತದ್ವಿರುದ್ಧವಾಗಿ ಜಾಗಗಳನ್ನು ಮಂಜೂರು ಮಾಡಿದ್ದಾರೆ. ಕಳೆದ ಮೂರು ವರ್ಷಗಳ ಹಿಂದೆ ಗುಜರಾತಿನ ಒಬ್ಬ ಮನುಷ್ಯನಿಗೆ ಮೂರು ಸಾವಿರ ಎಕರೆ ಸರ್ಕಾರಿ ಜಾಗವನ್ನು 99ವರ್ಷಗಳ ಲೀಸ್ ಮೇಲೆ ಹಿಂದಿನ ಸರ್ಕಾರ ಯಾವ ತರಹ ಪರಿಹಾರವನ್ನು ತೆಗೆದುಕೊಳ್ಳದೆ ಕೊಟ್ಟಿದೆ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಮತ್ತು ಇದರ ಬಗ್ಗೆ ತಾವು ಕೂಡಲೇ ವಿಚಾರಣೆ ನಡೆಸಬೇಕು. ಕಾವೇರಿ ಹೊಳೆ ದಡದಲ್ಲಿ ಮೂರು ಸಾವಿರ ಎಕರೆ ಜಮೀನನ್ನು ಏತ ಕೋಸ್ಕರ ಕೊಡಬೇಕಾಗಿತ್ತು ! ಯಾವ ಕಾರ್ಯಕ್ಕೋಸ್ಕರ ಕೊಟ್ಟರು ! ಎಷ್ಟೋ ಜನ ಹರಿಜನ ಗಿರಿಜನರು ಜಾಗಕ್ಕೋಸ್ಕರ ಅರ್ಜಿ ಹಾಕಿಕೊಂಡಿದ್ದರೂ ಅವರಿಗೆ ಯಾರಿಗೂ ಕೊಡದೆ ಬೇರೆಯವರಿಗೆ ಕೊಟ್ಟಿದ್ದಾರೆ. ನಾನು ಈಗಿನ ಸರ್ಕಾರದ ಬಗ್ಗೆ ಹೇಳುತ್ತಿಲ್ಲ. ಹಿಂದಿನ ಸರ್ಕಾರ ಆ ಮೂರು ಸಾವಿರ ಎಕರೆ ಜಾಗವನ್ನು ನಮ್ಮ ಊರಿಗೆ ಒಂದು ಮೈಲಿ ದೂರದಲ್ಲಿ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆ ಜಾಗದ ಬೆಲೆ ಲಕ್ಷಾಂತರ ರೂಪಾಯಿ ಆಗುತ್ತದೆ. ಏಕೆಂದರೆ ಅಲ್ಲಿ ಬೇಕಾದಷ್ಟು ಬೀಟೆ ಮರಗಳು ಇವೆ. ಇಂತಹ ಮರಗಳನ್ನು ಹಗಲು ರಾತ್ರಿ ಸರ್ಕಾರಕ್ಕಾಗಲೀ, ಬೇರೆ ವ್ಯಾಪಾರಸ್ಥರಿಗಾಗಲೀ ಪ್ರಯೋಜನಕ್ಕೆ ಬಾರದ ಹಾಗೆ ಬೆಂಕಿಯಲ್ಲಿ ಸುಟ್ಟ ನಿದರ್ಶನಗಳು ಇವೆ. ಇದನ್ನೆಲ್ಲಾ ಆಗಿನ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಆದರೆ ಇದುವರೆಗೂ ಯಾವ ತರಹ ವಿಚಾರಣೆ ಆಗಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಚಾರಣೆ ನಡೆಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಮತ್ತು ಅನೇಕ ಭಾಗಗಳಲ್ಲಿ ಸರ್ಕಾರೀ ಜಾಗಗಳಿಗೆ ಮಂಜೂರಾತಿಯನ್ನು ಪಡೆಯದೆ ಸಾವಿರಾರು ಎಕರೆ ಭೂಮಿಯನ್ನು ಅಕ್ರಮವಾಗಿ ತೆಗೆದುಕೊಂಡು ಇವತ್ತಿನವರೆಗೂ ವ್ಯವಸಾಯ ಮಾಡುತ್ತಿದ್ದಾರೆ. ಇದು 10ಸಾವಿರ ಎಕರೆಗೂ ಮೇಲ್ಪಟ್ಟು ಇರಬಹುದು. ಇದರ ಬಗ್ಗೆ ಅನೇಕ ತರಹ ಪುಕಾರುಗಳನ್ನು ತಹಸೀಲ್ದಾರರವರಿಗೂ, ಡೆಪ್ಯೂಟಿ ಕಮಿಷನರರವರಿಗೂ ಮತ್ತು ಹಿಂದಿದ್ದ ಮಂತ್ರಿಮಂಡಲಕ್ಕೆ ಕೊಟ್ಟರೂ ಯಾವ ಕಾರ್ಯಕ್ರಮ ಕೈಗೊಂಡಿಲ್ಲ. ನಾವು

ಸಮಾಜವಾದವನ್ನು ಜಾರಿಗೆ ತರುತ್ತೇವೆ ಎಂದು ನಮ್ಮ ಜನಗಳ ಮುಂದೆ ಆಶ್ವಾಸನೆ ಕೊಟ್ಟು ಬಂದಿದ್ದೇವೆ. ಆದ್ದರಿಂದ ಸರ್ಕಾರದವರು ಅಂಥ ಅನ್ಯಾಯಗಳನ್ನು ನಿಜವಾಗಿಯೂ ಸರಿಪಡಿಸ ಬೇಕಾದುದು ಆದ್ಯ ಕರ್ತವ್ಯ. ಹಿಂದೆ ಆದಂಥ ಅನ್ಯಾಯಗಳು ಮುಂದೆ ಆಗಲಿಕ್ಕೆ ಅವಕಾಶ ಕೊಡಬಾರದು.

ಸರ್ಕಾರ ಇಂಥ ಒಂದು ಪರಿಸ್ಥಿತಿಯನ್ನು ಬದಲಾವಣೆ ಮಾಡಬೇಕಾದರೆ ನನ್ನ ಒಂದು ವೈಯಕ್ತಿಕ ಸಲಹೆ ಏನೆಂದರೆ ಈ ಡಿವಿಷನಲ್ ಕಮಿಷನರುಗಳ ಆಫೀಸನ್ನು ರದ್ದು ಮಾಡಬೇಕು ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ರೈತರಿಗೆ ಅನೇಕ ಸಂದರ್ಭಗಳಲ್ಲಿ ಬಹಳ ತೊಂದರೆಯಾಗುತ್ತದೆ. ಡೆಪ್ಯೂಟಿ ಕಮಿಷನರ್‌ರವರಿಗೆ ಇರುವಂತಹ ಅಧಿಕಾರವನ್ನು ಸ್ವಲ್ಪ ಹೆಚ್ಚು ಮಾಡಿ ರೈತರಿಗೆ ಪರಿಹಾರ ಕೊಡುವಂತೆ ಮಾಡಿ, ಈಗಿರತಕ್ಕಂಥ ಕ್ರಮದಲ್ಲಿ ತಹಸೀಲ್ದಾರ್ ಆಫೀಸಿನಿಂದ, ಡೆಪ್ಯೂಟಿ ಕಮಿಷನರ್ ಆಫೀಸು ಡಿವಿಷನಲ್ ಕಮಿಷನರ್ ಆಫೀಸು ಎಂದು ಯಾವ ಕಾರಣಗಳು ಇಲ್ಲದೆ ಬಹಳ ಜನಗಳು ಅಲೆಯುವಂಥ ಕೆಲಸವಾಗಿದೆ. ಇದಕ್ಕೆ ಅನೇಕ ನಿದರ್ಶನಗಳು ಇವೆ. ಆದ್ದರಿಂದ ಸರ್ಕಾರದವರು ಈ ಡಿವಿಷನಲ್ ಕಮಿಷನರ್‌ಗಳ ಆಫೀಸನ್ನು ರದ್ದು ಮಾಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ ಮತ್ತು ಜನರಿಗೂ ಅನುಕೂಲವಾಗುತ್ತದೆ ಎಂದು ಈ ಸಮಯದಲ್ಲಿ ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ವಿದ್ಯಾವಂತರ ನಿರುದ್ಯೋಗ ಸಮಸ್ಯೆ, ಇದು ನಮ್ಮ ಮುಂದಿರುವ ಒಂದು ದೊಡ್ಡ ಸಮಸ್ಯೆ. ವಿದ್ಯಾವಂತರ ನಿರುದ್ಯೋಗ ಸಮಸ್ಯೆ ದಿನ ದಿನಕ್ಕೂ ಹೆಚ್ಚುತ್ತಿದೆ. ನಾವು ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರಬೇಕಾದರೆ ಈ ವಿದ್ಯಾವಂತರಿಗೆ ಸರಿಯಾದಂಥ ಕೆಲಸಗಳನ್ನು ಒದಗಿಸುವ ಅವಕಾಶ ಮಾಡಿಕೊಡಬೇಕು. ಸರಿಯಾದಂಥ ಕೆಲಸಗಳನ್ನು ನಾವು ಅವರಿಗೆ ಕೊಡದೇ ಹೋದರೆ ದೇಶದಲ್ಲಿ ಶಾಂತಿಯಾಗಲೀ ಅಥವಾ ಜನತೆಗೆ ಸೌಲಭ್ಯವಾಗಲೀ ಸಿಕ್ಕುವಂತಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟು ಈ ಸಮಸ್ಯೆಯನ್ನು ಪರಿಹರಿಸಿ, ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಕೈಗಾರಿಕಾ ಕ್ಷೇತ್ರದಲ್ಲಾಗಲೀ ವ್ಯವಸಾಯ ಕ್ಷೇತ್ರದಲ್ಲಾಗಲೀ ಅಥವಾ ಸರ್ಕಾರಿ ಕ್ಷೇತ್ರದಲ್ಲಾಗಲೀ ಯಾವುದೇ ಒಂದು ರೀತಿಯಲ್ಲಿ ಅವರಿಗೆ ಸೌಲಭ್ಯವನ್ನು ಒದಗಿಸಿಕೊಡಬೇಕು. ತಾವು ಮುಂದಾದರೂ ಒಂದು ಕಮಿಟಿಯನ್ನು ಮಾಡಿ ಅದರಲ್ಲಿ ತಿಳುವಳಿಕೆಯಿರುವವರ ಸಲಹೆಯನ್ನು ಪಡೆದು ಒಂದು ಯೋಜನೆಯನ್ನು ಕೈಕೊಳ್ಳಬೇಕು ಎಂದು ಈ ಸಮಯದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಾಹನ ಸೌಕರ್ಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ರಾಷ್ಟ್ರೀಕರಣವಾದ ಮೇಲೆ ಬಸ್ಸುಗಳಿಂದ ಜನಗಳಿಗೆ ಆಗುತ್ತಿರುವ ಕಷ್ಟ ಅಷ್ಟಿಷ್ಟಲ್ಲ. ಬರೀ ಭಾಷಣ ಮಾಡಿದರೆ, ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟರೆ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಈಗ ಬಸ್ಸುಗಳಲ್ಲಿ ಬೆಳಗ್ಗೆ ಹೊರಟರೆ 10 ಗಂಟೆಗೆ ತಲುಪಬೇಕಾದ ಬಸ್ಸು 4 ಗಂಟೆಯಾದರೂ ಬಂದಿರುವುದಿಲ್ಲ. ಇದರಿಂದ ಹೆಂಗಸರು ಒಬ್ಬರೇ ಪ್ರಯಾಣ ಮಾಡಿದರೆ ಅವರ ಕಷ್ಟ ಹೇಳತೀರದು. ಸಾಮಾನುಗಳನ್ನು ನೀವೇ ಇಳಿಸಿಕೊಳ್ಳಬೇಕು ಎಂದು ಕಂಡಕ್ಟರ್ ಬೇಜವಾಬ್ದಾರಿಯಿಂದ ವರ್ತಿಸುತ್ತಾನೆ. ಬಸ್ಸುಗಳು ಸರಿಯಾದ ಸಮಯದಲ್ಲಿ ಬಾರದೆ ಇರುವುದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಅನೇಕ ಕಡೆಗಳಲ್ಲಿ ಈ ಬಸ್ಸುಗಳ ಸೌಲಭ್ಯವನ್ನು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರದವರನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮತ್ತೆ ಸರ್ಕಾರಕ್ಕೆ ಮೋಸ ಮಾಡಿ ಅನೇಕ ತರಹ ಖಾಸಗೀ ಬಸ್ಸುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಓಡಿಸುತ್ತಿದ್ದಾರೆ. ನಾವು ಎಲ್ಲಾ ಸದಸ್ಯರುಗಳು ಸೇರಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಒಂದು ತೀರ್ಮಾನ ಮಾಡದೆ ಹೋದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ಏಕೆಂದರೆ ಈ ದಿನ "ಆನ್ ಕಂಟ್ರಾಕ್ಟ್" ಬೋರ್ಡು ಹಾಕಿಕೊಂಡು ನೂರಾರು ಬಸ್ಸುಗಳು ಓಡಾಡುತ್ತಿವೆ. ಬೆಂಗಳೂರಿನಿಂದ, ಮಂಗಳೂರಿಗೆ ಮೈಸೂರಿಗೆ ಮತ್ತು ಬೆಳಗಾಂಗೆ ಓಡಾಡುತ್ತವೆ. ನಾವು ಬಸ್ಸುಗಳ ರಾಷ್ಟ್ರೀಕರಣ ಮಾಡಿದ ಉದ್ದೇಶವಾದರೂ ಏನು ? ರಾಷ್ಟ್ರೀಕರಣವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಇಲ್ಲವೇ ಕೈಬಿಡಬೇಕು. ನಮ್ಮ ರಾಜ್ಯದಲ್ಲಿ ಸರ್ಕಾರಿ ಬಸ್ಸುಗಳ ಜೊತೆಗೆ ಖಾಸಗೀ ಬಸ್ಸುಗಳು ಓಡಾಡುತ್ತಿವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಅಧಿಕಾರಿಗಳಿಗೆ ಹೆಚ್ಚಿನ ಪ್ರಯೋಜನವಾಗುತ್ತದೆ. ಇವೊತ್ತು ರಾಷ್ಟ್ರಪತಿಯವರಿಗೆ ಪ್ರಧಾನಮಂತ್ರಿಯವರಿಗೆ ಮತ್ತು ಮುಖ್ಯಮಂತ್ರಿಗಳೂ, ಶಾಸಕರೂ ಯಾರಿಗೂ ಇಲ್ಲದಂಥ ಹೆಚ್ಚಿನ ಉತ್ಪತ್ತಿ ಸರ್ಕಾರದ ಒಬ್ಬ ಆರ್. ಟಿ. ಓ, ರೇಂಜ್ ಆಫೀಸರ್ ಮತ್ತು ಸೇಲ್ಸ್ ಟ್ಯಾಕ್ಸ್ ಆಫೀಸರುಗಳಿಗೆ ಬರುತ್ತಿದೆ ಎಂದು ನಾನು ಘಂಟಾ ಘೋಷವಾಗಿ ಸರ್ಕಾರದ ಮುಂದೆ ಅರಿಕೆ ಮಾಡಿಕೊಳ್ಳುತ್ತೇನೆ. ಏಕೆಂದರೆ ಕೊಡಗಿನಲ್ಲಿ ಒಬ್ಬ ರೇಂಜರ್‌ಗೆ 10-20 ಲಕ್ಷ ರೂಪಾಯಿ ಆಸ್ತಿ ಇದೆ. ಇವರಿಗೆ ಒಂದು ಲಕ್ಷ

(ಶ್ರೀ ಆರ್. ಗುಂಡೂರಾವ್)

ರೂಪಾಯಿ ಬೆಲೆ ಬಾಳುವ ಬಂಗಲೆಗಳಿರುತ್ತವೆ. ಬೆಂಗಳೂರಿನಲ್ಲಿ ಯಾರಾದರೂ ಮಿನಿಸ್ಟರು ಒಂದು ಸೈಟ್ ಮಾಡಿದರೆ ಅಥವಾ ಶಾಸಕರು ಸೈಟು ಮಾಡಿದರೆ ಅಥವಾ ಒಂದು ಲೈಸೆನ್ಸ್ ತೆಗೆದುಕೊಂಡರೆ ಅವರ ಮೇಲೆ ಆಪಾದನೆ ಮಾಡುತ್ತಾರೆ. ಆದರೆ ನಿಜವಾಗಿಯೂ ಅರಣ್ಯ ಸ್ವತ್ತು ಯಾವರೀತಿ ಲೂಟಿಯಾಗುತ್ತಿದೆ ಎಂದು ತಿಳಿದುಕೊಳ್ಳಬೇಕಾದರೆ, ಮೈಸೂರಿನಿಂದ ಕೇರಳಕ್ಕೆ ಆಗುವ ಕಳ್ಳಸಾಗಾಣಿಕೆಯನ್ನು ನೋಡಿದರೆ ಗೊತ್ತಾಗುತ್ತದೆ. ಈ ಕಳ್ಳಸಾಗಾಣಿಕೆ ಅಧಿಕಾರಿಗಳ ತಂಡದ ಒಂದು ಸಂಘಟನೆಯಿಂದ ಮತ್ತು ಷಾಮೀಲಿನಿಂದ ನಡೆಯುತ್ತಿದೆ. ಇದು ಚೀಫ್ ಕನ್ಸರ್ವೇಟರ್ ನಿಂದ ಹಿಡಿದು ಒಬ್ಬ ಗಾರ್ಡ್‌ವರಿಗೂ ನಡೆಯುತ್ತಿದೆ. ದಯವಿಟ್ಟು ಸರ್ಕಾರದವರು ಅರಣ್ಯ ಹಾಳಾಗುವುದನ್ನು ಕೂಡಲೇ ನಿಲ್ಲಿಸಬೇಕು. ಇದರ ಕಡೆ ಹೆಚ್ಚಿನ ಗಮನ ಕೊಡದೆ ಹೋದರೆ ಇದರಿಂದ ಜನತೆಗಾಗಲೀ, ಸರ್ಕಾರಕ್ಕಾಗಲಿ ಏನೂ ಉಪಯೋಗವಾಗುವುದಿಲ್ಲ. ಅರಣ್ಯವನ್ನು ಎರಡು ರೀತಿಯ ಉಪಯೋಗದಿಂದ ಬೆಳೆಸಬೇಕು. ಒಂದು ಮಳೆ ಬರುವುದಕ್ಕೆ ಅರಣ್ಯ ಬೆಳೆಸಬೇಕು ಇನ್ನೊಂದು ರೀತಿಯಲ್ಲಿ ಕಾಡು ಪ್ರಾಣಿಗಳ ಸಂರಕ್ಷಣೆಗೆ ಅರಣ್ಯ ಬೆಳೆಸಬೇಕು. ಅಲ್ಲದೆ ನಮ್ಮ ಐಶ್ವರ್ಯವನ್ನೂ ಕೂಡ ಸಂಪಾದಿಸುವುದಕ್ಕಾಗಿ ಅರಣ್ಯ ಸಂಪತ್ತನ್ನು ಬೆಳೆಸಬೇಕು. ಈ ದೃಷ್ಟಿಯಿಂದ ಅರಣ್ಯ ಇಲಾಖೆಯನ್ನು ಶುದ್ಧೀಕರಣ ಮಾಡಬೇಕು ಇಲ್ಲದೇ ಹೋದರೆ ದೇಶಕ್ಕೆ ಕ್ಷೇಮ ಇಲ್ಲ ಎಂದು ಹೇಳುತ್ತೇನೆ.

ಇನ್ನು ಆರ್.ಟಿ.ಓ ಆಫೀಸಿನಲ್ಲಿರುವ ಕೆಲವು ನ್ಯೂನತೆಗಳನ್ನು ಹೇಳಬೇಕಾಗಿದೆ. ಟ್ರಾನ್ಸ್‌ಪೋರ್ಟ್ ಮಂತ್ರಿಗಳು ಈ ಸಭೆಯಲ್ಲಿ ಇಲ್ಲ. ವಾಹನಗಳನ್ನು ಓಡಿಸಬೇಕಾದರೆ ಬ್ರೇಕ್ ಇನ್‌ಸ್ಪೆಕ್ಟರ್ಸ್ ವೆಹಿಕಲ್‌ಗಳನ್ನು ಇನ್‌ಸ್ಪೆಕ್ಷನ್ ಮಾಡಿ ಸರ್ಟಿಫೈ ಮಾಡಬೇಕು. ಈಗ ಏನಾಗಿದೆ ಎಂದರೆ ರಾಯಚೂರು, ಬಿಜಾಪುರ ಕಡೆಗಳಲ್ಲಿ ಓಡಿಸುವ ವಾಹನಗಳು ಏನು ಇವೆಯೋ ಅವಕ್ಕೆ ಬೆಂಗಳೂರಿಗೆ ಬಂದು ಆರ್ ಟಿ.ಓ. ಆಫೀಸಿನಲ್ಲಿ ಸರ್ಟಿಫಿಕೇಟ್ ತೆಗೆದುಕೊಂಡು ಹೋಗುತ್ತಾರೆ. ಅದನ್ನು ಇಲ್ಲೇ ಇಷ್ಯೂ ಮಾಡುತ್ತಾರೆ. ಅಲ್ಲಿ ಓಡಿಸುವ ವಾಹನಗಳಿಗೆ ಅವನು ಇನ್‌ಸ್ಪೆಕ್ಷನ್ ಏನೊಂದು ಮಾಡದೆ ಈ ರೀತಿ ಸರ್ಟಿಫಿಕೇಟ್ ಇಷ್ಯೂ ಮಾಡುವುದಾದರೆ ಏನೆಂದು ತಿಳಿಯಬೇಕು ? ಈ ರೀತಿ ಆಗುವುದಕ್ಕೆ ಕಾರಣ ಏನೆಂದರೆ ಆರ್.ಟಿ ಓ. ಆಫೀಸಿನಲ್ಲಿ ಕೆಳಮಟ್ಟದಿಂದ ಹಿಡಿದು ಮೇಲ್ಮಟ್ಟದವರೆಗೂ ಕೂಡ ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಾ ಇಲ್ಲ. ಆದುದರಿಂದ ಸರ್ಕಾರದವರು ಆರ್.ಟಿ.ಓ. ಆಫೀಸಿನ ಬಗ್ಗೆ ಹೆಚ್ಚಿನ ನಿಗಾ ಕೊಡಬೇಕು. ಅದೇ ರೀತಿ ಅರಣ್ಯ ಇಲಾಖೆ, ಸೇಲ್ಸ್ ಟ್ಯಾಕ್ಸ್ ಇಲಾಖೆಗಳಲ್ಲೂ ಕೂಡ ಏನು ಅನ್ಯಾಯವಾಗುತ್ತದೆ ಅದನ್ನು ಸರಿಪಡಿಸಬೇಕು. ನಾವು ಕಳೆದ ಚುನಾವಣೆಯಲ್ಲಿ ಜನತೆಗೆ ಬಹಿರಂಗವಾಗಿ ಭರವಸೆ ಕೊಟ್ಟಿದ್ದೇವೆ. ನಾವು ಈ 5 ವರ್ಷದಲ್ಲಿ 50 ಪರ್ಸೆಂಟ್ ಆದರೂ ಪ್ರೋಗ್ರೆಸ್ ತೋರಿಸದೇ ಹೋದರೆ ಅವರಿಗೆ ಮುಖ ತೋರಿಸುವುದಕ್ಕಾಗುವುದಿಲ್ಲ. ಇನ್ನೊಮ್ಮೆ ನಾವು ಅವರನ್ನು ಓಟು ಕೇಳುವುದಕ್ಕಾಗುವುದಿಲ್ಲ. ಆದುದರಿಂದ ಸರ್ಕಾರದವರು ಕೂಡಲೇ ಈ ಇಲಾಖೆಗಳಲ್ಲಿ ನಡೆಯತಕ್ಕಂಥ ಅಕ್ರಮಗಳನ್ನು ತಡೆಗಟ್ಟಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಬಡವರಿಗೆ ಮನೆ ಕೊಡುವ ವಿಷಯ. ಸ್ಲಮ್ಸ್ ಹೋಗಲಾಡಿಸುವುದಕ್ಕೆ ನಾವು ಪ್ರಯತ್ನ ಮಾಡಬೇಕಾಗಿದೆ. ಈವೊತ್ತು ಲಕ್ಷಾಂತರ ಮಂದಿ ಸ್ಲಮ್ಸ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ. ಇಂದು ದೇಶದಲ್ಲಿ ಇದು ತೀವ್ರ ಬದಲಾವಣೆಯಾಗಬೇಕಾಗಿದೆ. ಜನತೆ ಇಂದಿರಾಗಾಳಿ ಎಂದು ಹೇಳಿ ಇಂದಿರಾ ಪಕ್ಷಕ್ಕೆ ನಮ್ಮ ಸಮಾಜವಾದಕ್ಕೆ ಬಲಿ ಬದ್ಧ, ನಮ್ಮನ್ನು ಏತಕ್ಕೆ ಕಳುಹಿಸಿಕೊಟ್ಟಿದ್ದಾರೋ ಅದರಂತೆ ನಾವೂ ಕೂಡ ಅವರ ಸಮಸ್ಯೆಗಳನ್ನು ಈಡೇರಿಸಿಕೊಡಬೇಕಾಗಿದೆ. ಅವರು ನಮಗೆ ಏತಕ್ಕೆ ಓಟು ಕೊಟ್ಟರು ಎಂದರೆ ಬಡವರ ರಕ್ಷಣೆ, ದೀನದಲಿತರ ರಕ್ಷಣೆ, ಕಾರ್ಮಿಕರ ರಕ್ಷಣೆ ಮಾಡಬೇಕು ಎಂದು. ದೊಡ್ಡ ದೊಡ್ಡ ಶ್ರೀಮಂತರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸಿಕೊಂಡು ವಾಸ ಮಾಡುವುದು ಬಹಳ ಕಾಲ ಇರುವುದಿಲ್ಲ. ಇಲ್ಲಿಯವರೆಗೂ ಜನ ಈ ಬದಲಾವಣೆಯನ್ನು ಕಂಡಿರಲಿಲ್ಲ. ಜನತೆಯ ಭರವಸೆಯನ್ನು ಈಡೇರಿಸಬಹುದೆಂದು ಇಂದಿರಾ ಗಾಳಿಯಲ್ಲಿ ಇಂದಿರಾ ಪಕ್ಷಕ್ಕೆ ಓಟು ಕೊಟ್ಟಿದ್ದಾರೆ. ನಾವು ಅವರಿಂದ ಚುನಾಯಿತರಾಗಿ ಬಂದಿದ್ದೇವೆ. ನಾವು ಸದಸ್ಯರಾದವರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ಯಾವ ಆಫೀಸರ್ಸ್ ವಿಷಯದಲ್ಲೇ ಆಗಲಿ ಇವನು ನಮ್ಮ ನೆಂಟ, ಇವನು ನಮ್ಮ ಜಾತಿಯವನು, ಇವನನ್ನು ಬಿಜಾಪುರಕ್ಕೆ ಟ್ರಾನ್ಸ್‌ಫರ್ ಮಾಡಿಕೊಡಿ, ಅಲ್ಲಿಗೆ ಮಾಡಿಕೊಡಿ, ಇಲ್ಲಿಗೆ ಮಾಡಿಕೊಡಿ ಎಂದು ಹೇಳುವುದು ಸೂಕ್ತವಲ್ಲ, ನಾವುಗಳು ಅದಕ್ಕೆ ಅವಕಾಶ ಕೊಡದೆ ರಾಜ್ಯದ ರಚನಾತ್ಮಕವಾದ ಕಾರ್ಯದಲ್ಲಿ ತೊಡಗಿ ಬಡವರ ಕಷ್ಟಗಳನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ಸರ್ಕಾರ

ದವರೂ ಸಾರ್ವಜನಿಕರೂ ಎಲ್ಲರೂ ಸಹಕರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಬಡತನ ನಿವಾರಣೆ ಮಾಡಲಿಕ್ಕೆ, ಬಡವರಿಗೆ ಇರಲಿಕ್ಕೆ ಮನೆ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಇವು ಇಷ್ಟನ್ನಾದರೂ ನಾವು ಮಾಡದೇ ಹೋದರೆ ಏನೂ ಪ್ರಯೋಜನವಿಲ್ಲ. ಅಲ್ಲದೆ ಜನತೆ ನಮ್ಮನ್ನು ಕ್ಷಮಿಸುವುದೂ ಇಲ್ಲ. ಜನತೆಯೂ ಕೂಡ ಈ 5 ವರ್ಷದಲ್ಲಿ ನಾವು ಕಳುಹಿಸಿಕೊಟ್ಟಂಥ ಪ್ರತಿನಿಧಿಗಳು ಏನು ಕೆಲಸ ಮಾಡಿದ್ದಾರೆ, ಸರ್ಕಾರ ಏನು ಮಾಡುತ್ತದೆ ಎನ್ನುವುದನ್ನು ನೋಡುತ್ತಾ ಇದ್ದಾರೆ. ನಾವು ಅವರಿಗೆ ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳಬೇಕು. ಈವೊತ್ತು ಕಾಂಗ್ರೆಸ್ ಪಕ್ಷದವರಾಗಲಿ, ಯಾರೇ ಆಗಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬೇಕಾದರೆ ದೇಶದಲ್ಲಿ ಶಾಂತಿ, ಶಿಸ್ತು ಮತ್ತು ರಕ್ಷಣೆ ಇರಬೇಕಾದುದು ಮುಖ್ಯ. ಹೀಗಿದ್ದರೆ ಸರ್ಕಾರವನ್ನು ಯಾವ ವಿರೋಧಪಕ್ಷದವರೂ ಟೀಕಿಸುವುದಿಲ್ಲ. ಜನತೆಯೂ ಕೂಡ ಟೀಕೆ ಮಾಡುವುದಿಲ್ಲ. ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಲಕ್ಷಾಂತರ ಜನರು, ಅಂದರೆ ಯುವಕರು, ಹಿರಿಯರು ಎಲ್ಲರೂ ಸೇರಿ ರಕ್ತ ಕ್ರಾಂತಿ ಮಾಡಿ ಈ ದೇಶವನ್ನು ಕಟ್ಟಿದ್ದಾರೆ. ಈ ಸ್ವಾತಂತ್ರ್ಯ ಕೇವಲ ನಾಲ್ಕಾರು ಜನರ ಭೋಗಕ್ಕೆ ಇರುವಂಥಾದ್ದಲ್ಲ. ಇಡೀ ದೇಶದಲ್ಲಿರುವ 50 ಕೋಟಿ ಜನರಿಗೆ ಒಂದು ಸೇವೆಯನ್ನು ಮಾಡತಕ್ಕಂಥ ಕರ್ತವ್ಯ ನಮ್ಮ ಮೇಲೆ ಬಿದ್ದಿದೆ. ಅದನ್ನು ಅರಿತುಕೊಂಡು ಜನತೆ ನಮ್ಮನ್ನು ಆರಿಸಿ ಇಲ್ಲಿಗೆ ಕಳುಹಿಸಿ ಕೊಟ್ಟಿದ್ದಾರೆ. ಜನತೆ ಸೇವೆ ಮಾಡುವುದು ನಮ್ಮ ಮುಖ್ಯ ಗುರಿಯಾಗಿರಬೇಕು. ಸರ್ಕಾರದವರೂ ಕೂಡ ಇದಕ್ಕೆ ಸಹಾಯ ಮಾಡಬೇಕು. ಆದುದರಿಂದ, ಸರ್ಕಾರದವರು ಇದನ್ನು ಮನಗಂಡು ಬಡವರ ಗೃಹ ವಸತಿ ಬಗ್ಗೆ ಒಂದು ಯೋಜನೆ ಹಾಕಿಕೊಂಡು ಅದನ್ನು ಪೂರೈಸಿಕೊಡಬೇಕು. ಇಲ್ಲವೇ ಅದನ್ನು ಹಂತ ಹಂತವಾಗಿಯಾದರೂ ಬಗೆಹರಿಸಬೇಕು ಎಂದು ಹೇಳುತ್ತೇನೆ. ಅಲ್ಲದೆ ರಾಜ್ಯಪಾಲರೂ ಕೂಡ ಇದರ ಬಗ್ಗೆ ಶ್ರಮವಹಿಸಿ ಹೇಳಿದ ವಿಷಯವನ್ನು ನಾನು ಸ್ವಾಗತಿಸುತ್ತೇನೆ.

ಇನ್ನು ಸರ್ಕಾರಿ ನೌಕರರ ವಿಷಯ. ಇದೂ ಕೂಡ ಒಂದು ದೊಡ್ಡ ಸಮಸ್ಯೆಯಾಗಿದೆ. ಸರ್ಕಾರದಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳಿಗೆ 5000 ರೂಪಾಯಿ ಸಂಬಳ, ಪೋಲೀಸ್ ಕಾನ್‌ಸ್ಟೇಬಲ್, ಗುಮಾಸ್ತರು ಇಂಥಾವರಿಗೆ 100 ರೂಪಾಯಿ ಸಂಬಳ ಇರುತ್ತದೆ. ಅಲ್ಲದೆ ಸಣ್ಣ ನೌಕರರು ಬೆಳಗ್ಗೆಯಿಂದ ರಾತ್ರಿ 10 ಗಂಟೆಯವರೆಗೂ ಆಫೀಸಿನಲ್ಲಿ ಕೆಲಸ ಮಾಡಿ ಮನೆಗೆ ಹೋಗಬೇಕು. ಹೆಚ್ಚು ವೇಳೆ ಕೆಲಸ ಮಾಡುವವರಿಗೆ ಸಂಬಳ ಕಡಿಮೆ ಬರುವುದರಿಂದ ಲಂಚ ಬೆಳೆಯುವುದಕ್ಕೆ ಒಂದು ಕಾರಣವಾಗಿದೆ. ಎರಡು ಗಂಟೆ ಕಾಲ ಕೆಲಸ ಮಾಡುವವರಿಗೆ 5 ಸಾವಿರ ರೂಪಾಯಿ ಸಂಬಳ 10 ಗಂಟೆಗಳ ಕಾಲ ಕೆಲಸ ಮಾಡುವವರಿಗೆ ಕಡಿಮೆ ಸಂಬಳ ಇರುತ್ತದೆ. ದೊಡ್ಡ ಅಧಿಕಾರಿಗಳ ಬುದ್ಧಿಗೆ, ವಿದ್ಯೆಗೆ ಜಾಸ್ತಿ ಸಂಬಳ ಕೊಡಬೇಕು ಅನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಈ ಒಂದು ಅಂತರ ಜಾಸ್ತಿ ಇರುವುದನ್ನು ಕಡಿಮೆ ಮಾಡಬೇಕು ಎಂದು ನಾನು ಹೇಳುತ್ತೇನೆ. 100 ರೂಪಾಯಿ ಸಂಬಳಕ್ಕೂ, 5 ಸಾವಿರ ರೂಪಾಯಿ ಸಂಬಳಕ್ಕೂ ಎಷ್ಟು ಅಂತರವಿದೆ ಎನ್ನುವುದನ್ನು ಯೋಚನೆ ಮಾಡಿ. ಸ್ವಲ್ಪ ಮಟ್ಟಿಗೆ ಅಂತರ ಇದ್ದರೆ ಒಪ್ಪೋಣ. ಇದರ ಬಗ್ಗೆ ತಜ್ಞರ ಅಭಿಪ್ರಾಯ ಏನು ಬರುತ್ತದೆ ಎನ್ನುವುದನ್ನು ಪರಿಶೀಲಿಸಿ ಹೆಚ್ಚಿನ ಅಂತರ ಏನು ಇದೆಯೋ ಅದನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ಸಣ್ಣ ನೌಕರರಿಗೆ ಅನುಕೂಲ ಮಾಡಿಕೊಡಬೇಕು. ಇಷ್ಟೊಂದು ಅಂತರ ಇರಬಾರದು. ಈ ರೀತಿ ಎಲ್ಲರಿಗೂ ಅನುಕೂಲವಾಗುವ ರೀತಿಯಲ್ಲಿ ಮುಂದಿನ ಹಣಕಾಸಿನ ಬಡ್ಜೆಟ್ಟಿನಲ್ಲಾದರೂ ಅವಕಾಶ ಮಾಡಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಾಜ್ಯಪಾಲರು ಪ್ಲಾನಿಂಗ್ ವಿಷಯದಲ್ಲೂ ಕೂಡ ಹೇಳಿದ್ದಾರೆ. ಅದರ ಬಗ್ಗೆ ಹೆಚ್ಚು ಮಾತನಾಡುವುದಿಲ್ಲ. ಏತಕ್ಕೆಂದರೆ ನಾನು ಒಬ್ಬ ತಜ್ಞನಲ್ಲ. ಆದಷ್ಟು ಮಟ್ಟಿಗೆ ಹರಿಜನ ಗಿರಿಜನರ ಅಭಿವೃದ್ಧಿ ಯೋಜನೆ, ಕಾಡಿನ ಯೋಜನೆ ಹಾಕಲಿ, ಬಡವರ ಹಿತವನ್ನು ಕಾಪಾಡುವ ಯೋಜನೆ ಹಾಕಲಿ, ಅದಕ್ಕೆ ಬೆಂಬಲ ಬರುತ್ತದೆ. ಅದಿಲ್ಲದೆ ನಾಲ್ಕಾರು ಜನ ಬಂಡವಾಳ ಶಾಹಿಗಳಿಗೆ ಅನುಕೂಲವಾಗುವ ಯೋಜನೆ ಹಾಕಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮೀನುಗಾರಿಕೆ ವಿಷಯ ಹೇಳುವುದಾದರೆ ಇದರ ಬಗ್ಗೆ ಅನೇಕ ಸದಸ್ಯರು ಮಾತನಾಡುವವರು ಇದ್ದಾರೆ. ಅವರು ಸಾಕಷ್ಟು ಮಾತನಾಡಬಹುದು. ಆದುದರಿಂದ ನಾನು ಅದರ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ.

ಇನ್ನು ನೀರಾವರಿ ವಿಷಯದಲ್ಲಿ ಶ್ರೀ ರಾಮೇಗೌಡರು ಚೆನ್ನಾಗಿ ಮಾತನಾಡಿದ್ದಾರೆ. ನಮ್ಮ ದೇಶದಲ್ಲಿ ಹತ್ತಾರು ವರ್ಷಗಳಿಂದ ಈ ಯೋಜನೆ ನಡೆಯುತ್ತಾ ಇದೆ. ಶ್ರೀಮಾನ್ ಚೆನ್ನಬಸಪ್ಪನವರೂ, ದೇವೇಗೌಡರೂ ಕೂಡ ಇದರ ಬಗ್ಗೆ ಹೇಳಿದರು. ಹಾರಂಗಿ, ಹೇಮಾವತಿ ಯೋಜನೆಗಳು ಈಗಾಗಲೇ ಪ್ರಾರಂಭವಾಗಿವೆ. ಆ ಮುಳುಗಡೆ ಪ್ರದೇಶದಲ್ಲಿ ಅನೇಕ ಜನ ಜಾಗಗಳನ್ನು ಬಿಡುವ ಸ್ಥಿತಿಯಲ್ಲಿದ್ದಾರೆ. ಮುಳುಗಡೆ ಆಗುವ ಪ್ರದೇಶದಲ್ಲಿ ನಾನೂ ಕೂಡ ಇದ್ದೇನೆ, ಹಾರಂಗಿ,

(ಶ್ರೀ ಆರ್. ಗುಂಡೂರಾವ್)

ಮುಳುಗಡೆ ಆಗುವಂಥ ಪ್ರದೇಶ ನನ್ನ ಕ್ಷೇತ್ರಕ್ಕೆ ಸೇರಿದ್ದು. ಅದರಿಂದ ಸುಮಾರು 60-70 ಗ್ರಾಮಗಳು ಮುಳುಗಡೆ ಆಗುತ್ತವೆ ಎಂದು ಗೊತ್ತಾಗಿದೆ. ಸಾವಿರಾರು ಎಕರೆಗಳು ಮುಳುಗಡೆಯಾಗುತ್ತವೆ. ಅವರಿಗೆ ಪುನರ್ವಸತಿ ಕಾರ್ಯ ಮಾಡುವ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿದೆ. ಜನಗಳು ಸಾವಿರಾರು ವರ್ಷದಿಂದ ಇದ್ದ ಆ ಜಾಗವನ್ನು ಅವರ ಕುಟುಂಬ ಸಮೇತವಾಗಿ ಈಗ ಬದಲಾಯಿಸಬೇಕಾಗಿದೆ. ಅವರು ಹೊಸ ಜಾಗಕ್ಕೆ ಹೋದರೆ ಅಲ್ಲಿ ಅವರ ಮಕ್ಕಳ ವಿದ್ಯಾಭ್ಯಾಸ, ಆಸ್ಪತ್ರೆಗಳು, ವಾಹನ ಸೌಕರ್ಯ ಇವೆಲ್ಲವೂ ಇರಬೇಕು. ಅಡಿಕೆ ತೋಟ, ಏಲಕ್ಕಿ ತೋಟ ಇಂತಹ ಫಲವತ್ತಾದ ಜಾಗಗಳನ್ನು ಕಳೆದುಕೊಂಡವರಿಗೆ ಎಲ್ಲದಕ್ಕೂ ಸೌಕರ್ಯ ಇರುವ ಜಾಗಗಳನ್ನು ಕೊಡಬೇಕೇ ವಿನಾ ಅರಣ್ಯದಲ್ಲಿ ಯಾವುದೋ ಒಂದು ಜಾಗದಲ್ಲಿ ಏನೂ ಅಭಿವೃದ್ಧಿ ಆಗದೇ ಇರುವ ಕಡೆಯಲ್ಲಿ ಅವರನ್ನು ಇರಿಸುವ ವ್ಯವಸ್ಥೆ ಮಾಡಿದರೆ ಅದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಈ ಪುನರ್ವಸತಿ ಕಾರ್ಯಕ್ಕೆ ಬರೀ ಅಧಿಕಾರಿಗಳನ್ನು ಬಿಟ್ಟರೆ ಸಾಲದು. ಯಾವ ಪ್ರದೇಶ ಮುಳುಗಡೆ ಆಗುತ್ತದೋ ಆ ಪ್ರದೇಶದಲ್ಲಿರುವ ಖಾಸಗೀ ಜನರನ್ನೂ ಸೇರಿಸಿ ಒಂದು ಕಮಿಟಿ ಮಾಡಿ, ಅವರಿಗೆ ಉತ್ತಮವಾದ ಫಲವತ್ತಾದ ಸ್ಥಳಗಳನ್ನು ಕೊಡುವಂತೆ ಏರ್ಪಾಡು ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ಮೊನ್ನೆ ಆ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿನ ಜನ ನಮ್ಮ ಅಜ್ಜ, ನೆಂಟರಿಷ್ಟರು ಮುಂತಾದವರ ಸಮಾಧಿ ಇಲ್ಲದೆ, ಅಲ್ಲದೆ ನಾವು ನಮ್ಮ ಮಕ್ಕಳು ಇರ್ಲೇ ಇರುವುದು, ಇದನ್ನು ಬಿಟ್ಟು ಬೇರೆ ಭಾಗಗಳಿಗೆ ಹೋಗಬೇಕಾಗುವುದರಿಂದ ವ್ಯಸನವಾಗುವುದು ಎಂದು ಹೇಳಿದರು. ಆದರೆ ಅಲ್ಲಿ ಲಕ್ಷಾಂತರ ಎಕರೆ ನೀರಾವರಿಯಾಗುವುದರಿಂದ ಆ ಕೆಲಸವಾಗಲೇಬೇಕು. ಆದ್ದರಿಂದ ಆದಷ್ಟು ಜನರಿಗೆ ತೊಂದರೆಯಾಗದಂತೆ, ನೋವಾಗದಂತೆ, ಆ ಪುನರ್ವಸತಿಯ ಕಾರ್ಯಕ್ರಮ ಕೈಕೊಳ್ಳಬೇಕು.

ಇನ್ನು ಕೈಗಾರಿಕೆ ವಿಚಾರ. ಈ ಸಂಬಂಧದಲ್ಲಿ ಅನೇಕ ಭಾಷಣಗಳನ್ನು ಕೇಳಿದ್ದೇವೆ. ಕೈಗಾರಿಕೆಗಳು ಹೆಚ್ಚಬೇಕು, ಮೈಸೂರು ದೇಶ ಕೈಗಾರಿಕೆಗಳಿಗೆ ಹೆಸರುವಾಸಿಯಾದ ದೇಶ ಎಂದು ಹೇಳುತ್ತಿದ್ದಾರೆ. ಅವರೆ ಇತ್ತೀಚೆಗೆ ಭದ್ರಾವತಿ ಕಾರ್ಖಾನೆಯಲ್ಲಾಗಿರುವ ಅನ್ಯಾಯ, ಅನೇಕ ಜನರಿಗೆ ಕೋಟ ಪರ್ಮಿಟ್ ಕೊಟ್ಟಿರುವುದು, ಪ್ರಭಾವಯುತರಾದವರು ಕೋಟ ಪಡೆದು ದುರುಪಯೋಗ ಮಾಡುವುದು ಕೇಳಿ ವ್ಯಸನವಾಗುವುದು. ಮಂತ್ರಿಗಳ ಸಂಬಂಧಿಗಳು, ಶಾಸನಸಭೆಗಳ ಸದಸ್ಯರು ಪರ್ಮಿಟ್ ಪಡೆದು ಸದುಪಯೋಗಮಾಡಿಲ್ಲ. ಬೊಂಬಾಯಿ, ಕಲ್ಕತ್ತಗಳಲ್ಲಿರುವವರ ಹೆಸರಿನಲ್ಲಿ ಪರ್ಮಿಟ್ ಇದೆ, ಅವರು ತಮಗೆ ಬರುವ ಕೋಟ ಎಲ್ಲ ಹೇಗೆ ವಿನಿಯೋಗಮಾಡಿದರೋ ತಿಳಿಯದು. ಹಿಂದಿನ ಸರಕಾರ ಅನೇಕ ಅನ್ಯಾಯಗಳನ್ನು ಮಾಡಿವೆ. ಈಗ ಅದಕ್ಕೆ ತಕ್ಕ ಕ್ರಮ ಕೈಕೊಳ್ಳಲು ಹೊಸ ಸರಕಾರಕ್ಕೆ ಅವಕಾಶವಿದೆ. ಆದುದರಿಂದ ಒಂದು ತಜ್ಞರ ಸಮಿತಿ ಮಾಡಿ ಯಾರು ದುರುಪಯೋಗ ಮಾಡಿಕೊಂಡಿರುವರೋ ಅವರ ಪರ್ಮಿಟ್ಟನ್ನು ವಜಾಮಾಡಿ ಕೈಗಾರಿಕಾಭಿವೃದ್ಧಿಯಾಗುವಂತೆ ವಿದ್ಯಾವಂತರಿಗೆ, ಇಂಜನಿಯರು ಮುಂತಾದವರಿಗೆ, ಯುವಕರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು ಪ್ರಗತಿ ಸಾಧಿಸಬೇಕು.

ಕಳೆದ ಸಾರಿ ಎಕ್ಸ್‌ಪೋ ಸಂಬಂಧದಲ್ಲಿ ಬಹಳ ಅನ್ಯಾಯವಾಗಿದೆಯೆಂದು ಅದರ ಪರಿಶೀಲನೆ ನಡೆದಾಗ ವ್ಯಕ್ತವಾಗಿದೆ ಅನೇಕರ ಮೇಲೆ ಸರಕಾರ ಸುಳ್ಳು ಕೇಸು ಹಾಕಿತ್ತು. ಏಕೆ ಆ ಯೋಜನೆ ಬಂತು, ಬಡವರಿಗೆ ಮತ್ತು ಅರ್ಹರಾದವರಿಗೆ ಅದರಿಂದೆಷ್ಟು ಅನುಕೂಲವಾಗಿದೆ ಮಂತ್ರಿಗಳು ಮತ್ತು ಶಾಸನಸಭೆ ಸದಸ್ಯರುಗಳ ಮಕ್ಕಳು ಎಷ್ಟು ಮಂದಿ ಜಪಾನಿಗೆ ಹೋಗಿದ್ದರು, ಅವರಿಗೆ ಅರ್ಹತೆ ಇತ್ತೇ, ಅಥವ ಶಿಫಾರಸಿನ ಮೇಲೆ ಹೋಗಿದ್ದರೆ, ಎಂಬುದನ್ನೆಲ್ಲಾ ವಿಚಾರಿಸಿ ಫಲತಾಂಶವನ್ನು ಈಗಿನ ಸರ್ಕಾರ ಜನತೆಗೆ ತಿಳಿಸಬೇಕು, ಈ ಸಭೆ ಮುಂದಿಡಬೇಕು ಎಂದು ಮುಖ್ಯ ಮಂತ್ರಿಗಳಲ್ಲಿ ವಿನಂತಿಮಾಡುತ್ತೇನೆ. ಆ ಸಂಬಂಧದಲ್ಲಿ ಬಹಳ ಅನ್ಯಾಯವಾಗಿದೆ, ಯೋಜನೆಯ ಉದ್ದೇಶ ಸಫಲವಾಗಿಲ್ಲ, ರ್‍ಯಾಂಕ್ ಪಡೆದ ವಿದ್ಯಾರ್ಥಿ ಹೋಗಿಲ್ಲ, ಮಂತ್ರಿಗಳ, ಅಧಿಕಾರಿಗಳ ಮುಂತಾದವರ ನೆಂಟರಿಷ್ಟರು ಹೋಗಿದ್ದಾರೆ. ಈ ರೀತಿ ಅನ್ಯಾಯವಾಗಿದೆ. ಈ ಬಗ್ಗೆ ಕಳೆದ ಸಾರಿ ಚಳವಳಿ ಮಾಡಿದ್ದೇವೆ ಇಂದು ನಮ್ಮ ಮಂತ್ರಿಗಳಿರುವಾಗ ಇದರ ಪರಿಶೀಲನೆ ಆಗಬೇಕು. ಅಧಿಕಾರ ಈಗ ನಮ್ಮ ಪಕ್ಷದ ಕೈಲಿದೆ, ದಯಮಾಡಿ ಸೂಕ್ಷ್ಮವಾಗಿ ಪರಿಶೀಲಿಸಿ ತಪ್ಪು ಯಾರೇ ಮಾಡಿರಲಿ ಫಲಿತಾಂಶವನ್ನು ಜನತೆಯ ಮುಂದಿಡಬೇಕು.

ರಾಜ್ಯಪಾಲರು ಅನೇಕ ರಚನಾತ್ಮಕವಾದ ಬದಲಾವಣೆಗಳನ್ನು ಸರಕಾರ ಮಾಡುವುದೆಂದು ಭರವಸೆ ಕೊಟ್ಟಿದ್ದಾರೆ, ಅನೇಕ ವಿಧದಲ್ಲಿ ಪ್ರಗತಿಯಾಗುವುದು, ಸಮಾಜವಾದವನ್ನು ಜಾರಿಗೆ ತರುತ್ತಾ ಜನತೆಗೆ ಅವರ ಆಶೋತ್ತರಗಳನ್ನು ಈಡೇರಿಸಿಕೊಡುವರು ಎಂದು ರಾಜ್ಯಪಾಲರು

ನಿರೀಕ್ಷಿಸಿರುವುದಾಗಿ ತಿಳಿಸಿದ್ದಾರೆ. ಈಗ ಸೇಲ್ಸ್‌ಟ್ಯಾಕ್ಸ್, ಆರ್ ಟಿ ಎ, ಅರಣ್ಯ ಮತ್ತು ಎಕ್ಸೈಜು ಮುಂತಾದ ಇಲಾಖೆಗಳಲ್ಲಿ ಅನ್ಯಾಯ ನಡೆಯುತ್ತಿದೆ. ಇದನ್ನು ಪರಿಶೀಲಿಸಿ ಸಮಾಜವಾದವನ್ನು ಜಾರಿಗೆ ತಂದು ಹರಿಜನರು, ಬಡವರು ಮುಂತಾದವರ ಉದ್ಧಾರ ಮಾಡುವರು, ಸರಕಾರ ತನ್ನ 5 ವರ್ಷಗಳ ಅಧಿಕಾರಾವಧಿಯಲ್ಲಿ ತಾನು ಕೊಟ್ಟಿರುವ ಭರವಸೆಗಳನ್ನು ಈಡೇರಿಸುವುದು ಎಂದು ನಂಬಿ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

MADAM SPEAKER.—There are a few amendments given notice of by some hon. Members. They will move them.

Sri T. R. SHAMANNA (Fort).—I move :

"That the following words shall be added at the end of the motion :—

but regret that there is no mention in the address regarding:

(i) steps for improving the administration of Bangalore University, improving the standards of education and effective means for the Bangalore University students to have good education in a congenial atmosphere ;

(ii) steps to give relief to the Bangalore citizens from the mosquito nuisance ;

(iii) steps for supplying adequate quantity of sugar for domestic consumers and steps for supplying better quality of rice at reasonable rates in the ration depots ;

(iv) steps for giving relief to the people to meet the challenge of rising prices.

My next amendment is :

" That the following words shall be added at the end of the motion—

" but regret to note the—

(a) failure of the Government for not conducting the elections in a fair and just manner, particularly in preparing voters list in a proper manner and also allowing large-scale bogus voting ;

(b) failure of the Government in not taking adequate action to promote learning of Kannada Shorthand and Kannada Typewriting which are essential steps to make Kannada official language of the Administration ;

(c) failure of the Government in not making proper bandobust arrengements for preventing election clashes during and post-election periods ;

(d) failure of the Government in not solving the unemployment problem of both educated and uneducated and also not taking steps to give employment to Kannadigas in the State and Central Industries located in the State ;

(SRI T. R. SHAMANNA)

(e) failure of the Government in respect of carrying out plan schemes effectively by using all external and internal resources obtainable ;

(f) failure of the Government in allowing most of the Co-operative institutions to be in miserable conditions ;

(g) failure of the Government in implementing the Land Reforms in a proper and useful way ;

(h) failure of the Government in not taking steps to remove or improve the numberous slums in Bangalore City ;

(i) failure of the Government for allowing electric power rates to go up abnormally ;

(j) failure of the Government to give better travelling facilities to the citizens of Bangalore at reasonable cost ;

(k) failure of the Government in allowing ineffective family planning programme ;

(l) failure of the Government in allowing wasteful Social Welfare Department ;

(m) failure of the Government in not giving quality education to the children of the State ;

(n) failure of the Government in allowing many privately managed educational institutions to run on commercial basis ;

(o) failure of the Government in bringing more industries in the State to help employment potentialities ;

(p) failure of the Government in allowing unsound financial position in the State ;

(q) failure of the Government in not runnig the Government economically and efficiently ;

(r) failure of the Government in not checking corrupt practices ;

(s) failure of the Government in not taking suitable steps to check arbitrary and indiscriminate levy of property tax by the Bangalore City Corporation ;

(t) failure of the Government in not solving the problem of the revenue site owners and giving sites to those who have applied and failed more than three to four times ;

(u) failure of the Government in stopping the useful advances to Government servants, like House Building, Motor Car, Motor Cycle, Cycle, etc.;

(v) failure of the Government in not taking proper steps to check preparation and drinking of illicit drinks, running of gambling clubs and running of naked dance performances ;

(w) failure of the Government in not getting clearance to major projects like Hemavathi, etc.;

(x) failure of the Government in not solving the housing problem ;

(y) failure of the Government in allowing the border dispute in suspense;

(z) failure of the Government in not giving proper accommodation to educational institutions and also providing play-grounds for children.

MADAM SPEAKER.—Amendments moved :

" That the following words shall be added at the end of the motion :

" but regret that there is no mention in the address regarding—

(i) steps for improving the administration of Bangalore University, improving the standards of education and effective means for the Bangalore University students to have good education in a congenial atmosphere ;

(ii) steps to give relief to the Bangalore citizens from the mosquito nuisance ;

(iii) steps for supplying adequate quantity of sugar for domestic consumers and steps for supplying better quality of rice at reasonable rates in the ration depots ;

(iv) steps for giving relief to the people to meet the challenge of rising prices.

Also—

" That the following words shall be added at the end of the motion :

" but regret to note the—

(a) failure of the Government for not conducting the elections in a fair and just manner, particularly in preparing voters list in a proper manner and also allowing large-scale bogus voting ;

(b) failure of the Government in not taking adequate action to promote learning of Kannada Shorthand and Kannada Typewriting which are essential steps to make Kannada official language of the Administration ;

(c) failure of the Government in not making proper bandobust arrangements for preventing election clashes during and post-election periods;

(d) failure of the Government in not solving the unemployment problem of both educated and uneducated and also not

(MADAM SPEAKER)

taking steps to give employment to Kannadigas in State and Central Industries located in the State ;

(e) filure of the Government in respect of carrying out plan schemes effectively by using all external and internal resources obtainable ;

(f) failure of the Government in allowing most of the Co-operative institutions to be in miserable conditions ;

(g) failure of the Government in implementing the Land Reforms in a proper and useful way ;

(h) failure of the Government in not taking steps to remove or improve the numerous slums in Bangalore City ;

(i) failure of the Government for allowing electric power rates to go up abnormally ;

(j) failure of the Government to give better travelling facilities to the citizens of Bangalore at reasonable cost ;

(k) failure of the Government in allowing ineffective family planning programme ;

(l) failure of the Government in allowing wasteful Social Welfare Department ;

(m) failure of the Government in not giving quality education to the children of the State ;

(n) failure of the Government in allowing many privately managed educational institutions to run on commercial basis ;

(o) failure of the Government in bringing more industries in the State to help employment potentialities ;

(p) failure of the Government in allowing unsound financial position in the State ;

(q) failure of the Government in not running the Government economically and efficiently ;

(r) failure of the Government in not checking corrupt practices ;

(s) failure of the Government in not taking suitable steps to check arbitrary and indiscriminate levy of property tax by the Bangalore City Corporation ;

(t) failure of the Government in not solving the problem of the revenue site owners and giving sites to those who have applied and failed more than three to four times ;

(u) failure of the Government in stopping the useful advances to Government servants, like House Building, Motor car, Motor Cycle, Cycle, etc. ;

(v) failure of the Government in not taking proper steps to check preparation and drinking of illicit drinks, running of gambling clubs and running of naked dance performances ;

(w) failure of the Government in not getting clearance to major projects like Hemavathi, etc. ;

(x) failure of the Government in not solving the housing problem ;

(y) failure of the Government in allowing the border dispute in suspense ;

(z) failure of the Government in not giving proper accommodation to educational institutions and also providing play grounds for children.

SRI P. A. PAWASHE (Uchagaon).—I beg to move :

"That the following words shall be added at the end of the motion :

but regret that the Government has failed—

1. to solve the border dispute between Maharashra and Mysore on the basis of village as a unit simple majority, wishes of the people and geographical contiguity ;

2. to mention the steps taken to improve the lot of the agricultural labourers and industrial labourers ;

3. to distribute lands to the landless agriculrurists ;

4. to revise the notified yield of sugarcane crop in Belgaum taluk notified under Section 8 of the Mysore Land Reforms Act by the prescribed authority ;

5. to provide more electricity to rural area of Belgaum taluk for domestic as well as agricultural use ;

6. to take effective measures to root out corruption in the State ;

7. to allot more funds to the Taluk Development Boards for roads, school buildings and rural water supply schemes especially in border areas ;

8. to undertake minor irrigation works immediately so that it will help the agriculturists to grow more food ; the works are neglected ;

9. to provide free secondary education to all in the State."

MADAM SPEAKER.—Amendment moved :

"That the following words shall be added at the end of the motion :

but regret that the Government has failed—

1. to solve the border dispute between Maharashtra and Mysore on the basis of village as a unit, simple majority, wishes of the people and geographical contiguity ;

2. to mention the steps taken to improve the lot of the agricultural labourers and Industrial labourers ;

3. to distribute lands to the landless agriculturists ;

4. to revise the notified yield of sugarcane crop in Belgaum taluk notified under Section 8 of the Mysore Land Reforms Act by the prescribed authority ;

5. to provide more electricity to rural area of Belgaum taluk for domestic as well as agricultural use ;

6. to take effective measures to root out corruption in the State ;

7. to allot more funds to the taluk Development Boards for roads, school buildings and rural water supply schemes especially in border areas ;

8. to undertake minor irrigation works immediately so that it will help the agriculturists to grow more food ; the works are neglected ;

9. to provide free secondary education to all in the State-"

Sri S. BANGARAPPA (Sorab).—I beg to move :

"That the following words shall be added at end of the motion :

but regret that the Governor's Address does not disclose the proper steps taken by the Government in regard to the distribution of lands to landless ryots, amendment to the "Land Reforms Act, labour policy, providing houses to houseless people, naming the State as Karnataka, etc."

MADAM SPEAKER.—Amendment moved :

"That the following words shall be added at the end of the motion :

"but regret that the Governor's Address does not disclose the proper steps taken by the Government in regard to the distribution of lands to landless ryots, amendment to the 'Land Reforms Act, labour policy providing houses to houseless people, naming the State as 'Karnataka etc. "

Hon. members sriyuts M. S. Krishnan, Konandur Lingappa B. B. Sayanak and N. B. Sirdesai are absent to move their amendments.

Now all the amendments to the Motion are before the House for discussion.

We will now adjourned and meet after half-an-hour.

---

*The House adjourned for Tea at Thirty Minutes past Three of the Clock and reassembled at Ten Minutes past Four of the Clock.*

---

[MADAM SPEAKER in the Chair]

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮೀ, ಈ ಸಭೆಯಲ್ಲಿ ಒಬ್ಬ ಮಂತ್ರಿಗಳೂ ಇಲ್ಲ. ಸುಮಾರು ಇಪ್ಪತ್ತು ನಿಮಿಷಗಳ ಕಾಲ ಸಭೆಯ ಗಂಟೆಬಾರಿಸುತ್ತಾ ಇದ್ದು ಈ ಸಭೆಯ ಕಾರ್ಯಕಲಾಪ ನಡೆಯುವುದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಇದರಲ್ಲಿ ತಮ್ಮ ಅಸಹಾಯಕತೆ ಇದೆ ಎನ್ನುವುದು ವ್ಯಕ್ತವಾಗುತ್ತದೆ. ಇಪ್ಪತ್ತು ನಿಮಿಷಗಳ ಕಾಲ ಗಂಟೆ ಹೊಡೆಯುತ್ತಿದ್ದರೂ 165 ಜನ ಸದಸ್ಯರುಗಳು ಇರುವವರಲ್ಲಿ ಒಬ್ಬ ಮಂತ್ರಿಗಳೂ ಕೂಡ ಇಲ್ಲಿಗೆ ಬರಲಿಲ್ಲ ಎಂದರೆ ಇವರಿಗೆ ಇಷ್ಟೊಂದು *** ಮತ್ತು *** ಬರಬಾರದು. ಸಭೆಯ ಕಾಲಾವಕಾಶವನ್ನು ಸದಸ್ಯರು ಉಪಯೋಗಿಸಿಕೊಳ್ಳಲು ತಕ್ಕ ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡುವುದಾದರೆ ನಾವು ಕೂಡ ಯಾವುದೇ ಕಾರ್ಯಕಲಾಪಗಳಲ್ಲಿ ನಮ್ಮ ಸಹಕಾರವನ್ನು ಕೊಡುವ ಬಗ್ಗೆ ತೀವ್ರವಾಗಿ ಪ್ರತಿಭಟಿಸಬೇಕಾಗುತ್ತದೆ.

(ಈ ವೇಳೆಗೆ ಸರಿಯಾಗಿ ಮಾನ್ಯ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸಭೆಗೆ ಬಂದರು.)

*Some Members of the Opposition*—Shame, shame.

ಶ್ರೀ ಕೆ. ಎಚ್. ರಂಗನಾಥ (ಹಿರಿಯೂರು).—ಒಂದು ಕ್ರಿಯಾಲೋಪ, ಸ್ವಾಮಿ, ಈಗತಾನೆ ವಿರೋಧಪಕ್ಷದ ನಾಯಕರು ಮಾತನಾಡುವಾಗ *** ಎಂಬ ಶಬ್ದಗಳನ್ನು ಉಪಯೋಗಿಸಿದರು. ಅವು ಪಾರ್ಲಿಮೆಂಟರಿ ಶಬ್ದಗಳಲ್ಲ. ಆದ್ದರಿಂದ ದಯಮಾಡಿ ಮಾನ್ಯ ಅಧ್ಯಕ್ಷರು ಆ ಪದಗಳನ್ನು ಪ್ರೊಸೀಡಿಂಗ್ಸ್‌ನಿಂದ ತೆಗೆಯುವುದಕ್ಕೆ ಆರ್ಡರ್ ಮಾಡಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ಆ ಪದಗಳನ್ನು ಉಪಯೋಗ ಮಾಡುವುದು ಅನ್‌ಪಾರ್ಲಿಮೆಂಟರಿಯಾಗುವುದಾದರೆ ನಾನು ಆ ಪದಗಳನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ.—ನನ್ನ ಕ್ರಿಯಾಲೋಪವನ್ನು ಅಧ್ಯಕ್ಷರಿಗೇ ಬಿಟ್ಟಿದ್ದೇನೆ. ಅವರು ತೀರ್ಮಾನ ಕೊಡಲಿ.

ಅಧ್ಯಕ್ಷರು.—ಅವರು ಉದ್ವೇಗದಲ್ಲಿ ಆ ಪದಗಳನ್ನು ಉಪಯೋಗಿಸಿದ್ದಾರೆ. ಅದನ್ನು ತೆಗೆಯುವುದಕ್ಕೆ ಹೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಬಯಸುತ್ತೇನೆ. ಹಿಂದೆ ಈ ಸಭೆಯಲ್ಲಿ ನಡೆದಿರುವ ಕಾರ್ಯಕಲಾಪಗಳ ವರದಿಗಳನ್ನು ತಾವು ತರಿಸಿ ನೋಡಬೇಕು. ಈಗ ಮಂತ್ರಿಗಳಾಗಿರುವವರು ಈ ಕಡೆ ಇದ್ದಾಗ ನಾನು ಉಪಯೋಗಿಸಿದಂಥ ಪದಗಳನ್ನು ಉಪಯೋಗಿಸಿದ್ದರೆ ತಮ್ಮ ರೂಲಿಂಗ್‌ನ್ನು ಪುನರ್ವಿಮರ್ಶೆ ಮಾಡಿ. ಅಂಥ ಪದಗಳನ್ನು ಅವರು ಉಪಯೋಗ ಮಾಡದಿದ್ದರೆ ನಾನು ಆ ಪದಗಳನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

---

***Word/words expunged as ordered by the Chair.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ದೇವೇಗೌಡರು ಬಹಳ ಪ್ರಾಮುಖ್ಯವಾದ ವಿಷಯ ಹೇಳಿದ್ದಾರೆ. ಕಳೆದ 30 ನಿಮಿಷಗಳಿಂದ ಒಂದೇ ಸಮನೆ ಗಂಟೆ ಬಾರಿಸಿತು. ನಾವು ನಾಲ್ಕು ಗಂಟೆಯಿಂದ ಇಲ್ಲಿಯವರೆಗೆ ಸಿನ್ಸಿಯರ್ ಆಗಿ ಕುಳಿತಿದ್ದೇವೆ. ಮಾನ್ಯ ಚೆನ್ನಬಸಪ್ಪನವರು ತಡಬಡಾಯಿಸಿಕೊಂಡು ಈಗತಾನೆ ಬಂದರು. ಅವರು ಈ ಕಡೆ ಕುಳಿತಿದ್ದಂಥ ಸಮಯದಲ್ಲಿ ಇಂತಹ ಸನ್ನಿವೇಶ ಬಂದಾಗ ಮಾತನಾಡುತ್ತಾ ಸಭೆಗೆ ಸಿಡಿಲು ಮಿಂಚು ಎಲ್ಲ ತರುತ್ತಿದ್ದರು. ಆದರೆ ಇಂದು ಅವರೇ ತಮ್ಮ ಸಂಪ್ರದಾಯವನ್ನು ತಿಳಿದುಕೊಳ್ಳದೆ ಈ ಸಭೆಯಲ್ಲಿ ತಿರಸ್ಕಾರ ಮನೋಭಾವನೆಯಿಂದ ಕಾಣುತ್ತಿದ್ದಾರೆ. ನಾವು 165 ಜನ ಇದ್ದೇವೆ, ಯಾವುದು ಏನಾದರೆ ನಮಗೇನು, ಬೇಕಾದರೆ ಬೆಂಕಿ ಬೀಳಲಿ, ದೇಶ ಹಾಳಾಗಲಿ, ನಮಗೇನಾಗಬೇಕೆಂಬ ಭಾವನೆ ಅವರಲ್ಲಿ ಬಂದಿದೆ. ಈ ದೇಶದಲ್ಲಿ ಒಂದು ಆದರ್ಶವನ್ನು ಜಾರಿಗೆ ತರುತ್ತೇವೆಂದು ಜನರಲ್ಲಿ ಹೇಳಿಕೊಂಡು ಬಂದಿರುವ ಈ ಜನರಲ್ಲಿ ನಾನು ಕೈಮುಗಿದು ಪ್ರಾರ್ಥನೆ ಮಾಡುವುದೇನೆಂದರೆ, ಅವರು ಹೇಳಿದಂಥ ಆದರ್ಶವನ್ನು ಈ ಸಭೆಯಲ್ಲಿ ಮೊದಲು ಪಾಲನೆ ಮಾಡಿ ಈ ಸಭೆಗೆ ಗೌರವ ಕೊಡಬೇಕೆಂದು ಅಧ್ಯಕ್ಷರ ಮೂಲಕ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರಿಗೆ ತಿಳಿದಿರುವಂತೆ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಕ್ಕೆ ಒಂದು ಪ್ರಮುಖವಾದಂಥ ಸ್ಥಾನವಿದೆ. ಇದೇ ಮಾತನ್ನು ಈಗ ಮಂತ್ರಿಗಳಾಗಿರುವವರು ಈ ಕಡೆ ಇದ್ದಾಗ ಆಗಿಂದಾಗ್ಗೆ ಹೇಳುತ್ತಿದ್ದರು. ನಮ್ಮ ಅನುಭವದಲ್ಲಿ ಹೇಳುವುದಾದರೆ, ಬ್ರಿಟಿಷ್ ಪಾರ್ಲಿಮೆಂಟರಿ ಪದ್ಧತಿಯಲ್ಲಿ ವಿರೋಧಪಕ್ಷಕ್ಕೆ ಉನ್ನತವಾದ ಸ್ಥಾನವಿದೆ. ಅಂದರೆ ಮುಖ್ಯಮಂತ್ರಿಗಳಿಗೆ ಯಾವ ಸ್ಥಾನಮಾನ ಇರುತ್ತದೋ ಅಷ್ಟೇ ಸ್ಥಾನಮಾನ ವಿರೋಧಪಕ್ಷದ ನಾಯಕರಿಗೂ ಇರಬೇಕು. ಈ ಒಂದು ತತ್ವವನ್ನು ನಾವೆಲ್ಲ ಒಪ್ಪಿಕೊಂಡಿದ್ದೇವೆ. ಇಂತಹ ಸಂಪ್ರದಾಯ ಇದ್ದರೂ ಕೂಡ ಈ ದಿನ ಸರ್ಕಾರದವರು ನಡೆದುಕೊಂಡಿರುವುದು ನಾಚಿಕೆಗೇಡಿನ ಪ್ರಸಂಗವೆಂದು ಹೇಳಬಹುದು. ಅವರು ನಮಗೆ ಯಾವ ರೀತಿಯಿಂದಲೂ ಮರ್ಯಾದೆ ಕೊಡುವುದಕ್ಕೆ ತಯಾರಿಲ್ಲವೆಂದು ಕಾಣುತ್ತದೆ. ನಾವು ಇಪ್ಪತ್ತು ನಿಮಿಷಗಳವರೆಗೆ ಕಾದು ಕುಳಿತುಕೊಂಡಿದ್ದೆವು. ಅಲ್ಲಿಯವರೆಗೆ ಸರ್ಕಾರದವರು ತಮಗೆ ಏನೇನು ಹೇಳಿದರೋ ನಮಗೆ ಗೊತ್ತಿಲ್ಲ. ತಾವು ಬಂದ ಮೇಲೆ ಮಾನ್ಯ ಚೆನ್ನಬಸಪ್ಪನವರು ಬಂದರು. ಇನ್ನೂ ಅವರು ಏದುತ್ತಿದ್ದಾರೆ. ಅವರಿಗೆ ನೀರು ಕೊಡಬೇಕು. ಇಲ್ಲದಿದ್ದರೆ ಅವರು ಮುಂದೆ ಮಾತನಾಡುವುದು ಕಷ್ಟವಾಗುತ್ತದೆ. ಇನ್ನು ಮುಂದೆ ಈ ರೀತಿ ಮಾಡಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈ ಸಭೆಗೆ ಸರಿಯಾದ ರೀತಿಯಲ್ಲಿ ಹಾಜರಾಗಬೇಕೆಂದು ಎಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಎಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆ ಎಂದು ಹೇಳಿದಿರಿ. ತಾವು ಆ ರೀತಿ ಹೇಳಿದ್ದು ಸಾಕೇ ಎಂದು ಯೋಚನೆ ಮಾಡುವುದಾದರೆ, ಅದು ಸಾಲದು. ತಾವು ಟ್ರೆಜರಿ ಬೆಂಚಿಗೆ ಛೀಮಾರಿ ಹಾಕಬೇಕು. ಅವರು ವಿರೋಧಪಕ್ಷದವರಿಗೆ ಮರ್ಯಾದೆ ಕೊಡುತ್ತಿಲ್ಲ. ಇಡೀ ಸಭೆಗೆ ಅವಮರ್ಯಾದೆ ಮಾಡಿದ್ದಾರೆ. 20 ನಿಮಿಷಗಳ ಕಾಲ ಗಂಟೆ ಹೊಡೆದಿದೆ, ಆದರೂ ಮಂತ್ರಿಗಳು ಸಭೆಗೆ ಬರದೆ, ತಾವು ಬಂದ ನಂತರ ಬಂದರು. ಸಭೆಯಲ್ಲಿ ಒಬ್ಬ ಮಂತ್ರಿಯೂ ಇಲ್ಲದಿರುವುದನ್ನು ನೋಡಿದರೆ, ಮಂತ್ರಿಗಳು ಬೇರೆ ಕೆಲಸದಲ್ಲಿ ತೊಡಗಿದ್ದಾರೆಂದು ಕಾಣಿಸುತ್ತದೆ

ಶ್ರೀ ವಾಟಾಳ್ ನಾಗರಾಜ್.—ವಿಧಾನಪರಿಷತ್ತಿನಲ್ಲಿ ಅವರ ಕಡೆಯವರು ಸೋತಿದ್ದಕ್ಕೆ ಡಿಸ್‌ಕಷನ್ ಮಾಡುವುದಕ್ಕೆ ಹೋಗಿರಬೇಕು.

ಶ್ರೀ ಎಸ್. ಬಂಗಾರಪ್ಪ.—ಆ ವಿಷಯ ಬೇಕಾಗಿಲ್ಲ. ಮಂತ್ರಿಯವರು ಯಾರಾದರೂ ಸಭೆಗೆ ಬರಲಿ ಎಂದು ತಾವು ಇದುವರೆಗೆ ತಮ್ಮ ಕೊಠಡಿಯಲ್ಲಿ ಕೂತಿದ್ದಿರಿ ಎಂದು ಕಾಣುತ್ತದೆ. ಅವರು ತಮಗೆ ಅವಮರ್ಯಾದೆ ಮಾಡಿದ್ದಾರೆ. ಸಭೆಗೆ ಅವಮರ್ಯಾದೆ ಮಾಡಿದ್ದಾರೆ. ಆದ್ದರಿಂದ ಮಂತ್ರಿಗಳು ಸಭೆಗೆ ಸರಿಯಾದ ರೀತಿಯಲ್ಲಿ ಹಾಜರಾಗಬೇಕೆಂದು ಎಲ್ಲರ ಪರವಾಗಿ ಕೇಳಿಕೊಳ್ಳುತ್ತೇನೆಂದು ತಾವು ಏನು ಒಂದು ತೀರ್ಮಾನ ಕೊಟ್ಟಿರಿ, ಅದು ಸಾಲದು. ತಾವು ಟ್ರೆಜರಿ ಬೆಂಚಿನವರ ಮುಖಕ್ಕೆ ಛೀಮಾರಿ ಹಾಕಬೇಕು. ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ಬೆಲೆ ಇರುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ತಮ್ಮ ರೂಲಿಂಗ್‌ನ್ನು ಮತ್ತೊಮ್ಮೆ ಪರಿಶೀಲನೆ ಮಾಡಿ ಆ ಕಡೆಯವರಿಗೆ ಛೀಮಾರಿ ಹಾಕಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ, ಈ ಸಭೆಯಲ್ಲಿ ಮಂತ್ರಿಗಳು ಕೆಲವು ಕಾಲ ಇರಲಿಲ್ಲ ಎನ್ನತಕ್ಕಂಥ ಆಕ್ಷೇಪಣೆ ನ್ಯಾಯವಾದುದು. ಈ ವಿಷಯದಲ್ಲಿ ನಾವು ತಾತ್ಸಾರ ಮನೋಭಾವ ಇಟ್ಟುಕೊಂಡಿದ್ದೇವೆಂದು ಯಾರೂ ಅನ್ಯಥಾ

ಭಾವಿಸಬಾರದೆಂದು ತಮ್ಮ ಮೂಲಕ ಈ ಸಭೆಗೆ ನಿವೇದನೆ ಮಾಡಿಕೊಳ್ಳುತ್ತೇನೆ. ಈ ಸಭೆಗೆ ಎಷ್ಟು ಗೌರವ ಇದೆ, ನಾವು ಎಷ್ಟು ಗೌರವ ಕೊಡಬೇಕು ಎನ್ನುವ ಅರಿವು ನಮಗೆ ಇದೆ. ಈ ಸಭೆಯಲ್ಲಿ ಮಂತ್ರಿಗಳು 10—20 ನಿಮಿಷಗಳ ಕಾಲ ಇರಲಿಕ್ಕೆ ಆಗದ್ದಕ್ಕೆ ನಾನು ವಿಷಾದಿಸುತ್ತೇನೆ. ಕಾರ್ಯಗೌರವದಿಂದ.........

ಶ್ರೀ ವಾಟಾಳ್ ನಾಗರಾಜ್.—22 ಜನ ಮಂತ್ರಿಗಳಲ್ಲಿ ಒಬ್ಬರೂ ಇರುವುದಕ್ಕೆ ಆಗಲಿಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕಾರ್ಯಗೌರವದಿಂದ ಈ ಸನ್ನಿವೇಶ ಉಂಟಾಯಿತು. ಬೇರೆ ಮಹತ್ವವಾದ ಕೆಲಸದಲ್ಲಿ ನಾವು ನಿರತರಾಗಿರಲಿಲ್ಲ. ರಾಜ್ಯದ ಕೆಲಸದಲ್ಲಿಯೇ ನಿರತರಾಗಿದ್ದೆವು. ಆದ್ದರಿಂದ........

ಶ್ರೀ ಎಸ್. ಬಂಗಾರಪ್ಪ.—ಸಭೆ ನಡೆಯುವಾಗ ಮಂತ್ರಿಗಳು ಯಾರಾದರೂ ಇರಲೇಬೇಕು. ಮಂತ್ರಿಗಳು ಇಲ್ಲವೆಂಬ ಕಾರಣದಿಂದ ಸಭೆ 20 ನಿಮಿಷಗಳಷ್ಟು ತಡವಾಗಿ ಸೇರಿತು.

ಶ್ರೀ ಎಚ್. ಎಂ ಚನ್ನಬಸಪ್ಪ.—ಆದ್ದರಿಂದ ಈ ವಿಷಯದಲ್ಲಿ ತಾವು ಯಾರೂ ಅನ್ಯಥಾ ಭಾವಿಸಬಾರದು. ಈ ಸಭೆಯ ಬಗ್ಗೆ ಮತ್ತು ತಮ್ಮ ಬಗ್ಗೆ ನಾವು ಗೌರವ ಇಟ್ಟುಕೊಂಡಿದ್ದೇವೆ. ಅಷ್ಟೇ ಅಲ್ಲ, ನಾವು ಈ ಸಭೆಯಲ್ಲಿ ಇದ್ದುಕೊಂಡು ತಾವು ಹೇಳತಕ್ಕಂಥ ಎಲ್ಲ ವಿಷಯಗಳಿಗೂ ತಕ್ಕ ಉತ್ತರ ಕೊಡುವುದಕ್ಕೆ ಜವಾಬ್ದಾರಿಯನ್ನು ಹೊತ್ತಿದ್ದೇವೆ. ಆದ್ದರಿಂದ 'ಈ ವಿಷಯವನ್ನು ಇಲ್ಲಿಗೇ ನಿಲ್ಲಿಸತಕ್ಕದ್ದು ಒಳ್ಳೆಯದೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮತ್ತೊಂದು ಗುರುತರವಾದ ವಿಷಯವೆಂದರೆ ಇಲ್ಲಿ ಆಹಾರ ಮಂತ್ರಿಗಳು ಇದ್ದಾರೆ, ಅವರಗಮನಕ್ಕೆ ಒಂದು ವಿಷಯ ತರಬೇಕಾಗಿದೆ. ಈ ಸಭೆಯ ಎರಡು ಕಡೆಯೂ ಆರಾಮಶಾಲೆಗಳಿವೆ. ಈ ಆರಾಮಶಾಲೆಗಳಲ್ಲಿ ಸಭೆ ನಡೆಯುವಾಗ ಕ್ಯಾಂಟೀನ್ ವ್ಯವಸ್ಥೆ ಇತ್ತು. ಆದರೆ ಈ ಸಲ ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಕುಡಿಯುವುದಕ್ಕೆ ಕಾಫಿ, ಟೀ, ಕೊನೆಗೆ ನೀರಿನ ವ್ಯವಸ್ಥೆಯೂ ಸಹ ಇಲ್ಲ. ನಾವೇ ನಾಳೆಯಿಂದ ಫ್ಲಾಸ್ಕ್‌ನಲ್ಲಿ ಕಾಫಿ, ಟಿಫಿನ್ ಕ್ಯಾರಿಯರ್‌ನಲ್ಲಿ ಊಟ ತಂದು ಇಟ್ಟುಕೊಳ್ಳಬೇಕೆಂದಿದ್ದೇವೆ. ಶ್ರೀ ನಾಗಣ್ಣನವರು ಸಕ್ಕರೆ ಇಲ್ಲದ ಕಾಫಿ ಕೇಳಿದರೆ ಅದೂ ಸಹ ಇಲ್ಲವೆಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ಲಿಂಗಾರೆಡ್ಡಿಯವರು ಮಂತ್ರಿಗಳಾಗಿದ್ದಾಗ ನಮಗೆ ಮೀನನ್ನು ಸಹ ಕೊಡುತ್ತಿದ್ದರು.

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಜನರಲ್ ಹಾಸ್ಟೆಲ್‌ನಲ್ಲಿ ಮತ್ತು ಶಾಸಕರ ಭವನದಲ್ಲಿ ಸ್ನಾನಕ್ಕೆ ನೀರು ಇಲ್ಲ, ಊಟದ ವ್ಯವಸ್ಥೆ ಕೂಡ ಚೆನ್ನಾಗಿಲ್ಲ. ನಾವೇನೋ ಊಟಕ್ಕೆ ಮನೆಗೆ ಹೋಗುತ್ತೇವೆ. ಆದರೆ ಬೇರೆ ಊರಿನಿಂದ ಬಂದ ಶಾಸಕರು ಈ ಊಟವನ್ನೇ ನಂಬಿರುವವರಿಗೆ ಬಹಳ ತೊಂದರೆಯಾಗಿದೆ. ಇವರು ಯಾವ ಘಳಿಗೆಯಲ್ಲಿ ಆಹಾರ ಮಂತ್ರಿಗಳಾದರೋ, ಅಂದಿನಿಂದ.......

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಊಟಕ್ಕೆ ತೊಂದರೆಯಾಗಿರುವ ಸದಸ್ಯರು ನನ್ನ ಹತ್ತಿರ ಹೇಳಿದ್ದಾರೆ. ಪಾಪ, ಅವರ ಬಗ್ಗೆ ನಿಮಗೆ ಕನಿಕರ ಬಂದಿರಬೇಕೆಂದು ಕಾಣುತ್ತದೆ. ಆ ವಿಷಯ ನನಗೆ ಗೊತ್ತಿದೆ. ಅದನ್ನು ನಾನು ನೋಡಿಕೊಳ್ಳುತ್ತೇನೆ.

4-30 P. M.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷಿಣಿಯವರೇ, ನನ್ನದೊಂದು ಪ್ರಾರ್ಥನೆ. ನನ್ನ ಹೆಸರನ್ನು ತಾವು ಕರೆದಾಗ ನಾನು ಎಲ್ಲೋ ಹೊರಗಡೆ ಹೋಗಿದ್ದೆ. ಈಗ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು, ಮತ್ತು ನನ್ನ ತಿದ್ದುಪಡಿಗಳನ್ನು ಮೂವ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ತಿದ್ದುಪಡಿಗಳನ್ನು ಮಂಡಿಸುವುದಕ್ಕೆ ನಾನು ತಮ್ಮ ಹೆಸರನ್ನು ಕರೆದಾಗ ತಾವು ಇಲ್ಲಿ ಇರಲಿಲ್ಲ. ತಮ್ಮ ಹೆಸರನ್ನು ಕರೆದಾಗ ತಾವು ಸೀಟಿನಲ್ಲಿ ಇರಬೇಕಾದ್ದು ತಮ್ಮ ಕರ್ತವ್ಯ. ಆದ್ದರಿಂದ ಈಗ ತಾವು ತಮ್ಮ ಚಾನ್ಸ್ ಕಳೆದುಕೊಂಡಿದ್ದೀರಿ. ಮುಂದೆ ತಮಗೆ ಮಾತನಾಡುವುದಕ್ಕೆ ಅವಕಾಶ ದೊರೆತಾಗ ತಮ್ಮ ತಿದ್ದುಪಡಿಗಳನ್ನು ಸೇರಿಸಿಕೊಂಡು ಆ ಮೇಲೆ ಮಾತನಾಡಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಆರೀತಿ ರಿಸ್ಟ್ರಿಕ್ಷನ್ ಹಾಕಿದರೆ ನಮಗೆ ಬಹಳ ಕಷ್ಟವಾಗುತ್ತದೆ. ತಾವು ನನಗೆ ಚಾನ್ಸ್ ಕೊಡಬೇಕು.

ಅಧ್ಯಕ್ಷರು.—ಮುಂದೆ ಅವಕಾಶವನ್ನು ಕೊಟ್ಟಾಗ ಮಾನ್ಯ ಸದಸ್ಯರು ತಿದ್ದುಪಡಿಯ ಮೇಲೆ ಮಾತನಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ತಾವು ಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡಹಾಗೆ ನಮ್ಮನ್ನೂ ತರಾಟೆಗೆ ತೆಗೆದುಕೊಳ್ಳಬೇಡಿ ನಮಗೆ ಸ್ವಲ್ಪ ರಿಯಾಯಿತಿ ಕೊಡಿ.

ಅಧ್ಯಕ್ಷರು.—ನಾನು ಸಾಮ್ಯ ಕೊಟ್ಟೆ ಅಷ್ಟೇ ಹೊರತು, ಉದ್ದೇಶಪೂರ್ವಕವಾಗಿ ನಾನೇನು ಆ ರೀತಿ ಮಾಡಲಿಲ್ಲ. ಬರೀ ಮಾತನಾಡುವುದರಲ್ಲೇ ಕಾಲವೆಲ್ಲಾ ವ್ಯರ್ಥವಾಗಿ ಹೋಗುತ್ತದೆ. ಆದ್ದರಿಂದ ಮುಂದಿನ ಕಾರ್ಯಕಲಾಪವನ್ನು ತೆಗೆದುಕೊಳ್ಳುವುಕ್ಕೆ ಅವಕಾಶವನ್ನು ಕೊಡಿ.

ಶ್ರೀ ವಾಟಾಳ್ ನಾಗರಾಜ್.—ಆಹಾರಶಾಖೆಯ ಮಂತ್ರಿಗಳು ಈಗ ಇಲ್ಲಿ ಇದ್ದಾರೆ. ಆದ್ದರಿಂದ ಎರಡು ಮಾತುಗಳನ್ನು ಹೇಳುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

Sri S. BANGARAPPA.—I wish to raise a point of order regarding the election of the Deputy Speaker.

MADAM SPEAKER.—The hon. member may raise it tommorrow.

Sri C. M. ARUMUGHAM.—The hon. member may be permitted to raise his point of order.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ಈ ಸಭೆಯಲ್ಲಿ ಯಾವಾಗಲೂ ಅಧ್ಯಕ್ಷರ ಚುನಾವಣೆಯಾದ ಮೇಲೆ ಉಪಾಧ್ಯಕ್ಷರನ್ನು ಆರಿಸುವಂತಹ ನಿಯಮ ಇದೆ. ಅಧ್ಯಕ್ಷರ ಚುನಾವಣೆ ಕಳೆದ ತಿಂಗಳು 24ನೇ ತಾರೀಖು ಆಯಿತು. ತಾವು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದೀರಿ. ಅದು ಆದಮೇಲೆ ರೂಲ್ಸ್ ಆಫ್ ಪ್ರೊಸೀಜರ್‌ನ 8ನೇ ನಿಯಮದ ಪ್ರಕಾರ ಈ ಸಭೆಯು ಉಪಾಧ್ಯಕ್ಷರನ್ನು ಚುನಾಯಿಸಲು ಇಲ್ಲಿಯವರೆಗೂ ಕ್ಯಾಲೆಂಡರ್ ಆಫ್ ಇವೆಂಟ್ಸ್ ಅನ್ನು ಹೊರಡಿಸಿಲ್ಲ. ಈ ಬಗ್ಗೆ ಏನೇನು ಕಾರ್ಯಕ್ರಮವನ್ನು ತೆಗೆದು ಕೊಳ್ಳಬೇಕೋ ಅದನ್ನು ತಾವು ತೆಗೆದುಕೊಂಡಿಲ್ಲ. ಇದು ತಮ್ಮ ಜವಾಬ್ದಾರಿ. ಬ್ರಿಟಿಷ್ ಪಾರ್ಲಿಮೆಂಟಿನ ಸಿಸ್ಟಂನಲ್ಲಿ ಕೂಡ ಅಧ್ಯಕ್ಷರ ಚುನಾವಣೆ ಆದ ಮೇಲೆ ಉಪಾಧ್ಯಕ್ಷರ ಚುನಾವಣೆಯನ್ನು ಮಾಡತಕ್ಕಂಥಾ ಒಂದು ಸತ್‌ಸಂಪ್ರದಾಯ ಇದೆ. ನಮ್ಮಲ್ಲಿ ಹಿಂದೆ ಕಳೆದ ಅಸೆಂಬ್ಲಿಯಲ್ಲಿ ಕೂಡ ಅಧ್ಯಕ್ಷರ ಚುನಾವಣೆ ಆದಮೇಲೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹೊರಡಿಸಿ ಉಪಾಧ್ಯಕ್ಷರನ್ನು ಚುನಾಯಿಸಿದ್ದನ್ನು ನಾನು ನೋಡಿದ್ದೇವೆ. ನಾವು 24ನೇ ತಾರೀಖಿನಿಂದ ಇಲ್ಲಿಯವರೆಗೂ ಕಾದು ನೋಡಿದೆವು. ಆದರೆ ಇಲ್ಲಿಯವರೆಗೂ ಉಪಾಧ್ಯಕ್ಷರನ್ನು ಚುನಾಯಿಸಲು ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ತಾವು ಉಪಾಧ್ಯಕ್ಷರ ವಿಷಯವನ್ನು ಮರೆತಂತೆ ಇದೆ. ಆದ್ದರಿಂದ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾವಾಗ ಉಪಾಧ್ಯಕ್ಷರ ಚುನಾವಣಾ ಕಾರ್ಯಕ್ರಮ ಪಟ್ಟಿಯನ್ನು ಪ್ರಕಟಿಸುತ್ತೀರಿ ಎಂಬುದನ್ನು ತಾವು ದಯವಿಟ್ಟು ತಿಳಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ಈಗ ಶ್ರೀಮಾನ್ ಬಂಗಾರಪ್ಪನವರು ಏನು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದು ಬಹಳ ಗುರುತರವಾದದ್ದು. ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಶ್ರೀಮಾನ್ ನಾಗಣ್ಣನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ ಪ್ರಜಾಪ್ರಭುತ್ವದ ಉಳಿವಿಗೋಸ್ಕರ ಒಂದು ಸತ್ ಸಂಪ್ರದಾಯವನ್ನು ಹಾಕಬೇಕು, ಅದಕ್ಕಾಗಿ ವಿರೋಧ ಪಕ್ಷದವರೊಬ್ಬರಿಗೆ ಉಪಾಧ್ಯಕ್ಷರ ಸ್ಥಾನವನ್ನು ದೊರಕಿಸಿಕೊಡಬೇಕೆಂದು ಹೇಳಿದ್ದಾರೆ. ಉಪಾಧ್ಯಕ್ಷರ ಸ್ಥಾನವನ್ನು ಯಾರಿಗೆ ಕೊಡಬೇಕು ಎನ್ನುವ ಬಗ್ಗೆ ಇನ್ನೂ ಆಡಳಿತಪಕ್ಷದಲ್ಲಿ ಸಮಾಲೋಚನೆ ನಡೆಯುತ್ತಿದೆ. ಅವರ ಪಕ್ಷದಲ್ಲಿ ಆ ಸ್ಥಾನಕ್ಕೆ ಇನ್ನೂ ಸರಿಯಾದ ಕ್ಯಾಂಡಿಡೇಟ್ ಸಿಕ್ಕಿಲ್ಲ ಎಂದು ಕಾಣುತ್ತದೆ. ಆದರೆ ಆ ಸ್ಥಾನಕ್ಕೆ ಬೇಕಾದ ಕ್ಯಾಂಡಿಡೇಟ್ ಅನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ವಿರೋಧ ಪಕ್ಷದಿಂದ ನಾವು ಕೊಡುವಂತಹ ಕ್ಯಾಂಡಿಡೇಟ್ ಅನ್ನು ತಾವು ಒಪ್ಪಿಕೊಂಡು ಅವರಿಗೆ ಉಪಾಧ್ಯಕ್ಷರ ಸ್ಥಾನವನ್ನು ಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ಕೆ. ಎಚ್. ರಂಗನಾಥ್.—ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ರೂಲ್‌ನಂಬರ್ 8ರ ಪ್ರಕಾರ ಏನು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದನ್ನು ಅವರು ಈ ಸಭೆಯ

ಕಾರ್ಯಕಲಾಪಗಳಿಗೆ ಸಂಬಂಧಿಸಿದಂತೆ ಕ್ರಿಯಾಲೋಪವನ್ನು ಎತ್ತಬಹುದು. ಆದರೆ ರೂಲ್ ನಂಬರ್ 311ರ ಪ್ರಕಾರ ಶ್ರೀಮಾನ್ ಬಂಗಾರಪ್ಪನವರು ಕ್ರಿಯಾಲೋಪವನ್ನು ಎತ್ತಿರುವ ವಿಷಯು ಈ ಸಭೆಯ ಪ್ರಸಕ್ತ ಕಾರ್ಯಕಲಾಪಗಳಿಗೆ ಸಂಬಂಧವಿಲ್ಲ. ಈ ದೃಷ್ಟಿಯಿಂದ ವಿಚಾರ ಮಾಡುವುದಾದರೆ ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಬಂಗಾರಪ್ಪನವರು ಎತ್ತಿರತಕ್ಕ ಕ್ರಿಯಾಲೋಪ ಕ್ರಮಬದ್ಧವಾಗಿಲ್ಲ ಎಂದು ಮಾನ್ಯ ಅಧ್ಯಕ್ಷರು ತೀರ್ಮಾನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಕೆ. ಎಚ್. ರಂಗನಾಥರವರು ರೂಲ್ 311 ರೆಫರ್ ಮಾಡಿದ್ದಾರೆ. ಅದರ ಬಗ್ಗೆ ಸ್ವಲ್ಪ ಹೇಳುತ್ತೇನೆ. Rule 311 says that it shall relate to the interpretation or enforcement of these rules. Enforcement includes Rule 8 and therefore Rule 8 comes under Rule 311. Rule 311 pertains not only to the business of the House but also to the enforcement of the Rules. Rule 8 pertains to the election of the Deputy Speaker and therefore it will have to be enforced. Therefore, my submission is that my point of order is correct and in order. ಅಲ್ಲಿ ಇಂಟರ್‌ಪ್ರಿಟೇಶನ್ ಪ್ರಶ್ನೆ ಇಲ್ಲವೇ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಾನು ನೋಡುತ್ತಿದ್ದ ಹಾಗೆ ಇಲ್ಲಿ ಒಂದು ವಿಚಾರ ನಡೆಯುತ್ತಾ ಇದೆ. ಅಧ್ಯಕ್ಷರು ಎದ್ದಾಗ ನಾವು ಕಾಣವೆ ಎದ್ದು ನಿಂತರೆ ಅದನ್ನು ಕ್ಷಮಿಸುವುದಕ್ಕೆ ಸಾಧ್ಯವಿದೆ. ಆದರೆ ನಾವು ಅದನ್ನೇ ಒಂದು ಉದ್ಯೋಗವನ್ನಾಗಿ ಮಾಡುವುದಾದರೆ.........

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾವು ಇಲ್ಲಿ ಬಂದಿರುವುದು ಉದ್ಯೋಗ ಮಾಡುವುದಕ್ಕಲ್ಲ.

ಶ್ರೀ ವಾಟಾಳ್ ನಾಗರಾಜ್.—ಆ ಮಾತನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ನಾವು ಅದನ್ನು ಪ್ರೊಟೆಸ್ಟ್ ಮಾಡುತ್ತೇವೆ. ನಾವು ಇಲ್ಲಿ ಬಂದಿರುವುದು ಯಾವ ಉದ್ಯೋಗ ಮಾಡುವುದಕ್ಕಲ್ಲ, ಉದ್ಯೋಗ ಮಾಡುವುದಕ್ಕೆ ಬಂದಿರುವುದು ಅವರು. ಈ ಕಡೆಯಿಂದ ಆ ಕಡೆಗೆ ಹೋಗಿ ಉದ್ಯೋಗ ಮಾಡುವುದು ಅವರು. ವರ್ಷಕ್ಕೆ ಒಂದು ಉದ್ಯೋಗ ಅವರು ಮಾಡುತ್ತಿರುವುದು.

ಶ್ರೀ.ಎಸ್. ಬಂಗಾರಪ್ಪ.—ದಯವಿಟ್ಟು ಮಾನ್ಯ ಸದಸ್ಯರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಾವು ಅಂತಹ ಉದ್ಯೋಗ ಮಾಡುವುದಕ್ಕೆ ಇಲ್ಲಿ ಬಂದಿಲ್ಲ; ಮತ್ತು ಯಾವ ಉದ್ಯೋಗ ಮಾಡುವ ಜಾತಿಗೂ ಸೇರಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ತಮ್ಮ ಅಪ್ಪಣೆ ಪಡೆದು ನಾನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದೆ. ನಾನು ಬಳಸಿರತಕ್ಕ ಪದ "ಉದ್ಯೋಗ" ಎನ್ನುವುದು ಅನ್‌ಪಾರ್ಲಿಮೆಂಟರಿಯಾಗಿದ್ದು, ಬಳಸಬಾರದ ಪದವಾಗಿದ್ದರೆ, ತಾವು ಅದರ ಬಗ್ಗೆ ರೂಲಿಂಗ್ ಕೊಡಿ, ನಾನು ಅದಕ್ಕೆ ತಲೆಬಾಗುತ್ತೇನೆ. ಇದಕ್ಕೆ ಕಾರಣ ಇಷ್ಟೆ. ಈ ಸಭೆಯ ಗೌರವವನ್ನು ಕಾಯ್ದುಕೊಳ್ಳತಕ್ಕದ್ದು ನಮ್ಮ ಕರ್ತವ್ಯವಾಗಿದೆ. ನಾವು ಇಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂಬುದನ್ನು ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ನಿಗದಿ ಮಾಡಿದ್ದಾರೆ. ಆದರೆ ಕಾರಣಾಂತರಗಳಿಂದ ಕೆಲವುವೇಳೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಯಾರೇ ಸದಸ್ಯರಾಗಲೀ ಉದ್ದೇಶಪೂರ್ವಕವಾಗಿ ಯಾರಾದರೂ ಮಾತನಾಡುವಾಗ ಮಧ್ಯೆ ಆತಂಕಪಡಿಸುವುದಾದರೆ, ನಾವು ಏನೊಂದು ಸತ್‌ಸಂಪ್ರದಾಯ ಪದ್ಧತಿಯನ್ನು ಈ ಸಭೆಯಲ್ಲಿ ಪಾಲನೆ ಮಾಡಿಕೊಂಡು ಬಂದಿದ್ದೇವೆ, ಅದನ್ನು ಮುಂದುವರಿಸಿಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ದಯವಿಟ್ಟು ಅಂಥದ್ದಕ್ಕೆ ಅವಕಾಶ ಕೊಡಬಾರದು ಎಂದು ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಮಾನ್ಯ ಮಿತ್ರರಿಗೆ ನಾನು ಅವರ ಮನಸ್ಸಿಗೆ ನೋಯಿಸಬೇಕೆಂದು ಆ ರೀತಿ ಮಾತನಾಡಿಲ್ಲ. ಮತ್ತು ಮಾನ್ಯ ನಾಗರಾಜರು ಬೆದರಿಕೆ ಹಾಕುವುದಾದರೆ ಈ ಸಭೆಯಲ್ಲಿ ನಾನು ಬೆದರತಕ್ಕವನಲ್ಲ. ಈ ಸಭೆಯಲ್ಲಿ ಸಭಾ ಸದಸ್ಯನಾಗಿ ಗೌರವದಿಂದ ವರ್ತಿಸಬೇಕಾದುದು ಪ್ರತಿಯೊಬ್ಬ ಸದಸ್ಯರ ಮೊದಲನೆಯ ಕರ್ತವ್ಯ. ಅದನ್ನು ಮಾಡದಿದ್ದರೆ ನಾವು ನಮ್ಮ ಕರ್ತವ್ಯಕ್ಕೆ ಚ್ಯುತಿ ಮಾಡಿದ ಹಾಗೆ ಆಗುತ್ತದೆ. ಇದನ್ನು ಗಮನಕ್ಕೆ ತೆಗೆದುಕೊಂಡು ತಾವು ನಮಗೆ ರಕ್ಷಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾರೂ ಯಾರ ಮೇಲೆಯೂ ಬೆದರಿಕೆ ಹಾಕತಕ್ಕದ್ದು ಏನೂ ಇಲ್ಲ. ಮಾನ್ಯ ರಂಗನಾಥರವರು ನಮ್ಮ ಬೆದರಿಕೆಗೆ ಹೆದರುವವನಲ್ಲ

(ಶ್ರೀ ವಾಟಾಳ್ ನಾಗರಾಜ್)

ಎಂದು ಹೇಳಿದರು. ಆದರೆ ಅದೇ ರೀತಿ ನಾನು ಕೂಡ ಅದನ್ನು ತಿರುಗಿಸಿ ಅವರಿಗೆ ಹೇಳಬೇಕಾಗಿದೆ. ನಾನು ಕೂಡ ಅವರ ಬೆದರಿಕೆಗೆ ಹೆದರುವವನಲ್ಲವೆಂದು ಹೇಳುತ್ತೇನೆ. ಮಾನ್ಯ ಬಂಗಾರಪ್ಪನವರು ಒಂದು ಕ್ರಿಯಾಲೋಪವನ್ನು ಎತ್ತಿ ಮಾತನಾಡುತ್ತಿರುವಾಗ ಮಾನ್ಯ ರಂಗನಾಥರವರು ಮಧ್ಯೆ ಸ್ವಲ್ಪ ಮಾತನಾಡಿದರು. ಮಾನ್ಯ ರಂಗನಾಥರವರ ಬಗ್ಗೆ ನಮಗೆ ಅಪಾರವಾದಂತಹ ಗೌರವ ಇದೆ. ಆದರೆ ಮಾತನಾಡುತ್ತಾ ಮಾತನಾಡುತ್ತಾ ಏನೋ ಸ್ವಲ್ಪ ಉದ್ವೇಗದಿಂದ ಮಾತನಾಡಿದರು. ಅವರು ಬಹಳ ವರ್ಷಗಳಿಂದ ನಮ್ಮ ಜೊತೆಗೆ ಇದ್ದವರು. ಅವರ ಉದ್ವೇಗವೇನೆಂದು ನನಗೆ ಅರ್ಥ ವಾಗಿಲ್ಲ. ಆದರೆ ಅವರು ಹಾಗೆ ಮಾತನಾಡುವಾಗ "ಉದ್ಯೋಗ" ಎಂಬ ಪದವನ್ನು ಬಳಸಿ ನಮಗೆ ಹೇಳುವುದಾದರೆ, ಬಹುಶಃ ಈ ಸಭೆಯಲ್ಲಿ ತಮ್ಮ ಮೂಲಕ ಅವರಿಗೆ ಹೇಳುತ್ತೇನೆ, ಆ ಉದ್ಯೋಗ ಎಂಬ ಪದವನ್ನು ಅವರು ಹಿಂದಕ್ಕೆ, ವಾಪಸ್ಸು ತೆಗೆದುಕೊಳ್ಳಬೇಕು ಎಂದು. ಇಲ್ಲಿ ಉದ್ಯೋಗ ಮಾಡಲು ಯಾರೂ ಬರುತ್ತಿಲ್ಲ. ಉದ್ಯೋಗ ಎಂಬ ಪದವನ್ನು ಬಳಸಿದರೆ ಅದರಲ್ಲಿ ಬಹಳವಾದ ಅಪಾರ್ಥ ಬರುತ್ತದೆ. ಇವತ್ತು ನೋಡಿಯೇ ಬಿಡೋಣ ಎಂದು ನಮಗೆ ಹೆದರಿಕೆ ಹಾಕುತ್ತಿದ್ದಾರೆ. ಆದರೆ ಒಂದು ಮಾತನ್ನು ಅವರಿಗೆ ಹೇಳುತ್ತೇನೆ–ನೀವು 165 ಜನರು ಇಲ್ಲಿ ಇರ ಬಹುದು ; ಆದರೂ ನಿಮ್ಮ ಹೆದರಿಕೆಗೆ ನಾವು ಸಹ ಬಗ್ಗುವುದಿಲ್ಲ ಎನ್ನುವ ಛಲವನ್ನು ಅವರಿಗೂ ತೋರಿಸುತ್ತಿದ್ದೇನೆ.

ಅಧ್ಯಕ್ಷರು.—ಈಗ ಕ್ರಿಯಾಲೋಪದ ಬಗ್ಗೆ ಎರಡು ಕಡೆಯೂ ಚರ್ಚೆಯಾಗಿದೆ. ಉದ್ಯೋಗ ಎಂಬ ಪದದ ಬಗ್ಗೆ ವಿಮರ್ಶೆ ಮಾಡುವುದಾದರೆ, ಅದಕ್ಕೆ ಡಿಕ್ಷನರಿ ಇದೆ ; ಅದರ ಬಗ್ಗೆ ಬಹಳವಾಗಿ ವಿಮರ್ಶೆ ಮಾಡಬಹುದು. ಆದರೆ ಅಸೆಂಬ್ಲಿ ಇರುವುದು ನಮ್ಮ ಕೆಲಸಕಾರ್ಯಗಳನ್ನು ಮಾಡುವುದ ಕ್ಕೋಸ್ಕರ. ದೇಶದಲ್ಲಿ ಏನು ನಡೆಯುತ್ತದೆ ; ಮತ್ತು ಏನು ನಡೆಯಬೇಕೆಂಬುದರ ಬಗ್ಗೆ ಇಲ್ಲಿ ನಾವು ಚರ್ಚೆ ಮಾಡಬೇಕಾಗುತ್ತದೆ. ಅದು ಬಿಟ್ಟು ಒಬ್ಬರನ್ನೊಬ್ಬರು ಬೆದರಿಸುವುದಕ್ಕೆ ಅಥವಾ ಹೆದರಿಸುವುದಕ್ಕೆ ಅಲ್ಲ. ತಾವೆಲ್ಲರೂ ದೇಶದ ಹಿತದೃಷ್ಟಿಯಿಂದ ಕೆಲಸಕಾರ್ಯಗಳನ್ನು ಮಾಡಲು ಬಂದಿದ್ದೀರಿ ಎಂದು ಭಾವಿಸುತ್ತೇನೆ. ಮಾನ್ಯ ರಂಗನಾಥರವರು ಅಧ್ಯಕ್ಷರು ನಿಂತಾಗ ಮಧ್ಯೆ ನಿಂತುಕೊಳ್ಳುವುದು ಸದಸ್ಯರಿಗೆ ಉದ್ಯೋಗವಾಗಬಾರದು ಎಂದು ಹೇಳಿದ್ದಾರೆ. ಅದರಲ್ಲಿ ಏನೂ ಅಂತಹ ತಪ್ಪು ಇಲ್ಲವೆಂದು ನನಗೆ ಕಾಣುತ್ತದೆ. ಅದರ ಬಗ್ಗೆ ಇದೇ ನನ್ನ ರೂಲಿಂಗ್.

ಡೆಪ್ಯುಟಿ ಸ್ಪೀಕರ್ ಚುನಾವಣೆ ವಿಚಾರದಲ್ಲಿ ನಾನು ಈಗಾಗಲೇ ಚರ್ಚೆ ಮಾಡುತ್ತಿದ್ದೇನೆ. ಅವರ ಚುನಾವಣೆಯ ಬಗ್ಗೆ ಒಂದು ದಿನಾಂಕವನ್ನು ನಿಗದಿ ಮಾಡಲಾಗುತ್ತದೆ. ಆ ವಿಚಾರದಲ್ಲಿ ಈಗ ಏನೂ ಹೇಳಬೇಕಾದ್ದು ಇಲ್ಲ. ಈ ವಿಚಾರ ಇಲ್ಲಿಗೆ ಸಾಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆಯವರೇ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ಚರ್ಚೆಮಾಡುವುದಕ್ಕೆ ಮುಂಚಿತವಾಗಿ ಈ ಸಭೆಯ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ನಾವು ಯಾರೂ ಹಿಂದೆ ಹೋಗುವುದಕ್ಕೆ ಪ್ರಯತ್ನಮಾಡುವುದಿಲ್ಲ. ಮಾನ್ಯ ಶ್ರೀ ರಂಗನಾಥ ಅವರು ಇವತ್ತು ಈ ಸಭೆಯ ಕಾರ್ಯಕಲಾಪಗಳು ಹೇಗೆ ನಡೆಯಬೇಕು ಎನ್ನುವುದರ ಬಗ್ಗೆ ಒಂದು ನಿಯಮಾವಳಿ ಚೌಕಟ್ಟಿನಲ್ಲಿ ನಡೆಯಬೇಕೆಂದು ಹೇಳಿದ್ದು ಬಹಳ ಸಂತೋಷ. ಅವರು ಈ ಭಾಗದಲ್ಲಿ ಕೂತಿದ್ದ ಕಾಲದಲ್ಲಿ ಏನು ಹೇಳುತ್ತಿದ್ದರು. ಎಂಬುದು ಗೊತ್ತು. ನಮಗೆ ವಿವೇಕ ಹೇಳತಕ್ಕ ಜನ ಯಾವರೀತಿ ವರ್ತಿಸಬೇಕೆಂದು ಅರಿತುಕೊಂಡರೆ ಸಾಕು. ಈ ಸಭೆಗೆ ಅಗೌರವ ತರಬೇಕೆಂಬ ದೃಷ್ಟಿ ನಮ್ಮಲ್ಲಿ ಯಾರಿಗೂ ಇಲ್ಲ. ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ವಿಚಾರದಲ್ಲಿ ಮಾತನಾಡುವಾಗ ಈ ಸಭೆಯ ಗೌರವವನ್ನು ಕಾಪಾಡುವುದು ಪ್ರತಿ ಯೊಬ್ಬ ಸದಸ್ಯರ ಕರ್ತವ್ಯ. ಅದನ್ನು ನಾವು ಇಲ್ಲಿ ಹೊಸದಾಗಿ ಕಲಿಯಬೇಕಾಗಿಲ್ಲವೆಂದು ಹೇಳಿ ನನ್ನ ಮಾತನ್ನು ಮುಂದುವರಿಸುತ್ತೇನೆ.

ಈ ದಿವಸ ಹೊಸದಾಗಿ ಸರ್ಕಾರ ರಚನೆಯಾದಮೇಲೆ ಈ ಸಭೆ ಬಹುಶಃ ಎರಡನೆಯ ಅಧಿವೇಶ ನದಲ್ಲಿ ಕೂತು ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯದ ಬಗ್ಗೆ ಚರ್ಚೆ ನಡೆಸುತ್ತಿದೆ. ಇವತ್ತು ರಾಜ್ಯಪಾಲರ ಭಾಷಣದ ಬಗ್ಗೆ ವಂದನೆಯನ್ನು ಅರ್ಪಿಸುವ ಏನೊಂದು ಸೂಚನೆಯನ್ನು ಮಾನ್ಯ ಶ್ರೀ ರಾಮೇಗೌಡರು ಇಟ್ಟಿದ್ದಾರೋ ಅವರು ಅವರ ಭಾಷಣವನ್ನು ಮಾಡುವ ಕಾಲದಲ್ಲಿ ರಾಜ್ಯಪಾಲರು ಬಹಳ ಉತ್ತಮವಾದಂಥ ಮತ್ತು ಬಹಳ ಚಿಕ್ಕದಾದ ಚೊಕ್ಕ ವಾಗಿರತಕ್ಕ ಭಾಷಣವನ್ನು ಮಾಡಿದ್ದಾರೆಂದು ಹೇಳಿದರು. ರಾಜ್ಯಪಾಲರಿಗೆ ರಾಜಕೀಯದಲ್ಲಿರತಕ್ಕ ಅವರ ಅನುಭವದ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪಮಾಡುವುದಿಲ್ಲ. ಅವರು ಬಹಳವಾಗಿ ನುರಿತಿರತಕ್ಕ ರಾಜಕಾರಣಿ. ಹೆಚ್ಚಿನ ಅನುಭವವನ್ನು ಗಳಿಸಿರುವಂಥ ವ್ಯಕ್ತಿ ಆದರೆ ರಾಜ್ಯಪಾಲರ ಭಾಷಣ

ವನ್ನು ನೋಡಿದರೆ, ಬಹುಶಃ ರಾಜ್ಯಪಾಲರು ಸ್ವತಃ ಈ ಭಾಷಣವನ್ನು ಮಾಡಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ರಾಜ್ಯದ ಸಚಿವ ಸಂಪುಟ ಅವರ ಬಾಯಿಂದ ಈ ರೀತಿ ನುಡಿಸಿದ್ದಾರೆ. ಇದಕ್ಕೆ ನಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುವುದಕ್ಕೆ ಸಾಕಷ್ಟು ತಿರುಳಿಲ್ಲ, ಹುರುಳಿಲ್ಲವೆಂದು ನಾನು ಹೇಳಬೇಕಾಗುತ್ತದೆ. ಇವತ್ತು ಸಚಿವ ಸಂಪುಟದ ಸದಸ್ಯರು ನಮಗೆ ಇರತಕ್ಕ ಕಾಲ ಬಹಳ ಕಡಿಮೆ, ಕೂಲಂಕಷವಾಗಿ ಆಲೋಚನೆ ಮಾಡಿ ಚುನಾವಣೆಯ ಸಂದರ್ಭದಲ್ಲಿ ಕೊಟ್ಟಂಥ ಆಶ್ವಾಸನೆಗಳನ್ನು ಈಡೇರಿಸುವ ಬಗ್ಗೆ ಸಾಕಷ್ಟು ಕಾಲಾವಕಾಶವಿಲ್ಲವೆಂದು ಹೇಳುವುದಾದರೆ ನಾನು ಅದರ ಬಗ್ಗೆ ಹೆಚ್ಚಿಗೆ ಟೀಕೆ ಮಾಡುವುದಿಲ್ಲ. ಆದರೆ ಚುನಾವಣೆಯ ಕಾಲದಲ್ಲಿ ಇವರು ಜನತೆಗೆ ಕೊಟ್ಟಂಥ ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ, ಅದಕ್ಕೆ ಸಂಬಂಧಪಟ್ಟಹಾಗೆ ಒಂದು ಲವಲೇಶಾಂಶವೂ ಸೂಚನೆ ಇಲ್ಲವೆಂದು ಹೇಳುತ್ತೇನೆ. ಅದು ಉತ್ಪ್ರೇಕ್ಷೆಯ ಮಾತಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ದೇಶದಲ್ಲಿ ಎರಡು ಬೃಹತ್ ಸಮಸ್ಯೆಗಳಿವೆ ಆ ಎರಡು ಸಮಸ್ಯೆಗಳು ಯಾವುವೆಂದರೆ ಚುನಾವಣೆಯ ಕಾಲದಲ್ಲಿ ಹೇಳಿರತಕ್ಕವು. ಒಂದು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದು, ಇನ್ನೊಂದು ಬಡತನವನ್ನು ನಿರ್ಮೂಲಮಾಡುವುದು. ನಾನು ಕೆರೆ, ರಸ್ತೆಯ ಬಗ್ಗೆ ಹೆಚ್ಚಿಗೆ ಮಾತನಾಡುವುದಿಲ್ಲ. ಕಳೆದ 25 ವರ್ಷಗಳಿಂದ ಈ ಕೆಲಸ ಮಾಡುತ್ತಲೇ ಇದ್ದಾರೆ, ಅದೇನೆಂದರೆ ರಸ್ತೆ ಮಾಡುವುದು, ಕೆರೆ ದುರಸ್ತುಮಾಡುವುದು ಇದರಿಂದೇನೂ ಅಷ್ಟಾಗಿ ಜನತೆಗೆ ಸಾಕಷ್ಟು ಉಪಯೋಗವಾಗಿಲ್ಲ. ಬಹುಶಃ ಈ ಬಾಬಿನಲ್ಲಿ ಈ ರಾಜ್ಯ ಇತರ ರಾಜ್ಯಗಳಿಗೆ ಹೋಲಿಸಿದರೆ ಹಿಂದೆ ಬಿದ್ದಿದೆಯೆಂದು ಲೋಕೋಪಯೋಗಿ ಮಂತ್ರಿಗಳು ತಿಳಿಯಬೇಕು. ಹೀಗೆ ನಾನಾ ಘೋಷಣೆಗಳನ್ನು ಚುನಾವಣೆಯ ಕಾಲದಲ್ಲಿ ಮಾಡಿ ಇವತ್ತು ಸಾಮಾನ್ಯ ಜನತೆಗೆ ತಮ್ಮ ಒಂದು ಕಪಟ ನಾಟಕವನ್ನು ತೋರಿಸಿ ಕೈಲಾಸವೇ ಭೂಲೋಕಕ್ಕೆ ಇಳಿಯುತ್ತಿದೆ ಎಂಬ ಭಾವನೆಯನ್ನು ಹೊಂದಿದವರಾಗಿದ್ದಾರೆ. ಇವತ್ತು ಪ್ಲಾನಿಂಗ್ ಮಿನಿಸ್ಟರ್ ಅವರಾದ ಮಾನ್ಯ ಶ್ರೀ ಸುಬ್ರಹ್ಮಣ್ಯಂ ಅವರು ಗರೀಬಿ ಹಠಾವೋ ಎಂಬ ಹೊಸ ಪದವನ್ನು ಹೇಳಿದ್ದಾರೆ. ಹೀಗೆ ಹೇಳಿ ಜನತೆಯ ಮನಸ್ಸನ್ನು ತಮ್ಮ ಕಡೆಗೆ ಸೆಳೆಯಬಹುದೆಂದು ಇದ್ದಾರೆ. ಇದು ಒಂದು ಉತ್ತಮ ಪದ. ಆಪ್ಯಾಯಮಾನವಾಗಿದೆ. ಮತದಾರರು ಸುಮಾರು 25 ವರ್ಷಗಳಿಂದ ನೊಂದು, ಬೆಂದು ಈವತ್ತು ಇವರ ಒಂದು ಚುನಾವಣೆಯ ಘೋಷಣೆಗೆ ಮಾರುಹೋಗಿದ್ದಾರೆ. ಅಲ್ಲದೆ ನಾವು ಅಧಿಕಾರಕ್ಕೆ ಬಂದರೆ ರಾಷ್ಟ್ರದಲ್ಲಿ ಬಡತನವನ್ನು ನಿರ್ಮೂಲಮಾಡುತ್ತೇವೆಂದು ಮತದಾರರಲ್ಲಿ ಇವರು ಹೇಳಿಬಂದಿದ್ದಾರೆ. ಇವತ್ತು ಅವರ ಪಕ್ಷ ಆಡಳಿತವನ್ನು ವಹಿಸಿ ಕೊಂಡಿದೆ, ಹೆಚ್ಚಿನ ಹೊರೆಯನ್ನು ಹೊತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಈ ಬಡತನವನ್ನು ನಿರ್ಮೂಲ ಮಾಡುವುದಕ್ಕೆ ಒಂದು ಸೂಚನೆ ರಾಜ್ಯಪಾಲರ ಭಾಷಣದಲ್ಲಿ ಕೊಟ್ಟಿದ್ದಾರೆಯೇ ಎಂದು ನೋಡುವುದಾದರೆ ಅದರಲ್ಲಿ ಅಂಥಾದ್ದು ಏನೂ ಇಲ್ಲ. ಕಳೆದ 25 ವರ್ಷಗಳಿಂದಲೂ ರಾಜ್ಯಪಾಲರ ಭಾಷಣಗಳನ್ನು ಓದಿ ನೋಡುವುದಾದರೆ, ಈ ಒಂದು ಭಾಷಣಕ್ಕೂ, ಅವುಗಳಿಗೂ ಏನಾದರೂ ವ್ಯತ್ಯಾಸವಿದ್ದರೆ, ನಾನು ಈ ಟೀಕೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಇವತ್ತೂ ಸಹ ಮಾನ್ಯ ಶ್ರೀ ಸುಬ್ರಹ್ಮಣ್ಯಂ ಅವರು ಪ್ಲಾನಿಂಗ್ ಮಿನಿಸ್ಟರ್ ಆಗಿ ಕಲವು ಮಾತುಗಳನ್ನು ಹೇಳಿದ್ದಾರೆ ನಾನು ಅಷ್ಟಾಗಿ ಪತ್ರಿಕೆಗಳನ್ನು ಓದುವುದಕ್ಕೆ ಹೋಗುವುದಿಲ್ಲ. ನಾನು ಅಂಕಿ ಅಂಶಗಳ ಮೂಲಕ ಮಾತನಾಡುವುದಕ್ಕೆ ಸಿದ್ಧ. ಶ್ರೀ ಬಾಬು ಜಗಜೀವನ್‌ರಾಮ್‌ರವರು 50 ವರ್ಷಗಳಾದರೂ ಈ ದೇಶದಲ್ಲಿ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಚುನಾವಣೆ 9 ಅಥವಾ 11ನೇ ತಾರೀಖುಗಳಲ್ಲಿ ನಡೆದಾಗ ನನ್ನಲ್ಲಿ ಬಡತನವನ್ನು ನಿರ್ಮೂಲಮಾಡುವುಕ್ಕೆ ತಕ್ಕ ಮಂತ್ರದಂಡ ಇಲ್ಲವೆಂದು ಹೇಳಿದ್ದಾರೆ. ಮಾನ್ಯ ಶ್ರೀ ಸುಬ್ರಹ್ಮಣ್ಯಂ ಅವರು ನಿರುದ್ಯೋಗ ನಿವಾರಣೆ ಮಾಡುವುದಕ್ಕೆ ಐದನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ತಕ್ಕ ಪ್ರಯತ್ನಮಾಡುತ್ತೇವೆಂದು ಹೇಳಿದ್ದಾರೆ. ಇದು ಮೊನ್ನೆ ಪತ್ರಿಕೆಯಲ್ಲಿಯೂ ಬಂದಿದೆ. ಇನ್ನೂ ಒಂದು ಹೇಳಿಕೆಯನ್ನು 6ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಗ್ರಾಮಾಂತರ ನಿರುದ್ಯೋಗ ಸಮಸ್ಯೆ, ವಿದ್ಯಾವಂತರ ನಿರುದ್ಯೋಗ ಸಮಸ್ಯೆ ಇವೆರಡನ್ನೂ ಬಗೆಹರಿಸುವುಕ್ಕೆ ಪ್ರಯತ್ನಮಾಡುತ್ತೇವೆಂದು ಹೇಳಿದ್ದಾರೆ. ಇದನ್ನೆಲ್ಲಾ ಕೇಳಿ ನಾನು ನೊಂದಮನಸ್ಸಿನಿಂದ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮ ಮತದಾರರು ಪ್ರಜ್ಞಾವಂತರು ಪ್ರತಿಯೊಬ್ಬ ಪ್ರಜೆಯೂ ಬೆಳಿಗ್ಗೆ ಎದ್ದು ಪತ್ರಿಕೆಯನ್ನು ನೋಡಿದರೆ ಇವತ್ತಿನ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಜನ ಇಂತಹ ಒಂದು ಹೇಳಿಕೆಯನ್ನು ಕೊಡುತ್ತಿರುವುದೇ ಕಾಣುತ್ತದೆ, ಇಂತಹ ಒಂದು ಹವ್ಯಾಸವನ್ನು ಇಟ್ಟುಕೊಂಡಿದ್ದಾರೆ. ಬೆಳಿಗ್ಗೆ ನೋಡಿದರೆ ಇದು, ಸಂಜೆ $5\frac{1}{2}$ ಘಂಟೆಯಲ್ಲಿ ರೇಡಿಯೋ ತಿರುಗಿಸಿದರೆ, ಬಡತನ ನಿರುದ್ಯೋಗ ಈ ಎರಡು ಸಮಸ್ಯೆಗಳನ್ನು ಜಾಗ್ರತೆಯಾಗಿ ನಿರ್ಮೂಲಮಾಡುತ್ತೇವೆ ಎಂಬುದಾಗಿ ಹೇಳುವುದೇ ಆಗಿದೆ. ಚುನಾವಣೆಯೇನೋ ಆಯಿತು. ಈಗ 5ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಅಥವಾ 6ನೇ ಪಂಚವಾರ್ಷಿಕ ಯೋಜನೆಯ

(ಶ್ರೀ ಎಚ್. ಡಿ. ದೇವೇಗೌಡ)

ಅಂತ್ಯದೊಳಗೆ ಈ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಗೃಹಮಂತ್ರಿಗಳು ಹೇಳಿದರು. ಈಗ ಇನ್ನು ಮೂರು ವರ್ಷಗಳಲ್ಲಿ ಏನೇ ಆಗಲೀ ಈ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಇವರೂ ಇವರ ಸಹೋದ್ಯೋಗಿಗಳು ಹೇಳುತ್ತಿರುವುದನ್ನು ನೋಡಿದರೆ, ನಿಜವಾಗಿ ಇವರು ಈ ಸಮಸ್ಯೆಗಳನ್ನು ಬಗೆಹರಿಸಲು ಇನ್ನೆಷ್ಟು ಕಾಲ ಕೇಳುತ್ತಾರೋ ಎಂಬುದನ್ನು ನಾನು ಯೋಚನೆ ಮಾಡಬೇಕಾಗಿದೆ. ಇವತ್ತು ಈ ಭಾಷಣದಲ್ಲಿ ಯಾವುದಾದರೂ ರೂಪರೇಷೆಗಳನ್ನು ಕೊಡುವ ಒಂದು ಅಂಶವನ್ನಾದರೂ ರಾಜ್ಯಪಾಲರ ಬಾಯಿಂದ ನುಡಿಸಿದ್ದಾರೆಯೇ ಎಂದು ತಮ್ಮನ್ನು ಕೇಳಬೇಕಾಗಿದೆ. ಇಂದು ಈ ಎರಡು ಸಮಸ್ಯೆಗಳು ಬೃಹತ್ ಸಮಸ್ಯೆಗಳಾಗಿವೆ. ಅವುಗಳನ್ನು ಬಗೆಹರಿಸಲು ಮಾನ್ಯ ಅರ್ಥಸಚಿವರು ನಾವು ಪುಟ್ಟ ಪುಟ್ಟ ಹೆಜ್ಜೆ ಇಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನನಗೆ ಒಂದು ವಿಷಯ ನೆನಪಿಗೆ ಬರುತ್ತಿದೆ.

[MR. CHAIRMAN (SRI G. RAMEGOWDA) in the Chair].

ಈಗ ರೈಲ್ವೆ ಮಂತ್ರಿಗಳಾಗಿರುವ ಮಾನ್ಯ ಶ್ರೀ. ಹನುಮಂತಯ್ಯನವರು ಇಲ್ಲಿ ಮುಖ್ಯಮಂತ್ರಿಗಳಾಗಿ ಕೆಲಸಮಾಡಿದ್ದಾರೆ. ಆಗಲೇ ಭ್ರಷ್ಟಾಚಾರವೆಂಬುದನ್ನು ಮಂತ್ರಿಗಳು ಹಿಡಿದು ಓಡಿಸಬೇಕು, ರಾಜ್ಯದಲ್ಲಿ ನನ್ನದೇ ಪಕ್ಷ ರಾಜ್ಯಾಡಳಿತ ಮಾಡಬೇಕು, ಆಗ ಚಿಕ್ಕಪುಟ್ಟ ಮಂತ್ರಿಮಂಡಲವನ್ನು ರಚಿಸುತ್ತೇನೆಂದು ಹೇಳಿದ್ದರು.

5-00 P.M.

ಅದರ ಬಗ್ಗೆ ಈಗ ಅವರಿಗೆ ಮಾತನಾಡತಕ್ಕ ಅರ್ಹತೆ ಬಹುಶಃ ಇರುವುದಿಲ್ಲ ಎಂದು ಹೇಳುತ್ತೇನೆ. ಆದರೆ ನಾನೀಗ ಆ ಚೊಕ್ಕ ಸರ್ಕಾರ, ಚಿಕ್ಕ ಸರ್ಕಾರ ಪುಟ್ಟ ಸರ್ಕಾರದ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾತನಾಡತಕ್ಕ ಕಾಲ ಇನ್ನೂ ಮುಂದಕ್ಕಿದೆ. ಆದ್ದರಿಂದ ಅದರ ಗೋಜಿಗೆ ನಾನೀಗ ಹೋಗುವುದಿಲ್ಲ. ಈ ಹಿಂದೆ ಹಣಕಾಸಿನ ಸಚಿವರೂ ಮತ್ತು ಮುಖ್ಯ ಮಂತ್ರಿಗಳಿಬ್ಬರೂ ಇದೇ ಸಭೆಯಲ್ಲಿ ನಮ್ಮ ಸರ್ಕಾರ ದೇಶದಲ್ಲಿ ಬ್ಯಾಂಕುಗಳನ್ನೆಲ್ಲಾ ರಾಷ್ಟ್ರೀಕರಣ ಮಾಡಿತು--ರಾಜ ಮಹಾರಾಜರುಗಳ ರಾಜಧನವನ್ನು ರದ್ದುಮಾಡಿತು., ರೈತರ ಹಿತಸಾಧನೆಗಾಗಿ ಭೂಸುಧಾರಣೆಯನ್ನು ಜಾರಿಗೆ ತಂದಿದೆ ಎಂದು ಹೇಳಿದರು. ಅದೆಲ್ಲಾ ಹಾಗಿರಲಿ. ಆದರೆ ಆ ನಮ್ಮ ಸಭಾನಾಯಕರು ಇಲ್ಲಿ ಅಪ್ಪಣೆ ಕೊಡಿಸಿದ ರೀತಿಯಲ್ಲಿ ಎಷ್ಟು ಕಾಲದೊಳಗಾಗಿ ಸಮಾಜದಲ್ಲಿ ಇರತಕ್ಕ ದಾರಿದ್ರ್ಯವನ್ನು ತೊಡೆದುಹಾಕುತ್ತಾರೆ ಎಂಬ ಬಗ್ಗೆ ಒಂದು ಕಾಲ ನಿಗದಿಯನ್ನು ಗೊತ್ತುಮಾಡುವುದಕ್ಕಾಗುತ್ತದೆಯೇ ಎಂದು ನಾನು ಅವರನ್ನು ಕೈ ಜೋಡಿಸಿ ಪ್ರಾರ್ಥಿಸಿಕೊಳ್ಳುತ್ತೇನೆ, ಅವರು ಅದನ್ನು ಹೇಳುವುದಕ್ಕೆ ಸಿದ್ಧರಾಗಿದ್ದಾರೆಯೇ ಎಂದು ಕೇಳುತ್ತೇನೆ. ಅವರಿಗೆ ಹಾಗೆ ಒಂದು ಕಾಲ ಮಿತಿಮಾಡಿ ಅಷ್ಟರಲ್ಲಿ ಅದನ್ನು ಮಾಡತಕ್ಕ ಭರವಸೆಯನ್ನು ಅವರು ಕೊಡಬಲ್ಲರೇ ? ಅದನ್ನು ಖಚಿತವಾಗಿ ಹೇಳದೆ ಒಬ್ಬೊಬ್ಬರಿಗೂ ಒಂದೊಂದು ಫೀಲರನ್ನು ಬಿಟ್ಟುಕೊಂಡು ಸುಮ್ಮನೆ ಏನೋ ಒಂದು ಅಪಪ್ರಚಾರವನ್ನು ನಡೆಸುತ್ತಿದ್ದಾರೆ. ಆದರೆ ಅದು ಬಹಳಕಾಲ ನಿಲ್ಲುವುದಿಲ್ಲ. ಅವರು ತಮ್ಮ ಈ ಪ್ರಚಾರ ಕಾರ್ಯಕ್ಕೆ ದೇಶದಲ್ಲಿರತಕ್ಕ ಎಲ್ಲಾಪತ್ರಿಕೆಗಳನ್ನೂ ಬಳಸಿಕೊಂಡಿದ್ದಾರೆ. ಇನ್ನು ಉಳಿದ ಇತರ ಪ್ರಚಾರ ಶಾಖೆಗಳನ್ನೂ ಕೂಡ ಅವರು ದುರುಪಯೋಗ ಮಾಡಿಕೊಂಡಿದ್ದಾರೆ ಹೀಗೆಲ್ಲಾ ಒಂದು ಪ್ರಸಾರ ರಂಗವನ್ನು ಕಟ್ಟಿಕೊಂಡು ಸತ್ಯಕ್ಕೆ ದೂರವಾದ ವಿಷಯಗಳನ್ನು ಅಲ್ಲಸಲ್ಲದ ಘೋಷಣೆಗಳನ್ನು ಮಾಡಿ ಜನರನ್ನು ಒಂದು ಕಪಟತನದಿಂದ ವಂಚನೆಗೊಳಿಸುತ್ತಿದ್ದಾರೆ. ಜನರ ಮುಂದೆ ಇನ್ನೂ ಹೀಗೇ ಈ ಕಪಟತ್ವವನ್ನೇ ಪ್ರದರ್ಶನ ಮಾಡುತ್ತಾ ಹೋದರೆ ಮುಂದೆ ಇದರಿಂದ ಬಹಳ ಕೆಡುಕಾದೀತು ಎಂದು ಈಗಲೇ ತಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಮಹಾರಾಷ್ಟ್ರದಲ್ಲಿ ಹೀಗೆ ಒಬ್ಬ ಶಾಸನ ಸಭಾ ಸದಸ್ಯನಿಗೆ ಕೊಟ್ಟ ವಚನವನ್ನು ಪಾಲಿಸಲಿಲ್ಲ ಎಂದು ಹೇಳಿ ಆತನನ್ನು ಜನರು ಕತ್ತೆಯಮೇಲೆ ಕುಳ್ಳಿರಿಸಿ ಕೊರಳಿಗೆ ಮೆಟ್ಟಿನಸರವನ್ನು ಹಾಕಿ ಊರೆಲ್ಲೆಲ್ಲಾ ಮೆರವಣಿಗೆ ಮಾಡಿದರಂತೆ. ನಮ್ಮಲ್ಲೂ ಕೂಡ ಈಗ ಜನರೆಲ್ಲಾ ಬಹಳ ಪ್ರಜ್ಞಾವಂತರಾಗುತ್ತಿದ್ದಾರೆ. ಆದುದರಿಂದ ನಾನು ಸರ್ಕಾರಕ್ಕೆ ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ ಇವರು ಜನರಿಗೆ ಇತ್ತೀಚೆಗೆ ಕೊಟ್ಟಿರತಕ್ಕ ವಾಗ್ದಾನದಂತೆ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಜನರ ಆಸೆಯನ್ನು ಇವರು ಈಡೇರಿಸದಿದ್ದರೆ ಮುಂದೆ ಬಹಳ ದುಷ್ಪರಿಣಾಮಗಳಾಗಬಹುದೆಂದು ನಾನು ಈಗಲೇ ಈ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಹಾಗೆ 5 ಲಕ್ಷ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆಂದೂ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಪಟ್ಟಹಾಗೆ 3 ಲಕ್ಷ ಜನ ನಿರುದ್ಯೋಗಿಗ

ಳಿದ್ದಾರೆಂದು ತಿಳಿದು ಬಂದಿದೆ. ಈ ನಿರುದ್ಯೋಗಿಗಳಲ್ಲಿ ಸುಮಾರು ಎರಡು ಲಕ್ಷ ಜನರು ವಿದ್ಯಾವಂತ ನಿರುದ್ಯೋಗಿಗಳು. ಇವರಲ್ಲಿ ಸುಮಾರು ಹತ್ತು ಹತ್ತೂವರೆ ಸಾವಿರ ಇಂಜಿನಿಯರಿಂಗ್ ಡಿಪ್ಲೊಮಾ ಹೋಲ್ಡರುಗಳೂ, ಸುಮಾರು ಹದಿನೈದೂವರೆ ಸಾವಿರ ಪದವೀಧರರೂ ಮತ್ತು ಒಂದೂ ಮುಕ್ಕಾಲು ಲಕ್ಷ ಎಸ್. ಎಸ್. ಎಲ್. ಸಿ. ಪಾಸಾದ ವಿದ್ಯಾವಂತ ಜನರೂ ಉದ್ಯೋಗವಿಲ್ಲದೆ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ರಿಜಿಷ್ಟರು ಮಾಡಿಸಿ ಕೆಲಸವಿಲ್ಲದೆ ಅಲೆಯುತ್ತಿದ್ದಾರೆ ಎಂದು ಗೊತ್ತಾಗಿದೆ. ಇವರಿಗೆ ಇಲ್ಲಿಯವರೆಗೂ ಒಂದು ಪರಿಹಾರ ಮಾರ್ಗವನ್ನು ಕಂಡು ಹಿಡಿದಿಲ್ಲ. ಇನ್ನೂ ಮೊನ್ನೆತಾನೆ ಕೇಂದ್ರದ ಯೋಜನಾ ಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯರವರು ಈ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸತಕ್ಕ ದಿಶೆಯಲ್ಲಿ ಸರ್ಕಾರದವರ ಧೋರಣೆಯೇನಿದೆ ಎಂಬುದನ್ನು ಹೇಳುತ್ತಾ ಅವರು ವಿದ್ಯಾವಂತರನ್ನು ಅದರಲ್ಲೂ 20—25 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಪದವೀಧರರಾಗಿರತಕ್ಕ ವಿದ್ಯಾವಂತ ಜನರನ್ನು ಹಳ್ಳಿಗಳಿಗೆ ಹೋಗಿ ವ್ಯವಸಾಯವನ್ನು ಅವಲಂಬಿಸಿ ಎಂದು ಹೇಳಿದ್ದಾರೆ. ಅವರು ಹಾಗೆ ಹೇಳಿರುವುದರಲ್ಲಿ ಏನಾದರೂ ತಿರುಳಿದೆಯೇ ? ಅವರು ಅವರ ವಿದ್ಯಾವಂತರಾದ ಮಕ್ಕಳನ್ನು ಇದೇ ರೀತಿ ಹಳ್ಳಿಗಳಿಗೆ ಕಳುಹಿಸಿ ಅಲ್ಲಿ ಅವರು ವ್ಯವ್ಯಸಾಯದ ವೃತ್ತಿಯನ್ನು ಅವಲಂಬಿಸುವಂತೆ ಮಾಡಿದ್ದಾರೆಯೇ ಎಂಬ ಬಗ್ಗೆ ಅವರು ತಮ್ಮ ಎದೆ ಮುಟ್ಟಿಕೊಂಡು ಹೇಳಬಲ್ಲರೇ? ಇಂಥ ಒಣ ಉಪದೇಶಗಳನ್ನು ಅವರೇಕೆ ಮಾಡುತ್ತಿದ್ದಾರೆ! ನಿಜವಾಗಿಯೂ ಹೇಳಬೇಕೆಂದರೆ ವ್ಯವಸಾಯದಲ್ಲಿ ತೊಡಗತಕ್ಕ ಜನರು ಅಂಥ ಒಂದು ಉತ್ತಮವಾದ ಜೀವನವನ್ನು ನಡೆಸುವುದಕ್ಕಾಗುವುದಿಲ್ಲ. ಅದನ್ನು ತಿಳಿದೇ ಜನರು ಈ ವೃತ್ತಿಯಲ್ಲಿ ಅಷ್ಟು ಮುನ್ನುಗ್ಗಲು ಇಷ್ಟಪಡುವುದಿಲ್ಲ. ಇಲ್ಲಿಯವರೆಗೂ ಶ್ರೀ ಸುಬ್ರಹ್ಮಣ್ಯರವರು ಎಷ್ಟು ಜನ ವಿದ್ಯಾವಂತರನ್ನು ಹಳ್ಳಿಗಳಿಗೆ ಕಳುಹಿಸಿ ಅವರು ಅಲ್ಲಿ ವ್ಯವಸಾಯವನ್ನು ಅವಲಂಬಿಸುವಂತೆ ಮಾಡಿದ್ದಾರೆಂಬ ಬಗ್ಗೆ ಅವರು ಅಂಕಿ ಅಂಶಗಳನ್ನು ಕೊಡಬಲ್ಲರೇ ಯಾರು ನಮ್ಮನ್ನೂ ನಿಮ್ಮನ್ನೂ ನಂಬಿ ಒಂದು ಲಾಭದಾಯಕ ಉದ್ಯೋಗದಾಸೆಯಿಂದ ನಮ್ಮೆಲ್ಲರ ಹಿಂದೆ ಬಿದ್ದು ಬರುತ್ತಿದ್ದಾರೋ ಅವರಿಗೆ ನಾವು ಕೊಡತಕ್ಕ ಉಪದೇಶ ಇದು ಅಲ್ಲವೇ? ಈ ವ್ಯಯಸಾಯೋದ್ಯಮದಲ್ಲಿ ಅಂಥ ಒಂದು ಗೌರವದಿಂದ ಸುಖ ಜೀವನ ನಡೆಸುವುದಕ್ಕಾಗುವುದಿಲ್ಲ ಎಂಬುದನ್ನು ನಾನು ಬಲ್ಲೆ ಶ್ರೀ ಚನ್ನಬಸಪ್ಪನವರೂ ಕೂಡ ಚೆನ್ನಾಗಿ ಬಲ್ಲರು...

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವೇನು ಅರಿತಿದ್ದೀರೋ ಅದನ್ನು ನಾನು ಅರಿತಿಲ್ಲ. ಆದ್ದರಿಂದ ನನ್ನ ಹೆಸರನ್ನು ಏಕೆ ಬಳಸುತ್ತೀರಿ?

ಶ್ರೀ ಎಚ್. ಡಿ. ದೇವೇಗೌಡ.—ನಾನೀಗ ಹೇಳುತ್ತಿದ್ದುದು ಶ್ರೀಮಾನ್ ಚನ್ನಬಸಪ್ಪನವರು ಭೂಸುಧಾರಣೆಯ ಸಂಬಂಧದಲ್ಲಿ ಏನೊಂದು ವರದಿಯನ್ನು ಕೊಟ್ಟಿದ್ದಾರೋ ಅದರ ಆಧಾರದ ಮೇಲೇ ಇದನ್ನು ನಾನು ಹೇಳಿದ್ದು. ಅವರೇ ತಮ್ಮ ಹೇಳಿಕೆಯಲ್ಲಿ ಈ ವೃತ್ತಿಯಲ್ಲಿ ತೊಡಗಿದವರು ಅಂಥ ಒಂದು ಸುಖ ಜೀವನ ನಡೆಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಇನ್ನು ಭೂಸುಧಾರಣೆಯ ಬಗ್ಗೆ ಹೇಳುವುದಾದರೆ ಶ್ರೀಮಾನ್ ಕಡಿದಾಳ್ ಮಂಜಪ್ಪ ಅವರು ಬಹಳ ಶ್ರಮಿಸಿದ್ದಾರೆ. ಬೇರಾವ ರಾಜ್ಯಗಳವರೂ ಮಾಡದೆ ಇದ್ದ ರೀತಿಯಲ್ಲಿ ಅವರು ಮೈಸೂರು ರಾಜ್ಯದಲ್ಲಿ ಒಂದು ಉತ್ತಮ ಸುಧಾರಣೆಗಳನ್ನು ಇದರ ಬಗ್ಗೆ ಇಲ್ಲಿ ಮಾಡಿದ್ದಾರೆ. ನಾವೀಗ ಮಾಡಬೇಕಾಗಿರುವುದು ಗೇಣಿದಾರರಿಗೆ ಭೂಮಾಲೀಕತ್ವದ ಬಗ್ಗೆ ಒಂದು ಪಟ್ಟಿಯನ್ನು ತೆಗಿಸಿ ಕೊಡಬೇಕಾದ ಕೆಲಸ ಉಳಿದಿದೆ. ನಮ್ಮಲ್ಲಿ ಭೂಮಿತಿಯನ್ನು ಇನ್ನೂ ತಗ್ಗಿಸುವುದಾದರೆ ಅದರ ಬಗ್ಗೆ ನನ್ನ ಅಭ್ಯಂತರವೇನೂ ಇರುವುದಿಲ್ಲ. ಇನ್ನು ಭೂಮಾಲೀಕರು ಗೇಣೀದಾರರಿಂದ ಭೂಮಿಯನ್ನು ಕಸಿದುಕೊಂಡು ಅವರನ್ನು ಓಡಿಸುತ್ತಾರೆಂಬುದಕ್ಕೆ ಇಲ್ಲಿ ಲೇಶಮಾತ್ರವೂ ಅವಕಾಶವಿಲ್ಲ. ಅವರೆ ಒಂದು ಎರಡು ಎಕರೆ ಭೂಮಿಯನ್ನು ಇಟ್ಟುಕೊಂಡಿರತಕ್ಕ ವಿಧವೆಯರ ವಿಚಾರ ಹೇಳತೀರದಾಗಿದೆ. ಅವರು ವಿಷ ತೆಗೆದುಕೊಂಡು ಪ್ರಾಣಬಿಡುವುದೊಂದು ಉಳಿದಿದೆ. ಅವರ ಸ್ಥಿತಿ ಅಷ್ಟು ಚಿಂತಾಜನಕವಾಗಿದೆ. ಅವರಿಗೆ ರಕ್ಷಣೆ ಕೊಡತಕ್ಕವರು ಯಾರೂ ಇಲ್ಲ. ಈ ಸಂದರ್ಭದಲ್ಲಿ ನಾನು ದೊಡ್ಡ ಜಮೀನ್ದಾರರ ವಿಷಯದಲ್ಲಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಕೆಲವು ಗೇಣಿದಾರರಿಗೆ ಜೀವನಕ್ಕಾಗುವಷ್ಟು ಭೂಮಿ ಇಲ್ಲದೆ ಅವರ ಜೀವನವೂ ಬಹಳ ಚಿಂತಾಜನಕವಾಗಿದೆ.

ಸ್ವಾಮಿ ಈ ಸಭೆಯಲ್ಲಿ ಅತ್ತ ಕಡೆ ಇರತಕ್ಕವರು ಮಾತೆತ್ತಿದರೆ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅಂದರೆ ಅವರು ಆ ಕೈಲಾಸವನ್ನೇ ಭೂಮಿಗೆ ಇಳಿಸಿದಂತೆ ಮಾತನಾಡುತ್ತಿದ್ದಾರೆ. ಆದರೆ ಅವರು ಹೇಳತಕ್ಕ ಸಿಹಿ ಮಾತುಗಳೆಲ್ಲಾ ಕೇವಲ ಕಾಗದದ ಮೇಲೆ ಉಳಿದಿರುತ್ತವೆ. ಅವು ಕಾರ್ಯರೂಪಕ್ಕೆ ಬರಲಿಲ್ಲ. ಈ ಬ್ಯಾಂಕುಗಳು ನ್ಯಾಷನಲೈಜ್ ಆದ ಮೇಲೆ ಆ ಪಕ್ಷದವರು ಎಷ್ಟು ಜನ ಸಣ್ಣ ಪುಟ್ಟ ರೈತರಿಗೆ ಬಡವರಿಗೆ ಗರೀಬರಿಗೆ ನಿರುದ್ಯೋಗಿಗಳಿಗೆ ಹಣ

(ಶ್ರೀ ಎಚ್. ಡಿ. ದೇವೇಗೌಡ)

ವನ್ನು ಒದಗಿಸಿದ್ದಾರೆಂಬುದರ ಬಗ್ಗೆ ಒಂದು ಪಟ್ಟಿಯನ್ನು ಕೊಡಬಲ್ಲರೇ? ಇವರ ರಾಷ್ಟ್ರೀಕರಣ ವಿಧಾನದಿಂದ ಎಷ್ಟು ಬಡಜನರ ಜೀವನ ಹಸನಾಯಿತು? ಎಷ್ಟು ಜನರಿಗೆ ಹಣವನ್ನು ಒದಗಿಸಿ ಸಹಾಯ ಮಾಡಿದ್ದಾರೆ? ಎಷ್ಟು ಜನ ಗರೀಬರಿಗೆ ಅದರಿಂದ ಅನುಕೂಲವಾಯಿತು ಎಂಬುದರ ಬಗ್ಗೆ ಅಂಕಿಸಂಖ್ಯೆಗಳನ್ನು ಅವರು ಯಾರಾದರೂ ಕೊಡಬಲ್ಲರೇ? ಈ ಅಂಶಗಳನ್ನೆಲ್ಲಾ ವಿಮರ್ಶೆ ಮಾಡಿದ್ದೇ ಆದರೆ ಇವರು ಹೇಳತಕ್ಕ ಆ ರಾಷ್ಟ್ರೀಕರಣದ ಮಾತುಗಳೇನಿವೆ ಅದರಲ್ಲಿ ಏನೂ ಹುರುಳಿಲ್ಲ ಎಂದು ಧಾರಾಳವಾಗಿ ಹೇಳಬಲ್ಲೆ.

ಇವೊತ್ತು ಕೇಂದ್ರದ ಹಣಕಾಸಿನ ಮಂತ್ರಿಗಳು ಪಾರ್ಲಿಮೆಂಟ್‌ನಲ್ಲಿ ಇದರಿಂದ ಬಡವರಿಗೆ ಒಳ್ಳೆಯದು ಆಗಿಲ್ಲ, ಇದರ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಬ್ಯಾಂಕ್ ರಾಷ್ಟ್ರೀಕರಣವಾಗಿ ಮೂರು ವರ್ಷವಾದ ಮೇಲೆ ಇದರ ಬಗ್ಗೆ ಗಮನ ಕೊಡಬೇಕು ಎಂದು ಇವೊತ್ತು ಅವರ ತಲೆಯಲ್ಲಿ ಹುಟ್ಟಿದೆ ಎಂದು ಹೇಳಬೇಕಾಗಿದೆ. ರಾಷ್ಟ್ರಾಧ್ಯಕ್ಷರ ಆಳ್ವಿಕೆಯಲ್ಲಿ ನಿರುದ್ಯೋಗಿ ಇಂಜನಿಯರುಗಳಿಗೆ, ಕಾರುಗಳನ್ನು, ಟ್ಯಾಕ್ಸಿಗಳನ್ನು ತೆಗೆದುಕೊಳ್ಳುವುದಕ್ಕೆ ಹಣ ಕೊಡುತ್ತೇವೆ ಎಂದು ಹೇಳಿದ್ದರು. ಈಗ ಎಷ್ಟು ನಿರುದ್ಯೋಗಿ ಇಂಜನಿಯರುಗಳಿಗೆ ಹಣ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಸಾಧ್ಯವಾದರೆ ಅಂಕಿ ಅಂಶಗಳೊಡನೆ ತಿಳಿಸಬೇಕು ಎಂದು ಈ ಸಭೆಯಲ್ಲಿ ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಇವತ್ತು ಸಮಾಜವಾದದ ಸರ್ಕಾರ, ಬಡವರ ಸರ್ಕಾರ ಬಂದಿರತಕ್ಕದ್ದು. 10 ಎಕರೆ ಭೂಮಿಗೆ ಒಳಪಟ್ಟು ಕಂದಾಯ ವಜಾ ಮಾಡಬೇಕು ಎಂದು ಹಿಂದಿನ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಈಗ ಅರ್ಥಸಚಿವರು ಹೇಳುತ್ತಾರೆ, ತೀರ್ಮಾನ ಆಗಿಲ್ಲ ಎಂದು, ಇದು ಸತ್ಯಕ್ಕೆ ದೂರವಾದುದು. ಈ ಸಭೆಯಲ್ಲಿ ಆ ಮಾತನ್ನು ಹೇಳಿದ್ದರೆ ನಾನು ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಿದ್ದೆ. ಮೇಲ್ಮನೆಯಲ್ಲಿ ಹೇಳತಕ್ಕಂಥ ಕಾಲದಲ್ಲಿ ಅಸತ್ಯವನ್ನು ನುಡಿದಿದ್ದಾರೆ. ಇದು ಸರ್ಕಾರಕ್ಕೆ ಗೌರವ ತರತಕ್ಕಂಥ ಮಾತಾಗಿಲ್ಲ. ಅದು ಪತ್ರಿಕೆಗಳಲ್ಲೂ ವರದಿಯಾಗಿದೆ. 10 ಎಕರೆಗೆ ಒಳಪಟ್ಟಿರತಕ್ಕ ಭೂಮಿಗೆ ಕಂದಾಯವನು ಮನ್ನಾ ಮಾಡುವ ಬಗ್ಗೆ ತಿದ್ದುಪಡಿಯನ್ನು ರಾಷ್ಟ್ರಾಧ್ಯಕ್ಷರ ಅನುಮತಿಗೆ ನಾವು ಕಳುಹಿಸಿದ್ದೇವೆಂದು ಸೆಪ್ಟೆಂಬರ್ 13ನೇ ತಾರೀಖು ಪತ್ರಿಕೆಯಲ್ಲಿ ವರದಿಯಾಗಿದೆ. ಹಿಂದಿನ ಸರ್ಕಾರದ ನಿರ್ಣಯದ ಪ್ರಕಾರ ಈ ಒಂದು ತೀರ್ಮಾನವನ್ನು ನಾವು ತೆಗೆದುಕೊಂಡಿದ್ದೇವೆ. ಇವತ್ತು ಅಮೆಂಡ್‌ಮೆಂಟ್ ಆಕ್ಟನ್ನು ರಾಷ್ಟ್ರಾಧ್ಯಕ್ಷರ ಸಮ್ಮತಿಗೆ ಕಳುಹಿಸುತ್ತಿದ್ದೇವೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಮಂತ್ರಿಮಂಡಲ ಪ್ರಾರಂಭವಾದ ಹತ್ತು ದಿವಸದಲ್ಲಿ ಸತ್ಯಕ್ಕೆ ದೂರವಾದಂಥ ಮಾತನ್ನು ಆಡತಕ್ಕ ಮನಸ್ಥೈರ್ಯ ಇವರಿಗೆ ಬಂತಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದು ಗೌರವ ತರತಕ್ಕಂಥ ಮಾತಲ್ಲ. ಇಂತಹ ಹವ್ಯಾಸವನ್ನು ಮುಂದಾದರೂ ಬಿಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದರಿಂದ ಬಡವರಿಗೆ ಒಳ್ಳೆಯದಾಗುವುದಿಲ್ಲ ಎಂಬ ಭಾವನೆ ಇದ್ದರೆ ಅದನ್ನು ರದ್ದು ಮಾಡಿ. ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಬಡವರಿಗೆ ಇದರಿಂದ ಉತ್ತಮವಾದ ಕಾರ್ಯ ಮಾಡಿಲ್ಲ ಎನ್ನುವ ಭಾವನೆ ಇದ್ದರೆ, ತಾವು ಯಾವುದೇ ನಿರ್ಣಯ ತೆಗೆದುಕೊಳ್ಳಿ, ಹಿಂದಿನ ಸರ್ಕಾರ ಮಾಡಿದ್ದನ್ನು ಜಾರಿಗೆ ಕೊಡಬಾರದು ಎನ್ನುವ ಸವತಿ ಮಾತ್ಸರ್ಯ ಇದ್ದರೆ ತಾವು ಏನು ಬೇಕಾದರೂ ತೀರ್ಮಾನ ತೆಗೆದುಕೊಳ್ಳಿ. ಹಿಂದೆ ತೀರ್ಮಾನ ಮಾಡಿದ್ದು ತೀರ್ಮಾನವಲ್ಲ ಎಂದು ಹೇಳುವ ಗೋಜಿಗೆ ಮಾತ್ರ ಹೋಗಬಾರದು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರೇ ಇವತ್ತು ಮಂತ್ರಿಮಂಡಲ ರಚನೆಯಾದ ಹೊಸದರಲ್ಲಿ ಭ್ರಷ್ಟಾಚಾರದ ಬಗ್ಗೆ ಬಹಳ ಉತ್ಪ್ರೇಕ್ಷೆಯಿಂದ ಮಾತನಾಡುತ್ತಾ ನನ್ನ ಮಿತ್ರರಾದ ಶ್ರೀಮಾನ್ ಗುಂಡೂರಾಯರು ಹೇಳಿದರು, ಹಿಂದಿನ ಸರ್ಕಾರ ಮಹಾ ಪಾಪದ ಕೆಲಸಗಳನ್ನು ಮಾಡಿದೆ, ಎಕ್ಸಪೋ—70ರಲ್ಲಿ ಏನೇನೋ ತಪ್ಪು ಮಾಡಿದೆ, ಆ ಸರ್ಕಾರದಲ್ಲಿ ಮೂರು ವರ್ಷಗಳೂ ಸಹ ತಪ್ಪು ಮಾಡಿದರು ಎಂದು ಆಪಾದನೆ ಮಾಡಿದ್ದಾರೆ. ಕಾಂಗ್ರೆಸ್ ಇಬ್ಭಾಗವಾಗಿ, ಸಿಂಡಿಕೇಟ್ ಸರ್ಕಾರ ಎರಡೂವರೆ ವರ್ಷಗಳ ಕಾಲ ನಡೆಯಿತು. ಅದಕ್ಕೆ ಮುಂಚೆ, ನಾವೂ ನೀವೂ ಇದ್ದ ಕಾಂಗ್ರೆಸ್ ಆ ಪಾಪದ ಹೊರೆಯನ್ನು ಹಂಚಿಕೊಳ್ಳಲು ಒಪ್ಪಬೇಕಾಗುತ್ತದೆ. ಈ ಮಾತನ್ನು ಏತಕ್ಕೆ ಹೇಳಿದೆ ಎಂದರೆ ಎರಡೂವರೆ ವರ್ಷಗಳಲ್ಲಿ ಕಾಂಗ್ರೆಸ್ ವಿಭಜನೆಯಾದ ಮೇಲೆ ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಸರ್ಕಾರ ಮಹಾ ಘೋರವಾದ ಪಾಪವನ್ನು ಮಾಡಿದ್ದರೆ, ಅನಾಚಾರವನ್ನು ಮಾಡಿದ್ದರೆ, ರಾಜ್ಯಕ್ಕೆ ದ್ರೋಹವನ್ನು ಮಾಡಿದ್ದರೆ, ವಿಚಾರಣೆ ಮಾಡಲಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ವ್ಯಕ್ತಿಯ ಮೇಲೆ, ಸರ್ಕಾರದ ಮೇಲೆ ಕಪ್ಪು ಚುಕ್ಕೆ ಹಚ್ಚತಕ್ಕ ವಾದ ಹೂಡಬಾರದು.

ಅವರು ಮಾಡಿರತಕ್ಕ ಉತ್ತಮ ಕಾರ್ಯಗಳನ್ನು ಸ್ಮರಿಸಿಕೊಳ್ಳುವುದಕ್ಕೆ ಬದಲು, ಕಪ್ಪು ಚುಕ್ಕೆ ಇಡತಕ್ಕ ಕಾರ್ಯಕ್ಕೆ ಕೈಹಾಕಬಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು, ರಾಜ್ಯಪಾಲರ ಭಾಷಣದಲ್ಲಿ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಸಂಬಂದಪಟ್ಟಂತೆ ಹೇಳಿದ್ದಾರೆ. ತಮ್ಮ ನೀತಿ ನಿರೂಪಣೆ ಮಾಡುವ ಕಾಲದಲ್ಲಿ ಏನು ಇವತ್ತು ಅಳವಡಿಸಿದ್ದೀರಿ ಎಂದು ಕೇಳಬೇಕಾಗುತ್ತದೆ. ನನ್ನ ಮಿತ್ರರಾದ ರಂಗನಾಥ್‌ರವರು ಹೇಳುತ್ತಿದ್ದರು ಗವರ್ನರ್ ಸ್ಪೀಚನಲ್ಲಿ ಪಾಲಿಸಿ ವಿಷಯ ಮಾತ್ರ ಇರಬೇಕು, ಸಣ್ಣಪುಟ್ಟ ವಿಷಯ ಮಾತನಾಡಬಾರದು ಎಂದು. ನಾನು ಕೇಳುತ್ತೇನೆ ನೀವು ಯಾವ ನೀತಿ ನಿರೂಪಣೆ ಮಾಡಿದ್ದೀರಿ ಎಂದು ? ಈ ದೇಶದಲ್ಲಿ ನಿವೇಶನ ಇಲ್ಲದ ಜನಕ್ಕೆ ನೀವು ನಿವೇಶನ ಕೊಡುತ್ತೀರಿ ಎಂದು ಪತ್ರಿಕೆಯಲ್ಲಿ ಸಂಪಾದಕೀಯದಲ್ಲಿ ಬರೆದಿರುತ್ತಾರೆ. ಇದು ಶ್ರೀಮತಿ ಇಂದಿರಾಗಾಂಧಿಯವರ ಪ್ರಗತಿಪರ ಹೆಜ್ಜೆ ಎಂದು ಹೇಳಿದ್ದಾರೆ. ಎಷ್ಟು ಜನಕ್ಕೆ ಸೈಟುಗಳನ್ನು ಕೊಟ್ಟಿದ್ದೀರಿ ? ಅಗ್ರಿಕಲ್ಚರ್ ಲೇಬರ್‌ಸ್‌ಗೆ ಒಂದು ಸೈಟೂ ಇರಬಾರದು ಎಂದು ಹೇಳೋಣವಾಗಿದೆ, ಕಡು ಬಡವನಾದರೂ ಗುಡಿಸಲು ಹಾಕಿಕೊಂಡಿರುತ್ತಾನೆ, ಆತನಿಗೆ 10 ಗಜ ಸೈಟು ಇರುತ್ತದೆ. ಸ್ಲಂ ಏರಿಯಾದಲ್ಲಿ ಈ ಪ್ರಶ್ನೆ ಬರುತ್ತದೆ. ಹಳ್ಳಿಯೊಳಗೆ ಇರುವ ರೈತ ಯಾವ ಜನಾಂಗದವನೇ ಆಗಿರಲಿ ಆತ ಗುಡಿಸಲು ಹಾಕಿಕೊಂಡಿರುತ್ತಾನೆ. ಆತನಿಗೆ 10 ಅಡಿ ಸೈಟು ಮಾತ್ರ ಇರುತ್ತದೆ. ಈ ಆರ್ಡರ್ ಪ್ರಕಾರ 10 ಅಡಿ ಸೈಟು ಇರುವ ಬಡವನಿಗೆ ನೀವು ಸೈಟು ಕೊಡುವುದಕ್ಕಾಗುವುದಿಲ್ಲ. ತಮ್ಮ ಆರ್ಡರ್ ಪ್ರಕಾರ ಗ್ರಾಮಾಂತರದಲ್ಲಿ ಶೇಕಡ ಒಬ್ಬ ರೈತನೂ ಸೈಟನ್ನು ಪಡೆಯುವುದಕ್ಕಾಗುವುದಿಲ್ಲ. ಹರಿಜನ ಗಿರಿಜನರಿಗೆ ಸೈಟು ಕೊಡುವ ಬಗ್ಗೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಸರ್ಕಾರ ಹಣ ಒದಗಿಸುತ್ತಿರಲಿಲ್ಲವೇ? ಕಳೆದ ಎರಡು ವರ್ಷಗಳಲ್ಲಿ ಶ್ರೀಮಂತ ಸರ್ಕಾರ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿಗೆ ಹರಿಜನ ಗಿರಿಜನರಿಗೆ ಸೈಟು ಕೊಡುವ ಬಗ್ಗೆ ಹಣ ಕೊಟ್ಟಿಲ್ಲ, ಇಲಾಖೆಯವರು ಖರ್ಚು ಮಾಡಿಲ್ಲ ಎಂದು ಪ್ರತಿ ಪಾದನೆ ಮಾಡುವುದಾದರೆ ನಾನು ಹೇಳಿದ ಮಾತನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಹಿಂದಿನ ಬಡ್ಜೆಟ್ಟಿನಲ್ಲಿ ಹಿಂದಿನ ಸರ್ಕಾರಗಳು ಇದಕ್ಕಾಗಿ ಹಣವನ್ನು ಇಟ್ಟಿಲ್ಲವೇ, ಹರಿಜನ ಗಿರಿಜನರಿಗೆ ಅವಕಾಶ ಸಿಕ್ಕಿಲ್ಲವೇ ಎಂದು ಕೇಳುತ್ತೇನೆ. ಹರಿಜನ ಗಿರಿಜನರಿಗೆ ಸಂಬಂಧಪಟ್ಟಹಾಗೆ ಈ ಸಭೆಯು ನೇಮಕ ಮಾಡಿದ ಒಂದು ಕಮಿಟಿಯೊಳಗೆ ನಾವೂ ಕೆಲಸ ಮಾಡಿದೆವು. ನಾವೂ ಹಲವಾರು ರಾಜ್ಯಗಳಲ್ಲಿ ಪ್ರವಾಸ ಮಾಡಿ ವಿಷಯವನ್ನು ಸಂಗ್ರಹಣೆ ಮಾಡಿದೆವು. ರಿಪೋರ್ಟು ಕೊಡುವ ಕಾಲಕ್ಕೆ ಸಭೆ ಡಿಸಾಲ್ವ್ ಆಗಿದ್ದುದು ತಮಗೆ ಗೊತ್ತಿದೆ. ಆದ್ದರಿಂದ ಈ ರಿಪೋರ್ಟು ಒದಗಿಸುವುದಕ್ಕೆ ಆಗಲಿಲ್ಲ. ಅಧ್ಯಕ್ಷರೇ, ತಮ್ಮ ಮೂಲಕ ಈ ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಲು ಇಚ್ಛಿಸುತ್ತೇನೆ, ಹಲವಾರು ಉತ್ತಮ ಕಾರ್ಯಗಳನ್ನು ಹಿಂದಿನ ಸರ್ಕಾರ ಮಾಡಿದೆಯೆಂದು ಬಹುಶಃ ಹೆಮ್ಮೆಯಿಂದ ಹೇಳಬಹುದು.

ಈವೊತ್ತು ಐದು ಕೋಟಿ ರೂಪಾಯಿಗಳನ್ನು ಹೌಸಿಂಗ್ ಲೋನ್‌ಗಾಗಿ ಅಡ್ವಾನ್ಸ್ ಮಾಡಿದ್ದೇವೆ. ಆಡಳಿತ ಕಾಂಗ್ರೆಸ್ ಆಡಳಿತ ನಡೆಸತಕ್ಕ ಹಲವಾರು ರಾಜ್ಯಗಳಲ್ಲಿ ಪ್ರವಾಸ ಮಾಡಿದ್ದೇವೆ. ಮಹಾರಾಷ್ಟ್ರ ಮತ್ತು ರಾಜ್ಯಪಾಲರ ಸಂಸ್ಥಾನವಾದ ರಾಜಾಸ್ಥಾನಕ್ಕೂ ಹೋಗಿದ್ದೆವು. ರಾಜ್ಯಪಾಲರು ಅವತ್ತು ಅಲ್ಲಿ ಮುಖ್ಯ ಮಂತ್ರಿಗಳಾಗಿದ್ದರು. ಅಲ್ಲೆಲ್ಲಾ ಹೌಸಿಂಗ್ ಸ್ಕೀಂಗಳು ಇಲ್ಲ. ಕೇವಲ ಸಿಟಿ ಏರಿಯಾದಲ್ಲಿ ಸ್ಲಂ ಕ್ಲಿಯರನ್ ಪ್ರೋಗ್ರಾಂ ಇತ್ತು. ಆಡಳಿತ ಕಾಂಗ್ರೆಸ್‌ನವರ ಅಧಿಕಾರ ಸೂತ್ರ ಏರ್ಪಟ್ಟಿರುವ ರಾಜ್ಯಗಳವರು ನಾವು ಪ್ರವಾಸ ಮಾಡಿದಕಾಲದಲ್ಲಿ, ಮೈಸೂರು ರಾಜ್ಯದಲ್ಲಿ ಹೇಗೆ ಹೌಸಿಂಗ್ ಸ್ಕೀಂ ಕಾರ್ಯಗತ ಮಾಡುತ್ತಿದ್ದೇವೆ ಮತ್ತು ಅದರ ರೂಪ ರೇಖೆಗಳೇನು ಎಂದು ತಿಳಿದುಕೊಳ್ಳಲು ಅವರ ಅಧಿಕಾರಿಗಳನ್ನು ಮೈಸೂರು ರಾಜ್ಯಕ್ಕೆ ಕಳುಹಿಸಿಕೊಡುತ್ತೇವೆಂದು ಅಲ್ಲಿಯ ಮಂತ್ರಿಗಳು ಮತ್ತು ಅಧಿಕಾರಿಗಳು ತಿಳಿಸಿದ್ದನ್ನು ಹೆಮ್ಮೆಯಿಂದ ಇಲ್ಲಿ ಹೇಳಬೇಕಾಗಿದೆ. ಈ ರಾಜ್ಯದಲ್ಲಿ ಎರಡೂವರೆ ವರ್ಷಗಳ ಕಾಲ ಸಿಂಡಿಕೇಟ್ ಕಾಂಗ್ರೆಸ್ ಆಡಳಿತ ಇದ್ದಾಗ ಪಾಪದ ಕೆಲಸಗಳನ್ನು ಮಾಡಿದ್ದಾರೆ ಎನ್ನುವ ವಾದವನ್ನು ಪದೇ ಪದೇ ಆಡುತ್ತಿದ್ದಾರೆ. ನಾನು ನೊಂದ ಮನಸ್ಸಿನಿಂದ ಹೇಳಬೇಕಾಗಿದೆ ಅವರು ಹರಿಜನರಿಗೆ ಮಾಡಿದ ಕೆಲಸಗಳನ್ನು ನೆನಸಿಕೊಳ್ಳಬೇಕಾಗಿದೆ. ರಾಜಸ್ಥಾನದಲ್ಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ 390 ಸೀಟುಗಳಿದ್ದರೆ ಷೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್‌ಸ್‌ಗೆ 6 ಸೀಟುಗಳನ್ನು ಕೊಟ್ಟಿದ್ದಾರೆ. ಅದೇ ನಮ್ಮ ರಾಜ್ಯದಲ್ಲಿ ಶೇಕಡ 18 ಸೀಟುಗಳನ್ನು ಕೊಟ್ಟಿದ್ದೇವೆ. ಅದನ್ನು ಉತ್ತಮ ಕಾರ್ಯ ಎಂದು ಹೇಳತಕ್ಕ ಸೌಜನ್ಯತೆ ನಿಮ್ಮಲ್ಲಿಲ್ಲವಲ್ಲಾ ಎಂದು ಹೇಳಬೇಕಾಗಿದೆ. ನೀವು ನಿರೂಪಣೆ ಮಾಡತಕ್ಕ ಹೊಸ ನೀತಿ ಆದರೂ ಏನು ಎಂದು ನಾವು ಕಾದು ನೋಡುತ್ತೇವೆ. ಮತ್ತು ಅದು ಗೊತ್ತಾದ ಮೇಲೆ ನಿಮ್ಮನ್ನು ಪ್ರಶ್ನೆ ಮಾಡತಕ್ಕ ಕಾಲ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ಹರಿಜನರಿಗೆ ಕೊಡುವ ಲೋನಿನ ಮೇಲೆ ಎರಡೂವರೆ ಪರ್ಸೆಂಟ್ ಬಡ್ಡಿ ಹಾಕಿದೆ.

(ಶ್ರೀ ಎಚ್. ಡಿ. ದೇವೇಗೌಡ)

ಇದು ಸಮಾಜವಾದದ ಹಾದಿಯಲ್ಲಿ ಹಿಂದಿನ ಸರ್ಕಾರ ನಡೆಯಲಿಲ್ಲವೇ ಎನ್ನುವ ಪ್ರಶ್ನೆ ಕೇಳುತ್ತೇನೆ. ಇರತಕ್ಕ ಜಮೀನಿನಲ್ಲಿ ಶೇಕಡ 50 ಅವರಿಗೆ ಕೊಡಬೇಕು ಎಂದು ಹೇಳಿರುವುದು ಆ ಸರ್ಕಾರ ಸಮಾಜವಾದದ ಹಾದಿಯಲಿಲ್ಲವೇ ಎಂದು ಕೇಳಬೇಕಾಗುತ್ತದೆ. ಆವತ್ತು ಶ್ರೀಮಂತರ ಪರವಾಗಿ ಇದ್ದ ಸರ್ಕಾರ ಸಮಾಜದಲ್ಲಿ ದೀನ ದಲಿತರ ವರ್ಗಕ್ಕೆ ಸಹಾಯ ಮಾಡಲಿಲ್ಲ ಎನ್ನುವ ಮಾತನ್ನು ಆಡುತ್ತಿದ್ದಾರೆ. ಅದು ತಮಗೆ ಯೋಗ್ಯವಾದದ್ದು ಅಲ್ಲ, ಯುಕ್ತವಾದುದು ಅಲ್ಲ ಮತ್ತು ಭೂಷಣವಾದುದು ಅಲ್ಲ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಇನ್ನು ಎಂ. ಎಸ್. ಆರ್. ಟಿ. ಸಿ. ವಿಚಾರ ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳಾದ ಅಜೀಜ್ ಸೇಟರವರು ಈ ಸಭೆಯಲ್ಲಿ ಇಲ್ಲ. ಬಹಳ ಉದ್ವೇಗದಿಂದ all appointments are political appointments ಎಂದು ಹೇಳಿದರು. ಆರೀತಿ ಉತ್ಪ್ರೇಕ್ಷೆ ಮಾಡಿ ಹೇಳುವುದು ಸರಿಯಲ್ಲ. ಶ್ರೀ ಬಸವಲಿಂಗಪ್ಪನವರು ಸಿಟಿ ಕಾರ್ಪೊರೇಷನ್‌ಗೆ ಹೋಗಿ The whole thing is full of corruption ಎಂದು ಹೇಳಿದರು. ಇದುವರೆಗೆ ಪಿ. ಡಬ್ಲ್ಯು. ಡಿ. ಇಲಾಖೆ ಒಂದರಲ್ಲೇ ಕರಪ್ಷನ್ ಇದೆ ಎಂದು ತಿಳಿದುಕೊಂಡಿದ್ದೆ. ಹೋದ ತಕ್ಷಣ ಅವರು ಆರೀತಿ ಹೇಳುವಷ್ಟು ನೈತಿಕ ಹಕ್ಕು ಇದೆಯೇ, ನೈತಿಕ ಮಟ್ಟ ಇದೆಯೇ ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಯಾವ ಮನುಷ್ಯ ಉಪದೇಶ ಮಾಡುತ್ತಾನೋ ಅವನ ಹಿನ್ನೆಲೆ ಚೆನ್ನಾಗಿರಬೇಕು. ದೇವೇಗೌಡರಿಂದ ಅಪಾದನೆ ಬಂದರೆ ಅದನ್ನು ಎದುರಿಸುವ ಶಕ್ತಿ ಇರಬೇಕು. ಸಾಮರ್ಥ್ಯ ಇರಬೇಕು. ಜೊತೆಗೆ ಉಪದೇಶ ಮಾಡತಕ್ಕ ಕಾಲದಲ್ಲಿ ಅವನ ಚಾರಿತ್ರ್ಯ ಚೆನ್ನಾಗಿರಬೇಕು. ಇಷ್ಟು ಮಾತ್ರ ಮುಗಮ್ ಆಗಿ ಹೇಳುತ್ತೇನೆ. ಈ ಹೊತ್ತು ಸಭಾನಾಯಕರು ಒಂದು ಕಡೆ ಭಾಷಣ ಮಾಡುತ್ತಾ ಹೇಳಿದ್ದಾರೆ ಕರಪ್ಷನ್ ಎರಾಡಿಕೇಟ್ ಮಾಡುತ್ತೇವೆ ಎಂದು. ಅದನ್ನು ಸ್ವಾಗತ ಮಾಡುತ್ತೇವೆ. ಪೂರ್ಣವಾಗಿ ಎರಾಡಿಕೇಟ್ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೂ 50 ಪರ್ಸೆಂಟೋ, 25 ಪರ್ಸೆಂಟೋ, 10 ಪರ್ಸೆಂಟ್ ಆದರೂ ಕಡಿಮೆ ಮಾಡಿ. ಬೇಡ ಎಂದು ಹೇಳುವುದಿಲ್ಲ. ಒಂದು ಮಾತು ಹೇಳುತ್ತಾರೆ. ಉನ್ನತ ಮಟ್ಟದಲ್ಲಿರತಕ್ಕವರಲ್ಲಿ ಕರಪ್ಷನ್ ಇದ್ದರೆ ಅದನ್ನು ಸರಿಮಾಡುವುದಕ್ಕೆ ಸಾಧ್ಯವಿಲ್ಲ, ಉನ್ನತ ಮಟ್ಟದಲ್ಲಿ ಆಡಳಿತ ವರ್ಗದಲ್ಲಿ ಕರಪ್ಷನ್ ರಿಮೂವ್ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಿದ್ದಾರೆ.. ಅದು ಎಲ್ಲರೂ ಮೆಚ್ಚತಕ್ಕ ವಿಷಯ. ಒಂದು ಪ್ರಶ್ನೆ ಕೇಳುತ್ತೇನೆ ಈಗ ಚುನಾವಣೆ ನಡೆದಾಗ ದುಡ್ಡು ಬಂದಿದೆ. ಎಷ್ಟು ಮೇಲ್ಮಟ್ಟದ ದಾರಿಯಲ್ಲಿ ಹಣ ಬಂತು ಎನ್ನುವ ಪ್ರಶ್ನೆ ಹಾಕಿದರೆ ಬಹುಶಃ ಉತ್ತರ ನಿಮಗೆ ಸಿಕ್ಕುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

**Sri H. M. CHANNABASAPPA.**—You know it more by your experience.

ಶ್ರೀ ಹೆಚ್. ಡಿ. ದೇವೇಗೌಡ.— ನಮ್ಮವರೇ ಪ್ರಧಾನ ಮಂತ್ರಿಗಳು ಚೀಫ್ ಮಿನಿಸ್ಟರ್ಸ್ ಮಂತ್ರಿಗಳು ಆಗಿದ್ದರೆ ಒಪ್ಪಿಕೊಳ್ಳುತ್ತೇನೆ. ಎಲ್ಲಾ ಕಡೆಯಿಂದಲೂ ದುಡ್ಡು ಬಂತು. ಇದರ ಬಗ್ಗೆ ತಾವು ಯಾರೂ ವ್ಯಥೆ ಪಡಬೇಕಾಗಿಲ್ಲ. ತಮ್ಮ ಎದೆ ಮುಟ್ಟಿ ಕೊಂಡು ಹೇಳಿ.

ಇನ್ನು ಎಂ. ಎಸ್. ಆರ್. ಟಿ. ಸಿ. ಯಲ್ಲಿ 5 ಕೋಟಿ ರೂಪಾಯಿಗಳನ್ನು ಡಿಬೆಂಚರ್ ಫ್ಲೋಟ್ ಮಾಡಿದರು. ನಾನು ಕೇಳಬೇಕಾಗುತ್ತದೆ, ಯಾವ ಹೊಸ ಏರಿಯಾವನ್ನು ನ್ಯಾಷನಲೈಸ್ ಮಾಡುತ್ತೀರಿ ; ಇರತಕ್ಕಂಥ ಏರಿಯಾದಲ್ಲಿಯೇ ನಿಮ್ಮ ಬಸ್ಸನ್ನು ಓಡಿಸತಕ್ಕಂಥದ್ದಕ್ಕೆ ಇರತಕ್ಕ ಬಸ್ಸುಗಳು ಸಾಕಾಗುವುದಿಲ್ಲವೆ ? ಹೊಸ ಬಸ್ಸುಗಳನ್ನು ಕೊಂಡು ಕೊಳ್ಳುವುದಕ್ಕೆ 5 ಕೋಟಿ ರೂಪಾಯಿಗಳನ್ನು ಫ್ಲೋಟ್ ಮಾಡಿದ್ದರೆ ಈಗ ಹಾಕಿರತಕ್ಕಂಥ 25 ಕೋಟಿ ರೂಪಾಯಿಗಳ ಬಂಡವಾಳಕ್ಕೆ ವರಮಾನ ಏನು? ಮಂತ್ರಿಗಳೇ ಹೇಳುತ್ತಿದ್ದಾರೆ. ಕೆಳಗಡೆಯಿಂದ ಮೇಲುಗಡೆಯವರೆಗೂ ಕೂಡ ಮಾಮೂಲು ಇದೆ ಎಂದು.

ಶ್ರೀ ಹೆಚ್. ಎಂ. ಚನ್ನಬಸಪ್ಪ.— ಇಲ್ಲ ಎಂದು ಹೇಳುತ್ತಿದ್ದೀರಾ?

ಶ್ರೀ ಹೆಚ್. ಡಿ. ದೇವೇಗೌಡ,— ಇಲ್ಲ ಎಂದು ತಮ್ಮ ಸ್ಥಾನದಲ್ಲಿ ಕೂತಿದ್ದರೆ ವಿಚಾರಣೆ ಮಾಡಿ ಹೇಳುತ್ತಿದ್ದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಿಮ್ಮ ಅನುಭವದಲ್ಲಿ ಹೇಳಿ.

ಶ್ರೀ ಹೆಚ್. ಡಿ.ದೇವೇಗೌಡ.—ನಾನು ಅಷ್ಟೊಂದು ವೇಗ್ ಆಗಿ ಹೇಳುವುದಕ್ಕೆ ತಯಾರಾಗಿಲ್ಲ. ಇದು ಎಂ. ಎಸ್. ಆರ್.ಟಿ. ಸಿ. ಒಂದಕ್ಕೇ ಅಪ್ಲೈ ಆಗುವುದಿಲ್ಲ. ಎಲ್ಲಾ ಕಡೆಯೂ ಇದೆ. ನಮ್ಮಲ್ಲಿ ರಾಜಕಾರಣಿಗಳಲ್ಲಿಯೂ ಇದೆ. ಇಷ್ಟೊಂದು ಆಡಳಿತದಲ್ಲಿ ಡಿಫಾರಲ್ಟೈಸ್ ಆಗುವರೀತಿ ಮಂತ್ರಿಗಳು ಆಡುವುದಕ್ಕೆ ಹೋಗಬಾರದು. ಇಷ್ಟೊಂದು ವೇಗ್ ರಿಮಾರ್ಕ್ಸ್ ಮಾಡುವುದು ಸರಿಯಾದುದಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಅದಕ್ಕೆ ಬದಲಾಗಿ ಕೆಳಗಡೆಯಿಂದ ಮೇಲ್ಮಟ್ಟದವರೆಗೆ ಪೂರ್ತಾ ಹದಗೆಟ್ಟುಹೋಗಿದೆ. ಎಂದು ಎಲ್ಲಾ ಅಧಿಕಾರಿಗಳನ್ನೂ ದೂರಿದರೆ ಹೇಗೆ? ಅವರನ್ನು ಡಿಸ್ಮಿಸ್ ಮಾಡಿ ಓಡಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಮಾತನಾಡತಕ್ಕಂಥ ಕಾಲದಲ್ಲಿ ಹಿಂದಿನ ಆವೇಶವನ್ನು ತಲೆಯಲ್ಲಿ ಇಟ್ಟುಕೊಂಡು ಮಾತನಾಡುವುದು ಸರಿಯಾದುದಲ್ಲ. ಮಂತ್ರಿಗಳು ಸರಿಯಾಗಿ ಮಾತನಾಡುವುದಕ್ಕ ಅಭ್ಯಾಸ ಮಾಡಲಿ ಎನ್ನುವ ಮಾತನ್ನು ಹೇಳುತ್ತೇನೆ.

ಕೊನೆಯದಾಗಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಸೀಸನಲ್ ಕಂಡೀಷನ್ಸ್ ಬಗ್ಗೆ ಒಂದು ಮಾತು ಹೇಳಬೇಕೆಂದು ಇದ್ದೇನೆ. ಅದೇನೆಂದರೆ ಪತ್ರಿಕೆಯಲ್ಲೂ ಕೂಡ ಬಂದಿದೆ. 2 ಕೋಟಿ ರೂಪಾಯಿ ಕೊಟ್ಟಿದ್ದಾರೆ ಎಂದು. ಈ ರಾಜ್ಯದಲ್ಲಿ ದುರ್ದೈವ ಏನಾಗಿದೆ ಎಂದರೆ ನಾವು ಸುಮಾರು 100ಕ್ಕೆ 85 ಗ್ರಾಮಗಳಲ್ಲಿ ಬಾವಿಗಳನ್ನು ಮಾಡಿದ್ದೇವೆ. ಕರೆಕ್ಟ್ ಆದ ಅಂಕಿ ಅಂಶ ಇಲ್ಲ. 60 ಅಡಿ 80 ಅಡಿ ಬಾವಿಗಳನ್ನು ತೆಗೆದರೂ ಕೂಡ ಆ ಬಾವಿಗಳಲ್ಲಿ ನೀರಿಲ್ಲ. ಇಂತಹ ಪ್ರಮಾಣದಲ್ಲಿ ಇರತಕ್ಕ ಬಾವಿಗಳಲ್ಲಿ ನೀರು ಸಿಕ್ಕುತ್ತಾ ಇಲ್ಲವೆಂದು ಹಲವಾರು ಕಡೆಯಿಂದ ಕೇಳಿದ್ದೇನೆ. ಆ ಗ್ರಾಮಗಳಿಗೆ ನೀರು ಒದಗಿಸುವುದಕ್ಕೆ ಏನು ಒಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ? ಬಹುತೇಕವಾಗಿ ಎಲ್ಲಾ ಬಾವಿಗಳಲ್ಲಿ ಜಲ ಇಂಗಿ ಹೋಗಿದೆ. ಅಂತಹ ಕಡೆ ಹಣ ಒದಗಿಸುವುದು ಆದ್ಯ ಕರ್ತವ್ಯ ತಾವು ತಿಳಿದುಕೊಳ್ಳಬೇಕೆಂದು ಸೂಚನೆ ಕೊಡುತ್ತೇನೆ. ಗೌರ್ನರ್‌ರವರ ಆಡಳಿತದಲ್ಲಿ ಒಂದು ಆಘಾತ ಮಾಡಿದ್ದಾರೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನಿಂದ 90 ಪರ್ಸೆಂಟು ಗ್ರಾಂಟು ಕೊಡುತ್ತಾ ಇದ್ದರು. ಇನ್ನು ಉಳಿದ 10 ಪರ್ಸೆಂಟು ಸಂಬಂಧಪಟ್ಟ ಪಂಚಾಯಿತಿ ಮತ್ತು ಗ್ರಾಮಾಂತರ ಜನರು ಒದಗಿಸುತ್ತಾ ಇದ್ದರು. ಈಗ ಅವರು ಏನು ಮಾಡಿದ್ದಾರೆ ಎಂದರೆ 40 ಪರ್ಸೆಂಟು ಗೌರ್ನಮೆಂಟ್ ಲೋನ್, 50 ಪರ್ಸೆಂಟು ಗ್ರಾಂಟ್, 10 ಪರ್ಸೆಂಟು ಪಾಪ್ಯುಲರ್ ಕಾಂಟ್ರಿಬ್ಯೂಷನ್ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ. ಅದು ಸರಿಯಾದುದಲ್ಲ. ಯಾವುದೇ ಪಂಚಾಯಿತಿ 50 ಪರ್ಸೆಂಟು ಗ್ರಾಂಟನ್ನು ಪಡೆದು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನಿಂದ ನೀರನ್ನು ಒದಗಿಸಲು ಕಷ್ಟವಾಗುತ್ತದೆ. ಪಂಚಾಯಿತಿಗೆ ಆರ್ಥಿಕ ಶಕ್ತಿ ಉಳಿದಿಲ್ಲ. ಹಿಂದೆ 90 ಪರ್ಸೆಂಟ್ ಗ್ರಾಂಟ್ ಕೊಡತಕ್ಕ ಆರ್ಡರ್ ಏನು ಇತ್ತೋ ಅದನ್ನು ಪುನಃ ರೆಸ್ಟೋರ್ ಮಾಡಬೇಕು ಅದರಿಂದ ಗ್ರಾಮಾಂತರ ಜನತೆಗೆ ನೀರು ಒದಗಿಸುವುದಕ್ಕೆ ಉಪಯೋಗವಾಗುತ್ತದೆ ಎಂದು ಹೇಳಲು ಇಚ್ಛೆ ಪಡುತ್ತೇನೆ.

ಎಂ. ಎಸ್. ಆರ್. ಟಿ. ಸಿ. ಬಗ್ಗೆ ಒಂದು ವಿಷಯವನ್ನು ಹೇಳುವುದನ್ನು ಮರೆತಿದ್ದೆ. ಕಾಂಟ್ರಾಕ್ಟ್ ಕ್ಯಾರಿಯೇಜಸ್ ಎಷ್ಟು ಇವೆ? ರಾಷ್ಟ್ರಪತಿಯವರ ಕಾಲದ ಆಳ್ವಿಕೆಯಲ್ಲಿ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗೆ ಎಷ್ಟು ಪರ್ಮಿಟ್‌ಗಳನ್ನು ಇಷ್ಯೂ ಮಾಡಿದ್ದಾರೆ, ದಯಮಾಡಿ ಒದಗಿಸಿ ಕೊಡಿ. ಇನ್ನು 27 ಜನ ಪಾರ್ಲಮೆಂಟ್ ಸದಸ್ಯರು ರಾಜ್ಯದ ಆಡಳಿತವನ್ನು ವಿಚಾರಣೆ ಮಾಡತಕ್ಕ ಶಕ್ತಿಯನ್ನು ಇಟ್ಟುಕೊಂಡು ಯಾವುದೋ ಕಮಿಟಿಗಳಿಗೆ ನೇಮಕ ಮಾಡಿದ್ದರ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಅಪಾದನೆ ಪಟ್ಟಿಯನ್ನು ತೆಗೆದುಕೊಂಡು ಹೋಗಿದ್ದರು. ಆದರೆ ಅಪಾದನೆ ಪಟ್ಟಿಯಲ್ಲಿ ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗೆ ಎಷ್ಟು ಪರ್ಮಿಟ್ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಯಾರಾದರೂ 'ಚ' ಕಾರ ಶಬ್ದವನ್ನೂ ಎತ್ತಿಲ್ಲ. ಗೌರ್ನರ್‌ರವರ ಕಾಲದಲ್ಲಿ ಕೊಟ್ಟಷ್ಟು ಪರ್ಮಿಟ್‌ಗಳನ್ನು ಇನ್ನು ಯಾರ ಕಾಲದಲ್ಲೂ'' ಕೊಟ್ಟಿಲ್ಲ. ಬಸ್ಸುಗಳು ಓಡಾಡುವುದನ್ನು ನೋಡಿದರೆ ಎಷ್ಟು ಕಾಂಟ್ರಾಕ್ಟ್ ಕ್ಯಾರಿಯೇಜಸ್‌ಗೆ ಗೌರ್ನರ್‌ರವರು ಅವಕಾಶ ಮಾಡಿಕೊಟ್ಟಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಈ ರೀತಿ ಆದರೆ ನಮ್ಮ ಟ್ರಾನ್ಸ್‌ಪೋರ್ಟ್ ಅಪರೇಷನ್‌ಗೆ ಹಾಕಿರತಕ್ಕಂಥ 25 ಕೋಟಿ ರೂಪಾಯಿಗಳ ಬಂಡವಾಳಕ್ಕೆ ಎಷ್ಟು ವರಮಾನ ಬರುತ್ತದೆ? ನೀವು ಇದನ್ನೆಲ್ಲಾ ಪರಿಪಡಿಸಬೇಕು ಎಂದು ಮಾನ್ಯ ಮಂತ್ರಿಗಳಾದ ಶ್ರೀಮಾನ್ ಅಜೀಜ್‌ಸೇಟ್‌ರವರನ್ನು ಕೇಳಿದರೆ ಅವರು ಪರ್ಮಿಟ್ ಪೀರಿಯಡ್ ಮುಗಿದ ಹೊರತು ಈಗ ಏನೂ ಮಾಡುವುದಕ್ಕಾಗುವುದಿಲ್ಲ. ಮದ್ರಾಸ್‌ನವರು ಹಾಕಿದ ಹಾಗೆ ಸರ್‌ಚಾರ್ಜು ಹಾಕುವುದನ್ನು ಯೋಚನೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. ಈ ದಿಸೆಯಲ್ಲಿ ಕೆಲಸ ಮಾಡುವುದಾದರೆ ಬಹುಶಃ ಹಾಕಿರತಕ್ಕಂಥ 25 ಕೋಟಿ ರೂಪಾಯಿ ಹೋಗಿ ಪ್ರೊಹಿಬಿಷನ್ ಹೇಗೆ ಸ್ಕ್ರ್ಯಾಪ್ ಮಾಡಿದೆವೋ ಅದೇ ರೀತಿ ಈ ಎಂ.ಎಸ್.ಆರ್. ಟಿ.ಸಿ. ಸಂಸ್ಥೆಯನ್ನು ರದ್ದು ಮಾಡತಕ್ಕ ಕಾಲಬಂದೀತು ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ.

(ಶ್ರೀ ಹೆಚ್. ಡಿ. ದೇವೇಗೌಡ)

5-30 P.M.

ವ್ಯವಸಾಯ ಮತ್ತು ಅನಿಮಲ್ ಹಸ್ಬೆಂಡ್ರಿ ಬಗ್ಗೆ ಮಾತನಾಡುವುದಾದರೆ ಹಲವಾರು ವಿಷಯಗಳಿವೆ. ಅಧ್ಯಕ್ಷರು ಈ ಕಡೆ ಇದ್ದಾಗ ಇದರ ವಿಚಾರವನ್ನು ಪ್ರಸ್ತಾಪಮಾಡುತ್ತಿದ್ದರು. ಇಂದು ಸೇಕಡ 90 ಮಂದಿ ವ್ಯವಸಾಯಗಾರರು ಖುಷ್ಕಿ ಜಮೀನಿನಿಂದ ಜೀವನಮಾಡುತ್ತಿದ್ದಾರೆ. ಅವರನ್ನು ಉದ್ಧಾರಮಾಡಲು ಅನಿಮಲ್ ಹಸ್ಬೆಂಡ್ರಿಯು ಒಳ್ಳೆಯ ಅವಕಾಶ ನೀಡುವುದು. ಅದನ್ನು ಉಪಕಸಬನ್ನಾಗಿಟ್ಟುಕೊಂಡರೆ ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದು. ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ನನ್ನ ತಾಲ್ಲೂಕಿನಲ್ಲಿ ರೈತರ ಆರ್ಥಿಕ ಸ್ಥಿತಿ ಉತ್ತಮವಾಗುವಂತೆ ಕೋಳಿ ಸಾಗಾಣಿಕೆಗೆ ಉತ್ತೇಜನ ಕೊಡಬೇಕೆಂದು ನಾನು ಪ್ರಯತ್ನ ಪಟ್ಟೆ. ಆದರೆ ಯಾವ ಬ್ಯಾಂಕು ಅದಕ್ಕೆ ಸಾಲ ಕೊಡಲು ತಯಾರಾಗಿಲ್ಲ. ಮೊದಲು ಮಾರ್ಕೆಟಿಂಗ್ ತೋರಿಸಿದರೆ ನಂತರ ಹಣಕೊಡಲಾಗುವುದೆಂದು ಹೇಳುವರು. ನಿಮಗೆ ಟೆಕ್ನಿಕಲ್ ನೋಹೌ ಏನಿದೆ ಎಂದು ಕೇಳುತ್ತಾರೆ. ಬೆಂಗಳೂರಿನಲ್ಲಿ ಮೊಟ್ಟೆ ಜಾಸ್ತಿ ತಯಾರಾಗುವುದು, ಆದುದರಿಂದ ಆ ವಿಚಾರಕ್ಕೆ ಕೈಹಾಕುವುದು ಸರಿಯಲ್ಲ ಎಂದು ಹೇಳುತ್ತಾರೆ. ಬೇರೆ ದೇಶಗಳಲ್ಲಿ ಪರಿಸ್ಥಿತಿ ಹೇಗಿದೆ ಎಂದು ನಾವು ವಿಚಾರಮಾಡುತ್ತಿದ್ದೇವೆ, ಅಲ್ಲಿ ಇಂಥ ಕಸಬನ್ನವಲಂಬಿಸುವವರು ಮುಂದುವರಿಯುತ್ತಿದ್ದಾರೆ ಎಂದು ಹೇಳುವರು. ರೈತರಿಗೆಷ್ಟುಮಟ್ಟಿಗೆ ಸಹಕಾರ ನೀಡುತ್ತಿದ್ದಾರೆಂಬುದನ್ನು ಇದರಿಂದ ನೋಡಬಹುದು. ಈಗ ಅಗ್ರಿಕಲ್ಚರ್ ಪದವೀಧರರು ಮಂತ್ರಿಗಳಾಗಿದ್ದಾರೆ, ಎಷ್ಟುಮಟ್ಟಿಗೆ ಅವರು ರೈತರ ಹಿತ ಸಾಧಿಸುವರು ಎಂದು ಕಾದು ನೋಡಬೇಕಾಗಿದೆ. ಇಂದು ಅನೇಕರು ವ್ಯವಸಾಯ ವೃತ್ತಿ ಅವಲಂಬಿಸಿ ಕೇವಲ ಖುಷ್ಕಿ ಜಮೀನನ್ನು ಅವಲಂಬಿಸಿ ಜೀವನಮಾಡುತ್ತಿದ್ದಾರೆ. ಅವರ ಪರಿಸ್ಥಿತಿ ಕಷ್ಟವಾಗಿದೆ. ಅವರಿಗೆ ಬೇರೆ ಉಪಕಸಬನ್ನು ಕಲ್ಪಿಸಿಕೊಡಬೇಕು.

ಕೊನೆಯದಾಗಿ ಈಗ ಅನುಭವಿಗಳು ಲೋಕೋಪಯೋಗಿ ಇಲಾಖೆ ಮಂತ್ರಿಗಳಾಗಿ ಇರುವುದು ಸಂತೋಷದ ವಿಷಯ, ಅವರು ಉನ್ನತ ರಾಜಕಾರಣಿಗಳು ಕೂಡ ಆಗಿದ್ದಾರೆ. ಅವರ ಸಹೋದ್ಯೋಗಿಗಳು ನೀರಾವರಿಗೆ ಹೆಚ್ಚು ಹಣ ಕೊಡುವುದಕ್ಕಾಗುವುದಿಲ್ಲ, ಮನೆಗಳಿಗಾಗಿ ಹಣ ಬೇಕಾಗಿದೆ ಎಂದು ಹೇಳಿದ್ದಾರೆ. ಇದರಿಂದ ನನಗೆ ಅನುಮಾನ ಬಂದಿದೆ. ನೀರಾವರಿ ಬಗ್ಗೆ ಈ ರೀತಿಯ ತಾತ್ಸಾರ ಮನೋಭಾವನೆ ಸರಿಯಲ್ಲ. ಎಷ್ಟೇ ಖರ್ಚಾದರೂ ಪೂರ್ಣವಾಗಿ ಸಂಪನ್ಮೂಲಗಳನ್ನು ಉಪಯೋಗಮಾಡಿಕೊಳ್ಳಬೇಕು. ಎಲ್ಲ ಕಡೆಗೆ ನದಿ ನೀರನ್ನೊದಗಿಸಲು ಸಾಧ್ಯವಿಲ್ಲ. ಸಣ್ಣ ನೀರಾವರಿ ಸೌಲಭ್ಯ ಒದಗಿಸಲು ಆಗದಿದ್ದರೆ ಕಮ್ಯೂನಿಟಿ ಇರಿಗೇಷನ್ ಕೆಲಸಮಾಡಬೇಕು. ಅದರಿಂದ ಚಿಕ್ಕ ಹಿಡುವಳಿದಾರರಿಗೆ ಅನುಕೂಲ. ಅದಕ್ಕೆ ಹೆಚ್ಚು ಹಣ ಒದಗಿಸಬೇಕು.

ಮಾನ್ಯ ಅಧ್ಯಕ್ಷರೇ ನಾನು ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಚರ್ಚೆಮಾಡಬೇಕಾದ ಹಲವಾರು ವಿಷಯಗಳಿವೆ. ಆದರೆ ಒಂದು ವಿಷಯದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಶ್ರೀ ಗೋಪಾಲಗೌಡರು ಇಂದು ಆಸ್ಪತ್ರೆಯಲ್ಲಿ ಬಹಳ ಕಷ್ಟ ಪರಿಸ್ಥಿತಿಯಲ್ಲಿದ್ದಾರೆ, ಸುಮಾರು 2–3 ವರ್ಷದಿಂದ ಅವರ ಆರೋಗ್ಯ ಕೆಟ್ಟಿದೆ, ಬಹುಶಃ ಅವರು ಈ ರಾಜ್ಯಕ್ಕೆ ಬೇಕಾದಷ್ಟು ಸೇವೆ ಸಲ್ಲಿಸಿದ್ದಾರೆ, ಬಡವರ ಬಗ್ಗೆ ಹೆಚ್ಚು ಹಿತಚಿಂತನೆ ಮಾಡಿದ್ದಾರೆ, ಅವರು ನಿಜವಾದ ಸಮಾಜವಾದಿ: ಅನುಕಂಪದಿಂದ ಈ ಮಾತನ್ನು ಹೇಳುತ್ತಿದ್ದೇನೆ. ಸರ್ಕಾರ ಅವರಿಗೆ ಸಕಲ ಖರ್ಚನ್ನೂ ಕೊಡಲು ಆಲೋಚನೆಮಾಡಬೇಕು. ಅವರು ತಮ್ಮ ಇಡೀ ಜೀವಮಾನವನ್ನು ಬಡವರಿಗಾಗಿ ಸವೆಸಿದ್ದಾರೆ. ಇಂದು ಅವರು ಸಂಕಟ ಪರಿಸ್ಥಿತಿಯಲ್ಲಿದ್ದಾರೆ. ಆ ಕಡೆ ಗಮನ ಹರಿಸಿ ಸಾಕಾದಷ್ಟು ಸಹಾಯ ಅವರಿಗೆ ನೀಡಬೇಕು ಎಂದು ಪ್ರಾರ್ಥಿಸುತ್ತೇನೆ.

ಇಂದು ರಾಜ್ಯಪಾಲರು ನಮ್ಮ ಮುಂದೆ ಅಮೋಘವಾದ ಭಾಷಣಮಾಡಿದ್ದಾರೆ, ಅವರ ಬಗ್ಗೆ ವೈಯಕ್ತಿಕವಾಗಿ ಹೇಳುತ್ತಾ ಮಾನ್ಯ ಮಿತ್ರರು ಅವರಿಗೆ ಉನ್ನತ ಸ್ಥಾನಮಾನ ದೊರೆಯಲಿ ಎಂದು ಆಶಿಸಿದರು. ಅವರು ರಾಜ್ಯಪಾಲರಾಗಿ ಇರುವ ಜಾಗದಲ್ಲಿದ್ದರೆ ಸಾಕು, ಹೆಚ್ಚು ಅಪೇಕ್ಷೆಪಡುವುದು ಅಷ್ಟಾಗಿ ಸರಿಯೆನಿಸಲಾರದು, ಇರುವ ಜಾಗದಲ್ಲಿ ಅವರು ಒಳ್ಳೆಯ ಹೆಸರನ್ನು ಪಡೆಯಲಿ ಎಂದು ಹೇಳಿ ಬಡವರು ಮತ್ತು ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸಲು ಸಾಕಾದಷ್ಟು ರೂಪರೇಷೆ ಇಲ್ಲದಿರುವುದರಿಂದ ವಂದನಾ ನಿರ್ಣಯಕ್ಕೆ ಸಮ್ಮತಿ ಕೊಡುವುದಿಲ್ಲ ಎಂದು ಸೂಚಿಸಿ ಅಧ್ಯಕ್ಷರಿಗೆ ವಂದಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ).—ನಾನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸುವ ನಿರ್ಣಯವನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ, ಅವರು ಅಮೂಲ್ಯವಾದ ಸಲಹೆ

ಗಳನ್ನು ನೀಡಿದ್ದಾರೆ. ನಮ್ಮ ದೇಶದ ಸಂಪತ್ತನ್ನು ಹೆಚ್ಚಿಸಬೇಕೆಂದು, ದೇಶಾಭಿವೃದ್ಧಿ ಮಾಡಿ ಪ್ರಗತಿಪಥದಲ್ಲಿ ಅದನ್ನು ಕೊಂಡೊಯ್ಯಬೇಕೆಂದು ಅದಕ್ಕೆ ತಕ್ಕ ಭರವಸೆಯನ್ನು ನಮ್ಮ ರಾಜ್ಯಪಾಲರು ಮತ್ತು ಅರ್ಥಮಂತ್ರಿಗಳು ಕೊಟ್ಟಿದ್ದಾರೆ. ಇದನ್ನು ವಿರೋಧಪಕ್ಷದ ಮಾನ್ಯ ಸದಸ್ಯರು ಕೂಡ ಅನುಮೋದಿಸುವುದಾಗಿ ಹೇಳಿರುವುದು ಸಹಜವಾಗಿಯೇ ಇದೆ. ಈಗ ನಮ್ಮ ದೇಶದಲ್ಲಿ ಬಡತನ, ನಿರುದ್ಯೋಗ, ಜನಸಂಖ್ಯೆ ಹೆಚ್ಚುತ್ತಾ ಇರುವಾಗ ನಾವು ಬಹಳ ಸಂದಿಗ್ಧ ಪರಿಸ್ಥಿತಿಯಲ್ಲಿರುವಾಗ ನಮ್ಮ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಬೇಕಾದ್ದು ನಮ್ಮ ಆದ್ಯ ಕರ್ತವ್ಯ. ದೇಶದಲ್ಲಿ ಹೇರಳವಾಗಿ ಖನಿಜ ಸಂಪತ್ತಿದೆ, ನೀರಿನ ಸೌಲಭ್ಯವಿದೆ ಮತ್ತು ಅರಣ್ಯ ಸಂಪತ್ತಿದೆ. ಈ ಸಂಪತ್ತನ್ನುಪಯೋಗಿಸಿ ಕೊಳ್ಳದಿದ್ದರೆ ನಮ್ಮ ದೇಶವನ್ನು ಅಭಿವೃದ್ಧಿಪಡಿಸುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ಸದಸ್ಯರಾದರೂ ಇರುವ ಸಂಪತ್ತನ್ನು ಹೆಚ್ಚಿಸಿಕೊಳ್ಳಲು ಮಾರ್ಗಗಳನ್ನು ಸೂಚಿಸಿದ್ದರೆ ಬಹಳ ಸಂತೋಷವಾಗುತ್ತಿತ್ತು. ಇಂಥ ಲೋಪದೋಷಗಳಿವೆ ಎಂದು ತೋರಿಸಿದ್ದರೆ ಚೆನ್ನಾಗಿತ್ತು. ಈ ರೀತಿ ಅನ್ಯಾಯವಾಗುತ್ತದೆ, ಈ ರೀತಿ ಅಭಿವೃದ್ಧಿ ಮಾಡಬೇಕು ಎಂದು ನಿರ್ದಿಷ್ಟವಾಗಿ ಹೇಳಿ ಸೂಕ್ತ ಸಲಹೆ ಕೊಟ್ಟಿದ್ದರೆ ಅಭಿವೃದ್ಧಿ ಮಾಡಲು ಅನುಕೂಲವಾಗುತ್ತಿತ್ತು. ಅಮೂಲ್ಯವಾದ ಸಲಹೆಗಳನ್ನು ಭಾಷಣ ಮಾಡುವಾಗ ಕೊಡಬಹುದಾಗಿತ್ತು. ಹಾಗೆ ಕೊಡುವರೆಂದು ನಾನು ನಿರೀಕ್ಷೆ ಮಾಡಿದ್ದೆ. ಅದು ಆಗಿಲ್ಲವೆಂದು ನಾನು ವಿಷಾದ ಪಡುತ್ತೇನೆ. ಆದರೂ ನಾನು ನನ್ನ ಕರ್ತವ್ಯ ದೃಷ್ಟಿಯಿಂದ ಹೇಳುವುದಾದರೆ, ನಮ್ಮಲ್ಲಿ ಸಮಾಜವಾದವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವುದಕ್ಕೆ ಪ್ರಜಾಪ್ರಭುತ್ವ ತತ್ವದ ಆಧಾರದ ಮೇಲೆ ರಚಿತವಾಗಿರುವ ಈ ಸರ್ಕಾರಕ್ಕೆ ಬಹಳವಾಗಿ ನಾವು ನಮ್ಮ ಬೆಂಬಲವನ್ನು ಕೊಡಬೇಕಾಗಿದೆ, ರಚನಾತ್ಮಕವಾದ ಸಲಹೆಗಳನ್ನು ಕೊಡಬೇಕಾಗಿದೆ. ಈ ದೃಷ್ಟಿಯಿಂದ ನಾವು ಈಗಾಗಲೇ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಅವುಗಳಲ್ಲಿ ಬಡತನ ನಿರ್ಮೂಲ ಮಾಡುವುದಕ್ಕೆ, ನಿರುದ್ಯೋಗ ತೊಲಗಿಸುವುದಕ್ಕೆ, ಉದ್ಯೋಗ ಒದಗಿಸುವುದಕ್ಕೆ, ನೈತಿಕವಾಗಿ, ಮಾನ ಮರ್ಯಾದೆಯಿಂದ ಬಾಳುವುದಕ್ಕೆ ಸಂಪಾದನೆ ಮಾಡುವುದಕ್ಕೆ ಬೇಕಾದ ವಿದ್ಯೆಯನ್ನು ಕೊಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಹರಿಜನರ ಆರ್ಥಿಕ, ಸಾಮಾಜಿಕ, ವಿದ್ಯಾಭ್ಯಾಸಗಳ ಅಭಿವೃದ್ಧಿ ಎಷ್ಟಾಗಿದೆ ಹೇಗೆ ಅಭಿವೃದ್ಧಿ ಮಾಡಬೇಕೆಂಬ ಬಗ್ಗೆ ಒಂದು ಸಮಿತಿ ಆಗಬೇಕು. ಬಡವರ ಶೋಷಣೆ ನಿಂತು ಸಾಮಾಜಿಕ ನ್ಯಾಯ ದೊರೆಯಬೇಕು.

ಈ ಹೊತ್ತಿನ ದಿವಸ ಏನು ಸಮಸ್ಯೆಗಳಿವೆ, ಏನು ಭರವಸೆಗಳನ್ನು ಜನರಿಗೆ ಕೊಟ್ಟಿದ್ದೇವೆ. ಆ ಸಮಸ್ಯೆಗಳನ್ನು ಪರಿಹರಿಸಿ ಭರವಸೆಗಳನ್ನು ಈಡೇರಿಸುವುದಕ್ಕೆ ನಾವು ಶ್ರಮಿಸಬೇಕಾಗಿದೆ. ಅನೇಕ ಕಡೆ ಕುಡಿಯುವ ನೀರಿನ ಬಾವಿಗಳಿರುವುದಿಲ್ಲ ಅದಕ್ಕಾಗಿ ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನಲ್ಲಿ ಬೇಕಾದಷ್ಟು ಹಣವನು ಖರ್ಚು ಮಾಡುತ್ತಿದ್ದಾರೆ. ಆದರೂ ಹಳ್ಳಿಗಳಿಂದ ಹಿಡಿದು ಪಟ್ಟಣಗಳವರೆಗೆ ಎಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಇದಕ್ಕಾಗಿ ಖರ್ಚು ಮಾಡುವ ಹಣ ಸರಿಯಾಗಿ ಖರ್ಚಾಗಿದೆಯೇ ಇಲ್ಲವೇ ಎನ್ನುವುದನ್ನು ನಾವು ನೋಡಬೇಕಾಗಿದೆ. ಇದಕ್ಕಾಗಿ ಆಡಳಿತ ಯಂತ್ರದಲ್ಲೂ ಕೆಲವು ಬದಲಾವಣೆಗಳು ಆಗಬೇಕಾಗಿವೆ. ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಮತ್ತು ಎಸ್ಟಿಮೇಟ್ಸ್ ಸಮಿತಿಯವರು ಏನೇನು ಲೋಪದೋಷಗಳಿವೆ ಎನ್ನುವುದನ್ನು ತೋರಿಸಿದ್ದಾರೆ. ಈ ಸಮಿತಿಗಳು ಕೊಟ್ಟಿರುವ ವರದಿಗಳನ್ನು ಪರಿಶೀಲಿಸಿ ನಮ್ಮ ಆಡಳಿತ ಯಂತ್ರ ಎಷ್ಟರಮಟ್ಟಿಗೆ ಸಾಗಿದೆ ಮತ್ತು ಎಷ್ಟು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ನಿಷ್ಠೆಯಿಂದ, ಈ ರಾಜ್ಯದಲ್ಲಿ ಆಡಳಿತವನ್ನು ಸುಲಲಿತವಾಗಿ ನಡೆಸಿಕೊಂಡು ಬಂದಿದೆ ಎನ್ನುವುದನ್ನು ನೋಡಬಹುದಾಗಿದೆ. ಆ ವರದಿಗಳನ್ನು ನಾವು ಅಧ್ಯಯನ ಮಾಡಿದರೆ ನಾವು ಇಲ್ಲಿ ಹೆಚ್ಚು ಹೇಳಬೇಕಾದ್ದಿಲ್ಲ. ಕೈಗಾರಿಕೆಯಲ್ಲಾಗಲೀ, ಇತರೇ ಉದ್ಯಮಗಳಲ್ಲಾಗಲೀ, ನಾವು ತೊಡಗಿಸಿರತಕ್ಕ ಬಂಡವಾಳಕ್ಕೆ ತಕ್ಕಂತೆ ಪ್ರತಿಫಲ ಬಾರದೆ ಇರತಕ್ಕದು ಅನೇಕ ಸಂದರ್ಭಗಳಲ್ಲಿ ನಮಗೆ ಎದ್ದು ಕಾಣುತ್ತದೆ. ಅನೇಕ ಯಂತ್ರಗಳನ್ನು ಕೊಳ್ಳುವುದರಲ್ಲಿ ಬಸ್ಸುಗಳನ್ನು ಕೊಳ್ಳುವುದರಲ್ಲಿ ಬಸ್ಸುಗಳ ಬಿಡಿ ಭಾಗಗಳನ್ನು ಕೊಳ್ಳುವುದರಲ್ಲಿ ಇನ್ನು ಅನೇಕ ಸಾಮಾನು ಕೊಳ್ಳುವುದರಲ್ಲಿ ಆಗಿರುವಂಥ ಅನ್ಯಾಯಗಳನ್ನು ನೋಡಿದರೆ ನಾವು ತಲೆ ತಗ್ಗಿಸಬೇಕಾಗುತ್ತದೆ. ಅಲ್ಲಲ್ಲಿ ಆಗಿರತಕ್ಕ ಲೋಪದೋಷಗಳನ್ನು ಈ ಮಾನ್ಯ ಸಭೆ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಾನು ಕೆಲವು ರಚನಾತ್ಮಕವಾದ ಸಲಹೆಗಳನ್ನು ಮಾಡುತ್ತೇನೆ.

ಮಲೆನಾಡು ವಿಚಾರವನ್ನು ತೆಗೆದುಕೊಂಡರೆ ಅಲ್ಲಿ ಹೇರಳವಾಗಿ ಗಿಡಮೂಲಿಕೆಗಳು ಸಿಕ್ಕುತ್ತವೆ ಆಯುರ್ವೇದ ಔಷಧಿಗಳ ಬಗ್ಗೆ ಬೇಕಾದಷ್ಟು ಅಭಿವೃದ್ಧಿ ಮಾಡಲು ಅವಕಾಶವಿದೆ. ನಮ್ಮಲ್ಲಿ ಹೇರಳವಾದ ಖನಿಜ ಸಂಪತ್ತು ಇದೆ. ಕಾಫಿ, ಏಲಕ್ಕಿ, ಅಡಕೆ ಮುಂತಾದ ಒಳ್ಳೆಯ ಬೆಲೆ ಕೊಡತಕ್ಕ ಮತ್ತು ಡಾಲರ್ ಸಂಪಾದನೆ ಮಾಡತಕ್ಕ ಬೆಳೆಗಳು ಮಲೆನಾಡಿನಲ್ಲಿ ಬೆಳೆಯುತ್ತವೆ. ದೈವದತ್ತವಾಗಿ

(ಶ್ರೀ ಜಿ. ಪುಟ್ಟಸ್ವಾಮಿ)

ದೊರೆಯುವ ಸಂಪತ್ತು ಮಲೆನಾಡಿನಲ್ಲಿ ವಿಶೇಷವಾಗಿರುವುದರಿಂದ, ಮಲೆನಾಡಿನ ಅಭಿವೃದ್ಧಿಗೆ ಒಂದು ಸಮಿತಿಯನ್ನು ನೇಮಕ ಮಾಡಬೇಕು. ಹಿಂದೆ ಮಲೆನಾಡು ಅಭಿವೃದ್ಧಿ ಸಮಿತಿ ಎಂದು ಇತ್ತು. ಅದಕ್ಕೆ ಸರಿಯಾದ ಆಡಳಿತಗಾರರನ್ನು, ಮತ್ತು ದ್ರವ್ಯ ಸಹಾಯವನ್ನು ಒದಗಿಸದೆ ಹೆಸರಿಗೆ ಮಾತ್ರ ಸಮಿತಿಯನ್ನು ರಚನೆ ಮಾಡಿ, ಆ ಕಮಿಟಿಯ ಸಲಹೆಯನ್ನು ಪಡೆಯುವುದಕ್ಕೆ, ಮಲೆನಾಡು ಅಭಿವೃದ್ಧಿ ಮಾಡುವುದಕ್ಕೆ, ಏನೂ ಕಾರ್ಯಕ್ರಮ ತೆಗೆದುಕೊಳ್ಳದೆ ಇದ್ದುದಕ್ಕಾಗಿ ನಾನು ವಿಷಾದ ಪಡುತ್ತೇನೆ. ಈಗಲಾದರೂ ಮಲೆನಾಡು ಅಭಿವೃದ್ಧಿಗೆ ಸಂಬಂಧಪಟ್ಟಂತೆ ಒಂದು ಕಮಿಟಿಯನ್ನು ಮಾಡಿ, ಮಲೆನಾಡಿನಲ್ಲಿರುವ ಖನಿಜ ಸಂಪತ್ತು, ಅರಣ್ಯ ಸಂಪತ್ತು ನೀರು ಮುಂತಾದುವನ್ನು ಉಪಯೋಗಿಸಿಕೊಂಡು ದೇಶದ ವರಮಾನವನ್ನು ಹೆಚ್ಚಿಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ. ಚಿಕ್ಕಮಗಳೂರು ಜನರಲ್ ಆಸ್ಪತ್ರೆಗೆ E.C.G. ಮೆಷಿನ್ ಕೂಡ ತರಿಸಬೇಕು. ಚಿಕ್ಕಮಗಳೂರು ಜನರಲ್ ಆಸ್ಪತ್ರೆ ಬೆಡ್ 180ರಿಂದ 300ಕ್ಕೆ ಏರಿಸಬೇಕು.

ಮಲೆನಾಡಿಗೆ ಒದಗಿರುವ ಗಂಡಾಂತರವನ್ನು ನಾನು ಇಲ್ಲಿ ವಿವರಿಸುತ್ತೇನೆ. ಮಲೆನಾಡಿನಲ್ಲಿ ಈಗ ಜನಸಂಖ್ಯೆ ಕಡಮೆಯಾಗಿದೆ. ಅಲ್ಲಿ ಸಂಪತ್ತು ಹೆಚ್ಚಾಗಿದೆ. ಕಾಲಕ್ಕೆ ಸರಿಯಾಗಿ ಮಳೆ ಬೀಳದೆ ಇದ್ದರೆ ಬಹಳ ನಷ್ಟವಾಗುತ್ತದೆ. ಈ ವೇಳೆಗೇ ಮಳೆ ಬರಬೇಕಾಗಿತ್ತು. ಇಂಥ ಕಾಲದಲ್ಲಿ ಇಂಥ ಮಳೆ ಬಂದರೆ ಮಾತ್ರ ಕಾಫಿ ಬೆಳೆ ಚೆನ್ನಾಗಿ ಆಗುತ್ತದೆ, ಇಲ್ಲವಾದರೆ ಲಕ್ಷಾಂತರ ರೂಪಾಯಿ, ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಇದರಿಂದ ಕಾಫಿ ಬೆಳೆಗಾರರು ತೊಂದರೆಗೆ ಈಡಾಗಿ, ಬಹಳ ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ. ಏಲಕ್ಕಿ ಬೆಳೆ ಮೂರು ವರ್ಷಗಳಿಂದ ಬಹಳ ಕಡಮೆ ಯಾಗಿದೆ ಮತ್ತು ಅದರ ಬೆಲೆ ಬಹಳ ಕಡಮೆ ಮಟ್ಟಕ್ಕೆ ಇಳಿದಿದೆ. ಈಗಾಗಲೇ ಅಲ್ಲಿ ಮಳೆ ಬರಬೇಕಾ ಗಿತ್ತು ಏಪ್ರಿಲ್ ಹತ್ತನೇ ತಾರೀಖಾದರೂ ಮೂಡಿಗೆರೆ ತಾಲ್ಲೂಕಿನಲ್ಲಿ ಮಳೆ ಬಂದಿಲ್ಲ. ಆದುದರಿಂದ ರೈತರೆಲ್ಲ ಕಂಗಾಲಾಗಿದ್ದಾರೆ. ಸಾಮಾನ್ಯವಾಗಿ ದೇಶಾದ್ಯಂತ ರೈತರೆಲ್ಲ ಸಾಲಗಾರರಾಗಿದ್ದಾರೆ ಎನ್ನುವ ವಿಚಾರ ಎಲ್ಲರಿಗೂ ಗೊತ್ತಿದೆ. ರೈತರಿಗೆ ಎಷ್ಟು ಸಾಲವಿದೆ ಎನ್ನುವುದನ್ನು ತಿಳಿಯುವು ದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿದರೆ ಬಹಳ ಸಂತೋಷ. ರೈತನು ಎಲ್ಲ ವಿಧವಾದ ಸಾಲಗಳನ್ನು ಪಡೆದುಕೊಂಡಿದ್ದು, ಬೆಳೆ ಕಡಮೆಯಾಗಿದ್ದರಿಂದಲೂ, ಬೆಳೆದ ಬೆಳೆಗೆ ಸರಿಯಾದ ಬೆಲೆ ದೊರೆಯದೆ ಇರುವುದರಿಂದಲೂ ರೈತ ಕಂಗಾಲಾಗಿದ್ದಾನೆ. ಮತ್ತು ತಾನು ಪಡೆದ ಸಾಲ ವನ್ನು ಹಿಂದಕ್ಕೆ ಕೊಡದೆ ಇರುವ ಸ್ಥಿತಿಗೆ ಬಂದಿದ್ದಾನೆ. ಆದುದರಿಂದ ದೇಶಾದ್ಯಂತ ರೈತರ ಸಾಲವೆಷ್ಟಿದೆ ಎನ್ನುವುದರ ಬಗ್ಗೆ ವಿವರಗಳನ್ನು ತಿಳಿಯಲು ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಿ ರೈತರ ನೆರವಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತೇನೆ. ಮಲೆನಾಡು ರೈತರು ಬಹಳ ಗಂಡಾಂತರ ಸ್ಥಿತಿಯಲ್ಲಿದ್ದಾರೆ. ಅವರ ಬಗ್ಗೆ ಸರ್ಕಾರ ಸಹಾನುಭೂತಿಯನ್ನು ತೋರಿಸಿ, ಅವರ ಅಭಿವೃದ್ಧಿಗೆ ತ್ವರಿತವಾದ ಕಾರ್ಯಕ್ರಮ ಕೈಗೊಳ್ಳದೆ ಇದ್ದರೆ ಅವರ ಸ್ಥಿತಿ ಚಿಂತಾಜನಕವಾಗುತ್ತದೆ ಎನ್ನುವುದನ್ನು ಹೇಳುತ್ತೇನೆ.

ಮೂಡಿಗೆರೆ ತಾಲ್ಲೂಕಿಗೆ ರಸ್ತೆ ಮತ್ತು ಸೇತುವೆಗಳನ್ನು ಮಂಜೂರ್ ಮಾಡಿ ಸಂಚಾರ ಸೌಕರ್ಯ ವನ್ನುಂಟು ಮಾಡಬೇಕು. ಮೂಡಿಗೆರೆ ತಾಲ್ಲೂಕು ಮಲೆನಾಡು ಪ್ರದೇಶ ಮತ್ತು ತಾಲ್ಲೂಕು ಮುಖ್ಯ ಸ್ಥಳ. ಅಲ್ಲಿ ಒಂದು ಜೂನಿಯರ್ ಕಾಲೇಜಿಲ್ಲವೆಂದರೆ ಬಹಳ ಆಶ್ಚರ್ಯದ ಮಾತು. ರಾಜ್ಯದಲ್ಲಿ ಪ್ರತಿ ಯೊಂದು ತಾಲ್ಲೂಕು ಮುಖ್ಯ ಸ್ಥಳದಲ್ಲಿಯೂ ಕನಿಷ್ಟ ಪಕ್ಷ ಒಂದು ಜೂನಿಯರ್ ಕಾಲೇಜಿರಬೇಕು. ಸರ್ಕಾರ ಇಂಥ ಕಾಲೇಜುಗಳನ್ನು ಸ್ಥಾಪನೆ ಮಾಡಿದ ಮೊದಲನೆ ವರ್ಷದಲ್ಲಿಯೇ ಅದಕ್ಕೆ ಬೇಕಾದ ಹಣವನ್ನು ಒದಗಿಸಿಕೊಟ್ಟು ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಸಲಹೆ ಮಾಡು ತ್ತೇನೆ. ಮೂಡಿಗೆರೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ ಜನರಲ್ ಆಸ್ಪತ್ರೆಗಳಿಲ್ಲ. ವೈದ್ಯಕೀಯ, ಸೌಕರ್ಯ ವಿದ್ಯಾಭ್ಯಾಸ ಸೌಕರ್ಯ ಮತ್ತು ಕುಡಿಯುವ ನೀರಿನ ಸೌಕರ್ಯ ಇವು ಅತ್ಯಾವಶ್ಯಕವಾಗಿ ಮನುಷ್ಯನಿಗೆ ಬೇಕಾಗಿರುವ ವಸ್ತುಗಳು. ಇಂಥವನ್ನು ಒದಗಿಸದೆ ಇದ್ದರೆ ಕಷ್ಟವಾಗುತ್ತದೆ. ಮಕ್ಕಳಿಗೆ ಕಡ್ಡಾಯ ಮತ್ತು ಮುಫತ್ತು ವಿದ್ಯಾಭ್ಯಾಸವನ್ನು S.S.L.C. ಅಂತಸ್ತು ವರೆವಿಗಾದರೂ ಕೊಡಬೇಕು. ಹರಾಜು ಮೂಲಕ ಮುನಿಸಿಪಾಲಿಟಿಯವರೇ ಸೈಟುಗಳನ್ನು ವಿಲೇ ವಾರಿ ಮಾಡುವುದನ್ನು ನಿಲ್ಲಿಸಿ ಸೈಟಿಲ್ಲದ ಬಡವರಿಗೆ ಹರಿಜನರಿಗೆ ಅಪ್‌ಸೆಟ್ ಬೆಲೆಗೆ ಕೊಡುವಂತಾಗ ಬೇಕು. ಮೊಬೈಲ್ ಆಸ್ಪತ್ರೆ ಮೊಬೈಲ್ ಕೋರ್ಟು ಆಗಬೇಕು, ಗೊಬ್ಬರ ಬೀಜ ವಗೈರೆ ರೈತನ ಮನೆಬಾಗಿಲಿಗೆ ಸೊಸೈಟಿ ಮುಖೇನ ದೊರೆಯಬೇಕು.

ಸೋಷಿಯಲ್ ವೆಲ್‌ಫೇರ್ ಡಿಪಾರ್ಟಿಮೆಂಟಿನ ಬಗ್ಗೆ ಹೇಳಲಾದ ಕೆಲವು ಲೋಪದೋಷಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ಸದಸ್ಯರು ಒಂದು ಆಕ್ಷೇಪಣೆಯೂ ಇಲ್ಲ ಎನ್ನುವ ರೀತಿಯಲ್ಲಿ ಹೇಳಿದುದನ್ನು ಕೇಳಿ ಬಹಳ ವ್ಯಸನವಾಯಿತು. ಹಿಂದೆ ಇದ್ದ ಮಂತ್ರಿಮಂಡಲ ಉರುಳುವುದಕ್ಕೆ ಮುಂಚೆ ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟಿನಲ್ಲಿ ಒಂದು ಮಿನಿಸ್ಟೀರಿಯಲ್ ವೆಲ್‌ಫೇರ್ ಕಮಿಟಿಯನ್ನು ಮಾಡಿದರು. G. O. regarding Constitution of a Ministerial Committee to review the reservation of posts in favour of the weaker sections of Society approval of G. O. No. S W. D. 28 September 1971 Bangalore Dated 9th February 1971. ಇವಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರು, ಶ್ರೀ ಬಿ. ರಾಚಯ್ಯ, ಶ್ರೀ ರಾಮಕೃಷ್ಣ ಹೆಗಡೆ ಯವರು, ಶ್ರೀ ರಾಜಶೇಖರ ಮೂರ್ತಿಗಳು ಮತ್ತು ಶ್ರೀ ವೈ. ರಾಮಕೃಷ್ಣ ಇವರು ಸದಸ್ಯರಾಗಿದ್ದರು. ಆ ಕಮಿಟಿಯು ಒಂದು ದಿವಸವಾದರೂ ಸಭೆ ಸೇರಲಿಲ್ಲ. ಆ ಕಮಿಟಿ ಯಾವ ಉದ್ದೇಶದಿಂದ ರಚನೆಯಾಯಿತೋ ಆ ಉದ್ದೇಶ ಇದುವರೆಗೂ ನೆರವೇರಲಿಲ್ಲ. ಅಷ್ಟು ಹೊತ್ತಿಗೆ ಈ ರಾಜ್ಯದಲ್ಲಿ ಗವರ್ನರವರ ಆಡಳಿತ ಬಂದು ಈ ಹಿಂದುಳಿದ ವರ್ಗಕ್ಕೆ ಏನೇನು ಅನುಕೂಲಗಳು ಸಿಗಬೇಕಾಗಿತ್ತೋ ಅವೊಂದು ಸಿಗಲಿಲ್ಲ ಮತ್ತು ಈ ಗವರ್ನರವರ ಆಡಳಿತದ ಸುಮಾರು ಒಂದು ವರ್ಷದ ಅವಧಿಯಲ್ಲಿ ನಮ್ಮ ರಾಜ್ಯದ ಹಿಂದುಳಿದ ಮತ್ತು ದಲಿತವರ್ಗಗಳನ್ನು ಕೂಲಿಕಾರರನ್ನು ಹಾಗೂ ಕಾರ್ಮಿಕವರ್ಗದವರನ್ನು ಬಹಳ ಅಸಡ್ಡೆಯಿಂದ ನೋಡಿ ಇವರಿಗೇನೂ ಸೌಕರ್ಯಗಳು ಸಿಗಲಿಲ್ಲ. ಇವರಿಂದ ಒಂದು ವರ್ಷದಲ್ಲಿ ಹಿಂದುಳಿದವರ ಅಭಿವೃದ್ಧಿಗಾಗಿ ಯಾವ ಸಮಿತಿ ರಚನೆ ಮಾಡಲಿಲ್ಲ ಮತ್ತು ಕೆಲವು ಕಮಿಟಿ ಕಾರ್ಪೊರೇಷನ್ ಮತ್ತು ಬೋರ್ಡುಗಳನ್ನು ರಚನೆ ಮಾಡಿದಾಗಲೂ ಇದರಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ದಲಿತವರ್ಗದವರಿಗೆ ನ್ಯಾಯವಾಗಿ ಕೊಡಬೇಕಾದ ಪ್ರಾತಿನಿಧ್ಯವನ್ನೂ ಕೊಡಲಿಲ್ಲ. ಇದರಿಂದ ರಾಜ್ಯದಲ್ಲಿರುವ ಹಿಂದುಳಿದ ವರ್ಗದವರು ಮತ್ತು ದಲಿತವರ್ಗದವರು ಹಿಂದುಳಿದವರಾಗಿಯೇ ಇಂದೂ ಉಳಿದಿದ್ದಾರೆ. ಇವರಿಗೆ ಅವಕಾಶಗಳನ್ನು ಕಲ್ಪಿಸಿಕೊಡುವ ಯೋಚನೆಯನ್ನು ಸಹ ಮಾಡಲಿಲ್ಲ. ಇದರಲ್ಲೇನೋ ಒಂದು ರೀತಿಯ ರಾಜಕೀಯ ಕಾರಣಗಳಿವೆ ಮತ್ತು ಇಂತಹ ದುರುದ್ದೇಶಗಳಿಂದ ಕೂಡಿದ ಸಮಿತಿ ಹಾಗೂ ಬೋರ್ಡುಗಳನ್ನು ಮಾಡಿರುವುದು ಸರಿಯಲ್ಲ. ಇಂತಹ ಅಕ್ರಮಗಳನ್ನು ಮಾಡಿರುವುದು ಜನತೆಗೆ ಅಕ್ಷಮ್ಯ ಅಪರಾಧ ಎಂದು ಹೇಳದೆ ವಿಧಿಯಿಲ್ಲ. ಈ ಹಿಂದೆ ರಾಜ್ಯಪಾಲರು ಮಾಡಿರುವ ಕಮಿಟಿ, ಬೋರ್ಡುಗಳು ಮತ್ತು ಕಾರ್ಪೊರೇಷನ್‌ಗಳನ್ನು ವಜಾಮಾಡಿ ಹೊಸದಾಗಿ ರಚನೆ ಮಾಡಬೇಕು.

† Sri BAPURAO PATIL (Aurad).—[*Spoke in Hindi*]

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ.

ದೇಶ ಭಾಷೆ ಉಳಿದುಕೊಳ್ಳಲಿ. ಗುಲಾಮಗಿರಿ ಸಂಕೇತವಾದ ಆಂಗ್ಲ ಭಾಷೆ ಇಂದು ಉಳಿಯಲಿಕ್ಕಿಲ್ಲ. ಇದು ಮುಖ್ಯವಾದ ವಿಷಯ. ನನ್ನ ಕ್ರಿಯಾ ಬಂದು ಹೀಗಿದೆ, ನಮ್ಮ ರಾಷ್ಟ್ರದ ಯಾವುದೇ ಭಾಷೆ ಅಲ್ಲದೆ ಮತ್ತು ಗುಲಾಮಗಿರಿಯ ಸಂಕೇತವಾದ ಇಂಗ್ಲೀಷು ಭಾಷೆಯಲ್ಲಿ ನನ್ಮಾನ್ಯ ಸದಸ್ಯರು ಮಾತನಾಡಲು ಪ್ರಾರಂಭ ಮಾಡಿದರೆ ಅದನ್ನು ಇಲ್ಲ ಬರೆದುಕೊಳ್ಳುವ ವಾಡಿಕೆ ಇದೆ. ಆದರೆ ಇಡೀ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಸದಸ್ಯರು ಭಾಷಣ ಮಾಡಲು ಯತ್ನ ಮಾಡಿದರೆ ಅದನ್ನು ಈ ಸಭೆಯಲ್ಲಿ ಬರೆದು ಇಡಲಿಕ್ಕೆ ಯಾವ ವ್ಯವಸ್ಥೆಯೂ ಇದ್ದಂತೆ ಕಾಣುತ್ತಿಲ್ಲ. ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಮಾತನಾಡುವಾಗ ಅದಕ್ಕೆ ಅವಮಾನವಾಗದಂತೆ ನಾವು ನೋಡಿಕೊಳ್ಳಬೇಕು. ಇದಕ್ಕಾಗಿ ಈ ಸರಕಾರ ಬಹಿರಂಗವಾಗಿ ಈ ಸಭೆಯ ಕ್ಷಮಾಯಾಚನೆ ಮಾಡಬೇಕು. ಇದು ರಾಷ್ಟ್ರದ್ರೋಹ. ರಾಷ್ಟ್ರ ಭಾಷೆಯಾದ ಹಿಂದಿಗೆ ತಕ್ಕ ಪ್ರಾಮಾಣಿಕತೆ ಇಲ್ಲ ದೊರಕುತ್ತಿಲ್ಲ. ಗುಲಾಮಗಿರಿಯ ಸಂಕೇತವಾದ ಇಂಗ್ಲೀಷು ಭಾಷೆಗೆ ಕೊಡತಕ್ಕ ಪ್ರಾಧಾನ್ಯತೆಯನ್ನು ಒಪ್ಪಿಕೊಂಡು ಇಂದು ರಾಷ್ಟ್ರಭಾಷೆಯ ಬಗ್ಗೆ ಅಪಚಾರವಾಗುತ್ತಿರುವುದರಿಂದ ತಾವು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದು ರಾಷ್ಟ್ರ ಭಾಷೆಗೆ ಅಗೌರವವೆಂದು ನಾನು ಇಲ್ಲಿ ಸೂಚಿಸುತ್ತೇನೆ. ಇದರ ಬಗ್ಗೆ ಅಧ್ಯಕ್ಷರು ಈ ಸಭೆಯಲ್ಲಿ ನಿಯಮಿಸುವ ದಂಡವನ್ನು ತೆರಬೇಕು. ಅಧ್ಯಕ್ಷರು ಕೊಡತಕ್ಕ ಬಹಳ ಕಡಿಮೆ ದಂಡ ಎಂದರೆ ನಾನು ಭಾವಿಸುವುದು ಇಲ್ಲಿ ಕುಳಿತಿರತಕ್ಕ ಮಂತ್ರಿ ಮಂಡಲದಲ್ಲಿರುವವರು ಯಾರೂ ಮಂತ್ರಿಗಳಾಗಿ ಇಲ್ಲಿ ಕುಳಿತುಕೊಳ್ಳಲು ಅನರ್ಹರು. ಇದಕ್ಕಾಗಿ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕು. ಇದೇ ಕನಿಷ್ಟ ದಂಡ ಎಂದು ಅವರು ತೆರಬೇಕು. ಇದು ರಾಷ್ಟ್ರದ್ರೋಹ, ಇದಕ್ಕೆ ಪಶ್ಚಾತ್ತಾಪ ಅನುಭವಿಸಬೇಕಾದರೆ ತಾವು ಆ ರೀತಿ ದಂಡ ವಿಧಿಸಬೇಕು ಮತ್ತು ಅವರು ತೆರಬೇಕು.

ಥೇರ್ಮನ್ನರವರು.—ತಾವು ಹೇಳುತ್ತಿರುವುದು ಹಿಂದಿಯಲ್ಲಿ ಮಾತಾಡುವಾಗ ಅದನ್ನು ಇಲ್ಲಿ ಬರೆಯುವ ವ್ಯವಸ್ಥೆ ಮಾಡಬೇಕು ಎನ್ನುವುದು, ಇದು ಸ್ವಾಭಾವಿಕ. ಇದರ ವಿಚಾರವನ್ನು ನಾನು ಸ್ಪೀಕರ್‌ರವರಿಗೆ ತಿಳಿಸುತ್ತೇನೆ. ಆದರೆ ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತಾಡಿದ ವಿಚಾರಗಳನ್ನು ನಮ್ಮ ಕಡೆಗೆ ಕಳುಹಿಸಿದರೆ ಅದನ್ನು ಭಾಷಾಂತರ ಮಾಡಿಸುವ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದುವರೆಗೂ ಏನು ಮಾಡುತ್ತಿದ್ದಿರಿ ?

ಥೇರ್ಮನ್ನರವರು.—ಇಲ್ಲಿ ಇದರ ವ್ಯವಸ್ಥೆ ಇಲ್ಲ ಎನ್ನುವುದು ತಮಗೆ ಗೊತ್ತಿರುವ ವಿಚಾರ. ವ್ಯವಸ್ಥೆ ಮಾಡದೇ ಇರುವುದು ತಪ್ಪು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದನ್ನು ನಾನು ಸ್ಪೀಕರ್‌ರವರಿಗೆ ತಿಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಅಷ್ಟು ಸಮಂಜಸವಾಗುತ್ತದೆಯೇ ಎಂದು ನಾನು ಕೇಳುತ್ತೇನೆ. ಹಿಂದಿಯನ್ನು ರಿಕಾರ್ಡು ಮಾಡುವ ವ್ಯವಸ್ಥೆ ಇಲ್ಲಿ ಇಲ್ಲದೇ ಇರುವುದು ಸರಿಯೇ ಎಂಬುದು ನಾವು ಮಾಡುತ್ತಿರುವ ಪ್ರಶ್ನೆ.

Sri BAPU RAO PATIL (Aurad).—[*Hindi*]

*The language version of the Speech is reproduced below :*

अध्यक्ष महोदय,

रज्यपाल के भाषण में समाजवाद की कोई दृष्टी दिखाई नही देती मनूष्य को जीने के लिये कम से कम पीने के पानी की आवश्यकता है किन्तू पानी की व्यवस्था करने आश्वासन नहीं है । दुष्काल के संबंध में साढेपांच करोड के करीब रुपया खर्च किया गया उल्लेख है। मेरे मतदार संघ औराद जि. बिदर में 28 लाख रुपये खर्च किये गये हैं, पर वह दलाला के हाथ में दिये उसमे से चौथाई पैसा मजदुरों को नहीं मिला ।

औराद तालूक के बोस ग्राम में खारीफ़ का पेर नही हुवा और यह पहाडी विभाग होने के कारण रबी का पीक नही आता, ऐसी अवश्था में इस विभाग को दुष्काल पिडीत जाहीर नही किया गया। तालूक के 150 ग्रामों में सीर्फ पांच ग्राम में बांध डालनेका काम शुरु किया है । यह तालूका पहाडी होने के कारण पुरे तालूक में बांध डालने का काम पूर्ण करने केलिये सबडिव्हीजन (बांध बंदस्ति) की अवश्यकता है।

तालूक के हर ग्राम से नाला बहता है। मायनर इरीगेशन की सर्व विभाग ने दस तालाबों का सर्वे और इस्टीमेट पूर्ण किये है किन्तु यह काम नही लिया गया है सीर्फ दो तालाब पर इस बजेट में दस और बीस हजार खर्च किये जा रहे है। तालुक में हरीजन, गारीजन और पिछडे हुवेजाती के लोग जिन के पास जमीन नही है । सरकारी जमीन नहा बाँटी गई इन

लोगों के कबजे हटाये जाते या उन्हे जुरमाना लगाया जाता है। किसानों के तकावी देने में आठ, पंद्रह दिन घुमना पडता है जिससे किसान परेशान होकर दानलों को 25% रक्कम देकर सरकारी रक्कम उठाता है।

तालूके दक्षिण में मांजरा नदी बहती है, उसका पानी तालूके के बहूत बडे हीसे को दिया जा सकता है, इसका सर्वे हुवा है। उसे कार्यनिवीत किया जाय।

भूसैनिक योजना से मजदुरों को लाभ होने के बजाय हानी ही है। हेडकवार्टर से आठ आठ मील दूर काम करके रात में वापस आना पडता है। समय पर मजूरी नहीं दी जाती है। मैसूर में बिजलीका उत्पादन अधिक होते हुवे भी सभी देहातों में अभितक बिजली नहीं दी गई।

ग्रामीण लोक संख्या दुगनी होगई है किन्तू गावठाण का रकबा बढाया नही गया। गिरिजन (लम्बाडा) आदी पीछडे हुवे लोगों को ग्राम में बसने के लिये मुफ्त जगह दिया जाय जीससे अच्छे संस्कार और प्रगती होने में सहाय हो।

जिन गावों में पीने का पानी उपलब्ध नही है, वहा संयुक्त नल द्वारा पानी का व्यवस्था किया जाय। ग्रामपंचायत पर इस कारण जिम्मेदारी रखति उनका उत्पन्न सेक्रेट्रीकी भी तनखा देनेंकी शक्ती नही है।

औराद तालूके में मराठी, कानडा, तेलगू और उर्दू चार भाषा बाला जाते है किन्तु शिक्षा में शिक्षकों की संख्या बहूत कम है। पचीस गाँव के एक शिक्षक प्रशान्तके शिक्षकों को दुसरी जगह नियुक्त किया गया है, जो सार्वजनीक शिक्षाप्रसार के विरोध है। तालूके के उत्तर, पश्चीम में महाराष्ट्र के तीन तालूके पूर्व में आंध्र के दो तालूके और दक्षिण में मैसूर के दो तालूके हैं इस में से सिर्फ़ एक भाल्की तालूके को पक्की सडक है। बाजूके व्यापारी गावों को मिलने केलिये महाराष्ट्र एकीकरण समिती के तालुका विकास बोर्डने पाच साल पूर्व 250 मीलके रस्ते किये हैं, उसे पक्के नही किये गये। पांच, दस मीलके पक्के रस्ते किये जाते तो यहाँ की प्रगती

(SRI BAPU RAO PATIL)

होती । आज यह तालूका मैसूर में नागालॉड समझा जाता है । बेंगलूर से 650 किलोमीटर दूर है । इस कारण इस विभाग को जहाँ मराठी बहु संख्या है महाराष्ट्र में मिलायाजाय ।

औराद तालूक में जानवार की चोरी सामान्य है, जैसा राज्य में कालाबाजार है । बिदर जिल्ले के एम. एल. सी. के भाई के दैल चोरि होते ही एस. पी. आदी कार्यक्षम रहे, वैसा किसानों के बारे में नही होगा। चुनाव मे संस्था काँग्रेस और सत्ताधारि काँग्रेस के उमेदवार रिव्हालवर लेकर प्रचार कार्य मे भाग लेते थे । यह अवस्था बिदर जिल्ले के पोलिस व्यवस्था की है ।

6-00 P.M.

### Business of the House.

Mr. CHAIRMAN.—Before adjourning, I wish to make an announcement.

At a meeting of the Business Advisory Committee held today the 10th April 1972, the Committee has recommended that the House may transact the following items of business during the period between the 10th and 15th April 1972 :

| | |
|---|---|
| 10th, 11th, 12th & 13th April 1972. | Debate on the Motion of Thanks to the Governor's Address. |
| 14th April 1972 Friday | Reply to the debate on the Motion of Thanks to the Governor's Address and Government legislative business. |
| 15th April 1972 Saturday | Non-fficial business. |

The Committee also recommended that if necessary, there may be two sittings on Saturday to complete the Government legislative business.

The House will now rise and meet again tomorrow at 1 p.m.

---

*The House adjourned at Five Minutes past Six of the Clock to meet again at One of the Clock on Tuesday the 11th April 1972.*

---

WD 17268—GPB—550—3-6.1972

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Tuesday, 11th April 1972*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

### (to which oral answers were given)

### Implementation of Land Reforms Act

Sri S. KARIAPPA (Kanakapura).—

Will the Minister for Revenue be pleased to state :—

(*a*) the period within which the Government proposes to implement the provisions of the Land Reforms Act ;

(*b*) whether there is any proposal to amend the provisions relating to ceiling on land ;

(*c*) if so, the ceiling limit contemplated to be fixed ?

Sri N. HUTCHAMASTHY GOWDA (Minister for Revenue)—

(*a*) The provisions of the Mysore Land Reforms Act are already under implementation.

(*b*) Yes.

(*c*) On the recommendations of the Central Land Reforms Committee the Government of India have suggested that the ceiling limit may be so fixed that for the 1st class of land it will not exceed 15 acres, 5th class of land it will not exceed 54 acres and 7th class of land (lowest class) it will be 75 acres. The suggestion of the Government of India is yet to be considered by the State Government.

ಶ್ರೀ ಎಸ್. ಕರಿಯಪ್ಪ.—ಭೂಸುಧಾರಣಾ ಕಾನೂನನ್ನು ಬಹಳ ದಿನಗಳ ಹಿಂದೆಯೇ ಜಾರಿಗೆ ತರಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಅಂದಾಗ ಸರ್ಕಾರದವರು ಆ ಕಲಂಗಳಲ್ಲಿ ಯಾವು ಯಾವುದನ್ನು ಜಾರಿಗೆ ತಂದಿದ್ದಾರೆ ಮತ್ತು ಅವುಗಳನ್ನು ಜಾರಿಗೆ ತರತಕ್ಕ ಬಗ್ಗೆ ನೇಮಕ ಮಾಡಿರತಕ್ಕ ಸರ್ಕಾರಿ ಮೆಷಿನರಿ ಯಾವುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರುವಹಾಗೇ ಇರತಕ್ಕ ಇಲಾಖೆಯ ಅಧಿಕಾರಿಗಳ ಮೂಲಕ ಈ ಕಾನೂನಿನ ಕಲಂಗಳನ್ನು ಜಾರಿಗೆ ಕೊಡುವುದಕ್ಕೆ ಏರ್ಪಾಡನ್ನು ಮಾಡಿದೆ.

ಶ್ರೀ ಎಸ್. ಕರಿಯಪ್ಪ.—ಆ ಕಲಂಗಳಲ್ಲಿ ಈಗಾಗಲೆ ಸರ್ಕಾರದವರು ಜಾರಿಗೆ ತಂದಿರತಕ್ಕ ಕಲಂಗಳು ಯಾವು ಯಾವುವು ?

Sri N. HUTCHMASTHY GOWDA.—Fixation of fair rent, land-lord tenant relationship, confirmation of ownership on actual cultivators, limitation of individual holdings, etc.,

ಈ ರೀತಿಯ ಕೆಲವು ಕಲಂಗಳನ್ನು ಜಾರಿಗೆ ಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪ.—ಭೂಮಾಲೀಕರಲ್ಲಿರತಕ್ಕ ಎಕ್ಸೆಸ್ ಲ್ಯಾಂಡನ್ನು ರೆಸ್ಯೂಂ ಮಾಡತಕ್ಕ ಬಗ್ಗೆ ಸರ್ಕಾರದವರು ಕೈಗೊಂಡಿರತಕ್ಕ ಕಾರ್ಯಕ್ರಮಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ ಇದರಲ್ಲಿ ಒಂದು ತೊಂದರೆ ಇದೆ. ಹಾಲಿ ಕೋರ್ಟಿನಲ್ಲಿ ರೆಸ್ಯೂಮಬಲ್ ಮತ್ತು ನಾನ್ ರೆಸ್ಯೂಮಬಲ್ ಕೇಸುಗಳ ಬಗ್ಗೆ ಇನ್ನೂ ಒಂದು ತೀರ್ಮಾನವಾಗಿ ಇತ್ಯರ್ಥಕ್ಕೆ ಬಂದಿಲ್ಲ. ಆದ್ದರಿಂದ ಸಧ್ಯದಲ್ಲಿ ಇದರ ತೀರ್ಮಾನಕ್ಕೆ ಅವಕಾಶವಿಲ್ಲ. ಇದು ನಮ್ಮ ಲಾ ಇಲಾಖೆಯವರ ಒಂದು ಅಭಿಪ್ರಾಯವಾಗಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ವಿಚಾರ ಪರಿಶೀಲನೆ ನಡೆಸುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ನ್ಯಾಯವಾದ ಫೇರ್ ರೆಂಟನ್ನು ನಿಗದಿ ಮಾಡುವುದರಲ್ಲಿ ಇರತಕ್ಕ ತೊಂದರೆಗಳೇನೆಂಬುದು ಸರ್ಕಾರದವರ ಗಮನಕ್ಕೆ ಬಂದಿವೆಯೇ ? ಬಂದಿದ್ದರೆ, ಆ ತೊಂದರೆಯನ್ನು ನಿವಾರಣೆ ಮಾಡತಕ್ಕ ಬಗ್ಗೆ ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ? ಮತ್ತು ಈ ವಿಚಾರದಲ್ಲಿ ಸಾವಿರಾರು ಕೇಸುಗಳು ಇತ್ಯರ್ಥವಾಗದೆ ನಿಂತಿವೆ ಎಂಬುದು ಗೊತ್ತಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಫೇರ್ ರೆಂಟನ್ನು ಫಿಕ್ಸ್ ಮಾಡತಕ್ಕ ವಿಚಾರದಲ್ಲಿ ಜಮೀನಿನ ವಾರ್ಷಿಕ ಗ್ರಾಸ್ ಇನ್‌ಕಂ ಏನಿದೆ ಅದನ್ನು ಕಂಡುಹಿಡಿದು—ಅದು ತರೀ ಜಮೀನಾಗಿದ್ದರೆ ಅದರ ಉತ್ಪತ್ತಿಯ ನಾಲ್ಕನೇ ಒಂದು ಭಾಗ ಅಥವಾ ಖುಷ್ಕಿ ಭೂಮಿ ಆಗಿದ್ದರೆ ಅದರ ಉತ್ಪತ್ತಿಯ ಐದನೇ ಒಂದು ಭಾಗ ಎಂದು ಗೊತ್ತುಮಾಡಲಾಗಿದೆ. ಆದರೆ ಆ ಗ್ರಾಸ್ ಇನ್‌ಕಂ ಎಷ್ಟು ಎಂಬುದನ್ನು ಫಿಕ್ಸ್ ಮಾಡುವುದಕ್ಕೆ ಕಷ್ಟವಾಗಿದ್ದರೂ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಲಕ್ಷ ಐವತ್ತು ಸಾವಿರ ಕೇಸುಗಳು ಈಗಾಗಲೇ ತೀರ್ಮಾನವಾಗಿವೆ. ಆ ಗ್ರಾಸ್ ಇನ್‌ಕಂ ಎಷ್ಟೆಂಬುದನ್ನು ಖಚಿತವಾಗಿ ನಿಗದಿ ಮಾಡುವುದಕ್ಕೆ ಕಷ್ಟವಾಗಿರುವುದರಿಂದ ಅದಕ್ಕೆ ಪ್ರತಿಯಾಗಿ ಭೂಕಂದಾಯದ ಹತ್ತರಷ್ಟನ್ನು ನಿಗದಿ ಮಾಡೋಣವೆಂಬ ಆಲೋಚನೆ ಇದೆ. ಹಿಂದಿನ ಬೊಂಬಾಯಿ ರಾಜ್ಯದಲ್ಲಿ ಕಂದಾಯದ ಮೇಲೆ ರೆಂಟ್ ಅವಲಂಬಿಸಿದೆ.

Sri D. B. KALMANKAR.—I want to know whether Government propose to take some steps immediately so as t) stop eviction of tenants on one account or the other, such as non-payment of rent and other reasons.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ವಿಷಯದಲ್ಲಿ ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ ತಿದ್ದುಪಡಿಯನ್ನು ಇದೇ ಅಧಿವೇಶನದಲ್ಲಿ ಈ ಸಭೆಯ ಮುಂದೆ ತರಬೇಕೆಂಬ ಆಲೋಚನೆ ಸರ್ಕಾರಕ್ಕಿದೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಉತ್ತರದಲ್ಲಿ ಮೊದಲನೇ ತರಗತಿಗೆ ಸೇರಿದ ಜಮೀನು 15 ಎಕರೆಗಳೆಂದು ಹೇಳಿದ್ದೀರಿ. ಅಂದರೆ 15 ಸ್ಟಾಂಡರ್ಡ್ ಎಕರೆಗಳೇ ಎಂಬುದನ್ನು ತಿಳಿಸಬೇಕು ? ಅಲ್ಲಿಂದ (ಬಿ)ಗೆ ಉತ್ತರವಾಗಿ ತಿದ್ದುಪಡಿಯನ್ನು ತರತಕ್ಕ ಉದ್ದೇಶವಿದೆ ಎನ್ನಲಾಗಿದೆ. ಹಾಗಿದ್ದರೆ ಸಣ್ಣ ಭೂಮಾಲೀಕರಿಗೆ ಗೇಣೀದಾರರು ಗೇಣೀ ಕೊಡದೆ ಡಿಫಾಲ್ಟರಾಗಿದ್ದರೆ ಅಂಥವರ ಬಗ್ಗೆ ಏನಾದರೂ ತಿದ್ದುಪಡಿ ತರತಕ್ಕ ಉದ್ದೇಶವಿದೆಯೆ ? ಅಂಥ ತಿದ್ದುಪಡಿ ತರಲು ಕಾನೂನಲ್ಲಿ ಅವಕಾಶವುಂಟೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉತ್ತರದಲ್ಲಿ ಹೇಳಿರತಕ್ಕ 15 ಎಕರೆಗಳು ಕೇಂದ್ರ ಭೂಸುಧಾರಣಾ ಸಮಿತಿ ಕಳುಹಿಸಿರತಕ್ಕ ಸೂಚನೆಯ ಪ್ರಕಾರ ಅದು ಸ್ಟ್ಯಾಂಡರ್ಡ್ ಎಕರೆಗಳು. ಇನ್ನು ಬಾಕಿ ಮಾನ್ಯ ಸದಸ್ಯರೇನು ಕೇಳಿದ್ದಾರೆ ಆ ವಿಚಾರದಲ್ಲಿ ಸೂಕ್ತ ತಿದ್ದುಪಡಿಗಳನ್ನು ತರಬೇಕೆಂಬ ಆಲೋಚನೆ ಸರ್ಕಾರದವರಲ್ಲಿದೆ.

ಶ್ರೀ ಎಸ್. ಬಂಗಾರಪ್ಪ.—ಆಗಲೇ ತಾವು ಉತ್ತರಕೊಡುತ್ತಾ ಬೊಂಬಾಯಿನಲ್ಲಿ ಕಂದಾಯದ ಆರರಷ್ಟನ್ನು ಗೇಣಿಯಾಗಿ ಕೊಡಲಾಗುತ್ತಿದೆ ಎಂದು ಹೇಳಿದ್ದಾಯಿತು. ಆದರೆ 1965ರಲ್ಲಿ ಬೊಂಬಾಯಿ ಇರಿಗೇಷನ್ ಆಕ್ಟ್ ಸೆಕ್ಷನ್ (8)ನ್ನು ತಿದ್ದುಪಡಿ ಮಾಡಿದ್ದರಿಂದ ಆ ಗೇಣೀದಾರರಿಗೆ ಅದರಿಂದ ಭಾರಿ ಪೆಟ್ಟು ಬಿದ್ದಿದೆ ಎಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಆ ಪ್ರದೇಶದ ಗೇಣೀದಾರರಿಗೆ ಅನುಕೂಲ ಮಾಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೊಂಬಾಯಿನಲ್ಲಿ ಆ ಭೂ ಕಂದಾಯದ ಐದರಷ್ಟು ಅಥವಾ 20 ರೂಪಾಯಿಗಳು—ಇವೆರಡರಲ್ಲಿ ಯಾವುದು ಕಡಮೆ ಇರುತ್ತದೋ ಅದನ್ನು ನಿಗದಿ ಮಾಡಬೇಕೆಂದಿತ್ತು. ಅದರಲ್ಲೂ ಇಂಥ ಒಂದು ತೊಂದರೆ ಇದ್ದುದರಿಂದ ಅಂದರೆ ಜಮೀನ್ ಕಂದಾಯ ಮತ್ತು ನೀರು ಕಂದಾಯ ಎಂದು ಪ್ರತ್ಯೇಕವಾದ್ದರಿಂದ ಭೂಕಂದಾಯದ ಐದು ಪಟ್ಟು ಎಂದರೆ ಭೂಕಂದಾಯ 2 ಅಥವಾ ಎರಡೂವರೆ ರೂಪಾಯಿಗಳಿದ್ದರೆ 10 – 15ರೂ. ಗಳಾಯಿತು. ಇದನ್ನೆಲ್ಲಾ ಪರಿಶೀಲನೆ ಮಾಡಿ ಕಂದಾಯದ ಎಷ್ಟು ಪಟ್ಟು ಮಾಡಿದರೆ ಅನುಕೂಲವಾಗುತ್ತದೆ ಎಂಬುದನ್ನು ಈಗ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಮಾನ್ಯ ಮಂತ್ರಿಗಳು ಭೂಸುಧಾರಣಾ ಕಾನೂನು ಈಗಾಗಲೇ ಜಾರಿಗೆ ಬಂದಿದೆಯೆಂದು ಹೇಳಿದರು. ಈ ಭೂಸುಧಾರಣಾಕಾನೂನು ಜಾರಿಗೆ ಬಂದಾಗಿನಿಂದಲೂ ಇದುವರೆಗೆ ಕೆಲವು ಭೂಮಾಲೀಕರು ತಮ್ಮ ಜಮೀನನ್ನು ತಮ್ಮ ಸ್ವಂತ ನೆಂಟರಿಷ್ಟರಿಗೆ, ಬಂಧುಗಳಿಗೆ ಹಂಚಿಕೆ ಮಾಡಿ ಸಬ್‌ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ. ಮತ್ತು ಆ ಜಮೀನನ್ನು ಉಳುಮೆ ಮಾಡುತ್ತಿದ್ದವರಿಗೆ ತೊಂದರೆಯನ್ನುಂಟುಮಾಡಿದ್ದಾರೆ. ಇದರಿಂದ ಗೇಣಿದಾರರು ಅನೇಕವಿಧವಾದ ತೊಂದರೆಗಳಿಗೆ ಈಡಾಗಿದ್ದಾರೆ. ಆದ್ದರಿಂದ ಅಂಥವರನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರದವರು ಏನು ಮಾಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೋಸ್ಕರವೇ ' ತಿದ್ದುಪಡಿ ತರತಕ್ಕಂಥಾ ಯೋಚನೆ ಸರ್ಕಾರದ ಮುಂದೆ ಇದೆ.

**Sri M H. JAYAPRAKASH NARAYAN.**—The Hon. Minister is giving vague answer to my question, Madam. A large number of tenants are put to a lot of difficulty. Their interests have to be protected. I want a specific answer from the hon. Minister.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆಗೆ ಈಗಾಗಲೇ ಎರಡು ಸಾರಿ ಉತ್ತರವನ್ನು ಹೇಳಿದ್ದೇನೆ.

**Sri B. B. SAYANAK.**—Whether the Government is aware that there is a ruling of the Mysore High Court that even when there is a fragment, half of the land should be given to the landlord. What action is going to be taken in this respect ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಪ್ರಶ್ನೆಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಎಚ್. ಎಸ್. ಸಿದ್ದಪ್ಪ.—ಭೂಸುಧಾರಣಾಕಾನೂನು ಬರುವುದನ್ನು ಗಮನದಲ್ಲಿಟ್ಟುಕೊಂಡು ಅದನ್ನು ಜಾರಿಗೆ ತರದಂತೆ ಮಾಡುವುದಕ್ಕೆ ಕೆಲವು ಮಂತ್ರಿಗಳು ಸಹಕಾರ ಸಂಘಗಳನ್ನು ರಚಿಸಿದ್ದಾರೆ. ಆದ್ದರಿಂದ ಅಂಥವರು ಯಾರಾದರೂ ಈಗಿರುವ ಮಂತ್ರಿಮಂಡಲದಲ್ಲಿ ಇದ್ದಾರೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥವರು ಯಾರೂ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ಈ ವಿಷಯದಲ್ಲಿ ಲೀಗಲ್ ಅಡ್ವೈಜ್ ತೆಗೆದುಕೊಳ್ಳುವುದಕ್ಕೆ ಸ್ವಲ್ಪಕಾಲ ಬೇಕಾಗುತ್ತದೆಂದು. ಸ್ವಲ್ಪ ಕಾಲ ಎಂದರೆ ಎಷ್ಟು ಕಾಲ ಎಂದು ನಾವು ಊಹಿಸಬಹುದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆದಷ್ಟು ಜಾಗ್ರತೆ ಈ ಬಗ್ಗೆ ತೀರ್ಮಾನವನ್ನು ಕೈಗೊಳ್ಳುತ್ತೇವೆ.

**MADAM SPEAKER.**—Next question.

ಶ್ರೀ ಎಸ್. ಬಂಗಾರಪ್ಪ.—ಗೇಣಿದಾರರ ಬಗ್ಗೆ ಸೋಷಿಯಲಿಸ್ಟ್ ಪಾರ್ಟಿಯವರು ಬಹಳ ತೀವ್ರವಾದ ಹೋರಾಟವನ್ನು ಮಾಡುತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಆದ್ದರಿಂದ ಈ ಪ್ರಶ್ನೆಯ ಮೇಲೆ ಉಪಪ್ರಶ್ನೆಯನ್ನು ಕೇಳಲು ನಮಗೆ ಇನ್ನೂ ಸ್ವಲ್ಪ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು.—ಈಗಾಗಲೇ ನಾನು ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ. ಆದ್ದರಿಂದ ಹಿಂದಿನ ಪ್ರಶ್ನೆಗೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ.

(ಶ್ರೀ ಎಸ್. ಬಂಗಾರಪ್ಪ, ಶ್ರೀ ಕೋಣಂದೂರು ಲಿಂಗಪ್ಪ, ಮತ್ತು ಶ್ರೀ ಕಾಗೋಡು ತಿಮ್ಮಪ್ಪ ಅವರು ಒಟ್ಟಿಗೆ ಎದ್ದುನಿಂತು ಈ ಪ್ರಶ್ನೆಯಮೇಲೆ ಉಪ ಪ್ರಶ್ನೆ ಕೇಳಲು ಇನ್ನೂ ಕಾಲಾವಕಾಶವನ್ನು ಕೊಡಬೇಕೆಂದು ಪ್ರತಿಭಟಿಸಿದರು.)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷಿಣಿಯವರು ತಮ್ಮ ತೀರ್ಮಾನವನ್ನು ಬದಲಾಯಿಸಿ ಮತ್ತೆ ಹಿಂದಿನ ಪ್ರಶ್ನೆಯ ಬಗ್ಗೆ ಉಪ ಪ್ರಶ್ನೆಯನ್ನು ಕೇಳಲು ನಮಗೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ರೀತಿ ಹಠ ಮಾಡಿದರೆ ಸಾಧ್ಯವಾಗುವುದಿಲ್ಲ.

Sri C. M. ARUMUGHAM.—Madam, normally one hour is set apart for questions. Today's list is the first list of questions presented to the House. There are only two questions and they are of an important nature.

MADAM SPEAKER.—I know the importance of the questions. We have already spent seven minutes on this question. Therefore, I have Called the next question.

ಶ್ರೀ ಎಸ್. ಬಂಗಾರಪ್ಪ.—ಇದು ಗೇಣಿಗಾರರಿಗೆ ಸಂಬಂಧಪಟ್ಟ ಪ್ರಶ್ನೆ. ಮುಂದಿನ ಪ್ರಶ್ನೆಯಲ್ಲಿ ನಾವು ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಉಪಪ್ರಶ್ನೆಗಳನ್ನು ಕೇಳುವುದಕ್ಕಾಗುವುದಿಲ್ಲ. ಆದ್ದರಿಂದ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ತಮ್ಮ ತೀರ್ಮಾನವನ್ನು ಬದಲಾಯಿಸಿ ಹಿಂದಿನ ಪ್ರಶ್ನೆಗೆ ಸಂಬಂಧಪಟ್ಟಹಾಗೆ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು.—ಈಗಾಗಲೇ ನಾನು ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ. ಮತ್ತೆ ಹಿಂದಿನ ಪ್ರಶ್ನೆಗೆ ಹೋಗುವುದಕ್ಕೆ ಆಗುವುದಿಲ್ಲ. ದಯುವಿಟ್ಟು ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಮಾನ್ಯ ಅಧ್ಯಕ್ಷಿಣಿಯವರಲ್ಲಿ ಶಿರಬಾಗಿ ಬೇಡಿ ಕೊಳ್ಳುತ್ತೇನೆ. ನಮಗೆ ಹಿಂದಿನ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು.—ನಾನು ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ. ಮತ್ತೆ ಹಿಂದಿನ ಪ್ರಶ್ನೆಗೆ ಹೋಗುವುದಕ್ಕೆ ಆಗುವುದಿಲ್ಲ. ಮಾನ್ಯ ಸದಸ್ಯರು ದಯುವಿಟ್ಟು ಕುಳಿತುಕೊಳ್ಳಬೇಕು.

Sri M. S. KRISHNAN.—I have a request to make Madam. With respect to your ruling that you have called the next question, I am not here to say that you must call back that question. There are only two questions tabled. Generally the question hour is one full hour and half-an-hour could be allotted to each question, because of the importance of the subject matter. Now, since you have already called the next question, and the next question also pertains to land reforms, I would very much entreat you that under the second question, chances may be given to all members who are really interested in the land reforms—Socialist Party, Communist Party and others. Even if it is beyond seven minutes. I would like the Chair to accommodate the question and allow as many members as possible to put their questions.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ಹಿಂದೆ ಕೂಡ ಶ್ರೀಮಾನ್ ಕೊಠಾವಳೆಯವರು ಈ ಸಭೆಯ ಅಧ್ಯಕ್ಷರಾಗಿದ್ದಾಗ ಇಂಥಾ ಪ್ರಾಮುಖ್ಯವಾದ ವಿಷಯಗಳು ಬಂದಾಗ ಅವರು ತಮ್ಮ ನಿರ್ಧಾರವನ್ನು ಬದಲಾವಣೆಮಾಡಿ ಉಪಪ್ರಶ್ನೆಗಳನ್ನು ಹಾಕುವುದಕ್ಕೆ ಅವಕಾಶ ಮಾಡಿ ಕೊಟ್ಟ ಸಂದರ್ಭ ಇದೆ. ಆದ್ದರಿಂದ ತಾವು ಈಗ ತಮ್ಮ ನಿರ್ಧಾರವನ್ನು ಬದಲಾಯಿಸಿ ಉಪ ಪ್ರಶ್ನೆಯನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಡಿ. ಇದರಿಂದ ಏನೂ ತೊಂದರೆಯಾಗುವುದಿಲ್ಲ. ಮುಂದೆ ಇದನ್ನೇ ಒಂದು ಪ್ರೀಸಿಡೆಂಟಾಗಿ ನಾವು ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು.—ಈಗ ನನ್ನ ನಿರ್ಧಾರವನ್ನು ಮತ್ತೆ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಿ.

Sri C. M. ARUMUGHAM.—We are not prepared to be deprived of the question hour. This is the first day we are having questions during this session. Let us have answers to our questions in a calm atmosphere. Let all Members interested in the subject participate. There are only two questions. Even if the Speaker has called the next question, the Speaker has the discretion to relax and permit the previous question to continue. We have important questions to ask under that question.

ಅಧ್ಯಕ್ಷರು.—ನಾನು ಮತ್ತೆ ನನ್ನ ನಿರ್ಧಾರವನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಬೇಕಾದರೆ ಈ ಪ್ರಶ್ನೆಯ ಮೇಲೆ ಅರ್ಧ ಗಂಟೆಯ ಚರ್ಚೆಗೆ ಅವಕಾಶ ಕೊಡುತ್ತೇನೆ. ಮಾನ್ಯ ಸದಸ್ಯರುಗಳು ಹಾಗೆ ಮಾಡಿ, ಹೀಗೆ ಮಾಡಿ ಎಂದು ಹೇಳುವ ಗೋಜಿಗೆ ಹೋಗ ಬಾರದು. ತಾವು ಹೇಳಿದಂಥ ಮಾತುಗಳನ್ನು ನಾನು ತಾಳ್ಮೆಯಿಂದ ತೆಗೆದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ತೀರ್ಮಾನ ಮಾಡಲು ಅಧ್ಯಕ್ಷರಿಗೆ ದಾರಿ ಮಾಡಿಕೊಡ ಬೇಕೆಂದು ನಾನು ಶ್ರೀ ಚನ್ನಬಸಪ್ಪನವರನ್ನು ಕೇಳಿಕೊಳ್ಳುತ್ತೇನೆ.

Sri H. M. CHANNABASAPPA (Minister for Public Works).—May I make a sudmission ? Rule 32 is clear on that point. It says :

> "Unless the Speaker otherwise directs, the first hour of every day of meeting shall be available for the asking and answering of questions."

So, if the speaker otherwise directs, then that hour will not be availabe for the questions. While I appreciate that the Question is also important and hon. members ars very anxious to know the view points of the Government on this important issue, the Speaker has also directed calling upon the member to put his next Question. Under these circumstances, I would make a submission to the hon. members on the other side that I also share the same anxiety about this imprtant issue. There are a number of occasions wherein we can voice our views and see that our views are also respected by all sides. Therefore, instead of crossing the Speaker's ruling, I would appeal to them to take other opportunities.

Sri C. M. ARUMUGHAM.—We are not here to cross the orders of the Speaker.

Sri H. M. CHANNABASAPPA.—If the hon. member who is a very good parliamentarian, goes on speaking when I am still on my legs, what shall I say ? I would appeal to hon. members, while sharing their feelings, to make use of the opportunities that will be available during the course of the discussion and to raise these issues and have detailed discussion on this point.

Sri M. S. KRISHNAN.- With due respect to the Hon'ble Minister, I regret to say that he has misinterpreted. The Rule says that the first hour will not be available for the questions and answers if the Speaker otherwise directs. I have not seen the Hon'ble Speaker otherwise directing till now. If she had otherwise directed then the point of Hon. Sri Channabasappa would have arisen. One hour has already been allotted for the Question Hour. No other direction has come except that she has called the next question ; we are not questioning that direction, Since the first question is a general question on the implementation of Land Reforms Act and since the second question is a particular question relating to the way in which the Land Reforms Act is sought to be circumvented by some people, if the Speaker were to use her discretion and direct that questions relating to the first question may also be asked and be answered by the Minister. I think we will be satisfied.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಮುಂದಿನ ಪ್ರಶ್ನೆ ತೆಗೆದುಕೊಳ್ಳುವುದಕ್ಕೆ ತಾವು ಅಪ್ಪಣೆ ಕೊಟ್ಟಿದ್ದೀರಿ. ಮೊದಲನೇ ಪ್ರಶ್ನೆಗೆ ನೇರವಾಗಿ ಸಂಬಂಧಪಟ್ಟ ಹಾಗೆ ಪ್ರಶ್ನೆ ಕೇಳಿದರೆ ನನಗೆ ತಿಳಿದಮಟ್ಟಿಗೆ ಉತ್ತರ ಹೇಳುವುದಕ್ಕೆ ಸಿದ್ಧವಾಗಿದ್ದೇನೆ.

## Distribution of landed properties among Relatives

2. Sri S. KARIAPPA (Kanakapura).—

Will the Minister for Revenue be pleased to state.—

(*a*) whether instances have come to the notice of Government where certain big land lords are transferring or distributing their lands among their relatives to circumvent the provisions of the Land Reforms Act ;

(*b*) whether they are also aware that with the help of the officials the landlords have manoeuvred to treat the big plots in their estates as uncultivable ;

(*c*) if so, the steps they have taken in such cases ?

Sri N. HUTCHAMASTHY GOWDA (Minister for Revenue).—

(*a*) No.

(*b*) No.

(*c*) Does not arise.

ಶ್ರೀ ಎಸ್. ಕರಿಯಪ್ಪ.—ಸ್ವಾಮಿ, ಭೂಮಾಲೀಕರು ತಮಗಿರತಕ್ಕಂಥ ಭೂಮಿಯನ್ನು ತಮ್ಮ ಮಕ್ಕಳು ಮರಿಗಳು ಮತ್ತು ಸಂಬಂಧೀಕರ ಹೆಸರಿಗೆ ವಿಭಾಗ ಮಾಡಿ ತಮಗೆ ಹೆಚ್ಚಿಗೆ ಜಮೀನು ಇಲ್ಲದ ಹಾಗೆ ಮಾಡುವುದು ಜನಜನಿತವಾದ ವಿಷಯ. ಇದನ್ನು ತಿಳಿದುಕೊಳ್ಳುವುದಕ್ಕೆ ಮಾನ್ಯ ಮಂತ್ರಿಗಳಿಗೆ ಸರಿಯಾದ ಸಿಬ್ಬಂದಿ ಇಲ್ಲ ಎಂದು ತಿಳಿದುಕೊಳ್ಳೋಣವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಿಬ್ಬಂದಿ ಸಾಕಾದಷ್ಟು ಇದೆ. 18-11-1961 ರಿಂದ 2-10-1965ರವರೆಗೆ ಜಮೀನುಗಳನ್ನು ಅಣ್ಣ ತಮ್ಮಂದಿರಿಗೆ, ಸಂಬಂಧಿಕರಿಗೆ ಮಾಡಿಕೊಳ್ಳುವುದಕ್ಕೆ

ಅವಕಾಶಇತ್ತು. ಆದುದರಿಂದ ಅನೇಕರು ಈ ಕಾಲದ ಉಪಯೋಗ ಮಾಡಿಕೊಂಡು ವಿಭಾಗಳನ್ನು ಮಾಡಿಕೊಂಡಿದ್ದರೆ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ ಸೆಕ್ಷನ್ 14ರ ಪ್ರಕಾರ ಈವರೆಗೆ ಎಷ್ಟು ಜನ ಅರ್ಜಿಗಳನ್ನು ಹಾಕಿದ್ದಾರೆ ? ಎಷ್ಟು ಅರ್ಜಿಗಳು ತೀರ್ಮಾನವಾಗಿವೆ ? ಅದರಲ್ಲಿ ರೆಂಟ್‌ರಿಕವರಿ ಕೇಸುಗಳು ಎಷ್ಟು ? ಮತ್ತು ಆ ಅರ್ಜಿಗಳನ್ನು ತೀರ್ಮಾನ ಮಾಡುವುದಕ್ಕೆ ಇನ್ನು ಎಷ್ಟು ದಿವಸ ಬೇಕಾಗುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿರ್ಧಾರವಾದ ಸಂಖ್ಯೆಯನ್ನು ನಾನು ಹೇಳಲಾರೆ. ಅದಕ್ಕೆ ನೋಟೀಸ್ ಬೇಕು. ಪ್ರತ್ಯೇಕ ಪ್ರಶ್ನೆ ಕೇಳಿದ್ದರೆ ಅದಕ್ಕೆ ಉತ್ತರ ಹೇಳಬಹುದಾಗಿತ್ತು. ಇಷ್ಟು ಹೇಳಬಲ್ಲೆ. ರೆಂಟ್ ರಿಕವರಿ ಕೇಸಿನಲ್ಲಿ 1 ಲಕ್ಷ 50 ಸಾವಿರ ಕೇಸುಗಳು ಈಗಾಗಲೇ ತೀರ್ಮಾನವಾಗಿವೆ.

ಶ್ರೀ ಕಾಗೋಡು ತಿಮ್ಮಪ್ಪ.—ರೆಂಟ್ ರಿಕವರಿ ಬಗ್ಗೆ ಎಷ್ಟು ಕೇಸುಗಳು ಪೆಂಡಿಂಗ್ ಇವೆ ಎಂದು ನಾನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ನೋಟಿಸ್ ಬೇಕು ಎಂದು ನಾನು ಆಗಲೇ ಹೇಳಿದ್ದೇನೆ.

Sri C. M. ARUMUGHAM.—It is stated that the provisions of the Mysore Land Reforms Act are already under implementation. How far is the Act implemented ? By its implementation, how many tenants are benefited so far ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಜನ ಗೇಣಿದಾರರಿಗೆ ಇದರಿಂದ ಲಾಭವಾಗಿದೆ ಎಂದು ನಿರ್ದಿಷ್ಟವಾದ ಅಂಕಿ ಅಂಶಗಳನ್ನು ಹೇಳುವುದಕ್ಕಾಗುವುದಿಲ್ಲ. ಕೆಲವು ಕೇಸುಗಳು ತೀರ್ಮಾನವಾಗಿವೆ, ಇದರಿಂದ ಎಷ್ಟರಮಟ್ಟಿಗೆ ಗೇಣಿದಾರರಿಗೆ ಪ್ರಯೋಜನವಾಗಿದೆ ಎಂದು ನಿರ್ಧಾರವಾಗಿ ಹೇಳಬೇಕಾದರೆ ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

Sri D. B. KALMANKAR.—Has it come to the notice of the Government that in several Hindu joint families bogus partitions are made so as to come within the limits of law and at the same time circumvent the provisions of the Land Reforms Act ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಥಾದ್ದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—1961ನೇ ಇಸವಿಯಲ್ಲಿ ಜಮೀನು ಮಾಲೀಕರು ಅವರ ಜಮೀನುಗಳನ್ನು ಅವರ ಸಂಬಂಧಿಕರುಗಳಿಗೆ ಹಂಚಿ ಬಿಡಬಹುದು ಎಂಬ ಕಾನೂನು ಇದ್ದುದರಿಂದ ಭೂಸುಧಾರಣೆಯನ್ನು ಜಾರಿ ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳಿದಿರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನು ಇರಲಿಲ್ಲ ಎಂದು ಹೇಳಲಿಲ್ಲ. ಪ್ರತಿಬಂಧಕ ಇರಲಿಲ್ಲ ಎಂದು ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರತಿಬಂಧಕ ಇರಲಿಲ್ಲವೆಂದೇ ಇಟ್ಟುಕೊಳ್ಳೋಣ. ನೀವು ಪ್ರತಿಬಂಧಕ ಇರಲಿಲ್ಲ ಎಂದು ಒಪ್ಪಿಕೊಂಡರೆ, ಈಗಲಾದರೂ ಒಂದು ಹೊಸ ಕಾನೂನು ತಂದು 1961ನೇ ಇಸವಿಯಿಂದ ಎಫೆಕ್ಟ್ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಎಲ್ಲಾ ವಿಷಯದಲ್ಲೂ ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಕೊಡುವುದಕ್ಕೆ ತೊಂದರೆ ಆಗಬಹುದು. ಕೆಲವು ವಿಷಯದಲ್ಲಿ ಗೇಣಿದಾರರನ್ನು ಬಲವಂತದಿಂದ ತಪ್ಪಿಸಿದಂಥ ವಿಷಯದ ಬಗ್ಗೆ ಸ್ವಲ್ಪ ದೂರ ಈಗಾಗಲೇ ಯೋಚನೆ ಮಾಡಿದ್ದೇವೆ.

1-3 P.M.

ಶ್ರೀ ಎಸ್. ಬಂಗಾರಪ್ಪ.—ಈಗ ಭೂ ಸುಧಾರಣಾ ಕಾನೂನನ್ನು ತಂದಿರುವುದರ ಉದ್ದೇಶ ಹಿಂದಿನ ರಾಜಮಹಾರಾಜರ ಕಾಲದ ಪದ್ಧತಿ ಇರಬಾರದು ಎಂಬುದಕ್ಕಾಗಿ ಈಗಿರುವ ಕಾನೂನಿನ ಪ್ರಕಾರ ಫಿಸಿಕಲ ಡಿಸಏಬಲ್ಡ್, ವಿಧವೆಯರು, ಸೈನಿಕರು ಮುಂತಾದವರು ಗೇಣಿಗೆ ಕೊಟ್ಟುಕೊಳ್ಳಬಹುದು. ಇದರಿಂದ ಭೂಸುಧಾರಣೆ ಕಾನೂನಿನ ಗುರಿಯೇನಿದೆ ಗೇಣಿ ಪದ್ಧತಿ

(ಶ್ರೀ ಎಸ್. ಬಂಗಾರಪ್ಪ)

ನಿರ್ಮೂಲವಾಗಬೇಕು ಎಂಬುದು ಅದು ಕೆಲವು ಸಂದರ್ಭಗಳಲ್ಲಿ ಗೇಣಿಗೆ ಕೊಡುವುದಕ್ಕೆ ಅವಕಾಶ ಕೊಡುವುದರಿಂದ ನಿಮ್ಮ ಗುರಿ ಸಾಧನೆಯಾಗುವುದಿಲ್ಲ, ಈ ಕಾನೂನಿನ ಉಪಯೋಗವಾಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ಈ ವಿಷಯದಲ್ಲಿ ತಮ್ಮ ಮೂಲಕ ಮಾನ್ಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ಮಾತನ್ನು ಹೇಳುತ್ತೇನೆ. ಎದುರು ಪಕ್ಷದಲ್ಲಿರುವ ಮಾನ್ಯ ಸದಸ್ಯರಿಗೆ ಭೂ ಶಾಸನ ಬಗ್ಗೆ ಎಷ್ಟು ಆಸಕ್ತಿಯಿದೆ ಅಷ್ಟೇ ಆಸಕ್ತಿ ಇರುವ ಪಕ್ಷದ ಸರಕಾರ ಈಗ ಇದೆ ಎಂಬುದನ್ನು ಅವರು ಮನಗಾಣಬೇಕು. ಈ ವಿಷಯದಲ್ಲಿ ಈಗಿರುವ ಕಾನೂನಿನಲ್ಲೇನು ಲೋಪದೋಷವಿದೆ ಅವನ್ನೆಲ್ಲಾ ಹೋಗಲಾಡಿಸಲು ಮುಂದಿನ ಅಧಿವೇಶನದಲ್ಲಿ ಒಂದು ಮಸೂದಾಕಾನೂನನ್ನು ತರುವುದಾಗಿ ಹೇಳಿದೆ. ಗೇಣೀದಾರರನ್ನು ಬಿಡಿಸುವ ವಿಷಯದಲ್ಲಿ ಮಾತ್ರ ಈಗ ಕಾನೂನನ್ನು ತಂದು ಅದನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟು ಜಾರಿಗೆ ತರಬೇಕೆಂಬುದು ಸರಕಾರದ ಉದ್ದೇಶವಾಗಿದೆ.

Sri S. A. PATIL.—The provisions of the Mysore Prevention and Fragmentation of Holdings Act has already come into force in our State. May I know whether the said provisions have been implemented under Section 14 of the Land Reforms Act or not ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೇರವಾಗಿ ಇದು ಪ್ರಶ್ನೆಗೆ ಸಂಬಂಧವಿಲ್ಲದಿದ್ದರೂ ಸಮಗ್ರವಾಗಿ ಭೂ ಸುಧಾರಣೆ ಮಾಡುವಾಗ ಈ ವಿಷಯವನ್ನು ಪರ್ಯಾಲೋಚನೆ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಈಗಿರುವ ಭೂಸುಧಾರಣಾ ಕಾನೂನಿನಲ್ಲಿ ಮುಜರಾಯಿ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳಿಗೆ ವಿನಾಯಿತಿ ಕೊಟ್ಟಿದ್ದೀರಿ. ಈಗ ತರುವ ತಿದ್ದುಪಡಿಯಲ್ಲಿ ಈ ಜಮೀನುಗಳೂ ಭೂಸುಧಾರಣಾ ಕಾನೂನಿಗೆ ಒಳಪಡುವುವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಚಾರ ಆಲೋಚನೆಯಲ್ಲಿದೆ.

ಶ್ರೀ ಬಾಪೂಗೌಡರಾಯಪ್ಪ.—ಯಾವ ಯಾವ ಕುಟುಂಬದಲ್ಲಿ ಭೂಮಿ ಎಷ್ಟಿದೆ, ಹಿಡುವಳಿದಾರರು ಎಷ್ಟಿದ್ದಾರೆ, ಎಷ್ಟು ಎಕರೆ ಜಮೀನು ಜಾಸ್ತಿ ಇದೆ ಎಂಬುದನ್ನು ತಿಳಿಸುವಿರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಬೇಕಾಗಿರುವ ಈ ಅಂಕಿ ಅಂಶಗಳನ್ನು ಸಂಗ್ರಹಿಸುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—18-11-61 ರಿಂದ 2-10-65 ರವರೆಗೆ ಭೂಮಾಲೀಕರು ತಮ್ಮ ಹೆಚ್ಚುವರಿ ಜಮೀನನ್ನು ಮಾರಲು ಅವಕಾಶವಿತ್ತು. ಆಗ ಸರಕಾರ ಏನೂ ಮಾಡುವುದಕ್ಕಾಗಲಿಲ್ಲ ಎಂದು ಹೇಳಿದರು. ಇದು ನಿಜವಾಗಿಯೂ ಸಮಾಜವಾದದ ರೀತಿಯೇ ? ಮಾಲೀಕರಿಗೆ ರಕ್ಷಣೆ ಹೀಗೆ ಕೊಡುವುದಾದರೆ ಗೇಣಿದಾರರಿಗೆ ರಕ್ಷಣೆ ಎಲ್ಲಿದೆ ? ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂ ಮಾಲೀಕರು 3—4 ವರ್ಷಗಳಿಂದ ಕಂದಾಯ ಕೊಡದೆ ಜಮೀನು ಹರಾಜಾಗುತ್ತಿರುವುದರಿಂದ ಗೇಣಿದಾರರಿಗೆ ತೊಂದರೆಯಾಗಿದೆ. ಇದಕ್ಕೆ ರಕ್ಷಣೆ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—18-11-61 ರಿಂದ 2-10-65ರವರೆಗೆ ಭೂ ಮಾಲೀಕರಿಗೆ ಜಮೀನು ವಿಭಾಗ ಮಾಡಿಕೊಳ್ಳುವುದಕ್ಕೆ ಅವಕಾಶವಿತ್ತು ಎಂದು ಹೇಳಲಿಲ್ಲ. ಆಗ ಅದಕ್ಕೆ ಪ್ರತಿಬಂಧಕವಿರಲಿಲ್ಲ. ಆದುದರಿಂದ ಆ ಲೋಪ ನಡೆದಿದೆ. ಈಗ ಉತ್ತರ ಕನ್ನಡ ಜಿಲ್ಲೆಯಲ್ಲಾಗಿರುವ ತೊಂದರೆ, ಮತ್ತಿತರ ಭಾಗಗಳಲ್ಲಿ ಗೇಣಿದಾರರನ್ನು ಹೊರಗೆ ಹಾಕುವ ವಿಷಯವನ್ನು ಸರಕಾರ ಯೋಚಿಸಿ ಅವರಿಗೆ ರಕ್ಷಣೆ ಕೊಡುವ ಬಗ್ಗೆ ಒಂದು ತಿದ್ದುಪಡಿ ಮಸೂದಾಕಾನೂನನ್ನು ತರುತ್ತೇವೆ.

Sri C. M. ARUMUGHAM.—Can we expect from the Government which proclaims socialistic views to bring in revolutionary changes and amend the provisions relating to the ceiling of land ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಡೀ ರಾಜ್ಯದ ಹಿತದೃಷ್ಟಿಯಿಂದ ಕ್ರಾಂತಿಕಾರಕವಾದ ಬದಲಾವಣೆ ಮಾಡುವ ಉದ್ದೇಶವಿದೆ.

ಶ್ರೀ ಶರಣಪ್ಪ.—ಕಾನೂನಿಗೆ ವಿರೋಧವಾಗಿ ವಿಭಾಗ ವಗೈರೆ ಮಾಡಿಕೊಂಡು ಕಾನೂನಿನ ನಿಯಮ ಉಲ್ಲಂಘಿಸಿದ್ದರೆ ಅದನ್ನು ಪರಿಶೀಲಿಸುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಪ್ಪಿತಸ್ಥರಿಗೆ ಕಾನೂನು ಪ್ರಕಾರ ಯಾವರೀತಿ ಶಿಕ್ಷೆ ಮಾಡಬಹುದೋ ಅದರಂತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ತಾರೇಗೌಡ.—ಮುಜರಾಯಿ ಜಮೀನನ್ನು ಜಮೀನಿಲ್ಲದಿರುವವರಿಗೆ ಕೊಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರು ಆ ಜಮೀನಿನ ಗೇಣಿದಾರರೋ ಅವರಿಗೆ ಆ ಜಮೀನು ಸಲ್ಲಬೇಕು ಎಂಬುದು ನನ್ನ ಭಾವನೆ.

ಶ್ರೀ ಎಸ್. ಎಂ. ಲಿಂಗಪ್ಪ.—ಮಾನ್ಯ ಸಚಿವರು ಉತ್ತರ ಕೊಡುವಾಗ ಗೇಣಿದಾರರ ಬಗ್ಗೆ ಅವರ ಪಕ್ಷಕ್ಕೆ ಬಹಳ ಕಳಕಳಿ ಇದೆ ಎಂದು ಹೇಳಿದರು, ಬಹಳ ಸಂತೋಷ. ಅದು ಕಾಣುವಂತಿರಬೇಕು. ಮೊದಲನೆಯ ತರಗತಿಯ ಭೂಮಿಯು 15 ಎಕರೆಗಳಿಗೆ ಮೀರದಂತೆ ನೋಡಿಕೊಳ್ಳಬೇಕೆಂದು ಕೇಂದ್ರ ಸರಕಾರ ತಿಳಿಸಿರುವುದಾಗಿ ಉತ್ತರದಲ್ಲಿದೆ. ಮೊದಲನೆ ತರಗತಿ ಭೂಮಿ ಎಂದು ವಿಂಗಡಿಸುವುದಕ್ಕೆ ಆಧಾರವೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವರ್ಷವೆಲ್ಲಾ ಖಾಯಂ ನೀರಿನ ಸೌಕರ್ಯವಿದ್ದು ಎರಡು ಭತ್ತದ ಬೆಳೆ ಬೆಳೆಯುವ ಜಮೀನಿಗೆ ಸ್ಟ್ಯಾಂಡರ್ಡ್ ಎಕರೆ ಎಂಬುದು ಅರ್ಥ.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರ ಸರಕಾರದವರು ಭೂ ಪರಿಮಿತಿ ವಿಷಯವಲ್ಲದೆ ಬೇರೆ ಭೂ ಸುಧಾರಣೆಗೆ ಸಂಬಂಧಪಟ್ಟ ಗೇಣಿದಾರರ ವಿಷಯ, ರೆಂಟ್, ಫ್ರಾಗ್‌ಮೆಂಟೇಷನ್, ಪ್ಲಾಂಟೇಷನ್ನಿಗೆ ವಿನಾಯಿತಿ, ಮುಜರಾಯಿ ಜಮೀನು ವಿನಾಯಿತಿ ಮುಂತಾದ ಇತರ ವಿಷಯಗಳ ಬಗ್ಗೆ ಕೂಡ ಶಿಫಾರಸು ಮಾಡಿರುವರೇ ? ಹಾಗೆ ಮಾಡಿದ್ದರೆ ಯಾವ ಶಿಫಾರಸನ್ನು ಜಾರಿಗೆ ತರಲು ಸಾಧ್ಯವೆಂಬುದನ್ನು ಹೇಳುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭೂ ಸುಧಾರಣೆ ರಾಜ್ಯ ಸರಕಾರಕ್ಕೂ ಸಂಬಂಧಪಟ್ಟಿರುವುದರಿಂದ ಅವರ ಅಭಿಪ್ರಾಯ ತಿಳಿಸಿದ್ದಾರೆ. ಎಲ್ಲಾ ವಿಷಯಗಳಲ್ಲೂ ಅವರು ಸಲಹೆ ಮಾಡಿದ್ದಾರೆ. ಅದನ್ನು ಲಕ್ಷ್ಯಕ್ಕೆ ತೆಗೆದುಕೊಂಡು ಅಗತ್ಯವಾಗಿ ಯಾವುದನ್ನು ಜಾರಿಗೆ ತರಬೇಕು ಅಥವ ಹೆಚ್ಚು ಕಡಮೆ ಮಾಡಬೇಕು ಅಥವ ಹೇಗೆ ಮಾಡಬೇಕು ಎಂಬುದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟ ವಿಷಯ. ಇದನ್ನೆಲ್ಲಾ ಪರಿಶೀಲಿಸಿ ಶಾಸನಸಭೆಯ ಮುಂದೆ ಮಸೂದೆ ತರಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಕೇಂದ್ರಸರ್ಕಾರದ ರೆಕಮೆಂಡೇಷನ್ಸ್ ಸಭೆಯ ಮುಂದೆ ಮಂಡಿಸಲಾಗುವುದೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಲ್ಪ ಆಲೋಚನೆ ಮಾಡಿ ಹೇಳುತ್ತೇನೆ.

ಶ್ರೀ ಬಿ. ಕೆ. ಕೋಳಿವಾಡ.—ರೆಂಟ್ ರಿಕವರಿ ಮಾಡುವುದಕ್ಕೆ ಒಂದೇ ವರ್ಷದ ಲಿಮಿಟೇಷನ್ ಇದೆ. ಅದರ ಸಲುವಾಗಿ ಕೇಸುಗಳನ್ನು ಹಾಕಿದರೆ ಅದು ಡಿಸ್‌ಪೋಸ್ ಆಗುವುದರೊಳಗೆ ಮತ್ತೊಂದು ಕೇಸು ಹಾಕಬೇಕಾಗುತ್ತದೆ. ಆದ್ದರಿಂದ ಲಿಮಿಟೇಷನ್ ಅವಧಿಯನ್ನು ಮೂರು ವರ್ಷ ಮಾಡುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರೆಂಟ್ ರಿಕವರಿ ಮಾಡುವ ಪ್ರಶ್ನೆಯಲ್ಲಿ ಬಹಳ ಕಾಂಪ್ಲಿಕೇಷನ್ಸ್ ಇವೆ ಎಂದು ನಾನು ಆಗಲೇ ಹೇಳಿದೆ. ಭೂಮಿಯಲ್ಲಿ ಬರತಕ್ಕ ಒಟ್ಟು ಆದಾಯ ಅಂದರೆ ಗ್ರಾಸ್ ಇನ್‌ಕಂ ತೆಗೆದುಕೊಂಡು ಅದರಲ್ಲಿ ಇಷ್ಟನೇ ಒಂದು ಭಾಗ ಎಂದು ನಿರ್ಧಾರ ಮಾಡಿರುತ್ತಾರೆ. ಗ್ರಾಸ್ ಇನ್‌ಕಂ ಎಷ್ಟು ಎನ್ನುವುದನ್ನು ಅನೇಕ ಸ್ಥಳಗಳಲ್ಲಿ ನಿಗದಿ ಮಾಡಿಲ್ಲ, ಅದರ ಬೆಲೆ ಎಷ್ಟು ಎನ್ನುವುದೂ ಮಾರ್ಕೆಟಿಂಗ್ ಆಫೀಸರ್ ನಿಗದಿ ಮಾಡಿಲ್ಲ. ಈ ಕಾರಣದಿಂದರೇ ರೆಂಟ್ ರಿಕವರ್ ಆಗದಿದ್ದರೆ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು ಎಂದು ಇರುವುದರಿಂದ ಆ ತೊಂದರೆಯನ್ನು ತಪ್ಪಿಸಲು, ಗೇಣಿದಾರರನ್ನು ಹೊರಹಾಕುವುದನ್ನು ತಪ್ಪಿಸುವ ಉದ್ದೇಶದಿಂದಲೇ ಈ ಅಧಿವೇಶನದಲ್ಲಿಯೇ ಒಂದು ಮಸೂದಾ ಕಾನೂನು ತರುತ್ತಿದ್ದೇವೆ ಎಂದು ನಾನು ಆಗಲೇ ತಿಳಿಸಿದೆ.

ಶ್ರೀ ಎಚ್. ಜಿ. ಚನ್ನಪ್ಪ.—ದೇವಸ್ಥಾನಗಳ ಜಮೀನನ್ನು ಸರ್ಕಾರದವರೇ ತೆಗೆದುಕೊಂಡು ಜಮೀನಿಲ್ಲದೆ ಇರತಕ್ಕ ಬಡವರಿಗೆ ಕೊಡುವ ಅಭಿಪ್ರಾಯವಿದೆಯೇ ಅಥವಾ ದೊಡ್ಡ ಜಮೀನ್ದಾರರಿಗೇ ಆ ಜಮೀನನ್ನು ಕೊಡುವ ಅಭಿಪ್ರಾಯವಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನೇಕ ದೇವಸ್ಥಾನಗಳ ಜಮೀನನ್ನು ಗೇಣಿದಾರರು ಮಾಡುತ್ತಿದ್ದಾರೆ. ಯಾವ ಯಾವ ಜಮೀನು ಗೇಣಿದಾರರು ಮಾಡುತ್ತಿದ್ದಾರೆ ಅದು ಗೇಣಿದಾರರಿಗೇ ಕೊಡಬೇಕೆನ್ನುವುದು ಸರ್ಕಾರದ ಅಭಿಪ್ರಾಯ.

Sri P. A. PAWASHE.- How many surrender applications have been filed so far, how many are allowed and how many are rejected and what is the extent of land that the landlords have taken possession so far ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಂಕಿ ಅಂಶಗಳನ್ನು ಸಂಗ್ರಹ ಮಾಡಬೇಕಾಗಿರುವುದರಿಂದ ಅದಕ್ಕೆ ನೋಟಿಸ್ ಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಭೂ ಸುಧಾರಣಾ ಕಾನೂನು ಜಾರಿಗೆ ಬಂದರೆ ಎಷ್ಟು ಜಮೀನು ಬಿಡುಗಡೆಯಾಗುತ್ತದೆ ಮತ್ತು ಹಂಚುವುದಕ್ಕಾಗುತ್ತದೆ ಎನ್ನುವುದರ ಒಗ್ಗೆ ಅಂದಾಜು ಮಾಡಲಾಗಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಎಷ್ಟು ಜಮೀನು ಸರ್ಕಾರದ ವಶಕ್ಕೆ ಬರುತ್ತದೆ ಎಂದು ಈಗಲೇ ಹೇಳುವುದು ಕಷ್ಟ. ಅದರ ಬಗ್ಗೆ ಅಂಕಿ ಅಂಶಗಳು ಈಗ ನನ್ನಲ್ಲಿಲ್ಲ.

Sri H. S. SIDDAPPA.—May I know why coffee estates have been left out from the purview of this Act ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕಾರಣ ನನಗೆ ಗೊತ್ತಿಲ್ಲ. ಕಾಫಿ ಮತ್ತು ಪ್ಲಾಂಟೇಷನ್ ಬೆಳೆಗಳಿಗೆ ವಿನಾಯಿತಿಯನ್ನು ಕಾನೂನಿನಲ್ಲಿ ಕೊಟ್ಟಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಅದನ್ನು ತಿದ್ದುಪಡಿ ಕಾನೂನಿನಲ್ಲಿ ಸೇರಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅದನ್ನು ಈಗಲೇ ಹೇಳುವುದಕ್ಕಾಗುವುದಿಲ್ಲ.

Sri D. B. KALMANKAR.—In the amending bill proposed, what will be the unit ? Will it be person or family ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದು ಮಸೂದಾ ಕಾನೂನು ತಯಾರಾದ ಮೇಲೆ ಹೇಳುವ ವಿಷಯ.

ಶ್ರೀ ಎಸ್. ಬಂಗಾರಪ್ಪ.—ಉಳುವವನೇ ಹೊಲದ ಒಡೆಯನಾಗಬೇಕು ಎನ್ನುವ ಭಾವನೆ ತಮ್ಮಲ್ಲಿ ಬಂದಿದೆ. ಮೈಸೂರು ರಾಜ್ಯದಲ್ಲಿ ಭೂ ಮಾಲೀಕರ ಸಂಘ, ಜಮೀನ್ದಾರರ ಸಂಘ, ಸಣ್ಣ ಹಿಡುವಳಿದಾರರ ಸಂಘ, ಹೀಗೆ ಜಮೀನ್ದಾರರಿಗೆ ಸಂಬಂಧಪಟ್ಟ ಸಂಸ್ಥೆಗಳವೆ. ಇದಕ್ಕೆ ಸಂಬಂಧಪಟ್ಟ ಕೆಲವು ಜನ ಮಂತ್ರಿಗಳಾಗಿ ಮಂತ್ರಿಮಂಡಲದಲ್ಲಿದ್ದಾರೆ ಮತ್ತು ಕೆಲವರು ಶಾಸನಸಭಾ ಸದಸ್ಯರಾಗಿದ್ದಾರೆ. ಈ ದೃಷ್ಟಿಯಿಂದ ತಮ್ಮ ಮೇಲೆ ಒತ್ತಡವನ್ನು ತರುವುದರ ಮೂಲಕ ಭೂ ಸುಧಾರಣಾ ಕಾನೂನಿಗೆ ಸರಿಯಾದ ತಿದ್ದುಪಡಿಯನ್ನು ತರುವುದಕ್ಕೆ ವಿರೋಧವಾಗಿದ್ದಾರೆ ಎನ್ನುವ ವಿಷಯ ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಸದಸ್ಯರು ಹೇಳುವುದರಲ್ಲಿ ಸತ್ಯಾಂಶವಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸಮಾಜವಾದದ ಮಂತ್ರಿ ಮಂಡಲದ ಮೂರು ಜನ ಮಂತ್ರಿಗಳು ಭೂ ಸುಧಾರಣೆ ತತ್ವವನ್ನು ಒಪ್ಪಿ ತಮಗೆ ಇದ್ದ ಜಮೀನನ್ನು ಕಳೆದ 15 ದಿವಸಗಳಲ್ಲಿ ಬಡವರಿಗೆ ಹಂಚಿದ್ದಾರನ್ನುವುದು ನಿಜವೇ ? ಮಾನ್ಯ ಮಂತ್ರಿಗಳಾದ ಚನ್ನಬಸಪ್ಪನವರು, ಹುಚ್ಚಮಾಸ್ತಿ ಗೌಡರು ಮತ್ತು ಬದರೀ ನಾರಾಯಣ್ ಅವರು ಈ ರೀತಿ ಹಂಚಿದ್ದಾರೆನ್ನುವುದು ನಿಜವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಸದಸ್ಯರು ಏನು ಹೇಳಿದರು ಅದೆಲ್ಲ ಅವರ ಊಹೆ ಸ್ವಾಮಿ.

Smt. WINNIFRED F. FERNANDES.—If concrete instances where the landlords have distributed their lands to their relatives are given, what action will be taken by the Government ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕಾನೂನು ಪ್ರಕಾರವಾಗಿ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ ಸ್ವಾಮಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರ ಹೇಳುವಾಗ ಪ್ಲಾಂಟೇಷನ್ನುಗಳನ್ನು ಅಳವಡಿಸುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಕಾನೂನು ಮಾಡುವಾಗ ಮೂರು ನಾಲ್ಕು ಸಾವಿರ ಎಕರೆ ಇರುವಂಥ ಪ್ಲಾಂಟೇಷನ್‌ನವರಿಗೆ ಕೂಡ ಅನ್ವಯಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕಾನೂನಿನಲ್ಲಿ ಅಳವಡಿಸುವುದಕ್ಕಾಗುವುದಿಲ್ಲ ಎಂದು ಹೇಳಲಿಲ್ಲ. ಪ್ಲಾಂಟೇಷನ್ ಬೆಳೆಗಳಿಗೆ ವಿನಾಯಿತಿ ಇತ್ತು. ಸಮಗ್ರವಾದ ಭೂ ಕಾಯಿದೆ ತರುವಾಗ ಅದನ್ನು ಆಲೋಚನೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಅಖಿಲ ಭಾರತ ಕಾಂಗ್ರೆಸ್ಸಿನ ದಂಶಾಂಶ ಕಾರ್ಯಕ್ರಮದ ಪ್ರಕಾರ ಎಲ್ಲ ಗೇಣಿದಾರರು ಮಾಡುವ ಜಮೀನನ್ನು ನಾನ್ ರೆಸ್ಯೂಮಬಲ್ ಎಂದು ಮಾಡುತ್ತೇವೆ, ಅದರಲ್ಲಿ ಆಸಕ್ತಿ ಇದೆ ಎಂದು ಹೇಳುವಾಗ, ಅದರ ಪ್ರಕಾರ ಮುಂದೆ ಬರುವ ಭೂ ಸುಧಾರಣಾ ತಿದ್ದುಪಡಿ ಕಾಯಿದೆಯಲ್ಲಿ ಅಳವಡಿಸುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದು ಅಗತ್ಯವಾಗಿ ಆಲೋಚನೆ ಮಾಡತಕ್ಕ ವಿಷಯ.

ಶ್ರೀ ಗೋಪಿನಾಥ ಸಾಂಡ್ರ.—ಭೂ ಸುಧಾರಣಾ ತಿದ್ದುಪಡಿ ಕಾಯಿದೆ ಬರುವುದಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದಕ್ಕೆ ಮೊದಲೇ ಒಂದು ಆರ್ಡರ್ ಹೊರಡಿಸಿ ಬೇರೆ ಯಾರೂ ತಮ್ಮ ಹೆಚ್ಚುವರಿ ಜಮೀನು ಟ್ರಾನ್ಸ್‌ಫರ್ ಮಾಡಬಾರದು ಎಂದು ಆದೇಶ ಕೊಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಪ್ರಸಕ್ತ ಅಧಿವೇಶನ ಮುಗಿಯುವುದರೊಳಗೇ ಒಂದು ತಿದ್ದುಪಡಿಯನ್ನು ತರಬೇಕೆಂಬುದು ಸರ್ಕಾರದ ಯೋಚನೆ.

ಶ್ರೀ ಗಟ್ಟಿ ಚಂದ್ರಶೇಖರ್.—ಭೂಸುಧಾರಣೆ ಕಾನೂನು ಕಾಲ ವಿಳಂಬವಾಗಿ ಬರುತ್ತಿರುವುದರಿಂದ ಭೂ ಮಾಲೀಕರು ಯಾರಿಗೂ ತಮ್ಮ ಭೂಮಿಯನ್ನು ಮಾರಬೇಕಾಗಿಲ್ಲ ಎನ್ನುವುದರ ಬಗ್ಗೆ ಒಂದು ಆರ್ಡಿನೆನ್ಸ್ ತರುತ್ತಿರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಪ್ರಶ್ನೆಗೆ ನಾನು ಬೇಕಾದಷ್ಟು ಸಲ ಈಗಾಗಲೇ ಉತ್ತರ ಹೇಳಿದ್ದೇನೆ. ಗೇಣೀದಾರರಿಗೆ ಇರುವ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕಾಗಿಯೇ ಒಂದು ತಿದ್ದುಪಡಿ ಮಸೂದೆ ತರುವುದರಲ್ಲಿದ್ದೇವೆ.

AN HON. MEMBER.—We are told by the Hon. Minister that Government proposes to bring a comprehensive amending Bill. But in the meanwhile decrees are being passed against the tenants and execution and attachment of property is being taken and the tenants are being harassed. I want to know the steps the Government proposes to take to protect the tenants till the amending Bill is brought ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಮಗ್ರವಾದ ಯೋಜನೆ ಮಾಡುವುದಕ್ಕಾಗಿ ಮುಂದಿನ ಅಧಿವೇಶನದಲ್ಲಿ, ಇಲ್ಲವೇ ಅದಷ್ಟು ಬೇಗ ಇಂತಹ ಒಂದು ತಿದ್ದುಪಡಿ ಮಸೂದೆ ತರುವುದಕ್ಕೆ ಸರಕಾರದವರು ಪ್ರಯತ್ನ ಮಾಡುತ್ತಿದ್ದಾರೆ.

Sri S. A. PATIL.—The Hon. Minister was pleased to state that the tenancy rights of the tenants who are cultivating the agricultural lands which are under the management of charitable institutions would be safeguarded. If it is so, what would be the effect of Section 117 of the Mysore Land Reforms Act, 1961 because the provisions of section 117 of the said Act will apply only to section 43 ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಇರತಕ್ಕ ಭೂಸುಧಾರಣೆ ಕಾಯಿದೆಯ ಪ್ರಕಾರ ದೇವಸ್ಥಾನಗಳು ಹಾಗೂ ಇನ್ನಿತರ ಚಾರಿಟಬಲ್ ಇನ್ಸ್‌ಟಿಟ್ಯೂಷನ್‌ಗಳ ಬಳಿ ಇರುವ ಜಮೀನುಗಳನ್ನು ಅಲ್ಲಿನ ಗೇಣೀದಾರರುಗಳಿಗೇ ಕೊಡುವ ಉದ್ದೇಶವಿರುವುದರಿಂದ ಇದಕ್ಕೆ ಯಾವ ರೀತಿ ತಿದ್ದುಪಡಿ ತರಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ ಮತ್ತು ನಾನು ಆಗಲೇ ಹೇಳಿದಂತೆ ಇಂತಹ ಕಾನೂನಿನ ಪರಿಣಾಮ ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು ಮತ್ತು ಗೇಣೀದಾರರಿಗೆ ಇರುವ ತೊಂದರೆಗಳನ್ನು ತಪ್ಪಿಸಿ ಅವರಿಗೆ ಇರುವ ಹಕ್ಕುಗಳನ್ನು ಕಾಪಾಡಲು ಪ್ರಯತ್ನ ಮಾಡುತ್ತಿದ್ದೇವೆ.

Sri J. P. SARWESH.—The big landlords who have got surplus lands are selling away their surplus lands. I want to know as to who will be the ultimate sufferer whether the buyer or the seller?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕಾನೂನು ಪ್ರಕಾರ ಅವರಿಗೆ ಶಿಕ್ಷೆಯಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಭೂಸುಧಾರಣೆ ವಿಷಯದ ಬಗ್ಗೆ ಮಾತನಾಡುತ್ತಿರುವುದರಿಂದ ಇದರಲ್ಲಿ ಬರುವ ಕೃಷಿ ಕಾರ್ಮಿಕರು ಏನಿದ್ದಾರೆ, ಇವರ ವೇತನ ಮತ್ತು ಅವರಿಗಿರುವ ಪರಿಸ್ಥಿತಿಯನ್ನು ಯೋಚನೆ ಮಾಡಲು ಇದರಲ್ಲಿ ಏನು ಒಂದು ಅಂಶವೂ ಇಲ್ಲ. ಇದರ ಬಗ್ಗೆ ಕೂಡ ಸಮಾಲೋಚನೆ ಮಾಡಿ ಈಗ ಕೂಲಿ ಮಾಡುವ ಜನ ಎಂದರೆ ಹಿಂದುಳಿದ ವರ್ಗದವರು ಮತ್ತು ಹರಿಜನರು ಹಾಗೂ ಗಿರಿಜನರು ಇವರ ಬಗ್ಗೆ ಕೂಡ ಸರ್ಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದು ಪ್ರತ್ಯೇಕವಾದ ಕಾನೂನು ಕೆಳಗೆ ಬರುತ್ತದೆ. ಆ ಕಾನೂನು ಮಾಡುವ ಸಂದರ್ಭದಲ್ಲಿ ಇದನ್ನು ಆಲೋಚನೆ ಮಾಡಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಭೂಸುಧಾರಣೆಯನ್ನು ಜಾರಿಗೆ ಕೊಡುವುದಕ್ಕೆ ಮುಂಚೆ ಇಲ್ಲಿರುವ ಶಾಸಕರು ಹಾಗೂ ಮಂತ್ರಿಗಳ ಹೆಸರಿನಲ್ಲಿರುವ ಜಮೀನಿನ ಲೆಕ್ಕವನ್ನು ಸರ್ಕಾರದವರು ತೆಗೆದುಕೊಳ್ಳಲು ಸಾಧ್ಯವಿದೆಯೇ ?

(ಉತ್ತರವಿಲ್ಲ)

Sri D. B. KALMANKAR.—I want to know the criteria that will be adopted by Government while determining the equations between the standard acre and other classes of lands?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಲಿಖಿತ ಮೂಲಕವಾಗಿ ಇಲ್ಲಿರುವ ಪ್ರಶ್ನೆಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಎಲ್ಲ ವಿವರಗಳೂ ಸಿಗುತ್ತವೆ. ಇದರಲ್ಲಿ ಏಳು ವರ್ಗದ ಭೂಮಿಗೆ ದಾಮಾಷಾ ಪ್ರಕಾರ ಯಾವ ರೀತಿ ಕೊಡಬೇಕು ಎನ್ನುವುದನ್ನೂ ಆಗಲೇ ಹೇಳಿದ್ದೇನೆ.

ಶ್ರೀ ಗಟ್ಟಿ ಚಂದ್ರಶೇಖರ್.—ಭೂಸುಧಾರಣೆ ಜಾರಿಗೆ ಬಂದ ಮೇಲೆ ಭೂಮಿಯ ಮೇಲಿರುವ ಹಕ್ಕನ್ನು ಗೇಣೀದಾರರಿಗೇ ಕೊಡುತ್ತೀರಾ ? ಎರಡನೇ ಪ್ರಶ್ನೆ ಈ ಕಾನೂನಿನ ಸೆಕ್ಷನ್ 14(1) ರ ಪ್ರಕಾರ ರಿಸಂಪ್‌ಷನ್ ಮಾಡಲು ಎಲ್ಲೂ ಸಾಧ್ಯವಿಲ್ಲ. ಆದುದರಿಂದ ಈ ಸೆಕ್ಷನ್ 14ನ್ನು ಸ್ಕ್ರಾಪ್ ಮಾಡಲು ಲಕ್ಷ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಇದಕ್ಕೆ ಉತ್ತರವನ್ನು ಈಗಾಗಲೇ ಹತ್ತು ಸಾರಿ ಹೇಳಿದೆ. ಸಮಗ್ರವಾಗಿ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ಮಾಡುವ ಸಂದರ್ಭದಲ್ಲಿ ಇವೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ.

Sri S. M. YAHYA.—What are the factors that would be taken into consideration while determining a standard acre ; Is there any rational basis for determination of a standard acre ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗಿರತಕ್ಕ ಕಾನೂನು ಇವೆಲ್ಲವನ್ನೂ ಡಿಫೈನು ಮಾಡಿದೆ. ಇದನ್ನು ಇನ್ನೂ ಬದಲಾಯಿಸಿ ಯಾವ ತರಹ ಮಾಡಬೇಕು ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಅದನ್ನೂ ಯೋಚನೆ ಮಾಡಬಹುದು.

ಶ್ರೀ ಗುರುಸಿದ್ದಪ್ಪ.—ಕೆಲವು ಗೇಣೀದಾರರು ಅವರ ಮಾಲೀಕರಿಂದ ಭೂಮಿಯನ್ನು ಕೊಂಡು ಕೊಂಡಿದ್ದಾರೆ. ಇಂತಹವರ ಹಕ್ಕನ್ನು ಕಾಪಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನು ಪ್ರಕಾರ ಪರಿಹಾರ ಕೊಡಬೇಕಾದರೆ ಅದರಂತೆ ಕೊಡಬಹುದು.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

ಶ್ರೀ ಶರಣಪ್ಪ.—ಮಾನ್ಯ ಅಧ್ಯಕ್ಷರಲ್ಲಿ ನನ್ನದೊಂದು ವಿನಂತಿ. ನಾನು ರಾಯಚೂರಿನಲ್ಲಿ ನಡೆದ ಬೆಂಕಿ ದುರಂತದ ಬಗ್ಗೆ ಒಂದು ಅಲ್ಪ ಕಾಲಾವಧಿಯ ಪ್ರಶ್ನೆ ಕಳುಹಿಸಿದ್ದೆ. ಅದು ಇನ್ನೂ ಇಲ್ಲಿ ಬರಲಿಲ್ಲ. ಇದರ ಬಗ್ಗೆ ಏನಾಯಿತು ಎಂದು ತಮ್ಮಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದನ್ನು ವಿಚಾರ ಮಾಡುತ್ತೇನೆ.

2-00 P.M.

## Calling Attention to a Matter of Urgent Public Importance *re* : Closure of Bhadigunda Mines.

Sri ABDUL KHUDDUS ANWAR (Bhadravathi).—I had given notice of Call Attention with regard to the closure of Bhadigunda Mines. Now that the matter has been decided by the Government, I do not like to press it. I thank the Government for having given to the workers a sum of Rs. 35,000 as *ex-gratia* payment.

## Motion of Thanks to the Governor's Address

(*Debate Continued*)

Sri BAPURAO PATIL (Aurad).—(*Hindi*)

†ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಸಭಾಪತಿಗಳೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಒಂದೆರಡು ವಿಷಯಗಳನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಪ್ರಪ್ರಥಮವಾಗಿ ತಮಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಅನೇಕ ವಿಷಯಗಳ ಹಾಗೂ ಸಮಸ್ಯೆಗಳ ಮೇಲೆ ಮಾತನಾಡುವ ಇಚ್ಛೆ ಇದ್ದರೂ ನಾನು ಮೀನುಗಾರರ ಸಮಾಜಕ್ಕೆ ಸೇರಿದವಳಾದ್ದರಿಂದ, ಮೀನುಗಾರರ ಹಾಗೂ ಮೀನುಗಾರಿಕೆ ಉದ್ಯಮದಲ್ಲಿ ಸ್ವಲ್ಪ ಮಟ್ಟಿಗೆ ಪರಿಜ್ಞಾನ ಉಳ್ಳವಳಾಗಿದ್ದರಿಂದ ಈ ಮೀನುಗಾರಿಕೆ ಬಗ್ಗೆ ಒಂದೆರಡು ಮಾತನಾಡಲು ಇಚ್ಛಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮೀನುಗಾರಿಕೆಯ ಸರ್ವತೋಮುಖವಾದ ಅಭಿವೃದ್ಧಿಗೆ ಒಂದು ಯೋಜನೆಯನ್ನು ಸಿದ್ಧಪಡಿಸಲಿದ್ದು ಮುಂದಿನ ವರ್ಷದಲ್ಲಿ ಅದನ್ನು ಕಾರ್ಯಗತ ಮಾಡುವ ಆಶ್ವಾಸನೆ ಕೊಟ್ಟಿದ್ದಕ್ಕಾಗಿ ನಾನು ಮೀನುಗಾರರ ಸಮಾಜದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಮೈಸೂರು ರಾಜ್ಯ ಕರಾವಳಿಯಲ್ಲಿ ಹೆಚ್ಚು ಕಡಿಮೆ ಒಂದು ಸಾವಿರ ಸಣ್ಣ ಯಾಂತ್ರಿಕ ದೋಣಿಗಳಿದ್ದು, ಅವುಗಳು ಬರೀ ಏಳು ಮೈಲಿ ದೂರಕ್ಕೆ ಹೋಗಿ ಮೀನು ಹಿಡಿಯುವುದಕ್ಕೆ ಸಾಧ್ಯವಿತ್ತು. ಅದರಲ್ಲೂ ಈಗ್ಗೆ ಎರಡು ವರ್ಷಗಳಿಂದ ನಾವು ವಿದೇಶಿ ವಿನಿಮಯ ಗಳಿಸುತ್ತಿರುವ 'ಸಿಗಡಿ ಮೀನಿನ' ಕೊರತೆಯಿಂದಾಗಿ ಬಡ ಮೀನುಗಾರರು ಬಹಳ ಸಂಕಷ್ಟದಲ್ಲಿದ್ದಾರೆ. ಆ ದೋಣಿಗಳ ಮೇಲೆ ಅವರು ಬ್ಯಾಂಕುಗಳಿಂದ ಮತ್ತೆ ಸಹಕಾರ ಸಂಘಗಳಿಂದ ಸಾಲ ಪಡೆದುಕೊಂಡಿರುವುದರಿಂದ ಅದರ ಅಸಲು ಕಟ್ಟುವುದು ಬಿಟ್ಟು ಬಡ್ಡಿ ಕಟ್ಟುವುದಕ್ಕೂ ಕೂಡ ಅವರಿಂದ ಸಾಧ್ಯವಾಗಿಲ್ಲ. ಹೀಗಾಗಿ, ಈ ವಿಚಾರದಲ್ಲಿ ಸರ್ಕಾರದವರು ಅವರಿಗೆ ಸ್ವಲ್ಪ ಪರಿಹಾರ ಧನವನ್ನು ಕೊಡಬೇಕಾಗಿ ನಾನು ಮಾನ್ಯ ಸರ್ಕಾರದವರಲ್ಲಿ ತಮ್ಮ ಮುಖಾಂತರ ವಿನಂತಿಸಿಕೊಳ್ಳುತ್ತೇನೆ. ನಮ್ಮ ಮಾನ್ಯ ರಾಜ್ಯಪಾಲರು 370 ಮೀಡಿಯಂ ಹಾಗೂ ದೊಡ್ಡ ಗಾತ್ರದ ಮೀನು ಹಿಡಿಯುವ ದೋಣಿಗಳನ್ನು ಹಂತ ಹಂತದಲ್ಲಿ ಕೊಡಿಸುವ ಯೋಜನೆಯನ್ನೂ ಕೂಡ ಇಟ್ಟಿದ್ದಾರೆ. ಆದರೆ ಯಾವುದಕ್ಕೂ ಮುಖ್ಯವಾಗಿ ನಮ್ಮ ಮೀನುಗಾರರಿಗೆ ಬಂದರು ಇಲ್ಲದೆ ಯಾವ ದೊಡ್ಡ ಗಾತ್ರದ ಅಥವಾ ಮಿಡಿಯಮ್ ಗಾತ್ರದ ದೋಣಿ ತಯಾರಿಸುವುದರಲ್ಲಿ ಪ್ರಯೋಜನ ಇರಲಿಕ್ಕಿಲ್ಲ. ಸಣ್ಣ ಪುಟ್ಟ ರಿಪೇರಿಗಾಗಿ ಗೋವೆ, ಕೊಚ್ಚಿ, ಬೊಂಬಾಯಿ ಮುಂತಾದ ಕಡೆಗೆ ಕಳುಹಿಸಬೇಕಾಗುತ್ತದೆ. ಅದು ಕಷ್ಟಸಾಧ್ಯ. ಮಾಲ್ಪೆಯಲ್ಲಿ ಎರಡು ಸಾರಿ ಫೌಂಡೇಷನ್ ಸ್ಟೋನ್ ಹಾಕಿ ಮೀನಿನ ಅಭಿವೃದ್ಧಿಗೆ ಯಾವ ಸಹಾಯವೂ ಆಗಲಿಲ್ಲ. ಹಿಂದಿನ ಸರ್ಕಾರ ಯಾವ ರೀತಿ ಮಾಡಿದರು ಆ ರೀತಿ ಈಗಿನ ಸರ್ಕಾರ ಮಾಡದೆ ಈ ವಿಚಾರದಲ್ಲಿ ಶೀಘ್ರವಾಗಿ ಗಮನ ಹರಿಸಿ ನಮಗೆ ಕನಿಷ್ಟ ಮೂರು ಮೀನುಗಾರಿಕೆ ಬಂದರುಗಳನ್ನಾದರೂ ರಚಿಸಿದರೆ ತುಂಬಾ ಉಪಕಾರವಾಗುತ್ತದೆ. ರಾಜ್ಯದಲ್ಲಿ 19 ನೈಸರ್ಗಿಕ ರೇವುಗಳಿರುವುದರಿಂದ ಕನಿಷ್ಠ 3—4 ನ್ನಾದರೂ ಮೀನುಗಾರಿಕೆ ಬಂದರುಗಳನ್ನಾಗಿ ಬದಲಾಯಿಸಬೇಕು ಎಂದು ಕಳಕಳಿಯಿಂದ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ತಜ್ಞ ಅಧಿಕಾರಿಗಳ ಬ್ರೇನ್ ವೇವ್ಸ್ ಪ್ರಕಾರ ಈ ವಿದೇಶ ವಿನಿಮಯ ಗಳಿಸುವ ಸಿಗಡಿ ಮೀನು, ಮೀನುಜಾತಿಗೆ ಸೇರುವುದಿಲ್ಲ ಎಂದು ಹೇಳಿ ಮೂರು ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿ

(ಶ್ರೀಮತಿ ಮನೋರಮಾ ಮಧ್ವರಾಜ್)

ದ್ದಾರೆ. ಕಾನೂನು ಪ್ರಕಾರ ರಫ್ತು ಮಾಡಲ್ಪಡುವ ಯಾವ ಸಾಮಾಗ್ರಿಗಳ ಮೇಲೂ ಸೇಲ್ಸ್ ಟ್ಯಾಕ್ಸ್ ವಿಧಿಸುವುದಿಲ್ಲ. ಅದೇ ರೀತಿ ಪೆರಿಷಬಲ್ ಅಂದರೆ ಹೆಚ್ಚು ಸಮಯ ಬಾಳುವುದಲ್ಲದ ಪದಾರ್ಥಗಳೇನಿವೆ ಅವಕ್ಕೂ ಸೇಲ್ಸ್ ಟ್ಯಾಕ್ಸ್ ಹಾಕದೆ ಅದನ್ನು ಕಂಪ್ಲೀಟ್ ಆಗಿ ರದ್ದುಪಡಿಸಬೇಕೆಂದು ಸರ್ಕಾರದವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಕಳೆದ ವರ್ಷ ಮಾಜಿ ಗವರ್ನರ್ ಶ್ರೀ ಧರ್ಮವೀರ ಅವರು ಬಂದಾಗ ಅವರಿಗೆ ಕಂಪ್ಲೀಟ್ ಸೇಲ್ಸ್‌ಟ್ಯಾಕ್ಸ್ ರದ್ದುಪಡಿಸಬೇಕು ಎಂದು ಮನವಿ ಮಾಡಿಕೊಂಡಿದ್ದೆವು. ಅದನ್ನು ಅವರು ಪರಿಶೀಲಿಸಿ ಒಂದೂವರೆ ಪರ್ಸೆಂಟ್‌ಗೆ ಇಳಿಸಿದರು. ಆದರೆ ಸರ್ಕಾರದವರಲ್ಲಿ ವಿನಂತಿಮಾಡಿಕೊಳ್ಳುವುದು ಕೂಡ, ಹಣ ಕೊಡುವಾಗ ಬಡ ಮೀನುಗಾರರಿಗೆ ಬಹಳ ಕಷ್ಟವಾಗುತ್ತದೆ ಏಕೆಂದರೆ ವ್ಯಾಪಾರಸ್ಥರು ಈ ಬಡ ಮೀನುಗಾರರ ಮೇಲೆ ತಮ್ಮ ಸೇಲ್ಸ್ ಟ್ಯಾಕ್ಸ್ ಹೊರೆಯನ್ನು ಹಾಕುತ್ತಾರೆ. ಆದ್ದರಿಂದ ಅರ್ಥ ಸಚಿವರು ಈ ವಿಚಾರದಲ್ಲಿ ಪರಿಶೀಲಿಸಿ ಸೇಲ್ಸ್ ಟ್ಯಾಕ್ಸ್ ಮನ್ನಾ ಮಾಡಬೇಕು ಮತ್ತು ಪರಿಹಾರ ಒದಗಿಸಿಕೊಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಇನ್ನು ಬಡ ಜನರು ಆಗಲಿ ಅಥವಾ ಯಾರಿಗೇ ಆದರೂ ಜೀವನದ ಅವಶ್ಯಕವಾದ ಗಾಳಿ ಮತ್ತು ನೀರು ಹೇರಳವಾಗಿ ಬೇಕು. ನಮ್ಮ ಕರಾವಳಿಯಲ್ಲಿ ಗಾಳಿ ಇದ್ದರೂ ಕುಡಿಯುವ ನೀರಿನ ಅವಸ್ಥೆಯನ್ನು ನೋಡಿದರೆ ಜನಕ್ಕೆ ತೀವ್ರವಾದ ಕಷ್ಟವಾಗಿದೆ. ಆ ಬದಿಗೆ ಸಮುದ್ರ ಮತ್ತು ಈಕಡೆ ಬದಿಗೆ ಹೊಳೆ ಇದ್ದರೂ ಎರಡೂ ಉಪ್ಪು ನೀರೇ. ಆದ್ದರಿಂದ ಬಾವಿ ತೋಡಿದರೂ ಅವರಲ್ಲಿ ಬರುವ ನೀರು ಉಪ್ಪೇ. ಮುಖ್ಯವಾಗಿ ಹೆಂಗಸರು ಸಿಹಿ ನೀರಿಗೋಸ್ಕರ ಒಂದೂವರೆ ಮೈಲಿ ದೋಣಿಯಲ್ಲಿ ಹೋಗಬೇಕಾಗಿದೆ. ಅನೇಕ ಕಡೆ ತಂದ ನೀರನ್ನು ಸಂಗ್ರಹಿಸಿ ಇಡಲಿಕ್ಕೆ ಪಾತ್ರೆಗಳಿಲ್ಲದೆ ಇರತಕ್ಕಂಥ ಜನರಿದ್ದಾರೆ. ಮಾನ್ಯ ಸರ್ಕಾರದವರು ಏನೂ ಇಲ್ಲದಿದ್ದರೂ ಸಹ ಈ ಕೂಡಲೇ ಸಿಹಿ ನೀರನ್ನು ಒದಗಿಸಿಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

''Water, water everywhere, but not a drop to drink''. ಎಂದು ಹೇಳಿದ ಹಾಗೆ ನಮ್ಮ ಅಲ್ಲಿಯ ಜನರ ಪರಿಸ್ಥಿತಿ ಆಗಿದೆ. ನಮ್ಮ ಸರ್ಕಾರದವರು ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಮಾಡುವಾಗ, ಅದರ ಜೊತೆಯಲ್ಲಿ ಈ ಕೆಲಸಕ್ಕೆ ಕೂಡ ಗಮನಕೊಟ್ಟು ಅಲ್ಲಿರುವ ಮೊಗವೀರ ಜನರಿಗೆ ಸಿಹಿ ನೀರಿನ ಸರಬರಾಜನ್ನು ಮಾಡಿಕೊಡಬೇಕೆಂದು ಕೇಳಿಕೊಂಡು, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ) —ಮಾನ್ಯ ಅಧ್ಯಕ್ಷಿಣಿಯರೇ, ರಾಜ್ಯಪಾಲರ ಭಾಷಣದಲ್ಲಿ ಕನ್ನಡಿಗರ ಜೀವಾಳದ ಮತ್ತು ಮಹತ್ವದ ಪ್ರಶ್ನೆಯಾದ ರಾಜ್ಯದ ಹೆಸರನ್ನು ಕರ್ನಾಟಕವೆಂದು ಇಡುವ ಬಗ್ಗೆ ನಮೂದು ಇಲ್ಲ. ಆ ಬಗ್ಗೆ ಎರಡು ಮಾತುಗಳನ್ನು ನಮ್ರತೆಯಿಂದ ಸೂಚಿಸಬಯಸುತ್ತೇನೆ. ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡುವುದರಿಂದ ಸರಕಾರಕ್ಕೆ ಯಾವ ಆರ್ಥಿಕ ತೊಂದರೆಯೂ ಬರುವುದಿಲ್ಲ ಮತ್ತು ಯಾವ ಜನರಿಗೂ ತೊಂದರೆಯಾಗುವುದಿಲ್ಲ. ಕರ್ನಾಟಕವೆಂದು ಹೆಸರಿಡುವುದು ಈ ರಾಜ್ಯದ ಎರಡು ಕೋಟಿ ಜನರಿಗೆ ಆನಂದವುಂಟುಮಾಡತಕ್ಕ ಮತ್ತು ಅಭಿಮಾನದ ಪ್ರಶ್ನೆಯಾಗಿದೆ.

1956ನೇ ಇಸವಿಯಿಂದ ಇಲ್ಲಿಯವರೆಗೆ ದಿವಂಗತ ಅಂದಾನಪ್ಪನವರು ದೊಡ್ಡಮೇಟಿ ಮೊದಲಾದ ಅನೇಕ ಮಹಾನ್ ವ್ಯಕ್ತಿಗಳು ನಮ್ಮ ಕನ್ನಡ ರಾಜ್ಯದ ಹೆಸರನ್ನು ಕರ್ನಾಟಕವೆಂದು ಕರೆಯಬೇಕೆಂದು ಹೋರಾಡಿದರೂ ಕೂಡಾ ಇಲ್ಲಿಯ ತನಕ ಯಾವ ಪ್ರಯೋಜನವೂ ಆಗಿಲ್ಲ.

ಮಹಾರಾಷ್ಟ್ರ ರಾಜ್ಯಕ್ಕೆ ಮಹಾರಾಷ್ಟ್ರವೆಂದೂ ಗುಜರಾತಕ್ಕೆ ಗುಜರಾತ್ ಎಂದೂ ಆಂಧ್ರ ಪ್ರಾಂತಕ್ಕೆ ಆಂಧ್ರವೆಂದೂ ಹೆಸರಿಟ್ಟು ಎಷ್ಟೋ ದಿವಸವಾದವು. ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡದಿರುವುದು ನಮ್ಮ ಜನರ ದೌರ್ಭಾಗ್ಯ ಮತ್ತು ನಮ್ಮೆಲ್ಲರಿಗೆ ಅಪಮಾನಕರ. ಆಂಧ್ರ ಪ್ರಾಂತದ ನಿರ್ಮಾಣ ಮಾಡುವ ಸಲುವಾಗಿ ಪೊಟ್ಟ್ಯುಲು ರಾಮುಲುರವರು ತಮ್ಮ ಪ್ರಾಣವನ್ನೇ ಕಳಕೊಂಡರು. ಅಂಥ ಪರಿಸ್ಥಿತಿ ಕರ್ನಾಟಕದಲ್ಲಿ ಆಗುವುದು ಬೇಡ. ಕರ್ನಾಟಕವೆಂದು ಕರೆಯುವುದರಿಂದ ರಾಜ್ಯಕ್ಕೆ ಹಣದ ತೊಂದರೆಯಂತೂ ಇಲ್ಲವೇ ಇಲ್ಲ. ಸಮತಾವಾದ ಸಾಮ್ಯವಾದ ನಿರ್ಮಾಣ ಮಾಡತಕ್ಕಂಥ ಜಟಿಲ ಪ್ರಶ್ನೆಯಿದಲ್ಲ. ಇದು ಕರ್ನಾಟಕದ ಹೆಸರು ಇಡಬೇಕು, ಇಡಬಾರದು, ಎಂಬ ಭಾವನಾಪರ ಮಾನಸಿಕ ಪ್ರಶ್ನೆ. ನಮ್ಮ ಲೋಕಪ್ರಿಯ ಸರ್ಕಾರದವರು ಆದಷ್ಟು ತೀವ್ರ ಕರ್ನಾಟಕವೆಂದು ಹೆಸರಿಡುವ ಠರಾವನ್ನು ತೀವ್ರವೇ ತರಬೇಕು, ಇಲ್ಲವೇ ವಿರೋಧಪಕ್ಷದವರಾದ ನಾವು ತರುವಂತೆ ಅನುಕೂಲ ಮಾಡಿಕೊಡಬೇಕೆಂದು ಅಧ್ಯಕ್ಷರ

ಮೂಲಕ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಎರಡನೇ ಮಾತೆಂದರೆ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಎಲ್ಲ ಮಟ್ಟದಲ್ಲಿಯೂ ಇನ್ನೂ ಮಾಡಿಲ್ಲ. ಸರ್ಕಾರದವರು ಬೇಗನೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ರಾಜ್ಯದ ಜನತೆಯ ಜೀವನಮಟ್ಟ ಏರಬೇಕು. ರಾಮರಾಜ್ಯವಾಗಬೇಕೆಂದು ಮಹಾತ್ಮಾ ಗಾಂಧೀಜಿಯವರು ಹೇಳಿದ ಮಾತು, ಕೃತಿಯಲ್ಲಿ ಬರಲಿಲ್ಲ. ಮತ್ತು ಬರುವ ಆಶೆಯೂ ಕಾಣದಾಗಿದೆ.

ವಿಜಾಪುರ ಜಿಲ್ಲೆಯ ಜನರ ಜೀವನಮಟ್ಟದ ಬಗ್ಗೆ ಹೇಳುವುದಾದರೆ, ಅಲ್ಲಿಯ ಜನರ ಸ್ಥಿತಿ ತೀರ ಶೋಚನೀಯವಾಗಿದೆ. ಬಿಜಾಪುರ ಜಿಲ್ಲೆಯ ಹರಿಜನರೂ ಒಡ್ಡರೂ ಇನ್ನುಳಿದ ಬಡಜನರು ಹೊಟ್ಟೆಯ ಪಾಡಿಗಾಗಿ ಗೋವಾ ಪ್ರಾಂತಕ್ಕೆ, ರತ್ನಾಗಿರಿ ಮೊದಲಾದ ಮಹಾರಾಷ್ಟ್ರದ ಭಾಗಕ್ಕೆ ಹೋಗಿರುವರು. ಇಂದು ಕನ್ನಡ ನಾಡಿನ ಬಡಜನರು ಪರಪ್ರಾಂತಕ್ಕೆ ಹೋಗಿ ಆಶ್ರಯ ಹೊಂದುವುದು ನಮ್ಮ ಸರ್ಕಾರಕ್ಕೂ ನಮಗೂ ಅಪಮಾನಕರದ ಮಾತು.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸಣ್ಣ ಸಣ್ಣ ಮಾತುಗಳನ್ನು ನಮೂದು ಮಾಡಿದ್ದಾರೆ. ಆದರೆ ಅಪ್ಪರ ಕೃಷ್ಣಾದಂಥ (ಕೃಷ್ಣಾ ಮೇಲ್ದಂಡೆ) ಮಹತ್ತರವಾದ ವಿಷಯವನ್ನೇ ಎತ್ತದಿರುವುದು ಶೋಚನೀಯ ಸಂಗತಿ. ಈ ಯೋಜನೆ ಅವಶ್ಯವಾಗಿ ಯಶಸ್ವಿಯಾಗಬೇಕು, ಪೂರ್ಣವಾಗಬೇಕು. ಈ ಯೋಜನೆಯಿಂದ ಯಾವಾಗಲೂ ದುಷ್ಕಾಲಕ್ಕೆ ತುತ್ತಾಗುವ ಬಿಜಾಪುರದ ಜಿಲ್ಲೆಗೆ ಮಹದುಪಕಾರವಾಗುತ್ತದೆ. ಅದನ್ನು ಮಾಡಿದರೆ, ಬಿಜಾಪುರ ಜಿಲ್ಲೆಯು ಇಡೀ ಮೈಸೂರು ರಾಜ್ಯದ ಜನತೆಗೆ ಸಾಕಾಗುವಷ್ಟು ಆಹಾರ ಪೂರೈಸಿ ಪರಪ್ರಾಂತಕ್ಕೂ ಕಳಿಸಬಹುದು. ನಾನು ಹಾಸನ ಮತ್ತು ಮಂಡ್ಯ ಜಿಲ್ಲೆಗಳನ್ನು ನೋಡಿದ್ದೇನೆ. ದಿವಂಗತ ವಿಶ್ವೇಶ್ವರಯ್ಯನವರು ಮಾಡಿದ ನೀರಾವರಿ ಮಹಾತ್ಕಾರ್ಯದಿಂದ ಇಂದು ಅಲ್ಲಿಯ ಭೂಮಿ ನಂದನವನವಾಗಿದೆ. ನಮ್ಮ ಬಿಜಾಪುರ ಜಿಲ್ಲೆಯನ್ನೂ ಕೃಷ್ಣಾ ಮೇಲ್ದಂಡೆ ಯೋಜನೆಯ ಮಹತ್ವವನ್ನೂ ಮಾನ್ಯ ಮಂತ್ರಿ ಶ್ರೀ ಚನ್ನಬಸಪ್ಪನವರು ಅರಿತಿದ್ದು ತಮ್ಮ ಸರಕಾರದಿಂದ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ತೀವ್ರವೇ ಮುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮೈನರು ಇರ್ರಿಗೇಷನ್ ಇದರಲ್ಲಿ ಮುಖ್ಯವಾದ ದೋಷವೇನೆಂದರೆ, ಕೆರೆಗಳಲ್ಲಿ ಸಬ್‌ಮರ್ಜ್ (ಮುಳುಗಡೆ) ಆಗುವ ಭೂಮಿಯ ಮಾಲೀಕರಿಗೆ ಭೂಮಿಯ ಬೆಲೆ ಕೊಡುವುದು ಸರಿಯಲ್ಲ. ಮುಳುಗಿದ ಅರ್ಧದಷ್ಟು ನೀರು ಉಣ್ಣುವ ಭೂಮಿಯನ್ನು ಭೂಮಿ ಕಳಕೊಂಡವರಿಗೆ ಕೊಡಬೇಕು. ಈ ಸಮಸ್ಯೆ ಶ್ರೀ ಚನ್ನಬಸಪ್ಪನವರು ಕಾಳಜಿಯಿಂದ ಅವಲೋಕಿಸಬೇಕು. ಪಿ. ಡಬ್ಲ್ಯು. ಡಿ. ಖಾತೆಯವರು ಮಾಡಬೇಕಾದ ಕೆಲಸ ಇನ್ನೊಂದು ಏನೆಂದರೆ—ಈಗ ಬ್ರಿಜ್‌ದ ಕೆಳಗೆ ಹೋಗುವ ನೀರನ್ನು ನಿಲ್ಲುವಂತೆ ಮಾಡಬೇಕು. ಇದರಿಂದ ಬ್ರಿಜ್‌ದ ಅಕ್ಕಪಕ್ಕದವರ ಕೆಳಗಿನ ಜಮೀನದ ಭಾವಿಗಳಿಗೆ ನೀರು ಪರ್ಕೋಲೇಶನ್ (ವಸರಿ) ಆಗಿ ಬಾವಿಗಳಿಗೆ ನೀರು ಹೆಚ್ಚಾಗಿ ರೈತರಿಗೆ ಬಹಳ ಅನುಕೂಲವಾಗುವುದು.

ನಾನು ಮಾತನಾಡುವ ಕಾಲಕ್ಕೇನೇ ಮಾನ್ಯ ಮುಖ್ಯಮಂತ್ರಿಯವರು ಸಭೆಗೆ ಬಂದುದು ನಮ್ಮ ಸುದೈವ. ಯಾಕೆಂದರೆ, ದುರ್ದೈವೀ. ಜಿಲ್ಲೆಯಾದ ಬಿಜಾಪುರದ ತೊಂದರೆ ಅವರಿಗೆ ತಿಳಿದುಕೊಳ್ಳಲು ಅನುಕೂಲವಾಗುವುದು.

ನಮ್ಮ ಭಾಗದ ದುಷ್ಕಾಲದ ಪರಿಸ್ಥಿತಿಯ ಬಗ್ಗೆ ಹೇಳುವುದಾದರೆ ಪ್ರತಿ ಎರಡು ವರ್ಷಕ್ಕೊಮ್ಮೆ ದುಷ್ಕಾಲ ನಮಗೆ ಕಟ್ಟಿಟ್ಟದ್ದು. ಆಗಿನ ಮುಂಬೈ ಸರಕಾರದವರು ಮತ್ತು ಮೈಸೂರು ಸರ್ಕಾರದವರು ತಾತ್ಪೂರ್ತಿಕ ದುಷ್ಕಾಲ ಕೆಲಸ ಪೂರೈಸುವ ಕುರಿತು ಎರಡು ಕೋಟಿಗಿಂತ ಹೆಚ್ಚು ಹಣ ಖರ್ಚು ಮಾಡಿರುವರು. ಇಂಡೀ ತಾಲ್ಲೂಕಿನಲ್ಲಿ ಒಂಬತ್ತು ಸಾವಿರ ನೀರಾವರಿ ಬಾವಿಗಳು, ಸಿಂದಗೀ ತಾಲ್ಲೂಕಿನಲ್ಲಿ ಆರು ಸಾವಿರ ನೀರಾವರಿ ಬಾವಿಗಳೂ ಇರುತ್ತವೆ. ಸಮಯ ಕಡಿಮೆ ಇದ್ದದ್ದರಿಂದ ಕೇವಲ ಸಿಂದಗಿ ತಾಲ್ಲೂಕಿನ ಬಗ್ಗೆ ಮಾತನಾಡುತ್ತೇನೆ. ಸಿಂದಗೀ ತಾಲ್ಲೂಕದ ಜನತೆಗೆ ಹೊಟ್ಟೆ ತುಂಬಾ ಅನ್ನ ಸಿಕ್ಕಬೇಕಾದರೆ ಬಡವರಿಗೆ ಕೂಲಿ ಸಿಗಬೇಕಾದರೆ, ಸಿಂದಗೀ ತಾಲ್ಲೂಕಿನಲ್ಲಿ ಇನ್ನು ಆರು ಸಾವಿರ ಬಾವಿಗಳನ್ನು ಮಾಡುವುದೊಂದೇ ಉಪಾಯ. ಭಾರತದ ಸರ್ಕಾರ ಬಂಗಾಲ ದೇಶದ ನಿರಾಶ್ರಿತರ ಸಂರಕ್ಷಣಕ್ಕಾಗಿ ಟ್ಯಾಕ್ಸ್ ಹಾಕಿದಾಗ, ಸಂತೋಷದಿಂದ ಕೊಟ್ಟಿದ್ದೇವೆ. ಬಿಜಾಪುರ ಜಿಲ್ಲೆಯ ದುಷ್ಕಾಲ ನಿವಾರಣಾ ಪ್ರಶ್ನೆ ನಮ್ಮ ರಾಜ್ಯದ ಬಡಜನ ಸಂರಕ್ಷಣಾ ಪ್ರಶ್ನೆ ಆದ್ದರಿಂದ ನೀರಾವರಿ ಬಾವಿಗಳ ಸಲುವಾಗಿ ಹೆಚ್ಚಿನ ಟ್ಯಾಕ್ಸ್ ಹಾಕಿದರೂ ಪರವಾಯಿಲ್ಲ. ನೀರಾವರಿ ಬಾವಿಗಳನ್ನು ಮಾಡಿಸಿಕೊಡಬೇಕು. ಹರಿಜನರ ಕಲ್ಯಾಣಕ್ಕಾಗಿ ಲಕ್ಷ್ಯ ಕೊಡುವಂತೆ ಅತ್ಯಂತ ಬಡತನದಿಂದ ಬಳಲುವ ಬಿಜಾಪುರ ಜಿಲ್ಲೆಯ ಜನರ ಸಲುವಾಗಿ ನಮ್ಮ ಸರಕಾರ ಹೆಚ್ಚು ಲಕ್ಷ್ಯ ಕೊಡುವುದು ಅವಶ್ಯವಿದೆ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಅನುಕೂಲವಾದರೆ ಬೇರೆ ಪ್ರಾಂತ್ಯಕ್ಕೆ ಬಡಜನರು ಹೋಗುವ ಪ್ರಶ್ನೆಯೇ ಉತ್ಪನ್ನವಾಗುವುದಿಲ್ಲ.

(ಶ್ರೀ ಎಸ್. ವೈ. ಪಾಟೀಲ್)

ಬಾವಿಗಳನ್ನು ಹೆಚ್ಚಿಸುವುದರಿಂದ ಬಡವರಿಗೆ ಉದ್ಯೋಗ ಹತ್ತುವುದು, ಜನರ ಅನ್ನದ ಪ್ರಶ್ನೆ ಬಿಡುವುದು ಮತ್ತು ಸರ್ಕಾರಕ್ಕೆ ದುಷ್ಕಾಲ ಕೆಲಸಗಳಿಗೆ ಖರ್ಚು ಮಾಡುವ ಹಣ ಉಳಿದು ಆ ಹಣ ರಾಷ್ಟ್ರೀಯ ಕಾರ್ಯಗಳಿಗೆ ಉಪಯೋಗವಾಗುವುದು. ಆದ್ದರಿಂದ ಸರ್ಕಾರದವರು ನಮ್ಮ ಭಾಗದಲ್ಲೇ ಬಾವಿಗಳನ್ನು ಮಾಡುವ ಸಲುವಾಗಿ ಒಂದು ಯೋಜನೆಯನ್ನೇ ಮಾಡಬೇಕು.

ನೀರಾವರಿ ಬಾವಿಗಳನ್ನು ಅಗಿಸಲು ನಿಜವಾಗಿಯೂ ಬಡವರಿಗೆ ಸಾಲವೇ ಸಿಗುವುದಿಲ್ಲ. ಸರಕಾರೀ ಸಾಲಕ್ಕಾಗಿ ಕೊಡಬೇಕಾದ ಸೆಕ್ಯುರಿಟಿ (ಜಾಮೀನು) ಸಲುವಾಗಿ ಸಾಕಷ್ಟು ಬರಾಡದ ಭೂಮಿಯಿರುವುದಿಲ್ಲ. ಸಾಮ್ಯವಾದ ಸಮತಾವಾದ ಹೇಳುವವರೇ ಹೆಚ್ಚು. ಬಡ ರೈತನಿಗೆ ಜಾಮೀನಾಗಿ ಹಣ ಕೊಡಿಸುವವರಿಲ್ಲ. ದುಡಿಯತಕ್ಕ ಲಮಾಣೀ ಹರಿಜನರೂ, ಒಡ್ಡರು, ಇತರ ಬಡ ರೈತರಿಗೆ ನೀರಾವರಿ ಬಾವಿಗಳನ್ನು ಮೊದಲು ಮಾಡಿಸಿಕೊಡಬೇಕು. ನಮ್ಮ ನಿಮ್ಮಂಥವರಿಗೆ ಮಾಡಿಸಿಕೊಟ್ಟರೆ ಉಪಯೋಗವೇನು. ? ಆದ್ದರಿಂದ ಬರಾಡದ ಆಧಾರದ ಮೇಲೆ ಸಾಲ ಮಂಜೂರು ಮಾಡದೇ ನೀರು ಬೀಳತಕ್ಕಂಥ ಭೂಮಿಯ ಒಡೆಯನಿಗೆ ಒಂದೇ ರೂಪಾಯಿ ಬರಾಡ ಇದ್ದರೂ ಭಾವಿಗೇ ಬೇಕಾಗುವಷ್ಟು ಸಾಲ ಮಂಜೂರು ಮಾಡಬೇಕು. ಮೇಲೆ ಹೇಳಿದಂತೆ ಸಿಂದಗಿ ತಾಲ್ಲೋಕಕ್ಕೆ ಆರು ಸಾವಿರ ಬಾವಿಗಳನ್ನು ಮಾಡಿಸಿಕೊಟ್ಟರೆ ಹದಿನೆಂಟು ಸಾವಿರ ಕ್ವಿಂಟಲ್ ಆಹಾರ ಹೆಚ್ಚು ಉತ್ಪನ್ನ ಆಗಿ ಜನರ ಪರಿಸ್ಥಿತಿ ಸುಧಾರಿಸುವುದು. ಫಲವತ್ತಾದ ಭೂಮಿಯುಳ್ಳ ಬಿಜಾಪುರ ಜಿಲ್ಲೆಗೆ ಮುಖ್ಯವಾಗಿ ಸಿಂದಗಿ ತಾಲ್ಲೋಕಿಗೆ ಆಹಾರ ಹೆಚ್ಚಾಗಿ ಪರಕೀಯರಿಗೆ ಕೈ ಒಡ್ಡುವುದು ತಪ್ಪುವುದು. ಈ ಬಗ್ಗೆ ಈ ಮೊದಲೇ ಡೆವಲಪ್‌ಮೆಂಟ್ ಸೆಕ್ರೆಟರಿ, ಶ್ರೀ ದುಬಾಶಿಯವರ ಮತ್ತು ಶ್ರೀ ಅನುಗೋಳ ಸಾಹೇಬರ ಸಂಗಡ, ಸಾಕಷ್ಟು ಚರ್ಚೆ ಮಾಡಲಾಗಿದೆ.

ಕೆಲವು ಕಡೆ ಭೂಮಿಯಲ್ಲಿ ತುಂಬಾ ನೀರಿನಸಂಪತ್ತು ಇರುತ್ತದೆ. ಸರಕಾರದವರು ನೀರು ಇದ್ದ ಭೂಮಿಯಲ್ಲಿ ದೊಡ್ಡದೊಂದು ಬಾವಿ ತೆಗೆದು ಯಂತ್ರದ ಸಹಾಯದಿಂದ ರೈತರಿಗೆ ನೀರು ಒದಗಿಸಬೇಕು. ಬಾವಿಗಾಗಿ ಭೂಮಿ ಕೊಟ್ಟವರಿಗೆ ಸಾಕಷ್ಟು ಹಣ ಕೊಡಬೇಕು. ಭೂಮಿ ಕಳಕೊಂಡವರು ಅಸಂತೋಷವಾಗಬಾರದೆಂದು ಈ ಮಾತು ಹೇಳುತ್ತೇನೆ.

2-30 P.M.

ಇನ್ನೊಂದು ವಿಷಯ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರು ಲಕ್ಷ ಕೊಡಬೇಕು. ನಮ್ಮ ಭಾಗದಲ್ಲಿ ಸವರ್ಣೀಯರಿಂದಾ ಹರಿಜನರ ಮೇಲೆ ಅನ್ಯಾಯವಾಗುತ್ತಲಿದೆ. ಅದರಂತೆ ಬಲಗೈ ಜನರಿಂದ ಎಡಗೈ ಜನರಿಗೂ ಅನ್ಯಾಯವಾಗುತ್ತದೆ. ಬಲಗೈ ಜನರು (ಹೊಲೆಯರು) ಎಡಗೈ ಜನರಿಗೆ (ಮಾದಿಗರಿಗೆ) ಕುಡಿಯುವ ನೀರಿನ ಭಾವಿಯಿಂದ ನೀರು ಒಯ್ಯಗೊಡುವುದಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಪರಿಹರಿಸಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಬಲಗೈ ಎಡಗೈ ಅವರ ಪ್ರಶ್ನೆಯನ್ನು ಮಾನ್ಯ ಸದಸ್ಯರು ಹೇಳುತ್ತಾಗ, ಎಲ್ಲರೂ ಅಣ್ಣತಮ್ಮಂದಿರಂತಿದ್ದು ಮಾನ್ಯ ಸದಸ್ಯರು ಶ್ರೀ ಎಸ್. ವೈ. ಪಾಟೀಲರು ಈ ಆಪಾದನೆ ಏಕೆ ಮಾಡುತ್ತಾರೋ ಗೊತ್ತಿಲ್ಲ. ಅವರೆಲ್ಲರೂ ನಿಮ್ಮ ವರ್ಗದವರೆಂದು ಮಾನ್ಯ ಸದಸ್ಯರು ನೆನಪಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಎಸ್. ವೈ. ಪಾಟೀಲ್.—ನಾನು ಹೇಳಿದ ವಿಷಯವನ್ನು ಬೇಕಾದರೆ ನಮ್ಮ ಭಾಗಕ್ಕೆ ಬಂದು ನೋಡಲಿ. ಪ್ರತ್ಯಕ್ಷ ಇರುವ ವಿಷಯವನ್ನು ಮಾತ್ರ ಇಲ್ಲಿ ಹೇಳಿದ್ದೇನೆ. ನಾನು ಯಾರ ಮೇಲೂ ಆರೋಪ ಮಾಡಲಿಕ್ಕೆ ಹೋಗಿಲ್ಲ. ಹರಿಜನ ಮ ಲಮಾಣಿ ಜನರಿಗೆ ನಮ್ಮ ಭಾಗದಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇರುತ್ತದೆ. ಸುದೈವದಿಂದ ಮಾನ್ಯ ಶ್ರೀ ಮಲ್ಲಿಕಾರ್ಜುನಸ್ವಾಮಿಯವರೇ ಈ ಖಾತೆಗೆ ಮಂತ್ರಿ ಇರುವುದರಿಂದ ನಮ್ಮ ಭಾಗಕ್ಕೆ ಬಂದು ಹರಿಜನಕೇರಿಗಳನ್ನು ಸಂದರ್ಶಿಸಿ ನಿಜಪರಿಸ್ಥಿತಿ ತಿಳಿದುಕೊಂಡು ಉದ್ಧಾರ ಮಾಡಬೇಕು. ಹರಿಜನರೂ ಸಹಾ ಕುಡಿಯುವ ನೀರಿನ ಬಾವಿಗಳಿಗಾಗಿ ಐದು ಟಕ್ಕೆ ಕೊಡಬೇಕಾಗುತ್ತದೆ. ಪಂಚಾಯಿತಿಯವರು ಕೊಡಬೇಕಾದ 5 ಟಕ್ಕೆ ಹಣವನ್ನು ಕೊಡಲು ಮುಂದೆ ಬರುವುದಿಲ್ಲ. ಹೀಗಾಗಿ, ಹರಿಜನರು ಬಾವಿಯಿರದ್ದರಿಂದ ಕುಡಿಯುವ ನೀರಿಗಾಗಿ ನೀರು ಬಿಕ್ಕಿಬೇಡುತ್ತಾಕೂಡ್ರು ಬೇಕಾಗುತ್ತದೆ. ಮಹಾತ್ಮಾ ಗಾಂಧೀಜಿಯವರ ದಿವ್ಯ ಪ್ರಯತ್ನದಿಂದ ಸ್ವತಂತ್ರಗಳಿಸಿದ ನಾವು ಅವರ ಪ್ರೀತಿಯ ವಿಷಯವಾದ ಹರಿಜನ ಕಲ್ಯಾಣದ ಸಲುವಾಗಿ ಪ್ರತಿಯೊಬ್ಬರೂ ಪ್ರಯತ್ನ ಮಾಡುವುದು ನಮ್ಮ ಆದ್ಯ ಕರ್ತವ್ಯ.

ರಸ್ತೆಗಳ ವಿಷಯ—ರಸ್ತೆಗಳ ವಿಷಯವಾಗಿ ಕೆಲವು ಮಾತುಗಳನ್ನು ಹೇಳುವುದು ಅತ್ಯವಶ್ಯ. ಸರ್ಕಾರದವರು ದುಷ್ಕಾಲ-ಕಾಮಗಿರಿಯಂತ (1) ಆಸ್ಕಿ ಸಿಂದಗಿ ರೋಡು, (2) ದೇವೂರು ಬೊಮ್ಮ ದೇವನವಾಡು ಇತ್ಯಾದಿ ರಸ್ತೆಗಳನ್ನು ಲಕ್ಷಾವಧಿ ಹಣ ಖರ್ಚು ಮಾಡಿ ಮಾಡಿಸಿದ್ದಾರೆ. ಅವನ್ನು ಇದೇ ಪರಿಸ್ಥಿತಿಯಲ್ಲೇ ಬಿಡದೇ ಉತ್ತಮ ರಸ್ತೆಗಳನ್ನು ಮಾಡಿ ಈ ವರೆಗೆ ಖರ್ಚಾದ ಹಣ ಹಾಳಾಗದಂತೆ ನೋಡಿಕೊಳ್ಳಬೇಕು. ಸಿಂದಗಿ ತಾಲ್ಲೋಕಿನಲ್ಲೇ ರಾಮನಹಳ್ಳಿ ಕೆರೆಯಲ್ಲಿ ಭೂಮಿಯನ್ನು ಕಳಕೊಂಡ, ಚಾಂದಕವಟೆ ಜನರಿಗೆ ಬ್ರಿಜ್ಜು ಇಲ್ಲ. ಸೋಂಪುರದಂಥಾ ಸಣ್ಣ ಹಳ್ಳಿಗಳಿಗೆ ಒಂದೂ ರಸ್ತೆಯಿಲ್ಲ. ಬೆಂಡಲ ಬಾವಿ ಮೊದಲಾದ ಎರಭ ಮಿಯ ಹಳ್ಳಿಗಳ ಜನರಿಗೆ ರಸ್ತೆಯಿರದ್ದರಿಂದ ಮಳೆಗಾಲದಲ್ಲಿ ಪರಸ್ಥಳಕ್ಕೆ ಹೋಗುವುದು ತೊಂದರೆದಾಯಕ. ಆದ್ದರಿಂದ ಪ್ರತಿಯೊಂದು ಊರಿಗೆ ತಾಲ್ಲೋಕಿನ ಸ್ಥಳಕ್ಕೆ ಮತ್ತು ಜಿಲ್ಲೆಯ ಸ್ಥಳಕ್ಕೆ ಹೋಗಲು ರಸ್ತೆ ಮಾಡಿಕೊಡಬೇಕು.

ಹರಿಜನ ಲವಾಣಿ ಕೊರವೇರ, ಇತ್ಯಾದಿ, ಬಡಜನರಿಗೆ ಮನೆಕಟ್ಟುವ ಸಲುವಾಗಿ ಸ್ಥಳದ ಬಗ್ಗೆ ಸರಕಾರ, ಏನು ಯೋಚನೆ ಮಾಡಿರುವುದೋ ಗೊತ್ತಿಲ್ಲ. ಎಷ್ಟೋ ಜನರಿಗೆ ಮನೆಗಳಂತೂ ಇಲ್ಲವೇ ಇಲ್ಲ. ಗುಡಿಸಲು ಹಾಕಿಕೊಳ್ಳಲೂ ಸಹಾ ಜಾಗಾ ಇರುವುದಿಲ್ಲ. ಅವರಿಗೆ ಹನ್ನೆರಡಾಣೆ ಸ್ಟ್ಯಾಂಪು ಹಚ್ಚಿ ಅರ್ಜಿ ಮಾಡಲು ಗತಿಯಿಲ್ಲ ತಮ್ಮ ಕಲ್ಯಾಣ ಹೇಗೆ ಮಾಡಿಕೊಳ್ಳಬೇಕೆಂಬುದು ಅವರಿಗೆ ಗೊತ್ತಿಲ್ಲ. ಆದ್ದರಿಂದ ಸರಕಾರದವರು ಹರಿಜನ ಲವಾಣಿ ಜನರ ಕಡೆಯಿಂದ ಅರ್ಜಿ ಬರುವ ಹಾಗೆ ನೋಡದೆ, ಡೆಪ್ಯುಟಿ ಕಮೀಷನರಿಗೆ ಹೇಳಿ ಒಂದು ಪೈ ಹಣವನ್ನೂ ಕೇಳದೆ ಪ್ರತಿ ಹರಿಜನ ಕೇರಿಗೊಂದು ಬಾವಿ ಮಾಡಿಸಿಕೊಡಬೇಕು. ಮತ್ತು ಪ್ರತಿ ಹರಿಜನಕೇರಿಯಲ್ಲಿ ಒಂದು ಸಮಾಜ ಮಂದಿರವನ್ನೂ ಕಟ್ಟಿಸಿಕೊಡಲಿಕ್ಕೇಬೇಕು.

ನಮ್ಮ ಭಾಗದಲ್ಲಿ ಹೋದವರುಷವೂ ಮಳೆಯಾಗಲಿಲ್ಲ. ಈ ವರ್ಷವೂ ಮಳೆಯಾಗಲಿಲ್ಲ. ಅಲ್ಲಿಯ ಜನರ ಪರಿಸ್ಥಿತಿ ಶೋಚನೀಯ. ಬೆಂಗಾಡವನ್ನು ನೋಡಿ ಬಿಡಬೇಕಲ್ಲದೆ ಎಲ್ಲಾ ಭಾಗದಲ್ಲಿಯೂ ದುಷ್ಕಾಲ ಕಾಮಗಿರಿಗಳನ್ನು ಪ್ರಾರಂಭಿಸಬೇಕು. ಎಲ್ಲ ಜಿಲ್ಲೆಗಳಲ್ಲಿ ಯಾವಾಗಲೂ ದುಷ್ಕಾಲ ಪೀಡಿತವಾಗಿರುವ ಬಿಜಾಪುರ ಜಿಲ್ಲೆಯ ಕಡೆಗೆ ಹೆಚ್ಚು ಲಕ್ಷ ಕೊಡಬೇಕು. ನಮ್ಮ ಜಿಲ್ಲೆಗೆ ಕ್ಯಾಬಿನೆಟ್ ದರ್ಜೆಯ ಮಂತ್ರಿಯಿಲ್ಲದಿರುವುದು ದುಃಖದ ಸಂಗತಿ.

ಸಿಂದಗಿ ತಾಲ್ಲೋಕಿಗೆ ಅತ್ಯಂತ ಉಪಯೋಗವುಳ್ಳ ಇನ್ನೊಂದು ಯೋಜನೆಯೆಂದರೆ ದೋಣಿ ನದೀ ಯೋಜನೆ. ಇದು ನಾನು ಹಿಂದೆ ಅಸೆಂಬ್ಲಿ ಮೆಂಬರನಿದ್ದಾಗ ಮಂಜೂರಾಗುವದಿತ್ತು ಹಾಗೇ ಉಳಿದಿದೆ. ಇದರಿಂದ ಸಿಂದಗಿ ತಾಲ್ಲೋಕಿನ ಪೂರ್ವ ಭಾಗದ ಹಳ್ಳಿಗಳಿಗೆ ಅತ್ಯಂತ ಉಪಯೋಗವಾಗುತ್ತದೆ. ಈ ಯೋಜನೆಯನ್ನು ಅತಿ ತೀವ್ರವಾಗಿ ಮುಗಿಸಬೇಕು.

ಮೈಸೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂತ್ರಿಗಳು ದೇವರಹಿಪ್ಪರಗಿಯಲ್ಲಿ ಬಸ್ ಸ್ಟ್ಯಾಂಡ್ ಕಟ್ಟಡ ಮತ್ತು ಸಿಂದಗಿ ಬಸ್ ಸ್ಟ್ಯಾಂಡ್ ಕಟ್ಟಡದ ಮೇಲೆ ಜನರಿಗೆ ಇಳಿದುಕೊಳ್ಳಲು ಒಂದು ಮೇಲಂತಸ್ತಿನ ಕಟ್ಟಡವನ್ನು ಅತಿ ತೀವ್ರವಾಗಿ ಮಾಡಿಸಬೇಕು.

ಒಟ್ಟಿನಲ್ಲಿ

(1) ನಮ್ಮ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಬೇಕು.

(2) ನಮ್ಮ ಸಿಂದಗೀ ತಾಲ್ಲೋಕಿಗೆ ಕನಿಷ್ಠ 6000 ನೀರಾವರೀ ಭಾವಿಗಳನ್ನು ಮಂಜೂರು ಮಾಡಬೇಕು. ಅದರಲ್ಲಿ ಹರಿಜನ ಲವಾಣಿ ಮೊದಲಾದ ಹಿಂದುಳಿದವರಿಗೆ ಪ್ರಾಶಸ್ತ್ಯ ಬರಬೇಕು.

(3). ಕೃಷ್ಣಾ ಮೇಲ್ದಂಡೆ ಯೋಜನೆ ಮತ್ತು ದೋಣೀನದೀ ಯೋಜನೆ ಕಾರ್ಯ ತ್ವರಿತವಾಗಬೇಕು.

(4) ನೀರಾವರೀ ಯೋಜನೆಯಲ್ಲಿ ಮುಳುಗಡೆಯಾದ ಜಮೀನುದಾರರಿಗೆ ಹಣದ ಬದಲು ನೀರು ಉಣ್ಣುವ ಸ್ವಲ್ಪಾದರೂ ಭೂಮಿಯನ್ನು ಕೊಡಬೇಕು.

(5) ಲವಾಣಿ ಮತ್ತು ಹರಿಜನರಿಗೆ ಇರಲಿಕ್ಕೆ ಬೇಕಾಗುವ ಸ್ಥಳದ ಬಗ್ಗೆ ಸರಕಾರದವರು ತಹಶೀಲ್ದಾರರಿಂದ ಅಂಕಿ ಅಂಶಗಳನ್ನು ತಾವೇ ತರಿಸಿಕೊಂಡು ಸಮಸ್ಯೆ ಪರಿಹರಿಸಬೇಕು.

(6) ದುಷ್ಕಾಲ ಕಾಮಗಾರಿಗಳನ್ನು ತೀವ್ರವೇ ಪ್ರಾರಂಭಿಸಿ ಜನರ ಕಷ್ಟದೂರ ಮಾಡಬೇಕು. ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಲು ಸಮಯ ಕೊಟ್ಟಿದ್ದಕ್ಕಾಗಿ ಮಾನ್ಯ ಸಭಾಧ್ಯಕ್ಷಣಿಯವರನ್ನು ನಮಸ್ಕರಿಸಿ ಮೇಲ್ಕಂಡ ಕೆಲಸಗಳನ್ನು ಮಾಡೇತೀರಬೇಕೆಂದು ಸರಕಾರವನ್ನು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ತಾರೇಗೌಡ (ಕಳ್ಳಂಬೆಳ್ಳ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ನೆಚ್ಚಿನ ರಾಜ್ಯಪಾಲರು 17 ವರ್ಷಗಳ ಕಾಲ ರಾಜಸ್ಥಾನದಲ್ಲಿ ಮುಖ್ಯ ಮಂತ್ರಿಗಳಾಗಿ ಅಲ್ಲಿನ ಜನರ ಮತ್ತು ಆ ದೇಶದ ಅವಶ್ಯಕತೆಗಳನ್ನು ಚೆನ್ನಾಗಿ ಅರಿತವರಾಗಿದ್ದಾರೆ. ಮತ್ತು ಆಡಳಿತದ ಎಲ್ಲಾ ಇಲಾಖೆಗಳಲ್ಲಿಯೂ ಕೂಡ ಏನೇನು ಅನುಕೂಲಗಳನ್ನು ಮಾಡಬೇಕು ಎನ್ನುವುದನ್ನು ಚೆನ್ನಾಗಿ ನುರಿತವರಾಗಿ ಈಗ ನಮ್ಮ ರಾಜ್ಯದಲ್ಲಿ ರಾಜ್ಯಪಾಲರಾಗಿ ಬಂದಿರುವುದು ನಮಗೆ ಹೆಮ್ಮೆಯ ವಿಷಯ. ಅಂತವರು ಈಗ ನೂತನವಾಗಿ ಅಧಿಕಾರವನ್ನು ಸ್ವೀಕರಿಸಿರತಕ್ಕ ಮಂತ್ರಿಗಳಿಗೆ ಉಪಯುಕ್ತವಾದ ಸಲಹೆಗಳನ್ನು ಅವರ ಭಾಷಣದಲ್ಲಿ ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾನು ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಅವರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಮಂಡಿಸಿರತಕ್ಕ ಮಾನ್ಯ ಶ್ರೀ ಜಿ. ರಾಮೇಗೌಡರನ್ನು ನಾನು ಅಭಿನಂದಿಸಿ ಅವರ ನಿರ್ಣಯಕ್ಕೆ ನನ್ನ ಅನುಮೋದನೆಯನ್ನು ಕೊಡುತ್ತೇನೆ. ರಾಜ್ಯಪಾಲರು ಅವರ ಭಾಷಣದಲ್ಲಿ ಬಂಗ್ಲಾದೇಶದೊಳಗೆ ಬಂಗ್ಲಾದೇಶದ ಜನರು ಅವರ ಸ್ವಾತಂತ್ರಕ್ಕೋಸ್ಕರ ಎಷ್ಟು ಕಷ್ಟಪಟ್ಟರೆಂದರೆ ಅನೇಕರು ಪ್ರಾಣ ತೆತ್ತಿದರು ಅನೇಕರು ನೊಂದರು, ಕೈಗಳನ್ನು ಮುರಿದುಕೊಂಡರು. ಅಂತವರಿಗೆ ಏನು ರಿಯಾಯತಿ ಕೊಡಬೇಕೋ ಅದನ್ನು ಅವರಿಗೆ ಕೊಟ್ಟು ಹಣವನ್ನು ಸಹಾಯ ಮಾಡಿದ್ದಾರೆ. ಇಡೀ ನಮ್ಮ ದೇಶದ ಜನರನ್ನೂ ಹಾಗೂ ಈ ಸಭೆಯ ಮಾನ್ಯ ಸದಸ್ಯರನ್ನೂ ಕೂಡ ಅದಕ್ಕಾಗಿ ಬೆಂಬಲವನ್ನು ಕೊಟ್ಟಿದ್ದಕ್ಕಾಗಿ ಸ್ವಾಗತಿಸಬೇಕೆಂದು ಹೇಳಿದ್ದಾರೆ. ಅವರಿಗೆ ಎಲ್ಲಾ ರಿಯಾಯಿತಿಗಳನ್ನು ತೋರಿಸಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡಿ ನಮಗೆಲ್ಲರಿಗೂ ಆ ವಿಷಯವನ್ನು ತಿಳಿಸಿದ್ದಾರೆ. ಆದರೆ ಒಂದು ವಿಚಾರವನ್ನು ಈ ಸಭೆಯಲ್ಲಿ ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಮತ್ತು ನೂತನ ಸರ್ಕಾರದವರ ಗಮನಕ್ಕೂ ತರಬೇಕೆಂದಿದ್ದೇನೆ. ನಾವು ಬಂಗ್ಲಾದೇಶದ ಜನತೆಗೆ ಎಷ್ಟು ಗೌರವ ಮತ್ತು ಅವರಿಗೆ ಅನುಕೂಲವಾಗತಕ್ಕ ಕೆಲಸಗಳನ್ನು ಮಾಡಬೇಕೋ ಅದಕ್ಕಿಂತಲೂ ಹೆಚ್ಚಾಗಿ ನಾವು ಒಂದು ಕಾರ್ಯವನ್ನು ಮಾಡಬೇಕಾಗಿದೆ. ಅದೇನೆಂದರೆ, ನಾವು ಈ ಭಾರತದೇಶದಲ್ಲಿ ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ಪ್ರಜಾಸರ್ಕಾರ, ಸ್ವಾತಂತ್ರ ಸರ್ಕಾರ ಬರುವುದಕ್ಕೆ ಹೋರಾಡಿದಂಥ ಸಾವಿರಾರು ಜನರು ಲಕ್ಷಾಂತರ ಜನರು ಸ್ವಾತಂತ್ರಯೋಧರು, ಸ್ವಾತಂತ್ರಚಳುವಳಿಗಾರರು ಇದ್ದಾರೆ. ಅವರ ವಿಚಾರದಲ್ಲಿ ಯಾವ ಒಂದು ಸ್ಮಾರಕವನ್ನೂ ಕೂಡ ನಾವು 25 ವರ್ಷಗಳು ಕಳೆದರೂ ನಮ್ಮ ರಾಜ್ಯದಲ್ಲಿ ಮಾಡಿಲ್ಲ. ಅವರನ್ನು ಈ ಸಂದರ್ಭದಲ್ಲಿ ನಾವು ಜ್ಞಾಪಿಸಿಕೊಳ್ಳಬೇಕು. ಅವರ ಕಷ್ಟ ತ್ಯಾಗ ಮತ್ತು ಅವರು ಪ್ರಾಣ ತೆತ್ತಿದ್ದರಿಂದ ನಮಗೆ ಈಗ ಸ್ವಾತಂತ್ರ ಸಿಕ್ಕಿದೆ. ನಮ್ಮ ಪ್ರಜಾಸರ್ಕಾರದ 5ನೇ ಮಂತ್ರಿಮಂಡಲ ಈಗ ಕಾರ್ಯರೂಪಕ್ಕೆ ಬಂದಿದೆ. ಆದ್ದರಿಂದ ಅಂತಹ ಯೋಧರಲ್ಲಿ ಅನೇಕರು ಈಗ ಬಹಳ ಕಷ್ಟದಲ್ಲಿದ್ದಾರೆ. ಅದರಲ್ಲಿಯೂ ಕೂಡ ಮಾನ್ಯ ಶ್ರೀ ವೀರೇಂದ್ರಪಾಟೀಲ್ ಅವರ ಸರ್ಕಾರದಲ್ಲಿ ಈ ವಿಚಾರವಾಗಿ ಅನೇಕ ಸಮಾಜವಾದ ಉಪಯುಕ್ತ ಕೆಲಸಕಾರ್ಯಗಳನ್ನು ಮಾಡಿದ್ದಾರೆ. 10 ಎಕರೆ ಜಮೀನು ಮೇಲೆ ಇರತಕ್ಕವರಿಗೆ ಮಾತ್ರ ಕಂದಾಯ ಹಾಕಬೇಕೆಂದು ಶಿಫಾರ್ಸುಮಾಡಿದ್ದಾರೆಂದು ಹೇಳಿದರು. ಅದಕ್ಕೋಸ್ಕರ ಗುಣಕ್ಕೆ ಮತ್ಸರವಿಲ್ಲದೆ ಅವರನ್ನು ಅಭಿನಂದಿಸಬೇಕು. ಅವರ ವಿಚಾರದಲ್ಲಿ ಈ ಸರ್ಕಾರ ಪೂರ್ಣಗಮನ ಕೊಡಬೇಕು. ಅದಕ್ಕಾಗಿ 6 ತಿಂಗಳು ಜೈಲುವಾಸ ಅನುಭವಿಸಿರುವವರಿಗೆ ಪೆನ್‌ಷನ್ ಕೊಡಬೇಕೆಂದು ತಂದರು. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ. ಅನಂತರ ಕೇವಲ ಮೂರು ತಿಂಗಳು ಕಾಲ ಜೈಲುವಾಸವನ್ನು ಅನುಭವಿಸಿರುವವರಿಗೂ ಆ ರೀತಿ ಪೆನ್‌ಷನ್ ಕೊಡಬೇಕೆಂದು ಒಂದು ತಿದ್ದುಪಡಿಮಾಡಿದರು. ಅದಕ್ಕಾಗಿ ಅವರಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ಈಗ ನೂತನವಾಗಿ ಆರಿಸಿಬಂದಂಥ ಮಂತ್ರಿಮಂಡಲದವರು ಅದಕ್ಕಿಂತ ಹೆಚ್ಚಾಗಿ ಬಂಗಾಳ ದೇಶದವರಿಗೆ ಏನು ಅನುಕೂಲಗಳನ್ನು ಮಾಡಿಕೊಟ್ಟರೋ ಅದೇ ರೀತಿಯಲ್ಲಿ ಕೇವಲ ಒಂದು ದಿನ ಜೈಲುವಾಸವನ್ನು ಅನುಭವಿಸಿದ್ದರೂ ಅವರಿಗೂ ಪೆನ್‌ಷನ್ ಕೊಡಬೇಕು. ಈ ಒಂದು ಇನ್‌ಟೆನ್‌ಷನ್ ಮೋಟಿವ್ ಸರ್ಕಾರಕ್ಕೆ ಮುಖ್ಯವಾಗಿ ಇರಬೇಕು. ಅದೂ ಅಲ್ಲದೆ ಸ್ವಾತಂತ್ರ್ಯಯೋಧರಲ್ಲಿ ಯಾರಾದರೂ ಒಂದು ದಿನ ಜೈಲುವಾಸದಲ್ಲಿದ್ದರೂ, ಏನಾದರೂ ತಪ್ಪಿನಿಂದ ಮ್ಯಾಜಿಸ್ಟ್ರೇಟರು 3 ಅಥವಾ 4 ತಿಂಗಳು ಯಾರಿಗಾದರೂ ಶಿಕ್ಷೆ ವಿಧಿಸಿದರೂ ಅಂತಹವರಿಗೂ ಸರ್ಕಾರದವರು ಪೆನ್‌ಷನ್ ಕೊಡಬೇಕು. ನಾನು ಹೇಳುವುದಿಷ್ಟೆ. ನಾವು ಮೊದಲೂ ಸ್ವಾತಂತ್ರಯೋಧರ ದೇಶಾಭಿಮಾನವನ್ನು ನೋಡಬೇಕು. ನಾವು ಎಂ. ಎಲ್. ಎ. ಗಳಾಗಿರುವುದರಿಂದ ನಮ್ಮಲ್ಲಿಗೆ ಅನೇಕರು ಬಂದು ಈ ವಿಚಾರವಾಗಿ ಕೇಳುತ್ತಿರುತ್ತಾರೆ. ಆದ್ದರಿಂದ ದೇಶಾಭಿಮಾನದಿಂದ ಸ್ವಾತಂತ್ರಕ್ಕೋಸ್ಕರ ಕಷ್ಟಪಟ್ಟು ತ್ಯಾಗಮಾಡಿದಂಥವರನ್ನು ನಾವು ಚೆನ್ನಾಗಿ ಗಮನದಲ್ಲಿಟ್ಟುಕೊಂಡು ಕೇವಲ ಒಂದು ದಿವಸವಾದರೂ ಜೈಲುವಾಸವನ್ನು ಅನುಭವಿಸಿದ್ದರೂ ಕೂಡ ಅಂತಹವರಿಗೆಲ್ಲರಿಗೂ ಪೆನ್‌ಷನ್ ರಿಯಾಯಿತಿಯನ್ನು ನಮ್ಮ ಸರ್ಕಾರದವರು ಕೂಡಲೇ ಕೊಡುತ್ತಾರೆಂದು ನಾನು ನಂಬಿದ್ದೇನೆ. ಇದರಲ್ಲಿ ಒಂದು ವಿಚಾರವನ್ನು ಹೇಳಬೇಕೆಂದರೆ ಆತ್ತ ಶ್ರೀ ವೀರೇಂದ್ರಪಾಟೀಲರ ಸರ್ಕಾರ ಬಿದ್ದು ಹೋದನಂತರ ಶ್ರೀ ಧರ್ಮವೀರ ಅವರ ಆಡಳಿತ ಇಲ್ಲಿ

ಪ್ರಾರಂಭವಾದ ಮೇಲೆ ನಮ್ಮ ರಾಜ್ಯದಲ್ಲಿರತಕ್ಕ ಸ್ವಾತಂತ್ರ್ಯ ಯೋಧರ ತೊಂದರೆಯನ್ನು ಹೇಳತೀರದಾಗಿದೆ. ಶ್ರೀ ಧರ್ಮವೀರ ಅವರ ಸರ್ಕಾರ ಇಲ್ಲಿದ್ದಾಗ ಇಲ್ಲಿಯ ಅಧಿಕಾರಿಗಳು ಆ ಸ್ವಾತಂತ್ರ್ಯ ಯೋಧರಬಗ್ಗೆ ವರ್ತಿಸುತ್ತಿರುವುದನ್ನು ನೋಡಿದರೆ ಆತ್ಮಗೌರವ ಇರತಕ್ಕ ಸ್ವಾವ ವ್ಯಕ್ತಿಯೂ ತನಗೆ ಪೆನ್‌ಷನ್ ಕೊಡಿ ಎಂದು ಸರ್ಕಾರಕ್ಕೆ ಅರ್ಜಿಹಾಕುವುದಕ್ಕೆ ಇಷ್ಟಪಡಲಾರ ಎಂದು ನನಗನಿಸುತ್ತಿದೆ. ಇಲ್ಲಿನ ಅಧಿಕಾರಿಗಳು ಅವರನ್ನು ಅಷ್ಟು ತಚ್ಛವಾಗಿ ಕಾಣುತ್ತಿದ್ದಾರೆ. ಆ ಸ್ವತಂತ್ರ್ಯ ಯೋಧರಿಗೆ ಷೆಷನ್ ಕೊಡತಕ್ಕ ವಿಚಾರದಲ್ಲಿ ಅಕೌಂಟೆಂಟ್ ಜನರಲ್ ಅವರು ಏನೋ ಒಂದು ಕೊಕ್ಕೆ ಹಾಕಿದ್ದಾರೆಂದು ಹೇಳಿ ದೇಶದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಆ ಯೋಧರನ್ನು ಕ್ರಿಮಿನಲ್ಸ್‌ನಂತೆ ಭಾವಿಸಿ ಇವರಿಗೂ ಕೂಡ ಜೈಲಿನಲ್ಲಿ ಇದ್ದುದಕ್ಕೆ ಮ್ಯಾಜಿಷ್ಟ್ರೇಟ್ ಕೋರ್ಟಿನ ಜಡ್ಜ್‌ಮೆಂಟಿನ ಕಾಪಿಯನ್ನು ಹಾಜರ್ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅವರು ಜೈಲುವಾಸ ಮಾಡಿದ್ದಾರೆಂಬುದಕ್ಕೆ ಬೆಂಗಳೂರು ಸೆಂಟ್ರಲ್ ಜೈಲಿನಿಂದ ಒಂದು ಸರ್ಟಿಫಿಕೇಟನ್ನು ಹಾಜರ್ಮಾಡಿದ್ದಾಗ್ಯೂ ಅದರ ಆಧಾರದ ಮೇಲೆ ಷೆನ್‌ಷನ್ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಮೇಲಾಗಿ ಅವರಿಗೆ ಜೈಲುವಾಸಕ್ಕೆ ಕೋರ್ಟಿನವರು ಆರ್ಡರ್ ಮಾಡಿದ ಜಡ್ಜ್‌ಮೆಂಟ್ ಕಾಪಿಯನ್ನೆ ಹಾಜರ್ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಆದರೆ ಕೆಲವರು ಜೈಲಿನಲ್ಲಿದ್ದಾಗಲೇ ಸತ್ತಿದ್ದರು. ಉದಾಹರಣೆಗೆ ಶಿರಾ ತಾಲ್ಲೂಕ್ ದ್ವಾರಾಳುಗ್ರಾಮದ ಉಗ್ರಪ್ಪ. ಈತ ಹರಿಜನ. ಇವನ ಗ್ರಾಮ ದ್ವಾರಾಳು. ನನ್ನ ಸ್ವಂತ ಊರಾದ ತಾವರೇಕೆರೆಗೆ ಒಂದು ಮೈಲಿಯಲ್ಲಿದೆ. ಇಂಥವರ ಬಗ್ಗೆ ಆಗಿದ್ದ ಸರ್ಕಾರದವರು ಹಾಗೆ ಜೈಲಿನಲ್ಲಿ ಸತ್ತ ವ್ಯಕ್ತಿಗಳನ್ನು ದೇ ವರ್ ರಿಲೀಸ್ಡ್ ಆನ್ ಮೆಡಿಕಲ್ ಗ್ರೌಂಡ್ಸ್ ಎಂದು ಹೇಳಿ ಅಲ್ಲಿ ರಿಜಿಸ್ಟರಲ್ಲಿ ದಾಖಲೇ ಮಾಡಿದ್ದಾರೆ. ಹೀಗಾಗಿ ಅವರ ಮರಣದ ಬಗ್ಗೆ ಯಾವ ಒಂದು ದಾಖಲೆಯೂ ಆ ಜನನ ಮರಣಗಳ ರಿಜಿಸ್ಟರಿನಿಂದ ಗೊತ್ತಾಗುವಂತಿಲ್ಲ. ಇಂಥವರ ವಿಚಾರದಲ್ಲಿ ಹೇಗೆ ಮಾಡುವುದು ? 1939ರಲ್ಲಿ ಹಿಂದೆ ನಮ್ಮ ಶಿರಾ ತಾಲ್ಲೂಕಿನಲ್ಲಿ ಅರಣ್ಯ ಸತ್ಯಾಗ್ರಹ ನಡೆದ ಕಾಲಕ್ಕೆ ನಾನು ತಾಲ್ಲೂಕ್ ಕಾಂಗ್ರೆಸ್ ಸಮಿತಿ ಪ್ರೆಸಿಡೆಂಟಾಗಿದ್ದೆ. ಆ ಕಾಲಕ್ಕೆ ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಅರಣ್ಯ ಸತ್ಯಾಗ್ರಹ ನಡೆದಾಗ ಶಿರಾ ಟೌನಿಗೆ ಅತಿ ಸಮೀಪದಲ್ಲಿ ಇರತಕ್ಕ 3–4 ಗ್ರಾಮಗಳ ಜನರೂ ಮತ್ತು ತುಮಕೂರು ಜಿಲ್ಲೆಯ ಇತರ ತಾಲ್ಲೂಕ್‌ಗಳ ಅನೇಕ ಜನರು ಬಂದು ಆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಆ ವಿಚಾರ ನನಗೆ ಬಹಳ ಚೆನ್ನಾಗಿ ಗೊತ್ತಿದೆ. ಆಗ ಶಿರಾ ತಾಲ್ಲೂಕಿನಲ್ಲಿ ನನ್ನ ಸ್ವಂತ ಗ್ರಾಮವಾದ ತಾವರೇಕೆರೆ, ಎಲೆಯೂರು ಮತ್ತು ಒಡ್ಡನಹಳ್ಳಿ ಈ ಮೂರುಗ್ರಾಮಗಳಲ್ಲಿ ಅರಣ್ಯ ಸತ್ಯಾಗ್ರಹ ಶಿಬಿರಗಳಿದ್ದವು. ನಾನು ಆ ಕಾಲಕ್ಕೆ ಅವರಿಗೆ ಕೊಟ್ಟಿದ್ದ ಸರ್ಟಿಫಿಕೇಟುಗಳು ಸಾಲದೆಂದು ಇಂದಿನ ಅಧಿಕಾರಿಗಳು ಹೇಳುತ್ತಿದ್ದಾರೆ. ನನಗೆ ಚೆನ್ನಾಗಿ ಗೊತ್ತಿರುವಂತೆ ಹರಿಜನರ ಒಬ್ಬ ಮುದುಕಿ, ಆಕೆಯ ಹೆಸರು ಗುಂಡಮ್ಮ ಎಂದು. ಈಕೆಯ ಗಂಡ ಉಗ್ರಪ್ಪ ಎಂಬಾತನು ಬೆಂಗಳೂರು ಸೆಂಟ್ರಲ್ ಜೈಲಿದಲ್ಲಿದ್ದಾಗಲೇ ಅಲ್ಲೇ ಮೃತನಾದ. ಈ ಮುದುಕಿಯ ಗ್ರಾಮ ನನ್ನ ಊರಿಗೆ ಕೇವಲ ಒಂದು ಮೈಲಿ ದೂರದಲ್ಲಿದೆ. ಆಕೆಗೆ ಈಗ 69 ವರ್ಷ ವಯಸ್ಸು. ಈ ದಿವಸ ಈಕೆಗೆ ಜೀವನಕ್ಕೇನೂ ಮಾರ್ಗವೇ ಇಲ್ಲ. ಆಕೆಗೆ ಒಬ್ಬ ಮಗಳಿದ್ದಾಳೆ. ಆಕೆ ಕೂಲಿ ಮಾಡಿ ತರಬೇಕು, ಈ ಇಬ್ಬರ ಜೀವನ ನಡೆಯಬೇಕು. ಆಕೆಗೆ ಇಲ್ಲಿಗೆ ಬಂದು ಒಂದು ಅರ್ಜಿಯನ್ನು ಕೊಡುವುದಕ್ಕೂ ಕೂಡ ಆಕೆಗೆ ಬಸ್ ಛಾರ್ಜು ಕೊಡುವುದಕ್ಕೂ ಕೂಡ ಗತಿಯಿಲ್ಲ. ಆಕೆಗೆ ಜೀವನ ನಡೆಸುವುದಕ್ಕೆ ಮತ್ತೇನೂ ಮಾರ್ಗವಿಲ್ಲದೆ ಇದ್ದ ಕಾರಣ ನಾನೇ ಆಕೆಯನ್ನು ಮಧುಗಿರಿಗೆ ಕರೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟರ್ ಹತ್ತಿರ ಒಂದು ಅಫಿಡವಿಟ್ಟನ್ನು ಮಾಡಿಸಿದೆ. ಆದರೆ ಅಧಿಕಾರಿಗಳು ಅದನ್ನೂ ಕೂಡ ಸಾಲದೆಂದೂ, ಆಕೆಯ ಗಂಡ ಜೈಲಿನಲ್ಲಿದ್ದು ಅಲ್ಲೇ ಸತ್ತ ಎಂಬುದಕ್ಕೆ ಒಂದು ಡೆತ್ ಸರ್ಟಿಫಿಕೇಟ್ ಮತ್ತು ಜೈಲು ಶಿಕ್ಷೆ ಅನುಭವಿಸಿದ ಬಗ್ಗೆ ಒಂದು ಜಡ್ಜ್‌ಮೆಂಟ್ ಕಾಪಿ ಇಷ್ಟನ್ನೂ ಹಾಜರ್ಮಾಡಬೇಕೆಂದು ಒತ್ತಾಯಮಾಡುತ್ತಿದ್ದಾರೆ. ಈ ಗುಂಡಮ್ಮನ ಗಂಡ ಜೈಲಿನಲ್ಲಿದ್ದ ಕಾಲದಲ್ಲೇ ಅವನ ಜೊತೆಯಲ್ಲಿ ನನ ಗ್ರಾಮವಾದ ತಾವರೆಕೆರೆ ಮತ್ತು ಆ ಗುಂಡಮ್ಮನ ಗಂಡನ ಊರಾದ ದ್ವಾರಾಳಿನ ಜನರ ಯಾರು ಯಾರು ಇವನ ಜೊತೆಯಲ್ಲಿದ್ದರೋ ಅವರೆಲ್ಲರಿಗೂ ಈ ದಿವಸ ಪೆನ್‌ಷನ್ ಸಿಕ್ಕುತ್ತಿದೆ. ಈಕೆಯ ಗಂಡ ಜೈಲಿನಲ್ಲಿದ್ದುದನ್ನು ನಾನೇ ಕಣ್ಣಾರೆ ನೋಡಿದ್ದೇನೆ. ಅಷ್ಟೇ ಅಲ್ಲದೆ ಹಾಲಿ ಪೆನ್‌ಷನ್ ಪಡೆಯುತ್ತಿರುವ ತಾವರೆಕೆರೆ ಬಸಪ್ಪ, ಚಿಕ್ಕಬೈರಪ್ಪ ಮತ್ತು ದ್ವಾರಾಳಿನ ಕಾಂಗ್ರೆಸ್ ಹನುಮಂತಪ್ಪ ಮತ್ತು ದ್ವಾರಾಳು ಗ್ರಾಮದ ಪಟೇಲ, ವಿ. ಪಿ. ಛೇರ್ಮನ್ ಮತ್ತು ವಿ. ಪಿ. ಸಕ್ರೇಟರಿಯವರೂ ಸಹಾ ಈತನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಯೇ ಸತ್ತನೆಂದು ಹೇಳಿಕೆ ಕೊಟ್ಟಿದ್ದಾರೆ. ಆದರೆ ಆತನ ಮರಣದ ಬಗ್ಗೆ ರಿಜಿಸ್ಟರಿನಲ್ಲಿ ಯಾವ ದಾಖಲೆಯೂ ಸಿಕ್ಕುವುದಿಲ್ಲ. ನಾನಾಗಲೇ ಹೇಳಿದ ಒಂದು ಹೇಳಿಕೆಯನ್ನು ಕೊಟ್ಟು ಇಲ್ಲಿಗಾಗಲೆ ಎರಡು ತಿಂಗಳಾಯಿತು. ಆ ಹೇಳಿಕೆಗಳೊಡನೆ ನಾನು ಇಲ್ಲಿ ಸೆಕ್ರೆಟರಿಯಟ್ಟಿನಲ್ಲಿ ಗೃಹಖಾತೆಯ ಅಂಡರ್ ಸೆಕ್ರೆಟರಿಗಳವರನ್ನು ಕಂಡಿದ್ದೆ. ಅವರು ಆಗ ಈ ವಿಧಾನ

(ಶ್ರೀ ಟಿ. ತಾರೇಗೌಡ)

ಸಭೆಯು ಜನರಲ್ ಎಲೆಕ್ಷನ್ ಮುಗಿಯಲಿ ಮಾಡೋಣ ಎಂದು ಹೇಳಿದ್ದರು. ಆದರೆ ಅವರದು ಕಲ್ಲೆದೆ. ಅವರಲ್ಲಿ ಮಾನವೀಯತೆ ಎಂಬುದಿಲ್ಲ. ಎಲ್ಲ ಅಧಿಕಾರಿಗಳ ಮನಸ್ಸೂ ಅಷ್ಟೇ ಸರ್ಕಾರಿ ದಾಖಲೆಗಳಲ್ಲಿ ಎಲ್ಲಿಯೂ ದೊರೆಯದೆ ಇರತಕ್ಕ ದಾಖಲೆಯನ್ನು ತರಬೇಕೆಂದರೆ ಅವರಿಗೆ ಎಲ್ಲಿಂದ ಸಾಧ್ಯವಿದೆ ? ಈ ವಿಚಾರವನ್ನು ಚೀಫ್ ಸೆಕ್ರೆಟರಿಗಳಿಗೂ ತಿಳಿಸಿದೆ. ಆದರೂ ಪ್ರಯೋಜನ ವಾಗಲಿಲ್ಲ. ಆ ಗುಂಡಮ್ಮನ ಅರ್ಜಿಯನ್ನು ಪುನಃ ತುಮಕೂರು ಜಿಲ್ಲಾಧಿಕಾರಿಗಳಿಗೆ ಜಡ್ಜ್ ಮೆಂಟ್ ಕಾಪಿ ಮತ್ತು ಡೆತ್ ಸರ್ಟಿಫಿಕೇಟನ್ನು ಹಾಜರ್ಮಾಡಬೇಕೆಂದು ವಾಪಸ್ ಕಳುಹಿಸಿದ್ದಾರೆ. ನಮ್ಮ ಸರ್ಕಾರಕ್ಕೆ ಒಂದು ಒಳ್ಳೆಯ ಹೆಸರು ಬರಬೇಕಾದರೆ ಇಂಥ ಕಲ್ಲೆದೆಯ ಅಧಿಕಾರಿಗಳಿಗೆ ಸೂಕ್ತ ಪಾಠವನ್ನು ಕಲಿಸಲೇಬೇಕು. ಇಲ್ಲವಿದ್ದರೆ ಸರ್ಕಾರಕ್ಕೆ ಖಂಡಿತ ಒಳ್ಳೆಯ ಹೆಸರು ಬರುವುದಿಲ್ಲ. ಎಲ್ಲಿಯವರೆಗೆ ಇಂಥ ಅಧಿಕಾರಿಗಳಿರುತ್ತಾರೋ ಅಲ್ಲಿಯತನಕ ನಮ್ಮ ಸರ್ಕಾರಕ್ಕಾಗಲಿ ಮತ್ತು ನಮ್ಮ ನೆಚ್ಚಿನ ನಾಯಕಿಯರಾಗಿರತಕ್ಕ ಶ್ರೀಮತಿ ಇಂದಿರಾ ಗಾಂಧಿಯವರಿಗೂ ಒಳ್ಳೇ ಹೆಸರು ಬರುವುದಿಲ್ಲ. ನಮ್ಮ ನೆಚ್ಚಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧೀಯವರ ಸಮಾಜವಾದವನ್ನು ದೇಶಾದ್ಯಂತವೂ ಜಾರಿಗೆ ತರಬೇಕಾಗಿದ್ದರೆ–ದೇಶದಲ್ಲಿ ಇವನು ಬಡವ, ಇವನು ಭಾಗ್ಯವಂತ, ಇವನು ಶ್ರೀಮಂತ, ಇವನು ಬಡವ, ಇವನು ಶೋಷಿತವರ್ಗದವನು ಇವನು ಶೋಷಿತವರ್ಗದವನಲ್ಲ ಎನ್ನತಕ್ಕ ಬೇಧಭಾವನೆಗಳೆಲ್ಲಾ ತೊಲಗಬೇಕಾಗಿದ್ದರೆ ಜನರಿಗೆ ಅನುಕೂಲವುಂಟಾಗಬೇಕಾಗಿದ್ದರೆ ಇಂದು ಎಲ್ಲರೂ ಪ್ರಧಾನಿ ಇಂದಿರಾ ಗಾಂಧಿ—ರೂಲಿಂಗ್ ಕಾಂಗ್ರೆಸ್ ನಾಯಕರುಗಳಲ್ಲಿ ನಂಬಿಕೆ ಇಟ್ಟು ಕೆಲಸಮಾಡುವುದಲ್ಲದೆ, ಇಲ್ಲಿ ಯಾವ ಜನರು ತಮ್ಮ ಪ್ರತಿನಿಧಿಗಳನ್ನು ಆ ಪಾರ್ಲಿಯಮೆಂಟಿಗೆ ಮತ್ತು ರಾಜ್ಯದ ಶಾಸನ ಸಭೆಗೆ ಆರಿಸಿ ನಮ್ಮೆಲ್ಲರನ್ನೂ ಕಳುಹಿಸಿದೆಯೋ ಆ ಜನಕ್ಕೆ ನಿಮ್ಮಲ್ಲಿ ನಂಬಿಕೆ ಉಳಿಯಬೇಕಾದರೆ ಮೊದಲು ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಮನಸ್ಸು ಪರಿವರ್ತನೆ ಆಗುವಂತೆ ಮಾಡಬೇಕು. ಇಂದು ಯಾವ ಆಫೀಸಿಗೇ ಹೋಗಲಿ ಲಂಚವಿಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ಒಬ್ಬ ಸಾಮಾನ್ಯ ಬಡ ವಿದ್ಯಾರ್ಥಿ ತನಗೆ ಅಗತ್ಯವಾದ ಒಂದು ವರಮಾನ ಸರ್ಟಿಫಿಕೆಟು ಪಡೆಯಬೇಕಾದರೂ ಅವನು ಲಂಚವನ್ನು ಕೊಡಲೇಬೇಕು. ಇನ್ನೂ ಅನೇಕ ಇಂಥ ವಿಚಾರಗಳಿದ್ದವು. ಆದರೆ ಅವುಗಳನೆಲ್ಲಾ ಹೇಳುವುದಕ್ಕೆ ಈಗ ಕಾಲಾವಕಾಶವಿಲ್ಲ. ನನಗೆ ಕೂಡ ಅಂಥ ವಿಷಯಗಳನ್ನೆಲ್ಲಾ ಹೇಳಬೇಕೆಂದರೆ ಮನಸ್ಸಿಗೂ ಬಹಳ ವ್ಯಥೆಯಾಗುತ್ತದೆ. ಆದರೆ ಇಂಥ ವಿಚಾರಗಳಲ್ಲಿ ಮೊದಲು ಮಂತ್ರಿಗಳು ವಿವಿಧ ಇಲಾಖೆಯ ಮುಖ್ಯಾಧಿಕಾರಿಗಳಿಗೆ ಮಾದರಿಯಾಗಿರಬೇಕು. ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಿಗೆ-ಪ್ರವಾಸ ಬಂದ ಕಾಲದಲ್ಲಿ ತಾಲ್ಲೂಕಿನ ಧಣಿಯಾದ ಅಮಲ್ದಾರನು ಮಂತ್ರಿಗಳಿಗೆ ಅಗತ್ಯವಾದ ಎಲ್ಲ ಸೌಕರ್ಯಗಳನ್ನೂ ಮಾಡಿ ಆ ಹಿತದಲ್ಲಿ ಒಂದು ಒಳ್ಳೇ ಹೆಸರನ್ನು ಪಡೆದು ಆ ಬಗ್ಗೆ ತನಗೆ ಬಂದ ಖರ್ಚನ್ನೆಲ್ಲಾ ರೆವಿನ್ಯೂ ಇನ್‌ಸ್ಪೆಕ್ಟರ್ ಮುಖಾಂತರ ರೈತರ ಮೇಲೆ ಹೇರುತ್ತಾನೆ. ಆದುದರಿಂದ ಮಂತ್ರಿಗಳಿಗೆ ಪ್ರವಾಸ ಕಾಲದಲ್ಲಿ ಅಮಲದ್ದಾರನು ಅರೇಂಜ್ ಮಾಡತಕ್ಕ ಊಟ ತಿಂಡಿ ಮತ್ತು ಟೀ ಪಾರ್ಟಿಗಳಿಗೆ ತಗುಲುವ ವೆಚ್ಚವನ್ನು ಅವರಿಗೆ ಬಿಟ್ಟು ಕೊಡಬಾರದು. ಬಿಟ್ಟು ಕೊಟ್ಟರೆ ಆ ಅವಕಾಶವನ್ನು ಅವರು ದುರುಪಯೋಗಪಡಿಸಿಕೊಂಡು ಅಲ್ಲ ಸಲ್ಲದ ಕೆಲಸಗಳನ್ನು ಮಾಡುತ್ತಾರೆ. ಅಲ್ಲದೆ ಆತನು ಏನು ಖರ್ಚು ಮಾಡಿದ್ದಾನೋ ಅದಕ್ಕೆ ಹತ್ತು ಪಟ್ಟು ಜಾಸ್ತಿ ಹಣವನ್ನು ರೆವಿನ್ಯೂ ಇನ್‌ಸ್ಪೆಕ್ಟರ ಮುಖಾಂತರ ರೈತರ ಮೇಲೆ ಬೀಳುತ್ತದೆ. ಆದುದರಿಂದ ಇಂಥ ಖರ್ಚುವೆಚ್ಚಗಳನ್ನು ಅವರು ವಿಲೊಟ್ ಮಾಡತಕ್ಕದ್ದು ಕೂಡ ಕಾನೂನಿಗೆ ವಿರೋಧವಾದದ್ದು. ಇದೇ ರೀತಿ ಆ ಪಿ.ಡಬ್ಲ್ಯು.ಡಿ. ಅವರು ಮಾಡತಕ್ಕ ಖರ್ಚು ಆ ಪಿ. ಡಬ್ಲ್ಯು.ಡಿ. ಕಂಟ್ರಾಕ್ಟರಮೇಲೆ ಬೀಳುತ್ತದೆ. ಇನ್ನುಳಿದ ಇಲಾಖೆಗಳಲ್ಲಿ ಇಂಥ ಖರ್ಚು ವೆಚ್ಚಗಳನ್ನು ಆಯಾ ಇಲಾಖೆಯಲ್ಲಿರತಕ್ಕ ಕೆಳದರ್ಜೆ ಅಧಿಕಾರಿಗಳೇ ಹೊರಬೇಕಾಗುವುದು. ಇದೇ ವಿಚಾರದಲ್ಲಿ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಜನರಲ್ಲಿರತಕ್ಕಂಥ ದೇಶಾಭಿಮಾನ ಕೆಲವು ಸರ್ಕಾರಿ ಅಧಿಕಾರಿಗಳಲ್ಲಿವೆ; ಎಂದರೆ ಅದು ತಪ್ಪಲ್ಲ. ಆದರೆ ಇಂಥವರ ಸಂಖ್ಯೆ ಕಡಿಮೆ. ಅನೇಕ ಜನ ಅಧಿಕಾರಿಗಳ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರೂ ದೇಶಾಭಿಮಾನದಿಂದ ಸ್ವಾತಂತ್ರ ಚಳುವಳಿಯ ಕಾಲದಲ್ಲಿ ಹೋರಾಟ ಮಾಡಿದ್ದಾರೆ. ಅವರ ಆ ಹೋರಾಟ ಫಲದಿಂದಲೇ ನಮಗೆ ಸ್ವಾತಂತ್ರ್ಯ ಲಭಿಸಿದೆ. ಆದರೆ ಈ ದಿವಸ ನಾವಿಲ್ಲಿ ಆಕಸ್ಮಿಕವಾಗಿ ಶಾಸಕರಾಗಿರುವಂತೆ ಆ ಅಧಿಕಾರಿಗಳೂ ಅಲ್ಲಿ ಆಕಸ್ಮಿಕವಾಗಿ ಅಧಿಕಾರ ಸ್ಥಾನದಲ್ಲಿದ್ದಾರೆ. ಆದರೆ ಈ ಅಧಿಕಾರಿಗಳ ಮನಸ್ಸು ಪರಿವರ್ತನೆಯಾಗದ ವಿನಾಃ ನಮ್ಮ ಸರ್ಕಾರಕ್ಕೆ ಒಳ್ಳೇ ಹೆಸರು ಬರುವುದಿಲ್ಲ. ಮಾನ್ಯ ಸಚಿವರುಗಳು ಏನಾದರೂ ಆಗಲಿ ಈ ಅಧಿಕಾರಿಗಳ ಬಲೆಗೆ ಬೀಳಬಾರದು. ತಮ್ಮೆಲ್ಲ ಜನರು ಇಟ್ಟಿರತಕ್ಕ ನಂಬಿಕೆಯನ್ನು ಉಳಿಸಿಕೊಳ್ಳಬೇಕಾದರೆ ನಮ್ಮ ನೆಚ್ಚಿನ ನಾಯಕರಿಗೆ

ಒಂದು ಕೆಟ್ಟ ಹೆಸರನ್ನು ತರಬಾರದು ಅನ್ನುವ ಹಾಗಿದ್ದರೆ ಈ ಅಧಿಕಾರಿಗಳ ಮನಸ್ಸು ಮೊದಲು ಪರಿವರ್ತನೆಯಾಗಬೇಕು. ನಮ್ಮಲ್ಲಿ ಅನೇಕರು ಹೇಳಿದರಂತೆ ಆ ಬ್ಯಾಂಕ್ ರಾಷ್ಟ್ರೀಕರಣವೇನೋ ಆಯಿತು. ಅಲ್ಲಿರತಕ್ಕ ಮ್ಯಾನೇಜರುಗಳ ಮನಸ್ಸೂ ಕೂಡ ಪರಿವರ್ತನೆಯಾಗದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ನನ್ನ ಸ್ವಂತ ಊರಿನಲ್ಲಿ ಒಂದು ಕ್ಯಾನರಾ ಬ್ಯಾಂಕಿನ ಶಾಖೆ ಇದೆ. ಅಲ್ಲಿರತಕ್ಕ ಆ ಬ್ಯಾಂಕಿನ ಮ್ಯಾನೇಜರವರ ಮನಸ್ಸು ಇನ್ನೂ ಪರಿವರ್ತನೆಯಾಗದಿರುವುದರಿಂದ ಅಲ್ಲಿರತಕ್ಕ ಸಣ್ಣ ಸಣ್ಣ ರೈತರಿಗೂ ಮತ್ತು ಸಣ್ಣ ಕೈಗಾರಿಕೆಯವರಿಗೂ ಇನ್ನೂ ಸಾಲದ ಸೌಲಭ್ಯಗಳು ಸಿಕ್ಕಿಲ್ಲ. ಸಾಲ ಕೊಡುವುದಕ್ಕಾಗಿ ಬ್ಯಾಂಕುಗಳು ಮಾಡಿಕೊಂಡಿರತಕ್ಕ ರೂಲ್ಸ್‌ಗಳೂ, ಬ್ಯಾಂಕಿನ ಮೇಲಧಿಕಾರಿಗಳೂ ಆಗಿರತಕ್ಕವರ ಮನಸ್ಸು ಬಡರೈತರ ಬಗ್ಗೆ ದಯೆ ಉಂಟಾಗುವಂತೆ ಬ್ಯಾಂಕಿನ ಕಸ್ಟೋಡಿಯನರಿಗೆ ಸಂಬಂಧಪಟ್ಟ ಫೈನಾನ್ಸ್ ಡಿಪಾರ್ಟಮೆಂಟ್‌ನವರು ತಿಳಿಸಬೇಕು. ರೂಲ್ಸನ್ನು ಬದಲಾಯಿಸಿ ಸರಳವಾಗಿ ಸಾಲ ದೊರೆಯುವಂತೆ ಮಾಡಬೇಕು ಮುಖ್ಯವಾಗಿ ಸಣ್ಣ ಸಣ್ಣ ರೈತರಿಗೆ ಮತ್ತು ಸಣ್ಣ ಕೈಗಾರಿಕೆಗಳವರಿಗೆ ಸುಲಭವಾಗಿ ಸಾಲ ಸಿಗುವಂತೆ ವ್ಯವಸ್ಥೆಮಾಡಬೇಕು. ಹಿಂದೆ ಶ್ರೀ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಸರ್ಕಾರಿ ಕೆಲಸ ದೇವರ ಕೆಲಸ ಎಂದು ಬೋರ್ಡನ್ನು ಹಾಕಿಸಿದರು. ಅದನ್ನು ತಾವಾದರೂ ಗಮನಕ್ಕೆ ತಂದುಕೊಂಡು ಜನರ ಹಿತಾಸಕ್ತಿಯನ್ನು ಕಾಪಾಡಿ ಕೊಂಡು ಬಂದರೆ ಮತ್ತು ನಮ್ಮ ಅಧಿಕಾರಿಗಳ ಮನೋಭಾವ ಕಾಲಧರ್ಮಕ್ಕನುಸಾರವಾಗಿ ಪರಿವರ್ತನೆಯಾಗಿ ಮಂತ್ರಿಗಳನ್ನು ಹೊಂದಿಕೊಂಡು ಹೋಗುವಂತಾದರೆ ನೀವು ಈ ಒಂದು ಎಲೆಕ್ಷನ್ನಿನಲ್ಲಿ ಗೆದ್ದಿದ್ದಲ್ಲ ಇನ್ನು ಮೂರು ಎಲೆಕ್ಷನ್‌ಗಳು ಬಂದಾಗ್ಯೂ ಜನರು ನಿಮ್ಮನ್ನೇ ಆರಿಸಿ ಕಳುಹಿಸುತ್ತಾರೆ. ಆದುದರಿಂದ ಇದಕ್ಕೆಲ್ಲಾ ಅಂದರೆ ನಮ್ಮ ನಿಮ್ಮ ಜಯಾಪಜಯಗಳಿಗೆ ನೀವು ನಾವುಗಳೇ ಕಾರಣವೆಂದರೆ ತಪ್ಪಾಗಲಾರದು. ಇನ್ನ ನಮ್ಮ ದೇಶದಲ್ಲಿ ಸ್ವಾತಂತ್ರ್ಯ ವೀರಯೋಧರಿಗೊಂದು ಸ್ಮಾರಕವನ್ನು ನಿರ್ಮಾಣ ಮಾಡಬೇಕೆಂದು ಒತ್ತಾಯಮಾಡುತ್ತೇನೆ. ಏಕೆಂದರೆ ಸ್ವಾತಂತ್ರ್ಯ ಬಂದಾಗಿನಿಂದ ಪ್ರಜಾಸರ್ಕಾರ ಬಂದ ನಂತರ ಇಲ್ಲಿ ತಾವುಗಳೆಲ್ಲಾ ಮಂತ್ರಿಗಳಾಗಿದ್ದೀರಿ. ಬಾಂಗ್ಲಾ ದೇಶದ ಸ್ವಾತಂತ್ರ್ಯ ವೀರರನ್ನು ಹೇಗೆ ಮರೆಯಲಾಗದೋ ಹಾಗೆ ಇಲ್ಲ ನಾವೂ ನೀವೂ ಇಲ್ಲಿ ನಮ್ಮ ಸ್ವಾತಂತ್ರ್ಯ ವೀರರನ್ನು ಮರೆಯಬಾರದು ; ಸ್ವಾತಂತ್ರ್ಯ ಚಳುವಳಿಯ ಹೋರಾಟಗಾರರನ್ನು ಮರೆಯಲಾಗದು.

ಇನ್ನು ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅಪ್ಪರ್ ಭದ್ರಾ ಅಣೆಕಟ್ಟಿಗೆ ಸಂಬಂಧಪಟ್ಟಹಾಗೆ ಸೆಂಟ್ರಲ್ ಸ್ಯಾನ್‌ಸರ್ಡ್ ಸ್ಕೀಮಿನಿಂದ ಚಿಕ್ಕನಾಯಕನಹಳ್ಳಿ, ಶಿರಾ, ಮಧುಗಿರಿ ಮತ್ತು ಪಾವಗಡ ಈ ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯ ಕಲ್ಪಿಸಿಕೊಡುವುದಲ್ಲದೆ ಹೇಮಾವತಿ ಯೋಜನೆಯಿಂದ ಕುಣಿಗಲು ತುರುವೇಕೆರೆ ಇತ್ಯಾದಿ ತಾಲ್ಲೂಕಿಗಳಿಗೆ ನೀರಾವರಿ ಸೌಕರ್ಯವನ್ನು ಒದಗಿಸಬೇಕೆಂದು ಮತ್ತು ನಮ್ಮ ಗಾಯತ್ರಿ ಪ್ರಾಜೆಕ್ಟಿಗೆ ಒಂದು ಕ್ರೆಸ್ಟ್ ಗೇಟನ್ನು ಇಟ್ಟು 8 ಅಡಿ ಏರಿಯವನ್ನು ಉಟಾವಣೆ ಮಾಡಿ ಶಿರಾ ಮತ್ತು ಹಿರಿಯೂರು ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯವನ್ನು ಹೆಚ್ಚಿಸಲು ಅವಕಾಶವಿದೆ. ಅಲ್ಲದೆ ಈಗ ತೆಗೆದುಕೊಂಡಿರುವ ಎರಡು ಕಾಲುವೆಗಳನ್ನು ಕೊನೇ ಪ್ರದೇಶದ ಜಮೀನಿಗೂ ನೀರು ಒದಗುವಂತೆ ವ್ಯವಸ್ಥೆಮಾಡಬೇಕು.

ಹಿಂದಿನ ಅಸೆಂಬ್ಲಿಯಲ್ಲಿ ಮಾನ್ಯ ಸದಸ್ಯರು ಕೇಳಿವ ಪ್ರಶ್ನೆಗೆ ಶ್ರೀ ವೀರೇಂದ್ರಪಾಟೀಲ್ ಹೇಳಿದರು, ಗೇಜ್ ಇಟ್ಟಿದ್ದೇವೆ, ರಿಪೋರ್ಟು ಬಂದಮೇಲೆ ಅದನ್ನು ಕನ್ಸಿಡರ್ ಮಾಡುತ್ತೇವೆ ಎಂದು. ಗೇಜ್ ಇಟ್ಟು ರಿಪೋರ್ಟು ಬಂದಿದೆ. ಈ ಕೆರೆಗೆ ಹೆಚ್ಚಿನ ನೀರು ಸರಬರಾಜು ಇದೆ ಎಂದು ತಿಳಿಸಿದ್ದಾರೆ. ಅದರಂತೆ ಕ್ರೆಸ್ಟ್ ಗೇಟ್ ಇಟ್ಟು 8 ಅಡಿ ಉಟಾವಣೆ ಮಾಡಿದರೆ, ಟೈಲ್ ಎಂಡ್ ನಲ್ಲಿರುವ ರೈತರ ಕಷ್ಟ ತಪ್ಪುತ್ತದೆ. ಇದು ಎರಡು ಡಿಸ್ಟ್ರಿಕ್ಟುಗಳಿಗೆ ಸಂಬಂಧಪಟ್ಟ ಕೆರೆಯಾಗಿರುವುದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ನೀರು ಹಂಚಿಕೆ ಮಾಡುವುದಕ್ಕೆ ಸುವ್ಯವಸ್ಥೆ ಮಾಡಬೇಕು. ಎಡಭಾಗದ ನಾಲೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಹಿರಿಯೂರು ಅಸಿಸ್ಟೆಂಟ್ ಇಂಜಿನಿಯರ್‌ರವರಿಗೆ ವಹಿಸಬೇಕು. ಬಲಭಾಗದ ನಾಲೆಯನ್ನು ತುಮಕೂರು ಡಿಸ್ಟ್ರಿಕ್ಟು ಮಧುಗಿರಿ ಸರ್ಕಲ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಶಿರಾ ಅಸಿಸ್ಟೆಂಟ್ ಇಂಜಿನಿಯರ್‌ಗೆ ವಹಿಸಿದರೆ ಎರಡು ಡಿಸ್ಟ್ರಿಕ್ಟುಗಳಿಗೂ ತೊಂದರೆಯಿಲ್ಲದಂತೆ ಆಗುತ್ತದೆ. ಇದನ್ನು ಮಾನ್ಯ ಪಿ.ಡಬ್ಲ್ಯು.ಡಿ. ಇಲಾಖೆ ಮಂತ್ರಿಗಳು ಗಮನಿಸಬೇಕು. ಈ ವ್ಯವಸ್ಥೆ ಮಾಡಿದರೆ ನೀರು ಹಂಚಿಕೆ ಮತ್ತು ನಾಲೆಗಳ ದುರಸ್ತು, ಮೇಲ್ವಿಚಾರಣೆ ಸಮರ್ಪಕವಾಗಿ ರೈತರಿಗೆ ಅನುಕೂಲವಾಗುತ್ತದೆ. ಮೈನರ್ ಇರಿಗೇಷನ್ ವಿಚಾರ ನನ್ನ ಕ್ಷೇತ್ರದಲ್ಲಿ ಹೆಚ್ಚಾಗಿ ಗಮನಿಸಬೇಕು.

ಇನ್ನು ಮುಜರಾಯಿ ಇಲಾಖೆಯಲ್ಲಿ ಅಲ್ಲಿ ಕಂಟ್ರಾಕ್ಟರ್ಸ್ ಕೆಲಸಕ್ಕೆ ಬರುವುದಿಲ್ಲ. ನಾನು ಒಂದು ಮುಜರಾಯಿ ದೇವಸ್ಥಾನಕ್ಕೆ ಕನ್‌ವೀನರ್ ಆಗಿದ್ದೇನೆ. 5 ವರ್ಷಗಳಿಂದ ಒಂದು ಸಿಥಿಲವಾದ ಕುಡಿಯುವ ನೀರಿನ ಬಾವಿ ರೆಸ್ಟೋರ್ ಮಾಡಲು ಆಗಿಲ್ಲ. ಕಂಟ್ರಾಕ್ಟರ್‌ಗೆ ದುಡ್ಡು ಆತ

(ಶ್ರೀ ಟಿ. ತಾರೇಗೌಡ)

ಮಾಡಿದ ಕೆಲಸಕ್ಕೆ ಕೊಟ್ಟಿಲ್ಲ. 5 ವರ್ಷಗಳಿಂದ ಪ್ರಯತ್ನಪಟ್ಟರೂ ಅದನ್ನು ಕಂಪ್ಲೀಟ್ ಮಾಡುವುದಕ್ಕೆ ಆಗಿಲ್ಲ. ದಿನ ಕಳೆದಂತೆಲ್ಲ ಭಾರಿ ಕಟ್ಟಡ ಇನ್ನೂ ಹೆಚ್ಚಾಗಿ ಬಿದ್ದುಹೋಗುತ್ತಿದೆ. ರೆಸ್ಟೋರ್ ಮಾಡಲು ದೇವಸ್ಥಾನದ ಫಂಡು ಇನ್ನೂ ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಅಧಿಕಾರಿಗಳ ಅನಾದರಣೆಯಿಂದ 3 ಸಾವಿರದಿಂದ 6 ಸಾವಿರ ರೂಪಾಯಿಯುವರೆಗೆ ಆ ಒಂದು ಕೆಲಸಕ್ಕೆ ಖರ್ಚು ಆಗಬೇಕಾಗಿರುತ್ತೆ. ಇದುವರೆಗೂ ಕೆಲಸ ಪೂರ್ತಿಯಾಗಿಲ್ಲ. ಅಧಿಕಾರಿಗಳು ಇದಕ್ಕೆ ಕಾರಣವಾಗಿರುವುದರಿಂದ ಅವರಮೇಲೆ ಜವಾಬ್ದಾರಿಯನ್ನು ಫಿಕ್ಸ್‌ಮಾಡಿ ಅವರ ಸಂಬಳದಿಂದ ಹಣ ಹಿಡಿದು ಈ ಕೆಲಸವನ್ನು ಮಾಡಿಸಿಕೊಡಬೇಕು. ಅವರ ಕೈಯಲ್ಲಿ ದೇವಸ್ಥಾನದ ಎರಡು ಬಾಗಿಲುಗಳನ್ನು ಗರ್ಭಗುಡಿ ಮತ್ತು ಉತ್ಸವಮೂರ್ತಿ ಕೊಠಡಿಗಳಿಗೆ ಹಾಕಿಸಿಕೊಡಲು ಆಗಲಿಲ್ಲ. ಮುಜರಾಯಿ ಇಲಾಖೆಗೆ ಗುಮಾಸ್ತರು ಅನುಭವ ಇಲ್ಲದೆ ಇರುವವರು ಬರುತ್ತಾರೆ, ಮನಸ್ಸಿಲ್ಲದವರು ಬರುತ್ತಾರೆ. ಮುಜರಾಯಿ ಧರ್ಮದರ್ಶಿಗಳ ಕಮಿಟಿಯವರು ರೆಸಲ್ಯೂಷನ್ ಮಾಡಿದರೆ ಅದಕ್ಕೆ ಬೆಲೆ ಕೊಡುವುದಿಲ್ಲ. ಮಾನ್ಯ ರೆವಿನ್ಯೂ ಸಚಿವರಿಗೆ ಇದರಲ್ಲಿ ಅನುಭವವಿದೆ, ಸ್ವಲ್ಪ ಮಾನ್ಯ ಸಚಿವರು ಇದಕ್ಕೆ ಗಮನಕೊಟ್ಟು ಇದನ್ನೆಲ್ಲಾ ಬಗೆಹರಿಸಿದರೆ, ಜನತೆ ನಿಮ್ಮನ್ನು ಅಭಿನಂದಿಸುತ್ತಾರೆ, ಜನತಾ ಪ್ರತಿನಿಧಿ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಷ್ಟನ್ನು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಪಾಯಿಂಟ್ ಆಫ್ ಆರ್ಡರ್, ಅಧಿಕಾರಸ್ಥಾನದಲ್ಲಿ ಇರುವ ಹಿರಿಯ ಮಂತ್ರಿಗಳು ಸತ್ ಸಂಪ್ರದಾಯ ಮತ್ತು ಸನ್ನಡತೆ ವಿಷಯದಲ್ಲಿ ಹೇಳುತ್ತಾರೆ. ಆದರೆ ಲೋಕಸಭೆ ಮತ್ತು ರಾಜ್ಯಸಭೆಯ ವಿಚಾರವನ್ನು ಯೋಚನೆ ಮಾಡಿದಾಗ ಅಲ್ಲಿ ಹೊಸದಾಗಿ ರಚಿತವಾದಂತಹ ಸಚಿವ ಸಂಪುಟದ ಪರಿಚಯವನ್ನು ಸಭೆಗೆ ಮಾಡಿಕೊಟ್ಟರು ಎಂದು ಪತ್ರಿಕೆಯಲ್ಲಿ ಓದಿದ್ದೆ. ಆದರೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸದಸ್ಯರ ಪರಿಚಯವನ್ನು ಇನ್ನು ಮಾಡಿಸಿಕೊಟ್ಟಿಲ್ಲ. ಈಗ ಇರತಕ್ಕ ಅನೇಕ ಜನ ಮಾನ್ಯ ಸಚಿವರುಗಳು ಯಾರು, ಯಾರು, ಅವರ ಪೋರ್ಟ್‌ಪೋಲಿಯೋ ಏನು ಏನು ಎಂದು ಗೊತ್ತಿಲ್ಲ. ಅವರ ಪರಿಚಯವನ್ನು ಮಾಡಿಸಿ ಕೊಡಬೇಕು.

ಅಧ್ಯಕ್ಷರು.—ಇದು ಕ್ರಿಯಾಲೋಪ ಆಗುವುದಿಲ್ಲ. ಏನಾದರೂ ಹೇಳಬೇಕು ಎಂದರೆ ಹೀಗೆ ಎದ್ದು ಬಿಡುವುದು ಸಂಪ್ರದಾಯವಲ್ಲ.

† Sri C. M. ARUMUGHAM (Kolar Gold Fields).—Madam Speaker, I am really grateful to you for having given me a chance to speak on the Address of the Governor of Mysore and the points referred to in it.

Madam, this present Government is determined to fight against poverty, against injustice, against tyranny, oppression and also against unemployment in this country. And, therefore, they brought the Twenty-Fourth Amendment of the Constitution, where by the Parliament could amend any article of the Constitution. Secondly they have got another amendment to the Constitution, which is called the Twenty-fifth Amendment Act and which we discussed on the first day of this Session and passed a Resolution ratifying the proposed amendment. That amendment substitutes a clause in Art. 31 and replaces the word "compensation" by the word "amount." They have brought this Amendment in order to fix the amounts for any property of individuals acquired for the welfare of the State and country or people; that 'amount' should be fixed by law and that law cannot be called in question in any court.

---

† Indicates that the remarks or speeches have not been revised by the member concerned.

The Government have brought another amendment, namely, the Twenty-sixth Amendment wherein they have withdrawn the princely privileges and the privy purses paid to the Ex. Maharajas and the princes like our Finance Minister Sri Ghorpade. Whenever we questioned him, Sri Ghorpade was saying that he was elected four times though he was a prince. He is now here connected with princely privileges as in the case of Sri Devaraj Urs though he is an 'Urs.' 'Even Winston Churchill was elected six times; he was in the House of Commons for 30 long years; just because Churchill was in the House of Commons for 30 long years, he cannot be called as a progressive man. Likewise just because my friend Sri Ghorpade was elected four times because people voted him, you cannot consider him a progressive man.

There are various reasons for bringing these Amendments; you know them and this House knows. Any way they have withdrawn and removed all the princely privileges and privy purses. I congratulate our Pime Minister and our Chief Minister for that purpose. What those privileges were, of course, everybody knows. The Princes had their own flags. They could use their own Number-plate on their cars and use their own symbol. They need not pay duties and taxes under those privileges. They could import food from foreign countries. They could import even drinks and tobacco for which there was no duty. The gardens of their palaces were maintained by the State. Their water tax and electricity tax were paid by the Government. They could possess arms and ammunition without a license. There was no need for them to pay road tax. Police guards were provided to them; they were entitled to security arrangements. These Rajas and Maharajas were celebrating their birthdays and marriage with lot of pomp and show and Government used to provide them so many facilities on those occasions. Whenever these Rulers imported goods not only for themselves but for their family or guests, those goods were exempt from duties. The Government brought a good measure and it is a good thing that the Rulers' privileges have gone now. The Government is moving in a path whereby the economic goods of the country will be distributed equally between the destitute and the rich and between capital and labour.

3-00 P.M.

The privy purses range from Rs. 100 to Rs. 25 lakhs. We can give Rs. 100 but on principle and policy, we are opposed to giving it and also the privileges. When the Government have abolished the privy purses and privileges, I request the Government to take the necessary measures to abolish certain privileges enjoyed by certain posts in the country. There are people in this country living in very palatial buildings. These buildings are constructed on an area ranging from 270 acres to 10 acres. To maintain such a high post and to allow him

(SRI C. M. ARUMUGHAM)

to live in a style befitting his status, Government spends about Rs. 10-20 lakhs. Today there are privileged classes and under-privileged classes. These privileged class of people who occupy certain high posts in the country are occupying palatial buildings which are maintained by the Government at the cost of the poor people.

Sri D. DEVARAJ URS (Chief Minister).—I request the hon. Member to be more explicit in the matter.

Sri C. M. ARUMUGHAM.—Madam, I mean the posts of big V.I.Ps, posts of Governors. Even today no customs duties are levied on the goods or drinks or articles of food imported by them. Water is supplied free to them. They need not pay sales tax. The bungalow in which they live is fully frunished for them. On the one hand you are abolishing the privy purses and princely privileges while on the other hand you are creating a second class Maharajs in the country. The higher you go the greater are the privileges enjoyed. There are thirty crores of people in this country who are not having a square meal a day; there are lakhs of people who are sleeping on the footpath; there are lakhs of people who are living in slums; there are crores of people who are living without water. The other day the Governor was mentioning in his Address a dozen or so villages in the Mysore State which are not having drinking water. Still there are bungalows occupied by big V.I.Ps where there are dozen wat r taps. Yet you talk of socialism. When you are not able to provide water taps for hundred or two hundred houses, you are providing a dozen or even more to a bungalow. Does it require so many water taps? When lakhs of people are living in single-room tenaments, there are V.I.Ps. holding very big posts in the country who are living in 30 or 40 rooms, with ten bed rooms—a husband and wife having 10 bed rooms!

Sri H. SIDDAVEERAPPA (Minister for Health).—Is it possible?

Sri C. M. ARUMUGHAM.—When the hon. Minister was the Home Minister in 1952 once I met him. Subsequently, he became the Leader of the Oppostion and suddenly he became a Minister again.

Take for instance, the Improvement Trust Board. Thousands of people apply for sites and they are given to big people. A site is allotted to a man from Kashmir. Perhaps Kashmiris are having better claims than Bangaloreans. More privileges and benefits should be given to Mysoreans. When the common people apply for sites measuring 40 by 60 feet they do not get them. Here in Bangalore the palatial bungalows having an area of 6 hectares are provided with 13 rooms. In Bombay such bungalows have an area of 19 hectares and in Poona 34 hectares. These palatial bungalows are built only for one person to live in. When a person is not having even a small site measuring 30 by 40 feet, is it necessary to have such palatial bungalows? When you have taken away the privileges of Maharajas, why do you

want these *chotta* Maharajas? The Chief Minister knows that a person drawing Rs. 50 or 100 has to pay 10% of his pay as rent for staying in Government quarters while a person drawing Rs. 5,500 per month is given a rent-free quarters. Can we allow such things in a country headed by our beloved Prime Minister? The higher you go the more the privileges and the lower you go the less the provileges. Do you want to have this in a socialistic Government? Do you call this Government wedded to socialism, a government meant for upliftment of poor people, poor workers, and so on?

Sri H. SIDDAVEERAPPA.—The hon. member is at liberty to criticise the Ministers but not the Governor.

Sri C. M. ARUMUGHAM.—The hon. minister will kindly have patience to listen to me. I am not attacking any person. These are political appointments. Please don't drive me to the point as to how these are made. I request you to kindly listen to me.

Sri D. DEVARAJ URS.—I only wish to submit that if the hon. member indirectly refers to the posts of Governors, to whom these privileges are provided then he must know that these are provided under the constitution. If the Constitution has to be amended so as to change these privileges or reduce these privileges, that is a different matter. But as long as it is there, it is the Government's business to provide these privileges.

Sri H. D. DEVE GOWDA.—The hon. Minister is suggesting to bring an amendment.

Sri D. DEVARAJ URS.—It is all right. The hon. member can bring a resolution. But this constitutional provision is there to provide the Governor all these privileges.

Sri H. SIDDAVEERAPPA.—The Governor alone is not living there. He has to invite so many guests and foreign dignitaries.

Sri D. DEVARAJ URS.—These are not their properties either. Art. 158 specifically mentions what are the perquisites and other things that should be provided to the Governor. Whoever is the Governor, he enjoys these. If tomorrow the hon. member Sri C. M. Arumugham were to become Governor he will enjoy it. The Governor is not owner of these properties, whereas in other instances they not only live but they own properties.

Sri C. M. ARUMUGHAM.—Madam Speaker, I am not referring to the person of the Governor. I have not said so and so is the Governor and he is enjoying all this. I am only attacking the post of the Governor. I want to know whether all these privileges are necessary. I even go to the extent of asking whether it is essential to have Governor?

Sri H. SIDDAVEERAPPA.—It is essential.

Sri C. M. ARUMUGHAM.—I say it is not essential. The Maharajas and Rajas had these privileges because they were ruling the country. Can we give the same privileges and concessions to the appointed posts? Is it correct? If they are in the constitution, you amend it. When you want to amend the fundamental rights and Directive Principles, can you not amend these?

ಶ್ರೀ ವಾಟಾಳ್ ನಾಗರಾಜ್.—ರಾಜ್ಯಪಾಲರು ಪ್ರಜಾಪ್ರಭುತ್ವದ ದೊರೆಗಳು. ಪ್ರಜಾಪ್ರಭುತ್ವದಲ್ಲಿ ರಾಜರಿಗಿಂತ ಹೆಚ್ಚು ಸೌಲತ್ತನ್ನು ಅವರು ಅನುಭವಿಸುವರು. ಅದು ನಿಮ್ಮ ಸಮಾಜವಾದದಲ್ಲಿ ಕಣ್ಣಿಗೆ ಕಾಣುವುದಿಲ್ಲ.

Sri C. M. ARUMUGHAM.—Last time, when I was speaking about the unemployment, I could not get enough time. Everyone knows that in this country the per capita income in 1968-69 was Rs. 546 and it is going to be Rs. 636 in 1973-74 provided the expected investments and savings are there. But according to Sri V. K. Krishna Menon this per capita income is calculated taking into account a large number of persons who draw more than Rs. 5000 and a few who draw less than Rs. 50 and striking an average. This is not correct. There is no minimum wages fixed nor fair wages fixed for a family. Therefore, why do you spend lakhs of rupees in maintaining these bungalows? Why not you levy some tax? There cannot be two citizenships in India. In the eyes of the law everybody is equal. If you say that You want to have a socialist society, everybody should go in Ambassador cars. Where is the necessity to import an Impala without imposing duty on it? It is left to the Central Government and State Government to take action in these matters.

Coming to the services, when you talk of socialism, why do you allow the I. A. S. and I. P. S. officers to get more than the Mysore Civil Service Officers? Just because you give more to an I. A. S. officer, do you say he has become intelligent overnight. You retire an I.A.S. officer at 58 but the moment the Mysore Civil Service Officer reaches 55 years you retire him. What justification is there? Is it not discrimination. Then how about the salary? An employee of the Government of India gets more salary and allowances than a Mysore Government servant. After all India is one country with one citizenship. It is not United States where every State has citizenship. There are two citizenships one for the State and another for the federal State. In India there is only one citizenship. An employee of the Central Government gets more than an employee of the State Government. Why is this discrimination? Is it fair to discriminate one citizen and another who do the same type of work?

I was appreciating the socialist view of the Government. But what is the action taken to improve the poor people in the country? The Congress (R) have during the last one year proclaimed to bring in socialism in the country and I think they will do it. I must first of all say that this is the first Government which has given more representation to the scheduled castes. I think there are 5 ministers.

When we attained independence Sri K. C. Reddy thought of giving representation to one person; next Sri K. Hanumanthaiya gave representation to one scheduled caste person and afterwards Sri Nijalingappa who was at the helm of affairs for a short time gave representation to one person and in 1956-57 after the general elections Sri Nijalingappa took one representative into his cabinet. He was there for a year and afterwards there was quarrel among themselves and he was removed. Then Mr. Jatti became the Chief Minister. He gave representation to two persons. After him, Mr. Veerendra Patil became the Chief Minister. He also gave representation for two persons, viz , Sri Rachaiah and Sri Y. Ramakrishna. Madam Speaker, to-day there are five representatives belonging to Scheduled Castes in the Government. Apart from this, there are 32 MLAs belonging to Scheduled Caste. I would like to mention here the progress made by the Scheduled Caste for the last 25 years after independence and 20 years after the functioning of constitution in India. It is said that there are so many safeguards given to the Scheduled Caste under articles 15, 16, 46 and so on. Of course the Constitution was written by Dr. Ambedkar who also belonged to Scheduled Caste and he put the word 'Scheduled Caste' everywhere in the constitution. He gave enough protection to the Scheduled Caste and other poorer sections of the country under the constitution. During the past twenty five years so many Governors were appointed but not a single post of Governor was filled by a person representing the Scheduled Caste. There are about 282 Ambassadors representing India in foreign countries. But not even one Scheduled Caste person has been represented among them. Then there are about 159 public sector industries wherein the representation of the Scheduled Caste is as follows :

| | | |
|---|---|---|
| Class I posts | ... | 1.07 |
| Class II posts | ... | 0.92 |

SRI B. P. KADAM.—May I know the source from which this information has been collected by the Hon'ble member ?

SRI C. M. ARUMUGHAM.—The Government of India had appointed a Committee and they collected this information. Then I have collected this information from the Report of the Commissioner for Scheduled Castes and Scheduled Tribes. I don't know whether the Ministry concerned has ever seen these reports.

Then Madam, you may ask me about the Central Government with regard to the upliftment of Scheduled Caste people. The Central Government has provided for 12½ per cent reservation for Scheduled Caste and 5½ per cent for Scheduled Tribes in respect of Class I posts. Even though there are so many safeguards provided for Scheduled

(SRI C. M. ARUMUGHAM)

Caste under the Constitution the position in respect of Central Government for Scheduled Caste is as follows :

| | | |
|---|---|---|
| Class I posts | ... | 1.89 |
| Class II posts | ... | 3.36 |
| Class III posts | ... | 6.38 |

Then in respect of class IV posts which consists of menials like butlers, cooks, peons, scavengers, sweepers etc., and which does not call for any qualification or merit, there also the representation of the Scheduled Castes is only 11.36. This is all about the Central Government.

Now coming to the State of Mysore from the year 1947 to 1971 *i. e.* from the year of independence the representation provided for Scheduled Caste is 15% and for Scheduled Tribes is 3%. The position that exist in respect of various classes of services in the State of Mysore is as follows :

| | | |
|---|---|---|
| Class I posts | ... | 3.63 |
| Class II posts | ... | 3.67 |
| Class III posts | ... | 6.87 |
| Class IV posts | ... | 17.01 |

They have not represented atleast 30 to 50 percent of Scheduled Caste people in Class IV services. For a class I post you may say that the candidates must be M. A. in Economics etc., or his father should have been holding a big position etc. But for a class IV post no such thing is required. A peon carrying a bundle of files does not require any qualification or efficiency. So Madam, the Scheduled Caste has suffered all these 25 years and yet there has been no tangible change in respect of giving them representation in various services of the Central and State Governments. Now I look upon the present Government to see that whatever was not done during all these years to do it now and give top-priority to the proper representation of Scheduled Caste in all respects. There are other backward communities also who needs protection and prosperity in our State. Almost every community here is called backward. I don't stand in their way. They should also be given due encouragement.

Then I would like to bring another thing to your kind notice *i. e.*, there were about 788 vacancies of I. A. S. posts, out of which, 144 were reserved for Scheduled Caste. They have filled only 83 and the rest are not filled.

3-30 P. M.

Out of 543 posts of I.A.S. officers, 110 posts were reserved, but only 63 posts have been filled up. Scheduled castes and tribes have not been properly represented in various Departments right from the office of the Governor up to the office of the High Commissioners. No scheduled caste person was ever appointed as Chairman or Managing Director of any big company. There are 80 universities in the country, but proper representation has not been given to scheduled castes by the University Grants Commission. Even in the Planning Commission, proper representation has not been given to scheduled castes not even in the statutory bodies, One may talk of socialism, one may see the pitiable condition of the scheduled castes, but what is the good you have done?

Sri K. Hanumanthayya, the former Chief Minister of Mysore, is now the Railway Minister at the Centre. I will confine my remarks to only Southern Railways as Mysore State is included in Southern Railways. Madam, it is interesting to note that there are 405 Class-I posts. These are very big posts, where the officers travel in a separate saloon and separate train when there is no accommodation for ordinary people in third class. In these Class-I posts, there are only 9 scheduled castes persons, and the percentage is only 2.2. In Class-II posts, the percentage is 3.89, in Class-III posts it is 8.23 and in Class-IV only 19 per cent. That is the position of scheduled castes in Southern Railways. Even when we had inadequate representation in various departments in Mysore State, 17 officers belonging to scheduled castes were removed on the plea that they were appointed as local candidates.

SRI H. SIDDAVEERAPPA.—When and where ?

SRI C. M. ARUMUGHAM.—I think it is during the regime of Sri S. Nijalingappa or Sri Veerendra Patil.

SRI M. S. KRISHNAN.—That was prior to the split of the Congress when all of you were there.

SRI C. M. ARUMUGHAM.—I request that adequate representation for the scheduled castes should be given as per the constitutional provision, and the Government should take immediate action in this behalf. Immediate action should be taken to protect the rights of every community on the basis of population. I think Sri D. Devaraj Urs, our present Chief Minister used this criteria in the issue of tickets for election. Likewise, the interests of all communities should be safeguarded, and the wealth of the nation and the State should be equally distributed. You cannot allow concentration of wealth. Madam, some time back I was travelling from Madras Central to Meenambakam Airport and I saw on either side of the road factories and industries owned by the former Finance Minister of India. You have allowed such persons to amass wealth. When you talk of land reforms and urban ceiling, and when you are distributing surplus land, please see that surplus wealth is also distributed.

Thank you, Madam.

[MR. CHAIRMAN (SRI T. R. SHAMANNA) in the Chair]

† Sri H. LINGA REDDY (Karugodu).—Sir, while thanking the Governor for the Address, I would like to bring out a few points for favour of consideration and necessary action by the Government. Bellary was the Divisional headquarters in the erstwhile Madras State, but this City has been considerably neglected while other areas have been given preferential treatment. About 26 offices have been shifted from Bellary to Gulbarga, and industrially Bellary has been backward like any other area. Raichur, though a contigious district has been declared as a backward area, but Bellary has not been declared as a backward area, and the benefits which ought to have been given to Bellary have not been given so far.

Several hon. members have talked about the upliftment of scheduled castes. Show me a place where there is a common well from which people from all communities take water? What steps have been taken by the Government of India or the Mysore Government or any other Government to improve the condition of the scheduled castes? It is very unfortunate that even today there is no protected water supply in the villages. I request the present Government to take steps to see that only one common well with a tank is provided to each village so that people of all caste and creed take water from that common well. Then only, there is salvation. Everybody talk about the upliftment of scheduled castes on the platform. But, what they say on the platform is quite different from what they do. I request the Government to see that Mysore State becomes a model State in the upliftment of scheduled castes at least during the course of 5 years.

With regard to ceiling on lands, I would like to point out that there should be no exemption of any kind on Co-operatives, Joint Farmings or temple lands or the company lands. Ceilings on those lands must be avoided. The ceiling should be so put that there should be an economic unit; otherwise no purpose would be served by simply granting 5 acres 10 acres, or 15 acres to an individual without providing water facilities. In the case of dry lands, I do not know what facilities are going to be provided by Government to the persons in respect of banking facilities, water facilities, bulls etc. The lands granted by the Government would be taken away once again by the capitalists. I am only requesting the Government to issue an order that people who have been granted wet lands upto the extent of 10 acres or 15 acres, should not be attached either by the revenue authorities or by the Courts. You will be thus helping the people to come up.

The Governor's Address is very bald in the cooperative field. It is high time that the Government should withdraw the nominees made to the several co-operative societies and only such people who are interested in serving the poor people might be nominated or to see that they are elected by the shareholders of the society. These nominations have been done as a sort of political favour to those people.

The private industries started by the people are not thriving properly. These persons have been troubled sufficiently by the Government. It is high time the Government should go to the rescue of the poor industrialists.

The Bellary City was the Divisional Headquarters of Cuddappah and Kurnool while it was in the erstwhile State of Madras. After its merger, it was tagged on to the Bangalore Division and subsequently it is tagged on to the Gulburga Division. The distance from Gulbarga to Bellary is 200 miles and from Bellary to Bangalore it is 200 miles. In view of the divisional offices being located in Gulbarga, the people are finding it extremely difficult to attend to their work. If the Divisional Offices are located at Bellary, the peonle from Gulbarga, Raichur and Bidar can conveniently come to Bellary and attend to to their work and if need be they can easily proceed to Bangalore to attend to their work at the Secretariat. It has been causing great hardship to the people of those districts to attend to their work. I therefore strongly plead that the Bellary City be made a divisional headquarters instead of Gulbarga. Further, there are sufficient facilities for locating the several offices at Bellary. The people of Gulbarga, Raichur and Bidar wou d not be put to hardship, they can attend their work at Bellary and if need be, they can proceed to Bangalore without any difficulty. It would be more troublesome for the people to move up and down Gulbarga. This would avoid unnecessary expenditure not only on the officers but also saves the expenditure of people. The Steel Plant at Tornagal is coming up pretty fast and there is great possibility of increasing commerce. Under these circumstances, I urge the Government to locate the Divisional Headquarters at Bellary.

With regard to Bank's Nationalsation, I might say that it has helped only the rich people for becoming richer. It has not helped the poor people. I therefore request the Government to move the Central Government to help even a small farmer owning about 2 acres of land for extending the credit facilities. It is learnt that no bank will advance the raiyat if his lands are situated beyond 10 miles of the bank and that he should own atleast 5 acres of land. If this condition is insisted upon, it would be difficult for a poor rai yat to avail of the banking facilities. I further request the Government to constitute a small committee to assist the farmers in securing financial assistance.

The Minimum requirements of every village is: water, shelter, clothing, food, education and communication. Even after 24 years of independence, it is regretable to note that even the border roads have not been so far improved. It is high time that the Government atleast open its eyes now and improve the roads that connect one district to another.

(SRI H. LINGA REDDY)

The industries should be encouraged because both the industries and agriculture should go together. There is no use of concentrating all the industries in the cities like Bangalore. These industries must be properly dispersed. Some of the industries must be located atleast in district headquarters. Some of the industries must be taken to Firka headquarters. It is only then there would be a change in the attitude of the villagers.

I was told recently that the power of granting land has been taken away from the officers. Hitherto the powers to grant lands were vested with the Deputy Commissioners. I request that these powers must once again be delegated to the Deputy Commissioners for grant of lands.

With regard to M.S.R.T.C. buses, I would like to bring to your notice that the plight of passengers travelling in these buses is horrible. These passengers have no drinking water facilities at the Bus stands, much less a shelter to them. The conductors and drivers are frequently changed. These buses are not provided with a spare stepney and spanners. If there is any breakdown, the passengers will have to be standed for hours together. Once I happended to travel in a Government Bus. Unfortunately the bus was stopped for want of a stepney. Even the other bus of the same Department which came from the opposite direction could not spare a stepney to the bus. I am sorry to say that the bus was standed for 4-5 hours. Some private bus came to our rescue. I therefore request the Government to provide spare parts like spanners and a stepney to all buses which are running long distances.

Last but not the least. My friends have stated that no paper moves in all the public offices. It is most regrettable and it has to be improved and there must be a finality for disposal of these files. Let them take, a month, or two months or three months, but there should be a finality for this. I myself have got this experience. The papers do not move at all. I am a victim in this connection. A file did not move for the last 17 years. When such is the stage of affairs even to a person like me, you please imagine the fate of a person coming from a village. I was under the impression that Sri Sukhadia was an experienced Chief Minister and we would have a good Governor's Address. But I find from the Address given by him that somebody had prepared the same for him. Lastly I request the Government to consider all the points and see something is done during the course of these five years.

There is a lot of seepage water in Bellary and Raichur Districts. There is a village called Kuntoji where some lands have been affected. The officials concerned when requested did not care to look to the needs of the persons. I asked the officers how much land is cultivable, how

much has been waste and what are the steps taken by the Government to pay compensation to the persons affected in this regard. The officials concerned have not replied yet. I request the Gorernment to do the needful in the matter. With these words I conclude my speech. Thank you.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯಧ ರಾಜ್ಯಪಾಲರು ಈ ವಿಧಾನ ಮಂಡಲದಲ್ಲಿ ಮಾಡಿರತಕ್ಕ ಭಾಷಣಕ್ಕಾಗಿ ವಂದನೆಯನ್ನು ಸಲ್ಲಿಸತಕ್ಕಂಥಾ ನಿರ್ಣಯವನ್ನು ಕುರಿತು ಮಾತನಾಡುತ್ತಾ ಈ ನಿರ್ಣಯದಲ್ಲಿ ಕಂಡುಬರತಕ್ಕಂಥಾ ಹಲವಾರು ಸಮಸ್ಯೆಗಳನ್ನು ಯೋಚನೆ ಮಾಡಿ ನಾನು ರಾಜ್ಯಪಾಲರು ತಳೆದಿರತಕ್ಕ ನಿಲುವನ್ನು ವಿರೋಧಿಸಿ ಮಾತನಾಡತಕ್ಕ ಪರಿಸ್ಥಿತಿಯಲ್ಲಿದ್ದೇನೆ. ಹಲವಾರು ವಿಷಯಗಳನ್ನು ಕುರಿತು ಮಾನ್ಯ ರಾಜ್ಯಪಾಲರು ವಿವೇಚನೆ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಮೈಸೂರು ರಾಜ್ಯದಲ್ಲಿ ಯಾವ ಕೆಲಸಕಾರ್ಯಗಳು ತ್ವರಿತ ಗತಿಯಿಂದ ನಡೆಯಬೇಕಾಗಿತ್ತೋ ಅವು ಹಲವಾರು ಒತ್ತಡಕ್ಕೊಳಗಾಗಿ ಅವು ಯಾವ ಪರಿಹಾರವನ್ನು ಕಾಣದೆ ಹಾಗೆಯೇ ಉಳಿದುಕೊಂಡಿವೆ. ರಾಜ್ಯಪಾಲರು ಏನು ತಮ್ಮ ಭಾಷಣವನ್ನು ಈ ಶಾಸನ ಸಭೆಯ ಮುಂದಿಟ್ಟಿದ್ದಾರೆ ಅದರಲ್ಲಿ ರಾಜ್ಯದ ಆಡಳಿತವನ್ನು ಕುರಿತು ಬಹಳ ಬಗೆಯಾಗಿ ಪ್ರಶಂಸಿಸಿ ಭಾಷಣ ಮಾಡಿದ್ದಾರೆ. ಆಡಳಿತದಲ್ಲಿ ಹಲವಾರು ನ್ಯೂನತೆಗಳು, ಲೋಪದೋಷಗಳು ಇದ್ದರೂ ಕೂಡ ಅವುಗಳನ್ನು ತಮ್ಮ ಭಾಷಣದಲ್ಲಿ ತೋರಿಸದೆ ಅವುಗಳನ್ನು ಮುಚ್ಚಿಹಾಕಿದ್ದಾರೆ. ರಾಜ್ಯಕ್ಕೆ ಆಗಿರತಕ್ಕ ಅನ್ಯಾಯಗಳನ್ನು ಈ ಭಾಷಣದಲ್ಲಿ ಪ್ರಸ್ತಾಪಿಸುವ ಗೋಜಿಗೆ ಹೋಗಿಲ್ಲ. ಹಲವಾರು ಪ್ರಾಮುಖ್ಯವಾದ ವಿಷಯಗಳನ್ನು ಕೈಬಿಟ್ಟು ರಾಜ್ಯಪಾಲರು ತಮ್ಮ ಭಾಷಣವನ್ನು ಮುಗಿಸಿದ್ದಾರೆ. ಅದಕ್ಕಾಗಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ ಮೈಸೂರು ರಾಜ್ಯದ ಆಡಳಿತವನ್ನು ವಹಿಸಿಕೊಂಡಿರತಕ್ಕ ಈ ಮಂತ್ರಿಮಂಡಲದಿಂದ ಪ್ರಜಾಸತ್ತೆ ಮತ್ತು ಬಡವರ ಹೆಸರಿನಲ್ಲಿ ನಮ್ಮ ರಾಜ್ಯ ಇತರ ರಾಜ್ಯಗಳಂತ ಮುಂದುವರಿಯುವುದು ಎಂದರೆ ಇದರಲ್ಲಿ ನನಗೆ ಅನುಮಾನ ಇದೆ. ಈ ಮಂತ್ರಿಮಂಡಲದ ಮೇಲೆ ಬಹುದೊಡ್ಡ ಆಪಾದನೆಗಳನ್ನು ಹೊರಿಸತಕ್ಕ ಸಂದರ್ಭವನ್ನು ನಾವು ಕಾಣಬಹುದು. ಏತಕ್ಕೆಂದರೆ ಈ ರಾಜ್ಯದಲ್ಲಿ ಮೊಟ್ಟಮೊದಲನೆಯದಾಗಿ ಮಂತ್ರಿಮಂಡಲದ ರಚನೆ ಬಹಳ ಕಳಂಕಪ್ರಾಯವಾಗಿ ರಚನೆಯಾಗಿದೆ. ಇದು ತುಕ್ಕುಹಿಡಿದಿರತಕ್ಕ ವ್ಯಕ್ತಿಗಳನ್ನು ಒಳಗೊಂಡಂತಹ ಮಂತ್ರಿಮಂಡಲ. ಈ ಮಂತ್ರಿಮಂಡಲದ ಬಗ್ಗೆ ಶ್ರೀಮಾನ್ ದೇವರಾಜ ಅರಸ್ ಅವರು 24-3-72 ರಂದು ನನ್ನ ತಂಡದ ಬಗ್ಗೆ ನನಗೆ ಹೆಮ್ಮೆ ಇದೆ ಎಂದು ಹೇಳಿದ್ದಾರೆ. ಅದು ಪತ್ರಿಕೆಯಲ್ಲಿ ಬಂದಿದೆ. 24-3-72 ರಂದು ರಾತ್ರಿ 8 ಗಂಟೆಯ ಸಮಯದಲ್ಲಿ ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳು ತಮ್ಮ ಕಛೇರಿಯಲ್ಲಿ ಬಹಳ ನಮ್ರತೆಯಿಂದ ಹೇಳಿದ ಮಾತು ಇದು. ಅವರು ನನ್ನ ತಂಡದ ಬಗ್ಗೆ ನನಗೆ ಹೆಮ್ಮೆ ಇದೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಈ ಮಂತ್ರಿಮಂಡಲದಲ್ಲಿ ಕೆಲವು ಒಳ್ಳೆಯ ವ್ಯಕ್ತಿಗಳು ಇದ್ದಾರೆ. ಪ್ರಾಮಾಣಿಕವಾಗಿ ಈ ರಾಜ್ಯದ ಅಭಿವೃದ್ಧಿಯನ್ನು ಮಾಡಬೇಕು, ಪ್ರಜಾಸತ್ತೆ ಉಳಿಯಬೇಕು, ಬಡವರು ಉದ್ಧಾರವಾಗಬೇಕು, ಸಾರ್ವಜನಿಕರ ಜೀವನ ಸುಧಾರಿಸಬೇಕು, ರಾಜ್ಯಕ್ಕೆ ಅನ್ಯಾಯ ಮಾಡಬಾರದು ಎನ್ನತಕ್ಕ ಹಲವಾರು ತಾತ್ವಿಕವಾದ ವಿಷಯಗಳನ್ನು ಹೊಂದಿರತಕ್ಕ ವ್ಯಕ್ತಿಗಳು ಈ ಮಂತ್ರಿಮಂಡಲದಲ್ಲಿ ಇದ್ದಾರೆ. ಇದು ಹೆಮ್ಮೆ ಪಡತಕ್ಕ ವಿಷಯ. ಆದರೆ ಈ ಮಂತ್ರಿಮಂಡಲದಲ್ಲಿರತಕ್ಕ ಕೆಲವು ವ್ಯಕ್ತಿಗಳ ಬಗ್ಗೆ ಕೆಲವು ಮಾತುಗಳನ್ನು ನಾನು ಹೇಳಬೇಕಾಗಿದೆ. ಈಗ ಈ ಮಂತ್ರಿಮಂಡಲದಲ್ಲಿ ಶ್ರೀಮಾನ್ ಬಿ. ಬಸವಲಿಂಗಪ್ಪನವರು ಕ್ಯಾಬಿನೆಟ್ ರ್‍ಯಾಂಕ್ ಮಂತ್ರಿಗಳಾಗಿದ್ದಾರೆ. ಅವರ ಮೇಲೆ ನಾನು ಒಂದು ಗುರುತರವಾದ ಆಪಾದನೆಯನ್ನು ಮಾಡುವುದಕ್ಕೆ ಇಷ್ಟಪಡುತ್ತೇನೆ. ಅವರು ಹಿಂದೆ ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಒಬ್ಬರು ಮಂತ್ರಿಗಳಾಗಿದ್ದರು. ಶ್ರೀ ಮಾನ್ ಬಸವಲಿಂಗಪ್ಪನವರಿಗೆ ಅವರು ಮಂತ್ರಿಗಳಾಗಿದ್ದಾಗ ಏನು ಪೀಠೋಪಕರಣಗಳನ್ನು ಸರ್ಕಾರದಿಂದ ಕೊಟ್ಟಿದ್ದರು. ಅದು ಇಡೀ ಮೈಸೂರು ರಾಜ್ಯದ ಜನತೆಯ ಸ್ವತ್ತು. ಅದನ್ನು ಅವರಿಗೆ ಮಂತ್ರಿಗಳಾಗಿದ್ದಾಗ ರಾಜ್ಯದ ಕೆಲಸಕಾರ್ಯಗಳನ್ನು ನಿರ್ವಹಿಸುವುದಕ್ಕೋಸ್ಕರ ಕೊಡಲಾಗಿತ್ತು. ಶ್ರೀ ಮಾನ್ ಬಸವಲಿಂಗಪ್ಪನವರು ತಮ್ಮ ಮಂತ್ರಿ ಪದವಿ ಮುಗಿದ ಮೇಲೆ ಅದನ್ನು ಸರ್ಕಾರಕ್ಕೆ ವಾಪಸ್ಸು ಮಾಡದೆ ದುರುಪಯೋಗಪಡಿಸಿಕೊಂಡಿದ್ದಾರೆ. ಅವರು ತಮಗೆ ಕೊಟ್ಟಿದ್ದಂತಹ ಪೀಠೋಪಕರಣಗಳನ್ನು ಏತಕ್ಕೆ ವಾಪಸ್ಸು ಕೊಡಲಿಲ್ಲ? ಈ ಬಗ್ಗೆ ಅವರ ಮೇಲೆ ಕೋರ್ಟಿನಲ್ಲಿ ಕೇಸು ಹಾಕಿದ್ದಾರೆ ಎಂದು ನಾನು ಕೇಳಿದ್ದೇನೆ. ಮತ್ತು ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ಡಿಕ್ರಿಕೂಡ ಆಗಿದೆ ಎಂದು ನಾನು ಕೇಳಿದ್ದೇನೆ. ಈ ವಿಷಯದಲ್ಲಿ ಅವರ ಮೇಲೆ ಸರ್ಕಾರದವರು ಏನು ಕ್ರಮತೆಗೆದುಕೊಂಡಿದ್ದಾರೆ ಎಂಬುದು ಗೊತ್ತಾಗಲಲ್ಲ.

(ಶ್ರೀ ಎಸ್. ಬಂಗಾರಪ್ಪ)

ಆ ಮೀಶೋಪಕರಣಗಳ ಬೆಲೆ ಸುಮಾರು 8—10 ಸಾವಿರ ರೂಪಾಯಿಗಳು ಆಗುತ್ತದೆ ಎಂದು ನಾನು ಕೇಳಿದ್ದೇನೆ. ಆ ಹಣವನ್ನು ಅವರಿಂದ ಸರ್ಕಾರದವರು ವಸೂಲು ಮಾಡಿಲ್ಲ. ಹೀಗಿರುವಾಗ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರು ನನ್ನ ತಂಡದ ಬಗ್ಗೆ ನನಗೆ ಹೆಮ್ಮೆ ಇದೆಯೆಂದು ಹೇಳಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರಂತಹ ವ್ಯಕ್ತಿಗಳನ್ನು ಹೊಂದಿರತಕ್ಕ ಮಂತ್ರಿಮಂಡಲದ ಬಗ್ಗೆ ಶ್ರೀ ಮಾನ್ ದೇವರಾಜ ಅರಸ್ ಅವರು ಯಾವರೀತಿ ನನ್ನ ತಂಡದ ಬಗ್ಗೆ ನನಗೆ ಹೆಮ್ಮೆ ಇದೆ ಎಂದು ಹೇಳಿದ್ದಾರೆ ಎಂದು ಕೇಳಬೇಕಾಗಿದೆ. ನೀವು ಏನೇ ಮಾಡಿದರೂ ಜನತೆಯನ್ನು ಸುಲಭವಾಗಿ ಮೋಸಮಾಡುವುದಕ್ಕಾಗುವುದಿಲ್ಲ. ನೀವು ಜನತೆಯನ್ನು ಸುಲಭವಾಗಿ ಮೋಸಮಾಡುತ್ತೇವೆ ಎಂದು ನಂಬಿದ್ದರೆ ಆ ರೀತಿ ಹತ್ತಾರು ವರ್ಷಗಳು ನೀವು ಎಳೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಬಸವಲಿಂಗಪ್ಪನವರು ಒಂದು ರೀತಿ ಆಪಾದನೆಗೆ ಗುರಿಯಾಗಿದ್ದಾರೆ, ಮತ್ತೊಬ್ಬರು ಇನ್ನೊಂದು ರೀತಿಯಲ್ಲಿ ಆಪಾದನೆಗೆ ಗುರಿಯಾಗಿದ್ದಾರೆ. ಹೀಗೆ ಅನೇಕರೀತಿಯಲ್ಲಿ ಆಪಾದನೆಗೆ ಗುರಿಯಾಗಿರುವವರು ಕೆಲವರು ಇದ್ದಾರೆ. ಈ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರು ನನ್ನ ತಂಡದ ಬಗ್ಗೆ ನನಗೆ ಹೆಮ್ಮೆ ಇದೆ ಎನ್ನುವ ಮಾತನ್ನು ಹೇಳುವ ಗೋಜಿಗೆ ಹೋಗಬಾರದು ಎಂದು ನಾನು ಹೇಳುತ್ತೇನೆ.

ಸ್ವಾಮಿ ಅಧ್ಯಕ್ಷರೇ, ಈ ಮಂತ್ರಿಮಂಡಲದ ರಚನೆ ಗ್ರಹಪೀಡಿತವಾಗಿದೆ. ಈ ಮಂತ್ರಿ ಮಂಡಲದಿಂದ ಈ ರಾಜ್ಯದ ಹಿತಕ್ಕೆ ಧಕ್ಕೆಯಾಗುತ್ತದೆ ಎನ್ನುವ ನಿಲುವನ್ನು ನಾನು ತಳೆದ ಕೊಂಡಿದ್ದೇನೆ.

4-00 P.M.

ಇನ್ನೊಂದು ವಿಷಯ. ಕೇಂದ್ರಸರ್ಕಾರಕ್ಕೂ ಮತ್ತು ರಾಜ್ಯಸರ್ಕಾರಕ್ಕೂ ಇರತಕ್ಕ ಸಂಬಂಧದ ವಿಷಯದಲ್ಲಿ ನಮ್ಮ ಹಿರಿಯರಾದಂತಹ ಚನ್ನಬಸಪ್ಪನವರನ್ನು ಕೇಳಿಕೊಳ್ಳುವುದು ಇಷ್ಟೆ. ಕೃಷ್ಣಾ ನದಿ ನೀರಿನ ವಿಷಯದಲ್ಲಿ ಆಂಧ್ರದವರು ನಮಗೆ ನಾಗಾರ್ಜುನ ಸಾಗರದಲ್ಲಿ ನೀರು ಕಡಿಮೆ ಇದೆ, ನಮಗೆ ನೀರು ಕೊಡಿ, ಅನೇಕ ಲಕ್ಷ ಎಕರೆ ಭೂಮಿಯಲ್ಲಿ ಬೆಳೆ ಸುಟ್ಟು ಹೋಗುತ್ತದೆಂದು ಕೇಳಿದ್ದಾರೆ. ಮೊದಲು ನಮ್ಮ ರಾಜ್ಯಸರ್ಕಾರದವರು ಒಂದು ನಿಲುವನ್ನು ತೆಗೆದುಕೊಂಡರು. ಅದರ ನಂತರ ಅದನ್ನು ಬದಲಾಯಿಸಿದರು. ಮೊದಲು ತುಂಗಭದ್ರಾ ಡ್ಯಾಮಿನಲ್ಲಿರತಕ್ಕಂತಹ ನೀರು ನಮಗೆ ಸಾಕಾಗುವುದಿಲ್ಲ; ಆದ್ದರಿಂದ ನೀರು ಕೊಡುವುದಿಲ್ಲ ಎಂದು ಹೇಳಿದರು. ನಾನಾದರೂ ತಿಳಿಯುತ್ತೇನೆ, ಇದನ್ನು ಟೆಕ್ನಿಕಲ್ ಅಭಿಪ್ರಾಯ ತೆಗೆದುಕೊಂಡು ಹೇಳಿದ್ದಾರೆಂದು. ಏಕೆಂದರೆ ಯಾವಾಗಲೂ ಮುಖ್ಯ ಮಂತ್ರಿಯಾಗಲಿ ಅಥವಾ ಇತರ ಮಂತ್ರಿಯಾಗಲಿ ಹೇಳಿಕೆ ಕೊಡುವಾಗ ಅವರು ಸ್ವತಃ ಜಾಗಕ್ಕೆ ಹೋಗಿ ನೀರನ್ನು ಅಳೆದು ಹೇಳಿಕೆ ಕೊಡುವುದಿಲ್ಲ. ಇವತ್ತಿನ ದಿವಸ ಪರಿಣತರು ಏನಿದ್ದಾರೆ, ಅವರ ಅಭಿಪ್ರಾಯದ ಮೇಲೆ ಇಂತಹ ಹೇಳಿಕೆಗಳನ್ನು ಕೊಡಬೇಕಾಗುತ್ತದೆ. ನಮಗೆ ಸಾಕಾಗುವುದಿಲ್ಲ, ನಮ್ಮ ರಾಜ್ಯದ ರೈತರ ಹಿತಕ್ಕೆ ಧಕ್ಕೆಯಾಗುತ್ತದೆಂದು ಟೆಕ್ನಿಕಲ್ ಅಭಿಪ್ರಾಯ ಕೊಟ್ಟ ನಂತರ ಕೆ.ಎಲ್. ರಾಯರು, ಡಿ. ಸಂಜೀವಯ್ಯನವರು ಮತ್ತು ಪ್ರಧಾನ ಮಂತ್ರಿಯವರು ಮಾನ್ಯ ದೇವರಾಜ ಅರಸರ ಮೇಲೆ ಪ್ರಭಾವ ತಂದು ಪುನಃ ಅದನ್ನು ಕ್ಯಾಬಿನೆಟ್ಟಿನಲ್ಲಿ ಒಪ್ಪಿ ಹೇಗೆ ತೀರ್ಮಾನ ಮಾಡಿದ್ದಾರೆಂದು ನಾನು ಕೇಳುತ್ತೇನೆ? ಮೊದಲು ಕೊಡುವುದಿಲ್ಲವೆಂದು ಟೆಕ್ನಿಕಲ್ ಒಪೀನಿಯನ್ ಇದ್ದರೂ ನೀವು ಹೇಗೆ ಪುನಃ ನೀರು ಕೊಡಲು ಒಪ್ಪಿದ್ದೀರಿ? ನನಗೆ ಅಲ್ಲಿರತಕ್ಕ ರೈತರಿಂದ ಪತ್ರಗಳು ಬಂದಿವೆ. ಅಲ್ಲಿ ಹಿಂದುಗಡೆ ಇರತಕ್ಕ ರೈತರಿಗೆ ನೀರು ಸಾಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಗುರೆಡ್ಡಿಯವರ ಮೂಲಕ ಈ ವಿಚಾರದಲ್ಲಿ ನಾನು ಚರ್ಚೆ ಮಾಡಿದ್ದೇನೆ. ಆದ್ದರಿಂದ ಇವರು ಇವತ್ತು ಕೇಂದ್ರದವರ ಕೈಗೊಂಬೆಗಳಾಗಿ, ಅವರ ಪಕ್ಷದ ಹಿತಕ್ಕೋಸ್ಕರ ರಾಜ್ಯದ ರೈತರ ಹಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ವರ್ತಿಸುತ್ತಿದ್ದಾರೆಂದು ನಾನಾದರೂ ಆಪಾದನೆಯನ್ನು ಮಾಡಬೇಕಾಗಿದೆ. ನಂತರ ಇಂದಿರಾ ಗಾಂಧಿಯವರು ಹೇಳಿದ ಮೇಲೆ ನಾವು ನೀರು ಕೊಡುತ್ತೇವೆಂದು ಹೇಗೆ ಹೇಳಿದರು? ಅಂದರೆ ಇವರಿಗೆ ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಮೋಸ ಮಾಡಿದ್ದಾರೆಯೇ, ಅಥವಾ ಇವರೇ ಆ ನಿರ್ಧಾರ ಕೈಗೊಂಡಿದ್ದಾರೆಯೇ ಎಂದು ಕೇಳಬೇಕಾಗಿದೆ. ಆದ್ದರಿಂದ ಮೈಸೂರು ರಾಜ್ಯದ ಹಿತಕ್ಕೆ ನೀವು ಧಕ್ಕೆಯನ್ನು ತಂದಿದ್ದೀರಿ; ಮತ್ತು ಶ್ರೀಮತಿ ಇಂದಿರಾಗಾಂಧಿಯವರನ್ನು ಸಂತೋಷ ಪಡಿಸುವುದಕ್ಕೋಸ್ಕರ, ಕೆ. ಎಲ್. ರಾಯರನ್ನು ಸಂತೋಷಪಡಿಸುವುದಕ್ಕೋಸ್ಕರ ನಿಮ್ಮ ಪಕ್ಷದ ಏಳಿಗೆಗೋಸ್ಕರ ರಾಜ್ಯದ ಹಿತವನ್ನು ಮತ್ತು ರಾಜ್ಯದ ರೈತರ ಹಿತವನ್ನು ಕಡೆಗಣಿಸಿದ್ದೀರಿ.

†ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಷಯ ತಾವು ಸಂಪೂರ್ಣವಾಗಿ ತಿಳಿದುಕೊಂಡು ಅದರ ಬಗ್ಗೆ ಮಾತನಾಡಿದರೆ ಒಳ್ಳೆಯದೆಂದು ನನಗನಿಸುತ್ತದೆ. ನಾವು ನಮಗೆ ನೀರು ಸಾಕಾಗುವುದಿಲ್ಲ ಅದರಿಂದ ಕೊಡುವುದಿಲ್ಲವೆಂದು ಮೊದಲು ಹೇಳಿದ್ದೆವು. ಆ ಪ್ರಶ್ನೆ ಬಂದಾಗ ಅದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿ ನಮ್ಮ ಬೇಸಿಗೆ ಬೆಳೆ ಏನಿದೆ ಅದನ್ನು ಕಾಪಾಡತಕ್ಕ ವಿಷಯ ಮತ್ತು ಮುಂದೆ ಖಾರೀಫ್ ಬೆಳೆಗೆ ಅವರಿಗೆ ಎಷ್ಟು ನೀರು ಕೊಡಬೇಕು ಅದನ್ನು ಕೊಟ್ಟು ನಮ್ಮಲ್ಲಿ ಎಷ್ಟು ಉಳಿಯುತ್ತದೆಂದು ಲೆಕ್ಕ ಹಾಕಿ, ಮುಂದೆ ಖಾರೀಫ್ ಕ್ರಾಪಿನಲ್ಲಿ ನೀರು ಅವರಿಗೆ ಎಷ್ಟು ಕೊಡಬೇಕೆಂಬುದನ್ನು ಮತ್ತು ನಿರ್ಧಿಷ್ಟವಾಗಿ ನಮಗೆ ತೊಂದರೆಯಾದೀತೇ ಎಂಬುದನ್ನು ನೋಡಿ, 'as a measure of abundant caution'—ನಾವು ಕೊಡುವುದಕ್ಕೆ ಇಚ್ಛೆ ಪಡಲಿಲ್ಲ. ಅವರು ಕೇಳಿದ್ದದ್ದು 3500 ಕ್ಯುಸೆಕ್ಸ್—15 ದಿವಸಗಳಿಗೆ. ಆ ಮೇಲೆ ಅವರು ತಮ್ಮ ಡಿಮ್ಯಾಂಡನ್ನು ಕಡಿಮೆ ಮಾಡಿ ಸುಮಾರು ಒಂದೂವರೆ ಲಕ್ಷ ಎಕರೆಗೆ ಸಾಕಾಗುವಷ್ಟಾದರೂ ಬೆಳೆ ಉಳಿಸುವುದಕ್ಕೋಸ್ಕರ, ಕೇವಲ 10 ದಿವಸಗಳಿಗೆ ಕೊಡಿ ಎಂದು ಕೇಳಿದರು. ಅದರ ಜೊತೆಗೆ ಮುಂದೆ ಖಾರೀಫ್ ಕ್ರಾಪಿಗೆ ಜಲಾಶಯದಿಂದ ನೀರು ಕೊಡುವಾಗ ಬಂದಂಡೆಯಲ್ಲಿ ಅವರಿಗೂ ನೀರು ಬಿಡಬೇಕಾಗುತ್ತದೆ, ನಮಗೂ ಬಿಡಬೇಕಾಗುತ್ತದೆ. ಆಗ ನಾವು ಮೊದಲನೆಯ ಪ್ರಾಧಾನ್ಯತೆಯನ್ನು ನಾವೇ ಇಟ್ಟುಕೊಂಡು ನಮ್ಮ ಅವಶ್ಯಕತೆ ಪೂರೈಸಿದ ಮೇಲೆ ಮಿಕ್ಕದ್ದು ಕೊಡುತ್ತೇವೆಯೇ ವಿನಹ, ಇಲ್ಲದಿದ್ದರೆ ಇಲ್ಲವೆನ್ನುವುದನ್ನು ಅವರೂ ಒಪ್ಪಿಕೊಂಡ ಮೇಲೆ, ನಮ್ಮ ಹಿತಕ್ಕೆ ಧಕ್ಕೆ ಬರುವುದಿಲ್ಲ ಎಂದು ಧೃಡಪಡಿಸಿಕೊಂಡ ಮೇಲೆ, ಟೆಕ್ನಿಕಲ್ ಒಪೀನಿಯನ್ ಪ್ರಕಾರ ಒಪ್ಪಿದ್ದೇವೆ. ತಾವು ಈ ವಿಷಯವನ್ನು ಅಂಕಿ ಅಂಶಗಳ ಆಧಾರ ಇಟ್ಟುಕೊಂಡು ಮಾತನಾಡಬೇಕು. ಖಾರೀಫ್ ಕ್ರಾಪಿನಲ್ಲಿ ಅವರಿಗೆ ಎಷ್ಟು ನೀರು ಬಿಡಬೇಕು ಆಗ ನಮಗೆ ಸಾಕಾಗುವಷ್ಟು ನೀರನ್ನು ಬಿಟ್ಟು, ಮಿಕ್ಕಿದ್ದನ್ನು ಅವರಿಗೆ ಕೊಡುತ್ತೇವೆ. ಇದನ್ನು ನಾವು ನಮ್ಮ ಹಿತಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆ ವಹಿಸಿಯೇ ಮಾಡಿದ್ದೇವೆ ಹೊರತು, ಬೇರೆ ಯಾವ ಕಾರಣದಿಂದಲೂ ಮಾಡಿಲ್ಲ. ತಾವು ಆಮೇಲೆ ಬಂದರೆ ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಕೊಡಲು ಸಿದ್ಧನಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ನಮ್ಮ ರಾಜ್ಯದ ಮಂತ್ರಿ ಮಂಡಲದ ಮೇಲೆ ಗುರುತರವಾದ ಅಪಾದನೆ ಮಾಡಿದ ವಿಷಯದಲ್ಲಿ ಮಾನ್ಯ ಚನ್ನಬಸಪ್ಪನವರು ಇದರ ಬಗ್ಗೆ ಕೆಲವು ವಿವರಗಳನ್ನು ಕೊಟ್ಟರು. ಮೊದಲು ದೇವರಾಜ ಅರಸರಾಗಲಿ, ಅಥವಾ ಇತರ ಮಂತ್ರಿಯವರಾಗಲಿ, ಹೇಳಿಕೆ ಕೊಡುವಾಗ ಅಂಕಿ ಅಂಶಗಳನ್ನು ನೋಡದೆ ಕೊಡುವುದಿಲ್ಲ. ನಾವು ಇದನ್ನು ಭಾಷಣ ಮಾಡುವುದಕ್ಕೋಸ್ಕರ ಮಾಡುತ್ತಾ ಇಲ್ಲ. ಅಂಕಿ ಅಂಶಗಳನ್ನು ಕೊಟ್ಟೇ ಕೊಡುವ ಪ್ರಸಂಗ ಬರುತ್ತದೆ. ಆದ್ದರಿಂದ ಅಂಕಿ ಅಂಶಗಳನ್ನು ನೋಡಿ ಸಮಾಧಾನ ಪಡಿಸತಕ್ಕ ಕಾಲ ಈಗ ಇಲ್ಲ. ಈಗ ಅಲ್ಲಿರತಕ್ಕ ಹಳ್ಳಿಗಳಲ್ಲಿ ಅನೇಕ ರೈತರಿಗೆ ತೊಂದರೆಯಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಅದನ್ನು ಬೇಕಾದರೆ ಬರವಣಿಗೆಯ ಮೂಲಕ ತಮಗೆ ಒದಗಿಸುತ್ತೇನೆ. ರಾಜ್ಯಸರ್ಕಾರದ ತೀರ್ಮಾನದಿಂದ ಅಲ್ಲಿರತಕ್ಕ ರೈತರಿಗೆ ಆಗಿರತಕ್ಕ ತೊಂದರೆಯನ್ನು ನಾನು ಉದಾಹರಣೆಗಳ ಮೂಲಕ ಕೊಟ್ಟು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇವೊತ್ತಿನ ಪರಿಸ್ಥಿತಿಯಲ್ಲಿ ಯಾರಿಗೂ ಯಾವ ರೀತಿಯ ತೊಂದರೆಯೂ ಅಲ್ಲಿ ಬರುವುದಿಲ್ಲ. ಅದನ್ನು ಮೇಲಿಂದ ಮೇಲೆ ತಿಳಿಸಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ ರೀತಿಯಲ್ಲೇ ನಾನು ಕೆಲವು ಹಳ್ಳಿಗಳನ್ನು ತೋರಿಸಿಕೊಡುತ್ತೇನೆ. ನಿಮ್ಮ ತೀರ್ಮಾನದಿಂದ ರೈತರಿಗೆ ಆಗಿರತಕ್ಕ ತೊಂದರೆಯನ್ನು ಹೇಳುತ್ತಿದ್ದೇನೆ. ಅದೇನೇ ಇರಲಿ, ನೀವು ಇವತ್ತು ಕೇಂದ್ರದವರ ಕೈಗೊಂಬೆಗಳಾಗಿ ರಾಜಕೀಯವನ್ನು ಮಾಡುತ್ತಿದ್ದೀರಿ ಎನ್ನುವುದು ನಮಗೆ ಈಗಾಗಲೇ ಮನವರಿಕೆಯಾಗಿದೆ. ಆದ್ದರಿಂದ ನಿಮ್ಮ ಬಗ್ಗೆ ಈ ಆಪಾದನೆಯನ್ನು ಹೊರಿಸಿದ್ದೇನೆ. ಈ ಆಪಾದನೆಯಿಂದ ನೀವು ಮುಕ್ತರಾಗಲು ಸಾಧ್ಯವಿಲ್ಲವೆಂದು ಹೇಳುತ್ತೇನೆ.

ಈಗ ಆಂಧ್ರಕ್ಕೆ ನೀರು ಕೊಡುವ ವಿಷಯ ಮಂತ್ರಿಮಂಡಲ ರಚನೆ ಮಾಡಿರತಕ್ಕ ವಿಷಯ ಮತ್ತು ಬೊಂಬಾಯಿ ಕರ್ಣಾಟಕಕ್ಕೆ ಪ್ರಾತಿನಿಧ್ಯ ಕೊಟ್ಟಿಲ್ಲವೆಂಬ ಕೂಗು, ಕೊರಗು ನಮ್ಮಲ್ಲಿದೆ. ಹಿಂದೆ ನಡೆದಿರತಕ್ಕಂಥ ಚುನಾವಣೆಯಲ್ಲಿ ನಮ್ಮ ಕಡೆಯಿಂದ ಎಷ್ಟು ಮತಗಳು ಆ ಕಡೆಗೆ ಬಂತು ಎಂಬುದನ್ನು ನೋಡಿ. ನೀವು ಮಾಡತಕ್ಕ ರಾಜಕೀಯವನ್ನು ನಮ್ಮಲ್ಲಿ ಅನೇಕ ಸದಸ್ಯರು ಒಪ್ಪಲಿಲ್ಲವೆಂದು ತೀರ್ಮಾನವಾಗಿದೆ. ನೀವು ಕೇಂದ್ರ ಸರ್ಕಾರದ ಕೈಗೊಂಬೆಗಳಾಗಿರುವುದರಿಂದ ಮತ್ತು ಈಗ ನೀವೇ ಅಧಿಕಾರದಲ್ಲಿ ಮುಂದುವರಿಯುತ್ತಿರುವುದರಿಂದ ಇನ್ನು ಮುಂದೆ ರಾಜ್ಯಗಳಿಗೆ ಹೆಚ್ಚಿಗೆ ಅಧಿಕಾರ ಎಂದರೆ ಅಟಾನಮಿ ಎಂದು ನಾವು ಏನು ಹೇಳುತ್ತೇವೋ ಅದು ಬೇಕಾಗುತ್ತದೆ. ಇನ್ನು

(ಶ್ರೀ ಎಸ್. ಬಂಗಾರಪ್ಪ)

ಮುಂದೆ ಮಿಲಿಟರಿ ವಿಷಯ ದೇಶದ ಗಡಿ ಸಮಸ್ಯೆ ಇಂತಹ ಬಹುಮುಖ್ಯವಾದಂಥ ವಿಷಯಗಳು ಬಿಟ್ಟರೆ ರಾಜ್ಯದ ಹಿತದೃಷ್ಟಿಯಿಂದ ಆಗಬೇಕಾದ ಕೆಲಸಗಳು ಆಗದೇ ರಾಜ್ಯದ ಹಿತವನ್ನೇ ಬಲಿ ಕೊಡುವ ಸನ್ನಿವೇಶಗಳು ತಮ್ಮ ಸರ್ಕಾರಕ್ಕೆ ಬರುತ್ತವೆ. ಈ ಸದನದಲ್ಲಿ ನಾನು ಪ್ರತಿ ಸಾರಿಯೂ ಒತ್ತಾಯ ಮಾಡುತ್ತಿದ್ದೇನೆ. ಇನ್ನು ಮುಂದೆ ಅಟಾನಮಿ ಅಥವಾ ಹೆಚ್ಚು ಅಧಿಕಾರ ಪಡೆಯಲು ನೀವು ತಯಾರಾಗಬೇಕು. ಇಲ್ಲದಿದ್ದರೆ ರಾಜ್ಯದ ಜನತೆ ಖಂಡಿತವಾಗಿಯೂ ವಿರೋಧಿಸುತ್ತಾರೆಂದು ನಿಮ್ಮ ಮುಂದೆ ಹೇಳುತ್ತೇನೆ.

ಇನ್ನು ಕರ್ಣಾಟಕ ಹೆಸರನ್ನು ಈ ರಾಜ್ಯಕ್ಕೆ ಇಟ್ಟಿಲ್ಲ. ನಿಮ್ಮ ಕೈಲಿ ಗಡಿ ಪ್ರಶ್ನೆ ಬಗೆಹರಿದಿಲ್ಲ. ನಿಮ್ಮ ರಾಜಕೀಯದಿಂದ ಗಡಿ ಪ್ರಶ್ನೆ ಇನ್ನೂ ಪಾರ್ಲಿಮೆಂಟಿನಲ್ಲಿಯೇ ಕೂತಿದೆ. ಮಂತ್ರಿ ಮಂಡಲದಲ್ಲಿಯೂ ಇನ್ನೂ ಯಾವ ಒಂದು ತೀರ್ಮಾನವನ್ನೂ ಇದರ ಬಗ್ಗೆ ತೆಗೆದುಕೊಂಡಿಲ್ಲ. ಜನತೆ ನಿಮ್ಮ ಘಂಟಾಘೋಷವಾದ ಘೋಷಣೆಗಳು ಮತ್ತು ನಿಮ್ಮ ದಶಾಂಶಗಳು ಚುನಾವಣೆಯ ಸಂದರ್ಭದಲ್ಲಿ ಹೇಳಿದ್ದನ್ನು ಯಾವ ರೀತಿ ಕಾರ್ಯಗತವಾಗುತ್ತವೆಯೆಂಬುದನ್ನು ಕಾದುನೋಡುತ್ತಿದ್ದಾರೆ. ಅವೆಲ್ಲವನ್ನೂ ಕೇವಲ 24 ಘಂಟೆಗಳಲ್ಲಿ ಆಕಾಶವನ್ನೇ ಭೂಮಿಗೆ ತಂದು ಇಳಿಸುತ್ತೇವೆ ಎಂಬಂತೆ ಮಾಡುತ್ತೇವೆಂಬುದಾಗಿ ಚುನಾವಣೆಯ ಘೋಷಣೆಯಲ್ಲಿ ಇಟ್ಟಿದ್ದೀರಿ. ಮೈಸೂರಿಗೆ ಕರ್ಣಾಟಕವೆಂದು ಹೆಸರನ್ನು ಇಡುವುದಕ್ಕೆ ಇವರೇ ತಯಾರಾಗಿಲ್ಲ. ಏಕೆಂದರೆ ಶ್ರೀಮಾನ್ ದೇವರಾಜ್ ಅರಸ್ ಅವರು ಶ್ರೀರಂಗಪಟ್ಟಣದಲ್ಲಿ ಮುಸಲ್ಮಾನ್ ಸಮ್ಮೇಳನದ ಉದ್ಘಾಟನೆಯ ಸಂದರ್ಭದಲ್ಲಿ ಚುನಾವಣೆಗೆ ಸ್ವಲ್ಪ ಮುಂಚೆ ಹೇಳಿದ ವಿಷಯ ಪತ್ರಿಕೆಗಳಲ್ಲಿಯೂ ಬಂದಿದೆ. ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಅರಸು ವಂಶಸ್ಥರು. ಆದರೂ ಇಂತಹ ವಿಷಯಗಳಲ್ಲಿ ಧೈರ್ಯ ಮಾಡಿರುವುದಿಲ್ಲ. ಅವರು ಈ ದೇಶದ ಹಿತಕ್ಕಾಗಿ ಮತ್ತು ಅವರ ಒಂದು ಹಿತಕ್ಕಾಗಿ ಮೈಸೂರಿನ ಹೆಸರನ್ನು ಬದಲಾಯಿಸುವ ಅವಶ್ಯಕತೆ ಇಲ್ಲವೆಂದು ಹೇಳಿದರು.

ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್.—ಮುಸ್ಲಿಂ ಸಮ್ಮೇಳನದಲ್ಲಿ ಅವರು ಕರ್ಣಾಟಕ ಬೇಡ ಎಂದು ಹೇಳಿದರೋ ? ನೀವು ಹೇಳುವುದು ಏನೂ ಅರ್ಥವಾಗಲಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮೈಸೂರು ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದು ಬೇಡವೆಂದು ಹೇಳಿದರೆ, ಅದರ ಅರ್ಥವೇನು ! ಮೈಸೂರು ಎಂಬ ಹೆಸರು ಮುಂದುವರಿಯಲಿ, ಕರ್ಣಾಟಕವೆಂಬ ಹೆಸರನ್ನು ಇಡಬೇಕೆಂಬ ಆಸೆಯನ್ನೇ ಇವರು ವ್ಯಕ್ತಪಡಿಸಲಿಲ್ಲ. ಆ ರೀತಿಯಾಗಿ ಹೆಸರನ್ನು ಇಡುವುದಕ್ಕೆ ಸಾಧ್ಯವೆಂದು ಹೇಳಿದ್ದಾರೆ. ಈಗಿನ ಮುಖ್ಯ ಮಂತ್ರಿಗಳಾಗಿರತಕ್ಕವರೇ ಕರ್ಣಾಟಕವೆಂಬ ಹೆಸರನ್ನು ಇಡುವುದಕ್ಕೆ ವಿರೋಧವಾಗಿದ್ದಾರೆ. ಆದ್ದರಿಂದ ನಾವು ಇನ್ನೇನು ಈ ಮಂತ್ರಿ ಮಂಡಲದಿಂದ ನಿರೀಕ್ಷಣೆ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ಗಡಿ ವಿಷಯದಲ್ಲಿ ಚರ್ಚೆ ಮಾಡುತ್ತಿರುವ ಶ್ರೀಮತಿ ಇಂದಿರಾ ಗಾಂಧಿಯವರೇ ಮೈಸೂರು ರಾಜ್ಯದ ಹೆಸರನ್ನು ಬದಲಾವಣೆ ಮಾಡಬೇಡಿ ಎಂದು ಹೇಳಿದರು. ಈ ಮಾತು ನಿಮ್ಮ ಮಂತ್ರಿಮಂಡಲ ರಚನೆಗೆ ಮತ್ತು ಚುನಾವಣೆಗೆ ಅನುಕೂಲವಾಗುತ್ತದೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಮಾನ್ಯ ಶ್ರೀ ದೇವರಾಜ್ ಅರಸ್ ಅವರ ಮಂತ್ರಿಮಂಡಲ ಇರುವವರೆಗೆ ಮೈಸೂರು ರಾಜ್ಯಕ್ಕೆ ಕರ್ಣಾಟಕವೆಂಬ ಹೆಸರು ಇನ್ನೆಲ್ಲಿ ?

ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್.—ಕರ್ಣಾಟಕ ಬೇಕು ಎಂಬುದಾಗಿ ಹೇಳುವವರಲ್ಲಿ ಮುಸಲ್ಮಾನರೂ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಮಹಮದ್ ಇಮಾಂ ಅವರು ಕರ್ಣಾಟಕವಾದಿಗಳು.

ಶ್ರೀ ಎಸ್. ಬಂಗಾರಪ್ಪ.—ಹಳೆಯ ಮೈಸೂರು ರಾಜ್ಯದ ಜನರ ಒಂದು ಒಲವನ್ನು ಪಡೆಯಬೇಕೆಂಬುದೇ ರಾಜ್ಯದಲ್ಲಿ ಒಂದು ಗತ್ತುಗಾರಿಕೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಿಳಿದಿದ್ದರೆ ಅದು ಸರಿಯಲ್ಲ. ಅವರ ಕೈಲಿ ಜನರ ಹಿತರಕ್ಷಣೆಯಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನುಮುಂದೆ ಅಖಿಲ ಭಾರತ ಮಟ್ಟದ ಬಂಡವಾಳ ಈ ರಾಜ್ಯಕ್ಕೆ ಕಪಿಮುಷ್ಟಿಯಿಂದ ಉಳಿಯಬೇಕು. ಅತಿಯಾಗಿ ಕೇಂದ್ರೀಕರಣದ ವಿಷಯಕ್ಕೆ ಗಮನ ತೆಗೆದುಕೊಳ್ಳದೆ ವಿಕೇಂದ್ರೀಕರಣಕ್ಕೆ ಹೆಚ್ಚಿಗೆ ಗಮನಕೊಡಬೇಕು. ಆದರೆ ಈ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಏನೂ ಇಲ್ಲ.

ಅಧ್ಯಕ್ಷರೇ, ನಾನು ಇನ್ನು ಎರಡು ವಿಷಯಗಳನ್ನು ಈ ಸಭೆಯ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಮೈಸೂರು ರಾಜ್ಯದಲ್ಲಿ ಲಂಚಗುಳಿತನ ಹೆಚ್ಚಾಗಿದೆ ಎಂಬುದು ತಮಗೇ ಗೊತ್ತಾಗಿದೆ. ಹಿಂದೆಯೂ ಈ ವಿಚಾರವಾಗಿ ಎಷ್ಟೋಸಾರಿ ಪ್ರಸ್ತಾಪ ಮಾಡಿದ್ದೇನೆ. ಈಗ ಏನಾಗಿದೆಯೆಂದರೆ ಕೇವಲ ಮಂತ್ರಿಮಂಡಲ ಬದಲಾವಣೆಯಾಗಿದೆಯೇ ವಿನಹ ಅಧಿಕಾರಿಗಳು ಮಾತ್ರ ಬದಲಾವಣೆಯಾಗುವುದಿಲ್ಲವೆಂದು ನಾನು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಲಂಚಗುಳಿತನ ಬಹಳ ಹೆಚ್ಚಾಗಿದೆ. ಮಾನ್ಯ ಶ್ರೀ ಘೋರ್ಪಡೆಯವರು ಹಿಂದೆ ಎಸ್ಟಿಮೇಟ್ ಕಮಿಟಿ ಚೇರ್‌ಮನ್‌ರಾಗಿದ್ದಾಗ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ಭೇಟಿ ಕೊಟ್ಟಾಗ ಆ ಕಾರ್ಖಾನೆಯಲ್ಲಿ ಎಷ್ಟು ಅನ್ಯಾಯವಾಗಿದೆ ಎಂಬುದನ್ನು ವಿವರಣ ರೀತಿಯಲ್ಲಿ ಹೇಳಿರುವುದನ್ನು ನಾನು ಕೇಳಿದ್ದೇನೆ. ಈ ಸಭೆಯಲ್ಲಿ ಅನೇಕರಿಗೆ ಗೊತ್ತಿದೆ. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಅವರ ವರದಿಯಲ್ಲಿ ಪುಟ 10–11ರಲ್ಲಿ 1969–70ನೇ ವರ್ಷದ ಕಮರ್ಷಿಯಲ್ ಎಂಬ ಅಧ್ಯಾಯದಲ್ಲಿ ಸೇಲ್ಸ್ ಪಾಲಿಸಿ ಬಗ್ಗೆ ಏನು ಹೇಳಿದೆಯೆಂಬುದು ಈ ರೀತಿ ಇದೆ.—

"9. Sales policy.—Certain points noticed in regard to sale of its products were mentioned in paragraphs 8 and 17 of the Audit Report (Commercial) 1970. It is however, seen that no definite policy with regard to pricing or sales had so far been made (November 1970). Certain cases wherein the Company suffered heavy losses due to fixation of prices below cost of manufacture are given below :

| | Cost of production | Selling rate | difference | Loss |
|---|---|---|---|---|
| | Rs. | Rs. | Rs. | Rs. (lakhs) |
| 1. Old Rolling Mills M. S. sections | 820.19 | 765.21 | 63.98 | 15.45 |
| 2. Strip and Rod Mills (Coils) | 903.27 | 892.45 | 10.82 | 1.16 |
| 3. New Rolling Mills M. S. Blooms | 844.16 | 430.10 | 414.00 | 13.82 |
| 4. -do- M. S. Sections | 982.88 | 730.38 | 202.50 | 3.22 |
| 5. -do- M. S. Billets | 982.88 | 604.85 | 378.03 | 67.84 |
| 6. L. D. Plant-M. S. ingots | 663.85 | 420.00 | 243.85 | 21.10 |
| | Total : | | | 122.59 |

ಆ ಕಾರ್ಖಾನೆಯಲ್ಲಿ ಸೇಲ್ಸ್ ಪಾಲಿಸಿಯನ್ನು ಸರಿಯಾಗಿ ಕಾರ್ಯಗತ ಮಾಡದೇ ಇದ್ದುದರಿಂದ 122 ಲಕ್ಷದ 59 ಸಾವಿರ ರೂಪಾಯಿಗಳಷ್ಟು ನಷ್ಟವನ್ನು ರಾಜ್ಯಸರ್ಕಾರಕ್ಕೆ ಮಾಡಿದ್ದಾರೆ. ಈ ಅಧಿಕಾರಿಗಳು ಲಂಚಂಗೂಳಿಗಳಲ್ಲದೆ ಮತ್ತೇನು? ಇಂತಹ ನೂರಾರು ಉದಾಹರಣೆಗಳಿವೆ.

(ಶ್ರೀ ಎಸ್. ಬಂಗಾರಪ್ಪ)

ಸ್ವಾಮಿ ಇನ್ನು ನಾನು ಕೊನೆಯದಾಗಿ ನಮ್ಮ ರಾಜಭವನಕ್ಕೆ ಸಂಬಂಧಪಟ್ಟ ಹಾಗೆ ಒಂದು ಮಾತನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ರಾಜ್ಯಪಾಲರಾದ ಶ್ರೀ ಸುಖಾಡಿಯಾರವರು ರಾಜಭವನಕ್ಕೆ ಸೇರಿದ ಸರ್ಕಾರಿ ಕಾರುಗಳನ್ನು ತಮಗೆ ಬೇಕಾದ ಯಾರು ಯಾರೋ ಹಳೇ ಸ್ನೇಹಿತರಿಗೆ, ರಾಜಸ್ಥಾನದಿಂದ ಬಂದಿರತಕ್ಕ ಶ್ರೀ ಚೌಧುರಿ ಎನ್ನತಕ್ಕವರಿಗೆ ಕೊಟ್ಟು ಅವುಗಳನ್ನು ದುರುಪಯೋಗ ಮಾಡುತ್ತಿದ್ದಾರೆ. ಆ ಶ್ರೀ ಚೌಧರಿ ಎನ್ನತಕ್ಕವರು ಇಲ್ಲಿ ಅಡ್ವರ್‌ಟೈಜ್‌ಮೆಂಟುಗಳನ್ನು ಗಿಟ್ಟಿಸುವುದಕ್ಕೆ ಬಂದಿದ್ದಾರಂತೆ. ಅವರಿನ್ನೂ ಇಲ್ಲೇ ಇದ್ದಾರಂತೆ ಹೀಗೆ ನಮ್ಮ ರಾಜಭವನದಲ್ಲಿ ಇನ್ನೂ ಅನೇಕ ಭಾರಿ ಭಾರಿ ಫರ್ಮುಗಳವರೂ ಮತ್ತು ಭಾರಿ ಭಾರಿ ಕಾರ್ಖಾನೆಗಳವರೂ ಬಂದು ಉಳಿಯುತ್ತಿದ್ದಾರೆ. ಅಂಥಾ ಖಾಸಗೀ ಜನರಿಗೆಲ್ಲಾ ಅವರು ರಾಜಭವನದ ಕಾರುಗಳನ್ನು ಕೊಡುತ್ತಿರುವುದು ಭಾರಿ ಅನ್ಯಾಯ. ಅವರು ಹಾಗೆ ಅಧಿಕಾರಸ್ಥಾನವನ್ನು ಮಿಸ್‌ಯೂಸ್ ಮಾಡಿಕೊಳ್ಳಬಾರದು. ಅವರು ತಮ್ಮ ಸ್ವಾರ್ಥಕ್ಕೆ ಇವುಗಳನ್ನು ಬಳಸುವುದು ದೊಡ್ಡ ತಪ್ಪು. ಅವರು ಹೀಗೆಲ್ಲಾ ಮಾಡುತ್ತಿರುವುದರಿಂದ ಇನ್ನು ಮುಂದಕ್ಕೆ ಅವರೇನು ಮಾಡಿದರೂ ಅದಕ್ಕೆ ನಾವಿಲ್ಲಿ ಕುಳಿತು ಗ್ರೀನ್ ಸಿಗ್ನಲ್ ಕೊಡುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯಪಾಲರ ಮೇಲೆ ಮೊದಲಿಂದಲೂ ಅನೇಕ ಅಪಾದನೆಗಳು ಇರುತ್ತವೆ. ಈ ಮಂತ್ರಿಮಂಡಲಕ್ಕೆ ನಾನೀಗಲೆ ಎಚ್ಚರಿಕೆ ಕೊಡುತ್ತಿದ್ದೇನೆ. ಈ ಸರ್ಕಾರ ಬಡವರ ಉದ್ಧಾರಕ್ಕೆ, ರೈತರ ಏಳಿಗೆಗೆ ಏನೇ ಬಿಲ್ಲುಗಳನ್ನು ತರಲಿ ಅದಕ್ಕೆ ನಾನು ಬೆಂಬಲ ಕೊಡುತ್ತೇನೆ. ಹಾಗೆ ಮಾಡದೆ ಈ ಸರ್ಕಾರ ಇದೇ ಹಾದಿಯಲ್ಲಿ ಮುಂದುವರಿದುದೇ ಆದರೆ ಹಿಂದಿದ್ದ ಸರ್ಕಾರಕ್ಕೂ ಈಗಿರತಕ್ಕ ಸರ್ಕಾರಕ್ಕೂ ಏನೂ ವ್ಯತ್ಯಾಸ ಇರುವುದಿಲ್ಲ ಎಂದು ಹೇಳುತ್ತೇನೆ. ಅಷ್ಟೇ ಅಲ್ಲ ಜನರು ಮುಂದೆ ನಿಮಗೂ ಛೀಮಾರಿ ಹಾಕುತ್ತಾರೆ. ಅವರಿಂದ ನೀವೂ ಭಾರಿ ಪೆಟ್ಟು ತಿನ್ನಬೇಕಾಗುತ್ತದೆಂದು ಹೇಳಿ ಈ ಒಂದು ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಟ್ಟು ನನಗೆ ನಿಗದಿ ಮಾಡಿದ್ದ ವೇಳೆಗಿಂತ ಸ್ವಲ್ಪ ಅವಧಿಯನ್ನು ನಾನು ಹೆಚ್ಚಿಗೆ ಬಳಸಿಕೊಂಡಿದ್ದುದಕ್ಕಾಗಿ ಕ್ಷಮಾಪಣೆಯನ್ನು ಬೇಡಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎ. ಜಿ. ಕೊಡಗಿ (ಬೈಂದೂರು).—ಮಾನ್ಯ ಸಭಾಧ್ಯಕ್ಷರೇ ನಾನು ಇದೇ ಮೊದಲನೆಯ ಬಾರಿಗೆ ಇಂಥ ಸಭೆಗಳಲ್ಲಿ ನಿಂತು ಮಾತನಾಡುತ್ತಿರುವುದು. ಆದ ಕಾರಣ ನನ್ನ ಭಾಷಣದಲ್ಲಿ ಏನಾದರೂ ಅಲ್ಪಸ್ವಲ್ಪ ಲೋಪ ದೋಷಗಳಿದ್ದರೆ ಅಧ್ಯಕ್ಷರು ಕ್ಷಮಿಸಬೇಕು. ಅಷ್ಟೇ ಅಲ್ಲದೆ ವಿರೋಧಪಕ್ಷದವರೂ ಕೂಡ ನನಗೆ ಮಧ್ಯೆ ಮಧ್ಯೆ ಪ್ರವೇಶ ಮಾಡಿ ಅಡ್ಡಿ ಅಡಚಣೆಗಳನ್ನು ಒಡ್ಡದೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ.

ತಾರೀಖು 24ನೇ ಮಾರ್ಚಿ 1972ರ ದಿನ ನಮ್ಮ ರಾಜ್ಯಪಾಲರೇನು ಉಭಯ ಶಾಸನ ಸಭೆಗಳನ್ನೂ ಉದ್ದೇಶಿಸಿ ಇಲ್ಲಿ ಒಂದು ಭಾಷಣವನ್ನು ಅಪ್ಪಣೆ ಕೊಡಿಸಿದ್ದಾರೋ ಆ ಭಾಷಣಕ್ಕೆ ನನ್ನ ಅನುಮೋದನೆಯನ್ನು ವ್ಯಕ್ತಪಡಿಸುವುದು ನನ್ನ ಕರ್ತವ್ಯ. ಹಾಗೆ ನನ್ನ ಅನುಮೋದನೆಯನ್ನು ವ್ಯಕ್ತಪಡಿಸುವ ಕಾಲದಲ್ಲಿ ನನಗೆ ಗೊತ್ತಿರುವ ಕೆಲವು ಅಂಶಗಳನ್ನು ಈ ಮಾನ್ಯ ಸಭೆಯ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯಪಾಲರು ತಮ್ಮ ಭಾಷಣವನ್ನು ಏನೋ ಒಂದು ಹಿಂದಿನ ಮಾಮೂಲಿನಂತೆ ಈಗಲೂ ಒಂದು ಭಾಷಣ ಮಾಡಿದ್ದಾರೆಯೇ ವಿನಾ ಇನ್ನೂ ಕೆಲವು ಪ್ರಗತಿಪರ ವಿಚಾರದಲ್ಲಿ ಸರ್ಕಾರವನ್ನು ನಡೆಸತಕ್ಕ ಆಡಳಿತ ಪಕ್ಷದವರ ಧೋರಣೆಯೇನೆಂಬುದನ್ನು ಅವರು ತಮ್ಮ ಭಾಷಣದಲ್ಲಿ ನಮೂದಿಸಬೇಕಾಗಿತ್ತು. ಹಾಗೆ ಮಾಡಿದ್ದರೆ ಇದು ಇನ್ನೂ ಚೆನ್ನಾಗಿ ಇರುತ್ತಿತ್ತು. ಈಗ ಶ್ರೀ ಜಿ. ರಾಮೇಗೌಡರೂ ಸಭೆಯ ಮುಂದೆ ರಾಜ್ಯಪಾಲರ ಭಾಷಣದ ಬಗ್ಗೆ ಸಭೆಯವರು ಒಪ್ಪಿಸತಕ್ಕ ವಂದನಾ ನಿರ್ಣಯವನ್ನು ಮಂಡಿಸಿದ್ದು ಇದನ್ನು ಶ್ರೀ ಗುಂಡೂರಾಯರು ಅನುಮೋದಿಸಿದ್ದಾರೆ. ಈ ನಿರ್ಣಯದ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ನನ್ನ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಲಿಚ್ಛಿಸುತ್ತೇನೆ.

ನಮ್ಮ ರಾಜ್ಯದಲ್ಲಿ ಕನ್ನಡ ಅಧಿಕೃತ ಆಡಳಿತ ಭಾಷೆಯಾಗಬೇಕು. ಅದನ್ನು ಸರ್ಕಾರದವರಾಗಲೇ ಕಾರ್ಯರೂಪಕ್ಕೆ ತರುತ್ತಿದ್ದಾರೆ ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಒಂದು ಬಹಳ ಆಶ್ಚರ್ಯಕರವಾದ ವಿಚಾರ ಏನೆಂದರೆ—ರಾಜ್ಯಪಾಲರು ತಮ್ಮ ವರದಿಯಲ್ಲಿ ಮಹಾಜನ್ ವರದಿ ವಿಚಾರದಲ್ಲಿ ಏನೂ ಹೇಳಿಲ್ಲ. ಕಾಸರಗೋಡಿನ ಪ್ರಶ್ನೆ ಏನಾಯಿತೆಂಬುದನ್ನೂ ಕೂಡ ತಿಳಿಸಿಲ್ಲ. ನಿಜವಾಗಿಯೂ ಇವೆಲ್ಲಾ ಜಟಿಲವಾದ ಪ್ರಶ್ನೆಗಳೇನೋ ಹೌದು. ಆದರೆ ಈ ವಿಚಾರಗಳಲ್ಲಿ ರಾಜ್ಯ ಸರ್ಕಾರದವರ ಧೋರಣೆ ಏನೆಂಬುದನ್ನು ತಿಳಿಸಿದ್ದರೆ ಚೆನ್ನಾಗಿತ್ತು.

ಇನ್ನು ನಮ್ಮ ರಾಜ್ಯದಲ್ಲಿ ಶಾಸನ ಪರಿಪಾಲನೆ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನಾನೂ ಕೂಡ ಒಪ್ಪುತ್ತೇನೆ. ಆದರೆ ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿರುವಂತೆ ರಾಜ್ಯದಲ್ಲಿ ಎಲ್ಲಿ ನೋಡಲಿ ಲಂಚದ ಹಾಗೂ ಭ್ರಷ್ಟಾಚಾರದ ಅಪಾದನೆಗಳು ವಿಶೇಷವಾಗಿ ಕೇಳಿಬರುತ್ತಿವೆ. ಅದನ್ನು ಸಂಪೂರ್ಣವಾಗಿ ಅಲ್ಲಗಳೆಯುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಅದನ್ನು ಸರ್ಕಾರದವರು ಸಂಪೂರ್ಣವಾಗಿ ನಿಲ್ಲಿಸುವುದಕ್ಕಾಗದಿದ್ದರೂ ಸಾಧ್ಯವಾದ ಮಟ್ಟಿಗೂ ಕಡಮೆ ಮಾಡಬೇಕು. ರಾಜ್ಯದಲ್ಲಿ ಕಾಯಿದೆಗಳಿಗೆ ಭಂಗಬಾರದಂತೆ ನೋಡಿಕೊಳ್ಳತಕ್ಕವರು ಪೋಲೀಸಿನವರು. ಅವರಿಗೆ ಮುಖ್ಯವಾಗಿ ಜೀವನಕ್ಕೆ ಸಾಕಾಗುವ ಸಂಬಳ ಸಾರಿಗೆಯನ್ನು ಸರ್ಕಾರ ಕೊಡುತ್ತಿಲ್ಲ. ಈ ಕಾರಣದಿಂದಲೂ ರಾಜ್ಯದಲ್ಲಿ ಲಂಚ ರುಷುವತ್ತುಗಳಿಗೆ ಸ್ವಲ್ಪ ದಾರಿಯಾಗಿದೆ. ಆದ್ದರಿಂದ ಲಂಚರುಷುವತ್ತುಗಳನ್ನು ಕಡಮೆ ಮಾಡಬೇಕಾಗಿದ್ದರೆ ಸರ್ಕಾರದವರು ಈ ಪೋಲೀಸಿನವರಿಗೆ ಕೊಡತಕ್ಕ ಸಂಬಳ ಸಾರಿಗೆಗಳನ್ನು ಹೆಚ್ಚಿಸಬೇಕು. ಈ ಅನುಕೂಲಗಳನ್ನು ಸರ್ಕಾರದವರು ಅವರಿಗೆ ಆದಷ್ಟು ಬೇಗ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ತಾಲ್ಲೂಕ್ ಮಟ್ಟದಲ್ಲಿರತಕ್ಕ ಪೋಲೀಸ್ ಶಿಬ್ಬಂದಿಗೆ-ಈ ದಿವಸ ಎಲ್ಲಾ ಇಲಾಖೆಗಳಿಗೂ ವಾಹನ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವಾಗ, ಈ ಕಾನೂನು ಪರಿಪಾಲನೆ ಮಾಡತಕ್ಕ ಪೊಲೀಸ್ ಶಿಬ್ಬಂದಿಗೆ ತಾಲ್ಲೂಕ್ ಮಟ್ಟದಲ್ಲಿ ವಾಹನ ಸೌಕರ್ಯಗಳನ್ನು ಒದಗಿಸದೆ ಇರುವುದು ಬಹಳ ತಪ್ಪು. ಸರ್ಕಾರದವರು ಇತ್ತ ಕಡೆಗೆ ತಮ್ಮ ಗಮನವನ್ನು ಕೊಟ್ಟು ಕೂಡಲೆ ಇವರಿಗೆ ವಾಹನ ಸೌಕರ್ಯವನ್ನು ಒದಗಿಸಬೇಕೆಂದು ಹೇಳುತ್ತೇನೆ.

ಇನ್ನು ಋತುಮಾನಗಳ ವಿಚಾರ. ನಮ್ಮ ರಾಜ್ಯ ವರ್ಷ ವರ್ಷ ಕ್ಷಾಮಕ್ಕೆ ತುತ್ತಾಗುತ್ತಲೇ ಇದೆ. ಕಳೆದ 20 ವರ್ಷಗಳಿಂದ ಸರ್ಕಾರದವರು ಕೋಟ್ಯಾಂತರ ಹಣವನ್ನು ಈ ಬಾಬಿನಲ್ಲಿ ವೆಚ್ಚಮಾಡಿದ್ದರೂ ದೇಶಕ್ಕೇನೂ ಅನುಕೂಲವಾಗಿಲ್ಲ. ಇನ್ನಾದರೂ ಸರ್ಕಾರದವರು ಇತ್ತ ಕಡೆಗೆ ಹೆಚ್ಚಿನ ಗಮನ ಕೊಟ್ಟು ಶಾಶ್ವತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆರೆ ಹಾವಳಿ ಬಹಳವಾಗಿರುತ್ತದೆ. ಇದರ ಬಗ್ಗೆ ಕೆಲವರಿಗೆ ಅಲ್ಲಲ್ಲೇ ಸಣ್ಣ ಪುಟ್ಟ ಪರಿಹಾರಗಳನ್ನು ಮಾತ್ರ ಒದಗಿಸಿದ್ದಾರೇ ವಿನಾ ಈ ವಿಚಾರದಲ್ಲೂ ಶಾಶ್ವತವಾದ ಒಂದು ಕ್ರಮವನ್ನು ಕೈಗೊಂಡಿಲ್ಲ. ಅಂಥ ಯಾವ ದೊಡ್ಡ ಯೋಜನೆಗಳನ್ನೂ ಮಾಡಿಲ್ಲ. ಇನ್ನಾದರೂ ಸರ್ಕಾರ ಇದನ್ನು ತಡೆಗಟ್ಟತಕ್ಕ ಬಗ್ಗೆ ಕೂಡಲೆ ಸೂಕ್ತ ಯೋಜನೆಗಳನ್ನು ಕೈಗೊಳ್ಳಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆ ಬೀಳುತ್ತದೆ ನಿಜ. ನದಿಗಳಲ್ಲಿ ವಿಶೇಷವಾಗಿ ನೀರು ಹರಿದು ಸಮುದ್ರಕ್ಕೆ ಸೇರುತ್ತಿದೆ. ಆದರೇನು ಈಗ ಸದ್ಯ ಅಲ್ಲಿ ಜನರಿಗೆ ಕುಡಿಯಲಿಕ್ಕೆ ನೀರಿಲ್ಲ. ಇಲ್ಲಿಯತನಕ ದಕ್ಷಿಣ ಕನ್ನಡ ಜಿಲ್ಲೆಗೆ ಯಾವ ರೂಪದಲ್ಲೂ ನೀರಾವರಿ ಸೌಕರ್ಯವನ್ನು ಒದಗಿಸಿರುವುದಿಲ್ಲ.

4-30 P. M.

ಇದಕ್ಕಾಗಿ ದೊಡ್ಡ ಯೋಜನೆ ಹಾಕಿಕೊಂಡು ನೀರು ನಿಷ್ಪ್ರಯೋಜನ ಆಗದ ರೀತಿಯಲ್ಲಿ ಅದರ ಸಂಪೂರ್ಣ ಪ್ರಯೋಜನ ಜಿಲ್ಲೆಗೆ ಆಗುವಂತೆ ಯೋಜನೆ ಹಾಕಿಕೊಳ್ಳಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಭೂಸುಧಾರಣೆ ವಿಚಾರವಾಗಿ ಮಾತನಾಡುವುದಕ್ಕೆ ಇಚ್ಛೆಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಶೀಘ್ರವಾಗಿ ಭೂ ಸುಧಾರಣೆಯ ಮಸೂದೆಯನ್ನು ಈ ಸಭೆಯಲ್ಲಿ ಮಂಡಿಸುತ್ತಾರೆ ಎಂದು ಹೇಳಿರುತ್ತಾರೆ ಅದನ್ನು ನೋಡಿಕೊಂಡು ಮುಂದೆ ಮಾತನಾಡುವುದಕ್ಕೆ ಇಚ್ಛೆ ಪಡುತ್ತೇನೆ. ಒಂದು ಮಾತನ್ನು ಮಾತ್ರ ಹೇಳದೆ ಹೋದರೆ ತಪ್ಪಾಗುತ್ತದೆ ಭೂ ಮಾಲೀಕರಲ್ಲಿಯೂ ಒಕ್ಕಲುಗಳಲ್ಲಿಯೂ ಯೋಗ್ಯರು ಇದ್ದಾರೆ. ದುರದೃಷ್ಟವಶಾತ್ ಕಳೆದ ಹಲವಾರು ವರ್ಷಗಳಿಂದ ಯೋಗ್ಯ ಧಣಿ, ಯೋಗ್ಯ ಒಕ್ಕಲು ಜೀವನ ಮಾಡುವುದಕ್ಕೆ ಕಷ್ಟವಾಗಿದೆ. ಕಳೆದ 50 ವರ್ಷಗಳಿಂದ ಭೂಮಿಯಲ್ಲಿ ಇದ್ದ ಯೋಗ್ಯ ಒಕ್ಕಲುಗಳನ್ನು ಉಚ್ಚಾಟನೆ ಮಾಡಿದ್ದಾರೆ. ಇದು ಕಾನೂನಿನ ಮುಖಾಂತರ ಅಥವಾ ಬಲಾತ್ಕಾರ ಮುಖಾಂತರ ಇರಬಹುದು. ಸಣ್ಣಪುಟ್ಟ ಹಿಡುವಳಿದಾರರು ಯೋಗ್ಯ ಧನಿಗಳೂ ಇದ್ದಾರೆ. ಭೂಮಿಯನ್ನೇ ಅವಲಂಬಿಸಿ ಕೊಂಡಿರುವ ಅವರು ನಿರಾಶ್ರಿತರಾಗುವ ಪರಿಸ್ಥಿತಿಯಲ್ಲಿ ಇದ್ದಾರೆ ಇವರಿಬ್ಬರನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಯೋಗ್ಯ ಮಸೂದೆಯನ್ನು ತರುವುದು ಸೂಕ್ತವೆಂದು ಹೇಳುತ್ತೇನೆ. ಸರ್ಕಾರ ಸಾಲ ಸವಲತ್ತುಗಳನ್ನು ಅನೇಕ ರೈತರಿಗೆ ಒದಗಿಸುತ್ತಾರೆ ಅದಕ್ಕಾಗಿ ಬೇರೆ ಬೇರೆ ಯೋಜನೆಗಳು ಇವೆ. ಅವನ್ನು ಇಲ್ಲಿ ಹೇಳಲು ಇಚ್ಛೆಪಡುವುದಿಲ್ಲ. ಸರ್ಕಾರ ಕೊಡುವ ಸಾಲವನ್ನು ಚಿಕ್ಕಪುಟ್ಟ ರೈತರಿಗೆ ಪಟ್ಟೆ

(ಶ್ರೀ ಎ. ಜಿ. ಕೊಡಗಿ)

ಇಲ್ಲ ಎನ್ನುವ ನೆಪದ ಮೇಲೆ ಒದಗಿಸುವುದಕ್ಕೆ ಅವಕಾಶವಿಲ್ಲ. ಚಾಲುಗೇಣಿ ಭೂಮಿಯನ್ನು ಪಡೆದಿರುವ ರೈತರಿಗೆ ಪಟ್ಟೆ ಹಕ್ಕನ್ನು ಕೊಡರೇ ವರ್ಗಾಯಿಸಿ ಅವರಿಗೆ ಸಾಲ ಒದಗುವಂತೆ ಮಾಡಬೇಕು. ಹೆಚ್ಚುವರಿ ಭೂಮಿಯನ್ನು ಬೇರೆ ಬೇರೆ ಜನರಿಗೆ ಹಂಚಿದ್ದೀರಿ, ಸಂತೋಷ ಸಾಕಷ್ಟು ಸರ್ಕಾರಿ ಭೂಮಿ ಇದೆ. ಅದನ್ನು ಹಂಚುವ ಯೋಗ್ಯ ವ್ಯವಸ್ಥೆ ಆಗಿಲ್ಲ. ನೀರಿನ ಆಶ್ರಯ ಇರುವ ಯೋಗ್ಯ ಸಾಗುವಳಿ ಮಾಡುವ ಭೂಮಿ ಇದೆ. ಅದನ್ನು ಹಂಚುವ ಏರ್ಪಾಡು ಶೀಘ್ರವಾಗಿ ಆಗಬೇಕು ಎಂದು ಸರ್ಕಾರಕ್ಕೆ ನಾನು ಅರಿಕೆ ಮಾಡಲು ಇಚ್ಛೆಪಡುತ್ತೇನೆ. ಈಗ ಒಂದು ಹೊಸ ಕಾನೂನು ಮಾಡಿದ್ದಾರೆ. ಮೊದಲು ರಿಸರ್ವ್ ಫಾರೆಸ್ಟ್‌ಗೆ ನೂರು ಮೀಟರು ಸ್ಥಳ ರಿಸರ್ವ್ ಮಾಡಲಾಗಿತ್ತು. ಆದರೆ ಈಗ ನಾಲ್ಕುನೂರು ಮೀಟರ್ ಎಂದು ಮಾಡಿರುವುದರಿಂದ ಎಲ್ಲ ಸ್ಥಳಗಳನ್ನೂ ಕಾದು ಇಡಬೇಕಾದ ಸನ್ನಿವೇಶ ಬಂದಿದೆ. ಇದರ ಪರಿಣಾಮವಾಗಿ ತಕ್ಷಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಲ್ಕುನೂರು ಮೀಟರು ಕಾದು ಇಟ್ಟರೆ ಜನರಿಗೆ ಬೇರೆ ಸ್ಥಳ ಒದಗಿಸುವ ಹಾಗಿಲ್ಲ. ಲ್ಯಾಂಡ್‌ಲೆಸ್ ಮತ್ತು ಬಡ ಜನರಿಗೆ ಭೂಮಿಯನ್ನು ಕೊಡಲು ಸಹಾಯವಾಗುವಂತೆ ನಾಲ್ಕು ನೂರು ಮೀಟರ್ ರಿಸರ್ವ್ ಮಾಡಬೇಕು. ಎಂದು ಏನು ಆರ್ಡರ್ ಮಾಡಿದ್ದಾರೆ ಅದನ್ನು ಸಡಲಿಸಿ 10 ) ಲಿಂಕ್ಸ್ ಇಡಗೊಡಿಸಬೇಕು ಎಂದು ಹೇಳಲು ಇಚ್ಛೆಪಡುತ್ತೇನೆ. ಸಮಾಜವಾದದ ಧೋರಣೆಯ ಮೇಲೆ ಭೂಮಸೂದೆಯನ್ನು ತರುವುದಾದರೆ ಅದೇ ಆಧಾರದ ಮೇಲೆ ನಗರದಲ್ಲಿರುವ ಆಸ್ತಿಯ ಮೇಲೆಯೂ ಮಿತಿಯನ್ನು ಹೇರಲಿಕ್ಕೆ ಯೋಚನೆ ಮಾಡಬೇಕು. ಬೇಸಾಯಗಾರರಿಗೆ ಸಮಾಜವಾದದ ನೀತಿ ಅನುಸರಿಸಿ ಭೂಮಿಯ ಮೇಲೆ ಸೀಲಿಂಗ್ ನಿರ್ಣಯಿಸು ವಾಗ ನಗರಗಳಲ್ಲಿ ಕಟ್ಟಡಗಳನ್ನು ಮಿತಿ ಇಲ್ಲದೆ ಕೊಂಡು ಕೊಂಡು ಹೊಸ ಕ್ಯಾಪಿಟಲಿಸ್ಟ್ ಕ್ಲಾಸ್ ಕ್ರಿಯೇಟ್ ಮಾಡುವುದಕ್ಕೆ ಅವಕಾಶ ಕೊಡಕೂಡದು. ಆದುದರಿಂದ ನಗರದಲ್ಲಿ ಮಿತಿಯನ್ನು ಹೇರುವಂತೆ ಶಾಸನ ಮಾಡಬೇಕು.

ಇನ್ನು ನಿರುದ್ಯೋಗ ಸಮಸ್ಯೆ ವಿಚಾರ ಸಾಕಷ್ಟು ನನ್ನ ಮಾನ್ಯ ಸ್ನೇಹಿತರು ಹೇಳಿದ್ದಾರೆ. ಒಂದು ವಿಷಯ ಮಾತ್ರ ನಾನು ತಮ್ಮ ಅವಗಾಹನೆಗೆ ತರಲಿಚ್ಛಿಸುತ್ತೇನೆ. ಕಳೆದ ವರ್ಷ ಎಕಾನಮಿ ಮೆಷರ್ ಎಂದು ಪ್ರತಿಯೊಂದು ಕೆಲಸಕ್ಕೂ ಸೇಕಡ 10 ರಷ್ಟು ಕಡಿತಗೊಳಿಸಿದ್ದಾರೆ. ಇದರ ಪರಿಣಾಮವಾಗಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳು ನಡೆಯದೆ ಮೂರನೇ ಮತ್ತು ನಾಲ್ಕನೇ ತರಗತಿ ನೌಕರರ ಉದ್ಯೋಗ ಅವಕಾಶ ಕೊಡುವುದರಲ್ಲಿ ಅಡ್ಡಿ ಆತಂಕಗಳು ನಿರ್ಮಾಣ ವಾಗಿದೆ. ಮೇಲಿನ ಹಂತದಲ್ಲಿ ಪ್ರಾರಂಭಿಸಿದ್ದರೆ ಅವರ ಉದ್ದೇಶ ಸಫಲವಾಗುತ್ತಿತ್ತು. ಕನ್ನಡ ಜಿಲ್ಲೆಯಲ್ಲಿ ನೌಕರಿಗಾಗಿ ಅನೇಕ ಅರ್ಜಿಗಳು ಬಂದಿವೆ. ಇನ್ನು ಕೂಡ ನೇಮಕ ಮಾಡಿಲ್ಲ ನಿರುದ್ಯೋಗಿಗಳನ್ನು ನಾವೇ ನಿರ್ಮಾಣ ಮಾಡುತ್ತಿದ್ದೇವೆ. ಅನೇಕ ಆಸ್ಪತ್ರೆಗಳು ಇವೆ ಅಲ್ಲಿ ಸಿಬ್ಬಂದಿ ವರ್ಗವಿಲ್ಲ. ಡಾಕ್ಟರು ಇಲ್ಲ. ಅರ್ಜಿಗಳು ಇದ್ದರೂ ನೇಮಕ ಮಾಡದೇ ನಿರುದ್ಯೋಗ ಸಮಸ್ಯೆ ನಾವೇ ಮಾಡುತ್ತಿದ್ದೇವೆಂದು ನನ್ನ ಮನಸ್ಸಿಗೆ ಬಂದಿರುವುದರಿಂದ ತಮ್ಮ ಅವಗಾಹನೆಗೆ ತರಲು ಇಚ್ಛೆಪಡುತ್ತೇನೆ. ಹೊಸ ಸಮಾಜ ಕಟ್ಟಲು ಪ್ರಯತ್ನ ಮಾಡಿರುವುದರಿಂದ, ನಾಲ್ಕನೇ ಪಂಚವಾರ್ಷಿಕ ಯೋಜನೆಗಳಲ್ಲಿ ಸೂಕ್ತ ಬದಲಾವಣೆ ಮಾಡುವ ಅಭಿಪ್ರಾಯ ಸರ್ಕಾರದ ಗಮನ ದಲ್ಲಿರುತ್ತದೆ. ಮುಂದೆ ಅವಕಾಶ ಬಂದಾಗ ಈ ವಿಚಾರ ಮಾತನಾಡಲು ಇಚ್ಛೆಪಡುತ್ತೇನೆ. ವ್ಯವಸಾಯ ವಿಚಾರವಾಗಿ ಒಂದು ವಿಚಾರ ಹೇಳಬೇಕಾಗುತ್ತದೆ ಎಲ್ಲಾ ದೃಷ್ಟಿಯಿಂದಲೂ ವ್ಯವಸಾಯವನ್ನು ಕಡೆಗಣಿಸಿದ್ದಾರೆ. ಘೋಷಣೆಯಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದಾರೆ. ಉದ್ಯಮ ಕಾರ್ಖಾನೆಗಳಿಗೆ ಕೊಡುವ ಯಾವ ಸವಲತ್ತುಗಳನ್ನೂ ವ್ಯವಸಾಯಕ್ಕೆ ಕೊಡುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಒಂದು ಉದಾಹರಣೆ ಕೊಡುವುದಾದರೆ, ಲೆವ್ಹಿ ಪದ್ಧತಿ ನಮ್ಮಲ್ಲಿ ಜಾರಿಯಲ್ಲಿದೆ. ಕಡ್ಡಾಯವಾಗಿ ಲೆವ್ಹಿ ಕೊಡಬೇಕಾಗುತ್ತದೆ. ಆಹಾರ ಕಾರ್ಪೊರೇಷನ್ ಅವರು ಆಹಾರ ಶೇಖರಣೆ ಮಾಡುತ್ತಾರೆ. ಯಾವ ಉದ್ದೇಶದಿಂದ ಮಾಡುತ್ತಿದ್ದಾರೆಂದು ಅರ್ಥವಾಗುವುದಿಲ್ಲ. ಆಹಾರ ಕಾರ್ಪೊರೇಷನ್ ನಮ್ಮ ದೇಶದ ಆಹಾರ ಸಮಸ್ಯೆಯನ್ನು ನಿವಾರಿಸಲಿಕ್ಕೆ ಇರುವ ಸಂಸ್ಥೆ ನಾರ್ತ್ ಕೆನರಾದಲ್ಲಿ ಒಂದು ಕ್ವಿಂಟಾಲಿಗೆ 180 ರೂಪಾಯಿ ನಂತೆ ಹರಾಜು ಮಾಡಿ ಅವರಿಂದ ಹೆಚ್ಚಿನ ಲಾಭ ಸಂಪಾದನೆ ಮಾಡಿದ್ದಾರೆ. ಆಹಾರ ಸಂಸ್ಥೆ, ಕಾರ್ಪೊರೇಷನ್ ಈ ರೀತಿ ಮಾಡಿದರೆ ಅದರ ಮೂಲ ಉದ್ದೇಶವನ್ನು ಮರೆತಂತೆ ಕಾಣುತ್ತದೆ. ಇದನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು.

ಮೀನುಗಾರಿಕೆ ವಿಚಾರ ನಮ್ಮ ಕ್ಷೇತ್ರದ ಸದಸ್ಯರು ಮಾತನಾಡುತ್ತಿದ್ದಾರೆ. ಆದಕ್ಕಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿದ್ದಾರೆ ಮತ್ತು ಯಂತ್ರೀಕರಣ ಒದಗಿಸುತ್ತಾರೆ, ಐಸ್

ಪ್ಲಾಂಟ್ ಒದಗಿಸುತ್ತಿದ್ದಾರೆ ಸಬ್‌ಸಿಡಿ ಕೊಡುತ್ತಾರೆ. ಆದರೆ ಸಣ್ಣ ಸಣ್ಣ ಮೀನುಗಾರರಿಗೆ ಯಾವ ರೀತಿಯಾದ ಅನುಕೂಲವಾಗುತ್ತಿಲ್ಲ. ಮೀನುಗಾರಿಕೆ ರಸ್ತೆಗಳು ಅರ್ಧಂಬರ್ಧವಾಗಿ ಹಾಗೆಯೇ ಇವೆ. ಅವನ್ನು ಯಾರು ಮಾಡಬೇಕೋ ಗೊತ್ತಿಲ್ಲ. ಫಿಷರೀಸ್ ಡಿಪಾರ್ಟ್‌ಮೆಂಟ್ ಕೇಳಿದರೆ ಪಿಡಬ್ಲ್ಯುಡಿ ಡಿಪಾರ್ಟ್‌ಮೆಂಟ್ ಎಂದು ಹೇಳುತ್ತಾರೆ ಪಿ.ಡಬ್ಲ್ಯು.ಡಿ.ಯವರನ್ನು ಕೇಳಿದರೆ ತಾಲ್ಲೋಕು ಬೋರ್ಡ್ ಮಂಡಲಿಯವರಿಗೆ ವಹಿಸಿಕೊಟ್ಟಿದ್ದೇವೆ ಎನ್ನುತ್ತಾರೆ. ಅವರನ್ನು ಕೇಳಿದರೆ ನಮ್ಮಲ್ಲಿ ಹಣವಿಲ್ಲವೆಂದು ಹೇಳುತ್ತಾರೆ. ಈ ರೀತಿ ದುರಸ್ತಿಯಾಗದೆ ಅರ್ಧ ರಸ್ತೆಯಾಗಿ ಬಿದ್ದಿವೆ. ಈ ರಸ್ತೆಗಳನ್ನು ದುರಸ್ತಿಮಾಡುವ ಕೆಲಸವನ್ನು ನಿಮ್ಮ ಯಾವುದಾದರೂ ಯೋಜನೆಯಲ್ಲಿ ಅಳವಡಿಸಿ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಸಮುದ್ರದ ಕರಾವಳಿಯಲ್ಲಿ ಕಷ್ಟದ ಜೀವನ ಮಾಡುವ ಬೆಸ್ತರು ಇದ್ದಾರೆ. ಅವರಿಗೆ ಇರಲು ಸ್ಥಳವಿಲ್ಲ. ಅವರಿಗೆ ಕರಾವಳಿಯಲ್ಲಿ ಮನೆ ಕಟ್ಟಿ ಕೊಳ್ಳಲು ಸ್ಥಳಾವಕಾಶ ಒದಗಿಸಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಅನೇಕ ವಿಚಾರ ಗಳನ್ನು ಸಭೆಯ ಮುಂದೆ ಇಡಲು ಇಚ್ಛೆ ಇದ್ದರೂ ಕೂಡ ಸಮಯವಿಲ್ಲವಾದ್ದರಿಂದ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ವಂದನಾ ನಿರ್ಣಯವನ್ನು ನಾನು ಕೂಡ ಬೆಂಬಲಿ ಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣ ಹರಿಕಥೆ ದಾಸರು ಮಾಡಿದಂಥ ಹರಿಕಥೆಯಾಗಿದೆ. ಅದರಲ್ಲೂ ಹೊಸ ದಾಸರು ಹರಿಕತೆ ಮಾಡುವುದಕ್ಕೆ ಹೊರಟರೆ ಮೂಲಕತೆ ಮರೆತು ಬೇರೆ ಒಂದು ಉಪಕತೆ ಹೇಳುತ್ತಾರಲ್ಲಾ ಹಾಗಿದೆ. ರಾಜ್ಯಪಾಲರ ಭಾಷಣ ಅವರ ಭಾಷಣದಲ್ಲಿ ಸರ್ಕಾರ ಅನೇಕ ಅಭಿವೃದ್ಧಿ ಇಲಾಖೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರಥಮತಃ ಅವರು ರಾಷ್ಟ್ರವನ್ನು ರಕ್ಷಣೆ ಮಾಡಿದಂಥ ಯೋಧರ ಬಗ್ಗೆ ಪ್ರಸ್ತಾಪ ಮಾಡಿ ಯೋಧರಿಗೆ ಎಲ್ಲಾ ಸೌಕರ್ಯವನ್ನು ಒದಗಿಸಿದ್ದೇವೆ, ಅವರಿಗೆ ನಾವು ಹೆಚ್ಚಿನ ಸೌಲಭ್ಯ ಗಳನ್ನು ಕೊಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ಮಾಜಿ ಯೋಧರ ಬಗ್ಗೆ ಸರ್ಕಾರವನ್ನು ಕೇಳಬಯಸುತ್ತೇನೆ. ಇದುವರೆಗೆ ಯೋಧರಿಗೆ ಏನಾದರೂ ಸುವ್ಯವಸ್ಥಿತ ಯೋಜನೆಯನ್ನು ಮಾಡಿದ್ದಾರೆಯೇ ಎಂದು ಕೇಳಬಯಸುತ್ತೇನೆ. ನನ್ನ ತಾಲ್ಲೂಕಿನ ವ್ಯಾಪ್ತಿಯಮಟ್ಟಿಗೆ ಹೇಳು ವುದಾದರೆ ಸುಮಾರು 40 ಯೋಧರ ಸಂಸಾರಗಳು ಇದ್ದರೂ ಒಬ್ಬರಿಗೂ 2 ಎಕರೆ ಜಮೀನಿಲ್ಲ, ಅವರ ಮಕ್ಕಳಿಗೆ ವಿದ್ಯಾಭ್ಯಾಸ ಸಹಾಯ ಒದಗಿಸುತ್ತಾ ಇಲ್ಲ, ಹೀಗಿದ್ದರೂ ಸುಳ್ಳಿನ ಕಂತೆಯನ್ನು ಸಭೆಯ ಮುಂದೆ ಇಟ್ಟಿರುವುದನ್ನು ನೋಡಿದರೆ ವಿಷಾದವಾಗುತ್ತದೆ.

ಇನ್ನು ಕನ್ನಡವನ್ನು ಅಧಿಕೃತ ಭಾಷೆ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸಮಿ ತಿಯ ಶಿಫಾರಸ್ಸುಗಳನ್ನು ಸರ್ಕಾರದವರು ತೀವ್ರವಾಗಿ ಪರಿಶೀಲಿಸುತ್ತಿದ್ದಾರೆ ಎಂದು ಹೇಳಿದ್ದಾರೆ. ಕನ್ನಡವನ್ನು ಅಧಿಕೃತ ಭಾಷೆ ಮಾಡುವುದರೊಳಗೆ ಇನ್ನೆಷ್ಟು ಮಂತ್ರಿ ಮಂಡಲಗಳು ಹೋಗುತ್ತವೋ ಎನ್ನುವ ಶಂಕೆ ನನಗೆ ಇದೆ. ಈ ಮಂತ್ರಿಮಂಡಲ ಸುಭದ್ರವಾಗಿದೆ ಉರುಳುವುದಿಲ್ಲ ಎಂದು ಕನಸಿನಲ್ಲಿ ಇಟ್ಟುಕೊಂಡರೆ ಅದನ್ನು ಬಿಟ್ಟುಬಿಡಬೇಕು. ನೀವು ಅಧಿಕೃತ ಭಾಷೆಯಾಗಿ ಕನ್ನಡವನ್ನು ತಕ್ಷಣ ಜಾರಿಗೆ ಕೊಡದೇ ಹೋದರೆ ಕನ್ನಡಕ್ಕೆ ಕೊಲೆ ಮಾಡಿದಂತೆ ನೀವೂ ಪಾಪಕ್ಕೆ ಗುರಿಯಾಗುತ್ತೀರಿ. ನಿಮ್ಮ ಮಂತ್ರಿಮಂಡಲ ಉರುಳಿ ಹೋಗುತ್ತದೆ ಎನ್ನುವುದನ್ನೂ ಕೂಡ ಜ್ಞಾಪಕ ಇಟ್ಟುಕೊಳ್ಳಿ.

ಇನ್ನು ಶಾಸನ ಸುವ್ಯವಸ್ಥೆ ಬಗ್ಗೆ ಅನೇಕ ಗೆಳೆಯರು ಮಾತನಾಡಿದ್ದಾರೆ. ಪೋಲೀಸಿನವರು ಆ ಶಾಸನವನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುತ್ತಾರೆ. ಅವರಿಗೆ ಅನುಕೂಲವಾದ ರೀತಿಯಲ್ಲಾದರೂ ಉಪಯೋಗಿಸಿಕೊಳ್ಳಬಹುದು, ಅನಾನುಕೂಲವಾದ ರೀತಿಯಲ್ಲಿ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಇಂತಹ ಶಾಸನವನ್ನು ಸರ್ಕಾರ ಮಾಡುತ್ತದೆ. ನೀವು ಮಾಡಿದ ಶಾಸನ ಹೇಗೆ ಇದೆ ಎಂದರೆ ಬ್ಲೇಡ್ ಇರುವ ಹಾಗೆ ಇದೆ, ಹಾಗೂ ಕುಯ್ಯುತ್ತದೆ, ಹೀಗೂ ಕುಯ್ಯುತ್ತದೆ. ಒಮ್ಮೆ ನನ್ನ ಜೊತೆಯಲ್ಲಿ ನನ್ನ ಗೆಳೆಯರು 4–5 ಜನ ಬಂದಿದ್ದರು. ಆ ಸಂದರ್ಭ ದಲ್ಲಿ ಪೋಲೀಸಿನವರು ಅವರನ್ನು ಹಿಡಿದುಕೊಂಡು ಹೋಗುವುದಕ್ಕೆ ಬಂದಿದ್ದರು. ಅದಕ್ಕೂ ನನಗೂ ಸಂಬಂಧವಿಲ್ಲದಿದ್ದರೂ ಕೂಡ ಪೋಲೀಸಿನವರು ನನ್ನನ್ನು ಹೆದರಿಸಿ ನೀನೂ ಅವರ ಜೊತೆಯಲ್ಲಿ ಬರು ತ್ತೀಯಾ ಇಲ್ಲವೇ, ಇಲ್ಲದೇ ಹೋದರೆ ಅವರಿಗೆ ಆಗುವ ಶಿಕ್ಷೆಯೇ ನಿನಗೂ ಆಗುತ್ತದೆ ಎಂದು ಹೇಳಿದರು. ನಾನು ಹೇಳಿದೆ ನೀವು ಏನು ಬೇಕಾದರೂ ಮಾಡಿಕೊಳ್ಳಿ, ಉಪ್ಪರಿಗೆಗೆ ಬೇಕಾದರೂ ಏರಿಸಿಕೊಳ್ಳಿರಿ ಎಂದು ಎಷ್ಟು ಬಗೆಯಲ್ಲಿ ಹೇಳಿದರೂ ಕೇಳದೆ ಬೆಂಗಳೂರಿಗೆ ನನ್ನನ್ನೂ ಮತ್ತು ನನ್ನ ಗೆಳೆಯರನ್ನೂ ಕರೆದುಕೊಂಡು ಬಂದು ಕೊಡಬಾರದ ಹಿಂಸೆ ಕೊಟ್ಟರು. ಈ ವಿಷಯಗಳು ಮತ್ತು ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಬಂದದ್ದು ನನ್ನ ಹೆಂಡತಿಗೂ ಗೊತ್ತಿರಲಿಲ್ಲ. ಇಂತಹ ಶಾಸನವನ್ನು ತಾವು ಮಾಡಿದ್ದೀರಿ. ಇದು ರಾಜ್ಯದ ರಕ್ಷಣೆ ಮಾಡತಕ್ಕಂಥ ಶಾಸನವೇ ? ರಾಷ್ಟ್ರದ ಬಗ್ಗೆ ನಿಮಗೆ ಅನುಕಂಪ ಇದೆಯೇ ! ನಿಮಗೆ ಯಾವ ಯೋಗ್ಯತೆಯೂ ಇಲ್ಲವೇ ! ನನ್ನನ್ನು ಮತ್ತು ನನ್ನ

(ಶ್ರೀ ಎಚ್. ಎಸ್. ಸಿದ್ದಪ್ಪ)

ಗೆಳೆಯರನ್ನೂ ಏತಕ್ಕೋಸ್ಕರ ಪೋಲೀಸಿನವರು ಹಿಡಿದು ತಂದರು ಎನ್ನುವುದನ್ನು ಇನ್ನೂ ವರೆಗೆ ವಿಚಾರ ಮಾಡಲಿಲ್ಲ. ಇದರಲ್ಲಿ ಏನು ಸತ್ಯಾಂಶ ಇದೆ ಎಂದು ಇನ್ನೂ ಕಂಡುಹಿಡಿದಿಲ್ಲ. ನೀವು ರಾಜ್ಯಪಾಲರ ಬಾಯಲ್ಲಿ ಮಂತ್ರಿಮಂಡಲದವರನ್ನು ಹೊಗಳಿಸುವುದಕ್ಕೆ ನಾಚಿಕೆಯಾಗುವುದಿಲ್ಲವೇ ? ಈವೊತ್ತು ಗುಲ್ಬರ್ಗದ ಪ್ರಶ್ನೆ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ಇನ್ನೊಂದು ವಿಷಯ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಒಂದೇ ಒಂದು ದಿವಸದಲ್ಲಿ 6 ಮನೆಗಳನ್ನು ಕಳ್ಳರು ದೋಚಿದ್ದಾರೆ. ಇದು ಒಂದು ಸುವ್ಯಸ್ಥಿತವಾದ ಶಾಸನವೇ ಎಂದು ನಾನು ಕೇಳುತ್ತೇನೆ. ಪೋಲೀಸಿನವರು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡರು ? ಅಲ್ಲದೆ ಕಳ್ಳತನಗಳು ಎಷ್ಟು ಜಾಸ್ತಿ ಆಗುತ್ತಿದೆಯೇ ವಿನಃ ಕಡಿಮೆಯಾಗುತ್ತಾ ಇಲ್ಲ. ಒಬ್ಬ ಪೋಲೀಸ್ ಇನ್‌ಸ್ಪೆಕ್ಟರನ್ನು ತಿಪಟೂರಿನಿಂದ ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿದರೆ ಅವರ ಹಿಂದೆಯೇ ತಿಪಟೂರಿನ ಕಳ್ಳತನಗಳು ವರ್ಗವಾಗುತ್ತವೆ. ಅಂದರೆ ತಿಪಟೂರು ಕಳ್ಳರು ಬೆಂಗಳೂರಿಗೆ ಬರುತ್ತಾರೆ. ತಾವು ಇಂತಹ ಒಂದು ಶಾಸನ ಮಾಡಿದ್ದೀರಿ.

ಇನ್ನು ಋತುಮಾನ ಸ್ಥಿತಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಎಂದು ನಾನು ಕೇಳಬೇಕಾಗಿದೆ. ನಾನು ಅಭಿವೃದ್ಧಿ ಮಂಡಲಿಯ ಅಧ್ಯಕ್ಷನಾಗಿರುವುದರಿಂದ, ನನ್ನ ಕ್ಷೇತ್ರದಲ್ಲಿ ಕ್ರಾಷ್ ಪ್ರೋಗ್ರಾಂ ಮಾಡಿರುವುದರಿಂದ ಅಲ್ಲಿ ಕೆಲಸ ಮಾಡುತ್ತಾ ಇರುವವರಿಗೆ 6 ತಿಂಗಳಿನಿಂದಲೂ ಕೂಲಿ ಕೊಟ್ಟಿಲ್ಲ. ನನ್ನನ್ನು ಬಂದು ಕೇಳುತ್ತಿದ್ದಾರೆ. ಅಲ್ಲಿರುವ ಬಿ. ಡಿ. ಓ. ಅವರನ್ನು ಕೇಳಿದರೆ ಆ ದುಡ್ಡನ್ನು ನಮಗೆ ಟ್ರಾನ್ಸ್‌ಫರ್ ಮಾಡಿಲ್ಲ, ನಮ್ಮ ಹತ್ತಿರ ದುಡ್ಡಿಲ್ಲ ಎಂದು ಹೇಳುತ್ತಾರೆ. ಈರೀತಿ ಮಾಡುವುದು ತರವಲ್ಲ. ಇದರಿಂದ ನಿಮ್ಮ ಯೋಗ್ಯತೆ ಕಡಿಮೆಯಾಗುತ್ತದೆ ಎನ್ನುವುದನ್ನು ಗಮನಿಸಬೇಕು.

ಇನ್ನು ಭೂಸುಧಾರಣೆ ಮತ್ತು ರೆವಿನ್ಯೂ ಆಡಳಿತದ ಬಗ್ಗೆ ಒಂದು ವಿಷಯವನ್ನು ಹೇಳಬೇಕಾಗಿದೆ. ನನ್ನ ಹೆಸರಿನಲ್ಲಿ ಖಾತೆ ಇರಬೇಕಾದುದು ಇನ್ನೂ ನಮ್ಮ ಅಜ್ಜನ ಹೆಸರಿನಲ್ಲೇ ಇದೆ. ನನ್ನ ಹೆಸರಿಗೆ ಇನ್ನೂ ಬದಲಾಯಿಸಿ ಕೊಟ್ಟಿಲ್ಲ. ನನ್ನ ತಮ್ಮನಿಗೆ ಚಿತಾವಣೆ ಮಾಡಿ ಅವನನ್ನು ರುಜು ಹಾಕಬೇಡ ಎಂದು ಹೇಳಿ ನನ್ನನ್ನು ರೆವಿನ್ಯೂ ಇನ್‌ಸ್ಪೆಕ್ಟರ್ 25 ರೂಪಾಯಿ ಕೇಳುತ್ತಾರೆ. ರೆವಿನ್ಯೂ ಆಡಳಿತದ ವ್ಯವಸ್ಥೆ ಈರೀತಿ ಮಾಡಿದ್ದೀರಿ. ಇನ್ನು ಸಹಕಾರ ಸಂಘಗಳಲ್ಲಿ ಸಾಲಗಳು ತೆಗೆದುಕೊಳ್ಳಬೇಕಾದರೆ 3 ವರ್ಷದ ಪಹಣಿ ಎಕ್ಸ್‌ಟ್ರಾಕ್ಟ್ ಕೇಳುತ್ತಾರೆ. ಬೆಂಗಳೂರಿನಲ್ಲಿರುವವರಿಗೆ ನಮ್ಮ ಊರಿನಲ್ಲಿ ಜಮೀನು ಇದ್ದರೆ ಅವನಿಗೆ 3 ದಿವಸದಲ್ಲೇ ಪಹಣಿ ಎಕ್ಸ್‌ಟ್ರಾಕ್ಟ್ ಸಿಕ್ಕುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಜಮೀನು ಆ ರೈತ ಅಲ್ಲೇ ವಾಸವಾಗಿದ್ದರೂ ಕೂಡ ಅಂಥಾವನಿಗೆ ಪಹಣಿ ಎಕ್ಸ್‌ಟ್ರಾಕ್ಟ್ ಸಿಕ್ಕಬೇಕಾದರೆ 3 ತಿಂಗಳು ಕಾಲ ಬೇಕಾಗುತ್ತದೆ. ಅವನು ಶ್ಯಾನುಭೋಗರ ಹತ್ತಿರ ಹೋಗಿ ಕೇಳಿದರೆ ನನ್ನ ಹತ್ತಿರ ಲೆಕ್ಕ ಇಲ್ಲ ಹೊಸ ಹೊಸ ಅಕೌಂಟೆಂಟರನ್ನು ಕೇಳಿ ಎಂದು ಹೇಳುತ್ತಾರೆ. ಹೊಸ ಅಕೌಂಟೆಂಟ್‌ರನ್ನು ಕೇಳಿದರೆ ಪಹಣಿ ಅಂದರೆ ಏನು ಎಂದು ಕೇಳುತ್ತಾರೆ. ಈರೀತಿ ನಮ್ಮ ಸರ್ಕಾರ ಆಡಳಿತ ನಡೆಸುತ್ತಾ ಇದೆ. ಹೀಗಾದರೆ ರೈತನಿಗೆ ಒಳ್ಳೆಯದಾಗುತ್ತದೆಯೋ ಎಂದು ಕೇಳುತ್ತೇನೆ. ಇದರ ಬಗ್ಗೆ ಸರ್ಕಾರಕ್ಕೆ ವಿವೇಚನೆ ಬರಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಭೂಮಿ ಹಂಚಿಕೆ ವಿಷಯ. ಹರಿಜನ ಗಿರಿಜನರಿಗೆ ಭೂಮಿಯನ್ನು ಕೊಡುತ್ತೇವೆ ಎಂದು ತಿಳಿಸಿದ್ದೀರಿ. ಹಿಂದಿನ ವರ್ಷ ಇವರ ಒಂದು ಅಭಿವೃದ್ಧಿಗಾಗಿ ಒಂದು ಸಮಿತಿಯನ್ನು ನೇಮಿಸಿದ್ದರು. ರಾಜ್ಯಪಾಲರು ಆ ಸಮಿತಿಯನ್ನು ರದ್ದುಪಡಿಸಿದರು. ರದ್ದುಪಡಿಸುವ ಸಮಯದಲ್ಲಿ ನಿರ್ದಿಷ್ಟವಾದ ಒಂದು ಆರ್ಡರನ್ನು ಹೊರಡಿಸದೇ ಇದ್ದುದರಿಂದ ಆಗಿದ್ದ ತಾಸೀಲ್ದಾರರು 30 ಸಹಸ್ರ ರೂಪಾಯಿ ಮಾಡಿಕೊಂಡಿದ್ದಾರೆ. ಆದುದರಿಂದ ದಯವಿಟ್ಟು ಭೂಮಿಯ ಹಂಚಿಕೆ ವಿಚಾರದಲ್ಲಿ ನೇರವಾಗಿ ನೀವೇ ಹಂಚಿಕೆ ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಿ. ಮತ್ತು ದರಖಾಸ್ತು ಭೂಮಿ ಏನು ಇದೆಯೋ ಅದನ್ನು ನೀವೇ ನೇರವಾಗಿ ಪಡೆದು ಹರಿಜನರಿಗೆ ಭೂಮಿ ಬಳಿಯಲ್ಲೇ ಭೂಮಿ ಹಂಚಲು ಏರ್ಪಾಡು ಮಾಡಿ ಇಲ್ಲದೇ ಹೋದರೆ ನಿಮ್ಮ ಮಂತ್ರಿಮಡಲ ನಿರ್ನಾಮವಾಗುತ್ತದೆ ಎನ್ನುವುದನ್ನು ಗಮನಿಸಬೇಕು.

ಇನ್ನು ನಿರುದ್ಯೋಗ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನೀವು ನಿರುದ್ಯೋಗ ಸಮಸ್ಯೆ ಮಾತನಾಡುವಾಗ ಪದವೀಧರರ ಬಗ್ಗೆ ಹೇಳುತ್ತಿದ್ದೀರಿ. ಪದವೀಧರರಿಗೆ ಅಲ್ಲಿ ಜಮೀನು ಕೊಟ್ಟ

ದ್ದೇವೆ, ಇಲ್ಲ ಜಮೀನು ಕೊಟ್ಟಿದ್ದೇವೆ ಎಂದು ಹೇಳುತ್ತೀರಿ, ಭೂಸೈನ್ಯ ಕಟ್ಟುತ್ತೇವೆ ಎಂದು ಹೇಳುತ್ತೀರಿ. ಪದವೀಧರರು ತಮ್ಮ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶ ಇರುತ್ತದೆ. ಅದಕ್ಕಿಂತ ಮುಖ್ಯವಾಗಿ ವಿಶೇಷವಾಗಿ ಬಡವರು ಅಂದರೆ ಅವಿದ್ಯಾವಂತರ ಬಗ್ಗೆ ಅವರ ಜೀವನವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಅವರಿಗೆ ಏನು ಯೋಜನೆ ಹಾಕಿಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ. ಅದರಲ್ಲೂ ಮಹಿಳೆಯರು ಹೊಟ್ಟೆಗಿಲ್ಲದೆ ಪಾಪ ಕಾರ್ಯದಲ್ಲಿ ತೊಡಗಿದ್ದಾರೆ. ನನ್ನ ತಾಲ್ಲೂಕಿಗೆ ನಮ್ಮ ಮಂತ್ರಿ ಮಂಡಲ ಬರುವುದಾದರೆ ಹೊಟ್ಟೆಗಿಲ್ಲದೆ ಮಹಿಳೆಯರು ಅದರಲ್ಲೂ ಅವಿದ್ಯಾವಂತರು ಎಂತಹ ಪಾಪಕೂಪದ ಕಾರ್ಯದಲ್ಲಿ ತೊಡಗಿದ್ದಾರೆ ಎನ್ನುವುದನ್ನು ತೋರಿಸಿಕೊಡುತ್ತೇನೆ. ಅಷ್ಟೇ ಅಲ್ಲ ಈವೊತ್ತು ಬೆಂಗಳೂರಿನ ಹೋಟೇಲುಗಳಲ್ಲಿ ಒಂದೊಂದು ಹೋಟೇಲಿನಲ್ಲಿ 50-60 ಜನ ಹೆಣ್ಣು ಮಕ್ಕಳು ದುರ್ನಡತೆಗೆ ತೊಡಗಿದ್ದಾರೆ. ಇಂಥಾದ್ದು ನೂರಾರು ಹೋಟೇಲುಗಳನ್ನು ತೋರಿಸುತ್ತೇನೆ. ಅವರಿಗೆ ಉದ್ಯೋಗವಿಲ್ಲ. ಯಾವ ಮಂತ್ರಿಗಳಾಗಲಿ, ಪೋಲೀಸಿನವರಾಗಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ! ಇದು ನಾಚಿಕೆಗೇಡಿನ ಪ್ರಸಂಗವಲ್ಲವೇ ? ನಮ್ಮ ಕಡೆಯಲ್ಲಿ ವಾರದ ಸಂತೆಯಲ್ಲಿ ಶನಿದೇವರ ಫೋಟೋ ಹಾಕಿಕೊಂಡು ಭಿಕ್ಷೆ ಕೇಳುವ ಹಾಗೆ ನೀವು ಇಂದಿರಮ್ಮನವರ ಫೋಟೋ ಹಾಕಿಕೊಂಡು ಅಧಿಕಾರ ಮಾಡುತ್ತಾ ಇದ್ದೀರಿ. ಅವಿದ್ಯಾವಂತರ ಅದರಲ್ಲೂ ಹೆಣ್ಣುಮಕ್ಕಳ ಗತಿ ಏನು ಎಂದು ನೀವು ಆಲೋಚಿಸಿದ್ದಿರಾ ? ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಈವೊತ್ತಿನ ದಿವಸ ಅವರ ಬಗ್ಗೆ ಕನಿಕರ ತೋರಿಸಿ ಸರ್ಕಾರ ಒಂದು ಯೋಜನೆ ತಯಾರಿಸಬೇಕೆಂದು ನಾನು ಮತ್ತೊಮ್ಮೆ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ರಾಷ್ಟ್ರೀಕೃತವಾದ ಬ್ಯಾಂಕುಗಳ ಬಗ್ಗೆ ಹೇಳುವುದಾದರೆ ಯಾರಿಗೆ ಹಣ ಕೊಡುವುದಕ್ಕೆ ಈ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಿದೆ ? ಚುನಾವಣಾ ಘೋಷಣೆಯಲ್ಲಿ ರಾಷ್ಟ್ರೀಕರಣ ಮಾಡಿರುವುದಾಗಿ ಹೇಳಿದ್ದಾರೆ. ಶ್ರೀ ಸಿದ್ದವೀರಪ್ಪನವರಿಗೆ ಶ್ರೀ ಚನ್ನಬಸಪ್ಪನವರಿಗೆ ಹಣ ಆ ಬ್ಯಾಂಕುಗಳಿಂದ ದೊರೆಯುವುದು. ನಾವು ಅಥವಾ ಬಡವರು ಬ್ಯಾಂಕಿಗೆ ಹೋದರೆ ಹಣಸಿಕ್ಕಬೇಕಾದರೆ ಶ್ರೀ ಸಿದ್ದವೀರಪ್ಪನವರು ಬರಬೇಕು. ಹೀಗಿರುವಾಗ ಏಕೆ ರಾಷ್ಟ್ರೀಕರಣ ಮಾಡಬೇಕು ! ರೈತರು ಮತ್ತು ಬಡವರ ಜೀವನ ಸುಧಾರಿಸಲು ಬ್ಯಾಂಕುಗಳ ಹಣ ವಿನಿಯೋಗವಾಗುವಂತೆ ವ್ಯವಸ್ಥೆ ಮಾಡಿಲ್ಲ. ತ್ವರಿತವಾಗಿ ಬಡವರಿಗೆ ಬ್ಯಾಂಕಿನಿಂದ ಹಣ ಸಿಕ್ಕುವಂತೆ ಏರ್ಪಾಡುಮಾಡಿದರೆ ರೈತರ ಆಶೀರ್ವಾದ ಸಿಕ್ಕಿ ಮಂತ್ರಿಮಂಡಲ ಉಳಿಯುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಆಸ್ಪತ್ರೆಗಳು. ಜನಾರೋಗ್ಯದ ಬಗ್ಗೆ ಹೇಳುವುದಾದರೆ ಈ ಸರಕಾರದ ಮಂತ್ರಿಗಳು ಅಥವಾ ನಾಯಕರು ಭಾಷಣ ಮಾಡುವಾಗ ಪ್ಲೇಗು ಮತ್ತು ಕಾಲರಾ ಬಾರದ ಹಾಗೆ ಮಾಡಿದ್ದೇವೆಂದು ಹೇಳುವರು. ಈಗ ಮನೋರೋಗಿಗಳು, ಡಯಾಬಿಟಿಸ್ ರೋಗಿಗಳು ಮುಂತಾದವರ ಸಂಖ್ಯೆ ಜಾಸ್ತಿಯಾಗಿದೆ. ಡಾಕ್ಟರುಗಳೇನಿದ್ದಾರೆ ಅವರಲ್ಲನೇಕರು ಮಂತ್ರಿಗಳ ಅಳಿಯಂದಿರು ಅಥವಾ ಅಣ್ಣತಮ್ಮಂದಿರ ಮಕ್ಕಳು. ಅವರೆಲ್ಲರೂ ಬೆಂಗಳೂರಿನಲ್ಲೇ ಇರಬೇಕೆಂದು ಆಸೆ ಪಡುವರು. ಬೆಂಗಳೂರಿನ ಮತ್ತು ಹಳ್ಳಿಗಳ ಆಸ್ಪತ್ರೆಗಳ ಪರಿಸ್ಥಿತಿ ಸುಧಾರಿಸಬೇಕಾದರೆ ಬೆಂಗಳೂರಿನಲ್ಲಿರುವ ಡಾಕ್ಟರುಗಳನ್ನು ಹಳ್ಳಿಗಳಿಗೆ ಹಾಕಿ ಹಳ್ಳಿಗಳಲ್ಲಿರುವವರನ್ನು ಬೆಂಗಳೂರಿಗೆ ಹಾಕಬೇಕು. ಈ ರೀತಿಯಾಗಿ ಒಳ್ಳೆಯ ರೀತಿಯಲ್ಲಿ ಬದಲಾವಣೆ ಮಾಡಿ ಗ್ರಾಮಗಳಿಗೆ ವೈದ್ಯಕೀಯ ಸೌಕರ್ಯ ಹೆಚ್ಚಿಸಬೇಕು.

ನಮ್ಮ ಪಕ್ಷದವರೇ ಅಧ್ಯಕ್ಷ ಪೀಠದಲ್ಲಿರುವಾಗ ಅವರ ಆಜ್ಞೆಗೆ ಯಾವುದೇ ಚ್ಯುತಿ ಬರಬಾರದು. ಅವರು ಕಾಲವನ್ನು ಮಿತಿಗೊಳಿಸಿದ್ದಾರೆ. ಆದ್ದರಿಂದ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತಾ ಈ ರಾಜ್ಯಪಾಲರ ಭಾಷಣ ನಿಜವಾಗಿಯೂ ಹರಿಕತೆ ದಾಸರ ಭಾಷಣದಂತಿದೆ, ಇದು ಒಪ್ಪುವುದಕ್ಕೆ ಯೋಗ್ಯವಾಗಿಲ್ಲ ಎಂದು ಹೇಳಿ ಇದನ್ನು ಸಂಪೂರ್ಣವಾಗಿ ನಾನು ವಿರೋಧಿಸುತ್ತೇನೆ.

ಶ್ರೀಮತಿ ರಾಧಾ ಭಟ್ (ಅಂಕೋಲ).— ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸಿ ಇದು ಬೂದಿ ಮುಚ್ಚಿದ ಕೆಂಡದಂತಿದೆ ಎಂದು ಅಭಿಪ್ರಾಯ ಸೂಚಿಸಿ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ನಮಗೆ ಸ್ವಾತಂತ್ರ್ಯ ಸಿಕ್ಕಿ 20 ವರ್ಷವಾದರೂ ನಮ್ಮ ಜಿಲ್ಲೆಯ ಬಹುಭಾಗದಲ್ಲಿ ಯಾವುದೇ ತೀವ್ರ ರೀತಿಯ ಅಭಿವೃದ್ಧಿ ಕೆಲಸವಾಗಿರುವುದು ಕಂಡುಬಂದಿಲ್ಲ. ಆದುದರಿಂದ ಇದನ್ನು ಗಮನಿಸಿ ಅಲ್ಲಿನವರಿಗೆ ಅವಶ್ಯಕವಾದ ಸೌಲಭ್ಯವನ್ನು ತ್ವರಿತವಾಗಿ ಒದಗಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ ಅಡಿಕೆ ಬೆಳೆಗಾರರು ಅಡಿಕೆ ಬೆಲೆ ಕುಸಿದಿರುವುದರಿಂದ ಬಹಳ ಕಂಗಾಲಾಗಿದ್ದಾರೆ. ಅವರು ಹೀಗೆ ಕಷ್ಟದಲ್ಲಿರುವಾಗ ಬೆಲೆ ಕುಸಿಯದಂತೆ ನೋಡಿಕೊಳ್ಳುವುದು ಬಹಳ ಅವಶ್ಯಕ

(ಶ್ರೀಮತಿ ರಾಧಾ ಭಟ್)

ವಾಗಿದೆ ಎಂದು ಹೇಳುತ್ತೇನೆ. ಇಲ್ಲದಿದ್ದರೆ ಅವರ ಅಸ್ತಿತ್ವಕ್ಕೆ ಬಹಳ ಗಂಡಾಂತರ ಒದಗುವ ಸ್ಥಿತಿ ಇದೆ. ಅಡಿಕೆ ಬೇಸಾಯಗಾರರ ಆರ್ಥಿಕಸ್ಥಿತಿ ಬಹಳ ಚಿಂತಾಜನಕವಾಗಿದೆ. ಆದುದರಿಂದ ಅದನ್ನು ಸುಧಾರಿಸಲು ಪರಿಣಾಮಕಾರಿಯಾದ ಕ್ರಮ ಕೈಕೊಂಡು ಅವರಿಗೆ ಒಳ್ಳೆಯ ಬೆಲೆ ಬರುವಂತೆ ತಕ್ಕ ವ್ಯವಸ್ಥೆಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇದಲ್ಲದೆ ನಮ್ಮ ಮಲೆನಾಡು ಬಹಳ ಹಿಂದುಳಿದ ಪ್ರದೇಶ. ಅದರ ಅಭಿವೃದ್ಧಿಯ ಬಗ್ಗೆ ಅನೇಕ ಬಾರಿ ಚರ್ಚೆ ಮಾಡಿರುವುದುಂಟು. ಮಲೆನಾಡು ಅಭಿವೃದ್ಧಿ ಯೋಜನೆಯನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ಬೇಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಕೆಲವು ರಸ್ತೆಗಳು ಇನ್ನೂ ಆಗಿಲ್ಲ ಶಿಕ್ಷಣ, ಆಸ್ಪತ್ರೆ ಮುಂತಾದುವುಗಳಿಗೆ ಅಲ್ಲಿ ಸೌಲಭ್ಯವನ್ನು ತಾವು ತ್ವರಿತ ರೀತಿಯಿಂದ ಮಾಡಿಕೊಡುತ್ತೀರೆಂದು ಭಾವಿಸುತ್ತೇನೆ. ಅದಕ್ಕಾಗಿ ಸರಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಸಮಾಜವಾದ ಸಮಾಜ ನಿರ್ಮಾಣಮಾಡಲು ಸರಕಾರ ಕಂಕಣಬದ್ಧವಾಗಿರುವಾಗ ಅದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು. ರೈತರಿಗೆ ಸಿಗುವ ಸಾಲವು ಕಡಿಮೆ ಬಡ್ಡಿದರದಲ್ಲಿ ಸಿಗುವಂತೆ ಮಾಡಲು ರಿಸರ್ವ್ ಬ್ಯಾಂಕುಗಳ ಜೊತೆಯಲ್ಲಿ ಮಧ್ಯಂತರ ಬ್ಯಾಂಕುಗಳಿಗೆ ಸಂಪರ್ಕ ಕಲ್ಪಿಸಿ ಮಾಡಿರುವ ಯೋಜನೆಗಳು ಕಾರ್ಯರೂಪಕ್ಕೆ ಬರುವಂತೆ ನೋಡಿಕೊಳ್ಳಬೇಕು. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ರಬ್ಬರ್ ಬೆಳೆಯುವುದಕ್ಕೆ ಸರಕಾರ ಒಂದು ಯೋಜನೆಯನ್ನು ಸರಕಾರ ಕೂಡ ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮೀನುಗಾರರ ವಿಷಯ ಹೇಳುವುದಾದರೆ ಅವರು ಬಹಳ ಹಿಂದುಳಿದವರು. ಅವರಿಗೆ ಗೃಹ ನಿರ್ಮಾಣ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೊಂದು ಏನೆಂದರೆ ಅಭಿವೃದ್ಧಿ ಕೆಲಸಗಳಲ್ಲಿ ಇಲ್ಲಸಲ್ಲದ ಕಿರುಕುಳ ಬಹಳ ಬರುತ್ತಿದೆ. ಕಾಯಿದೆ ಗಳನೆಪವನ್ನು ಮುಂದೆ ಮಾಡಿ ಕಿರುಕುಳ ಕೊಡುವ ಅಧಿಕಾರಿಗಳ ಬಗ್ಗೆ ಸರಕಾರ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದಲ್ಲದೆ ನಮ್ಮ ಮಲೆನಾಡಿನಲ್ಲಿ ಅರಣ್ಯಖಾತೆಯವರು ಅರಣ್ಯ ಕಡಿದು ನೀಲಗಿರಿ ಅಥವ ಬೇರೆ ಯಾವುದೋ ಸಸಿ ನೆಡುತ್ತಾ ಇದ್ದಾರೆ. ಇದರಿಂದ ಒಳ್ಳೆಯ ಮರಗಳು ಹೋಗಿ ಸ್ವಲ್ಪ ವರ್ಷಗಳಲ್ಲಿ ಒಳ್ಳೆಯ ಜಾತಿಯ ಮರ ನಮಗೆ ಸಿಕ್ಕುವುದಿಲ್ಲವೆಂಬ ಭಾವನೆ ಇದೆ. ನೀಲಗಿರಿ ಮತ್ತು ಸಾಗುವಾನಿ ಜೊತೆಗೆ ಒಳ್ಳೆಯ ಮತ್ತಿ, ಹೊನ್ನೆ ಈ ರೀತಿಯ ಅನೇಕ ಒಳ್ಳೆಯ ಸಸಿ ಹಾಕುವ ಯೋಜನೆ ಕಾರ್ಯರೂಪಕ್ಕೆ ತಂದರೆ ಸ್ವಲ್ಪ ಒಳ್ಳೆಯದಾಗುತ್ತದೆಂಬ ಭಾವನೆಯಿದೆ.

ಇಷ್ಟನ್ನು ತಮ್ಮ ಮುಂದಿಟ್ಟು ಅನೇಕ ವಿಷಯ ಮಾತನಾಡಬೇಕೆಂದಿದ್ದರೂ ಕಾಲವಿಲ್ಲ, ಹೊಸ ಬರೆಲ್ಲರಿಗೂ ಮಾತನಾಡಲು ಇಚ್ಛೆ ಇದೆ. ಆದುದರಿಂದ ಮುಂದೆ ಅವಕಾಶ ದೊರೆತಾಗ ನಾನು ಹೆಚ್ಚು ವಿಷಯ ಹೇಳುತ್ತೇನೆ, ಈಗ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ನಮ್ಮ ಹೊಸ ಮಂತ್ರಿಮಂಡಲಕ್ಕೆ ಅಭಿನಂದಿಸಿ ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನನಗೆ ಭಾಷಣ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನಾನು ಕೃತಜ್ಞತೆಗಳನ್ನರ್ಪಿಸುತ್ತೇನೆ. ರಾಜ್ಯಪಾಲರ ಭಾಷಣದ ಬಗ್ಗೆ ಬಹಳವಾಗಿ ನಮ್ಮ ಮಿತ್ರರು ಚೆನ್ನಾಗಿ ಮಾತನಾಡಿದ್ದಾರೆ. ನಾನು ಅದನ್ನು ಒಪ್ಪಲಾರೆ. ಬಹುಶಃ ಹಿಂದಿದ್ದ ರಾಜ್ಯಪಾಲರು ಲಂಗು ಲಗಾಮಿಲ್ಲದೆ ಕೊನೆಯವರೆಗೆ ತಮ್ಮದೆ ಈ ರಾಜ್ಯ ಎನ್ನುವಂತೆ ಯಹ್ಯಾಖಾನರಂತೆ ಒಂದು ವರ್ಷ ಆಡಳಿತ ನಡೆಸಿ ನಮ್ಮನ್ನೆಲ್ಲಾ ಒಂದು ರೀತಿ ಕಂಡರು.

5-00 P.M.

ಬಹುಶಃ ಇದಕ್ಕೆ ಪಕ್ಷಾಂತರವೇ ಕಾರಣವಾಯಿತು. ಪಕ್ಷಾಂತರದ ಪಿಡುಗನ್ನು ತಪ್ಪಿಸುವುದಕ್ಕೆ ಪಾರ್ಲಿಮೆಂಟಿನಲ್ಲಿ ಒಂದು ಮಸೂದೆ ಬರುತ್ತದೆ ಎಂದು ನಾವೆಲ್ಲರೂ ನಂಬಿದ್ದೆವು. ಆದರೆ ಈ ಹೊತ್ತು ಅದು ಮಾಯವಾಗಿದೆ. ಪಕ್ಷಾಂತರ ಮಾಡುವುದರಲ್ಲಿ ಅಗ್ರಗಣ್ಯ ಸ್ಥಾನವನ್ನು ಹೊಂದಿರುವವರು ಆಡಳಿತ ಕಾಂಗ್ರೆಸ್ಸಿನವರು. ಅವರಲ್ಲಿ ಅನೇಕ ಸೆಲ್ ಮಾಡಿದ್ದಾರೆ, ಮೈನಾರಿಟಿ ಸೆಲ್ ಎಂದು ಏನೇನೋ ಸೆಲ್ ಮಾಡಿದ್ದಾರೆ. ಅದರಲ್ಲಿ ಪಕ್ಷಾಂತರದ್ದೂ ಒಂದು ಸೆಲ್ ಇರ

ಬಹುದೆಂದು ನನಗನ್ನಿಸುತ್ತದೆ. ಯಾರನ್ನು ಯಾವಾಗ ಬೇಕಾದರೂ ಕರೆಯಬಹುದು. ಮೊನ್ನೆ ರಾಜ್ಯ ಸಭೆಯ ಚುನಾವಣೆ ನಡೆಯಿತು. ಒಂದು ವೋಟು ಕೊಟ್ಟರೆ 35 ಸಾವಿರ ರೂಪಾಯಿ ಕೊಡುತ್ತೇವೆಂದು ಹೇಳುವ ಮಟ್ಟಕ್ಕೆ ಕೆಲವು ಮಾನ್ಯ ಮಿತ್ರರು ಬಂದಿದ್ದರು, ಕೆಲವರ ಹತ್ತಿರ. ಬಹುಶಃ ಈ ಮಟ್ಟದಲ್ಲಿ ಪಕ್ಷಾಂತರ ನಡೆದರೆ ಅದು ಪ್ರಜಾಪ್ರಭುತ್ವಕ್ಕೆ ನಿಜವಾಗಿಯೂ ಕಂಟಕಪ್ರಾಯವಾಗುತ್ತದೆ ಎನ್ನುವ ಮಾತನ್ನು ನಾನು ವಿಷಾದದಿಂದ ಹೇಳಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಮ್ಮ ಹತ್ತಿರ ಯಾರಾದರೂ ಬಂದಿದ್ದರೆ ?

ಶ್ರೀ ವಾಟಾಳ್ ನಾಗರಾಜ್.—ನನ್ನ ಹತ್ತಿರ ಬರುವ ಗಂಡಸು ಇಮ್ಮಲ್ಲಿಲ್ಲ. ಪಕ್ಷಾಂತರ ಹೋಗಬೇಕಾದರೆ, ನಿಜವಾಗಿಯೂ ಲೋಕಸಭೆಯಲ್ಲಿ ಒಂದು ಕಾಯಿದೆ ಬರಲೇ ಬೇಕು. ಎಲ್ಲಿಯವರೆಗೆ ಪಕ್ಷಾಂತರ ನಿಲ್ಲುವುದಿಲ್ಲ, ಅಲ್ಲಿಯವರೆಗೂ ಪ್ರಜಾಪ್ರಭುತ್ವ ಉಳಿಯುವುದಿಲ್ಲವೆಂದು ನಾನು ತಮ್ಮ ಮೂಲಕ ಕೇಂದ್ರಕ್ಕೆ ಮನವಿಯನ್ನು ಮಾಡುತ್ತೇನೆ. ಬಹುಶಃ ಇದನ್ನು ಎಲ್ಲರೂ ಒಪ್ಪುತ್ತಾರೆಂದು ಕಾಣುತ್ತದೆ. ಪಕ್ಷಾಂತರ ತೊಲಗುವ ರೀತಿಯಲ್ಲಿ ಸಮಗ್ರವಾದ ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ತರಬೇಕೆಂದು ಯಾರು ಈ ಹೊತ್ತು ದೇಶವನ್ನು ಆಳುತ್ತಿದ್ದಾರೆ ಆ ಜನತೆಗೆ ನಾನು ಈ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಇಲ್ಲಿ ಪ್ರಜಾಪ್ರತಿನಿಧಿಗಳಾಗಿ ಕುಳಿತಿರುವವರು ಅವರ ಕ್ಯಾನ್‌ವಾಸ್, ಅವರ ಪಿತೂರಿಗಳನ್ನು ನೋಡಿದಾಗ ನನಗನ್ನಿಸುತ್ತದೆ, ಎಲ್ಲಿಗೆ ದೇಶ ಹೋಗುತ್ತಿದೆ, ಯಾವ ಮಟ್ಟಕ್ಕೆ ಬಂದಿದೆ ಎಂದು ಅನ್ನಿಸುತ್ತದೆ. ಪಕ್ಷಾಂತರದ ಭೂತ ತಮ್ಮನ್ನು ಬೆನ್ನಟ್ಟಿಕೊಂಡು ಬರುತ್ತಿದೆ. ನಿನ್ನೆ ತಾನೇ ರಾಜ್ಯಸಭೆಗೆ ಚುನಾವಣೆ ನಡೆದನಂತರ ಮಾನ್ಯ ಮುಖ್ಯಮಂತ್ರಿಯವರಾದ ಅರಸು ಅವರು ಪಕ್ಷಾಂತರ ನಡೆದಿಲ್ಲ ಎನ್ನುವ ಮಾತನ್ನು ಹೇಳಿದರು. ಮತ್ತೆ ಅದೇ ಅರಸು ಅವರು 6 ಜನ ನಮ್ಮಲ್ಲಿ ಪಕ್ಷಾಂತರ ಮಾಡಿದ್ದಾರೆ, ಅವರನ್ನು ನಾವು ಪಕ್ಷದಿಂದ ತೆಗೆದು ಹಾಕಬೇಕಾಗುತ್ತದೆ ಎನ್ನುವ ಮಟ್ಟದಲ್ಲಿ ಉಗ್ರವಾಗಿ ಹೇಳಿದ್ದಾರೆ. ಅವರ ಹೆಸರುಗಳು ನನ್ನ ಹತ್ತಿರ ಇವೆ. ಈ ರೀತಿ ಆದರೆ ಎಲ್ಲಿಗೆ ಹೋಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ಸರ್ಕಾರವಾಗಲೀ, ನಿಮ್ಮ ಸರ್ಕಾರವಾಗಲೀ ಯಾವುದೇ ಸರ್ಕಾರವಾಗಲೀ ಪ್ರಜಾಪ್ರಭುತ್ವದಲ್ಲಿ ಭದ್ರವಾಗಿ ಉಳಿಯತಕ್ಕ ಸರ್ಕಾರದ ಆವಶ್ಯಕತೆ ಈ ಹೊತ್ತು ಇದೆ.

* * *

ಚೇರ್ಮನ್‌ರವರು.—ಈಗ ಸಭೆ ಎದ್ದು ಮತ್ತೆ ನಾಳೆ ಒಂದು ಗಂಟೆಗೆ ಸೇರುತ್ತದೆ.

---

*The House adjourned at Five Minutes past Six of the Clock to meet again at One of the Clock on Wednesday, the 12th April 1972.*

---

*** Expunged as ordered by the Chair.

WD 17291—GPB—550—6-6-72

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Wednesday, the 12th April 1972*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

**(to which oral answers were given)**

### Employment Exchange at Taluk Level

35. **Sri H. S. SIDDAPPA** (Arsikere).—

Will the Minister for Labour be pleased to state:—

whether there is any proposal to open Employment Exchange Centres at Taluka level in addition to those existing now at district level ?

† **Sri AZEEZ SAIT** (Minister for Labour).—

Yes, but only in towns with a population of 25,000 or more, subject to availability of funds..

**Sri H. S. SIDDAPPA**.—Sir, in the printed answer, the Hon'ble Minister has stated that wherever there is a population of 25,000 or more, they would think of starting an employment exchange at the taluka level. According to the latest Census, most of the taluks have a population of 25,000 or more. I would like to know from the Hon'ble Minister how long it would take to open employment exchanges at all the taluka levels ?

†**Sri AZEEZ SAIT**.—It depends upon the financial position of the Government.

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ, ಹಾಲಿ ಎಷ್ಟು ಎಂಪ್ಲಾಯು'ಮೆಂಟ್' ಎಕ್ಸ್ಚೇಂಜು ಗಳು ಇವೆ ಎಂದು ತಿಳಿಸುತ್ತೀರಾ ?

---

† Indicates that the remarks or speeches have not been revised by the member concerned.

Sri AZEEZ SAIT.—19 employment exchanges are there. In addition, a special employment exchange for the physically handicapped and for professional executive employment is there. Besides that, the State Government has recently sanctioned the establishment of an employment exchange in K.G.F. In addition, considering the employment opportunities likely to be generated on account of the establishment of the Vijayanagar Steel Plant at Hospet, there will be one more employment exchange.

Sri D. B. KALMANKAR.—May I know how many towns are going to be benefited by this, because the Hon'ble Minister says that only places having a population of 25,000 or more will have the benefit of employment exchange ?

Sri AZEEZ SAIT.—I want notice.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು "ಹಣಕಾಸಿನ ಸೌಲಭ್ಯಕ್ಕನುಗುಣವಾಗಿ 25 ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಇಂಥ ಎಕ್ಸ್‌ಚೇಂಜುಗಳನ್ನು ಪ್ರಾರಂಭಮಾಡುವ ನೀತಿ ಇದೆ" ಎಂದು ಹೇಳುತ್ತೀರಿ. ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಸಿರ್ಸಿ ಜಿಲ್ಲಾ ಕೇಂದ್ರ ಮತ್ತು ಇಲ್ಲಿ ಎಲ್ಲಾ ಆಫೀಸುಗಳು ಇವೆ. ಇಲ್ಲಿ 32 ಸಾವಿರ ಪ್ರಜಾಸಂಖ್ಯೆ ಇದೆ. ಮುಂದೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳನ್ನು ಕೊಡುವಾಗ ಇಲ್ಲಿಗೆ ಒಂದು ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Sri AZEEZ SAIT.—I will have it examined.

ಭದ್ರಾವತಿ ಮತ್ತು ದಾವಣಗೆರೆ ವಿಷಯ ನಮ್ಮ ಆಲೋಚನೆಯಲ್ಲಿದೆ. ಸಿರ್ಸಿ ವಿಷಯದಲ್ಲಿ ನಾನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸ್ವಾಮಿ ತಮ್ಮ ಉತ್ತರದಲ್ಲಿ ಹೇಳಿದ್ದೀರಿ, 25 ಸಾವಿರದ ಮೇಲೆ ಜನಸಂಖ್ಯೆ ಇರುವ ಟೌನ್‌ಗಳಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸಚೇಂಜು ತೆರೆಯುತ್ತೇವೆ ಎಂದು. ರಾಜ್ಯದಲ್ಲಿ ಒಟ್ಟು 19 ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳು ಮತ್ತು ಫಿಸಿಕಲಿ ಹ್ಯಾಂಡಿಕ್ಯಾಪ್ಡ್‌ಗೆ ಸಪರೇಟ್ ಆಗಿ ಬೇರೆ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ತೆರೆದಿದ್ದೇವೆ ಎಂದು ಹೇಳಿದ್ದೀರಿ. ಜನಗಳಿಗೆ ಇನ್ನೊಂದು ಕಡೆ ಹೋಗಿ ರಿಜಿಸ್ಟರ್ ಮಾಡುವುದಕ್ಕೂ ಅವಕಾಶ ಆಗದೆ ಇರುವ ಸಂದರ್ಭ ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಒಂದೊಂದು ಸಬ್ ಡಿವಿಷನ್‌ಗೆ ಒಂದೊಂದು ಎಂಪ್ಲಾಯ್‌ಮೆಂಟ್ ಎಕ್ಸಚೇಂಜ್ ತೆರೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

Sri AZEEZ SAIT.—Already Government is seized of the matter. The Employment Exchanges already existing serve the needs of the urban areas. Considering the importance of the better utilisation of rural man power, a decision has been taken in consultation with the Planning Commission to have an employment exchange in places with a population of 25,000 or more. If there has to be a change in population size, we have to get it examined because the question of finance is also involved.

Sri B. B. SAYANAK.—The Hon'ble Minister has been stating that employment exchanges would be opened in all places with a population of 25,000. May I know how many towns are there with a population of 25,000 in the whole State and why there is a discrimination regarding this ?

Sri AZEEZ SAIT.—I have already answered this question. I said I want notice.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರಿನಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸು ಇದೆ. ತಮಗೆ ಗೊತ್ತಿರುವ ಹಾಗೆ ಈ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸುವುದಕ್ಕೂ ಬಹಳ ಜನ ಬರುತ್ತಾರೆ. ಅಲ್ಲಿ ನೂಕು ನುಗ್ಗಲು ಆಗಿ ರಿಜಿಸ್ಟರ್ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಬೆಂಗಳೂರಿನಲ್ಲಿ ಎರಡು ಕಡೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ಆಫೀಸುಗಳನ್ನು ಕರೆಯುವುದಕ್ಕೆ ಯೋಚನೆ ಮಾಡುತ್ತೀರಾ ?

Sri AZEEZ SAIT.—It is under my due consideration.

Sri D. B. KALMANKAR.—In view of the fact that the unemployment problem is not confined only to towns but also rural areas, is it not feasible to open employment exchanges at every taluka level irrespective of the size of population ?

Sri AZEEZ SAIT.—Perhaps the Hon'ble Member has not cought my point ; I said that it is under due consideration and we want to extend the benefit to the rural man-power also. All these days we were only serving the urban population. We want to get down to rural areas also and with this object, we have taken some action and future action is still under the consideration of the Government. It all depends upon the financial position of the Government.

ಶ್ರೀ ಎನ್. ಜಿ. ಹಾಲಪ್ಪ.—ಈಗ 25 ಸಾವಿರ ಪ್ರಜಾಸಂಖ್ಯೆ ಮೇಲ್ಪಟ್ಟು ಇರುವ ಕಡೆ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ತೆರೆಯುತ್ತೇವೆ ಎಂದು ಹೇಳಿದ್ದೀರಿ. ಶಿವಮೊಗ್ಗ ಜಿಲ್ಲೆಯಲ್ಲಿ, ಶಿವಮೊಗ್ಗ, ಭದ್ರಾವತಿ ಬಿಟ್ಟರೆ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ನಲ್ಲಿ 25ಸಾವಿರ ಜನಸಂಖ್ಯೆ ಬರುವುದಿಲ್ಲ. ಹಳ್ಳಿಗಾಡಿನ ಜನರಿಗೆ ಉಪಕಾರ ಮಾಡುವ ದೃಷ್ಟಿಯಿಂದ ತಾಲ್ಲೂಕು ಹೆಡಕ್ವಾರ್ಟರ್‌ನಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೆಂಜುಗಳನ್ನು ತೆರೆಯುವುದು ಉಚಿತವಲ್ಲವೆ ? ಹಳ್ಳಿಗಳಲ್ಲಿರುವ ಹುಡುಗರಿಗೆ ಅವಕಾಶ ಸಿಕ್ಕುತ್ತಿಲ್ಲ, ಪಟ್ಟಣದಲ್ಲಿರುವವರಿಗೆ ಸಿಕ್ಕುತ್ತದೆ. ಅವರ ಹೆಸರನ್ನು ರಿಜಿಸ್ಟರ್ ಮಾಡಬೇಕೆಂದರೆ ಅವರಿಗೆ ಸುಮಾರು ದುಡ್ಡು ಖರ್ಚಾಗುತ್ತದೆ. ಆದ್ದರಿಂದ ತಾಲ್ಲೂಕು ಹೆಡ್ ಕ್ವಾರ್ಟರ್‌ನಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೆಂಜುಗಳನ್ನು ತೆರೆಯುವುದು ಸೂಕ್ತ ಮತ್ತು ಉಚಿತವಲ್ಲವೇ ?

Sri AZEEZ SAIT.— The Hon'ble Member knows that we want to attract rural manpower also. The Hon'ble Member perhaps is saying that rural man- power is drifting towards cities in search of employment. Instead of encouraging that, we are trying our best to utilise the rural man-power also. That is why we are starting one in Bhadravathi.

ಶ್ರೀ ಜಿ. ರಾಮೇಗೌಡ.—ತಾಲ್ಲೂಕಿನ ಜನಸಂಖ್ಯೆಗೆ ಅನುಸಾರವಾಗಿ 25 ಸಾವಿರ ಗೊತ್ತು ಮಾಡಿರುವುದರ ಉದ್ದೇಶವೇನು ? ತಾಲ್ಲೂಕಿನಲ್ಲಿ ಲಕ್ಷಾಂತರ ಜನ ಇರುವುದರಿಂದ ಪ್ರತಿ ತಾಲ್ಲೂಕಿನಲ್ಲಿ ಒಂದು ಸೆಂಟರ್ ಓಪನ್ ಮಾಡುವುದು ಒಳ್ಳೆಯದಲ್ಲವೆ ?

†ಶ್ರೀ ಡಿ. ದೇವರಾಜ್ ಅರಸ್ (ಮುಖ್ಯಮಂತ್ರಿಗಳು).—ಮಾನ್ಯಅಧ್ಯಕ್ಷರೇ, ಕ್ರ್ಯಾಷ್ ಪ್ರೋಗ್ರಾಂ ಎಂದು ಕೇಂದ್ರ ಸರ್ಕಾರದವರು ಇತ್ತೀಚಿಗೆ 25 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದಾರು. ಅದರಲ್ಲಿ ಮೈಸೂರು ರಾಜ್ಯಕ್ಕೆ ಎರಡು ಕೋಟಿ ರೂಪಾಯಿಗಳ ಸಹಾಯ ಹೋದ ಸಾರಿ ಬಂತು. ಮತ್ತೆ ದುಡ್ಡು ಬರುವುದಿದೆ. ಈ ಎರಡು ಕೋಟಿ ರೂಪಾಯಿಗಳನ್ನು ಎಲ್ಲಾ ಕಡೆಗೂ ಅಲ್ಪಸ್ವಲ್ಪ ಹಂಚುವುದಕ್ಕಿಂತ ಕೆಲವು ಪ್ರಾಜಕ್ಟ್‌ಗಳನ್ನು ಆರಿಸಿಕೊಂಡು ಬಹಳ ತೊಂದರೆಗಳಿರ ತಕ್ಕಂಥ ರೂರಲ್ ಅನ್‌ಎಂಪ್ಲಾಮೆಂಟ್ ಪ್ರಾಬ್ಲಮ ಹೆಚ್ಚಾಗಿರುವ ಕಡೆ ಪ್ರಪ್ರಥಮವಾಗಿ ಹಣ ಖರ್ಚುಮಾಡಿ ಆ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳಬೇಕೆಂದು ಮಾಡಿದೆವು. ಹೆಚ್ಚಿಗೆ ಹಣ ಬಂದ ಹಾಗೆ ಸ್ವಲ್ಪ ಕಾಲದಲ್ಲಿ ಒಂದು ಯೋಜನೆ ರೀತ್ಯ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳನ್ನು ತೆರೆಯುತ್ತೇವೆ. ರೂರಲ್ ಅನ್ ಎಂಪ್ಲಾಯಿಮೆಂಟ್ ಪ್ರಾಬ್ಲಮ್ ಎಲ್ಲಾ ಕಡೆ ಇದೆ. ಆದರೆ ಮಾನ್ಯ ಸದಸ್ಯರು ಒಪ್ಪಬೇಕು, ಕೆಲವು ಕಡೆ ಈ ಸಮಸ್ಯೆ ಜಾಸ್ತಿಯಾಗಿದೆ. .ಜಾಸ್ತಿ ಇರುವ ಕಡೆ ಲೋಕೆಟ್ ಮಾಡಿ ಪ್ರಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತೇವೆ. ಹಣ ಎಷ್ಟು ದೊರೆಯುತ್ತದೆಯೋ ಅದರಂತೆ ಮುಂದು

(ಶ್ರೀ ಡಿ. ದೇವರಾಜ್ ಅರಸ್)

ವಹಿಸುತ್ತೇವೆ. ಎರಡು ರೀತಿಯ ಪ್ರಾಜೆಕ್ಟುಗಳನ್ನು ಜಾರಿಗೆ ತಂದಿದ್ದೇವೆ. ಒಂದು ತಾಲ್ಲೂಕು ಬೋರ್ಡುಗಳ ಮುಖೇನ ಕೆಲಸ ಮಾಡುವುದು, ಅದಕ್ಕಾಗಿ ಒಂದು ಲ್ಯಾಂಡ್ ಆರ್ಮಿ ಆಫೀಸು ಮಾಡುವ ಆಲೋಚನೆ ಮಾಡಿದ್ದೇವೆ ಮತ್ತು ಬೇರೆ ಕೆಲವು ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳತಕ್ಕದ್ದು ಇದೆ. ಈ ರೀತಿಯಲ್ಲಿ ಟ್ಯಾಕಲ್ ಮಾಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ಹಳ್ಳಿಯ ಪ್ರದೇಶದ ಅವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯನ್ನು ಗೊತ್ತುಪಡಿಸುವ ಸಲುವಾಗಿ ತಾವು ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ತಮ್ಮ ಈ ಯೋಜನೆ ಮುಂದಿನ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಕಾರ್ಯಗತವಾಗುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ ಈಗಿನ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಕೆಲಸಕ್ಕೋಸ್ಕರ ನಿರುದ್ಯೋಗಿ ಯುವಕರು, ಯುವತಿಯರು ನಂಬರನ್ನು ಅವರ ಕಡೆ ಕಳುಹಿಸುವುದಕ್ಕೆ ಎಷ್ಟು ಕಷ್ಟಪಡುತ್ತಿದ್ದಾರೆ ಎನ್ನುವುದು ಗೊತ್ತಿದೆ. ಕೇವಲ ಇನ್‌ಫ್ಲುಯೆನ್ಸ್‌ಗೆ ಒಳಗಾಗಿ ಆಗುವಂಥ ಕೆಲಸಗಳನ್ನು ತಡೆಗಟ್ಟುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಈಗಾಗಲೇ ಅದರ ಬಗ್ಗೆ ಸರ್ವೆ ನಡೆಯುತ್ತಾ ಇದೆ. ಮಾನ್ಯ ಸದಸ್ಯರು ಹೇಳಿರುವ ಹಾಗೆ 5 ವರ್ಷದಲ್ಲಿ ಅನ್‌ಎಂಪ್ಲಾಯ್‌ಮೆಂಟ್ ಸಮಸ್ಯೆಯನ್ನು ಸುಧಾರಣೆ ಮಾಡುವುದಕ್ಕೆ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. 5 ವರ್ಷದಲ್ಲಿ ಪೂರ್ಣವಾಗಿ ಸುಧಾರಣೆ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲೆಮ್ ಸಾಲ್ವ್ ಮಾಡುವುದಕ್ಕೆ ಪ್ರಯತ್ನ ಮಾಡಿದರೂ ಅದು ಪ್ರಜಾಸಂಖ್ಯೆಗನುಗುಣವಾಗಿ ಬೆಳೆಯುತ್ತಾ ಹೋಗುವುದು ತಮಗೆ ಗೊತ್ತಿದೆ. ಮತ್ತು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ಹೆಸರನ್ನು ಕಳಿಸುವಾಗ ಇನ್‌ಫ್ಲುಯೆನ್ಸ್ ಆಗುತ್ತಿದೆ ಎಂದು ಏನು ಹೇಳುತ್ತಾರೋ ಆರೀತಿ ಇನ್‌ಫ್ಲುಯೆನ್ಸ್‌ಗೆ ಒಳಗಾಗದ ಹಾಗೆ ಒಂದು ಯೋಜಿತವಾದ ನೀತಿನಿಯಮಗಳಿಗನುಸಾರವಾಗಿ ಕೆಲಸ ಸಿಕ್ಕಬೇಕು ಎನ್ನುವುದೇ ನಮ್ಮ ಆಸೆ. ಅದಕ್ಕೆ ಯಾರೂ ಕೂಡ ಆ ಪ್ರಭಾವಕ್ಕೆ ಒಳಗಾಗದ ಹಾಗೆ ಸರ್ಕಾರ ಗಮನ ಕೊಡುತ್ತದೆ. ಆ ಪ್ರಭಾವವನ್ನು ಯಾರವೂ ಮಾಡದ ಹಾಗೆ ನಾವು ನೀವು ನೋಡಿಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಪ್ರಭಾವಕ್ಕೆ ಒಳಗಾದ ಅಧಿಕಾರಿಗಳ ಮೇಲೆ ನಿರುದ್ಯೋಗಿಗಳು ಯಾರಾದರೂ ದೂರು ಕೊಟ್ಟರೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಸಿದ್ದವೀರಪ್ಪ.—ಅಗತ್ಯವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ.—ಕ್ರ್ಯಾಷ್ ಪ್ರೋಗ್ರಾಂ ಕೆಲಸ ಮಾಡುತ್ತಾ ಇರುವುದು ಬಹಳ ಶ್ಲಾಘನೀಯವಾದದ್ದು. ಆದರೆ ಇದರಲ್ಲಿ ಎಸ್. ಎಸ್. ಎಲ್. ಸಿ. ಮೇಲ್ಪಟ್ಟು ಓದಿದ ಪದವೀಧರರಿಗೆ ಏನೂ ಅವಕಾಶವಿಲ್ಲ. ಆದ್ದರಿಂದ ಅವರ ಸಂಖ್ಯೆ ಹೆಚ್ಚಾಗಿ ಬೆಳೆಯುತ್ತಾ ಇರುವುದರಿಂದ 1 ಲಕ್ಷ ಪ್ರಜಾಸಂಖ್ಯೆ ಇರುವ ತಾಲ್ಲೂಕುಗಳಿಗೆ ಒಂದು ಸೆಂಟರನ್ನು ಓಪನ್ ಮಾಡುವುದು ಉಚಿತವಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ಮೊದಲೇ ಹೇಳಿದಂತೆ ಈಗ ನಾವು 10 ಸಾವಿರ ರೂಪಾಯಿಗಳನ್ನು ಹಂಚಿ ಬಿಟ್ಟು ಸೆಂಟರುಗಳನ್ನು ಮಾಡಿದರೆ ಆ ದುಡ್ಡು ಅಲ್ಲೂ ಇಲ್ಲ, ಇಲ್ಲೂ ಇಲ್ಲದ ಹಾಗೆ ಆಗುತ್ತದೆ. ಈ ಸೆಂಟರ್ಸ್ ಇರುವುದು ಎಸ್. ಎಸ್. ಎಲ್. ಸಿ. ಓದಿದವರಿಗೇ ಅಂತಾ ಅಲ್ಲ. ಯಾರು ಬೇಕಾದರೂ ಬರಬಹುದು ಯಾರು ಗುದ್ದಲಿ, ಹಾರಿ ಹಿಡಿದುಕೊಂಡು ಕೆಲಸ ಮಾಡುತ್ತಾರೋ ಅಂಥಾವರಿಗೆ ಈ ಕ್ರ್ಯಾಷ್ ಪ್ರೋಗ್ರಾಂ ಕೆಲಸ. ಇದರಲ್ಲಿ ನಾಚಿಕೆ ಏನೂ ಇಲ್ಲ. ಓದಿದವರು ಚಡ್ಡಿ ಹಾಕಿಕೊಂಡು ಬಂದು ಕೆಲಸ ಮಾಡುವುದಾದರೆ ನನ್ನ ಅಭ್ಯಂತರವಿಲ್ಲ. ಈಗ ಇರುವ ಪರಿಸ್ಥಿತಿಯಲ್ಲಿ ಈ ಕೆಲಸದಲ್ಲಿ ವಿದ್ಯಾವಂತರು ಬರುವುದಿಲ್ಲ. ಶಾರೀರಿಕ ಶ್ರಮ ವಹಿಸಿ ಈ ಕೆಲಸ ಮಾಡುವವರನ್ನು ತೆಗೆದುಕೊಳ್ಳಬಹುದು.

**Smt. C. NAGAMMA KESHAVAMURTHY.**—At present, there is an Exchange Centre at Chitradurga in our District. Considering the fact that Davanagere is a big City with a population of over one lakh, can the Hon'ble Minister give an assurance to open an Exchange Centre at Davanagere ?

**Sri AZEEZ SAIT.**—They are starting a Centre at Davanagere.

SRI H. S. SIDDAPPA.—In view of the fact that the population of Arsikere has exceeded 25,000, will the Government be pleased to consider favourably the opening of a Centre at Arsikere ?

SRI AZEEZ SAIT.—I have already made it clear that we are at it. We will take it up as and when the financial position permits and the circumstances and requirements warrant.

## Admission to T. B. Sanatorium at Mudushedde

58. SMT. WINNIFRED F. FERNANDES (Coondapur).—

Will the Minister for Health be pleased to state :—

(*a*) whether it has come to the notice of the Government that admissions to the Government T. B. Sanatorium at Mudushedde in South Kanara, are available only on payment of Rs. 300.00 and not otherwise ;

(*b*) if so, whether they would institute an enquiry into this matter ?

SRI H. SIDDAVEERAPPA (Minister for Health).—

(*a*) Yes ; there are complaints to this effect.

(*b*) A departmental enquiry has been instituted.

SMT. WINNIFRED F. FERNANDES.—Have you received any complaints from the public or the T. B. patients against the Government T. B. Sanatorium at Mudushedde ?

† SRI H. SIDDAVEERAPPA.—I have received a complaint from the Deputy Commissioner of the District containing allegations against Dr. Raghavendra Rao Kulkarni, Superintendent, Government T. B. Sanatorium, Mudushedde.

SMT. WINNIFRED F. FERNANDES.—May I know whether the departmental enquiry has already been instituted ; and if so by whom ?

SRI H. SIDDAVEERAPPA.—The enquiry will be by the Joint Director, Dr. B. V. Puttaraj Urs. He has been directed to give his report within 15 days.

SRI B. B. SAYANAK.—Is it not very very disgraceful and shameful on the part of the medical authorities to claim from the poor and helpless patients Rs. 300 to get admission to the Sanatorium ? What action does the Government propose to take against the Doctor ?

SRI H. SIDDAVEERAPPA.—I can take action only after the receipt of the report.

**Sri B. B. SAYANAK.**—Since how many years is this Doctor taking money for admission to the Government T. B. Sanatorium from patients and why did not the Government send the complaint against him to the Vigilance Commission ?

**Sri H. SIDDAVEERAPPA.**—We had earlier received a complaint against him while he was working at Kolar and that matter was referred to the Anti-Corruption and it is pending there. We have not yet received the report from the Anti-Corruption Department.

**Sri B. B. SAYANAK.**—Why was it referred to the Anti-Corruption Department and not to the Vigilance Commission.

**Sri H. SIDDAVEERAPPA.**—The procedure followed is much more speedy.

ಶ್ರೀ ಎಸ್. ಎಚ್. ಪುಟ್ಟದಾಸ್.—ಡಾ. ಕುಲಕರ್ಣಿಯವರು ಟ್ಯಾಂಪರಿಂಗ್ ಆಫ್ ರಿಕಾರ್ಡ್ಸ್ ಮಿಸ್ ಅಪ್ರೋಪ್ರಿಯೇಷನ್ ಆಫ್ ಹಾಸ್ಪಿಟಲ್ ಫಂಡ್ಸ್ ಇಂಥಾದ್ದನ್ನೆಲ್ಲಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ! ಬಂದಿದ್ದರೆ ಏತಕ್ಕೆ ಆಕ್ಷನ್ ತೆಗೆದುಕೊಂಡಿಲ್ಲ ?

ಶ್ರೀ ಹೆಚ್. ಸಿದ್ಧವೀರಪ್ಪ.—ನನ್ನ ಮುಂದೆ ಇರತಕ್ಕ ವರ್ತಮಾನದ ಪ್ರಕಾರ 50 ರೂಪಾಯಿ ಒಬ್ಬರ ಹತ್ತಿರ ಹಣ ಕೇಳಿದರೇ ವಿನಃ ಟ್ಯಾಂಪರಿಂಗ್ ಆಫ್ ರಿಕಾರ್ಡ್ಸ್ ವಿಚಾರದಲ್ಲಿ ಯಾವುದೂ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಡಾ. ಕುಲಕರ್ಣಿಯವರಬಗ್ಗೆ ಮಾಹಿತಿ ಕೊಟ್ಟರೆ ಆಕ್ಷನ್ ತೆಗೆದುಕೊಳ್ಳುತ್ತೀರಾ ?

ಶ್ರೀ ಹೆಚ್. ಸಿದ್ಧವೀರಪ್ಪ.—ಆಗಬಹುದು.

ಶ್ರೀ ಬಿ. ವಿ. ಕಕ್ಕಿಲಾಯ.—ಸೌತ್ ಕೆನರಾದಲ್ಲಿ ಟಿ. ಬಿ. ಸ್ಯಾನಿಟೋರಿಯಂನಲ್ಲಿ ಪಾಜಿಟೀವ್ ಆಗಿ ರೆಫರ್‌ಮಾಡಿದ ಕೇಸುಗಳನ್ನು ಸೂಪರಿಂಟೆಂಡೆಂಟರು ನೆಗೆಟೀವ್ ಎಂದು ವಾಪಸ್ಸು ಕಳುಹಿಸಿದ ಕಂಪ್ಲೆಂಟ್ ಬಂದಿದೆ. ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್‌ನವರು ಅವು ಪಾಜಿಟಿವ್ ಕೇಸುಗಳು ಎಂದು ಡೆಪ್ಯೂಟಿ ಕಮೀಷನರಿಗೆ ಕಂಪ್ಲೆಂಟ್ ಕೊಟ್ಟಿಲ್ಲವೆ ?

ಶ್ರೀ ಹೆಚ್. ಸಿದ್ಧವೀರಪ್ಪ.—ಅದರ ಮೇಲೇನೇ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೇವೆ.

**Sri N. G. HALAPPA.**—The Hon'b'e Minister was pleased to say that the complaint was from the Deputy Commissioner. Why did it come from him ? Should not the Doctor has been placed under suspension pending enquiry ?

**Sri H. SIDDAVEERAPPA.**—The complaint is from the Deputy Commissioner in his capacity as the Chairman of the District Development Counc'l ; this matter was brought to the notice of the District Development Council. I have already told the House that this Doctor is under suspension.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಎನ್‌ಕ್ವೈರಿ ನಡೆಸುತ್ತೇವೆ ಎಂದು ಹೇಳಿದಿರಿ. ಎನ್‌ಕ್ವೈರಿ ನಡೆಸುವಾಗ ಬಹಿರಂಗವಾಗಿ ನಡೆಸುತ್ತೀರಾ, ಅಂತರ್ಗತವಾಗಿ ನಡೆಸುತ್ತೀರಾ ? ಸಂಬಂಧಪಟ್ಟವರ ಸಾಕ್ಷಿ ನುಡಿಯುವುದಕ್ಕೆ ಅವಕಾಶ ಕೊಡುತ್ತೀರಾ !

ಶ್ರೀ ಹೆಚ್. ಸಿದ್ಧವೀರಪ್ಪ.—ಅದು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ.

**Sri D. B. KALMANKAR.**—May I know whether the Officer concerned was put under suspension when this Government assumed office or he was put under suspension no sooner complaints were received ?

**Sri H. SIDDAVEERAPPA.**—The complaint was received on the 8th and that day only he was kept under suspension.

ಶ್ರೀ ಸಿ. ಬೈರೇಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವ ಈ ಅನ್ಯಾಯದ ಬಗೆಗೆ ದೂರು ಬಂದಿದ್ದರೂ ಇದುವರೆಗೇಕೆ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ?

ಶ್ರೀ ಎಚ್. ಸಿದ್ದವೀರಪ್ಪ.—ಸರಕಾರ ಕ್ರಮ ತೆಗೆದುಕೊಳ್ಳಬೇಕಾದರೆ ಒಂದು ಪದ್ಧತಿ ಇದೆ. ಆ ಪದ್ಧತಿ ಪ್ರಕಾರ ಪರಿಶೀಲನೆಮಾಡಬೇಕು. ತಪ್ಪಿತಸ್ಥರಿಗೆ ಕಾನ್‌ಸ್ಟಿಟ್ಯೂಷನಲ್ ಗ್ಯಾರಂಟಿ ಇದೆ. ನಮ್ಮಲ್ಲಿರುವ ಪದ್ಧತಿ ಪ್ರಕಾರ ಪರಿಶೀಲನೆಮಾಡಿ ವಿಚಾರಣೆ ನಡೆಸಲು ಆಂಟಿ ಕರಪ್ಷನ್ ಇಲಾಖೆಗೆ ಹೋಗುವುದು. ಅಲ್ಲಿಗೆ ಹೋಗಿದೆ, ಅಲ್ಲಿಂದ ವರದಿ ಬಂದಿಲ್ಲ. ಎರಡನೆಯ ಸಲ ದೂರು ಬಂದ ಮೇಲೆ ಡಿಪಾರ್ಟಮೆಂಟಲ್ ಎನ್‌ಕ್ವೈರಿ ಮಾಡಲು ಸಂಬಂಧಪಟ್ಟ ಅಧಿಕಾರಿಯನ್ನು ಸಸ್‌ಪೆನ್‌ಷನ್ನಿನಲ್ಲಿಟ್ಟಿದೆ.

ಶ್ರೀ ಎಸ್ ಬಂಗಾರಪ್ಪ.—(ಅ) ಪ್ರಶ್ನೆಯಲ್ಲಿ ಈ ಬಗ್ಗೆ ವಿಚಾರಣೆಯೊಂದನ್ನು ನಡೆಸುವರೇ? ಎಂದು ಕೇಳಿರುವುದಕ್ಕೆ ಉತ್ತರವಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದೆ. ತಮ್ಮ ಪ್ರಕಾರ ಬೇರೆ ಎಲ್ಲಾವಿಚಾರಣೆಗಳಿಗಿಂತ ಇಲಾಖಾ ವಿಚಾರಣೆ ಬಹಳ ಒಳ್ಳೆಯದು ಎಂಬ ಅಭಿಪ್ರಾಯವಿದೆಯೇ ? ನಮ್ಮ ಅನುಭವದ ಪ್ರಕಾರ ಇಲಾಖೆ ವಿಚಾರಣೆಯಿಂದ ಸರಿಯಾದ ಅಂಶ ಹೊರಬರುವುದಿಲ್ಲ. ಆದುದರಿಂದ ಇಲಾಖೆ ವಿಚಾರಣೆ ಬಿಟ್ಟು ಅವರಿಗೆ ಉಗ್ರಶಿಕ್ಷೆ ಕೊಡಲು ಏರ್ಪಾಡು ಮಾಡುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ಪ್ರಶ್ನೆ ಏಳುವುದಿಲ್ಲ. ವಿಚಾರಣೆಯಾಗಿ ಸರಿಯಾದ ವರದಿ ಬಂದಿಲ್ಲ. ಬಂದನಂತರ ವಿಚಾರಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—69--70ರಲ್ಲಿ ಆಂಟಿಕರಪ್ಷನ್ ಇಲಾಖೆಗೆ ಬರೆದರೂ ಅಲ್ಲಿಂದ ವರದಿ ಬಂದಿಲ್ಲವೆಂದು ಹೇಳುತ್ತೀರಿ. ಎರಡು ವರ್ಷವಾಗಿದೆ. ಲಂಚವಿರೋಧ ಇಲಾಖೆ ಕೂಡ ಕರಪ್ಟ್ ಆಗಿದೆಯೆಂಬುದು ಗಮನಕ್ಕೆ ಬಂದಿದೆಯೇ ?

(ಉತ್ತರವಿಲ್ಲ)

MADAM SPEAKER.—Questions are over.

## SHORT NOTICE QUESTION AND ANSWER

### Small-Pox Epidemic in Gulbarga District

5. Sri J. P. SARVESH (Sedam).—
Sri D. B. KALMANKAR (Afzalpur).—

Will the Minister for Health be pleased to state :—

(*a*) whether there is small-pox epidemic in Gulbarga District;

(*b*) the steps taken to control the spread of this epidemic in all taluks of Gulbarga District, paticularly in Sedam where the epidemic is spreading fast ;

(*c*) the number of persons that died in the small-pox epidemic in Sedam ?

† Sri H. SIDDAVEERAPPA (Minister for Health).—

(*a*) Yes.

(SRI H. SIDDAVEERAPPA)

(b) Primary Vaccinations and Re-Vaccinations have been carried out as indicated below:—

| | Primary Vaccinations | Re-Vaccinations |
|---|---|---|
| Affected areas of Gulbarga District. | 3,419 | 21,064 |
| Sedam Town | 725 | 8,081 |

(c) Eleven (11)

Sri J. P. SARVESH. In reply to Supplementary to (c) the figure given is only eleven. Is it only for Sedam Town or for the whole taluk ? Because my information is that in Kurkunde itself 30 people have died, in Sedam 30 people have died and there are deaths in other villages also.

†Sri H. SIDDAVEERAPPA.—It is only for Sedam Town.

Sri D. B. KALMANKAR.—Will the Government be pleased to state how many deaths have taken place in Sedam and in other talukas due to small-pox ?

Sri H. SIDDAVEERAPPA.—I have got the entire list as to the number of deaths that have taken place in Gulbarga District in this full one year. If the hon. Member wants it I am prepared to place it on the table. The total number of attacks is 223 and number of deaths 19 in the whole of Gulbarga District.

Sri D. B. KALMANKAR.—What action has been taken against the officers concerned and who are they ?

Sri H. SIDDAVEERAPPA.—This Officer was callous and indifferent. For one year he did not report to the Government. The matter had to come to us through the Central Government. The Andhra and Maharashtra Governments had reported to us. Looking to the grave nature of the allegation against him, I have kept him under suspension pending enquiry.

Sri J. P. SARVESH.—Has it come to the notice of the Government that the Doctor working at Mudhol dispensary is responsible. He has been absent for many years and when the epidemic started, there was no person in the hospital.

Sri H. SIDDAVEERAPPA. - That is under enquiry and if the matter comes to light in the enquiry, such action as is necessary will be taken.

ಶ್ರೀ ಎಂ. ಎಸ್. ಕೃಷ್ಣನ್.—ಗುಲ್ಬರ್ಗದಲ್ಲಲ್ಲದೆ ಇನ್ನಾವುದಾದರೂ ಪ್ರದೇಶದಲ್ಲಿ ಈ ರೀತಿ ಎಪಿಡೆಮಿಕ್ ಇದ್ದರೂ ಸಹ ವರದಿ ಬಾರದಿರುವುದು ಮತ್ತು ಕೇಂದ್ರ ಸರಕಾರದಿಂದ ಸಮಾಚಾರ ಬಂದಿರುವುದು—ಇಂಥ ಉದಾಹರಣೆಯಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ

Sri D. B. KALMANKAR.—Is it a fact that so many deaths have taken place and that in so many cases the Officers have submitted nil reports to the higher authorities ?

Sri H. SIDDAVEERAPPA.—Yes, it is a fact.

## Calling attention to a matter of urgent public importance *re*: disturbances at Belgaum during Moharam Festival

Sri B. B. SAYANAK.—Sir, I call the attention of the Chief Minister to the disturbances at Belgaum during Moharam Festival on 26th February 1972.

Sri D. DEVARAJ URS (Chief Minister).—Sir, Some incidents took place at Belgaum during Moharam on 26th February 1972. It is reported that at 6-15 p. m., taboots were taken out from different parts of Belgaum City in a procession. Most of the processionists were heavily drunk and behaving in a disorderly manner. At Bogarves Chowk, three drunkards started quarrelling and when a Traffic Police Constable intervened to separate them, he was assaulted. Hence, these three persons were arrested, but released later. The procession continued further and when the processionists reached Khade Bazar Lane, they stopped moving further alleging that stones were hurled at them from the top of a building. When the procession passed Maruthi Temple, the processionists were shouting slogans. They became violent, tried to enter houses forcibly and assaulted the police when they intervened. In spite of the assurance given by the police that action would be taken against the alleged miscreants, the processionists insisted on breaking open the doors of houses and dragging the inmates out. A tear-gas shell was burst to disperse the unruly mob. Thereafter, the procession moved further and dispersed after performing the customary religious rites.

Due to the pelting of stones by the mob some street lights and window panes of buildings in Khade Bazar Lane were broken. Total damage to property is estimated to be Rs. 9,876. 11 Police Officers and 8 members of the public sustained injuries. Prohibitory Order under section 35 of the Mysore Police Act was promulgated in the limits of Belgaum City and Cantonment area for two days with effect from 12 hours on 28th February 1972.

The police have registered cases under various Sections of I. P. C. 44 persons have been arrested. Adequate Police arrangements were made and no incidents occured from the mid-night of 26th February 1972.

As regards certain specific incidents mentioned in the Calling Attention Notice, it may be stated that on the complaints made to the police, cases have been registered, and in some cases charge-sheets have also been filed. Hence the matter is sub-judice. In regard to the remaining cases which are under investigation, charge-sheets are likely to be filed soon. It is therefore not desirable to discuss these incidents at this stage.

Sri B. B. SAYANAK.—Sir, I want to make it clear that I am not against any community or any caste. But there is a rumour in Belgaum that there is an anti-national element in Belgaum. During the

(SRI B. B. SAYANAK)

procrssion, the processionists were shouting slogans like 'Pakistan Zindabad', 'Sheikh Mujibir Murdabad' and 'Pakistan Zindabad'. They are simply alleging that stones were pelted; actually no stones were pelted. The processionists have entered the houses of Hindus and beat them. One lady has been dragged from the House. There is an anti-national element in Belgaum.

SRI D. DEVARAJ URS.—This is not the way. Most of the facts which the hon. Member has mentioned are in the mind of Government and I think no useful purpose would be served by referring to this community or that community on the floor of the House. On the other hand, it might incite further troubles. I would, therefore, request that we need not refer to these matters now. I can assure the House that Government is aware of the existence of some anti-social elements particularly with reference to the incident that has taken place in Belgaum. Since we know the matter and since the Government has taken action and is going to take action, I suggest that any kind of argument or discussion at this juncture would not be useful.

1-30 P.M.

SRI C. M. ARUMUGAM.—The hon. Chief Minister has accepted that there are anti-social elements in Belgaum. May I ask to which party or group these anti-social elements belong?

† SRI D. DEVARAJ URS.—That cannot be disclosed. Why should the hon. member worry to which party or community they belong? To whichever party or community they may belong, they will be dealt with suitably.

SRI C. M. ARUMUGAM.—Who organised this procession?

SRI D. DEVARAJ URS.—It is a relgious procession.

SRI M. S. KRISHNAN.—Can I take that the Government will be firm in dealing with the anti-social elements, to whichever community or party they may belong?

SRI D. DEVARAJ URS.—I can assure the House through you, that so far as such antisocial elements are concerned, such elements who are by profession trouble-shooters and who sometimes are instigated by persons remaining in the background, all such persons whether they belong to this party or that party, irrespective of party affiliation and irrespective of community or caste they belong and irrespective of position they hold, the Government is going to take stern action against them.

SRI P. A. PAWASHE.—In the statement it is stated that the police have been assaulted on that day. May I know whether any cases have been launched against persons who committed assault?

SRI. D. DEVARAJ URS.—44 cases have been registered so far and further investigation is going on.

SRI M. S. KRISHNAN.—Since a number of communal clashes have taken place in recent days in Belgaum, Gulbarga and Mangalore, may I ask whether the new Government would probe into this matter more deeply and find out the real reasons and see that effective action is taken.

SRI D. DEVARAJ URS.—So far as Gulbarga is concerned, I have already stated that an enquiry is going on. With regard to Belgaum no enquiry has been contemplated. I agree and I also feel it necessary that more vigilance is needed on the part of the Government to watch and find out who these anti-social elements are and see that we locate them in advance and be watchful over them. I think to that extent we have got to be very careful.

SRI B. B. SAYANAK.—The total damage is estimated at Rs. 9,866. May I ask the Government whether the Government is going to compensate the sufferers.

SRI D. DEVARAJ URS.—That point will be considered.

SRI M. S. KRISHANAN.—Will the Government take action to totally ban communal propaganda?

SRI D. DEVARAJ URS.—Yes. I think it is already banned.

SRI M. S. KRISHNAN.—Will the Government ban communal propaganda either overt or covert, or instance in the textbooks for students which incits one community against another. In the name of seculiarism such things are going on. Will the Government ban them ?

SRI D. DEVARAJ URS.—We can examine all those points and all steps which are necessary to avoid such literature or statements should be taken. I will look into the matter further.

SRI B. V. KAKKILAYA.—Will the Government prevent communal organisations making use of panchayat offices, school play grounds for giving lathi training

SRI D. DEVARAJ URS.—If they are panchayat grounds and public places, that is a matter for examination. I agree.

SRI B. B. SAYANAK.—The Chief Minister has assured Compensation in respect of Hubli and Gulbarga. May I know why it is not done in respect of Belgaum people ?

SRI D. DEVARAJ URS.—I have already stated that we will consider that point.

## Presentation of petition by Sri T. R. Shamanna.

SRI T. R. SHAMANNA.—Madam Speaker, please permit me to present the petition signed by the unemployed Electrical Diploma Engineers in Mysore State. Since there are no definite rules in the rules of Business, I seek the assistance of the House in this matter.

MADAM SPEAKER.—The petition is presented.

## The Mysore Land Reforms (Amendment and Miscellaneous provision) Bill, 1972—Introduction.

Sri S. M. KRISHNA (Minister for Industries).—On behalf of the Minister for Revenue I beg to introduce The Mysore Land Reforms (Amendment and Miscellaneous provisions) Bill, 1972.

MADAM SPEAKER.—The Bill is introduced.

## The Mysore Land Revenue (Amendment) Bill, 1972—Introduction

Sri S. M. KRISHNA.—I also introduce The Mysore Land Revenue (Amendment) Bill, 1972.

MADAM SPEAKER.—The Bill, is introduced.

Sri S. BANGARAPPA.—I rise to a point of order.

MADAM SPEAKER.—The Bills, are just now introduced.

Sri S. M. KRISHNA.—The Bills are just introduced. At this stage if the opposition members want to take objection for introduction they can.

Sri C. M. ARUMUGAM.—I heard the hon. Minister saying that at this stage if the opposition wants to object, they can. Is it their view that we are here only to oppose? We are here to give effective opposition and it is not that we oppose everything. We are not going to do that. Whatever good measures they bring, we will support.

## Notice of Privilege motion *re* : Certain words used by Sri Vatal Nagaraj reflecting the conduct of Sri H. Siddaveerappa and others.

Sri M. MALLAPPA (Birur).—I have given a privilege motion regarding yesterday's incident.

ಶ್ರೀ ಕೆ. ಎಂ. ನಾಗಣ್ಣ.—ನಾನು ಒಂದು ಪ್ರಿವಿಲೆಜ್ ಮೋಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಈಗ ತಾನೇ ಅದು ನನ್ನ ಕೈಗೆ ಬಂದಿದೆ. ಅದನ್ನು ನಾನು ನೋಡುತ್ತೇನೆ.

Sri C. M. ARUMUGAM.—The privilege motion given by Sri Naganna needs top priority.

MADAM SPEAKER.—The hon. member cannot force the Chair like that.

Sri C. M. ARUMUGAM.—I am not forcing ; I am only submitting.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೆನರಸೀಪುರ).—ಅಧ್ಯಕ್ಷರಲ್ಲಿ ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಅದೇನು ಎಂದರೆ ಈಗ ಶ್ರೀ ಮಾರ್ಗದ ಮಲ್ಲಪ್ಪನವರು ತಮ್ಮ ಅಪ್ಪಣೆಯನ್ನು ಪಡೆದು ಒಂದು ಪ್ರಿವಿಲೆಜ್ ಮೋಷನ್‌ನನ್ನು ತರುತ್ತೇನೆಂದು ಹೇಳುತ್ತಿದ್ದಾರೆ. ಆ ವಿಷಯ ನನಗೆ

ಕಾಣುವುದು, ನಿನ್ನೆ ನಡೆದ ಕಾರ್ಯಕಲಾಪಗಳ ಬಗ್ಗೆ ಇರಬಹುದು. ಆದರೆ ನಿನ್ನೆ ಆಗ ಇದ್ದ ಪ್ರಿಸೈಡಿಂಗ್ ಆಫೀಸರ್‌ರವರು ಆ ಕಾರ್ಯಕಲಾಪಗಳನ್ನೆಲ್ಲಾ ರೂಲ್ 315ರ ಪ್ರಕಾರ ಎಕ್ಸ್‌ಪಂಜ್ ಮಾಡಿದ್ದಾರೆ. ಆದ್ದರಿಂದ ಅವರು ಏನು ಒಂದು ನಿರ್ಣಯವನ್ನು ತರಬೇಕೆಂದು ಇದ್ದಾರೆ ಆದಕ್ಕೆ ಸಂಬಂಧಪಟ್ಟಂತಹ ಯಾವುದೂ ವಿಷಯ ಈಗ ಸಭೆಯ ಮುಂದೆ ಇಲ್ಲ ಮತ್ತು ನಿನ್ನೆ ನಡೆದ ಯಾವ ಘಟನೆಯೂ ಈಗ ಇಲ್ಲ. ಇಂತಹ ಒಂದು ಸಂದರ್ಭದಲ್ಲಿ ಶ್ರೀ ಮಾರ್ಗದ ಮಲ್ಲಪ್ಪನವರು ಅಂತಹ ಯಾವ ಒಂದು ಮೋಷನ್ನನ್ನೂ ಇಲ್ಲಿ ತೆಗೆದುಕೊಂಡು ಬರುವುದು ಈಗ ಸಾಧುವಾದುದಲ್ಲ. ನಿನ್ನೆ ನಡೆದ ಯಾವ ಘಟನೆಗಳೂ ಪುನಃ ಈ ಸಭೆಯ ಕಾರ್ಯ ಕಲಾಪಗಳಿಗೆ ಸೇರುವುದಿಲ್ಲ ಎನ್ನುವುದನ್ನು ನಾನು ಇವೊತ್ತು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಈ ಸಭೆಯ ಮುಂದೆ ಇಂತಹ ಯಾವ ಮೋಷನ್ ಇಲ್ಲದೇ ಇರುವುದರಿಂದ ಇದನ್ನು ತೆಗೆದುಕೊಳ್ಳಲು ಬರುವುದಿಲ್ಲ. ಮತ್ತು ಇದರ ಬಗ್ಗೆ ಮೇ ಪಾರ್ಲಿಮೆಂಟರಿ ಪ್ರಾಕ್ಟೀಸ್ ಎನ್ನುವ ಪುಸ್ತಕದಲ್ಲಿ—

> "Any member or the Panel of Chairmen when presiding over a sitting has the same power as the Speaker when so presiding and the ruling given by him shall neither be questioned nor open to any debate or appeal."

ಎಂದು ಈ ರೀತಿ ಇದೆ. ನಿನ್ನೆ ತಾವು ಈ ಸಭೆಯಲ್ಲಿ ಇಲ್ಲದ ಕಾಲದಲ್ಲಿ ಆಗ ಇದ್ದ ಪ್ರಿಸೈಡಿಂಗ್ ಆಫಿಸರು ಏನು ತೀರ್ಮಾನ ಕೊಟ್ಟರೋ ಅದನ್ನು ಇಲ್ಲಿ ಇವೊತ್ತು ಪುನಃ ಪ್ರಶ್ನೆ ಮಾಡುವುದಕ್ಕೆ ಅವಕಾಶವೇ ಇಲ್ಲ. ನಿನ್ನೆ ನಡೆದಂತಹ ಘಟನೆ ಬಗ್ಗೆ ಇಲ್ಲಿ ಯಾವ ನಿರ್ಣಯ ಇಲ್ಲ ಮತ್ತು ಆಗ ನಡೆದ ಕಾರ್ಯಕಲಾಪಗಳನ್ನು ಪೂರ್ತಿಯಾಗಿ ಎಕ್ಸ್‌ಪಂಜ್ ಮಾಡಿರತಕ್ಕ ಕಾಲದಲ್ಲಿ ಅದರ ಮೇಲೆ ಯಾವ ಮೋಷನ್ನನ್ನೂ ಈ ಸಭೆಯಲ್ಲಿ ತರಲು ಸಾಧ್ಯವಿಲ್ಲ. ಇದು ನನ್ನ ಪಾಯಿಂಟ್ ಆಫ್ ಆರ್ಡರು.

Sri M. S. KRISHNAN (Malleswaram).—From what Mr. Mallappa stated just now it is seen that the matter is connected with the incident that took place yesterday about Mr. Vatal Nagaraj. Now the point is if it is connected with that incident which happened yesterday then I think the motion of privilege cannot be brought on that matter since the Hon. Chair has already expunged the entire proceedings connected with that incident. I don't know how that issue could be raised again. I think some other way must be found out to see that the whole thing is settled in a cordial manner.

Sri C. M. ARUMUGAM.—Madam, this issue was raised yesterday and a ruling was already given yesterday by the Chair.

Sri H. SIDDAVEERAPPA (Minister for Health).—Decision was given only with regard to the expunction of proceedings. The notice of privilege motion was there and no decision was given on that motion,

Sri C. M. ARUMUGAM.—Under rule 313 the Speaker has the power necessary for the purpose of enforcing his or her decision. So, the decision given yesterday must be enforced. I feel that a decision was given on all matters raised yesterday including the privilege motion.

Sri H. SIDDAVEERAPPA.—The decision was to expunge what was uttered but not the privilege motion.

Sri D. DEVARAJ URS.—If a decision has been given it is on record. It could be verified. It is our understanding that the decision of the Speaker was only for the expunction of the words uttered and not on the motion of privilege.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ಶ್ರೀ ಮಾರ್ಗದ ಮಲ್ಲಪ್ಪನವರು ತಮ್ಮ ಅಪ್ಪಣೆಗಾಗಿ ಇಲ್ಲಿ ಒಂದು ಪ್ರಿವಿಲೆಜ್ ಮೋಷನ್ ಕಳುಹಿಸಿದ್ದಾರೆಂದು ಕಾಣುತ್ತೆ. ಆದರೆ ಅಂತಹ ಯಾವ ಪ್ರಸಂಗಗಳೂ ಇಲ್ಲಿಲ್ಲ. ಅವರ ಪ್ರಿವಿಲೆಜ್ ಮೋಷನ್ ನಿನ್ನೆ ನಡೆದ ಕಾರ್ಯಕಲಾಪಗಳ ಬಗ್ಗೆ ಇದ್ದರೆ ನಿನ್ನೆ ಇದ್ದ ಅಧ್ಯಕ್ಷರು ಅದನ್ನು ರಿಕಾರ್ಡಿನಿಂದ ಸಂಪೂರ್ಣವಾಗಿ ತೆಗೆದುಹಾಕಿರುವಾಗ ಅದರ ಮೇಲೆ ಮತ್ತೆ ಶ್ರೀ ಮಲ್ಲಪ್ಪನವರು ಇಲ್ಲಿ ನಿರ್ಣಯ ತರುವುದು ಸರಿಯಲ್ಲ. ಆದುದರಿಂದ ಮಾನ್ಯ ಸದಸ್ಯರು ಅವರ ಮೋಷನ್ನನ್ನು ವಾಪಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

SRI M. MALLAPPA.—Madam Speaker, under Rule 177 I have applied for the consent of the Chair to move the motion. The motion given notice of by me reads as follows :

> "Under Rule 177 of the Rules of Procedure I pray for the permission of the Speaker to move a privilege motion against Sri Vatal Nagaraj who has uttered treasonable, seditious and defamatory words reflecting upon the conduct of Sri H. Sidda veerappa and other hon. members of the House imputing motives that they defected from the party while giving votes in Rajya Sabha elections."

I request you to give your permission to move this motion.

SRI S. BANGARAPPA (Sorab).—How can the hon. member move the motion ?

MADAM SPEAKER.—He has just now sought my permission to move the motion.

† SRI S. BANGARAPPA.—I rise to a point of order. Under Rule 177 the Speaker will have to give his consent. There is no motion at all. Yesterday only a notice of privilege motion was given to the Speaker and the Hon. Speaker also announced that he had received a notice of privilege motion. Further, whatever that was uttered yesterday was ordered to be expunged from the official records. Here I would like to quote from May's Parliamentary Practice which reads thus :

> "The meaning of the term 'proceedings in Parliament' the primary meaning, as a technical parliamentary term, of 'proceedings' (which it had at least as early as the seventeenth century) is some formal action, usually a decision, taken by the House in its collective capacity. This is naturally extended to the forms of business in which the House takes action, and the whole process, the principal part of which is debate by which it reaches a decision.
>
> An individual Member takes part in a proceedings usually by speech, but also by various recognised kinds of formal action, such as voting, giving notice of a motion, etc."

The Hon'ble Speaker yesterday ordered for the expunction of the entire proceedings pertaining to this issue. I press for the words 'giving notice of a motion'. In this case, a motion was given to the hands of the Hon'ble Speaker, and the motion, according to my learned

friend Sri M. Mallappa pertains to breach of privilege. According to May's Parliamentary Practice, it is part and parcel of the entire proceedings. So, my submission, Madam Speaker, is that once that 'notice of motion' is to be considered as part and parcel of the entire proceedings and once it is ordered by the Hon'ble Speaker to be expunged, there is no notice of motion at all, as things stand, given to the hands of the Hon'ble Speaker.

Sri H. SIDDAVEERAPPA.—Notice of motion can be either allowed or disallowed, but it cannot be expunged.

Sri S. BANGARAPPA.—It can be as per the author of this book. Therefore, my submission is that there is no motion at all, and the motion if at all was given yesterday, has already been expunged. My learned friend on the other side cannot say that there is a motion still pending, is alive, and the same can be raised. I submit that the same cannot be raised at all today because the matter has already been closed yesterday.

ಶ್ರೀ ಎಚ್. ಎನ್. ನಂಜೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು 315ನೇ ರೂಲ್ ಪ್ರಕಾರ ಕ್ರಿಯಾಲೋಪ ಎತ್ತಿದ್ದಾರೆ. ರೂಲ್ 315ರಲ್ಲಿ ಯಾವ ಪದಗಳನ್ನು ಕಾರ್ಯಕಲಾಪಗಳ ವರದಿಯಲ್ಲಿ ಸೇರಿಸಬಹುದು, ಯಾವ ಪದಗಳನ್ನು ತೆಗೆಯಬೇಕು ಎಂಬುದರ ಬಗ್ಗೆ ಹೇಳಿದೆ. ರೂಲ್ 316ರ ಪ್ರಕಾರ ಹೇಳಿರುವುದನ್ನು ನೋಡಿದರೆ ಅದು ಈ ರೀತಿ ಇದೆ: —

> ವಿಧಾನಸಭೆಯ ಕಾರ್ಯಕಲಾಪಗಳ ವರದಿಯಲ್ಲಿ ಹಾಗೆ ಬಿಟ್ಟುಬಿಟ್ಟ ಭಾಗಗಳನ್ನು ನಕ್ಷತ್ರದ ಗುರ್ತಿನಿಂದ ಗುರ್ತಿಸತಕ್ಕದು, ಮತ್ತು ವರದಿಯಲ್ಲಿ ಈ ಕೆಳಕಂಡಂತೆ ವಿವರಣಾ ರೂಪದ ಒಂದು ಅಡಿ ಟಿಪ್ಪಣಿಯನ್ನು ಸೇರಿಸತಕ್ಕದು ; ಹೇಗೆಂದರೆ:—
>
> "ಅಧ್ಯಕ್ಷರವರ ಆಜ್ಞಾನುಸಾರ ಬಿಟ್ಟುಬಿಡಲಾಗಿದೆ,"

ಆದ್ದರಿಂದ ಇಲ್ಲಿ ಮುಖ್ಯವಾಗಿ ಎಕ್ಸ್‌ಪಂಜ್ ಮಾಡುವ ಉದ್ದೇಶವೆಂದರೆ ಸಭೆಯಲ್ಲಿ ಮಾತನಾಡಿದಂಥ ಸದಸ್ಯರು ಉಪಯೋಗಿಸಿದ ಪದಗಳು ಪಾರ್ಲಿಮೆಂಟರಿಯೇ ಅಥವಾ ಅನ್‌ಪಾರ್ಲಿಮೆಂಟರಿಯೇ ಎಂಬುದನ್ನು ನೋಡಿ, ಅನ್‌ಪಾರ್ಲಿಮೆಂಟರಿ ಪದಗಳನ್ನು ಉಪಯೋಗಿಸಿದ್ದರೆ ಅದನ್ನು ಅಧ್ಯಕ್ಷರು ಎಕ್ಸ್‌ಪಂಜ್ ಮಾಡುವುದಕ್ಕೆ ಆರ್ಡರ್ ಮಾಡುತ್ತಾರೆ. ಒಬ್ಬರು ಸದಸ್ಯರು ಮತ್ತೊಬ್ಬರ ಬಗ್ಗೆ ಉಪಯೋಗಿಸಿದ ಪದಗಳು, ಅವರ ಸ್ಥಾನಮಾನಕ್ಕೆ ಧಕ್ಕೆತಂದಿದ್ದರೆ, ಅವರಿಗೆ ಅಗೌರವ ಸೂಚಿಸುವಂತೆ ಇದ್ದರೆ, ಆಡಬಾರದಂಥ ಮಾತುಗಳನ್ನು ಆಡಿದ್ದರೆ, ಒಂದು ಮಟ್ಟ ಕೆಳಗೆ ಇಳಿದು ಉಪಯೋಗಿಸಿದ ಭಾಷೆಯಾಗಿದ್ದರೆ ಅಂಥ ಪದಗಳನ್ನು ಎಕ್ಸ್‌ಪಂಜ್ ಮಾಡಬೇಕೆಂದು ಅಧ್ಯಕ್ಷರು ಹೇಳುತ್ತಾರೆ. ಈ ವಿಷಯ ಬೇರೆ. ಆದರೆ ಮಾರ್ಗದ ಮಲ್ಲಪ್ಪನವರು ಏನು 177ನೇ ರೂಲ್ ಪ್ರಕಾರ ಹಕ್ಕುಬಾಧ್ಯತೆಯ ಬಗ್ಗೆ ಮೋಷನನ್ನು ಮೂವ್ ಮಾಡುವುದಕ್ಕೆ ಅನುಮತಿ ಕೇಳುತ್ತಿದ್ದಾರೆ, ಅದರ ಪರಿಮಿತಿ ಬೇರೆ. ಮಾನ್ಯ ಸಭೆಯ ಸದಸ್ಯರೊಬ್ಬರು, ಮತ್ತೊಬ್ಬ ಸದಸ್ಯರ ಬಗ್ಗೆ ಅವರ ಗೌರವವನ್ನು ಕಳೆಯತಕ್ಕಂಥ, ಮಾನನಷ್ಟಕ್ಕೆ ಚ್ಯುತಿ ಬರುವಂತಹ ಭಾಷೆಯನ್ನು ಉಪಯೋಗಿಸಿದರೆ ಅದನ್ನು ಮಾನ್ಯ ಸಭೆ ಪರಿಶೀಲಿಸಬೇಕಾಗುತ್ತದೆ. ಎಕ್ಸ್‌ಪಂಜ್ ಮಾಡುವುದು ಬೇರೆ, ಒಬ್ಬ ಸದಸ್ಯರ ಬಗ್ಗೆ ತೂಕವಲ್ಲದ ಪದಗಳನ್ನು ಬಳಸುವುದು, ಅವರು ಸಮಾಜದಲ್ಲಿ ಕಾರ್ಯಭಾರ ಮಾಡುವುದಕ್ಕೆ ಯೋಗ್ಯತೆಯಿಲ್ಲ ಎಂಬತಕ್ಕಂಥ ವಿಷಯಗಳನ್ನು ಹೇಳಿದರೆ ಅದರಿಂದ ಆ ಸದಸ್ಯರ ಹಕ್ಕುಬಾಧ್ಯತೆಗೆ ಚ್ಯುತಿ ಬರುತ್ತದೆ. ಇಂತಹ ಹಕ್ಕುಬಾಧ್ಯತೆಯ ವಿಷಯವನ್ನು ರೂಲ್ 179ರ ಪ್ರಕಾರ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಏಕೆಂದರೆ ಇದು ನೆನ್ನೆ ತಾನೆ ನಡೆದ ಘಟನೆಯಾಗಿದೆ. ಇಂತಹ ವಿಷಯಗಳನ್ನು ಸಭೆಯ ಹೊರಗೆ ಹೇಳಿದ್ದರೆ ಕೋರ್ಟಿಗೆ ಎಳೆದು ಮಾನನಷ್ಟ ಮೊಕದ್ದಮೆಯನ್ನು ಹಾಕುವುದಕ್ಕೆ ಸಾಧ್ಯವಿತ್ತು. ಆದರೆ ಇಲ್ಲಿ ಬೇರೆ ಮಾರ್ಗವಿಲ್ಲ. ಇಂತಹ ಪದಗಳನ್ನು ಉಪಯೋಗಿಸಿದ ಮಾನ್ಯ ಸದಸ್ಯರಿಗೆ ಶಿಕ್ಷೆಕೊಡುವುದು ಅಥವಾ ಕ್ಷಮೆ ಕೊಡುವುದು ಸಭೆಗೇ ಸೇರಿದ ವಿಷಯವಾಗಿದೆ. ಮಾನ್ಯ ಸದಸ್ಯರೊಬ್ಬರ ಹಕ್ಕಿಗೆ ಚ್ಯುತಿ ತಂದಿರುವುದರಿಂದ ಆ ಬಗ್ಗೆ ಏನು ಮಾಡಬೇಕು ಎಂಬುದನ್ನು ಸಭೆಯೇ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಎಕ್ಸ್

(ಶ್ರೀ ಎಚ್. ಎನ್. ನಂಜೇಗೌಡ)

ಪಂಜ್ ಮಾಡುವುದು ಬೇರೆ, ಸದಸ್ಯರೊಬ್ಬರ ಹಕ್ಕುಬಾಧ್ಯತೆಗೆ ಚ್ಯುತಿ ಬಂದಿರುವುದು ಬೇರೆ, ಇವೆರಡನ್ನು ಬೇರೆ ಬೇರೆಯಾಗಿ ಪರಿಶೀಲಿಸಬಹುದು. ಆದ್ದರಿಂದ ಮಾರ್ಗದ ಮಲ್ಲಪ್ಪನವರಿಗೆ ಮೋಷನ್ ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

2-00 P.M.

ಶ್ರೀ ಎಚ್. ಡಿ. ದೇವೇಗೌಡ.—315ನೇ ರೂಲ್ ಪ್ರಕಾರ ಈ ಸಭೆಯಲ್ಲಿ ನಿನ್ನೆ ನಡೆದಂತಹ ಘಟನೆಯ ಸಂಬಂಧದ ಎಲ್ಲಾ ಕಾರ್ಯಕಲಾಪಗಳನ್ನು ವರದಿಯಿಂದ ತೆಗೆದು ಹಾಕಬೇಕೆಂದು ನಿನ್ನೆಯ ದಿವಸ ಅಧ್ಯಕ್ಷರು ರೂಲಿಂಗ್ ಕೊಟ್ಟಿದ್ದಾರೆ. ಆದ್ದರಿಂದ ಅಧ್ಯಕ್ಷರು ಕೊಟ್ಟಂತಹ ರೂಲಿಂಗ್ ಅನ್ನು ಈಗ ಪ್ರಶ್ನೆ ಮಾಡುವ ಹಕ್ಕು ಈ ಸಭೆಗೆ ಇಲ್ಲ. ಈ ಪ್ರಕರಣ ನಿನ್ನೆಗೆ ಮುಗಿದಿದೆ. ಪುನಃ ಆ ವಿಷಯವನ್ನು ಎತ್ತಲು ಬರುವುದಿಲ್ಲ. ಹೀಗಿರುವಾಗ ಮಾನ್ಯ ಸದಸ್ಯರು ಯಾವುದರ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಾರೆ? According to the practice and procedure of Indian Parliament in respect of expuaction, I may inform you that the rulings given by the Chair are final and that no appeal by an aggrieved person disagreeing with the rulings could be entertained. The House though otherwise sovereign cannot differ from the same as one Indian Speaker observed. The English Procedure is that the Speaker is not a court of appeal and therefore he is not competent to reverse any ruling given by any occupant of the Chair during the absence of the Speaker. The ruling in the Indian Parliament is that any Presiding Officer who is requested to revise the ruling given by the previous Speaker, cannot be altered but he would support the ruling already given by his predecessor.

Sri K. H. PATIL.—There is no request for the revision of the ruling.

Sri H. M. CHANNABASAPPA (Minister for Public Works).—The Hon. Member Sri Mallappa has raised a point of privilege and it is before the Chair for a decision and it is for the Chair to give a ruling. Whether consent is given or not and whether there is any *prima facie* case or not it is for the Speaker to determine. It is only when the Speaker determines that consent may be given after considering all aspects of the question, then the matter will be seized by the House and the Speaker will call upon the members and it is only at the stage of taking objection under Rule 182, all these points will arise. That is one aspect of the question. The second aspect of the question is, under rule 315, it is clear that the Speaker may order expunging of the words which are defamatory or undignified in the Speaker's discretion. The spirit behind the expunction is that it should not go to the records. Rule 316 makes it very clear. "The portion of the proceedings of the Assembly so expunged shall be marked by asterisks and an explanatory foot-note shall be inserted in the proceedings as follows :

"Expunged as ordered by the Chair".

So, the spirit behind this is that it is prevented from publication. Whatever has been expunged has been ordered to be expunged by the Speaker. Therefore whatever has

taken place in the Assembly, whether expunged or not shall go into the proceedings and only on the express orders of the Speaker the matter will be expunged. The effect of it would be that whatever proceedings have taken place in the House will find a place in the proceedings but it shall not go for publication. That is the spirit of rule 316. Therefore whatever has taken place in the Assembly is a question of fact. Whatever has passed is within the knowledge of the Speaker and within the knowledge of the members of this House, nobody can dispute about it. The only effect of expunging is that this matter is not for publication and for the knowledge of others outside the members of this House. So, this aspect will have to be borne in mind, Madam Speaker, while giving a decision on this privilege issue. Therefore it would be futile on the part of the members who spoke on the other side saying that there is absolutely no cause of action. The cause of action is there ; nobody can dispute it and much less the Hon. Member who has himself admitted that he did make defamatory remarks ; did make certain remarks damaging the privilege and prestige of this House. That question remains and it cannot be washed out and it has also gone into the proceedings. Merely because it is orderd to be expunged, it means that it is prevented from being publicised in papers for the information of the public at large, but that does not take away the effect of commission of the offence. Therefore the Hon. Member Sri Mallappa has a right to move a motion of privilege and the Speaker has to take into consideration only these facts : whether the act has been committed or not, whether the member has made a statement which is derogatory to the dignity of this House; whether the statement which he has made is a cause of action for the privilege motion, that is all the point at issue now. I would, therefore, appeal to the Speaker who is the custodian of the privileges of the members and the prestige and dignity of this House, that the Speaker has no other alternative but to say this is a matter of privilege. The very fact that it has been orderd to be expunged itself goes to the support of the privilege motion ; otherwise there was no cause whatsoever for the Chair to order for the expunction. The very fact that orders have been issued to that effect means that it is derogatory to the dignity of this House. Therefore, Madam, I plead that there is a *prima facie* case for a privilege motion and I would appeal to you in the interests of the dignity and decorum of this House and the protection and privileges to which the members are entitled to, that the Chair should give its consent to move this motion.

†Sri K. PUTTASWAMY (Chamundeswari).—It is admitted on all hands that the privilege motion was tabled yesterday long before the Hon. Presiding Officer gave a direction to expunge the alleged remarks of the honble Member Sri Vatal Nagaraj. The point that I wish to make out is whether it is open to the Speaker to change the situation by ordering the de-expunction of the remarks. I wish to make the matters to be clearly understood. Remarks were made by the honble Member Sri Vatal Nagaraj for which exception was taken. There was considerable

(SRI K. PUTTASWAMY)

discussion in the House as to whether a motion of privilege can be taken in writing. Then hon'ble Member Sri Mallappa tabled a motion. Then the hon'ble Speaker brought it to the notice of the House. Then in all humility I would like to submit that it was the duty of the Hon'ble Speaker to have followed the relevant provisions in the Rules of Procedure and Conduct of Business. He should have allowed Sri Mallappa to move the motion, and given an opportunity to him to explain his points. Then he should have also followed the rules 178 and 179. According to first provision of Rule 180, the matter is different. It reads thus :

> "180. (1) The Speaker, if he gives consent under rule 177 and holds that the matter proposed to be discussed is in order, shall, after the questions and before the list of business is entered upon, call the member concerned, who shall rise in his place and while asking for leave to raise the question of privilege make a short statement relvant thereto : "

I wish to submit that the Speaker did not exercise his mind under rules 178 and 179 to give his consent. The matter stands there. What was the position then ? The remarks which were subsequently directed to be expunged by the Presiding Officer did not find place on records. Would it be fair to subsequently expunge the remarks and tell Sri Mallappa that those remarks do no longer be on the records? So I would like to request the Hon'ble Speaker to consider the question whether the proceedings stood expunged at the time at which Sri Mallappa tabled this question. That is the first point I wish to make.

Another point is that it is within the powers of the Honble Speaker to annul the order of expunction and restore the expunged remarks on the records and then proceed and for that matter I do not think that there is any necessity for me to quote any rule or precedents. How are the precedents made and how are the rules drafted ? The rules are the creation of this House. If any rule comes in the way of discharge of duties devolved on this House, it is open to the House to suspend the rules and proceed to transact the business. Madam Speaker, the precedents are not over. The House will go on creating precedents; and precedents are created by the circumstances. What were the circumstances yesterday ? One hon'ble Member deemed fit to make certain sweeping allegations. He may be having certain facts to prove. I do not want to say that those were irresponsible allegations. He may be in a position to prove his allegations. When he is called upon to prove, perhaps the hon'ble Member being a very responsible member, I am sure, he will come out with facts which are in his possession. The privilege motion was tabled. Subsquently perhaps not having sufficient time to deliberate on these points, the Presiding Officer might have given a ruling. Is it open to the Hon'ble Speaker stands to re-consider the ruling and say that order of the expunction

annulled In order to meet the matter on justice, in order to safeguard the rights and privileges of the Hon'ble Members of this House and above all in order to protect and safeguard the rights and privileges of this House I submit that it would not be out of way if the Hon'ble Speaker consider the desirability of annulling the order of expunction, and if the Hon'ble, Speaker agrees with me, you have a right to annul the order directing expunction and I am sure, Madam our friends will be having a firm ground to stand upon. Fortunately for me I have a precedent to quote.

Only last month, it so happened in a sister Legislature of a neighbouring State that the same situation arose and the Speaker has de-expunged and gave a ruling by which he reversed the previous ruling. I do not want to take the time of this hon. House by reading through this elaborate full test. It would be sufficient if I point out the relevant portion.

The Chief Minister suggested the Speaker might allow publication of the entire portion expunged yesterday, for publication of the Speaker's ruling to-day (whether he could expunge a walk out or not) without giving the background to the episode would only make it appear mysterious. " It will be in consonance with democratic principles if the Speaker withdraws the expunction order he made yesterday ", the Chief Minister said. "Messrs. Ponnappa Nadar and M. Surendran said the Speaker could not reverse his ruling and put the expunged matter back on the record. Mr. Mathialagan said what started as an " academic discussion " had landed them in a " ticklish situation ". He would therefore order that the entire proceedings expunged by him yesterday to go on record.

Sri B. B. SAYANAK.—I object to the hon. Member reading from newspapers.

ಶ್ರೀ ಕೆ. ಎನ್. ವೀರಪ್ಪಗೌಡ.—ಹಿಂದೆ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಕನ್ನಡ ಪ್ರಭ ಪತ್ರಿಕೆಯನ್ನು ಓದಲಿಲ್ಲವೇ ?

Sri K. PUTTASWAMY.—My hon. friend Mr. Sayanak is perfectly correct. He may expect the same thing from me. It is not given to me to read from or refer to newspapers very often. But I just wanted to show that in drawing the attention of the Chair to the desirability of annuling the order of expunction, which was made by the Hon. Speaker yesterday, I am also supported by a precedent. Therefore, on the ground of the record as at the time of taking the privilege motion, the privilege motion is quite in order. Yesterday, the Hon. Speaker has not bestowed his thought on the privilege motion and given any considered view of his. And secondly, even if that point is made out against me, I stand on the second point that it is open to the Speaker to annul the order of expunction given yesterday and proceed with the motion of privilege.

Sri M. S. KRISHNAN.—I want a clarification from the Member. I just want to know from what you read, whether the person who ordered expunction was the same person as the one who ordered de-expunction or different.

Sri K. PUTTASWAMY.—The person who ordered the annualment of the order of expunction was different from the person who ordered expunction.

† Sri D. DEVARAJ URS.—May I submit madam, although it is unfortunate that I was not in the House at the time of these proceedings, I have taken pains to understand what had taken place yesterday. I learnt that at the time of giving notice of this privilege motion, the subject matter on which the motion of previlege was given notice of, was in existence. Subsequently, the Speaker who was in the Chair, thought it fit to expunge that portion of the speech made by the Hon. Member, which he considered derogatory or not fit to be on record.

Sri S. BANGARAPPA.—Not only the speech but the proceedings.

Sri D. DEVARAJ URS.—Not the entire proceedings of yesterday but only sentences relating only to a portion of yesterday's proceedings. Subject to verification from records, I still continue to understand that the Speaker yesterday did not give a ruling on this privilege motion. He should have either said the privilege motion is not there or he should have said it may be withdrawn or some ruling should have been given. I heard from the Hon. Leader of the Opposition that the whole thing had been expunged and everything had been put an end to. I am of opinion that if no ruling has been given by the Speaker this is subject to verification of records, the privilege motion is still there. Now, the question is whether the Speaker should allow discussion, or the motion to be moved in the House or not. Of course, it is completely within the authority of the Speaker to give consent or not to give consent.

Another point just now raised by my Hon. friend Sri K. Puttaswamy has some relevance in this context because, in case that subject-matter at the time of moving this privilege motion was in existence, the question arises as to whether we should resort to re-considering this ruling of the Speaker made yesterday. I would suggest, that, if the House agrees, the Speaker might ponder over this and reserve a ruling for tomorrow. In the meanwhile, this question may be further looked into by the Speaker as well as the parties concerned, if there is anything to be looked into. The Hon. Speaker may give the final disicision tomorrow.

Sri H. D. DEVE GOWDA.—The Hon. Chief Minister said 'subject to verification from the proceedings'. It is not so difficult to verify. Let it be verified and let the matter be finalised. According to me, yesterday, the Presiding Officer said that the whole matter may be expunged and it should not be published in the Press and that the whole matter was squared up. That is what he said.

Sri H. SIDDAVEERAPPA.—Will you kindly yield for a minute?

2-30 P.M.

As far as my memory goes, the Speaker or the officer who presided yesterday did not make any reference to the privilege motion. He only said: "I have received notice of a privilege motion". When he said "I expunge from the proceedings what Mr. Vatal Nagaraj has said", it does not mean privilege motion. How can it be?

SRI H. D. DEVE GOWDA.—What I want to make myself clear about is, he has made statement that the whole matter has been squarred up.

SRI D. DEVARAJ URS.—I have repeatedly stated 'subject to verification'. There is no point in yourself or myself making assertions over the matter. That is why I submitted that the Speaker will look into the whole question in a calmer atmospehre. Let the ruling be reserved for tomorrow. That is what I have stated.

SRI H. D. DEVE GOWDA.—Records may be looked into now.

SRI D. DEVARAJ URS.—Records may not be readily available here. They will be looked into by the Speaker.

MADAM SPEAKER.—I will look into the records and I reserve my ruling for tomorrow.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ತಾವು ಹೇಳತಕ್ಕದ್ದನ್ನು ನಾನು ಕೇಳುತ್ತೇನೆ. ತಾವು ನನಗೆ ದಯಮಾಡಿ ಮಾತನಾಡಲು ಒಂದು ನಿಮಿಷ ಅವಕಾಶ ಮಾಡಿಕೊಡಿ......

ಅಧ್ಯಕ್ಷರು.—ನಾನೀಗ ಎರಡೂ ಕಡೆಯವರು ಏನೇನು ಹೇಳಿವ್ಧಾರೆಂಬುದನ್ನೆಲ್ಲಾ ಕೇಳಿದ್ದೇನೆ ಆದ್ದರಿಂದ ತಾವು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ದಯಮಾಡಿ ನನಗೆ ಒಂದು ನಿಮಿಷ ಅವಕಾಶ ಕೊಡಲೇ ಬೇಕು...

ಶ್ರೀ ಎಚ್. ಡಿ. ದೇವೇಗೌಡ.—ಈಗತಾನೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಒಂದು ವಿಚಾರವನ್ನು ಸಭೆಯ ಮುಂದಿಟ್ಟಿದ್ದಾರೆ. ಮದ್ರಾಸಿನಲ್ಲಿ ಈಗಾಗಲೇ ಇಂಥದೇ ವಿಚಾರದಲ್ಲಿ...

SRI D. DEVARAJ URS.—I am sorry, the Hon'ble Leader of the Opposition is again entering into a controversy. If the Hon'ble Member were to raise that controversy, I may have to submit so many other things. That is why I have said : let us allow the Speaker some time to look into the whole question. Supposing in her discretion, if she thinks it proper that it should be re-opened, she may do it. Let us allow her some time to study the subject. What is the point in raising the issue now alone?

ಶ್ರೀ ಎಚ್. ಡಿ. ದೇವೇಗೌಡ.—ಮದ್ರಾಸಿನಲ್ಲಿ ಇಂಥದೇ ವಿಚಾರದಲ್ಲಿ ಈಗಾಗಲೇ ಒಂದು ತೀರ್ಮಾನ ಕೊಟ್ಟಿದ್ದಾರೆ. ಆ ವಿಚಾರ ಕೇವಲ 15 ನಿಮಿಷ ಮಾತ್ರದ್ದು. ಆದರೆ ಇಲ್ಲಿ ಅಧ್ಯಕ್ಷರು ಡೆಫೆನೆಟ್ಟಾಗಿ ಎಲ್ಲವನ್ನೂ ಎಕ್ಸ್‌ಪಂಜ್ ಮಾಡಬೇಕೆಂದು ರೂಲಿಂಗ್ ಕೊಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ......

SRI D. DEVARAJ URS.—A previlege motion can be raised on so many points. What is unparliamentary need not be expunged. It may be an allegation against a member of the House. Allegations need not be expunged at all. Supposing the Member is challenged to prove,

(SRI D. DEVARAJ URS)

the whole thing may go to the privilege committee. What can be expunged or what could not be expunged is again a matter for discussion sometimes. Such things are also there. So, instead of raising that sort of a controversy, let us allow the Speaker some time to study the matter and in the meantime, let us take up other business of the House.

Sri K. PUTTASWAMY.—I have made an incorrect statement which I would like to correct Madam. Sri M. S. Krishnan asked me whether the person who gave the ruling a second time in Madras Assembly, was the same person who gave the first ruling. In that connection, I made an incorrect statement. The facts are, the Speaker was not present at the time the alleged remarks were made and he considered the alleged remarks and gave a ruling. Next day, he reversed his own ruling.

ಶ್ರೀ ಎಸ್. ಬಂಗಾರಪ್ಪ.—ಶ್ರೀ ಕೆ. ಪುಟ್ಟಸ್ವಾಮಿಯವರು ಹೇಳತಕ್ಕ ವಿಚಾರದಲ್ಲಿ ಅವರು ಒಂದು ಹೊಸ ವಿಷಯವನ್ನು ಎತ್ತಿದ್ದಾರೆ. ಆದ್ದರಿಂದ ಅಧ್ಯಕ್ಷರು ರೂಲಿಂಗ್ ಕೊಡುವುದಕ್ಕೆ ಮುನ್ನ ಇತ್ತ ಕಡೆಗೂ ಒಂದು ಅವಕಾಶ ಕೊಟ್ಟು ತಾವು ತೀರ್ಮಾನ ಕೊಡಿ ಎಂಬುದು ನನ್ನ ಆಸೆ. ಏಕೆಂದರೆ ನಾಳೆ ತಾವು ಕೊಡತಕ್ಕ ರೂಲಿಂಗ್ ಹೆಚ್ಚು ಕಡಿಮೆಯಾಗಬಾರದು.

ಅಧ್ಯಕ್ಷರು.—ಇದೇನು ಯಾವಾಗಲೂ ನಿಮ್ಮೊಬ್ಬರನ್ನೇ ಕೇಳಿ ರೂಲಿಂಗ್ ಕೊಡಬೇಕೋ ! ನಾನು ಎರಡೂ ಕಡೆಯವರನ್ನು ಸಾಕಷ್ಟು ಕೇಳಿ ಆಗಿದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಇತ್ತ ಕಡೆಯವರವೂ ಏನೆಂಬುದನ್ನು ಕೇಳಿಲ್ಲ. ದಯವಿಟ್ಟು ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪಾಯಿಂಟ್ ಆಫ್ ಆರ್ಡರ್ ಅಧ್ಯಕ್ಷರೇ......

ಶ್ರೀ ಎಸ್. ಬಂಗಾರಪ್ಪ.—ನನ್ನದೂ ಒಂದು ಪಾಯಿಂಟ್ ಆಫ್ ಆರ್ಡರೇ......

ಅಧ್ಯಕ್ಷರು.—ಮೊದಲು ಶ್ರೀ ಚನ್ನಬಸಪ್ಪನವರು ಪಾಯಿಂಟ್ ಆಫ್ ಆರ್ಡರನ್ನು ಎತ್ತಿದ್ದಾರೆ. ಆದ್ದರಿಂದ ಅವರು ಮೊದಲು ಮಾತನಾಡಲಿ.

ಶ್ರೀ ಎಸ್. ಬಂಗಾರಪ್ಪ.—ಒಂದು ನಿಮಿಷ ಅವಕಾಶವನ್ನು ತಾವು ನನಗೇಕೆ ಕೊಡಬಾರದು?

ಅಧ್ಯಕ್ಷರು.—ನಿಮಗೆ ಮೂರಾವರ್ತಿ ಅವಕಾಶ ಕೊಟ್ಟಿದ್ದೇನೆ. ಇನ್ನು ಬೇರೆ ಸದಸ್ಯರು ಹೇಳುವುದನ್ನು ಕೇಳಬೇಡವೇ ?

(ಸಭೆಯಲ್ಲಿ ಶ್ರೀ ಕೆ. ಲಿಂಗಪ್ಪ, ದೇವೇಗೌಡ, ಬಂಗಾರಪ್ಪ ಮತ್ತು ಸಿ. ಎಂ. ಆರ್ಮುಗಂ ಇವರೆಲ್ಲರೂ ಏಕ ಕಾಲದಲ್ಲೇ ನಿಂತಿದ್ದರು.)

ಏಕೆ ಒಟ್ಟಿಗೆ ನಾಲ್ಕು ಜನರೂ ನಿಂತಿದ್ದೀರಿ ! ಹೀಗೆ ಎಲ್ಲರೂ ಎದ್ದು ನಿಂತರೇನು ಮಾಡುವುದು ?

Sri H. D. DEVEGOWDA.—Conventions could be changed according to circumstances. That is what Sri K. Puttaswamy has said.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ ನನಗೆ ಒಂದು ಹೊಸ ವಿಷಯದ ಬಗ್ಗೆ ಒಂದು...

Sri D. DEVARAJ URS.—What the Speaker has stated is that she will take up the matter tomorrow. ಅದನ್ನೂ ಕೇಳದೆ ಮಾನ್ಯ ಸದಸ್ಯರು ವಾದ ಮಾಡುವುದಾದರೆ, I will have to raise a point of order and say you are not in order to raise further points at this stage.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ...

MADAM SPEAKER.—Please resume your seat.

Sri H. M. CHANNABASAPPA.—I rise to a point of order.

**Sri S. BANGARAPPA.**—I am also on a point of order.

**MADAM SPEAKER.**—The Hon. member has not raised any point of order. He may please resume his seat?

**ಶ್ರೀ ಎಸ್. ಬಂಗಾರಪ್ಪ.**—ಶ್ರೀ ಕೆ. ಪುಟ್ಟಸ್ವಾಮಿಯವರು ಒಂದು ಹೊಸ ವಿಷಯವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದನ್ನು ಕ್ಲಾರಿಫೈ ಮಾಡತಕ್ಕ ಉದ್ದೇಶದಿಂದ ನನಗೆ ಅಧ್ಯಕ್ಷರು ಒಂದು ನಿಮಿಷ ಕಾಲಾವಕಾಶಕೊಡಬೇಕೆಂದು ಕೇಳುತ್ತಿದ್ದೆ......

**ಅಧ್ಯಕ್ಷರು**—ನಾನೂ ಅದೆಲ್ಲವನ್ನೂ ಪರಿಶೀಲನೆ ಮಾಡಿ ನೋಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಎಸ್ ಬಂಗಾರಪ್ಪ.**—ನಾಳೆ ತಾವು ಕೊಡತಕ್ಕ ರೂಲಿಂಗಿನಲ್ಲಿ ಅನುಮಾನ ಬಾರದಿರಲಿ...

**Sri D. DEVARAJ URS.**—Again, we may have to make a privilege motion against the Hon'ble Member if he goes on obstructing the the proceedings of the House.

**Sri S. BANGARAPPA.**—If that is the attitude the Leader of the House is going to adopt, I am sorry, you are free to do it. You cannot frighten me with your privilege motion.

(Sri S. Bangarappa, Sri H. D. Deve Gowda, Sri Bapu Gowda, Sri C. M. Arumugam, Sri Konandur Lingappa—were seen standing and speaking).

**Sri H. M. CHANNABASAPPA.**—On a point of order. The Rules of Procedure are very clear. When the Speaker stands, all the Members shall sit and hear the Speaker patiently. And it is not open to any Member of this House to controvert the provisions of this Rule. Even when the Speaker is on her legs, to continue to talk one after the other will not only amount to committing breach of the Rule but also obstructing the proceedings of this House.

**Sri H. D. DEVE GOWDA.**—Your own argument has been defeated by your friend Sri Puttuswamy because he stated that according to the circumstances all the rules and precedents can be changed.

**Sri H. M. CHANNABASAPPA.**—The hon. Leader of the Opposition is an old Member of this House. I expect him to know all the Rules of Procedure and also the way in which one has to conduct himself when another Member has been called upon to speak. Unless I yield, the hon. member has no right whatsover to get up and speak. Rule 285 (ix) says.

> "Whilst the Assembly is sitting, a member shall not obstruct proceedings, his or interrupt and shall avoid making running commentaries when speeches are being made in the Assembly."

Now, Madam, it is for you to judge whether the proceedings are going on in an orderly manner. For the last few minutes when you were standing, Four members are standing and talking simultaneously; that would not do justice to the provisions of the Rules of Procedure.

**Sri C. M. ARUMUGAM.**—The hon'ble Minister was also standing, and the Chief Minister was also standing. Both were standing together.

Sri H. M. CHANNABASAPPA.—It is always open to the hon. member to draw my attention if I controvert any rule in the Rules of Procedure and I for one would not like to do it. It is open to the chair to correct me when I am in the wrong. I always submit to the rule of law. I would like that there should be no running commentaries or interruption of proceedings. It is for the Chair to judge whether there is any breach of law or not. When there is continuous breach of this Rule every now and then, it would not be in the fitness of things and consistent with the Rules of Procedure.

MADAM SPEAKER.—I will look in to the records and tell what I am going to do, to-morrow. Now we will go to the next business.

(Sri Bangarappa Rose.........)

ಅಧ್ಯಕ್ಷರು.—ತಾವು ಕೂತುಕೊಳ್ಳುತ್ತೀರೋ ಇಲ್ಲವೋ !

ಶ್ರೀ ಎಸ್ ಬಂಗಾರಪ್ಪ.—ದಯವಿಟ್ಟು ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು. —ತಾವು ಕೂತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ.—ನನಗೆ ಮಾತನಾಡಲು ಅವಕಾಶ ಕೊಡಬೇಕು. ತಾವು ಒಂದು ಕಡೆಯ argument ನ್ನು ಮಾತ್ರ ಕೇಳಿದ್ದೀರಿ. ಮಾನ್ಯ ಅಧ್ಯಕ್ಷರೇ ಈ ಕಡೆಯವರ argumentನ್ನು ಕೇಳಿ.

ಅಧ್ಯಕ್ಷರು.—ಕೇಳಿದ್ದೇನೆ.

Sri S. BANGARAPPA.—You can have a privilege motion.

Sri D. DEVARAJ URS.—I suggest that the hon. Member who is behaving in a disorderly manner, may be asked to retire from the House.

Sri S. BANGARAPPA.—I rise to a point of order.

MADAM SPEAKER.—Hon. member Sri Bangarappa must retire from the House immediately.

Sri S. BANGARAPPA.—I rise to a point of order. I want to explain and then go......We are not here to abide by the claps.

MADAM SPEAKER.—The hon. Member must retire from the House immediately.

Sri S. BANGARAPPA.—I will explain it. I am on a point of order.

MADAM SPEAKER.—Please withdraw from this house.

Sri S. BANGARAPPA.—I have risen on a point of order.

MADAM SPEAKER.—Will you withdraw from this House or not ?

Sri S. BANGARAPPA.—I am prepared to withdraw.

MADAM SPEAKER.—First withdraw.

Sri S. BANGARAPPA.—I want to explain.

MADAM SPEAKER.—No, no......

Sri D. DEVARAJ URS.—No argument with the Speaker.

MADAM SPEAKER.—First immediately withdraw from the House.

**Sri D. DEVARAJ URS.**—Speaker's ruling must be honoured.

(Sri H. D. Deve Gowda stood up to speak)

**Sri M. MALLIKARJUNASWAMY** (Minister for Social Welfare).—Let the Leader of the Opposition speak after the hon. member Sri Bangarappa withdraws from the House. He is casting unnecessary aspersions and obstructing the proceedings.

ಶ್ರೀ ಎಚ್. ಡಿ. ದೇವೇಗೌಡ.—ನಾವು ಸ್ಪೀಕರ್ ಅವರ ರೂಲಿಂಗ್‌ನ್ನು ಡಿಸ್ ಆನರ್ ಮಾಡಬೇಕೆಂದು ಇಲ್ಲ. ತಾವು ಅಷ್ಟೊಂದು ಆವೇಶದಿಂದ ಹೇಳಬೇಕಾಗಿಲ್ಲ.

**Sri D. DEVARAJ URS.**—Let him first respect the ruling of the Chair. Let him obey first. Any submission may be made later on. Speaker's ruling must be honoured.

**Sri C. M. ARUMUGAM.**—I rise to a point of order.

**MADAM SPEAKER.**—I do not allow any point of order. First let the hon. member withdraw from the House.

ಶ್ರೀ ಎಸ್. ಬಂಗಾರಪ್ಪ.—ಬೆದರಿಕೆ ಹಾಕಬೇಡಿ ಸ್ವಾಮಿ. ಇದು ಪ್ರಜಾಪ್ರಭುತ್ವ. ಒಂದು ನಿಮಿಷ ಕೇಳಿ. ಸಾವಧಾನವಾಗಿ ಕೇಳುವುದಾದರೆ ಒಂದು ಸಬ್‌ಮಿಷನ್ ಮಾಡುತ್ತೇನೆ.

ಅಧ್ಯಕ್ಷರು.—ಕೇಳ ಬೇಕಾದ್ದು ಇಲ್ಲ. ದಯವಿಟ್ಟು ತಾವು ಹೊರಗಡೆ ಹೋಗಬೇಕು.

*    *    *    *

**Sri D. DEVARAJ URS.**—The hon. Member has got to withdraw. He must respect the Chair. He is obstructing the business of the House.

**Sri D. B. KALMANKAR.**—Under Rule 309 the hon. Member may be suspended because he is obstructing the business of the House.

**Sri M. S. KRISHNAN.**—Madam. You are calling for restraint from this side only; you must call for restraint from the other side also. The hon. Minister Sri Mallikarjunaswamy is gesticulating as though he is trying to fight with us; we are not enemies here.

**Sri H. SIDDAVEERAPPA.**—That is his mannerism.

**Sri M. MALLIKARJUNASWAMY.**—We must all obey the Chair.

ಅಧ್ಯಕ್ಷರು.—ಈಗ ತಾವು ಹೊರಗೆ ಹೋಗಿ.

(Sri Bangarappa withdrew from the House.)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಿಣಿಯವರೇ, ತಾವು ಕೊಟ್ಟಿರತಕ್ಕ ರೂಲಿಂಗ್ ಪ್ರಕಾರ ಬಂಗಾರಪ್ಪನವರು ಹೊರಗೆ ಹೋಗಿದ್ದಾರೆ. ಸಭಾ ನಾಯಕರಲ್ಲಿ ಒಂದು ಮನವಿ. ವಿರೋಧ ಪ ದಲ್ಲಿ ಕಡಿಮೆ ಜನ ಇರಬಹುದು, ಆದರೆ ತಮ್ಮ ಸಂಖ್ಯಾಬಲದ ಒಂದೇ ಆಧಾರದ ಮೇಲೆ ನಮ್ಮ ಹಕ್ಕನ್ನು ಮೊಟಕು ಮಾಡುವುದಕ್ಕೆ ತಾವು ಪ್ರಯತ್ನ ಮಾಡಿದರೆ ನಾವು ಸಹಕರಿಸುವುದಕ್ಕೆ ಕಷ್ಟವಾಗುತ್ತದೆ. ಈ ಸಭೆಯ ಘನತೆ, ಗಾಂಭೀರ್ಯ, ಗೌರವಗಳನ್ನು ಉಳಿಸಿಕೊಂಡು ಕೆಲಸ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಈ ಸಭೆಯಲ್ಲಿ ನಡೆದಂಥ ಹಿಂದಿನ ಘಟನೆಗಳನ್ನು ದಯವಿಟ್ಟು ಜ್ಞಾಪಕಕ್ಕೆ ತಂದುಕೊಳ್ಳುವುದಾದರೆ ಯಾರು ಈ ಸಭೆಯಲ್ಲಿ ಕಾರ್ಯಕಲಾಪಗಳನ್ನು ರೆಗ್ಯುಲೇಟ್ ಮಾಡಬೇಕು ಎಂದು ಹೇಳುತ್ತಿದ್ದಾರೋ ಅವರು ಶ್ರೀ ಕೊಠಾವಳೆಯವರು ರೂಲಿಂಗ್ ಕೊಟ್ಟ ಕಾಲದಲ್ಲಿ ಅವರ ರೂಲಿಂಗ್‌ನ್ನು ಒಪ್ಪಕೂಡದು ಎಂದು ಈ ಸ್ಥಾನದಲ್ಲಿ ಕುಳಿತು ಉಪದೇಶ

**** Matter not recordeded as ordered by the Chair.

(ಶ್ರೀ ಎಚ್. ಡಿ. ದೇವೇಗೌಡ)

ಮಾಡುತ್ತಿದ್ದರು. ವಿರೋಧ ಪಕ್ಷಗಳು ಹೇಗೆ ನಡದುಕೊಳ್ಳಬೇಕು ಎಂದು ಉಪದೇಶ ಮಾಡುತ್ತಿದ್ದರು. ಅವರ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗಬೇಕು ಎನ್ನುವ ಆಸೆ ನಮಗೆ ಇಲ್ಲ. ಈ ಸಭೆಯ ಕಾರ್ಯಕಲಾಪಗಳು ನಿಯಮಗಳಿಗನುಸಾರವಾಗಿ, ಸಭೆಯ ಸಂಪ್ರದಾಯಕ್ಕನುಗುಣವಾಗಿ ಇರಬೇಕು ಎಂದು ಸಂಖ್ಯಾಬಲದ ಆಧಾರದ ಮೇಲೆ ಹೇಳುತ್ತಿರುವ ಮಾನ್ಯ ಮಿತ್ರರಿಗೆ ಆ ರೀತಿ ಹೇಳಲು ನೈತಿಕ ಹಕ್ಕು ಇಲ್ಲ ಎಂದು ಹೇಳುತ್ತೇನೆ. ಇದರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಸಭೆಯ ಕಾರ್ಯಕಲಾಪಗಳು ಸೌಹಾರ್ದದಿಂದ ನಡೆಯಬೇಕಾದರೆ ವಿರೋಧ ಪಕ್ಷದ ಸಹಕಾರವನ್ನು ಪಡೆಯುವುದಕ್ಕೆ ಕಾತುರತೆ ಅವರಿಗೆ ಇರಬೇಕು ಎಂದು ಅವರಲ್ಲಿ ಮನವಿ ಮಾಡುತ್ತೇನೆ. ತಾವು ಕೊಟ್ಟಂಥ ನಿರ್ಣಯ ಯಾವುದೇ ಆಗಲಿ ಅದನ್ನು ಪ್ರಶ್ನೆ ಮಾಡುವಷ್ಟು ಅಸೌಜನ್ಯತೆಗೆ ನಾನು ಹೋಗುವುದಿಲ್ಲ. ದಯಮಾಡಿ ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತೇನೆ ಎಂದು ಹೇಳುವುದನ್ನು ಬಿಟ್ಟುಬಿಡುವುದು ಒಳ್ಳೆಯದು. ಒಂದುವೇಳೆ ಹಾಗೆ ಮೂವ್ ಮಾಡಿದ್ದೇ ಆದರೆ ವಿರೋಧಪಕ್ಷದ ಸದಸ್ಯರ ಹಕ್ಕನ್ನು ಮೊಟಕು ಮಾಡಿದಂತಾಗುತ್ತದೆ. ಸಂಖ್ಯಾಬಲದ ಆಧಾರದ ಮೇಲೆ ಸದಸ್ಯರ ಹಕ್ಕನ್ನು ಮೊಟಕು ಮಾಡುವ ದಾರಿಯಲ್ಲಿ ಮುಂದುವರೆದರೆ ಈ ಸಭೆಯಲ್ಲಿ ಕೂತು ಕೆಲಸ ಮಾಡುವುದಕ್ಕೆ ಅಸಾಧ್ಯವಾಗುತ್ತದೆ ಎಂದು ತಮ್ಮ ಮುಖಾಂತರ ಈ ಸಭೆಯಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಆದುದರಿಂದ ಇಲ್ಲಿಂದ ಮುಂದಾದರೂ ಸೌಹಾರ್ದದಿಂದ ನಡೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ನಡೆದಂಥ ಘಟನೆಗಳೂ ಇನ್ನೂ ಹೊಸದಾಗಿ ಇವೆ. ಈಗ ಏನೋ ಒಂದು ವರ್ಷವಾಗಿರಬಹುದು. ಅವನ್ನು ಮರೆಯುವುದಕ್ಕೆ ಪ್ರಯತ್ನ ಮಾಡಬೇಕು. ಹಿಂದೆ ನಡೆದಂಥ ಘಟನೆಗಳ ಧಾಟಿಯಲ್ಲೇ ಮುಂದುವರೆಸಿಕೊಂಡು ಹೋಗಬೇಕು ಎಂದು ಹೇಳುವ ವ್ಯಕ್ತಿ ನಾನು ಅಲ್ಲ. ಇದನ್ನು ಮರೆಯುವುದಕ್ಕೆ ಪ್ರಯತ್ನ ಮಾಡೋಣ. ಸೌಹಾರ್ದವಾತಾವರಣದಲ್ಲಿ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡೋಣ ಕೇವಲ ತಮ್ಮ ಸಂಖ್ಯಾಬಲದಿಂದ ತಾವು ಎಲ್ಲವನ್ನೂ ದಾರಿಗೆ ತರುತ್ತೇವೆ ಎನ್ನುವ ಅಭಿಪ್ರಾಯ ಇದ್ದರೆ ಅದು ತಪ್ಪಾಗುತ್ತದೆ. ನಾವು ನಿಮ್ಮ ಜೊತೆಗೆ ಸೌಹಾರ್ದದಿಂದ ನಡೆದುಕೊಳ್ಳುವುದಕ್ಕೆ ತಯಾರು ಇದ್ದೇವೆ. ಸಭೆಯ ನಿಯಮವನ್ನೂ, ಸಂಪ್ರದಾಯಗಳನ್ನೂ ಸಂಖ್ಯಾಬಲದ ಆಧಾರದ ಮೇಲೆ ಅನುಸರಿಸಿಕೊಂಡು ಹೋಗಲು ಪ್ರಯತ್ನ ಮಾಡಿದರೆ ಕಷ್ಟವಾಗುತ್ತದೆ. ಶ್ರೀ ಪುಟ್ಟಸ್ವಾಮಿಯವರು ಪ್ರಿಸೀಡೆಂಟ್ಸ್, ಕನ್‌ವೆನ್‌ಷನ್ಸ್ ಮತ್ತು ರೂಲ್ಸ್‌ನ್ನು ಸರ್ಕಮ್‌ಸ್ಟೆನ್ಸಸ್‌ಗೆ ಅನುಗುಣವಾಗಿ ಬದಲಾವಣೆ ಮಾಡತಕ್ಕ ಅವಕಾಶ ತಮಗೆ, ಸ್ಪೀಕರ್‌ರವರಿಗೆ ಇದೆ ಎಂದು ತಿಳಿಸಿದರು ಸಂಖ್ಯಾಬಲದ ಆಧಾರದ ಮೇಲೆ ಈ ಸಭೆಯ ವ್ಯವಹಾರ ನಡೆಯುವುದಾದರೆ, ಈ ಸಭೆಯ ಸಂಪ್ರದಾಯ ನಿಯಮಗಳನ್ನು ಮುರಿಯತಕ್ಕ ವ್ಯವಹಾರ ಸಭೆಯಲ್ಲಿ ನಡೆಯುವುದಾದರೆ ನಾವು ಈ ಸಭೆಯಲ್ಲಿ ಕೂತುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳುತ್ತೇನೆ.

**Sri H. SIDDAVEERAPPA.**—What he said was that rules are made for the convenience of this House. We are not slaves to the rules. Even judgements of the Supreme Court are reversed.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸಭಾನಾಯಕರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ನಾವು ಸೌಹಾರ್ದವನ್ನು ಅಪೇಕ್ಷೆ ಮಾಡುತ್ತೇವೆ. ಯಾವುದೇ ಸನ್ನಿವೇಶದಲ್ಲಿ ಈ ಸಭೆಯ ಕಾರ್ಯಕಲಾಪದಲ್ಲಿ ನಮ್ಮಗಳನ್ನು ತಮ್ಮ ಜೊತೆಗೆ ತೆಗೆದುಕೊಂಡು ಹೋಗುವ ಸಂಪ್ರದಾಯವನ್ನು ಬೆಳೆಸಬೇಕು ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಅಧ್ಯಕ್ಷರೇ, ಎದುರುಪಕ್ಷದ ನಾಯಕರು ಹೇಳಿರುವುದನ್ನು ಕೇಳಿದ್ದೇನೆ. ನನ್ನ ಅಭಿಪ್ರಾಯ ಏನೆಂದರೆ ಅವರು ಎಷ್ಟು ಸೌಹಾರ್ದದಿಂದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು ಎಂದು ಹೇಳುತ್ತಾರೋ, ಸಭೆಯ ಕಾರ್ಯಕಲಾಪಗಳು ಕಾನೂನು ಬದ್ಧವಾಗಿ ನಡೆಯಬೇಕು ಎಂದು ಅಪೇಕ್ಷೆ ಪಡುತ್ತಾರೋ ನಾವೂ ಅದೇ ರೀತಿಯ ಅಭಿಪ್ರಾಯ ಉಳ್ಳವರು. ಅವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿ ನಮಗೆ ಕಾನೂನಿಗೆ ಅನುಗುಣವಾಗಿ ನಡೆಯಿರಿ ಎಂದು ಅಪ್ಪಣೆ ಕೊಡಿಸಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ನೈತಿಕ ಮಟ್ಟ ಇಲ್ಲ ಎಂದು ಹೇಳಿದೆ.

ಶ್ರೀ ಡಿ. ದೇವರಾಜ್ ಅರಸ್.—ನಿಮಗೆ ಬಲ ಇಲ್ಲದೇ ಹೋದಮೇಲೆ ತಾವು ಮೈನಾರಿಟಿಯಲ್ಲಿ ಇದ್ದೇವೆಂದು ಮೈನಾರಿಟಿ ಅಗ್ರೆಷನ್ ನಮ್ಮ ಮೇಲೆ ಮಾಡುವುದಕ್ಕೆ ಪ್ರಯತ್ನಪಡಬೇಡಿ. ನಿಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ. ಡೆಮಾಕ್ರಸಿ ತತ್ವ ತಿಳಿದುಕೊಂಡು ಅದರಂತೆ ಹೋಗೋಣ. ಎಲ್ಲರಿಗೂ ರಕ್ಷಣೆ ಕೊಡತಕ್ಕಂಥವರು ಮಾನ್ಯ ಅಧ್ಯಕ್ಷರು ಇದ್ದಾರೆ.

3-00 P.M.

ಕಾನೂನು ಮುರಿಯುವುದಕ್ಕೆ ನಮಗೂ ಅವಕಾಶವಿಲ್ಲ, ನಿಮಗೂ ಇಲ್ಲ. ನಾವು ಮೆಜಾರಿಟಿಯಲ್ಲಿರಬಹುದು, ನೀವು ಮೈನಾರಿಟಿಯಲ್ಲಿರಬಹುದು. ಹಾಗಿದ್ದ ಮಾತ್ರಕ್ಕೆ ಯಾರಿಗೂ ಕಾನೂನಿಗೆ ವಿರೋಧವಾಗಿ ನಡೆಯಲು ಅವಕಾಶವಿಲ್ಲ. ಇದನ್ನು ಪ್ರಜಾಪ್ರಭುತ್ವದಲ್ಲಿ ತಿಳಿದುಕೊಳ್ಳಬೇಕು. ಎಲ್ಲರಿಗೂ ರಕ್ಷಣೆ ಕೊಡುವವರು ಮಾನ್ಯ ಅಧ್ಯಕ್ಷರು ಮತ್ತು ಪುಸ್ತಕದಲ್ಲಿರುವ ರೂಲ್ಸ್ ಮತ್ತು ರೆಗ್ಯುಲೇಷನ್ಸ್‌ಗಳನ್ನು ನಾವು ತಪ್ಪು ಮಾಡಿದಾಗ ಅದನ್ನು ತೋರಿಸಲು ತಮಗೆ ಅವಕಾಶವಿದೆ. ಅಧ್ಯಕ್ಷರು ಅದನ್ನು ನೋಡಿ ವಿಮರ್ಶೆಮಾಡಿ ರೂಲಿಂಗ್ ಕೊಡಲು ಅವರಿಗೆ ಅಧಿಕಾರವಿದೆ. ಯಾರಾದರೂ ತಪ್ಪುಮಾಡಿದಾಗ ಅವರು ನಮ್ಮ ಕಡೆಯವರೇ ಆಗಲಿ ಅಥವಾ ಬೇರೆ ಕಡೆಯವರೇ ಆಗಲಿ ಅದನ್ನು ತೋರಿಸಲು ಅವಕಾಶವಿದೆ. ಕಾನೂನುಬದ್ಧವಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಎಲ್ಲರೂ ಸಹಕರಿಸಬೇಕು. ಹಾಗೆ ಮಾಡಿ ಸರಿಯಾದ ಕೆಲಸ ಮಾಡೋಣ. ನಮ್ಮ ಪಕ್ಷದವರಾಗಲಿ ಅಥವ ವಿರೋಧ ಪಕ್ಷದವರಾಗಲಿ ಕಾನೂನಿಗೆ ವಿರುದ್ಧವಾಗಿ ನಡೆಯುವುದಕ್ಕಾಗುವುದಿಲ್ಲ. ಯಾರೇ ಆಗಲಿ ನಿಯಮಗಳಿಗೆ ವಿರೋಧವಾಗಿ ನಡೆಯುವುದು ಯೋಗ್ಯವಲ್ಲ. ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟರೆ ನಾವೆಲ್ಲರೂ ಕೂಡ ಅದಕ್ಕೆ ತಲೆಬಾಗಬೇಕು, ಉದ್ವೇಗದಿಂದ ಕೋಪದಿಂದ ಅದರಮೇಲೆ ಚರ್ಚೆ ಮಾಡುವುದು ಸರಿಯಲ್ಲ, ಹಾಗೆ ಮುಂದುವರೆಯುವುದು ಬೇಡ. ಒಂದು ಸತ್ಸಂಪ್ರದಾಯವನ್ನು ನಾವು ಬೆಳೆಸೋಣ. ಹಿಂದಿನವರೇನೇ ಮಾಡಿದ್ದರೂ ಅದನ್ನು ಅಲ್ಲಿಗೆ ಬಿಡೋಣ. ಹಿಂದಿನ ಜನ್ಮದಲ್ಲಿ ನಾನಾ ರೀತಿಯ ಅವತಾರವಿರಬಹುದು, ಅದನ್ನು ಎತ್ತಿ ಆರೋಪ ಮಾಡುವುದು ಬೇಡ, ಅದೆಲ್ಲವೂ ಪ್ರೊಸೀಡಿಂಗ್ಸ್ ಆಗಬಾರದು.

ಶ್ರೀ ಎಚ್. ಡಿ. ದೇವೇಗೌಡ.—ಹೊಸ ಅವತಾರಕ್ಕೆ ಹೊಂದಿಕೊಳ್ಳಬೇಕು.

ಶ್ರೀ ಡಿ. ದೇವರಾಜ ಅರಸ್.—ನೀವು 5 ವರ್ಷ ನೋಡಿರಬಹುದು, ನಾನು 30 ವರ್ಷದಿಂದ ಅನುಭವ ಪಡೆದಿದ್ದೇನೆ. ಹಿಂದಿನದನ್ನು ತೆಗೆದು ಆರೋಪ ಮಾಡುವುದು ಬೇಡ.

Sri B. B. SAYANAK.—We are not blaming you. What about Sri Siddaveerappa, Sri Mallikarjunaswamy and Sri Azzez sait ? They were gheraoing Sri Kothavale.

ಶ್ರೀ ಡಿ. ದೇವರಾಜ ಅರಸ್.—ಆ ಕಥೆ ಈಗ ಅಲ್ಲಿಗೇ ಬಿಡೋಣ. ಹೊಸದಾಗಿ ಸತ್ಸಂಪ್ರದಾಯ ಬೆಳೆಸೋಣ. ಕಾನೂನಿನ ಪ್ರಕಾರ ಇರುವ ರೂಲ್ಸ್ ಮತ್ತು ರೆಗ್ಯುಲೇಷನ್ಸ್ ಪ್ರಕಾರ ಅದರ ಚೌಕಟ್ಟಿನೊಳಗೆ ಈ ಸಭೆ ನಡೆಯಲು ಎಲ್ಲರೂ ಸಹಕರಿಸಬೇಕು ಎಂದು ಅಧ್ಯಕ್ಷರ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಕೆಲವರು ಒಂದೇ ವಿಷಯದ ಮೇಲೆ ಅನೇಕ ಸಲ ಮಾತನಾಡುವರು. ಆದರೆ ಒಂದು ವಿಷಯದ ಮೇಲೆ ಒಂದೇ ಸಲ ಮಾತನಾಡಬೇಕೆಂಬ ನಿಬಂಧನೆಯಿದೆ. ಕೆಲವರು ಇಂದು ಎಷ್ಟೋ ಸಲ ಒಂದೇ ವಿಷಯದ ಮೇಲೆ ಮಾತನಾಡಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ನಾನೊಂದು ಪ್ರಿವಿಲೇಜ್ ಮೋಷನ್ ಕಳಿಸಿದ್ದೆ, ಅದರ ವಿಚಾರ ಏನಾಯಿತೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ನಾಳೆ ತಿಳಿಸುತ್ತೇನೆ.

## Authority to the Newspapers not to publish the expunged Proceedings.

Sri H. M. CHANNABASAPPA.—Before proceeding with the further business of the House, I wish to bring one important issue to the notice of the House and the Chair. Commenting on the proceedings of the

(SRI H. M. CHANNABASAPPA)

Legislative Assembly on 11-4-1972 the PRAJAVANI paper has reported that there is no legislation whatsoever to prevent the publication of the expunged portion and it reads like this:

"ಅಧ್ಯಕ್ಷರು ಕಡತದಿಂದ ತೆಗೆದುಹಾಕಬೇಕೆಂದು ಆಜ್ಞೆ ಮಾಡುವ ಭಾಗವನ್ನು ಪತ್ರಿಕೆಗಳು ವರದಿ ಮಾಡುವಂತಿಲ್ಲ. ಇದನ್ನು ನಿರ್ಬಂಧಿಸುವ ಶಾಸನವೇನೂ ಇಲ್ಲ. ವಿಧಾನಸಭಾಧ್ಯಕ್ಷರ ಸೌಜನ್ಯದ ಮೇಲೆ ಪತ್ರಿಕಾ ಪ್ರತಿನಿಧಿಗಳ ಹಾಗೂ ಅವರ ವರದಿ". ಇದು ಪತ್ರಿಕೆಯಲ್ಲಿ ಬಂದಿರುವುದು. ಇದರ ಹಿಂದಿರುವ ಕಲ್ಪನೆ –ಅಂದರೆ ರದ್ದು ಮಾಡಬೇಕು ಅಥವಾ ಎಕ್ಸ್‌ಪಂಜ್ ಮಾಡಬೇಕು ಎಂದು ಅಧ್ಯಕ್ಷರು ಅಪ್ಪಣೆ ಮಾಡಿದಮೇಲೆ ಪಬ್ಲಿಷ್ ಮಾಡುವುದು ಅಥವ ಬಿಡುವುದು. ಎಂಬ ವಿಚಾರದಲ್ಲಿ ಯಾವ ನಿಬಂಧನೆಯೂ ಇಲ್ಲ ಎಂದು ಅರ್ಥ ಬರುವ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದಾರೆ. ಇದು ಸರಿಯೇ ಎಂದು ಆಲೋಚಿಸಿ ಸತ್ಸಂಪ್ರದಾಯ ಬೆಳೆಸುವುದರ ಬಗ್ಗೆ ಸೂಚನೆ ಕೊಡಬೇಕೆಂದು ಹೇಳುತ್ತೇನೆ.

ಎ. ಐ. ಆರ್. 1958 Searchlight ಕೇಸಿನಲ್ಲಿ ಆದ ಸುಪ್ರೀಂ ಕೋರ್ಟಿನ ಆಜ್ಞೆಯನ್ನು ತಮ್ಮ ಅವಗಾಹನೆಗೆ ತರುತ್ತೇನೆ. ಅವರು ಈ ರೀತಿ ಡಿಸಿಷನ್ ಕೊಟ್ಟಿದ್ದಾರೆ.—

> "A paper which publishes the expunged portion of the proceedings of the House Commits a breach of privilege."

ಇದು ಕೇಸ್ ಲಾ, ಹೀಗಿರುವುದರಿಂದ ಯಾವ ನಿರ್ಬಂಧವೂ ಇಲ್ಲ ಎಂಬ ಭಾವನೆ ಬರುವ ರೀತಿಯಲ್ಲಿ ಪ್ರಜಾವಾಣಿಯಲ್ಲಿ ತಿಳಿಸಿರುವುದು ಸರಿಯಿಲ್ಲ. ಇನ್ನುಮುಂದೆ ಇದನ್ನು ಸರಿಪಡಿಸುವುದಕ್ಕೆ ಸುಪ್ರೀಂ ಕೋರ್ಟಿನ ತೀರ್ಮಾನದ ಪ್ರಕಾರ ಎಕ್ಸ್‌ಪಂಜ್ ಮಾಡಿದ ಅಂಶ ಯಾವರೀತಿಯಿಂದಲೂ ಪಬ್ಲಿಷ್ ಮಾಡಬಾರದು ಎನ್ನುವುದರ ಬಗ್ಗೆ ನಿರ್ದಿಷ್ಟವಾದ ಸೂಚನೆಯನ್ನು ತಾವು ಕೊಡಬೇಕು. ಇದು ಪತ್ರಿಕೆಯವರ ಕರ್ತವ್ಯ. ಈ ವಿಷಯವನ್ನು ತಮ್ಮ ಮುಂದಿಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಚನ್ನಬಸಪ್ಪನವರೆತ್ತಿರುವುದು ಬಹಳ ಗಹನವಾದ ವಿಚಾರ. ಎಕ್ಸ್‌ಪಂಜ್ ಮಾಡಿರುವುದನ್ನು ಪತ್ರಿಕೆಗಳಲ್ಲಿ ಪ್ರಕಟಪಡಿಸಬಹುದೇ ಅಥವ ಇಲ್ಲವೇ ಎಂಬುದು ಮುಖ್ಯವಾದ ವಿಷಯ. ಪ್ರಜಾವಾಣಿಯವರು ಅವರ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ. ಅವರೇ ಎಕ್ಸ್‌ಪಂಜ್ ಮಾಡಿರುವುದನ್ನು ಪಬ್ಲಿಷ್ ಮಾಡಿಲ್ಲ. ಪಬ್ಲಿಷ್ ಮಾಡಿದ್ದರೆ ಆಗ ತಾವೇನಾದರೂ ಕ್ರಮ ತೆಗೆದುಕೊಳ್ಳಬೇಕಾಗುತ್ತಿತ್ತೋ ಏನೋ. ಅವರು ನನಗೆ ತಿಳಿದಮಟ್ಟಿಗೆ ನಿಯಮಗಳನ್ನು ಬಿಟ್ಟುಹೋಗುವುದಿಲ್ಲ.

SRI H. M. CHANNABASAPPA.—I did not say that they have published the expunged portion. I only drew the attention of the House and the Speaker to the fact that mention has been made that there is no law prohibiting them from publication. That is not so. That is why I want to bring it to the notice of the House and the Speaker.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದು ಅರ್ಥವಾಯಿತು. ಅವರು ಪಬ್ಲಿಷ್ ಮಾಡಿಲ್ಲವೆಂಬುದು ನಿಜ. ಸತ್ಸಂಪ್ರದಾಯ ಬೆಳೆಸಿಕೊಂಡು ಬರಬೇಕು ಮತ್ತು ಪತ್ರಿಕೆಯವರು ಹಾಗೆ ಮಾಡಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಪ್ರಜಾವಾಣಿ, ಡೆಕನ್ ಹೆರಾಲ್ಡ್ ಮುಂತಾದ ಪತ್ರಿಕೆಗಳನ್ನು ಸಾಮಾನ್ಯವಾಗಿ ಎಲ್ಲರೂ ಓದುವರು. ಅವರಿಗೆ ಮುಂದೆ ಬರಬೇಕೆಂಬ ಆಸೆ ಇದೆ. ಈಗ ಮಂತ್ರಿಗಳು ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಓದಿದ್ದಾರೆ. ಅದರ ಬಗ್ಗೆ ನಾನು ಕಾಮೆಂಟ್ ಮಾಡುವುದಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನ ತಪ್ಪು ಅಥವಾ ಸರಿ ಎಂದು ನಾನು ಹೇಳುವುದಿಲ್ಲ. ಅದನ್ನು ಹೇಳುವುದಕ್ಕಾಗುವುದಿಲ್ಲ. ಇಂದು ಒಂದು ತೀರ್ಮಾನ ಕೊಡಬಹುದು, ನಾಡಿದ್ದು ಇನ್ನೊಂದು ತೀರ್ಮಾನ ಕೊಡಬಹುದು. ರಾಜ್ಯಾಂಗದ ಬಗ್ಗೆ ತೀರ್ಮಾನ ನೀಡಿದ್ದಾರೆ. ಆದುದರಿಂದ ನಾನು ಕೇಳಿಕೊಳ್ಳುವುದು ಅವರ ಜೊತೆಯಲ್ಲಿ ನಾವೂ ಸೇರಿ ಸತ್ಸಂಪ್ರದಾಯ ಉಳಿಸಬೇಕು ಎಂಬುದೇ ಹೊರತು ಮತ್ತೆ ಬೇರೆ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಚನ್ನಬಸಪ್ಪನವರು ಈಗ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಇದು ಪ್ರಜಾಪ್ರಭುತ್ವದ ಮೂಲಭೂತವಾದ ವಿಚಾರಕ್ಕೆ ಸಂಬಂಧಪಟ್ಟಿದ್ದು. ಮೊನ್ನೆ 25ನೇ ರಾಜ್ಯಾಂಗ ತಿದ್ದುಪಡಿಯ ವಿಚಾರದಲ್ಲಿ ಮಾತನಾಡುವಾಗ ಹೇಳಿದ್ದೇನೆ, ಇದು ಪತ್ರಿಕಾ ಅಭಿಪ್ರಾಯಕ್ಕೆ, ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಕೊಡಲಿ ಏಟನ್ನು ಹಾಕತಕ್ಕ ಸರ್ವಾಧಿಕಾರಿ ಮನೋಭಾವವನ್ನು ವ್ಯಕ್ತಪಡಿಸತಕ್ಕ ವಿಚಾರ ಎಂದು. ಪತ್ರಿಕಾ ವರದಿಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಇರತಕ್ಕದ್ದು ಕೂಡ ಅವರ ಮಾತಿನಿಂದ ವ್ಯಕ್ತವಾಗುತ್ತದೆ. ಅದರಲ್ಲಿ ಏನು ಹೇಳಿದ್ದಾರೆಂದರೆ 'ವರದಿ ಮಾಡುವಂತಿಲ್ಲ, ಆದರೂ ಇದರ ಬಗ್ಗೆ ಯಾವುದೇ ಕಡ್ಡಾಯವಾದ ನಿಯಮವಿಲ್ಲ, ನಿರ್ಬಂಧವಿಲ್ಲ ಎಂದು ಹೇಳಿದ್ದಾರೆ. ಈಗ ನಮ್ಮ ರೂಲ್ಸ್ ಆಫ್ ಪ್ರೊಸೀಜರ್'ನಲ್ಲಿ ಪತ್ರಿಕೆಯವರ ಬಗ್ಗೆ ಏನಾದರೂ ಇದೆಯೇ? ಇಲ್ಲ. ಆದ್ದರಿಂದ ಅವರು ಇದ್ದುದನ್ನು ಇದ್ದ ಹಾಗೆ ಹೇಳಿದ್ದಾರೆ. ಇದ್ದುದನ್ನು ಇದ್ದ ಹಾಗೆ ಹೇಳಿದ್ದು ತಪ್ಪು ಎನ್ನುವ ಅಭಿಪ್ರಾಯವನ್ನು ಮಾನ್ಯ ಸಚಿವರು ಈಗ ವ್ಯಕ್ತಪಡಿಸಿದ್ದಾರೆ. ಇದರಿಂದ ವ್ಯಕ್ತಿಗಳ ಮೂಲಭೂತವಾದ ಅಭಿಪ್ರಾಯ ಸ್ವಾತಂತ್ರ್ಯದ ಬಗ್ಗೆ, ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ದೊಡ್ಡ ಧಕ್ಕೆ ಬರುವ ರೀತಿಯಲ್ಲಿ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರವನ್ನು ನಡೆಸತಕ್ಕ ರೀತಿಯಲ್ಲಿ ಸರ್ಕಾರ ಹೋಗುತ್ತಿದೆ. ಈಗತಾನೇ ಮಾನ್ಯ ಸದಸ್ಯರಾದ ಬಂಗಾರಪ್ಪನವರನ್ನು ಹೊರಗೆ ಕಳುಹಿಸುವುದಕ್ಕೆ ಒತ್ತಾಯಪಡಿಸಿತು ಮತ್ತು ಸದಸ್ಯರ ಹಕ್ಕನ್ನು ಮೊಟಕು ಮಾಡುವುದರ ಜೊತೆಗೆ ಪತ್ರಿಕಾ ಸ್ವಾತಂತ್ರ್ಯಕ್ಕೆ ಕೂಡ ಧಕ್ಕೆ ಬರುವ ರೀತಿಯಲ್ಲಿ ನಡೆಯುತ್ತಿದ್ದಾರೆ, ನುಡಿಯುತ್ತಿದ್ದಾರೆ. ಈ ಅಭಿಪ್ರಾಯದಿಂದ ಮುಂದೆ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರವನ್ನು ರಾಷ್ಟ್ರದಲ್ಲಿ, ರಾಜ್ಯದಲ್ಲಿ ತರುವುದಕ್ಕೆ ಆಡಳಿತ ಕಾಂಗ್ರೆಸ್ ಸರ್ಕಾರ ಅಲ್ಲಿ, ಇಲ್ಲಿ ಪ್ರಯತ್ನ ಮಾಡುತ್ತಿದೆ. ಇದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾದ ನೀತಿ, ನಿಲುವು, ಅಭಿಪ್ರಾಯ. ಇದನ್ನು ತಾವು ಬಹಳ ಎಚ್ಚರಿಕೆಯಿಂದ ಹಾಗೂ ರಾಜ್ಯದ ಜನ ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಇದು ಸರ್ವಾಧಿಕಾರಿ ಆಡಳಿತವಲ್ಲ. ಪ್ರಜಾಪ್ರಭುತ್ವದಲ್ಲಿ ಪತ್ರಿಕೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ರಾಜ್ಯಾಂಗದತ್ತವಾದ ಸ್ವಾತಂತ್ರ್ಯವಿದೆಯೋ, ಇಲ್ಲವೋ? ಅಧ್ಯಕ್ಷರು ಕೊಟ್ಟ ತೀರ್ಪಿನಂತೆ ಯಾವ ವಿಚಾರವನ್ನೂ ಪ್ರಕಟ ಮಾಡಿಲ್ಲ. ಆದರೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗ, ಬರೆದಿದ್ದಾರೆ. ಅದು ಕೂಡ ತಪ್ಪು, ಹಾಗೆ ಬರೆಯಬಾರದು ಎನ್ನತಕ್ಕ ವಿಚಾರವೇನಿದೆ ಇದು ರಾಷ್ಟ್ರಘಾತುಕವಾದ, ಪ್ರಜಾಪ್ರಭುತ್ವಕ್ಕೆ ಮಾರಕಪ್ರಾಯವಾದ, ಅಭಿಪ್ರಾಯ ಸ್ವಾತಂತ್ರ್ಯವನ್ನು ದಮನ ಮಾಡತಕ್ಕ, ಸರ್ವಾಧಿಕಾರಿ ಮನೋಭಾವವನ್ನು ವ್ಯಕ್ತಪಡಿಸತಕ್ಕ, ಅಭಿಪ್ರಾಯ. ಈ ಅಭಿಪ್ರಾಯಕ್ಕೆ ನಾನು ಸಂಪೂರ್ಣವಾಗಿ ವಿರೋಧಿಸುತ್ತೇನೆ ಖಂಡಿಸುತ್ತೇನೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಹೇಳಿದ್ದೆಲ್ಲ ಕೇಳಿದ್ದಾಯಿತು. ಇದರ ಮೇಲೆ ಇನ್ನೂ ಎಷ್ಟು ಜನ ಮಾತನಾಡಬೇಕು ?

Sri C. M. ARUMUGAM.—I want to know whether there is any law passed by the State Legislature or the Parliament, apart from the ruling or the decision of the Supreme Court, prescribing that the newspapers should not publish the expunged proceedings ?

Sri H. M. CHANNABASAPPA.—It is a well accepted convention which is prevalent all over the country that expunged proceedings should not be published. The decision of the Supreme Court is a case law and the hon· member knows that the case law has the force of law.

Sri C. M. ARUMUGAM.—I would only appeal to the Government not to go to the extent of threatening the newspapers.

Sri M. S. KRISHNAN.—This is a very simple issue. I don't know why they are making it a big issue.

ಅಧ್ಯಕ್ಷರು:—ಎಲ್ಲರೂ ಹೇಳಿರುವುದನ್ನು ಕೇಳಿದ್ದೇನೆ. ನಾನು ನಾಳೆ ರೂಲಿಂಗ್ ಕೊಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್—ಅಧ್ಯಕ್ಷರೇ, ಸಭೆಯಲ್ಲಿ ನಡೆಯುತಕ್ಕ ನಡೆವಳಿಕೆಯನ್ನು ವರದಿ ಮಾಡತಕ್ಕದು ಪ್ರತಿದಿವಸದ ನಡೆವಳಿಕೆ ಕೊನೆಯಾಗಿ, ಸಭೆ ಮುಗಿದ ನಂತರ. ಆ ಮಧ್ಯೆ ತಾವೇನಾದರೂ ಎಕ್ಸ್‌ಪಂಜ್ ಮಾಡಿದ್ದೇವೆಂದರೆ ಆ ಭಾಗ ನಡೆವಳಿಕೆಯಿಂದ ತೆಗೆದು ಹಾಕಲ್ಪಡುತ್ತದೆ. ಅದು ನಡೆವಳಿಕೆಯಲ್ಲಿ ಸೇರುವುದಿಲ್ಲ. ಆದ್ದರಿಂದ ಆ ಭಾಗವನ್ನು ಪತ್ರಿಕೆಗಳಾಗಲೀ, ಯಾರೇ ಆಗಲೀ ಪಬ್ಲಿಷ್ ಮಾಡಬಾರದೇ ವಿನಾ ಅದನ್ನು ಮಾಡಬೇಕೇ ಬಿಡಬೇಕೆ ಎನ್ನುವ ಕಾನೂನು ಮಾಡಬೇಕಾಗಿದೆಯೇ ಇಲ್ಲವೇ ಎನ್ನುವ ಜಿಜ್ಞಾಸೆಗೆ ಒಳಗಾಗತಕ್ಕ ಪರಿಸ್ಥಿತಿ ಇಲ್ಲ. ಆದುದರಿಂದ ಇಷ್ಟು ಸುಲಭವಾದ ವಿಚಾರದ ಮೇಲೆ ಜಿಜ್ಞಾಸೆ, ವ್ಯಾಖ್ಯಾನ ಮಾಡುವುದು ಸರಿಯಲ್ಲ ಎಂದು ನನ್ನ ಅಭಿಪ್ರಾಯ.

MADAM SPEAKER.—Now, we will take up the next item on the agenda. *i. e.* motion of thanks to Governor's Address. Hon. Member Sri Krishnan to speak.

## Motion of Thanks to the Governor's Address

(*Debate Continued*)

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಧ್ಯಕ್ಷರೇ ನಾನು ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ತಿದ್ದುಪಡಿಗಳನ್ನು ಕೊಟ್ಟಿದ್ದೇನೆ. ಆ ತಿದ್ದುಪಡಿಗಳು ಸಭೆಯ ಮುಂದೆ ಮಂಡಿಸಲ್ಪಟ್ಟಿವೆ ಎಂದು ತಿಳಿದುಕೊಂಡು ರಾಜ್ಯಪಾಲರ ಭಾಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ರಾಜ್ಯಪಾಲರ ಭಾಷಣವಾದ ನಂತರ ಮತ್ತು ಅದನ್ನು ಪುನಃ ಓದಿದ ನಂತರ ನನಗೆ ಭಾಸವಾಗಿರುವಂಥ ಭಾವನೆ ಏನೆಂದರೆ ಇದು ಸಾರವೇ ಇಲ್ಲದಿರುವ ನಿರುತ್ಸಾಹವನ್ನು ತರುವಂಥ ಒಂದು ಭಾಷಣವಾಗಿದೆ ಎಂದರೆ ತಪ್ಪಾಗಲಾರದು. ಇದು ಸರ್ಕಾರದಲ್ಲಿರುವ ಎಲ್ಲ ಇಲಾಖೆಗಳ ಕೆಲಸ ಕಾರ್ಯಗಳ ವರದಿ ಎನ್ನುವ ರೀತಿಯಲ್ಲಿದೆಯೇ ವಿನಾ ನಮ್ಮ ರಾಜ್ಯದ ಮುಂದೆ ಅಥವಾ ದೇಶದ ಮುಂದೆ ಏನು ಪ್ರಶ್ನೆಗಳಿವೆ, ಮುಖ್ಯವಾಗಿ ನಮ್ಮ ರಾಜ್ಯದ ಜನತೆಯ ಮುಂದೆ ಏನು ಪ್ರಶ್ನೆಗಳಿವೆ ಏನು ಸಮಸ್ಯೆಗಳಿವೆ, ಅವುಗಳ ಬಗ್ಗೆ ಧೋರಣೆ ತಾಳುವಂಥ ಯಾವುದೇ ವಿಷಯಗಳನ್ನು ಕೂಡ ರಾಜ್ಯಪಾಲರು ಇದರಲ್ಲಿ ಹೇಳಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅತಿ ಗಹನವಾದ ವಿಷಯಗಳು ಬೇಕಾದಷ್ಟಿರುತ್ತವೆ. ಅವುಗಳ ಬಗ್ಗೆ ಯಾವ ಧೋರಣೆಯನ್ನು ನಮ್ಮ ಮುಂದಿನ ಸರ್ಕಾರ ತಾಳುತ್ತದೆ ಎನ್ನುವುದನ್ನು ಸೂಚಿಸುವ ರೀತಿಯಲ್ಲಿ ವಿಷಯಗಳಿರುತ್ತವೆ ಎಂದು ನಾವು ನಂಬಿದ್ದೆವು. ಆದರೆ ಆ ರೀತಿಯಾದ ಯಾವ ಧೋರಣೆಯನ್ನೂ ಸಹ ಸ್ಪಷ್ಟಪಡಿಸಿಲ್ಲ. ಅಪ್ಪಿ ತಪ್ಪಿ ಭೂಸುಧಾರಣೆ ಬಗ್ಗೆ ಅಥವಾ ಒಂದೆರಡು ವಿಷಯಗಳ ಬಗ್ಗೆ ಹೇಳಿದ್ದರೂ ಸಹ ಅದರಲ್ಲಿಯೂ ಕೂಡ ಯಾವರೀತಿಯ ಸ್ಪಷ್ಟತೆ ಕಂಡುಬರುವುದಿಲ್ಲ ಎನ್ನುವುದನ್ನು ನಾವು ನೋಡಬಹುದು. ಇಂತಹ ಭಾಷಣ ಬಂದಿರುವಂಥ ಹಿನ್ನೆಲೆ ಯಾದರೂ ಏನು ಎಂದರೆ ನಮ್ಮ ರಾಜ್ಯದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿ ಆಳುವ ಪಕ್ಷಕ್ಕೆ ಜನತೆ ಮತ ಕೊಟ್ಟಿದೆ. ಶ್ರೀಮತಿ ಇಂದಿರಾ ಗಾಂಧಿಯವರ ಪ್ರಭಾವದಿಂದ ಅವರ ಹೆಸರನ್ನು ತೆಗೆದುಕೊಂಡು ಜನರ ಮುಂದೆ ಹೋಗಿ ಘೋಷಣೆಗಳನ್ನು ಮಾಡಿ ಇಂದು ಬಹುಮತದಿಂದ ಎಂದರೆ ಸುಮಾರು 165 ಜನ ಇಲ್ಲಿಗೆ ಚುನಾಯಿತರಾಗಿ ಬಂದಿದ್ದಾರೆ. ಜನತೆಯೂ ಏತಕ್ಕಾಗಿ ಇವರಿಗೆ ಮತ ನೀಡಿದರು ಎನ್ನುವುದನ್ನು ಇವರು ತಿಳಿದುಕೊಂಡಿಲ್ಲ. ಇಂದಿರಾ ಗಾಂಧಿಯವರ ಮುಖ ನೋಡಿಕೊಂಡು ಅವರು ಮತ ಕೊಡಲಿಲ್ಲ. ಅವರು ಏತಕ್ಕಾಗಿ ನಿಮಗೆ ಮತ ನೀಡಿದರು ಎಂದರೆ ನೀವು ಜನತೆ ಮುಂದೆ ಇಟ್ಟ ಘೋಷಣೆಗಳನ್ನು ಇಲ್ಲಿ ಜಾರಿಗೆ ತರಬೇಕೆಂದು ನಿಮಗೆ ಅವರು ಮತ ಕೊಟ್ಟು ಕಳುಹಿಸಿದ್ದಾರೆ. ನೀವೇ ಪಾರ್ಲಿಮೆಂಟ್ ಚುನಾವಣೆ ಸಮಯದಲ್ಲಿ ಮತ್ತು ಈಚೆಗೆ ನಡೆದ ಚುನಾವಣೆಯಲ್ಲಿ, ಗರೀಬೀ ಹಠಾವೋ, ಎಂದು ಹೇಳುತ್ತಾ ಅನೇಕ ಘೋಷಣೆಗಳನ್ನು ಜನರ ಮುಂದೆ ಮಾಡಿ ಇಲ್ಲಿಗೆ ಬಂದಿದ್ದೀರಿ. ಜನ ಏನು ಆಸೆ ಮತ್ತು ಆಕಾಂಕ್ಷೆಗಳನ್ನು ಇಟ್ಟುಕೊಂಡು ನಿಮಗೆ ಮತ ಕೊಟ್ಟು ಇಲ್ಲಿ ಕಳುಹಿಸಿದ್ದಾರೋ ಅವುಗಳನ್ನು ಮತ್ತು ತಮ್ಮ ಘೋಷಣೆಗಳನ್ನು ಈಡೇರಿಸುವುದಕ್ಕೆ ನಿಮ್ಮನ್ನು ಇಲ್ಲಿ ಮಂತ್ರಿಗಳಾಗಿ ಚುನಾಯಿಸಿದ್ದಾರೆ. ಸರಕಾರದ ನಡವಳಿಕೆಯ ಮೇಲೆ ನನಗೆ ಅತಿಮುಖ್ಯವಾಗಿ ಕಾಣುವ ತಪ್ಪು ಎಂದರೆ ಅನೇಕ ಅಂಶಗಳಿವೆ. ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳೇ ಆಗಲೀ ಗ್ರಾಮಾಂತರ ಜನರ ವಿಚಾರವಾಗಲೀ

ವಿದ್ಯಾರ್ಥಿಗಳ ಹಾಗೂ ವಿದ್ಯಾಭ್ಯಾಸದ ಕಾರ್ಯಕ್ರಮವಾಗಲೀ ಇವೆಲ್ಲ ವಿಷಯಗಳ ಬಗ್ಗೆ ಯಾವ
ಒಂದು ಧ್ಯೇಯ ಧೋರಣೆಗಳನ್ನು ಅನುಸರಿಸುತ್ತಾರೆ ಎನ್ನುವುದನ್ನು ಈ ಭಾಷಣದಲ್ಲಿ ಹೇಳಿದ್ದರೆ
ಚೆನ್ನಾಗಿರುತ್ತಿತ್ತು. ಅಂತಹ ಒಂದು ಭಾಷಣವನ್ನು ನಮ್ಮ ರಾಜ್ಯಪಾಲರು ಇಲ್ಲಿ ಮಾಡದೇ
ಇರುವುದರಿಂದ ಈ ಭಾಷಣ ಏನೂ ಸಾರವಿಲ್ಲದ ಭಾಷಣ ಎಂದು ನಾನು ಹಿಂದೆಯೇ ಹೇಳಿದೆ.
ಇಂತಹ ಭಾಷಣದಿಂದ ಏನು ಪ್ರಯೋಜನವೂ ಇಲ್ಲ ಎಂದು ನಾನು ನನ್ನ ಭಾಷಣದ ಮೊದಲೇ
ಹೇಳಬೇಕಾಗಿ ಬಂತು. ಈ ಭಾಷಣದಲ್ಲಿ ಒಂದು ವಿಚಾರ ಎಂದರೆ ಬಂಗ್ಲಾ ದೇಶದ ವಿಮೋಚನೆಯ
ಬಗ್ಗೆ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಇದು
ಎಲ್ಲರಿಗೂ ಗೊತ್ತಿರುವ ವಿಷಯ. ಬಂಗ್ಲಾ ದೇಶದ ಬಗ್ಗೆ ಮಾತನಾಡುತ್ತಾ ಇದರಲ್ಲಿ ನಮ್ಮ
ದೇಶದ ಸೈನಿಕರು ಎಂದರೆ ಯೋಧರು ಯಾರು ಹೋಗಿ ಹೋರಾಟ ಮಾಡಿ ದೇಶಕ್ಕಾಗಿ ಮಡಿದರೋ
ಅಂತಹವರಿಗೆ ಇಂದಿನ ದಿವಸ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ನಾವು ಕೂಡ ಇವರೆಲ್ಲರಿಗೂ
ನಮ್ಮ ಶ್ರದ್ಧಾಂಜಲಿ ಹಾಗೂ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಇವರೆಲ್ಲರೂ ದೇಶದ
ಸ್ವಾತಂತ್ರ್ಯವನ್ನು ಕಾಪಾಡಲಿ ಎಂದು ಭಾರತ ಹಾಗೂ ಪಾಕಿಸ್ತಾನದೊಡನೆ ಯುದ್ಧವಾದಾಗ
ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಕೊಡಲಿ ಪೆಟ್ಟು ಬೀಳುವಾಗ ಬಂಗ್ಲಾ ದೇಶದ ವಿಮೋಚನೆ ಮಾಡಿ
ದುದಕ್ಕಾಗಿ ನಾವು ನಮ್ಮ ಧನ್ಯವಾದಗಳನ್ನು ಅರ್ಪಿಸಬೇಕು. ಇಂತಹ ಯುದ್ಧದಲ್ಲಿ ಯಾರು
ಯೋಧರು ಹೋರಾಡಿ ತಮ್ಮ ಸಾಮರ್ಥ್ಯಗಳನ್ನು ಸಮರ್ಥಿಸಿದರೋ ಅವರನ್ನು ನಾವು ಇಂದು
ಸ್ಮರಿಸಬೇಕು. ಅಂತಹ ಯೋಧರಿಗೆ ನಮ್ಮ ಅನುಕಂಪ ಹಾಗೂ ಅವರನ್ನು ಸ್ಮರಿಸುವಾಗ ಮತ್ತು
ಅವರು ಯುದ್ಧದಿಂದ ವಾಪಸು ಬಂದಾಗ ಅವರನ್ನು ಮಾಜೀ ಯೋಧರು ಎಂದು ಹೇಳುತ್ತಾರೆ.
ಇವರಿಗೆ ಸರಕಾರ ಎಲ್ಲ ವಿಧವಾದ ಸವಲತ್ತುಗಳನ್ನೂ ಕೊಡಬೇಕು ಎಂದು ಹೇಳುತ್ತೇವೆ. ಇಂತಹ
ವರ ಕೆಲವು ವಿಚಾರಗಳನ್ನು ಈ ಭಾಷಣದಲ್ಲಿ ರಾಜ್ಯಪಾಲರು ಹೇಳಬೇಕಾಗಿತ್ತು. ಇಂತಹ ಮುಖ್ಯ
ವಾದ ಕೆಲವಾರು ವಿಚಾರಗಳನ್ನು ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ಏಕೆ ಸೂಚಿಸಲಿಲ್ಲ
ಎನ್ನುವ ಶಂಕೆ ನಮಗೆ ಉಂಟಾಗಿದೆ. ತಮಗೆಲ್ಲಾ ಗೊತ್ತಿರುವ ಹಾಗೆ ಸರಕಾರ ಇಂತಹ ಮಾಜೀ
ಯೋಧರಿಗೆ ಜಮೀನು ಕೊಡುತ್ತೇವೆ ಎಂದು ಹೇಳುತ್ತಾರೆ. ಇಂತಹ ಯೋಧರು ಭೂಮಿಯನ್ನು
ಕೇಳಲು ತಹಶೀಲ್‌ದಾರರ ಬಳಿಗೆ ಹೋದಾಗ ತಹಶೀಲದಾರರು ಇವರಿಗೆ ಯಾವ ಜಮೀನು ಎಲ್ಲಿ
ಬೇಕು ಎನ್ನುವದನ್ನು ಅವರೇ ಹುಡುಕಿಕೊಂಡು ಬಂದು ಹೇಳಿದರೆ ಆಗ ಆ ಜಮೀನನ್ನು ಕೊಡ
ಬಹುದು ಎಂದು ಹೇಳುತ್ತಾರೆ. ನನಗೆ ಗೊತ್ತಿರುವ ಹಾಗೆ ಇಂದು ನಮ್ಮ ಬೆಂಗಳೂರು ನಗರ
ದಲ್ಲೇ ಇರುವ ಅನೇಕ ಯೋಧರುಗಳ ದರಖಾಸ್ತು ಅರ್ಜಿಗಳು ಬೇಕಾದಷ್ಟು ಇವೆ. ಅವು ಇನ್ನೂ
ಇತ್ಯರ್ಥವಾಗದೇ ಹಾಗೇ ಉಳಿದಿವೆ. ಆದರೆ ನಮ್ಮ ಹಿಂದೆ ಇದ್ದ ರಾಜ್ಯಪಾಲರಾದ ಶ್ರೀ
ಧರ್ಮವೀರರವರು ಇದರ ಬಗ್ಗೆ ಒಂದು ಅಪ್ಪಣೆ ಕೊಡಿಸಿದರು. ಯೋಧರುಗಳು ಜಮೀನು ಹುಡುಕಿ
ಕೊಂಡು ಹೋಗುವುದು ಸರಿಯಲ್ಲ. ಇಲಾಖೆಯಲ್ಲಿರುವ ತಹಶೀಲುದಾರರುಗಳೇ ಎಲ್ಲಿ ಭೂಮಿ ಇದೆ
ಎನ್ನುವುದನ್ನು ಅವರಿಗೆ ಪಟ್ಟಿ ಮಾಡಿ ತೋರಿಸಬೇಕು ಮತ್ತು ಆ ನಂತರ ಭೂಮಿಯನ್ನು ವಿತರಣೆ
ಮಾಡಬೇಕೆಂದು ಆಗಿತ್ತು. ಆದರೆ ಈಗ ಏನಾಗಿದೆಯೋ ನನಗೆ ಗೊತ್ತಿಲ್ಲ. ಇಂದಿನ ಸರಕಾರ
ಇದರ ಕಡೆಗೆ ಅವರ ಮುಖ್ಯ ಗಮನವನ್ನು ಕೊಡಬೇಕು. ಇದು ಬಹು ಮುಖ್ಯವಾದ ವಿಷಯ.
ಇದನ್ನು ಕೂಡಲೇ ಮಾಡಬೇಕೆಂದು ಸರಕಾರದಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.
ಇದೂ ಅಲ್ಲದೆ ಇಂತಹ ಯೋಧರ ಮಕ್ಕಳಿಗೆ ಕೆಲಸಕೊಡುವುದು ಮತ್ತು ವಿದ್ಯಾಭ್ಯಾಸಕ್ಕೆ ಸಹಾಯ
ಮಾಡುವುದು ಇವೆಲ್ಲ ಅನುಕೂಲಗಳನ್ನು ಕೊಟ್ಟು ಈ ಜನಕ್ಕೆ ಅದಷ್ಟುಮಟ್ಟಿಗೆ ಪರಿಹಾರಗಳನ್ನು
ಕೊಡಬೇಕೆಂದು ಸರಕಾರದ ಗುರಿಯಾಗಿತ್ತು. ಆದರೆ ಇದರ ಬಗ್ಗೆ ಇದುವರೆಗೆ ಏನೂ ಆಗಿಲ್ಲ
ಎಂದು ಹೇಳಲೇಬೇಕಾಗಿದೆ. ಇಷ್ಟು ಮಾತ್ರವಲ್ಲ. ಇಂದು ನಡೆದಿರುವ ಬಂಗ್ಲಾದೇಶದ ವಿಮೋ
ಚನೆಯ ಯುದ್ಧದಿಂದ ನಾವು ಎರಡು ಪಾಠಗಳನ್ನು ಕಲಿಯಬೇಕು. ಮೊದಲನೇದು ಏನೆಂದರೆ,
ನನಗೆ ತಿಳಿದಮಟ್ಟಿಗೆ ಇಂಡಿಯಾ ಹಾಗೂ ಪಾಕಿಸ್ಥಾನದ ಹೋರಾಟದಲ್ಲಿ ನಮ್ಮ ದೇಶವೆಲ್ಲಾ ಕಲಕಿ
ಹೋಗಿದೆ. ಇದರ ಬಗ್ಗೆ ನಾವು ಹೊಸ ರೀತಿಯಲ್ಲಿ ಯೋಚನೆ ಮಾಡಬೇಕು ಎಂದು ನಮ್ಮ ಅಭಿ
ಪ್ರಾಯ. ಹಳೆಯ ಸಂಪ್ರದಾಯಬದ್ಧವಾದ ಪದ್ಧತಿಗಳನ್ನು ಬಿಟ್ಟು ನಮ್ಮ ದೇಶದ ಸ್ವಾತಂತ್ರಕ್ಕೆ
ಧಕ್ಕೆ ಬರುವಾಗ ನಮ್ಮ ಜನಗಳಿಗೆ ಇರುವ ಆಸೆಗಳಿಗನುಗುಣವಾಗಿ ಯಾವ ನೀತಿಯನ್ನು ಅನುಸರಿಸ
ಬೇಕು ಎನ್ನುವುದಕ್ಕೆ ಗಮನಕೊಡಬೇಕು. ಹಿಂದಿನಿಂದ ಬಂದಿರುವ ಸರಕಾರಗಳು ಬಂಡವಾಳಶಾಹಿ
ಹಾದಿಯಲ್ಲಿ ಹೋಗದೇ ಇಂದು ಒಂದು ಹೊಸ ಹಾದಿಯಲ್ಲಿ ಹೋಗಬೇಕಾಗಿದೆ. ಈ ಹಾದಿ ಎಂದರೆ
ಸಮಾಜವಾದದ ಹಾದಿಯಲ್ಲಿ ಹೋಗಬೇಕು. ಇನ್ನೊಂದು ಈ ಹೋರಾಟದಿಂದ ನಾವು ಕಾಣುವುದು
ತಮಗೆ ಗೊತ್ತಿರುವ ಹಾಗೆ ನಮಗೆ ಪಾಕಿಸ್ಥಾನ ಮಾತ್ರವಲ್ಲ ಇತರ ಸಾಮ್ರಾಜ್ಯವಾದಿ
ಸರಕಾರಗಳ ನಿರ್ಬಂಧಗಳಿಂದಾಗಿ ನಮ್ಮ ದೇಶದ ಸ್ವಾತಂತ್ರಕ್ಕೆ ಧಕ್ಕೆ ತರುವ ರೀತಿಯಲ್ಲಿ ಒಂದು
ತರಹದ ಪರಿಸ್ಥಿತಿ ಬಂದಾಗ ಸಮಾಜವಾದೀ ಸ್ವರೂಪದ ರಾಷ್ಟ್ರವಾದ ರಷ್ಯಾ ನಮ್ಮ ಸಹಾಯಕ್ಕೆ

(ಶ್ರೀ ಎಂ. ಎಸ್. ಕೃಷ್ಣನ್)

ಬಂತು ಮತ್ತು ನಮ್ಮ ಸ್ವಾತಂತ್ರ್ಯವನ್ನು ಕಾಪಾಡಲು ನಮಗೆ ಒಂದು ದಾರಿಯಾಯಿತು. ನಾವು ಪಾಕೀಸ್ಥಾನಕ್ಕೆ ಯುದ್ಧ ಸಾಮಗ್ರಿಗಳನ್ನು ಕಳುಹಿಸಬಾರದು ಅದನ್ನು ತಡೆಯಬೇಕು ಎಂದು ಹೇಳಿದರೂ ಕೂಡ ಅಮೆರಿಕಾದೇಶದವರು ಅದನ್ನು ಕೇಳದೆ ಪಾಕೀಸ್ಥಾನಕ್ಕೆ ಯುದ್ಧ ಸಾಮಗ್ರಿಗಳನ್ನು ಕಳುಹಿಸಿಕೊಟ್ಟರು. ಆಗ ನಮ್ಮ ದೇಶದ ಸ್ವಾತಂತ್ರ್ಯವನ್ನು ನಾವು ಕಾಪಾಡಿಕೊಳ್ಳಬೇಕಾಗಿ ಬಂತು. ಇದು ನಮಗೆಲ್ಲರಿಗೂ ಗೊತ್ತಿದೆ. ಇವೆಲ್ಲಾ ನಮ್ಮ ಕಣ್ಣು ಮುಂದೆಯೇ ಇವೆ.

ಇನ್ನು ನಮ್ಮ ದೇಶದ ಕೈಗಾರಿಕೆ ಬಗ್ಗೆ ಏನು ನೀತಿ ಇರಬೇಕು, ನಮ್ಮ ಆರ್ಥಿಕ ಗುರಿ ಏನಿರಬೇಕು, ಮತ್ತು ಯಾವ ತರಹದಲ್ಲಿರಬೇಕು ಮತ್ತು ನಮ್ಮ ದೇಶದಲ್ಲಿ ವಿದ್ಯಾಭ್ಯಾಸದ ಪದ್ಧತಿ ಯಾವ ರೀತಿ ಇರಬೇಕು ಎನ್ನುವುದನ್ನೆಲ್ಲಾ ನಾವು ಈಗ ಆಳವಾಗಿ ಯೋಚನೆ ಮಾಡಬೇಕಾದ ಕಾಲ ಬಂದಿದೆ. ಇಂತಹ ಯಾವ ಒಂದು ಮುಖ್ಯ ವಿಷಯ ಕೂಡ ಈ ಭಾಷಣದಲ್ಲಿ ಮಾಡಲಿಲ್ಲ ಮತ್ತು ನನಗೆ ಎಲ್ಲೂ ಇದು ಕಂಡು ಬರುತ್ತಿಲ್ಲ. ಆದರೆ ಒಂದೆರಡು ಮುಖ್ಯ ವಿಚಾರಗಳು ಬಂದಿವೆ. ಆದರಲ್ಲಿ ಒಂದು ಮುಖ್ಯವಾಗಿ ಬಂಗ್ಲಾದೇಶದ ವಿಚಾರ ಮತ್ತು ಇನ್ನೊಂದು ಸೆಲ್ಫ್ ರಿಲಯನ್ಸ್ ಎಂದು ಹೇಳಿದ್ದಾರೆ. ಎಲ್ಲರೂ ಅವರ ಸ್ವಂತ ಕಾಲಿನ ಮೇಲೆ ನಿಂತುಕೊಳ್ಳಬೇಕು ಎಂದು ಇದರಲ್ಲಿ ಹೇಳಿದ್ದಾರೆ. ಇದರ ಬಗ್ಗೆ ರಾಜ್ಯಪಾಲರು ಅವರಭಾಷಣದ 14ನೇ ಪುಟದಲ್ಲಿ ಹೇಳಿದ್ದಾರೆ. ನಾನು ಇದನ್ನು ಇಲ್ಲಿ ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನು ಇಲ್ಲಿ ಹೇಳಲು ಇಚ್ಛಿಸುವುದು ಈ ದೇಶದ ಜನರಲ್ಲಿ ಅಂತಹ ಪರಿಸ್ಥಿತಿ ಇರಲಿಲ್ಲ. ಪಬ್ಲಿಕ್ ಸೆಕ್ಟರು ಇಂಡಸ್ಟ್ರೀಗಳಲ್ಲಿ ಕೈಗಾರಿಕೆ ಯಾವ ರೀತಿ ಮಾಡಬೇಕು, ಇದರ ಕೈಪಾಸಿಟಿ ಹಾಗೂ ಉತ್ಪಾದನೆ ಶಕ್ತಿ ಯಾವ ರೀತಿ ಇರಬೇಕು ಇವನ್ನು ಇಲ್ಲಿ ಹೇಳಲು ಹೋಗುವುದಿಲ್ಲ. ಅವರ ಭಾವನೆ ಏನು ಎನ್ನುವುದನ್ನು ಅವರೇ ಇಲ್ಲಿ ಹೇಳಿದ್ದಾರೆ. ಸೆಲ್ಫ್ ರಿಲೆಯನ್ಸ್ ಏನು ಎನ್ನುವುದು ಅತಿ ಮುಖ್ಯವಾದ ವಿಷಯ. ಇದು ಹೇಗೆ ಮುಂದುವರಿಯುತ್ತಾ ಬಂದಿದೆ ಎನ್ನುವುದನ್ನು ನಮ್ಮ ದೇಶದ ಜನ ತಿಳಿದುಕೊಳ್ಳಬೇಕಾದರೆ ಯಾವ ರೀತಿಯಾದ ಸಾಧನ ಸಂಪರ್ಕಗಳನ್ನು ಇಟ್ಟುಕೊಳ್ಳಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಇದರ ಬಗ್ಗೆ ವಿಚಾರ ಮಾಡಿ ನೋಡಿದರೆ ಇಂತಹ ಸಂಪರ್ಕಗಳನ್ನು ಇಟ್ಟುಕೊಂಡರೂ ಬಂಡವಾಳಗಾರರ ಹಾಗೂ ಬಂಡವಾಳಶಾಹಿಯ ಮಾರ್ಗದಲ್ಲೇ ಇಲ್ಲಿಯವರೆಗೂ ಹೋಗುತ್ತಿದ್ದಾರೆ. ಇದರಲ್ಲಿ ನಾವು ನೋಡಿದಂತೆ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಳದಿಂದ ಶ್ರೀ ವೀರೇಂದ್ರ ಪಾಟೀಲರವರ ಮಂತ್ರಿಮಂಡಲದವರೆಗೆ ಯಾವ ಬದಲಾವಣೆಯೂ ಆದಂತೆ ಕಾಣುತ್ತಿಲ್ಲ. ಇದರಿಂದ ಯಾವ ಕಾರ್ಯಕ್ರಮಗಳೂ ಯಶಸ್ವಿಯಾಗಲಿಲ್ಲ. ಇದು ತಮಗೆಲ್ಲಾ ಗೊತ್ತಿರುವ ವಿಚಾರ. ರಷ್ಯಾ ದೇಶ ಏನು ಮಾಡಿದೆ ಎಂದು ಹೇಳುತ್ತಾರೆ. ಇಂದು ರಷ್ಯಾ ದೇಶ ನಮ್ಮ ದೇಶದ ಸಹಾಯಕ್ಕೆ ಬಾರದೇ ಇದ್ದಿದ್ದರೆ ಇಂದು ಈ ದೇಶದಲ್ಲಿ ಸ್ವಾತಂತ್ರ್ಯವೇ ಇರುತ್ತಿರಲಿಲ್ಲ.

3–30 P.M.

ಆದ್ದರಿಂದ ನಾನು ಕೇಳಿಕೊಳ್ಳುವುದು ಏನೆಂದರೆ, ನಾವೆಲ್ಲ, ಸಮಾಜವಾದದ ಹಾದಿಯಲ್ಲಿ ಹೋಗಬೇಕಾದರೆ ನಾವು ಹೆಚ್ಚಿನ ಸಂಪರ್ಕವನ್ನು ಸಮಾಜವಾದೀ ರಾಷ್ಟ್ರಗಳೊಡನೆ ಬೆಳೆಸಬೇಕು, ಮತ್ತು ಅವರಿಂದ ಹೆಚ್ಚಿನ ಸಹಾಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಕೈಗಾರಿಕೆಯ ಬೆಳವಣಿಗೆ ಬಗ್ಗೆ ಭಿಲಾಯ್ ಮತ್ತು ಬೊಕಾರೋ ಕಾರ್ಖಾನೆಗಳ ಬಗ್ಗೆ ಬೇರೆ ದೇಶದೊಡನೆ ಆಗಿರುವ ಒಪ್ಪಂದವನ್ನು ಮತ್ತು ಇತರೇ ಕೈಗಾರಿಕೆಗಳ ವಿಷಯದಲ್ಲಿ ಪಶ್ಚಿಮ ಜರ್ಮನಿಯವರೊಡನೆ ಆಗಿರುವ ಒಪ್ಪಂದವನ್ನು ನೋಡಿದರೆ ಏನು ವ್ಯತ್ಯಾಸಗಳಿವೆ ಎಂಬುದು ಮಾನ್ಯ ಕಾಗೋಡ್ ತಿಮ್ಮಪ್ಪನವರಿಗೆ ಗೊತ್ತಾಗುತ್ತದೆ. ಆರ್ಥಿಕ ಅಭಿವೃದ್ಧಿ ಸಾಧಿಸಬೇಕಾದರೆ ಮುಖ್ಯವಾಗಿ ಕೈಗಾರಿಕೆಗಳು ಬೆಳೆಯಬೇಕು. ಹಿಂದೆ ಇದ್ದ ಮಂತ್ರಿಮಂಡಲದವರು ಸಮಾಜವಾದ ಬಗ್ಗೆ ಹೇಳುತ್ತಿದ್ದರೇ ಹೊರತು ಅದನ್ನು ಕಾರ್ಯಗತ ಮಾಡಲಿಲ್ಲ. ಮಾನ್ಯ ಎಸ್. ಎಂ. ಕೃಷ್ಣ ಅವರು, ಮಾನ್ಯ ಘೋರ್ಪಡೆಯವರು ಸೋಷಿಯಲಿಜಮ್‌ಗೆ ಸೇರಿದ ಜನ ನಾವು ಎಂದು ಹೇಳುತ್ತಾರೆ. ಈ ದಿಶೆಯಲ್ಲಿಯೇ ಅವರು ಎಷ್ಟು ದೂರ ಹೋಗಿ ಕೈಗಾರಿಕೆಗಳನ್ನು ಬೆಳೆಸುತ್ತಾರೆಂಬುದನ್ನು ನಾವು ಕಾದುನೋಡಬೇಕಾಗಿದೆ. ಮುಖ್ಯವಾಗಿ ಆಲರ್ಜಿ ಹೋಗಬೇಕು. ಬೆಂಗಳೂರು ನಗರದಲ್ಲಿರತಕ್ಕ ಮೈಸೂರು ಲ್ಯಾಂಪ್ ವರ್ಕ್ಸ್ ಮತ್ತು ಎನ್. ಜಿ. ಇ. ಎಫ್. ನಲ್ಲಿ ಪಶ್ಚಿಮ ಜರ್ಮನಿಯ ಪಾಲು ಇದೆ. ನಮ್ಮ ದೇಶದ ಬಂಡವಾಳ ಮತ್ತು ಹೊರದೇಶದ ಬಂಡವಾಳದ ದಾಮಾಷ 51 ಮತ್ತು 49 ಇರಬೇಕೆಂದು ಕೇಂದ್ರಸರ್ಕಾರದವರು ಹೇಳಿದ್ದಾರೆ. ಇಲ್ಲದಿದ್ದರೆ ನಮ್ಮ ಹತೋಟಿ ಆ ಕೈಗಾರಿಕೆಯಲ್ಲಿ ಇರುವುದಿಲ್ಲವೆಂದು ಹೇಳಿದ್ದಾರೆ. ಈ ದಾಮಾಷವನ್ನು ಮಾರ್ಪಾಡು ಮಾಡಬೇಕೆಂಬ ಬಗ್ಗೆ ಹೋದ ವರ್ಷವೇ

ಹೊಗೆಯಾಡುತ್ತಿತ್ತು. ಈ ಬಗ್ಗೆ ಪ್ರಯತ್ನ ನಡೆಯುತ್ತಿದೆ ಎಂಬ ವಿಷಯ ನನಗೆ ನಂಬಿಕೆಗೆ ಅರ್ಹವಾದ ಮೂಲದಿಂದ ಸುದ್ದಿ ಬಂದಿದೆ. ಮೈಸೂರು ಲ್ಯಾಂಪ್ ವರ್ಕ್ಸ್ ಮತ್ತು ಎನ್. ಜಿ. ಇ. ಎಫ್. ಬಗ್ಗೆ ಈಗಿರುವ ದಾಮಾಷವನ್ನು ಬದಲಾವಣೆ ಮಾಡುವುದಾದರೆ ನಾವು ಕೈಗಾರಿಕಾ ರಂಗದಲ್ಲಿ ಮುಂದುವರಿಯುವುದು ಕಷ್ಟವಾಗುತ್ತದೆ. ಕೈಗಾರಿಕೆ ಬಗ್ಗೆ ನಾವು ಸೆಲ್ಫ್ ರಿಲೆಯನ್ಸ್ ಹೊಂದಿರಬೇಕೆಂದು ಏನು ಹೇಳುತ್ತೇವೆ ಅದನ್ನು ಜಾರಿಯಲ್ಲಿ ತರಬೇಕಾದರೆ ಈಗಿರುವ ದಾಮಾಷವೇ ಮುಂದುವರಿಯಬೇಕು. ನಮ್ಮ ರಾಜ್ಯದಲ್ಲಿ ಸಣ್ಣ ಕಾರಿನ ಯೋಜನೆಯನ್ನು ತರುತ್ತೇವೆಂದು ಬಹಳ ಕಾಲದಿಂದ ಹೇಳುತ್ತಲೇ ಇದ್ದಾರೆ. ಆದರೆ ಕಾರ್ಯರೂಪದಲ್ಲಿ ಬರಲಿಲ್ಲ. ಶ್ರೀ ನಿಜಲಿಂಗಪ್ಪನವರು ಹೇಳಿ ಕೈಬಿಟ್ಟರು, ಶ್ರೀ ವೀರೇಂದ್ರಪಾಟೀಲರು ಹೇಳಿ ಕೈಬಿಟ್ಟರು. ವಿಧಾನ ತಿಳಿದುಕೊಳ್ಳುವುದಕ್ಕೆ ಟೋಕಿಯೋಗೂ ಸಹ ಹೋಗಿ ಬಂದರು. ಆದರೆ ಕಾರ್ಯಗತವಾಗಲಿಲ್ಲ. ಕೇಂದ್ರ ಸರ್ಕಾರದವರು ಸಹ ಕೈಬಿಟ್ಟಿರುವಂತೆ ಕಾಣುತ್ತದೆ. ಸಣ್ಣ ಕಾರನ್ನು ತಯಾರು ಮಾಡುವುದರಲ್ಲಿ ಹಿಂದೂಸ್ಥಾನ್ ಏರೋನಾಟಿಕ್ಸ್‌ನಲ್ಲಿ ತಜ್ಞರಾದ ಕೆಲಸಗಾರರಿದ್ದಾರೆ. ವಿಸ್ತಾರವಾದ ಜಾಗವಿದೆ, ಪ್ರೊಟೋ ಟೈಪ್ ಇವೆ. ನುರಿತ ಕೆಲಸಗಾರರಿದ್ದಾರೆ. ಹಣಕ್ಕೆ ಕೊರತೆ ಇಲ್ಲ. ಪಬ್ಲಿಕ್ ಸೆಕ್ಟರ್‌ನಲ್ಲಿ ಈ ಕೈಗಾರಿಕೆಯನ್ನು ಬೆಳೆಸುವುದಕ್ಕೆ ಅವಕಾಶವಿದೆ. ಆದರೂ ಏತಕ್ಕೆ ಮಾಡುವುದಿಲ್ಲವೆಂದು ಈ ದಿನ ಕೇಳಬೇಕಾಗಿದೆ. ಹಿಂದಿನವರು ಬಿಟ್ಟಿದ್ದನ್ನು ಈಗಿನವರು ಮುಂದುವರಿಸಿ ಈಗಲಾದರೂ ಬೆಂಗಳೂರಿನಲ್ಲಿ ಸಣ್ಣ ಕಾರಿನ ಯೋಜನೆ ಬರುವಂತೆ ಮಾಡಿ ಪುಣ್ಯ ಕಟ್ಟಿಕೊಳ್ಳಬೇಕು. ಸಾರ್ವಜನಿಕ ಕ್ಷೇತ್ರದಲ್ಲಿ ಇದನ್ನು ಪ್ರಾರಂಭ ಮಾಡಿದರೆ ನಾವು ಕೈಗಾರಿಕಾ ಕ್ಷೇತ್ರದಲ್ಲಿ ಮುಂದೆ ಹೋಗುವುದಕ್ಕೆ ಮತ್ತು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇದೇ ಅಲ್ಲದೆ ಇನ್ನೂ ಅನೇಕ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿ ಸ್ಥಾಪಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಈ ದಿನ ರಾಜ್ಯದಲ್ಲಿ ಕೆಲವು ಮಿಲ್‌ಗಳನ್ನು, ಕೆಲವು ಕಾರ್ಖಾನೆಗಳನ್ನು ಮುಚ್ಚಲಾಗಿದೆ. ಮುಚ್ಚಲಾಗಿದ್ದ ರಾಜ ಮಿಲ್ ಮತ್ತು ಮಿನರ್ವ ಮಿಲ್‌ಗಳನ್ನು ಮತ್ತೆ ತೆಗೆಯಲಾಗಿದೆ. ಅದಕ್ಕಾಗಿ ಸಂತೋಷಪಡುತ್ತೇನೆ. ಮೆಕ್‌ಬ್ಯಾಕ್ ಕಾರ್ಖಾನೆಯಲ್ಲಿ ಡಿಫೆನ್ಸ್‌ಗೆ ಸಂಬಂಧಪಟ್ಟ ಸಾಮಾನುಗಳನ್ನು ತಯಾರು ಮಾಡಲಾಗುತ್ತಿದ್ದರೂ ಸಹ ಅದನ್ನು ಮುಚ್ಚಲಾಗಿದೆ. ಎಲ್ಲಮ್ಮ ಟೆಕ್ಸ್‌ಟೈಲ್ ಮಿಲ್‌ನ್ನು ಮುಚ್ಚಲಾಗಿದೆ. ಇದರಿಂದ ಅನೇಕ ಜನರಿಗೆ ಉದ್ಯೋಗ ಇಲ್ಲದಂತಾಗಿದೆ. ಕೆಲವು ಕೈಗಾರಿಕೆಗಳಲ್ಲಿ ಮಿಸ್‌ಮೇನೇಜ್‌ಮೆಂಟ್ ನಡೆಯುತ್ತಿದೆ, ಲಂಚಕೋರತನ, ಹಣದ ದುರ್ವಿನಿಯೋಗ ಆಗುತ್ತಿದೆ. ಇದರಿಂದ ದೇಶದ ಹಣ ಹಾಳಾಗುತ್ತಿರುವುದಲ್ಲದೆ ಕೆಲಸಗಾರರಿಗೂ ತೊಂದರೆಯಾಗಿದೆ. ದೇಶ ಮುಂದುವರೆಯಬೇಕು ಎಂಬುದು ಸರ್ಕಾರದ ಮನಸ್ಸಿನಲ್ಲಿ ಇದ್ದರೆ ಈ ಕೈಗಾರಿಕೆಗಳನ್ನು ಮತ್ತು ಮಿಲ್‌ಗಳನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. ಈಗಾಗಲೇ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಕ್ಟ್ ಮಾರ್ಪಾಡಾಗಿರುವುದರಿಂದ ಮುಚ್ಚಿರುವ ಕೈಗಾರಿಕೆಗಳನ್ನು ಸರ್ಕಾರದವರು ವಹಿಸಿಕೊಂಡು ವೇಗವಾಗಿ ಕೆಲಸವಾಗುವಂತೆ ನೋಡಿ ಕೊಳ್ಳಬೇಕು. ಮೈಸೂರು ಮಿಷಿನರಿ ಮ್ಯಾನುಫ್ಯಾಕ್ಚರಿಂಗ್ ಕಂಪನಿ ಎಂಬುದು ಇದೆ. ಅಲ್ಲೂ ಕೆಲಸಕಾರ್ಯ ಸರಿಯಾಗಿ ಆಗುತ್ತಿಲ್ಲ. ಇಲ್ಲೆಲ್ಲಾ ವೇಗವಾಗಿ ಕೆಲಸವಾಗುವಂತೆ ನೋಡಿಕೊಳ್ಳಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಕಾರ್ಮಿಕರು ದೇಶದ ಬೆನ್ನೆಲುಬು ಎಂದು ಸರ್ಕಾರದವರು ಹೇಳುತ್ತಾರೆ. ಆದರೆ ಅವರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಚಕಾರ ಕೂಡ ಎತ್ತಿಲ್ಲದಿರುವ ಬಗ್ಗೆ ನನಗೆ ಬಹಳ ಸಂಕಟವಾಗಿದೆ. ರೈತರ ಬಗ್ಗೆ, ಕೈಗಾರಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದರೂ ಸಹ ಇವರ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಕಾರ್ಮಿಕರು ಎಂದರೆ ತಕರಾರು ಕಂಪನಿ ಎಂದು ಸರ್ಕಾರ ತಿಳಿದುಕೊಂಡಿದೆ. ಸೋಸಿಯಲಿಸಮ್ ಕಟ್ಟಬೇಕು ಎಂದು ಹೇಳುತ್ತಾರೆ, ಕಾರ್ಮಿಕ ವರ್ಗ ಇಲ್ಲದೆ ಕಟ್ಟುವುದಕ್ಕಾಗುತದೆಯೇ ಎಂದು ನಾನು ಕೇಳುತ್ತೇನೆ. ಸೋಸಿಯಲಿಜಮ್ ಎಂದರೆ ಏನು? ಮೂಲಭೂತವಾಗಿ ಉತ್ಪನ್ನವನ್ನು ಮಾಡತಕ್ಕ ಶಕ್ತಿ ಯಾರಿಗೆ ಇರುತ್ತದೋ ಅಂತಹವರ ಸಹಾಯವನ್ನು ತೆಗೆದುಕೊಂಡರೆ ದೇಶದಲ್ಲಿ ಸೋಸಿಯಲಿಜಂ ಜಾರಿಗೆ ಬರುತ್ತದೆ. ಕಾರ್ಮಿಕರ ನೇತೃತ್ವ ಸರ್ಕಾರಕ್ಕೆ ಅತಿ ಮುಖ್ಯವಾಗಿದ್ದರೂ ಸಹ ಅವರ ಬಗ್ಗೆ ಒಂದು ಮಾತನ್ನೂ ಸಹ ಸರ್ಕಾರದವರು ಹೇಳಿಲ್ಲ. ಕಾರ್ಮಿಕರ ಬಗ್ಗೆ ಸರ್ಕಾರದ ಧೋರಣೆ ಏನು ಎಂಬ ಬಗ್ಗೆ ಹೇಳಿಲ್ಲ. ಇದರಿಂದ ನನಗೆ ಬಹಳ ದುಃಖವಾಗಿದೆ. ಒಂದು ಶಬ್ದವನ್ನೂ ಸಹ ಕಾರ್ಮಿಕರ ಬಗ್ಗೆ ಹೇಳದಿರುವುದು ಅವಮಾನಕರವೆಂದು ಹೇಳುತ್ತೇನೆ. ಇದಕ್ಕಿಂತ ಕಟುವಾದ ಶಬ್ದವನ್ನು ನಾನು ಉಪಯೋಗಿಸುವುದಿಲ್ಲ. ಕಾರ್ಮಿಕರ ಬಗ್ಗೆ ಸರ್ಕಾರದ ಧೋರಣೆ ಏನು ಇರಬೇಕು ಎಂಬ ಬಗ್ಗೆ ನಾನು ಈಗ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮುಂದೆ ಕಾರ್ಮಿಕ ಇಲಾಖೆಯ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ. ಕಾರ್ಮಿಕರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಷಯವನ್ನು ಪ್ರಸ್ತಾಪ ಮಾಡದಿರುವುದು ಅವರ ಹಕ್ಕಿಗೆ ಚ್ಯುತಿ ಬಂದಿದೆಯೆಂದು ಮಾತ್ರ ಈಗ ಹೇಳುತ್ತೇನೆ.

(ಶ್ರೀ ಎಂ. ಎಸ್. ಕೃಷ್ಣನ್)

ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಸ್ಲಮ್ ಕ್ಲಿಯರ್ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ. ಪ್ರತಿ ಸರ್ಕಾರ ಬಂದಾಗಲೂ ಇದನ್ನೇ ಹೇಳುತ್ತಿವೆ. ಎಷ್ಟು ಸಮಯದಲ್ಲಿ ಮಾಡುತ್ತೇವೆಂದು ಹೇಳಿದರೆ ಆ ಜನರಿಗೂ ಒಂದು ನಂಬಿಕೆ ಬರುತ್ತದೆ. ಗುಡಿಸಲುವಾಸಿಗಳಿಗೆಲ್ಲಾ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಹೇಳುತ್ತಲೇ ಇದ್ದಾರೆ. ಆ ರೀತಿ ಕಟ್ಟಿಸಿಕೊಟ್ಟಿದ್ದನ್ನು ನಾನು ನೋಡಲಿಲ್ಲ. ಅದಕ್ಕೆ ಬದಲು ಪೋಲೀಸರ ಸಹಾಯ ಪಡೆದುಕೊಂಡು ಗುಡಿಸಲ ಮೇಲೆ ದಾಳಿ ಮಾಡಿ, ಗುಡಿಸಲನ್ನು ಕೆಡವುತ್ತಿದ್ದಾರೆ. ಇದು ಸರಿಯಾದುದು ಅಲ್ಲ. ಗುಡಿಸಲುವಾಸಿಗಳ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಬಹಳ ಜೋರಾಗಿ ಮಾತನಾಡಿದ್ದಾರೆ. ಬಹಳ ಸಂತೋಷ. ಒಂದೊಂದು ಸಲ ನನಗೆ ಅವರು ಚುನಾವಣಾ ಪ್ರಚಾರ ಮಾಡುತ್ತಾ ಇದ್ದಾರೋ ಏನೋ ಎಂಬ ಅನುಮಾನ ಕೂಡ ಬರುತ್ತದೆ. ಇವರು ಹೋಗುತ್ತಿರುವ ದಾರಿಯ ಬಗ್ಗೆ ನನಗೆ ಅನುಮಾನ ಬರುತ್ತದೆ. ಏಕೆಂದರೆ ಇವರಲ್ಲಿ ಅಷ್ಟು ದುಡ್ಡಿದೆಯೇ ಎಂದು ಕೇಳುತ್ತೇನೆ. ಕೇಂದ್ರ ಸರ್ಕಾರದವರು ಹಣ ಒದಗಿಸುವಹಾಗಿದ್ದರೆ ಸಂತೋಷ. ಸಮಾಜವಾದಿ ರಾಷ್ಟ್ರದಲ್ಲಿ ಎಲ್ಲರಿಗೂ ವಾಸಕ್ಕೆ ಮನೆ, ಮೈತುಂಬ ಬಟ್ಟೆ, ಮತ್ತು ಊಟದ ವ್ಯವಸ್ಥೆ ಇರಬೇಕು. ಕೇವಲ ಬೆಂಗಳೂರು ನಗರದಲ್ಲಿ ಮಾತ್ರ ಗುಡಿಸಲುವಾಸಿಗಳಿಗೆ ಮನೆಗಳನ್ನು ಕಟ್ಟಿಸಿಕೊಟ್ಟರೆ ಸಾಲದು, ರಾಜ್ಯದ ಎಲ್ಲ ಭಾಗಗಳಲ್ಲಿಯೂ ಸಹ ಇದೇ ರೀತಿ ಕಟ್ಟಿಸಿಕೊಡಬೇಕು. ಇಲ್ಲದಿದ್ದರೆ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಮುಂದುವರಿದ ಸಮಾಜವಾದೀ ರಾಷ್ಟ್ರಗಳಲ್ಲಿ ಇಂದಿಗೂ ಕೂಡ ಬೃಹದಾಕಾರವಾಗಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಅವರು ಕಾರ್ಮಿಕರ ನೇತೃತ್ವದಲ್ಲಿ ಮನೆಗಳನ್ನು ಕಟ್ಟಿಸುತ್ತಿದ್ದಾರೆ. ಆದ್ದರಿಂದಲೇ ಅವರು ಅಷ್ಟೊಂದು ಮುಂದಕ್ಕೆ ಬಂದಿರುವುದು. ಕೇರಳ ಸರ್ಕಾರದವರು ಅಕ್ಟೋಬರ್ ತಿಂಗಳೊಳಗೆ 5 ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದಾರೆ. ಪ್ರತಿಯೊಂದು ಪಂಚಾಯಿತಿ ಪ್ರದೇಶದಲ್ಲಿಯೂ ನೂರು ಮನೆಗಳನ್ನು ಕಟ್ಟಿಸಿ, ಅದರಲ್ಲಿ 50 ಮನೆಗಳನ್ನು ಹರಿಜನರಿಗೂ, ಉಳಿದ 50 ಮನೆಗಳನ್ನು ಜಮೀನು ಮನೆ ಇಲ್ಲದವರಿಗೂ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಕಾರ್ಯಗತ ಮಾಡುತ್ತಿದ್ದಾರೆ. ಒಂದೊಂದು ಮನೆಗೆ ಕೇವಲ 600 ರಿಂದ 650 ರೂಪಾಯಿಗಳವರೆಗೆ ಮಾತ್ರ ಖರ್ಚು ಮಾಡಲಾಗುತ್ತದೆಂದು ಸಹ ಹೇಳಿದ್ದಾರೆ. ಕೇರಳದ ಮಂತ್ರಿಗಳಾದ ಶ್ರೀ ಗೋವಿಂದನಾಯರ್ ಅವರು ಈ ಬಗ್ಗೆ ನನಗೆ ವಿವರಗಳನ್ನು ಸಹ ಕೊಟ್ಟಿದ್ದಾರೆ. ನಮ್ಮ ಸರ್ಕಾರದವರು ಈ ರೀತಿ ಮಾಡುವುದಕ್ಕೆ ಮನಸ್ಸು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ. ಕೇರಳ ಸರ್ಕಾರದ ಯೋಜನೆ ಬಗ್ಗೆ ಶ್ರೀ ಟಿ. ಎ. ಪೈ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾ ಅಕ್ಟೋಬರ್ ತಿಂಗಳೊಳಗೆ ಇಷ್ಟೊಂದು ಮನೆಗಳನ್ನು ಕಟ್ಟಿ ಮುಗಿಸಿದರೆ ಅದೊಂದು ಕ್ರಾಂತಿಕಾರಕ ಕಾರ್ಯಕ್ರಮವಾಗುತ್ತದೆಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ಸಹ ಒಂದೊಂದು ಪಂಚಾಯಿತಿಯಲ್ಲಿ 100 ಮನೆಗಳನ್ನು ಕಟ್ಟಿಸುವುದಕ್ಕೆ ಆಗದಿದ್ದರೆ 50 ಮನೆಗಳನ್ನಾದರೂ ಕಟ್ಟಿಸಿಕೊಟ್ಟರೆ ಜನ ನೆಮ್ಮದಿಯಿಂದ ಇರುತ್ತಾರೆ. ಯಾವ ರೀತಿ ಅವರು ಕಟ್ಟಿಸುತ್ತಾರೆಂಬ ವಿವರಗಳನ್ನು ಸರ್ಕಾರಕ್ಕೆ ನಾನು ಆಮೇಲೆ ಕೊಡುತ್ತೇನೆ. ಅದರ ಪ್ರಕಾರ ಮನೆಗಳನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಗಮನ ಕೊಡಬೇಕು. ಈಗ ಟ್ರಸ್ಟ್ ಬೋರ್ಡಿನವರು ಕೆಲವು ಕಡೆ ಇಂಡಸ್ಟ್ರಿಯಲ್ ಕೆಲಸಗಾರರಿಗೆ ಇಂಡಸ್ಟ್ರಿಯಲ್ ಸಬರಬ್ಸ್ ಮಾಡಿದ್ದಾರೆ.

ಬೆಂಗಳೂರಿನಲ್ಲಂತೂ ಮನೆಗಳು ಸಿಕ್ಕುವುದು ಬಹಳ ಕಷ್ಟ. ಮನೆಬಾಡಿಗೆ ಕೊಡಬೇಕಾದರೆ ಕಣ್ಣಲ್ಲಿ ರಕ್ತಬರುತ್ತದೆ. ಮನೆ ಮಾಲೀಕರಿಗೆ ಕಾರ್ಪೋರೇಷನ್‌ನವರು ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಆದ್ದರಿಂದ ಅವರು ಮನೆ ಬಾಡಿಗೆ ಜಾಸ್ತಿ ಮಾಡಿದ್ದಾರೆ. ಇದರಿಂದಾಗಿ ಬಾಡಿಗೆದಾರರಿಗೆ ತೊಂದರೆಯಾಗಿದೆ. ಬೆಂಗಳೂರಿನಲ್ಲಿ ಜೀವನ ನಡೆಸುವುದಕ್ಕೆ ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಹೌಸಿಂಗ್ ಬೋರ್ಡಿನವರು ಮತ್ತು ಟ್ರಸ್ಟ್‌ಬೋರ್ಡಿನವರು ಆದಷ್ಟು ಬೇಗ ಯಾವ ಯಾವ ಏಜೆನ್ಸಿಬೇಕೋ ಅದನ್ನು ಉಪಯೋಗಿಸಿಕೊಂಡು ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸಬೇಕು. ಆ ರೀತಿ ಮನೆಗಳನ್ನು ಕಟ್ಟಿಸಿ ಮನೆಇಲ್ಲದೆ ಇರತಕ್ಕ ಬಡವರಿಗೂ ಮತ್ತು ಕಾರ್ಮಿಕರಿಗೂ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಆದ್ದರಿಂದ ಇದಕ್ಕೆ ಯಾವುದಾದರೂ ಒಂದು ಯೋಜನೆಯನ್ನು ಹಾಕಿಕೊಂಡು ಅದನ್ನು ಕಾರ್ಯಗತ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಹೇಳುತ್ತೇನೆ. ಟ್ರಸ್ಟ್ ಬೋರ್ಡಿನವರು ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಯಶವಂತಪುರದಲ್ಲಿ ಇಂಡಸ್ಟ್ರಿಯಲ್ ವರ್ಕರ್ಸ್‌ಗೋಸ್ಕರ 100–150 ಮನೆಗಳನ್ನು ಕಟ್ಟಿಸುತ್ತಾರೆಂದು ಗೊತ್ತಾಗಿದೆ. ಆ ಸಂಬಂಧದಲ್ಲಿ ಟ್ರಸ್ಟ್‌ಬೋರ್ಡಿನವರು ಒಂದು

ಬೃಹತ್ ಯೋಜನೆಯನ್ನು ಹಾಕಿಕೊಂಡು ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಭೂಸುಧಾರಣೆಯ ಬಗ್ಗೆ ನನ್ನ ಸ್ನೇಹಿತರಾದ ಕಕ್ಕಿಲಾಯ ಅವರು ಸಾಕಷ್ಟು ಹೇಳಿದ್ದಾರೆ. ಆದ್ದರಿಂದ ಆ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ.

ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಆಡಳಿತ ಭಾಷೆ ಕನ್ನಡ ಆಗಬೇಕು ಎನ್ನುವುದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಈ ವಿಚಾರದಲ್ಲಿ ಯಾರದೂ ಭಿನ್ನಾಭಿಪ್ರಾಯ ಇಲ್ಲ. ವಿಶೇಷ ಸಮಿತಿಯ ಶಿಫಾರಸ್ಸುಗಳನ್ನು ಹಂತ ಹಂತವಾಗಿ ಜಾರಿಗೆ ತರುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ ಎಂದು ಸರ್ಕಾರದವರು ಹೇಳಿದ್ದಾರೆ. ಯೋಚನೆ ಮಾಡುವುದೇನು? ಆಡಳಿತ ಭಾಷೆ ಕನ್ನಡ ಆಗಬೇಕು. ಕೆಳಗಿನಿಂದ ಮೇಲಿನವರೆಗೂ ಕನ್ನಡ ಆಡಳಿತ ಭಾಷೆಯಾಗಬೇಕು. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇದು ಆದಷ್ಟು ಜಾಗ್ರತೆ ಆಗಬೇಕು. ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಯಾವುದೇ ಒಂದು ಅರ್ಜಿಯನ್ನು ಕೊಡಬೇಕಾದರೂ ಇಂಗ್ಲೀಷಿನಲ್ಲಿ ಅರ್ಜಿ ಕೊಡಬೇಕು. ಟ್ರಿಬ್ಯೂನಲ್‌ನಲ್ಲಿ ಕನ್ನಡದಲ್ಲಿ ಮಾತನಾಡುವ ಹಾಗಿಲ್ಲ. ಸಾಕ್ಷಿಗಳು ಇಂಗ್ಲೀಷಿನಲ್ಲಿ ಮಾತನಾಡಬೇಕು. ಎಗ್ಸಿಕ್ಯೂಷನ್ ಆರ್ಡರುಗಳೂ ಕೂಡ ಇಂಗ್ಲೀಷಿನಲ್ಲಿ ಬರುತ್ತಿದೆ. ಇಂಗ್ಲೀಷು ಎಷ್ಟು ಜನಗಳಿಗೆ ಗೊತ್ತಾಗುತ್ತದೆ ? ಜನತೆಗೆ ತಿಳಿಯುವಂತಹ ಭಾಷೆಯಲ್ಲಿ ವ್ಯವಹಾರಗಳನ್ನು ನಡೆಸಬೇಕು. ಆದಷ್ಟು ಜಾಗ್ರತೆ ಎಲ್ಲಾ ಹಂತಗಳಲ್ಲೂ ಕನ್ನಡ ಆಡಳಿತ ಭಾಷೆಯಾಗಬೇಕು. ಇದರ ಜೊತೆಗೆ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಬೇಕೆಂದು ಹಿಂದೆಯೇ ಬಹಳ ಕಳಕಳಿಯಿಂದ ಹೇಳಿದ್ದೇವೆ. ಹಿಂದೆ ಈ ಬಗ್ಗೆ ಕರ್ನಾಟಕ ಏಕೀಕರಣ ಸಮಿತಿ ಹೋರಾಟವನ್ನು ನಡೆಸಿದೆ. ಈ ಹೆಸರಿನ ಬದಲಾವಣೆಯ ಬಗ್ಗೆ ಈಗ ಸುಮಾರು 4 ವರ್ಷಗಳಿಂದಲೂ ಬರೀ ಒಣ ಚರ್ಚೆ ನಡೆಯುತ್ತಿದೆ. ಈಗ್ಗೆ ಒಂದೂವರೆ ವರ್ಷದ ಹಿಂದೆ ಈ ಸಭೆಯಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಬೇಕೇ ಅಥವಾ ಕನ್ನಡ ನಾಡು ಎಂದು ಇರಬೇಕೇ ಎಂಬ ಬಗ್ಗೆ ಬರೀ ಒಣ ಚರ್ಚೆನಡೆಯಿತು. ಈ ಚರ್ಚೆಯಲ್ಲಿ ಅನೇಕ ಜನ ಮಾನ್ಯ ಸದಸ್ಯರು ಭಾಗವಹಿಸಿದ್ದಾರೆ. ಶ್ರೀಮಾನ್ ಚನ್ನಬಸಪ್ಪನವರೂ ಸಹ ಈ ಚರ್ಚೆಯಲ್ಲಿ ಭಾಗವಹಿಸಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಆ ಚರ್ಚೆಯಲ್ಲಿ ಭಾಗವಹಿಸಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಸಂತೋಷ. ಕರ್ನಾಟಕ ಎಂಬುದಾಗಿ ಆಗಬೇಕು ಎಂದು ನನ್ನ ಅಭಿಪ್ರಾಯ ಇದೆ ಎಂದು ಏತಕ್ಕೆ ಹೇಳುವುದಿಲ್ಲ. ಆ ಧೈರ್ಯ ಇವರಿಗೆ ಏಕೆ ಬರುವುದಿಲ್ಲ ? ಒಕ್ಕಲಿಗರು, ಲಿಂಗಾಯಿತರು ಎಂದು ಜಾತಿ ಜಗಳ ಮಾಡಿಕೊಂಡು ಈ ಪ್ರಶ್ನೆ ಇತ್ಯರ್ಥವಾಗದೇ ಹಾಗೆಯೇ ಉಳಿದಿದೆ. ನಾನು ಆಡಳಿತ ಪಕ್ಷದವರಿಗೆ ಹೇಳುತ್ತೇನೆ. ಈ ಬಗ್ಗೆ ಹಿಂದೆ ನಡೆದಂತಹ ಚರ್ಚೆಯನ್ನು ನೋಡಿದರೆ ನನ್ನ ಮನಸ್ಸಿಗೆ ನೋವಾಯಿತು. ಮೈಸೂರಿಗೆ ಕರ್ನಾಟಕ ಎಂದು ಇಡಬೇಕೇ ಅಥವಾ ಕನ್ನಡ ನಾಡು ಎಂದು ಇಡಬೇಕೇ ಎಂದು ಇನ್ನೂ ಮೀನಾಮೇಷಾ ನೋಡುತ್ತಿದ್ದಾರೆ. ಕರ್ನಾಟಕವೆನ್ನುವ ಹೆಸರು ಪರಂಪರಾಗತವಾಗಿ ಬಂದಿರತಕ್ಕದ್ದು. ಮಹಾತ್ಮ ಗಾಂಧಿಯವರು ಬೆಳಗಾವಿಗೆ ಹೋಗಿದ್ದಾಗ ಮೈಸೂರು ಎಂದು ಕರೆಯಲಿಲ್ಲ. ಇದು ಕರ್ನಾಟಕ ಎಂದು ಹೇಳಿದರು. ಆಗ ಕರ್ನಾಟಕ ಕಾಂಗ್ರೆಸ್ ಕಮಿಟಿ ಎಂದು ಕರೆದರು. ಈ ದೃಷ್ಟಿಯಿಂದ ಪರಂಪರಾಗತವಾಗಿ ಬಂದಿರತಕ್ಕ ಹೆಸರಾದ ಕರ್ನಾಟಕ ಎಂಬ ಹೆಸರನ್ನು ಈ ರಾಜ್ಯಕ್ಕೆ ಇಡುವುದು ಒಳ್ಳೆಯದು. ಇದು ನನ್ನ ವಿಷಯವಲ್ಲ. ಇದನ್ನು ತಾತ್ಸಾರ ಮಾಡಬಾರದು. ಈ ವಿಷಯದಲ್ಲಿ ಬೇಗ ಒಂದು ನಿರ್ಧಾರಕ್ಕೆ ಬಂದು ನಮ್ಮ ಪರಂಪರೆಗೆ ಅನುಗುಣವಾದ ಕರ್ನಾಟಕವೆನ್ನುವ ಹೆಸರನ್ನು ಈ ರಾಜ್ಯಕ್ಕೆ ಇಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ನಿರುದ್ಯೋಗ ಸಮಸ್ಯೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಸಮಸ್ಯೆ ದಿನೇ ದಿನೇ ಬೃಹದಾಕಾರವಾದ ಸಮಸ್ಯೆಯಾಗಿ ಬೆಳೆಯುತ್ತಿದೆ. ಎಲ್ಲಿಯವರೆಗೆ ಸರ್ಕಾರದವರು ಈ ಬಗ್ಗೆ ಒಂದು ನಿರ್ದಿಷ್ಟವಾದ ಧೋರಣೆಯನ್ನು ತಳೆಯುವುದಿಲ್ಲ ಅಲ್ಲಿಯವರೆಗೆ ಈ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಬಂಡವಾಳ ಶಾಹಿ ಪದ್ಧತಿ ಬೆಳೆಯದಂತೆ ಅದನ್ನು ಕಡಿತ ಮಾಡುವಂತಹ ಧೋರಣೆ ಇದರಲ್ಲಿ ಕಾಣುವುದಿಲ್ಲ. ಆಡಳಿತ ಕಾಂಗ್ರೆಸ್ಸಿನವರು ಸಮಾಜವಾದವನ್ನು ಜಾರಿಗೆ ತರುತ್ತೇವೆ ಎಂದು ಹೇಳಿದರು. ಆದರೆ ಇದನ್ನು ಎಷ್ಟೋ ಜನ ನಿಮ್ಮಲ್ಲೇ ಒಪ್ಪಿಕೊಳ್ಳುವುದಿಲ್ಲ ಎಂದು ಕಾಣುತ್ತದೆ. ಬಾಯಲ್ಲಿ ಏನು ಹೇಳುತ್ತಾರೆ ಅದನ್ನು ಕಾರ್ಯಗತ ಮಾಡಬೇಕಾದರೆ ಬಹಳ ಕಷ್ಟ. ಭೂಮಾಲೀಕರು ಪಾರ್ಲಿಮೆಂಟಿನಲ್ಲಿಯೂ ಇದ್ದಾರೆ, ಅಸೆಂಬ್ಲಿಯಲ್ಲಿಯೂ ಇದ್ದಾರೆ.

(ಶ್ರೀ ಎಂ. ಎಸ್. ಕೃಷ್ಣನ್)

ಆದ್ದರಿಂದ ಭೂಸುಧಾರಣೆಯನ್ನು ಜಾರಿಗೆ ತರುವಾಗ ಸ್ವಲ್ಪ ಜಂಜಾಟ, ತಿಕ್ಕಾಟಗಳು ಆಗಬಹುದು. ಅದು ಇರಲಿ ಈಗ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಈಗ ಆದಷ್ಟು ಬೇಗ ಭೂಸುಧಾರಣಾ ಮಸೂದೆಯನ್ನು ತಂದು ಉಳುವವನೇ ಭೂಮಿಯ ಒಡೆಯ ಎಂದು ಮಾಡುವುದಾದರೆ ಈಗ ಏನು ಕೆಲವು ಜನ ರೈತರು ತೊಂದರೆ ಪಡುತ್ತಿದ್ದಾರೆ ಅದನ್ನು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಎಷ್ಟೋ ಸಮಸ್ಯೆಗಳು ಅದರಿಂದ ಬಗೆಹರಿಯುತ್ತವೆಂದು ನಾನು ಹೇಳುತ್ತೇನೆ.

ಪೋಲೀಸ್ ವಿಚಾರದಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಪೋಲೀಸಿನವರ ವಿಚಾರದಲ್ಲಿ ಹೆಚ್ಚು ಟೀಕೆ ಮಾಡುವುದರಿಂದ ಪ್ರಯೋಜನ ಇಲ್ಲ. ಈ ವಿಚಾರದಲ್ಲಿ ಟೀಕೆ ಮಾಡುವ ಕಾಲ ಬೇರೆ ಬರುತ್ತದೆ. ಈಗ ನಾವು ಹಳೆಯ ರೀತಿಯನ್ನು ಬಿಟ್ಟು ಹೊಸರೀತಿಯಲ್ಲಿ ಇದನ್ನು ಯೋಚನೆ ಮಾಡಬೇಕಾಗಿದೆ. ಈ ವಿಚಾರದಲ್ಲಿ ನನ್ನ ಇಚ್ಛೆ ಇಷ್ಟೆ. ಪೋಲೀಸಿನವರು ದಬ್ಬಾಳಿಕೆಯ ಅಸ್ತ್ರವನ್ನು ಜನಗಳ ಮೇಲೆ, ಸಾರ್ವಜನಿಕರ ಮೇಲೆ, ಕಾರ್ಮಿಕರ ಮೇಲೆ ಉಪಯೋಗ ಮಾಡಕೂಡದು. ಅವರು ಶಾಂತಿಯನ್ನು ಕಾಪಾಡಲಿ. ಆದರೆ ದಬ್ಬಾಳಿಕೆಯನ್ನು ಮಾಡಕೂಡದು. ಆ ರೀತಿಯಾದ ಒಂದು ಧೋರಣೆಯನ್ನು ಅನುಸರಿಸುವುದಾದರೆ ಈ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ಹೇಳುವ ವಿಷಯಗಳು ಅನೇಕ ಇವೆ. ಕಾರ್ಪೋರೇಷನ್ನಿಗೆ ಸಂಬಂಧ ಪಟ್ಟ ಹಾಗೆ ಅನೇಕ ಸಮಸ್ಯೆಗಳು ಇವೆ. ಟ್ರಸ್ಟ್‌ಬೋರ್ಡಿಗೆ ಸಂಬಂಧ ಪಟ್ಟ ಹಾಗೆ ಅನೇಕ ಸಮಸ್ಯೆಗಳು ಇವೆ. ಕಾರ್ಪೋರೇಷನ್‌ನಲ್ಲಿ ದುರ್ನಾತ ಹೊಡೆಯುತ್ತಿದೆ. ಬೆಂಗಳೂರು ಕಾರ್ಪೋರೇಷನ್‌ನಲ್ಲಿ ಅನೇಕ ಅನ್ಯಾಯಗಳು ನಡೆಯುತ್ತಿವೆ ಎಂದು ಜನಗಳು ಹೇಳುತ್ತಿದ್ದಾರೆ. ಕೆಲವು ಜನ ಕಂಟ್ರಾಕ್ಟರುಗಳು ಸೇರಿಕೊಂಡು ಕಾರ್ಪೋರೇಷನ್ ಕೆಲಸ ಕಾರ್ಯಗಳಲ್ಲಿ ನಾನಾ ರೀತಿಯಾದ ಅವ್ಯವಹಾರಗಳು ನಡೆದಿವೆ. ವಿಜಿಲೆನ್ಸ್ ಕಮಿಶನಿನವರಿಗೆ ಹಿಂದೆ ಏನಾಗಿತ್ತು, ಈಗ ಏನೇನು ಆಗಿದೆ ಎಂಬುದನ್ನು ಕಂಡುಹಿಡಿಯುವುದಕ್ಕೆ ಜವಾಬ್ದಾರಿ ವಹಿಸಿದ್ದಾರೆ. ಈಗ ಅವರು ಸರ್ಕಾರಕ್ಕೆ ವರದಿಯನ್ನು ಸಲ್ಲಿಸುವವರಿದ್ದಾರೆ. ಆದರೆ ಆ ವರದಿ ಸರ್ಕಾರದ ಮುಂದೆ ಬರದಿರಲಿ, ಮತ್ತು ಅದರ ಮೇಲೆ ಕ್ರಮ ತೆಗೆದುಕೊಳ್ಳದಿರಲಿ ಎನ್ನುವ ಉದ್ದೇಶದಿಂದ, ಆ ವರದಿ ಸರ್ಕಾರಕ್ಕೆ ಬರದೇನೇ ಇರಲಿ ಎಂದು ಒಂದು ಪ್ರಯತ್ನ ನಡೆಯುತ್ತಿದೆ ಎಂದು ನಾನು ತಿಳಿದಿದ್ದೇನೆ. ಇದರ ವರದಿ ಹೊರಗೆ ಬಂದರೆ ಅದರಲ್ಲಿ ತಪ್ಪು ಮಾಡಿದ ಕೆಲವು ಕಾರ್ಪೋರೇಟರ್ಸ್ ಬರಬಹುದು ಮತ್ತು ಇತರ ದೊಡ್ಡ ದೊಡ್ಡ ಕಂಟ್ರಾಕ್ಟರ್ಸ್ ಕೂಡ ಬರಬಹುದು. ಇದಕ್ಕೋಸ್ಕರ ಸುಮಾರು ಎರಡು ಲಕ್ಷ ರೂಪಾಯಿಯನ್ನು ಇಲ್ಲಿರುವಂತಹ ಕಂಟ್ರಾಕ್ಟರ್ಸ್ ಕಲೆಕ್ಟ್ ಮಾಡಿ ಅದನ್ನು ಯಾರ್ಯಾರಿಗೆ ಹಂಚಬೇಕೋ, ಹಾಗೆ ಹಂಚಿ, ಆ ರಿಪೋರ್ಟೇ ಇಲ್ಲದಂತೆ ಮಾಡಲಾಗುತ್ತದೆ ಎಂದು ತಿಳಿದು ಬಂದಿದೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ. ಆ ರಿಪೋರ್ಟನ್ನು ತರಿಸಿ ನಮ್ಮ ಮುಂದೆ ಇಟ್ಟು, ಆ ಮೇಲೆ ಬೇಕಾದ ಕಾರ್ಯಕ್ರಮವನ್ನು ಅವರ ಮೇಲೆ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನಿಮ್ಮನ್ನೇ ಕೇಳಬೇಕಾಗುತ್ತದೆ; ನೀವೇ ಅದಕ್ಕೆ ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ನಿಮ್ಮ ತತ್ವಕ್ಕೆ ತಿಲಾಂಜಲಿ ಕೊಟ್ಟ ಹಾಗಾಗುತ್ತದೆ ಎಂದು ಹೇಳಬಹುದು. ಒಟ್ಟಾರೆ ರಾಜ್ಯಪಾಲರ ಭಾಷಣದಲ್ಲಿ ನಮ್ಮ ದೇಶದ ಸಮಸ್ಯೆಗಳ ಬಗ್ಗೆ ಏನೂ ಹೇಳಿಲ್ಲ ಮತ್ತು ನಮ್ಮ ರಾಜ್ಯದ ಸಮಸ್ಯೆಗಳು ಮಾತ್ರ ಹಾಗೆಯೇ ಘಾಡವಾಗಿವೆ. ನಮ್ಮಲ್ಲಿ ಬಡತನ, ನಿರುದ್ಯೋಗ ಮತ್ತು ಹಸಿವು ಇನ್ನೂ ತಾಂಡವವಾಡುತ್ತಿವೆ. ಇದರ ಬಗ್ಗೆ ಒಬ್ಬ ಕವಿಯು ಕೀರ್ತಿ ಕನ್ಯೆ ಎಂಬ ಕವಿತೆಯಲ್ಲಿ ಚೆನ್ನಾಗಿ ಹೇಳಿದ್ದಾನೆ. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ (ಸಿರ್ಸಿ).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಂಡಿಸಿದಂತಹ ವಂದನಾ ನಿರ್ಣಯವನ್ನು ಅನುಮೋದಿಸುತ್ತಾ ರಾಜ್ಯ ಸರ್ಕಾರ ಕಳೆದ ಒಂದು ವರ್ಷದಲ್ಲಿ ರಾಜ್ಯಪಾಲರ ಆಡಳಿತವನ್ನು ಹೊಂದಿದ್ದು ಮಾಡಿರತಕ್ಕ ಅನ್ಯಾಯಗಳ ಪರಂಪರೆಯನ್ನು ಸಲಹೆಗಳ ರೂಪದಲ್ಲಿ ಸರ್ಕಾರಕ್ಕೆ ಕೊಡಬಯಸುತ್ತೇನೆ. ಕಾಂಗ್ರೆಸ್ ಸರ್ಕಾರ ಮತ್ತು ಸಂಸ್ಥೆ ಜನತೆಯ ಮುಂದೆ ಯಾವ ಒಂದು ಘನ ಉದ್ದೇಶವನ್ನು ಇಟ್ಟುಕೊಂಡು ಜಾತ್ಯಾತೀತವಾದ ಸಮಾಜವನ್ನು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರಚನೆ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇವೋ, ಅದನ್ನು ಸರ್ಕಾರದವರು ಈಗ ಮಾಡದೆ ಹೋದರೆ ನಾವು ಜನತೆಗೆ ಯಾವ ಒಂದು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದನ್ನು ಮಾಡದೆ ವಚನ

ಭ್ರಷ್ಟರಾಗುತ್ತೇವೆ. ಈಗಿನ ಆಡಳಿತದಲ್ಲಿ ಯಾವ ಒಂದು ಅಧಿಕಾರಿಗಳ ಸೆಟ್ ಅಪ್ ಇದೆ ಅದನ್ನು ಮೊದಲನೆಯದಾಗಿ ಬದಲಾವಣೆ ಮಾಡಬೇಕು. ಇವೊತ್ತಿನ ದಿವಸ ಸೆಕ್ರೆಟರಿಯೇಟಿನಲ್ಲಿ ಸೆಕ್ರೆಟರಿಯವರು ಏನಿದ್ದಾರೆ ಅವರು ಸಮಾಜವಾದದ ನೀತಿಯನ್ನು ಅನುಸರಿಸುತಾ್ತ ಇಲ್ಲ. ಅಂಥ ಧೋರಣೆಯನ್ನು ಇಟ್ಟುಕೊಂಡಿರತಕ್ಕಂತಹ ಸೆಕ್ರೆಟರಿಯವರು ಬ್ರಿಟಿಷರ ಆಡಳಿತದಲ್ಲಿ ಇದ್ದಂತಹ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಇವತ್ತು ಯಾರು 3-4 ವರ್ಷಗಳಿಂದ ಇಲ್ಲಿ ಸೆಕ್ರೆಟರಿಗಳಾಗಿದ್ದಾರೆ, ಅವರನ್ನು ಮೊದಲು ಬದಲಾಯಿಸತಕ್ಕಂತಹ ನೀತಿಯನ್ನು ರಾಜ್ಯಸರ್ಕಾರದವರು ಮಾಡಬೇಕು. ಇಲ್ಲದಿದ್ದರೆ ನಾವು ಹೇಳಿರತಕ್ಕಂತಹ ಹೇಳಿಕೆಗಳು ಮತ್ತು ಜನತೆಯ ಮುಂದಿಟ್ಟಂತಹ ತತ್ವಗಳನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಮಾನ್ಯ ಧರ್ಮವೀರರು ಒಂದು ವರ್ಷಗಳ ಕಾಲ ಇಲ್ಲಿ ರಾಜ್ಯಭಾರ ಮಾಡಿ ಏನೇನು ಅಧರ್ಮಗಳನ್ನು ಮಾಡಿದ್ದಾರೆಂಬುದನ್ನು ಕೆಲವು ಅಂಶಗಳ ಮುಖಾಂತರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ರಾಜ್ಯದಲ್ಲಿ ಸ್ವೀಪರ್ಸ್ ಮತ್ತು ಸ್ಕ್ಯಾವೆಂಜರ್ಸ್‌ಗೆ ಸಂಬಂಧಪಟ್ಟ ಒಂದು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂಗೆ ಸುಮಾರು 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಸರ್ಕಾರೀ ಅಧಿಕಾರಿಗಳು ಇದನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿದ್ದಾರೆ. ಇದೊಂದು ಧರ್ಮವೀರರ ಅಧರ್ಮದ ನೀತಿ ಮತ್ತು ಇದನ್ನು ನಮ್ಮ ಸರ್ಕಾರದವರು ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಈ ಅಗ್ರಿಕಲ್ಚರಲ್ ಇಲಾಖೆಯಲ್ಲಿ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸ್‌ಗಾಗಿ 15 ಲಕ್ಷ ರೂಪಾಯಿಯ ಒಂದು ಸ್ಕೀಂ ಮಾಡಿದ್ದರು. ಅದನ್ನು ಕೂಡ ಈ ಅಧಿಕಾರಿಗಳು ಜಾರಿಗೆ ತರದೆ ಲ್ಯಾಪ್ಸ್ ಮಾಡಿದರು. ಬಡವರ, ಕೂಲಿಗಾರರ ಮತ್ತು ಇತರ ದಲಿತವರ್ಗದವರ ಉದ್ಧಾರವಾಗಬೇಕಾದರೆ, ಮತ್ತು ನಾವು ನಿಜವಾಗಿಯೂ ಸಮಾಜವಾದವನ್ನು ಜಾರಿಗೆ ತರಬೇಕಾದರೆ ಇವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಇವತ್ತು ಪ್ರತಿ ಒಬ್ಬರಿಗೆ ಅನ್ನ ವಸತಿ ದೊರಕಬೇಕಾದರೆ ಇಂತಹ ರಿಹ್ಯಾಬಿಲಿಟೇಶನ್ ಸ್ಕೀಂಗಳನ್ನು ಜಾರಿಗೆ ತರಬೇಕು. ಇದಕ್ಕೆ ಮೂಲ ಕಾರಣ ಯಾರೆಂದರೆ, ಸೆಕ್ರೆಟರಿಯೇಟಿನಲ್ಲಿರತಕ್ಕಂತಹ ಸೆಕ್ರೆಟರಿಯವರು. ಅದನ್ನು ತಾವು ಪರಿಶೀಲನೆ ಮಾಡಬೇಕು. ಮತ್ತೊಂದು ಅಂಶ ಏನೆಂದರೆ ಈ ಕೋಆಪರೇಟಿವ್ ಇಲಾಖೆಯಲ್ಲಿ ಲೇಬರ್ ಕ್ವಾರ್ಟರ್ಸ್ ಕನ್‌ಸ್ಟ್ರಕ್ಷನ್ ಕೋಆಪರೇಟಿವ್ ಸೊಸೈಟಿ ಎಂದು ಬಡವರಿಗಾಗಿ ನಡೆಯುತ್ತಿದೆ, ಆದರೆ ಮಾನ್ಯ ಧರ್ಮವೀರರು ಬಂದಾಗ ಈ ಸಂಸ್ಥೆಗಳಿಗೆ ಇರತಕ್ಕ ರಿಯಾಯಿತಿಗಳೆನ್ನೆಲ್ಲಾ ರದ್ದು ಮಾಡಿದರು. ಬಡವರ ಮತ್ತು ಕೂಲಿಗಾರರ ಅಭಿವೃದ್ಧಿಗಾಗಿ ಇಂತಹ ಸಂಸ್ಥೆಗಳು ಹುಟ್ಟಿದ್ದವು. ಆದರೆ ಕೋಆಪರೇಟಿವ್ ಇಲಾಖೆಯವರು ಶಿಫಾರಸು ಮಾಡಿದರೂಕೂಡ ಅದಕ್ಕಿರುವ ರಿಯಾಯಿತಿಗಳನ್ನು ರದ್ದು ಮಾಡಿದರು. ಇದರಿಂದ ಬಡಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ನಮ್ಮ ಸರ್ಕಾರದವರು ಸರಿಪಡಿಸಬೇಕೆಂದು ಸಲಹೆಮಾಡುತ್ತೇನೆ. ಅದೇ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿ 10 ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಹರಿಜನ ಗಿರಿಜನರಿಗಾಗಿ ಇರುವ ವಸತಿ ಸೌಕರ್ಯಗಳನ್ನು ಒದಗಿಸಲು 20–25 ಲಕ್ಷ ರೂಪಾಯಿ ಗ್ರಾಂಟ್ ಕೊಟ್ಟು ಮನೆಗಳನ್ನು ಕಟ್ಟಿಸಿ ಕೊಡಬೇಕೆಂಬ ಸ್ಕೀಂ ಇದೆ. ಇದನ್ನು 5–6 ವರ್ಷದಿಂದ ತಪ್ಪಿಸಿ ಶೆಡ್ಯೂಲ್ ಕ್ಯಾಸ್ಟ್ ಹೌಸಿಂಗ್ ಕಾರ್ಪೊರೇಶನ್ ಎಂದು ಮಾಡಿ ಎಲ್. ಐ. ಸಿ. ಯವರಿಂದ ಸುಮಾರು 3-3½ ಕೋಟಿ ರೂಪಾಯಿ ಸಾಲ ಪಡೆದು ಒದಗಿಸಿದ್ದಾರೆ. ಪ್ರತಿ ತಾಲೂಕಿನಲ್ಲಿ ಒಂದು ಹೌಸಿಂಗ್ ಸೊಸೈಟಿ ಮಾಡಿದ್ದಾರೆ. ಮೂರು ಸಾವಿರ ರೂಪಾಯಿಗಳನ್ನು ಸೊಸೈಟಿಯಿಂದ ಹಾಕಿ ಒಂದು ಮನೆಯನ್ನು ಕಟ್ಟಬೇಕೆಂದು ಮಾಡಿದ್ದಾರೆ. ಈ ರೀತಿಯಿಂದ ನಿಧಾನವಾಗಿ ಮನೆಗಳನ್ನು ಕಟ್ಟಿದರೆ ಇದನ್ನು ಮುಗಿಸಲು ಎಷ್ಟು ವರ್ಷ ಬೇಕಾಗುತ್ತದೆ? ಅಲ್ಲದೆ ಈ ಸಾರಿ ಇದಕ್ಕೆ ಒದಗಿಸಿರುವ ಹಣವೂ ಬಹಳ ಕಡಿಮೆ. ಆದ್ದರಿಂದ ಇದಕ್ಕೆ ಒಂದು ಕಾಲ ಮಿತಿಯನ್ನು ಇಟ್ಟುಕೊಂಡು ಸರ್ಕಾರ ಪ್ರತಿ ವರ್ಷ ಒಂದು ಕೋಟಿ ರೂಪಾಯಿಯನ್ನು ಒದಗಿಸಿ ಬಡ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಎಲ್.ಐ.ಸಿ.ಯ ಮುಖಾಂತರ ಸಾಲವನ್ನು ಪಡೆದು ಸೊಸೈಟಿ ಮುಖಾಂತರ ಹರಿಜನರಿಗೆ ಗಿರಿಜನರಿಗೆ ಹಣವನ್ನು ಕೊಟ್ಟಾಗ ಈ ಮೂರು ಸಾವಿರ ರೂಪಾಯಿಯನ್ನು ವಾಪಸ್ಸು ಕೊಡುವುದಕ್ಕೆ ಅವರಿಗೆ ಕಷ್ಟವಾಗುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಿರುವ ಅವರ ಮನೆಯ ಸಾಮಾನುಗಳನ್ನು ಎಲ್ಲಾ ಹರಾಜು ಮಾಡುತ್ತಾರೆ. ಹರಾಜು ಮಾಡಿದಾಗ ಅಲ್ಲಿರುವ ಬಂಡವಾಳಶಾಹಿಗಳು ಅವುಗಳನ್ನು ಕೊಂಡುಕೊಂಡು, ಈ ಜನರನ್ನು ಹಿಂದಿನಂತೆಯೇ ತಮ್ಮ ಅಧೀನದಲ್ಲಿಟ್ಟುಕೊಳ್ಳುತ್ತಾರೆ. ಆದ್ದರಿಂದ ಈ ಸಾಲಗಳನ್ನು ಬಡ್ಡಿರಹಿತವಾದ ಮತ್ತು ಗ್ರಾಂಟ್ ರೂಪದಲ್ಲಿ ಕೊಡತಕ್ಕ ಯೋಜನೆಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೇರವಾಗಿ ಹೌಸಿಂಗ್ ಬೋರ್ಡಿನಲ್ಲಿ ಯಾವ ರೀತಿ ಕೊಡುತ್ತಾರೆ, ಅದೇ ರೀತಿಯಲ್ಲಿ ನಿಮ್ಮ ವರ್ಗದವರಿಗೆ, ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ಅಂಶವೇನೆಂದರೆ, ಈ ಅನಿಮಲ್ ಹಸ್ಬಂಡರಿ ಇಲಾಖೆಯಲ್ಲಿ ಬಡಜನರಿಗೆ ಡೈರಿ ಮತ್ತು ಪೌಲ್ಟ್ರಿಯನ್ನು ಮಾಡುವುದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಕೊಡುವ ಯೋಜನೆ ಇದೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಕೆಲವು ಸಂಸಾರಗಳಿಗೆ ಅಂದರೆ 10-20 ಸಂಸಾರಗಳಿಗೆ ಅನುಕೂಲ ಕಲ್ಪಿಸಬೇಕೆಂದು ಅದಕ್ಕೆ 2 ಲಕ್ಷ ರೂಪಾಯಿಯ ಒಂದು ಸ್ಕೀಮನ್ನು ಮಾಡಿದರು. ಅದೂ ಕೂಡ ಸರಿಯಾಗಿ ನಡೆಯಲಿಲ್ಲ. ಇದು ಹರಿಜನರನ್ನು ಉದ್ಧಾರಮಾಡತಕ್ಕ ರೀತಿನೀತಿಯೇ ಎಂದು ಕೇಳುತ್ತೇನೆ ?

ಇನ್ನು ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಇಲ್ಲಿ 74 ಎಯಿಡೆಡ್ ಹಾಸ್ಟೆಲುಗಳಿವೆ. ಇವುಗಳನ್ನು ಮೊದಲು ವಿದ್ಯಾ ಇಲಾಖೆಯ ಆಡಳಿತಕ್ಕೆ ಒಪ್ಪಿಸಲಾಗಿದ್ದಿತು. ಇತ್ತೀಚೆಗೆ ಇದನ್ನು ಅಲ್ಲಿಂದ ಬದಲಾಯಿಸಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿಸಿದ್ದಾರೆ. ವಿದ್ಯಾಭ್ಯಾಸದ ಇಲಾಖೆಗೆ ಸರ್ಕಾರ 56 ಕೋಟಿ ರೂಪಾಯಿಗಳನ್ನು ಒದಗಿಸಿದರೆ ಅದೇ ಸಮಾಜ ಕಲ್ಯಾಣ ಇಲಾಖೆಗೆ 5 ಕೋಟಿ ರೂಪಾಯಿಗಳನ್ನು ಒದಗಿಸಿರುತ್ತದೆ. ಅಂದಾಗ ಇಲ್ಲಿ ಈ ಹಾಸ್ಟಲುಗಳ ಅಭಿವೃದ್ಧಿಗೆ ಮಾತೆತ್ತಿದರೆ ಹಣವಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಜನರಲ್ ಹಾಸ್ಟಲುಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಿದ್ದು ಸರಿಯಲ್ಲ. ಹರಿಜನರ ಜನಾಂಗಕ್ಕೆ ಒಂದು ಹೆಚ್ಚಿನ ಬಾಲ ಮಂದಿರ ಶಾಲೆಗಳನ್ನು ತೆರೆಯಬೇಕಾಗಿದ್ದರೆ ಅದು ವಿದ್ಯಾ ಇಲಾಖೆಯಿಂದ ಸಾಧ್ಯವೇ ವಿನಾ ಈ ಅಲ್ಪಸ್ವಲ್ಪ ಬಡ್ಜೆಟ್ಟಿರತಕ್ಕ ಸಮಾಜ ಕಲ್ಯಾಣ ಇಲಾಖೆಯಿಂದ ಇದು ಸಾಧ್ಯ ಇಲ್ಲ. ಅಲ್ಲದೆ ಈ ಬೋರ್ಡಿಂಗಳಿಗೆ ಕೊಡತಕ್ಕ ಗ್ರಾಂಟನ್ನು 30 ರೂಪಾಯಿಗಳಿಂದ 50 ರೂಪಾಯಿಗಳಿಗೆ ಏರಿಸಬೇಕು.

(ಅಧ್ಯಕ್ಷರು. ಸಭೆಯಲ್ಲಿ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಿಗದಿಮಾಡಿದ್ದ ವೇಳೆಗಿಂತ ಹೆಚ್ಚು ಕಾಲವನ್ನು ತೆಗೆದುಕೊಂಡಿದ್ದಾರೆ. ದಯವಿಟ್ಟು ಅವರು ಹೇಳುತ್ತಿರುವ ವಾಕ್ಯ ಮುಗಿದು ಕೂಡಲೆ ಅವರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ದಿವಸ ಸರ್ಕಾರದವರು ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕೆ ಒಂದು ಸ್ಕೀಮನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ಬಡವರಿಗೆ ಹೆಚ್ಚಿನ ಅನುಕೂಲವಾಗಬೇಕು ಅನ್ನುತ್ತಾರೆ. ಆದರೆ ಕಳೆದ 10 ವರ್ಷಗಳಿಂದ ಇಲ್ಲಿ ರಾಜ್ಯ ಸರ್ಕಾರದವರು ಏನು ಮಾಡುತ್ತಿದ್ದಾರೆ ? 1960 ರಲ್ಲಿ 5 ಸಾವಿರ ಜನರನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಹೇಳಿ ಕೆಲಸಕ್ಕೆ ತೆಗೆದುಕೊಂಡು ನಂತರ ಅವರನ್ನೆಲ್ಲಾ ರೆಗ್ಯುಲರೈಜ್ ಮಾಡಿದರು. ಮತ್ತೆ ಅದೇರೀತಿ 1965 ರಲ್ಲಿ ಇನ್ನೂ ಐದುಸಾವಿರ ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ತೆಗೆದುಕೊಂಡು ಅವರನ್ನೂ ರೆಗ್ಯುಲರೈಜ್ ಮಾಡಿದರು. ಹಾಗೆ ಮಾಡತಕ್ಕ ಕಾಲದಲ್ಲಿ ಹರಿಜನರಿಗೆ ಸಲ್ಲಬೇಕಾಗಿದ್ದ ಆ 18 ಮತ್ತು 15 ಪರ್ಸೆಂಟ್ ಸ್ಥಾನಗಳನ್ನು ಮೀಸಲಾಗಿಟ್ಟಿದ್ದರೆ ? ಅವರೇನು ಇದಕ್ಕೆ ಹೇಳುತ್ತಾರೆ ?

MADAM SPEAKER.—The hon. Member was allotted 10 minutes. He has already taken 20 minutes. He may finish his sentence and conclude.

Sri M. H. JAYAPRAKASH NARAYAN.—I have not finished one-fourth of my speech. Please allot me ten more minutes.

MADAM SPEAKER.—I do not know all that. Please conclude.

Sri M. H. JAYAPRAKASH NARAYAN.—Allot me 10 more minutes. Otherwise I will not speak further.

MADAM SPEAKER.—That is all right. Next Member Sri T. R. Shamanna.

†ಶ್ರೀ ಟಿ. ಆರ್. ಶ್ಯಾಮಣ್ಣನವರು (ಕೋಟೆ).—ಸನ್ಮಾನ್ಯ ಸಭಾಪತಿಯವರೇ ; ಈಗ ರಾಜ್ಯಪಾಲರ ಭಾಷಣದ ಬಗ್ಗೆ ಕಳೆದ ಮೂರು ದಿನಗಳಿಂದಲೂ ಚರ್ಚೆ ನಡೆಯುತ್ತಿದೆ. ಅವರು ಸೂಚನೆ ಮಾಡಿರತಕ್ಕ ಅನೇಕ ವಿಷಯಗಳಲ್ಲಿ ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡಿರತಕ್ಕ ವಿಷಯ ಅಂದರೆ ಅದು ರಾಜ್ಯದಲ್ಲಿ ಕನ್ನಡ ಅಧಿಕೃತ ಭಾಷೆಯಾಗಬೇಕು ಅನ್ನುವುದು. ಇಂದಿಗೆ ವಿಶಾಲ ಕರ್ಣಾಟಕ ರಾಜ್ಯವಾಗಿ 14-15 ವರ್ಷಗಳಾದವು. ಇನ್ನೂ ಆ 15 ವರ್ಷಗಳ ಹಿಂದಿನ ಸ್ಥಿತಿಗತಿಗಳು ಹೇಗಿದ್ದವೋ ಅವು ಹಾಗೆಯೇ ಇವೆ. ಈ ವಿಚಾರದಲ್ಲಿ ಯಾವ ಒಂದು ಪ್ರಗತಿಯೂ

ಭ್ರಷ್ಟರಾಗುತ್ತೇವೆ. ಈಗಿನ ಆಡಳಿತದಲ್ಲಿ ಯಾವ ಒಂದು ಅಧಿಕಾರಿಗಳ ಸೆಟ್ ಅಪ್ ಇದೆ ಅದನ್ನು ಮೊದಲನೆಯದಾಗಿ ಬದಲಾವಣೆ ಮಾಡಬೇಕು. ಇವೊತ್ತಿನ ದಿವಸ ಸೆಕ್ರೆಟರಿಯೇಟಿನಲ್ಲಿ ಸೆಕ್ರೆಟರಿಯವರು ಏನಿದ್ದಾರೆ ಅವರು ಸಮಾಜವಾದದ ನೀತಿಯನ್ನು ಅನುಸರಿಸುತ್ತಾ ಇಲ್ಲ. ಅಂಥ ಧೋರಣೆಯನ್ನು ಇಟ್ಟುಕೊಂಡಿರತಕ್ಕಂತಹ ಸೆಕ್ರೆಟರಿಯವರು ಬ್ರಿಟಿಷರ ಆಡಳಿತದಲ್ಲಿ ಇದ್ದಂತಹ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಇವತ್ತು ಯಾರು 3-4 ವರ್ಷಗಳಿಂದ ಇಲ್ಲಿ ಸೆಕ್ರೆಟರಿಗಳಾಗಿದ್ದಾರೆ, ಅವರನ್ನು ಮೊದಲು ಬದಲಾಯಿಸತಕ್ಕಂತಹ ನೀತಿಯನ್ನು ರಾಜ್ಯಸರ್ಕಾರದವರು ಮಾಡಬೇಕು. ಇಲ್ಲದಿದ್ದರೆ ನಾವು ಹೇಳಿರತಕ್ಕಂತಹ ಹೇಳಿಕೆಗಳು ಮತ್ತು ಜನತೆಯ ಮುಂದಿಟ್ಟಂತಹ ತತ್ವಗಳನ್ನು ಜಾರಿಗೆ ತರುವುದಕ್ಕಾಗುವುದಿಲ್ಲ. ಮಾನ್ಯ ಧರ್ಮವೀರರು ಒಂದು ವರ್ಷಗಳ ಕಾಲ ಇಲ್ಲಿ ರಾಜ್ಯಭಾರ ಮಾಡಿ ಏನೇನು ಅಧರ್ಮಗಳನ್ನು ಮಾಡಿದ್ದಾರೆಂಬುದನ್ನು ಕೆಲವು ಅಂಶಗಳ ಮುಖಾಂತರ ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ರಾಜ್ಯದಲ್ಲಿ ಸ್ವೀಪರ್ಸ್ ಮತ್ತು ಸ್ಕ್ಯಾವೆಂಜರ್ಸ್‌ಗೆ ಸಂಬಂಧಪಟ್ಟ ಒಂದು ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಂಗೆ ಸುಮಾರು 15 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆದರೆ ಸರ್ಕಾರೀ ಅಧಿಕಾರಿಗಳು ಇದನ್ನು ಖರ್ಚು ಮಾಡದೆ ಲ್ಯಾಪ್ಸ್ ಮಾಡಿದ್ದಾರೆ. ಇದೊಂದು ಧರ್ಮವೀರರ ಅಧರ್ಮದ ನೀತಿ ಮತ್ತು ಇದನ್ನು ನಮ್ಮ ಸರ್ಕಾರದವರು ಸರಿಪಡಿಸಬೇಕೆಂದು ಸಲಹೆ ಮಾಡುತ್ತೇನೆ. ಮತ್ತೊಂದು ವಿಚಾರವೇನೆಂದರೆ, ಈ ಅಗ್ರಿಕಲ್ಚರಲ್ ಇಲಾಖೆಯಲ್ಲಿ ಲ್ಯಾಂಡ್‌ಲೆಸ್ ಅಗ್ರಿಕಲ್ಚರಲ್ ಲೇಬರರ್ಸಿಗಾಗಿ 15 ಲಕ್ಷ ರೂಪಾಯಿಯ ಒಂದು ಸ್ಕೀಂ ಮಾಡಿದ್ದರು. ಅದನ್ನು ಕೂಡ ಈ ಅಧಿಕಾರಿಗಳು ಜಾರಿಗೆ ತರದೆ ಲ್ಯಾಪ್ಸ್ ಮಾಡಿದರು. ಬಡವರ, ಕೂಲಿಗಾರರ ಮತ್ತು ಇತರ ದಲಿತವರ್ಗದವರ ಉದ್ಧಾರವಾಗಬೇಕಾದರೆ, ಮತ್ತು ನಾವು ನಿಜವಾಗಿಯೂ ಸಮಾಜವಾದವನ್ನು ಜಾರಿಗೆ ತರಬೇಕಾದರೆ ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಾಗಿದೆ. ಇವತ್ತು ಪ್ರತಿ ಒಬ್ಬರಿಗೆ ಅನ್ನ ವಸತಿ ದೊರಕಬೇಕಾದರೆ ಇಂತಹ ರಿಹ್ಯಾಬಿಲಿಟೇಶನ್ ಸ್ಕೀಂಗಳನ್ನು ಜಾರಿಗೆ ತರಬೇಕು. ಇದಕ್ಕೆ ಮೂಲ ಕಾರಣ ಯಾರೆಂದರೆ, ಸೆಕ್ರೆಟರಿಯೇಟಿನಲ್ಲಿರತಕ್ಕಂತಹ ಸೆಕ್ರೆಟರಿಯವರು. ಅದನ್ನು ತಾವು ಪರಿಶೀಲನೆ ಮಾಡಬೇಕು. ಮತ್ತೊಂದು ಅಂಶ ಏನೆಂದರೆ ಈ ಕೋಆಪರೇಟಿವ್ ಇಲಾಖೆಯಲ್ಲಿ ಲೇಬರ್ ಕ್ವಾರ್ಟರ್ಸ್ ಕನ್‌ಸ್ಟ್ರಕ್ಷನ್ ಕೋಆಪರೇಟಿವ್ ಸೊಸೈಟಿ ಎಂದು ಬಡವರಿಗಾಗಿ ನಡೆಯುತ್ತಿದೆ, ಆದರೆ ಮಾನ್ಯ ಧರ್ಮವೀರರು ಬಂದಾಗ ಈ ಸಂಸ್ಥೆಗಳಿಗೆ ಇರತಕ್ಕ ರಿಯಾಯಿತಿಗಳೆನ್ನಾಲ್ಲಾ ರದ್ದು ಮಾಡಿದರು. ಬಡವರ ಮತ್ತು ಕೂಲಿಗಾರರ ಅಭಿವೃದ್ಧಿಗಾಗಿ ಇಂತಹ ಸಂಸ್ಥೆಗಳು ಹುಟ್ಟಿದ್ದವು. ಆದರೆ ಕೋಆಪರೇಟಿವ್ ಇಲಾಖೆಯವರು ಶಿಫಾರಸು ಮಾಡಿದರೂಕೂಡ ಅದಕ್ಕಿರುವ ರಿಯಾಯಿತಿಗಳನ್ನು ರದ್ದು ಮಾಡಿದರು. ಇದರಿಂದ ಬಡಜನರಿಗೆ ಬಹಳ ತೊಂದರೆಯಾಗಿದೆ. ಇದನ್ನು ನಮ್ಮ ಸರ್ಕಾರದವರು ಸರಿಪಡಿಸಬೇಕೆಂದು ಸಲಹೆಮಾಡುತ್ತೇನೆ. ಅದೇ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿ 10 ವರ್ಷಗಳಿಂದಲೂ ನಡೆದುಕೊಂಡು ಬಂದಿರುವ ಹರಿಜನ ಗಿರಿಜನರಿಗಾಗಿ ಇರುವ ವಸತಿ ಸೌಕರ್ಯಗಳನ್ನು ಒದಗಿಸಲು 20–25 ಲಕ್ಷ ರೂಪಾಯಿ ಗ್ರಾಂಟ್ ಕೊಟ್ಟು ಮನೆಗಳನ್ನು ಕಟ್ಟಿಸಿ ಕೊಡಬೇಕೆಂಬ ಸ್ಕೀಂ ಇದೆ. ಇದನ್ನು 5–6 ವರ್ಷದಿಂದ ತಪ್ಪಿಸಿ ಶೆಡ್ಯೂಲ್ ಕ್ಯಾಸ್ಟ್ ಹೌಸಿಂಗ್ ಕಾರ್ಪೊರೇಶನ್ ಎಂದು ಮಾಡಿ ಎಲ್. ಐ. ಸಿ. ಯವರಿಂದ ಸುಮಾರು 3-3½ ಕೋಟಿ ರೂಪಾಯಿ ಸಾಲ ಪಡೆದು ಒದಗಿಸಿದ್ದಾರೆ. ಪ್ರತಿ ತಾಲೂಕಿನಲ್ಲಿ ಒಂದು ಹೌಸಿಂಗ್ ಸೊಸೈಟಿ ಮಾಡಿದ್ದಾರೆ. ಮೂರು ಸಾವಿರ ರೂಪಾಯಿಗಳನ್ನು ಸೊಸೈಟಿಯಿಂದ ಹಾಕಿ ಒಂದು ಮನೆಯನ್ನು ಕಟ್ಟಬೇಕೆಂದು ಮಾಡಿದ್ದಾರೆ. ಈ ರೀತಿಯಿಂದ ನಿಧಾನವಾಗಿ ಮನೆಗಳನ್ನು ಕಟ್ಟಿದರೆ ಇದನ್ನು ಮುಗಿಸಲು ಎಷ್ಟು ವರ್ಷ ಬೇಕಾಗುತ್ತದೆ? ಅಲ್ಲದೆ ಈ ಸಾರಿ ಇದಕ್ಕೆ ಒದಗಿಸಿರುವ ಹಣವೂ ಬಹಳ ಕಡಿಮೆ. ಆದ್ದರಿಂದ ಇದಕ್ಕೆ ಒಂದು ಕಾಲ ಮಿತಿಯನ್ನು ಇಟ್ಟುಕೊಂಡು ಸರ್ಕಾರ ಪ್ರತಿ ವರ್ಷ ಒಂದು ಕೋಟಿ ರೂಪಾಯಿಯನ್ನು ಒದಗಿಸಿ ಬಡ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ಎಲ್.ಐ.ಸಿ.ಯ ಮುಖಾಂತರ ಸಾಲವನ್ನು ಪಡೆದು ಸೊಸೈಟಿ ಮುಖಾಂತರ ಹರಿಜನರಿಗೆ ಗಿರಿಜನರಿಗೆ ಹಣವನ್ನು ಕೊಟ್ಟಾಗ ಈ ಮೂರು ಸಾವಿರ ರೂಪಾಯಿಯನ್ನು ವಾಪಸ್ಸು ಕೊಡುವುದಕ್ಕೆ ಅವರಿಗೆ ಕಷ್ಟವಾಗುತ್ತದೆ. ಅಂತಹ ಸಂದರ್ಭದಲ್ಲಿ ಅಲ್ಲಿರುವ ಅವರ ಮನೆಯ ಸಾಮಾನುಗಳನ್ನು ಎಲ್ಲಾ ಹರಾಜು ಮಾಡುತ್ತಾರೆ. ಹರಾಜು ಮಾಡಿದಾಗ ಅಲ್ಲಿರುವ ಬಂಡವಾಳಶಾಹಿಗಳು ಅವುಗಳನ್ನು ಕೊಂಡುಕೊಂಡು, ಈ ಜನರನ್ನು ಹಿಂದಿನಂತೆಯೇ ತಮ್ಮ ಅಧೀನದಲ್ಲಿಟ್ಟುಕೊಳ್ಳುತ್ತಾರೆ. ಆದ್ದರಿಂದ ಈ ಸಾಲಗಳನ್ನು ಬಡ್ಡಿರಹಿತವಾದ ಮತ್ತು ಗ್ರಾಂಟ್ ರೂಪದಲ್ಲಿ ಕೊಡತಕ್ಕ ಯೋಜನೆಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೇರವಾಗಿ ಹೌಸಿಂಗ್ ಬೋರ್ಡಿನಲ್ಲಿ ಯಾವ ರೀತಿ ಕೊಡುತ್ತಾರೆ, ಅದೇ ರೀತಿಯಲ್ಲಿ ನಿಮ್ಮ ವರ್ಗದವರಿಗೆ, ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಹೇಳುತ್ತೇನೆ.

ಮತ್ತೊಂದು ಅಂಶವೇನೆಂದರೆ, ಈ ಅನಿಮಲ್ ಹಸ್ಬಂಡರಿ ಇಲಾಖೆಯಲ್ಲಿ ಬಡಜನರಿಗೆ ಡೈರಿ ಮತ್ತು ಪೌಲ್ಟ್ರಿಯನ್ನು ಮಾಡುವುದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಕೊಡುವ ಯೋಜನೆ ಇದೆ.

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಧರ್ಮವೀರರ ರಾಜ್ಯಭಾರ ಬಂದಮೇಲೆ, ಸೆಕ್ರಟರಿಯವರು ಈ ಯೋಜನೆಯನ್ನು ರದ್ದು ಮಾಡಿ ನಿಮ್ಮ ವರ್ಗದವರಿಗೆ ಯಾವ ವಿಧವಾದಂತಹ ಸಹಾಯವೂ ದೊರಕದೆ ಹಾಗೆ ಮಾಡಿದ್ದಾರೆ. ಈ ಒಂದು ಲೋಪವನ್ನು ಸರ್ಕಾರದವರು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಇನ್ನೊಂದು ಮುಖ್ಯವಾದ ವಿಚಾರ. ರಾಜ್ಯದಲ್ಲಿ 174 ತಾಲೂಕು ಬೋರ್ಡುಗಳು ಇವೆ. ಇವುಗಳಿಗೆ ಪ್ಲಾನ್ ಮತ್ತು ನಾನ್ ಪ್ಲಾನ್ ಸ್ಕೀಮುಗಳಿಗೋಸ್ಕರ ಕೊಡತಕ್ಕಂತಹ ದುಡ್ಡಿನಲ್ಲಿ 18 ಪರ್‌ಸೆಂಟ್ ಹಣವನ್ನು ನಿಮ್ಮ ವರ್ಗದವರ ಅಭಿವೃದ್ಧಿಗಾಗಿ ಖರ್ಚು ಮಾಡಲು ಮೀಸಲಾಗಿಡಬೇಕೆಂದು ಇದ್ದರೂ ಸಹ ಅನೇಕ ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರದ ಈ ಆಜ್ಞೆಯನ್ನು ಪರಿಗಣನೆ ಮಾಡಿಲ್ಲ. ಈ ರೀತಿ ಯಾರ್‍ಯಾರು ಮಾಡಿದ್ದಾರೆ, ಅಂತಹ ತಾಲ್ಲೂಕು ಬೋರ್ಡುಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಜಿಲ್ಲಾ ಅಭಿವೃದ್ಧಿ ಸಮಿತಿಯಲ್ಲಿ ಬರತಕ್ಕಂತಹ ಅವರ ವಾರ್ಷಿಕ ಬಜೆಟನ್ನು ಅಪ್ರೂವ್ ಮಾಡದ ಹಾಗೆ ಮಾಡಬೇಕೆಂದು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇದನ್ನು ಅಭಿವೃದ್ಧಿ ಮಂತ್ರಿಯವರು ಗಮನಕ್ಕೆ ತೆಗೆದುಕೊಂಡು ರಾಜ್ಯಸರ್ಕಾರದ ಆದೇಶವನ್ನು ಕಡೆಗಣಿಸಿದ ಹಾಗೆ ನೋಡಿಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

4-00 P.M.

ಮತ್ತೊಂದು ಅಂಶ. ಈ ರಾಜ್ಯದಲ್ಲಿ ಎರಡೂವರೆ ಕೋಟಿ ಜನಗಳ ಪೈಕಿ ನಲವತ್ತೈದು ಲಕ್ಷ ಜನ ನಿಮ್ಮ ಪಂಗಡದವರು ಇದ್ದಾರೆ. ಆ ನಲವತ್ತೈದು ಲಕ್ಷದ ಪೈಕಿ 5 ಲಕ್ಷ ಜನ ಹೆಣ್ಣು ಮಕ್ಕಳು, ಮತ್ತು ಗಂಡು ಮಕ್ಕಳು ಪಾಠಶಾಲೆಗೆ ಹೋಗದೆ ಬೀದಿ ಬಿಕಾರಿಗಳಾಗಿ ಅನ್ನವಿಲ್ಲದೆ, ಬಟ್ಟೆ ಇಲ್ಲದೆ, ವಸತಿ ಇಲ್ಲದೆ ಬಹಳವಾಗಿ ಕಷ್ಟಪಡುತ್ತಿದ್ದಾರೆ. ಸರ್ಕಾರದವರು ಕಂಪಲ್ಸರಿ ಎಜುಕೇಷನ್ ಜಾರಿಯಲ್ಲಿದೆಯೆಂಬುದಾಗಿ ಬೇರೆ ಹೇಳುತ್ತಿದ್ದಾರೆ. ಆದರೆ ಅವರಿಗೆ ಯಾವ ವಿಧವಾದಂಥ ಶಿಕ್ಷಣ ಸೌಕರ್ಯವಿಲ್ಲ. ನಾವು ಈ ರಾಜ್ಯದ ವಿದ್ಯಾರ್ಥಿಗಳ ಸಂಖ್ಯೆಯನ್ನು ಮತ್ತು ಲಿಟರೆಸಿ ಸಂಖ್ಯೆಯನ್ನು ಹೆಚ್ಚಿಸಬೇಕಾದರೆ ಮೊಟ್ಟಮೊದಲನೆಯದಾಗಿ ನಿಮ್ಮ ವರ್ಗ ಹಾಗೂ ನಿಮ್ಮ ಪಂಗಡಗಳವರ ವಿದ್ಯಾಭಿವೃದ್ಧಿಗೆ ಹೆಚ್ಚಿಗೆ ಗಮನಕೊಡಬೇಕು. ಹೆಚ್ಚು ಹೆಚ್ಚು ಬಾಲಮಂದಿರಗಳನ್ನು ಸ್ಥಾಪನೆ ಮಾಡಬೇಕು. ಹೆಚ್ಚು ಹೆಚ್ಚು ವಿಮೆನ್ ಅಂಡ್ ವೆಲ್‌ಫೇರ್ ಸೆಂಟರುಗಳನ್ನು ಸ್ಥಾಪನೆ ಮಾಡಬೇಕು, ಕಮ್ಯೂನಿಟಿ ಸೆಂಟರುಗಳನ್ನು ಸ್ಥಾಪನೆ ಮಾಡಬೇಕು. ಇವೆಲ್ಲದರ ಬಗ್ಗೆ ಒಂದು ಮಾತನ್ನೂ ಹೇಳದ ರಾಜ್ಯ ಸರ್ಕಾರ ರಾಜ್ಯಪಾಲರ ಆಡಳಿತದಲ್ಲಿ ಅವರಿಗಿದ್ದಂಥ ಅನೇಕ ಸೌಕರ್ಯಗಳನ್ನು ರದ್ದು ಮಾಡಿದೆ. ಹಿಂದೆ ಕೇವಲ 2 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಕಮ್ಯೂನಿಟಿ ಸೆಂಟರನ್ನು ಕಟ್ಟಬೇಕೆಂದು ಯೋಚನೆ ಮಾಡಿದ್ದರು. ಅದಕ್ಕೆ ಒಂದು ರೇಡಿಯೋ ಸೆಟ್ ಕೊಡಬೇಕೆಂದೂ ಇತ್ತು. ಆಮೇಲೆ ಅದಕ್ಕೆ ರೇಡಿಯೋ ಸೆಟ್ ಕೊಡುವುದು ಬೇಡವೆಂದು ರದ್ದು ಮಾಡಿದರು. ಇದರಿಂದ ಅವರಿಗೆ ಅನೇಕ ವಿಧವಾದಂಥ ತೊಂದರೆಗಳು ಆಗಿವೆ. ಆದ್ದರಿಂದ ಆ ಸ್ಕೀಮನ್ನು ಈಗಲಾದರೂ ಮುಂದುವರಿಸಬೇಕೆಂದು ನಾನು ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಇನ್ನು ಹಿಂದೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿ ಎಂದು ಮಾಡಿದ್ದರು. ಆ ಕಮಿಟಿ ಸ್ಥಾಪನೆಯಾದಾಗ ಸುಮಾರು 10 ಲಕ್ಷ ಎಕರೆ ಜಮೀನು ರಾಜ್ಯದಲ್ಲಿತ್ತು. ಅದರಲ್ಲಿ 5 ಲಕ್ಷ ಎಕರೆ ಅಂದರೆ ಸೇಕಡ 50ರಷ್ಟು ನಿಮ್ಮ ಪಂಗಡಗಳವರಿಗೆ ಮೀಸಲಾಗಿಟ್ಟಿದ್ದೇವೆಂದು ಮಾನ್ಯ ಶ್ರೀ ವೀರೇಂದ್ರ ಪಾಟೀಲ್ ಅವರು ಹಿಂದೆಯೇ ಹೇಳಿ ಪ್ರತಿಯೊಬ್ಬರಿಗೂ 5 ಎಕರೆ ಕೊಡುತ್ತೇವೆಂದು ಹೇಳಿದರು. ಆ ವಿಚಾರವೇನಾಯಿತೋ ಗೊತ್ತಾಗಲಿಲ್ಲ. ಆ ರೀತಿ ನಿಮ್ಮ ಪಂಗಡಗಳವರಿಗೆ ಏನಾದರೂ ಸೌಕರ್ಯ ಒದಗಿದೆಯೋ ಮತ್ತು ಅವರಿಗೇನಾದರೂ ಜಮೀನುಗಳನ್ನು ಅಲಾಟ್ ಮಾಡಿದ್ದಾರೆಯೋ ಅಥವಾ ಅದರ ಬಗ್ಗೆ ಏನಾದರೂ ನೋಟಿಫೈ ಮಾಡಿದ್ದಾರೆಯೋ ಅಥವಾ ಇಂತಿಂಥ ಸರ್ವೆ ನಂಬರ್ ಇಂತಹ ಜನಾಂಗಗಳಿಗಾಗಿ ಮೀಸಲಾಗಿಟ್ಟಿದ್ದೇವೆಂದು ಹೇಳಿದ್ದಾರೆಯೋ ಅಂದರೆ ಅದೇನೂ ಇಲ್ಲ. ಆದ್ದರಿಂದ ಈ ಕಮಿಟಿಗಳಿಂದ ನಿಮ್ಮ ಪಂಗಡಗಳವರಿಗೆ ತುಂಬಾ ಅನ್ಯಾಯವಾಗಿದೆ. ಆದ್ದರಿಂದ ಇನ್ನು ಮುಂದೆ ರೆವಿನ್ಯೂ ಮಿನಿಸ್ಟರು ಇಂತಹ ಕಮಿಟಿಗಳನ್ನು ರಚನೆ ಮಾಡುವಾಗ ಅವರ ರಕ್ಷಣೆಗೆ ಯಾವ ರೀತಿಯಲ್ಲಿಯೂ ಧಕ್ಕೆ ಬಾರದ ರೀತಿಯಲ್ಲಿ ಸಮಿತಿಗಳನ್ನು ರಚಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕಮಿಟಿಗಳಲ್ಲಿ ಸೇಕಡ 50ರಷ್ಟು ನಿಮ್ಮ ಪಂಗಡಗಳವರಿಗೆ ಸೌಕರ್ಯ ಕೊಡಬೇಕೆಂದು ಮಾಡಿರುವುದನ್ನು ಕೂಡಲೇ ಜಾರಿಗೆ ಕೊಡಬೇಕು. ಇಲ್ಲವಿದ್ದರೆ ಇಷ್ಟು ಲಕ್ಷೋಪಲಕ್ಷ ಜನ ನಿರುದ್ಯೋಗಿಗಳು ಕೂಲಿಗಾರರು ಮತ್ತು ಅಗ್ರಿಕಲ್‌ಚರಲ್ ಲೇಬರ್ ಯಾರು ಇದ್ದಾರೋ ಅವರಿಗೆ ಸಹಾಯವಾಗುವ

ದಿಲ್ಲ. ಇವತ್ತು ಅವರಿಗೆ ದಿನಕ್ಕೆ ಕೇವಲ ಒಂದು ರೂಪಾಯಿ ಕೂಲಿ ಕೂಡ ಸಿಗುತ್ತಿಲ್ಲ. ಆದ್ದರಿಂದ ಅಂತಹವರಿಗೆ ಕೂಡಲೇ ಜಮೀನು ಕೊಡುವ ವ್ಯವಸ್ಥೆ ಮಾಡಬೇಕು. ಈ ವಿಚಾರದಲ್ಲಿ ಎಲ್ಲಾ ಜಿಲ್ಲೆಗಳಲ್ಲಿಯೂ ಅನ್ಯಾಯವಾಗಿದೆ; ಅವರಿಗೆ ರಕ್ಷಣೆ ಸಿಕ್ಕಿಲ್ಲ. ಕಡು ಬಡವರನ್ನು ಸುಲಿಗೆ ಮಾಡುವ, ಶೋಷಣೆ ಮಾಡುವ ಪರಿಸ್ಥಿತಿ ಇದೆ. ಅದರಲ್ಲಿಯೂ ಶಿವಮೊಗ್ಗ ಜಿಲ್ಲೆಯಲ್ಲಿರುವ ನಿಮ್ಮ ವರ್ಗದ ಮತ್ತು ನಿಮ್ಮ ಸಂಗಡಿಗಳವರಿಗೆ ಆಗಿರತಕ್ಕ ಕಷ್ಟ ಪರಂಪರೆಯನ್ನು ಹೇಳುವುದಕ್ಕಾಗುವುದಿಲ್ಲ. ಭದ್ರಾವತಿ ತಾಲ್ಲೂಕಿನಲ್ಲಿ ಅವರ ಬಗ್ಗೆ ಬೇಕಾದಷ್ಟು ಮನವಿಗಳನ್ನು ಕಳುಹಿಸಿದ್ದೇನೆ. ಈಗ ಏನೋ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಅವರು ಹೊಸ ನೀತಿ, ಹೊಸ ಧ್ಯೇಯ ಇಟ್ಟುಕೊಂಡಿದ್ದಾರೆ. ಬಡವರ ತೊಂದರೆಗಳನ್ನು ನಿವಾರಣೆ ಮಾಡುವುದೇ ನಮ್ಮ ಸಿದ್ಧಾಂತವೆಂದು ಹೇಳುವ ಸರ್ಕಾರ ಈಗ ಬಂದಿರುವುದರಿಂದ ಈ ವಿಚಾರಗಳ ಕಡೆಗೆ ಅವರು ಹೆಚ್ಚಿನ ಗಮನ ಕೊಡಬೇಕು.

ಇನ್ನೊಂದು ಬಹು ಮುಖ್ಯವಾದಂಥ ವಿಷಯ. ಈ ಸರ್ಕಾರ ವೆಲ್ ಸ್ಕೀಮ್ಸ್ ಎಂಬುದಾಗಿ ಮಾಡಿ ನಮ್ಮ ಜನಾಂಗದವರಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಬಾವಿಗಳನ್ನು ತೆಗೆಯಲು ಹಣ ಸಹಾಯ ಮಾಡಬೇಕೆಂದು ಮಾಡಿದ್ದಾರೆ. ಮೈಸೂರಿನಲ್ಲಿರತಕ್ಕ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳಲ್ಲಿ ಹರಿಜನರ ಪ್ರಾತಿನಿಧ್ಯ ಕೇವಲ ಸೇಕಡ ಒಂದರಷ್ಟೂ ಇಲ್ಲ. ಅಂದಮೇಲೆ ಈ ಯೋಜನೆಯ ಮೂಲಕ ಅವರಿಗೆ ಸಹಾಯ ಕೊಡಬೇಕೆಂದು ಹೇಳುವುದು ಎಲ್ಲಿ ಬರುತ್ತದೋ, ಅಲ್ಲಿ ಈ ಜನಾಂಗಕ್ಕೆ ಯಾವ ಪ್ರಾತಿನಿಧ್ಯವೂ ಇಲ್ಲ. ಅದು ಸಾಧ್ಯವೂ ಇಲ್ಲ. ಅವರಿಗೆ ಅಲ್ಲಿ ಷೇರು ಬಂಡವಾಳ ಕೊಡುವ ನೀತಿಯೂ ಇಲ್ಲ. ಅದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯವರು ಒಂದು ಹೊಸ ಯೋಜನೆಯನ್ನು ತಯಾರು ಮಾಡಿ 5 ಸಾವಿರ ರೂಪಾಯಿಗಳಷ್ಟು ಸಬ್ಸಿಡಿ 5 ಸಾವಿರ ರೂಪಾಯಿಗಳಷ್ಟು ಸಾಲದ ರೂಪದಲ್ಲಿ ಕೊಟ್ಟು ಪಂಪು ಸೆಟ್ಟುಗಳನ್ನು ಕೊಡಿಸಿ, ಬಾವಿ ಕಟ್ಟತಕ್ಕ ಮತ್ತೊಂದು ಯೋಜನೆಯನ್ನು ಸರ್ಕಾರಕ್ಕೆ ಕೊಟ್ಟರು. ಆ ಪ್ರೊಪೋಜಲ್ ತಲೆಕೆಳಗಾಗುವಂತೆ ಮಾಡಿ ಈಗ ಆ 10 ಲಕ್ಷ ರೂಪಾಯಿಗಳನ್ನು ಲ್ಯಾಪ್ಸ್ ಮಾಡಿದ್ದಾರೆ.

ಇನ್ನು ಅಗ್ರಿಕಲ್‌ಚರಲ್ ಕಾಲೋನಿಗಳೆಂದು ಮಾಡುತ್ತಿದ್ದಾರೆ. ಅದನ್ನು 20 ವರ್ಷಗಳಿಂದಲೂ ಸೆಂಟ್ರಲಿ ಸ್ಪಾನ್ಸರ್ಡ್ ಸ್ಕೀಮ್ಸ್ ಎಂಬುದಾಗಿ ಮಾಡುತ್ತಲೇ ಇದ್ದಾರೆ. ಅದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಅಬ್ದುಲ್ ಖುದೂಸ್ ಅನ್ವಾರ್.—ಆ ವಿಚಾರದಲ್ಲಿ ಭದ್ರಾವತಿಯಲ್ಲಿ ಮಾಡಿರುವುದು ನ್ಯಾಯವಾಗಿದೆ. ಭದ್ರಾವತಿಯಲ್ಲಿ ಸುಮಾರು 3,500 ಎಕರೆ ಕೊಟ್ಟಿರುವುದರಲ್ಲಿ ನಾನೇ ಖುದ್ದಾಗಿ ಹೋಗಿ ಹೇಳಿದ ಮೇಲೆ ಹರಿಜನ—ಗಿರಿಜನರಿಗೆ ಸುಮಾರು 1,800 ಎಕರೆಗಳ ಮೇಲೆ ಜಮೀನು ದೊರಕಿದೆ. ಅದರ ಬಗ್ಗೆ ಯಾವುದಾದರೂ ವರ್ತಮಾನ ಬಂದಿದ್ದರೆ ಅಥವಾ ಅಪವಾದ ಬಂದಿದ್ದರೆ ಅದನ್ನು ಇಲ್ಲಿ ಹೇಳಬಹುದು. ಮಾನ್ಯ ಸದಸ್ಯರಿಗೆ ಇಲ್ಲಿರತಕ್ಕ ಹರಿಜನರ ವಿಷಯ ಗೊತ್ತಿಲ್ಲ. ಸಿದ್ಧಾಪುರದ ವಿಷಯ ಬೇಕಾದರೆರೆ ಹೇಳಲಿ. ನಾವು ಅವರಿಗೆ ಕೊಡಿಸಿಕೊಟ್ಟ ಜಮೀನು ಅವರ ಪೊಸೆಷನ್ನಿನಲ್ಲಿ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಭದ್ರಾವತಿಯಲ್ಲಿ ಬಹಳ ಅನ್ಯಾಯವಾಗಿದೆ. ಮಾನ್ಯ ಸದಸ್ಯರಾದ ಶ್ರೀ ಅಬ್ದುಲ್ ಖುದ್ದೂಸ್ ಅನ್ವಾರ್ ಅವರು ಹರಿಜನರ ಪ್ರೇಮಿಗಳು. ಅವರು 1,800 ಎಕರೆಗಳಷ್ಟು ಜಮೀನುಗಳನ್ನು ಹರಿಜನರಿಗೆ ಕೊಡಿಸಿರಬಹುದು. ಅದನ್ನು ನಾನೂ ಒಪ್ಪುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಅಧ್ಯಕ್ಷರಲ್ಲಿ ನನ್ನ ಮನವಿ ಇಷ್ಟೆ. ಒಂದು ಕ್ರಿಯಾಲೋಪ. ಈ ಸಭೆಯ ಒಬ್ಬ ಮಾನ್ಯ ಸದಸ್ಯರು ಮಾತನಾಡುವಾಗ ಅದೇ ಪಕ್ಷದ ಅರಿತು ನುರಿತ ಅನುಭವಸ್ಥರಾದ ಸದಸ್ಯರು ಅವರಿಗೆ ಅನಾವಶ್ಯಕವಾಗಿ ಅಡ್ಡಿ ಬಂದು ಅವರ ಗಮನವನ್ನು ಬೇರೆ ಕಡೆಗೆ ಎಳೆಯುವುದು ವಿಹಿತವೇ? ಇದರ ಬಗ್ಗೆ ತಮ್ಮ ನಿರ್ಧಾರವನ್ನು ಕೊಡಬೇಕೆಂದು ಅಧ್ಯಕ್ಷರನ್ನು ಕೇಳುತ್ತೇನೆ.

ಚೇರ್‌ಮನ್.—ಇದರಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ. ಕ್ಲಾರಿಫಿಕೇಷನ್ ಮಾತ್ರ ಇದೆ. ಈಗ ಮಾತನಾಡುತ್ತಿರುವ ಸದಸ್ಯರು ಒಪ್ಪಿದರೆ ಅವರು ಏನಾದರೂ ಹೇಳಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಅಧ್ಯಕ್ಷರೇ, ನಾನು ಈ ಬಡ ಕೂಲಿಗಾರರ, ದೀನದಲಿತರ ಉದ್ಧಾರಕ್ಕೆ ಏನು ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂಬುದನ್ನು ನಿವೇದನೆ ಮಾಡಿಕೊಳ್ಳುತ್ತಿದ್ದೆ. ಹಿಂದೆ ಸೆಂಟ್ರಲಿಸ್ಪಾನ್‌ಸರ್ಡ್ ಸ್ಕೀಮುಗಳ ಮೂಲಕ ಹರಿಜನರಿಗೆ ವ್ಯವಸಾಯದ ಕಾಲೋನಿಗಳನ್ನು ಮಾಡಿಕೊಟ್ಟು ತನ್ಮೂಲಕ ಹರಿಜನರ ಅಭಿವೃದ್ಧಿಯನ್ನು ಮಾಡುತ್ತಿದ್ದರು. ಇತ್ತೀಚೆಗೆ ಅದನ್ನು ನಿಲ್ಲಿಸಿ ಎಂ. ಸಿ. ಆರ್. ಎಸ್. ಸ್ಕೀಮನ್ನ ತಯಾರು ಮಾಡಿ ಆದರಿಂದ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಕೆಲವು ಸಂಸಾರಗಳಿಗೆ ಅಂದರೆ 10-20 ಸಂಸಾರಗಳಿಗೆ ಅನುಕೂಲ ಕಲ್ಪಿಸಬೇಕೆಂದು ಅದಕ್ಕೆ 2 ಲಕ್ಷ ರೂಪಾಯಿಯ ಒಂದು ಸ್ಕೀಮನ್ನು ಮಾಡಿದರು. ಅದೂ ಕೂಡ ಸರಿಯಾಗಿ ನಡೆಯಲಿಲ್ಲ. ಇದು ಹರಿಜನರನ್ನು ಉದ್ಧಾರಮಾಡತಕ್ಕ ರೀತಿನೀತಿಯೇ ಎಂದು ಕೇಳುತ್ತೇನೆ ?

ಇನ್ನು ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸವನ್ನು ತೆಗೆದುಕೊಂಡರೆ ಇಲ್ಲಿ 74 ಎಯಿಡೆಡ್ ಹಾಸ್ಟೆಲುಗಳಿವೆ. ಇವುಗಳನ್ನು ಮೊದಲು ವಿದ್ಯಾ ಇಲಾಖೆಯ ಆಡಳಿತಕ್ಕೆ ಒಪ್ಪಿಸಲಾಗಿದ್ದಿತು. ಇತ್ತೀಚೆಗೆ ಇದನ್ನು ಅಲ್ಲಿಂದ ಬದಲಾಯಿಸಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿಸಿದ್ದಾರೆ. ವಿದ್ಯಾಭ್ಯಾಸದ ಇಲಾಖೆಗೆ ಸರ್ಕಾರ 56 ಕೋಟಿ ರೂಪಾಯಿಗಳನ್ನು ಒದಗಿಸಿದರೆ ಅದೇ ಸಮಾಜ ಕಲ್ಯಾಣ ಇಲಾಖೆಗೆ 5 ಕೋಟಿ ರೂಪಾಯಿಗಳನ್ನು ಒದಗಿಸಿರುತ್ತದೆ. ಅಂದಾಗ ಇಲ್ಲಿ ಈ ಹಾಸ್ಟಲುಗಳ ಅಭಿವೃದ್ಧಿಗೆ ಮಾತೆತ್ತಿದರೆ ಹಣವಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಈ ಜನರಲ್ ಹಾಸ್ಟಲುಗಳನ್ನು ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಿದ್ದು ಸರಿಯಲ್ಲ. ಹರಿಜನರ ಜನಾಂಗಕ್ಕೆ ಒಂದು ಹೆಚ್ಚಿನ ಬಾಲ ಮಂದಿರ ಶಾಲೆಗಳನ್ನು ತೆರೆಯಬೇಕಾಗಿದ್ದರೆ ಅದು ವಿದ್ಯಾ ಇಲಾಖೆಯಿಂದ ಸಾಧ್ಯವೇ ವಿನಾ ಈ ಅಲ್ಪಸ್ವಲ್ಪ ಬಡ್ಜೆಟ್ಟಿರತಕ್ಕ ಸಮಾಜ ಕಲ್ಯಾಣ ಇಲಾಖೆಯಿಂದ ಇದು ಸಾಧ್ಯ ಇಲ್ಲ. ಅಲ್ಲದೆ ಈ ಬೋರ್ಡಿಂಗ್‌ಗಳಿಗೆ ಕೊಡತಕ್ಕ ಗ್ರಾಂಟನ್ನು 30 ರೂಪಾಯಿಗಳಿಂದ 50 ರೂಪಾಯಿಗಳಿಗೆ ಏರಿಸಬೇಕು.

(ಅಧ್ಯಕ್ಷರು. ಸಭೆಯಲ್ಲಿ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಿಗದಿಮಾಡಿದ್ದ ವೇಳೆಗಿಂತ ಹೆಚ್ಚು ಕಾಲವನ್ನು ತೆಗೆದುಕೊಂಡಿದ್ದಾರೆ. ದಯವಿಟ್ಟು ಅವರು ಹೇಳುತ್ತಿರುವ ವಾಕ್ಯ ಮುಗಿದು ಕೂಡಲೆ ಅವರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ ದಿವಸ ಸರ್ಕಾರದವರು ನಿರುದ್ಯೋಗವನ್ನು ಪರಿಹಾರ ಮಾಡುವುದಕ್ಕೆ ಒಂದು ಸ್ಕೀಮನ್ನು ಇಟ್ಟುಕೊಂಡಿದ್ದಾರೆ. ಅದರಲ್ಲಿ ಬಡವರಿಗೆ ಹೆಚ್ಚಿನ ಅನುಕೂಲವಾಗಬೇಕು ಅನ್ನುತ್ತಾರೆ. ಆದರೆ ಕಳೆದ 10 ವರ್ಷಗಳಿಂದ ಇಲ್ಲಿ ರಾಜ್ಯ ಸರ್ಕಾರದವರು ಏನು ಮಾಡುತ್ತಿದ್ದಾರೆ ? 1960 ರಲ್ಲಿ 5 ಸಾವಿರ ಜನರನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಹೇಳಿ ಕೆಲಸಕ್ಕೆ ತೆಗೆದುಕೊಂಡು ನಂತರ ಅವರನ್ನೆಲ್ಲಾ ರೆಗ್ಯುಲರೈಜ್ ಮಾಡಿದರು. ಮತ್ತೆ ಅದೇರೀತಿ 1965 ರಲ್ಲಿ ಇನ್ನೂ ಐದುಸಾವಿರ ಲೋಕಲ್ ಕ್ಯಾಂಡಿಡೇಟ್ಸ್‌ಗಳನ್ನು ತೆಗೆದುಕೊಂಡು ಅವರನ್ನೂ ರೆಗ್ಯುಲರೈಜ್ ಮಾಡಿದರು. ಹಾಗೆ ಮಾಡತಕ್ಕ ಕಾಲದಲ್ಲಿ ಹರಿಜನರಿಗೆ ಸಲ್ಲಬೇಕಾಗಿದ್ದ ಆ 18 ಮತ್ತು 15 ಪರ್ಸೆಂಟ್ ಸ್ಥಾನಗಳನ್ನು ಮೀಸಲಾಗಿಟ್ಟಿದ್ದರೆ ? ಅವರೇನು ಇದಕ್ಕೆ ಹೇಳುತ್ತಾರೆ ?

MADAM SPEAKER.—The hon. Member was allotted 10 minutes. He has already taken 20 minutes. He may finish his sentence and conclude.

Sri M. H. JAYAPRAKASH NARAYAN.—I have not finished one-fourth of my speech. Please allot me ten more minutes.

MADAM SPEAKER.—I do not know all that. Please conclude.

Sri M. H. JAYAPRAKASH NARAYAN.—Allot me 10 more minutes. Otherwise I will not speak further.

MADAM SPEAKER.—That is all right. Next Member Sri T. R. Shamanna.

†ಶ್ರೀ ಟಿ. ಆರ್. ಶ್ಯಾಮಣ್ಣನವರು (ಕೋಟೆ).—ಸನ್ಮಾನ್ಯ ಸಭಾಪತಿಯವರೇ ; ಈಗ ರಾಜ್ಯಪಾಲರ ಭಾಷಣದ ಬಗ್ಗೆ ಕಳೆದ ಮೂರು ದಿನಗಳಿಂದಲೂ ಚರ್ಚೆ ನಡೆಯುತ್ತಿದೆ. ಅವರು ಸೂಚನೆ ಮಾಡಿರತಕ್ಕ ಅನೇಕ ವಿಷಯಗಳಲ್ಲಿ ಮೊಟ್ಟಮೊದಲನೆಯದಾಗಿ ಪ್ರಸ್ತಾಪ ಮಾಡಿರತಕ್ಕ ವಿಷಯ ಅಂದರೆ ಅದು ರಾಜ್ಯದಲ್ಲಿ ಕನ್ನಡ ಅಧಿಕೃತ ಭಾಷೆಯಾಗಬೇಕು ಅನ್ನುವುದು. ಇಂದಿಗೆ ವಿಶಾಲ ಕರ್ಣಾಟಕ ರಾಜ್ಯವಾಗಿ 14-15 ವರ್ಷಗಳಾದವು. ಇನ್ನೂ ಆ 15 ವರ್ಷಗಳ ಹಿಂದಿನ ಸ್ಥಿತಿಗತಿಗಳು ಹೇಗಿದ್ದವೋ ಅವು ಹಾಗೆಯೇ ಇವೆ. ಈ ವಿಚಾರದಲ್ಲಿ ಯಾವ ಒಂದು ಪ್ರಗತಿಯೂ

ಆಗಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ಬೇರೆ ರಾಜ್ಯಗಳಾದ ತಮಿಳುನಾಡು, ಉತ್ತರಪ್ರದೇಶ, ಬಿಹಾರ್ ಇತ್ಯಾದಿ ರಾಜ್ಯಗಳಲ್ಲಿ ಆಡಳಿತವು ಆಯಾ ಪ್ರಾಂತೀಯ ಭಾಷೆಗಳ ಮಾಧ್ಯಮದಲ್ಲೇ ನಡೆಯುತ್ತಿದೆ. ಆದರೆ ಇಲ್ಲಿ ನಾಮಕಾವಾಸ್ತೆಗೆ ಕನ್ನಡ ಆಡಳಿತ ಭಾಷೆಯಾಗಿರುತ್ತದೆ. ಇದು ಇಲ್ಲಿ ನಿಜವಾಗಿಯೂ ಒಂದು ಅರ್ಥವಿಲ್ಲದ ಮಾತು. ಈ ವಿಚಾರದಲ್ಲಿ ಬೇರೆ ರಾಜ್ಯಗಳು ಮುಂದೆ ಹೋಗುತ್ತಿರುವುದಕ್ಕೂ, ಇಲ್ಲಿ ನಮ್ಮ ರಾಜ್ಯ ಹಿಂದಕ್ಕೆ ಹೋಗುತ್ತಿರುವುದಕ್ಕೂ ಕಾರಣ ಏನು ? ಇದನ್ನು ಕೂಲಂಕಷವಾಗಿ ತಿಳಿದುಕೊಂಡು ಬರುವುದಕ್ಕಾದರೂ ಸರ್ಕಾರದ ಕೆಲವು ಮಂತ್ರಿಗಳು ಆ ರಾಜ್ಯಗಳಿಗೆ ಹೋಗಿ ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ತಿಳಿದುಕೊಂಡು ಬಂದು ಅದರಂತೆ ಇಲ್ಲಿಯೂ ಕೂಡ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿ ರಾಜ್ಯ ಭಾಷೆಯನ್ನು, ಆಡಳಿತ ಭಾಷೆಯನ್ನು ಕನ್ನಡದಲ್ಲೇ ಮಾಡುತ್ತೇವೆಂದು ಇವರು ಒಂದು ಸ್ಥಿರ ಸಂಕಲ್ಪವನ್ನು ಕೈಗೊಳ್ಳದ ವಿನಾ ಇದು ಸಾಧ್ಯವಾಗುವುದಿಲ್ಲ. ಕೇವಲ ಕೆಲವರು ವೇದಿಕೆಗಳ ಮೇಲೆ ನಿಂತು ಭಾಷಣ ಮಾಡಿದರೆ ಇದು ಅಭಿವೃದ್ಧಿಯಾದಂತೆ ಆಗಲಿಲ್ಲ. ನಮ್ಮ ನಗರ ಕಾರ್ಪೊರೇಷನ್ನಿನಲ್ಲಿ ಕನ್ನಡದಲ್ಲೇ ಅಲ್ಲಿಯ ಆಡಳಿತ ನಡೆಯಬೇಕು ಎಂದು ಒಂದು ಸಿದ್ಧಾಂತ ಮಾಡಿ ಅಲ್ಲಿಗೆ 10 ಕನ್ನಡ ಟೈಪ್‌ರೈಟರುಗಳನ್ನು ತರಿಸಲಾಗಿತ್ತು. ಅವುಗಳನ್ನು ಈಗ ಅಲ್ಲಿರತಕ್ಕ ಅಧಿಕಾರಿಗಳು ಗೋಡೌನಿಗೆ ಹಾಕಿಸಿದ್ದಾರೆ. ಆ ಕಾರಣ ಇತ್ತೀಚೆಗೆ ಎಲ್ಲವೂ ಮತ್ತೆ ಇಂಗ್ಲೀಷಿನಲ್ಲೇ ಆಗುವುದಕ್ಕೆ ಪ್ರಾರಂಭವಾಗಿದೆ. ಈ ವಿಚಾರದಲ್ಲಿ ಸರ್ಕಾರದವರು, ಆಡಳಿತ ನಡೆಸತಕ್ಕ ಮುಖ್ಯ ಅಧಿಕಾರಿಗಳಿಗೆ ಒಂದು ತೀವ್ರವಾದ ಎಚ್ಚರಿಕೆಯನ್ನು ಕೊಡಬೇಕು. ಈ ವಿಚಾರದಲ್ಲಿ ನಮ್ಮ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಒಂದು ಕನ್ನಡದ ರೆಫ್ರೆಷ್‌ಮೆಂಟ್ ಕೋರ್ಸನ್ನು ತೆರೆಯಬೇಕೆಂದು ಸಲಹೆ ಮಾಡುತ್ತೇನೆ. ಹೀಗೆ ಮಾಡಿ ಅವರಿಗೆ ಕನ್ನಡದಲ್ಲಿ ಒಂದು ಅಭಿಮಾನ, ಆಸಕ್ತಿಯನ್ನು ಉಂಟು ಮಾಡಿಕೊಡಬೇಕೆಂದು ನನ್ನ ಸಲಹೆ. ನಾನು ಬಹಳ ವರ್ಷಗಳ ಕಾಲದಿಂದಲೂ ಒಂದು ವಾಣಿಜ್ಯೋದ್ಯಮ ಶಾಲೆಯನ್ನು ನಡೆಸುತ್ತಿದ್ದೇನೆ. ಸುಮಾರು ಅದನ್ನು ನಡೆಸುವುದಕ್ಕೆ ಪ್ರಾರಂಭ ಮಾಡಿ 30 ವರ್ಷಗಳ ಮೇಲಾಗಿರಬಹುದು. ಕೋರ್ಟುಗಳಲ್ಲಿ ಮತ್ತು ಇನ್ನು ಇತರೇ ಸರ್ಕಾರಿ ಕಛೇರಿಗಳಲ್ಲಿ ಕನ್ನಡ ಭಾಷೆಯಲ್ಲಿ ಪತ್ರವ್ಯವಹಾರಗಳು ನಡೆಯುವಂತೆ ಆಗಬೇಕಾಗಿದ್ದರೆ ಅಲ್ಲಿ ನುರಿತ ಕನ್ನಡ ಟೈಪ್‌ರೈಟಿಂಗ್ ಮತ್ತು ಷಾರ್ಟ್ ಹ್ಯಾಂಡ್ ನೌಕರರ ಅಗತ್ಯ ಹೆಚ್ಚಾಗಿರುತ್ತದೆ. ಇಲ್ಲದಿದ್ದರೆ ಅಲ್ಲಿ ನಡೆಯಬೇಕಾದ ಕೆಲಸ ಕಾರ್ಯಗಳು ವೇಗವಾಗಿ ನಡೆಯುವುದಕ್ಕಾಗುವುದಿಲ್ಲ. ಹಾಗೆ ಕನ್ನಡ ಟೈಪ್‌ರೈಟಿಂಗ್ ಮತ್ತು ಷಾರ್ಟ್‌ಹ್ಯಾಂಡು ವಿದ್ಯೆಯಲ್ಲಿ ತರಬೇತು ಮಾಡುವುದಕ್ಕೆ ವಿದ್ಯಾರ್ಥಿಗಳನ್ನು ತರುವುದೇ ಬಹಳ ಕಷ್ಟವಾಗಿದೆ. ಕಾರಣ ಅವರಿಗೆ ಇದರಲ್ಲಿ ಏನೇನೂ ಉತ್ತೇಜನ ಇಲ್ಲ. ಅವರಿಗೆ ಪಾಸಾದ ಕೂಡಲೆ ಕೆಲಸಗಳು ಸಿಕ್ಕುವುದಿಲ್ಲ. ಅವರಿಗೆ ಪ್ರೋತ್ಸಾಹ ಮಾಡುವಂತೆ ಮಾಡಲು ಸರ್ಕಾರದವರು ಪ್ರಾರಂಭದಲ್ಲಿ ಒಂದು ಏನಾದರೂ ಅಲೋಯೆನ್ಸನ್ನು ಕೊಡುವುದು ಅಗತ್ಯ. ಇಲ್ಲದಿದ್ದರೆ ಈ ಬಾಬಿನಲ್ಲಿ ಟ್ರೈನಿಂಗನ್ನು ಕೊಡುವುದಕ್ಕೆ 10-20 ವಿದ್ಯಾರ್ಥಿಗಳನ್ನು ಬರಮಾಡಿಕೊಳ್ಳುವುದೇ ಬಹಳ ಕಷ್ಟವಾಗಿದೆ. ಆದ್ದರಿಂದ ಕೆಲವು ವರ್ಷಗಳ ಕಾಲವಾದರೂ ಈ ವಿದ್ಯಾಭ್ಯಾಸಕ್ಕೆ ಬರತಕ್ಕ ವಿದ್ಯಾರ್ಥಿಗಳಿಗೆ ಒಂದು ಅಲೋಯೆನ್ಸನ್ನಾಗಲೀ ಅಥವಾ ಒಂದು ಸ್ಕಾಲರ್‌ಷಿಪ್ಪನ್ನಾಗಲಿ ಕೊಡಬೇಕಾದ್ದು ಅತ್ಯಗತ್ಯ. ಅಲ್ಲದೆ ಇದರಲ್ಲಿ ಪಾಠಪ್ರವಚನ ನಡೆಸತಕ್ಕ ಪಾಠಶಾಲೆಗಳಿಗೂ ಕೂಡ ಪರಿಹಾರ ರೂಪದಲ್ಲಿ ಸಹಾಯ ಮಾಡಬೇಕಾದ್ದು ಅತ್ಯಗತ್ಯ. ಹೀಗೆ ಮಾಡಿ ಇದನ್ನು ಒತ್ತಾಯವಾಗಿ ಜಾರಿಗೆ ತರದಿದ್ದರೆ ಕನ್ನಡವನ್ನು ರಾಜ್ಯದಲ್ಲಿ ಅಧಿಕೃತಭಾಷೆಯನ್ನಾಗಿ ಮಾಡುವುದಕ್ಕೆ ಕಷ್ಟವಾಗುತ್ತದೆ.

ಒಂದು ಪ್ರೋಗ್ರಾಮ್ ಹಾಕಿಕೊಂಡು ಮೊದಲು ಎಲ್ಲಾ ಮಟ್ಟದಲ್ಲೂ ಕನ್ನಡವನ್ನು ಆಡಳಿತ ಭಾಷೆಯಾಗಿ ಜಾರಿಗೆ ತರಬೇಕು. ಆ ರೀತಿ ಒಂದು ಕಾರ್ಯಕ್ರಮ ಹಾಕಿಕೊಳ್ಳದೆ ಹೋದರೆ ಕನ್ನಡ ಭಾಷೆ ಆಡಳಿತ ಭಾಷೆಯಾಗುವುದಿಲ್ಲ ಎಂದು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಶಾಸನ ಸುವ್ಯವಸ್ಥೆ ಬಗ್ಗೆ ರಾಜ್ಯಪಾಲರು ಮಾತನಾಡುವಾಗ ಗುಲ್ಬರ್ಗಾ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಶಾಸನ ಸುವ್ಯವಸ್ಥೆ ಎಂದರೆ ಹೊಡೆದಾಟ ಬಡಿದಾಟ ಎಂದು ಅರ್ಥವಾಗುತ್ತದೆ. ನನ್ನ ತಿಳುವಳಿಕೆ ಪ್ರಕಾರ ರಾಜ್ಯದಲ್ಲಿ ಪೋಲೀಸರು ನಡೆಸಬೇಕಾದಂತಹ ಕಾರ್ಯಕ್ರಮ ತೆಗೆದುಕೊಳ್ಳಬೇಕಾದಂಥ ಕೆಲಸಗಳು ಏನು ಇವೆಯೋ ಅವನ್ನು ಆಸಕ್ತಿ ವಹಿಸಿ ಮಾಡಿಲ್ಲ. ಪೋಲೀಸರಿಗೆ ಮುಖ್ಯವಾಗಿ ಬೇಕಾಗಿರುವ ಮೇಲಿನ ಸಂಪಾದನೆಗೆ ಬೇಕಾದ ಕೆಲಸವಾಗುತ್ತಿದೆಯೇ ಹೊರತು ಶಾಸನ ಸುವ್ಯವಸ್ಥೆ ಖಂಡಿತ ನಡೆಯುತ್ತಿಲ್ಲ ಎಂದು ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಸುಮಾರು 500 ಕ್ಲಬ್‌ಗಳು ಇವೆ, ಅನೇಕ ನೈಟ್ ಕ್ಲಬ್‌ಗಳು ನಡೆಯುತ್ತಿವೆ. ಒಬ್ಬ ಕ್ಲಬ್ ನಡೆಸುವವನು ಒಂದು ತಿಂಗಳಿಗೆ ಸುಮಾರು 5 ಸಾವಿರದಿಂದ 10 ಸಾವಿರ ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಾನೆ. ಅರ್ಧಭಾಗ ಹಣವನ್ನು ಪೋಲೀಸರಿಗೆ ಕೊಟ್ಟು ರಮ್ಮಿ ಮೊದಲಾದ ಅನೇಕ

(ಶ್ರೀ ಟಿ. ಆರ್. ಶಾಮಣ್ಣ)

ಜೂಜು ಆಟವಾಡುತ್ತಿದ್ದಾರೆ. ಸೋಷಿಯಲ್ ಕ್ಲಬ್ ಎಂದು 500 ಕ್ಲಬ್‌ಗಳು ಇವೆ. ಪೋಲೀಸರ ಸಹಾಯದಿಂದ ಅನೇಕ ಕ್ಲಬ್‌ಗಳು ನಡೆಯುತ್ತಿವೆ. ಈ ಕ್ಲಬ್‌ಗಳಿಂದ ಅನೇಕ ಮನೆಗಳು ಹಾಳಾಗುತ್ತಿವೆ. ಪೋಲೀಸಿನವರೇ ಕುಮ್ಮಕ್ಕು ಕೊಟ್ಟು ನಡೆಸುತ್ತಾ ಇರುವುದರಿಂದ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಇಲ್ಲ. ಇದುಶಾಸನ ಸುವ್ಯವಸ್ಥೆಯೇ ಎಂದು ಕೇಳಬೇಕಾಗಿದೆ. ಪಾನನಿರೋಧ ಜಾರಿಗೆ ಬಂದಮೇಲೆ ಬೆಂಗಳೂರಿನಲ್ಲಿ ನಡೆಯತಕ್ಕಷ್ಟು ಕಳ್ಳಬಟ್ಟಿ ವ್ಯವಹಾರ ಬೇರೆ ಎಲ್ಲೂ ನಡೆಯುತ್ತಿಲ್ಲ. ಇದಕ್ಕೆ ಪೋಲೀಸಿನವರೇ ಉತ್ತೇಜನ ಕೊಡುತ್ತಿದ್ದಾರೆ. ಕಳ್ಳಬಟ್ಟಿ ಸಾರಾಯಿ ಕುಡಿಯುವುದಕ್ಕೆ ಬೇಕಾದಷ್ಟು ಸಿಕ್ಕುತ್ತದೆ ಜೊತೆಗೆ ಸರ್ಕಾರಕ್ಕೆ ಬರುವ ದುಡ್ಡು ಹೋಗುತ್ತದೆ. ಆದುದರಿಂದ ಕಳ್ಳ ಭಟ್ಟಿ ಸಾರಾಯಿ ತಡೆಗಟ್ಟದೇ ಇದ್ದ ಪಕ್ಷದಲ್ಲಿ ಸರ್ಕಾರಕ್ಕೆ ಬರಬೇಕಾದ ವರಮಾನವು ಬರುವುದಿಲ್ಲ. ಹೆಚ್ಚಿನ ರೀತಿಯಲ್ಲಿ ಕಳ್ಳಭಟ್ಟಿ ಸಾರಾಯಿ ಜನರಿಗೆ ಸಿಗುವಂತೆ ಮಾಡಿದರೆ, ಅವರು ಸಾಯುವುದಕ್ಕೆ ಅನುಕೂಲವಾಗುತ್ತದೆ. ಪೋಲೀಸ್ ಕಮಿಷನರ್‌ರವರ ವರದಿಯನ್ನು ನಾವು ಪತ್ರಿಕೆಯಲ್ಲಿ ಓದುತ್ತಿದ್ದೇವೆ, ಅಲ್ಲಿ ಕಳ್ಳತನವಾಯಿತು. ಇಲ್ಲಿ ಕಳ್ಳತನ ವಾಯಿತು, ವಿಚಾರಣೆಗಳು ನಡೆಯುತ್ತಿದೆ ಎಂದು. ಆದರೆ ಅದನ್ನು ತಡೆಗಟ್ಟುವುದಕ್ಕೆ ಏನು ಮಾಡುತ್ತಾರೆ ಎಂಬುದನ್ನು ನೋಡಬೇಕು. ಸಣ್ಣ ಪುಟ್ಟ ಹೊಡೆದಾಟಗಳ ಲೆಕ್ಕವೇ ಇಲ್ಲ. ನಾವು ರಾತ್ರಿ ಹೊತ್ತು ನಿದ್ದೆ ಮಾಡುವುದಕ್ಕೂ ಆಗುವುದಿಲ್ಲ. ಅವನು ಇವನನ್ನು ಹೊಡೆದ ಇವನು ಅವನನ್ನು ಹೊಡೆದ ಎಂದು ದೂರುಗಳು ಬಂದು ಒಂದು ದಿವಸವೂ ಸುಸೂತ್ರವಾಗಿ ನಿದ್ದೆ ಮಾಡುವುದಕ್ಕೆ ಆಗುವುದಿಲ್ಲ. ಪೋಲೀಸ್ ಸ್ಟೇಷನ್‌ಗೆ ಅಲೆಯುವುದೇ ಆಗಿದೆ, ಇದಕ್ಕೆ ಕಾರಣ ಕುಡಿತ ಮತ್ತು ಜೂಜಾಟ. ಇದು ಶಾಸನ ಸುವ್ಯವಸ್ಥೆಯೇ ಎಂದು ಈ ಸಂದರ್ಭದಲ್ಲಿ ನೋಡಬೇಕಾಗಿದೆ. ಪೋಲೀಸಿನವರು ಕ್ರಮವಾಗಿ ಪ್ರತಿಯೊಂದು ಸ್ಟೇಷನ್‌ಗೂ ಲಾರಿಯವರು ಇಷ್ಟಿಷ್ಟು ಕೊಡಬೇಕು, ಇಂತಿಂಥ ಬಾಬಿನಿಂದ ಇಷ್ಟು ದುಡ್ಡು ಬರಬೇಕೆಂದು ಲೆಕ್ಕ ಇಟ್ಟು ಕೊಂಡಿದ್ದಾರೆ. ಪೋಲೀಸ್ ಕಾನ್‌ಸ್ಟೇಬಲ್‌ನಿಂದ ಹಿಡಿದು ಇನ್ಸ್‌ಪೆಕ್ಟರ್‌ವರೆಗೂ ಹಂಚಿಕೆ ನಡೆಯುತ್ತಿದೆ. ಶಾಸನ ಸುವ್ಯವಸ್ಥೆ ನೋಡಿಕೊಳ್ಳುವವರೇ ಈ ರೀತಿ ಲೂಟಿ ಮಾಡಿದರೆ ಕುರಿಕಾಯುವುದಕ್ಕೆ ತೋಳ ಸಂಬಳವಿಲ್ಲದೆ ಕಾಯುತ್ತೇನೆಂದು ಹೇಳಿದ ವ್ಯವಸ್ಥೆ ಬರುತ್ತದೆ. ಇದನ್ನು ಯೋಚನೆ ಮಾಡಬೇಕಾಗಿದೆ.

ಇನ್ನು ತಮಗೆ ತಿಳಿದಹಾಗೆ ಪ್ರತಿ ವರ್ಷವೂ ಬರಗಾಲವಿದೆಯೆಂದು ಕಾಣುತ್ತದೆ. ಇದಕ್ಕಾಗಿ ಅನೇಕ ಯೋಜನೆಗಳು ಇವೆ ಮತ್ತು ವ್ಯವಸಾಯಕ್ಕೆ ಅನೇಕ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದಾರೆ. ಆದರೂ ಸಾಕಷ್ಟು ಆಹಾರ ಉತ್ಪತ್ತಿಯಾಗಿಲ್ಲ. ಆಹಾರದ ಬೆಲೆಗಳು ದಿನೇ ದಿನೇ ಏರುತ್ತಿವೆ. ಹೀಗಾದರೆ ಯಾವರೀತಿ ಜನಗಳ ಹಿತರಕ್ಷಣೆ ಆಗುತ್ತದೆ ಎಂದು ಯೋಚನೆ ಮಾಡಿ, ಮುಂದೆ ಭೂಸುಧಾರಣೆ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಸರ್ಕಾರದವರು ವಹಿಸುವವರಿದ್ದಾರೆ. ಭೂಸುಧಾರಣೆತರುತ್ತೇವೆಂದು ಹೇಳಿ 15-16 ವರ್ಷಗಳಾದುವು. ಕಾನೂನು ಏನೋ ಆಗಿದೆ. ಊರೆಲ್ಲಾ ಸೂರೆಯಾದ ಮೇಲೆ ಊರು ಬಾಗಿಲು ಹಾಕಿದರು ಎಂದು ಹೇಳಿದ ಹಾಗೆ ಜಮೀನನ್ನು ಯಾವ ರೀತಿ ವಿತರಣೆ ಮಾಡಿದರೆ ಕಾಯಿದೆಗೆ ಒಳಪಡದ ಹಾಗೆ ಆಗುತ್ತದೆ ಎಂದು ಯೋಚಿಸಿ ಎಲ್ಲಾ ಮಾಡಿದ ಮೇಲೆ ಭೂಸುಧಾರಣೆ ತಂದರೆ, ಆದರಿಂದ ಜನರಿಗೆ ಎಷ್ಟು ಅನುಕೂಲವಾಗಬಹುದು ಎಂದು ಯೋಚನೆ ಮಾಡಬೇಕು. ಇದರ ಜೊತೆಗೆ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುವವರು ಸಣ್ಣ ಹಿಡುವಳಿದಾರರು. ನನಗೆ ಯಾವ ಜಮೀನು ಇಲ್ಲ ಯಾರ ಪರ ವಾದಿಸಬೇಕಾಗಿಲ್ಲ. ಜಮೀನಿನಿಂದಲೇ ಜೀವನ ಮಾಡತಕ್ಕ ಅನೇಕ ಗಂಡಂದಿರನ್ನು ಕಳೆದುಕೊಂಡ ಹೆಂಗಸರು ಮತ್ತು ಸಣ್ಣ ಸಣ್ಣ ಸಂಸಾರಗಳು ಅನೇಕ ಬಡವರು ಇದ್ದಾರೆ. ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ ಇವರಿಂದ ಕಿತ್ತು ಬಿಟ್ಟು ವ್ಯವಸಾಯ ಮಾಡುವವರಿಗೆ ಕೊಟ್ಟರೆ ಕೊಡಿ, ಆದರೆ ಅನೇಕರಿಗೆ ಹೊಟ್ಟೆಗೆ ಸಿಗದಂತೆ ಅದನ್ನು ತೆಗೆದು ಬೇರೆ ವ್ಯವಸಾಯ ಮಾಡದೆ ಇರುವವರಿಗೆ ಕೊಡುವುದು ಅನ್ಯಾಯ. ಮಹಾರಾಜರನ್ನು ಮನೆಗೆ ಕಳುಹಿಸಿದಾಗ ಅವರಿಗೆ ಪರಿಹಾರ ಕೊಡುತ್ತೀರಿ. ಅದೇ ರೀತಿ ಇತರರನ್ನು ತೆಗೆದಾಗ ಅವರಿಗೆ ರಿಲೀಫ್ ಕೊಡುತ್ತೀರಿ ಆದರೆ ಸಣ್ಣ ಜಮೀನು ಇಟ್ಟುಕೊಂಡಿರುವವರಿಗೆ ಏನಾದರೂ ದಾರಿ ಮಾಡಿಕೊಡದೆ ಹೋದರೆ, ಅವರಿಗೆ ಸಂಪಾದನೆ ಮಾಡಲು ಬೇರೆ ದಾರಿಯೇ ಇಲ್ಲದಂತಾಗುತ್ತದೆ. ಹಾಗೆ ಮಾಡಿದರೆ ಜನರಿಗೆ ಯಾವರೀತಿ ಉಪಕಾರವಾಯಿತು ಎಂದು ನೋಡಬೇಕಾಗಿದೆ. ಸರ್ಕಾರದಲ್ಲಿ ಬಡವರು ಬಲ್ಲಿದರು ಎಲ್ಲಾ ಜನರ ಹಿತವನ್ನೂ ರಕ್ಷಿಸಬೇಕಾದ್ದು ಸರ್ಕಾರದ ಕರ್ತವ್ಯ. ಇದರಲ್ಲಿ ಜೀವನ ಮಾಡುವವರ ಜೀವನವನ್ನು ಕಿತ್ತುಕೊಂಡು, ನಿರ್ಗತಿಕರನ್ನಾಗಿ ಮಾಡಿ ತಿರುಪೆ ಎತ್ತುವ ಹಾಗೆ ಮಾಡಿದರೆ ನ್ಯಾಯವೇ ?

ಜಮೀನು ಇಲ್ಲದೆ ಇರುವವರಿಗೂ ಅನುಕೂಲ ಮಾಡಿಕೊಡಿ, ಬಂಜರು ಜಮೀನು ಕೊಡಿ. ಜಮೀನು ಯಾರು ಯಾರಿಗೆ ಕೊಟ್ಟರೆ ಯಾರಿಗೆ ಸುಭಿಕ್ಷವಾಯಿತು ಎಂದು ಯೋಚನೆ ಮಾಡಿ. ಜಮೀನನ್ನೇ ನಂಬಿಕೊಂಡು ಜೀವನಕ್ಕೆ ಬೇರೆ ಮಾರ್ಗವಿಲ್ಲದೆ ಇರುವಂಥವರಿಗೆ ಸರಿಯಾದ ರೀತಿಯಲ್ಲಿ ಅವರಿಗೆ ಜೀವನ ಮಾರ್ಗ ಒದಗಿಸಿಕೊಡದೇ ಹೋದರೆ, ಅವರಿಗೆ ಪೂರ್ಣ ಅನ್ಯಾಯ ಮಾಡಿದಂತೆ ಆಗುತ್ತದೆಂದು ಈ ಸಮಯದಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಅನ್‌ಎಂಪ್ಲಾಯ್‌ಮೆಂಟ್ ಬಗ್ಗೆ ಇಷ್ಟು ಮಾತ್ರ ಹೇಳಬಲ್ಲೆ. ಸರ್ಕಾರ ಸಾಕಾದಷ್ಟು ಗಮನವನ್ನು ಎಜುಕೇಟೆಡ್ ಅನ್ ಎಂಪ್ಲಾಯಡ್ ಬಗ್ಗೆ ಮಾತ್ರ ಹರಿಸುತ್ತಿದ್ದಾರೆ. ಇವತ್ತಿನ ದಿವಸ ತಮ್ಮ ಮುಂದೆ ಈ ಮನೆಯಲ್ಲಿ ಒಂದು ವಿಚಾರ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಮನೆಗೆ ಕಡೇ ಪಕ್ಷ ಆದರಲ್ಲೂ ಮುಖ್ಯವಾಗಿ ಅನೇಕ ಹೆಂಗಸರು ಬೆಳಿಗ್ಗೆನಿಂದ ಸಾಯಂಕಾಲದ ವರೆಗೂ ಗೋಳಾಡಿಕೊಂಡು ಬರುತ್ತಾರೆ. ನಮ್ಮ ಮನೆಯಲ್ಲಿ ಭರತಕ್ಕ ಜನರಲ್ಲಿ ಶೇಕಡ 5 ಭಾಗಕ್ಕೆ ಕೆಲಸ ಒದಗಿಸಿಕೊಟ್ಟರೆ ನನಗೆ ಬರತಕ್ಕ ಸಂಬಳ 400 ರೂಪಾಯಿಗಳನ್ನು ನಿಮಗೆ ಕೊಡುತ್ತೇನೆ. ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ದಿನೇ ದಿನೇ ಉಲ್ಬಣ ಸ್ಥಿತಿಗೆ ಬರುತ್ತಿದೆ. ಶೀಘ್ರವಾಗಿ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ನನಗೆ ಕಾಣುವ ಹಾಗೆ, ಯಾವ ರೀತಿಯಲ್ಲೂ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಆಗಿಲ್ಲ. ಅದು ಜಾಸ್ತಿಯಾಗುತ್ತಾ ಇದೆ. ತೀವ್ರ ಕಾರ್ಯಕ್ರಮ ತೆಗೆದುಕೊಳ್ಳದೆ ಹೋದ ಪಕ್ಷದಲ್ಲಿ ಕ್ರಾಂತಿ ಆಗುವ ಪರಿಸ್ಥಿತಿ ಉದ್ಭವಿಸುತ್ತದೆ. ಈ ಪ್ರಶ್ನೆಯನ್ನು ಸರ್ಕಾರ ಬರೀ ಘೋಷಣೆಯಿಂದ ಪರಿಹರಿಸುವುದಕ್ಕಾಗುವುದಿಲ್ಲ ಎಂದು ಒತ್ತಾಯ ಪೂರ್ವಕವಾಗಿ ಹೇಳಿ ಅನ್ ಎಂಪ್ಲಾಯ್‌ಮೆಂಟ್ ಬಗ್ಗೆ ಬರೀ ಪೇಪರ್ ಮೇಲೆ ಹೆಚ್ಚಿಗೆ ಪ್ರಯತ್ನ ಮಾಡುವುದು ಬೇಡ, ಈ ವರ್ಷದ ಆರಂಭದಲ್ಲಿ ಎಷ್ಟು ಅನ್ ಎಂಪ್ಲಾಯ್‌ಮೆಂಟ್ ಇತ್ತು, ಈ ವರ್ಷದ ಕೊನೆಯ ವರೆಗೆ ಎಷ್ಟು ನೌಕರಿ ಒದಗಿಸಿದ್ದೀರಿ ಎಂದು ಸ್ಟ್ಯಾಟಿಸ್ಟಿಕ್ಸನ್ನು ಒದಗಿಸಿ ಜನಗಳಿಗೆ ತೃಪ್ತಿಪಡಿಸಿ ಜನಗಳ ಹಾಹಾಕಾರ ತಪ್ಪಿಸುವುದಕ್ಕೆ ಪ್ರಯತ್ನಪಡುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೂರು ಯೋಜನೆಗಳು ಆದರೂ ಎಷ್ಟು ಪ್ರಯೋಜನವಾಯಿತು ಎಂಬುದನ್ನು ಜನಗಳು ಪಟ್ಟಿರತಕ್ಕ ಸುಖದಿಂದ ನೋಡಬೇಕಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯು ನಾಲ್ಕು ವರ್ಷ ಮುಗಿದು ಐದಕ್ಕೆ ಬಂದಿದ್ದೇವೆ. ಈ ಯೋಜನೆಗಳಿಂದ ಎಷ್ಟು ಮಟ್ಟಿಗೆ ಫಲಕಾರಿಯಾಯಿತು ಎಂಬುದನ್ನು ಯೋಚನೆ ಮಾಡಬೇಕಾಗಿದೆ. 5 ವರ್ಷಕ್ಕೆ ಒಂದು ಸಾರಿ ಮಾಡುವ ಪ್ಲಾನಿನಿಂದ ಜನಕ್ಕೆ ಸೌಖ್ಯವಾಗಿದೆಯೋ ಎಂದು ಯೋಚನೆ ಮಾಡಬೇಕಾಗಿದೆ.

4-30 P. M.

ಇನ್ನು ನಮ್ಮ ಬೆಂಗಳೂರು ನಗರದ ಕಷ್ಟ ಹೇಗೆ ಇದೆ ಎಂದರೆ ಹಳ್ಳಿಯವರುಗಳು ಪಟ್ಟಣಕ್ಕೆ ಬಂದು ಸೇರುತ್ತಿದ್ದಾರೆ. ಹಳ್ಳಿಯವರುಗಳು ಹಳ್ಳಿಗಳಲ್ಲೇ ಇದ್ದರೆ ಕ್ಷೇಮವಾಗಿರುತ್ತದೆ. ರೈತ ಹಳ್ಳಿಯಲ್ಲೇ ಇದ್ದುಕೊಂಡು ವ್ಯವಸಾಯ ಮಾಡದೇ ಹೋದರೆ ಹಳ್ಳಿಯನ್ನು ಉದ್ಧಾರ ಮಾಡವುದಕ್ಕಾಗುವುದಿಲ್ಲ. ಕಟ್ಟು ಪಟ್ಟಣ ಸೇರಬೇಕು ಎನ್ನುವಗಾದೆಯಂತೆ ಬೆಂಗಳೂರು ನಗರಕ್ಕೆ ಬರತಕ್ಕವರೆಲ್ಲಾ ಹಳ್ಳಿಯ ಜನರು. ಅವರು ಇಲ್ಲಿಗೆ ಏತಕ್ಕೆ ಬರುತ್ತಿದ್ದಾರೆ ಎಂದರೆ ಪಟ್ಟಣದಲ್ಲಿ ಕೆಲಸ ಸಿಕ್ಕುತ್ತದೆ ಎಂದು. ಅದರ ಬಗ್ಗೆ ಈಗಲಾದರೂ ಸರ್ಕಾರದವರು ಗಮನ ಕೊಟ್ಟು ಹಳ್ಳಿಯವರು ಹಳ್ಳಿಯಲ್ಲೇ ಕ್ಷೇಮವಾಗಿರುವಂತೆ ಒಂದು ವ್ಯವಸ್ಥೆ ಮಾಡಬೇಕು, ಬರೀ ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಕೊಳಚೆ ನಿರ್ಮೂಲನದ ವಿಷಯದ ಬಗ್ಗೆ ಹೇಳಬೇಕಾಗಿದೆ. ಬೆಂಗಳೂರು ನಗರದಲ್ಲಿ ಕಳೆದ 14 ವರ್ಷದಲ್ಲಿ ನಾನು ಕಾರ್ಪೋರೇಷನ್ನಿಗೆ ಹೋದಾಗ ಸುಮಾರು 100 ಸ್ಲಮ್ಸ್ ಇತ್ತು. ಈವೊತ್ತಿನ ದಿವಸ 130 ಸ್ಲಮ್ಸ್ ಇವೆ. ಈಗಾಗಲೇ ನೀವು ಸುಮಾರು 1 ಕೋಟಿ ರೂಪಾಯಿಗಳಷ್ಟು ಕೊಳಚೆ ನಿರ್ಮೂಲನಾ ಪ್ರದೇಶಕ್ಕೆ ಖರ್ಚು ಮಾಡಿದ್ದೀರಿ. ಆದರೆ ಆ ಕೊಳಚೆ ಪ್ರದೇಶಗಳು ನಿರ್ಮೂಲ ಆಗಲಿಲ್ಲ. 4 ಕೊಳಚೆ ಪ್ರದೇಶಗಳು ಮಾತ್ರ ನಿರ್ಮೂಲ ಮಾಡಿದ್ದೀರಿ. ಕಳಾಸಿಪಾಳ್ಯಂ ಹತ್ತಿರ ಸುಮಾರು 15 ಲಕ್ಷ ರೂಪಾಯಿ ಖರ್ಚು ಮಾಡಿ ಅಲ್ಲಿರತಕ್ಕಂಥ ಸ್ಲಂನ್ನು ವರ್ಗಾಯಿಸಿದರು ಮತ್ತೊಂದು ಸ್ಲಂ ಅಲ್ಲಿ ಬಂದಿರುತ್ತದೆ. ಒಂದು ಸ್ಲಂ ತೆಗೆದರೆ 4 ಸ್ಲಂಗಳು ಹುಟ್ಟಿಕೊಳ್ಳುತ್ತವೆ. ಸ್ಲಂಮ್ ಕ್ಲಿಯರ್ ಮಾಡುತ್ತೇವೆಂದು ಬರೀ ಬಾಯಿಯಲ್ಲಿ ಹೇಳಿದರೆ ಆಗುವುದಿಲ್ಲ. ಎಲ್ಲಿಯವರೆಗೆ ಕಾರ್ಪೋರೇಷನ್ನಿಗೆ ಚುನಾಯಿತರಾಗುವವರು ಓಟು ಕೇಳುವ ಪರಿಸ್ಥಿತಿ ಇರುತ್ತದೋ ಅಲ್ಲಿಯವರೆಗೆ

(ಶ್ರೀ ಟಿ. ಆರ್. ಶಾಮಣ್ಣ)

ಈ ಸ್ಲಂಗಳನ್ನು ನಿರ್ಮೂಲ ಮಾಡುವುದಕ್ಕಾಗುವುದಿಲ್ಲ. ಕಾರಣ ಏನೆಂದರೆ ಕಾರ್ಪೊರೇಷನ್ನಿಗೆ ಒಬ್ಬ ಕಾರ್ಪೊರೇಟರ್ ಚುನಾವಣೆಯಿಂದ ಗೆದ್ದು ಬರಬೇಕಾದರೆ ಅವನು ಎರಡು ಸ್ಲಂಗಳನ್ನು ಭದ್ರವಾಗಿ ಹಿಡಿದುಕೊಂಡರೆ ಸಾಕು. ಇದಕ್ಕೆ ರಾಜಕಾರಣಿಗಳೇ ಕಾರಣ. ಆದುದರಿಂದ ಈ ಸ್ಲಂಸ್‌ನ್ನು ತೆಗೆಯಬೇಕಾದರೆ ಇದಕ್ಕೆ ಒಂದು ಬಲವಾದಂಥ ಸಂಸ್ಥೆಯನ್ನು ಏರ್ಪಾಡು ಮಾಡಬೇಕು. ಈ ಕೊಳಚೆ ಪ್ರದೇಶಗಳು ಒಂದು ತರಹ ಕ್ಯಾನ್ಸರ್ ಇದ್ದ ಹಾಗೆ. ಆದ್ದರಿಂದ ಇವನ್ನು ಹೆಚ್ಚಾಗಿ ಬೆಳೆದುಕೊಂಡು ಹೋಗುವುದಕ್ಕೆ ಅವಕಾಶ ಕೊಡದೆ ನಿರ್ಮೂಲ ಮಾಡಲು ತಕ್ಕ ಏರ್ಪಾಡು ಮಾಡಬೇಕು. ಬಡವರ ಬಗ್ಗೆ ಮಾತನಾಡತಕ್ಕಂಥ ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳ ತಕ್ಕಂಥಾದ್ದು ನೀವು ನಿಜವಾಗಿಯೂ ಬಡವರ ಬಂಧುಗಳು ಎಂದು ಅನಿಸಿಕೊಳ್ಳಬೇಕಾದರೆ ವರ್ಷಕ್ಕೆ 10–20 ಸ್ಲಂಸ್‌ಗಳನ್ನಾದರೂ ತೆಗೆಯುವುದಕ್ಕೆ ಸಿದ್ಧಾಂತ ಮಾಡಿಕೊಂಡು ಒಂದು ಪ್ರೋಗ್ರಾಂ ಹಾಕಿಕೊಳ್ಳದೇ ಹೋದರೆ ಖಂಡಿತವಾಗಿಯೂ ನೀವು ಯಾವುದನ್ನೂ ಸಾಧಿಸುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ದರದ ಬಗ್ಗೆ ಮಾತನಾಡುತ್ತೇನೆ. ಈ ದರವನ್ನು ಬೋರ್ಡ್‌ನವರು ನಿಧಾನ ದ್ರೋಹ ಮಾಡಿದ ಹಾಗೆ ನಿಧಾನವಾಗಿ ಏರಿಸುತ್ತಿದ್ದಾರೆ. ಬೋರ್ಡು ಬರುವುದಕ್ಕಿಂತ ಮುಂಚೆ ಇದ್ದ ದರಕ್ಕೂ ಈಗ ಇರತಕ್ಕ ದರಕ್ಕೂ ಲೆಕ್ಕ ಹಾಕಿ ನೋಡಿದರೆ ಒಂದಕ್ಕೆ 3 ರಷ್ಟು ಹೆಚ್ಚಾಗಿದೆ. ಅವರ ಪ್ರೊಡಕ್ಷನ್ ಕಾಸ್ಟ್ 2 ಪೈಸೇ ಇದ್ದರೆ ನಮ್ಮ ಹತ್ತಿರ 40 ಪೈಸೇ ತೆಗೆದುಕೊಳ್ಳುತ್ತಾರೆ. ಆದುದರಿಂದ 2 ಪೈಸೇ ಇದ್ದುದನ್ನು 40 ಪೈಸೇ ತೆಗೆದುಕೊಳ್ಳಬೇಕಾದರೆ ಅದರಲ್ಲಿ ಲೋಪ ಇರಬೇಕು. ಅನೇಕ ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಎಂದು ಹೇಳುತ್ತಾರೆ. ಅದು ಹೇಗೆ ನಷ್ಟವಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಅದರಲ್ಲಿ ಉಳಿಯತಕ್ಕಂಥ ಮಾರ್ಗಗಳು ಬೇಕಾದಷ್ಟು ಇವೆ. ಎಲೆಕ್ಟ್ರಿಸಿಟಿ ತಯಾರಾಗತಕ್ಕಂಥ ಮೈಸೂರು ದೇಶದಲ್ಲಿ ಇಷ್ಟೊಂದು ಹೆಚ್ಚು ದರ ಕೊಡಬೇಕಾಗಿದೆಯೇ ಹೇಗೆ ಎನ್ನುವುದನ್ನು ಯೋಚನೆ ಮಾಡಬೇಕು. ಈ ಬೋರ್ಡ್‌ನಲ್ಲಿ ಆಗ ತಕ್ಕಂಥ ದೊಡ್ಡ ಲೋಪ ಏನೆಂದರೆ ಬೆಂಗಳೂರಿನಲ್ಲಿ 30 ಸಾವಿರ ಲೈಟುಗಳು ಇವೆ. ಅದರಲ್ಲಿ ಅರ್ಧ ಭಾಗದಷ್ಟು ಲೈಟುಗಳು ಉರಿಯುವುದಿಲ್ಲ. ಇದು ಎಲೆಕ್ಟ್ರಿಸಿಟಿ ಬೋರ್ಡಿನ ಒಂದು ಅದಕ್ಷತೆ ಎಂದು ತೋರಿಸುತ್ತದೆ. ಯಾವುದಾದರೂ ಸಮಾರಂಭಗಳಲ್ಲಿ ಮದುವೆ ಮುಂಜಿ ಕಾಲದಲ್ಲಿ ಕಾರಣ ಇರಲಿ, ಇಲ್ಲದೇ ಇರಲಿ ವಿದ್ಯುಚ್ಛಕ್ತಿಯ ಸರಬರಾಜು ಇರುವುದಿಲ್ಲ. ಹಿಂದೆ ಮಳೆಗಾಲದಲ್ಲಿ ಗಾಳಿ ಕಾಲದಲ್ಲಿ ವಿದ್ಯುಚ್ಛಕ್ತಿ ಹೋಗುತ್ತಿತ್ತೇ ವಿನಃ ಈಗಿನಂತೆ ಯಾವಾಗಲೂ ಹೋಗುತ್ತಿರಲಿಲ್ಲ. ಆದಕಾರಣ ಇವನ್ನು ತಪ್ಪಿಸುವುದಕ್ಕೆ ಮತ್ತು ಏರಿಸಿರುವ ದರದ ಬಗ್ಗೆ ಎಲೆಕ್ಟ್ರಿಸಿಟಿ ಬೋರ್ಡ್‌ನವರಲ್ಲಿ ಆಲೋಚನೆ ಮಾಡಿ ಸರಿಯಾದ ಒಂದು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ಮತ್ತು ಪ್ರೈವೇಟ್ ಸ್ಕೂಲ್ ನಡೆಯುವುದರ ಬಗ್ಗೆ ನಾನು ಸಾಕಾದಷ್ಟು ಅಧ್ಯಯನ ಮಾಡಿದ್ದೇನೆ. ಅಧ್ಯಕ್ಷರು ಬೆಲ್ ಮಾಡುತ್ತಾ ಇರುವುದರಿಂದ ಹೆಚ್ಚಾಗಿ ಅದರ ಬಗ್ಗೆ ಒತ್ತಾಯ ಮಾಡದಿದ್ದರೂ ನಾನು ಅನೇಕ ಅಮೆಂಡ್‌ಮೆಂಟ್‌ಗಳನ್ನು ಕಳುಹಿಸಿದ್ದೇನೆ, ಅದರಲ್ಲಿ ಮುಖ್ಯವಾಗಿರುವುದನ್ನು ಓದಿಬಿಟ್ಟು ನನ್ನ ಭಾಷಣವನ್ನು ಮುಗಿಸುತ್ತೇನೆ. ಮುಖ್ಯವಾದುದು ಯಾವುದು ಎಂದರೆ, ಅದು ಈ ಕೆಳಕಂಡಂತೆ ಇವೆ:—

Failure of the Government for not conducting the elections in fair and just manner, particularly in preparing voters list in a proper manner and also allowing large-scale bogus voting ;

Failure of the Government in not making proper bandhobust arrangements for preventing election clashes during and post election periods ;

Failure of the Government in allowing most of the co-operative institutions to be in miserable conditions ;

Failure of the Government to give better travelling facilities to the citizens of Bangalore at reasonable cost ;

Failure of the Government in not giving quality education to the children of the State ;

Failure of the Government in allowing many privately managed educational institutions to run on commercial basis ;

Failure of the Government in bringing more industries in the State to help employment potentialities ;

Failure of the Government in not checking corrupt practices ;

Failure of the Government in not taking suitable steps to check arbitrary and indiscriminate levy of property tax by the Bangalore City Corporation ;

Failure of the Government in stopping the useful advances to Government servants, like house building, motor car, motor cycle, cycle, etc.

Failure of the Government in not solving the housing problem ;

Failure of the Government in not giving proper accommodation to educational institutions and also providing playgrounds for children.

ಮಾನ್ಯ ಅಧ್ಯಕ್ಷಿಣಿಯವರೇ, ಸರ್ಕಾರವನ್ನು ಈಗ ಹೆಚ್ಚು ಟೀಕೆ ಮಾಡಿದರೆ ಪ್ರಯೋಜನವಿಲ್ಲ. ಏತಕ್ಕೆಂದರೆ ಅವರು ಅಧಿಕಾರವನ್ನು ವಹಿಸಿಕೊಂಡು ಕೇವಲ ಒಂದು ತಿಂಗಳು ಕೂಡ ಆಗಿಲ್ಲ. ಈಗ ನಾನು ಹೇಳುವುದು ಏನೆಂದರೆ ಸರ್ಕಾರ ಒಳ್ಳೆಯ ಹೆಸರು ತೆಗೆದುಕೊಳ್ಳಬೇಕಾದರೆ ಜನಗಳ ಕ್ಷೇಮದ ಬಗ್ಗೆ ಸಾಕಾದಷ್ಟು ಶ್ರದ್ಧೆ ವಹಿಸಬೇಕು ಮತ್ತು ಯಾವುದು ಒಳ್ಳೆಯ ಕೆಲಸಕಾರ್ಯಗಳು ಸಾಧನೆಯಾಗಿವೆ, ಅದರಿಂದ ಜನಗಳಿಗೆ ಎಷ್ಟು ಒಳ್ಳೆಯದಾಗಿದೆ ಎನ್ನುವುದನ್ನು ತಿಳಿಸಬೇಕು. ಬರೀ ರಾಜ್ಯಪಾಲರು ಓದತಕ್ಕಂಥ ಭಾಷಣದಲ್ಲಿ 12 ತಿಂಗಳ ಒಂದು ಸಾಧನೆಯನ್ನು ತೋರಿಸಬೇಡಿ. ಜನಗಳ ಹಿತದೃಷ್ಟಿಯಿಂದ ಏನು ಸಾಧನೆ ಮಾಡಿದ್ದೀರಿ, ಏನೇನು ಇಂಪ್ಲಿಮೆಂಟ್ ಆಗಿದೆ ಎನ್ನುವುದನ್ನು ನೋಡಬೇಕು. ಈ ಒಂದು ವರ್ಷದಲ್ಲಿ ಏನು ನಡೆಯಿತು ಎಂದು ಮುಂದಿನ ವರ್ಷದ ರಾಜ್ಯಪಾಲರ ಭಾಷಣದಲ್ಲಿ ತಿಳಿಸಬೇಕು. ಈ ವರ್ಷ ನಾನು ಇದನ್ನು ಟೀಕೆ ಮಾಡಿದ್ದರೂ ಕೂಡ ಸಾಕಾದಷ್ಟು ಮೆಚ್ಚತಕ್ಕಂಥ ಅವಕಾಶವನ್ನು ಮುಂದೆ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಅದೇ ರೀತಿ ಈಗ ರಾಜ್ಯಪಾಲರ ಭಾಷಣದಲ್ಲಿ ಸಾಕಾದಷ್ಟು ಜನಗಳಿಗೆ ಹಿತವಾಗಿಲ್ಲ. ಆದುದರಿಂದ ಈ ರಾಜ್ಯಪಾಲರ ಭಾಷಣವನ್ನು ನಾನು ವಿರೋಧಿಸುತ್ತೇನೆ. ಇಷ್ಟು ಹೇಳಿ ಅಧ್ಯಕ್ಷಿಣಿಯವರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Smt. MADIMAN SUMATI BALACHANDRA (Dharwar-Rural).—Madam Speaker, I support the motion that is before the House. First of all, I thank the Governor for placing before us some progressive programmes regarding unemployment, agriculture, land reforms etc. Regarding unemployment problem I would like to say that a large number of boys and girls, both graduates and non-graduates, are without jobs and especially women from low middle-class and the needy class are leading miserable lives with one meal a day. This has also led quite a considerable number of them to make a living by resorting to immoral ways of life. It is a great pity to see them struggling for their survival. No doubt, Government is trying its best to stop immoral traffic and have established rescue homes and shelter homes in many places, but this is only a temporary remedy. To prevent this immoral traffic and to provide employment to the unemployed, Industries are very essential. Cottage industries are a supplementary help. It is not enough to make a living in this industry, because I know

(SMT. MADIMAN SUMATI BALACHANDRA)

about it since I have tried this. People do not come forward to work in this industry as it is not worth paying for their livelihood. Since the past few years I have been trying to solve this problem and have come to the conclusion that until and unless bigger industries are started in taluks we will not be able to solve this problem of unemployment. Further the small scale industries also, as I understand, depend upon large scale industries. The large scale industries are always being located in cities. I was glad to read that some of the backward districts would be allotted some industries. But I wish that these industries are equally distributed to all the districts in the State also. If industries are started in taluks the educated and the uneducated men and women would get jobs. Ancillary Units for women could also be started and thereby a large number of women could be employed. This will also help to stop over-crowding of cities and the people from rural areas will be happy to be in their places.

Regarding Education I feel that Nursery Schools should be started in Villages and slum areas. Educationists and Psychologists have said that the most impressive years in a child's life are from 1 to 5 years and therefore more attention should be paid to their education in a proper environment. Unforunately these children are being neglected in villages and slums. Till the life of villagers and especially women is not ma e easy these problems will continue and our programmes will not be successful. The whole family revolves round the woman and it is she who looks after the family and all other members of the family depend on her. For example, when a woman goes to work her little babies and younger children are to be looked after by the elder children and thereby the elder children are deprived of school education. Out of 6 to 7 children hardly 2 attend the school. Even if you start schools in villages and slum areas the problem is who is to attend the schools? Therefore, I would suggest that Social Welfare Board could take more interest and put up programmes for starting creches by which the nutrition programme could be implemented successfully and the babies also looked after well. If this could be done not only the mothers would be relieved of their burden but also the older children could happily attend to schools and the younger children could by trained up well and the nutrition programmes could also be a success.

Then in some villlages we have schools only up to IV standard and after that the children have to walk upto 2 to 3 miles for their further education. I would suggest that irrespective of the number of children all Villages should have schools at least upto Kannada VII Standard. You can employ just one teacher and pay him little more and see that every village is equipped with a school having classes upto VII standard. To make the literacy programmes a success we have to tackle the root causes of this problem. To attain success in literacy programmes I

feel that until and unless schools are started in all villages this programme will not be successful. Not only that, but some of the boys who just comlete their IV standard school education are sent to work in farms and fields and I think even psychologically it is not good for the boys. Once I was told by a person when he introduced his son who was an agricultural graduate that his son did not want to come back and work on field because he felt this work to be quite inferior. One never thinks of the practical difficulties of the villagers and the needy. More attention to these problems will only be the solution to this. I would suggest that agricultural schools should be started in Taluks where boys who have discontinued school education and have taken up cultivation or farming could be given training. We hear many a times that the crops are not good and the output is not sufficient etc. I think this is all due to the fact that the farmer is not well-equipped with the scientific knowledge to cultivate his field.

Lastly, I would like to suggest that before we take up any project we should always look into the practical difficulties of the villages and slum areas. There is no meaning in starting these projects without understanding the practical difficulties of the people. We should go deep into the root causes before we start implementing any of our programmes and plans and then only I think they will be successful and we could really do something good for the people.

With these words I would like to once again support the motion that is before the house and thank the Chair for having given me this opportunity to speak.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬೇಕೆಂದು ಇಚ್ಛೆಪಡುತ್ತೇನೆ. ರಾಜ್ಯಪಾಲರ ಭಾಷಣದಮೇಲೆ ಅನೇಕ ಸದಸ್ಯರು ಮಾತನಾಡಿ ನಾವು ಆರಿಸಿ ಬಂದಿರತಕ್ಕ ಪಕ್ಷವನ್ನು ಸಾಕಷ್ಟು ಟೀಕೆ ಮಾಡಿದರು. ರಾಜ್ಯಪಾಲರ ಭಾಷಣವನ್ನು ಆರಿಸಿ ಬಂದಿರುವ ಈ ಮಂತ್ರಿಮಂಡಲಿ ರಚಿಸಿತೇ ಎಂಬುದನ್ನು ಯೋಚನೆಮಾಡತಕ್ಕ ಅವಶ್ಯಕತೆ ಮಾನ್ಯ ಸದಸ್ಯರಿಗಿತ್ತು ಎಂದು ಕಾಣುತ್ತದೆ. 8—10 ದಿವಸಗಳಲ್ಲಿ ಈ ಭಾಷಣವನ್ನು ಈಗ ರಚನೆಯಾಗಿರುವ ಮಂತ್ರಿಮಂಡಳ ತಯಾರಿಸಿಲ್ಲ ಎಂದು ಹೇಳಬೇಕಾಗಿದೆ, ಇದು ಶಮಗೆಲ್ಲಾಗೊತ್ತಿದೆ. ಯಾವ ಪಕ್ಷದವರೇ ಅಧಿಕಾರಕ್ಕೆ ಬಂದರೂ ಕೂಡ ಅವರು ಪ್ರಜೆಗಳಿಂದ ಮತ ಪಡೆದು ಬಂದ ವರ್ಷ ಈ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ ಎಂಬುದು ಕಳೆದ 25 ವರ್ಷಗಳಿಂದ ಪ್ರತಿಯೊಬ್ಬರಿಗೂ ಗೊತ್ತಿರಬೇಕು. ನಾನು ಆರಿಸಿ ಬಂದ ಪಕ್ಷದ ನೀತಿ ಮತ್ತು ನಮ್ಮ ಪ್ರಣಾಳಿಕೆ, ಜನರಿಗೆ ಭರವಸೆ ಕೊಟ್ಟಿರುವುದು ಆ ಅಂಶಗಳೊಂದು ರಾಜ್ಯಪಾಲರ ಭಾಷಣದಲ್ಲಿ ಅಡಕವಾಗಿಲ್ಲ, ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಅಂದಮೇಲೆ ನೇರವಾಗಿ ನಮ್ಮ ಮುಖ್ಯ ಮಂತ್ರಿಗಳನ್ನಾಗಲಿ ಅಥವಾ ಮಂತ್ರಿಮಂಡಲವನ್ನಾಗಲಿ ಟೀಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಎಲ್ಲರಿಗೂ ನಿಜಾಂಶ ಗೊತ್ತಿದೆ. ಪಕ್ಷಗಳವರು ಆರಿಸಿ ಬರುವರು, ಸರಕಾರದಲ್ಲಿ ಅಧಿಕಾರ ಯಂತ್ರವಿರುವುದು. ನಮ್ಮ ನೀತಿಯನ್ನು ಬುಡಮೇಲು ಮಾಡುವ ಶಕ್ತಿ ಅಧಿಕಾರಿಗಳಲ್ಲಿದೆ. ಇದು ಕಳೆದ 20-25 ವರ್ಷಗಳಿಂದಲೂ ನೋಡಿರತಕ್ಕ ವಿಷಯ. ಈ ವಿಷಯವನ್ನು ನಾನು ಹೇಳಬೇಕು ಎಂದರೆ, ಹೊಸದಾಗಿ ಆರಿಸಿಬರತಕ್ಕ ಯಾವುದೇ ಪಕ್ಷಕ್ಕೆ ಮಂತ್ರಿಮಂಡಲ ರಚನೆ ಮಾಡಿ ಕನಿಷ್ಠ ಪಕ್ಷ ಎರಡು ತಿಂಗಳ ಅವಕಾಶವಾದರೂ ಕೊಟ್ಟು ಇಂಥ ಭಾಷಣದಲ್ಲಿ ಅವರು ಏನು ಹೇಳುತ್ತಾರೆ ಎನ್ನುವ ಪದ್ಧತಿ ನಡೆದುಕೊಂಡು ಬಂದರೆ, ವಿಷಯಗಳು ಅಚ್ಚುಕಟ್ಟಾಗಿ ಇರುವ ಹಾಗೆ ಮಾಡುವುದಕ್ಕೆ ಅವರಿಗೆ ಅವಕಾಶವಿದ್ದರೆ, ಬಹುಶಃ ವಿರೋಧ ಪಕ್ಷದವರು ಇಂಥ ಭಾಷಣದ ಬಗ್ಗೆ ಹೆಚ್ಚು ಟೀಕೆಯನ್ನು ಮಾಡಲಾರರು ಎನ್ನುವ ಅಭಿಪ್ರಾಯದಿಂದ ಈ ವಿಷಯವನ್ನು ತಿಳಿಸುತ್ತಿದ್ದೇನೆ. ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲದಿದ್ದರೆ ಅವಕಾಶವನ್ನು ಮಾಡಿಕೊಳ್ಳಬೇಕಾಗುತ್ತದೆ.

(ಶ್ರೀ ಕೆ. ಶ್ರೀರಾಮುಲು)

ರಾಜ್ಯಪಾಲರ ಭಾಷಣವನ್ನು ಒಪ್ಪಿಕೊಳ್ಳುವುದಕ್ಕೆ ಇಚ್ಛೆ ಇಲ್ಲವೆ ಇದ್ದರೂ, ನಾವು ವಿಧಿ ಇಲ್ಲದೆ ಒಪ್ಪತಕ್ಕ ರಾಜ್ಯಪಾಲರ ಭಾಷಣದಲ್ಲಿ ಕಾರ್ಮಿಕರ ಬಗ್ಗೆಯಾಗಲೀ, ಗುಡಿಸಲುಗಳಲ್ಲಿ ವಾಸ ಮಾಡುವ ಬಡವರ ಬಗ್ಗೆಯಾಗಲಿ, ಏನನ್ನೂ ಹೇಳಿಲ್ಲ. ನಾವು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಬಡವರಿಗೆ, ಕಾರ್ಮಿಕರಿಗೆ, ಸರ್ಕಾರಿ ನೌಕರರಿಗೆ ಮನೆ ಕಟ್ಟಿಕೊಡುತ್ತೇವೆಂದು ಹೇಳಿದ್ದೇವೆ. ರಾಜ್ಯಪಾಲರ ಭಾಷಣವನ್ನು ತೆಗೆದು ಓದಿದರೆ ಎಲ್ಲಿ ಜಲಾಶಯಗಳಿವೆಯೋ ಅಲ್ಲಿ ನೀರಿನಿಂದ ಮುಳುಗಡೆಯಾಗತಕ್ಕ ಮನೆಗಳಿದ್ದರೆ ಅಂಥವರಿಗೆ ಮಾತ್ರ ವಿಶೇಷ ಗಮನ ಕೊಡಲಾಗುವುದು ಎಂದು ಹೇಳಿದ್ದಾರೆ. ಮೇಲೆ ಹಾಕಿರತಕ್ಕ ಹೆಡಿಂಗ್‌ನಲ್ಲಿ ಏನಿದೆ ಎಂದರೆ ಗುಡಿಸಲುಗಳನ್ನು ನಿರ್ಮೂಲ ಮಾಡಿ ಮನೆಗಳನ್ನು ಕಟ್ಟುವುದಕ್ಕಾಗಿ ಒಂದು ಕೋಟಿ 24 ಲಕ್ಷ ರೂಪಾಯಿಗಳನ್ನು ಒದಗಿಸಲಾಗುವುದು ಎಂದಿದೆ. ಮೇಲಿನ ಭಾಗಕ್ಕೂ, ಕೆಳಗಿನ ಭಾಗಕ್ಕೂ ವ್ಯತ್ಯಾಸವಿದೆ. ಗುಡಿಸಲುಗಳನ್ನು ನಿರ್ಮೂಲ ಮಾಡಿ ಮನೆಗಳನ್ನು ಕಟ್ಟುವುದಕ್ಕೆ ಕೋಟ್ಯಾಂತರ ರೂಪಾಯಿ ಕೊಡುತ್ತೇವೆ ಎನ್ನುವುದಕ್ಕೆ ಯಾವ ಆಧಾರವೂ ಸಿಕ್ಕುವುದಿಲ್ಲ. ಅಷ್ಟೇ ಅಲ್ಲ, ಬೆಂಗಳೂರಿನಲ್ಲಿ ನಾವಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಹೇಳಿದರು 130 ಕೊಳಚೆ ಪ್ರದೇಶಗಳಿವೆ ಎಂದು ; ನನ್ನ ಪ್ರಕಾರ 144 ಇವೆ. ಗುಡಿಸಲುಗಳು ಇರುವ ಸ್ಥಳ ಮತ್ತು ಇವು ಏಕೆ ಬೆಳೆಯುತ್ತವೆ ಎಂದು ಸರ್ಕಾರವಾಗಲೀ, ಯಾರೇ ಆಗಲೀ ಯೋಚನೆ ಮಾಡುತ್ತಿಲ್ಲ. ಇದನ್ನು ಯಾರು ಬೆಳೆಸುತ್ತಾರೆ? 1965 ನೇ ಇಸವಿಯಲ್ಲಿ ಟ್ರಸ್ಟ್‌ಬೋರ್ಡ್‌ಗೆ ಸಂಬಂಧಪಟ್ಟ ಒಂದು ಕಾನೂನು ಮಾಡಿದ್ದಾರೆ. ಅದರ ಪ್ರಕಾರ ಸೈಟುಗಳ ಹಂಚಿಕೆಯಲ್ಲಿ ನೌಕರರಿಗೆ 5 ಪರ್ಸೆಂಟ್, ಅಧಿಕಾರಿಗಳಿಗೆ 15 ಪರ್ಸೆಂಟ್ ಕೊಡಬೇಕೆಂದು ಮಾಡಿದ್ದಾರೆ. ಎಂದರೆ ಸಾವಿರಾರು ರೂಪಾಯಿ ಸಂಬಳ ಬರುವವರಿಗೆ 15 ಪರ್ಸೆಂಟ್, ದುಡಿದು ಶ್ರಮಪಟ್ಟು ಉತ್ಪತ್ತಿ ಕೊಡತಕ್ಕ ಕಾರ್ಮಿಕರಿಗೆ, ನೌಕರರಿಗೆ, ನಾಲ್ಕನೇ ವರ್ಗದ ನೌಕರರಿಗೆ ಐದು ಪರ್ಸೆಂಟ್ ಆಯಿತು. ಈ ತರಹ ಕಾನೂನನ್ನು ಇಟ್ಟು ಸಮಾಜವಾದವನ್ನು ತರುತ್ತೇವೆಂದು ಹೇಳಿದರೆ, ಆ ಕಾನೂನಿಗೂ, ಹೇಳತಕ್ಕ ಸಮಾಜವಾದಕ್ಕೂ ಏನಾದರೂ ಸಂಬಂಧವಿದೆಯೇ ಎನ್ನುವ ಪ್ರಶ್ನೆ ಬರುತ್ತದೆ. ಇದು ಯಾರು ಮಾಡಿದ್ದು ಎಂದರೆ, 1965 ರಲ್ಲಿ ಟ್ರಸ್ಟ್ ಬೋರ್ಡ್ ಚೇರ್‌ಮನ್ ಆಗಿ ಯಾರಿದ್ದರು ಅವರ ಒಂದು ಕಾನೂನು. ಒಬ್ಬ ಅಧಿಕಾರಿಗೆ ಇಡೀ ಪಕ್ಷದ ನೀತಿಯನ್ನು ಬದಲಾವಣೆ ಮಾಡತಕ್ಕ ಶಕ್ತಿ ಇದುವರೆಗೂ ಇರುತ್ತದೆ ಇದುವರೆಗೂ ಕೂಡ ನಾವು ಯಾವ ಸಮಾಜವಾದವನ್ನು ತಂದರೂ ಕೂಡ ಅದನ್ನು ಬುಡಮೇಲು ಮಾಡತಕ್ಕ ಶಕ್ತಿ ಅವರಿಗೆ ಇದೆ. ಅಧಿಕಾರಿಗಳು, ಯಾರು ಚುನಾವಣೆಗಳಲ್ಲಿ ಆರಿಸಿಬರುತ್ತಾರೋ ಅವರಲ್ಲಿ ಹೊಂದಿಕೊಂಡು ಹೋದರೆ ಮಾತ್ರ ನಮ್ಮ ದೇಶ ಮುಂದೆ ಬರುವುದಕ್ಕೆ ಸಾಧ್ಯ. ಹಾಗಲ್ಲದೆ ಚುನಾಯಿತ ಪ್ರತಿನಿಧಿಗಳ ನೀತಿಗಳಿಗೆ, ತತ್ವಗಳಿಗೆ ವಿರೋಧವಾಗಿ ತಮ್ಮದೇ ಆದ ಆಡಳಿತ ಯಂತ್ರವನ್ನು ಯಾರು ಇಟ್ಟುಕೊಂಡಿರುತ್ತಾರೆ ಅವರಿಂದ ಸಮಾಜವಾದ ಜಾರಿಗೆ ಬರಲು ಸಾಧ್ಯವಾಗಲಾರದು. ನನ್ನನ್ನೇ ಉದಾಹರಣೆಯಾಗಿ ತೆಗೆದುಕೊಂಡು ಒಂದು ಮಾತು ಹೇಳುತ್ತೇನೆ. ನಾನು ಅಧಿಕಾರಕ್ಕೆ ಬಂದ ತಕ್ಷಣ ಆಡಳಿತ ಯಂತ್ರ ಹೇಗಿರುತ್ತದೆ ಎಂದು ತಿಳಿದುಕೊಳ್ಳಬೇಕಾದರೆ ಅದಕ್ಕೆ ಕೆಲವು ಕಾಲ ಬೇಕಾಗುತ್ತದೆ. ಈ ಕೆಲವು ಕಾಲದಲ್ಲಿ, ನನಗೆ ಗೊತ್ತಿಲ್ಲದ ವಿಷಯಗಳನ್ನು ತಿಳಿದಿರತಕ್ಕ ಅಧಿಕಾರಿಗಳು ಬಂದು ಪ್ರಮಾಣಪೂರ್ವಕವಾಗಿ ಇಂಥದ್ದು ಆಗಬೇಕು ಎಂದು ಹೇಳುವುದಾದರೆ ಈ 25 ವರ್ಷಗಳಿಂದ ಏನನ್ನು ಮಾಡಲಿಲ್ಲವೋ ಅದನ್ನು ಮತ್ತಷ್ಟು ಚೆನ್ನಾಗಿ ಮಾಡುವುದಕ್ಕೆ ಅವಕಾಶವಿರುತ್ತಿತ್ತು. ಈ ದೇಶದಲ್ಲಿ ಸರ್ಕಾರದಿಂದ ಸಂಬಳವನ್ನು ಪಡೆದು ದೇಶಕ್ಕಾಗಿ ದುಡಿಯಬೇಕು ಎನ್ನುವ ಅಧಿಕಾರಿಗಳು ಬರುತ್ತಾರೆ, ಅವರು ಹೆಚ್ಚು ಪ್ರಮಾಣಪೂರ್ವಕವಾಗಿ ಇದ್ದಿದ್ದರೆ ನಮ್ಮ ದೇಶ ಬಹಳ ಉತ್ತಮವಾಗುತ್ತಿತ್ತು.

ಚುನಾವಣಾ ಪ್ರಚಾರದಲ್ಲಿ ತಾವೂ ಕೂಡನೋಡಿರುವ ಹಾಗೆ ಅನೇಕ ಕಷ್ಟನಷ್ಟಗಳು ಆಗುವುದನ್ನು ನೋಡಿದ್ದೇವೆ. ಕುಟುಂಬ ಯೋಜನೆಯನ್ನು ಯಾರಿಗಾಗಿ ಮಾಡುತ್ತಿದ್ದೀರಿ. ಗುಡಿಸಲುಗಳಲ್ಲಿರುವ ಜನಗಳಿಗೆ ನಿಮ್ಮ ಬೋಧೆ ನಡೆಯುತ್ತಿದೆ. ಇದರ ಬಗ್ಗೆ ನಾನು ಕೆಲವು ವಿಷಯ ಹೇಳಬೇಕೆಂದು ಇಚ್ಛೆಪಡುತ್ತೇನೆ. ಆರಡಿ ಅಗಲ ಎಂಟಡಿ ಉದ್ದ ಇರುವ ಗುಡಿಸಲುಗಳಲ್ಲಿ ತಂದೆ ತಾಯಿ, ಗಂಡ ಹೆಂಡತಿ, ಅವರ ಮಕ್ಕಳು ಇರುತ್ತಾರೆ. ಇಡೀ ಕುಟುಂಬದ ಇಷ್ಟು ಜನ ವಾಸಮಾಡತಕ್ಕ ಗುಡಿಸಲುಗಳಲ್ಲಿ ನಿಮ್ಮ ಕುಟುಂಬ ಯೋಜನೆಯನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತೀರಿ ! ಅವರು ವಾಸ ಮಾಡತಕ್ಕ ಮನೆಗಳಲ್ಲಿ ಮೂರು ನಾಲ್ಕು ಕೊಠಡಿಗಳಿಲ್ಲದಿದ್ದರೆ, ಯಾವ ರೀತಿ ಇವರು ಮಾಡುವ ಕುಟುಂಬ ಯೋಜನೆ ಫಲಕಾರಿಯಾಗುವುದಕ್ಕೆ ಸಾಧ್ಯ? ಅಧಿಕಾರಿಗಳಿಗೆ ಇದು ಗೊತ್ತಿದೆ. ಆದರೂ ಈ ಕಡೆ ಅವರ ದೃಷ್ಟಿ ಹರಿಯುವುದಿಲ್ಲ. ಗುಡಿಸಲು

ಗಳಲ್ಲಿ ಬೆಳೆಯುವವರು ಇರಬೇಕು, ಬಡವರು ಮತ್ತಷ್ಟು ಜಾಸ್ತಿ ಆಗುತ್ತಿರಬೇಕು. ಇಂಥ ಒಂದು ಆಡಳಿತ ಯಂತ್ರ ಸರ್ಕಾರದಲ್ಲಿ ನಡೆಯುತ್ತಿದೆ. ನನ್ನ ಅಭಿಪ್ರಾಯದಲ್ಲಿ ಈಗ ಯಾವ ಪಕ್ಷ ಜನರಿಂದ ಆರಿಸಲ್ಪಟ್ಟು, ಅಧಿಕಾರಕ್ಕೆ ಬಂದಿದೆಯೋ, ಯಾರು ಮುಖ್ಯ ಮಂತ್ರಿಗಳಾಗಿ ಆರಿಸಲ್ಪಟ್ಟಿರುವರೋ ಅವರು ಮತ್ತು ನಾವು ಬಡಜನರನ್ನು ರಕ್ಷಣೆ ಮಾಡುವ ವಿಚಾರದಲ್ಲಿ ಏನು ಭರವಸೆಗಳನ್ನು ಕೊಟ್ಟಿದ್ದೇವೆಯೋ ಅದನ್ನು ಕಾರ್ಯಗತ ಮಾಡುವುದಕ್ಕೆ ಅಧಿಕಾರಿಗಳು ಸಹಕರಿಸಿದರೆ ಮಾತ್ರ ಸಾಧ್ಯವೆಂದು ಹೇಳುತ್ತಿದ್ದೇನೆ.

**Sri B. B. SAYANAK** (Belgaum).—Madam Speaker, first of all, I congratulate the new Governor, who was the Chief Minister of Rajasthan for more than 15 years, who was a well-known leader in India, and who took initiative to elect or select late Sri Lalbahadur Sastry as the Prime Minister of India. However, I would like to criticise the Governor's Address, because there is no mention of the Maharashtra-Mysore border dispute in his Address The Maharashtra-Mysore border dispute is pending for more than 16 years. There was agitation, satyagraha and no-tax campaign in the border area and Senapathi Bapat had started 'fast unto death' in front of the house of the Chief Minister of Maharashtra in 1965. Afterwards, the Mahajan Commission was appointed and the report was submitted. That report was placed before the Parliament on 18th December 1970. After the report was placed before the Parliament, the Parliament was dissolved by the President on the advise of the Prime Minister.

5–00 P.M.

Now there is a Ruling Congress regime in Mysore State, there is a Ruling Congress Regime in Maharashtra State and there is Ruling Congress Regime in the Centre. I request through you Madam, the Central, State Governments to solve this vital problem of Maharashtrians. This problem is pending for the last 16 years. So, I request the Centre to solve this problem once and for all. The Central Government has solved the problem of East Bengal. They have fought with the Government of Pakistan and brought freedom to the people of East Bengal whose problem was also based on language. I request the Prime Minister through you Madam to solve this problem once and for all. Our Prime Minister has taken a risk in getting freedom to the people of East Bengal and thus she has elevated the fame and name of India in the eyes of the World. This problem pertains to 10 lakhs of Maharashtrians. We have successfully contested 4 general elections. This time, the governor has said in his speech that elections reflect the wishes of the people. This time there were five candidates fielded against me. The Belgaum City is the crux of the Maharashtra-Mysore border problem. The Congress (R) had given ticket to a communist and they have fully supported the Communist Party. There was a candidate set up against me from Congress (O), Muslim League, Indepedent supported by Jan-Singha and Swathantra. I have defeated almost all the candidates by a overwheling majority and I got 11000 more votes against my nearest Congress (O) candidate, Swatantra and the Jan Singh and Muslim League candidates have lost their deposits. That is the

(SRI B. B. SAYANAK)

historical success of the Maharashtra Ekikarna Samithi in the recent General Election. Why you are not respecting the wishes of the people of border area ? I request the Mysore Government to send us back to Maharashtra which is our Government.

The Mahajan Commission Report is perverse one-sided and full of inconsistencies.

(*Interruptions.*)

MADAM SPEAKER.—Please do not disturb the hon. Member. Let him go on with his speech.

SRI B. B. SAYANAK.—Our Prime Minister has not accepted the report of the Mahajan Commission *in toto* because that report is considered to be one-sided, preverse and full of inconsistencies. The Prime Minister had asked Sri Setalvad, Attorney-General, to offer his opinion on this Report. He has opined that the report was one sided. Border issue must be solved on the basis of village as a unit, simple majority, contiguity and wishes of the people.

Regarding Kannada language, I am proud of Kannada language because it is the sister language of Marathi. I respect all the 14 languages of India. If you want to introduce Kannada as the medium of instruction in all the schools in the border area where Marathi is the mother tongue, it would be very difficult for the boys to follow Kannada wherein Marathi people are in majority.

The text books for the 7th standard are made available to the students in the month of February. The Marathi text books are horrible. The Marathi speaking people say that these books are not correct. The books are in Marathi but the maps published in the books are in Kannada. Our boys are finding it extremely difficult to follow the maps. You will find such a discrepancy in the Social Studies Book prescribed for the 7th Standard. In the same way, the book on Mathematics. You will find Kannada script in this book. This being so, how do you expect our boys to follow such books This is the plight of Marathi students in border area.

There is a PUC Board in Mysore State and there is a Hindi paper for that exmination. In the question papers, there is an English para kannada para for translation in Hindi. But we do not find para in Marathi. I want to know why there is not a para in Marathi. If this is the fate of the Marathi boys, I request the Government to please send them back to Maharashtra which is their mother State.

Regarding political sufferers' pension, they are getting only Rs. 50 as political suffers' pension per month for having participated in the independence struggle. But the pension they get is not commensurate with the sufferings that they have undergone. These pensioners are required to produce income certificate once in three months. It is

strange that a man who has done a lot for the nation, who has gone to the jail should be asked to produce income certificate for every three months. You must ask the income certificate to be produced once in a year but you should not ask for the production of the certificate once in three months. Political sufferers pension is not an obligation on freedom fighters.

Taking into consideration the paltry sum paid to the political sufferers, I request the Government to pay at least Rs. 200 p.m. as political pension to all the freedom fighters.

Regarding the Co-operative Societies there is a big story to narrate. The Societies are there for the poor and the down-trodden. There are some societies in my area. If a man is going to take Rs. 100 share, he will be a share-holder otherwise he will not be allowed to be a share-holder. What is the use of such societies? Do you consider that these societies are meant for the poor? Shall we take it that they are meant for the rich only? Are they not for poor people? If so, why do you insist on 100 rupees share. Another interesting thing is about the Co-operative Banks. If a person purchases Rs. 1000 shares or Rs 300 he is entitled to contest for the Directorship. The Government has allowed this. Madam Speaker, this is not convenient. This is not proper; this is not a good thing for the poor people. I request the Government to take drastic action against the Societies which are doing such mischiefs and which are not allowing the poor people to be share-holders.

Regarding the liquor shop, it is a sad thing to tell. The liquor shop contractors are starting their shops in front of the Schools, even in front of Temples. We people in Belgaum are agitated over this problem. But the contractors and the authorities have never cared for the public agitation. There is one liquor shop in Hindalga just in front of the School. We requested the authorities to remove it. But they have not removed it so far.

Another thing is that the border area is completely neglected by the Government so far as irrigation is concerned. Though there are no major or minor irrigation projects in these area, there is one Bellary Nalla. They have constructed half of the nalla. The Deputy Commissioner told me that the Nalla would not be completed unless the popular Government comes to power. He further told me that there will be election and thereafter there will be popular Government and that Government could be prevailed upon in the Assembly to take up this Nalla for completion. I therefore, request you to take action to complete this work.

Regarding the law and order situation, it is very bad. There is one village called Kakati in Belgaum Taluka where a virgin was pregnant. She had an illegal connection with a brick-layer. She was going as cooli under him. The Sub-Inspector of that area caught hold of a poor agriculturist and made him to marry that lady even though he was

(SRI B. B. SAYANAK)

not willing. He was forced to marry that lady at about 8-30 p.m. The Sub-inspector himself purchased everything for this marriage. This is the state of affairs. What was the necessity for this Sub-Inspector to take initiative in this regard ? Why I am bringing this before this Hon. House, is the people in our area are afraid of these police people. They thought that the man who had not illegal connection with that woman would be made to marry her. But something different had taken place.

At the time of election, the communist member who contested against me had engaged some people to throw stones in the election meeting we held. The organisers of his party mixed up in the meeting threw stones and some of his organisers threw stones from outside. We caught hold of these people and handed them over to the Police. But the Police did not take any action on them.

Sri B. V. KAKKILAYA.—The persons who had thrown stones are not the members of the Communist Party. How can the hon. Member prove that they belong to the Communist Party ?

Sri B. B. SAYANAK.—They are the workers of that Party only. Though we had handed them over to the Police, they did not take action. They had not taken any cognisance of it and had not filed any case. The Police are partial to the Ruling Party and they were partial to the Communist candidate who was supported by the Ruling Party. Thank you.

ಶ್ರೀ ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷಣಿಯವರೇ, ಇದುವರೆಗೆ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಅನೇಕ ಮಾನ್ಯ ಸದಸ್ಯರು ಪರವಾಗಿ ಮತ್ತು ವಿರೋಧವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಮಾನ್ಯ ಸದಸ್ಯರು ಪರವಾಗಿ ಮಾತನಾಡಿದರೂ ಕೂಡ ಅವರ ಭಾಷಣದಲ್ಲಿ ಅನೇಕ ವಿರುದ್ಧವಾದ ವಿಚಾರಗಳನ್ನು ಕೂಡ ವ್ಯಕ್ತಪಡಿಸುತ್ತಿದ್ದರು. ಆದ್ದರಿಂದ ಅವರಿಗೆ ತೃಪ್ತಿಕರವಾಗಿಲ್ಲವೆಂದು ನನಗನ್ನಿಸುತ್ತದೆ. ಈ ರಾಜ್ಯಪಾಲರ ಭಾಷಣದಿಂದ ನಮ್ಮ ಮೈಸೂರು ರಾಜ್ಯಕ್ಕೆ ಆಗಲೀ ಅಥವಾ ಕರ್ನಾಟಕದ ಕನ್ನಡಿಗರಿಗೇ ಆಗಲೀ ತೃಪ್ತಿಕರವಾಗಿಲ್ಲ, ಸಮಾಧಾನಕರವಾಗಿಲ್ಲವೆಂದು ನಾನು ಹೇಳಬಹುದು. ನಮ್ಮ ಸರ್ಕಾರ ಮಾಡತಕ್ಕ ಅನೇಕ ವಿಷಯಗಳ ಬಗ್ಗೆ ಸಂಪೂರ್ಣವಾದ ಚಿತ್ರವನ್ನು ಅವರ ಭಾಷಣದಲ್ಲಿ ಕೊಟ್ಟಿಲ್ಲ. ಇದರಿಂದ ಜನತೆಗೆ ನಿರಾಶೆಯಾಗಿದೆಯೆಂದು ಹೇಳುವುದಕ್ಕೆ ನಾನು ಈಗ ನಿಂತಿದ್ದೇನೆ. ಈ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಕೆಲವೊಂದು ಮಾನ್ಯ ಸ್ನೇಹಿತರು ಈ ಗಡಿಯ ವಿವಾದದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದರು. ಸತ್ಯಕ್ಕೆ ದೂರವಾದ ವಿಚಾರಗಳನ್ನು ಈ ಸಭೆಯಲ್ಲಿ ಅವರು ಹೇಳಬಾರದಾಗಿತ್ತು ಎಂದು ಅವರಲ್ಲಿ ವಿನಂತಿ ಮಾಡಿಕೊಂಡು ಗಡಿ ವಿವಾದದ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಮೈಸೂರು ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರಗಳೆರಡೂ ಸಹ ಒಪ್ಪಿದ ಮೇಲೆ ಕೇಂದ್ರ ಸರ್ಕಾರ ಏಕ ಸದಸ್ಯ ಆಯೋಗವನ್ನು ನೇಮಕ ಮಾಡಿತು. ಆ ಆಯೋಗ ತನ್ನ ವರದಿಯನ್ನು ಕೊಟ್ಟ ಮೇಲೆ ಕೇಂದ್ರ ಸರ್ಕಾರ ಅದನ್ನು ನ್ಯಾಯವಾಗಿ ಒಪ್ಪಬೇಕಾಗಿತ್ತು. ಆದರೆ ಆ ವರದಿಯನ್ನು ಪಾರ್ಲಿಮೆಂಟಿನ ಮುಂದೆ ಇಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಸಯನಕ್ ಅವರು ರಾಜ್ಯದ ಜನತೆಯ ಅಭಿಪ್ರಾಯವನ್ನು ತಿಳಿಸದೆ ತಮ್ಮ ಸ್ವಂತ ಅಭಿಪ್ರಾಯವನ್ನು ಗಡಿ ವಿವಾದದ ಬಗ್ಗೆ ಹೇಳಿದ್ದಾರೆ. ಮತ್ತು ಸತ್ಯಕ್ಕೆ ದೂರವಾದ ವಿಚಾರಗಳನ್ನು ಸಹ ಅವರು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಷಯಗಳು ಬಿಟ್ಟುಹೋಗಿವೆ. ಮುಖ್ಯವಾಗಿ ನಮ್ಮ ದೇಶದ ಅಭಿವೃದ್ಧಿಯಾಗಬೇಕಾದರೆ, ಬಡತನ ದೂರವಾಗಬೇಕಾದರೆ ಅಥವಾ ಬಡವರಿಗೆ ಸಕಾಲದಲ್ಲಿ ಕೆಲಸ ಒದಗಿಸಬೇಕಾದರೆ, ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಆರ್ಥಿಕ ಮಟ್ಟ ಹೆಚ್ಚಾಗಬೇಕಾದರೆ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಹರಿಯುವ ನೀರನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳ

ತಕ್ಕದ್ದು ನಮ್ಮ ಸರ್ಕಾರದ ನೀತಿಯಾಗಿರಬೇಕು. ಆ ರೀತಿ ನೀರನ್ನು ಉಪಯೋಗ ಮಾಡಿಕೊಳ್ಳುವುದು ಸರ್ಕಾರದ ಧರ್ಮ. ಆದರೆ ನೀರಾವರಿ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಯಾವ ಒಂದು ಶಬ್ದವನ್ನೂ ತೋರಿಸಿಲ್ಲ. ನಮ್ಮ ರಾಜ್ಯದ ಎರಡೂವರೆ ಕೋಟಿ ಜನಸಂಖ್ಯೆಯಲ್ಲಿ 50 ಲಕ್ಷ ಜನಸಂಖ್ಯೆಗೆ ಅನುಕೂಲವಾಗುವಂತಹ ಮತ್ತು 6 ಲಕ್ಷ ಎಕರೆಗೆ ಮೇಲ್ಪಟ್ಟು ನೀರಾವರಿಯಾಗತಕ್ಕಂಥ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಯಾವ ಒಂದು ಶಬ್ದವನ್ನೂ ತೋರಿಸದಿರುವುದು ನೋಡಿದರೆ ನನಗೆ ತುಂಬಾ ವಿಷಾದವಾಗುತ್ತದೆ. ಇದು ಸುಮಾರು 200 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗುವ ಯೋಜನೆಯಾಗಿದೆ. ಇದರ ಬಗ್ಗೆ ಸ್ವಲ್ಪ ವಿಷಯವನ್ನಾದರೂ ರಾಜ್ಯಪಾಲರು ವ್ಯಕ್ತಪಡಿಸಿದ್ದರೆ ಆ ಭಾಗದ ಕನ್ನಡದ ಜನರಿಗೆ ತೃಪ್ತಿಯಾಗುತ್ತಿತ್ತು. ಆದರೆ ಏನನ್ನೂ ಹೇಳದಿರುವುದು ನಮ್ಮ ದುರ್ದೈವ,

ಯಾರೋ ಬರೆದದ್ದನ್ನು ಇವರು ಓದುತ್ತಿದ್ದಾರೆ.

ಅಪ್ಪರ್ ಕೃಷ್ಣ ಪ್ರಾಜೆಕ್ಟಿನ ವಿಚಾರದಲ್ಲಿ ಹೇಳುವುದಾದರೆ ಇದರಿಂದ 3 ಲಕ್ಷ ಎಕರೆ ರಾಯಚೂರು ಭಾಗದಲ್ಲಿ, 3 ಲಕ್ಷ ಎಕರೆಗಿಂತ ಹೆಚ್ಚಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿ ಆಗತಕ್ಕಂಥ ಸುಯೋಗ ನಮಗೆ ದೊರೆಯುತ್ತದೆ. ಈ ಪ್ರದೇಶಗಳು ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತವೆ. ಆದ್ದರಿಂದ ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಕಾರ್ಯಗತ ಮಾಡುವುದರಿಂದ ಈ ಪ್ರದೇಶದ ಜನತೆಗೆ ಬಹಳ ಅನುಕೂಲವಾಗುತ್ತದೆ. ಈ ಒಂದು ದೃಷ್ಟಿಯಿಂದ ಸರ್ಕಾರದವರು ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗ್ರಾಮಾಂತರ ಮತ್ತು ನಗರಗಳಿಗೆ ಸಂಬಂಧಪಟ್ಟ ನೀರು ಸರಬರಾಜಿಗೆ ಸಂಬಂಧಪಟ್ಟ ಯೋಜನೆಯ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಕಾರ್ಯಕ್ರಮ ಏನಿದೆ ಇದರ ಸಂಬಂಧದಲ್ಲಿ ಗ್ರಾಮಾಂತರ ಹಾಗೂ ನಗರಗಳಿಗೆ ನೀರುಪೂರೈಕೆ ಮಾಡುವುದು ಸಾಕಷ್ಟು ತೃಪ್ತಿಕರವಾಗಿ ನಡೆದಿಲ್ಲ. ದೇವದುರ್ಗ ತಾಲ್ಲೂಕಿನ ಸುಮಾರು 27 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಸರ್ಕಾರದವರು ಒದಗಿಸಿಲ್ಲ. ಈ ವಿಷಯದಲ್ಲಿ ಅನೇಕ ಜನರು ಸರ್ಕಾರದವರಿಗೆ ಮನವಿಯನ್ನು ಸಲ್ಲಿಸಿದ್ದಾರೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಆದರೂ ಸಹ ಕುಡಿಯುವ ನೀರಿನ ಸೌಕರ್ಯ ಆ ಭಾಗದ ಜನರಿಗೆ ಇನ್ನೂ ಸರ್ಕಾರದವರು ದೊರಕಿಸಿ ಕೊಟ್ಟಿಲ್ಲ. ವಾಟರ್ ಸಪ್ಲೈ ಯೋಜನೆಗಳು ಏನಿವೆ ಈ ಯೋಜನೆಗಳನ್ನು ಕೈಗೊಂಡು ಗ್ರಾಮಾಂತರ ಪ್ರದೇಶದ ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಅರಣ್ಯ ದಿನೇ ದಿನೇ ಕಡಿಮೆಯಾಗುತ್ತಿದೆ. ಇದು ಸರಿಯಲ್ಲ. ಅನೇಕ ಜನರು ಕಾಡನ್ನು ಕಡಿದು ನಾಶ ಮಾಡುತ್ತಿದ್ದಾರೆ. ಅರಣ್ಯವನ್ನು ಬೆಳೆಸುವ ಬಗ್ಗೆ ಸರ್ಕಾರದವರು ಕೊಡುವಂತಹ ಸೌಲಭ್ಯವನ್ನು ಉಪಯೋಗ ಮಾಡಿಕೊಂಡು ಕಾಡನ್ನು ಬೆಳೆಸುವ ಬಗ್ಗೆ ಯಾರೂ ಸಾಕಷ್ಟು ಪ್ರಯತ್ನವನ್ನು ಮಾಡಿಲ್ಲ. ಅರಣ್ಯವನ್ನು ಬೆಳೆಸುವ ಎಷ್ಟೋ ಯೋಜನೆಗಳು ಸರ್ಕಾರದ ಮುಂದೆ ಇವೆ. ರಾಜ್ಯದಲ್ಲಿ ಅನೇಕ ಕಡೆ ಎಷ್ಟೋ ವೇಸ್ಟ್ ಲ್ಯಾಂಡ್ ಇದೆ. ದೊಡ್ಡದೊಡ್ಡ ಭೂ ಮಾಲೀಕರಲ್ಲಿ ಎಷ್ಟೋ ವೇಸ್ಟ್ ಲ್ಯಾಂಡ್ ಇರುತ್ತದೆ ಅಂಥಾ ಜಮೀನಿನಲ್ಲಿ ಮರಗಳನ್ನು ಬೆಳೆಸುವಂತಹ ಒಂದು ಯೋಜನೆಯನ್ನು ಹಾಕಿದರೆ ಅರಣ್ಯ ಸಂಪತ್ತನ್ನು ಇಡೀ ದೇಶದಲ್ಲೇ ಬೆಳೆಸಬಹುದೆಂದು ನಾನು ಒಂದು ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆ.

ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಕೆಗಳನ್ನು ಕೈಗೊಳ್ಳುವ ಸಲುವಾಗಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸುಮಾರು 5 ಕೋಟಿ 49 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರ ಪೈಕಿ 3 ಕೋಟಿ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ನಿವೇದಿಸಿದ್ದಾರೆ. ಈ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಮೇಲಿಂದ ಮೇಲೆ ಬರಗಾಲ ಉಂಟಾಗುವುದರಿಂದ ಮತ್ತು ಇನ್ನಿತರ ಕಷ್ಟಗಳಿಂದ ಅನೇಕ ಭಾಗದಲ್ಲಿ ಜನಗಳಿಗೆ ಒಪ್ಪತ್ತು ಊಟ ಮಾಡುವುದಕ್ಕೆ ಸಾಕಾಗುವಷ್ಟು ಸಂಪಾದನೆ ಸಿಕ್ಕುವುದಿಲ್ಲ. ಅಂಥಾ ಒಂದು ದುಸ್ಥಿತಿಯಲ್ಲಿ ಜನಗಳು ಇದ್ದಾರೆ. ಅದನ್ನು ಸರ್ಕಾರದವರು ಗಮನಿಸಬೇಕು. ಸ್ಕೇರ್ಸಿಟಿ ಏರಿಯಾ ಏನಿದೆ, ಅಂಥಾ ಕಡೆ ಈಗ ಪರಿಹಾರ ಕಾಮಗಾರಿಕೆಗಳನ್ನು ನಿಲ್ಲಿಸಿದ್ದಾರೆ. ಇದರಿಂದ ಆ ಭಾಗದ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು

(ಶ್ರೀ ಕಾಗೋಡು ತಿಮ್ಮಪ್ಪ)

ವೀರೇಂದ್ರಪಾಟೀಲರ ಸರ್ಕಾರದಿಂದಾಗಲಿ ಇಂತಹ ಸಮಯಬದ್ಧ ಕಾರ್ಯಕ್ರಮವಿಲ್ಲದೆ ಒಂದು ರಾಜ್ಯಪಾಲರ ಭಾಷಣವನ್ನು ಮಾಡಿಸಿದ್ದರೆ ಅದಕ್ಕೆ ನಾವು ಹೆಚ್ಚಿಗೆ ಹೇಳುತ್ತಾ ಇರಲಿಲ್ಲ. ಆದರೆ ಈ ರಾಜ್ಯಸರ್ಕಾರದವರಿಗೆ ಜನತೆಯು ಅಧಿಕ ಸಂಖ್ಯೆಯ ಬಹುಮತವನ್ನು ನೀಡಿ ಸರ್ಕಾರವನ್ನು ನಡೆಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಾಗ ನೀವು ಚುನಾವಣೆಯ ಕಾಲದಲ್ಲಿ ಕೊಟ್ಟಂತಹ ಮಾತನ್ನು ಜ್ಞಾಪಕದಲ್ಲಿಟ್ಟುಕೊಂಡು ಅವುಗಳನ್ನು ಕಾರ್ಯಗತ ಮಾಡುವ ದೃಷ್ಟಿಯಿಂದ ಸಮಯಬದ್ಧ ಕಾರ್ಯಕ್ರಮವನ್ನು, ನೀತಿಯನ್ನು ಹಾಕಿಕೊಂಡು ರಾಜ್ಯಪಾಲರ ಭಾಷಣದಲ್ಲಿ ನಿರೂಪಿಸಬೇಕಾಗಿತ್ತು. ರಾಜ್ಯಪಾಲರ ಭಾಷಣ ನೋಡಿದರೆ ಎಂಥಹ ಕಾರ್ಯಕ್ರಮವನ್ನು ಮುಂದೆ ನೀವು ತರುತ್ತೀರಿ ಎಂಬುದರ ಬಗ್ಗೆ ಯಾವ ಸ್ಪಷ್ಟವಾದ ಕಲ್ಪನೆಯನ್ನು ಮತ್ತು ವಿವರಣೆಯನ್ನು ಕೊಡದಿರತಕ್ಕದ್ದು ತೀರಾ ವಿಷಾದಕರವಾಗಿದೆ. ಇಷ್ಟೇ ಅಲ್ಲದೆ ರಾಜ್ಯದ ಜನತೆ ಇದರಿಂದ ಅತ್ಯಂತ ವಿಷಾದ ಪಡುತ್ತಿದೆ. ಆದ್ದರಿಂದ ಈಗಾಗಲೇ ತಾವು ಕೊಟ್ಟಂತಹ ಮಾತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಹೆಜ್ಜೆ ಇಡಬೇಕೆಂದು ಹೇಳುತ್ತಿದ್ದೇನೆ. ಇಡೀ ಭಾಷಣದಲ್ಲಿ ಒಂದು ಕಡೆಯಾದರೂ ಸಮಾಜವಾದವನ್ನು ಸಕ್ರಿಯವಾಗಿ, ಪ್ರಾಮಾಣಿಕವಾಗಿ ಜಾರಿಗೆ ತರುತ್ತೇವೆಂಬ ಮಾತನ್ನು ಹೇಳಿದ್ದರೆ ನಾವು ಇಷ್ಟು ವ್ಯಸನ ಪಡಬೇಕಾಗಿರಲಿಲ್ಲ. ಆದರೆ ಇವೊತ್ತಿನ ದಿವಸ ನಮಗೆಲ್ಲಾ ಗೊತ್ತಿದೆ. ಬೆಲ್ಲಕ್ಕೆ ಗೊದ್ದ ಹುಳಗಳು ಸ್ವಾಭಾವಿಕವಾಗಿ ಮುತ್ತಿಡುತ್ತವೆ, ಅದರಂತೆ ಅಧಿಕಾರಕ್ಕಾಗಿ ಸಮಾಜವಾದದ ನಂಬಿಕೆ ಇರಲಿ, ಇಲ್ಲದಿರಲಿ, ಎಲ್ಲರೂ ಸೇರಿಕೊಂಡಿರುತ್ತೀರಿ. ಆದರೆ ತಾವು ಸಮಾಜವಾದವನ್ನು ಒಪ್ಪಿಕೊಂಡ ಮೇಲೆ, ಅದನ್ನು ಪ್ರಾಮಾಣಿಕವಾಗಿ ಜಾರಿಗೆ ತರತಕ್ಕಂತಹ ಸ್ಪಷ್ಟವಾದ ನೀತಿ ನಿರೂಪಣೆಯನ್ನು ಸ್ಪಷ್ಟವಾಗಿ ಜಾರಿಗೆ ಕೊಡಬೇಕಾಗಿದೆ. ನೀವು ಸಮಾಜವಾದವನ್ನು ಸಮಾನತೆಯನ್ನು ಜಾರಿಗೆ ತರುತ್ತೇವೆಂದು ಜನತೆಗೆ ಯಾವಾಗ ಭರವಸೆಯನ್ನು ಕೊಟ್ಟು ಚುನಾಯಿತರಾಗಿ ಬಂದಿದ್ದೀರೋ, ಹಾಗಿರುವಾಗ ನೀವು ಅದನ್ನು ಅವಷ್ಟು ಜಾಗ್ರತೆ ಕಾರ್ಯಗತ ಮಾಡಲೇ ಬೇಕಾಗುತ್ತದೆ. ಆದರೆ ನೀವು ವಿಶೇಷವಾಗಿ ಸಮಾಜವಾದನ್ನು ಹೇಳಿಕೊಂಡು ಬಂದರೂ ಕೂಡ, ಅಪಾರವಾದ ಆಸ್ತಿಯಿದ್ದಂತಹ ಕೆಲವು ಮಿತ್ರರು ಈಗ ನಿಮ್ಮಲ್ಲಿ ಮಂತ್ರಿಯಾಗಿದ್ದಾರೆ. ನಮ್ಮ ಭಾಸ್ಕರ ಶೆಟ್ಟರು ಮತ್ತು ಹಮೀದ್ ಶಾರವರು ಇದರ ಬಗ್ಗೆ ಸ್ವಲ್ಪ ತೀವ್ರವಾಗಿ ಯೋಚನೆ ಮಾಡಿ, ಹಿಂದೆ ಅವರು ಹೇಳಿದಂತಹ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಅವರು ಆರ್ಥಿಕ ಮಟ್ಟ 1:10ರಷ್ಟು ಇರಬೇಕೆಂದು ಹೇಳುತ್ತಿದ್ದರು. ಸಾಮಾಜಿಕವಾದ ಸಮಾನತೆಯನ್ನು ಜಾರಿಗೆ ತರಬೇಕಾದರೆ, ದೇಶದಲ್ಲಿ ಹಿಂದುಳಿದ ಜನರಿಗೆ, ಹರಿಜನರಿಗೆ, ಗಿರಿಜನರಿಗೆ ಮತ್ತು ಅಲ್ಪ ಸಂಖ್ಯಾತ ಜನರಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ 100ಕ್ಕೆ 60ರಷ್ಟು ಸ್ಥಾನವನ್ನು ಕಲ್ಪಿಸಬೇಕೆಂದು ಎಲ್ಲರೂ ಹೇಳುತ್ತಿದ್ದರು. ಅವುಗಳನ್ನು ಈಗ ಸಮಾಜವಾದಿ ಮಿತ್ರರು ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ ರಾಜ್ಯಪಾಲರ ಭಾಷಣದಲ್ಲಿ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ತರುವುದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇವರ ನಾಲಿಗೆ ಬಿದ್ದುಹೋಗಿತ್ತೇ! ನೀವೇನು ನಿರ್ವೀರ್ಯರಾಗಿದ್ದೀರಾ ಎಂದು ಕೇಳಬೇಕಾಗಿದೆ. ಇವೊತ್ತಿನ ದಿವಸ ಶ್ರೀಮಾನ್ ಎಸ್. ಎಂ. ಕೃಷ್ಣರವರಲ್ಲಿ ಮತ್ತು ಮಾನ್ಯ ಭಾಸ್ಕರ ಶೆಟ್ಟರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದರಲ್ಲಿ ಹೆಚ್ಚಿಗೆ ಆಸಕ್ತಿಯನ್ನು ವಹಿಸಬೇಕು. ಇಲ್ಲದಿದ್ದರೆ ನೀವು ಆತ್ಮಘಾತುಕ ಮಾಡಿಕೊಂಡ ಹಾಗೆ ಆಗುತ್ತದೆ. ಕೇವಲ ಅಧಿಕಾರಕ್ಕೋಸ್ಕರ ನೀವು ಕೂತ್ತಿದ್ದೀ: ಆದರೆ ನಿಮಗೆ ಜನರು ಧಿಕ್ಕಾರ ಹಾಕುವರು ; ಮತ್ತು ನೀವು ಸಮಾಜವಾದವನ್ನು ಜಾರಿಗೆ ತರುವುದರಲ್ಲಿ ವಿಫಲರಾಗುತ್ತೀರಿ. ಇದಕ್ಕೆ ನಿಮ್ಮ ಆತ್ಮಪರಿಶೋಧನೆ ಮಾಡಿಕೊಂಡು ನೀವು ಹೆಚ್ಚಿನ ಕೆಲಸವನ್ನು ಮಾಡಬೇಕಾಗಿದೆ. ನಿಮ್ಮ ಮತ್ತು ಕೇಂದ್ರಸರ್ಕಾರದ ಆಡಳಿತ ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗಿದೆ. ಇವೊತ್ತಿನ ದಿವಸ ನಿಮ್ಮ ಅಧಿಕಾರ ಬೆಂಗಳೂರಿನಿಂದ ಹಿಡಿದು ಹಳ್ಳಿಯವರೆಗೆ ಹೋಗಬೇಕಾಗಿದೆ ; ಹಳ್ಳಿಯಿಂದ ಬೆಂಗಳೂರಿಗೆ ಅಲ್ಲ. ಇಂತಹ ವ್ಯವಸ್ಥೆಯನ್ನು ತರಲು ಯಾವ ವ್ಯವಸ್ಥೆಯನ್ನು ಮಾಡಿದ್ದೀರಿ? ಏನೂ ಮಾಡಿಲ್ಲ. ಕಳೆದ ಎರಡು ವರ್ಷಗಳ ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಿಂದ ಸೇರಿದ ಪಂಚಾಯಿತಿ ರಾಜ್ಯ ಪರಿಷತ್ತು ರಾಜ್ಯದಲ್ಲಿ, ಜಿಲ್ಲಾ ಪರಿಷತ್ತುಗಳನ್ನು ಅಸ್ತಿತ್ವಕ್ಕೆ ತರಬೇಕೆಂದು ತೀರ್ಮಾನ ತಗೆದುಕೊಂಡಿದ್ದರು. ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮತ್ತು ಪಂಚಾಯತ್‌ಗಳ ಮುಖಂಡರು ತೆಗೆದುಕೊಂಡಿರತಕ್ಕಂತಹ ಈ ತೀರ್ಮಾನದ ಬಗ್ಗೆ ಸರ್ಕಾರದವರು ಇನ್ನೂ ಯಾವ ಮಾತನ್ನು ಹೇಳಿಲ್ಲ. ಏಕೆಂದರೆ ಅಧಿಕಾರ ವಿಕೇಂದ್ರೀಕರಣವಾದರೆ ಮಂತ್ರಿಗಳ ಸ್ಥಾನಮಾನ ಸ್ವಲ್ಪ ಅಲುಗಾಡುತ್ತದೆ. ಇವತ್ತು ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬಂದರೆ ಸರ್ಕಾರದಲ್ಲಿರುವ ಅಧಿಕಾರ ಕಿತ್ತುಕೊಂಡು

ತಕ್ಕದ್ದು ನಮ್ಮ ಸರ್ಕಾರದ ನೀತಿಯಾಗಿರಬೇಕು. ಆ ರೀತಿ ನೀರನ್ನು ಉಪಯೋಗ ಮಾಡಿಕೊಳ್ಳುವುದು ಸರ್ಕಾರದ ಧರ್ಮ. ಆದರೆ ನೀರಾವರಿ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಯಾವ ಒಂದು ಶಬ್ದವನ್ನೂ ತೋರಿಸಿಲ್ಲ. ನಮ್ಮ ರಾಜ್ಯದ ಎರಡೂವರೆ ಕೋಟಿ ಜನಸಂಖ್ಯೆಯಲ್ಲಿ 50 ಲಕ್ಷ ಜನಸಂಖ್ಯೆಗೆ ಅನುಕೂಲವಾಗುವಂತಹ ಮತ್ತು 6 ಲಕ್ಷ ಎಕರೆಗೆ ಮೇಲ್ಪಟ್ಟು ನೀರಾವರಿಯಾಗತಕ್ಕಂಥ ನೀರಾವರಿ ಯೋಜನೆಯಾದ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಯಾವ ಒಂದು ಶಬ್ದವನ್ನೂ ತೋರಿಸದಿರುವುದು ನೋಡಿದರೆ ನನಗೆ ತುಂಬಾ ವಿಷಾದವಾಗುತ್ತದೆ. ಇದು ಸುಮಾರು 200 ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚಾಗುವ ಯೋಜನೆಯಾಗಿದೆ. ಇದರ ಬಗ್ಗೆ ಸ್ವಲ್ಪ ವಿಷಯವನ್ನಾದರೂ ರಾಜ್ಯಪಾಲರು ವ್ಯಕ್ತಪಡಿಸಿದ್ದರೆ ಆ ಭಾಗದ ಕನ್ನಡದ ಜನರಿಗೆ ತೃಪ್ತಿಯಾಗುತ್ತಿತ್ತು. ಆದರೆ ಏನನ್ನೂ ಹೇಳದಿರುವುದು ನಮ್ಮ ದುರ್ದೈವ,

ಯಾರೋ ಬರೆದದ್ದನ್ನು ಇವರು ಓದುತ್ತಿದ್ದಾರೆ.

ಅಪ್ಪರ್‌ಕೃಷ್ಣ ಪ್ರಾಜೆಕ್ಟಿನ ವಿಚಾರದಲ್ಲಿ ಹೇಳುವುದಾದರೆ ಇದರಿಂದ 3 ಲಕ್ಷ ಎಕರೆ ರಾಯಚೂರು ಭಾಗದಲ್ಲಿ, 3 ಲಕ್ಷ ಎಕರೆಗಿಂತ ಹೆಚ್ಚಾಗಿ ಗುಲ್ಬರ್ಗಾ ಜಿಲ್ಲೆಯಲ್ಲಿ ನೀರಾವರಿ ಆಗತಕ್ಕಂಥ ಸುಯೋಗ ನಮಗೆ ದೊರೆಯುತ್ತದೆ. ಈ ಪ್ರದೇಶಗಳು ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತವೆ. ಆದ್ದರಿಂದ ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಕಾರ್ಯಗತ ಮಾಡುವುದರಿಂದ ಈ ಪ್ರದೇಶದ ಜನತೆಗೆ ಬಹಳ ಅನುಕೂಲವಾಗುತ್ತದೆ. ಈ ಒಂದು ದೃಷ್ಟಿಯಿಂದ ಸರ್ಕಾರದವರು ಈ ಅಪ್ಪರ್ ಕೃಷ್ಣಾ ಯೋಜನೆಯನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಗ್ರಾಮಾಂತರ ಮತ್ತು ನಗರಗಳಿಗೆ ಸಂಬಂಧಪಟ್ಟ ನೀರು ಸರಬರಾಜಿಗೆ ಸಂಬಂಧಪಟ್ಟ ಯೋಜನೆಯ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಕಾರ್ಯಕ್ರಮ ಏನಿದೆ ಇದರ ಸಂಬಂಧದಲ್ಲಿ ಗ್ರಾಮಾಂತರ ಹಾಗೂ ನಗರಗಳಿಗೆ ನೀರುಪೂರೈಕೆ ಮಾಡುವುದು ಸಾಕಷ್ಟು ತೃಪ್ತಿಕರವಾಗಿ ನಡೆದಿಲ್ಲ. ದೇವದುರ್ಗ ತಾಲ್ಲೋಕಿನ ಸುಮಾರು 27 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಸರ್ಕಾರದವರು ಒದಗಿಸಿಲ್ಲ. ಈ ವಿಷಯದಲ್ಲಿ ಅನೇಕ ಜನರು ಸರ್ಕಾರದವರಿಗೆ ಮನವಿಯನ್ನು ಸಲ್ಲಿಸಿದ್ದಾರೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ಈ ವಿಚಾರವನ್ನು ತಂದಿದ್ದಾರೆ. ಆದರೂ ಸಹ ಕುಡಿಯುವ ನೀರಿನ ಸೌಕರ್ಯ ಆ ಭಾಗದ ಜನರಿಗೆ ಇನ್ನೂ ಸರ್ಕಾರದವರು ದೊರಕಿಸಿ ಕೊಟ್ಟಿಲ್ಲ. ವಾಟರ್ ಸಪ್ಲೈ ಯೋಜನೆಗಳು ಏನಿವೆ ಈ ಯೋಜನೆಗಳನ್ನು ಕೈಗೊಂಡು ಗ್ರಾಮಾಂತರ ಪ್ರದೇಶದ ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಅರಣ್ಯ ದಿನೇ ದಿನೇ ಕಡಿಮೆಯಾಗುತ್ತಿದೆ. ಇದು ಸರಿಯಲ್ಲ. ಅನೇಕ ಜನರು ಕಾಡನ್ನು ಕಡಿದು ನಾಶ ಮಾಡುತ್ತಿದ್ದಾರೆ. ಅರಣ್ಯವನ್ನು ಬೆಳೆಸುವ ಬಗ್ಗೆ ಸರ್ಕಾರದವರು ಕೊಡುವಂತಹ ಸೌಲಭ್ಯವನ್ನು ಉಪಯೋಗ ಮಾಡಿಕೊಂಡು ಕಾಡನ್ನು ಬೆಳೆಸುವ ಬಗ್ಗೆ ಯಾರೂ ಸಾಕಷ್ಟು ಪ್ರಯತ್ನವನ್ನು ಮಾಡಿಲ್ಲ. ಅರಣ್ಯವನ್ನು ಬೆಳೆಸುವ ಎಷ್ಟೋ ಯೋಜನೆಗಳು ಸರ್ಕಾರದ ಮುಂದೆ ಇವೆ. ರಾಜ್ಯದಲ್ಲಿ ಅನೇಕ ಕಡೆ ಎಷ್ಟೋ ವೇಸ್ಟ್ ಲ್ಯಾಂಡ್ ಇದೆ. ದೊಡ್ಡದೊಡ್ಡ ಭೂ ಮಾಲೀಕರಲ್ಲಿ ಎಷ್ಟೋ ವೇಸ್ಟ್ ಲ್ಯಾಂಡ್ ಇರುತ್ತದೆ ಅಂಥಾ ಜಮೀನಿನಲ್ಲಿ ಮರಗಳನ್ನು ಬೆಳೆಸುವಂತಹ ಒಂದು ಯೋಜನೆಯನ್ನು ಹಾಕಿದರೆ ಅರಣ್ಯ ಸಂಪತ್ತನ್ನು ಇಡೀ ದೇಶದಲ್ಲೇ ಬೆಳೆಸಬಹುದೆಂದು ನಾನು ಒಂದು ಸಲಹೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆ.

ಬರಗಾಲ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾಮಗಾರಿಕೆಗಳನ್ನು ಕೈಗೊಳ್ಳುವ ಸಲುವಾಗಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಸುಮಾರು 5 ಕೋಟಿ 49ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಇದರ ಪೈಕಿ 3 ಕೋಟಿ ರೂಪಾಯಿಗಳನ್ನು ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಿದ್ದೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ನಿವೇದಿಸಿದ್ದಾರೆ. ಈ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಮೇಲಿಂದ ಮೇಲೆ ಬರಗಾಲ ಉಂಟಾಗುವುದರಿಂದ ಮತ್ತು ಇನ್ನಿತರ ಕಷ್ಟಗಳಿಂದ ಅನೇಕ ಭಾಗದಲ್ಲಿ ಜನಗಳಿಗೆ ಒಪ್ಪತ್ತು ಊಟ ಮಾಡುವುದಕ್ಕೆ ಸಾಕಾಗುವಷ್ಟು ಸಂಪಾದನೆ ಸಿಕ್ಕುವುದಿಲ್ಲ. ಅಂಥಾ ಒಂದು ದುಸ್ಥಿತಿಯಲ್ಲಿ ಜನಗಳು ಇದ್ದಾರೆ. ಅದನ್ನು ಸರ್ಕಾರದವರು ಗಮನಿಸಬೇಕು. ಸ್ಕೇರ್ಸಿಟಿ ಏರಿಯಾ ಏನಿದೆ, ಅಂಥಾ ಕಡೆ ಈಗ ಪರಿಹಾರ ಕಾಮಗಾರಿಕೆಗಳನ್ನು ನಿಲ್ಲಿಸಿದ್ದಾರೆ. ಇದರಿಂದ ಆ ಭಾಗದ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಸರ್ಕಾರದವರು

(ಶ್ರೀ ಶರಣಪ್ಪ).

ಆ ಪ್ರದೇಶಕ್ಕೆ ಹಣವನ್ನು ಒದಗಿಸಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಮುಖ್ಯವಾಗಿ ರಾಯಚೂರು ಜಿಲ್ಲೆಯಲ್ಲಿ ಕುಷ್ಟಗಿ, ದೇವದುರ್ಗ, ಲಿಂಗಸುಗೂರು ಮುಂತಾದ ಕಡೆಗಳಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದವರು ತಕ್ಕ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಜೂನಿಯರ್ ಕಾಲೇಜುಗಳನ್ನು ಏರ್ಪಾಡು ಮಾಡಬೇಕು. ಇಲ್ಲದೆ ಹೋದರೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಸಣ್ಣ ಸಣ್ಣ ಹಳ್ಳಿಯಲ್ಲಿರತಕ್ಕ ಮಕ್ಕಳಿಗೆ ವಿದ್ಯಾಭ್ಯಾಸ ಸಿಕ್ಕುವುದಿಲ್ಲ. ಮತ್ತು ರಾಯಚೂರಿನಲ್ಲಿ ಒಂದೂ ಸರ್ಕಾರಿ ಕಾಲೇಜು ಇರುವುದಿಲ್ಲ. ಇದರಿಂದಾಗಿ ಆ ಪ್ರದೇಶದ ಮಕ್ಕಳಿಗೆ ಕಾಲೇಜು ವಿದ್ಯಾಭ್ಯಾಸಕ್ಕೆ ಅನಾನುಕೂಲವಾಗಿದೆ. ಅದಕಾರಣ ರಾಯಚೂರಿನಲ್ಲಿ ಒಂದು ಸರ್ಕಾರಿ ಕಾಲೇಜನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಷಯ ನಮ್ಮಲ್ಲಿ ಕ್ಷಯರೋಗ ಬಹಳ ಜಾಸ್ತಿಯಾಗಿ ಅನೇಕ ಕಡೆ ಹರಡುತ್ತಿದೆ. ಕೆಲವು ಡಾಕ್ಟರ ಅಭಿಪ್ರಾಯದ ಪ್ರಕಾರ ವಿಚಾರ ಮಾಡಿ ನೋಡುವುದಾದರೆ 100ಕ್ಕೆ 35 ಜನ ಕ್ಷಯರೋಗಕ್ಕೆ ಈಡಾಗಿದ್ದಾರೆ ಎನ್ನುವ ಅಭಿಪ್ರಾಯ ಇದೆ. ಆದ್ದರಿಂದ ಕನಿಷ್ಠ ಒಂದೊಂದು ಡಿಸ್ಟ್ರಿಕ್ಟಿಗೂ ಒಂದೊಂದು ಸ್ಯಾನಿಟೋರಿಯಂ ಯೂನಿಟ್ ಪ್ರಾರಂಭ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಕೇವಲ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಕ್ಷಯರೋಗದ ಆಸ್ಪತ್ರೆಗಳನ್ನು ಕಟ್ಟಿಸಿದರೆ ಈ ರೋಗವನ್ನು ದೂರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕಾಲರಾವನ್ನು ತಡೆಗಟ್ಟುವುದಕ್ಕೆ ಯಾವರೀತಿ ಪ್ರಯತ್ನ ಮಾಡುತ್ತೀರೋ ಆ ಒಂದು ರೀತಿಯಿಂದ ಕ್ಷಯರೋಗವನ್ನೂ ತಡೆಗಟ್ಟುವುದಕ್ಕೆ ಪ್ರಯತ್ನ ಮಾಡಬೇಕು. ಕ್ಷಯರೋಗ ಅಂಟುರೋಗವಾಗಿರುವುದರಿಂದ ಇದನ್ನು ನಿವಾರಣೆ ಮಾಡುವುದಕ್ಕೆ ಕನಿಷ್ಠಪಕ್ಷ ಜಿಲ್ಲಾ ಮಟ್ಟದಲ್ಲಿ ಒಂದು ಸ್ಯಾನಿಟೋರಿಯಂ ಯೂನಿಟ್ ಪ್ರಾರಂಭ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನೂ ಹೇಳತಕ್ಕ ವಿಷಯಗಳು ಅನೇಕ ಇವೆ. ಈಗ ಹೆಚ್ಚು ಕಾಲಾವಕಾಶ ಇಲ್ಲದೆ ಇರುವುದರಿಂದ ಇಷ್ಟನ್ನು ಮಾತ್ರ ಹೇಳಿ ಉಳಿದ ವಿಷಯಗಳನ್ನು ಬಡ್ಜೆಟ್ಟಿನ ಮೇಲೆ ಚರ್ಚೆ ಮಾಡುವಾಗ ಹೇಳುತ್ತೇನೆ. ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†Smt. ADDY SALDHANA (Mangalore-1).—Hon. Madam Speaker, I thank you for giving me this opportunity to speak on the Motion of Thanks to the Governor's Address. I fully support the Motion that is before the House. The Congress has been victorious at the polls on the strength of the attractive programme. In that programme, we have made a pledge under our Prime Minister to banish poverty from the land. GARIBI HATAO embodies great ideas and ideals, but we must not allow it to become a mere slogan and a pious wish as we have done with several of our reforms. GARIBI HATAO should be a call to action—vigorous and substantive action and create job opportunities and multiply employment. It should create facilities in terms of finance, equipment and technical know-how. There must be an industrial revolution in the field of small scale industries as also a revolution in the agricultural field involving the cultivation of unused land, which would have the way for a decent standard of living.

I wish now to proceed from general to particular items. In the Municipal area of Mangalore, fishing is the major trade. The fishermen who come to sell their fish are selling fish on open platforms. So, it is high time we should give them a roof to cover their head. During monsoons, they get drenched in rain and during hot summer they are

subject to sun strokes. Plans have been submitted to the Government in this behalf for construction of a market, but so far, we have received neither the grants from the Government, nor permission to get grants from the Banks or from the Life Insurance Corporation.

The next problem is road maintenance. Mangalore Municipality was under the Madras Government and at that time, when the income was very small, the grant was 22,000 rupees. Even now, the same grant continues—a grant of 22,000 rupees—though the income tax from motor vehicles is 2½ crores of rupees. Mangalore Town being the recipient of heavy rains, the roads are often damaged by heavy rains. I request the Government at least to consider this and give us more money to maintain these roads in a good condition.

5-30 P.M.

The third point is, we have the filaria disease which is a heart-rending picture of our town. At least 60 per cent of the people are affected with this disease. Little school children, beautiful young maidens, young and old people are affected by this disease. I request the Government to take more measures to wipe out this disease and to give more facilities to cure the people who are affected.

The fourth point is, the Rent Control Act which protects the tenants in the towns. I request the Government to take immediate steps to amend suitably the Mysore Rent Control Act to remove the following grievances of the tenants :—

(i) Eviction of tenants with the help of municipal authorities by getting building certified as dangerous for occupation.

(ii) Eviction of tenants on the ground of self occupation of owners.

(iii) Eviction of tenants on the pretext of recontruction of buildings for pecuniary interest of the owners.

First preference should be given to tenants whenever the owners dispose of their property.

In Kerala, there is a law which says that tenants who occupy a building for more than 12 years, should not be evicted. So I request the Government that this law sholud be brought into effect by the Mysore Rent Control Act.

Lastly, lecturers of the aided colleges whenever they retire, get no pension. They put in a service of 36 years and more and when they retire, they have no pension. I request the Government that their case should be looked into.

Thank you Madam Speaker for giving me this opportunity.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಪ್ರಥಮವಾಗಿ ರಾಜ್ಯಪಾಲರ ಭಾಷಣದ ಮೇಲೆ ತಂದಿರತಕ್ಕಂತಹ ಪ್ರಸ್ತಾವವನ್ನು ತೀವ್ರವಾಗಿ ವಿರೋಧಿಸುತ್ತಾ, ನನ್ನ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ರಾಜ್ಯಪಾಲರ ಭಾಷಣ ಕೇವಲ ಮಾಮೂಲು ಭಾಷಣವಾಗಿದೆ. ಹಿಂದೆ ನಿಜಲಿಂಗಪ್ಪನವರ ಸರ್ಕಾರದವರಿಂದಾಗಲ,

(ಶ್ರೀ ಕಾಗೋಡು ತಿಮ್ಮಪ್ಪ)

ವೀರೇಂದ್ರಪಾಟೀಲರ ಸರ್ಕಾರದಿಂದಾಗಲಿ ಇಂತಹ ಸಮಯಬದ್ಧ ಕಾರ್ಯಕ್ರಮವಿಲ್ಲದೆ ಒಂದು ರಾಜ್ಯಪಾಲರ ಭಾಷಣವನ್ನು ಮಾಡಿಸಿದ್ದರೆ ಅದಕ್ಕೆ ನಾವು ಹೆಚ್ಚಿಗೆ ಹೇಳುತ್ತಾ ಇರಲಿಲ್ಲ. ಆದರೆ ಈ ರಾಜ್ಯಸರ್ಕಾರದವರಿಗೆ ಜನತೆಯು ಅಧಿಕ ಸಂಖ್ಯೆಯ ಬಹುಮತವನ್ನು ನೀಡಿ ಸರ್ಕಾರವನ್ನು ನಡೆಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಾಗ ನೀವು ಚುನಾವಣೆಯ ಕಾಲದಲ್ಲಿ ಕೊಟ್ಟಂತಹ ಮಾತನ್ನು ಜ್ಞಾಪಕದಲ್ಲಿಟ್ಟುಕೊಂಡು ಅವುಗಳನ್ನು ಕಾರ್ಯಗತ ಮಾಡುವ ದೃಷ್ಟಿಯಿಂದ ಸಮಯಬದ್ಧ ಕಾರ್ಯಕ್ರಮವನ್ನು, ನೀತಿಯನ್ನು ಹಾಕಿಕೊಂಡು ರಾಜ್ಯಪಾಲರ ಭಾಷಣದಲ್ಲಿ ನಿರೂಪಿಸಬೇಕಾಗಿತ್ತು. ರಾಜ್ಯಪಾಲರ ಭಾಷಣ ನೋಡಿದರೆ ಎಂಥಹ ಕಾರ್ಯಕ್ರಮವನ್ನು ಮುಂದೆ ನೀವು ತರುತ್ತೀರಿ ಎಂಬುದರ ಬಗ್ಗೆ ಯಾವ ಸ್ಪಷ್ಟವಾದ ಕಲ್ಪನೆಯನ್ನು ಮತ್ತು ವಿವರಣೆಯನ್ನು ಕೊಡದಿರತಕ್ಕದ್ದು ತೀರಾ ವಿಷಾದಕರವಾಗಿದೆ. ಇಷ್ಟೇ ಅಲ್ಲದೆ ರಾಜ್ಯದ ಜನತೆ ಇದರಿಂದ ಅತ್ಯಂತ ವಿಷಾದ ಪಡುತ್ತಿದೆ. ಆದ್ದರಿಂದ ಈಗಾಗಲೇ ತಾವು ಕೊಟ್ಟಂತಹ ಮಾತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದೆ ಹೆಜ್ಜೆ ಇಡಬೇಕೆಂದು ಹೇಳುತ್ತಿದ್ದೇನೆ. ಇಡೀ ಭಾಷಣದಲ್ಲಿ ಒಂದು ಕಡೆಯಾದರೂ ಸಮಾಜವಾದವನ್ನು ಸಕ್ರಿಯವಾಗಿ, ಪ್ರಾಮಾಣಿಕವಾಗಿ ಜಾರಿಗೆ ತರುತ್ತೇವೆಂಬ ಮಾತನ್ನು ಹೇಳಿದ್ದರೆ ನಾವು ಇವತ್ತು ವ್ಯಸನ ಪಡಬೇಕಾಗಿರಲಿಲ್ಲ. ಆದರೆ ಇವೊತ್ತಿನ ದಿವಸ ಶಮಗೆಲ್ಲಾ ಗೊತ್ತಿದೆ. ಬೆಲ್ಲಕ್ಕೆ ಗೊದ್ದ ಹುಳಗಳು ಸ್ವಾಭಾವಿಕವಾಗಿ ಮುತ್ತಿಡುತ್ತವೆ, ಅದರಂತೆ ಅಧಿಕಾರಕ್ಕಾಗಿ ಸಮಾಜವಾದದ ನಂಬಿಕೆ ಇರಲಿ, ಇಲ್ಲದಿರಲಿ, ಎಲ್ಲರೂ ಸೇರಿಕೊಂಡಿರುತ್ತೀರಿ. ಆದರೆ ತಾವು ಸಮಾಜವಾದವನ್ನು ಒಪ್ಪಿಕೊಂಡ ಮೇಲೆ, ಅದನ್ನು ಪ್ರಾಮಾಣಿಕವಾಗಿ ಜಾರಿಗೆ ತರತಕ್ಕಂತಹ ಸ್ಪಷ್ಟವಾದ ನೀತಿ ನಿರೂಪಣೆಯನ್ನು ಸ್ಪಷ್ಟವಾಗಿ ಜಾರಿಗೆ ಕೊಡಬೇಕಾಗಿದೆ. ನೀವು ಸಮಾಜವಾದವನ್ನು ಸಮಾನತೆಯನ್ನು ಜಾರಿಗೆ ತರುತ್ತೇವೆಂದು ಜನತೆಗೆ ಯಾವಾಗ ಭರವಸೆಯನ್ನು ಕೊಟ್ಟು ಚುನಾಯಿತರಾಗಿ ಬಂದಿದ್ದೀರೋ, ಹಾಗಿರುವಾಗ ನೀವು ಅದನ್ನು ಅಷ್ಟು ಜಾಗ್ರತೆ ಕಾರ್ಯಗತ ಮಾಡಲೇ ಬೇಕಾಗುತ್ತದೆ. ಆದರೆ ನೀವು ವಿಶೇಷವಾಗಿ ಸಮಾಜವಾದನ್ನು ಹೇಳಿಕೊಂಡು ಬಂದರೂ ಕೂಡ, ಅಪಾರವಾದ ಆಸ್ತಿಯಿದ್ದಂತಹ ಕೆಲವು ಮಿತ್ರರು ಈಗ ನಿಮ್ಮಲ್ಲಿ ಮಂತ್ರಿಯಾಗಿದ್ದಾರೆ. ನಮ್ಮ ಭಾಸ್ಕರ ಶೆಟ್ಟರು ಮತ್ತು ಹಮೀದ್ ಶಾರವರು ಇದರ ಬಗ್ಗೆ ಸ್ವಲ್ಪ ತೀವ್ರವಾಗಿ ಯೋಚನೆ ಮಾಡಿ, ಹಿಂದೆ ಅವರು ಹೇಳಿದಂತಹ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಅವರು ಆರ್ಥಿಕ ಮಟ್ಟ 1:10ರಷ್ಟು ಇರಬೇಕೆಂದು ಹೇಳುತ್ತಿದ್ದರು. ಸಾಮಾಜಿಕವಾದ ಸಮಾನತೆಯನ್ನು ಜಾರಿಗೆ ತರಬೇಕಾದರೆ, ದೇಶದಲ್ಲಿ ಹಿಂದುಳಿದ ಜನರಿಗೆ, ಹರಿಜನರಿಗೆ, ಗಿರಿಜನರಿಗೆ ಮತ್ತು ಅಲ್ಪ ಸಂಖ್ಯಾತ ಜನರಿಗೆ ಎಲ್ಲಾ ಕ್ಷೇತ್ರಗಳಲ್ಲಿಯೂ 100ಕ್ಕೆ 60ರಷ್ಟು ಸ್ಥಾನವನ್ನು ಕಲ್ಪಿಸಬೇಕೆಂದು ಎಲ್ಲರೂ ಹೇಳುತ್ತಿದ್ದರು. ಅವುಗಳನ್ನು ಈಗ ಸಮಾಜವಾದಿ ಮಿತ್ರರು ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ ರಾಜ್ಯಪಾಲರ ಭಾಷಣದಲ್ಲಿ ಆರ್ಥಿಕ, ಸಾಮಾಜಿಕ ಸಮಾನತೆಯನ್ನು ತರುವುದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇವರ ನಾಲಿಗೆ ಬಿದ್ದುಹೋಗಿತ್ತೇ! ನೀವೇನು ನಿರ್ವೀರ್ಯರಾಗಿದ್ದೀರಾ ಎಂದು ಕೇಳಬೇಕಾಗಿದೆ. ಇವೊತ್ತಿನ ದಿವಸ ಶ್ರೀಮಾನ್ ಎಸ್. ಎಂ. ಕೃಷ್ಣರವರಲ್ಲಿ ಮತ್ತು ಮಾನ್ಯ ಭಾಸ್ಕರ ಶೆಟ್ಟರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದರಲ್ಲಿ ಹೆಚ್ಚಿಗೆ ಆಸಕ್ತಿಯನ್ನು ವಹಿಸಬೇಕು. ಇಲ್ಲದಿದ್ದರೆ ನೀವು ಆತ್ಮಘಾತುಕ ಮಾಡಿಕೊಂಡ ಹಾಗೆ ಆಗುತ್ತದೆ. ಕೇವಲ ಅಧಿಕಾರಕ್ಕೋಸ್ಕರ ನೀವು ಕೂತಿದ್ದೀ: ಆದರೆ ನಿಮಗೆ ಜನರು ಧಿಕ್ಕಾರ ಹಾಕುವರು ; ಮತ್ತು ನೀವು ಸಮಾಜವಾದವನ್ನು ಜಾರಿಗೆ ತರುವುದರಲ್ಲಿ ವಿಫಲರಾಗುತ್ತೀರಿ. ಇದಕ್ಕೆ ನಿಮ್ಮ ಆತ್ಮಪರಿಶೋಧನೆ ಮಾಡಿಕೊಂಡು ನೀವು ಹೆಚ್ಚಿನ ಕೆಲಸವನ್ನು ಮಾಡಬೇಕಾಗಿದೆ. ನಿಮ್ಮ ಮತ್ತು ಕೇಂದ್ರಸರ್ಕಾರದ ಆಡಳಿತ ನೀತಿಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕಾಗಿದೆ. ಇವೊತ್ತಿನ ದಿವಸ ನಿಮ್ಮ ಅಧಿಕಾರ ಬೆಂಗಳೂರಿನಿಂದ ಹಿಡಿದು ಹಳ್ಳಿಯವರೆಗೆ ಹೋಗಬೇಕಾಗಿದೆ ; ಹಳ್ಳಿಯಿಂದ ಬೆಂಗಳೂರಿಗೆ ಅಲ್ಲ. ಇಂತಹ ವ್ಯವಸ್ಥೆಯನ್ನು ತರಲು ಯಾವ ವ್ಯವಸ್ಥೆಯನ್ನು ಮಾಡಿದ್ದೀರಿ? ಏನೂ ಮಾಡಿಲ್ಲ. ಕಳೆದ ಎರಡು ವರ್ಷಗಳ ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಳಿ ಅಧ್ಯಕ್ಷರಿಂದ ಸೇರಿದ ಪಂಚಾಯತಿ ರಾಜ್ಯ ಪರಿಷತ್ತು ರಾಜ್ಯದಲ್ಲಿ, ಜಿಲ್ಲಾ ಪರಿಷತ್ತುಗಳನ್ನು ಆಸ್ತಿತ್ವಕ್ಕೆ ತರಬೇಕೆಂದು ತೀರ್ಮಾನ ತೆಗೆದುಕೊಂಡಿದ್ದರು. ಎಲ್ಲಾ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮತ್ತು ಪಂಚಾಯತ್‌ಗಳ ಮುಖಂಡರು ತೆಗೆದುಕೊಂಡಿರತಕ್ಕಂತಹ ಈ ತೀರ್ಮಾನದ ಬಗ್ಗೆ ಸರ್ಕಾರದವರು ಇನ್ನೂ ಯಾವ ಮಾತನ್ನು ಹೇಳಿಲ್ಲ. ಏಕೆಂದರೆ ಅಧಿಕಾರ ವಿಕೇಂದ್ರೀಕರಣವಾದರೆ ಮಂತ್ರಿಗಳ ಸ್ಥಾನಮಾನ ಸ್ವಲ್ಪ ಆದುರ್ಬಲವಾಗುತ್ತದೆ. ಇವತ್ತು ಜಿಲ್ಲಾಪರಿಷತ್ತು ಆಸ್ತಿತ್ವಕ್ಕೆ ಬಂದರೆ ಸರ್ಕಾರದಲ್ಲಿರುವ ಅಧಿಕಾರ ಕಿತ್ತುಕೊಂಡು -

ಹೋಗಬಹುದು ಎಂಬ ಹೆದರಿಕೆ ಇವರಿಗೆ ಇದೆ. ಆದ್ದರಿಂದ ತಾಲ್ಲೂಕು ಅಭಿವೃದ್ಧಿ ಮಂಡಲ ಅಧ್ಯಕ್ಷರು ಸೇರಿ ತೀರ್ಮಾನ ಮಾಡಿರುವುದನ್ನು ಕಾರ್ಯಗತ ಮಾಡುವುದಕ್ಕೆ ಭರವಸೆಯನ್ನು ಕೊಡಬೇಕು. ಇವೊತ್ತಿನ ದಿವಸ ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿರುವುದರಿಂದ, ತಾಲ್ಲೂಕು ಬೋರ್ಡುಗಳು ಮತ್ತು ಪಂಚಾಯತುಗಳು ಎಷ್ಟು ಮಟ್ಟಿಗೆ ಕೆಲಸ ಮಾಡುತ್ತವೆ ಎಂದು ನನಗೆ ಗೊತ್ತಿದೆ. ತಾಲ್ಲೂಕು ಬೋರ್ಡು ಅಧ್ಯಕ್ಷರಿಗೆ ಮುಖ್ಯ ನಿರ್ವಾಹಕರ ಮೇಲೆ ಯಾವುದೇ ರೀತಿಯ ನಿಯಂತ್ರಣ ಇಟ್ಟುಕೊಳ್ಳುವುದಕ್ಕೆ ಅಧಿಕಾರವಿಲ್ಲ, ಇದರಿಂದ ತಾಲೂಕು ಬೋರ್ಡು ಅಧ್ಯಕ್ಷರು ನಾಮಕವಾಸ್ತೆ ಅಧ್ಯಕ್ಷರಾಗಿರುತ್ತಾರೆ. ಅದೇ ರೀತಿ ಪಂಚಾಯತಿ ಅಧ್ಯಕ್ಷರಿಗೆ ಯಾವುದೇ ನಿಯಂತ್ರಣವನ್ನು ಅಲ್ಲಿನ ಅಧಿಕಾರಿಗಳ ಮೇಲೆ ಹತೋಟಿ ಇಟ್ಟುಕೊಳ್ಳಲು ಅವಕಾಶ ಇಲ್ಲ; ಆದ್ದರಿಂದ ಆಡಳಿತವನ್ನು ವಿಕೇಂದ್ರೀಕರಿಸಿ, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅವುಗಳನ್ನು ಬಲಯುತವನ್ನಾಗಿ ಮಾಡಬೇಕು. ಇದರಿಂದ ಸಾಮಾನ್ಯ ಜನರಿಗೆ, ಏನು ತೊಂದರೆಗಳು ಆಗುತ್ತವೆ ಅವುಗಳನ್ನು ನಿವಾರಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿ ಇವತ್ತು ನೇರವಾಗಿ ಪಂಚಾಯತುಗಳಿಗೆ ಪೋಲೀಸ್ ಅಧಿಕಾರವನ್ನು ಕೊಡಬೇಕು. ಹಾಗೆಯೇ ಜಮೀನು ಮಂಜೂರು ಮಾಡುವ ಕೆಲಸವನ್ನು ಕೂಡ ಪಂಚಾಯತುಗಳಿಗೆ ಕೊಟ್ಟರೆ ಏಕೆ ಜನರಿಗೆ ತೃಪ್ತಿಯಾಗುವುದಿಲ್ಲ. ಇವೊತ್ತಿನದಿವಸ ಒಬ್ಬ ಬಡ ರೈತ ದರ್ಖಾಸ್ತು ಅರ್ಜಿ ಕೊಟ್ಟರೆ, ಅವನು ತಾಲ್ಲೂಕು ಆಫೀಸಿಗೆ ತಿರುಗಿ ತಿರುಗಿ 10 ವರ್ಷವಾದರೂ ಅದನ್ನು ಮಾಡಿಸಿಕೊಳ್ಳಲಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಆಡಳಿತ ಯಂತ್ರವನ್ನು ಆಮೂಲಾಗ್ರವಾಗಿ ಬದಲಾಯಿಸಬೇಕಾದುದು ಅತ್ಯಂತ ಮುಖ್ಯವಾದ ಕೆಲಸ. ಈ ವಿಚಾರವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡದಿರುವುದು ಅತ್ಯಂತ ವಿಷಾದಕರವಾದ ಸಂಗತಿಯಾಗಿದೆ. ಆದ್ದರಿಂದ ಈಗಲಾದರೂ ಆ ಬಗ್ಗೆ ಸರ್ಕಾರದವರು ನಿರ್ದಿಷ್ಟ ನಿಲುವನ್ನು ತೆಗೆದುಕೊಳ್ಳಬೇಕು. ಜಿಲ್ಲಾ ಪರಿಷತ್ತನ್ನು ಅಸ್ತಿತ್ವಕ್ಕೆ ತರುವುದಕ್ಕೆ ಒಂದು ತೀರ್ಮಾನವನ್ನು ಜಾಗ್ರತೆಯಾಗಿ ತೆಗೆದುಕೊಳ್ಳಬೇಕೆಂದು ನಾನು ಆಗ್ರಹ ಪೂರ್ವಕವಾಗಿ ಒತ್ತಾಯ ಮಾಡುತ್ತೇನೆ.

ಇನ್ನು ಶಾಸನ ಸುವ್ಯವಸ್ಥೆ ಬಗ್ಗೆ ಪ್ರಸ್ತಾಪಮಾಡಬೇಕೆಂದು ಇದರಲ್ಲಿ ಒಂದು ಮಾತನ್ನು ಮಾತ್ರ ಹೇಳಿದ್ದಾರೆ. ಅದೇನೆಂದರೆ, ಪೋಲೀಸರ ಬಗ್ಗೆ ಹೇಳಿರುವುದು. ಅದು ಈ ರೀತಿ ಇದೆ: ಈ ವಿಚಾರದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಪೋಲೀಸು ಪಡೆಗೆ ಆಧುನಿಕ ಸಜ್ಜು ಸಲಕರಣೆಗಳನ್ನೂ ಬೇರೆ ಸೌಲಭ್ಯಗಳನ್ನೂ ಒದಗಿಸಲಾಗುವುದು. ನಾನು ಈ ವಿಚಾರದಲ್ಲಿ ಹೇಳಬೇಕಾದರೆ, ನಮ್ಮ ಪೋಲೀಸ್ ಪಡೆಗೆ ಈಗಿರತಕ್ಕ ಸಲಕರಣೆಗಳು ಸಾಕು. ಇದರಿಂದಲೇ ಈಗಾಗಲೇ ಸಾಕಷ್ಟು ಜನರ ತಲೆಗಳನ್ನು ಹೊಡೆಯುತ್ತಿದ್ದಾರೆ. ಅವರಿಗೆ ಮುಖ್ಯವಾಗಿ ಕೆಲಸ ಬೇಕಾದುದು ವಿವೇಚನೆ ಹಾಗೂ ಪರಿಜ್ಞಾನ. ಅವರ ದೃಷ್ಟಿಕೋನವೆಲ್ಲಾ ಹಳೆಯ ಪದ್ಧತಿಯಲ್ಲೇ ನಡೆಯುತ್ತಿದೆ. ಆದ್ದರಿಂದ ಈಗ ಪೋಲೀಸರ ರಕ್ಷಣಾ ದಳಗಳ ಪರಿಸರದಲ್ಲಿ ಬದುಕಿ ಬಾಳಬೇಕಾದರೆ ಅವರು ಜನರ ದೃಷ್ಟಿಕೋಣಗಳಿಂದ ದೂರಹೋಗಬೇಕಾಗಿದೆ. ಜಗತ್ತಿಗೆ ಬೇಕಾದಂಥ ದೃಷ್ಟಿಕೋಣಗಳನ್ನು ಅಳವಡಿಸಿಕೊಂಡು ಜನರನ್ನು ಗೌರವದಿಂದ ಕಾಣಬೇಕಾಗುತ್ತದೆ. ಹಿಂದೆ ಮಾನ್ಯ ಶ್ರೀ ಚನ್ನಬಸಪ್ಪನವರು ಗೃಹಮಂತ್ರಿಯಾಗಿದ್ದಂಥ ಕಾಲದಲ್ಲಿ ಒಂದು ತರಹ ಸ್ಕ್ವ್ಯಾಡ್ ಇಟ್ಟುಕೊಂಡಿದ್ದರು. ಅವರು ಬಂದರು ಅಂದರೆ, ಅಧಿಕಾರಿಗಳು ಗಡಗಡವೆಂದು ನಡುಗುತ್ತಿದ್ದರು. ಸಾಮಾನ್ಯವಾಗಿ ಎಲ್ಲ ಅಧಿಕಾರಿಗಳಲ್ಲೂ ಭಯ ಉಂಟಾಗತಕ್ಕ ಪರಿಸ್ಥಿತಿ ಇರುತ್ತಿತ್ತು. ಆದ್ದರಿಂಧ ಇವತ್ತು ಪೋಲೀಸರ ದೃಷ್ಟಿಕೋಣ, ಅವರ ಮುಖವಾಡ ಏನಿದೆಯೋ ಅದನ್ನು ಈಗ ಬದಲಾಯಿಸಬೇಕು. ಜನಸಾಮಾನ್ಯರ ದೃಷ್ಟಿಯಲ್ಲಿ ಅವರ ನಡತೆ ನೀತಿಗಳನ್ನು ತಿದ್ದುವುದಕ್ಕೆ ಶಾಸನ ವ್ಯವಸ್ಥೆ ಆಗಬೇಕು. ಆದ್ದರಿಂದ ಈಗ ಅವರಿಗೆ ಕೊಡುತ್ತಿರುವ ಸಜ್ಜು ಸಲಕರಣೆಗಳು ಏನಿವೆಯೋ ಅವನ್ನು ಮಾತ್ರ ಕೊಡಿ. ಹೊಸ ಸಜ್ಜು ಸಲಕರಣೆಗಳನ್ನು ಮಾತ್ರ ಖಂಡಿತವಾಗಿ ದಯವಿಟ್ಟು ಕೊಡಬೇಡಿ.

ಇನ್ನು ಭೂಸುಧಾರಣೆಯ ಸಂಬಂಧವಾಗಿ ಕೆಲವು ವರ್ಷಗಳ ಹಿಂದೆ ಪತ್ರಿಕೆಗಳಲ್ಲಿ ಒಂದು ವಿಚಾರ ಬಂತು. ಅದೇನೆಂದರೆ, ಜಮೀನು ಬಿಡಿಸುವುದಕ್ಕೆ ಹಾಕಿದಂಥ 85 ಸಾವಿರ ಅರ್ಜಿಗಳು ಕೋರ್ಟಿನಲ್ಲಿ ಪೆಂಡಿಂಗ್ ಇವೆಯೆಂದು. ಅವು ಇವತ್ತಿನವರೆಗೂ ತೀರ್ಮಾನವಾಗಿಲ್ಲ. ಈಗಿರತಕ್ಕ ಭೂಸುಧಾರಣೆಯ ಕಾನೂನುಗಳನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಿ ಕ್ರಾಂತಿಕಾರಕವಾದ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಅದಕ್ಕಾಗಿ ಕಾಯುತ್ತೇವೆ. ಇದರಲ್ಲಿ ನಮಗೆ ಒಂದು ಅಪನಂಬಿಕೆ. ಮಾನ್ಯ ಶ್ರೀ ಚನ್ನಬಸಪ್ಪನವರನ್ನು ನೋಡಿದರೆ ಅಂಜಿಕೆಯಾಗುತ್ತದೆ. ಏಕೆಂದರೆ, ಹಿಂದೆ ಅವರು ಇದಕ್ಕೆ ವಿರೋಧಮಾಡಿದವರು ಈಗ ಆಡಳಿತ ಪಕ್ಷದಲ್ಲಿಯೇ ಇದ್ದಾರೆ? ಅವರೇ ಈಗ ಏನಾದರೂ ಈ ಬಗ್ಗೆ ತೀರ್ಮಾನ ಮಾಡಬೇಕಾಗಿದೆ.

Sri H. M. CHANNABASAPPA.—On a point of personal explanation. Because I spoke for 2 to 3 days on land reforms, that does not mean that I am opposed to land reforms. That only shows the depth of understanding and the study I have made on land reforms.

ಶ್ರೀ ಕಾಗೋಡು ತಿಮ್ಮಪ್ಪ.—ಸಂತೋಷ. ಆದರೂ ಇದಕ್ಕೆ ಬಹಳ ಕಾಲ ವಿಳಂಬವಾಗುವುದಿಲ್ಲವೆಂದು ಅಂದುಕೊಂಡಿದ್ದೇನೆ. ಇದಕ್ಕಾಗಿ ಕಾಗೋಡಿನಲ್ಲಿ 1951 ರಲ್ಲಿ ನಾನು ಒಂದು ದೊಡ್ಡ ಚಳುವಳಿಯನ್ನೇ ಮಾಡಿದ್ದೇನೆ. ಮಾನ್ಯ ಮಂತ್ರಿಗಳಾಗಿರುವವರೇ ಅದಕ್ಕೆ ಅಪೋಜ್ ಮಾಡಿದ್ದರು. ಆದ್ದರಿಂದ ಸರ್ಕಾರದವರು ಆಗಿನ ಧಾಟಿಯನ್ನೂ ಮತ್ತು ಈಗಿನ ಧಾಟಿಯನ್ನೂ ಪರಾಂಬರಿಸಬೇಕು. ಆ ಒಂದು ಚಳುವಳಿಯಲ್ಲಿ ಸೇರಿ ನಾನು ಹೊಡೆತ ತಿಂದಿದ್ದೇನೆ. ಇಷ್ಟು ವರ್ಷಗಳವರೆಗೂ ತಡೆದು ತಡೆದು 1951 ನೇ ಇಸವಿಯಿಂದ ಅನೇಕರು ಗೇಣಿದಾರರಾಗಿದ್ದವರು ಅವತ್ತಿನ ಚಳುವಳಿಯಿಂದ ಜಮೀನು ಕಳೆದುಕೊಂಡಿದ್ದಾರೆ. ಅವತ್ತು ಇದ್ದಂಥ ಗೇಣೀದಾರರು ಇಷ್ಟು ವರ್ಷಗಳ ಕಾಲ ಸರಿಯಾಗಿ ಭೂಸುಧಾರಣಾ ಕಾನೂನನ್ನು ಕಾರ್ಯಗತ ಮಾಡದೇ ಇದ್ದುದರಿಂದ ಅವರೂ ಸಹ ತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಅನೇಕ ಗೇಣೀದಾರರ ಸಂಬಂಧೀಕರೂ ಸಹ ತಂತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಅದಕ್ಕಾಗಿ ಮಾನ್ಯ ಸಚಿವರು ಒಂದು ಕಾನೂನನ್ನು ಈ ವಿಚಾರದಲ್ಲಿ ಜಾರಿಗೆ ತಂದರೆ ಬಹಳ ಒಳ್ಳೆಯದು. ಮೂರು ವರ್ಷಗಳಿಗೊಂದುಸಾರಿ ನಮ್ಮಲ್ಲಿ ಗೇಣಿ ರಸೀದಿ ಕೊಡುವ ಪದ್ಧತಿ ಇದೆ. ಬಾಯಿಮಾತಿನಿಂದ ಗೇಣಿ ಕೊಡುವುದಿಲ್ಲ. ಜಮೀನು ಬಿಡಿಸುವಾಗ ಮೂರು ವರ್ಷಗಳ ಡಿಕ್ರಿ ಹಣವನ್ನು ಕೊಡುವುದಕ್ಕಾಗುವುದಿಲ್ಲ. ಹೀಗಾಗಿ ಅನೇಕರು ತಂತಮ್ಮ ಜಮೀನುಗಳನ್ನು ಕಳೆದುಕೊಂಡಿದ್ದಾರೆ. ದಯವಿಟ್ಟು ಈಗಲಾದರೂ ಅಂತಹ ಅವಕಾಶ ಮಾಡಿಕೊಡಬೇಡಿ. ಅದಕ್ಕೋಸ್ಕರ ನಿರ್ದಿಷ್ಟವಾದ ಸಮಯದಲ್ಲಿ ಇದಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಬದಲಾಯಿಸಿದರೆ ಒಳ್ಳೆಯದು. ಆ ರೀತಿ ಮಾಡುತ್ತೀರೆಂದು ನಾನು ವಿಶ್ವಾಸ ಇಟ್ಟುಕೊಂಡಿದ್ದೇವೆ. ಅದಕ್ಕಾಗಿ ಮಾನ್ಯ ಶ್ರೀ ಬದರೀನಾರಾಯಣ್ ಅವರು ಮತ್ತು ಶ್ರೀ ಚನ್ನಬಸಪ್ಪನವರು ಸಹಾಯ ಮಾಡಬೇಕು. ಇಲ್ಲದೇ ಹೋದರೆ ಜನ ಬೇರೆಯಾಗಿ ಭಾವಿಸುತ್ತಾರೆ.

ಇನ್ನೊಂದು ವಿಷಯ. ಮಾನ್ಯ ಶ್ರೀ ಚನ್ನಬಸಪ್ಪನವರು ವ್ಯವಸಾಯದ ಬಗ್ಗೆ ಬಹಳ ಆಳವಾಗಿ ಅಭ್ಯಾಸಮಾಡಿದ್ದಾರೆ. ವ್ಯವಸಾಯ ಕ್ಷೇತ್ರವನ್ನು ಅನೇಕ ರೀತಿಯಲ್ಲಿ ಬದಲಾಯಿಸಬೇಕು. ಇವತ್ತು ವ್ಯವಸಾಯಗಾರನಿಗೆ ಸಾಲದ ಸೌಲಭ್ಯಗಳು ಸಿಗತಕ್ಕ ಕ್ಷೇತ್ರಗಳು ಹಲವಾರು ಇವೆ. ಸಹಕಾರ ಸಂಘಗಳು, ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳು ಹೀಗೆ ಬೇರೆಬೇರೆ ಇವೆ. ಪ್ರತಿಯೊಂದು ಸಹಕಾರ ಸಂಘವು ಒಂದು ಪಂಚಾಯತಿ ವ್ಯಾಪ್ತಿಯಲ್ಲಿದೆ. ಅಲ್ಲಿರತಕ್ಕ ಪ್ರತಿಯೊಬ್ಬ ವ್ಯವಸಾಯಗಾರನು ಮನೆ ಕಟ್ಟುವುದಕ್ಕಾಗಲೀ, ಜಮೀನು ಪಡೆಯುವುದಕ್ಕಾಗಲೀ ಯಾವುದೇ ರೀತಿಯಲ್ಲಿ ಅಗತ್ಯವಾದ ಹಣವನ್ನು ಪಡೆಯ ಬೇಕಾದರೆ ಸಹಕಾರ ಸಂಘಗಳ ಮೂಲಕವೇ ಪಡೆಯಬೇಕು. ಈಗಿರತಕ್ಕ ಸಹಕಾರ ಸಂಘಗಳಲ್ಲಿ ಕೆಲವು ಅದಕ್ಕೆ ಸಂಬಧಪಟ್ಟ ಡಿಸ್ಟ್ರಿಕ್ಟ್ ಬ್ಯಾಂಕ್, ಅಮೇಲೆ ಜಿಲ್ಲಾ ಪ್ರಾಥಮಿಕ ಅಭಿವೃದ್ಧಿ ಬ್ಯಾಂಕ್‌ಗಳಮೇಲೆ ಸಾಲ ಸಿಗಲಿಲ್ಲವೆಂದು ಅನೇಕ ಸಾರಿ ದೂರುಗಳನ್ನು ಹಾಕುತ್ತಿರುತ್ತಾರೆ. ವ್ಯವಸಾಯಗಾರನಿಗೆ, ಬೀಜವಾಗಲೀ, ನೇಗಿಲಾಗಲೀ, ಗೊಬ್ಬರವಾಗಲೀ ಸರಬರಾಜು ಮಾಡಿ ಜಮೀನು ಅಭಿವೃದ್ಧಿಪಡಿಸುವುದಕ್ಕೆ ಯಾವಾಗಲೂ ಒಂದೇ ಸ್ಥಳದಲ್ಲಿ ಸಾಲ ಸಿಗಬೇಕು. ಒಂದು ಕಡೆ ಮಾತ್ರ ಸಾಲ ಸಿಗುವ ವ್ಯವಸ್ಥೆ ಮಾಡಬೇಕು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕನ್ನು ಸರ್ಕಾರದವರು ರದ್ದುಪಡಿಸಿದರೂ ಚಿಂತೆ ಇಲ್ಲ. ವ್ಯವಸಾಯಕ್ಕೆ ಬೇಕಾದಂಥ ಸಾಮಾನು ಸರಂಜಾಮುಗಳನ್ನು ಕ್ರೋಢೀಕರಿಸಿ ವ್ಯವಸಾಯ ಕ್ಷೇತ್ರಕ್ಕೆ ಒದಗಿಸುವ ಹಣವನ್ನು ಒಂದೇ ದಾರಿ, ಒಂದೇ ಮುಖದಲ್ಲಿ, ಒಂದೇ ಕ್ಷೇತ್ರದಲ್ಲಿ ಸಿಗುವ ವ್ಯವಸ್ಥೆಮಾಡಬೇಕು. ಈಗ ಡಿಫರೆಂಟ್ ಚಾನಲ್ಸ್ ಇವೆ. You must channelise these facilities in one channel. ಇದನ್ನು ದಯವಿಟ್ಟು ಮಾಡಿದರೆ, ವ್ಯವಸಾಯ ತನ್ನ ಊರಿನಲ್ಲಿ ತನ್ನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಲ್ಲಾ ಸೌಕರ್ಯಗಳನ್ನು ರೈತನಾದವನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಗೊಬ್ಬರ ಕೊಳ್ಳುವುದಕ್ಕೆ ಯಾವುದಾದರೂ ಒಂದು ಸಹಕಾರ ಸಂಘದಲ್ಲಿ ಸಾಲ ಪಡೆಯಲು ಅಥವಾ ಜಮೀನು ಅಭಿವೃದ್ಧಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬಾಂಕುಗಳ ಮೂಲಕ ಸಾಲ ಪಡೆಯಲು ಸಂಬಂಧಪಟ್ಟ ದಾಖಲುಗಳನ್ನು ಒಂದು ಸಾರಿ ಕೊಟ್ಟಮೇಲೆ ಬೇರೆ ಕಡೆಗಳಲ್ಲಿ ಅದೇ ದಾಖಲುಗಳನ್ನು ಮತ್ತೊಂದು ಸಾರಿ ಕೊಡುವುದಕ್ಕಾಗುವುದಿಲ್ಲ. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕ ಎಲ್ಲಾ ಸೌಲಭ್ಯಗಳನ್ನೂ ಕಳೆದುಕೊಳ್ಳುವ ಪರಿಸ್ಥಿತಿ ವ್ಯವಸಾಯಗಾರನಿಗೆ ಬಂದಿದೆ.

(ಶ್ರೀ ವೀರಪ್ಪ ಮೋಯಿಲಿ)

ಅವರಿಗೆ ಯಾರಿಂದಲೂ ರಕ್ಷಣೆ ದೊರೆಯದಾಗಿದೆ, ಆದರೆ ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ರೆಕಾರ್ಡ್ ಆಫ್‌ರೈಟ್ಸ್‌ನ್ನು ಅಪ್‌ಟುಡೇಟ್ ಮಾಡುತ್ತೇವೆಂದು ತಿಳಿಸಿದ್ದಾರೆ. ಇದನ್ನು ತಯಾರು ಮಾಡತಕ್ಕ ಕಾಲಕ್ಕೆ ಯಾವ ರೈತನಲ್ಲಿ ಕಾಗದ ಪತ್ರಗಳ ಆಧಾರವಿರುವುದಿಲ್ಲವೋ ಅಂಥವರಿಗೆ ಕಾನೂನು ಪ್ರಕಾರ ಅನುಕೂಲ ಸಿಕ್ಕುವುದು ಕಷ್ಟ. ಗೇಣಿದಾರರಲ್ಲಿ ಲೀಜ್ ಡೀಡ್ ಇದ್ದರೆ ಮಾತ್ರ ಅವನಿಗೆ ಅನುಕೂಲವಾಗುತ್ತದೆಯೇ ವಿನಾ ಇಲ್ಲವಾದರ ಇಲ್ಲ. ರೆವಿನ್ಯೂ ರೆಕಾರ್ಡಿನಲ್ಲಿ ಗೇಣಿ ದಾರನ ಹೆಸರು ಇರುವುದಕ್ಕೆ ಸಾಧ್ಯವೇ ಇಲ್ಲ. ಲೀಜ್‌ಡೀಡ್ ಇದ್ದರೆ ಮಾತ್ರ ಸಾಧ್ಯ. ಈ ಒಂದು ಪರಿಸ್ಥಿತಿಯ ಅನುಕೂಲ ಪಡೆದು ಎಲ್ಲರೂ ಆ ಭೂ ಮಾಲೀಕರಿಗೇ ಅನುಕೂಲ ಮಾಡುತ್ತಿದ್ದಾರೆ. ಇತ್ತೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಮಾಡತಕ್ಕ ವಿಲೇಜ್ ಅಕೌಂಟೆಂಟ್‌ಗಳೇನಿದ್ದಾರೆ— ಶ್ಯಾನುಭೋಗರು ಅವರು ವಂಶಪಾರಂಪರ್ಯವಾಗಿ ಬಂದವರು. ಅವರು ಯಾವತ್ತೂ ಈ ಭೂ ಮಾಲೀಕರಿಗೆ ಅನುಕೂಲವಾಗುವಹಾಗೆ ರೆಕಾರ್ಡ್‌ಗಳನ್ನು ತಯಾರು ಮಾಡಿದ್ದಾರೆಯೇ ಶಿವಾಯಿ ಗೇಣಿದಾರನಿಗೆ ಅನುಕೂಲವಾಗುವಂತೆ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಈ ಭೂ ಸುಧಾರಣೆ ಯನ್ನು 1961 ರಲ್ಲಿ ಜಾರಿಗೆ ತರಬೇಕೆಂದು ಏನೊಂದು ಆಲೋಚನೆ ಮಾಡಿದ್ದರೋ ಆ ಕಾಲದಲ್ಲಿ ಭೂಮಿ ಯಾರ ವಶದಲ್ಲಿತ್ತು ಎಂಬುದನ್ನು ದಾಖಲೆ ತೆಗೆಸಿ ಅದರಂತೆ ಕ್ರಮಗಳನ್ನು ಸರ್ಕಾರ ಕೈಗೊಂಡು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊರದೂಡಲ್ಪಟ್ಟ ಸುಮಾರು 75 ಸಾವಿರ ಒಕ್ಕಲನ್ನು ಅಲ್ಲಿ ನೆಲೆಸುವುದಕ್ಕೆ ಪುನರ್ವಸತಿಗೆ ಅವಕಾಶ ಮಾಡಿಕೊಡಬೇಕಾಗಿದೆ. 1961 ಕ್ಕೆ ಹಿಂದೆ ಯಾರು ಯಾರು ಒಕ್ಕಲದ್ದರೋ ಅಂಥವರನ್ನು ಇತ್ತೀಚೆಗೆ ಏನು ಎಬ್ಬಿಸಿದ್ದಾರೆ ಅವರಿಗೆಲ್ಲಾ ಮತ್ತೆ ಪುನರ್ವ ಸತಿ ಮಾಡಿ ಅನುಕೂಲಮಾಡಿಕೊಡಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಅಷ್ಟು ಆಶ್ವಾಸನವನ್ನು ಅಲ್ಲಿಯ ಗೇಣಿದಾರರಿಗೆ ಕೊಡದಿದ್ದರೆ ಏನೂ ಫಲವಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಈ ವಿಚಾರ ದಲ್ಲಿ ಒಂದು ಸಲಹಾ ಮಂಡಲಿಯನ್ನು ನೇಮಕ ಮಾಡಿ ಆ ಗೇಣೀದಾರರಿಗೆ ಒಂದು ಅನುಕೂಲ ಮಾಡಿ ಕೊಡಬೇಕು. ಇದನ್ನು ಅತಿ ತ್ವರಿತವಾಗಿ ಮಾಡಬೇಕು ಹಿಂದೆ ಸಾವಿರಾರು ವರ್ಷಗಳಿಂದ ಗೇಣೀ ದಾರರು ಅನುಭವಿಸಿಕೊಂಡು ಬಂದಂಥ ಭೂಮಿಗಳನ್ನು ಅವರಿಗೆ ಬಿಡಿಸಿ ಕೊಡಬೇಕು ಇಲ್ಲವೇ ಅವರಿಗೆ ಸೂಕ್ತ ಪರಿಹಾರವನ್ನು ಒದಗಿಸಿಕೊಡಬೇಕು.

ಇನ್ನು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಭೂಮಿತಿಯನ್ನು ತಗ್ಗಿಸುವುದಾಗಿ ತಿಳಿಸಿದ್ದಾರೆ. ಇದರ ಬಗ್ಗೆ ರಾಜ್ಯ ಸರ್ಕಾರ ಸೂಕ್ತವಾದ ತಿದ್ದುಪಡಿಗಳನ್ನು ಇದೇ ಅಧಿವೇಶನದಲ್ಲಿ ಸಭೆಯ ಮುಂದೆ ತರುತ್ತಾರೆಂದು ನಂಬಿದ್ದೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಈ ಸೀಲಿಂಗ್ ವಿಚಾರ ಹೇಳುವುದಾದರೆ ಅಲ್ಲಿಯ ಭೂಮಾಲೀಕರಿಗೇನೂ ಇದರಿಂದ ತೊಂದರೆಯಾಗುವುದಿಲ್ಲ. ಕಾರಣ ಶೇಕಡ 90 ಪಾಲನಷ್ಟು ಭೂಮಿಯನ್ನು ಈಗಾಗಲೇ ಬೇರೆಯವರಿಗೆ ಪರಾಧೀನ ಮಾಡಿದ್ದಾರೆ. ಕಾನೂನಿಗೂ ಕೂಡ ಅವರು ಸಿಕ್ಕದಂತೆ ವಂಚನೆ ಮಾಡಿದ್ದಾರೆ. ಇದನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಇನ್ನೂ ಇದು ನಡೆಯುತ್ತಲೇ ಇದೆ. ಇದೇ ರೀತಿ ಆ ದರಖಾಸ್ತು ಗಳ ವಿಷಯದಲ್ಲೂ ಬಹಳ ಅನ್ಯಾಯಗಳು ನಡೆಯುತ್ತಿವೆ. ಹರಿಜನರಿಗೆ ಒಳ್ಳೆಯ ಭೂಮಿ ಸಿಕ್ಕುತ್ತಿಲ್ಲ ಒಳ್ಳೆ ಕೃಷಿಗೆ ಬರತಕ್ಕ ಜಮೀನು ಬೇರೆಯವರಿಗೆ ಸಿಕ್ಕುತ್ತಿದೆ. ಶ್ಯಾನುಭೋಗರುಗಳು ಪಟೇಲರು ಈ ದರಖಾಸ್ತಿನ ವಿಚಾರದಲ್ಲಿ 5—10 ರೂಪಾಯಿಗಳ ಲೇವಿ ಬಾಕಿ ಇದ್ದರೂ ಒಳ್ಳೇ ಬೆಲೆ ಬಾಳತಕ್ಕ ರೆವಿನ್ಯೂ ಭೂಮಿಗಳನ್ನು ಅಗ್ಗದ ಬೆಲೆಗೆ ಹರಾಜ್ ಮಾಡಿಸುತ್ತಿದ್ದಾರೆ. ಇಂಥ ಸುಮಾರು 40—50 ನಿದರ್ಶನಗಳು ನನ್ನ ಗಮನಕ್ಕೆ ಬಂದಿವೆ. ಅವುಗಳನ್ನು ಸರ್ಕಾರದವರ ಕಡೆಗೆ ಕೊಡುತ್ತೇನೆ. ಹೀಗೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಶ್ಯಾನುಭೋಗರುಗಳು ಪಟೇಲರು ಸಾರ್ವಭೌಮ ಆಡಳಿತ ವನ್ನು ನಡೆಸುತ್ತಿರುವಾಗ ಸಾಮಾನ್ಯ ಜನರ ಪ್ರಗತಿಯಾಗಬೇಕು ಎಂದರೆ ಅದು ಹೇಗೆ ಸಾಧ್ಯ? ಇದೇ ರೀತಿಯಲ್ಲಿ ಅನೇಕ ದರಖಾಸ್ತು ವಿತರಣೆಗಳಲ್ಲಿ ಅನ್ಯಾಯವಾಗುತ್ತಿದೆ. ಯಾವ ಬಡವನಿಗೆ ದರಖಾಸ್ತು ವಿತರಣೆಯಾಗಬೇಕೋ ಅವನಿಗೆ ಅದು ಆಗದೆ, ಯಾರು ಪಾಪದ ಹರಿಜನರು ಅಥವಾ ಪಾಪದ ಜನ ಯಾರಿದ್ದಾರೆ ಅಂಥ ಜನರಿಗೆ ಸಿಕ್ಕದೆ, ತಾಲ್ಲೋಕು ಬೋರ್ಡ್ ಪ್ರೆಸಿಡೆಂಟ್‌ಗಳಾಗಲಿ ತಾಲ್ಲೂಕು ಬೋರ್ಡ್ ಸದಸ್ಯರಾಗಲಿ ಅವರಿಗೆ ಹೊಂದಿಕೊಂಡಂಥ ಜನರಿಗೆ ಮಾತ್ರ ಭೂಮಿ ವಿತರಣೆ ಯಾಗುತ್ತಿದೆ. ನಿಜವಾಗಿ ಇದರ ಪ್ರಯೋಜನ ಬಡವರಿಗೆ ಸಿಕ್ಕಬೇಕು. ಆದರೆ ಅವರಿಗೆ ಪ್ರಯೋಜನ ಸಿಕ್ಕುತ್ತಿಲ್ಲ. ಇಷ್ಟರವರೆಗೆ ಆದ ಭೂವಿತರಣೆ ವಿಮರ್ಶೆ ಮಾಡಲು ಅದರ ವಿಚಾರದಲ್ಲಿ ಉತ್ತಮ ತನಿಖೆ ನಡೆಸಲು ಒಂದು ಕಾರ್ಯಕ್ರಮ ಸರ್ಕಾರ ಕೈಕೊಳ್ಳಬೇಕು. ಇಲ್ಲದಿದ್ದರೆ ಭೂಮಿಹೀನರಿಗೆ ಭೂಮಿ ಸಿಕ್ಕುವುದು ಅಸಾಧ್ಯವಾಗುತ್ತದೆ.

ಇನ್ನು ಮಲೆನಾಡು ಅಭಿವೃದ್ಧಿ ಮಂಡಲಗಳನ್ನು ಸ್ಥಾಪನೆ ಮಾಡಬೇಕು. ಲೋಕೋಪಯೋಗಿ ಖಾತೆಯವರು ಈ ವಿಚಾರದ ಕಡೆ ಹೆಚ್ಚು ಗಮನವನ್ನು ಕೊಡಬೇಕು. ಮಲೆನಾಡಿನಲ್ಲಿ ಕರೆಗಳು ಬಹಳ ವಿಶೇಷವಾಗಿವೆ. ನಮ್ಮ ಪ್ರದೇಶ ಬಯಲು ಸೀಮೆಯಲ್ಲ. ಹಿಂದೆ ಶಿವಪ್ಪನಾಯಕನ ಕಾಲದಲ್ಲಿ ಸ್ಥಾಪನೆ ಮಾಡಿದಂಥ ಕೆರೆಗಳು ಅವು. ಅವುಗಳಲ್ಲಿ ಈಗ ಬಹಳವಾಗಿ ಹೂಳು ತುಂಬಿಕೊಂಡಿದೆ. ಅದಕ್ಕೆ ಒದಗಿಸಿರುವ ಕೇವಲ ದುರಸ್ತಿ ಹಣ ಉಪಯುಕ್ತವಾಗದೆ ವ್ಯರ್ಥವಾಗುತ್ತಿದೆ. ದಯವಿಟ್ಟು ಮಲೆನಾಡು ಪ್ರದೇಶಗಳಲ್ಲಿ ಕರೆಗಳ ಹೂಳನ್ನು ತೆಗೆಯುವುದಕ್ಕೆ ವಿಶೇಷವಾದಂಥ ಸೌಕರ್ಯಗಳನ್ನು ಒದಗಿಸುವುದಕ್ಕೆ ಸಾಕಷ್ಟು ಹಣವನ್ನು ತೆಗೆದಿಡಬೇಕು. ಇಲ್ಲದೇ ಹೋದರೆ ಸುಮ್ಮನೆ ಕೆರೆಗಳ ರಿಪೇರಿ ಮಾಡಿದರೂ ಏನೂ ಪ್ರಯೋಜನವಿಲ್ಲ. ನಮ್ಮ ಮಲೆನಾಡಿನ ಅಭಿವೃದ್ಧಿಯ ದೃಷ್ಟಿಯಿಂದ ಆ ಕಡೆಗೆ ವಿಶೇಷವಾಗಿ ಗಮನಕೊಡಬೇಕು. ಎಲ್ಲಾ ಸಂಪತ್ತನ್ನೂ ಕೊಡತಕ್ಕ ಮಲೆನಾಡು ಪ್ರದೇಶಗಳಲ್ಲಿ ಮಲೆನಾಡು ಅಭಿವೃದ್ಧಿ ಮಂಡಲಿಗಳನ್ನು ಸ್ಥಾಪನೆ ಮಾಡಬೇಕು. ಇವತ್ತು ಒಂದು ಮಾತನ್ನು ಹೇಳಬೇಕಾಗಿದೆ. ಅಲ್ಲಿ ಬೆಳೆಯತಕ್ಕ ಮರಗಳನ್ನು ಬೆಂಗಳೂರು ನಗರಕ್ಕೆ ತಂದು ಕಾರ್ಖಾನೆಗಳನ್ನು ಸ್ಥಾಪನೆ ಮಾಡುತ್ತಿದ್ದಾರೆ. ನಿವ್ಕೊ ಎಂಬ ಕಂಪೆನಿಗೆ ಯಥೇಚ್ಛವಾಗಿ ಮರಗಳನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಹೆಚ್ಚಿಗೆ ಕಾರ್ಖಾನೆಗಳು ಇಲ್ಲದೇ ಹೋಗಿರುವುದರಿಂದ ಪರರಾಷ್ಟ್ರಗಳಿಗೆ ಹೆಚ್ಚಿಗೆ ಮರಗಳನ್ನು ತೆಗೆದುಕೊಂಡು ಹೋಗಿ ಅಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುತ್ತಿದ್ದಾರೆ. ಅಲ್ಲಿ ಹೆಚ್ಚಿಗೆ ಆ ಮರಗಳನ್ನು ಮಾರಾಟ ಮಾಡುತ್ತಿದ್ದಾರೆ. ಬೇರೆ ದೇಶಗಳವರಿಗೆ ಹೆಚ್ಚಿನ ಪ್ರಮಾಣದಲ್ಲಿ ಮರಗಳನ್ನು ಕೊಟ್ಟಿದ್ದಾರೆ. ಎಷ್ಟು ಪ್ರಮಾಣದ ಮೇಲೆ ಆ ಕಂಪೆನಿಗೆ ಕೊಡುತ್ತಿದ್ದಾರೋ ಗೊತ್ತಿಲ್ಲ. ಮಲೆನಾಡಿನ ಅಭಿವೃದ್ಧಿ ದೃಷ್ಟಿಯಿಂದ ಈ ರಾಜ್ಯವನ್ನು ಒಂದು ಸಂಪದ್ಭರಿತವಾದ ರಾಜ್ಯವನ್ನಾಗಿ ಮಾಡುವುದಕ್ಕಾಗಿ ಮಲೆನಾಡು ಇರುವ ಪ್ರದೇಶಗಳ ಕಡೆಗೆ ಸರ್ಕಾರದವರು ವಿಶೇಷ ಗಮನವನ್ನು ಹರಿಸಬೇಕು.

ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷಣಿಯರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರಪ್ಪ ಮೊಯಿಲ (ಕಾರ್ಕಳ).— ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣವನ್ನು ಅನುಮೋದಿಸುತ್ತ ಅವರೇನು ಮುಖ್ಯವಾಗಿ ಭೂಸುಧಾರಣೆ ಮತ್ತು ರೆವಿನ್ಯೂ ಇಲಾಖೆಯ ಬಗ್ಗೆ ಮತ್ತು ಈ ಇಲಾಖೆಯ ಆಡಳಿತದ ಬಗ್ಗೆ ಸೂಚನೆ ಮಾಡಿದ್ದಾರೆ ಆ ಕೆಲವು ಸೂಚನೆಗಳನ್ನು ಪ್ರತಿಪಾದಿಸುತ್ತಾ ಕೆಲವು ವಿಮರ್ಶೆಯ ಮಾತುಗಳನ್ನು ಸೂಚನೆ ಮಾಡಲಿಕ್ಕೆ ಇಚ್ಛಿಸುತ್ತೇನೆ.

ಸ್ವಾಮಿ ಈ ಭೂಸುಧಾರಣೆಯ ಶಾಸನವನ್ನು ಸುಮಾರು ಇಲ್ಲಿಗೆ ಏಳು ವರ್ಷಗಳ ಹಿಂದೆಯೇ ಜಾರಿಗೆ ತಂದರು, ನಿಜ. ಆದರೆ ಇದರಿಂದ ಆ ಬಡರೈತನ ಆಸೆ ಆಕಾಂಕ್ಷೆಗಳನ್ನು ಹೆಚ್ಚಿನ ರೀತಿಯಲ್ಲಿ ಈಡೇರಿಸುವುದಕ್ಕೆ ಸಾಧ್ಯವಾಯಿತೇ ಅವರಿಗೆ ಒಂದು ಹೆಚ್ಚಿನ ರೀತಿಯಲ್ಲಿ ಪರಿಹಾರ ಒದಗಿಸುವುದಕ್ಕೆ ಸಾಧ್ಯವಾಯಿತೇ ಎಂದರೆ ಯಾವುದೂ ಅನುಕೂಲವಾಗಿಲ್ಲ. ಅದರಲ್ಲೂ ಮುಖ್ಯವಾಗಿ ದಕ್ಷಿಣ ಕನ್ನಡಜಿಲ್ಲೆಯಲ್ಲಿ ಈ ಭೂಸುಧಾರಣೆಯನ್ನು ಜಾರಿಗೆ ತಂದದ್ದು ಒಂದು ದೊಡ್ಡ ದುರಂತದ ಕಥೆಯೇ ಆಗಿದೆ. ಆದರೆ ಅದು ಇಲ್ಲಿ ಹೆಚ್ಚು ಜನರಿಗೆ ತಿಳಿದಿರಲಿಕ್ಕಿಲ್ಲ. ಆ ಜಿಲ್ಲೆಯಿಂದ ಬರತಕ್ಕ ಪ್ರತಿನಿಧಿಗಳು ಏನು ಹೇಳಿದ್ದರೂ ಅದು ಸರ್ಕಾರದವರ ಗಮನಕ್ಕೆ ಹೋಗಿಲ್ಲ ಎಂಬುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ಭೂಮಾಲೀಕರಿಗೂ ಮತ್ತು ಗೇಣಿದಾರರಿಗೂ ಹೋಲಿಸಿದರೆ ಗೇಣೀದಾರರೇ ಅಲ್ಲಿ ನೂರಕ್ಕೆ 80 ರಷ್ಟು ಇದ್ದಾರೆ; ಆಂದರೆ ಈ ಶೇಕಡ 80 ರಷ್ಟು ಜನರಿಗೆ ತಾವು ಗೇಣಿದಾರರು ಎಂಬುದಕ್ಕೆ ಅವರಲ್ಲಿ ಯಾವ ಕಾಗದ ಪತ್ರಗಳ ದಾಖಲೆಯೂ ಇರುವುದಿಲ್ಲ. ಇವರೆಲ್ಲಾ ಬರಿ ಒಂದು ಬಾಯಿ ಮಾತಿನಲ್ಲಿ ನಡೆದ ಓರಲ್ ಕರಾರಿನ ಪ್ರಕಾರ ಗೇಣಿದಾರರಾಗಿದ್ದಾರೆ. ಇವರ ಸಂಖ್ಯೆ ದಿನ ದಿನಕ್ಕೂ ನಶಿಸಿಹೋಗುತ್ತಾ ಇದೆ. ಹೀಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಭೂ ಸುಧಾರಣೆಯ ಶಾಸನದಿಂದ ಗೇಣೀದಾರನಿಗೆ ಏನೇನೂ ಸುಖವಾಗಿಲ್ಲ. ಇನ್ನೂ ತೊಂದರೆಗಳೇ ಹೆಚ್ಚಾಗುತ್ತಿವೆ. ಇವರು ಯಾವ ಕೋರ್ಟಿಗೆ ಹೋದರೂ ಇವರಲ್ಲಿ ಯಾವ ಬರವಣಿಗೆಯೂ ಇಲ್ಲದಿರುವ ಕಾರಣ ಅಲ್ಲಿ ಆಗತಕ್ಕ ತೀರ್ಮಾನ ಇವರಿಗೆ ಹೆಚ್ಚು ವ್ಯತಿರಿಕ್ತವಾಗುತ್ತಿದೆಯೇ ವಿನಾ ಅನುಕೂಲವಾಗುವುದಕ್ಕೆ ಅವಕಾಶವಿಲ್ಲದಂತಾಗಿದೆ, ಈ ದಿವಸ ಪ್ರತಿಯೊಬ್ಬ ಒಕ್ಕಲುತನದವನೂ ಕೋರ್ಟಿನಲ್ಲಿ ಭೂ ಮಾಲೀಕನು ಹೂಡಿರತಕ್ಕ 3–4 ಕೇಸುಗಳನು ಎದುರಿಸಬೇಕಾಗಿದೆ. ಅವನು ದಿನವೂ ಕೋರ್ಟಿಗೆ ಅಲೆದಾಡುತ್ತಾ ಅಲ್ಲಿಯ ಒಕ್ಕಲುತನ ನಾಶವಾಗುವುದಕ್ಕೆ ಹತ್ತಿದೆ. ಅಲ್ಲಿಯ ಭೂ ಮಾಲೀಕರು ಈ ಒಂದು ಅನುಕೂಲ ಹೊಂದಿರುವುದರಿಂದ ಸುಮಾರು 75 ಸಾವಿರ ಒಕ್ಕಲುಗಳನ್ನು ಈಗಾಗಲೇ ಹೊರಗೆ ಹಾಕಿದ್ದಾರೆ. ಆ ಪ್ರಯತ್ನಗಳನ್ನು ತಡೆಗಟ್ಟುವುದಕ್ಕೆ ಹಾಲಿ ಇರತಕ್ಕ ಶಾಸನ ಮತ್ತು ಪೋಲೀಸರು ಇವರು ಯಾರಿಂದಲೂ ಸಾಧ್ಯವಿಲ್ಲ.

ಎರಡನೆಯದಾಗಿ ಹೆಚ್ಚಿಗೆ ಎನ್‌ಕ್ರೋಚ್‌ಮೆಂಟ್ಸ್ ಮತ್ತು ಅನ್ ಆತರೈಜಡ್ ಆಕ್ಯುಪೇಷನ್ಸ್‌ಗಳ ಕೇಸುಗಳು ನಮ್ಮಲ್ಲಿ ತುಂಬಾ ಇವೆ ಹಲವಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸಮಾಡತಕ್ಕ ಜನಗಳಿಗೆ ನೋಟೀಸ್ ಹೋಗುತ್ತಾ ಇವೆ. ಆದುದರಿಂದ ಯಾರಾದರೂ ಮನೆಯನ್ನು ಕಟ್ಟಿಕೊಂಡಿದ್ದರೆ, ಅವರಿಗೆ ಹೆಚ್ಚಿನ ದಂಡವನ್ನು ವಿಧಿಸದೆ ಅವರಿಗೆ ಮುಫತ್ತಾಗಿ ಭೂಮಿಯನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರ ಕೈಕೊಳ್ಳಬೇಕಾಗಿದೆ. ಭೂಸುಧಾರಣೆ ವಿಷಯದಲ್ಲಿಯೂ ಕೂಡ ಒಂದು ಸಲಹಾ ಮಂಡಳಿಯನ್ನೂ ಸ್ಥಾಪನೆ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಗೆ ಈ ಸಲಹಾ ಮಂಡಲಿಯು ಅಗತ್ಯ ಇದೆ. ಈ ಸಲಹಾ ಮಂಡಲಿಯ ಸಹಾಯದಿಂದ ರೈತರಿಗೆ ಆಗುವ ಅನ್ಯಾಯವನ್ನು ತಡೆಗಟ್ಟುವ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ವಿನಂತಿಸಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**MADAM SPEAKER.**—The House will now rise and meet tomorrow at 1 P.M.

---

*The House adjourned at Five Minutes past Six of the Clock, to meet again at One of the Clock on Thursday, the 13th April 1972.*

---

WD 17321—GPB—550—15-7-72

ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Thursday, the 13th April 1972*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

### (to which Oral Answers were given)

### Sunflower Cultivation

10. Sri M. B. RAMASWAMY (Anekal).—

Will the Minister for Agriculture and Forests be pleased to state :—

(*a*) whether Government has taken up propagation of Sunflower cultivation ;

(*b*) if so, the steps Government has taken to popularise its cultivation ;

(*c*) the present area in the State under Sunflower cultivation (Districtwise figures be furnished) ;

(*d*) the marketing facilities created for the purchase and sale of Sunflower seeds ?

Sri K. H. PATIL (Minister for Agriculture and Forests).—

(*a*) Yes.

(*b*) The Department conducted 140 demonstrations during 1971-72 in 15 Districts.

The Department has taken action to collect good seeds of Sunflower after testing the same at the Seed Testing Laboratory.

The Department has programmed to cover an area of 20,000 hectares during 1972–73.

(*c*) 140 Hectares (Districtwise figures appended).

(SRI K. H. PATIL)

(*d*) (i) Good seeds conforming to the minimum limits of purity and germination are purchased by the Department for seed purposes.

(ii) The Vanaspathi Manufacturers Association, Bombay are purchasing Sunflower seeds.

## Sunflower Demonstrations (1 Hectare each) in Mysore State during 1971-72.

| Sl. No. | Name of the District | Target | | Achievement | | Remarks |
|---|---|---|---|---|---|---|
| | | Kharif | Summer | Kharif | Summer | |
| 1 | Bangalore | ... | 2 | ... | ... | |
| 2 | Kolar | ... | 1 | ... | ... | |
| 3 | Tumkur | 5 | 1 | 5 | ... | |
| 4 | Shimoga | 5 | 9 | 5 | 8 | |
| 5 | Chitradurga | ... | 15 | ... | 14 | |
| 6 | Mandya | ... | 1 | ... | ... | |
| 7 | Hassan | 2 | 1 | 2 | ... | |
| 8 | Chickmagalur | 5 | 3 | 5 | 3 | |
| 9 | Raichur | 11 | 23 | 11 | 23 | |
| 10 | Gulbarga | 3 | 3 | 3 | 3 | |
| 11 | Bidar | 5 | ... | 5 | ... | |
| 12 | Bellary | 4 | 15 | 4 | 10 | |
| 13 | Dharwar | ... | 4 | ... | 4 | |
| 14 | Belgaum | 9 | 9 | 9 | 3 | |
| 15 | Bijapur | 14 | 10 | 14 | 9 | |
| | Total | 63 | 97 | 63 | 77 | |

**Sri M. B. RAMASWAMY.**—Are any special officers appointed for conducting these demonstrations ?

† **Sri K. H. PATIL.**—Yes. Not only for this purpose but also as development officers.

**Sri M. B. RAMASWAMY.**—May I know the names of the Districts in which the demonstrations have been conducted ?

**Sri K. H. PATIL.**—They are already mentioned in the Appendix.

ಶ್ರೀ ಎಸ್. ಹೆಚ್. ಪುಟ್ಟದಾಸ್.—ನೀವು ಉತ್ತರದಲ್ಲಿ 140 ಪ್ರದರ್ಶನ ನಡೆದಿದೆ ಎಂದು ತಿಳಿಸಿದ್ದೀರಿ. ನಮ್ಮ ಜಿಲ್ಲೆಯಲ್ಲಿ 2 ಪ್ರದರ್ಶನಗಳೂ ಕೂಡ ಆಗಿಲ್ಲ. ಅಂತಹ ಪ್ರದರ್ಶನವನ್ನು ಯಾವಾಗ ನಡೆಸುತ್ತೀರಿ ಎನ್ನುವ ಭರವಸೆ ಕೊಡುತ್ತೀರಾ ?

**Sri K. H. PATIL.**—As per the report received, it is only in respect of some flowers that exhibitions have taken place.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಬೆಂಗಳೂರಿನಲ್ಲಿ 2 ಪ್ರದರ್ಶನ ನಡೆದಿದೆ ಎಂದು ಉತ್ತರ ಕೊಟ್ಟಿದ್ದೀರಿ. ಅದರಲ್ಲಿ ಅಚೀವ್‌ಮೆಂಟ್ ನಿಲ್ ಎಂದು ಹೇಳಿದ್ದೀರಿ. ಹಾಗೆಯೇ ಕೋಲಾರದಲ್ಲೂ 'ನಿಲ್' ಎಂದು ಇದೆ. ಇದಕ್ಕೆ ಕಾರಣಗಳು ಏನಾದರೂ ಇವೆಯೇ ?

**Sri K. H. PATIL.**—Since we are in the experimental stage, achievement is not given. We are awaiting results.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಸೂರ್ಯಕಾಂತಿ ಹೂವಿನ ಪ್ರದರ್ಶನ ಮಾತ್ರ ಮಾಡಿದ್ದೀರಿ. ಬೇರೆ ಇನ್ನಾವ ಪ್ರದರ್ಶನವನ್ನೂ ಮಾಡುವುದಕ್ಕೆ ಬೇಕಾದಂಥ ಹೂಗಳು ಇರಲಿಲ್ಲವೇ ? ಸೂರ್ಯಕಾಂತಿ ಹೂವಿನ ಪ್ರದರ್ಶನ ಮಾಡುವುದಕ್ಕೆ ಕಾರಣ ಏನು ?

ಶ್ರೀ ಕೆ. ಹೆಚ್. ಪಾಟೀಲ್.—ಸೂರ್ಯಕಾಂತಿ ಹೂವಿನಿಂದ ಅಡುಗೆಗೆ ಬಳಸಬಹುದಾದ ಆಯಿಲ್‌ನ್ನು ತಯಾರು ಮಾಡುವುದಕ್ಕೆ ಪ್ರಯೋಜನವಾಗುವುದರಿಂದ ಈ ಸ್ಕೀಮನ್ನು ಇಟ್ಟುಕೊಂಡಿದ್ದೇವೆ. ಈ ತರಹ ಆಯಿಲ್‌ಗೆ ಖರೀದಿಯೂ ಇರುತ್ತದೆ. ಇದು ಒಂದು ಸ್ಪೆಷಲ್ ಸ್ಕೀಂ. ಇದಕ್ಕೆ ಸೆಂಟ್ರಲ್ ಗೌರ್ನ್‌ಮೆಂಟ್‌ನವರು ಗ್ರಾಂಟ್ ಮಂಜೂರು ಮಾಡಿದ್ದಾರೆ. ಅದಕ್ಕೇ ನಾವು ಇಷ್ಟೊಂದು ಆಸಕ್ತಿಯನ್ನು ತೆಗೆದುಕೊಂಡು ಕೆಲಸ ಮಾಡಿದ್ದೇವೆ.

ಶ್ರೀ ಎಸ್. ಹೆಚ್. ಪುಟ್ಟದಾಸ್.—ಇದನ್ನು ಬೆಳೆಯುವುದಕ್ಕೆ ರೈತರಿಗೆ ಏನಾದರೂ ಸೌಲಭ್ಯಗಳನ್ನು ಕೊಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ರೈತರಿಗೆ ಪುಕ್ಕಟೆ ಬೀಜವನ್ನು ಕೊಡುತ್ತೇವೆ. ಟೆಕ್ನಿಕಲ್ ಹೆಲ್ಪು ತೆಗೆದುಕೊಳ್ಳುತ್ತಾರೆ. ಸಾಧನ ಸಾಮಗ್ರಿಗಳನ್ನು ಕೊಡುವುದರ ಬಗ್ಗೆ ವಿಚಾರಣೆ ನಡೆಯುತ್ತಿದೆ.

ಶ್ರೀ ಟಿ. ಎಂ. ಮಂಜುನಾಥ್.—ಸೂರ್ಯಕಾಂತಿ ಹೂವನ್ನು ಹೆಚ್ಚು ಬೆಳೆಸಿದರೆ, ಅದನ್ನು ಅಡುಗೆಗೆ ಬಳಸಬಹುದೆಂದು ಹೇಳುತ್ತೀರಿ. ಆದ್ದರಿಂದ ಇದನ್ನು ಇನ್ನೂ ಹೆಚ್ಚಿಗೆ ಪ್ರದರ್ಶನ ಮಾಡಬಹುದು. ನಮ್ಮ ತುಮಕೂರು ಜಿಲ್ಲೆಯಲ್ಲಿ ಈ ಪ್ರದರ್ಶನ ನಡೆದರೆ, ಇನ್ನೂ ಹೆಚ್ಚು ಪ್ರಚಾರ ಮಾಡುವುದಕ್ಕೆ ಅವಕಾಶ ಇದೆ ಎಂದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ನಮ್ಮ ತುಮಕೂರು ಜಿಲ್ಲೆಯಲ್ಲಿ ತಾಲ್ಲೂಕಾ ಮಟ್ಟದಲ್ಲಿ ಇದನ್ನು ಪ್ರಚಾರ ಮಾಡಲಿಕ್ಕೆ ಎಲ್ಲೆಲ್ಲಿ ಆ ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಸೂರ್ಯಕಾಂತಿ ಹೂವಿನಿಂದ ಜನಗಳಿಗೆ ತಿನ್ನುವಂಥ ಪದಾರ್ಥಗಳನ್ನು ತಯಾರಿಸಲು ಬಳಸುವ ಎಣ್ಣೆಯನ್ನು ತೆಗೆಯಲಿಕ್ಕೆ ಬರುತ್ತದೆ. ಆದುದರಿಂದ ಅದನ್ನು ಇನ್ನೂ ಹೆಚ್ಚು ಅಭಿವೃದ್ಧಿ ಮಾಡಿ ನಮ್ಮ ರಾಜ್ಯದಲ್ಲಿ ಅದನ್ನು ಹೆಚ್ಚು ಜನ ಬಳಸಲು ಅವಕಾಶ ಮಾಡುತ್ತೇವೆ. ಜನರು ಅದರಿಂದ ತಯಾರಾದ ಪದಾರ್ಥಗಳನ್ನು ತಿನ್ನುತ್ತಿದ್ದಾರೋ ಇಲ್ಲವೋ ಎಂಬುದನ್ನು ಕಾದು ನೋಡಬೇಕಾಗಿದೆ. ಅದರ ಬೆಳವಣಿಗೆ ಇನ್ನೂ ಜಾಸ್ತಿಯಾಗಿಲ್ಲ.

---

† Indicates that the remarks or speeches have not been revised by the member concerned.

Sri M. MALLAPPA.—It is stated that an Association is purchasing seeds. What is the income of the Department realised by the sale of these seeds ?

Sri K. H. PATIL.—Notice.

Sri C. M. ARUMUGHAM.—The Hon'ble Minister, while replying to a supplementary, stated that the Central Government has given grant for development purposes. May I know what is the grant paid so far by the Central Government and the amount spent from it ?

Sri K. H. PATIL.—It is out of the Question. I want Notice.

Sri C. M. ARUMUGHAM.—The Minister is not the authority to decide whether a supplementary is out of the question and it does not come within the purivew of the Question raised. The Ministers must be a little restrained in answering questions. Let them not take to themselves the authority of the Speaker to decide whether a supplementary comes within the purivew of the main Question or not. The Hon. Minister must know that he is not participating in a debate.

MADAM SPEAKER—It will be taken note of.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಈ ಸೂರ್ಯಕಾಂತಿ ಹೂವನ್ನು ಬೆಳೆಸುವುದಕ್ಕೆ ಜನ ಆಸಕ್ತಿ ವಹಿಸಿದರೆ ಅವರಿಗೇನಾದರೂ ಜಮೀನು, ಸಹಾಯಧನ ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಅವರಿಗೆ ಜಮೀನು ಕೊಡುವುದಕ್ಕೆ ಯೋಚನೆ ಮಾಡಿಲ್ಲ. ಯಾರು ಯಾರು ಸೂರ್ಯಕಾಂತಿ ಹೂವನ್ನು ಬೆಳೆಸುವುದಕ್ಕೆ ಇಷ್ಟ ಪಡುತ್ತಾರೋ ಅವರಿಗೆ ಪುಕ್ಕಟೆ ಬೀಜ ವನ್ನು ಕೊಡುವುದಕ್ಕೆ ಯೋಚನೆ ಮಾಡಿದ್ದೇವೆ. ಮತ್ತು ರೈಲ್ವೆ ಲೈನಿನ ಬಳಿ ಇರುವ ಆ ಕಡೆ ಈ ಕಡೆ ಜಮೀನಿನಲ್ಲಿ ಸೂರ್ಯಕಾಂತಿ ಹೂವು ಬೆಳೆಸುವುದಕ್ಕೆ ರೈಲ್ವೆ ಗ್ಯಾಂಗ್‌ಮನ್‌ಗಳಿಗೆ ಪ್ರೋತ್ಸಾಹ ಕೊಟ್ಟು ಮಾಡಿಸಬೇಕೆನ್ನುವುದು ಸರ್ಕಾರದ ಇಚ್ಛೆಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸೂರ್ಯಕಾಂತಿ ಹೂವು ಬೆಳೆಸುವುದನ್ನು ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ವಿಸ್ತರಿಸುವುದಕ್ಕೆ ಯೋಚನೆ ಮಾಡಿದ್ದೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮೈಸೂರಿನ ಜಿಲ್ಲೆಯೊಳಗೆ ಈ ಸೂರ್ಯಕಾಂತಿ ಹೂವನ್ನು ಎಲ್ಲೆಲ್ಲಿ ಬೆಳೆಸುವುದಕ್ಕೆ ಸಾಧ್ಯ ಇದೆಯೋ ಅಲ್ಲಲ್ಲಿ ಬೆಳೆಸುವುದಕ್ಕೆ ಪ್ರೋತ್ಸಾಹ ಕೊಡಬೇಕು ಎನ್ನುವುದು ಸರ್ಕಾರದ ಯೋಚನೆಯಲ್ಲಿದೆ.

ಶ್ರೀ ಸಿ. ಬೈರೇಗೌಡ.—ಈ ಬೆಳೆ ಬಹಳ ಉತ್ತಮವಾಗಿರುತ್ತದೆ ಎಂದು ರೈತರು ತಿಳಿದು ಕೊಂಡಿದ್ದಾರೆ. ಆದುದರಿಂದ ಮುಂದಿನ ವರ್ಷ ಹೆಚ್ಚು ಹೆಚ್ಚು ಬೆಳೆಯಬಹುದು. ಹಾಗೆ ಬೆಳೆ ದಂಥ ಸಮಯದಲ್ಲಿ ಅದಕ್ಕೆ ಏನಾದರೂ ಎಕನಾಮಿಕ್ ಮಿನಿಮಮ್ ಪ್ರೈಸ್ ಕೊಡುವುದಕ್ಕೆ ತಯಾರಿದ್ದೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ವಿಚಾರ ಮಾಡುತ್ತೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶನಾರಾಯಣ್.—ಮಾನ್ಯ ಮಂತ್ರಿಗಳು ಇಲ್ಲಿ ಉತ್ತರಿಸುವಾಗ 15 ಜಿಲ್ಲೆಗಳಲ್ಲಿ 140 ಪ್ರದರ್ಶನಗಳನ್ನು ಏರ್ಪಡಿಸಿದ್ದೇವೆ ಎಂದು ಹೇಳುತ್ತಾರೆ. ಉಳಿದ ಜಿಲ್ಲೆ ಗಳಲ್ಲಿ ಈ ಪ್ರದರ್ಶನಗಳು ಇಲ್ಲ ಎಂದು ತಿಳಿದುಕೊಳ್ಳೋಣವೇ ? ಅಥವಾ ಅಲ್ಲಿ ಈ ಯೋಜನೆ ಕಾರ್ಯಗತವಾಗಿಲ್ಲವೆ ? ಯಾವ ಜಿಲ್ಲೆಯಲ್ಲಿ ಇದು ಕಾರ್ಯಗತವಾಗಿಲ್ಲವೋ ಅಂದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಪ್ರದರ್ಶನ ಆಯಿತೇ ? ಆಗಿದ್ದರೆ ಇದು ಎಲ್ಲಿ ಆಗಿದೆ ಎಂದು ತಿಳಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೇ ಕಾರ್ಯಗತವಾಗಿರತಕ್ಕಂಥ ಜಿಲ್ಲೆಗಳನ್ನು ಕೊಟ್ಟಿದ್ದೇವೆ. ಯಾವ ಜಿಲ್ಲೆಗಳನ್ನು ಕೊಟ್ಟಿಲ್ಲವೋ ಅಲ್ಲಿ ಇನ್ನೂ ಈ ಯೋಜನೆ ಕಾರ್ಯಗತವಾಗಿಲ್ಲ. ಅದನ್ನು ಕಾರ್ಯಗತ ಮಾಡುವ ಪ್ರಯತ್ನ ನಡೆದಿದೆ.

ಶ್ರೀ ಪಿ. ಎಂ. ಭಂಗಿ.—ಈ ಬೀಜವನ್ನು ಯಾವ ಇಲಾಖೆ ಮುಖಾಂತರ ಶೇಖರಣೆ ಮಾಡುತ್ತೀರಿ ?

ಶ್ರೀ ಕೆ. ಹೆಚ್. ಪಾಟೀಲ್.—ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್ ಮುಖಾಂತರ ಶೇಖರಣೆ ಮಾಡುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ.—ಮಳೆ ಕಡಿಮೆ ಬೀಳತಕ್ಕಂಥ ಖುಷ್ಕಿ ಜಮೀನಿನಲ್ಲಿ ಇದನ್ನು ಬೆಳೆಸುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್.—ಖುಷ್ಕಿ ಜಮೀನಿನಲ್ಲಿ ಬೆಳೆಯುತ್ತೇವೆ.

ಶ್ರೀ ಸಿ. ಬೈರೇಗೌಡ.—ಸೂರ್ಯಕಾಂತಿ ಹೂವನ್ನು ಬೆಳೆಸುವುದಕ್ಕೆ ತಾಲ್ಲೂಕಾ ಮಟ್ಟದಲ್ಲಿ ಏನು ಯೋಚನೆ ಮಾಡಿದ್ದೀರಿ ?

ಶ್ರೀ ಕೆ. ಹೆಚ್. ಪಾಟೀಲ್.—ಎಲ್ಲೆಲ್ಲಿ ಅಗ್ರಿಕಲ್‌ಚರಲ್ ಮಾರ್ಕೆಟಿಂಗ್ ಸೊಸೈಟಿಗಳು ಇವೆಯೋ ಅಲ್ಲಲ್ಲಿ ಬೀಜಗಳನ್ನು ತರಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಂ. ಮಲ್ಲಪ್ಪ.— ಮಳೆ ಬಾರದೇ ಇರತಕ್ಕಂಥ ಖುಷ್ಕಿ ಜಮೀನಿನಲ್ಲೂ ಕೂಡ ಇದನ್ನು ವ್ಯಾಪಕವಾಗಿ ಬೆಳೆಸುವುದಕ್ಕೆ ಇಲಾಖೆಯವರು ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಂಡು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಯಾವ ಯಾವ ಜಿಲ್ಲೆಯೊಳಗೆ ಎಲ್ಲೆಲ್ಲಿ ಸಾಧ್ಯವಿದೆ, ಅಲ್ಲಿ ಈ ಬೀಜಗಳನ್ನು ಕೊಟ್ಟು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಫಾರೆಸ್ಟ್ ರಿಲೀಸ್ ಮಾಡುವ ಪಾಲಿಸಿ ಪ್ರಕಾರ ಶಿವಮೊಗ್ಗ ಜಿಲ್ಲೆ ಲಿಂಗನಮಕ್ಕಿ ಒಳಗೆ ಅಲ್ಲಿರುವ ಜನಗಳನ್ನು ಬಲಾತ್ಕಾರವಾಗಿ ಬಿಡಿಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದಕ್ಕೆ ತಾವು ಏನಾದರೂ ಪರಿಹಾರ ಕೊಡುತ್ತೀರಾ ?

SRI K. H. PATIL.—Notice, Sir.

## Upset Price of Plantation Land

19. SRI G. PUTTASWAMY (Mudigere).—

Will the Minister for Revenue be pleased to state:—

(*a*) whether Government have received complaints that the upset price fixed per acre for plantation land is very high ;

(*b*) if so, the steps taken to revise the price ;

(*c*) whether it has come to the notice of Government that the Scheduled Caste people are unable to pay this upset price in plantation area ;

(*d*) if so, the action taken by the Government to reduce the upset price ?

SRI N. HUTCHAMASTHY GOWDA (Minister for Revenue).—

(*a*) Yes. A representation was received from the Mysore Small Coffee Growers Association, Chickmagalur.

(SSI N. HUTCHAMASTHY GOWDA)

(*b*) A provision has been made in Mysore Land Grant Rules, 1969, that where a person who owns Coffee lands not exceeding 10 acres in extent, or a person who does not own any land, applies for lands for growing Coffee he may be granted lands up to 5 acres or an extent required to make up 10 acres, whichever is less, at half the rate payable.

(*c*) Yes.

(*d*) A provision has been made in the Rules that if persons belonging to S.Cs., and S. Ts., become members of Co-operative Societies which can finance Coffee cultivation then lands may be granted to them, the recovery of the value of the land being deferred till the lands are confirmed in their favour at the end of five years.

ಶ್ರೀ ಜಿ. ಪುಟ್ಟಸ್ವಾಮಿ.—69ನೆಯ ಇಸವಿಯಲ್ಲಿ ಮೈಸೂರು ರಾಜ್ಯದ ಭೂ ಮಂಜೂರಾತಿ ನಿಯಮಗಳಲ್ಲಿ ಅವಕಾಶಕಲ್ಪಿಸಲಾಗಿದೆ ಎಂದು ಉತ್ತರದಲ್ಲಿ ತಿಳಿಸಿದೆ. ಏನು ಅವಕಾಶ ಮಾಡಲಾಗಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—69ನೆಯ ಇಸವಿಯಲ್ಲಿ ಒಂದು ಹೆಕ್ಟೇರಿಗೆ 1250 ರೂಪಾಯಿ ಅಥವ ಎಕರೆಗೆ 500 ರೂಪಾಯಿ ನಿಗದಿಮಾಡಿತ್ತು. ಈಗ 500 ರೂಪಾಯಿಗೆ ಇಳಿಸಲಾಗಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಎಕರೆಗೆ 500 ರೂಪಾಯಿ ಬಹಳ ದುಬಾರಿ ಎಂಬುದು ಸರಕಾರದ ಗಮನಕ್ಕೆಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ಬೆಳೆಯುವ ಜಮೀನಿಗಿರುವ ಮಾರ್ಕೆಟ್ ವ್ಯಾಲ್ಯೂ ನೋಡಿದರೆ ಇದೇನು ಹೆಚ್ಚಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—(ಡಿ) ಪ್ರಶ್ನೆಗೆ ಉತ್ತರವಾಗಿ ಸಹಕಾರ ಸಂಘಗಳ ಸದಸ್ಯರಾಗಿದ್ದರೆ ವಸೂಲಾತಿಯನ್ನು ಮುಂದಕ್ಕೆ ಹಾಕಲಾಗುವುದು ಎಂದು ತಿಳಿಸಲಾಗಿದೆ. ಆದರೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಯವರು ಸಹಕಾರ ಸಂಘಗಳ ಉಪಯೋಗ ಪಡೆಯಲು ಅವರಿಗೆ ಶಕ್ತಿಯಿಲ್ಲ. ಆದುದರಿಂದ ಅವರಿಗೆ ಬೇರೆ ರೀತಿಯಲ್ಲಿ ಅನುಕೂಲಮಾಡಿ ಕೊಡುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಸರಕಾರಿ ಆಜ್ಞೆ ಪ್ರಕಾರ ಈ ರೀತಿ ಇದೆ. ಮೊದಲು ಪೂರ್ತಿ ಬೆಲೆ, ಜಮೀನು ಮಂಜೂರ್ಮಾಡಿದಾಗಲೇ ಕೊಡಬೇಕಾಗಿತ್ತು. 69ರ ಆರ್ಡರಿನ ಪ್ರಕಾರ 5 ವರ್ಷವಾದಮೇಲೆ ಬೆಳೆ ಕೈಗೆ ಸೇರಿದಮೇಲೆ ಕೊಡುವಂತೆ ಅವಕಾಶ ಕಲ್ಪಿಸಿರುವುದರಿಂದ ಇದರಿಂದ ಅನುಕೂಲವಾಗಬಹುದು. ಮಾನ್ಯ ಸದಸ್ಯರು ಹೇಳುವಂತೆ ಸಂಘಗಳ ಸದಸ್ಯರಾಗಲು ಕಷ್ಟವಾಗುವುದಾದರೆ ಏನು ಮಾಡಬೇಕೆಂಬುದನ್ನು ಯೋಚಿಸಿ ಹೇಳಬೇಕಾಗುವುದು.

ಶ್ರೀ ಬಿ. ಬೈರಪ್ಪಾಜಿ.—ಇದೇ ರೀತಿ ಮೈದಾನ ಪ್ರದೇಶಗಳಲ್ಲಿ ಅನುಸೂಚಿತ ಜಾತಿಗಳವರಿಗೆ ಜಮೀನನ್ನು ಅಪ್‌ಸೆಟ್ ಪ್ರೈಸಿಗೆ ಕೊಡಲು ಸಾಧ್ಯವಿಲ್ಲವೆ ? ಷೆಡ್ಯೂಲ್ಡ್ ಕ್ಯಾಸ್ಟಿನವರು ಮುತ್ತಿತರರಿಗೆ ಫ್ರೀ ಆಗಿ ಏಕೆ ಕೊಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ಬೆಳೆಯುವ ಜಮೀನಿನ ವಿಷಯವಲ್ಲದೆ ಬೇರೆ ಜಮೀನಿನ ವಿಷಯ ಕೇಳಬೇಕಾದರೆ ಬೇರೆ ಪ್ರಶ್ನೆ ಹಾಕಬೇಕು. ಇದು ಕಾಫಿ ಬೆಳೆಯುವ ಜಮೀನಿಗೆ ಮಾತ್ರ ಸಂಬಂಧಪಟ್ಟ ಪ್ರಶ್ನೆ. ಈ ಜಮೀನಿಗೆ ಈಗಿರುವುದಕ್ಕಿಂತ ಹೆಚ್ಚು ರಿಯಾಯಿತಿ ಕೊಡುವುದು ಕಷ್ಟ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮಂತ್ರಿಗಳು ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಯವರಿಗೆ ಹೆಚ್ಚು ರಿಯಾಯಿತಿ ಕೊಡುವುದಕ್ಕಾಗುವುದಿಲ್ಲ ಎನ್ನುವ ರೀತಿಯಲ್ಲಿ ಉತ್ತರ ಹೇಳುತ್ತಿದ್ದಾರೆ. ಸೇಕಡ 50 ಭಾಗ ಜಮೀನನ್ನು ಸರಕಾರ ನಿಮ್ನ ವರ್ಗದವರಿಗೆ ಉಳುವುದಕ್ಕೆ ಕೊಡಬಹುದೆಂಬ ತತ್ವವಿರುವುದರಿಂದ ಕಾಫಿ ಬೆಳೆಯುವ ಸೇಕಡ 50 ರಷ್ಟು ಜಮೀನನ್ನು ಮೀಸಲಾಗಿಟ್ಟು ವಿಶೇಷ ರೀತಿಯಲ್ಲಿ ಕೊಟ್ಟು ಬಡವರನ್ನು ಉದ್ಧಾರ ಮಾಡುವಿರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನುಸೂಚಿತ ಜಾತಿಗಳವರಿಗೆ ಕಾಫಿ ಬೆಳೆಯುವ ಜಮೀನನ್ನು ಕೂಡ ಇತರ ಜಮೀನುಗಳನ್ನು ಕೊಡುವ ರೀತಿಯಲ್ಲೇ ಕೊಡಬೇಕೆಂದರೆ ಅದು ಬೇರೆ ಪ್ರಶ್ನೆ. ಈ ಪ್ರಶ್ನೆಗೆ ಅದು ಸಂಬಂಧಪಡುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಫಿ ಬೆಳೆಯುವ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಜಮೀನು ಉಳಿದಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಅಂಕಿಅಂಶ ಶೇಖರಿಸಿ ತಿಳಿಸಬಹುದು.

ಶ್ರೀ ಟಿ. ಎನ್. ಮಾದಪ್ಪಗೌಡ.—ನಿಮ್ನವರ್ಗದವರಿಗಿಂತ ಕೀಳುಮಟ್ಟದಲ್ಲಿ ಬೇರೆ ಜಾತಿಗಳವರಿದ್ದಾರೆ. ಅವರು ಕೇಳಿದರೆ ಇದೇ ಸೌಲಭ್ಯವನ್ನು ಅವರಿಗೂ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—(ಅ) ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿರುವಂತೆ ಕಡಿಮೆ ಜಮೀನಿರುವವರಿಗೆ ಕಾಫಿ ಬೆಳೆಯುವಾಗ ವಿನಾಯಿತಿ ಇದೆ. ಅದು ಅನುಸೂಚಿತ ಜಾತಿಗಳವರಿಗೆ ಕೊಡುವ ರಿಯಾಯಿತಿ. ಬೇರೆಯವರಿಗೆ ಕೊಡುವ ವಿಚಾರದಲ್ಲಿ ಉತ್ತರ ಈಗ ಹೇಳುವದಕ್ಕಾಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಈಗ ಕಾಫಿ ಬೆಳೆಯುವ ಜಮೀನಿಗೆ ಎಕರೆಗೆ 500 ರೂಪಾಯಿ ಇದೆ. ಮಾಲ್ಕಿ ವಗೈರೆ ಇರುವುದನ್ನು ನೋಡಿ ಅದಕ್ಕೆ ಬೆಲೆ ಕಟ್ಟಿದರೆ ಹೆಚ್ಚು ಬರುವುದಿಲ್ಲ ಮಾಲ್ಕಿ ಬಿಟ್ಟು ಬರೀ ಜಮೀನಿನ ಬೆಲೆ ಲೆಕ್ಕ ಹಾಕಿರಬಹುದು· ಖರ್ಚು 50ರಿಂದ 200 ರೂಪಾಯಿವರೆಗೆ ಬರುವುದರಿಂದ 200 ರೂಪಾಯಿಗೆ ಬೆಲೆ ಇಳಿಸುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—1940ರಲ್ಲಿ ಕೇವಲ ಎಕರೆಗೆ 20 ರೂಪಾಯಿ ಇತ್ತು. 1959ರಿಂದ 60ರವರೆಗೆ ನೂರು ರೂಪಾಯಿ ಇತ್ತು, 1968ರಲ್ಲಿ ಎಕರೆಗೆ 800 ರೂಪಾಯಿ ಆಯಿತು. 1969ರಲ್ಲಿ 500 ರೂಪಾಯಿಗೆ ಇಳಿಸಿದರು. ಅದಕ್ಕಿಂತ ಹೆಚ್ಚಾಗಿ ಇಳಿಸಲು ಸಾಧ್ಯವಿಲ್ಲ. ಕಾಫಿ ಬೆಳೆ ಒಂದು ಅಥವ 2 ವರ್ಷಕ್ಕೆ ಬರುವುದಿಲ್ಲ. 4 ವರ್ಷ ಒಂದು ಎಕರೆಗೆ ವರ್ಷಕ್ಕೆ ಸುಮಾರು 800 ರೂಪಾಯಿನಿಂದ 1000 ರೂಪಾಯಿವರೆಗೆ ಖರ್ಚು ಬರುವುದು. ಬೆಳೆ ಬರಲು 5 ವರ್ಷ ಬೇಕು. ಇದಾಗಬೇಕಾದರೆ 5 ಎಕರೆಗೆ 16 ಸಾವಿರದಿಂದ 20 ಸಾವಿರ ರೂಪಾಯಿಗಳವರೆಗೆ ಬಂಡವಾಳ ಹಾಕಿ ಖರ್ಚು ಮಾಡಬೇಕು. ಆ ಶಕ್ತಿ ಇದ್ದರೆ ಉಪಯೋಗವಾಗುತ್ತದೆ. ಇಲ್ಲದಿದ್ದರೆ ಪ್ರಯೋಜನವಾಗುವುದಿಲ್ಲ. ಅಷ್ಟು ಶಕ್ತಿ ಇಲ್ಲದಿದ್ದರೆ ಪಕ್ಕದಲ್ಲಿರುವ ಹಣವಂತರು ಜಮೀನನ್ನು ಕೊಂಡುಕೊಳ್ಳುವುದಕ್ಕೆ ಅವಕಾಶವಾಗುವುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಅನುಸೂಚಿತ ಜಾತಿಗಳವರು ಸಹಕಾರಿ ಸಂಘಗಳ ಸದಸ್ಯರಾದರೆ ಸಾಲತ್ತು ಕೊಡುವಿರಿ. ಆದರೆ ಅವರು ಸದಸ್ಯರಾಗಲು ತೊಂದರೆ ಇರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತೊಂದರೆಯೇನು ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಮಲೆನಾಡು ಭಾಗಗಳಲ್ಲಿ ಗುಡ್ಡ ಬೆಟ್ಟ ಹೆಚ್ಚಾಗಿದ್ದು, ತರಿ ಮತ್ತು ಖುಷ್ಕಿ ಜಮೀನಿಲ್ಲದಿರುವ ಕಡೆ ಕಾಫಿ ಬೆಳೆಯುವರು. ಅಂಥ ಕಡೆ ಬೆಳೆಯುವವರಿಗೆ ಜಮೀನನ್ನು ಮುಫತ್ತಾಗಿ ಕೊಡುತ್ತಿದ್ದುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—5 ಎಕರೆ ಜಮೀನು ಕೊಟ್ಟರೆ 16 ರಿಂದ 20 ಸಾವಿರ ರೂಪಾಯಿಗಳವರೆಗೆ ಖರ್ಚುಮಾಡಿದರೆ ಕಾಫಿ ಬೆಳೆ ಕಾಣಬಹುದು ಎಂದು ಹೇಳುವರು. ಈ ರೀತಿ ಜಮೀನು ತೆಗೆದುಕೊಂಡು ಕಾಫಿ ಬೆಳೆದಿರುವವರು ನಿಮ್ನವರ್ಗದಲ್ಲಿ ಇರುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇರಬಹುದು.

ಶ್ರೀ ಸಿ. ಬೈರೇಗೌಡ.—ಕೊಡುವ ಜಮೀನಿನ ಮೇಲೆ ಜಾಸ್ತಿ ಬಂಡವಾಳ ಹಾಕಬೇಕಾಗುತ್ತದೆ. ಆದುದರಿಂದ ಮುಫತ್ತಾಗಿ ಕೊಡುವುದಕ್ಕೆ ವ್ಯವಸ್ಥೆಮಾಡಿ ನಿಮ್ನವರ್ಗದವರಿಗೆ ಹೆಚ್ಚು ಪ್ರೋತ್ಸಾಹ ಕೊಡಲು ಸರಕಾರವೇನಾದರೂ ಪುನರಾಲೋಚನೆ ಮಾಡಲು ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಅದಕ್ಕೆ ಉತ್ತರ ತಕ್ಕಮಟ್ಟಿಗೆ ಹೇಳಿದೆ. ಅವರಿಗೆ ಕೊಟ್ಟರೆ ಎಕರೆಗೆ 800 ರಿಂದ ಒಂದು ಸಾವಿರದವರೆಗೆ ಬಂಡವಾಳ ಹಾಕಿ ಉತ್ಪತ್ತಿ ಪಡೆಯಬೇಕು ಆದುದರಿಂದ ಆ ಜಮೀನು ಬೇರೆಯವರಿಗೆ ಸೇರುವುದು. ಇದಕ್ಕೆ ಅಂಕಿಅಂಶವಿದೆ. ಅಧಿಕಾರಿಗಳು ಇದನ್ನು ನೋಡಿದ್ದಾರೆ. ಅನೇಕ ಜಮೀನುಗಳು ಕೈಬಿಟ್ಟುಹೋಗಿರುವುದರಿಂದ ಕಡಮೆ ಮಾಡಿದರೆ ಅದರಿಂದ ಹೆಚ್ಚು ಸಹಾಯವಾಗುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಜಮೀನಿನ ಬೆಲೆ ಕೊಟ್ಟು ಬೆಳೆ ತೆಗೆಯಲು ಸಾಧ್ಯವಿಲ್ಲದಿರುವುದರಿಂದ ರಿಯಾಯಿತಿ ಕೊಡಬೇಕೆಂದು ಕೇಳುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕಾಗಿಯೇ ಸೊಸೈಟಿ ಸದಸ್ಯರಾಗಿ ಆ ಮೂಲಕ ಬೆಳೆ ಕೈ ಸೇರಿದಮೇಲೆ ಹಣ ಕೊಡಬಹುದು ಎಂದು ಮಾಡಿದೆ. ಉದ್ದೇಶವೇ ಅದು.

Sri S. M. YAHYA.—Has the Government examined whether 5 acres or 10 acres for coffee plantation can be an economic holding ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸರ್ಕಾರದವರು ಈಗಾಗಲೇ ಅಂಕಿಅಂಶಗಳನ್ನು ಸಂಗ್ರಹಿಸಿರುವ ಪ್ರಕಾರ ಇಂಥ ಚಿಕ್ಕ ಚಿಕ್ಕ ಕಾಫಿ ಬೆಳೆಗಾರರೇ ಹೆಚ್ಚು ಲಾಭ ಪಡೆಯುವುದಕ್ಕೆ ಸಾಧ್ಯ ಎನ್ನುವ ವಿಚಾರ ಸರ್ಕಾರದ ಮುಂದೆ ಇದೆ.

ಶ್ರೀ ಜಿ. ಪುಟ್ಟಸ್ವಾಮಿ.—ಸಹಕಾರ ಸಂಘಗಳಿಂದ ಸಾಲ ಪಡೆದು, ಬೆಳೆಯನ್ನು ಮಾಡಬೇಕು. ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟಿಲ್ಲದೆ ಸಾಲ ದೊರೆಯುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಹಕಾರ ಸಂಘಗಳ ಸದಸ್ಯರಾಗಿದ್ದರೆ ಸರ್ಕಾರಕ್ಕೆ ಕೊಡಬೇಕಾದ ಬೆಲೆಯನ್ನು 4 ವರ್ಷಗಳ ಅವಧಿಯ ನಂತರ ಅವರಿಂದ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ನಿಯಮಗಳಿರುವ ಪ್ರಕಾರ ಬೆಳೆ ಬರುವುದಕ್ಕೆ ಪ್ರಾರಂಭವಾದ ಮೇಲೆ ಮಾತ್ರ ಕಾಫಿ ರಿಜಿಸ್ಟ್ರೇಷನ್ ಸರ್ಟಿಫಿಕೇಟನ್ನು ಕೊಡುತ್ತಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇರಬಹುದು.

ಶ್ರೀ ಬಿ. ಬೈರಪ್ಪಾಜಿ.—ನಿಮ್ನವರ್ಗದವರಿಗೆ ಕಾಫಿ ತೋಟಗಳನ್ನು ಮಾಡಲು ಅನುಕೂಲವಾಗುವಂತೆ ಅವರಿಗೆ ಜಮೀನನ್ನು ಮುಫತ್ತಾಗಿ ಕೊಡುವ ಅಥವಾ ಅವರು ಕೊಡಬೇಕಾದ ಹಣವನ್ನು 15 ವರ್ಷದ ಕಂತುಗಳಲ್ಲಿ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಸಹಕಾರ ಸಂಘಗಳ ಮೂಲಕ ಮಾಡಿ ಹರಿಜನರಿಗೂ ಕೂಡ ಕಾಫಿ ವ್ಯವಸಾಯವನ್ನು ಮಾಡತಕ್ಕ ವ್ಯವಸ್ಥೆಯನ್ನು ಮಾಡುವುದು ಸರ್ಕಾರದ ಹೊಣೆಯಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾಲ್ಕು ವರ್ಷಗಳ ಮೇಲೆ ತೆಗೆದುಕೊಳ್ಳತಕ್ಕ ಹಣವನ್ನು ಕಂತುಗಳಲ್ಲಿ ತೆಗೆದುಕೊಳ್ಳತಕ್ಕ ವಿಚಾರದಲ್ಲಿ ಆಲೋಚನೆ ಮಾಡಬಹುದು ಎಂದು ಹೇಳುತ್ತೇನೆ.

Smt. WINNIFRED F. FERNANDES.—What is the upset price for raising cashew plantation.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.— ಪ್ರಶ್ನೆಯಲ್ಲಿ ಕಾಫಿ ಬೆಳೆಗೆ ಸಂಬಂಧಪಟ್ಟ ವಿಚಾರವಿರುವುದರಿಂದ ಕ್ಯಾಷ್ಯೂನಟ್ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಒದಗಿಸಬಹುದು.

Smt. WINNIFRED F. FERNANDES.—Cashew comes under coffee plantation crops. I am asking the acreage price for cashew plantation.

MADAM SPEAKER.—The hon.ble Minister wants notice.

Sri S. M. YAHYA.—How many acres have been distributed at the upset price or at Rs. 500 per acre so far ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂಕಿ ಅಂಶಗಳನ್ನು ಸಂಗ್ರಹಿಸಿ ಹೇಳಬೇಕು.

ಶ್ರೀ ಟಿ. ಎಂ. ಮಂಜುನಾಥ.—ಕಾಫಿ ಬೆಳೆಯಲ್ಲಿ ಎಕರೆ ಒಂದಕ್ಕೆ ಎಷ್ಟು ವರಮಾನವನ್ನು ಪಡೆಯುತ್ತಾರೆ; ಹತ್ತು ಎಕರೆ ಕಾಫಿ ಪ್ಲಾಂಟೇಷನ್ ಇದ್ದರೆ ಅದರಿಂದ ತನ್ನ ಜೀವನವನ್ನು ಸುಖವಾಗಿ ನಡೆಸುವುದಕ್ಕೆ ಸಾಕಾಗುವಷ್ಟು ವರಮಾನ ಬರುತ್ತದೆಯೋ ಎನ್ನುವುದನ್ನು ಹೇಳುತ್ತಾರೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಬೆಲೆ ಸಿಕ್ಕುತ್ತದೆ ಎಂದು ಕರಾರುವಾಕ್ಕಾಗಿ ಕಾಫಿ ಬೋರ್ಡಿನಲ್ಲಿ ಆಗಿಂದಾಗ್ಗೆ ಬೆಲೆಯನ್ನು ನಿಗದಿ ಮಾಡಿ ಇಳುವರಿ ನೋಡಿ ಕೊಡುವುದರಿಂದ ಅವರಿಂದ ಆ ವಿಚಾರವನ್ನು ತಿಳಿದುಕೊಳ್ಳಬೇಕಾಗುತ್ತದೆ. ಆದರೆ 10 ಎಕರೆ ಜಮೀನು ಜೀವನ ನಡೆಸುವುದಕ್ಕೆ ಸಾಧ್ಯವೇ ಇಲ್ಲವೇ ಎನ್ನುವ ಪ್ರಶ್ನೆ ಇಲ್ಲ. ನಮ್ಮ ಮುಂದಿರುವ ಪ್ರಶ್ನೆ 10 ಎಕರೆ ಜಮೀನಿನಲ್ಲಿ ಅಥವಾ ಅದಕ್ಕಿಂತ ಕಡಮೆ ಇರುವವನಿಗೆ ಹೆಚ್ಚು ವರಮಾನವಿದೆಯೋ ಎಂದು. ದೊಡ್ಡ ದೊಡ್ಡ ತೋಟಗಳನ್ನು ಇಟ್ಟುಕೊಂಡಿರುವವರಿಗಿಂತಲೂ ಹತ್ತು ಎಕರೆ ಅಥವಾ ಕಡಿಮೆ ಎಕರೆಯಿರುವ ತೋಟಗಾರರು ದಾಮಾಷಾ ಪ್ರಕಾರ ಹೆಚ್ಚು ಪಡೆಯುತ್ತಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಸಿ. ಬೈರೇಗೌಡ.—ಕೆಲವರಿಗೆ ಕೊಟ್ಟಿರುವ ಜಮೀನನ್ನು ಪಕ್ಕದಲ್ಲಿರುವವರು ಕೊಂಡುಕೊಳ್ಳುತ್ತಾರೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಮಂಜೂರು ಮಾಡತಕ್ಕ ಕಾಲದಲ್ಲಿ ಅದನ್ನು ಬೇರೆಯವರಿಗೆ ಪರಭಾರೆ ಮಾಡಬಾರದು ಎನ್ನುವ ನಿರ್ಬಂಧವನ್ನು ಹಾಕಿ ಆ ರೀತಿ ಎನ್‌ಫೋರ್ಸ್ ಮಾಡಿ ಸೂಕ್ತ ಕಂಡವರಿಗೆ ಕೊಡುವುದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾಫಿ ಬೆಳೆಯುವವರಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂಬ ಉದ್ದೇಶದಿಂದ ಪ್ರತಿಬಂಧಕಗಳನ್ನು ಹಾಕಿಲ್ಲ. ಬೇರೆಯವರಿಗೆ ಮಾರಾಟ ಮಾಡುತ್ತಾರೆನ್ನುವುದನ್ನು ತಪ್ಪಿಸುವುದಕ್ಕೆ ಇದು ಅತ್ಯಾವಶ್ಯಕವೆಂದು ಕಂಡುಬಂದರೆ ಪ್ರತಿಬಂಧಕವನ್ನು ಹಾಕಬೇಕು.

ಶ್ರೀ ಎಸ್. ಎಂ. ಚಂದ್ರಶೇಖರ್.—ಸರ್ಕಾರದವರು ಭೂರಹಿತ ಕಾರ್ಮಿಕರಿಗೆ ಒಂದೆರಡು ಎಕರೆ ಜಮೀನು ಕೊಡುವಾಗ ಮಾಲಿಕಿಯನ್ನು ಹೆಚ್ಚಾಗಿ ನಿಗದಿ ಮಾಡುವುದಲ್ಲದೆ ಪ್ರತಿಯೊಬ್ಬರೂ ಬಂಗ್ಲಾದೇಶದ ನಿಧಿಗೆ ಎಕರೆಗೆ 200 ರೂಪಾಯಿ ಪ್ರಕಾರ ಕೊಡಬೇಕೆಂದು ರೆವೆನ್ಯೂ ಅಧಿಕಾರಿಗಳು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪ್ರಭಾಕರ್.—ಅಪ್‌ಸೆಟ್ ಪ್ರೈಸ್ ಜಾಸ್ತಿ ಇದ್ದಾಗ ತೆಗೆದುಕೊಳ್ಳುವುದಕ್ಕೆ ಸೊಸೈಟಿಯ ಮೂಲಕ ಬಂದರೆ ಅವರು ಹಣಕಾಸಿನ ಸಹಾಯ ಮಾಡುತ್ತಾರೆಂದು ಹೇಳಿದ್ದಾರೆ. ಈ ರೀತಿಯಾಗಿ ವ್ಯವಸ್ಥೆಯಾದ ಅಂಥ ಸೊಸೈಟಿಗಳಿಂದ ಇಂಥ ಕೇಸುಗಳಿಗೆ ಸಾಲ ದೊರೆಯುವುದು ಎಷ್ಟು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪ್ರತ್ಯೇಕವಾದ ಪ್ರಶ್ನೆ ಹಾಕಿದರೆ ವಿಷಯ ಸಂಗ್ರಹಿಸಬಹುದು.

ಶ್ರೀ ಬಿ. ಬೈರಪ್ಪಾಜಿ.—ಈ ದೇಶದಲ್ಲಿ ಹರಿಜನರು ಮತ್ತು ಗಿರಿಜನರಿಗೆ ಖುಷ್ಕಿ ಮತ್ತು ತರೀ ಜಮೀನನ್ನು ಹಂಚುವಾಗ ಮುಫತ್ತಾಗಿ ಕೊಡುವ ವ್ಯವಸ್ಥೆ ಇದೆ ಎಂದು ತಿಳಿದುಕೊಂಡಿದ್ದೇನೆ. ಅದೇ ರೀತಿ ನಿಮ್ಮ ವರ್ಗದವರಿಗೆ ಕಾಫಿ ಬೆಳೆಯತಕ್ಕ ಪ್ರದೇಶವನ್ನು ಕೊಡುವಾಗಲೂ ಮುಫತ್ತಾಗಿ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಆಲೋಚನೆ ಮಾಡಬೇಕು.

ಶ್ರೀ ಕೆ. ಪ್ರಭಾಕರ್.—ಸರ್ಕಾರದವರು ಬಡವರಿಗೆ ಅನುಕೂಲವಾಗಲಿ ಎಂದು ಸೊಸೈಟಿಗಳ ಮುಖಾಂತರ ಜಮೀನು ಕೊಡುತ್ತೇವೆಂದು ಹೇಳುತ್ತಾರೆ. ಆ ಸೊಸೈಟಿಯವರು ಇಂಥ ಅವಕಾಶವನ್ನು ಮುಂದೆ ಮಾಡಿಕೊಳ್ಳುತ್ತಾರೆಯೋ ಅಥವಾ ಅಂಥ ಸೊಸೈಟಿಗಳಲ್ಲಿ ಇವಕ್ಕೆ ಈಗಾಗಲೇ ಕಾನೂನಿನಲ್ಲಿ ಅವಕಾಶವಿದೆಯೋ ಎಂಬ ವಿಚಾರದಲ್ಲಿ ಸರ್ಕಾರಕ್ಕೆ ತೃಪ್ತಿಯಾಗಿದೆಯೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಹಕಾರ ಸಂಘಗಳ ಸದಸ್ಯರಾಗುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ. ಧಾರಾಳವಾಗಿ ಆಗಬಹುದು.

SRI S. M. YAHYA.—In North Canara District coffee can be an useful plantation crop. How many acres can be brought under coffee plantation in North Canara District ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಹಾಕಿದರೆ ಅಂಕಿ ಅಂಶಗಳನ್ನು ಸಂಗ್ರಹಿಸಿ ಹೇಳಬಹುದು.

ಶ್ರೀ ಜಿ. ಪುಟ್ಟಸ್ವಾಮಿ.—ಸರ್ಕಾರಿ ದಾಖಲೆಗಳಲ್ಲಿ ಕಾಫಿ ಖರಾಬು ಎಂದು ಇರುವುದರಿಂದ ತರೀ ಖುಷ್ಕಿ ಬೆಳೆಗೋಸ್ಕರ ಆ ಜಮೀನನ್ನು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಕಾಫಿ ಖರಾಬಿನಲ್ಲಿ ಬತ್ತ ಬೆಳೆಯುವುದಕ್ಕೆ ಆಗುವುದಿಲ್ಲ. ಆದರಿಂದರೇ ಅದನ್ನು ಕೊಡುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ನೀರಿನ ಆಸರೆ ಚೆನ್ನಾಗಿದ್ದು, ಅದು ತಗ್ಗು ಪ್ರದೇಶವಾಗಿದ್ದರೆ ಬತ್ತ ಕೂಡ ಬೆಳೆಯಬಹುದು ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸಾಮಾನ್ಯವಾಗಿ ಕಾಫಿ ಬೆಳೆಯತಕ್ಕ ಜಾಗ ಇಳಿಜಾರು ಪ್ರದೇಶವಾಗಿರುವುದರಿಂದ, ನೀರಿನ ಸೌಲಭ್ಯವಿದ್ದರೂ ಕೂಡ ಬತ್ತ ಬೆಳೆಯುವುದು ಕಷ್ಟ ಎಂದು ನಾನು ಸಾಮಾನ್ಯ ರೈತನಾಗಿ ತಿಳಿದುಕೊಂಡು ಹೇಳತಕ್ಕ ಉತ್ತರ ಇದು.

ಶ್ರೀ ಎಸ್. ವಿ. ನಾಯಕ.—ಉತ್ತರ ಕನ್ನಡ ಜಿಲ್ಲೆಯಲ್ಲಿ ಸರ್ಕಾರ ಪ್ರಾಯೋಗಿಕವಾಗಿ ಕಾಫಿ ತೋಟಗಳನ್ನು ಬೆಳೆಸಿತ್ತು ಎನ್ನುವುದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇರಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಎರಡು ವರ್ಷಗಳ ಹಿಂದೆ 67 ಸಾವಿರ ಎಕರೆ ಅರಣ್ಯ ಭೂಮಿಯನ್ನು ಬಡುಗಡೆ ಮಾಡಿ 15 ಸಾವಿರ ಎಕರೆಯನ್ನು ಕಾಫಿ ಪ್ಲಾಂಟೇಷನ್‌ಗೋಸ್ಕರ ರಿಸರ್ವ್ ಮಾಡುವ ವ್ಯವಸ್ಥೆ ಮಾಡಿತ್ತು. ಇದರೊಳಗೆ ಎಷ್ಟು ಭೂಮಿ ವಿಲೇವಾರಿಯಾಗಿದೆ ? ನಿಮ್ಮವರ್ಗ ಮತ್ತು ನಿಮ್ಮ ಪಂಗಡದವರಿಗೆ ಎಷ್ಟು ಕೊಟ್ಟಿದ್ದಾರೆ ? ಆ ರೀತಿ ಯಾರಿಗೂ ಜಮೀನು ಒದಗಿಸಿ ಕೊಡದೆ ಇದ್ದರೆ ಕೊಡುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇಲ್ಲಿಯವರೆಗೂ ಕೊಡದೆ ಇದ್ದರೆ ಮೊದಲಿನ ಷರತ್ತುಗಳ ಮೇಲೆ ಕೊಡತಕ್ಕ ಏರ್ಪಾಡು ಮಾಡಬಹುದು.

1–30 P. M.

ಶ್ರೀ ಎಸ್. ಎಂ. ಚಂದ್ರಶೇಖರ.—ಮಲೆನಾಡಿನಲ್ಲಿ ಇರುವ ಹೊಸನಗರ, ಸಾಗರ ಮತ್ತು ತೀರ್ಥಹಳ್ಳಿ ಇಲ್ಲಿ ನೀರಿನ ಆಸರೆಯೇ ಇಲ್ಲ. ಆದರೂ ಇಲ್ಲಿನ ರೈತರಿಂದ ವಾಟರ್ ರೇಟನ್ನು ವಸೂಲು ಮಾಡಬೇಕೆಂದು ಒತ್ತಾಯ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪ್ರಶ್ನೆ ಇದರೊಳಗೆ ಬರುವುದಿಲ್ಲ.

SRI S. M. YAHYA.—How much foreign exchange this Coffee would bring to the Mysore State ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಪ್ರತ್ಯೇಕವಾಗಿ ಕೇಳಬೇಕಾದ ಪ್ರಶ್ನೆ.

ಶ್ರೀ ಜಿ. ಪುಟ್ಟಸ್ವಾಮಿ.—ಸಹಕಾರ ಸಂಘಗಳಲ್ಲಿ ಈಗಿರುವ ನಿಯಮಗಳ ಪ್ರಕಾರ ಸಾಲ ಪಡೆಯಲು ಹರಿಜನರು ಹಾಗೂ ಗಿರಿಜನರಿಗೆ ಅವಕಾಶಗಳೇ ಸಿಗುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಿದ್ದರೆ ಸಹಕಾರ ಸಂಘಗಳ ಸದಸ್ಯತ್ವವನ್ನು ಇಂತಹ ಜನಕ್ಕೆ ಕೊಡಿಸಲು ಹಾಗೂ ಇನ್ನಿತರ ಸೌಲಭ್ಯಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

MADAM SPEAKER.—The question hour is over.

## Notice of a motion *re.*—Rights and Privileges of Members

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜ ಅರಸ್‌ರವರ ಮೇಲೆ ಒಂದು ಹಕ್ಕುಬಾಧ್ಯತಾ ನಿರ್ಣಯವನ್ನು ತಮ್ಮ ಅವಗಾಹನೆಗಾಗಿ ಕಳುಹಿಸಿದ್ದೇನೆ. ಅದರಲ್ಲಿರತಕ್ಕ ವಿಷಯ ಏನೆಂದರೆ ಈ ಸಭೆಯಲ್ಲಿ ನಿನ್ನೆ ಚರ್ಚೆ ನಡೆಯುತ್ತಿದ್ದಾಗ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ದೇವರಾಜಅರಸ್‌ರವರು

"I will have to move a privilege motion"

ಎಂದು ಬೆದರಿಕೆ ರೀತಿಯಲ್ಲಿ ನನ್ನ ಬಗ್ಗೆ ಒಂದು ಮಾತನ್ನು ಆಡಿದರು. ಅದು ಈ ಸಭೆಯಲ್ಲಿ ಸದಸ್ಯನಾಗಿ ನನಗೆ ಇರತಕ್ಕ ಹಕ್ಕು ಉಲ್ಲಂಘನೆ ಅಷ್ಟೇ ಅಲ್ಲ, ಈ ಸಭೆಯ ಹಕ್ಕಿನ ಉಲ್ಲಂಘನೆಯೂ ಆಗುತ್ತದೆ. ಈ ದೃಷ್ಟಿಯಿಂದ ನಾನು ಇಲ್ಲಿ ಒಂದು ಹಕ್ಕು ಬಾಧ್ಯತಾ ನಿರ್ಣಯವನ್ನು ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ತಮಗೆ ಕಳುಹಿಸಿಕೊಟ್ಟಿದ್ದೇನೆ. ಇದರ ಬಗ್ಗೆ ತಾವು ಅಪ್ಪಣೆ ಕೊಟ್ಟರೆ ಅದರ ವಿಚಾರವನ್ನು ಇಲ್ಲಿ ಪ್ರಸ್ತಾಪಿಸಲು ಪ್ರಯತ್ನ ಮಾಡುತ್ತೇನೆ.

MADAM SPEAKER.—I have just now received it and I will consider it.

## Admission of Call Attention Notices in the list of business under rules

ಶ್ರೀ ಎಂ. ಹೆಚ್. ಜಯಪ್ರಕಾಶ್‌ನಾರಾಯಣ್ (ಸಿರ್ಸಿ).—ನಾನು ಒಂದು ಕಾಲ್ ಅಟೆನ್ಷನ್ ಮೋಷನನ್ನು ಉತ್ತರ ಕನ್ನಡ ಜಿಲ್ಲೆಯ ಸಿರಸಿ ಸಿದ್ದಾಪುರ ಇಲ್ಲಿನ ಜನರ ತೊಂದರೆ ಬಗ್ಗೆ ಸರಕಾರಕ್ಕೆ ಕಳುಹಿಸಿ ಸುಮಾರು ಐದು ದಿನಗಳಾದರೂ ಇಲ್ಲ ಬರಲಿಲ್ಲ. ಇದರ ಬಗ್ಗೆ ಏನಾಯಿತು ಎನ್ನುವುದನ್ನು ತಾವು ತಿಳಿಸಬೇಕು.

ಅಧ್ಯಕ್ಷರು.—ಅದು ಮುಂದೆ ಬರುತ್ತದೆ.

ಶ್ರೀ ಶರಣಪ್ಪ (ದೇವದುರ್ಗ).—ನಾನೂ ಕೂಡ ಒಂದು ಕಾಲ್ ಆಟೆನ್‌ಷನ್ ನೋಟೀಸು ಕೊಟ್ಟಿದ್ದೆ. ಅದು ಇನ್ನೂ ಬರಲಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ (ಹೊಸನಗರ).—ನನ್ನದೂ ಒಂದು ಕಾಲ್ ಅಟೆನ್‌ಷನ್ ಕಳುಹಿಸಿದ್ದೆ ಅದೂ ಬರಲಿಲ್ಲ.

ಅಧ್ಯಕ್ಷರು.—ಕಾಲ್ ಅಟೆನ್‌ಷನ್ ನೋಟೀಸು ಯಾವ ಸ್ವರೂಪದ್ದು ಎನ್ನುವುದು ತಮಗೆಲ್ಲ ಗೊತ್ತಿದೆ. ಒಂದು ದಿವಸಕ್ಕೆ ಒಂದೇ ಕಾಲ್ ಅಟೆನ್‌ಷನ್ ಮೋಷನ್ ಬರುತ್ತದೆ. ಇದಕ್ಕಿಂತ ಹೆಚ್ಚಿಗೆ ಬರಲು ಅವಕಾಶ ಇಲ್ಲ. ಆದರಂತೆ ಮುಂದೆ ಬರುತ್ತದೆ.

## Tours by Some Ministers during the Sessions period.

Sri C. M. ARUMUGHAM (K.G.F.).—I have a submission to make. For the past few days we are discussing motion of Thanks to the Governor's Addres in this House. This is a subject wherein we could discuss any matter relating to almost all the Departments. Hence, I feel it necessary on the part of all the Hon. Ministers to be present in the House except some of them who may have work in the Upper House. But it is seen in the papers that some of the Hon. Ministers are undertaking tours unnecessarily. I want to know whether it is proper for the Hon. Ministers to undertake tours when the Session is going on. This is a submission and I want a ruling from the Chair

**MADAM SPEAKER.**—The Hon. Ministers would have made other arrangements. There are other Ministers to represent the Government in the House. It is a joint reporsibility.

**Sri K. H. PATIL** (Minister for Agriculture and Forests).—The hon· member used the word 'unnecessarily'. If the hon. member has got any facts to say against any Minister let him make the submission to the House, otherwise, a general remark will not add to the decorum of the House. If the hon. member is in possession of the facts that any of the Hon. Ministers has undertaken tour unnecessarily then he could submit those facts before the House.

**Sri H. D. DEVE GOWDA** (Holenarsipura).—It may be necessary to tour from the point of view of the Government. But the Hon. Ministers cannot neglect the House when it is in session.

**Sri C. M. ARUMUGHAM.**—I only made a general submission as to whether it is proper for the Hon. Ministers to undertake tours when the Assembly is in session. I want to know whether the work of the Assembly is important or the touring of constituencies. Whether the tour is necessary or not is for the Hon. Chair to decide.

ಶ್ರೀ ಹೆಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಅಸೆಂಬ್ಲಿಯಲ್ಲಿ ನಡೆಯತಕ್ಕ ನಡವಳಿಕೆಗಳ ಬಗ್ಗೆ ಮೊದಲನೆಯದಾಗಿ ಆದ್ಯತೆ ಕೊಡಬೇಕು, ಅದನ್ನು ಪ್ರಾಮಾಣಿಕತೆಯಿಂದ ಕೊಡಬೇಕು ಮತ್ತು ಅದಕ್ಕೆ ಗೌರವ ಕೊಡಬೇಕು ಎನ್ನತಕ್ಕದ್ದೇ ಸರಕಾರದ ಆಶಯವಾಗಿದೆ. ಮತ್ತೆ ಯಾರಾದರೂ ಒಬ್ಬರು ಮಂತ್ರಿಗಳು ಅವಶ್ಯಕತೆಯುಂಟಾಗಿ ಆಡಳಿತ ದೃಷ್ಟಿಯಿಂದ ಈ ಸ್ಥಳದಿಂದ ಬೇರೆ ಕಡೆಗೆ ಹೋಗಬೇಕಾದ ಸಂದರ್ಭ ಬಂದಲ್ಲಿ ಸಭೆಯ ಕಾರ್ಯಕಲಾಪಗಳಿಗೆ ಅಡ್ಡಿ ಬಾರದ ರೀತಿಯಲ್ಲಿ ವ್ಯವಸ್ಥೆ ಮಾಡಿಕೊಂಡು ಹೋಗಬೇಕೇ ವಿನಾ ಈ ಸಭೆಗೆ ಅಡ್ಡಿ ಆತಂಕಗಳನ್ನು ಮಾಡಿಕೊಂಡು ಹೋಗುವುದು ಸರಿಯಲ್ಲ. ಇದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಅಸೆಂಬ್ಲಿ ನಡೆಯತಕ್ಕ ಕಾಲದಲ್ಲಿ ಮಂತ್ರಿಗಳೆಲ್ಲರೂ ಇರುವುದು ಲೇಸು. ಇದನ್ನು ಒಪ್ಪಬೇಕಾಗುತ್ತದೆ. ಒಂದೊಂದು ವೇಳೆ ಅನಿವಾರ್ಯವಿಂದ, ಆಡಳಿತದ ಹಿತದೃಷ್ಟಿಯಿಂದ ಟೂರು ಹೋಗಬೇಕಾಗಿ ಬಂದರೆ ಅವರಿಗೆ ಸಂಬಂಧಪಟ್ಟ ವ್ಯವಹಾರಗಳಿಗೆ ಅಥವಾ ಅವರ ಕಾರ್ಯಗಳಿಗೆ ಅವರು ಇಲ್ಲದ ಕಾಲದಲ್ಲಿ ಬೇರೆ ರೀತಿಯ ವ್ಯವಸ್ಥೆ ಮಾಡಿ ಸರಕಾರ ತನ್ನ ಕಾರ್ಯವನ್ನು ಸಮರ್ಪಕವಾದ ರೀತಿಯಲ್ಲಿ ಮಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಿ ಹೋಗುವುದಕ್ಕೆ ಅಡಿಂಬಾರದು. ಮಾನ್ಯ ಸದಸ್ಯರು ಅನಾವಶ್ಯಕವಾಗಿ ಮಂತ್ರಿಗಳು ಪ್ರವಾಸಮಾಡುತ್ತಿದ್ದಾರೆ ಎಂದು ಹೇಳಿದರು. ಆದರೆ ಅನಾವಶ್ಯಕವಾಗಿ ಯಾರಿಗೂ ಪ್ರವಾಸ ಮಾಡಬೇಕೆಂಬ ಇಚ್ಛೆ ಇಲ್ಲ ಎನ್ನುವುದನ್ನು ಒತ್ತಿ ಒತ್ತಿ ಈ ಸಂದರ್ಭದಲ್ಲಿ ತಿಳಿಸಬೇಕೆಂದಿದ್ದೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸತ್ಕಾರ ಸಮಾರಂಭಗಳಿಗೆ ಈ ಸಭೆ ನಡೆಯುತ್ತಾ ಇರುವಾಗ ಹೋಗದಂತೆ ಇರಲು ಪ್ರಯತ್ನ ಮಾಡುತ್ತಾರೆಯೋ ಎಂದು ಕೇಳುತ್ತಿರುವುದು.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಮಾನ್ಯ ಸದಸ್ಯರಿಗೆ ಆಗಲೇ ನಾನು ಇದರ ಬಗ್ಗೆ ಹೇಳಿದ್ದೇನೆ. ಈ ಸಭೆಯ ಕಾರ್ಯಗಳಿಗೆ ಚ್ಯುತಿ ಬಾರದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗುತ್ತದೆ. ಮಂತ್ರಿಗಳಿಗೆ ಪ್ರವಾಸ ಮಾಡಬೇಕೆಂದು ಏನೂ ಇಚ್ಛೆ ಇಲ್ಲ. ಆದರೆ ಮಂತ್ರಿಗಳು ಪ್ರವಾಸ ಹೋದ ಕಾಲದಲ್ಲಿ ವೈಯ್ಯಕ್ತಿಕವಾಗಿ ಕೆಲವು ಸಮಾರಂಭಗಳಿಗೆ ಹೋಗಬೇಕಾಗಿ ಬರಬಹುದು. ಆಗ ಹೋಗುತ್ತಾರೆ; ಅವಶ್ಯಕತೆ ಇಲ್ಲದೆ ಪ್ರವಾಸ ಹೋಗುತ್ತಾರೆ ಎಂದು ಹೇಳುವುದು ಅಷ್ಟು ಸರಿಯಲ್ಲ. ಬರೀ ಸಮಾರಂಭಗಳಿಗೆ ಹೋಗಬೇಕೆಂಬ ಇಚ್ಛೆ ಇಲ್ಲ. ಸಮಾರಂಭಗಳಿಗೆ ಎರಡನೇ ಆದ್ಯತೆ. ರಾಜ್ಯದ ಕೆಲಸ ಕಾರ್ಯಗಳು ನಡೆಯಲಿಕ್ಕೆ ಅನೇಕ ವಿಷಯಗಳನ್ನು ನಮ್ಮ ಆಡಳಿತದಲ್ಲಿ ನೋಡಬೇಕಾಗಿ ಬರುತ್ತದೆ. ಅಂತಹ ಸರಕಾರದ ಸಮಸ್ಯೆಗಳು ಬಹಳ ಮಹತ್ವವುಳ್ಳದ್ದಾಗಿರುತ್ತವೆ. ಅವಕ್ಕೆ ಯಾವಾಗಲೂ ಮೊದಲನೆಯ ಆದ್ಯತೆ ಕೊಟ್ಟು ಪ್ರವಾಸ ಹೋಗಬೇಕಾಗಿ ಬರಬಹುದು. ಹಾಗೆ ಹೋಗುವಾಗ ಸರಕಾರದ ಕೆಲಸಗಳ ಜೊತೆಗೆ ಅಲ್ಲಿ ಸಮಾರಂಭಗಳಿಗೆ

ಹೋಗತಕ್ಕದ್ದು ಎರಡನೇ ಹಾಗೂ ಮೂರನೇ ಆದ್ಯತೆಯಾಗಿ ಹೋಗಬೇಕಾಗುತ್ತದೆ. ಅಂತಹ ಸಮಾರಂಭಗಳಿಗೆ ಯಾವಾಗಲೂ ಮೊದಲನೇ ಆದ್ಯತೆ ಇರುವುದಿಲ್ಲ ಎನ್ನುವುದನ್ನು ತಮ್ಮಲ್ಲಿ ಅರಿಕೆ ಮಾಡುತ್ತಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮೀ ಈಚೆಗೆ ಹುಬ್ಬಳ್ಳಿಯಲ್ಲಿ ಗಲಭೆಗಳಾದಾಗ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೆ. ಹೆಚ್. ಪಾಟೀಲರವರು ಅಲ್ಲಿಗೆ ಹೋಗಿದ್ದರು. ಇದು ಬಹಳ ಮುಖ್ಯವಾದ ವಿಚಾರ. ಅಲ್ಲಿಗೆ ಹೋಗಬೇಕಾಗಿತ್ತು. ಇಂತಹ ಸಂದರ್ಭಗಳಲ್ಲಿ ಮಂತ್ರಿಗಳು ಹೋಗಬಾರದು ಎಂದು ಹೇಳುತ್ತಿಲ್ಲ. ಇದು ನಮಗೂ ಗೊತ್ತು. ಇಂತಹ ಬೆಂಕಿ ಅನಾಹುತ ಇತ್ಯಾದಿ ಗಲಭೆಗಳಾದಾಗ ಮಂತ್ರಿಗಳು ಹೋಗಲೇಬೇಕಾಗುತ್ತೆ. ಇದು ಸರಕಾರದ ಆದ್ಯ ಕರ್ತವ್ಯ. ಆದರೆ ಸಭೆ ನಡೆಯುತಕ್ಕ ಕಾಲದಲ್ಲಿ ಕೆಲವು ಮಂತ್ರಿಗಳು ಸಮಾರಂಭಗಳಿಗೆ ಹೋಗುವುದು ಅಷ್ಟು ಸರಿಯಾದುದಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಮೊದಲೇ ಹೇಳಿದೆ, ಮಂತ್ರಿಗಳು ಸರ್ಕಾರೀ ಕೆಲಸದ ಮೇಲೆ ತನಿಖೆ ಮಾಡುವುದಕ್ಕಾಗಲೀ, ಇನ್ಸ್‌ಪೆಕ್ಷನ್ ಮಾಡುವುದಕ್ಕಾಗಲೀ ಅಥವಾ ಆಡಳಿತ ವ್ಯವಸ್ಥೆ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ನೋಡುವುದಕ್ಕಾಗಲೀ ಪ್ರವಾಸ ಹೋದಾಗ ಅಂತಹ ಕೆಲಸಗಳಿಗೆ ಮೊದಲು ಆದ್ಯತೆ ಕೊಡಬೇಕು. ಅದೇ ಸಮಯದಲ್ಲಿ ಯಾವುದಾದರೂ ಸಮಾರಂಭಗಳು ನಡೆಯುವುದು ಇದ್ದರೆ ಅದಕ್ಕೆ ಎರಡನೆಯ ಆದ್ಯತೆ ಕೊಟ್ಟು ಹೋಗುವುದರಲ್ಲಿ ಏನೂ ಅಡ್ಡಿ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳ ಮನೆಯೊಳಗೆ ಸಮಾರಂಭ ಆದರೆ ಅದಕ್ಕೆ ಹೋಗಬಾರದು, ಓಲಗ ಊದಿಸಬಾರದು ಎಂದು ಹೇಳಿದರೆ ಹೇಗೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಮಂತ್ರಿಗಳು ಮತ್ತು ಲೆಜಿಸ್‌ಲೇಟರ್ಸ್ ಬಗ್ಗೆ ನಿಯಮಾವಳಿ ಇರುವುದು ಅವಶ್ಯಕ ಎಂಬುದನ್ನು ನಾನು ಒಪ್ಪುತ್ತೇನೆ. ತಕ್ಷಣದಲ್ಲಿಯೇ ತಮಗೂ ಮತ್ತು ನಮಗೂ ಆ ಪಾರ್ಟಿಯೇ ಆಗಲೀ, ಈ ಪಾರ್ಟಿಯೇ ಆಗಲೀ ಎಲ್ಲರಿಗೂ ಅನ್ವಯವಾಗುವಂಥ ಕೋಡ್ ಆಫ್ ಕಾಂಡಕ್ಟ್ ಇರಬೇಕೆಂದು ತೀರ್ಮಾನ ಮಾಡಿದ್ದೇವೆ. ಮಂತ್ರಿಗಳ ಬಗ್ಗೆ ಈಗಾಗಲೇ ತಯಾರಾಗಿದೆ. ಲೆಜಿಸ್ಲೇಟರ್ಸ್ ಬಗ್ಗೆ ಕೋಡ್ ಆಫ್ ಕಾಂಡಕ್ಟ್ ತಯಾರಾಗುತ್ತಿದೆ. ಅದು ತಯಾರಾದ ಮೇಲೆ ಅದರಂತೆ ನಾವು ಮತ್ತು ನೀವು ಒಪ್ಪಿಕೊಂಡು ಕೆಲಸ ಮಾಡೋಣ. ಅಷ್ಟು ಮಾತ್ರ ಈಗ ಹೇಳಿದರೆ ಸಾಕು ಎಂದು ತಿಳಿಯುತ್ತೇನೆ.

ಶ್ರೀ ಎಚ್. ಡಿ. ದೇವೆಗೌಡ.—ಕೋಡ್ ಆಫ್ ಕಾಂಡಕ್ಟ್ ಇರಬೇಕಾದುದು ಅವಶ್ಯಕ. ಅದನ್ನು ಜಾಗ್ರತೆ ತೆಗೆದುಕೊಂಡು ಬನ್ನಿ.

Sri C. M. ARUMUGHAM.—Has the Leader of the Opposition been consulted with regard to the framing of Code of Conduct? We should not forget the past. We have to take into consideration the past experience also in framing the Code of Conduct both for Ministers and legislators.

Sri H. M. CHANNABASAPPA.—The Code of Conduct as would be acceptable all over the world will be framed and it is for the legislators and Ministers to act on that.

Sri H. D. DEVE GOWDA.—What my friend Sri Arumugham means is that it is better to consult this side also while framing the Code of Conduct. It is only a suggestion.

Sri C. M. ARUMUGHAM.—Madam, the discussion is on the Governor's Address and it pertains to all departments. I therefore feel that all the Ministers must be present in the House. I request a Ruling on this matter.

ಅಧ್ಯಕ್ಷರು.—ಈಗ ಕೌನ್ಸಿಲ್ ಕೂಡ ನಡೆಯುತ್ತಿದೆ. ಅಲ್ಲಿಯೂ ಮಂತ್ರಿಗಳು ಇರಬೇಕಾಗುತ್ತದೆ. ಇಲ್ಲಿಯೇ ಎಲ್ಲ ಮಂತ್ರಿಗಳು ಇರಬೇಕಾದುದು ಅನಾವಶ್ಯಕ. ಅವರು ಇಲ್ಲಿಯೂ ಇರುತ್ತಾರೆ, ಅಲ್ಲಿಯೂ ಇರುತ್ತಾರೆ. ಆದ್ದರಿಂದ ಎಲ್ಲ ಮಂತ್ರಿಗಳು ಇಲ್ಲಿಯೇ ಇರಬೇಕೆಂದು ಹೇಳುವುದು ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಈ ಶಾಸನಸಭೆಯ ಅಧಿವೇಶನವೂ ನಡೆಯುತ್ತಿದೆ, ಮೇಲ್ಮನೆಯ ಅಧಿವೇಶನವೂ ನಡೆಯುತ್ತಿದೆ. ಅಲ್ಲಿಗೂ ಮಂತ್ರಿಗಳು ಹೋಗಬೇಕಾಗುತ್ತದೆ. ಅದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಆರ್ಮುಗಂ ಅವರು ಎತ್ತಿರುವ ವಿಷಯ ಶಾಸನಸಭಾ ಅಧಿವೇಶನ ನಡೆಯುತ್ತಿದ್ದ ಕಾಲದಲ್ಲಿ ಮಂತ್ರಿಗಳು ಪ್ರವಾಸ ಮಾಡಬಾರದು ಎಂಬುದು. ಅದು ಅತಿ ಮುಖ್ಯವಾದುದು ಈ ರೀತಿ ಪ್ರವಾಸ ಹೋಗಬಾರದೆಂದು ಹಿಂದಿನ ಅಧ್ಯಕ್ಷರು ಸಹ ಅನೇಕ ಸಲ ಹೇಳಿದ್ದಾರೆ. ಆದರೂ ಹೋಗುತ್ತಿದ್ದಾರೆ. ಸರ್ಕಾರದ ವತಿಯಿಂದ ಏನಾದರು ಉತ್ತರವನ್ನು ಶಾಸಕರು ಕೇಳಿದಾಗ ಆ ಸಮಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಇನ್-ಚಾರ್ಜ್ ಮಂತ್ರಿಗಳು ಕೂಡಲೇ ಆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಎಮರ್ಜನ್ಸಿ ಇದ್ದರೆ ಹೊರತು ಉಳಿದಂತೆ ಶಾಸನಸಭೆ ನಡೆಯುತ್ತಿರುವಾಗ ಯಾವ ಮಂತ್ರಿಗಳೂ ಪ್ರವಾಸ ಮಾಡಬಾರದೆಂದು ತಾವು ಆದೇಶ ಕೊಟ್ಟರೆ ಒಳ್ಳೆಯದು. ಶಾಸನಸಭೆಯ ಹಿತದೃಷ್ಟಿಯಿಂದ ಮಂತ್ರಿಗಳು ಮದುವೆ ಸಮಾರಂಭಕ್ಕೆ, ಅಡಿಗಲ್ಲು ಹಾಕುವ ಸಮಾರಂಭಕ್ಕೆ, ಸತ್ಕಾರ ಕೂಟಗಳಿಗೆ ಹೋಗುವುದು ಸರಿಯಲ್ಲ, ಅದಕ್ಕೆ ಜೀರೋ ಹಾಕಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದರ ಬಗ್ಗೆ ಮಾನ್ಯ ಚನ್ನಬಸಪ್ಪನವರು ಹೇಳಿದ್ದಾರೆ. ಸರ್ಕಾರೀ ಕಾರ್ಯಕ್ರಮಕ್ಕೆ ಮೊದಲ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ನಾವು ನಿರೀಕ್ಷೆ ಮಾಡಿ ನೋಡೋಣ.

ಶ್ರೀ ಎಚ್. ಡಿ. ದೇವೇಗೌಡ.—ನೆನ್ನೆ ದಿವಸ ಮಾರ್ಗದ ಮಲ್ಲಪ್ಪನವರು ಒಂದು ನೋಟೀಸ್ ಕೊಟ್ಟಿದ್ದಾರೆ. ಆ ಸಂಬಂಧದಲ್ಲಿ ತಮ್ಮ ಒಂದು ತೀರ್ಪನ್ನು ಕಾದಿರಿಸಿದ್ದೀರಿ. ಈ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥ ಸನ್ನಿವೇಶದಲ್ಲಿ ಉಭಯತ್ರರಲ್ಲಿ ಒಂದು ಒಳ್ಳೆಯ ಸೌಹಾರ್ದ ವಾತಾವರಣ ಮೂಡಿಸ ಬೇಕಾಗಿರುವುದರಿಂದ ಅದಕ್ಕೆ ಸ್ವಲ್ಪ ಕಾಲಾವಕಾಶ ಮಾಡಿಕೊಡಬೇಕು. ಮತ್ತು ಇದರ ಬಗ್ಗೆ ತಮ್ಮ ರೂಲಿಂಗನ್ನು ನಾಳೆಯ ವರೆಗೆ ಮುಂದೂಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ತಾವು ಏನಾದರು ಹೇಳುವುದು ಇದೆಯೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ವಿರೋಧಪಕ್ಷದ ನಾಯಕರು ಈ ವಿಷಯದ ಬಗ್ಗೆ ಒಂದು ವ್ಯವಸ್ಥೆ ಮಾಡುವುದಕ್ಕೆ ಮತ್ತು ಸೌಹಾರ್ದ ವಾತಾವರಣವನ್ನು ಕಲ್ಪನೆ ಮಾಡುವುದಕ್ಕೆ ಕಾಲಾವಕಾಶ ಬೇಕು ಎಂದು ಕೇಳುವಾಗ, ಬೇಡ ಎಂದು ಹೇಳುವುದು ನಮ್ಮ ಪಾರ್ಟಿಯ ಪರವಾಗಿಯಾಗಲೀ ನಮ್ಮ ಸರ್ಕಾರದ ಪರವಾಗಿಯಾಗಲೀ ಸರಿಯಲ್ಲ. ತಮಗೆ ಸೂಕ್ತ ತೋರಿದಂತೆ ಮಾಡಬಹುದು.

MADAM SPEAKER.—I will give my Ruling tomorrow.

Sri C. M. ARUMUGHAM.—We appreciate the fairness of the Deputy Leader of the House.

## Presentation of Petition

### *re*: Grievances of Village officers in Khanapur Taluk

Sri N. B. SIRDESAI (Khanapur).—I present a petition signed by the Chairman of Patils and others of Khanapur Taluk regarding the grievances of both the superior and inferior village officers.

MADAM SPEAKER.—Petition presented.

## Motion of Thanks to the Governor's Address—*Debate Continued*

† ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಮಾನ್ಯ ಅಧ್ಯಕ್ಷರೇ, ಈ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಈ ದಿವಸ ಒದಗಿಸಿಕೊಟ್ಟಿದ್ದೀರಿ. ಅದಕ್ಕಾಗಿ ನಿಮಗೆ ಮೊದಲನೆಯದಾಗಿ ನನ್ನ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯದ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆ ರೀತಿ ಪ್ರಸ್ತಾಪ ಮಾಡುವ ಸಂದರ್ಭದಲ್ಲಿ ಬಹುಶಃ ಅವರು ಹೊಸದಾಗಿ ನಮ್ಮ ರಾಜ್ಯಕ್ಕೆ ರಾಜ್ಯಪಾಲರಾಗಿ ಬಂದಿದ್ದರಿಂದ ನಮ್ಮ ರಾಜ್ಯದ ಅನೇಕ ವಿಚಾರಗಳನ್ನು ಮತ್ತು ಆಗುಹೋಗುಗಳನ್ನು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ನಾನಾದರೂ ಭಾವಿಸಿದ್ದೇನೆ. ತಮ್ಮ ಮುಖಾಂತರ ನಾನು ಪ್ರಾರ್ಥಿಸಿಕೊಳ್ಳುವುದೇನೆಂದರೆ ನಮ್ಮ ದೇಶದ ಹಿರಿಯ ಹಾಗೂ ವೈಭವಪೂರಿತವಾದ ಪರಂಪರೆಯಿಂದ ಬಂದ ಕರ್ನಾಟಕ ರಾಜ್ಯವನ್ನು ಕಟ್ಟುವುದಕ್ಕೋಸ್ಕರ ಅನೇಕ ಜನರು ತಮ್ಮ ಪ್ರಾಣತ್ಯಾಗವನ್ನು ಮಾಡಿದ್ದಾರೆ ಮತ್ತು ಬಲಿದಾನ ಮಾಡಿದ್ದಾರೆ. ಅದನ್ನು ಕಟ್ಟಿದಂತಹ ಕಾಲದಲ್ಲಿನ ಗತವೈಭವಗಳನ್ನು ಕುರಿತು ಎಷ್ಟರಮಟ್ಟಿಗೆ ಆಗ ನ್ಯಾಯ ಧರ್ಮಗಳು ನೆರೆಗೊಂಡಿದ್ದವು, ಆಗಿನ ಪರಿಸ್ಥಿತಿ ಏನಿತ್ತು ಮತ್ತು ಈಗ ಕರ್ನಾಟಕ ರಾಜ್ಯದಲ್ಲಿ ಏನೇನು ಪ್ರಗತಿ ಆಗಿದೆ ಎಂಬುದನ್ನು ಮುಖ್ಯವಾಗಿ ಈ ಭಾಷಣದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು. ಈ ಭಾಷಣವನ್ನು ಮಾಡಬೇಕಾಗಿದ್ದರೆ ಸಾಮಾನ್ಯವಾಗಿ ತಮ್ಮ ಅನುಭವವನ್ನು ದೇಶದ ಮೂಲೆ ಮೂಲೆಗಳಲ್ಲಿರತಕ್ಕ ವಿಚಾರಗಳನ್ನು ಮತ್ತು ಜನತೆಯ ಕಷ್ಟ ಸುಖಗಳು, ಆಗುಹೋಗುಗಳನ್ನು ಇದರಲ್ಲಿ ಚಿತ್ರೀಕರಿಸಿದ್ದರೆ ಚೆನ್ನಾಗಿತ್ತು. ಇದರಲ್ಲಿ ನಮಗೆ ಮೂಲತಃ ಒಂದು ತೊಂದರೆ ಏನೆಂದರೆ ಸಂವಿಧಾನದ ಪ್ರಕಾರ ಕೇಂದ್ರ ಸರ್ಕಾರದವರಿಗೆ ನಮ್ಮ ದೇಶಕ್ಕೆ ರಾಜ್ಯಪಾಲರನ್ನು ನೇಮಿಸುವಂತಹ ಒಂದು ಅಧಿಕಾರ ಇದೆ. ಇದರಲ್ಲಿ ಸ್ವಲ್ಪ ತೊಡಕು ಇದೆ ಎಂದು ಕಂಡು ಬರುತ್ತದೆ. ಇದನ್ನು ನೋಡಿದರೆ ರಾಜ್ಯಪಾಲರು ನಮ್ಮ ದೇಶದವರಲ್ಲ, ಅವರು ಹೊರಗಡೆಯಿಂದ ಬಂದಿರತಕ್ಕವರು. ಅವರು ನಮ್ಮ ದೇಶದ ಬಗ್ಗೆ ಅಷ್ಟಾಗಿ ಹೆಚ್ಚಿನ ಪರಿಚಯವನ್ನು ಇಟ್ಟು ಕೊಂಡಿಲ್ಲದೇ ಇರತಕ್ಕ ವ್ಯಕ್ತಿಗಳು. ಆದ್ದರಿಂದ ಅವರು ನಮ್ಮ ದೇಶದ ಆಗುಹೋಗುಗಳು ಮತ್ತು ಜನತೆಯ ಕಷ್ಟ ಸುಖಗಳು ಇವುಗಳ ಒಂದು ನೈಜ ಚಿತ್ರವನ್ನು ಮತ್ತು ಈಗ ದೇಶದಲ್ಲಿ ಇರತಕ್ಕಂಥಾ ಪರಿಸ್ಥಿತಿ ಇವುಗಳನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸುವುದಕ್ಕೆ ಸಾಧ್ಯವಾಗಿಲ್ಲ. ಈ ದೃಷ್ಟಿಯಿಂದ ನಮ್ಮ ದೇಶದಲ್ಲಿ ದೇಶಕ್ಕೋಸ್ಕರ ದುಡಿದಿರತಕ್ಕಂಥಾ ದೇಶದ ಜನತೆಯ ಕಷ್ಟ ಸುಖಗಳನ್ನು ಅರಿತಿರತಕ್ಕಂಥಾ ಮತ್ತು ದೇಶದ ಮೂಲೆ ಮೂಲೆಗಳಲ್ಲಿ ಆಗಿರತಕ್ಕಂಥಾ ಅನ್ಯಾಯಗಳನ್ನು ಪರಾಂಬರಿಸಿ ಅವುಗಳನ್ನು ಹೋಗಲಾಡಿಸತಕ್ಕಂಥಾ ಶಕ್ತಿಯುತರಾದ ವ್ಯಕ್ತಿಗಳನ್ನು ರಾಜ್ಯಪಾಲರ ಸ್ಥಾನದಲ್ಲಿ ಕೂರಿಸಿದರೆ ಅವರು ಆ ಕೆಲಸವನ್ನು ಚೆನ್ನಾಗಿ ಮಾಡಬಲ್ಲರು ಎಂದು ನಾನು ಭಾವಿಸಿದ್ದೇನೆ. ಇದನ್ನು ಸರ್ಕಾರದವರು ಗಮನಿಸಬೇಕು.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಶಾಂತಿ ಸುವ್ಯವಸ್ಥೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಬಹಳ ಚೆನ್ನಾಗಿ ಹೇಳಿದ್ದಾರೆ. ಒಂದೆರಡು ಘಟನೆಗಳನ್ನು ಬಿಟ್ಟರೆ ದೇಶದಲ್ಲಿ ಶಾಂತಿ ಸುವ್ಯವಸ್ಥೆ ಸರ್ವ ಸಾಮಾನ್ಯವಾಗಿ ಸಮಾಧಾನಕರವಾಗಿದೆ ಎಂದು ಹೇಳಿದ್ದಾರೆ. ನಾನಾದರೋ ತಮ್ಮ ಮೂಲಕ ಹೇಳುತ್ತೇನೆ ಪ್ರತಿನಿತ್ಯ ಪೋಲೀಸಿನವರಿಂದ ನಿರಪರಾಧಿಗಳಿಗೆ, ಬಡಜನಗಳಿಗೆ, ಆಗತಕ್ಕಂಥಾ ಒಂದು ಅನ್ಯಾಯ, ತೊಂದರೆ, ಕಿರುಕುಳ, ಭಯೋತ್ಪಾದನೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಈ ಸಂದರ್ಭದಲ್ಲಿ ನಾನು ತಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ತಿಪಟೂರಿನಲ್ಲಿ ಒಮ್ಮೆ ಒಬ್ಬ ಪೋಲೀಸ್ ಮುಖ್ಯಾಧಿಕಾರಿ ನಿರಪರಾಧಿಗಳಿಗೆ ಕೈಕೋಳ ಹಾಕಿಕೊಂಡು ರಸ್ತೆಯಲ್ಲಿ ಅವರನ್ನು ಮೆರವಣಿಗೆಮಾಡಿ ಅವರಿಗೆ ಅವಮಾನ ಮಾಡಿದಂತಹ ಸಂದರ್ಭದಲ್ಲಿ ನೂತನ ಮಂತ್ರಿಮಂಡಲದವರಿಗೆ ಗೊತ್ತಾಗಿದೆ. ಸರ್ಕಾರದವರಹತ್ತಿರ ದೂರು ಹೋದಾಗ ಅವರು ಈ ಬಗ್ಗೆ ತನಿಖೆ ಮಾಡಲು ಒಬ್ಬ ಉನ್ನತ ಅಧಿಕಾರಿಯನ್ನು ನೇಮಕ ಮಾಡಿ ತನಿಖೆ ನಡೆಸಿದರು. ಆಗ ತನಿಖೆ ಮಾಡಿದ ಅಧಿಕಾರಿಗಳು ತಿಪಟೂರಿನ ಪೋಲೀಸ್ ಅಧಿಕಾರಿ ತಪ್ಪು ಮಾಡಿದ್ದಾರೆ, ಅವರನ್ನು ಬೇರೆ ಕಡೆ ವರ್ಗಾಯಿಸಬೇಕೆಂದು ಬರೆದಿದ್ದರೂ ಕೂಡ ರಾಜಕಾರಿಣಿಗಳು, ಮಂತ್ರಿಗಳ ಸ್ನೇಹಿತರಾಗಿರತಕ್ಕ ಹಿರಿಯ ನಾಯಕರು ಮಧ್ಯೆ ಪ್ರವೇಶ ಮಾಡಿದ್ದರ ಪರಿಣಾಮವಾಗಿ ಆ ತಪ್ಪು ಮಾಡಿದ ಅಧಿಕಾರಿಯನ್ನು ಬೇರೆ ಕಡೆ ವರ್ಗಾಯಿಸದೆ ಅವರಿಗೆ ರಕ್ಷಣೆ ಕೊಟ್ಟಿದ್ದಾರೆ. ಇದರಿಂದ ಆಡಳಿತಪಕ್ಷದ ಕಾಂಗ್ರೆಸ್ ಮಂತ್ರಿ ಮಂಡಲದವರು ಜನತೆಗೆ, ನಿರಪರಾಧಿಗಳಿಗೆ ಎಷ್ಟರಮಟ್ಟಿನ ನ್ಯಾಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಅನುಮಾನ ನಮಗೆ ಬರುತ್ತದೆ. ನಾನು ನಮ್ಮ ತಾಲ್ಲೂಕಿನ ಪ್ರತಿನಿಧಿ, ಆದ್ದರಿಂದ ನನ್ನ ತಾಲ್ಲೂಕಿನ ಜನತೆಯ ಕಷ್ಟಸುಖವನ್ನು ವಿಚಾರಮಾಡಬೇಕೆಂದು

(ಶ್ರೀ ಟಿ. ಎಂ. ಮಂಜುನಾಥ್)

ಸಂಬಂಧಪಟ್ಟ ಮಂತ್ರಿವರ್ಯರ ಗಮನಕ್ಕೆ ತರಬೇಕಾದ್ದು ನನ್ನ ಕರ್ತವ್ಯ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಇನ್ನೊಂದು ವಿಚಾರವನ್ನು ಈ ಸಂದರ್ಭದಲ್ಲಿ ಅಧ್ಯಕ್ಷರ ಮುಖಾಂತರ ಈ ಸಭೆಯ ಗಮನಕ್ಕೆ ತರಬೇಕೆಂದು ಇಷ್ಟಪಡುತ್ತೇನೆ. ಒಮ್ಮೆ ನಾನು ನಮ್ಮ ತಾಲ್ಲೋಕಿನ ಸಾರ್ವಜನಿಕ ಒಕ್ಕಲಿಗರ ವಿದ್ಯಾರ್ಥಿನಿಲಯದ ವಿಚಾರವಾಗಿ ಮುಖ್ಯ ಮಂತ್ರಿಗಳ ಹತ್ತಿರ ಮಾತನಾಡಲು ಹೋಗಿ ಅವರಿಗೆ ಒಂದು ಅರ್ಜಿಯನ್ನು ಕೊಟ್ಟಾಗ ಅವರು ನನ್ನೊಡನೆ ವ್ಯವಹರಿಸಿದ ಸನ್ನಿವೇಶವನ್ನು ಜ್ಞಾಪಿಸಿಕೊಂಡರೆ ಮತ್ತೆ ಯಾವ ಸದಸ್ಯರೂ ಕೂಡ ಅವರಲ್ಲಿಗೆ ಹೋಗತಕ್ಕಂಥಾ ಹವ್ಯಾಸವನ್ನು ಇಟ್ಟುಕೊಳ್ಳುವುದಿಲ್ಲ ಎಂದು ನಾನು ಹೇಳುತ್ತೇನೆ. ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯಕ್ಕೆ ಸಂಬಂಧಪಟ್ಟ ವಿಚಾರವನ್ನು ಮಾತನಾಡಲು ನಾನು ಅವರಲ್ಲಿಗೆ ಹೋದಾಗ ಅವರು ನನ್ನೊಡನೆ ಜಾತೀಯ ಮನೋಭಾವನೆ ಬರುವ ಹಾಗೆ ಮಾತನಾಡಿ ನಾನು ಈ ಸಭೆಯ ಸದಸ್ಯನಲ್ಲದ ರೀತಿಯಲ್ಲಿ ಅವರು ನನ್ನನ್ನು ಗಮನಿಸಿದ್ದಾರೆ. ನಾನು ಇದನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ತಾವು ನನಗ ರಕ್ಷಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನನ್ನ ಮನೆಗೋಸ್ಕರ, ನನ್ನ ಅಣ್ಣ ತಮ್ಮಂದಿರಿಗೋಸ್ಕರ ಅದು ಕೇಳತಕ್ಕ ವಿಚಾರವಲ್ಲ. ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಮಾಡಲು ವಿದ್ಯಾರ್ಥಿನಿಲಯವನ್ನು ಕಟ್ಟಿಸುವ ವಿಚಾರ. ಇಡೀ ತಾಲ್ಲೂಕಿನ ಜನತೆಯ ಉದ್ಧಾರ ಕೋಸ್ಕರ ಯಾರಿಂದ ನಾವು ಆರಿಸಿಬಂದು ಈ ಸ್ಥಾನದಲ್ಲಿ ಕುಳಿತುಕೊಂಡಿದ್ದೇವೋ ಅವರ ಕಷ್ಟ ಸುಖಗಳನ್ನು ವಿಚಾರಿಸುವುದು ನಮ್ಮ ಜವಾಬ್ದಾರಿ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಅವರು ಆ ದಿವಸ ಕೇವಲ ನನಗೆ ಮಾಡಿದಂತಹ ಅವಮಾನವಲ್ಲ ಅದು ಇಡೀ ತಾಲ್ಲೂಕಿನ್ನ ಜನತೆಗೆ ಮಾಡಿರತಕ್ಕ ಅವಮಾನ ಎಂದು ನಾನು ಭಾವನ ಮಾಡಿಕೊಂಡಿದ್ದೇನೆ. ಅವರು ತೋರಿಸಿದಂತಹ ರೀತಿಯನ್ನು ನೋಡಿದರೆ ಬೇರೆ ಪಕ್ಷದವರು ಇರುವುದು ಬೇಡ, ಅಲ್ಲದ್ದರೆ ಕೆಲಸಕಾರ್ಯಗಳು ಆಗುವುದಿಲ್ಲ ಎಂದು ಹೆದರಿಕೊಂಡು ಅವರು ನಮ್ಮ ಪಕ್ಷಕ್ಕೆ ಬರಲಿ ಎನ್ನುವ ಭಾವನೆ ಅವರಿಗೆ ಇದೆಯೋ ಏನೋ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಶ್ರೀ ಬಿ. ಬೈರಪ್ಪಾಜಿ.—ನಮ್ಮಲ್ಲಿ ಜಾಸ್ತಿ ಜನ ಇದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ನಿಮ್ಮ ಕಡೆ ಬರಬೇಕೆಂಬ ಅಭಿಪ್ರಾಯವನ್ನು ಇಟ್ಟುಕೊಂಡು ಈ ಮಾತನ್ನು ಹೇಳಲಿಲ್ಲ.

ಬಂಗ್ಲಾದೇಶದ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುತ್ತಾ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಜಯವನ್ನು ಹೊಂದಿದ್ದೇವೆ, ಈ ವಿಚಾರದಲ್ಲಿ ನಾವು ಸಂತೋಷಪಟ್ಟುಕೊಳ್ಳಬಹುದಾಗಿದೆ ಎಂದು ಹೇಳಿದ್ದಾರೆ. ಇದು ನಾವೆಲ್ಲರೂ ಒಪ್ಪಬೇಕಾದ ವಿಷಯ. ಆದರೆ ಈ ಸಂದರ್ಭದಲ್ಲಿ ರಕ್ಷಣಾ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕ ಶ್ರೀ ಜಗಜೀವನರಾಂ ಅವರ ವಿಚಾರವನ್ನು ಪ್ರಸ್ತಾಪ ಮಾಡದೆ ಇರುವುದು ಸರಿಯಲ್ಲ. ಯಾರೇ ಆಗಿರಲಿ ರಾಜ್ಯದಲ್ಲಿ ಸೇವೆಯನ್ನು ಸಲ್ಲಿಸಿರತಕ್ಕ ಗಣ್ಯವ್ಯಕ್ತಿಗಳ ವಿಷಯವನ್ನು ತರಬೇಕಾಗಿತ್ತು ಎಂದು ನಾನು ಹೇಳುತ್ತೇನೆ.

ಇನ್ನೂ ಮುಖ್ಯವಾಗಿ ಹಳ್ಳಿಗಳಲ್ಲಿ ಜನಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದವರ ಕರ್ತವ್ಯ. ಸರ್ಕಾರದವರೇನೋ ಗ್ರಾಮಾಂತರ ಪ್ರದೇಶಗಳಲ್ಲಿ ಜನಗಳಿಗೆ ಕುಡಿಯುವ ನೀರನ್ನು ಒದಗಿಸಲು ಯೋಜನೆಗಳನ್ನು ಹಾಕಿಕೊಂಡಿದ್ದೇವೆ, ಅದರ ಮುಖಾಂತರ ಕೆಲಸಕಾರ್ಯಗಳನ್ನು ಮಾಡಿಸುತ್ತಿದ್ದೇವೆ, ಜನಗಳಿಗೆ ಕುಡಿಯುವ ನೀರನ್ನು ಒದಗಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ನನಗೆ ತಿಳಿದಮಟ್ಟಿಗೆ ಗ್ರಾಮಾಂತರ ಪ್ರದೇಶದಲ್ಲಿ ಅದರಲ್ಲೂ ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಬಹಳ ಚಿಂತಾಜನಕವಾಗಿದೆ. ಒಬ್ಬ ಹರಿಜನ ಮನುಷ್ಯ ಒಂದು ಗಡಿಗೆ ನೀರನ್ನು ತರಬೇಕಾದರೆ ಒಬ್ಬೊಬ್ಬರ ಮನೆಯ ಹತ್ತಿರವೂ ಒಂದೊಂದು ಗಂಟೆಯ ಕಾಲ ಕಾಯಬೇಕಾಗುತ್ತದೆ. ಅವರು ಕಷ್ಟಪಡತಕ್ಕದ್ದನ್ನು ಕಣ್ಣಾರೆ ನೋಡಿದ್ದೇನೆ. ಸರ್ಕಾರದ ಯಾವುದೇ ಕೆಲಸವನ್ನಾಗಲೀ ಬದಿಗಿಟ್ಟು ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಗಮನ ಕೊಡಬೇಕು. ಹರಿಜನರನ್ನು ಉದ್ಧಾರಮಾಡುತ್ತೇವೆಂದು ಹೊರಟಿರತಕ್ಕ ಆಡಳಿತ ಕಾಂಗ್ರೆಸ್ ಸರ್ಕಾರದವರು ಆದಷ್ಟು ಬೇಗ ಹರಿಜನರಿಗೆ ಸಾಧ್ಯವಾದ ಮಟ್ಟಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಅಸ್ಪೃಶ್ಯತಾ ಕಾನೂನನ್ನು ಉಲ್ಲಂಘಿಸಿದವರಿಗೆ ಶಿಕ್ಷೆ ವಿಧಿಸುತ್ತೇವೆ ಎಂದು ಹೇಳುತ್ತೀರಿ, ಆದರೆ ಕಾನೂನು ಪುಸ್ತಕದಲ್ಲಿಯೇ ವಿನಾ ಕಾರ್ಯತಃ ಜಾರಿಗೆ ಬಂದಿಲ್ಲ.

ಶ್ರೀ ಜಿ. ರಾಮೇಗೌಡ.—ಹರಿಜನರಿಗೆ ಬೇರೆ ಬಾವಿಗಳನ್ನು ಮಾಡಿ ಎಂದು ಹೇಳುತ್ತೀರಾ ?

ಶ್ರೀ ಟಿ. ಎಂ. ಮಂಜುನಾಥ್.—ಯಾವರೀತಿ ಮಾಡಿದರೂ ಸರಿ, ಒಟ್ಟಿನಲ್ಲಿ ಹರಿಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಆದಷ್ಟು ಬೇಗ ಮಾಡಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರ ವ್ಯವಸ್ಥೆಯನ್ನು ಬಹಳ ತೀವ್ರತೆಯಿಂದ ಮಾಡಬೇಕು. ರೈತರು ಹಳ್ಳಿಗಳಿಂದ ಪಟ್ಟಣಗಳಿಗೆ ಆಹಾರಧಾನ್ಯಗಳನ್ನು ಸಾಗಿಸಿಕೊಂಡು ಬರುವುದಕ್ಕಾಗಲೀ, ಇತರೇ ಯಾವ ಪದಾರ್ಥವನ್ನು ತರುವುದಕ್ಕಾಗಲೀ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಬೇಕಾದರಾಗಲೀ ಸರಿಯಾದ ರಸ್ತೆ ಸೌಕರ್ಯಗಳು ಇಲ್ಲ. ಅದ್ದರಿಂದ ಈ ಬಗ್ಗೆ ಸರ್ಕಾರದವರು ಸೂಕ್ತ ಗಮನವನ್ನು ಹರಿಸಬೇಕು. ಮತ್ತು ರಸ್ತೆ ಸೌಕರ್ಯವನ್ನು ಒದಗಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗ ಹಾಲಿ ಇರತಕ್ಕಂಥಾ ರಸ್ತೆಗಳನ್ನು ರಿಪೇರಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಸಣ್ಣ ಹಿಡುವಳಿದಾರರಿಗೆ ರಾಜ್ಯ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರು ಸಹಾಯ ಮಾಡುತ್ತೇವೆ ಎಂದು ಅನೇಕ ಸಭೆ ಮತ್ತು ಸಮಾರಂಭಗಳಲ್ಲಿ ಪ್ರಚಾರ ಮಾಡುತ್ತಾ ಬಂದಿದ್ದಾರೆ.

2.00 P.M.

'ನಾನು ನೋಡಿದ ಹಾಗೆ ನಮ್ಮ ತಾಲ್ಲೂಕಿನ ವಿಚಾರ ಹೇಳುವುದಾದರೆ ಒಬ್ಬೊಬ್ಬ ರೈತನೂ ಸುಮಾರು 30ರಿಂದ 50 ರೂಪಾಯಿವರೆಗೂ ಅರ್ಜಿಗೆ ಖರ್ಚು ಮಾಡಿ ಒಬ್ಬನೂ ಸಹಿತ ಈ ಸ್ಕೀಮಿನಲ್ಲಿ ಹಣವನ್ನು ಪಡೆಯುವುದಕ್ಕೆ ಅಸಮರ್ಥನಾಗಿ ಪರಿತಾಪ ಪಡುತ್ತಿದ್ದಾನೆ. ಸರ್ಕಾರದವರು ಇಂತಹ ಯೋಜನೆಗಳ ಬಗ್ಗೆ ಬರೇ ಬಾಯಿ ಮಾತಿನಲ್ಲಿ ಹೇಳಿದರೆ ಪ್ರಯೋಜನವಿಲ್ಲ. ಅದನ್ನು ಕಾರ್ಯತಃ ಮಾಡಬೇಕಾಗುತ್ತದೆ. ಈಗ ಎಷ್ಟು ಅರ್ಜಿಗಳು ಇದ್ದಾವೆ, ಅವುಗಳಿಗೆ ಯಾವುದಾದರೂ ರಾಷ್ಟ್ರೀಯ ಬ್ಯಾಂಕಿನಿಂದಾಗಲಿ, ಅಥವಾ ಸೇವಾ ಸಹಕಾರ ಸಂಘದಿಂದಾಗಲಿ ಕೂಡಲೇ ಹಣ ಒದಗಿಸುವ ವ್ಯವಸ್ಥೆ ಮಾಡುತ್ತೀರೆಂದು ಭಾವಿಸುತ್ತೇನೆ. ಮತ್ತು ಸೇವಾ ಸಹಕಾರ ಸಂಘಗಳ ವಿಚಾರದಲ್ಲಿ ಚೆನ್ನಾಗಿ ಭಾಷಣ ಮಾಡಿದರೆ ಪ್ರಯೋಜನವಿಲ್ಲ. ಅಲ್ಲಿ ಒಳ್ಳೆಯ ಅಭಿವೃದ್ಧಿ ಕೆಲಸ ಕಾರ್ಯಗಳು ಜನತೆಗೋಸ್ಕರ ನಡೆಯಬೇಕಾಗಿದೆ. ಆದರೆ ಇಂತಹ ಸಂಸ್ಥೆಗಳಲ್ಲಿ ರಾಜಕೀಯ ಗುಂಪುಗಳು ಸೇರಿಕೊಂಡು ಈ ಸೇವಾ ಸಹಕಾರ ಸಂಸ್ಥೆಗಳನ್ನು ಕೇವಲ ಒಬ್ಬಿಬ್ಬರ ಸ್ವತ್ತಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಮಂತ್ರಿಯವರು ಇಂತಹ ಸಂಸ್ಥೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು, ಅದರ ಕಾರ್ಯ ಚಟುವಟಿಕೆಗಳನ್ನು ನಡೆಸುವ ವ್ಯವಸ್ಥೆ ಮಾಡಿ ಜನತೆಗೆ ಅನುಕೂಲ ಮಾಡಿಕೊಡುವ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಮಳೆ ನೀರಿನ ಆಶ್ರಯದಲ್ಲಿ ವ್ಯವಸಾಯ ಮಾಡತಕ್ಕ ಜನರೇ ಜಾಸ್ತಿಯಾಗಿದ್ದಾರೆ. ಆದ್ದರಿಂದ ನಾವು ಪದೇ ಪದೇ ಕ್ಷಾಮವನ್ನು ಎದುರಿಸತಕ್ಕಂತಹ ಸಂದರ್ಭ ಬರುತ್ತದೆ. ಇಂತಹ ಪರಿಸ್ಥಿತಿಯೊಳಗೆ, ರೈತರಿಗೆ ಕೆಲಸವಿಲ್ಲದೆ ಇನ್ನೂ ಹೆಚ್ಚು ನಿರುದ್ಯೋಗ ಸಮಸ್ಯೆಯು ಉಂಟಾಗುತ್ತದ. ಆದ್ದರಿಂದ ಇಂತಹ ಸನ್ನಿವೇಶಗಳ ಕಡೆ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟು, ಎಲ್ಲಿ ಹೆಚ್ಚು ಕ್ಷಾಮ ಇದೆ, ಅಂತಹ ಕಡೆ ಹೆಚ್ಚು ಕಾಮಗಾರಿ ಕೆಲಸಗಳನ್ನು ಒದಗಿಸಿ ಹೆಚ್ಚಿನ ಆರ್ಥಿಕ ನೆರವನ್ನೂ ಕೂಡ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಈ ಕ್ಷಾಮ ಪರಿಹಾರ ಕಾಮಗಾರಿಗಳನ್ನು ಇದುವರೆಗೂ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಮೂಲಕ ಮಾಡಿಸುತ್ತಿದ್ದರು. ಆದರೆ ರಾಷ್ಟ್ರಪತಿ ಆಡಳಿತ ಬಂದಮೇಲೆ ಅದನ್ನು ಲೋಕೋಪಯೋಗಿ ಇಲಾಖೆಯ ಮೂಲಕ ಮಾಡಿಸುತ್ತಿದ್ದಾರ. ಇವತ್ತು ಯಾರು ನಿಜವಾಗಿ ರೈತರ ಮತ್ತು ಅಲ್ಲಿರುವ ವ್ಯವಸಾಯಗಾರರ ಸಂಪರ್ಕ ಇಟ್ಟುಕೊಂಡಿದ್ದಾರೆ ಅಂದರೆ ಅಲ್ಲಿರತಕ್ಕ ತಾಲ್ಲೂಕು ಬೋರ್ಡು ಸದಸ್ಯರು. ಅವರಿಗೆ ಎಲ್ಲೆಲ್ಲಿ ಕ್ಷಾಮ ಬಂದಿದೆ, ಎಲ್ಲಿ ಜನರಿಗೆ ಕೆಲಸವಿಲ್ಲವೆಂಬುದು ಚೆನ್ನಾಗಿ ಗೊತ್ತು. ಆದ್ದರಿಂದ ಈ ಕೆಲಸಕಾರ್ಯಗಳನ್ನು ತಾಲ್ಲೂಕು ಅಭಿವೃದ್ಧಿ ಮಂಡಲಿಯವತಿಯಿಂದ ಮಾಡಿಸುವಂತೆ ನೂತನ ಮಂತ್ರಿಮಂಡಲದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನೀವು ಮತ ಕೇಳುವುದಕ್ಕೆ ಹೋದಾಗ ಜನರಿಗೆ ಏನೊಂದು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ಮತ್ತು ಹರಿಜನ ಗಿರಿಜನರಿಗೆ ವಸತಿ ಇಲ್ಲದಿದ್ದರೆ ಪುಕ್ಕಟೆಯಾಗಿ ಸೈಟುಗಳನ್ನು ಕೊಡಿಸುತ್ತೇವೆಂದು ಏನು ಹೇಳಿದ್ದೀರಿ, ಅದನ್ನು ಈಗ ಕಾರ್ಯಗತ ಮಾಡ ಮಾಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಇದನ್ನು ಎಲ್ಲರಿಗೆ ಕೊಡುವುದಕ್ಕೆ ಸಾಧ್ಯವಿಲ್ಲವಾದರೂ, ಯಾವ ಹರಿಜನರು ಇವತ್ತು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೋ, ಮನೆಗಳನ್ನು

(ಶ್ರೀ ಟಿ. ಎಂ. ಮಂಜುನಾಥ್)

ಕಟ್ಟುವುದಕ್ಕೆ ಯಾರಿಗೆ ಸಾಧ್ಯವಿಲ್ಲವೋ ಅಂಥವರಿಗೆ ಈ ಅನುಕೂಲಗಳನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಕೆಲವು ಹರಿಜನರು ತಗೆದುಕೊಂಡ ಸಾಲವನ್ನು ವಾಪಸ್ಸು ಕೊಟ್ಟಿಲ್ಲವೆಂದು ಅವರ ಮನೆಗಳನ್ನು ಕಿತ್ತು ಹಾಕುತ್ತಿದ್ದಾರೆ. ಈ ಒಂದು ನೀತಿಯನ್ನು ತಪ್ಪಿಸಿ, ಬಡ ಜನರಿಗೆ ತೊಂದರೆ ಯಾಗದ ಹಾಗೆ ಸರ್ಕಾರದವರು ತಮ್ಮ ಪದ್ಧತಿಯನ್ನು ಬದಲಾಯಿಸಿಕೊಳ್ಳಬೇಕೆಂದು ಕೇಳಿಕೊಳ್ಳು ತ್ತೇನೆ. ಒಟ್ಟಾರೆ ಹೇಳುವುದಾದರೆ, ರಾಜ್ಯಪಾಲರ ಭಾಷಣ ಅಧಿಕಾರಿಗಳು ಬರೆದು ಕೊಟ್ಟ ನೀರಸವಾದಂತಹ ಮತ್ತು ಯಾವುದೇ ಕಾರ್ಯಕ್ರಮ ಹಾಕಿಕೊಳ್ಳದೆ ಇರತಕ್ಕಂತಹ ಹೇಳಿಕೆಯಾಗಿದೆ ಎಂದು ಹೇಳಿ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸಿ, ಮುಂದೆಯಾದರೂ ಇದು ಸರಿಯಾಗಿ ಬರಲಿ ಎಂದು ಆಶಿಸಿ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಎನ್. ಮಾದಪ್ಪಗೌಡ (ನಾಗಮಂಗಲ).—ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ರಾಜ್ಯಪಾಲರ ಭಾಷಣ ಈಗ ಹೊಸದಾಗಿ ಸ್ಥಾಪನೆಯಾಗಿರತಕ್ಕಂತಹ ಸರ್ಕಾರದವರು ಕೊಟ್ಟಿರ ತಕ್ಕಂತಹ ಭಾಷಣವಲ್ಲವೆಂದು ಒಂದು ವಿನಾಯಿತಿಯನ್ನು ಕೊಡಬಹುದಾದರೂ ಈ ಭಾಷಣವನ್ನು ಬರೆದುಕೊಟ್ಟಂತಹ ಅಧಿಕಾರಿಗಳು ದೇಶದಲ್ಲಿರತಕ್ಕಂತಹ ಇಂದಿನ ಪರಿಸ್ಥಿತಿಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ತಾಲ್ಲೂಕು ಮತ್ತು ಅಕ್ಕಪಕ್ಕದ ತಾಲ್ಲೂಕುಗಳಾದ ಕೃಷ್ಣರಾಜಪೇಟೆ, ಪಾಂಡವಪುರ, ತುರುವೇಕೆರೆ ತಾಲ್ಲೂಕುಗಳಲ್ಲಿ ಕಳೆದ 7 ವರ್ಷ ಗಳಿಂದ ಬೆಳೆ ಇಲ್ಲದೆ ರೈತ ಕಂಗೆಡುವ ಪರಿಸ್ಥಿತಿಗೆ ಬಂದಿದ್ದಾನೆ. ಪ್ರತಿವರ್ಷ ಆಗತಕ್ಕಂತಹ ಮಳೆ ಯಾವುದೋ ಒಂದು ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಬೀಳುತ್ತದೆ. ಆದರೆ ಅದು ಸರಿ ಯಾಗಿ ಕಾಲಕ್ಕೆ ಬೀಳದೆ, ರೈತನಿಗೆ ಬೆಳೆ ಮಾತ್ರ ಕೈಗೆ ಬರುವುದಿಲ್ಲ. ಕಳೆದ ಕೆಲವು ವರ್ಷಗಳಿಂದ ಕಂದಾಯ ರಿಯಾಯಿತಿ ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರಿಂದ ರೈತರು ಇಲ್ಲಿಯವರೆಗೂ ಅದನ್ನು ಬಾಕಿ ನಿಲ್ಲಿಸಿಕೊಂಡು ಬಂದಿದ್ದಾರೆ. ಅದಲ್ಲದೆ ಇಂತಹ ದುಸ್ಥಿತಿ ಇರುವಾಗ ಅವರು ಏನು ತಾನೆ ಕೊಟ್ಟಾರು ? ಹರಿಜನ ಗಿರಿಜನರಂತೂ ನಿಕೃಷ್ಟವಾದ ಪರಿಸ್ಥಿತಿಯಲ್ಲಿದ್ದಾರೆಂದು ಹೇಳಿದರೆ ಏನೂ ಅತಿಶಯೋಕ್ತಿಯಾಗಲಾರದು. ಇಲ್ಲಿ ರಿಲೀಫ್ ಬಗ್ಗೆ ನಮ್ಮ ತಾಲ್ಲೂಕು ಒಂದನ್ನೇ ತೆಗೆದು ಕೊಳ್ಳುವುದಾದರೆ, ಕಳೆದ 7 ವರ್ಷಗಳಿಂದ ಸುಮಾರು 26 –27 ಲಕ್ಷ ರೂಪಾಯಿಗಳನ್ನು ಸರ್ಕಾರ ದವರು ಕೊಟ್ಟಿದ್ದಾರೆ. ಹೀಗೆ ಕೊಟ್ಟ ಹಣ ಎಲ್ಲಿ ಹೋಯಿತು, ಮತ್ತು ಇದರಿಂದ ಏನು ಕೆಲಸ ಮಾಡಿದ್ದಾರೆಂದು ನೋಡುವುದಾದರೆ, ಅದನ್ನು ನಮಗೆ ಹೇಳಿಕೊಳ್ಳುವುದಕ್ಕೂ ಕೂಡ ನಾಚಿಕೆ ಯಾಗುತ್ತದೆ. ಈ 26 ಲಕ್ಷದಲ್ಲಿ ಎರಡು ಲಕ್ಷ ಸಹಿತ ರೈತರಿಗೆ ಮುಟ್ಟಿಲ್ಲ. ಬಾಕಿ ಹಣವೆಲ್ಲಾ ದುರ್ವ್ಯವಹಾರಗಳಲ್ಲಿ ಹೋಗಿದೆ. ಈ ರಿಲೀಫ್ ಕೊಡತಕ್ಕಂತಹ ನೀತಿ ಒಳ್ಳೆಯದಾದರೂ ನಮ್ಮ ಅಧಿಕಾರಿಗಳ ಮತ್ತು ಜನರ ಸ್ವಭಾವ ಬದಲಾವಣೆಯಾಗದೆ, ಇದನ್ನು ಸರಿಯಾಗಿ ವಿನಿಯೋಗ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇಂತಹ ಕಾರ್ಯಕ್ರಮಗಳನ್ನು ನಾವು ನಿಲ್ಲಿಸಿ ಇವುಗಳಿಗೆ ಶಾಶ್ವತವಾಗಿ ಒಂದು ಪರಿಹಾರವನ್ನು ಹುಡುಕುವ ಬಗ್ಗೆ ಯೋಚನೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಇದರ ಬಗ್ಗೆ ನಮ್ಮ ಅಧಿಕಾರಿಗಳು ಯಾಕೆ ಯೋಚನೆ ಮಾಡದೆ ಇದ್ದಾರೆ ಎಂದು ನನಗೆ ಗೊತ್ತಾಗಿಲ್ಲ. ಇಲ್ಲಿ ಡೆವಲಪ್‌ಮೆಂಟ್ ಮತ್ತು ಪ್ಲಾನಿಂಗ್ ಮುಂತಾದ ವಿಷಯಗಳಿಗೆ ವಿಶೇಷವಾದ ವ್ಯವಸ್ಥೆ ಇದೆ. ಇದಕ್ಕೋಸ್ಕರ ಸೆಕ್ರೆಟರಿಯೇಟಿನಲ್ಲಿ ಒಂದು ದೊಡ್ಡ ವಿಭಾಗವೇ ಇದೆ. ಈ ಜನರಿಗೆಲ್ಲಾ ಏನು ಕೆಲಸವಿದೆ ಎಂಬುದನ್ನು ಸರ್ಕಾರದವರು ಹೇಳ ಬೇಕೆಂದು ತಿಳಿಸುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಯಾರಾದರೂ ಮಂಡ್ಯ ಜಿಲ್ಲೆಯ ಹೆಸರು ಹೇಳಿದ ತಕ್ಷಣ, ಸರ್ಕಾರದ ಮತ್ತು ಅನೇಕ ಸದಸ್ಯರ ಮನಸ್ಸಿನ ಮೇಲೆ ಒಂದು ಪರಿಣಾಮ ವಾಗಿ ಅದು ಒಂದು ಒಳ್ಳೆಯ ಸಮೃದ್ಧಿಯಾದ ನಾಡು, ಕಾವೇರಿ ಹೊಳೆಯಿಂದ ಅಲ್ಲಿಗೆ ಬಹಳ ಪ್ರಯೋಜನವಾಗುತ್ತಿದೆ ಎಂದು ಅಭಿಪ್ರಾಯ ಪಡುತ್ತಾರೆ. ಬೆಂಗಳೂರಿಂದ ಮೈಸೂರಿಗೆ ಹೋಗುವ ದಾರಿಯಲ್ಲಿ ಕೆಲವು ಜಾಗಗಳಲ್ಲಿ ಕಬ್ಬು ಮತ್ತು ಇತರ ಬೆಳೆಗಳನ್ನು ನೋಡಬಹುದು. ಆದರೆ ಪಾಂಡವಪುರ ಸಬ್ ಡಿವಿಜನ್ ಮತ್ತು ಶ್ರೀರಂಗಪಟ್ಟಣ ಬಿಟ್ಟು ಉಳಿದ ಪ್ರದೇಶಗಳನ್ನು ತೆಗೆದುಕೊಂಡರೆ ಅದು ಬರೀ ಕೆಂಗಾಡಾಗಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ತರಬಯಸು ತ್ತೇನೆ. ಅದೊಂದು ಜೋನ್ ಮಾತ್ರ ದಾರಿಯಲ್ಲಿ ಹೋಗುವಾಗ ನೋಡುವುದಕ್ಕೆ ಚೆನ್ನಾಗಿರುತ್ತದೆ. ಈಗ ಟ್ಯೂಬ್‌ವೆಲ್ಸ್ ಮತ್ತು ರಿಗ್‌ವೆಲ್ಸ್ ಬಹಳ ಮಟ್ಟಿಗೆ ಉಪಯುಕ್ತವಾಗುತ್ತವೆ ಎಂದು ಕೇಳಿದ್ದೇನೆ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಅಂತಹ ಬಾವಿಗಳನ್ನು ಮಾಡುವುದರ ಜೊತೆಗೆ ಕೆಲವು ಸಾಮೂಹಿಕ ಬಾವಿಗಳನ್ನು ಮಾಡಿ ನೀರು ಉಪಯೋಗಿಸಿಕೊಳ್ಳುವ ಒಂದು ವ್ಯವಸ್ಥೆಯನ್ನು ಎಲ್ಲಿ ನೀರಾವರಿ

ಸೌಕರ್ಯ ಇಲ್ಲ, ಅಲ್ಲಿ ಮಾಡಬೇಕೆಂದು ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸಹ ಕೆಲವು ಸಾಮೂಹಿಕ ಬಾವಿಗಳನ್ನು ತೆಗೆದಿದ್ದಾರೆ. ಅದರಲ್ಲಿ ಒಂದು ಕಡೆ ಪ್ರಯೋಜನವಾಗಿದೆ. ಇನ್ನು ಕೆಲವು ಕಡೆ ಕೆಲವು ಪುಡಾರಿಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಒಂದೊಂದು ಬಾವಿಗೆ 25–30 ಸಾವಿರ ರೂಪಾಯಿ ಖರ್ಚುಮಾಡಿ ಸುಳ್ಳು ಬರೆದು ಮಾಡಿರತಕ್ಕದ್ದು ಇದೆ.

ಕೆಲವು ಕಡೆಗಳಲ್ಲಿ ರೈತರು 5–6 ಸಾವಿರ ರೂಪಾಯಿ ಸಾಲ ತೆಗೆದುಕೊಂಡು ಬಾವಿ ತೆಗೆದರೂ ಆ ಬಾವಿಯಲ್ಲಿ ಒಂದು ಎಕರೆಗೂ ಸಾಲುವಷ್ಟು ನೀರು ಸಿಗದೆ ಇರುವುದರಿಂದ ಕೊನೆಗೆ ಅವರು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿಕೊಂಡು, ಬೀದಿ ಬಿಕಾರಿಗಳಾಗಿದ್ದಾರೆ. ಸಾಲವನ್ನು ವಾಪಸ್ಸು ಕೊಡುವುದಕ್ಕೆ ಸಾಧ್ಯವಿಲ್ಲದೆ, ಅವರಿಗೆ ಜಫ್ತಿ ನೋಟೀಸ್ ಬಂದಿರತಕ್ಕಂತಹ ಅನೇಕ ನಿದರ್ಶನಗಳು ಇವೆ. ಇಂತಹ ಪರಿಸ್ಥಿತಿ ಹೋಗಬೇಕು. ಸರ್ಕಾರವೇ ಸಾಮೂಹಿಕ ಬಾವಿಗಳನ್ನು ಮತ್ತು ರಿಗ್‌ವೆಲ್‌ಗಳನ್ನು ತೆಗೆಯುವ ಏರ್ಪಾಡನ್ನು ಮಾಡಬೇಕು. ಅಧಿಕಾರಿಗಳು ಮತ್ತು ಖಾಸಗೀ ಜನಗಳನ್ನೊಳಗೊಂಡ ಒಂದು ಸಮಿತಿ ರಚನೆ ಮಾಡಿ ಆ ಸಮಿತಿಯ ವರದಿ ಪ್ರಕಾರ ಬಾವಿಗಳನ್ನು ತೋಡಿಸಿ ಎಲ್ಲಿ ನೀರು ಸುಲಲಿತವಾಗಿ ಬರುತ್ತದೋ ಅಂತಹ ಕಡೆಗಳಲ್ಲಿ ರೈತ ಬೆಳೆ ಬೆಳೆಯುತ್ತಾನೆ. ಅಂತಹ ಸಂದರ್ಭದಲ್ಲಿ ಖರ್ಚು ಮಾಡಿದಂಥ ಹಣವನ್ನು ಅವನಿಂದ ವಸೂಲುಮಾಡುವುದಕ್ಕೆ ಯಾವ ಕಷ್ಟವೂ ಇರುವುದಿಲ್ಲ. ಒಂದು ಪಕ್ಷ ದುರಾದೃಷ್ಟದಿಂದ ಅಂತಹ ಕಡೆಗಳಲ್ಲಿ ನೀರು ಬಾರದೇ ಇದ್ದರೆ ಅವನು ಕೊಡಬೇಕಾಗಿದ್ದ ಹಣವನ್ನು ಮಾಫಿ ಮಾಡಿ ರೈತನನ್ನು ಉದ್ಧಾರಮಾಡಬೇಕೆಂಬ ಸಲಹೆಯನ್ನು ನಾನು ಕೊಡುತ್ತೇನೆ. ನಾಗಮಂಗಲ ತಾಲ್ಲೂಕಿನ ಜನರಿಗೆ ಕಳೆದ 20 ವರ್ಷಗಳಿಂದಲೂ ಈ ವಿಚಾರದಲ್ಲಿ ಏನು ಕೆಲಸವೂ ಆಗಿಲ್ಲ. ಚುನಾವಣೆಗಳ ಕಾಲದಲ್ಲಿ ಹಿಂದಿದ್ದ ಸರ್ಕಾರ ಹೇಮಾವತಿ ಹೊಳೆಯಿಂದ ನಾಗಮಂಗಲಕ್ಕೆ ನೀರು ಬರುತ್ತದೆಂದು ಹೇಳಿತ್ತು. ನಮ್ಮ ತಾಲ್ಲೂಕಿನಿಂದ ಜೀಪುಗಳು ಓಡಾಡಿ ಇನ್ನೇನು ಜನಗಳಿಗೆ ನೀರು ಬರುತ್ತದೆ ಎಂದು ನಂಬಿಸಿ, ಸುಳ್ಳು ಹೇಳಿದ್ದು ಆಯಿತು. ಆದರೆ ಅದು ಇಲ್ಲಿಯವರೆಗೂ ಕಾರ್ಯಗತವಾಗಲಿಲ್ಲ. ಲೋಕೋಪಯೋಗಿ ಶಾಖಾ ಮಂತ್ರಿಗಳಾಗಿರತಕ್ಕ ಮಾನ್ಯ ಶ್ರೀ ಚನ್ನಬಸಪ್ಪನವರು ಖಡಾಖಂಡಿತವಾಗಿ ಮಾತನಾಡುವವರು. ಅವರಿಗೆ ಈ ವಿಚಾರದಲ್ಲಿ ಚೆನ್ನಾಗಿ ಅನುಭವವಾಗಿದೆ. ಮಂತ್ರಿಗಳು ಯಾರೇ ಆಗಲಿ ಅವರು ಈ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ನಮ್ಮ ಜನಗಳಿಗೆ ಕೊಡಬೇಕು. ಈ ವಿಚಾರದಲ್ಲಿ ಮಂಡ್ಯ ಜಿಲ್ಲೆಯ ರೈತರಿಗೆ ಒಂದು ಅನುಮಾನ ಬಂದಿದೆ. ಹಿಂದೆ ಕೃಷ್ಣರಾಜಸಾಗರವನ್ನು ಕಟ್ಟಿದಾಗ ವಿಶ್ವೇಶ್ವರಯ್ಯ ನಾಲೆಯಿಂದ ಒಂದು ಲಕ್ಷದ ಇಪ್ಪತ್ತು ಸಾವಿರ ಎಕರೆಗೆ ನೀರು ಕೊಡುತ್ತೇವೆಂದು ಹೇಳಿದರು. ಆದರೆ ಇದುವರೆಗೆ ಕೊನೆಯ ಭಾಗದ ರೈತರಿಗೆ ಇನ್ನೂ ಆ ನೀರನ್ನು ಕೊಟ್ಟಿಲ್ಲ. ಇಂತಹ ಪರಿಸ್ಥಿತಿ ಇರುವಾಗ ಹಾರಂಗಿ ಕಬಿನಿ ಕಂಬದಕಡ ಮತ್ತು ಹೇಮಾವತಿ ಈ ಮೂರು ಕಡೆಗಳಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಾಣಮಾಡುವ ಕಾರ್ಯ ಈಗ ಪ್ರಾರಂಭವಾಗಿದೆ. ಮತ್ತೆ ಇದರ ಜೊತೆಗೆ ಮಾನ್ಯ ಶ್ರೀ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಎಗಚಿ ನೀರನ್ನು ವಾಣೀವಿಲಾಸ ಸಾಗರಕ್ಕೆ ಹರಿಯುವಂತೆ ವ್ಯವಸ್ಥೆ ಮಾಡಿದ್ದಾರೆ. ಇದರಿಂದ ಮಂಡ್ಯಾ ಜಿಲ್ಲೆಯಲ್ಲಿರುವ ಜನಗಳ ಗತಿ ಏನಾಗುತ್ತದೆ ಎಂಬುದನ್ನು ಸರ್ಕಾರ ಯೋಚನೆ ಮಾಡಿದೆಯೇ ಎಂದು ಈ ಸಂದರ್ಭದಲ್ಲಿ ನಾನು ಪ್ರಶ್ನೆ ಮಾಡಬೇಕಾಗಿದೆ. ನಾಗಮಂಗಲ ತಾಲ್ಲೂಕಿಗೆ ಗೊರೂರು ಅಣೆಕಟ್ಟಿನಿಂದ ನೀರು ಬರುವುದಕ್ಕೆ ಸಾಧ್ಯವಿದೆಯೇ ಇಲ್ಲವೇ ಎನ್ನುವ ವಿಚಾರವನ್ನು ಆದಷ್ಟು ಬೇಗ ಸರ್ಕಾರ ಯೋಚನೆ ಮಾಡಿ ಜನಗಳಿಗೆ ತಿಳಿಸಬೇಕು. ಅಲ್ಲಿಯವರು ಈಗಾಗಲೇ ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ಆದ್ದರಿಂದ ಈ ಯೋಜನೆ ಸರ್ಕಾರಕ್ಕೆ ಸಾಧ್ಯವಿಲ್ಲವೆನ್ನುವ ಮಾತನ್ನು ನಮ್ಮ ರೈತರು ಒಪ್ಪುವುದಿಲ್ಲ. ನಾನು ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಆದರೆ ನನಗೆ ಬಹಳ ಕಡಿಮೆ ಕಾಲವನ್ನು ಕೊಟ್ಟಿದ್ದಾರೆ. ಭಾಷಣದ ಮಧ್ಯೆ ನಾನು ನಿಲ್ಲಿಸಿದರೆ, ನನ್ನ ಅಭಿಪ್ರಾಯಗಳನ್ನು ಪೂರ್ತಿಯಾಗಿ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ಸ್ವಲ್ಪ ಉದಾರಮನಸ್ಸಿನಿಂದ ಕೆಲವಾರು ವಿಷಯಗಳನ್ನು ಹೇಳುವುದಕ್ಕಾದರೂ ಕಾಲಾವಕಾಶವನ್ನು ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು.—ಆ ರೀತಿ ಹೆಚ್ಚಿಗೆ ಕಾಲಾವಕಾಶವನ್ನು ಮಾನ್ಯ ಸದಸ್ಯರೊಬ್ಬರಿಗೆ ಮಾಡಿಕೊಟ್ಟರೆ, ಬೇರೆ ಸದಸ್ಯರು ಮಾತನಾಡುವುದಕ್ಕೆ ಕಾಲಾವಕಾಶ ಸಿಗುವುದಿಲ್ಲ.

ಶ್ರೀ ಟಿ. ಎನ್. ಮಾದಪ್ಪಗೌಡ.—ಆದ್ದರಿಂದ ನನ್ನ ಭಾಷಣವನ್ನು ಜಾಗ್ರತೆಯಾಗಿ ಮುಗಿಸುತ್ತೇನೆ ಗೊರೂರು ಅಣೆಕಟ್ಟಿನಿಂದ ಕೃಷ್ಣರಾಜಸಾಗರಕ್ಕೆ ಎಷ್ಟು ನೀರು ಹೋಗಬೇಕು, ಮದ್ರಾಸ್ ಸರ್ಕಾರದ ಒಪ್ಪಂದದ ಪ್ರಕಾರ ಅವರಿಗೆ ಎಷ್ಟು ಪಾಲು ಹೋಗಬೇಕು, ನಮಗೆ ಬರುವ ನೀರೆಷ್ಟು, ಅದು ನಾಗಮಂಗಲಕ್ಕೆ ಬರುತ್ತದೋ ಇಲ್ಲವೋ ಎಂಬುದನ್ನು ಸರ್ಕಾರದವರು ಕೂಲಂಕಷವಾಗಿ ಹೇಳಬೇಕು. ಅದು ಬರುವ ಕಾಲಕ್ಕೆ ಅದು ಬರಲಿ, ಆದರೆ ನಮಗೆ ರಿಗ್‌ವೆಲ್ಸ್ ಮತ್ತು ಸಾಮೂಹಿಕ

(ಶ್ರೀ ಟಿ. ಎನ್. ಮಾದಪ್ಪಗೌಡ)

ಬಾವಿಗಳ ಬಗ್ಗೆ ನಾನು ಹೇಳಿದ ರೀತಿಯಲ್ಲಿ, ಒಂದು ಕೋಟಿ ಅಥವಾ ಎರಡು ಕೋಟಿ ರೂಪಾಯಿಗಳನ್ನು ಒಂದೊಂದು ಸಬ್ ಡಿವಿಷನ್ನಿಗೆ ಇಟ್ಟು ರಿಲೀಫ್ ವರ್ಕ್ಸ್‌ನ್ನು ಬೇಕಾದರೆ ನಿಲ್ಲಿಸಿ, ತಕ್ಕ ಕ್ರಮಗಳನ್ನು ತೆಗೆದುಕೊಂಡರೆ ರೈತರಿಗೆ ಬಹಳ ಅನುಕೂಲವಾಗುತ್ತದೆ.

ಕಳೆದ 7 ವರ್ಷಗಳಿಂದ ಕಂದಾಯ ಕೊಡದೇ ಇರುವ ರೈತರಿಗೆ ಕಂದಾಯ ಮಾಫಿಯಾಗದೆ, ಅದರ ವಸೂಲಾತಿ ಮುಂದಕ್ಕೆ ಹೋಯಿತು ಎಂಬುದಾಗಿ ಹೇಳುವುದರಿಂದ ಇವತ್ತು ಅವರಸ್ಥಿತಿ ಬಹಳ ದುಸ್ಥಿತಿಗೆ ಬಂದಿದೆ. ಇಲ್ಲಿಯವರೆಗೆ ವಸೂಲಾಗದೇ ಇರತಕ್ಕ ಕಂದಾಯವನ್ನು ಮಾಫಿ ಮಾಡಬೇಕು. ಇನ್ನು ಮುಂದೆ ಮಳೆಬೆಳೆ ಚೆನ್ನಾಗಿ ಆದರೆ ಕಂದಾಯ ವಸೂಲು ಮಾಡಬೇಕು, ಇಲ್ಲದೇ ಹೋದರೆ ನಿಲ್ಲಿಸಬೇಕೆಂದು ನಾನು ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಇಲ್ಲಿ ಒಂದು ಪಕ್ಷ ನೀರಾವರಿ ಕಾಮಗಾರಿಗಳನ್ನು ಏನು ಮಾಡುವುದಕ್ಕೆ ಆಗದೇ ಹೋದರೆ ರೈತನ ಬೇಡಿಕೆಗಳ ಪೈಕಿ ಅನೇಕ ಬೇಡಿಕೆಗಳನ್ನು ಇತ್ಯರ್ಥಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಶ್ರೀ ರಾಮೇಗೌಡರು ಮಾತನಾಡುತ್ತಾ ಹೈನು ಮತ್ತು ರೇಷ್ಮೆಗೆ ಸಹಾಯ ಮಾಡಬೇಕೆಂದು ಒಂದು ಮಾತನ್ನು ಹೇಳಿದರು ನಮ್ಮ ತಾಲ್ಲೂಕಿನಲ್ಲಿ ಕುರಿಗಳನ್ನು ಸಾಕುವುದಕ್ಕೆ ಉತ್ತಮವಾದ ಅವಕಾಶವಿರುವುದರಿಂದ ಒಂದೊಂದು ಬಡ ಸಂಸಾರಕ್ಕೆ 20–25 ಕುರಿಗಳನ್ನು ಸರ್ಕಾರದವರು ಪುಗಸಟ್ಟೆಯಾಗಿ ಒದಗಿಸುವ ವ್ಯವಸ್ಥೆ ಮಾಡಬೇಕು. ಆ ಮೂಲಕ ರೈತರ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದಕ್ಕೆ ಸರ್ಕಾರದವರು ತಕ್ಕ ನೆರವನ್ನು ಕೊಡಬೇಕು.

ಇನ್ನು ನಿರುದ್ಯೋಗ ನಿವಾರಣೆಗೆ ತೀವ್ರ ಯತ್ನ ಮಾಡಬೇಕು. ಇಲ್ಲದೆ ಹೋದರೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲ. ಒಂದೇ ಸಮನೆ 7 ವರ್ಷದ ಬರಗಾಲದಿಂದ ಈಗ ಪ್ರತಿಯೊಬ್ಬ ಮನೆಯವರೂ ಕೆಲಸ ಹುಡುಕಿಕೊಂಡು ಬರುವ ಒಂದು ಪ್ರಮೇಯ ಬಂದಿದೆ. ನಮ್ಮ ಕೈಗಾರಿಕಾ ಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರ ಮನೆಯ ಮುಂದೆ ಶಾಸಕರಾದ ನಮ್ಮ ರೂಂಗಳಿಗೆ ದಿವಸಕ್ಕೆ 200-250ಕ್ಕೆ ಕಡಿಮೆ ಇಲ್ಲದೆ ಜನರು ಕೆಲಸಕ್ಕಾಗಿ ಬೇಡಿಕೊಂಡು ಬರುತ್ತಿದ್ದಾರೆ. ಇಂತಹ ಜನಗಳಿಗೆ ಉದ್ಯೋಗ ಕಲ್ಪಿಸುವ ದೃಷ್ಟಿಯಿಂದ ಏನಾದರೂ ಒಂದು ವ್ಯವಸ್ಥೆಮಾಡಿ ಹೊಸ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಅವಕಾಶವಿದ್ದರೆ ಅದನ್ನು ಮಾಡಬೇಕು. ಇನ್ನು ನಾನು ಹೆಚ್ಚಿಗೆ ಮಾತನಾಡಿದರೆ ತಮಗೆ ಬೇಜಾರು ಆಗುತ್ತದೆಂದು ತಿಳಿದು ಮತ್ತೆ ಬೇರೆ ಅವಕಾಶವನ್ನು ತೆಗೆದುಕೊಂಡು ಮಾತನಾಡುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರಂ).—ಗೌರವಾನ್ವಿತ ಸಭಾಧ್ಯಕ್ಷಿಣಿಯವರೇ ತಾರೀಖು 24–3–72ರಂದು ಈ ಸದನದಲ್ಲಿ ರಾಜ್ಯಪಾಲರು ಮಾಡಿದಂಥ ಭಾಷಣಕ್ಕೆ ವಂದನೆಯನ್ನು ಅರ್ಪಿಸತಕ್ಕ ನಿರ್ಣಯದ ವಿಷಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬೇಕೆಂದು ಆಶೆಪಡುತ್ತೇನೆ. ಈಗ ರಾಜ್ಯಪಾಲರ ಭಾಷಣವೇನಿದೆಯೋ ಇದು ವಂದನೆಗೆ ಅರ್ಹವಾದಂಥಾದ್ದು ಅಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೂ ನಾನು ಈ ಚರ್ಚೆಯಲ್ಲಿ ಭಾಗಿಯಾಗಿ ಕೆಲವು ವಿಷಯಗಳನ್ನು ಪ್ರಸ್ತಾಪಮಾಡಲು ಇಚ್ಛಿಸುತ್ತೇನೆ. ಈ ಸದನದ ಗೌರವಾನ್ವಿತ ಮಾನ್ಯ ಸದಸ್ಯರು ವಂದನಾ ನಿರ್ಣಯದ ಮೇಲೆ ಚರ್ಚೆಮಾಡಿ ಸಲಹಾರೂಪವಾಗಿ ಕೊಟ್ಟಿರತಕ್ಕ ಅಂಶಗಳನ್ನು ಸರ್ಕಾರದ ಮೇಲ್ವಿಚಾರಣೆಯನ್ನು ವಹಿಸಿರತಕ್ಕ ಮಾನ್ಯ ಸಚಿವರು ಹಾಗೂ ಇಲಾಖೆಯ ಅಧಿಕಾರಿಗಳು ಸರ್ವಶಕ್ತಿಯಿಂದ ಕೇಳಿ ಅದನ್ನು ಸುವ್ಯವಸ್ಥಿತ ರೀತಿಯಲ್ಲಿ ಮಾಡುವುದಕ್ಕೆ ಕಾರ್ಯೋನ್ಮುಖರಾದರೆ ಆಗ ಸಫಲವಾಗುತ್ತದೆ. ಈ ಪ್ರಯೋಜನ ಎರಡು ದಿಶೆಗಳಲ್ಲಿಯೂ ಆಗಲಿ ಎಂಬುದಾಗಿ ಆಶಿಸಿ ನನ್ನ ಮಾತನ್ನು ಮುಂದುವರಿಸುತ್ತೇನೆ. ಈ ಸಂದರ್ಭದಲ್ಲಿ ನನಗಂತೂ ಒಂದು ಸಂದೇಹ ಈಗ ನಮ್ಮ ಮುಂದೆ ಏನು ಹೊಸ ಸರ್ಕಾರ ರಚನೆಯಾಗಿದೆಯೋ ಅದು ಸಮರ್ಥಶಾಲಿಯ ಸರ್ಕಾರವೇ ಎಂಬ ಶಂಕೆ ನನ್ನಲ್ಲಿದೆ.

ಒಬ್ಬ ಸದಸ್ಯರು ಒಬ್ಬ ಮಂತ್ರಿಯ ಬಗ್ಗೆ ಒಂದು ವಿಷಯ ಏನು ಪ್ರಸ್ತಾಪ ಮಾಡಿದ್ದಾರೆ ಎಂದರೆ ಹಿಂದೆ ಮಂತ್ರಿಗಳಾಗಿದ್ದಾಗ ಅವರಿಗೆ ಕೊಡಲಾಗಿದ್ದ ಮರದ ಸಾಮಾನುಗಳನ್ನು ಅಂದರೆ ಮೇಜು ಕುರ್ಚಿ ಇತ್ಯಾದಿ ಸಾಮಾನುಗಳನ್ನು ಹೊತ್ತುಕೊಂಡು ಹೋದಂಥವರನ್ನು ಮತ್ತೆ ಮಂತ್ರಿ ಮಂಡಲಕ್ಕೆ ತೆಗೆದುಕೊಂಡಿದ್ದಾರೆಂದು ಜನರು ಆಡಿಕೊಳ್ಳುತ್ತಿದ್ದಾರೆ ಎಂಬುದಾಗಿ ಹೇಳಿದರು. ಅದೇ ರೀತಿ ಈ ಹಿಂದೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧ ನಡೆಯುತ್ತಿದ್ದ ಕಾಲದಲ್ಲಿ ಯಾರನ್ನು ಭದ್ರತೆಯೊಳಗೆ ಇಡಲಾಗಿತ್ತೋ ಅಂಥವರೊಬ್ಬರನ್ನು ಈಗಿನ ಮಂತ್ರಿ ಮಂಡಲದಲ್ಲಿ ಸೇರಿಸಿಕೊಂಡಿದ್ದಾರೆಂದು ಜನರು ಆಡಿಕೊಳ್ಳುತ್ತಿದ್ದಾರೆ. ಅದೇ ರೀತಿ ಹಿಂದೆ ಇದ್ದ ಮಂತ್ರಿಮಂಡಲದಲ್ಲಿ ಮೋಟಾರ್

ವಾಹನಗಳ ಪೋರ್ಟ್‌ಪೋಲಿಯೋ ಇಟ್ಟುಕೊಂಡು ಜನರಿಗೆ ಬಸ್ಸು, ಛಾಸಿ ಇತ್ಯಾದಿಗಳನ್ನು ಕೊಡತಕ್ಕ ಸಂದರ್ಭದಲ್ಲೂ ಒಂದುಕಾರನ್ನು ಬಕ್ಷೀಸಾಗಿ ಪಡೆದುಕೊಂಡಿದ್ದಂಥ ಒಬ್ಬರನ್ನು ಈಗಿನಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿದ್ದಾರೆಂದು ಜನರು ಪಿಸುಗುಟ್ಟುತ್ತಿದ್ದಾರೆ. ಇಂಥ ಜನರನ್ನು ಒಳಗೊಂಡಿರತಕ್ಕ ಮಂತ್ರಿಮಂಡಲದಲ್ಲಿ ಕೆಲವು ಜನರು ಏನು ತಾವು ಗಾಂಧೀ ಖಟ್ಟಾವಾದಿಗಳೆಂದು ಹೇಳಿಕೊಳ್ಳುತ್ತಿದ್ದಾರೋ ಅಂಥ ಆ ಹಿರಿಯರು ಎದುರುಪಕ್ಷದಲ್ಲಿ ಕುಳಿತಿರುವುದನ್ನು ನೋಡಿದರೆ ನನಗೆ ಕರುಳನ್ನು ಕಿತ್ತುಕೊಂಡ ಹಾಗೆ ಆಗುತ್ತಿದೆ. ಅಂಥಾ ಖಟ್ಟಾವಾದಿಗಳಾಗಿರತಕ್ಕ ಆ ಮಂದಿ ಇಂದು ಇಂಥ ಒಂದು ಸರ್ಕಾರವನ್ನು ಸ್ಥಾಪನೆ ಮಾಡಿದ್ದಾರೆ. ಆದರೆ ದೇಶದ ಜನತೆಯ ದೃಷ್ಟಿಯಲ್ಲಿ ಈ ಮಂತ್ರಿಮಂಡಲ ಒಂದು ಶಂಕೆಗೆ ಒಳಪಟ್ಟಿದ್ದೇ ಆಗಿದೆ. ಇಂಥಾ ಶಂಕೆಗೆ ಒಳಪಟ್ಟಿರತಕ್ಕ ಮಂತ್ರಿಮಂಡಲ ರಾಜ್ಯದಲ್ಲಿರತಕ್ಕ ಅನೇಕ ದಕ್ಷ ಹಾಗೂ ನಿಸ್ಪೃಹ ಅಧಿಕಾರಿಗಳ ಬಗ್ಗೆ ವರ್ತಿಸುವಾಗ ಅವರಿಗೆ ವಿವೇಕಯುತವಾದ ಸೂಚನೆಗಳನ್ನು ಕೊಡತಕ್ಕ ಕಾಲದಲ್ಲಿ ಇವರು ತಮ್ಮ ಕರ್ತವ್ಯಪರಿಪಾಲನೆಯಲ್ಲಿ ಒಂದು ತತ್ವಪರಿಪಾಲನೆ ಹಾಗೂ ದಕ್ಷತೆಯಿಂದ ವರ್ತಿಸಲು ಇವರಿಗೆ ಶಕ್ತಿ ಇದೆಯೇ ಎಂದು ಪ್ರಶ್ನಿಸುವುದಕ್ಕೂ ಅವಕಾಶವಿದೆ. ನಮ್ಮ ರಾಜ್ಯದಲ್ಲಿ ದಕ್ಷ ಅಧಿಕಾರಿಗಳಿಗೇನೂ ಕೊರತೆಯಿಲ್ಲ. ಆದರೆ ಅವರಲ್ಲಿ ಒಂದು ತಾತ್ಸಾರ ಭಾವನೆ ಮೂಡುವುದಕ್ಕೆ ಈ ರಾಜಕಾರಣಿಗಳೇ ಮೂಲಕಾರಣ ಎಂಬುದು ನನ್ನ ಅಭಿಮತ. ಯಾವ ರಾಜ್ಯದಲ್ಲಿಯೇ ಆಗಲಿ ದಕ್ಷರಾದಂಥ ನಿಸ್ಪೃಹ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡಬೇಕಾದ್ದು ಎಲ್ಲಾ ನಾಗರೀಕ ಸರ್ಕಾರಗಳ ಆದ್ಯ ಕರ್ತವ್ಯ. ಈ ಸಂದರ್ಭದಲ್ಲಿ ನಾನು ಅಧ್ಯಕ್ಷರ ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಇವರಿಗೆ ಬೇಕಾದ ಕೆಲವು ಅಧಿಕಾರಿಗಳನ್ನು ತಂದು ಒಳ್ಳೇ ಆಡಳಿತದಲ್ಲಿ ಅರಿತು ನುರಿತಂಥ ಅಧಿಕಾರಿಗಳ ಮೇಲೆ ಹಾಕದಿರಲಿ, ದಕ್ಷ ಅಧಿಕಾರಿಗಳಿಗೆ ಪ್ರೋತ್ಸಾಹ ದೊರೆಯಲಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರಲ್ಲಿ ಮುಖ್ಯವಾಗಿ ನಾವು ಗಮನಿಸಬೇಕಾದ್ದು ರಾಜ್ಯದ ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಸಬೇಕು ಹಾಗೆ ಬೆಳೆಸಿದ ಸಂಪನ್ಮೂಲಗಳನ್ನು ಮಂತ್ರಿಗಳಾದವರು ತಮ್ಮ ಸ್ವಾರ್ಥಕ್ಕೆ ಬಳಸದೆ ಅವುಗಳನ್ನು ದೇಶದ ಕಲ್ಯಾಣಕ್ಕೆ ಬಳಸುವಂತೆ ಮಾಡಬೇಕು. ಈ ದಿಶೆಯಲ್ಲಿ ಅಧಿಕಾರಿಗಳಿಂದಲೂ ಸ್ವಾರ್ಥಸಾಧನೆಗೆ ಅವಕಾಶಕೊಡಬಾರದೆಂದೂ ಅಧಿಕಾರಿಗಳ ಬಗ್ಗೆ ಅಷ್ಟು ನಿಗಾ ಇಡಬೇಕೆಂದೂ ಹೇಳಿ ನಾನು ಇನ್ನು ಬಹಳ ಪ್ರಾಮುಖ್ಯವಾದ ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ.

ಪ್ರಾಮುಖ್ಯವಾಗಿ ಯಾವ ರಾಜ್ಯದಲ್ಲೇ ಆಗಲಿ ಪ್ರಜೆಗಳು ಸುಖ ಸಂತೋಷಗಳಿಂದ ಜೀವನ ನಡೆಸಬೇಕಾಗಿದ್ದರೆ ಅಂಥಾ ರಾಜ್ಯದಲ್ಲಿ ವಿದ್ಯಾಸಂಸ್ಥೆಗಳು ಬಹಳ ಹೆಚ್ಚಿನ ಶ್ರದ್ಧೆಯಿಂದ ಕೆಲಸ ಮಾಡಬೇಕಾಗುತ್ತದೆ. ಗ್ರಾಮಾಂತರಪ್ರದೇಶಗಳಲ್ಲಿರತಕ್ಕ ಮಕ್ಕಳಿಗೆ ವಿದ್ಯಾಭ್ಯಾಸದಲ್ಲೂ ಅದರಲ್ಲೂ ತತ್ರಾಪಿ ಪ್ರೌಢವಿದ್ಯಾಭ್ಯಾಸದಲ್ಲಿ ಒಂದು ಹೆಚ್ಚಿನ ಮಟ್ಟದಲ್ಲಿ ಸೌಕರ್ಯಗಳನ್ನು ಕಲ್ಪಿಸಬೇಕಾದ್ದು ಅತ್ಯವಶ್ಯಕ. ಹಿಂದೆ ಈ ಒಂದು ಉದ್ದೇಶ ಸಾಧನೆಗಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಸೊಸೈಟಿಗಳನ್ನು ಸ್ಥಾಪನೆ ಮಾಡಲಾಯಿತು. ಆಗ ಗ್ರಾಮಾಂತರ ಪ್ರದೇಶಗಳಲ್ಲಿ ತೆರೆಯತಕ್ಕ ಪ್ರೌಢವಿದ್ಯಾಶಾಲೆಗಳನ್ನು ಈ ಸೊಸೈಟಿಗಳವರು ಮೂರು ವರ್ಷಗಳ ಕಾಲ ನಡೆಸಬೇಕು ಆನಂತರ ಅವರಿಗೆ ಗ್ರಾಂಟ್ ಕೊಡಲಾಗುತ್ತೆಂದು ಒಂದು ರೂಲನ್ನು ಮಾಡಿದ್ದರು. ಅದನ್ನು ಈಗ 5 ವರ್ಷಗಳಿಗೆ ಬದಲಾಯಿಸಿದ್ದಾರೆ. ಇದರಿಂದ ಆ ಸೊಸೈಟಿಗಳಿಗೆ ಕೆಲಸ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಆದ್ದರಿಂದ ವಿದ್ಯಾಮಂತ್ರಿಗಳು ಗ್ರಾಮಾಂತರ ಪ್ರದೇಶಕ್ಕೆ ಈ ವಿದ್ಯಾಭ್ಯಾಸದ ವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡುತ್ತಾರೆಂದು ನಂಬಿದ್ದೇನೆ. ಅಲ್ಲದೆ ಈ ಅವಧಿಯನ್ನು ಮೊದಲಿದ್ದಂತೆ ಮಾರ್ಪಾಡು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಜಿಲ್ಲಾಪರಿಷತ್ತುಗಳನ್ನು ಪುನರುಜ್ಜೀವನಗೊಳಿಸತಕ್ಕ ಬಗ್ಗೆ ಅನೇಕ ಸಮಿತಿಗಳನ್ನು ಮಾಡಿ ಅವುಗಳು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದ ಮುಂದೆ ಇಡಲಾಗಿದೆ. ಅಧಿಕಾರ ವಿಕೇಂದ್ರೀಕರಣ ಮಾಡತಕ್ಕ ಉದ್ದೇಶದಿಂದಲೂ ಮತ್ತು ಮಾನ್ಯ ಮಂತ್ರಿಗಳಿಗೆ ಕೆಲಸ ಸ್ವಲ್ಪ ಹಗುರವಾಗತಕ್ಕ ದೃಷ್ಟಿಯಿಂದಲೂ ಮತ್ತು ಜನತೆಗೆ ಹೆಚ್ಚಿನ ಸೌಕರ್ಯಗಳು ಒದಗತಕ್ಕ ದೃಷ್ಟಿಯಿಂದಲೂ ಆದಷ್ಟು ಬೇಗ ಈ ಜಿಲ್ಲಾ ಪರಿಷತ್ತುಗಳನ್ನು ಮತ್ತೆ ಅಸ್ತಿತ್ವಕ್ಕೆ ತರಬೇಕಾದ್ದು ಅತ್ಯಗತ್ಯ ಎಂದು ಹೇಳುತ್ತೇನೆ. ಹೀಗೇ ಜನರಿಗೆ ಇನ್ನೂ ಅನೇಕ ಆಶೋತ್ತರಗಳನ್ನು ಇಂದಿನ ಸರ್ಕಾರ ನೀಡಿದೆ. ದೇಶದಲ್ಲಿರತಕ್ಕ ಬಡತನ ನಿರುದ್ಯೋಗಗಳನ್ನು ನಿವಾರಣೆ ಮಾಡುತ್ತೇವೆಂದು ಸಾರಿದ್ದಾರೆ. ಆ ಮಾತುಗಳನ್ನು ಇವರು ಸತ್ಯದ ನಾಲಿಗೆಯಿಂದ ಸಾರಿದ್ದಾರೆ. ಆದಕ್ಕೆ ಈಗ ಮತ್ತಷ್ಟು ಜೇನುತುಪ್ಪ ಇವುಗಳನ್ನು ಸವರಿ ದೇಶದಲ್ಲಿ ಉದ್ಯೋಗವಿಲ್ಲದೆ ಅಲೆದಾಡತಕ್ಕ ವಿದ್ಯಾವಂತ ನಿರುದ್ಯೋಗಿಗಳಿಗೆ ಮೊದಲು ಉದ್ಯೋಗ ದೊರೆಯತಕ್ಕ ಏರ್ಪಾಡನ್ನು ಮಾಡಬೇಕೆಂದು ಮಾನ್ಯ ವಿದ್ಯಾಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಇನ್ನು ಆರೋಗ್ಯ ಶಾಖೆಯ ವಿಚಾರ ಹೇಳಬೇಕೆಂದರೆ ಎಷ್ಟೋ ಜನ ಹೆಣ್ಣು ಮಕ್ಕಳೂ ಗಂಡು ಮಕ್ಕಳೂ ವಿಶೇಷವಾಗಿ ಹಣವನ್ನು ವೆಚ್ಚಮಾಡಿ ಈ ಬಾಬಿನಲ್ಲಿ ತರಬೇತು ಪಡೆದುಕೊಂಡಿದ್ದರೂ ಅವರಿಗೆ ಉದ್ಯೋಗ ದೊರೆಯದೇ ಬೀದಿಗಳಲ್ಲಿ ಅಲೆದಾಡುತ್ತಿದ್ದಾರೆ. ಅವರ ಅಂಕೆ ಸಂಖ್ಯೆಗಳನ್ನು ಕೂಡಲೇ ಶೇಖರಿಸಿ ಅವರಿಗೆ ಮೊದಲು ಉದ್ಯೋಗ ದೊರಕಿಸುವುದಕ್ಕೆ ಏರ್ಪಾಡನ್ನು ಮಾಡಬೇಕು.

ಆರೋಗ್ಯ ಇಲಾಖೆಯಲ್ಲಿ ಹೆಚ್ಚಿನ ನೈರ್ಮಲ್ಯ ಹಾಗೂ ಅಚ್ಚುಕಟ್ಟುಗಳು ಇರಬೇಕಾದರೆ ಇಂಥ ಇಲಾಖೆಗೆ ಹೆಚ್ಚಿಗೆ ಹೆಣ್ಣುಮಕ್ಕಳನ್ನು ನೇಮಿಸುವುದು ಒಳ್ಳೆಯದು. ಒಂದು ಗೃಹಕೃತ್ಯದ ವಿಚಾರ ತೆಗೆದುಕೊಳ್ಳಿ. ಅಲ್ಲಿ ಅವರ ಕೈವಾಡ ಇರುವುದರಿಂದ ಮನೆ ಎಷ್ಟು ಶುಚಿಯಾಗಿರುತ್ತದೆ. ಹಾಗೇ ಇಲ್ಲಿಯೂ ಈ ಇಲಾಖೆ ಅವರ ಕೈಲಿದ್ದರೆ ಬಹಳ ಚೆನ್ನಾಗಿರುತ್ತದೆ. ಹೀಗೆಂದ ಮಾತ್ರಕ್ಕೆ ಆ ಇಲಾಖೆಯಲ್ಲಿರತಕ್ಕ ಗಂಡುವೈದ್ಯರು ಕೋಪಮಾಡಿಕೊಳ್ಳಬಾರದು. ಈ ದಿವಸ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಬಡರೋಗಿಗಳ ಗೋಳೇನೆಂಬುದನ್ನು ಮಂತ್ರಿಗಳ್ಯಾರು ತಿಳಿದುಕೊಂಡ ಹಾಗೆ ಕಾಣುವುದಿಲ್ಲ. ಇದರ ನಿಜಾಂಶವೇನು ಎಂಬುದನ್ನು ಅವರು ಪರೀಕ್ಷೆ ಮಾಡಬೇಕಾಗಿದ್ದರೆ ಅವರು ಹಾಲಿ ಇರತಕ್ಕ ಉಡುಪನ್ನು ಬದಲಾಯಿಸಿ ನನ್ನ ಜೊತೆಯಲ್ಲಿ ಬರಲಿ, ಅವರನ್ನು ಜಟಕಾದಲ್ಲಿ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತೇನೆ, ಅಲ್ಲಿ ನೋಡಲಿ, ಇವರಿಗೆ ನಾವು ಹೇಳುತ್ತಿರುವುದೇನೆಂಬುದು ಆಗ ಗೊತ್ತಾಗುತ್ತದೆ. ಆದ್ದರಿಂದ ಒಂದು ಗಂಡು ಹುಲಿಯಾಗಿ ನೋಡಿಕೊಳ್ಳತಕ್ಕಂಥ ಒಬ್ಬ ಹೆಣ್ಣುಮಗಳಿಗೆ ಈ ಇಲಾಖೆಯ ಪೋರ್ಟ್‌ಫೋಲಿಯೋವನ್ನು ಕೊಟ್ಟು ಹಾಲಿ ಇರತಕ್ಕ ಹಿರಿಯರು ಈಚೆಗೆ ಹೊರಟು ಬಂದು ಆ ಹೆಣ್ಣುಮಗಳಿಗೆ ಮಾರ್ಗದರ್ಶನ ಮಾಡಿಸುತ್ತಾ ಅವರು ಭೀಷ್ಮಾಚಾರ್ಯರಂತೆ ಸುಮ್ಮನೆ ಕುಳಿತುಕೊಳ್ಳಲಿ ಎಂದು ನಾನು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮ ದೇಶ ಶ್ರೀರಾಮಚಂದ್ರನು ಹುಟ್ಟಿದಂಥ ದೇಶ. ಒಂದು ದಿನ ಒಬ್ಬ ಮಡಿವಾಳ ಬಟ್ಟೆ ಒಗೆಯತಕ್ಕವನು ರಾವಣಾಸುರನು ಹೊತ್ತುಕೊಂಡು ಹೋಗಿದ್ದಂಥ ಹೆಂಡತಿಯನ್ನು ರಾಮಚಂದ್ರನು ಮತ್ತೆ ಕರೆದುಕೊಂಡು ಬಂದಿದ್ದಾನೆಂದು ಹೇಳಿದ್ದರಿಂದ ಶ್ರೀರಾಮನು ಸೀತಾಮಾತೆಯನ್ನು ಅಗ್ನಿ ಪರೀಕ್ಷೆಗೆ ಗುರಿಮಾಡಿದ, ಕಾರಣ ಅವನ ಮೇಲೆ ಅಂಥ ಒಂದು ಆಪಾದನೆ ಬಂದಿತ್ತು. ಅದನ್ನು ಸಾಬೀತು ಮಾಡಿಕೊಳ್ಳಲು ತಾನು ಸೀತಾದೇವಿಯನ್ನು ಅಗ್ನಿಪರೀಕ್ಷೆಗೆ ಗುರಿಮಾಡಿದ. ಆದರೆ ನಾನೇನು ಈ ಹಿಂದೆ ಕೆಲವು ಮಂತ್ರಿಗಳ ಬಗ್ಗೆ ಜನರು ಕೆಲವು ಆಪಾದನೆಗಳನ್ನು ಮಾಡುತ್ತಿದ್ದಾರೆಂದು ಹೇಳಿದೆ ಅಂಥ ಜನರ ಬಗ್ಗೆ ನಮ್ಮ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟು ಅವರ ಆ ಹೇಳಿಕೆಯೇ ಒಂದು ಅಗ್ನಿಕುಂಡವಾಗಿ ಅದರ ಪರೀಕ್ಷೆಯಲ್ಲಿ ಅವರು ಜಯಶಾಲಿಗಳಾಗಿ ಬರುವಂತಾಗಲೆಂದು ಆಶಿಸುತ್ತೇನೆ. ಭಗವಂತನು ಮುಖ್ಯಮಂತ್ರಿಗಳಿಗೆ ಇಂಥ ಒಂದು ಸಾಮರ್ಥ್ಯವನ್ನು ಕೊಡಲೆಂದು ಹಾರೈಸುತ್ತೇನೆ.

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಬಾವಿಗಳಲ್ಲಿ ಎಷ್ಟೋ ಕಸ ಉಪ್ಪು ನೀರು ಬಿದ್ದಿದೆ. ಅಲ್ಲಿ ಸೀನೀರಿನ ಬಾವಿ ಆಗಬೇಕಾದರೆ ಅದಕ್ಕೆ ಜಿಲ್ಲಾಧಿಕಾರಿಗಳಿಂದ ಪ್ರತ್ಯೇಕ ಆಜ್ಞೆಯಾಗಬೇಕಂತೆ. ಅಲ್ಲದೆ ಒಬ್ಬರ ಕೈಲಿ ಇರಬೇಕಾದ ಆಡಳಿತ ಹಂಚಿಹೋಗಿ 3-4 ಜನ ಮಂತ್ರಿಗಳ ಕೈಸೇರಿದೆ. ಇನ್ನು ಯಾರಿಗೆ ರೇಷ್ಮೆ ವ್ಯವಹಾರದಲ್ಲಿ ಏನೇನೂ ಅನುಭವ ಇಲ್ಲವೋ ಅಂಥವರು ಅದಕ್ಕೆ ಮಂತ್ರಿಗಳು. ಅವರಿಗೆ ಹಿಪ್ಪಲಿ ನೇರಳೆ ಎಂದರೇನು ಎಂಬುದು ಗೊತ್ತಿಲ್ಲ.

2-30 P.M.

ನನ್ನ ಕೈ ಜೋಡಿಸಿ ಹೇಳುತ್ತೇನೆ, ಈ ರಾಜ್ಯ ಮಾದರೀ ರಾಜ್ಯವಾಗಬೇಕು. ನೀವು ಗಾಂಧಿವಾದಿಗಳಾಗಿದ್ದೀರಿ, ಈಗಲೂ ನಮ್ಮ ಸಭಾನಾಯಕರು ರಾಜ್ಯಕ್ಕೆ ಮಾದರಿಯಾಗಿದ್ದಾರೆ. ಚುನಾವಣೆಗೆ ನಿಲ್ಲುವುದಿಲ್ಲ, ಮಾದರಿಯಾಗುತ್ತೇನೆಂದು ತಾವು ಹೇಳಿದ್ದಿರಿ. ಆದರೆ ತಾವು ಪಕ್ಷದ ನಾಯಕರು ಆಗಲೇ ಬೇಕು ಎಂದು ಕೇಂದ್ರದಿಂದ ಅಪ್ಪಣೆ ಬಂದ ಮೇಲೆ ತಾವು ಮುಖ್ಯಮಂತ್ರಿಯಾಗಲು ಒಪ್ಪಿದ್ದೀರಿ. ಈ ರಾಜ್ಯಕ್ಕೆ ಒಬ್ಬ ಹರಿಜನರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ನಮ್ಮ ನಾಯಕರು ಮಾದರಿಯಾಗಬೇಕು, ಅದು ತಮ್ಮ ಮನಸ್ಸಿನಲ್ಲಿಲ್ಲದಿದ್ದರೆ ಒಬ್ಬ ಹೆಣ್ಣು ಮಗಳನ್ನು ಮುಖ್ಯಮಂತ್ರಿಯಾಗಿ ಮಾಡಿದರೆ ಆಗ ನಮ್ಮ ರಾಜ್ಯ ಮಾದರಿ ರಾಜ್ಯವಾಗಬಹುದು. ಬಡತನ ನಿವಾರಣೆಯಾಗಬೇಕು. ನಿರುದ್ಯೋಗ ನಿವಾರಣೆಯಾಗಬೇಕು. ಈ ಸಂದರ್ಭದಲ್ಲಿ ಬಡತನ ನೀಗುವುದಕ್ಕೆ ಸಾಮರ್ಥ್ಯವಿಲ್ಲ, ನಿರುದ್ಯೋಗ ನೀಗವುದಕ್ಕೆ ಸಾಮರ್ಥ್ಯವಿಲ್ಲ ಎಂದು ಕಲುಷಿತ ವಾತಾವರಣ ಉಂಟುಮಾಡಿ

ಪಿಸು ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ ಎಂದು ಕೈ ಜೋಡಿಸಿ ಕೇಳುತ್ತೇನೆ. ನಮ್ಮ ರಾಜ್ಯ ಭಾರತದಲ್ಲೇ ಮಾದರಿಯಾಗಬೇಕು. ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರನ್ನು ಆತ್ಮೀಯವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Smt. C. NAGAMMA KESHAVA MURTHY (Davanagere).—Madam Speaker, first I support the motion that is before the House today. I thank our Governor for placing before us some very progressive programmes regarding agriculture, land reforms, etc.

But, as I went through the para devoted to education and youth welfare programmes, I was really wonder-struck to note that not a mention is made regarding the Pre-Primary education of the child. We plan and think quite a lot and spend crores and crores of rupees towards higher education, while completely neglecting the most important years of a child. This period between 3 and 5 is the most sensitive period during which the achievement of the child is miraculous and marvellous. Psychologists say that grown-up people take 60 years to achieve what a child has achieved in his first five years. A child is our valuable asset and it is our utmost duty to see that he is properly guided during this delicate period.

Of course, in the bigger towns and cities a few private institutions and individuals do run nursery or Kindergarten or Montessori Schools. But they are very expensive and are out of reach of common man. Regarding the villages, except a very few, the nursery education is completely neglected. So it is my sincere request to the Education Department that it should take up this challenge and meet the educational needs of the child between 3 and 5. Now I request the Finance Minister to provide massive aid to the Education Department or to the Local Bodies to set up nursery schools both in rural and urban areas.

Madam Speaker, the other important problem which, if neglected, shall upset all our plans, projects and programmes is the problem of population control. I am glad to note that five districts in the State have been selected for an intensive Family Palanning Programme. But, what about the other districts ? This problem is equally rampant throughout the State. According to the report of the Bureau of Economics and Statitics, Bangalore, population growth has restrained the per capita income in the State. Though the real income of the State during the years 1956 to 1971 has increased by 73. 4 per cent the per capita income has increased only by 32.3 per cent. This is due to the increase of population by 36 per cent. So the birth boom has curbed the State's growth. Here, I request the Health Minister to plan an intensive State level progromme to check this population growth throughout the State.

Coming to my own Constituency, the problems are too many. Due to the many mills and factories, the labour population is growing day by day. The problems and sufferings of these labourers are quite

(SMT. C. NAGAMMA KÉSHAVA MURTHY)

varying and need to be tackled immediately. One of the foremost problems facing not only the labourers, but also the other citizens of the State is the housing problem. Now the City has become an important, agricultural and educational centre. The population is increasing by leaps and bounds and it has reached the mark of 1 lakh 10 thousand. But the housing problem has become a bottleneck and so the steep rise in rents and prices of sites. All the sites in and around the City are in the hands of persons who neither construct nor dispose of the sites. They just wait and wait to see the increase in the value of sites in the City. Regarding the surrounding lands where new extensions can be developed the rates per acre go up to 20 to 30 thousand rupees. At this rate, even the Municipality feels it highly impossible to buy, develop and sell the sites at low prices to the poorer classes. So, the common man cannot even hope to have a house of his own even after a decade. Here comes the need to form Trust Boards in smaller towns having one lakh population. This will help in expanding the City in a well-planned way.

Facilities like internal transport in Cities like Davanagere shall be a boon to the poorer classes. The common man cannot afford to hire a taxi, an auto or even a jutka to move about within the City limits. So bus service within the City is a necessity. The M.S.R,T.C. should take up this scheme of introducing bus service within the City limits or if it is not possible, the Government should allow the local Municipalities to have their own City Bus Service facility in their towns.

J.J.M. Medical College is one of the private medical colleges in the State. There are too many allegations against private medical colleges in general and the J.J.M. Medical College in particular regarding the admissions, the regarding the management and regarding the misuse of funds. The admissions are made according to the whims and fancies of the fictitious selection committee members. There are no set and fast rules for the selection of students. So, there are allegations regarding admissions and administration. Neither the citizens are happy about this institution nor the students and their parents who pay heavy admission and yearly fees are happy over it. There is no sound relationship between the management of the Association and the governing council and the staff and the students. The Government should probe into the matter and see that an enquiry is made and suitable action is taken to set right the affairs of this institution.

With these words, I would like to once again support the motion that is before the House today and thank the Chair.

SRI N. B. SIRDESAI (Khanapur).—Madam Speaker, I rise to make certain observations on the Address delivered by the Governor of Mysore.

Madam, the Governor has referred to the socio-economic objectives of this Government. I cannot understand what type of socio-economic objective this Government is having and in what way socialism is defined by this Government—whether socialism of the type which the Central Government is having before them or whether this Government is having different types of socialism because socialism is defined in many ways. That is why, unless we understand what type of socialism this Government is intending to have, it is very difficult now to assess at this stage.

I have nothing to say against the inspiring, invincible and dynamic leadership of our Prime Minister Smt. Indiraji Gandhi. But whether the slogans given by Indiraji namely "Garibi Hatao" can be implemented at all and whether it would become fruitful in the near future has to be seen because the principles of democracy are being ignored and neglected and social justice is also denied to the majority of the people. So, how can they implement and bring about socialism? If socialism is to prevail and survive, democracy must survive. In the absence of democracy, socialism will never thrive. So, if social justice is denied to a majority or large section of the people who are putting forth their just, legal and proper demands by democratic ways, then I can definitely say that socialism or socialistic pattern of society will not thrive here.

Madam, by habits and customs and socially, culturally and linguistically the Marathi-speaking area which is called a border area forms an integral part of Maharashtra and we the Marathi-speaking people have been requesting since 1956 to merge our area with Maharashtra, but this, our just request, is being rejected and ignored by this and the Central Governments. If social justice is denied to the Marathi-speaking people, then how can they bring about socialism or socialistic pattern of society? When justice was given by the late Prime Minister Pandit Jawaharlal Nehru to Dadra and Nagarhaveli people and when it has been given recently by our Prime Minister to Meghalaya, Punjab and Haryana, they have respected the wishes of the people there. But I fail to understand why the wishes of the Marathi people which have been expressed by democratic ways are being ignored by both the Governments. We the Marathi people have no hatred against any language or any caste but I think that both the Central Government and this Government are having some sort of animosity against the Marathi people and that is why social justice is being denied to them.

As regards Land Reforms and Revenue Administration, I do not want to say much about the lowering of the ceiling on land holdings because the law is to be suitably amended in the next session. As regards Revenue Administration I have to say much. The work of bringing the record of rights up-to-date and the issue of patta books, the

(SRI N. B. SIRDESAI)

Governor says in his address, will be speeded up. But I would like to point out to you, Madam, and through you to the Minister for Revenue that the record of rights have not been brought up-to-date and they have not issued the patta books as yet. Though the former Minister for Revenue had declared on the floor of this House that this work would be speeded up, upto now it is at standstill. The Governor in his address has also stated that 'in order to expedite the disposal of Government waste lands, Special Assistant Commissioners have been appointed in seven districts.' The Consultative Committees for the disposal of land grant cases were constituted and they were functioning but when the Assembly was dissolved the committees were also dissolved and the distribution of waste lands was not carried further. I would request the Minister for Revenue to constitute these committees as early as possible without wasting even a single minute. The lands which were released by the Revenue Department were rocky lands and unfit for cultivation. Such lands should be taken back and they should request the Forest Department to release some cultivable lands for the landless persons. It is stated in the Governor's Address that 'specific areas will be reserved for Ex-service men and their families to whom it is proposed to grant the lands free of cost.' This should not prove to be a pious hope. They should reserve lands for the disabled Ex-service men and for the families of those who have been killed in action.

As regards Forest, I should like to bring to the notice of the Minister for Forests and Agriculture that by undertaking large-scale plantation of Eucalyptus, Government is being put to a heavy loss. Government is losing much revenue by not undertaking the planting of timber trees. So, Government should stop large scale plantation of Eucalyptus and undertake a plantation programme of fuel and other trees which are used for industrial purposes.

As regards Rural and Urban Water Supply, I would like to bring to the notice of the Government that though some schemes have been sanctioned under it, Government has not commenced those schemes and though the grampanchayats have credited their share of popular contribution, the Government has failed to commence the schemes. In Kanapur, the Town Panchayat has credited its share but the P.W.D. has not yet commenced the work. So, such assurances given by the Government will never be fulfilled without Government making strenuous efforts in that direction.

As regards extending irrigation facilities, I would request the Government to pay much more attention to a Malnad area like Khanapur Taluk. Because the people are Marathi-speaking, the area has been deliberately neglected by the Government and irrigation works have not been sanctioned deliberately though there is dire necessity for irrigation works. I would like to request the Government to conduct

survey work of Malaprabha project area near Asogar village in Khanapur Taluk and complete the irrigation project which will irrigate areas in Bijapur and Belgaum Districts.

Though there is surplus power with the Government it has failed to carry on rural electrification programme. The pace of rural electrification programme in Khanapura Taluk is slow. I do not understand why they have neglected our area though the villagers have come forward to pay 18 per cent minimum income guarantee.

With these words I conclude my speech and thank the Chair.

ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಮಾನ್ಯ ಅಧ್ಯಕ್ಷರೇ, 24-3-72 ರಂದು ಈ ಮನೆಯಲ್ಲಿ ರಾಜ್ಯಪಾಲರು ಮಾಡಿದ ಭಾಷಣದ ಬಗ್ಗೆ ಕೆಲವು ಸೂಚನೆಗಳನ್ನು ಕೊಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಮೊಟ್ಟಮೊದಲು ತಮಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ರಾಜ್ಯಪಾಲರ ಭಾಷಣವು ಪ್ರಗತಿಪರವಾಗಿಲ್ಲದಿರುವುದರಿಂದ, ಅದರಲ್ಲಿ ಅನೇಕ ಸಮಸ್ಯೆಗಳು ಪ್ರಸ್ತಾಪ ಮಾಡಲ್ಪಡದಿರುವುದರಿಂದ ಅದನ್ನು ವಿರೋಧಿಸುತ್ತಾ, ಕೆಲವು ಮಾತುಗಳನ್ನು ಇಲ್ಲ ಸೂಚಿಸಬಯಸುತ್ತೇನೆ. ಮಾನ್ಯ ಅರ್ಥ ಸಚಿವರು ತಮ್ಮ ಭಾಷಣದಲ್ಲಿ ರಾಜ್ಯದ ದೊಡ್ಡ ದೊಡ್ಡ ಸಮಸ್ಯೆಗಳನ್ನು ಆಗು ಹೋಗುಗಳನ್ನು ಸಮಗ್ರವಾಗಿ ಆಳವಾಗಿ ಅರಿತುಕೊಂಡು ಮುಂಬಿನ ಜೂನ್ ತಿಂಗಳಲ್ಲಿ ಆಯ ವ್ಯಯ ಪಟ್ಟಿಯನ್ನು ಮಂಡಿಸುವುದಾಗಿ ತಿಳಿಸಿದ್ದಾರೆ. ಈ ಕಾರಣ ನಾನು ಅಧ್ಯಕ್ಷರ ಮುಖಾಂತರ ನನ್ನ ಮುಖ್ಯ ಸಮಸ್ಯೆಗಳನ್ನು ಸೂಚಿಸ ಬಯಸುತ್ತೇನೆ. ರಾಜ್ಯದಲ್ಲಿ ರಸ್ತೆಗಳು ಮತ್ತು ರಾಷ್ಟ್ರೀಯ ಹೆದ್ದಾರಿಗಳು ಹೇಗೆ ಮುಖ್ಯವೋ ಹಾಗೆಯೇ ರೈಲು ಮಾರ್ಗಗಳೂ ಕೂಡ ಬಹಳ ಮುಖ್ಯವಾದುವು. ನಮ್ಮ ರಾಜ್ಯದಲ್ಲಿ ಅವು ಎಲ್ಲೆಲ್ಲ ಅವಶ್ಯಕವಾಗಿವೆ ಎಂಬುದನ್ನು ಕೇಂದ್ರ ಸರಕಾರಕ್ಕೆ ಸೂಚಿಸಿ ಅದಕ್ಕೆ ಕೇಂದ್ರ ಸರಕಾರದ ಅನುಮತಿ ಪಡೆದು ಆ ರೈಲು ಮಾರ್ಗಗಳನ್ನು ರಚಿಸಲು ಈ ಸಂದರ್ಭದಲ್ಲಿ ಸರಕಾರವನ್ನು ವಿನಂತಿಸುತ್ತೇನೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಕೊಟ್ಟೂರು—ಹರಿಹರ ರಾಯದುರ್ಗ—ಚಿತ್ರದುರ್ಗ ರೈಲ್ ಮಾರ್ಗಗಳು ಆಗಬೇಕೆಂದು ಪಾರ್ಲಿಮೆಂಟಿನಲ್ಲಿ ಸುಮಾರು 20 ವರ್ಷಗಳಿಂದಲೂ ದೀರ್ಘವಾಗಿ ಚರ್ಚಿಸುತ್ತಿದ್ದರೂ ಕೆಲಸವಾಗಿಲ್ಲ. ಆದಕಾರಣ ನಮ್ಮ ಜಿಲ್ಲೆಯವರೇ ಆದ ಮಾನ್ಯ ಅರ್ಥ ಸಚಿವರು ಕೇಂದ್ರ ಸರಕಾರಕ್ಕೆ ಹರಿಹರ—ಕೊಟ್ಟೂರು ರೈಲುಮಾರ್ಗವನ್ನು ಶಿಫಾರಸು ಮಾಡಿ ಒತ್ತಾಯಮಾಡಿ ಕಾರ್ಯಗತವಾಗುವಂತೆ ಮಾಡಲು ವಿನಂತಿಸುತ್ತೇನೆ. ಹಾಗೂ ರಾಯದುರ್ಗ ಮತ್ತು ಚಿತ್ರದುರ್ಗ ರೈಲ್ವೇ ಮಾರ್ಗವನ್ನು ಸಹ ಕಾರ್ಯಗತ ಮಾಡುವಂತೆ ಒತ್ತಾಯಮಾಡಬೇಕೆಂದು ವಿನಂತಿಸುತ್ತೇನೆ.

ಇನ್ನೊಂದು ವಿಚಾರ ಸರಕಾರದ ಮುಂದಿಡಲು ಬಯಸುತ್ತೇನೆ. ಯೋಜನೆಗಳಲ್ಲಿ ಬಹಳ ಮುಖ್ಯವಾದ ಯೋಜನೆ ಅಪ್ಪರ್ ಭದ್ರಾ ಯೋಜನೆ. ಅದರಿಂದ ತುಮಕೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆ ಪ್ರದೇಶಗಳಲ್ಲಿ ಸುಮಾರು 5 ಲಕ್ಷ ಎಕರೆ ನೀರಾವರಿಯಾಗುವುದು. ಮಾನ್ಯ ಮಂತ್ರಿಗಳಾದ ಸಿದ್ಧವೀರಪ್ಪನವರು ಘೋರ್ಪಡೆಯವರು ಮತ್ತು ಹುಚ್ಚಮಾಸಿ ಗೌಡರು ಮತ್ತು ದೊಡ್ಡ ನೀರಾವರಿ ಯೋಜನಾ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಅಪ್ಪರ್ ಭದ್ರಾ ಯೋಜನೆ ಬಗ್ಗೆ ಸ್ಥೂಲವಾಗಿ ಪರಿಶೀಲಿಸಿ ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ. ಆದರೆ ದೊಡ್ಡ ನೀರಾವರಿ ಕೆಲಸಗಳನ್ನು ತೆಗೆದುಕೊಂಡಾಗ ಲಕ್ಷಾಂತರ ಎಕರೆಗೆ ಅದರ ಅನುಕೂಲವಾಗದೆ ಹಾಗೆಯೇ ಉಳಿಯುವುದುಂಟು. ಆದಕಾರಣ ಉಪಯೋಗವಾಗುವಂತೆ ಮಾಡಲು ರಾಜ್ಯ ಸರಕಾರದವರು ಯಂತ್ರೋಪಕರಣಗಳನ್ನು ಒದಗಿಸಿ ರೈತರಿಗೆ ಅನುಕೂಲಮಾಡಬೇಕು.

ನಮ್ಮ ರಾಜ್ಯದಲ್ಲಿ ವ್ಯವಸಾಯದ ಬಗ್ಗೆ ಸ್ಥೂಲವಾಗಿ ವಿಚಾರ ಮಾಡಿದರೆ ಇಡೀ ದೇಶದಲ್ಲಿ ನಮ್ಮ ರಾಜ್ಯದಲ್ಲಿ ನೀರಾವರಿ ಸೇಕಡ 11 ಎಕರೆ ಮಾತ್ರ ಇದೆ. ನಮ್ಮ ನೆರೆ ರಾಜ್ಯವಾದ ತಮಿಳುನಾಡಿನಲ್ಲಿ ಸೇಕಡ 36 ಎಕರೆ, ಆಂಧ್ರದಲ್ಲಿ ಸೇಕಡ 22 ಎಕರೆ ಇದೆ. ಆದುದರಿಂದ ನೀರಾವರಿಗೆ ನಮ್ಮ ರಾಜ್ಯ ಹೆಚ್ಚು ಗಮನಕೊಟ್ಟು ಕೊನೆಯ ಪಕ್ಷ ಐದನೆ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ದೇಶದ ನೀರಾವರಿ ಸೇಕಡ 19 ರಷ್ಟಾದರೂ ಆಗುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ಯೋಜನೆಗಳಿಗೆ ಸರಕಾರದವರು ಬರೀ ಹಣ ಖರ್ಚು ಮಾಡಿದರೆ ಸಾಲದು, ಪರಿಣಾಮಕಾರಿಯಾಗುವಂತೆ ವಿವೇಚನೆಯಿಂದ ಖರ್ಚುಮಾಡಬೇಕು. ಇದಕ್ಕೆ ಅಧಿಕಾರಿಗಳ ಪ್ರಾಮಾಣಿಕತೆ ಮುಖ್ಯವಾದುದು.

(ಶ್ರೀ ಬಿ. ಎಸ್. ವೀರಭದ್ರಪ್ಪ)

ಬಳ್ಳಾರಿ ಜಿಲ್ಲೆಯಲ್ಲಿ ಟವನ್ ಪಂಚಾಯಿತಿಗಳಿವೆ, ಅಲ್ಲಿ 10 ಸಾವಿರದಿಂದ 15—20 ಸಾವಿರದ ವರೆಗೆ ಜನಸಂಖ್ಯೆ ಇದೆ. ಹಳೆಯ ಮೈಸೂರಿನಲ್ಲಿ ಕೇವಲ ಎರಡೂವರೆ ಸಾವಿರ ಜನಸಂಖ್ಯೆ ಇರುವ ಪಂಚಾಯಿತಿಗಳನ್ನು ಮುನಿಸಿಪಾಲಿಟಿಗಳಾಗಿ ಪರಿವರ್ತಿಸಿದ್ದಾರೆ. ಆದರೆ ನಮ್ಮಲ್ಲಿ ಜನಸಂಖ್ಯೆ ಇನ್ನೂ ಹೆಚ್ಚಾಗಿದ್ದರೂ ಕೂಡ ಪಂಚಾಯಿತ್ತಿಗಳನ್ನು ಮುನಿಸಿಪಾಲಿಟಿಗಳಾಗಿ ಪರಿವರ್ತಿಸಲು ಮನಸ್ಸು ಮಾಡಿಲ್ಲ; ಮಾಡಲು ವಿನಂತಿಮಾಡುತ್ತೇನೆ.

ಸೇವಾ ಸಹಕಾರ ಸಂಘಗಳವರು ಜನರಲ್ ಬಾಡಿ ಮೀಟಿಂಗ್ ಕರೆಯುವ ವಿಚಾರದಲ್ಲಿ ಮನ ಬಂದ ಹಾಗೆ ವರ್ತಿಸುತ್ತಿದ್ದಾರೆ. ಪಂಚಾಯಿತಿಯ ಹಾಗೆ ಸಹಕಾರ ಸಂಘವೂ ಕೂಡ ಹಳ್ಳಿಯಲ್ಲಿ ಮುಖ್ಯವಾದ ಸಂಸ್ಥೆ. ಪಂಚಾಯಿತಿ ಚುನಾವಣೆ ನಡೆಸುವಾಗ ಚುನಾವಣಾ ಅಧಿಕಾರಿಯನ್ನು ನೇಮಿಸಿ ಅದಕ್ಕೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ಮುಂತಾದುವನ್ನು ಹಾಕಿ ಕ್ರಮ ಪ್ರಕಾರ ಹೇಗೆ ಚುನಾವಣೆ ನಡೆಸುವರೋ ಅದೇ ಪ್ರಕಾರ ಸಹಕಾರ ಸಂಘಗಳ ವಿಚಾರದಲ್ಲೂ ಮಾಡಬೇಕು. ಇಂಥ ಅನೇಕ ಸಮಸ್ಯೆಗಳನ್ನು ಸಹಕಾರ ಇಲಾಖೆ ಮಂತ್ರಿಗಳು ಬಗೆಹರಿಸಬೇಕಾಗಿ ವಿನಂತಿ. ಈಗ ಅನೇಕ ಸಹಕಾರ ಸಂಘಗಳ ತನಿಖೆ ಮಾಡುವುದಕ್ಕೆ ಆಫೀಸೇ ಇರುವುದಿಲ್ಲ, ಪುಸ್ತಕಗಳಿರು ವುದಿಲ್ಲ, ಇದರಿಂದ ಅಧಿಕಾರಿಗಳಿಗೆ ಗೊತ್ತಾಗುವುದಿಲ್ಲ. ಚುನಾವಣೆ ಕ್ರಮವನ್ನು ಜಾರಿಗೆ ತಂದರೆ ಅನುಕೂಲವಾಗುವುದು. ಅದರಿಂದ ತನಿಖೆಮಾಡುವುದಕ್ಕೆ ಸುಲಭವಾಗುವುದು. ಹಾಗೇ ಮಾಡ ಬೇಕೆಂದು ಸೂಚಿಸುತ್ತೇನೆ.

ಬಳ್ಳಾರಿ ಜಿಲ್ಲೆಯ ರಸ್ತೆ ಸಾರಿಗೆ ವಿಚಾರದಲ್ಲಿ ಸರಕಾರದವರು ಬಹಳ ನಿರ್ಲಕ್ಷಮಾಡಿದ್ದಾರೆಂದು ಹೇಳಲು ವಿಷಾದವಾಗುವುದು. ಈ ಮುಂಚೆ ಅನೇಕ ತಾಲ್ಲೂಕುಗಳಲ್ಲಿ ಪಿ.ಡಬ್ಲ್ಯೂ.ಡಿ. ನವರು ಕೆಲವು ರಸ್ತೆಗಳನ್ನು ಪ್ರತಿವರ್ಷವೂ ಮಾಡುತ್ತಿದ್ದರು. ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಹಿಂದುಳಿದಿದೆ. ಅದರ ವಿಸ್ತೀರ್ಣ 707 ಚದರಮೈಲಿ ಇದ್ದರೂ ಕೇವಲ ಒಂದು ರಸ್ತೆಯನ್ನೂ ಪಿ.ಡಬ್ಲ್ಯೂ.ಡಿ.ಗೆ ಹೊಸದಾಗಿ ತೆಗೆದುಕೊಂಡಿಲ್ಲ. ಅನೇಕ ಗ್ರಾಮಾಂತರ ರಸ್ತೆಗಳಿವೆ, ಅವುಗಳ ದುರಸ್ತಿಯನ್ನು ಪಿ.ಡಬ್ಲ್ಯೂ.ಡಿ.ಗೆ ವಹಿಸಿಕೊಂಡು ತೀವ್ರವಾಗಿ ಬಸ್ಸು ಸಂಚಾರಕ್ಕೆ ಅನುಕೂಲಮಾಡಿಕೊಡಬೇಕು.

3-00 P.M.

ವಿದ್ಯಾಭ್ಯಾಸದ ವಿಚಾರವಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಈಗ ಇರುವ ಏಕ ಉಪಾಧ್ಯಾಯ ಶಾಲೆಗಳಲ್ಲಿ 5 ತರಗತಿಗಳಿರುವ ಕಡೆ ಒಬ್ಬ ಉಪಾಧ್ಯಾಯರು ಕಲಿಸ ಮಾಡಲಿಕ್ಕೆ ಸಾಧ್ಯವಿಲ್ಲ. ಕಾನೂನು ಪ್ರಕಾರ ಒಬ್ಬ ಉಪಾಧ್ಯಾಯರಿಗೆ 40 ಮಂದಿ ವಿದ್ಯಾರ್ಥಿಗಳಿರಬೇಕು ಎಂದು ಇದೆ. ಆದರೆ ಐದು ತರಗತಿಗಳಿಂದ 40 ವಿದ್ಯಾರ್ಥಿಗಳೂ ಆಗುವುದಿಲ್ಲ. ಅಂಥ ಸಂದರ್ಭ ಗಳಲ್ಲಿ ಒಬ್ಬ ಉಪಾಧ್ಯಾಯರು ಐದು ತರಗತಿಗಳನ್ನೂ ನಡೆಸಿಕೊಂಡು ಹೋಗುವುದು ಬಹಳ ಕಷ್ಟವಾಗುತ್ತದೆ. ಆದುದರಿಂದ ರಾಜ್ಯದಲ್ಲಿ ಒಬ್ಬರೆ ಉಪಾಧ್ಯಾಯರಿರುವ ಶಾಲೆಗಳಿರುವ ಕಡೆ ಕೊನೇಪಕ್ಷ ಇಬ್ಬರು ಉಪಾಧ್ಯಾಯರನ್ನಾದರೂ ನೇಮಕ ಮಾಡಬೇಕೆಂದು ವಿದ್ಯಾ ಇಲಾಖೆಯವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಅದೇ ರೀತಿ ಅನೇಕ ಕಡೆ ಕಟ್ಟಡಗಳನ್ನು ಕಟ್ಟಿಸಬೇಕು ಮತ್ತು ನಿವೃತ್ತಿ ಹೊಂದಿದ ಉಪಾಧ್ಯಾಯರಿಗೆ ಆದಷ್ಟು ತೀವ್ರವಾಗಿ ನಿವೃತ್ತಿ ವೇತನ ಕೊಡಬೇಕೆಂದು ವಿನಂತಿಸು ತ್ತೇನೆ.

ವ್ಯವಸಾಯದ ಬಗ್ಗೆ ಹೇಳುವುದಾದರೆ, ಅನೇಕ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿಸಿದ್ದಾರೆ, ಲಕ್ಷಗಟ್ಟಲೆ ಎಕರೆ ನೀರಾವರಿ ಪ್ರದೇಶವಾಗಿದೆ. ತುಂಗಭದ್ರ ಅಣೆಕಟ್ಟು ಪ್ರದೇಶದಲ್ಲಿ ಆರು ಲಕ್ಷ ಎಕರೆ ನೀರಾವರಿ ಪ್ರದೇಶವಾಗಿದ್ದರೂ ಕೂಡ ಅದರಲ್ಲಿ ಸುಮಾರು ಒಂದು ಲಕ್ಷ ಎಕರೆ ಪ್ರದೇಶ ವ್ಯವಸಾಯಕ್ಕೆ ಇನ್ನೂ ಅನುಕೂಲವಾದ ಪ್ರದೇಶವಾಗಿಲ್ಲ. ಇದರ ಕಡೆಗೆ ಹೆಚ್ಚು ಲಕ್ಷ್ಯ ಕೊಡಬೇಕು. ನೀರು ಖರ್ಚಾಗುತ್ತಿದ್ದರೂ ರೈತರಿಗೆ ಉಪಯೋಗವಾಗುತ್ತಿಲ್ಲ. ಸರ್ಕಾರದವರು ಸಣ್ಣ ಸಣ್ಣ ಹಿಡುವಳಿದಾರರಿಗೆ ಯಂತ್ರಗಳನ್ನು ಒದಗಿಸಿ, ಅವರ ಭೂಮಿ ಸಾಗುವಳಿಗೆ ಬರುವಂತೆ ಮಾಡ ಬೇಕೆಂದು ಸೂಚಿಸುತ್ತೇನೆ.

ನೀರಾವರಿ ಯೋಜನೆಗಳಲ್ಲಿ ಭೂಮಿ ಸವಳು, ಕರಲು ಆಗುತ್ತಿದೆ. ಹಾಗೆ ಆಗದಂತೆ ಭೂಸಾರ ಸಂರಕ್ಷಣೆಯನ್ನು ಮಾಡಲು ನೀರಾವರಿ ಪ್ರದೇಶಗಳಲ್ಲಿ ನೀರು ಬಸಿಯುವ ಕಾಲುವೆ ಮಾಡುವ ಯೋಜನೆಗಳನ್ನು ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕು. ಭೂಸಾರ ಸಂರಕ್ಷಣೆಯ ಕಾರ್ಯವನ್ನು ಸರ್ಕಾರ ಕೈಕೊಂಡಿರುವಂತೆ ನೀರಾವರಿ ಪ್ರದೇಶದಲ್ಲಿ ನೀರು ಬಸಿಯುವ ಕಾಲುವೆ

ಮಾಡುವ ಕಾರ್ಯವನ್ನೂ ಸರ್ಕಾರದವರೇ ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿಕೊಟ್ಟು, ಅದಕ್ಕೆ ಬೀಳುವ ಹಣವನ್ನು ರೈತರಿಂದ ಕಂದಾಯದ ರೂಪದಲ್ಲಿ ವಸೂಲು ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಮುನಿಸಿಪಾಲಿಟಿಗಳಲ್ಲಿ ಗೊಬ್ಬರಕ್ಕೆ ಆಕ್ಟ್ರಾಯಿ ವಿಧಿಸುತ್ತಿಲ್ಲ. ಆದರೆ ನಗರ ಪಂಚಾಯಿತಿಗಳಲ್ಲಿ ಆರ್ಥಿಕ ದೃಷ್ಟಿಯಿಂದ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಎಷ್ಟೋ ಸಂಪನ್ನವಾಗಿದ್ದರೂ ಕೂಡ ಗೊಬ್ಬರದ ಮೇಲೆ ಆಕ್ಟ್ರಾಯಿ ವಿಧಿಸುತ್ತಿರುವುದು ಬಹಳ ಆಶ್ಚರ್ಯಕರವಾದ ಸಂಗತಿ. ಮಾನ್ಯ ಪಂಚಾಯಿತಿ ಮಂತ್ರಿಗಳು ಈ ಬಗ್ಗೆ ಲಕ್ಷ್ಯ ಕೊಟ್ಟು ನಗರ ಪಂಚಾಯಿತಿಗಳು ಆಕ್ಟ್ರಾಯಿ ವಿಧಿಸದಂತೆ ಸೂಚನೆಕೊಡಬೇಕೆಂದು ಹೇಳುತ್ತೇನೆ.

ಅನೇಕ ಬಂಜರು ಭೂಮಿಗಳನ್ನು ನಮ್ಮ ದೇಶದಲ್ಲಿ ರೈತರಿಗೆ ಕೊಡಲಿಕ್ಕೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಆದರೆ ಅದು ಕಾರ್ಯಗತವಾಗುತ್ತಿಲ್ಲ. ಆದಷ್ಟು ತೀವ್ರವಾಗಿ ಭೂರಹಿತರಿಗೆ ಜಮೀನು ಕೊಟ್ಟು ಉಪಕಾರ ಮಾಡಬೇಕು, ಹಾಗೂ ರಿಸರ್ವ್ ಫಾರೆಸ್ಟ್‌ನಿಂದ ಜಮೀನನ್ನು ರೈತರಿಗೆ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ.

ಬಸ್ ರಾಷ್ಟ್ರೀಕರಣದ ಬಗ್ಗೆ ಬಳ್ಳಾರಿ ಜಿಲ್ಲೆ ದುರ್ದೈವದ ಜಿಲ್ಲೆ ಅನೇಕ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. 200 ಬಸ್ಸುಗಳು ಇದ್ದರೂ ಕೂಡ ಯಾವುದೂ ನಿರ್ದಿಷ್ಟವಾದ ಸಮಯಕ್ಕೆ ಹೊರಡದೆ, ನಾವು ತಲುಪಬೇಕಾದ ಸ್ಥಳಗಳಿಗೆ ನಿರ್ದಿಷ್ಟವಾದ ವೇಳೆಗೆ ಸೇರದೆ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ರಾಷ್ಟ್ರೀಕರಣವಾದ ಮೇಲೆ ಖಾಸಗಿ ಬಸ್ಸಿಗಿಂತ ಹೆಚ್ಚು ದರವನ್ನು ಕೊಟ್ಟರೂ ಕೂಡ ಸುಖ ಸಿಕ್ಕುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಕಡೆ ಹೆಚ್ಚು ಲಕ್ಷ್ಯ ಕೊಟ್ಟು ಹೊಸ ಬಸ್ಸುಗಳನ್ನು ಹಾಕಿ, ಹಳೆಯ ಬಸ್ಸುಗಳನ್ನು ರಿಪೇರಿ ಮಾಡಿಸಿ, ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್ಸ್ ಒದಗಿಸಿ ಜನತೆಗೆ ಅನುಕೂಲತೆಯನ್ನು ಮಾಡಿಕೊಡಬೇಕೆಂದು ಸೂಚಿಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗಿ ಸುಮಾರು ಐದಾರು ವರ್ಷಗಳಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ರಸ್ತೆ ಸಾರಿಗೆಯವರಿಗೆ ಸಾಧ್ಯವಾಗಿಲ್ಲ. ಎಲ್ಲೆಲ್ಲಿ ಇವರು ಬಸ್ಸುಗಳನ್ನು ಓಡಿಸುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗಳಲ್ಲಿ ಖಾಸಗಿಯವರು ಬಸ್ಸುಗಳನ್ನು ಓಡಿಸುವುದಕ್ಕೆ ಹಂಗಾಮಿಯಾಗಿ ಪರವಾನಗಿ ಕೊಡಬೇಕು ಎಂದು ಸೂಚಿಸುತ್ತೇನೆ.

ಅನೇಕ ಮಾನ್ಯ ಸದಸ್ಯರು ನಿರುದ್ಯೋಗದ ಬಗ್ಗೆ ಮಾತನಾಡಿದ್ದಾರೆ; ವಿದ್ಯಾವಂತ ನಿರುದ್ಯೋಗಿಗಳು ಮತ್ತು ಅವಿದ್ಯಾವಂತ ನಿರುದ್ಯೋಗಿಗಳ ಬಗ್ಗೆ ಮಾತನಾಡಿದ್ದಾರೆ. ವಿದ್ಯಾವಂತರಲ್ಲಿ ಅನೇಕ ಮಂದಿ ಸ್ಥಳೀಯ ಅಭ್ಯರ್ಥಿಗಳಾಗಿ ಅನೇಕ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕೆಲಸದಿಂದ ತೆಗೆದು ಅವರ ಜಾಗದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ದ್ವಾರ ಬೇರೆಯವರನ್ನು ನೇಮಿಸುವುದು ಅಷ್ಟು ಸೂಕ್ತವಲ್ಲ. ಆದಕಾರಣ ಈಗಾಗಲೇ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವ 200-300 ಜನರ ಸರ್ವಿಸ್ ರೆಗ್ಯುಲರೈಸ್ ಮಾಡಿ ಅವರಿಗೆ ನೌಕರಿ ಖಾಯಂ ಮಾಡಬೇಕಾಗಿ ಸೂಚಿಸುತ್ತೇನೆ. ಅವರು ಈಗಾಗಲೇ ಎರಡು ಮೂರು ವರ್ಷ ಸರ್ವಿಸ್ ಮಾಡಿದ್ದಾರೆ ಮತ್ತು ಅವರಿಗೆ ಇನ್‌ಕ್ರಿಮೆಂಟ್ ಕೂಡ ಬರುತ್ತಿದೆ.

ಗ್ರಾಮಾಂತರದಲ್ಲಿ ವೈದ್ಯಕೀಯ ಸೌಲಭ್ಯಗಳು ಬಹಳ ಕಡಿಮೆ. ಅದಕ್ಕೆ ನನ್ನ ಸೂಚನೆ ಏನೆಂದರೆ ತಾಲ್ಲೂಕು ಹೆಡ್ ಕ್ವಾರ್ಟರ್ ಮತ್ತು ಹತ್ತು ಸಾವಿರಕ್ಕೆ ಹೆಚ್ಚಾಗಿ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಹೆಣ್ಣು ಮಕ್ಕಳ ಡಾಕ್ಟರನ್ನು ಅತ್ಯಾವಶ್ಯಕವಾಗಿ ಹಾಕಬೇಕು ಮತ್ತು ಆಸ್ಪತ್ರೆಗಳು ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುವುದಕ್ಕೆ ಇಲಾಖೆ ಪ್ರಯತ್ನ ಪಡಬೇಕೆಂದು ಸೂಚಿಸುತ್ತೇನೆ.

ಕುಡಿಯುವ ನೀರಿನ ವ್ಯವಸ್ಥೆಯ ಕಡೆಗೆ ಹೆಚ್ಚಾಗಿ ಗಮನ ಕೊಡಬೇಕು. ಕುಡಿಯುವ ನೀರಿನ ಅಭಾವ ನನ್ನ ಕ್ಷೇತ್ರದಲ್ಲಿ ಇದೆ. ಆದಷ್ಟು ತೀವ್ರವಾಗಿ ಸರ್ಕಾರದವರು ಈ ಕಡೆ ಹೆಚ್ಚಿಗೆ ಗಮನಕೊಟ್ಟು ರಿಗ್ ವೆಲ್ಸ್ ಮತ್ತು ಎನ್. ಆರ್. ಡಬ್ಲ್ಯು. ಸ್ಕೀಂ ಮೂಲಕ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿದ್ದಕ್ಕಾಗಿ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, 24-3-1972 ರಂದು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಮನಸಾರೆ ವಂದಿಸಿ ಎರಡು ಮಾತನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ನಮ್ಮ ಸಂಸ್ಥಾನಕ್ಕೆ ಬಂದು ಬಹಳ ಕಡಮೆ ದಿವಸಗಳಾಗಿದ್ದರೂ

(ಶ್ರೀ ಬಿ. ಭೈರಪ್ಪಾಜಿ)

ಚಾನಲ್ಲು, ಎಸ್ಟಿಮೇಟು ಮಾಡಿ ಬೇಗನೆ ಕೆಲಸಗಳು ಆರಂಭವಾಗಲು ಪ್ರಯತ್ನ ಮಾಡಿ ನೀರು ಕೊಡಿಸಬೇಕು. ನಮ್ಮ ಕ್ಷೇತ್ರವಾದ ತುರುವೇಕೆರೆ; ಗುಬ್ಬಿ ಹಾಗೂ ಇನ್ನಿತರ ಪ್ರದೇಶಗಳಿಗೆ ಅಪ್ಪರ್ ಭದ್ರಾ ಪ್ರಾಜೆಕ್ಟು ಮೇಲುಭಾಗದಿಂದ ನೀರನ್ನು ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ).—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಮೊಟ್ಟಮೊದಲನೆಯದಾಗಿ ವಂದನೆ ಸಲ್ಲಿಸುತ್ತಾ, ನಮ್ಮ ದೇಶದ ರೈತರ ದೃಷ್ಟಿಯಿಂದ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಕಾರಣ ನಮ್ಮ ದೇಶ ರೈತರ ದೇಶ ವಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಘಟಪ್ರಭಾ, ಮಲಪ್ರಭಾ ಮುಂತಾದ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ಹಣವನ್ನು ಒದಗಿಸಿರುವ ಮತ್ತು ಪ್ರಾಶಸ್ತ್ಯವನ್ನು ಕೊಟ್ಟಿರುವ ಬಗ್ಗೆ ಹೇಳಲಾಗಿದೆಯೇ ಹೊರತು ಸಣ್ಣ ನೀರಾವರಿ ವಿಷಯದಲ್ಲಿ ಯಾವ ಒಂದು ಮಾತನ್ನು ಸಹ ಹೇಳಿಲ್ಲ. ಇವೊತ್ತು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿಸುವುದರಿಂದ ಕೆಲವು ಭಾಗಗಳಿಗೆ ಅನುಕೂಲ ವಾಗುತ್ತದೆಯೇ ಹೊರತು ಅದರಿಂದ ದೇಶದ ಎಲ್ಲ ಭಾಗಗಳಿಗೂ ಅನುಕೂಲವಾಗುವುದಿಲ್ಲ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಇದರಿಂದ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದಂತಾಗುತ್ತದೆ. ಅದೇ ದೊಡ್ಡ ನೀರಾವರಿ ಯೋಜನೆಗಳಿಂದ ರೈತರಿಗೆ ಹೆಚ್ಚಿನ ಸಹಾಯವಾಗುವುದಿಲ್ಲ. ಈ ಕಾರಣದಿಂದ 5 ಎಕರೆ, 10 ಎಕರೆ ಭೂಮಿಗೆ ನೀರಾವರಿ ಯಾಗುವಂತಹ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕು. ಸಣ್ಣ ಸಣ್ಣ ಕಟ್ಟೆಗಳು, ಪಿಕಪ್‌ಗಳಿಗೆ ಸರ್ಕಾರದವರು ಹೆಚ್ಚು ಹಣ ಒದಗಿಸುವುದರಿಂದ ದೇಶದ ಎಲ್ಲ ಭಾಗಗಳಿಗೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಮತ್ತು ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸಿ ದಂತಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಸಣ್ಣ ನೀರಾವರಿ ಯೋಜನೆಗಳಿಗೆ ಒದಗಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶವು ವ್ಯವಸಾಯದ ದೇಶವಾಗಿದ್ದರೂ ಕೂಡ ವ್ಯವಸಾಯದ ಅಭಿವೃದ್ಧಿ ಬಗ್ಗೆ ಏನೇನೂ ಪ್ರಯತ್ನಗಳನ್ನೂ ಮಾಡುತ್ತಿಲ್ಲ. ಅನೇಕ ಜಮೀನುಗಳು ನಾದುರಸ್ತು ಆಗಿವೆ. ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ರೈತರಿಗೆ ಯಾವ ವಿಧವಾದಂಥ ಶಕ್ತಿಯೂ ಇಲ್ಲ. ಆದ್ದರಿಂದ ಸರ್ಕಾರದವರೇ ಮಾಡಿಸಬೇಕು. ಈಗ ಭೂಸಾರ ಸಂರಕ್ಷಣೆ ಮಾಡುವುದು, ಕಾಂಟೂರ್ ಬಂಡಿಂಗ್ ಹಾಕಿಸುವುದು, ಈ ಎರಡು ಸ್ಕೀಮ್‌ಗಳು ಇದ್ದರೂ ಕೂಡ ಸರಿಯಾದ ರೀತಿಯಲ್ಲಿ ಈ ಕೆಲಸಗಳು ನಡೆಯುತ್ತಿಲ್ಲ. ಈ ಬಗ್ಗೆ ಯಾವ ವಿಧವಾದಂಥ ಕಾರ್ಯ ವನ್ನೂ ಕೈಕೊಂಡಿಲ್ಲ. ಆದಷ್ಟು ಜಾಗ್ರತೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕ್‌ನಲ್ಲಿಯೂ ಒಬ್ಬ ಅಧಿಕಾರಿಯನ್ನು ಇಟ್ಟು ಜಮೀನಿನ ಭೂಸಾರ ಹೊರಗೆ ಹೋಗದಂತೆ ಕಾಂಟೂರ್ ಬಂಡಿಂಗ್ ಹಾಕಿಸುವುದಕ್ಕೆ ವ್ಯವಸ್ಥೆ ಮಾಡಿ ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾದುದನ್ನಾಗಿ ಮಾಡಿ ಕೊಟ್ಟರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಈ ರೀತಿ ಜಾಗ್ರತೆ ಮಾಡಿಸದಿದ್ದರೆ ಭೂಮಿ ಯಲ್ಲಿರುವ ಸಾರವೆಲ್ಲವೂ ಹೊರಟು ಹೋಗಿ ಭೂಮಿಯೆಲ್ಲಾ ಬಂಜರಾಗುತ್ತದೆ. ಕೊನೆಗೆ ಯಾವ ಪೈರುಪಚ್ಚೆಯೂ ಸಹ ಬೆಳೆಯುವುದಿಲ್ಲ. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಆದ್ಯತೆ ಕೊಟ್ಟು ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆರೋಗ್ಯದ ವಿಷಯ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಬಂದು 26 ವರ್ಷಗಳಾದ ಮೇಲೂ ಸಹ ನಾವು ಜನರಿಗೆ ಮತ್ತು ಜಾನುವಾರುಗಳಿಗೆ ಆರೋಗ್ಯದ ಬಗ್ಗೆ ಯಾವ ಒಂದು ಸೌಲಭ್ಯವನ್ನೂ ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಇವೊತ್ತಿನದಿವಸ 20 ಸಾವಿರ ಜನಸಂಖ್ಯೆ ಇರುವ ಎಲ್ಲ ಗ್ರಾಮಗಳಿಗೂ ಆಸ್ಪತ್ರೆ ಕೊಡಬೇಕೆಂದು ಕಾನೂನು ಇದೆ. ಆದರೆ ಅದರಂತೆ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಈ ಕಾರಣದಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಯಾವ ವಿಧವಾದಂಥ ವೈದ್ಯಕೀಯ ಸೌಲಭ್ಯವೂ ಸಿಗುತ್ತಿಲ್ಲ. ತಾಲ್ಲೂಕ್ ಕೇಂದ್ರಗಳಲ್ಲಿ ಮಾತ್ರ ಆಸ್ಪತ್ರೆಗಳು ಇವೆ. ಗ್ರಾಮಾಂತರ ಪ್ರದೇಶದ ಜನರು ಔಷಧ ಬೇಕಾದರೆ ಇಲ್ಲಿಗೆ ಬರಬೇಕು. ತಾಲ್ಲೂಕ್‌ಗಳಿಗೆ ಬಂದು ಕ್ಯೂ ನಿಂತು ಔಷಧ ತೆಗೆದುಕೊಳ್ಳುವುದಕ್ಕೆ ವೇಳೆ ಇಲ್ಲದೆ ಖಾಸಗೀ ಡಾಕ್ಟರ್ ಹತ್ತಿರ ಹೋಗಿ ಒಂದಕ್ಕೆ ನಾಲ್ಕರಷ್ಟು ಹಣ ಕೊಟ್ಟು ಔಷಧ ಪಡೆಯುತ್ತಿದ್ದಾರೆ. ಇದರಿಂದ ಒಂದು ರೀತಿಯಲ್ಲಿ ಬಡವರ ಶೋಷಣೆ ನಡೆಯುತ್ತಿದೆ. ಇದನ್ನು ತಪ್ಪಿಸಬೇಕಾದರೆ, ಈಗಿರುವ ಕಾನೂನಿನಂತೆ 20

ಮಾಡುವ ಕಾರ್ಯವನ್ನೂ ಸರ್ಕಾರದವರೇ ಹಾಕಿಕೊಂಡು ರೈತರಿಗೆ ಅನುಕೂಲ ಮಾಡಿಕೊಟ್ಟು, ಅದಕ್ಕೆ ಬೀಳುವ ಹಣವನ್ನು ರೈತರಿಂದ ಕಂದಾಯದ ರೂಪದಲ್ಲಿ ವಸೂಲು ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಮುನಿಸಿಪಾಲಿಟಿಗಳಲ್ಲಿ ಗೊಬ್ಬರಕ್ಕೆ ಅಕ್ರಾಯಿ ವಿಧಿಸುತ್ತಿಲ್ಲ. ಆದರೆ ನಗರ ಪಂಚಾಯಿತಿಗಳಲ್ಲಿ ಆರ್ಥಿಕ ದೃಷ್ಟಿಯಿಂದ ಮತ್ತು ಜನಸಂಖ್ಯೆಯ ದೃಷ್ಟಿಯಿಂದ ಎಷ್ಟೇ ಸಂಪನ್ನವಾಗಿದ್ದರೂ ಕೂಡ ಗೊಬ್ಬರದ ಮೇಲೆ ಅಕ್ರಾಯಿ ವಿಧಿಸುತ್ತಿರುವುದು ಬಹಳ ಆಶ್ಚರ್ಯಕರವಾದ ಸಂಗತಿ. ಮಾನ್ಯ ಪಂಚಾಯಿತಿ ಮಂತ್ರಿಗಳು ಈ ಬಗ್ಗೆ ಲಕ್ಷ್ಯ ಕೊಟ್ಟು ನಗರ ಪಂಚಾಯಿತಿಗಳು ಅಕ್ರಾಯಿ ವಿಧಿಸದಂತೆ ಸೂಚನೆಕೊಡಬೇಕೆಂದು ಹೇಳುತ್ತೇನೆ.

ಅನೇಕ ಬಂಜರು ಭೂಮಿಗಳನ್ನು ನಮ್ಮ ದೇಶದಲ್ಲಿ ರೈತರಿಗೆ ಕೊಡಲಿಕ್ಕೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಆದರೆ ಅದು ಕಾರ್ಯಗತವಾಗುತ್ತಿಲ್ಲ. ಆವಷ್ಟು ತೀವ್ರವಾಗಿ ಭೂರಹಿತರಿಗೆ ಜಮೀನು ಕೊಟ್ಟು ಉಪಕಾರ ಮಾಡಬೇಕು, ಹಾಗೂ ರಿಸರ್ವ್ ಫಾರೆಸ್ಟಿನಿಂದ ಜಮೀನನ್ನು ರೈತರಿಗೆ ಕೊಡಬೇಕೆಂದು ಸರ್ಕಾರದಲ್ಲಿ ವಿನಂತಿಸುತ್ತೇನೆ.

ಬಸ್ ರಾಷ್ಟ್ರೀಕರಣದ ಬಗ್ಗೆ ಬಳ್ಳಾರಿ ಜಿಲ್ಲೆ ದುರ್ದೈವದ ಜಿಲ್ಲೆ ಅನೇಕ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದ್ದಾರೆ. 200 ಬಸ್ಸುಗಳು ಇದ್ದರೂ ಕೂಡ ಯಾವುದೂ ನಿರ್ದಿಷ್ಟವಾದ ಸಮಯಕ್ಕೆ ಹೊರಡದೆ, ನಾವು ತಲುಪಬೇಕಾದ ಸ್ಥಳಗಳಿಗೆ ನಿರ್ದಿಷ್ಟವಾದ ವೇಳೆಗೆ ಸೇರದೆ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದೇವೆ. ರಾಷ್ಟ್ರೀಕರಣವಾದ ಮೇಲೆ ಖಾಸಗಿ ಬಸ್ಸಿಗಿಂತ ಹೆಚ್ಚು ದರವನ್ನು ಕೊಟ್ಟರೂ ಕೂಡ ಸುಖ ಸಿಕ್ಕುತ್ತಿಲ್ಲ. ಮಾನ್ಯ ಮಂತ್ರಿಗಳು ಈ ಕಡೆ ಹೆಚ್ಚು ಲಕ್ಷ್ಯ ಕೊಟ್ಟು ಹೊಸ ಬಸ್ಸುಗಳನ್ನು ಹಾಕಿ, ಹಳೆಯ ಬಸ್ಸುಗಳನ್ನು ರಿಪೇರಿ ಮಾಡಿಸಿ, ಅದಕ್ಕೆ ಬೇಕಾದ ಸ್ಪೇರ್ ಪಾರ್ಟ್ಸ್ ಒದಗಿಸಿ ಜನತೆಗೆ ಅನುಕೂಲತೆಯನ್ನು ಮಾಡಿಕೊಡಬೇಕೆಂದು ಸೂಚಿಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ರಾಷ್ಟ್ರೀಕರಣವಾಗಿ ಸುಮಾರು ಐದಾರು ವರ್ಷಗಳಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಬಸ್ಸುಗಳನ್ನು ಓಡಿಸುವುದಕ್ಕೆ ರಸ್ತೆ ಸಾರಿಗೆಯವರಿಗೆ ಸಾಧ್ಯವಾಗಿಲ್ಲ. ಎಲ್ಲೆಲ್ಲಿ ಇವರು ಬಸ್ಸುಗಳನ್ನು ಓಡಿಸುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆಗಳಲ್ಲಿ ಖಾಸಗಿಯವರು ಬಸ್ಸುಗಳನ್ನು ಓಡಿಸುವುದಕ್ಕೆ ಹಂಗಾಮಿಯಾಗಿ ಪರವಾನಗಿ ಕೊಡಬೇಕು ಎಂದು ಸೂಚಿಸುತ್ತೇನೆ.

ಅನೇಕ ಮಾನ್ಯ ಸದಸ್ಯರು ನಿರುದ್ಯೋಗದ ಬಗ್ಗೆ ಮಾತನಾಡಿದ್ದಾರೆ ; ವಿದ್ಯಾವಂತ ನಿರುದ್ಯೋಗಿಗಳು ಮತ್ತು ಅವಿದ್ಯಾವಂತ ನಿರುದ್ಯೋಗಿಗಳ ಬಗ್ಗೆ ಮಾತನಾಡಿದ್ದಾರೆ. ವಿದ್ಯಾವಂತರಲ್ಲಿ ಅನೇಕ ಮಂದಿ ಸ್ಥಳೀಯ ಅಭ್ಯರ್ಥಿಗಳಾಗಿ ಅನೇಕ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕೆಲಸದಿಂದ ತೆಗೆದು ಅವರ ಜಾಗದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ದ್ವಾರ ಬೇರೆಯವರನ್ನು ನೇಮಿಸುವುದು ಅಷ್ಟು ಸೂಕ್ತವಲ್ಲ. ಆದಕಾರಣ ಈಗಾಗಲೇ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವ 200–300 ಜನರ ಸರ್ವಿಸ್ ರೆಗ್ಯುಲರೈಸ್ ಮಾಡಿ ಅವರಿಗೆ ನೌಕರಿ ಖಾಯಂ ಮಾಡಬೇಕಾಗಿ ಸೂಚಿಸುತ್ತೇನೆ. ಅವರು ಈಗಾಗಲೇ ಎರಡು ಮೂರು ವರ್ಷ ಸರ್ವಿಸ್ ಮಾಡಿದ್ದಾರೆ ಮತ್ತು ಅವರಿಗೆ ಇನ್‌ಕ್ರಿಮೆಂಟ್ ಕೂಡ ಬರುತ್ತಿದೆ.

ಗ್ರಾಮಾಂತರದಲ್ಲಿ ವೈದ್ಯಕೀಯ ಸೌಲಭ್ಯಗಳು ಬಹಳ ಕಡಿಮೆ. ಅದಕ್ಕೆ ನನ್ನ ಸೂಚನೆ ಏನೆಂದರೆ ತಾಲ್ಲೂಕು ಹೆಡ್‌ಕ್ವಾರ್ಟರ್ ಮತ್ತು ಹತ್ತು ಸಾವಿರಕ್ಕೆ ಹೆಚ್ಚಾಗಿ ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಹೆಣ್ಣು ಮಕ್ಕಳ ಡಾಕ್ಟರನ್ನು ಅತ್ಯಾವಶ್ಯಕವಾಗಿ ಹಾಕಬೇಕು ಮತ್ತು ಆಸ್ಪತ್ರೆಗಳು ಸುವ್ಯವಸ್ಥಿತವಾಗಿ ನಡೆದುಕೊಂಡು ಹೋಗುವುದಕ್ಕೆ ಇಲಾಖೆ ಪ್ರಯತ್ನ ಪಡಬೇಕೆಂದು ಸೂಚಿಸುತ್ತೇನೆ.

ಕುಡಿಯುವ ನೀರಿನ ವ್ಯವಸ್ಥೆಯ ಕಡೆಗೆ ಹೆಚ್ಚಾಗಿ ಗಮನ ಕೊಡಬೇಕು. ಕುಡಿಯುವ ನೀರಿನ ಅಭಾವ ನನ್ನ ಕ್ಷೇತ್ರದಲ್ಲಿ ಇದೆ. ಆವಷ್ಟು ತೀವ್ರವಾಗಿ ಸರ್ಕಾರದವರು ಈ ಕಡೆ ಹೆಚ್ಚಿಗೆ ಗಮನಕೊಟ್ಟು ರಿಗ್ ವೆಲ್ಸ್ ಮತ್ತು ಎನ್. ಆರ್. ಡಬ್ಲ್ಯು. ಸ್ಕೀಂ ಮೂಲಕ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿದ್ದಕ್ಕಾಗಿ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, 24-3-1972 ರಂದು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಮನಸಾರೆ ವಂದಿಸಿ ಎರಡು ಮಾತನ್ನು ಆಡುವುದಕ್ಕೆ ಇಚ್ಛೆಪಡುತ್ತೇನೆ. ಅವರು ನಮ್ಮ ಸಂಸ್ಥಾನಕ್ಕೆ ಬಂದು ಬಹಳ ಕಡಮೆ ದಿವಸಗಳಾಗಿದ್ದರೂ

(ಶ್ರೀ ಬಿ. ಬೈರಪ್ಪಾಜಿ)

ಕೂಡ ಹೆಚ್ಚು ವಿಚಾರಗಳನ್ನು ತಿಳಿದುಕೊಂಡು ಸಮಾಜವಾದವನ್ನು ಜಾರಿಗೆ ತರುವ ದಿಶೆಯಲ್ಲಿ ಕೆಲವಾರು ಕಾರ್ಯಕ್ರಮಗಳನ್ನು ಜಾರಿಗೆ ತರುತ್ತೇವೆನ್ನುವ ಆಸೆಯನ್ನು ಇಟ್ಟುಕೊಂಡು ತಮ್ಮ ಭಾಷಣವನ್ನು ಮಾಡಿದ್ದಾರೆ. ಅವರ ಭಾಷಣದಲ್ಲಿ ಅತಿ ಮುಖ್ಯವಾದ ವಿಷಯ ಎಂದರೆ 1971–72ನೇ ಇಸವಿಯಲ್ಲಿ ಈ ದೇಶದಲ್ಲಿ ಸುಮಾರು 116 ತಾಲ್ಲೂಕುಗಳಲ್ಲಿ ಇದ್ದಂಥ ಕ್ಷಾಮ ಪರಿಸ್ಥಿತಿಯನ್ನು ಉದಾಹರಿಸಿದ್ದಾರೆ. 116 ತಾಲ್ಲೂಕುಗಳಲ್ಲಿ ಅನೇಕ ರೀತಿಯ ಉಪಯುಕ್ತವಾದ ಹಾಗೂ ಶಾಶ್ವತವಾದ ಅನೇಕ ಕಾಮಗಾರಿಗಳನ್ನು ನಡೆಸಿರತಕ್ಕದನ್ನು ಮಾನ್ಯ ರಾಜ್ಯಪಾಲರು ಉದಾಹರಿಸಿದ್ದಾರೆ. ಸಣ್ಣ ನೀರಾವರಿ ಕಾಮಗಾರಿಗಳು, ಬದು ಹಾಕುವ ವ್ಯವಸ್ಥೆ, ಕಾಡನ್ನು ಬೆಳೆಸತಕ್ಕ ವ್ಯವಸ್ಥೆ ಇವುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಮಾಡಿದ್ದಾರೆ. ಇನ್ನೂ ಮಾಡಬೇಕಾದ್ದು ಬಹಳವಿದೆ. ಕೇಂದ್ರ ಸರ್ಕಾರ ಈಗಾಗಲೇ ಮೂರು ಕೋಟಿ ರೂಪಾಯಿಗಳನ್ನು ಕ್ಷಾಮ ಪರಿಹಾರ ಕಾರ್ಯಗಳಿಗಾಗಿ ಕೊಟ್ಟಿದೆ. ಇನ್ನುಳಿದಿರತಕ್ಕ 2·49 ಕೋಟಿ ರೂಪಾಯಿಗಳೇನಿವೆ ಅದನ್ನು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ತ್ವರಿತವಾಗಿ ಸಹಾಯವನ್ನು ಪಡೆದು ಮುಂದಿನ ಸಾರಿ ಶಾಶ್ವತವಾದ ಪರಿಹಾರ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಕಂದಾಯ ಸಚಿವರು ಹೋದ ಕಡೆಗಳಲ್ಲಿ ರೈತರ ಬಗ್ಗೆ ಹೇಳುತ್ತಿದ್ದಾರೆ. ಅವರು ನಿಜವಾಗಿ ಒಬ್ಬ ರೈತನ ಮಗನಾಗಿ, ರೈತರಿಗೆ ಇರತಕ್ಕ ಕಷ್ಟಗಳನ್ನು ಅರಿತು, ಅದರ ನಿವಾರಣೆಗೆ ಕಾರ್ಯೋನ್ಮುಖರಾಗಿದ್ದಾರೆ. ಅದು ಬಹಳ ಸಂತೋಷ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ಬಗ್ಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಪ್ರತಿಯೊಬ್ಬ ರೈತನಿಗೂ ಕೂಡ ಪಟ್ಟೆಯನ್ನು ಕೊಡತಕ್ಕ ವ್ಯವಸ್ಥೆ ಬಹಳ ತ್ವರಿತವಾಗಿ ನಡೆಯಬೇಕು ಎಂದು ಹೇಳಿದ್ದಾರೆ. ಹಾಗೆಯೇ ಪಟ್ಟೆಯನ್ನು ಕೊಡಬೇಕಾದರೆ ಖಾತೆಯನ್ನು ಕೂಡ ಪ್ರತಿಯೊಬ್ಬ ರೈತನ ಹೆಸರಿಗೆ ಮಾಡಬೇಕಾದ್ದು ಕೂಡ ಅತ್ಯಾವಶ್ಯಕವಾದ ಕಾರ್ಯ. ಈ ಕಾರ್ಯದಲ್ಲಿ ರೆವೆನ್ಯೂ ಅಧಿಕಾರಿಗಳು ನಿರ್ದಿಷ್ಟವಾದ ಕಾಲವನ್ನು ಗೊತ್ತುಮಾಡಿ ತ್ವರಿತವಾಗಿ ಮಾಡಿಸಿಕೊಡತಕ್ಕದು ಅತಿ ಮುಖ್ಯ. ಈ ಬಗ್ಗೆ ಮಾನ್ಯ ರೆವೆನ್ಯೂ ಸಚಿವರು ಕೂಡ ಹೋದ ಕಡೆ ಜಿಲ್ಲಾಧಿಕಾರಿಗಳನ್ನು, ಇತರ ಅಧಿಕಾರಿಗಳನ್ನು ಕರೆಸಿಕೊಂಡು ಅವರಿಗೆ ಸೂಕ್ತ ನಿರ್ದೇಶನವನ್ನು ಕೊಡುತ್ತಿದ್ದಾರೆ. ಈ ಕಾರ್ಯವನ್ನು ದೇಶಾದ್ಯಂತ ಮಾಡಿ, ಸುಮಾರು ಆರು ತಿಂಗಳೊಳಗಾಗಿ ಇದನ್ನು ಮುಗಿಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇಂದು ರೈತನ ಭೂಮಿಗೆ ಇಂತಿಷ್ಟು ಕಂದಾಯ ಎಂದು ನಿರ್ದಿಷ್ಟವಾಗಿ ನಿಗದಿ ಮಾಡುವುದು ಸರಕಾರದ ಕರ್ತವ್ಯ. ಈಚೆಗೆ ಸರಕಾರ ವಿಲೇಜು ಅಕೌಂಟೆಂಟರುಗಳು ಎಂದು ನೇಮಕ ಮಾಡಿದ್ದಾರೆ. ಇವರು ಹಳ್ಳಿಗಳಲ್ಲಿ ರೈತರ ಜಮೀನನ್ನು ಲೆಕ್ಕಾಚಾರ ಮಾಡಿ ಕಂದಾಯದ ದರವನ್ನು ನಿಗದಿ ಮಾಡುತ್ತಾರೆ. ಇದರ ಬಗ್ಗೆ ಸರಕಾರ ಸ್ವಲ್ಪ ನಿಗಾ ಇಡಬೇಕು. ಇದರಲ್ಲಿ ಅನೇಕ ಲೋಪದೋಷಗಳಾಗುತ್ತಿವೆ ಎಂದು ಕೇಳುತ್ತೇವೆ. ಇದನ್ನು ಸರಿಪಡಿಸುವ ಕಾರ್ಯವನ್ನು ಶೀಘ್ರದಲ್ಲಿ ಹಾಗೂ ತ್ವರಿತವಾಗಿ ಸರಕಾರ ವಹಿಸಿಕೊಂಡು ಮಾಡಬೇಕು ಎಂದು ನಮ್ರತೆಯಿಂದ ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಾಮಾನ್ಯ ರೈತರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸಬೇಕು. ಆದಷ್ಟು ಬೇಗ ನ್ಯಾಯವಾದ ರೀತಿಯಲ್ಲಿ ರೈತರಿಗೆ ಪಟ್ಟೆ ಒದಗಿಸಿಕೊಡಬೇಕು ಮತ್ತು ಅವನ ಜಮೀನಿಗೆ ಎಷ್ಟು ಕಂದಾಯ ಕೊಡಬೇಕು ಎನ್ನುವುದರ ಬಗ್ಗೆ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರುವ ಕಾಲದಲ್ಲಿ ರೈತರಿಗೆ ಆದಷ್ಟು ಅನುಕೂಲಗಳನ್ನು ಮಾಡಿಕೊಡಬೇಕು. ಈಹೊತ್ತು ದೇಶದಲ್ಲಿ ರೈತರಿಗೆ ಪಟ್ಟೆ ಮಾಡಿಕೊಡತಕ್ಕದ್ದು ಹಾಗೂ ಪೋಡು ಮಾಡಿಕೊಡತಕ್ಕದ್ದು ಇವು ಬಹು ಪ್ರಾಮುಖ್ಯವಾದ ಅಂಶಗಳು. ಇದನ್ನು ನಮ್ಮ ಸರಕಾರವೂ ಅರಿತಿದೆ. ಜನರೂ ಕೂಡ ಇಂದಿನ ಸರಕಾರದಲ್ಲಿ ರೈತರ ಸಮಸ್ಯೆ ಬಗೆಹರಿಯುತ್ತದೆ ಎಂದು ಆಸೆಯುಳ್ಳವರಾಗಿದ್ದಾರೆ. ಅಥರಂತೆ ರೈತನಿಗೆ ಖಾತೆ ಮಾಡಿಸಿಕೊಟ್ಟು ಅವನ ಕಷ್ಟಗಳಿಗೆ ತಕ್ಕ ಪರಿಹಾರಗಳನ್ನು ಮಾಡತಕ್ಕದ್ದು ಸರಕಾರದ ನೀತಿಯೂ ಆಗಿದೆ. ನಮ್ಮ ಕಂದಾಯದ ಸಚಿವರು ಇದರ ಕಡೆಗೆ ಹೆಚ್ಚು ನಿಗಾ ಕೊಡಬೇಕಾದುದು ಅವರ ಆದ್ಯ ಕರ್ತವ್ಯ. ಇವರು ರೈತರೇ ಆಗಿರುವುದರಿಂದ ಇವರಿಂದ ರೈತರ ಹಿತರಕ್ಷಣೆಯಾಗುತ್ತದೆ ಮತ್ತು ಇವರು ಇದನ್ನು ಕಾಪಾಡಿಕೊಂಡು ಬರುತ್ತಾರೆ ಎನ್ನುವ ಆಸೆಯೂ ಜನರಲ್ಲಿದೆ.

ಇನ್ನು ರೆವನ್ಯೂ ಇಲಾಖೆಯಲ್ಲಿ ಕೆಲವು ಕಡೆಗಳಲ್ಲಿ ಕೆಲಸ ಬಹಳ ಜಾಸ್ತಿಯಾಗಿದೆ. 1935ನೇ ಇಸವಿಯಲ್ಲಿ ಏನು ಸಿಬ್ಬಂದಿ ಇತ್ತೋ ಅದೇ ಸಿಬ್ಬಂದಿಯನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ತುರುವೇಕೆರೆ ತಾಲ್ಲೂಕು ಆಫೀಸಿನಲ್ಲಿ

1930-32ನೇ ಇಸವಿಯಲ್ಲಿ ಏನು ಸಿಬ್ಬಂದಿ ಇರಬೇಕೆಂದು ಮಾಡಿದ್ದರೋ ಅದೇ ಸಿಬ್ಬಂದಿ ವರ್ಗವನ್ನೇ ಇಂದೂಕೂಡ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಈಗಿರತಕ್ಕ ಕಾರ್ಯಕ್ಷೇತ್ರಕ್ಕೂ 1930ನೇ ಇಸವಿಯಲ್ಲಿ ಇದ್ದ ಕಾರ್ಯಕ್ಷೇತ್ರಕ್ಕೂ ಬಹಳ ವ್ಯತ್ಯಾಸಗಳಿವೆ. ಆಗ ಇದ್ದುದಕ್ಕಿಂತ ಈಗ ಇಲ್ಲಿನ ಕೆಲಸಗಳು ಜಾಸ್ತಿಯಾಗಿವೆ. ಇಲ್ಲಿಗೆ ಜಾಸ್ತಿ ಸಿಬ್ಬಂದಿಯನ್ನು ಕೊಡತಕ್ಕದ್ದು ಉಚಿತವಾಗಿದೆ. ಸಿಬ್ಬಂದಿ ವರ್ಗ ಕಡಿಮೆ ಇದ್ದರೆ ಇಲ್ಲಿ ಕೆಲಸ ಮಾಡುವಾಗ ಅನಾದರಣೆ ಬರುತ್ತದೆ ಮತ್ತು ಏನೋ ಒಂದು ರೀತಿಯ ತಾತ್ಸಾರ ಮನೋಭಾವ ಅಧಿಕಾರಿಗಳಲ್ಲಿ ಬರುತ್ತದೆ. ಇಂತಹ ಕಾರ್ಯ ನೀತಿಯನ್ನು ಮುಂದುವರಿಸಬಾರದು. ಕೆಲಸಕ್ಕೆ ತಕ್ಕಂತೆ ಸಿಬ್ಬಂದಿ ವರ್ಗವನ್ನು ಜಾಸ್ತಿ ಮಾಡಿದರೆ ಇಲ್ಲಿನ ಜನಕ್ಕೆ ಒಂದು ರೀತಿಯಾದ ಶಕ್ತಿ ಬರುತ್ತದೆ ಮತ್ತು ಕೆಲಸಗಳೂ ಚೆನ್ನಾಗಿ ಮಾಡಲು ಅನುಕೂಲವಾಗುತ್ತದೆ. ಯಾವಾಗ ಸಿಬ್ಬಂದಿ ಸಂಖ್ಯೆ ಕಡಿಮೆ ಇರುತ್ತದೋ ಇಲ್ಲಿ ಕೆಲಸಗಳು ಆಗುವುದಿಲ್ಲ. ಅದರಿಂದ ಲಂಚರುಷುವತ್ತುಗಳಿಗೆ ಅವಕಾಶವಾಗುತ್ತದೆ ಮತ್ತು ಗ್ರಾಮಾಂತರ ಪ್ರದೇಶಗಳ ರೈತರಿಗೆ ಅನುಕೂಲವಾಗುವಂತೆ ಅಲ್ಲಿ ಬೇಗ ಕೆಲಸ ಮಾಡುವುದು ಅಸಾಧ್ಯವಾಗುತ್ತದೆ. ಈಗ ಸರಕಾರ ಮಾಡುವ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದರೆ ಅದಕ್ಕೆ ತಕ್ಕ ಸಿಬ್ಬಂದಿಯನ್ನು ಹೆಚ್ಚು ಮಾಡಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಡಬೇಕು ಎಂದು ಹೇಳಲು ಇಷ್ಟಪಡುತ್ತೇನೆ.

ಇನ್ನು ವ್ಯವಸಾಯ. ನಮ್ಮ ದೇಶದಲ್ಲಿ ಬಹು ಭಾಗ ಜನರು ವ್ಯವಸಾಯವನ್ನು ಅವಲಂಬನೆ ಮಾಡಿದ್ದಾರೆ. ವ್ಯವಸಾಯ ಮಾಡತಕ್ಕ ಜನರಿಗೆ ಸಾಕಷ್ಟು ಅನುಕೂಲ ಮಾಡಬೇಕಾಗಿದೆ ಎನ್ನುವ ಒಂದು ಕೂಗು ಈಗ ಹೆಚ್ಚಾಗಿ ಕೇಳಬರುತ್ತಿದೆ. ಸರಕಾರದ ಧೋರಣೆಯೂ ಕೂಡ ಸಾಕಷ್ಟು ಪ್ರಗತಿದಾಯಕವಾದದ್ದಾಗಿದೆ. ಆದರೆ ಇನ್ನೂ ಆಗಬೇಕಾದ ಪ್ರಗತಿ ಬಹಳ ಇದೆ. ಬಾವಿ ತೆಗೆಯುವವರಿಗೆ ಸಾಲವನ್ನು ಸರಕಾರ ಮಂಜೂರು ಮಾಡುತ್ತಿದೆ. ಇದರ ಬಗ್ಗೆ ಅನೇಕ ಸದಸ್ಯರು ಆಗಲೇ ಮಾತಾಡಿದ್ದಾರೆ. ಅವರೇ ಹೇಳಿದಂತೆ ಒಂದು ಬಾವಿ ತೆಗೆಯಲು ಮೂರು ಸಾವಿರದಿಂದ ಐದು ಸಾವಿರದವರೆಗೆ ಸಹಾಯ ದ್ರವ್ಯ ಇರುತ್ತದೆ. ಆದರೆ ಇದರಲ್ಲಿ ಕೆಲವು ಲೋಪದೋಷಗಳು ಬಂದು ಎಡರು ತೊಡರುಗಳು ಬರಲು ಅವಕಾಶವಾಗಿದೆ. ಸಾಮಾನ್ಯವಾಗಿ ಹಿಂದೆ ಕೊಟ್ಟಂಥ ಬಾವಿಯ ಸಾಲ ವಾಪಸು ಆಗಲಿಲ್ಲ ಮತ್ತು ಶೇಕಡಾ ಐವತ್ತು ಭಾಗ ತೋಡಿಸಿರುವ ಬಾವಿಗಳಲ್ಲಿ ನೀರು ಬರತಕ್ಕ ಸ್ಥಿತಿಯೂ ಇಲ್ಲ. ಮತ್ತು ಬಾವಿಗಳನ್ನು ತೋಡಿ ಪಂಪುಸೆಟ್ಟುಗಳನ್ನು ಹಾಕಿಕೊಂಡಿರುತ್ತಾರೆ. ಇದಕ್ಕೆ ವಿದ್ಯುತ್ತನ್ನು ಒದಗಿಸಿಕೊಡಬೇಕು. ಆಗ ನಿಜವಾಗಿಯೂ ರೈತನು ತನ್ನ ಹೊಲಕ್ಕೆ ನೀರು ಒದಗಿಸಲು ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರವೇ ಎಲ್ಲ ಖರ್ಚನ್ನೂ ವಹಿಸಿಕೊಂಡು ಆ ನಂತರ ಕಂತುಗಳಲ್ಲಿ ರೈತರಿಂದ ವಾಪಸು ಪಡೆಯಬಹುದು. ಈ ಬಗ್ಗೆ ಒಂದು ನಿರ್ದಿಷ್ಟ ನೀತಿಯನ್ನು ಅನುಸರಿಸಬೇಕು ಮತ್ತು ಬಾವಿಗಳನ್ನು ತೆಗೆಸುವ ವ್ಯವಸ್ಥೆಯನ್ನು ಸರಕಾರವೇ ಮಾಡಿ ಈ ದೇಶದಲ್ಲಿ ಹಸಿರುಕ್ರಾಂತಿ ಮಾಡಲು ಸಹಕರಿಸಬೇಕು.

ಇನ್ನು ನಮ್ಮ ಸರಕಾರದಲ್ಲಿ ನೀರಾವರಿಯ ಬಗ್ಗೆ ಉನ್ನತ ಅನುಭವವನ್ನು ಪಡೆದಿರತಕ್ಕವರು ಲೋಕೋಪಯೋಗಿ ಖಾತೆಯಲ್ಲಿ ಮಂತ್ರಿಗಳಾಗಿರುವುದು ನಮಗೆ ಬಹು ಸಂತೋಷದ ಸಂಗತಿ. ಶ್ರೀಮಾನ್ ಚನ್ನಬಸಪ್ಪನವರು ಒಬ್ಬ ನುರಿತ ಆಡಳಿತಗಾರರು. ಇಂತಹವರು ಈ ನೀರಾವರಿ ಇಲಾಖೆಯನ್ನು ವಹಿಸಿಕೊಂಡಿರುವುದು ಅವರ ದಕ್ಷತೆಯ ಫಲವಾಗಿ. ನೀರಾವರಿ ವಿಚಾರದಲ್ಲಿ ಅವರು ಚೆನ್ನಾಗಿ ಪಳಗಿದವರು ಆಗಿರುವುದರಿಂದ ನಮ್ಮ ದೇಶದ ನೀರಾವರಿ ಕಾರ್ಯಗಳೆಲ್ಲಾ ಕಾರ್ಯರೂಪಕ್ಕೆ ಬರುವುದರಲ್ಲಿ ನಮಗೆ ದೃಢವಾದ ನಂಬಿಕೆ ಬಂದಿದೆ ಮತ್ತು ನಾನು ಇದಕ್ಕಾಗಿ ಸಂತೋಷಪಡುತ್ತೇನೆ. ಇದರ ಬಗ್ಗೆ ಹೇಳುವಾಗ ನಾನು ನಮ್ಮ ತುಮಕೂರು ಜಿಲ್ಲೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ. ನಮ್ಮ ಜಿಲ್ಲೆಯಲ್ಲಿರುವ ತುಮಕೂರು, ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ಕುಣಿಗಲ್ಲು ಇವೆಲ್ಲಾ ಬೆಂಗಾಡು ಪ್ರದೇಶಗಳಾಗಿವೆ. ಇದರ ಜೊತೆಗೆ ಮಂಡ್ಯ ಜಿಲ್ಲೆಯಲ್ಲಿರುವ ನಾಗಮಂಗಲ ತಾಲ್ಲೂಕಿಗೆ ಹೇಮಾವತಿಯಿಂದ ನೀರನ್ನು ಒದಗಿಸಿಕೊಡಲು ಪ್ರಯತ್ನ ಮಾಡಬೇಕೆಂದು ನಮ್ಮ ತಾತನ ಕಾಲದಿಂದಲೂ ಕೇಳುತ್ತ ಬರುತ್ತಿದ್ದೇವೆ. ನಮ್ಮ ತಂದೆಯ ಕಾಲದಿಂದಲೂ ಕೇಳುತ್ತಿದ್ದರು. ಈಗಲೂ ಕೂಡ ನಾವೂ ಸರಕಾರವನ್ನು ನೀರು ಕೊಡಬೇಕೆಂದು ಕೇಳುತ್ತಲೇ ಇದ್ದೇವೆ. ಈಗ ಅದು ಕಾರ್ಯರೂಪಕ್ಕೆ ಬರುವಂತೆ ನನಗನಿಸುತ್ತಿದೆ. ಇದಕ್ಕಾಗಿ ಸರಕಾರಕ್ಕೆ ವಂದನೆ ಮಾಡಲು ಇಚ್ಛೆಪಡುತ್ತೇನೆ. ಹೇಮಾವತಿಯಿಂದ ಈಗಾಗಲೇ ನೀರು ತರುವ ಕೆಲಸಗಳು ಪ್ರಾರಂಭವಾಗಿ ಬಹು ಭಾಗ ಇದರ ಕೆಲಸಗಳು ಮುಗಿದಿವೆ. ಅದರಂತೆ ನಮಗೂ ನೀರು ಒದಗಿಸುವ ಕೆಲಸವನ್ನು ಮಾಡಬೇಕು ಎಂದು ಮಾನ್ಯ ಸಚಿವರಾದ ಶ್ರೀ ಚನ್ನಬಸಪ್ಪನವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಈ ಕಾರ್ಯವನ್ನು ತ್ವರಿತವಾಗಿ ಮಾಡಿಸಿಕೊಡಬೇಕೆಂದು ನಮ್ಮ ಜನ ಒತ್ತಾಯ ಮಾಡುತ್ತಿದ್ದಾರೆ. ಇದಕ್ಕಾಗಿ

(ಶ್ರೀ ಬಿ. ಬೈರಪ್ಪಾಜಿ)

ಚಾನಲ್ಲು, ಎಸ್ಟಿಮೇಟು ಮಾಡಿ ಬೇಗನೆ ಕೆಲಸಗಳು ಆರಂಭವಾಗಲು ಪ್ರಯತ್ನ ಮಾಡಿ ನೀರು ಕೊಡಿಸಬೇಕು. ನಮ್ಮ ಕ್ಷೇತ್ರವಾದ ತುರುವೇಕೆರೆ; ಗುಬ್ಬಿ ಹಾಗೂ ಇನ್ನಿತರ ಪ್ರದೇಶಗಳಿಗೆ ಅಪ್ಪರ್ ಭದ್ರಾ ಪ್ರಾಜೆಕ್ಟು ಮೇಲುಭಾಗದಿಂದ ನೀರನ್ನು ಒದಗಿಸಿಕೊಡುವ ಪ್ರಯತ್ನ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮತ್ತು ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚೆನ್ನಪ್ಪ (ಮಾಗಡಿ).—ಸನ್ಮಾನ್ಯ ಸಭಾಪತಿಯವರೇ, ಈ ದಿವಸ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ನಾನು ತಮಗೆ ಮೊಟ್ಟಮೊದಲನೆಯದಾಗಿ ವಂದನೆ ಸಲ್ಲಿಸುತ್ತಾ ನಮ್ಮ ದೇಶದ ರೈತರ ದೃಷ್ಟಿಯಿಂದ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಕಾರಣ ನಮ್ಮ ದೇಶ ರೈತರ ದೇಶ ವಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಘಟಪ್ರಭಾ, ಮಲಪ್ರಭಾ ಮುಂತಾದ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ಹಣವನ್ನು ಒದಗಿಸಿರುವ ಮತ್ತು ಪ್ರಾಶಸ್ತ್ಯವನ್ನು ಕೊಟ್ಟಿರುವ ಬಗ್ಗೆ ಹೇಳಲಾಗಿದೆಯೇ ಹೊರತು ಸಣ್ಣ ನೀರಾವರಿ ವಿಷಯದಲ್ಲಿ ಯಾವ ಒಂದು ಮಾತನ್ನು ಸಹ ಹೇಳಿಲ್ಲ. ಇವೊತ್ತು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿಸುವುದರಿಂದ ಕೆಲವು ಭಾಗಗಳಿಗೆ ಅನುಕೂಲ ವಾಗುತ್ತದೆಯೇ ಹೊರತು ಅದರಿಂದ ದೇಶದ ಎಲ್ಲ ಭಾಗಗಳಿಗೂ ಅನುಕೂಲವಾಗುವುದಿಲ್ಲ. ಆದ್ದರಿಂದ ಸಣ್ಣ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆ ಕೊಡಬೇಕು. ಇದರಿಂದ ರೈತರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿದಂತಾಗುತ್ತದೆ. ಅದೇ ದೊಡ್ಡ ನೀರಾವರಿ ಯೋಜನೆಗಳಿಂದ ರೈತರಿಗೆ ಹೆಚ್ಚಿನ ಸಹಾಯವಾಗುವುದಿಲ್ಲ. ಈ ಕಾರಣದಿಂದ 5 ಎಕರೆ, 10 ಎಕರೆ ಭೂಮಿಗೆ ನೀರಾವರಿ ಯಾಗುವಂತಹ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳಬೇಕು. ಸಣ್ಣ ಸಣ್ಣ ಕಟ್ಟೆಗಳು, ಪಿಕಪ್‌ಗಳಿಗೆ ಸರ್ಕಾರದವರು ಹೆಚ್ಚು ಹಣ ಒದಗಿಸುವುದರಿಂದ ದೇಶದ ಎಲ್ಲ ಭಾಗಗಳಿಗೂ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಮತ್ತು ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸಿ ದಂತಾಗುತ್ತದೆ. ಆದ್ದರಿಂದ ಹೆಚ್ಚಿನ ಹಣವನ್ನು ಸಣ್ಣ ನೀರಾವರಿ ಯೋಜನೆಗಳಿಗೆ ಒದಗಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶವು ವ್ಯವಸಾಯದ ದೇಶವಾಗಿದ್ದರೂ ಕೂಡ ವ್ಯವಸಾಯದ ಅಭಿವೃದ್ಧಿ ಬಗ್ಗೆ ಏನೇನೂ ಪ್ರಯತ್ನಗಳನ್ನೂ ಮಾಡುತ್ತಿಲ್ಲ. ಅನೇಕ ಜಮೀನುಗಳು ನಾದುರಸ್ತು ಆಗಿವೆ. ಜಮೀನುಗಳನ್ನು ಅಭಿವೃದ್ಧಿ ಮಾಡುವುದಕ್ಕೆ ರೈತರಿಗೆ ಯಾವ ವಿಧವಾದಂಥ ಶಕ್ತಿಯೂ ಇಲ್ಲ. ಆದ್ದರಿಂದ ಸರ್ಕಾರದವರೇ ಮಾಡಿಸಬೇಕು. ಈಗ ಭೂಸಾರ ಸಂರಕ್ಷಣೆ ಮಾಡುವುದು, ಕಾಂಟೂರ್ ಬಂಡಿಂಗ್ ಹಾಕಿಸುವುದು, ಈ ಎರಡು ಸ್ಕೀಮ್‌ಗಳು ಇದ್ದರೂ ಕೂಡ ಸರಿಯಾದ ರೀತಿಯಲ್ಲಿ ಈ ಕೆಲಸಗಳು ನಡೆಯುತ್ತಿಲ್ಲ. ಈ ಬಗ್ಗೆ ಯಾವ ವಿಧವಾದಂಥ ಕಾರ್ಯ ವನ್ನೂ ಕೈಕೊಂಡಿಲ್ಲ. ಆದಷ್ಟು ಜಾಗ್ರತೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕ್‌ನಲ್ಲಿಯೂ ಒಬ್ಬ ಅಧಿಕಾರಿಯನ್ನು ಇಟ್ಟು ಜಮೀನಿನ ಭೂಸಾರ ಹೊರಗೆ ಹೋಗದಂತೆ ಕಾಂಟೂರ್ ಬಂಡಿಂಗ್ ಹಾಕಿಸುವುದಕ್ಕೆ ವ್ಯವಸ್ಥೆ ಮಾಡಿ ಜಮೀನನ್ನು ವ್ಯವಸಾಯಕ್ಕೆ ಯೋಗ್ಯವಾದುದನ್ನಾಗಿ ಮಾಡಿ ಕೊಟ್ಟರೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಈ ರೀತಿ ಜಾಗ್ರತೆ ಮಾಡಿಸದಿದ್ದರೆ ಭೂಮಿ ಯಲ್ಲಿರುವ ಸಾರವೆಲ್ಲವೂ ಹೊರಟು ಹೋಗಿ ಭೂಮಿಯೆಲ್ಲಾ ಬಂಜರಾಗುತ್ತದೆ. ಕೊನೆಗೆ ಯಾವ ಪೈರುಪಚ್ಚೆಯೂ ಸಹ ಬೆಳೆಯುವುದಿಲ್ಲ. ಆದ್ದರಿಂದ ಇದರ ಕಡೆಗೆ ಹೆಚ್ಚಿನ ಆದ್ಯತೆ ಕೊಟ್ಟು ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆರೋಗ್ಯದ ವಿಷಯ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಬಂದು 26 ವರ್ಷಗಳಾದ ಮೇಲೂ ಸಹ ನಾವು ಜನರಿಗೆ ಮತ್ತು ಜಾನುವಾರುಗಳಿಗೆ ಆರೋಗ್ಯದ ಬಗ್ಗೆ ಯಾವ ಒಂದು ಸೌಲಭ್ಯವನ್ನೂ ಒದಗಿಸುವುದಕ್ಕೆ ಸಾಧ್ಯವಾಗಲಿಲ್ಲ. ಇವೊತ್ತಿನದಿವಸ 20 ಸಾವಿರ ಜನಸಂಖ್ಯೆ ಇರುವ ಎಲ್ಲ ಗ್ರಾಮಗಳಿಗೂ ಆಸ್ಪತ್ರೆ ಕೊಡಬೇಕೆಂದು ಕಾನೂನು ಇದೆ. ಆದರೆ ಅದರಂತೆ ಮಾಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ. ಈ ಕಾರಣದಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಯಾವ ವಿಧವಾದಂಥ ವೈದ್ಯಕೀಯ ಸೌಲಭ್ಯವೂ ಸಿಗುತ್ತಿಲ್ಲ. ತಾಲ್ಲೂಕ್ ಕೇಂದ್ರಗಳಲ್ಲಿ ಮಾತ್ರ ಆಸ್ಪತ್ರೆಗಳು ಇವೆ. ಗ್ರಾಮಾಂತರ ಪ್ರದೇಶದ ಜನರು ಔಷಧ ಬೇಕಾದರೆ ಇಲ್ಲಿಗೆ ಬರಬೇಕು. ತಾಲ್ಲೂಕ್‌ಗಳಿಗೆ ಬಂದು ಕ್ಯೂ ನಿಂತು ಔಷಧ ತೆಗೆದುಕೊಳ್ಳುವುದಕ್ಕೆ ವೇಳೆ ಇಲ್ಲದೆ ಖಾಸಗೀ ಡಾಕ್ಟರ್ ಹತ್ತಿರ ಹೋಗಿ ಒಂದಕ್ಕೆ ನಾಲ್ಕರಷ್ಟು ಹಣ ಕೊಟ್ಟು ಔಷಧ ಪಡೆಯುತ್ತಿದ್ದಾರೆ. ಇದರಿಂದ ಒಂದು ರೀತಿಯಲ್ಲಿ ಬಡವರ ಶೋಷಣೆ ನಡೆಯುತ್ತಿದೆ. ಇದನ್ನು ತಪ್ಪಿಸಬೇಕಾದರೆ, ಈಗಿರುವ ಕಾನೂನಿನಂತೆ 20

ಸಾವಿರ ಜನಸಂಖ್ಯೆ ಇರುವ ಪ್ರದೇಶಗಳಲ್ಲಿ ಒಂದೊಂದು ಆಸ್ಪತ್ರೆಯನ್ನು ಕಟ್ಟಿಸಬೇಕು. ಇಲ್ಲದಿದ್ದರೆ ಬಡಜನರಿಗೆ ವೈದ್ಯಕೀಯ ಸೌಲಭ್ಯವನ್ನು ಒದಗಿಸಿದಂತಾಗುವುದಿಲ್ಲ. ಆಸ್ಪತ್ರೆ ಕಟ್ಟಡಗಳನ್ನು ಕಟ್ಟಿಸಬೇಕಾದರೆ ತಾಲ್ಲೂಕ್ ಬೋರ್ಡಿನವರು ಅರ್ಧ ಹಣ ಕೊಡಬೇಕು, ಉಳಿದ ಅರ್ಧ ಹಣವನ್ನು ಸರ್ಕಾರದವರು ಕೊಡಬೇಕೆಂದು ನಿಯಮವಿದೆ. ಕೆಲವು ತಾಲ್ಲೂಕ್ ಬೋರ್ಡುಗಳಿಗೆ ಆರ್ಥಿಕ ಅನುಕೂಲತೆ ಸಾಕಷ್ಟು ಇಲ್ಲದಿರುವುದರಿಂದ ಅವರು ತಮ್ಮ ಭಾಗದ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಕಡೆಗಳಲ್ಲಿ ಸರ್ಕಾರದವರೇ ಪೂರ್ತಾ ಹಣವನ್ನು ಖರ್ಚುಮಾಡಿ ಕಟ್ಟಡಗಳನ್ನು ಕಟ್ಟಿಸಬೇಕು. ಆರೋಗ್ಯದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಷಯವನ್ನೂ ಹೇಳಿಲ್ಲ. ನಾನು ಹೇಳಿದಂಥ ಅಂಶವನ್ನು ಅದರಲ್ಲಿ ಸೇರಿಸಿಕೊಂಡು ಆಸ್ಪತ್ರೆಗಳನ್ನು ಕಟ್ಟಿಸುವುದಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಈಗ ಕೆಲವು ಕಡೆ ಕಟ್ಟಡಗಳನ್ನು ಕಟ್ಟಿದ್ದರೂ ಕೂಡ ಅಲ್ಲಿಗೆ ಸರ್ಕಾರದವರು ಡಾಕ್ಟರ್‌ಗಳನ್ನು ಕಳಿಸದೆ, ಆ ಕಟ್ಟಡಗಳು ಹಾಳು ಬಿದ್ದಿವೆ. ಎಲ್ಲೆಲ್ಲಿ ಕಟ್ಟಡಗಳು ಆಗಿವೆಯೋ ಅಲ್ಲೆಲ್ಲಾ ಆಸ್ಪತ್ರೆಗಳನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಲ್ಲದಿದ್ದರೆ ನಮ್ಮ ಜನರ ಆರೋಗ್ಯವನ್ನು ಸುಧಾರಿಸಿದಂತಾಗುವುದಿಲ್ಲ. ಗೃಹ ನಿರ್ಮಾಣದ ವಿಷಯ ಹೇಳುವುದಾದರೆ, ಈ ಬಗ್ಗೆ ಅನೇಕ ಪ್ರಯತ್ನಗಳು ಸರ್ಕಾರದ ವತಿಯಿಂದ ಆಗುತ್ತಿದ್ದರೂ, ಯಾವುದೂ ಕಾರ್ಯರೂಪದಲ್ಲಿ ಬರುತ್ತಿಲ್ಲ. ಅನೇಕ ಸ್ಕೀಮ್‌ಗಳಿವೆ. ಯಾವುದೂ ಕಾರ್ಯಗತವಾಗುತ್ತಿಲ್ಲ. ಇದರಿಂದ ಹರಿಜನಗಿರಿಜನರಿಗಾಗಲೀ, ಕಾರ್ಮಿಕರಿಗಾಗಲೀ, ಬಡವರಿಗಾಗಲೀ ಯಾವ ಒಂದು ಸೌಲಭ್ಯವೂ ಸಿಗುತ್ತಿಲ್ಲ. ಸ್ಕೀಮ್ ಮಾತ್ರ ಇದೆ. ಆದರೆ ಅದರಲ್ಲಿ ಅನೇಕ ತೊಡಕುಗಳಿವೆ. ಸ್ವತಂತ್ರ ಭಾರತದಲ್ಲಿ ಎಲ್ಲ ಜನತೆಗೂ ಕುಡಿಯುವುದಕ್ಕೆ ನೀರು, ವಾಸಕ್ಕೆ ಮನೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನಾದರೂ ಒದಗಿಸಿಕೊಡದಿದ್ದರೆ ನಾವು ಏನನ್ನೂ ಸಾಧಿಸಿದಂತಾಗುವುದಿಲ್ಲವೆಂದು ಹೇಳುತ್ತೇನೆ. ಮನೆಗಳನ್ನು ಕಟ್ಟಿಸುವುದಕ್ಕೆ ಯಾರು ಯಾರು ಮುಂದೆ ಬರುತ್ತಾರೋ ಅಂತಹವರಿಗೆ ಹಣ ಕೊಡದೆ, ಸರ್ಕಾರದವರೇ ಟ್ರಸ್ಟ್‌ಬೋರ್ಡ್ ಮೂಲಕ ಮತ್ತು ಹೌಸಿಂಗ್ ಬೋರ್ಡ್ ಮೂಲಕ ಮನೆಗಳನ್ನು ಕಟ್ಟಿಸಿಕೊಡಬೇಕು. ಸೈಟ್‌ಗಳನ್ನು ಹೊಂದಿರುವವರಿಗೂ ಕೂಡ ಅವರ ಆದಾಯಕ್ಕೆ ತಕ್ಕಂತೆ ಸರ್ಕಾರದವರೇ ಮನೆಗಳನ್ನು ಕಟ್ಟಿಸಿಕೊಡಬೇಕೇ ಹೊರತು, ಅವರ ಕೈಗೆ ಹಣ ಕೊಟ್ಟರೆ ಹಣ ದುರುಪಯೋಗವಾಗುತ್ತದೆ. ಏಕೆಂದರೆ ಅವರಿಗೆ ಬಡತನ ಎಂಬುದು ಕಿತ್ತು ತಿನ್ನುತ್ತಿರುತ್ತದೆ. ದುಡ್ಡು ಕೈಗೆ ಬಂದ ಕೂಡಲೇ ಆತ ಮೊದಲು ತನ್ನ ಹೊಟ್ಟೆಗೆ ಹಾಕಿಕೊಳ್ಳುವುದನ್ನು ನೋಡುತ್ತಾನೆಯೇ ಹೊರತು, ಮನೆ ಮಠ ನೋಡುವುದಕ್ಕೆ ಹೋಗುವುದಿಲ್ಲ. ಈ ಕಾರಣದಿಂದ ಕೊಟ್ಟ ಹಣ ದುರುಪಯೋಗವಾಗುತ್ತಿದೆ. ಆದ್ದರಿಂದ ಸರ್ಕಾರದವರೇ ಹೌಸಿಂಗ್ ಬೋರ್ಡ್ ಮೂಲಕ ಮನೆಗಳನ್ನು ಕಟ್ಟಿಸಿಕೊಡಬೇಕು. ತ್ವರಿತಗತಿಯಲ್ಲಿ ಈ ಕೆಲಸವಾಗಬೇಕು.

ಕುಡಿಯುವ ನೀರಿನ ವಿಷಯ ಹೇಳುವುದಾದರೆ, ನಾಲ್ಕಾರು ಮನೆಗಳು ಇರುವ ಕಡೆ ಬಾವಿ ತೋಡಿಸಿಕೊಡುವುದಕ್ಕಾಗುವುದಿಲ್ಲವೆಂದು ಸರ್ಕಾರದವರು ಹೇಳುತ್ತಾರೆ. ಒಂದು ಮನೆ ಇರಲಿ, ನಾಲ್ಕು ಮನೆಗಳು ಇರಲಿ, ಎಲ್ಲ ಕಡೆಗಳಲ್ಲಿಯೂ ಕುಡಿಯುವ ನೀರಿನ ಸೌಕರ್ಯ ಮಾಡಿಕೊಡುವುದು ಸರ್ಕಾರದ ಕರ್ತವ್ಯವೆಂದು ಹೇಳುತ್ತೇನೆ. ಗ್ರಾಮಸ್ಥರು ಎಲ್ಲಿ ಜಾಗ ಕೊಡುತ್ತೇವೆಂದು ಹೇಳುತ್ತಾರೋ ಅಲ್ಲಿ ಬಾವಿಗಳನ್ನು ತೋಡಿಸಿ ಕುಡಿಯುವ ನೀರಿನ ಸೌಕರ್ಯ ಒದಗಿಸಿಕೊಡಬೇಕು. ಗ್ರಾಮಗಳಿಗೆ ಕುಡಿಯುವ ನೀರನ್ನು ನಲ್ಲಿಗಳ ಮೂಲಕ ಒದಗಿಸಬೇಕಾದರೆ 10 ಪರ್‌ಸೆಂಟ್ ಹಣವನ್ನು ಪಂಚಾಯತಿಯವರು ಕೊಡಬೇಕೆಂದು ನಿಯಮವಿದೆ. ಈ ಹಣವನ್ನು ಕೊಡುವುದಕ್ಕೆ ಕೆಲವು ಪಂಚಾಯತಿಗಳಲ್ಲಿ ದುಡ್ಡು ಇರುವುದಿಲ್ಲ. ಇಂತಹ ಕಡೆಗಳಲ್ಲಿ ಸರ್ಕಾರದವರೇ ಪೂರ್ತಾ ಹಣವನ್ನು ಖರ್ಚು ಮಾಡಿ ಪಂಚಾಯತಿ ಪಾಲಿನ ಹಣವನ್ನು 5 ಅಥವಾ 10 ಸಮ ಕಂತುಗಳಲ್ಲಿ ವಸೂಲಿ ಮಾಡುವ ವ್ಯವಸ್ಥೆ ಆಗಬೇಕು. ಈ ರೀತಿ ಮಾಡದಿದ್ದರೆ ಈ ಯೋಜನೆ ಕಾರ್ಯಗತವಾಗುವುದು ಕಷ್ಟವಾಗುತ್ತದೆ. ಮುಖ್ಯವಾಗಿ ಸರ್ಕಾರದವರು ಕುಡಿಯುವ ನೀರನ್ನು ಒದಗಿಸುವುದಕ್ಕೆ, ವೈದ್ಯಕೀಯ ಸೌಕರ್ಯವನ್ನು ಒದಗಿಸುವುದಕ್ಕೆ, ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಳ್ಳುವುದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಯ ವಿಷಯ. ಸರ್ಕಾರದವರು ಜಮೀನುದಾರರನ್ನು ರದ್ದು ಮಾಡಿ ಆ ಮೂಲಕ ಜನರಲ್ಲಿರುವ ನಿರುದ್ಯೋಗವನ್ನು ತೊಲಗಿಸುತ್ತೇವೆಂದು ಹೇಳುತ್ತಿದ್ದಾರೆ ಇದು ಸಾಧ್ಯವಾಗುವುದಿಲ್ಲವೆಂದು ನಾನಾದರೂ ಭಾವಿಸಿದ್ದೇನೆ. ಜಮೀನುದಾರರಿಂದ ಹೆಚ್ಚಿನ ಜಮೀನನ್ನು ಪಡೆದುಕೊಂಡರೆ ಆ ಹೆಚ್ಚುವರಿ ಜಮೀನನ್ನು ಶೇಕಡ 5 ರಷ್ಟು ಜನರಿಗೆ ಹಂಚಬಹುದು. ಅಂದರೆ ಇನ್ನೂ ಹೆಚ್ಚು ಜನ ನಿರುದ್ಯೋಗಿಗಳಿರುತ್ತಾರೆಂದು ಅರ್ಥವಾಗುತ್ತದೆ.

(ಶ್ರೀ ಎಚ್. ಜಿ. ಚೆನ್ನಪ್ಪ)

ಇವರಿಗೆಲ್ಲಾ ಜಪಾನ್ ಮಾದರಿಯಲ್ಲಿ ಗೃಹ ಕೈಗಾರಿಕೆಯನ್ನು ಹೇಳಿಕೊಟ್ಟರೆ ಮಾತ್ರ ನಮ್ಮ ದೇಶದಲ್ಲಿರುವ ನಿರುದ್ಯೋಗ ಕಡಿಮೆಯಾಗುತ್ತದೆ ಮತ್ತು ಆರ್ಥಿಕ ಪರಿಸ್ಥಿತಿಯೂ ಉತ್ತಮಗೊಳ್ಳುತ್ತದೆ. ಇಲ್ಲದಿದ್ದರೆ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಿಲ್ಲ. ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತಂದರೂ ಕೂಡ ಒಂದೊಂದು ತಾಲ್ಲೂಕಿಗೆ 500 ಜನರಿಗೆ ಅನುಕೂಲವಾಗಬಹುದು. ಇನ್ನೂ ಶೇಕಡ 70 ರಷ್ಟು ಜನರಿಗೆ ಉದ್ಯೋಗವಿರುವುದಿಲ್ಲ. ಇಂತಹವರಿಗೆ ಕೆಲಸ ಒದಗಿಸಲು ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕು. ಜಪಾನ್ ದೇಶದಲ್ಲಿ ಗೃಹ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿದೆ. ಅಲ್ಲಿ ಪ್ರತಿಯೊಂದು ಮನೆಗೂ ರಾ-ಮೆಟೀರಿಯಲ್ಸ್ ಸಪ್ಲೈ ಮಾಡಿ, ಮನೆಯಲ್ಲಿರುವ ಜನರು ಸಾಮಾನುಗಳನ್ನು ತಯಾರು ಮಾಡಿದ ಮೇಲೆ, ರಾ-ಮೆಟೀರಿಯಲ್ಸ್ ಸಪ್ಲೈ ಮಾಡಿದವರು ಹಣ ಕೊಟ್ಟು ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಈ ಕಾರಣದಿಂದಲೇ ಆ ಒಂದು ಸಣ್ಣ ದೇಶ ಆರ್ಥಿಕ ಪರಿಸ್ಥಿತಿಯಲ್ಲಿ ಅಷ್ಟೊಂದು ಮುಂದುವರಿದಿದೆ. ಆದಕಾರಣ ನಮ್ಮ ಸರ್ಕಾರದವರು ಕೂಡ ಸಣ್ಣ ಸಣ್ಣ ಕೈಗಾರಿಕೆಗಳ ಕಡೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಕೇವಲ ಭೂಸುಧಾರಣೆಯಿಂದ ಜನರನ್ನು ತೃಪ್ತಿಪಡಿಸುತ್ತೇವೆ, ಸಮಾಧಾನಪಡಿಸುತ್ತೇವೆಂದು ಸರ್ಕಾರದವರು ತಿಳಿದುಕೊಂಡಿದ್ದರೆ ಅದು ಸಾಧ್ಯವಾಗುವುದಿಲ್ಲವೆಂದು ನಾನು ಅಂದುಕೊಂಡಿದ್ದೇನೆ. ಆದ್ದರಿಂದ ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕು. ಅದಕ್ಕೆ ಹೆಚ್ಚಿನ ಹಣವನ್ನು ಮೀಸಲಾಗಿಟ್ಟು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕೆ ಸಹಾಯಮಾಡಬೇಕು, ಇಲ್ಲದಿದ್ದರೆ ಗರೀಬಿ ಹಠಾವೋ ಎನ್ನತಕ್ಕಂಥಾ ಶ್ರೀಮತಿ ಗಾಂಧಿಯವರ ಸ್ಲೋಗನ್ ಏನಿದೆಯೋ ಅದು ಬರಿ ಬಾಯಿ ಮಾತಿನಲ್ಲಿ ಉಳಿಯುತ್ತದೆಯೇ ವಿನಾ ಕಾರ್ಯಗತವಾಗುವುದಿಲ್ಲ ಎಂದು ನನಗೆ ಅನಿಸುತ್ತದೆ. ಬಡತನ ನಿರ್ಮೂಲವಾಗಬೇಕಾದರೆ ಅಧಿಕಾರಿಗಳೂ ಆ ಬಗ್ಗೆ ಕೆಲಸ ಮಾಡಲು ಮುಂದೆ ಬರಬೇಕು ಎಂದು ನಾನು ಹೇಳುತ್ತೇನೆ.

3-30 P.M.

ಇನ್ನೊಂದು ವಿಷಯ. ಕೈಗಾರಿಕೆಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೇಂದ್ರೀಕೃತವಾಗುತ್ತಿವೆ. ಕೈಗಾರಿಕೆಗಳ ವಿಕೇಂದ್ರೀಕರಣವಾಗಬೇಕು. ಕೈಗಾರಿಕೆಗಳು ಒಂದೇ ಕಡೆಯಲ್ಲಿ ಕೇಂದ್ರೀಕೃತವಾದರೆ ಅದರಿಂದ ನಾನಾವಿಧವಾದ ತೊಂದರೆಯೂ ಅನೇಕ ಸಂದರ್ಭಗಳಲ್ಲಿ ಆಗುತ್ತದೆ. ಒಂದುವೇಳೆ ದೇಶಕ್ಕೆ ಏನಾದರೂ ಗಂಡಾಂತರ ಒದಗಿದರೆ, ಶತ್ರುಗಳು ದಾಳಿ ಮಾಡಿದರೆ ಆಗ ದೇಶದ ಆರ್ಥಿಕ ಸ್ಥಿತಿ ಚಿಂತಾಜನಕವಾಗುತ್ತದೆ. ಆದ್ದರಿಂದ ಕೈಗಾರಿಕೆಗಳು ಕೇಂದ್ರೀಕೃತವಾಗುವುದನ್ನು ತಡೆಗಟ್ಟಿ ಬೆಂಗಳೂರಿನ ಸುತ್ತಮುತ್ತಲೂ ಇರುವ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಾದರೆ ಆ ಪ್ರದೇಶದ ಹಳ್ಳಿಯ ಜನಗಳಿಗೂ ಕೆಲಸವನ್ನು ಕೊಟ್ಟಂತಾಗುತ್ತದೆ. ಮತ್ತು ನಿರುದ್ಯೋಗವನ್ನು ಬಗೆಹರಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಕೈಗಾರಿಕೆಗಳನ್ನು ವಿಕೇಂದ್ರೀಕರಣಮಾಡಬೇಕು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಕೈಗಾರಿಕೆಗಳು ಕೇಂದ್ರೀಕೃತವಾಗುವುದನ್ನು ತಪ್ಪಿಸಬೇಕು. ಆ ರೀತಿ ಮಾಡದಿದ್ದರೆ ದೇಶದ ಸ್ಥಿತಿ ಚಿಂತಾಜನಕವಾಗುತ್ತದೆ. ಮತ್ತು ಹಳ್ಳಿಗಳಿಂದ ಜನಗಳು ಪಟ್ಟಣಗಳಿಗೆ ವಲಸೆ ಬಂದು ಪಟ್ಟಣಗಳಲ್ಲಿ ವಾಸಮಾಡುವುದಕ್ಕೆ ಪ್ರಾರಂಭ ಮಾಡುತ್ತಾರೆ. ಆಗ ಜನಗಳಿಗೆ ಮನೆಗಳು ಇರುವುದಿಲ್ಲ, ಕುಡಿಯುವುದಕ್ಕೆ ನೀರು ಒದಗಿಸುವುದು ಕಷ್ಟವಾಗುತ್ತದೆ. ಮನೆಗಳ ಬಾಡಿಗೆಯೂ ಜಾಸ್ತಿಯಾಗುತ್ತದೆ. ಪಟ್ಟಣದಲ್ಲಿ ಜನಸಂಖ್ಯೆ ಜಾಸ್ತಿಯಾದರೆ ಸ್ಲಂ ಬರುತ್ತದೆ. ಆಗ ಎಷ್ಟೋ ಜನ ಗುಡಿಸಲುಗಳಲ್ಲಿ, ಫುಟ್‌ಪಾತ್‌ನಲ್ಲಿ ವಾಸಮಾಡಬೇಕಾದಂತಹ ಪರಿಸ್ಥಿತಿ ಬರುತ್ತದೆ. ಇಂಥಾ ಒಂದು ಪರಿಸ್ಥಿತಿಯನ್ನು ತಪ್ಪಿಸಿ ಸಮಾಜವನ್ನು ಸುಧಾರಿಸಬೇಕಾದರೆ ನಾನು ಹೇಳಿದಂತಹ ಎಲ್ಲಾ ಅಂಶಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಐ. ಜಿ. ಸನದಿ (ಹುಬ್ಬಳ್ಳಿ).— ಸನ್ಮಾನ್ಯ ಅಧ್ಯಕ್ಷಿಣಿಯವರೇ, ನಾವು ಜನತೆಯಿಂದ ಚುನಾಯಿತರಾಗಿ ಬಂದಂಥಾ ಸಂದರ್ಭದಲ್ಲಿ ಜನತೆಯ ವಿಶ್ವಾಸವನ್ನು ಗಳಿಸುವುದಕ್ಕೆ ನಾವು ಅವರಿಗೆ ಕೊಟ್ಟಂತಹ ಕೆಲವು ಆಶ್ವಾಸನೆಗಳು ಏನಿವೆ ಅವುಗಳನ್ನು ಕುರಿತು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೊರಸೂಸಿರತಕ್ಕ ವಿಷಯಗಳ ಮೇಲೆ ಪ್ರಕಾಶವನ್ನು ಬೀರಲು ಲವಲವಿಕೆಯಿಂದ

ನಾನು ಎದ್ದು ನಿಂತಿದ್ದೇನೆ. ನಾವು ಜನತೆಗೆ ಪರಿಶುದ್ಧವಾದ ಪ್ರಜಾಪ್ರಭುತ್ವ, ಜಾತ್ಯಾತೀತ ಸಮಾಜವಾದವನ್ನು ನಿರ್ಮಾಣಮಾಡುತ್ತೇವೆಂದೂ, ದುಡಿಯುವಂತಹ ಜನಗಳಿಗೆ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆ, ವಸತಿ, ಔಷಧಿ ಬಾಳಿಗೆ ಬೇಕಾದ ಅರಿವು ಇವುಗಳನ್ನು ವ್ಯವಸ್ಥೆ ಮಾಡುತ್ತೇವೆ ಎಂದು ಜನಗಳಿಗೆ ಆಶ್ವಾಸನೆಯನ್ನು ಕೊಟ್ಟು ಬಂದಿದ್ದೇವೆ. ರಾಜ್ಯಪಾಲರ ಭಾಷಣದಲ್ಲಿ ಹೊರಸೂಸಿರತಕ್ಕ ಕೆಲವೊಂದು ವಿಷಯಗಳ ಕಡೆಗೆ ನಮ್ಮ ಗಮನವನ್ನು ಹರಿಸಿದಾಗ ಈ ಭಾಷಣ ಚಿಕ್ಕದಾಗಿದ್ದರೂ ಕೂಡ ಇದರಲ್ಲಿ ರಾಜ್ಯದ ಪ್ರಗತಿಗೆ, ಜನತೆಯ ಕಲ್ಯಾಣಕ್ಕೆ ಸಂಬಂಧಪಟ್ಟ ಅನೇಕ ಮಹತ್ತರ ವಿಷಯಗಳು ಅಡಕವಾಗಿವೆ ಎಂದು ಹೇಳಬಹುದು. ಶಾಸಕರಾದ ನಾವು ನಮ್ಮ ರಾಜ್ಯದ ಮಂತ್ರಿಮಂಡಲದವರು ಎಲ್ಲರೂ ಕೂಡ ಒಳ್ಳೆಯ ಭಾವನೆಯಿಂದ ಕಾರ್ಯತತ್ಪರರಾದರೆ ನಾವು ಜನತೆಗೆ ಕೊಟ್ಟಿರತಕ್ಕ ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ ವಿಳಂಬವಾಗಲಾರದು ಎಂದು ನಾನು ಭಾವಿಸಿಕೊಂಡಿದ್ದೇನೆ. ನಿರುದ್ಯೋಗ ನಿವಾರಣೆಯ ಬಗ್ಗೆ ಆಶ್ವಾಸನೆಯನ್ನು ಕೊಟ್ಟು ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಡುವ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಒದಗಿಸಿಕೊಟ್ಟರೆ, ಇನ್ನೊಂದು ಕಡೆ ಕಲಿಯದೆ ಇರತಕ್ಕಂಥ ಅವಿದ್ಯಾವಂತ ನಿರುದ್ಯೋಗಿಗಳು ಎಷ್ಟೋ ಜನ ಹಳ್ಳಿಗಳಲ್ಲಿ ಇದ್ದಾರೆ. ಇಂಥವರಿಗೂ ಅವರ ಯೋಗ್ಯತೆಗೆ ತಕ್ಕಂತೆ ಸ್ಥಾನಮಾನ ಮತ್ತು ಉದ್ಯೋಗವನ್ನು ಕಲ್ಪಿಸಿಕೊಡತಕ್ಕ ಜವಾಬ್ದಾರಿಯನ್ನು ನಾವು ಹೊತ್ತಿದ್ದೇವೆ. ಆದ್ದರಿಂದ ಕಲಿಯದೆ ಇರತಕ್ಕ ಅವಿದ್ಯಾವಂತ ನಿರುದ್ಯೋಗಿಗಳಿಗೂ ಕೂಡ ಸರ್ಕಾರದವರು ಉದ್ಯೋಗವನ್ನು ಒದಗಿಸಿ ಕೊಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ. ಹಳ್ಳಿಗಾಡಿನಲ್ಲಿ ರತಕ್ಕ ಜಮೀನಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟು ರೈತರು ಸಾಕಷ್ಟು ದುಡಿಯುವುದಕ್ಕೆ ಅವಕಾಶ ಮಾಡಿಕೊಡಲು ಸಾಧ್ಯವಿದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಗಳಲ್ಲಿ ನದಿಗಳಿಗೆ ಅಣೆಕಟ್ಟುಗಳನ್ನು ಹಾಕಿ ಅವುಗಳ ಮುಖಾಂತರ ರೈತರಿಗೆ ನೀರಾವರಿ ಸೌಲಭ್ಯವನ್ನು ಒದಗಿಸಬೇಕು. ಆ ರೀತಿ ಮಾಡುವುದಾದರೆ ಕೈ ಕೆಸರಾದರೆ ಬಾಯಿ ಮೊಸರಾಗುತ್ತದೆ ಎನ್ನುವ ಒಂದು ಮಾತಿಗೆ ಒಂದು ನಿದರ್ಶನವನ್ನು ತಂದುಕೊಡುವುದಕ್ಕೆ ಸಾಧ್ಯವಾಗುತ್ತದೆ.

ಭೂಸುಧಾರಣೆಯ ಬಗ್ಗೆ ಗಮನವನ್ನು ಹರಿಸಿದಾಗ ನಮ್ಮಲ್ಲಿ ಎಷ್ಟೋ ಬಂಜರು ಮತ್ತು ಬರಡು ಭೂಮಿ ಸರ್ಕಾರದ ವಶದಲ್ಲಿ ಇದೆ. ಅದು ನ್ಯಾಯವಾಗಿ ಯಾರಿಗೆ ಭೂಮಿ ಇಲ್ಲವೋ ಅಂಥವರಿಗೆ ಹಂಚಿಕೆಯಾಗಬೇಕು. ಈ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಈ ವಿಚಾರದಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡು ಕಾರ್ಯಾಚರಣೆ ಮಾಡಿದರೆ ಸಾಕಷ್ಟು ಜನಗಳಿಗೆ ಎರಡು ಹೊತ್ತಿನ ಊಟಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಜನತೆ ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿದ ಮೇಲೆ ಜನತೆಯೇ ಬೇರೆ, ಶಾಸಕರೇ ಬೇರೆ ಎನ್ನುವ ಭಾವನೆಯನ್ನು ತಂದುಕೊಳ್ಳಬಾರದು. ಅಧಿಕಾರವರ್ಗದವರಾಗಲೀ, ಮಂತ್ರಿಗಳಾಗಲಿ, ಅಥವಾ ಶಾಸಕರಾಗಲೀ, ತಾವು ಅಧಿಕಾರಿಗಳು ತಮ್ಮ ಮುಂದೆ ಸಾಲುಗಟ್ಟಿ ನಿಲ್ಲಬೇಕು ಎಂಬುದನ್ನು ಅಪೇಕ್ಷಿಸದೆ ಅವರಿಗೆ ಗೊತ್ತಾಗದಂತೆ ತೊಂದರೆಗಳನ್ನು ಹೋಗಲಾಡಿಸಲು ಪ್ರಯತ್ನ ಮಾಡಬೇಕು. ಜನಗಳಿಗೆ ನ್ಯಾಯವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ.

ಹುಬ್ಬಳ್ಳಿ ಮತ್ತು ಇತರ ಯಾವುದೇ ಪ್ರದೇಶವಾಗಲೀ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡಲು ಸಾಕಷ್ಟು ಪ್ರಯತ್ನ ಮಾಡಬೇಕು. ಕೊಳಚೆ ಪ್ರದೇಶದಲ್ಲಿ ವಾಸವಾಗಿರುವ ಜನಗಳ ಆರೋಗ್ಯ, ಮಕ್ಕಳ ಆರೋಗ್ಯ, ವಸತಿ ಸೌಕರ್ಯ ಮತ್ತು ಕುಡಿಯುವ ನೀರಿನ ಸೌಕರ್ಯ ಇವುಗಳ ಕಡೆಗೆ ಗಮನವನ್ನು ಹರಿಸಿದಾಗ ಎಂತಹ ನಾಗರೀಕನಿಗೂ ಸಹ ದುಃಖವಾಗದೆ ಇರುವುದಿಲ್ಲ. ಈ ದೃಷ್ಟಿಯಿಂದ ಈ ಕಡೆ ಸರ್ಕಾರದವರು ಗಮನಿಸಬೇಕೆಂದು ನಾನು ಹೇಳುತ್ತೇನೆ.

ಹಳ್ಳಿಗಳ ಸ್ಥಿತಿಗತಿಗಳನ್ನು ಸುಧಾರಣೆ ಮಾಡಬೇಕು. ಹಳ್ಳಿಗಾಡಿನ ಜನಗಳಿಗೆ ಕುಡಿಯುವ ನೀರಿನ ಸೌಕರ್ಯ ವಸತಿ ಸೌಕರ್ಯಗಳನ್ನು ಒದಗಿಸಬೇಕು. ರಸ್ತೆಗಳ ಸೌಕರ್ಯವನ್ನು ಒದಗಿಸಬೇಕು. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವುದಕ್ಕೆ ಸಂಪರ್ಕರಸ್ತೆ ಸೌಕರ್ಯವನ್ನು ಒದಗಿಸಬೇಕು. ಮತ್ತು ಹಳ್ಳಿಗಳಿಂದ ಪಟ್ಟಣಗಳಿಗೆ ಬರುವುದಕ್ಕೆ ರಸ್ತೆ ಸೌಕರ್ಯವನ್ನು ಒದಗಿಸಬೇಕು.

ನಾವು ರಾಷ್ಟ್ರದಲ್ಲಿ ಜಾತ್ಯಾತೀತ ಸಮಾಜವನ್ನು ನಿರ್ಮಾಣ ಮಾಡುತ್ತೇವೆ ಎಂದು ಜನತೆಗೆ ನಾವು ವಚನವನ್ನು ಕೊಟ್ಟಿದ್ದೇವೆ. ಆದರೆ ಈಗ ದೇಶದಲ್ಲಿ ಜಾತೀಯತೆ ತಾಂಡವಾಡುತಲಿ ಇರುವುದು ಕಂಡುಬರುತ್ತಿದೆ.

(ಶ್ರೀ ಹೆಚ್. ಜಿ. ಚೆನ್ನಪ್ಪ)

ಸಮಾಜಕಲ್ಯಾಣ ಇಲಾಖೆಯಲ್ಲಿ ಹರಿಜನ ಗಿರಿಜನರ ಉದ್ಧಾರಕ್ಕೆ ಸಂಬಂಧಪಟ್ಟ ಕೆಲಸಕಾರ್ಯಗಳು ನಡೆಯುತ್ತಿವೆ. ಹರಿಜನ ಗಿರಿಜನರ ಕಲ್ಯಾಣ ಸಾಧನೆಗೆ ಹಣ ಸಾಕಾದಷ್ಟು ಮಂಜೂರಾಗುತ್ತದೆ. ಆದರೆ ಅದು ಸರಿಯಾದ ರೀತಿಯಲ್ಲಿ ಉಪಯೋಗವಾಗುವ ಹಾಗೆ ಮಾಡಬೇಕು. ಈ ವಿಚಾರದಲ್ಲಿ ಶಾಸಕರಾದ ನಮ್ಮದೂ ಕರ್ತವ್ಯ ಇದೆ ಎಂದು ನಾನು ಸ್ಮರಿಸಿಕೊಳ್ಳುತ್ತೇನೆ.

ಉಚ್ಚಕುಲದಲ್ಲಿ ಹುಟ್ಟಿದ ಕೆಲವರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಅವರು ಘರದೆಯ ಒಳಗಡೆ ಇದ್ದುಕೊಂಡು ಒಳಗಡೆ ಇದ್ದಾರೋ ಇಲ್ಲವೋ ಎನ್ನುವ ಹಾಗೆ ಇದ್ದಾರೆ. ಅದರಲ್ಲೂ ಹೆಣ್ಣುಮಕ್ಕಳ ಸ್ಥಿತಿ ವ್ಯಸನಪಡುವಂಥಾದ್ದಾಗಿದೆ. ಇಂಥವರ ಬಗ್ಗೆ ಸರ್ಕಾರದವರು ತಮ್ಮ ಗಮನ ಹರಿಸಬೇಕು.

ಶಿಕ್ಷಣ ವಿಷಯದಲ್ಲಿ ಹೇಳುವುದಾದರೆ ಪಠ್ಯ ಪುಸ್ತಕ ಮತ್ತು ಹಾಗೂ ಈಗ ದೊರೆಯುವ ಶಿಕ್ಷಣದಿಂದ ಮಕ್ಕಳ ಸರ್ವಾಂಗೀಣ ಉನ್ನತಿ ಮನೋ ವಿಕಾಸ ಮಾಡುವಲ್ಲಿ ಕೆಲಮಟ್ಟಿಗೆ ನಾವು ಸಫಲರಾಗಿದ್ದೇವೆ. ಈಗ ಕೆಲವೊಂದು ಶಿಕ್ಷಣ ವೃತ್ತಪತ್ರಿಕೆಗಳ ಮುಖಾಂತರ ಪ್ರಾರಂಭವಾಗಿದೆ. ಇವೊತ್ತಿನ ದಿವಸ ದಿನಪತ್ರಿಕೆಗಳಲ್ಲಿ ಬರತಕ್ಕಂತಹ ವರ್ತಮಾನವನ್ನು ಮಕ್ಕಳು, ಮುದುಕರು ಹೆಂಗಸರು ಎಲ್ಲರೂ ನೋಡುತ್ತಿರುತ್ತಾರೆ. ಇಲ್ಲಿಯ ನಮ್ಮ ನಡೆ ನುಡಿಗಳು ಏನು, ವರ್ತನೆ ಏನೆಂಬುದು ಪತ್ರಿಕೆಗಳಲ್ಲಿ ಬರುವಾಗ ಎಲ್ಲರಿಗೂ ತಿಳಿಯುತ್ತದೆ. ಆದ್ದರಿಂದ ನಾವು ಒಳ್ಳೆಯದಾದಂತಹ ಶಿಕ್ಷಣವನ್ನು ಪೇಪರ್ ಮುಖಾಂತರ ಕೊಡುವುದಕ್ಕೆ ಪ್ರಾರಂಭ ಮಾಡಬೇಕು.

ಇನ್ನು ಪಠ್ಯಪುಸ್ತಕಗಳ ವಿಷಯವಾಗಿ ಹೇಳುವುದಾದರೆ, ಸಧ್ಯ ದೊರೆಯುವ ಶಿಕ್ಷಣದಿಂದ ಮಕ್ಕಳ ಸರ್ವಾಂಗೀಣ ಉನ್ನತಿ ಮನೋವಿಕಾಸ ಮಾಡುವಲ್ಲಿ ನಾವು ಅಸಫಲರಾಗಿದ್ದೇವೆ. ಆಸ್ಥೆ ಇಲ್ಲದ ಶಿಕ್ಷಕರು ನಿಯಮಿತರಾದರೆ, ನಿಷ್ಠೆಯಿಲ್ಲದ ವಿದ್ಯಾರ್ಥಿಗಳಿಂದ ಸಮಾಜ ಕೂಡಿಕೊಳ್ಳುವುದು. ಸಮಾಜಕ್ಕೆ ಇಂಥ ಹಸಿ ಬಿಸಿ ರಕ್ತದ ತರುಣರು ಗಂಡಾಂತರಕಾರಿಯಾಗಿ ಪರಿಣಮಿಸುವರು. ನಮ್ಮ ಇಂದಿನ ಯುವಕರು ಶಾಲಾ ಕಾಲೇಜುಗಳಲ್ಲಿ ನಿಷ್ಠೆಯಿಲ್ಲದ ಭಾವನೆಯನ್ನು ತಾಳುವುದದಿಂದ ಇದು ಗೊಂದಲಕ್ಕೆ ಎಡೆ ಮಾಡಿಕೊಡುತ್ತದೆ. ಎರಡನೆಯದಾಗಿ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣಕ್ಕಾಗಿ ಹೆಚ್ಚು ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಪ್ರೈಮರಿ ಎಜುಕೇಶನ್ ಮತ್ತು ನರ್ಸರಿ ಎಜುಕೇಶನಿಗೆ ಸರ್ಕಾರದವರು ಹೆಚ್ಚಿನ ಗಮನವನ್ನು ಹರಿಸುತ್ತಾ ಇಲ್ಲ. ನಮ್ಮ ಸಮಾಜದ ಭಾವೀ ನಾಗರೀಕರಾಗುವಂತಹ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನವನ್ನು ಸರ್ಕಾರದವರು ವಹಿಸಿ ಅವರ ಮನೋವಿಕಾಸಕ್ಕೆ ಹೆಚ್ಚಿನ ಅವಕಾಶವನ್ನು ಒದಗಿಸುವಂತೆ ಏರ್ಪಾಡುಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ತ್ರಿಭಾಷಾ ಸೂತ್ರವನ್ನು ಜಾರಿಗೆ ತಂದು ಅದಕ್ಕೆ ಪ್ರೋತ್ಸಾಹವನ್ನು ಕೊಡಬೇಕಾಗಿದೆ. ಮಾತೃಭಾಷೆ, ರಾಷ್ಟ್ರಭಾಷೆ ಮತ್ತು ಒಂದು ಅಂತರರಾಷ್ಟ್ರೀಯ ಭಾಷೆಯನ್ನು ಒಪ್ಪಿಕೊಂಡು ನಮ್ಮ ಮೈನಾರಿಟೀಸ್ ಜನರ ಭಾಷೆಯಾದ ಮರಾಠಿ, ತಮಿಳು ತೆಲಗು ಭಾಷೆಗಳಿಗೂ ಪ್ರೋತ್ಸಾಹವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಈ ಮೈನಾರಿಟೀಸ್ ಭಾಷೆಗಳಲ್ಲಿ ಎಸ್. ಎಸ್. ಎಲ್. ಸಿ. ಪಾಸಾಗಿ ಹೊರಗೆ ಬಂದ ವಿದ್ಯಾರ್ಥಿಗಳಿಗೆ ಎಲ್ಲೂ ಕೆಲಸ ದೊರೆಯುತ್ತಾ ಇಲ್ಲ. ಆದ್ದರಿಂದ ಈ ಅಲ್ಪಸಂಖ್ಯಾತರ ಭಾಷೆಗಳಿಗೂ ಸರಿಯಾದ ರಕ್ಷಣೆಯನ್ನು ನೀಡುತ್ತೇವೆಂದು ನಮ್ಮ ಈ 10 ಪಾಯಿಂಟ್ ಪ್ರೋಗ್ರಾಂನಲ್ಲಿ ಏನು ನಮೂದಿಸಿದ್ದೇವೆ ಅದನ್ನು ಯೋಗ್ಯ ರೀತಿಯಲ್ಲಿ ಕಾರ್ಯರೂಪದಲ್ಲಿಯೂ ತರಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಇನ್ನು ಶಿಕ್ಷಕರ ಆಯ್ಕೆಯಲ್ಲಿ ಕೂಡ ಜಾತಿ, ಹಣ ನೋಡದೆ, ಅವರ ಯೋಗ್ಯತೆಯ ಮೇಲೆ ಆಯ್ಕೆಯನ್ನು ಮಾಡಬೇಕು. ಇದಕ್ಕೆ ವಿದ್ಯಾಮಂತ್ರಿಗಳು ಹೆಚ್ಚಿನ ಗಮನವನ್ನು ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ ಜಾತ್ಯಾತೀತತೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. 'ಪತಿತಂ ಷತಂತಂ ಪಶಿಷ್ಯಂತಂ' ಎಂದು ಹೇಳಿದ ಹಾಗೆ ನಾವು ಮಾಡಬೇಕಾಗಿದೆ. ಆದರೆ ಇದನ್ನು ಮಾಡಬೇಕಾದರೆ, ಅದಕ್ಕೆ ಸರಿಯಾದ ಎಜುಕೇಶನಾಗಲಿ, ಅಥವಾ ಬೇಕಾಗಿರತಕ್ಕಂತಹ ಒಂದು ಯೋಗ್ಯವಾದ ವಾತಾವರಣಗಳನ್ನು ಆಗಲೀ ಉಂಟು ಮಾಡುವುದಕ್ಕೆ ನಮಗೆ ಸಾಧ್ಯವಾಗಲಿಲ್ಲ. ಇವತ್ತು ಸ್ವಧರ್ಮ ನಿಷ್ಠೆ, ಪರಧರ್ಮ ಸಹಿಷ್ಣುತೆ ನಮ್ಮಲ್ಲಿ ಇರಬೇಕು. ಸ್ವಧರ್ಮದಲ್ಲಿ ಎಷ್ಟು ನಿಷ್ಠೆ, ಪ್ರೀತಿ ಇದೆಯೋ ಅಷ್ಟೇ ಪ್ರೀತಿ ನಿಷ್ಠೆ ಪರಧರ್ಮದಲ್ಲಿಯೂ ಇರಬೇಕಾದುದು ಮುಖ್ಯ. ಇಲ್ಲದಿದ್ದರೆ, ಭಾಷೆ ಭಾಷೆಗಳಿಗೆ, ಜಾತಿಜಾತಿಗಳಿಗೆ, ಗುಂಪು ಗುಂಪುಗಳಿಗೆ ಹೊಡೆದಾಟ ಬಡಿದಾಟ ಉಂಟಾಗುವುದು. ನಮ್ಮ ಧರ್ಮ ನೈತಿಕ ನೆಲಗಟ್ಟಿನ ಮೇಲೆ ಮಾನವತೆಯನ್ನು

ಸ್ಥಿರಗೊಳಿಸುವಲ್ಲಿ ಸೃಷ್ಟಿಯಾಗಬೇಕಾಗಿದೆ. ನಮ್ಮಲ್ಲಿ ಸಮನ್ವಯ ದೃಷ್ಟಿ ಹುಟ್ಟಬೇಕು ಮತ್ತು ಜಾತ್ಯಾತೀತತೆಯ ಸರ್ವಧರ್ಮ ಸಮಭಾವ ನೆಲಗೊಳ್ಳಬೇಕು. ಅದೇ ರೀತಿ ಬೇರೆಯವರನ್ನು ಕಾಣತಕ್ಕಂತಹ ಒಂದು ಪ್ರೇಮ ಭಾವ ನಮ್ಮದಾಗಬೇಕು. ಈ ನುಡಿಗಳನ್ನು ಹಿಂದೆ ದೊಡ್ಡ ದೊಡ್ಡ ಮಹಾನ್ ವ್ಯಕ್ತಿಗಳು ಹೇಳಿದ್ದಾರೆ. ಆದರೆ ಅದನ್ನು ನಾವು ಪಾಲನೆ ಮಾಡಬೇಕಾಗಿದೆ. ನಾವು ಸಕಲ ಜೀವಾತ್ಮರಿಗೆ ಲೇಸನೇ ಬಯಸಿ, ನಾವು ಕುಲಜರಾಗಬೇಕು. ಇದು ನಮ್ಮ ಶಾಂತಿ ಸ್ಥಾಪನೆಯಲ್ಲಿ ನೆರವಾಗಿಯೇ ಆಗುತ್ತದೆ. ಆದರೆ ನಾವು ಇವತ್ತು ಗುಲ್ಬರ್ಗ ದಲ್ಲಾಗಲಿ, ಹುಬ್ಬಳ್ಳಿಯಲ್ಲಾಗಲಿ ನೋಡತಕ್ಕ ಪರಿಸ್ಥಿತಿ ಏನು ? ಒಂದಲ್ಲ ಒಂದು ರೀತಿ ಯಲ್ಲಿ ಶಾಂತಿಯ ವಾತಾವರಣ ಹೋಗಿ ಗೊಂದಲದ ವಾತಾವರಣ ಉಂಟಾಗಿದ್ದರ ಕಾರಣವಾದರೂ ಏನು ? ಇಂತಹ ಕಡೆಗಳಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡು ವಲ್ಲಿ ಶಾಸನಗಳು ಮಹತ್ತರವಾದ ಪಾತ್ರವನ್ನು ವಹಿಸಿವೆ. ಇಂದು ಕೊಳ್ಳಿ, ಕೊಲೆ, ಲೂಟಿ ಬೆತ್ತ ಪ್ರಹಾರ, ಅಸ್ತ್ರ ಪ್ರಯೋಗ, ಬಲಪ್ರಯೋಗದಿಂದ ಶಾಂತಿಯನ್ನು ಕಾಪಾಡಲು ಸಾಧ್ಯವಿಲ್ಲ. ಆದರೆ ಹೃದಯ ಪರಿವರ್ತನೆ ಮಾಡಿ ಶಾಂತಿಯನ್ನು ಕಾಪಾಡಲು ಸಾಧ್ಯವಾಗಬಹುದು, ಅದನ್ನು ನಾವು ನಮ್ಮ ಶಿಕ್ಷಣದ ಮುಖಾಂತರ ಮಾಡಬೇಕಾಗಿದೆ. ಇವತ್ತು ಜನರಿಗೆ ಯಾರಲ್ಲಿಯೂ ವಿಶ್ವಾಸ ವಿಲ್ಲ, ವಿಶ್ವಾಸ ಘಾತಕತನ ಹೆಚ್ಚಾಗಿದೆ. ಜನರನ್ನು ಕಂಡರೆ ಜನರು ಹೆದರುತ್ತಿದ್ದಾರೆ; ಎಲ್ಲೆಲ್ಲಿಯೂ ಜನರಿಗೆ ಸಂದೇಹ–ಶಾಂತಿಯ ಪರದೆಯ ಹಿಂದೆ ಕ್ರಾಂತಿಯ ಸನ್ನಾಹ ನಡೆಯುತ್ತಿದೆ. ನಾವು ನಮ್ಮ ಹಿಂದಿನ ಚರಿತ್ರೆಯನ್ನು ತೆಗೆದು ನೋಡಿದರೆ ಅಲ್ಲಿ ನಡೆದುದೇನು ? ಕ್ರುಸೇಡರ್ ಕಂಡ ಕ್ರಿಶ್ಚಿ ಯಾನಿಟಿ—ಅದರಲ್ಲಿ ಆದುದೇನು ? ಸರ್ವಾಧಿಕಾರ ದಾಹ. ಕುರುಕ್ಷೇತ್ರ ಮಹಾಭಾರತದಲ್ಲಿ ನಡೆದು ದೇನು–ಸೋದರವಧೆಯ ರಕ್ತರಂಜಿತ ಮಹಾಭಾರತ—ಕುರುಕ್ಷೇತ್ರ. ಅದೇ ರೀತಿ ಅಧಿಕಾರ ದಾಹದ, ಕಣ್ಣೀರಿನ ಕಥೆಯ 'ಕರ್ಬಲಾ'ದ ಇಸ್ಲಾಂ. ಈಗ ನಾವು ಕಾಣುತ್ತಿರುವುದೇನು ? ವರ್ಣಸಂಕರ ಒತ್ತಡಕ್ಕೆ ಒಳಗಾದ 'ಕಲ್ಯಾಣ ಕ್ರಾಂತಿ'. ನಮ್ಮ ಧರ್ಮ ಮನೋವೃತ್ತಿಗಳಲ್ಲಿ ಇವೆಲ್ಲಾ ಕ್ರಾಂತಿಗಳು ನಡೆದುವು. ನಮ್ಮಲ್ಲಿ ಜಾತ್ಯಾತೀತತೆಯ ಮನೋವೃತ್ತಿ ಬೆಳೆದು ಬರಬೇಕು. ಆರೀತಿ ಬರುವಂತೆ ನಮ್ಮ ಶಿಕ್ಷಣವನ್ನು ಸರಿಯಾದ ರೀತಿಯಲ್ಲಿ ಕೊಂಡೊಯ್ಯಬೇಕು. ಇವತ್ತು ಗುರುಗಳಲ್ಲಿ ಧರ್ಮವಿಲ್ಲ ವಿಶ್ವಾಸವಿಲ್ಲ ಅಂದರೆ ವಿಶ್ವಾಸಘಾತುಕತೆ ಬಂದೇ ಬರುತ್ತದೆ. ಇವತ್ತು ಕೆಲವರು ಸುಖವಾಗಿ ಬಾಳ ಬಹುದು ; ಆದರೆ ಎಲ್ಲರೂ ಹಾಗೆ ಬಾಳಲು ಸಾಧ್ಯವೇ ?

ನಮ್ಮ ಪ್ರಾಚೀನ ಮಂತ್ರವಾದಂತಹ ; ಸರ್ವೇ ಸುಖಿನಃ ಸಂತು
ಸರ್ವೇ ಸಂತು ನಿರಾಮಯಾಃ
ಸರ್ವೇ ಭದ್ರಾಣಿ ಪಶ್ಯಂತು
ಮಾಕಶ್ಚಿತ್ ದುಃಖಭಾಗ್ ಭವೇತ್

ಎಂಬುದನ್ನು ನಾವು ಯಾವಾಗಲೂ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇದು ನಮ್ಮ ಜಾತ್ಯಾತೀತತೆಯ ರಾಷ್ಟ್ರದ ಹಾಗೂ ಮಾನವ ಕುಲದ ಮಂತ್ರವಾದರೆ ಮಾತ್ರ ನಾವು ಮಂಗಳವನ್ನು ಸಾಧಿಸುವುದಕ್ಕೆ ಸಾಧ್ಯವೆಂಬುದನ್ನು ತಿಳಿದುಕೊಳ್ಳಬೇಕು. ಶ್ರೀಮತಿ ಇಂದಿರಾಗಾಂಧಿಯವರು ಹಾಗೂ ನಮ್ಮ ಸಭೆಯ ಅಧ್ಯಕ್ಷಿಣಿಯವರು ಮಹಿಳೆಯರಾಗಿದ್ದಾರೆ. ಇಂತಹ ಮಹಾ ತಾಯಿಯವರ ರಾಜ್ಯದಲ್ಲಿ ಸರ್ಕಾರ ಎಲ್ಲರಿಗೂ ತಾಯಾಗಿ ರಾಜ್ಯದಲ್ಲಿ ಸಂಪೂರ್ಣವಾದ ಬದಲಾವಣೆಗಳನ್ನು ಮಾಡಿ ಶಾಂತಿ ಯಿಂದ ಇರುವುದಕ್ಕೆ ಸಾಧ್ಯವಿದೆ. ಇಂದಿರಾ ಯುಗ, ಸುಖ ಶಾಂತಿಯ ಯುಗ ಆಗುವುದರಲ್ಲಿ ಸಂದೇಹವಿಲ್ಲ. ಮನುಷ್ಯರಿಂದ ಆಗದ ಸುಧಾರಣೆಗಳು ಇಂದು ಮಹಿಳೆಯರಿಂದ ಆಗುವ ಶುಭ ಚಿಹ್ನೆಗಳು ಕಂಡು ಬಂದಿವೆ. ಇಂತಹ ಕಾರ್ಯಗಳಿಗೆ ನಾವೆಲ್ಲರೂ ಶಾಸಕರು ಎಲ್ಲ ರೀತಿಯ ಸಮರ್ಥ ಸಹಕಾರವನ್ನು ನೀಡಿ ಸರಕಾರಕ್ಕೆ ಸಹಾಯವನ್ನು ಮಾಡಿ ನಮ್ಮ 5 ವರ್ಷಗಳ ಅವಧಿಯನ್ನು ಸದು ಪಯೋಗ ಪಡಿಸಿಕೊಂಡು, ನಾವು ಏನು ಜನರಿಗೆ ಆಶ್ವಾಸನೆಗಳನ್ನು ಕೊಟ್ಟಿದ್ದೇವೆ, ಅವುಗಳನ್ನು ಮಾಡಿ, ಜನತೆಯ ವಿಶ್ವಾಸಕ್ಕೆ ಪಾತ್ರರಾಗಬೇಕೆಂದು ಹೇಳಿ, ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಗೋಪಿನಾಥ್ ಆರ್. ಸಾಂಡ್ರ (ಹುಬ್ಬಳ್ಳಿ ರೂರಲ್).—ಮಾನ್ಯ ಅಧ್ಯಕ್ಷರೇ, ಹೆಸರು ವಾಸಿಯಾದಂತಹ ರಾಜಕಾರಣಿಗಳಾಗಿರುವ ರಾಜ್ಯಪಾಲರು ಕೇವಲ ಮೂರು ತಿಂಗಳ ಕಾಲ ರಾಜ್ಯದ ಆಡಳಿತವನ್ನು ವಹಿಸಿಕೊಂಡರೂ ಕೂಡ, ನಮ್ಮ ರಾಜ್ಯದ ಅನೇಕ ಸಮಸ್ಯೆಗಳನ್ನು ಅರಿತು ಕೊಂಡು ರಾಜ್ಯದ ಅಭಿವೃದ್ಧಿ ಹೇಗೆ ಆಗಬೇಕೆನ್ನುವ ಮಾತನ್ನು ತಮ್ಮ ಭಾಷಣದಲ್ಲಿ ಅಳವಡಿಸಿ ಕೊಂಡು ಬಹಳ ಸುತ್ತ್ಯಾರ್ಹವಾಗಿ ಹೇಳಿದುದಕ್ಕಾಗಿ ನಾನು ಅವರನ್ನು ಮೊದಲನೆಯದಾಗಿ ಅಭಿ

(ಶ್ರೀ ಗೋಪಿನಾಥ್ ಆರ್. ಸಾಂಧ್ರ)

ನಂದಿಸುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರು ಕನ್ನಡವನ್ನು ಕಲಿತುಕೊಂಡು ಕನ್ನಡದಲ್ಲಿ ಭಾಷಣವನ್ನು ಮಾಡಿದರು. ಇದು ಒಂದು ಒಳ್ಳೆಯ ಕೆಲಸ. ಕಳೆದ 16 ವರ್ಷಗಳಿಂದ ನಾವು ನಮ್ಮ ಆಡಳಿತ ಭಾಷೆಯನ್ನು ಈವರೆಗೂ ಜಾರಿಗೆ ತರಲಿಲ್ಲ. ಇದು ಬಹಳ ದುಃಖದಾಯಕವಾದ ಮಾತು. ಆದರೆ ನಮ್ಮ ಪಕ್ಷದವರು ಇವತ್ತು ಆಡಳಿತವನ್ನು ವಹಿಸಿರುವುದರಿಂದ ಕನ್ನಡ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಆದಷ್ಟು ಜಾಗ್ರತೆಯಾಗಿ ಮಾಡುತ್ತಾರೆಂದು ನಂಬುತ್ತೇನೆ.

ಇನ್ನು ಕಾಯಿದೆ ಮತ್ತು ಸುವ್ಯವಸ್ಥೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ಕಾಯಿದೆ ಮತ್ತು ಸುವ್ಯವಸ್ಥೆಯು ರಾಜ್ಯದಲ್ಲಿ ಚೆನ್ನಾಗಿದೆ. ಆದರೆ ಕೆಲವೊಂದು ಭಾಗಗಳಲ್ಲಿ ಅಂದರೆ, ಗುಲ್ಬರ್ಗ ಮತ್ತು ಹುಬ್ಬಳ್ಳಿಯಲ್ಲಿ ಕೆಲವೊಂದು ಜಾತೀಯ ಸಂಸ್ಥೆಗಳು ಹಾಗೂ ಕೆಲವು ವ್ಯಕ್ತಿಗಳು ತಮ್ಮ ಸ್ವಾರ್ಥ ಸಾಧನೆಗೋಸ್ಕರ ಜಾತಿ ಭಾವನೆಯನ್ನು ಜನರಲ್ಲಿ ಕೆರಳಿಸಿ ಗೊಂದಲ ಮತ್ತು ಗಲಾಟೆಯನ್ನು ಎಬ್ಬಿಸಲು ಪ್ರಯತ್ನ ಮಾಡಿದ್ದಾರೆ. ಹುಬ್ಬಳ್ಳಿ ಗಲಾಟೆಯಲ್ಲಿ ಅನೇಕ ಮಾರ್ವಾಡಿ ಅಂಗಡಿಯವರು, ಪುಸ್ತಕ ವ್ಯಾಪಾರಿಗಳು, ಹಣ್ಣಿನ ಅಂಗಡಿಯವರು, ಮತ್ತಿತರ ಕೆಲವು ಅಂಗಡಿಯವರು ಬಹಳ ನಷ್ಟಕ್ಕೆ ತುತ್ತಾಗಿದ್ದಾರೆ. ಇಂತಹ ಜನರಿಗೆ ಕೂಡಲೇ ಸರ್ಕಾರದವರು ಪರಿಹಾರವನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೆಲವು ಪುಸ್ತಕ ಭಂಡಾರಗಳು ಸುಟ್ಟು ಬೂದಿಯಾಗಿವೆ. ಆ ಪುಸ್ತಕ ಭಂಡಾರದ ಮಾಲೀಕರು ತುಂಬಾ ಕಷ್ಟಕ್ಕೆ ಈಡಾಗಿದ್ದಾರೆ, ಅಂತಹವರಿಗೆ ಸರ್ಕಾರದಿಂದ ಸಹಾಯ ಒದಗದಿದ್ದರೆ ಅವರಿಗೆ ಇಷ್ಟರಲ್ಲಿಯೇ ಹುಚ್ಚು ಹಿಡಿಯುತ್ತದೆ. ಅದಕ್ಕಾಗಿ ಸರ್ಕಾರದವರು ಕೂಡಲೇ ಅವರಿಗೆ ಸಹಾಯ ನೀಡಬೇಕೆಂದು ಮನವಿ ಮಾಡುತ್ತೇನೆ.

ಎರಡನೆಯದಾಗಿ ಬರಗಾಲ ಪರಿಹಾರ ಕಾಮಗಾರಿಗಳನ್ನು ನಮ್ಮ ಜಿಲ್ಲೆಯಲ್ಲಿ ಹೇಗೆ ಮಾಡುತ್ತಿದ್ದಾರೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವತ್ತಿನ ದಿವಸ ನಮ್ಮ ಧಾರವಾಡ ಜಿಲ್ಲೆಯಲ್ಲಿ ಅನೇಕ ಕೆಲಸಕಾರ್ಯಗಳನ್ನು ಪಿ.ಡಬ್ಲ್ಯು.ಡಿ. ಮುಖಾಂತರ ಮತ್ತು ಟಿ.ಡಿ.ಬಿ. ಮುಖಾಂತರ ಮಾಡಿಸುತ್ತಿದ್ದರೂ ಪಿ.ಡಬ್ಲ್ಯು.ಡಿ. ಹಾಗೂ ಜಿಲ್ಲಾಧಿಕಾರಿಗಳ ನಡುವೆ ಒಂದು ವೈಷಮ್ಯ ಬಂದು ಯಾವ ಕೆಲಸ ಆಗಬೇಕೋ ಅದು ಆಗುತ್ತಾ ಇಲ್ಲ. ನಮ್ಮ ಧಾರವಾಡ ಜಿಲ್ಲೆಯಲ್ಲಿ 6 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಅದನ್ನು ಖರ್ಚುಮಾಡದೆ ಅಷ್ಟು ಹಣವನ್ನು ಸರ್ಕಾರಕ್ಕೆ ಉಳಿತಾಯ ಮಾಡಿದ್ದೂ ಒಂದು ದೊಡ್ಡ ಉದಾಹರಣೆಯಾಗಿದೆ. ಏಕೆಂದರೆ ಪಿ.ಡಬ್ಲ್ಯು.ಡಿ.ಗೂ ಮತ್ತು ಜಿಲ್ಲಾಧಿಕಾರಿಗಳಿಗೂ ಒಂದು ಸಮನ್ವಯವಿಲ್ಲ. ಆದ್ದರಿಂದ ಇಂತಹ ಅನ್ಯಾಯಗಳು ಆಗಬಾರದೆಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ನಮ್ಮ ಜಿಲ್ಲೆಯಲ್ಲಿ ಒಂದು ರಸ್ತೆಯನ್ನು 11 ಕಿಲೊಮೀಟರ್‌ವರೆಗೆ ಮಾಡಬೇಕೆಂದು ಸರ್ಕಾರದವರು ಹಿಂದೆ ಹಣವನ್ನು ಕೊಟ್ಟಿದ್ದರು. ಅದು ಆಗದೇ ಇದ್ದುದರಿಂದ ನಂತರ ಕೇವಲ 2 ಕಿಲೊ ಮೀಟರ್ ರಸ್ತೆ ನಿರ್ಮಿಸಲು ಸಾಕಷ್ಟು ಹಣ ಕೊಟ್ಟರು. ಸಂಬಂಧಪಟ್ಟ ಇಲಾಖೆಯವರು ಆ ಹಣವನ್ನೂ ಸಹ ಸುಮಾರು 6 ತಿಂಗಳು, 8 ತಿಂಗಳುಗಳವರೆಗೆ ಹಾಗೇ ಇಟ್ಟುಕೊಂಡಿದ್ದರಿಂದ ಆ ಹಣವೂ ಸಹ ಲ್ಯಾಪ್ಸ್ ಆಗುತ್ತದೆಂದು ವ್ಯಥಾ ಅನ್ಯಾಯವಾಗಿ ಖರ್ಚುಮಾಡಿದ್ದಾರೆ. ಇದರಿಂದ ಸರ್ಕಾರದ ದುಡ್ಡು ಹೀಗೆ ಹಾಳಾಗಿ ಹೋಗುತ್ತಿದೆ. ಏಕೆಂದರೆ ಅಧಿಕಾರಿಗಳ ಮನೋವೃತ್ತಿ ಕೊಟ್ಟಿರುವ ಹಣವನ್ನು ಹೇಗೋ ಖರ್ಚುಮಾಡಿ ಬಿಡುವುದು ಆಗಿದೆ. ಶಾಶ್ವತವಾದ ರೀತಿಯಲ್ಲಿ ಹಣದ ಉಪಯೋಗ ಆಗುತ್ತಾ ಇಲ್ಲ. ಅಧಿಕಾರಿಗಳಾಗಿರುವವರು ಕೇವಲ ಹಣ ಖರ್ಚುಮಾಡಿ ಬಿಲ್ಲುಗಳನ್ನು ಮಾಡುವುದೇ ಅವರ ಕೆಲಸ ಆಗಿದೆ. ಅಂಥಾದ್ದನ್ನು ಸರ್ಕಾರದವರು ಕೂಡಲೇ ತಡೆಯಬೇಕು.

ಇನ್ನು ನಮ್ಮ ರಾಜ್ಯದ ಚಲನಚಿತ್ರ ಉದ್ಯಮದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಒಂದು ಉದ್ಯಮದ ಬಗ್ಗೆ ಇದುವರೆಗೂ ಸರ್ಕಾರದವರು ಎಷ್ಟು ಆಸ್ಥೆ ವಹಿಸಬೇಕಾಗಿತ್ತೋ, ಎಷ್ಟು ಸಹಾಯ ಮತ್ತು ಸಹಕಾರಗಳನ್ನು ನೀಡಬೇಕಾಗಿತ್ತೋ ಅಷ್ಟು ನೀಡಿಲ್ಲ. ನಮ್ಮ ಈ ಚಲನಚಿತ್ರ ಉದ್ಯಮದಲ್ಲಿ ಕನ್ನಡ ಚಲನಚಿತ್ರ ಹಿಂದೆ ಬಿದ್ದಿಲ್ಲ. ಪ್ರತಿವರ್ಷವೂ ಒಂದೊಂದು ರೀತಿಯಲ್ಲಿ ಪ್ರಗತಿಯಾಗುತ್ತಿದೆ. ಕನ್ನಡ ಚಲನಚಿತ್ರಗಳು ರಾಷ್ಟ್ರಪತಿಯವರಿಂದ ಪದಕಗಳನ್ನು ಪಡೆದಿವೆ. ಅಂತರರಾಷ್ಟ್ರಗಳಲ್ಲಿ ಕನ್ನಡ ಚಲನಚಿತ್ರದ ಬಗ್ಗೆ ಒಂದು ಹೆಚ್ಚಿನ ಗೌರವ ಸಿಗುತ್ತಿದ್ದರೂ ಕನ್ನಡ ಚಲನಚಿತ್ರ ಪ್ರಪಂಚದಲ್ಲಿ ಎಷ್ಟು ಪ್ರಗತಿಯಾಗಬೇಕಾಗಿತ್ತೋ ಅಷ್ಟು ಆಗಿಲ್ಲ. ಕನ್ನಡ ಚಲನಚಿತ್ರ

ನಿರ್ಮಾಪಕರಿಗೂ ಮತ್ತು ಡಿಸ್ಟ್ರಿಬ್ಯೂಟರಿಗೂ ಅನೇಕ ತೊಂದರೆಗಳು ಉದ್ಭವಿಸುತ್ತವೆ. ಇವತ್ತು ಹುಬ್ಬಳ್ಳಿ ಮತ್ತು ಬೆಂಗಳೂರಿನಲ್ಲಿ ಕನ್ನಡ ಚಲನಚಿತ್ರಗಳ ಡಿಸ್ಟ್ರಿಬ್ಯೂಷನ್ನಿಗೆ ಅನೇಕರು ಮುಂದೆ ಬರುತ್ತಾ ಇಲ್ಲ. ಸಿನಿಮಾ ಥಿಯೇಟರುಗಳಲ್ಲಿ ಪ್ರದರ್ಶನ ಮಾಡುವ ಕನ್ನಡ ಚಲನಚಿತ್ರಗಳ ಸಂಖ್ಯೆ ಬಹಳ ಕಡಿಮೆ ಇದೆ. ಅಲ್ಲಿ ಎಷ್ಟು ಪ್ರಗತಿಯಾಗಬೇಕೋ ಅಷ್ಟು ಆಗಿಲ್ಲ. ಆದ್ದರಿಂದ ಖಾಸಗೀ ವ್ಯಕ್ತಿಗಳು ಯಾರೇ ಆಗಲೀ ಥಿಯೇಟರುಗಳನ್ನು ಕಟ್ಟಿಸುತ್ತೇವೆಂದು ಮುಂದೆ ಬಂದರೆ ಅವರಿಗೆ ಎಲ್ಲಾ ತರಹ ಸಹಾಯ ಸೌಕರ್ಯಗಳನ್ನು ಒದಗಿಸುವುದು ಸರ್ಕಾರದ ಬಹು ಮುಖ್ಯವಾದ ಕರ್ತವ್ಯವೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ. ಹೇಗೆ ಸರ್ಕಾರದವರು ಹೊಸ ಕೈಗಾರಿಕೆಗಳಿಗೆ ನೀರು, ವಿದ್ಯುಚ್ಛಕ್ತಿ, ಈ ಸೌಕರ್ಯಗಳನ್ನು ಪುಕ್ಕಟೆಯಾಗಿ ಕೊಟ್ಟು ಬೆಳೆಸುತ್ತಿದ್ದೀರೋ ಹಾಗೆಯೇ ಈ ಒಂದು ಕೈಗಾರಿಕೆಯನ್ನು ಬೆಳೆಸುವುದು ಬಹಳ ಉತ್ತಮವಾದುದಾಗಿದೆ. ನಮ್ಮ ಕಡೆಯಿಂದ ಸುಮಾರು 15 ಕೋಟಿ ರೂಪಾಯಿಗಳನ್ನು ಸರ್ಕಾರದ ಬೊಕ್ಕಸಕ್ಕೆ ನೀಡುತ್ತಿರುವುದರಿಂದ ಇಂತಹ ಒಂದು ಕೈಗಾರಿಕೆಗೆ ಸರ್ಕಾರದವರು ಹೆಚ್ಚಿನ ಸಹಾಯವನ್ನು ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ. ಈಗ ಫಿಲಂ ಡೆವಲಪ್‌ಮೆಂಟ್ ಕೌನ್ಸಿಲ್ ಎಂಬುದಾಗಿ ಈಚೆಗೆ ಮೈಸೂರು ರಾಜ್ಯದಲ್ಲಿ ಪ್ರಾರಂಭವಾಗಿದೆ. ಆದೀಗ ನಿರ್ಜೀವವಾಗಿದೆ. ಅದನ್ನು ಪುನರುಜ್ಜೀವನ ಗೊಳಿಸಬೇಕು. ಅದರ ಮುಖಾಂತರವಾದರೂ ಚಲನಚಿತ್ರದ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು.

ಇನ್ನೊಂದು ವಿಷಯ. ಇಲ್ಲಿ ಥಿಯೇಟರುಗಳನ್ನು ಕಟ್ಟಿಸಬೇಕು. ಥಿಯೇಟರುಗಳನ್ನು ಕಟ್ಟಿಸಬೇಕೆನ್ನುವುದರಲ್ಲಿ ಸತ್ಯಾಂಶ ಇದೆ. ಮದ್ರಾಸಿನಲ್ಲಿ ಕೇವಲ ಒಂದೂವರೆ ಲಕ್ಷ ರೂಪಾಯಿಗಳಲ್ಲಿ ಸಣ್ಣ ಥಿಯೇಟರುಗಳನ್ನು ಕಟ್ಟಿಸಿ ಚಲನಚಿತ್ರದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಆ ಸರ್ಕಾರದ ಬೊಕ್ಕಸಕ್ಕೆ ಎಷ್ಟೋ ರೂಪಾಯಿಗಳ ವರಮಾನ ಅಂತಹ ಚಲನಚಿತ್ರಮಂದಿರಗಳಿಂದ ಬರುತ್ತದೆ. ಅದೇ ರೀತಿ ನಮ್ಮಲ್ಲೂ ಮಾಡಬೇಕು. ನಮ್ಮಲ್ಲಿ ಟೂರಿಂಗ್ ಟಾಕೀಸ್‌ಗಳು ಬೇರೆ ಇವೆ. ಅವುಗಳಿಗೆ ಲೈಸೆನ್ಸ್ ಕೊಡುವ ಬಗ್ಗೆ ಹಳೆಯ ಮೈಸೂರಿನಲ್ಲಿ ಹಾಗೂ ಹೊಸ ಮೈಸೂರಿನಲ್ಲಿ ಬೇರೆ ಬೇರೆ ಪದ್ಧತಿಗಳಿವೆ. ಇದು ಸರಿಯಲ್ಲ. ಒಂದೇ ಪದ್ಧತಿ ಇರಬೇಕು. ಒಟ್ಟಿನಲ್ಲಿ ಚಲನಚಿತ್ರ ಅಭಿವೃದ್ಧಿಮಂಡಲಿಗಳನ್ನು ಪುನರುಜ್ಜೀವನ ಗೊಳಿಸಬೇಕು. ಸರ್ಕಾರದವರು ಅದಕ್ಕೆ ಬೇಕಾದಷ್ಟು ಹಣವನ್ನು ಒದಗಿಸಿಕೊಡಬೇಕು.

ಇನ್ನು ಕಚ್ಚಾ ಫಿಲಂಗಳನ್ನು ಮದ್ರಾಸಿಗೆ ಹೋಗಿ ತೆಗೆದುಕೊಳ್ಳಬೇಕು. ಮದ್ರಾಸಿಗೆ ಹೋಗುವುದಕ್ಕೆ ಬದಲು ಇಲ್ಲಿಯೇ ಒಂದು ಡಿಪೋವನ್ನು ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಕೇಳಿಕೊಳ್ಳುತ್ತೇನೆ. ಇನ್ನು ಚಲನಚಿತ್ರಗಳಲ್ಲಿ ಕನ್ನಡದಲ್ಲಿ ಕಾರ್ಪೊರೇಷನ್ ಇರುವ ರೀತಿಯಲ್ಲಿ ಮಾಡಬೇಕೆಂದು ಆಶೆಪಡುತ್ತೇನೆ. ನಮ್ಮ ಕನ್ನಡ ಚಲನಚಿತ್ರಗಳಲ್ಲಿ ಕಚ್ಚಾ ಕಾರ್ಪೊರೇಷನ್ ಸಿಗುತ್ತಾ ಇಲ್ಲ. ಕೊನೆಯಪಕ್ಷ ಒಂದೆರಡು ಆ ರೀತಿಯಾದಂಥ ಕನ್ನಡ ಚಲನಚಿತ್ರಗಳನ್ನು ನಿರ್ಮಾಣಮಾಡುವಂತೆ ನೋಡಿಕೊಳ್ಳಬೇಕು. ಇನ್ನೂ ಅನೇಕ ಸಮಸ್ಯೆಗಳಿವೆ. ಈಗ ಕನ್ನಡ ಚಲನಚಿತ್ರಗಳ ಸೆನ್ಸಾರ್ ಆಗಬೇಕಾಗಿದೆ. ಸೆನ್ಸಾರ್ ಆಗಲು ಮದ್ರಾಸಿಗೆ ಹೋಗಿ, ಅಲ್ಲಿ ಕನ್ನಡ ತಿಳಿಯದೇ ಇದ್ದವರು ಇದ್ದರೆ ಅಂತಹ ಸಂದರ್ಭದಲ್ಲಿ ಕನ್ನಡ ಚಲನಚಿತ್ರಕ್ಕೇ ಪ್ರತ್ಯೇಕವಾಗಿ ಒಂದು ಬೋರ್ಡ್ ಇರಬೇಕು.

ಅದರಂತೆಯೇ ಇನ್ನು ನಾಟಕ ಕಂಪನಿಗಳ ವಿಷಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇತ್ತೀಚೆಗೆ ನಾಟಕ ಕಂಪನಿಗಳೂ ಕೂಡ ತೀರಾ ಶೋಚನೀಯ ಪರಿಸ್ಥಿತಿಯಲ್ಲಿವೆ. ಕಲಾವಿದರು ಒಂದುಗೂಡಿ ನಾಟಕವಾಡಿದರೆ, ಅಂತಹ ಕಂಪೆನಿಗಳಿಗೆ ಲೈಸೆನ್ಸ್ ಕೊಡಬೇಕು ಮತ್ತು ಸರ್ಕಾರದಿಂದ ಹೆಚ್ಚಿನ ಹಣ ಸಹಾಯವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನೇಕಾರರ ಸಮಸ್ಯೆ. ನಮ್ಮ ರಾಜ್ಯದಲ್ಲಿ ಒಂದು ಲಕ್ಷ 50 ಸಾವಿರ ಮಗ್ಗಗಳಿವೆ. ಸುಮಾರು 10 ಲಕ್ಷ ಜನರು ಈ ಉದ್ಯಮಮಾಡುತ್ತಿದ್ದಾರೆ. ದುರ್ದೈವದಿಂದ ಇವತ್ತು ಅವರಿಗೆ ಯಾವುದೇ ತರಹ ಸಹಾಯವೂ ಸರ್ಕಾರದಿಂದ ದೊರಕುತ್ತಾ ಇಲ್ಲ. ಆ ವಿಚಾರವನ್ನು ನಾನು ಈ ಸಭೆಯಲ್ಲಿ ಬಹಳ ವಿಷಾದದಿಂದ ಹೇಳುತ್ತಿದ್ದೇನೆ. ಇವತ್ತು ನಮ್ಮ ರಾಜ್ಯದಲ್ಲಿ ಎಷ್ಟು ಸಹಕಾರ ಕೈಮಗ್ಗಗಳ ಸಂಘಗಳಿವೆಯೋ ಅಷ್ಟು ಸಂಘಗಳ ಮೂಲಕ ಅಲ್ಲಿರತಕ್ಕ ಎಲ್ಲ ನೇಕಾರರಿಗೂ ಸಹ ಹೆಚ್ಚಿನ ಸಹಾಯ ಮಾಡಬೇಕು. ಪ್ರತಿಯೊಂದು ಕುಟುಂಬಕ್ಕೂ ಒಂದು ಕೈಮಗ್ಗ ಇರುವಂತೆ ಏರ್ಪಾಡು ಮಾಡಬೇಕೆಂದು ನಾನು ಸರ್ಕಾರದವರನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಯಾವ

(ಶ್ರೀ ಗೋಪಿನಾಥ್ ಆರ್. ಸಾಂಧ್ರ)

ರೀತಿಯಲ್ಲಿ ತನ್ನ ಸಲಕರಣೆಗಳನ್ನು ಕೊಳ್ಳಲು ಸರ್ಕಾರದವರು ರೈತನಿಗೆ ಸಹಾಯ ಮಾಡುತ್ತೀರೋ ಅದೇ ರೀತಿಯಲ್ಲಿ ಇವರಿಗೂ ಸಹಾಯಧನ ಕೊಡಬೇಕೆಂದು ನಾನು ಸರ್ಕಾರದವರನ್ನು ಮತ್ತೊಮ್ಮೆ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಇವತ್ತಿನದಿವಸ ಹುಬ್ಬಳ್ಳಿಯಲ್ಲಿರುವಂತೆ ಕ್ಯಾಲೆಂಡರ್ ಪ್ರಿಂಟಿಂಗ್, ಫಿನಿಷಿಂಗ್ ಕೋ—ಆಪರೇಟಿವ್ ಸೊಸೈಟಿಗಳನ್ನು ನಮ್ಮ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ವ್ಯವಸ್ಥೆಮಾಡಬೇಕು. ನ್ಯೂಯಿಂಗ್ ಮೆಷೀನುಗಳನ್ನು ಸಹ ತಂದು ಕೊಡಿಸಬೇಕು. ಒಟ್ಟಿನಲ್ಲಿ ಇವತ್ತಿನದಿವಸ ಎಲ್ಲಿಯೂ ಎಳ್ಳಷ್ಟೂ ಕಚ್ಚಾಮಾಲು ದೊರಕುತ್ತಾ ಇಲ್ಲ. ಅವರ ಬೆಲೆ ಹೋದ ವರ್ಷ 42 ರೂಪಾಯಿಗಳಿದ್ದುದು ಈಗ 62 ರೂಪಾಯಿಗಳಾಗಿವೆ. 40ನೇ ನಂಬರ್ ನೂಲು ಬಡ ನೇಕಾರರೆಲ್ಲರಿಗೂ ಸೊಸೈಟಿಗಳ ಮೂಲಕ ಸಿಗುವಂತೆ ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಅಧ್ಯಕ್ಷರು ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜೊತೆಗೆ ಇವತ್ತು ನಮ್ಮ ಸರ್ಕಾರದ ಧೋರಣೆ ಹೇಗಿದೆಯೆಂದರೆ, ಅಧಿಕಾರಿಗಳು ನಿವೃತ್ತರಾಗುವ ವಯಸ್ಸಿಗೆ ಬಂದರೂ ಅಂತಹವರಿಗೆ ಎಕ್ಸ್‌ಟೆನ್‌ಷನ್ ಕೊಡುವ ಪದ್ಧತಿ ಇದೆ. ಅದನ್ನು ಕೂಡಲೇ ತೆಗೆದುಹಾಕಬೇಕು. ಯುವಕರಿಗೆ ಆ ಚಾರ್ಜನ್ನು ವಹಿಸಿಕೊಡಬೇಕು. ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡಬೇಕೆನ್ನುವಂಥ ಕಾಲದಲ್ಲಿ, ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ದೊರಕಿಸಿ ಕೊಡುವುದಕ್ಕೆ ಅವಕಾಶವಿರುವಾಗ ನಿವೃತ್ತರಾದವರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಂಡು ಅವರ ಸೇವೆಯನ್ನು ಎಕ್ಸ್‌ಟೆಂಡ್ ಮಾಡುವುದಕ್ಕೆ ಖಂಡಿತವಾಗಿಯೂ ಅವಕಾಶವನ್ನು ಕೊಡಬಾರದೆಂದು ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-00 P.M.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣದ ಬಗ್ಗೆ ಟೀಕೆ ಮಾಡುವುದು ಅಷ್ಟು ಸಮಂಜಸವಾಗಿದ್ದಂತೆ ನನಗೆ ಕಂಡುಬರುವುದಿಲ್ಲ. ಇದು ರಾಜ್ಯಪಾಲರ ಭಾಷಣವಲ್ಲ. ಇದನ್ನು ಆಡಳಿತ ಪಕ್ಷದವರು ತಯಾರು ಮಾಡಿ ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆ. ಆದುದರಿಂದ ಈ ಭಾಷಣ ಆಡಳಿತ ಪಕ್ಷದ್ದು. ನಾವು ರಾಜ್ಯಪಾಲರ ಬಗ್ಗೆ ಒಂದು ಹೆಚ್ಚಿನ ಗೌರವವನ್ನು ಇಟ್ಟುಕೊಂಡಿರಬೇಕಾದ್ದು ನ್ಯಾಯ. ಆದರೆ ಸಾಮಾನ್ಯವಾಗಿ ಈ ದಿನ ಈ ರಾಜ್ಯಪಾಲರ ಸ್ಥಾನಕ್ಕೆ ಯಾರನ್ನು ಹಾಕುತ್ತಿದ್ದಾರೆ ಎಂದರೆ ಯಾರು ರಾಜಕೀಯದಿಂದ ನಿವೃತ್ತರಾಗುತ್ತಾರೋ ಅಥವಾ ಕೆಲವು ಪ್ರದೇಶಗಳಲ್ಲಿ ಯಾರು ರಾಜಕೀಯದಲ್ಲಿ ಬಹಳ ಪ್ರಭಾವಶಾಲಿಗಳಾಗಿರುತ್ತಾರೋ ಅಂಥವರನ್ನು ಅಲ್ಲಿಂದ ಓಡಿಸಲು ಅವರನ್ನು ತಂದು ಈ ಸ್ಥಾನಕ್ಕೆ ಹಾಕುತ್ತಿದ್ದಾರೆ. ಅಂಥ ರಾಜಕೀಯ ಪ್ರಭಾವಶಾಲಿಗಳನ್ನು 'ಗೆಟ್ ರಿಡ್ಡಾಫ್' ಮಾಡತಕ್ಕಂಥ ಒಂದು ಮನೋವೃತ್ತಿ ಕೇಂದ್ರ ಸರ್ಕಾರದಲ್ಲಿ ಇದ್ದಂತೆ ಕಾಣಬರುತ್ತಿದೆ. ನಾನು ಈಗ ರಾಜ್ಯಪಾಲರ ಭಾಷಣವನ್ನು ಟೀಕೆ ಮಾಡುವುದಕ್ಕೆ ಬದಲಾಗಿ ಇದು ಆಡಳಿತ ಪಕ್ಷದವರ ಭಾಷಣ ಎಂದು ಹೇಳಿ ಇದನ್ನು ಟೀಕೆ ಮಾಡಲು ನಿಂತಿದ್ದೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಪಕ್ಷದವರು ರಾಜ್ಯದಲ್ಲಿ 'ಗರಿಬೀ ಹಟಾವೋ' ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆಂಬುದರ ವಿಚಾರದಲ್ಲಿ ಒಂದು ಚಕಾರವನ್ನೂ ಕೂಡ ಹೇಳಿಲ್ಲ. ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್ನಿನ ಬಗ್ಗೆ ಈ ಹಿಂದೆ ಒಂದು ವಿಜಿಲೆನ್ಸ್ ಸಮಿತಿ ಎಂಬುದಾಗಿ ಮಾಡಲಾಗಿತ್ತು. ಆ ಸಮಿತಿಯವರು ಒಂದು ವರದಿಯನ್ನು ತಯಾರಿಸಿದ್ದಾರೆ. ಅದು ಈಗಾಗಲೇ ಸರಕಾರದವರ ಕೈ ಸೇರಿದೆ. ಆದರೆ ಅದರ ಬಗ್ಗೆ ಸರಕಾರದವರ ಧೋರಣೆ ಏನು ಎಂಬುದನ್ನೂ ಕೂಡ ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿಲ್ಲ. ಆ ವರದಿಯನ್ನಾದರೂ ಈ ಮಾನ್ಯ ಸಭೆಯ ಮುಂದೆ ಮಂಡಿಸಬೇಕಾಗಿತ್ತು. ಅದನ್ನು ಮಂಡಿಸದಿರುವುದಕ್ಕೆ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

ಇನ್ನು ನಮ್ಮ ಬೆಂಗಳೂರಿನಲ್ಲಿ ಟ್ರಸ್ಟ್ ಬೋರ್ಡ್ ಎಂಬ ಒಂದು ಸಂಸ್ಥೆ ಇದೆ. ಇದರ ಬಗ್ಗೆ ಕೂಡ ರಾಜ್ಯಪಾಲರು ಒಂದು ಮಾತನ್ನು ಹೇಳಿಲ್ಲ. ಈ ಬೋರ್ಡನ್ನು 1946—47 ರಲ್ಲಿ ಬಡವರಿಗೆ ಈ ನಗರದಲ್ಲಿ ನಿವೇಶನಗಳನ್ನು ಒದಗಿಸತಕ್ಕ ಬಗ್ಗೆ ಸ್ಥಾಪನೆ ಮಾಡಲಾಯಿತು. ಆದರೆ ಉದ್ದೇಶ ನೆರವೇರಲಿಲ್ಲ—ಬೋರ್ಡ್‌ನೋ ಸ್ಥಾಪಿತವಾಯಿತು. ಈ ದಿವಸ ಸದಾಶಿವನಗರದಲ್ಲಿ—ಅಂದರೆ ಆ

ಬಡಾವಣೆಯಲ್ಲಿ ಯಾರಾದರೂ ಒಬ್ಬ ಬಡವನಿಗೆ ನಿವೇಶನ ಸಿಕ್ಕಿದೆಯೇ? ಅಥವಾ ಅಲ್ಲಿ ಯಾರು ಯಾರಿಗೆ ಈ ದಿವಸ ನಿವೇಶನಗಳು ಸಿಕ್ಕಿವೆಯೋ ಅವರೆಲ್ಲರೂ ಈ ಬೆಂಗಳೂರು ನಗರವಾಸಿಗಳೇ? ಅಥವಾ ಮೈಸೂರಿನವರೇ? ಅಲ್ಲಿ ನಿವೇಶನಗಳನ್ನು ಪಡೆದಿರತಕ್ಕ ಜನರು ಇಂಡಿಯಾದೇಶದ ನಾನಾ ಭಾಗಗಳಲ್ಲಿ ಇರತಕ್ಕವರು. ಅಲ್ಲದೆ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡಿರತಕ್ಕ ಮಾಜೀ ಮಂತ್ರಿಗಳಿಗೆ, ಹಾಲಿ ಮಂತ್ರಿ ಸ್ಥಾನಗಳಲ್ಲಿ ಇರತಕ್ಕವರಿಗೆ ಮಾತ್ರ ಅಲ್ಲಿ ನಿವೇಶನಗಳು ಸಿಕ್ಕಿವೆ. ಕಾರಣ ಅಲ್ಲಿರತಕ್ಕ ಅಧಿಕಾರವರ್ಗದವರು ತಮಗೆ ಇಷ್ಟಬಂದವರಿಗೆ ನಿವೇಶನಗಳನ್ನು ಕೊಡುತ್ತಿದ್ದಾರೆ. ನಿಯಮಗಳ ಪ್ರಕಾರ ನಿವೇಶನಗಳನ್ನು ಹಂಚುತ್ತಿಲ್ಲ. ನಾನೂ ಕೂಡ ಪ್ರಾರಂಭದಲ್ಲಿ ಅದರ ಒಬ್ಬ ಸದಸ್ಯನಾಗಿದ್ದೆ. ಅಲ್ಲಿ ನಡೆಯುತ್ತಿರುವಂಥ ಮಹಾಪರಾಧಗಳು ಇನ್ನೆಲ್ಲಿಯೂ ನಡೆಯುತ್ತಿಲ್ಲ.

ಇನ್ನು ಬಂಗ್ಲಾದೇಶದ ಜನತೆಗೆ ಸಹಾಯ ಮಾಡತಕ್ಕ ಉದ್ದೇಶದಿಂದ ಸರಕಾರದವರು ಜನರ ಮೇಲೆ ಒಂದು ತೆರಿಗೆಯನ್ನು ಹಾಕತಕ್ಕ ಉದ್ದೇಶದಿಂದ ಬಂಗ್ಲಾ ಸ್ಟ್ಯಾಂಪನ್ನು ಜಾರಿಗೆ ತಂದರು. ಈಗ ಅಲ್ಲಿ ನಡೆಯುತ್ತಿದ್ದ ಯುದ್ಧ ಅಥವಾ ಜಗಳ ಮುಗಿದಿದೆ. ಆದರೆ ಈ ಟ್ಯಾಕ್ಸ್ ಮಾತ್ರ ಇನ್ನೂ ರದ್ದಾಗಲಿಲ್ಲ. ಈ ಒಂದು ನೆಪದ ಮೇಲೆ ಸರಕಾರ ಜನರ ಮೇಲೆ ಕೋಟ್ಯಂತರ ರೂಪಾಯಿಗಳ ತೆರಿಗೆಯನ್ನು ಹಾಕಿದೆ. ಹಿಂದೆ 1952ರಲ್ಲಿ ಮದ್ರಾಸ್—ಕೇರಳ ಮತ್ತು ಆಂಧ್ರ ಈ ಮೂರೂ ಪ್ರದೇಶಗಳು ಒಂದಾಡಳಿತದಲ್ಲಿದ್ದಾಗ ಮದ್ರಾಸಿನಲ್ಲಿ ಕಮ್ಯೂನಿಷ್ಟರ ಪ್ರಭಾವ ಹೆಚ್ಚಾಗಿದ್ದುದರ ಪ್ರಯುಕ್ತ ಕಾಂಗ್ರೆಸ್ ಪಕ್ಷದವರಿಗೆ ಮಂತ್ರಿಮಂಡಲ ಮಾಡತಕ್ಕ ಬಲವಿಲ್ಲದಿದ್ದ ಕಾರಣ ಶ್ರೀ ರಾಜಗೋಪಾಲಾಚಾರ್ ಅವರನ್ನು ಶ್ರೀ ಕಾಮರಾಜ್ ಅವರು ಅಲ್ಲಿನ ಮುಖ್ಯ ಮಂತ್ರಿಯಾಗಬೇಕೆಂದು ಪ್ರಾರ್ಥಿಸಿಕೊಂಡರು. ಅದರಂತೆ ರಾಜಗೋಪಾಲಾಚಾರ್ ಅವರು ಮದ್ರಾಸಿನ ಮುಖ್ಯಮಂತ್ರಿಗಳೂ ಆದರು. ಆಗ ರಾಜ್ಯದಲ್ಲಿ ಪಾನ ನಿರೋಧವನ್ನು ಜಾರಿಗೆ ತರಬೇಕಾಗಿ ಬಂದಾಗ ಅದನು ರದ್ದು ಮಾಡುವುದರಿಂದ ಸರಕಾರಕ್ಕೆ ವರ್ಷಂಪ್ರತಿ ಎಷ್ಟು ನಷ್ಟವಾಗುತ್ತಿತ್ತೋ ಅಷ್ಟನ್ನು ಬೇರೆ ಒಂದು ತೆರಿಗೆ ರೂಪದಲ್ಲಿ ಜನರಿಂದ ಬರುವಂತೆ ಮಾಡಿ ಆ ಪಾನನಿರೋಧವನ್ನು ಜಾರಿಗೆ ತರಬೇಕೆಂದಾಯಿತು. ಆಗ ಜನರ ಮೇಲೆ ನೂರು ರೂಪಾಯಿಗಳ ವಾರಾಟ ತೆರಿಗೆಯ ಮೇಲೆ 50 ಪೈಸೆ ತೆರಿಗೆ ಕೊಡಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಿದರು. ಅತ್ತ ಕುಡಿಯುವುದನ್ನು ಅಲ್ಲಿ ಸಂಪೂರ್ಣವಾಗಿ ತಡೆಗಟ್ಟಿದಿದ್ದರೂ ಕಳೆದ ಮೂವತ್ತು ವರ್ಷಗಳಿಂದ ಆ ಕುಡಿತದ ಬಾಬಿನಿಂದಲೂ ಸರ್ಕಾರಕ್ಕೆ ಆದಾಯ ಬರುತ್ತಿದೆ. ಇತ್ತ ಈ ತೆರಿಗೆಯಿಂದಲೂ ಸರ್ಕಾರಕ್ಕೆ ಆದಾಯ ಬರುತ್ತಿದೆ. ಪಾನ ನಿರೋಧ ಜಾರಿಗೆ ಬಾರದಿದ್ದರೂ ಅಲ್ಲಿ ವಿಧಿಸಲಾಗಿದ್ದ ತೆರಿಗೆಯನ್ನು ರದ್ದು ಮಾಡಬೇಕೆಂಬ ಮನೋಭಾವ ಆ ಸರ್ಕಾರಕ್ಕೆ ಇನ್ನೂ ಬಂದಿಲ್ಲ. ಈಗ ಬಂಗ್ಲಾದೇಶದವರ ಬಗ್ಗೆ ಹಾಕಿರತಕ್ಕ ತೆರಿಗೆಯ ವಿಷಯವೂ ಹಾಗೆ ಆಗಿದೆ. ಒಂದಾವರ್ತಿ ಹುಲಿ ಮನುಷ್ಯನ ರಕ್ತದ ರುಚಿಯನ್ನು ಆಕಸ್ಮಿಕವಾಗಿ ಕಂಡುಕೊಂಡರೆ ಅದಕ್ಕೆ ಮತ್ತೆ ಅದನ್ನು ಬಿಡುವುದಕ್ಕೆ ಇಷ್ಟವೇ ಇರುವುದಿಲ್ಲ ಎನ್ನುವಂತೆ ಇಲ್ಲಿಯೂ ಹಾಗೆ ಆಗಿದೆ. ರಾಜ್ಯಪಾಲರಾದರೂ ತಮ್ಮ ಭಾಷಣದಲ್ಲಿ ಆ ತೆರಿಗೆಯನ್ನು ಯಾವಾಗ ತೆಗೆದುಹಾಕುತ್ತಾರೆ ಎಂಬುದನ್ನು ಏಕೆ ತಿಳಿಸಬಾರದಾಗಿತ್ತು?

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಚಾರ. ಇದನ್ನು ಸರಕಾರದವರು ಏತಕ್ಕಾಗಿ ತಂದರೋ ಗೊತ್ತಾಗುತ್ತಿಲ್ಲ. ಈ ದಿವಸ ಜಗತ್ತಿನಲ್ಲಿ ಎಲ್ಲಾ ರಾಷ್ಟ್ರಗಳೂ ಚೈನಾದೇಶಕ್ಕೆ ಏಕೆ ಹೆದರುತ್ತಿವೆ? ಆ ದೇಶದ ಜನಸಂಖ್ಯೆಯನ್ನು ನೋಡಿತಾನೆ? ಅಲ್ಲಿ ಹಾಗಿದ್ದರೆ ಇಲ್ಲಿ ಒಂದು ಕಾನೂನು ಮಾಡಿ ಜನಸಂಖ್ಯೆಯನ್ನು ನಾಶ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಈ ಕಾನೂನು ಏನಿದ್ದರೂ ಕೇವಲ ಮುಸಲ್ಮಾನೇತರರಿಗೆ ಮಾತ್ರವೇ ಅನ್ವಯಿಸತಕ್ಕದ್ದಾಗಿದೆ. ಮುಸಲ್ಮಾನರು ಈ ದಿವಸ ಒಬ್ಬರಲ್ಲ ನಾಲ್ಕು ಜನ ಹೆಂಗಸರನ್ನು ಲಗ್ನಮಾಡಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಹಿಂದುಗಳಲ್ಲಿ ಒಬ್ಬ ಹೆಂಡತಿ ಜೀವಂತಳಾಗಿದ್ದರೆ ಇನ್ನೊಬ್ಬ ಹೆಂಗಸನ್ನು ಲಗ್ನವಾಗುವಂತಿಲ್ಲ. ಹಾಗೆ ಲಗ್ನವಾದರೆ ಅದೊಂದು ದೊಡ್ಡ ಅಪರಾಧವಾಗುತ್ತದೆ. ಹೀಗೆ ಇದೇ ರೀತಿ ಈ ಫ್ಯಾಮಿಲಿ ಪ್ಲಾನಿಂಗ್ ಎನ್ನುವುದು ಇನ್ನು 20 ವರ್ಷಗಳ ಕಾಲ ಮುಂದುವರಿದರೆ ನಮ್ಮ ಮಕ್ಕಳು ಮುದುಕರಾಗುವ ಹೊತ್ತಿಗೆ ದೇಶದಲ್ಲಿ ಮುಸಲ್ಮಾನರ ಸಂಖ್ಯೆ ಎಷ್ಟು ಜಾಸ್ತಿಯಾಗಿ ಬೆಳೆದಿರುತ್ತದೆ, ಇನ್ನುಳಿದ ಹಿಂದುಗಳ ಸಂಖ್ಯೆ ಎಷ್ಟು ಇಳಿಮುಖವಾಗಿರುತ್ತದೆ ಎಂಬ ಆಲೋಚನೆ ಯಾರ ತಲೆಯಲ್ಲಾದರೂ ಇದೆಯೇ?

ಇನ್ನು ಪೋಲೀಸ್ ಸಿಬ್ಬಂದಿಯನ್ನು ಸ್ವಲ್ಪ ಜಾಸ್ತಿಮಾಡಲಾಗಿದೆ ಎಂದು ಈ ವರದಿಯಲ್ಲಿ ಹೇಳಿದ್ದಾರೆ. ಇವಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಮಂತ್ರಿಗಳೇ ಹೇಳಬೇಕು. ಈ ದಿವಸ ಬೆಂಗಳೂರು ಮೈಸೂರು ನಗರಗಳಲ್ಲಿ ದಿನವಹಿ ರಸ್ತೆಗಳಲ್ಲಿ ನಡೆಯುತ್ತಿರುವ ಆಕ್ಸಿಡೆಂಟುಗಳ ವಿಚಾರ ಹೇಳತೀರದಾಗಿದೆ. ಇವುಗಳನ್ನು ತಡೆಗಟ್ಟುವುದಕ್ಕೆ ಯಾವ ಪ್ರಯತ್ನವನ್ನೂ ಕೈಗೊಂಡಂತೆ

(ಶ್ರೀ ಕೆ. ಎಂ. ನಾಗಣ್ಣ)

ಕಾಣಬರುತ್ತಿಲ್ಲ. ಆಟೋರಿಕ್ಷಾದವನು ಕಾರಿನವನಿಗಿಂತ ಸ್ಪೀಡಿನಲ್ಲಿ ಓಡಿಸುವುದಕ್ಕೆ ಪ್ರಯತ್ನ ಮಾಡುತ್ತಾನೆ.

ರಾಜ್ಯದ ಪೋಲೀಸರು ಈಗ ನಡೆಯುತಕ್ಕ ಘಟನೆಗಳನ್ನು ತಪ್ಪಿಸಲಿಕ್ಕೆ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಆಟೋರಿಕ್ಷಾಗಳು, ಬಸ್ಸುಗಳು, ಲಾರಿಗಳು ಓವರ್ ಸ್ಪೀಡ್ ಮಾಡುವುದನ್ನು ತಪ್ಪಿಸುವ ಗೋಜಿಗೂ ಸಹ ಹೋಗದಿರುವುದು ಖಂಡನೀಯವಾದುದು. ಬೇರೆ ರಾಜ್ಯದಲ್ಲಿ ಇರುವ ಹಾಗೆ ವಾಹನಗಳು ಜಾಸ್ತಿ ವೇಗವಾಗಿ ಹೋಗುವುದನ್ನು ನಿಲ್ಲಿಸಬೇಕು. ಅದನ್ನು ಸರ್ಕಾರದವರು ಬ್ಯಾನ್ ಮಾಡಬೇಕು ಎಂದು ಮನವಿಮಾಡಿಕೊಳ್ಳುತ್ತೇನೆ.

ಇನ್ನು ಕ್ಯಾಟಲ್ ಮೆನೇಸ್ ವಿಷಯ. ಶ್ರೀ ರಾಮೇಗೌಡರು ಮಾತನಾಡುವಾಗ ಬಹಳವಾಗಿ ಹೇಳಿದ್ದಾರೆ. ಅವರು ಹೇಳಿರುವುದರಲ್ಲಿ ವಾಸ್ತವಾಂಶ ಇದೆ. ಏಕ್‌ದಮ್ ದನಗಳನ್ನು ಬೇರೆ ಕಡೆಗೆ ಸಾಗಿಸುವುದಕ್ಕಾಗುವುದಿಲ್ಲ. ಮದ್ರಾಸ್ ಸರ್ಕಾರದವರು ಅವುಗಳಿಗೋಸ್ಕರ ಒಂದು ಕಾಲೋನಿ ಮಾಡಿ ಅವುಗಳ ಪೋಷಕರಿಗೆ ಮನೆಗಳನ್ನು ಕಟ್ಟುವ ಏರ್ಪಾಡು ಮಾಡಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಮದ್ರಾಸಿಗೆ ಹೋಗಿ, ಮದ್ರಾಸ್ ರಾಜ್ಯದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ತಿಳಿದುಕೊಂಡು ಬಂದು ಅದೇ ರೀತಿ ನಮ್ಮ ಬೆಂಗಳೂರು ನಗರದಲ್ಲಿಯೂ ಮಾಡಬೇಕು. ಈಗ ಮುಕ್ಕಾಲು ಭಾಗ ರಸ್ತೆಯನ್ನು ದನಗಳು ಆಕ್ರಮಿಸಿಕೊಂಡು ಮಲಗಿಕೊಳ್ಳುತ್ತವೆ. ಅವುಗಳ ಪೋಷಕರ ಮೇಲೆ ಯಾವ ವಿಧವಾದ ಕಾನೂನನ್ನು ಜಾರಿ ಮಾಡದೆ ಅವರಿಗೆ ವಸತಿ ಸೌಕರ್ಯವನ್ನು ಒದಗಿಸಿ ಕೊಟ್ಟು ಇಲ್ಲಿಂದ ವರ್ಗಾಯಿಸಬೇಕು ಎಂದು ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ದವಸ ಧಾನ್ಯಗಳ ಬೆಲೆ ಮತ್ತು ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗಿರುವುದನ್ನು ಕಡಿಮೆ ಮಾಡುವ ಬಗ್ಗೆ ಯಾವ ವಿಧವಾದ ಹೇಳಿಕೆಯನ್ನೂ ಕೊಟ್ಟಿಲ್ಲ. ಇದು ವಿಷಾದಕರವಾದ ಸಂಗತಿ. ಕಾಂಗ್ರೆಸ್ (ಆರ್) ಪಾರ್ಟಿಯ ಪ್ರಣಾಳಿಕೆಯಲ್ಲಿ ಈ ಒಂದು ಮಾತು ಹೇಳಿದ್ದಾರೆ, ಜಾಸ್ತಿ ಬೆಲೆಗಳನ್ನು ತಡೆಗಟ್ಟುತ್ತೇವೆ ಎಂದು. ಮೊನ್ನೆಕೂಡ ಚುನಾವಣಿ ಪ್ರಣಾಳಿಕೆಯಲ್ಲಿ ಕೂಡ ಹೇಳಿದ್ದಾರೆ. ಆದರೆ ಕಾಂಗ್ರೆಸ್ ಪರವಾಗಿ ಚುನಾಯಿತರಾಗಿ ಬಂದ ಮಂತ್ರಿಗಳು ರಾಜ್ಯಪಾಲರ ಭಾಷಣದಲ್ಲಿ ಬೆಲೆಗಳ ಬಗ್ಗೆ ಒಂದು ಮಾತನ್ನೂ ಹೇಳಿಸದೆ ಇರುವುದು ವಿಷಾದಕರ. ಎಷ್ಟು ಮಟ್ಟಿಗೆ ಈ ಬೆಲೆಗಳು ಏರಿವೆ ಎಂದರೆ ಇದು ಗಗನಕ್ಕೆ ಹೋಗಿದೆ. ಇದನ್ನು ಕಡಿಮೆ ಮಾಡುವುದಕ್ಕೆ ಯಾವ ವಿಧವಾದ ಪ್ರಯತ್ನವನ್ನು ಮಾಡುತ್ತಿಲ್ಲ. ರೂಪಾಯಿ 1-30 ಕ್ಕೆ ಒಂದು ಕೆ. ಜಿ. ಅಕ್ಕಿ ಕೊಡುತ್ತೇವೆ ಎಂದು ಪತ್ರಿಕೆಯಲ್ಲಿ ವರದಿಯಾಗಿದ್ದನ್ನು ನೋಡಿದ್ದೇನೆ. ಯಾವ ಫೇರ್ ಪ್ರೈಸ್ ಡಿಪೋಗೆ ತರುವುದಕ್ಕೆ ಸೋದರೂ ಮೊದಲೇ ಆ ಅಕ್ಕಿಯನ್ನು ಮಾರಿ ಹೊಲಸು ಅಕ್ಕಿಯನ್ನು ಡಿಪೋದಲ್ಲಿಟ್ಟಿರುತ್ತಾರೆ. ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದು ಅವಶ್ಯಕ. ಜನಕ್ಕೆ ಕಷ್ಟ ಕಾಲ ಬಂದಿರುವಾಗ ಅದರ ಬಗ್ಗೆ ಪರಿಶೀಲನೆ ಮಾಡುವುದು ಅಗತ್ಯ. ಆಹಾರ ಸಚಿವರು ಇದನ್ನು ಗಮನಿಸುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನೊಂದು, ಶ್ರೀಮಾನ್ ಚೆನ್ನಬಸಪ್ಪನವರು ಗಮನಿಸಬೇಕಾದ ವಿಷಯ. ಅವರಿಗೆ ನದಿ ನೀರಿನ ಬಗ್ಗೆ ಹೆಚ್ಚಿನ ಮಾಹಿತಿ, ಅನುಭವವಿದೆ. ನಿನ್ನೆದಿವಸ ಕೇಂದ್ರ ಸರ್ಕಾರದವರು ನದಿ ನೀರಿನ ಹಕೋರ್ಟಿಯನ್ನು ತೆಗೆದುಕೊಳ್ಳಬೇಕೆಂದಿದ್ದಾರೆ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ನಮ್ಮ ರಾಜ್ಯದಲ್ಲಿ ಹುಟ್ಟಿ ಹರಿಯುತಕ್ಕ ನದಿ ನೀರಿನ ಹಕೋರ್ಟಿಯನ್ನು ಅವರು ತೆಗೆದುಕೊಂಡರೆ ನಿಮಗೇನು ಕೆಲಸ? ಇದನ್ನು ಕೇಂದ್ರ ವಹಿಸಿಕೊಳ್ಳುವುದರಿಂದ ನಮ್ಮ ಸರ್ಕಾರಕ್ಕೆ ಇಂತಕ್ಕ ಕೆಲಸ ಕಡಿಮೆ ಆಗಿ, ಬೆಂಗಳೂರು ಕಾರ್ಪೊರೇಷನ್‌ಗಿರತಕ್ಕ ಕೆಲಸವನ್ನು ನೀವು ಕಸಿದುಕೊಳ್ಳಬೇಕಾಗುತ್ತದೆ ಅಷ್ಟೆ. ಆದ್ದರಿಂದ ನದಿ ನೀರಿನ ಹಕೋರ್ಟಿಯನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಮೈಸೂರು ದೇಶವನ್ನು ನೀರಿನ ಹಂಚಿಕೆಯ ಬಗ್ಗೆ ಎಚ್ಚರಿಕೆಯಿಂದ ಇದ್ದು ಕಾಪಾಡಬೇಕೆಂದೂ, ಆ ರೀತಿ ಮಾಡುತ್ತಾರೆಂದೂ ತಿಳಿದುಕೊಂಡಿದ್ದೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇಂಟರ್ ಸ್ಟೇಟ್ ರಿವರ್ ವಾಟರ್ಸ್ ಏನಿದೆ ಇದು ಆಯಾ ರಾಜ್ಯಗಳಿಗೆ ಸಂಬಂಧಪಟ್ಟದ್ದೇ ವಿನಹ ಕೇಂದ್ರ ಸರ್ಕಾರಕ್ಕೆ ಕಾನ್‌ಸ್ಟಿಟ್ಯೂಷನ್ ಪ್ರಕಾರವಾಗಲೀ ಅಥವಾ ಇನ್ನಾವ ಕಾನೂನು ಪ್ರಕಾರವಾಗಲೀ ಅದರ ಬಗ್ಗೆ ಹಕ್ಕು ಇಲ್ಲ. ಹಾಗೆ ಏನಾದರೂ ಮಾಡಬೇಕಾದರೆ, ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನಲ್ಲಿ ಬೇರೆ ಲಾ ಮಾಡಬೇಕು ಅಥವಾ ಕಾನ್‌ಸ್ಟಿಟ್ಯೂಷನ್‌ನಲ್ಲಿ ಅವಶ್ಯವಾದ ತಿದ್ದುಪಡಿ ಮಾಡಬೇಕು. ನದಿ ನೀರಿನ ಹಕ್ಕು ಬಾಧ್ಯತೆಗಳು ಮತ್ತು ವಿತರಣೆಯ ಸಂಬಂಧವಾಗಿ ಎರಡು ರಾಜ್ಯಗಳು ವ್ಯಾಜ್ಯ ಮಾಡಿದರೆ ಅವರು

ಪ್ರವೇಶ ಮಾಡಿ ತೀರ್ಮಾನ ಮಾಡುವುದಕ್ಕೆ ಸಹಾಯ ಮಾಡಬಹುದು. ಇದು ತೀರ್ಮಾನವಾಗದೇ ಹೋದರೆ ಒಂದು ಟ್ರಿಬ್ಯೂನಲ್ ಅಪಾಯಿಂಟ್ ಮಾಡತಕ್ಕದ್ದು ಇಷ್ಟೇ ಅವರ ಅಧಿಕಾರ. ಮೊನ್ನೆ ನಾನೂ ಕೂಡ ನೋಡಿದೆ, ಪ್ರೆಸ್ ರಿಪೋರ್ಟರ್ ಬಂದ ಕೂಡಲೆ ಅದರ ಕೆಳಗೆ ಮತ್ತೊಂದು ರಿಪೋರ್ಟರ್ ಇದೆ. ಅದನ್ನು ತಾವು ಓದಲಿಲ್ಲ ಅಂತ ಕಾಣುತ್ತದೆ. ಈಗ ನಾನು ಏನು ಹೇಳಿದ್ದೇನೆ ಅದೇ ವಿಷಯ ಅಲ್ಲಿ ಹೇಳಿದ್ದಾರೆ. ಆದ್ದರಿಂದ ನದಿ ನೀರಿನ ವಿಷಯದಲ್ಲಿ ಎರಡು ರಾಜ್ಯಗಳು ಒಂದಕ್ಕೊಂದು ಒಪ್ಪಂದ ಮಾಡಿಕೊಳ್ಳಲಿಕ್ಕೆ ಸಹಾಯ ಮಾಡಬೇಕಾಗಿದೆ. ಕಾವೇರಿ, ಗೋದಾವರಿ ಎಲ್ಲಾ ತೆಗೆದುಕೊಂಡು ಬಿಡುತ್ತೇವೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ, ಮತ್ತು ಇರತಕ್ಕ ಕಾನೂನಿನಲ್ಲಿ ಶಕ್ಯವಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಇನ್ನು ಕಾರ್ಪೋರೇಷನ್‌ನಲ್ಲಿ ಲಂಚಗುಳಿತನ ಜಾಸ್ತಿಯಾಗಿರುವುದಕ್ಕೆ ಮುಖ್ಯ ಕಾರಣ ಆಕ್ಟ್ರಾಯ್ ಈ ಸುಂಕದ ಇಲಾಖೆಯಲ್ಲಿರತಕ್ಕ ಪ್ರತಿಯೊಬ್ಬರೂ ಕೋರ್ ಎಷ್ಟರಮಟ್ಟಿಗೆ ಲಂಚ ಸಂಪಾದನೆ ಮಾಡುತ್ತಿದ್ದಾರೆ ಎಂದರೆ ಅವರಲ್ಲಿರುವ ಹಣ ಅವರ ಶಕ್ತಿ ಮೀರಿದ್ದು. ಆದ್ದರಿಂದ ಈ ಆಕ್ಟ್ರಾಯ್ ರದ್ದು ಮಾಡಿ, ವರಮಾನ ಭರ್ತಿಮಾಡಲಿಕ್ಕೆ ಸೇಲ್ ಟ್ಯಾಕ್ಸ್, ಸರ್ಚಾರ್ಜ್ ಹಾಕಿ, ಎಲ್ಲಾ ಕಾರ್ಪೋರೇಷನ್ ಮುನಿಸಿಪಾಲಿಟಿಗಳಿಗೂ ಕೊಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಹಿಂದಿದ್ದ ವೀರೇಂದ್ರ ಪಾಟೀಲರ ಸರ್ಕಾರದವರು ಇದನ್ನು ರದ್ದು ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದರು. ಮತ್ತು ಹಿಂದಿದ್ದ ಗವರ್ನರ್ ಶ್ರೀ ಧರ್ಮವೀರ ಅವರು ಮಾಡುತ್ತೇವೆಂದು ಹೆಚ್ಚು ಕಡಿಮೆ ಭರವಸೆ ಕೊಟ್ಟಿದ್ದರು. ಆಕ್ಟ್ರಾಯ್ ಹೊರಟು ಹೋದರೆ ಸರ್ಕಾರಕ್ಕೆ ಬರತಕ್ಕ ವರಮಾನ ಯಾವ ವಿಧದಲ್ಲೂ ಕಡಿಮೆಯಾಗುವುದಿಲ್ಲ. ಜನರಿಗೆ ಕೊಡತಕ್ಕ ಕಿರುಕುಳ ತಪ್ಪುತ್ತದೆ. ಲಂಚಕೋರ ಅಧಿಕಾರಿಗಳನ್ನು ಸ್ವಲ್ಪ ಕಡಿಮೆ ಮಾಡಿದಂತಾಗುತ್ತದೆ. ಈ ಬಗ್ಗೆ ಗವರ್ನರ್‌ರವರ ವರದಿಯಲ್ಲಿ ಏನೂ ಹೇಳಿಲ್ಲದೆ ಇರುವುದು ವಿಷಾದಕರ.

ಇನ್ನು ಮುಖ್ಯವಾದ ವಿಷಯ ಫರದರ್ ಮೊಬಿಲೈಸೇಷನ್ ಆಫ್ ರಿಸೋರ್ಸಸ್ ಬಗ್ಗೆ ಹೇಳಿದ್ದಾರೆ. ಇದರಿಂದ ಏನು ಅರ್ಥವಾಗುತ್ತದೆ ಎಂದರೆ, ಈಗ ಅಲ್ಲ, ಮುಂದೆ ಜೂನ್ ತಿಂಗಳಲ್ಲಿ ತಯಾರಾಗುವ ಬಡ್ಜೆಟ್‌ನಲ್ಲಿ ತೆರಿಗೆ ಹಾಕುತ್ತಾರೆ, ಜನರು ತಯಾರಾಗಿ ಇರಬೇಕು ಎಂದು ಮುನ್ನೆಚ್ಚರಿಕೆ ಕೊಟ್ಟಿದ್ದಾರೆ. ಈಗಾಗಲೇ ಜನರು ಕರಭಾರ ಹೊತ್ತು ಬಗ್ಗಿ ಹೋಗಿದ್ದಾರೆ. ಮತ್ತೆ ತಿರುಗಿ ಮುಂದಿನ ಬಡ್ಜೆಟ್‌ನಲ್ಲಿ ಯಾವ ತೆರಿಗೆಯನ್ನು ಹೊಸದಾಗಿ ಹಾಕಬಾರದೆಂದು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಎರಡು ವಿಷಯಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಖರ್ಚನ್ನು ಕಡಿಮೆ ಮಾಡುತ್ತೇವೆ ಎನ್ನುವ ಸೂಚನೆ ಮಾಡಿದ್ದಾರೆ. ಯಾವ ರೀತಿ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. 100 ರೂಪಾಯಿ ಸಂಬಳ ಬರುವ 100 ಜನರನ್ನು ಕೆಲಸದಿಂದ ವಜಾ ಮಾಡಿದರೆ ಖರ್ಚು ಕಡಿಮೆಯಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ. ಅದು ತಪ್ಪು, ಖರ್ಚನ್ನು ಕಡಿಮೆ ಮಾಡುವ ಭಾವನೆ ಇದ್ದರೆ ಅವರು ಸ್ವತಃ ಈಗ ತೋರಿಸಿಕೊಡಬೇಕು. ಈಗ 22 ಜನ ಮಂತ್ರಿಗಳಿದ್ದಾರೆ. ನಮಗೆ ಇರತಕ್ಕ ಕೆಲಸಗಳನ್ನು ಕೇಂದ್ರಸರ್ಕಾರದವರೇ ವಹಿಸಿಕೊಳ್ಳಬೇಕೆಂದರೆ, ಮತ್ತೆ ಮಂತ್ರಿಮಂಡಲದಲ್ಲಿರತಕ್ಕ ಮಂತ್ರಿಗಳ ಸಂಖ್ಯೆ ಜಾಸ್ತಿಮಾಡಬೇಡಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. 22 ಜನ ಮಂತ್ರಿಗಳಿಗೆ ಸಾಕಷ್ಟು ಕೆಲಸವಿಲ್ಲ. ಶ್ರೀಮಾನ್ ಆರ್ಮುಗಂ ಅವರು ಹೇಳಿದಹಾಗೆ ಮಂತ್ರಿಗಳು ಜಾಸ್ತಿ ಟೂರ್ ಹಾಕಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಉಳಿಯುವುದಕ್ಕೆ ತೊಂದರೆ ಬಂದಾಗಲಾದರೂ ಮಂತ್ರಿಮಂಡಲ ಜಾಸ್ತಿಮಾಡುವುದಕ್ಕೆ ಅವಕಾಶ ಬೇಡವೇ ?

ಶ್ರೀ ಕೆ. ಎಂ. ನಾಗಣ್ಣ.—ನಾನು ಬೇರೆಯವರು ಭಾಷಣ ಮಾಡುವಾಗ ಇಂಟರ್ ಫಿಯರ್ ಮಾಡುವ ಅಭ್ಯಾಸವಿಲ್ಲ. ನಾನು ಭಾಷಣ ಮಾಡುವಾಗ ಯಾರೇ ಆಗಲಿ ಮಧ್ಯ ಇಂಟರ್‌ಫಿಯರ್ ಮಾಡಬೇಡಿ ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಕಡೆಯದಾಗಿ ಹ್ಯಾಂಡ್‌ಲೂಮ್ ಇಂಡಸ್ಟ್ರೀಸ್ ಅಂದರೆ ಕೈಮಗ್ಗದ ಬಾಬಿನಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ವರ್ಷಕ್ಕೆ 120 ಕೋಟಿ ರೂಪಾಯಿ ಜಮಾಖರ್ಚು ನಡೆಯುತ್ತದೆ.

ಮೈಸೂರು ರಾಜ್ಯದಲ್ಲಿ 1 ಲಕ್ಷ 50 ಸಾವಿರ ಕೈಮಗ್ಗಗಳು ಇವೆ. 1 ಲಕ್ಷ 50 ಸಾವಿರ ಕೈಮಗ್ಗಗಳಲ್ಲಿ ಧಾರವಾಡ, ಬಿಜಾಪುರ, ಗುಲ್ಬರ್ಗ ಡಿಸ್ಟ್ರಿಕ್ಟ್‌ಗಳಲ್ಲಿ 75 ಸಾವಿರ, ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ 5 ಸಾವಿರ ಮಗ್ಗಗಳು ಇವೆ. ಆದರೆ ಇಲ್ಲಿ ವಿದ್ಯುತ್ ಮಗ್ಗಗಳೇ ಜಾಸ್ತಿಯಾಗಿವೆ. ಹೈದರಾಬಾದ್ ಕರ್ನಾಟಕದಲ್ಲಿ 35 ಸಾವಿರ ಉಳಿದ ಕಡೆ 50 ಸಾವಿರ ಕೈಮಗ್ಗಗಳು ಇವೆ. ಕೈಮಗ್ಗಗಳು ಇಷ್ಟೊಂದು ಇರಬೇಕಾದರೆ ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದಕ್ಕೆ

(ಶ್ರೀ ಕೆ. ಎಂ. ನಾಗಣ್ಣ)

ಒಬ್ಬ ಡೈರಕ್ಟರನ್ನು ಅಪಾಯಿಂಟ್ ಮಾಡಬೇಕು ಎಂದು ಹೇಳುತ್ತೇನೆ. ಮದ್ರಾಸ್ ಪ್ರಾಂತದಲ್ಲಿ ಈ ರೀತಿ ಮಾಡುವುದರಿಂದ ಅನೇಕ ಕೈಮಗ್ಗದವರಿಗೆ ಅನುಕೂಲವಾಗಿದೆ. ಉದಾಹರಣೆಗೆ ಹೇಳುವುದಾದರೆ ಆರ್ಟಿಫಿಷಿಯಲ್ ಸಿಲ್ಕ್ ನಮ್ಮ ಮೈಸೂರು ರಾಜ್ಯಕ್ಕೆ 5 ಲಕ್ಷ ಕೇಜಿ ಬರುತ್ತದೆ. ಈ 5 ಲ ಕೇಜಿ ಸರಿಯಾಗಿ ವಿನಿಯೋಗವಾಗುತ್ತಾ ಇಲ್ಲ. ಕಾರಣ ಏನೆಂದರೆ ಅದು ಯಾರಿಗೆ ವಿನಿಯೋಗವಾಗಬೇಕೋ ಅವರಿಗೆ ವಿನಿಯೋಗವಾಗದೆ ಬೇರೆಯವರಿಗೆ ವಿನಿಯೋಗವಾಗಿಬಿಡುತ್ತದೆ. ಸರ್ಕಾರದವರು ಮೊದಲಿನಿಂದಲೂ ಇದರ ಬಗ್ಗೆ ಯೋಚನೆ ಮಾಡುತ್ತಾ ಇಲ್ಲ. ಅವರನ್ನು ಕೇಳಿದರೆ ಏನು ಹೇಳುತ್ತಾರೆ ಎಂದರೆ ಇದನ್ನು ಕೋ ಆಪರೇಟೀವ್ ಸೊಸೈಟಿ ಮುಖಾಂತರ ಕೊಡಬೇಕು ಆದ್ದರಿಂದ ನೀವು ಅಸೋಷಿಯೇಷನ್ ಮಾಡಿಕೊಳ್ಳಿ ಎಂದು ಹೇಳುತ್ತಾರೆ. ಆದರೆ ರಾಜಕಾರಣಿಗಳ ಪ್ರಭಾವದಿಂದ ಅವರು ಏನು ಮಾಡುತ್ತಾರೆ ಎಂದರೆ ಅವರು, ಅವರ ಹೆಂಡತಿ, ಅವರ ಮಕ್ಕಳು ಈ ರೀತಿ 5 ಜನ ಸೇರಿಸಿಬಿಟ್ಟು ಒಂದು ಅಸೋಷಿಯೇಷನ್ ಅಂತ ಮಾಡಿ ರಿಜಿಸ್ಟರ್ ಮಾಡಿಸಿ ಬಿಡುತ್ತಾರೆ. ಅಂಥಾ ಅಸೋಷಿಯೇಷನ್‌ಗೆ ಇದನ್ನು ಹಂಚುವ ಕೆಲಸ ಕೊಟ್ಟುಬಿಡುತ್ತಾರೆ. ಇದರಿಂದ ಯಾರು ಹಿಂದುಳಿದಿದ್ದಾರೋ ಅವರಿಗೆ ಸರಿಯಾಗಿ ವಿನಿಯೋಗವಾಗದೆ, ಅವರವರಿಗೇನೇ ಸಿಕ್ಕುತ್ತದೆ. ಈ ರೀತಿ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ ಕೈಮಗ್ಗದವರಿಗೇನೇ ಒಬ್ಬ ಪ್ರತ್ಯೇಕ ಡೈರಕ್ಟರ್ ನೇಮಕ ಮಾಡಿದ ಪಕ್ಷದಲ್ಲಿ ಈಗ ಇರತಕ್ಕಂಥ ಅನ್ಯಾಯಗಳು ತಪ್ಪಿ ಸರ್ಕಾರಕ್ಕೂ ವರಮಾನ ಬರುತ್ತದೆ. 3 ಜಿಲ್ಲೆಗಳ ಸುತ್ತಮುತ್ತ ಇರತಕ್ಕ ನೇಕಾರರು ನನ್ನಲ್ಲಿಗೆ ಬಂದು ಮನವಿ ಮಾಡಿಕೊಂಡರು. ಏನೆಂದರೆ 1947 ನೇ ಇಸವಿಯಲ್ಲಿ ಹರಿಜನ ಗಿರಿಜನರ ಸ್ಥಿತಿ ಹೇಗಿತ್ತೋ ಅದಕ್ಕಿಂತ ವರ್ಸ್ ಆಗಿದೆ ನಮ್ಮ ಸ್ಥಿತಿ ಎಂದು ಹೇಳಿದರು. ಆದುದರಿಂದ ಸರ್ಕಾರದವರು ಮತ್ತು ಕೈಗಾರಿಕಾ ಮಂತ್ರಿಗಳಾದ ಶ್ರೀ ಕೃಷ್ಣರವರೂ ಕೂಡ ಇವರ ಬಗ್ಗೆ ಕೂಡಲೇ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀಮತಿ ರೇಣುಕಾರಾಜೇಂದ್ರನ್ (ಬಾಗೇಪಲ್ಲಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಹಾಗೂ ಮಾನ್ಯ ಸದಸ್ಯರೇ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣದ ಬಗ್ಗೆ ಶ್ರೀಮಾನ್ ಜಿ. ರಾಮೇಗೌಡರು ತಂದಿರತಕ್ಕ ಈ ನಿರ್ಣಯವನ್ನು ಬೆಂಬಲಿಸುತ್ತಾ ಕೆಲವಾರು ವಾಕ್ಯಗಳನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಮೊದಲನೆಯದಾಗಿ ಕ್ಷಾಮ ಪರಿಹಾರ ಕಾರ್ಯವನ್ನು ನಮ್ಮ ಕೋಲಾರ ಜಿಲ್ಲೆಯಲ್ಲಿ ಎಂದರೆ ನನ್ನ ಕ್ಷೇತ್ರವಾದ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಶೀಘ್ರವಾಗಿ ಎಂದರೆ 15 ದಿವಸದಲ್ಲೇ ಆರಂಭಿಸಿದರೆ ಉತ್ತಮ ಎಂದು ನನ್ನ ಭಾವನೆ. ಅಲ್ಲಿ ಕುಡಿಯುವ ನೀರಿನ ಅಭಾವವನ್ನು ಕಳೆದ ಅಧಿವೇಶನದ ನಂತರ 3 ದಿವಸ ಪ್ರವಾಸ ಮಾಡಿದಾಗ ಹೆಚ್ಚಿಗೆ ಕಂಡಿದ್ದೇನೆ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಶೀಘ್ರವಾಗಿ ಪರಿಶೀಲನೆ ಮಾಡುವುದು ಅಗತ್ಯ ಎಂದು ಹೇಳುತ್ತೇನೆ. ಹಾಗೂ ಗೋಕಟ್ಟೆಯಲ್ಲಿ ನೀರು ಬತ್ತಿಹೋಗುವುದರಿಂದ ದನಕರುಗಳಿಗೆ ನೀರು ಇಲ್ಲದಂತಾಗಿದೆ. ಅವು ಸಾಯುವ ಸ್ಥಿತಿಯಲ್ಲಿರುವುದರಿಂದ ಅಲ್ಲಿ ಗೋಕಟ್ಟೆಗಳನ್ನು ತೋಡಿಸುವುದಕ್ಕೆ ಪ್ರಯತ್ನ ಮಾಡಬೇಕು ಅಥವಾ ಈಗ ಇರತಕ್ಕಂಥ ಗೋಕಟ್ಟೆಯನ್ನು ಆಳಮಾಡಿಸಿ ದನಕರುಗಳಿಗೆ ಉಪಯೋಗವಾಗಲಿಕ್ಕೆ ಅನುಕೂಲಮಾಡಿಕೊಡಬೇಕು. ಇದನ್ನು ಕಾರ್ಯ ರೂಪದಲ್ಲಿ ತರುತ್ತಾರೆಂದು ನಂಬಿರುತ್ತೇನೆ.

ಇನ್ನು ಭೂಸುಧಾರಣೆ ಬಗ್ಗೆ ಹೇಳುವುದಾದರೆ ಈಗ ಇನತಕ್ಕಂಥ ಭೂಮಾಲೀಕರಿಂದ ಜಮೀನು ತೆಗೆದುಕೊಂಡು ಹಂಚುವ ಬದಲು ಅರಣ್ಯಕ್ಕೆ ಬಿಟ್ಟುಕೊಟ್ಟಿರುವ ಖಾಲಿ ಜಮೀನುಗಳನ್ನು ಮೊದಲು ಅಕ್ವೈರು ಮಾಡಿಕೊಂಡು ವ್ಯವಸಾಯವನ್ನು ಅವಲಂಬಿಸಿಕೊಂಡಿರತಕ್ಕಂಥ ಬಡಜನರಿಗೆ ಅದನ್ನು ಹಂಚಬೇಕು ಎಂದು ಹೇಳುತ್ತೇನೆ. ಈ ಕೆಲಸವನ್ನು ಕೂಡಲೇ ತೆಗೆದುಕೊಂಡು ಮಳೆಗಾಲಕ್ಕಿಂತ ಮುಂಚಿತವಾಗಿ ಹಂಚಿದರೆ ಆ ಬಡಜನರಿಗೆ ಮುಂದಿನ ಫಸಲು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆ ವಿಷಯ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸುವ ವಿಷಯ ತಮಗೆ ಗೊತ್ತಿದೆ. ಇದು ಹಿಂದಿನಿಂದಲೂ ಬಂದ ಪದ್ಧತಿ. ಇದರಲ್ಲಿ ಏನು ಅನ್ಯಾಯ ನಡೆಯುತ್ತಾ ಇದೆ ಎಂದರೆ ಈಗ 6–7 ವರ್ಷದಲ್ಲಿ ಕೆಲವು ಅಭ್ಯರ್ಥಿಗಳು ರಿಜಿಸ್ಟರ್ ಮಾಡಿಸಿರುತ್ತಾರೆ, ಅಲ್ಲದೆ ಹೊಸದಾಗಿಯೂ ಕೆಲವು ಅಭ್ಯರ್ಥಿಗಳು

ರಿಜಿಸ್ಟರ್ ಮಾಡಿಸಿರುತ್ತಾರೆ. ಯಾವ ಇಲಾಖೆಯಾಗಲಿ ಅಲ್ಲಿ ಕೆಲಸಕ್ಕೆ ಅವರು ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಿ ಕೊಡಿ ಎಂದು ಕೇಳಿದಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನವರು ಹಳೆ ಅಭ್ಯರ್ಥಿಗಳ ಪಟ್ಟಿಯ ಜೊತೆಗೆ ಹೊಸ ಅಭ್ಯರ್ಥಿಗಳ ಪಟ್ಟಿಯನ್ನೂ ಕೂಡ ಕಳುಹಿಸಿಕೊಡುವ ಏರ್ಪಾಡು ನಡೆಯುತ್ತಾ ಇದೆ. ಇದು ಜಾತೀಯತೆ ಆಧಾರದ ಮೇಲೆ ನಡೆಯುತ್ತದೆಯೋ ಅಥವಾ ಹಣದ ಅಧಾರದ ಮೇಲೆ ನಡೆಯುತ್ತದೆಯೋ ಅಥವಾ ಇನ್ನು ಯಾವ ರೀತಿಯ ಆಧಾರದ ಮೇಲೆ ನಡೆಯುತ್ತಾ ಇದೆಯೋ ಗೊತ್ತಾಗುವುದಿಲ್ಲ. ಆದುದರಿಂದ ಸರ್ಕಾರದವರು, ಇದರ ಬಗ್ಗೆ ತನಿಖೆ ನಡೆಸಿ ಅಭ್ಯರ್ಥಿಗಳ ಪಟ್ಟಿಯನ್ನು ಇನ್ನು ಮುಂದೆ ಕಳುಹಿಸಿ ಕೊಡುವಾಗ ಅವರು ಯಾವ ತಾರೀಕಿನಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿರುತ್ತಾರೆ ಮತ್ತು ಅವರ ಸೀನಿಯಾರಿಟಿ ನಂಬರ್ ಇವಿಷ್ಟನ್ನು ನಮೂದಿಸಿ ಕಳುಹಿಸಿದರೆ ಉತ್ತಮ ಎಂದು ನನ್ನ ಅಭಿಪ್ರಾಯ.

ಇನ್ನು ಸೀನಿಯಾರಿಟಿ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಇಲಾಖೆಯಲ್ಲೂ ಬಡ ನೌಕರರು ಇರುವುದರಿಂದ ಅವರ ಬಗ್ಗೆ ಯಾರೂ ಹೆಚ್ಚಿಗೆ ಸೀರಿಯಸ್ ಆಗಿ ಗಮನಕೊಟ್ಟಿಲ್ಲ. ಅಲ್ಲದೆ ಅವರ ಬಗ್ಗೆ ಸೀನಿಯಾರಿಟಿ ಕೊಶ್ಚನ್ ಮಾಡುವವರೂ ಯಾರೂ ಇಲ್ಲ. ಮತ್ತು ಅವರಿಗೆ ಹೇಳಿಕೊಳ್ಳುವಂತಹವರೂ ಯಾರು ಇರುವುದಿಲ್ಲ. ಇಷ್ಟೇ ಅಲ್ಲದೆ ಆಫೀಸರ್‌ಗಳಿಗೆ ಇವರುಗಳ ಬಗ್ಗೆ ಯಾವ ಪೇಷೆನ್ಸ್ ಕೂಡ ಇರುವುದಿಲ್ಲ. ಆದುದರಿಂದ ಆ ಬಡ ನೌಕರರು ಯಾರ ಹತ್ತಿರವೂ ಹೋಗಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದಕ್ಕಾಗುವುದಿಲ್ಲ. ಇದರಿಂದ ಅವರುಗಳು ಬಹಳ ತೊಂದರೆಗೀಡಾಗುತ್ತಾರೆ. ಈಗಾಗಲೇ 25 ವರ್ಷದಿಂದ ನಡೆದುಕೊಂಡು ಬಂದಿರತಕ್ಕಂಥ ಸೀನಿಯಾರಿಟಿ ಬಗ್ಗೆ ಪ್ರತಿಯೊಂದು ಇಲಾಖೆಯಲ್ಲೂ ಸರ್ಕಾರದವರು ತನಿಖೆ ನಡೆಸಿ ವರದಿಗಳನ್ನು ತರಿಸಿಕೊಂಡಿದ್ದೇ ಆದರೆ ನಮ್ಮ ಹರಿಜನ ಗಿರಿಜನರಿಗೆ ಶೇಕಡ ಎಷ್ಟು ಪರ್ಸೆಂಟು ಸೀನಿಯಾರಿಟಿ ಸಿಕ್ಕಿದೆ ಎಂಬುದು ತವ:ಗೆ ಗೊತ್ತಾಗುತ್ತದೆ. ಅವರನ್ನು ಪ್ರೋತ್ಸಾಹ ಮಾಡುವುದರ ಬಗ್ಗೆ ಇನ್ನು ಮುಂದಕ್ಕಾದರೂ ಯಾವರೀತಿಯಾದರೂ ಕ್ರಮ ಕೈಗೊಂಡರೆ ಬಡ ನೌಕರರಿಗೆ ಒಳ್ಳೆಯದಾಗುತ್ತದೆ. ಇದರ ಬಗ್ಗೆ ತಾವು ಯೋಚನೆ ಮಾಡಿ ಇದು ಕಾರ್ಯಗತವಾಗುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕಡ್ಡಾಯ ಶಿಕ್ಷಣದ ವಿಷಯ. ಇದು ಬಹಳ ಒಳ್ಳೆಯದು. ಆದರೆ ಕಡ್ಡಾಯ ಶಿಕ್ಷಣ ಯಶಸ್ವಿಯಾಗಬೇಕಾದರೆ ಯಾವರೀತಿ ನಡೆಸಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ನಮ್ಮ ದೇಶದಲ್ಲಿ ಕೂಲಿಗಾರರು, ಬಡವರೇ ಹೆಚ್ಚಾಗಿರುವುದರಿಂದ ಅವರು ತಮ್ಮ ಮಕ್ಕಳನ್ನು ಓದಿಸುವುದಕ್ಕೆ ಕಷ್ಟವಾಗುತ್ತದೆ. ಆ ಮಕ್ಕಳನ್ನು ಪಾಲನೆ ಮಾಡುವುದಕ್ಕೆ, ಆ ಮಕ್ಕಳನ್ನು ಸೇವೆ ಮಾಡುವುದಕ್ಕೆ ಮನೆಯಲ್ಲೇ ಕೂಡಿಸಿಕೊಂಡರೆ ಅವರಿಗೆ ಸಿಕ್ಕುವ ಕೂಲಿ ಹಾಳಾಗುತ್ತದೆ. ಇದರಿಂದ ಕೂಲಿಯನ್ನೇ ಅವಲಂಬನೆ ಮಾಡಿಕೊಂಡು ಇರತಕ್ಕಂಥ ಜನರಿಗೆ ಮಕ್ಕಳನ್ನು ಓದಿಸುವುದು ಕಷ್ಟವಾಗುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಗಮನಕೊಟ್ಟು ಪ್ರತಿ ಹಳ್ಳಿಗೂ ಒಂದು ಶಿಶುವಿಹಾರ ಕೇಂದ್ರವನ್ನು ತೆರೆದು ಬಡಮಕ್ಕಳಿಗೆ ಸ್ಲೇಟು ಪುಸ್ತಕ, ಉಪಾಹಾರ ಸಾಧ್ಯವಾದರೆ ಊಟ ಕೊಟ್ಟು ಅವರನ್ನು ಕಡ್ಡಾಯ ಶಿಕ್ಷಣಕ್ಕೊಳಪಡಿಸಿ ಓದಿಸುವುದಕ್ಕೆ ಅನ:ವು ಮಾಡಿಕೊಟ್ಟರೆ ಬಡವರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳುತ್ತೇನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆ ವಿಷಯ, ಸಣ್ಣ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಬೇಕಾದರೆ ಆಯಾಯಾ ತಾಲ್ಲೂಕುಗಳಲ್ಲಿ ಯಾವಯಾವರೀತಿ ಕಚ್ಚಾಪದಾರ್ಥಗಳು ದೊರೆಯುತ್ತವೋ ಅದರ ಒಂದು ಸರ್ವೆ ಮಾಡಿಸಿ. ಸರ್ಕಾರದವರೂ ಮತ್ತು ಕೈಗಾರಿಕಾ ಮಂತ್ರಿಗಳೂ ಇದರ ಬಗ್ಗೆ ಹೆಚ್ಚಿನ ಶ್ರದ್ಧೆವಹಿಸಿ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಪೂರ್ತಾ ಬಂಡವಾಳವನ್ನು ಸರ್ಕಾರದವರೇ ಕೊಟ್ಟು ಕಚ್ಚಾ ಪದಾರ್ಥಗಳು ಎಲ್ಲೆಲ್ಲಿ ದೊರೆಯುತ್ತವೋ ಅದಕ್ಕೆ ಸಂಬಂಧಪಟ್ಟ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರೆ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಲ್ಲದೆ ದೇಶದಲ್ಲಿ ಉತ್ಪಾದನೆಯೂ ಹೆಚ್ಚುತ್ತದೆ. ಆ ರೀತಿ ನನ್ನ ಕ್ಷೇತ್ರವಾದ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಪ್ರಾರಂಭಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಖಾದಿ ಗ್ರಾಮೋದ್ಯೋಗ ಕೈಗಾರಿಕೆಗೆ ಸಂಬಂಧಪಟ್ಟವರಿಂದಾಗಲಿ, ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನವರಿಂದಾಗಲಿ ಒಂದು ಸಣ್ಣ ಕೈಗಾರಿಕೆಯನ್ನು ನನ್ನ ಕ್ಷೇತ್ರದಲ್ಲಿ ಪ್ರಾರಂಭಿಸಿಕೊಟ್ಟರೆ ನಮ್ಮ ತಾಲ್ಲೂಕಿನ ಜನಗಳಿಗೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ವಿನಂತಿಸಿಕೊಳ್ಳುತ್ತೇನೆ. ಇಷ್ಟು ಹೇಳಿ ನಮ್ಮ ರಾಜ್ಯಪಾಲರ ಭಾಷಣದ ಬಗ್ಗೆ ಕೆಲವು ಅಂಶಗಳನ್ನು ಹೇಳಲು ಅಧ್ಯಕ್ಷಿಣಿಯವರು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

4-30 P.M.

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. ನಮ್ಮ ವಿರೋಧ ಪಕ್ಷದ ನಾಯಕರಾದ ಮಾನ್ಯ ದೇವೇಗೌಡರು ಭಾಷಣ ಮಾಡುವಾಗ ನಾನು ಕೌನ್ಸಿಲ್ಲಿನಲ್ಲಿ ಹೇಳಿರುವ ಕೆಲವು ಮಾತುಗಳ ಬಗ್ಗೆ ಬಹಳ ಉಗ್ರವಾಗಿ ಇಲ್ಲಿ ಮಾತನಾಡಿದ್ದಾರೆ. ಅದಕ್ಕೆ ಉತ್ತರ ಹೇಳಬೇಕಾದ್ದು ನನ್ನ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದು ಕ್ಲಾರಿಫಿಕೇಷನ್. ನಾಳೆ ಉತ್ತರ ಕೊಡಬೇಕು.

ಶ್ರೀ ಎಂ. ವೈ. ಘೋರ್ಪಡೆ.—ಈಗ ಬರೀ ಇಂಟರ್‌ವೆನಷನ್, ಒಂದು ಪಾಯಿಂಟಿನಮೇಲೆ ಮಾತ್ರ ಮಾತನಾಡುತ್ತೇನೆ. ಸಂಪೂರ್ಣ ಉತ್ತರ ನಾಳೆ ಶ್ರೀ ಚನ್ನಬಸಪ್ಪನವರು ಕೊಡುವರು. ಏಕೆಂದರೆ ಒಂದು ವಿಷಯ ಮುಖ್ಯವಾದುದನ್ನು ಪ್ರಸ್ತಾಪಮಾಡಿದ್ದಾರೆ. ಚರ್ಚೆ ಮಾಡುವಾಗ ಬಿಸಿ ವಾತಾವರಣ ಉಂಟಾದಾಗ ನಮ್ಮ ಮುಖ್ಯ ಮಂತ್ರಿಗಳು ಅದರ ಬಗ್ಗೆ ಒಂದು ಪ್ರಿವಿಲೇಜ್ ಇಷ್ಯೂ ತರಬೇಕಾದ ಸಂದರ್ಭ ಬಂದಾಗ ಮಾನ್ಯ ದೇವೇಗೌಡರು ಬಹಳ ಸಿಟ್ಟಾಗಿ ಮಾತು ಮಾತಿಗೂ ಪ್ರಿವಿಲೇಜ್ ಇಷ್ಯೂ ಎಂದು ಹೆದರಿಸುತ್ತಿದ್ದೀರಾ ಎಂದು ಹೇಳಿದರು. ನಾನು ಲ್ಯಾಂಡ್ ರೆವಿನ್ಯೂ ಬಗ್ಗೆ ಎರಡು ಮಾತುಗಳನ್ನು ವಿಧಾನಪರಿಷತ್ತಿನಲ್ಲಿ ಹೇಳಿದೆ. ಶ್ರೀ ದೇವೇಗೌಡರು ಮಾತನಾಡುವಾಗ ಅದನ್ನು ಪ್ರಸ್ತಾಪಿಸಿ ಅದೇ ಮಾತನ್ನು ಈ ಸಭೆಯಲ್ಲಿ ಹೇಳಿದ್ದರೆ ನಾನು ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಿದ್ದೆ ಎಂದು ಬಹಳ ಸಿಟ್ಟಿಂದ ಮಾತನಾಡಿ ಹೇಳಿದ್ದಾರೆ ಎಂದು ಅವರ ಭಾಷಣದಿಂದ ಗೊತ್ತಾಗಿದೆ. ಅವರು ಈ ರೀತಿ ಹೇಳಿದ್ದಾರೆ ; ''ಈಗ ಅರ್ಥ ಸಚಿವರು ಹೇಳುತ್ತಾರೆ ತೀರ್ಮಾನವಾಗಿಲ್ಲ ಎಂದು''. ಇದು ಲ್ಯಾಂಡ ರೆವೆನ್ಯೂ ಅಬಾಲಿಷನ್‌ಗೆ ಸಂಬಂಧಪಟ್ಟಿದೆ ''ಈ ಸಭೆಯಲ್ಲಿ ಆ ಮಾತನ್ನು ಹೇಳಿದ್ದರೆ ನಾನು ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾಗಿತ್ತು'' ಎಂದು ಹೇಳಿದ್ದಾರೆ. ಆದಕಾರಣ ನಾನು ವಿವರಣೆ ಹೇಳಬೇಕಾಗಿ ಬಂತು. ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾದ ಪ್ರಮೇಯವಿಲ್ಲ, ಅಂಥ ಮಾತನ್ನೇನೂ ನಾನು ಹೇಳಲಿಲ್ಲ. ಕೌನ್ಸಿಲ್ಲಿನಲ್ಲಿ ಲ್ಯಾಂಡ್ ರೆವೆನ್ಯೂ ಬಗ್ಗೆ ನಾನು ಕೆಲವು ವಿಚಾರ ಹೇಳಬೇಕಾಯಿತು. ಕಾರಣ ಹಿಂದಿನ ಸರಕಾರ ಹಾಗೆ ಮಾಡಿದೆ, ಹೀಗೆ ಮಾಡಿದೆ ಎಂದು ಬಹಳ ಹೆಮ್ಮೆಯಿಂದ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದರು. ಇಂಥ ತೀರ್ಮಾನ ನಾವು ಮಾಡಿದ್ದೇವೆ, ಪ್ರಗತಿಪರವಾದ ಕೆಲಸ ಮಾಡಿದ್ದೇವೆ, ನೀವು ಮಾಡುತ್ತಿಲ್ಲ ಎಂದು ಮುಂತಾಗಿ ಮಾತನಾಡಿದಾಗ ನಾನು ಹೇಳಿದೆ, ಅಂಥ ತೀರ್ಮಾನ ಬೇಕಾದಷ್ಟು ಮಾಡಿದ್ದಾರೆ, ಆದರೆ ಅನುಷ್ಠಾನಕ್ಕೆ ಬಂದಿಲ್ಲ, ಬರುವವರೆಗೆ ಅದರ ಬಗ್ಗೆ ಕ್ರೆಡಿಟ್ ಆ ಸರಕಾರಕ್ಕೆ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದೆ. ಆ ಧಾಟಿಯಲ್ಲಿ ನಾನು ಮಾತನಾಡಿದೆ. ಅದಕ್ಕೆ ಉದಾಹರಣೆಯಾಗಿ ಆಕ್ಟ್ರಾಯ್ ವಿಚಾರ ಕೂಡ ಪ್ರಸ್ತಾಪಮಾಡಿದೆ. ಹಣಕಾಸಿನ ಸಚಿವರು 1970-71ರಲ್ಲಿ ಈ ರೀತಿ ಹೇಳಿದ್ದಾರೆ:

> " I am happy to announce that we have decided to abolish octroi. It will, however, be necessary to protect revenue realised from it now by the local bodies. I shall bring proposals before the House for alternative measures simultaneously with the abolition of octroi. "

ಇಂಥ ಒಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದನ್ನು ತೀರ್ಮಾನ ಅಥವಾ ಡಿಸಿಷನ್ ಅಥವ ನಿರ್ಣಯ ಎಂದು ಏನು ಬೇಕಾದರೂ ಕರೆಯಿರಿ. ಒಂದು ಸ್ಟೇಟ್‌ಮೆಂಟ್ ಎಂದು ಬೇಕಾದರೂ ಹೇಳಲಿ. ಇಂಥ ಸ್ಟೇಟ್‌ಮೆಂಟ್ ಮಾಡಿದ ತಕ್ಷಣ ಅದರ ಕೆಲಸವಾಯಿತು ಎಂದು ತಿಳಿಯುವುದಕ್ಕಾಗುವುದಿಲ್ಲ ಎಂದು ಹೇಳಿದೆ. ನನ್ನ ಭಾಷಣದ ಮುಖ್ಯೋದ್ದೇಶವೇನಂದರೆ ಆ ತೀರ್ಮಾನದಲ್ಲಿ ಅಷ್ಟೊಂದು ಅರ್ಥವಿರಲಿಲ್ಲ, ಎಂಬುದು. ಈಗ ಲ್ಯಾಂಡ್ ರೆವಿನ್ಯೂ ವಜಾಮಾಡಬೇಕು ಎಂಬ ತೀರ್ಮಾನದ ಹಿನ್ನೆಲೆಯಲ್ಲಿ 1968 ರಿಂದ ಹಳೆಯ ಸರಕಾರ ಏನೇನು ಮಾಡಿತು, ಯಾವಯಾವ ತೀರ್ಮಾನ ಮಾಡಿತು. ಅದನ್ನು ಈ ಸಭೆಯಲ್ಲಿ ಈ ಸಂದರ್ಭದಲ್ಲಿ ಇಡಬೇಕಾದ್ದು ಸೂಕ್ತ ಅನ್ನಿಸುವುದು. ಎಷ್ಟೋ ಸದಸ್ಯರಿಗೆ ಬ್ಯಾಕ್‌ಗ್ರೌಂಡ್ ಗೊತ್ತಿಲ್ಲ ಮತ್ತು ಹೊರಗಿರುವ ಜನರು ಹಿಂದಿನ ಭಾಷಣವನ್ನು ಮರೆತಿರಬಹುದು. ಆದುದರಿಂದ ಅದನ್ನು ಸಭೆಯ ಮುಂದಿಡುತ್ತೇನೆ.

Again on 15th March 1967 in the Governor's Address it was stated that:

"The feasibility of abolishing the land revenue in its present form is under active consideration of Government."

On 24th March 1967 the Finance Minister in his budget speech again said :

"In my reply to the discussions on the last budget I had invited suggestions regarding the abolition of land revenue in its present form. Government have been bestowing its thought to this measure and have constituted a Cabinet sub committee to examine the question in all its aspects. I am glad to inform the House that the Government have taken a decision to abolish land revenue in its present form. This will obviously create certain new problems. As the House is aware this decision involves loss of revenue of about Rs. 6 to 7 crores including cesses. Sixty per cent of land revenue is assigned to Taluk Boards and Village Panchayats. The interest of these local bodies have to be taken care of. There is also the question of meeting the cost of staff for maintenance of land records and other Village Accountants. All these points have to be looked into and it will take some time to implement the decision."

Again the Finance Minister in his budget speech for the year 1968-69 stated :

"The State Government have given very careful consideration regarding replacement of land revenue by other alternative sources. The State Government had proposed the scheme of introducing agricultural income tax to all crops, so that the taxation may be on the basis of the capacity to pay. But the general trend of opinion in the rural parts is that they would rather continue to pay the enhanced land revenue rather than come under the subjection of complicated agricultural income tax law. The proposal of the Planning Commission to rationalise and introduce uniform income tax on agricultural income in all States was discussed in a meeting of all the Chief Ministers and it was thought that the time was not opportune. All the subsequent public and experts opinion have made the Government to re-think about the scheme of replacement of land revenue and they have now come to the conclusion that land revenue should not be abolished till the agricultural economy reaches a stage when taxes on agricultural income could be rationalised and introduced on a broader basis. With the absorption of all our resources due to financial commitments there are practically no resources left for our future developmental plans. We should be careful in foregoing the existing revenue without finding the alternative sources

(ಶ್ರೀ ಎಂ. ವೈ. ಘೋರ್ಪಡೆ)

which would cause the least hardship to people in the collection of revenue."

The Financce Minister, in his budget speech for 1969-70 has stated as follows :—

" The problem of raising additional resources is no doubt a difficult one. Taxation in the urban sector has reached almost the saturation point. There is very little scope for getting substantial revenue from direct taxation. Large investments have been made in the rural sector by way of large, medium and minor irrigation projects, irrigation wells, soil coservation, facilities of modern agricultural practices like supply of good seeds, fertilisers, tractors, etc,. rural electrification, supply of pumpsets and energising them have also contributed considerably to agricultural production. There is no doubt about the fact that all these measures have generated considerable wealth and a section of agriculturists who have benefited to the maximum have almost escaped the proper incidence of taxation and their contribution to domestic savings is negligible.

Since 1967 there has been an unhealthy tendency in several States to forego existing sources of revenue and take certain expensive measures to earn easy popularity. This, apart from worsening the financial position of those States, will create problems for other States. If our object is to improve the economic condition of the people through planned development, it is invitable that we must raise maximum possible resources and also educate the people to pay for services rendered."

ಇದು ಹಿಂದಿನ ಸರ್ಕಾರದ ಹಣಕಾಸಿನ ಮಂತ್ರಿಗಳು ಮಾಡಿರುವ ಭಾಷಣದ ಭಾಗ. ಅದಕ್ಕೇ ನಾನು ಹೇಳಿದೆ, ಇದು ಚುನಾವಣೆಗೆ ಮುನ್ನ ಮಾಡಿರತಕ್ಕ ಒಂದು ಸ್ಟೇಟ್‌ಮೆಂಟ್ ಅಥವಾ ರೆಸಲ್ಯೂಷನ್, ಕ್ಯಾಬಿನೆಟ್ ಡಿಸಿಷನ್, ಇದು ಚುನಾವಣೆಗಳಿಗೋಸ್ಕರ ಮಾಡಿದ್ದು ಅವರು ತೆಗೆದು ಕೊಂಡಿರುವ ತೀರ್ಮಾನಗಳು ಕಾರ್ಯಗತವಾಗದೇ ಇವೆ ಎಂದು ಹೇಳಿದೆ. ಇದರಿಂದ ಮಾನ್ಯ ದೇವೇಗೌಡರು ಪ್ರಿವಿಲೆಜ್ ಮೋಷನ್ ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸು ತ್ತೇನೆ.

1971ರ ಬಜೆಟ್ ಭಾಷಣದಲ್ಲಿ ಆಗಿನ ಹಣಕಾಸು ಮಂತ್ರಿಗಳು ಹೀಗೆ ಹೇಳಿದ್ದಾರೆ.—

"Administrative and other steps are being taken to further strengthen Panchayat Raj institutions. Their land revenue assignments will be pr tected even though Government have decided to abolish land revenue in its present form on the small holdings."

ಇದನ್ನು ನೋಡಿದರೆ ಮಾನ್ಯ ಸಭೆಯಲ್ಲಿರತಕ್ಕ ಸದಸ್ಯರಿಗೆ ಹಿಂದಿನ ಸರ್ಕಾರಗಳ ಧೋರಣೆ ಏನಿತ್ತು ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ನನ್ನ ಸ್ಪಷ್ಟವಾದ ಉದ್ದೇಶ ಅವರು ಮಾಡಿರತಕ್ಕ

ಒಳ್ಳೆಯ ಕೆಲಸಗಳನ್ನು ಶೀಘ್ರವಾಗಿ ಮಾಡಬಾರದು ಎಂದಲ್ಲ. ಆದರೆ ಆ ಸರ್ಕಾರದ ಪಾಲಿಸಿ ಏನಿದೆ ಎಂದು ಸರಿಯಾದ ಪರ್‌ಸ್ಪೆಕ್ಟಿವ್ ಮುಂದೆ ನೋಡಲಿಕ್ಕೆ ಸಾಧ್ಯ. 1971ರಲ್ಲಿ ಜನವರಿ 27ನೇ ತಾರೀಖು ಒಂದು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡು 10 ಎಕರೆಗಿಂತ ಕಡಮೆ ಇರುವವರಿಗೆ ಲ್ಯಾಂಡ್ ರೆವೆನ್ಯೂ ಬಿಡಬೇಕೆಂದು ಅಷ್ಟು ಮಾತ್ರ ಡಿಸಿಷನ್ ತೆಗೆದುಕೊಂಡಿದ್ದರು. ಅದರ ಲೀಗಲ್ ಇಂಪ್ಲಿಕೇಷನ್ಸ್ ಏನು ಫೈನಾನ್‌ಷಿಯಲ್ ಇಂಪ್ಲಿಕೇಷನ್ಸ್ ಏನು ಎಂದು ತಿಳಿದುಕೊಳ್ಳದೆ ಡಿಸಿಷನ್ ತೆಗೆದುಕೊಂಡು ಅನೌನ್ಸ್ ಮಾಡಿದರು. ಹಲವಾರು ಡಿಸಿಷನ್ಸ್ ತೆಗೆದುಕೊಂಡಿದ್ದು ಅದಕ್ಕೆ ಎಷ್ಟರ ಮಟ್ಟಿಗೆ ಬೆಲೆ ಕೊಡಬಹುದು ಎಂದು ನಾವೂ ನೀವೂ ಯೋಚನೆ ಮಾಡೋಣ. ಅನಂತರ ಡೆಪ್ಯುಟಿ ಕಮಿಷನರುಗಳಿಗೆ ಹೇಳಿದರು. 10 ಎಕರೆಗಿಂತ ಕಡಮೆ ಇರುವವರನ್ನು ಬಿಟ್ಟರೆ ಎಷ್ಟು ಭೂಮಿ ಯಾಗುತ್ತದೆ, ಹತ್ತು ಎಕರೆಗಿಂತ ಹೋಲ್ಡಿಂಗ್ಸ್ ಕಡಮೆ ಇದ್ದರೆ ಅದರಿಂದ ಹಣಕಾಸಿನ ಮೇಲೆ ಏನು ಪರಿಣಾಮವಾಗುತ್ತದೆ ಎಂದು ತಿಳಿಯುವುದಕ್ಕೆ ಪ್ರಯತ್ನಪಟ್ಟರು. ಅಷ್ಟರಲ್ಲಿ 27–3–71 ರಿಂದ ರಾಷ್ಟ್ರಾಧ್ಯಕ್ಷರ ಆಡಳಿತ ಬಂತು. ಪ್ರೆಸಿಡೆಂಟ್ಸ್ ರೂಲ್ ಬಂದ ನಂತರ ರಾಜ್ಯಪಾಲರು ಆಗಿನ ಸರ್ಕಾರದ ತೀರ್ಮಾನದ ಪ್ರಕಾರ ಒಂದು ಬಿಲ್ ತಯಾರು ಮಾಡುವ ಪ್ರಯತ್ನ ಮಾಡಿದರು. ಅದನ್ನು ಮಾಡಿ ಸೆಪ್ಟೆಂಬರ್ ತಿಂಗಳಿನಲ್ಲಿ ಡೆಲ್ಲಿಗೆ ಕಳುಹಿಸಿದರು. ಆ ನಂತರ ಮೂರೇ ತಿಂಗಳಲ್ಲಿ ಅದು ಸರಿಯಾದ ತೀರ್ಮಾನವಲ್ಲ ಎಂದು ರದ್ದು ಮಾಡಿದರು. ಇದನ್ನು ಕೇಂದ್ರ ಸರ್ಕಾರಕ್ಕೂ ತಿಳಿಸಿದರು, ಅಧಿಕಾರಿಗಳಿಗೂ ತಿಳಿಸಿದರು. ಇಲ್ಲಿಗೆ ಈ ಬಿಲ್ಲಿನ ಇತಿಹಾಸವಾಯಿತು. ಆದಕಾರಣ ಈ ಇತಿಹಾಸದ ಹಿನ್ನೆಲೆಯಲ್ಲಿ ನಾನು ಏನಾದರೂ ಇಂಥ ತೀರ್ಮಾನಗಳು ಬೇಕಾದಷ್ಟು ಆಗಿವೆ, ಆ ತೀರ್ಮಾನಗಳಿಗೆ ಅಷ್ಟೊಂದು ಅರ್ಥವಿಲ್ಲ, ಇದಕ್ಕೆ ಎಷ್ಟುಮಟ್ಟಿಗೆ ನಾವು ಬೆಲೆ ಕೊಡಬಹುದು ಎನ್ನುವುದನ್ನು ತೀರ್ಮಾನ ಮಾಡಬೇಕಾಗಿದೆ. ಇದು ಎಲೆಕ್ಷನ್‌ಗೆ ಮುಂಚೆ ಮಾಡಿರತಕ್ಕ ಒಂದು ಹೇಳಿಕೆ ಎಂದರೆ, ಆ ರೀತಿ ಹೇಳಿದ್ದರೆ ಅದು ತಪ್ಪಲ್ಲ, ಸತ್ಯಕ್ಕೆ ದೂರವಾಗಿರತಕ್ಕ ಮಾತಲ್ಲ.

ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು, ಘೋರ್ಪಡೆಯವರು ಈ ರೀತಿಯ ತಪ್ಪು ಮಾತು ಹೇಳಿದರು, ಅದು ಸತ್ಯಕ್ಕೆ ದೂರವಾಗಿರುವ ಮಾತು ಎಂದು. ಆದರೆ ಇದರ ಹಿನ್ನೆಲೆಯನ್ನು ತಿಳಿದುಕೊಂಡರೆ, ನಾನು ಹೇಳಿರುವುದು ಸತ್ಯಕ್ಕೆ ದೂರವಾದ ಮಾತಲ್ಲ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಅನಂತರ ಜನರೂ ಕೂಡ ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಲಿಲ್ಲ. ನಿಮಗೆ ಒಳ್ಳೆಯದು ಎಂದು ಅನ್ನಿಸಿದ್ದು, ಇಂಥ ತೀರ್ಮಾನ ಮಾಡಿದ್ದೇವೆ ಎಂದು ಪತ್ರಿಕೆಗಳಲ್ಲಿ ಪಬ್ಲಿಷ್ ಮಾಡಿದ ತಕ್ಷಣ ಜನರ ಮೇಲೆ ಹೆಚ್ಚು ಪರಿಣಾಮವಾಗುತ್ತದೆಂದು ಏನು ಲೆಕ್ಕ ಹಾಕಿದ್ದರು ಆ ರೀತಿ ಆಗಲಿಲ್ಲ. ಜನಗಳಿಗೆ ಸ್ವಲ್ಪ ವಿಚಾರಗಳು ಗೊತ್ತಿವೆ. ಎಲೆಕ್ಷನ್‌ಗೋಸ್ಕರ ಮಾಡಿದ ತೀರ್ಮಾನವೆಂದು ತಿಳಿದು ಕೊಂಡಿರುವುದನ್ನು ಎಷ್ಟೋ ಜನ ಪಕ್ಷದ ವತಿಯಿಂದ ಹೇಳಿಕೊಳ್ಳುವ ಕೆಲಸವನ್ನೂ ಕೂಡ ಮಾಡಿಲ್ಲ. ಏಕೆ ಈ ರೀತಿ ಮಾಡಿದರು ಎಂದು ನನ್ನನ್ನು ಕೇಳಿದರೆ, ಸ್ವತಂತ್ರ ಪಕ್ಷ, ಜನಸಂಘ ಮತ್ತು ಸಂಸ್ಥಾ ಕಾಂಗ್ರೆಸ್ ಪಕ್ಷ ಸೇರಿ ಒಂದು ಗ್ರ್ಯಾಂಡ್ ಅಲೈಯನ್ಸ್ ಅಥವಾ ಮೈತ್ರಿ ಕೂಟ ಏನು ಮಾಡಿಕೊಂಡಿರಿ, ಅದರ ಬಗ್ಗೆ ನಿಮ್ಮ ಪಕ್ಷಕ್ಕೆ ಒಂದು ಗಿಲ್ಟಿ ಕಾಂಪ್ಲೆಕ್ಸ್ ಸಾಕಷ್ಟು ಪ್ರಮಾಣದಲ್ಲಿ ಇವೆ, ನಾವು ಏನೋ ತಪ್ಪು ಮಾಡಿದ್ದೇವೆಂದು ಅನ್ನಿಸಿತು, ಆದಕಾರಣ, ಅದನ್ನು ಮುಚ್ಚಿಕೊಳ್ಳುವ ಉದ್ದೇಶ ದಿಂದ ಇಂಥ ಒಂದೆರಡು ಪ್ರೋಗ್ರೆಸಿವ್ ಲುಕಿಂಗ್ ಸ್ಟೇಟ್‌ಮೆಂಟ್ಸ್ ಮಾಡಿದರೆ, ಪ್ರೋಗ್ರೆಸಿವ್ ಆಗಿ ಇದ್ದೇವೆಂದು ಜನ ತಿಳಿದುಕೊಂಡಾರು ಎಂಬ ಉದ್ದೇಶದಿಂದ ಮಾಡಿರತಕ್ಕ ಸ್ಟೇಟ್‌ಮೆಂಟ್ಸ್ ಅವು. ಮೈತ್ರಿ ಕೂಟ ಮಾಡಿದ ಗಿಲ್ಟಿ ಕಾಂಪ್ಲೆಕ್ಸ್ ಏನಿದೆ ಅದನ್ನು ತಿದ್ದಿಕೊಳ್ಳುವುದಕ್ಕೆ ಮಾಡರತಕ್ಕ ಸ್ಟೇಟ್‌ಮೆಂಟ್ಸ್‌ನಿಂದ ಜನರ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಆದಕಾರಣ ಅಂಥ ಸ್ಟೇಟ್ ಮೆಂಟ್‌ಗಳ ಬಗ್ಗೆ ಈ ಹೊತ್ತು ಈ ಸಭೆಯಲ್ಲಿ ವಿರೋಧಪಕ್ಷದ ನಾಯಕರು ದೊಡ್ಡದಾಗಿ ನಾವೇ ಇಂಥ ಪ್ರೋಗ್ರೆಸಿವ್ ಆದ ಕಾರ್ಯಕ್ರಮಗಳನ್ನು ಮಾಡಿದ್ದೇವೆ, ಈ ಸರ್ಕಾರ ಅದನ್ನು ಮಾಡಿದ್ದಲ್ಲ ಎಂದು ಹೇಳುವುದಕ್ಕೆ ಹೊರಟರೆ ನಾವು ಅಷ್ಟು ಸುಲಭವಾಗಿ ಅದನ್ನು ಒಪ್ಪಿಕೊಳ್ಳುವುದಕ್ಕಾಗು ವುದಿಲ್ಲ. ಅದರ ಹಿನ್ನೆಲೆ ಏನು ಎನ್ನುವುದರ ವಿಷಯವನ್ನು ನಾವು ಜನರ ಮುಂದೆ ಇಡಬೇಕಾಗು ತ್ತದೆ.

ಈ ಸರ್ಕಾರದ ಧೋರಣೆ ಏನು ಎನ್ನುವುದನ್ನು ಮಾನ್ಯ ದೇವೇಗೌಡರು ಪದೇ ಪದೇ ಕೇಳು ತ್ತಿದ್ದಾರೆ. ಈ ಸರ್ಕಾರದ ಧೋರಣೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾದ್ದಿಲ್ಲ. ಭೂತಲಿಂಗಂ ಕಮಿಟಿಯವರು ಬರೆದಿರತಕ್ಕ ಒಂದು ಪ್ಯಾರಾಗ್ರಾಫ್ ಮಾತ್ರ ಇಲ್ಲಿ ಓದುತ್ತೇನೆ.

(ಶ್ರೀ ಎಂ. ವೈ. ಘೋರ್ಪಡೆ)

Extract from Bhootalingam Committee Report :

"For the very same reason, we would depricate exemptions including exemption of land revenue on small holdings. However, we find during the last few years, there has been a rush of such exemptions in several States, most have arisen from local temporary political exigencies rather than from any well-considered economic or practical objectives or as part of a new progressive system. As other scurces of revenue expand and yield from land revenue becomes less important, a time may come when it may be possible to do away with land revenue altogether. But, in our view, that time has not yet at least for the State of Mysore come. In the opinion of the Committee therefore, the land revenue should be retained as an indispensable part of the total scheme of taxation and the element of progression secured by other ways, better and more enduring, we feel that this can best be achieved by the development of progressive agricultural income tax."

ಒಟ್ಟಿನಲ್ಲಿ ನಾನು ಹೇಳುವುದು ಇಷ್ಟು. ಲ್ಯಾಂಡ್ ರೆವೆನ್ಯೂ ಪ್ರೋಗ್ರೆಸಿವ್ ಟ್ಯಾಕ್ಸ್ ಅಲ್ಲ. ಹತ್ತು ಎಕರೆ ಇರುವವರು ಒಂದು ಎಕರೆಗೆ ಎಷ್ಟು ಕೊಡುತ್ತಾರೆಯೋ ಒಂದು ಎಕರೆ ಇರುವವರೂ ಅಷ್ಟೇ ಕೊಡಬೇಕು. ಇದು ಪ್ರೋಗ್ರೆಷನ್ ಅಲ್ಲ. ಪ್ರೋಗ್ರೆಷನ್ ತರಬೇಕಾದರೆ ಸರಿಯಾದ ಕಾಲ ಬಂದಾಗ ಪ್ರೋಗ್ರೆಸಿವ್ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕಲಿಕ್ಕೆ ಸಾಧ್ಯವಿದೆ. ಆವಾಗ ಲ್ಯಾಂಡ್ ರೆವೆನ್ಯೂ ಬಿಟ್ಟುಬಿಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಷಯ ಇದರಲ್ಲಿ ಅಡಕವಾಗಿದೆ. ಈಗ ತಾವು ಏನು ಹೇಳುತ್ತಿದ್ದೀರಿ ಅದು ಪೊಲಿಟಿಕಲ್ ಎಕ್ಸಿಜೆನ್ಸೀಸ್‌ಗಾಗಿ ಮಾಡಿರತಕ್ಕದ್ದು. ಆಳವಾಗಿ ಯೋಚನೆ ಮಾಡಿ ಆರ್ಥಿಕ ದೃಷ್ಟಿಯಿಂದ ಮಾಡಿರತಕ್ಕದ್ದಲ್ಲ ಎನ್ನುವುದು ಇದರಲ್ಲಿ ಅರ್ಥವಾಗುತ್ತದೆ. ಉದಾಹರಣೆಯನ್ನು ಕೊಡಬೇಕಾದರೆ, ಹತ್ತು ಎಕರೆಗೆ ಲ್ಯಾಂಡು ರೆವೆನ್ಯೂ ಹಾಕಬಾರದು ಎನ್ನುವ ನೀತಿಯನ್ನು ಇಂಪ್ಲಿಮೆಂಟು ಮಾಡುವಾಗ ಏನಾಗಿದೆ ಎಂದರೆ ಯಾರಲ್ಲಿ 10.5 ಎಕರೆಯಷ್ಟು ಭೂಮಿ ಇರುತ್ತದೋ ಅಂತಹವರು ಲ್ಯಾಂಡ್ ರೆವಿನ್ಯೂ ಕೊಡಬೇಕಾಗುತ್ತದೆ. ಆದರೆ ಯಾರಿಗೆ 9.9 ಎಕರೆಗಳಷ್ಟು ಭೂಮಿ ಇದೆಯೋ ಅವರಿಗೆ ಎಕ್ಸೆಂಪ್‌ಷನ್ ಇರುತ್ತದೆ. ಇದನ್ನು ಆಳವಾಗಿ ಆಗ ವಿಚಾರ ಮಾಡಿಲ್ಲ. 9.9 ಎಕರೆಗಳಷ್ಟು ಭೂಮಿ ಇರುವವರು ಲ್ಯಾಂಡು ರೆವೆನ್ಯೂ ಕೊಡಬೇಕಾಗಿಲ್ಲ. ಆದರೆ 10.1 ಎಕರೆ ಭೂಮಿ ಇರುವವರು ಲ್ಯಾಂಡು ರೆವೆನ್ಯೂ ಕೊಡಬೇಕು. ಇನ್ನು ಇದನ್ನು ತಾಲ್ಲೂಕ್ ವೈಸು ಮಾಡಿದ್ದಾರೆ. ಹತ್ತು ಎಕರೆಗಳು ಎಂದು ಮಾಡಿರುವುದು ಆಯಾ ತಾಲ್ಲೂಕಿಗೆ ಸಂಬಂಧಪಟ್ಟದ್ದು. ಒಂದು ತಾಲ್ಲೂಕಿನಲ್ಲಿ ನೂರು ಎಕರೆ ಇದ್ದರೆ ಅದು ಹತ್ತು ಎಕರೆಯಂತೆ ಹತ್ತು ಜನಕ್ಕೆ ಸೇರಿದ್ದು ಇರಬಹುದು. ಇಲ್ಲವೇ 9.9 ಎಕರೆ ಎಂದು ಆದರೆ 9 ಜನಕ್ಕೆ ಸೇರಿದ್ದು ಸುಮಾರು 90 ಎಕರೆಗಳಷ್ಟು ಆಗುತ್ತದೆ. ಇವರು ಲ್ಯಾಂಡ್ ರೆವೆನ್ಯೂ ಕೊಡಬೇಕಾಗುವುದಿಲ್ಲ. ಒಬ್ಬರಿಗೆ ಐದು ತಾಲ್ಲೂಕುಗಳಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂಬತ್ತು ಎಕರೆಗಳು ಇದ್ದರೆ ಅವರೂ ಕೂಡ ಲ್ಯಾಂಡು ರೆವೆನ್ಯೂ ಕೊಡಬೇಕಾದ್ದಿಲ್ಲ. ಈಚೆಗೆ ಯಾವ ಯಾವ ವಿಧವಾದ ಭೂಮಿ ಯಾವ ರೀತಿ ಇರಬೇಕು ಎಂದು ವರ್ಗೀಕರಣವಾಗಿದೆ. ಆದರಂತೆ ಹತ್ತು ಎಕರೆ ಡ್ರೈ ಲ್ಯಾಂಡು ಇದ್ದರೆ ಅದಕ್ಕೆ ಒಂದು ಎಕರೆ ಗಾರ್ಡನ್ ಲ್ಯಾಂಡು ಸಮನಾಗುತ್ತದೆ, ಇಲ್ಲವೇ ಎರಡು ಎಕರೆ ವೆಟ್ ಲ್ಯಾಂಡು ಸಮವಾಗುತ್ತದೆ, ಇವುಗಳಲ್ಲಿ ಯಾವುದಕ್ಕೆ ವಿನಾಯತಿ ಕೊಡಬೇಕು ಎನ್ನುವುದರ ಬಗ್ಗೆ ನಿರ್ಧಾರವಾಗಬೇಕು. ಇವೆಲ್ಲ ಪ್ರಶ್ನೆಗಳು ಇದರಲ್ಲಿ ಬರುವುದರಿಂದ ಸರಕಾರ ಇನ್ನೂ ಯಾವ ಯೋಚನೆಯನ್ನೂ ಮಾಡಿಲ್ಲ. ಇದನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಯಾವ ರೀತಿ ಮಾಡಬೇಕು, ಬೇರೆ ರಾಜ್ಯಗಳಲ್ಲಿ ಇದರ ಬಗ್ಗೆ ಏನು ಮಾಡಿದ್ದಾರೆ, ಏನು ಸ್ಟೇಟುಮೆಂಟು ಕೊಟ್ಟಿದ್ದಾರೆ ಎನ್ನುವುದನ್ನು ನೋಡಿ ನಂತರ ಒಂದು ತೀರ್ಮಾನ ಮಾಡಬಹುದು, ಇದರ ಬಗ್ಗೆ ಕ್ಯಾಬಿನೆಟ್ ತೀರ್ಮಾನವಾಗಿಲ್ಲ ಎಂದು ಇಷ್ಟು ಮಾತ್ರ ನಾನು ಕೇಳಬಯಸುತ್ತೇನೆ. ಸರಕಾರದ ಧೋರಣೆ ಏನಿದೆ ಅದನ್ನು ನಾವು ತೀರ್ಮಾನ ಮಾಡುವುದಕ್ಕೆ ಮುಂಚೆ ಇವೆಲ್ಲ ಅಂಶಗಳನ್ನೂ ತಜ್ಞರು ಸರಿಯಾಗಿ

ಅಭ್ಯಾಸ ಮಾಡಿ ಈಗ ಲ್ಯಾಂಡು ರೆವಿನ್ಯೂ ಇರುವುದನ್ನು ಬದಲಾಯಿಸುವ ಕಾಲ ಬಂದಿದೆಯೋ ಇಲ್ಲವೇ, ಈಗಿರುವ ಲ್ಯಾಂಡು ರೆವಿನ್ಯೂ ಪ್ರೋಗ್ರೆಸೀವ್ ಆಗಿದೆಯೋ ಇಲ್ಲವೇ ಎಂಬುದರ ಬಗ್ಗೆ ಎಕ್ಸ್‌ಪರ್ಟ್‌ಗಳು ಹೇಳಿದರೆ ಇದನ್ನು ಯಾವ ರೀತಿ ಬದಲಾಯಿಸಬೇಕು ಮತ್ತು ಯಾವಾಗ ಮಾಡಬೇಕು, ಎಂಬುದನ್ನು ಆಲೋಚನೆ ಮಾಡಬಹುದು. ಭೂಕಂದಾಯದಿಂದ ಸುಮಾರು ಆರೇಳು ಕೋಟಿ ರೂಪಾಯಿಗಳಷ್ಟು ಬರಬಹುದು. ಇದನ್ನು ಆಯಾ ತಾಲ್ಲೂಕಾ ಬೋರ್ಡುಗಳು ಹಾಗೂ ಪಂಚಾಯತಿಗಳಿಗೆ ಕೊಡುತ್ತಿದ್ದೇವೆ. ಇದನ್ನು ಕೂಡ ನಿಲ್ಲಿಸಿಬಿಟ್ಟರೆ ಡೆಮಾಕ್ರೆಟಿಕ್ ಇನ್ಸ್‌ಟಿಟ್ಯೂಷನ್‌ಗಳು ಎಂದು ಹೇಳುವ ತಾಲ್ಲೂಕಾ ಬೋರ್ಡುಗಳು ಮತ್ತು ಪಂಚಾಯತಿಗಳು ಮುಂದೆ ಅವುಗಳ ಕೆಲಸವನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದನ್ನು ಕೊಂಚ ಯೋಚನೆ ಮಾಡಿ. ಯಾವ ರೀತಿ ಬದಲಾವಣೆ ಮಾಡಿದರೆ ಸರಿಹೋಗುತ್ತೆ, ಡ್ರೈಏರಿಯಾದವರಿಗೆ ರಿಲೀಫ್ ಕೊಡಲು ಸಾಧ್ಯವೇ ಎಂಬ ವಿಷಯಗಳ ಬಗ್ಗೆ ಒಂದು ಸಮಗ್ರವಾದ ಟ್ಯಾಕ್ಸೇಷನ್ ರಿಪೋರ್ಟು ಬಂದಿದೆ. ಅದರಲ್ಲಿ ಇರುವ ವಿಚಾರಗಳನ್ನು ನೋಡಿ, ಅವರು ಯಾವ ರೀತಿ ಪ್ರಗತಿಪರವಾದ ವರದಿ ಕೊಟ್ಟಿದ್ದಾರೆ, ನಮ್ಮ ಹಣಕಾಸಿನ ವ್ಯವಸ್ಥೆ ಯಾವ ರೀತಿ ಇದೆ ಎನ್ನುವುದನ್ನು ನನ್ನ ಹೇಳಿಕೆಯಲ್ಲಿ ಹೇಳಿದೆ. ನಾನು ಕೊಟ್ಟಿರುವ ಹೇಳಿಕೆ ಪ್ರಗತಿಪರವಾಗಿಲ್ಲ, ಅನುಭವವಿಲ್ಲದ್ದು, ಅದು ಅಷ್ಟೇನೂ ಸ್ವಾಯತ್ತ ಪದ್ಧತಿಗೆ ಅನುಗುಣವಾಗಿಲ್ಲ ಎಂದು ಹೇಳಿ ಶ್ರೀ ದೇವೇಗೌಡರವರು ಈ ಸಭೆಯಲ್ಲಿ ಪ್ರಸ್ತಾಪ ಮಾಡಿದರು. ಇದರ ಬಗ್ಗೆ ಇರುವ ಹಿನ್ನೆಲೆಯೇನು ಎನ್ನುವುದನ್ನು ಹೇಳಲು ತಮ್ಮಲ್ಲಿ ಕಾಲಾವಕಾಶ ಕೇಳಿದೆ. ಅದಕ್ಕೆ ಸ್ಪೀಕರ್‌ರವರು ಅವಕಾಶ ಕೊಟ್ಟರು ಅದರಂತೆ ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ವಿವರಗಳನ್ನು ಗಮನಿಸಬೇಕಾಗಿ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸ್ವಾಮಿ, ನಮ್ಮ ಮಾನ್ಯ ಅರ್ಥ ಸಚಿವರು ಸ್ವಲ್ಪ ಗಮನವಿಟ್ಟು ಅವರು ಮೊನ್ನೆಯಲ್ಲಿ ಮಾಡಿರುವ ತಮ್ಮ ಭಾಷಣವನ್ನು ಸ್ವಲ್ಪ ನೋಡಬೇಕೆಂದು ವಿನಂತಿ ಮಾಡುತ್ತೇನೆ. ಅವರು ಕೊಟ್ಟಿರುವ ಹೇಳಿಕೆಯಲ್ಲಿ ಹಿಂದೆ ಕ್ಯಾಬಿನೆಟ್ ಡಿಸಿಷನ್ ಆಗಿಲ್ಲ ಎಂದು ಹೇಳಿದ್ದಾರೆ.

He has referred to several points *viz.*,. Grand alliance and all those things. I want to make myself clear about it. I have verified his statement. I do not want to be bluffed. Please send me a copy of his speech. ಇವರು ಕೊಟ್ಟಿರುವ ಹೇಳಿಕೆಯಿಂದ ಸ್ಪಷ್ಟವಾಗಿ ತೀರ್ಮಾನವಾಡಿಲ್ಲ ಎಂದು ಅರ್ಥವಾಗುವುದಿಲ್ಲ. ಅವರು ಕನ್ನಡದಲ್ಲೇ ಮಾತನಾಡಿದ್ದಾರೆ. ಅವರ ಕನ್ನಡ ಭಾಷಣವನ್ನು ನೋಡಿ ಅದರಲ್ಲಿರುವ ಕನ್ನಡವನ್ನು ಅರ್ಥಮಾಡಿಕೊಂಡಿದ್ದೇನೆ. ಕ್ಯಾಬಿನೆಟ್ ಡಿಸೆಷನ್ ಆಗಿಲ್ಲ, ಅದು ಚುನಾವಣೆಯ ಸಂದರ್ಭದಲ್ಲಿ ಮಾಡಿದ ಒಂದು ತೀರ್ಮಾನ ಎಂದು ಹೇಳಿದ್ದಾರೆ. ನಾನು ತಪ್ಪು ಮಾಡಿದ್ದರೆ ಮಾಫಣಿ ಕೇಳಲು ಸಿದ್ಧ. ನಾನು ಕ್ಯಾಬಿನೆಟ್ ಡಿಸಿಷನ್ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ನನ್ನ ವಾದವನ್ನು ಪುಷ್ಟೀಕರಿಸಲು ಮತ್ತು ವಿಶದೀಕರಿಸಲು ವಿವರಗಳನ್ನು ಹೇಳಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ತಮ್ಮ ವಾದ ಏನಿದೆ ಅದನ್ನು ಕೇಳಿದ್ದೇನೆ. ಇದರ ಉದ್ದೇಶವೇನು ಎನ್ನುವುದನ್ನೂ ಹೇಳುತ್ತೇನೆ. ಕ್ಯಾಬಿನೆಟ್ ಡಿಸಿಷನ್ ಆಗಿದೆಯೋ ಇಲ್ಲವೇ ಎನ್ನುವುದಕ್ಕೆ ಅವರೇ ಕೊಟ್ಟಿರುವ ಡೀಟೆಲ್ಸ್‌ಗಳನ್ನು ಇಲ್ಲಿ ಹೇಳುತ್ತೇನೆ. 15-3-1967ರಲ್ಲಿ ಆಗಿನ ಆರ್ಥಿಕ ಮಂತ್ರಿಗಳು ಮಾಡಿದ ಭಾಷಣಕ್ಕೆ 24-3-1967 ರಲ್ಲಿ ಉತ್ತರವಾಗಿ ಬಂದಿರುವ ಭಾಷಣದಲ್ಲಿ ಎಲ್ಲ ವಿವರಗಳೂ ಇವೆ. ಅನಂತರ 19-10-68 ರಲ್ಲಿ ಮಾಡಿದ ಬಜೆಟ್ಟು ಭಾಷಣದಲ್ಲಿ ಸರ್ಕಾರದ ಧೋರಣೆ ಏನು ಎನ್ನುವುದನ್ನು ಹೇಳಲಾಗಿದೆ. ಒಂದು ಸಾಮಾನ್ಯ ತೀರ್ಮಾನ ಎಂದೂ ಹೇಳುವುದಕ್ಕೂ ಕ್ಯಾಬಿನೆಟ್ ತೀರ್ಮಾನ ಎಂದು ಹೇಳುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ ಎಂದು ನನ್ನ ಭಾವನೆ. ಕ್ಯಾಬಿನೆಟ್‌ನಲ್ಲಿ ಆದ ನಿರ್ಣಯಗಳು ಏನಿವೆ ಅವು ಸರ್ಕಾರದ ಧೋರಣೆಗಳು ಆಗಿರುತ್ತವೆ ಇದರ ಬಗ್ಗೆ ಇರತಕ್ಕ ಇಂಪ್ಲಿಕೇಷನ್‌ಗಳನ್ನು ಹೇಳಲು ನಾನು ಕ್ಯಾಬಿನೆಟ್‌ನಲ್ಲಿ ಸಚಿವನಾಗಿ ಕೆಲಸ ಮಾಡಿಲ್ಲ. ತಾವೇ ಹೇಳಿರುವ ತಾರೀಖುಗಳನ್ನು ಇಲ್ಲಿ ತಮಗೆ ತಿಳಿಸುತ್ತೇನೆ. 15-3 67 ರಲ್ಲಿ, ಹಾಗೂ 24-3-67 ರಲ್ಲಿ ತಾವೇ ಹೇಳಿದ್ದೀರಿ, ಎಂದರೆ ಐದು ವರ್ಷಗಳ ಹಿಂದೆ, ಇದು ಹೇಳಿರುವುದು. ಆಗ ಸಿಂಡಿಕೇಟು ಅಥವಾ ಇಂಡಿಕೇಟು ಎಂದು ಯಾವುದೂ ಇರಲಿಲ್ಲ. ಆ ದಿವಸ ಈ ಸಂಸ್ಥೆಯಲ್ಲಿ ತಾವೂ ಇದ್ದೀರಿ, ಮತ್ತು ಇದಕ್ಕೆ ಭಾಗಿಗಳಾಗಿದ್ದೀರಿ. ಇದರ ಬಗ್ಗೆ ಚುನಾವಣೆಗೆ ಮುಂಚೆ

(ಶ್ರೀ ಎಚ್. ಡಿ. ದೇವೇಗೌಡ)

ನಿರ್ಣಯ ತೆಗೆದುಕೊಂಡಿರುವುದು ಎಂದು ಹೇಳುವುದು ಸರಿಯಲ್ಲ. ಸಿಂಡಿಕೇಟ್, ಪೊಲಿಟಿಕಲ್ ಅಲಯನ್ಸ್ ಮಾಡಿಕೊಂಡಿತು, ನಾವು ಪ್ರತಿಗಾಮಿಗಳು ಎಂದು ಹೇಳಿದ್ದೀರಿ. ನಾವು ಪ್ರಗತಿಗಾಮಿಗಳೆಂಬುದನ್ನು ತೋರ್ಪಡಿಸಿಕೊಳ್ಳಲು ಹಿಂದಿನ ಸರಕಾರ ಒಂದು ನಿರ್ಣಯ ತೆಗೆದುಕೊಂಡಿದೆ ಎನ್ನುವ ಮಾತನ್ನು ತಮಗೆ ಇಲ್ಲಿ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಆಗಿನ ಸರಕಾರ ಮಾಡಿದ ನಿರ್ಣಯದಂತೆ ಇಂದು ನಮ್ಮ ರಾಜ್ಯದಲ್ಲಿ ವೃದ್ಧಾಪ್ಯ ವೇತನ ಕೊಡಬೇಕು ಎಂದು ಮಾಡಿತು, ಅದನ್ನು ಇತರೆ ಬೇರೆ ಯಾವ ರಾಜ್ಯದಲ್ಲೂ ಮಾಡಿಲ್ಲ. ನಮ್ಮ ರಾಜ್ಯವೇ ಮೊದಲನೆಯದು. ರಾಷ್ಟ್ರದಲ್ಲಿ ಯಾವ ಇಂಡಿಕೇಟ್ ಸರಕಾರವೂ ಅದನ್ನು ಮಾಡಲಿಲ್ಲ. ಇದನ್ನು ತಾವು ಅರಿಯಬೇಕು. ಹಿಂದೆ ಇದ್ದ ಸರ್ಕಾರ ಪ್ರತಿಗಾಮಿ ಸರಕಾರ ಎಂದು ಏನು ಹೇಳುತ್ತಾರೆ ಅದು ತಪ್ಪು. ಇದನ್ನು ಜನ ಮೆಚ್ಚುವುದಕ್ಕಾಗಿ ಇಲ್ಲಿ ಹೇಳಲು ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಸೌಲಭ್ಯಗಳನ್ನು ಇಡೀ ರಾಷ್ಟ್ರದಲ್ಲೇ ಮೊದಲಾಗಿ ನಮ್ಮ ರಾಜ್ಯ ಕಲ್ಪಿಸಿತು. ಇದರ ಜೊತೆಗೆ ರಾಜಕೀಯ ಸಂತ್ರಸ್ತರಿಗಾಗಿ ಸರಕಾರ ಕೆಲವು ರಿಯಾಯತಿಗಳನ್ನು ಕೊಟ್ಟಿದೆ. ಮೊಟ್ಟ ಮೊದಲಗೆ ನಮ್ಮ ಸರ್ಕಾರ ಪೊಲಿಟಿಕಲ್ ಸಫರರುಗಳಿಗೆ ವಿಶ್ರಾಂತಿ ವೇತನ ಕೊಟ್ಟಿದೆ. ರಾಷ್ಟ್ರವಲ್ಲಿ ಹಿಂದೆ ಯಾವ ಸರಕಾರವಾದರೂ ಕೊಟ್ಟಿತ್ತೇ ಎನ್ನುವುದನ್ನು ಅರಿಯಬೇಕು ಮತ್ತು ಇದನ್ನು ತಿಳಿದುಕೊಳ್ಳಬೇಕು.

Do not try to tar us. You are also a party. I want a clarification. I have got every right to ask for a clarification.

5-00 P. M.

ನಾನು ಇವೊತ್ತು ಹೇಳತಕ್ಕಂಥದ್ದು ಏನೆಂದರೆ ತಾವು ಮೇಲ್ಮನೆಯಲ್ಲಿ ಬಡ್ಜೆಟ್ ಭಾಷಣಕ್ಕೆ ಉತ್ತರ ಕೊಡುವಾಗ ರಾಜಕೀಯ ಭಾಷಣ ಮಾಡುವ ಅವಶ್ಯಕತೆ ಇಲ್ಲದಿದ್ದರೂ ಕೂಡ ನಮ್ಮ ಪಕ್ಷ ಇತರೇ ಪ್ರತಿಗಾಮಿ ಪಕ್ಷಗಳೊಡನೆ ಸೇರಿಕೊಂಡು ಕೆಲಸ ಮಾಡಿತು ಎಂಬತಕ್ಕಂಥ ರೀತಿಯಲ್ಲಿ ರಾಜಕೀಯ ಭಾಷಣ ಮಾಡಿದ್ದೀರಿ. ತಾವು ಆ ರೀತಿ ಭಾಷಣ ಮಾಡಿದ್ದಕ್ಕೆ ನನಗೆ ಅಸಂತೋಷ ಇಲ್ಲ. ನಾವು ಪ್ರತಿಗಾಮಿಗಳು, ನೀವು ಪ್ರಗತಿಗಾಮಿಗಳು ಎಂದು ಹೇಳುವುದಾದರೆ ಈ ಕೂಡಲೆ ಇಷ್ಟು ಎಕರೆಗೆ ಭೂಕಂದಾಯವನ್ನು 'ರದ್ದು ಮಾಡುತ್ತೇವೆಂದು ಹೇಳಿ. ಹಿಂದಿನ ಸರ್ಕಾರ 10 ಎಕರೆಯವರೆಗೆ ಜಮೀನು ಇರತಕ್ಕವರಿಗೆ ಭೂಕಂದಾಯವನ್ನು ರದ್ದು ಮಾಡುವುದಾಗಿ ತೀರ್ಮಾನ ತೆಗೆದುಕೊಂಡಿತು. ಅದರಂತೆ ತಾವು ಕೂಡ ಮಾಡುತ್ತೀರೋ ಇಲ್ಲವೋ ಎಂಬುದನ್ನು ಹೇಳಿ. ಬಡವರಿಗೆ ಅನುಕೂಲ ಮಾಡಬೇಕೆಂದೇ ಹಿಂದಿನ ಸರ್ಕಾರ ಈ ತೀರ್ಮಾನ ತೆಗೆದುಕೊಂಡಿತ್ತು. ಅದನ್ನು ಮಾನ್ಯ ಮಂತ್ರಿಗಳಾದ ತಾವು ಅರಿತುಕೊಳ್ಳಲಿಲ್ಲವೆಂದರೆ ಕಷ್ಟವಾಗುತ್ತದೆ. ಒಬ್ಬ ಮನುಷ್ಯನಿಗೆ 10 ಎಕರೆ 20 ಗುಂಟೆ ಜಮೀನು ಇದ್ದರೆ ಅತನು ಭೂಕಂದಾಯದ ರದ್ದಿಗೆ ಅನರ್ಹನಾಗುತ್ತಾನೆಂದು ತಾವು ವಾದ ಹೂಡುವುದಾದರೆ ಅದು ಸಮಂಜಸವಾದ ವಾದವಾಗುವುದಿಲ್ಲ. ಕೇವಲ ತಾವು ಭೂತಲಿಂಗಮ್ ಕಮಿಟಿಯ ವರದಿಯನ್ನೇ ಆಧಾರವನ್ನಾಗಿ ಇಟ್ಟುಕೊಂಡು ಸಿಂಡಿಕೇಟಿನವರ ತೀರ್ಮಾನವನ್ನು ತೆಗೆದು ಹಾಕಬೇಕೆಂದು ಇಂಡಿಕೇಟ್‌ನವರಾದ ತಾವು ಈ ಭೂಕಂದಾಯದ ಬಗ್ಗೆ ರಾಜಕೀಯ ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಮೊನ್ನೆ ನಡೆದ ಚುನಾವಣೆಯ ಕಾಲದಲ್ಲಿ ಬಡವರಿಗೆ ಎಲ್ಲ ರೀತಿಯ ಅನುಕೂಲಗಳನ್ನು ಮಾಡುತ್ತೇವೆಂದು ಏನು ಒಂದು ನಿರ್ಣಯ ತೆಗೆದುಕೊಂಡಿದ್ದೀರಿ, ಅದನ್ನು ಯಾವ ರೀತಿಯಲ್ಲಿ ಕಾರ್ಯಗತ ಮಾಡುತ್ತೀರಿ ಎಂಬುದನ್ನು ನಾನು ಈ ಜಾಗದಲ್ಲಿ ಕುಳಿತುಕೊಂಡು ನೋಡುತ್ತಿರುತ್ತೇನೆ. I want a specific information from the Government whether it is prepared to implement it or not. Please tell us whether you are prepared to implement it in the present form. ಹಿಂದಿನ ರಾಜ್ಯಪಾಲರು ಭೂಕಂದಾಯವನ್ನು ರದ್ದು ಮಾಡುವ ವಿಚಾರದಲ್ಲಿ ಒಂದು ತಿದ್ದುಪಡಿಯನ್ನು ಕೇಂದ್ರಕ್ಕೆ ಕಳಿಸಿಕೊಟ್ಟಾಗ ಅದು ವಾಪಸ್ ಬಂತು ಎಂದು ಹೇಳಿದಿರಿ. ಈ ತಿದ್ದುಪಡಿ ಸೂಚನೆಯನ್ನು ಕೇಂದ್ರಕ್ಕೆ ಯಾವ ತಾರೀಖಿನಂದು ಕಳಿಸಲಾಗಿತ್ತು ಎಂದರೆ ನಾನು ಅದರ ದಾಖಲೆಯನ್ನು ಇಂದು ತಂದಿಲ್ಲ, 13-9-1971 ರಂದು ಕಳಿಸಲಾಗಿತ್ತು ಎಂದು ಕಾಣುತ್ತದೆ. ಈ ತಿದ್ದುಪಡಿಯನ್ನು ಕೇಂದ್ರಕ್ಕೆ ಕಳಿಸಲಾಗಿತ್ತೇ ಇಲ್ಲವೇ, ಅದನ್ನು ಕೇಂದ್ರ ಸರ್ಕಾರದವರು ಒಪ್ಪದೆ ಹಾಗೆಯೇ ವಾಪಸ್ ಕಳಿಸಿದರೇ ಅಥವಾ ಇಲ್ಲವೇ ಎಂಬುದನ್ನು ತಾವು ಸ್ಪಷ್ಟೀಕರಣ ಮಾಡಬೇಕು. ಕೇಂದ್ರ ಸರ್ಕಾರದವರು

ಈ ತಿದ್ದುಪಡಿಯನ್ನು ಯಾವ ಕಾರಣದಿಂದ ವಾಪಸ್ ಕಳಿಸಿದರು, ಇದರಿಂದ ಬಡವರಿಗೆ ಅನುಕೂಲವಾಗುತ್ತದೋ ಇಲ್ಲವೋ ಎಂಬುದನ್ನು ಅವರು ಗಮನಿಸಲಿಲ್ಲವೇ ಎಂಬುದನ್ನು ಸಹ ತಿಳಿಸಬೇಕು. ಏಕೆಂದರೆ ತಾವು ಪ್ರಗತಿಗಾಮಿಗಳು ಅಂದಮೇಲೆ ಬಡವರಿಗೆ ಅನುಕೂಲವಾಗುವ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಸ್ಪೆಸಿಫಿಕ್ ಆಗಿ ಹೇಳಿಬಿಡಿ. ಭೂತಲಿಂಗಮ್ ಕಮಿಟಿಯವರು ಸೈಂಟಿಫಿಕ್ ಆಗಿ ಕೊಡತಕ್ಕ ಒಂದು ವರದಿಯ ಆಧಾರದ ಮೇಲೆ ಪ್ರಗತಿಪರವಾದಂಥ ತೆರಿಗೆ ವಿಧಾನವನ್ನು ಜಾರಿಗೆ ತರುತ್ತೇವೆಂದು ತಾವು ಹೇಳುವುದಾದರೆ ಅದು ಬೇರೆ ಮಾತು. ಆದರೆ ಹಿಂದಿನ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದನ್ನು ತಾವು ಜಾರಿಗೆ ತರುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು. ಇದು ಕೇವಲ ಇಂಡಿಕೇಟ್ ಮತ್ತು ಸಿಂಡಿಕೇಟ್‌ನ ಪ್ರಶ್ನೆ ಅಲ್ಲ. ಇದರ ಬಗ್ಗೆ ಬಡವರಿಗೆ ಆಸಕ್ತಿ ಇದೆ, ಅವರು ಈ ಸರ್ಕಾರದವರು ಏನು ಮಾಡುತ್ತಾರೆಂಬುವನ್ನು ಕಾದು ನೋಡುತ್ತಿದ್ದಾರೆ. ಆದ್ದರಿಂದ ತಾವು ಉತ್ತರ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ಮೊದಲು ನಾನು ಒಂದು ವಿಷಯ ಹೇಳಬೇಕಾಗಿದೆ. ಈಗ ನಡೆಯುತ್ತಿರುವ ವಾದವನ್ನು ನೋಡಿದರೆ, ಅವರು ಇಲ್ಲಿ ಇದ್ದಾಗ ಇವರು ಏನೂ ಮಾಡಲಿಲ್ಲ ಎಂಬುದಾಗಿಯೂ ಇವರು ಇಲ್ಲಿ ಇದ್ದಾಗ ಅವರು ಏನೂ ಮಾಡಲಿಲ್ಲ ಎಂಬುದಾಗಿಯೂ ಕಾಣುವ ರೀತಿಯಲ್ಲಿ ವಾದ ವಿವಾದ ನಡೆಯುತ್ತಿರುವಂತೆ ಕಾಣುತ್ತದೆ. 1967, 1968, 1969ನೇ ಸಾಲಿನಲ್ಲಿ ಆಗಿನ ಸರ್ಕಾರದವರು ಜಾರಿಗೆ ತರಬೇಕೆಂದಿದ್ದವುಗಳನ್ನು ಜಾರಿಗೆ ತರಲಿಲ್ಲವೆಂಬ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ವಿವರಣೆ ಕೊಟ್ಟು ಹೇಳಿದರು. ಆ ಸಮಯದಲ್ಲಿ ಶ್ರೀ ದೇವೇಗೌಡರು ಶ್ರೀ ಘೋರ್ಪಡೆಯವರು ಒಂದೇ ಕಡೆ ಇದ್ದರು. ಹಿಂದಿನ ಸರ್ಕಾರದವರು ಕೆಲವು ಧೋರಣೆಗಳ ಬಗ್ಗೆ ತೀರ್ಮಾನ ತೆಗೆದುಕೊಂಡ ಕಾಲದಲ್ಲಿ ಮತ್ತು ಅದೇ ವಿಷಯದ ಬಗ್ಗೆ ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಕೊಟ್ಟಾಗ ಇವರಿಬ್ಬರೂ ಒಂದೇ ಕಡೆ ಇದ್ದರು. ಅದರ ನಂತರ ಕಾಂಗ್ರೆಸ್ ಎರಡು ಭಾಗವಾದ ಮೇಲೆ ಕೆಲವರು ಈ ಕಡೆ ಉಳಿದರು, ಕೆಲವರು ಆ ಕಡೆಗೆ ಹೋದರು. ಇವರಿಬ್ಬರ ಜಗಳದಲ್ಲಿ ಜನರಿಗೆ ಮೋಸವಾಗಿದೆ. ಬೇರೆ ಯಾರಿಗೂ ಮೋಸವಾಗಿಲ್ಲ. ಮಾನ್ಯ ಘೋರ್ಪಡೆಯವರ ಬಗ್ಗೆ ನನಗೆ ಅಭಿಮಾನವಿದೆ. ವೈಯಕ್ತಿಕವಾಗಿ ಅವರ ಬಗ್ಗೆ ನಾನು ಏನನ್ನೂ ಹೇಳುತ್ತಿಲ್ಲ. ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಎರಡು ಭಾಗಗಳಾದ ಮೇಲೆ, ಆ ಕಡೆ ಸಂಖ್ಯೆ ಜಾಸ್ತಿಯಾಗಿದೆ, ಈ ಕಡೆ ಸಂಖ್ಯೆ ಕಡಿಮೆಯಾಗಿದೆ ಅಷ್ಟೆ. ಆದರೆ ಅವರು ಮಾಡಿದ್ದಾರೆ, ಇವರು ಏನೂ ಮಾಡಿಲ್ಲ, ಇವರು ಮಾಡಿದ್ದಾರೆ, ಅವರು ಏನೂ ಮಾಡಿಲ್ಲ ಅಂದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಈಗ ಆಳುವ ಪಕ್ಷದವರು ಏನೇನು ಮಾಡುತ್ತಾರೆ ಎಂಬುದನ್ನು ಜಡ್ಜ್ ಮಾಡಬೇಕಾಗಿದೆ. ಇವತ್ತಿನ ದಿವಸವೇ ಅವರು ಏನನ್ನೂ ಮಾಡಿಲ್ಲವೆಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಯಾರು ಯಾರು ಏನೇನು ಮಾಡಿದ್ದಾರೆಂಬುದು ಜನಕ್ಕೆ ಗೊತ್ತಿದೆ. ಚುನಾವಣೆಯ ಸಮಯದಲ್ಲಿ ಆಗಿನ ಸರ್ಕಾರದವರು ಮಾಡಿದಂಥ ಘೋಷಣೆಗಳನ್ನು ಈಗಿನ ಸರ್ಕಾರದವರೂ ಕೂಡ ಚುನಾವಣೆಯ ಸಂದರ್ಭದಲ್ಲಿ ಮಾಡುವುದಿಲ್ಲವೆಂದು ಯಾರಿಗೆ ಗೊತ್ತು? ಚುನಾವಣೆಯ ಸಮಯದಲ್ಲಿ ಎನ್. ಜಿ. ಒ. ಗಳಿಗೆ 5 ರೂಪಾಯಿ ಜಾಸ್ತಿ ಮಾಡಿ ನಾವು ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳುವುದು. ಈ ರೀತಿ ನಡೆಯುತ್ತಿರುವ ನಾಟಕ ನಮಗೆ ಗೊತ್ತಿಲ್ಲವೇ ? ಜನರಿಗೂ ತಾಳ್ಮೆ ಇದೆ. ಅದೇ ತಾಳ್ಮೆಯನ್ನು ದುರುಪಯೋಗ ಮಾಡಿಕೊಂಡು ಸರ್ಕಾರದವರು ಜನರಿಗೆ ಮೋಸಮಾಡುವುದು ಬೇಡ. ಶ್ರೀ ದೇವೇಗೌಡರಿಗೂ ಸಹ ನಾನು ಇದನ್ನೇ ಹೇಳುವುದು, ಅವರ ಸರ್ಕಾರ ಬಂದಾಗಲೂ ಕೂಡ ಅವರು ಜನರಿಗೆ ಮೋಸ ಮಾಡುವುದು ಬೇಡ. ಯಾರು ಏನು ಮಾಡುತ್ತಾರೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ಈಗ ವಾದ ವಿವಾದ ನಡೆಯುತ್ತಿದೆ. ಅದು ರದ್ದು ಆದರೆ ನನಗೆ ಸಂತೋಷ. ಈ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಇದನ್ನು ಆಳವಾಗಿ ಯೋಚನೆ ಮಾಡಬೇಕಾಗಿದೆ, ಎಲ್ಲ ತೆರಿಗೆಗಳ ಬಗ್ಗೆಯೂ ಕೂಡ ಸಮಗ್ರವಾದಂಥ ಮಾರ್ಪಾಡನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ಮಾಡಬೇಕಾಗಿದೆಯೆಂದು ಹೇಳಿದರು. ಅದು ಅರ್ಥಗರ್ಭಿತವಾದಂಥ ಮಾತು. ಅದೇ ಸಮಯಕ್ಕೆ ಅದನ್ನು ಜಾರಿಗೆ ತರುವ ಬಗ್ಗೆ ಜಾಸ್ತಿ ದಿವಸ ಮಾಡಬೇಡಿ. ಇಂತಹ ಪ್ರಗತಿಪರವಾದಂಥ ಧೋರಣೆಗಳನ್ನು ತಾವು ಜಾಗ್ರತೆ ಜಾರಿಗೆ ತರಬೇಕು. ಗರೀಬಿ ಹಟಾವೋ ಮಾಡುತ್ತೇವೆಂದು ತಾವು ಹೇಳಿರುವುದರಿಂದ ಇಂತಹ ಪ್ರಗತಿಪರವಾದ ಧೋರಣೆಗಳನ್ನು ಜಾಗ್ರತೆ ಜಾರಿಗೆ ತರದಿದ್ದರೆ ಜನರು ಸಿಂಡಿಕೇಟ್‌ಗೆ ಯಾವ ದಾರಿ ತೋರಿಸಿದರೋ ಅದೇ ದಾರಿಯನ್ನು ನಿಮಗೂ ತೋರಿಸುತ್ತಾರೆಂಬುದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(SMT. VIJAYA DESAI)

not be difficult for all of us, just in a small span of a year to translate all these things into Kannada? So I would request the Government to examine these things thoroughly and retain English as the basic language along with Kannada in Educational Institutions, till it is possible to translate all these things into Kannada.

Then a passing remark has been made regarding the disturbances in Gulbarga. A month and a half ago, the situation in Gulbarga brought tears to our eyes. The most unfortunate part of it was, we could see some of the book stalls burning, we could see beedi shops burning; the beautiful flower market was set on fire. As regards the Police, either it is modern equipment or ancient equipment—we are not concerned with that. It is immaterial. But I do request the Government to take immediate steps to find out who the culprits were who were behind these disturbances. I request the Government to bring them to book and punish all those who were responsible for the breath-taking disturbances at Gulbarga.

Madam, the more striking feature of the Address was land Reforms. We all agree for lower ceilings. But no purpose will be served if we merely pass the Land Reforms (Amendment) Bill. We must all see that it will be effective and efficient in its working. Not only that. We must start with our kith and kin and relatives to whom this Land Reforms Bill will apply, so that we will be strengthening the hands of the Government and we will be minimising the disparities between the rich and poor and we will be able to give some lands to the landless.

As regards waste lands, the Government is thinking of granting 50 per cent lands in favour of the S. C. and S. T. and for this, they have already appointed a Special Assistant Commissioner. The Assistant Commissioner, the Thasildar and the concerned MLA should sit together and distribute these lands. Otherwise, if the Government starts its paraphernallia at each and every level, then I am afraid that no S. C. or S. T. is going to get any land. No S. C. or S. T. is going to be benefited by this scheme.

As regards fisheries, we are supposed to have a coast-line of 200 miles and Government is already thinking of developing deep-sea fiishing, off-shore fishing. We already have the Norwegian project and the Japanese method of mechanised fishing is also there in our State. Now the Government is thinking of having a phased programme. It is going to have 317 boats and we must have to construct some boats. If we should think of abundant fish catches, we must have knowledge about the spawning period and whether fish is in deep sea or whether it is available in the shore; we must know the feeding habits of the fish, some times it feeds on small fish and some times it feeds on small worms and organisms. This information is very necessary as far as abundant catch is concerned. So I feel that our resesrch stations are the nucleus

ಈ ತಿದ್ದುಪಡಿಯನ್ನು ಯಾವ ಕಾರಣದಿಂದ ವಾಪಸ್ ಕಳಿಸಿದರು, ಇದರಿಂದ ಬಡವರಿಗೆ ಅನುಕೂಲವಾಗುತ್ತದೋ ಇಲ್ಲವೋ ಎಂಬುದನ್ನು ಅವರು ಗಮನಿಸಲಿಲ್ಲವೇ ಎಂಬುದನ್ನು ಸಹ ತಿಳಿಸಬೇಕು. ಏಕೆಂದರೆ ತಾವು ಪ್ರಗತಿಗಾಮಿಗಳು ಅಂದಮೇಲೆ ಬಡವರಿಗೆ ಅನುಕೂಲವಾಗುವ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಸ್ಪೆಸಿಫಿಕ್ ಆಗಿ ಹೇಳಿಬಿಡಿ. ಭೂತಲಿಂಗಮ್ ಕಮಿಟಿಯವರು ಸೈಂಟಿಫಿಕ್ ಆಗಿ ಕೊಡತಕ್ಕ ಒಂದು ವರದಿಯ ಆಧಾರದ ಮೇಲೆ ಪ್ರಗತಿಪರವಾದಂಥ ತೆರಿಗೆ ವಿಧಾನವನ್ನು ಜಾರಿಗೆ ತರುತ್ತೇವೆಂದು ತಾವು ಹೇಳುವುದಾದರೆ ಅದು ಬೇರೆ ಮಾತು. ಆದರೆ ಹಿಂದಿನ ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದನ್ನು ತಾವು ಜಾರಿಗೆ ತರುತ್ತೀರೋ ಅಥವಾ ಇಲ್ಲವೋ ಎಂಬುದನ್ನು ತಿಳಿಸಬೇಕು. ಇದು ಕೇವಲ ಇಂಡಿಕೇಟ್ ಮತ್ತು ಸಿಂಡಿಕೇಟ್‌ನ ಪ್ರಶ್ನೆ ಅಲ್ಲ. ಇದರ ಬಗ್ಗೆ ಬಡವರಿಗೆ ಆಸಕ್ತಿ ಇದೆ, ಅವರು ಈ ಸರ್ಕಾರದವರು ಏನು ಮಾಡುತ್ತಾರೆಂಬುವನ್ನು ಕಾದು ನೋಡುತ್ತಿದ್ದಾರೆ, ಆದ್ದರಿಂದ ತಾವು ಉತ್ತರ ಕೊಡಬೇಕು.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಉತ್ತರ ಕೊಡುವುದಕ್ಕೆ ಮೊದಲು ನಾನು ಒಂದು ವಿಷಯ ಹೇಳಬೇಕಾಗಿದೆ. ಈಗ ನಡೆಯುತ್ತಿರುವ ವಾದವನ್ನು ನೋಡಿದರೆ, ಅವರು ಇಲ್ಲಿ ಇದ್ದಾಗ ಇವರು ಏನೂ ಮಾಡಲಿಲ್ಲ ಎಂಬುದಾಗಿಯೂ ಇವರು ಇಲ್ಲಿ ಇದ್ದಾಗ ಅವರು ಏನೂ ಮಾಡಲಿಲ್ಲ ಎಂಬುದಾಗಿಯೂ ಕಾಣುವ ರೀತಿಯಲ್ಲಿ ವಾದ ವಿವಾದ ನಡೆಯುತ್ತಿರುವಂತೆ ಕಾಣುತ್ತದೆ. 1967, 1968, 1969ನೇ ಸಾಲಿನಲ್ಲಿ ಆಗಿನ ಸರ್ಕಾರದವರು ಜಾರಿಗೆ ತರಬೇಕೆಂದಿದ್ದವುಗಳನ್ನು ಜಾರಿಗೆ ತರಲಿಲ್ಲವೆಂಬ ಬಗ್ಗೆ ಮಾನ್ಯ ಅರ್ಥಮಂತ್ರಿಗಳು ವಿವರಣೆ ಕೊಟ್ಟು ಹೇಳಿದರು. ಆ ಸಮಯದಲ್ಲಿ ಶ್ರೀ ದೇವೇಗೌಡರು ಶ್ರೀ ಘೋರ್ಪಡೆಯವರು ಒಂದೇ ಕಡೆ ಇದ್ದರು. ಹಿಂದಿನ ಸರ್ಕಾರದವರು ಕೆಲವು ಧೋರಣೆಗಳ ಬಗ್ಗೆ ತೀರ್ಮಾನ ತೆಗೆದುಕೊಂಡ ಕಾಲದಲ್ಲಿ ಮತ್ತು ಅದೇ ವಿಷಯದ ಬಗ್ಗೆ ಕಾಂಟ್ರಡಿಕ್ಟರಿ ಸ್ಟೇಟ್‌ಮೆಂಟ್ ಕೊಟ್ಟಾಗ ಇವರಿಬ್ಬರೂ ಒಂದೇ ಕಡೆ ಇದ್ದರು. ಅದರ ನಂತರ ಕಾಂಗ್ರೆಸ್ ಎರಡು ಭಾಗವಾದ ಮೇಲೆ ಕೆಲವರು ಈ ಕಡೆ ಉಳಿದರು, ಕೆಲವರು ಆ ಕಡೆಗೆ ಹೋದರು. ಇವರಿಬ್ಬರ ಜಗಳದಲ್ಲಿ ಜನರಿಗೆ ಮೋಸವಾಗಿದೆ. ಬೇರೆ ಯಾರಿಗೂ ಮೋಸವಾಗಿಲ್ಲ. ಮಾನ್ಯ ಘೋರ್ಪಡೆಯವರ ಬಗ್ಗೆ ನನಗೆ ಅಭಿಮಾನವಿದೆ. ವೈಯಕ್ತಿಕವಾಗಿ ಅವರ ಬಗ್ಗೆ ನಾನು ಏನನ್ನೂ ಹೇಳುತ್ತಿಲ್ಲ. ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಎರಡು ಭಾಗಗಳಾದ ಮೇಲೆ, ಆ ಕಡೆ ಸಂಖ್ಯೆ ಜಾಸ್ತಿಯಾಗಿದೆ, ಈ ಕಡೆ ಸಂಖ್ಯೆ ಕಡಿಮೆಯಾಗಿದೆ ಅಷ್ಟೆ. ಆದರೆ ಅವರು ಮಾಡಿದ್ದಾರೆ, ಇವರು ಏನೂ ಮಾಡಿಲ್ಲ, ಇವರು ಮಾಡಿದ್ದಾರೆ, ಅವರು ಏನೂ ಮಾಡಿಲ್ಲ ಅಂದರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಈಗ ಆಳುವ ಪಕ್ಷದವರು ಏನೇನು ಮಾಡುತ್ತಾರೆ ಎಂಬುದನ್ನು ಜಡ್ಜ್ ಮಾಡಬೇಕಾಗಿದೆ. ಇವತ್ತಿನ ದಿವಸವೇ ಅವರು ಏನನ್ನೂ ಮಾಡಿಲ್ಲವೆಂದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಯಾರು ಯಾರು ಏನೇನು ಮಾಡಿದ್ದಾರೆಂಬುದು ಜನಕ್ಕೆ ಗೊತ್ತಿದೆ. ಚುನಾವಣೆಯ ಸಮಯದಲ್ಲಿ ಆಗಿನ ಸರ್ಕಾರದವರು ಮಾಡಿದಂಥ ಘೋಷಣೆಗಳನ್ನು ಈಗಿನ ಸರ್ಕಾರದವರೂ ಕೂಡ ಚುನಾವಣೆಯ ಸಂದರ್ಭದಲ್ಲಿ ಮಾಡುವುದಿಲ್ಲವೆಂದು ಯಾರಿಗೆ ಗೊತ್ತು? ಚುನಾವಣೆಯ ಸಮಯದಲ್ಲಿ ಎನ್. ಜಿ. ಓ. ಗಳಿಗೆ 5 ರೂಪಾಯಿ ಜಾಸ್ತಿ ಮಾಡಿ ನಾವು ಅನುಕೂಲ ಮಾಡಿಕೊಟ್ಟಿದ್ದೇವೆಂದು ಹೇಳುವುದು. ಈ ರೀತಿ ನಡೆಯುತ್ತಿರುವ ನಾಟಕ ನಮಗೆ ಗೊತ್ತಿಲ್ಲವೇ? ಜನರಿಗೂ ತಾಳ್ಮೆ ಇದೆ. ಅದೇ ತಾಳ್ಮೆಯನ್ನು ದುರುಪಯೋಗ ಮಾಡಿಕೊಂಡು ಸರ್ಕಾರದವರು ಜನರಿಗೆ ಮೋಸಮಾಡುವುದು ಬೇಡ. ಶ್ರೀ ದೇವೇಗೌಡರಿಗೂ ಸಹ ನಾನು ಇದನ್ನೇ ಹೇಳುವುದು, ಅವರ ಸರ್ಕಾರ ಬಂದಾಗಲೂ ಕೂಡ ಅವರು ಜನರಿಗೆ ಮೋಸ ಮಾಡುವುದು ಬೇಡ. ಯಾರು ಏನು ಮಾಡುತ್ತಾರೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಭೂಕಂದಾಯವನ್ನು ರದ್ದು ಮಾಡುವ ಬಗ್ಗೆ ಈಗ ವಾದ ವಿವಾದ ನಡೆಯುತ್ತಿದೆ. ಅದು ರದ್ದು ಆದರೆ ನನಗೆ ಸಂತೋಷ. ಈ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಇದನ್ನು ಆಳವಾಗಿ ಯೋಚನೆ ಮಾಡಬೇಕಾಗಿದೆ, ಎಲ್ಲ ತೆರಿಗೆಗಳ ಬಗ್ಗೆಯೂ ಕೂಡ ಸಮಗ್ರವಾದಂಥ ಮಾರ್ಪಾಡನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ಮಾಡಬೇಕಾಗಿದೆಯೆಂದು ಹೇಳಿದರು. ಅದು ಅರ್ಥಗರ್ಭಿತವಾದಂಥ ಮಾತು. ಅದೇ ಸಮಯಕ್ಕೆ ಅದನ್ನು ಜಾರಿಗೆ ತರುವ ಬಗ್ಗೆ ಜಾಸ್ತಿ ದಿವಸ ಮಾಡಬೇಡಿ. ಇಂತಹ ಪ್ರಗತಿಪರವಾದಂಥ ಧೋರಣೆಗಳನ್ನು ತಾವು ಜಾಗ್ರತೆ ಜಾರಿಗೆ ತರಬೇಕು. ಗರೀಬಿ ಹಟಾವೋ ಮಾಡುತ್ತೇವೆಂದು ತಾವು ಹೇಳಿರುವುದರಿಂದ ಇಂತಹ ಪ್ರಗತಿಪರವಾದ ಧೋರಣೆಗಳನ್ನು ಜಾಗ್ರತೆ ಜಾರಿಗೆ ತರದಿದ್ದರೆ ಜನರು ಸಿಂಡಿಕೇಟ್‌ಗೆ ಯಾವ ದಾರಿ ತೋರಿಸಿದರೋ ಅದೇ ದಾರಿಯನ್ನು ನಿಮಗೂ ತೋರಿಸುತ್ತಾರೆಂಬುದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Sri M. Y. GHORPADE.—I gave only the background of the Government's thinking from year to year from 1968 so that the House could judge what the thinking was and how all of a sudden such a decision was taken on the eve of election.

Sri H. D. DEVE GOWDA.—Your Prime Minister said something about this. Your Defence Minister said something about this. I want to know a clear cut decision of your Government in regard to implementation.

Sri M. Y. GHORPADE.—It is to enable this House to judge the context in which the decision was taken I read out the speeches of the previous Finance Minister. Sri Deve Gowda asked what exactly happened after the decision was taken. Some sort of a bill was passed and the Government of India did not refuse this as Mr. Gowda says. The Government also after considered thinking withdrew the decision. This has happened when there was Governor's rule in the Mysore State.

† ಶ್ರೀ ಕೆ. ಯೆಂಕಟಪ್ಪ (ಶಿಕಾರಿಪುರ). –ಮಾನ್ಯ ಅಧ್ಯಕ್ಷಿಣಿಯವರೇ ಈ ದಿವಸ ನಾನು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಅರ್ಪಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಶಿವಮೊಗ್ಗ ಜಿಲ್ಲೆಯಲ್ಲಿ ನನ್ನ ಸ್ವಂತ ಕ್ಷೇತ್ರದಲ್ಲಿ ಸುಮಾರು 25 ವರ್ಷಗಳ ಹಿಂದೆ ಏನು ಆಗಬೇಕಾಗಿತ್ತೋ ಅಂಥಾ ಕೆಲಸಕಾರ್ಯಗಳು ಇಂದಿನವರೆಗೂ ನಡೆದಿಲ್ಲ. ಆದರೆ ನಮ್ಮ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಹಿಂದೆ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳಾಗಿದ್ದಾಗ ನಮ್ಮಲ್ಲಿರತಕ್ಕ ಕೆಲವು ರಸ್ತೆಗಳನ್ನು ಸ್ಟೇಟ್‌ಫಂಡ್ ರಸ್ತೆಗಳಾಗಿ ಮಾರ್ಪಾಡು ಮಾಡಿದ್ದರು. ಆದರೆ ಈಗ ಆ ರಸ್ತೆಗಳು ಗಾಡಿಗಳು ಓಡಾಡುವುದಕ್ಕೆ ಸಾಧ್ಯವಾಗದೇ ಇರತಕ್ಕ ರಸ್ತೆಗಳಾಗಿವೆ. ಏತಕ್ಕೆಂದರೆ ಈ ವಿಚಾರದಲ್ಲಿ ಯಾರೂ ಆಸಕ್ತಿ ವಹಿಸಿ ಕೆಲಸ ಮಾಡುವುದಿಲ್ಲ. ಇದನ್ನು ಕೇಳತಕ್ಕಂಥವರು ಇಲ್ಲ. ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಹಲವಾರು ತಾಲ್ಲೂಕುಗಳನ್ನು ನಾನು ನೋಡಿದ್ದೇನೆ. ನನ್ನ ತಾಲ್ಲೂಕು ಹಿಂದುಳಿದಿರುವಷ್ಟು ಬೇರೆ ಯಾವ ತಾಲ್ಲೂಕೂ ಹಿಂದುಳಿದಿಲ್ಲ. ಇವೊತ್ತು ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ, ನಮ್ಮ ಸರ್ಕಾರ ನಮ್ಮ ತಾಲ್ಲೂಕಿನ ಬಗ್ಗೆ ಅಭಿಮಾನ ಇಟ್ಟು ನಮ್ಮ ತಾಲ್ಲೋಕಿಗೆ ಬೇಕಾದ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುತ್ತಾರೆ ಎನ್ನುವ ಪೂರ್ಣ ನಂಬಿಕೆ ನನಗೆ ಇದೆ.

ನೀರಾವರಿಯ ಬಗ್ಗೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ 1938ನೇ ಇಸವಿಯಲ್ಲಿ ಕುಮುದ್ವತಿ ನದಿಗೆ ಒಂದು ಅಣೆಕಟ್ಟನ್ನು ಕಟ್ಟಿಸಿದ್ದಾರೆ. ಅದನ್ನು ಕಟ್ಟಿಸಿದ ಮೇಲೆ ಇವೊತ್ತಿನವರೆಗೂ ಆ ಅಣೆಕಟ್ಟಿನಿಂದ 10 ಸಾವಿರ ಎಕರೆಗೆ ಮಾತ್ರ ನೀರನ್ನು ಕೊಡುತ್ತಿದ್ದಾರೆ. ಆ ಅಣೆಕಟ್ಟನ್ನು ಎತ್ತರಿಸಿದರೆ ಅದರಿಂದ 22 ಸಾವಿರ ಎಕರೆ ನೀರಾವರಿ ಆಗುತ್ತದೆ, ಆ ಒಂದು ಸೌಲಭ್ಯವನ್ನು ನಮ್ಮ ತಾಲ್ಲೂಕಿನ ಜನಗಳಿಗೆ ಒದಗಿಸಬೇಕೆಂದು ನಾವು ಹಿಂದೆಯೇ ಸರ್ಕಾರಕ್ಕೆ ಮನವಿಮಾಡಿಕೊಂಡಿದ್ದೇವೆ. ಈ ಬಗ್ಗೆ ಹಿಂದಿನ ಮಂತ್ರಿಮಂಡಲದವರು ಆ ಅಣೆಕಟ್ಟನ್ನು ಎತ್ತರಿಸುವುದಕ್ಕೆ ಹೆಚ್ಚು ಖರ್ಚಾಗುತ್ತದೆ, ಅಲ್ಲಿ ಬರತಕ್ಕ ರೆವಿನ್ಯೂ ಬಹಳ ಕಡಿಮೆ ಇದೆ ಎಂದು ಹೇಳಿದರು. 1938ನೇ ಇಸವಿಯಿಂದ ಆ ಅಣೆಕಟ್ಟಿನ ಹಿಂಭಾಗದ ಜಮೀನಿನಿಂದ ಸರ್ಕಾರಕ್ಕೆ ಎಷ್ಟೋ ಕಂದಾಯ ಬಂದಿದೆ. ಆದರೂ ಸಹ ಈ ಅಣೆಕಟ್ಟನ್ನು ಎತ್ತರಿಸುವುದಕ್ಕೆ ಸರ್ಕಾರದವರು ಒಪ್ಪಲಿಲ್ಲ. ಈ ಅಣೆಕಟ್ಟಿನಿಂದ ಹಾಳಾಗಿ ಹೋಗತಕ್ಕಂಥಾ ನೀರನ್ನು ತಡೆಯುವುದಕ್ಕೋಸ್ಕರ ಗೇಟುಗಳನ್ನು ಹಾಕಿಕೊಡಬೇಕೆಂದು ಸೂಪರಿನ್‌ಟೆಂಡಿಂಗ್ ಇಂಜನಿಯರನ್ನು ಕೇಳಿದ್ದಕ್ಕೆ ಅದು ಸಾಧ್ಯವಿಲ್ಲ ಎಂದು ಅವರು ಹೇಳಿದರು. ಈಗ ಅದಕ್ಕೆ ಸಂಬಂಧಪಟ್ಟ ಫೈಲು ಸರ್ಕಾರಕ್ಕೆ ಬರುತ್ತದೆ, ಅದು ಸರ್ಕಾರಕ್ಕೆ ಬಂದ ತಕ್ಷಣ ನಮಗೆ ಅನುಕೂಲ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತು ಅಣೆಕಟ್ಟನ್ನು ಎತ್ತರಿಸುವಂತಹ ಕೆಲಸವನ್ನು ಸಹ ಸರ್ಕಾರದವರು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಶ್ರೀಮಾನ್ ಕೆ. ವಿ. ನರಸಪ್ಪನವರು ವಿಧಾನಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಶ್ರೀಮಾನ್ ಚನ್ನಬಸಪ್ಪನವರು ನಮ್ಮ ಕ್ಷೇತ್ರ

ದಲ್ಲಿ ಕೆಲವು ರಸ್ತೆಗಳನ್ನು ಮಾಡಿಸಿಕೊಟ್ಟಿದ್ದರು. ಈಗ ಆ ರಸ್ತೆಗಳೆಲ್ಲಾ ಕೆಟ್ಟು ಹೋಗಿವೆ. ಆ ರಸ್ತೆಗಳನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳು ಹೆಚ್ಚಿನ ಆಸಕ್ತಿಯನ್ನು ವಹಿಸಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ

ಅಂಬಿಲಗೊಳ ಪ್ರಾಜೆಕ್ಟಿನ ಎತ್ತರವನ್ನು ಹೆಚ್ಚು ಮಾಡುವುದರಿಂದ ಹೆಚ್ಚು ಜಮೀನು ಮುಳುಗಡೆಯಾಗುತ್ತದೆ ಎಂದು ಹಿಂದೆ ಅಭಿಪ್ರಾಯ ಇತ್ತು. ಸ್ವಲ್ಪ ಜಮೀನು ಮುಳುಗಡೆ ಆದರೂ ಕೂಡ ಅದರಿಂದ ಹೆಚ್ಚು ನೀರಾವರಿಯಾಗುತ್ತದೆ. ಜನಗಳಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಈ ಅಂಬಿಲಗೊಳ ಅಣೆಕಟ್ಟು ಮತ್ತು ಕುಮುದ್ವತಿಯ ಅಣೆಕಟ್ಟು ಈ ಎರಡು ಅಣೆಕಟ್ಟುಗಳನ್ನು ಎತ್ತರಿಸಿ ಅದರಿಂದ ಜನಗಳಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕೆಲಸವನ್ನು ಮಾಡುವುದರಿಂದ ಎರಡು ಹೋಬಳಿಗಳಲ್ಲಿ ಕೆಲವು ಭಾಗಗಳಲ್ಲಿ ನೀರಾವರಿ ಆಗುತ್ತದೆ. ನನ್ನ ಕ್ಷೇತ್ರದಲ್ಲಿ ಇವೊತ್ತಿನ ದಿವಸ 3 ಹೋಬಳಿಗಳಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಆದ್ದರಿಂದ ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ನೀರಾವರಿ ಸೌಲಭ್ಯವನ್ನು ಒದಗಿಸುವುದು ಸರ್ಕಾರದವರು ಮಾಡಿ ಕೊಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿದ್ಯುಚ್ಛಕ್ತಿ ವಿಚಾರ. ನಮ್ಮ ಜಿಲ್ಲೆಯಲ್ಲಿ ಇವೊತ್ತು ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ. ಆದರೂ ಸಹ ನಮ್ಮ ಕ್ಷೇತ್ರದಲ್ಲಿರತಕ್ಕ 140 ಹಳ್ಳಿಗಳಲ್ಲಿ ಸುಮಾರು 60-70 ಹಳ್ಳಿಗಳಿಗೆ ವಿದ್ಯುಚ್ಛಕ್ತಿ ಇಲ್ಲ. ಇದನ್ನು ಸರ್ಕಾರದವರು ಗಮನಿಸಬೇಕು. ಇವೊತ್ತಿನ ದಿವಸ ಹಳ್ಳಿಗಳಲ್ಲಿ ಜನಗಳು ಬಹಳ ಕಷ್ಟಪಟ್ಟು ಮನೆಗಳಿಗೆ ಈಗಾಗಲೇ ವೈರಿಂಗ್ ಮಾಡಿಸಿದ್ದಾರೆ. ಆದರೆ ಅವರಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಎಂ.ಎಸ್.ಇ.ಬಿ.ಯಲ್ಲಿ ಈಗ ಒಂದು ರೂಲ್ ಮಾಡಿದ್ದಾರೆ. ಅದನೇಂದರೆ 1.5 ಕಿಲೋಮೀಟರ್ ಇರತಕ್ಕ ಮುಖ್ಯ ಲೈನ್ ಇದ್ದರೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ ಎಂದು ಹೇಳುತ್ತಾರೆ. ಅದಕ್ಕಾಗಿ ನನ್ನ ಸಲಹೆ ಏನೆಂದರೆ 1.5 ಕಿಲೋಮೀಟರ್ ಮುಖ್ಯ ಲೈನ್ ಇರಬೇಕೆಂದು ಏನು ಎಂ.ಎಸ್.ಇ.ಬಿ.ಯವರು ರೂಲ್ ಮಾಡಿದ್ದಾರೆ; ಅದನ್ನು 3 ಕಿಲೋಮೀಟರ್ ಮಾಡಿ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದನ್ನು ಮಾಡದಿದ್ದರೆ ಸಬ್‌ಟ್ರಾನ್ಸ್‌ಮಿಷನ್ ಲೈನ್ ಹಾಕಿ ಆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಅತಿಜಾಗ್ರತೆಯಾಗಿ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ಇಷ್ಟು ಹೊತ್ತು ಮಾತನಾಡಲು ನನಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†Smt. VIJAYA DESAI (Chitapur).—Madam Speaker, I suppo·t the Motion that is before the House to-day. Very fittingly, the Governor has already pointed out the heroic fight of the Bangla Desh people as well as the success of the Indian armed forces, under the able, inspiring and dynamic leadership of Smt. Indira Gandhi. Further, he has paid a tribute to the armed forces for defending the mother land and also further, he has explained the legal assistance, the educational facilities and medical facili'ies to be extended to the families of those who have already been killed in the fighting. And here, I would like to suggest one thing, *i.e.*, the children of such families should be given priority and preference especially in the allotment of sites as well as in the appointment to Government service.

Then secondly, Government has been pleased to state that Kannada has been made the official language in Taluk and Sub-Divisional levels and they are going to extend it to higher levels also. When we come down to the educational field, I think it is not that easy to translate the scientific terminologies in subjects like Biology. For a sample, I may mention here that a berry fruit is called *Zigjiphas Zujuba*, for a small fly they say *maska domestica* and for a horse, they say *equas aquas*. We fin l one generic name and another specific name. Will it

(SMT. VIJAYA DESAI)

not be difficult for all of us, just in a small span of a year to translate all these things into Kannada ? So I would request the Government to examine these things thoroughly and retain English as the basic language along with Kannada in Educational Institutions, till it is possible to translate all these things into Kannada.

Then a passing remark has been made regarding the disturbances in Gulbarga. A month and a half ago, the situation in Gulbarga brought tears to our eyes. The most unfortunate part of it was, we could see some of the book stalls burning, we could see beedi shops burning; the beautiful flower market was set on fire. As regards the Police, either it is modern equipment or ancient equipment—we are not concerned with that. It is immaterial. But I do request the Government to take immediate steps to find out who the culprits were who were behind these disturbances. I request the Government to bring them to book and punish all those who were responsible for the breath-taking disturbances at Gulbarga.

Madam, the more striking feature of the Address was land Reforms. We all agree for lower ceilings. But no purpose will be served if we merely pass the Land Reforms (Amendment) Bill. We must all see that it will be effective and efficient in its working. Not only that. We must start with our kith and kin and relatives to whom this Land Reforms Bill will apply, so that we will be strengthening the hands of the Government and we will be minimising the disparities between the rich and poor and we will be able to give some lands to the landless.

As regards waste lands, the Government is thinking of granting 50 per cent lands in favour of the S. C. and S. T. and for this, they have already appointed a Special Assistant Commissioner. The Assistant Commissioner, the Thasildar and the concerned MLA should sit together and distribute these lands. Otherwise, if the Government starts its paraphernallia at each and every level, then I am afraid that no S. C. or S. T. is going to get any land. No S. C. or S. T. is going to be benefited by this scheme.

As regards fisheries, we are supposed to have a coast-line of 200 miles and Government is already thinking of developing deep-sea fiishing, off-shore fishing. We already have the Norwegian project and the Japanese method of mechanised fishing is also there in our State. Now the Government is thinking of having a phased programme. It is going to have 317 boats and we must have to construct some boats. If we should think of abundant fish catches, we must have knowledge about the spawning period and whether fish is in deep sea or whether it is available in the shore; we must know the feeding habits of the fish, some times it feeds on small fish and some times it feeds on small worms and organisms. This information is very necessary as far as abundant catch is concerned. So I feel that our resesrch stations are the nucleus

of fisheries and they can give us all this information which is very essential. So, I request the Government to develop these research stations and these research stations should be well equipped; and if possible, one more research station should be started at Bhatkal or Honnavar.

As regards industries, there is a reference to the starting of industries in the eleven backward districts and I think it includes Bidar, Raichur and Gulbarga, because these three districts are devoid of Industries. In Gulbarga, we have two cement factories and one textile Mill. I would like to mention that in Gulbarga we have some raw-materials, so that Government can think of installing a cement factory in Yadgir Fullers earth is available in Gulbarga. There is a rich store-house of quartz in Chitapur. There is also a special type of grass which is grown in Shorapur, from which crude PAINTS can be prepared. At present, the crude PAINT is sent to Hyderabad for purification. All these raw-materials are available in these districts and I feel Government should start a few of these industries.

With these few words, I thank the Chair.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೇ, ಮೊದಲನೆಯದಾಗಿ ಕರ್ಣಾಟಕ ಜನತೆಯ ಸಮ್ಮತಿಯನ್ನು ಪಡೆಯದೆ ನೇಮಿಸಲ್ಪಟ್ಟ ರಾಜ್ಯಪಾಲರ ಭಾಷಣಕ್ಕೆ ಕೃತಜ್ಞತೆಯನ್ನು ಸಲ್ಲಿಸುವ ದುಸ್ಥಿತಿ ಪ್ರಜಾಪ್ರಭುತ್ವದಲ್ಲಿ ನಮ್ಮ ರಾಜ್ಯಕ್ಕೆ ಬಂದಿದೆ. ಏಕೆಂದರೆ ರಾಜ್ಯಪಾಲರನ್ನು ಇಲ್ಲಿ ನೇಮಿಸುವಾಗ ಈ ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಇರಲಿಲ್ಲ. ಕೇಂದ್ರ ಸರ್ಕಾರದವರು ಅವರನ್ನು ಇಲ್ಲಿ ನೇಮಕ ಮಾಡಿದ್ದಾರೆ. ಆದ್ದರಿಂದ ಇವರು ಜವಾಬ್ದಾರಿ ಸರ್ಕಾರದ ಸಮ್ಮತಿಯನ್ನು ಪಡೆಯದೆ ನೇಮಿಸಲ್ಪಟ್ಟಂತಹ ರಾಜ್ಯಪಾಲರು. ಇಂತಹ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸುವ ದುಸ್ಥಿತಿ ನಮ್ಮ ರಾಜ್ಯಕ್ಕೆ ಬಂದಿದೆ. ಪ್ರಜಾಪ್ರಭುತ್ವದ ಕಲ್ಪನೆ ಬಹುಶಃ ನಮ್ಮ ಸರ್ಕಾರದ ಸಮಾಜವಾದಿಗಳಿಗೆ ಯಾವುದೂ ಇಲ್ಲವೆಂದು ಕಾಣುತ್ತದೆ. ಒಂದು ಕಡೆ ಜನಪ್ರಿಯ ಸರ್ಕಾರ, ಜನತೆಯಿಂದ ಚುನಾಯಿತರಾದಂತಹ ಮುಖ್ಯಮಂತ್ರಿ—ಇವರ ತಲೆಯ ಮೇಲೆ ಒಬ್ಬರು ರಾಜ್ಯಪಾಲರು. ಇದೇ ರೀತಿ ಜಿಲ್ಲಾ ಪರಿಷತ್ತಿನ ತಲೆಯ ಮೇಲೆ ಜಿಲ್ಲಾಧಿಕಾರಿಗಳು, ತಾಲ್ಲೂಕು ಬೋರ್ಡಿನ ಮೇಲೆ ಒಬ್ಬರು ತಹಸೀಲ್ದಾರರು, ಮತ್ತು ಗ್ರಾಮ ಪಂಚಾಯಿತಿಯ ಮೇಲೆ ಅಲ್ಲಿರುವ ಲೆಕ್ಕಾಧಿಕಾರಿಗಳು ಮತ್ತು ರೆವೆನ್ಯೂ ಇನ್‌ಸ್ಪೆಕ್ಟರ್. ಹೀಗೆ ಬ್ರಿಟಿಷ್ ಸರ್ಕಾರದ ಸಾಮ್ರಾಜ್ಯಶಾಹಿಗಳ ಪಳೆಯುಳಿಕೆ ನಮ್ಮ ರಾಜ್ಯದಲ್ಲಿ ಇಂದು ಕೂಡ ಜಾರಿಯಲ್ಲಿದೆ. ಆದ್ದರಿಂದ ನಿಮಗೆ ಪ್ರಜಾಪ್ರಭುತ್ವ ಏಕೆ ಎಂದು ಕೇಳುತ್ತಿದ್ದೇನೆ. ಪ್ರಜಾಪ್ರಭುತ್ವ ಬುಡದಿಂದ ಬರಬೇಕು. ಅಧಿಕಾರದ ಗದ್ದುಗೆಯಲ್ಲಿ ಯಾರಿದ್ದಾರೋ, ಅವರ ಕೈಯಲ್ಲಿ ಎಲ್ಲಾ ಅಧಿಕಾರವೂ ಇರಬೇಕು. ಇಲ್ಲಿ 216 ಜನರು ಆರಿಸಿದಂತಹ ನಾಯಕರನ್ನು ಮತ್ತು ಸಂಪುಟವನ್ನು ಡಿಸ್‌ಮಿಸ್ ಮಾಡತಕ್ಕಂತಹ ಹಕ್ಕು ಕೇವಲ ಕೇಂದ್ರ ಸರ್ಕಾರ ನೇಮಿಸಿದಂತಹ ರಾಜ್ಯಪಾಲರಿಗೆ ಇರುವುದಾದರೆ ಇದು ಪ್ರಜಾಪ್ರಭುತ್ವವೇ ? ಇದನ್ನು ತಾವು ವಿಚಾರ ಮಾಡಬೇಕಾಗಿದೆ. ನಿಜವಾಗಿ ಪ್ರಜಾಪ್ರಭುತ್ವ ಬುಡದಿಂದ ಬರಬೇಕಲ್ಲದೆ, ಈ ರೀತಿ ಸಾರ್ವಭೌಮರಾಗಿರತಕ್ಕದ್ದು ಯೋಗ್ಯವೇ ಎಂಬುದನ್ನು ನಮ್ಮ ಸರ್ಕಾರದ ಸಮಾಜವಾದಿಗಳು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಕನ್ನಡದ ಬಗ್ಗೆ ನಮ್ಮ ಸರ್ಕಾರಗಳು ಕಳೆದ 25 ವರ್ಷಗಳಿಂದಲೂ ಹೇಳಿಕೊಂಡು ಬಂದಿವೆ. ಆದರೆ ನಿಜವಾಗಿಯೂ ಯಾರೂ ಈ ಕೆಲಸವನ್ನು ಮಾಡಿಲ್ಲ. ಅಧಿಕಾರದ ಗದ್ದುಗೆಯನ್ನು ಹಿಡಿದಂತಹ ಎಲ್ಲಾ ಮಾಜೀ ಮಂತ್ರಿಗಳು ತಕ್ಷಣ ಕನ್ನಡ ಭಾಷೆ ಶಿಕ್ಷಣ ಮಾಧ್ಯಮವಾಗಬೇಕೆಂದು ಹೇಳಿದ್ದರು. ಇವತ್ತು ಈ ಕಡೆಯಿಂದ ಕೂಡ ಅದೇ ಮಾತನ್ನು ಹೇಳುತ್ತಿದ್ದೇವೆ. ಈ ಕೆಲಸವನ್ನು ಮಾಡದಿರುವುದಕ್ಕೆ ಕಾರಣರು ಯಾರು ! ಇವರು ಏನೋ ಇದಕ್ಕೆ ಸ್ವಲ್ಪ ತಾಂತ್ರಿಕ ಕೊರತೆಗಳು ಇವೆಯೆಂದು ಹೇಳುತ್ತಿದ್ದಾರೆ. ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ. ತಮಗೆ ಕನ್ನಡದ ಬಗ್ಗೆ ಅಭಿಮಾನ ಇದ್ದರೆ, ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದಕ್ಕೆ

(ಶ್ರೀ ಕೋಣಂದೂರು ಲಿಂಗಪ್ಪ)

ಇಷ್ಟ ಇದ್ದರೆ ಅದನ್ನು ಕೂಡಲೇ ಮಾಡಬೇಕಾಗುತ್ತದೆ. ಉದಾಹರಣೆಗೆ ನಮ್ಮ ಪಕ್ಕದ ರಾಜ್ಯದವರಾದ ತಮಿಳ್ನಾಡಿನವರು ಹೇಗೆ ಅವರು ತಮಿಳು ಭಾಷೆಯನ್ನು ರಾಜ್ಯಭಾಷೆಯನ್ನಾಗಿ ಮಾಡಿದರು? ಆಂಧ್ರದಲ್ಲಿ ತೆಲುಗನ್ನು ಹೇಗೆ ರಾಜ್ಯಭಾಷೆಯನ್ನಾಗಿ ಮಾಡಿದರು! ಉತ್ತರ ಪ್ರದೇಶದವರು ಹೇಗೆ ಮಾಡಿದರು! ಇವರಿಗೆಲ್ಲಾ ಹೇಗೆ ಸಾಧ್ಯವಾಯಿತು ಎಂಬುದನ್ನು ನೋಡಬೇಕು. ಹಾಗಿರುವಾಗ ಕನ್ನಡವನ್ನು ಮಾಡುವುದಕ್ಕೆ ಏಕೆ ಸಾಧ್ಯವಿಲ್ಲ? ಇವರು ಕನ್ನಡವನ್ನು ಪ್ರಯೋಗ ಮಾಡಿ ನೋಡುತ್ತೇವೆಂದು ಹೇಳುತ್ತಿದ್ದಾರೆ. ಅಂದರೆ, ಕನ್ನಡಕ್ಕೆ ಶಕ್ತಿ ಇದೆಯೋ ಇಲ್ಲವೇ ಎಂಬುದನ್ನು ಪ್ರಯೋಗ ಮಾಡಿ ನೋಡುತ್ತಾರಂತೆ.

5-30 P.M.

ಮಾನ್ಯ ಶ್ರೀ ಚನ್ನಬಸಪ್ಪನವರು ಮತ್ತು ಶ್ರೀ ದೇವರಾಜ್ ಅರಸ್ ಅವರು ಇವತ್ತಿನ ದಿವಸ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡುವುದಕ್ಕೆ ತೊಂದರೆ ಇದೆಯೆಂದು ಹೇಳಿದರೆ ಅದು ಬಹುಶಃ ನಿಮ್ಮಿಂದಲೂ ಅಲ್ಲ, ಜನರಿಂದಲೂ ಅಲ್ಲ, ಆ ತೊಂದರೆ ಕೇವಲ ಅಧಿಕಾರಿಗಳಿಂದ ಮಾತ್ರವೆಂಬುದಾಗಿ ನಾನು ತಮಗೆ ಹೇಳುತ್ತೇನೆ. ಉನ್ನತ ಮಟ್ಟದಲ್ಲಿರತಕ್ಕ ಅಧಿಕಾರಿಗಳು ಇವತ್ತು ಕನ್ನಡವನ್ನು ಸಂಪೂರ್ಣವಾಗಿ ರಾಜ್ಯಾಡಳಿತ ಭಾಷೆಯಾಗಿ ಮಾಡುವುದಕ್ಕೆ ಹಿಂದೇಟು ಹೊಡೆಯುತ್ತಿದ್ದಾರೆ. ಕಳೆದ 25 ವರ್ಷಗಳಿಂದ ಈ ರಾಜ್ಯದ ಗದ್ದುಗೆ ಮೇಲೆ ಕುಳಿತು ಅಧಿಕಾರ ನಡೆಸಿದಂಥ ಜನ, ಅಧಿಕಾರಗಳ ಗುಲಾಮರಾಗಿ ಬಂದಿರತಕ್ಕ ಜನ, ಅವರ ತಾಳಕ್ಕೆ ತಕ್ಕಂತೆ ಹೆಜ್ಜೆ ಹಾಕಿ ಕನ್ನಡ ಜನಗಳಿಗೆ ದ್ರೋಹ ಮಾಡಿದ್ದಾರೆ. ನಾನು ಇವತ್ತು ನಿಮ್ಮನ್ನು ಕೇಳುತ್ತೇನೆ. ನನಗೆ ವಿಶೇಷ ಅಧಿಕಾರವನ್ನು ಕೊಡಿ. ಆರು ತಿಂಗಳುಗಳ ಕಾಲಾವಕಾಶ ಕೊಡಿ, ಕೇವಲ ಆರು ತಿಂಗಳುಗಳಲ್ಲಿ ಕನ್ನಡವನ್ನು ಗ್ರಾಮ ಪಂಚಾಯಿತಿಯಿಂದ ವಿಧಾನಸೌಧದವರೆಗೆ ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಮಾಡುವುದಕ್ಕೆ ಆಗುತ್ತದೋ ಇಲ್ಲವೋ ಎಂಬುದನ್ನು ತಮಗೆ ಮಾಡಿ ತೋರಿಸುತ್ತೇನೆ. ಒಂದು ವೇಳೆ ನನ್ನ ಬಗ್ಗೆ ನಿಮಗೆ ವಿಶ್ವಾಸವಿಲ್ಲದಿದ್ದರೆ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯವರಾದ ಮಾನ್ಯ ಶ್ರೀ ಜವರೇಗೌಡರಿಗೆ ಒಂದು ವಿಶೇಷ ಅಧಿಕಾರವನ್ನು ಕೊಡಿ. ಇದನ್ನು ಮಾಡುವುದಕ್ಕೆ ಅವರು ತಯಾರು ಇದ್ದಾರೆ. ನೀವು ನಿಜವಾಗಿ ಪ್ರಜಾಪ್ರಭುತ್ವವಾದಿಗಳಾಗಿ, ಪ್ರಜಾಪ್ರಭುತ್ವದಲ್ಲಿ ನಿಷ್ಠೆ ಇರುವುದು ನಿಜವಾದಲ್ಲಿ, ಜೂನ್ ತಿಂಗಳ ಅಧಿವೇಶನದಲ್ಲಿ ಸಂಪೂರ್ಣವಾಗಿ ಕನ್ನಡವನ್ನು ರಾಜ್ಯಭಾಷೆಯನ್ನಾಗಿ ಮಾಡಬೇಕು. ಈ ಮಾತನ್ನು ನಾನು ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಇಲ್ಲಿ ಹೇಳುತ್ತಿದ್ದೇನೆ. ನಾನು ಕೇವಲ ಕನ್ನಡ ಭಾಷೆಯ ಒಂದು ಅಭಿಮಾನ, ಗೌರವದಿಂದ ಈ ರೀತಿಯಾಗಿ ಹೇಳುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಿತದೃಷ್ಟಿಯಿಂದ ಈ ರಾಜ್ಯಾಡಳಿತ ಸಂಪೂರ್ಣವಾಗಿ ಕನ್ನಡ ಭಾಷೆಯಲ್ಲಿಯೇ ನಡೆಯಬೇಕೆಂಬ ಉದ್ದೇಶದಿಂದ ನಾನು ಹೇಳುತ್ತಿದ್ದೇನೆ. ಕನ್ನಡ, ಕನ್ನಡ ಎಂಬುದಾಗಿ ಕೇವಲ ಪ್ರಚಾರಕ್ಕೆ ಹೇಳುವ ಜನರು ನಾವಲ್ಲ. ಸುಮಾರು 10--12 ವರ್ಷಗಳ ಹಿಂದೆ ಅಂದರೆ 1960 ರಲ್ಲಿ ಕನ್ನಡದ ಚಳುವಳಿ ಪ್ರಾರಂಭದ ಆರಂಭ ಮಾಡಿದಂತಹವನು ನಾನು. ನಮ್ಮ ನಾಡಿನಲ್ಲಿ ಎಲ್ಲ ಕಡೆಯಲ್ಲಿಯೂ, ಎಲ್ಲಾ ಹಂತಗಳಲ್ಲಿಯೂ ಕೂಡ ಕನ್ನಡ ರಾಜ್ಯಭಾಷೆ ಆಗಬೇಕೆಂಬ ಉದ್ದೇಶ ಇತ್ತು. ಈ ಸಂದರ್ಭದಲ್ಲಿ ಯಾರಾದರೂ ಬೇರೆ ವಿಚಾರವನ್ನು ಹೇಳಿದ್ದೇ ಆದರೆ, ತಾಂತ್ರಿಕವಾಗಿ ಇತರೇ ವಿಚಾರಗಳನ್ನು ತಂದು ಅಡ್ಡಿ ಆತಂಕಗಳನ್ನು ತಂದೊಡ್ಡುವಂಥಾದ್ದಾದರೆ, ಅಂತಹವರನ್ನು ನಾನು ಹೆಸರಿಸಬೇಕೆಂದರೆ, ನೀವು ನಂಬರ್ ಒಂದನೇ ಕನ್ನಡ ದ್ರೋಹಿಗಳು. ಯಾರು ಕನ್ನಡ ಭಾಷೆಯನ್ನು ಇವತ್ತಿನವರೆಗೂ ರಾಜ್ಯಭಾಷೆಯನ್ನಾಗಿ ಸಂಪೂರ್ಣವಾಗಿ ಜಾರಿಗೆ ತಂದಿಲ್ಲವೋ ಅವರೇ ಈ ರಾಜ್ಯದ ಹಾಗೂ ಈ ರಾಜ್ಯದ ಜನರ ಪ್ರಥಮ ಶತ್ರು. ಹಿಂದೆ ಪೂರ್ವಕಾಲದಲ್ಲಿ ಯಾರೋ ಕೆಲವರು ಜ್ಞಾನವನ್ನು ತಮ್ಮ ಸ್ವಾಧೀನವನ್ನಾಗಿ ಇಟ್ಟುಕೊಂಡು, ಸಂಸ್ಕೃತಿಯನ್ನೇ ತನ್ನವನನ್ನಾಗಿ ಇಟ್ಟುಕೊಂಡು ಬಹು ಜನರನ್ನು ಹೇಗೆ ಮೂಢರನ್ನಾಗಿ, ಹಾಗೂ ಮೃಗಗಳಂತೆ ಅವಿದ್ಯಾವಂತರನ್ನಾಗಿ ಮಾಡಿದರೋ ಹಾಗೆಯೇ ಇವತ್ತು ಸರ್ಕಾರದವರು ಈಗ ಇಂಗ್ಲಿಷನ್ನು ಇಟ್ಟುಕೊಂಡು ಪುನಃ ಅದೇ ರೀತಿಯಲ್ಲಿ ಬಹುಸಂಖ್ಯಾತರನ್ನು ನಿರುದ್ಯೋಗಿಗಳಾಗಿ ಮೂಢರಾಗಿ ತಿರುಗಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇದು ರಾಜ್ಯದ ಜನರ ಹಿತಕ್ಕೆ ಆಘಾತವನ್ನುಂಟುಮಾಡುತ್ತಿದೆಯೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು.

ಇನ್ನು ರಾಜ್ಯದ ಹೆಸರು ಕರ್ಣಾಟಕವೆಂದು ಇಡಬೇಕೆಂಬ ವಿಷಯ. ಅದರ ವಿಷಯದಲ್ಲಿ ಈ ಸಭೆಯಲ್ಲಿಯೇ ಮುಂದೆ ಒಂದು ನಿರ್ಣಯ ಬರುವುದರಿಂದ ನಾನು ಆಗ ವಿವರವಾಗಿ ಮಾತನಾಡು

ತ್ತೇನೆ. ಕೇವಲ ಒಂದೆರಡು ವಿಚಾರಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಕರ್ಣಾಟಕ ವೆಂಬ ಹೆಸರಿನ ಬಗ್ಗೆ ಮಹಾಕವಿ ಕುವೆಂಪು ಅವರು ಬಹಳ ಚೆನ್ನಾಗಿ ಬರೆದಿದ್ದಾರೆ. ನಮಗೆ ಬೇಕಾದುದು ರಾಜಕೀಯ ಕರ್ಣಾಟಕವಲ್ಲ. ಅಖಂಡ ಕರ್ಣಾಟಕದ ವಿಷಯ. ಅದರಲ್ಲೂ ಸಂಸ್ಕೃತಿ ಕರ್ಣಾಟಕದ ವಿಷಯ. ನನಗೆ ಬೇಕಾಗಿರುವುದು ಸಂಸ್ಕೃತಿ ಕರ್ಣಾಟಕ. ನಿಮ್ಮ ರಾಜಕೀಯ ಕರ್ಣಾಟಕ ನಮಗೆ ಬೇಕಿಲ್ಲ. ಕರ್ಣಾಟಕದಲ್ಲಿ ಶಬ್ದದಲ್ಲಿ, ಕನ್ನಡ ಸಂಸ್ಕೃತಿ, ಸಂಗೀತ, ಸಾಹಿತ್ಯ-ಶಿಲ್ಪ ಇತ್ಯಾದಿ—ಹೀಗೆ ಸರ್ವಸ್ವವೂ ಈ ಶಬ್ದದ ಅರ್ಥದಲ್ಲಿ ಇಂದು ಅಡಕವಾಗಿದೆ. ಈ ಶಬ್ದದ ಅರ್ಥವ್ಯಾಪ್ತಿಯನ್ನು ಮತ್ತೊಂದು ಸಂದರ್ಭದಲ್ಲಿ ಹೇಳದೆ ವಿಧಿಯಿಲ್ಲ. ಖಂಡಿತವಾಗಿ ಹೇಳುತ್ತೇನೆ.

ಒಬ್ಬ ಸದಸ್ಯರು.—ಕನ್ನಡನಾಡು ಎಂದು ಹೇಳಿದರೇನು ತೊಂದರೆ ?

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡನಾಡು ಎಂದಾದರೂ ಹೇಳಬಹುದು, ಅಥವಾ ಕೋಣಂದೂರು ಎಂದಾದರೂ ಹೇಳಬಹುದು.

ಇನ್ನು ಗಡಿ ವಿಚಾರದಲ್ಲಿ ಹೆಚ್ಚು ವಿಷಯಗಳನ್ನು ಹೇಳುವುದಕ್ಕೆ ನಾನು ಹೋಗುವುದಿಲ್ಲ. ನಮ್ಮ ಮಹಾರಾಷ್ಟ್ರದ ಜನರ ವಿಚಾರವೇನೆಂದರೆ, ಹಿರಣ್ಯಾಕ್ಷ ಭೂದೇವಿಯನ್ನು ಸ್ವಾಧೀನಪಡಿಸಿ ಕೊಳ್ಳುವುದಕ್ಕೆ ಪ್ರಯತ್ನಪಟ್ಟ ಹಾಗೆ, ಮತ್ತು ದುರ್ಯೋಧನನು ಪಾಂಡವರಿಗೆ ಒಂದು ಅಂಗುಲ ಭೂಮಿಯನ್ನೂ ಕೊಡುವುದಿಲ್ಲವೆಂದು ಹಠ ಹಿಡಿದ ಹಾಗೆ, ನಮ್ಮ ಮಹಾರಾಷ್ಟ್ರ ಸ್ನೇಹಿತರು ಹಠ ಹಿಡಿದರೆ ಅದರಿಂದ ಕೆಡಕು ಆಗುತ್ತದೆಂದು ಹೇಳದೇ ವಿಧಿಯಿಲ್ಲ. ಅದೇ ತರಹ ಅವರು ಆ ಛಲವನ್ನು ಮುಂದುವರಿಸಿದರೆ, ಅವರು ಭೀಮನ ಗದಾಯುದ್ಧದಂತೆ ಕೊನೆಗೊಳ್ಳಬೇಕಾಗುತ್ತದೆ. ಅಲ್ಲದೆ ಬೆಳಗಾಂ ಬರ್ಲಿನ್ ನಗರವಾಗುವುದಕ್ಕೆ ಅವರಿಗೆ ಬಿಡುವುದಿಲ್ಲವೆಂಬುದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು.

ಇನ್ನು ವಿದ್ಯಾಭ್ಯಾಸದ ವಿಚಾರವಾಗಿ ಎರಡು ಮಾತುಗಳನ್ನು ಹೇಳುತ್ತೇನೆ. ಕಡ್ಡಾಯ ಶಿಕ್ಷಣದ ಬಗ್ಗೆ ಹೇಳಿದ್ದಾರೆ. ವಿದ್ಯಾಭ್ಯಾಸ ಮತ್ತು ಯುವಜನಸೇವೆ—ಇವುಗಳಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿದೆ. ಈ ಕಡ್ಡಾಯ ಎನ್ನುವ ಶಬ್ದದ ಅರ್ಥ ಸರ್ಕಾರಕ್ಕೆ ಗೊತ್ತಿದೆಯೇ ಎಂಬುದು ನನ್ನ ಮೊದಲನೆಯ ಪ್ರಶ್ನೆ. ಕಡ್ಡಾಯ ಎಂದು ಆದಮೇಲೆ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ನೋಡಿಕೊಳ್ಳುವ ಜವಾಬ್ದಾರಿ ಯಾರದು ? ಒಂದು ವೇಳೆ ಹಾಗೆ ಶಿಕ್ಷಣಕ್ಕಾಗಿ ಕಳುಹಿಸದೇ ಇದ್ದಮೇಲೆ ದಂಡವನ್ನು ವಿಧಿಸುವ ಕಾರ್ಯ ಸರ್ಕಾರದ್ದು. ಈ ಕೆಲಸವನ್ನು ತಾವು ಮಾಡಿದ್ದೀರಾ ? ಇದಕ್ಕೆ ಉತ್ತರ ಕೊಡಿ ಸಾಕು.

ಇನ್ನು ವಿಶ್ವವಿದ್ಯಾನಿಲಯಗಳ ಬಗ್ಗೆ ಹೇಳುವುದಾದರೆ, ನಾನು ಮೊಟ್ಟಮೊದಲನೆಯದಾಗಿ ಮೈಸೂರು ವಿಶ್ವವಿದ್ಯಾನಿಲಯವನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಅವರು ಅವರ ಸಂಪೂರ್ಣ ವ್ಯವಹಾರವನ್ನು ಕನ್ನಡದಲ್ಲಿಯೇ ಮಾಡತಕ್ಕ ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆ. ಹಾಗೇಯೇ ಶಿಕ್ಷಣ ಮಾಧ್ಯಮವನ್ನು ಕನ್ನಡದಲ್ಲಿಯೇ ಮಾಡತಕ್ಕ ನಿರ್ಧಾರವನ್ನೂ ಸಹ ಕೈಗೊಂಡಿದ್ದಾರೆ. ಈ ಸಂದರ್ಭದಲ್ಲಿ ನಾನು ಕೇವಲ ಕನ್ನಡ, ಕನ್ನಡ ಎಂಬುದಾಗಿ ಹೇಳುವಾಗ ತಾವು ಅನ್ಯಥಾ ಭಾವಿಸಬಾರದು. ಎಂದಿಗೂ ನಾನು ದೇಶಿಯ ಭಾಷೆಯ ವಿರೋಧಿಯಲ್ಲ. ಇಂಗ್ಲಿಷನ್ನು ಸಮುದ್ರದಾಚೆ ತಳ್ಳಬೇಕೆಂದಲ್ಲ. ಇಂಗ್ಲೀಷ್, ರಷ್ಯನ್, ಫ್ರೆಂಚ್ ಮತ್ತು ಇನ್ನೂ ಇತರ ಜಗತ್ತಿನ ಎಲ್ಲಾ ಭಾಷೆಗಳೂ ಕೂಡ ನಮ್ಮ ರಾಜ್ಯದಲ್ಲೆಲ್ಲಾ ಇರಲಿ. ಯಾರ್ಯಾರಿಗೆ ಯಾವ್ಯಾವ ಭಾಷೆಯ ಅವಶ್ಯಕತೆ ಇದೆಯೋ ಅದನ್ನು ಆಪ್ಷನಲ್ಲಾಗಿ ಕಲಿಯುವ ಒಂದು ಅವಕಾಶ ಇರಬೇಕು. ಇಂಗ್ಲೀಷ್ ಆಗಲೀ, ಅಥವಾ ಹಿಂದಿಯಾಗಲೀ, ಯಾವುದೇ ಬೇರೆ ಭಾಷೆಯಾಗಲೀ ಕನ್ನಡ ಭಾಷೆಯ ಮೇಲೆ ಸವಾರಿ ಮಾಡುವುದನ್ನು ಮಾತ್ರ ನಾವು ಸಹಿಸುವುದಿಲ್ಲ. ಪ್ರಭುತ್ವ ಮಟ್ಟದಲ್ಲಿ ನಮ್ಮ ರಾಜ್ಯದಲ್ಲಿ ಕನ್ನಡ ಇರಬೇಕು. ಆದ್ದರಿಂದ ವಿಶ್ವವಿದ್ಯಾನಿಲಯಗಳಲ್ಲೂ ಕನ್ನಡ ಶಿಕ್ಷಣ ಮಾಧ್ಯಮ ವಾಗಬೇಕು. ಅದಕ್ಕೆ ಮೂಲವಾಗಿ ಮೊಟ್ಟಮೊದಲು ಕಾನ್‌ವೆಂಟ್, ನರ್ಸರಿ ಶಾಲೆಗಳಿಂದಲೇ ಕನ್ನಡ ಕಲಿಸುವ ವ್ಯವಸ್ಥೆಯಾಗಬೇಕು. ಅಂದಮಾತ್ರಕ್ಕೆ ಬೇರೆ ಪ್ರಾಂತದ ಜನಗಳಿಗೆ ತಕ್ಕ ವ್ಯವಸ್ಥೆ ಮಾಡಬಾರದೆಂದಲ್ಲ, ಮಾಡಬೇಕು. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಇನ್ನು ವಿಶ್ವವಿದ್ಯಾ ನಿಲಯಗಳ ವ್ಯವಹಾರದ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ನಾನು ಹೆಚ್ಚು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ, ಸರ್ಕಾರೀ ಕಾಲೇಜುಗಳಲ್ಲಿ ಅನೇಕ ಜನ ಅಧ್ಯಾಪಕರು 2—3—4 ವರ್ಷಗಳು ಸೇವೆ ಮಾಡಿದ್ದರೂ ಅವರನ್ನು ಸರ್ವಿಸ್ಸಿನಿಂದ ಬರ್ತರ್ಫ್ ಮಾಡಿದ್ದಾರೆ. ಮೊನ್ನೆ ಇದಕ್ಕೆ ಕಾರಣವೇನೆಂದು ಕೇಳಿದರೆ ಏನೇನೋ ಬೇರೆ ಕಾರಣ ಗಳನ್ನು ಹೇಳಿ ಮತ್ತೆ ಮುಂದೆ ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತೇವೆಂಬುದಾಗಿ ಹೇಳುತ್ತಾರೆ. ಮುಂದೆ ಅವರನ್ನು ಸೇರಿಸಿಕೊಳ್ಳಬಹುದು. ಹಿಂದೆ 2—3—4 ವರ್ಷಗಳ ಕಾಲ ಅವರು ಸಲ್ಲಿಸಿದ

(ಶ್ರೀ ಕೋಣಂದೂರು ಲಿಂಗಪ್ಪ)

ಸೇವೆ, ಸರ್ವಿಸ್ ಮತ್ತು ಅವರ ಬಡ್ತಿ ವಿಷಯಗಳ ಗತಿಯೇನು ? ಈ ರೀತಿ ಪ್ರತಿಸಾರಿಯೂ ಅವರಿಗೆ ಇಷ್ಟಬಂದವರನ್ನು ಎರಡು ವರ್ಷಗಳವರೆಗೆ ಇಟ್ಟುಕೊಳ್ಳುವುದು, ಇಷ್ಟ ಬರಲಿಲ್ಲವೆಂದರೆ ಅವರನ್ನು ತೆಗೆದುಹಾಕುವುದು ಇದು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ. ಅದರ ಬಗ್ಗೆ ಸಂಬಂಧಪಟ್ಟ ಸಚಿವರು ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗಾಗಲೇ ನನ್ನ ಸ್ನೇಹಿತರಾದ ಕಾಗೋಡು ತಿಮ್ಮಪ್ಪನವರು ಬೆಂಗಳೂರಿನಲ್ಲಿರತಕ್ಕ ವ್ಯವಸಾಯದ ವಿಶ್ವವಿದ್ಯಾನಿಲಯದ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ವ್ಯವಸಾಯದ ಇಲಾಖೆಯಲ್ಲಿ ಇಲ್ಲಿ ಅನೇಕರಿಗೆ ಗೊತ್ತಿಲ್ಲದೆ ಇರತಕ್ಕಂಥ ಒಂದು ಚಿದಂಬರ ರಹಸ್ಯ ಅಡಗಿದೆ. ಆ ವಿಶ್ವವಿದ್ಯಾನಿಲಯದಲ್ಲಿರತಕ್ಕ ಅಧಿಕಾರಿಗಳಿಗೆ, ನಮ್ಮ ವ್ಯವಸಾಯದ ಬಗ್ಗೆ ಎಷ್ಟು ಎತ್ತರಕ್ಕೆ ಸ್ಫೂರ್ತಿ ಬೆಳೆದಿದೆ ಎಂದರೆ ಅವರು ನಮ್ಮ ವ್ಯವಸಾಯವನ್ನೆಲ್ಲಾ ಇನ್ನು ಮುಂದಕ್ಕೆ ಇಂಗ್ಲೀಷಿನಲ್ಲೇ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈಗ ಅವರು ವ್ಯವಸಾಯವನ್ನು ಇನ್ನು ಮುಂದಕ್ಕೆ ಹೇಗೆ ಅಣುಶಕ್ತಿ ಮತ್ತು ಎಲೆಕ್ಟ್ರಾನಿಕ್ ಮೂಲಕ ನಡೆಸಬೇಕೆಂಬುದನ್ನು ಸಂಶೋಧನೆ ಮಾಡುತ್ತಿದ್ದಾರೆ. ಆದರೆ ಸದ್ಯ ನಮ್ಮ ರೈತರಿಗೆ ಅಗತ್ಯವಾಗಿ ಬೇಕಾಗಿರತಕ್ಕದ್ದು ದಿನ ಬಳಕೆಯ ವಸ್ತುಗಳು ಎಂದರೆ ಪಂಪ್‌ಸೆಟ್, ಚಿಕ್ಕ ಚಿಕ್ಕ ಪವರ್ ಟಿಲ್ಲರ್ ಮತ್ತು ಟ್ರಾಕ್ಟರುಗಳು. ಅವನ್ನು ಒದಗಿಸಲು ತಮಗೆ ಸಾಧ್ಯವಾಗುತ್ತಿಲ್ಲ. ಕೃಷಿಮಾಡತಕ್ಕವರಿಗೆ ಎತ್ತು ಕೋಣ ಕೊಳ್ಳಲು ಹಣ ಸಹಾಯ ಮಾಡಿ ಎಂದರೆ ಸರ್ಕಾರದವರು ಇಲ್ಲವೆನ್ನುತ್ತಾರೆ. ಅದೇ ಸಂಶೋಧನೆಗೆ ಹಣವನ್ನು ಅಪಾರವಾಗಿ ವೆಚ್ಚ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ನಮ್ಮ ಸರ್ಕಾರದ ನೀತಿ—ಆಗುವುದಕ್ಕೆ ಅಡಚಣೆ ಮಾಡಿ ಆಗದಿದ್ದುದಕ್ಕೆ ಕುಮ್ಮಕ್ಕನ್ನು ಕೊಡುವಂತಿದೆ. ಹೀಗಾಗಿ ಈ ವಿಶ್ವವಿದ್ಯಾನಿಲಯದವರು ಅಲ್ಲಿ ಎಲ್ಲ ಬೆಳೆಗಳನ್ನೂ ಈಗ ಇಂಗ್ಲೀಷಿನಲ್ಲೇ ಬೆಳೆಯುವುದಕ್ಕೆ ಹತ್ತಿದ್ದಾರೆ. ಹೀಗೆ ಅವರು ಈ ದಿವಸ ನಮ್ಮ ರಾಷ್ಟ್ರ ನೀತಿಗೆ ವಿರುದ್ಧವಾದ ಸಂಶೋಧನೆಯಲ್ಲಿ ತೊಡಗಿದ್ದಾರೆ. ರಾಷ್ಟ್ರ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಇರತಕ್ಕ ಅಪಾರ ಜನಶಕ್ತಿಗೆ ದುಡಿಯತಕ್ಕ ಒಂದು ಅವಕಾಶ ಕಲ್ಪಿಸಿಕೊಡಿ ಎಂದರೆ ಅದನ್ನು ಬಿಟ್ಟು ಎಲ್ಲಾ ಕೆಲಸ ಕಾರ್ಯಗಳನ್ನೂ ಯಂತ್ರಗಳ ಮೂಲಕ ನಡೆಸುವುದಕ್ಕೆ ಹವಣಿಸುತ್ತಿದ್ದಾರೆ. ಇನ್ನು ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ ಈ ದಿವಸ ನಮ್ಮ ಆರ್ಥಿಕ ಸಚಿವರು ವಿಮಾನ ನಿಲ್ದಾಣಕ್ಕೆ ಹಾರಿ ಅಲ್ಲಿ ಐ. ಬಿ. ಎಂ. ವರಲ್ಡ್ ಟ್ರೇಡಿನ ಕಾರ್ಪೊರೇಷನ್ ಅಧ್ಯಕ್ಷರಾದ ಟೈಲರ್ ಅವರಿಗೆ ಹಸ್ತಲಾಘವನ್ನು ಕೊಡುತ್ತಿದ್ದಾರೆ. ಅವರು ನಮ್ಮ ಬಡ್ಜೆಟ್ ತಯಾರಿಕೆಗೆ ಅವರ ಕಂಪ್ಯೂಟರನ್ನು ಪಡೆಯುವುದರಲ್ಲಿ ತಲ್ಲೀನರಾಗಿದ್ದಾರೆ. ನಮ್ಮ ಸರ್ಕಾರದವರಲ್ಲಿ ಇಂಥ ಪ್ರೊಗ್ರೆಸೀವ್ ಐಡಿಯಾಗಳಿರುವಾಗ ಇವರೇಕೆ ದೇಶದಲ್ಲಿರತಕ್ಕ ಜನಸಂಪತ್ತನ್ನು ಮಿಷನ್‌ಕಲ್ಲಿಂಗಿಗೆ ಕೊಡಬಾರದು ? ದೇಶದಲ್ಲಿ ಬೆಳೆಯುತ್ತಿರುವ ಜನಶಕ್ತಿಯನ್ನು ಹೇಗೆ ಉಪಯೋಗಿಸಬೇಕು ಎಂಬ ಮೂಲಭೂತ ಪ್ರಶ್ನೆಯನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡದೆ ಕಂಪ್ಯೂಟರುಗಳನ್ನು ಕೊಳ್ಳಲು ಅತ್ತ ಕೋಟ್ಯಾಂತರ ರೂಪಾಯಿಗಳನ್ನು ಹಾಳುಮಾಡಿದರೆ ಇತ್ತ ಲಕ್ಷಾಂತರ ಜನರು ಹೊಟ್ಟೆಗಿಲ್ಲದೆ ಸಾಯುತ್ತಾರೆ. ನಮಗೆ ಈ ದಿವಸ ಅತ್ಯಗತ್ಯವಾಗಿ ಬೇಕಾಗಿರತಕ್ಕದ್ದು ಸಣ್ಣ ಸಣ್ಣ ಪವರ್ ಟಿಲ್ಲರುಗಳು, ಟ್ರಾಕ್ಟರುಗಳು, ಪಂಪ್‌ಸೆಟ್ಟುಗಳು. ಇವುಗಳನ್ನು ರೈತರಿಗೆ ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಿ ಎಂದರೆ ಅದನ್ನು ಬಿಟ್ಟು ಸಣ್ಣ ಕಾರುಗಳನ್ನು ತಯಾರು ಮಾಡಲು ಹೊರಟಿದ್ದಾರೆ. ಇದು ಸರ್ವಥಾ ಸರಿಯಾದ್ದಲ್ಲ. ಇದನ್ನು ಕೂಡಲೆ ಸರ್ಕಾರ ಕೈಬಿಡಬೇಕು ಎಂದು ಹೇಳುತ್ತೇನೆ. ಅದಕ್ಕೆ ಹಾಕತಕ್ಕ ಬಂಡವಾಳವನ್ನೇ ಉಪಯೋಗಿಸಿ ಪ್ರತಿ ಜಿಲ್ಲೆಯಲ್ಲೂ ಒಂದೊಂದು ಕಾರ್ಖಾನೆ ತೆರೆದು ಅಲ್ಲಿ ಟ್ರಾಕ್ಟರ್ ಮತ್ತು ಸಣ್ಣ ಸಣ್ಣ ಪವರ್ ಟಿಲ್ಲರುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳುತ್ತೇನೆ.

ಇನ್ನು ಮಿನಿ ಮೈನರ್ ಇರಿಗೇಷನ್ ವಿಚಾರಕ್ಕೆ ಬಂದರೆ ನಮಗಿನ್ನೂ ಸುಮಾರು 20,000 ಬಾವಿಗಳ ಅಗತ್ಯವಿದೆ. ಅದಕ್ಕೆ ಸರ್ಕಾರದವರು ಹಣವನ್ನು ಒದಗಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡಿಲ್ಲ. ಸರ್ಕಾರದವರು ಇದಕ್ಕೆ ಕೂಡಲೇ ಗಮನ ಕೊಡಬೇಕು.

ಇನ್ನು ನಾನು ಮಲೆನಾಡಿನಿಂದ ಬರತಕ್ಕವನು. ಅರಣ್ಯದ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ಮೀಸಲಾಗಿರತಕ್ಕ ಅರಣ್ಯ ಪ್ರದೇಶ ಮತ್ತು ಶಾಸನ ಬದ್ಧವಾಗಿ ಬಿಟ್ಟಿರತಕ್ಕ ಗೋಮಾಳ ಪ್ರದೇಶ ಇವುಗಳನ್ನು ಬಿಟ್ಟು ಇನ್ನುಳಿಯತಕ್ಕ ಜಮೀನು ಎಷ್ಟಿದೆ ಎಂಬುದನ್ನು ಅಳತೆ ಮಾಡಿಸಿ ನಮ್ಮ ರಾಜ್ಯದಲ್ಲಿ ಭೂರಹಿತ ವರ್ಗದಲ್ಲಿ ಎಷ್ಟು ಜನರಿದ್ದಾರೆಂಬುದನ್ನು ಕಂಡು ಹಿಡಿದು ಆ ಭೂರಹಿತ ವ್ಯವಸಾಯ ವರ್ಗಕ್ಕೆ ಎಷ್ಟೆಷ್ಟು ಜಮೀನು ಬರುತ್ತೆಂಬ ಬಗ್ಗೆ ಅಂಕಿ

ಅಂಶಗಳನ್ನು ತಯಾರಿಸಿ ಇದಕ್ಕೆ ಗಮನ ಕೊಡಬೇಕಾದ್ದು ಅತ್ಯಗತ್ಯ. ಈ ದಿವಸ ಸರ್ಕಾರದವರ ಅಂಕೀ ಅಂಶಗಳ ಪ್ರಕಾರ ನಮ್ಮಲ್ಲಿ 25 ಲಕ್ಷ ವ್ಯವಸಾಯಗಾರ ಕುಟುಂಬಗಳಿಗೆ ಅವರಿಗೆ ಸ್ವಂತ ಉಳುವ ಭೂಮಿ ಇಲ್ಲದೆ ಇದ್ದಾರೆ. ಅವರಿಗೆ ಹಂಚಬಹುದಾದ ಭೂಮಿ ಇರುವುದು 50 ಲಕ್ಷ ಹೆಕ್ಟಾರು. ಇದರಲ್ಲಿ ಎಲ್ಲ ಬಂಜರ್ ಭೂಮಿಗಳೂ ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲಿರತಕ್ಕ ಟೈಗರ್ ಬ್ಲಾಕಿನಲ್ಲಿರತಕ್ಕ ಜಮೀನು ಎಲ್ಲಾ ಸೇರಿರುತ್ತದೆ. ಇದನ್ನು ಈ ಭೂರಹಿತ ವ್ಯವಸಾಯಗಾರರಿಗೆ ಹಂಚಿದರೆ ಒಂದು ಕುಟುಂಬಕ್ಕೆ ಸುಮಾರು 15.5 ಎಕರೆ ಜಮೀನು ಬರಬಹುದು. ನಮ್ಮ ಮಲೆ ನಾಡಿನಲ್ಲಿ ಒಂದಾನೊಂದು ಕಾಲಕ್ಕೆ ದೊಡ್ಡ ಕಾಡಿತ್ತು. ಅದೆಲ್ಲಾ ಈ ದಿವಸ ನಾಶವಾಗಿ ಅಲ್ಲಿ ಮಳೆ ಬೆಳೆಗಳು ಬಹಳ ಕಡಮೆಯಾಗಿದೆ. ಹಿಂದೆ ಅಲ್ಲಿ ದೊಡ್ಡ ದೊಡ್ಡ ಮರಗಳಿದ್ದವು. ಅವುಗಳನ್ನು ಫಾರೆಸ್ಟ್ ಇಲಾಖೆಯವರು ಕತ್ತರಿಸಿ ಆ ಜಾಗದಲ್ಲಿ ಹೊಸದಾಗಿ ನೀಲಗಿರಿ ಸಸಿಗಳನ್ನು ನಡುತ್ತಿದ್ದಾರೆ. ಆದರೆ ಜನರು ಹೇಳುತ್ತಾರೆ ಆ ನೈಸರ್ಗಿಕವಾದ ಕಾಡಿದ್ದರೇನೇ ಅಲ್ಲಿ ಮಳೆ ಬೆಳೆಯಾಗುವುದು ಎಂದು. ಅದರಲ್ಲೂ ತತ್ರಾಪಿ ಈಗ ಎಲ್ಲೆಲ್ಲಿ ಅರಣ್ಯ ಇಲಾಖೆಯವರು ನೀಲಗಿರಿ ಸಸಿಗಳನ್ನು ಬೆಳೆಸುತ್ತಿದ್ದಾರೋ ಅಲ್ಲಿ ಮಳೆ ಬೆಳೆಗಳು ಸುತರಾಂ ಆಗುತ್ತಿಲ್ಲ. ಇದು ನಮ್ಮ ಅರಣ್ಯ ಇಲಾಖೆಯವರು ಮಾಡುತ್ತಿರುವ ಒಂದು ಸಮಾಜ ಉದ್ಧಾರದ ದೇಶೋದ್ಧಾರದ ಕಾರ್ಯ. ದೇಶದಲ್ಲಿ ಸಮತಾವಾದವನ್ನು ಕಾರ್ಯರೂಪಕ್ಕೆ ತರತಕ್ಕ ಮಾರ್ಗ ಇದಂತೆ. ಹೀಗೆ ನೈಸರ್ಗಿಕವಾದ ಮರಗಳನ್ನು ಕಡಿದು ಮಳೆಬೆಳೆಗಳು ಕಡಮೆಯಾದರೂ ಚಿಂತೆಯಿಲ್ಲ, ಅಲ್ಲಿ ನೀಲಗಿರಿ ಮರಗಳನ್ನು ಬೆಳೆಸಿ ಅದರ ಪಲ್ಪನ್ನು ರೆಯಾನ್ ತಯಾರಿಸಲು ಬಿರ್ಲಾ ಕಂಪೆನಿಗೆ ಸರಬರಾಯಿ ಮಾಡಬೇಕೆಂಬುದು ಸರ್ಕಾರದವರ ನೀತಿ. ಅದಕ್ಕಾಗಿ ಆ ಮರಗಳನ್ನು ಬಹಳ ಕಷ್ಟಪಟ್ಟು ಬೆಳೆಸುತ್ತಿದ್ದಾರೆ. ಇದು ಸರ್ಕಾರದವರು ರಚಿಸಲಿರತಕ್ಕ ಸಮತಾವಾದ ಸಮಾಜ. ಇದೇ ಅಲ್ಲ ಈ ದಿವಸ ನೀಲಗಿರಿ ಮರಗಳನ್ನು ಬೆಳೆಸುವುದರಲ್ಲಿ ಇರತಕ್ಕ ಚಿದಂಬರ ರಹಸ್ಯ. ಇನ್ನು ಕೆಲವು ಕಡೆಗಳಲ್ಲಿ ಕಾಡನ್ನು ಕಡಿದು ಅಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸುತ್ತಾರಂತೆ. ಇನ್ನು ಕೆಲವು ಅರಣ್ಯ ಇಲಾಖೆಯ ಅಧಿಕಾರಿಗಳು ಎಂದರೆ ಜನರಿಗೆ ಸಿಂಹಸ್ವಪ್ನ. ಅಂತೂ ಈ ಅರಣ್ಯ ಇಲಾಖೆ ಈ ದಿವಸ ಆ ಮಟ್ಟಕ್ಕೇರಿದೆ. ಇವರು ಅರಣ್ಯ ಪ್ರದೇಶವನ್ನು ಈ ದಿವಸ ಎಲ್ಲಿಯವರೆಗೆ ವಿಸ್ತರಿಸುತ್ತಾ ಬಂದಿದ್ದಾರೆ ಎಂದರೆ ರೈತನ ಮನೆಯ ಹಿತ್ತಲ ಹಿಂದಿನವರೆಗೂ ಬಂದಿದ್ದಾರೆ. ಹಳ್ಳಿಯ ಜನರು ಸೌದೆಗೂ ಕೂಡ ಕಾಡಿನಲ್ಲಿ ಒಂದು ಕಡ್ಡಿಯನ್ನು ಸಹಾ ಮುಟ್ಟುವಂತಿಲ್ಲ. ಅಂತೂ ಈ ದಿವಸ ಅರಣ್ಯ ಇಲಾಖೆಯಲ್ಲಿ ನಡೆಯತಕ್ಕ ಅನಾಯಕತ್ವವನ್ನು ಹೇಳಲಿಕ್ಕೆ ತೀರದಾಗಿದೆ. ಈ ಇಲಾಖೆಯ ಅಧಿಕಾರಿಗಳಲ್ಲಿರತಕ್ಕ ದರ್ಪ ಸರ್ಕಾರ ನಡೆಸುತ್ತಿರುವ ಮಂತ್ರಿಗಳಿಗೂ ಕೂಡ ಇರುವುದಿಲ್ಲ.

ಇನ್ನು ನಮ್ಮ ಆರ್ಥಿಕ ವ್ಯವಸ್ಥೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದ ವಾರ್ಷಿಕ ವರಮಾನ 1,500 ಕೋಟಿ ರೂಪಾಯಿಗಳು. ಇದರಲ್ಲಿ ರಾಜ್ಯದ ವರಮಾನ 300 ಕೋಟಿ ರೂಪಾಯಿಗಳು ಮಾತ್ರ. ಇನ್ನುಳಿದ 1200 ಕೋಟಿ ರೂಪಾಯಿಗಳ ಆದಾಯ ಕೇಂದ್ರಕ್ಕೆ ಹೋಗುತ್ತದೆ. ಈ ಮೊಬಲಗಿನಲ್ಲಿ ಮೂರರ ಎರಡು ಭಾಗ 500 ಚ. ಮೈಲಿಗಳಷ್ಟು ಪ್ರದೇಶದಲ್ಲಿ ಹರಡಿರತಕ್ಕ 230 ಪಟ್ಟಣಗಳಿಗೆ ವೆಚ್ಚವಾಗುತ್ತಿದೆ. ಇನ್ನುಳಿದ ಮೂರರ ಒಂದು ಭಾಗದ ಹಣ ಉಳಿದ ರಾಜ್ಯಕ್ಕೆಲ್ಲಾ ವೆಚ್ಚವಾಗಬೇಕಾಗಿದೆ. ಈ ದಿವಸ ನಗರ ಪ್ರದೇಶದ ಜನರಿಗೆ ಸರ್ಕಾರ ಖರ್ಚುಮಾಡತಕ್ಕ ಹಣವನ್ನು ಅಂದರೆ ಸೆಂಟ್ಸ್, ಸ್ನೋ, ಫೇಸ್ ಪೌಡರ್, ಲಿಪ್‌ಸ್ಟಿಕ್ ಇತ್ಯಾದಿ ಭೋಗವಸ್ತುಗಳನ್ನು ತರಿಸುವುದಕ್ಕೆ ವೆಚ್ಚಮಾಡತಕ್ಕ ಹಣವನ್ನು ತಡೆಗಟ್ಟಿದರೆ ರಾಜ್ಯಕ್ಕೆ ಬಹಳ ಹಣ ಉಳಿತಾಯವಾಗುತ್ತದೆ. ರಾಜ್ಯಕ್ಕೆ 73 ಕೋಟಿ ರೂಪಾಯಿಗಳಷ್ಟು ಓವರ್ ಡ್ರಾಫ್ಟ್ ಇರುವಾಗ ನಾವು ಬಹಳ ಮಿತವ್ಯಯದಿಂದ ನಡೆಯಬೇಕಾಗಿದೆ. ನಮ್ಮ ಅಧಿಕಾರವರ್ಗದಲ್ಲಿರತಕ್ಕ ಯಾವ ಒಬ್ಬ ಅಧಿಕಾರಿಗಾಗಲೀ ಸಂಬಳ ಭತ್ಯೆ ಇತ್ಯಾದಿಗಳೆಲ್ಲಾ ಸೇರಿ ಒಂದು ಸಾವಿರ ರೂಪಾಯಿಗಳಿಗೆ ಜಾಸ್ತಿ ಇರಬಾರದು. ಹೀಗೆ ಮಾಡಿದರೆ ಇದರಿಂದ ಸರ್ಕಾರಕ್ಕೆ ಬಹಳ ಹಣ ಉಳಿತಾಯವಾಗುತ್ತದೆ. ಇನ್ನು ನಮ್ಮಲ್ಲಿರತಕ್ಕ ಶಾಲೆಗಳಲ್ಲಿ ಕಿಂಡರ್‌ಗಾರ್ಟನ್ ಕಾನ್‌ವೆಂಟ್ ಮತ್ತು ಮಿಷನರಿ ಶಾಲೆಗಳನ್ನು ತಪ್ಪಿಸಿದರೆ ಸರ್ಕಾರಕ್ಕೆ ಬಹಳ ಉಳಿತಾಯವಾಗುತ್ತದೆ. ಇನ್ನು ನಮ್ಮಲ್ಲಿರತಕ್ಕ ಕಾರುಗಳನ್ನ ನ್ಯಾಷನಲೈಜ್ ಮಾಡಿ ಟ್ಯಾಕ್ಸಿಗಳನ್ನಾಗಿ ಮಾಡಿದರೆ ಅದರಿಂದ ಬಹಳ ಹಣ ಸರ್ಕಾರಕ್ಕೆ ಉಳಿಯುತ್ತದೆ. ಹಾಗೇ ಸಿನಿಮಾ ಮತ್ತು ಹೋಟೆಲುಗಳನ್ನು ರಾಷ್ಟ್ರೀಕರಣ ಮಾಡಿ. ಅದರಿಂದಲೂ ಸರ್ಕಾರಕ್ಕೆ ಹಣ ಬರುತ್ತದೆ.

ಮಾನ್ಯ ಅಧ್ಯಕ್ಷಿಣಿಯವರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟುದಕ್ಕೆ ಅವರಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಕರಿಯಪ್ಪ ಗೌಡ (ಹುಣಸೂರು).—ಮಾನ್ಯ ಅಧ್ಯಕ್ಷಣಿಯವರೆ ನಮ್ಮ ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಅಭಿನಂದನಾ ಭಾಷಣಕ್ಕೆ ನಮ್ಮ ಅನುಮೋದನೆಯನ್ನು ಸೂಚಿಸತಕ್ಕ ಕಾಲದಲ್ಲಿ ಹೀಗೆ ಮಾತನಾಡತಕ್ಕದ್ದು ಸ್ವಾಭಾವಿಕ. ಆದರೆ ನಾನು ರಾಜ್ಯಪಾಲರ ಭಾಷಣಕ್ಕೆ ನನ್ನ ಒಪ್ಪಿಗೆಯನ್ನು ಕೊಡುತ್ತ ಅವರ ಭಾಷಣದಲ್ಲಿ ಕಂಡ ಕೆಲವು ವಿಷಯಗಳ ಬಗ್ಗೆ ಕೆಲವು ಸೂಚನೆಗಳನ್ನು ವಿಮರ್ಶೆ ಮಾಡುತ್ತಾ ಮಾತನಾಡಬೇಕೆಂದಿದ್ದೇನೆ. ಮೊಟ್ಟಮೊದಲನೆಯದಾಗಿ ನಮ್ಮ ರಾಜ್ಯಪಾಲರು ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆಯಾಗಬೇಕು ಎಂದು ಹೇಳಿದ್ದಾರೆ. ಇದಕ್ಕೆ ನಮ್ಮೆಲ್ಲರ ಒಪ್ಪಿಗೆ ಇದೆ. ಇದನ್ನು ಎಲ್ಲ ಹಂತದಲ್ಲೂ ಜಾರಿಗೆ ತರುವಂತೆ ಮಾಡಬೇಕು. ಆದರೆ ಅದರ ಜೊತೆಯಲ್ಲಿ ಇಂಗ್ಲೀಷೂ ಕೂಡ ಜಾರಿಯಲ್ಲಿರಬೇಕೆಂದು ಹೇಳುತ್ತೇನೆ. ಇನ್ನು ಕನ್ನಡ ನಾಡು, ಕರ್ಣಾಟಕ ಎಂಬ ಹೆಸರನ್ನು ಮೈಸೂರು ರಾಜ್ಯಕ್ಕೆ ಇಡಬೇಕೆಂದು ಒಂದು ಕೂಗನ್ನು ನಾವು ಸತತವಾಗಿ ಕೇಳುತ್ತಿದ್ದೇವೆ. ಆದರೆ ಈ ರಾಜ್ಯಕ್ಕೆ ರಾಜಧಾನಿ ಬೆಂಗಳೂರು ನಗರ. ಇದನ್ನು ಕೆಂಪೇಗೌಡ ಕಟ್ಟಿಸಿದ್ದು. ಆದ್ದರಿಂದ ಇದಕ್ಕೆ ಏಕೆ ಕೆಂಪೇಗೌಡ ನಗರ ಎಂದು ಹೆಸರಿಡಲು ನಮ್ಮ ಹಿರಿಯರು ಪ್ರಯತ್ನ ಮಾಡಲಿಲ್ಲ ಎಂಬುದು ತುಂಬಾ ಶೋಚನೀಯವಾದ ಪ್ರಶ್ನೆ ಆಗಿದೆ.

ಇನ್ನು ಈ ಕಾನೂನು ಪರಿಪಾಲನೆ ವಿಷಯದಲ್ಲಿ ನಾನು ನನ್ನ ಅಭಿಪ್ರಾಯ ಕೊಡುವುದಾದರೆ ಈ ನಮ್ಮ ರಾಜ್ಯದಲ್ಲಿ ಕಾನೂನು ಪರಿಪಾಲನೆ ವಿಷಯ ಎಲ್ಲಿಗೆ ಹೋಗಿದೆ ಎಂದರೆ 'ಬೇಲಿ ಎದ್ದು ಹೊಲ ಮೇದಂತೆ'' ಆಗಿರುವ ಸನ್ನಿವೇಶವನ್ನು ಎಲ್ಲಾ ಸಂದರ್ಭಗಳಲ್ಲೂ ನಾವು ಕಾಣುತ್ತಿದ್ದೇವೆ. ಒಂದು ಕಾನೂನು ಪರಿಪಾಲನೆಯಾಗಬೇಕಾದರೆ ಇದಕ್ಕೆ ಬೇರೆಯಾದ ಒಂದು ಆಡಳಿತದ ನೀತಿಯನ್ನು ಹಾಕಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡಲು ಇಚ್ಛೆಪಡುತ್ತೇನೆ.

ಮುಖ್ಯವಾಗಿ ಸೀಸನಲ್ ಕಂಡಿಷನ್ಸ್ ಮತ್ತು ರಿಲೀಫ್ ಮೆಷರ್ಸ್ ಬಗ್ಗೆ ನಾನು ಸರ್ಕಾರಕ್ಕೆ ಸಲಹೆ ಮಾಡುವುದು ಏನೆಂದರೆ ಪರಿಹಾರ ಕಾರ್ಯಗಳನ್ನು ಸರ್ಕಾರ ಸುಮಾರು ವರ್ಷಗಳ ಕಾಲ ನಡೆಸಿಕೊಂಡು ಬಂದರೂ ಕೂಡ ಅದರ ಪ್ರತಿ ಫಲ ನಮಗೆ ಸಿಕ್ಕಿಲ್ಲ, ಅದು ಸಫಲವಾಗಿಲ್ಲ, ವಿಫಲ ವಾಗಿದೆ ಎಂದು ಸರ್ಕಾರದ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅದೇ ರೀತಿ ಲ್ಯಾಂಡ್ ರಿಫಾರಮ್ಸ್, ಭೂಸುಧಾರಣಾ ಕಾಯಿದೆ ಹಾಗೂ ರೆವಿನ್ಯೂ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ ನನ್ನ ಒಂದು ಅಭಿಪ್ರಾಯ ಏನೆಂದರೆ ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತರಬೇಕು. ಭೂಸುಧಾರಣೆಯ ಬಗ್ಗೆ ಈಗ ಏನು ವಿಶಾಲವಾಗಿ ಈ ಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ ಇದರಲ್ಲಿ ಇರತಕ್ಕ ಒಂದು ದೋಷವನ್ನು ನಾನು ವಕೀಲಿ ವೃತ್ತಿಯಲ್ಲಿ ಕಂಡಿದ್ದೇನೆ. ಅದು ಏನೆಂದರೆ ಯಾರೂ ಗೇಣಿದಾರರ ಹೆಸರಿನಲ್ಲಿ ಪಹಣಿ ಬರೆಯುತ್ತಿಲ್ಲ, ಜಮೀನ್ದಾರರ ಹೆಸರಿನಲ್ಲಿ ಬರೆಯುತ್ತಿದ್ದಾರೆ. ನಾಳೆ ನ್ಯಾಯಾಲಯದ ಮುಂದೆ ಕಾನೂನು ಪರಿಶೀಲನೆಗೆ ಬಂದಾಗ, ಪಹಣಿಯಲ್ಲಿ ಹೆಸರು ವ್ಯತ್ಯಾಸ ಇರತಕ್ಕಂಥ ದುರ್ವ್ಯವಹಾರದ ನೀತಿಯನ್ನು ನಾವು ಕಾಣುತ್ತೇವೆ. ಅದರ ಬಗ್ಗೆ ನಾನು ಎಚ್ಚರಿಕೆಯ ಕ್ರಮವಾಗಿ ಹೆಚ್ಚಿನ ಮುತುವರ್ಜಿಯನ್ನು ವಹಿಸಬೇಕು ಎಂದು ಸರ್ಕಾರಕ್ಕೆ ಸಲಹೆ ಕೊಡುತ್ತಿದ್ದೇನೆ.

ಅದೇ ರೀತಿ ನಮ್ಮ ಭೂಸುಧಾರಣೆ ಕಾಯಿದೆಯೊಳಗೆ ಪ್ಲಾಂಟೇಷನ್‌ಗೆ ಯಾವ ವಿಧವಾದ ಅನುಕೂಲ ಮಾಡದೆ ಮಿತಿ ಹಾಕಬೇಕು. 10 ಸಾವಿರ ಎಕರೆ ಮತ್ತು ಒಂದು ಲಕ್ಷ ಎಕರೆ ಮಿತಿ ಇರಬಾರದು. ಇದರ ಬಗ್ಗೆ ಯಾವುದೇ ಒಂದು ಮಿತಿಯನ್ನು ಇಡಬೇಕೆಂದು ಸರ್ಕಾರಕ್ಕೆ ಸಲಹೆ ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿ ಪಟ್ಟಣಗಳಲ್ಲಿನ ಒಬ್ಬರ ಆಸ್ತಿಯ ಮೇಲೆ ಮಿತಿ ಹಾಕಬೇಕು, ಮತ್ತು ಪಟ್ಟಣಗಳ ಆಸ್ತಿಯ ಮಿತಿಯನ್ನು ಈ ಭೂಸುಧಾರಣಾ ಕಾಯಿದೆ ಜೊತೆಗೆ ಜಾರಿಗೆ ತರಬೇಕು ಎಂದು ನಾನು ಸಲಹೆ ಕೊಡುತ್ತೇನೆ. ಒಬ್ಬ ಸರ್ಕಾರಿ ನೌಕರನಿಗೆ 300 ರೂಪಾಯಿ ಸಂಬಳ ಕೊಟ್ಟರೆ ಸಂಸಾರ ಸಾಗಿಸುತ್ತಾನೆ, ಅದೇ ಇನ್ನೊಬ್ಬನಿಗೆ ಮೂರು ಸಾವಿರ ರೂಪಾಯಿ ಸಂಬಳ ಕೊಟ್ಟರೆ ಅವನು ಅದ್ದೂರಿಯ ಜೀವನ ನಡೆಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸಮಾನತೆ ಬರಬೇಕಾದರೆ ಒಂದು ವಿಧವಾದಂಥ ವೇತನ ಮಿತಿಯನ್ನು ಕೂಡ ಜಾರಿಗೆ ತರಬೇಕು ಎಂದು ಸರ್ಕಾರಕ್ಕೆ ನಾನು ಸಲಹೆ ಕೊಡುತ್ತೇನೆ. ಮತ್ತು ಭೂಸುಧಾರಣೆ ಕಾಯಿದೆಯ ಬಗ್ಗೆ ಇನ್ನೊಂದು ಸಲಹೆ ಏನೆಂದರೆ ನಮ್ಮ ದೇಶದಲ್ಲಿ ಅವಿಭಕ್ತ ಕುಟುಂಬಗಳಲ್ಲಿ ಹುಟ್ಟಿದಂಥ ಮಕ್ಕಳಿಗೆ ಸಮನಾದ ಹಕ್ಕು ಕೊಡುತ್ತಾ ಬಂದಿದ್ದೇವೆ. ಸರ್ಕಾರದ ಮುಂದೆ ನನ್ನ ಸಲಹೆ ಏನೆಂದರೆ ಒಬ್ಬನಿಗೆ ಹುಟ್ಟತಕ್ಕ ಎರಡು ಮಕ್ಕಳಲ್ಲಿ ಒಬ್ಬನು ವಿದ್ಯಾವಂತನಾಗಿ ಬೇರೆ ಉದ್ಯೋಗವನ್ನು ಕಲ್ಪಿಸಿಕೊಂಡಾಗ ಅವನು ಬೇರೆ ರೀತಿಯ ಜೀವನ ಒದಗಿಸಿಕೊಂಡಾಗ, ಆತನಿಗೆ ಮತ್ತೆ ಈ ಆಸ್ತಿಯ ಮೇಲೆ ಸಮಾನ ಹಕ್ಕು ಇರಕೂಡದು. ಹುಟ್ಟಿದಂದಿನಿಂದ ಸಾಯುವವರೆಗೂ ಹೊಲವನ್ನೇ ನಂಬಿರುವ

ವ್ಯಕ್ತಿಗೆ ಆಸ್ತಿಯ ಪೂರ್ಣ ಹಕ್ಕು ಬರಬೇಕು. ವಿದ್ಯಾವಂತ ಉದ್ಯೋಗಿಗಳು ಮಾಡತಕ್ಕ ಕೀಟಲೆಗಳು ಮತ್ತು ತೊಂದರೆಗಳು ಹಲವಾರು ಶಾಸಕರ ಗಮನಕ್ಕೆ ಬಂದಿವೆ. ವಿದ್ಯಾವಂತರಿಗೆ ಒಳ್ಳೆಯ ಭೂಮಿ ಬೇಕು, ಒಳ್ಳೆಯ ಮನೆ ಬೇಕು, ಮತ್ತು ಸೌಲಭ್ಯ ಇರಬೇಕು ಎನ್ನುವ ಮಾತನ್ನು ಹಳ್ಳಿಗಳಲ್ಲಿ ಕೇಳುತ್ತಿದ್ದೇವೆ. ಇದು ನನಗೆ ಅರ್ಥವಾಗುತ್ತಿಲ್ಲ. ಇದರ ಕಡೆಗೆ ಸರ್ಕಾರದವರು ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ಕಂದಾಯ ಮಂತ್ರಿಗಳು ಆದಂಥ ಹುಚ್ಚಮಾಸ್ತಿಗೌಡರು ಪತ್ರಕರ್ತರ ಸಭೆಯನ್ನು ಕರೆದು ಆರ್ ಆರ್ ದುರಸ್ತು ಮಾಡಿ ಪಟ್ಟೆ ಬರೆಸಿಕೊಡುವ ಬಗ್ಗೆ ಹೆಚ್ಚಿನ ಮುತು ವರ್ಜಿ ವಹಿಸುತ್ತೇನೆ, ಜಮೀನು ತಕರಾರು ಎಲ್ಲವನ್ನು ಸರಿಪಡಿಸುತ್ತೇನೆ ಎಂದು ವಿವರವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಅದನ್ನು ಸಾರ್ಥಕ ಪಡಿಸಬೇಕು ಎಂದು ನಾನು ಅವರಿಗೆ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೂ ಅಲ್ಲದೆ ಒಬ್ಬ ಮನುಷ್ಯ ಒಂದು ಅರ್ಜಿಯನ್ನು ತಾಲ್ಲೂಕು ಆಫೀಸಿಗೆ ಕೊಟ್ಟರೆ ಕೆಲವು ದಿನಗಳಾದಮೇಲೆ ಅರ್ಜಿ ನನಗೆ ಬಂದಿಲ್ಲ, ಎಂದು ದಬಾಯಿಸುವ ಸನ್ನಿವೇಶಗಳು ಕಾಣುತ್ತವೆ. ಇದರ ಬಗ್ಗೆ ನನ್ನ ಸಲಹೆ ಏನೆಂದರೆ ಯಾವುದೇ ಒಂದು ಕಾಗದವನ್ನು ಒಬ್ಬ ಸಾರ್ವಜನಿಕ ಹೋಗಿ ಕೊಟ್ಟರೆ, ಅದಕ್ಕೆ ಅಕ್ನಾಲೆಡ್ಜ್‌ಮೆಂಟ್ ಕೊಡುವ ಒಂದು ನಿಯಮವನ್ನು ಸರ್ಕಾರ ಮಾಡಬೇಕು. ಕಾಗದ ಕೊಟ್ಟಿದ್ದಕ್ಕೆ ಒಂದು ಗುರುತು ಇರಬೇಕು. ಅದಕ್ಕೂ ಒಂದು ನಿಯಮ ಹಾಕಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರದ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ ಅದೇ ರೀತಿ ಭೂಸುಧಾರಣೆಯ ಬಗ್ಗೆ ಭೂಮಿ ವಿತರಣೆಯ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹರಿಜನ ಗಿರಿಜನರಿಗೆ ಮತ್ತು ನಿಮ್ನವರ್ಗದವರಿಗೆ ವಿಲೇವಾರಿ ಮಾಡುವ 50 ಭಾಗದಷ್ಟು ಭೂಮಿಯನ್ನು ಮೀಸಲಾಗಿಟ್ಟಿದ್ದೇವೆ ಎಂದು ಹೇಳಿದ್ದಾರೆ. ಈ ಕೆಲಸಕ್ಕಾಗಿ ಸ್ಪೆಷಲ್ ಅಸಿಸ್ಟೆಂಟ್ ಕಮಿಷನರುಗಳನ್ನು ನೇಮಿಸಲಾಗಿದೆ ಎಂದು ಹೇಳಿದ್ದಾರೆ. ಇದು ತುಂಬಾ ಸಂತೋಷದ ವಿಷಯ. ಆದರೆ ನಮ್ಮ ದೇಶದ ಆಡಳಿತ ಯಾವ ರೀತಿ ನಡೆದುಕೊಂಡು ಬಂದಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಾದರೆ ಹರಿಜನ ಅಥವಾ ಗಿರಿಜನರಿಗೆ, ನಿಮ್ನವರ್ಗದವರಿಗೆ ಮತ್ತು ಬಡವರಿಗೆ ನಾಲ್ಕು ಎಕರೆ ಜಮೀನು ಕೊಟ್ಟು ಮಲಗುವುದಕ್ಕೆ ನಾಲ್ಕು ಮೊಳ ಜಾಗ ಇಲ್ಲದಂಥ ದುಸ್ಥಿತಿಯನ್ನು ನಾವು ಹಳ್ಳಿಗಳಲ್ಲಿ ನೋಡುತ್ತಿದ್ದೇವೆ. ಇದನ್ನು ಕಂಡಾಗ ನಮಗೆ ಕಣ್ಣೀರು ಬರುತ್ತದೆ. ಅಲ್ಲದೇ ಇದೇ ಒಂದು ಸಂದರ್ಭದಲ್ಲಿ ಸೈನಿಕರ ಬಗ್ಗೆ ಹೆಚ್ಚಿನ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅವರಿಗೆ ಬೇಕಾದಷ್ಟು ಸೌಲಭ್ಯ ಕೊಡುತ್ತಿದ್ದಾರೆ. ಅವರಿಗೆ ಜಮೀನನ್ನು ಮುಫತ್ತಾಗಿ ಕೊಡುತ್ತಿದ್ದಾರೆ. ನಮ್ಮ ಹುಣಸೂರು ತಾಲ್ಲೂಕಿನಲ್ಲಿ ಎಕ್ಸ್-ಸರ್ವೀಸ್‌ಮನ್‌ಗಳ ಕಾಲೋನಿಗಳು 2-3 ಇವೆ. ಈ ಕಾಲೋನಿಗಳು ಯಾವ ರೀತಿ ಇವೆ ಎನ್ನುವುದು ನನಗೆ ಅನುಭವವಿದೆ. ಎಕ್ಸ್-ಸರ್ವೀಸ್ ಮನ್‌ಗಳು ಯಾವ ಯಾವುದೋ ಮೂಲೆಯಿಂದ ಬಂದಂಥ ಜನ. ಕನ್ನಡ ಭಾಷೆ ಬರದೆ ನೊಗ, ಹಗ್ಗ, ಗೊತ್ತಿಲ್ಲದೆ ಇರುವ ಜನಕ್ಕೆ ಜಮೀನು ಕೊಟ್ಟಿದ್ದಾರೆ. ಅವರು ನಮ್ಮ ಜನಕ್ಕೆ ಜಮೀನನ್ನು ವಾಪಸ್ಸು ಕೊಟ್ಟು ಹೋಗುವ ಸ್ಥಿತಿಯನ್ನು ನೋಡುತ್ತಿದ್ದೇವೆ. ಅವರಿಗೆ ಸೂಕ್ತವಾದಂಥ ನೆರವನ್ನು ಕೊಡಬೇಕು. ಜಮೀನನ್ನು ಕೊಟ್ಟಿದ್ದೇವೆ ಎನ್ನುವ ಹೆಮ್ಮೆಯನ್ನು ಸರ್ಕಾರ ಪಟ್ಟುಕೊಳ್ಳಬಾರದು ಎಂದು ಈ ಸಂದರ್ಭದಲ್ಲಿ ಸಲಹೆ ನೀಡುತ್ತಿದ್ದೇನೆ.

ಇನ್ನು ನಿರುದ್ಯೋಗದ ಸಮಸ್ಯೆ. ಈ ಸಮಸ್ಯೆ ಎಲ್ಲಿಯವರೆಗೆ ಬಂದಿದೆ ಎಂದರೆ ಈ ಸಭೆಯಲ್ಲಿ ನಾವು ಕೂತು ಕೆಲಸ ಮಾಡುವುದಕ್ಕೂ ಕಷ್ಟವಾಗಿದೆ. ಕಾರಣ ಏನೆಂದರೆ, ಚುನಾವಣೆಗಳ ಕಾಲದಲ್ಲಿ ಹಲವಾರು ರೀತಿಯ ನೆರವನ್ನು ನೀಡಿದಂಥ ಜನ ಆ ಕೆಲಸ, ಈ ಕೆಲಸ ಮಾಡಿಕೊಡಿ ಎಂದು ಪೀಡಿಸುತ್ತಾ ಕಾಲಹರಣ ಮಾಡುತ್ತಿದ್ದಾರೆ. ಇದಕ್ಕೆ ಮೂಲ ಕಾರಣ ಏನೆಂದರೆ ಇದುವರೆಗೆ ನಡೆದುಕೊಂಡು ಬಂದಂಥ ಈ ವಿದ್ಯಾ ಇಲಾಖೆಯ ಒಂದು ಧೋರಣೆ, ಒಂದು ದಾರಿ ಶುದ್ಧ ಅವಿವೇಕದ್ದು ಆಗಿದೆ. ಅದರ ರೂಪ ಹೇಗೆ ಇರಬೇಕಾಗಿತ್ತು ಎಂದರೆ ಉದ್ಯೋಗ ಕಲ್ಪಿಸುವುದಕ್ಕೆ ಅವಕಾಶ ಕೊಡುವಂತಹ ವಿದ್ಯೆಯನ್ನು ಕೊಡಬೇಕಾಗಿತ್ತು ಮತ್ತು ಅದಕ್ಕೆ ತಕ್ಕ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿತ್ತು ಎಂದು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಹಿಂದಿನ ಸರ್ಕಾರಗಳವರು ಶಾಲೆಗಳಿಂದ ವಿದ್ಯಾವಂತರಾಗಿ ಹೊರಬರಬೇಕಾದಂಥ ಮಕ್ಕಳ ಮೇಲೆ ನಾನಾ ತರಹದ ಪ್ರಯೋಗಗಳನ್ನು ಮಾಡುವುದಕ್ಕೆ ಹೋಗಿ ಮೊದಲು ಇದ್ದ ಇಂಟರ್‌ಮೀಡಿಯಟ್ ಪದ್ಧತಿಯನ್ನು ತೆಗೆದು ಪ್ರಿಯೂನಿವರ್ಸಿಟಿ ಅಂತ ಮಾಡಿ ಅವರು ಯಾವ ಒಂದು ಸ್ಥಿತಿಗೂ ಬರದಂತೆ ಮಾಡಿದಂತಹ ಸನ್ನಿವೇಶಗಳನ್ನು ನಾವು ಕಾಣುತ್ತಿದ್ದೇವೆ. ವಿದ್ಯಾ ಇಲಾಖೆಯಲ್ಲಿ ಬದಲಾವಣೆಯಾಗಬೇಕು. ನನ್ನ ಅನುಭವ ಏನೆಂದರೆ ಹುಣಸೂರಿನಲ್ಲಿ ಐದು ಜನ ಸ್ಕೂಲು ಇನ್‌ಸ್ಪೆಕ್ಟರ್ಸ್ ಇದ್ದಾರೆ. ಒಬ್ಬ ಇನ್‌ಸ್ಪೆಕ್ಟರಿಗೆ ಒಂದು ವೆಹಿಕಲ್ ಕೊಟ್ಟರೆ ಅವನು 150 ಶಾಲೆಗಳಿಗೆ ಹೋಗಿ ಇನ್‌ಸ್ಪೆಕ್ಷನ್ ಮಾಡುತ್ತಿದ್ದ. ಆದರೆ ಈಗ ಐದು ಜನ ಇನ್‌ಸ್ಪೆಕ್ಟರುಗಳು ಇದ್ದಾರೆ. ಮನೆಯಲ್ಲಿ

(ಶ್ರೀ ಡಿ. ಕರಿಯಪ್ಪ ಗೌಡ)

ಟೂರು ನೋಟು ಬರೆದುಕೊಂಡು ಸಂಬಳ ತೆಗೆದುಕೊಳ್ಳುತ್ತಾ ಇದ್ದಾರೆ. ಇದನ್ನು ಸರ್ಕಾರದವರು ವಿಚಾರ ಮಾಡಬೇಕಾಗುತ್ತದೆ.

6–00 P.M

ಇನ್ನು 1972–73ರ ವಾರ್ಷಿಕ ಯೋಜನೆ ಬಗ್ಗೆಯೂ ಮತ್ತು 4ನೇ ಪಂಚವಾರ್ಷಿಕ ಯೋಜನೆಯಲ್ಲಿ ಉಳಿದವರ್ಷಗಳಲ್ಲಿ ವ್ಯವಸಾಯ ಉತ್ಪಾದನೆ, ಹಳ್ಳಿಗಾಡಿನ ವಿದ್ಯುಚ್ಛಕ್ತಿ, ಗ್ರಾಮಾಂತರ ಮತ್ತು ನಗರ ಪ್ರದೇಶಗಳ ನೀರು ಸರಬರಾಜು, ಮತ್ತು ಹಿಂದುಳಿದ ವರ್ಗಗಳವರ ಕಲ್ಯಾಣ ಸಾಧನೆಗೆ ಪ್ರಾಶಸ್ತ್ಯ ಕೊಟ್ಟಿರುವುದರ ಬಗ್ಗೆಯೂ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನೆಲ್ಲಾ ಸರ್ಕಾರ ಯಾವರೀತಿ ಮಾಡಿಕೊಂಡು ಹೋಗುತ್ತದೆ ಎನ್ನುವುದನ್ನು ಕಾದುನೋಡಬೇಕಾಗಿದೆ.

ಇನ್ನು ವ್ಯವಸಾಯದಲ್ಲಿ ಸಣ್ಣ ರೈತರ ಯೋಜನೆ ಸ್ಕೀಮು ಇದೆ. ಅದು ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಾ ಇದೆ. 4–5 ವರ್ಷವಾದರೂ ಆ ಯೋಜನೆಯ ಪ್ರತಿಫಲ ಸಣ್ಣ ರೈತರಿಗೆ ತಲುಪಿಲ್ಲ ಎಂದು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಕೊನೆಯದಾಗಿ ನೀರಾವರಿ ಯೋಜನೆ ಬಗ್ಗೆ ಹೇಳುವುದಾದರೆ ಅದರಲ್ಲೂ ಹುಣಸೂರು, ಪಿರಿಯಾಪಟ್ಟಣ, ಹೆಗ್ಗಡದೇವನಕೋಟೆ ತಾಲ್ಲೂಕುಗಳು ಮಲೆನಾಡು ತಾಲ್ಲೂಕುಗಳಾದರೂ ಕೂಡ ಅಲ್ಲಿ ಮಳೆ ಕಡಮೆ ಬಿದ್ದಿದೆ. ಮೊದಲು ಅಲ್ಲಿ ಆಹಾರ ಪದಾರ್ಥವನ್ನು ಬೆಳೆಸುವುದಕ್ಕೆ ಅವಕಾಶ ಇತ್ತು. ಈಗ ಕಾಡು ಪ್ರದೇಶ ಹೋದ ಮೇಲೆ ಮಳೆ ಕಡಿಮೆಯಾಗಿದೆ. ನಮ್ಮ ತಾಲ್ಲೂಕಿನಲ್ಲಿ ಹಾರಂಗಿ ಯೋಜನೆಯಿಂದ 16 ಸಾವಿರ ಎಕರೆ ನೀರಾವರಿಯಾಗುತ್ತದೆ. ಇನ್ನೂವರೆಗೆ ಅದರ ಪ್ರತಿಫಲ ಮುಟ್ಟಿಲ್ಲ. ಈಗ ನಮಗೆ ಒಂದು ಶುಭ ಸೂಚನೆ ಕಾಣುತ್ತಾ ಇದೆ. ಅದು ಏನೆಂದರೆ ಈಗ ನಮ್ಮ ಹಳೆಯ ಮೈಸೂರು ಭಾಗದ ಮಂತ್ರಿಗಳನ್ನು ಕಾಣುತ್ತಾ ಇದ್ದೇವೆ. ಅವರಿಂದ ಈ ದೊಡ್ಡ ನೀರಾವರಿ ಯೋಜನೆಗಳ ಬಗ್ಗೆ ಮತ್ತು ಸಣ್ಣ ನೀರಾವರಿ ಯೋಜನೆಗಳ ಬಗ್ಗೆ ನಮಗೆ ಎಷ್ಟರಮಟ್ಟಿಗೆ ಪ್ರತಿಫಲ ಸಿಕ್ಕುತ್ತದೋ ಎನ್ನುವುದನ್ನು ಕಾದು ನೋಡಬೇಕು. ದಕ್ಷ ಆಡಳಿತಗಾರರಾದ ಶ್ರೀಮಾನ್ ಚನ್ನಬಸಪ್ಪನವರು ಮತ್ತು ಶ್ರೀಮಾನ್ ನಂಜೇಗೌಡರು ಈ ನೀರಾವರಿ ಬಗ್ಗೆ ಹೆಚ್ಚಿನ ಒಂದು ಆಸಕ್ತಿ ವಹಿಸಿ ಇದರ ಒಂದು ಜವಾಬ್ದಾರಿಯನ್ನು ಹೊರಬೇಕು. ಅವರ ಒಂದು ಕೈಯಲ್ಲಿ ನಮ್ಮ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ನಂಬಿದ್ದೇನೆ. ಈ ಸಂದರ್ಭದಲ್ಲಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**MADAM SPEAKER.**—The House will now rise to meet at 12 NOON to-morrow.

---

*The House adjourned at Five Minutes past Six of the Clock to meet again at Twelve of the Clock on Friday, the 14th April 1972.*

---

WD 17332 -GPB- 550—27-6-72

(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪುಸ್ತಕ ಕ್ರಮಾಂಕ Accession No......6003
ದಿನಾಂಕ Date..............................
(B)

ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Friday, 14th April 1972.*

The House met in the Assembly Chamber, Vidhana Soudha, at Twelve of the Clock.

MADAM SPEAKER (SMT. K. S. NAGARATHNAMMA) in the Chair.

---

## Oath or Affirmation by a Member

MADAM SPEAKER.—Smt. Sheila Irani has been nominated a member of this House. The hon. Member will take her oath.

*Then the Secretary called the member to take the oath and the member took the prescribed oath or made the affirmation.*

Smt. Sheila Irani.... .............(Nominated.)

## STARRED QUESTIONS

### (to which oral answers were given)

### Cotton Seed Production in Bangalore District

12 SRI. M. B. RAMASWAMY (Anekal).—

Will the Minister for Agriculture and Forests be pleased to state :—

(*a*) whether there is any Officer for propagation of cotton seed production in Bangalore District ;

(*b*) the number of persons who have come forward to take up production of cotton seeds ; the number of persons who have been afforded facilities as contemplated in the scheme for production of cotton seeds ;

(*c*) the quality of cotton seeds so far produced by all the cotton seed producers under the scheme in Bangalore District ?

Sri K. H. PATIL (Minister for Agriculture and Forests).—

(*a*) No.

(*b*) Six (6).

Six (6).

(*c*) The seed cotton is not yet harvested. The quality of seed will be known only after testing the purity and germination.

ಶ್ರೀ ಎಂ. ಬಿ. ರಾಮಸ್ವಾಮಿ.—ಕೊನೆಯ ಪ್ರಶ್ನೆಗೆ ಉತ್ತರವಾಗಿ ಬಿತ್ತನೆ ಬೀಜದ ಬೆಳೆಯನ್ನು ತೆಗೆದಿರುವುದಿಲ್ಲ, ಬೀಜದ ಶುದ್ಧತೆಯನ್ನು ಮತ್ತು ಮೊಳೆಯುವ ಶಕ್ತಿಯನ್ನು ಪರೀಕ್ಷಿಸಿದ ನಂತರವೇ ಬೀಜದ ದರ್ಜೆ ಯಾವುದೆಂಬುದನ್ನು ಗೊತ್ತುಮಾಡಲಾಗುತ್ತದೆ ಎಂದು ತಿಳಿಸಿರುವುದು ಅರ್ಥವಾಗುವುದಿಲ್ಲ. 6 ಜನ ಮುಂದೆ ಬಂದಿರುವವರು ಯಾರು ?

† ಶ್ರೀ ಕೆ. ಎಚ್. ಪಾಟೀಲ್.—ಹಾರ್ವೆಸ್ಟ್ ಆದನಂತರ ಕ್ವಾಲಿಟಿ ವಿಚಾರ ತಿಳಿಯಲು ಸಾಧ್ಯ. ಆರು ಜನರು ಯಾರೆಂದರೆ–ಬಿ. ಎಂ. ರಾಮಕೃಷ್ಣ, ಡಿ. ಎಸ್. ರಾಮು, ಎಚ್. ಅಶ್ವತ್ಥ ನಾರಾಯಣ, ಚನ್ನೇಗೌಡ, ಕೆ. ಎಸ್. ಮುನಿಸ್ವಾಮಿ, ಎಚ್. ವಿ. ನಾರಾಯಣಪ್ಪ.

ಶ್ರೀ ಎಂ. ಬಿ. ರಾಮಸ್ವಾಮಿ.- -ಹಾರ್ವೆಸ್ಟ್ ಆಗುವುದು ಯಾವಾಗ ?

ಶ್ರೀ ಕೆ. ಎಚ್. ಪಾಟೀಲ್.—ಇನ್ನೂ ನಿಧಾನವಾಗುವುದು. ಅದನ್ನು ಪ್ರೊಕ್ಯೂರ್ ಮಾಡಿದಮೇಲೆ ಕ್ವಾಲಿಟಿ ವಿಚಾರ ಗೊತ್ತಾಗುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಬೆಳೆಯುವವರಿಗೆ ಕೊಟ್ಟಿರುವ ಸೌಲಭ್ಯವೇನು ?

ಶ್ರೀ ಕೆ. ಎಚ್. ಪಾಟೀಲ್.—ಬೀಜ, ಗೊಬ್ಬರ, ಟೆಕ್ನಿಕಲ್ ಅಡ್ವೈಜ್ ಮುಂತಾದ್ದನ್ನು ಒದಗಿಸಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಷ್ಟು ಮಟ್ಟದ ಸಹಾಯ ಮಾಡಲಾಗಿದೆ ?

ಶ್ರೀ ಕೆ. ಎಚ್. ಪಾಟೀಲ್.— ನೋಟೀಸ್.

ಶ್ರೀ ಎಂ. ಬಿ. ರಾಮಸ್ವಾಮಿ.—ಪ್ರಚಾರಮಾಡಲು ಯಾವ ಅಧಿಕಾರಿಯೂ ಇಲ್ಲ ಎಂದು ಉತ್ತರದಲ್ಲಿ ತಿಳಿಸಿದೆ. ಅವರಿಲ್ಲದಿದ್ದರೆ ಟೆಕ್ನಿಕಲ್ ಅಡ್ವೈಜ್ ಕೊಡುವವರು, ಪ್ರಚಾರ ಮಾಡುವವರು ಯಾರು ?

ಶ್ರೀ ಕೆ. ಎಚ್. ಪಾಟೀಲ್.—ಈಗಿರುವ ಕಾಟನ್ ಡೆವಲಪ್‌ಮೆಂಟ್ ಆಫೀಸರು, ವ್ಯವಸಾಯ ಇಲಾಖೆ ಡೈರಕ್ಟರು ಮತ್ತು ಟೆಕ್ನಿಕಲ್ ಆಫೀಸರು ಮುಂತಾದವರೇ ಆ ಕೆಲಸ ನೋಡಿಕೊಳ್ಳುವರು. ಬೇರೆ ಪ್ರತ್ಯೇಕ ಅಧಿಕಾರಿ ಇಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಬೆಂಗಳೂರು ಜಿಲ್ಲೆಯಲ್ಲಿ ಮಾತ್ರ ಹತ್ತಿ ಬೆಳೆಯಲು ವ್ಯವಸ್ಥೆ ಮಾಡಲಾಗಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಉಳಿದ ಕಡೆಯೂ ಮಾಡಿದೆ. ಬೆಂಗಳೂರು ಜಿಲ್ಲೆ ಬಗ್ಗೆ ಮಾತ್ರ ಪ್ರಶ್ನೆ ಕೇಳಿರುವುದರಿಂದ ಅಷ್ಟನ್ನು ಮಾತ್ರ ತಿಳಿಸಲಾಗಿದೆ.

ಶ್ರೀ ಎಂ. ಕೆ. ಕುಲಕರ್ಣಿ.—ಇದರ ಬೆಲೆ ನಿಗದಿ ಮಾಡಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಹತ್ತಿ ಬೆಳೆಯುವವರ ಮತ್ತು ಸಂಬಂಧಪಟ್ಟ ಇತರರ ಸಲಹೆ ಪಡೆದು ನಿಗದಿ ಮಾಡಬೇಕು, ತೀವ್ರವಾಗಿ ಮಾಡಲಾಗುವುದು.

ಶ್ರೀ ಆರ್. ಎಸ್. ಪಾಟೀಲ್.—ಬೀಜದ ದರ್ಜೆ ಕಂಡುಹಿಡಿಯುವಾಗ ಅಡಲ್ಟರೇಷನ್ ಇದ್ದರೆ ಗೊತ್ತಾಗುವುದಿಲ್ಲ. ಅಡಲ್ಟರೇಷನ್ ಪತ್ತೆಮಾಡಲು ಕ್ರಮವೇನಿದೆ ?

ಶ್ರೀ ಕೆ. ಎಚ್. ಪಾಟೀಲ್.—ದರ್ಜೆ, ವಗೈರೆ ನಿರ್ಧಾರ ಮಾಡುವಾಗ ಸಂಬಂಧಪಟ್ಟವರು ನೋಡಿ ಒಂದು ವ್ಯವಸ್ಥೆ ಮಾಡುವರು.

---

† Indicates that the remarks or speeches have not been revised by the member concerned.

## Abolition of Land Revenue

57. **Sri H. D. DEVE GOWDA** (Holenarasipur).—

Will the Minister for Revenue be pleased to state :—

(*a*) whether the previous Ministry had decided to abolish land revenue to holdings up to 10 acres ;

(*b*) if so, whether that decision has been given effect to ;

(*c*) if not, the reasons for the same ?

**Sri N. HUTCHAMASTHY GOWDA** (Minister for Revenue).—

(*a*) The previous Ministry took a decision to abolish land revenue on holdings up to 10 acres of dry land or its equivalent in wet or garden.

(*b*) No.

(*c*) The proposal to grant exemption from payment of land revenue on holdings of less than 10 acres of dry land or its equivalent has since been withdrawn due to the imperative need to improve the resources of the State for developmental activities.

ಶ್ರೀ ಎಚ್. ಡಿ. ದೇವೇಗೌಡ.—ಹತ್ತು ಎಕರೆಗಳವರೆಗಿನ ಭೂಕಂದಾಯವನ್ನು ರದ್ದುಗೊಳಿಸುವ ಬಗ್ಗೆ ಹಿಂದಿನ ಮಂತ್ರಿಮಂಡಲ ನಿರ್ಧಾರ ಕೈಗೊಂಡಿದ್ದರು, ಅದನ್ನು ಜಾರಿಗೊಳಿಸಿಲ್ಲ ಎಂದು ಹೇಳಿದ್ದಾರೆ. ಹಾಗಿದ್ದರೆ ಹಿಂದಿನ ಮಂತ್ರಿಮಂಡಲ ಏನು ನಿರ್ಧಾರ ತೆಗೆದುಕೊಂಡು ಈ ಒಂದು ಪರಿಹಾರವನ್ನು ರೈತರಿಗೆ ಕೊಡುವುದು ಒಳ್ಳೆಯದು ಎಂದು ತೀರ್ಮಾನ ಮಾಡಿತ್ತೊ ಅದನ್ನು ಜಾರಿಗೆ ಕೊಡುವುದಕ್ಕೆ ತಮಗೆ ಮನಸ್ಸಿಲ್ಲವೇ ಎನ್ನುವುದನ್ನು ತಿಳಿಸಬೇಕು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಜಾರಿಗೆ ಕೊಡುವ ಮನಸ್ಸಿನಿಂದ ಈ ತೀರ್ಮಾನವನ್ನು ಹಿಂದಿನ ಸರ್ಕಾರದವರು ಮಾಡಿದ್ದರೆ ಆಗಲೇ ಜಾರಿಗೆ ಕೊಡುವುದಕ್ಕೆ ಸಾಧ್ಯವಿತ್ತು.

ಶ್ರೀ ಎಚ್. ಡಿ. ದೇವೇಗೌಡ.—'ಹಿಂದಿನ ಮಂತ್ರಿಮಂಡಲ ಜಾರಿಗೆ ಕೊಡುವ ಮನಸ್ಸಿನಿಂದ ಮಾಡಿದ್ದರೆ' ಎಂದು ಹೇಳಿದರು. ಹಾಗಾದರೆ ಅವರ ಮನಸ್ಸು ಹಿಂದಕ್ಕು ಮಂತ್ರಿಮಂಡಲ ನಿರ್ಧಾರ ಮಾಡಿದಾಗ ನೋಡಿದ್ದರೆ ಎಂದು ಕೇಳಬಹುದೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅವರು ಕೈಕೊಂಡ ಕಾರ್ಯಕ್ರಮಗಳನ್ನು ನೋಡಿದರೆ ಜಾರಿಗೆ ಕೊಡುವ ಉದ್ದೇಶ ಅವರಿಗೆ ಇರಲಿಲ್ಲ, ಚುನಾವಣೆಗೋಸ್ಕರ ಮಾಡಿದ್ದು ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಹಿಂದಿನ ಮಂತ್ರಿಮಂಡಲದವರು ಚುನಾವಣೆಗೋಸ್ಕರ ಆ ತೀರ್ಮಾನ ಮಾಡಿದ್ದಾರೆಂದು ಹೇಳಿದರೂ ಕೂಡ, ಈ ಕಂದಾಯ ಎನ್ನತಕ್ಕುದು ರಾಜಮಹಾರಾಜರ ಕಾಲದ ಪದ್ಧತಿ, ಪ್ರಜಾಪ್ರಭುತ್ವಕ್ಕೆ ತಕ್ಕ ಲಕ್ಷಣವಲ್ಲ. ಆ ದೃಷ್ಟಿಯಿಂದ ಈಗ ನಿಮ್ಮ ಮಂತ್ರಿಮಂಡಲವಾದರೂ ಕಂದಾಯ ಪದ್ಧತಿ ಪ್ರಜಾಪ್ರಭುತ್ವಕ್ಕೆ ವಿರೋಧ ಎಂದು ತಿಳಿದುಕೊಂಡು ಸಂಪೂರ್ಣವಾಗಿ ಕಂದಾಯವನ್ನು ರದ್ದು ಮಾಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಬಂಗಾರಪ್ಪನವರು ಮತ್ತು ಇತರ ಸದಸ್ಯರು ಎಷ್ಟರಮಟ್ಟಿಗೆ ಸಣ್ಣ ಹಿಡುವಳಿದಾರರ ವಿಷಯದಲ್ಲಿ ಅನುಕಂಪವನ್ನು ತೋರಿಸಬಹುದೋ ಅಷ್ಟೇ ಅನುಕಂಪ ಸರ್ಕಾರಕ್ಕೂ ಇದೆ. ಭೂಕಂದಾಯದ ವಿಷಯದಲ್ಲಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಂಡು, ಸಣ್ಣ ಸಣ್ಣ ಹಿಡುವಳಿದಾರರಿಗೆ ತಪ್ಪಿಸಬೇಕೋ ಅಥವಾ ಪೂರ್ಣವಾಗಿ ಕಂದಾಯವನ್ನು ರದ್ದುಮಾಡಬೇಕೋ ಎನ್ನುವ ವಿಷಯವನ್ನು ಪೂರ್ಣವಾಗಿ ಪರ್ಯಾಲೋಚನೆ ಮಾಡಿ ಬೇಗ ತೀರ್ಮಾನ ತೆಗೆದುಕೊಳ್ಳುತ್ತೇವೆ.

Sri C. M. ARUMUGAM.—Have the Government considered the fact that as a large majority of agriculturists are poor holding less than 10 acres, they should be exempted from payment of land revenue ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹತ್ತು ಎಕರೆಗೆ ಕಡಮೆ ಇರತಕ್ಕ ಖುಷ್ಕಿ ಜಮೀನು ತರೀ ಜಮೀನಿದ್ದರೆ ಅದಕ್ಕೆ ಸರಿಸಮನಾಗಿ ಎರಡು ಎಕರೆ ಬಾಗಾಯಿತು ಆದರೆ, ಒಂದು ಎಕರೆಗೆ ಕಂದಾಯ ತಗೆಯಬೇಕೆಂದು ಹಿಂದಿನ ಮಂತ್ರಿಮಂಡಲ 27-1-1971 ರಲ್ಲಿ ತೀರ್ಮಾನ ತೆಗೆದುಕೊಂಡಿತ್ತು. ಆ ತೀರ್ಮಾನ ನಾನಾ ಕಾರಣದಿಂದ ಜಾರಿಗೆ ಕೊಡಲಿಲ್ಲ. ಅವರ ಉದ್ದೇಶವೇನಿತ್ತು ಎನ್ನುವುದನ್ನು ಸಭೆಗೆ ತಿಳಿಸಿದ್ದೇನೆ. ನಾವು ಅದೇ ರೀತಿ ಮಾಡಬೇಕೇ. ಇನ್ನೂ ಹೆಚ್ಚು ಪರಿಣಾಮಕಾರಿಯಾದ ತೀರ್ಮಾನ ತೆಗೆದುಕೊಳ್ಳಬೇಕೇ ಎನ್ನುವುದನ್ನು ಸರ್ಕಾರ ಆದಷ್ಟು ಬೇಗ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಆರ್. ಎಸ್. ಪಾಟೀಲ್.—ಹಿಂದಿನ ಸರ್ಕಾರ ಹತ್ತು ಎಕರೆಗಳವರೆಗಿನ ಜಮೀನಿಗೆ ಕಂದಾಯ ರದ್ದು ಮಾಡುವ ನಿರ್ಧಾರವನ್ನು ತೆಗೆದುಕೊಂಡಿತ್ತು ಎಂದು ಹೇಳಿದ್ದಾರೆ. ಈ ಕ್ರಮ ಶಾಸ್ತ್ರೀಯವಾದುದಲ್ಲ, ನಮ್ಮ ದೇಶದಲ್ಲಿ ಎಲ್ಲ ಭಾಗದಲ್ಲಿರತಕ್ಕ ಜಮೀನು ಒಂದೇ ಗುಣಮಟ್ಟದ್ದಿರುವುದಿಲ್ಲ ಎನ್ನುವ ಕಾರಣದಿಂದ ಕೈಬಿಟ್ಟಿದ್ದಾರೆಯೇ ಹೇಗೆ ಎಂಬುದನ್ನು ತಿಳಿಸುತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಆ ಕಾರಣದಿಂದ ಕೈಬಿಟ್ಟಿಲ್ಲ. 27-1-1971 ರಲ್ಲಿ ತೀರ್ಮಾನ ತೆಗೆದುಕೊಂಡಮೇಲೆ ಜಾರಿಗೆ ಕೊಡುವ ಉದ್ದೇಶವಿದ್ದರೆ ಆ ವರ್ಷದ ಕಂದಾಯ ವಜಾ ಮಾಡಲು ತೀರ್ಮಾನ ಮಾಡಬಹುದಾಗಿತ್ತು; ಆರ್ಡಿನೆನ್ಸ್ ಮುಖಾಂತರ ಮಾಡಬಹುದಾಗಿತ್ತು. ಅದನ್ನು ಮಾಡದೆ ಇರುವುದನ್ನು ನೋಡಿದರೆ ಅವರಿಗೆ ಜಾರಿಗೆ ಕೊಡುವ ಉದ್ದೇಶವಿತ್ತೇ ಇಲ್ಲವೆ ಎನ್ನುವುದು ಗೊತ್ತಾಗುತ್ತದೆ. ಶಾಸ್ತ್ರೀಯವಾಗಿ ಇಲ್ಲ ಎನ್ನುವ ಕಾರಣದ ಮೇಲೆ ಬಿಟ್ಟಿದ್ದಾರೆ ಎಂದು ನಾನು ಹೇಳುವುದಕ್ಕೆ ಸಾಧ್ಯವಿಲ್ಲ.

Sri B. B. SAYANAK.—When the hon. Minister was in the opposition last time, he himself was insisting on abolition of land revenue and why is he hesitating now to abolish the land revenue ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನನ್ನ ಅಭಿಪ್ರಾಯವನ್ನು ಬದಲಾಯಿಸಿಲ್ಲ. ಇದರ ಬಗ್ಗೆ ಸರ್ಕಾರ ತೀರ್ಮಾನವನ್ನು ಕೈಗೊಳ್ಳಬೇಕಾಗಿದ್ದರೆ, ಎಲ್ಲ ಅಂಕಿ ಅಂಶಗಳನ್ನೂ ಪರಿಸ್ಥಿಯನ್ನೂ, ಎಷ್ಟರಮಟ್ಟಿಗೆ ಶಾಸ್ತ್ರೀಯವಾಗಿದೆ, ಸಾರ್ವತ್ರಿಕವಾಗಿ ಈ ತತ್ತ್ವವನ್ನು ಅನುಸರಿಸಿದರೆ ಹೇಗೆ ಎನ್ನುವ ಎಲ್ಲ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು ಪರ್ಯಾಲೋಚನೆ ಮಾಡಿ ಅಂತ ತೀರ್ಮಾನ ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆಂದು ಹೇಳಿದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಹಿಂದಿನ ಸರ್ಕಾರ ಈ ತೀರ್ಮಾನವನ್ನು ಕೈಗೊಂಡಾಗ ಇದಕ್ಕೆ ಆಗತಕ್ಕ ಕಂದಾಯದ ಮೊಬಲಗು ಎಷ್ಟು ಎಂದು ಪರಿಶೀಲನೆ ಮಾಡಿ ನಿಗದಿ ಮಾಡಿದ್ದರೇ? ಹಾಗೆ ಮಾಡಿದ್ದರೆ ಅದನ್ನು ಬೇರೆ ರೂಪದಲ್ಲಿ ವಸೂಲು ಮಾಡತಕ್ಕ ಮಾರ್ಗವನ್ನು ಮಾಡಿ ಬಡವರ ಮತ್ತು ಅತ್ಯಂತ ಚಿಕ್ಕ ಹಿಡುವಳಿದಾರರಿಗೆ ಈ ಅನುಕೂಲವನ್ನು ಕಲ್ಪನೆ ಮಾಡಿದ್ದರೇ? ಈಗಲಾದರೂ ಇದರಿಂದ ಆಗತಕ್ಕ ನಷ್ಟವನ್ನು ಬೇರೆ ರೂಪದಲ್ಲಿ ವಸೂಲು ಮಾಡತಕ್ಕ ರೀತಿಯನ್ನು ಸರ್ಕಾರ ಅನುಸರಿಸಿ ಈ ವಿಷಯವನ್ನು ಪುನಃ ಪರಿಶೀಲಿಸುವುದಕ್ಕೆ ಸಾಧ್ಯವೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಒಟ್ಟು ಹಣ, ಸುಮಾರು ಹತ್ತು ಎಕರೆಗಿಂತ ಕಡಮೆ ಇರುವವರು 20 ಲಕ್ಷ ಹಿಡುವಳಿದಾರರಿದ್ದಾರೆಂದು ತೆಗೆದುಕೊಂಡರೆ, ಒಂದು ಕೋಟಿ ಎಕರೆ ಜಮೀನಾಗುತ್ತದೆ, ಒಂದು ಎಕರೆಗೆ ಸರಾಸರಿ 2 ರೂಪಾಯಿ ಎಂದು ಇಟ್ಟುಕೊಂಡರೆ ಎರಡು ಕೋಟಿ ರೂಪಾಯಿ ಕಂದಾಯ ಖುಷ್ಕಿ ಜಮೀನಿಗೆ ಮಾತ್ರ ಕಡಮೆಯಾಗುತ್ತದೆ. ಆದರೆ ಅದಕ್ಕೆ ಪ್ರತಿಯಾಗಿ ಬೇರೆ ವಿಧವಾದ ಉತ್ಪತ್ತಿಯನ್ನು ತುಂಬಿಸಿಕೊಳ್ಳತಕ್ಕ ಯೋಚನೆ ಏನಾದರೂ ಮಾಡಿದ್ದರೆ ಎನ್ನುವುದು ನನಗೆ ತಿಳಿಯದು. ಈ ಸರ್ಕಾರ ಅದನ್ನು ಯಾವರೀತಿ ಮಾಡಬೇಕು ಎಂದು ಆಲೋಚನೆ ಮಾಡುತ್ತದೆಂದು ತಿಳಿಸಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸರ್ಕಾರದವರು ಇದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿದ್ದು ತಮಗೆ ಗೊತ್ತಿದೆಯೇ? ಭೂತಲಿಂಗಂ ಕಮಿಟಿಯವರ ಸಿಫಾರಸು ಪ್ರಕಾರ ಭೂಕಂದಾಯದಿಂದ 6 ಕೋಟಿ ರೂಪಾಯಿ ನಮಗೆ ನಷ್ಟವಾಗುತ್ತದೆ. ಆದರೂ ಕೂಡ ಇದು

ಒಟೀರಾಯನ ಕಾಲದ ಪದ್ಧತಿ. ಇದನ್ನು ಹೊಸರೀತಿಯಿಂದ ತರಬೇಕಾಗಿದೆ, ಯಾವ ರೀತಿಯಿಂದ ತರಬೇಕು ಎನ್ನುವುದನ್ನು ಯೋಚನೆ ಮಾಡಬೇಕಾದ ವಿಷಯ ಎಂದು ಹೇಳಿದ್ದಾರೆ. ಭೂತಲಿಂಗಂ ಕಮಿಟಿ ರಿಪೋರ್ಟನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಭೂತಲಿಂಗಂ ಕಮಿಟಿ ವರದಿಯಲ್ಲಿ ಆ ಅಭಿಪ್ರಾಯ ಪಟ್ಟಿದ್ದು ನಿಜ. ಅವರು ವರದಿ ಕೊಡುವಷ್ಟು ಹೊತ್ತಿಗೆ ಪ್ರಜಾ ಸರ್ಕಾರವಿರಲಿಲ್ಲ. ರಾಜ್ಯಪಾಲರ ಆಡಳಿತವಿದ್ದುದರಿಂದ ಅವರು ಒಪ್ಪಿಕೊಂಡಿದ್ದಾರೆ ಅಷ್ಟೇ. ಚುನಾವಣೆಗೋಸ್ಕರ ಇದನ್ನು ಮಾಡಿದ್ದಾರೆ ಎಂದು ಒಂದು ಮಾತಿನಲ್ಲಿ ನಾನು ಹೇಳಿದೆ. ನನಗೆ ಗೊತ್ತಿರುವ ಅಂಕಿ ಅಂಶಗಳ ಪ್ರಕಾರ 27-1-71ರಲ್ಲಿ ಈ ತೀರ್ಮಾನ ತೆಗೆದುಕೊಂಡರು. ಡೆಪ್ಯುಟಿ ಕಮಿಷನರುಗಳಿಗೆ ಎಷ್ಟೆಷ್ಟು ಹಿಡುವಳಿಗಳು ಹತ್ತು ಎಕರೆಗಿಂತ ಕಡಿಮೆ ಬರುತ್ತವೆ. ಎನ್ನುವುದನ್ನು ತಿಳಿಸಬೇಕೆಂದು ಕೇಳಿದಾಗ ಅವರು ತಿಳಿಸುವುದೇ ಎರಡು ತಿಂಗಳಾಗಿದೆ. ಚುನಾವಣೆಗೆ ಮುಂಚೆ ಇದನ್ನು ಹೇಳಿದ್ದು ಎನ್ನುವುದು ಸ್ಪಷ್ಟವಾಗುತ್ತದೆ. ಅದನ್ನು ಕಾರ್ಯಗತ ಮಾಡಬೇಕೆನ್ನುವ ಉದ್ದೇಶವಿದ್ದಿದ್ದರೆ, ಎರಡು ತಿಂಗಳ ಅವಧಿಯಲ್ಲಿ ಅವರು ಅಧಿಕಾರದಲ್ಲಿ ಇದ್ದಾಗಲೇ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿತ್ತು. ಭೂತಲಿಂಗಂ ವರದಿಯನ್ನು ಈ ಸರ್ಕಾರ ಇನ್ನೂ ಒಪ್ಪಿಕೊಂಡಿಲ್ಲ, ಅದು ಸರ್ಕಾರದ ಮುಂದೆ ಇದೆ.

ಶ್ರೀ ಬಾಪುಗೌಡ ರಾಯಪ್ಪ.—10 ಎಕರೆಗಳಿಗೆ ಒಳಪಟ್ಟ ಭೂ ಮಾಲೀಕರಿಗೆ ಭೂಕಂದಾಯವನ್ನು ವಜಾ ಮಾಡತಕ್ಕದ್ದು ಎಂದು ಹಿಂದಿನ ಸರ್ಕಾರ ಕೈಗೊಂಡಂಥ ನಿರ್ಧಾರವೇನಿದೆ ಅದರ ಬಗ್ಗೆ ಹಿಂದೆ ಇದ್ದ ರಾಜ್ಯಪಾಲರು ಪಾರ್ಲಿಮೆಂಟಿನಲ್ಲಿ ಅದನ್ನು ಕಾಯಿದೆ ರೂಪವಾಗಿ ಒಪ್ಪಿಗೆ ಪಡೆಯುವುದಕ್ಕೆ ಕಳುಹಿಸಿದ್ದು ತಮ್ಮ ಗಮನದಲ್ಲಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಅಷ್ಟರೊಳಗೆ ಆ ಸರ್ಕಾರ ಅಧಿಕಾರದಲ್ಲಿರಲಿಲ್ಲ.

Sri D. B. KALMANKAR.—In view of the fact that this Government is committed to socialism and in order to benefit millions of small holders, may I know whether the Government is going to take a decision to abolish land revenue for such small holders whose holdings do not exceed 10 acres ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳುತ್ತಾ ಹತ್ತು ಎಕರೆಗಳ ವರೆಗೆ ವಿನಾಯಿತಿ ಕೊಡಬೇಕಾದ ಹಿಡುವಳಿಗಳು ಸುಮಾರು 20 ಲಕ್ಷ ಇದೆ ಮತ್ತು ಇದರಿಂದ ಸುಮಾರು ಎರಡು ಕೋಟಿ ರೂಪಾಯಿ ವರಮಾನ ಬರುತ್ತಿದೆ ಎಂದು ಹೇಳಿದರು. ರಾಜ್ಯಪಾಲರ ಆಡಳಿತದಲ್ಲಿ ಇದಕ್ಕಾಗಿ ಮಾಡಿದ ಒಂದು ಅಮೆಂಡೆಡ್ ಬಿಲ್ಲು ಕೇಂದ್ರ ಸರಕಾರದ ಮುಂದೆ ಹೋಗಿತ್ತು. ಅಲ್ಲಿಂದ ಒಪ್ಪಿಗೆ ಪಡೆಯುವ ಮುನ್ನವೇ ಇದನ್ನು ಹಿಂತೆಗೆದುಕೊಂಡದ್ದು ಸರಿಯೇ ? ಒಂದು ವೇಳೆ ತಾವು ಹಿಂತೆಗೆದುಕೊಂಡಿದ್ದರೆ, ತಾವು ಇಲ್ಲಿ ಏನು ಸಮಾಜವಾದ ಎನ್ನುವ ಹೆಸರನ್ನು ಕೂಗೀ ಕೂಗೀ, ಜನರ ಮುಂದೆ ನಿಮ್ಮ ಹಂಬಲ, ನಿಮ್ಮ ಆಸಕ್ತಿಯನ್ನು ತೋರಿಸುತ್ತಾ ಇದ್ದೀರಿ ಅದಕ್ಕನುಗುಣವಾಗಿ ಇದನ್ನು ಜಾರಿಗೆ ಕೊಡುತ್ತೀರಾ ಎನ್ನುವ ವಿಷಯವನ್ನು ಹೇಳುತ್ತೀರಾ ಮತ್ತು ಜನರ ಮುಂದೆ ಇದನ್ನು ಜಾರಿಗೆ ತರುತ್ತೇವೆ ಎನ್ನುವ ಒಂದು ಘೋಷಣೆಯನ್ನು ಇಲ್ಲಿ ಮಾಡುತ್ತೀರಾ? ರೈತರಿಂದ ಬರುವ ಆರು ಕೋಟಿ ರೂಪಾಯಿಗೆ ಸರಕಾರ ಏಕೆ ವಿಚಾರ ಮಾಡಬೇಕು ? ನಾವು ಇಲ್ಲಿ ನಮ್ಮ ಸರಕಾರದ ನೌಕರರುಗಳಿಗೆ 20 ಕೋಟಿ ರೂಪಾಯಿಗಳವರೆಗೆ ಕೊಡಲಿಲ್ಲವೇನು ? ಇದರ ಬಗ್ಗೆ ಸರಕಾರದ ನಿರ್ದಿಷ್ಟ ಅಭಿಪ್ರಾಯವನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಮಾನ್ಯ ಸದಸ್ಯರು ಹೇಳುತ್ತಿರುವ ತಿದ್ದುಪಡಿ ಕಾನೂನನ್ನು ಕೇಂದ್ರ ಸರ್ಕಾರದ ಒಪ್ಪಿಗೆಗೋಸ್ಕರ ಕಳುಹಿಸಿರುವುದು ನನಗೆ ಗೊತ್ತಿರುವ ಅಂಶದ ಪ್ರಕಾರ 10-9-71ರಲ್ಲಿ. 10-9-71ರಲ್ಲಿ ಡ್ರಾಫ್ಟ್ ಬಿಲ್ಲನ್ನು ಪ್ರೆಸಿಡೆಂಟರವರ ಒಪ್ಪಿಗೆಗಾಗಿ ಕಳುಹಿಸಲಾಗಿತ್ತು. ಹಿಂದೆ ಇದ್ದ ಸರಕಾರ ಇದರ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇನ್ನು ಮಾನ್ಯ ಸದಸ್ಯರು ಸಮಾಜವಾದದ ತತ್ವದ ಬಗ್ಗೆ ಹೇಳಿದರು. ಇದರಂತೆ ಯಾವಾಗ ಜಾರಿಗೆ ಕೊಡುತ್ತೀರಿ ಎಂದೂ ಕೇಳಿದರು. ಈ ವಿಷಯದಲ್ಲಿ ಈಗಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಹತ್ತು ಎಕರೆ, ಎರಡು ಎಕರೆಗಳಿಗೆ ರಿಯಾಯಿತಿ ಕೊಡುವುದರಿಂದ ಅನುಕೂಲ ಜಾಸ್ತಿಯಾಗುತ್ತದೆಯೇ ಅಥವಾ ತಾಲ್ಲೂಕಾ ಬೋರ್ಡುಗಳಿಗೆ ರಸ್ತೆ, ಬಾವಿ ಮೊದಲಾದ ಕಾಂಗಾರಿಗಳಿಗೆ ಕೊಡುವ ಮೊತ್ತಗಳನ್ನು ಕಡಿಮೆ ಮಾಡಿದರೆ ಹೆಚ್ಚಿನ ಉಪಯೋಗವಾಗುತ್ತದೆಯೇ ? ಇದು ಒಂದನೇ ಪ್ರಶ್ನೆ. ಎರಡನೆಯದು ಹತ್ತು ರೂಪಾಯಿ ಅಥವಾ ಎರಡು ರೂಪಾಯಿಗಳನ್ನು ಕಡಿಮೆ ಮಾಡುವುದಕ್ಕಿಂತ ಎಲ್ಲರಿಗೂ ಉದ್ಯೋಗಗಳನ್ನು ಒದಗಿಸಿ ಕೊಡುವುದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಸಮಾಜವಾದವನ್ನು ಜಾರಿಗೆಕೊಡುತ್ತಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಮಾನ್ಯ ಸದಸ್ಯರ ಅಭಿಪ್ರಾಯದ ಮೇಲೆ ಹೋಗುತ್ತದೆ.

Sri S. M. YAHYA.—Are there any administrative difficulties in abolishing the land revenue ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಇದಕ್ಕೆ ಉತ್ತರ ಹೇಳಿದ್ದೇನೆ. ಇದರಿಂದ ಆಗತಕ್ಕ ಪರಿಣಾಮ ಈಗ ಬರುತ್ತಿರುವ ಕಂದಾಯದ ವರಮಾನ ಕಡಿಮೆಯಾಗುತ್ತದೆ. ಇದನ್ನು ಯಾವ ರೀತಿ, ಹಾಗೂ ತತ್ವಗಳಿಗನುಸಾರವಾಗಿ ಹೇಗೆ ಮಾಡಬಹುದು ಎಂಬುದನ್ನೆಲ್ಲಾ ಜಾರಿಗೆ ಕೊಡುವ ಕಾನೂನಿನಲ್ಲಿ ಸರಕಾರ ಗಮನಕ್ಕೆ ತೆಗೆದುಕೊಂಡು ಮಾಡಬೇಕಾದ ಸಂದರ್ಭ ಬರಬಹುದು.

ಶ್ರೀ ಶರಣಪ್ಪ.—ಉತ್ತರದಲ್ಲಿ ರಾಜ್ಯಪಾಲರು ಈ ಕಾನೂನನ್ನು ಹಿಂತೆಗೆದುಕೊಂಡರು ಎಂದು ಹೇಳುತ್ತಾ ಇದಕ್ಕೆ ರಿಸೋರ್ಸಸ್‌ಗಳನ್ನು ಹುಡಕಬೇಕೆಂದು ಹೇಳಿದ್ದೀರಿ ! ಯಾವ ಯಾವ ರಿಸೋರ್ಸ್‌ಗಳು ಇವೆ ಎನ್ನುವುದನ್ನು ಯೋಚಿಸಲಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಂದಾಯ ವಜಾ ಮಾಡಬೇಕು ಎನ್ನುವ ಪ್ರಶ್ನೆಗೂ ಇದಕ್ಕೆ ಸಂಬಂಧಪಟ್ಟ ರಿಸೋರ್ಸಸ್‌ಗಳಿಗೂ ಹೆಚ್ಚು ಸಂಬಂಧವಿರದಿದ್ದರೂ ಇದರ ಬಗ್ಗೆ ಪರ್ಯಾಲೋಚನೆ ಮಾಡುವಾಗ ಇವೆಲ್ಲ ವಿಷಯಗಳನ್ನೂ ನೋಡಿಕೊಳ್ಳುವುದಕ್ಕೆ ಯೋಚನೆ ಮಾಡಬೇಕಾದ ಅಗತ್ಯ ಬರುತ್ತದೆ. ಆದರೆ ಯಾವ ರಿಸೋರ್ಸಸ್‌ಗಳು ಎನ್ನುವುದನ್ನು ತಿಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ರೈತರಿಂದ ಕಂದಾಯ ವಸೂಲಿ ಮಾಡುವುದನ್ನು ಹಿಂತೆಗೆದುಕೊಳ್ಳಲು ಸರಕಾರ ಆಲೋಚನೆ ಮಾಡುತ್ತಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಅರಿಕೆ ಮಾಡಿಕೊಂಡೆ, ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಸರಕಾರ ಸಿದ್ಧವಾಗಿದೆ.

Sri C. M. ARUMUGAM.—By abolishing land revenue, do the Government feel that it would be helpful to the agriculturists ?

ಶ್ರೀ ಎನ್. ಹುಚ್ಚಮಾಸ್ತಿಗೌಡ.---ಇದು ಒಪ್ಪಿಕೊಳ್ಳಬೇಕಾದ ವಿಷಯ.

ಶ್ರೀ ವಿ. ಎನ್. ಪಾಟೀಲ್.—ಹತ್ತು ಎಕರೆ ಇರುವ ಭೂಮಿಯವರು ಕೆಲವು ಕಡೆಗಳಲ್ಲಿ ಸುಮಾರು ಐವತ್ತು ಸಾವಿರ ರೂಪಾಯಿಗಳವರೆಗೆ ವರಮಾನ ಪಡೆಯುತ್ತಿದ್ದಾರೆ. ಆದರೆ 25 ಎಕರೆ ಇರುವವರಿಗೆ ಕೆಲವು ಕಡೆಗಳಲ್ಲಿ ಡ್ರೈಲ್ಯಾಂಡು ಇದೆ, ಅವರು ಒಂದು ಒಂದೂವರೆಸಾವಿರ ರೂಪಾಯಿಗಳಷ್ಟು ಮಾತ್ರ ವರಮಾನ ಪಡೆಯುತ್ತಿದ್ದಾರೆ. ಆದುದರಿಂದ ತಾವು ಹತ್ತು ಎಕರೆ ಎಂದು ಮಾಡಿದರೆ ಅದು ಅನ್‌ಎಕನಾಮಿಕ್ ಹಾಗೂ ಅನ್‌ಸೈಂಟಿಫಿಕ್ ಆಗುತ್ತದೆ. ಆದ್ದರಿಂದ ತಾವು ಈಗ ಹತ್ತು ಎಕರೆಗಳಷ್ಟು ಎಂದು ಏನುನಿಗದಿ ಮಾಡುತ್ತಿದ್ದೀರಿ, ಅದರಂತೆಯೇ ಮಾಡಬೇಕೆಂದು ನಿರ್ಧಾರ ಮಾಡುತ್ತಿದ್ದೀರಾ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳಿದ ವಿಚಾರ ಪರ್ಯಾಲೋಚನೆ ಮಾಡಬೇಕಾದ ವಿಚಾರವೇ ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಂದಾಯ ರದ್ದುಮಾಡಬೇಕೆಂದು ಮಾಡುವ ತೀರ್ಮಾನವನ್ನು ಮುಂದಿನ ಸರಕಾರ ಬರುವವರೆಗೂ ಮುಂದೂಡಬೇಕೆಂದು ನಿರ್ಧಾರ ಮಾಡಿದ್ದೀರಾ?

(ಉತ್ತರವಿಲ್ಲ)

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆಯಾಯಿತು.

## Stray incidents at Gulbarga

ಶ್ರೀ ಬಾಪೂಗೌಡ ರಾಯಪ್ಪ (ಶಹಪುರ್).—ಸ್ವಾಮಿ, ಗುಲ್ಬರ್ಗಾದಲ್ಲಿ ಹಿಂದೆ ಗಲಭೆಗಳಾದಾಗ ಅಲ್ಲಿಗೆ ಮಾನ್ಯ ಟ್ರಾನ್ಸ್ ಪೋರ್ಟ್ ಮಿನಿಸ್ಟರವರು ಹೋಗಿದ್ದ ಕಾಲದಲ್ಲಿ ಪೋಲಿಸರ ವರ್ತನೆ ಬಗ್ಗೆ ಕೂಡ ಹೇಳಿಬಂದಿದ್ದಾರೆ. ಇದರ ವಿವರಗಳನ್ನು ಈಗ ಹೇಳಲು ಹೋಗುತ್ತಿಲ್ಲ. ಆದರೆ ನಿನ್ನೆ ದಿವಸ ಪತ್ರಿಕೆಗಳಲ್ಲಿ ಬಂದಿರುವಂತೆ ನೋಡಿದರೆ ಅಲ್ಲಿನ ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸೂಚನೆಗಳಿವೆ ಎಂದು ಕಾಣುತ್ತೆ. ಆದರಂತೆ ನಿನ್ನೆ ದಿನ ಒಬ್ಬರು ಫೋಟೋಗ್ರಾಫರನ್ನು ಸ್ಟ್ಯಾಬ್ ಮಾಡಿರುವ ವಿಚಾರ ಪತ್ರಿಕೆಗಳಲ್ಲಿ ವರದಿಯಾಗಿದೆ. ಇಂತಹ ಘಟನೆಗಳು ನಡೆದು ಇನ್ನೂ ಹೆಚ್ಚು ವಿಕೋಪಕ್ಕೆ ಹೋದೀತು ಎನ್ನುವುದಕ್ಕಾಗಿ ಮುಂಜಾಗರೂಕತೆಯ ಕ್ರಮಗಳನ್ನು ಸರಕಾರ ತೆಗೆದುಕೊಳ್ಳಬೇಕೆಂದು ಸರಕಾರದ ಗಮನ ಸೆಳೆಯುತ್ತಿದ್ದೇನೆ.

Sri H. M. CHANNABASAPPA (Minister for Public Works).—I am glad that the hon. memter has passed on this information. Needful action will be taken to prevent any fi rther deterioration in the law and order situation.

ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಎರಡು ತಿಂಗಳ ಹಿಂದೆ ಇದೇ ಗುಲ್ಬರ್ಗಾ ನಗರದಲ್ಲಿ ಗಲಭೆಗಳು ಆಗಿದ್ದರೂ ಸರಕಾರ ಇದನ್ನು ಗಮನಕ್ಕೆ ತೆಗೆದುಕೊಂಡು ಇದರ ಮೂಲಭೂತ ಕಾರಣಗಳು ಯಾವುದು ಇದರಲ್ಲಿ ತಪ್ಪು ಮಾಡಿದವರು ಯಾರು ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ತಕ್ಕ ಪ್ರಯತ್ನ ಮಾಡಲಿಲ್ಲ. ಇಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಎರಡು ಗುಂಪುಗಳಿವೆ. ಒಂದು ಗುಂಪು ಜನಸಂಘದವರ ಕಡೆ ಇದೆ. ಇನ್ನೊಂದು ಇಸ್ಲಾಮಿಯಾ ಗುಂಪಿಗೆ ಸೇರಿದ್ದು. ಇವೆರಡು ಪಕ್ಷಗಳ ಲೀಡರುಗಳೂ ಇದ್ದಾರೆ. ಇಲ್ಲಿರುವ ವಿದ್ಯಾರ್ಥಿಗಳಲ್ಲಿ ಒಂದು ರೀತಿಯ ವೈಷಮ್ಯಗಳು ಬಂದು ಗಲಭೆಗಳು ಆಗುತ್ತಲೇ ಇವೆ. ಇದರಲ್ಲಿ ಕೆಲವು ಜನ ಜನಸಂಘದವರು ಇಲ್ಲವೇ ಸಿಂಡಿಕೇಟಿನವರು ಹಾಗೂ ಇನ್ನಿತರ ಪಕ್ಷಗಳವರು ವಿದ್ಯಾರ್ಥಿಗಳನ್ನು ಪ್ರಚೋದನೆ ಮಾಡಿ ಇಂತಹ ಗಲಭೆಗಳಿಗೆ ಅವಕಾಶವಾಗಿದೆ. ಸರ್ಕಾರ ಇಲ್ಲಿರುವ ಮುಖಂಡರುಗಳನ್ನು ಕರೆಸಿ ಇದುವರೆಗೆ ಯಾರು ಇದಕ್ಕೆ ಕಾರಣರು ಎನ್ನುವುದನ್ನೇನಾದರೂ ಪತ್ತೆ ಮಾಡಿದರೇ ? ಇದಕ್ಕೆ ಇಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕು ಎಂದು ಹೇಳಿದರೆ ಅದು ಸಾಧ್ಯವಿಲ್ಲ ಎಂದರು. ಇಂತಹ ಎನ್‌ಕ್ವೈರಿ ಮಾಡಿದ್ದರೆ ಇದರಲ್ಲಿ ಸತ್ಯಾಂಶಗಳು ಬೆಳಕಿಗೆ ಬರುತ್ತಿತ್ತು. ದಿನಬೆಳಗಾದರೆ ಗುಲ್ಬರ್ಗಾದಲ್ಲಿ ಗಲಭೆಗಳು ಹಾಗೂ ಚೂರಿ ಇರಿತಗಳು ಸಾಮಾನ್ಯವಾಗಿ ಆಗುತ್ತವೆ ಎಂದು ಅಲ್ಲಿ ಕೇರಿ ಕೇರಿಗಳಲ್ಲೂ ಹೇಳುತ್ತಿದ್ದಾರೆ, ಇದರ ಬಗ್ಗೆ ಈಗಲಾದರೂ ಸರ್ಕಾರ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೋ ?

12-30 P. M.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಸದಸ್ಯರು ಕೆಲವು ರಾಜಕೀಯ ಪಕ್ಷಗಳನ್ನು ಪ್ರಸ್ತಾಪ ಮಾಡಿದರು. ಅದು ಅನಾವಶ್ಯಕ. ಇಂತಹ ಘಟನೆಗಳು ನಡೆಯುವುದಕ್ಕೆ ಜನರನ್ನು ಪ್ರಚೋದನೆ ಮಾಡುವುದರಲ್ಲಿ ಇಂಡಿಕೇಟ್, ಸಿಂಡಿಕೇಟ್, ಸಿ. ಪಿ. ಐ., ಸಿ. ಪಿ. ಎಂ., ಜನಸಂಘ, ಮುಂತಾದ ಎಲ್ಲ ಪಕ್ಷಗಳು ಸೇರಿರುತ್ತವೆ. ಆದರೆ ಇಂತಹ ಘಟನೆ ನಡೆಯುವುದಕ್ಕೆ ಪ್ರಚೋದನೆ ಮಾಡುವಂತಹ ಜನ ಏನಿದ್ದಾರೆ, ಅವರು ಯಾವುದೇ ಪಕ್ಷಕ್ಕೆ ಸೇರಿರಲಿ, ಅಂತಹವರನ್ನು ಪಕ್ಷ, ಪಂಗಡ ಅಥವಾ ವರ್ಗ ನೋಡದೆ ದಮನ ಮಾಡಬೇಕು ಮತ್ತು ಅಂತಹವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಪ್ರಾರ್ಥನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದು ಪಕ್ಷ ಪರಪಕ್ಷಗಳ ವಿಷಯವಲ್ಲ. ಇದು ಜನತೆಗೆ ರಕ್ಷಣೆ ಕೊಡತಕ್ಕಂಥ ವಿಷಯ. ಮತ್ತು ಕಾನೂನುಬದ್ಧವಾಗಿ ವ್ಯವಹರಿಸಿಕೊಂಡು ಹೋಗಲು ಸೂಕ್ತ ವ್ಯವಸ್ಥೆ ಮಾಡತಕ್ಕಂಥ ವಿಷಯ. ಮಾನ್ಯ ಸದಸ್ಯರು ಈ ಬಗ್ಗೆ ಏನೇನು ವಿಷಯಗಳನ್ನು ಹೇಳಿದ್ದಾರೆ, ಅದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಜನರಿಗೆ ಮತ್ತು ಅವರ ಆಸ್ತಿಪಾಸ್ತಿಗಳಿಗೆ ಸಂರಕ್ಷಣೆ ಕೊಡತಕ್ಕಂಥ ಕರ್ತವ್ಯವನ್ನು ನಿಷ್ಪಕ್ಷಪಾತದಿಂದ ನಿರ್ವಹಿಸುತ್ತದೆಂದು ತಮಗೆ ಭರವಸೆ ಕೊಡುತ್ತೇನೆ.

## Calling attention to a matter of urgent public importance

### *re* : Tractor Trolly Accident at Humnabad Taluk

Sri V. N. PATIL.—Madam, I call the attention of the Minister for Labour to the accident of tractor trolly belonging to Venkateshwar Khandasari Sugar Mills, Manna Ekheli, Humnabad Taluk.

Sri AZEEZ SAIT (Minister for Labour). —Madam, Shri V. N. Patil, has drawn the attention to the following matter.

A Tractor Trolly carrying 70 workers working in the Venkateshwar Khandasari Sugar Mills, Manna-Ekheli, Taluk Humnabad, Bidar District met with an accident at Vithalpur on 21st December 1971 ; wherein one worker by name Sri Abbas Khan lost his life, 3 persons lost their hands resulting into amputation and 40 other workers suffered multiple injures and that during the last 3 months none of the workers received a single Paise towards maintenance or treatment or compensation. There were 600 workers working in the factory and in view of the accident the public mind was greatly agitated.

There is a Khandasari Sugar Mills Factory by name Venkateshwara Khandasari Sugar Mills, Manna-Ekheli, Taluk Humnabad, Bidar District. On 21st December 1971 at about 8-00 A.M. about 50-60 workers were taken in a Tractor trolly (belonging to the management) bearing No. MYI 3138 to go to the factory for work. It was the normal practice to transport to the factory, daily, the workers who were residing at places at a distance of 5-6 miles. It is reported that the Vehicle on the date of accident was being driven by one Bhimsha, s/o Manik, aged 21 years of Medigi Zahirabad taluk (Andhra. Pradesh). He was not qualified to drive the vehicle as he was not possessing a valid Driving Licence. The tractor trailer went off the road and capsized during its journey to the factory causing injury to all the workers in the trailor including one fatal case. The place of accident is near Lingol Nala Bridge of Vithalpur Village on Chincholi-Bidar Road, at a distance of about 3 miles from the factory. The person who died on the spot is one Sri, Abbas khan son of Mahboob Khan, aged about 35 years a resident, Chimanchod in Chincholi taluk in Gulbarga District.

The number of persons injured is reported to be 53. All the injured persons were attended to by the Medical Officer, Bidar. There are no reports to confirm that hands of 3 persons were amputed.

The police, are reported to have taken action to charge sheet the driver and the management in the Court of the I Class Magistrate, Bidar. U/s 304-A and 357 and 338 of the I. P. C. The place of accident happens to be outside the factory premises, at a distance of about 3 miles. Therefore no report of accident under the Factories Act was submitted to the Chief Inspector of Factories and Boilers. A report has been made to the Workmens Compensation Commissioner (Assistant Commissioner, Bidar) in the matter. Action is being taken by him. Though the matter, is as old as 21st December 1971, no intimation of the accident or any

request for compensation by the injured has been received either by the Factory Inspector or the officers of the Labour Department. However, the officers of the department have now been instructed to persuade the management to give relief to the deceased and the injured persons pending disposal of the case by workmens Compensation Commissioner, Bidar. The position is being watched.

Sri V. N. PATIL.—I find from the reply given by the Hon'ble Minister for Labour that the old tradition is being continued. Actually, most of the facts are suppressed and shelter is being taken under the provisions of law. Though a report has been made to the Assistant Commissioner, it is stated that no application for compensation has been made ; even though 70 persons suffered injuries, multiple injuries, the Government has not even moved its little finger. Why not the Government cancel the licence of the factory ? The entire district of Bidar is agitated over this matter. The Superintendent of Police, Bidar, intervened in this matter and asked for only one week's time for a report. Because it was election period, the Communist party did not raise this issue in a vigorous manner. If the party had raised the issue, others would have said that it is an election stunt. May I know why the police have not taken action so far excepting sending a charge-sheet? Though the Superintendent of Police intervened, nothing has been done to give relief to the sufferers.

Sri AZEEZ SAIT.—The hon. member met me earlier about this matter. This matter was referred to the concerned authorities for sending a report. I do admit that the Factory Inspector should have been more vigilant in sending a comprehensive report to the Government. When I had been to Gulbarga recently, I visited the factory and necessary instructions were given, and it is only after that a report has come. A report has been made to the Commissioner under the Workmen's Compensation Act. But, the Union or the heirs of the deceased ought to have made an application under the Compensation Act, which has not been done even now.

The Superintendent of Police, who promised to intervene in this matter, is doing his best and his report is awaited. I tried to contact the concerned official, through the departmental Secretary to Government, to know the progress in this behalf. I can assure the hon. member that I have taken note of the issue and it will be dealt with on humanitarian grounds.

About cancellation of licence to the factory, the same will be examined if it is going to serve the purpose of the Labour Union or the Trade Union. But the benefits could be taken only if the factory is there. Necessary action will be taken after I get a comprehensive report. I request the hon. member to see that the Union takes up the question of payment of *ex-gratia* grant under the Compensation Act and when the matter is taken up by the Union, I shall use my good offices in this behalf. We will have to consider as to how much liability is to be fixed on either side.

Sri M. S. KRISHNAN (Malleswaram).—The statement coming from a dynamic Labour Minister unfortunately appears to be self-contradictory.

I want to seek a clarification from the Hon'ble Minister for Labour on the following points: (1) It is said in para 2 of page 2 of the statement that "there are no reports to confirm that hands of 3 persons were amputed" (2) In the last para of the statement it is stated that "a report has been made to the Workmens Compensation Commissioner (Assistant Commissioner, Bidar) in the matter.' Of course, you rightly pointed out that the Union should have taken up the matter with the management. Unfortunately, there is no union. Therefore it was not possible to take up the matter with the concerned authorities. Atleast the worker should have taken up the matter with the concerned people because that was his responsibility. But the Inspector of Factories has totally shirked his responsibility from sending a report. Even according to your own report, he has not till now sent any report in regard to this to the Labour Department even though the incident took place on 21st December 1971. The failure of the officer in not sending the report, is a larger issue which has to be viewed seriously. This is not the first instance where the Inspector has not sent the report but there are several cases where the Inspectors under the influence of employers do not send reports. These inspectors take money from the Employers and leave the workers to suffer. May I request the Minister whether he would take stringent action against the erring Inspector of Factories ?

Sri AZEEZ SAIT.—I may inform the Hon. Member that I had instructed personally the Inspector of Factories to meet the injured in the Hospital at Gulbarga. The Inspector was waiting for an information from the Hospital authorities and hence he was unable to send his report. Besides, the names of three persons whose hands are amputed, are said to be on the rolls of the management. This is not the last and final report, I am expecting a comprehensive report in this regard. I will certainly look into the matter soon after the report is received. I may assure the Hon. Member that nobody would be spared for dereliction of his duty. The case will be considered purely on humanitarian grounds. The concerned officials will be pulled up and the administration will be toned up. In this particular case, the concerned workers should take up the matter with the management. My hon. friend Sri M. S. Krishnan is a more seasoned labour leader than myself and he knows well the procedure in this behalf.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ವರ್ಕ್‌ಮೆನ್ಸ್ ಕಾಂಪೆನ್‌ಸೇಷನ್ ಆಕ್ಟ್ ಪ್ರಕಾರ ಪರಿಹಾರ ಕೊಡುವ ಬಗ್ಗೆ ಕಮೀಷನರ ಸಲಹೆಯನ್ನು ಕೇಳಬೇಕಾಗುತ್ತದೆ ಎನ್ನ ತಕ್ಕಂಥಾ ವಿಷಯವನ್ನು ಹೇಳಿದರು. ಆದರೆ ಆಕ್ಟ್ ಪ್ರಕಾರ ತೊಂದರೆಗೆ ಒಳಗಾದ ವ್ಯಕ್ತಿಗೆ ಪರಿಹಾರ ಸಿಕ್ಕುವುದು ಬಹಳ ತಡವಾಗುತ್ತದೆ. ಆದ್ದರಿಂದ ಅವರಿಗೆ ಅನ್ಯಾಯ ಆಗದ ಹಾಗೆ ಕಾಂಪೆನ್‌ಸೇಷನ್ ಕೊಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

**Sri AZEEZ SAIT.**—As the Hon. Member knows, the Workmens Compensation Commissioner is there to give benefit to the workers. As per rules, the management has to deposit the amount. If the management is guilty, then I can take suitable action in the matter. In the absence of any initiative taken by the workers, it would be rather difficult to take action in the matter. However, I may suggest Hon. Members Sri V. N. Patil and Krishnan to take up the matter with the concerned authority.

**Sri V. N. PATIL.**—May I bring to the notice of the Hon. Minister that semi-famine conditions exist in Bidar District where a worker is prepared to work for 0-50 N.P. a day. You can just imagine the plight of the poor peo le there. In the present case, husband and his wife along with 3 children were travelling in the trolly to attend to work in the factory. This is a seasonal factory which works for three months in a year. The management has failed to bring to the notice of the Factory Inspector about the incident. According to rules, it is the bounden duty of the management to bring it to the notice of the Factory Inspector within 24 hours of its occurrence, but it has failed in its duty. The Government has not raised a little finger against the driver who was driving the vehicle without any licence. I am glad that the Government has shown sympathy in this respect but I feel that these are all lip sympathies. The Hon. Minister is hesitating to move his little finger against the driver who has driven without any licence.

**Sri AZEEZ SAIT.**—Government is always prepared to rectify the irregularties if any. I may assure the Hon. Member that I will use my good offices for securing some interim relief to the victims. I hope this would satisfy my Hon. friend.

## Notice of a question of privilege etc., *re*: the Incident on 12-4-1972,

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ). -ಮಾನ್ಯ ಅಧ್ಯಕ್ಷಿಣಿಯವರೇ ನಾನು ರೂಲ್ 312ರ ಪ್ರಕಾರ ಒಂದು ನೋಟೀಸ್ ಕಳುಹಿಸಿದ್ದೆ. ಅದು ಏನಾಗಿದೆ ಎಂಬುದು ಗೊತ್ತಾಗಲಿಲ್ಲ. ರಾಜ್ಯಸಭಾ ಚುನಾವಣೆಯಲ್ಲಿ ನಡೆದಂತಹ ಕಾಂಗ್ರೆಸ್ ವೋಟಿಂಗ್ ಬಗ್ಗೆ ಈ ಸದನದ ಸದಸ್ಯರನ್ನು ಹೆದರಿಸುವ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದು ಏನಾಯಿತು ಎಂಬುದು ಗೊತ್ತಾಗಲಿಲ್ಲ.

ಅಧ್ಯಕ್ಷರು.—ಆ ವಿಚಾರದಲ್ಲಿ ತಮ್ಮ ಯಾವ ನೋಟೀಸೂ ನಮಗೆ ಬಂದಿಲ್ಲ.

ಶ್ರೀ ಸಿ. ಬೈರೇಗೌಡ.—ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೆ. ಅದು ಏನಾಗಿದೆ ಎಂಬುದು ಗೊತ್ತಾಗಲಿಲ್ಲ ? ಅದು ಕುಡಿಯುವ ನೀರಿನ ವಿಷಯ.

ಅಧ್ಯಕ್ಷರು.—ಅದು ಡ್ಯೂ ಕೋರ್ಸ್‌ನಲ್ಲಿ ಬರುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಸನ್ಮಾನ್ಯ ಸಭಾಧ್ಯಕ್ಷಣಿಯವರೇ ಮೊನ್ನೆ ಈ ಸಭೆಯಲ್ಲಿ ನಡೆದಂತಹ ಘಟನೆಯ ಬಗ್ಗೆ ಹಾಗೂ ಶ್ರೀಮಾನ್ ಮಲ್ಲಪ್ಪನವರ ಪ್ರಿವಿಲೇಜ್ ಮೋಷನ್ ಬಗ್ಗೆ ಈ ದಿವಸ ತಾವು ತಮ್ಮ ತೀರ್ಪನ್ನು ಕೊಡತಕ್ಕವರಾಗಿದ್ದೀರಿ. ಈ ಸಂದರ್ಭದಲ್ಲಿ ನಾನು ಆ ವಿಷಯದ

(ಶ್ರೀ ಎಚ್. ಡಿ. ದೇವೇಗೌಡ)

ಬಗ್ಗೆ ಹೇಳುವುದಾದರೆ ಮೊನ್ನೆ ಈ ಸಭೆಯಲ್ಲಿ ನಡೆದಂತಹ ಘಟನೆ ಬಹಳ ವಿಷಾದ ಪೂರಿತವಾದದ್ದು. ಅದು ಈ ಸಭೆಯ ಹಿರಿಯ ಸದಸ್ಯರುಗಳಿಗೆ ಬಹಳ ನೋವನ್ನುಂಟು ಮಾಡಿದೆ. ನಿಜವಾಗಿಯೂ ನನಗೂ ಕೂಡ ಅವರಷ್ಟೇ ನೋವು ಉಂಟಾಗಿದೆ. ಈ ಸಭೆಯಲ್ಲಿ ಅಂಥಾ ಘಟನೆ ನಡೆಯಬಾರದಾಗಿತ್ತು. ಆ ರೀತಿ ನಡೆಯತಕ್ಕದ್ದು ಸಾಧುವಾದದ್ದಲ್ಲ. ಈ ಸಭೆಯ ಘನತೆ, ಗಾಂಭೀರ್ಯ ಮತ್ತು ಒಂದು ಪಾವಿತ್ರ್ಯತೆ ಏನಿದೆ ಅದನ್ನು ಕಾಪಾಡಿಕೊಂಡು ಹೋಗತಕ್ಕಂಥಾದ್ದು ಪ್ರತಿಯೊಬ್ಬ ಸದಸ್ಯರ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಮೊನ್ನೆ ನಡೆದ ಘಟನೆ ಏನಿದೆ ಅದು ಒಂದು ದುರ್ದೈವದ ಘಟನೆ ಎಂದು ನಾನು ವಿಷಾದದಿಂದ ಹೇಳುತ್ತೇನೆ. ಅದು ನಡೆಯಬಾರದಾಗಿತ್ತು. ಏಕೆಂದರೆ, ಅದು ಬಹಳ ಜನ ವ್ಯಕ್ತಿಗಳ ವ್ಯಕ್ತಿತ್ವದ ಬಗ್ಗೆ ಸಂಶಯಪಡತಕ್ಕ ವಿಚಾರ. ಅದು ನಿಜವಾಗಿಯೂ ಅಹಿತಕರವಾದ ಘಟನೆ. ಮುಂದಾದರೂ ಇಂತಹ ಘಟನೆ ನಡೆಯದಂತೆ ನೋಡಿಕೊಂಡು ಈ ಸಭೆಯ ಘನತೆ, ಗೌರವಗಳನ್ನು ಉಳಿಸಿಕೊಂಡು ಹೋಗುವುದಕ್ಕೆ ನಾವೆಲ್ಲರೂ ಪ್ರಾಮಾಣಿಕತೆಯಿಂದ ಸಹಕರಿಸುತ್ತೇವೆಂಬ ಮಾತನ್ನು ಹೇಳುತ್ತೇನೆ. ಎಂತಹ ಕ್ಲಿಷ್ಟಕರವಾದ ಸಮಸ್ಯೆಯೇ ಬಂದರೂ ಕೂಡ ನಾವು ಈ ಸಭೆಯ ಘನತೆ ಗೌರವಗಳನ್ನು ಕಾಪಾಡತಕ್ಕದ್ದು ನಮ್ಮ ಕರ್ತವ್ಯ. ಅಷ್ಟೇ ರೀತಿಯಿಂದ ನಾನು ಇದನ್ನು ಆ ಕಡೆ ಇರುವ ಸದಸ್ಯರಿಂದಲೂ ಅಪೇಕ್ಷೆ ಪಡುತ್ತೇನೆ. ಮೊನ್ನೆ ಮಾನ್ಯ ಮುಖ್ಯ ಮಂತ್ರಿಯವರು ಮಾತನಾಡುವಾಗ ಕೂಡ ಸ್ವಲ್ಪ ಉದ್ವೇಗ ಪೂರಿತವಾಗಿ ಮಾತನಾಡಿದ್ದನ್ನು ನಾನು ನೋಡಿದ್ದೇನೆ. ಯಾರೇ ಆಗಲಿ, ಈ ಸಭೆಯ ಸದಸ್ಯರಾಗಿರುವವರು ಎಲ್ಲರೂ ಈ ಸಭೆಯ ಘನತೆ ಗಾಂಭೀರ್ಯಗಳನ್ನು ಉಳಿಸಿಕೊಂಡು ಹೋಗತಕ್ಕದ್ದು ಬಹಳ ಮುಖ್ಯವೆಂದು ಹೇಳುತ್ತೇನೆ. ಮೊನ್ನೆಯ ಘಟನೆಯಿಂದ ಆ ಕಡೆಯ ಸದಸ್ಯರಿಗೆ ಎಷ್ಟು ದುಃಖವಾಗಿದೆಯೋ ಅಷ್ಟೇ ನಮಗೂ ಆಗಿದೆ. ಈ ಒಂದು ಘಟನೆಯಿಂದ ಹಿರಿಯ ಸದಸ್ಯರಿಗೆ ಆಗಿರತಕ್ಕಂತಹ ನೋವಿನಲ್ಲಿ ನಾವೂ ಭಾಗಿಗಳಾಗಿಲ್ಲವೆಂದು ತಿಳಿದುಕೊಳ್ಳಬಾರದು. ಈ ಬಗ್ಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತೊಮ್ಮೆ ಅದನ್ನು ಸ್ಪಷ್ಟೀಕರಣ ಮಾಡುವುದಕ್ಕೋಸ್ಕರ ಒಂದು ಹೇಳಿಕೆಯನ್ನು ಕೊಡುವುದು ಸೂಕ್ತವೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಏಕೆಂದರೆ ನಾವು ಇವತ್ತು 5ನೇ ಅಧಿವೇಶವನ್ನು ಪ್ರಾರಂಭ ಮಾಡಿ ಕೇವಲ 5 ದಿವಸಗಳು ಕೂಡ ಆಗಿಲ್ಲ. ಮುಂದೆಯೂ ಈ ಸಭೆಯ ಸತ್‌ಸಂಪ್ರದಾಯಗಳನ್ನು ಮರೆತು ಇಲ್ಲಿ ಕಾರ್ಯಕಲಾಪಗಳನ್ನು ನಡೆಸಿಗೊಂಡಲಕ್ಕೆ ಹೋಗತಕ್ಕದ್ದು ಸೂಕ್ತವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಭೆಯ ಘನತೆ ಗಾಂಭೀರ್ಯಗಳನ್ನು ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ. ಇದಕ್ಕೆ ವಿರೋಧ ಪಕ್ಷದವರ ಸಹಕಾರ ಇದೆಯೆಂಬುದನ್ನು ನಾನು ಹೇಳಬಯಸುತ್ತೇನೆ. ಅದೇ ರೀತಿ ಆಡಳಿತ ಪಕ್ಷದವರ ಸಹಕಾರ ಕೂಡ ಇದಕ್ಕೆ ಕೊಡುತ್ತಾರೆಂದು ಭಾವಿಸಿ, ಮಾನ್ಯ ವಾಟಾಳ್ ನಾಗರಾಜ್‌ರವರು ಅವರ ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷಿಣಿಯವರೇ, ನಾನು ಮೊನ್ನೆ ಮಾಡಿದಂತಹ ಭಾಷಣದಲ್ಲಿ, ನಾನು ಮಾತನಾಡುವಾಗ ಒಬ್ಬರ ಮನಸ್ಸನ್ನು ನೋಯಿಸಬೇಕು ಎನ್ನತಕ್ಕಂತಹ ಉದ್ದೇಶದಿಂದ ಆ ಭಾಷಣವನ್ನು ಮಾಡಿಲ್ಲ. ಬಹುಶಃ ಮಾತನಾಡುವಾಗ ಆ ಉದ್ದೇಶ ನನ್ನದಾಗಿರಲಿಲ್ಲ. ಅದು ಇಷ್ಟೊಂದು ದೊಡ್ಡದಾಗುತ್ತದೆಂದು ನಾನು ಮನಸ್ಸಿನಲ್ಲಿ ನೆನೆಸಿರಲಿಲ್ಲ. ಬಹುಶಃ ಇದು ಈಗ ದೊಡ್ಡದಾಗಿ ಬೆಳೆದು ಬಂದಿದೆ. ನಾನು ಹಾಗೆ ಹೇಳುವಾಗ ಮಾನ್ಯ ಸಿದ್ಧವೀರಪ್ಪನವರ ಮೇಲಾಗಲಿ, ಅಥವಾ ಇನ್ನಿತರ ಸದಸ್ಯರ ಮೇಲಾಗಲಿ ನನಗೆ ವೈಯಕ್ತಿಕವಾದ ದ್ವೇಷ ಏನೂ ಇರಲಿಲ್ಲ. ಅವರು ಹಿಂದೆ ನಮ್ಮ ಜೊತೆಯಲ್ಲೇ ಇದ್ದವರು, ಈಗ ಸರ್ಕಾರದಲ್ಲಿದ್ದಾರೆ. ಭಾಷಣ ಮಾಡುವಾಗ ಇದನ್ನು ಬಳಸಿ ಹೇಳಬೇಕಾಯಿತಲ್ಲದೆ, ಉದ್ದೇಶಪೂರ್ವಕವಾಗಿ ಬಳಸಬೇಕೆಂದೇನೂ ನನಗೆ ಇರಲಿಲ್ಲ. ಮುಂದೆ ಅದು ಒಂದು ದುರಂತಮಯವಾಗಿ ಪ್ರಾರಂಭವಾಯಿತೆಂದು ನಾನಾದರೂ ಹೇಳುತ್ತೇನೆ. ಅವತ್ತು ನಾನು ಈ ಸಭೆಯಲ್ಲಿ ಅದರ ಬಗ್ಗೆ ಹೇಳಿದ್ದೇನೆ. ಇವತ್ತು ಕೂಡ ಅದನ್ನೇ ನಾನು ಪುಷ್ಟೀಕರಿಸಿ ಈ ಸಭೆಯ ನಡವಳಿಕೆಗಾಗಲಿ, ಅಥವಾ ತಮಗಾಗಲಿ, ಅಥವಾ ಇನ್ನಿತರರಿಗಾಗಲಿ ಅಗೌರವವನ್ನು ತೋರಿಸಬೇಕೆಂಬ ಉದ್ದೇಶದಿಂದ ಅದನ್ನು ಹೇಳಲಿಲ್ಲ. ಆದ್ದರಿಂದ ನನ್ನ ಭಾಷಣದಿಂದ ಹಿರಿಯ ಸದಸ್ಯರ ಮನಸ್ಸಿಗೆ ನೋವಾಗಿದೆಯೆಂದು ವಿಷಾದವನ್ನು ಅವತ್ತು ಒಂದು ಸಾರಿ ವ್ಯಕ್ತಪಡಿಸಿದ್ದೇನೆ. ಮತ್ತೊಮ್ಮೆ ಇವತ್ತು ಕೂಡ ನಾನು ತಮ್ಮ ಮೂಲಕ ಅದರ ಬಗ್ಗೆ ವಿಷಾದವನ್ನು ಕಳಕಳಿಯಿಂದ ವ್ಯಕ್ತಪಡಿಸುತ್ತೇನೆ.

† ಶ್ರೀ ಎಚ್. ಸಿದ್ಧವೀರಪ್ಪ (ಆರೋಗ್ಯ ಶಾಖೆಯ ಮಂತ್ರಿಯವರು).—ಸ್ವಾಮಿ, ಈಗ ತಾವು ತಮ್ಮ ರೂಲಿಂಗನ್ನು ಕೊಡುವವರಿದ್ದೀರಿ. ತಮ್ಮ ರೂಲಿಂಗ್ ಏನು ಕೊಡುತ್ತೀರಿ ಅದಕ್ಕೆ ನಾವು ತಲೆ ಬಾಗಿ ನಡೆಯುವುದಕ್ಕೆ ಸಿದ್ಧ; ನಡೆಯಲೇಬೇಕು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ದೇವೇಗೌಡರು ಏನು ಕೆಲವು ಮಾತುಗಳನ್ನು ಹೇಳಿದರು, ಅದಕ್ಕೆ ನಾನು ಬಹಳ ಆಭಾರಿಯಾಗಿದ್ದೇನೆ. ಅವರು ತಳೆದಂತಹ ಧೋರಣೆ ನಾವೆಲ್ಲರೂ ಮೆಚ್ಚತಕ್ಕಂಥಾದ್ದು. ಯಾವ ವ್ಯಕ್ತಿ ಆವತ್ತು ನಡೆದಂತಹ ದುರಂತ ಪ್ರಕರಣಕ್ಕೆ ಕಾರಣರಾಗಿದ್ದರೋ ಅವರಲ್ಲಿ ನಾವು ಆವತ್ತು ಏನು ಕೇಳಿಕೊಂಡೆವೋ, ಆ ಮಾತು ಅವರ ಬಾಯಿಂದ ಇನ್ನೂ ಬರಲಿಲ್ಲವಲ್ಲ ಎಂದು ವಿಷಾದ ವಾಗಿದೆ. ಅದಕ್ಕೆ ಕಾರಣ ಇಷ್ಟೆ—ಅಂದಿನ ದಿವಸ ಒಬ್ಬ ಮನುಷ್ಯನ ಅಥವಾ ಒಬ್ಬ ವ್ಯಕ್ತಿಯ ಮೇಲೆ ಒಂದು ಆರೋಪವನ್ನು ಮಾಡಿ, ಮುಖಕ್ಕೆ ಮಸಿ ಹಚ್ಚಿ ಅಥವಾ ಟಾರನ್ನು ಚೆಲ್ಲಿ ಅಥವಾ ಏನಾದರೂ ಬೇರೆ ಪ್ರಸಂಗ ಬಂದಾಗ, ಅದರ ಮೇಲೆ ನಾವು ಏನು ಅಭಿಪ್ರಾಯವನ್ನು ವ್ಯಕ್ತ ಪಡಿಸಿದೆವೋ, ಬಹುಶಃ ಅದು ಸಾರ್ವಜನಿಕರ ಮುಂದೆ ಬಂದಿದ್ದರೆ ಚೆನ್ನಾಗಿತ್ತು ಎಂದು ಕಾಣುತ್ತದೆ. ನಾನು ಆವತ್ತು ಕೊಟ್ಟ ರೂಲಿಂಗನ್ನು ಪ್ರಶ್ನೆ ಮಾಡುತ್ತಾ ಇಲ್ಲ. ಆದರೆ ನಮ್ಮ ದುರ್ದೈವದಿಂದ ಆವತ್ತು ಒಂದು ರೂಲಿಂಗ್ ಆಗಿರುವುದರಿಂದ ಆ ಒಂದು ಅವಕಾಶ ಅದಕ್ಕೆ ಒದಗಲಿಲ್ಲ; ಮತ್ತು ಆ ವಿಚಾರ ಪತ್ರಿಕೆಗಳಲ್ಲಿ ಬರಲಿಲ್ಲ. ಆದ್ದರಿಂದ ಈಗಲಾದರೂ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇ ನೆಂದರೆ, ಅವರು ಆವತ್ತು ಮಾಡಿದಂತಹ ಅಪಾದನೆ ಬಹಳ ಗುರುತರವಾದ ಅಪಾದನೆ. ಇವತ್ತು ಕೂಡ ನನ್ನ ಮನಸ್ಸಿನಲ್ಲಿ ಅದು ಇದೆ. ಅದನ್ನು ಒಂದು ಹೇಯವಾದ ಅಪಾದನೆ ಎಂದು ಹೇಳಿದರೂ ತಪ್ಪಾಗಲಾರದು. ನಾನಾಗಲೇ ಅರಿಕೆ ಮಾಡಿಕೊಂಡಿದ್ದೇನೆ—ಇದರಲ್ಲಿ ನನಗಾಗಲಿ, ಶ್ರೀಮಾನ್ ವಿ. ಎಲ್. ಪಾಟೀಲ್ ಅವರಿಗಾಗಲಿ, ಶ್ರೀಮಾನ್ ಪುಟ್ಟಸ್ವಾಮಿಯವರಿಗಾಗಲಿ ಅಥವಾ ಶ್ರೀಮಾನ್ ಮಹಮ್ಮದಾಲಿಯವರಿಗಾಗಲಿ, ಇವರು ನಮ್ಮ ಹೆಸರನ್ನು ಏನಾದರೂ ಒಂದು ದುರುದ್ದೇಶ ಇಟ್ಟುಕೊಂಡೇ ಹೇಳಿದ್ದಾರೆಂದು ಸ್ಪಷ್ಟವಾಗುತ್ತದೆ. ಬಹುಶಃ ಇದು ದೇಶದ ಮುಂದೆ ಬಂದಿದ್ದರೆ ಚೆನ್ನಾಗಿತ್ತು. ಆದರೆ ಆ ಅವಕಾಶ ಇಲ್ಲದ ಹಾಗೆ ಆಗಿದೆ. ಮಾನ್ಯ ಶ್ರೀ ವಾಟಾಳ್ ನಾಗರಾಜರವರ ಬಗ್ಗೆ ನನಗೆ ಮೊದಲಿಂದಲೂ ವಾತ್ಸಲ್ಯ ಇತ್ತು. ಈಗಲೂ ಅದನ್ನು ಇಟ್ಟುಕೊಳ್ಳುವುದಕ್ಕೆ ಅವರು ಅವಕಾಶ ಮಾಡಲಿ. ಶ್ರೀಮಾನ್ ವಾಟಾಳ್ ನಾಗರಾಜರು ಈ ಮನೆಗೆ ಬಂದಾಗ ನಾವು ಆ ಕಡೆ ಇದ್ದೆವು. ಆಗ ಅವರು ತರುಣರು ಇದ್ದಾರೆ ಅವರು ಮುಂದಕ್ಕೆ ಬರಲಿ ಎಂದು ಅನೇಕ ಸಾರಿ ಅವರು ಉದ್ವೇಗದಿಂದ ಮಾತನಾಡಿದಾಗಲೂ ನಾವು ಅವರ ನೆರವಿಗೆ ಬಂದಿದ್ದೇವೆ, ಮತ್ತು ಅವರ ಪರವಾಗಿ ಮಾತನಾಡಿ ಪರಿಸ್ಥಿತಿಯನ್ನು ಶಾಂತಿಗೆ ತಂದಿದ್ದೇವೆ. ಬಹುಶಃ ಅದರ ಪ್ರಾಯಶ್ಚಿತ್ತ ಈಗ ಅವರು ನಮಗೆ ಮಾಡಿದರು ಎಂದು ಕಾಣುತ್ತದೆ. ಇದು ಯಾವ ಒಂದು 'ಇಜ್ಜತ್ತಿನ' ಪ್ರಶ್ನೆಯೂ ಅಲ್ಲ. ಶರಣರಿಗೆ ಮರಣವಿಲ್ಲ, ಅಂದ ಹಾಗೆ ನಾವು ಏನಾದರೂ ತಪ್ಪು ಮಾಡಿದರೆ ಆ ತಪ್ಪಿಗೆ ಮನಸ್ಸಿನಲ್ಲಿ ಏನಾದರೂ ನಾನು ತಪ್ಪು ಮಾಡಿದೆ ಎನ್ನತಕ್ಕಂತಹ ಒಂದು ಭಾವನೆ ಬಂದರೆ ಅಷ್ಟು ಸಾಕಾಗುತ್ತದೆ. ಅದನ್ನು ನಾವು ಹೇಳುವಂತಹ ಮಾತಿನಿಂದ ಅರ್ಥಮಾಡಿಕೊಳ್ಳಬಹುದು. ಆದ್ದರಿಂದ ನಾನಾದರೂ ಹೇಳುತ್ತೇನೆ, ಇದು ವ್ಯಕ್ತಿಯ ಪ್ರಶ್ನೆಯಲ್ಲ, ಇದು ಈ ಮನೆಯ ಎಲ್ಲ ಸದಸ್ಯರಿಗೂ ಸಂಬಂಧಪಟ್ಟ ಪ್ರಶ್ನೆಯಾಗಿದೆ, ಇಡೀ ಸಭೆಯ ಘನತೆ ಗಾಂಭೀರ್ಯವನ್ನು ಕಾಪಾಡತಕ್ಕ ಪ್ರಶ್ನೆ ಮತ್ತು ಈ ಸಭೆಯ ಎಲ್ಲ ಸದಸ್ಯರಿಗೂ ಸೇರಿದತಕ್ಕ ಪ್ರಶ್ನೆಯಾಗಿದೆಯೇ ಹೊರತು ವೈಯಕ್ತಿಕವಾದ ಪ್ರಶ್ನೆಯೇನೂ ಇಲ್ಲ. ಪ್ರಜಾಪ್ರಭುತ್ವದಲ್ಲಿ ನಾವು ಅನ್ನುವುದಕ್ಕೆ ಇರುತ್ತೇವೆ ಮತ್ತು ಅನ್ನಿಸಿಕೊಳ್ಳುವುದಕ್ಕೂ ಇರುತ್ತೇವೆ. ನಾನು ಹೋದ ಸಾರಿ ವಿರೋಧ ಪಕ್ಷದಲ್ಲಿ ಕೂತು ಕೊಂಡಿದ್ದೆ, ಬಹಳ ಸಾಹಸ ಮಾಡಿ ಈ ಕಡೆ ಬಂದಿದ್ದೇನೆ. ನಿಮಗೆ ಶಕ್ತಿ ಇದ್ದರೆ ನೋಡಿ. ಆದರೆ ಹೀಗೆ ಹೋಗುವುದಕ್ಕೆ ಅವಕಾಶ ಮಾಡಿ ಕೊಡುವುದಿಲ್ಲವೆಂಬುದನ್ನು ಮಾತ್ರ ಅರಿಕೆಮಾಡಿಕೊಳ್ಳುತ್ತೇನೆ. ಆದ್ದರಿಂದ ತಮ್ಮಲ್ಲಿ ಅರಿಕೆಮಾಡಿ ಕೊಳ್ಳುವುದೇನೆಂದರೆ. The essence of democracy is t e e must always be a constant fear in the mind of the Ruling Party that the Opposition may come to power any day. That is the way of democracy. The essential ingredients of democracy is that the Ruling Party should allow the Opposition Party to equally function.

1-00 P. M,

ನಾನು ತಮ್ಮಲ್ಲಿ ಹೇಳುವುದೇನೆಂದರೆ, ನಾನು ಬಹಳ ಜವಾಬ್ದಾರಿಯುತವಾದ ಸ್ಥಾನದಲ್ಲಿ ಕುಳಿತಿದ್ದೇನೆ. ನಿಮ್ಮ ಮನಸ್ಸಿಗೂ ಕೂಡ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಮಾಡಿ

(ಶ್ರೀ ಎಚ್. ಸಿದ್ದವೀರಪ್ಪ)

ದಂಥ ಸ್ಟೇಟ್‌ಮೆಂಟ್ ಸಮರ್ಪಕವಾಗಿದೆಯೆಂದು ಕಂಡಿಲ್ಲ. ಆದರಲ್ಲಿ ಏನೂ ಅನುಮಾನವಿಲ್ಲ. ಇವತ್ತು ವಿರೋಧಪಕ್ಷದ ನಾಯಕರಾಗಿರುವವರು ಮಾನ್ಯ ಶ್ರೀ ವಾಟಾಳ್ ನಾಗರಾಜರಿಗೆ ಹೇಳಬೇಕು. ಅವರು ಸರಿಯಾದಂಥ ರೀತಿಯಲ್ಲಿ ಈ ಸಭೆಯ ಎಲ್ಲ ಸದಸ್ಯರಿಗೂ ಸಮರ್ಪಕವಾಗುವ ರೀತಿಯಲ್ಲಿ ಈ ಸಭೆಗೆ ಏನೊಂದು ' ರಿಗ್ರೆಟ್ ' ಎಂಬುದಾಗಿ ಹೇಳುತ್ತಾರೋ ಅದನ್ನು ಕ್ಷಮಾಪಣೆಯ ರೂಪವಾಗಿ ಹೇಳಬೇಕು. ಆ ರೀತಿ ವ್ಯವಸ್ಥೆ ಮಾಡಿಕೊಡುತ್ತೀರಾ ಎಂಬುದಾಗಿ ವಿರೋಧಪಕ್ಷದ ನಾಯಕರನ್ನು ಕೇಳುತ್ತೇನೆ. ಅದರ ಮೇಲೆ ನಮ್ಮ ಸ್ಪೀಕರ್ ಅವರು ಏನು ರೂಲಿಂಗ್ ಕೊಡುತ್ತಾರೋ ಆ ರೂಲಿಂಗಿಗೆ ನಾವೆಲ್ಲರೂ ಬದ್ಧರಾಗಿರುತ್ತೇವೆ. ನನ್ನ ಮನಸ್ಸಿನಲ್ಲಿರುವ ಉದ್ವೇಗ ಈ ರೀತಿ ಇರುತ್ತದೆ. ಅನೇಕ ವರ್ಷಗಳಿಂದ ಇವತ್ತಿನವರೆಗೂ ನಮ್ಮ ಒಂದು ವ್ಯಕ್ತಿತ್ವವನ್ನು ಉಳಿಸಿಕೊಂಡು ಬರುತ್ತಿರತಕ್ಕವರಿಗೆ ಈ ರೀತಿ ಮುಖಕ್ಕೆ ಮಸಿ ಬಳಿಯುವುದು ಖಂಡಿತವಾಗಿ ಸರಿಯಲ್ಲ. ಇದು ನಮ್ಮ ದುರ್ದೈವ. ಇದನ್ನು ಸಬ್‌ಸ್ಟ್ಯಾನ್ಶಿಯೇಟ್ ಮಾಡಿಕೊಳ್ಳತಕ್ಕ ಕಾಯಿದೆಗಳು ನಮಗೆ ಇಲ್ಲದೆ ಈ ರೀತಿ ಇವತ್ತಿನ ದಿವಸ ಸ್ಪೀಕರ್ ಅವರ ರೂಲಿಂಗ್‌ನಿಂದ ತೀರ್ಮಾನಮಾಡುವುದಕ್ಕೆ ಕಾಯಬೇಕಾಗಿದೆ. ಅದು ಇಂತಹ ಸಂದರ್ಭದಲ್ಲಿ ಅನಿವಾರ್ಯವಾಗಿದೆಯೆಂದು ಹೇಳುತ್ತೇನೆ. ನಮ್ಮ ಅಭಿಪ್ರಾಯದಲ್ಲಿ ಇಂತಹ ಸಂದರ್ಭಗಳಿಗೆ ತಕ್ಕ ಕಾನೂನು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈ ಒಂದು ಸಂದರ್ಭದಲ್ಲಿ ಸ್ಪೀಕರ್ ಅವರು ಯಾವ ರೀತಿಯಲ್ಲಿ ತೀರ್ಮಾನ ಕೊಡುತ್ತಾರೋ ಕೊಡಲಿ. ನಾವು ಅದಕ್ಕೆ ಬದ್ಧರಾಗಿರುತ್ತೇವೆ.

**Sri H. M. CHANNABASAPPA,**—Madam Speaker, this House is awaiting the ruling of the Hon. Speaker on the privilege motion that has been tabled by Sri Mallappa. The Hon. Leader of the Opposition made a good gesture yesterday. He was one with all the Members of this House in conceding set of the way in which things went on the other day was derogatory to the dignity and decorum of this House and the Member concerned not only offended the senior Members of this Assembly but also offended the dignity of the House itself. I am glad he has accepted that position. Once that position has been aceepted by both the Leaders on this side as well as on that side of of the House, then the necessary course of action will have to be pursued. Whatever apology the member concerned who was responsible for the incident has tendered, must come from within and it must be convincing to the Members of this House. The Members of this House must feel that it is a heart-felt apology coming from the innermost core of the heart, out of a feeling from the innermost part of his heart that he has done the wrong thing. He has not only done the wrong thing but also wronged the senior Members of this House and he has also wronged the entire House itself. He must tender an unconditional apology to this House and not to any individual. He must also make it clear that he has done the wrong thing. Without any basis, allegations have been made and if it is convincing to the Members of this House that the apology has come from an urge from the innermost part of the heart and that he has felt that he has done the wrong thing against of this House, then the matter can be considered by the Members of this House. And, therefore, Madam Speaker, I personally feel that if he has really done the wrong thing, let him express that he has done wrong thing against the senior Members of the House and has also acted in a manner which is derogatory to the dignity and decorum of this House.

†ಶ್ರೀ ಎಂ. ಎಸ್. ಕೃಷ್ಣನ್.—ನಾನು ಈಗ ಮಾನ್ಯ ಶ್ರೀ ಸಿದ್ಧವೀರಪ್ಪನವರೂ ಮತ್ತು ಮಾನ್ಯ ಶ್ರೀ ಚನ್ನಬಸಪ್ಪನವರೂ ಹೇಳಿದ್ದನ್ನು ಬಹಳ ಕೂಲಂಕಷವಾಗಿ ಕೇಳಿದ್ದೇನೆ. ಇವತ್ತು ಒಂದು ಗಾಂಭೀರ್ಯವಾದ ಸಮಸ್ಯೆ ಎದ್ದಿದೆ. ತಾವು ಅದರ ಬಗ್ಗೆ ಒಂದು ರೂಲಿಂಗ್ ಕೊಡುವವರಿದ್ದೀರಿ. ತಮ್ಮ ಆ ಒಂದು ರೂಲಿಂಗ್ ಬಗ್ಗೆ ನಾನೇನೂ ಹೇಳುವುದಕ್ಕಾಗುವುದಿಲ್ಲ. ನಾವೆಲ್ಲರೂ ಆ ಚರ್ಚೆಯಲ್ಲಿ ಭಾಗವಹಿಸಿದ್ದೇವೆ. ಮೊನ್ನೆ ದಿವಸ ನಡೆದಂಥ ಘಟನೆ ನಡೆಯಬಾರದಾಗಿತ್ತು. ಅದು ಅನಿವಾರ್ಯವಾಗಿ ನಡೆದುಹೋಯಿತು. ಅದರಿಂದ ನಮಗೆಲ್ಲರಿಗೂ ವಿಷಾದವಾಯಿತು. ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರಿಗಾಗಲೀ, ಅಥವಾ ಇನ್ನು ಯಾರೇ ಸದಸ್ಯರಿಗಾಗಲೀ ಈ ವಿಚಾರದಲ್ಲಿ ಏನಾದರೂ ಒಂದು ಸಲಹೆ ಕೊಡುವುದಕ್ಕೆ ನಾವು ಯಾವಾಗಲೂ ಸಿದ್ಧ. ಯಾರೇ ಆಗಲಿ ಪಾರ್ಲಿಮೆಂಟರಿ ಪ್ರಜಾಪ್ರಭುತ್ವಕ್ಕೆ ವಿರೋಧವಾಗಿ ಯಾವುದೇ ಪದವನ್ನು ಉಪಯೋಗಿಸಿದರೆ ಅಥವಾ ಯಾರ ಮನಸ್ಸನ್ನಾದರೂ ತೀವ್ರವಾಗಿ ನೋಯಿಸುವುದಾದರೆ ಅದು ಸರಿಯಲ್ಲವೆಂದು ಹೇಳುವ ಜನರು ನಾವು. ಈ ಸಭೆಯಲ್ಲಿ ನಾವು ಮಾತನಾಡುವಾಗ ಈ ಒಂದು ದಿಶೆಯಲ್ಲಿ ನಾವು ಹೇಳಿದ್ದೆಲ್ಲಾ ಸರಿಯೆಂದು ಹೇಳುತ್ತಿಲ್ಲ, ಆದರೆ ಇಲ್ಲಿ ಈಗ ಬಂದಿರುವ ಪ್ರಶ್ನೆ, ನಮ್ಮ ಸ್ನೇಹಿತರಾದಂಥ ಮಾನ್ಯ ಶ್ರೀ ವಾಟಾಳ್ ನಾಗರಾಜ್ ಅವರು ಹೋದಸಾರಿಯೇ ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತೇನೆಂದು ಹೇಳಿದರು. ಅವರ ಹೇಳಿಕೆಯಲ್ಲಿ, ಯಾವ ಒಂದು ತಪ್ಪು ಉದ್ದೇಶವನ್ನು ಇಟ್ಟುಕೊಂಡಿರಲಿಲ್ಲವೆಂದು ಏನು ಹೇಳಿದರೋ, ಅವರು ಹೇಳಿದ ಆ ಮಾತನ್ನು ನಾವು ಕೇಳುವುದು ಒಳ್ಳೆಯದು. ಮಾನ್ಯ ಶ್ರೀ ಚನ್ನಬಸಪ್ಪನವರು ಹೇಳುವುದೇನೆಂದರೆ, ಅವರು ಹೇಳಿದ್ದು ಒಳಗಿನಿಂದ ಬರಬೇಕು ಎಂದು. ನನಗೆ ಇದರಿಂದೇನು ಗೊತ್ತಾಗುತ್ತದೆಂದರೆ, ಒಬ್ಬ ಜವಾಬ್ದಾರಿಯುತ ಸದಸ್ಯ ಈ ಸಭೆಯಲ್ಲಿ ಎದ್ದು ನಿಂತು, ನಾನು ನಿಮ್ಮ ಮೇಲೆ ಆರೋಪಣೆ ಮಾಡುವ ಅಭಿಪ್ರಾಯ ಹೊಂದಿರಲಿಲ್ಲ, ತಪ್ಪನ್ನು ಬಿಟ್ಟುಬಿಡಬೇಕೆಂಬ ಹೇಳಿದ ಮೇಲೆ ಇನ್ನೂ ಆಡಳಿತ ಪಕ್ಷದವರು ಅದನ್ನೇ ಬೆಳೆಸುತ್ತಿರುವುದು ಸರಿಯಲ್ಲ. ಅದರಿಂದ ನಿಜವಾಗಿ ತಾವು ಹೇಳುವುದನ್ನು ಕೇಳಿ ನಮ್ಮ ಮನಸ್ಸಿಗೆ ಬಹಳವಾಗಿ ನೋವಾಗುತ್ತಿದೆ. ನಿಮ್ಮ ಮೇಲೆ ದುರುದ್ದೇಶ ಪೂರ್ವಕವಾಗಿ ಅಪಾದನೆ ಮಾಡಲಿಲ್ಲವೆಂದು ನನ್ನ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಅವರು ಕಳಕಳಿಯಿಂದ ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ ಮೇಲೆ, ಅನೇಕ ವರ್ಷಗಳು ಈ ಸಭೆಯ ಅನುಭವ ಪಡೆದಿರುವವರೂ, ಹಿರಿಯರೂ ಮತ್ತು ಮಾರ್ಗದರ್ಶಕರೂ ಆದವರು ಅದನ್ನು ಒಪ್ಪಬಹುದು. ಹೋದ ಅಧಿವೇಶನಗಳಲ್ಲಿ ನಾನೇ ಅನೇಕ ಸಾರಿ ನೋಡುತ್ತಿದ್ದೆ. ಇದಕ್ಕಿಂತಲೂ ಹೆಚ್ಚಾಗಿ ಕಟುವಾದ ಹಾಗೂ ತೀವ್ರವಾದ ಪ್ರಸಂಗಗಳು ಬೇಕಾದಷ್ಟು ಬಂದಿವೆ. ಅಂತಹ ಸಂದರ್ಭಗಳಲ್ಲಿ ಹಿಂದೆ ಸ್ಪೀಕರ್ ಆಗಿದ್ದಂಥ ಮಾನ್ಯ ಶ್ರೀ ಕೊರಾವಳೆಯವರು ಬಹಳ ಚೆನ್ನಾಗಿ ರೂಲಿಂಗ್ ಕೊಟ್ಟಿದ್ದಾರೆ. ಆದರೆ ಅವರ ಬಗ್ಗೆ ನಾನು ಈಗ ಏನೂ ಹೇಳುವುದಿಲ್ಲ.

Sri H. SIDDAVEERAPPA.—I did not utter even one word of character assassination against anybody and there was no occasion for anybody to ask me to withdraw it. There was no such occasion at all.

Sri M. S. KRISHNAN.—There was no occasion for you to use such words, but there were ample occasions for you to come and support those people who used such words.

Sri H. SIDDAVEERAPPA.—For that, is this the PRAYASCHITHA ?

Sri M. S. KRISHNAN.—You want to take your pound of flesh because you happen to have 165 brute majority here. You cannot use brute majority against the minority and try to silence us.

Sri H. SIDDAVEERAPPA.—It is a case of tyranny of the minority against the majority.

Sri M. S. KRISHNAN.—In fact, you were tyrannical last time You want to be tyrannical again. When you were on this side, you were tyrannical. Now, I do not want you to be tyrannical again. I have been going through the Chamber's Dictionary. ನಾನು ಇದನ್ನೇನೂ ದೊಡ್ಡದಾಗಿ ಬೆಳೆಸುತ್ತಿಲ್ಲ. ಮಾನ್ಯ ಶ್ರೀ ಎಚ್. ಸಿದ್ಧವೀರಪ್ಪನವರು ಮತ್ತು ಶ್ರೀ ಚನ್ನಬಸಪ್ಪ

(ಶ್ರೀ ಎಂ. ಎಸ್. ಕೃಷ್ಣನ್)

ನವರು ನನ್ನ ಸ್ನೇಹಿತರು ಹೇಳಿದಂತೆ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ, ಅವರು ಅಪಾಲಜಿ ಕೇಳಬೇಕೆಂದು ಹೇಳುತ್ತಿದ್ದರು. 'ರಿಗ್ರೆಟ್' ಎಂದರೇನು, 'ಅಪಾಲಜಿ' ಎಂದರೇನು ? 'ಅಪಾಲಜಿ' ಅಂದರೆ 'ಎಕ್ಸ್‌ಪ್ರೆಷನ್ ಆಫ್ ರಿಗ್ರೆಟ್' ಎಂದು ಡಿಕ್ಷನರಿಯಲ್ಲಿ ಹಾಕಿದ್ದಾರೆ. The word "apology" means 'expression of regret.' Expression of regret has been made and a person seasoned in Parliamentary practice should have simply accepted it and be done with it and see that the work is done.

ನನಗೇಕೆ ತಮ್ಮ ಬಗ್ಗೆ ಒಂದು ಅನುಮಾನ ಬರುತ್ತಿದೆ ಎಂದರೆ ತಾವೇನು ಸಭೆಯ ಮುಂದೆ ರೈತರ ವಿಚಾರದಲ್ಲಿ ಒಂದು ತಿದ್ದುಪಡಿ ಬಿಲ್ಲನ್ನು ತರಬೇಕೆಂದಿದ್ದೀರೋ ಅದನ್ನು ಮನಸ್ಸಿಲ್ಲದೆ ತಂದಿರುವುದರಿಂದ, ಅದನ್ನು ಪಾಸ್ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶ ಸಿಕ್ಕಲಿಲ್ಲ ಅನ್ನತಕ್ಕ ನೆಪದಲ್ಲಿ, ಅದನ್ನು ಹಿಂದಕ್ಕೆ ಹಾಕೋಣ ಅನ್ನತಕ್ಕ ಉದ್ದೇಶದಿಂದಲೋ ಅಥವಾ ಆ ರೈತರಿಗೆ ಆಗತಕ್ಕ ತೊಂದರೆಗಳು ಇನ್ನೂ ಸ್ವಲ್ಪ ಕಾಲ ಹಾಗೇ ಉಳಿದಿರಲಿ ಎಂಬ ಭಾವನೆಯಿಂದಲೋ ಆ ಬಿಲ್ಲಿಗೆ ಬೇಕಾಗುವ ವೇಳೆಯನ್ನೆಲ್ಲ ಈ ಸಂದರ್ಭಕ್ಕೇ ಬಳಸೋಣ ಎಂದು ಅನ್ನುವ ಹಾಗೆ ಇರುವಂತೆ ನನಗೆ ಭಾಸವಾಗುತ್ತಿದೆ. ದಯವಿಟ್ಟು ಹಾಗೆ ಮಾಡಬೇಡಿ. you will be creating a very bad precedent in a democracy. You are trying to revoke a thing which has been done. I do not want you to do that.

## Ruling

ಅಧ್ಯಕ್ಷರು.—ಈ ಅನ್ ಹ್ಯಾಪಿ ಇವೆಂಟ್ ನಡೆದಾಗ ನಾನು ಈ ಸ್ಥಾನದಲ್ಲಿರಲಿಲ್ಲ. ಆ ವೇಳೆಯಲ್ಲಿ ನಾನು ನನ್ನ ಛೇಂಬರಿನೊಳಗಡೆ ಕುಳಿತು ಇಲ್ಲಿ ನಡೆಯುತ್ತಿದ್ದುದನ್ನೆಲ್ಲಾ ಕೇಳಿದೆ. ಆಗ ನಾನು ಈ ಸ್ಥಾನಕ್ಕೆ ಕೂಡಲೇ ಬರಬೇಕೆಂದಿದ್ದೆ. ನಾನು ಇಲ್ಲಿಗೆ ಬಂದ ಮೇಲೆ ಮತ್ತೆ ಹೊಸದಾಗಿ ಎಲ್ಲವೂ ಷುರುವಾಗುತ್ತದೆಯಲ್ಲಾ—ಆದುದರಿಂದ ಆ ದಿನದ ಪ್ರಸಂಗ ಅಷ್ಟಕ್ಕೇ ಮುಗಿಯಲಿ ಎಂಬ ಒಂದು ಸದುದ್ದೇಶದಿಂದ ನಾನು ಆ ವೇಳೆಯಲ್ಲಿ ಈ ಸ್ಥಾನಕ್ಕೆ ಬಂದು ಕುಳಿತುಕೊಳ್ಳಲಿಲ್ಲ. ಒಂದು ವೇಳೆ ಬಂದಿದ್ದರೆ ಚೆನ್ನಾಗಿರುತ್ತಿತ್ತೋ ಏನೋ.

ಆದರೆ ಆ ದಿವಸ ಈ ಮಾನ್ಯ ಸಭೆಯಲ್ಲಿ ಏನು ನಡೆಯಿತೋ ಅದು ನಿಜವಾಗಿಯೂ ಇಂಥ ಯಾವ ಶಾಸನ ಸಭೆಗೂ ಮರ್ಯಾದೆ, ಘನತೆ, ಗೌರವಗಳನ್ನು ತರುವಂಥದ್ದಲ್ಲ. ಮನುಷ್ಯನ ನಾಲಗೆಗೆ ಮೂಳೆ ಇಲ್ಲವೆಂದು ಮನಸ್ಸಿಗೆ ಬಂದಹಾಗೆ ಮಾತುಗಳನ್ನು, ಆಗಿನ ಸಂದರ್ಭಕ್ಕೆ ಸಮಂಜಸವಾಗಿರಲಿ—ಇಲ್ಲದಿರಲಿ ಆಡುವುದು ಸರಿಯಾದ್ದಲ್ಲ. ಇಂಥ ಸಭೆಗಳಲ್ಲಿ ಮಾತನಾಡುವಾಗ ಸದಸ್ಯರು ಆಡತಕ್ಕ ಮಾತುಗಳಿಗೆಲ್ಲಾ ಸಾಕಷ್ಟು ಆಧಾರಗಳು ಇವೆಯೋ ಎಂಬುದನ್ನು ದೃಢಪಡಿಸಿಕೊಂಡು ಮಾತನಾಡಬೇಕು. ನಾವೆಲ್ಲರೂ ಇಲ್ಲಿ ಸೇರಿರುವುದು ದೇಶಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ. ಅದಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಇಲ್ಲಿ ಮಾತನಾಡಬೇಕೇ ವಿನಹ ಅದನ್ನು ಬಿಟ್ಟು ಈ ಸಭೆಗೆ ಅನೇಕ ವೀಕ್ಷಕರು ಬಂದಿದ್ದಾರೆ, ಪ್ರೆಸ್ಸಿನವರಿದ್ದಾರೆ—ಎಲ್ಲರೂ ನನ್ನ ಹೆಸರು ಪ್ರಚಾರಕ್ಕೆ ಬರುತ್ತದೆ ಎಂಬ ಭಾವನೆಯಿಂದ ಹಾಗೆಲ್ಲ ಮಾತನಾಡಬಾರದು. ಹಾಗೆ ಮಾತನಾಡುವುದು ಯಾರಿಗೂ ಸೊಗಸುವುದಿಲ್ಲ, ಮತ್ತು ಈ ಸಭೆಗೂ ಭೂಷಣವಲ್ಲ. ನಮ್ಮ ಸಭೆಯ ಕೆಲವು ಹಿರಿಯ ಸಚಿವರುಗಳಿಗೂ ಮತ್ತು ಹಿರಿಯ ಸದಸ್ಯರುಗಳಿಗೂ ಅವರ ಮಾತುಗಳಿಂದ ಮನಸ್ಸಿಗೆ ಬಹಳ ನೋವಾಗಿರುವಂತೆ ಗೊತ್ತಾಗಿದೆ. ಇದೇ ವಿಚಾರದಲ್ಲಿ ವಿರೋಧ ಪಕ್ಷದ ನಾಯಕರೂ ಮತ್ತು ಶ್ರೀ ಎಂ. ಎಸ್. ಕೃಷ್ಣನ್ ಅವರೂ ತಮ್ಮ ವ್ಯಥೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ವಾಟಾಳ್ ನಾಗರಾಜ್ ಅವರೂ ಕೂಡ ತಮ್ಮ ರಿಗ್ರೆಟ್ಸನ್ನು ಎಕ್ಸ್‌ಪ್ರೆಸ್ ಮಾಡಿದ್ದಾರೆ. ಹೆಲ್ತ್ ಮಿನಿಸ್ಟರಿಗೂ ಮತ್ತು ಪಿ.ಡಬ್ಲ್ಯು.ಡಿ. ಮಿನಿಸ್ಟರಿಗೂ ಬಹಳ ಕಳಕಳಿಯಿಂದ ತಮ್ಮ ಮನನೊಂದು ಅವರು ಅವರ ಎಕ್ಸ್‌ಪ್ರೆಷನ್‌ಗಳನ್ನು ವಾಪಸ್ ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಇನ್ನು ಮುಂದೆ ಅವರು ಯಾವ ಇಂಥ ಶಬ್ದಗಳನ್ನೂ ಆಧಾರವಿಲ್ಲದೆ ಸಭೆಗಳಲ್ಲಿ ಬಳಸಬಾರದೆಂದು ಅವರಿಗೆ ಸೂಚನೆ ಮಾಡುತ್ತೇನೆ.

ಇಲ್ಲಿಯ ವಾತಾವರಣ ಒಂದು ಶಾಂತ ರೀತಿಯಿಂದ ಎಲ್ಲರಿಗೂ ಅನುಕೂಲವಾಗಲು ಮತ್ತು ಈ ಸಭೆಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಅನುಕೂಲವಾಗತಕ್ಕಂಥ ರೂಲಿಂಗನ್ನು ಕೊಡಬೇಕೆಂದು ಈ ಸಭೆಯ ಸರ್ವ ಪಕ್ಷಗಳವರೂ ಕೇಳಿಕೊಂಡಿದ್ದಂತೆ ಎಲ್ಲ ಅಂಶಗಳನ್ನೂ ಗಮನಕ್ಕೆ ತೆಗೆದುಕೊಂಡು ಈ ಸಭೆಯ ಕೆಲಸ ಕಾರ್ಯಗಳಲ್ಲಿ ಎಲ್ಲರೂ ಸಹಕರಿಸಿ ನಡೆಯುವಂತಾಗಲೆಂದು ನಾನು ಆ ಹಿಂದಿನ ವಿಚಾರಗಳನ್ನೆಲ್ಲಾ ಕ್ಲೋಸ್ ಮಾಡಿದ್ದೇನೆ. I close this matter.

ಶ್ರೀ ಎಚ್. ಸಿದ್ಧವೀರಪ್ಪ.—ತಮ್ಮ ರೂಲಿಂಗಿಗೆ ನಾವು ತಲೆಬಾಗಿ ನಡೆಯುತ್ತೇವೆ. ತಮಗೆ ನಾವು ಆಭಾರಿಯಾಗಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ರೂಲಿಂಗಿಗೆ ನಾನೂ ಆಭಾರಿಯಾಗಿದ್ದೇನೆ. ಇದರಿಂದ ನಾವೆಲ್ಲರೂ ಒಂದು ಪಾಠವನ್ನು ಕಲಿತಂತಾಗಿದೆ.

ಶ್ರೀ ಎಚ್. ಡಿ. ದೇವೆಗೌಡ.—ಶ್ರೀಮಾನ್ ನಾಗಣ್ಣನವರೂ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿರುವಂತಿದೆ. ಅದನ್ನೂ ಕೂಡ ಅವರು ದಯವಿಟ್ಟು ಹಿಂದಕ್ಕೆ ತೆಗೆದುಕೊಳ್ಳುವುದು ಉತ್ತಮ ಎಂದು ಹೇಳುತ್ತೇನೆ. I request him to withdraw it in view of the need to create a healthy atmosphere. It is not necessary to press.

**Sri K. M. NAGANNA** (Chickpet).—I do not press my motion. ಇಲ್ಲಿ ಹೇಗೆ ಮಾತನಾಡಬೇಕು ಎಂಬುದನ್ನು ಈ ಸಭೆಗೆ ಬಂದಿರತಕ್ಕ ಮಾನ್ಯ ಸದಸ್ಯರಿಗೆಲ್ಲಾ ತಿಳಿಯ ಪಡಿಸಲು ಮಾನ್ಯ ಅಧ್ಯಕ್ಷರು ಒಂದು ಪಾಠಶಾಲೆಯನ್ನು ಇಡುವುದು ಒಳ್ಳೆಯದು ಎಂದು ನನ್ನ ಭಾವನೆ. ಇದಕ್ಕಾಗಿ ಬಜೆಟ್ಟಿನಲ್ಲಿ ಒಂದು ಪ್ರಾವಿಜನ್ ಮಾಡಬೇಕೆಂದು ಹೇಳುತ್ತೇನೆ. ಆ ದಿವಸ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರು ಸಭೆಯಲ್ಲಿ ತಾವು ಒಬ್ಬ ಮಂತ್ರಿಗಳೆಂಬುದನ್ನೂ ಕೂಡ ಮರೆತು ತೋಳನ್ನು ಮುದುರುವುದಕ್ಕೆ ಪ್ರಾರಂಭಮಾಡಿದ್ದರು. ನಾನು ಹುಡುಗನಾಗಿದ್ದಾಗ ಹಾಗೆ ತೋಳನ್ನು ಮುದುರುವುದು ಗೊತ್ತಿತ್ತು.

ಶ್ರೀ ಎಚ್. ಸಿದ್ಧವೀರಪ್ಪ.—ಹಾಗೆ ಮಾತನಾಡುವುದು ಕೆಲವರ ಸ್ವಭಾವ.

ಶ್ರೀ ಎಂ. ಎಸ್. ಕೃಷ್ಣನ್.—ಹೌದು ಹಾಗೇ ಶ್ರೀ ವಾಟಾಳ್ ನಾಗರಾಜ್ ಅವರಿಗೆ ಕೂಡ ಹಾಗೆ ಮಾತನಾಡುವುದು ಅವರ ಒಂದು ಸ್ವಭಾವ,

ಶ್ರೀ ಕೆ. ಎಂ. ನಾಗಣ್ಣ.—ನಾನು ಹೇಳಿದ್ದು ಸದಸ್ಯರಿಗೆ ಎಂದು. ಆದರೆ ಮಂತ್ರಿಗಳು ಕೂಡ ಮೊದಲು ಸದಸ್ಯರು, ಆ ನಂತರ ಅವರು ಮಂತ್ರಿಗಳು. ಆದ್ದರಿಂದ ಹೇಳಿದ್ದಕ್ಕೆ ಇವರು ಕೋಪ ಮಾಡಿಕೊಳ್ಳುವ ಹಾಗೂ ಇಲ್ಲ—ಅತ್ತ ಅವರು ಸಂತೋಷಪಟ್ಟುಕೊಳ್ಳುವ ಹಾಗೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಆ ಪಾಠಶಾಲೆಯನ್ನು ಮಾಡಿದರೆ ಅದಕ್ಕೆ ಪ್ರಿನ್ಸಿಪಾಲರು ಶ್ರೀಮಾನ್ ಸಿದ್ಧವೀರಪ್ಪನವರು, ವೈಸ್ ಪ್ರಿನ್ಸಿಪಾಲರು ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಮತ್ತು ಅದಕ್ಕೆ ಫಿಜಿಕಲ್ ಕಲ್ಚರ್ ಇನ್‌ಸ್ಟ್ರಕ್ಟರ್ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರನ್ನು ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಹಿರಿಯರಿಗೇ ಒಂದು ಶಾಲೆ—ಕಿರಿಯರಿಗೇ ಒಂದು ಶಾಲೆ ತೆರೆಯಬೇಕು.

## Motion of thanks to the Governor's Address

(Debate Contd.)

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ್).—ಮಾನ್ಯ ಅಧ್ಯಕ್ಷಣಿಯರೇ ನಾವೀಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ. ಆದರೆ ಇದೇ ಸದನದಲ್ಲಿ ಅನೇಕ ಬಾರಿ ಚರ್ಚೆಯಾಗಿರತಕ್ಕ ಒಂದು ವಿಷಯ ಅಂದರೆ ಈ ರಾಜ್ಯಕ್ಕೆ ಕರ್ಣಾಟಕ ಎಂದು ಹೆಸರನ್ನು ಇಡತಕ್ಕ ವಿಷಯ. ಅನೇಕ ಸಾರಿ ಚರ್ಚೆ ನಡೆದಿದ್ದರೂ ರಾಜ್ಯಪಾಲರು ಅದರ ಬಗ್ಗೆ ಒಂದು ಮಾತನ್ನು ಅವರ ಭಾಷಣದಲ್ಲಿ ಹೇಳಿಲ್ಲ. ಇದು ಬರೇ ಒಂದು ಹೆಸರಿನ ಪ್ರಶ್ನೆ ಅಲ್ಲ. ಇದರ ಬಗ್ಗೆ ಸರ್ಕಾರ ಏನು ಒಂದು ತೀರ್ಮಾನ ಮಾಡಿದ್ದಾರೇ ? ಹಿಂದೆ ಇದ್ದ ಸರ್ಕಾರ ಇದರ ಬಗ್ಗೆ ಒಂದು ವಿರೋಧವಾದ ತೀರ್ಮಾನ

(ಶ್ರೀ ಬಿ. ವಿ. ಕಕ್ಕಿಲಾಯ)

ವನ್ನೇ ಮಾಡಿತ್ತು. ಈಗಿರತಕ್ಕ ಸರ್ಕಾರ ಕೂಡ ಅದೇ ಭಾವನೆ ತಾಳಿರುವಂತೆ ಕಾಣಬರುತ್ತಿದೆ. ಇಲ್ಲಿ ಸೇರಿರತಕ್ಕ ಮದ್ರಾಸ್, ಬೊಂಬಾಯಿ ಮತ್ತು ಹೈದ್ರಾಬಾದ್ ಕರ್ಣಾಟಕ ಪ್ರದೇಶಗಳಿಂದ ಬಂದಿರತಕ್ಕ ಜನರೆಲ್ಲಾ ಅನಗತ್ಯ ಆಗುಂತಕರು, ಅವರು ಹಳೇ ಮೈಸೂರಿನ ಯಜಮಾನಿಕೆಗೆ ಒಳಪಟ್ಟಿರಬೇಕು ಎಂಬ ಭಾವನೆ ಕೆಲವರಲ್ಲಿ ಬಂದಿದೆ ಎಂಬ ಅಂಶವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಕರ್ಣಾಟಕ ಏಕೀಕರಣವಾಗಿ ಕನ್ನಡ ನಾಡು ಒಂದುಗೂಡಿದ ಮೇಲೆ ರಾಜ್ಯಪಾಲರು ಇದರ ಬಗ್ಗೆ ಒಂದು ಮಾತನ್ನು ಹೇಳಿದ್ದರೆ ಚೆನ್ನಾಗಿತ್ತು. ಆದರೆ ಕೆಲವರಲ್ಲಿ ಇನ್ನೂ ಅರಸೊತ್ತಿಗೆಯ ಪಳೆಯುಳಿಕೆ ಕಾಯುವ ವಿಚಾರ ಉಳಿದಿದೆ, ಅದಿನ್ನು ಬಹಳ ಕಾಲ ಉಳಿಯಲಾರದು. ಅದು ಸಂಪೂರ್ಣವಾಗಿ ಅಳಿಯಲೇಬೇಕು. ಇಂದಲ್ಲ ನಾಳೆ ಈ ರಾಜ್ಯಕ್ಕೆ ಕರ್ಣಾಟಕ ಎಂಬ ಹೆಸರನ್ನು ಇಡಲೇಬೇಕೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ ಬಹಳ ಮುಖ್ಯವಾದ ವಿಚಾರ ಗಡಿ ವಿವಾದ. ಇದೂ ಕೂಡ ಹಲವು ವರ್ಷಗಳಿಂದ ನಮ್ಮ ತಲೆ ತಿನ್ನುತ್ತಿದೆ. ಬೆಳಗಾಂ ವಿಚಾರದಲ್ಲಿ ಸಧ್ಯ ನಾನು ಏನು ಹೇಳುವುದಕ್ಕೂ ಬಯಸುವುದಿಲ್ಲ. ಆ ಪ್ರಶ್ನೆ ಬಂದಾಗ ಮಾತನಾಡುವವನಿದ್ದೇನೆ. ಆದರೆ ನನ್ನ ಕ್ಷೇತ್ರಕ್ಕೆ, ನಾನು ಬಂದ ಜಿಲ್ಲೆಗೆ ಮತ್ತು ಈ ರಾಜ್ಯಕ್ಕೆ ಬಹಳ ಪ್ರಾಮುಖ್ಯವಾದಂಥ ಪ್ರಶ್ನೆಯನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಅದು, ಕಾಸರಗೋಡು ಪ್ರಶ್ನೆ. ಕಾಸರಗೋಡನ್ನು ಮೈಸೂರಿಗೆ ಸೇರಿಸಬೇಕೆಂದು; ಚಂದ್ರಗಿರಿ ಹೊಳೆಯ ಉತ್ತರ ಭಾಗ ಮೈಸೂರು ರಾಜ್ಯಕ್ಕೆ ಸೇರಬೇಕು ಎಂದು ಮಹಾಜನ್ ಆಯೋಗದವರು ಸ್ಪಷ್ಟವಾಗಿ ಶಿಫಾರಸನ್ನು ಮಾಡಿದ್ದಾರೆ. ಮಹಾಜನ್ ಆಯೋಗದ ಶಿಫಾರಸುಗಳನ್ನು ಪೂರ್ತಿಯಾಗಿ ಅಂಗೀಕಾರ ಮಾಡಬೇಕು ಎಂದು ನನ್ನ ಅಭಿಪ್ರಾಯ. ಅವರ ಅಭಿಪ್ರಾಯಗಳನ್ನು ಅಂಗೀಕಾರ ಮಾಡುವುದಕ್ಕೆ ಕೇಂದ್ರಸರ್ಕಾರದವರಿಗಾಗಲೀ ಅಥವಾ ಇಲ್ಲಿನ ಸರ್ಕಾರಕ್ಕಾಗಲೀ ಏನಾದರೂ ತೊಂದರೆಗಳು ಇದ್ದರೆ ಆ ವಿಚಾರ ಆಮೇಲೆ ನೋಡೋಣ. ಆದರೆ ಕಾಸರಗೋಡು ಬಗ್ಗೆ ಏನು ತೀರ್ಮಾನ ಕೊಟ್ಟಿದ್ದಾರೆ ಅದನ್ನು ಕಾಸರಗೋಡು ಜನ ಸಂಪೂರ್ಣವಾಗಿ ಸ್ವಾಗತ ಮಾಡಿದ್ದಾರೆ. ಆದ್ದರಿಂದ ಕಾಸರಗೋಡಿನ ಚಂದ್ರಗಿರಿ ಹೊಳೆಯ ಉತ್ತರ ಭಾಗ ಮೈಸೂರಿಗೆ ಸೇರುವ ವಿಷಯದಲ್ಲಿ ಸರ್ಕಾರ ತೀವ್ರವಾದ ಕಾರ್ಯಕ್ರಮಗಳನ್ನು ವಹಿಸಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮೂರನೆಯದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮದು ತುಳು ಮಾತನಾಡುವ ಪ್ರದೇಶ, ಶ್ರೀಮಾನ್ ವಾಟಾಳ್ ನಾಗರಾಜ್ ಮತ್ತು ಕೋಣಂದೂರು ಲಿಂಗಪ್ಪನವರು ಕನ್ನಡದ ಬಗ್ಗೆ ಎಷ್ಟು ಅಭಿಮಾನ ಪ್ರಕಟ ಮಾಡಿದ್ದಾರೋ ಅಷ್ಟೇ ನಮ್ಮದೂ ಇದೆ. ಆದರೆ ಕರ್ಣಾಕ ರಾಜ್ಯದಲ್ಲಿ ಕನ್ನಡ ಅಲ್ಲದೆ ಬೇರೆ ಭಾಷೆಗಳನ್ನು ಮಾತನಾಡುವವರೂ ಕೂಡ ಇದ್ದಾರೆ. ಸಾಮಾನ್ಯವಾಗಿ 17 ಲಕ್ಷ ಜನ ಮಾತನಾಡುವ ಭಾಷೆ ತುಳು. ಈ ತುಳು ಭಾಷೆಗೆ ಲಿಪಿ ಇಲ್ಲ. ಇದು ಹಿಂದುಳಿದ ಭಾಷೆ ಎನ್ನುವ ಭಾವನೆ ಇದೆ. ಆದರೆ ಆ ಭಾಷೆಗೆ ಪ್ರೋತ್ಸಾಹ ಕೊಡಬೇಕಾದುದು ಸರ್ಕಾರದ ಕರ್ತವ್ಯ ಎಂದು ಹೇಳಬೇಕಾಗಿದೆ. ಇವತ್ತು ಅನೇಕ ಸಿನಿಮಾಗಳು ತುಳು ಭಾಷೆಯಲ್ಲಿ ಆಗುತ್ತಿವೆ. ಸರ್ಕಾರದವರು ಕನ್ನಡ ಸಿನಿಮಾಗಳಿಗೆ ಎಷ್ಟು ಪ್ರೋತ್ಸಾಹ ಕೊಡುತ್ತಾರೋ ಅದೇ ರೀತಿಯಲ್ಲಿ ತುಳು ಸಿನಿಮಾಕ್ಕೂ ಕೂಡ ಪ್ರೋತ್ಸಾಹ ಕೊಡಬೇಕು. ಅಷ್ಟು ಮಾತ್ರವಲ್ಲ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸವನ್ನು ಕತ್ತಲೆಯಿಂದ ಬೆಳಕಿಗೆ ತರಲು ಅನೇಕರು ಪ್ರಯತ್ನ ಮಾಡುತ್ತಿದ್ದಾರೆ. Association of Indological Studies ಎಂಬ ಸಂಸ್ಥೆ ಬಹಳ ಉತ್ತಮ ಕೆಲಸಗಳನ್ನು ಮಾಡಿಕೊಂಡು ಬಂದಿದೆ. ಸರ್ಕಾರದವರು ಈ ಸಂಸ್ಥೆಗೆ ಪ್ರೋತ್ಸಾಹ ಮತ್ತು ಧನ ಸಹಾಯ ಕೊಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಕೊನೆಯದಾಗಿ ನೀರಾವರಿ ಬಗ್ಗೆ ಒಳ್ಳೆಯ ಮಾತುಗಳನ್ನಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ 3–4 ಮೈಲಿ ಅಂತರದಲ್ಲಿ ಚಿಕ್ಕ ಚಿಕ್ಕ ಹೊಳೆಗಳು ಹರಿಯುತ್ತಿರುತ್ತವೆ. ಆದರೆ ಆ ಹೊಳೆಗಳ ನೀರು ಉಪಯೋಗಕ್ಕೆ ಬರುತ್ತಿಲ್ಲ. ಲಿಫ್ಟ್ ಇರಿಗೇಷನ್ ಸ್ಕೀಂ ಪ್ರಕಾರ ನೇತ್ರಾವತಿ ಹೊಳೆಯ ಎರಡು ದಂಡೆಗಳಲ್ಲಿಯೂ ಸಾವಿರಾರು ಎಕರೆ ಜಮೀನನ್ನು ಸಾಗುಮಾಡುತ್ತಿದ್ದಾರೆ. ಅದೇ ರೀತಿ ಗುರುಪುರ ಹೊಳೆಯ ದಂಡೆಗಳಲ್ಲಿಯೂ ಯಶಸ್ವಿಯಾಗಿ ಲಿಫ್ಟ್ ಇರಿಗೇಷನ್ ಯೋಜನೆ ಕಾರ್ಯರೂಪಕ್ಕೆ ತಂದರೆ ಸಾವಿರಾರು ಎಕರೆ ಜಮೀನನ್ನು ಸಾಗುವಳಿಗೆತರಲಿಕ್ಕೆ ಸಾಧ್ಯವಿದೆ. ನನ್ನ ಕ್ಷೇತ್ರದಲ್ಲಿ ನಡೆದಂಥ ಎರಡು ಘಟನೆಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ನೇತ್ರಾವತಿ ನದಿಯ ಎರಡು ದಂಡೆಗಳಲ್ಲೂ ಕೂಡ ಸರ್ಕಾರದ ಅನುಮತಿಯನ್ನು ಪಡೆದು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಪಡೆದು ದೊಡ್ಡ ಇಂಜನ್ನುಗಳನ್ನು ಇಟ್ಟು ನೀರು ತೆಗೆದುಕೊಂಡು ನೂರಾರು ಎಕರೆ ಪ್ರದೇಶದಲ್ಲಿ ಸಾಗುವಳಿ

ಮಾಡುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಕೇಂದ್ರ ಸರ್ಕಾರದ ಒತ್ತಡದಿಂದ ಇರಬಹುದು, ಅವರಿಗೆ ಒಂದು ಆಜ್ಞೆ ಬಂತು. ಫರ್ಟಿಲೈಸರ್ಸ್ ಫ್ಯಾಕ್ಟರಿ ಮತ್ತು ಮಂಗಳೂರು ಬಂದರಿಗೆ ನೀರು ಸಾಕಾಗುವುದಿಲ್ಲ ಆದ್ದರಿಂದ ಪಂಪ್ ಸೆಟ್ಟುಗಳನ್ನು ಕಿತ್ತುಹಾಕಬೇಕು ಎಂದು. ಅದರಿಂದಾಗಿ ಪಂಪ್ ಸೆಟ್ಟುಗಳ ಉಪಯೋಗವನ್ನು ಅಲ್ಲ ತಡೆಹಿಡಿದಿದ್ದಾರೆ. ಆದ್ದರಿಂದ ನಾನು ಕೇಳಿಕೊಳ್ಳು ವುದು, ಈ ನದಿಯ ಎರಡು ದಂಡೆಗಳಲ್ಲಿ ನೀರು ತೆಗೆಯುವುದಕ್ಕೆ ರೈತರಿಗೆ ಇನ್ನಷ್ಟು ಪ್ರೋತ್ಸಾಹ ಕೊಡಬೇಕು. ನೀರು ತೆಗೆಯುವುದನ್ನು ಕಿತ್ತುಹಾಕಿ ನಮ್ಮ ಪ್ರದೇಶವನ್ನು ಬರಗಾಲ ಪ್ರದೇಶವನ್ನಾಗಿ ಮಾಡಬೇಡಿ.

ಇನ್ನು ಒಂದೇ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನನ್ನ ಕ್ಷೇತ್ರದಲ್ಲಿ "ಮುನ್ನೂರು ಲಿಫ್ಟ್ ಇರಿಗೇಷನ್ ಸ್ಕೀಂ" ನ್ನು ಮಾನ್ಯ ಹಿಂದಿನ ಮಂತ್ರಿಗಳು ಆದ ಶ್ರೀ ವಿಠ್ಠಲದಾಸ ಸೆಟ್ಟರು ಉದ್ಘಾಟನೆ ಮಾಡಿಬಂದ ದಿವಸವೇ ಅದು ಕೆಟ್ಟು ಹೋಗಿದೆ. ಇದರ ದುರಸ್ತು ಮಾಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಪೋಲೀಸು ಇಲಾಖೆಯ ಬಗ್ಗೆ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿದ್ದೇನೆ. ನನ್ನ ಕ್ಷೇತ್ರದಲ್ಲಿ ಕಳೆದ ಪಾರ್ಲಿಮೆಂಟ್ ಚುನಾವಣೆಯ ಸಂದರ್ಭದಲ್ಲಿ ಅನೇಕ ಅಂಗಡಿಗಳಿಗೆ ಬೆಂಕಿ ಹಚ್ಚಿದರು ಮತ್ತು ಲೂಟಿ ನಡೆಯಿತು, ಇದನ್ನು ಆಗಿನ ಒಬ್ಬ ಮಂತ್ರಿಗಳು, ಸೂಪರಿಂಟೆಂಡ್ ಆಫ್ ಪೋಲೀಸ್ ಮತ್ತು ಡೆಪ್ಯೂಟಿ ಕಮಿಷನರ್‌ರವರು ಕಣ್ಣಾರೆಕಂಡಿದ್ದಾರೆ. ಆದರೆ ಇವತ್ತಿನವರೆಗೂ ಈ ಬಗ್ಗೆ ಕೇಸ್ ದಾಖಲೆ ಮಾಡಿಲ್ಲ. ಚಾರ್ಜುಷೀಟು ಹಾಕಿಲ್ಲ. ಇವತ್ತು ಅತ್ಯಾಚಾರ ನಡೆಯುತ್ತಿದೆ. ಇವತ್ತು ಪೋಲೀಸು ಇಲಾಖೆಯವರು ಕಂಪನಿಗಳಿಗೆ ವ್ಯಾಪಾರಸ್ಥರಿಗೆ ಯಾವ ರೀತಿ ಸತಾಯಿಸುತ್ತಾರೆ ಎಂಬುದಕ್ಕೆ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಒಂದು ಕಂಪನಿಗೆ ಬರೆದಿರುವ ಪತ್ರವನ್ನು ತಮ್ಮ ಗಮನಕ್ಕೆ ತಂದು ಮೇಜಿನ ಮೇಲೆ ಇಡುತ್ತೇನೆ ಮಂತ್ರಿಗಳು ಇದರ ಬಗ್ಗೆ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆ ಪತ್ರ ಈ ರೀತಿ ಇದೆ:

"To Messrs. Navkarnataka Publications (P) Ltd., Kempegowda Circle, Bangalore.

Sir,

*Sub:* Balance Sheet and Profit and Loss Account of M/s. Navkarnataka Publications (P) Ltd., Bangalore for 1970-71.

I request you to kindly furnish me a copy of the Balance Sheet and Profit and Loss Account of Messrs. Navkarnataka Publication. (P) Ltd, Bangalore, for the year 1970-71 for this office reference, through the bearer of this letter, and oblige.

Thanking you,

Yours faithfully,

..............

Circle Inspector of Police,
III and IV Division, Special Branch,
Bangalore City."

ಇಂತಹ ಪತ್ರವನ್ನು ಪೋಲೀಸ್ ಅಧಿಕಾರಿಗಳು ಕಂಪನಿಗಳಿಗೆ ಬರೆಯುತ್ತಾರೆ. ಅವರಿಗೆ ಹಾಗೆ ಬರೆಯುವುದಕ್ಕೆ ಏನು ಅಧಿಕಾರ ಇದೆ ? ಲಂಚ ಕೊಡದಿರುವ ಅಂಗಡಿಗಳಿಗೆ ಹೋಗಿ ಕಾನೂನು ಮೀರಿ ವರ್ತಿಸುತ್ತಾರೆ. ಆದ್ದರಿಂದ ಇಂತಹ ಅಧಿಕಾರಿಗಳ ಮೇಲೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ಮೇಜಿನ ಮೇಲೆ ಈ ಪತ್ರವನ್ನು ಇಡುತ್ತಿದ್ದೇನೆ.

ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).— ಮಾನ್ಯ ಸಭಾಧ್ಯಕ್ಷಿಣಿಯವರೇ, ರಾಜ್ಯಪಾಲರ ಭಾಷಣಕ್ಕೆ ಅಭಿನಂದಿಸಲು ತಂದಿರುವ ನಿರ್ಣಯವನ್ನು ಸಮರ್ಥಿಸುತ್ತಾ ಕೆಲವು ಸಲಹೆಗಳನ್ನು ಮಾಡಲು ಬಯಸುತ್ತೇನೆ. ನಮ್ಮ ಪಕ್ಷದ ಧ್ಯೇಯಧೋರಣೆಗೆ ಅನುಸಾರವಾಗಿ ನಮ್ಮ ಸ್ನೇಹಿತರು ಹೇಳಿದಹಾಗೆ ಪ್ರಜಾಪ್ರಭುತ್ವದಲ್ಲಿ ಜಾತ್ಯಾತೀತ ಮತ್ತು ರಾಜತಾಂತ್ರಿಕ ಸುಖೀ

(ಶ್ರೀ ಎಚ್. ಬಿ. ಕೆಂಚೇಗೌಡ)

ರಾಜ್ಯ ಸ್ಥಾಪನೆ ಮಾಡಬೇಕು. ತನ್ಮೂಲಕ ಬಡವರ ಮತ್ತು ಬಲ್ಲಿದರ ಅಂತರವನ್ನು ಕಡಿಮೆ ಮಾಡಬೇಕು. ಬಡರೈತರ ಮತ್ತು ಕಾರ್ಮಿಕರ ಏಳಿಗೆಗೆ ಶ್ರಮಿಸಬೇಕು. ಆದರೆ ರಾಜ್ಯಪಾಲರ ಭಾಷಣ ಈ ಧ್ಯೇಯಧೋರಣೆಗಳಿಗೆ ಅನುಗುಣವಾಗಿಲ್ಲ ಎನ್ನುವುದನ್ನು ಹೇಳಬಯಸುತ್ತೇನೆ. ಸ್ವಾತಂತ್ರ್ಯ ಬಂದು 25 ವರ್ಷಗಳಾದಾಗ್ಯೂ ನಮ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚಾಗಿದ್ದು, ಸುಮಾರು ನೂರಕ್ಕೆ 70-80ರಷ್ಟು ಪ್ರತಿನಿಧಿಗಳು ಹಳ್ಳಿಯ ರೈತರಿಂದ ಆರಿಸಿ ಬಂದಿದ್ದಾಗ್ಯೂ ನಾವು ನಿರೀಕ್ಷಣೆ ಮಾಡಿದಷ್ಟು ಹಳ್ಳಿಗಳ ಅಭಿವೃದ್ಧಿಯಾಗಿಲ್ಲ. ಹಳ್ಳಿಯ ರೈತರ ಪ್ರತಿನಿಧಿಗಳು ಕರ್ತವ್ಯ ಲೋಪ ಮಾಡಿದ್ದಾರೆಂದು ಹೇಳಬಯಸುತ್ತೇನೆ.

ವಿದ್ಯಾಭ್ಯಾಸದ ವಿಚಾರವನ್ನೇ ತೆಗೆದುಕೊಂಡರೂ ಹಳ್ಳಿಗಳಲ್ಲಿ ನಾವು ನಿರೀಕ್ಷಣೆ ಮಾಡಿದಷ್ಟು ಅಭಿವೃದ್ಧಿಯಾಗಿಲ್ಲ. ನಾನು ಸಲಹೆ ಮಾಡುವುದು, ಇನ್ನು ಮುಂದೆ ಆದರೂ ಹಳ್ಳಿಯವರ ಅಭಿವೃದ್ಧಿಗಾಗಿ 70 ಭಾಗದಷ್ಟು ಹಣವನ್ನು ಉಪಯೋಗಿಸಬೇಕು ಎಂಬುದೇ ನನ್ನ ಸಲಹೆ. ವ್ಯವಸಾಯದಲ್ಲಿ ನಿರತರಾಗಿರತಕ್ಕವರಿಗೆ ವ್ಯವಸಾಯದ ವೃತ್ತಿ ಲಾಭದಾಯಕವಾಗಿಲ್ಲ. ಎಲ್ಲರೂ ಶೋಷಣೆ ಮಾಡುವವರಾಗಿದ್ದಾರೆ. ಈ ವೃತ್ತಿ ಕಷ್ಟತಮವಾದುದು. ಈ ವೃತ್ತಿಯನ್ನವಲಂಬಿಸಿ ಜೀವನ ಮಾಡುವವರ ಜೀವನ ಮಟ್ಟ ಕಡಿಮೆಯಾಗಿದೆ. ಇವರಿಗೆ ಇರುವ ವಸತಿ ಸೌಕರ್ಯವನ್ನಾಗಲೀ, ಬಟ್ಟೆ ಬರೆಯನ್ನಾಗಲೀ ವಿದ್ಯಾಸೌಕರ್ಯವನ್ನಾಗಲೀ ವೈದ್ಯಕೀಯ ಸೌಕರ್ಯವನ್ನಾಗಲೀ ಬೇರೆಯವರೊಂದಿಗೆ ಹೋಲಿಸಿಕೊಂಡು ನೋಡಿದರೆ ಇತರೆ ವರ್ಗದ ಜನರಿಗಿಂತ ಕಡಿಮೆಯಾಗಿದೆ. ಯೋಜನೆ ಹಾಕುವಾಗ ಎಲ್ಲಾ ಇಲಾಖೆಗಳಿಗಿಂತಲೂ ಹೆಚ್ಚಾಗಿ ಹಣ ಹಳ್ಳಿಗಳ ಅಭಿವೃದ್ಧಿಗೆ ಉಪಯೋಗಿಸಬೇಕು ಎಂಬುದೇ ನನ್ನ ಆಶಯ.

1-30 P.M.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಭೂಸುಧಾರಣೆ ಬಗ್ಗೆ ಮಾತನಾಡುತ್ತಾ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಏನೆಂದರೆ ಭೂಸುಧಾರಣೆ ಮಾಡುವಾಗ ಗರಿಷ್ಠ ಮಿತಿಗಳನ್ನು ತಗ್ಗಿಸುವ ವಿಚಾರಗಳನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಸಲಹೆ ಏನೆಂದರೆ ಈ ಒಂದು ಭೂಸುಧಾರಣೆ ಮಾಡುವಾಗ, ಗರಿಷ್ಠ ಮಿತಿಯನ್ನು ನಿಗದಿ ಮಾಡುವಾಗ ಒಂದು ವಿಷಯವನ್ನು ಯೋಚನೆ ಮಾಡಬೇಕು. ವ್ಯವಸಾಯಗಾರನ ವೃತ್ತಿಯಲ್ಲಿ ಏನು ಆದಾಯ ಇದೆ, ಅವನಿಗೆ ಇಷ್ಟು ಎಕರೆ ಎಂದು ಮಿತಿಗೊಳಿಸಿದರೆ ಅವನು ಆ ವ್ಯವಸಾಯಕ್ಕೆ ಖರ್ಚು ಮಾಡಿದ ಒಟ್ಟು ಮೊತ್ತಕ್ಕೆ ಏನು ಆದಾಯ ಬರುತ್ತದೆ, ಇದರಿಂದ ಅವನು ಯಾವ ಮಟ್ಟದಲ್ಲಿ ಜೀವನ ಮಾಡಬಹುದು ಎಂಬುದನ್ನು ನಿರ್ಧಾರ ಮಾಡಬೇಕು. ಉದಾಹರಣೆಗೆ ಪಟ್ಟಣದ ಆಸ್ತಿಯನ್ನು ಸುಮಾರು 5-6 ಲಕ್ಷ ರೂಪಾಯಿಗಳ ಆಸ್ತಿ ಇರಬಹುದು ಎಂದು ಮಿತಿಗೊಳಿಸುತ್ತೀರಿ. ಹಣದರೂಪದಲ್ಲಿದ್ದರೆ ಅದನ್ನು ತೆಗೆದುಕೊಂಡು ಹೋಗಿ ಬ್ಯಾಂಕ್‌ನಲ್ಲಿ ಫಿಕ್ಸ್‌ಡ್ ಡಿಪಾಸಿಟ್‌ನಲ್ಲಿ ಇಟ್ಟರೂ ವರ್ಷಕ್ಕೆ 40 ಸಾವಿರ ರೂಪಾಯಿ ಆದಾಯ ಬರುತ್ತದೆ. ಅದೇರೀತಿ ಈ ವ್ಯವಸಾಯ ತೆಗೆದುಕೊಂಡರೆ ಹೆಚ್ಚು ಆದಾಯ ಬರುವುದಿಲ್ಲ. ಭೂಮಿಯನ್ನು ಮಿತಿಗೊಳಿಸುವುದರ ಸಂದರ್ಭದಲ್ಲಿ ನಮ್ಮ ಅನುಭವದ ಪ್ರಕಾರ ಒಂದು ಸಂಸಾರಕ್ಕೆ 25 ಎಕರೆ ಎಂದು ಇಟ್ಟುಕೊಂಡ ಪಕ್ಷದಲ್ಲಿ ಅದರ ಖರ್ಚು ವೆಚ್ಚಗಳು ಹೋಗಿ ವರ್ಷಕ್ಕೆ 12 ಸಾವಿರ ರೂಪಾಯಿ ಆದಾಯ ಬರುವುದು ಕಷ್ಟ. 12 ಸಾವಿರ ರೂಪಾಯಿ ಆದಾಯ ಬಂದ ಪಕ್ಷದಲ್ಲಿ ಒಂದು ಸಂಸಾರಕ್ಕೆ ಒಂದುತಿಂಗಳಿಗೆ ಒಂದು ಸಾವಿರ ರೂಪಾಯಿ ಆದಾಯ ಬಂದಂತಾಗುತ್ತದೆ. ಅದೇ ರೀತಿ ಒಬ್ಬ ಲಾಯರ್ ಆಗಲಿ, ಒಬ್ಬ ಡಾಕ್ಟರ್ ಆಗಲಿ, ಯಾರು ಯಾವ ವೃತ್ತಿಯಲ್ಲೇ ಇರಲಿ, ಕೈಗಾರಿಕೆಯಲ್ಲೇ ಆಗಲಿ, ವ್ಯಾಪಾರಸ್ಥರೇ ಆಗಲಿ ಎಲ್ಲರಿಗೂ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ, ಆದಾಯ ಬರತಕ್ಕ ಹಾಗೆ ಮಿತಿಗೊಳಿಸಬೇಕು. ಈ ಒಂದು ವಿಚಾರವನ್ನು ಸಲಹೆ ಮಾಡುತ್ತೇನೆ. ಆದುದರಿಂದ ಮುಂದೆ ಭೂಸುಧಾರಣೆ ಕಾಯಿದೆ ಬಂದಾಗ ಆಲೋಚನೆ ಮಾಡಿ ಭೂಮಿಯನ್ನು ಮಿತಿಗೊಳಿಸುವುದಕ್ಕೆ ಮುಂಚಿತವಾಗಿ ಒಂದು ಕಮೀಷನ್ ನೇಮಿಸಿ ಗದ್ದೆ ಅಥವಾ ತೋಟ ಅಥವಾ ಖುಷ್ಕಿ ಎಷ್ಟು ಇದ್ದರೆ, ಎಷ್ಟು ಆದಾಯ ಬರುತ್ತದೆ ಮತ್ತು ಎಷ್ಟು ಆದಾಯ ಬಂದರೆ ಜೀವನ ನಡೆಸಬಹುದು ಎನ್ನುವುದನ್ನು ನಿರ್ಧಾರ ಮಾಡಿ ಅನಂತರ ಗರಿಷ್ಠ ಮಿತಿಯನ್ನು ನಿರ್ಧರಿಸಿ. ತಮಿಳು ನಾಡಿನಲ್ಲಿ 40 ಸ್ಟ್ಯಾಂಡರ್ಡ್ ಎಕರೆ ಗರಿಷ್ಠ ಮಿತಿ ಮಾಡಿದ್ದಾರೆ, ಬೇರೆ ರಾಜ್ಯಗಳಲ್ಲಿ 30 ಸ್ಟ್ಯಾಂಡರ್ಡ್ ಎಕರೆ ಗರಿಷ್ಠ ಮಿತಿ ಮಾಡಿದ್ದಾರೆ. ಆದುದರಿಂದ ಇದನ್ನು ಆಲೋಚನೆ ಮಾಡಬೇಕು ಎಂದು ಭೂಸುಧಾರಣೆ ಬಗ್ಗೆ ಇಷ್ಟು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ವಿಚಾರದಲ್ಲಿ ಮಾತನಾಡುವುದಾದರೆ ಏನಾದರೂ ಒಂದು ಸ್ಕೀಮು ತಂದರೆ ಸಣ್ಣಪುಟ್ಟ ರೈತರಿಗೆ ಅದರಿಂದ ಯಾವ ಪ್ರಯೋಜನವೂ ದೊರಕುತ್ತಾ ಇಲ್ಲ. ದೊಡ್ಡ ದೊಡ್ಡ ಜಮೀನ್ದಾರರಿಗೆ ಆ ಸೌಲಭ್ಯಗಳು ದೊರಕುತ್ತಾ ಇವೆಯೇ ವಿನಾ ಸಣ್ಣಪುಟ್ಟ ರೈತರ ಸ್ಥಿತಿ ಹಿಂದೆ ಇದ್ದ ಹಾಗೆಯೇ ಇದೆ. ಇದು ಜನಜನಿತವಾಗಿರುತ್ತದೆ. ವ್ಯವಸಾಯದ ಇಲಾಖೆ ದೊಡ್ಡ ಇಲಾಖೆ ಆಗಿ ಅಧಿಕಾರಿಗಳ ಸಂಬಳ ಕೊಡುತ್ತಿದ್ದಾರೆಯೇ ವಿನಾ ಸಣ್ಣ ಪುಟ್ಟ ರೈತರಿಗೆ ಆ ಅಧಿಕಾರಿಗಳಿಂದ ಯಾವ ಪ್ರಯೋಜನವೂ ದೊರಕುತ್ತಾ ಇಲ್ಲ. ಅಲ್ಲಿರುವ ತಾಂತ್ರಿಕ ಅಧಿಕಾರಿಗಳು ಪಟ್ಟಣಗಳಲ್ಲಿಯೇ ಪ್ರಯೋಗಗಳನ್ನು ತೋರಿಸುತ್ತಾರೆಯೇ ವಿನಾ ಹಳ್ಳಿಗಳಲ್ಲಿ ಹೋಗಿ ವ್ಯವಸಾಯ ದಲ್ಲಿ ನಿರತರಾಗಿರತಕ್ಕವರಿಗೆ ಆ ಪ್ರಯೋಗದ ಸೌಲಭ್ಯ ದೊರಕುವಂತೆ ಮಾಡುತ್ತಾ ಇಲ್ಲ. ಆದು ದರಿಂದ ಹಳ್ಳಿಗಳಲ್ಲಿ ಹೋಗಿ ಈ ಪ್ರಯೋಗದ ಸೌಲಭ್ಯ ರೈತರಿಗೆ ದೊರಕುವಂತೆ ಮಾಡಬೇಕು ಎಂದು ಹೇಳಬಯಸುತ್ತೇನೆ.

ಕೊನೆಯದಾಗಿ ಬೃಹತ್ ನೀರಾವರಿ ಯೋಜನೆ ಬಗ್ಗೆ ಒಂದೆರಡು ಮಾತು ಹೇಳಿ ಮುಗಿ ಸುತ್ತೇನೆ. ಈ ಬೃಹತ್ ನೀರಾವರಿ ಯೋಜನೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ನಮ್ಮಲ್ಲಿ ಅನೇಕ ಸಮಸ್ಯೆಗಳು ಇವೆ, ಆದರೆ ಎಲ್ಲಾ ಸಮಸ್ಯೆಗಳನ್ನೂ ಒಂದೇ ಸಾರಿ ತಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಮುಖ್ಯವಾಗಿ ಯಾವುದಕ್ಕೆ ಆದ್ಯತೆ ಕೊಡಬೇಕೋ ಆ ವಿಚಾರಕ್ಕೆ ಆದ್ಯತೆ ಕೊಡಬೇಕು ಎಂದು ಹೇಳಿದ್ದಾರೆ. ಈ ಬೃಹತ್ ನೀರಾವರಿ ಯೋಜನೆ ವಿಚಾರದಲ್ಲಿ ಹಿಂದಿನ ಶ್ರೀ ವೀರೇಂದ್ರಪಾಟೀಲರ ಸರ್ಕಾರದಲ್ಲಿ 28 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎನ್ನುವುದು ಗೊತ್ತಿದೆ, ರಾಜ್ಯಪಾಲರ ಕಾಲದಲ್ಲಿ 32 ಕೋಟಿ ರೂಪಾಯಿ ಖರ್ಚಾಗಿದೆ, ಆದರೆ ಈ ವರ್ಷದಲ್ಲಿ ಕೇವಲ 22 ಕೋಟಿ ರೂಪಾಯಿಗಳು ಖರ್ಚಾಗಿರುವುದು ಬಹಳ ಶೋಚನೀಯವಾದ ವಿಚಾರ. ಈ ವರ್ಷದ ಮಟ್ಟಿಗೆ 40 ಕೋಟಿ ರೂಪಾಯಿ ಇಟ್ಟರೆ ಕೃಷ್ಣಾ ಯೋಜನೆಗೆ 20 ಕೋಟಿ ರೂಪಾಯಿ, ಕಾವೇರಿ ಯೋಜನೆಗೆ 20 ಕೋಟಿ ರೂಪಾಯಿ ಖರ್ಚಾಗುತ್ತದೆ. ಆದರೆ ಈಗ 6 ಕೋಟಿ ರೂಪಾಯಿ ಖರ್ಚು ಮಾಡಿದರೆ ಕಬಿನಿ ಪ್ರಾಜೆಕ್ಟ್ ಪೂರ್ತಿಯಾಗಿ ಅದರ ಪ್ರತಿಫಲ ಬರುತ್ತದೆ. ಮತ್ತು ಮಲಪ್ರಭಾ ಪೂರ್ತಿ ಆಗುವುದಕ್ಕೆ ಸಾಕಷ್ಟು ಹಣವನ್ನು ಒದಗಿಸಬೇಕು. ಅದಕ್ಕಾಗಿ ಈ ನೀರಾವರಿ ಯೋಜನೆ ಗಳನ್ನು ಸ್ಥಗಿತ ಗೊಳಿಸುವುದು ಸರಿಯಲ್ಲ. ಈ ಯೋಜನೆಗೆ ಹೆಚ್ಚಿನ ಹಣವನ್ನು ಹಾಕಿ ಕಾರ್ಯಗತ ಮಾಡಬೇಕು ಎಂದು ಸರ್ಕಾರಕ್ಕೆ ಸಲಹೆ ಮಾಡಬಯಸುತ್ತೇನೆ.

† ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಮಾನ್ಯ ರಾಜ್ಯ ಪಾಲರು ಮಾಡಿದ ಭಾಷಣದಲ್ಲಿ ಉಪ್ಪು, ಹುಳಿ, ಕಾರ ಏನೂ ಇಲ್ಲ. ಸಪ್ಪೆ ಭಾಷಣವಾಗಿದೆ. ದೇಶಾದ್ಯಂತ ಬಡತನ ನಿವಾರಣೆಗೆ ಟೊಂಕ ಕಟ್ಟಿದ್ದೇವೆ ಎಂದು ಕೂಗನ್ನು ಹೇಳಿ ಆಳುವ ರಾಜಕೀಯ ಪಕ್ಷ ನಮ್ಮ ರಾಜ್ಯದಲ್ಲಿ ಸಾಕಷ್ಟು ಜನ ಅದರ ಸದಸ್ಯರಾಗಿ ಬರಲು ಅನುಕೂಲ ಮಾಡಿಕೊಂಡರು. ಆದರೆ ಬಡತನ ನಿವಾರಣೆ ಬಗ್ಗೆ ಈಗ ಏನೊಂದು ಕಾರ್ಯಕ್ರಮವೂ ಕಾಣುತ್ತಾ ಇಲ್ಲ. 25 ವರ್ಷ ರಾಜ್ಯಭಾರ ಮಾಡಿಕೊಂಡು ಬಂದಂಥ ಸಂಪ್ರದಾಯವೇ ಇದೆ. ರಾಜ್ಯಪಾಲರ ಭಾಷಣದಿಂದ ಹೊಸ ಆಡಳಿತ ಹೇಗಿರುತ್ತದೆ ಎನ್ನುವ ಕಲ್ಪನೆ ಬಂದಿಲ್ಲ. ಹಿಂದಿನ ಸರ್ಕಾರದಲ್ಲೂ ಇಂದಿನ ಸರ್ಕಾರ ದಲ್ಲೂ ಹೆಚ್ಚು ಬದಲಾವಣೆ ಇಲ್ಲ ಎನ್ನತಕ್ಕಂಥ ಮಾತು ನಮ್ಮ ಸದಸ್ಯರು ಯಾರು ಪ್ರಾರಂಭ ದಿಂದಲೂ ರಾಜಕೀಯ ಜೀವನದಲ್ಲಿ ಇದ್ದು ಯಾರು ವಿರೋಧ ಪಕ್ಷದಲ್ಲಿದ್ದರೋ ಅಂಥಾವರಿಗೆ ಅನಿಸುತ್ತದೆ. 4—5 ವರ್ಷ ವಿರೋಧ ಪಕ್ಷದಲ್ಲಿ ಕೆಲಸ ಮಾಡಿ ಹೋದಂಥ ಶ್ರೀಯುತರುಗಳಾದ ಸಿದ್ಧವೀರಪ್ಪನವರು, ಚೆನ್ನಬಸಪ್ಪನವರು, ಅಜೀಜ್ ಸೇಟರು, ಹುಚ್ಚಮಾಸ್ತಿಗೌಡರು, ಮಲ್ಲಿಕಾರ್ಜುನ ಸ್ವಾಮಿಯವರು ಅಂತಹವರು ಆಡಳಿತ ನಡೆಸಲು ಬಂದಿದ್ದಾರೆ. ಈ ಒಂದು ದೃಷ್ಟಿಯಿಂದ ಜನತೆಯ ಕನಸನ್ನು ನನಸಾಗಿ ಮಾಡುವುದು ಸಂಪೂರ್ಣವಾಗಿ ಸಾಧ್ಯವಾಗದಿದ್ದರೂ ಕೂಡ ವಿರೋಧ ಪಕ್ಷದಲ್ಲಿ ಅನುಭವ ಪಡೆದು ಜನತೆಯ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು ಅವರ ಪರವಾಗಿ ಹೋರಾಡಿದ ಹಿನ್ನೆಲೆಯನ್ನು ನೆನೆಸಿ ಕೊಂಡು ಜನತೆಗೆ ದುಡಿಯುವವರು ಎನ್ನತಕ್ಕಂಥಾ ಮಾತನ್ನು ನೆನೆಸಿ ಕೊಂಡು ಸ್ವಲ್ಪ ಆಶಾದಾಯಕವಾಗಿ ಇರೋಣ. ಈಗ ಹೊಸದಾಗಿ ಬಂದಿದ್ದಾರೆ, ಈಗ ಹೆಚ್ಚು ಟೀಕೆ ಮಾಡುವ ವಿಚಾರ ಇಲ್ಲ. ಸಮಯ ಕೊಟ್ಟು ನೋಡೋಣ, ಸ್ವಲ್ಪ ಕಾದು ನೋಡೋಣ. ಅವರು ವಿರೋಧ ಪಕ್ಷದಲ್ಲಿದ್ದಾಗ ವಿರೋಧಪಕ್ಷದ ವತಿಯಿಂದ ಸಂಪೂರ್ಣವಾದ ಜವಾಬ್ದಾರಿಯಿಂದ ವರ್ತಿಸಿದ್ದಾರೆ. ಈವೊತ್ತು ಅವರು ಆಡಳಿತ ಪಕ್ಷದಲ್ಲಿದ್ದಾರೆ. ಈ ದಿವಸ ವಿರೋಧ ಪಕ್ಷದವರೂ ಕೂಡ ಅವರ ಮಾತಿಗೆ ಸಹಕರಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಬಡತನ ನಿವಾರಣೆ ಬಗ್ಗೆ ಒಂದು ಹೆಜ್ಜೆ ಮುಂದೆ ಇಡಬೇಕಾದರೆ ಕೇವಲ ಒಂದು ಸಮಾಜದ ಕೂಗಿನಿಂದ ಆಗುತ್ತದೆ ಎನ್ನತಕ್ಕ ಕಲ್ಪನೆ ಇಟ್ಟುಕೊಂಡವರು ಕೆಲವು ಜನ ಇದ್ದಾರೆ. ಈ ಬಡತನ ನಿವಾರಣೆ ಆಗುವುದಕ್ಕೆ ಯಾವ ಯಾವ ಉಪಾಯಗಳು ಬೇಕೋ ಎನ್ನುವ ಪ್ರಶ್ನೆ

(ಶ್ರೀ ವಿಶ್ವನಾಥರೆಡ್ಡಿ)

ಅಲ್ಲ. ಸಮಾಜವಾದವನ್ನೇ ಆಧಾರವಾಗಿಟ್ಟುಕೊಂಡು ಅದಕ್ಕೆ ಶರಣು ಹೋಗಬೇಕೇ ಹೊರತು ಬೇರೆ ಯಾವ ಮಾರ್ಗವೂ ಇಲ್ಲ. ಪ್ರಧಾನವಾಗಿ ಬಡತನ ನಿವಾರಣೆಯಾಗಬೇಕು. ಬಡತನದಿಂದ ಬಳಲುತ್ತಾ ಇರತಕ್ಕಂಥ ಸಾವಿರಾರು ಜನರಿಗೆ ಯಾವ ಸೌಕರ್ಯಗಳು ಬೇಕೋ, ಆ ಸೌಕರ್ಯಗಳನ್ನು ಒದಗಿಸಿ, ಬಡತನ ನಿವಾರಣೆ ಮಾಡುವ ಪ್ರಯತ್ನ ಮಾಡಬೇಕು. ಪ್ರತಿಯೊಬ್ಬ ಮನುಷ್ಯನಿಗೂ ಕೂಡ ಮಿನಿಮಂ ನೆಸೆಸಿಟೀಸ್ ಏನಿದೆ ಅದನ್ನು ಪೂರ್ಣಮಾಡಲು ಸರಕಾರ ಉತ್ತಮವಾದ ವ್ಯವಸ್ಥೆ ಮಾಡಬೇಕು. ಯಾರಾದರೂ ಉದ್ಯೋಗ ಬಯಸಿದರೆ ಅದನ್ನು ಕಲ್ಪಿಸಿಕೊಡಲು ವ್ಯವಸ್ಥೆಯಾಗ ಬೇಕು. ಯಾರಾದರೂ ಹೊಟ್ಟೆ ಬಟ್ಟೆಗೆ ದುಡಿಯಲು ಸಿದ್ಧವಾಗಿದ್ದರೆ ಅದಕ್ಕೆ ಅವಕಾಶ ಕಲ್ಪಿಸ ಬೇಕು. ಇಂಥ ಒಂದು ದೃಷ್ಟಿಯಿಂದ ನಮ್ಮ ರಾಜ್ಯ ಸರಕಾರ ತನ್ನ ಬಜೆಟ್ಟನ್ನು ತಯಾರಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಜಿಲ್ಲೆಗೆ ಒಂದು ಸಾವಿರ ಜನರಿಗೆ ಉದ್ಯೋಗ ಒದಗಿಸಲು ವ್ಯವಸ್ಥೆಮಾಡಿರುವುದಾಗಿ ಹೇಳಿದ್ದಾರೆ. ಒಂದೊಂದು ಜಿಲ್ಲೆಯಲ್ಲೂ ಸಾವಿರಾರು ಜನ ನಿರುದ್ಯೋಗಿಗಳಿದ್ದಾರೆ. ಸರಕಾರ ಇದನ್ನು ಪರಿಶೀಲಿಸಿ ಅವರಿಗೆ ಉದ್ಯೋಗ ದೊರಕಿಸಿಕೊಡಬೇಕು ಮತ್ತು ಎಸ್ ಎಸ್ ಎಲ್ ಸಿ ಫೈಲ್ ಆಗಿರುವವರಿಗೆ ಕೂಡ ಒಂದೆರಡು ವರ್ಷ ಟ್ರೈನಿಂಗ್ ಕೊಟ್ಟು ನೌಕರಿ ದೊರೆಯುವಂತೆ ನೋಡಿಕೊಳ್ಳಬೇಕು, ಸಮಯ ಸುಮ್ಮನೆ ಕಳೆಯುವು ದಕ್ಕೆ ಅವಕಾಶ ಕೊಡಬಾರದು.

ಇದರಹಾಗೆ ಬೇಸಿಕ್ ನೆಸೆಸಿಟೀಸ್ ಇರುವುದರಲ್ಲಿ ಹೆಲ್ತ್ ಸರ್ವಿಸಸ್ ಮುಖ್ಯವಾದುದು. ಪ್ರತಿ ಯೊಬ್ಬ ರಾಜ್ಯದ ಪ್ರಜೆಗೂ ಹೆಲ್ತ್ ಸರ್ವಿಸಸ್ ಉಚಿತವಾಗಿ ಸಿಕ್ಕಬೇಕು. ಆ ದೃಷ್ಟಿಯಿಂದ ವೈದ್ಯ ಕೀಯ ಪ್ರಯೋಗ ನಡೆಸಬೇಕು. ಕೇವಲ ಅಲೋಪತಿಕ್ ಅಲ್ಲ, ಹೋಮಿಯೋಪತಿಕ್ ಮತ್ತು ಆಯುರ್ವೇದ ವೈದ್ಯಕೀಯ ಪದ್ಧತಿಗಳಿಗೂ ಅವಕಾಶ ಮಾಡಿ ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಹೆಲ್ತ್ ಸರ್ವಿಸಸ್ ಸರಿಯಾಗಿ ದೊರೆಯುವಂತೆ ಮಾಡಬೇಕು, ಯಾರೂ ಕೂಡ ಸರಿಯಾಗಿ ಇದು ದೊರೆಯುತ್ತಿಲ್ಲವೆಂದು ಹೇಳಲು ಅವಕಾಶವಿರಬಾರದು. ಇಂದು ಆಸ್ಪತ್ರೆಗಳಲ್ಲಿ ನೋಡಿದರೆ ಬಹಳ ಕನಿಕರ ಪರಿಸ್ಥಿತಿ ಇದೆ, ಕಟುಕರ ಓಣಿಯಲ್ಲಿ ನೂಕುವಹಾಗೆ ರೋಗಿಗಳನ್ನು ದವಾಖಾನೆಗಳಲ್ಲಿ ಹಾಕುತ್ತಿದ್ದಾರೆ. ನಮ್ಮ ಪತ್ರಿಕೆಯಲ್ಲಿ ಯಾದಗಿರಿಯ ಡಾಕ್ಟರ ಬಗ್ಗೆ ವರದಿ ಮಾಡಿದ್ದರೂ ಕೂಡ ಇದುವರೆಗೂ ಸರಕಾರ ಆ ಕಡೆ ಗಮನಕೊಟ್ಟಿಲ್ಲ. ಜವಾಬ್ದಾರಿ ಯುತವಾಗಿ ಒಂದು ಪತ್ರಿಕೆಯಲ್ಲಿ ಸುದ್ದಿ ಬಂದಮೇಲೆ ಅದು ತಪ್ಪೇ ಅಥವಾ ನಿಜವೇ ಎಂಬುದನ್ನು ವಿಮರ್ಶೆಮಾಡಬೇಕು, ಬೇಕಾದರೆ ಸಬ್‌ಸ್ಟ್ಯಾನ್‌ಷಿಯೇಟ್ ಮಾಡಿ ಎಂದು ಕೇಳಬಹುದು. ನಿಜ ವಿದ್ದರೆ ಅವರಮೇಲೆ ಕ್ರಮ ಕೈಕೊಳ್ಳಬೇಕಾಗಿತ್ತು. ಇಲ್ಲಿಯವರೆಗೆ ಜವಾಬ್ದಾರಿ ಸರಕಾರವಿರಲಿಲ್ಲ; ಈಗಿದೆ. ಒಂದು ಕಡೆಯೂ ಸರಿಯಾದ ವ್ಯವಸ್ಥೆಯಿಲ್ಲ, ಪ್ರತಿಯೊಂದು ದವಾಖಾನೆಯ ಪರಿಸ್ಥಿತಿಯೂ— ಒಂದೇ ರೀತಿಯಿದೆ. ಜನರನ್ನು ಪ್ರಾಣಿಗಳಂತೆ ಕಾಣುತ್ತಿದ್ದಾರೆ. ಈ ಪರಿಸ್ಥಿತಿ ಹೋಗಬೇಕು. ಪ್ರತಿ ಯೊಬ್ಬರಿಗೂ ಹೆಲ್ತ್ ಸರ್ವಿಸಸ್ ಪುಕ್ಕಟೆಯಾಗಿ ದೊರೆಯಬೇಕು ಮತ್ತು ಎಲ್ಲಾ ದೃಷ್ಟಿಯಿಂದಲೂ ಸೌಕರ್ಯ ದೊರೆಯಬೇಕು.

ಇನ್ನು ಕೋ-ಆಪರೇಟಿವ್ ಸೆಕ್ಟಾರ್ ಬಗ್ಗೆ ಹೇಳಬೇಕಾದರೆ ಬಡತನ ನಿವಾರಣೆಯಾಗಬೇಕು. ಸಮಾಜವಾದ ಜಾರಿಗೆ ಬರಬೇಕು ಎಂಬ ಅಪೇಕ್ಷೆ ಇರುವಾಗ ಸಹಕಾರ ಸಂಘಗಳ ಪರಿಸ್ಥಿತಿ ನೋಡಿ ದರೆ ಅದರಿಂದ ಅನುಕೂಲವಾಗುವುದರಲ್ಲಿ ಅನುಮಾನವಿದೆ. ಈ ವಿಚಾರದಲ್ಲಿ ಒಂದು ಮಾತು. ಕೋ-ಆಪರೇಟಿವ್ ಸೆಕ್ಟಾರ್ ಬೆಳೆಸಲು ಕಾಂಪಿಟಿಟಿವ್ ದೃಷ್ಟಿ ಇರುವಂತೆ ಮಾಡಬೇಕು, ಬೇಕಾದರೆ ಅದಕ್ಕೆ ಸಬ್ಸಿಡಿ ಕೊಡಿ. ಎಲ್ಲಿ ಸೊಸೈಟಿಯು ಒಳ್ಳೆಯ ಕೆಲಸ ಮಾಡುವುದಿಲ್ಲ ಅಲ್ಲಿ ಅದಕ್ಕೆ ಕಡಿವಾಣ ಹಾಕಿ. ಹೀಗೆ ಮಾಡಿ ಈ ಪ್ರಯೋಗ ಯಶಸ್ವಿಯಾದರೆ ಬೇರೆ ಸೆಕ್ಟಾರ್‌ಗಳಿಗೂ ಇದನ್ನು ವಿಸ್ತರಿಸ ಬಹುದು.

ಕೊನೆಯದಾಗಿ ಒಂದು ಮಾತು. ಬಾವಿಗಳ ಸೌಕರ್ಯವನ್ನು ಒಕ್ಕಲಿಗರಿಗೆ ಕೊಡುವ ಬಗ್ಗೆ ಎಸ್. ವೈ. ಪಾಟೀಲರು ಸಲಹೆ ಮಾಡಿದರು. ಒಂದು ಎಕರೆ ಭೂಮಿ ಇರುವವರಿಗೂ ಕೊಡ ಬೇಕಾದರೆ ಬಾವಿಗೆ ಅವಕಾಶಮಾಡಿಕೊಡಬೇಕು ಮತ್ತು ಸರಕಾರದ ಕಡೆಯಿಂದ ಬಾವಿ ತೆಗೆಸಿ ಕೊಡಬೇಕು. ಬೇಕಾದರೆ ಹಣ ಆಮೇಲೆ ಪಡೆಯಬಹುದು. ರಾಜ್ಯಪಾಲರ ಭಾಷಣದಲ್ಲಿ ಬಡತನ ನಿವಾರಣೆ ಮಾಡಲು ಸಾಕಾದಷ್ಟು ವ್ಯವಸ್ಥೆ ಮಾಡಿರುವುದೇನೂ ಇಲ್ಲ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್. (ಹೊಸನಗರ).— ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರಾಜ್ಯಪಾಲರಾದ ಮಾನ್ಯ ಸುಖಾಡಿಯಾರವರು ಮಾಡಿರುವ ಭಾಷಣವನ್ನು ಸ್ವಾಗತಮಾಡಿ ಅದಕ್ಕೆ ಗೌರವವನ್ನು ಸೂಚಿಸಿ ಪ್ರಧಾನಿಯವರ ಸಮಾಜವಾದಕ್ಕೆ ಮತ್ತು ರಕ್ತ ರಹಿತ ಕ್ರಾಂತಿಗೆ ಬೆಂಬಲ ಸೂಚಿಸಿ ಕೆಲವು ಮಾತುಗಳನ್ನು ಹೇಳಬಿಚ್ಛಿಸುತ್ತೇನೆ.

ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷವಾದರೂ ಕೂಡ ಇರುವ ಅಧಿಕಾರಶಾಹಿ ಬದಲಾಗಿಲ್ಲ ಅದಕ್ಕೆ ಯಾವ ರೀತಿಯ ಔಷಧಿ ಕೊಡಬೇಕೋ ಗೊತ್ತಾಗುವುದಿಲ್ಲ. ರಾಜ ಕಾರಣಿಗಳು, ಮಂತ್ರಿಗಳು, ದೇಶವನ್ನಾಳುವ ಜನರು ಎಷ್ಟೇ ನಿಷ್ಠರಾದರೂ, ಸಮಾಜವಾದ ಜಾರಿಗೆ ಬರಬೇಕು, ರಕ್ತರಹಿತವಾದ ಕ್ರಾಂತಿ ನಡೆಸಬೇಕು, ದೇಶದಲ್ಲಿ ಸಮಾನತೆ ನಿರ್ಮಾಣ ಮಾಡಬೇಕು ಎಂದು ಪ್ರಯತ್ನಮಾಡಿದರೂ ಈ ದಿವಸ ಕಾಣುವುದು ಬರೀ ಅಧಿಕಾರಶಾಹಿ. ಇನ್ನೂ ಬ್ರಿಟಿಷರ ಕಾಲದ ಆಳ್ವಿಕೆಯಂತೆಯೇ ಇದೆ. ಇಂದು ಒಬ್ಬ ತಾಸಿಲ್ದಾರರನ್ನು ನೋಡಬೇಕಾದರೆ ರೈತರಿಗೆಷ್ಟು ಕಷ್ಟವೆಂದರೆ ಅವರು ತಮ್ಮ ಜೊತೆಯಲ್ಲಿ ವಕೀಲರನ್ನು ಅಥವಾ ಶಾಸನಸಭೆ ಸದಸ್ಯರನ್ನು ಹಿಡಿದುಕೊಂಡು ಹೋಗಬೇಕಾಗುತ್ತದೆ. ಒಂದು ದಿನವೆಲ್ಲಾ ಕಾದರೂ ಕೂಡ ಕಾಣಲು ಸಾಧ್ಯವಾಗುವುದಿಲ್ಲ, ಇಂಥ ಪರಿಸ್ಥಿತಿ ಇದೆ. ಇದು ಹೋದ ಹೊರತು ಸಮಾಜವಾದ ಜಾರಿಗೆ ತರುವುದಕ್ಕಾಗುವುದಿಲ್ಲ. ಅಧಿಕಾರದಲ್ಲಿರುವ ಅಧಿಕಾರಿಗಳ ಮನೋಭಾವ ಬದಲಾವಣೆಯಾಗುವವರೆಗೆ ಅದಕ್ಕೆ ಅವಕಾಶ ಮಾಡುವವರೆಗೆ ಸಾಕಷ್ಟು ಪ್ರಯೋಜನವಾಗುವುದಿಲ್ಲ.

ಭೂ ಹಂಚಿಕೆ ವಿಷಯದಲ್ಲಿ ಕೆಲವು ಸಮಸ್ಯೆಗಳಿವೆ. ಅದಕ್ಕೆ ಕೆಲವು ಕಂಡೀಷನ್ ಹಾಕಿದ್ದಾರೆ. ಭೂಮಿ ಪಡೆದವರು 15 ವರ್ಷ ಪರಭಾರೆ ಮಾಡಬಾರದು ಎಂದು ಹೇಳುತ್ತಾರೆ. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಅಕ್ಟ್‌ನ 10ನೆಯ ಸೆಕ್ಷನ್ ಅಡಚಣೆಯಾಗಿದೆ. ಎರಡುಮೂರು ಎಕರೆ ಜಮಾನು ಪಡೆದು ಮರುದಿವಸ ಮಾರಿಕೊಂಡಿರುವ ನಿದರ್ಶನಗಳಿವೆ. ಪರಭಾರೆ ಮಾಡಿರುವುದು ತಪ್ಪು ಎಂದು ಅಭಿಪ್ರಾಯ ಪಟ್ಟಿರುವಾಗ ಹೈಕೋರ್ಟು ಪರಭಾರೆ ಮಾಡಬಾರದೆಂದು ನಿಯಮ ರಚಿಸುವುದು ತಪ್ಪು ಎಂದು ತಿಳಿಸಿದೆ. ಇದಕ್ಕೆ ತಕ್ಕ ತಿದ್ದುಪಡಿ ಮಾಡಬೇಕು. ಎರಡುಮೂರು ಎಕರೆ ಬಡವರಿಗೆ ಕೊಟ್ಟರೆ ಅವರು ಬಂಡವಾಳಗಾರರಿಗೆ ಮಾರುವುದಾದರೆ ಉದ್ದೇಶ ಸಫಲವಾಗುವುದಿಲ್ಲ. ಆದುದರಿಂದ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಸೆಕ್ಷನ್ 10 ತಿದ್ದುಪಡಿ ಮಾಡಬೇಕು' ಭೂ ಸುಧಾರಣೆ ಆಕ್ಟಿನಲ್ಲಿ ಕೆಲವಾರು ತಿದ್ದುಪಾಟು ಮಾಡಲು ಭರವಸೆ ಕೊಡಲಾಗಿದೆ. ಅದರಲ್ಲಿ ಮುಖ್ಯವಾಗಿರುವುದು 14 ಮತ್ತು 16ನೆಯ ಸೆಕ್ಷನ್ನುಗಳು. 14ರ ಪ್ರಕಾರ ಮಾಲೀಕ ಅರ್ಜಿಕೊಟ್ಟು ಜಮೀನು ಸ್ವಂತಕ್ಕೆ ಬೇಕು ಎಂದು ಪಡೆಯಬಹುದು. 16ರಲ್ಲಿ ಇರುವಂತೆ ರೈತ ತಕರಾರುಮಾಡಿ ಇಷ್ಟು ವರ್ಷ ತಾನು ಸಾಗುವಳಿ ಮಾಡಿರುವುದಾಗಿ ಕೋರ್ಟಿನಲ್ಲಿ ರುಜುವಾತು ಮಾಡಿದರೆ ಭೂಮಿಯನ್ನು ಆತ ಬಿಡುವಂತಿಲ್ಲ.

ಒಂದಕ್ಕೊಂದು ದ್ವಂದ್ವವಾಗಿದೆ. ಈ ಭೂ ಸುಧಾರಣಾ ಕಾನೂನಿನಿಂದ ಯಾರಿಗೆ ಅನುಕೂಲವಾಗಿದೆ ಎಂದರೆ ನನ್ನಂಥ ವಕೀಲರಿಗೆ ಮಾತ್ರ. ಇದರಿಂದ ರೈತನಿಗಾಗಲೀ, ಭೂ ಮಾಲೀಕನಿಗಾಗಲೀ ಏನೂ ಉಪಯೋಗವಾಗಿಲ್ಲ ಎನ್ನುವ ವಿಚಾರವನ್ನು ಸರ್ಕಾರದವರು ಗಮನದಲ್ಲಿಡಬೇಕಾಗಿದೆ.

ಭೂ ಸುಧಾರಣೆಯಿಂದ ಉಳುವವನಿಗೆ ಭೂಮಿಯನ್ನು ಕೊಟ್ಟಿದ್ದೇವೆಂದು ಹೇಳಿದರೂ ಕೂಡ ಆ ಜಮೀನನ್ನು ತೆಗೆದುಕೊಂಡು ವ್ಯವಸಾಯ ಮಾಡಿಕೊಂಡು ಹೋಗಬೇಕಾದರೆ ಎಷ್ಟು ಬಂಡವಾಳ ಬೇಕಾಗುತ್ತದೆ ? 20 ವರ್ಷಕಾಲ ಸರ್ಕಾರಕ್ಕೆ ಕಂತು ಕಟ್ಟಬೇಕು ಎನ್ನುವ ನಿಯಮವನ್ನು ಇಟ್ಟಿರುವುದು ಹೋಗಬೇಕು. ಕಂತು ಕೊಟ್ಟು ಜಮೀನನ್ನು ವ್ಯವಸಾಯಕ್ಕೆ ಉಪಯೋಗವಾಗುವ ರೀತಿಯಲ್ಲಿ ತಂದುಕೊಳ್ಳುವುದು ಸಣ್ಣ ರೈತರಿಗೆ ಕಷ್ಟವಾಗುತ್ತದೆ. ಕಂತನ್ನು ಕೊಡದೆ ಇರುವ ರೀತಿಯಲ್ಲಿ ಸರ್ಕಾರದವರು ಸೂಕ್ತವಾದ ಪರಿಹಾರವನ್ನು ಜಮೀನ್ದಾರರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಭೂ ರಹಿತರಿಗೆ ಎರಡೆರಡು ಎಕರೆ ಜಮೀನು ಕೊಡುತ್ತಿದ್ದಾರೆ. ಇದರಿಂದ ಜಮೀನನ್ನು ಅಬಾದು ಮಾಡುವುದಕ್ಕೆ ಕಷ್ಟವಾಗುತ್ತದೆ. ಊರಿನಲ್ಲಿರುವ ಒಬ್ಬ ಬಂಡವಾಳಶಾಹಿ ಹತ್ತಿರಹೋಗಿ ಸಾಲ ಪಡೆದು ಜಮೀನು ಅಬಾದು ಮಾಡಬೇಕಾಗುತ್ತದೆ. ಕೊನೆಗೆ ಜಮೀನು ಆ ಬಂಡವಾಳಶಾಹಿಗೆ ಹೋಗುತ್ತದೆ. ಇದನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಕೊಡತಕ್ಕ ಜಮೀನನ್ನು ಅಬಾದು ಮಾಡುವುದಕ್ಕೆ ಸರ್ಕಾರದವರು ಸವಲತ್ತು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಅರಣ್ಯ ಇಲಾಖೆಯವರು ಅರಣ್ಯವನ್ನು ರಿಲೀಸ್ ಮಾಡಬಾರದು ಎನ್ನುವ ವಿಷಯವನ್ನು ಮುಂದೆ ಇಟ್ಟಿದ್ದಾರೆ ಎಂದು ಕೇಳಿದ್ದೇನೆ. ಅರಣ್ಯವನ್ನು ಯಾವ ಸಂದರ್ಭದಲ್ಲಿಯೂ ರಿಲೀಸ್

(ಶ್ರೀ ಎಸ್. ಎಂ. ಶೀರನಹಳ್ಳಿ ಚಂದ್ರಶೇಖರ್)

ಮಾಡುವುದೇ ಇಲ್ಲ ಎಂದು ಇಟ್ಟುಕೊಳ್ಳುವುದಾದರೆ ನಿಜವಾಗಿಯೂ ಭೂರಹಿತ ಕಾರ್ಮಿಕರಿಗೆ ಭೂಮಿಯನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಈ ದೇಶದ ಜನಸಂಖ್ಯೆಯನ್ನು ತೆಗೆದುಕೊಂಡರೆ ಎರಡು ಹೊತ್ತು ಊಟಕ್ಕೆ ಸಹ ಇಲ್ಲ ಎನ್ನುವ ಪರಿಸ್ಥಿತಿ ಇರುವಾಗ ಅರಣ್ಯ ಪ್ರದೇಶವನ್ನು ರಿಲೀಸ್ ಮಾಡುವುದಿಲ್ಲ ಎನ್ನುವ ನಿಲುವೆಯನ್ನು ತೆಗೆದುಕೊಂಡರೆ ಬಹಳ ತೊಂದರೆಯಾಗುತ್ತದೆ. ಲಿಂಗನಮಕ್ಕಿ ಜಲಾಶಯ ನಿರ್ಮಾಣದ ಕಾಲದಲ್ಲಿ ಹೆಂಡತಿ ಮಕ್ಕಳೊಂದಿಗೆ ಬಂದು ಅರಣ್ಯ ಜಮೀನನ್ನು ಸಾಗುವಳಿ ಮಾಡಿಕೊಂಡಿರುತ್ತಾರೆ. ಅವರು ಹತ್ತಾರು ವರ್ಷಗಳಿಂದ ಸಾಗುವಳಿ ಮಾಡಿಕೊಂಡಿದ್ದಾರೆ. ಅರಣ್ಯ ಜಮೀನನ್ನು ರಿಲೀಸ್ ಮಾಡುವುದಿಲ್ಲವೆನ್ನುವುದರಿಂದ ವ್ಯವಸಾಯ ಕಾರ್ಮಿಕರಿಗೆ ಮತ್ತು ವ್ಯವಸಾಯಗಾರರಿಗೆ ಗಧಾಪ್ರಹಾರವಾಗಿದೆ. ಇದನ್ನು ಪುನರ್ವಿಮರ್ಶೆ ಮಾಡಬೇಕೆಂದು ತಮ್ಮ ಮೂಲಕ ಅರಿಕೆಮಾಡಿಕೊಳ್ಳುತ್ತೇನೆ.

ನೀರಾವರಿ ವಿಚಾರದಲ್ಲಿ ಆಗಿರತಕ್ಕ ಮುನ್ನಡೆ ಏನಿದೆ ಅದೆಲ್ಲ ಬರೀ ರೆಸಲ್ಯೂಷನ್‌ನಲ್ಲಿ ರಿಪೋರ್ಟಿನಲ್ಲಿದೆ. ಎಷ್ಟೋ ಹಳ್ಳಿಗಳಿಗೆ ನೀರಿನ ಸೌಕರ್ಯವಿಲ್ಲ.

ನಿರುದ್ಯೋಗ ಸಮಸ್ಯೆಯನ್ನು ತೆಗೆದುಕೊಂಡರೆ ಈ ಹೊತ್ತು ವಿದ್ಯಾವಂತ ನಿರುದ್ಯೋಗಿಗಳು ಏನಿದ್ದಾರೆ ಅವರನ್ನು ಇದೇ ರೀತಿಯಲ್ಲಿ ನಿರುದ್ಯೋಗದಲ್ಲಿ ಬಿಟ್ಟಿರುವುದಾದರೆ, ದೇಶದಲ್ಲಿ ಕ್ರಾಂತಿಯಾಗುವುದಕ್ಕೆ ಬಹಳ ದಿವಸ ಬೇಕಾಗಿಲ್ಲ. ಫ್ರಾನ್ಸ್ ದೇಶದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಬೆಳೆದು ಅಲ್ಲಿ ರಕ್ತಕ್ರಾಂತಿಯಾಯಿತು. ಈ ದೇಶದಲ್ಲಿಯೂ ಅಂಥ ಪರಿಸ್ಥಿತಿ ಬರುತ್ತಿದೆ. ಎಂ ಬಿ.ಬಿ.ಎಸ್., ಬಿ.ಇ., ಎಂ.ಎ., ಎಂ.ಎಸ್.ಸಿ., ಮುಂತಾದ ಪದವಿಗಳನ್ನು ಪಡೆದ ಪದವೀಧರರು ಕೆಲಸವಿಲ್ಲದೆ ಬೀದಿ ಬೀದಿ ಅಲೆಯುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ Idle brain is a Devil's workshop ಎಂದು ಎನ್ನುವಂತೆ ಜನತೆಯನ್ನು ಪ್ರಚೋದನೆಮಾಡಿ, ಕ್ರಾಂತಿಯನ್ನು ಎಬ್ಬಿಸತಕ್ಕ ಪರಿಸ್ಥಿತಿ ಈ ದೇಶಕ್ಕೆ ಬರಬಹುದು. ಆದ್ದರಿಂದ ಹೇಗಾದರೂ ಮಾಡಿ ಈ ನಿರುದ್ಯೋಗ ಸಮಸ್ಯೆಯನ್ನು ಸರ್ಕಾರಿ ಕೆಲಸ ಕೊಡುವುದರ ಮೂಲಕ ಅಥವಾ ಸ್ವತಂತ್ರವಾದ ಜೀವನವನ್ನು ನಡೆಸುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಸಹಾಯವನ್ನು ಒದಗಿಸುವುದರ ಮೂಲಕ ಬಗೆಹರಿಸಬೇಕು ಎಂದು ಹೇಳಿ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರು ಸಮಯವಿಲ್ಲವೆಂದು ಹೇಳುತ್ತಿದ್ದಾರೆ. ನನಗೆ ಇಷ್ಟು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ಮತ್ತೊಮ್ಮೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†Sri C. M. ARUMUGAM (K.G.F.).—Regarding the ruling given by the Chair to-day I have a submission to make. Though no hon. member including myself could question the ruling, in framing the Rules of Procedure of this House and also the Rules of Procedure of the Parliament, we have been guided by the rules of the House of Commons. In the House of Commons an hon. member could make a submission to the Speaker after a ruling is given by the Speaker. I also know that to question the ruling of the Chair a substantive motion has to be brought in this House.

Madam, during the course of your ruling, you were pleased to observe that hon. members should not speak for the gallery and for the press. I feel that this observation tells upon the members that they come here and talk for the sake of press or for the gallery. I submit that this portion of the ruling may kindly be asked not to be published and that portion need not also go into the official records.

MADAM SPEAKER.—The ruling is perfectly in order.

Sri C. M. ARUMUGAM.—Then I will have to bring a substantive motion and I will do that.

ಶ್ರೀ ವಾಟಾಳ್ ನಾಗರಾಜ್.—ನಾವು ಸ್ವಲ್ಪ ಗೌರವ, ಘನತೆಯಿಂದ ಬರತಕ್ಕವರು. ತಮ್ಮ ಮಾತಿನಿಂದ ನಮಗೆ ಮನನೊಂದಿದೆ. ನಾಲಿಗೆಗೆ ಮೂಳೆ ಇಲ್ಲದೆ ಮಾತನಾಡುತ್ತೀನೆ ಎಂದು ಹೇಳಿದ್ದೀರಿ. ಅದಕ್ಕೆ ನಾವು ಬಂದಿಲ್ಲ. ಈ ರೀತಿ ತಾವು ಹೇಳಬಾರದಾಗಿತ್ತು. ತಮ್ಮಲ್ಲಿ ಒಂದು ಪ್ರಾರ್ಥನೆ......

ಅಧ್ಯಕ್ಷರು.— ನಿಮ್ಮ ಮಾತಿನಿಂದ ಬಹಳ ಜನಗಳಿಗೆ ಬಹಳ ನೋವಾಗಿದೆ.

Sri K. H. PATIL.—On a point of order. Can any hon. member question the propriety of the Hon. Speaker and direct the Speaker that you ought not to have said like that ?

MADAM SPEAKER.—No, the hon. member cannot say like that.

Sri P. A. PAWASHE (Uchagaon).—Though I have stood up to oppose the motion of thanks to the Governor's Address, I wish to say, that I fully agree with His Excellency the Governor and join with him in extending our warm and sincere congratulations to the people of Bangla Desh and in paying tributes to our armed forces who defended our country against a sudden and unprovoked attack.

With regard to the Governor's Address I would like to submit, though it has been argued and said that it is exhaustive, that it has not taken into consideration some of the important problems of the State and one of them is the border issue. In the border area the recent elections were also fought on this issue and the people of the border area have once again given their verdict in favour of their wish to join the State of Maharashtra. Madam Speaker, you know, the whole of the country is behind the Congress since the time our Prime Minister took up the reigns of Government. But there is resentment in the border areas and the people of the border areas have defeated Congress not because that they are against the policies of the Congress or because they have no sincere feelings towards the Prime Minister, but because their desire to join the State of Maharashtra has not been cared for. This problem has unnecessarily been delayed and the Governments lead by Mr. Nijalingappa and Mr. Veerendra Patil tried their best to see that the use of Kannada in those areas is increased and the society is changed. There is great apprehension in the minds of the people of the border areas with regard to the intentions of Congress and the ruling party and that is why the people of these areas are against the ruling party. Was it not the duty of this Government to make a note of this just and deep-rooted feelings of the border people in the Address of the Governor ? Ignoring such important and just feelings of the people will definitely come in the way of national integration and I wonder why this important subject has altogether been neglected. The people of the border area have fought all the elections since 1956 and they have expressed their wish to join the State of Maharashtra. In the recent elections our four candidates who contested the elections from the border areas, the Belgaum City candidate secured a margin of about 11,000 votes, our candidate from Khanapur taluka secured a margin of about 12,000 votes and the candidate from Aurad secured a margin of 4,000 votes and myself secured a margin of about 3,910

(SRI P. A. PAWASHE)

votes. This speaks of the deep-rooted feelings of the people of border area. May I expect that justice would be done to the people of border areas in this respect by adopting the principles set out by Mr. Pataskar *viz.*, village as a unit, geographical contiguity, linguistic majority and wishes of the people as expressed by them in the elections held from 1956. My submission is that this problem should be solved by both the Governments once for all and they should allow us to go to our State where Marathi is spoken and where the marathi culture prevails. I am submitting these words not because I hate our Kannada brothers or because there is ill will between us. I have great respect for the Kannada language and culture. I emphasize that both the Government should come together and try to solve this problem amicably and justice done to the people of border areas.

With regard to other aspects of the Address of the Governor I would like to submit that he has suggested various schemes and measures to fulfill socio-economic objectives of the Government. Even the previous Government had various schemes and projects before them and huge amount was also spent on them. But I want to know whether they have succeeded in achieving their objectives? My humble submission is that the results expected by them have not been achieved. The reason for their failure is that the machinery which was entrusted with the work of implementing these schemes and projects was not sincere enough in their work. These things were entrusted in the hands of people who were corrupt and unless and until the present Government or the personnel at the head of the Government try to eradicate this corruption they will not achieve the goal of socialism, nor will they achieve the results they expect.

I come from a constituency which forms part of Belgaum Taluka. except a few villages that are then round about Belgaum City. There are no roads, no water supply facilities, no school buildings and no maternity or other hospitals facilities in the villages that are in jungle area. Further, the officers who are appointed to look after the developmental works of these areas do not know the language of the people *i.e.*, Marathi. Officers speaking Kannada language are appointed there, for example, Gram Sevaks, Agricultural Extension Officers etc. Since they do not know the language of the people much difficulty is being experienced by the people and the purpose is also not served. My request therefore to the Government is to see that persons knowing the language of the people are appointed in those areas and that would help to solve the difficulties of the people. Further more, all correspondence, summons and notices, etc., are being sent in Kannada language. The people of that area do not know Kannada. I request the Government to direct the officers concerned to issue notices and court summons, etc., in Marathi language.

With these few words I thank the Chair and conclude my speech.

† ಶ್ರೀ ಎಸ್. ವಿ. ನಾಯಕ್ (ಕುಮಟಾ).—ಸನ್ಮಾನ್ಯ ಅಧ್ಯಕ್ಷರೇ, ಸುಮಾರು ಒಂದು ವರ್ಷ ಕಾಲದ ರಾಷ್ಟ್ರಾಧ್ಯಕ್ಷರ ಆಡಳಿತ ಮುಕ್ತಾಯಗೊಂಡು ಲೋಕಶಾಹಿ ಸರಕಾರ ಈ ರಾಜ್ಯದಲ್ಲಿ ಸ್ಥಾಪನೆಯಾಗಿರುವಾಗ ರಾಜಾಸ್ಥಾನದ ಮರಳು ಭೂಮಿಯನ್ನು ಹಸನುಗೊಳಿಸಿದಂತಹ ರಾಜ್ಯಪಾಲರು ನಮಗೆ ದೊರೆತಿರುವುದು ನಮ್ಮ ಭಾಗ್ಯ. ಈ ಸಂದರ್ಭದಲ್ಲಿ ನನಗೆ ಮಾತ ನಾಡುವುದಕ್ಕೆ ಅನುವು ಮಾಡಿಕೊಟ್ಟ ತಮಗೆ ನಾನು ಚಿರಋಣಿಯಾಗಿದ್ದೇನೆ. ಕೇಂದ್ರದ ಭೂಸುಧಾರಣಾ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ ರಾಜ್ಯದ ಭೂಸುಧಾರಣೆ ಕಾನೂನನ್ನೂ ಸೂಕ್ತವಾಗಿ ತಿದ್ದುಪಡಿ ಮಾಡುತ್ತಿರುವುದಕ್ಕಾಗಿ ನಾನು ಚಿರಋಣಿಯಾಗಿದ್ದೇನೆ. ಆದರೆ ಇದನ್ನು ಉತ್ತರ ಕನ್ನಡ ಜಿಲ್ಲೆಗೆ ಅನ್ವಯಿಸುವಾಗ ಯಾವ ಭೂಸುಧಾರಣೆಯನ್ನು ಜಾರಿಗೆ ತಂದರೂ ಈ ಜಿಲ್ಲೆಗೆ ಯಾವ ಲಾಭವೂ ಆಗುವುದಿಲ್ಲ ಎನ್ನುವ ಅಂಶವನ್ನು ಇಲ್ಲಿ ಒತ್ತಿ ಹೇಳ ಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಭಿನ್ನ ಭಿನ್ನತೆಯುಳ್ಳ ಭೂಮಿಗಳಿರುವುದರಿಂದ ಯಾವ ಭೂ ಸುಧಾರಣೆಯೂ ಲಾಭದಾಯಕವಾಗುವುದಿಲ್ಲ ಎನ್ನುವ ಅಂಶವನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ. 1948ನೇ ಇಸವಿಯಲ್ಲಿ ಟೆನೆನ್ಸಿ ಆಕ್ಟ್ ಎಂದು ಆಗಿನ ಮುಂಬಯಿ ರಾಜ್ಯ ಸರಕಾರ ಜಾರಿಗೆ ತಂದಾಗ ಲಕ್ಷಗಟ್ಟಲೆ ಕುಟುಂಬಗಳು ತಮ್ಮ ಭೂಮಿಯನ್ನು ಕಳೆದುಕೊಂಡರು. ಈ ಸಂದರ್ಭದಲ್ಲಿ ಉಳಿದಿರತಕ್ಕ ಉಪಾಯ ಒಂದೇ ಒಂದು, ನಮ್ಮ ಉತ್ತರ ಕನ್ನಡ ಜಿಲ್ಲೆಯ ಸುತ್ತಮುತ್ತ ಅರಣ್ಯದ ಭೂಮಿಯೇ ಇದೆ. ಇಂತಹ ಅರಣ್ಯ ಭೂಮಿಗೆ ಇದುವರೆಗೆ ಯಾವ ತರದ ಅಭಿವೃದ್ಧಿಯೂ ಆಗಲಿಲ್ಲ. ಇಲ್ಲಿರುವ ಭಿನ್ನತೆಗಳನ್ನು ಸರಕಾರ ಗಮನದಲ್ಲಿಟ್ಟುಕೊಂಡು ಇಲ್ಲಿಗೆ ಆರ್ಥಿಕ ನೆರವು ಕೊಡುತ್ತಾರೆಂದು ಈ ಸಂದರ್ಭದಲ್ಲಿ ನಂಬುತ್ತೇನೆ.

2-00 P.M.

ನಮ್ಮ ರಾಜ್ಯದಲ್ಲಿ ಅರಣ್ಯ ಸಂಪತ್ತು ಕಳೆದ 20 ವರ್ಷಗಳಿಂದ ಕ್ರಮೇಣ ಕ್ಷೀಣಿಸುತ್ತ ಬಂದಿದೆ ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಸರ್ಕಾರದ ಗಮನಕ್ಕೆ ಈ ಅಂಶ ಬಂದಿರುವುದು ಸ್ತುತ್ಯವೆಂದು ಹೇಳುತ್ತೇನೆ. ಈ ರೀತಿ ಅರಣ್ಯ ಕ್ಷೀಣಿಸುತ್ತಿರುವುದಕ್ಕೆ ಕಾರಣವನ್ನು ಸಂಬಂಧಪಟ್ಟ ಮಂತ್ರಿಗಳು ಅರ್ಥ ಮಾಡಿಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ಮರಗಳನ್ನು ಕಡಿದು ಕಳ್ಳಸಾಗಣೆ ಮಾಡುತ್ತಿರುವುದು. ನಮ್ಮ ಉತ್ತರಕನ್ನಡ ಜಿಲ್ಲೆಯಲ್ಲಿ ಆಗುತ್ತಿರುವಷ್ಟು ಕಳ್ಳಸಾಗಣೆ ಇನ್ನುಳಿದ ಜಿಲ್ಲೆಗಳಲ್ಲಿ ಆಗುತ್ತಿಲ್ಲವೆಂಬ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಅರಣ್ಯ ಸಂಪತ್ತು ಇನ್ನು ಮುಂದೆ ನಾಶವಾಗು ವುದನ್ನು ತಡೆಗಟ್ಟಬೇಕು ಮತ್ತು ನಾಶ ಮಾಡತಕ್ಕವರು ಸಾರ್ವಜನಿಕರೇ ಇರಲಿ ಅಥವಾ ಅಧಿಕಾರಿಗಳೇ ಇರಲಿ ಅವರನ್ನು ದಂಡಿಸಬೇಕು. ಈ ರೀತಿ ಕ್ರಮ ತೆಗೆದುಕೊಳ್ಳದಿದ್ದರೆ ಇನ್ನು ಮುಂದೆ ಅರಣ್ಯ ಸಂಪೂರ್ಣವಾಗಿ ನಾಶವಾಗಿ ಮಳೆ ಕೂಡ ಬೀಳದೆ ಇಡೀ ಪ್ರದೇಶ ಮರುಭೂಮಿ ಯಾಗುತ್ತದೆಂದು ಒತ್ತಿ ಹೇಳುತ್ತೇನೆ.

ಇನ್ನು ಉದ್ದಿಮೆ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡುತ್ತಾ ರಾಜ್ಯದಲ್ಲಿ ಹಿಂದುಳಿದ 11 ಜಿಲ್ಲೆಗಳಲ್ಲಿ ಹೊಸ ಉದ್ದಿಮೆಗಳನ್ನು ಪ್ರಾರಂಭಿಸುವ ಬಗ್ಗೆ ಉದ್ಯಮ ವ್ಯವಸ್ಥಾಪಕರಿಗೆ ಈಚೆಗೆ ಹೊಸ ಉತ್ತೇಜನಗಳನ್ನು ನೀಡಲಾಗಿದೆಯೆಂದು ಹೇಳಿದ್ದಾರೆ. ಈ ವಿಷಯದಲ್ಲಿ ರಾಯಚೂರು ಜಿಲ್ಲೆಗೆ ವಿಶೇಷ ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ಜಿಲ್ಲೆಗೂ ಇದೇ ರೀತಿ ಪ್ರೋತ್ಸಾಹ ಕೊಟ್ಟು ಭೂಮಿಯನ್ನು ಕಳೆದುಕೊಂಡಿರುವ ನಿರ್ಗತಿಕರಿಗೆ ಮತ್ತು ಅವರ ಮಕ್ಕಳಿಗೆ ಸಾಕಷ್ಟು ಉದ್ದಿಮೆಯಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ರೈತರ ಮಕ್ಕಳು ಈಗ ವಿದ್ಯಾವಂತರಾಗಿರುವುದರಿಂದ ಅವರಿಗೆ ಉದ್ದಿಮೆಯಲ್ಲಿ ಸಾಕಷ್ಟು ಅವಕಾಶ ಕಲ್ಪಿಸಿಕೊಡಬೇಕು. ಮಂಗಳೂರಿನಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆಯ ನಿರ್ಮಾಣವು ಬೇಗನೆ ಪ್ರಾರಂಭವಾಗಲಿದೆ ಎಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ಕಾರವಾರ ಜಿಲ್ಲೆಯ ಅರಿಕೆ ಗ್ರಾಮದಲ್ಲಿ ಕಾಸ್ಟಿಕ್ ಸೋಡಾ ತಯಾರು ಮಾಡುವ ಕಾರ್ಖಾನೆ ಪ್ರಾರಂಭ ಮಾಡುವ ವಿಷಯವನ್ನು ಪ್ರಸ್ತಾಪ ಮಾಡಿಲ್ಲ. ಇದರಿಂದ ಅಲ್ಲಿಯ ಜನತೆ ವಿವಂಚನೆಗೆ ಒಳಗಾಗಿದ್ದಾರೆ. ಗೋಕರ್ಣದಲ್ಲಿ ಅಲ್ಯೂಮಿನಿಯಂ ಕೈಗಾರಿಕೆ ಬರಬೇಕಾಗಿದ್ದು ಅದು ಈಗ ಬೆಳಗಾಂ ಜಿಲ್ಲೆಗೆ ಹೋಗಿದ್ದು ಕಂಡುಬಂತು. ಇದೇ ರೀತಿ ಎಲ್ಲಾಪುರದಲ್ಲಿ ಸ್ಥಾಪನೆಯಾಗಬೇಕಾಗಿದ್ದ ರೇಯಾನ್ ಕಾರ್ಖಾನೆಯೂ ಬೆಳಗಾಂಗೆ ಹೋಗಿದ್ದು ಕಂಡುಬಂತು, ನಮ್ಮ ಹಿಂದುಳಿದ ಜಿಲ್ಲೆಯಲ್ಲಿ ಹೊಸ ಹೊಸ ಉದ್ದಿಮೆಗಳನ್ನು ಪ್ರಾರಂಭ ಮಾಡಿ ಜನರಿಗೆ ಉದ್ಯೋಗ ಕಲ್ಪಿಸಿಕೊಡಬೇಕೆಂದು ಮಾನ್ಯ ಉದ್ದಿಮೆ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಉದ್ದಿಮೆ ಸ್ಥಾಪನೆ ಫಲವಾಗಿ ಸುಮಾರು ಎರಡೂವರೆ ಸಾವಿರ ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು

(ಶ್ರೀ ಎಸ್. ಬಿ. ನಾಯಕ್)

ಸರ್ಕಾರದವರು ಸುಮಾರು 700 ಕುಟುಂಬಗಳಿಗೆ ಜಾಗ ಖಾಲಿ ಮಾಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಅವರಿಗೆ ಈ ಸಂದರ್ಭದಲ್ಲಿ ಎಲ್ಲಿಗೆ ಹೋಗಬೇಕು ಎಂಬುದು ತಿಳಿಯದಾಗಿದೆ. ಅವರಿಗೆ ಮೊದಲು ಪುನರ್ವಸತಿಯನ್ನು ಕಲ್ಪಿಸಿ ನಂತರ ಅವರ ಸ್ಥಳವನ್ನು ತೆರವು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಬೆರೆ ಏರಿಕೆ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಇದರ ವಿರುದ್ಧವಾಗಿ ನಾವು ಈಗಾಗಲೇ ಪ್ರತಿಭಟನೆ ವ್ಯಕ್ತಪಡಿಸಿದ್ದೇವೆ. ನಮ್ಮ ಜಿಲ್ಲೆಯಿಂದ ದೊಡ್ಡ ಪ್ರಮಾಣದಲ್ಲಿ ಸಾಮಾನುಗಳು ಗೋವಾಕ್ಕೆ ಹೋಗುತ್ತವೆ. ಈ ರೀತಿ ಕಾಳಸಂತೆಯಾಗುತ್ತಿರುವುದನ್ನು ಸರ್ಕಾರದವರು ನಿಯಂತ್ರಣದಲ್ಲಿ ತಂದರೆ ಬೆರೆ ಏರಿಕೆ ಮೇಲೆ ನಿಯಂತ್ರಣ ತರುವುದಕ್ಕೆ ಸಾಧ್ಯವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನು ಇನ್ನೂ ಅನೇಕ ವಿಚಾರಗಳನ್ನು ತಿಳಿಸಬೇಕಾಗಿತ್ತು. ಆದರೆ ಕಾಲಾವಕಾಶವಿಲ್ಲದಿರುವುದರಿಂದ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ಮೊದಲಿನಿಂದ ಕೊನೆಯವರೆಗೆ ನಾನು ಓದಿದ್ದೇನೆ. ಅದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಮುಖ್ಯವಾದ ವಿಷಯಗಳ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನಿಲುವು ಏನು ಅನ್ನುವುದನ್ನು ಎಲ್ಲೂ ಕಾಣಲಿಲ್ಲ. ಅತಿ ಮುಖ್ಯವಾಗಿ ಈ ಸರ್ಕಾರ ಹೊಸದಾಗಿ ಅಧಿಕಾರಕ್ಕೆ ಬಂದಿದೆ. ಸಮಾಜವಾದವನ್ನು ಈ ರಾಜ್ಯದಲ್ಲಿ ಮತ್ತು ಈ ದೇಶದಲ್ಲಿ ಜಾರಿಗೆ ತರುತ್ತೇವೆಂದು ಜನರಿಗೆ ಆಶ್ವಾಸನೆ ಕೊಟ್ಟು ಅಧಿಕಾರಕ್ಕೆ ಬಂದಿರುವ ಈ ಸರ್ಕಾರ, ಸಮಾಜವಾದಿ ಕಾರ್ಯಕ್ರಮಗಳ ಬಗ್ಗೆ ನಿರ್ದಿಷ್ಟವಾದ ಒಂದು ನೀತಿ ಅಥವಾ ಧೋರಣೆ ಏನಿದೆ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿಲ್ಲ. ರಾಜ್ಯಪಾಲರ ಭಾಷಣ ಮಾರ್ಗದರ್ಶನವಾಗಿ ಇರಬೇಕು. ಅದರಲ್ಲಿ ಸರ್ಕಾರದ ನೀತಿ ಮತ್ತು ಧೋರಣೆಗಳನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಆದರೆ ಈ ಭಾಷಣದಲ್ಲಿ ಅದು ಖಂಡಿತವಾಗಿ ಇಲ್ಲ. ನನಗೆ ಗೊತ್ತಿರುವ ಮಟ್ಟಿಗೆ ನಮ್ಮ ರಾಜ್ಯದ ಅತಿ ಮುಖ್ಯವಾದ ವಿಷಯಗಳಾದ ಇಂಡಸ್ಟ್ರಿಯಲ್ ಪಾಲಿಸಿ, ಲೇಬರ್ ಪಾಲಿಸಿ, ನದಿ ನೀರು, ಗಡಿಸಮಸ್ಯೆ, ಆಹಾರಧಾನ್ಯಗಳ ಬೆಲೆ ಮುಂತಾದ ವಿಷಯಗಳ ಬಗ್ಗೆ ಕೂಡ ನಿರ್ದಿಷ್ಟವಾದ ಉತ್ತರವನ್ನು ಸರ್ಕಾರದವರು ಕೊಟ್ಟಿಲ್ಲ. ಹಿಂದೆ ನಮ್ಮ ದೇಶದಲ್ಲಿ ಇದ್ದಂಥ ಪ್ರತಿಗಾಮಿ ಸರ್ಕಾರಗಳು ಯಾವ ದಾರಿಯನ್ನು ಹಿಡಿದವೋ ಅದೇ ದಾರಿಯಲ್ಲಿ ಈ ಸರ್ಕಾರವೂ ಮುಂದುವರಿಯುತ್ತದೆಯೋ ಏನೋ ಎಂಬ ಭಯ ನನ್ನಲ್ಲಿ ಮೂಡುತ್ತಿದೆ. ಇದಕ್ಕೆ ಅನೇಕ ನಿದರ್ಶನಗಳು ಇವೆ. ಮಾನ್ಯ ಬಂಗಾರಪ್ಪನವರು ಈ ಸರ್ಕಾರ ಕೇಂದ್ರ ಸರ್ಕಾರದ ಕೈಗೊಂಬೆಯಾಗಿರುವುದರಿಂದ ನಿರ್ದಿಷ್ಟವಾದ ಸೂತ್ರಗಳನ್ನಾಗಲೀ, ತೀರ್ಮಾನಗಳನ್ನಾಗಲೀ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲವೆಂದು ಏನು ಹೇಳಿದರು ಅದನ್ನು ನಾನು ಮತ್ತೊಂದು ಸಲ ಒತ್ತಿ ಹೇಳುತ್ತೇನೆ. ಇದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಾದರೆ, ಕೇಂದ್ರ ಸರ್ಕಾರದವರು ಸ್ಕೇರ್ಸಿಟಿ ಕಂಡಿಷನ್ ಮತ್ತು ಫ್ಯಾಮಿನ್ ರಿಲೀಫ್‌ಗೋಸ್ಕರ ನಮ್ಮ ಸರ್ಕಾರಕ್ಕೆ 5.49 ಕೋಟಿ ರೂಪಾಯಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರೂ ಕೂಡ ನಮಗೆ ಇದುವರೆಗೆ ಕೊಟ್ಟಿರುವುದು 3 ಕೋಟಿ ರೂಪಾಯಿಗಳನ್ನು ಮಾತ್ರ. ಇನ್ನುಳಿದ 2.49 ಕೋಟಿ ರೂಪಾಯಿಗಳ ಸಮಸ್ಯೆ ಏನಾಯಿತು ? ಈ ಹಣ ಕೇಂದ್ರದಿಂದ ಬರುತ್ತದೋ ಇಲ್ಲವೋ ಎಂಬುದನ್ನು ರಾಜ್ಯಪಾಲರ ಭಾಷಣದಲ್ಲಿ ನಿರ್ದಿಷ್ಟವಾಗಿ ತೋರಿಸಿಲ್ಲ. ಇನ್ನೂ ಈ ಬಗ್ಗೆ ಹೇಳುತ್ತಾ ಹೋದರೆ, ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಆರ್ಥಿಕ ಸ್ಥಿತಿಯ ಬಗ್ಗೆ ಹೇಳುತ್ತಾ, ಐದನೆಯ ಆರ್ಥಿಕ ಆಯೋಗದ ಐತೀರ್ಪು ರಾಜ್ಯಕ್ಕೆ ಅನುಕೂಲವಾಗಿರಲಿಲ್ಲವೆಂಬ ಅಂಶವು ಮಾನ್ಯ ಸದಸ್ಯರಿಗೆ ತಿಳಿದೇ ಇದೆ ಎಂಬುದಾಗಿ ಹೇಳಿದ್ದಾರೆ, ಮತ್ತು ಅದೇ ಪುಟದ ಕೊನೆಯಲ್ಲಿ ಓವರ್‌ಡ್ರಾಫ್ಟ್ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಬಗೆಹರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುವಂತೆ, ವಿಶೇಷ ಸಹಾಯ ನೀಡಬೇಕೆಂದು ಮೈಸೂರು ಮಾಡಿಕೊಂಡ ಮನವಿಯನ್ನು ಭಾರತ ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವುದು ಅಗತ್ಯವಾಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದ ಸಹಾನುಭೂತಿಯ ಮೇಲೆ ನಾವು ಎಷ್ಟು ದಿವಸ ಬಾಳುವುದಕ್ಕಾಗುತ್ತದೆ. ಸಹಾನುಭೂತಿಯಿಂದ ಪರಿಶೀಲಿಸುವುದು ಎಂದರೆ ಏನು ಎಂಬುದನ್ನು ತಿಳಿಸಲಿಲ್ಲ. ಇದನ್ನು ಮತ್ತೊಮ್ಮೆ ಹೇಳಬೇಕಾಗಿದೆ. ಇದು ಹೇಳಿದಂತ ಮಾತಿಗೂ ಮತ್ತು ಈ ಸರ್ಕಾರ ಮಾಡುತ್ತಿರುವ ಕೆಲಸಕ್ಕೂ ಒಂದಕ್ಕೊಂದು ಸಂಬಂಧವಿಲ್ಲ.

ಹರಿಜನರ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಬಗ್ಗೆ ನಾನು ತಮಗೆ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ನಮ್ಮ ಕೋಲಾರ ಜಿಲ್ಲೆಯಲ್ಲಿ ನರಸಾಪುರ ಎನ್ನುವ

ಒಂದು ದೊಡ್ಡ ಗ್ರಾಮ ಇದೆ. ಅಲ್ಲಿ ಸುಮಾರು 300 ಹರಿಜನ ಕುಟುಂಬಗಳು ಇವೆ. ಅವರು 1968 ನೇ ಇಸವಿಯಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದರು. ಆಗ ಆ ಮನೆಗಳು ಮಾಳಿಗೆ ಮಟ್ಟಕ್ಕೆ ಬಂದು ಅವು ಹಾಗೆಯೇ ನಿಂತು ಹೋಗಿದ್ದುವು. ಇವೊತ್ತಿನ ದಿವಸ ಆ ಮನೆಗಳು ಬಿದ್ದು ಹೋಗಿವೆ. ಆದರೆ ಆ ಸ್ಥಳದಲ್ಲಿ ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ಆ ಹರಿಜನರು ವಾಸ ಮಾಡುತ್ತಿದ್ದರು. ಈಗ ಆ ಗುಡಿಸಲುಗಳನ್ನು ನೆಲಸಮ ಮಾಡಿ ಆ ಸ್ಥಳದಲ್ಲಿ ಬೇರೆ ಹೊಸ ಕಟ್ಟಡಗಳನ್ನು ಕಟ್ಟಬೇಕೆಂದು ಪ್ರಯತ್ನ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಹರಿಜನರ ದುಸ್ಥಿತಿಯನ್ನು ಕಣ್ಣಾರೆ ಕಂಡರೂ ಕೂಡ ಸರ್ಕಾರದವರು 1938 ನೇ ಇಸವಿಯಿಂದ ಇಲ್ಲಿಯವರೆಗೂ ಆ ಒಂದು ಸಮಸ್ಯೆಯನ್ನು ಬಗೆಹರಿಸಿಲ್ಲ. ಆದ್ದರಿಂದ ಈ ವಿಚಾರವನ್ನು ಸರ್ಕಾರದವರು ಗಮನಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಈಗ ಪ್ರಗತಿಗಾಮಿ ಸರ್ಕಾರ ಇದ್ದರೂ ಕೂಡ ನಮ್ಮ ರಾಜ್ಯದಲ್ಲಿ ಬಂಡವಾಳ ಶಾಹಿ ಪದ್ಧತಿ ಉಳಿಯುತ್ತಲೇ ಇದೆ, ಈಗ ನಮ್ಮ ಅರಣ್ಯ ಶಾಖೆಯ ಮಂತ್ರಿಗಳು ಇದ್ದಾರೆ. ಅವರ ಗಮನಕ್ಕೆ ಒಂದು ವಿಷಯವನ್ನು ತರಬೇಕೆಂದು ಬಯಸುತ್ತೇನೆ. ನಮ್ಮ ರಾಜ್ಯದ ಅರಣ್ಯದಿಂದ ಜಿಲ್ಲಾ ಸಂಸ್ಥೆಗೆ ಒಂದು ಟನ್ ಯೂಕಲಿಪ್ಟಸ್ ಮರಗಳನ್ನು 25 ರೂಪಾಯಿಗಳಿಗೆ ಸರ್ಕಾರದವರು ಮಾರಾಟ ಮಾಡುತ್ತಿದ್ದಾರೆ. ಇವೊತ್ತಿನ ದಿವಸ ಬೆಂಗಳೂರಿನಲ್ಲಿ ಒಂದು ಟನ್ ಸೌದೆಗೆ 100–150 ರೂಪಾಯಿಗಳಂತೆ ಮಾರಾಟಮಾಡುತ್ತಿದ್ದಾರೆ. ಹೀಗಿರುವಾಗ ಜಿಲ್ಲಾ ಸಂಸ್ಥೆಗೆ ಒಂದು ಟನ್ ಯೂಕಲಿಪ್ಟಸ್ ಸೌದೆಗೆ 25 ರೂಪಾಯಿಗಳಂತೆ ಮಾರಾಟ ಮಾಡುವುದು ಸರಿಯೇ ? ಇದನ್ನು ತಡೆಗಟ್ಟಬೇಕೆಂದು ನಾನು ಮನವಿ ಮಾಡುತ್ತೇನೆ. ಸರ್ಕಾರದವರು ಪ್ರಗತಿಗಾಮಿ ನೀತಿಯನ್ನು ಅನುಸರಿಸಬೇಕೆಂಬ ಇಚ್ಛೆ ಇದ್ದರೆ, ಸಮಾಜವಾದವನ್ನು ಜಾರಿಗೆ ತರಬೇಕೆಂಬ ಉದ್ದೇಶ ಇದ್ದರೆ ಈಗ ಏನು ಅನ್ಯಾಯ ನಡೆಯುತ್ತಿದೆ ಅದನ್ನು ನಿಲ್ಲಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗಾಡಿ ವಿರುಪಾಕ್ಷ ಮಲಪ್ಪ (ಹಳಿಯಾಳ).—ಸನ್ಮಾನ್ಯ ಸಭಾಪತಿಯವರೇ, 24-3-1972 ರಂದು ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣ ಚಿಕ್ಕದಾಗಿದ್ದರೂ ಸಹ ಅದು ಬಹಳ ಅರ್ಥಗರ್ಭಿತವಾಗಿದೆ. ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ ನಾನು ಕೆಲವೊಂದು ಸಲಹೆಗಳನ್ನು ಕೊಡಬಯಸುತ್ತೇನೆ. ನಾವು ನಮ್ಮ ರಾಜ್ಯದಲ್ಲಿ ಶಿಕ್ಷಣಕ್ಕೆ ಅತಿ ಮಹತ್ವವನ್ನು ಕೊಡಬೇಕಾಗಿದೆ. ಶಿಕ್ಷಣದಿಂದ ರಾಜ್ಯದ ಅಭಿವೃದ್ಧಿ ಆಗುತ್ತದೆ. ಅಷ್ಟೇ ಅಲ್ಲ ದೇಶದ ಅಭಿವೃದ್ಧಿ ಸಹಿತ ಆಗುತ್ತದೆ. ಇವೊತ್ತಿನ ದಿವಸ ಹಳ್ಳಿಗಳಲ್ಲಿ ಮಕ್ಕಳಿಗೆ ಕೊಡತಕ್ಕಂಥಾ ಶಿಕ್ಷಣವನ್ನು ನೋಡಿದರೆ ಅದು ಅಷ್ಟು ಉತ್ತಮವಾದುದಲ್ಲ ಎಂದು ಕಾಣುತ್ತದೆ. ಅದಕ್ಕೆ ಕಾರಣ ಸ್ವಲ್ಪ ಮಟ್ಟಿಗೆ ಶಿಕ್ಷಕರದೂ ಇರಬಹುದು ; ಆದರೆ ಮುಖ್ಯವಾಗಿ ಪಾಲಕರದು, ಸರ್ಕಾರದ್ದು ಮತ್ತು ಮ್ಯಾನೇಜ್‌ಮೆಂಟಿನವರದು ತಪ್ಪು ಇರುವುದು ಕಂಡುಬರುತ್ತಿದೆ. ಈಗ ಸರ್ಕಾರದವರು ಕೆಲವೊಂದು ಪುಸ್ತಕಗಳನ್ನು ನ್ಯಾಷನಲೈಜ್ ಮಾಡಿದ್ದಾರೆ. ಆ ಪುಸ್ತಕಗಳಲ್ಲಿ ಎಷ್ಟೋ ದೋಷಗಳು ಕಂಡುಬರುತ್ತವೆ. ಈಗ ಉದಾಹರಣೆಗೆ ಹೇಳುವುದಾದರೆ 7 ನೇ ಸ್ಟ್ಯಾಂಡರ್ಡ್‌ಗೆ ಇಂಗ್ಲೀಷ್ ಪುಸ್ತಕವನ್ನು ಪ್ರಿಸ್‌ಕ್ರೈಬ್ ಮಾಡಿದ್ದಾರೆ. ಅದರಲ್ಲಿ ಅನೇಕ ಲೋಪದೋಷಗಳು ಕಂಡುಬರುತ್ತವೆ. ಇದರ ಜೊತೆಗೆ ಮಾಸ್ತರುಗಳಿಗೆ ಯಾವ ಪಾಠವನ್ನು ಯಾವರೀತಿ ಮಕ್ಕಳಿಗೆ ಕಲಿಸಬೇಕು ಎಂಬುದು ತಿಳಿಯುವುದಿಲ್ಲ. ಈಗ ಸರ್ಕಾರದವರು ನ್ಯಾಷನಲೈಜ್ ಮಾಡಿರತಕ್ಕ ಪುಸ್ತಕಗಳಲ್ಲಿ ಮರಾಠಿ, ಕನ್ನಡ, ಉರ್ದು, ಪುಸ್ತಕಗಳು, ಸೈನ್ಸ್, ಮ್ಯಾಥ್‌ಮ್ಯಾಟಿಕ್ಸ್ ಸೋಷಿಯಲ್‌ಸ್ಟಡೀಸ್ ಇತ್ಯಾದಿ ಪುಸ್ತಕಗಳು ಇವೆ. ಈ ಪುಸ್ತಕಗಳಲ್ಲಿ ಮಕ್ಕಳಿಗೆ ಯಾವರೀತಿ ಶಿಕ್ಷಣವನ್ನು ಕೊಡಬೇಕು ಎಂಬುದು ಶಿಕ್ಷಕರಿಗೆ ಗೊತ್ತಾಗುವುದಿಲ್ಲ. ಕನ್ನಡ ಪುಸ್ತಕಗಳನ್ನು ಈಗ ಏನು ಬರೆಯುತ್ತಿದ್ದಾರೆ ಅದರಲ್ಲಿಯೂ ಸಹ ಕೆಲವು ಲೋಪದೋಷಗಳು ಇವೆ. ಇದರಿಂದಾಗಿ ಮಕ್ಕಳ ಶಿಕ್ಷಣದ ಮಟ್ಟ ಬಹಳ ಕೆಳಮಟ್ಟಕ್ಕೆ ಹೋಗುತ್ತಿದೆ. ತಾಲ್ಲೂಕ್ ರೇಂಜ್ ಆಫೀಸ್ ಎಂದು ಏನು ಸರ್ಕಾರದವರು ಮಾಡಿದ್ದಾರೆ ಅವುಗಳಿಂದ ಯಾವತರಹದ ಉಪಯೋಗವೂ ಆಗಿಲ್ಲ. ಆ ಆಫೀಸುಗಳಿಗಾಗಿ ಹಣ ಮಾತ್ರ ಖರ್ಚಾಗುತ್ತದೆ. ಆದರೆ ನಿರೀಕ್ಷಿಸಿದಷ್ಟು ಉಪಯೋಗ ಅದರಿಂದ ಆಗುತ್ತಿಲ್ಲ. ಮಕ್ಕಳಿಗೆ ಪಾಠವನ್ನು ಹೇಳಿಕೊಡತಕ್ಕಂಥಾ ಶಿಕ್ಷಕರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದೆ ಬೇರೊಂದು ಉಪದಂಧೆಯನ್ನು ಮಾಡಿಕೊಂಡಿರುತ್ತಾರೆ. ಯಾವುದಾದರೂ ದಳ್ಳಾಳಿಗಳ ಕೆಲಸ ಮಾಡುವುದು ಅಥವಾ ತಮ್ಮ ಹೊಲಗದ್ದೆಗಳ ಕೆಲಸವನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ. ಅವರು ಮಕ್ಕಳಿಗೆ ಪಾಠವನ್ನು ಕಲಿಸುವ ಕಡೆಗೆ ಹೆಚ್ಚು ಲಕ್ಷ್ಯ ಕೊಡುವುದಿಲ್ಲ. ಇವರಮೇಲೆ ಡಿ. ಡಿ. ಪಿ. ಐ. ಅವರ ಕಂಟ್ರೋಲ್ ಆಗಲೀ ಅಥವಾ ವಿದ್ಯಾಭ್ಯಾಸ ಇಲಾಖೆಯ ಮತ್ತೆ ಯಾವ ಅಧಿಕಾರಿಗಳ ಕಂಟ್ರೋಲ್ ಆಗಲೀ ಇರುವುದಿಲ್ಲ. ಹಳ್ಳಿಗಳಲ್ಲಿರತಕ್ಕ ಎಷ್ಟೋ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಕಂಡುಬರುತ್ತದೆ. ಇದರ

(ಶ್ರೀ ಗಾಡಿ ವಿರುಪಾಕ್ಷ ಮಲ್ಲಪ್ಪ)

ಜೊತೆಗೆ ಎಲ್ಲಾ ಕಡೆಗಳಲ್ಲಿಯೂ ಕೂಡ ನಿರುದ್ಯೋಗ ಸಮಸ್ಯೆ ಕಂಡುಬರುತ್ತಿದೆ. ಕೆಲವರನ್ನಾದರೂ ಶಿಕ್ಷಕರ ಹುದ್ದೆಗಳಿಗೆ ತೆಗೆದುಕೊಂಡು ಈ ಸಮಸ್ಯೆಯನ್ನು ನೀಗಬೇಕು. ಪವಿತ್ರವಾದ ವಿದ್ಯಾ ಕ್ಷೇತ್ರದಲ್ಲಿ ಲಂಚಗುಳಿತನ ಇರುವುದು ಕಂಡು ಬರುತ್ತಿದೆ ಎಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಶಾಲೆಗಳಿಗೆ ಕೊಡಬೇಕಾದಂತಹ ಗ್ರಾಂಟನ್ನು ಸರಿಯಾಗಿ ಕೊಡುವುದಿಲ್ಲ. 1966-67 ನೇ ಸಾಲಿನ ಗ್ರಾಂಟ್ ಇನ್ನೂ ಕೆಲವು ಶಾಲೆಗಳಿಗೆ ಕೊಟ್ಟಿಲ್ಲ. ನಿಜವಾಗಿಯೂ ಇದು ಶೋಚನೀಯವಾದ ವಿಚಾರ. ನಮ್ಮ ಪ್ರದೇಶದಲ್ಲಿ ಶಾಲೆಗಳಿಗೆ ಸರ್ಕಾರದವರು ಕೊಡಬೇಕಾದ ಗ್ರಾಂಟು 22-23 ಲಕ್ಷ ರೂಪಾಯಿ ಕೊಡುವುದಿದೆ. ಆದ್ದರಿಂದ ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈಗ ಶಾಲೆಗಳಿಗೆ ಕೊಡಬೇಕಾದಂತಹ ಗ್ರಾಂಟು ಏನಿದೆ ಅದನ್ನು ಜೂನ್ ತಿಂಗಳ ಒಳಗಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಶಾಲೆಗಳಿಗೆ ಕೊಡಬೇಕಾದ ಬಾಡಿಗೆ ಏನಿದೆ ಅದನ್ನು ಕೊಡುವ ಬಗ್ಗೆ ಕೂಡ ಬಹಳ ತೊಡಕಿನ ಪ್ರಶ್ನೆಯಾಗಿದೆ. ಇದನ್ನು ಸರ್ಕಾರದವರು ಬಿಡಿಸಿಲ್ಲ. ಆದಕಾರಣ ಸರ್ಕಾರದವರು ಈ ಬಗ್ಗೆ ಪರಿಶೀಲನೆಮಾಡಿ ಇದನ್ನು ಬಗೆಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಹಳಿಯಾಳ ಸರ್ಕಾರಿ ಹೈಸ್ಕೂಲಿನಲ್ಲಿ 5-6 ಜನ ಶಿಕ್ಷಕರು ಇಲ್ಲ. ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ತೊಂದರೆಯಾಗಿದೆ. ಈ ರೀತಿ ತೊಂದರೆಯಾಗುವುದಕ್ಕೆ ಆ ಹೈಸ್ಕೂಲ್ ಹೆಡ್ಮಾಸ್ಟರ್ ಮತ್ತು ಡಿ. ಡಿ.ಪಿ. ಐ. ಅವರೇ ಕಾರಣ. ಮುನಿಸಿಪಲ್ ಹೈಸ್ಕೂಲುಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಆ ಬಗ್ಗೆ ಸರ್ಕಾರದವರು ಏನು ಮಾಡಿದರು ಎಂಬುದು ಗೊತ್ತಾಗಲಿಲ್ಲ. ಇದನ್ನು ಹೆಡ್ಮಾಸ್ಟರುಗಳ ಒಂದು ಸಮಿತಿಗೆ ಒಪ್ಪಿಸಬೇಕು.

ಉಪಾಧ್ಯಾಯರುಗಳನ್ನು ಪದೇ ಪದೇ ಟ್ರಾನ್ಸ್‌ಫರ್‌ಮಾಡಿ, ಶಾಲೆಗಳಲ್ಲಿ ಪಾಠಗಳು ಸರಿಯಾಗಿ ನಡೆಯದೆ ಪರೀಕ್ಷೆಯ ಫಲಿತಾಂಶ ಕಡಿಮೆಯಾಗುತ್ತದೆ ಎಂದು ನಾನು ಹೇಳುತ್ತೇನೆ.

ಅರಣ್ಯ ಭೂಮಿಯನ್ನು ಹಂಚುವುದರಲ್ಲಿ ನಮ್ಮ ಜಿಲ್ಲೆಯಲ್ಲಿ ಬಹಳ ಅನ್ಯಾಯ ಆಗಿದೆ. ಇದನ್ನು ಸರಿಪಡಿಸಬೇಕು ಮತ್ತು ಸರ್ಕಾರದವರು ಅರಣ್ಯ ಭೂಮಿಯನ್ನು ಕೊಡುವಾಗ ಅದನ್ನು ಸಾಗು ಮಾಡುವುದಕ್ಕೆ ಸಹಾಯ ಧನ ಕೊಡಬೇಕು. ನಮ್ಮ ಕಾರವಾರ ಜಿಲ್ಲೆಯಲ್ಲಿ ಬತ್ತದ ಬೆಳೆ ಕಡಿಮೆಯಾಗಿದೆ. ಇದಕ್ಕೆ ಕಾರಣ ಅಲ್ಲಿ ಮಳೆ ಬೀಳುವ ಪ್ರಮಾಣ ಕಡಿಮೆಯಾಗಿದೆ. ಆದ್ದರಿಂದ ನಮ್ಮ ಜಿಲ್ಲೆಯಲ್ಲಿ ನೀರಾವರಿ ಸೌಕರ್ಯವನ್ನು ಹೆಚ್ಚು ಮಾಡುವ ಕಡೆಗೆ ಸರ್ಕಾರದವರು ಲಕ್ಷ್ಯ ಕೊಡಬೇಕು. ಹೂಲಿಕೆರೆ, ಬಳಗೆರೆ, ದುರ್ಗದ್, ಅಪ್ಪರ್ ಗಡಿಯೂರ್ ಈ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು. ನೀರಾವರಿ ಪ್ರದೇಶವನ್ನು ಹೆಚ್ಚು ಮಾಡಬೇಕು. ಕಾರವಾರ ಜಿಲ್ಲೆಯಲ್ಲಿ ಇರುವ ಯಾವ ಕೆರೆಯ ಅಚ್ಚುಕಟ್ಟಿನಲ್ಲಿಯೂ ಎರಡು ಬೆಳೆ ಆಗುವುದಿಲ್ಲ. ಹೀಗಿರುವಾಗ ಅಲ್ಲಿ ನೀರು ತೆರಿಗೆ ಏನು ಹಾಕಿದ್ದಾರೆ ಅದನ್ನು ರದ್ದು ಮಾಡಬೇಕು ಎಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ನಮ್ಮ ಕಾರವಾರ ಜಿಲ್ಲೆಯಲ್ಲಿರತಕ್ಕ ಕೈಗಾರಿಕೆಗಳಲ್ಲಿ ಆ ಸ್ಥಳದವರಿಗೆ ಕೆಲಸ ಕೊಡುವ ವ್ಯವಸ್ಥೆ ಮಾಡಬೇಕು. ಯಲ್ಲಾಪುರದಲ್ಲಿರುವ ರೇಯಾನ್ ಫ್ಯಾಕ್ಟರಿ ಬಂದಾಗಿದೆ. ಅದು ನಡೆಯುವ ಹಾಗೆ ಮಾಡಿ ಅದರಲ್ಲಿ ನಿರುದ್ಯೋಗಿಗಳಿಗೆ ಕೆಲಸ ಕೊಡುವ ವ್ಯವಸ್ಥೆ ಮಾಡಬೇಕು. ಎಂದು ನಾನು ಹೇಳುತ್ತೇನೆ.

ಇನ್ನು ದಾಂಡೇಲಿಯಲ್ಲಿ ಪ್ಲಾಸ್ಟಿಕ್ ಕಾರ್ಖಾನೆಯನ್ನು ಮಾಡಬೇಕೆಂದು ಒಂದು ಯೋಜನೆ ಮಾಡುತ್ತಿದ್ದಾರೆ. ಆದರೆ ಅದರ ಸಮೀಪದಲ್ಲಿ ಬರಿಯಲ್ ಗ್ರೌಂಡಿಗೋಸ್ಕರ ಒಂದು ಜಾಗ ಇದೆ. ಇದರ ಬಗ್ಗೆ ನಾನು ಸರ್ಕಾರದವರಲ್ಲಿ ಪತ್ರವ್ಯವಹಾರ ಕೂಡ ಮಾಡಿದ್ದೇನೆ. ಸರ್ಕಾರದವರು ಕೂಡಲೇ ಆ ಜಾಗವನ್ನು ಹಿಂದೂಗಳಿಗೆ ಬರಿಯಲ್ ಗ್ರೌಂಡಿಗೋಸ್ಕರ ಬಿಡಿಸಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

2-30 P. M.

ಅದೇ ರೀತಿಯಲ್ಲಿ ದಾಂಡೇಲಿಯಲ್ಲಿರುವ ಕಾರ್ಖಾನೆಗಳಲ್ಲಿ ಮಾರ್ವಾಡಿ ಜನರನ್ನು ಹೆಚ್ಚಾಗಿ ನೇಮಕ ಮಾಡಿಕೊಳ್ಳುತ್ತಿದ್ದಾರೆ. ನಮ್ಮ ನಾಡಿನ ಜನರಿಗೆ ಅಲ್ಲಿ ಹೆಚ್ಚು ಉದ್ಯೋಗಗಳು ಸಿಗುತ್ತಾ ಇಲ್ಲ. ಆದ್ದರಿಂದ ಅಲ್ಲಿರುವ ಕಾರ್ಖಾನೆಗಳಲ್ಲಿ ನಮ್ಮ ರಾಜ್ಯದ ಕನ್ನಡಿಗರಿಗೆ ಉದ್ಯೋಗ ದೊರೆಯುವಂತೆ ಸರ್ಕಾರದವರು ಒಂದು ಆದೇಶವನ್ನು ಅವರಿಗೆ ಕೊಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೆ, ರಾಜ್ಯಪಾಲರ ಭಾಷಣದಲ್ಲಿ ಕಳೆದ 6-7 ವರ್ಷಗಳಿಂದ ಕ್ಷಾಮದ ದವಡೆಗೆ ಸಿಕ್ಕಿ ಬಳಲುತ್ತಾ ಇರತಕ್ಕಂತಹ ಪ್ರದೇಶದ ಜನರನ್ನು ಉಳಿಸುವುದಕ್ಕಾಗಿ ಶಾಶ್ವತವಾದ ಪರಿಹಾರ ಕಾರ್ಯಕ್ರಮವನ್ನು ಒಂದು ಸಮಗ್ರವಾದ ಯೋಜನೆಯ ಮೂಲಕ ರೂಪಿಸಿ ಹೇಳುತ್ತಾರೆಂದು ನಾನು ಭಾವಿಸಿಕೊಂಡಿದ್ದೆ. ಆದರೆ ಅದು ಯಾವುದೂ ರಾಜ್ಯಪಾಲರ ಭಾಷಣದಲ್ಲಿಲ್ಲ. ಕಳೆದ 6-7 ವರ್ಷಗಳಿಂದ ಕ್ಷಾಮಕ್ಕೆ ತುತ್ತಾಗಿರತಕ್ಕಂತಹ ಪ್ರದೇಶದ ಜನರಿಗೆ ಖರ್ಚು ಮಾಡಿದ ದುಡ್ಡನ್ನು ಮಾತ್ರ ತೋರಿಸಿದ್ದಾರೆ. ನಮ್ಮ ರಾಜ್ಯದ ಅರ್ಧ ಭಾಗ ಕಳೆದ 6–7 ವರ್ಷಗಳಲ್ಲಿ ಕ್ಷಾಮಕ್ಕೆ ತುತ್ತಾಗಿ ಬಳಲಿ ಬೆಂಡಾಗಿದೆ. ಇದರಿಂದಾಗಿ ಅನೇಕ ಜನರು ಮನೆ ಮಠಗಳನ್ನು ಕಳೆದುಕೊಂಡು ಇತರ ಊರುಗಳಿಗೆ ವಲಸೆ ಹೋಗಿದ್ದಾರೆ. ಪ್ರತಿ ವರ್ಷವೂ ಮುಂಗಾರಿನಲ್ಲಿ ಒಂದೆರಡು ತಿಂಗಳು ಮಳೆಯಾಗಿ, ವರ್ಷದ ಕೊನೆಯಲ್ಲಿ ಮಳೆಯಾಗದೆ ಇರುವುದರಿಂದ, ಹಾಕಿರತಕ್ಕಂತಹ ಬೆಳೆಗಳಿಗೆ ಸರಿಯಾಗಿ ನೀರು ಸಿಗದೆ ನಾಶವಾಗುವ ಪರಿಸ್ಥಿತಿ ಇದೆ. ರೈತರು ಯಾವ ಒಂದು ಆಶಾಭಾವನೆಯನ್ನು ಇಟ್ಟುಕೊಂಡು ಬೆಳೆಯನ್ನು ಹಾಕುತ್ತಾರೋ, ಅದು ವ್ಯರ್ಥವಾಗಿ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದರೂ, ಜನರನ್ನು ಈ ಒಂದು ಕ್ಷಾಮದಿಂದ ಶಾಶ್ವತವಾಗಿ ಬಿಡುಗಡೆ ಮಾಡುವುದಕ್ಕೆ ಯಾವ ಒಂದು ಕಾರ್ಯಕ್ರಮವನ್ನೂ ರೂಪಿಸಿಲ್ಲ. ಇಂತಹ ಬಾಬುಗಳಿಗೆ ದೇಶದ ಹಣವನ್ನು ಖರ್ಚು ಮಾಡುವುದರಿಂದ ಅದರಲ್ಲಿ ಹೆಚ್ಚು ಉತ್ಪತ್ತಿಯಾಗದೆ, ಸಾಲದ ಹೊರೆಯೇ ಜಾಸ್ತಿಯಾಗುತ್ತದೆ. ಈ ಒಂದು ವಿಚಾರವನ್ನು ಗಣನೆಗೆ ತೆಗೆದುಕೊಂಡು, ಯಾವ್ಯಾವ ಪ್ರದೇಶಗಳು ಆಗಾಗ್ಯೆ ಕ್ಷಾಮಕ್ಕೆ ತುತ್ತಾಗುತ್ತವೆ, ಅವುಗಳಿಗೆ ಒಂದು ಸಮಗ್ರವಾದ ಯೋಜನೆಯನ್ನು ಮಾಡಬೇಕಾಗಿತ್ತು ಎಂದು ಹೇಳುತ್ತಿದ್ದೇನೆ. ಅದಲ್ಲದೆ ಎಷ್ಟೋ ರೈತರು ಇವತ್ತು ಜಮೀನು ಆಬಾದು ಮಾಡುವುದಕ್ಕಾಗಿ ಸಾಲಗಳನ್ನು ತೆಗೆದುಕೊಂಡಿರುತ್ತಾರೆ. ಆದರೆ ಬರಗಾಲ ಬಂದುದರಿಂದ ಹಲವು ರೈತರಿಗೆ ಸಾಲದ ಕಂತುಗಳನ್ನು ಕೊಡುವುದಕ್ಕಾಗಲಿಲ್ಲ. ಇದಕ್ಕಾಗಿ ಅವರು ತೆಗೆದುಕೊಂಡ ಸಾಲಗಳಿಗೆ ಪೀನಲ್ ಇಂಟರೆಸ್ಟ್ ಹಾಕುತ್ತಿದ್ದಾರೆ ಮತ್ತು ಎಷ್ಟೋ ಕಡೆಗಳಲ್ಲಿ ಜಮೀನನ್ನು ಹರಾಜು ಹಾಕಿದಂತಹ ನಿದರ್ಶನಗಳು ಅನೇಕ ಇವೆ. ಒಂದು ಕಡೆ ಪರಿಹಾರ ಕಾಮಗಾರಿಗಳನ್ನು ಮಾಡುವುದು, ಇನ್ನೊಂದು ಕಡೆ ಅದೇ ಜನರ ಭೂಮಿಯನ್ನು ಹರಾಜು ಮಾಡುವುದು. ಇದು ಯಾವ ನ್ಯಾಯವೆಂದು ನಾನು ಕೇಳುತ್ತಿದ್ದೇನೆ. ಈ ವಿಚಾರದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುತ್ತೇನೆ. ನಮ್ಮ ಮಾನ್ಯ ಚನ್ನಬಸಪ್ಪನವರೂ ಇಲ್ಲಿ ಇದ್ದಾರೆ. ಹಿಂದಿನಿಂದಲೂ ನಡೆದು ಬಂದ ಪದ್ಧತಿ ಏನೆಂದರೆ, ದೊಡ್ಡ ದೊಡ್ಡ ನೀರಾವರಿ ಅಣೆಕಟ್ಟುಗಳನ್ನು ಕಟ್ಟುವುದು. ನೀರು ಎಲ್ಲಿ ಹರಿದು ಹೋಗುತ್ತದೆ, ಎಲ್ಲಿ ಮಳೆ ಬರುತ್ತದೆ, ಎಲ್ಲಿ ಬರುವುದಿಲ್ಲ, ಯಾವ ಜಾಗ ಸಮೃದ್ಧಿಯಾಗಿದೆ, ಯಾವುದು ಆಗಿಲ್ಲ—ಇವು ಯಾವುದನ್ನೂ ನೋಡುವುದಿಲ್ಲ. ನಾನು ಹೇಳುವುದು, ಆ ಪದ್ಧತಿಯನ್ನು ಈಗ ಬದಲಾವಣೆ ಮಾಡಬೇಕು. ಯಾವ ಪ್ರದೇಶ ಪ್ರತಿವರ್ಷವೂ ಕ್ಷಾಮಕ್ಕೆ ತುತ್ತಾಗುತ್ತದೆ, ಅಂತಹ ಕಡೆಗಳಲ್ಲಿ ಬೇಕಾದರೆ ಹೈ ಪವರ್ ಪಂಪ್ ಹಾಕಿ, ಇಲ್ಲವೇ ಕಂಟೂರ್ ಬಂಡಿಂಗ್ ಮಾಡಿ ನೀರನ್ನು ಒದಗಿಸಬೇಕು. ಅಂತೂ ಆ ಭಾಗದ ಜನರಿಗೆ ನೀರನ್ನು ಒದಗಿಸಿ ಬೆಳೆಗಳನ್ನು ರಕ್ಷಿಸುವ ಯೋಜನೆ ಮಾಡಬೇಕು.

ಇನ್ನೊಂದು ವಿಚಾರ ಏನೆಂದರೆ, ಒಂದು ಎಕರೆ ಬತ್ತವನ್ನು ಬೆಳೆಯುವುದಕ್ಕೆ ಎಷ್ಟು ನೀರು ಬೇಕಾಗುತ್ತದೆ, ಅಷ್ಟು ನೀರನ್ನು ಖುಷ್ಕಿ ಜಮೀನಿಗೆ ಕೊಟ್ಟರೆ 4–6 ಎಕರೆ ಭೂಮಿಯಲ್ಲಿ ಬೆಳೆ ತೆಗೆದುಕೊಳ್ಳಬಹುದೆಂಬ ಅನುಭವ ನನಗೆ ಇದೆ. ಆದ್ದರಿಂದ ಯೋಜನೆಗಳನ್ನು ಮಾಡುವಾಗ, ಅಣೆಕಟ್ಟುಗಳನ್ನು ಕಟ್ಟುವಾಗ, ಅದರ ನೀರನ್ನು ಭತ್ತ ಬೆಳೆಯುವುದಕ್ಕೆ ಮಾತ್ರ ಕೊಡುವುದನ್ನು ತಪ್ಪಿಸಿ, ಖುಷ್ಕಿ ಬೆಳೆಗೂ ಕೊಡುವ ವ್ಯವಸ್ಥೆ ಮಾಡಬೇಕು. ಆ ರೀತಿ ದೊಡ್ಡ ನೀರಾವರಿ ಯೋಜನೆಗಳನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಹಾಸನ ತಾಲ್ಲೂಕಿನಲ್ಲಿ ಹೇಮಾವತಿ ಜಲಾಶಯದಿಂದ ಸಾಧಾರಣ 20 ಹಳ್ಳಿಗಳು ಮುಳುಗಡೆಯಾಗುತ್ತವೆ. ಆದ್ದರಿಂದ ಅದಕ್ಕೆ ಒಂದು ಹೈಲೆವೆಲ್ ಚಾನಲ್ ಕೊಟ್ಟರೆ, ಮಳೆಗಾಲದಲ್ಲಿ ಹೆಚ್ಚಾಗಿ ಬಂದಂತಹ ನೀರು ಈ ಚಾನಲುಗಳಲ್ಲಿ ಹೋಗುವುದರಿಂದ, ಕೆರೆ ಹೆಚ್ಚು ತುಂಬಿ ಆ ಭಾಗದ ಜನರಿಗೆ ಆಗುವ ತೊಂದರೆಯನ್ನು ತಪ್ಪಿಸಿದ ಹಾಗೆ ಆಗುತ್ತದೆ ಎಂದು ಹೇಳುತ್ತೇನೆ. ಇನ್ನೊಂದು ವಿಚಾರವೇನೆಂದರೆ, ಹಾಸನ ತಾಲ್ಲೂಕಿನಲ್ಲಿ ಯಗಚಿ ನದಿಗೆ ಒಂದು ಅಂದಾಜು ಎಲ್ಲಾ ತಯಾರಾಗಿತ್ತು. ಅದರಿಂದ 50 ಸಾವಿರ ಎಕರೆ ಜಮೀನಿಗೆ ನೀರಾವರಿಯಾಗುತ್ತದೆಂದು ಕೂಡ ಅಂದಾಜು ಮಾಡಿದ್ದಾರೆ. ಅದನ್ನು ಸರ್ಕಾರದವರು ತಕ್ಷಣ ಕಾರ್ಯಗತ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀ ಕೆ. ಎಚ್. ಹನುಮೇಗೌಡ)

ಇನ್ನೊಂದು ವಿಚಾರವೇನೆಂದರೆ, ಶಾಶ್ವತವಾದ ಪರಿಹಾರ ಕಾರ್ಯಗಳಿಗೆ ಒಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡಬೇಕು. ಇವತ್ತು ಭೂಮಿಯ ಒಳಗಡೆ ಬೇಕಾದಷ್ಟು ಜಲ ಇದೆ. ಇದನ್ನು ಸರ್ವೆ ಮಾಡಿಸಿ ಎಲ್ಲೆಲ್ಲಿ ಅದನ್ನು ಸದುಪಯೋಗಪಡಿಸುವುದಕ್ಕೆ ಸಾಧ್ಯವಿದೆಯೋ, ಅಲ್ಲೆಲ್ಲಾ ಬೋರ್ ವೆಲ್‌ಗಳನ್ನು ಹಾಕಿ ನೀರನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇವತ್ತು ಒಂದೊಂದು ಬೋರ್‌ವೆಲ್‌ಗೆ 15–20 ಸಾವಿರ ರೂಪಾಯಿ ಖರ್ಚಾಗುವುದರಿಂದ, ಸರ್ಕಾರದವರೇ ಇದನ್ನು ಹಾಕಿಕೊಂಡು, 15–20 ಕಂತುಗಳಲ್ಲಿ ರೈತರಿಂದ ವಸೂಲು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ರೀತಿ ಅಂತರ್ಗತ ಭೂಗರ್ಭ ಜಲ ಇಲ್ಲದಿರುವ ಕಡೆ ಮತ್ತು ನೀರಿಲ್ಲದ ಕಡೆಗಳಲ್ಲಿ ಕುರಿ ಮತ್ತು ಕೋಳಿ ಸಾಕಾಣಿಕೆ ಕೇಂದ್ರಗಳನ್ನು ತೆರೆಯಬೇಕು. ಇಲ್ಲದಿದ್ದರೆ ಸಣ್ಣ ಸಣ್ಣ ಕೈಗಾರಿಕೆಗಳನ್ನು ತೆರೆದು ಅಲ್ಲಿರುವ ಜನರು ಕೂಡ ಬೇರೆ ಪ್ರದೇಶಗಳ ಜನರ ಹಾಗೆ ಶಾಂತಿಯಿಂದ, ನೆಮ್ಮದಿಯಿಂದ, ಜೀವನ ಮಾಡುವುದಕ್ಕೆ ವ್ಯವಸ್ಥೆಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದೇ ರೀತಿ ಕ್ಷಾಮ ಪರಿಹಾರದ ಕಾರ್ಯಕ್ರಮಕ್ಕೆ ಒಂದು ಬೋರ್ಡು ಮಾಡುವುದು ಒಳ್ಳೆಯದು ಎಂದು ಸಲಹೆ ಮಾಡುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ಇವತ್ತು ಕನ್ನಡ ಸಿನಿಮಾಕ್ಕೆ ಪ್ರತಿಯೊಂದಕ್ಕೂ 50 ಸಾವಿರ ರೂಪಾಯಿಯನ್ನು ಕೊಡುತ್ತಿದ್ದಾರೆ. ಬಹುಶಃ ಕಲೆಗೆ ಉತ್ತೇಜನ ಕೊಡುವುದಕ್ಕಾಗಿ ಈ ಹಣವನ್ನು ಕೊಡುತ್ತಿದ್ದಾರೆಂದು ತಿಳಿಯುತ್ತೇನೆ. ನಾನಾದರೂ ಹೇಳುತ್ತೇನೆ, ಈ 50 ಸಾವಿರ ರೂಪಾಯಿ ಕೊಡುವುದರಿಂದ ಯಾವ ವಿಧವಾದ ಕಲೆಯೂ ಉದ್ಧಾರವಾಗುವುದಿಲ್ಲ. ಅದಕ್ಕೆ ಬದಲಾಗಿ ನನ್ನ ಸಲಹೆ ಏನೆಂದರೆ, ಈಗ ಪೂನಾದಲ್ಲಿ ಫಿಲ್ಮ್ ಇನ್‌ಸ್ಟಿಟ್ಯೂಟ್ ಇದೆ, ಎಷ್ಟೋ ಜನ ಉತ್ತಮ ಕಲಾವಿದರಿಗೆ ಹಣಕಾಸಿನ ತೊಂದರೆಯಿಂದಾಗಿ ಅಲ್ಲಿಗೆ ಹೋಗಿ ತರಬೇತಿ ಪಡೆಯುವುದಕ್ಕೆ ಅವಕಾಶ ಇಲ್ಲದಂತಾಗಿದೆ. ಆದ್ದರಿಂದ ಅಂತಹ ಉತ್ತಮ ಕಲಾವಿದರು, ಯೋಗ್ಯರಾದವರು ಯಾರಿದ್ದಾರೆ, ಅವರಿಗೆ ಸರ್ಕಾರದವರು ಧನ ಸಹಾಯಮಾಡಿ ಇಲ್ಲವೇ ಸ್ಕಾಲರ್ ಶಿಪ್ ಕೊಟ್ಟು ತರಬೇತಿ ಪಡೆಯುವುದಕ್ಕೆ ಅಲ್ಲಿಗೆ ಕಳಿಸಿದರೆ ಅದರಿಂದ ನಾವು ಹೆಚ್ಚಿನ ಸೇವೆಯನ್ನು ನಮ್ಮ ಕನ್ನಡ ನಾಡಿನ ಕಲಾವಿದರಿಗೆ ಮಾಡಿದಂತಾಗುತ್ತದೆ. ಪ್ರತಿ ವರ್ಷ 10–12 ಜನರನ್ನು ಅಲ್ಲಿಗೆ ಕಳಿಸುವಂತೆ ಮಾಡಿದರೆ, ಅದರಿಂದ ಕಲೆಗೂ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ, ಮತ್ತು ಕಲಾವಿದರಿಗೂ ಹೆಚ್ಚಿನ ಅವಕಾಶವನ್ನು ಒದಗಿಸಿಕೊಟ್ಟ ಹಾಗೆ ಆಗುತ್ತದೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ನಿರುದ್ಯೋಗವನ್ನು ನಿವಾರಣೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು 50 ಕೋಟಿ ರೂಪಾಯಿಯನ್ನು ಮಂಜೂರು ಮಾಡಿ ಅದರಲ್ಲಿ 30 ಕೋಟಿ ರೂಪಾಯಿ ಖರ್ಚಾಗಿದೆ ಎಂದು ಕೇಳಿದ್ದೇನೆ. ಬಹುಶಃ ಇದರಿಂದ ಯಾವ ನಿರುದ್ಯೋಗ ಸಮಸ್ಯೆಯೂ ಪರಿಹಾರವಾಗುವುದಿಲ್ಲವೆಂದು ಹೇಳುತ್ತೇನೆ. ಇದಕ್ಕೆ ಕಾರಣ ಇಷ್ಟೆ. ನಿರುದ್ಯೋಗಿಗಳಿಂದ ಮಾಡಿಸುತ್ತಿರುವ ಕೆಲಸ, ರಸ್ತೆಗಳನ್ನು ರಿಪೇರಿ ಮಾಡಿಸುವುದು, ಕೆರೆಯನ್ನು ರಿಪೇರಿ ಮಾಡಿಸುವುದು ಇತ್ಯಾದಿ. ಇವುಗಳನ್ನು ಪಿ. ಡಬ್ಲ್ಯು. ಡಿ ಯವರು ಮತ್ತು ತಾಲ್ಲೂಕು ಬೋರ್ಡಿನವರು ಮಾಡುವುದರಿಂದ, ಇದರ ಬದಲು ಶಾಶ್ವತವಾಗಿ ಅನುಕೂಲವಾಗತಕ್ಕಂತಹ ಕೆಲಸಗಳನ್ನು ಮಾಡಿಸಿದರೆ ಒಳ್ಳೆಯದು. ಆದ್ದರಿಂದ ಇವತ್ತು ಯಾವ ಒಂದು ಕೆಲಸ ಶಾಶ್ವತವಾಗಿ ಉಳಿಯುತ್ತದೆ, ಅಂತಹ ಕೆಲಸಗಳನ್ನು ಮಾಡಿಸಬೇಕೆಂದು ಸರ್ಕಾರಕ್ಕೆ ಸೂಚಿಸಿ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಂಡಿಸಿರುವ ವಂದನಾ ನಿರ್ಣಯವನ್ನು ನಾನು ಅನುಮೋದಿಸುತ್ತಾ ಅದರಲ್ಲಿ ಬಿಟ್ಟಿರತಕ್ಕ ಕೆಲವು ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಕನ್ನಡ ಆಡಳಿತ ಭಾಷೆಯಾಗಿ ಮಾಡುವುದರಲ್ಲಿ ತುಂಬಾ ಅನಾನುಕೂಲಗಳಿವೆ. ಇದನ್ನು ಆದಷ್ಟು ಜಾಗ್ರತೆಯಾಗಿ ಮಾಡಿದರೆ ನಮ್ಮ ಗ್ರಾಮಾಂತರ ಜನರಿಗೆ ಮತ್ತು ನಮ್ಮ ಸರ್ಕಾರಕ್ಕೆ ಇರತಕ್ಕ ಬಾಂಧವ್ಯ ಹೆಚ್ಚಾಗುತ್ತದೆಂದು ಹೇಳುವುದಕ್ಕೆ, ನಾನು ಇಷ್ಟಪಡುತ್ತೇನೆ.

ಇನ್ನು ಲಾ ಅಂಡ್ ಆರ್ಡರ್ ವಿಷಯವಾಗಿ ಹೇಳುತ್ತಾ ರಿಜರ್ವ್ ಪೋಲೀಸಿನವರನ್ನು ಹೆಚ್ಚಿಸಿದ್ದೇವೆಂಬ ಒಂದು ಅಂಶವನ್ನು ರಾಜ್ಯಪಾಲರು ಹೇಳಿದ್ದಾರೆ. ಈ ಸಂಖ್ಯೆಯನ್ನು ಕೇವಲ ಹೆಚ್ಚಿಸಿದರೆ ಸಾಲದು, ಅದೇ ತರಹ ಅವರು ಇನ್ನೂ ಹೆಚ್ಚಿನ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಮತ್ತು

ನಿಷ್ಠೆಯಿಂದ ಅವರವರ ಕೆಲಸಗಳನ್ನು ಮಾಡುವಂತೆ ಒಂದು ಸುವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾದುದು ಅವರ ಆದ್ಯಕರ್ತವ್ಯ.

ಇನ್ನು ಕ್ಷಾಮ ಪರಿಹಾರ ಕಾಮಗಾರಿಗಳ ಬಗ್ಗೆ ಮಾತನಾಡುವಾಗ ನಮ್ಮ ಜಿಲ್ಲೆಯಲ್ಲಿ ಇದೇ ಸಭೆಯ ಸದಸ್ಯರಾದ ಮಾನ್ಯ ಶ್ರೀ ಮಾದಪ್ಪಗೌಡರು ಈ ಬಾಬಿಗೋಸ್ಕರ ಸರ್ಕಾರದಿಂದ ಒದಗಿಸಲಾದ ಹಣ ಹಿಂದೆ ಎಷ್ಟೊಂದು ಅಪವ್ಯಯವಾಗಿದೆಯೆಂಬುದಾಗಿ ಹೇಳಿದರು. ನಾನು ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ನಾಗಮಂಗಲ ತಾಲ್ಲೂಕಿನಲ್ಲಿಯೇ ಲಕ್ಷ ರೂಪಾಯಿಗಳಷ್ಟು ಅಪವ್ಯಯವಾಗಿದೆ. ಅದರ ಬಗ್ಗೆ ಇನ್ನೂ ಸರ್ಕಾರ ಯಾವ ತರಹ ಒಂದು ಧೋರಣೆಯನ್ನು ತೆಗೆದುಕೊಂಡು ಯಾರನ್ನೂ ಶಿಕ್ಷೆಗೆ ಗುರಿಪಡಿಸಿಲ್ಲ. ಆದ್ದರಿಂದ ಇನ್ನುಮುಂದಾದರೂ ಯಾವ ರೀತಿಯಲ್ಲಿಯೂ ಈ ಬಾಬಿನಲ್ಲಿ ಅಪವ್ಯಯವಾಗದಂತೆ ನೋಡಿಕೊಳ್ಳಬೇಕು. ಸರ್ಕಾರದ ದುಡ್ಡು ಅತ ಬಡವರಿಗೆ ಉಪಯೋಗವಾಗುವಂತೆ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯ.

ಇನ್ನು ಲ್ಯಾಂಡ್ ರಿಫಾರಮ್ಸ್‌ನ್ನು ಬಹಳ ಜಾಗ್ರತೆಯಾಗಿ ಜಾರಿಗೆ ತರಬೇಕಾಗಿದೆ. ಸ್ವಾತಂತ್ರ್ಯ ಬಂದು 25 ವರ್ಷಗಳಾದರೂ ಈ ವಿಚಾರದಲ್ಲಿ ನಾವು ಕುಂಟುತ್ತಾ ಹೋಗುವುದರಿಂದ ಜನಗಳ ಶಾಂತಿಯನ್ನು ನಾವು ಈಗ ಪರೀಕ್ಷೆ ಮಾಡಿದಂತಾಗಿದೆ. ರೆವಿನ್ಯೂ ಅಡ್ಮಿನಿಸ್ಟ್ರೇಷನ್ನನ್ನು ದಕ್ಷತೆಯಿಂದ ಸಂಬಂಧಪಟ್ಟ ಇಲಾಖೆ ನೋಡಬೇಕು. ಇವತ್ತು ನಾನಾ ಕಾರಣಗಳಿಂದ ದಕ್ಷತೆಗೆ ಪ್ರಾಮುಖ್ಯತೆ ಕಡಿಮೆಯಾಗಿದೆ. ಲ್ಯಾಂಡ್ ರಿಫಾರಂಸ್‌ನ್ನು ಜಾರಿಗೆ ತರಬೇಕಾದರೆ ರೆವಿನ್ಯೂ ಇಲಾಖೆಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕು. ರೆವಿನ್ಯೂ ಇಲಾಖೆಯಲ್ಲಿ ಕೆಲಸಮಾಡುವವರಿಗೆ ವಾಹನ ಸೌಕರ್ಯಗಳು ಇಲ್ಲ. ಸದ್ಯದಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರ ಮಟ್ಟದಲ್ಲಿರುವವರಿಗೆ ಮಾತ್ರ ಜೀಪುಗಳನ್ನು ಒದಗಿಸುತ್ತಿದ್ದಾರೆ. ಅಷ್ಟೇ ಸಾಲದು. ಲ್ಯಾಂಡ್ ರಿಫಾರಮ್ಸನ್ನು ಜಾರಿಗೆ ತರಬೇಕಾದರೆ ಅನೇಕ ಕಾರ್ಯಗಳನ್ನು ತಾಲ್ಲೂಕು ಅಧಿಕಾರಿಗಳಾಗಿರುವವರು ತ್ವರಿತ ಗತಿಯಲ್ಲಿ ಕೈಗೊಳ್ಳಲು ಸ್ಥಳಗಳಿಗೇ ಹೋಗಿ ಭೇಟಿ ಮಾಡಿ ಜನರ ಹೇಳಿಕೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕಾಗಿದೆ. ಅಂತಹ ಒಂದು ಸಂದರ್ಭದಲ್ಲಿ ತ್ವರಿತವಾಗಿ ಕಾರ್ಯಗಳನ್ನು ಕೈಗೊಳ್ಳಲು ಅವರಿಗೆ ಜೀಪುಗಳನ್ನು ಒದಗಿಸುವ ಮೂಲಕ ವಾಹನ ಸೌಕರ್ಯಗಳನ್ನು ಒದಗಿಸುವುದು ಉಚಿತವೆಂದು ನನಗನ್ನಿಸುತ್ತದೆ. ಈ ವಿಚಾರದಲ್ಲಿ ನನಗೆ ಒಬ್ಬ ಸರ್ಕಾರದ ಅಧಿಕಾರಿಯಾದವರು ಆ ಅಧಿಕಾರಿಗಳು ಬಸ್ಸುಗಳಲ್ಲಿ ಹೋಗಿ ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆಂದು ಹೇಳಿದರು. ಅದು ನಿಜ. ಅನೇಕ ಸಾರಿ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಇತರರು ಈ ವಿಚಾರದಲ್ಲಿ ನನಗೆ ವರದಿಯನ್ನೂ ಸಹ ಮಾಡಿರುತ್ತಾರೆ. ಲ್ಯಾಂಡ್ ರಿಫಾರ್ಮ್ಸ್ ಪ್ರಕಾರ ಅವರು ಏನಾದರೂ ಕ್ರಮ ತೆಗೆದುಕೊಳ್ಳಬೇಕಾದರೆ, ಅಂತಹ ಸಂದರ್ಭಗಳಲ್ಲಿ ತ್ವರಿತವಾಗಿ ತೀರ್ಮಾನಗಳನ್ನು ಕೊಡುವುದಕ್ಕೆ ಆಗುವುದಿಲ್ಲ ಅದಕ್ಕೋಸ್ಕರವಾಗಿ ಜೀಪುಗಳ ಅವಶ್ಯಕತೆ ರೆವಿನ್ಯೂ ಇಲಾಖೆಗೆ ಹೆಚ್ಚಾಗಿದೆ. ಆದ್ದರಿಂದ ರೆವಿನ್ಯೂ ಇಲಾಖೆಯಲ್ಲಿ ಕೆಲಸಮಾಡುವಂತಹ ತಹಸೀಲ್ದಾರರಿಗೆ ಜೀಪುಗಳನ್ನು ಒದಗಿಸುವುದು ಸರ್ಕಾರದ ಆದ್ಯಕರ್ತವ್ಯ. ಇಲ್ಲದೆ ಹೋದರೆ, ಜೀಪುಗಳನ್ನು ಇತರೆ ಇಲಾಖೆಗಳಿಂದ ಸಾಲವಾಗಿ ಪಡೆದು ಬಾಡಿಗೆ ಕೊಟ್ಟು ದೂರವಾಗಿರತಕ್ಕ ಸ್ಥಳಗಳಿಗೆ ಹೋಗಲು ಅವನ್ನು ಉಪಯೋಗಿಸಿಕೊಂಡು ಅಲ್ಲಿಯವರ ಹೇಳಿಕೆಗಳನ್ನು ತೀರ್ಮಾನಮಾಡುವುದರಲ್ಲಿ ಸಮಸ್ಯೆಗಳು ಇನ್ನೂ ಹೆಚ್ಚಾಗುತ್ತವೆಯೇ ವಿನಹ ಕಡಿಮೆಯಾಗುವುದಿಲ್ಲ.

ಸರ್ಕಾರಿ ಬಂಜರು ಭೂಮಿಗಳನ್ನು ಹಂಚಿಕೆ ಮಾಡುವಾಗ ರೈತರಿಗೆ ಪ್ರಾಮುಖ್ಯತೆ ಕೊಡಬೇಕು. ರೈತರಲ್ಲದವರಿಗೆ, ಅಧಿಕಾರಿಗಳ ಕುಟುಂಬದವರಿಗೆ ಕೊಡಬಾರದು.

ಇನ್ನು ನಿರುದ್ಯೋಗ ಸಮಸ್ಯೆಯನ್ನು ಒಂದು ವಾರ್ ಫುಟಿಂಗ್ (warfooting) ಆಗಿ, ವೇಗವಾಗಿ ತೀವ್ರಗತಿಯಿಂದ ಬಗೆಹರಿಸದೇ ಹೋದರೆ ದಿನೇ ದಿನೇ ಯುವಕರಲ್ಲಿ ಬಹಳವಾಗಿ ಒಂದು ನಿರಾಶಾದಾಯಕವಾದ ಭಾವನೆ ಬರುತ್ತದೆ. ಇತ್ತೀಚೆಗೆ ಖಾಸಗೀಯವರಿಂದ ಮೆಡಿಕಲ್ ಕಾಲೇಜುಗಳು ಮತ್ತು ಟೆಕ್ನಿಕಲ್ ಕಾಲೇಜುಗಳನ್ನು ತೆರೆಯುವುದು ಜಾಸ್ತಿಯಾಗುತ್ತಿದೆ. ಅದರ ಬಗ್ಗೆ ಮಿತಿ ಇರಬೇಕು. ಇನ್ನು ಮುಂದೆ ಹೊಸದಾಗಿ ಅವನ್ನು ತೆರೆಯಬಾರದು. ಇರತಕ್ಕ ಕಾಲೇಜುಗಳಲ್ಲಿಯೂ ಸೀಟುಗಳನ್ನು ಕಡಿಮೆಮಾಡಬೇಕು. ಇತ್ತೀಚೆಗೆ ಹೊಸ ಪ್ರೊಪೋಜಲ್ ತಂದು ಲ್ಯಾಂಡ್ ಆರ್ಮಿ ಎಂಬುದಾಗಿ ತಂದಿದ್ದೀರಿ. ಹಿಂದೆ ವಿಲೇಜ್ ವಾಲಂಟೀರ್ಸ್ ಫೋರ್ಸ್ ಎಂಬುದಾಗಿ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಬಂತು. ನಮ್ಮ ನಿರೀಕ್ಷಣೆಯಲ್ಲಿ ಶೇಕಡ 5ರಷ್ಟೂ ಸಹ ಆ ಯೋಜನೆ ಫಲಕಾರಿಯಾಗಲಿಲ್ಲ. ಆ ರೀತಿಯಾಗಿ ಈ ಲ್ಯಾಂಡ್ ಆರ್ಮಿ ಕೂಡ ಆಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಅದು ಸರಿಯಾಗಿ ಕೆಲಸಮಾಡುವ ವ್ಯವಸ್ಥೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

(ಶ್ರೀ ದಮಯಂತಿ ಬೋರೇಗೌಡ)

ಇನ್ನು ವ್ಯವಸಾಯಾಭಿವೃದ್ಧಿಗೆ ಸರ್ಕಾರದವರು ಹೆಚ್ಚಿಗೆ ಗಮನ ಕೊಡುತ್ತಿದ್ದಾರೆಂದು ರಾಜ್ಯಪಾಲರು ಅವರ ಭಾಷಣದಲ್ಲಿ ಹೇಳಿದ್ದಾರೆ. ಇದಕ್ಕೆ ಸಂತೋಷಪಡಬೇಕಾದುದು ಸಹಜ. ಅವರಿಗೆ ಸಾಲದ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ. ಇವತ್ತು ನಮ್ಮ ಸಹಕಾರ ಸಂಘಗಳ ಪರಿಸ್ಥಿತಿ ಏನಾಗಿದೆಯೆಂದರೆ, ಸೇಕಡ 10ರಷ್ಟು ಸಹ ಅಲ್ಲಿ ಸಮರ್ಪಕವಾಗಿ ಕೆಲಸಮಾಡುತ್ತಿಲ್ಲ. ಇನ್ನು ಫರ್ಟಿಲೈಜರ್ಸ್ ಅದನ್ನು ಸಾಲದ ರೂಪದಲ್ಲಿ ಹೆಚ್ಚಿಗೆ ರೈತರಿಗೆ ಕೊಡುತ್ತಾರೆ. ಅನೇಕ ವೇಳೆ ಫರ್ಟಿಲೈಜರ್ಸ್‌ನಲ್ಲಿ ಅಡಲ್ಟರೇಷನ್ ಕಂಡುಬರುತ್ತದೆ. ಖಾಸಗೀ ಕಂಪನಿಗಳಿಂದ ಹಾಗೂ ಪ್ರೈವೇಟ್ ಡೀಲರ್‌ಗಳಿಂದ ಇವನ್ನು ಕೊಳ್ಳುವಾಗ ಹೆಚ್ಚಿಗೆ ನಿಗಾವನ್ನು ಸರ್ಕಾರದವರು ಕೊಡಬೇಕು. ಏಕೆಂದರೆ, ಅವುಗಳಲ್ಲಿ ಉಪ್ಪು, ಮಣ್ಣು, ಬೂದಿ ಮಿಕ್ಸಾಗಿರುತ್ತವೆ. ಆದ್ದರಿಂದ ಈ ಕಡೆಗೆ ಗಮನಕೊಡಬೇಕು. ಇಂತಹ ಫರ್ಟಿಲೈಜರ್ಸ್ ವ್ಯವಸ್ಥೆಯಿಂದ ಯಾವ ತರಹ ಹಸುರು ಕ್ರಾಂತಿ ತರುವುದಕ್ಕೆ ಸಾಧ್ಯವಾಗುವುದಿಲ್ಲವೆಂಬುದಾಗಿ ನಮಗೆ ಕಳವಳ ಉಂಟಾಗಿದೆ. ಆದ್ದರಿಂದ ಸ್ಟ್ಯಾಂಡರ್ಡೈಜೇಷನ್ ಆಫ್ ಫರ್ಟಿಲೈಜರ್ಸ್ ಬಗ್ಗೆ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂಬುದು ಬಹಳ ಮುಖ್ಯವಾದುದು.

ಇನ್ನು ಇರಿಗೇಷನ್ ವಿಷಯವಾಗಿ ಹೇಳುವುದಾದರೆ, ಸರ್ಕಾರದವರು ಮೇಜರ್ ಇರಿಗೇಷನ್ನಿಗೆ ಮಾತ್ರ ವಿಶೇಷ ಗಮನ ಕೊಡುತ್ತಿದ್ದಾರೆ. ಮೈನರ್ ಇರ್ರಿಗೇಷನ್ ಮತ್ತು ಲಿಫ್ಟ್ ಇರ್ರಿಗೇಷನ್ ಕಡೆಗೂ ಸರ್ಕಾರದವರು ಇನ್ನು ಮುಂದೆ ಹೆಚ್ಚಿಗೆ ಗಮನ ಕೊಡಬೇಕು. ಇದೇ ಸಂದರ್ಭದಲ್ಲಿ ವರ್ಲ್ಡ್ ಬ್ಯಾಂಕಿನವರು ಈ ಒಂದು ಬಾಬಿಗಾಗಿ 40 ಮಿಲಿಯನ್ ಡಾಲರುಗಳನ್ನು ಕೊಡುವುದರಿಂದ, ಅದನ್ನು ನಮ್ಮ ದೇಶಾಭಿವೃದ್ಧಿಗಾಗಿ ನಮ್ಮ ಸರ್ಕಾರದವರು ಸದುಪಯೋಗಪಡಿಸಬೇಕು.

ಇನ್ನು ಕೆಲವು ಸದಸ್ಯರು ಮಾರ್ಕೆಟಿಂಗ್ ವಿಷಯವಾಗಿ ಹೇಳುತ್ತಾ ಹತ್ತಿಯ ಬೆಳೆಯ ಅಭಿವೃದ್ಧಿ ವಿಷಯದಲ್ಲಿ ಕೆಲವು ಅಭಿಪ್ರಾಯಗಳನ್ನು ಕೊಟ್ಟರು. ನಾನು ಹೇಳುವುದಿಷ್ಟೇ. ರೈತನು ಬೆಳೆಯುವ ಬೆಳೆಗಳಿಗೆ ಸುವ್ಯವಸ್ಥಿತವಾದ ಮಾರ್ಕೆಟಿಂಗ್ ಇರಬೇಕು. ಅವನು ಬೆಳೆಯುವ ಪದಾರ್ಥಗಳ ಬೆಲೆಯ ಬಗ್ಗೆ ಆಗುತ್ತಿರುವ ಏರುಪೇರುಗಳನ್ನು ತಡೆಯುವ ಶಕ್ತಿಯನ್ನೂ ಹಾಗೂ ಅವನಿಗೆ ಆ ವಿಚಾರದಲ್ಲಿ ಒಂದು ರಕ್ಷಣೆಯನ್ನೂ ರೈತರಿಗೆ ಕೊಡುವಾಗ ಅಂತಹ ಸಂದರ್ಭಗಳಲ್ಲಿ ಮಾರ್ಕೆಟಿಂಗ್ ವ್ಯವಸ್ಥೆ ಸರಿಯಾಗಿರಬೇಕು.

ಇನ್ನು ಅಫಾರಸ್ಟೇಷನ್ ವಿಚಾರದಲ್ಲಿ ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಒಂದು ಕಡೆ ಮರಗಳನ್ನು ಕಡಿದು ಜಮೀನುಗಳನ್ನು ಜನರಿಗೆ ಕೊಡುವುದನ್ನು ತಡೆಯಬೇಕು. ಮತ್ತೆ ದಿನದ ಬಳಕೆಯಲ್ಲಿ ಹೆಚ್ಚಿಗೆ ಮರಗಳನ್ನು ಉಪಯೋಗಿಸದೆ ವಿದ್ಯುಚ್ಛಕ್ತಿಯನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.

ಇನ್ನು ಹೌಸಿಂಗ್ ಪ್ರಾಬ್ಲಂ. ಸಿಟಿಗಿಂತ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲಿಯೂ ವೆಟ್ ಲ್ಯಾಂಡ್ಸ್ ಇರುವ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ ಗ್ರಾಮವಿಸ್ತರಣೆಗೆ ಯಾವ ತರಹ ಸೌಲಭ್ಯವೂ ಇಲ್ಲ. ಅಲ್ಲಿರುವ ಪಂಚಾಯತಿಗಳು ಜಮೀನನ್ನು ಅಕ್ವೈರ್ ಮಾಡಿಕೊಂಡು ಜನಗಳಿಗೆ ಮನೆ ಕಟ್ಟುವುದಕ್ಕೆ ಅವಕಾಶಕೊಡುವುದಕ್ಕೆ ಆಗುತ್ತಾ ಇಲ್ಲ ಪಂಚಾಯತಿಯವರು ಸಮರ್ಪಕವಾಗಿ ಕೆಲಸಮಾಡದೇ ಇರುವುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ. ಈ ಯೋಜನೆ ಸರಿಯಾಗಿ ಆಗುತ್ತಾ ಇಲ್ಲ. ಉದಾಹರಣೆಗೆ ಹೇಳುವುದಾದರೆ ಶ್ರೀರಂಗಪಟ್ಟಣದ ಪಾಳ್ಯ ಮುಂತಾದ ಸ್ಥಳಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಬಹಳ ತೊಂದರೆಯಾಗಿದೆ. ಸಣ್ಣ ಪುಟ್ಟ ಮನೆಗಳಲ್ಲಿ 3–4 ಸಂಸಾರಗಳು ವಾಸಮಾಡುತ್ತಿರುವುದನ್ನು ನೋಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ ಯೋಜನೆ ಏನಾಗಿದೆಯೆಂಬುದೇ ನಮ್ಮ ಆತಂಕವಾಗುತ್ತದೆ.

ಇನ್ನೊಂದು ವಿಷಯ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಲ್ಲಿ ಸುಮಾರು ಒಂದೂವರೆ ತಿಂಗಳಿಂದಲೂ ಒಬ್ಬ ಕಾರ್ಯದರ್ಶಿಯೂ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರಬಹುದು. ಅದರ ಬಗ್ಗೆ ಯೋಚನೆ ಮಾಡಿ ಕೂಡಲೇ ಒಬ್ಬ ದಕ್ಷ ಅಧಿಕಾರಿಯನ್ನು ಅಲ್ಲಿಗೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆಗಳನ್ನು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ಒಂದು ಮಿತಿ ಹಾಕಬೇಕು. ಇಡೀ ರಾಜ್ಯದಾದ್ಯಂತ ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಕೈಗಾರಿಕೆಗಳು ಹೆಚ್ಚಾಗಿ ಬೆಳೆಯುವುದಕ್ಕೆ ಅವಕಾಶ ಕೊಡಬೇಕು. ಅಲ್ಲಿ ಕೆಲಸಮಾಡುವ ನೌಕರರ ಸಮಸ್ಯೆಗಳನ್ನೂ ಸಹ ಸರ್ಕಾರದವರು ಬಗೆಹರಿಸಬೇಕು.

ಕೊನೆಯದಾಗಿ ಈಗ ಸಾಕಷ್ಟು ಸಮಯ, ಅವಕಾಶ ನನಗೆ ಇಲ್ಲದೇ ಇರುವುದರಿಂದ ಹೆಚ್ಚು ವಿಷಯಗಳನ್ನು ಹೇಳುವುದಕ್ಕಾಗಲಿಲ್ಲ. ಆದರಲ್ಲಿಯೂ ಆಡಳಿತ ಪಕ್ಷದವರು ಮಾಡತಕ್ಕ ಭಾಷಣಗಳನ್ನು ಮೊಟಕು ಮಾಡಬೇಕಾಗಿ ಬಂದಿರುವುದು ವಿಷಾದಕರವೆಂದು ತಿಳಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇ ಗೌಡ. (ಪಾಂಡವಪುರ).—ಮಾನ್ಯ ಸಭಾಧ್ಯಕ್ಷಿಣಿಯವರೇ, ರಾಜ್ಯಪಾಲರು ಮಾಡಿರತಕ್ಕ ಭಾಷಣದ ಸಂಬಂಧದಲ್ಲಿ ಮಂಡಿಸಿರತಕ್ಕ ವಂದನಾ ನಿರ್ಣಯಕ್ಕೆ ನಾನು ನನ್ನ ಬೆಂಬಲವನ್ನು ಕೊಡುತ್ತಾ, ಅವರ ಭಾಷಣದಲ್ಲಿ ತೋರಿಸಿರತಕ್ಕ ಕೆಲವು ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ ಈ ನನ್ನ ಸಲಹೆಗಳನ್ನು ಸರ್ಕಾರದವರು ಗಮನದಲ್ಲಿ ಇಟ್ಟುಕೊಳ್ಳಬೇಕು ಎಂದು ನಾನು ಅವರನ್ನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ರಾಜ್ಯಪಾಲರು ತಮ್ಮ ಭಾಷಣದ ಆದಿಯಲ್ಲಿ ಕನ್ನಡ ಭಾಷೆಯ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಅಷ್ಟೇ ಅಲ್ಲದೆ ರಾಜ್ಯಪಾಲರು ತಮ್ಮ ಭಾಷಣವನ್ನು ಮೊದಲು ಕನ್ನಡದಲ್ಲಿ ಪ್ರಾರಂಭ ಮಾಡಿ ಅನಂತರ ಅದನ್ನು ಮುಕ್ತಾಯ ಮಾಡುವಾಗ ಮತ್ತೆ ಕನ್ನಡದಲ್ಲೇ ಅದನ್ನು ಮುಕ್ತಾಯ ಮಾಡಿದ್ದಾರೆ. ಅವರು ಇಷ್ಟು ಕ್ಷಿಪ್ರದಲ್ಲೇ ಕನ್ನಡ ಭಾಷೆ ಪರಿಚಯ ಮಾಡಿಕೊಳ್ಳಲು ಪ್ರಯತ್ನ ಮಾಡಿರುವುದು ಸ್ತುತ್ಯಾರ್ಹ ಮತ್ತು ಅವರಿಗೆ ಈ ಭಾಷೆಯ ಮೇಲಿರತಕ್ಕ ಅಭಿಮಾನವನ್ನು ಅದು ಸೂಚಿಸುತ್ತದೆ. ಆದರೆ ನನಗನಿಸುತ್ತಿದೆ ಇಂಥ ಭಾಷಣಗಳಿಂದ ಕನ್ನಡ ಏಳಿಗೆಯ ಸಾಧನೆಯಾಗಲಾರದು ಎಂದು. ಆ ಅಭಿಮಾನ ಭಾಷಣ ಮಟ್ಟದಿಂದ ಕೆಳಕ್ಕೆ ಇಳಿದು ಕಾರ್ಯರೂಪಕ್ಕೆ ಬರಬೇಕು ಎಂಬುದಾಗಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈಗಾಗಲೇ ರಾಜ್ಯದ ಕೆಲವು ಮಟ್ಟಗಳಲ್ಲಿ ಕನ್ನಡ ಆಡಳಿತ ಭಾಷೆಯಾಗಿರಬಹುದು. ಆದರೆ ಅಷ್ಟನ್ನು ಮಾಡಿದರೆ ಸಾಲದು. ಆ ಆಜ್ಞೆಗನುಸಾರವಾಗಿ ಅದು ಕಾರ್ಯರೂಪಕ್ಕೆ ಬಂದಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಈ ದಿವಸ ರಾಜ್ಯದ ಮೇಲ್ಮಟ್ಟದ ಅಧಿಕಾರಗಳಲ್ಲಿರತಕ್ಕ ಐ. ಎ. ಎಸ್. ಅಧಿಕಾರಿಗಳೆಲ್ಲಾ ಬೇರೆ ಪ್ರದೇಶಗಳಿಂದ ಬಂದಿರತಕ್ಕವರು. ಅವರಿಗೆ ಕನ್ನಡ ಭಾಷೆ ತಿಳಿಯುವುದಿಲ್ಲ. ಹಾಗಿರುವಾಗ ಇಲ್ಲಿ ಕನ್ನಡದಲ್ಲಿ ಆಡಳಿತ ನಡೆಯುವಂತಾಗಬೇಕಾದರೆ ಕನ್ನಡಬಾರದ ಅಧಿಕಾರಿಗಳು ಮೇಲಿನ ಸ್ಥಾನದಲ್ಲಿರುವ ತನಕ ಅದು ಸಾಧ್ಯವಾಗುತ್ತದೆಯೇ ಎಂಬುದು ತಮಗೇ ವೇದ್ಯವಾಗಬೇಕು. ಉದಾಹರಣೆಗೆ ಹೇಳುವುದಾದರೆ ನಮ್ಮ ಉಪವಿಭಾಗಕ್ಕೆ ಬಂಗಾಳ ದೇಶದ ಒಬ್ಬ ಅಧಿಕಾರಿಯನ್ನು ತಂದು ಹಾಕಿದ್ದಾರೆ. ಅವರು ಅಲ್ಲಿ ಇದ್ದಷ್ಟು ಕಾಲ ಯಾವ ಯಾವ ಫೈಲುಗಳು ಕನ್ನಡದಲ್ಲಿದ್ದವೋ ಅವು ತೀರ್ಮಾನವಾಗದೆ ಹಾಗೇ ಮೂಲೆಗೆ ಬಿದ್ದವು. ಹೀಗೆ ಕನ್ನಡ ತಿಳಿಯದ ಮೇಲಧಿಕಾರಿಗಳು ಇರುವಾಗ ಅವರು ನಿಜವಾಗಿಯೂ ಈ ಭಾಷೆಯ ಏಳಿಗೆಗೆ ಶ್ರದ್ಧೆವಹಿಸುತ್ತಾರೆಯೇ—ಅವರಿಂದ ಅದು ಸಾಧ್ಯವಾದೀತೇ ಎಂಬುದನ್ನು ತಾವೆಲ್ಲರೂ ಈಗ ಆಲೋಚಿಸಬೇಕಾಗಿದೆ. ಕನ್ನಡ ಆಡಳಿತ ಭಾಷೆಯಾಗಬೇಕು ಎಂದು ನಾವೆಲ್ಲರೂ ಹೇಳುತ್ತ ಇರುವಾಗ ಅದಕ್ಕೆ ಮೊದಲು ಮೂಲ ಸಲಕರಣೆಗಳೇನು ಬೇಕು ಯಾವುವು ಅತ್ಯಗತ್ಯ ಎಂಬುದನ್ನು ನೋಡಿ ಅವುಗಳನ್ನು ಕಡ್ಡಾಯವಾಗಿ ಒದಗಿಸಬೇಕು. ಕನ್ನಡ ಆಡಳಿತ ಭಾಷೆಯಾಗಿ ವ್ಯವಹಾರಗಳು ಸುಗಮವಾಗಿ ನಡೆಯಬೇಕಾದರೆ ಮೊದಲು ಎಲ್ಲಾ ಕಛೇರಿಗಳಿಗೂ ಕನ್ನಡ ಟೈಪ್‌ರೈಟರುಗಳನ್ನು ಒದಗಿಸಬೇಕು. ಹೀಗೆ ಇವನ್ನು ಒದಗಿಸಬೇಕಾದರೆ ನಮ್ಮ ರಾಜ್ಯದಲ್ಲಿ ಎಷ್ಟು ಆಫೀಸುಗಳಿವೆ ಅವಕ್ಕೆ ಎಷ್ಟು ಟೈಪ್‌ರೈಟರುಗಳು ಬೇಕಾಗುತ್ತವೆ, ಎಷ್ಟನ್ನು ತಯಾರು ಮಾಡಿಸಬೇಕು, ಟೈಪಿಂಗ್ ಮತ್ತು ಷಾರ್ಟ್‌ಹ್ಯಾಂಡ್ ಬಲ್ಲಂಥ ಜನರು ನಮ್ಮಲ್ಲಿ ಎಷ್ಟು ಜನರಿದ್ದಾರೆ ಅಥವಾ ಎಷ್ಟು ಜನಕ್ಕೆ ಶಿಕ್ಷಣ ಕೊಡಬೇಕು ಇದಕ್ಕೆಲ್ಲಾ ಎಷ್ಟು ಹಣ ಖರ್ಚಾಗಬೇಕಾಗುತ್ತದೆ ಎಂಬುದಕ್ಕೆಲ್ಲ ಸರ್ಕಾರದವರಲ್ಲಿ ಅಂಕಿಅಂಶಗಳಿರಬೇಕು. ನಾವು ಈ ಹಿಂದೆ ನಮ್ಮ ಪಾಂಡವಪುರಕ್ಕೆ ಒಂದು ಕನ್ನಡ ಟೈಪ್‌ರೈಟರನ್ನು ಸಪ್ಲೈ ಮಾಡಬೇಕೆಂದು ಸರಕಾರವನ್ನು ಪ್ರಾರ್ಥಿಸಿಕೊಂಡೆವು. ಅದು ಇಲ್ಲಿಯವರೆಗೂ ದೊರೆತಿಲ್ಲ. ಹೀಗಾದರೆ ಕನ್ನಡ ಭಾಷೆ ಎನ್ನುವುದು ನಮ್ಮ ದೇಶದಲ್ಲಿ ಯಾವ ಕಾಲಕ್ಕೆ ಆಡಳಿತ ಭಾಷೆಯಾಗಿ ಜಾರಿಗೆ ಬರುತ್ತದೋ ತಿಳಿಯದು. ಇದನ್ನು ಬರೀ ಒಂದು ಆಡಳಿತ ಭಾಷೆಯನ್ನಾಗಿ ಮಾಡಿದ್ದರಿಂದಲೇ ಇದರ ಅಭಿವೃದ್ಧಿಯಾಯಿತು ಎಂದು ಹೇಳುವುದಕ್ಕಾಗುವುದಿಲ್ಲ. ಇದಿನ್ನೂ ಬೆಳೆಯಬೇಕು. ನಮ್ಮ ನಾಡಿನ ಶಾಲಾ ಕಾಲೇಜುಗಳೆಲ್ಲಾ ಕನ್ನಡದಲ್ಲೇ ಪಾಠ ಪ್ರವಚನಗಳು ನಡೆಯುವಂತಾಗಬೇಕು. ನನಗೆ ತಿಳಿದಿರುವಂತೆ ನಮ್ಮ ಪ್ರೌಢಶಾಲೆಗಳಲ್ಲಿ ಕನ್ನಡದಲ್ಲಿ ಚೆನ್ನಾಗಿ ಅರಿತು ನುರಿತ ಕನ್ನಡದ ಅಧ್ಯಾಪಕರು ಇಲ್ಲ. ಬೇರೊಂದು ಭಾಷೆಯಲ್ಲಿ ಪಾರಂಗತರಾಗಿರತಕ್ಕ ಒಬ್ಬರನ್ನು ಕನ್ನಡ ಪಾಠ ಮಾಡುವುದಕ್ಕೆ ನೇಮಕ ಮಾಡಿದ್ದಾರೆ ಎಂದರೆ ಇದೆಂಥ ನಾಚಿಕಗೇಡಿನ ವಿಷಯ? ನಮ್ಮ ಕನ್ನಡ ನಾಡಿನಲ್ಲಿ ಕನ್ನಡ ಬಾಲಕರಿಗೆ ಕನ್ನಡದಲ್ಲಿ ಪಾಠ ಹೇಳತಕ್ಕ ಉಪಾಧ್ಯಾಯರುಗಳಿಲ್ಲ ಎಂದರೆ ನಾವು ಖಂಡಿತ ತಲೆತಗ್ಗಿಸಬೇಕು. ಹೀಗಾದರೆ ಕನ್ನಡ ಹೇಗೆ ಮುಂದುವರಿಯುವುದಕ್ಕೆ ಸಾಧ್ಯವಿದೆ? ಇಂಥ ತೊಂದರೆಗಳಿಗೆ ಯಾರು ಮೂಲ ಕಾರಣರು

(ಶ್ರೀ ಡಿ. ಹಲಗೇಗೌಡ)

ಎಂದರೆ ಈ ದಿವಸ ಇಂಗ್ಲೀಷ್ ಭಾಷೆಯಲ್ಲಿ ಪರಿಚಯವುಳ್ಳ ನೌಕರನಿಗೆ ಸಿಕ್ಕತಕ್ಕ ಪ್ರೋತ್ಸಾಹ, ಆ ಸಂಬಳದ ಸ್ಕೇಲು ಕನ್ನಡ ಭಾಷೆಯಲ್ಲಿ ಅಷ್ಟೇ ಪರಿಚಯವುಳ್ಳ ನೌಕರನಿಗೆ ದೊರೆಯುತ್ತಿಲ್ಲ. ಒಂದೊಂದು ಭಾಷೆಯವರಿಗೇ ಒಂದೊಂದು ಸಂಬಳದ ಸ್ಕೇಲು ಕನ್ನಡಿಗರ ಸಂಬಳದ ಸ್ಕೇಲನ್ನು ನೋಡಿದರೆ ಬಹಳ ಅಸಹ್ಯವಾಗುತ್ತದೆ—ಅಂಥ ಸಂಬಳದ ಸ್ಕೇಲುಗಳನ್ನು ಕನ್ನಡಕ್ಕೆ ಮಾಡಿದ್ದಾರೆ. ಹೀಗಾದರೆ ಯಾರು ಕನ್ನಡದಲ್ಲಿ ಪಾರಂಗತರಾಗುವುದಕ್ಕೆ ಮುಂದೆ ಬರುತ್ತಾರೆ? ಇನ್ನಾದರೂ ಸರಕಾರದವರು ಈ ಅಸಮಾನತೆಯನ್ನು ಕೂಡಲೇ ತೆಗೆದು ಹಾಕಬೇಕೆಂದು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ಇನ್ನು ನಮ್ಮ ಕನ್ನಡ ನಾಡಿನಲ್ಲಿ ಕನ್ನಡದ ಮಕ್ಕಳಿಗೆ ಸಾಕಷ್ಟು ಉದ್ಯೋಗವಿಲ್ಲದೆ ಬೀದಿ ಬೀದಿಗಳಲ್ಲಿ ಅಲೆಯುತ್ತಿದ್ದಾರೆ. ನಮ್ಮ ನಾಡಿನ ಅನೇಕ ಫ್ಯಾಕ್ಟರಿಗಳಲ್ಲಿ ಅನ್ಯಭಾಷಾ ಜನರು ಅನೇಕರಿದ್ದಾರೆ. ಅವರ ಸಂಖ್ಯೆಗೂ ಕನ್ನಡಿಗರ ಸಂಖ್ಯೆಗೂ ಹೋಲಿಸಿದರೆ ಅಲ್ಲೆಲ್ಲಾ ಅನ್ಯಭಾಷಾ ಜನರೇ ಅಪಾರವಾಗಿದ್ದಾರೆ. ಕನ್ನಡದವರ ಸಂಖ್ಯೆ ಬಹಳ ಕಡಿಮೆ. ಇದು ಸರಿಯಾದುದಲ್ಲ. ಮೊದಲು ನಮ್ಮ ಕನ್ನಡ ನಾಡಿನಲ್ಲಿರತಕ್ಕ ಎಲ್ಲ ಫ್ಯಾಕ್ಟರಿಗಳಲ್ಲೂ ಮೊದಲು ಕನ್ನಡಿಗರಿಗೆ ಉದ್ಯೋಗಗಳನ್ನು ಒದಗಿಸಿದ ನಂತರ ಉಳಿಯತಕ್ಕ ಉದ್ಯೋಗಗಳನ್ನು ಬೇರೆ ಭಾಷೆಯ ಜನರಿಗೆ ಕೊಡುವಂತೆ ಸರಕಾರದವರು ಒಂದು ಆಜ್ಞೆ ಹೊರಡಿಸಬೇಕು. ಅದನ್ನು ಕೂಡಲೇ ಜಾರಿಗೆ ತರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕನ್ನಡ ಭಾಷೆಯ ಅಭಿವೃದ್ಧಿಗೆ ಇನ್ನು ದೇಶದಲ್ಲಿ ದಿನ ಬೆಳಗಾದರೆ ಜನಮನವನ್ನು ಸೂರೆಗೊಳ್ಳತಕ್ಕ ಕನ್ನಡದ ದೈನಂದಿನ ಪತ್ರಿಕೆಗಳೇನಿವೆ ಅವುಗಳಿಗೆ ಸರ್ಕಾರದವರು ಹೆಚ್ಚಿನ ಪ್ರೋತ್ಸಾಹ ನೀಡತಕ್ಕ ದೃಷ್ಟಿಯಿಂದ ಹೆಚ್ಚು ಹೆಚ್ಚು ಅಡ್ವರ್‌ಟೈಜ್‌ಮೆಂಟುಗಳನ್ನು ಕೊಡಬೇಕು. ಇದರ ಕಡೆಗೆ ಸರಕಾರ ಹೆಚ್ಚು ಮನಸ್ಸನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ವಿಚಾರಕ್ಕೆ ಬಂದರೆ ಉಪಾಧ್ಯಾಯನಾಗಿ ಸೇರಿದ ಒಬ್ಬ ವ್ಯಕ್ತಿ ಕಡೆಗೆ ಉಪಾಧ್ಯಾಯನಾಗೇ ನಿವೃತ್ತಿಹೊಂದಬೇಕು. ಇಂಥ ಅನ್ಯಾಯ ಬೇರೆ ಯಾವ ಇಲಾಖೆಯಲ್ಲೂ ಇರುವುದಿಲ್ಲ. ಇಲ್ಲಿ ಯಾವ ಒಂದು ಹೆಚ್ಚಿನ ಪುರಸ್ಕಾರವೂ ಆ ಉಪಾಧ್ಯಾಯನಿಗಿರುವುದಿಲ್ಲ. ಹಾಗಿದ್ದರೂ ಒಂದು ತಾಲ್ಲೂಕಿನಲ್ಲಿ ಹುಟ್ಟಿದ ಒಬ್ಬ ಉಪಾಧ್ಯಾಯ ತನ್ನ ತಾಲ್ಲೂಕಿನಲ್ಲಿ ಉಪಾಧ್ಯಾಯನಾಗಿರ ಕೂಡದು ಎಂಬುದಾಗಿ ಹಿಂದೆ ಇದ್ದ ಸರಕಾರ ಒಂದು ಸುತ್ತೋಲೆಯನ್ನು ಹೊರಡಿಸಿದೆ. ಅದು ಬಹಳ ಅನ್ಯಾಯ. ರೆವಿನ್ಯೂ ಇಲಾಖೆಯನ್ನು ತೆಗೆದುಕೊಂಡರೆ ಅಲ್ಲಿ ಒಬ್ಬ ಸೆಕೆಂಡ್ ಡಿವಿಜನ್ ಗುಮಾಸ್ತನಾಗಿ ಕೆಲಸಕ್ಕೆ ಸೇರಿದರೆ ನಿವೃತ್ತಿಯಾಗುವಾಗ ಆತನು ತಹಶೀಲ್ದಾರನಾಗಿ ನಿವೃತ್ತಿಯಾಗುವುದಕ್ಕೆ ಅವಕಾಶವಿದೆ. ಅದೇ ತಾನು ಹುಟ್ಟಿದ ತಾಲ್ಲೂಕಿನಲ್ಲೂ ಆತನಿಗೆ ಇರಬಾರದೆಂಬ ಅಡ್ಡಿಯಿಲ್ಲ. ಆದ್ದರಿಂದ ಸರಕಾರದವರು ದಯಮಾಡಿ ಹಿಂದಿನವರು ಮಾಡಿದ್ದ ಆ ಸುತ್ತೋಲೆಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ರಾಜ್ಯದಲ್ಲಿ ನೀರಾವರಿ ಪ್ರದೇಶಗಳ ವಿಚಾರಕ್ಕೆ ಬಂದರೆ ನೀರಿದ್ದರೆ ಅಲ್ಲಿ ಹಸಿರು ಕಾಣುತ್ತದೆಯೇ ವಿನಾ ಬೇರೆ ಕಡೆಗಳಲ್ಲಿ ಏನೂ ಪ್ರಯೋಜನ ಇಲ್ಲ. ಖುಷ್ಕಿ ಬೆಳೆ ಬೆಳೆಯತಕ್ಕ ಜಾಗದಲ್ಲಿ ಏನೂ ಪ್ರಯೋಜನವಿಲ್ಲ. ಆದುದರಿಂದ ಸರಕಾರದವರು ಮಳೆ ಬೆಳೆ ಇಲ್ಲದ ಪ್ರದೇಶಗಳಿಗೆ ಹೆಚ್ಚಿನ ರೀತಿಯಲ್ಲಿ ನೀರಾವರಿ ಸೌಕರ್ಯಗಳನ್ನು ಒದಗಿಸಬೇಕೆಂದು ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ರೈತನಿಗೆ ಸಧ್ಯದಲ್ಲಿ ಒಳ್ಳೆಯ ಗೊಬ್ಬರ ಮತ್ತು ಬಿತ್ತನೆ ಬೀಜಗಳು ದೊರೆಯುತ್ತಿಲ್ಲ. ಈ ಕೃತಕ ಗೊಬ್ಬರ ಬಿತ್ತನೆ ಬೀಜಗಳನ್ನು ಒದಗಿಸಬೇಕೆಂದೂ ಮತ್ತು ಸಣ್ಣ ಸಣ್ಣ ರೈತರಿಗೆ ಸಾಲಗಳನ್ನು ಕೊಡುವುದರ ಮೂಲಕ ಹೆಚ್ಚು ಪ್ರೋತ್ಸಾಹ ನೀಡುವಂತೆ ಮಾಡಬೇಕೆಂದೂ ತಮ್ಮ ಮೂಲಕ ಸರಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸಹಕಾರ ಸಂಘಗಳಿಂದ ಸರಬರಾಯಿ ಆಗತಕ್ಕ ಗೊಬ್ಬರ ಮತ್ತು ಬಿತ್ತನೆ ಬೀಜಗಳು ಕೀಳು ಮಿಶ್ರಣದಿಂದ ಕೂಡಿದ್ದ ಕಾರಣ ರೈತರಿಗೆ ನಷ್ಟವಾಗಿ ಅವರು ಹಾಳಾದರೆಂದು ಹಿಂದೆ ಮಾತನಾಡಿದ ಶ್ರೀಮತಿ ದಮಯಂತಿ ಬೋರೇಗೌಡ ಅವರು ತಿಳಿಸಿದ್ದಾರೆ. ಇದರಿಂದ ಒಂದು ಕಡೆ ರೈತನು ತನ್ನ ಬೆಳೆಯನ್ನು ಹಾಳು ಮಾಡಿಕೊಂಡಿದ್ದರೆ ಜೊತೆಗೆ ಇನ್ನೊಂದು ಕಡೆ ನಿಷ್ಕಾರಣವಾಗಿ ಸಾಲಗಾರನಾಗುತ್ತಾನೆ. ಇದು ಬಹಳ ಅನ್ಯಾಯ. ಇದರ ಕಡೆಗೆ ಸರಕಾರ ಬಹಳ ಎಚ್ಚರಿಕೆ ಇಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

3-00 P.M.

ಇನ್ನು ಎರಡು ಮೂರು ದಿವಸದಲ್ಲಿ, ಅಂತಹ ಕೆಲವು ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಊರುಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. 100 ಅಡಿ ಬಾವಿ ತೋಡಿದರೂ ನೀರು ಸಿಗುವುದು ಕಷ್ಟವಾಗಿದೆ. ಸಹಾಯ ಧನವನ್ನು ಸರ್ಕಾರ ಕೊಡುವುದು ಯಾವಾಗ ? ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಕೊಡುತ್ತಾರೆ. ಆವಾಗ ಮಳೆಗಾಲ, ಎಲ್ಲಾ ಭಾಗಗಳಲ್ಲೂ ನೀರು ಇರುತ್ತದೆ. ಬಾವಿಗಳನ್ನು ಆಳಪಡಿಸಬೇಕಾಗಿಲ್ಲ ಎಂದು ಅಧಿಕಾರಿಗಳು ಹೇಳಿ ಹೋಗುತ್ತಾರೆ. ನಿಜವಾಗಿ ನೀರಿನ ಕೊರತೆ ಬೇಸಿಗೆ ಕಾಲದಲ್ಲಿ ಫೆಬ್ರವರಿ ಮತ್ತು ಆಗಸ್ಟ್ ತಿಂಗಳುಗಳಲ್ಲಿ, ಆಗ ಸಹಾಯಧನ ಬರಬೇಕು. ಈಗ 500 ಜನಕ್ಕೆ ಒಂದು ಬಾವಿ ಎಂದು ಇದೆ. ಇದನ್ನು ಬದಲಾಯಿಸಿ 200 ಜನಕ್ಕೆ ಒಂದು ಬಾವಿಯನ್ನು ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ನನ್ನ ಕ್ಷೇತ್ರವಾದ ಪಾಂಡವಪುರವನ್ನು ಸಕ್ಕರೆ ನಾಡು ಎಂದು ತಿಳಿದುಕೊಂಡಿದ್ದಾರೆ. ಆದರೆ ಇಲ್ಲಿ ಎಷ್ಟರಮಟ್ಟಿಗೆ ಸೌಲಭ್ಯ ಇದೆ ಎಂದು ಮಾನ್ಯ ಅಧ್ಯಕ್ಷರಿಗೆ ಗೊತ್ತು. 200 ಹಳ್ಳಿಗಳಲ್ಲಿ ಕೇವಲ 30 ಊರುಗಳಿಗೆ ಮಾತ್ರ ನೀರಾವರಿ ಸೌಲಭ್ಯವಿದೆ. ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶವನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಕುಡಿಯುವುದಕ್ಕೆ ನೀರು, ತಿನ್ನಲು ಅನ್ನ, ಉಡಲು ಬಟ್ಟೆ ಇಲ್ಲದೆ ಜೀವನವನ್ನು ತಳ್ಳುತ್ತಿದ್ದಾರೆ. ಬಹಳ ಬಡ ಜನರಿದ್ದಾರೆ. ಅವರ ಗತಿ ಹೇಗಿದೆ ಎಂದರೆ, ಬಡವನು ಸತ್ತರೆ ಸುಡುವುದಕ್ಕೂ ಅವರ ಕೈಯಲ್ಲಿ ಹಣವಿಲ್ಲದಾಗಿದೆ. ನನ್ನ ಒಂದು ಸಂಸಾರದ ಜೀವನವನ್ನು ತೆಗೆದುಕೊಂಡರೆ, ನಾನು ಸಾವಿಗೆ ಅಂಜುವವನಲ್ಲ, ಮರಣಕ್ಕೆ ಅಂಜುವವನಲ್ಲ, ಯಾರು ಸತ್ತರೂ ದುಃಖ ಪಡುವವನಲ್ಲ, ಆದರೆ ಯಾರಿಗೂ ಮರಣ ಕೊಡಬೇಡ ದೇವರೇ ಎಂದು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಅವರ ಶ್ರಾದ್ಧಾದಿ ಕರ್ಮಗಳಿಗೂ ಖರ್ಚು ಮಾಡುವುದಕ್ಕೆ ನನ್ನಲ್ಲಿ ಹಣವಿಲ್ಲ. ಈ ಸದನದ ಸದಸ್ಯನಾದ ನನ್ನ ಒಬ್ಬನ ಸಂಸಾರದ ಸ್ಥಿತಿ ಈ ರೀತಿಯಿರುವಾಗ, ಇನ್ನು ಗ್ರಾಮಾಂತರ ಪ್ರದೇಶದ ಜನರ ಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರದವರು ಗಮನಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕು. ನಗರ ಪ್ರದೇಶಗಳಿಗೆ ಹೆಚ್ಚು ಗಮನ ಕೊಡುವುದು ಬೇಡವೆಂದು ಹೇಳುವುದಿಲ್ಲ. ಅದರ ಜೊತೆಗೆ ಗ್ರಾಮಾಂತರ ಪ್ರದೇಶಕ್ಕೂ ಗಮನವನ್ನು ಹರಿಸಿ ಹಳ್ಳಿಗಾಡಿನ ಜನರ ಜೀವನ, ನಗರ ಪ್ರದೇಶದ ಜನ ಜೀವನಕ್ಕೆ ಸರಿಸಮನಾಗಿ ಹೋಗದಿದ್ದರೂ, ನಗರ ಪ್ರದೇಶಗಳ ಪಕ್ಕದಲ್ಲಿ ಹೋಗುವ ಒಂದು ಅನುಭವ ತಂದುಕೊಳ್ಳುವ ಹಾಗೆ ಸರ್ಕಾರದವರು ವ್ಯವಸ್ಥೆಯನ್ನು ಮಾಡಿ, ಅವರನ್ನು ಸಮಾಜದಲ್ಲಿ ಗೌರವಯುತ ವ್ಯಕ್ತಿಗಳನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲಿ 10—12 ವರ್ಷಗಳಿಂದ ಕೆಲಸಗಳು ನಡೆದಿಲ್ಲ. ಹಿಂದೆ ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ್ಗೆ ಮಂಡ್ಯಾದ ದೋಣಿಕೆರೆ ರಸ್ತೆ 12 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅದರ ಮೇಲೆ ಹಲವಾರು ರೂಪಾಯಿ ಖರ್ಚು ಮಾಡಿದರೂ ಅದು ಇಲ್ಲಿಯವರೆಗೆ ಪೂರ್ಣವಾಗಿಲ್ಲ. ಒಂದು ಊರಿನ ಜಮೀನು ಮುಳುಗಿಸಿ ಕೆರೆ ಕಟ್ಟಿದರು. ಅರಕೆರೆ ಗ್ರಾಮದವರು ತಿರುಗಾಡುವುದಕ್ಕೂ ಸಾಧ್ಯವಿಲ್ಲದಂತಾಗಿದೆ. ಆದ್ದರಿಂದ ಆದಷ್ಟು ಬೇಗ ಈ ಹಳ್ಳಿಗಳ ಕೊರತೆಯನ್ನು ನಿವಾರಿಸಬೇಕು ಎಂದು ತಮ್ಮ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎನ್. ಗುರುಸಿದ್ದಪ್ಪ (ಬಿಳಿಗೆರೆ).—ರಾಜ್ಯಪಾಲರ ಭಾಷಕ್ಕೆ ವಂದನೆಯನ್ನರ್ಪಿಸುವ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸರ್ಕಾರದವರ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಅನ್ನು ಖಂಡಿತವಾಗಿ ಜಾರಿಗೆ ತರಬೇಕಾಗಿದ್ದರೆ ಕೆಲವು ವಿಷಯಗಳನ್ನು ಗಮನಿಸಬೇಕಾಗಿದೆ. ಮೊದಲನೆಯದಾಗಿ ಮಂತ್ರಿಗಳು ಮತ್ತು ಸದಸ್ಯರು ಮಾತ್ರವಲ್ಲ, ಪ್ರತಿಯೊಬ್ಬ ಪ್ರಜೆಯೂ ಕೂಡ ಐದು ವರ್ಷಗಳಿಗೆ ಒಂದು ಸಾರಿ ಆಸ್ತಿ ವಿವರ ಕೊಡಬೇಕು ಎಂದು ಕಂಪಲ್ಸರಿ ರೂಲ್ಸ್ ಮಾಡಬೇಕು. ಎಷ್ಟು ಉತ್ಪತ್ತಿ ಇದೆ ಎಷ್ಟು ಖರ್ಚು ಇದೆ, ಉಳಿತಾಯ ಎಷ್ಟು ಇದೆ ಎಂಬುದನ್ನು ಐದು ವರ್ಷಕ್ಕೊಂದು ಸಾರಿ ಕೊಟ್ಟರೆ ಬ್ಲಾಕ್ ಮಾರ್ಕೆಟ್ ತಡೆಗಟ್ಟಬಹುದು, ಬ್ಲಾಕ್ ಮನಿ ಪ್ರಸಾರ ನಿಂತುಹೋಗುತ್ತದೆ. ನಮ್ಮ ಎಲ್ಲಾ ಯೋಜನೆಗಳು ತಲೆಕೆಳಗಾಗುತ್ತಿರುವುದಕ್ಕೆ ಕಾರಣಗಳು, ಮೊದಲನೆಯದಾಗಿ ಲಂಚ ಮತ್ತು ಕರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಿರತಕ್ಕ ಕಳ್ಳರು. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ ಲಂಚವಿಲ್ಲದೆ ಯಾವ ಕೆಲಸಗಳೂ ಆಗುವುದಿಲ್ಲ. ಇದನ್ನು ಸರ್ಕಾರದವರು ನಿಗದಲ್ಲಿಟ್ಟುಕೊಂಡು ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ ಲಂಚದ

(ಶ್ರೀ ಎನ್. ಬಸವಯ್ಯ)

ಬೇಕಾದ ಹಾಗೆ ವಿವರಿಸುತ್ತಾ ಇದ್ದಾರೆ. ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಒಂದು ತರಹ, ರಾಜ್ಯ ಸರಕಾರದ ಅಧಿಕಾರಿಗಳಿಗೆ ಒಂದು ತರಹ ಸಂಬಳದಲ್ಲಿ ವ್ಯತ್ಯಾಸ ಇರುವುದು ಸರಿಯಲ್ಲ. ಪ್ರಪ್ರಥಮವಾಗಿ ಸಮತಾವಾದವನ್ನು ಸಾಧಿಸಬೇಕಾದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕೇವಲ 3 ಪರ್ಸೆಂಟು ಇರತಕ್ಕ ಅಧಿಕಾರ ವರ್ಗದವರಿಗೆ ಒಂದೇ ರೀತಿಯಾದ ಸಂಬಳದ ವ್ಯವಸ್ಥೆ ಮಾಡಿದರೆ ಸಮತಾವಾದಕ್ಕೆ ಮನ್ನಣೆ ಸಿಕ್ಕುತ್ತದೆ. ಇಲ್ಲದೇ ಹೋದರೆ ಇದು ಟೊಳ್ಳು ಘೋಷಣೆಯಾಗಿ ಉಳಿಯುತ್ತದೆ.

ಇನ್ನು ವ್ಯವಸಾಯಕ್ಕೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಪಂಪುಸೆಟ್ಟುಗಳನ್ನು ರೈತರಿಗೆ ಒದಗಿಸುತ್ತಾ ಇದ್ದರು. ಈ ಒಂದು ಕಾರ್ಯ ಈಗ ಕುಂಠಿತವಾಗಿದೆ. ಆದುದರಿಂದ ಈಗಲಾದರೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ರೈತರಿಗೆ ಪಂಪುಸೆಟ್ಟು, ಗೊಬ್ಬರ ವ್ಯವಸಾಯಕ್ಕೆ ಬೇಕಾದ ಇಂಪ್ಲಿಮೆಂಟ್ಸ್ ಏನು ಇವೆಯೋ ಅವೆಲ್ಲವನ್ನೂ ಒದಗಿಸಿ ರೈತರ ಕಷ್ಟಗಳನ್ನು ಜರೂರಾಗಿ ಬಗೆಹರಿಸಬೇಕೆಂದು ಹೇಳಿ ಈ ಒಂದು ಸಂದರ್ಭದಲ್ಲಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ ಮುಲ್ಕಿ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರ ಭಾಷಣ ಮೇಲೆ ಸಭೆಯ ಮುಂದಿರುವ ಕೃತಜ್ಞತೆಯನ್ನು ಅರ್ಪಿಸುವ ಸೂಚನೆಯನ್ನು ಅನುಮೋದಿಸುತ್ತೇನೆ. ನಮ್ಮ ಜನಸಾಮಾನ್ಯರು ಕಳೆದ ಚುನಾವಣೆಯಲ್ಲಿ ನಮಗೆ ಅಭೂತಪೂರ್ವ ವಿಜಯವನ್ನು ಗಳಿಸಿಕೊಟ್ಟಿದ್ದಾರೆ. ನಮ್ಮ ಪಕ್ಷದ ಮೇಲೆ, ನಮ್ಮ ಮೇಲೆ ಇರುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಪಕ್ಷದ ಮೇಲೆ ಇರುವ ವಿಶ್ವಾಸವನ್ನು ಅರಿತು ಅವರ ಆಸೆ ಆಕಾಂಕ್ಷೆಗಳನ್ನು ತಿಳಿದು ಅವರ ಕನಸನ್ನು ನನಸಾಗಿ ಮಾಡುವುದು ನಮ್ಮ ಕರ್ತವ್ಯ. ನಮ್ಮ ಪಕ್ಷ ಸರ್ಕಾರ ರಚಿಸಿ ಕೇವಲ ಒಂದು ತಿಂಗಳು ಸಂದಿದೆ. ಈ ಅತ್ಯಲ್ಪ ಅವಕಾಶದಲ್ಲಿ ಸರ್ಕಾರ ಏನೂ ಸಾಧಿಸಿಲ್ಲ ಎಂದು ಟೀಕಿಸುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ನಮ್ಮ ಸರ್ಕಾರದ ಗಮನಕ್ಕೆ ಹಿಂದೆ ಆಗಿರುವ ಕೆಲವು ಕುಂದುಕೊರತೆಗಳನ್ನು, ಈಗ ಆಗತಕ್ಕಂಥ ಕೆಲವು ಲೋಪದೋಷಗಳನ್ನೂ ತರುವುದು ನಮ್ಮ ಕರ್ತವ್ಯ. ರಾಜ್ಯಪಾಲರ ಭಾಷಣ ನೋಡಿದಾಗ ನಮಗೆ ಮೊದಲು ಕಾಣುವುದು ಭೂಮಸೂದೆ ವಿಷಯ. ಕಳೆದ 25 ವರ್ಷದಿಂದ ಜನಸಾಮಾನ್ಯರಿಗೆ ಭೂಮಸೂದೆಯನ್ನು ತರುತ್ತೇವೆ, ನಿಮಗೆ ಪಟ್ಟ ಸಿಕ್ಕುತ್ತದೆ ಎನ್ನುವ ಆಶ್ವಾಸನೆಯನ್ನು ಚುನಾವಣಾ ಸಮಯದಲ್ಲಿ ಹೇಳಿ, ಚುನಾವಣೆ ಕಳೆದ ನಂತರ ಮರೆಯುವುದು ರಾಜಕೀಯ ಪಕ್ಷಕ್ಕೆ ಸ್ವಾಭಾವಿಕವಾಗಿದೆ. ಆದರೆ ಈ ಸಲ ನಮ್ಮ ಮೇಲೆ ಜನಸಾಮಾನ್ಯರು ಇಟ್ಟ ಭರವಸೆಯನ್ನು ಕಾರ್ಯಗತಗೊಳಿಸಬೇಕು. ಅವರ ಆಸೆ ಆಕಾಂಕ್ಷೆಗಳನ್ನು ಪೂರೈಸಿ ಲ್ಯಾಂಡ್ ರೀಫಾರಂಸ್‌ನ್ನು ಆದಷ್ಟು ಬೇಗನೆ ಕಾರ್ಯ ರೂಪಕ್ಕೆ ತರಬೇಕು ಎಂದು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇನ್ನು ಸಹಕಾರ ಸಂಘಗಳನ್ನು ಕುರಿತು ಹೇಳುವುದಾದರೆ ನಾನು ಒಬ್ಬ ಸಹಕಾರಿ ಬ್ಯಾಂಕಿನ ಡೈರೆಕ್ಟರಾಗಿ ಅಲ್ಲಿ ಕಂಡ ವಿಷಯಗಳನ್ನು ಹೇಳಲು ನಾಚಿಕೆಯಾಗುತ್ತದೆ. ನಮ್ಮ ಸಹಕಾರ ಸಂಸ್ಥೆಗಳು ಇಂದು ಜನಸಾಮಾನ್ಯರಿಗೆ ಮಾಡಬೇಕಾಗಿರುವ ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ ಎಂದು ಧೈರ್ಯವಾಗಿ ಹೇಳಬಹುದು. ಸಹಕಾರಿ ಸಂಘಗಳು ರಾಜಕಾರಣಿಗಳ ಮತ್ತು ಅಲ್ಲಿಯ ಅಧಿಕಾರಿ ವರ್ಗದವರು ಆಡುವ ಹೊಲವಾಗಿದೆ. ಜನಸಾಮಾನ್ಯರಿಗೆ ಯಾವ ರೀತಿಯ ಸಹಾಯವನ್ನೂ ಮಾಡುತ್ತಾ ಇಲ್ಲ. ಈ ಪರಿಸ್ಥಿಯನ್ನು ಸುಧಾರಿಸದೇ ಇದ್ದರೆ ಜನಕ್ಕೆ ಇದರಿಂದ ಯಾವ ತರಹ ಸಹಾಯವೂ ದೊರಕಲಿಕ್ಕಿಲ್ಲ. ಮುಖ್ಯವಾಗಿ ಸಹಕಾರ ಸಂಘಗಳು ಎಂದರೆ ಡೈರೆಕ್ಟರ್ಸ್, ಸೆಕ್ರೆಟರಿ, ಪ್ರೆಸಿಡೆಂಟರು. ಇವರು ಒಂದೆರಡು ವರ್ಷ ತಪ್ಪಿದರೆ 3 ವರ್ಷ, ಅದಕ್ಕಿಂತ ಜಾಸ್ತಿ ಆ ಸಂಸ್ಥೆಯಲ್ಲಿ ಅಧಿಕಾರ ವರ್ಗದಲ್ಲಿ ಇರಬಾರದು. ಮುಖ್ಯವಾಗಿ ಒಬ್ಬ ಬಡವ 500 ರೂಪಾಯಿ ಸಾಲಕ್ಕೆ ಹೋದರೆ ಕನಿಷ್ಠ ಪಕ್ಷ 100 ರೂಪಾಯಿನಷ್ಟು ಷೇರು ತೆಗೆದುಕೊಳ್ಳಬೇಕಾಗುತ್ತದೆ. ಆ ರೀತಿ 100 ರೂಪಾಯಿ ಅವನು ಕೊಡುವುದು ಕಷ್ಟ. ಆದುದರಿಂದ ಒಂದು ಷೇರಿನ ಮೇಲೆ ಈ ಸೌಲಭ್ಯ ಸಿಕ್ಕುವಂತೆ ಮಾಡಲು ಮಾನ್ಯ ಸಚಿವರು ಮನಸ್ಸು ಮಾಡುವುದು ಉತ್ತಮ ಎಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆರೋಗ್ಯದ ಒಂದು ವಿಷಯವನ್ನು ಎತ್ತಲಿಲ್ಲ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಆಸ್ಪತ್ರೆಗಳು ಇವೆ. ಉತ್ತಮವಾದ ಕಟ್ಟಡಗಳು ಇವೆ. ಸಿಬ್ಬಂದಿ ವರ್ಗ ಇವೆ. ಆದರೆ ಆಸ್ಪತ್ರೆಯಲ್ಲಿ ಡಾಕ್ಟರ್ಸ್ ಇಲ್ಲ, ಬಡಜನಕ್ಕೆ ಕೇವಲ ಬಣ್ಣದ ನೀರು ಸಿಕ್ಕು

3-00 P.M.

ಇನ್ನು ಎರಡು ಮೂರು ದಿವಸದಲ್ಲಿ, ಅಂತಹ ಕೆಲವು ಉದಾಹರಣೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಊರುಗಳಲ್ಲಿ ಕುಡಿಯುವುದಕ್ಕೆ ನೀರು ಇಲ್ಲ. 100 ಅಡಿ ಬಾವಿ ತೋಡಿದರೂ ನೀರು ಸಿಗುವುದು ಕಷ್ಟವಾಗಿದೆ. ಸಹಾಯ ಧನವನ್ನು ಸರ್ಕಾರ ಕೊಡುವುದು ಯಾವಾಗ ? ಅಕ್ಟೋಬರ್, ನವಂಬರ್ ತಿಂಗಳುಗಳಲ್ಲಿ ಕೊಡುತ್ತಾರೆ. ಆವಾಗ ಮಳೆಗಾಲ, ಎಲ್ಲಾ ಭಾಗಗಳಲ್ಲೂ ನೀರು ಇರುತ್ತದೆ. ಬಾವಿಗಳನ್ನು ಆಳಪಡಿಸಬೇಕಾಗಿಲ್ಲ ಎಂದು ಅಧಿಕಾರಿಗಳು ಹೇಳಿ ಹೋಗುತ್ತಾರೆ. ನಿಜವಾಗಿ ನೀರಿನ ಕೊರತೆ ಬೇಸಿಗೆ ಕಾಲದಲ್ಲಿ ಫೆಬ್ರವರಿ ಮತ್ತು ಆಗಸ್ಟ್ ತಿಂಗಳುಗಳಲ್ಲಿ, ಆಗ ಸಹಾಯಧನ ಬರಬೇಕು. ಈಗ 500 ಜನಕ್ಕೆ ಒಂದು ಬಾವಿ ಎಂದು ಇದೆ. ಇದನ್ನು ಬದಲಾಯಿಸಿ 200 ಜನಕ್ಕೆ ಒಂದು ಬಾವಿಯನ್ನು ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ನನ್ನ ಕ್ಷೇತ್ರವಾದ ಪಾಂಡವಪುರವನ್ನು ಸಕ್ಕರೆ ನಾಡು ಎಂದು ತಿಳಿದುಕೊಂಡಿದ್ದಾರೆ. ಆದರೆ ಇಲ್ಲಿ ಎಷ್ಟರಮಟ್ಟಿಗೆ ಸೌಲಭ್ಯ ಇದೆ ಎಂದು ಮಾನ್ಯ ಅಧ್ಯಕ್ಷರಿಗೆ ಗೊತ್ತು. 200 ಹಳ್ಳಿಗಳಲ್ಲಿ ಕೇವಲ 30 ಊರುಗಳಿಗೆ ಮಾತ್ರ ನೀರಾವರಿ ಸೌಲಭ್ಯವಿದೆ. ಸಕ್ಕರೆ ಕಾರ್ಖಾನೆಯ ವ್ಯಾಪ್ತಿಗೆ ಒಳಪಟ್ಟ ಪ್ರದೇಶವನ್ನು ಬಿಟ್ಟರೆ ಉಳಿದ ಕಡೆಗಳಲ್ಲಿ ಕುಡಿಯುವುದಕ್ಕೆ ನೀರು, ತಿನ್ನಲು ಅನ್ನ, ಉಡಲು ಬಟ್ಟೆ ಇಲ್ಲದೆ ಜೀವನವನ್ನು ತಳ್ಳುತ್ತಿದ್ದಾರೆ. ಬಹಳ ಬಡ ಜನರಿದ್ದಾರೆ. ಅವರ ಗತಿ ಹೇಗಿದೆ ಎಂದರೆ, ಬಡವನು ಸತ್ತರೆ ಸುಡುವುದಕ್ಕೂ ಅವರ ಕೈಯಲ್ಲಿ ಹಣವಿಲ್ಲದಾಗಿದೆ. ನನ್ನ ಒಂದು ಸಂಸಾರದ ಜೀವನವನ್ನು ತೆಗೆದುಕೊಂಡರೆ, ನಾನು ಸಾವಿಗೆ ಅಂಜುವವನಲ್ಲ, ಮರಣಕ್ಕೆ ಅಂಜುವವನಲ್ಲ, ಯಾರು ಸತ್ತರೂ ದುಃಖ ಪಡುವವನಲ್ಲ, ಆದರೆ ಯಾರಿಗೂ ಮರಣ ಕೊಡಬೇಡ ದೇವರೇ ಎಂದು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ಅವರ ಶ್ರಾದ್ಧಾದಿ ಕರ್ಮಗಳಿಗೂ ಖರ್ಚು ಮಾಡುವುದಕ್ಕೆ ನನ್ನಲ್ಲಿ ಹಣವಿಲ್ಲ. ಈ ಸದನದ ಸದಸ್ಯನಾದ ನನ್ನ ಒಬ್ಬನ ಸಂಸಾರದ ಸ್ಥಿತಿ ಈ ರೀತಿಯಿರುವಾಗ, ಇನ್ನು ಗ್ರಾಮಾಂತರ ಪ್ರದೇಶದ ಜನರ ಸ್ಥಿತಿ ಹೇಗಿದೆ ಎಂಬುದನ್ನು ಸರ್ಕಾರದವರು ಗಮನಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಅಭಿವೃದ್ಧಿಕಾರ್ಯಗಳನ್ನು ಮಾಡಬೇಕು. ನಗರ ಪ್ರದೇಶಗಳಿಗೆ ಹೆಚ್ಚು ಗಮನ ಕೊಡುವುದು ಬೇಡವೆಂದು ಹೇಳುವುದಿಲ್ಲ. ಅದರ ಜೊತೆಗೆ ಗ್ರಾಮಾಂತರ ಪ್ರದೇಶಕ್ಕೂ ಗಮನವನ್ನು ಹರಿಸಿ ಹಳ್ಳಿಗಾಡಿನ ಜನರ ಜೀವನ, ನಗರ ಪ್ರದೇಶದ ಜನ ಜೀವನಕ್ಕೆ ಸರಿಸಮನಾಗಿ ಹೋಗದಿದ್ದರೂ, ನಗರ ಪ್ರದೇಶಗಳ ಪಕ್ಕದಲ್ಲಿ ಹೋಗುವ ಒಂದು ಅನುಭವ ತಂದುಕೊಳ್ಳುವ ಹಾಗೆ ಸರ್ಕಾರದವರು ವ್ಯವಸ್ಥೆಯನ್ನು ಮಾಡಿ, ಅವರನ್ನು ಸಮಾಜದಲ್ಲಿ ಗೌರವಯುತ ವ್ಯಕ್ತಿಗಳನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಅಲ್ಲಿ 10—12 ವರ್ಷಗಳಿಂದ ಕೆಲಸಗಳು ನಡೆದಿಲ್ಲ. ಹಿಂದೆ ಶ್ರೀಮಾನ್ ಚೆನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ್ಗೆ ಮಂಡ್ಯದ ದೋಣಿಕೆರೆ ರಸ್ತೆ 12 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅದರ ಮೇಲೆ ಹಲವಾರು ರೂಪಾಯಿ ಖರ್ಚು ಮಾಡಿದರೂ ಅದು ಇಲ್ಲಿಯವರೆಗೆ ಪೂರ್ಣವಾಗಿಲ್ಲ. ಒಂದು ಊರಿನ ಜಮೀನು ಮುಳುಗಿಸಿ ಕೆರೆ ಕಟ್ಟಿದರು. ಅರಕೆರೆ ಗ್ರಾಮದವರು ತಿರುಗಾಡುವುದಕ್ಕೂ ಸಾಧ್ಯವಿಲ್ಲದಂತಾಗಿದೆ. ಆದ್ದರಿಂದ ಆದಷ್ಟು ಬೇಗ ಈ ಹಳ್ಳಿಗಳ ಕೊರತೆಯನ್ನು ನಿವಾರಿಸಬೇಕು ಎಂದು ತಮ್ಮ ಮುಖಾಂತರ ಪ್ರಾರ್ಥಿಸಿಕೊಳ್ಳುತ್ತೇನೆ. ಮತ್ತು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎನ್. ಗುರುಸಿದ್ದಪ್ಪ (ಬಿಳಿಗೆರೆ).—ರಾಜ್ಯಪಾಲರ ಭಾಷಕ್ಕೆ ವಂದನೆಯನ್ನರ್ಪಿಸುವ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಸರ್ಕಾರದವರ ಸೋಷಿಯಲಿಸ್ಟಿಕ್ ಪ್ಯಾಟರನ್ ಆಫ್ ಸೊಸೈಟಿ ಅನ್ನು ಖಂಡಿತವಾಗಿ ಜಾರಿಗೆ ತರಬೇಕಾಗಿದ್ದರೆ ಕೆಲವು ವಿಷಯಗಳನ್ನು ಗಮನಿಸಬೇಕಾಗಿದೆ. ಮೊದಲನೆಯದಾಗಿ ಮಂತ್ರಿಗಳು ಮತ್ತು ಸದಸ್ಯರು ಮಾತ್ರವಲ್ಲ, ಪ್ರತಿಯೊಬ್ಬ ಪ್ರಜೆಯೂ ಕೂಡ ಐದು ವರ್ಷಗಳಿಗೆ ಒಂದು ಸಾರಿ ಆಸ್ತಿ ವಿವರ ಕೊಡಬೇಕು ಎಂದು ಕಂಪಲ್ಸರಿ ರೂಲ್ಸ್ ಮಾಡಬೇಕು. ಎಷ್ಟು ಉತ್ಪತ್ತಿ ಇದೆ ಎಷ್ಟು ಖರ್ಚು ಇದೆ, ಉಳಿತಾಯ ಎಷ್ಟು ಇದೆ ಎಂಬುದನ್ನು ಐದು ವರ್ಷಕ್ಕೊಂದು ಸಾರಿ ಕೊಟ್ಟರೆ ಬ್ಲಾಕ್ ಮಾರ್ಕೆಟ್ ತಡೆಗಟ್ಟಬಹುದು, ಬ್ಲಾಕ್ ಮನಿ ಪ್ರಸಾರ ನಿಂತುಹೋಗುತ್ತದೆ. ನಮ್ಮ ಎಲ್ಲಾ ಯೋಜನೆಗಳು ತಲೆಕೆಳಗಾಗುತ್ತಿರುವುದಕ್ಕೆ ಕಾರಣಗಳು, ಮೊದಲನೆಯದಾಗಿ ಲಂಚ ಮತ್ತು ಕರಿಗೆ ಕೊಡದೆ ತಪ್ಪಿಸಿಕೊಳ್ಳುತ್ತಿರತಕ್ಕ ಕಳ್ಳರು. ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ ಲಂಚವಿಲ್ಲದೆ ಯಾವ ಕೆಲಸಗಳೂ ಆಗುವುದಿಲ್ಲ. ಇದನ್ನು ಸರ್ಕಾರದವರು ನಿಗದಲ್ಲಿಟ್ಟುಕೊಂಡು ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿ ಲಂಚದ

(ಶ್ರೀ ಎಸ್. ಎನ್. ಗುರುಸಿದ್ದಪ್ಪ)

ಹಾವಳಿಯನ್ನು ತಪ್ಪಿಸಬೇಕು. ಆರ್.ಟಿ.ಓ. ಮತ್ತು ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಲಂಚ ವಿಲ್ಲದೆ ಯಾವ ಕೆಲಸಕಾರ್ಯಗಳೂ ಆಗುತ್ತಿಲ್ಲ. ತೆರಿಗೆ ಕಳ್ಳರು, ಫ್ಯಾಕ್ಟರಿ ಓನರ್ಸ್, ಲಿಕ್ಕರ್ ಮ್ಯಾನ್ಯುಫ್ಯಾಕ್ಚರರ್ಸ್, ಟ್ಯಾಕ್ಸ್ ಕೊಡದೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ ಬಂಗಲೆಗಳನ್ನು ಕಟ್ಟಿದ್ದಾರೆ. ಅವರಿಗೆ ಈ ದುಡ್ಡು ಎಲ್ಲಿಂದ ಬಂತು ? ನಿಜವಾಗಿ ಟ್ಯಾಕ್ಸ್ ಕಟ್ಟಿದ್ದರೆ ಆ ಮನೆ ಗಳನ್ನು ಕಟ್ಟುವುದಕ್ಕೆ ಆಗುತ್ತಿರಲಿಲ್ಲ. ಅವರು ಮಜಾ ಮಾಡುವುದಕ್ಕೆ ಆಗುತ್ತಿರಲಿಲ್ಲ.

ರೈತರ ಮಕ್ಕಳು ಈಗ ಸರ್ಕಾರಿ ನೌಕರಿ ಹುಡುಕಿಕೊಂಡು ಹೋಗುತ್ತಿದ್ದಾರೆ. ಅದಕ್ಕೆ ಕಾರಣ ವಿದ್ಯಾಭ್ಯಾಸದ ಕ್ರಮ. ಈ ವಿದ್ಯಾಭ್ಯಾಸ ಎಲ್ಲರನ್ನೂ ಗುಮಾಸ್ತಗಿರಿಗೆ ತಯಾರು ಮಾಡುತ್ತಿದೆ. ಅದರ ಬದಲು ಪ್ರತಿಯೊಂದು ತಾಲ್ಲೂಕಿನಲ್ಲಿ ಅಗ್ರಿಕಲ್ಚರಲ್ ಫಾರ್ಮ್ಸ್, ಅಗ್ರಿಕಲ್ಚರಲ್ ಕಾಲೇಜುಗಳನ್ನು ಏರ್ಪಾಡು ಮಾಡಿ ರೈತರ ಮಕ್ಕಳಿಗೆ ವ್ಯವಸಾಯದಲ್ಲಿ ಟ್ರೈನಿಂಗ್ ಕೊಟ್ಟು ಐದು ವರ್ಷದಲ್ಲಿ ತಾನು ನೌಕರಿಯಲ್ಲಿ ಸಂಪಾದನೆ ಮಾಡತಕ್ಕದ್ದನ್ನು ಒಂದು ಬೆಳೆಯಲ್ಲಿ ತೆಗೆದುಕೊಳ್ಳ ಬಹುದು ಎನ್ನುವ ಧೈರ್ಯ ಕೊಟ್ಟರೆ, ನಿಜವಾಗಿ ನಿರುದ್ಯೋಗ ನಿವಾರಣೆಯಾಗುತ್ತದೆ ಎಂದು ಹೇಳಬಯಸುತ್ತೇನೆ.

ಪಾನ ನಿರೋಧವನ್ನು ನಿಜವಾಗಿ ಜಾರಿಗೆ ತರಬೇಕು. ಅನೇಕ ಬಡ ಜನರು ಕುಡಿದು ಹಾಳಾಗುತ್ತಿದ್ದಾರೆ. ಪಾನನಿರೋಧ ಜಾರಿಯಲ್ಲಿದ್ದಾಗ ಅನೇಕ ಹರಿಜನರು ಉದ್ಧಾರವಾಗು ತ್ತಿದ್ದರು. ಪಾನನಿರೋಧ ಬಂದಮೇಲೆ ಬಡತನ ಹೆಚ್ಚುತ್ತಿದೆ. ಆದುದರಿಂದ ಪಾನನಿರೋಧ ಜಾರಿಗೆ ತರಬೇಕು. ಲಾಟರಿ, ಸಮಾಜವಾದದ ಕಾರ್ಯಕ್ರಮಗಳಿಗೆ ವಿರುದ್ಧ, ಆದ್ದರಿಂದ ಅವನ್ನು ಕೈಬಿಟ್ಟರೆ ಬಹಳ ಒಳ್ಳೆಯದು. ವ್ಯಾಪಾರಸ್ಥರು ಲಕ್ಷಾಂತರ ರೂಪಾಯಿ ತೆರಿಗೆ ಕೊಡದೆ ಸಂಪಾದನೆ ಮಾಡುತ್ತಿದ್ದಾರೆ. ಆದುದರಿಂದ ಪ್ರತಿಯೊಂದು ಟೌನಿನಲ್ಲೂ ಹಳ್ಳಿಯಲ್ಲೂ ಮತ್ತು ಸಿಟಿಗಳಲ್ಲೂ ಜನತಾ ಬಜಾರ್ ಪ್ರಾರಂಭಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕೆ ಪ್ರಪ್ರಥಮವಾಗಿ ವಂದಿಸಿ, ರಾಜ್ಯಪಾಲರ ಭಾಷಣ ನಿಸ್ಸಾರವಾದುದು ಎಂದು ಹೇಳಿ ಒಂದೆರಡು ವಿಚಾರಗಳನ್ನು ಸರ್ಕಾರದ ಮುಂದಿಡುತ್ತೇನೆ. ತುಮಕೂರು ಜಿಲ್ಲೆಯಲ್ಲಿ ಮಳೆಯ ಅಭಾವದಿಂದ ತೆಂಗಿನ ಬೆಳೆ ನಾಶವಾಗುತ್ತಿದೆ. ಸರ್ಕಾರದವರು ನಿಜವಾಗಿ ತೆಂಗಿನ ಬೆಳೆಗೆ ಕೋಕನಟ್ ಪಿಕ್ ಅಪ್ಸ್ ಒದಗಿಸಿ ಅದರ ಮೇಂಟನೆನ್ಸ್ ಪಿ.ಡಬ್ಲ್ಯು.ಡಿ. ಗೆ ವಹಿಸಿಕೊಟ್ಟರೆ, ತೆಂಗಿನ ಬೆಳೆ ಹೆಚ್ಚು ಅಭಿವೃದ್ಧಿಹೊಂದಿ ರೈತರಿಗೆ ಅನುಕೂಲವಾಗುತ್ತದೆ. ಅಲ್ಲದೆ ಸರ್ಕಾರದವರಿಗೆ ಈ ಬೆಳೆಯಿಂದ ಕೋಟ್ಯಾಂತರ ರೂಪಾಯಿಗಳ ವರಮಾನ ಬರುತ್ತದೆ.

ಕೈಗಾರಿಕೆಗೆ ಸಂಬಂಧಪಟ್ಟಂತೆ ಹೇಳುವುದಾದರೆ ಪ್ರಪ್ರಥಮವಾಗಿ ಸರ್ಕಾರದ ಕೈಗಾರಿಕೆ ಯನ್ನು ವಿಕೇಂದ್ರೀಕರಣ ಮಾಡಿ, ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ಅನೇಕ ಇಂಡಸ್ಟ್ರೀಸ್‌ಗಳನ್ನು ಸ್ಥಾಪನೆ ಮಾಡಿದ್ದೇ ಆದರೆ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ. ನನ್ನ ಕ್ಷೇತ್ರವಾದ ಚಿಕ್ಕನಾಯಕನಹಳ್ಳಿಗೆ ಸಂಬಂಧಪಟ್ಟಂತ ಮಾತನಾಡ-ವುದಾದರೆ ಅನೇಕ ಉಲ್ಲನ್ ವೀವರ್ಸ್ ಮತ್ತು ಕಾಟನ್‌ಗೆ ಸಂಬಂಧಪಟ್ಟಂತೆ ನೇಕಾರರು ಇದ್ದಾರೆ. ಅಲ್ಲಿ ವೂಲ್ ಅಭಾವ ಉಂಟಾಗಿದೆ. ಸರ್ಕಾರದವರು ಆದಷ್ಟು ಬೇಗ ಷೀಪ್‌ಬೋರ್ಡು ಒಂದನ್ನು ರಚಿಸಿ ಕುರಿ ಸಾಕು ವುದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ನೇಕಾರರ ಸಮಸ್ಯೆ ಬಗೆಹರಿಸಿ ಅವರು ಒಳ್ಳೆಯ ರೀತಿಯಲ್ಲಿ ಜೀವನ ಮಾಡುವಂತೆ ಸಹಕರಿಸಬೇಕು.

ಮೂರನೆಯದಾಗಿ, ಎಜುಕೇಷನ್ ಬಗ್ಗೆ ಹೇಳಬೇಕು. ತಾಲ್ಲೂಕು ಮಟ್ಟದಲ್ಲಿ ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ಗಳವರಿಂದ ವಿದ್ಯಾಭ್ಯಾಸ ನಡೆಯುತ್ತಿದೆ. ಅವರಿಗೆ ಜೂನಿಯರ್ ಕಾಲೇಜ್ ಗಳನ್ನು ತೆಗೆಯಲಿಕ್ಕೆ ಸಾಧ್ಯವಾಗದೇ ಹೋಗಬಹುದು. ಆದ್ದರಿಂದ ಸರ್ಕಾರದವರು ಜೂನಿಯರ್ ಕಾಲೇಜ್‌ಗಳನ್ನು ಪ್ರಾರಂಭಮಾಡಿ ವಿದ್ಯಾಭ್ಯಾಸ ಮಾಡತಕ್ಕಂಥ ಅನೇಕ ಬಡ ವಿದ್ಯಾರ್ಥಿಗಳಿಗೆ ವಿದ್ಯಾ ಸೌಕರ್ಯ ನೀಡಬೇಕೆಂದು ಹೇಳುತ್ತೇನೆ.

ಸಹಕಾರಿ ಇಲಾಖೆಯಿಂದ ನಮಗೆ ಸಹಕಾರ ಸಿಕ್ಕುತ್ತಾ ಇಲ್ಲ. ನಾನು ತುಮಕೂರು ಜಿಲ್ಲೆಯ ಸಹಕಾರಿ ಕೇಂದ್ರ ಬ್ಯಾಂಕಿನ ಉಪಾಧ್ಯಕ್ಷನಾಗಿ ಹೇಳುತ್ತಿದ್ದೇನೆ. ಕೊಟ್ಟಿರತಕ್ಕಂಥ ಸಾಲದ ವಸೂಲಿ ಕ್ರಮದ ಬಗ್ಗೆ ಹೇಳುವುದಾದರೆ ಆನ್ ಡಿಮ್ಯಾಂಡ್ ಪ್ರೋನೋಟ್‌ಗಳು ಡಿಕ್ರಿ ಆಗಿರ

ತಕ್ಕಂಥ ದಾವೆಗಳನ್ನು ಎಕ್ಸಿಕ್ಯೂಷನ್‌ಗೆ ತರಬೇಕು. ಹೈಯರ್ ಆಫೀಸರ್ಸ್ ಇದರ ಕಡೆ ಗಮನ ಹರಿಸುವುದಿಲ್ಲ. ಅದರಿಂದಾಗಿ ಸಾಲ ವಸೂಲಿ ಆಗದ ಸನ್ನಿವೇಶ ಒದಗುತ್ತದೆ. ಸರ್ಕಾರದವರು ಈ ಕಡೆ ಗಮನ ಕೊಟ್ಟು ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಮಾಡಿ ಕೆಳಗಿನ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇ ಆದರೆ ಸಹಕಾರಿ ಇಲಾಖೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಮಿಸ್‌ಅಪ್ರೋಪ್ರಿಯೇಷನ್ ಆದ ಸಂದರ್ಭದಲ್ಲಿ ಒಂದು ಸಸ್ಪೆನ್‌ಷನ್ ಆರ್ಡರ್ ಕೊಡಬೇಕಾದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರಿಗಾಗಲಿ ಡೆಪ್ಯೂಟಿ ರಿಜಿಸ್ಟ್ರಾರ್‌ರವರಾಗಲಿ ಅಧಿಕಾರವಿಲ್ಲ. ಜಾಯಿಂಟ್ ರಿಜಿಸ್ಟ್ರಾರ್ ಅಥವಾ ರಿಜಿಸ್ಟ್ರಾರ್‌ರವರು ಸಸ್ಪೆನ್‌ಷನ್ ಆರ್ಡರ್ ಕೊಡುವ ಹೊತ್ತಿಗೆ ಸೊಸೈಟಿ ನಿರ್ನಾಮವಾಗುತ್ತದೆ. ಇಂತಹ ಸನ್ನಿವೇಶಗಳನ್ನು ಆದಷ್ಟು ಜಾಗ್ರತೆ ಹೋಗಲಾಡಿಸಬೇಕು. ಕೆಲವು ಅಧಿಕಾರಿಗಳಿಗೆ ಹೆಚ್ಚಿಗೆ ಅಧಿಕಾರ ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಗ್ರಾಮಾಂತರ ನೀರು ಸರಬರಾಜು ವ್ಯವಸ್ಥೆ ಬಗ್ಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಪುರಸಭೆಯ ಅಧ್ಯಕ್ಷನಾಗಿದ್ದಾಗ 6 ಲಕ್ಷ 60 ಸಾವಿರ ರೂಪಾಯಿ ಗ್ರ್ಯಾಂಟನ್ನು ಕೊಟ್ಟರು. ಒಂದು ವರ್ಷದ ಮೇಲೆ 2 ತಿಂಗಳು ಆದರೂ ಕೂಡ ಪಿ.ಡಬ್ಲ್ಯು.ಡಿ. ಇಲಾಖೆಯವರು ಕೆಲಸವನ್ನು ತೆಗೆದುಕೊಂಡಿಲ್ಲ. ವರ್ಷವರ್ಷವೂ ಸ್ಟೀಲ್ ಮತ್ತು ಇತರೇ ಬಾಬುಗಳ ಬೆಲೆ ಹೆಚ್ಚಾಗುತ್ತಾ ಇದೆ. ಕೊಡತಕ್ಕ ಕಾಂಟ್ರಿಬ್ಯೂಷನ್‌ನಲ್ಲಿ 10 ಪರ್ಸೆಂಟು ಹೆಚ್ಚುತ್ತಲೇ ಹೋಗುತ್ತದೆ. ನಿಧಾನವಾಗುವುದಕ್ಕೆ ಅವಕಾಶ ಕೊಡದಂತೆ ಅತಿ ಶೀಘ್ರವಾಗಿ ಈ ನೀರು ಸರಬರಾಯಿ ಯೋಜನೆಯನ್ನು ಪ್ರಾರಂಭ ಮಾಡಿ ನೀರು ತೊಂದರೆ ಇರತಕ್ಕಂಥ ಊರುಗಳಿಗೂ ನೀರು ಒದಗಿಸಿ ಕೊಡಬೇಕು. ಅನೇಕ ಗ್ರಾಮಗಳಲ್ಲಿ ನೀರಿನ ಕೊರತೆ ಇದೆ. ಸಿಹಿ ನೀರು ಸಿಕ್ಕುವುದಿಲ್ಲ. ಅಂಥಾ ಕಡೆ ರಿಗ್ ಬೋರ್ ಒದಗಿಸಿ, ಪಂಪುಗಳನ್ನು ಹಾಕಿ, ಆ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿಕೊಟ್ಟು, ನೀರಿನ ತೊಂದರೆಯನ್ನು ಹೋಗಲಾಡಿಸಬೇಕೆಂದು ನನ್ನ ಪ್ರಾರ್ಥನೆ.

ಇನ್ನು ಕುಟುಂಬ ಯೋಜನೆ ಬಗ್ಗೆ ಮಾತನಾಡುವುದಾದರೆ ಇದನ್ನು ಖಂಡಿತವಾಗಿಯೂ ಕಂಪಲ್ಸರಿಯಾಗಿ ತರದೇ ಇದ್ದರೆ ಸಕ್ಸೆಸ್ ಆಗುವುದು ಕಂಡುಬರುವುದಿಲ್ಲ. ನಮ್ಮ ವಾಲಂಟೀರ್ಸ್ ಹೋಗಿ ಅನೇಕ ರೀತಿಯಲ್ಲಿ ಬೋಧನೆ ಮಾಡಿದರೂ ಕೂಡ ಜನರು ಮುಂದೆ ಬರುತ್ತಾ ಇಲ್ಲ. ಧಾರ್ಮಿಕವಾದ ವಿಚಾರಗಳಿಗೋಸ್ಕರ ಜನರು ಮುಂದೆ ಬರುತ್ತಾ ಇಲ್ಲ. ಜನಸಂಖ್ಯೆ ಹೆಚ್ಚುತ್ತಾ ಇರುವುದರಿಂದ ಅದನ್ನು ಕಡಿಮೆ ಮಾಡುವುದಕ್ಕೋಸ್ಕರ ಅತಿ ಶೀಘ್ರವಾಗಿ ಈ ಯೋಜನೆಯನ್ನು ಕಂಪಲ್ಸರಿಯಾಗಿ ತಂದರೆ ಯೋಜನೆಯ ಉದ್ದೇಶ ಸಫಲವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಇನ್ನು ಸಮಾಜ ಕಲ್ಯಾಣದ ಬಗ್ಗೆ ಹೇಳುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ್ರತಿ ತಾಲ್ಲೂಕಿಗೂ ಒಂದು ಸಮಾಜ ಕಲ್ಯಾಣ ಮಂಟಪವನ್ನು ಕಟ್ಟಿಸಬೇಕು. ಮದುವೆ ಮುಂಜಿ ಮಾಡುವುದಕ್ಕೆ, ಸಂಸ್ಕೃತಿ ಪ್ರಚಾರ ಕಾರ್ಯಕ್ರಮಗಳಿಗೆ ಸ್ಥಳಾವಕಾಶದ ತೊಂದರೆ ಇದೆ. ಮುಜರಾಯಿ ದೇವಸ್ಥಾನಗಳಲ್ಲಿ ಅನೇಕ ಕಡೆ ಸ್ಥಳ ಇದೆ. ಅಂತಹ ಕಡೆಗಳಲ್ಲಿ ಸಮಾಜ ಕಲ್ಯಾಣವತಿಯಿಂದ ಮಂದಿರವನ್ನು ಕಟ್ಟಿ ಬಡಬಗ್ಗರಿಗೆ ಹಿಂದುಳಿದ ಜನಾಂಗದವರಿಗೆ ಮದುವೆ ಮುಂಜಿ ಮಾಡುವುದಕ್ಕೆ ಸ್ಥಳಾವಕಾಶ ಒದಗಿಸಿ ಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತೇನೆ. ಮುಖ್ಯವಾಗಿ ಹೇಳುವುದಾದರೆ ಸಮತಾವಾದದ ಬೋಧನೆ ಏನು ಮಾಡುತ್ತಿದ್ದಾರೋ ಅದು ಪೊಳ್ಳು ಆಗಬಾರದು ಎಂದು ಹೇಳುತ್ತೇನೆ.

ಇನ್ನು ಸರಕಾರಿ ನೌಕರರ ವಿಷಯ. ಪ್ರಪ್ರಥಮವಾಗಿ ಹೇಳುವುದಾದರೆ ಕೇಂದ್ರ ಸರ್ಕಾರಕ್ಕೂ ನಮ್ಮ ಸರ್ಕಾರಕ್ಕೂ ಪೇ-ಸ್ಕೇಲ್‌ನಲ್ಲಿ ವ್ಯತ್ಯಾಸ ಇದೆ. ರಾಜ್ಯದ ಜನಸಂಖ್ಯೆಯಲ್ಲಿ ಅಧಿಕಾರ ವರ್ಗದವರು 3 ಪರ್ಸೆಂಟು ಇರಬಹುದು. ಕೇಂದ್ರ ಸರ್ಕಾರದಲ್ಲಿ ಒಂದು ತರಹ, ರಾಜ್ಯ ಸರ್ಕಾರದಲ್ಲಿ ಒಂದು ತರಹ ಪೇ-ಸ್ಕೇಲ್ಸ್ ಇದೆ. ಕೇಂದ್ರ ಸರ್ಕಾರದಲ್ಲಿ ಕೆಲಸಮಾಡತಕ್ಕ ಒಬ್ಬ ಸ್ಕ್ಯಾವೆಂಜರ್, ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಒಬ್ಬ ಸ್ಕ್ಯಾವೆಂಜರ್‌ಗಿಂತ ಇಮ್ಮಡಿ ಸಂಬಳ ತೆಗೆದುಕೊಳ್ಳುತ್ತಾನೆ. ಇಬ್ಬರ ಜೀವನ ಮಟ್ಟ ಒಂದೇ ಆಗಿರುವುದರಿಂದ ಪ್ರಪ್ರಥಮವಾಗಿ ಈ ತಾರತಮ್ಯವನ್ನು ಹೋಗಲಾಡಿಸಬೇಕು. ಇಲ್ಲದೇ ಹೋದರೆ ಸಮತವಾದ ಸಮಾಜವನ್ನು ಆಚರಣೆಗೆ ತರದೇ ಇರುವುಕ್ಕೆ ಈ ಸರ್ಕಾರವೇ ಹೊಣೆಯಾಗುತ್ತದೆ ಎಂದು ಹೇಳುತ್ತೇನೆ. ಸಮತಾವಾದವನ್ನು ನಮ್ಮ ಶರೀರದಲ್ಲಿರತಕ್ಕ ಕೂದಲಿಗೆ ಹೋಲಿಸಬಹುದು. ಹೇಗೆ ತಲೆಯಲ್ಲಿರುವ ದಪ್ಪ ಕೂದಲಿಗೆ ಕೂದಲು ಎಂದು ಕರೆಯುತ್ತೇವೆ, ಮುಖದಲ್ಲಿರುವ ಕೂದಲಿಗೆ ಮೀಸೆ ಎಂದು ಕರೆಯುತ್ತೇವೆ, ಗುಪ್ತದಲ್ಲಿರುವ ಸ್ಥಳಕ್ಕೆ ಇನ್ನೊಂದು ಹೆಸರಿನಿಂದ ಕರೆಯುತ್ತೇವೆ, ಹಾಗೆ ಬೇರೆ ಬೇರೆ ಪಕ್ಷಗಳು ಸಮಾಜವಾದವನ್ನು ತಮಗೆ

(ಶ್ರೀ ಎನ್. ಬಸವಯ್ಯ)

ಬೇಕಾದ ಹಾಗೆ ವಿವರಿಸುತ್ತಾ ಇದ್ದಾರೆ. ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಒಂದು ತರಹ, ರಾಜ್ಯ ಸರಕಾರದ ಅಧಿಕಾರಿಗಳಿಗೆ ಒಂದು ತರಹ ಸಂಬಳದಲ್ಲಿ ವ್ಯತ್ಯಾಸ ಇರುವುದು ಸರಿಯಲ್ಲ. ಪ್ರಪ್ರಥಮವಾಗಿ ಸಮತಾವಾದವನ್ನು ಸಾಧಿಸಬೇಕಾದರೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕೇವಲ 3 ಪರ್ಸೆಂಟು ಇರತಕ್ಕ ಅಧಿಕಾರ ವರ್ಗದವರಿಗೆ ಒಂದೇ ರೀತಿಯಾದ ಸಂಬಳದ ವ್ಯವಸ್ಥೆ ಮಾಡಿದರೆ ಸಮತಾವಾದಕ್ಕೆ ಮನ್ನಣೆ ಸಿಕ್ಕುತ್ತದೆ. ಇಲ್ಲದೇ ಹೋದರೆ ಇದು ಟೊಳ್ಳು ಘೋಷಣೆಯಾಗಿ ಉಳಿಯುತ್ತದೆ.

ಇನ್ನು ವ್ಯವಸಾಯಕ್ಕೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ಪಂಪುಸೆಟ್ಟು ಗಳನ್ನು ರೈತರಿಗೆ ಒದಗಿಸುತ್ತಾ ಇದ್ದರು. ಈ ಒಂದು ಕಾರ್ಯ ಈಗ ಕುಂಠಿತವಾಗಿದೆ. ಆದುದರಿಂದ ಈಗಲಾದರೂ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ರೈತರಿಗೆ ಪಂಪುಸೆಟ್ಟು, ಗೊಬ್ಬರ ವ್ಯವಸಾಯಕ್ಕೆ ಬೇಕಾದ ಇಂಪ್ಲಿಮೆಂಟ್ಸ್ ಏನು ಇವೆಯೋ ಅವೆಲ್ಲವನ್ನೂ ಒದಗಿಸಿ ರೈತರ ಕಷ್ಟಗಳನ್ನು ಜರೂರಾಗಿ ಬಗೆಹರಿಸಬೇಕೆಂದು ಹೇಳಿ ಈ ಒಂದು ಸಂದರ್ಭದಲ್ಲಿ ಎರಡು ಮಾತುಗಳನ್ನಾಡುವುದಕ್ಕೆ ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ದಾಮೋದರ ಮುಲ್ಕಿ (ಮೂಡಬಿದ್ರೆ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ರಾಜ್ಯಪಾಲರ ಭಾಷಣ ಮೇಲೆ ಸಭೆಯ ಮುಂದಿರುವ ಕೃತಜ್ಞತೆಯನ್ನು ಅರ್ಪಿಸುವ ಸೂಚನೆಯನ್ನು ಅನುಮೋದಿಸುತ್ತೇನೆ. ನಮ್ಮ ಜನಸಾಮಾನ್ಯರು ಕಳೆದ ಚುನಾವಣೆಯಲ್ಲಿ ನಮಗೆ ಅಭೂತಪೂರ್ವ ವಿಜಯವನ್ನು ಗಳಿಸಿಕೊಟ್ಟಿದ್ದಾರೆ. ನಮ್ಮ ಪಕ್ಷದ ಮೇಲೆ, ನಮ್ಮ ಮೇಲೆ ಇರುವ ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಪಕ್ಷದ ಮೇಲೆ ಇರುವ ವಿಶ್ವಾಸವನ್ನು ಅರಿತು ಅವರ ಆಸೆ ಆಕಾಂಕ್ಷೆಗಳನ್ನು ತಿಳಿದು ಅವರ ಕನಸನ್ನು ನನಸಾಗಿ ಮಾಡುವುದು ನಮ್ಮ ಕರ್ತವ್ಯ. ನಮ್ಮ ಪಕ್ಷ ಸರ್ಕಾರ ರಚಿಸಿ ಕೇವಲ ಒಂದು ತಿಂಗಳು ಸಂದಿದೆ. ಈ ಅತ್ಯಲ್ಪ ಅವಕಾಶದಲ್ಲಿ ಸರ್ಕಾರ ಏನೂ ಸಾಧಿಸಿಲ್ಲ ಎಂದು ಟೀಕಿಸುವುದು ಅಷ್ಟೊಂದು ಸಮಂಜಸವಾಗಿ ಕಾಣುವುದಿಲ್ಲ. ನಮ್ಮ ಸರ್ಕಾರದ ಗಮನಕ್ಕೆ ಹಿಂದೆ ಆಗಿರುವ ಕೆಲವು ಕುಂದುಕೊರತೆಗಳನ್ನು, ಈಗ ಆಗತಕ್ಕಂಥ ಕೆಲವು ಲೋಪದೋಷಗಳನ್ನೂ ತರುವುದು ನಮ್ಮ ಕರ್ತವ್ಯ. ರಾಜ್ಯಪಾಲರ ಭಾಷಣ ನೋಡಿದಾಗ ನಮಗೆ ಮೊದಲು ಕಾಣುವುದು ಭೂಮಸೂದೆ ವಿಷಯ. ಕಳೆದ 25 ವರ್ಷದಿಂದ ಜನಸಾಮಾನ್ಯರಿಗೆ ಭೂಮಸೂದೆಯನ್ನು ತರುತ್ತೇವೆ, ನಿಮಗೆ ಪಟ್ಟ ಸಿಕ್ಕುತ್ತದೆ ಎನ್ನುವ ಆಶ್ವಾಸನೆಯನ್ನು ಚುನಾವಣಾ ಸಮಯದಲ್ಲಿ ಹೇಳಿ, ಚುನಾವಣೆ ಕಳೆದ ನಂತರ ಮರೆಯುವುದು ರಾಜಕೀಯ ಪಕ್ಷಕ್ಕೆ ಸ್ವಾಭಾವಿಕವಾಗಿದೆ. ಆದರೆ ಈ ಸಲ ನಮ್ಮ ಮೇಲೆ ಜನಸಾಮಾನ್ಯರು ಇಟ್ಟ ಭರವಸೆಯನ್ನು ಕಾರ್ಯಗತಗೊಳಿಸಬೇಕು. ಅವರ ಆಸೆ ಆಕಾಂಕ್ಷೆಗಳನ್ನು ಪೂರೈಸಿ ಲ್ಯಾಂಡ್ ರೀಫಾರಂಸ್‌ನ್ನು ಆದಷ್ಟು ಬೇಗನೆ ಕಾರ್ಯ ರೂಪಕ್ಕೆ ತರಬೇಕು ಎಂದು ನಾನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇನ್ನು ಸಹಕಾರ ಸಂಘಗಳನ್ನು ಕುರಿತು ಹೇಳುವುದಾದರೆ ನಾನು ಒಬ್ಬ ಸಹಕಾರಿ ಬ್ಯಾಂಕಿನ ಡೈರೆಕ್ಟರಾಗಿ ಅಲ್ಲಿ ಕಂಡ ವಿಷಯಗಳನ್ನು ಹೇಳಲು ನಾಚಿಕೆಯಾಗುತ್ತದೆ. ನಮ್ಮ ಸಹಕಾರ ಸಂಸ್ಥೆಗಳು ಇಂದು ಜನಸಾಮಾನ್ಯರಿಗೆ ಮಾಡಬೇಕಾಗಿರುವ ಯಾವ ಕೆಲಸವನ್ನೂ ಮಾಡುತ್ತಾ ಇಲ್ಲ ಎಂದು ಧೈರ್ಯವಾಗಿ ಹೇಳಬಹುದು. ಸಹಕಾರಿ ಸಂಘಗಳು ರಾಜಕಾರಣಿಗಳ ಮತ್ತು ಅಲ್ಲಿಯ ಅಧಿಕಾರಿ ವರ್ಗದವರು ಆಡುವ ಹೊಲವಾಗಿದೆ. ಜನಸಾಮಾನ್ಯರಿಗೆ ಯಾವ ರೀತಿಯ ಸಹಾಯವನ್ನೂ ಮಾಡುತ್ತಾ ಇಲ್ಲ. ಈ ಪರಿಸ್ಥಿಯನ್ನು ಸುಧಾರಿಸದೇ ಇದ್ದರೆ ಜನಕ್ಕೆ ಇದರಿಂದ ಯಾವ ತರಹ ಸಹಾಯವೂ ದೊರಕಲಿಕ್ಕಿಲ್ಲ. ಮುಖ್ಯವಾಗಿ ಸಹಕಾರ ಸಂಘಗಳು ಎಂದರೆ ಡೈರೆಕ್ಟರ್ಸ್, ಸೆಕ್ರೆಟರಿ, ಪ್ರೆಸಿಡೆಂಟರು. ಇವರು ಒಂದೆರಡು ವರ್ಷ ತಪ್ಪಿದರೆ 3 ವರ್ಷ, ಅದಕ್ಕಿಂತ ಜಾಸ್ತಿ ಆ ಸಂಸ್ಥೆಯಲ್ಲಿ ಅಧಿಕಾರ ವರ್ಗದಲ್ಲಿ ಇರಬಾರದು. ಮುಖ್ಯವಾಗಿ ಒಬ್ಬ ಬಡವ 500 ರೂಪಾಯಿ ಸಾಲಕ್ಕೆ ಹೋದರೆ ಕನಿಷ್ಠ ಪಕ್ಷ 100 ರೂಪಾಯಿನಷ್ಟು ಷೇರು ತೆಗೆದುಕೊಳ್ಳಬೇಕಾಗುತ್ತದೆ. ಆ ರೀತಿ 100 ರೂಪಾಯಿ ಅವನು ಕೊಡುವುದು ಕಷ್ಟ. ಆದುದರಿಂದ ಒಂದು ಷೇರಿನ ಮೇಲೆ ಈ ಸೌಲಭ್ಯ ಸಿಕ್ಕುವಂತೆ ಮಾಡಲು ಮಾನ್ಯ ಸಚಿವರು ಮನಸ್ಸು ಮಾಡುವುದು ಉತ್ತಮ ಎಂದು ಹೇಳುತ್ತೇನೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆರೋಗ್ಯದ ಒಂದು ವಿಷಯವನ್ನು ಎತ್ತಲಿಲ್ಲ. ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಆಸ್ಪತ್ರೆಗಳು ಇವೆ. ಉತ್ತಮವಾದ ಕಟ್ಟಡಗಳು ಇವೆ. ಸಿಬ್ಬಂದಿ ವರ್ಗ ಇವೆ. ಆದರೆ ಆಸ್ಪತ್ರೆಯಲ್ಲಿ ಡಾಕ್ಟರ್ಸ್ ಇಲ್ಲ, ಬಡಜನಕ್ಕೆ ಕೇವಲ ಬಣ್ಣದ ನೀರು ಸಿಕ್ಕು

ತ್ತದೆ. ಅದು ಮಿಕ್ಸ್ಚರ್ ರೀತಿಯಲ್ಲಿ ಇರುತ್ತದೆ. ನಾನು 10—14 ವರ್ಷ ಪ್ರಾಕ್ಟೀಸ್ ಮಾಡಿದ ಡಾಕ್ಟರ್. ಆಸ್ಪತ್ರೆಯಲ್ಲಿ ಕೆಲವು ವರ್ಷ ಆನರರಿಯಾಗಿ ಡಾಕ್ಟರ್ ಕೆಲಸ ಮಾಡಿದ್ದೇನೆ. ಇದನ್ನು ಹೇಳಲು ಬಹಳ ಬೇಸರವಾಗುತ್ತದೆ. ಈ ಪರಿಸ್ಥಿತಿಯನ್ನು ಸುಧಾರಿಸುವುದು ಅತಿ ಮುಖ್ಯವಾದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಿನಿಂದ ಉಡುಪಿಯವರೆಗೆ ಹತ್ತು ಮೈಲಿ ಸಮುದ್ರತೀರ ಇರುವ ಭಾಗದಲ್ಲಿ ಆನೇಕಾಲು ರೋಗದ ಹಾವಳಿ ಜಾಸ್ತಿಯಾಗಿದೆ. ಸೇಕಡ 5 ಮಂದಿ ಇದರಿಂದ ನರಳುತ್ತಾ ಇದ್ದಾರೆ. ಈ ರೋಗ ಮುಲ್ಕಿಯಲ್ಲಿ ಸೇಕಡ 30 ರಷ್ಟಿದೆ. ಇದಕ್ಕೆ ತಕ್ಕ ಚಿಕಿತ್ಸೆ ಮಾಡಿ ಈ ರೋಗ ಹರಡದಂತೆಯೂ ಮತ್ತು ಜನರಿಗೆ ಅನುಕೂಲವಾಗುವಂತೆಯೂ ನೋಡಿಕೊಳ್ಳಬೇಕು. ಹಾಗೆ ಮಾಡಿ ಅಲ್ಲಿನ ಜನರ ಆರೋಗ್ಯ ಸುಧಾರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಜಿಲ್ಲೆಯಲ್ಲಿ ಸುಮಾರು ಸೇಕಡ 30 ರಷ್ಟು ಬಿಲ್ಲರಿದ್ದಾರೆ, ಆ ಜನಾಂಗ ಬಹಳ ಹಿಂದುಳಿದಿದೆ. ಅವರು ಮೂರ್ತೆದಾರರು, ಅದು ಅವರ ಕಸಬು. 1968 ರವರೆಗೆ ಅವರು ಬೆಲ್ಲ ಮಾಡುತ್ತಿದ್ದರು, ಅದಕ್ಕೆ ತೆರಿಗೆ ಇರಲಿಲ್ಲ. 1968 ರಲ್ಲಿ ಮೈಸೂರು ಸರಕಾರ ಪಾನ ನಿರೋಧ ರದ್ದು ಮಾಡಿದಾಗ ಅವರಿಗಿದ್ದ ಪರವಾನಿಗೆಯನ್ನು ರದ್ದುಮಾಡಿದ್ದರಿಂದ ತೊಂದರೆ ಆಗಿದೆ. ಅದರಿಂದ 10 ಸಾವಿರ ಮೂರ್ತೆದಾರರಲ್ಲಿ 3 ಸಾವಿರ ಮಂದಿಗೆ ಕೆಲಸವಿದ್ದು ಉಳಿದ 7 ಸಾವಿರ ಜನರಿಗೆ ಕೆಲಸ ಇಲ್ಲದಾಗಿದೆ. ಆದುದರಿಂದ ಅವರಿಗೆ ಸೌಲಭ್ಯ ಒದಗಿಸಿ ಹಿಂದಿನಂತೆ ತೆರಿಗೆ ಇಲ್ಲದೆ ಬೆಲ್ಲ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಲ್ಲದೆ ನಮ್ಮಲ್ಲಿ 1968 ರವರೆಗೆ ಒಂದೊಂದೇ ಅಂಗಡಿಯನ್ನು ಪ್ರತ್ಯೇಕವಾಗಿ ಹರಾಜು ಮಾಡುತ್ತಿದ್ದರು, ನಂತರ ತಾಲ್ಲೂಕುವಾರಾಗಿ ಅಥವಾ ಡಿಸ್ಟ್ರಿಕ್ಟ್‌ವಾರಾಗಿ ಏಲಂ ಮಾಡಲು ಪ್ರಾರಂಭಿಸಿದರು. ಈ ರೀತಿಯ ಎಕ್ಸೈಜ್ ಏಲಂ 10—12 ಬಂಡವಾಳಗಾರರಿಗೆ ಮಾತ್ರ ಅನುಕೂಲವಾಗಿ ಸುಮಾರು 50 ಸಾವಿರ ಮೂರ್ತೆದಾರರಿಗೆ, 10 ಸಾವಿರ ಸಣ್ಣ ಕಂಟ್ರಾಕ್ಟದಾರರಿಗೆ ತೊಂದರೆಯಾಗಿದೆ. ಸಮಾಜವಾದವನ್ನು ಜಾರಿಗೆ ತರುವುದಾಗಿ ಹೇಳುವಾಗ ಈ ಕಡೆ ಗಮನ ಕೊಡಬೇಕು. ಕೇವಲ 10—12 ಜನರು ಮಾತ್ರ ಬಂಡವಾಳಗಾರರಾಗಲು ಅವಕಾಶ ಕೊಡಬಾರದು. ಜನಸಾಮಾನ್ಯರಿಗೆ ಲಾಭವಾಗುವಂತೆ ಒಂದೊಂದೇ ಅಂಗಡಿ ಏಲಂ ಮಾಡಬೇಕು. 1968 ರಲ್ಲಿ ಏಲಂ ಮಾಡಿದಾಗ ಮತ್ತು 1971 ರಲ್ಲಿ ಡಿಸ್ಟ್ರಿಕ್ಟ್‌ವಾರಾಗಿ ಏಲಂ ಮಾಡಿದಾಗ ಸರಕಾರಕ್ಕೆ ಸುಮಾರು ಏಳೂವರೆ ಲಕ್ಷ ರೂಪಾಯಿ ನಷ್ಟವಾಗಿದೆ. ಅಲ್ಲದೆ ದೊಡ್ಡ ಕಂಟ್ರಾಕ್ಟರುಗಳು ಅಲ್ಲಿಯ ಅಧಿಕಾರಿಗಳನ್ನು ತಮ್ಮ ಕೈಲಿ ಹಿಡಿದುಕೊಂಡು 68 ರಲ್ಲಿ 31 ಸಾವಿರ ತೆಂಗಿನಮರಗಳಿಗೆ ತೆರಿಗೆ ಕೊಟ್ಟು ಕಳೆದ ವರ್ಷ 13 ಸಾವಿರಕ್ಕೆ ಕೊಟ್ಟರು, ಅರ್ಧ ತೆರಿಗೆ ಕೊಟ್ಟಿಲ್ಲ. ಅಧಿಕಾರಿಗಳನ್ನು ಕೈಲಿಟ್ಟುಕೊಂಡು ಹೀಗೆ ಮಾಡುತ್ತಿದ್ದಾರೆ. ಇದರಿಂದ ಸರಕಾರ 2 ಲಕ್ಷದ 87 ಸಾವಿರ ರೂಪಾಯಿ ಕಳೆದುಕೊಂಡಿದೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎ. ವಿ. ಮುನಿಸ್ವಾಮಿ (ಮಾಲೂರು).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಅಭಿನಂದನೆ ಸಲ್ಲಿಸುವ ನಿರ್ಣಯದ ಮೇಲೆ ಮಾತನಾಡುತ್ತಾ, ನಾನು ಕೆಲವು ಅಂಶಗಳನ್ನು ಸಭೆಯ ಮುಂದಿಡಬೇಕೆಂದು ಬಯಸುತ್ತೇನೆ. ನಾನು ಈ ಸಭೆಗೆ ಹೊಸದಾಗಿ ಬಂದಿರುವುದರಿಂದ ಏನಾದರೂ ಅನ್‌ಪಾರ್ಲಿಮೆಂಟರಿಯಾಗಿ ಮಾತನಾಡಿದರೆ ನನ್ನನ್ನು ಕ್ಷಮಿಸುವರೆಂದು ಭಾವಿಸಿ ಕೆಲವು ವಿಷಯಗಳನ್ನು ಹೇಳುತ್ತೇನೆ. ನಮ್ಮ ಸರಕಾರದ ಪಕ್ಷದವರು ಸಮಾಜವಾದವನ್ನು ಅನುಷ್ಠಾನಕ್ಕೆ ತರುವುದಾಗಿ ಬೇಕಾದಷ್ಟು ಭಾಷಣಗಳನ್ನು ಮಾಡಿ ಚುನಾವಣೆಯಲ್ಲಿ ಜಯಶೀಲರಾಗಿದ್ದಾರೆಂದು ಕೆಲವರು ಹೇಳಿದ್ದಾರೆ. ನಿಜವಾಗಿಯೂ ನಾವು ಸಮಾಜವಾದವನ್ನು ಜಾರಿಗೆ ತರಲೇಬೇಕು. ತರುವುದಕ್ಕೆ ಕೆಲವು ಅಡ್ಡಿಆತಂಕಗಳಿರಬಹುದು. ಇದಕ್ಕೆ ಸರಕಾರಕ್ಕೆ ಸಂಪೂರ್ಣ ಬೆಂಬಲ ಕೊಡುತ್ತಾ ಭೂಸುಧಾರಣೆಯನ್ನು ಆದಷ್ಟು ಬೇಗ ಜಾರಿಗೆ ತರಬೇಕು, ಅದಕ್ಕೆ ಧೈರ್ಯ ಮಾಡಬೇಕು, ಸಮಾಜವಾದ ಸ್ಥಾಪಿಸಬೇಕು, ನಾವು ಆಶ್ವಾಸನೆ ಕೊಟ್ಟಿರುವುದನ್ನು ಕಾರ್ಯತಃ ಮಾಡಿ ತೋರಿಸಬೇಕು ಎಂದು ಹೇಳುತ್ತೇನೆ. ಒಬ್ಬ ಸದಸ್ಯರು ಹೇಳಿದಂತೆ ಮುಂದಿನ ಸರಕಾರಕ್ಕೆ ಅದನ್ನು ಬಿಡದೆ ಅಥವಾ ಅವರು ಮತ್ತೆ ಹಾಗೆ ಹೇಳುವುದಕ್ಕೆ ಅವಕಾಶ ಕೊಡದೆ ಈಗಲೇ ಜಾರಿಗೆ ತರಬೇಕು ಎಂದು ಪ್ರಾರ್ಥಿಸುತ್ತೇನೆ ಮತ್ತು ಅದಕ್ಕೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ.

ಇನ್ನೊಂದು ವಿಷಯ ನಾನು ಇಂಟಿಗ್ರೇಟೆಡ್ ಪ್ರದೇಶದಿಂದ ಬಂದಿದ್ದೇನೆ. ಮೊದಲು ನಮ್ಮ ಪ್ರದೇಶ ಮದ್ರಾಸಿನ ಸೇಲಂ ಜಿಲ್ಲೆಯಲ್ಲಿತ್ತು, ಅಲ್ಲಿ ಸೇಂದಿ ಕುಡಿಯಲು ಅವಕಾಶವಿಲ್ಲ. ಸೇಂದಿಯನ್ನು ಹರಿಜನರು ಮಾತ್ರ ಕುಡಿಯುವರೆಂದು ಹೇಳುತ್ತಿದ್ದಾರೆ. ಹಿಂದೆ ಹಾಗಿದ್ದಿರಬಹುದು. ಈಗ ಸೇಂದಿ ಕುಡಿಯುವುದು ಒಂದು ಫ್ಯಾಷನ್ ಆಗಿದೆ. ಪ್ರತಿಯೊಬ್ಬರೂ ಕುಡಿಯುವರು. ಯಾರು ಪಾನಮಾಡುವುದಿಲ್ಲ ಅವರಿಗೆ ಸಮಾಜದಲ್ಲಿ ಸ್ಥಾನವಿಲ್ಲ. ಇದಲ್ಲದೆ ಪಾನನಿರೋಧ ಜಾರಿಗೆ

(ಶ್ರೀ ಎ. ವಿ. ಮುನಿಸ್ವಾಮಿ)

ಬಂದ ಮೇಲೆ ಚಟವಿರುವವರು ಕಳ್ಳಬಟ್ಟಿ ತಯಾರಿಸಿ ಕುಡಿಯಲು ಪ್ರಾರಂಭಿಸಿದರು. ಅದಕ್ಕೆ ಬೇಲದ ತೊಗಟೆ ಬೇಕು. ಹೀಗಾಗಿ ಬೇಲದ ಗಿಡಗಳು ನಿರ್ಮೂಲವಾಗಿವೆ. ಇದರಿಂದ ಬೇಕಾದ ಮರಮುಟ್ಟು ಸಿಕ್ಕುವುದಿಲ್ಲ. ಈಗ ಸಾಮಾನ್ಯವಾಗಿ ಪ್ರತಿಯೊಬ್ಬರೂ ಕುಡಿಯುವುದರಿಂದ ಒಂದಕ್ಕೆ ನಾಲ್ಕರಷ್ಟು ಹಣ ಬರುತ್ತದೆ, ಅಲ್ಲದೆ ಆಹಾರದಲ್ಲಿ ಸ್ವಾವಲಂಬನೆ ಕೂಡ ಹೆಂಡ ಕುಡಿಯು ವುದರಿಂದ ಆಗಿದೆ.

ನಮ್ಮ ಮಿತ್ರರು ಕನ್ನಡ ದೇಶಭಾಷೆಯಾಗಬೇಕು, ವ್ಯವಹಾರ ಕನ್ನಡದಲ್ಲೇ ನಡೆಯಬೇಕು ಎಂದು ಹೇಳಿದ್ದಾರೆ. ಅದಕ್ಕೆ ತೊಡಕೇನಿದೆ ಎಂಬುದನ್ನು ಹೇಳುತ್ತೇನೆ. ಪೂರ್ವದ ಕಡೆಯಿಂದ ತೆಲುಗು ಮಾತನಾಡುವವರು ಬಂದು ಸೇರಿದ್ದಾರೆ, ಉತ್ತರದ ಕಡೆಯಿಂದ ಉರ್ದು ಮಾತನಾಡು ವವರು ಬಂದಿದ್ದಾರೆ, ದಕ್ಷಿಣದಿಂದ ತಮಿಳರು ಬಂದಿರುವರು, ಮಹಾರಾಷ್ಟ್ರದ ಕಡೆಯಿಂದ ಮರಾಠಿ ಮಾತನಾಡುವವರು ಬಂದಿದ್ದಾರೆ. ಆದುದರಿಂದ ಮೈಸೂರಿನಲ್ಲಿ ನಾನಾ ಭಾಷೆಗಳನ್ನಾಡುವವರು ಸೇರಿದ್ದಾರೆ. ಹೀಗೆ ಹಲವಾರು ಭಾಷೆಗಳವರು ಬಂದು ಕೆಲವು ವರ್ಷಗಳಾಗಿವೆ. ಪೂರ್ಣವಾಗಿ ಕನ್ನಡಿಗರೇ ಇಲ್ಲಿಲ್ಲ. ಹೀಗಾಗಿ ಇಲ್ಲಿ ಇಂಗ್ಲೀಷು, ಕನ್ನಡ, ತೆಲುಗು, ಉರ್ದು, ತಮಿಳು, ಮರಾಠಿ ಕಲತವರೆಲ್ಲಾ ಇದ್ದಾರೆ. ಈಗ ಕನ್ನಡವನ್ನೇ ಜಾರಿಗೆ ತಂದರೆ ಹೊರಗಿನಿಂದ ಬಂದಿರುವವರಿಗೆ ತೊಂದರೆಯಾಗುವುದು. ಆದುದರಿಂದ ಇನ್ನೂ ಕೆಲವು ಕಾಲ ಅಂದರೆ ಎರಡು ದಶಕಗಳವರೆಗೆ ಕನ್ನಡ ಆಡಳಿತ ಭಾಷೆ ಮಾಡುವುದರಿಂದ ಹೊರಗಿನಿಂದ ಬಂದಿರುವವರಿಗೆ ತೊಂದರೆಯಾಗುವುದರಿಂದ ಅದಕ್ಕೆ ಅವಕಾಶ ಕೊಡಬಾರದೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

3-30 P.M.

ನಾನು ಬಯಲು ಸೀಮೆಯಾದ ಕೋಲಾರ ಜಿಲ್ಲೆಯಿಂದ ಬರುವವನು. ಅಲ್ಲಿ ಯಾವ ಪ್ರಾಜೆಕ್ಟ್ ಗಳೂ ಇಲ್ಲ. ಅದು ಬಹಳ ಎತ್ತರದಲ್ಲಿರುವ ಪ್ರದೇಶ. ನೀರಿನ ಸೌಲಭ್ಯ ಕಡಮೆ. ಬಾವಿಯನ್ನು ತೋಡಿ ಪಂಪುಗಳನ್ನು ಉಪಯೋಗಿಸಿ ನೀರನ್ನು ಎತ್ತಿ ವ್ಯವಸಾಯ ಮಾಡಬೇಕಾಗಿದೆ. ರೂರಲ್ ಎಲೆಕ್ಟ್ರಿಫಿಕೇಷನ್‌ನಲ್ಲಿ ಒಂದು ಎಚ್.ಪಿ.ಗೆ ಎರಡೂವರೆ ಸಾವಿರ ರೂಪಾಯಿ ಖರ್ಚು ಮಾಡುತ್ತಿದ್ದರು. ಅದನ್ನು ಒಂದು ಸಾವಿರಕ್ಕೆ ಇಳಿಸಿದ್ದಾರೆ. ಪ್ರತಿಯೊಂದು ಮೆಟೀರಿಯಲ್ ಬೆಲೆ ಒಂದಕ್ಕೆ ನಾಲ್ಕು ಪಟ್ಟು ಹೆಚ್ಚಾಗಿರುವಾಗ ಎರಡೂವರೆ ಸಾವಿರ ರೂಪಾಯಿ ಇದ್ದುದನ್ನು ಒಂದು ಸಾವಿರ ರೂಪಾಯಿ ಗಳಿಗೆ ಇಳಿಸಿರುವುದರಿಂದ ಸಾಮಾನ್ಯ ರೈತರು ಅವರ ಬಾವಿಗಳಿಗೆ ಪಂಪ್‌ಸೆಟ್ ಹಾಕಿಸಿಕೊಳ್ಳು ವುದಕ್ಕೆ ಬಹಳ ಕಷ್ಟವಾಗಿದೆ. ಒಂದೇ ಸಲ ನಾಲ್ಕೈದು ಬಾವಿಗಳಿಗೆ ಕರೆಂಟ್ ಕೇಳಿದರೂ ಎಸ್ಟಿ ಮೇಟ್ ಮಾಡಿ ನಾಟ್ ಫೀಸಿಬಲ್ ಎಂದು ವಾಪಸು ಮಾಡುತ್ತಾರೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಪುನರಾಲೋಚಿಸಿ ಕೋಲಾರ ಜಿಲ್ಲೆಯ ಮಟ್ಟಿಗಾದರೂ ಈ ಪದ್ಧತಿಯನ್ನು ಅನ್ವಯಿಸದಂತೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ಬಾವಿಗಳ ಮೇಲೆ ನಂಬಿಕೊಂಡು ನೀರಾವರಿ ವ್ಯವಸಾಯವನ್ನು ಮಾಡ ಬೇಕಾಗಿದೆ. ವಾಟರ್ ಟೇಬಲ್ ಕೆಳಮಟ್ಟದಲ್ಲಿದೆ. ಹಾಗಿರುವುದರಿಂದ ನಾವು ಬಂಡೆ ಗಳನ್ನು ಬ್ಲಾಸ್ಟ್ ಮಾಡಬೇಕಾಗಿದೆ, ಹೋದ ವರ್ಷ ಬಂಡೆ ಬ್ಲಾಸ್ಟ್ ಮಾಡುವುದಕ್ಕೆ ರಿಗ್ಸ್‌ಗೆ ಒಂದು ಗಂಟೆಗೆ 55 ರೂಪಾಯಿ ಇತ್ತು. ಈ ವರ್ಷ 110 ರೂಪಾಯಿಗಳಿಗೆ ಏರಿಸಿದ್ದಾರೆ. ಅದರ ಜೊತೆಗೆ ಜಿಲಟಿನ್ ಬೆಲೆ ಕೂಡ ಜಾಸ್ತಿಯಾಗಿದೆ. ಕೇಪುಗಳು ಪೇಟೆಯಲ್ಲಿ ಒಂದು ರೂಪಾಯಿಗೆ ನಾಲ್ಕು ಸಿಕ್ಕುತ್ತವೆ. ಅದಕ್ಕೆ ನಮ್ಮ ಇಲಾಖೆಯಲ್ಲಿ ಎರಡು ರೂಪಾಯಿಗಳಿಗೆ ಏರಿಸಿದ್ದಾರೆ. ಸೆಂಟ್ ಪರ್ಸೆಂಟ್ ಹೆಚ್ಚು ಮಾಡಿದ್ದಾರೆ. ಹಿಂದೆ ರಿಯಾಯಿತಿ ದರದಲ್ಲಿದ್ದಾಗ ಬುದ್ಧಿ ಜೀವಿಗಳು, ಸರ್ಕಾರಿ ಅಧಿಕಾರಿಗಳು, ಮಂತ್ರಿವರ್ಯರು ಅದರ ಉಪಯೋಗವನ್ನು ಪಡೆದುಕೊಂಡು, ರೈತರ ಸರದಿ ಬಂದಾಗ ಒಂದಕ್ಕೆ ಎರಡರಷ್ಟು ಏರಿಸಿದ್ದಾರೆ ಎನ್ನುವ ಭಾವನೆ ಉಂಟಾಗಿದೆ. ಇಷ್ಟು ದಿವಸ ಇದ್ದ ಹಾಗೆ ರಿಯಾಯಿತಿಯನ್ನು ಮುಂದುವರಿಸಿಕೊಂಡು ರೈತರಿಗೆ ಒಳ್ಳೆಯದಾಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಕಡೆಯದಾಗಿ ಕೈಗಾರಿಕೆಗಳ ವಿಚಾರದಲ್ಲಿ ಒಂದು ಮಾತು. ನಮ್ಮ ಜಿಲ್ಲೆಯಲ್ಲಿ ಯಾವ ಕೈಗಾ ರಿಕೆಯೂ ಇಲ್ಲ. ಬಿ.ಇ.ಎಂ.ಎಲ್. ಒಂದು ಮಾತ್ರ ಇದೆ. ಕೋಲಾರದ ಚಿನ್ನದ ಗಣಿಗಳಿಂದ ರಾಯಲ್ಟಿ ಬರುತ್ತಿದ್ದರೂ ಕೋಲಾರ ಜಿಲ್ಲೆಗೆ ಖರ್ಚು ಮಾಡುತ್ತಿರುವುದು ಬಹಳ ಕಡಮೆ. ಆದು ದರಿಂದ ಕೈಗಾರಿಕೆಗಳನ್ನು ಆದಷ್ಟೂ ನಮ್ಮ ಜಿಲ್ಲೆಯಲ್ಲಿ ಹಾಕಿಕೊಂಡರೆ ಅದರಿಂದ ದೇಶಕ್ಕೆ ಒಳ್ಳೆಯ

ದಾಗುತ್ತದೆ. ಬೆಂಗಳೂರು ನಗರದಲ್ಲಿ ಕೈಗಾರಿಕೆಗಳೆಲ್ಲದರ ಕೇಂದ್ರೀಕರಣವಾಗಿರುವುದರಿಂದ ಜನಸಂಖ್ಯೆ ಹೆಚ್ಚಾಗಿ ಮಾನ್ಯ ಸದಸ್ಯರು ಮೊನ್ನೆ ದಿವಸ ಹೇಳಿದಂತೆ ನೀರಿನ ಅಭಾವ ಬಂದಿದೆ. 20 ವರ್ಷಗಳ ಕೆಳಗೆ ಬಾಣಾವರ ಕೆರೆಯ ನೀರು ಸಾಕಾಗುತ್ತಿತ್ತು. ಅನಂತರ ತಿಪ್ಪಗೊಂಡನಹಳ್ಳಿ ನೀರು ಬಂತು. ಈಗ ಅದೂ ಸಾಕಾಗದೆ ಕಾವೇರಿ ನೀರನ್ನು ತರುತ್ತಿದ್ದಾರೆ. ಇದೇ ರೀತಿಯಲ್ಲಿ ಬೆಂಗಳೂರಿನಲ್ಲಿ ಕೈಗಾರಿಕೆಗಳನ್ನು ಹೆಚ್ಚು ಮಾಡುತ್ತ ಹೋದರೆ ಗಂಗಾ ನದಿಯಿಂದ ನೀರನ್ನು ತರಬೇಕಾಗಬಹುದು. ಅದಕ್ಕೆ ವಿಶ್ವಬ್ಯಾಂಕಿನಿಂದ ಹಣ ದೊರೆಯದೆ ಹೋದರೆ ಏನೇನು ಮಾಡ ಬೇಕಾಗುತ್ತದೆಯೋ ಗೊತ್ತಿಲ್ಲ. ಕೈಗಾರಿಕೆಗಳನ್ನು ಆದಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಮಾಡು ವುದರಿಂದ ಈ ಸಮಸ್ಯೆಯನ್ನು ಬಗೆಹರಿಸಬಹುದು ಎಂದು ಹೇಳುತ್ತೇನೆ.

ಭೂ ಸುಧಾರಣೆ ವಿಚಾರವಾಗಿ ನಮ್ಮ ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥಿಸುತ್ತೇನೆ. ಅದನ್ನು ಜಾರಿಗೆ ತರುವುದರಲ್ಲಿ ನಿಧಾನ ಮಾಡುವುದರಿಂದ ಯಾವ ರೀತಿಯ ಸುಧಾರಣೆಯೂ ಆಗು ವುದಿಲ್ಲ. ಇನಾಂಗಳನ್ನು ರದ್ದು ಮಾಡಿ 10 ವರ್ಷ ಕಾಲವಾದರೂ ಇನ್ನೂ ಅದರ ಕೆಲಸ ಮುಗಿದಿಲ್ಲ. ಇದರಿಂದ ಒಂದು ಕಡೆ ರೈತರಿಗೆ ತೊಂದರೆಯಾಯಿತು, ಇನ್ನೊಂದು ಕಡೆ ಭೂ ಮಾಲೀಕರಿಗೂ ತೊಂದರೆ ಯಾಯಿತು. ಆದುದರಿಂದ ಮಾಡುವುದನ್ನು ಬೇಗ ಕಾರ್ಯರೂಪದಲ್ಲಿ ತರಬೇಕು ಎಂದು ಹೇಳಿ, ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ವೀರಪ್ಪ ಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣ ವನ್ನು ನೋಡಿ ನನಗೆ ತುಂಬ ಸಂತೋಷವಾಗಿದೆ. ಕಾರಣ ಸರ್ಕಾರವೇ ಇಲ್ಲದೆ ಇರತಕ್ಕ ಸಂದರ್ಭದಲ್ಲಿ ಕೆಲವೇ ದಿನಗಳ ಹಿಂದೆ ಬಂದಿರತಕ್ಕ ರಾಜ್ಯಪಾಲರು ಇಷ್ಟೊಂದು ವಿಷಯಗಳನ್ನು ಕ್ರೋಢೀಕರಿಸಿ ನಮ್ಮ ಮುಂದೆ ಇಟ್ಟಿರುವುದು ಬಹಳ ಸಂತೋಷದ ವಿಷಯ ಹಾಗೂ ಆ ಒಂದು ಅವಕಾಶದಲ್ಲಿ ಬಹುಶಃ ಟ್ರಾನ್ಸ್‌ಪೋರ್ಟಿನ ವಿಷಯ ಅದರಲ್ಲಿ ಬಂದಿಲ್ಲವೆಂದು ಕಾಣುತ್ತದೆ. ಮೊದಲನೆಯದಾಗಿ ಈಗ ಬಂದಿರತಕ್ಕ ಮಂತ್ರಿಮಂಡಲದವರಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮೊದಲು ಯೋಚನೆ ಮಾಡಬೇಕು. ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚು ಮಾಡಲು ಆಂಟಿ ಕರಪ್ಷನ್ ಇಲಾಖೆ ಎಂದು ಮಾಡಿದ್ದಾರೆ. ಇದಕ್ಕೆ ವಿಜಿಲೆನ್ಸ್ ಕಮಿಷನ್ ಎಂದು ಕರೆಯುತ್ತಾರೆ. ಅದರಿಗೆ ಹೋಗಿರತಕ್ಕ ರಿಕಾರ್ಡುಗಳು ಮೂರು ವರ್ಷವಾದರೂ ಕೂಡ ಹೊರಗೆ ಬಾರದೆ ಹೋದರೆ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸುವವರು ಯಾರು ಎಂದು ವಿಮರ್ಶೆ ಮಾಡಬೇಕಾಗುತ್ತದೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಮೂರು ವರ್ಷಗಳ ಹಿಂದೆ ಕೆಲವು ಕೆರೆಗಳ ಕಾಮಗಾರಿಯನ್ನು ಕೈಗೊಂಡಾಗ ಅದರಲ್ಲಿ ಜೂನಿಯರ್ ಇಂಜಿನಿಯರುಗಳ ಕೈವಾಡವಿದೆ ಎನ್ನುವ ತಕರಾರು ಇದ್ದು ಆ ವಿಷಯ ಸರ್ಕಾರಕ್ಕೆ ಬಂದಾಗ ಸರ್ಕಾರದವರು ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದಾರೆ. ಮೂರು ವರ್ಷವಾದರೂ ಅದರ ರಿಪೋರ್ಟ್ ಬಂದಿಲ್ಲ. ಮಲೆನಾಡಿನಲ್ಲಿ ವಿಪರೀತ ಮಳೆಯಾಗು ವುದರಿಂದ ಈ ಹೊತ್ತು ಆ ಕಾಮಗಾರಿಗಳ ಬಿಲ್ಲನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗು ತ್ತದೆಯೇ, ಆಗಿರುವಂಥ ತಪ್ಪನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನೋಡಬೇಕು. ಆಗಿರುವ ತಪ್ಪುಗಳನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗದೆ ಇರಲಿ ಎಂದು ನಿಧಾನ ಮಾಡಿದ್ದಾರೋ ಏನೋ ಎಂದು ನನಗನ್ನಿಸುತ್ತದೆ. ಮಂತ್ರಿಗಳು ಇನ್ನು ಮುಂದೆ ಪ್ರವಾಸ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಾರೆ. ಅವರು ದಯಮಾಡಿ ಒಂದು ದೃಷ್ಟಿಯನ್ನು ಮಾತ್ರ ಇಟ್ಟುಕೊಂಡು, ಪ್ರತಿ ಜಿಲ್ಲೆಯಲ್ಲಿಯೂ ಕೂಡ ಒಂದು ವಾರವಾದರೂ ಚಿಂತೆ ಇಲ್ಲ, ನಿಧಾನವಾಗಿ ಪ್ರವಾಸ ಮಾಡುವ ಕಾರ್ಯಕ್ರಮವನ್ನು ಹಾಕಿಕೊಂಡು ಅವರವರ ಇಲಾಖೆಗಳ ಆಫೀಸುಗಳಿಗೆ ಭೇಟಿ ಮಾಡಿ, ಕಾಗದ ಪತ್ರಗಳನ್ನು ಹೊರ ತೆಗೆದು ನೋಡತಕ್ಕ ಅಭ್ಯಾಸವನ್ನು ಇಟ್ಟುಕೊಳ್ಳದೇ ಇದ್ದಲ್ಲಿ ಈ ಆಡಳಿತ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅನೇಕ ಜನ ಶಾಸಕರು ಬಂದು ಬಿಲ್ಡಿಂಗ್ ಓಪನ್ ಮಾಡಬೇಕು' ಆಸ್ಪತ್ರೆ ಓಪನ್ ಮಾಡಬೇಕು ಬನ್ನಿ ಎಂದು ಕರೆಯುತ್ತಾರೆ. ಇದಕ್ಕೆ ಮಂತ್ರಿಗಳು ಒಪ್ಪಿಕೊಂಡು ಹೋಗತಕ್ಕ ಪದ್ಧತಿ ಮೊದಲಿನಿಂದಲೂ ಜಾರಿಗೆ ಬಂದಿದೆ. ಹೊಸ ಸರ್ಕಾರದಲ್ಲಿ ಇದು ಸಂಪೂರ್ಣವಾಗಿ ಹೋಗಬೇಕು ಮತ್ತು ಮಂತ್ರಿ ಗಳು ಪ್ರವಾಸಕ್ಕಾಗಿ ಹೋಗುವ ಸಂದರ್ಭದಲ್ಲಿ ಮಾತ್ರ ಏನಾದರೂ ಕಾರ್ಯಕ್ರಮವಿದ್ದರೆ ಇಟ್ಟು ಕೊಳ್ಳಬೇಕೇ ಹೊರತು ಬರೀ ಕಾರ್ಯಕ್ರಮಗಳಿಗಾಗಿ ಕರೆಯಬೇಡಿ ಎಂದು ಹೇಳುವ ನೀತಿಯನ್ನು ಮೊದಲೇ ಹಾಕಿಕೊಳ್ಳಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರಿ ಕಾರ್ಯಗಳ ಜೊತೆಗೆ ಬೇರೆ ಕಾರ್ಯಕ್ರಮಕ್ಕೆ ಹೋದಾಗ ಯಾವುದಕ್ಕೆ ಎಷ್ಟು ಕಾಲ ಕೊಡಬೇಕು ಎಂದು ನಿರ್ಧಾರ ಮಾಡಿ ಕೊಳ್ಳುವುದು ಒಳ್ಳೆಯದು. ಬರೀ ಕಾರ್ಯಕ್ರಮಗಳಲ್ಲಿ ಓಡಾಡಿ, ಎರಡು ಮೂರು ಗಂಟೆ ತಡವಾಗಿ ಹೋಗಿ, ಯಾವುದರ ಪರಿಶೀಲನೆಗೂ ಅವಕಾಶವಿಲ್ಲದ ರೀತಿಯಲ್ಲಿ ಟೂರ್ ಮಾಡುವುದನ್ನು

(ಶ್ರೀ ಕೆ. ಎನ್. ವೀರಪ್ಪಗೌಡ)

ರದ್ದು ಮಾಡಬೇಕು. ಪ್ರವಾಸ ಮಾಡುವಾಗ ಒಂದೆರಡು ಇತರ ಕಾರ್ಯಕ್ರಮಗಳನ್ನು ಬೇಕಾದರೆ ಇಟ್ಟುಕೊಂಡು ಪೂರ್ಣ ಕಾಲ ಆಫೀಸುಗಳಿಗೆ ಹೋಗಿ ರಿಕಾರ್ಡುಗಳನ್ನು ತೆಗೆಸಿ ನೋಡುವ ಅಭ್ಯಾಸ ವನ್ನು ಇಟ್ಟುಕೊಳ್ಳಬೇಕು. ಈ ಸಂದರ್ಭದಲ್ಲಿ ನನ್ನ ಒಂದೆರಡು ಅನುಭವಗಳನ್ನು ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ.

30-3-1972 ರಂದು ನಾನು ಆಹಾರ ಇಲಾಖೆಯ ಡೈರೆಕ್ಟರ ಆಫೀಸಿಗೆ ಹೋಗಿದ್ದೆ ಹಾಗೆಯೇ ಎಲ್ಲ ಕಡೆಯೂ ನೋಡಿಕೊಂಡು ಬಂದೆ. ಒಂದು ಕೊಠಡಿಯಲ್ಲಿ, ಸುಮಾರು ನಾಲ್ಕೂಕಾಲು ಗಂಟೆಯಲ್ಲಿ, 12 ಕುರ್ಚಿಗಳಲ್ಲಿ ಎರಡು ಕುರ್ಚಿಯಲ್ಲಿ ಮಾತ್ರ ಜನರಿದ್ದರು. ಉಳಿದ 10 ಕುರ್ಚಿ ಗಳಲ್ಲಿ ಜನರಿರಲಿಲ್ಲ. ಈ ರೀತಿಯ ಆಡಳಿತ ಬೆಂಗಳೂರಿನಲ್ಲಿ ನಡೆದರೆ ಇನ್ನು ಬಾಕಿ ಕಡೆ ಕಂಟ್ರೋಲ್ ಮಾಡುವುದು ಹೇಗೆ ಸಾಧ್ಯ ?

11-4-1972 ರಲ್ಲಿ ರಿಜಿಸ್ಟ್ರಾರ್ ಅವರ ಆಫೀಸಿಗೆ ಯಾರನ್ನೋ ಕಾಣಲು, ಹೋದೆ. ಹಾಗೆಯೇ ನೋಡಿದಾಗ ಒಂದು ಸಾಲಿನಲ್ಲಿ 9 ಕುರ್ಚಿಗಳಿದ್ದರೆ, ಕೇವಲ ಒಬ್ಬರು ಮಾತ್ರ ಅಲ್ಲಿ ಇದ್ದರು. ಒಬ್ಬರು ಏಕೆ ಇರುತ್ತಾರೆಂದರೆ, ಕಾಫಿಗೆ ಹೋಗಿದ್ದಾರೆ, ಆಫೀಸರ ಹತ್ತಿರ ಫೈಲು ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳುವುದಕ್ಕೆ ಮಾತ್ರ ಒಬ್ಬರು ಇರುತ್ತಾರೆ. ಈ ರೀತಿಯಾಗಿ ಬೆಂಗಳೂರು ನಗರದಲ್ಲಿಯೇ ಆಡಳಿತ ನಡೆಯುತ್ತದೆ. ಇದನ್ನು ಎಷ್ಟು ಕಾಲ ಸಹಿಸಿಕೊಳ್ಳುವುದಕ್ಕೆ ಸಾಧ್ಯ ಎನ್ನುವುದನ್ನು ಜನರೂ ಕೂಡ ಯೋಚನೆ ಮಾಡುತ್ತಿದ್ದಾರೆ.

ಮಾನ್ಯ ಸ್ನೇಹಿತರು, ಕೆಲವರು ಬಹಳ ಜನ ಪದವೀಧರರು ಹೊರಗೆ ಬರುತ್ತಿದ್ದಾರೆ, ಅವರಿಗೆ ಉದ್ಯೋಗಗಳನ್ನು ಒದಗಿಸುವ ವ್ಯವಸ್ಥೆ ಸರ್ಕಾರಕ್ಕೆ ಸೇರಿದ್ದು ಎಂದು ಭಾವಿಸಿದ್ದಾರೆ. ಅದು ಸರಿಯಲ್ಲ ಸ್ವಂತ ದುಡಿಮೆಗೆ ಯೋಚಿಸಬೇಕು. ನಾವು ವೋಟು ತೆಗೆದು ಕೊಂಡು ಬಂದಿರುವುದು ಗ್ರಾಮಾಂತರ ಜನಗಳಿಂದ. ಅವರಲ್ಲಿ ನೂರಕ್ಕೆ 80 ರಷ್ಟು ಜನ ಊಟಕ್ಕೆ ಇಲ್ಲದೆ ಇರುವವರು. ಅವರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು. ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಉದ್ಯೋಗ ಎಲ್ಲವನ್ನೂ ಒದಗಿಸಿಕೊಡಬೇಕು.

ಇಂದು ದಿನೇ ದಿನೇ ಹೆಚ್ಚುತ್ತಿರುವ ನಿರುದ್ಯೋಗದ ಸಮಸ್ಯೆ ಬಗ್ಗೆ ಪರಿಹಾರ ಕೊಡಬೇಕೆಂದು ಹೇಳುತ್ತಾರೆ ಅದರಂತೆ ನೀವು ರಾಜ್ಯದಲ್ಲಿ ಇಂದು ಎಂಪ್ಲಾಯಿಮೆಂಟನ್ನು ಜಾಸ್ತಿ ಮಾಡುತ್ತಿದ್ದೀರಿ. ಇದನ್ನು ಮಾಡುವುದರಿಂದ ಏನಾಗಿದೆ ಎಂದರೆ ಅಧಿಕಾರಿಗಳಿಗೆ ಮಾಡಲು ಕೆಲಸವೇ ಇಲ್ಲ. ಈಗ ತಾಲ್ಲೂಕುಗಳಲ್ಲಿ ಡೆವಲಪ್‌ಮೆಂಟು ಆಫೀಸು ಎಂದು ಮಾಡಿದ್ದಾರೆ. ಇವರಿಗೆ ಬರೀ ಸಂಬಳ ಕೊಡುತ್ತಾರೆಯೇ ವಿನಾ ಇದರಿಂದ ಯಾವ ಕೆಲಸವೂ ಆಗುವುದಿಲ್ಲ. ನಮ್ಮಲ್ಲಿ ಕೂಡ ಇಂತಹ ಒಂದು ಬ್ಲಾಕ್ ಡೆವಲಪ್‌ಮೆಂಟು ಆಫೀಸು ಮಾಡಬೇಕೆಂದು ಇದಕ್ಕೆ ಕಟ್ಟಡವಿಲ್ಲದೆ ಇದನ್ನು ಬಾಡಿಗೆ ಕಟ್ಟಡದಲ್ಲಿ ಇಡಲಾಗಿದೆ ಇದರ ಫಲವಾಗಿ ಸರಕಾರ ಒಂದೊಂದು ತಾಲ್ಲೂಕಿನಲ್ಲೂ ಎರಡು ಬೋರ್ಡು ಗಳಾಗಿ ಅದಕ್ಕೆ ಕೆಲಸವೇ ಇಲ್ಲ, ನಾವು ಬರೀ ಸಂಬಳವೇ ಕೊಡುತ್ತಿರುವುದು ಅಮೇಲೆ ಎಸ್.ಡಿ.ಓ. ಆಫೀಸು ಎಂದು ಇದೆ. ಇದು ಬರೀ ಪೋಸ್ಟು ಆಫೀಸು ಆಗಿದೆ ಮತ್ತೆ ಡಿವಿಜನಲ್ ಕಮಿಷನರು ಆಫೀಸುಗಳಿವೆ. ಇದೂ ಕೂಡ ಬರೀ ಪೋಸ್ಟು ಆಫೀಸಿನಂತೆ ಇದೆ. ಇದರಿಂದ ರೈತರಿಗೇನಾದರೂ ಅನುಕೂಲವಾಗುತ್ತದೆಯೇ ಎಂದು ನೋಡಿದರೆ ಏನೂ ಆಗುತ್ತಿಲ್ಲ. ಒಂದು ತಿಂಗಳಲ್ಲಿ ಆಗುವ ಕೆಲಸ ಇದರಿಂದ ಇಂದು ಆರು ತಿಂಗಳಾದರೂ ಒಂದು ಕೆಲಸ ಆಗುತ್ತಿಲ್ಲ. ಇದಕ್ಕಾಗಿ ಸರಕಾರ ವ್ಯರ್ಥವಾಗಿ ದುಡ್ಡು ಖರ್ಚು ಮಾಡಿ ಸಂಬಳ ಕೊಡುತ್ತಿದ್ದಾರೆ. ಇಂತಹ ಆಫೀಸುಗಳನ್ನು ಕೂಡಲೇ ವಜಾ ಮಾಡಬೇಕು ಮತ್ತು ಇದು ಬಹು ಅಗತ್ಯ. ನಾನು ಹಿಂದೆ ಇದ್ದ ಆಗಿನ ಸರಕಾರದಲ್ಲೂ ಇದನ್ನು ಹೇಳಿದ್ದೆ. ಇಂತಹ ಆಫೀಸುಗಳನ್ನು ರದ್ದು ಮಾಡುವುದು ಸೂಕ್ತ ಎಂದು ಈಗಲಾದರೂ ಸರಕಾರ ಇದರ ಕಡೆಗೆ ಗಮನ ಕೊಟ್ಟು ಇವುಗಳನ್ನು ರದ್ದು ಮಾಡಬೇಕೆಂದು ಮತ್ತು ಇದರ ಬಗ್ಗೆ ಶೀಘ್ರವಾದ ತೀರ್ಮಾನ ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತಿದ್ದೇನೆ.

ಇನ್ನು ಎಜುಕೇಷನಲ್ ಇನ್‌ಸ್ಟಿಟ್ಯೂಷನ್‌ಗಳ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ಜನತೆಗೆ ವಿದ್ಯಾಭ್ಯಾಸ ದೊರಕಿಸಿ ಕೊಡುವುದು ಸರಕಾರದ ಕರ್ತವ್ಯ. ಕಡ್ಡಾಯ ಶಿಕ್ಷಣ ಎಂದು ಜಾರಿಗೆ ತಂದು ಇಂದು ಎಲ್ಲವನ್ನೂ ರಾಷ್ಟ್ರೀಕರಣ ಮಾಡುವುದು ಸೂಕ್ತ. ಇಂದು ಖಾಸಗೀ ಶಾಲೆಗಳಿಗೆ ಗ್ರಾಂಟುಗಳನ್ನು ಕಟ್ಟಡಗಳಿಗಾಗಿ ಕೇಳುವುದನ್ನು ಬಿಟ್ಟಿದ್ದಾರೆ. ಕಾರಣ ಇದರಿಂದಾಗಿ ಪ್ರತಿಯಾಗಿ ಬಾಡಿಗೆ ಪಡೆಯಬಹುದು ಸರಕಾರದವರು ಸುಮಾರು 48 ಸಾವಿರ ರೂಪಾಯಿಗಳಷ್ಟು ಬಾಡಿಗೆ ಯಾಗಿ ವರ್ಷಕ್ಕೆ ಶೃಂಗೇರಿ ಕಾಲೇಜು ಬಿಲ್ಡಿಂಗಿಗೆ ಕೊಡುತ್ತಿದ್ದಾರೆ ಇದೇ ಲಾಭ. ಹೀಗೆ ಇಂದು

ವಿದ್ಯಾ ಇಲಾಖೆಯಲ್ಲಿ ಅನೇಕ ಅಕ್ರಮಗಳಾಗುತ್ತಿವೆ. ಅದರೆ ಇಂದು ನಮಗೆ ದೊರೆತಿರುವ ವಿದ್ಯಾ ಇಲಾಖೆಯಲ್ಲಿ ಅನೇಕ ಅಕ್ರಮಗಳಾಗುತ್ತಿವೆ. ಆದರೆ ಇಂದು ನಮಗೆ ದೊರೆತಿರುವ ವಿದ್ಯಾ ಮಂತ್ರಿಗಳಾದ ಶ್ರೀ ಎ. ಆರ್. ಬದರೀನಾರಾಯಣ್‌ರವರು ಇದರಲ್ಲಿ ತಿಳಿದವರು ಮತ್ತು ಖಾಸಗೀ ಶಾಲೆಗಳ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಇದರ ಬಗ್ಗೆ ವಿಚಾರ ಮಾಡಿ ಸರಿಯಾದ ಕ್ರಮ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ. ಮತ್ತು ಇಂತಹ ಶಾಲೆಗಳು ಯಾವ ರೀತಿ ಇವೆ ಎನ್ನುವುದನ್ನು ಅವರು ಅರ್ಥಮಾಡಿ ಕೊಂಡಿದ್ದಾರೆ. ಖಾಸಗಿ ವಿದ್ಯಾ ಸಂಸ್ಥೆಗಳನ್ನು ರಾಷ್ಟ್ರೀಕರಣ ಮಾಡಿ ಸರಕಾರವೇ ನಡೆಸಿದರೆ ಇದರಿಂದ ಇನ್ನೂ ಚೆನ್ನಾಗಿ ಅನುಕೂಲ ಆಗುತ್ತದೆ. ಜಾಗ್ರತೆ ಇದರ ಬಗ್ಗೆ ತಕ್ಕ ಕ್ರಮತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಕೊನೆಯದಾಗಿ ಟ್ರಾನ್ಸ್‌ಪೋರ್ಟ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ರೋಡು ಟ್ರಾನ್ಸ್‌ಪೋರ್ಟ್ ವಿಷಯದಲ್ಲಿ ಹಿಂದಿನ ಸಾರಿ ಕೂಡ ನಾನು ಸರಕಾರಕ್ಕೆ ಹೇಳಿದ್ದೆ. ಅದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಇಂದು ಕಾಂಟ್ರಾಕ್ಟ್ ಕ್ಯಾರೇಜು ಎಂದು ಬೋರ್ಡ್ ಹಾಕಿಕೊಂಡು ಪ್ರತಿ ದಿನವೂ ಬೆಂಗಳೂರಿಂದ ಶಿವಮೊಗ್ಗಾ ಮತ್ತು ಇತರ ಅನೇಕ ಕಡೆ ಸರ್ವಿಸು ಬಸ್ಸುಗಳಂತೆ ಹೋಗುತ್ತಿವೆ. ಟ್ರಾನ್ಸ್‌ಪೋರ್ಟ್ ಬಸ್ಸುಗಳು ಹೋಗುವ ದಾರಿಯಲ್ಲೇ ಮನಾಪಲಿ ರೋಡುಗಳಲ್ಲಿ ಇವುಗಳು ಹೋಗುತ್ತಿವೆ. ಸುಮಾರು ರಾತ್ರಿ ವೇಳೆಯಲ್ಲೇ 10-15 ಬಸ್ಸುಗಳು ಕಾಂಟ್ರಾಕ್ಟ್ ಕ್ಯಾರೇಜು ಇಲ್ಲವೇ ಟೂರಿಸ್ಟು ಎಂದು ಬೋರ್ಡ್ ಹಾಕಿ ಕೊಂಡು ಓಡಾಡುತ್ತಿದ್ದು ಈಗ ಹಗಲೂ ಸಹ ಇವು ರೆಗ್ಯುಲರು ಬಸ್ಸುಗಳಂತೆ ಓಡಾಡಲು ಹೇಗೆ ಸಾಧ್ಯ ಎಂದು ವಿಚಾರ ಮಾಡಿದರೆ ಇದರಲ್ಲಿ ಪರ್ಮಿಟ್ಟು ಯಾರ ಹೆಸರಿನಲ್ಲೋ ಇರುತ್ತದೆ. ಓಡಿಸುವವರು ಬೇರೆ ಒಬ್ಬರು ಇರುತ್ತಾರೆ. ಇದಕ್ಕಾಗಿ ಸಿಟಿಯಲ್ಲಿ ಬಸ್ ಸ್ಟಾಂಡುಗಳಲ್ಲಿ ಏಜಂಟರುಗಳು ಬೇಕಾದಷ್ಟು ಜನ ಇರುತ್ತಾರೆ. ದಿನ ವಹಿ ಇಂಥಾ ಊರುಗಳಿಗೆ ಸರ್ವಿಸ್ ಇದೆ ಎಂತ ಬೋರ್ಡ ಸಹ ಸರ್ಕಲ್‌ಗಳಲ್ಲಿ ಹಾಕಿಕೊಂಡಿರುತ್ತಾರೆ ಈ ಬಸ್ಸಿನವರೇ ಜನಕ್ಕೆ ಹೇಳುತ್ತಾರೆ. ಸರಕಾರ ರಾಷ್ಟ್ರೀಕರಣ ಮಾಡಿದೆ, ಆದರೆ ಅವರಿಂದ ಬಸ್ಸುಗಳನ್ನು ನಡೆಸಲು ಆಗುವುದಿಲ್ಲ. ಸರಕಾರ ಇದನ್ನು ಬಿಟ್ಟು ನಮಗೇನೇ ವಹಿಸಿದರೆ ನಾವು ಲಾಭದಾಯಕವಾಗಿ ಕೆಲಸ ಮಾಡಲು ಅನುಕೂಲವಾಗುತ್ತೆ ಎಂದು ಹೇಳುತ್ತಾರೆ. ಆದರೆ ಸರಕಾರ ರಾಷ್ಟ್ರೀಕರಣ ಮಾಡಿದ್ದರೂ ಕಾಂಟ್ರಾಕ್ಟ್ ಕ್ಯಾರೇಜುಗಳು ಹಾಗೂ ಟೂರಿಸ್ಟು ಬಸ್ಸುಗಳ ಓಡಾಟ ದಿನೇ ದಿನೇ ಹೆಚ್ಚಾಗುತ್ತಿದೆ. ಇದನ್ನು ಸರಕಾರ ನಿಲ್ಲಿಸಿ ಸರ್ಕಾರವೇ ನಡೆಸಲು ಬದ್ಧರಾಗಬೇಕು. ಇದರ ಬಗ್ಗೆ ಸರಕಾರ ಆದಷ್ಟು ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು ಮತ್ತು ಇವರಿಗೆ ಕೊಟ್ಟಿರುವ ಪರ್ಮಿಟ್ಟುಗಳನ್ನು ಕ್ಯಾನ್ಸಲ್ ಮಾಡಬೇಕೆಂದು ಸರಕಾರಕ್ಕೆ ಸಲಹೆ ಮಾಡಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† Sri PRABHAKAR TELKAR (Kalgi).—Madam Speaker, while supporting the motion of thanks for the Governor's address, I want to make certain suggestions to the Government so that they can look into them as they are very important from the point of view of public. Regarding the law and order situation in Gulbarga City on the 28th Feb. 1972, I may submit that the Police Administration was not proper there for about three days. During those three days, riots, looting and arson took place without any fear of the police administration. In fact, I myself tried to contact the Deputy Commissioner, the S.P. and also the D.I.G over phones but there was no response for about 2-3 hours. This clearly shows that the police administration was not at all proper. In every nook and corner of the City looting was going without any fear. This happened before the present Government took charge. The victims of the riots have been given certain compensation for the loss they have suffered. In this connection I would like to submit that the compensation paid to the victims is too meagre when compared to the loss sustained by the victims of the riots. I request the Government kindly to give them loan so that they can come up and carry on their normal avocations.

(SRI PRABHAKAR TELKAR)

Coming to the agriculture, I think the Government has given more attention to the problems of small farmers and the marginal farmers. It gives me pleasure to note that the Government has decided to sink 20,000 irrigation wells in the State. The previous Government had decided to give exemption from paying land revenue to the small holders. On this account the loss to Government was to the tune of Rs. 2 crores per annum. In this respect, the Hon. Minister for Finance also gave certain explanation. I would like to submit th. t giving exemption of land revenue to the small holders is not proper. A small holder who is owning about 10 acres of land is proposed to be exempted from the payment of land revenue provided the present Government thinks of implementing the decision of the previous Government. The small holders might pay Rs. 10 as land revenue. He does not mind paying such a small sum. Even if this is exempted, the loss to Government would be Rs. 2 crores per annum. In this connection I would like to submit that the sum of Rs. 2 crores might be usefully utilised if the Government were to sink wells for the benefit of small holders. This would really help the small farmers to a great extent. They will be very much benefited by these wells. Therefore, I sincerely submit that Therefore, I sincerely submit that by exempting the land revenue we are not helping the small holders. Even the small holders of land are not in favour of it, because they have some moral fear that unless they pay something to the Government, they will not be real owners. Therefore, this should not be the policy of the Government. The revenue realised in this regard could be utilised for sinking of wells all over the State. Nearly 8,000 wells could be sunk out of the money realised.

Regarding education I want to submit one or two words. The private institutions which are running some colleges and schools are extracting heavy amount of money from the public. We know that the K.L.E. Society is running a Medical College in Gulbarga. For each seat in the Medical College, the Society collects Rs. 5,000 as capitation fees. How can a poor parent pay so much ? At the time of addmission there are persons who pay Rs. 50,000 per seat. It is a different matter because they can afford to do so. Therefore, I request the Government to look into the matter and see that necessary steps are taken to alleviate the difficulties of the poor parents and also see that the Government will have control over these institutions. There was an enquiry being held by the previous Government. But this enquiry was stopped abruptly. The Government therefore, should see that an enquiry is held in the matter and see that the currupt practices are stopped. With these words I conclude. I thank the Chair for having given me an opportunity to speak.

† ಶ್ರೀ ಬಿ. ಇ. ರಾಮಯ್ಯ (ಶಿರಗುಪ್ಪ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ವಿಧಾನಮಂಡಲದಲ್ಲಿ ಮಾಡಿದ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಬಗ್ಗೆ

ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಮುಖ್ಯವಾಗಿ ಗಡಿಯ ವಿಷಯದಲ್ಲಿ ನಮ್ಮ ಹಿಂದಿನ ಸರ್ಕಾರಗಳು ಸರಿಯಾದ ಪ್ರಾಮುಖ್ಯತೆಯನ್ನು ಕೊಡದೆ ಗಡಿ ಭಾಗದಲ್ಲಿರುವ ಜನತೆಗೆ ಅನ್ಯಾಯ ಮಾಡಿದ್ದಾರೆ. ಮಹಾರಾಷ್ಟ್ರ ಮತ್ತು ಮೈಸೂರು ಗಡಿಯ ವಿಷಯದಲ್ಲಿ ಒಂದು ಸಮಿತಿ ಇದೆ. ಅದೇ ಪ್ರಕಾರ ಮೈಸೂರು ಮತ್ತು ಆಂಧ್ರ ಗಡಿಯ ವಿಷಯದಲ್ಲಿ ಒಂದು ಸಮಿತಿ ನೇಮಕವಾಗಿಲ್ಲ. ಮುಖ್ಯವಾಗಿ ಬಳ್ಳಾರಿ ಜಿಲ್ಲೆ 1953 ರಲ್ಲಿ ಮೈಸೂರು ರಾಜ್ಯಕ್ಕೆ ಸೇರಿತು. ಬಳ್ಳಾರಿ ಜಿಲ್ಲೆಯು ಮೊದಲು 9 ತಾಲ್ಲೂಕ್‌ಗಳನ್ನು ಒಳಗೊಂಡಂತಹ ಒಂದು ಜಿಲ್ಲೆಯಾಗಿತ್ತು. ಆ ಕಾಲಕ್ಕೆ ಕೆ.ಪಿ.ಸಿ.ಸಿ.ಯ ಅಧ್ಯಕ್ಷರಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರುವ ಕಾಲಕ್ಕೆ ಆ ಜಿಲ್ಲೆಯ 9 ತಾಲ್ಲೂಕ್‌ಗಳ ಪೈಕಿ 3 ತಾಲ್ಲೂಕ್‌ಗಳನ್ನು ಆಂಧ್ರಕ್ಕೆ ಬಿಟ್ಟು ಕೊಡಲು ಒಪ್ಪಿದರು. ಈ ಕಾರಣದಿಂದ ರಾಯದುರ್ಗ, ಆಲೂರು, ಮಡಕಶಿರ ತಾಲ್ಲೂಕ್‌ಗಳು ಇನ್ನೂ ಆಂಧ್ರದಲ್ಲಿಯೇ ಉಳಿಯುವಂತಾಯಿತು. ಈ ತಾಲ್ಲೂಕ್‌ಗಳ ಜನರು ಕಳೆದ 18 ವರ್ಷದಿಂದ ಮೈಸೂರು ರಾಜ್ಯಕ್ಕೆ ಸೇರಬೇಕೆಂದು ಸತತವಾಗಿ ಸರ್ಕಾರದ ಮುಂದೆ ತಮ್ಮ ಬೇಡಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಮತ್ತು ಕನ್ನಡ ಸಾಹಿತ್ಯ ಪರಿಷತ್‌ನವರು ಸಹ ಮನವಿ ಮಾಡಿಕೊಂಡಿದ್ದಾರೆ, ಆದರೂ ಸಹ ಆಂಧ್ರ ಮತ್ತು ಮೈಸೂರು ಗಡಿ ವಿಷಯದಲ್ಲಿ ಇವೊತ್ತಿಗೂ ಸರ್ಕಾರ ಸುಮ್ಮನಿದೆ. ಈ ವಿಷಯದಲ್ಲಿ ಯಾವ ವಿಧವಾದಂಥ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಬೇರೆ ರಾಜ್ಯಗಳಲ್ಲಿ ಕನ್ನಡಿಗರು ಎಲ್ಲೆಲ್ಲಿ ಹೆಚ್ಚು ಇದ್ದಾರೆ, ಅವರು ಮೈಸೂರು ರಾಜ್ಯಕ್ಕೆ ಸೇರುತ್ತೇವೆಂದು ಹೇಳಿದರೆ ಸೇರಿಸುವುದಿಲ್ಲವೆಂದು ಹೇಳಿದರೆ ಅದು ತಪ್ಪಾಗುತ್ತದೆ. ಈಗಲಾದರೂ ಸರ್ಕಾರದವರು ಮುಂದೆ ಬಂದು ಈ ವಿಷಯದಲ್ಲಿ ಒಂದು ಗಡಿ ಸಮಿತಿಯನ್ನು ನೇಮಕ ಮಾಡಿ ಆದವಾನಿ, ಆಲೂರು ರಾಯ ದುರ್ಗ, ಮಡಕಶಿರ ಮುಂತಾದ ಕನ್ನಡ ಪ್ರದೇಶಗಳನ್ನು ಮೈಸೂರಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಈ ಪ್ರದೇಶಗಳು ಅನಂತಪುರ ಜಿಲ್ಲೆಗೆ ಸೇರಿಹೋಗಿವೆ. ಇದೇ ರೀತಿ ಮದ್ರಾಸ್ ರಾಜ್ಯದಲ್ಲಿ ಸೇರಿರುವ ಕನ್ನಡ ಪ್ರದೇಶವಾದ ಹೊಸೂರು ತಾಲ್ಲೂಕನ್ನು ಸಹ ಮೈಸೂರು ರಾಜ್ಯಕ್ಕೆ ಸೇರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಗಡಿಯಲ್ಲಿರುವ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಕೂಡಲೇ ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಸರ್ಕಾರ ದವರನ್ನು ಕೇಳುತ್ತೇನೆ.

ಸಂಪರ್ಕಸಾಧನಗಳ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡಿ ರಸ್ತೆ ಸಂಚಾರ ಸುಧಾರಿಸು ವುದು ಇನ್ನೂ ಬೇಕಾದಷ್ಟು ಇದೆ ಎಂದು ಹೇಳಿದ್ದಾರೆ. ಅಮೇರಿಕಾದವರು ಚಂದ್ರಲೋಕಕ್ಕೆ ಹೋಗಿ ಬಂದರು, ಆದರೆ ನಮ್ಮ ರಾಜ್ಯದಲ್ಲಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲು ಸರಿಯಾದಂಥ ರಸ್ತೆಗಳು ನಮಗೆ ಸ್ವಾತಂತ್ರ್ಯ ಬಂದು ಸುಮಾರು 24 ವರ್ಷಗಳಾದರೂ ಕೂಡ ಇನ್ನೂ ಆಗಿಲ್ಲ. ಇಂದು ನಮ್ಮ ದೇಶದಲ್ಲ ಶೇಕಡ 75 ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾ ರೆಂಬುದನ್ನು ಸರ್ಕಾರದವರು ಮರೆಯಬಾರದು. ಹೆಚ್ಚು ಜನರು ಹಳ್ಳಿಗಳಲ್ಲಿ ವಾಸ ಮಾಡುತ್ತಿ ದ್ದರೂ ಹಳ್ಳಿಗಳಿಗೆ ಬಸ್‌ಗಳು ಹೋಗುವಂತೆ ರಸ್ತೆಗಳನ್ನು ಮಾಡಿಸಿಕೊಟ್ಟಿಲ್ಲ. ಮಾನ್ಯ ಚನ್ನಬಸಪ್ಪ ನವರು 1960 ರಲ್ಲಿ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಾಗಿದ್ದಾಗ ನಮ್ಮ ಭಾಗದಲ್ಲಿ 58 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಒಂದು ಆಯಕಟ್ ರೋಡನ್ನು ಮಾಡಲು ಅನುಮತಿ ಕೊಟ್ಟು ಅದನ್ನು 5 ವರ್ಷಗಳಲ್ಲಿ ಮುಗಿಸಬೇಕೆಂದು ಆರ್ಡರ್ ಕೂಡ ಮಾಡಿದ್ದರು. ಆದರೆ ಆ ಕೆಲಸ ಇನ್ನೂ ಅರ್ಧ ಕೂಡ ಆಗಿಲ್ಲ. ಅಂದರೆ ಲೋಕೋಪಯೋಗಿ ಇಲಾಖೆಯ ಕೆಲಸ ಎಷ್ಟು ನಿಧಾನವಾಗಿ ನಡೆಯುತ್ತಿದೆ ಎಂಬುದು ಅರ್ಥವಾಗುತ್ತದೆ. 5 ವರ್ಷಗಳಲ್ಲಿ ಮುಗಿಸಬೇಕೆಂದು ಸ್ಪೆಸಿಫಿಕ್ ಆಗಿ ಹೇಳಿದ್ದರೂ ಕೂಡ ಮಾಡಿ ಮುಗಿಸಲಿಲ್ಲ. ನಮ್ಮ ಸುದೈವದಿಂದ ಈಗ ಮಾನ್ಯ ಚೆನ್ನಬಸಪ್ಪನವರೇ ಈ ಇಲಾಖೆಯ ಮಂತ್ರಿಗಳಾಗಿದ್ದಾರೆ. ಆದಷ್ಟು ಜಾಗ್ರತೆ ಈ ಆಯಕಟ್ ರೋಡನ್ನು ಮಾಡಿಸಿ ಕೊಟ್ಟರೆ ತುಂಗಭದ್ರಾ ಪ್ರಾಜೆಕ್ಟ್ ಪ್ರದೇಶಕ್ಕೆ ಬಹಳ ಅನುಕೂಲವಾಗುತ್ತದೆ. ಈಗ ಆ ಭಾಗದಲ್ಲಿ ರಸ್ತೆ ಇಲ್ಲದೆ ಬಹಳ ತೊಂದರೆಯಾಗಿರುವುದರಿಂದ ಈ ಕೆಲಸ ಜಾಗ್ರತೆಯಾಗಬೇಕೆಂದು ಕೇಳಿಕೊಳ್ಳು ತ್ತೇನೆ. ಹೊಸದಾಗಿ ರೈಲ್ವೆ ಲೈನನ್ನು ನಮ್ಮ ರಾಜ್ಯದಲ್ಲಿ ಹಾಕುವ ಬಗ್ಗೆ ರಾಜ್ಯಪಾಲರ ಭಾಷಣ ದಲ್ಲಿ ಏನನ್ನೂ ಹೇಳದೆ ಬಿಟ್ಟುಬಿಟ್ಟಿದ್ದಾರೆ. ನಮ್ಮ ರಾಜ್ಯ ರೈಲು ಮಾರ್ಗಗಳಿಗೆ ಸಂಬಂಧಪಟ್ಟಂತೆ ಬಹಳ ಹಿಂದುಳಿದಿದೆ. ಈಗ ಕೇಂದ್ರದಲ್ಲಿ ದಕ್ಷ ಆಡಳಿತಗಾರರು ಮತ್ತು ನಮ್ಮ ರಾಜ್ಯದವರೇ ಆದ ಶ್ರೀಮಾನ್ ಹನುಮಂತಯ್ಯನವರು ರೈಲ್ವೆ ಸಚಿವರಾಗಿದ್ದಾರೆ. ಆದ್ದರಿಂದ ಸರ್ಕಾರದವರು ನಮ್ಮ ರಾಜ್ಯಕ್ಕೆ ಅಗತ್ಯವಿರುವ ರೈಲು ಸೌಲಭ್ಯವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಉದಾಹರಣೆಗೆ ಹೇಳುವುದಾದರೆ, ಬಳ್ಳಾರಿ, ಗುಲ್ಬರ್ಗ ರೈಲ್ವೆ ಮಾರ್ಗ ಅವಶ್ಯಕವಾಗಿ ಆಗ ಬೇಕಾಗಿದೆ. ಈ ಬಳ್ಳಾರಿ ಮತ್ತು ಗುಲ್ಬರ್ಗ ಮಾರ್ಗವನ್ನು ಹಾಕುವುದರಿಂದ ತುಂಗಭದ್ರಾ ಪ್ರಾಜೆಕ್ಟ್ ಮತ್ತು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಪ್ರದೇಶಗಳಿಗೆ ಅನುಕೂಲವಾಗುವುದರಿಂದ ಈ ವಿಷಯವನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕೆಂದು ತಿಳಿಸುತ್ತೇನೆ.

(ಶ್ರೀ ಬಿ. ಇ. ರಾಮಯ್ಯ)

ತುಂಗಭದ್ರಾ ರೈಟ್ ಬ್ಯಾಂಕ್ ಲೋ-ಲೆವಲ್ ಚಾನಲ್‌ನ್ನು ಏಪ್ರಿಲ್ 30 ಕ್ಕೆ ಮುಚ್ಚುತ್ತಾರೆ. ಪ್ರತಿವರ್ಷ ಕೂಡ ಏಪ್ರಿಲ್ 30 ಕ್ಕೆ ಮುಚ್ಚುವುದು ಇದ್ದರೂ ಕೂಡ 15 ದಿವಸಗಳವರೆಗೆ ಎಕ್ಸ್‌ಟೆನ್‌ಷನ್ ಕೊಟ್ಟು ನೀರು ಬಿಡುತ್ತಿದ್ದರು. ಈ ವರ್ಷವೂ ಕೂಡ ಅದೇ ರೀತಿ ಮಾನವೀಯ ದೃಷ್ಟಿಯಿಂದ ಏಪ್ರಿಲ್ 30 ಕ್ಕೆ ನಿಲ್ಲಿಸದೆ ಮೇ 15 ರವರೆಗೂ ನೀರು ಬಿಟ್ಟರೆ ಬಹಳ ಜನ ರೈತರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಸುಮಾರು 2-3 ಕೋಟಿ ರೂಪಾಯಿಗಳಷ್ಟು ಬೆಳೆ ನಷ್ಟವಾಗುತ್ತದೆ. ಅದಕ್ಕೋಸ್ಕರ ಸರ್ಕಾರದವರು ಈ ವಿಷಯದಲ್ಲಿ ಗಮನಕೊಟ್ಟು ಮೇ 15 ರವರೆಗೂ ನೀರನ್ನು ಬಿಡುತ್ತಾರೆಂದು ನಾನು ನಂಬಿದ್ದೇನೆ.

ಮತ್ತೊಂದು ಮುಖ್ಯವಾದ ವಿಚಾರವೆಂದರೆ ಬಳ್ಳಾರಿ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋಆಪರೇಟಿವ್ ಬ್ಯಾಂಕ್ ಅಧೋಗತಿಗೆ ಇಳಿದಿದೆ. ಅಲ್ಲಿ ಅನೇಕ ಗುಂಪುಗಳು ಹುಟ್ಟಿಕೊಂಡು ಹಣವೆಲ್ಲಾ ಪೋಲಾಗುತ್ತಿದೆ. ಆದಷ್ಟು ಜಾಗ್ರತೆ ಈ ಬ್ಯಾಂಕನ್ನು ಸೂಪರ್‌ಸೀಡ್ ಮಾಡಿ ಒಬ್ಬರು ಸ್ಪೆಷಲ್ ಆಫೀಸರನ್ನು ನೇಮಕ ಮಾಡಿ ಆಗಿರುವ ಅನ್ಯಾಯದ ಬಗ್ಗೆ ವಿಚಾರಣೆ ನಡೆಸಬೇಕು. ಇಲ್ಲದಿದ್ದರೆ ಅಲ್ಲಿಯ ಅನೇಕ ಜನ ರೈತರಿಗೆ ಅನಾನುಕೂಲವಾಗುತ್ತದೆ. ಈ ಬ್ಯಾಂಕ್‌ನಲ್ಲಿರತಕ್ಕ ಹಣವನ್ನು ತಮಗಿಷ್ಟ ಬಂದಂತೆ ಖರ್ಚು ಮಾಡುತ್ತಿದ್ದಾರೆ. ಸರ್ಕಾರದ ಹಣ ಈ ಬ್ಯಾಂಕ್‌ನಲ್ಲಿ ಹೆಚ್ಚು ಇರುವುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಒಬ್ಬ ಆಫೀಸರನ್ನು ನೇಮಕ ಮಾಡಿ ತನಿಖೆ ನಡೆಸಬೇಕು. ಅಲ್ಲಿಯವರೆಗೆ ಈ ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಾ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

4-00 P.M.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಂಡಿಸಿರತಕ್ಕ ರಾಜ್ಯಪಾಲರ ವಂದನಾರ್ಪಣಾ ಗೊತ್ತುವಳಿ ಏನಿದೆ ಇದರ ಬಗ್ಗೆ ನನ್ನ ಅನುಮೋದನೆಯನ್ನು ಕೊಡುತ್ತಾ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿರುವ ವಿಷಯಗಳ ಬಗ್ಗೆ ಸರ್ಕಾರದವರು ಕ್ರಮಗಳನ್ನು ತೆಗೆದುಕೊಂಡು ಈ ಬಗ್ಗೆ ಸೂಕ್ತ ಪರಿಹಾರವನ್ನು ಕೊಟ್ಟರೆ ನಮ್ಮ ಇಡೀ ಮೈಸೂರು ರಾಜ್ಯ ಅಭಿವೃದ್ಧಿ ಹೊಂದುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಒಂದು ಅಂಶದ ಬಗ್ಗೆ ಉಲ್ಲೇಖ ಇಲ್ಲ. ಅದು ಯಾವುದೆಂದರೆ ನೇಕಾರರಿಗೆ ಸಂಬಂಧಪಟ್ಟ ವಿಷಯ. ಈ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲ. ಮೈಸೂರು ರಾಜ್ಯದಲ್ಲಿ ಸುಮಾರು ಒಂದು ಲಕ್ಷ ಐವತ್ತು ಸಾವಿರ ಜನ ನೇಕಾರರು ಇದ್ದಾರೆ. ನೇಕಾರರು ಕೆಲವರು ಕೇವಲ ರೇಷ್ಮೆ ಬಟ್ಟೆಗಳನ್ನೂ, ನೂಲಿನ ಬಟ್ಟೆಗಳನ್ನೂ ನೇಯುತ್ತಾರೆ. ಈಗ ಪವರ್‌ಲೂಮ್ ಫ್ಯಾಕ್ಟರಿಯ ಮಾಲೀಕರು ಬಣ್ಣದ ಬಟ್ಟೆಗಳನ್ನು ನೇಯಕೂಡದು ಎಂದು ಟೆಕ್ಸ್‌ಟೈಲ್ ಕಮೀಷನರು ಹುಕುಂ ಮಾಡಿದ್ದಾರೆ. ಇದನ್ನು ಸರ್ಕಾರದವರು ವಿಚಾರ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ನೇಕಾರರು ಹ್ಯಾಂಡ್ಲೂಮ್‌ಗಳನ್ನು ಹಾಕಿಕೊಂಡು ಅದಕ್ಕೆ ಸಾಕಷ್ಟು ಬಂಡವಾಳವನ್ನು ಹಾಕಿದ್ದಾರೆ. ಪವರ್ ಲೂಮ್‌ಗಳಿಂದ ಬಣ್ಣದ ಬಟ್ಟೆಗಳನ್ನು ನೇಯಬಾರದು, ಒಂದು ವೇಳೆ ಅವರು ಬಣ್ಣದ ಬಟ್ಟೆಗಳನ್ನು ನೇದರೆ ಅದು ಅಪರಾಧವಾಗುತ್ತದೆ ಎಂದು ಟೆಕ್ಸ್‌ಟೈಲ್ ಕಮೀಷನರು ಹುಕುಂ ಮಾಡಿದ್ದಾರೆ. ಇದರ ಜೊತೆಗೆ ಹಿಂದೆ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರ ಅವರು ಒಂದು ಹುಕುಂ ಮಾಡಿ ಎಲ್ಲಾ ಡೆಪ್ಯುಟಿ ಕಮೀಷನರಿಗೂ ಕೂಡ ಸೂಚನೆ ಕೊಟ್ಟು, ಯಾರಾದರೂ ಪವರ್ ಲೂಮ್‌ಗಳವರು ಬಣ್ಣದ ಬಟ್ಟೆಗಳನ್ನು ತಯಾರುಮಾಡುವುದಾದರೆ ಅದು ಅಪರಾಧವಾಗುತ್ತದೆ, ಆದ್ದರಿಂದ ಪವರ್ ಲೂಮ್‌ಗಳವರು ಬಣ್ಣದ ಬಟ್ಟೆಗಳನ್ನು ತಯಾರು ಮಾಡುವುದನ್ನು ನಿಲ್ಲಿಸಬೇಕೆಂದು ಸೂಚನೆ ಕೊಟ್ಟಿದ್ದರು. ಆದರೆ ಆ ಆಜ್ಞೆಯನ್ನು ಡೆಪ್ಯುಟಿ ಕಮೀಷನರು ಇದುವರೆಗೂ ಇಪ್ಲಿಮೆಂಟ್ ಮಾಡಿಲ್ಲ. ಇದರಿಂದಾಗಿ 500 ಜನ ಹ್ಯಾಂಡ್ಲೂಮ್ ನೇಕಾರರು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಇದನ್ನು ಮಾನ್ಯ ಕೈಗಾರಿಕಾ ಶಾಖೆಯ ಮಂತ್ರಿಗಳು ಗಮನಿಸಿ ಟೆಕ್ಸ್‌ಟೈಲ್ ಕಮೀಷನರ ಹುಕುಂ ಅನ್ನು ಜಾರಿಗೆ ತರುವಂತೆ ಮಾಡಿ ಬಡನೇಕಾರರ ಗೋಳನ್ನು ಬಗೆಹರಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯ ವಿಷಯ ಏನೆಂದರೆ ಕೃಷ್ಣಾನದಿಗೆ ಸಂಬಂಧಪಟ್ಟ ಹೊಳೆಯಲ್ಲಿ ಇವತ್ತು ನೀರು ಇಲ್ಲ. ಆದ್ದರಿಂದ ಕೃಷ್ಣಾ ನದಿಯ ದಂಡೆಯಲ್ಲಿ ವಾಸಮಾಡತಕ್ಕ ಬಿಜಾಪುರ ಡಿಸ್ಟ್ರಿಕ್ಟಿನ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದಂತಹ ತೊಂದರೆಯಾಗಿದೆ. ಆದಕಾರಣ ನಮ್ಮ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದವರೊಡನೆ ವ್ಯವಹರಿಸಿ ಕೊಯನಾ ರಿಜರ್ವಾಯರ್‌ನಿಂದ ಕೃಷ್ಣಾನದಿಗೆ ನೀರು ಬಿಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ಕೆಲವು ಮಾನ್ಯಸದಸ್ಯರು 10 ಎಕರೆಗಳಿಗಿಂತ ಕಡಿಮೆ ಇರತಕ್ಕ ಭೂಮಿಗೆ ಕಂದಾಯವನ್ನು ವಜಾ ಮಾಡಬೇಕೆಂದು ಹೇಳಿದರು. ಆದರೆ ಬೊಂಬಾಯಿ ಲ್ಯಾಂಡ್ ರೆವಿನ್ಯೂ ಕೋಡ್ ಪ್ರಕಾರ ಮತ್ತು ಮೈಸೂರಿನ ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ಭೂಮಿಯು ಸರ್ಕಾರದ್ದಾಗಿದ್ದರೆ, ಅದರ ಹಕ್ಕುದಾರಿಕೆಯನ್ನು ಭೂಮಾಲೀಕನಿಗೆ ಕೊಡತಕ್ಕದ್ದು. ಅಂಥಾ ಸಂದರ್ಭಗಳಲ್ಲಿ ಪ್ರತಿಯೊಬ್ಬ ಭೂಮಾಲೀಕನಿಂದಲೂ ನಾಮಿನಲ್ ಫೀಜನ್ನು ಕಂದಾಯದ ರೂಪದಲ್ಲಿ ವಸೂಲು ಮಾಡುತ್ತಾರೆ. ಅದನ್ನು ಸಂಪೂರ್ಣವಾಗಿ ರಿಯಾಯಿತಿ ಬಿಡುವುದಕ್ಕಾಗುವುದಿಲ್ಲ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗಟ್ಟಿ ಚಂದ್ರಶೇಖರ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ನಾನು ರಾಜ್ಯಪಾಲರ ಭಾಷಣವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ರಾಜ್ಯಪಾಲರ ಭಾಷಣ ಬೂದಿ ಮುಚ್ಚಿದ ಕೆಂಡದ ಹಾಗೆ ಇದೆ. ಬಹಳ ಅರ್ಥಗರ್ಭಿತವಾಗಿದೆ. ಇದನ್ನು ನಾವು ವಿಶಾಲ ದೃಷ್ಟಿಯಿಂದ ಆಳವಾಗಿ ಅಭ್ಯಾಸ ಮಾಡಿದರೆ, ನಮ್ಮ ಪಕ್ಷದ ನೀತಿ, ಧೋರಣೆ, ಸಮಾಜವಾದದ ಧ್ಯೇಯ ಧೋರಣೆಗಳು ಇವುಗಳನ್ನೆಲ್ಲಾ ಇದರಲ್ಲಿ ಅಳವಡಿಸಿರುವುದು ಗೊತ್ತಾಗುತ್ತದೆ. ಅದಕ್ಕಾಗಿ ನಾವು ರಾಜ್ಯಪಾಲರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಬಂಗ್ಲಾದೇಶದ ಯುದ್ಧದ ಸಂಬಂಧದಲ್ಲಿ ನಮ್ಮ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರನ್ನು ಎಲ್ಲರೂ ಕೂಡ ಬಹಳ ಮೆಚ್ಚಿದ್ದಾರೆ. ಇಂಥಾ ಧರ್ಮ ಯುದ್ಧ ಇಡೀ ಜಗತ್ತಿನಲ್ಲೇ ಎಲ್ಲೂ ಇದುವರೆಗೂ ನಡೆದಿಲ್ಲ. ನಮ್ಮ ನೆರೆ ರಾಷ್ಟ್ರದ ಮೇಲೆ ಭಾರಿ ಶತ್ರುಗಳು ದಾಳಿ ಮಾಡಿದ ಸಂದರ್ಭದಲ್ಲಿ ನಾವು ನಮ್ಮ ನೆರೆ ರಾಷ್ಟ್ರದವರಿಗೆ ಸಹಾಯ ಮಾಡಿ ಅವರನ್ನು ದಾಳಿಯಿಂದ ಬಿಡುಗಡೆ ಮಾಡಿ ಅದನ್ನು ಅವರಿಗೆ ಬಿಟ್ಟುಕೊಟ್ಟು ಬಂದಿರತಕ್ಕ ನಿದರ್ಶನ ಜಗತ್ತಿನಲ್ಲಿ ಯಾವ ಯುದ್ಧದಿಂದಲೂ ತಿಳಿದು ಬರುತ್ತಿಲ್ಲ. ಆದರೆ ವಿರಾಟಪರ್ವದಲ್ಲಿ ಉತ್ತರ ಗೋಗ್ರಹಣದ್ದು ಒಂದು ಮಾತ್ರ ಅಂಥಾ ಒಂದು ನಿದರ್ಶನ ಇದೆ. ಶ್ರೀಮತಿ ಇಂದಿರಾಗಾಂಧಿಯವರು ನಮ್ಮ ದೇಶಕ್ಕೆ ಪ್ರಧಾನಿಯಾಗಿರುವುದು ನಮಗೆ ಒಂದು ಹೆಮ್ಮೆಯ ವಿಷಯವಾಗಿದೆ ಎಂದು ನಾನು ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಕನ್ನಡವನ್ನು ಅಧಿಕೃತಭಾಷೆಯಾಗಿ ಬಳಸಬೇಕು ಎನ್ನತಕ್ಕಂಥಾದ್ದು ಒಂದು ಹೆಮ್ಮೆಯ ವಿಚಾರ. 25 ವರ್ಷಗಳಿಂದ ಅನಾಥಾಶ್ರಮದಲ್ಲಿ ಬೆಳೆದ ಕನ್ನಡ ಮಕ್ಕಳಿಗೆ ಈಗಲಾದರೂ ತಮ್ಮ ಮಾತೃಭಾಷೆಯ ಬಗ್ಗೆ ಒಂದು ವಿಧವಾದ ಉತ್ತೇಜನ ದೊರಕಿರತಕ್ಕದ್ದು ಕನ್ನಡಿಗರ ಅದೃಷ್ಟ ಎಂದು ಹೇಳಬಹುದು. ಭಾಷಾವಾರು ಪ್ರಾಂತ್ಯವನ್ನು ರಚನೆ ಮಾಡುವಾಗ ತಮ್ಮ ತಮ್ಮ ಭಾಷೆಯ ಆಧಾರದ ಮೇಲೆ ರಾಜ್ಯಗಳನ್ನು ರಚಿಸಿಕೊಂಡಮೇಲೆ ನಮ್ಮ ನೆರೆಯ ರಾಜ್ಯಗಳಾದ ಆಂಧ್ರ, ತಮಿಳುನಾಡು, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳು ತಮ್ಮ ತಮ್ಮ ಭಾಷೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಅವುಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಆದರೆ ಕನ್ನಡಿಗರಾದ ನಾವು ಈಗ ನಮ್ಮ ಭಾಷೆಯ ಬಗ್ಗೆ ಕಣ್ಣು ತೆರೆಯುತ್ತಿದ್ದೇವೆ. ಇದು ನಮ್ಮ ದುರ್ದೈವ. ಕನ್ನಡ ಭಾಷೆಯೇನೂ ಹೊಸದಲ್ಲ. ಸಹಸ್ರಾರು ವರ್ಷಗಳಿಂದಲೂ ಇರುವ ಶಿಲಾಶಾಸನಗಳನ್ನು ನೋಡಿದರೂ ಕನ್ನಡದ ಉಲ್ಲೇಖ ಇದೆ. ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ಸದಸ್ಯರಲ್ಲಿ ನಾನು ಒಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಇಲ್ಲಿರತಕ್ಕ ಜನಗಳಲ್ಲಿ 100 ಕ್ಕೆ 99 ಜನ ಕನ್ನಡ ದೇಶದವರು. ಕನ್ನಡ ತಿಳಿಯತಕ್ಕಂಥ ಜನ ಈ ಸಭೆಯ ಕಾರ್ಯಕಲಾಪಗಳನ್ನು ನೋಡಲು ಬಹಳ ಕುತೂಹಲದಿಂದ ಗ್ಯಾಲರಿಯಲ್ಲಿ ಬಂದು ಕುಳಿತುಕೊಂಡಿದ್ದಾರೆ. ಆದರೆ ನಮ್ಮ ಸದಸ್ಯರು ಮತ್ತು ಮಾನ್ಯ ಮಂತ್ರಿಗಳಿಗೆ ಕನ್ನಡ ಬಾರದಿದ್ದರೆ ಹೋಗಲಿ, ಕನ್ನಡ ಬರತಕ್ಕವರು ಇಂಗ್ಲೀಷಿನಲ್ಲಿ ಮಾತನಾಡತಕ್ಕಂಥಾ ಷೋಕಿಯನ್ನು ಇಟ್ಟುಕೊಂಡಿದ್ದಾರೆ. ಅವರು ದಯವಿಟ್ಟು ಇಂಗ್ಲೀಷಿನಲ್ಲಿ ಮಾತನಾಡುವುದನ್ನು ಬಿಟ್ಟು ಕನ್ನಡದಲ್ಲಿಯೇ ಮಾತನಾಡಿದರೆ ಚೆನ್ನಾಗಿರುತ್ತದೆ. ಆದ್ದರಿಂದ ಅವರು ಆ ಕರ್ತವ್ಯವನ್ನು ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಮೂರನೆಯದಾಗಿ ನಿರುದ್ಯೋಗ ಸಮಸ್ಯೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಿರುದ್ಯೋಗ ಸಮಸ್ಯೆ ನಮ್ಮ ದೇಶದಲ್ಲಿ ಬಹಳ ದೊಡ್ಡದಾಗಿದೆ. ನಾನು

(ಶ್ರೀ ಗಟ್ಟಿ ಚಂದ್ರಶೇಖರ)

ವಿಧಾನಸಭೆಯ ಸದಸ್ಯನಾದ ಮೇಲೆ ಅನೇಕ ಜನಗಳು ನನ್ನ ಹತ್ತಿರ ಬಂದು ನಮಗೆ ಕೆಲಸ ಕೊಡಿಸಿ ಕೊಡಿ ಎಂದು ನಮ್ಮನ್ನು ಕಾಡುತ್ತಿದ್ದಾರೆ. ನಮಗೆ ಇದೇ ಒಂದು ಕೆಲಸವಾಗಿದೆ. ಇಂಥಾ ಒಂದು ಕಠಿಣವಾದ ನಿರುದ್ಯೋಗ ಸಮಸ್ಯೆ ನಮ್ಮ ರಾಜ್ಯದಲ್ಲಿರುವಾಗ ಈ ಬಗ್ಗೆ ಸರ್ಕಾರದವರು ತೀವ್ರಗತಿಯಿಂದ ಗಮನಕೊಡಬೇಕೆಂದು ನಾನು ಹೇಳುತ್ತೇನೆ. ಇದರ ಕಾವು ನನಗೂ ಕೂಡ ಸ್ವಲ್ಪ ತಟ್ಟಿದೆ. ಈಗ್ಗೆ 8-10 ವರ್ಷಗಳ ಹಿಂದೆ ಬಿ. ಇ. ಮತ್ತು ಎಂ. ಬಿ. ಬಿ. ಎಸ್. ಪರೀಕ್ಷೆ ಪಾಸಾದ ತರುಣರಿಗೆ 50 ಸಾವಿರ, ಒಂದು ಲಕ್ಷ ರೂಪಾಯಿಗಳವರೆಗೂ ವರದಕ್ಷಿಣೆ ಕೊಡಲು ಜನ ಮುಂದೆ ಬರುತ್ತಿದ್ದರು. ಆದರೆ ಈಗ ನನ್ನ ಮಗನೇ ಒಬ್ಬನು ಬಿ. ಇ. ಪಾಸು ಮಾಡಿದ್ದಾನೆ. ಅವನಿಗೆ 100 ರೂಪಾಯಿ ಸಂಬಳದ ಕೆಲಸವೂ ಸಿಕ್ಕುವುದಿಲ್ಲ, ವರದಕ್ಷಿಣೆಯೂ ಸಿಕ್ಕುವುದಿಲ್ಲ. ನನ್ನಂಥವನ ಗತಿಯೇ ಹೀಗಾಗಬೇಕಾದರೆ ಇನ್ನು ಸಾಮಾನ್ಯ ಜನಗಳ ಗತಿ ಏನು? ಆದ್ದರಿಂದ ಈ ಬಗ್ಗೆ ಸರ್ಕಾರದವರು ಬಹಳ ತೀಕ್ಷಣವಾಗಿ ಗಮನ ಕೊಡಬೇಕು ಎಂದು ನಾನು ಹೇಳುತ್ತೇನೆ.

ರೆವಿನ್ಯೂ ಆಡಳಿತದ ಬಗ್ಗೆ ನಮ್ಮ ಜಿಲ್ಲೆಯವರೇ ಆದ ರೆವಿನ್ಯೂ ಮಂತ್ರಿಯವರು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಖಾತೆ ಬದಲಾವಣೆಯ ವಿಷಯದಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ನಮ್ಮ ಎಲ್ಲಾ ಮಂತ್ರಿಗಳು ಅದೇ ರೀತಿ ಕೆಲಸವನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ. ಆದರೆ ನಮಗೂ ಸಾಮಾನ್ಯ ಜನರಿಗೂ ಮಧ್ಯೆ ಒಂದು ಅಧಿಕಾರಿ ವರ್ಗದವರ ಗೋಡೆ ಇದೆ. ಹೀಗಿರುವಾಗ ಏನು ಕಾರ್ಯವಾಗಬೇಕಾದರೂ ಅಧಿಕಾರಿಗಳ ಮೂಲಕ ಬರಬೇಕಾಗುತ್ತದೆ. ಆದರೆ ಇವೊತ್ತಿನ ದಿವಸ ಬಹಳ ಮಂದಿ ಅಧಿಕಾರಿಗಳು ರಾಜ್ಯಪಾಲರ ಆಡಳಿತದ ಅಮಲಿನಲ್ಲಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಪ್ರಜಾಪ್ರಭುತ್ವದ ಚಾಟಿಯಿಂದ ಚೆನ್ನಾಗಿ ಹೊಡೆದು ಅವರನ್ನು ಎಬ್ಬಿಸಬೇಕು. ಇದರಿಂದ ಸಾಮಾನ್ಯ ಜನರಿಗೂ, ಸರ್ಕಾರದಿಂದ ಆಗಬೇಕಾದ ಕಾರ್ಯಗಳು ಸುಲಭವಾಗಿ ಆಗುತ್ತದೆಂದು ನಂಬಿದ್ದೇನೆ.

ಇನ್ನು ಸಹಕಾರಿ ಸಂಘಗಳ ಬಗ್ಗೆ ಹೇಳುವುದಾದರೆ, ಬಹಳವಾಗಿ ಹೇಳಬಹುದು. ಇವು ಭರ್ಜರಿ ಸಂಘಗಳಾಗಿವೆ. ಮಾನ್ಯ ಸಹಕಾರ ಮಂತ್ರಿಯವರಲ್ಲಿ ಕೆಲವು ವಿಷಯಗಳನ್ನು ಹೇಳಿದಾಗ ಅವರು ಹೇಳಿದ ಮಾತಿನಲ್ಲಿ ನನಗೆ ಒಂದು ಆಶಾಭಾವನೆ ಉಂಟಾಯಿತು. ನಾನು ತಿಳಿದುಕೊಂಡ ಹಾಗೆ ಇವತ್ತು ನಾವು ಕೂಡ ಒಂದು ಸಹಕಾರ ಸಂಘವನ್ನು ಮಾಡಿ ಸಹಕಾರ ತತ್ವದ ಮೇಲೆ ಸಹಕರಿಸಿಕೊಂಡು ಹೋದರೆ 4—5 ಲಕ್ಷ ರೂಪಾಯಿಯಾದರೂ ಮಾಡಿಕೊಳ್ಳಬಹುದೆಂದು ಕಾಣುತ್ತದೆ. ಸರ್ಕಾರದವರು ಇದರ ಬಗ್ಗೆ ಕಟ್ಟುನಿಟ್ಟಾದ ನಿಯಮಗಳನ್ನು ಅನುಸರಿಸಿ ಸರಿಪಡಿಸಬೇಕೆಂದು ಹೇಳುತ್ತೇನೆ.

ಆ ಮೇಲೆ ಹೇಮಾವತಿ ನೀರನ್ನು ನಮ್ಮ ತುಮಕೂರು ಜಿಲ್ಲೆಗೂ ಒದಗಿಸುವ ಒಂದು ಯೋಜನೆಯನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕುಟುಂಬ ಯೋಜನೆ ವಿಚಾರ ಬಹಳ ಮುಖ್ಯವಾದುದು. ಇದಕ್ಕೆ ಸರ್ಕಾರದವರು ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಈಗ ಮಾಡುತ್ತಾ ಇರುವ ರೀತಿಯಲ್ಲಿ ಒಂದು ಸಾವಿರ ವರ್ಷವಾದರೂ ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಅಲ್ಲದೆ ಇನ್ನು ಮುಂದೆ ಬರತಕ್ಕ ಪೀಳಿಗೆ ಬರ ಬರುತ್ತಾ ಬಹಳ ಸಮಾಜಕ್ಕೆ ಘಾತಕವನ್ನುಂಟುಮಾಡುವ ಪೀಳಿಗೆಯಾಗುತ್ತದೆ. ಇವೊತ್ತಿನ ದಿವಸ ಕುಟುಂಬ ಯೋಜನೆಯನ್ನು ವಿದ್ಯಾವಂತರು, ಪದವೀಧರರು ಎಲ್ಲಾ ಆಚರಣೆಗೆ ತರುವುದರಿಂದ ಅವರಿಗೆ ಮೂರಕ್ಕಿಂತ ಹೆಚ್ಚು ಮಕ್ಕಳೇ ಇರುವುದಿಲ್ಲ. ಆದರೆ ಇಂತಹ ಜನರೆಲ್ಲಾ ಮೂರಕ್ಕೆ ನಿಲ್ಲಿಸಿದರೆ, ಬೇರೆ ಕೆಲವು ಜನಾಂಗದವರು ಕುಟುಂಬ ಯೋಜನೆಯನ್ನೇ ಮಾಡದೆ ವರ್ಷಕ್ಕೆ 3 ಮಕ್ಕಳನ್ನು ಮಾಡುತ್ತಿದ್ದಾರೆ. ಅದೇ ರೀತಿ ಈ ಗುಡಿಸಲುಗಳಲ್ಲಿ ವಾಸ ಮಾಡುವ ಜನರು ಮತ್ತು ಕೂಲಿಗಾರ ಜನರು ಕುಟುಂಬ ಯೋಜನೆಯನ್ನೇ ಮಾಡದೆ, ಅವರಲ್ಲಿ ಮಕ್ಕಳು ಜಾಸ್ತಿಯಾಗುತ್ತಿದ್ದಾರೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಸರ್ಕಾರದವರು ಇದಕ್ಕೆ ಒಂದು ಶಾಸನವನ್ನು ಮಾಡಿ ಎಲ್ಲಾ ಜಾತಿಯವರು, ಪಂಗಡದವರು ಈ ಕುಟುಂಬ ಯೋಜನೆಯನ್ನು ಅನುಸರಿಸುವಂತೆ ಕಡ್ಡಾಯವಾದ ಹುಕುಂ ಮಾಡಬೇಕು. ನಮ್ಮ ರಾಷ್ಟ್ರ ಜಾತ್ಯಾತೀತ ರಾಷ್ಟ್ರವಾಗಿರುವುದರಿಂದ ಇದು ಒಂದು ಗುಂಪಿಗೆ ಅಥವಾ ಒಂದು ಜಾತಿಗೆ ಮಾಡಬಾರದೆಂದು ಏನೂ ಇಲ್ಲ. ಎಲ್ಲರಿಗೂ ಒಂದೇ ಸಮನಾಗಿರಬೇಕು. ಇಂತಹ ಶಾಸನವನ್ನು ಮಾಡಿ ಯಾರು ಮೂರು ಮಕ್ಕಳ ಮೇಲೆ ಮಾಡುತ್ತಾರೋ ಅವರಿಗೆ ಕಡ್ಡಾಯವಾಗಿ ಶಿಕ್ಷೆ ವಿಧಿಸ

ಬೇಕು. ಹಾಗೆ ಶಿಕ್ಷೆ ಮಾಡುವಾಗ ಗಂಡನನ್ನು ಬೇರೆ ಹೆಂಡತಿಯನ್ನು ಬೇರೆ ಜೈಲಿನಲ್ಲಿ ಇಡಬೇಕು. ಏಕೆಂದರೆ ಒಟ್ಟಿಗೆ ಪುನಃ ಇಟ್ಟರೆ, ಅಲ್ಲಿ ಕೂಡ ಅವರು ಹೊರಗೆ ಬರುವಾಗ ಮಕ್ಕಳನ್ನು ಮಾಡಿಕೊಂಡೇ ಬರಬಹುದು. ಆದ್ದರಿಂದ ಸರ್ಕಾರದವರು ಇದರ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ರಸ್ತೆ ಸಾರಿಗೆ ವಿಚಾರ. ಇವತ್ತು ರಸ್ತೆಗಳನ್ನು ಕೆಲವು ಕಡೆ ರಾಷ್ಟ್ರೀಕರಣ ಮಾಡಿದ್ದಾರೆ, ಕೆಲವು ಕಡೆ ಮಾಡಿಲ್ಲ. ಅದನ್ನು ಒಂದೇ ರೀತಿಯಾಗಿ ಮಾಡಬೇಕೆಂದು ಹೇಳುತ್ತೇನೆ. ಆದೇ ರೀತಿ ಈ ಬಸ್ಸುಗಳ ಓಡಾಟ ಕಾಲಕ್ಕೆ ಸರಿಯಾಗಿ ಇರುವುದಿಲ್ಲ. ಒಂದು ಕಡೆ ಬಸ್ ಇದ್ದರೆ, ಡ್ರೈವರ್ ಇರುವುದಿಲ್ಲ; ಡ್ರೈವರ್ ಇದ್ದರೆ ಕಂಡಕ್ಟರ್ ಇರುವುದಿಲ್ಲ; ಮತ್ತು ಎರಡೂ ಇದ್ದರೆ ಬಸ್ಸೇ ಸರಿ ಇರುವುದಿಲ್ಲ. ಇಂತಹ ರಾಷ್ಟ್ರೀಕರಣ ಮಾಡುವ ಬದಲು ಇದನ್ನು ಖಾಸಗೀಯವರಿಗೆ ಬಿಟ್ಟರೆ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನಾದರೂ ತಪ್ಪಿಸಬಹುದು; ಮತ್ತು ಜನರಿಂದ ಬರುವಂತಹ ದೂರುಗಳನ್ನಾದರೂ ತಪ್ಪಿಸಬಹುದು. ಸರ್ಕಾರದವರು ತೆಗೆದುಕೊಂಡ ಮೇಲೆ ಸರಿಯಾಗಿ ಮಾಡಬೇಕು, ಇಲ್ಲದಿದ್ದರೆ ತೆಗೆದುಕೊಳ್ಳಲೇ ಬಾರದು.

ಕೊನೆಯದಾಗಿ ಹರಿಜನರ ಮತ್ತು ಗಿರಿಜನರ ಬಗ್ಗೆ ಹೇಳುವುದಾದರೆ ಇದಕ್ಕೆ ಸರ್ಕಾರದವರು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. 25 ವರ್ಷಗಳಿಂದ ಇಷ್ಟು ಖರ್ಚು ಮಾಡಿದ್ದರೂ, ಒಬ್ಬ ಸಾಮಾನ್ಯ ಹರಿಜನ-ಗಿರಿಜನ ಸದಸ್ಯನ ಸ್ಥಾನಮಾನವೂ ಸಮಾಜದಲ್ಲಿ ಅಷ್ಟು ಮಟ್ಟಿಗೆ ಸುಧಾರಣೆಯಾಗಿಲ್ಲ. ಅವರ ಹೆಸರು ಹೇಳಿಕೊಂಡು ಕೆಲವರು ಮಂತ್ರಿಯಾಗಿರಬಹುದು ಆದರೆ ಸಾಮಾನ್ಯ ಹರಿಜನರು ಯಾರೂ ಉದ್ಧಾರವಾಗಿಲ್ಲ. ಇದಕ್ಕೆ ಕಾರಣ—ಪ್ರತಿಯೊಂದು ಊರಿನಲ್ಲೂ ಹರಿಜನ ಕೇರಿಗಳನ್ನು ಊರಿನ ಹೊರಗಡೆ ಹಾಕಿರುತ್ತಾರೆ. ಇದರಿಂದ ಅವರಿಗೆ ಒಂದು ಪ್ರತ್ಯೇಕವಾದ ಸಮಾಜವನ್ನೆ ಮಾಡಿದ ಹಾಗೆ ಆಗುತ್ತದೆ. ಅನೇಕ ಊರುಗಳಲ್ಲಿ ಹರಿಜನ ಕೇರಿಗಳ ಪಕ್ಕದಲ್ಲೇ ಹೆಂಡದ ಅಂಗಡಿಗಳನ್ನು ತೆರೆದಿದ್ದಾರೆ ಈ ರೀತಿ ಮಾಡತಕ್ಕದ್ದು ಶುದ್ಧ ತಪ್ಪು ಅವರು ಸವರ್ಣ ಹಿಂದುಗಳ ಜೊತೆಯಲ್ಲಿ ವಾಸಮಾಡುವಂತೆ ಒಂದು ಅವಕಾಶವನ್ನು ಮಾಡಿಕೊಡುವುದಾದರೆ ಇದು ಉತ್ತಮವಾಗಬಹುದು. ಕೇವಲ ಆಡಂಬರದ ಅಬ್ಬರ ಮಾಡುವುದರಿಂದ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. 12ನೇ ಶತಮಾನದಲ್ಲಿ ಬಸವೇಶ್ವರರು ಕ್ರಾಂತಿಕಾರಕ ಕಾರ್ಯಗಳನ್ನು ಮಾಡಿದ್ದರು. ಬಸವೇಶ್ವರರು ಅರಳಯ್ಯನ ಮಗನಿಗೆ ಮಾದರಸನ ಮಗಳನ್ನು ಕೊಟ್ಟು ಮದುವೆ ಮಾಡಿಸಿದ್ದಾರೆ. ಅಂತಹ ಒಂದು ಕ್ರಾಂತಿಕಾರಕ ಸಾಮಾಜಿಕ ಬದಲಾವಣೆಯನ್ನು ಆಗಿನ ಕಾಲದಲ್ಲಿ ಮಾಡಿದ್ದಾರೆ. ಇಂತಹ ಕ್ರಾಂತಿಕಾರಕ ಕೆಲಸಗಳನ್ನು ನಾವು ಮಾಡಬೇಕೇ ಹೊರತು ಸುಮ್ಮನೆ ಮಾತನಾಡುತ್ತಾ ಇದ್ದರೆ, ಯಾವ ಕಾರ್ಯವೂ ಆಗುವುದಿಲ್ಲ. ಇಷ್ಟು ಹೇಳಿ, ಅವಕಾಶ ಒದಗಿಸಿದ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ಹೃತ್ಪೂರ್ವಕವಾಗಿ ಒಪ್ಪಿಕೊಂಡು, ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತಿನ ದಿವಸ ಎಲ್ಲರೂ ಅಧಿಕೃತ ಭಾಷೆ ಕನ್ನಡ ಆಗಬೇಕೆಂದು ಹೇಳುತ್ತಿದ್ದಾರೆ. ಆದರೆ ಅದರ ಜೊತೆಗೆ ಇಂಗ್ಲೀಷ್ ಕೂಡ ಕೆಲವು ಕಾಲವಾದರೂ ಇರಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ ಶಾಸನ ಸುವ್ಯವಸ್ಥೆಯ ಬಗ್ಗೆ ಒಂದು ಮಾತನ್ನು ಹೇಳಬೇಕೆಂದಿದ್ದೇನೆ. ನಾನು ಬಹಳ ಹಿಂದುಳಿದ ತಾಲ್ಲೂಕಾದ ಆನೇಕಲ್ ತಾಲ್ಲೂಕಿನಿಂದ ಬಂದಿದ್ದೇನೆ. ಆ ತಾಲ್ಲೂಕಿನಲ್ಲಿ ಪೋಲೀಸರ ದಬ್ಬಾಳಿಕೆ ಅತಿಯಾಗಿದೆ. ಅಲ್ಲಿಯ ಜನರು ಯಾವ ಒಂದು ರಿಪೋರ್ಟು ಪೋಲೀಸರಿಗೆ ಕೊಟ್ಟರೂ, ಅದರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ ಅಲ್ಲಿ ಬಡವರಿಗೆ ಮತ್ತು ಹಿಂದುಳಿದ ವರ್ಗಗಳ ಜನರಿಗೆ ಸರಿಯಾದ ರಕ್ಷಣೆ ದೊರೆಯುತ್ತಾ ಇಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವೊತ್ತಿನ ದಿವಸ ಅಲ್ಲಿ ಯಾರಾದರೂ ಬಡವರು ಪೋಲೀಸರಿಗೆ ದೂರನ್ನು ಕೊಟ್ಟರೆ, ಅಂತಹ ದೂರು ಕೊಟ್ಟ ಜನರನ್ನೇ ಲಾಕಪ್ಪಿನಲ್ಲಿ ಹಾಕತಕ್ಕಂತಹ ಪರಿಸ್ಥಿತಿ ಬಂದಿದೆ. ಅಂತಹ ಜನರಿಗೆ ಅಲ್ಲಿ ಇವತ್ತು ರಕ್ಷಣೆ ದೊರೆಯುತ್ತಾ ಇಲ್ಲ. ಇದರ ಬಗ್ಗೆ ಸರ್ಕಾರದವರು ತೀವ್ರ ಗಮನವನ್ನು ಹರಿಸಿ ಬಡ ಜನರಿಗೆ ರಕ್ಷಣೆ ದೊರೆಯುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ಕ್ಷಾಮ ನಿವಾರಣೆ ಬಗ್ಗೆ, ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಬಡವರಿಗೆ ಸರಿಯಾಗಿ ಪರಿಹಾರ ದೊರೆಯುತ್ತಾ ಇಲ್ಲ. ಅಲ್ಲಿ ಕೆಲವೇ ಜನ ಶ್ರೀಮಂತರು ಮತ್ತು ಅವರ ಸಂಬಂಧಿಕರು ಹಣವನ್ನು

(ಶ್ರೀ ಎಂ. ಬಿ. ರಾಮಸ್ವಾಮಿ)

ಉಪಯೋಗಿಸಿಕೊಂಡು ಕ್ಷಾಮ ಪೀಡಿತ ಪ್ರದೇಶದ ಬಡ ಜನರಿಗೆ ತುಂಬಾ ಅನ್ಯಾಯವನ್ನು ಮಾಡುತ್ತಿದ್ದಾರೆ. ಅದರ ಬಗ್ಗೆ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಭೂಸುಧಾರಣೆಯ ಬಗ್ಗೆ ನಮ್ಮ ಮಾನ್ಯ ಸ್ನೇಹಿತರು ಅನೇಕರು ಮಾತನಾಡಿದ್ದಾರೆ. ಭೂಸುಧಾರಣೆ ಕಾನೂನು ಜಾಗ್ರತೆಯಾಗಿ ಜಾರಿಗೆ ಬರಬೇಕು. ಅದರಿಂದ ಬಡವರಿಗೆ ಹೆಚ್ಚಿಗೆ ಅನುಕೂಲವಾಗಬೇಕು.

ಇನ್ನು ನಿರುದ್ಯೋಗದ ಸಮಸ್ಯೆಯ ಬಗ್ಗೆ ಹೇಳುವುದಾದರೆ, ಅದು ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇದಕ್ಕೆ ಪರಿಹಾರವನ್ನು ಆದಷ್ಟು ಜಾಗ್ರತೆಯಾಗ ಕಂಡುಹಿಡಿದು ಹೆಚ್ಚು ಹೆಚ್ಚಾಗಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ತೆಗೆದರೆ ಮಾತ್ರ ಇದು ಸಾಧ್ಯ. ಆ ರೀತಿ ಮಾಡದೆ ಹೋದರೆ, ನಿಜವಾಗಿಯೂ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ಭೂಮಿ ಹಂಚಿಕೆಯ ಬಗ್ಗೆ ಹರಿಜನರಿಗೆ ಬಹಳವಾಗಿ ಅನುಕೂಲವಾಗಿದೆ, ಅದಕ್ಕಾಗಿ ಈಗಾಗಲೇ ನಾಲ್ಕೈದು ಯೋಜನೆಗಳಾಗಿವೆ. ಕೋಟ್ಯಾಂತರ ರೂಪಾಯಿಗಳನ್ನು ಹರಿಜನರಿಗಾಗಿ ಮಿಸಲಾಗಿಟ್ಟು ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ. ಆದರೆ ಅದು ಸರಿಯಾದ ರೀತಿಯಲ್ಲಿ ವಿತರಣೆಯಾಗುತ್ತಾ ಇಲ್ಲ. ಮಧ್ಯದಲ್ಲಿ ಕೆಲವೇ ಜನ ಶ್ರೀಮಂತರು ಆದನ್ನು ಕಸಿದುಕೊಂಡು ಅವರಿಗೆ ಅನ್ಯಾಯಮಾಡುತ್ತಿದ್ದಾರೆ. ಆದ್ದರಿಂದ ಅದರ ಬಗ್ಗೆ ಮಂತ್ರಿಗಳು ಹೆಚ್ಚಿಗೆ ಶ್ರಮವಹಿಸಿ ಸರಿಯಾದ ರೀತಿಯಲ್ಲಿ ಮೀಸಲಾಗಿಟ್ಟಿರುವ ಹಣವನ್ನು ಖರ್ಚುಮಾಡಲು ತಕ್ಕ ವ್ಯವಸ್ಥೆಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಅರಣ್ಯದ ಬಗ್ಗೆ ಹೇಳುವುದಾದರೆ, ಆನೇಕಲ್‌ನಲ್ಲಿ ಬನ್ನೇರುಘಟ್ಟ ಎಂದು ಇದೆ. ಅಲ್ಲಿ ಒಳ್ಳೆಯ ಕಾಡು ಇದೆ. ಈಗಾಗಲೇ ಅಲ್ಲಿ ಸುಮಾರು 2-3 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ನ್ಯಾಷನಲ್ ಪಾರ್ಕ್ ಮಾಡಬೇಕೆಂದಿದ್ದಾರೆ. ಆದರೆ ಅಲ್ಲಿ ಪೋಲೀಸರ ಸಹಾಯದಿಂದ ರಾತ್ರಿಯ ವೇಳೆಯಲ್ಲೂ ಕಳ್ಳರು ದೊಡ್ಡ ದೊಡ್ಡ ಮರಗಳನ್ನು ಕಡಿಯುತ್ತಿದ್ದಾರೆ. ಅಲ್ಲಿಗೆ ಎಷ್ಟೇ ಸಿಬ್ಬಂದಿಯನ್ನು ಹಾಕಿದರೂ ಕೂಡ ಕೆಲವು ಶ್ರೀಮಂತರು ಮತ್ತು ಬಂಡವಾಳಸ್ಥರು ಸೇರಿಕೊಂಡು ಅಲ್ಲಿಯ ಅರಣ್ಯ ಸಂಪತ್ತನ್ನು ಬಹಳವಾಗಿ ಹಾಳು ಮಾಡುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಸರಿಯಾದ ವ್ಯವಸ್ಥೆಮಾಡಬೇಕೆಂದು ಹೇಳುತ್ತೇನೆ.

ಇನ್ನು ಗೃಹನಿರ್ಮಾಣದ ಬಗ್ಗೆ ಕೆಲವಾರು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಹರಿಜನರಿಗಾಗಿ ಮನೆಗಳನ್ನು ಕಟ್ಟುತ್ತೇವೆಂದು ಎಲ್ಲಾ ತಾಲ್ಲೂಕುಗಳಲ್ಲಿಯೂ ಸೊಸೈಟಿಗಳನ್ನು ಮಾಡಿಸುತ್ತಿದ್ದಾರೆ. ಸರಿಯಾದ ರೀತಿಯಲ್ಲಿ ಅವರಿಗೆ ಹಣ ಹೋಗುತ್ತಾ ಇಲ್ಲ. ಕೆಲವೇ ಮುಖಂಡರು ಹಣ ತೆಗೆದುಕೊಂಡು ಅವರಿಗೆ ಇಷ್ಟಬಂದ ರೀತಿಯಲ್ಲಿ ವಿತರಣೆ ಮಾಡುತ್ತಾರೆ. ಈಗ ನೂತನ ಮಂತ್ರಿಗಳಾಗಿ ಬಂದಿರುವವರು ಬಹಳ ಅನುಭವಶಾಲಿಗಳು, ಆದ್ದರಿಂದ ಅವರು ಇದರ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ರಸ್ತೆಗಳ ವಿಷಯ. ಆನೇಕಲ್ ತಾಲ್ಲೂಕಿನಲ್ಲಿ ಇನ್ನು 25 ವರ್ಷಗಳಾದರೂ ಸಹ ನನಗನ್ನಿಸುತ್ತದೆ, ಕೇವಲ ಒಬ್ಬ ಬಸಿರು ಹೆಂಗಸೂ ಸಹ ಆ ರಸ್ತೆಗಳಲ್ಲಿ ನಡೆಯುವುದಕ್ಕಾಗುವುದಿಲ್ಲ. ಏಕೆಂದರೆ ಆ ರಸ್ತೆಗಳ ರಿಪೇರಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಲೆಕ್ಕ ತೋರಿಸುತ್ತಿದ್ದಾರೆ. ಆದರೆ ಅವುಗಳ ಸ್ಥಿತಿಯನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ಹಿರಿಯರಾದ ಮಾನ್ಯ ಶ್ರೀ ಚನ್ನಬಸಪ್ಪನವರು ಈಗ ಈ ಇಲಾಖೆಯನ್ನು ವಹಿಸಿಕೊಂಡಿರುವುದರಿಂದ ಈ ರಸ್ತೆಗಳ ದುರಸ್ತಿಗಾಗಿ ಬಹುಶಃ ನಮ್ಮ ತಾಲ್ಲೂಕಿಗೆ ಹೆಚ್ಚಿಗೆ ಧನಸಹಾಯ ಮಾಡಲು ತೀವ್ರ ಗಮನ ಕೊಡುತ್ತಾರೆಂದು ನಾನು ನಂಬಿದ್ದೇನೆ.

ಇನ್ನು ಬಸ್ಸುಗಳ ವಿಚಾರ. ನಮ್ಮಲ್ಲಿ ನ್ಯಾಷನಲ್ ಹೈರೋಡ್ ಇದೆ. ಅದು ಹೊಸೂರು–ಸೇಲಂ ರೋಡ್. ಒಂದೊಂದು ಬಸ್ಸಿನಲ್ಲಿ 200-300 ಜನ ಪ್ರಯಾಣಿಕರು ಹೋಗುತ್ತಾರೆ. ದಿವಸಗಟ್ಟಲೆ ಕಾದರೂ ಬಸ್ಸುಗಳು ಸಿಗುತ್ತಾ ಇಲ್ಲ. ಖಾಸಗೀ ಬಸ್ಸುಗಳಿಗೆ ಸ್ಟೇಟ್ ಪರ್ಮಿಟ್ ಕೊಟ್ಟಿಲ್ಲ. ಯಾರೂ ಬಸ್ಸು ಓಡಿಸಬಾರದು ಎಂದು ಹೇಳಿದ್ದಾರೆ. ಸರ್ಕಾರದವರು ಅದಕ್ಕಾಗಿ ನಮ್ಮ ಸರ್ಕಾರೀ

ಬಸ್ಸುಗಳನ್ನು ಓಡಿಸುವುದು ಹೆಚ್ಚುಮಾಡಿದರೆ ಅದರಿಂದ ಜನಗಳಿಗೆ ಅನುಕೂಲವಾಗುತ್ತದೆ. ಪ್ರಯಾಣಿಕರು ಜಾಗ್ರತೆಯಾಗಿ ಅವರವರ ಸ್ಥಳಗಳಿಗೆ ಹೋಗಿ ಸೇರುತ್ತಾರೆ. ಆ ವಿಷಯದಲ್ಲಿ ಸರ್ಕಾರದವರು ಸೂಕ್ತ ಗಮನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಮತ್ತೆ ವಿದ್ಯುಚ್ಛಕ್ತಿ ವಿಷಯ. ಕೆಲವು ಕಡೆ ಕೆಲವು ಜನರು ಅವರಿಗೆ ಇನ್‌ಫ್ಲುಯನ್ಸ್ ಇದೆಯೆಂದು ಹೇಳಿದರೆ ಸಾಕು, ಅವರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದ್ದಾರೆ. ಆದರೆ ಬಡವರ ಅರ್ಜಿ ಹೋದರೆ ಅದನ್ನು ಮೂಲೆಗೆ ಒತ್ತುತ್ತಿದ್ದಾರೆ. ಹಿಂದಿನ ರಾಜ್ಯಪಾಲರಾಗಿದ್ದ ಮಾನ್ಯ ಶ್ರೀ ಧರ್ಮವೀರ ಅವರ ಕಾಲದಲ್ಲಿ ಆಗಬಾರದ್ದೆಲ್ಲಾ ಆಗಿಹೋಗಿದೆ. ನಮ್ಮ ತಾಲ್ಲೂಕಿನಲ್ಲಿ ಕೆಲವಾರು ಕಡೆಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾದರೆ, ತುಂಬಾಕಷ್ಟವಾಯಿತು. ಮುಂದೆ ಆ ರೀತಿಯಾಗಿ ತೊಂದರೆ ಆಗದಂತೆ ಸಂಬಂಧಪಟ್ಟ ಮಂತ್ರಿಗಳು ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಒಟ್ಟಿನಲ್ಲಿ ಹೇಳಬೇಕಾದರೆ, ಈ ದಿವಸ ಒಳ್ಳೆಯ ಸರ್ಕಾರ ಬಂದಿದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಮನವಿಮಾಡುವುದಿಷ್ಟೇ. ಮಂತ್ರಿಗಳಾದವರು ಎಲ್ಲಾ ಜಿಲ್ಲೆಗಳಿಗೂ ಪ್ರವಾಸ ಮಾಡುವಾಗ, ಅಲ್ಲಿರತಕ್ಕ ಪ್ರಜಾ ಪ್ರತಿನಿಧಿಗಳು ಕೊಡುವ ಸೂಕ್ತ ಸಲಹೆಗಳ ಪ್ರಕಾರ, ಅಲ್ಲಿರತಕ್ಕ ಬಡವರ ಕಷ್ಟ ಪರಂಪರೆಗಳನ್ನು ಅರಿತುಕೊಂಡು ಅವರಿಗೆ ಸೂಕ್ತ ಮಾರ್ಗದಲ್ಲಿ ಒಳ್ಳೆಯ ರಕ್ಷಣೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ನಾನು ಈ ದಿವಸ ಈ ಸಭೆಯಲ್ಲಿ ಮಾತನಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI H. SIDDAVEERAPPA (Minister for Public Health).—Madam Speaker, I thought I would have no occasion to intervene in this debate for the simple reason that not a word was mentioned in the Governor's Speech. Somehow, some hon. members thought it fit to make a reference to this Department.

As you know, this is one of the nation-building Departments looking after the health in the State. After all, as the adage goes "Health is wealth". If there is no health, no amount of wealth can give you prosperity of happiness. Therefore, I feel that if this Department has to serve the State and the sovereign in the State, namely, the masses who pay for it, this Department and those who work in the Department must, first of all, be humane. They must understand the poblems and then dedicate themselves to serve the State.

We have been spending a considerable amount of money—more than Rs. 20 crores annually for the upkeep, maintenance and the development of this department. We have a number of schemes sponsored wholly by the Centre and some times partially financed both by the Centre and the State. We have a very large number of Doctors also in the State and the number of Hospitals also are very many. As regards the medical personnel, we have now nearly 3,094 Doctors working in Government institutions, besides 2,239 Nurses and 3,833 auxliary Nurses and Midwives. Of these 3,094 Doctors, you can see that 1,174 are in urban areas and only 1,220 are in rural areas. If we take the Doctor-population ratio it is 1:3800 in urban areas and 1:1800 in rural areas. This clearly shows that our population is 80 per cent in the rural areas. Hitherto all our attentions are concentrated in urban areas where the population is only 20 per cent. That shows in a socialistic society if we have to do social justice we may pay more attention to the rulal areas hereafter and try to see that medical facilities are taken to the rural

(SRI H. SIDDAVEERAPPA)

areas to help them. It is with this object in view that we have been thinking of providing greater facilities in the rural areas and it is with this object in view that we have been thinking of starting more hospitals and more health centres in the rural areas.

4-30 P. M.

We have now nearly 1,000 unemployed doctors in this State. We know that to train one doctor we will have to spend about Rs. 80,000 to 90, 000 in all. I thought it would not be advisable to waste this man power which has been trained and which is unemployed. We thought over it and our party has also given a promise that we shall try to solve the unemployment problem in this country. Unemployment does not mean only educated unemployment ; it means both educated as well as un-educated unemployment. We thought that in order to stem the tide of unemployment the Government will have to do something. Therefore, Government have now sanctioned the appointment of 250 doctors on a monthly stipendiary basis of Rs. 250 and the object is to see that they are posted only to the rural areas where there is no medical facility. In the first instance, the object is to provide them jobs in the rural areas and I am happy to say that the Government of India also are agreeable to see that this scheme is financed out of the funds we have got to solve the unemployment problem. I am glad that our Finance Minister also has agreed and he has made necessary arrangements with the Government of India to get the funds to solve this problem. To begin with, they will have to work in the primary health centres and if anybody wants to have his own private practice, Government are also ready and willing to come forward with the necessary financial aid so that they may start their own clinics. The object is that they must go and settle in rural areas instead of trying to stick only to Bangalore and Mysore. It is better that they spread out and go to rural areas. The intention of Government is to see that they are encouraged to go and settle down in villages.

Then there is one other problem which my friend Sri Krishnan has mentioned. The project is called the India Population Project. This is a new project which has been sponsored by the World Bank. The World Bank has interested itself in helping the Government of India to solve this problem and render the help they can. With this object in view they sent a study team. They went round the country and they have selected two States. Out of them Mysore is one that is privileged and the other is Uttar Pradesh. This scheme that has been started as an experimental measure will cost about Rs. 11 crores and it is wholly financed by the Government of India and that has been now taken up in one Division in this State, namely, Bangalore Division. It is a very useful scheme. I do not want to spell out the details. The Director of Health Services and the Secretary of the Health Department are proceeding to America on the 23rd of this month to negotiate

this deal. The idea is that it will have to be started immediately for implementation from July. This will help a number of our unemployed graduates and quite a large number of nurses who are now unemployed for the time being to get employment.

So far as nurses are concerned, the Government are advising them to take up employment if they so wish in the Defence Department where there are any number of vacancies. All the unemployed nurses in this State, if they so like, can find jobs. Like wise the Government of India are also prepared to encourage our doctors. In another five years we may expect another 4,000 doctors to come out of the medical colleges. These doctors, if they so like, may go to the Government of India service like Arunachal Pradesh, Tripura and various other places where they will be started on a monthly salary of Rs. 800 and after a probationery period of one year they will be absorbed by the Government of India after being selected by the U.P.S.C. Their prospects will be many times more than what they are here.

Then, one hon. Member mentioned just now about private medical colleges. This is a problem that has been engaging the attention of this Government. I have been seriously considering as to how to put down the corrupt practices that have crept in there. Government are not unaware of them.

ಶ್ರೀ ಕೋಣಂದೂರು ಲಿಂಗಪ್ಪ.—ಖಾಸಗೀ ಮೆಡಿಕಲ್ ಕಾಲೇಜುಗಳನ್ನು ಇಡುವುದು ಸರಿಯೋ ಅಲ್ಲವೋ, ಅದನ್ನು ತಾವು ತಿಳಿಸಬೇಕು.

SRI H. SIDDAVEERAPPA.—So far as that position is concerned, the hon. Member might have read the Central Government announcement that it is not their intention to take over the private colleges immediately for want of funds. If our Government wishes, nothing prevents. Fortunately for us the Twenty-fifth Constitutional Amendment is also there. The only point that we will have to consider is the financial aspect of it. In order to run a private medical college it costs Rs. 20 lakhs per annum. If we are to take over all the five Medical Colleges it will cost us Rs. 1 crore. We are considering; Government have not spelt out their policy. These are things over which we are pondering.

ಶ್ರೀ ಕೋಣಂದೂರು ಲಿಂಗಪ್ಪ.—ಆ ಕಟ್ಟಡಗಳೆಲ್ಲ ಪಬ್ಲಿಕ್ ಫಂಡ್‌ನಿಂದ ಕಟ್ಟಿಸಿದವುಗಳು. ಆದ್ದರಿಂದ ಅವುಗಳಿಗೇನೂ ಹೆಚ್ಚಿನ ಪರಿಹಾರವನ್ನು ಕೊಡಬೇಕಾಗಿಲ್ಲ.

SRI H. SIDDAVEERAPPA.—It is not a question so much of giving them *parihara*. The recurring expenditure itself comes to about Rs. 20 lakhs per annum. That is a secondary issue altogether. In Kerala I understand there is a Government College where they are taking capitation fee. These are some of the things which we will have to examine and Government will have to spell out its policy after getting the matter thoroughly examined. I am exercised over it and I have been thinking as to what to do about it. I have yet to come to a conclusion after studying and I shall be obliged if hon. Members also express their opinion in the matter.

Sri B. B. SAYANAK.—They can take Rs. 9000 but they are charging more than Rs. 15,000. What are you going to do about it?

Sri H. SIDDAVEERAPPA.—If your pocket is fat, and if you are a prospective father-in-law and if you pay a fabulous dowry, who is there to stop you? It is unethical and it should not be done.

Sri M. S. KRISHNAN.—You are saying unethical. The hon. member Sri B. B. Sayanak is prepared to pay Rs. 9000.

Sri H. SIDDAVEERAPPA.—There are one or two points which I would like to mention. One is about the honorary medical practitioners We have been thinking whether this system is good or beneficial in the interest of the State. I have not come to any conclusion. This is one of the points over which we are exercised.

There is another point and that is about private practice by Government doctors. I think we are now paying Rs. 9 lakhs per annum for 790 Government doctors. It is a fact which cannot be disputed that inspite of non-practising allowance, many private practice is going on clandestinely. That is a very hard fact. Now, what should we do about it? There are States where private practice is allowed; there are certain states who are allowed to do private practice outside the office hours. There are certain states where they pay non-practising allowance. For instance in the Centre non-practising allowance is 50 per cent of the basic salary. This is also another issue over which the Government is exercised. We have been seriously thinking as to what to do with private medical colleges. Most of them do not observe any rules about admission. For instance the rule is that there must be one admission for 5 or 6 beds. In a college it so works out that for each bed there will be 18 to 20 who go for clinical work. probably one has to see the leg, another hand and so on, with the result that the patient gets exhausted and thinks it is a curse. These private medical colleges, I am sorry to say, most of them have not worked satisfactorily. The Government have been indulgent and may I say the university also has been indulgent in allowing for indiscriminate affiliation and admissions. Inspite of rules being there, they have not followed them. Therefore these are some of the points we have to consider in the interest of the medical profession. In the interest of purity of administration we have to do it and moreover I feel our doctors working in the medical institutions must be made to work and feel that they are servants of the people. With that object in view the Government would like to examine as to how best they could tighten up administration. Hitherto we have been studying and wherever cases come to the notice of the Government that administration is not proper, I am there to put it down with a firm hand. we want to deal firmly and see that the administration is toned up.

With these few words I have said what I have got to say. Thank you.

Sri M. S. KRISHNAN.—Regarding the World Bank scheme which the hon. Minister mentioned, I would like to know whether the scheme will really go through because the World Bank is tied with American aid. During Indo-Pakistan war they stopped all aid and we were in colorums. Will the Government assure that we will not be subjected to the vagaries of the policies of the aid giving countries ?

Sri H. SIDDAVEERAPPA.—We are tied with the Government of India and the Goverment of India also are with it. The Government of India have sponsored it and more than that I cannot say about international matters.

Sri M. S. KRISHNAN.—I want to know whether you are going to be pressurised by the imperialism and blackmail of America ?

Sri H. SIDDAVEERAPPA.—So far I know, I do not see that American imperialism is there. World Bank does not mean only U. S. A. It means World Bank.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ, ಆರೋಗ್ಯ ಸಚಿವರು ಆರೋಗ್ಯವಾಗಿ ಎರಡು ಮಾತುಗಳನ್ನು ಆಡಿದ್ದಾರೆ. ಅದಕ್ಕೆ ನನ್ನ ಶುಭಾಶಯಗಳು. ಅವರು ಸೋಷಿಯಲಿಸ್ಟ್ ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಪ್ಪಣೆ ಕೊಡಿಸಿದ್ದಾರೆ. ಬಹಳ ಸಂತೋಷ. ನಮ್ಮ ರಾಜ್ಯದಲ್ಲಿ ಸರ್ಕಾರಿ ವೈದ್ಯಶಾಲೆಗಳು ಮತ್ತು ಖಾಸಗೀ ವೈದ್ಯಶಾಲೆಗಳು ಇವೆ. ಶ್ರೀಮಂತರು ದುಡ್ಡು ಇರುವವರು ಮತ್ತು ತಮ್ಮಂಥಹ ಮಂತ್ರಿ ಮಾನ್ಯರು ಖಾಸಗೀ ವೈದ್ಯಶಾಲೆಗಳಿಗೆ ಹೋಗುತ್ತಾರೆ. ನಮ್ಮಂತಹ ಬಡವರು ಸರ್ಕಾರಿ ವೈದ್ಯಶಾಲೆಗಳಲ್ಲಿ ಕ್ಯೂನಲ್ಲಿ ನಿಂತು ಒದ್ದಾಡುತ್ತಾ ಇದ್ದೇವೆ ಎನ್ನುವುದು ತಮಗೆ ಗೊತ್ತಿದೆ. ಈಗ ಏನು ಬಡವರಿಗೆ ಮತ್ತು ಶ್ರೀಮಂತರಿಗೆ ಮೂಲಭೂತವಾದ ಆರೋಗ್ಯದ ಸಂಬಂಧದಲ್ಲಿ ತಾರತಮ್ಯ ಇದೆ ಅದು ಹೋಗಬೇಕು. ವೈದ್ಯಕೀಯ ಸೌಲಭ್ಯ ಖಾಸಗೀ ವೈದ್ಯಕೀಯ ಶಾಲೆಗಳಲ್ಲಿಯೂ ಸರ್ಕಾರಿ ವೈದ್ಯಶಾಲೆಗಳಲ್ಲಿಯೂ ಸರ್ವರಿಗೂ ಸಮನಾಗಿ ಸಿಗುವಂತೆ ರಾಷ್ಟ್ರೀಕರಣ ಮಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪ.—ಅದು ಬಹಳ ಜಟಿಲವಾದ ಪ್ರಶ್ನೆ, ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಸಮಾಜವಾದಿ ಸಿದ್ಧಾಂತ ಹೇಳತಕ್ಕ ಜನ ಇದ್ದು ಏತಕ್ಕೆ ಈ ಸಮಸ್ಯೆ ಜಟಿಲವಾಗುತ್ತದೆ ?

† ಶ್ರೀ ಎ. ಆರ್. ಬದರಿನಾರಾಯಣ ಅಯ್ಯಂಗಾರ್ (ವಿದ್ಯಾ ಸಚಿವರು).—ಸನ್ಮಾನ್ಯ ಸಭಾಪತಿಯವರೇ, ಗವರ್ನರ್ ಅವರ ಭಾಷಣ ವಿಚಾರದಲ್ಲಿ ಅನೇಕ ಮಾನ್ಯ ಸ್ನೇಹಿತರು ನನ್ನ ಖಾತೆ ವಿಚಾರದಲ್ಲಿ ಕೆಲವು ಮಾತುಗಳನ್ನು ಆಡಿದ್ದಾರೆ. ನಾನು ದೀರ್ಘವಾದ ಭಾಷಣ ಮಾಡುವುದಿಲ್ಲ. ಯಾರು ಯಾರು ಏನೇನು ಪ್ರಶ್ನೆಯನ್ನು ಎತ್ತಿದ್ದಾರೆ, ಅದಕ್ಕೆ ಮಾತ್ರ ಉತ್ತರ ಕೊಟ್ಟು ತಮ್ಮ ಕಾಲವನ್ನು ಹೆಚ್ಚು ಕಳೆಯುವುದಕ್ಕೆ ಅಪೇಕ್ಷೆಪಡುವುದಿಲ್ಲ. ಮೊದಲನೆಯದಾಗಿ ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ರವರು Implementation of compulsory Education to the fullest extent ವಿಚಾರ ಹೇಳಿದರು. ಈ ಪ್ರಶ್ನೆಯನ್ನು ಶ್ರೀಮಾನ್ ರಾಮೇಗೌಡರೂ ಕೂಡ ಎತ್ತಿದ್ದಾರೆ. ಆರುವರ್ಷದಿಂದ ಹತ್ತು ವರ್ಷ ವಯಸ್ಸಿನ ಮಕ್ಕಳಿಗೆ ಕಂಪಲ್ಸನ್ ಬರುತ್ತದೆ. ಅವರು ಸ್ಕೂಲಿಗೆ ಹೋಗಲೇಬೇಕು. ಎನ್ನ ತಕ್ಕಂಥ ಕಡ್ಡಾಯವಿದೆ. ತಂದೆತಾಯಿಗಳು ಅವರನ್ನು ಶಾಲೆಗೆ ಕಳುಹಿಸದೇ ಹೋದರೆ ಶಿಕ್ಷೆ ಇದೆ. ಅವರನ್ನು ಪ್ರಾಸಿಕ್ಯೂಟ್ ಮಾಡಬಹುದು. ಒಂದೊಂದು ಸಲ ಎರಡು ರೂಪಾಯಿ ಫೈನು ಹಾಕಬಹುದು ಕಂಟಿನ್ಯುಯಸ್ ವಯಲೇಷನ್ ಆಗುವುದಾದರೆ ಒಂದು ದಿನಕ್ಕೆ ಐವತ್ತು ಪೈಸೆಯಂತೆ ಶಿಕ್ಷೆ ವಿಧಿಸಬಹುದು. ಇದು ನೂರು ರೂಪಾಯಿಗಳಿಗಿಂತ ಜಾಸ್ತಿ ಆಗಬಾರದು. ಈಗ ಇರತಕ್ಕ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ನಮ್ಮಲ್ಲಿ 18,56,688 ಬಾಲಕರು, 14,57,222 ಬಾಲಕಿಯರು ಒಟ್ಟು 33,13,910 ಜನವಿದ್ಯಾರ್ಥಿಗಳು ಎನ್ಯುಮರೇಟ್ ಆಗಿದ್ದಾರೆ. ಅವರಲ್ಲಿ 17,11,670 ಹುಡುಗರು 13,13,914 ಹುಡುಗಿಯರೂ ಒಟ್ಟು 30,25,584 ಎನ್‌ರೋಲ್ ಆಗಿದ್ದಾರೆ. ಅಂದರೆ ಹುಡುಗರಲ್ಲಿ 92 ಪರ್ಸೆಂಟು ಹುಡುಗಿಯರಲ್ಲಿ 90 ಪರ್ಸೆಂಟು ಒಟ್ಟು 91 ಪರ್ಸೆಂಟ್ ಎನ್‌ರೋಲ್ ಆಗಿದ್ದಾರೆ.

(ಶ್ರೀ ಎ. ಆರ್. ಬದರಿ ನಾರಾಯಣ ಅಯ್ಯಂಗಾರ್)

ಷೆಡ್ಯೂಲ್ ಕ್ಯಾಸ್ಟ್, ಷೆಡ್ಯೂಲ್ ಟ್ರೈಬ್ಸ್‌ನಲ್ಲಿ 3,52,756 ಹುಡುಗರೂ, 2,53,351 ಹುಡುಗಿಯರೂ ಒಟ್ಟು 6,06,107 ಎನ್ಯುಮರೇಟ್ ಆಗಿದ್ದಾರೆ. ಅದರಲ್ಲಿ 2,63,271 ಹುಡುಗರು 1,82,0 8 ಹುಡುಗಿಯರೂ ಒಟ್ಟು 4,45,349 ಎನ್‌ರೋಲ್ ಆಗಿದ್ದಾರೆ. ಅಂದರೆ ಹುಡುಗರಲ್ಲಿ 74·6 ಪರ್ಸೆಂಟ್ ಹುಡುಗಿಯರಲ್ಲಿ 71·9 ಪರ್ಸೆಂಟ್ ಒಟ್ಟು 73·3 ಪರ್ಸೆಂಟ್ ಎನ್‌ರೋಲ್ ಆಗಿದ್ದಾರೆ. ಪೀನಲ್ ಪ್ರಾವಿಷನ್ ಇದ್ದಾಗ್ಯೂ ಕೂಡ ಪೀನಲ್ ಪ್ರಾವಿಷನ್‌ನ್ನು ಹೆಚ್ಚಾಗಿ ಉಪಯೋಗಿಸದೆ ಸಾಧಾರಣವಾಗಿ ಅವರ ಮನಸ್ಸನ್ನು ಒಲಿಸಿಕೊಳ್ಳುವ ದೃಷ್ಟಿಯಿಂದ ಬೆಟರ್‌ಮೆಂಟ್ ಕಮಿಟಿಗಳನ್ನು ಏರ್ಪಡಿಸಲಾಗಿದೆ. ಆ ಬೆಟರ್‌ಮೆಂಟ್ ಕಮಿಟಿಯಲ್ಲಿ ಪಂಚಾಯತಿ ಚೇರ್ಮನ್, ಹೆಡ್ಮಾಸ್ಟರ್, ಷೆಡ್ಯೂಲ್ ಕ್ಯಾಸ್ಟ್ ರೆಪ್ರೆಸೆಂಟೆಟೀವ್, ಹೆಣ್ಣುಮಕ್ಕಳ ರೆಪ್ರೆಸೆಂಟೆಟೀವ್ ಮತ್ತು ವಿದ್ಯಾಭ್ಯಾಸದಲ್ಲಿಂತಕ್ಕ ಎರಡು ಮೂರು ಜನರನ್ನು ಹಾಕಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವಂಥ ತಂದೆತಾಯಿಗಳಿಗೆ ಶಿಕ್ಷೆ ವಿಧಿಸಿದಂಥ ಸಂದರ್ಭ ಇದೆಯೇ ?

**Sri A. R. BADARINARAYANA IYENGER.**—I have no information as to how many have been prosecuted.

32,600 ಸ್ಕೂಲುಗಳ ಪೈಕಿ 29,574 ಸ್ಕೂಲುಗಳಲ್ಲಿ ಬೆಟರ್‌ಮೆಂಟ್ ಕಮಿಟಿಗಳು ಆಗಿವೆ. ಕಮಿಟಿಗಳು ಆದಷ್ಟು ಮಟ್ಟಿಗೆ ಮಕ್ಕಳು ಶಾಲೆಗೆ ಬರುವ ಹಾಗೆ ಪ್ರಯತ್ನ ಮಾಡುತ್ತಿವೆ. ಇನ್‌ಸೆಂಟೀವ್ಸ್ ಕೂಡ ಕೊಡುತ್ತಿದ್ದೇವೆ. ಮತ್ತು ಕಮಿಟೀಸ್‌ಗೆ ರೋಲಿಂಗ್ ಶೀಲ್ಡ್ಸ್ ಮತ್ತು ಪ್ರೈಸಸ್ ಕೊಟ್ಟು ಇನ್‌ಸೆಂಟೀವ್ಸ್ ಕೂಡ ಕೊಟ್ಟಿದೆ. ಈಗ 3 ಪರ್ಸೆಂಟು ಎನ್‌ರೋಲ್ ಮಾಡಿದ್ದಾರೆ. 4ನೇ ಪಂಚವಾರ್ಷಿಕ ಯೋಜನೆಯಲ್ಲಿ 100ಕ್ಕೆ 100 ಪರ್ಸೆಂಟು ಎನ್‌ರೋಲ್‌ಮೆಂಟ್ ಮಾಡುವ ಹಾಗೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಎಜುಕೇಷನ್ ಎಲ್ಲರಿಗೂ ಸಿಕ್ಕುವ ಹಾಗೆ ಮಾಡುವುದಕ್ಕೋಸ್ಕರ ಈ ವಿಚಾರದಲ್ಲಿ ನಮ್ಮ ರಾಜ್ಯ ಸರ್ಕಾರ ಮತ್ತು ಇಂಡಿಯಾ ಸರ್ಕಾರದವರಿಗೂ ಬಹಳ ತೀವ್ರವಾದ ಆಸಕ್ತಿ ಇದೆ. ನ್ಯಾಷನಲ್ ಕೌನ್ಸಿಲ್ ಆಫ್ ರೀಸರ್ಚ್ ಎಕ್ಸ್‌ಟೆನ್‌ಷನ್ ಅಂಡ್ ಟ್ರೈನಿಂಗ್, ಗೌರ್ನಮೆಂಟ್ ಆಫ್ ಇಂಡಿಯಾ ಅವರೂ ಕೂಡ ಸರ್ವೆ ಮಾಡಿದ್ದಾರೆ. ಈ ವಿಚಾರವನ್ನು ಕಾನ್‌ಫರೆನ್ಸ್‌ನಲ್ಲಿ ಚರ್ಚೆ ಮಾಡಲಾಯಿತು. ಶ್ರೀ ಜಯಪ್ರಕಾಶನಾರಾಯಣ್‌ರವರು ಇನ್ನೊಂದು ವಿಚಾರ ಎತ್ತಿದ್ದಾರೆ. ಷೆಡ್ಯೂಲ್ ಟ್ರೈಬ್ಸ್‌ಗಳಿಗೆ ಟೆಕ್ಸ್ಟ್ ಬುಕ್ಸ್, ಬಟ್ಟೆ, ಆಹಾರ ಕೊಡತಕ್ಕ ವಿಚಾರ ಕೇಳಿದ್ದಾರೆ. 1ನೇ ಸ್ಟ್ಯಾಂಡರ್ಡ್‌ನಿಂದ 7ನೇ ಸ್ಟ್ಯಾಂಡರ್ಡ್‌ನವರೆಗೂ ಅಟೆಂಡೆನ್ಸ್ ಸ್ಕಾಲರ್‌ಷಿಪ್ಸ್‌ನ್ನು ಕೊಡಬೇಕೆಂದು ಇದೆ. ಅದಕ್ಕೋಸ್ಕರ ಒಟ್ಟು 40 ಲಕ್ಷ 25 ಸಾವಿರ ರೂಪಾಯಿ ಪ್ರಾವಿಷನ್ ಮಾಡಿದ್ದೇವೆ. ಇದರಲ್ಲಿ ಶೇಕಡ 18 ರಷ್ಟು ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಗೆ ಕೊಡುತ್ತಾ ಇದ್ದೇವೆ. ಅದರಂತೆ ಪ್ಲೇಟ್ಸ್, ಟೆಕ್ಸ್ಟ್ ಬುಕ್ಸ್ ಮತ್ತು ಯೂನಿಫಾರಂಸ್ ಕೊಡುತ್ತಾ ಇದ್ದೇವೆ.

ಶ್ರೀ ಎಂ. ಎಸ್, ಕೃಷ್ಣನ್.—ಈ ಸಹಾಯ ಪೂರ್ತಿಯಾಗಿ ಉಪಯೋಗವಾಗಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್ ಅಯ್ಯಂಗಾರ್.—ಪೂರ್ತಿಯಾಗಿ ಉಪಯೋಗವಾಗಿದೆ ಎಂದು ತಿಳಿದುಕೊಂಡಿದ್ದೇನೆ. ನ್ಯೂನತೆಗಳು ಇದ್ದರೆ ದಯಮಾಡಿ ತಿಳಿಸಿದರೆ ಗಮನ ಕೊಡುತ್ತೇನೆ.

ಇನ್ನು ಮಿಡ್ಡೇಮೀಲ್ಸ್ ವಿಚಾರ ಕೇಳಿದರು. ಕೇರ್ ಅಸಿಸ್ಟೆನ್ಸ್ ಏನು ಇದೆ ಅದರಿಂದ ಈ ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ; ಅಲ್ಲಲ್ಲಿ ಮಿಡ್ಡೇಮೀಲ್ಸ್ ವಿಚಾರದಲ್ಲಿ ಕಂಪ್ಲೇಂಟ್ಸ್ ಇವೆ. ಎಂದು ನಮ್ಮ ಗಮನಕ್ಕೆ ತಂದಿದ್ದೀರಿ. ಎಂಬುದು ಗೊತ್ತಿದೆ. ಅದಕ್ಕೆ ಏನು ಮಾಡಬೇಕೋ ಮಾಡುತ್ತೇವೆ. ಹೇಗೆ ಸರಿಮಾಡಬೇಕೋ ಹಾಗೆ ಸರಿ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಹೇಳಬೇಕಾದರೆ ತಮಗೇ ನಗುಬರುತ್ತಿದೆಯಲ್ಲಾ ಸ್ವಾಮಿ.

ಶ್ರೀ ಎ. ಆರ್. ಬದರಿನಾರಾಯಣ್ ಅಯ್ಯಂಗಾರ್.—ಇರುವುದನ್ನು ಇದೆ ಎಂದು ಹೇಳಬಹುದು, ಇಲ್ಲದೇ ಇರುವುದನ್ನು ಇಲ್ಲ ಎಂದು ಹೇಳಬಹುದು. ಇರುವುದನ್ನು ಒಪ್ಪಿಕೊಳ್ಳುವುದರಲ್ಲಿ ತಪ್ಪು ಇಲ್ಲ. ಆ ರೀತಿ ಕಂಪ್ಲೇಂಟ್ ಇದ್ದರೆ ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದಷ್ಟು ಮಟ್ಟಿಗೆ ನ್ಯೂನತೆಯನ್ನು ಹೋಗಲಾಡಿಸುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೆಕೆಂಡರಿ ಸ್ಟೇಜ್ ಆಫ್ ಎಜುಕೇಷನ್ ಹೈಸ್ಕೂಲಿನಲ್ಲಿ ಷೆಡ್ಯೂಲ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ಫೀಸ್ ಕೊಡಬೇಕಾದ್ದಿಲ್ಲ. ಆತನು ಫೇಲ್ ಆದರೂ ಕೂಡ ರಿಪೀಟರ್ಸ್ ಫೀಸ್ ಕೊಡಬೇಕಾದ್ದಿಲ್ಲ. ಕನ್‌ಸೆಷನ್ಸ್ ಕೊಟ್ಟಿದ್ದೇವೆ. ಇನ್ನೊಂದು ವಿಚಾರವನ್ನು ಶ್ರೀ ಜಯಪ್ರಕಾಶ್ ನಾರಾಯಣ್‌ರವರು ಎತ್ತಿದರು. ಹರಿಜನ ಹಾಸ್ಟಲುಗಳನ್ನು ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಇರತಕ್ಕಂಥಾದ್ದನ್ನು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ವರ್ಗಾಯಿಸುವುದು ಬೇಡ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ಈಗ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲೇ ಇದೆ. ಸಧ್ಯಕ್ಕೆ ಅಂತಹ ಪ್ರಪೋಸಲ್ಸ್ ಯಾವುದೂ ಇಲ್ಲ.

ಆಮೇಲೆ ಸ್ಟೆಪ್ಪಿಂಗ್ ಅಪ್ ಆಫ್ ಬೋರ್ಡಿಂಗ್ ಗ್ರಾಂಟ್ ಫ್ರಮ್ Rs. 30. ಈ ಬೋರ್ಡಿಂಗ್ ಗ್ರಾಂಟ್ ಸಾಲದು ಎಂದು ಹೇಳಿದ್ದಾರೆ. ಒಂದು ವರ್ಷಕ್ಕೆ 17 ಲಕ್ಷ ರೂಪಾಯಿ ಆಗುತ್ತದೆ. ಇದನ್ನು ಜಾಸ್ತಿ ಮಾಡುವ ವಿಚಾರದಲ್ಲಿ ಫೈನಾನ್ಸ್ ಬಗ್ಗೆ ಬಹಳ ತೊಂದರೆ ಇರುವುದರಿಂದ ಸದ್ಯಕ್ಕೆ ಜಾಸ್ತಿ ಮಾಡುವ ವಿಚಾರ ಇಲ್ಲ.

ಇನ್ನು ನರ್ಸರಿ ಸ್ಕೂಲುಗಳನ್ನು ಜಾಸ್ತಿ ಮಾಡಬೇಕೆಂದು ಹೇಳಿದ್ದಾರೆ. ಶ್ರೀಮತಿ ಮಡಿಮನ್ ರವರೂ ಕೂಡ ಈ ವಿಚಾರದಲ್ಲಿ ಹೇಳಿದ್ದಾರೆ. ಎಜುಕೇಷನ್ ಡಿಪಾರ್ಟ್‌ಮೆಂಟ್ ಬಹುಶಃ ನರ್ಸರಿ ಸ್ಕೂಲುಗಳನ್ನು ಸದ್ಯಕ್ಕೆ ಓಪನ್ ಮಾಡುವುದಿಲ್ಲವೆಂದು ತೀರ್ಮಾನವಾಗಿದೆ. 15 ನರ್ಸರಿ ಸ್ಕೂಲ್‌ಗಳನ್ನು ಮಾತ್ರ ಸರ್ಕಾರದಿಂದ ನಡೆಸುತ್ತಾ ಇದ್ದಾರೆ. 127 ಲೋಕಲ್ ಬಾಡೀಸ್ ಮತ್ತು 656 ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗಳಲ್ಲಿ ನಡೆಯುತ್ತಾ ಇವೆ. ಒಟ್ಟು 798 ನರ್ಸರಿ ಸ್ಕೂಲುಗಳು ಈಗ ಇವೆ. ಪ್ರೈವೇಟ್ ನರ್ಸರಿ ಸ್ಕೂಲ್ಸ್ ಯಾರಾದರೂ ನಡೆಸುತ್ತಾ ಇದ್ದರೆ ಸರ್ಕಾರ ಈ ರೀತಿ ಸಹಾಯ ಮಾಡುತ್ತದೆ.

> "58 percent of the authorised expenditure in Urban areas and 70 percent of the authorised expenditure in Rural areas and 50 percent equipment subject to the availability of funds".

ಶ್ರೀ ಕಾಗೋಡು ತಿಮ್ಮಪ್ಪ.—ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ನರ್ಸರಿ ಸ್ಕೂಲುಗಳು ಇವೆ ಮತ್ತು ನಗರ ಪ್ರದೇಶಗಳಲ್ಲಿ ಎಷ್ಟು ನರ್ಸರಿ ಸ್ಕೂಲುಗಳು ಇವೆ ?

ಶ್ರೀ ಎ. ಆರ್. ಬದರಿನಾರಾಯಣ್ ಅಯ್ಯಂಗಾರ್.—ತಾವು ಈ ಪ್ರಶ್ನೆ ಕೇಳುವುದು ಒಳ್ಳೆಯದು. ಕೇಳತಕ್ಕ ಸಮಯದಲ್ಲಿ ಕೇಳಿದರೆ ಹೇಳತಕ್ಕ ರೀತಿಯಲ್ಲಿ ಹೇಳಬಹುದು.

ಇನ್ನು ಶ್ರೀ ವೀರಪ್ಪಗೌಡರು 5 ವರ್ಷ ಸರ್ವಿಸ್ ಆಗಿದ್ದವರನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಟ್ರಾನ್ಸ್‌ಫರ್ ಮಾಡಬೇಕು ಎಂದು ಹೇಳಿದರು. ಇದನ್ನು ಫೇಸ್ಡ್ ಪ್ರೋಗ್ರಾಂ ಪ್ರಕಾರ ಮಾಡಬೇಕಾಗುತ್ತದೆ. ಕಾರಣ ಟಿ.ಎ. ಮತ್ತು ಡಿ.ಎ. ಪ್ರಶ್ನೆ ಬರುತ್ತದೆ. ಅದು ಬಹಳ ಜಾಸ್ತಿ ಅಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ವಿಷಯವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಎಲ್ಲಾ ಮೇಷ್ಟರುಗಳನ್ನೂ ಹೊರಗಡೆ ಹಾಕಬೇಕಾದರೆ ಮೊದಲು ವಾಸದ ಮನೆಗಳನ್ನು ಕಟ್ಟಬೇಕು. ಮನೆಗಳನ್ನು ಕಟ್ಟದೆ ಹೊರಗಡೆ ಹಾಕಬೇಕು ಎನ್ನುವ ಭಾವನೆ ಇಟ್ಟುಕೊಂಡು ಹಾಕುವುದು ನನಗೆ ಸರಿ ಎನಿಸುವುದಿಲ್ಲ.

ಶ್ರೀ ಎ. ಆರ್. ಬದರಿನಾರಾಯಣ್ ಅಯ್ಯಂಗಾರ್.—ಶ್ರೀಮಾನ್ ದೇವೇಗೌಡರು ಹೇಳಿದ ವಿಚಾರ ಒಪ್ಪಿಕೊಳ್ಳುತ್ತೇನೆ. ಅನೇಕ ಗ್ರಾಮಗಳಲ್ಲಿ ಹಳ್ಳಿಗಳಲ್ಲಿ ವಾಸಕ್ಕೆ ಮನೆ ಇಲ್ಲದೆ ತೊಂದರೆ ಆಗುತ್ತದೆ ಎನ್ನುವ ವಿಚಾರ ತಮಗೆ ಗೊತ್ತಿದೆ. ಈ ವಿಚಾರದಲ್ಲಿ ತಮಗೆ ಗೊತ್ತಿರುವ ಹಾಗೆ ಫೈನಾನ್ಸ್ ಪ್ರಶ್ನೆ ಬರುತ್ತದೆ. ಎಲ್ಲಾ ಕಡೆಗಳಲ್ಲೂ ಕಟ್ಟಡ ಕಟ್ಟಿಸುವುದಕ್ಕಾಗುವುದಿಲ್ಲ. It is to be done on a phased programme. ತತ್ರಾಪಿ ಹರಿಜನ, ಗಿರಿಜನರ ವಿಚಾರ ಶೋಚನೀಯವಾಗಿದೆ. ಅವರು ಏನು ಹೇಳುತ್ತಾರೆ ಎಂದರೆ ಹಳ್ಳಿಗಳಿಗೆ ಟ್ರಾನ್ಸ್‌ಫರ್ ಮಾಡಬೇಡಿ ಮನೆಗಳು ಸಿಕ್ಕುವುದಿಲ್ಲ, ಟೌನ್‌ಗಳಿಗೆ ಮಾಡಿಕೊಡಿ ಎಂದು ಹೇಳುತ್ತಾರೆ. ಆ ಒಂದು ಪ್ರಶ್ನೆ ಸರ್ಕಾರದ ಮುಂದೆ ಇದೆ.

ಶ್ರೀ ಹೆಚ್. ಟಿ. ಕೆಂಚೇಗೌಡ.—ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳು ಹಳ್ಳಿಯಲ್ಲೇ ಇದ್ದುಕೊಂಡು ಸ್ವಂತ ವ್ಯವಸಾಯ ಮಾಡುತ್ತಾರೆ ಆದುದರಿಂದ ಅವರನ್ನು ಬೇರೆ ಕಡೆ ಟ್ರಾನ್ಸ್‌ಫರ್ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ್ ಅಯ್ಯಂಗಾರ್.— ಶ್ರೀ ಕೆಂಚೇಗೌಡರು ಹೇಳಿದ ಹಾಗೆ ಅದೇ ತಾಲ್ಲೂಕಿನಲ್ಲಿರತಕ್ಕಂಥ ಮೇಷ್ಟ್ರು ಅಲ್ಲೇ ಇರುವ ಹಾಗೆ ಮಾಡಿದರೆ ಜಮೀನುಗಳ ವ್ಯವಹಾರ ನಡೆಸಿಕೊಂಡು ಸ್ಕೂಲುಕಡೆ ಗಮನ ಕೊಡುತ್ತಾ ಇಲ್ಲ ಎನ್ನುವ ಅಪಾದನೆ ಇದೆ. ಅದನ್ನು ಹೋಗಲಾಡಿಸಬೇಕಾದರೆ ಅವರನ್ನು ಆ ತಾಲ್ಲೂಕಿನಲ್ಲೇ ಇಡಬೇಡಿ ಹೊರಗಡೆ ತಾಲ್ಲೂಕಿಗೆ ಹಾಕಿ ಎಂದು ಹೇಳುವುದರಿಂದ ಮುಖ್ಯವಾಗಿ ಮಕ್ಕಳ ವಿದ್ಯಾಭ್ಯಾಸದ ಹಿತದೃಷ್ಟಿಯಿಂದ ಆರೀತಿ ಮಾಡತಕ್ಕದ್ದು ಸೂಕ್ತ. ಆದರೆ ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ಹೌಸಿಂಗ್ ಫೆಸಿಲಿಟೀಸ್ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಆ ಪ್ರಯತ್ನ ಮಾಡಿದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ, ಈ ವಿಷಯವನ್ನು ಯೋಚನೆ ಮಾಡಬೇಕು ಎಂದು ನನಗೆ ಅನಿಸುತ್ತದೆ. ಆದರೆ ಉಪಾಧ್ಯಾಯರನ್ನು ರೆಕ್ರೂಟ್ ಮಾಡುವಾಗ ಸ್ಥಳದವರನ್ನು ಅವರಿಗೆ ಸಂಬಂಧಪಟ್ಟ ತಾಲ್ಲೂಕಿಗೆ ಪೋಸ್ಟ್ ಮಾಡುವುದಿಲ್ಲ.

5-00 P.M.

ಶ್ರೀ ಪುಟ್ಟಸ್ವಾಮಿಯವರು ಒಂದು ಪ್ರಶ್ನೆ ಎತ್ತಿದ್ದಾರೆ. ಜೂನಿಯರ್ ಕಾಲೇಜನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸ್ಥಾಪಿಸಬೇಕೆಂದು ಸಲಹೆ ಮಾಡಿದ್ದಾರೆ. ಎರಡು ವರ್ಷದ ಜೂನಿಯರ್ ಕಾಲೇಜು 1971-72 ರಿಂದ ಜಾರಿಗೆ ಬಂದಿದೆ. ಈಗ 23 ಹೊಸ ಜೂನಿಯರ್ ಕಾಲೇಜುಗಳನ್ನು ಸ್ಥಾಪಿಸಲು ಅನುಮತಿ ಕೊಡಲಾಗಿದೆ. 328 ಗವರ್ನಮೆಂಟ್ ಏಡೆಡ್ ಸೆಕೆಂಡರಿ ಶಾಲೆಗಳಲ್ಲಿ ಮೊದಲನೆ ವರ್ಷದ ಪಿ.ಯು.ಸಿ. ತರಗತಿಯನ್ನು ಪ್ರಾರಂಭಿಸಲು ಅವಕಾಶ ಕೊಡಲಾಗಿದೆ. 378 ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ಎರಡನೆ ವರ್ಷದ ಪಿ.ಯು.ಸಿ. ತರಗತಿಯನ್ನು ನಡೆಸಲು ಅವಕಾಶ ಕೊಡುವ ವಿಚಾರ ಆಲೋಚನೆಯಲ್ಲಿದೆ. ಪ್ರತಿ ತಾಲ್ಲೂಕಿಗೂ ಒಂದು ಶಾಲೆ ಮತ್ತು ಕಾಲೇಜನ್ನು ತೆರೆಯಲು ಅವಕಾಶ ಮಾಡಬೇಕು ಎಂದು ಶ್ರೀ ಪುಟ್ಟಸ್ವಾಮಿಯವರು ಸಲಹೆ ಮಾಡಿರುವುದನ್ನು ಯೋಚನೆಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ. ರಾಯಚೂರಿಗೆ ಒಂದು ಸರಕಾರಿ ಕಾಲೇಜು ಬೇಕೆಂದು ಶ್ರೀ ಶರಣಪ್ಪನವರು ಕೇಳಿದ್ದಾರೆ. ಅಲ್ಲಿ ಈಗ ಒಂದು ಪ್ರೈವೇಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜು, ಒಂದು ಕಾಮರ್ಸ್ ಕಾಲೇಜು ಮತ್ತು ಒಂದು ಹೆಣ್ಣುಮಕ್ಕಳ ಕಾಲೇಜು ಇವೆ. ಅವಕ್ಕೆ ರೆಕಗನಿಷನ್ ಇದೆ. 71-72ರಲ್ಲಿ ಒಂದು ಸರಕಾರಿ ಕಾಲೇಜನ್ನು ರಾಯಚೂರು ಜಿಲ್ಲೆ ಸಿಂಧನೂರಿನಲ್ಲಿ ಪ್ರಾರಂಭಿಸಲಾಯಿತು. ಹಣದ ಕೊರತೆಯಿಂದ ಈಗ ಕಾಲೇಜ್ ಇನ್ನೊಂದನ್ನು ಈ ವರ್ಷ ರಾಯಚೂರಿನಲ್ಲಿ ಪ್ರಾರಂಭಿಸಲು ಸದ್ಯಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗಿದೆ.

ಶ್ರೀ ಸಯನಕ್ ಅವರು ಟೆಕ್ಸ್ಟ್‌ಬುಕ್‌ಗಳನ್ನು ಲೇಟಾಗಿ ಸರಬರಾಯಿ ಮಾಡುವ ವಿಚಾರ ಮತ್ತು ಹಿಂದಿಯಿಂದ ಮರಾಠಿಗೆ ಭಾಷಾಂತರ ಮಾಡುವ ವಿಚಾರ ತಿಳಿಸಿದ್ದಾರೆ. ಮತ್ತು ಪುಸ್ತಕಗಳಲ್ಲಿರುವ ನ್ಯೂನತೆಯ ವಿಚಾರ ಹೇಳಿದ್ದಾರೆ.

ಶ್ರೀ ಶರಣಪ್ಪ.—ಪ್ರತಿಯೊಂದು ತಾಲ್ಲೂಕಿನಲ್ಲೂ ಜೂನಿಯರ್ ಕಾಲೇಜನ್ನು ತೆರೆಯಬೇಕೆಂಬ ನೀತಿಯಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ ಅಯ್ಯಂಗಾರ್.—ಬಜೆಟ್ ಪ್ರಪೋಸಲ್ ಮಾಡುವಾಗ ಹಣದ ಅನುಕೂಲತೆ ನೋಡಿ ಒಂದು ತೀರ್ಮಾನಕ್ಕೆ ಬರಲಾಗುವುದು.

ಮರಾಠಿ ಪಠ್ಯಪುಸ್ತಗಳ ವಿಚಾರ ಹೇಳುತ್ತೇನೆ. 15 ನ್ಯಾಷನಲೈಜ್ ಟೆಕ್ಸ್ಟ್‌ಬುಕ್ಸ್ 8, 9, 10, ನೇ ಸ್ಟ್ಯಾಂಡರ್ಡ್‌ಗೆ ಸಂಬಂಧಪಟ್ಟಂತೆ ಸೋಷಿಯಲ್ ಸ್ಟಡೀಸ್, ಜನರಲ್ ಸೈನ್ಸ್ ಮತ್ತು ಲೆಕ್ಕ ಈ ವಿಷಯಗಳಿಗೆ ಸಂಬಂಧಪಟ್ಟಿರುವುದು ಪ್ರಿಂಟ್ ಆಗಿವೆ. ಇಬ್ಬರು ಪ್ರೈವೇಟ್ ಪಬ್ಲಿಷರ್ಸ್‌ನಿಂದ ಮರಾಠಿಯಲ್ಲಿ ಪ್ರಿಂಟ್ ಆಗಿದೆ. 8 ಸಾವಿರ ಕಾಪಿ ಆಗಿದೆ ಎಂದು ವರದಿಯಾಗಿದೆ. ಶಾಲೆ ತೆರೆದು ಪುಸ್ತಕಗಳನ್ನು ಕೊಡಲಾಗಿದೆ. 7ನೇ ಸ್ಟ್ಯಾಂಡರ್ಡ್‌ಗೆ ಸಂಬಂಧಿಸಿದ ಸೋಷಿಯಲ್ ಸ್ಟಡೀಸ್, ಜನರಲ್ ಸೈನ್ಸ್ ಮತ್ತು ಲೆಕ್ಕ ಇವಕ್ಕೆ ಸಂಬಂಧಪಟ್ಟ ಮೂರು ಪುಸ್ತಕಗಳು ಪ್ರೈವೇಟ್‌ನವರಿಂದ ಪಬ್ಲಿಷ್ ಆಗಿದೆ. ಇದರಲ್ಲಿ ಎರಡು ಸರಿಯಾಗಿದೆ. ಆದರೆ ನ್ಯೂ ಪುಸ್ತಕ ಪಬ್ಲಿಷರ್ಸ್ ಸೋಷಿಯಲ್ ಸ್ಟಡೀಸ್‌ಗೆ ಸಂಬಂಧಪಟ್ಟ ಪುಸ್ತಕ ಪ್ರಿಂಟ್ ಮಾಡಿರುವುದರಲ್ಲಿ ಮ್ಯಾಪನ್ನು ಕನ್ನಡದಲ್ಲಿ ಹಾಕಿದ್ದಾರೆ. ತಕ್ಷಣ ಅದನ್ನು ನೋಡಿ ಪುನಃ ಸರಿಯಾಗಿ ಮುದ್ರಿಸಲು ಹೇಳಿ ಸರಿಮಾಡಿಸಿಕೊಡಲಾಗಿದೆ. ತಪ್ಪುಮಾಡಿದ್ದಕ್ಕೆ ಶಿಕ್ಷೆ ಕೂಡ ಮಾಡಲಾಗಿದೆ, ಪುನಃ ಸರಿಮಾಡುವ ಖರ್ಚನ್ನು ಅವರೇ ವಹಿಸಿದ್ದಾರೆ. ನಂತರ ಹಿಂದಿ ಪ್ರಶ್ನೆ ಪತ್ರಿಕೆ ವಿಚಾರ ಹೇಳಿದ್ದಾರೆ. ಭಾಷಾಂತರ ಮಾಡಬೇಕೆಂದು ತಿಳಿಸಿದ್ದಾರೆ. ಹೆಚ್ಚಾಗಿ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಮಾತ್ರ ಅವು ಪ್ರಿಂಟಾಗುವುವು. ಮರಾಠಿಯಲ್ಲಿ ಭಾಷಾಂತರಿಸಿ ಪ್ರಿಂಟ್ ಮಾಡಲು ಅವಕಾಶವಿಲ್ಲದ್ದರಿಂದ ಮಾಡಿಲ್ಲ, ಮುಂದೆ ಯೋಚನೆ ಮಾಡೋಣ.

ಎಕ್ಸ್‌ಪೊ 70ರ ವಿಚಾರ ಶ್ರೀ ಗುಂಡುರಾಯರು ಪ್ರಸ್ತಾಪಿಸಿದ್ದಾರೆ, ಆ ವಿಚಾರದಲ್ಲಿ ಎನ್‌ಕ್ವೈರಿ ಮಾಡುವ ವಿಚಾರ ಹೇಳಿದರು. ಮೆರಿಟ್ ಇಲ್ಲದಿರುವವರನ್ನು ಆರಿಸಿ ಕಳಿಸಿದ್ದಾರೆ ಎಂದು ಹೇಳಿದ್ದಾರೆ. ಸರಕಾರಿ ಆಜ್ಞೆ ಪ್ರಕಾರ ಎಕ್ಸ್‌ಪೊ 70 ರಲ್ಲಿ 143 ಜನ ಸ್ಪೆಷಲ್ ಆಫೀಸರ್ಸನ್ನು ಡೆಪ್ಯೂಟ್ ಮಾಡಿದರು. ಒಟ್ಟು ಖರ್ಚು 6,30,000 ರೂಪಾಯಿ ಆಗಿದೆ. ಯಾವ ಆಧಾರದ ಮೇಲೆ ಆರಿಸಿ ಕಳಿಸಿದರು ಎಂದರೆ ಅಕೆಡಮಿಕ ಎಕ್ಸಲೆನ್ಸ್ ಇರುವವರನ್ನು, ಸ್ಪೋರ್ಟ್ಸ್ ಮತ್ತು ಎಕ್ಸ್‌ಟ್ರಾ ಕರಿಕ್ಯುಲರ್ ಆಕ್ಟಿವಿಟೀಸ್ ಇರುವವರನ್ನು ವೈಸ್‌ಛಾನ್ಸಲರು ಆರಿಸುವರು. ಸಂಗೀತ-ನಾಟಕ ಅಕ್ಯಾಡಮಿಯಿಂದ ಕಲ್ಚರಲ್ ಆಕ್ಟಿವಿಟೀಸ್ ಇರುವವರನ್ನು, ವಾಲಂಟರಿ ಯೂತ ಆರ್ಗನೈಜೇಷನ್ನಿನವರು, ಸೇವಾದಳದವರು, ಸ್ಕೌಟ್ಸ್ ಮತ್ತು ಗೈಡ್ಸ್ ಮುಂತಾದ ಕಡೆಗಳಿಂದ ಶಿಫಾರಸು ಮಾಡಲ್ಪಟ್ಟಿರುವವರನ್ನು, ಆರಿಸಿ ಕಳಿಸಲಾಗಿದೆ. ಜಿಲ್ಲಾಧಿಕಾರಿಗಳಿಂದ ಚುನಾಯಿಸಲ್ಪಟ್ಟ ಯುವಕರು ಮತ್ತು ಯೂತ್ ಬೋರ್ಡ್ ಛೇರ್ಮನ್ನರು ಶಿಫಾರಸು ಮಾಡಿರುವುದು, ಸ್ಮಾಲ್ ಸ್ಕೇಲ್ ಇಂಡಸ್ಟ್ರಿಯಲಿಸ್ಟ್, ರೋಟರಿ ಕ್ಲಬ್, ಲಯನ್ಸ್ ಕ್ಲಬ್, ಜೂನಿಯರ್ ಛೇಂಬರ್ ಆಫ್ ಕಾಮರ್ಸ್‌ನವರು, ಯಂಗ್ ಫಾರ್ಮರ್ಸ್ ಅಸೋಸಿಯೇಷನ್‌ನವರು ಸೆಲೆಕ್ಟ್ ಮಾಡಿರವುದನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದೆ. ಅಂಥವರನ್ನು ಕಳಿಸಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳುವುದು ಅರ್ಥವಾಗುವುದಿಲ್ಲ, ಮುಖಕ್ಕೆ ಮಸಿ ಬಳಿಯುವ ಕೆಲಸ ಮಾಡುತ್ತಿದ್ದಾರೆ. ಜಪಾನಿಗೆ ಕಳಿಸುವಾಗ ಮಂತ್ರಿಗಳು ಈ ಕಡೆ ಇದ್ದರು. ಈಗ ಅವರು ಪರಿಶೀಲಿಸುವುದೇನು ? ಎಕ್ಸ್‌ಪೋ ಅಧಿಕಾರಿಗಳು ಈ ವಿಚಾರದಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಮಾಡಿಲ್ಲವೇ ? ಅವರ ಮಕ್ಕಳನ್ನು ಮತ್ತು ಅವರಿಗೆ ಬೇಕಾದವರನ್ನು ಕಳಿಸಿಲ್ಲವೇ ? ಅದರ ಬಗ್ಗೆ ವಿಚಾರಮಾಡಿ ಎಂದರೆ ಅದನ್ನು ಮಾಡದೆ ಸುಮ್ಮನೆ ಲಿಸ್ಟ್ ಓದಿದರೆ ಪ್ರಯೋಜನವೇನು ? ಅವರು ಸಭೆಗೆ ಅವಮಾನ ಮಾಡುತ್ತಿದ್ದಾರೆ. The Hon'ble Minister is agitating us, is exposing us !

Sri A. R. BADARINARAYANA IYENGAR.—It is like beating a dead horse. I am only making a statement of facts. I am not saying whether what was done is justified.

Sri M. S. KRISHNAN.—That was done wrongly. But, what action are you going to take against those people ?

Sri R. GUNDU RAO.—I want to know the names of persons.

Sri A. R. BADARINARAYANA IYENGAR.—It is a long list. It was laid on the Table of the House. ಹಿಂದಿನ ಸಭೆಯ ಸದಸ್ಯರು ಈ ವಿಷಯದಮೇಲೆ ನಿರ್ಣಯ ತಂದಿದ್ದರು, ಆಗ ಇದರ ಮೇಲೇನಾಯಿತು ಎಂಬುದನ್ನು ಡೈರೆಕ್ಟರ್ ಅವರು ಬಂದ ಮೇಲೆ ವಿಚಾರ ಮಾಡುತ್ತೇನೆ. ಶ್ರೀ ಗುಂಡೂರಾಯರು ಈ ವಿಷಯವನ್ನು ಪರಿಶೀಲಿಸಬೇಕು ಎಂದು ಹೇಳಿದ್ದಾರೆ. This is a matter for consideration and decision by the Government.

Sri M. S. KRISHNAN.—This is a stereotyped answer we have been hearing since times immemorial. The Hon'ble Minister when he was sitting this side criticised and said that an enquiry should be conducted. But, now he is saying something else. Why this double standard when he goes that side ?

Sri A. R. BADARINARAYANA IYENGAR.—It is hardly 10 or 15 days that this Ministry has been in office. This matter has been raised by Sri Gundu Rao, and I am saying that the matter will be considered and decided by the Government. Why does the hon. member say that I have no interest ?

Sri M. S. KRISHNAN.—With due respect to the Hon. Minister for Education, I would only request that certain things should be done quickly. Supposing the Minister had conducted the enquiry which was there in the minds of the people, the image of the Minister would have gone high. That would have been the image of the Prime Minister.

Sri A. R. BADARINARAYANA IYENGAR.—There was hardly any time for us to look into this matter.

ಶ್ರೀ ಕೆ. ಪ್ರಭಾಕರ್.—ಎನ್ಯೂಮರೇಷನ್ ನಡೆದಿರುವ ಪ್ರಕಾರ 75 ಪರ್ಸೆಂಟ್ ಹರಿಜನರ ಮಕ್ಕಳು ಓದುತ್ತಿದ್ದಾರೆಂದು ಹೇಳಿದರು. ಹರಿಜನರ ಮಕ್ಕಳಲ್ಲಿ ಸೇಕಡ 10–15 ರಷ್ಟುಕೂಡ ಶಾಲೆಗಳಿಗೆ ಹೋಗುತ್ತಿಲ್ಲ. ವರ್ಷದ ಪ್ರಾರಂಭದಲ್ಲಿ ಸ್ವಲ್ಪ ಜಾಸ್ತಿ ಇದ್ದ ಹಾಗೆ ಕಂಡು ಬಂದರೂ ಅದು ಕ್ರಮೇಣ ಕಡಮೆಯಾಗುತ್ತ ಬರುತ್ತದೆ. ಮಾನ್ಯ ಸಚಿವರು ಹೇಳಿರುವ ಸೇಕಡಾವಾರು ಯಾವ ಮಾಹಿತಿಯ ಮೇಲೆ ಹೇಳಿದ್ದು ಎಂದು ಕೇಳಬಹುದೇ?

Sri A. R. BADARINARAYANA IYENGAR.—I have given the figures that were available to me. If the Hon. Member thinks that it is a wrong information or there is some mistake, he may kindly enlighten me where the mistake is. I shall certainly have them examined.

ಶ್ರೀ ಎಚ್. ಡಿ. ದೇವೇಗೌಡ.—ಖಾಸಗಿ ಸಂಸ್ಥೆಗಳಲ್ಲಿ ಸೇಕಡ 20ಕ್ಕಿಂತ ಕಡಮೆ ಫಲಿತಾಂಶ ಬಂದರೆ ಅವರಿಗೆ ಕೊಡುವ ಗ್ರಾಂಟ್‌ನಲ್ಲಿ 5 ಪರ್ಸೆಂಟ್ ಖೋತಾ ಮಾಡಬೇಕು ಎಂದು ತೀರ್ಮಾನ ಮಾಡಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಕೂಡ 20 ಪರ್ಸೆಂಟಿಗೆ ಕಡಮೆ ಫಲಿತಾಂಶಗಳು ಬರುತ್ತವೆ. ಅಲ್ಲಿ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಖಾಸಗಿ ಶಾಲೆಗಳಿಗೆ ಗ್ರಾಂಟ್ ಖೋತಾ ಮಾಡುವ ಪದ್ಧತಿಯನ್ನು ಬದಲಾಯಿಸಬೇಕಲ್ಲವೇ?

Sri A. R. BADARINARAYANA IYENGAR.—That is a matter which will be considered.

ಶ್ರೀ ಕಾಗೋಡು ತಿಮ್ಮಪ್ಪ.—ಸಮಾಜವಾದಿ ರಾಷ್ಟ್ರದಲ್ಲಿ ಸಮಾನವಾದ ವಿದ್ಯಾಭ್ಯಾಸ ಕೊಡತಕ್ಕದ್ದು ಒಪ್ಪಿರತಕ್ಕ ನೀತಿ. ಹಾಗಿದ್ದಮೇಲೆ ಈ ರಾಜ್ಯದಲ್ಲಿ ಸಮಾನವಾದ ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲರಿಗೂ ಸಿಕ್ಕುವ ದೃಷ್ಟಿಯಿಂದ ಈಗಿರತಕ್ಕ ಎಲ್ಲ ಖಾಸಗಿ ಶಾಲೆಗಳನ್ನೂ ರದ್ದು ಪಡಿಸಿ ಸರ್ಕಾರವೇ ಶಾಲೆಗಳನ್ನು ನಡೆಸುವ ತೀರ್ಮಾನ ಕೈಕೊಳ್ಳುತ್ತಾರೆಯೇ?

Sri A. R. BADARINARAYANA IYENGAR.—This is a question of policy which the Government has got to consider and take a decision.

ಶ್ರೀ ಎಚ್. ಡಿ. ದೇವೇಗೌಡ.—ಸ್ಥಾನಿಕ ಸಂಸ್ಥೆಗಳು ನಡೆಸುತ್ತಿರುವ ಪ್ರೌಢ ಶಾಲೆಗಳನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಹಿಂದಿನ ಸರ್ಕಾರ ನಿರ್ಣಯ ಮಾಡಿದೆ. ಅದರ ಬಗ್ಗೆ ಆಗಲೇ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆಂದು ಕೇಳಿದ್ದೇನೆ. ಅಂಥ ಶಾಲೆಗಳ ಬಗ್ಗೆ, ಸೀನಿಯಾರಿಟಿ ಮುಂತಾದುವನ್ನು ನಿಗದಿ ಮಾಡತಕ್ಕದ್ದರ ಬಗ್ಗೆ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಕೇಳಿದ್ದೇನೆ. ತಾತ್ಕಾಲಿಕವಾಗಿ ಹಿಂದೆ ಮಾಡಿದ್ದ ತೀರ್ಮಾನವನ್ನು ತಡೆಹಿಡಿಯಬೇಕೆಂದು ಸೂಚನೆ ಕೊಟ್ಟಿರುವುದಾಗಿ ನನಗೆ ತಿಳಿದು ಬಂದಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ನೀಡಬೇಕೆಂದು ಕೇಳುತ್ತೇನೆ.

Sri A. R. BADARINARAYANA IYENGAR.—That information is incorrect. Regarding taking over of the Taluk Board and other Municipal High Schools in its entirity, I may inform you that more than half has been taken over and the other half is in the process of taking over.

Sri B. B. SAYANAK.—You have taken over all the private primary schools in Belgaum City. There are five primary schools (Marathi) in Belgaum City which are not yet taken over. I want to know why they have not yet been taken over.

**Sri A. R. BADARINARAYANA IYENGAR.**—The suggestion of the Hon'ble Member would be considered.

ಶ್ರೀ ಎಂ. ಎಸ್. ಕೃಷ್ಣನ್.—ಖಾಸಗಿ ಸಂಸ್ಥೆಗಳವರು ನಡೆಸುವ ಶಾಲೆಗಳಿಗೆ ನಮ್ಮ ಸರ್ಕಾರದವರು 80 ಪರ್ಸೆಂಟಿನಷ್ಟು ಹಣವನ್ನು ಕೊಟ್ಟರೂ ಕೂಡ ಅವು ವ್ಯಾಪಾರಿ ಸಂಸ್ಥೆಗಳಾಗಿ ಪರಿಣಮಿಸುತ್ತಿವೆ. ಇಂಥ ಪ್ರವೃತ್ತಿಯನ್ನು ತಪ್ಪಿಸುವುದಕ್ಕೋಸ್ಕರ ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ! ಇಂಥ ಶಾಲೆಗಳನ್ನು ಸರ್ಕಾರದವರೇ ನಡೆಸುವುದಕ್ಕೆ ಯೋಚನೆ ಮಾಡಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳುತ್ತಾರೆಯೇ ?

**Sri A. R. BADARINARAYANA IYENGAR.**—Regarding the privately managed schools, there are good schools, there are very bad schools and there are indifferent schools. So far as good schools are concerned, you will admit that no action would be necessary. In regard to bad schools and the indifferent schools, suitable action will be taken against them. We have issued circulars. Whatever is possible, we have done. We have taken very swift action in all these matters.

**Sri R. GUNDU RAO.**—Will the Hon. Minister conduct an inquiry over the Expo—70 Issue ?

**Sri H. M. CHANNABASAPPA.**—If Government finds it necessary after due examination, it will consider the question.

† **Sri B. BASAVALINGAPPA.**—(Minister for Municipal Administration).—Madam Speaker, before I reply to certain points raised by Hon. Members, I request the Hon. Members of this House to congratulate the brave people of Bangla Desh for their heroic fight against the tyranny of Pakistan. It was a question of establishing human freedom and liberty and that freedom could not have been achieved by those people but for the great leadership of our Prime Minister Smt. Indira Gandhi, who supported them morally and materially. Smt. Indira Gandhi is now a symbol of human freedom and liberty. Under her dynamic leadership, many historical events have taken place in our country. Many Hon. Members said that we were only indulging in slogans. But I might inform my friends that we are not indulging in slogans but we are all seriously and actively considering the implementation of the several programmes drawn up by our party.

**Sri M. S. KRISHNAN.**—I want to know whether the Hon. Minister is replying on behalf of all the Departments or on behalf of the Prime Minister or on behalf of his own Department ?

**Sri B. BASAVALINGAPPA.**—You yourself praised her. I am replying on behalf of the Government ?

**Sri M. S. KRISHNAN.**—I know you are speaking on behalf of the Government. It is learnt that the Deputy Leader of the House is going to speak on the motion of thanks. I would like to know whether the Hon. Minister is supplying information about various Departments. I would like to know this as a matter of information. The Hon. Minister has started speaking about Bangla Desh.

**Sri B. BASAVALINGAPPA.**—I have not yielded.

**Sri M. S. KRISHNAN.**—Do not be intolerant.

Sri B. BASAVALINGAPPA.—It is the dynamic leadership that has given so much of enthusiasm to all the workers of our party. Now whatever was said by way of slogans we are translating them into practice. Some of my hon. friends have expressed certain doubts about the implementation of our programmes. But I may say this much, for the last 10 years the Government is run by certain class of people, *viz.*, the officers who could not change their mind. These officers continued to be so even in the Governor's Rule and they did their job just to satisfy the Governor who was ruling the State. It is time now that the officers have got to adjust to the policies and programmes of our party. We have to go according to the wishes and will of the people. I think these officers will have to adjust themselves to the new environment or to go out of service. Certain doubts are expressed by some of our Hon. Members about the implementation of policies and programmes of our party. Some Hon. Members have gone to the extent of saying that it is impossible to implement some of our programmes and schemes. I do not agree with them. You cannot imagine the non-implementation at all. We will implement the policies and programmes to the last letter. I think the hon. Members will congratulate us later in this regard. We have taken charge of the Government only on 23rd of last month. We have just applied our mind to the problems. I hope we put our heart and soul in this task and try to translate the desires and aspirations of the people to their best advantage.

I want to answer all the points one by one. Some of the Hon. Members said so many things about water supply and housing. There are about 1500 villages where there are no drinking water wells. I have seen some of the villages without drinking water facilities. I have seen such villages during my election tour. The people of these villages draw water from raw tanks and wells. I have seen with my own eyes. They drink muddy water and water full of insects. I assure the House that by the completion of this year such situation will not be there in the State.

My friend Sri Shamanna said many things about the misquito nuisance in the Bangalore City. A grant to the extent of Rs. 9.5 lakhs was released to the Bangalore Corporation during 1971-72 for implementation of this scheme. All efforts it seems were made to implement it. But things were different. As I said earlier, the person who handled this scheme was not so efficient or not purposeful to implement this programme. I am taking a serious step in this matter. As you know there is drinking water supply problem in some villages in the State in addition to the problem of Bangalore Water Supply Scheme. Complaint of this nature will not be there at the end of this year.

I have made a statement on the floor of the Council stating that the entire issue about the property tax in Bangalore will be examined

so that relief could be given to the owners of the houses and the poor people living in small huts will be given sufficient relief.

About the slum clearance I have already stated on one or two occasions what the Government is going to do in the matter. These slums are there on the lands belonging to the Corporation and also of the Government. This problem will be taken up first and see that this is solved within the end of this year. We have already reserved 3,000 small sites measuring 30'x 40' for the poor people. The Government will seriously look into this problem and see that these sites are made available for the solution of the slum. I can say we will put our heart and soul to the problem and see that the slum clearance is solved very soon and the people living in these slum areas will soon find themselves that they are also the citizens of India.

About the Housing problem, many of our friends have said many things. Madam Speaker, this is a stupendous problem that has been facing the country ever since independence. This houseless and siteless people are there since so many years in all villages, towns and cities of the State. The siteless people will be given priority to get site and later on through a comprehensive housing scheme, we will try to solve the problem both for the lower section and other sections of the Society.

In this matter, Mr. Ghatti Chandrasekhar made a very good point *i.e.*, whenever we distribute sites and form lay outs in extensions, we should see that the Harijan 'keris' should not be isolated from the Cities and Towns. For the last 25 years, I have seen that Harijan keris are being located outside the towns with the result that they are continued to be called MADIGAS and HOLEYAS. I entirely agree with him that hereafter, distribution of the sites should be on alternative basis and all sections of society will be allowed to be mixed up.

5-30 P.M.

Regarding wells, some friends said that they should not be sunk for the benefit of each community. Some people were of the view that left hand Harijan people should be allowed to draw water from the wells of the right hand people and *vice versa*. We see that caste system exists not only among the scheduled castes but also among the other caste Hindus. Unless you solve the problem of caste system, you should not say that left hand Harijans should draw water from the wells of right hand Harijans, because left hand Harijans belong to a different caste as apart from right hand Harijans. The question is whether horizontal solution is the panacea or vertical solution is the panacea. I just submit that horizontal solution is the panacea. The Vokkaligars, the Lingayats and the Brahmins must feel that they are part of the community. They must, if they are interested in solving the problem, allow the right hand man and the left hand man to draw water in their wells and set an example to abolish the caste system. It

(SRI B. BASAVALINGAPPA)

is no use saying : you must sink one well for a left hand man, another for the right hand man, another for a Lingayat and another for a Brahmin, because we are committed to a Socialistic pattern of society.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಪಾರ್ಟಿಯವರು ಹೇಳುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆಯೇ ?

SRI B. BASAVALINGAPPA.—They must agree. I wish to say One more thing before I conclude. I want to refer to the Bangalore City Corporation. We have received the Vigilance report. Mr. Naganna raised this issue and referred to the conduct of certain officers of the Corporation. We have received the report and we are examining it. We are pursuing the matter. I can assure the House that wherever this corruption exists, wherever dishonesty exists, wherever these lapses exist, wherever dereliction of duties exists, we are the last persons to shield the concerned persons. We will subject them to all the rigours of Law and see that they will either work in the services or get out of the services.

ಶ್ರೀ ಎಂ. ಎಸ್. ಕೃಷ್ಣನ್.—ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಜಾಸ್ತಿಯಾಗಿರುವ ಮನೆಗಂದಾಯವನ್ನು ಕಾನೂನು ರೀತ್ಯಾ ಪುನಃ ಪರಿಶೀಲನೆ ಮಾಡಿ ರಿಬೇಟ್ ಕೊಡುತ್ತೇವೆಂದು ಹೇಳಿದಿರಿ. ಪುನರ್ ಪರಿಶೀಲನೆ ಮಾಡುವವರೆಗೂ ಹೊಸ ಕಂದಾಯದ ಬದಲು ಹಳೆಯ ಕಂದಾಯವನ್ನೇ ವಸೂಲಿ ಮಾಡುವಂತೆ ಅಧಿಕಾರಿಗಳಿಗೆ ಆದೇಶ ಕೊಡುತ್ತೀರಾ ? ಇಲ್ಲವಿದ್ದರೆ ಅಧಿಕಾರಿಗಳು ಹೆರಾಸ್ ಮಾಡುತ್ತಾರೆ.

SRI B. BASAVALINGAPPA.—Madam, there are two types of taxation. One is tax levied on owner-living houses and another is tax levied on houses which fetch rent. There is no doubt about the latter ; there is no uncertainty about this taxation. But as far as the owner-residing houses and the houses of the poorer sections of the community are concerned, I think we will not go to the extent of harassing them.

ಶ್ರೀ ಕೆ. ಪ್ರಭಾಕರ್.—ಮಾನ್ಯ ಬಂಗಾರಪ್ಪನವರು ಮಾನ್ಯ ಮಂತ್ರಿಗಳ ವಿಷಯದಲ್ಲಿ ಕೆಲವು ವಿಷಯ ಪ್ರಸ್ತಾಪ ಮಾಡಿದರು. ಮಂತ್ರಿಗಳು ಸಭೆಯಲ್ಲಿ ಇಲ್ಲದಾಗ ಅವರು ಪ್ರಸ್ತಾಪ ಮಾಡಿದರು. ಅವರು ಇಲ್ಲದಾಗ ಅದನ್ನು ಪ್ರಸ್ತಾಪ ಮಾಡಬಾರದು, ಅವರು ಡಿಫೆಂಡ್ ಮಾಡಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಬೇಕೆಂದು ನನ್ನ ಮನಸಿನಲ್ಲಿ ಇತ್ತು. ಆದರೆ ನಾನು ಮಾತನಾಡಲಿಲ್ಲ. ಅವರ ಭಾಷಣವನ್ನು ಮಾನ್ಯ ಮಂತ್ರಿಗಳು ಓದಿ ತಿಳಿದುಕೊಂಡು ಅದರ ಬಗ್ಗೆ ಉತ್ತರ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಉತ್ತರ ಕೊಡಲಿಲ್ಲ. ಎರಡನೆಯದಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನಾನು ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ ಎಂದು ಹೇಳಿದರು. ಸರ್ಕಾರ ಹಾಗೆ ಮಾಡುತ್ತದೆ ಸರ್ಕಾರ ಹೀಗೆ ಮಾಡುತ್ತದೆ ಎಂದು ಹೇಳಬೇಕಾಗಿತ್ತು. ಇಲ್ಲದಿದ್ದರೆ ಒಬ್ಬರೇ ಹೇಗೆ ಮಾಡುತ್ತಾರೆಂಬ ಶಂಕೆ ಬರುತ್ತದೆ. ಮೂರನೆಯದಾಗಿ ಒಬ್ಬ ಆಫೀಸರಿಗೆ ಖರ್ಚು ಮಾಡಲು ಒಂದು ಲಕ್ಷ ರೂಪಾಯಿ ಕೊಡಲಾಗಿತ್ತು ; ಆದರೆ ಆತ ಖರ್ಚು ಮಾಡಲಿಲ್ಲವೆಂದು ಹೇಳಿದರು. ಯಾವ ಕಾರಣಕ್ಕಾಗಿ ಖರ್ಚು ಮಾಡಲಿಲ್ಲವೆಂದು ಹೇಳಲಿಲ್ಲ, ಮತ್ತು ಅಧಿಕಾರಿಗಳ ಬಗ್ಗೆ ಏಕವಚನವನ್ನು ಉಪಯೋಗಿಸಬಹುದೇ ಎಂಬ ಬಗ್ಗೆ ಉತ್ತರ ಕೊಡಬೇಕು. ನನ್ನ ಈ ಮೂರು ಪ್ರಶ್ನೆಗಳಿಗೂ ಉತ್ತರ ಕೊಡಬೇಕು.

SRI B. BASAVALINGAPPA.—I might have just referred to it. I meant that it is the view of the Government and not my individual opinion.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಒಂದು ಕಡೆ ಮಾತನಾಡುತ್ತಾ, ದೊಡ್ಡ ನೀರಾವರಿ ಯೋಜನೆಗಳಿಗೆ ಇಟ್ಟಿರುವ ಹಣವನ್ನು ಕಟ್ ಮಾಡಿ ಅದೇ ಹಣವನ್ನು ಮನೆಗಳನ್ನು ಕಟ್ಟಲು ಉಪಯೋಗ ಮಾಡಬೇಕೆಂದು ಹೇಳಿದ್ದು ಪತ್ರಿಕೆಗಳಲ್ಲಿ ಬಂದಿತ್ತು. ಅದನ್ನು ನಾನು ಓದಿದೆ. ಅದು ಮಾನ್ಯ ಮಂತ್ರಿಗಳ ವೈಯಕ್ತಿಕ ಅಭಿಪ್ರಾಯವೋ ಅಥವಾ ಸರ್ಕಾರದ ಅಭಿಪ್ರಾಯವೋ ಎಂಬುದನ್ನು ತಿಳಿಸಬೇಕು. ಎರಡನೆಯದು ನಿಮ್ಮ ಮೇಲೆ ನಾನು ಮಾಡಿರತಕ್ಕ ಅಪಾದನೆ ಏನಿದೆ............

SRI B. BASAVALINGAPPA.—When we bagan the fight against the previous Government, the only point that was agitating our minds, was that these major irrigation projects had taken away major portion of the Government revenue and that Government was not properly attending to the socially obligatory duties that were cast on them. That was the basis on which we began our fight against the previous Government. Even now we are spending a major portion of our revenues on major irrigation and we are not getting as much results as we expected. This has been the position all these years and we made a suggestion that a portion of this amount could be diverted towards social welfare activities. That was only a suggestion of certain persons and I agreed with those persons and said that this would be thought of by the Government. That was my exclusively individual opinion and I said I would pursue this matter with the Government.

SRI H. M. CHANNABASAPPA (Minister for Public Works).—Madam Speaker, I am very grateful for all the comments that the Hon'ble Members both on this side and on that side of the House have made during the discussion. Hon'ble Members have expressed and given a number of suggestions and made a number of criticisms also. I am grateful for all of them. Criticisms are there for us to rectify ourselves. Suggestions are there for examination and action.

Now, Madam, at the outset, the Hon'ble Leader of the Opposition was pleased to observe that no indication about the fulfilment of the election promises has been given by Government. I should like humbly to submit that a Government is one which gives you good government; Government is one which carries out the programmes and policies which have been promised during the elections. And I can assure this House that we are straining every nerve to see that whatever we have promised will be implemented.

Regarding the elimination of poverty and un-employment which was high-lighted by Members on the other side, I should like to say that it is our earnest endeavour to see that poverty is eliminated or at least the hardships felt under that is brought to the minimum; and unemployment will be tackled with all the earnestness and seriousness it demands. We hope that in times to come we will be able to tackle it with success.

The Leader of the Opposition also said that the previous Ministry headed by Sri Veerendra Patil has done very good work. Well for whatever good work has been done, we are thankful and we record our appreciation and people are there to appreciate. Incidentally, he also

(SRI H. M. CHANNABASAPPA)

observed that if the Veerendra Patil Ministry has done anything wrong, please order an enquiry. Well I can assure this House, we feel that both the administration and the public life have to be purified at all costs. Unless public life is purified, it is impossible to give good government. Unless the administration is purified, it would be impossible to carry on or implement our policies and programmes. So, if the Government has to function effectively in a democratic set up, both the administration as well as the public life have to be purified. And now that the Hon'ble Member, the Leader of the Opposition is so anxious to see that if there be any mal-practice of any kind whatsoever in the public life of this country, whether it is Veerendra Patil's Ministry or any other Ministry, I should like to give this assurance to the Hon'ble Members of this House, Government will make all efforts to see that appropriate action is taken at appropriate time to see that both the public life and the administration are purified.

ಶ್ರೀ ಕೋಣಂದೂರು ಲಿಂಗಪ್ಪ.—ಶರಾವತಿ ಕರ್ಮಕಾಂಡವನ್ನು ಹೇಳಿದ್ದಿರಿ. ಈಗ ಅದನ್ನು ವಿಚಾರಣೆ ಮಾಡುತ್ತೀರಾ!

Sri H. M. CHANNABASAPPA.—If the Hon'ble Member is not able to follow what I said, I cannot help it. I said the public life has to be purified, whoever may be the person. The administration has to be purified. If both these things are not done, it is only futile to think of Government implementing the socialistic policies and programmes.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ನಡೆದದ್ದನ್ನು ಈಗ ಏತಕ್ಕೆ ಹೇಳುವುದಿಲ್ಲ! ಅದನ್ನು ಹೇಳಿ. ಹಾರಿಕೆಯ ಉತ್ತರವನ್ನು ಹೇಳಬೇಡಿ.

Sri H. M. CHANNABASAPPA.—If the Hon'ble Member has patience, he will please bear with me. If I yield to you every time, my trend of thought will be disturbed and I have much to speak.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ತಾವು ವಿರೋಧಪಕ್ಷವಲ್ಲದ್ದಾಗ ವೀರೇಂದ್ರ ಪಾಟೀಲ್ ಸರ್ಕಾರದ ಮೇಲೆ ಅನೇಕ ಆಪಾದನೆಗಳನ್ನು ಮಾಡಿದ್ದೀರಿ. ಶರಾವತಿ ಕರ್ಮಕಾಂಡ ಮೊದಲಾದ ಪ್ರಕರಣಗಳ ಬಗ್ಗೆ ರಾಷ್ಟ್ರಾಧ್ಯಕ್ಷರಿಗೆ ಮನವಿಯನ್ನು ಕೊಟ್ಟಿದ್ದೀರಿ. ಈಗ ನೀವು ಅಧಿಕಾರದಲ್ಲಿದ್ದೀರಿ, ಆ ಬಗ್ಗೆ ಏಕೆ ಕ್ರಮ ತೆಗೆದುಕೊಳ್ಳಬಾರದು ?

Sri H. M. CHANNABASAPPA.—I am very anxious even now to take action against the erring person whoever he may be, however great he may be. Even if I have erred, I am prepared to take action against myself. Such being the case, why are you in such a great hurry. We have to examine all aspects of the question and take appropriate action and time must be appropriate. If you are in such great hurry, what I am to do ?

ಶ್ರೀ ಎಸ್. ಬಂಗಾರಪ್ಪ.—ಅಪ್ರೋಪ್ರಿಯೇಟ್ ಟೈಮ್ ಎಂದರೆ ಯಾವಾಗ ಎಂಬುದನ್ನು ಹೇಳಿ, ಹಾರಿಕೆಯ ಉತ್ತರವನ್ನು ಕೊಡಬೇಡಿ. ನೇರವಾಗಿ ಉತ್ತರವನ್ನು ಏತಕ್ಕೆ ಕೊಡಬಾರದು?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಮ್ಮ ಅಭಿಪ್ರಾಯದಲ್ಲಿ ನಾನು ಕೊಡತಕ್ಕ ಉತ್ತರ ನೇರವಾಗಿಲ್ಲ ಎಂದರೆ ನಾನು ಹೇಳತಕ್ಕದ್ದೇನೂ ಇಲ್ಲ. ಸಾಮಾನ್ಯ ಮಾತಿನಲ್ಲಿಯೇ ನಾನು ಹೇಳುತ್ತಿದ್ದೇನೆ. ನಿಮಗೆ ಅರ್ಥವಾಗದಿದ್ದರೆ ನಾನು ಮಾಡತಕ್ಕದ್ದು ಏನು ?

ಶ್ರೀ ಎಸ್. ಬಂಗಾರಪ್ಪ.—ತಮಗೆ ವಂದನೆಗಳು.

SRI H. M. CHANNABASAPPA.—I am thankful to the compliment. Madam Speaker, I will not be able to cover the entire field of criticisms and suggestions. So you will permit me to confine myself only to important ones. That does not mean that we will not be able to take note of the criticisms and suggestions. They will all be taken note of and due action will be taken in pursuance of the wishes of the Members who have Spoken about it.

I now take up only a few important issues that were referred to during the discussion.

Certain observations were made, Madam Speaker, about the River Water Disputes and also about the diversion of the KOYNA waters to Krishna in order to meet the needs of drinking water in the villages and towns in the Krishna basin. Efforts are already being made to get into touch with the Maharashtra Government and see that necessary relief is given in time. Unfortunately, we were not able to contact the Irrigation Minister, or the Cheif Minister over the phone, because both of them were at Delhi. I can assure the House that quick action will be taken to see that necessary relief is secured from the Maharashtra Government.

In regard to the criticism about the diversion of Thungabhadra waters to the extent of 3 TMCFT, some observation was made that it was detrimental to our interest in Mysore and that we should not have taken that sort of a decision. I should like to humbly submit, Madam Speaker, that the Mysore Government has not given waters to the Andhra Pradesh Government at the cost of our interest. It is true that the Government of Mysore took a decision not to give water for 4½ lakhs of acres at the rate of 3500 cusecs. As a measure of abundant precaution, we flatly refused. But when they reduced their requirements both in quantity as well as in time, and when they made an appeal saying that they have given up 2½ lakhs of acres and they would only like to protect 2½ lakhs of acres and at the same time agreed to pay back the waters during the mungar-kharif season, there was no difficulty. So we got it examined technically and we were told that there was no danger of our crops withering. Such being the case, the Government took a decision to give that help to the extent necessary.

SRI S. BANGARAPPA.—Then there are two technical opinions. Which is correct ?

SRI H. M. CHANNABASAPPA.—There cannot be two technical opinions. This is a matter on which there cannot be a debate on the floor of the House. If the Hon'ble Member can see me afterwards, I can sit with him and convince him about it. In all this, 4 plus 4 can only be 8 and cannot be anything else.

SRI S. BANGARAPPA.—To my knowledge, there are two technical opinions.

Sri H. M. CHANNABASAPPA.—It is open to the Hon'ble Member to hold that view.

Sri S. BANGARAPPA.—It shows your parasitism.

Sri H. M. CHANNABASAPPA.—It is open to the hon. member to have his own opinion about it.' But let him permit me to say what I feel and if I am incorrect I would like to be corrected. If I am correct I expect him to accept it.

ಶ್ರೀ ಕೋಣಂದೂರು ಲಿಂಗಪ್ಪ.—ನೀರಿನ ಪ್ರಶ್ನೆ ರಾಜ್ಯಕ್ಕೆ ಸಂಬಂಧಪಟ್ಟಂತಹ ಮುಖ್ಯವಾದ ಪ್ರಶ್ನೆ. ಈ ಸಭೆ ಎರಡು ಮೂರು ದಿನಗಳಲ್ಲಿ ನಡೆಯುತ್ತಿದೆ ಎಂದು ಗೊತ್ತಿದ್ದರೂ ಕೂಡ ಅಷ್ಟು ಅವಸರದಲ್ಲಿ ಏಕೆ ನಿರ್ಣಯ ತೆಗೆದುಕೊಂಡಿದ್ದೀರಿ ?

Sri H. M. CHANNABASAPPA.—If the hon. member is not able to distinguish between administrative and technical matters, I cannot help it. Whatever opinion I hold, if it is correct, say it is correct. If it is not correct, I am prepared to get corrected if he can correct me.

ಇನ್ನು ಕರಪ್ಟ್ ಪ್ರಾಕ್ಟೀಸ್ ವಿಚಾರದಲ್ಲಿ ಬಹಳ ಮಟ್ಟಿನ ಚರ್ಚೆ ನಡೆದಿದೆ. ಕರಪ್ಟ್ ಪ್ರಾಕ್ಟೀಸ್ ಸಾರ್ವಜನಿಕ ಜೀವನದಲ್ಲಿ ಮತ್ತು ಅಧಿಕಾರಿಗಳಲ್ಲಿ—ಅದು ಎಲ್ಲಿಯೇ ಇರಲಿ, ಅದನ್ನು ಕಡಿಮೆ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ನಮ್ಮ ಪಕ್ಷದ ಧ್ಯೇಯಗಳನ್ನು ಸಾಧನೆ ಮಾಡುವುದಕ್ಕಾಗು ವುದಿಲ್ಲ. ಕರಪ್ಟ್ ಪ್ರಾಕ್ಟೀಸ್ ಎನ್ನತಕ್ಕಂತದ್ದು ಒಂದೇ ಅಲ್ಲ, ಅದರ ಜೊತೆಗೆ ಇನ್‌ಎಫಿಷಿಯನ್ಸಿ ಮತ್ತು ಇನ್‌ಕಾಂಪಿಟೆನ್ಸಿ—ಇವುಗಳನ್ನು ಕೂಡ ದೂರ ಮಾಡತಕ್ಕದ್ದು ಬಹಳ ಮುಖ್ಯವಾದ ವಿಷಯ ಗಳು. ಆದ್ದರಿಂದ ಇವೆಲ್ಲವನ್ನೂ ಇಟ್ಟುಕೊಂಡು ಆಡಳಿತವನ್ನು ನಡೆಸತಕ್ಕದ್ದು ಸರ್ಕಾರಕ್ಕೆ ಭೂಷಣವಲ್ಲ. ಇವೆಲ್ಲವನ್ನೂ ನಿರ್ಮೂಲನ ಮಾಡಿಯೇ ಬಿಡುತ್ತೇವೆಂದು ಸರ್ಕಾರದವರು ಹೇಳಿದರೂ ಕೂಡ, ಇವುಗಳನ್ನು ಹತೋಟಿ ಮಾಡಿ ಇಟ್ಟುಕೊಳ್ಳತಕ್ಕಂತಹ ಪ್ರಾಮಾಣಿಕತೆಯ ಭರವಸೆಯನ್ನು ತಮಗೆ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಇವುಗಳನ್ನು ನಿಮ್ಮಲ್ಲಿರತಕ್ಕ ವಿಜಿಲೆನ್ಸ್ ಮತ್ತು ಇತರ ಇಲಾಖೆಗಳ ಮುಖಾಂತರ ತಡೆಗಟ್ಟುತ್ತೀರಾ ?

(ಹಲವು ಸದಸ್ಯರು ಎದ್ದು ಮಾತನಾಡಿದರು)

Sri H. M. CHANNABASAPPA.—Therefore, corrupt practices will be put an end to and action is being taken. Hon. members feel rather doubtful of our ability to bring it under control. I only appeal to them to just wait and see. I do not want to say anything more : just wait and see. After all, nothing will happen if we take some time.

(*Interruption*)

If the hon. member does not want me to speak and complete my reply, I have no objection to sit down at this stage. If there is anything the hon. member wishes to know, I would like to meet his arguments after I conclude.

ಶ್ರೀ ಕೆ. ಎನ್. ವೀರಪ್ಪಗೌಡ.—ಸ್ವಾಮಿ, ನರಸಿಂಹರಾಜಪುರದ ಕೆರೆ ರಿಪೇರಿಯ ಬಗ್ಗೆ ವಿಜಿಲೆನ್ಸಿಗೆ ರೆಫರ್ ಮಾಡಿ ಮೂರು ವರ್ಷವಾಯಿತು. ಈ ವರೆಗೂ ಅದರ ಪತ್ತೆಯಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

Sri H. M. CHANNABASAPPA.—Let us get into touch with the facts; let us hold strings. Interjections will only result in interjections. It will not facilitate me to complete my speech.

In regard to rural electrification, rural communication, minor irrigation and major irrigation, Government is anxious to see that the programme that we have put up is implemented. So much has already been done in that direction. We would like to go faster and create conditions which will facilitate growth of rural communication at a speed which is speedier than in the past. And so also rural electrification with electric speed. The only bottleneck is of finance. We will try our best to see that funds are also made available to the extent possible with whatever we have and promises made in this direction are fulfilled.

In regard to the industrial development in the State as also the taking over of sick industries, certain observations were made by certain members. I am sorry to say that Government is not in agreement with the suggestion of some members that sick industries which are practically in the dying stage should be taken over. It is no wisdom to take them over. It is more profitable to start new industries. Our experience in the past has been anything but happy. You know our experience in regard to the M.S.K. Mills ; it is miserable ; we have sunk Rs. 2 crores for no profit. And, therefore, Government is not in favour of taking over sick mills which are already in the dying stage. We would consider the question of each one of them on its own merits and if it is going to do any profit to the country that question may be considered ; otherwise not. References have been made in regard to some of the industries and the industrial development in the State. Suffice it to say that we have been making greater output than any of the sister States. To that extent we are ahead of other States. That does not mean that we should not do more. All efforts would be made to provide necessary facilities for the development of industries and render all help to the entrepreneurs whether they are either in the private sector or private-cum-Government sectors.

Regarding Krishna water dispute, it would be inappropriate to make any reference as it is already pending in the Court. It is likely that a decison may be given by the end of this year.

In regard to the Cauvery waters dispute, one aspect of it has been settled by the Supreme Court, namely, the Supreme Court is not in favour of stay ; it will not give any stay for our projects like Hemavathi, Harangi, Kambadakada and Kabini. And the question of appointment of Tribunal is before the Court and the Supreme Court is likely to take decision very shortly and we will abide by it.

In regard to certain allegations made by my young socialist friend against Sri Basavalingappa, I would like to clarify the position. It is not appropriate for me to make any observation on a matter which is already under adjudication in a court of law and therefore you will permit me, Madam, not to say a word about it further.

6-00 P.M.

ಶ್ರೀ ಎಂ. ಎಸ್. ಕೃಷ್ಣನ್.—ಎಗಟಿ ಪ್ರಾಜೆಕ್ಟ್ ನೀರು ಹಾಸನ ತಾಲ್ಲೂಕಿಗೆ ಬೇಕಾಗಿದೆ. ಅದರ ಬಗ್ಗೆ ತಾವೇನೂ ಹೇಳಲಿಲ್ಲ.

Sri H. M. CHANNABASAPPA.—There are two projects on the Yagachi. As regards utilising the waters in the Yagachi valley, that is under consideration. But as regards diversion of Yagachi waters to Krishna basin it requires deeper examination.

ಶ್ರೀ ಕೆ. ಹೆಚ್. ಹನುಮೇಗೌಡ.—ಎಗಟಿ ಪ್ರಾಜೆಕ್ಟ್‌ನಿಂದ ಹಾಸನ ತಾಲ್ಲೂಕಿಗೆ ನೀರು ಒದಗಿಸುವ ಬಗ್ಗೆ ಬಹಳ ದಿವಸಗಳಿಂದ ಜನ ಕಾತುರರಾಗಿದ್ದಾರೆ. ಆದ್ದರಿಂದ ಈ ನೀರನ್ನು ಬೇರೆ ಕಡೆಗೆ ಕೊಡುವುದಾದರೆ ಅಲ್ಲಿನ ಜನ ಖಂಡಿತವಾಗಿ ಸುಮ್ಮನೆ ಇರುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣಾ ನೀರಿನ ಬಗ್ಗೆ ಇನ್ನೂ ಒಂದು ವರ್ಷ ಆಗುತ್ತದೆ. ಕೃಷ್ಣಾ ಪ್ರಾಜೆಕ್ಟಿಗೂ ಮತ್ತು ಇದಕ್ಕೂ ನೇರ ಸಂಬಂಧವಿದೆ.

ಶ್ರೀ ಎಸ್. ವೈ. ಪಾಟೀಲ್.—ಮಾನ್ಯ ಶ್ರೀ ಚನ್ನಬಸಪ್ಪನವರು ಈಗ ಒಂದು ವಿಷಯವನ್ನು ಅಪ್ಪಣೆ ಕೊಡಿಸಿದರು. ಇದರಲ್ಲಿ ಸಬ್‌ಮರ್ಜ್ ಆಗುವ ಭೂಮಿಗೆ ಹಣ ಕೊಡುವುದಕ್ಕೆ ಬದಲಾಗಿ, ಭೂಮಿಯನ್ನೇ ಕೊಡತಕ್ಕ ವ್ಯವಸ್ಥೆ ಮಾಡಿದರೆ ನಮ್ಮ ಸಿಂದಗಿ ತಾಲ್ಲೂಕಿನಲ್ಲಿ ಜನಗಳಿಗೆ ತೊಂದರೆ ತಪ್ಪುತ್ತದೆ. ಆದ್ದರಿಂದ ಆ ರೀತಿ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಸ್ಕೀಮುಗಳು ಬಹಳ ಇವೆ. ಯಾವಾಗ ಭೂಮಿ ಸಬ್ ಮರ್ಜ್ ಆಗುತ್ತದೋ ಆಗ ಸ್ವಲ್ಪ ಹಣವನ್ನು ಕೊಡುವುದಕ್ಕೆ ಬದಲಾಗಿ ಭೂಮಿಯನ್ನು ಕೊಡಬಹುದು.

ಶ್ರೀ ಎಸ್. ವೈ. ಪಾಟೀಲ್.—ಸಬ್ ಮರ್ಜ್ ಆಗುವ ಪ್ರದೇಶದ ಜನಗಳನ್ನು ರೀಹ್ಯಾಬಿಲಿಟೇಟ್ ಮಾಡುವುದಕ್ಕೆ ಸರ್ಕಾರ ವಿಧಾಯಕವಾದ ರೀತಿಯಲ್ಲಿ ಅವರಿಗೆ ಎಲ್ಲಾ ವಿಧವಾದ ಸೌಕರ್ಯಗಳನ್ನು ಕೊಟ್ಟು ಅವರ ಜೀವನವನ್ನು ಸ್ವಲ್ಪ ಹಸನಾಗಿ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಭೂಮಿ ಕೊಡುವ ವಿಷಯದಲ್ಲಿ ಸರ್ಕಾರದಲ್ಲಿ ವಿಧಾಯಕವಾದ ಕ್ರಮಗಳಿವೆ. ಆದ್ದರಿಂದ ಭೂಮಿಯನ್ನೂ ಕೊಡೋಣ ಮತ್ತು ಹಣವನ್ನೂ ಕೊಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಉತ್ತರ ಹೇಳುವ ಕಾಲದಲ್ಲಿ ಮಾನ್ಯ ಶ್ರೀ ವೀರೇಂದ್ರಪಾಟೀಲರ ಮಂತ್ರಿಮಂಡಲದ ಮೇಲೆ ಪ್ರಾಪರ್ ಟ್ರೈಮಿನಲ್ಲಿ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದರು. ನನಗೆ ಸ್ಪೆಸಿಫಿಕ್ಕಾಗಿ ಒಂದು ಜವಾಬು ಕೊಡಬೇಕು. ಇದೇ ರೀತಿ ಹಿಂದೆ ಎಲ್ಲಾ ಮಂತ್ರಿಮಂಡಲಗಳ ಮೇಲೂ ಅಪಾದನೆಗಳಿವೆ. ಮಾನ್ಯ ಶ್ರೀ ನಿಜಲಿಂಗಪ್ಪನವರ ಮತ್ತು ಮಾನ್ಯ ಶ್ರೀ ಜತ್ತಿಯವರ ಮಂತ್ರಿಮಂಡಲ ಇದ್ದಾಗ ಅವರಮೇಲೆ ಅಪಾದನೆಗಳ ಪಟ್ಟಿಯು ಸುರಿಮಳೆಮಾಡಿ ಅದನ್ನು ರಾಷ್ಟ್ರಾಧ್ಯಕ್ಷರಿಗೆ ಕೊಟ್ಟಿದೆ. ಆದ್ದರಿಂದ ಹಿಂದಿನ ಎಲ್ಲಾ ಮಂತ್ರಿಮಂಡಲಗಳ ಮೇಲೂ ವಿಚಾರಣೆ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ರೈಮಾ ಫೇಸಿ ಕೇಸುಗಳನ್ನು ನೋಡಿಕೊಂಡು ಅದರ ಮೇಲೆ ವಿಚಾರಮಾಡುವುದು ಸೂಕ್ತ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ವಿಷಯ ಹೇಳಿದರು. ಒಳ್ಳೆಯದು. ಮಂತ್ರಿಗಳ ಆಸ್ತಿ ವಿಷಯ ತಿಳಿಸುವ ಬಗ್ಗೆ ತಕ್ಷಣ ಏನಾದರೂ ಒಂದು ಕ್ರಮವನ್ನು ತೆಗೆದು ಕೊಂಡರೆ, ಆಗ ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಏನೊಂದು ಶಂಕೆ ಇದೆ, ಅದು ಹೋಗುತ್ತದೆ. ಮಾನ್ಯ ಮಂತ್ರಿಯವರು ಬಹಳ ಅನುಭವಸ್ಥರು. ಹಿಂದೆ ಮಂತ್ರಿಮಂಡಲದಲ್ಲಿದ್ದವರು. ಈಗ ಮಂತ್ರಿಗಳಲ್ಲಿ ಅನೇಕರು ವಿಧಾನಸಭೆಗೇ ಹೊಸಬರು. ಮಾನ್ಯ ಮಂತ್ರಿಗಳಿಗೆ ಗೊತ್ತಿರುವಹಾಗೆ ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ ಈ ಅಪಾದನೆ ಇದೆ. ಸರ್ಕಾರದ ಕಾರ್ಯದರ್ಶಿ ಯಾರು ಇದ್ದಾರೆಯೋ ಅವರ ಜೇಬಿನಲ್ಲಿ ಇವರನ್ನು ಇಟ್ಟುಕೊಂಡಿರುವುದರಿಂದ, ಅವರು ಈಗ ಆಟವಾಡಿಸುತ್ತಿದ್ದಾರೆ. ಆ ರೀತಿ ನಡೆದುಕೊಂಡರೆ, ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ಎಲ್ಲಿ ಇರುತ್ತದೆ. ಕೇವಲ ಸೆಕ್ರೆಟರಿಗಳು ಆಗಿರುವವರು ಒಂದು ನೋಟ್

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY

ಬರೆದುಕೊಡುತ್ತಾರೆ. ಅದು ಹೊಸ ಮಂತ್ರಿಗಳಿಗೆ ಅಷ್ಟಾಗಿ ಗೊತ್ತಿರುವುದಿಲ್ಲ. ಆಗ ಒಳ್ಳೆಯ ಸರ್ಕಾರಕ್ಕೆ ಇರಬೇಕಾದ ಚೆಕ್ಸ್ ಮತ್ತು ಕೌಂಟರ್ ಚೆಕ್ಸ್ ಇರುವುದಿಲ್ಲ. ಹೀಗೆ ಪ್ರಾಸಂಗಿಕವಾಗಿ ಹೇಳುವುದಾದರೆ, ಇತ್ತೀಚೆಗೆ ಮಂತ್ರಿಗಳಿಗೆ ಒಂದು ಕೋಡ್ ಆಫ್ ಕಾಂಡಕ್ಟ್ ಎಂಬುದಾಗಿ ಸಿದ್ಧವಮಾಡಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ಮಂತ್ರಿಗಳಾದವರು ಪ್ರತಿ ವರ್ಷ ಮಾರ್ಚ್ 31ನೇ ತಾರೀಖಿನವರೆಗೆ ಎಷ್ಟು ಆಸ್ತಿ ಇರುತ್ತದೆಂಬ ವಿಷಯವನ್ನು ವರ್ಷವರ್ಷವೂ ಮಾನ್ಯ ಮುಖ್ಯ ಮಂತ್ರಿಗಳಿಗೆ ತಿಳಿಸಬೇಕೆಂದಿದೆ. ಈ ವಿಷಯ ಏನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಅವರದು ಮಾತ್ರವೋ ಅಥವಾ ಅವರ ಸಂಬಂಧೀ ಕರದೋ ?

ಶ್ರೀ ಎಂ. ಎಸ್. ಕೃಷ್ಣನ್.—ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ಮತ್ತು ಪ್ಯೂರಿಟಿ ಆಫ್ ಪಬ್ಲಿಕ್ ಲೈಫ್ ನಮಗೆ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.— ಜೀವನಕ್ಕೆ ಯಾರಾದರೂ ಮಂತ್ರಿಗಳನ್ನು ಅವಲಂಬಿಸಿ ಕೊಂಡಿದ್ದರೆ, ಅಂದರೆ ಅವರ ಹೆಂಡತಿ, ಮಕ್ಕಳು, ಆ ಡೆಫಿನಿಷನ್ನಿನಲ್ಲಿ ಬರುತ್ತಾರೆ. ಅದಕ್ಕಾಗಿ ತಾವು ಈಗ ಆತುರ ಪಡಬೇಕಾಗಿಲ್ಲ. ತಮ್ಮ ಮನಸ್ಸಿನಲ್ಲಿರುವುದು ವಿಧಾಯಕವಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಪ್ಯೂರಿಟಿ ಆಫ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಸೆಕ್ರೆಟರಿ ಯವರಿಗೂ, ಮಂತ್ರಿಗಳಿಗೂ ವ್ಯವಹಾರ ಹೇಗೆ ನಡೆಯಬೇಕು, ಟೂರ್ ಹೇಗೆ ಮಾಡ ಬೇಕು, ಅಲ್ಲಿ ಯಾವ ರೀತಿಯಲ್ಲಿ ವರ್ತನೆ ಮಾಡಬೇಕು ಎನ್ನುವ ವಿಚಾರದಲ್ಲಿ ಹಿಂದೆ ಮಾಡಿದಂಥ ಕೋಡ್ ಆಫ್ ಕಾಂಡಕ್ಟನ್ನು ಏನಾದರೂ ಬದಲಾವಣೆ ಮಾಡಬೇಕಾದರೆ, ತಾವು ರಚನಾತ್ಮಕ ವಾದಂಥ ಸಲಹೆಯನ್ನು ಕೊಟ್ಟರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ.

ಶ್ರೀ ಕೆ. ಎಚ್. ರಂಗನಾಥ್.—ಮಂತ್ರಿವರ್ಯರು ಅವರ ಉತ್ತರದಲ್ಲಿ ಪ್ರಸ್ತಾಪ ಮಾಡುತ್ತಾ ಎರಡು ವಿಚಾರಗಳ ಬಗ್ಗೆ ಹೇಳಿದರು. ಒಂದು ಗುಡ್ ಗೌರ್ನಮೆಂಟ್, ಇನ್ನೊಂದು ಇಂಡಸ್ಟ್ರಿ ಯಲ್ ಪಾಲಿಸಿ. ಮಾನ್ಯ ಮಂತ್ರಿಗಳನ್ನು ಒಂದು ವಿಚಾರವಾಗಿ ಕೇಳಬಯಸುತ್ತೇನೆ. ಗುಡ್ ಗೌರ್ನಮೆಂಟ್ ಎನ್ನುವುದು ಬಹಳ ವೇಗ್ ಆಗಿರತಕ್ಕ ಪದ. ಮನಾಪಲಿ ಇರತಕ್ಕವರನ್ನು ಹಾಗೆ ಇರುವುದಕ್ಕೆ ಬಿಟ್ಟು ಕೊಡುವುದು ಒಂದು ನ್ಯೂ ಇಂಡಸ್ಟ್ರಿಯಲ್ ಪಾಲಿಸಿ ಏನು ಎಂದು ಸರ್ಕಾರ ಇನ್ನೂ ಹೇಳಲಿಲ್ಲ. ಸರಿಯಾಗಿ ನಡೆಯದೇ ಇರತಕ್ಕ ಕಂಪೆನಿಗಳನ್ನು ಈ ಸರ್ಕಾರ ತೆಗೆದುಕೊಳ್ಳು ತ್ತೇವೆಂಬ ನೆಪ ಹೂಡಿ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನಲ್ಲಿರತಕ್ಕ ಇಂಡಸ್ಟ್ರೀಸ್‌ಗಳನ್ನು ಅವರ ವಶಕ್ಕೆ ತಗೆದುಕೊಳ್ಳುವ ಉದ್ದೇಶ ಏನಾದರೂ ಸರ್ಕಾರ ಮಾಡಿದೆಯೋ ! ನಾನಾಗಲೇ ಹೇಳಿದ ಹಾಗೆ ಸಾಯುವ ಸ್ಥಿತಿಯಲ್ಲಿರತಕ್ಕ ಕೈಗಾರಿಕೋದ್ಯಮಗಳನ್ನು ಸರಕಾರ ತೆಗೆದುಕೊಂಡು ರಾಜ್ಯ ಬೊಕ್ಕಸದ ಹಣವನ್ನು ಪೋಲು ಮಾಡುವುದು ಸರ್ಕಾರದ ನೀತಿಯಲ್ಲ. ಯಾವುದಾದರೊಂದು ಕೈಗಾರಿಕೆಯನ್ನು ಸರ್ಕಾರ ಕೈಗೊಂಡರೆ ಅದರಿಂದ ಸರಕಾರಕ್ಕೆ, ದೇಶಕ್ಕೆ ಒಳ್ಳೆಯದಾಗುತ್ತದೆ ಎನ್ನುವುದಾಗಿದ್ದರೆ ಮಾತ್ರ ಸರಕಾರ ಅದರಲ್ಲಿ ಕೈಹಾಕುತ್ತದೆ.

ಇನ್ನು ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಅಂಡ್ ಡೆವಲಪ್‌ಮೆಂಟ್ ವಿಚಾರದಲ್ಲಿ ಸರಕಾರದ ಪಾಲಿಸಿ ಏನು ಎಂದು ಕೇಳಿದರು. ಆ ವಿಚಾರದಲ್ಲಿ ನಮ್ಮ ಸರಕಾರದ ನೀತಿ ಮೊದಲಿಂದಲೂ ಅಗ್ಗದ ದರದಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದು, ಅಗ್ಗದ ದರದಲ್ಲಿ ನೀರನ್ನು, ಭೂಮಿಯನ್ನು ಒದಗಿಸುವುದು ಇತ್ಯಾದಿ ಸೌಲಭ್ಯಗಳು ಏನಿವೆಅವನ್ನು ಧಾರಾಳವಾಗಿ ಮುಂದೆ ಬರತಕ್ಕ ಕೈಗಾರಿಕೆ ಯವರಿಗೆ ಒದಗಿಸಬೇಕೆಂಬುದೇ ಆಗಿದೆ. ಅದನ್ನೇ ನಾವೂ ಮುಂದುವರಿಸಿಕೊಂಡು ಬರುತ್ತಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಆ ವಿಚಾರಗಳನ್ನು ನಾನು ಈಗ ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ರಾಜ್ಯದ ನಾನಾ ಭಾಗಗಳಲ್ಲಿ ದೊರೆಯತಕ್ಕ ಕಚ್ಚಾಪದಾರ್ಥಗಳೇನಿವೆ ಅದನ್ನು ಇಲ್ಲಿಯೇ ಸದುಪಯೋಗ ಪಡಿಸಿಕೊಳ್ಳಲು ಅವುಗಳಿಗೆ ತಕ್ಕ ಕೈಗಾರಿಕೆಗಳನ್ನು ರಾಜ್ಯದಲ್ಲಿ ಅಲ್ಲಲ್ಲೇ ತೆರೆಯತಕ್ಕ ಬಗ್ಗೆ ನಿಮ್ಮ ಧೋರಣೆಯೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗ್ರೋ ಇಂಡಸ್ಟ್ರೀಸ್ ಅವರ ಆಶ್ರಯದಲ್ಲಿ ಈ ಕಚ್ಚಾಮಾಲು ಗಳು ರಾಜ್ಯದ ಯಾವ ಭಾಗದಲ್ಲಿ ಎಷ್ಟೆಷ್ಟು ದೊರೆಯುತ್ತವೆ ಎಂಬುದನ್ನು ಕಂಡು ಹಿಡಿದು, ಅವುಗಳನ್ನು ಹೇಗೆ ಉಪಯೋಗ ಮಾಡಿಕೊಳ್ಳಬೇಕು, ಆ ಬಗ್ಗೆ ಏನು ಸಹಾಯ ಸೌಲಭ್ಯಗಳು ಸರಕಾ ರದಿಂದ ಬೇಕಾಗುತ್ತದೆ ಎಂಬುದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಆ ಒಂದು ಏಜನ್ಸಿ ಮೂಲಕ ಕೆಲಸ ನಡೆಸಲು ಅದಕ್ಕೆ ಸೂಕ್ತ ಪ್ರೋತ್ಸಾಹ ನೀಡತಕ್ಕದ್ದು ಸರಕಾರದ ನೀತಿಯಾಗಿದೆ.

**Sri B. V. KAKKILAYA.**—I am sure you will agree with me that our experience with M.S.K. mills has been miserable. We have sunk 2 crores and we have lost practically everything. ಕೆಲವು ಕೈಗಾರಿಕೆಗಳು ಮಿಸ್ ಮ್ಯಾನೇಜ್‌ಮೆಂಟಿನಿಂದ ಮುಚ್ಚತಕ್ಕ ಸ್ಥಿತಿಗೆ ಬಂದಿವೆ. ಅಂಥ ಕೈಗಾರಿಕೆಗಳನ್ನು ಸರಕಾರ ವಹಿಸಿಕೊಂಡು ಏಕೆ ಅವುಗಳನ್ನು ನಡೆಸಬಾರದು ? ಹಾಗೆ ಮಾಡದಿದ್ದರೆ ಸಾವಿರಾರು ಜನರಿಗೆ ಕೆಲಸವಿಲ್ಲದೆ ಅವರು ನಿರುದ್ಯೋಗಿಗಳಾಗುವುದಿಲ್ಲವೇ ? ಸಾಯುತ್ತಿರುವ ಕೈಗಾರಿಕೆಗಳು ಎಂದು ಅವುಗಳನ್ನು ಹಾಗೇ ಕೈಬಿಡುವುದು ಯಾವ ನೀತಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಸತ್ತು ಹೋಗುತ್ತಿರುವ ಕೈಗಾರಿಕೆಗಳಿಗೆ ರಾಜ್ಯ ಸರಕಾರದ ಹಣವನ್ನು ಹಾಕುವುದಕ್ಕೆ ಬದಲು ಆ ಹಣವನ್ನು ಹೊಸ ಉದ್ಯಮಗಳಿಗೇ ಏಕೆ ಹಾಕಬಾರದು ! ಹೊಸ ಕೈಗಾರಿಕೆಗಳಿಗೆ ಹಣವನ್ನು ಹಾಕಬೇಕು ಎಂಬುದು ನಮ್ಮ ಸರಕಾರದ ನೀತಿಯಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಎಂ. ಎಸ್. ಕೆ. ಮಿಲ್ಸ್‌ನಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ನಡೆಯಿತು. ಅದೇ ರೀತಿ ಬಾಕಿ ಕಡೆಗಳಲ್ಲೂ ನಡಯುವುದಕ್ಕೆ ಪ್ರಾರಂಭವಾದರೊ......

**Sri H. M. CHANNABASAPPA.**—I know the entire history of M.S.K. Mills. It was so not because we were incapable but because it was already in a dying stage. We went on pumping money to an industry which could never survive. That is the point.

**Sri M. S. KRISHNAN.**—I beg to diffier. It would be better you study this more deeply.

ಶ್ರೀ ಎಸ್. ಬಂಗಾರಪ್ಪ.—ಲಂಚಗುಳಿತನದ ನಿರ್ಮೂಲನದ ವಿಷಯದಲ್ಲಿ ಹಿಂದೆ ಕೇಂದ್ರ ಸರಕಾರದಲ್ಲಿ ಮಂತ್ರಿಗಳಾಗಿದ್ದ ಶ್ರೀ ಜಿ. ಎಲ್. ನಂದಾರವರು ಈ ಲಂಚವನ್ನು ಅಂದರೆ ಇದರ ಹಾವಳಿಯನ್ನು ಮೂರು ವರ್ಷಗಳಲ್ಲಿ ದೇಶದಲ್ಲಿ ಮೂಲೋತ್ಪಾಟನೆ ಮಾಡುವುದಾಗಿ ಅಪ್ಪಣೆ ಕೊಡಿಸಿದ್ದರು. ಆದರೆ ಲಂಚ ನಿಲ್ಲಲಿಲ್ಲ. ಅವರು ಮೂಲೆಗೆ ಬಿದ್ದರು. ನೀವಾದರೂ. ಈ ಲಂಚದ ಹಾವಳಿಯನ್ನು ಎಷ್ಟು ಕಾಲದಲ್ಲಿ ನಿಲ್ಲಿಸುತ್ತೀರಿ ಎಂಬುದರ ಬಗ್ಗೆ ಕಾಲನಿಗದಿಯನ್ನೇನಾದರೂ ತಿಳಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಲಂಚದ ಹಾವಳಿಯನ್ನು ನಿರ್ಮೂಲ ಮಾಡುತ್ತೇನೆಂದು ಹೇಳಲಿಲ್ಲ. ಸಾಧ್ಯವಾದಷ್ಟು ಕಡಮೆ ಮಾಡುವುದಾಗಿ ಹೇಳಿದೆ. ಆ ಹಾದಿಯಲ್ಲಿ ಈಗ ಪ್ರಯತ್ನಗಳು ನಡೆಯುತ್ತಿವೆ. ಆದರೆ ಶ್ರೀ ನಂದಾರವರು ಅಲ್ಲಿ ಫೇಲಾದರೆ ಇಲ್ಲಿ ಚನ್ನಬಸಪ್ಪನವರೂ ಫೇಲಾಗುತ್ತಾರೆಂಬ ಯೋಚನೆ ತಮಗೇಕೆ ಬಂತು ?

**Sri B. B. SAYANAK.**—The management of Amalgamated Electricty Company, Belgaum, has declared an illegal lock-out for the last one year and the Government is not taking drastic action. May I know when the Government is going to take action and compel the management to lift the lock-out ?

**Sri H. M. CHANNABASAPPA.**—We have taken up the question of nationalisation of all electric undertakings and the bill in this regard will come before the House during the next session.

ಶ್ರೀ ಎಚ್. ಡಿ. ದೇವೇಗೌಡ.—ಕಾವೇರಿ ಪ್ರಾಜೆಕ್ಟ್ ವಿಚಾರದಲ್ಲಿ ತಮ್ಮಿಂದ ನಾನು ಬೇರೆ ಉತ್ತರ ಬರುತ್ತದೆಂದು ನಿರೀಕ್ಷಿಸಿದ್ದೆ. ತಾವು ಈ ವಿಚಾರದಲ್ಲಿ ಕೇಂದ್ರದವರಿಂದ ಕ್ಲಿಯರೆನ್ಸ್ ತರುತ್ತೀರೆಂದು ನಾನು ಭಾವಿಸಿದ್ದೆ. ಅಂಥ ಒಂದು ದಿಟ್ಟ ಉತ್ತರವನ್ನು ನಾನು ತಮ್ಮಿಂದ ನಿರೀಕ್ಷಿಸಿದ್ದೆ. ತಮಗೆ ಕೇಂದ್ರದಲ್ಲಿ ಹೆಚ್ಚಿನ ಪ್ರಭಾವವಿದೆ. ತಾವೀಗ 72 ಕೋಟಿ ರೂಪಾಯಿ ಓವರ್ ಡ್ರಾಫ್ಟನ್ನು ಹೊರತಕ್ಕ ಕಾಲದಲ್ಲಿ ತಾವು ಈ ನಾನ್ ಪ್ಲಾನ್ ಎಕ್ಸ್‌ಪೆಂಡಿಚರನ್ನು ಇನ್‌ಕ್ರೀಸ್ ಮಾಡಬೇಕು. ನಿಮ್ಮದು ದಕ್ಷ ಆಡಳಿತ, ತಾವು ಕೇಂದ್ರದ ಪ್ಲಾನಿಂಗ್ ಕಮಿಷನ್ನಿನಿಂದ ಸಾಕಷ್ಟು ಹಣವನ್ನು ತರುತ್ತೀರೆಂದು ಭಾವಿಸಿದ್ದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಚಾರ ಅನೇಕ ಲೀಗಲ್ ಆಸ್ಪೆಕ್ಟ್‌ಗಳನ್ನು ಒಳಗೊಂಡಿದೆ ಇದರಲ್ಲಿ ಹೀಗೆ ಅನೇಕ ಲೀಗಲ್ ಇಂಪ್ಲಿಕೇಷನ್‌ಗಳು ಇರೋಣದರಿಂದ ತಾವು ನನ್ನ ಬಾಯಿಯಲ್ಲಿ ಕೆಲವು ಮಾತುಗಳನ್ನು ಹೇಳಿಸಿ ಆಗುವ ಕೆಲಸಕ್ಕೆ ತೊಂದರೆ ಮಾಡಿಕೊಳ್ಳುವುದು ಬೇಡ. ಮಾನ್ಯ ಸದಸ್ಯರ ಅಂತರಂಗದಲ್ಲಿ ಏನು ಅಡಗಿದೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಈ ವಿಚಾರದಲ್ಲಿ ಯಾವ ರೀತಿ ಮುಂದುವರಿದರೆ ಎಲ್ಲರಿಗೂ ಅನುಕೂಲವಾಗುತ್ತೋ ಆ ರೀತಿಯಲ್ಲಿ ಹೋಗೋಣ.

**Sri H. D. DEVE GOWDA.**—When Sri Veerendra Patil did not want to disclose the matter in the interest of the State you took objection.

**Sri H. M. CHANNABASAPPA.**—It is not correct. I am sorry, you are not correctly interpreting what I said. This is a matter which involves a number of legal complications and it is going before the tribunal. If it was not before the tribunal or court, I would have straightaway answered your point. Today it is before the court and therefore I am exercising restraint. Otherwise I am not afraid to express what I feel about it.

**MADAM SPEAKER.**—I would like to know whether the Hon. members who have moved their amendments, would like to withdraw them.

**HON. MEMBERS.**—Yes.

**MADAM SPEAKER.**—The amendments are by leave withdrawn. I will now put the motion to the vote of the House. The question is :

> "That we, the Members of the Mysore Legislative Assembly assembled in this session beg leave to thank the Governor for the Address delivered to the Members of the Legislature on the 24th March, 1972."

*The motion was adopted.*

## Business of the House

**MADAM SPEAKER.**—I have an announcement to make to the House. On Saturday the 15th April 1972 the House will take up Government Business instead of non-official business. There will be a sitting of the House on Monday also to transact the non-official business.

Now, the House will rise and meet again tomorrow at 9-00 A.M.

---

*The House adjourned at Twenty-five Minutes past Six of the Clock to meet again at Nine of the Clock on Saturday, the 15th April 1972.*

---

WD 17345—GPB—550—10-7-1972

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Saturday, the 15th April 1972*

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

### (to which oral answers were given)

### Bovipalyakere in Anekal Taluk

13. SRI M. B. RAMASWAMY (Anekal).—

Will the Minister for Public Works be pleased to state :—

(*a*) whether plans and estimates had been prepared for Bovipalyakere (Chikkanagamangala) in Sarjapur Hobli, Anekal-Taluk;

(*b*) if so, the estimated cost of the said tank ;

(*c*) the extent of land coming under its atchkat ;

(*d*) whether it is not a fact that tenders were invited for construction of this tank ;

(*e*) if so, the date that was fixed for receiving the tenders ?

SRI H. M. CHANNABASAPPA (Minister for Public Works).—

(*a*) Yes.

(*b*) Rs. 35,500

(*c*) 24 Acres.

(*d*) Yes ; tenders were invited.

(*e*) 20th April 1966.

ಶ್ರೀ ಎಂ. ಬಿ. ರಾಮಸ್ವಾಮಿ.—20-4-1966 ರೊಳಗಾಗಿ ಟೆಂಡರುಗಳನ್ನು ಹಾಕಬೇಕು ಎಂದು ಕೇಳಿದ್ದರೂ ಸಹ ಇದುವರೆಗೂ ಕೆಲಸಗಳನ್ನು ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರುಗಳನ್ನು ಕರೆದಿದ್ದು ನಿಜ. ಅದನ್ನು ರಿವೋಕ್ ಮಾಡಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಟೆಂಡರುಗಳನ್ನು ಯಾರು ಯಾರು ಹಾಕಿದ್ದರು ಎಂದು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಟೆಂಡರ್ ನೋಟಿಫಿಕೇಷನ್ ಹೊರಡಿಸಿದ ಮೇಲೆ ಕೂಡಲೇ ಟೆಂಡರ್ ನೋಟಿಫಿಕೇಷನ್ ರದ್ದು ಮಾಡಿದ್ದೇವೆಂದು ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ಸಣ್ಣಪುಟ್ಟ ನೀರಾವರಿ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಈ ರಾಜ್ಯದಲ್ಲಿ ಮಾಡಬೇಕು ಎನ್ನುವ ನೀತಿಯನ್ನು ಇಟ್ಟುಕೊಂಡಿರತಕ್ಕ ಸರ್ಕಾರದಲ್ಲಿ, 1966ನೇ ಇಸವಿಯಲ್ಲಿ ಟೆಂಡರ್ ಕರೆದಿದ್ದರೂ, 1972 ನೇ ಇಸವಿಯಾದರೂ ಕೆಲಸ ಮಾಡದೆ ಇರುವುದಕ್ಕೆ ಕಾರಣವೇನು ? ಹಣದ ಅಭಾವವೋ ಅಥವಾ ರಾಜಕೀಯ ಒತ್ತಡವೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಕೆಲಸವನ್ನು ಮಾಡಕೂಡದೆಂದು ಹುಕುಂ ಮಾಡಿದೆ.

ಶ್ರೀ ಜಿ. ರಾಮೇಗೌಡ.—ಈ ಕೆಲಸವನ್ನು ಮಾಡಕೂಡದೆಂದು ಹುಕುಂ ಹೊರಡಿಸಲು ಮುಖ್ಯವಾಗಿ ಗಮನಕ್ಕೆ ತಂದ ಅಂಶಗಳೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಅನ್‌ಸೌಂಡ್ ಎನ್ನುವ ತೀರ್ಮಾನಕ್ಕೆ ಬಂದಮೇಲೆ ಹುಕುಂ ಮಾಡಲಾಗಿದೆ.

ಶ್ರೀ ಬಿ. ಬೈರಪ್ಪಾಜಿ.—ಟೆಕ್ನಿಕಲಿ, ಫೈನಾನ್‌ಷಿಯಲಿ ಅನ್‌ಫೀಸಿಬಲ್ ಎಂದು ಹೇಳಿದ್ದಾರೆ. ಒಂದು ಎಕರೆಗೆ ಇಷ್ಟು ಸಾವಿರ ರೂಪಾಯಿ ಖರ್ಚು ಮಾಡಿದರೆ ಅದರಿಂದ ಉತ್ಪತ್ತಿ ಇಷ್ಟು ಬಂದರೆ ಸಾಕು, ಕೆರೆ ಕಟ್ಟಿಸಬೇಕು ಎನ್ನುವ ಒಂದು ಲೆಕ್ಕಾಚಾರ ಸರ್ಕಾರದಲ್ಲಿದೆ. ಆ ಒಂದು ಮಿತಿಯನ್ನು ಮೀರಿ ಅಂದಾಜುಗಳು ತಯಾರಾದುವೋ ಅಥವಾ ರಾಜಕೀಯ ಒತ್ತಡ ಅಥವಾ ಪ್ರಭಾವದಿಂದ ಈ ಕಾಮಗಾರಿಯನ್ನು ನಿಲ್ಲಿಸಲಾಗಿದೆಯೋ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಎಕರೆಗೆ ನಿರ್ದಿಷ್ಟವಾದ ಖರ್ಚಿನ ಮಿತಿಯೇನಿದೆ ಅದರ ಮೇಲೆ ಖರ್ಚು ಬಂದರೆ ಆಗ ಕಟ್ಟ ಕೂಡದು ಎನ್ನುವ ವಿಧಿ ಇದೆ. ಅದಕ್ಕೆ ಇದು ವಿರೋಧವಾಗಿದೆ. ಅದಕ್ಕಿಂತಲೂ ಬಹಳ ಮುಖ್ಯವಾಗಿ ಅಲ್ಲಿ ಸಾಕಷ್ಟು ನೀರು ಆ ಕೆರೆಗೆ ಒದಗುವುದಿಲ್ಲ ಎನ್ನುವುದು ಖಚಿತವಾದ ಮೇಲೆ ಅದನ್ನು ನಿಲ್ಲಿಸಿದ್ದೇವೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಸಂಸ್ಥಾ ಕಾಂಗ್ರೆಸ್ ಪ್ರಭಾವದಿಂದ ಹೀಗಾಗಿದೆ, ಅದನ್ನು ಸರಿಪಡಿಸುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇಲ್ಲಿ ಪಕ್ಷಗಳ ಪ್ರಶ್ನೆ ಇಲ್ಲ. ನೀರು ಇದೆಯೇ, ಇಲ್ಲವೇ ಎನ್ನುವುದು ಪ್ರಶ್ನೆ ಮತ್ತು ಆರ್ಥಿಕವಾಗಿ, ತಾಂತ್ರಿಕವಾಗಿ ಸೌಂಡ್ ಆಗಿದೆಯೇ ಎನ್ನುವುದು ಪ್ರಶ್ನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈ ಕೆಲಸವನ್ನು ಕೈ ಬಿಡಲಾಗಿದೆ ಎನ್ನುವ ರೀತಿಯಲ್ಲಿ ಉತ್ತರ ಹೇಳಿದರು. ಟೆಂಡರ್ ಕರೆಯುವುದಕ್ಕೆ ಮೊದಲು ಲೋಕೋಪಯೋಗಿ ಇಲಾಖೆಯಲ್ಲಿ ಅದು ಫೀಸಿಬಲ್ ಆಗಿದೆಯೇ ಇಲ್ಲವೇ ಎನ್ನುವ ವಿಚಾರ ಪರಿಶೀಲನೆ ಮಾಡಲಿಲ್ಲವೇ ? ಪರಿಶೀಲನೆ ಮಾಡದೆ ಕಣ್ಣುಮುಚ್ಚಿಕೊಂಡು ಟೆಂಡರ್ ಕರೆದರೇ ? ಆ ರೀತಿ ಬೇಜವಾಬ್ದಾರಿಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ವಿಷಯ ಪರ್ಯಾಲೋಚನೆಯಲ್ಲಿದೆ. ಎಲ್ಲಿ ತಪ್ಪು ಆಗಿದೆ ಎನ್ನುವುದನ್ನು ನೋಡಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕೆಂಬ ಯೋಚನೆಯೂ ಇದೆ.

ಶ್ರೀ ಎಚ್. ಡಿ. ದೇವೇಗೌಡ.—24 ಎಕರೆಗೆ 35,500 ರೂಪಾಯಿ ಖರ್ಚಾಗುತ್ತದೆ ಎಂದು ಹೇಳಿದ್ದಾರೆ. ಅರಿಡ್ ಜೋನ್‌ನಲ್ಲಿ 1500 ರೂಪಾಯಿಗಳವರೆಗೂ ಖರ್ಚು ಮಾಡಬಹುದು ಎಂದು ಇದೆ. ಆ ಪ್ರಕಾರ ಈ ಪ್ರಾಜೆಕ್ಟ್‌ಗೆ 36 ಸಾವಿರ ರೂಪಾಯಿಗಳವರೆಗೂ ಹಣ ವೆಚ್ಚಮಾಡುವುದಕ್ಕೆ ಅವಕಾಶವಿದೆ. ಫೈನಾನ್‌ಷಿಯಲಿ ಫೀಸಿಬಲ್ ಎನ್ನುವ ದೃಷ್ಟಿಯಿಂದ ಇದನ್ನು ಮಾಡಿಸುವುದು ಸರಿಯಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಫೈನಾನ್‌ಷಿಯಲ್ ಅಂಡ್ ಟೆಕ್ನಿಕಲ್ ಫೀಸಿಬಲ್ ಎಂದು ನಾನು ಹೇಳಿದೆ. ಒಂದು ವೇಳೆ ಫೈನಾನ್‌ಷಿಯಲಿ ಫಿಸಿಬಲ್ ಅಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಯಾದರೂ ಅಡ್ಡಿ ಇಲ್ಲ. ಟೆಕ್ನಿಕಲ್ ಫೀಸಿಬಿಲಿಟಿಯಲ್ಲಿ ಲೋಪದೋಷವಿದ್ದರೆ, ಅದನ್ನು ಮಾಡತಕ್ಕದು ಸರಿಯಲ್ಲ ಎನ್ನುವುದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈ ತರಹ ಟೆಂಡರ್ ಕರೆದು, ರದ್ದಾಗಿರತಕ್ಕ ನಿದರ್ಶನಗಳಿವೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರದ್ದಾಗಿರತಕ್ಕ ನಿದರ್ಶನಗಳಿರಬಹುದು. ತಕ್ಷಣದಲ್ಲಿ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಟೆಕ್ನಿಕಲಿ ಅನ್‌ಸೌಂಡ್ ಇದ್ದರೆ ಅಂಥ ಕೆಲಸಗಳನ್ನು ಮಾಡುವುದು ಸರಿಯಲ್ಲ ಎಂದು ಅಪ್ಪಣೆ ಕೊಡಿಸಿದರು. ಟೆಕ್ನಿಕಲಿ ಅನ್‌ಸೌಂಡ್ ಆಗಿರತಕ್ಕ ಕೆಲಸಗಳನ್ನು ಮಾಡಿಸಿ ಅದರಿಂದ ರೈತರಿಗೆ ಅನುಕೂಲವಾಗದೆ ಇರತಕ್ಕ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾಗಲೇ ಹೇಳಿದೆ. ತಾಂತ್ರಿಕವಾಗಿ ಒಪ್ಪಿಗೆಯಾಗದೆ ಇರತಕ್ಕವನ್ನು ಸಲಹೆ ಮಾಡಿ ಕಾರ್ಯ ಮುಂದುವರಿದಿದ್ದರೆ, ಯಾರು ತಾಂತ್ರಿಕವಾಗಿ ತಪ್ಪು ಸಲಹೆಯನ್ನು ಕೊಟ್ಟಿದ್ದಾರೆ ಅಂಥವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಂಡು ಶಿಕ್ಷೆ ಮಾಡುವುದಕ್ಕೆ ಸರ್ಕಾರ ಹಿಂಜರಿಯುವುದಿಲ್ಲವೆಂದು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ನಂ. 108 ಮತ್ತು 113, ಈ ಎರಡು ಪ್ರಶ್ನೆಗಳು ಒಂದೇ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳಾಗಿರುವುದರಿಂದ ಎರಡನ್ನು ಒಟ್ಟಿಗೆ ಹಾಕಬಹುದು.

## Unemployment in the State

108. Sri T. R. SHAMANNA (Fort).—

Will the Minister for Labour be pleased to state :—

(*a*) the number of unemployed persons of the following categories :—

(i) Technical—B. E., Diplomas, Medical etc.,

(ii) Other educated unemployed,

(iii) Uneducated—skilled and unskilled ;

(*b*) the steps taken by the Government to solve the unemployment problem ?

Sri AZEEZ SAIT (Minister for Labour).—

(*a*) The figures, as on 29-2-1972 of the number of educated unemployed persons in different categories were as below :

| | | |
|---|---|---|
| (i) | Engineering graduates | 2,765 |
| | Diploma holders | 6,585 |
| | Graduates in Medicine | 380 |
| | Graduates in Agriculture | 216 |
| | Graduates in Veterinary | 25 |

(ii) Other educated unemployed 1,43,498

(iii) Detailed breakup regarding all categories of skilled persons is not available.

However, total number of certificate holders (I. T. I. Apprenticeship, etc.) 3,665

Total Number of uneducated persons (including illiterates) 1,21,113.

(SRI AZEEZ SAIT)

(b) The important steps under implementation or proposed to be taken up for implementation are given in the list appended.

## Steps taken or proposed to be taken by the Government to solve the unemployment problems in the State.

### Schemes under implementation

(a) Mysore State Stipendiary Training Scheme for Engineers and Diploma holders.

(b) Pilot Scheme of Employment assistance and relief to educated unemployed.

(c) Incentive scheme of self-employment to ex-I. T. I. Trainees.

(d) Establishment of Custom Service Units.

(e) Supervisory Training in Tractor and Farm Machinery.

(f) Training in Industrial Entrepreneurship.

(g) Incentive short-term training programme in gainful trades.

(h) Training in Engineering trades for the Physically Handicapped.

(i) Incentives to Civil Engineering Graduates and Diploma Holders to undertake works on contract in P. W. D.

(j) Employment of Engineers and Diploma holders by contractors.

(k) Non-stipendiary Training Scheme for Engineers.

(l) Facilities to Engineers to form Co-operatives.

(m) Incentives to Engineers by way of allotment of sheds on priority basis in Industrial Sheds.

(n) Rural Works Programmes.

(o) Crash Scheme for Rural Employment and Land Army.

### Schemes sanctioned but not yet implemented.

(p) Scheme for allotment of Cars and Auto-rickshaws to Engineers to be used as owner-driven taxis.

(q) Land Colonisation scheme for Agricultural Graduates.

(r) Setting up of Co-operative Workshops by Engineers to service Scooters, Auto-rickshaws and Cars.

### Schemes proposed to be taken up.

(*s*) Intensive short-term training programmes in the field of:—

(i) Power cable jointing.

(ii) Clock and Watch Repairs.

(iii) Maintenance of Public Address System.

(iv) Repairs to Typewriters and Duplicators.

(v) Training in Office Management.

(vi) Training in Accountancy.

(vii) Training in Salesmanship.

(viii) Training in Senior Stenography.

(ix) Servicing home appliances.

(*t*) Schemes to train in Printing and Book Binding and assistance to set up small presses.

(*u*) Maintenance of units for Hospital appliances and furniture.

(*v*) H. T. V. driving and maintenance.

(*w*) Tractor driving and maintenance.

(*x*) Establishment of Rural Workshops.

(*y*) Establishment of Service Stations for Automobiles.

### Employment to Educated Unemployed

113. SRI M. S. KRISHNAN (Malleswaram).—

Will the Minister for Labour be pleased to state:—

(*a*) the number of unemployed persons in the following categories in the State as on date or up to the latest convenient date available:

(i) Engineering degree holders—(details in respect of Civil, Mechanical, Electrical and Electronic Engineers may be given separately),

(ii) Doctors,

(iii) Diploma holders (details regarding L.M.Es., L.C.Es., L.E.Es., etc., may be given),

(iv) Graduates,

(v) Under Graduates but passed S.S.L.C.,

(vi) Failed S.S.L.C.;

(*b*) the steps the Government is taking or intends to take to provide employment to the educated unemployed?

**Sri AZEEZ SAIT** (Minister for Labour).—

(*a*) As on 29-2-1972 the particulars of unemployed persons in different categories were as below :—

| | | | |
|---|---|---|---|
| (i) Engineering degree holders | | ... | 2,765 |
| (*a*) Civil | 377 | | |
| (*b*) Mechanical | 1,245 | | 2,765 |
| (*c*) Electrical | 1,012 | | |
| (*d*) Others | 131 | | |
| (ii) Doctors | | ... | 380 |
| (iii) Diploma holders | | ... | 6,585 |
| (*a*) Civil | 2,173 | | |
| (*b*) Mechanical | 2,065 | | |
| (*c*) Electrical | 1,863 | | |
| (*d*) Automobile | 211 | | 6,585 |
| (*e*) Radio and Sound Engg. | 83 | | |
| (*f*) Others | 190 | | |
| (iv) Graduates (all branches) | | ... | 20,920 |
| (v) Under Graduates but passed S.S.L.C. | | ... | 1,24,669 |

(vi) Number not available. However, number of persons who are below matriculates (including illiterates) is 1,21,113.

(*b*) The more important measures taken or proposed to be taken by the Government to alleviate the problem of unemployment are given in the Statement appended.

## STATEMENT

Measures taken or proposed to be takan by the Government to alleviate the problem of unemployment among the educated.

1 Mysore State Stipendiary Scheme for Engineers and Diploma holders.

2 Pilot Scheme of Employment Assistance and relief to educated unemployed.

3 Incentive scheme of self-employment to ex-ITI trainees.

4 Establishment of Custom Service Units.

5 Supervisory Training in Tractor and Farm Machinery.

6 Training in Industrial Entrepreneurship.

7 Scheme for the allotment of cars and auto-rickshaws to be used as owner-driven taxis.

8 Intensive short-term training programmes in usual trades.

9 Scheme for the Training in Engineering trades for the Physically handicapped.

10 Land colonisation scheme for the benefit of agricultural graduates.

11 Incentives to Civil Engineering graduates and Diploma holders to undertake work as contractors in P.W.D.

12 Non-stipendiary training scheme for Civil, Mechanical and Electrical Engineers.

13 Engineers are encouraged to form co-operatives.

14 Facilities to Engineers by why of allotment of sheds in industrial estates and other concessions.

15 Employment of Engineers and Diploma holders by P.W.D. contractors.

16 Rural works programmes.

17 Crash Scheme for Rural Employment and setting up of land army.

18 Co-operative Service units for repairs of Scooters, Cars.

**Scheme proposed.**

19 Training in HTV driving and maintenance.

20 Training in Tractor driving and maintenance.

21 Other short-term intensive training programmes in the fields of:

(*a*) Power cable jointing.

(*b*) Maintenance of public address system.

(*c*) Repairs to Typewriters and Duplicators.

(*d*) Training in Office Management.

(*e*) Training in Accountancy.

(*f*) Training in Salesmanship.

(*g*) Training in Senior Stenography.

(*h*) Training in Servicing home appliances.

(*i*) Training in Clock and Watch repairs.

22 Establishment of Rural Workshops.

23 Training in printing and assistance to set up Presses.

24 Maintenance unit for Hospital appliances and furniture.

ಶ್ರೀ ಟಿ. ಆರ್. ಶಾಮಣ್ಣ.—ಉತ್ತರದಲ್ಲಿ ಹೇಳಿರುವಂತೆ ಸುಮಾರು ಎರಡು ಲಕ್ಷ ಐವತ್ತು ಸಾವಿರ ಜನರು ಕೆಲಸಕ್ಕಾಗಿ ರಿಜಿಸ್ಟರು ಮಾಡಿಸಿದ್ದಾರೆಂದು ಇದೆ. ಆದರೆ ಇದಕ್ಕಿಂತ ಹೆಚ್ಚು ಸಂಖ್ಯೆ ಇದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಮತ್ತು ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜು ಗಳಲ್ಲಿ ಯಾರಿಗೆ ಪ್ರಭಾವ ಇರುವುದೋ ಅಂತಹವರಿಗೆ ಕೆಲಸಗಳು ಬೇಗ ಸಿಗುತ್ತವೆ ಮತ್ತು ಇತರ

(ಶ್ರೀ ಟಿ. ಆರ್. ಶಾಮಣ್ಣ)

ಜನಕ್ಕೆ ಸಿಗುತ್ತಿಲ್ಲ. ಮತ್ತು ಕೆಲವರು ರಿಜಿಸ್ಟರು ಮಾಡಿಸಿಕೊಂಡು ಐದಾರು ವರ್ಷಗಳಾಗಿದ್ದರೂ ಅಂತಹವರಿಗೆ ಕೆಲಸ ಸಿಗದೆ ಕಷ್ಟಪಡುತ್ತಿದ್ದಾರೆ. ಇದರ ಬಗ್ಗೆ ಸರಕಾರ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಯೋಚನೆ ಮಾಡಿದೆ?

† ಶ್ರೀ ಅಜೀಜ್ ಸೇಟ್.—ಎರಡು ಲಕ್ಷಕ್ಕಿಂತ ಜಾಸ್ತಿ ಜನ ರಿಜಿಷ್ಟರು ಮಾಡಿಸಿರಬಹುದು. ಆದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜುಗಳಲ್ಲಿ ಪ್ರಭಾವದಿಂದ ಕೆಲಸಗಳು ಸಿಗುತ್ತಿವೆ ಎಂದು ಹೇಳುವುದನ್ನು ನಾನು ಒಪ್ಪಿಕೊಳ್ಳಲು ತಯಾರಿಲ್ಲ. ಸರಕಾರ ಈಗಾಗಲೇ ಕೆಲಸವಿಲ್ಲದೇ ಇರುವ ಅನ್‌ಎಂಪ್ಲಾಯ್ಡ್ ಗ್ರಾಜುಯೇಟರುಗಳನ್ನು ಸಾಧ್ಯವಾದಷ್ಟು ಅಲ್ಲಲ್ಲೆ ಕೆಲಸಕ್ಕೆ ಸೇರಿಸಲು ಪ್ರಯತ್ನ ಮಾಡುತ್ತಿದೆ. ಇದರ ಜೊತೆಗೆ ಇನ್ನೂ ಅನೇಕ ಸ್ಕೀಂಗಳನ್ನು ಮಾಡಿದ್ದೇವೆ. ಇವನ್ನು ಕಾರ್ಯಗತ ಮಾಡಲು ಬಹಳ ತೀವ್ರವಾಗಿ ಯೋಚನೆ ಮಾಡಲಾಗುತ್ತಿದೆ.

ಶ್ರೀ ಟಿ. ಆರ್. ಶಾಮಣ್ಣ.—ಕೆಲಸಕ್ಕಾಗಿ ಕೆಲವರು ಅರ್ಜಿಗಳನ್ನು ಹಾಕಿ ನಾಲ್ಕು ವರ್ಷಗಳಾಗಿದ್ದರೂ ಅವರಿಗೆ ಕೆಲಸ ಸಿಗುತ್ತಿಲ್ಲ. ಆದರೆ ಎರಡು ಮೂರು ತಿಂಗಳಲ್ಲಿ ರಿಜಿಸ್ಟರು ಮಾಡಿಸಿಕೊಂಡವರಿಗೆ ಬಹಳ ಬೇಗನೆ ಕೆಲಸಗಳು ಸಿಗುತ್ತಿವೆ. ಇದರ ಬಗ್ಗೆ ಸರಿಯಾದ ಪ್ರತಿಫಲ ದೊರಕದೆ ಕಷ್ಟಪಡುತ್ತಿರುವ ಜನರ ಬಗ್ಗೆ ಇರುವ ನಿರ್ದಿಷ್ಟ ದೂರುಗಳನ್ನು ಸರಕಾರದ ಗಮನಕ್ಕೆ ತಂದರೆ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ? ಮತ್ತು ನಮ್ಮ ರಾಜ್ಯದಲ್ಲಿರುವ ಕೆಲವು ಕೇಂದ್ರ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಕೆಲಸಗಳು ಸಿಗುತ್ತಿಲ್ಲ. ನಮ್ಮ ರಾಜ್ಯದ ಕನ್ನಡಿಗರಿಗೆ ಹೆಚ್ಚು ಅವಕಾಶವನ್ನು ಇಂತಹ ಕೈಗಾರಿಕೆಗಳಲ್ಲಿ ಕೊಡಿಸಲು ಸಾಕಷ್ಟು ಕ್ರಮ ತೆಗೆದುಕೊಂಡರೂ ಇನ್ನೂ ನಮ್ಮ ಕನ್ನಡಿಗರಿಗೆ ಕೆಲಸಗಳು ಸಿಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ಕನ್ನಡಿಗರಿಗೆ ಪ್ರಾಧಾನ್ಯತೆ ಕೊಡಬೇಕು, ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಅಜೀಜ್ ಸೇಟ್.—ತಾವು ಹೇಳಿದ ವಿಷಯಗಳಲ್ಲಿ ಅನೇಕ ವಿಷಯಗಳು ಕೆಲಮಟ್ಟಿಗೆ ನಿಜ ಎಂದು ನಾನೂ ಒಪ್ಪುತ್ತೇನೆ. ಸೆಂಟ್ರಲ್ ಗವರ್ನಮೆಂಟು ಇಂಡಸ್ಟ್ರೀಗಳಲ್ಲಿ ಕನ್ನಡಿಗರಿಗೆ ಸಾಧಾರಣವಾಗಿ ಕೆಲಸಗಳು ಸಿಗುತ್ತಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಕಾನೂನು ಪ್ರಕಾರ ಎಲ್ಲ ಇಂಡಸ್ಟ್ರಿಗಳಲ್ಲೂ ಪ್ರೈವೇಟು ಸೆಕ್ಟರು ಆಗಲೀ, ಇಲ್ಲವೇ ಪಬ್ಲಿಕ್ ಸೆಕ್ಟರ್ ಆಗಲೀ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಮೂಲಕವೇ ಕೆಲಸಕ್ಕೆ ನೇಮಕ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಭರವಸೆ ಮಾತ್ರ ಕೊಡಬಹುದು. ಪಬ್ಲಿಕ್ ಸೆಕ್ಟರು ಇಂಡಸ್ಟ್ರಿಗಳಲ್ಲಿ ಹಾಗೂ ಪ್ರೈವೇಟು ಸೆಕ್ಟರು ಇಂಡಸ್ಟ್ರಿಗಳಲ್ಲಿ ಸ್ವಲ್ಪಮಟ್ಟಿನ ಪ್ರಭಾವ ಬೀರಿ ನಮ್ಮ ಎಂಪ್ಲಾಯಮೆಂಟು ಎಕ್ಸ್‌ಚೇಂಜು ಮೂಲಕ ಹೋಗುವಾಗ ನಿರುದ್ಯೋಗಿಗಳಿಗೆ ಕೆಲಸಗಳು ಸಿಗುವ ವ್ಯವಸ್ಥೆ ಮಾಡಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಡಲಾಗಿದೆ. ಅವರು ಇವನ್ನು ತೀವ್ರವಾಗಿ ಜಾರಿಗೆ ತರಲು ಪ್ರಯತ್ನ ಮಾಡುತ್ತಾರೆ. ಸೆಂಟ್ರಲ್ ಗವರ್ನಮೆಂಟು ಕೈಗಾರಿಕೆಗಳಲ್ಲಿ ಕೆಲಸಗಳನ್ನು ಕೊಡುತ್ತಿಲ್ಲ ಎನ್ನುವ ದೂರುಗಳು ಈಗ ಬಂದಿದ್ದಲ್ಲ. ಇದು ಬಹಳ ಹಿಂದಿನಿಂದಲೂ ಬರುತ್ತಿದೆ. ಇವಕ್ಕಾಗಿ ನಮ್ಮ ಸರಕಾರ ಕೆಲವಾರು ಸ್ಕೀಂಗಳನ್ನು ಹಾಕಿಕೊಂಡಿದೆ. ಇಂತಹ ಸ್ಕೀಂಗಳಲ್ಲಿ ಕೆಲವು ಜನರಿಗೆ ಟ್ರೇನಿಂಗು ಕೊಡಲು ಅನುಕೂಲ ಮಾಡಿದ್ದೇವೆ ಕೆಲವು ಕಡೆಗಳಲ್ಲಿ ಸ್ಟೈಫೆಂಡು ಕೊಟ್ಟು ತರಬೇತಿ ಕೊಡಲಾಗುತ್ತಿದೆ. ಹೀಗೆ ಟ್ರೇನಿಂಗು ಆದವರ ಪರ್ಸೆಂಟೇಜು ಸುಮಾರು ಶೇಕಡಾ 57.4 ರಷ್ಟು ಇದೆ. ಹೀಗೆ ಕೆಲವರಿಗೆ ತರಬೇತಿ ಕೊಟ್ಟು ಕೆಲಸಗಳನ್ನು ಕೊಡಲು ಯತ್ನ ಮಾಡುತ್ತಿದ್ದೇವೆ ಮತ್ತು ಕೆಲವು ಕಡೆಗಳಲ್ಲಿ ಕೆಲವು ಹುಡುಗರು ಅವರಾಗಿಯೇ ಒಂದು ಇಂಡಸ್ಟ್ರೀಗೆ ಹೋಗಿ 250 ರೂಪಾಯಿಗಳನ್ನು ಆ ಇಂಡಸ್ಟ್ರೀಯವರಿಗೆ ಕೊಟ್ಟು ಟ್ರೇನಿಂಗು ಪಡೆಯುತ್ತಿದ್ದಾರೆ. ಇದರ ಜೊತೆಗೆ ನಮ್ಮಲ್ಲಿ ಗ್ರಾಜುಯೇಟ ಆಗಿ ಡಿಗ್ರಿ ಪಡೆದವರು ಡಾಕ್ಟರಾಗಿ, ಇಂಜಿನೀಯರರಾಗಿ ಅಥವಾ ಬೇರೆ ಯಾವುದಾದರೂ ಟೆಕ್ನಿಕಲ್ ಕೋರ್ಸಿನಲ್ಲಿ ತರಬೇತಿ ಹೊಂದಿ ಪಾಸಾದವರು ಇದ್ದಾರೆ. ಇವರಿಗೆಲ್ಲಾ ಸರಕಾರ ಒಂದು ರೀತಿಯಾದ ಇನ್‌ಸೆಂಟೀವ್ ಕೊಡಬೇಕೆಂದು ಕೆಲವರಿಗೆ ಕಾಂಟ್ರಾಕ್ಟು ಕೆಲಸಗಳನ್ನು ಕೊಡಲು ಪ್ರಯತ್ನ ಮಾಡಲಾಗಿದೆ. ಇಲ್ಲಿ ಇವರುಗಳು ಅರ್ನೆಸ್ಟ್ ಡಿಪಾಸಿಟ್ಟು ಕಟ್ಟುವ ಅವಶ್ಯಕತೆ ಇಲ್ಲ. ಮತ್ತು ಕೆಲವರು ಸ್ಮಾಲ್ ಸ್ಕೇಲು ಇಂಡಸ್ಟ್ರೀಗಳಲ್ಲಿ ಕೆಲಸ ಮಾಡಲು ಅವಕಾಶಗಳಿವೆ. ಮತ್ತೆ ಕೆಲವರು ತಮ್ಮದೇ ಆದ ಇಂಡಸ್ಟ್ರಿಗಳನ್ನು ಮಾಡಬಹುದು. ಆದರೆ ನಮ್ಮ ಹುಡುಗರು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿಲ್ಲ. ಅಗ್ರಿಕಲ್‌ಚರು ಡಿಗ್ರಿ ಪಡೆದವರು ತಾವೇ ತಮ್ಮ ಕ್ಷೇತ್ರಕ್ಕೆ ಹೋಗಿ ವ್ಯವಸಾಯ ಮಾಡಲು ಮನಸ್ಸು ಮಾಡುತ್ತಿಲ್ಲ. ಹೀಗೆ ಡಿಗ್ರೀ ಪಡೆದವರು ಸಾಕಷ್ಟು

† Indicates that the remarks or speeches have not been revised by the member concerned.

ಆಸಕ್ತಿಯಿಂದ ಕೆಲಸ ಮಾಡುತ್ತಿಲ್ಲ. In a co-operative way an unemployed man who starts an industry on his own can not only get himself employed but he can also provide employment to some 10 to 15 other persons. That is how this national problem of unemployment could be solved. ಬರೀ ಎಂಪ್ಲಾಯ್‌ಮೆಂಟು ಎಕ್ಸ್‌ಚೇಂಜ್‌ಗಳಿಂದಲೇ ಎಲ್ಲರಿಗೂ ಕೆಲಸಗಳು ಸಿಗುವುದು ಕಷ್ಟ. ಸರಕಾರ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಗಳೆಂದು ಮಾಡುತ್ತಿದ್ದಾರೆ. ಇವುಗಳಲ್ಲಿ ತರಬೇತಿ ಪಡೆದು ತಮ್ಮ ಸ್ವಂತ ಕಾಲಿನ ಮೇಲೆ ನಿಲ್ಲಲು ಸೂಕ್ತವಾದ ಕ್ರಮ ತೆಗೆದುಕೊಳ್ಳಬಹುದು. ಇನ್ನು ಕೆಲವು ಕಡೆಗಳಲ್ಲಿ ಕಾಂಟ್ರಾಕ್ಟ್ ಕೆಲಸವನ್ನು ಮಾಡಲು, ಅವರು ಡಿಪಾಸಿಟ್ಟು ಕೊಡದೇ ಕೆಲಸ ಮಾಡ ಬಹುದು ಎಂದು ಒಂದು ರೀತಿಯಾದ ಇನ್‌ಸೆಂಟೀವ್ ಕೊಡಬೇಕೆಂದು ಸರಕಾರ ಮಾಡುತ್ತಿದೆ. ಇದರಲ್ಲಿ ಟೆಕ್ನಿಕಲ್ ನೋ ಹೌ ಎಂದು ಏನು ಇದೆ ಇದನ್ನೆಲ್ಲಾ ಅವರುಗಳು ಉಪಯೋಗಿಸಿಕೊಳ್ಳ ಬಹುದು ಮತ್ತು ಕೆಲವರು ತಮ್ಮದೇ ಆದ ಕೈಗಾರಿಕೆ ಮಾಡಿದರೆ ಅದರಲ್ಲಿ ಅವರೇ ಇನ್ನು ಕೆಲವರನ್ನು ಸೇರಿಸಿಕೊಂಡು ಕೆಲಸ ಕೊಡಬಹುದು. It is a matter which pertains to our Youngsters and to their future career.

ಶ್ರೀ ಎಂ. ಎಸ್. ಕೃಷ್ಣನ್.—ಬೇರೆ ರಾಜ್ಯಗಳಲ್ಲಿ ಎಂದರೆ ತಮಿಳುನಾಡು, ಮಹಾರಾಷ್ಟ್ರ ಹಾಗೂ ಆಂಧ್ರ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆಗಳನ್ನು ಕಲಿತುಕೊಂಡರೆ ಮಾತ್ರ ಅಲ್ಲ ಕೆಲಸ ಗಳನ್ನು ಕೊಡುತ್ತೇವೆಂದು ಹೇಳುತ್ತಾರೆ ಮತ್ತು ಆಯಾ ಸರಕಾರ ಇದರಂತೆ ತೀರ್ಮಾನ ತೆಗೆದು ಕೊಂಡಿದೆ. ಇದು ನಮ್ಮ ಸರಕಾರದ ಗಮನಕ್ಕೆ ಬಂದಿದೆಯೇ? ಇದನ್ನು ನಾನು ಹೇಳಲು ಕಾರಣ ಈಚೆಗೆ ಮೈಕೊ ಫ್ಯಾಕ್ಟರಿಯವರು ನಾಸಿಕ್‌ನಲ್ಲಿ ಅವರ ಶಾಖೆ ಒಂದನ್ನು ತೆರೆಯುತ್ತಿದ್ದಾರೆ. ಅಲ್ಲಿಗೆ ಬೆಂಗಳೂರಿನಿಂದ ಹೋಗುವ ಕನ್ನಡಿಗರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ಅವರು ಮರಾಠಿ ಕಲಿತುಕೊಂಡು ಬಂದರೆ ಕೆಲಸ ಕೊಡುತ್ತೇವೆ ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಇಂತಹ ಒಂದು ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಇರುವ ಕೈಗಾರಿಕೆಗಳಲ್ಲೂ ತರುವ ಪ್ರಯತ್ನ ಮಾಡಲು ಸಾಧ್ಯವೇ?

Sri AZEEZ SAIT.—I think we have to first consider this question on a national basis because we are all Indians and we shall not have any discrimination among ourselves. It is also true that some of the States are employing persons on language and regional basis. But I assure you that we will also consider it but not in that narrow angle as other States have done but we will do it with a little broader view.

ಶ್ರೀ ವಾಟಾಳ್ ನಾಗರಾಜ್.—ಕೆಲಸ ಕೊಡುವಾಗ ರಾಷ್ಟ್ರೀಯ ಭಾವನೆ ಇಟ್ಟುಕೊಳ್ಳ ಬೇಕೆಂದು ಮಾನ್ಯ ಸಾರಿಗೆ ಸಚಿವರು ಈಗ ತಾನೇ ಉತ್ತರ ಕೊಟ್ಟರು, ಸಂತೋಷ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕನ್ನಡವನ್ನು ಓದುವುದು, ಬರೆಯುವುದು ಮತ್ತು ಮಾತನಾಡುವುದು ಈ ಮೂರು ಗೊತ್ತಿರುವವರ ಹೆಸರನ್ನು ಮಾತ್ರ ರಿಜಿಸ್ಟರ್ ಮಾಡಿಕೊಳ್ಳಬೇಕೆಂದು ಸರ್ಕಾರದವರು ಆದೇಶ ಕೊಡುವುದಕ್ಕಾಗುವುದಿಲ್ಲವೇ? ಎರಡನೆಯದು ಬೆಂಗಳೂರಿನ ಎಚ್. ಎ. ಎಲ್ ನಲ್ಲಿ 8 ಜನ ಡೈರೆಕ್ಟರ್ ಹುದ್ದೆಗಳಲ್ಲಿ 7 ಜನ ಮದ್ರಾಸಿನವರು ಒಬ್ಬರು. ಕೇರಳದವರು ಇದ್ದಾರೆ. ಮೈಸೂರಿ ನವರು ಇಲ್ಲ. ವರ್ಕ್‌ಷಾಪ್‌ನಲ್ಲಿ, ಸ್ಟೋರ್ಸ್ ವಿಭಾಗದಲ್ಲಿ, ಮ್ಯಾಥಮ್ಯಾಟಿಕ್ಸ್ ವಿಭಾಗದಲ್ಲಿ ಮೈಸೂರಿ ನವರು ಒಬ್ಬರೂ ಇಲ್ಲ. ಅಕೌಂಟ್ಸ್ ಆಫೀಸರ್ ಕೂಡ ಮೈಸೂರಿನವರಲ್ಲ. ಮೈಸೂರಿನ ಜನರಿಗೆ ಅರ್ಹತೆ ಇದ್ದರೂ ಹೊರರಾಜ್ಯದವರನ್ನು ನೇಮಕ ಮಾಡಿಕೊಂಡಿದ್ದಾರೆ. ಈ ಬಗ್ಗೆ ತಮಗೆ ಒಂದು ಮನವಿಯನ್ನು ಸಹ ಕೊಟ್ಟಿದ್ದೇನೆ. ನೂರಕ್ಕೆ 90 ರಷ್ಟು ಹೊರರಾಜ್ಯದವರನ್ನೇ ನೇಮಕ ಮಾಡಿ ಕೊಳ್ಳುತ್ತಿರುವುದರಿಂದ ಮೈಸೂರಿನ ಜನತೆಗೆ ಅನ್ಯಾಯವಾಗುತ್ತಿದೆ. ಇದನ್ನು ತಪ್ಪಿಸುತ್ತೀರಾ? ಮತ್ತು ನೆರೆ ರಾಜ್ಯಗಳಲ್ಲಿರುವ ಕೇಂದ್ರಸರ್ಕಾರದ ಕೈಗಾರಿಕೆಗಳಲ್ಲಿ ಮೈಸೂರಿನವರಿಗೆ ಎಷ್ಟೆಷ್ಟು ಸ್ಥಾನಗಳನ್ನು ಕೊಟ್ಟಿದ್ದಾರೆಂಬುದು ತಮಗೆ ಗೊತ್ತಿದೆಯೇ?

Sri AZEEZ SAIT.—If Mysoreans were to fit in for particular jobs, we will try our best and use our good offices to see that they are employed.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಾ ತಾಂತ್ರಿಕ ವಿಜ್ಞಾನ ಪದವೀಧರರು ಎಷ್ಟು ಜನ ನಿರುದ್ಯೋಗಿಗಳಾಗಿದ್ದಾರೆ, ಡಿಪ್ಲೊಮಾದಾರರು ಎಷ್ಟು ಜನ ನಿರುದ್ಯೋಗ

(ಶ್ರೀ ಎಂ. ಎಸ್. ಕೃಷ್ಣನ್)

ಗಳಾಗಿದ್ದಾರೆಂಬುದನ್ನು ತಿಳಿಸಿದ್ದೀರಿ. ಇವತ್ತಿನ ದಿವಸ ನಿಮ್ಮ ಅಂಕಿಅಂಶಗಳ ಪ್ರಕಾರ ಮೆಕ್ಯಾನಿಕಲ್ ವಿಭಾಗದಲ್ಲಿ ಮತ್ತು ಎಲೆಕ್ಟ್ರಿಕಲ್ ವಿಭಾಗದಲ್ಲಿ ವಿಜ್ಞಾನ ಪದವೀಧರರು ಮತ್ತು ಡಿಪ್ಲೊಮಾದಾರರು ಬಹಳ ಜನ ನಿರುದ್ಯೋಗಿಗಳಾಗಿದ್ದಾರೆ. ಇವತ್ತಿನ ದಿವಸ ದೇಶದಲ್ಲಿರುವ ಕೈಗಾರಿಕೆಗಳಲ್ಲಿ ಇವರ ಆವಶ್ಯಕತೆ ಇದ್ದರೂ ಕೂಡ ನೇಮಕ ಮಾಡಿಕೊಳ್ಳುತ್ತಿಲ್ಲ. ಇನ್ನು ಮುಂದೆ ಈ ಮೆಕಾನಿಕಲ್ ವಿಭಾಗದ ವಿಜ್ಞಾನ ಪದವೀಧರರನ್ನು ಮತ್ತು ಡಿಪ್ಲೊಮಾದಾರರನ್ನು ಕಡ್ಡಾಯವಾಗಿ ನೇಮಕ ಮಾಡಿಕೊಳ್ಳಬೇಕೆಂದು ಎಲ್ಲಾ ಕೈಗಾರಿಕೆಗಳಿಗೂ ಒತ್ತಾಯ ಮಾಡುತ್ತೀರಾ ? ಏಕೆಂದರೆ ಈ ಡಿಪ್ಲೊಮೋದಾರರ ವಿಷಯ ಬಹಳ ಪರಿತಾಪವಾಗಿದೆ. ಕೆಲವರು ಕೆಲಸ ಸಿಗದೆ ಹೆಲ್ಪರ್ ಕೆಲಸ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಅರ್ಹತೆಯಿರುವ ಎಲ್ಲರಿಗೂ ವೇತನವನ್ನು ಕೊಡುವಂತೆ ಕೈಗಾರಿಕೆಗಳವರಿಗೆ ಒತ್ತಾಯ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಈ ವಿಷಯ ಈಗಾಗಲೇ ಹೇಳಿದ್ದೇನೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನ ರೂಲ್ಸ್ ಅಂಡ್ ರೆಗ್ಯುಲೇಷನ್ಸ್‌ನ್ನು ಚಾಚೂತಪ್ಪದಂತೆ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಈಗ ಪಬ್ಲಿಕ್ ಸೆಕ್ಟಾರ್ ಮತ್ತು ಪ್ರೈವೇಟ್ ಸೆಕ್ಟಾರ್‌ನಲ್ಲಿರುವ ಕೈಗಾರಿಕೆಗಳವರು ಕೆಲಸಕ್ಕೆ ಅಭ್ಯರ್ಥಿಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಿ ನೇರವಾಗಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮೂಲಕ ನೇಮಕ ಮಾಡಿಕೊಳ್ಳುವಂತೆ ಹೇಳುತ್ತೇವೆ. ಇದನ್ನು ಮಾಡಿದರೆ ನಮ್ಮ ರಾಜ್ಯದ ನಿರುದ್ಯೋಗ ಸಮಸ್ಯೆ ಅದಷ್ಟು ಕಡಿಮೆಯಾಗುತ್ತದೆ. ಇದರ ಜೊತೆಗೆ ಸರ್ಕಾರದವರು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಏನು ಕೆಲವು ಯೋಜನೆಗಳನ್ನು ಕೈಕೊಂಡಿದ್ದಾರೆ ಅದರ ಉಪಯೋಗವನ್ನು ಅವರು ಪಡೆದುಕೊಳ್ಳಬಹುದು.

ಶ್ರೀ ಗೋಪಿನಾಥಸಾಂದ್ರ.—ಈ ವಿಷಯದಲ್ಲಿ ಸರ್ಕಾರದವರು ಕೈಕೊಂಡಿರತಕ್ಕ ಕೆಲವು ಯೋಜನೆಗಳನ್ನು ಕಾರ್ಯಗತ ಮಾಡದಿರುವುದಕ್ಕೆ ಕಾರಣವೇನು ?

ಶ್ರೀ ಅಜೀಜ್ ಸೇಟ್.—ಇಲ್ಲಿರುವ ಅನೇಕ ಯೋಜನೆಗಳನ್ನು ಜಾರಿಗೆ ತರಬೇಕಾದರೆ ಹಣದ ತೊಂದರೆ ಬರುತ್ತದೆ. ಈಗಾಗಲೇ ಕೆಲವು ಯೋಜನೆಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಪೋಸ್ ಮಾಡಿದ್ದೇವೆ. ಹಣ ಅನುಕೂಲವಾದಂತೆ ಎಲ್ಲ ಯೋಜನೆಗಳನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ರಾಜ್ಯದಲ್ಲಿ ಎಷ್ಟು ಜನ ನಿರುದ್ಯೋಗಿಗಳಿದ್ದಾರೆಂಬ ಲೆಕ್ಕವನ್ನು ಕೊಟ್ಟಿದ್ದೀರಿ. ಸಂತೋಷ. ಆ ಲೆಕ್ಕ ಸರಿಯೋ ಇಲ್ಲವೋ ಎಂಬುದನ್ನು ಮುಂದೆ ಪರಿಶೀಲನೆ ಮಾಡೋಣ. ಈಗ ಸರ್ಕಾರದವರು ಶಿಕ್ಷಣ ಕೊಟ್ಟು ಅನೇಕ ಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿದೆ. ಇವರಿಗೆ ಕೆಲಸ ಕೊಡುವುದಕ್ಕೆ ಸಾಧ್ಯವಾಗದಿದ್ದರೆ ನಿರುದ್ಯೋಗ ಭತ್ಯವನ್ನಾದರೂ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ? ತಾವು ವಿಶಾಲ ಮನೋಭಾವದ ಹೆಸರನ್ನು ಹೇಳಿದಿರಿ ಮತ್ತು ರಾಷ್ಟ್ರೀಯತೆಯ ಹೆಸರನ್ನು ಹೇಳಿದಿರಿ. ನಮ್ಮ ರಾಜ್ಯದಲ್ಲಿರತಕ್ಕ ಜನರಿಗೆ ಉದ್ಯೋಗಕೊಡಿ ಎಂದು ಕೇಳಿದರೆ, ಎಲ್ಲ ನಿರುದ್ಯೋಗಿಗಳಿಗೂ ಕೆಲಸ ಕೊಡುತ್ತೇವೆಂದು ಹೇಳಿದಿರಿ, ಆದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಮತ್ತು ಕಾರ್ಖಾನೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಅಧಿಕಾರಿಗಳು ಏನಿದ್ದಾರೆ ಅವರು ಬೇರೆ ರಾಜ್ಯದವರಾಗಿರುವುದರಿಂದ ಅವರು ನಮ್ಮ ರಾಜ್ಯದ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆ. ಕಸ ಗುಡಿಸುವ ಕೆಲಸಕ್ಕೂ ಮದ್ರಾಸಿನಿಂದ ಜನರನ್ನು ತಂದು ನೇಮಕ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ನಮ್ಮ ರಾಜ್ಯದ ಜನತೆಗೇ ಉದ್ಯೋಗ ಸಿಗುವಂತೆ ಏರ್ಪಾಡು ಮಾಡುತ್ತೀರಾ ?

Sri AZEEZ SAIT.—It is a very emotional question. Employment Exchanges are there to guide our graduate boys. But, I am very sorry to say that our graduate boys do not like to move from their districts not even from their taluks, to take up jobs. I request hon. members to persuade our boys to take up some work available under our schemes.

ಶ್ರೀ ಕೆ. ಎನ್. ವೀರಪ್ಪಗೌಡ.—ಸರ್ಕಾರದವರು ಉದ್ಯೋಗ ಕಲ್ಪಿಸಿಕೊಡುತ್ತಾರೆಂಬ ಒಂದು ಪ್ರಚಾರದಿಂದ ನಿರುದ್ಯೋಗಿಗಳಿಗೆ ಸ್ವಂತ ದುಡಿಮೆ ಮಾಡಬೇಕೆಂಬ ಮನಸ್ಸು ಬಹಳವಾಗಿ ಕಡಿಮೆಯಾಗಿದೆ. ಸರ್ಕಾರದವರು ಎಲ್ಲರಿಗೂ ಉದ್ಯೋಗ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದೆಯೇ ? ಮತ್ತು ಯಾರಿಗೆ ಜೀವನಕ್ಕೆ ತೊಂದರೆಯಾಗಿದೆ, ಅಂಥವರಿಗೆ ಮಾತ್ರ ಕೆಲಸ ಕೊಡುವುದಾಗಿ ಸರ್ಕಾರ ತನ್ನ ನೀತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ? ಈಗ ಶ್ರೀಮಂತರ ಮಕ್ಕಳೇ ಮೆರಿಟ್‌ನಲ್ಲಿ ಪಾಸಾಗಿ ಅವರೇ ಅಧಿಕಾರಕ್ಕೆ ಬರುತ್ತಿದ್ದಾರೆ. ಬಡವರ ಮಕ್ಕಳು ಮೆರಿಟ್‌ನಲ್ಲಿ ಪಾಸಾಗದೆ ಕೆಲಸ ಸಿಗುವುದು ಕಷ್ಟವಾಗಿದೆ ಇದನ್ನು ತಪ್ಪಿಸುವುದಕ್ಕೆ ಏನಾದರು ಮಾರ್ಗವಿದೆಯೇ ?

ಶ್ರೀ ಅಜೀಜ್ ಸೇಟ್.—ನಾನು ಈಗಾಗಲೇ ಹೇಳಿದ್ದೇನೆ. ಕಾಲೇಜ್, ಪಾಲಿಟೆಕ್ನಿಕ್ ಮತ್ತು ಐ. ಟಿ. ಐ. ನಲ್ಲಿ ಕಾಲಿಟ್ಟು ಪಾಸಾದೊಡನೆ ಸರ್ಕಾರಿ ಕೆಲಸ ಸಿಗುತ್ತದೆ ಎಂದು ಹೇಳುವ ಮನೋಭಾವ ಹೋಗಬೇಕು. ಈಗ ಕೈಗಾರಿಕಾ ಇಲಾಖೆಯಿಂದ, ವ್ಯವಸಾಯ ಇಲಾಖೆಯಿಂದ ಲೋಕೋಪಯೋಗಿ ಇಲಾಖೆಯಿಂದ ಏನೇನು ಅನುಕೂಲತೆಗಳು ಸಿಗುತ್ತವೆ ಆ ಅನುಕೂಲತೆಗಳನ್ನು ಪಡೆಯುವುದಕ್ಕೆ ಪದವೀಧರ ನಿರುದ್ಯೋಗಿಗಳು ಮುಂದೆ ಬರಬೇಕು. ಓದಿದವರಿಗೆ ಎಲ್ಲರಿಗೂ ಸರ್ಕಾರಿ ಕೆಲಸವನ್ನು ಕೊಡಬೇಕೆಂದರೆ ಸಾಧ್ಯವಾಗುವುದಿಲ್ಲ.

9-30 A. M.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ ಈಗ ತಾವು ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಗಂಡಸರೆಷ್ಟು ಹೆಂಗಸರೆಷ್ಟು ಎಂಬುದು ಗೊತ್ತಾಗುವುದಿಲ್ಲ. ಅದನ್ನು ತಿಳಿಸುವುದಕ್ಕೆ ಸಾಧ್ಯವೇ? ಈಗ ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಹೆಚ್ಚು ಗಂಡಸರನ್ನು ಕೆಲಸಕ್ಕೆ ನೇಮಿಸುವ ವ್ಯವಸ್ಥೆ ಇದೆಯೇ ಹೊರತು ಹೆಣ್ಣು ಮಕ್ಕಳನ್ನು ಕೆಲಸಕ್ಕೆ ನೇಮಿಸುವ ಬಗ್ಗೆ ಅಸಡ್ಡೆ ಇದೆ. ಇದರ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

Sri AZEEZ SAIT.—There is no difference between ladies and gents. Therefore the Employment Exchange is not in a position to keep a list of men and women separately. One can make out from the name whether he is a man or a woman. Employment opportunities are there both for men and women. Under the circumstances, I am unable to give you the figures of men and women separately.

ಶ್ರೀ ಎಸ್. ವಿ. ನಾಯಕ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರುದ್ಯೋಗವನ್ನು ಬಗೆಹರಿಸುವ ದೃಷ್ಟಿಯಿಂದ ಸ್ಥಳೀಯ ಜನರಿಗೆ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯಲ್ಲಿ ಮತ್ತು ಕಾಳಿ ನದಿಯ ಯೋಜನೆಗೆ ಸಂಬಂಧಪಟ್ಟ ಕೆಲಸದಲ್ಲಿ ಶೇಕಡಾ 60 ರಷ್ಟು ಉದ್ಯೋಗವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಅಜೀಜ್ ಸೇಟ್.—ಆ ಕಾರ್ಖಾನೆಯವರು ನಮಗೆ ಯಾರಾದರೂ ನೌಕರರು ಬೇಕು ಎಂದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಅವರ ಹೆಸರು ರಿಜಿಸ್ಟರಾಗಿದ್ದರೆ ಅಂಥವರಿಗೆ ಕೆಲಸವನ್ನು ಕೊಡಿಸಿಕೊಡೋಣ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡುತ್ತಾ ಹೆಣ್ಣು ಮಕ್ಕಳು ಮತ್ತು ಗಂಡಸರು ಎನ್ನತಕ್ಕಂಥ ಬೇಧಭಾವವನ್ನು ಕೆಲಸ ಕೊಡುವ ವಿಷಯದಲ್ಲಿ ತೋರಿಸುವುದಕ್ಕಾಗುವುದಿಲ್ಲ ಎಂದು ಹೇಳಿದರು. ಜನಸಂಖ್ಯೆಯ ಆಧಾರದ ಮೇಲೆ ನೋಡಿದರೆ ನೌಕರಿಯಲ್ಲಿ ಗಂಡಸರಿಗಿಂತ ಹೆಣ್ಣುಮಕ್ಕಳು ಕಡಿಮೆ ಇದ್ದಾರೆ. ಆದ್ದರಿಂದ ಅವರಿಗೆ 100ಕ್ಕೆ 60 ರಷ್ಟು ಹುದ್ದೆಗಳನ್ನು ರಿಜರ್ವೇಶನ್ ಇಡುತ್ತೀರಾ ? ಈಗ ಇಂಜಿನಿಯರಿಂಗ್ ಮತ್ತು ಮೆಡಿಕಲ್ ಪದವೀಧರರು ಹೆಚ್ಚು ಜನ ನಿರುದ್ಯೋಗಿಗಳಾಗಿದ್ದಾರೆ, ಡಿಪ್ಲೊಮಾ ಹೋಲ್ಡರುಗಳು ನಿರುದ್ಯೋಗಿಗಳಾಗಿದ್ದಾರೆ. ಆದ್ದರಿಂದ ಕೆಲವು ಕಾಲದವರೆಗೆ ಈ ಟೆಕ್ನಿಕಲ್ ಕಾಲೇಜು ಮತ್ತು ಸ್ಕೂಲುಗಳನ್ನು ಮುಚ್ಚುವುದಕ್ಕೆ ತಾವು ಯೋಚನೆ ಮಾಡುತ್ತೀರಾ ?

**Sri AZEEZ SAIT.**—There is no difference between work and wages paid to both male and female workers. It is not feasible to make reservation for men and women. There are certain factories like H.M.T. Watch Factory where ladies are required because the work involved there is very delicate. For delicate work only ladies are preferred. As regards the Medical graduates, there are only 380 doctors who remain unemployed. I may advise these doctors to go outside the State and seek employment or they might start their own practice or start hospitals in the rural areas.

ಶ್ರೀ ಬಿ. ಸತ್ಯನಾರಾಯಣಸಿಂಗ್.—ಈಗ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಆದ್ದರಿಂದ ಈಗ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭ ಮಾಡುವುದರಿಂದ ಅಲ್ಲಿಗೆ ಬೇಕಾಗಿರುವ ಇಂಜನಿಯರುಗಳನ್ನು ರೆಕ್ರೂಟ್ ಮಾಡಿ ಬೇರೆಯಾವುದಾದರೂ ಫ್ಯಾಕ್ಟರಿಗೆ ತರಪೇತಿಗಾಗಿ ಕಳುಹಿಸಲು ಕೇಂದ್ರ ಸರ್ಕಾರದವರನ್ನು ಸರ್ಕಾರದವರು ಒತ್ತಾಯ ಮಾಡುತ್ತೀರಾ ?

**Sri AZEEZ SAIT.**—It is a matter to be considered.

**Sri C. M. ARUMUGAM.**—May I know the relief given to the educated unemployed persons ?

**Sri AZEEZ SAIT.**—Allotment of cars, and Autorickshaws ; lands to the agricultural graduates, all these schemes are under the consideration of Government.

**Sri D. B. KALMANKAR.**—In the appendix to the answer, you have stated three categories of schemes *viz.*, schemes under implementation, schemes sanctioned but not yet implemented and the schemes proposed to be taken up. May I know how many people are employed under the schemes which are under implementation and how many are going to be employed under the schemes sanctioned and how many are going to be employed under the proposed schemes ?

**Sri AZEEZ SAIT.**—I have already replied to that question.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರ ಸರ್ಕಾರದ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಕೆಲಸಕ್ಕೆ ನೇಮಿಸಿಕೊಳ್ಳತಕ್ಕ ಅಭ್ಯರ್ಥಿಗಳ ವಯೋಮಿತಿಯನ್ನು 24 ವರ್ಷದಿಂದ 26 ವರ್ಷಗಳಿಗೆ ಮಾಡಿದ್ದಾರೆ. ಆ ದೃಷ್ಟಿಯಿಂದ ನಮ್ಮ ರಾಜ್ಯ ಸರ್ಕಾರದವರು ನಮ್ಮ ರಾಜ್ಯದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳತಕ್ಕ ಅಭ್ಯರ್ಥಿಗಳ ವಯೋಮಿತಿಯನ್ನು 28 ವರ್ಷದಿಂದ 30 ವರ್ಷ, ಹರಿಜನ ಮತ್ತು ಗಿರಿಜನರಿಗೆ 30 ವರ್ಷದಿಂದ 35 ವರ್ಷಕ್ಕೆ ಹೆಚ್ಚು ಮಾಡುವುದು ಸೂಕ್ತವಲ್ಲವೇ ?

**Sri AZEEZ SAIT.**—We will just consider your suggestion.

ಶ್ರೀ ಎನ್. ಜಿ. ಹಾಲಪ್ಪ.—ಪ್ರೈವೇಟ್ ಸೆಕ್ಟಾರ್‌ನಲ್ಲಿ ಕನ್ನಡಿಗರಿಗೆ ಜಾಸ್ತಿ ಕೆಲಸಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು, ನಮ್ಮ ರಾಜ್ಯದಲ್ಲಿ ಪ್ರೈವೇಟ್ ಸೆಕ್ಟಾರಿನಲ್ಲಿ ಕನ್ನಡಿಗರು ಎಷ್ಟು ಜನ ಇದ್ದಾರೆ? ಮತ್ತು, ಹರಿಹರದಲ್ಲಿರುವ ಪಾಲಿಫಿಬ್ರೆ ಫ್ಯಾಕ್ಟರಿಯಲ್ಲಿ ಎಷ್ಟು ಜನ ಕನ್ನಡಿಗರು ಕೆಲಸ ಮಾಡುತ್ತಾರೆ ?

**Sri AZEEZ SAIT.**—I request notice to answer that question.

**Sri C. M. ARUMUGUM.**—May I know whether there is any specific Government Order directing the A, B, C, contractors to employ the engineers and the diploma holders and whether Government have told them that unless they employ these people, no contract work would be given to them ?

**Sri AZEEZ SAIT.**—The Government order is already there.

**Sri C. M. ARUMUGAM.**—There is a Government Order saying that the local people should be given preference in employment. I want to know whether the Government Order is implemented, and whether the contract employment still exists?

**Sri AZEEZ SAIT.**—In most of the cases the local people are being employed. With regard to the other question I have called for further information and I will furnish it to the hon. Members after it is received.

ಶ್ರೀ ಬಿ. ಬೈರಪ್ಪಾಜಿ.—ಈಗ ದೇಶದಲ್ಲಿ ಪದವೀಧರರು ಮತ್ತು ಡಿಪ್ಲೊಮಾ ಹೋಲ್ಡರ್ಸ್ ಬಹಳ ಜನ ಉದ್ಯೋಗ ಇಲ್ಲದೆ ಇದ್ದಾರೆ. ಕೇಂದ್ರ ಸರ್ಕಾರದವರು ಇಂಜನಿಯರಿಂಗ್ ಪದವೀಧರರಿಗೆ ಒಂದು ಸ್ಕೀಮನ್ನು ಮಾಡಿ ಕೆಲಸ ಸಿಗುವತನಕ 250 ರೂಪಾಯಿ ಗೌರವ ಸಂಭಾವನೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಕೂಡ ಕೆಲಸವಿಲ್ಲದೆ ಇಂಜನಿಯರಿಂಗ್ ಗ್ರ್ಯಾಜ್ಯುವೇಟ್ಸ್ ಗುಮಾಸ್ತರ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಇಂತಹ ಜನರಿಗೆ ಕೂಡ ಗೌರವ ಸಂಭಾವನೆ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೀರಾ? ಅದೇ ರೀತಿ ಕನ್ನಡಿಗರಿಗೆ ನಮ್ಮ ರಾಜ್ಯದಲ್ಲಿರುವಂತಹ ಕೈಗಾರಿಕೆಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಅಲ್ಲಿರುವ ಕೈಗಾರಿಕೋದ್ಯಮಿಗಳಿಗೆ ಸೂಚನೆ ಕೊಡುತ್ತೀರಾ? ಉದಾಹರಣೆಗೆ ನಮ್ಮಲ್ಲಿ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆ ಇದೆ. ಅಲ್ಲಿ ಕಸ ಗುಡಿಸುವ ಕೆಲಸಗಳಿಗೆ ಮಾತ್ರ ಕನ್ನಡಿಗರನ್ನು ನೇಮಿಸುತ್ತಿದ್ದಾರೆ; ಉಳಿದ ಒಳ್ಳೆಯ ಕೆಲಸಗಳಿಗೆ ಮದ್ರಾಸಿನಿಂದ ಮತ್ತು ಇತರ ಕಡೆಗಳಿಂದ ಬಂದ ಜನರನ್ನು ನೇಮಿಸುತ್ತಿದ್ದಾರೆ. ಇದನ್ನು ತಪ್ಪಿಸಿ ಸ್ಥಳೀಯ ಜನರಿಗೆ ಕೊಡುವಂತೆ ಏರ್ಪಾಡು ಮಾಡುತ್ತೀರಾ?

**Sri AZEEZ SAIT.**—This is a burning problem. This problem is to be solved. I assure you that all good offices will be used to get employment to all the unemployed. This is our aim. I assure you that my Department will take up this problem very sincerely and earnestly and see that this problem is solved to the maximum extent possible. I am sorry the politicians are interfering and they are bringing pressure on behalf of their unemployed persons.

ಶ್ರೀ ಟಿ. ಆರ್. ಶಾಮಣ್ಣ.—ಈಗ ಹುಚ್ಚು ಹಿಡಿದರೆ ಹುಚ್ಚಾಸ್ಪತ್ರೆಗೆ ಹೋಗಬಹುದು, ತಲೆ ನೋವಾದರೆ, ಅವಕ್ಕೆ ಡಾಕ್ಟರ ಹತ್ತಿರ ಹೋಗಬಹುದು. ಆದರೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ಮದ್ದು ಮಾಡುವುದು? ನಮ್ಮನ್ನು ಬೆಳಿಗ್ಗೆಯಿಂದ ಸಾಯಂಕಾಲದ ತನಕ, ಏನಾದರೂ ಕೆಲಸ ಕೊಡಿಸಿ ಎಂದು, ಜನರು ಹಿಂಸಿಸುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಯಾವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ?

ಶ್ರೀ ಅಜೀಜ್ ಸೇಠ್.—ಯಾರ ಮನೆಯಲ್ಲಿ ಇವತ್ತು ಒಬ್ಬರು ಡಾಕ್ಟರ್ ಇದ್ದಾರೆ, ಅವರು ಇನ್ನೊಬ್ಬರು ಡಾಕ್ಟರ್ ನಮ್ಮ ಮನೆಯಲ್ಲಿ ಆಗಬೇಕೆಂದೂ, ಯಾರ ಮನೆಯಲ್ಲಿ ಒಬ್ಬರು ಇಂಜಿನಿಯರಿದ್ದಾರೆ, ಅವರ ಮನೆಯಲ್ಲಿ ಇನ್ನೊಬ್ಬರು ಇಂಜಿನಿಯರ್ ಆಗಬೇಕೆಂದೂ ಅಪೇಕ್ಷೆ ಪಡುತ್ತಾರೆ. ಆ ರೀತಿ ಈ ರಾಜಕಾರಣಿಗಳು ಎಲ್ಲಿ ಒತ್ತಾಯ ತರಬೇಕೋ ಅಲ್ಲಿ ತಂದು, ಈ ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರುಗಳಲ್ಲಿ ತಮ್ಮ ತಮ್ಮ ಮಕ್ಕಳನ್ನು ಮತ್ತು ಸಂಬಂಧೀಕರನ್ನು ತಂದು ಹಾಕಿದ್ದಾರೆ.

(ಆಗ ಹಲವು ಸದಸ್ಯರು ಎದ್ದು ಪ್ರತಿಭಟನೆ ಮಾಡಿದರು)

ಶ್ರೀ ಎಸ್. ಬಂಗಾರಪ್ಪ.—ಅವರು ರಾಜಕಾರಣಿಗಳು ಎಂದು ಹೇಳಿದ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆ ತರಹ ಹೇಳುವುದಕ್ಕೆ ಇವರು ರಾಜಕಾರಣಿಗಳು ಅಲ್ಲವೇ?

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇವರು ಮಂತ್ರಿಸ್ಥಾನದಲ್ಲಿರುವವರು ಉತ್ತರ ಕೊಡಬೇಕಾದರೆ, ಇಲ್ಲಿ ಯಾವ ಪ್ರಶ್ನೆ ಇದೆಯೋ, ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಕೊಡಬೇಕೇ ಹೊರತು ಅದನ್ನು ಬಿಟ್ಟು ಬಿಟ್ಟು ಈ ರೀತಿ ಅಸಮರ್ಪಕವಾದ ಉತ್ತರವನ್ನು ಹೇಳಬಾರದು. ಇವರು ರಾಜಕಾರಣಿಗಳು ಎಂದು

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಕೇರಾಫ್ ಅಡ್ರೆಸ್ ಕೊಟ್ಟು, ಅವರು ಇಲ್ಲಿ ಕನ್ನಡಿಗರೆನಿಸಿಕೊಂಡು ಇಲ್ಲಿಯೇ ಕನ್ನಡಿಗರಾಗಿ ಕೆಲಸಗಳನ್ನು ಪಡೆಯತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ರೀತಿ ಸರ್ಕಾರದ ಗಮನಕ್ಕೆ ಬಾರದಿದ್ದರೆ ಅದನ್ನು ಈಗಲಾದರೂ ಪರಿಶೀಲನೆ ಮಾಡುತ್ತೀರಾ? ಇನ್ನೊಂದು ಪ್ರಶ್ನೆ. ಎಂಪ್ಲಾಯಮೆಂಟ್ ಎಂಕ್ಸ್‌ಚೇಂಜ್‌ನಲ್ಲಿ ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಅವರ ಬಗ್ಗೆ ಸ್ಟೇಟ್ ಗವರ್ನಮೆಂಟಿನಲ್ಲಿ ಸೇಕಡ 18ರಷ್ಟನ್ನೂ ಮತ್ತು ಕೇಂದ್ರ ಸರ್ಕಾರದಲ್ಲಿ ಸೇಕಡ 12½ಯಷ್ಟನ್ನು ರಿಜರ್ವ್ ಆಗಿ ಇಡಬೇಕೆಂಬ ಕಾನೂನು ಇದ್ದರೂ ಸಹ ಆ ಅಂಕಿ ಅಂಶಗಳ ಮೇಲೆ ಸೇಕಡಾವಾರು ಶಿಫಾರಸು ಆಗುತ್ತಾ ಇಲ್ಲ. ಅದನ್ನು ಸರಿಮಾಡುತ್ತೀರಾ? ಈ ಮೂರು ಪ್ರಶ್ನೆಗಳಿಗೂ ದಯವಿಟ್ಟು ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಈ ವರ್ಷದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿಗೆ ಏನಾದರೂ ಅನುಕೂಲವಾಗದಿದ್ದರೆ ಇನ್ನು ಮುಂದೆ ಆರೀತಿ ಅನ್ಯಾಯವಾಗುವುದಿಲ್ಲ. ಆ ವಿಷಯದಲ್ಲಿ ನಾನು ನೋಡಿಕೊಳ್ಳುತ್ತೇನೆ. ಷೆಡ್ಯೂಲ್ಡ್ ಟ್ರೈಬ್ಸ್ ಅವರ ಬಗ್ಗೆ ಅಂಕಿ ಅಂಶಗಳು ಈಗ ನನ್ನಲ್ಲಿ ಸದ್ಯಕ್ಕಿಲ್ಲ. ಬೇಕಾದರೆ ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ದೊರಕಿಸಿಕೊಡುತ್ತೇನೆ.

SRI K. PRABHAKAR.—With a view to implementing socialistic policies, will the Government try an experiment to assure each family at least one source of living for its maintenance either through Government service or through other employment potential ?

MADAM SPEAKER.—This has been answered, now the Question Hour is over.

10-00 A. M.

## Theft of Timber at Hosanagar and Sagar

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ, ಅಧ್ಯಕ್ಷರೇ, ನಾನು ಈಗ ತಮ್ಮ ಗಮನಕ್ಕೆ ಒಂದು ವಿಷಯವನ್ನು ನಮ್ಮ ಶಿವಮೊಗ್ಗಾ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅದರಲ್ಲೂ ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ತರಬೇಕಾಗಿದೆ. ಅರಣ್ಯ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳ ಕುಮ್ಮಕ್ಕಿನಿಂದ ಸರ್ಕಾರಿ ಕಾಡಿನಲ್ಲಿ ಸುಮಾರು 4 ಲಕ್ಷ ರೂಪಾಯಿಗಳ ಬೆಲೆಬಾಳತಕ್ಕ ನಾಟಾವನ್ನು ಅಪಹರಿಸುತ್ತಿದ್ದ ಬಗ್ಗೆ ನನಗೆ ಒಂದು ವರ್ತಮಾನ ಬಂದಿದೆ. ಈ ಸಂಬಂಧದಲ್ಲಿ ಅರಣ್ಯ ಮತ್ತು ರೆವಿನ್ಯೂ ಇಲಾಖೆಗಳ, ಹಾಗೂ ಸರ್ವೆ ಇಲಾಖೆಗಳ ಅಧಿಕಾರಿಗಳು ಖಾಸಗೀಯವರೊಬ್ಬರಿಗೆ ಕುಮ್ಮಕ್ಕು ಕೊಟ್ಟು ನಾಟಾ ಕಳವು ಮಾಡಿಸುತ್ತಿದ್ದ ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ಹಾಗೂ ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ವಿಷಯವಾದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಈ ಸೂಚನೆಯನ್ನು ತರಬಯಸುತ್ತೇನೆ. ಆ ಬಗ್ಗೆ ಸರ್ಕಾರದವರಲ್ಲಿ ಏನಾದರೂ ಮಾಹಿತಿ ಇದ್ದರೆ ತಿಳಿಸಬಹುದು. ಮಾನ್ಯ ಸಚಿವರು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನು ಈ ಮಾನ್ಯ ಸಭೆಗೆ ಕೊಟ್ಟರೆ ಬಹಳ ಸಂತೋಷ.

† SRI K. H. PATIL (Minister for Agriculture and Forest).—If the Speaker permits me, I am prepared to give the Statement.

The case of illicit felling of forest wealth was as a result of Sri K. Shreedharan, Timber Merchant, Hosanagar submitting an application to the Thasildar, Hosanagar on 5th October 1971 for supplying the sketch indicating the limits of Kushki Survey 214/1 as he had purchased the tree growth on the said Survey number. As per

Sri AZEEZ SAIT.—The Government order is already there.

Sri C. M. ARUMUGAM.—There is a Government Order saying that the local people should be given preference in employment. I want to know whether the Government Order is implemented, and whether the contract employment still exists?

Sri AZEEZ SAIT.—In most of the cases the local people are being employed. With regard to the other question I have called for further information and I will furnish it to the hon. Members after it is received.

ಶ್ರೀ ಬಿ. ಬೈರಪ್ಪಾಜಿ.—ಈಗ ದೇಶದಲ್ಲಿ ಪದವೀಧರರು ಮತ್ತು ಡಿಪ್ಲೊಮಾ ಹೋಲ್ಡರ್ಸ್ ಬಹಳ ಜನ ಉದ್ಯೋಗ ಇಲ್ಲದೆ ಇದ್ದಾರೆ. ಕೇಂದ್ರ ಸರ್ಕಾರದವರು ಇಂಜನಿಯರಿಂಗ್ ಪದವೀಧರರಿಗೆ ಒಂದು ಸ್ಕೀಮನ್ನು ಮಾಡಿ ಕೆಲಸ ಸಿಗುವತನಕ 250 ರೂಪಾಯಿ ಗೌರವ ಸಂಭಾವನೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಇಲ್ಲಿ ಕೂಡ ಕೆಲಸವಿಲ್ಲದೆ ಇಂಜನಿಯರಿಂಗ್ ಗ್ರಾಜ್ಯುವೇಟ್ಸ್ ಗುಮಾಸ್ತರ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಇಂತಹ ಜನರಿಗೆ ಕೂಡ ಗೌರವ ಸಂಭಾವನೆ ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೀರಾ? ಅದೇ ರೀತಿ ಕನ್ನಡಿಗರಿಗೆ ನಮ್ಮ ರಾಜ್ಯದಲ್ಲಿರುವಂತಹ ಕೈಗಾರಿಕೆಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಅಲ್ಲಿರುವ ಕೈಗಾರಿಕೋದ್ಯಮಿಗಳಿಗೆ ಸೂಚನೆ ಕೊಡುತ್ತೀರಾ! ಉದಾಹರಣೆಗೆ ನಮ್ಮಲ್ಲಿ ಅಮ್ಮಸಂದ್ರ ಸಿಮೆಂಟ್ ಕಾರ್ಖಾನೆ ಇದೆ. ಅಲ್ಲಿ ಕಸ ಗುಡಿಸುವ ಕೆಲಸಗಳಿಗೆ ಮಾತ್ರ ಕನ್ನಡಿಗರನ್ನು ನೇಮಿಸುತ್ತಿದ್ದಾರೆ; ಉಳಿದ ಒಳ್ಳೆಯ ಕೆಲಸಗಳಿಗೆ ಮದ್ರಾಸಿನಿಂದ ಮತ್ತು ಇತರ ಕಡೆಗಳಿಂದ ಬಂದ ಜನರನ್ನು ನೇಮಿಸುತ್ತಿದ್ದಾರೆ. ಇದನ್ನು ತಪ್ಪಿಸಿ ಸ್ಥಳೀಯ ಜನರಿಗೆ ಕೊಡುವಂತೆ ಏರ್ಪಾಡು ಮಾಡುತ್ತೀರಾ?

Sri AZEEZ SAIT.—This is a burning problem. This problem is to be solved. I assure you that all good offices will be used to get employment to all the unemployed. This is our aim. I assure you that my Department will take up this problem very sincerely and earnestly and see that this problem is solved to the maximum extent possible. I am sorry the politicians are interfering and they are bringing pressure on behalf of their unemployed persons.

ಶ್ರೀ ಟಿ. ಆರ್. ಶಾಮಣ್ಣ.—ಈಗ ಹುಚ್ಚು ಹಿಡಿದರೆ ಹುಚ್ಚಾಸ್ಪತ್ರೆಗೆ ಹೋಗಬಹುದು, ತಲೆ ನೋವಾದರೆ, ಅವಕ್ಕೆ ಡಾಕ್ಟರ ಹತ್ತಿರ ಹೋಗಬಹುದು. ಆದರೆ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಯಾವ ಮದ್ದು ಮಾಡುವುದು! ನಮ್ಮನ್ನು ಬೆಳಿಗ್ಗೆಯಿಂದ ಸಾಯಂಕಾಲದ ತನಕ, ಏನಾದರೂ ಕೆಲಸ ಕೊಡಿಸಿ ಎಂದು, ಜನರು ಹಿಂಸಿಸುತ್ತಿದ್ದಾರೆ. ಇದನ್ನು ತಪ್ಪಿಸುವುದಕ್ಕೆ ಯಾವ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ?

ಶ್ರೀ ಅಜೀಜ್ ಸೇಠ್.—ಯಾರ ಮನೆಯಲ್ಲಿ ಇವತ್ತು ಒಬ್ಬರು ಡಾಕ್ಟರ್ ಇದ್ದಾರೆ, ಅವರು ಇನ್ನೊಬ್ಬರು ಡಾಕ್ಟರ್ ನಮ್ಮ ಮನೆಯಲ್ಲಿ ಆಗಬೇಕೆಂದೂ, ಯಾರ ಮನೆಯಲ್ಲಿ ಒಬ್ಬರು ಇಂಜಿನಿಯರಿದ್ದಾರೆ, ಅವರ ಮನೆಯಲ್ಲಿ ಇನ್ನೊಬ್ಬರು ಇಂಜಿನಿಯರ್ ಆಗಬೇಕೆಂದೂ ಅಪೇಕ್ಷೆ ಪಡುತ್ತಾರೆ. ಆ ರೀತಿ ಈ ರಾಜಕಾರಣಿಗಳು ಎಲ್ಲಿ ಒತ್ತಾಯ ತರಬೇಕೋ ಅಲ್ಲಿ ತಂದು, ಈ ಪ್ರೈವೇಟ್ ಸೆಕ್ಟರ್ ಮತ್ತು ಪಬ್ಲಿಕ್ ಸೆಕ್ಟರುಗಳಲ್ಲಿ ತಮ್ಮ ತಮ್ಮ ಮಕ್ಕಳನ್ನು ಮತ್ತು ಸಂಬಂಧೀಕರನ್ನು ತಂದು ಹಾಕಿದ್ದಾರೆ.

(ಆಗ ಹಲವು ಸದಸ್ಯರು ಎದ್ದು ಪ್ರತಿಭಟನೆ ಮಾಡಿದರು)

ಶ್ರೀ ಎಸ್. ಬಂಗಾರಪ್ಪ.—ಅವರು ರಾಜಕಾರಣಿಗಳು ಎಂದು ಹೇಳಿದ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆ ತರಹ ಹೇಳುವುದಕ್ಕೆ ಇವರು ರಾಜಕಾರಣಿಗಳು ಅಲ್ಲವೇ?

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಮೂಲಕ ಮಾನ್ಯ ಮಂತ್ರಿಯವರಿಗೆ ಮನವಿ ಮಾಡಿಕೊಳ್ಳುವುದೇನೆಂದರೆ, ಇವರು ಮಂತ್ರಿ ಸ್ಥಾನದಲ್ಲಿರುವವರು ಉತ್ತರ ಕೊಡಬೇಕಾದರೆ, ಇಲ್ಲಿ ಯಾವ ಪ್ರಶ್ನೆ ಇದೆಯೋ, ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಕೊಡಬೇಕೇ ಹೊರತು ಅದನ್ನು ಬಿಟ್ಟು ಬಿಟ್ಟು ಈ ರೀತಿ ಅಸಮರ್ಪಕವಾದ ಉತ್ತರವನ್ನು ಹೇಳಬಾರದು. ಇವರು ರಾಜಕಾರಣಿಗಳು ಎಂದು

(ಶ್ರೀ ಎಂ. ಎಸ್. ಕೃಷ್ಣನ್)

ಹೇಳಿದರೆ ನನಗೇನೂ ಮನಸ್ಸು ನೋಯುವುದಿಲ್ಲ; ಆದರೆ ಆ ರೀತಿ ಹೇಳಿದರೆ ಅದು ಎಲ್ಲಾ ಮಾನ್ಯ ಸದಸ್ಯರಿಗೂ ಅನ್ವಯವಾಗುತ್ತದೆ. ಅಲ್ಲದೆ ಈ ರೀತಿಯ ಕಸಬನ್ನು ಇವರು ಈ ಕಡೆ ಇರುವಾಗ ಎಷ್ಟು ಮಾಡಿದ್ದಾರೋ; ನನಗಂತೂ ಗೊತ್ತಿಲ್ಲ. ಈಗ ಪ್ರಶ್ನೆ ಏನೆಂದರೆ ಆ ಮಾತನ್ನು ಎಲ್ಲಿ ಹೇಳಬೇಕೋ ಅಲ್ಲಿ ಹೇಳಬೇಕು. ಇಲ್ಲಿ ಆ ತರಹದ ಮಾತನ್ನು ಹೇಳಿದರೆ ಅದರಿಂದ ಉದ್ವೇಗಕ್ಕೆ ಅವಕಾಶಮಾಡಿ ಕೊಟ್ಟಂತೆ ಆಗುತ್ತದೆ. ಅದರ ಬದಲು ಇಂತಹ ರಾಜಕಾರಣಿಗಳು ಮಾಡಿದ್ದಾರೆಂದು ಹೇಳಿದರೆ ನಾನು ಒಪ್ಪುತ್ತೇನೆ. ನೀವೂ ಒಪ್ಪಬಹುದೆಂದು ತಿಳಿಯುತ್ತೇನೆ. ಅವರಿಗೆ ಈ ಕಡೆ ಇದ್ದು ಹೆಚ್ಚು ತಂಟೆ ತಕರಾರು ಮಾಡಿ ರೂಢಿಯಾಗಿದೆ. ಆದ್ದರಿಂದ ಈಗ ಮಂತ್ರಿಯಾಗಿ ಉತ್ತರ ಕೊಡುವಾಗಲೂ ಅದೇ ಅಭ್ಯಾಸ ಬಲದಿಂದ ಆ ರೀತಿ ಮಾತನಾಡುತ್ತಿದ್ದಾರೆ. ಈ ರೀತಿ ಮಾಡುವುದು ಸರಿಯಲ್ಲವೆಂದು ಕೇಳಿಕೊಳ್ಳುತ್ತೇನೆ.

**Sri C. M. ARUMUGAM.**—I suggest to the Chair that as this is an important matter, this subject may be taken up on Monday. It is left to the decision of the Chair. As far as the question is concerned, I want to know definitely from the Hon. Minister whether preference will be given to the local people ?

**Sri AZEEZ SAIT.**—I am all along saying that we go deep into the matter and see that this problem is solved to a great extent. At present, the son of a poor agriculturist and the son of a beggar are not getting employment. The position now is that the sons of engineers, doctors and big officials of the Government are getting employment. This monopoly should go. That is why I am saying that all the unemployed should get employment at least one in a family. There should be no discrimination whatsoever. Therefore, this matter will be taken up very earnestly and we will see that at least one in a family of unemployed gets an employment. We will take up this problem on a purely humanitarian consideration.

**Sri C. M. ARUMUGAM.**—It is a fact, as Mr. Azeez Sait said that they are using political influence to get appointments. If a father is a Minister, his son also becomes a Minister and the grandson also becomes a Minister because of political influence. If a father is a Legislator, his son becomes a legislator and his grandson also becomes a Legislator. But the Ministers should be careful in making such statements because their speeches will be published by the Press and will be heard by the persons in the gallery. I submit to you, Madam, that Mr. Azeez Sait who was a Member of the Opposition has just now become a Minister and has to be careful.

**Sri AZEEZ SAIT.**—I would like to submit that this is not the first time that I am in the political life. I have been in the political life since a long time.

**Sri J. P. SARWESH.**—The Central Government have several Corporations such as the Cement Corporation of India, the Steel Corporation of India, and the Oil Corporation of India. All the Head offices are at Delhi. The Engineers are selected at Delhi and sent to these parts. All top ranking officers are from outside places like

Hariyana and Punjab. Will the Government of Mysore take up this issue and see that they are transferred and our people are provided with jobs?

Sri AZEEZ SAIT.—My Government is going to use its good offices in this behalf.

ಶ್ರೀ ಎಂ. ಎಸ್. ಕೃಷ್ಣನ್.—ಮಂತ್ರಿಗಳು ಮಾತನಾಡುತ್ತಾ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜು ಮೂಲಕ ನಾವು ಕೆಲಸಗಳನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಆ ರೀತಿ ಆದರೆ ಸರಿಹೋಗುತ್ತದೆ. ನಾನು ಕೇಳುವುದಿಷ್ಟೇ. ನನಗೆ ತಿಳಿದಮಟ್ಟಿಗೆ ಕೇಂದ್ರಸರ್ಕಾರದ ಕೈಗಾರಿಕೆಗಳಲ್ಲಿ ಎಲ್ಲರನ್ನೂ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕವೇ ತೆಗೆದುಕೊಳ್ಳಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಹಾಗೆ ಎಲ್ಲಾ ಕೈಗಾರಿಕಾ ಕೇಂದ್ರಗಳಲ್ಲಿ ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್ ಮೂಲಕ ತೆಗೆದುಕೊಂಡರೂ ಏನೂ ಪ್ರಯೋಜನವಾಗುತ್ತಾ ಇಲ್ಲ. ಅವನ್ನು ಈ ರಾಜ್ಯದ ಜನಗಳಿಗೂ ಕೊಡಬೇಕೆನ್ನುವುದು ಇನ್ನೂ ಇತ್ಯರ್ಥವಾಗಲಿಲ್ಲ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ಏನಾದರೂ ಹಗ್ಗಣಗಳು ಇವೆಯೋ ಏನೋ ಗೊತ್ತಾಗಲಿಲ್ಲ. ಇವತ್ತು ಅಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ? ಅದಕ್ಕೇನಾದರೂ ತೀವ್ರ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಪ್ರೈವೆಟ್ ಸೆಕ್ಟಾರಿನಲ್ಲಿಯೂ ಕೂಡ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ತೆಗೆದುಕೊಳ್ಳಬೇಕೆಂದು ಹೇಳಲಿಲ್ಲ. ಅಲ್ಲಿಯೂ ಈ ಕಾನೂನುಗಳನ್ನೇ ಒತ್ತಾಯಮಾಡುತ್ತೀರಾ?

ಶ್ರೀ ಅಜೀಜ್ ಸೇಟ್.—ಅಲ್ಲಿ ಹಗ್ಗಣಗಳು ಇದ್ದರೆ, ಸ್ಕೈನೊಗ್ರ್ಯಾಸ್ ಉಪಯೋಗ ಮಾಡುತ್ತೇವೆ. ನಾನು ಮೊದಲೇ ಇದಕ್ಕೆ ಉತ್ತರ ಹೇಳಿದ್ದೇನೆ. I have answered that qustion and said that my Government will give due consideration and use their good offices to see that we get a major share.

Sri K. PRABHAKAR.—Can the Minister say 'My Government'?

Sri C. M. ARUMUGAM.—His Excellency' the Governor alone can use these words. Is it in order for the Labour Minister to say 'My Government'?

ಶ್ರೀ ಕೆ. ಎಚ್. ರಂಗನಾಥ್.—ತಮ್ಮ ಸ್ಕೀಂನ್ನು ಜಾರಿಗೆ ಕೊಡುವುದರಲ್ಲಿ ಇಂಜಿನಿಯರಿಂಗ್ ಗ್ರ್ಯಾಜುಯೇಟುಗಳಿಗೆ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ? ಡಾಕ್ಟರುಗಳಿಗೆ ಎಷ್ಟು ಜನರಿಗೆ ಕೆಲಸಗಳನ್ನು ಕೊಟ್ಟಿದ್ದೀರಿ? ಡಿಪ್ಲೊಮಾ ಹೋಲ್ಡರುಗಳಿಗೆ ಎಷ್ಟು ಕೆಲಸಗಳು ಸಿಕ್ಕಿವೆ? ಗ್ರ್ಯಾಜುಯೇಟ್ಸ್ ಮತ್ತು ಅಂಡರ್ ಗ್ರ್ಯಾಜುಯೇಟ್‌ಗಳಿಗೆ ಎಷ್ಟು ಕೆಲಸಗಳು ಸಿಕ್ಕಿವೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ?

Sri AZEEZ SAIT.—Those figures are not available with me. I want notice. ಆದರೆ ಎಲ್ಲ ಅನ್ ಎಂಪ್ಲಾಯ್‌ಮೆಂಟ್ ಸ್ಕೀಮುಗಳನ್ನೂ ಸರ್ಕಾರದವರು ಯಾವಾಗ ಇಂಪ್ಲಿಮೆಂಟ್ ಮಾಡುತ್ತಾರೆಂಬುದನ್ನು ಹೇಳುವುದಕ್ಕಾಗುವುದಿಲ್ಲ. ಸಮಯ, ಸಂದರ್ಭ ನೋಡಿಕೊಂಡು ಕೆಲವನ್ನಾದರೂ ಜಾಗ್ರತೆಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ. ಅದರ ಬಗ್ಗೆ ಕೆಲವಾರು ಕ್ರ್ಯಾಷ್ ಪ್ರೋಗ್ರಾಂಗಳು ಇವೆ. ಮೊದಲು ರೂರಲ್ ಪ್ರದೇಶಗಳಲ್ಲಿ ಅವನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಯೋಚನೆ ಮಾಡಲಾಗಿದೆ.

ಶ್ರೀ ಕೆ. ಎಚ್. ರಂಗನಾಥ್.—ಈ ಎಲ್ಲಾ ಯೋಜನೆಗಳಿಂದ ಯಾರ್‍ಯಾರಿಗೆ ಈಗ ಉಪಯೋಗವಾಗಿದೆ?

ಶ್ರೀ ಅಜೀಜ್ ಸೇಟ್.—ಕೆಲವರಿಗೆ ಈಗಾಗಲೇ ಬಹಳಮಟ್ಟಿಗೆ ಉಪಯೋಗವಾಗಿದೆ ಎಂಬುದಾಗಿ ಹೇಳಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರುವ ಹಾಗೆ ಇಂಜನಿಯರಿಂಗ್ ಪದವೀಧರರಲ್ಲೂ ಮತ್ತು ಡಿಪ್ಲೊಮಾ ಹೋಲ್ಡರ್ಸ್‌ಗಳಲ್ಲೂ ಏನೊಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೋ ಅವುಗಳ ಪೈಕಿ ಪರಿಶಿಷ್ಟ ವರ್ಗ, ಹಾಗೂ ಪರಿಶಿಷ್ಟ ಜನಾಂಗದ ನಿರುದ್ಯೋಗಿಗಳು ಎಷ್ಟು ಜನರಿದ್ದಾರೆಂಬ ಅಂಶ ಇದೆಯೇ? ಅದನ್ನು ತಿಳಿಸಬೇಕು. ಮತ್ತೊಂದು ಪ್ರಶ್ನೆ. ಕೇರಳಾ, ತಮಿಳುನಾಡು ಮತ್ತು ಆಂಧ್ರ ಕಡೆಗಳಿಂದ ಇಲ್ಲಿಗೆ ಬಂದು ಅವರು ಇಲ್ಲಿ

(ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್)

ಕೇರಾಫ್ ಅಡ್ರೆಸ್ ಕೊಟ್ಟು, ಅವರು ಇಲ್ಲಿ ಕನ್ನಡಿಗರೆನಿಸಿಕೊಂಡು ಇಲ್ಲಿಯೇ ಕನ್ನಡಿಗರಾಗಿ ಕೆಲಸಗಳನ್ನು ಪಡೆಯತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ರೀತಿ ಸರ್ಕಾರದ ಗಮನಕ್ಕೆ ಬಾರದಿದ್ದರೆ ಅದನ್ನು ಈಗಲಾದರೂ ಪರಿಶೀಲನೆ ಮಾಡುತ್ತೀರಾ? ಇನ್ನೊಂದು ಪ್ರಶ್ನೆ. ಎಂಪ್ಲಾಯಮೆಂಟ್ ಎಂಕ್ಸ್‌ಚೇಂಜ್‌ನಲ್ಲಿ ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಅವರ ಬಗ್ಗೆ ಸ್ಟೇಟ್ ಗೌರ್ನಮೆಂಟನಲ್ಲಿ ಸೇಕಡ 18ರಷ್ಟನ್ನೂ ಮತ್ತು ಕೇಂದ್ರ ಸರ್ಕಾರದಲ್ಲಿ ಸೇಕಡ 12½ಯಷ್ಟನ್ನು ರಿಜರ್ವ್ ಆಗಿ ಇಡಬೇಕೆಂಬ ಕಾನೂನು ಇದ್ದರೂ ಸಹ ಆ ಅಂಕಿ ಅಂಶಗಳ ಮೇಲೆ ಸೇಕಡಾವಾರು ಶಿಫಾರಸು ಆಗುತ್ತಾ ಇಲ್ಲ. ಅದನ್ನು ಸರಿಮಾಡುತ್ತೀರಾ? ಈ ಮೂರು ಪ್ರಶ್ನೆಗಳಿಗೂ ದಯವಿಟ್ಟು ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಅಜೀಜ್ ಸೇಟ್.—ಈ ವರ್ಷದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿಗೆ ಏನಾದರೂ ಅನುಕೂಲವಾಗದಿದ್ದರೆ ಇನ್ನುಮುಂದೆ ಆರೀತಿ ಅನ್ಯಾಯವಾಗುವುದಿಲ್ಲ. ಆ ವಿಷಯದಲ್ಲಿ ನಾನು ನೋಡಿಕೊಳ್ಳುತ್ತೇನೆ. ಷೆಡ್ಯೂಲ್ಡ್ ಟ್ರೈಬ್ಸ್ ಅವರ ಬಗ್ಗೆ ಅಂಕಿ ಅಂಶಗಳು ಈಗ ನನ್ನಲ್ಲಿ ಸದ್ಯಕ್ಕಿಲ್ಲ. ಬೇಕಾದರೆ ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಮಾಹಿತಿಯನ್ನು ದೊರಕಿಸಿಕೊಡುತ್ತೇನೆ.

SRI K. PRABHAKAR.—With a view to implementing socialistic policies, will the Government try an experiment to assure each family at least one source of living for its maintenance either through Government service or through other employment potential ?

MADAM SPEAKER.—This has been answered, now the Question Hour is over.

10-00 A. M.

## Theft of Timber at Hosanagar and Sagar

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸ್ವಾಮಿ, ಅಧ್ಯಕ್ಷರೇ, ನಾನು ಈಗ ತಮ್ಮ ಗಮನಕ್ಕೆ ಒಂದು ವಿಷಯವನ್ನು ನಮ್ಮ ಶಿವಮೊಗ್ಗಾ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅದರಲ್ಲೂ ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟ ವಿಷಯವನ್ನು ತರಬೇಕಾಗಿದೆ. ಅರಣ್ಯ ಮತ್ತು ರೆವಿನ್ಯೂ ಇಲಾಖೆಯ ಅಧಿಕಾರಿಗಳ ಕುಮ್ಮಕ್ಕಿನಿಂದ ಸರ್ಕಾರಿ ಕಾಡಿನಲ್ಲಿ ಸುಮಾರು 4 ಲಕ್ಷ ರೂಪಾಯಿಗಳ ಬೆಲೆಬಾಳತಕ್ಕ ನಾಟಾವನ್ನು ಅಪಹರಿಸುತ್ತಿದ್ದ ಬಗ್ಗೆ ನನಗೆ ಒಂದು ವರ್ತಮಾನ ಬಂದಿದೆ. ಈ ಸಂಬಂಧದಲ್ಲಿ ಅರಣ್ಯ ಮತ್ತು ರೆವಿನ್ಯೂ ಇಲಾಖೆಗಳ, ಹಾಗೂ ಸರ್ವೆ ಇಲಾಖೆಗಳ ಅಧಿಕಾರಿಗಳು ಖಾಸಗೀಯವರೊಬ್ಬರಿಗೆ ಕುಮ್ಮಕ್ಕು ಕೊಟ್ಟು ನಾಟಾ ಕಳವು ಮಾಡಿಸುತ್ತಿದ್ದ ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಇದು ಬಹಳ ಪ್ರಾಮುಖ್ಯವಾದ ಹಾಗೂ ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ವಿಷಯವಾದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಈ ಸೂಚನೆಯನ್ನು ತರಬಯಸುತ್ತೇನೆ. ಆ ಬಗ್ಗೆ ಸರ್ಕಾರದವರಲ್ಲಿ ಏನಾದರೂ ಮಾಹಿತಿ ಇದ್ದರೆ ತಿಳಿಸಬಹುದು. ಮಾನ್ಯ ಸಚಿವರು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನು ಈ ಮಾನ್ಯ ಸಭೆಗೆ ಕೊಟ್ಟರೆ ಬಹಳ ಸಂತೋಷ.

† SRI K. H. PATIL (Minister for Agriculture and Forest).—If the Speaker permits me, I am prepared to give the Statement.

The case of illicit felling of forest wealth was as a result of Sri K. Shreedharan, Timber Merchant, Hosanagar submitting an application to the Thasildar, Hosanagar on 5th October 1971 for supplying the sketch indicating the limits of Kushki Survey 214/1 as he had purchased the tree growth on the said Survey number. As per

the directions of the office Shirestedar without the knowledge of the Thasildar the Surveyor Sri H. Prahlada Rao was asked to survey the area and fix the boundary (entertaining of such applications by the Tahsildar is prohibited recently *i.e.* from September 1971 by the Settlement Commissioner and Land Records). The Surveyor visited the area on 10th November 1971 and in the presence of the Contractor surveyed the land and indicated the limits of Kushki Survey No. 214/1 and fixed the boundary stones and submitted a report to the Tahsildar on 13th December 1971. The Survey Sketch was produced by the Contractor to the Divisional Forest Officer, Sagar. The survey Sketch made by the Surveyor did not contain proper marking in view of the fact that it included substantial portion of the State Forests of Kavaldurga in the said survey number. It seems that permission seems to have been given to the Contractor for cutting the tree growth on Survey No. 214/1 thinking that this Survey No. was Kushki without proper verification whether this was Kushki or the sketch included any forest area etc. etc. There was a difference of opinion between the officers of the Revenue Department and those of the Survey and Settlement as to the nature of the land of the said S. No. The entire Survey No. is Government owned, a portion of it being forest and the remaining portion being Khatkan land. Had this been properly investigated, the question of contractor purchasing the tree growth from the alleged holder would not have arisen and the whole episode would have been put a stop to. The investigation all along is very perfunctory and it was almost a case of landing Government into a serious loss, but for the timely agitation of the Villagers and the Village Panchayat Chairman. There have been conflicting reports as to the number of logs cut from the so-called kushki land and the forest land. At one stage the logs cut in the said Kushki are reported to be 1897 logs and at some other place it is 1351 logs. It is also reported that 800 logs were prepared out of illicit fellings from the Kavaldurga State Forest area and at some other stage logs removed from forests is mentioned as 803. On account of agitation of the villagers it was found out that the whole tree growth that was felled for transport belonged to Government and the Divisional Forest Officer did not exercise his powers properly for the disposal of the growth so cut. He wanted to compound the offence of the Contractor in accordance with the 1957 rules which were not in force then and in fact there was no case for compounding as the whole material belonged to Government. The Assistant Conservator of Forests flying Squad who had reached the spot for personal verification was content with getting information through somebody else. Similarly the Range Forest officers have not properly acted in this matter, so also the Clerical staff of the office of the Divisional Forest Officer. When the whole episode was brought to the notice of Government, the Chief Conservator of Forests (Development) was deputed to make an enquiry on the spot and it was found out that the Forest Officers and officials have been very negligent in this affair. They were first transferred from their posts

(Sri K. H. Patil)

and subsequently they have been kept under suspension so that in the eventual enquiry about this, they should not be able to tamper with the records.

So far as the officers of the other Departments are concerned, *viz.*, Revenue and Survey and Settlement, the Revenue Minister has been requested to transfer those officers from their present posts. This is only a broad outline of the case and unless a detailed enquiry is conducted we cannot fix the gravity of offence or negligence committed by each individual officer. I am glad to state that with the willing co-operation of the public of that area, Government has been able to stop the loss that Government would have incurred. It is proposed to hold departmental enquiry against the officers involved and depending upon the gravity of the offence committed by those officers necessary punishment will be given according to the provisions of the rules framed by the Government in this behalf.

ಶ್ರೀ ಎಸ್. ಬಂಗಾರಪ್ಪ.—ಈಗ ಕಳುವಾಗಿರತಕ್ಕ ಒಟ್ಟು ನಾಟಾ ಬೆಲೆ ಎಷ್ಟಾಗುತ್ತದೆ ? ಮತ್ತು ಇಂಥ ಒಂದು ಪ್ರಾಮುಖ್ಯವಾದ ವಿಷಯವನ್ನು ಸರ್ಕಾರದವರ ಗಮನಕ್ಕೆ ಗುಟ್ಟಾಗಿ ತಂದುಕೊಟ್ಟ ಆ ಖಾಸಗಿ ವ್ಯಕ್ತಿಗೆ ಸರ್ಕಾರದ ಪರವಾಗಿ ಒಂದು ಅಭಿನಂದನೆಯನ್ನು ಸಾರ್ವಜನಿಕರ ಪರವಾಗಿ ಕಳುಹಿಸಬೇಕಾದ್ದೂ ಕೂಡ ಅಗತ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆತನು ಕೊಟ್ಟ ಸುದ್ದಿಯಿಂದ ಸರ್ಕಾರಕ್ಕೆ ಅಷ್ಟು ದೊಡ್ಡ ಮೊತ್ತದ ಆಸ್ತಿ ಕಳುವಾಗುತ್ತಿದ್ದುದು ಉಳಿಯಿತು. ಆ ಅಕ್ರಮ ವ್ಯವಹಾರದಲ್ಲಿ ತೊಡಗಿದ್ದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಾ ಹೇಗೆ ಈ ಅಂಶಗಳನ್ನೂ ತಾವು ತಿಳಿಸಬೇಕಾಗಿತ್ತು. ಇವುಗಳ ಬಗ್ಗೆ ಏನು ಹೇಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ನನಗೆ ಒಬ್ಬ ಖಾಸಗೀ ಮನುಷ್ಯ ಬಂದು ಈ ವರ್ತಮಾನ ಕೊಟ್ಟ. ಆದಾಗ್ಗೂ ನಾನು ಅದನ್ನು ನಂಬಿಲ್ಲ. ಏನೇ ಇರಲಿ ಇದನ್ನು ಕೂಡಲೇ ತಪಾಸ್ ಮಾಡಿ ನೋಣ ಎಂದು ಅಲ್ಲಿಗೆ ಗುಟ್ಟಾಗಿ ಅಧಿಕಾರಿಗಳನ್ನು ಕಳುಹಿಸಿದೆ. ಆ ನಂತರ ನನಗೆ ಆ ಖಾಸಗಿ ವ್ಯಕ್ತಿ ಕೊಟ್ಟ ಸುದ್ದಿ ನೂರಕ್ಕೆ ನೂರು ಭಾಗ ಸತ್ಯ ಎಂದು ಗೊತ್ತಾಯಿತು. ಅಂಥ ಮನುಷ್ಯನಿಗೆ ಒಂದು ಯೋಗ್ಯ ರಿವಾರ್ಡ್‌ನ್ನು ಕೊಡತಕ್ಕದ್ದು ಒಳ್ಳೆಯದೆಂದು ಭಾವಿಸಿ ನಾನಾಗಲೇ ನಮ್ಮ ಮುಖ್ಯ ಮಂತ್ರಿಗಳಿಗೆ ವಿಷಯ ತಿಳಿಸಿದ್ದೇನೆ. ಅಷ್ಟೇ ಅಲ್ಲದೆ ಆ ಸಂದರ್ಭದಲ್ಲಿ ಆ ಅಪರಾಧವನ್ನು ಪತ್ತೆ ಹಚ್ಚಲು ಯಾವ ಯಾವ ಅಧಿಕಾರಿಗಳು ಇತರರೂ ಸಹಕಾರ ಸಹಾಯಗಳನ್ನು ನೀಡಿದ್ದಾರೋ ಅಂಥಹವರಿಗೂ ಕೂಡ ಲೆಟರ್ ಆಫ್ ಅಪ್ರಿಸಿಯೇಷನ್ ಮೂಲಕ ಸರ್ಕಾರದವರ ಸಹಾನುಭೂತಿಯನ್ನು ವ್ಯಕ್ತಪಡಿಸುವುದಕ್ಕೂ ಏರ್ಪಾಡನ್ನು ಮಾಡಿದ್ದೇನೆ.

## Use of words " House full " in Vidhana Soudha.

ಶ್ರೀ ಎಂ. ಎಸ್ ಕೃಷ್ಣನ್ (ಮಲ್ಲೇಶ್ವರಂ).—ಅಧ್ಯಕ್ಷರೇ, ನಾನು ತಮ್ಮ ಗಮನಕ್ಕೆ ಒಂದು ಸಣ್ಣ ವಿಷಯವನ್ನು ತರಬೇಕಾಗಿದೆ. ಅದೇನೆಂದರೆ ನಾನು ನೆನ್ನೆಯ ದಿನ ಕೆಳಗಡೆಗೆ ಇಳಿದು ಹೋಗುತ್ತಿದ್ದಾಗ ಅಲ್ಲಿ ಒಂದು ಬೋರ್ಡನ್ನು ನೋಡಿದೆ—ಅದರಲ್ಲಿ " ಹೌಸ್ ಫುಲ್ " ಎಂದು ಇತ್ತು. ಆಗ ನನಗೆ ಇದೇನು ಆ ಸಿನೀಮ ಮತ್ತು ನಾಟಕ ಮಂದಿರಗಳಲ್ಲಿ ಹಾಕುವಂತೆ ಇಲ್ಲಿಯೂ ಹಾಕಿದ್ದಾರಲ್ಲ ಎಂದು ಅನಿಸಿತು.

ಅಧ್ಯಕ್ಷರು.—ಅದನ್ನು ನಾನು ವಿಚಾರ ಮಾಡಿ ನೋಡುತ್ತೇನೆ.

## Notice of adjournment motion *re* : Suspensions made at the Office of B. C. C.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ನಾನು ಅಧ್ಯಕ್ಷರ ಕಡೆಗೆ ಒಂದು ಅಡ್ಜೌರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಬೆಂಗಳೂರು ನಗರ ಕಾರ್ಪೊರೇಷನ್ನಿನಲ್ಲಿ ಹೋಲ್‌ಸೇಲಾಗಿ 180 ಜನ ನೌಕರರನ್ನು ಮತ್ತು ಅಧಿಕಾರಿಗಳನ್ನು ಏಕ ಕಾಲಕ್ಕೆ ಸಸ್ಪೆಂಡ್ ಮಾಡಿದ್ದಾರೆ. ಅದರಿಂದ ದಿನವಹಿ ನಡೆಯಬೇಕಾದ ಕೆಲಸ ಕಾರ್ಯಗಳಿಗೆ ತುಂಬಾ ತೊಂದರೆಯಾಗಿದೆ. ಇದರ ಬಗ್ಗೆ ಆಲ್ಟರ್‌ನೇಟಾಗಿ ಕೆಲಸ ನಡೆಯಲು ಏನು ವ್ಯವಸ್ಥೆ ಮಾಡಿದೆ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ತಮ್ಮ ಸೂಚನೆ ನನಗೆ ಈಗತಾನೆ ಬಂದಿದೆ.

ಶ್ರೀ ಎಚ್. ಡಿ. ದೇವೇ ಗೌಡ.—180 ಜನರನ್ನು ಏಕ್‌ದಂ ಸಸ್ಪೆಂಡ್ ಮಾಡುವುದೆಂದರೇನು ? ಈ ಸಭೆ ಸೋಮವಾರ ಅಡ್ಜೌರ್ನ್ ಆಗುತ್ತೆ. ಸರ್ಕಾರದ ಈ ದಿಟ್ಟ ಕಾರ್ಯಕ್ರಮ ಶ್ಲಾಘನೀಯ ವಾಗಿದ್ದರೂ, ಅಲ್ಲಿ ದಿನಂಪ್ರತಿ ನಡೆಯತಕ್ಕ ಕೆಲಸಗಳನ್ನು ಮುಂದುವರಿಸಲು ಏನು ವ್ಯವಸ್ಥೆ ಮಾಡಿದ್ದಾರೆ ? ಆಂಟಿಕರಪ್ಷನ್ ಇನ್‌ವೆಸ್ಟಿಗೇಷನ್ ವರದಿ ಮೇಲೆ ಸಸ್ಪೆನ್‌ಷನ್ ಮಾಡಿದ್ದಾರೆ ಎಂದು ಮಂತ್ರಿಗಳು ಹೇಳಿದ್ದಾರೆ. ಪತ್ರಿಕೆಗಳಲ್ಲಿ ವರದಿ ಆಗಿರುವ ಪ್ರಕಾರ 180 ಜನ ಸಸ್‌ಪೆಂಡ್ ಮಾಡಿರುವುದಾದರೆ ಅಡ್ಮಿನಿಸ್ಟ್ರೇಷನ್‌ಗೆ ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ಸ್ ಏನು ಮಾಡಿದ್ದಾರೆ, ಎಷ್ಟು ಜನ ಅಧಿಕಾರಿಗಳ ಮೇಲೆ ರಿಪೋರ್ಟು ಬಂದಿದೆ ಎಂದು ಈ ಸಭೆಗೆ ಇನ್‌ಫರ್‌ಮೇಷನ್ ಕೊಡುವುದಕ್ಕೆ ಸಾಧ್ಯವಿದ್ದರೆ ಕೊಡಬೇಕಾಗುತ್ತದೆ. ನನ್ನ ಮನಸ್ಸಿನಲ್ಲಿ ಇರುವ ಸಂಶಯ ಕ್ಲಾರಿಫೈ ಮಾಡಬೇಕು. ಮೇಯರ್ ಹೇಳಿದಂತೆ ಅಧಿಕಾರಿಗಳು ನಡೆದುಕೊಳ್ಳಲಿಲ್ಲ ಎಂದು ಅಧಿಕಾರಿಗಳ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೆ ಮೆನೋವರ್ ಮಾಡಿ 180 ಜನರನ್ನು ಒಂದೇ ಸಾರಿ ಸಸ್‌ಪೆಂಡ್ ಮಾಡಿದ್ದಾರೆ ಎನ್ನುವ ಸಂಶಯ ಇದೆ. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟರೂ ಆಗಬಹುದು, ಅಥವಾ ಸಭಾನಾಯಕರು ವಿವರಣೆ ಕೊಡಬಹುದು. ಅಡ್ಮಿನಿಸ್ಟ್ರೇಷನ್ ಕಂಪ್ಲೀಟ್ ಆಗಿ ನಿಂತಂತಾಗುತ್ತದೆ. ಅದಕ್ಕೆ ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ಸ್ ಏನು ಮಾಡಿದ್ದಾರೆ ಎನ್ನುವುದಕ್ಕೆ ಪೂರ್ಣ ವಿವರಣೆ ಕೊಡಬೇಕು.

ಶ್ರೀ ಟಿ. ಆರ್. ಶಾಮಣ್ಣ.—ನನ್ನ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳುತ್ತೀರೋ ಹೇಗೆ ?

ಅಧ್ಯಕ್ಷರು.—ಅದು ಈಗ ತಾನೆ ಬಂದಿದೆ, ವಿಚಾರಮಾಡಿ ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ತನಿಖೆ ಮಾಡುವುದಕ್ಕೆ ಒಂದು ವಿಜಿಲೆನ್ಸ್ ಕಮಿಷನ್ ನೇಮಕ ಮಾಡಿದ್ದರು. ಇವೊತ್ತಿನ ದಿವಸ ವಿಜಿಲೆನ್ಸ್ ಕಮಿಷನವರು ಕೊಟ್ಟ ರಿಪೋರ್ಟು ಮೇಲೆ ಈ ಅಧಿಕಾರಿಗಳನ್ನು ಸಸ್‌ಪೆಂಡ್ ಮಾಡಿದ್ದಾರೆಂದು ತಿಳಿದು ಬಂದಿದೆ. ರಿಪೋರ್ಟು ಏನು ಎನ್ನುವುದು ನಮ್ಮ ಕೈಗೆ ಬಂದಿಲ್ಲ. ಕಾರ್ಪೊರೇಷನ್ ಸದಸ್ಯನಾದ ನನ್ನ ಕೈಗೂ ಬಂದಿಲ್ಲ. ನಿಜವಾಗಿ ತಪ್ಪಿತಸ್ತನನ್ನು ಶಿಕ್ಷೆಗೆ ಗುರಿಪಡಿಸುವುದರಬಗ್ಗೆ ಸಂತೋಷಪಡುತ್ತೇನೆ. ಇವೊತ್ತು ಆ ರಿಪೋರ್ಟು ಏನು ಬಂದಿದೆ ಎನ್ನುವುದು ನಮಗೆ ಇನ್ನೂ ತಿಳಿದಿಲ್ಲ. ಮಾನ್ಯ ಸಚಿವರು ಸಭೆಗೆ ರಿಪೋರ್ಟು ಒದಗಿಸುತ್ತಾರೆಯೇ ? ಅಲ್ಲಿ ಎರಡು ಗುಂಪುಗಳಾಗಿವೆ. ಈಗ ರೆಬೆಲ್ ಗುಂಪು ಕಾರ್ಪೊರೇಷನ್ ಆಡಳಿತವನ್ನು ನಡೆಸುತ್ತಿದೆ. ಆ ಗುಂಪಿನಮೇಲೆ ಸೇಡು ತೀರಿಸುವುದಕ್ಕೆ ಹಾಗೆ ಮಾಡಿದ್ದಾರೆಯೇ ಕಾರ್ಪೊರೇಷನ್ ಸೂಪರ್‌ಸೀಡ್ ಮಾಡುತ್ತಾರೆ ಎಂದು ಇನ್ನೊಂದು ಸುದ್ದಿಹುಟ್ಟಿದೆ. ವಿಜಿಲೆನ್ಸ್ ರಿಪೋರ್ಟು ನಮಗೆ ಯಾರಿಗೂ ಬಂದಿಲ್ಲ. ಕಾರ್ಪೊರೇಷನ್ ಸದಸ್ಯರಿಗೂ ಬಂದಿಲ್ಲ. ರಿಪೋರ್ಟು ಬರೀ ಅಧಿಕಾರಿಗಳಿಗೆ ಗೊತ್ತಿರತಕ್ಕ ರಿಪೋರ್ಟು ಆಗಿದೆ. ಈ ಸಭೆಯ ಸದಸ್ಯರಿಗೂ ರಿಪೋರ್ಟು ಒದಗಿಸುತ್ತಾರೆಯೇ ಎನ್ನುವುದನ್ನು ಹೇಳಬೇಕು. ಸೂಪರ್‌ಸೀಡ್ ಮಾಡುವ ಬಗ್ಗೆ ಕೂಡ ಹೇಳಬೇಕು.

† ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಇದು ಬಹಳ ಪ್ರಮುಖವಾದ ಪ್ರಶ್ನೆ. ವಿಜಿಲೆನ್ಸ್ ಕಮಿಷನ್ನಿನವರು ಮಾಡಿದ ರಿಪೋರ್ಟು ನಮ್ಮ ಮುಂದೆ ಬಂದಿಲ್ಲ. ಈಗ ಏನಾಗಿದೆಯೆಂದರೆ ಕಾರ್ಪೊರೇಷನ್‌ನಲ್ಲಿ ಯಾರು ಯಾರನ್ನು ಸಸ್‌ಪೆಂಡ್ ಮಾಡಲಾಗಿದೆಯೋ ಅವರ ಪೈಕಿ ಅನೇಕರು ಕಂಟ್ರಾಕ್ಟರ್ಸ್ ಜೊತೆ ಸೇರಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ. ಆದ್ದರಿಂದ ವಿಜಿಲೆನ್ಸ್ ಕಮಿಷನ್ ನೇಮಕ ಮಾಡುವ ಮೊದಲು ನಾನು ಕಾರ್ಪೊರೇಷನ್ ಆಡಳಿತ ದಲ್ಲಿದ್ದೆ. ಶ್ರೀ ಬಾಲಸುಬ್ರಮಣ್ಯಮ್ ಮತ್ತು ಶ್ರೀ ಶಂಕರರಾವ್ ಅವರನ್ನು ಬಿಟ್ಟು ಬಾಕಿ ಅನೇಕ ಮಂದಿ ಲಂಚಕೋರರು ಎಂದು ಘೋಷಣೆ ಮಾಡಿದ್ದೇವೆ. 33 ದಿವಸ ಸತತವಾಗಿ ಸತ್ಯಾ

(ಶ್ರೀ ಕೆ. ಎಂ. ನಾಗಣ್ಣ)

ಗ್ರಹ ನಡೆಸಿದ್ದೇವೆ. ಯಾವ ಅಧಿಕಾರಿಯೂ ಲಂಚಕೋರನಲ್ಲವೆಂದು ನಮ್ಮ ಮುಂದೆ ಬಂದು ಹೇಳುವುದಕ್ಕೆ ಧೈರ್ಯವಿಲ್ಲ. ಆ ಇಬ್ಬರು ಅಡಳಿತಾಧಿಕಾರಿಗಳನ್ನು ಬಿಟ್ಟು ಬಹುಮಂದಿ ಲಂಚಕೋರರು ಇದ್ದಾರೆಂದು ಹೇಳಿದ್ದೇವೆ. ಅವರನ್ನು ಸಸ್‌ಪೆಂಡ್ ಮಾಡಿರುವ ಈ ಸಂದರ್ಭದಲ್ಲಿ ಕಂಟ್ರಾಕ್ಟರು ಗಳೂ ಅಧಿಕಾರಿಗಳುಸೇರಿ 50 ಲಕ್ಷ ರೂಪಾಯಿಗಳನ್ನಾದರೂ ಲಂಚ ಕೊಟ್ಟು ಸರಿ ಮಾಡಿಕೊಳ್ಳುತ್ತೇವೆ, ತಪ್ಪು ಸಾರಿಸುತ್ತೇವೆ ಎಂದು ಮಾತನಾಡುತ್ತಿದ್ದಾರೆ. ಒಬ್ಬೊಬ್ಬ ಅಧಿಕಾರಿ ಒಂದು ಲಕ್ಷ ರೂಪಾಯಿ ಕೊಡುವುದಕ್ಕೆ ತಯಾರಿದ್ದಾನೆ. ಆ ರೀತಿ ವಸೂಲು ಮಾಡಿ ಸರ್ಕಾರದಲ್ಲಿ ಯಾರಿಗಾದರೂ ಲಂಚ ಕೊಟ್ಟು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಶ್ರೀ ಶಾಮಣ್ಣನವರ ಅಡ್‌ಜರ್ನ್‌ಮೆಂಟ್ ಮೋಷನ್ ಚರ್ಚೆಗೆ ದಯವಿಟ್ಟು ಅವಕಾಶ ಕೊಡಬೇಕು ಎಂದು ಅತಿ ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಸೋಮವಾರ ಒಂದೇ ದಿವಸ ಈ ಸಭೆ ಇರುವುದು, ಆದುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಬೇಡಿ. 17 ಲಕ್ಷ ಜನ ಬೆಂಗಳೂರು ನಾಗರೀಕರ ಹಿತದೃಷ್ಟಿಯಿಂದ, ಬೆಂಗಳೂರಿನ ನಾಗರೀಕರ ಒಂದು ಕೋಟಿ ರೂಪಾಯಿ ಹಾಳು ಮಾಡುತ್ತಿರುವುದರಿಂದ, ಸೂಕ್ತ ಶಿಕ್ಷೆ ವಿಧಿಸಲಿಕ್ಕೆ ಸಹಾಯ ಮಾಡಬೇಕು. ನಿರ್ದೋಷಿಗಳಿಗೆ ಶಿಕ್ಷೆ ವಿಧಿಸಬೇಕಾಗುವುದಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈ ಪ್ರಶ್ನೆಯನ್ನು ಮಾತ್ರ ಇಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಬಹಳ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇಡೀ 17 ಲಕ್ಷ ಪ್ರಜೆಗಳ ಪರವಾಗಿ ಪಾರ್ಥನೆ ಮಾಡುತ್ತೇನೆ. ಲೈಸೆನ್ಸ್ ಕೊಡಬೇಕಾದರೆ ಇನ್ನೂರು, ಮುನ್ನೂರು ರೂಪಾಯಿ ಕೊಡಬೇಕು. ಖಾತೆ ಟ್ರಾನ್ಸ್‌ಫರ್ ಮಾಡಬೇಕಾದರೆ ಇಷ್ಟು ದುಡ್ಡು ಎಂದು ಮಾಡಿದ್ದಾರೆ. ಈ ಕಾರ್ಪೊರೇಷನ್‌ನಲ್ಲಿ ಆಗುವಷ್ಟು ಅನ್ಯಾಯ ಇಡೀ ಭಾರತದಲ್ಲಿ ಎಲ್ಲೂ ನಡೆಯುವುದಿಲ್ಲ. ಮದ್ರಾಸ್‌ನಲ್ಲಿ ನಡೆಯಬಹುದು. ಆದರೆ ಈ ಮಟ್ಟದಲ್ಲಿ ನಡೆಯುತಕ್ಕ ಅನ್ಯಾಯ ಎಲ್ಲೂ ನಡೆಯುವುದಿಲ್ಲ. ಈ ಪ್ರಮುಖವಾದ ಪ್ರಶ್ನೆಯನ್ನು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು ಮತ್ತು ವಿಜಿಲೆನ್ಸ್ ಕಮಿಷನ್ ಅವರು ಮಾಡಿರುವ ತೀರ್ಮಾನವನ್ನು ನಮ್ಮ ಮುಂದೆ ಇಡಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳುವುದಕ್ಕೆ ಮುಂಚೆ ಸಸ್‌ಪೆನ್‌ಷನ್ ಪೆಂಡಿಂಗ್ ಎನ್‌ಕ್ವಾಯರಿ ಎಂದು ಮಾಡಿದ್ದಾರೆಂದು ತಿಳಿದು ಬಂದಿದೆ. ಇದರಲ್ಲಿ ಕೆಲವರು ದೊಡ್ಡ ಅಧಿಕಾರಿಗಳು ಕೆಲವರು ಸಣ್ಣ ಅಧಿಕಾರಿಗಳು ಇದ್ದಾರೆ. ಇವೊತ್ತಿನದಿವಸ ಯಾರು ಯಾರು ತಪ್ಪು ಮಾಡಿರುತ್ತಾರೆ, ಅವರ ಬಗ್ಗೆ ಉಗ್ರ ಶಿಕ್ಷೆ ವಿಧಿಸಬೇಕೆಂಬ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ವಿಜಿಲೆನ್ಸ್ ವರದಿ ಅಧಾರದಮೇಲೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಹಾಗಾದರೆ ವಿಜಿಲೆನ್ಸ್ ಕಮಿಷನ್ ರಿಪೋರ್ಟು ಒದಗಿಸಿಕೊಡಿ ಎಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಪಾಯಿಂಟ್ ಆಫ್ ಆರ್ಡರ್. ಈ ವಿಷಯ ಕಾರ್ಯಕ್ರಮದ ಪಟ್ಟಿಯಲ್ಲಿ ಎಲ್ಲಿ ಇದೆ ? ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದ ವಿಷಯ ಚರ್ಚಿಸಲು ಹೇಗೆ ಬರುತ್ತದೆ! ಇದನ್ನು ತಿಳಿದುಕೊಳ್ಳಲು ಇಚ್ಛೆಪಡುತ್ತೇನೆ. I would like to know how these things could be raked up as and when they want it !

ಅಧ್ಯಕ್ಷರು.—ಇದು ಹೇಗೆ ಮ್ಯಾಟರ್ ಆಫ್ ಪಬ್ಲಿಕ್ ಇಂಪಾರ್ಟೆನ್ಸ್ ಆಗುತ್ತದೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದುದರಿಂದ ಇದು ಅಜೆಂಡಾದಲ್ಲಿ ಇರಬೇಕಾದ ಅವಶ್ಯಕತೆ ಇಲ್ಲ. I have allowed the hon. Members to speak.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಗಮನಕ್ಕೆ ತರಬೇಕಾದಂಥ ನನ್ನ ಪ್ರಶ್ನೆ ಏನೆಂದರೆ ಕಾರ್ಪೊರೇಷನ್‌ನ ಕೆಲವು ಅಧಿಕಾರಿಗಳನ್ನು ಈಗ ಸಸ್ಪೆಂಡ್ ಮಾಡಿದ್ದಾರೆ-ಎನ್ನುವ ವಿಷಯ ತಿಳಿದು ಬಂತು. ಇದು ಬಹಳ ಗಹನವಾದ ವಿಚಾರ. ವಿಜಿಲೆನ್ಸ್ ಕಮೀಷನ್ ರಿಪೋರ್ಟ್ ಮೇಲೆ ಸಸ್ಪೆಂಡ್ ಮಾಡಿದ್ದರೆ ನಾವು ಏನೂ ಹೇಳುವ ಪರಿಸ್ಥಿತಿಯಿರಲಿಲ್ಲ. ಯಾರನ್ನೂ ನಿಜವಾಗಿ ಸಸ್ಪೆನ್‌ಷನ್ ಮಾಡಬೇಕೋ ಅವರನ್ನು ಮಾಡಿದ್ದರೆ ಸರಿಯಾಗಿತ್ತು. ಆದರೆ ಇದಕ್ಕೆ ಸಂಬಂಧಪಡದೇ ಇದ್ದವರನ್ನೂ ಕೂಡ ಸಸ್ಪೆನ್‌ಷನ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ. ಹಿಂದೆಯೂ ಕೂಡ ಅಲ್ಲದ್ದ ಒಬ್ಬ ಒಳ್ಳೆಯ ಅಧಿಕಾರಿ ಶ್ರೀ ಹನುಮಂತಪ್ಪನವರನ್ನು ಕಿತ್ತು ಹಾಕಿದರು. ಆ ರೀತಿ ಆಗಿದೆಯೇ ಎಂಬುದನ್ನು ನೋಡಬೇಕು. ಇದರ ಬಗ್ಗೆ ಶ್ರೀ ಶಾಮಣ್ಣನವರು ಕೂಡ ಅಡ್ಜರ್ನ್‌ಮೆಂಟ್ ಮೋಷನ್ ತಂದಿದ್ದಾರೆ.

SRI H. M. CHANNABASAPPA (Minister for Public Works).—Madam Speaker, I appreciate the gesture of the Members of the Opposition and their anxiety to see that the administration is cleaned up at all levels including the Corporation. In doing so, various steps will have to be taken. Government is at it and I have made it very clear yesterday, Madam, that Government will spare none in their effort to see that the administration is geared up to the required standard of efficiency and competence. The erring officers will be punished under the law. I should like to assure the hon. Members of this House that we will not allow any political considerations to come in the matter of punishing the erring officials.

In regard to placing the Vigilance Commission's Report before this Assembly, I am afraid I cannot agree with it. After all, it is a process in the investigation which helps in coming to a conclusion as to what is wrong and what is right. It is not a correct practice to place investigation reports and Vigilance Commission Reports before this Assembly for decision. One thing I should like to bring to the notice of the House is that officers who have been dealt with contrary to any provisions of the law have a right to go to a court of law for protection. Therefore, Government will take all necessary action to see that action is taken strictly in accordance with rules and law.

An observation was made by the hon. Member Sri Naganna that some of them who are suspended or probably in the process of suspension are collecting huge amounts of money to bribe in order to see that the allegations made against them are hushed up. I can assure Sri Naganna that we shall not allow it and will not allow it. In regard to the magnitude of suspension, I should like to assure this House that without adequate reason and without adequate material we will not suspend any one and where we find that there is ample reason to keep an official under suspension, we will not hesitate to do so. It is not the number that counts; it is the material that counts. I want to make it clear that suspension is not a punishment. If it is found necessary for the purpose of investigation and elucidation of facts to keep a man under suspension, it will be done; it is one of the necessary things in the proceedings. So it is only where we find that there is absolute necessity to keep an official under suspension to facilitate further enquiry, Government will do it.

Another point raised by Sri Deve Gowda was what alternative arrangements have the Government made while suspending a huge number like 100 to 150. I can assure him and through you, Madam, this House that we will make the necessary arrangements to run the administration normally without any impediments whatsoever.

MADAM SPEAKER.—In view of the Government's reply, I disallow the adjournment motion.

## Calling Attention to a Matter of Urgent Public Importance *re*: Failure of Crops in Afzalpur Taluk.

Sri D. B. KALMANKAR (Afzalpur).—Sir, I call the attention of the Minister for Revenue to the failure of kharif and rabi, crops of jowar in Afzalpur Taluk.

Sri N. HUTCHAMASTHY GOWDA (Minister for Revenue).—Sir, The arrears under land revenue and other Government dues in Afzalpur Taluk as on 1-1-1972 are indicated hereunder :—

| | | Rs. P. |
|---|---|---|
| 1. | Land Revenue ... | 2,33,009-93 |
| 2. | Takavi ... ... | 6,10,567-59 |
| 3. | Other Government dues. ... | 2,03,385-91 |

During the three months from 1-1-1972 to 31-3-1972, the total amounts collected are as follows ;—

| | | |
|---|---|---|
| 1. | Land Revenue ... | 4,466-98 |
| 2. | Takavi ... ... | 16,194-98 |
| 3. | Other Government dues ... | 594-88 |

Thus it can be seen that no appreciable amount has been collected from 1-1-1972 to 31-3-1972.

It is also reported that no coercive steps have been taken in Afzalpur Taluk to recover the Government arrears during the present collection season.

During 1970-71, suspension or remission of land revenue has not been sanctioned in Afzalpur Taluk. However, proposals in this behalf for 1971-72 are awaited from the Tahasildar, Afzalpur Taluk. The The Deputy Commissioners are empowered to sanction suspension of the collection of the land revenue under Clause (1) of sub-section (1) of Section 194 of the Mysore Land Revenue Act 1964 based on the crop cutting experiments of the kharif and rabi crops in the areas. It is reported that the seasonal and crop conditions of kharif and rabi crops in Afzalpur Taluk are unsatisfactory. Instructions have been issued to the Deputy Commissioner to suspend the collection of land revenue in all deserving cases and also send proposals to Government to sanction remission of land revenue wherever necessary.

According to the Food Policy approved for the Crop Year 1971-72, the target of procurement for jowar is 30,000 tonnes. As on 7-4-1972, the jowar procured under the levy order is 844 tonnes inclusive of 246 tonnes procured in Gulbarga District.

A representation has been received from a few members of the Legislative Assembly of Gulbarga District requesting for exempting Gulbarga District from the payment of levy. The representation

(SRI N. HUTCHAMASTHY GOWDA)

has been examined. It is a fact that both kharif and Rabi Crops in Gulbarga District have been affected due to adverse seasonal conditions etc. and in view of this, the Deputy Commissioner, Gulbarga, has tentatively fixed the target of procurement of Rabi, Jowar at 11,330 quintals as against provisional demand of 71,806 quintals.

Jowar is the staple food in Gulbarga District. With the procurement of the provisional target of jowar fixed by the Deputy Commissioner, Gulbarga, and the procurement made in other jowar producing Districts, the stocks of jowar that would be available to Government would be too short of the requirements. Efforts were made to procure jowar outside the State but in vain.

In the circumstances, procurement of jowar would appear to be inevitable in the interest of the jowar consuming areas. However, strict instructions have been issued to the procurement agency not to harass small farmers and they may even be left out for purposes of procurement.

10-30 A.M.

**Sri D. B. KALMANKAR.**—In view of the fact that seasonal conditions in Gulbarga are not satisfactory, will the Government consider taking up works under '64 Famine' in the Gulbarga District ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಕ್ಷಾಮ ನಿವಾರಣಾ ಕಾರ್ಯಕ್ರಮಗಳನ್ನು ಕೈಕೊಳ್ಳಲು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

**Sri D. B. KALMANKAR.**—The Hon. Minister was pleased to state that small farmers will not be harassed in the collection of levy. May I know as to how many acres the Government consider as small holder's holding ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಸ್ಮಾಲ್ ಹೋಲ್ಡರ್ಸ್‌ಗೆ ಇಷ್ಟು ಎಂದು ಹೇಳುವುದಕ್ಕೆ ಬದಲಾಗಿ ಸಾಮಾನ್ಯವಾಗಿ ಎಲ್ಲ ಬೆಳೆ ಚೆನ್ನಾಗಿದೆ ಅಂಥ ಕಡೆ ಅವರ ಕುಟುಂಬದ ಜನರಿಗೆ ಎಷ್ಟು ಅವಶ್ಯಕವೆಂದು ನೋಡಿ ಅದನ್ನು ಬಿಟ್ಟು ಉಳಿದಿರುವುದನ್ನು ತೊಂದರೆಯಾಗದಂತೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಮಾಡಲಾಗಿದೆ.

**Sri D. B. KALMANKAR.**—In view of the fact that as against the arrears of 10 lakhs including land revenue, Takavi and other Government dues, only Rs. 21,000 have been collected from Afzalpur which reveals that conditions there are very unsatisfactory, whether the Government will issue instructions to the Deputy Commissioners specially in the case of Afzalpur for remission of land revenue ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ನಾನು ಹೇಳಿದೆ. 4 ಆಣೆಗಿಂತ ಕಡಿಮೆ ಬೆಳೆ ಆಗಿರುವ ಪ್ರದೇಶದಲ್ಲಿ ರೆಮಿಷನ್ ಕೊಡಬೇಕೆಂದು ರೂಲ್ಸ್ ಮಾಡಿದೆ, ಅದಕ್ಕೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಜಿಲ್ಲಾಧಿಕಾರಿಗಳು ತೆಗೆದುಕೊಂಡು ಸರ್ಕಾರಕ್ಕೆ ವರದಿ ಮಾಡುವರು.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನಲ್ಲಿ ಅದರಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಲೆವಿ ವಸೂಲುಮಾಡುವುದರಲ್ಲಿ ಜನರಿಗೆ ತೊಂದರೆಯಾಗಿದೆ. ಎರಡನೆಯದಾಗಿ ಸರಕಾರ ಕೊಡುವ ಬೆಲೆಗೂ ಮಾರ್ಕೆಟ್ಟಿನ ಬೆಲೆಗೂ ವ್ಯತ್ಯಾಸ ಬಹಳವಿದೆ, ಹೊರಗೆ 85 ರೂಪಾಯಿ ಬೆಲೆ ಇದ್ದರೆ ಸರಕಾರ

(ಶ್ರೀ ಕೋಣಂದೂರು ಲಿಂಗಪ್ಪ)

ಕ್ವಿಂಟಾಲಿಗೆ 65 ರೂಪಾಯಿ ಕೊಡುವುದು. ಮಾರ್ಕೆಟ್ ದರವನ್ನು ಕೊಡುವುದಾದರೆ ತೊಂದರೆ ಇಲ್ಲದೆ ಬೇಕಾದಷ್ಟು ಧಾನ್ಯ ದೊರೆಯುವುದು ಎಂಬುದು ಗೊತ್ತಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಭಾವ ಪ್ರದೇಶಗಳಿಗೆ ಧಾನ್ಯ ಒದಗಿಸಬೇಕಾಗಿರುವುದರಿಂದ ಲೆವಿ ವಸೂಲುಮಾಡಬೇಕಾಗಿದೆ. ಮಾಡಬೇಕಾದಾಗ ಯಾವ ಯಾವ ರಾಜ್ಯದಲ್ಲಿ ಯಾವ ಬೆಲೆ ಕೊಡಬೇಕೆಂಬುದನ್ನು ಗೊತ್ತುಮಾಡಿದ್ದಾರೆ. ಅದು ಮಾರ್ಕೆಟ್ ದರಕ್ಕಿಂತ ಕಡಿಮೆ ಇರುವುದು. ಈ ಕಷ್ಟ ತಪ್ಪಿದ್ದಲ್ಲ. ಅಲ್ಲದೆ ಸರ್ಕಾರದವರು ಕೊಂಡಮೇಲೆ ಮತ್ತೆ ಕೆಲವು ಖರ್ಚುಬರುವುದು.

ಶ್ರೀ ಪಿ. ಎನ್. ಪಾಟೀಲ್.— 4 ಆಣೆಗಿಂತ ಬೆಳೆ ಕಡಿಮೆಯಾಗಿದ್ದರೆ ಕಂದಾಯ ತೆಗೆದುಕೊಳ್ಳಬಾರದೆಂದು ಹೈದರಾಬಾದನ ಲ್ಯಾಂಡ್ ರೆವನ್ಯೂ ಅಕ್ಟಿನಲ್ಲಿದೆ, ಅದನ್ನು ಆ ಪ್ರದೇಶಕ್ಕೆ ಅನ್ವಯಿಸುವಿರಾ ? ಈಗ ಹಾಗೆ ಬೆಳೆ ಕಡಮೆ ಇದ್ದರೂ ವಸೂಲುಮಾಡುತ್ತಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಇದು ನಡೆಯುತ್ತಿದೆ. ಅಲ್ಲಿ 4 ಅಣೆಗಿಂತ ಕಡಿಮೆ ಬೆಳೆಯಾಗಿದೆ ಎಂದು ರೈತರು ಹೇಳುತ್ತಿದ್ದಾರೆ. ಅಂಥ ಕಡೆ ರೆಮಿಷನ್ ಕೊಡುವಿರಾ ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—4 ಅಣೆಗಿಂತ ಕಡಿಮೆ ಬೆಳೆಯಾಗಿರುವ ಕಡೆಗೆ ರೆಮಿಷನ್ ಕೊಡಬೇಕೆಂಬ ತತ್ವವಿದೆ, ಜಿಲ್ಲಾಧಿಕಾರಿಗಳು ವರದಿ ತರಿಸಿ ರೆಮಿಷನ್ ಕೊಡಲು ಶಿಫಾರಸು ಮಾಡಿದ ಮೇಲೆ ಕಂದಾಯದ ವಸೂಲಿ ನಿಲ್ಲಿಸಬಹುದೆಂದು ತಿಳಿಸಿದೆ. ರಾಜ್ಯದ ಯಾವ ಭಾಗದಲ್ಲಾದರೂ ಕೂಡ ಅದು ಅನ್ವಯವಾಗುವುದು.

ಶ್ರೀ ಟಿ. ತಾರೇಗೌಡ.—ಹೋದ ಸಲ ಸಿರಾ ತಾಲ್ಲೂಕಿನಲ್ಲಿ ಮತ್ತು ತುಮಕೂರು ಜಿಲ್ಲೆಯ ಅನೇಕ ಕಡೆ ಲೆವಿ ವಸೂಲು ಮಾಡಿರುವುದಕ್ಕೆ ಹಣ ಕೊಡದಿರುವುದು ಮತ್ತು ಕೊಡಬೇಕಾದುದನ್ನು ಕಂದಾಯ ಬಾಕಿ ಇದ್ದರೆ ಅದಕ್ಕೆ ಉತ್ತಾರ ಹಾಕಿ ಅಂದರೆ ಅದನ್ನು ಮಾಡದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ವಸೂಲುಮಾಡಿರುವುದಕ್ಕೆ ಹಣ ಕೊಡದಿದ್ದರೆ ಕೊಡಬೇಕಾಗುವುದು ಮತ್ತು ಕಂದಾಯ ಬಾಕಿ ಇದ್ದರೆ ಅದಕ್ಕೆ ಬೇಕಾದರೆ ವಜ ಮಾಡಬಹುದು. ಅದನ್ನು ಮಾಡುವರು.

ಶ್ರೀ ಎಚ್. ಬಿ. ಕೆಂಚೇಗೌಡ.—ಸರಕಾರ ವಸೂಲು ಮಾಡುವ ಲೆವಿ ದರಕ್ಕೂ ಮಾರ್ಕೆಟ್ ಬೆಲೆಗೂ ಸುಮಾರು 40 ರೂಪಾಯಿ ವ್ಯತ್ಯಾಸವಿರುವುದು. ಇದಕ್ಕೆ ಕಾರಣ ಮಧ್ಯೆ ದುರುಪಯೋಗವಾಗುವುದರಿಂದ ಎಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೊಂಡಬೆಲೆಯಮೇಲೆ ಖರ್ಚು ಎಷ್ಟು ಯಾವ್ಯಾವುದನ್ನು ಹಾಕುವರು ಎಂಬುದನ್ನು ವಿವರವಾಗಿ ತಿಳಿದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

## Lock-out in the Belgaum Amalgamated Electric Company

SRI B. B. SAYANAK (Belgaum).—I had given a call attention notice on 26th of March, 1972, regarding the lock-out in the Belgaum Amalgamated Electric Company by which nearly 80 labourers are hard hit.

MADAM SPEAKER.—I will look into it.

SRI B. B. SAYANAK.—If you assure me that it will be taken up on Monday it is allright.

MADAM SPEAKER.—It will be taken up, either on next Monday or Tuesday.

## PAPERS LAID ON THE TABLE

SRI D. DEVARAJ URS (Chief Minister).—Madam, I beg to lay :

Notification No. GSR 151 dated 6th April 1972.

The Mysore Excise (Tapping of Trees) (Amendment) Rules, 1972.

as required under Section 71 (4) of the Mysore Excise Act 1965.

SRI N. HUTCHAMASTHY GOWDA (Minister for Revenue).—Madam, on behalf of Hon. Minister for Municipal Administration I beg to lay :

Notification No. GSR 363, dated 5th November 1971.

The Mysore Municipalities (Powers of Expenditure) (Amendment) Rules, 1971.

as required under Section 323 (6) of Municipalities Act, 1964.

Madam, I beg to lay :

Notification No. RD 24 EST 72 dated 29th March, 1972.

(i) Remission of Stamp Duties in respect of instrument executed by the Mysore Housing Board.

(ii) Remission of Stamp Duties in respect of instrument executed by Mysore State Electricity Board during 1971-72.

(iii) Remission of Stamp Duties in respect of instrument executed by Mysore Housing Board under Village (Rural) Housing Project Scheme.

as required under Section 9 (1) of the Mysore Stamp Act, 1957.

Madam, On behalf of Hon. Minister for Transport I beg to lay :

(i) Notification No. GSR 254 dated 6th July, 1971.

The Mysore Motor Vehicles (V Amendment) Rules 1971.

(ii) Notification No. GSR 320 dated 8th October 1971.

The Mysore Motor Vehicles (12th Amendment) Rules, 1971.

(iii) Notification No. GSR 367 dated 29th October 1971.

The Mysore Motor Vehicles (13th Amendment) Rules, 1971.

(iv) Notification No. GSR 393 dated 26th November 1971.

The Mysore Motor Vehicles (14th Amendment) Rules, 1971.

(v) Notification No. GSR 417 dated 14th December, 1971.

The Mysore Motor Vehicles (15th Amendment) Rules, 1971.

(vi) Notification No. GSR 79 dated 20th December 1971.

The Mysore Motor Vehicles (16th Amendment) Rules, 1971.

as required under Section 133 (3) of the Mysore Motor Vehicles Act, 1939.

V. Sri M. Y. GHORPADE (Minister for Finance).—Madam, I beg to lay:

Notification No. S.O. 81 dated 23rd December 1971. Grant of exemption to the charitable raffle conducted by the I.A.S. and I.P.S. Officers Wives' Organisation, Bangalore, for the purpose of National Defence Fund ;

as required under Section 30 (2) of the Mysore Lotteries and Prize Competitions Control and Tax Act, 1951.

VI. Sri D. K. NAIKAR (Minister for Law and Parliamentary Affairs). Madam, I beg to lay:

(i) Notification No. GSR 427 dated 21st December 1971.

The Mysore Legislature (Rate of Rent for Accommodation to Moffusil Members') Rules, 1971.

(ii) Notification No. GSR 110 dated 15th March 1972.

The Mysore Legislature (Members' Free Transit by Road Transit Services) Rules, 1972.

as required under Section 15 (2) of the Mysore Legislature Salaries Act, 1956.

MADAM SPEAKER.—All the papers are laid.

## LEGISLATIVE BUSINESS

### Mysore Land Reforms (Amendment and Miscellaneous Provisions) Bill, 1972.

*Motion to Consider*

Sri N. HUTCHAMASTHY GOWDA (Minister for Revenue).—Madam, I beg to move :

"That the Mysore Land Reforms (Amendement and Miscellaneous Provisions) Bill, 1972 be taken into consideration."

MADAM SPEAKER.—Motion moved :

"That the Mysore Land Reforms (Amendment and Miscellaneous Provisions) Bill, 1972 be taken into consideration."

I call upon the hon. member Sri T. R. Shamanna to move his amendment.

Sri T. R. SHAMANNA (Fort).—I beg to move the following amendment :

"That the Mysore Land Reforms (Amendment and Miscellaneous Provisions) Bill, 1972 be circulated for the purpose of eliciting public opinion thereon by 1st June 1972."

MADAM SPEAKER.—Amendment moved:

"That the Mysore Land Reforms (Amendment and Miscellaneous Provisions) Bill, 1972 be circulated for eliciting public opinion thereon by 1st June 1972."

Both the motion for consideration and amendment thereon are before the House.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಬಹಳ ಸಾಮಾನ್ಯವಾದುದು; ಆದರೂ ಗೇಣಿದಾರರಿಗೆ ತಕ್ಕಮಟ್ಟಿಗೆ ಸಹಾಯವಾಗತಕ್ಕ ಒಂದು ತಿದ್ದುಪಡಿ ಮಸೂದೆ. ಈ ವಿಷಯದಲ್ಲಿ ನಾನು ಹೆಚ್ಚಿಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಬಹಳ ವರ್ಷಗಳಿಂದ ಬಾಕಿ ನಿಂತಿದ್ದು ಗೇಣಿದಾರರು ಏಕ ಕಾಲದಲ್ಲಿ ಎಲ್ಲ ಬಾಕಿಯನ್ನು ಕೊಡಲು ಕಷ್ಟವಾಗಿದೆ. ಹೆಚ್ಚು ಗೇಣಿ ಕೊಡುವುದಕ್ಕೆ ಸಾಧ್ಯವಿಲ್ಲ. ಗೇಣಿ ಬಾಕಿ ವಸೂಲಿಗಾಗಿ ಕ್ರಮ ತೆಗೆದುಕೊಂಡು ಡಿಕ್ರಿಯಾದ ಮೇಲೆ ಗೇಣಿದಾರರನ್ನು ಹೊರ ಹಾಕತಕ್ಕ ಕೆಲಸ ನಡೆದಿದೆ. ಅದನ್ನು ತಪ್ಪಿಸುವ ಉದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ತರಲಾಗಿದೆ. ಇದರಲ್ಲಿ ಯಾರು ಬಲವಂತವಾಗಿ ಈ ಕಾನೂನು ಜಾರಿಗೆ ಬಂದ ಮೇಲೆ ಹೊರಹಾಕಿದ್ದಾರೋ ಅಥವಾ ಕಾನೂನು ಬರುವುದಕ್ಕೆ ಹಿಂದೆ ಹೊರ ಹಾಕಿದ್ದರೂ ಕೂಡ, ಅದನ್ನೂ ತಪ್ಪಿಸುವುದಕ್ಕೆ ಒಂದು ಭಾಗ ಇದರಲ್ಲಿದೆ. ಈ ಎರಡೂ ಇದರಲ್ಲಿರುವ ಮುಖ್ಯವಾದ ಅಂಶಗಳು. ಈಗಾಗಲೇ ಅನೇಕ ಜನಗಳಿಗೆ ತೊಂದರೆಯಾಗಿದೆ. ಇನ್ನು ಮುಂದಾದರೂ ಈಗ ಆಗಿರತಕ್ಕುದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಈ ಮಸೂದೆಯನ್ನು ತರಲಾಗಿದೆ. ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡುತ್ತಾರೆಂದು ನಾನು ತಿಳಿಯುತ್ತೇನೆ. ಮಾನ್ಯ ಸಭೆ ಈ ತಿದ್ದುಪಡಿ ಮಸೂದೆಗೆ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ನಾನು ಸಭೆಯ ಮುಂದೆ ಮಂಡಿಸಿರತಕ್ಕ ತಿದ್ದುಪಡಿಯ ಅವಶ್ಯಕತೆಯಾದರೂ ಇಷ್ಟೇ. ಈ ಮಸೂದೆ ಬಹಳ ಚಿಕ್ಕದಾದರೂ ಕೂಡ ಇದನ್ನು ಬಹಳ ತ್ವರಿತವಾಗಿ ನಮ್ಮ ಮುಂದೆ ಇಟ್ಟಿದ್ದಾರೆ. ಏಪ್ರಿಲ್ 11 ನೇ ತಾರೀಖು ಗೆಜೆಟ್ ಎಕ್ಸ್‌ಟ್ರಾರ್ಡಿನರಿಯಲ್ಲಿ ಇದು ಪಬ್ಲಿಷ್ ಆಗಿದೆ. ಅದು ಗೆಜೆಟ್ಟಿನಲ್ಲಿ ಪ್ರಕಟವಾಗತಕ್ಕುದು 14ನೇ ತಾರೀಖು. ಆ ಹೊತ್ತು ಸಾರ್ವಜನಿಕರಿಗೆ ಅದು ತಿಳಿಯುತ್ತದೆ. ನನ್ನ ತಿದ್ದುಪಡಿಯಲ್ಲಿ ಸೂಚಿಸಿರುವಂತೆ ಈ ಮಸೂದೆಯ ಮೇಲೆ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗಿದೆ. ಅದರಲ್ಲಿಯೂ ಕೂಡ ಭೂಮಾಲೀಕರು 15 ದಿವಸಗಳೊಳಗಾಗಿ ತಮ್ಮ ಜಮೀನುಗಳನ್ನು ಗೇಣಿದಾರನಿಗೆ ಬಿಟ್ಟುಕೊಡದೆ ಹೋದರೆ ಒಂದು ತಿಂಗಳ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ಜುಲ್ಮಾನೆ ಹಾಕುವುದರ ಜೊತೆಗೆ ಕೆಲವು ಕಠಿಣವಾದ ಪರಿಸ್ಥಿತಿಯನ್ನು ತಂದು ಇಟ್ಟಿದ್ದಾರೆ. ಗೇಣಿದಾರನಿಗೆ ಸಹಾಯ ಮಾಡಬೇಕು, ಅದರ ಜೊತೆಗೆ ರೈತರ ಹಿತಚಿಂತನ ಇರಬೇಕು ಮತ್ತು ಅವರು ಜಮೀನಿನಲ್ಲಿ ಆಹಾರ ಉತ್ಪಾದನೆ ಮಾಡಲು ಸಾಕಾದಷ್ಟು ಅನುಕೂಲ ಮಾಡಿಕೊಡಬೇಕು ಎನ್ನುವುದರ ಬಗ್ಗೆ ನನ್ನ ಅಭ್ಯಂತರವಿಲ್ಲ. ಆದರೆ ಈಗಿರತಕ್ಕ ಪರಿಸ್ಥಿತಿಯಲ್ಲಿ ನಮ್ಮ ಸಭೆಯಲ್ಲಿರುವ ಆಡಳಿತ ಪಕ್ಷದಲ್ಲಿರುವ ಸುಮಾರು 165 ಜನ ಅವರ ಅಭಿಪ್ರಾಯವೇನೇ ಇದ್ದರೂ ಕೂಡ, ಅವರು ಬಾಯಿ ಮುಚ್ಚಿಕೊಂಡು ಇರಬೇಕಾದ ಪರಿಸ್ಥಿತಿ ಇದೆ. ಅವರು ತಮ್ಮ ಸ್ವಂತ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಅವಕಾಶವಿಲ್ಲ. ಒಂದು ಕಡೆ ನಮ್ಮ ವಿರೋಧ ಪಕ್ಷದಲ್ಲಿ ನಿಜವಾಗಿಯೂ ಸೋಷಿಯಲಿಸಂನಲ್ಲಿ ನಂಬಿಕೆ ಇಟ್ಟುಕೊಂಡಿರತಕ್ಕ ಎಸ್.ಎಸ್.ಪಿ. ಹಾಗೂ ಕಮ್ಯುನಿಸ್ಟ್ ಪಕ್ಷದ ಸದಸ್ಯರೂ ಇದ್ದರೂ ಅವರು ಇನ್ನೂ ಹೆಚ್ಚಿನ ರೀತಿಯಲ್ಲಿ ಕ್ರಾಂತಿಕಾರಕವಾದ ಮಾರ್ಪಾಡು ಮಾಡಬೇಕು ಎನ್ನುವ ಮನೋಭಾವನೆಯನ್ನು ಇಟ್ಟುಕೊಂಡಿದ್ದಾರೆ. ಸಂಸ್ಥಾ ಕಾಂಗ್ರೆಸ್ಸಿನವರು ಇದರ ಬಗ್ಗೆ ಏನಾದರೂ ಹೇಳಿದರೆ ಅವರನ್ನು ರೀ ಆಕ್ಷನರಿ ಎಂದು ಎಲ್ಲಿ ಕರೆಯುತ್ತಾರೋ ಎಂದು ಅವರು ಸುಮ್ಮನೆ ಇದ್ದಾರೆ. ಇದರ ಬಗ್ಗೆ ಸಾಕಾದಷ್ಟು ಅಸೆಂಬ್ಲಿಯಲ್ಲಿ ಚರ್ಚೆಯಾಗುವುದಕ್ಕೆ ಅವಕಾಶವಿಲ್ಲ. ಕೆಲವು ತೊಂದರೆಗಳು ಇದರಲ್ಲಿರುವುದರಿಂದ ಇದರ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಪಡೆದರೆ ಅನುಕೂಲವಾಗುತ್ತದೆ ಎಂದು ಇಲ್ಲಿ ನಾನು ನನ್ನ ತಿದ್ದುಪಡಿಯನ್ನು ತಂದಿದ್ದೇನೆ. ಅತಿಮುಖ್ಯವಾಗಿ ಇದರಲ್ಲಿ ಕೆಲವರಿಗೆ ಬಹಳ ತೊಂದರೆಯಾಗುತ್ತದೆ. ಪುಡಾರಿಗಳು ಗೇಣಿದಾರರುಗಳಿಗೆ ತೊಂದರೆ ಮಾಡಿ ಜಮೀನುಗಳನ್ನು ಅವರಿಂದ ತೆಗೆದುಕೊಳ್ಳುತ್ತಿದ್ದಾರೆ. ಊರಿನಲ್ಲಿ ಯಾರಿಗೆ ಶಕ್ತಿ ಇದೆಯೋ ಅಂತಹವನು ಜಮೀನನ್ನು ತನ್ನ ಸ್ವಾಧೀನಮಾಡಿಕೊಳ್ಳುತ್ತಿರುವುದು ಅನೇಕರಿಗೆ ಗೊತ್ತಾಗಿದೆ. ಊರಿನಲ್ಲಿ ರೈತರು ಯಾರು ಶಕ್ತಿಯುಳ್ಳವರಾಗಿರುತ್ತಾರೋ ಅಂತಹವರು ಗೇಣಿದಾರರುಗಳ ಹತ್ತಿರ

(ಶ್ರೀ ಟಿ. ಆರ್. ಶಾಮಣ್ಣ)

ಇರುವ ಜಮೀನನ್ನು ಬರಿಸಿಕೊಂಡು ತೊಂದರೆಗಳನ್ನು ಕೊಡುತ್ತಿದ್ದಾರೆ. ಆದ್ದರಿಂದ ನಾನು ಇದರ ಬಗ್ಗೆ ಸ್ವಲ್ಪ ದಿನಗಳ ಅವಕಾಶ ಕೊಟ್ಟು ಸಾರ್ವಜನಿಕರ ಅಭಿಪ್ರಾಯ ತಿಳಿದುಕೊಂಡು ಅನಂತರ ಕ್ರೋಢೀಕರಿಸಿದ ಒಂದು ಬಿಲ್ಲನ್ನು ತರಬಹುದು ಎಂದು ಹೇಳುತ್ತೇನೆ. ಆದಕ್ಕಾಗಿ ನಾನು 1-6-1972ರ ಒಳಗಾಗಿ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು ಎಂದು ನನ್ನ ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ ಮತ್ತು ಇದನ್ನು ಮುಂದಿನ ಸೆಷನ್‌ನಲ್ಲಿ ತೆಗೆದುಕೊಳ್ಳಬಹುದು ಎಂದು ಹೇಳಿ ಈಗ ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† Sri K. PUTTASWAMY (Chamundeshwari).—Madam Speaker, I think it is usual that discussion takes place both on the motion made by the Hon. Minister and also on the amendment proposed by the hon. member Sri T. R. Shamanna. Finally, when the opinion of the House is to be taken, Sri T. R. Shamanna's amendment would be put first to vote and thereafter the motion of the Hon. Minister. If you could kindly permit me, I would like to ask some information from the Government. I would like to know in which area this difficulty has arisen. I would also like to know the number of cases involved. There is a provision to stay proceedings and also to stay the execution. When this amending Bill is passed, as the Government is anxious to have it passed, I want to know how many pending cases are there when the amending Act would become applicable and the number of execution proceedings.

As per Clause 3 (1) (b), if the landlord has already taken possession of the land, there is an obligation on him to redeliver it within a fortnight from the date of this Act coming into force, failing which he is punishable with a simple imprisonment upto a month and also a fine. It may so happen that the landlord after having taken possession might how transferred the land by inheritence or by mortgage or by sale or gift or by any accepted mode of transfer. I want to know whether Government have any information under each category.

† Sri D. B. KALMANKAR (Aland).—I want to know the areas where such rent recovery suits are not disposed of and their number, and secondly whether there are any such proceedings pending, and if so, districtwise information may be given.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಇದರ ವಿವರಗಳು ಕೊಡಬಹುದು. ಮುನ್‌ಸೀಫ್ ಕೋರ್ಟುಗಳ ಫೈಲುಗಳಲ್ಲಿ ಇರುವ ಕೇಸುಗಳ ಸಂಖ್ಯೆ—1017, ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ಇದರಲ್ಲಿ ಜಿಲ್ಲಾವಾರು ವಿವರಗಳು ಈ ರೀತಿ ಇವೆ :—

| | | |
|---|---|---|
| ಬೆಳಗಾಂನಲ್ಲಿ | ... | 184 |
| ಬಳ್ಳಾರಿಯಲ್ಲಿ | ... | 5 |
| ಬೀದರ್‌ನಲ್ಲಿ | ... | 3 |
| ಕೊಡಗಿನಲ್ಲಿ | ... | 1 |
| ಗುಲ್ಬರ್ಗಾದಲ್ಲಿ | ... | 6 |
| ಹಾಸನದಲ್ಲಿ | ... | 1 |
| ಕೋಲಾರದಲ್ಲಿ | ... | ಇಲ್ಲ |

| | | |
|---|---|---|
| ಮಂಡ್ಯದಲ್ಲಿ | ... | 10 |
| ರಾಯಚೂರಿನಲ್ಲಿ | ... | 13 |
| ಶಿವಮೊಗ್ಗಾದಲ್ಲಿ | ... | 28 |
| ತುಮಕೂರಿನಲ್ಲಿ | ... | 5 |
| ಬಿಜಾಪುರದಲ್ಲಿ | ... | 96 |
| ಚಿಕ್ಕಮಗಳೂರಿನಲ್ಲಿ | ... | 21 |
| ಚಿತ್ರದುರ್ಗದಲ್ಲಿ | ... | 2 |
| ನಾರ್ತ್ ಕ್ಯಾನರಾದಲ್ಲಿ | ... | 317 |
| ಧಾರವಾಡದಲ್ಲಿ | ... | 152 |
| ಬೆಂಗಳೂರು ಒಂದು ಕೋರ್ಟಿನಲ್ಲಿ | | 19 |

ಇದರಲ್ಲಿ 31-12-71ರ ವರೆಗೆ ಒಟ್ಟು ಡಿಸ್‌ಪೋಸ್ ಆಗಿರುವ ಕೇಸುಗಳ ಸಂಖ್ಯೆ—326. 1-1-71 ರಲ್ಲಿ ಉಳಿದಿರುವ ಕೇಸುಗಳ ಸಂಖ್ಯೆ—691.

† Sri K. PUTTASWAMY.—The amending Bill is very restrictive in scope. It only applies to cases where there is a default in payment of arrears of rent. They might have asked for resumption of land or termination of tenancy. There are so many other grounds. I am only asking information about cases that have been filed for default in payment of arrears of rent. I do not know whether the Hon. Minister is in a position to vouchsafe as to the veracity of the figures that have been supplied. Coming as I do, both from Mandya and Mysore, I am surprised that there are only 10 cases in Mandya—perhaps there may be more than 100 cases in Srirangapatna itself.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ವಿವರಗಳು ಈ ರೀತಿ ಇವೆ :—

| | | |
|---|---|---|
| Total number of recovery of rent applications on the file of the Munsiffs' Courts | ... | 1,33,490 |
| Total number disposed of upto 31st December 1971 | ... | 41,713 |
| Balance to be disposed of as on 1st January 1972 | ... | 91,777 |

ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದವರು ಮತ್ತು ಇಲ್ಲಿ ಕೆಲಸ ಮಾಡುತ್ತಿದ್ದಾಗ ಅವರು ಯಾವ ರೀತಿ ಅಂಕಿ ಅಂಶಗಳನ್ನು ಪಡೆಯುತ್ತಿದ್ದರೋ ಅದೇ ರೀತಿಯಲ್ಲಿ ನಮ್ಮ ಇಲಾಖೆಯವರು ಒದಗಿಸಿ ಕೊಟ್ಟಿರುವುದರ ಮೇಲೆ ನಾನು ಇಲ್ಲಿ ಹೇಳುತ್ತಿದ್ದೇನೆ. ಇವರಲ್ಲಿ ಅವರಿಗೆ ಪರಿಶ್ರಮವಿದೆ. ನಾವು ಕೂಡ ಇದರ ಬಗ್ಗೆ ಒಳಹೊಕ್ಕು ನೋಡಿ ಇಲಾಖೆಯವರು ಯಾವ ಅಂಕೆ ಸಂಖ್ಯೆಗಳನ್ನು ಕೊಟ್ಟಿರುತ್ತಾರೋ ಆ ಅಂಕೆ ಸಂಖ್ಯೆಗಳನ್ನು ನಾನು ಈ ಸಭೆಯ ಮುಂದೆ ಇಡುತ್ತಿದ್ದೇನೆ.

ಇನ್ನು

| | | |
|---|---|---|
| Total number determining land applications on the file of the Munsiff Court | ... | 650 |
| Total number disposed of upto 31-12-1971 | ... | 321 |
| Balance to be disposed of as on 1-1-1972 | ... | 476 |

11-00 A. M.

Sri C. M. ARUMUGAM.—May I request the Hon. Minister to place a copy of the statement which he has just now read on the table of the House ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸ್ಟೇಟ್‌ಮೆಂಟ್ ಕೊಡುವುದಕ್ಕೆ ಅಡ್ಡಿಯಿಲ್ಲ. ಅದನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರು ಒಂದು ಮಾತನ್ನು ಹೇಳಿದರು. ಏನೆಂದರೆ, ಕೋರ್ಟಿನಲ್ಲಿ ಡಿಕ್ರಿಯಾಗಿದ್ದು ಈಗಾಗಲೇ ಜಮೀನುದಾರರು ಗೇಣಿದಾರರನ್ನು ಎವಿಕ್ಟ್ ಮಾಡಿದ್ದರೆ ಅಥವಾ ಮಾಡುತ್ತಿದ್ದರೆ, ಅಂತಹ ಕೇಸಸ್‌ನಲ್ಲಿ ಜಮೀನುದಾರರಿಂದ ಜಮೀನನ್ನು ಗೇಣಿದಾರರಿಗೆ ಕೊಡಿಸುವುದಕ್ಕೆ ತೊಂದರೆಯಾಗುವುದಿಲ್ಲವೇ ಎಂಬುದಾಗಿ.

Sri K. PUTTASWAMY.—Madam Speaker, I never said that. I am just asking for information. I may assure the Hon. Minister at this stage that I appreciate the very objective in bringing this Bill and I do not lag behind the Hon. Minister. I am trying to appreciate the difficulties of the tenants. At this stage I am asking for information. I have never expressed my opinion.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಸದಸ್ಯರು ಈ ವಿಷಯದಲ್ಲಿ ನನಗಿಂತ ಹಿಂದೆ ಬಿದ್ದಿದ್ದಾರೆ ಎಂದು ನನ್ನ ಅಭಿಪ್ರಾಯವಲ್ಲ. ಈ ತಿದ್ದುಪಡಿ ಮಸೂದಾ ಕಾನೂನನ್ನು ತಂದಿರತಕ್ಕ ಮೂಲ ಉದ್ದೇಶ ಗೇಣಿದಾರರ ಕೈತಪ್ಪಿ ಹೋಗಿರತಕ್ಕ ಜಮೀನನ್ನು ಮತ್ತೆ ಅವರ ಸ್ವಾಧೀನಕ್ಕೆ ಕೊಡಿಸುವುದೇ ಆಗಿದೆ. ಅದಕ್ಕಿಂತ ಹೆಚ್ಚು ಇದರಲ್ಲಿ ಏನೂ ಇಲ್ಲ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು, ಹೆಚ್ಚು ಒತ್ತಾಯ ಮಾಡಬೇಕಾದ ಅವಶ್ಯಕತೆ ಇಲ್ಲ,

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ).—Statement of objects and Reasons ನಲ್ಲಿ Rent recovery suits filed by the land-lords from 1966 onwards... ಎಂದು ಹೇಳಲಾಗಿದೆ. ಇಂತಹ ಎಷ್ಟು ಕೇಸ್‌ಗಳು ತಮ್ಮ ಗಮನಕ್ಕೆ ಬಂದಿವೆ ಎಂದು ಕೇಳುತ್ತೇನೆ ।

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಂಖ್ಯೆಯನ್ನು ಹೇಳಿದ್ದೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಆ ಅಂಕಿಗಳು ತಪ್ಪು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ)—ರೆಂಟ್ ರಿಕವರಿ ಕೇಸಸ್ ಎಷ್ಟು ಇವೆ ಎಂಬುದನ್ನು ಹೇಳಿರಿ. 14ನೇ ಸೆಕ್ಷನ್ ಪ್ರಕಾರ ಎಷ್ಟು ಕೇಸಸ್ ಡಿಸ್‌ಪೋಸ್ ಆಗಿವೆ ಮತ್ತು ರಿಜಂಪ್ಷನ್ ಆಗಿ ಎಷ್ಟು ಜನ ಗೇಣಿದಾರರಿಗೆ ತೊಂದರೆಯಾಗಿದೆ ಯೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಅದನ್ನೆಲ್ಲಾ ಹೇಳುತ್ತಾರೆ.

Sri D. B. KALMANKAR.—May I seek one information ? In the statement of objects and reasons it is said that rent recovery suits filed by the land-lords from 1966 onwards could not be disposed of in certain areas as the average of principal crops and prices of such crops notified by the Tahsildar and the Chief Marketing officers respectively had to be revised pursuant to the directions of the High Court on a Writ Petition before it. The notifications of average yield could be finalised in a few cases only in the year 1971. May I know in how many such cases the revision has to be effected ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ,—3 ವರ್ಷದ ಸರಾಸರಿ ಬೆಳೆ ಎಷ್ಟು ಇದೆ ಅದರ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಬೆಳೆಯನ್ನು ಗೊತ್ತು ಮಾಡುತ್ತಾರೆ. ಈ ರೀತಿ ಬೆಳೆಯನ್ನು ಆಧಾರವಾಗಿ ಇಟ್ಟುಕೊಂಡು ರೆಂಟ್ ವಸೂಲಿ ಮಾಡಬೇಕಾಗುತ್ತದೆ. ಎಷ್ಟು ರಿಟ್ ಪಿಟಿಷನ್‌ಗಳು ಡಿಸ್‌ಪೋಸ್ ಆಗಿವೆ ಎಂದು ಕೇಳಿದರು, ಆ ಬಗ್ಗೆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ.

† ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ಕಂದಾಯ ಮಂತ್ರಿಗಳು ಬಡ ಗೇಣಿದಾರರಿಗೆ ರಕ್ಷಣೆಕೊಡಬೇಕೆಂದು ಏನು ಒಂದು Mysore Land Reforms (Amendment and Miscellaneous Provisions) Bill, 1972 ನ್ನು ತಂದಿದ್ದಾರೆ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ ನಾನು ಸರ್ಕಾರದ ಒಂದು ಧೋರಣೆಯನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾವು ಬಹುಶಃ ಮುಂದಿನ ಜೂನ್ ತಿಂಗಳಿನಲ್ಲಿ ಪುನಃ ಸಭೆ ಸೇರುತ್ತೇವೆ. ಸರ್ಕಾರದವರು ಏನು ಒಂದು ಕಾಂಪ್ರಹೆನ್ಸಿವ್ ಲ್ಯಾಂಡ್ ರಿಫಾರಮ್ಸ್ ಬಿಲ್ ತರುತ್ತೇವೆ, ಅದನ್ನು ತರುವ ಬಗ್ಗೆ ಆತುರದಿಂದ ಇದ್ದೇವೆ, ಕಾತುರದಿಂದ ಇದ್ದೇವೆ ಎಂದು ಹೇಳುತ್ತಿದ್ದವರು ಇಂದು ಅಂತಹ ಒಂದು ಕಾಂಪ್ರಹೆನ್ಸಿವ್ ಲ್ಯಾಂಡ್ ರಿಫಾರಮ್ಸ್ ಬಿಲ್‌ನ್ನು ಸಭೆಯ ಮುಂದೆ ತರದೆ ಒಂದು ಸಣ್ಣ ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ, ಈ ಒಂದು ಸಣ್ಣ ತಿದ್ದುಪಡಿ ಮಸೂದೆಯ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಂಡು ಭಾಷಣ ಮಾಡುವುದಾದರೆ, ಈ ಸರ್ಕಾರದವರು ಜೂನ್ ತಿಂಗಳಿನಲ್ಲಿ ಕಾಂಪ್ರಹೆನ್ಸಿವ್ ಬಿಲ್‌ನ್ನು ತರುವುದಿಲ್ಲವೆಂದು ಹೇಳುತ್ತೇನೆ. ಕಾರಣವಾದರೂ ಇಷ್ಟೆ, ಕೇವಲ 20 ದಿವಸಗಳಲ್ಲಿ ಗೇಣಿದಾರರಿಗೆ ಪ್ರೊಟೆಕ್ಷನ್ ಕೊಡುವುದರ ಬಗ್ಗೆ ಸರ್ಕಾರದವರು ಆಸಕ್ತಿ ವಹಿಸಿದ್ದರ ಹಿನ್ನೆಲೆಯನ್ನು ನೋಡುವುದಾದರೆ, ಇವರು ಕಾಂಪ್ರಹೆನ್ಸಿವ್ ಬಿಲ್‌ನ್ನು ಭೂಸುಧಾರಣೆಯ ಬಗ್ಗೆ ತರುವುದಕ್ಕೆ ಸಾಧ್ಯವಿಲ್ಲವೆಂಬ ನನ್ನ ಭಾವನೆಯಾಗಿದೆ. ಇದನ್ನು ತಮ್ಮ ಉತ್ತರದಲ್ಲಿ ಸ್ಪಷ್ಟೀಕರಣ ಮಾಡಬೇಕು. ಏಕೆಂದರೆ ಕೇವಲ 30 ದಿವಸಗಳಲ್ಲಿ ಗೇಣಿದಾರರಿಗೆ ರಕ್ಷಣೆ ಕೊಡುವ ತಿದ್ದುಪಡಿಯನ್ನು ತಂದಿರುವುದನ್ನು ನೋಡಿದರೆ, ಕಾಂಪ್ರಹೆನ್ಸಿವ್ ಬಿಲ್‌ನ್ನು ತರುವುದಕ್ಕೆ ನಿಮಗೆ ಅಡಚಣೆ ಇದೆಯೆಂದು ನಾನು ಹೇಳುತ್ತೇನೆ. ಗೇಣಿದಾರರಿಗೆ ರಕ್ಷಣೆ ಕೊಡಬೇಕು, ಅವರನ್ನು ಒಕ್ಕಲೆಬ್ಬಿಸವುದನ್ನು ತಪ್ಪಿಸಬೇಕೆಂದು ಏನು ಒಂದು ಈ ತಿದ್ದುಪಡಿಯನ್ನು ತಂದಿದ್ದೀರಿ ಮತ್ತು ಇದರ ಒಂದು ಸ್ಪಿರಿಟ್ ಏನಿದೆ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವ ಗೇಣಿದಾರರನ್ನೂ ಒಕ್ಕಲೆಬ್ಬಿಸುವುದು ಸರಿಯಾದುದಲ್ಲ. ಅವರಿಗೆ ಸರಿಯಾದ ರಕ್ಷಣೆ ಕೊಡುವುದು ಸರ್ಕಾರದ ಕರ್ತವ್ಯ. ಆದರೆ ಈ ಒಂದು ತಿದ್ದುಪಡಿತಂದಿರತಕ್ಕ ವಿಷಯದಲ್ಲಿ ಮಾನ್ಯ ಮಾಜಿ ಮಂತ್ರಿಗಳು ಏನು ಒಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ಒಂದು ಕ್ಲಾರಿಫಿಕೇಷನ್ ಬೇಕಾಗುತ್ತದೆ. ಇವೊತ್ತು ಕೋರ್ಟ್ ಅರ್ಜಿ ಮೂಲಕ ಗೇಣಿದಾರರಿಂದ ಜಮೀನುದಾರರು ತಮ್ಮ ಜಮೀನನ್ನು ವಾಪಸ್ ಪಡೆದುಕೊಂಡಿದ್ದರೆ, ಅಂತಹ ಜಮೀನನ್ನು ಪುನಃ ಜಮೀನುದಾರರಿಂದ ವಾಪಸ್ ಪಡೆದು ಅದೇ ಗೇಣಿದಾರರಿಗೆ ಕೊಡುವುಕ್ಕೆ ಇಲ್ಲಿ ಪ್ರಾವಿಜನ್ ಮಾಡಿದ್ದೀರಿ. ಆದರೆ ಒಂದು ವೇಳೆ ಜಮೀನನ್ನು ವಾಪಸ್ ಪಡೆದ ಜಮೀನುದಾರರು ಆ ಜಮೀನನ್ನು ಬೇರೆಯವರಿಗೆ ಕ್ರಯಕ್ಕೆ ಮಾರಿದ್ದರೆ, ಆ ಮೂರನೇ ಮನುಷ್ಯನಿಂದ ಜಮೀನನ್ನು ಪುನಃ ವಾಪಸ್ ಪಡೆಯುವುದಕ್ಕೆ ಈ ತಿದ್ದುಪಡಿಯಲ್ಲಿ ಸಾಧ್ಯವೇ ಎಂದು ನನ್ನ ಪ್ರಶ್ನೆ. ಮೂರನೇ ಮನುಷ್ಯನಿಂದ ಪಡೆದ ಜಮೀನಿಗೆ ಕ್ರಯದ ಮೊಬಲಗನ್ನು ಕೊಡುತ್ತೀರಾ ಅಥವಾ ಅಂತಹ ಸಂದರ್ಭಗಳಲ್ಲಿ ಯಾವ ರೀತಿ ಪರಿಹಾರ ಕೊಡಬೇಕೆಂದು ಇದ್ದೀರಾ ಎಂದು ಕೇಳುತ್ತೇನೆ. ಲ್ಯಾಂಡ್ ರಿಫಾರಮ್ಸ್ ಆಕ್ಟ್ ಕೆಳಗೆ ಪರಿಹಾರ ಕೊಡುವುದು ಬೇರೆಯಾಗುತ್ತದೆ. ಆದರೆ ಇಲ್ಲಿ ಬೇರೆಯವರಿಗೆ ಮಾರಾಟವಾಗಿದ್ದರೆ ಅಥವಾ ಮಾರ್ಟ್‌ಗೇಜ್ ಆಗಿದ್ದರೆ ಅಂತಹ ಸಂದರ್ಭದಲ್ಲಿ ಯಾವ ರೀತಿ ಪರಿಹಾರ ಕೊಡುತ್ತೀರಾ ಎಂಬುದು ಇದರಲ್ಲಿ ಅಡಕವಾಗಿಲ್ಲ. ಇದನ್ನು ಮಾನ್ಯ ಮಂತ್ರಿಗಳು ಕ್ಲಾರಿಫೈ ಮಾಡಬೇಕು.

ಇನ್ನು ಎರಡನೆಯದಾಗಿ ಈ ತಿದ್ದುಪಡಿ ಮಸೂದೆಯಲ್ಲಿ ಗೇಣಿದಾರರಾಗಿರುವವರು ಎರಡು ವರ್ಷ ಗೇಣಿ ಕೊಟ್ಟಿದ್ದರೆ ಸಾಕು, ಅಂತಹ ಗೇಣಿದಾರರನ್ನು ಒಕ್ಕಲೆಬ್ಬಿಸುವುದಕ್ಕೆ ಸಾಧ್ಯವಿಲ್ಲವೆಂದು ಇದರಲ್ಲಿ ಅಳವಡಿಸಿದ್ದೀರಿ. ಇದರಲ್ಲಿ ಕೂಡ ಮತ್ತೊಂದು ಪ್ರಶ್ನೆ ಉದ್ಭವವಾಗುತ್ತದೆ. ಕಳೆದ 1966ನೇ ಇಸವಿಯಿಂದ 1972ನೇ ಇಸವಿಯವರಿಗೆ ಮತ್ತು ಅದಕ್ಕಿಂತ ಇನ್ನೂ ಹಿಂದಿನಿಂದ ಅನೇಕ ಜನ ಗೇಣಿದಾರರು ಸಣ್ಣ ಹಿಡುವಳಿದಾರರಿಗೆ ಗೇಣಿಯನ್ನೇ ಕೊಟ್ಟಿಲ್ಲ.

ಮಾನ್ಯ ಅಧ್ಯಕ್ಷಿಣಿಯವರೇ, ಈಗ ಈ ಸಭೆಯಮುಂದೆ ಮಂಡಿಸಿರುವ ಭೂಸುಧಾರಣಾ ತಿದ್ದುಪಡಿ ಮಸೂದೆಯ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ನಾನು ದೊಡ್ಡ ಜಮೀನ್ದಾರರ ಬಗ್ಗೆ ಮಾತನಾಡುವುದಿಲ್ಲ. ಅವರಿಗೆ ರಕ್ಷಣೆ ಕೊಡುವ ಅವಶ್ಯಕತೆ ಇಲ್ಲ. ಆದರೆ ಸಣ್ಣ ಹಿಡುವಳಿದಾರರು ಎಂದರೆ ಒಂದು ಎಕರೆ, ಎರಡು ಎಕರೆ, ಮೂರು ಎಕರೆ ಜಮೀನು ಇಟ್ಟುಕೊಂಡಿರತಕ್ಕ ಹಿಡುವಳಿದಾರರಿಗೆ ಇದರಿಂದ ಸ್ವಲ್ಪ ತೊಂದರೆಯಾಗತಕ್ಕಂಥಾ ಅವಕಾಶ ಇದರಲ್ಲಿ ಇದೆ. ಏತಕ್ಕೆಂದರೆ ಇವೊತ್ತಿನ ದಿವಸ ಅನೇಕ ಜನ ಸಣ್ಣ ಹಿಡುವಳಿದಾರರು ಗಂಜಿಗೂ ಗತಿ ಇಲ್ಲದೆ ಪ್ರಾಣ ಬಿಡುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಅವರ ಹಿತವನ್ನು ರಕ್ಷಣೆ ಮಾಡತಕ್ಕಂಥಾ ಒಂದು ಅವಕಾಶವನ್ನು ಈ ಮಸೂದೆಯಲ್ಲಿ ಸೇರಿಸಬೇಕಾಗಿತ್ತು. ಈಗಾಗಲೇ ಕೆಲವು ಜಮೀನ್ದಾರರು ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚು ಇರುವ ಜಮೀನನ್ನು ಮೂರನೆಯವರಿಗೆ

(ಶ್ರೀ ಎಚ್. ಡಿ. ದೇವೇಗೌಡ)

ಮಾರಾಟ ಮಾಡಿದ್ದಾರೆ. ಅವರಿಂದ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಈ ತಿದ್ದುಪಡಿಯಿಂದ ಅವಕಾಶ ಇದೆಯೇ ಎಂಬುದನ್ನು ಇದರಲ್ಲಿ ಸ್ಪಷ್ಟಪಡಿಸಿಲ್ಲ ಉಳುವವನೇ ಭೂಮಿಯ ಒಡೆಯ ಆಗಬೇಕು ಎನ್ನತಕ್ಕ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ ಸಣ್ಣ ಹಿಡುವಳಿದಾರರು ಏನು ಇದ್ದಾರೆ ಅವರಿಗೆ ಕಾನೂನು ಪ್ರಕಾರ ಬರಬೇಕಾಗಿದ್ದ ಗೇಣಿಯನ್ನು ಪಡೆಯುವುದರಲ್ಲಿ ತೊಂದರೆಯಾಗಿದೆ. ಆದ್ದರಿಂದ ಅವರಿಗೆ ಸೂಕ್ತ ಪರಿಹಾರವನ್ನು ಕೊಡುವ ಕಡೆಗೆ ಸರ್ಕಾರದವರು ಗಮನ ಕೊಡಬೇಕು. ಸಣ್ಣ ಹಿಡುವಳಿದಾರರು ಎಂದರೆ ಗೇಣಿದಾರರ ಚೌಕಟ್ಟಿನಲ್ಲಿ ಬರತಕ್ಕವರು ಗೇಣಿಯನ್ನು ವಸೂಲು ಮಾಡುವ ಬಗ್ಗೆ ಕಾನೂನಿನ ಅಡ್ಡಿ ಬೇರೆ ಇದೆ. ಏತಕ್ಕೆಂದರೆ ಫೇರ್ ರೆಂಟ್ ಇಷ್ಟು ಎಂದು ಫಿಕ್ಸ್ ಮಾಡಿಲ್ಲ. ಈ ಸಂಬಂಧದಲ್ಲಿ ಕೆಲವು ಕೇಸುಗಳು ಹೈಕೋರ್ಟಿನಲ್ಲಿ ಇವೆ ಎಂದು ಕೂಡ ಗೊತ್ತಾಗಿದೆ. ಈ ದೃಷ್ಟಿಯಿಂದ ಸಣ್ಣ ಹಿಡುವಳಿದಾರರ ಪರಿಸ್ಥಿತಿಯನ್ನು ಅರಿತುಕೊಂಡು ಅವರಿಗೆ ಪರಿಹಾರವನ್ನು ಕೊಡುವುದು ಒಳ್ಳೆಯದು ಎಂದು ನನ್ನ ಭಾವನೆ. ಈ ಬಗ್ಗೆ ಕಾನೂನಿನ ಎಡರುತೊಡರುಗಳು ಏನಿವೆ ಎಂಬುದನ್ನು ಯೋಚನೆ ಮಾಡಬೇಕು. ಮತ್ತೆ ಇದರ ಬಗ್ಗೆ ಕೋರ್ಟಿನಲ್ಲಿ ಪ್ರಶ್ನೆ ಮಾಡುವುದಕ್ಕೆ ಅವಕಾಶವನ್ನು ಕೊಡದಂತೆ ಆ ಬಗ್ಗೆ ಈಗಲೇ ಎಚ್ಚರಿಕೆಯನ್ನು ವಹಿಸುವುದು ಸೂಕ್ತ ಎಂದು ನನ್ನ ಅಭಿಪ್ರಾಯ. ತಾವು ಜೂನ್ ತಿಂಗಳಿನಲ್ಲಿ ಕಾಂಪ್ರೆಹೆನ್ಸೀವ್ ಲ್ಯಾಂಡ್ ರಿಫಾರಮ್ಸ್ ಮಸೂದೆಯನ್ನು ತರುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸಭೆಗೆ ಕೊಡಬೇಕು. ವೆಸ್ಟೆಡ್ ಇಂಟರೆಸ್ಟ್ ಇರುವವರು ಎಲ್ಲಾ ಕಡೆಯೂ ಇದ್ದಾರೆ. ಆದ್ದರಿಂದ ಈ ಬಿಲ್ಲನ್ನು ತರುವ ಕಾಲದಲ್ಲಿ ಹಲವಾರು ತೊಡಕುಗಳು ಇವೆಯೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಸಮಗ್ರವಾದ ಬಿಲ್ಲನ್ನು ತರುವಾಗ ಸಹಕಾರ ಸಂಘಗಳ ಹೆಸರಿನಲ್ಲಿ ಮತ್ತು ಟ್ರಸ್ಟ್‌ಗಳ ಹೆಸರಿನಲ್ಲಿ ಹಿಡಿತವನ್ನು ಇಟ್ಟುಕೊಂಡಿರುವವರನ್ನು ಸರ್ಕಾರದವರು ಗಮನವಲ್ಲಿಟ್ಟುಕೊಳ್ಳಬೇಕು, ಮತ್ತು ಸಣ್ಣ ಹಿಡುವಳಿದಾರರ ಕಡೆ ಗಮನವನ್ನು ಹರಿಸಬೇಕೆಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಸಿ. ಶೆಟ್ಟರ್ (ಹಾನಗಲ್).—ಮಾನ್ಯ ಅಧ್ಯಕ್ಷಿಣಿಯವರೇ, ಇವೊತ್ತಿನದಿವಸ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವಂತಹ ಈ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ನಾವು ಅರೆಮನಸ್ಸಿನಿಂದ ಒಪ್ಪಬೇಕಾಗಿದೆ. ಇವೊತ್ತು ಈ ಮಸೂದೆಯ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದಾರೆ ಅದನ್ನು ನಾವು ಸಂಪೂರ್ಣವಾಗಿ ಒಪ್ಪಿದರೂ ಕೂಡ ಮಾನ್ಯ ಮಂತ್ರಿಗಳು ಇಷ್ಟೊಂದು ತ್ವರಿತವಾಗಿ ಈ ಬಿಲ್ಲನ್ನು ತಂದಂಥಾ ಉದ್ದೇಶವನ್ನು ನೋಡಿದರೆ ಇದು ಹೆಚ್ಚಿನ ರೈತರಿಗೆ ರಕ್ಷಣೆಯನ್ನು ಕೊಡುತ್ತಿಲ್ಲ. ಇವರು ಕೊಟ್ಟಿರತಕ್ಕಂಥಾ ಅಂಕಿ ಅಂಶಗಳನ್ನು ನೋಡಿದರೆ ಇದು ಒಂದೆರಡು ಪರ್ಸೆಂಟ್ ರೈತರಿಗೆ ಮಾತ್ರ ರಕ್ಷಣೆಯನ್ನು ಕೊಡುತ್ತದೆ ಎಂದು ಅರ್ಥವಾಗುತ್ತದೆ. ನನಗೆ ತಿಳಿದ ಹಾಗೆ ನಾವು ಜನತೆಗೆ ಕೊಟ್ಟಂಥಾ ಆಶ್ವಾಸನೆಯನ್ನು ಪೂರೈಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಈ ಒಂದು ಕಾರಣದಿಂದ ನಮ್ಮ ಸರ್ಕಾರದವರು ಭೂಸುಧಾರಣೆಗೆ ಸಂಬಂಧಪಟ್ಟ ಒಂದು ಕಾಂಪ್ರಹೆನ್ಸೀವ್ ಮಸೂದೆಯನ್ನು ಸ್ವಲ್ಪ ಸಮಯದಲ್ಲೇ ಎಂದರೆ ಈ ವರ್ಷ ಮುಕ್ತಾಯವಾಗುವುದರೊಳಗೇ ತರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಒಂದು ಕಾಂಪ್ರೆಹೆನ್ಸೀವ್ ಬಿಲ್ಲಿನಲ್ಲಿ ರೈತರು ಕೊಡಬೇಕಾದ ಕ್ವಾಂಟಮ್ ಆಫ್ ರೆಂಟ್ ವಿಷಯ ಚರ್ಚೆಯಾಗಬೇಕಾಗಿದೆ. ಮತ್ತು ಸೀಲಿಂಗ್ ಲಿಮಿಟ್ ಎಷ್ಟು ಮಾಡಬೇಕು ಎನ್ನುವ ವಿಷಯವನ್ನು ಗಣನೆಗೆ ತೆಗೆದುಕೊಳ್ಳುತ್ತಾರೆ. ಈಗ ಕೋರ್ಟಿನಲ್ಲಿರುವ ಮೊಕದ್ದಮೆಗಳನ್ನು ನಡೆಸಿಕೊಂಡು ಬರಬೇಕೇ ಹೇಗೆ, ಎನ್ನುವ ವಿಷಯವನ್ನು ಕಾಂಪ್ರೆಹೆನ್ಸೀವ್ ಬಿಲ್ಲಿನಲ್ಲಿ ತರಬಹುದು ಎಂದು ಕಾಣುತ್ತದೆ. ಇವೊತ್ತು ಈ ಒಂದು ಭೂಸುಧಾರಣಾ ಕಾನೂನನ್ನು ಪುನಃ ಪರಿಶೀಲನೆ ಮಾಡಿ ಎಲ್ಲಾ ವಿಷಯಗಳ ಮೇಲೂ ಒಂದು ಕೊನೆಯ ತೀರ್ಮಾನವನ್ನು ಕೊಡಬೇಕೆಂಬ ಇಚ್ಛೆ ಸರ್ಕಾರಕ್ಕೆ ಇರುವಾಗ ಸೆಕ್ಷನ್ 22 ರ ಪ್ರಕಾರ ಒಕ್ಕಲೆಬ್ಬಿಸುವಂತಹ ಗೇಣಿದಾರರಿಗೆ ರಕ್ಷಣೆ ಕೊಡುವುದು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ. ಆದ್ದರಿಂದ ಈ ಸಂಬಂಧದಲ್ಲಿ ಕೋರ್ಟಿನ ಎದುರಿನಲ್ಲಿ ಇರತಕ್ಕಂಥಾ ಎಲ್ಲಾ ಮೊಕದ್ದಮೆಗಳನ್ನೂ ಹೊಸ ಒಂದು ಶಾಸನ ಬರುವ ತನಕ ಹಿಡಿಯಬೇಕು ಎನ್ನುವ ವಿಚಾರ ಸಂಪೂರ್ಣವಾಗಿ ಸ್ವಾಗತಾರ್ಹವಾದದ್ದು. ಸೆಕ್ಷನ್ 14ರ ಪ್ರಕಾರ ರಿಜಂಪ್ಷನ್ನಿಗೆ ಸಂಬಂಧಪಟ್ಟದ್ದಾಗಲೀ, ಸೆಕ್ಷನ್ 40ರ ಪ್ರಕಾರ ರೆಂಟ್ ರಿಕವರಿಗೆ ಸಂಬಂಧಪಟ್ಟದ್ದಾಗಲೀ ಫೇರ್ ರೆಂಟ್ ಫಿಕ್ಸ್ ಮಾಡುವುದಾಗಲೀ ಕಾಂಪ್ರೆಹೆನ್ಸೀವ್ ಬಿಲ್ ಬರುವ ತನಕ ಈಗಿನ ಕಾನೂನಿನ ಪ್ರಕಾರ ಯಾವುದೇ ಮೊಕದ್ದಮೆಗಳನ್ನು ಹೂಡಲು ಅವಕಾಶವಿಲ್ಲದಂತೆ ಮಾಡಲು ಸರ್ಕಾರದವರು ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಮತ್ತು ಆದಷ್ಟು ಜಾಗ್ರತೆ ಕಾಂಪ್ರೆಹೆನ್ಸೀವ್ ಬಿಲ್ಲನ್ನು ತರಬೇಕೆಂದು ನಾನು ಹೇಳುತ್ತೇನೆ.

1956ನೇ ಇಸವಿಯಲ್ಲಿ ಬೊಂಬಾಯಿ ಟೆನೆನ್ಸಿ ಆಕ್ಟ್ ಬಂದಾಗ ಬೊಂಬಾಯಿ ಏರಿಯಾದ ರೈತರಿಗೆ ಕೆಲವೊಂದು ಹಕ್ಕು ಬಾಧ್ಯತೆಗಳು ಸಿಕ್ಕಿದವು. ಆಗ ಮೈಸೂರು ಟೆನೆನ್ಸಿ ಪ್ರೊಟೆಕ್ಷನ್ ಆಕ್ಟ್ ಎಂದು ಹೇಳಿ ಒಂದು ಆಕ್ಟನ್ನು ತಂದು ಬೊಂಬಾಯಿ ಟೆನೆನ್ಸಿ ಆಕ್ಟ್ ಪ್ರಕಾರ ಅನ್ವಯ ವಾಗತಕ್ಕಂಥಾ ಎಲ್ಲಾ ಕ್ರಮಗಳನ್ನೂ ತಡೆಹಿಡಿದರು. 1961ನೇ ಇಸವಿಯಲ್ಲಿ ಭೂಸುಧಾರಣಾ ಕಾನೂನು ಆದರೂ ಕೂಡ ಅದನ್ನು 1965ನೇ ಇಸವಿಯಲ್ಲಿ ಜಾರಿಗೆ ಕೊಟ್ಟರು. ಲ್ಯಾಂಡ್ ರಿಫಾರಮ್ಸ್ ಆಕ್ಟನ್ನು ಎಲ್ಲವನ್ನೂ ನೋಡಿದರೆ ನಮಗೆ ಏನು ಅನಿಸುತ್ತದೆ ಎಂದರೆ ಹಿಂದಿನ ಸರ್ಕಾರದವರು ಮಾಡಿದ ರೀತಿಯಲ್ಲಿ ಪೋಲೀಸಿನವರು ಅಪರಾಧ ಮಾಡಿದಂತಹವನಿಗೆ ಒಂದು ನೋಟೀಸ್ ಕೊಟ್ಟು ನಾವು ನಿನ್ನನ್ನು ಅರೆಸ್ಟ್ ಮಾಡುವುದಕ್ಕೆ ಬರುತ್ತೇವೆ ಎಂದು ಹೇಳಿದಹಾಗೆ ಹಿಂದೆ ಈ ಭೂಸುಧಾರಣಾ ಕಾನೂನನ್ನು ಜಾರಿಗೆ ಕೊಡುವುದು ನಡೆದಿದೆ. ಇವತ್ತು ನಾವು ಎಷ್ಟು ಜನ ರೈತರು ಸ್ವಂತ ಜಮೀನು ಇಲ್ಲದೇ ಇದ್ದಾರೆ ಎಷ್ಟು ಭೂಮಿ ಜಮೀನು ಇಲ್ಲದಿರತಕ್ಕವರಿಗೆ ಸಿಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ಒಂದು ಕಾಂಪ್ರೆಹೆನ್ಸಿವ್ ಬಿಲ್ ತರ ಬೇಕಾಗಿದೆ. ಸರ್ಕಾರದವರು ಈ ಒಂದು ಕಾಂಪ್ರೆಹೆನ್ಸಿವ್ ಬಿಲ್ಲನ್ನು ತಾವೇ ಡ್ರಾಫ್ಟ್ ಮಾಡದೆ, ಅದಕ್ಕೆ ಒಂದು ನಿಷ್ಠೆಯಿಂದ ಕೂಡಿದ ಪ್ರೋಗ್ರೆಸ್ಸಿವ್ ಆದ ವಿರೋಧಪಕ್ಷದ ಸದಸ್ಯರನ್ನು ಒಳಗೊಂಡ ಒಂದು ಸಮಿತಿಯನ್ನು ರಚನೆ ಮಾಡಿ, ಆ ಸಮಿತಿ ಈ ವರ್ಷದ ಒಳಗೆ ಈ ಶಾಸನವನ್ನು ಪರಿಶೀಲನೆ ಮಾಡಿ ಯಾವ ರೀತಿ ಇದನ್ನು ಜಾರಿಗೆ ತರಬೇಕೆನ್ನುವುದರ ಬಗ್ಗೆ ಶಿಫಾರಸು ಮಾಡುವುದು ಸೂಕ್ತ ವೆಂದು ನಾನು ಸಲಹೆ ಮಾಡುತ್ತೇನೆ. ಈ ಸಮಿತಿಯ ಶಿಫಾರಸು ಯಾವರೀತಿ ಇರಬೇಕೆಂದರೆ ಈ ಶಾಸನ 1972ನೇ ಡಿಸೆಂಬರ್ ಒಳಗೆ ಜಾರಿಗೆ ಬರುವಂತೆ ವ್ಯವಸ್ಥೆ ಮಾಡುವ ರೀತಿಯಲ್ಲಿ ಇರಬೇಕು, ಇದನ್ನು ನಮ್ಮ ಸರ್ಕಾರದವರು ಮಾಡುತ್ತಾರೆ ಮತ್ತು ಮಾನ್ಯ ಮಂತ್ರಿಯವರು ಇದರ ಬಗ್ಗೆ ಆಸ್ಥೆ ವಹಿಸುತ್ತಾರೆಂದು ನಂಬಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿ ಯವರು ತಂದಂಥ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಈ ಮಸೂದೆ ಯಿಂದ ಕನಿಷ್ಠ ಪಕ್ಷ 1017 ಜನ ರೈತರಾದರೂ ರಕ್ಷಣೆಯನ್ನು ಪಡೆಯುತ್ತಾರೆ ಎನ್ನುವ ವಿಚಾರ ಇದರಲ್ಲಿ ಇದೆ. ಆದರೆ ಮಾನ್ಯ ಕಂದಾಯ ಮಂತ್ರಿಯವರಿಗೆ ಉಳಿದಿರತಕ್ಕ ಗೇಣೀರೈತರು ಕಾಣಲಿಲ್ಲವೆಂದು ವಿಷಾದವಾಗುತ್ತಿದೆ. ಸೆಕ್ಷನ್ 14ರ ಕೆಳಗಡೆ ರಿಸಂಪ್ಷನ್ ಬಗ್ಗೆ ಸುಮಾರು 85 ಸಾವಿರ ಅರ್ಜಿಗಳು ಇವೆ. ಅವುಗಳಲ್ಲಿ ಕನಿಷ್ಟ ಅಂದರೆ 4-5 ಲಕ್ಷ ಗೇಣಿ ರೈತರಾದರೂ ಇದ್ದಾರೆ. ಆದರೆ ಈ ರೈತರಿಗೆ ಯಾವುದೇ ರಕ್ಷಣೆಯನ್ನು ಕೊಡುವ ದೃಷ್ಟಿಯಿಂದ ಯಾವುದೇ ಕಾನೂನನ್ನು ತರುವುದಕ್ಕೆ ಇವರು ಮುಂದಾಗಲಿಲ್ಲ. ಅದನ್ನು ಏಕೆ ಮಾಡಿಲ್ಲವೆಂದು ನನಗೆ ಗೊತ್ತಾಗಿಲ್ಲ. ಇವೊತ್ತಿನ ದಿವಸ ಬಹಳ ಮುಖ್ಯವಾದ ಸಮಸ್ಯೆ ಸೆಕ್ಷನ್ 14ರ ಕೆಳಗಡೆ ಜಮೀನು ಬಿಡಿಸಿಕೊಳ್ಳತಕ್ಕದ್ದು. ತಾವು ಸುಗ್ರೀವಾಜ್ಞೆ ಮುಖಾಂತರ ರೈತರ ಕೈಯಿಂದ ಜಮೀನು ತಪ್ಪದ ಹಾಗೆ ಮಾಡಿದ್ದರೆ ಚೆನ್ನಾಗಿತ್ತು. ಇವೊತ್ತಿನ ದಿವಸ ಜಮೀನ್ದಾರರು ಗೇಣೀದಾರರಿಗೆ ರಸೀದಿ ಕೊಡತಕ್ಕ ಪದ್ಧತಿ ಯನ್ನು ಇಟ್ಟುಕೊಳ್ಳಲಿಲ್ಲ. ರೈತನು ನೂರಾರು ವರ್ಷಗಳಿಂದ ಅಲ್ಲಿದ್ದರೂ ಅವನ ಜಮೀನು ಕೈ ಬಿಟ್ಟುಹೋಗುವ ಪರಿಸ್ಥಿತಿ ಇವತ್ತು ಬಂದಿದೆ. ಆದ್ದರಿಂದ 1017 ಜನರ ರಕ್ಷಣೆ ಮಾಡುವುದಕ್ಕೆ ಹೊರಟ ಮಂತ್ರಿಯವರು ಉಳಿದ 5 ಲಕ್ಷ ಜನ ಗೇಣಿದಾರರ ರಕ್ಷಣೆ ಮಾಡುವುದಕ್ಕೂ ಏಕೆ ಮನಸ್ಸು ಮಾಡಿಲ್ಲವೆಂದು ನಾನು ಕೇಳುತ್ತೇನೆ. ಇದಕ್ಕೆ ಕೂಡ ಒಂದು ಸಮರ್ಪಕವಾದ ಕಾನೂನನ್ನು ಜಾರಿಗೆ ತರಬೇಕಾಗಿತ್ತು ಎಂದು ಹೇಳುತ್ತೇನೆ. ಏಕೆಂದರ ಈಗಾಗಲೇ ತಮ್ಮ ಸೆಕ್ಷನ್ 14ರ ಕೆಳಗಡೆ ಎಷ್ಟೋ ದೊಡ್ಡ ಪ್ರಮಾಣದಲ್ಲಿ ರಿಸಂಪ್ಷನ್ ಆಫ್ ಲ್ಯಾಂಡಿಗೆ ಅರ್ಜಿಗಳು ಬಂದು, ಎಷ್ಟೋ ಜಮೀನ್ದಾರರು ರೈತರಿಂದ ಜಮೀನುಗಳನ್ನು ಬಿಡಿಸಿಕೊಳ್ಳುತ್ತಿದ್ದಾರೆ. ಆದರೆ ನೀವು ಅದನ್ನು ತಡೆಯದೆ ಹೋದರೆ, ನೀವು ಸಮಗ್ರವಾದ ಭೂಸುಧಾರಣೆಯನ್ನು ತರುವ ವೇಳೆಗ ಲಕ್ಷಾಂತರ ಜನ ಗೇಣಿದಾರರಾದ ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುವ ಪ್ರಸಂಗ ಬರುತ್ತದೆ. ಆದ್ದರಿಂದ ಇದನ್ನು ಕೂಡಲೇ ಸೆಕ್ಷನ್ 14ರ ಪ್ರಕಾರ ಬಿಡಿಸಿಕೊಳ್ಳುವ ಅವಕಾಶವನ್ನು ತಪ್ಪಿಸ ಬೇಕು. ಅದನ್ನು ಒಂದು ಸುಗ್ರೀವಾಜ್ಞೆಯ ಮೂಲಕವಾದರೂ ತರುವುದಕ್ಕೆ ಮುಂದಾಗಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಯಲ್ಲಿ ಸೆಕ್ಷನ್ 14ರ ಕೆಳಗಡೆ ಏನು ಸ್ವಂತ ಸಾಗುವಳಿಗೆಂದು ಭೂಮಿ ಯನ್ನು ತೀರ್ಮಾನದ ಪ್ರಕಾರ ಬಿಡಿಸಿಕೊಳ್ಳುತ್ತಾರೋ ಅದರ ಮೇಲೆ ಬರುವ ನಾನ್ ರೆಸ್ಯೂಮೆಬಲ್ ಲ್ಯಾಂಡ್ಸ್ ಇರುತ್ತದೋ, ಅದನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ, ವೆಸ್ಟಿಂಗ್ ನೋಟಿಫಿಕೇಷನ್ ಮಾಡಬೇಕಾಗುತ್ತದೆ. ಆದರೆ 1965 ನೇ ಇಸವಿಯಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೆ ಕೊಟ್ಟರೂ ಕೂಡ ಇವತ್ತಿನವರೆಗೂ ಒಂದು ಎಕರೆ ಕೂಡ ವೆಸ್ಟಿಂಗ್ ಮಾಡಿಕೊಳ್ಳಲಿಲ್ಲ. ಇದರಿಂದ ಸಣ್ಣ ಹಿಡುವಳಿದಾರರಿಗೆ ಬಹಳ ತೊಂದರೆಯಾಗಿದೆ. ಅವರ ತೊಂದರೆಗಳನ್ನು ಗಮನಕ್ಕೆ ತೆಗೆದು

(ಶ್ರೀ ಕಾಗೋಡು ತಿಮ್ಮಪ್ಪ)

ಕೊಳ್ಳುವುದಾದರೆ, ತಾವು ಮತ್ತೊಂದು ಆಲೋಚನೆಯನ್ನು ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಗೇಣಿ ರೈತನಿಂದ ಭೂಮಿಯನ್ನು ತಪ್ಪಿಸಿ ಸಣ್ಣ ಹಿಡುವಳಿದಾರನಿಗೆ ಸ್ವಂತ ಸಾಗುವಳಿಗೆ ಜಮೀನನ್ನು ಕೊಡುವುದರಿಂದ, ಸಣ್ಣ ಹಿಡುವಳಿದಾರನಿಗೂ ಕೂಡ ಸ್ವಂತ ಸಾಗುವಳಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಅದಕ್ಕಾಗಿ ಸಣ್ಣ ಹಿಡುವಳಿದಾರರಿಗೆ ಅದರ ಮಾರ್ಕೆಟ್ ಬೆಲೆಯ ಎರಡರಷ್ಟು ಬೆಲೆಯನ್ನು ಕೊಡಬೇಕು. ಅಲ್ಲದೆ ಕೊಡುವ ಪರಿಹಾರವನ್ನು ಏಕ ಕಂತಿನಲ್ಲೇ ಕೊಟ್ಟರೆ, ಅವರು ಬೇರೆ ಏನಾದರೂ ಕಸಬನ್ನು ಮಾಡಿ ತಮ್ಮ ಜೀವನವನ್ನು ಮಾಡಿಕೊಳ್ಳಬಹುದು. ಅದು ಬಿಟ್ಟು ಆ ಕಡೆ ಅವರಿಗೆ ಗೇಣಿಯೂ ಇಲ್ಲದೆ, ಈ ಕಡೆ ಪರಿಹಾರವೂ ಇಲ್ಲದೆ ಜೀವನ ಮಾಡುವುದು ಬಹಳ ಕಷ್ಟ ವಾಗುತ್ತದೆ. ಅದರ ಬದಲು ಗೇಣಿ ರೈತನಿಂದ ಭೂಮಿಯನ್ನು ತಪ್ಪಿಸಿ ಸಣ್ಣ ಹಿಡುವಳಿದಾರರಿಗೆ ಸ್ವಂತ ಸಾಗುವಳಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಅವರು ಹೇಗೆ ಸಾಗುವಳಿಯನ್ನು ಮಾಡುತ್ತಾರೆ ? ಅವರಿಗೆ ಬೀಜ ಇಲ್ಲ, ಗೊಬ್ಬರ ಇಲ್ಲ, ಎತ್ತುಗಳು ಇಲ್ಲ ಮತ್ತು ಇವೆಲ್ಲವೂ ಇದ್ದರೆ, ಬೇಕಾದಂತಹ ಅನುಭವವೂ ಇರುವುದಿಲ್ಲ ; ಹೊಲ ಉಳುವುದಕ್ಕೂ ಬರುವುದಿಲ್ಲ. ಇದರಿಂದ ಅವರು ಮನೆ ಮಠಗಳನ್ನು ಕಳೆದುಕೊಂಡು ಎಲ್ಲಿಯಾದರೂ ಅಲೆಯುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಆದ್ದರಿಂದ ಸಣ್ಣ ಹಿಡುವಳಿದಾರರಿಗೆ ಕೊಡತಕ್ಕ ಪರಿಹಾರವನ್ನು ಒಂದಕ್ಕೆ ಎರಡರಷ್ಟು ಏಕ ಕಾಲದಲ್ಲಿ ಕೊಡುವ ಏರ್ಪಾಡನ್ನು ಮಾಡಿದರೆ, ಸಣ್ಣ ಹಿಡುವಳಿದಾರರ ರಕ್ಷಣೆ ಯನ್ನು ಕೂಡ ಮಾಡಿದಂತಾಗುತ್ತದೆ. ಅದಲ್ಲದೆ, ಏನಾದರೂ ಅರ್ಧ ಬಿಡಿಸಿಕೊಳ್ಳುವುದಕ್ಕೆ ಅವಕಾಶ ಇದೆಯೆಂದು ಮಾಡಿದರೆ, ಅದರಿಂದ ಇನ್ನಷ್ಟು ಅನಿಷ್ಟವಾಗುತ್ತದೆ ಜೊತೆಗೆ ಇವನ್ನೆಲ್ಲಾ ಮಾಡಬೇಕಾದರೆ, ನಿಮ್ಮಲ್ಲಿ ಪ್ರಗತಿಪರರಾದ ಅಧಿಕಾರಿಗಳನ್ನು ಇಟ್ಟುಕೊಳ್ಳದೆ ಹೋದರೆ ನೀವು ಈ ಕಾನೂನನ್ನು ಅತಿ ಶೀಘ್ರವಾಗಿ ಪೂರ್ತಿಯಾಗಿ ಜಾರಿಗೆ ತರುವುದಕ್ಕಾಗುವುದಿಲ್ಲ. ಅದರಲ್ಲೂ ಕಂದಾಯ ಇಲಾಖೆಯಲ್ಲಿ ಮೊದಲಿಂದಲೂ ಹಳೆಯ ಹುಲಿಗಳು ಇದ್ದಾವೆ. ಅವರು ಯಾವುದೇ ರೀತಿಯ ಪ್ರಗತಿಪರವಾದ ಸುಧಾರಣೆಗಳನ್ನು ಕಾನೂನಿನಲ್ಲಿ ಜಾರಿಗೆ ತರುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಕೂಡ ಯಾರು ಪ್ರಗತಿದಾಯಕವಾದ ಅಭಿಪ್ರಾಯ ವನ್ನು ಹೊಂದಿರುತ್ತಾರೋ, ಅಂಥವರನ್ನು ಮಾತ್ರ ನೀವು ಇಟ್ಟುಕೊಂಡರೆ ಇದನ್ನು ಜಾರಿಗೆ ತರುವುದಕ್ಕೆ ಬಿಡುತ್ತಾರಲ್ಲದೆ, ಬೇರೆ ರೀತಿಯ ಅಧಿಕಾರಿಗಳನ್ನು ಇಟ್ಟುಕೊಂಡರೆ, ನಿಮ್ಮನ್ನು ಅವರು ಹಿಡಿದುಕೊಂಡು ಬಿಡುತ್ತಾರೆ ಮತ್ತು ನಿಮಗೆ ಗೊತ್ತಿಲ್ಲದ ರೀತಿಯಲ್ಲಿ ಏನಾದರೂ ಮಾಡಿ ಈ ಕಾನೂನನ್ನು ಜಾರಿಗೆ ತರದ ರೀತಿಯಲ್ಲಿ ಮಾಡುತ್ತಾರೆ. ಆದ್ದರಿಂದ ಇಂತಹ ಅಧಿಕಾರಿಗಳನ್ನು ಬದಲಾಯಿಸಿಕೊಂಡು ಹೊಸ ಸನ್ನಿವೇಶನಕ್ಕೆ ಹೊಂದಿಕೊಳ್ಳುವಂತಹ ಅಧಿಕಾರಿಗಳನ್ನು ಇಟ್ಟು ಕೊಂಡು ಈ ಒಂದು ಸಮಗ್ರವಾದ ಭೂಸುಧಾರಣೆಯನ್ನು ಜಾರಿಗೆ ತರಬೇಕು. ಜೊತೆಗೆ ಸೆಕ್ಷನ್ 14 ರ ಕೆಳಗಡೆ ಜಮೀನು ಕಳೆದುಕೊಳ್ಳತಕ್ಕ ರೈತರು ಯಾರಿದ್ದಾರೋ, ಅವರಿಗೆ ಕೂಡ ಒಂದು ರಕ್ಷಣೆಯನ್ನು ಒದಗಿಸಬೇಕು. ಇದರಲ್ಲಿ ಮತ್ತೊಂದು ಏನಾಗುತ್ತದೆ ಅಂದರೆ, ಸ್ವಂತ ಸಾಗುವಳಿಗೆ ಜಮೀನು ಬಿಡಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದರೆ ಪುನಃ ತೀರ್ಮಾನವಾದ ಮೇಲೆ, ಸರ್ಕಾರದ ವಶಕ್ಕೆ ಜಮೀನು ಬಂದ ಮೇಲೆ ಗೇಣಿದಾರ ರೈತರು ಆಕ್ಯುಪೆನ್ಸಿ ರೈಟ್ಸ್‌ಗೆ ಅರ್ಜಿ ಹಾಕಬೇಕಾಗುತ್ತದೆ. ಇದರಿಂದ ನಾಳೆ ಸುಮಾರು 4—5 ಲಕ್ಷ ಗೇಣಿದಾರ ರೈತರು ಅರ್ಜಿ ಹಾಕಿಕೊಂಡು ಆಕ್ಯುಪೆನ್ಸಿ ರೈಟ್ ಕೇಳುತ್ತಾರೆ. ಒಂದು ಕಡೆ ನಿಮ್ಮ ರೆಸ್ಯೂಮೇಬಲ್ ಅಪ್ಲಿಕೇಷನ್ಸ್ ತೀರ್ಮಾನವಾಗಬೇಕು, ಇನ್ನೊಂದು ಕಡೆ ನಾನ್ ರೆಸ್ಯೂಮೇಬಲ್ ಅರ್ಜಿಗಳು ತೀರ್ಮಾನವಾಗಬೇಕು. ಇದು ಗೇಣಿದಾರ ರೈತನಿಗೆ ಜಮೀನನ್ನು ಕೊಡುವ ತೀರ್ಮಾನ ಮಾಡುವ ಕಾಲದಲ್ಲಿ ಆಗಬೇಕು. ಇವೆಲ್ಲವನ್ನೂ ಒಂದೇ ಕಾಲದಲ್ಲಿ ತೀರ್ಮಾನ ಮಾಡುವುದಕ್ಕಾಗುತ್ತದೆಯೇ ? ಆದ್ದರಿಂದ ಸೆಕ್ಷನ್ 14 ರಂತೆ ಸ್ವಂತ ಸಾಗುವಳಿಗೆ ಬಿಡಿಸಿಕೊಳ್ಳುವುದನ್ನು ಕೂಡಲೇ, ಒಂದು ಸಮಗ್ರ ಭೂಸುಧಾರಣಾ ಕಾನೂನು ಬರುವವರೆಗೆ ತಡೆಗಟ್ಟಬೇಕು ; ಮತ್ತು ಎಲ್ಲಾ ಗೇಣಿ ರೈತರಿಗೆ ಒಂದು ರಕ್ಷಣೆ ಕೊಡುವ ಅವಕಾಶವನ್ನು ಕಲ್ಪಿಸಬೇಕು.

ಸೆಕ್ಷನ್ 22 ರ ಕೆಳಗಡೆ ಕೂಡ ಜಮೀನು ಬಿಡಿಸಿಕೊಳ್ಳುವ ಅವಕಾಶ ಇಲ್ಲ. ಆದ್ದರಿಂದ ಇದು ದೊಡ್ಡ ಒಂದು ಸಾಹಸವೆಂದು ತಿಳಿದುಕೊಳ್ಳಬೇಡಿ. ಇದರಿಂದ ಏನೂ ತೃಪ್ತಿಯಾಗುವುದಿಲ್ಲ. ನೀವು ಮೊದಲು 4–5 ಲಕ್ಷ ಗೇಣಿ ರೈತರ ರಕ್ಷಣೆಯನ್ನು ಮಾಡುವುದಕ್ಕೆ ಸಾಹಸ ಮಾಡಿದ್ದರೆ ನಾನು ಸಂತೋಷಪಡುತ್ತಿದ್ದೆ. ಅಂತಹ ಕಾಲವನ್ನು ಬೇಗನೆ ನಿರೀಕ್ಷಣೆ ಮಾಡುತ್ತೇನೆ. ಆ ರೀತಿಯಲ್ಲಿ ನೀವು ಒಂದು ಪ್ರಗತಿದಾಯಕವಾದ ಕಾನೂನನ್ನು ತರಬೇಕೆಂದು ಹೇಳುತ್ತೇನೆ. ಅದೇ ರೀತಿ ವಿಧವೆಯರಿಗೆ, ಮೈನರ್ಸ್‌ಗೆ ಕೋಆಪರೇಟಿವ್ ಫಾರ್ಮ್‌ಗೆ ಮತ್ತು ದೇವಸ್ಥಾನಗಳಿಗೆ ಒಂದು exemption ಕೊಟ್ಟಿದ್ದಾರೆ. ಇವತ್ತು ಅನೇಕ ಮಂತ್ರಿಗಳು 400—500 ಎಕರೆ ಜಮೀನನ್ನು

ಇಟ್ಟುಕೊಂಡವರೂ ಇದ್ದಾರೆ. ಈಗಿರತಕ್ಕ ಕಾನೂನು ವ್ಯಾಪ್ತಿಗೆ ಅದು ಬರುವುದಿಲ್ಲ. ಆ ರೀತಿ ವ್ಯವಸ್ಥೆ ಮಾಡಿದ್ದಾರೆ. ಆದ್ದರಿಂದ ಪಿನಾಯಿತಿ ಹೊಂದಿದ ಎಲ್ಲಾ ಭೂಮಿಯನ್ನು ಕಾನೂನಿನ ವ್ಯಾಪ್ತಿಗೆ ಒಳಪಡಿಸಬೇಕು. ಅದನ್ನು ಗಮನದಲ್ಲಿಟ್ಟುಕೊಂಡು ತಾವು ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಬೇಕಾಗಿದೆ. ಕಾನೂನು ಪ್ರಕಾರ ಯಾವ್ಯಾವ ಭೂಮಿಯನ್ನು ಹೊರತು ಪಡಿಸಿದ್ದಾರೋ ಅದನ್ನು ಭೂಸುಧಾರಣೆಯ ಕಾನೂನಿನ ವ್ಯಾಪ್ತಿಯೊಳಗೆ ತರಬೇಕು. ಜಮೀನು ಉಳುವವನೇ ಹೊಲದ ಒಡೆಯ ಎಂಬುದನ್ನು ತತ್ವಶಃ ಪ್ರಾಮಾಣಿಕವಾಗಿ ಜಾರಿಗೆ ತರಬೇಕು. ಅದನ್ನು ಜಾರಿಗೆ ತರುವ ದೃಷ್ಟಿಯಿಂದ ಯಾವ ಗೇಣಿ ರೈತ ಜಮೀನು ಮಾಡಿಕೊಂಡಿದ್ದಾನೋ ಅವನು ಭೂಒಡೆಯನಾಗಬೇಕು. ಉಳುವವನೇ ಹೊಲದ ಒಡೆಯನಾಗುತ್ತಾನೆಂಬ ಕಾರ್ಯನೀತಿ ಯಿಂದ ಸಮರ್ಪಕವಾಗಿ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದು ಹೇಳಿ ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

11-30 A.M.

† ಶ್ರೀ ಕೆ. ಎಚ್. ರಂಗನಾಥ್ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಭೆಯ ಮುಂದೆ ಇರತಕ್ಕಂಥ ಲ್ಯಾಂಡ್ ರಿಫಾರಮ್ಸ್ ಅಮೆಂಡ್‌ಮೆಂಟ್ ಅಂಡ್ ಮಿಸಲೇನಿಯಸ್ ಪ್ರೊವಿಷನ್ಸ್ ಬಿಲ್ 1972 ಇದರಲ್ಲಿ ಗೇಣಿ ಕೊಡದೇ ಇರತಕ್ಕ ರೈತನ ಬಗ್ಗೆ ಮಾತ್ರ ಪ್ರಸ್ತಾಪ ಮಾಡಲಾಗಿದೆ. ಸರ್ಕಾರದವರ ಉದ್ದೇಶ ಇನ್ನೂ ಹೆಚ್ಚು ಪ್ರಗತಿದಾಯಕವಾದಂಥ ಭೂ ಸುಧಾರಣೆಯ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕೆಂಬುದು. ಆದರೆ ಅಂಥ ಒಂದು ಪ್ರಗತಿದಾಯಕವಾದಂಥ ಮಸೂದೆ ಇವತ್ತು ನಮ್ಮ ಮುಂದೆ ಇಲ್ಲ. ಇವತ್ತಿನ ದಿವಸ ಕೇವಲ 22ನೇ ಸೆಕ್ಷನ್ನಿಗೆ ಮಾತ್ರ ಒಂದು ತಿದ್ದುಪಡಿಯನ್ನು ನಮೂದಿಸಲಾಗಿದೆ. ಅದರಲ್ಲಿಯೂ ಕೂಡ ಎಲ್ಲೆಲ್ಲಿ ಯಾವ್ಯಾವ ಭಾಗದಲ್ಲಿ ಏನೇನು ಬೆಳೆಗಳು ಮುಖ್ಯವೋ ಆ ಮುಖ್ಯ ಬೆಳೆಗಳ ಬಗ್ಗೆ ಇನ್ನೂ ಗೇಣಿ ಎಷ್ಟೆಂಬುದು ನಿಗದಿಯಾಗಿಲ್ಲ, ಅದರ ಬಗ್ಗೆ ಸರ್ಕಾರ ಇನ್ನೂ ನೋಟಿಫಿಕೇಷನ್ ಹೊರಡಿಸಿಲ್ಲ. ಆದ್ದರಿಂದ ಕೇಸುಗಳನ್ನು ಹಾಕುವುದಕ್ಕೆ ತೊಂದರೆಯಾಗಿದೆ. ಕೋರ್ಟಿನಲ್ಲಿ ಯಾವುದಾದರೂ ಕೇಸುಗಳನ್ನು ಹಾಕಿದ್ದರೆ, ಅವುಗಳ ಮೇಲೆ ತೀರ್ಪು ಕೊಡುತ್ತಿಲ್ಲ. ಲ್ಯಾಂಡ್ ರಿಫಾರಮ್ಸ್ ಮಸೂದೆಯ 14ನೇ ಕಲಂ ಕೆಳಗೆ ಇವತ್ತಿನದಿವಸ ಸಾವಿರಾರು ರಿಸಂಪ್‌ಷನ್ ಅರ್ಜಿಗಳು ಕೋರ್ಟು ಗಳಲ್ಲಿವೆ. ಇವತ್ತಿನದಿವಸ ಗೇಣೀದಾರನಿಗೆ ಏನೇನು ಅನುಕೂಲಗಳು ದೊರೆಯಬೇಕೋ ಅವು ದೊರೆತಿಲ್ಲವೆಂಬ ಒಂದು ಅಭಿಪ್ರಾಯ ಈ ಸದನದಲ್ಲಿ ಬರುತ್ತಿದೆ. ಈಗ ಸಣ್ಣ ಹಿಡುವಳಿದಾರರಿಗೆ ರಾಣಿ ಕೊಡಬೇಕೆಂದು ಹೇಳುತ್ತಿದ್ದಾರೆ. ಅದನ್ನು ನಾವು ವಿಚಾರ ಮಾಡುವ ಪರಿಸ್ಥಿತಿ ಬಂದಿದೆ. ಯಾವನು ಭೂಮಿಯನ್ನೇ ಅವಲಂಬಿಸಿಕೊಂಡು ಗೇಣೀದಾರನಾಗಿದ್ದಾನೋ ಅದು ಆತನ ಉದ್ಯೋಗ ವೆಂದು ಭಾವಿಸಬೇಕು. ಆದರೆ ಭೂಮಿಯನ್ನು ಕೈ ಬಿಟ್ಟು ಹಲವಾರು ವರ್ಷಗಳಿಂದ ಬೇರೆ ಉದ್ಯೋಗ ಇಟ್ಟುಕೊಂಡಿರುವವರು ಇದ್ದರೆ, ಅಂತಹವರ ಬಗ್ಗೆ ಬೇರೆ ರೀತಿ ವಿಚಾರ ಮಾಡಬೇಕಾಗಿದೆ. 14ನೇ ಕಲಂಮನ್ನು ದುರುಪಯೋಗ ಮಾಡಿಕೊಂಡು ದೊಡ್ಡ ದೊಡ್ಡ ಭೂಮಾಲೀಕರು ಸ್ವಂತವಾಗಿ ಸಾಗುವಳಿ ಮಾಡುತ್ತೇವೆ ಎನ್ನುವ ನೆಪದಿಂದ ಗೇಣೀದಾರರಿಂದ ಜಮೀನು ಬಿಡಿಸಿಕೊಳ್ಳುತ್ತಿದ್ದಾರೆ. ನೀವು ತರುವ ಭೂ ಸುಧಾರಣೆಯ ಕಾನೂನಿನಲ್ಲಿ ಗೇಣೀದಾರನೆಂಬ ಶಬ್ದಕ್ಕೆ ಅವಕಾಶ ಇರಕೂಡದು. ಮಿಲಿಟರಿಯಲ್ಲಿ ಕೆಲಸ ಮಾಡಿದಂತಹವರನ್ನು ಮಾತ್ರ ಬಿಟ್ಟು, ಬಾಕಿ ಟೆನೆನ್ಸಿ ಏನಿದೆಯೋ ಅವರಿಗೆ ಎಷ್ಟರಮಟ್ಟಿಗೆ ಅನುಕೂಲವಾಗುತ್ತದೆಂಬುದನ್ನು ನೋಡಬೇಕು. ಮುಂದೆ ಬರತಕ್ಕ ಪ್ರಗತಿ ಯಾದಂಥ ಭೂ ಸುಧಾರಣಾ ಕಾನೂನಿನಲ್ಲಿ ಟೆನೆಂಟ್ ಎನ್ನುವ ಶಬ್ದ ಇಲ್ಲದೇ ಇರುವ ರೀತಿಯಲ್ಲಿ ಮಾಡಬೇಕು. ಯಾವನು ಭೂಮಿಯನ್ನು ಅವಲಂಬನೆ ಮಾಡಿಕೊಂಡು ಕೆಲಸ ಮಾಡಿರುತ್ತಾನೋ ಅಂತಹವನಿಗೆ ಭೂಮಿಯ ಒಡೆತನದ ಹಕ್ಕನ್ನು ಖಾಯಂ ಮಾಡಬೇಕು. ಹಿಂದೆ 1965 ಅಕ್ಟೋಬರ್ 2ರಲ್ಲಿ ಭೂಸುಧಾರಣೆ ಕಾನೂನನ್ನು ಜಾರಿಗೆ ಕೊಟ್ಟಿದ್ದೇವೆಂದು ಹಿಂದಿನ ಸರ್ಕಾರ ಪ್ರಸಿದ್ಧಿ ಪಡಿಸಿದ್ದರೂ, ಇಲ್ಲಿಯವರೆಗೂ ಅದರಿಂದ ಬರತಕ್ಕಂಥ ಫಲ ಯಾರಿಗೂ ದೊರೆತಿಲ್ಲ. ಹೋದ ಅಸೆಂಬ್ಲಿಯಲ್ಲಿ ಅಂದರೆ 70-71ನೇ ಇಸವಿಯಲ್ಲಿ ಈ ಕಾನೂನಿಗೆ ಹಿಂದಿದ್ದ ಕಂದಾಯ ಮಂತ್ರಿಗಳು ಒಂದು ತಿದ್ದುಪಡಿ ತಂದು ತಹಸೀಲ್ದಾರರಿಗೆ ಈ ಬಗ್ಗೆ ತೀರ್ಮಾನವನ್ನು ಕೊಡತಕ್ಕ ಒಂದು ಅಧಿಕಾರವನ್ನು ವಹಿಸಿಕೊಟ್ಟರು. ಆಗ ಸಿವಿಲ್ ಪ್ರೊಸೀಜರ್ ಕೋಡ್ ಮುಖಾಂತರ ಇದನ್ನು ಜಾರಿ ಮಾಡಬೇಕಾಗಿತ್ತು. ನಾನು ಒಬ್ಬ ವಕೀಲ. ಆ ವಿಚಾರ ನನಗೆ ಗೊತ್ತು. ಟೆನೆನ್ಸಿ ಕೇಸುಗಳನ್ನು ಸಿವಿಲ್ ಪ್ರೊಸೀಜರ್ ಕೋಡ್ ಮೂಲಕ ಇತ್ಯರ್ಥ ಮಾಡುವುದಾದರೆ ಯಾವ ಗೇಣೀ ದಾರನಿಗೂ ನೂರಾರು ವರ್ಷಗಳಾದರೂ ಜಮೀನು ಸಿಗುವುದಿಲ್ಲ. ಆದ್ದರಿಂದ ಸಮಗ್ರವಾದಂಥ ತಿದ್ದುಪಡಿಯನ್ನು ಜಾರಿಗೆ ತರಬೇಕಾಗಿದೆ. ಸೆಕ್ಷನ್ 14ರ ಬಗ್ಗೆ ಹೆಚ್ಚು ವಿಚಾರಮಾಡಬೇಕಾಗು

(ಶ್ರೀ ಕೆ. ಎಚ್. ರಂಗನಾಥ್)

ತ್ತದೆ. ಈಗ ಕ್ರಾಪಿನ ಬೆಲೆಯನ್ನು ನಿಗದಿ ಮಾಡುತ್ತಿದ್ದಾರೆ. ಒಬ್ಬೊಬ್ಬ ಆಫೀಸರ್ ಒಂದೊಂದು ರೀತಿಯಲ್ಲಿ ಬೆಳೆಯ ಬೆಲೆಯನ್ನು ನಿಗದಿಮಾಡುತ್ತಿದ್ದಾರೆ. ಅವರು ಹೇಳಿದ ಪ್ರಕಾರ ಅದರ ಬೆಲೆ ಇರುತ್ತದೆ. ಆ ಬೆಲೆಯನ್ನು ಜಾರಿಗೆ ಕೊಡುತ್ತಾರೆ. ಒಂದು ಉದಾಹರಣೆ ಹೇಳುವುದಾದರೆ, 1965–66ನೇ ಇಸವಿಯಿಂದ ಆ ರೀತಿ ಬೆಲೆಯನ್ನು ನಿಗದಿಮಾಡಿ ಸಾವಿರಾರು ರೂಪಾಯಿಗಳು ಗೇಣಿ ಬಾಕಿ ಇದೆಯೆಂದು ಕೋರ್ಟ್ ತೀರ್ಮಾನ ಮಾಡಿದರೆ, ಆಗ ಅದನ್ನು ಕೊಡುವುದಕ್ಕಿಂತ, ಭೂಮಿಯನ್ನು ಬಿಟ್ಟು ಹೋಗುವುದು ಲೇಸು ಎಂಬ ವಿಷಯ ಬರುತ್ತದೆ. ತಾವು ಏನು ಒಂದು ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದೀರೋ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಒಂದು ತಿದ್ದುಪಡಿಯಿಂದ ಗೇಣೀದಾರನಿಗೂ ಅನುಕೂಲವಾಗುವುದಿಲ್ಲ, ಭೂಮಾಲೀಕನಿಗೂ ಅನುಕೂಲವಾಗುವುದಿಲ್ಲ. ಆದಕ್ಕಾಗಿ ಬೇರೆ ಒಂದು ಕಾನೂನನ್ನು ಜಾರಿಗೆ ತರಬೇಕು. ಈ ಕಾನೂನಿನಲ್ಲಿ 27 ಎಕರೆ ಮತ್ತು 18 ಎಕರೆ ಎಂದು ಹಳೇ ಮತ್ತು ಹೊಸ ಆಕ್ಟಸಿಷನ್ನುಗಳಿಗೆ ಇರುವ ವ್ಯತ್ಯಾಸ ಹೋಗಬೇಕು. 5 ಜನರು ಇರತಕ್ಕ ಒಂದು ಫ್ಯಾಮಿಲಿಯಲ್ಲಿ 27 ಎಕರೆ ಎಂದೂ, ಅವರಿಗಿಂತ ಹೆಚ್ಚು ಜನರು ಇದ್ದರೆ, ಅದಕ್ಕೆ ಎರಡು ಪಟ್ಟು ಎಂಬುದಾಗಿ ಪ್ರಸ್ತಾಪಮಾಡಿರುವುದೂ ಕೂಡ ಹೋಗಬೇಕಾಗುತ್ತದೆ. ಈಗಿರತಕ್ಕ ಡಿಸ್ಟಿಂಕ್ಷನ್ ತೆಗೆದುಹಾಕಿ ಇನ್ನೂ ಸೀಲಿಂಗ್‌ನ್ನು ಕಡಿಮೆಮಾಡಿ ಸಮಗ್ರವಾದ ಹಾಗೂ ಏಕರೂಪವಾದ ಶಾಸನವನ್ನು ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ ಈ ಕಾನೂನು ಬಹಳ ದಿವಸ ಇರುವುದಿಲ್ಲ. ಮುಂದೆ ಬರತಕ್ಕ ಜೂನ್ ಅಧಿವೇಶನದೊಳಗೆ ಹೆಚ್ಚು ಪ್ರಗತಿದಾಯಕವಾದಂಥ ಭೂ ಸುಧಾರಣೆಯ ಕಾನೂನನ್ನು ಜಾರಿ ಮಾಡಬೇಕೆಂದು ನಾನು ಕೇಳಿಕೊಂಡು ಈ ತಿದ್ದುಪಡಿ ಮಸೂದೆಗೆ ನನ್ನ ಅನುಮೋದನೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬೈಂದೂರು).—ಸ್ವಾಮಿ, ಈಗ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಏನೂ ಒಂದು ಮಸೂದೆಯನ್ನು ಮಂಡಿಸಿದ್ದಾರೆ ಅದರ ಬಗ್ಗೆ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ, ಕೆಲವು ಭೂಮಾಲೀಕರು ಗೇಣೀಬಾಕಿಗಾಗಿ ಗೇಣೀದಾರರ ಮೇಲೆ ಕೋರ್ಟುಗಳಲ್ಲಿ ಖಟ್ಲೆ ಹಾಕಿದ್ದಾರೆ, ಆ ಸಂದರ್ಭದಲ್ಲಿ ಗೇಣಿ ಕೊಡದೆ ತಪ್ಪಿತಸ್ಥರಾಗಿರತಕ್ಕ ಗೇಣೀದಾರರಿಂದ ಸಂಪೂರ್ಣವಾಗಿ ಜಮೀನನ್ನು ಕಿತ್ತುಕೊಂಡು ಅವರನ್ನು ಹೊರಗೆ ಹಾಕುವುದಕ್ಕೆ ಅವಕಾಶವಾಗದಿರಲಿ, ಆ ಗೇಣೀದಾರರಿಗೆ ಒಂದು ತಾತ್ಕಾಲಿಕ ಪರಿಹಾರ ನೀಡೋಣ ಎಂಬ ದೃಷ್ಟಿಯಿಂದ, ಆ ಒಂದು ರಕ್ಷಣೆ ನೀಡಲು, ಇದನ್ನು ತಂದಿದ್ದಾರೆಂದು ನನಗನಿಸುತ್ತದೆ. ಆದರೆ ಆ ವಿಚಾರದಲ್ಲಿ ಸರ್ಕಾರದವರ ಉದ್ದೇಶ ಏನೇ ಇರಲಿ ಆ ಗೇಣೀದಾರರಿಗೆ ಇದರಿಂದ ಏನೂ ಹಿತಸಾಧನೆ ಆಗುವ ಹಾಗೆ ನನಗನಿಸುವುದಿಲ್ಲ. ಈ ದಿವಸ ನಮ್ಮ ಭೂಸುಧಾರಣೆಯ ಶಾಸನದ 139ನೇ ಸೆಕ್ಷನ್ ಪ್ರಕಾರ ರೆಂಟ್ ರಿಕವರಿಗೆ ಸರ್ಕಾರದವರು ಒಂದು ಎಗ್ಸಿಕ್ಯೂಟೀವ್ ಆರ್ಡರನ್ನು ಹೊರಡಿಸುವುದಕ್ಕೆ ಅವಕಾಶವಿದೆ. ಆ ಆರ್ಡರ್ ಮೂಲಕ ಕೋರ್ಟಿನವರು ಕೊಡತಕ್ಕ ಇವಿಕ್ಷನ್ ಆರ್ಡರನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆಯೋ ಎಂಬುದನ್ನು ಸರ್ಕಾರದವರು ಇನ್ನೊಮ್ಮೆ ಪರಿಶೀಲಿಸಿ ನೋಡಬೇಕಾಗಿದೆ. ಬರುವ ಜೂನ್ ತಿಂಗಳಲ್ಲಿ ಇದರ ಬಗ್ಗೆ ಸರ್ಕಾರ ಒಂದು ಕಾಂಪ್ರಹೆನ್‌ಸೀವ್ ಬಿಲ್ಲನ್ನು ತಂದು ಶಾಸನದಲ್ಲಿರತಕ್ಕ ದೋಷದೋಷಗಣನ್ನು ಸರಿಪಡಿಸಬೇಕೇ ವಿನಾ ಹೀಗೆ ತಾತ್ಕಾಲಿಕವಾಗಿ ರಕ್ಷಣೆ ಕೊಡತಕ್ಕದ್ದು ಅನಗತ್ಯ. ಇಂಥ ಒಂದು ಬಿಲ್ಲಿನಿಂದ ತಾತ್ಕಾಲಿಕ ರಕ್ಷಣೆ ಅಸಾಧ್ಯ ಎಂದು ನನಗನಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀ ಕಕ್ಕಿಲಾಯ ಅವರು ಕೋಟ್ ಮಾಡುತ್ತಿರುವ ಸೆಕ್ಷನ್ ಪ್ರಕಾರ ಸರ್ಕಾರ ಆ ಡಿಫಿಕಲ್ಟೀಸನ್ನು ರಿಮೂವ್ ಮಾಡುವುದಕ್ಕಾಗಿ ಇದನ್ನು ತಂದಿಲ್ಲ. ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯಿಂದ ಬರತಕ್ಕವರು. ಅವರಿಗೆ ಇದರ ವಿಚಾರ ಚೆನ್ನಾಗಿ ಗೊತ್ತಿದೆ. ಈ ದಿವಸ ಈ ಗೇಣೀ ಕೊಡದೆ ಕೋರ್ಟುಗಳಲ್ಲಿ ಹೆಚ್ಚಿಗೆ ಕೇಸುಗಳು ನಡೆಯುತ್ತಿರುವುದೆಲ್ಲಾ ಆ ದಕ್ಷಿಣ ಕನ್ನಡ ಜಿಲ್ಲೆಯಲ್ಲೇ. ಅಂಥ ಸಂದರ್ಭಗಳಲ್ಲಿ ಗೇಣೀದಾರರಿಗೆ ಸ್ವಲ್ಪ ರಿಲೀಫ್ ಕೊಡೋಣ ಎಂದು ನಾವು ಇದನ್ನು ತಂದಿದ್ದೇವೆ. ಅವರೇ ಬೇಡ ಎಂದರೆ ನಾವಿನ್ನೇನು ಮಾಡೋಣ ? ಈ ದಿವಸ ಏನು ಜಾರಿಯಲ್ಲಿದೆ ಅದನ್ನು ಹೀಗೇ ಮುಂದುವರಿಸಬೇಕು ಎನ್ನುವಂಥ ಉದ್ದೇಶದಿಂದೇನೂ ನಾವು ಇದನ್ನು ತಂದಿಲ್ಲ. ಸರ್ಕಾರದವರು ಎಲ್ಲಾ ಲೀಗಲ್ ಆಸ್ಪೆಕ್ಟುಗಳನ್ನೂ ಎಗ್ಸಾಮಿನ್ ಮಾಡಿಸಿ ಒಂದು ಕಾಂಪ್ರಹೆನ್‌ಸೀವ್ ಮೆಷರನ್ನು ಏಕೆ ತರಬಿಲ್ಲ ಎಂದು ಕೇಳುತ್ತಾರೆ. ಅದನ್ನು ಜೂನ್ ತಿಂಗಳಲ್ಲಿ ಮಾಡಬೇಕೆಂದಿದೆ. ಅದಕ್ಕೆ ಈಗ ಕಾಲಾವಕಾಶವಿರಲಿಲ್ಲ. ಇದನ್ನು ತಾತ್ಕಾಲಿಕವಾಗಿ ಈಗ ಯಾವ ಟೆನೆಂಟನ್ನು ಭೂಮಿಯಿಂದ

ಹೊರಹಾಕಲು ಕ್ರಮಗಳನ್ನು ನಡೆಸಲಾಗುತ್ತದೋ ಅಂಥ ಸಂದರ್ಭಗಳಲ್ಲಿ ಮಾತ್ರ ಇದರಿಂದ ಅನುಕೂಲವಾಗಲೆಂದು ತರಲಾಗಿದೆ. ಇದರಿಂದ ಆ ಗೇಣೀದಾರರಿಗೆ ಇಮ್ಮೀಡಿಯಟ್ ರಿಲೀಫ್ ಸಿಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ.—ನಾನೀಗ ಇದರ ಲೀಗಲ್ ಆಸ್ಪೆಕ್ಟನ್ನು ಚರ್ಚೆ ಮಾಡುತ್ತಿಲ್ಲ. ಅದರ ಪ್ರಮೇಯವೂ ಈಗಿಲ್ಲ. ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ್ದು ಈ ಭೂಸುಧಾರಣೆಯ ಕಾನೂನನ್ನು ತಂದುದು 1966 ರಲ್ಲಿ. ಇಂದು ನಾವು 1972 ರಲ್ಲಿ ಇದ್ದೇವೆ. ಕೆಲವು ಗೇಣೀದಾರರು ಕೊಡಬೇಕಾದ ಗೇಣಿ ಹಣ ಬಾಕಿ ನಿಂತಿದೆ. ಹಾಗೆ ಇಂದು ಬಾಕಿ ನಿಂತಿರತಕ್ಕ ಮೊಬಲಗಾದರೂ ಬಹಳ ದೊಡ್ಡದು. ಅಷ್ಟು ದೊಡ್ಡ ಮೊತ್ತವನ್ನು ಕೊಟ್ಟು ಅಲ್ಲಿ ಗೇಣಿದಾರನಾಗಿ ಉಳಿಯುವುದಕ್ಕಿಂತ ಅದೇ ಹಣ ಅವನಲ್ಲಿದ್ದರೆ ಬೇರೆ ಅವನು ಎಲ್ಲಿಯಾದರೂ ಅದಕ್ಕಿಂತಲೂ ಉತ್ತಮವಾದ ಭೂಮಿಯನ್ನು ಸುಖವಾಗಿ ಖರೀದಿಗೆ ಪಡೆದುಕೊಳ್ಳಬಹುದು. ಇದರಲ್ಲಿ ಗೇಣೀದಾರನಿಗೂ ಮತ್ತು ಭೂಮಾಲೀಕನಿಗೂ ಇರತಕ್ಕ ಸಂಬಂಧ ಇನ್ನೂ ಹಾಗೇ ಮುಂದುವರಿಯತಕ್ಕ ಸಂದರ್ಭವಿದೆ. ಆ ದಿವಸ ನಾವೆಲ್ಲರೂ ಏನು "ಭೂಮಿಯನ್ನು ಉಳುವವನೇ ಹೊಲದ ಒಡೆಯನಾಗಬೇಕು" ಎಂದು ಹೇಳಿದ್ದೇವೋ ಅದು...

ಶ್ರೀ ಡಿ. ದೇವರಾಜ ಅರಸ್.—ಈ ಬಿಲ್ಲನ್ನು ತಂದ ಉದ್ದೇಶ ಏನೆಂಬುದನ್ನು ಈಗಾಗಲೇ ಮಾನ್ಯ ರೆವಿನ್ಯೂ ಮಂತ್ರಿಗಳು ತಿಳಿಸಿರಬೇಕು. ಇದರಲ್ಲಿ ಮುಖ್ಯದಾಗಿ ಎಲ್ಲರೂ ಗಮನಿಸಬೇಕಾದಂಥ ಒಂದಂಶ ಏನೆಂದರೆ: ಹಿಂದೆ ಈ ಶಾಸನ ಸಭೆಗೆ ಚುನಾವಣೆಗಳು ನಡೆಯುವ ಮುನ್ನ ಹೈಕೋರ್ಟಿನಲ್ಲಿ ಗೇಣೀ ಕೊಡದೆ ಬಾಕಿ ನಿಲ್ಲಿಸಿಕೊಂಡಿದ್ದ ಟೆನೆಂಟುಗಳನ್ನು ಎವಿಕ್ಟ್ ಮಾಡತಕ್ಕ ತೀರ್ಪನ್ನು ಆ ಕೋರ್ಟಿನಿಂದ ಕೊಡಲಾಗುತ್ತಿತ್ತು. ಅವಕ್ಕೆ ಅವಕಾಶವಿದೆ. ಅಲ್ಲದೆ ಗೇಣೀ ಕೊಡದೆ ಆ ಬಾಕಿಯನ್ನು 4–5 ವರ್ಷಗಳ ಕಾಲ ಹಾಗೇ ನಿಲ್ಲಿಸಿಕೊಂಡು ಬಂದಿದ್ದರೆ ಅಂಥವರ ಬಗ್ಗೆ ಆ ಬಾಕಿ ನಿಂತಿರತಕ್ಕ ಎಲ್ಲ ವರ್ಷಗಳ ಗೇಣಿಯನ್ನೂ ಒಂದೇ ಗಂಟಿನಲ್ಲಿ ಒತ್ತಾಯಮಾಡಿ ವಸೂಲ್ಮಾಡಿಕೊಳ್ಳತಕ್ಕ ಬಗ್ಗೆ ಕೋರ್ಟಿನಲ್ಲಿ ಕೇಸ್ ಹಾಕುವುದಕ್ಕೆ ಜಮೀನ್ದಾರನಿಗೆ ಕಾನೂನು ಪ್ರಕಾರ ಅವಕಾಶವಿದೆ. ಆಗ ಗೇಣೀದಾರನು ಬಾಕಿಯನ್ನು ಪಾವತಿ ಮಾಡದಿದ್ದರೆ ಅವನನ್ನು ಇವಿಕ್ಟ್ ಮಾಡಿಸುವುದಕ್ಕೆ ಕೋರ್ಟಿಗೆ ಅವಕಾಶ ಇದೆ. ಹಾಗೆ ಅನೇಕರನ್ನು ಈಗಾಗಲೇ ಎವಿಕ್ಟ್ ಮಾಡಿ ಆಗಿದೆ. ಇನ್ನು ಕೆಲವರನ್ನ ಎವಿಕ್ಟ್ ಮಾಡತಕ್ಕ ಪ್ರೊಸೆಸ್ಸಿನಲ್ಲಿದ್ದಾರೆ. ಅಂಥ ಒಂದು ಸಂದರ್ಭವಿದ್ದ ಕಾರಣ ಸರ್ಕಾರಕ್ಕೆ ದ. ಕನ್ನಡ ಜಿಲ್ಲೆಯಿಂದ ಅನೇಕ ಮನವಿಗಳು ಬಂದಿವೆ. ಇದೇ ವಿಚಾರದಲ್ಲಿ ಹಿಂದಿದ್ದ ರಾಜ್ಯಪಾಲರಿಗೂ ಮನವಿಗಳು ಬಂದಿದ್ದವು. ಕಳೆದ ಚುನಾವಣೆಗಳ ಕಾಲದಲ್ಲಿ ಮಾನ್ಯ ಪ್ರಧಾನ ಸಚಿವರು ದ. ಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಕಾಲದಲ್ಲೂ ಕೂಡ ಅನೇಕರು ಅವರಿಗೆ ಈ ಸಂಬಂಧವಾದ ಮನವಿಗಳನ್ನು ಅರ್ಪಿಸಿದ್ದರು. ಹಾಗೆ ಹೋಗೆ ಹಾಕತಕ್ಕ ಟೆನೆಂಟಗಳನ್ನು ತಡೆಗಟ್ಟುವುದಕ್ಕೆ ಕ್ರಮ ಕೈಗೊಳ್ಳಲು ಚುನಾವಣೆಗಳು ನಡೆಯುವುದಕ್ಕೆ ಸಲ್ಪವೇ ಕಾಲ ಉಳಿದಿತ್ತು. ಆಗ ಒಂದು ಆರ್ಡಿನೆನ್ಸ್‌ನ್ನು ಹೊರಡಿಸುವುದಕ್ಕೆ ಸಾಧ್ಯವಿಲ್ಲವೇ, ಎಂಬ ವಿಚಾರದಲ್ಲಿ ನಾನು ಕೇಂದ್ರ ಸರ್ಕಾರಕ್ಕೆ ಒಂದು ಸಲಹೆ ಕೇಳಿದ್ದೆ. ಆಗ ಕೇಂದ್ರ ಸರ್ಕಾರದಿಂದ ಚುನಾವಣೆಗಳು ಕೇವಲ ಒಂದು ತಿಂಗಳ ಕಾಲದಲ್ಲೇ ನಡೆಯತಕ್ಕವುಗಳಿದ್ದ ಕಾರಣ ಹಾಗೆ ಆರ್ಡಿನೆನ್ಸ್‌ನ್ನು ಹೊರಡಿಸುವುದು ಸೂಕ್ತವಾದ್ದಲ್ಲ. ಅದರಿಂದ ಆ ಚುನಾವಣೆಗಳ ಮೇಲೆ ಒಂದು ಪರಿಣಾಮವನ್ನು ಬೀರಬಹುದೆಂದು ಹೇಳಿದ್ದರಿಂದ ಆಗ ಅದನ್ನು ನಿಲ್ಲಿಸಿತ್ತು. ಚುನಾವಣೆಗಳು ನಡೆದ ನಂತರ ಇಂಥ ಒಂದು ಕ್ರಮವನ್ನು ಕೈಗೊಳ್ಳಬಹುದೆಂದು ಕೇಂದ್ರ ಸರ್ಕಾರ ಇದಕ್ಕೆ ಒಪ್ಪಿಗೆಯನ್ನು ನೀಡಿತ್ತು. ಆದರೆ ಸಮಗ್ರವಾಗಿ ಆಕ್ಟ್‌ನ್ನೆಲ್ಲಾ ತಿದ್ದುಪಡಿ ಮಾಡುವತನಕ ಇವರನ್ನು ಹೊರಗೆ ಹಾಕತಕ್ಕ ಕೆಲಸ ಮುಂದುವರಿಯುತ್ತಲೇ ಇರುತ್ತದಲ್ಲ ಎಂದು ಅದನ್ನು ತಡೆಗಟ್ಟಲು ಈ ಮಸೂದೆಯನ್ನು ತರಲಾಗಿದೆ.

ಇನ್ನು ಉಳಿದ ವಿಷಯಗಳ ಬಗ್ಗೆ ಅಂದರೆ ಗೇಣೀದಾರನಿಗೂ ಭೂಮಾಲೀಕನಿಗೂ ಇರಬೇಕಾದ ಸಂಬಂಧ, ಫ್ಯಾಮಿಲಿ ಹಿಡುವಳಿ, ಸೀಲಿಂಗ್ ಲಿಮಿಟ್, ಇತ್ಯಾದಿಗಳನ್ನೆಲ್ಲಾ ಸರಿಪಡಿಸಲು ಒಂದು ಕಾಂಪ್ರಹೆನ್‌ಸೀವ್ ಬಿಲ್ಲನ್ನು ಜೂನ್ ತಿಂಗಳಲ್ಲಿ ತಂದು ಅದನ್ನೂ ಪಾಸ್ ಮಾಡೋಣ. ಆದರೆ ಹಾಲಿ ಇರತಕ್ಕ ಗೇಣಿದಾರರನ್ನು ಭೂಮಿಯಿಂದ ಹೊರ ಅಟ್ಟುತ್ತಿರುವುದನ್ನು ಮೊದಲು ತಡೆಗಟ್ಟಬೇಡವೇ? ಒಂದು ಉದ್ದೇಶದಿಂದ ಇದನ್ನು ತಂದಿದ್ದೇವೆ. ಅಷ್ಟೇ ಶಿವಾಯಿ ಇರತಕ್ಕ ಪಾಮೂಲನ್ನೇ ಮುಂದುವರಿಸುವುದಕ್ಕಾಗಿ ಇದನ್ನು ತಂದಿಲ್ಲ. ಉಳುವವನು ಹೊಲದ ಒಡೆಯನನ್ನಾಗಿ ಮಾಡುತ್ತೇವೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಬೇರೆ ನಮೂದಿಸಲಾಗಿತ್ತು. ಅದನ್ನು ತಾವೆಲ್ಲರೂ ಪತ್ರಿಕೆಗಳಲ್ಲಿ ಓದಿರಬಹುದು. ಈಗ ತಕ್ಷಣ ಭೂಮಿ ಕಿತ್ತುಕೊಳ್ಳುವುದನ್ನು ತಪ್ಪಿಸುವುದಾಗಿ ಮಾತ್ರ ಇದನ್ನು ತರಲಾಗಿದೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸರ್ಕಾರದವರು ಇನ್ನು ಒಂದು ತಿಂಗಳ ಅವಧಿಯಲ್ಲೇ ಕಾಂಪ್ರಹೆನ್‌ಸೀವ್ ಮೆಷರನ್ನು ತರುವವರಿದ್ದಾರೆ, ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದರಲ್ಲಿ ಈಗ 2 ವರ್ಷಗಳ ಗೇಣಿಯನ್ನು ಕೊಟ್ಟರೆ ಒಕ್ಕಲನ್ನು ಎಬ್ಬಿಸಬಾರದು ಎಂದು ಹೇಳಿದೆ. ನಾನು ಹೇಳುತ್ತಿರುವುದು ಈ ಎರಡು ವರ್ಷಗಳ ಗೇಣಿಯನ್ನು ಕೊಡದಿದ್ದರೂ ಗೇಣೀದಾರರನ್ನು ಕಿತ್ತು ಹಾಕಬಾರದು. ಆರೀತಿ ಒಂದು ಅಜ್ಞೆ ಹೊರಡಿಸಿ ಎಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಡಿಫಿಕಲ್ಟೀಸ್ ಏನು ಬರಬಹುದೋ ಅವನ್ನು ಪರಿಶೀಲಿಸೋಣ, ಈಗ ಗೇಣೀ ಕೊಡುವವರು ಯಾರು ಇದ್ದಾರೆ ಅವರು ಹಿಂದಿನ ಬಾಕಿಯನ್ನು ಕೊಡದಿದ್ದರೆ ಎವಿಕ್ಟ್ ಮಾಡಲು ಹೋದಾಗ ಈ ಪಾಯಿಂಟ್ ಬರುತ್ತದೆ. ನಾಳೆ ಕೊಡುವವರು ಕೊಡುವುದಿಲ್ಲ, ಯಾರು ಕೊಟ್ಟಿಲ್ಲ ಅವರು ಕೊಡುವ ಹಾಗಿಲ್ಲ. ಅದು ಸರಿಯೆಂದು ಕಂಡರೆ ಮುಂದೆ ಯೋಚನೆ ಮಾಡೋಣ.

ಶ್ರೀ ಬಿ. ವಿ. ಕಕ್ಕಿಲಾಯ.—ಇದು ಕೆಲವೇ ದಿವಸಗಳ ವಿಚಾರ. ಗೇಣಿ ಬಾಕಿ ಕೊಡುವುದನ್ನು ಸ್ವಲ್ಪ ಹಿಂದಕ್ಕೆ ಹಾಕಿದರೆ ರೈತರಿಗೆ ಅನುಕೂಲವಾಗಬಹುದು. ನೋಟಿಫಿಕೇಷನ್ ಬಗ್ಗೆ ತೀರ್ಮಾನ ಆಗದೆ ಇರುವ ಬಗ್ಗೆ ಆಜ್ಞೆ ಹೊರಡಿಸುವ ಹಾಗೆ ಇಲ್ಲ ಎಂದು ಅಮೆಂಡ್‌ಮೆಂಟಿನಲ್ಲಿ ಹೇಳಿದ್ದಾರೆ. ಎರಡನೆ ಕ್ಲಾಜ್‌ನಲ್ಲಿ ತೀರ್ಮಾನ ಆಗಿರುವ ಬಗ್ಗೆ ಏನು ಮಾಡಬೇಕು ಎಂದು ಹೇಳಿದ್ದಾರೆ. ತಹಶೀಲ್ದಾರರು ಹೊರಡಿಸಿದಂಥ ನೋಟಿಫಿಕೇಷನ್ ಮೇಲೆ ಡೆಪ್ಯೂಟಿ ಕಮೀಷನರವರಿಗೆ ಅಪೀಲು ಮಾಡಿದ್ದಾರೆ. ಅಪೀಲು ಮಾಡಿದ ರೈತರಿಗೆ ಸ್ಟೇ ಕೊಟ್ಟಿದ್ದಾರೆ. ಉಳಿದವರಿಗೆ ಸ್ಟೇ ಇಲ್ಲ. ಉಳಿದ ರೈತರ ದಾವೆಗಳು ಸಿವಿಲ್ ಕೋರ್ಟುಗಳಲ್ಲಿ ಇವೆ. ಒಂದು ವೇಳೆ ಡಿಕ್ರಿ ಆಯಿತು ಎಂದು ಇಟ್ಟುಕೊಳ್ಳೋಣ. ಅವರು ಎವಿಕ್ಟ್ ಮಾಡುತ್ತಾರೆ ಅಥವಾ ಎರಡು ವರ್ಷದ ಗೇಣಿ ಕೊಡಬೇಕು. ಈಗಿರುವ ನೋಟಿಫಿಕೇಷನ್ ಪ್ರಕಾರ ಎರಡು ವರ್ಷದ್ದು ಕೊಡಬೇಕು. ನಾಳೆ ಅಪೀಲಿನಲ್ಲಿ ನೋಟಿಫಿಕೇಷನ್ ಬದಲಾವಣೆ ಮಾಡಿದರೆ ಅಥವಾ ರದ್ದುಮಾಡಿದರೆ ಮತ್ತೆ ಕೇಸುಗಳು ಕೋರ್ಟಿಗೆ ಬರುತ್ತವೆ ಮತ್ತು ತೀರ್ಮಾನವಾಗುತ್ತವೆ. ಅವರು ಕೊಡಬೇಕಾದಂಥ ಗೇಣಿ ಪ್ರಮಾಣಕ್ಕೂ ಈಗ ಯಾರ ಕೇಸುಗಳು ಡಿಕ್ರಿ ಆಗಿವೆ ಅವರ ಗೇಣಿ ಪ್ರಮಾಣಕ್ಕೂ ಬಹಳ ವ್ಯತ್ಯಾಸ ಬರುತ್ತದೆ. ಒಂದು ಭಾಗ ರೈತರು ಜಾಸ್ತಿ ಕೊಡಬೇಕು ಮತ್ತೆ ಕೆಲವರು ಕಡಿಮೆ ಕೊಡಬೇಕಾದಂಥ ಅನಾಮಲಿಸ್ ಪೊಸಿಷನ್‌ಗೆ ಅವಕಾಶವಿದೆ. ಉದಾಹರಣೆಗೆ ಹೇಳುವುದಾದರೆ, ಬಂಟವಾಳ ತಾಲ್ಲೂಕು ತೆಗೆದುಕೊಂಡರೆ ಡೆಪ್ಯೂಟಿಕಮಿಷನರ್ ರವರಿಗೆ ಕೆಲವು ನೋಟಿಫಿಕೇಷನ್ ಬಗ್ಗೆ ಅಪೀಲು ಮಾಡಿದ್ದಾರೆ ; ಕೆಲವರು ಮಾಡಿಲ್ಲ. ಡೆಪ್ಯೂಟಿ ಕಮೀಷನರ್‌ರವರು ಜನರಲ್ ಸ್ಟೇ ಕೊಟ್ಟಿಲ್ಲ. ಯಾರು ಅಪೀಲು ಮಾಡಿದ್ದಾರೆ ಅವರ ವಿರುದ್ಧವಾಗಿ ಸಿವಿಲ್ ಕೋರ್ಟಿನಲ್ಲಿ ದಾವೆ ಇದೆ., ಅವನ್ನು ಸ್ಟೇ ಮಾಡಿದ್ದಾರೆ. ಉಳಿದ ದಾವೆಗಳು ನಡೆಯುತ್ತಾ ಇವೆ. ಡೆಪ್ಯೂಟಿಕಮೀಷನರ್‌ರವರು ಫೈನಲ್ ಡಿಸಿಷನ್‌ಗೆ ಬರುವ ಮೊದಲು ಸ್ಟೇ ಆಗಿದ್ದ ಕೇಸ್‌ಗಳಲ್ಲಿ ಡಿಕ್ರಿ ಆಗಿ ಅಂತಹ ರೈತರ ಕೈಯಿಂದ ಹಣವನ್ನು ವಸೂಲು ಮಾಡಿದರೆ ಈ ಶಾಸನ ಮೂಲಕ ಯಾವುದೇ ರೀತಿಯ ರಕ್ಷಣೆ ಸಿಕ್ಕುವುದಿಲ್ಲ. ಆ ಜನ ಒಬ್ಬೊಬ್ಬರು ಡೆಪ್ಯೂಟಿ ಕಮೀಷನರ್‌ಗೆ ಅಪೀಲು ಮಾಡಿದ್ದು ಇದೆ. ಅಪೀಲ್ಸ್ ಪೆಂಡಿಂಗ್ ಇರುವಾಗ ಈ ನೋಟಿಫಿಕೇಷನ್‌ಗೆ ಬದ್ಧವಾಗಿರತಕ್ಕ ಎಲ್ಲಾ ದಾವೆಗಳು ಮುಂದುವರಿಯದ ಹಾಗೆ ಶಾಸನದಲ್ಲಿ ವ್ಯವಸ್ಥೆ ಮಾಡುವುದು ಅಗತ್ಯ. ಇದರಿಂದ ಸ್ವಲ್ಪ ಅನುಕೂಲ ಆಗಬಹುದು. ಈ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಬಿಲ್ಲು ತಂದಿದ್ದು ಅನಾವಶ್ಯಕ. ಇದರಿಂದ ಯಾವ ಪ್ರಯೋಜನವೂ ಇಲ್ಲ ಎನ್ನುವುದು ನಮ್ಮ ಅಭಿಪ್ರಾಯವಲ್ಲ. ಆದರೆ ಆದರಿಂದ ಪೂರ್ತಿಯಾದಂಥ ರಕ್ಷಣೆ ರೈತರಿಗೆ ಬರಬೇಕಾಗಿದ್ದರೆ ತಾವು ಏನು ಆಶ್ವಾಸನೆಕೊಟ್ಟಿದ್ದೀರಿ, ಆ ಅವಧಿಯೊಳಗೆ ಮೈಸೂರು ಭೂಸುಧಾರಣೆ ಶಾಸನವನ್ನು ಸಮಗ್ರ ತಿದ್ದುಪಡಿ ಮಾಡಿದರೆ ಮಾತ್ರ ಸಾಧ್ಯ ಎಂದು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತೇನೆ.

† **Sri M. VEERAPPA MOILY** (Karkal).—Sir, I very much appreciate the spirit in which this particular amendment is brought before this House. Of course, this amendment does not bring forth all aspects of the problems which the tenants in this State are confronted with but all the same it does bring forth certain aspects and as stated by the Hon. Revenue Minister it will solve certain problems of the tenants. We are bringing the bulk of the tenants within the purview of the benefit which this particular amendment seeks to confer.

My difficulty is that this particular amendment does not go far enough and does not fulfil the objects and reasons attached to this

Bill. Right from 1965 upto 1971 there has been some confusion with regard to the notifications. The notifications are pending and several writs have also been filed before the High Court. We have given hopes to the tenants that the rate contract rent which is prevailing today is not fair and fair rent is to be fixed under Section 8. As far as South Kanara District is concerned, with regard to the first-class wet lands the tenant is paying rent to the extent of Rs. 600 to 700 or even more per acre.

Sri D. DEVARAJ URS.— Madam, I am afraid the scope of the Bill is very much limited. This does not refer to the quantum of rent that is to be paid. Whether the present system of calculating the quantum of rent is right or wrong or has to be changed is a matter which has to be taken up later. This only serves the limited purpose of giving protection to certain tenants. Especially in some areas ever since this Act was promulgated in those areas, there was a *jugla* between the tenant on the one side and the landlord on the other side. Because the landlord was not satisfied with the gross produce that was calculated by the local officer, he went to the court or when it was finally calculated and the tenant was not satisfied he went to the court. As between these two persons, one person or the other used to go to the court and for a number of years nothing was settled so much so year after year neither the landlord could receive his rent because what quantum he should receive was not decided nor the tenant could give it because he did not know how much he should give. When it was finalised, some of the landlords said, " you give me rent according to the formula fixed by the court". The tenant now feels that the quantum which should have been paid year by year has accumulated for 3-4 years and that in one instalment he cannot give all that, but the landlord says that he does not care for all that. The landlord says, "I have obtained the decree and will evict you because under the Act there is provision for eviction for not paying the rent." So, he has resorted to it and he has evicted the tenant. The poor tenant is not able to pay the entire rent of 3-4 years together all at once. So, according to law he can be evicted and some have already been evicted and some are in the process of being evicted.

12-00 Noon

One difficulty which the hon. member mentioned and which will be looked into is whether the Deputy Commissioners would look into cases everywhere or in every Tahsil. Supposing we want to reduce the quantum of rent, then the question is we have taken the gross produce as the basis and one-fifth of it is the rent to be given to the landlord according to the present Act. The whole trouble in Mysore State is, it is with reference to wet lands. For instance we thought of taking the land revenue as the basis for fixing the rent. Fortunately or unfortunately, the practice previously in vogue was that the water rate to be paid by the farmer who owned wet lands was tagged on to the land revenue of

(SRI D. DEVARAJ URS)

eight annas or one rupee he was paying, and the whole thing was calculated as land revenue. Some time back we amended the Act and took the decision that water rate is separate from the basic land revenue. If we have to calculate rent on the basis of land revenue, even in a wet land the land revenue sometimes is eight annas or one rupee. Water rate has not been taken into calculation and it will be an injustice done to the landlord. That is why we could not take up land revenue as the basis. For the present, the formula that has been mentioned under the present Act to calculate the rent to be paid by the tenant to the landlord is retained at the moment. This question can be taken up when the regular amendments to the Act come up. Immediately our objective is to give protection from eviction. Supposing even without paying anything we do it, you can say why should he not be protected ? We thought that there must be some justification in giving protection. We will not ask him to pay arrears of rent of four years. At least let him pay the current year's rent and in the case of previous arrears to pay one year's arrear. If it is four years arrears, he need not pay all that. That is the amendment we have proposed.

ಶ್ರೀ ಎಸ್. ಬಂಗಾರಪ್ಪ.—ವಿಶೇಷವಾಗಿ ರಿಸಮ್‌ಷನ್ ಆನ್ ದಿ ಬೇಸಿಸ್ ಆಫ್ ರೆಂಟ್‌ಗೆ ಅಪ್ಲಿಕೇಷನ್ ಬರುವುದು. ಸೆಕ್ಷನ್ 140 ಪ್ರಕಾರ ಎವಿಕ್ಷನ್‌ಗೆ ಜಾಸ್ತಿ ಅಪ್ಲಿಕೇಷನ್ಸ್ ಬರುತ್ತವೆ. ಇದನ್ನು ಮುಖ್ಯವಾಗಿ ಇದರಲ್ಲಿ ಅಳವಡಿಸಬೇಕು. ಆದುದರಿಂದ ಈ ಬಿಲ್ಲನ್ನು ವಿತ್‌ಡ್ರಾ ಮಾಡಿ ಸೋಮವಾರ ತೆಗೆದುಕೊಂಡು ಬನ್ನಿ ಎಂದು ನನ್ನ ಸಲಹೆ.

SRI VEERAPPA MOILY.—Madam Speaker, the words "no proceedings" as shown in the amending Bill will show that prior to the determination of the rent made by the Tahsildar and notified by him, if any proceedings are instituted before a court, such proceedings will stay. As I have contended before, right from 1966 rent is in arrears and when it is in arreas he will have issued notice by June 1966. That is contemplated under section 122 (a). Thereafter he will issue notice for eviction. What happens is, by this time three notices will have been issued. From the amendment which is now introduced it will give an impression to the court that the notices, which have been issued earlier to the amendment now introduced, will remain and after the amendment is made the landlord can take action and he can file eviction petition under section 23. If this is done, it will take away the entire effect. For example if notification has been finalised in 1971-72, a tenant would not have paid rent because of the exorbitant rent prevalent and he would be cherishing the hope that the rent would be reduced. Once a matter goes to a court every litigant will have the hope that only after determination of rent he need pay. That is always the tendency. One cannot say that he has allowed rent to be accumulated and therefore the tenant must suffer. That must not be the attitude. If a landlord has issued notice earlier it cannot be allowed to have legal force. A tenant does not know what quantum he has to pay. When a case is under adjudication he will not be in a

position to know what amount he has to pay. In such cases his interests have to be protected. Simply because of a legal lacuna you cannot ask the tenants to pay arrears. Take, for instance, the case of South Canara itself. The notification was finalised in 1970. Prior to that there were decrees pending against some of the tenants. As stated by the hon. member Sri Kakkilaya, some of the cases have been stayed. In fact, what has happened is that the landlords have issued notices and kept all the grounds ready for filing eviction proceedings. By virtue of this amendment he will be entitled to file for eviction because the notification has been finalised in 1970 and a shrewed landlord will not be so foolish as to file for eviction first under section 22. He will file a suit for attachment of crops and then for eviction. First, he will take action for attachment of crops, next attachment of moveables and after exhausting all this to enforce the decree he will take recourse to other means for execution of the decree. So, in such cases by the time he takes to eviction proceedings the tenant will not have anything. I therefore suggest that in the proposed proviso to section 22, the words "notice or" may be added before the words "no proceedings" in the proviso proposed to section 22. If those words are added, I think it will help lakhs of tenants who are waiting for relief and it will give substantial relief to all the tenants. We will also be not leaving the poor tenants to the mercy of judicial officers. In fact, we are saving them from such legal lacuna now created by the legislation. So my humble suggestion is that the words "notice or" after the words "there shall be" in the first line of the proviso to section 22 should be inserted. If these words are added I feel that substantial benefit or relief could be given to tenants as narrated in the statement of objects and reasons by the Hon. Minister.

Then in clause 4 of the amending Bill mere mention to the effect that the tenant is required to pay rent of two years to the landlord has been made In fact in the original Act a more advantageous benefit has been given than by this amendment Bill. In the original section certain discretion was given to the Judicial Officer. The present amendment will take away that particular discretion and it will make the Judicial Officer to pass a conditional order and leave the tenant to face a big problem. So I would suggest that the original section might be retained and the proposed amendment omitted. Of course, if the Hon. Minister is more particular about the payment of rent of two years by tenants he could retain this provision in section 23 itself. I think while drafting the Bill they seem to have forgotten the very effect of section 23.

SRI D. DEVARAJ URS.—I would like the hon. member to go through section 23 and sub-sections therein carefully before making his observations. If there were to be any relief then there would not have been any evictions. Further the arrears are to be paid only if the court decides so. Your view seems to be that the original section 23 gives more relief than the amending clauses of the Bill. But kindly go through the section carefully and then comment.

Sri VEERAPPA MOILY.—Madam Speaker, I would like to impress upon the House that what is proposed to be changed through clause 4 could have been done by amending section 23 itself. Sub-section (1) of section 23 of the Act reads thus :

> "Notwithstanding anything contained in section 22 the Tribunal shall not order possession to be restored to the landlord on the ground of default in paying rent, if during the pendency of any proceeding for such restoration of possession, the tenant pays to the landlord the arrears of rent, together with the costs of the proceedings, as decided by the Tribunal, within such period as may be fixed by the Tribunal."

I feel that the words "arrears of rent" might be omitted and in its place the words "an amount equal to two years rent" might be added.

In the proposed amendment it is stated that :

> "Notwithstanding anything contained in the Principal Act, or in any decree or order of any court or Tribunal, no order for restoration of possession of any land to the landlord on the ground of default in paying rent by the tenant shall be executed if the tenant pays to the landlord an amount equal to the rent due for a period of two years."

Hence, my difficulty is that no discretion to the Judicial officer is provided here. Therefore I would suggest that the words "within such period as fixed by the Tribunal" should be added at the end. Unless this is done I personally feel that it will not give any benefit to the people. Since the Government wanted to bring some comprehensive bill I think these amendments could be reconsidered and introduced so that it could give substantial benefit to the tenants.

With these words I thank the Chair and conclude my speech.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಸಭಾಪತಿಗಳೇ, ಈ ರೀತಿ ಚಿಲ್ಲರೆ ಚಿಲ್ಲರೆಯಾಗಿ ತಿದ್ದುಪಡಿ ತರುವುದರಿಂದ ತೊಡಕುಗಳು ಹೆಚ್ಚುತ್ತವೆಯೇ ಹೊರತು ಭೂ ಮಾಲೀಕರಿಗಾಗಲೀ ಅಥವಾ ಗೇಣಿದಾರರಿಗಾಗಲಿ ಹೆಚ್ಚು ಅನುಕೂಲವಾಗುವುದಿಲ್ಲ ಎಂದು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ಈಗ ಈ ಬಿಲ್ಲನ್ನು ತಂದಿರುವ ಕಂದಾಯ ಸಚಿವರು ತಾವು ಸ್ವತಃ ರೈತರಿಗಾಗಿ ಭೂಮಾಲೀಕರ ಕಷ್ಟಸುಖಗಳನ್ನರಿತಿರುವುದರಿಂದ ಮಾಲೀಕರಿಗೂ ಮತ್ತು ಗೇಣಿದಾರರಿಗೂ ಅನುಕೂಲವಾಗುವಂಥ ಒಂದು ಸಮಗ್ರವಾದ ಬಿಲ್ಲನ್ನು ಬೇಗ ತರುತ್ತಾರೆಂದು ತಿಳಿದಿದ್ದೆ. ಸೆಕ್ಷನ್ 22 ಕ್ಲಾಜು ಎರಡರ ತಿದ್ದುಪಡಿಯಲ್ಲಿ ಇರುವುದನ್ನು ನೋಡಿದರೆ ಅಧಿಕಾರಿಗಳು ಭೂಮಾಲೀಕರಿಗೆ ತೊಂದರೆ ಮಾಡುವರೆಂದು ತಿಳಿದುಬರುವುದು. ಭೂಮಾಲೀಕನಿಗೆ ಕೊಡಬೇಕಾದ ಗೇಣಿಯನ್ನು ಕೊಡದೆ ತಡಮಾಡಿದಷ್ಟು ಗೇಣಿದಾರನಿಗೆ ಬಹಳ ದಿವಸ ಉಳಿದುಕೊಳ್ಳಲು ಅವಕಾಶವಾಗುತ್ತದೆ.

ಎರಡನೆಯದಾಗಿ 3 ನೇ ಕ್ಲಾಜಿನ (ಎ) ಮತ್ತು (ಬಿ) ನಲ್ಲಿ ಕೆಲವು ಅಂಶಗಳಿವೆ. 15 ದಿವಸಗಳಲ್ಲಿ ಭೂಮಾಲೀಕ ಜಮೀನನ್ನು ಗೇಣಿದಾರನಿಗೆ ವಾಪಸು ಕೊಡಬೇಕು, ಇಲ್ಲದಿದ್ದರೆ ಒಂದು ತಿಂಗಳ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ದಂಡ ಮತ್ತು ಇದರ ಜೊತೆಗೆ ತಾಸಿಲ್ದಾರರು ಜಮೀನನ್ನು ಭೂಮಾಲೀಕರಿಂದ ತೆಗೆದು ಗೇಣಿದಾರರಿಗೆ ಕೊಡಬೇಕು ಎಂದಿದೆ. ನಾನು ಹೇಳವುದಿಷ್ಟೆ 15 ದಿವಸಕ್ಕೆ ಬದಲಾಗಿ 60 ದಿವಸ ಎಂದು ತಿದ್ದುಪಡಿ ಮಾಡಬೇಕು ಎಂದು ನಾನೊಂದು ತಿದ್ದುಪಡಿ ತಂದಿದ್ದೇನೆ. ಅದರ ಉದ್ದೇಶ ಇಷ್ಟು ಜಮೀನನ್ನು ಗೇಣಿದಾರನ ವಶಕ್ಕೆ ಕೊಡುವ ಪೂರ್ಣ ಜವಾ

ಬ್ದಾರಿ ಭೂಮಾಲೀಕರ ಮೇಲಿವೆ. ಮಾಲೀಕರು 15 ದಿವಸಗಳಲ್ಲಿ ಕೊಡದಿದ್ದರೆ ಅವರಿಗೆ ಶಿಕ್ಷೆ ಆಗುವುದು, ಜೈಲಿಗೆ ಹಾಕಬಹುದು ಮತ್ತು ದಂಡ ವಿಧಿಸಬಹುದು. ಆದುದರಿಂದ ಮಾಲೀಕರಿಗೆ ಹೆಚ್ಚು ಅವಕಾಶ ಕೊಡಬೇಕು, 15 ದಿನಕ್ಕೆ ಬದಲಾಗಿ 60 ದಿವಸ ಎಂದು ತಿದ್ದುಪಡಿ ಮಾಡಿದರೆ ಒಳ್ಳೆಯದಾಗುವುದು. ಕೆಲವು ಸಲ ಗೇಣಿ ಕೊಡದಿದ್ದರೆ ಬೆನಿಫಿಟ್ ಆಫ್ ಡೌಟಿನಿಂದ ಬಿಡುಗಡೆಯಾಗುವುದಕ್ಕೆ ಅವಕಾಶವಿವೆ. ಅದೇ ಭೂ ಮಾಲೀಕ ಭೂಮಿಯನ್ನು ಬಿಟ್ಟು ಕೊಡದಿದ್ದರೆ ಜೈಲು ಶಿಕ್ಷೆ ಅನುಭವಿಸಬೇಕು, ಒಂದು ಸಾವಿರ ರೂಪಾಯಿ ದಂಡ ಕೊಡಬೇಕು. ಆದುದರಿಂದ ಇದಕ್ಕೆ ಟೋಕನ್ ಆಗಿ ಒಂದು ದಿವಸ ಎಂದು ತಿದ್ದುಪಡಿ ತಂದಿದ್ದೇನೆ. ಎಷ್ಟೋ ತಪ್ಪು ಮಾಡಿದವರಿಗೆ ಶಿಕ್ಷೆ ಆಗುವುದಿಲ್ಲ. ಹಾಗಿರುವಾಗ ಜಮೀನನ್ನು ಗೇಣಿದಾರನಿಗೆ ಕೊಡಲಿಲ್ಲ ಎನ್ನುವ ಒಂದೇ ಕಾರಣಕ್ಕಾಗಿ ಒಂದು ತಿಂಗಳು ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿ ದಂಡ ಎನ್ನುವುದನ್ನು ಬದಲಾಯಿಸಿ ಒಂದು ದಿನದ ಶಿಕ್ಷೆ ಮತ್ತು ನೂರು ರೂಪಾಯಿ ದಂಡ ಎಂದು ಸೂಚಿಸುವ ತಿದ್ದುಪಡಿಯನ್ನು ನಾನು ತಂದಿದ್ದೇನೆ.

In the explanation it is said that 'Landlord 'includes a person in possession of land whether as transferee or otherwise of such land. ಕೆಲವು ಸಂದರ್ಭದಲ್ಲಿ ಸ್ವಾಧೀನ ಭೋಗ್ಯ ಹಾಕುತ್ತಾರೆ. ಆದುದರಿಂದ ಇದರಲ್ಲಿ ಮಾರ್ಟ್‌ಗೇಜೀ ಎನ್ನುವ ಪದವನ್ನೂ ಸೇರಿಸಬೇಕೆಂದು ತಿದ್ದುಪಡಿಯನ್ನು ನಾನು ಸೂಚಿಸಿದ್ದೇನೆ.

ನಾಲ್ಕನೇ ಕ್ಲಾಜಿನಲ್ಲಿ ಎಷ್ಟೇ ಬಾಕಿ ಇರಲಿ ಎರಡು ವರ್ಷದ ಗೇಣಿ ಕೊಟ್ಟರೆ ಅವನು ಕೊಡಬೇಕಾದ ಬಾಕಿ ಪೂರ್ಣವಾಗಿ ಕೊಟ್ಟಂತಾಗುತ್ತದೆ ಎಂದು ಹೇಳಿದ್ದಾರೆ. ಯಾರು ನ್ಯಾಯವಾಗಿ ಗೇಣಿಯನ್ನು ಕೊಟ್ಟುಕೊಂಡು ಬರುತ್ತಾರೆ ಅಂಥವರಿಂದ ಜಮೀನ್ದಾರನಿಗೆ ಬರಬೇಕಾದ್ದು ಪೂರ್ಣವಾಗಿ ಸಿಕ್ಕುತ್ತದೆ. ಯಾರು ಕೊಡದೆ ಉಳಿಸಿಕೊಂಡಿರುತ್ತಾರೆ ಅಂಥವರಿಗೆ ರಿಯಾಯಿತಿ ಕೊಡುತ್ತಿದ್ದೇವೆ ಎನ್ನುವುದನ್ನು ನೋಡಬೇಕು. ಜಮೀನ್ದಾರನಿಗೆ ಸೇಕಡ 50 ರಷ್ಟಾದರೂ ಸಿಕ್ಕಲಿ ಎನ್ನುವ ಉದ್ದೇಶದಿಂದ ಎರಡು ವರ್ಷದ ಗೇಣಿಗೆ ಬದಲಾಗಿ ಮೂರು ವರ್ಷದ ಗೇಣಿ ಕೊಡಬೇಕು ಎನ್ನುವ ತಿದ್ದುಪಡಿಯನ್ನು ತಂದಿದ್ದೇನೆ. ಗೇಣಿದಾರನಿಗೆ ಎಲ್ಲ ವಿಧವಾದ ಅನುಕೂಲಗಳನ್ನೂ ಕೊಡುತ್ತ ಬಂದಿದ್ದೇವೆ. ಆದರೆ ಜಮೀನ್ದಾರನ ಹಿತದೃಷ್ಟಿಯನ್ನೂ ಗಮನಕ್ಕೆ ತೆಗೆದುಕೊಂಡು ಕೆಲವು ವಿಷಯಗಳನ್ನು ನಾನು ಹೇಳಬೇಕಾಗಿದೆ. ಮಾನ್ಯ ದೇವೇಗೌಡರು ಹೇಳಿದ ಹಾಗೆ ಸಣ್ಣ ಹಿಡುವಳಿದಾರರಿಗೆ ಏನಾದರೂ ಪರಿಹಾರವನ್ನು ಕೊಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಮತ್ತು ಅವರಿಗೆ ಪರಿಹಾರ ಒಂದೇ ಗಂಟಿನಲ್ಲಿ ಕೊಟ್ಟರೆ ಅವರಿಗೂ ಸ್ವಲ್ಪ ಸಹಾಯ ಮಾಡಿದಹಾಗೆ ಆಗುತ್ತದೆ. ಅದಿಲ್ಲದೆ ಹೋದರೆ ಹಾವು ಹೊಡೆದು ಹದ್ದಿಗೆ ಹಾಕಿದ ಹಾಗೆ ಆಗುತ್ತದೆ. ಸಣ್ಣ ಹಿಡುವಳಿದಾರರಿಗೆ ಪರಿಹಾರವನ್ನು ಕಂತುಗಳಲ್ಲಿ ಕೊಡದೆ ಒಂದೇ ಸಲ ಕೊಡುವುದರಿಂದ ಅವರು ಯಾವ ರೀತಿಯಾದರೂ ಜೀವನ ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆ ರೀತಿ ಮಾಡುವುದು ಒಳ್ಳೆಯದು. ಗೇಣಿದಾರರಿಗೆ ಯಾವ ರೀತಿಯಲ್ಲಾದರೂ ಸಹಾಯ ಮಾಡಬೇಕು ಎನ್ನುವಾಗ ಸಣ್ಣ ಹಿಡುವಳಿದಾರರ ವಿಷಯವನ್ನೂ ಗಮನದಲ್ಲಿಟ್ಟುಕೊಂಡು ಅವರಿಗೂ ಅನುಕೂಲ ಮಾಡಿಕೊಡಬೇಕು ಎಂದು ಮಾನ್ಯ ದೇವೇಗೌಡರು ಹೇಳಿರುವುದನ್ನು ನಾನು ಪುಷ್ಟೀಕರಿಸಿ ನನ ಎರಡು ಮಾತುಗಳನ್ನು ಮುಗಿಸುತ್ತೇನೆ.

†**Sri K. PUTTASWAMY.**—Madam Speaker, I rise to support this Bill. I congratulate the Government and especially my hon. friend the Revenue Minister for his earnestness in trying to protect the interests of the tenants. I would like to point out certain inconsistencies in this Bill, and I hope my hon. friend will make note of these things and have them examined, and then if there is anything to be improved upon he would do so. This Bill is very restrictive in its scope. It is an amendment to Section 22. Section 22 provides for eviction of tenants under certain circumstances. The circumstances are five in number. But the amendment has in its view only item (a) of sub-section (1) of Section 22. Item (a) relates to the failure for payment of rent, and it reads thus :—

> "that the tenant has failed to pay the rent of such land on or before the due date during two consecutive years, provided

(SRI K. PUTTASWAMY)

the landlord has issued every year within three months after the due date a notice in writing to the tenant that he has failed to pay the rent for that year ;"

This has relation to the rights of the Tribunal to fix the rent payable. I would like to refer to sections 8 and 9 which deal with the modes of prescribing the maximum rent. The rent payable is prescribed under Section 8—sub-section (3). It says :—

" The average yield for each of the principal crops for each class and grade of land in each local area shall be determined by the prescribed authority in the prescribed manner, taking into consideration the productivity of the lands and such other factors as may be prescribed."

Madam Speaker, I am under the impression that the rent has not been fixed only in certain areas in the State though the Government is the prescribed authority to fix the rent in all the areas in the State. In certain local areas there were writ petitions and the High Court held that the fixation of rent on average yield in that area is invalid. That has landed the tenants in certain difficulties. As I have already submitted, there are five circumstances under which a tenant can be evicted. If the tenant has done permanent injury to the land he can be evicted under (b) of sub-clause (1) of Clause 22. Similarly, under item (c) he can be evicted if he has sub-divided the land or assigned the land in contravention of Section 21, and also under (d) and (e) he can be evicted if he has failed to cultivate the land or has mis used the land. I do not think, under this amending Bill, there is any intention to cover the other four cases also. If by bringing an amending Bill, if the Government has in their mind the other four cases also, I have absolutely no objection. But, from the wording of the amending Bill, it relates only to item (a). Madam Speaker, I would like to read over again the proviso, which if accepted would be the second proviso to Section 22, for the benefit of this House. It says :—

"Provided further that there shall be no proceedings for eviction of a tenant from any land until the average yield of the principal crops of the local area in which such land is situated is finally determined under sub-section (3) of section 8 and the prices of principal crops are notified under sub-section (2) of Section 9."

12-30 P.M.

Madam Speaker, I understand that the fixation of rent under sub-section (3) of Section 8 and fixation of prices of principal crops under sub-section 2 of section 9 has not been done so only in certain local areas. But unfortunately the sub-clause (c) is worded in such a manner as to bring within its scope all the cases which come under sub-section (1) of section

22. I do not know whether that is the intention of the Government. Clause 3 specifically refers to this under (a) and (b) of sub-section (1) of Section 3.

> (a) orders or decrees for eviction of a tenant made in proceedings instituted before the commencement of the Mysore Land Reforms (Amendment and Miscellaneous Provisions) Act, 1972, which are precluded by the second proviso to sub-section (1) of Section 22 of the principal Act, shall not have any effect and shall abate;

I understand that when the Bill is passed as it is, all proceedings for eviction of a tenant under sub-section (1) of Section 22 will cease to have any effect and will abate. I do not know whether that is the ntention of the Government. I hope it is not so. Therefore it must be worded in such a manner as to make it applicable only to item (a) of sub-section (1) of section 22. And similar is the case with regard to item (b) of sub-section (1) of clause 3. The item (b) reads thus:

> "(b) if any laddlord has bef re the commencement of this Act taken possession of any land in pursuance of a decree or order of eviction of a tenant made in any proceeding precluded by the second proviso to sub-section (1) of Section 22 of the Principal Act, he shall within fifteen days from the said date restore possession of the land to the tenant from whom possession was taken; and if any landlord fails to restore possession of any land to the tenant as required by this clause, the Tahsildar may summarily evict the landlord from the land and deliver possession thereof to the tenant, and such tenant shall hold the land on the same terms and conditions on which he held it at the time he was dispossessed."

Supposing there are persons against whom there are proceedings under items (b), (c), (d), (e) of sub-section (1) of section 22 for eviction of a tenant in a local area where the maximum rent payable is not fixed under sub-section (3) of section 8; and where the prices of a principal crop are not notified under sub-section (1) of Section 9, is it the intention of the Government that all those proceedings shall abate? Is it the intention of the Government that all those proceedings should have no effect? Further, is it the intention of the Government that in such cases also where possession has been taken lawfully under (b), (c), (d) and (e) of sub-section (1) of Section 22 that possession has to be restored? If that is their idea, I shall have no objection, if the same is made clear to me. According to me there is a lacuna here. In the statement of objects and reasons, the last sentence is worded like this:

> "Provision is also made for restoration of possession to the tenants evicted under certain circumstances."

By this sentence, I infer that Government have in their mind evictions which have taken place in a local area where the

(SRI K. PUTTASWAMY)

maximum rent has not been fixed, where the prices have not been notified under Sections 8 and 9 respectively. Therefore it is very clear to me that the object with which this Bill is brought is only to protect the interests of tenants against whom there are eviction proceedings and the tenants who have been evicted in a local area where the rent is not fixed under sub-section (3) of Section 8 and the prices of principal crops are not notified under sub-section (2) of Section 9. This is my comment as far as this Bill is concerned.

Madam Speaker, I would like to point out one serious omission which escaped the attention of the Government. I wish they had taken notice of it and they had included the necessary measure in this amending Bill to control it. I would like to refer to your kind attention to section 65 of the Land Reforms Act. Section 65 deals with the surplus land to be surrendered to the State Government. The land which is in excess of the ceiling laid down under Sections 63 and 64 hereinafter referred to as surplus land, shall be surrendered to the State Government after the date has been notified. I take it that the land-owners have declared their surplus land. So far no attempts have been made to take over the surplus land. This surplus land declared under Section 65, automatically vests with the Government. I am sure, Madam Speaker, that most of the hon. Members are aware of the number of instances where the land-owners who are in possession of land in excess of the present ceiling have sold out their lands. Their land is transferable from hand to hand. It may be open to this House ultimately to say that all those transfers are invalid. If such a provision is brought, I would also be one with those friends who support that provision. I would like to point out what would be the hardships caused to the innocent transferees. We will also have to take into consideration the plight and the difficulties that innocent transferees might be involved in. If only we had acted in time and taken possession of these surplus lands, it would not have resulted in such a predicament. I wish they had brought some provision in this amending Bill itself to let the world know that the transferees of surplus lands will get them transferred at their own risk.

Unfortunately we have not been able to realise the complexity of land reforms. It is a highly complicated problem and a very complex measure. Whatever may be the earnestness on the part of the Government, yet the problems remain unsolved. The ceiling varies very much from one area to another area. The potential value of the land differs from year to year. We cannot deny that there is land hunger. There are many people who are eager to get some land in some manner or the other. Therefore, I would have very much appreciated if the Government had also brought a measure relating to the vesting of surplus land. With these observations I wholeheartedly support this measure. There are also other things to be dealt with. I am sure at the appropriate stage I shall be able to offer my remarks on those provisions. Thank you.

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷಣಿಯವರೇ, ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಈ ಒಂದು ಪುಟ್ಟ ತಿದ್ದುಪಡಿ ಮಸೂದೆಯನ್ನು ತಂದಿರುವುದಕ್ಕಾಗಿ ನಮ್ಮ ಪಾರ್ಟಿಯ ಪರವಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾವು ಹಿಂದಿನಿಂದ ಹೇಳುತ್ತಾ ಬಂದಿರುವುದು ಏನೆಂದರೆ, 14ನೇ ಸೆಕ್ಷನ್ ಅಡಿಯಲ್ಲಿ 5—6 ಲಕ್ಷ ಜನ ಗೇಣಿದಾರರು ಏನು ಸಿಕ್ಕಿಕೊಂಡಿದ್ದಾರೆ, ಅವರಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕೆಂದು. ಆದರೆ ಈಗ 22ನೇ ಸೆಕ್ಷನ್ ಅಡಿಯಲ್ಲಿ ಕೇವಲ ಸಾವಿರಾರು ಜನರಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇಂತಹವರು 1,)17 ಜನ ಇದ್ದಾರೆಂದು ತಾವು ಅಂಕಿಅಂಶವನ್ನು ಸಹ ಕೊಟ್ಟಿದ್ದೀರಿ. ಇದೂ ಸಹ ಅಭಿನಂದನೀಯವಾದ ಸಂಗತಿಯೇ. ಆದರೂ ಒಂದು ಅನುಮಾನ ಬರುತ್ತದೆ. ಏನೆಂದರೆ ಸರ್ಕಾರದವರು ಲಕ್ಷಾಂತರ ಜನರ ಹಿತರಕ್ಷಣೆ ಮಾಡದೆ ಕೇವಲ ಸಾವಿರ ಜನರ ಹಿತರಕ್ಷಣೆ ಮಾಡುತ್ತಿದ್ದಾರೆ ಎಂಬುದಾಗಿ. ಇದನ್ನು ನೋಡಿದರೆ ತಾವು ಏನೋ ಒಂದು ಉಪಾಯ ಮಾಡಿ ತಪ್ಪಿಸಿಕೊಳ್ಳುವುದಕ್ಕೆ ಇಂತಹ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೀರೆಂದು ಕಾಣುತ್ತದೆ. ಈಗಿನ ಮುಖ್ಯಮಂತ್ರಿಗಳಲ್ಲಿ ನನಗೆ ನಂಬಿಕೆ ಇದೆ. ಆದರೆ ಸಮಗ್ರವಾದ ತಿದ್ದುಪಡಿಯನ್ನು ತರುವುದಕ್ಕೆ ಅವರಿಗೆ ಅಡಚಣೆಯಾಗುತ್ತಿದೆಯೆಂದು ಕಾಣುತ್ತದೆ. ಮಾನ್ಯ ಕಡಿದಾಳ್ ಮಂಜಪ್ಪನವರು ಈ ಒಂದು ಗೇಣಿ ಶಾಸನವನ್ನು ತರುವುದಕ್ಕೆ ಪ್ರಯತ್ನ ಮಾಡಿದಾಗ ಅದಕ್ಕೆ ಕೆಲವರು ಅಡ್ಡಗಾಲು ಹಾಕಿದರು. ಆ ರೀತಿ ಅಡ್ಡಗಾಲು ಹಾಕಿದಂಥ ಜನರು ಈಗಲೂ ಆಡಳಿತ ಪಕ್ಷದಲ್ಲಿ ಇದ್ದಾರೆ. ಈ ತಿದ್ದುಪಡಿಗೆ ಪ್ರೋತ್ಸಾಹ ಕೊಡತಕ್ಕಂಥವರಾದ ಶ್ರೀಮಾನ್ ಕೆ. ಹೆಚ್. ರಂಗನಾಥ್, ಶ್ರೀಮಾನ್ ಭಾಸ್ಕರಶೆಟ್ಟಿ, ಶ್ರೀಮತಿ ವಿನ್ನಿಫ್ರೆಡ್ ಫರ್ನಾಂಡಿಸ್ ಅಂತಹವರು ನಿಮ್ಮ ಮಂತ್ರಿಮಂಡಲದಲ್ಲಿ ಇಲ್ಲ.

ಶ್ರೀ ಡಿ. ದೇವರಾಜ ಅರಸ್.—ಅವರು ನಮ್ಮ ಪಾರ್ಟಿಯಲ್ಲಿ ಇದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಶ್ರೀಮಾನ್ ಚೆನ್ನಬಸಪ್ಪನವರು, ಶ್ರೀಮಾನ್ ಬದರೀ ನಾರಾಯಣ್ ಅವರು ನಿಮ್ಮ ಮಂತ್ರಿಮಂಡಲದಲ್ಲಿ ಇದ್ದಾರೆ. ಅವರ ಬಗ್ಗೆ ನೀವು ಎಚ್ಚರಿಕೆಯಿಂದ ಇರಬೇಕು. ಬಂಡವಾಳಶಾಹಿ ಮನೋಭಾವದ ಜನ ಏನಿದ್ದಾರೆ ಅವರು ಸಮಗ್ರವಾದ ಭೂಸುಧಾರಣಾ ಕಾಯಿದೆಯನ್ನು ತರುವುದಕ್ಕೆ ನಿಮಗೆ ಅವಕಾಶ ಕೊಡುವುದಿಲ್ಲವೆಂದು ನನಗೆ ಗೊತ್ತಿದೆ. ಆ ರೀತಿ ತಾವು ತರುವುದಕ್ಕೆ ಹೊರಟಾಗ ಅವರು ತಾಂತ್ರಿಕವಾದ ಭಿನ್ನಾಭಿಪ್ರಾಯವನ್ನು ಮುಂದೊಡ್ಡುತ್ತಾರೆ. ನಾನಾ ರೀತಿಯ ಅಡ್ಡಿಆತಂಕಗಳನ್ನು ತಂದೊಡ್ಡುತ್ತಾರೆ. ಧರ್ಮಸಂಕಟ ತಂದೊಡ್ಡುತ್ತಾರೆ. ಇಂತಹವರು ಅನೇಕ ವರ್ಷಗಳಿಂದ ಇದನ್ನೇ ಮಾಡುತ್ತಾ ಬಂದಿರುವುದು ಎಲ್ಲರಿಗೂ ಗೊತ್ತಿದೆ. ಇವೇ ಕಾರಣದಿಂದ ಮುಂದೆ ಬರತಕ್ಕಂಥ ಸಮಗ್ರವಾದ ಭೂಸುಧಾರಣಾ ತಿದ್ದುಪಡಿ ಕಾನೂನು ಏನಿದೆ; ಅದು ಕಂದಕ ಹೊಂದಿರುವ ಭೂಸುಧಾರಣಾ ಕಾಯಿದೆಯಾಗಿರುವುದೆಂದು ಕಾಣುತ್ತವೆ. ಈ ಕಾರಣದಿಂದ ನಾನು ಈಗಲೇ ಸರ್ಕಾರಕ್ಕೆ ಮುನ್ನೆಚ್ಚರಿಕೆ ಕೊಡುವುದಕ್ಕೆ ಅಪೇಕ್ಷೆ ಪಡುತ್ತೇನೆ, ಏನೆಂದರೆ ಸರ್ಕಾರದವರು ಬರುವ ಜೂನ್ ತಿಂಗಳಿನಲ್ಲಿ ಸಮಗ್ರವಾದಂಥ ಭೂಸುಧಾರಣಾ ಕಾನೂನನ್ನು ತರದಿದ್ದರೆ, ನಮ್ಮ ಪ್ರಾಂತ್ಯದಲ್ಲಿ ಗೇಣಿಯನ್ನು ಕೊಡುವುದಿಲ್ಲ; ಗೇಣಿಯನ್ನು ಅಳೆಯುವುದಿಲ್ಲ; ಸರ್ಕಾರದವರು ನಮಗೆ ಯಾವುದೇ ರೀತಿಯ ಕಷ್ಟವನ್ನು ಕೊಡಲಿ, ಯಾವುದೇ ಜೈಲಿಗೆ ಹಾಕಲಿ, ಹೋಗುವುದಕ್ಕೆ ತಯಾರಿದ್ದೇವೆ; ಎಷ್ಟೇ ವರ್ಷ ಶಿಕ್ಷೆ ಕೊಡಲಿ, ಅನುಭವಿಸುತ್ತೇವೆ; ಆದರೆ ಗೇಣಿಯನ್ನು ಮಾತ್ರ ಮುಂದಿನ ಸುಗ್ಗಿಯಲ್ಲಿ ಅಳೆಯುವುದಿಲ್ಲವೆಂದು ಈ ಸಭೆಯ ಮೂಲಕ ಸರ್ಕಾರಕ್ಕೆ ಗೇಣಿದಾರರ ಪರವಾಗಿ ಮುನ್ನೆಚ್ಚರಿಕೆ ಕೊಡುವುದಕ್ಕೆ ಅಪೇಕ್ಷೆಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾವು ಭೂಸುಧಾರಣಾ ಶಾಸನವನ್ನು ಸಂಪೂರ್ಣವಾಗಿ ಜಾರಿಗೆ ಅಷ್ಟರಲ್ಲಿ ತರುತ್ತೇವೆಂದು ತಿಳಿದುಕೊಂಡು ತಾವು ಆ ರೀತಿ ಖಾಯಂ ಆಗಿ ಹೇಳುತ್ತಿದ್ದೀರಿ.

ಶ್ರೀ ಕೋಣಂದೂರು ಲಿಂಗಪ್ಪ.—ತಂದಾಗ ನಾವು ನಿಮ್ಮನ್ನು ಅಭಿನಂದಿಸುತ್ತೇವೆ. ತಾವು ಆ ರೀತಿ ಏನಾದರೂ ತಂದರೂ ಕೂಡ ಅದರಲ್ಲಿ ದೊಡ್ಡ ದೊಡ್ಡ ಸುರಂಗಗಳನ್ನು ಇಟ್ಟುಕೊಂಡೇ ತರುತ್ತೀರಿ. ತಾವು ತಂದಾಗ ಅದರ ಬಗ್ಗೆ ವಿಮರ್ಶೆ ಮಾಡೋಣ. ಈಗ ಆ ವಿಷಯ ಬೇಡ. ನಾವು ಮಾತ್ರ ಮುಂದಿನ ಸುಗ್ಗಿಯಲ್ಲಿ ಗೇಣಿ ಕೊಡುವುದಿಲ್ಲ. ಇದರ ಬಗ್ಗೆ ನಾನು ಖಚಿತವಾಗಿ ಹೇಳುತ್ತಿದ್ದೇನೆ. ಸಣ್ಣ ಹಿಡುವಳಿದಾರರ ಬಗ್ಗೆ ಮಾನ್ಯ ಕಾಗೋಡ್ ತಿಮ್ಮಪ್ಪನವರು ಏನು ಹೇಳಿದರು ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಅವರನ್ನು ಅನಾಥರನ್ನಾಗಿ ಮಾಡುವುದು ಸರಿಯಲ್ಲ. ಅದನ್ನು ನಾವು ಒಪ್ಪುವುದೂ ಇಲ್ಲ. ಗೇಣಿದಾರರು ಒಂದು ಎಕರೆಯಲ್ಲಿ ಸಾಗುಮಾಡುತ್ತಿರಲಿ, ಸಾವಿರ ಎಕರೆಯಲ್ಲಿ ಸಾಗುಮಾಡುತ್ತಿರಲಿ, ಅವರನ್ನು ಮಾತ್ರ ಬಿಡಿಸಬಾರದು. ಉಳುವವನೇ ಭೂಮಿಯ ಒಡೆಯನಾಗಬೇಕು. ಅಂದರೆ ಸಣ್ಣ ಸಣ್ಣ ಹಿಡುವಳಿದಾರರ ಗತಿ ಏನು

(ಶ್ರೀ ಕೋಣಂದೂರು ಲಿಂಗಪ್ಪ)

ಎಂದು ಕೇಳಬಹುದು. ಸರ್ಕಾರದವರು ಅಂತಹವರ ಬಗ್ಗೆ ವಿಶೇಷವಾದಂಥ ಆಸಕ್ತಿ ವಹಿಸಿ ಅವರಿಗೆ ಅವರ ಭೂಮಿಯ ಬೆಲೆ ಏನಿದೆ ಅದರ ಒಂದು ಪಟ್ಟು, ಎರಡು ಪಟ್ಟು ಅಥವಾ ಮೂರು ಪಟ್ಟು ಆದರೂ ಚಿಂತೆಯಿಲ್ಲ, ಒಂದೇ ಗಂಟಿನಲ್ಲಿ ಅವರಿಗೆ ಪರಿಹಾರ ಕೊಟ್ಟು ಅವರು ಸ್ವತಂತ್ರವಾಗಿ ಬೇರೆ ಉದ್ಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಮಾಜವಾದದ ಬಗ್ಗೆ, ಸೋಷಿಯಲಿಜಮ್ ಬಗ್ಗೆ ಬಹಳ ಕಳಕಳಿ ಇರತಕ್ಕ ಜನ ನಾವು ಎಂದು ತಾವು ಘೋಷಣೆ ಮಾಡಿದ್ದೀರಿ. ಸಮಾಜವಾದದ ಬಗ್ಗೆ ನಮಗೆ ಇರುವಷ್ಟೇ ಕಳಕಳಿ ನಿಮಗೆ ಇರುವುದಾದರೆ ನೀವು ನಮ್ಮ ಜೊತೆಗೇ ಬರಬೇಕು.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ಜೊತೆಗೆ ಬಂದರೆ ಜನರು ನಮಗೆ ಓಟು ಕೊಡು ವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ. —ಒಂದು ಮುಖ್ಯವಾದ ವಿಚಾರವನ್ನು ಮಾತ್ರ ನಾನು ಹೇಳ ಬೇಕಾಗಿದೆ. ಏನೆಂದರೆ ಕೆಳಗಿನಿಂದ ಹಿಡಿದು ಮೇಲ್ಗಡೆಯವರೆಗೆ ಒಬ್ಬರಿಗೆ ಒಂದೇ ಉದ್ಯೋಗವಿರ ಬೇಕು. ಈ ತತ್ವವನ್ನು ಸರ್ಕಾರದವರು ಜಾರಿಗೆ ತರಬೇಕು. ಇಂದು ಏನಾಗಿದೆ ಎಂದರೆ, ಒಬ್ಬ ಸರ್ಕಾರಿ ನೌಕರಿಯಲ್ಲಿ ಇದ್ದುಕೊಂಡು ಸಾವಿರ ರೂಪಾಯಿಗಳ ಸಂಬಳ ಪಡೆಯುತ್ತಿರುತ್ತಾನೆ, ಮತ್ತೊಂದು ಕಡೆ ಜಮೀನನ್ನು ಸಾಗುವಳಿ ಮಾಡಿಸಿ ಅದರ ಆದಾಯ ಪಡೆಯುತ್ತಿರುತ್ತಾನೆ. ಇನ್ನೊಂದು ಕಾರ್ಖಾನೆ ನಡೆಸುತ್ತಿರುತ್ತಾನೆ, ಟ್ಯಾಕ್ಸಿ ಇಟ್ಟು ಅದರ ಆದಾಯ ಪಡೆಯುತ್ತಿರುತ್ತಾನೆ. ಈ ಪ್ರಕಾರ 25 ಉದ್ಯೋಗಗಳನ್ನು ಒಬ್ಬನೇ ಮಾಡಿ 25 ಜನರಿಗೆ ಸಿಗಬೇಕಾಗಿದ್ದ ಉತ್ಪನ್ನವನ್ನು ಒಬ್ಬನೇ ಕಬಳಿಸುತ್ತಿರುತ್ತಾನೆ. ಇಂತಹದನ್ನು ಸರ್ಕಾರದವರು ಕಡಿದುಹಾಕಿ ಒಬ್ಬನಿಗೆ ಒಂದು ಉದ್ಯೋಗ ಎಂದು ಮಾಡಬೇಕು. ಸರ್ಕಾರಿ ನೌಕರಿ ಮಾಡುವವರಿಗೆ ಭೂಮಿ ಏತಕ್ಕೆ ಬೇಕು? ಮತ್ತು ಬೇರೆ ಬೇರೆ ರೀತಿಯ ಉತ್ಪಾದನೆ ಮತ್ತು ಸೌಲತ್ತುಗಳು ಏಕೆ ಬೇಕೆಂದು ಕೇಳುತ್ತೇನೆ.

ಒಬ್ಬರು ಸದಸ್ಯರು.—ಸರ್ಕಾರಿ ನೌಕರರು ರಿಟೈರ್ ಆದ ಮೇಲೆ ಏನು ಮಾಡಬೇಕು ?

ಶ್ರೀ ಎಸ್. ಬಂಗಾರಪ್ಪ.—ಅಂತಹವರಿಗೆ ಸರ್ಕಾರದವರು ಪೆನ್‌ಷನ್ ಕೊಡುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಸಮಾಜವಾದವೆಂದರೆ ಸರ್ಕಾರೀ ಸಮಾಜವಾದವನ್ನು ನಾನು ಹೇಳುತ್ತಿಲ್ಲ. ನಿಜವಾದ ಸಮಾಜವಾದವನ್ನು ಹೇಳುತ್ತಿದ್ದೇನೆ. ಈ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿ ಒಬ್ಬರಿಗೆ ಒಂದು ಉದ್ಯೋಗ ಕೊಡುವ ತತ್ವವನ್ನು ಅನುಷ್ಠಾನಕ್ಕೆ ತರುವುದಾದರೆ ಮತ್ತು ಆ ದಿನ ಬಂದರೆ ತಮ್ಮನ್ನು ನಾನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಇಂತಹ ಒಂದು ಕಾನೂನನ್ನು ಜಾರಿಯಲ್ಲಿ ತರುವುದಕ್ಕೆ ಮುಖ್ಯಮಂತ್ರಿಗಳು ಹೊರಟರೆ ಅವರನ್ನು ಹಗ್ಗ ಹಾಕಿ ಎಳೆಯುವ ಜನ ಅವರ ಕಡೆಯೇ ಇದ್ದಾರೆ. ಈ ಒಂದು ತತ್ವವನ್ನು ಸರ್ಕಾರದವರು ಅನುಷ್ಠಾನಕ್ಕೆ ತರುವುದಾದರೆ ಇಡೀ ರಾಷ್ಟ್ರದಲ್ಲಿ ಅಥವಾ ಇಡೀ ರಾಜ್ಯದಲ್ಲಿ ಬಹಳ ಜನರಿಗೆ ಉದ್ಯೋಗ ಸಿಗುತ್ತದೆ. ಮತ್ತು ಬಹಳ ಜನರಿಗೆ ಉತ್ಪನ್ನ ತರತಕ್ಕ ಮಾರ್ಗಗಳು ದೊರಕುತ್ತವೆ. ಇದನ್ನು ಸರ್ಕಾರದವರು ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಸ್ನೇಹಿತರಾದ ಶ್ರೀ ಕಾಗೋಡ್ ತಿಮ್ಮಪ್ಪನವರು ಮಿಕ್ಕ ವಿಚಾರಗಳನ್ನು ಹೇಳಿದ್ದಾರೆ. ಸಮಗ್ರ ವಾದ ಭೂಸುಧಾರಣಾ ಕಾಯಿದೆಯನ್ನು ಈ ಸಭೆಯ ಮುಂದೆ ಸರ್ಕಾರದವರು ತಂದಾಗ ನಾನು ಬಾಕಿ ವಿಚಾರಗಳನ್ನು ಹೇಳುತ್ತೇನೆ. ಈಗ ನಾನು ಹೇಳಿದಂಥ ವಿಚಾರಗಳ ಬಗ್ಗೆ ಸರ್ಕಾರದವರು ಗಮನ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ಕೃತಜ್ಞತೆಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷಿಣಿಯವರೇ, ಈ ಸಭೆಯ ಮುಂದೆ ಮಂಡಿಸಿರುವ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ನಾನು ಅನುಮೋದಿಸುವುದಕ್ಕೆ ಎದ್ದು ನಿಂತಿದ್ದೇನೆ. ಈ ಮಸೂದೆಯಲ್ಲಿ ಹೇಳಿರುವಂತೆ ಇದುವರೆಗೂ ಯಾವ ತಹಶೀಲ್ದಾರರಾಗಲೀ ಅಥವಾ ಚೀಫ್ ಮಾರ್ಕೆಟಿಂಗ್ ಆಫೀಸರ್ ಆಗಲೀ ಆವರೇಜ್ ಈಲ್ಡ್ ಫಿಕ್ಸ್ ಮಾಡಿಲ್ಲ ಮತ್ತು ಸರಕುಗಳ ಬೆಲೆ ಜಾಹೀರ ಮಾಡಿಲ್ಲಾ ಅಂಥ ತಾಲ್ಲೂಕಿನಲ್ಲಿಯ ಗೇಣಿದಾರರಿಗೆ ಸಂಬಂಧಪಟ್ಟ ಹಾಗೆ ಕೆಲವು ಕೋರ್ಟಿನ ಆರ್ಡರ್ಸ್‌ಗಳೇನೋ ಆಗಿವೆ. ಆದರೆ ಯಾವ ತಾಲ್ಲೂಕಿನಲ್ಲಿಯೂ ಗೇಣಿದಾರರನ್ನು ಜಮೀನನ್ನು ಬಿಡಿಸಿ ಹೊರಗೆ ಹಾಕಿಲ್ಲ. ಈ ಮಸೂದೆಯ ಮೂಲಕ ಗೇಣಿ ದಾರರಿಗೆ ರಕ್ಷಣೆಯನ್ನು ಕೊಡುವಂತಹ ಒಂದು ಅವಕಾಶವೇನೋ ಇದೆ. ಆದರೆ ಗೇಣಿ ಕೊಡುವ ವಿಷಯದಲ್ಲಿ ರೈತ ಡಿಫಾಲ್ಟ್ ಆಗಿ ತಪ್ಪು ಮಾಡಿದರೆ ಅವನಿಗೆ ಸ್ವಲ್ಪ ರಿಯಾಯ್ತಿಯನ್ನು ಕೊಡುವ

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY

ಒಂದು ಅವಕಾಶ ಈ ಮಸೂದೆಯಲ್ಲಿ ಇಲ್ಲ. ಹಿಂದಿನ ಮಸೂದೆಯಲ್ಲಿ ಆ ಒಂದು ಅವಕಾಶ ಇತ್ತು. ಈ ಮಸೂದೆಯಲ್ಲಿ ಅದು ದೊರೆಯದೇ ಇರುವುದು ಒಂದು ಅಸಮಾಧಾನಕರವಾದ ಸಂಗತಿಯಾಗಿದೆ. ಆದ್ದರಿಂದ ಗೇಣಿ ಕೊಡುವ ವಿಷಯದಲ್ಲಿ ರೈತ ಡಿಫಾಲ್ಟ್ ಆಗಿ ತಪ್ಪು ಮಾಡಿದರೆ ಅವನಿಗೆ ರಿಯಾಯ್ತಿ ಕೊಡುವ ಒಂದು ಅವಕಾಶವನ್ನು ಈ ಮಸೂದೆಯಲ್ಲಿ ಸೇರಿಸಿದ್ದರೆ ಚೆನ್ನಾಗಿತ್ತು. ಈ ಮಸೂದೆಯ ಪ್ರಕಾರ ಕೆಲವು ಗೇಣಿದಾರರಿಗೆ ಪರಿಹಾರ ದೊರೆತಿವೆ ಅದಕ್ಕಾಗಿ ನಾವು ಸಂತೋಷಪಡಬೇಕಾಗಿದೆ. ಈ ಮಸೂದೆಯಲ್ಲಿರತಕ್ಕ ಕೆಲವು - ವಿಷಯಗಳನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ನಾನು ತರಬಯಸುತ್ತೇನೆ. ಈ ಮಸೂದೆಯಲ್ಲಿ ಸೆಕ್ಷನ್ 22 (ಎ) ನಲ್ಲಿ "Orders or decrees for eviction of a tenant made in proceedings instituted before the commencement of the Mysore Land Reforms (Amendment and Miscellaneous Provisions) Act, 1972, which are precluded by the second proviso to sub-section (1) of Section 22 of the Principal Act shall not have any effect and shall abate". ಎಂದು ಹೇಳಿದ್ದಾರೆ. ಅಂದರೆ ಇಂಥಾ ಹುಕುಂಗಳಿಂದ ಯಾವ ಭೂಮಾಲೀಕರಿಗೆ ಯಾವುದೇ ಪರಿಹಾರ ದೊರಕುವುದಿಲ್ಲವೋ ಅಂಥಾ ಭೂಮಾಲೀಕರು ಪುನಃ ಮುನ್ಸೀಫ್ ಕೋರ್ಟಿನಲ್ಲಿ ಪರಿಹಾರಕ್ಕಾಗಿ ಅರ್ಜಿಗಳನ್ನು ಹಾಕಬೇಕೋ ಯೆಂಬ ಬಗ್ಗೆ ಈ ಕಾಲಂನಲ್ಲಿ ಉಲ್ಲೇಖ ಇಲ್ಲ, ಕಾಂಪೆನ್ಸೇಷನ್ ಫಿಕ್ಸೇಷನ್ ಆದಮೇಲೆ ಭೂಮಾಲೀಕರಿಗೆ ಅರ್ಜಿಯನ್ನು ಕೊಡುವುದಕ್ಕೆ ಸಮಯ ಇಡಬೇಕು. ಇಲ್ಲದಿದ್ದರೆ ಭೂಮಾಲೀಕನಿಗೆ ಜಸ್ಟೀಸ್ ಇಲ್ಲದಂತಾಗುತ್ತದೆ.

ಎರಡನೆಯದಾಗಿ ಭೂಸುಧಾರಣೆ ಕಾಯಿದೆಯಲ್ಲಿ ಟೆನೆನ್ಸಿ ಇಯರ್ ಡಿಫೈನ್ ಮಾಡಿಲ್ಲ. ಅದಕ್ಕಾಗಿ ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ನೋಡಬೇಕಾಗುತ್ತದೆ. ಮೈಸೂರು ಲ್ಯಾಂಡ್ ರೆವಿನ್ಯೂ ಆಕ್ಟ್ ಕಲಂ 25ರಲ್ಲಿ ರೆವಿನ್ಯೂ ಇಯರ್ ಜುಲೈ ಒಂದನೇ ತಾರೀಖು ಎಂದು ರೆವಿನ್ಯೂ ಇಯರ್ ಅಂತಾ ಉಲ್ಲೇಖ ಮಾಡಲಾಗಿದೆ. ಆದರೆ ಟೆನೆನ್ಸಿ ಇಯರ್ ಬಗ್ಗೆ ಈ ಕಾಯಿದೆಯಲ್ಲಿ ಯಾವುದೇ ತರಹ ಉಲ್ಲೇಖ ಇಲ್ಲ.

ಈಗ ಈ ಕಾಯಿದೆಯಲ್ಲಿ ಎರಡು ವರ್ಷಗಳ ಗೇಣಿಯನ್ನು ಪಾವತಿ ಮಾಡಿದರೆ ಒಕ್ಕಲೆಬ್ಬಿಸ ಕೂಡದು ಎಂದು ಸೂಚಿಸಿದ್ದಾರೆ. ಅದು ಯಾವ ಎರಡು ವರ್ಷದ ಗೇಣಿ ಎಂಬುದನು ಸ್ಪಷ್ಟಪಡಿಸಬೇಕು. ಮತ್ತು ಟೆನೆನ್ಸಿಯ ಇಯರ್ ಯಾವ ತಿಂಗಳಿನಿಂದ ಪ್ರಾರಂಭವಾಗುತ್ತದೆ ಎಂಬುದನ್ನೂ ತಿಳಿಸಬೇಕು. ಈ ಎರಡು ವಿಷಯಗಳನ್ನೂ ಮಾನ್ಯ ಕಂದಾಯ ಮಂತ್ರಿಗಳು ಕ್ಲಿಯರ್ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಈ ಬಿಲ್ಲಿನ 4ನೇ ಕ್ಲಾಸ್ ನಲ್ಲಿ ಈ ರೀತಿ ಇದೆ.

> "Notwithstanding anything contained in the Principal Act, or in any decree or order of Tribunal, no order for restoration of possession of any land to the landlord on the ground of default in paying rent by the tenant shall be executed if the tenant pays to the landlord an amount equal to the rent due for a period of two years."

ಎಂದು ಹೇಳಿದ್ದಾರೆ. ಆದರೆ ಇದರಲ್ಲಿ ಯಾವ ಎರಡು ವರ್ಷದ ಗೇಣಿಯನ್ನು ಪಾವತಿ ಮಾಡಿರಬೇಕು ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ. ಅದನ್ನು ಸ್ಪಷ್ಟಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**Sri D. B. KALMANKAR.**—'Tenant' is defined under sub-section 34 of section 2 of the Act. The hon. Member may please refer to this section.

**Sri P. M. BANGI.**—I am talking about the 'tenancy year' There is no definition regarding "Tenancy Year" in the Mysore Land Reforms Act or Land Revenue Act or Transfer of Property Act. So I submit that the Hon. Revenue Minister should see that one clause is inserted in the Bill regarding the Tenancy Year and he should also see that the point regarding the two year period during which the arrears

(SRI P. M. BANGI)

are to be paid, is clarified. Clarification is needed in this behalf. Otherwise, the Law will be interpreted by the Courts in a different way and there will be scope for continuous litigation regarding the words used in Section 4 and also regarding the Tenancy Year. So, I submit that these two amendments be made and the Bill passed with these amendments. I support the Bill although it confers limited rights on the limited tenants. The Hon. Minister may also look into the matter of issuing an Ordinance for the temporary Protection from Eviction of tenants for the year 1972.

MADAM SPEAKER.—Further discussion on this Bill will continue on Monday. We will take up the Non-Official business on Tuesday. The House will now adjourn to meet at One of the Clock on Monday the 17th, April 1972.

---

*The House adjourned at One of the Clock to meet again at One of the Clock on Monday the 17th April, 1972.*

---

WD 17358—GPB—550—20-7-1972

ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Monday, the 17th April 1972*

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

### (to which oral answers were given)

### Scarcity of drinking water supply in the villages of Chikodi Taluk

17. Sri J. S. AMMANNAVAR (Sadalga).—

Will the Minister for Community Development and Social Welfare be pleased to state :—

(*a*) whether the Government is aware of the acute scarcity of drinking water in almost all the villages of Chikodi Taluk ;

(*b*) if so, the steps they have taken to provide drinking water supply facility to these villages ?

Sri M. MALLIKARJUNASWAMY (Minister for Community Development and Social Welfare).—

(*a*) No. There is scarcity of drinking water in 88 villages and hamlets out of 103 villages and 43 hamlets in the taluk.

(*b*) Bore wells are proposed to be sunk with the help of High Speed Rigs where it is difficult to strike water at reasonable depth. Deepening of the wells is also undertaken by the concerned Panchayats. The Taluk Development Board is giving 75 per cent of the cost for deepening the existing wells.

In Chikodi town, where scarcity of drinking water is felt, arrangements are made to supply water through PWD trucks from Vadral tank. Six bore wells have been sunk and in 6 more villages bore wells are proposed to be sunk.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಉತ್ತರದಲ್ಲಿ ಗೊತ್ತಿಲ್ಲ ಎಂದು ಹೇಳಿದ್ದೀರಿ. ಎಂದರೆ ತಮಗೆ ಇಲ್ಲಿ ಕುಡಿಯುವ ನೀರಿನ ಅಭಾವ ಇರುವುದು ಗೊತ್ತಿಲ್ಲ ಎಂತಲೇ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಲ್ಲ ಹಳ್ಳಿಗಳಲ್ಲೂ ಕುಡಿಯುವ ನೀರಿನ ಅಭಾವ ಇದೆಯೇ ಎಂದು ಕೇಳಿದುದಕ್ಕೆ ಹಾಗೆ ಹೇಳಲಾಗಿದೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಹಾಗಾದರೆ ಎಷ್ಟು ಹಳ್ಳಿಗಳಲ್ಲಿ ಬೋರ್ ವೆಲ್ಸ್‌ಗಳನ್ನು ತೆಗೆಯಬೇಕೆಂದು ಮಾಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಾವಿಗಳು ಇಲ್ಲದೇ ಇರತಕ್ಕ ಹಳ್ಳಿಗಳಲ್ಲಿ ಬೋರ್ ವೆಲ್ಸ್ ಸ್ಕೀಂಗಳನ್ನು ಮಾಡಿ ಅಲ್ಲಿ ಭಾವಿಗಳನ್ನು ತೆಗೆಯುವ ಕೆಲಸಗಳನ್ನು ಮಾಡುತ್ತಿದ್ದೇವೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಎಷ್ಟು ಹಳ್ಳಿಗಳಲ್ಲಿ ಬಾವಿ ತೆಗೆಯಲಾಗಿದೆ? ಅವು ಯಾವುವು?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಎಂಟು ಹಳ್ಳಿಗಳಲ್ಲಿ ನೀರು ತೆಗೆಯಲು ಇಂತಹ ಬೋರ್ ವೆಲ್ಸ್‌ಗಳನ್ನು ಮಾಡಲಾಗಿದೆ. ಅವುಗಳು ಹೀಗಿವೆ :

ಬೆಳಗಲಿ, ತೀರವಾಡಿ, ಪುಟ್ಟವಾಡಿ, ತುಪ್ಪನವಾಡಿ, ಅರಂಗನವಾಡಿ, ಎಡೆಹಟ್ಟಿ, ಬಸನ ಕಟ್ಟೆ ಮತ್ತು ಯಡಿಯಾಪುರಿ.

ಶ್ರೀ ಆರ್. ಎಸ್. ಪಾಟೀಲ್.—ಚಿಕ್ಕೋಡಿ ತಾಲ್ಲೂಕಿನ ಸುಮಾರು ಎಲ್ಲ ಹಳ್ಳಿಗಳಲ್ಲೂ ಕುಡಿಯುವ ನೀರಿನ ಬಾವಿಗಳಿಲ್ಲದೆ ಜನ ಎರಡು ಮೂರು ಮೈಲಿಗಳ ದೂರ ಹೋಗಿ ನೀರು ತರುತ್ತ ಬಹಳ ಕಷ್ಟಪಡುತ್ತಿದ್ದಾರೆ. ಆದಕಾರಣ ತಾತ್ಕೂರ್ತಿಕವಾಗಿ ಅಲ್ಲಿಗೆ ನೀರು ಒದಗಿಸಲು ಬೇರೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಚಿಕ್ಕೋಡಿ ತಾಲ್ಲೂಕಿನಲ್ಲಿ ನೀರಿನ ಅಭಾವ ಇದೆ ಎಂದು ಹೇಳಿದ್ದಾರೆ. ಅಲ್ಲಿ ಆರು ಬೋರ್ ವೆಲ್ಸ್‌ಗಳನ್ನು ಮಾಡಲು ಯತ್ನ ಮಾಡಲಾಗಿದೆ ಮತ್ತು ನೀರಿನ ವ್ಯವಸ್ಥೆ ಸುಧಾರಿಸಲು ಪೈಪ್ ವಾಟರ್ ಸ್ಕೀಂನ್ನು ಮಾಡಬೇಕೆಂದು ಯೋಚನೆ ಮಾಡಿ ಸುಮಾರು 12 ಹಳ್ಳಿಗಳಲ್ಲಿ ಈಗಾಗಲೇ ಕೆಲಸಗಳು ಆಗುತ್ತಿವೆ, ಬೇರೆ ಬೇರೆ ಹಂತದಲ್ಲಿ ಕೆಲಸಗಳನ್ನು ಮಾಡಲಾಗುತ್ತಿದೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ಬೋರ್ ವೆಲ್ಸ್‌ಗಳನ್ನು ತೆಗೆದಾಗ ಭೂಮಿಯಲ್ಲಿ ನೀರಿನ ಆಸರೆ ಸಾಕಷ್ಟು ಇಲ್ಲದೇ ಇದ್ದರೆ ಹೆಚ್ಚು ನೀರು ಸಿಗುವುದಿಲ್ಲ. ಆದ್ದರಿಂದ ನೀರಿನ ಲೆವೆಲ್ ಕಡಿಮೆ ಯಾದಾಗ ಅಲ್ಲಿನ ಜನಕ್ಕೆ ಹ್ಯಾಂಡು ಪಂಪುಗಳನ್ನು ಕೊಟ್ಟರೆ ಅದರಿಂದ ನೀರು ಉಪಯೋಗಿಸಿ ಕೊಳ್ಳಲು ಸಹಾಯವಾಗುತ್ತದೆ. ಅಂತಹ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದಕ್ಕಾಗಿಯೇ ಯಂತ್ರಗಳನ್ನು ಕೊಟ್ಟು ಆಳವಾದ ಬಾವಿಗಳನ್ನು ಮಾಡಿಸಲಾಗುತ್ತಿದೆ.

ಶ್ರೀ ಬಿ. ಎಂ. ಮಂಜುನಾಥ.—ಚಿಕ್ಕೋಡಿ ತಾಲ್ಲೂಕಿನಲ್ಲಿ ಈಗಾಗಲೇ ಯಾವುದಾದರೂ ಬಾವಿಗಳು ಇದ್ದು, ಅವುಗಳಲ್ಲಿ ನೀರಿಲ್ಲದೆ ಆ ಬಾವಿಗಳು ಶಿಥಿಲವಾಗಿದ್ದರೆ ಅವನ್ನು ನೇರವಾಗಿ ಸರಕಾರದವರೇ ರಿಪೇರಿ ಮಾಡಿಸಿ ಮತ್ತು ಆಳ ಮಾಡಿಸಿ ನೀರು ಬರುವಂತೆ ಮಾಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂತಹ ಬಾವಿಗಳು ಸರಕಾರದ ಗಮನಕ್ಕೆ ಬಂದಿದ್ದರೆ ಅವುಗಳ ಬಗ್ಗೆ ತಕ್ಕ ವ್ಯವಸ್ಥೆ ಮಾಡಬೇಕೆಂದು ಈಗಾಗಲೇ ಸೂಚನೆ ಕೊಡಲಾಗಿದೆ ಮತ್ತು ಹಾಗೆ ಮಾಡುತ್ತಿದ್ದಾರೆ.

ಶ್ರೀ ಶರಣಪ್ಪ.—ನೀರಿನ ಸೌಕರ್ಯ ಹೆಚ್ಚು ಮಾಡಲು ಹೈಸ್ಪೀಡ್ ರಿಗ್ಸ್ ಯಂತ್ರಗಳನ್ನು ಅಲ್ಲಲ್ಲಿ ಕೊಡಲಾಗುತ್ತಿದೆ. ಅದರ ಮೂಲಕ ಆಳವಾದ ಬಾವಿಗಳನ್ನು ತೆಗೆದು ಹೆಚ್ಚು ನೀರು ಪಡೆಯುವ ಪ್ರಯತ್ನಗಳನ್ನು ಇಲ್ಲಿ ಮಾಡುತ್ತಿದ್ದಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ರೀತಿ ಮಾಡಲು ಸ್ವಲ್ಪಮಟ್ಟಿನ ಕ್ರಮಗಳನ್ನು ಇಲ್ಲಿ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಪ್ರತಿಯೊಂದು ತಾಲ್ಲೂಕ್‌ಗೂ ಒಂದೊಂದು ರಿಗ್ಸ್‌ನ್ನು ಒದಗಿಸಿ ಕುಡಿಯುವ ನೀರು ಇಲ್ಲದಿರುವ ಎಲ್ಲ ಭಾಗಗಳಿಗೂ ನೀರನ್ನು ಒದಗಿಸುವುದಕ್ಕೆ ಒಂದು ಸಮಗ್ರವಾದ ಯೋಜನೆಯನ್ನು ರೂಪಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಮಗ್ರವಾದ ಯೋಜನೆಯನ್ನು ಸರ್ಕಾರ ಮಾಡಿಕೊಂಡಿದೆ. ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವ ಒಂದು ಸಾವಿರ ಹಳ್ಳಿಗಳಿಗೆ ಈ ವರ್ಷದ ಅಂತ್ಯದಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಈ ಅಂಶವನ್ನು ರಾಜ್ಯಪಾಲರ ಭಾಷಣದಲ್ಲಿ ಕೂಡ ಹೇಳಲಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಕುಡಿಯುವ ನೀರಿನ ಸೌಕರ್ಯ ಇಲ್ಲದಿರುವ ಎಲ್ಲ ಗೊಲ್ಲರಹಟ್ಟಿ ಗ್ರಾಮಗಳಿಗೂ ಕುಡಿಯುವ ನೀರನ್ನು ಒದಗಿಸಬೇಕೆಂಬ ನೀತಿಯನ್ನು ಅಥವಾ ಅಂಥ ಒಂದು ಪಾಲಿಸಿ ಡಿಸಿಷನನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಗುಡ್ಡಕಾಯಿ ಚಂದ್ರಶೇಖರ್.—ಚಿಕ್ಕೋಡಿ ತಾಲ್ಲೂಕ್‌ನಲ್ಲಿ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಯೋಜನೆ ಹಾಕಿಕೊಳ್ಳಲಾಗಿದೆಯೆಂದು ಹೇಳಿದಿರಿ. ಈ ಯೋಜನೆಯನ್ನು ಎಷ್ಟು ದಿವಸಗಳಲ್ಲಿ ಮುಗಿಸಬಹುದೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಯೋಜನೆಯನ್ನು ಪ್ರಾರಂಭ ಮಾಡಿದ್ದೇವೆ. ಬಹಳ ಬೇಗ ಪೂರ್ಣವಾಗುತ್ತದೆ. ಈಗ ಸಧ್ಯಕ್ಕೆ ಲೋಕೋಪಯೋಗಿ ಇಲಾಖೆಯವರು ಲಾರಿಗಳ ಮೂಲಕ ವದರಾಳ್ ಕೆರೆಯಿಂದ ಶುದ್ಧೀಕರಿಸಿದ ನೀರನ್ನು ಒದಗಿಸುತ್ತಿದ್ದಾರೆ.

ಶ್ರೀ ಜೆ ಎಸ್. ಅಮ್ಮಣ್ಣನವರ್.—ಈಗ ಚಿಕ್ಕೋಡಿಯಲ್ಲಿ ಕುಡಿಯುವ ನೀರಿನ ಅಭಾವ ಇರುವುದಕ್ಕೆ ಅಲ್ಲಿರುವ ಸಕ್ಕರೆ ಕಾರ್ಖಾನೆಯವರು ವದರಾಳು ಕೆರೆಯಿಂದ ಹೆಚ್ಚಿನ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿರುವುದು ಕಾರಣವಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಕ್ಕರೆ ಕಾರ್ಖಾನೆಯವರು ಈ ಕೆರೆಯಿಂದ ಹೆಚ್ಚಿನ ನೀರನ್ನು ಉಪಯೋಗಮಾಡಿಕೊಳ್ಳುತ್ತಿರುವುದರಿಂದ ಸುತ್ತಮುತ್ತ ಇರುವ ಬಾವಿಗಳಲ್ಲಿ ನೀರು ಕಡಿಮೆಯಾಗಿದೆ ಎಂಬುದು ಅದೂ ಒಂದು ಕಾರಣ ಎಂಬುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

## Drinking Water Wells in Kallambella Constituency

69. SRI T. TARE GOWDA (Kallambella).—

Will the Minister for Community Development and Social Welfare be pleased to state :—

(*a*) the number of villages of Gollarahattis where there are no drinking water wells and their names in Kallambella Constitueacy ;

(*b*) the reasons for not providing drinking water wells in these villages of Gollarahattis ;

(*c*) when the Government intend to grovide drinking water wells ;

(*d*) whether there is any proposal to provide rigs and give drinking water wells by boring stony and rocky soil, specially in Kandikere Hobli of Chikkanaikanhalli taluk near cement quarry Gollarahatti ;

(*e*) whether unsuccessful wells will be pursued by rigs and drinking water made available to the suffering public in Kallambbella Constituency villages, A. K. and Gollarahattis

Sri M. MALLIKARJUNASWAMY (Minister for Community Development and Social Welfare).—

(a) 14-names are indicated in the list appended.

(b) As some of these villages are situated at higher levels and rocky places and as the precribed popular contribution was not forthcoming, these villages could not be provided with drinking water wells.

(c) Before the close of the current year 1972.

(d) Two rigs are allotted to Tumkur District for taking up bore wells with high speed rigs and the Deputy Commissioner has been asked to provide bore wells to these areas.

(e) Yes.

LIST

*I. Sira Taluk.*—

1. Katamala Gollarahatti
2. Kyathadevara do
3. Joganapalya do
4. Neralagudda do
5. Hosahalli do
6. Kallobanahalli do

*II. Gubbi Taluk*

1. Chiterderahalli do
2. Aralikatte do
3. Settihalli do
4. Thimmappanahatti do
5. Eramuddanahatti do

*III. C. N. Halli Taluk*

1. Quarry Gollarahatti (Chikkarampura)
2. Daddarampura Gollarahatti
3. Belavadi Thirumadevarahatti

**Abstract**

| | | |
|---|---|---|
| 1. | Sira Taluk | 6 |
| 2. | Gubbi Taluk | 5 |
| 3. | C. N. Halli Taluk (in Kallambella Constituency) | 3 |
| | | 14 |

ಶ್ರೀ ಟಿ. ತಾರೇಗೌಡ.—ಕುಡಿಯುವ ನೀರಿನ ಬಾವಿಗಳು ಇಲ್ಲದಿರುವ ಗ್ರಾಮಗಳು 14 ಎಂದು ಹೇಳಿದ್ದೀರಿ. ಈ ಗ್ರಾಮಗಳು ಎತ್ತರದ ಮತ್ತು ಕಲ್ಲು ಬಂಡೆಯ ಸ್ಥಳಗಳಲ್ಲಿ ಇವೆ ಎಂದು ಹೇಳಿದ್ದೀರಿ. ಈ 14 ಗ್ರಾಮಗಳು ಯಾವ ಯಾವ ತಾಲ್ಲೂಕ್‌ಗಳಲ್ಲಿ ಇವೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸಿರಾ ತಾಲ್ಲೂಕ್‌ನಲ್ಲಿ 6, ಗುಬ್ಬಿ ತಾಲ್ಲೂಕ್‌ನಲ್ಲಿ 5 ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕ್‌ನಲ್ಲಿ 3. ಈ ಪ್ರಕಾರ ಒಟ್ಟು 14 ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು ಇಲ್ಲದಿರುವುದರಿಂದ, ಇಲ್ಲಿ ಬಾವಿಗಳನ್ನು ತೋಡಿಸಲು ಎರಡು ರಿಗ್ಸ್ ಯಂತ್ರಗಳನ್ನು ಒದಗಿಸಲಾಗಿದೆ. ಅವು ಕೆಲಸ ಮಾಡುತ್ತಿವೆ.

ಶ್ರೀ ಆರ್. ಎಸ್. ಪಾಟೀಲ್.—ನಿಗದಿಯಾದ ವಂತಿಗೆಯನ್ನು ಸಾರ್ವಜನಿಕರು ಕೊಡುವುದಕ್ಕೆ ಸಾಧ್ಯವಾಗದಿದ್ದರೆ ಅಂತಹ ಕಡೆ ಪೂರ್ತಿಯಾಗಿ ಸರ್ಕಾರದವರೇ ಖರ್ಚು ಹಾಕಿ ಬಾವಿಗಳನ್ನು ತೋಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕ್ರ್ಯಾಷ್ ಪ್ರೋಗ್ರಾಮ್‌ನಲ್ಲಿ ಎಲ್ಲಿ ಸಾರ್ವಜನಿಕಕರು ತಮ್ಮ ವಂತಿಕೆಗೆ ಕೊಡಲು ಸಾಧ್ಯವಿಲ್ಲವೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಪೂರ್ಣವಾಗಿ ವೆಚ್ಚವನ್ನು ವಹಿಸಿಕೊಂಡು ಬಾವಿಗಳನ್ನು ತೋಡಿಸಿಕೊಡುತ್ತಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಹರಿಜನರು ಮತ್ತು ಗಿರಿಜನರು ಇರುವ ಕಡೆ ಅಲ್ಲಿಯ ಜನರು ಬಾವಿ ತೋಡಿಸಲು ತಮ್ಮ ವಂತಿಗೆ ಕೊಡಲು ಕಷ್ಟವಾಗುತ್ತದೆ. ಅಂತಹ ಕಡೆಯಲ್ಲಿ ಸರ್ಕಾರದವರೇ ಪೂರ್ಣ ವೆಚ್ಚವನ್ನು ವಹಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಂತಹ ಪ್ರದೇಶಗಳಲ್ಲಿ ನಾನು ಈಗಾಗಲೇ ಹೇಳಿದಂತೆ ಕ್ರ್ಯಾಷ್ ಪ್ರೋಗ್ರಾಮ್‌ನಲ್ಲಿ ತೆಗೆದುಕೊಂಡು ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿಕೊಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಈಗಿನ ಕಾನೂನಿನ ಪ್ರಕಾರ ಹಿಂದುಳಿದ ವರ್ಗದವರು ತಮ್ಮ ಭಾಗವಾದ ಐದು ಪರ್ ಸೆಂಟನ್ನು ಕೊಟ್ಟರೆ ಮಾತ್ರ ಅಂತಹ ಕಡೆಗಳಲ್ಲಿ ಬಾವಿಗಳನ್ನು ತೋಡಿಸುತ್ತಿದ್ದಾರೆ. ಈ ರಾಜ್ಯದಲ್ಲಿ ಅಸ್ಪೃಶ್ಯತೆ ಒಂದು ದೊಡ್ಡ ಕಳಂಕವಾಗಿರುವುದರಿಂದ ಸಾರ್ವಜನಿಕ ಬಾವಿಗಳಿಗೆ ಅವರನ್ನು ಬಿಡುತ್ತಿಲ್ಲ. ಇಂತಹ ಕಡೆಗಳಲ್ಲಿ ಸರ್ಕಾರದವರೇ ಅವರ ಭಾಗದ ವೆಚ್ಚವನ್ನು ಸಹ ಹಾಕಿಕೊಂಡು ಸರ್ಕಾರದವರೇ ಬಾವಿಗಳನ್ನು ತೋಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—5 ಪರ್‌ಸೆಂಟ್ ಹಣವನ್ನು ಸ್ಥಳದ ಜನರು ಕೊಡಬೇಕೆಂದು ನಿಯಮವಿದೆ. ಅದನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿರುವ ಕಡೆಗಳಲ್ಲಿ ಸರ್ಕಾರದವರೇ ಅದನ್ನು ಕ್ರ್ಯಾಷ್ ಪ್ರೋಗ್ರಾಮಿನಲ್ಲಿ ಸೇರಿಸಿಕೊಂಡು ಬಾವಿಗಳನ್ನು ತೋಡಿಸಿಕೊಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಎಲ್ಲಿ ಹಣ ಕೊಡುವುದಕ್ಕೆ ಸಾಧ್ಯವಿಲ್ಲವೋ ಅಂತಹ ಕಡೆಗಳಲ್ಲಿ ಸರ್ಕಾರದವರೇ ಹಾಕಿಕೊಳ್ಳುತ್ತಾರೆಂದು ಹೇಳಿದಿರಿ. ಶಕ್ತಿ ಇರುವವರು, ಇಲ್ಲದಿರುವವರು ಎಂಬುದನ್ನು ಯಾವ ರೀತಿಯಲ್ಲಿ ಕಂಡುಹಿಡಿಯುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕೂಲಿಯಿಂದ ಜೀವನ ಮಾಡತಕ್ಕಂಥ ಜನರು ಏನಿದ್ದಾರೆ ಅವರು ತಮ್ಮ ಭಾಗದ 5 ಪರ್ ಸೆಂಟನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ ಅಂತಹದನ್ನು ನಾವು ಗಣನೆಗೆ ತೆಗೆದುಕೊಂಡು ಅಂತಹ ಕಡೆಗಳಲ್ಲಿ ಸರ್ಕಾರದವರೇ ಪೂರ್ಣವಾಗಿ ಖರ್ಚು ಹಾಕಿ ಬಾವಿಗಳನ್ನು ತೋಡಿಸುತ್ತಾರೆ.

SRI D. B. KALMANKAR.—In view of the fact that the water problem is a basic problem and the projects are unnecessarily delayed on account of the contributions to be given by the Panchayats, and that the contribution asked for is also very much less, may I know whether the Government will take up these projects by their own finances and see that the problem is solved?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಮೂಲಭೂತವಾದಂಥ ಅವಶ್ಯಕತೆ ಎಂಬುದು ನಿರ್ವಿವಾದ ವಿಷಯ. ಆದ್ದರಿಂದಲೇ ಸರ್ಕಾರದವರು ಇದರ ಬಗ್ಗೆ ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು 4ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ ಎಲ್ಲ ಗೊಲ್ಲರಹಟ್ಟಿ ಗ್ರಾಮಗಳಿಗೂ ಕುಡಿಯುವ ನೀರಿನ ಸೌಕರ್ಯ ಒದಗಿಸಬೇಕೆಂದು ಮತ್ತು ಈ ವರ್ಷದ ಕೊನೆಯೊಳಗೆ ಕುಡಿಯುವ ನೀರಿನ ಸೌಕರ್ಯವಿಲ್ಲದ ಸಾವಿರ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ.

ಶ್ರೀ ವಿ. ಎನ್. ಪಾಟೀಲ್.—ಕ್ಷಾಮ ಪೀಡಿತ ಪ್ರದೇಶವಾದ ಬಿದರೆ ಜಿಲ್ಲೆಯಲ್ಲಿ ಬಾವಿಗಳಿದ್ದರೂ ಸಹ ಆ ಬಾವಿಗಳಲ್ಲಿ ಒಂದು ಗ್ಯಾಲನ್ ನೀರು ಸಹ ಸಿಗುತ್ತಿಲ್ಲ. ಅಲ್ಲಿಯ ಜನರು ಊರಿನಿಂದ ಆಚೆ 2 ಮೈಲಿ ದೂರದಿಂದ ನೀರನ್ನು ತರುತ್ತಿದ್ದಾರೆ. ಈ ಜನರ ಕಷ್ಟವನ್ನು ತಪ್ಪಿಸಲು ಬಿದರೆ ಜಿಲ್ಲೆಗೆ ಹೆಚ್ಚು ರಿಗ್ಸ್ ಯಂತ್ರಗಳನ್ನು ಒದಗಿಸಿ ಅಲ್ಲಿ ಇರುವ ಬಾವಿಗಳನ್ನು ಆಳಪಡಿಸಬೇಕೆಂದು ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ನಿರ್ದಿಷ್ಟವಾದ ಸೂಚನೆಯನ್ನು ಕೊಟ್ಟು ಅದರ ಪೂರ್ತಿ ಖರ್ಚನ್ನು ಸರ್ಕಾರದವರೇ ವಹಿಸಿಕೊಂಡು ಅಲ್ಲಿಯ ಜನರಿಗೆ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂಥಾ ಪ್ರದೇಶಕ್ಕೆ 64ನೇ ಫ್ಯಾಮಿನ್ ಹೆಡ್ ಪ್ರಕಾರ ನಾವು ಸಹಾಯ ಮಾಡುತ್ತಿದ್ದೇವೆ ಮತ್ತು ರಿಗ್ಸ್‌ಗಳನ್ನು ಉಪಯೋಗ ಮಾಡಿಕೊಂಡು ನೀರು ಬರುವವರೆಗೂ ಬಾವಿಗಳನ್ನು ತೋಡಬೇಕೆಂದು ಪ್ರತಿಯೊಬ್ಬ ಡೆಪ್ಯುಟೀ ಕಮಿಷನರಿಗೂ ಆದೇಶವನ್ನು ಕೊಡಲಾಗಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಗೊಲ್ಲರು ಪರಿಶಿಷ್ಟ ಜನಾಂಗಕ್ಕೆ ಸೇರಿರುವುದರಿಂದ ಅವರಿಂದ ಯಾವ ಕಾಂಟ್ರಿಬ್ಯೂಷನ್ ಅನ್ನೂ ತೆಗೆದುಕೊಳ್ಳದೆ ಗೊಲ್ಲರ ಹಟ್ಟಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರು ಪರಿಶಿಷ್ಟ ಜನಾಂಗಕ್ಕೆ ಸೇರಿಲ್ಲ.

ಶ್ರೀ ಬಾಪುಗೌಡ ರಾಯಪ್ಪ.—ಈಗ ಗ್ರಾಮಾಂತರ ಪ್ರದೇಶಗಳಲ್ಲಿ ರೂರಲ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ ಅನೇಕ ಹಳ್ಳಿಗಳಿಗೆ ನೀರು ಸರಬರಾಜು ಮಾಡಲು ಸರ್ಕಾರದವರು ಯೋಜನೆಗಳನ್ನು ಹಾಕಿಕೊಂಡು ಅದರಂತೆ ಅವುಗಳನ್ನು ಕಾರ್ಯಗತ ಮಾಡುತ್ತಿದ್ದಾರೆ. ಆ ಪ್ರಕಾರ ರೂರಲ್ ವಾಟರ್ ಸಪ್ಲೈ ಸ್ಕೀಂ ಮುಖಾಂತರ ಹಳ್ಳಿಗಳಿಗೆ ನೀರು ಸರಬರಾಜು ಮಾಡಿರುವ ಎಷ್ಟೋ ಕಡೆಗಳಲ್ಲಿ ಪಂಚಾಯ್ತಿಯವರು ಎಲೆಕ್ಟ್ರಿಸಿಟಿ ಚಾರ್ಜ್ ತುಂಬಲಾರದೆ ಜನಗಳಿಗೆ ನೀರು ಸಿಕ್ಕುತ್ತಿಲ್ಲ. ಅಂಥಾ ಕಡೆ ಸರ್ಕಾರದವರೇ ಈ ಯೋಜನೆಯನ್ನು ವಹಿಸಿಕೊಂಡು ಜನಗಳಿಗೆ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದ ಪಂಚಾಯತಿಯವರ ಆಬ್ಲಿಗೇಟರಿ ಡ್ಯೂಟಿ ಆದ್ದರಿಂದ ಅದನ್ನು ಪಂಚಾಯ್ತಿಯವರು ಮಾಡಬೇಕು.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಸರ್ಕಾರಕ್ಕೆ ದೊರೆತಂತಹ ರಿಗ್‌ಗಳನ್ನು ಎಲ್ಲಾ ಕಡೆಗಳಿಗೂ ಕಳುಹಿಸಿಕೊಟ್ಟು ಬಾವಿಗಳನ್ನು ತೆಗೆಸುತ್ತಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಹಾಗಾದರೆ ಈಗ ತಮ್ಮಲ್ಲಿ ಎಷ್ಟು ರಿಗ್‌ಗಳು ಇವೆ ! ಅವುಗಳು ಎಲ್ಲವೂ ಸರಿಯಾಗಿ ಕೆಲಸ ಮಾಡುತ್ತಿವೆಯೋ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜನಸ್ವಾಮಿ.—ರಿಗ್ಸ್ ಎಷ್ಟು ಇವೆ ಎಂಬುದನ್ನು ಹೇಳಬೇಕಾದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ತಾವು ಹೇಳಿದಿರಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕಾದರೆ ಆಯಾ ಸ್ಥಳೀಯ ಗ್ರಾಮಸ್ಥರು ತಾವು ಕೊಡಬೇಕಾಗಿರುವ ಕಾಂಟ್ರಿಬ್ಯೂಷನ್ ಕೊಡಬೇಕೆಂದು. ಹರಿಜನ ಗಿರಿಜನರು ಸಾರ್ವಜನಿಕ ಬಾವಿಗಳಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ಸವರ್ಣ ಹಿಂದೂಗಳು ಬಿಡುವುದಿಲ್ಲ. ಆದ್ದರಿಂದ ಸರ್ಕಾರದವರು ಹರಿಜನ ಗಿರಿಜನರಿಂದ ಯಾವ ಕಾಂಟ್ರಿಬ್ಯೂಷನ್‌ನನ್ನೂ ತೆಗೆದುಕೊಳ್ಳದೆ ಅವರಿಗೆ ಬಾವಿಗಳನ್ನು ತೋಡಿಸಿಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜನಸ್ವಾಮಿ.—ಹರಿಜನರು ಸಾರ್ವಜನಿಕ ಬಾವಿಯ ನೀರನ್ನು ಉಪಯೋಗಿಸುವಂತಾಗಲು ನೀವು ಚಳುವಳಿ ನಡೆಸಿ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಅದಕ್ಕೆ ತಯಾರಾಗಿದ್ದೇವೆ. ನೀವೂ ನಮ್ಮ ಜೊತೆಗೆ ಬರಬೇಕು.

ಶ್ರೀ ಕೆ. ಎಂ. ನಾಗಣ್ಣ.—ಮಂತ್ರಿಗಳು ಸಭೆಯಲ್ಲಿ ಆ ರೀತಿ ಚಳುವಳಿ ನಡೆಸಿ ಎಂದು ಹೇಳ ಬಹುದೇ ? ಅದು ಸಭೆಗೆ ಅಗೌರವದ ಮಾತು. ಅವರು ಸೌಜನ್ಯದ ಜವಾಬು ಕೊಡಬೇಕಲ್ಲವೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಳ್ಳಿಗಳಲ್ಲಿ 100ಕ್ಕೆ 80 ಜನಗಳು ಸವರ್ಣ ಹಿಂದೂ ಗಳು ಇದ್ದಾರೆ. 20 ಪರ್ಸೆಂಟ್ ಹರಿಜನರು ಇದ್ದಾರೆ. ಆದ್ದರಿಂದ ಹರಿಜನರು ಸಾರ್ವಜನಿಕ ಬಾವಿಗಳಲ್ಲಿ ನೀರನ್ನು ಉಪಯೋಗಿಸುವಂತಾಗಲು ಆ ಊರಿನ ಸಾರ್ವಜನಿಕರೇ ಚಳುವಳಿ ಮಾಡು ವುದಾದರೆ ಅಸ್ಪೃಶ್ಯತೆಯೂ ಹೋಗುತ್ತದೆ. ಹರಿಜನರಿಗಾಗಿ ಪ್ರತ್ಯೇಕ ಬಾವಿಗಳನ್ನು ತೋಡಿಸ ಬೇಕಾಗಿಲ್ಲ. ಈ ಪ್ರಶ್ನೆ ತಾನಾಗಿಯೇ ಬಗೆಹರಿಯುತ್ತದೆ.

ಅಧ್ಯಕ್ಷರು.—ಚಳುವಳಿ ಮಾಡಿ ಎಂದು ಮಂತ್ರಿಗಳು ಸಭೆಯಲ್ಲಿ ಹೇಳಕೂಡದು. ಆ ರೀತಿ ಹೇಳಲು ಬೇರೆ ಪ್ಲಾಟ್‌ಫಾರಂ ಇದೆ. ಆದ್ದರಿಂದ (ಚಳುವಳಿ) ಎನ್ನುವ ಪದವನ್ನು ಉಪಯೋಗ ಮಾಡಬೇಡಿ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಮಂತ್ರಿಗಳು ಕ್ರ್ಯಾಷ್ ಪ್ರೋಗ್ರಾಮ್‌ನಲ್ಲಿ ಹಳ್ಳಿಗ ಳಿಗೆ ಕುಡಿಯುವ ನೀರಿನ ಬಾವಿಗಳನ್ನು ತೆಗೆಸುವ ಯೋಜನೆಯನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದರು. ಹಾಗಾದರೆ ಕ್ರ್ಯಾಷ್ ಪ್ರೋಗ್ರಾಂನಲ್ಲಿ ಒಂದು ವರ್ಷಕ್ಕೆ ಎಷ್ಟು ಬಾವಿಗಳನ್ನು ತೆಗೆಯುವ ಅಂದಾಜನ್ನು ತಾವು ಹಾಕಿಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಇಷ್ಟು ಬಾವಿಗಳು ಎಂದು ಇಲ್ಲ. ಆಯಾ ಸ್ಥಳದ ಜನರು 5 ಪರ್ಸೆಂಟ್ ಕಾಂಟ್ರಿಬ್ಯೂಷನ್ ಹಣವನ್ನು ಕೊಡುವುದಕ್ಕೆ ಸಾಧ್ಯವಿಲ್ಲದೇ ಇರುವ ಕಡೆಗಳಲ್ಲಿ ಸರ್ಕಾರದವರು ಕ್ರ್ಯಾಷ್ ಪ್ರೋಗ್ರಾಂನಲ್ಲಿ ಸೇರಿಸಿಕೊಂಡು ಬಾವಿಗಳನ್ನು ತೋಡಿಸುತ್ತಾರೆ. ರೂರಲ್ ವಾಟರ್ ಸಪ್ಲೈ ಸ್ಕೀಂ ಪ್ರಕಾರ 4ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗಾಗಿ ಕುಡಿಯುವ ನೀರಿನ ಬಾವಿಗಳು ಇಲ್ಲದೇ ಇರುವ ಒಂದು ಸಾವಿರ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ತೋಡಿಸುತ್ತೇವೆ ಎಂದು ಈಗಾಗಲೇ ರಾಜ್ಯಪಾಲರ ಭಾಷಣದಲ್ಲಿ ಹೇಳಿದೆ.

ಶ್ರೀ ಜಿ. ಆರ್. ಸಾಂಬ್ರ.—ಹುಬ್ಬಳ್ಳಿ-ಧಾರವಾಡದಲ್ಲಿ ನೀರಿನ ಕೊರತೆ ಅಪಾರವಾಗಿದೆ. ಆದ್ದರಿಂದ ಅಲ್ಲಿನ ಜನಗಳಿಗೆ ಸಾಕಷ್ಟು ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮಾಡುತ್ತೀರಾ ?

ಅಧ್ಯಕ್ಷರು.—ಇದು ಕಳ್ಳಂಬೆಳ್ಳಕ್ಕೆ ಸೇರಿದ ಪ್ರಶ್ನೆ. ಆದ್ದರಿಂದ ನಿಮ್ಮ ಪ್ರಶ್ನೆ ಇದರಲ್ಲಿ ಬರುವುದಿಲ್ಲ.

**Sri D. B. KALMANKAR**.—In answer to (*b*) you have stated that some of these villages are situated at higher levels and rocky places and as the prescribed popular contribution was not forthcoming, these villages could not be provided with drinking water wells. Will the Government consider to take up these villages under the crash programme and execute the scheme of providing the wells ?

ಶ್ರೀ ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಸಿ. ಬೈರೇಗೌಡ.—ಕಳ್ಳಂಬೆಳ್ಳ ಚುನಾವಣಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಬಾವಿ ಗಳಿಲ್ಲದ 14 ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುತ್ತೇವೆ ಎಂದು ತಾವು ಹೇಳಿದಿರಿ. ಹೀಗಿರುವಾಗ ಈ ದೇಶದಲ್ಲಿ ಗೊಲ್ಲರ ಜನಾಂಗ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದು ಳಿದ ಜನಾಂಗದವರಾಗಿದ್ದಾರೆ, ಆದ್ದರಿಂದ ಅವರಿಂದ ವಂತಿಕೆಯನ್ನು ತೆಗೆದುಕೊಳ್ಳದೆ ಅವರಿಗೆ ಗೊಲ್ಲರಹಟ್ಟಿಯಲ್ಲಿ ಬಾವಿಗಳನ್ನು ತೋಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನು ಪ್ರಯತ್ನ ಮಾಡೋಣ.

ಒಬ್ಬ ಮಾನ್ಯ ಸದಸ್ಯರು.—ಎಷ್ಟು ಜನಗಳಿಗೆ ಒಂದು ಬಾವಿಯನ್ನು ಕೊಡಬೇಕೆಂದು ಲೆಕ್ಕ ಹಾಕಿಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸುಮಾರು ಒಂದು ಸಾವಿರ ಜನಸಂಖ್ಯೆ ಇದ್ದರೆ ಒಂದು ಎರಡು ಬಾವಿಗಳನ್ನು ಕೊಡುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—1972ನೇ ಇಸವಿಯ ಅಂತ್ಯದಲ್ಲಿ ಕುಡಿಯುವ ನೀರಿಲ್ಲದ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸಲು ವ್ಯವಸ್ಥೆ ಮಾಡುತ್ತೇವೆ ಎಂದು ಆಶ್ವಾಸನೆ ಯನ್ನು ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾನು ಈಗಾಗಲೇ ಆ ಪ್ರಶ್ನೆಗೆ ಉತ್ತರವನ್ನು ಹೇಳಿದ್ದೇನೆ. ನಾಲ್ಕನೆಯ ಪಂಚವಾರ್ಷಿಕಯೋಜನಾವಧಿಯ ಅಂತ್ಯದೊಳಗಾಗಿ ಕುಡಿಯುವ ನೀರಿನ ಬಾವಿಗಳಿಲ್ಲದ ಒಂದುಸಾವಿರ ಹಳ್ಳಿಗಳಿಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುತ್ತೇವೆ.

1-30 P.M.

MADAM SPEAKER.—There is a calling attention notice. The concerned member is not here. We will take up further discussion on the Bill.

## Mysore Land Reforms (Amendment and Miscellaneous Provisions) Bill, 1972—Motion to consider

*(Debate continued)*

† ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ ನಾನು ಮಾತನಾಡುವುದಕ್ಕೆ ಮೊದಲು ಲ್ಯಾಂಡ್ ರಿಫಾರ್ಮ್ಸ್ ಆಕ್ಟಿನ 139 ನೇ ಸೆಕ್ಷನನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವುದೇ ನ್ಯೂನತೆಗಳು ಅಥವಾ ಸಂಶಯಗಳು ಇದ್ದಲ್ಲಿ ಅದನ್ನು ನೋಟಿಫಿಕೇಶನ್ ಮೂಲಕ ತಿದ್ದಲಿಕ್ಕೆ ಸಾಧ್ಯವಿದೆ ಎಂದು ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮೊದಲನೆಯದಾಗಿ ಈ ಬಿಲ್ಲನ್ನು ತರುವ ಅವಶ್ಯಕತೆ ಇತ್ತೇ ಎಂಬ ಅನುಮಾನ ಬರುತ್ತದೆ. ಏಕೆಂದರೆ ಸೆಕ್ಷನ್ 139 ರಲ್ಲಿ ನ್ಯೂನತೆಗಳು ಏನಾದರೂ ಇದ್ದರೆ, ಅದಕ್ಕೆ ಒಂದು ನೋಟಿಫಿಕೇಶನ್ ಮಾಡಿ, ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿದ್ದಾಗ ಈ ತಿದ್ದುಪಡಿ ಬಿಲ್ಲನ್ನು ತರುವುದರ ಅವಶ್ಯಕತೆ ಏನೆಂಬುದು ನನಗೆ ಕಾಣಲಿಲ್ಲ. ಹೇಗೂ ಸರ್ಕಾರದವರು ಇದನ್ನು ತಂದಿರುವುದರಿಂದ ಇದಕ್ಕೆ ನನ್ನ ಬೆಂಬಲವನ್ನು ಕೊಡಲು ಇಚ್ಛೆಪಡುತ್ತೇನೆ. ಈ ಬಿಲ್ಲಿನ ಪ್ರಕಾರ ಸೆಕ್ಷನ್ 22ಕ್ಕೆ ಈ ರೀತಿ ಅಮೆಂಡ್‌ಮೆಂಟ್ ತಂದಿದ್ದಾರೆ.

> "Provided further that there shall be no proceedings for eviction of a tenant from any land until the average yield of the principal crops of the local area in which such land is situated is finally determined under sub-section (3) of section 8 and the prices of principal crops are notified under sub-section (2) of section 9".

ಇದರ ಪ್ರಕಾರ ಅರ್ಥ ಏನಾಗುತ್ತದೆ ಅಂದರೆ, ಎಲ್ಲಿ ಉತ್ಪನ್ನ ನಿರ್ದಿಷ್ಟವಾಗಿ ಮಾಡಿರುವುದಿಲ್ಲವೋ, ಅಲ್ಲಿ ಇದನ್ನು ಅನ್ವಯ ಮಾಡುವುದಕ್ಕಾಗುವುದಿಲ್ಲ. ಆದರೆ Section 8 of the principal Act ಪ್ರಕಾರ ಈ ರೀತಿ ಇದೆ.—

> "(a) the gross produce per acre in any year of any land in each local area specified by the State Government by notification, shall be the average yield for that year of the principal crops grown on that class and grade of land in that local area published under sub-section (4)".

ಯಾವ ರೆಗ್ಯುಲೇಟೆಡ್ ಕಮಿಟಿಯಾಗಲಿ, ತಾಹಸೀಲ್ದಾರರಾಗಲಿ ತೀರ್ಮಾನ ಕೊಡದೆ ಯಾವ ಮುನ್ಸೀಫ್ ಕೂಡ ಡಿಕ್ರಿ ಕೊಡುವುದಕ್ಕಾಗುವುದಿಲ್ಲ. ಎಲ್ಲಿಯಾದರೂ ಅಂತಹ ಸಂದರ್ಭ ನಡೆದಿದ್ದರೆ, ಅದಕ್ಕಾಗಿ ಈ ಬಿಲ್ಲನ್ನು ತಂದಿದ್ದರೆ ನಾನು ಅದನ್ನು ಸ್ವಾಗತಿಸುತ್ತೇನೆ. ಏನಾದರೂ ನ್ಯೂನತೆಗಳಿದ್ದರೆ, ಅದನ್ನು ಬೈ ಮೀನ್ಸ್ ಆಫ್ ನೋಟಿಫಿಕೇಶನ್ ಹೋಗಲಾಡಿಸಬಹುದು.

† Indicates that the remarks or speeches have not been revised by the member concerned.

ಇನ್ನೊಂದು, ನಾಲ್ಕನೆಯ ಪ್ರೊವಿಸೋದಲ್ಲಿ ಈ ರೀತಿ ಹೇಳುತ್ತಾರೆ:—

"4. Certain eviction orders not to be executed : Notwithstanding anything contained in the Priiicipal Act, or in any Court or Tribunal, no order for restoration of possession of any land to the landlord on the ground of default in paying rent by the tenant shall be executed if the tenant pays to the landlord an amount equal to the rent due for a period of two years."

ಡಿಫಾಲ್ಟರ್ಸ್ ಬಗ್ಗೆ ಸೆಕ್ಷನ್ 23 ರಲ್ಲಿ ಕ್ಲಿಯರಾಗಿ ಹೇಳಿದ್ದಾರೆ. ಅದು ಹೀಗೆ ಇದೆ:

"Notwithstanding anything contained in Section 22, the Tribunal shall not order possession to be restored...etc.,

ಅಂದಾಗ ಅಷ್ಟು ತುರ್ತಾಗಿ ಈ ಬಿಲ್ಲನ್ನು ತರಬೇಕಾದಂತಹ ಅವಶ್ಯಕತೆ ನನಗೇನೋ ತೋರುತ್ತಾ ಇಲ್ಲ. 7–8 ವರ್ಷಗಳಿಂದ ನಾನ್ ರೆಸ್ಯೂಮಬಲ್ ಲ್ಯಾಂಡ್ ಎಂದು ಡಿಕ್ಲೇರ್ ಆಗಿ ಸಾವಿರಾರು ಎಕರೆ ಜಮೀನುಗಳು, ಇತ್ತ ಕಡೆ ರೈತನಿಗೂ ಇಲ್ಲ, ಅತ್ತ ಕಡೆ ಜಮೀನದಾರನಿಗೂ ಇಲ್ಲದಂತಾಗಿ ಒಂದು ತ್ರಿಶಂಕು ಸ್ವರ್ಗವಾಗಿ ಬಿಟ್ಟಿದೆ. ಅಂಥದ್ದನ್ನು ರೈತನ ಸ್ವಾಧೀನ ಕೊಟ್ಟು ಅವನೇ ಹಕ್ಕುದಾರ ಎಂದು ಹೇಳುವುದಕ್ಕೆ ಯಾವ ತೊಂದರೆ ಇದೆ? ರಿಸಮ್ಶನ್ ಅರ್ಜಿ ಹಾಕಿದಂತಹ ಸಾವಿರಾರು ಎಕರೆ ಜಮೀನುಗಳು ಹಾಗೇ ಬಿದ್ದಿವೆ. ನಾನ್ ರೆಸ್ಯೂಮಬಲ್ ಆದ ತಕ್ಷಣ ಅದು ಸರ್ಕಾರಕ್ಕೆ ವೆಸ್ಟ್ ಆಗುತ್ತದೆ. ಅಂತಹ ಜಮೀನುಗಳ ಮೇಲೆಯೂ ಗೇಣಿ ವ್ಯಾಜ್ಯಗಳು ನಡೆಯುತ್ತಾ ಇವೆ. ನಾನ್ ರೆಸ್ಯೂಮಬಲ್ ಲ್ಯಾಂಡ್ ಎಂದು ಹೇಳತಕ್ಕದ್ದು ಯಾವುದು ಇದೆ ಅದನ್ನು ತಾವು ರೈತರಿಗೆ ಕೊಟ್ಟು ಅದಕ್ಕೆ ಏನು ಕಂಪನ್ಸೇಶನ್ ಕೊಡಬೇಕಾಗಿತ್ತೋ ಅದರ ಕೆಲ ವಂಶವನ್ನಾದರೂ ಜಮೀನ್ದಾರರಿಗೆ ಕೊಟ್ಟು ತೀರ್ಮಾನ ಮಾಡಿದ್ದರೆ 100ಕ್ಕೆ 70 ಭಾಗ ಈ ಭೂ ಸುಧಾರಣೆಯ ಸಮಸ್ಯೆ ತೀರ್ಮಾನವಾಗುತ್ತಿತ್ತು. ಹಾಗೆ ಮಾಡುವುದನ್ನು ಬಿಟ್ಟು ಇಂತಹ ಒಂದು ಬಿಲ್ಲನ್ನು ತರುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಇನ್ನುಮುಂದಾದರೂ, ಕಾಂಪ್ರೆಹೆನ್ಸೀವ್ ಲ್ಯಾಂಡ್ ರಿಫಾರಂಸ್ ಬಿಲ್ಲನ್ನು ಕೂಡಲೇ ತರಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಯಾರಿಗೂ ಇದರಿಂದ ಸುಖವಿಲ್ಲ. ಅಲ್ಲದೆ ಕೆಲವು ಮಾನ್ಯ ಸದಸ್ಯರು ಹೇಳಿದರು, ದೊಡ್ಡ ದೊಡ್ಡ ಜಮೀನ್‌ದಾರರು, ಈ ಮಂತ್ರಿಮಂಡಲದಲ್ಲಿದ್ದಾರೆ, ಆಡಳಿತ ಪಕ್ಷದಲ್ಲಿದ್ದಾರೆ, ಇವರೆಲ್ಲಾ ಇದನ್ನು ಜಾರಿಗೆ ತರುವುದಕ್ಕೆ ಬಿಡಲಿಕ್ಕಿಲ್ಲ ಅಡಚಣೆ ಮಾಡಬಹುದು ಎಂದು ನಾನಾದರೂ ಹೇಳುತ್ತೇನೆ, ಅದು ಸುಳ್ಳು ಮಾತು. ಇವೊತ್ತಿನ ದಿವಸ ಯಾವ ಜಮೀನ್ದಾರನಾಗಲಿ, ಭೂಮಾಲಿಕನಾಗಲಿ, ಇಂತಹ ಪರಿಸ್ಥಿತಿಯಲ್ಲಿರುವುದಕ್ಕೆ ಸಾಧ್ಯವಿಲ್ಲ. 25 ವರ್ಷಗಳಿಂದಲೂ ಈ ಭೂಸುಧಾರಣೆಯನ್ನು ತರುತ್ತೇವೆ, ರೈತನಿಗೆ ಒಂದು ಅನುಕೂಲವನ್ನು ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದಾರೆ. ಹಾಗಿರುವಾಗ ಮಕ್ಕಳಿಗೆ ಪೆಪ್ಪರ್‌ಮೆಂಟ್ ತೋರಿಸಿ ಎಷ್ಟು ಸಮಯದವರೆಗೆ ಕೊಡದೆ ಇರುವುದಕ್ಕಾಗುತ್ತದೆ? ಒಂದಲ್ಲ ಒಂದು ಬಾರಿ ಕೊಡಲೇಬೇಕಾಗುತ್ತದೆ. ಹಾಗೆಯೇ ಇದು. ಆದ್ದರಿಂದ ಯಾವ ಭೂಮಾಲಿಕನೂ ಇದನ್ನು ವಿರೋಧ ಮಾಡುವ ಹಾಗಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಮಗುವಿಗೆ ಈಗ 25 ವರ್ಷವಾಗಿದೆ. ಕೊಡದಿದ್ದರೆ ಅದು ಕಿತ್ತುಕೊಳ್ಳುತ್ತದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—25 ವರ್ಷಗಳಿಂದ ಇದೇ ಪಕ್ಷ ಇದ್ದಿರಲಿಲ್ಲ. ಇವೊತ್ತಿನ ದಿವಸ ನಾವು ಏನು ಧೋರಣೆಯನ್ನು ಇಟ್ಟುಕೊಂಡು ಬಂದಿದ್ದೇವೆ ಆ ಧೋರಣೆಗಳನ್ನು ಅನುಷ್ಠಾನಕ್ಕೆ ತರುತ್ತೇವೆ. ಸೆಕ್ಷನ್ 14 ಪ್ರಕಾರ ಭೂಸುಧಾರಣೆ ಜಾರಿಗೆ ಬಂದ ತಕ್ಷಣ ಅರ್ಜಿ ಹಾಕಿದರೂ ವಾಸ್ತವವಾಗಿ ಯಾವ ಒಬ್ಬ ಮನುಷ್ಯನಿಗೂ ಒಂದು ಇಂಚು ಭೂಮಿಯನ್ನು ಕೂಡ ಬಿಡಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಅದೇ ರೀತಿ ಫ್ರ್ಯಾಗ್‌ಮೆಂಟೇಷನ್ ಮಾಡಕೂಡದು ಎಂದು ನೋಟಿಫಿಕೇಶನ್ ತಂದಿದ್ದಾರೆ; ಜೊತೆಗೆ ಸೆಕ್ಷನ್ 14 ಇಟ್ಟಿದ್ದಾರೆ. ಇವೊತ್ತಿನ ದಿವಸ ಟ್ರಿಬ್ಯೂನಲ್‌ನಲ್ಲಿ ಅಥವಾ ಮುನ್ಸಿಫ್ ಕೋರ್ಟಿನಲ್ಲಿ ಅರ್ಧ ಜಮೀನನ್ನು ಬಿಡಿಸಿಕೊಳ್ಳುತ್ತಾರೆ. ಆಗ ಫ್ರ್ಯಾಗ್‌ಮೆಂಟೇಷನ್ ಆದರೆ ಅದು ಆಕ್ಟಿಗೆ ವಿರುದ್ಧವಾಗುವುದಿಲ್ಲವೇ? ಇವೊತ್ತಿನ ದಿವಸ ಜನರು ಪ್ರಜ್ಞಾವಂತರಾಗಿದ್ದಾರೆ. ಸಾರ್ವಜನಿಕರಿಗೆ ಜ್ಞಾನ ಬಂದಿದೆ. ಅವನು ಸುಖವಾಗಿರುವಾಗ ನಾನು ಏಕೆ ಸುಖವಾಗಿರಬಾರದು ಎಂದು ಕೇಳುವ ಮಟ್ಟಿಗೆ ಬಂದಿದ್ದಾರೆ. ನಾನು ಕೇಳಿಕೊಳ್ಳು.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ವುದೇನೆಂದರೆ, ಈಗ ನೋಟಿಫಿಕೇಷನ್ ಹೊರಡಿಸಿಬಿಟ್ಟು, ಯಾರ್ಯಾರು ಸಣ್ಣ ಹಿಡುವಳಿದಾರರು ಇದ್ದಾರೆ ಅವರಿಗೆ ಕೊಡುವ ಪರಿಹಾರವನ್ನು ಸರ್ಕಾರದವರು ನ್ಯಾಷನಲೈಸ್ಡ್ ಬ್ಯಾಂಕಿನಿಂದಾದರೂ ತೆಗೆದು ಒಂದೇ ಕಂತಿನಲ್ಲಿ ಕೊಟ್ಟರೆ, ಅವರು ಒಂದು ಜೀವನ ಮಾರ್ಗವನ್ನು ಹಿಡಿಯುವುದಕ್ಕೂ ಅವಕಾಶವಾಗುತ್ತದೆ ಆ ರೀತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಹಾಗೆ ಮಾಡದೆ ಇದನ್ನು ತ್ರಿಶಂಕು ಸ್ವರ್ಗದಲ್ಲಿದ್ದಂತೆ ಈ ಸಭೆಯ ಮುಂದೆ ಇಟ್ಟರೆ ಇದರಿಂದ ಯಾರಿಗೂ ಸೌಕರ್ಯವಿಲ್ಲ. ಭೂಮಾಲೀಕನಾದವನು ಒಬ್ಬ ರೈತನನ್ನು ಏನೋ ಒಂದು ಅಹಿತದೃಷ್ಟಿಯಿಂದ ನೋಡುತ್ತಾನೆಂದರೆ, ಭೂಮಾಲೀಕನನ್ನು ರೈತನೂ ಸಹ ಅಂತಹ ಒಂದು ಅಹಿತ ರೀತಿಯಲ್ಲೇ ನೋಡುತ್ತಾನೆ. ಇಂತಹ ಒಂದು ಅವ್ಯವಸ್ಥೆ ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯಲ್ಲಿಯೂ ಇದೆ. ಇವತ್ತು ಜನರು ನಮ್ಮನ್ನು ಚುನಾಯಿಸಿ ಇಲ್ಲಿಗೆ ಕಳುಹಿಸಿದ ಮೇಲೆ ಯಾವುದಾದರೂ ಒಂದು ಅರ್ಜಿಯನ್ನು ರೈತನಾದವನು ನಮ್ಮಲ್ಲಿಗೆ ತೆಗೆದುಕೊಂಡು ಬಂದರೆ, ಅದರ ಬಗ್ಗೆ ವಿಚಾರ ಮಾಡುವುದು ನಮ್ಮ ಆದ್ಯ ಕರ್ತವ್ಯ. ಈ ವಿಚಾರವನ್ನು ನಾವು ಪ್ರತಿಯೊಂದು ವೇದಿಕೆಯ ಮೇಲೆ ನಿಂತು ಹೇಳಿದ್ದೇವೆ. ಇವತ್ತು ಇರತಕ್ಕ ತಿದ್ದುಪಡಿಯನ್ನು ಮೊದಲು ತೆಗೆದುಹಾಕಿ, ಕೂಡಲೇ ಒಂದು ಕಾಂಪ್ರಹೆನ್ಸಿವ್ ಬಿಲ್ಲನ್ನು ತಂದಿದ್ದರೂ ಬಹಳ ಚೆನ್ನಾಗಿತ್ತು. ಇವತ್ತು ಒಂದೆರಡು ಎಕ್ಸ್‌ಪ್ಲನೇಷನ್‌ಗಳನ್ನು ನಾನು ಕೇಳಬೇಕೆಂದಿದ್ದೇನೆ. ತಹಸೀಲ್ದಾರರು ಲೆಕ್ಕ ಮಾಡಿರತಕ್ಕ ಆರ್ಡ್ ಹೈಕೋರ್ಟಿಗೆ ಹೋಗಿ ಕ್ಯಾಷ್ ಆಗಿದೆ. ಅದಕ್ಕೆ ಮುಂಚಿತವಾಗಿಯೇ ಡಿಕ್ರಿ ಕೊಟ್ಟಿದ್ದಾರೆ. ಪ್ರಕೃತ ಈಗ ಇರತಕ್ಕ ಸಮಸ್ಯೆ ಏನೆಂದರೆ. ಇವತ್ತು ಕೇವಲ ಒಂದು, ಎರಡು, ಮೂರು, ನಾಲ್ಕು ಎಕರೆಗಳಿರುವ ಭೂಮಾಲೀಕರೂ ಸಹ ಇದ್ದಾರೆ. ಅವರಿಗೆ ಒಂದು ಹೊತ್ತು ತಿನ್ನುವುದಕ್ಕೆ ಇಲ್ಲ. ಒಂದು ಹೊತ್ತಿಗೆ ಇದ್ದರೆ, ಇನ್ನೊಂದು ಹೊತ್ತಿಗೆ ಇಲ್ಲ. ಅಂತಹವರಿಗೆ ನಿಜವಾಗಿಯೂ ಕಂಪನ್ಸೇಷನ್ ಕೊಡಿ. ರೈತರಿಗೆ ಇದು ನನ್ನ ಜಮೀನು ಎಂಬ ಭಾವನೆ ಬರಬೇಕು ಅದು ಇದುವರೆಗೂ ಆಗಿಲ್ಲ. ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಸುಮಾರು 25 ವರ್ಷಗಳಿಂದಲೂ ಹೇಳುತ್ತಲೇ ಇದ್ದಾರೆ. ಭೂಮಿ ನನ್ನದು ಅಲ್ಲ ಎಂದು ಯಾವ ಹಳ್ಳಿಯ ರೈತನೂ ಭೂಮಿಗೋಸ್ಕರ ದುಡ್ಡು ಹಾಕುವುದಕ್ಕೆ ಹೆದರುತ್ತಾನೆ. ಭೂಮಿ ನನಗೆ ಸೇರುತ್ತದೋ ಇಲ್ಲವೋ ಎಂಬ ಯೋಚನೆ ಭೂಮಾಲೀಕನದು. ಹೀಗಾಗಿ ಭೂಮಾಲೀಕ ರೈತನಿಗೆ ಸಾಲ ಕೊಡುತ್ತಾ ಇಲ್ಲ. ಆಹಾರ ಸಮಸ್ಯೆ ಉಂಟಾಗಿ ಬಹಳ ಕಷ್ಟವಾಗಿರುವುದು ಇದರಿಂದಲೇ. ಯಾವ ರೈತ ಭೂಮಿಯ ಮೇಲೆ ದುಡ್ಡು ಹಾಕಿದ್ದಾನೋ ಅವನಿಗೆ ಒಂದು ವೇಳೆ ತರೀ ಜಮೀನು ಇರುವುದಾದರೆ, ವರ್ಷೇ ವರ್ಷೇ ಅದರಿಂದ ಹೆಚ್ಚು ವರಮಾನ ಬಂದರೆ, ಆಗ ತಾನೇ ಇನ್ನಷ್ಟು ಹೆಚ್ಚಿಗೆ ಖರ್ಚು ಮಾಡುತ್ತಾನೆ ಹೆಚ್ಚು ಆಹಾರಧಾನ್ಯ ಬೆಳೆಯುತ್ತಾನೆ. ಹಿಂದೆ ಅಂತಹ ಒಳ್ಳೆಯ ಜಮೀನು ಹೊಂದಿದ್ದ ಭೂಮಾಲೀಕ ದುಡ್ಡು ಹಾಕಿ ತಾನೇ ಜಮೀನು ಆಬಾದು ಮಾಡಿಸಿಕೊಡುತ್ತಿದ್ದ. ಇಂದಿನ ಪರಿಸ್ಥಿತಿ ಹಾಗೆ ಇಲ್ಲ. ಈಗ ರೈತ ನನಗೆ ಆಬಾದು ಮಾಡಿಸುವುದಕ್ಕಾಗುವುದಿಲ್ಲ, ನೀವೇ ಮಾಡಿಸಿಕೊಡಿ, ನಾನು ಜಮೀನು ಉಳುಮೆ ಮಾಡುತ್ತೇನೆಂದು ಹೇಳುತ್ತಾನೆ. ಹೀಗಾಗಿ ಮಲೆನಾಡು ತಾಲ್ಲೂಕುಗಳಲ್ಲಿ ನೂರಾರು ಎಕರೆಗಳಷ್ಟು ಜಮೀನು ಪಾಳು ಬಿದ್ದಿವೆ. ಇಂತಹ ಪರಿಸ್ಥಿತಿಯನ್ನು ಎಲ್ಲಿಯವರೆಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯ ? ರೈತರಿಗೆ ನೆಮ್ಮದಿ ಆಗುವಂತೆ ಇದು ತಮ್ಮ ಜಮೀನು ಎಂದು ಹೇಳುವ ಒಂದು ನೋಟಿಫಿಕೇಷನನ್ನು ಜಾರಿಗೆ ಕೊಡಬೇಕು. ಅಂತಹ ಒಂದು ಬಿಲ್ಲನ್ನು ತರಬೇಕು. ಈಗ ತಂದಿರುವ ಬಿಲ್ ಪ್ರಗತಿಪರವಾದ ಧೋರಣೆಯುಳ್ಳದ್ದರೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕು. ಒಟ್ಟಿನಲ್ಲಿ ಈ ಭೂಸುಧಾರಣೆಯ ಬಗ್ಗೆ ಕ್ರಾಂತಿಕಾರಕವಾದಂಥ ತಿದ್ದುಪಡಿ ಮಸೂದೆ ತಂದರೆ ಬಹಳ ಒಳ್ಳೆಯದು. ಯಾವ ರೀತಿಯಾದಂಥ ಅನ್ಯಾಯಗಳೂ ಇದರಲ್ಲಿ ನಡೆಯದಂತೆ ನೋಡಿಕೊಂಡು, ಜನತೆ ನಮ್ಮ ಮೇಲೆ ಇಟ್ಟಿರತಕ್ಕ ವಿಶ್ವಾಸಕ್ಕೆ ಎಲ್ಲರೂ ಪಾತ್ರರಾಗಬೇಕೆಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಭೂಸುಧಾರಣಾ ಕಾನೂನಿಗೆ ತಿದ್ದುಪಡಿಯನ್ನು ತಂದಿರತಕ್ಕಂಥ ಮಾನ್ಯ ಸಚಿವರಾದ ಶ್ರೀ ಹುಚ್ಚಮಾಸ್ತಿಗೌಡರಿಗೆ ನಾನು ಬಹಳವಾಗಿ ವಂದನೆಗಳನ್ನು ಸಲ್ಲಿಸಬೇಕು. ಆದರೆ ಬಹಳ ಎಂಬ ಪದ ಪ್ರಯೋಗ ಮಾಡಿದರೆ ಈ ಬಿಲ್ಲಿಗೆ ಸಂಪೂರ್ಣವಾಗಿ ಅದು ಲಾಯಕ್ಕಾಗಿರುವುದಿಲ್ಲವೆಂದು ಕಾಣುತ್ತದೆ. ತಮಗೆ ವಂದನೆ ಮಾಡುವ ವಿಷಯದಲ್ಲಿ ಕೇವಲ ನಾಂದಿಯಾಗುತ್ತದೆ. ತಾವೇ ಹೇಳಿದ್ದೀರಿ. ಮುಂದೆ ಬರತಕ್ಕ ಆಯವ್ಯಯ ಅಧಿವೇಶನದಲ್ಲಿ ಜೂನ್ ತಿಂಗಳಲ್ಲಿ ತಾವು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಈ ಭೂ

ಸುಧಾರಣೆ ಕಾನೂನಿಗೆ ತರುತ್ತೇವೆಂಬ ವಾಗ್ದಾನವನ್ನು ಈ ಸಭೆಯಲ್ಲಿ ಕೊಟ್ಟಿರುವುದರಿಂದ ನಾನು ನಿಮಗೆ ವಂದನೆಗಳನ್ನು ಅರ್ಪಿಸುತ್ತೇನೆಂದು ಹೇಳಿದೆ. ಈ ಲ್ಯಾಂಡ್ ರಿಫಾರ್ಮ್ ಬಗ್ಗೆ ಒಂದು ಕಾಂಪ್ರಿಹೆನ್ಸಿವ್ ಲೆಜಿಸ್ಲೇಷನ್ನನ್ನು ಬರುವ ಜೂನ್ ತಿಂಗಳಲ್ಲಿ ತರುತ್ತೇವೆಂದು ಹೇಳಿದಿರಿ. ಬಹಳ ಸಂತೋಷಕರವಾದ ವಿಷಯ. ಈಗ 22 ನೇ ಸೆಕ್ಷನ್ ಬಗ್ಗೆ ನಾವು ಏನು ಹೇಳುತ್ತೇವೆನ್ನುವ ಮಾತನ್ನು ತಾವು ಕೇಳುತ್ತಿದ್ದೀರಿ. ಆದರೆ ನಾವು ಮಾತನಾಡುವುದು ಹೆಚ್ಚಿಗೆ ಸಮಗ್ರವಾದ ಭೂ ಸುಧಾರಣೆಯ ಕಾನೂನಿಗೆ ತರತಕ್ಕ ತಿದ್ದುಪಡಿ ಮಸೂದೆಯ ಮೇಲೆ. ಬಹುಮಂದಿ ಸದಸ್ಯರು ಈಗಾಗಲೇ ಈ ತಿದ್ದುಪಡಿಯ ಮೇಲೆ ಮಾತನಾಡಿದ್ದಾರೆ. ನಾನು ಮಾತನಾಡುವುದಿಷ್ಟೆ. ಈಗ ಸೆಕ್ಷನ್ 22 ರ ಪ್ರಕಾರ ಯಾವ ಜಮೀನ್ದಾರ ಗೇಣೀದಾರನ ಮೇಲೆ ಡಿಕ್ರಿ ಪಡೆಯುತ್ತಾನೋ ಆ ಡಿಕ್ರಿ ಆಧಾರದ ಮೇಲೆ ಅವನನ್ನು ಆ ಜಮೀನಿನಿಂದ ಬಿಡಿಸಬಹುದು ಎಂಬುದಾಗಿ ಏನು ನಿರೂಪಣೆ ಆಗಿದೆ ಅದನ್ನು ನಿಲ್ಲಿಸುವ ನಿಮ್ಮ ಉದ್ದೇಶ ಒಳ್ಳೆಯದು. ನಿಮ್ಮ ಆಸೆ ಗೇಣಿದಾರನ ಪರಿಸ್ಥಿತಿಯನ್ನು ಬಗೆಹರಿಸಬೇಕೆಂಬುದು ಆಗಿದೆ. ಕರಾಚಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಮಹಾತ್ಮ ಗಾಂಧಿಯವರ ಕಾಲದಲ್ಲಿ ತೀರ್ಮಾನ ಮಾಡಿದಂಥ ವಿಷಯವೇನೆಂದರೆ, ಉಳುವವನೇ ಈ ದೇಶದಲ್ಲಿ ಭೂ ಒಡೆಯನಾಗಬೇಕೆಂಬುದು. ಇದು ದಿವಂಗತ ಮಹಾತ್ಮ ಗಾಂಧಿಯವರ ಮತ್ತು ದಿವಂಗತ ಪಂಡಿತ ಜವಹರ್‌ಲಾಲ್ ನೆಹರೂ ಅವರ ಕಾಲದಲ್ಲಿ ತೀರ್ಮಾನವಾದಂಥ ವಿಷಯ. ಈ ತೀರ್ಮಾನವಾದುದು 1931 ನೇ ಇಸವಿಯಲ್ಲಿ ಇದ್ದಿರಬಹುದು. ಆದ್ದರಿಂದ ಉಳುವವನೇ ಹೊಲದ ಒಡೆಯನಾಗಬೇಕೆಂಬ ಕಾಂಗ್ರೆಸ್ಸಿನ ಘೋಷಣೆ ಈ ದೇಶಕ್ಕೆ ಹೊಸದಲ್ಲ. ಒಂದುವೇಳೆ ನೀವು ಮುಂದೆ ಬರುವ ಜೂನ್ ತಿಂಗಳ ಅಧಿವೇಶನದಲ್ಲಿ ಇದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದರೆ ಒಳ್ಳೆಯದು. ನೀವೇ ಅಂದರೆ ಬರೀ ಕಾಂಗ್ರೆಸ್ಸಿನವರೇ, ಅಲ್ಲ, ಎಲ್ಲರೂ ಕಾಂಗ್ರೆಸ್ಸಿನವರಾಗಿಯೇ ಮೊದಲಿನಿಂದ ಇದ್ದರು. ಸ್ವಾತಂತ್ರಗಳಿಸುವುದರಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದರು. ಆದರೆ ಈಗ ನಿಮ್ಮನ್ನು ವಿರೋಧ ಮಾಡುವ ಜನ ನಾವೇ. ಹಿಂದೆ ಇದೇ ಸಭೆಯಲ್ಲಿ ನೀವು ನಮ್ಮ ಪಕ್ಷವಲ್ಲಿ ಕುಳಿತು ಅನೇಕ ವರ್ಷಗಳಿಂದ ವಿರೋಧ ಮಾಡುತ್ತಿದ್ದೀರಿ. ಅದನ್ನು ಕೆಲವು ಜನ ಮೆಚ್ಚಿದ್ದಾರೆ. ನೀವೂ ಮೆಚ್ಚಿದ್ದೀರಿ. ಉಳುವವನೇ ಹೊಲದ ಒಡೆಯನಾಗಬೇಕೆಂಬ ಆಶೆ ನಿಮಗಿದ್ದರೆ, ತ್ವರಿತಗತಿಯಿಂದ ಉಳುವವನಿಗೆ ಹೊಲದ ಒಡೆತನವನ್ನು ಕನ್‌ಫರ್ಮ್ ಮಾಡಬೇಕೆಂಬ ಆಶೆ ಇದ್ದರೆ ಈಗ ತಾವೂ ಮಾಡುವುದು ಸರಿಯಲ್ಲ. ಈಗ ಸೆಕ್ಷನ್ 22 ಕ್ಕೆ ತಂದಿರುವ ತಿದ್ದುಪಡಿಯನ್ನು ನೋಡಿದರೆ ನಿಮ್ಮನ್ನು ಯಾರೂ ನಂಬುವುದಿಲ್ಲ. ಕೆಲವರು ಈ 22 ನೇ ಸೆಕ್ಷನ್ನಿಗೆ ತಿದ್ದುಪಡಿಗಳನ್ನು ತಂದಿರಬಹುದು. ಇದರ ಬಗ್ಗೆ ಎಲ್ಲಾ ಅಂಕಿ ಅಂಶಗಳನ್ನೂ ತಾವು ಈ ಸದನದ ಮುಂದೆ ಇಟ್ಟಿದ್ದೀರಾ ಎಂದು ನಾನು ಪ್ರಶ್ನೆ ಮಾಡುತ್ತೇನೆ.

ತಾವು ಸೆಕ್ಷನ್ (14) ಮತ್ತು (22)ನ್ನು ಹೋಲಿಸಿ ನೋಡಿ, ಸೆಕ್ಷನ್ 14ರ ಪ್ರಕಾರ ಪೆಂಡಿಂಗ್ ಇರತಕ್ಕ ಕೇಸುಗಳ ಸಂಖ್ಯೆ 95 ಸಾವಿರ ಆದರೆ ಸೆಕ್ಷನ್ 22ರ ಪ್ರಕಾರ ಪೆಂಡಿಂಗ್ ಇರತಕ್ಕ ಕೇಸುಗಳ ಸಂಖ್ಯೆ 1,013 ಮಾತ್ರ. ಈ ಎರಡು ಸೆಕ್ಷನ್ನುಗಳೂ ಗೇಣೀದಾರನಿಗೆ ಅನಾನುಕೂಲವಾದವುಗಳೇ. ಆದರೆ ಆದೇನು ಕಾರಣವೋ ಗೊತ್ತಾಗಲಿಲ್ಲ ಸರ್ಕಾರದವರು ಗೇಣೀದಾರನ ಬಗ್ಗೆ ಸೆಕ್ಷನ್ 14ರ ಪ್ರಕಾರ ಪೆಂಡಿಂಗ್ ಇರತಕ್ಕ ಕೇಸುಗಳ ಬಗ್ಗೆ ಕಳಕಳಿ ತೋರಿಸದೆ ಅಲ್ಲಿ ಗೇಣೀದಾರರ ಕೇಸುಗಳ ಸಂಖ್ಯೆ ಅಧಿಕವಾಗಿದ್ದರೂ ಅದರ ಬಗ್ಗೆ ಏನು ಕ್ರಮ ಕೈಗೊಳ್ಳಬೇಕೆಂಬುದನ್ನು ಯೋಚಿಸದೆ ಕೇವಲ 1,013 ಕೇಸುಗಳ ಬಗ್ಗೆ ಸರ್ಕಾರದವರು ಇಷ್ಟೊಂದು ಕಳಕಳಿಯನ್ನು ಏಕೆ ವ್ಯಕ್ತಪಡಿಸುತ್ತಿದ್ದಾರೆಂಬುದೇ ನನಗೆ ತಿಳಿಯುತ್ತಿಲ್ಲ. ಸರ್ಕಾರದವರಿಗೆ ಗೇಣೀದಾರರ ಬಗ್ಗೆ ಕಳಕಳಿ ಇದ್ದಿದ್ದರೆ ಅವರೇಕೆ ಈ ಸೆಕ್ಷನ್ 14ರ ಪ್ರಕಾರ ದಾಖಲಾಗಿರತಕ್ಕ ಕೇಸುಗಳ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ ? ಈ ದಿವಸ ಆಡಳಿತ ಪಕ್ಷದಲ್ಲಿರತಕ್ಕ ಶ್ರೀಯುತರುಗಳಾದ ಎಸ್. ಎಂ. ಕೃಷ್ಣಾ ಅವರು, ಹುಚ್ಚಮಾಸ್ತಿಗೌಡರು, ಚನ್ನಬಸಪ್ಪನವರು ಮತ್ತು ಘೋರ್ಪಡೆಯವರು, ಶಂಕರ ಆಳ್ವ ಅವರು ಮತ್ತು ಇತರೇ ಸಚಿವರುಗಳು ಇಲ್ಲಿಯವರೆಗೂ ಅವರಿಗೆ ಈ ಬಡಪಾಯಿಗಳಾದ ಗೇಣೀದಾರರ ಬಗ್ಗೆ ಏನಾದರೂ ಕಳಕಳಿಯಿದ್ದಿದ್ದರೆ ಅವರೆಲ್ಲರೂ ಏಕೆ ಈ ಸೆಕ್ಷನ್ 14ರ ಪ್ರಕಾರ ಮುಲ್ಕನಿಂತಿರತಕ್ಕ ಕೇಸುಗಳ ಬಗ್ಗೆ ಒಂದು ಅನುಕೂಲ ಮಾಡಲು ಪ್ರಯತ್ನ ಮಾಡಲಿಲ್ಲ ? ಕಳೆದ ಸಾರ್ವತ್ರಿಕ ಚುನಾವಣೆಗಳು ಮುಗಿದ ಕೂಡಲೆ ಸರ್ಕಾರ ಒಂದು ಆರ್ಡಿನೆನ್ಸನ್ನು ಈ ಸೆಕ್ಷನ್ ಬಗ್ಗೆ ಹೊರಡಿಸಬೇಕಾಗಿತ್ತು. ಶ್ರೀ ದೇವರಾಜ್ ಅರಸರವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ ಇದಕ್ಕೆ ಒಂದು ಆರ್ಡಿನೆನ್ಸ್ ಹೊರಡಿಸಬಹುದಾಗಿತ್ತು. ಅದನ್ನು ಮಾಡಲಿಲ್ಲ. ಬ್ಯಾಂಕ್ ನ್ಯಾಷನಲೈಜ್ ಮಾಡತಕ್ಕ ಕಾಲದಲ್ಲಿ ಕೇಂದ್ರ ಸರ್ಕಾರ ಎಷ್ಟಾವರ್ತಿ ಆರ್ಡಿನೆನ್ಸ್‌ಗಳನ್ನು ಹೊರಡಿಸಿತು ? ಈ ದಿವಸ ಕೇಂದ್ರದಲ್ಲೂ ನಿಮ್ಮ ಪಕ್ಷವೇ ಆಡಳಿತದಲ್ಲಿದೆ. ನೀವು ಒಂದು ಆರ್ಡಿನೆನ್ಸನ್ನು ಹೊರಡಿಸಬಹುದಾಗಿತ್ತು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಮುಖ್ಯ ಮಂತ್ರಿಗಳು ಪ್ರತಿಜ್ಞೆ ತೆಗೆದುಕೊಂಡ ಮಾರನೇ ದಿನವೇ ಅಧಿವೇಶನ ಇದ್ದಾಗ ಆರ್ಡಿನೆನ್ಸ್‌ಗಳನ್ನು ಹೇಗೆ ಹೊರಡಿಸುವುದಕ್ಕಾಗುತ್ತದೆ?

ಶ್ರೀ ಎಸ್. ಬಂಗಾರಪ್ಪ.—ಅವರು ಪ್ರತಿಜ್ಞೆ ತೆಗೆದುಕೊಂಡ ಮೂರು ನಾಲ್ಕು ದಿನಗಳ ನಂತರ ಅಧಿವೇಶನ ಪ್ರಾರಂಭವಾಯಿತು ಇರಲಿ, ನಮ್ಮ ಜನರು ಈ ಭೂಸುಧಾರಣೆಯ ಬಗ್ಗೆ ಕೂಗಿ ಕೂಗಿ ಬಹಳ ಸುಸ್ತಾಗಿ ಈಗ ಬಡಜನರು ಮಾತನಾಡುವುದಕ್ಕೆ ಶಕ್ತಿ ಇಲ್ಲದೆ ಸುಮ್ಮನೆ ಬಿದ್ದಿದ್ದಾರೆ. ನೀವು ಒಂದು ಸಮಗ್ರ ಮಸೂದೆಯನ್ನು ಬರುವ ಜೂನ್ ತಿಂಗಳಲ್ಲಿ ತರತಕ್ಕವರಿರುವುದರಿಂದ ಅವರು ಇಲ್ಲಿಗೆ 25 ವರ್ಷಗಳಿಂದ ಕಾಯುತ್ತಿದ್ದವರು ಇನ್ನು ಒಂದೆರಡು ತಿಂಗಳು ಕಾಯುವುದಕ್ಕೆ ಅವರಿಂದ ಆಗುತ್ತಿರಲಿಲ್ಲವೇ? ಹಾಗೆ ಕಾಯತಕ್ಕ ಸಹನೆ ಅವರಲ್ಲಿ ಇನ್ನೂ ಇದೆ. ಆದರೆ ಕೂಗತಕ್ಕ ಶಕ್ತಿ ಮಾತ್ರ ಇಲ್ಲ. ಈ ಭೂಸುಧಾರಣೆಯ ಕಾನೂನು ಮೊಟ್ಟಮೊದಲಿಗೆ ಇಲ್ಲಿ ಜಾರಿಗೆ ಬಂದದ್ದು 1965ನೇ ಅಕ್ಟೋಬರ್ ಎರಡನೇ ತಾರೀಖಿನ ದಿನ. ಆದರೆ ಅದನ್ನು ಜಾರಿಗೆ ತರತಕ್ಕ ವಿಚಾರದಲ್ಲಿ ಅನೇಕ ಅಡ್ಡಿ ಅಡಚಣೆಗಳು ಆಡಳಿತ ಪಕ್ಷದಲ್ಲೇ ಉಂಟಾದವು. ಅವರೆ ಆ ಕಾಲಕ್ಕೆ ನಾವು ಆ ಕಾಂಗ್ರೆಸ್ಸಿನಲ್ಲಿ ಇರಲಿಲ್ಲ ಎಂದು ಜಾರಿಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ ಹಾಲಿ ಇರತಕ್ಕ ಕಾಂಗ್ರೆಸ್ ಪಕ್ಷದಲ್ಲಿ ಈ ಬಡಜನರ ಬಗ್ಗೆ ಕಳಕಳಿ ಪಡತಕ್ಕ ಕೆಲವು ಜನರು ಇದ್ದಾರೆ. ಆದಾಗ್ಯೂ ಯಾರೊಬ್ಬರೂ ಈ ಸೆಕ್ಷನ್ 14ರ ಬಗ್ಗೆ ಗೇಣೀದಾರನಿಗೆ ಆಗತಕ್ಕ ಅನಾನುಕೂಲವನ್ನು ತಡೆಗಟ್ಟಲು ಏತಕ್ಕೆ ಮನಸ್ಸು ಮಾಡಲಿಲ್ಲ ಎಂಬುದೇ ನನಗೆ ಅರ್ಥವಾಗುತ್ತಿಲ್ಲ. 1013 ಕೇಸುಗಳೇನಿವೆ ಅಲ್ಲಿ ಈ ಒಕ್ಕಲೆಬ್ಬಿಸುವುದನ್ನು ತಡೆಗಟ್ಟುತ್ತೇವೆ; ಆದರೆ ಆ 95 ಸಾವಿರ ಕೇಸುಗಳ ಪ್ರಕರಣಗಳಲ್ಲಿ ಒಕ್ಕಲೆಬ್ಬಿಸುವ ಕಡೆ ಸರ್ಕಾರ ಮನಸ್ಸು ಮಾಡದಿರುವುದಕ್ಕೇನು ಕಾರಣವೋ ತಿಳಿಯದಾಗಿದೆ. ಇದರ ಔಚಿತ್ಯವೇನು? ಇವರಿಗೇಕೆ ಆ ಬಡಜನತೆಯ ಬಗ್ಗೆ ಕಳಕಳಿಯಿಲ್ಲ! ಈ ಸರ್ಕಾರಕ್ಕೆ ನಿಜವಾಗಿಯೂ ಸಮಾಜವಾದದಲ್ಲಿ ನಂಬಿಕೆ ಇದ್ದ ಪಕ್ಷದಲ್ಲಿ ಈ 95 ಸಾವಿರ ಕೇಸುಗಳ ಬಗ್ಗೆ ಒಕ್ಕಲೆಬ್ಬಿಸತಕ್ಕ ಸಂದರ್ಭದಲ್ಲಿ ಸರ್ಕಾರ ಒಂದು ತಿದ್ದುಪಡಿ ಮಸೂದೆಯನ್ನು ತರಬೇಕಾಗಿತ್ತು. ಅದರ ಬಗ್ಗೆ ಜೂನ್ ತಿಂಗಳಲ್ಲಿ ತರುತ್ತೇವೆಂದು ಹೇಳುತ್ತಿರುವುದರ ಬಗ್ಗೆ ನನಗೇನೋ ಬಹಳ ಶಂಕೆ ಇದೆ. ಈ ಸರ್ಕಾರ ಒಂದು ಸಮಗ್ರ ಭೂಸುಧಾರಣಾ ಶಾಸನವನ್ನು ತಿದ್ದತಕ್ಕ ಮಸೂದೆಯನ್ನು ಬರುವ ಜೂನ್ ತಿಂಗಳಲ್ಲಿ ತರುತ್ತದೆಂಬುದನ್ನು ನಾನು ನಂಬಲಾರೆ. ಇಂಥ ಅನೇಕ ಹೇಳಿಕೆಗಳನ್ನು ಹಲವಾರು ಬಾರಿ ಆ ಪಕ್ಷದವರು ಕೊಡುತ್ತ ಬಂದಿದ್ದಾರೆ. ಆದ್ದರಿಂದ ಈಗ ಇವರು ಕೊಡುತ್ತಿರುವ ಹೇಳಿಕೆ ಏನಿದೆ ಇದೇನೂ ನಮಗೆ ಒಂದು ಹೊಸ ಹೇಳಿಕೆಯಲ್ಲ. ಇದೇ ಹೇಳಿಕೆ ಇಲ್ಲಿ ಅನೇಕಾವರ್ತಿ ಘೋಷಣೆಯಾಗಿವೆ. ಆದರೆ ಕಾರ್ಯರೂಪಕ್ಕೆ ಮಾತ್ರ ಬರಲಿಲ್ಲ. ಇದನ್ನು ನಮ್ಮ ಮುಖ್ಯ ಮಂತ್ರಿಗಳು ತರಬೇಕಾದರೆ ಅವರು ತಮ್ಮ ಮನಸ್ಸನ್ನು ಕಲ್ಲಾಗಿಯೋ ಅಥವಾ ಕತ್ತಿಯನ್ನಾಗಿಯೋ ಮಾಡಿಕೊಳ್ಳಬೇಕು. ಅವರು ಯಮ ಧೈರ್ಯ ಇಲ್ಲವೇ ಹುಲಿಯ ಧೈರ್ಯವನ್ನು ತಾಳಬೇಕು. ಅವರ ಪಕ್ಷದಲ್ಲೇ ಅವರ ಕೈಗಳನ್ನು ಒಂದೊಂದು ಕಡೆಗೂ ಹಿಡಿದು ಎಳೆಯುತಕ್ಕ ಜನರಿದ್ದಾರೆ. ಆದ್ದರಿಂದ ಅವರಲ್ಲಿ ನಾನು ಬಹಳ ಕಳಕಳಿಯಿಂದ ಹೇಳಿಕೊಳ್ಳುತ್ತಿದ್ದೇನೆ. ಅವರು ಆ ಎಳೆಯುತಕ್ಕ ಶಕ್ತಿಗಳನ್ನೆಲ್ಲಾ ದಾಟಿಕೊಂಡು ಇದನ್ನು ಈಚೆಗೆ ಎಳೆತರಬೇಕಾಗಿದೆ. ಆದ್ದರಿಂದ ಜನತೆಗೆ ಅನುಕೂಲವಾಗಬೇಕಾಗಿದ್ದರೆ ಸರ್ಕಾರದವರು ಈ 14ನೇ ಸೆಕ್ಷನ್ನಿಗೆ ಮೊದಲು ಸೂಕ್ತ ತಿದ್ದುಪಡಿಯನ್ನು ತರಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೂ ಅನೇಕ ಮಸೂದೆಗಳನ್ನು ತರಬೇಕಾಗುತ್ತದೆ.

ಇನ್ನು ಸಣ್ಣ ಹಿಡುವಳಿದಾರರ ಬಗ್ಗೆ ಹೇಳುವುದಾದರೆ ಅವರಿಗೇನು ಸಹಾಯ ಮಾಡಬೇಕು ಎಂಬುದನ್ನು ತಿಳಿಸಿ. ಆದರೆ ಅವರಿಗೇ ಸರ್ಕಾರ ಏನೇ ಸೌಲತ್ತುಗಳನ್ನು ಕೊಡಲಿ ಇವನು ಗೇಣೀದಾರ ಇವನು ಭೂಮಾಲೀಕ ಅನ್ನತಕ್ಕ ವ್ಯತ್ಯಾಸ ಹೋಗಬೇಕು. ಆ ಪದ್ಧತಿ ಇರಬಾರದು. ಆ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದವರು ಒಂದು ಸಮಗ್ರ ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಇಂಥ ಒಂದು ಸಮಗ್ರ ಮಸೂದೆಯನ್ನು ತರತಕ್ಕ ವಿಚಾರದಲ್ಲಿ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ಕೊಡತಕ್ಕ ಬಗ್ಗೆ ತಾವು ಈ ಸದನದ ಎಲ್ಲ ಪಕ್ಷಗಳ ಮಾನ್ಯ ಸದಸ್ಯರನ್ನೂ ಕೂಡಿಸಿ ಒಂದು ತಾರೀಖನ್ನು ನಿಗದಿ ಮಾಡಿ ಒಂದು ಸಭೆಯನ್ನು ಕರೆಯತಕ್ಕದ್ದು ಬಹಳ ಸಾಧುವಾದುದೆಂದು ನನ್ನ ಸಲಹೆ. ಹೀಗೆ ಮಾಡುವುದು ಒಳ್ಳೆಯದೆಂದು ಸೂಚಿಸಲಿಚ್ಛಿಸುತ್ತೇನೆ.

2-00 P.M.

ಇನ್ನು ತಾವು ಸಾಧ್ಯವಾದರೆ ಜೂನ್ ತಿಂಗಳ ಮೊದಲು ಒಂದು ಆರ್ಡಿನೆನ್ಸ್ ಹೊರಡಿಸುವುದು ಒಳ್ಳೆಯದು. ಎಷ್ಟೋ ಸಾವಿರಾರು ಜನ ರೈತರು ತಮ್ಮ ಜಮೀನನ್ನು ಕಳೆದುಕೊಳ್ಳತಕ್ಕಂಥ ಕ್ಲಿಷ್ಟವಾದ ಕಷ್ಟ ಪರಿಸ್ಥಿತಿಯಲ್ಲಿ ಇದ್ದಾರೆ. ಸಾಧ್ಯವಾದರೆ ಬೇಗ ಆರ್ಡಿನೆನ್ಸ್ ತನ್ನಿ ಎಂದು ಅಧ್ಯಕ್ಷರ ಮೂಲಕ ರೆವಿನ್ಯೂ ಮಂತ್ರಿಗಳಿಗೆ ಭಿನ್ನವಿಸಿಕೊಳ್ಳುತ್ತೇನೆ. ಈ ಶಾಸನ ಜಾರಿಗೆ ಬಂದ 15 ದಿವಸದೊಳಗಾಗಿ ಪೊಸೆಷನ್ ರೆಸ್ಟೋರ್ ಮಾಡಿಕೊಡಬೇಕು, ಇಲ್ಲವಿದ್ದರೆ ಒಂದು ತಿಂಗಳ ಸಜ ಅಥವಾ ಒಂದು ಸಾವಿರ ರೂಪಾಯಿಗಳವರೆಗೂ ದಂಡ ಅಥವಾ ಎರಡೂ ವಿಧಿಸಬಹುದು ಎನ್ನತಕ್ಕ ಮಾತನ್ನು ಹೇಳುತ್ತಾರೆ. ಇದಕ್ಕಿಂತ ಕಮ್ಮಿ ಶಿಕ್ಷೆ ಕೊಡಿ. ಇಂಡಿಯನ್ ಪೀನಲ್ ಕೋಡ್ ಪ್ರಕಾರ ಶಿಕ್ಷೆ ಕೊಡಿ ಎಂದು ನಾನು ಹೇಳುವುದಿಲ್ಲ. ಎಷ್ಟರಮಟ್ಟಿಗೆ ಶಿಕ್ಷೆ ಕೊಡಬೇಕು ಎನ್ನುವ ಮಾತು ಹೇಳುತ್ತೇನೆ. ಈ ಸದನ ಮಾಡತಕ್ಕ ಕಾನೂನು ಪ್ರಕಾರ ಈ ದೇಶದಲ್ಲಿರತಕ್ಕ ಜನ ನಡೆದುಕೊಳ್ಳುತ್ತಿಲ್ಲ, ಆದ್ದರಿಂದ ಅವರು ಕಾನೂನಿನ ಪರಿಮಿತಿ ಒಳಗೆ ಬರಬೇಕು. ಈ ದೃಷ್ಟಿಯಿಂದ ಹೇಳುತ್ತೇನೆ. ಸೆಕ್ಷನ್ 14 ಪ್ರಕಾರ 95 ಸಾವಿರ ಕೇಸುಗಳು ಇರುವುದರಿಂದ, ಶಿಕ್ಷೆ ಬಿಗಿ ಮಾಡುವುದು ಒಳ್ಳೆಯದು, ಇಲ್ಲವಿದ್ದರೆ ಈ ವರ್ಗದ ಜನ ಬಗ್ಗುವುದಿಲ್ಲ ಎಂಬ ಭಾವನೆ ತಮಗೆ ಬಂದ ಹಾಗಿದೆ. 22ನೇ ಸೆಕ್ಷನ್ ತಿದ್ದುಪಡಿ ಮಾಡುವ ಸಮಗ್ರವಾದ ಶಾಸನ ತಂದರೆ ನಮ್ಮ ಸಂಪೂರ್ಣ ಬೆಂಬಲ ನೀವು ನಿರೀಕ್ಷಣೆ ಮಾಡಬಹುದು ಎಂದು ಹೇಳುತ್ತೇನೆ. ಈ ಬಿಲ್ಲಿನ ಬಗ್ಗೆ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮೊದಲು ಈ ಭೂಸುಧಾರಣೆ ಮಸೂದೆಯನ್ನು ಸ್ವಾಗತಿಸುತ್ತೇನೆ. ಇದರ ಹಿನ್ನೆಲೆಯಾಗಿ, ನಮ್ಮ ಪಕ್ಷದವರು ಸಮಾಜವಾದವನ್ನು ಒಪ್ಪಿ ಅದನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರಬೇಕು ಎಂದು ಗುರಿ ಇಟ್ಟುಕೊಂಡು ಇದ್ದಾರೆ ಮತ್ತು ನಾವು ಕಮಿಟೆಡ್ ಟು ಸೋಷಿಲಿಯಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಎಂದು ಈ ಸಭೆ ಗಮನಕ್ಕೆ ತರುತ್ತೇನೆ. ಇದರ ಬಗ್ಗೆ ನನ್ನ ಸ್ನೇಹಿತರುಗಳು ಅಂದರ ನಮ್ಮ ಪಕ್ಷದವರು ಅನುಮಾನಗಳನ್ನು ಸೂಚಿಸಬೇಕಾದುದಿಲ್ಲ. ಈಗ ಜಮೀನುದಾರರ ಕಿರುಕುಳ ಮತ್ತು ಉಪಟಳದಿಂದ ಅನೇಕ ಗೇಣಿ ಜನರಿಗೆ ತೊಂದರೆ ಉಂಟಾಗಿದ್ದುದರಿಂದ, ಕಂದಾಯ ಸಚಿವರು ಸಮಗ್ರ ಭೂಸುಧಾರಣೆ ತರುವುದಕ್ಕೆ ಮೊದಲು ಅತ್ಯಂತ ಶೀಘ್ರವಾಗಿ ಗೇಣಿದಾರರಿಗೆ ರಕ್ಷಣೆ ಕೊಡಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ನನ್ನ ಸುಸ್ವಾಗತ. ಗೇಣಿದಾರ ಮತ್ತು ಜಮೀನ್‌ದಾರ ಈ ವರ್ಗಗಳ ಜೊತೆಗೆ ಭೂಮಿ ವ್ಯವಸಾಯ ಮಾಡುತ್ತಾ ಇರತಕ್ಕ ಅನೇಕ ವರ್ಗಗಳನ್ನು ನೋಡುತ್ತಿದ್ದೇವೆ. ನೇರವಾಗಿ ಸ್ವತಃ ಕಷ್ಟಪಟ್ಟು ಜಮೀನಿನಲ್ಲಿ ಉತ್ಪನ್ನ ಪಡೆದು ಅದನ್ನು ಅನುಭವಿಸುವವರು ಇದ್ದಾರೆ. ಜಮೀನು ಇಲ್ಲದ ಕೃಷಿ ಕಾರ್ಮಿಕರು ಇದ್ದಾರೆ. ಈ ವರ್ಗಗಳನ್ನು ತೆಗೆದುಹಾಕಿ ದೇಶದಲ್ಲಿ ಯಾರು ನೇರವಾಗಿ ಶ್ರಮಜೀವಿಗಳಾಗಿ ವ್ಯವಸಾಯ ಕಸಬನ್ನು ಮಾಡುತ್ತಾ ಇದ್ದಾರೆ ಅವರಿಗೆ ನೇರವಾಗಿ ಭೂಮಿ ಸಲ್ಲಬೇಕು. ನಮ್ಮ ಸೋಷಿಯಲಿಸ್ಟ್ ಸಹೋದರರು 'ಲ್ಯಾಂಡ್ ಟು ದಿ ಟಿಲ್ಲರ್', ಎಂದು ಏನು ಒಂದು ತತ್ವ ಇಟ್ಟುಕೊಂಡಿದ್ದಾರೋ ಅದು ನಮಗೂ ಅನ್ವಯಿಸುತ್ತದೆ. ಅದನ್ನು ಅನುಷ್ಠಾನಕ್ಕೆ ತರಲು ನಾವೂ ಬದ್ಧರಾಗಿದ್ದೇವೆ. ಈ ರೀತಿ ಭೂಸುಧಾರಣೆ ಮಾಡುವಾಗ ಭೂಮಿಯನ್ನು ಯಾರು ನೇರವಾಗಿ ಉಳುತ್ತಾರೋ, ಯಾರು ವ್ಯವಸಾಯ ಕ್ಷೇತ್ರದಲ್ಲಿ ಶ್ರಮಜೀವಿಗಳು ಇದ್ದಾರೋ ಅವರಿಗೆ ಭೂಮಿಯ ಒಡೆತನ ಸಲ್ಲಬೇಕು. ಮಧ್ಯವರ್ತಿಗಳು ಯಾರು ಇದ್ದಾರೆ ಅವರಿಗೆ ಭೂಮಿಯ ಒಡೆತನ ಸಲ್ಲಬಾರದು. ಗೇಣಿದಾರ, ಜಮೀನ್‌ದಾರ, ಭೂಮಿಒಡೆಯ ಎಂದು ಇರಬಾರದು. ಭೂಮಿ ವ್ಯವಸಾಯ ಮಾಡುವವನು ಒಬ್ಬನೇ ಇರಬೇಕು. ಈ ತತ್ವವನ್ನು ನಾನು ವೈಯಕ್ತಿಕವಾಗಿ ಒಪ್ಪಿಕೊಂಡಿದ್ದೇನೆ. ಅದಕ್ಕೆ ನಮ್ಮ ಪಕ್ಷವು ಕೂಡ ಬದ್ಧವಾಗಿದೆ. ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈ ಕಾನೂನು 1961ರಲ್ಲಿ ಅದನಂತರ ಅದಕ್ಕೆ ಅನೇಕ ತಿದ್ದುಪಡಿಗಳು ಆಗಿವೆ. ಸುಂದರವಾಗಿ ಕಾಣತಕ್ಕ ಒಬ್ಬ ಮನುಷ್ಯನ ಕೈಕಾಲುಗಳನ್ನು, ರುಂಡ ಮುಂಡಗಳನ್ನು ಬೇರ್ಪಡಿಸಿದ ಹಾಗೆ, ಈ ಆಕ್ಟ್ ಭಿನ್ನ ಭಿನ್ನವಾಗಿ ಹೋಗಿದೆ. ಮಾನ್ಯ ಸಚಿವರನ್ನು ಪ್ರಾರ್ಥಿಸಿಕೊಳ್ಳುವುದು ಇಷ್ಟೆ. ನಿಮ್ಮ ಈ ಒಂದು ಅವಧಿಯಲ್ಲಿ ನಿಮಗೆ ಸುವರ್ಣ ಅವಕಾಶ ದೊರಕಿದೆ. ನಮ್ಮ ಪಕ್ಷಕ್ಕೂ ಸುವರ್ಣ ಅವಕಾಶ ಬಂದಿದೆ. ಇದನ್ನು ಮಾಡಿಯೇ ಮಾಡುತ್ತೀರಿ. ನೇರವಾಗಿ ಭೂಮಿಯಲ್ಲಿ ಕೆಲಸ ಮಾಡತಕ್ಕವನಿಗೆ ಭೂಮಿ ಹಂಚಿಕೆಯಾಯಿತು ಎಂಬ ಕೀರ್ತಿ ರೆವಿನ್ಯೂ ಸಚಿವರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೇ ಸಲ್ಲಲಿ ಅಥವಾ ನಮ್ಮ ಪಕ್ಷಕ್ಕೆ ಸಲ್ಲಲಿ ಈ ಬಗ್ಗೆ ಬಹು ಶೀಘ್ರವಾಗಿ ಮತ್ತು ಸಮಗ್ರವಾಗಿ ತಿದ್ದುಪಡಿ ಬರಲಿ ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಕಾಗೋಡಿನಲ್ಲಿ ಹೋರಾಟಮಾಡಿ ಈ ತತ್ವವನ್ನು ದೇಶಕ್ಕೆ ತೋರಿಸಿಕೊಟ್ಟವರು ಸೋಶಿಯಲಿಸ್ಟ್ ಪಕ್ಷದವರು.

ಶ್ರೀ ಕೆ. ಬಿ. ಶಿವಯ್ಯ.—ಒಂದು ತತ್ವವನ್ನು ನಮ್ಮವರೂ ಕೂಡ ಒಪ್ಪಿಕೊಂಡಿದ್ದಾರೆ 'ಲ್ಯಾಂಡ್ ಟು ದಿ ಟಿಲ್ಲರ್'' ಎನ್ನುವ ತತ್ವವನ್ನು ನಾನು ಪ್ರತಿಪಾದಿಸುತ್ತೇನೆ. ಒಂದು ಸಂಸಾರ ದಲ್ಲಿ ಗಂಡ, ಹೆಂಡಿರು ಮತ್ತು ಡಿಪೆಂಡಿಂಗ್ ಸನ್ಸ್ ಇದ್ದರೆ, ಗಂಡನಿಗೆ ಭೂಮಿ ಇದ್ದು ಆತನು ಗೌರ್ನಮೆಂಟ್ ಅಧಿಕಾರದಲ್ಲಿ ಇದ್ದರೆ, ಅಂತಹವರಿಗೂ ಕೂಡ ಒಂದೇ ಸೋರ್ಸ್ ಆಫ್ ಇನ್‌ಕಂ ಹೊಂದಿರಬೇಕೆಂಬ ಪ್ರಗತಿದಾಯಕವಾದ ಸುಧಾರಣೆ ಮುಂದೆ ತರತಕ್ಕ ಭೂಸುಧಾರಣೆಯ ತಿದ್ದುಪಡಿ ಮಸೂದೆಯಲ್ಲಿ ಅಡಕವಾಗಿರಬೇಕು. ಅದು ಎಲ್ಲರೂ ಮೆಚ್ಚತಕ್ಕಂಥ ಪ್ರಗತಿದಾಯಕವಾದ ಎರಡೂವರೆ ಕೋಟಿ ಜನತೆಗೂ ಅನುಕೂಲವಾಗಿರತಕ್ಕ ಭೂಸುಧಾರಣೆಯಾಗಬೇಕು. ಇಡೀ ರಾಜ್ಯದಲ್ಲಿ ಭೂಮಿ ಉತ್ಪನ್ನದಿಂದ ಶೇಕಡ 80 ಜನ ಅನುಕೂಲ ಹೊಂದುತ್ತಿದ್ದಾರೆ. ಹಾಗಿರುವಾಗ ತನ್ಮೂಲಕ ಶ್ರೀಮತಿ ಇಂದಿರಾಗಾಂಧಿಯವರ ಘೋಷಣೆಯಿಂದ ಗರೀಬಿ ಹಟಾವ್ ಎನ್ನುವ ಕನಸು ನನಸಾಗ ಬೇಕು. ಆ ರೀತಿ ಆಗಲು ಸಮಗ್ರವಾದ ತಿದ್ದುಪಡಿ ಮಸೂದೆಯನ್ನು ಮುಂದೆ ಬರತಕ್ಕ ಅಧಿ ವೇಶನದಲ್ಲಿ ಕಂದಾಯ ಸಚಿವರು ತರುತ್ತಾರೆ ಎಂದು ಭಾವಿಸಿ ಈಗ ತಂದಿರತಕ್ಕ ಪ್ರಗತಿದಾಯಕ ವಾದ ತಿದ್ದುಪಡಿಗೆ ನನ್ನ ಸಂಪೂರ್ಣ ಬೆಂಬಲವನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಬಾದ್).—ಅಧ್ಯಕ್ಷರೇ, ತಿದ್ದುಪಡಿ ಮಸೂದೆಗೆ ಸಂಬಂಧ ಪಟ್ಟಂತೆ ಒಂದೆರಡು ವಿಷಯಗಳನ್ನು ನಾನು ಒತ್ತಿ ಹೇಳಬೇಕು ಎಂದು ಇಚ್ಛಿಸುತ್ತೇನೆ. ಕೆಲವು ಮಿತ್ರರು, ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಬೇಕಾಗಿತ್ತು, ಈ ತಿದ್ದುಪಡಿ ತರದೆ ವಿಸ್ತಾರ ವಾದ ಕಾಂಪ್ರಹೆನ್ಸೀವ್ ಲೆಜಿಸ್ಲೇಷನ್ ಆ ಸುಗ್ರೀವಾಜ್ಞೆಯಲ್ಲಿ ಇರಬೇಕಾಗಿತ್ತು ಎಂದು ಹೇಳಿದರು. ಮಾನ್ಯ ಮಂತ್ರಿಗಳು ಸೆಷನ್ ನಡೆಯುತ್ತಾ ಇರುವಾಗ ಸುಗ್ರೀವಾಜ್ಞೆ ಹೊರಡಿಸಿದರೆ ಸಭೆಯ ಘನತೆ ಕಡಿಮೆ ಆಗುತ್ತದೆ. ಅದಕ್ಕಾಗಿ ಸುಗ್ರೀವಾಜ್ಞೆ ಹೊರಡಿಸದೆ ಅದಕ್ಕೆ ಬದಲಾಗಿ ಈ ತಿದ್ದುಪಡಿ ಬಿಲ್ ತರಲಾಗಿದೆ ಎಂದು ಹೇಳಿದರು. ಒಂದು ಪ್ರಶ್ನೆ ಇದರಲ್ಲಿ ಬರುತ್ತದೆ ಲ್ಯಾಂಡ್ ಲಾರ್ಡ್‌ಗಳು ಭೂಮಿ ರೆಸ್ಯೂಮ್ ಮಾಡಿದ ಮೇಲೆ ಉಳಿದ ಭೂಮಿಗೆ ನಿರ್ಣಯ ಮಾಡಿದಪ್ರಕಾರ ಗೇಣಿ ಕೊಟ್ಟರೆ ಗೇಣಿದಾರನಿಗೆ ಆ ಭೂಮಿಯನ್ನು ಬಿಡಿಸಿಕೊಡಬೇಕೆಂದು ಹೇಳುತ್ತಾರೆ. 2 ವರ್ಷದ ರೆಂಟ್ ಎಷ್ಟು ಆಗಬಹುದು ಎನ್ನುವುದನ್ನು ನೋಡಬೇಕು. ಈಗ ಲ್ಯಾಂಡ್ ಟ್ರಿಬ್ಯೂನಲ್ ಆಗಲೀ ಇಲ್ಲದೆ ಹೋದರೆ ಸಂಬಂಧಪಟ್ಟ ಅಧಿಕಾರಿಗಳು ಆಗಲಿ ಒಂದು ಎಕರೆಗೆ ಇಷ್ಟು ರೆಂಟ್ ಕೊಡಬೇಕು ಎಂದು ಡಿಸಿಷನ್ ಕೊಟ್ಟಿರುತ್ತಾರೆ. ಒಂದು ಎಕರೆಗೆ 100 ರೂಪಾಯಿ ರೆಂಟ್ ಕೊಡ ಬೇಕು ಎಂದು ತೀರ್ಮಾನ ಕೊಟ್ಟಿದ್ದಾರೆ ಎಂದು ಇಟ್ಟುಕೊಳ್ಳೋಣ. ಈವೊತ್ತಿನ ದಿವಸ ಪ್ರಗತಿ ಗಾಮಿ ಅಭಿಪ್ರಾಯದ ಪ್ರಕಾರ ನೋಡಿದರೆ ಇಷ್ಟು ಗೇಣಿ ಕೊಡತಕ್ಕದ್ದಲ್ಲ, ಅದಕ್ಕಿಂತ ಕಡಿಮೆ ಇದ್ದರೆ ಗೇಣಿದಾರರಿಗೆ ಹಿತ ಸಿಕ್ಕುತ್ತದೆ ಅವರ ಹಿತರಕ್ಷಣೆ ಮಾಡಿದಂತಾಗುತ್ತದೆ ಎಂದು ಇದೆ ಈವೊತ್ತು 100 ರೂಪಾಯಿ ಗೇಣಿ ಕೊಡಬೇಕು ಎಂದು ಕೋರ್ಟ್ ತೀರ್ಪುಕೊಟ್ಟರೂ ಜಮೀನ್ದಾರ 200 ರೂಪಾಯಿ ಗೇಣಿ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾನೆ. ಅವನ ಇಚ್ಛೆಯಂತೆ ತೀರ್ಮಾನ ವಾದರೆ ಇನ್ನು 2 ತಿಂಗಳೊಳಗೆ ನೀವು ಒಂದು ಕಾಂಪ್ರಹೆನ್ಸೀವ್ ಲೆಜಿಸ್ಲೇಷನ್ನನ್ನು ಏನು ತರುತ್ತೀರಿ. ಆಗ ಅವರಲ್ಲಿ 25 ರೂಪಾಯಿ ಕೊಟ್ಟರೆ ಸಾಕು ಎಂದು ತಾವು ಕಾಯಿದೆ ತಂದರೆ 50 ರೂಪಾಯಿಗಳನ್ನಾದರೂ ತೆಗೆದುಕೊಂಡು ನಂತರ ಉಳುವವನಿಗೆ ಭೂಮಿ ಕೊಡಬೇಕಾಗು ತ್ತದೆ. ಆದ್ದರಿಂದ ಈಗ 200 ರೂಪಾಯಿ ಕೊಟ್ಟರೆ ಹೊಸದಾಗಿ ಬರತಕ್ಕ ಕಾಯಿದೆಯಿಂದ ಗೇಣಿದಾರನಿಗೇನೂ ಪ್ರಯೋಜನವಾಗುವುದಿಲ್ಲ. 2 ವರ್ಷದ ಗೇಣಿಯನ್ನು ಕೊಟ್ಟಿದ್ದರೆ ಸಾಕು. ಹೊಸಕಾಯಿದೆ ತರುವವರೆಗೆ ಗೇಣಿದಾರನಿಂದ ಜಮೀನು ಬಿಡಿಸಕೂಡದು ಎಂದು ಮಾಡಿ. ಆರೀತಿ ಮಾಡಿದರೆ ಯಾವ ಕಡೆಯಿಂದಲೂ ಏನೂ ಅಬ್ಜಕ್ಷನ್ ಇರುವುದಿಲ್ಲ. ಮಾನ್ಯ ಸಚಿವರು ಪ್ರಗತಿಶೀಲ ಕಾಯಿದೆ ತರುತ್ತೇವೆ ಎಂದು ಹೇಳುವಾಗ ಗೇಣಿದಾರರಿಂದ ಪೌಂಡ್ ಆಫ್ ಫ್ಲೆಷ್ ಕೊಡುವುದಕ್ಕೆ ಏತಕ್ಕೆ ಕೇಳುತ್ತಾರೋ ಗೊತ್ತಿಲ್ಲ. ಈಗಾಗಲೇ 6 ವರ್ಷವಾಗಿದೆ. ಇನ್ನು 2 ತಿಂಗಳೊಳಗೆ ಕಾಂಪ್ರಹೆನ್ಸಿವ್ ಲೆಜಿಸ್ಲೇಷನ್ನನ್ನು ತರುತ್ತೀರಿ. ಹಾಗಿರುವಾಗ ಈ 2 ತಿಂಗಳಿನಲ್ಲಿ ಅಂತಹ ಅನಾಹುತ ಏನೂ ಆಗುವುದಿಲ್ಲ, ಆಕಾಶ ಕಳಚಿ ಭೂಮಿಗೆ ಬೀಳುವುದಿಲ್ಲ. 2 ವರ್ಷದ್ದು ರೆಂಟ್ ಕೊಟ್ಟಿದ್ದರೆ, ಗೇಣಿದಾರನಿಂದ ಜಮೀನು ಬಿಡಿಸಕೂಡದು ಎಂದು ಮಾಡಿದರೆ ಒಳ್ಳೆಯದು ಹಾಗೆ ಮಾಡುವುದರಿಂದ ಪ್ರಗತಿಶೀಲ ಹಾದಿಯಲ್ಲಿ ಮುಂದೆ ಹೋಗಲು ಅನುಕೂಲವಾಗುತ್ತದೆ. ಇದರಿಂದ ರೈತಾಪಿ ಜನಗಳಿಗೆ ಸಂತೋಷವಾಗುತ್ತದೆ.

ಸರ್ಕಾರ ಯಾವಾಗಲೂ ಮಾಡಲ್ ಎಂಪ್ಲಾಯರ್ ಆಗಬೇಕು. ಸರ್ಕಾರದ ಹತ್ತಿರ ಲಕ್ಷಾಂತರ ಎಕರೆ ಜಮೀನು ಇದೆ. ಜಮೀನು ಹಂಚುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ

ಎಂದು ಅವರು ಹೇಳುತ್ತಾ ಇಲ್ಲ. ಸರ್ಕಾರದ ಹತ್ತಿರ ಇರುವ ಜಮೀನನ್ನು ಗಾಂಧಿಶತಾಬ್ದಿ ವರ್ಷದೊಳಗೆ ಹಂಚಬೇಕೆಂದು ಹಿಂದೆ ಮಂತ್ರಿಗಳಾಗಿದ್ದ ಶ್ರೀಮಾನ್ ವೀರೇಂದ್ರಪಾಟೀಲ್‌ರವರು ಹೇಳಿದ್ದರು, ಶ್ರೀಮಾನ್ ನಿಜಲಿಂಗಪ್ಪನವರೂ ಕೂಡ ಹೇಳಿದ್ದರು. ಆದರೆ ಅರಸ್‌ರವರು ಆ ರೀತಿ ಹೇಳುವುದಿಲ್ಲ ಎನ್ನುವ ನಂಬಿಕೆ ನನಗಿದೆ. ಮುಖ್ಯಮಂತ್ರಿಗಳು 2 ತಿಂಗಳೊಳಗೆ ಸರ್ಕಾರದ ವಶದಲ್ಲಿರುವ ಜಮೀನುಗಳನ್ನು ಹಂಚಬೇಕು. ಈಗ ನಾಮಿನಲ್ ಫಾರೆಸ್ಟ್ ಲ್ಯಾಂಡ್ ಇದೆ. ಬಂಜರು, ಪರಂಬೋಕೆ ಜಮೀನು ಇದೆ, ಗ್ರೇಜಿಂಗ್ ಲ್ಯಾಂಡ್ ಇದೆ. ಲಕ್ಷಾವಧಿ ಎಕರೆ ನಾಮಿನಲ್ ಫಾರೆಸ್ಟ್ ಜಮೀನು ಇರುವುದನ್ನು ಹಂಚಿಬಿಡಿ. ಈ ಫಾರೆಸ್ಟ್ ಲ್ಯಾಂಡ್ ಸರ್ಕಾರದ ವಶದಲ್ಲಿದೆ. ರೈತರು 10—20 ವರ್ಷಗಳಿಂದ 10 ಪಟ್ಟು ಶಿವಾಜಮಾ ಕೊಡುತ್ತಿದ್ದಾರೆ. ಅಂತವರಿಗೆ ಆ ಜಮೀನು ಸಿಕ್ಕುವಹಾಗೆ ಸುಗ್ರೀವಾಜ್ಞೆ ಹೊರಡಿಸಿ ಎಂದು ನಾನು ಕೇಳುತ್ತೇನೆ. ಹಾಗೆ ಮಾಡಿದರೆ ಬರುವ 2 ತಿಂಗಳಲ್ಲಿ ಲ್ಯಾಂಡ್ ಲೆಜಿಸ್ಲೇಷನ್ ತರುತ್ತೀರಿ ಎಂದು ಜನಕ್ಕೆ ಪೂರ್ತಿ ನಂಬಿಕೆ ಬರುತ್ತದೆ. 2½ ತಿಂಗಳ ಮೇಲೂ ಟೆಕ್ನಿಕಲ್ ಡಿಫಿಕಲ್ಟೀಸ್ ಬರಬಹುದು. ಆದರೆ ಭೂಮಿಯನ್ನು ಹೀಗೆ ಹಂಚಿಕೆಮಾಡುವುದರಿಂದ ಸರ್ಕಾರದ ಭಾವನೆ ಏನು ಇದೆ, ಸರ್ಕಾರದ ಧೋರಣೆ ಏನು ಇದೆ ಎನ್ನುವುದರಲ್ಲಿ ಜನಕ್ಕೆ ವಿಶ್ವಾಸ ಹುಟ್ಟುತ್ತದೆ. ಒಂದು ಮಾದರಿ ಎಂಪ್ಲಾಯರ್ ತರಹ ಸರ್ಕಾರದ ವಶದಲ್ಲಿರತಕ್ಕಂಥ ಜಮೀನನ್ನು ರೈತಾಪಿ ಜನಗಳಿಗೆ ಹಂಚುವ ವ್ಯವಸ್ಥೆಮಾಡಿ. ಈಗ ಆ ಜಮೀನನ್ನು ಯಾವ ಕೆಲಸಕ್ಕೂ ಉಪಯೋಗಿಸುತ್ತಾ ಇಲ್ಲ. ಆ ಕಡೆ ಲಕ್ಷ್ಯ ಕೊಟ್ಟು ನಿಮ್ಮ ಹತ್ತಿರ ಇರುವ ಜಮೀನನ್ನು ಆ ರೈತಾಪಿ ಜನಗಳಿಗೆ ಮೊದಲು ಹಂಚಿಬಿಟ್ಟು ಅವರಿಗೆ ಪಟ್ಟ ಮಾಡಿಸಿ ಕೊಡಿ.

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು).—ತಾವು ಹೇಳುವುದರ ಇಂಪ್ಲಿಕೇಷನ್ಸ್ ಏನು ಎಂಬುದನ್ನು ತಾವು ತಿಳಿಸಿ ಹೇಳಿದರೆ ಉತ್ತಮ. ಸರ್ಕಾರದ ವಶದಲ್ಲಿರುವ ಜಮೀನು ಗಳನ್ನು ಎಲ್ಲರಿಗೂ ಕೊಟ್ಟುಬಿಡಿ ಎಂದು ಹೇಳುತ್ತಿದ್ದೀರಿ.

ಶ್ರೀ ವಿ. ಎನ್. ಪಾಟೀಲ್.—ವೇಸ್ಟ್ ಲ್ಯಾಂಡ್ ಇದೆಯಲ್ಲಾ ಅದನ್ನಾದರೂ ಕೊಟ್ಟುಬಿಡಿ.

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ತೆಗೆದುಕೊಂಡು ಏನು ಮಾಡುತ್ತಾರೆ? ಸರ್ಕಾರದ ಲ್ಯಾಂಡ್ ಸಾರ್ವಜನಿಕರ ಹಿತಕ್ಕಾಗಿ ಇರತಕ್ಕದ್ದು. ಫಾರೆಸ್ಟ್ ಲ್ಯಾಂಡ್ ಹಂಚಲು ತೀರ್ಮಾನ ತೆಗೆದುಕೊಂಡು ಹಂಚಿ ಎಂದು ಹೇಳುತ್ತಿದ್ದೀರಿ. ಆದರೆ ನಮ್ಮ ಎಕಾನಮಿ ದೃಷ್ಟಿಯಿಂದ ಇದು ಸರಿಯೋ ತಪ್ಪೋ ಎಂದು ತಿಳಿಯದೇ ಹಾಗೆ ಕೇಳುವುದರಿಂದ ಪ್ರಯೋಜನವಾಗುವುದಿಲ್ಲ. We have got certain proportion to be maintained between forest land and cultivated land. ಒಂದು ಪ್ರಪೋರ್ಷನ್‌ನಲ್ಲಿ ಫಾರೆಸ್ಟ್ ಲ್ಯಾಂಡ್ ಇಟ್ಟುಕೊಂಡೇ ಇರುತ್ತೇವೆ. ಹಂಚಿಬಿಟ್ಟಾಕ್ಷಣ ಅದರಿಂದ ಎಕಾನಮಿ ಇಂಪ್ರೂ ಆಗುವುದಿಲ್ಲ. ಈಪೊತ್ತು ತಕ್ಷಣ ಜಮೀನು ಸಿಕ್ಕಿತು ಎಂದು ಹೇಳಬಹುದು. ಆದರೆ ಅವನು ಉದ್ಧಾರವಾಗುವ ಹಾಗಿಲ್ಲ. ಜಮೀನು ಉಳಿಯುವುದಿಲ್ಲ ಫಾರೆಸ್ಟ್ ಲ್ಯಾಂಡ್ ಎಷ್ಟು ಪ್ರಪೋರ್ಷನ್‌ನಲ್ಲಿ ಮೇನ್‌ಟೈನ್ ಮಾಡಬೇಕೋ ಅಷ್ಟು ಇಲ್ಲದೇ ಹೋದರೆ ಕಾಡು ಬೆಳೆಸುವುದಕ್ಕೆ ಕಷ್ಟವಾಗುತ್ತದೆ. ಫಾರೆಸ್ಟ್ ಪ್ರಾಡಕ್ಟ್ಸ್‌ನಿಂದ ಎಕಾನಮಿ ಇಂಪ್ರೂ ಮಾಡಬಹುದು. ಇದನ್ನು ಒಪ್ಪಿಕೊಳ್ಳಬೇಕಾಗಿದೆ. ಹಾಗಿಲ್ಲದೆ ಎಕನಾಮಿಕ್ ಯೂಸಸ್ ಆಫ್ ಲ್ಯಾಂಡ್ ಯಾವರೀತಿ ಮಾಡಬೇಕು ಎಂಬುದು ಮುಖ್ಯವೇ ಹೊರತು ಸುಮ್ಮನೆ ಹಂಚಿಬಿಡಿ ಎಂದು ಹೇಳುವುದು ಮುಖ್ಯವಲ್ಲ. ಪ್ರೈವೇಟ್ ಲ್ಯಾಂಡ್ ಲಾರ್ಡ್ಸ್ ಏನು ಹೇಳುತ್ತಾರೋ ಅದನ್ನೇ ತಾವು ಹೇಳುತ್ತೀರಿ. ಸರ್ಕಾರದಲ್ಲಿರುವುದನ್ನು ಮೊದಲು ಹಂಚಿ ನಮ್ಮ ಹತ್ತಿರ ಇರುವುದನ್ನು ಏತಕ್ಕೆ ಕಿತ್ತುಕೊಳ್ಳುತ್ತೀರಿ, ನೀವು ದೊಡ್ಡ ಲ್ಯಾಂಡ್ ಲಾರ್ಡ್ ಆಗಿದ್ದೀರಿ ಎಂದು ಅವರು ಹೇಳುತ್ತಾರೆ.

ಶ್ರೀ ವಿ. ಎನ್. ಪಾಟೀಲ್.—ಲ್ಯಾಂಡ್ ಲಾರ್ಡ್ ಹೇಳುವುದರಲ್ಲಿಯೂ, ಕಮ್ಯೂನಿಸ್ಟ್ ಹೇಳು ವುದರಲ್ಲಿಯೂ ವ್ಯತ್ಯಾಸ ಇದೆ ಲ್ಯಾಂಡ್ ಲಾರ್ಡ್ ತನ್ನ ಹತ್ತಿರ ಇರುವುದನ್ನು ಕೊಡಬಾರದು ಎಂದು ಸರ್ಕಾರಕ್ಕೆ ಬೆರಳು ತೋರಿಸಿ ಹೇಳುತ್ತಾನೆ.

ಶ್ರೀ ಡಿ. ದೇವರಾಜ್ ಅರಸ್.—ಅವರು ಹೇಳುವುದಕ್ಕೂ ನೀವು ಹೇಳುವುದಕ್ಕೂ ವ್ಯತ್ಯಾಸ ಇದೆ. ಅರ್ಥದಲ್ಲಿ ಎರಡೂ ಒಂದೇ ಆದಹಾಗೆ ಆಗಬಾರದು.

ಶ್ರೀ ವಿ. ಎನ್. ಪಾಟೀಲ್.—ತೆಲುಗಿನಲ್ಲಿ ಮಾಸೊಮ್ಮೇ ಮಿಸೊಮ್ಮು, ಮೀಸೊಮ್ಮೇ ಮಾಸೊಮ್ಮು ಎಂದು ಗಾದೆ ಇದೆ. ನಾನು ನಾಮಿನಲ್ ಫಾರೆಸ್ಟ್ ಲ್ಯಾಂಡ್ ಏನು ಇದೆ ಅದನ್ನು ಕ್ಲಾರಿಫೈ ಮಾಡಿ ಹೇಳಲಿಲ್ಲ ಎಂದು ತಾವು ಹೇಳಿದ್ದರಿಂದ ಅರ್ಥವಾಗುತ್ತದೆ. ಆದ್ದರಿಂದ ಮುಖ್ಯ

(ಶ್ರೀ ವಿ. ಎನ್. ಪಾಟೀಲ್)

ಮಂತ್ರಿಗಳಿಗೆ ಕನ್‌ಫ್ಯೂಷನ್ ನಾನೇ ಕ್ರಿಯೇಟ್ ಮಾಡಿದ ಹಾಗಾಗುತ್ತದೆ. ನಿಮ್ಮ ಹತ್ತಿರ ಎಷ್ಟು ಡಿಸ್ಟ್ರಿಬ್ಯೂಟಬಲ್ ಲ್ಯಾಂಡ್ ಇದೆ ಅದನ್ನು ಹಂಚುವುದಕ್ಕೆ ತ್ವರಿತವಾದ ಕ್ರಮ ತೆಗೆದುಕೊಳ್ಳಬೇಕು. 5 ವರ್ಷದಲ್ಲಿ ಎಷ್ಟೋ ಶತಾಬ್ದಿಗಳು ಆಗಿ ಹೋದುವು. ಮುಂದಿನ ಶತಾಬ್ದಿ ಬರುವವರೆಗೆ ಈ ಕೆಲಸ ತೆಗೆದುಕೊಳ್ಳುವುದಿಲ್ಲ. ಯಾರು 10 ವರ್ಷದಿಂದ ಸಿವಾಜವಾ ಕೊಡುತ್ತಿದ್ದಾರೆ ಅವರಿಗೇನೇ ಆ ಜಮೀನು ಕೊಡುತ್ತೇವೆ ಎಂದು ಹೇಳಿದರೆ ಸಾಕು. ಸರ್ಕಾರದವರು ಮಾವರಿ ಲ್ಯಾಂಡ್ ಲಾರ್ಡ್ಸ್ ಆಗಿ ಅವರ ಹತ್ತಿರ ಇರುವ ಜಮೀನುಗಳನ್ನು ಹಂಚಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ ಮತ್ತೊಂದು ವಿಷಯ.—ಶ್ರೀ ಬಂಗಾರಪ್ಪನವರು ಹೇಳಿರುವುದು ಸೂಕ್ತವಾಗಿದೆ. ಕೋರ್ಟಿನಲ್ಲಿ ತೀರ್ಮಾನವಾಗುವುದು ಸುಮಾರು 95 ಸಾವಿರ ಗೇಣೀಜನರ ವಿರುದ್ಧ ರಿಸಮ್ಷನ್ ಪಿಟಿಷನ್ಸ್ ಇವೆ. ಸೆಕ್ಷನ್ 14ರ ಬಗ್ಗೆ ಕೂಡ ತಿದ್ದುಪಡಿ ತರಬೇಕಾಗಿತ್ತು, ತರಬೇಕು, ರಕ್ಷಣೆ ಕೊಡಲು ಒಂದು ಆರ್ಡಿನೆನ್ಸ್ ಹೊರಡಿಸಬೇಕು. ಬೇರೆ ಕಾಂಪ್ರಿಹೆನ್ಸಿವ್ ಲೆಜಿಸ್ಲೇಷನ್ ಬರುವವರೆಗೆ ರೆಸ್ಯೂಮ್ ಮಾಡಬಾರದು, ಕೋರ್ಟಿನ ಯಾವ ಡಿಕ್ರಿಯನ್ನು ಕೂಡ ಜಾರಿಗೆ ತರಲು ಅವಕಾಶವಿರಬಾರದು: ಹೀಗೆ ಮಾಡಲು ಅವಕಾಶವಾಗುವಂತೆ ಜಾಗ್ರತೆ ಒಂದು ಆರ್ಡಿನೆನ್ಸ್ ಹೊರಡಿಸಿದರೆ ಜನರಿಗೆ ನಂಬಿಕೆ ಬರುವುದು, ಈ ವಿಚಾರದಲ್ಲಿ ಸರಕಾರ ಒಂದು ಹೆಜ್ಜೆ ಮುಂದಿಡುವುದು ಎಂದು ನಂಬಿದ್ದೇನೆ.

† ಶ್ರೀ ಡಿ. ದೇವರಾಜ ಅರಸ್.—ತಾವು ಯೋಚನೆ ಮಾಡಿ. ಸೆಕ್ಷನ್ 14 ರಲ್ಲಿ ರಿಸಮ್ಷನ್ ಮಾಡಿಕೊಳ್ಳುವುದಕ್ಕೆ ಅವಕಾಶವಿರುವುದು ಪರ್ಸನಲ್ ಕಲ್ಟಿವೇಷನ್‌ಗೆ. ಅದರಲ್ಲಿ ಸ್ವತಃ ಜಮೀನಿನಲ್ಲಿ ಸಾಗುವಳಿ ಮಾಡಬೇಕಾದರೆ ಯಾವ ಸಂದರ್ಭದಲ್ಲಿ ರೆಸ್ಯೂಮ್ ಮಾಡಬಹುದು ಎಂಬುದನ್ನು ತಿಳಿಸಲಾಗಿದೆ. ಅದನ್ನು ತಿದ್ದುಪಡಿ ಮಾಡಬೇಕಾದರೆ ಸಭೆ ಅಭಿಪ್ರಾಯದಂತೆ ಮಾಡೋಣ. ಈಗ ತಮಗಿರುವ ಉತ್ಸಾಹ ನನಗೆ ಅರ್ಥವಾಗುವುದು. ಜಮೀನು ಮಾಲೀಕರು ತಾವೇ ಸಾಗುವಳಿ ಮಾಡುವುದಾದರೆ ಅವರಿಗೆ ಬಿಟ್ಟುಕೊಡಬೇಕು, ಅವರಿಗೆ ಹಕ್ಕಿದೆ. ಆದರೆ ಸಾವಿರಾರು ವರ್ಷಗಳಿಂದ ಮಾಲೀಕರು ಮತ್ತು ಗೇಣಿದಾರಗಿರುವ ಸಂಬಂಧ ಒಂದೇ ಸಾರಿ ಕಿತ್ತುಹಾಕಿದರೆ ಒಂದು ದೊಡ್ಡ ರೆವಲ್ಯೂಷನ್ ಆಗುವುದು, ಜನ ಸುಲಭವಾಗಿ ಒಪ್ಪುವುದಿಲ್ಲ. ಈಗ ಗೇಣಿದಾರರಿಗೆ ರಕ್ಷಣೆ ಕೊಡಲು ಈ ಬಿಲ್ಲನ್ನು ತಂದಿದೆ. ಮುಂದಿನ ಅಧಿವೇಶನದಲ್ಲಿ ಬೇರೆ ಬಿಲ್ಲನ್ನು ತಂದಾಗ ಬೇಕಾದ ತೀರ್ಮಾನ ಮಾಡೋಣ.

ಶ್ರೀ ವಿ. ಎನ್. ಪಾಟೀಲ್.—ಮುಖ್ಯಮಂತ್ರಿಗಳು ಹೇಳುವುದನ್ನು ಒಪ್ಪುತ್ತಾ, ಒಂದು ಸಲಹೆ ಮಾಡುತ್ತೇನೆ. ಈಗ ರಿಸಂಪ್ಷನ್ ಪಿಟೀಷನ್‌ಮೇಲೆ ಕೋರ್ಟ್ ಆರ್ಡರಾಗುವುದು ಅದು ಫೈನಲ್ ಆಗುವುದು. ಆದುದರಿಂದ ರಿಸಂಪ್ಷನ್ ಬಗ್ಗೆ ಡಿಕ್ರಿ ಕೊಟ್ಟರೂ ಜಮೀನನ್ನು ವಶಪಡಿಸಿಕೊಳ್ಳಬಾರದೆಂದು ಸುಗ್ರೀವಾಜ್ಞೆ ಹೊರಡಿಸಬೇಕು. ಅದರಿಂದ ರೈತರಿಗೆ ಅನುಕೂಲವಾಗುವುದು, ಇದನ್ನು ಮರೆಯಬಾರದು ಎಂದು ಸಲಹೆಮಾಡಿ ಇಷ್ಟು ಹೇಳಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸುತ್ತೇನೆ.

†ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಈ ಬಿಲ್ಲನ್ನು ನಾನು ಶೃಂಗೇರಿ ಕ್ಷೇತ್ರದವರ ಪರವಾಗಿ ಬಹಳ ಸಂತೋಷದಿಂದ ಸ್ವಾಗತಿಸುತ್ತೇನೆ. ನಮ್ಮಲ್ಲಿರುವಷ್ಟು ಗೇಣಿದಾರರ ಸಂಖ್ಯೆ ಬೇರೆ ಕಡೆ ಎಲ್ಲಿಯೂ ಇಲ್ಲವೆಂದು ಕಾಣುತ್ತದೆ. ಬಹಳ ಮುಖ್ಯವಾಗಿರುವ ವಿಷಯವನ್ನು ಸರಕಾರಕ್ಕೆ ತಿಳಿಸಬೇಕೆಂದು ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳುತ್ತೇನೆ. ಗೇಣಿ ಕೊಡದಿದ್ದರೆ ಜಮೀನನ್ನು ಆಕ್ಟ್ ಪ್ರಕಾರ ಬಿಡಿಸಬಹುದು. ಇಂದು ಪಹಣಿಯನ್ನು ಬರೆಯುವ ಹಕ್ಕು ಶಾನುಭೋಗರಿಗಿದೆ, ಅವರ ಮೂಲಕ ಪಹಣಿಯನ್ನು ಬದಲಾಯಿಸಿ ಕೋರ್ಟಿಗೆ ಹೋಗುತ್ತಿರುವುದು ಸರಕಾರಕ್ಕೆ ಗೊತ್ತಿದೆಯೋ ಇಲ್ಲವೋ ತಿಳಿಯದು. ಅದರಿಂದ ತೊಂದರೆಯಾಗುತ್ತಿದೆ. ಗೇಣಿ ಕೊಡದೆ ಇರುವ ಸಂದರ್ಭಗಳಲ್ಲಿ ಜಮೀನು ಬಿಡಿಸುವುದು ಕಡಿಮೆ. ಒಂದು ಸಲ ಪಹಣಿ ಬರೆದಮೇಲೆ ಬದಲಾಯಿಸಲು ಅವಕಾಶವಿರಬಾರದು. ಅದಕ್ಕೆ ತಕ್ಕಂತೆ ರೂಲ್ಸ್ ಮಾಡಬೇಕು ಹಳ್ಳಿಗಳಲ್ಲಿ ಪಹಣಿ ಬರೆಯುತ್ತಿದ್ದಾರೋ ಇಲ್ಲವೋ ಯಾರೂ ಸರಿಯಾಗಿ ನೋಡುವುದಿಲ್ಲ. ಹತ್ತು ವರ್ಷದ ಪಹಣಿ ಬದಲಾಯಿಸಿ ಕೋರ್ಟಿನಿಂದ ಈ ದಿವಸ ಅನುಕೂಲ ಪಡೆಯುವವರು ಇದ್ದಾರೆ ಇದಕ್ಕೆ ಅವಕಾಶ ಇಲ್ಲದಂತೆ ತಾಸಿಲ್ದಾರರಿಗೆ ತಿಳಿಸಿ ರೈತರನ್ನು ಉಳಿಸಲು ಸರಕಾರ ಸರಿಯಾದ ನಿಯಮವನ್ನು ರಚಿಸಬೇಕು.

ಇನ್ನೊಂದು ಪ್ರಶ್ನೆ. ಈಗ ಒಂದು ಮನೆಯಲ್ಲಿರುವ ಮಕ್ಕಳು, ಮೊಮ್ಮಕ್ಕಳ ಹೆಸರಿಗೆಲ್ಲಾ ಭೂಮಿಯನ್ನು ಬರೆದು ಗೇಣಿ ಮುಂದುವರಿಸಿರುವವರು, ಎಲ್ಲರೂ ಒಂದೇ ಮನೆಯಲ್ಲಿರುತ್ತಾರೆ, ಮೈನರ ಹುಡುಗ ಮೆಜಾರಿಟಿಗೆ ಬಂದಮೇಲೆ ಅವನ ಹೆಸರಿನಲ್ಲಿರುವ ಜಮೀನನ್ನು ಬಿಡಿಸಿಕೊಳ್ಳುವರು. ತಂದೆ ಇರುವಾಗ ಮೈನರ್ ಹೆಸರಿಗೆ ಮಾಡಿ ನಂತರ ಕೋರ್ಟಿಗೆ ಹೋಗಿ ತೆಗೆದುಕೊಳ್ಳುವರು. ಇದನ್ನು ಸಹ ನಿಲ್ಲಿಸಬೇಕು. ಈಗಾಗಲೇ ಶೇಕಡ 90 ಮಂದಿ ಗೇಣಿದಾರರನ್ನು ಬಿಡಿಸಿದ್ದಾಗಿದೆ. ಪೂರ್ಣವಾಗಿ ಪಹಣಿ ಪುಸ್ತಕವನ್ನು ಸುಟ್ಟು ಬೇರೆ ಬರೆದಿದ್ದಾರೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಹೀಗಾಗಿದೆ. ಈ ಬಗ್ಗೆ ವಿಮರ್ಶೆಮಾಡಿ ಗೇಣಿದಾರರಿಗೆ ಅನುಕೂಲವಾಗತಕ್ಕ ಮಾರ್ಗವನ್ನು ಸರಿಸಬೇಕೆಂದು ವಿನಂತಿಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

†SRI D. B. KALMANKAR (Aland).—Madam Speaker, while welcoming the present Mysore Land Reforms (Amendment and Miscellaneous Provisions) Bill, 1972 I would like to make some observations.

The hon. member Sri V. N. Patil stated that there are some cases where the Government lands are in possession of some persons unauthorisedly and the Government should come forward to regularise them. In this respect I have to submit that really there are many cases pend ing before the revenue authorities since a very long time. They have not taken steps to regularise those cases. The people who are in possession unauthorisedly have spent huge money and have made the lands cultivable. If these cases are expedited I think the objections raised by hon. member could be conceded and by regularising the unauthorised possession Government would also be satisfying the people who are cultivating those lands.

Coming to the amending Bill I would like to say that it pertains only to certain cases. The scope of the Bill is very restrictive and the statement of objects and reasons shows that there are some cases. Under sections 8 and 9 of the Mysore Land Reforms Act the rents are not fixed. This is one category of cases. There are some other category of cases wherein on the basis of default in payment of rent eviction proceedings are taken up. In the third category of cases even the possession also has been delivered. Taking all these things into consideration I think the present Bill is comprehensive enough. In amending clause 2 a further proviso is proposed to be inserted which says :

> "Provided further that there shall be no proceedings for eviction of a tenant from any land until the average yield of the principal crops of the local area in which such land is situated is finally determined under sub-section (3) of section 8 and the prices of principal crops are notified under sub-section (2) of section 9".

Then in amending clause 3 it is stated :

> "Notwithstanding anything contained in any law or in any judgem nt, decree or order of any court or any other competent authority, (a) orders or decrees for eviction of a tenant made in proceedings instituted before the commencement of the Mysore Land Reforms (Amendment and Miscellaneous

(SRI D. B. KALMANKAR)

Provisions) Act, 1972, which are precluded by the second proviso to sub-section (1) of Section 22 of the principal Act shall not have any effect and shall abate ;"

So the second proviso is inserted to deal with cases where the procedure laid down under sections 8 and 9 are not followed. Hence it is said that "which are precluded by the second proviso to sub-section (1) of Section 22". I am emphasizing this point because hon. member Sri Puttaswamy had stated that there is some lacuna in clause 3. But I feel that clause 3 has to be read with clause 2. Sub-clause (b) clause 3 states that :

"if any landlord has before the commencement of this Act taken possession of any land in pursuance of a decree or order of eviction of a tenant made in any proceedings precluded by the second proviso to sub-section (1) of Section 22 of the Principal Act, he shall within fifteen days from the said date restore possession of the land to the tenant from whom possession was taken ; and if any landlord fails to restore possession of any land to the tenant as required by this clause, the Tahsildar may summarily evict the landlord from the land and deliver possession thereof to the tenant, and such tenant shall hold the land on the same terms and conditions on which he heldt ait the time he was dispossessed".

The contention of the hon. member Sri Puttaswamy was that some amendments should be brought forward to fill the lacuna in this clause. But I feel there is no necessity to bring any amendments since amending clause 3 deals with all categories of cases referred to by the hon. member.

Then I also agree with the object of the sub-clause (b) of clause 2 *i. e.*, where the possession is delivered before the coming into force of this amending Bill. Here also justice is to be done to the tenants and hence it is said that:

"He shall within fifteen days from the said date restore possession of the land to the tenant from whom possession was taken ; and if any landlord fails to restore possession of any land to the tenant as required by this clause, the Tahsildar may summarily evict the landlord from the land and deliver possession thereof to the tenant."

So in sub-clause (b) even such cases are taken into consideration where the possession is delivered in pursuance o the decrees passed for having failed to pay the rent. I welcome this also, because it safeguards such tenants whose possession are handed over to the landlords and that too on account of sections 8 and 9.

In sub-clause (2) of amending clause 3 it is stated :

> "Where any landlord fails to restore possession of the land to the tenant within fifteen days from the date of commencement of this Act, as required by clause (*b*) of sub-section (1), he shall, on conviction, be punished with simple imprisonment which may extend to one month or with fine which may extend to one thousand rupees or with both."

I welcome this clause also because there is some deterrent punishment prescribed for the defaulting landlords. If this were not to be there there is every possibility that the very object of this Bill which is meant to safeguard the interest of the tenants would be defeated.

Then the hon. members from the opposition side mentioned that the Government may not bring a comprehensive and progressive Bill. But I have got full confidence and hope that the Government will bring a very comprehensive Bill before the House during its next session to be held in June.

In view of the fact that the object of the present amending Bill is to protect the interest of the tenants and in order that this object is effectively achieved the proposed amending clause 2 is very essential and unless there is some deterrent punishment prescribed, which has rightly been done in the present Bill, the very object of this Bill would be defeated. Hence, I welcome this Bill.

Clause 4 is very comprehensive and not only deals with Sections 8 and 9, which have got a very limited purpose, but also deals with all other cases. There might be cases where decrees would have been passed but still possession has not been delivered. This clause protects all such cases, and in effect almost all the tenants will be safeguarded under this clause. It says :—

> "CERTAIN EVICTION ORDERS NOT TO BE EXECUTED.—
>
> Notwithstanding anything contained in the Principal Act, or in any decree or order of any court or Tribunal, no order for restoration of possession of any land to the landlord on the ground of default in paying rent by the tenant shall be executed if the tenant pays to the landlord an amount equal to the rent due for a period of two years."

Therefore, this particular clause safeguards all contingencies. It has got a very good effect, and it virtually means that almost all the tenants against whom cases are pending and decrees are passed and possession is to be delivered. Here, the only condition is that they should pay the rent for two years. As the object of this Bill is very limited, there is no need to make any amendment. We have given a clear understanding in our election manifesto that we are going to bring in all the progressive reforms. As far as land reforms are concerned, a lot has to be done. If the object of our Party is to be achieved, we have to make so many laws and redraft the whole thing.

(SRI D. B. KALMANKAR)

I wish the Government should also take the initiative to bring in a Bill with regard to the ceiling on urban property. If we do not do this, we will be doing injustice to the rural areas and agriculturists. Therefore, the Government should not hesitate to bring forward a very comprehensive Bill as far as urban ceiling is concerned.

With these remarkes, I welcome this Bill and thank the Chair.

ಶ್ರೀ ಹೆಚ್. ಎಸ್. ಸಿದ್ಧಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ಈ ಲ್ಯಾಂಡ್ ರಿಫಾರಂಸ್ ಅಮೆಂಡ್‌ಮೆಂಟ್ ಬಿಲ್ಲಿನ ಬಗ್ಗೆ ನನ್ನ ಸಹೋದ್ಯೋಗಿಗಳು ಈಗಾಗಲೇ ಸಾಕಷ್ಟು ಮಾತನಾಡಿದ್ದಾರೆ ನನಗೆ ಇದರಲ್ಲಿ ಒಂದು ಅನುಮಾನ ಬಂದಿದೆ. ಅದು ಇದರಲ್ಲಿರುವ 'ಟೆನೆಂಟ್' ಎನ್ನುವ ಪದದ ಅರ್ಥ ವಿವರಣೆ ಸರಿಯಾಗಿಲ್ಲ ಎಂದು ಕಾಣುತ್ತೆ. ಹಿಂದೆ ಇದ್ದ ಲ್ಯಾಂಡ್ ರಿಫಾರಂಸ್ ಆಕ್ಟ್‌ನಲ್ಲಿ 'ಟೆನೆಂಟ್' ಎನ್ನುವ ಪದದ ಅರ್ಥ ವಿವರಣೆಯಂತೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಪಹಣಿ ಮತ್ತು ಖಾತೆಗಳನ್ನು ಅನುಸರಿಸಿ ಟೆನೆಂಟ್ ಇಂತಹವರು ಎಂದು ಬರೆಯುತ್ತಿದ್ದರು. ಈಗ ಪಹಣಿಯನ್ನು ಬರೆಯುವವರೇ ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲ. ಜಮೀನುದಾರ ತನ್ನ ಜಮೀನನ್ನು ಗುತ್ತಿಗೋ ವಾರಕ್ಕೋ ಕೊಟ್ಟು ತನ್ನ ಹೆಸರಿನಲ್ಲಿ ಪಹಣಿ ಬರೆಸಿಕೊಳ್ಳುತ್ತಿದ್ದಾನೆ. ಇದರ ಬಗ್ಗೆ ಈ ಬಿಲ್ಲಿನಲ್ಲಿ ನಿರ್ದಿಷ್ಟವಾದ ವಿವರಣೆಯನ್ನು ಕೊಡಬೇಕಾಗಿತ್ತು. ಇಲ್ಲದೇ ಹೋದರೆ ಭೂಸುಧಾರಣೆ ಕಾನೂನು ಎಲ್ಲಿ ಇರುತ್ತೋ ಅಲ್ಲಿ ಸರಿಯಾಗಿ ಪಹಣಿ ಬರೆಯದೇ ಇದ್ದರೆ ಅದಕ್ಕೆ ಸೂಕ್ತವಾದ ವ್ಯವಸ್ಥೆ ಮಾಡಬೇಕು. ಟೆನೆಂಟ್ ಎಂದು ಹೇಳುವವರ ಸ್ಥಿತಿ ಬಹಳ ಕಠಿಣವಾಗಿದೆ. ಶ್ಯಾನುಭೋಗರುಗಳು ಎಂದು ಹಿಂದೆ ಇದ್ದವರು ಹೋಗಿ ಈಗ ವಿಲೇಜು ಅಕೌಂಟೆಂಟರುಗಳು ಬಂದಿದ್ದಾರೆ ಇವರುಗಳಿಗೆ ಪಹಣಿ ಬರೆಯುವುದೇ ಗೊತ್ತಿಲ್ಲ. ಯಾರು ಇವರಲ್ಲಿಗೆ ಹೋಗಿ ಹೇಳುತ್ತಾರೋ ಅಂತಹವರ ಹೆಸರಿಗೇನೇ ಇವರು ಪಹಣಿ ಬರೆಯುತ್ತಾರೆ. ಮಾನ್ಯ ಸಚಿವರು ಇದನ್ನು ಪರಿಶೀಲನೆ ಮಾಡಿ ಪಹಣಿ ಬರೆಯುವಾಗ ಓನರುಗಳು ಯಾರು ಟೆನೆಂಟುಗಳು ಯಾರು ಎನ್ನುವುದನ್ನು ಗಣನೆಗೆ ತೆಗೆದುಕೊಂಡು ಓನರುಗಳ ಹೆಸರು ಇರುವುದನ್ನು ರದ್ದು ಮಾಡಬೇಕು. ಗೇಣಿದಾರನಾಗಿರುವವನು ಅರ್ಜಿ ಕೊಟ್ಟಕೂಡಲೇ ಅವನ ಹೆಸರನ್ನು ಪಹಣಿಯಲ್ಲಿ ಬರೆಯುವಂತೆ ಮಾಡಬೇಕು. ಇದರ ಜೊತೆಗೆ ಜಮೀನನ್ನು ಉಳುತ್ತಿರುವವರು ಯಾರಿದ್ದಾರೋ ಅಂತಹವರಿಂದ ಜಮೀನು ಬಿಡಿಸಿಕೊಳ್ಳಲು ಜಮೀನುದಾರರುಗಳು ಅವರ ಮೇಲೆ ಕೇಸು ಹಾಕಿ ಇತ್ಯರ್ಥವಾಗದೆ ಕಾಲವಿಳಂಬವಾಗುತ್ತಿದೆ. ಇದಕ್ಕಾಗಿ ಟೆನೆನ್ಸಿ ಕೇಸುಗಳು ದಾಖಲಾದಾಗ ಇಂತಿಷ್ಟು ಅವಧಿಯಲ್ಲೇ ತೀರ್ಮಾನವನ್ನು ಕೋರ್ಟು ಕೊಡಬೇಕೆಂದು ಇದರಲ್ಲಿರಬೇಕು. ತಹಶೀಲುದಾರರು ಇಂತಿಷ್ಟು ದಿನಗಳಲ್ಲಿ ತೀರ್ಪು ಕೊಡಬೇಕು, ಇದರ ಮೇಲೆ ಇಂತಿಷ್ಟು ದಿನದಲ್ಲಿ ಸಬ್ ಡಿವಿಜನ್ ಆಫೀಸರು ತೀರ್ಪು ಕೊಡಬೇಕು ಆ ನಂತರ ಜಿಲ್ಲಾಧಿಕಾರಿಗಳು ಇಂತಿಷ್ಟು ದಿನದಲ್ಲಿ ತಮ್ಮ ತೀರ್ಪುಕೊಡಬೇಕು ಎಂದು ಮಾಡಿದರೆ ಗೇಣಿದಾರರ ಕೇಸುಗಳು ವರ್ಷ ವರ್ಷವೂ ಮುಂದುವರಿಯುವುದಕ್ಕೆ ಅವಕಾಶವಿರುವುದಿಲ್ಲ. ಈಗೇನಾಗಿದೆ ಎಂದರೆ ಟೆನೆನ್ಸಿ ಕೇಸುಗಳು ಎರಡು, ಮೂರು ಹಾಗೂ ನಾಲ್ಕು ವರ್ಷಗಳ ಕಾಲ ಮುಂದುವರಿಯುತ್ತಾ ಹೋಗಿ ಗೇಣಿದಾರರುಗಳಿಗೆ ಭೂಮಿಯೇ ಸಿಗುವುದು ಕಷ್ಟವಾಗಿದೆ. ಆದುದರಿಂದ ಈ ಬಿಲ್ಲಿನಲ್ಲಿ ಇಂತಹ ಗೇಣಿ ಕೇಸುಗಳನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ತೀರ್ಮಾನವಾಗಬೇಕೆಂದು ಮಾಡಿದರೆ ಸ್ವಲ್ಪ ಅನುಕೂಲ ಸಿಗುತ್ತದೆ. ಇದರಲ್ಲಿ ನೀತಿವಂತ ಅಧಿಕಾರಿಗಳು ಎಲ್ಲ ಕಡೆಗಳಲ್ಲೂ ಇರುವುದಿಲ್ಲ. ಸರಿಯಾದ ಒಂದು ಅವಧಿಯನ್ನು ಇದರಲ್ಲಿ ನಿಗದಿ ಮಾಡುವುದು ಒಳ್ಳೆಯದು. ಈಗ ಇರುವ ಅಧಿಕಾರಿಗಳು ಎಂದರೆ ಶ್ರೀಮಾನ್ ಬಾಲಸುಬ್ರಮಣ್ಯಂ ಹಾಗೂ ಶಂಕರರಾಯರಂತಹ ಅಧಿಕಾರಿಗಳೇ ಎಲ್ಲ ಕಡೆಗಳಲ್ಲೂ ಇರುವುದಿಲ್ಲ. ಗೇಣಿದಾರರುಗಳಿಗೆ ತೊಂದರೆ ಕೊಡುವಂತಹ ಅಧಿಕಾರಿಗಳೇ ಹೆಚ್ಚು ಇರುತ್ತಾರೆ. ಇದಕ್ಕಾಗಿ ಇದರಲ್ಲಿ ಒಂದು ರೀತಿಯಾಗಿ ನಿರ್ಬಂಧ ಇಟ್ಟು ಒಂದು ನಿರ್ದಿಷ್ಟ ಅವಧಿಯಲ್ಲಿ ಗೇಣಿ ಕೇಸುಗಳು ಇತ್ಯರ್ಥವಾಗುವಂತೆ ಇದರಲ್ಲಿ ಮಾಡಬೇಕೆಂದು ಮಾನ್ಯ ಸರಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ. ಇಲ್ಲಿಯವರೆಗೆ ಚರ್ಚೆಯಲ್ಲಿ ಭಾಗವಹಿಸಿದ ಮಾನ್ಯ ಸದಸ್ಯರು ಇಲ್ಲಿ ತಂದಿರತಕ್ಕ ತಿದ್ದುಪಡಿ ಮಸೂದಾ ಕಾನೂನನ್ನು ಯಾರೂ ವಿರೋಧ ಮಾಡಲಿಲ್ಲ. ಎಲ್ಲರೂ ಇದನ್ನು ಹೀಗೆ ತಡವಾಗಿ ತರುವುದಕ್ಕೆ ಬದಲಾಗಿ ಒಂದು ಸಮಗ್ರವಾದ ಮಸೂದೆಯನ್ನು ತರಬೇಕಾಗಿತ್ತು ಮತ್ತು ಇಂತಹ ಮಸೂದೆ ಅವಶ್ಯಕವಾಗಿತ್ತು.

ಎಂದು ಹೇಳಿದರೇ ವಿನಾ ಯಾರೂ ಇದಕ್ಕೆ ವಿರೋಧವಾಗಿ ಇಲ್ಲಿ ಹೇಳಿದ ಹಾಗೆ ನನಗೆ ಭಾಸವಾಗ ಲಿಲ್ಲ. ಈ ವಿಷಯದಲ್ಲಿ ಈಗಾಗಲೇ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮುಂದೆ ಬರತಕ್ಕ ಅಧಿ ವೇಶನದಲ್ಲಿ ಸಮಗ್ರವಾದ ಒಂದು ಭೂಸುಧಾರಣೆ ಮಸೂದೆ ತರುತ್ತೇವೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ವಿಷಯದಲ್ಲಿ ಅನುಮಾನವನ್ನು ಪಡಬೇಕಾಗಿಲ್ಲ. ಶ್ರೀಮಾನ್ ದೇವೇಗೌಡರವರು ಇಂತಹ ಒಂದು ಅನುಮಾನವನ್ನು ಇಲ್ಲಿ ವ್ಯಕ್ತಪಡಿಸಿದಾಗ ಉತ್ತರವಾಗಿ ಮಾನ್ಯ ಮುಖ್ಯಮಂತ್ರಿಗಳು ಆಗಲೇ ಹೇಳಿದರು. ಇದೇ ರೀತಿಯಾದ ಅನುಮಾನವನ್ನು ಮಾನ್ಯ ಸದಸ್ಯರುಗಳಾದ ಶ್ರೀ ಬಂಗಾ ರಪ್ಪನವರು ಕಾಗೋಡು ತಿಮ್ಮಪ್ಪನವರು ಹಾಗೂ ಕೋಣಂದೂರು ಲಿಂಗಪ್ಪನವರೂ ವ್ಯಕ್ತಪಡಿಸಿ ದರು. ಅಂತಹ ಅನುಮಾನಕ್ಕೆ ಕಾರಣವಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿ ದ್ದಾರೆ. ನಾನು ಇಲ್ಲಿ ಆಶ್ವಾಸನೆ ಕೊಡುತ್ತೇನೆ. ಈ ವಿಷಯದಲ್ಲಿ ಪ್ರತ್ಯೇಕವಾಗಿ ಟೀಕೆ ಮಾಡುವ ಅವಶ್ಯಕತೆ ಇಲ್ಲ. ಅವರೆಲ್ಲರೂ ಈ ವಿಚಾರದಲ್ಲಿ ಎಷ್ಟು ಮಟ್ಟಿಗೆ ಕಳಕಳಿಯಿಂದ ಇದ್ದಾರೋ ನಮ್ಮ ಪಕ್ಷಕ್ಕೆ ಹಾಗೂ ನಮ್ಮ ಮಂತ್ರಿಮಂಡಲಕ್ಕೂ ಅಷ್ಟೇ ಕಳಕಳಿ ಇದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ ಎಂದು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರ ಇಲ್ಲಿ ಹೇಳಿದರು. ಇದರ ಬಗ್ಗೆ ಒಂದು ಸುಗ್ರೀವಾಜ್ಞೆ ಹೊರಡಿಸಿ ಇದನ್ನು ತಡೆಗಟ್ಟಬಹುದಾಗಿತ್ತು ಎಂದು. ಮಾನ್ಯ ಮುಖ್ಯಮಂತ್ರಿಗಳು ಪ್ರತಿಜ್ಞಾವಚನ ತೆಗೆದುಕೊಂಡು ಮಂತ್ರಿಮಂಡಲ ರಚನೆಯಾಯಿತು ಮತ್ತು ಇದಾದ ಮೂರು ದಿನಗಳಲ್ಲಿ ವಿಧಾನ ಸಭಾಧಿವೇಶನವು ಇಲ್ಲಿ ಸೇರಿತು. ನಾವು ಇಲ್ಲಿ ಸುಗ್ರೀವಾಜ್ಞೆ ಹೊಡಿಸಿದ್ದರೆ ಈ ವಿಧಾನಸಭೆಯನ್ನು ಧಿಕ್ಕರಿಸಿದಂತೆ ಆಗುತ್ತಿತ್ತು. ಮತ್ತು ಆಗ ಇಂತಹ ಒಂದು ಸುಗ್ರೀವಾಜ್ಞೆ ಹೊರಡಿಸುವ ಅವಶ್ಯಕತೆಯೂ ಇರಲಿಲ್ಲ. ಇದನ್ನು ಪ್ರಸ್ತಾಪ ಮಾಡಿದ ಮೇಲೆ ಮುಂದಿನ ಅಧಿವೇಶನ ಬರುವುದರೊಳಗೆ 14ನೇ ಸೆಕ್ಷನ್ ಪ್ರಕಾರ ಉಂಟಾಗಿರತಕ್ಕ ಅನ್ಯಾಯಗಳನ್ನು ಸರಿಪಡಿಸಲು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಈ ವಿಷಯದಲ್ಲಿ ನಮಗೂ ಸಹ ಆ ರೀತಿ ಆಸೆಯಿದ್ದರೂ ಕೂಡ ಈ 14ನೇ ಸೆಕ್ಷನ್ ಜೊತೆಯಲ್ಲಿ ಇತರೇ ಅನೇಕ ಕಾನೂನಿನ ಭಾಗಗಳು ಬೆರತು ಹೋಗಿರುವುದರಿಂದ ಅದು ಒಂದನ್ನೇ ಪ್ರತ್ಯೇಕವಾಗಿ ಮಾಡುವುದು ಕಷ್ಟವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಗೇಣಿದಾರರನ್ನು ಉಚ್ಚಾಟನೆ ಮಾಡಬಾರದು ಎಂಬ ಬಗ್ಗೆ ಈ ಒಂದು ಮಸೂದೆಯನ್ನು ತಂದಿದ್ದೀರಿ. ಅದೇ ಒಂದು ಭಾವನೆ ಮತ್ತು ಕಳಕಳಿ ಸೆಕ್ಷನ್ 14ರ ಬಗ್ಗೆಯೂ ಸಹ ಸರ್ಕಾರಕ್ಕೆ ಇರಬೇಕಲ್ಲವೇ ? ಈ ಸೆಕ್ಷನ್ ಪ್ರಕಾರ ಇವೊತ್ತಿನ ದಿವಸ ಅನೇಕ ಜನ ಗೇಣಿದಾರರ ಉಚ್ಚಾಟಣೆಯಾಗುತ್ತಿದೆ. ಇದನ್ನು ತಪ್ಪಿಸಲು ಏನಾದರೂ ತುರ್ತು ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಯಾರು ಗೇಣಿ ಕೊಡದೆ ಬಾಕಿ ಇಟ್ಟುಕೊಂಡಿದ್ದಾರೆ, ಅಂತಹವರ ಒಕ್ಕಲೆಬ್ಬಿಸುವುದನ್ನು ತಪ್ಪಿಸುವ ಉದ್ದೇಶದಿಂದ ಈ ಬಿಲ್‌ನ್ನು ತರಲಾಗಿದೆ. ಇಷ್ಟಕ್ಕೇ ಇದು ಸೀಮಿತವಾಗಿದೆ. ಇದರ ಜೊತೆಗೆ 14ನೇ ಸೆಕ್ಷನ್‌ಗೆ ತಿದ್ದುಪಡಿ ತರುವುದು ಕಷ್ಟವಾಗುತ್ತದೆ. ಏಕೆಂದರೆ ನಾನು ಮೊದಲೇ ತಿಳಿಸಿದಂತೆ ಈ ಕಾಯಿದೆಯಲ್ಲಿ ಉಳಿದ ಕಲಂಗಳು ಹೊಂದಿಕೊಂಡು ಹೋಗುವುದರಿಂದ 14ನೇ ಸೆಕ್ಷನನ್ನು ಪ್ರತ್ಯೇಕ ಮಾಡುವುದು ಕಷ್ಟವಾಗುತ್ತದೆ. ಮಾನ್ಯ ಸದಸ್ಯರ ಉದ್ದೇಶವನ್ನು ನಾನು ಮನಗಂಡಿದ್ದೇನೆ. 14ನೇ ಸೆಕ್ಷನ್‌ನಲ್ಲಿ ಭೂಮಾಲಿಕ ತನ್ನ ಸ್ವಂತ ಸಾಗುವಳಿಗೆ ಜಮೀನನ್ನು ಗೇಣಿದಾರರಿಂದ ವಾಪಸ್ ಪಡೆಯತಕ್ಕಂಥ ಸಂದರ್ಭವಿದೆ. ಈ ಸೆಕ್ಷನ್ ಪ್ರಕಾರ ಸುಮಾರು 95 ಸಾವಿರ ಮೊಕದ್ದಮೆಗಳು ಬಂದಿದ್ದು, ಅದರಲ್ಲಿ ಸುಮಾರು 69 ಸಾವಿರ ಮೊಕದ್ದಮೆ ಗಳು ಈಗಾಗಲೇ ತೀರ್ಮಾನವಾಗಿವೆ. ಇನ್ನೂ 26 ಸಾವಿರ ಮೊಕದ್ದಮೆಗಳು ಇತ್ಯರ್ಥವಾಗ ಬೇಕಾಗಿದೆ. ಈಗ ನಾವು ತಂದಿರತಕ್ಕ ತಿದ್ದುಪಡಿ ಜೊತೆಗೆ 14ನೇ ಸೆಕ್ಷನ್‌ಗೂ ತಿದ್ದುಪಡಿ ತರು ವುದಕ್ಕೆ ನಾವು ಕೈಹಾಕಿದ್ದರೆ ಅದರಿಂದ ಅನೇಕ ತೊಂದರೆಗಳು ಉದ್ಭವವಾಗುತ್ತಿದ್ದವು. ಯಾರ ಯಾರು ಭೂಮಿಯನ್ನು ಸ್ವಂತ ಸಾಗುವಳಿಗಾಗಿ ಕೇಳಿರುತ್ತಾರೆಯೋ, ಅವರಲ್ಲಿ ಯಾರದು ನ್ಯಾಯವಾಗಿದೆ, ಯಾರದು ನ್ಯಾಯವಾಗಿಲ್ಲ ಎಂಬ ಬಗ್ಗೆ 16ನೇ ಸೆಕ್ಷನ್‌ನಲ್ಲಿ ಕೆಲವು ಷರತ್ತುಗಳಿವೆ. ಅದನ್ನು ನಾವು ಅನುಸರಿಸಬೇಕಾಗುತ್ತದೆ. ಈ ರೀತಿ ಪರಸ್ಪರ ಹೊಂದಾಣಿಕೆ ಇರುವುದರಿಂದ ಇದೆಲ್ಲವನ್ನೂ ನಾವು ಯೋಚನೆ ಮಾಡಿ ಮುಂದೆ ಸಮಗ್ರವಾದ ಮಸೂದೆಯನ್ನು ತರುತ್ತೇವೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇನ್ನು ಕೆಲವು ಮಾನ್ಯ ಸದಸ್ಯರು ಸಣ್ಣ ಹಿಡುವಳಿದಾರರಿಗೆ ಪರಿ ಹಾರ ಕೊಡುವ ವಿಷಯದಲ್ಲಿ ಹೇಳಿದರು. ಸಣ್ಣ ಹಿಡುವಳಿದಾರರಿಗೆ ಪರಿಹಾರಕೊಡುವುದಕ್ಕೆ 49 ಮತ್ತು 50ನೇ ಕಲಂಗಳಲ್ಲಿ ಅವಕಾಶವಿದೆ. ಸಣ್ಣ ಹಿಡುವಳಿದಾರರಿಗೆ ಎಷ್ಟು ಪರಿಹಾರ ಕೊಡಬೇಕು ಎಂಬ ಬಗ್ಗೆ 47ನೇ ಕಲಂನ್ನು ಓದಿದರೆ ಗೊತ್ತಾಗುತ್ತದೆ. ಅದರಲ್ಲಿ ಈ ರೀತಿ ಇದೆ :

(ಶ್ರೀ ಎನ್. ಹುಚ್ಚಮಾಸ್ತಿಗೌಡ)

Provided that if the landlord is a small holder the compensation payable shall be twenty times the difference mentioned in item (i) or item (ii), as the case may be ;

ಇನ್ನುಳಿದ ಸಂದರ್ಭಗಳಲ್ಲಿ 15 times the difference ಕೊಡಬೇಕೆಂದು ಇದೆ.

ಶ್ರೀ ಎಸ್. ಬಂಗಾರಪ್ಪ.—ಅದರಲ್ಲಿ ಸಣ್ಣ ಹಿಡುವಳಿದಾರರಿಗೆ ಮಾತ್ರವಲ್ಲ, ಎಲ್ಲ ಹಿಡುವಳಿದಾರರಿಗೂ ಪರಿಹಾರ ಕೊಡಬೇಕೆಂದು ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಎರಡು ರೀತಿಯ ಪರಿಹಾರ ಕೊಡುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ವಿಷಯದಲ್ಲಿ ಅನುಕಂಪ ತೋರಿಸುತ್ತಿರುವವರಿಗೆ ಇದು ಉತ್ತರವಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಅಷ್ಟು ಪರಿಹಾರ ಕೊಟ್ಟರೆ ಸಾಲದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನುಕಂಪದ ದೃಷ್ಟಿಯಿಂದ ನೋಡಿದರೆ 20ರಷ್ಟು ಅಲ್ಲ, 50ರಷ್ಟು ಕೊಟ್ಟರೂ ಸಹ ಅದು ಸಾಲದು ಎಂದು ಹೇಳಬಹುದು. ಅದು ಅನುಕಂಪದ ಮಾತಾಗುತ್ತದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ.—ಪರಿಹಾರವನ್ನು ಹಣದ ರೂಪದಲ್ಲಿ ಕೊಡುತ್ತೀರೋ ಅಥವಾ ಬಾಂಡ್ ರೂಪದಲ್ಲಿ ಕೊಡುತ್ತೀರೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರಿಹಾರವನ್ನು ನಗದು ರೂಪದಲ್ಲಿ ಮತ್ತು ಬಾಂಡ್ ರೂಪದಲ್ಲಿ ಕೊಡಬಹುದು. ಎರಡಕ್ಕೂ ಅವಕಾಶವಿದೆ. ಅದನ್ನು 51ನೇ ಕಲಮ್‌ನಲ್ಲಿ ಹೇಳಲಾಗಿದೆ.

> "51. Mode of payment of compensation.—Save as provided in section 106, the compensation payable to any preson under section 47 shall, subject to the provisions of section 50—
>
> (a) be paid in cash in a lumpsum if the amount payable does not exceed two thousand rupees and
>
> (b) if the amount payable exceeds two thousand rupees the amount upto two thousand rupees shall be paid in cash and the balance shall be paid in negotiable bonds......"

ಎಂಬುದಾಗಿ ಹೇಳಿದೆ. ಹೀಗೆ ಎರಡಕ್ಕೂ ಅವಕಾಶವಿದೆ. ಶ್ರೀಮಾನ್ ಬಂಗಿಯವರು ಮಾತನಾಡುವಾಗ ಒಂದು ಪ್ರಶ್ನೆಯನ್ನು ಎತ್ತಿದರು. ಕೆಲವು ಗೇಣಿದಾರರು ಹೆಚ್ಚು ವರ್ಷದ ಗೇಣಿಯನ್ನು ಬಾಕಿ ಕೊಡಬೇಕಾಗಿದ್ದರೆ ಅಂತಹ ಸಮಯದಲ್ಲಿ ಯಾವ ವರ್ಷದ ಗೇಣಿಯನ್ನು ಗೊತ್ತು ಮಾಡುತ್ತೀರಿ ಎಂದು ಕೇಳಿದರು. ಎಷ್ಟು ವರ್ಷ ಬಾಕಿ ಇದೆಯೋ ಅದರಲ್ಲಿ ಮೊದಲನೆಯ ಎರಡು ವರ್ಷ ಎಂದು ಲೆಕ್ಕಕ್ಕೆ ತೆಗೆದುಕೊಳ್ಳಬಹುದು. ಮತ್ತೆ ಕೆಲವು ಸದಸ್ಯರು ಈ ತಿದ್ದುಪಡಿಯ ಪ್ರಕಾರ 15 ದಿವಸದೊಳಗೆ ಜಮೀನನ್ನು ಗೇಣಿದಾರರಿಗೆ ಹಿಡುವಳಿದಾರರು ವಾಪಸ್ ಮಾಡಬೇಕೆಂದು ಏನು ನಿಯಮವಿದೆ, ಅಂತಹ ಸಂದರ್ಭದಲ್ಲಿ ಭೂಮಿಯಲ್ಲಿ ಬೆಳೆ ಇದ್ದರೆ ಏನು ಮಾಡುವುದು ಎಂದು ಕೇಳಿದರು. ಆ ರೀತಿ ಏನಾದರೂ ಬೆಳೆ ಇದ್ದರೆ, ಸಾಮಾನ್ಯವಾಗಿ ಯಾರು ಬೆಳೆ ಹಾಕಿರುತ್ತಾರೋ ಅವರಿಗೆ ಬೆಳೆ ಸೇರಬೇಕೆಂದು ಕಾನೂನು ಇದೆ. ಆದ್ದರಿಂದ ಬೆಳೆ ಬೆಳೆದವರಿಗೆ ಬೆಳೆ ಸೇರುತ್ತದೆ. ಈಗ ಇರುವ 15 ದಿವಸಗಳ ವಾಯಿದೆಯನ್ನು ಎರಡು ಅಥವಾ ಮೂರು ತಿಂಗಳಿಗೆ ಜಾಸ್ತಿ ಮಾಡಬೇಕೆಂದು ಕೆಲವರು ಹೇಳಿದರು. ಆ ರೀತಿ ಏನಾದರು ಸಮಯವನ್ನು ಜಾಸ್ತಿಮಾಡಿದರೆ, ನಾವು ಈಗ ಏನು ಒಂದು ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೋ ಅದರಂತೆ ಭೂಮಿಯನ್ನು ವಾಪಸ್ ಪಡೆಯುವುದು ತೊಂದರೆಯಾಗುತ್ತದೆ. ಒಂದು ಪಕ್ಷ ಮಾನ್ಯ ಸದಸ್ಯರು ಹೇಳಿದಂತೆ ಎರಡೂವರೆ ಅಥವಾ ಮೂರು ತಿಂಗಳವರೆಗೆ ಸಮಯವನ್ನು ಜಾಸ್ತಿ ಮಾಡಿದರೆ, ನಾವು ಮುಂದೆ ಏನು ಒಂದು ಸಮಗ್ರವಾದಂಥ ಮಸೂದೆಯನ್ನು ತರಬೇಕೆಂದಿದ್ದೇವೋ ಅಲ್ಲಿಯವರೆಗೆ, ಇದನ್ನು ತಳ್ಳಿಕೊಂಡು ಹೋದಂತಾಗುತ್ತದೆ. ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲವಾದ್ದರಿಂದ ಈಗ ಇರುವ 15 ದಿವಸದ ಅವಧಿಯನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ.

ಸಾಮಾನ್ಯವಾಗಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ಎಲ್ಲ ಅಂಶಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ಈಗ ನಮ್ಮ ಮುಂದೆ ಇರತಕ್ಕಂಥ ತಿದ್ದುಪಡಿ ಮಸೂದಾ ಕಾನೂನಿಗೆ ಅಷ್ಟೊಂದು ವಿರೋಧವೇನೂ ಕಾಣಲಿಲ್ಲ. ಎಲ್ಲ ಭಾಗದಿಂದಲೂ ಇದಕ್ಕೆ ಒಪ್ಪಿಗೆ ದೊರೆತಿದೆ. ಇದರ ಬಗ್ಗೆ ನಾನು ಇನ್ನು ಹೆಚ್ಚು ವಿಷಯ ಹೇಳದೆ, ಈ ತಿದ್ದುಪಡಿ ಮಸೂದಾ ಕಾನೂನಿಗೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾತೊಂದು ಮುಖ್ಯವಾದ ಅಂಶವೆಂದರೆ 22ನೇ ಕಲಂನಲ್ಲಿ ಒಂದು ಪ್ರಾವಿಸೋ ಇದೆ. ಇದರ ಅರ್ಥವನ್ನು ಸ್ವಲ್ಪ ಸ್ಪಷ್ಟೀಕರಿಸಬೇಕೆಂದು ಮಾನ್ಯ ಪುಟ್ಟಸ್ವಾಮಿಯವರು ಕೇಳಿದರು. 22ನೇ ಸೆಕ್ಷನ್‌ನಲ್ಲಿ ಯಾವ ಸಂದರ್ಭದಲ್ಲಿ ಒಕ್ಕಲೆಬ್ಬಿಸಬೇಕೆಂಬುದಕ್ಕೆ ಒಂದು ತಿದ್ದುಪಡಿ ಇದೆ.

ಅಧ್ಯಕ್ಷರು.—ಈ ಮಸೂದೆ ಪಾಸಾದಮೇಲೆ ತಾವು ಸ್ಪಷ್ಟೀಕರಣ ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆಗಬಹುದು.

3-00 P.M.

MADAM SPEAKER.—I would like to know whether Sri T. R. Shamanna wants to press his amendment or wishes to withdraw it.

Sri T. R. SHAMANNA.—I want to press the amendment.

MADAM SPEAKER.—I will put the amendment to the vote of the House.

The question is :

"That the Mysore Land Reforms (Amendment and Miscellaneous Provisions) Bill, 1972, be circulated for purpose of eliciting opinion thereon by 1st June 1972."

*The amendment was negatived.*

MADAM SPEAKER.—I will now put the consideration motion to the vote of the House.

The question is :

"That the Mysore Land Reforms (Amendment and Miscellaneous Provisions) Bill, 1972, be taken into consideration."

*The motion was adopted.*

MADAM SPEAKER.—I will now take up clause by clause consideration.

*Clause 2*

MADAM SPEAKER.—The question is :

"That clause 2 do stand part of the Bill."

There are amendments, the concerned members may move them.

Sri N. HUTCHAMASTHY GOWDA.—I move :

"That in line 2 of the proposed proviso to sub-section (1) of Section 22 of the Mysore Land Reforms Act, 1961, after the words 'from any land', the following words shall be inserted :

'On the ground of default of payment of rent by the tenant'."

MADAM SPEAKER.—Amendment moved :

"That in line 2 of the proposed proviso to sub-section (1) of Section 22 of the Mysore Land Reforms Act, 961, after the words 'from any land', the following words shall be inserted :

'On the ground of default of payment of rent by the tenant'."

MADAM SPEAKER.—There is an amendment by Sri Kagodu Thimmappa. He may move it.

Sri KAGODU THIMMAPPA (Sagar).—I beg to move :

"That at page 3, the following second proviso shall be added after the first proviso proposed in sub-section (1) of Section 22 of the Principal Act :

'Notwithstanding anything contained in section 14 of the Mysore Land Reforms Act (Principal Act) or in any judgement, decree or order of any court or Tribunal no tenant shall be evicted or disposed'."

MADAM SPEAKER.—Amendment moved :

"That at page 3, the following second proviso shall be added after the first proviso proposed in sub-section (1) of section 22 of the Principal Act :

"Notwithstanding anything contained in section 14 of the Mysore Land Reforms Act (Principal Act) or in any Judgement, decree or order of any Court or Tribunal no tenant shall be evicted or disposed'."

†ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ನಾನು ಇದರಲ್ಲಿ ಪ್ರಸ್ತಾಪ ಮಾಡಿರ ತಕ್ಕಂಥಾದ್ದು ಇಷ್ಟೆ. ನಾನು ಈಗಾಗಲೇ ಹಿಂದೆ ಹೇಳಿದ ಹಾಗೆ ಇವೊತ್ತು ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೇಣಿರೈತರ ಉಚ್ಚಾಟನೆ ಆಗುತ್ತಾ ಇರತಕ್ಕಂಥಾದ್ದು ಭೂ ಸುಧಾರಣಾ ಕಾನೂನಿನ ಸೆಕ್ಷನ್ 14ರ ಪ್ರಕಾರ. ಆದ್ದರಿಂದ ಇಷ್ಟು ಸಹಸ್ರ ಸಂಖ್ಯೆಯಲ್ಲಿ ಇರತಕ್ಕ ಗೇಣಿ ರೈತರು ಏನು ಉಚ್ಚಾಟನೆಯಾಗುತ್ತಿದ್ದಾರೆ ಅದನ್ನು ಕೂಡಲೇ ನಿಲ್ಲಿಸಬೇಕು ಎನ್ನುವ ಉದ್ದೇಶದಿಂದ ಈ ತಿದ್ದುಪಡಿ ಯನ್ನು ತಂದಿದೆ. ಇಲ್ಲಿ ನಡೆದಂತಹ ಚರ್ಚೆಯನ್ನು ನೋಡಿದ್ದರಲ್ಲಿ ಹೆಚ್ಚು ಜನ ಮಾನ್ಯ ಸದಸ್ಯರ ಅಭಿಪ್ರಾಯ ಕೂಡ ಗೇಣಿ ರೈತರನ್ನು ಯಾವ ವಿಧದಿಂದಲೂ ಒಕ್ಕಲೆಬ್ಬಿಸಕೂಡದು ಎಂದು ಅಭಿಪ್ರಾಯ ಈ ಸದನದ ಮುಂದೆ ಬಂದಿದೆ. ತಮಗೆ ಮನವರಿಕೆಯಾಗಿದೆ ಇವೊತ್ತು ಕೇವಲ 1,017 ಜನಗಳಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಈ ಒಂದು ತಿದ್ದುಪಡಿ ಮಸೂದೆಯನ್ನು ಈ ಸಭೆಯ ಮುಂದೆ ಸರ್ಕಾರದವರು ತಂದಿದ್ದಾರೆ. ಸಹಸ್ರಾರು ಸಂಖ್ಯೆಯಲ್ಲಿ ಗೇಣಿ ರೈತರು ಉಚ್ಚಾಟನೆ ಯಾಗುವ ಸಂದರ್ಭದಲ್ಲಿ ಅದನ್ನು ತಡೆ ಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು ಲಕ್ಷಾಂತರ ಮಂದಿ ಗೇಣಿ ರೈತರು ತಮ್ಮ ಜಮೀನನ್ನು ಉಳಿಸಿಕೊಳ್ಳುತ್ತಾರೆ. ನೂರಾರು ವರ್ಷಗಳಿಂದ ಅವರು ಭೂಮಿಯನ್ನು ನಂಬಿಕೊಂಡು ಬಂದಿರುವುದರಿಂದ ಅವರಿಗೆ ನಾನು ಈಗ ತಂದಿರುವ ತಿದ್ದುಪಡಿಯಿಂದ ರಕ್ಷಣೆ ಆಗುತ್ತದೆ. ಸಮಗ್ರ ಭೂಸುಧಾರಣೆಯನ್ನು ತಾವು ತಂದಾಗ ಅದರ ಪ್ರಕಾರ ಅವರು ಪರಿಹಾರವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ನನ್ನ ತಿದ್ದುಪಡಿಯನ್ನು ಮಾನ್ಯಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳು ತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ನಾವು ತಂದಿರತಕ್ಕ ಮಸೂದಾ ಕಾನೂನಿನಲ್ಲಿ ಮಾನ್ಯ ಸದಸ್ಯರು ಹೇಳತಕ್ಕಂಥಾ ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

MADAM SPEAKER.—I want to know from Sri Kagodu Thimmappa whether he would like to press for his amendment.

Sri KAGODU THIMMAPPA.—I beg leave of the House to withdraw my amendment.

*The Amendment was withdrawn by leave of the House.*

MADAM SPEAKER.—The Amendment of the Hon'ble Minister will be put to vote. The question is :

"That in line 2 of the proposed proviso to sub-section (1) of Section 22 of the Mysore Land Reformas Act 1961, after the words 'from any land' the following words shall be inserted :

'On the ground of default of payment of rent by the tenant'."

*The amendment was adopted.*

MADAM SPEAKER.—The question is :

"That clause 2 as amended, do stand part of the Bill."

*The motion was adopted.*

Clause 2 as amended was added to the Bill.

CLAUSE 3

MADAM SPEAKER.—The question is :

"That clause 3 do stand part of the Bill."

Sri T. R. Shamanna may move his amendments to clause 3.

Sri T. R. SHAMANNA (Fort).—I beg to move :

"That at page 3, in sub-clause 1 (b) line 6 for the words 'fifteen days' the words 'sixty days' shall be substituted.

"That at page 3, in sub-clause 2, line 5 for the words 'one month' the words 'one day' and in line 6 for the words 'one thousand rupees' the words 'one hundred rupees' shall be substituted. And

"That at page 3, in para—Explanation after the word 'transferee' the word 'Mortgagee' shall be inserted."

MADAM SPEAKER.—Amendments moved :

"That at page 3, in sub-clause 1 (b) line 6 for the words 'fifteen days' the words 'sixty days' shall be substituted.

"That at page 3, in sub-clause 2, line 5 for the words 'one month' the words 'one day' and in line 6 for the

(MADAM SPEAKER)

words 'one thousand rupees' the words 'one hundred rupees' shall be substituted. And

"That at page 3, in para—Explanation after the word 'transferee' the word 'Mortgagee' shall be inserted."

†ಶ್ರೀ ಟಿ. ಆರ್. ಶಾಮಣ್ಣ.—ಈಗ ನನ್ನ ತಿದ್ದುಪಡಿಯ ಉದ್ದೇಶ ಇಷ್ಟೆ. ಈ ಡ್ರಾಫ್ಟ್ ಬಿಲ್ಲು ಈ ತಿಂಗಳು 11ನೇ ತಾರೀಖು ಪ್ರಕಟವಾಗಿದೆ. ಆದ್ದರಿಂದ ಇದರ ಬಗ್ಗೆ ಸಾಕಷ್ಟು ಜನಗಳಿಗೆ ತಿಳುವಳಿಕೆ ಇಲ್ಲ. ಈ ಬಿಲ್ಲು ಪಾಸಾದ 15 ದಿವಸಗಳೊಳಗಾಗಿ ಜಮೀನ್ದಾರ ಜಮೀನನ್ನು ಗೇಣಿದಾರನಿಗೆ ಒಪ್ಪಿಸಬೇಕು ಎಂದು ಇದೆ. ಅವನು ಆ ರೀತಿ ಮಾಡದೇ ಹೋದರೆ ಅವನಿಗೆ ಒಂದು ಹೆಚ್ಚಿನ ರೀತಿಯ ಶಿಕ್ಷೆಯನ್ನು ವಿಧಿಸಬೇಕೆಂದು ಈ ಮಸೂದೆಯಲ್ಲಿ ಇದೆ. ಅವನನ್ನು ಜೈಲಿಗೆ ಕಳುಹಿಸುವುದಕ್ಕೂ ಮತ್ತು ದಂಡವನ್ನು ವಿಧಿಸುವುದಕ್ಕೂ ಅವಕಾಶ ಇದೆ. ಆದ್ದರಿಂದ ಜಮೀನ್ದಾರರಿಗೆ ಸಾಕಷ್ಟು ಎಚ್ಚರಿಕೆಯನ್ನು ಕೊಡುವುದಕ್ಕೋಸ್ಕರ ಈಗ ಈ ಮಸೂದೆಯಲ್ಲಿ 15 ದಿವಸಕ್ಕೆ ಬದಲಾಗಿ 60 ದಿವಸಗಳು ಎಂದು ಮಾಡಬೇಕೆಂದು ನಾನು ನನ್ನ ತಿದ್ದುಪಡಿಯಲ್ಲಿ ಸೂಚಿಸಿದ್ದೇನೆ. ಅದು ಸೂಕ್ತವಾಗಿದೆ. ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮಾನ್ಯ ಸದಸ್ಯರಾದ ಶ್ರೀಮಾನ್ ಟಿ. ಆರ್. ಶಾಮಣ್ಣನವರು ಹೇಳಿದ ಹಾಗೆ ಅವರ ತಿದ್ದುಪಡಿಯನ್ನು ನಾವು ಒಪ್ಪಿಕೊಂಡರೆ ನಾವು ತಂದಿರತಕ್ಕ ಮಸೂದೆಯ ಮೂಲ ಉದ್ದೇಶ ಹಾಳಾಗುತ್ತದೆ ಎಂದು ನನ್ನ ಅಭಿಪ್ರಾಯ. ಈಗ 15 ದಿವಸ ಕೊಟ್ಟಿರತಕ್ಕ ವಾಯಿದೆ ಸಾಕಾಗುವುದಿಲ್ಲ, ಆದ್ದರಿಂದ 60 ದಿವಸ ವಾಯಿದೆ ಕೊಡಿ ಎಂದು ಹೇಳಿದ್ದಾರೆ. ಹೆಚ್ಚು ದಿವಸ ವಾಯಿದೆಯನ್ನು ಕೊಡುವುದಾದರೆ ಮುಂದೆ ಸಮಗ್ರ ಬಿಲ್ಲು ಬರುವವರೆಗೂ ಇದನ್ನು ತಳ್ಳಿಕೊಂಡು ಹೋಗುವ ಉದ್ದೇಶ ಈ ತಿದ್ದುಪಡಿಯಲ್ಲಿದೆ ಎಂದ ಹಾಗಾಯಿತು. ಆದ್ದರಿಂದ ಮಾನ್ಯ ಶ್ರೀ ಶಾಮಣ್ಣನವರು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

MADAM SPEAKER.—I want to know from Sri T. R. Shamanna whether he wants to press his amendments.

Sri T. R. SHAMANNA.—I want to press them.

MADAM SPEAKER.—The question is :

"That at page 3, in sub-clause 1 (b) line 6 for the words 'fifteen days' the words 'sixty days' shall be substituted.

"That at page 3, in sub-clause 2, line 5 for the words 'one month' the words 'one day' and in line 6 for the words 'one thousand rupees' the words 'one hundred rupees' shall be substituted. And

"That at page 3, in para-Explanation after the word 'transferee' the word 'Mortgagee' shall be inserted."

*The amendments were negatived.*

MADAM SPEAKER.—I put clause 3 to the vote of the House. The question is :

"That clause 3 do stand part of the Bill."

*The motion was adopted.*

Clause 3 was added to the Bill.

CLAUSE 4

**MADAM SPEAKER.**—The question is :

"That clause 4 do stand part of the Bill."

There are amendments given notice of by Sriyuths B. V. Kakkilaya and T. R. Shamanna. They may move the amendments. Sri M. S. Krishnan has also supported the Amendment of Sri Kakkilaya.

**Sri B. V. KAKKILAYA** (Bantwal).—Madam, I beg to move the following Amendment :

"That at Page 4, for the existing Clause (4) the following clause shall be substituted :

'Notwithstanding anything contained in the principal Act, or in any decree or order of any Court or Tribunal, no order for eviction of a tenant or restoration of possession of any land to the landlord on the ground of default in paying rent by the tenant shall be executed for a period of three years from the commencement of the Mysore Land Reforms (Amendment and Miscellaneous Provisions) Act, 1972'."

**MADAM SPEAKER.**—Amendment moved :

"That at page 4 for the existing clause (4) the following clause shall be substituted :

'Notwithstanding anything contained in the principal Act, or in any decree or order of any Court or Tribunal, no order for eviction of a tenant or restoration of possession of any land to the landlord on the ground of default in paying rent by the tenant shall be executed for a period of three years from the commencement of the Mysore Land Reforms (Amendment and Miscellaneous Provisions) Act, 1972'."

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಸರ್ಕಾರದವರು ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಒಂದು ಸಮಗ್ರ ಶಾಸನವನ್ನು ಬೇಗನೆ ತರುತ್ತೇವೆಂದು ಹೇಳುತ್ತಿದ್ದಾರೆ. ಅದರಲ್ಲಿ ಕೊನೆಯ ಪಕ್ಷ ಮುಖ್ಯವಾದ ಅಂಶಗಳಾದರೂ ಇರುತ್ತವೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತಿನ ದಿವಸ ಗೇಣಿ ನಿರ್ಣಯ ಮಾಡುವಾಗ ಬೇರೆ ಬೇರೆ ಜಾಗಗಳಲ್ಲಿ ಇರುವ ಪರಿಸ್ಥಿತಿಗೆ ಅನುಸಾರವಾಗಿ ಮಾಡಬೇಕಾಗುತ್ತದೆ. ಅಷ್ಟೇ ಅಲ್ಲದೆ ಎರಡು ವರ್ಷದ ಗೇಣಿಯನ್ನು ರೈತರು ಕೊಟ್ಟರೆ ಅವರ ಕೈಯಲ್ಲಿರತಕ್ಕ ಜಮೀನನ್ನು ಬಿಡಿಸಬಾರದು ಎಂದು ಹೇಳಿದ್ದಾರೆ. ಇವತ್ತಿನ ಪ್ರೊಸೀಜರ್ ಪ್ರಕಾರ ಇವತ್ತು ಏನು ಗೇಣಿ ನಿರ್ಣಯವಾಗುತ್ತದೆ, ಆ ಪ್ರಕಾರ ರೈತರು ಎರಡು ವರ್ಷದ ಗೇಣಿಯನ್ನು ಕೊಡಬೇಕಾಗುತ್ತದೆ. ಮುಂದೆ ಕಾಂಪ್ರೆಹೆನ್ಸಿವ್ ಶಾಸನ ತಂದಾಗ ಈ ಸಂಪ್ರದಾಯವನ್ನು ಬದಲಾವಣೆ ಮಾಡಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟೇ ಅಲ್ಲದೆ, ಗೇಣಿಯನ್ನು ಕೂಡ ಬಹಳ ಕಡಿಮೆ ಮಾಡುತ್ತೀರೆಂದು ನಾನು ತಿಳಿದಿದ್ದೇನೆ. ಹಾಗಿರುವಾಗ, ಸ್ವಲ್ಪ ಸಮಯದಲ್ಲಿಯೇ ನಿಜವಾದ ತಿದ್ದುಪಡಿಯನ್ನು ತರುವುದಾದರೆ, ಈಗ ಇದನ್ನು ತಂದು ಏಕೆ ಒತ್ತಾಯ ಮಾಡುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ಮತ್ತು ಈಗ ಗೇಣಿ ಎರಡು ವರ್ಷದ್ದು ಕೊಟ್ಟರೆ, ರೈತನಿಗೆ ಭೂಮಿ ಉಳಿಯುತ್ತದೆಂದು ಏಕೆ ಹೇಳುತ್ತೀರೆಂದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ನೋಡಿದರೆ, ಅದಷ್ಟು ಜಾಗ್ರತೆ ನೀವು ಆ ಮೂಲ ತಿದ್ದುಪಡಿಯನ್ನು ತರುತ್ತೀರೋ ಇಲ್ಲವೋ ಎಂಬ ಅನುಮಾನವಿದೆ. ನೀವು ಅದನ್ನು ನಿಜವಾಗಿ ಬೇಗನೇ ತರುವುದಾದರೆ ಈ ಎರಡು ವರ್ಷದ ಗೇಣಿಯನ್ನು ಕೊಡಬೇಕೆಂದು ಹೇಳುವ ಅವಶ್ಯಕತೆ ಇಲ್ಲ. ತಾವು

(ಶ್ರೀ ಬಿ. ಎ. ಕಕ್ಕಿರಾಯ)

ಸಮಗ್ರವಾದ ಮಸೂದೆಯನ್ನು ತರುವಾಗ ಗೇಣಿ ವಸೂಲಾತಿಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ? ರೈತನಿಂದ ಭೂಮಿಯನ್ನು ಬಿಡಿಸಿದ ರೀತಿಯಲ್ಲಿ, ಬೆಳೆಯನ್ನು ಜಫ್ತಿ ಮಾಡದ ರೀತಿಯಲ್ಲಿ ಮತ್ತು ನೀವು ತೆಗೆದುಕೊಳ್ಳುವ ಕ್ರಮಗಳೆಲ್ಲವನ್ನೂ ತಡೆಯುವ ರೀತಿಯಲ್ಲಿ ಈ ತಿದ್ದುಪಡಿಯನ್ನು ತಂದಿದ್ದೇವೆ. ಈ ಮಸೂದೆ ಮಂಜೂರಾದ ಮೇಲೆ ಏನಾಗುತ್ತದೆ ? ಯಾವುದೇ ಡಿಕ್ರಿಯನ್ನು ಕೂಡ ಇನ್ನು ಮೂರು ವರ್ಷಗಳವರೆಗೆ ಜಾರಿಗೆ ಕೊಡಬಾರದು ; ಮತ್ತು ಅದನ್ನು ತಡೆಹಿಡಿಯಬೇಕೆಂಬುದೇ ನಮ್ಮ ತಿದ್ದುಪಡಿಯ ಮೂಲ ಉದ್ದೇಶ. ರೈತನು ಗೇಣಿ ಕೊಡಲಿ, ಅಥವಾ ಕೊಡದೆ ಇರಲಿ, ಸಮಗ್ರವಾದ ಭೂಮಸೂದೆ ಬರುವ ತನಕ ಅವನು ಇರುವಲ್ಲಿಂದ ಅವನನ್ನು ಹೊರಗಡೆ ಹಾಕಬಾರದು, ಮತ್ತು ಅವನಿಂದ ಗೇಣಿಯನ್ನು ವಸೂಲಾತಿ ಮಾಡಬಾರದೆಂಬುದೇ ನಮ್ಮ ವಾದ. ಅದು ತಾವು ಹೇಳುವ ಮೂಲ ಉದ್ದೇಶಕ್ಕೂ ಈ ಶಾಸನದ ಉದ್ದೇಶಕ್ಕೂ, ಸರಿಹೋಗುತ್ತದೆ, ಆದ್ದರಿಂದ ತಾವು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Sri T. R. SHAMANNA.—Madam Speaker, I beg to move the following Amendment :

"That at Page 4, line 7, for the words 'two years', the words 'three years' shall be substituted."

MADAM SPEAKER.—Amendment moved :

"That at Page 4, line 7, for the words 'two years' the words 'three years' shall be substituted."

† ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಕಕ್ಕಿರಾಯರವರ ತಿದ್ದುಪಡಿಗೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ, ಅದು ಹೀಗಿದೆ :

" That at Page 4, for the existing Clause (4) the following clause shall be substituted :

'Notwithstanding anything contained in the Principal Act, or in any decree or order of any Court or Tribunal, no order for eviction of a tenant or restoration of possession of any land to the landlord on the ground of default in paying rent by the tenant shall be executed for a period of three years from the commencement of the Mysore Land Reforms (Amendment and Miscellaneous Provisions) Act, 1972'."

ಈ ತಿದ್ದುಪಡಿಯಲ್ಲಿ ನೀವು ಹೇಳುವಂತಹ ಉದ್ದೇಶಗಳಿಗೆ ನಮ್ಮ ಮಾನ್ಯ ಮಿತ್ರರು ಹೇಳಿದಂತೆ ಯಾವ ವಿರೋಧವೂ ಕಾಣುವುದಿಲ್ಲ. ನೀವು ಸಹ ಗೇಣಿದಾರರಿಗೆ ಮತ್ತು ರೈತರಿಗೆ ಆದಷ್ಟು ಹೆಚ್ಚಿನ ಪರಿಹಾರ ಕೊಡಬೇಕೆಂದು ಯೋಚನೆ ಮಾಡಿದ್ದೀರಿ. ನಾವು ಸಹ ಅದೇ ರೀತಿ ಏಕೆ ಮಾಡಕೂಡದು ಎಂದು ಹೇಳುತ್ತಿದ್ದೇವೆ. ಎರಡನೆಯದಾಗಿ ನೀವು 1966ನೇ ಇಸವಿಯಿಂದ ಸ್ವಲ್ಪ ಮಟ್ಟಿಗೆ ಪರಿಹಾರವನ್ನು ಕೊಡುವುದಕ್ಕೆ ಯೋಚನೆ ಮಾಡಿದ್ದೀರಿ. ಅದೇ ರೀತಿ ನಾವು ಸಹ ಮುಂದೆ ಯಾವ ರೀತಿ ಪರಿಹಾರ ಕೊಡಬೇಕೆಂಬುದರ ಬಗ್ಗೆ ಹೇಳಿದ್ದೇವೆ ಮತ್ತು ಈ ರೀತಿ ವಸೂಲು ಮಾಡುವುದು ಸರಿಯಲ್ಲವೆಂದು ಹೇಳುತ್ತಿದ್ದೇವೆ. ಅಂತೂ ಮೂರು ವರ್ಷದ ಒಳಗಾದರೂ ಒಂದು ಸಮಗ್ರವಾದ ಮಸೂದೆಯನ್ನು ತಾವು ತರುತ್ತೀರಿ. ಆದ್ದರಿಂದ ಮೂರು ವರ್ಷಗಳವರೆಗೆ ರೈತನ ಮೇಲೆ ಕೊಡಲಿ ಪೆಟ್ಟು ಹಾಕಬಾರದು, ಅವನನ್ನು ಯಾವ ರೀತಿಯಲ್ಲಿಯೂ ಎವಿಕ್ಟ್ ಮಾಡಬಾರದು ಎಂದು ಹೇಳುತ್ತಿದ್ದೇವೆ: ಆದ್ದರಿಂದ ಇವರೆಲ್ಲರಿಗೂ ಆ ಒಂದು ಅನುಕೂಲವನ್ನು ಮಾಡಿ, ಇನ್ನೂ ಹೆಚ್ಚಿನ ಅವರ ಕೃಪೆಗೆ ಪಾತ್ರರಾಗುತ್ತೀರಿ ಮತ್ತು ಇದನ್ನು ಒಪ್ಪುತ್ತೀರೆಂದು ನಂಬಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ತಂದ ತಿದ್ದುಪಡಿಯ ಉದ್ದೇಶವಾದರೂ ಇಷ್ಟೆ. ಜಮೀನ್ದಾರರು ಯಾರು ಅಕ್ರಮವಾಗಿ ಗುತ್ತಿಗೆಗೆ ಕೊಟ್ಟುಕೊಂಡು ಬರುತ್ತಾರೋ ಅಂಥವರಿಗೆ

ರಿಯಾಯಿತಿ ಇಲ್ಲ. ಯಾರು ಗುತ್ತಿಗೆಯನ್ನು ಉಳಿಸಿಕೊಂಡು ಬರುತ್ತಾರೊ, ಅಂಥವರು ಎರಡು ವರ್ಷದ ವರೆಗಿನ ಗುತ್ತಿಗೆಯನ್ನು ಕೊಟ್ಟರೆ ಸಾಕು ಎಂದು ಹೇಳುತ್ತಿದ್ದೀರಿ. ಈಗ ಅನೇಕ ಭೂಮಾಲೀಕರು ರೈತಾಪಿ ಕೆಲಸ ಮಾಡದೆ ಹೋದರೆ ಅವರಿಂದ ಭೂಮಿಯನ್ನು ವಶಪಡಿಸಿಕೊಂಡು ಮನೆಗೆ ಕಳಿಸುವಾಗ, ಅವರನ್ನು ಗ್ರೇಸ್‌ಫುಲ್ ಆಗಿ ಕಳಿಸುವುದು ಉತ್ತಮ. ಆದ್ದರಿಂದ ಎರಡು ವರ್ಷದ ಬದಲಾಗಿ ಮೂರು ವರ್ಷ ಎಂದು ನಾನು ತಿದ್ದುಪಡಿಯನ್ನು ಕಳಿಸಿದ್ದೇನೆ. ಅದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಕಕ್ಕಿಲಾಯರವರು ಮತ್ತು ಮಾನ್ಯ ಕೃಷ್ಣನ್‌ರವರು ತಂದಿರತಕ್ಕಂತಹ ತಿದ್ದುಪಡಿಯಲ್ಲಿ ಮೂಲ ಉದ್ದೇಶ, ಅವರಿಗೆ ನಮ್ಮೆಲ್ಲರತಕ್ಕಂತಹ ಅನುಮಾನ. ಆ ಅನುಮಾನಕ್ಕೆ ಅವಕಾಶವಿಲ್ಲವೆಂದು ನಾನು ಮತ್ತು ನಮ್ಮ ಮುಖ್ಯಮಂತ್ರಿಯವರು ಎಷ್ಟು ಸಾರಿ ಹೇಳಿದರೂ ಇನ್ನೂ ಆ ಅನುಮಾನವನ್ನು ಇಟ್ಟುಕೊಳ್ಳುವುದು ಸೂಕ್ತವಲ್ಲವೆಂದು ಹೇಳುತ್ತೇನೆ. ಅದರ ಜೊತೆಗೆ ಗೇಣಿ ಬಾಕಿ ನಿಂತಿರುವುದು, ಯಾರ ತಪ್ಪಿನಿಂದಲೂ ಅಲ್ಲ. ಸಂಬಂಧಪಟ್ಟ ಅಧಿಕಾರಿಗಳು ಜಮೀನಿನಲ್ಲಿ ಬರತಕ್ಕ ಉತ್ಪನ್ನವನ್ನು ಸರಿಯಾಗಿ ಗೊತ್ತು ಮಾಡದಿರುವುದರಿಂದ ಅನೇಕ ಕಡೆಗಳಲ್ಲಿ ಈ ರೀತಿಯಾಗಿದೆ. ಇದರಿಂದ ಹಿಡುವಳಿದಾರರಿಗೆ ಗೇಣಿ ಬರಬೇಕಾದ್ದುದು ತಪ್ಪಿ ಹೋಗಿದೆ. 1956ನೇ ಇಸವಿಯಿಂದ ಅನೇಕ ಕಡೆ ಗೇಣಿ ಬಾಕಿ ಇದೆ. ಇಷ್ಟು ಬಾಕಿ ಇರುವಾಗ ಕೊನೆಯ ಪಕ್ಷ ಎರಡು ವರ್ಷವಾದರೂ ಅವರಿಗೆ ಬರಲಿ ಎಂದು ಈ ರೀತಿ ಮಾಡಿದ್ದೇವೆ. ಆ ಒಂದು ಉದ್ದೇಶದಿಂದ ಗೇಣಿದಾರನ ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ ಇಬ್ಬರಿಗೂ ಅನುಕೂಲ ವಾಗುವಂತಹ ಉದ್ದೇಶ ಇಟ್ಟುಕೊಂಡು ಇದನ್ನು ಮಾಡಿದ್ದೇವೆ.

ಶ್ರೀ ಬಿ. ವಿ. ಕಕ್ಕಿಲಾಯ.—ಮುಂದೆ ಶಾಸನದಲ್ಲಿ ಗೇಣಿ ಕಡಿಮೆಯಾದರೆ ಅದನ್ನು ಯಾರಿಗೆ ಕೊಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವತ್ತು ಕೊಡತಕ್ಕಂತಹ ಗೇಣಿ, ಅವರು ಕಡಿಮೆ ಯಾದಾಗ ಕೊಡತಕ್ಕ ಗೇಣಿ ಏನಿದೆ ಆ ವ್ಯತ್ಯಾಸವನ್ನು ಕಂದಾಯಕ್ಕೆ ವಜಾ ಮಾಡುವುದಕ್ಕೆ ಏನೂ ಅಡ್ಡಿ ಇರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದು ನನಗೆ ಅರ್ಥವಾಗಲಿಲ್ಲ. ಭೂಮಾಲೀಕರಿಗೆ ಈಗಾಗಲೇ ಗೇಣಿದಾರರು ಕೊಟ್ಟು ಬಿಟ್ಟಿದ್ದಾರೆ. ಅವರು ಕೊಟ್ಟಮೇಲೆ ಅದನ್ನು ವಾಪಸ್ಸು ಪಡೆಯುವುದು ಅಷ್ಟು ಸುಲಭವಲ್ಲ. ಅವರು ಹಣದ ರೂಪದಲ್ಲಿ ಕೊಟ್ಟ ಮೇಲೆ ನಾಳೆ ದಿವಸ ಅದನ್ನು ಕಂದಾಯಕ್ಕೆ ಹೇಗೆ ಉತ್ತಾರ ಮಾಡುತ್ತೀರಾ ? ಅದು ಸಾಧ್ಯವಾಗುವುದಿಲ್ಲ.

ಎರಡನೆಯದು ತಮಗೆ ಗೊತ್ತಿರುವ ಹಾಗೆ ಗೇಣಿಯನ್ನು ನಿಗದಿ ಮಾಡುವ ರೀತಿ ನೀತಿ ಸರಿ ಯಾಗಿಲ್ಲವೆಂದು ತಾವೇ ಒಪ್ಪಿಕೊಳ್ಳುತ್ತೀರಿ. ಆ ರೀತಿಯ ನ್ಯೂನತೆಗಳನ್ನು ಹೋಗಲಾಡಿಸು ವುದಕ್ಕೋಸ್ಕರ ಇನ್ನೊಂದು ತಿದ್ದುಪಡಿಯನ್ನು ತರಬೇಕು. ಒಂದು ವೇಳೆ ಮುಂದಿನ ತಿಂಗಳಲ್ಲಿ ತಾವು ತರುವ ಒಂದು ಸಮಗ್ರ ತಿದ್ದುಪಡಿ ಮಸೂದೆಯಿಂದ ರೈತರಿಗೆ ರಿಲೀಫ್ ಸಿಗುತ್ತದೆ ಎನ್ನು ವುದಾದರೆ ನೀವು ಅದನ್ನು ಒಂದು ಒಳ್ಳೆಯ ಉದ್ದೇಶದಿಂದ ತೆಗೆದುಕೊಂಡು ಬರಬೇಕು. ಆದರೆ ಈಗಲೇ ರಿಲೀಫ್ ಕೊಡಿ ಎಂದು ನಮ್ಮ ಸ್ನೇಹಿತರು ಕೇಳುತ್ತಿದ್ದಾರೆ ಅದನ್ನು ನೀವು ಏಕೆ ಒಪ್ಪಿ ಕೊಳ್ಳುವುದಿಲ್ಲವೋ ಗೊತ್ತಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಹೇಳಿದೆ, ಅದನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು. ಈಗಿರತಕ್ಕ ಭೂಮಾಲೀಕರಿಗೆ ಐದಾರು ವರ್ಷಗಳ ಬಾಕಿ ಇರುವಾಗ ಕೇವಲ ಎರಡು ವರ್ಷಗಳನ್ನಾದರೂ ಕೊಡಿಸುವುದು ಅಗತ್ಯ.

ಶ್ರೀ ಎಂ. ಎಸ್. ಕೃಷ್ಣನ್.—ಗೇಣಿದಾರರು ರೆಂಟ್ ಕೊಡಬೇಕಾಗಿಲ್ಲ ಎಂಬುದಾಗಿ ನಾವು ಹೇಳುವುದಿಲ್ಲ. ಇಷ್ಟು ವರ್ಷಗಳೇ ಅವರು ಕಾದರು. ಆದ್ದರಿಂದ ಇನ್ನಷ್ಟು ಸ್ವಲ್ಪ ದಿವಸಗಳು ಕಾದರೆ ಅವರಿಗೇನೂ ಆಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದನ್ನು ಇನ್ನೂ ಎರಡು ತಿಂಗಳಲ್ಲಿ ಕೊಡಬಹುದು ಬಾಕಿ ಇರುವುದನ್ನು ಅಲ್ಪಸ್ವಲ್ಪ ಕೊಡುವುದರಿಂದ ಒಕ್ಕಲೆಬ್ಬಿಸುವುದನ್ನು ತಪ್ಪಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಇದು ಭೂಮಾಲೀಕರ ಮೇಲೆ ಮತ್ತು ಸಣ್ಣ ಹಿಡುವಳಿದಾರರ ಮೇಲೆ ಇರುವ ಅನುಕಂಪವನ್ನು ತೋರಿಸುತ್ತದೆ. ಐದಾರು ವರ್ಷಗಳದು ಒಂದೇ ಸಾರಿ ಕೊಡು ವುದಕ್ಕಾಗುವುದಿಲ್ಲ. ಕೇವಲ ಎರಡು ವರ್ಷದ್ದು ಗೇಣಿ ಕೊಡುವುದೂ ಕೂಡ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಮಾಡುತ್ತಿರುವುದು ಮಿಕ್ಸೆಡ್ ಇಕಾನಮಿ ರೀತಿಯಾಗುತ್ತದೆ. ಇದು ಪಿಬಂಡಿ ತರಹ ಆಗಕೂಡದು.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಅನುಕಂಪದ ಪ್ರಮಾಣ ಯಾರ ಕಡೆಗೆ ಎಷ್ಟೆಷ್ಟಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಅನುಕಂಪದ ಪ್ರಮಾಣ ಹೆಚ್ಚಿಗೆ ಗೇಣೀದಾರರ ಕಡೆಗೆ ಇರುತ್ತೆ. ಆದ್ದರಿಂದ ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಶಾಮಣ್ಣನವರು ತಂದಿರುವ ತಿದ್ದುಪಡಿಯನ್ನು ನೋಡಿದರೆ, ನಿಮ್ಮದು ಪೂರ್ವ, ಅವರದು ಪಶ್ಚಿಮ ಇದ್ದಂತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಿಜ. ಅವರ ತಿದ್ದುಪಡಿಯಲ್ಲಿ ಗೇಣಿದಾರರು ಎರಡು ವರ್ಷದ ಗೇಣಿಯನ್ನು ಕೊಟ್ಟರೆ ಸಾಲದು, ಅನೇಕ ವರ್ಷಗಳ ಬಾಕಿ ಇದೆ; ಮೂರು ವರ್ಷಗಳ ಬಾಕಿಯನ್ನಾದರೂ ಕೊಡಬೇಕೆಂದು ಜಮೀನ್ದಾರರ ಕಡೆ ಅವರ ಒಲುವನ್ನು ತೋರಿಸಿದ್ದಾರೆ. ಆದ್ದರಿಂದ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಗೇಣಿದಾರರು ಹೆಚ್ಚು ಬಾಕಿಯನ್ನು ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಅವರ ತಿದ್ದುಪಡಿಯನ್ನು ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ನನ್ನಲ್ಲಿ ಅನುಮಾನವನ್ನು ಬಿಟ್ಟುಬಿಡಬೇಕಾಗಿಯೂ ಮಾನ್ಯ ಶ್ರೀ ಶಾಮಣ್ಣನವರೂ ಸಹ ಗೇಣೀದಾರರ ಕಡೆಗೆ ತಮ್ಮ ಒಲುಮೆನ್ನು ತೋರಿಸಬೇಕು ಎಂಬುದಾಗಿಯೂ ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

Sri T. R. SHAMANNA.—I beg leave of the House to withdraw my amendment.

*The amendment was withdrawn by leave of the House.*

Sri B. V. KAKKILAYA.—I press my amendment Madam.

MADAM SPEAKER.—The question is:

"That at page 4, for the existing clause (4) the following clause shall be substituted :

'Notwithstanding anything contained in the principal Act, or in any decree or order of any Court or Tribunal, no order for eviction of a tenant or restoration of possession of any land to the landlord on the ground of default in paying rent by the tenant shall be executed for a period of three years from the commencement of the Mysore Land Reforms (Amendment and Miscellaneous Provisions) Act, 1972,."

*The amendment was negatived.*

MADAM SPEAKER.—I now put clause 4 to the vote of the House. The question is :

"That Clause 4 do stand part of the Bill."

*The motion was adopted.*

Clause 4 was added to the Bill.

MADAM SPEAKER.—Clause 1, etc.

The question is :

"That Clause 1, the long Title and the enacting Formula do stand part of the Bill."

*The motion was adopted.*

Clause 1, long Title and the Enacting Formula were added to the Bill.

*Motion to pass*

SRI N. HUTCHAMASTHY GOWDA.—Madam, I beg to move:

"That the Mysore Land Reforms (Amendment and Miscellaneous Provisions) Bill, 1972, as ammended, be passed."

MADAM SPEAKER.—The question is :

"That the Mysore Land Reforms (Amendment and Miscellaneous Provisions) Bill, 1972, as amended, be passed."

*The motion was adopted.*

SRI N. HUTCHAMASTHY GOWDA (Minister for Revenue).— I do not propose to move the Mysore Land Revenue (Amendment) Bill, 1972 now.

MADAM SPEAKER.—The House will now adjourn and meet tomorrow at 9-00 A.M.

---

*The House adjourned at Thirty Minutes past Three of the Clock to meet again at Nine of the Clock on Tuesday, the 18th April 1972.*

---

WD 17362—GPB—550—22-7-1972

# ಮೈಸೂರು ವಿಧಾನಸಭೆ

# MYSORE LEGISLATIVE ASSEMBLY

*Tuesday, 18th April 1972.*

The House met in the Assembly Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

---

## STARRED QUESTIONS

### (to which oral answers were given)

### State Fund Roads in Anekal Taluk

7. Sri M. B. RAMASWAMY (Anekal).—

Will the Minister for Public Works be pleased to state :

(*a*) the length of existing State Fund Roads in Anekal Taluk ;

(*b*) the length of Taluk Board Roads which are proposed to be converted to State Roads in Anekal Taluk ?

Sri D. DEVARAJ URS (Chief Minister) [On behalf of SRI H. M. Channabasappa (Minister for Public Works)].—

(*a*) 103 miles and 6 furlongs.

(*b*) The matter is under consideration.

ಶ್ರೀ ಎಂ. ಬಿ. ರಾಮಸ್ವಾಮಿ.—ಆನೇಕಲ್ ತಾಲ್ಲೂಕಿನಲ್ಲಿ ಉಳಿದ ರಸ್ತೆಗಳನ್ನು ರಾಜ್ಯನಿಧಿ ರಸ್ತೆಗಳನ್ನಾಗಿ ಮಾರ್ಪಡಿಸಲು ಇನ್ನು ಎಷ್ಟು ದಿವಸ ಬೇಕು ?

† ಶ್ರೀ ಡಿ. ದೇವರಾಜ ಅರಸ್.—ಎಷ್ಟು ದಿವಸ ಎಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿಯೂ ಕೆಲವು ರಸ್ತೆಗಳನ್ನು ರಾಜ್ಯನಿಧಿ ರಸ್ತೆಗಳನ್ನಾಗಿ ಮಾಡಿದ್ದೇವೆ. ಇನ್ನು ಕೆಲವು ಹಾಗೆಯೇ ಇವೆ. ಹಣದ ಆವಶ್ಯತೆಯನ್ನು ನೋಡಿಕೊಂಡು ಇದನ್ನು ಮಾಡಬೇಕಾಗುತ್ತದೆ.

ಶ್ರೀ ಪಿ. ಪುಟ್ಟಸ್ವಾಮಿ.—ಒಂದು ಮೈಲಿ ರಸ್ತೆಯನ್ನು ರಾಜ್ಯನಿಧಿ ರಸ್ತೆಯನ್ನಾಗಿ ಮಾರ್ಪಡಿಸ ಬೇಕಾದರೆ ಎಷ್ಟು ಖರ್ಚು ಬರುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ನಿರ್ದಿಷ್ಟವಾಗಿ ಇಷ್ಟೇ ಎಂದು ಹೇಳುವುದಕ್ಕೆ ಬರುವುದಿಲ್ಲ.

---

† Indicates that the remarks or speeches have not been revised by the member concerned.

## Upper Tunga Project

47. Sri B. G. BANAKAR (Hirekerur).—

Will the Minister of State for Major Irrigation be pleased to state :—

(*a*) whether any plans and estimates have been prepared for the construction of Upper Tunga Project by modification to the existing Tunga Anicut at Gajanur ;

(*b*) if so, the cost and the area to be irrigated ;

(*c*) the difficulties to make the scheme successful ?

Sri D. DEVARAJ URS (Chief Minister) [On behalf of SRI H. N. NANJEGOWDA (Minister of State for Major Irrigation)].—

(*a*) Yes, tentatively.

(*b*) Rs. 37.42 Crores. 3,20,000 acres.

(*c*) The Project can be taken up only after final allocation of waters in Tungabhadra is decided by the Krishna Tribunal.

ಶ್ರೀ ಬಿ. ಜಿ. ಬಣಕಾರ್.—ಈ ಯೋಜನೆಯಿಂದ ಯಾವ ಯಾವ ತಾಲ್ಲೂಕ್‌ಗಳಿಗೆ ಅನುಕೂಲವಾಗುತ್ತದೆ ಎಂಬುದನ್ನು ಹೇಳುತ್ತೀರಾ ?

† ಶ್ರೀ ಡಿ. ದೇವರಾಜ ಅರಸ್.—ಯಾವ ಯಾವ ತಾಲ್ಲೂಕ್‌ಗಳಿಗೆ ಅನುಕೂಲವಾಗುತ್ತದೆ ಎಂಬ ಬಗ್ಗೆ ಇನ್ನೂ ಅಧ್ಯಯನ ಮಾಡಬೇಕು.

ಶ್ರೀ ಬಿ. ಜಿ. ಬಣಕಾರ್.—ನಮಗೆ ತಿಳಿದಮಟ್ಟಿಗೆ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ, ಧಾರವಾಡ ಜಿಲ್ಲೆಯ ಹಿರೆಕೆರೂರು, ರಾಣಿಬೆನ್ನೂರು, ಹಾವೇರಿ, ಮುಂಡರಗಿ, ಹಾನಗಲ್ಲು, ಶಿರಹಟ್ಟಿ ಮತ್ತು ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕುಗಳಿಗೆ ಈ ಯೋಜನೆಯಿಂದ ಅನುಕೂಲವಾಗುತ್ತದೆಂದು ತಿಳಿದುಬಂದಿದೆ. ಇದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ಇರಬಹುದು, ಆ ತಾಲ್ಲೂಕ್‌ಗಳಿಗೆ ಅನುಕೂಲವಾಗುವುದಾದರೆ ನಮಗೆ ಸಂತೋಷ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಯೋಜನೆಯಿಂದ ನಮ್ಮ ತೀರ್ಥಹಳ್ಳಿ ತಾಲ್ಲೂಕ್ ಮತ್ತು ಶೃಂಗೇರಿ ತಾಲ್ಲೂಕ್‌ನ ಬಹುಭಾಗ ಮುಳುಗಡೆಯಾಗುವುದರಿಂದ, ಈ ಯೋಜನೆಗೆ ನಮ್ಮ ಪ್ರಾಂತ್ಯದ ಜನರ ವಿರೋಧವಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಕೆಲವು ಜಲಾಶಯಗಳ ನಿರ್ಮಾಣವಾದಾಗ ಕೆಲವರ ಪ್ರದೇಶ ಮುಳುಗಡೆಯಾಗುತ್ತದೆ, ಕೆಲವರು ಬದುಕುತ್ತಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮನ್ನು ಮುಳುಗಿಸಬೇಕೆಂದು ನಿಮ್ಮ ಯೋಚನೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೆಳಕು ಇರುವ ಕಡೆ ನೆರಳು ಇರುವಂತೆ, ಜಲಾಶಯ ನಿರ್ಮಾಣವಾದಾಗ ಕೆಲವು ಭಾಗ ಮುಳುಗಡೆಯಾಗುತ್ತದೆ ಮತ್ತು ಬಹುಮಂದಿಗೆ ಅನುಕೂಲವಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಒಬೀರಾಯನ ಕಾಲದ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಿಂತ ಅಲ್ಲಿಯ ರೈತರಿಗೆ ಬಾವಿಗಳನ್ನು ಮತ್ತು ಪಂಪುಸೆಟ್ಟುಗಳನ್ನು ಒದಗಿಸಿ ನೀರಾವರಿ ಅನುಕೂಲ ಮಾಡಿಕೊಡಬಹುದೇ ಹೊರತು, ಈ ಯೋಜನೆಯನ್ನು ಮಾತ್ರ ಕಾರ್ಯಗತ ಮಾಡಬಾರದು. ಆ ರೀತಿ ಏನಾದರೂ ಕಾರ್ಯಗತ ಮಾಡಿದರೆ ನಮ್ಮ ಪ್ರಾಂತ್ಯದ ಜನರು ಉಗ್ರವಾಗಿ ವಿರೋಧ ಮಾಡುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಅವರ ಪ್ರಾಂತ್ಯ ಯಾವುದು ಎಂಬುದು ನನಗೆ ಗೊತ್ತಾಗಲಿಲ್ಲ. ನಮ್ಮ ಪ್ರಾಂತ್ಯ ಬೇರೆ, ಅವರ ಪ್ರಾಂತ್ಯ ಬೇರೆ ಎಂದರೆ ಏನು ? ಆ ಭಾಗದ ಪಾಕೆಟ್ ಅವರ ಹೆಸರ ಮೇಲೆ ಇದೆಯೆಂದು ಕಾಣುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಮ್ಮ ಕ್ಷೇತ್ರ ಎಂದು ಹೇಳುವುದಕ್ಕೆ ಬದಲು ನಮ್ಮ ಪ್ರಾಂತ್ಯ ಎಂದು ಹೇಳಿದೆ.

ಶ್ರೀ ಡಿ. ದೇವರಾಜ ಅರಸ್.—ಯಾವುದೇ ಕ್ಷೇತ್ರದಲ್ಲಿ ಜಲಾಶಯ ಕಟ್ಟುವಾಗ ಕೆಲವು ಭಾಗ ಮುಳುಗಡೆಯಾಗುತ್ತದೆ. ಇದು ಇಂಡಿಯಾ ದೇಶದ ಎಲ್ಲ ಭಾಗಗಳಲ್ಲಿಯೂ ನಡೆಯುತ್ತಿದೆ. ಮಾನ್ಯ ಸದಸ್ಯರ ಅಭಿಪ್ರಾಯದಂತೆ ಇನ್ನು ಮುಂದೆ ಜಲಾಶಯವನ್ನು ಕಟ್ಟುವಾಗ ಅದನ್ನು ಕಟ್ಟ ಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಅಸೆಂಬ್ಲಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಕಾಣು ತ್ತದೆ. ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಾವು ಯಾವುದೇ ಒಂದು ಜಲಾಶಯ ನಿರ್ಮಾಣ ಮಾಡಬೇಕಾದರೂ ಅದರಿಂದ ಆಗತಕ್ಕಂಥ ಲಾಭ, ಅದರಿಂದ ಆಗತಕ್ಕಂಥ ನಷ್ಟ ಇವೆರಡನ್ನೂ ನೋಡಿಕೊಂಡು, ನಷ್ಟಕ್ಕಿಂತ ಲಾಭ ಹೆಚ್ಚು ಸಿಗುತ್ತದೆ ಎಂದು ಕಂಡುಬಂದರೆ ಮಾತ್ರ ಜಲಾಶಯ ನಿರ್ಮಾಣ ಮಾಡುತ್ತೇವೆ. ಯಾರನ್ನೋ ಮುಳಗಿಸಬೇಕೆಂದು ಇಂತಹ ಜಲಾಶಯಗಳನ್ನು ನಿರ್ಮಾಣ ಮಾಡುವುದಿಲ್ಲವೆಂಬುದು ತಮಗೂ ಗೊತ್ತಿದೆ. ಆದಷ್ಟು ಕಡಿಮೆ ಪ್ರದೇಶ ಮುಳುಗಡೆಯಾಗುವಂತೆ ನೋಡಿಕೊಂಡು ಇಂತಹ ಜಲಾಶಯಗಳನ್ನು ಕಟ್ಟುತ್ತೇವೆ. ಮುಳುಗಡೆಯಾಗತಕ್ಕಂಥ ತಾಲ್ಲೂಕ್ ಗಳು ಯಾವುವು ಎಂಬುದು ಮುಖ್ಯವಲ್ಲ. ಆ ರೀತಿ ಮುಳುಗಡೆಯಾಗತಕ್ಕಂಥ ಪ್ರದೇಶದ ಜನರಿಗೆ ಬೇರೆ ಪುನರ್ವಸತಿ ಒದಗಿಸುವುದು, ಜಮೀನನ್ನು ಒದಗಿಸುವುದು ಮತ್ತು ಪರಿಹಾರ ಕೊಡುವುದು ಇದ್ದೇ ಇದೆ. ಇದನ್ನೆಲ್ಲಾ ಯೋಚನೆ ಮಾಡಿಯೇ ಮಾಡುತ್ತೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಒಂದು ಅಣೆಕಟ್ಟನ್ನು ಕಟ್ಟುವಾಗ ನೀರು ಎಲ್ಲಿ ಶೇಖರಣೆ ಯಾಗುತ್ತದೋ ಅಂತಹ ಅರಣ್ಯ ಪ್ರದೇಶ ಮುಳುಗಡೆಯಾಗುವುದು ಸ್ವಾಭಾವಿಕ. ಅರಣ್ಯ ಪ್ರದೇಶ ಮುಳುಗಡೆಯಾದ ಮೇಲೆ ಮಳೆ ಬರುವುದು ಕಡಿಮೆಯಾಗುತ್ತದೆ. ಆದ್ದರಿಂದ ಈಗ ಇರುವ ತುಂಗಾ ಅಣೆಕಟ್ಟಿನ ಜೊತೆಗೆ ಮತ್ತೊಂದು ಅಣೆಕಟ್ಟು ಕಟ್ಟಿದರೆ ನೀರು ಸಾಕಷ್ಟು ಬರು ವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಏನೇನು ವಿಚಾರಗಳನ್ನು ಮತ್ತು ಸಲಹೆ ಗಳನ್ನು ಕೊಡುತ್ತಾರೋ ಅದನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ಪ್ರಾಜೆಕ್ಟನ್ನು ಮಾಡಬೇಕಾ ದರೆ ಮಾಡೋಣ.

ಶ್ರೀ ಟಿ. ತಾರೇಗೌಡ.—ತುಂಗಾ ಅಣೆಕಟ್ಟು ಮತ್ತು ತುಂಗಾ ಮೇಲ್ದಂಡೆ ಯೋಜನೆ ಇವು ಬೇರೆ ಬೇರೆಯೇ ?

ಶ್ರೀ ಡಿ. ದೇವರಾಜ ಅರಸ್.—ಹೌದು, ಅದು ಬೇರೆ, ಇದು ಬೇರೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ತುಂಗಾ ಅಣೆಕಟ್ಟಿನಿಂದ ಸಾಗುವಳಿ ಜಮೀನಿನ ಎಷ್ಟು ಪ್ರದೇಶ ಮುಳುಗಡೆಗೆ ಒಳಪಡುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನೋಟೀಸ್.

Sri P. M. BANGI.—You have stated in your reply that the Tunga Project will be taken up only after the final allocation of waters in Tungabhadra is decided by the Krishna Tribunal. May I know the approximate time when it will be decided ?

Sri D. DEVARAJ URS.—The matter is under proposal stage.

ಶ್ರೀ ಪಿ. ಎಂ. ಬಂಗಿ.—ಇದು ಯಾವಾಗ ಮುಗಿಯಬಹುದು ಎಂಬುದರ ಬಗ್ಗೆ ಅಪ್ರಾಕ್ಸಿ ಮೇಟ್ ಟೈಮ್ ಹೇಳುವುದಕ್ಕಾಗುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್.—ಟ್ರಿಬ್ಯುನಲ್ ಮುಂದೆ ಇರತಕ್ಕ ನಮ್ಮ ತಕರಾರುಗಳು, ಕೇಸು ಗಳು ಫೈನಲ್ ಸ್ಟೇಜಿಗೆ ಬಂದಿವೆ. ಆರ್ಗ್ಯುಮೆಂಟ್ ಸ್ಟೇಜ್ ಮತ್ತು ಹಿಯರಿಂಗ್ ಸ್ಟೇಜ್ ಮುಗಿದಿದೆ ಎಂದು ನಾನು ಕೇಳಿದ್ದೇನೆ. 3–4 ತಿಂಗಳುಗಳಲ್ಲಿ ಮುಗಿಯಬಹುದು. ಅದು ಆದಮೇಲೆ

(ಶ್ರೀ ಡಿ. ದೇವರಾಜ್ ಅರಸ್)

ಸರ್ಕಾರದವರು ಈ ಯೋಜನೆಯನ್ನು ಎಷ್ಟು ಬೇಗ ಮುಗಿಸಬೇಕೆಂಬುದು ಹಣದ ಆಧಾರದ ಮೇಲೆ ನಿಂತಿದೆ. ಅದು ಎಷ್ಟು ಸಿಕ್ಕುತ್ತದೆ ಎಂಬುದನ್ನು ನೋಡಿಕೊಂಡು ಆ ಕೆಲಸವನ್ನು ಮಾಡಬೇಕಾಗುತ್ತದೆ. ಮತ್ತು ಆ ನೀರು ನಮಗೆ ಎಷ್ಟೆಷ್ಟು ಸಿಕ್ಕಬಹುದು ಎಂಬುದು ತೀರ್ಮಾನವಾದ ಮೇಲೆ ಎಲ್ಲಿ ಪ್ರಾಜೆಕ್ಟನ್ನು ಕಟ್ಟುವುದು, ಯಾವ ಪ್ರಮಾಣದಲ್ಲಿ ಕಟ್ಟಬೇಕು ಎಂಬುದು ಪ್ರಪೋಜಲ್ ಸ್ಟೇಜಿನಲ್ಲಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕ ಸೀಗೆಹಳ್ಳ, ಐಹೊಳೆ ಮುಂತಾದ ಪ್ರಾಜೆಕ್ಟ್‌ಗಳು ಯಾವಾಗ ಪ್ರಾರಂಭವಾಗುತ್ತವೆ ?

ಶ್ರೀ ಡಿ. ದೇವರಾಜ ಅರಸ್.—ಆ ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ. ಅವು ಪ್ರಪೋಜಲ್ ಸ್ಟೇಜಿನಲ್ಲಿದೆ.

ಶ್ರೀ ಕೆ. ಎಫ್. ಪಾಟೀಲ್.—ನಮಗೆ ಇದರಲ್ಲಿ ಎಷ್ಟು ನೀರು ಸಿಕ್ಕುತ್ತದೆ ಮತ್ತು ನಾವು ಎಷ್ಟು ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಟೋಟಲ್ ನೀರು ಎಷ್ಟು ಇದೆ ಎಂಬುದು ಈಗ ನನ್ನ ಮುಂದೆ ಇಲ್ಲ. ನಾವು ಉಪಯೋಗ ಮಾಡಿಕೊಳ್ಳಬೇಕಾದ್ದು ಹೆಚ್ಚು ನೀರು ಇದೆ, ಅದನ್ನು ನಮಗೆ ಕೊಡಿ ಎಂದು ನಾವು ಅವರನ್ನು ಕೇಳುತ್ತಿದ್ದೇವೆ.

ಶ್ರೀ ಕೆ. ಎಫ್. ಪಾಟೀಲ್.—ಈಗ ತಾವು ಅಂದಾಜು ಮಾಡಿರತಕ್ಕ ಯೋಜನೆ ಏನಿದೆ ಅದಕ್ಕಿಂತಲೂ ಹೆಚ್ಚು ನೀರಿನ ಸಂಗ್ರಹ ಇದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ನೀರು ಹೆಚ್ಚಿಗೆ ಇದೆಯೆಂದು ತಿಳಿದು ಅದರ ಪ್ರಾಜೆಕ್ಟ್ ರಿಪೋರ್ಟ್ ತರಿಸುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಯೋಜನೆಯಿಂದ 3 ಲಕ್ಷ 20 ಸಾವಿರ ಎಕರೆಗಳಿಗೆ ನೀರನ್ನು ಒದಗಿಸಬಹುದು ಎಂದು ತಾವು ಉತ್ತರ ಕೊಟ್ಟಿದ್ದೀರಿ, ಇದರಲ್ಲಿ ಈಗ ಹಾಲಿ ಸಾಗುವಳಿಯಾಗುತ್ತಿರತಕ್ಕ ಭೂಮಿ ಎಷ್ಟು, ಮತ್ತು ಹೊಸದಾಗಿ ಎಷ್ಟು ಎಕರೆ ಸಾಗುವಳಿಯಾಗುತ್ತದೆ ಎಂಬುದನ್ನು ತಿಳಿಸುತ್ತೀರಾ?

ಶ್ರೀ ಡಿ. ದೇವರಾಜ ಅರಸ್.—ಮಳೆಯ ನೀರಿನ ಆಧಾರದ ಮೇಲೆ ಸಾಗುವಳಿಯಾಗತಕ್ಕಂಥಾದ್ದು ಅನೇಕ ಭೂಮಿ ಇರಬಹುದು ಎಂದು ಕಾಣುತ್ತದೆ. ಹೊಸದಾಗಿ ಎಷ್ಟು ಎಕರೆ ಸಾಗುವಳಿಯಾಗುತ್ತದೆ ಎನ್ನುವ ಮಾಹಿತಿ ಈಗ ನನ್ನ ಮುಂದೆ ಇಲ್ಲ. ಅದು ಇನ್ನೂ ಪ್ರಪೋಜಲ್ಸ್ ಸ್ಟೇಜಿನಲ್ಲಿದೆ.

ಶ್ರೀ ಕೆ. ಎಫ್. ಪಾಟೀಲ್.—ಹೆಚ್ಚು ನೀರಾವರಿ ಪ್ರದೇಶಗಳಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಆ ಯೋಜನೆಯನ್ನು ಕೈಗೊಳ್ಳುವಂತೆ ತಮ್ಮ ಇಲಾಖೆಯವರಿಗೆ ಆದೇಶವನ್ನು ಕೊಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈಗ ನಮ್ಮಲ್ಲಿ ಎರಡು ಕಣಿವೆಗಳು ಇವೆ. ಒಂದು ಕಾವೇರಿ ವ್ಯಾಲಿ, ಇನ್ನೊಂದು ಕೃಷ್ಣಾ ವ್ಯಾಲಿ. ಈಗ ನಮ್ಮ ದೇಶದಲ್ಲಿ 7–8 ಪರ್ಸೆಂಟ್ ಮಾತ್ರ ನೀರಾವರಿಯಾಗುತ್ತಿದೆ. ನಾವು ಇನ್ನು ಮೈನರ್ ಮತ್ತು ಮೇಜರ್ ಇರಿಗೇಷನ್ ಮುಖಾಂತರ ಎಷ್ಟು ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ ಎಂದರೆ ಈ ಯೋಜನೆಗಳಿಂದ ಶೇಕಡಾ 25 ರಷ್ಟು ಭೂಮಿಯನ್ನು ನೀರಾವರಿ ಮಾಡುವುದಕ್ಕೆ ಸಾಧ್ಯವಿದೆ ಎಂಬುದು ಕಂಡುಬಂದಿದೆ. ಇನ್ನುಮೇಲೆ ಕೃಷ್ಣಾ ಮತ್ತು ಕಾವೇರಿ ಎರಡು ವ್ಯಾಲಿಗಳಲ್ಲಿಯೂ ಹೆಚ್ಚು ನೀರನ್ನು ಉಪಯೋಗ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ನಮ್ಮ ಭಾಗಕ್ಕೆ ಬರತಕ್ಕಂಥಾ ನೀರನ್ನು ಉಪಯೋಗಮಾಡಿಕೊಳ್ಳಬೇಕಾದಂಥಾದ್ದಕ್ಕೆ ನಮ್ಮ ಜವಾಬ್ದಾರಿ ಕೂಡ ಇದೆ. ನಾವು ಹೀಗೆ ಸುಮ್ಮನೆ ಅದನ್ನು ಬಿಟ್ಟುಕೊಂಡು ಹೋಗುವುದಕ್ಕಾಗುವುದಿಲ್ಲ. ನಾವು ಆ ನೀರನ್ನು ಉಪಯೋಗ ಮಾಡಿಕೊಳ್ಳದೇ ಹೋದರೆ ನಮ್ಮ ದೇಶದಲ್ಲಿ ವ್ಯವಸಾಯ ಅಭಿವೃದ್ಧಿ ಆಗುವುದಿಲ್ಲ, ನಮ್ಮ ಜನಗಳಿಗೆ ಅನುಕೂಲವಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ.—ತುಂಗಭದ್ರಾ ನದಿಯಿಂದ ನಮಗೆ ಬರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳದೆ ಆ ನೀರನ್ನು ಕಾಡಿಗೆ ಬಿಡುತ್ತಿದ್ದಾರೆ ಎಂದು ಗೊತ್ತಾಗಿದೆ. ಇದು ನಿಜವೇ ?

ಶ್ರೀ ಡಿ. ದೇವರಾಜ ಅರಸ್.—ಅದು ಕಾಡಿಗೆ ಹೋಗುವುದಿಲ್ಲ, ಸಮುದ್ರಕ್ಕೆ ಹೋಗುತ್ತದೆ.

ಶ್ರೀ ಕೆ. ಎಫ್. ಪಾಟೀಲ್.—ತುಂಗಭದ್ರಾ ಯೋಜನೆಯಿಂದ ಧಾರವಾಡ ಜಿಲ್ಲೆಗೆ ಬಹಳ ಉಪಕಾರವಾಗುತ್ತದೆ ಎಂದು ನಮ್ಮಲ್ಲಿ ಜನಗಳು ಆಶೆಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಇದನ್ನು ಕಾರ್ಯಗತ ಮಾಡಲು ಟಾಪ್ ಪ್ರಯಾರಿಟಿ ಕೊಟ್ಟು ಇದನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನಾನು ಅದನ್ನು ಈಗಾಗಲೇ ಹೇಳಿದ್ದೇನೆ, ಅದು ಇನ್ನೂ ಪ್ರಪೋಜಲ್ ಸ್ಟೇಜಿನಲ್ಲಿದೆ ಎಂದು.

ಶ್ರೀ ಗೋಪಿನಾಥ ರಂಗಸ್ವಾಮಿ ಸಾಂದ್ರ.—ಈ ಯೋಜನೆಗೆ ಟಾಪ್ ಪ್ರಯಾರಿಟಿ ಕೊಡುತ್ತೀರೋ ಹೇಗೆ ?

ಶ್ರೀ ಡಿ. ದೇವರಾಜ ಅರಸ್.—ಈಗ ಮೊದಲು ವಾಟರ್ ಅಲೋಕೇಷನ್ ಆಗಬೇಕು, ಆಮೇಲೆ ದುಡ್ಡು ಒದಗಬೇಕು, ಎರಡೂ ಆದಮೇಲೆ ಟಾಪ್ ಪ್ರಯಾರಿಟಿ ಕೊಡಬಹುದು.

ಶ್ರೀ ಕೆ. ಎಫ್. ಪಾಟೀಲ್.—ಈ ಯೋಜನೆಯಿಂದ ಶಿವಮೊಗ್ಗ ಜಿಲ್ಲೆ ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ಹೆಚ್ಚು ನೀರಾವರಿಯಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೋ ?

ಶ್ರೀ ಡಿ. ದೇವರಾಜ ಅರಸ್.—ಈ ಯೋಜನೆಯಿಂದ ಧಾರವಾಡ ಜಿಲ್ಲೆಗೆ ಹೆಚ್ಚು ಉಪಯೋಗವಾಗುತ್ತದೆ ಎಂದು ತಾವು ತಿಳಿದುಕೊಂಡರೆ ಅದರಲ್ಲಿ ತಪ್ಪೇನು ಇಲ್ಲ. ಅದು ಯಾವ ಜಿಲ್ಲೆಗೆ ಬರಲಿ ನಾವು ನೀರನ್ನು ಉಪಯೋಗಮಾಡಿಕೊಳ್ಳತಕ್ಕಂಥಾದ್ದು ಅಗತ್ಯ ಇದೆ ಎನ್ನುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಅದು ಸರ್ಕಾರದ ಗಮನದಲ್ಲಿಯೂ ಇದೆ. ಇದರಲ್ಲಿ ನಮಗೆ ಮೊದಲು ವ್ಯಾಜ್ಯ ಬಗೆಹರಿಯಬೇಕು.

ಶ್ರೀ ಸಿ. ಅಂದಾನಪ್ಪ.—ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಪರ್ಮಿಷನ್ ತೆಗೆದುಕೊಂಡು ರೆಡಿಯಾಗಿ ಇಟ್ಟುಕೊಂಡಿದ್ದು ಮುಂದೆ ನೀರಿನ ಹಂಚಿಕೆಯೂ ತೀರ್ಮಾನವಾದಾಗ ಈ ಯೋಜನೆಗೆ ಟಾಪ್‌ಪ್ರಯಾರಿಟಿಕೊಟ್ಟು ಇದನ್ನು ಕಾರ್ಯಗತ ಮಾಡಬೇಕೆಂಬ ಅಭಿಪ್ರಾಯ ಸರ್ಕಾರಕ್ಕೆ ಇದೆಯೋ ?

ಶ್ರೀ ಡಿ. ದೇವರಾಜ ಅರಸ್.—ನಾನು ಮೊದಲೇ ತಮಗೆ ಅರಿಕೆ ಮಾಡಿಕೊಂಡಿದ್ದೇನೆ. ಈಗ ಇರತಕ್ಕಂಥಾ ವ್ಯಾಜ್ಯ ಬಗೆಹರಿಯುವವರೆಗೂ ಕೇಂದ್ರ ಸರ್ಕಾರದವರು ನಮಗೆ ಅದಕ್ಕೆ ಪರ್ಮಿಷನ್ ಕೊಡುವುದು ಬಿಡುವುದು ಅದರ ಜೊತೆಯಲ್ಲಿಯೇ ಸೇರಿಕೊಂಡಿದೆ. ಈ ಸಂದರ್ಭದಲ್ಲಿ ನಾನು ಒಂದು ವಿಚಾರವನ್ನು ತಮ್ಮ ಮುಖಾಂತರ ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಕೃಷ್ಣಾ ನೀರಿನ ಹಂಚಿಕೆಯ ಬಗ್ಗೆ ಕೇಂದ್ರ ಸರ್ಕಾರದವರೂ ಕೂಡ ಒಂದು ಸಲಹೆಯನ್ನು ನಮ್ಮ ಮುಂದೆಇಟ್ಟಿದ್ದಾರೆ. ಅವೇನೆಂದರೆ ಮೈಸೂರು ಮತ್ತು ಆಂಧ್ರ ಈ ಎರಡು ರಾಜ್ಯಸರ್ಕಾರಗಳು ಸೇರಿ ಕೋರ್ಟಿನ ಹೊರಭಾಗದಲ್ಲಿ ಕೃಷ್ಣಾ ನೀರಿನ ಹಂಚಿಕೆಯ ವಿವಾದವನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಾಗುವ ರೀತಿ ಏರ್ಪಾಡುಮಾಡುವುದಕ್ಕೆ ನಿಮಗೆ ಇಚ್ಛೆ ಇದೆಯೇ, ಮತ್ತು ಆಂಧ್ರ ಮತ್ತು ಮೈಸೂರು ಸರ್ಕಾದವರು ಕಲೆತು ಪರಸ್ಪರ ವಿಚಾರ ವಿನಿಮಯದಿಂದ, ಚರ್ಚೆಯಿಂದ ಅದನ್ನು ಬಗೆ ಹರಿಸುವುದಕ್ಕೆ ನಾವು ಸಹಾಯಮಾಡುವುದಕ್ಕೆ ಸಿದ್ಧರಿದ್ದೇವೆ ಎನ್ನುವ ಅಭಿಪ್ರಾಯವನ್ನು ಕೇಂದ್ರ ಸರ್ಕಾರದವರು ವ್ಯಕ್ತಪಡಿಸಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಅವರ ಮಾತನ್ನು ಕಟ್ಟಿಕೊಂಡು ಮತ್ತೆ ರಾಜ್ಯಕ್ಕೆ ಅನ್ಯಾಯ ಮಾಡಬೇಡಿ.

ಶ್ರೀ ಡಿ. ದೇವರಾಜ ಅರಸ್.—ತಮಗೆ ಗೊತ್ತಿದ್ದಕ್ಕಿಂತಲೂ ಸ್ವಲ್ಪ ಸರ್ಕಾರಕ್ಕೆ ಹೆಚ್ಚಾಗಿ ಗೊತ್ತಿದೆಯೆಂದು ಹೇಳಿದರೆ ತಪ್ಪಾಗಲಾರದು. ಅವರು ಆಂಧ್ರದ ಪಕ್ಷ ವಹಿಸಿದ್ದಾರೋ, ಬಿಟ್ಟಿದ್ದಾರೋ ಎಂಬುದನ್ನು ಏಕ್‌ದಂ ನಾನು ಒಪ್ಪುವುದಕ್ಕೆ ಸಿದ್ಧವಿಲ್ಲ. ಯಾರೋ ಅವರಿವರು ಹೇಳಿದುದನ್ನು ಒಪ್ಪುವುದಕ್ಕಾಗುತ್ತದೆಯೇ ? ಫೈಲನ್ನು ನೋಡಿ ಅವರು ಯಾರಿಗೆ ಅನ್ಯಾಯ ಮಾಡಿದ್ದಾರೆ ಯಾರಿಗೆ ನ್ಯಾಯ ಮಾಡಿದ್ದಾರೆಂದು ತಿಳಿದು ಹೇಳಿದರೆ ತಪ್ಪಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಸಭೆಯ ಉಪನಾಯಕರು ಹಿಂದೆ ಇಲ್ಲಿ ಈ ಕಡೆ ಇದ್ದಾಗ ಆಂಧ್ರದ ಕೆ. ಎಲ್. ರಾಯರು ನಮಗೆ ಅನ್ಯಾಯವನ್ನು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅದನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಯಾರು ಏನೇ ಹೇಳಿದರೂ ನಾನು ಅವರು ಹೇಳಿದಂತಹ ರೀತಿಯಲ್ಲಿ ಈಗ ಒಪ್ಪುವುದಕ್ಕೆ ಸಾಧ್ಯವಿಲ್ಲ. ಅವರು ಯಾವಪಕ್ಷ ವಹಿಸಿದ್ದಾರೆಂಬುದನ್ನು ಅವರ ಕಾರ್ಯಕ್ರಮಗಳಿಂದ, ಅವರ ನಡವಳಿಕೆಗಳಿಂದ ನಾವು ಹೇಳಬೇಕಾಗಿದೆಯೇ ಹೊರತು ಏಕ್‌ದಂ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆಗ ಅನ್ಯಾಯ ಮಾಡಿದ್ದಾರೆ, ಈಗ ಮಾಡಿಲ್ಲವೆಂಬುದು ತಮ್ಮ ಅಭಿಪ್ರಾಯವೇ ?

ಶ್ರೀ ಡಿ. ದೇವರಾಜ ಅರಸ್.—ಯಾರು ಏನು ಹೇಳಿದ್ದಾರೆಂಬುದಕ್ಕೆ ನಾನು ಜವಾಬ್ದಾರನೇ ?

ಶ್ರೀ ಎಸ್. ಬಂಗಾರಪ್ಪ.—ಈಗ ತಾನೇ ಮುಖ್ಯಮಂತ್ರಿಯವರು, ಮಾನ್ಯ ಕೆ. ಎಲ್. ರಾಯರು ಕೃಷ್ಣಾ ಬೇಸಿನ್ ನೀರಿನ ವಿಚಾರದಲ್ಲಿ ಮೈಸೂರು ರಾಜ್ಯಕ್ಕೆ ಅನ್ಯಾಯ ಮಾಡಿದ್ದಾರೆಂದು ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದಾಗ, ಯಾರು ಹೇಳಿದ್ದಾರೋ ಬಿಟ್ಟಿದ್ದಾರೋ ಅದು ನನಗಂತೂ ಸಂಬಂಧವಿಲ್ಲವೆಂದು ಹೇಳಿದರು. ಕೆ. ಎಲ್. ರಾಯರು ಅನ್ಯಾಯ ಮಾಡಿದ್ದಾರೆಂಬುದನ್ನು ಮಾನ್ಯ ಚನ್ನಬಸಪ್ಪನವರು ಹಿಂದೆ ಹೇಳಿದ್ದಾರೆಂಬುದನ್ನು ಕೂಡ ಮಾನ್ಯ ದೇವೇಗೌಡರು ಈಗ ತಾನೇ ಹೇಳಿದರು. ಅದನ್ನು ಇದೇ ಸದನದಲ್ಲಿ ಮಾನ್ಯ ನಂಜೇಗೌಡರು ಸಹ ಬೇಕಾದಷ್ಟು ಸಲ ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಅದನ್ನು ಎಕ್‌ದಂ ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದರು. ಆದ್ದರಿಂದ ತಾವು ಅದನ್ನು ಒಪ್ಪುವುದಕ್ಕೆ ಎಷ್ಟು ವರ್ಷಬೇಕಾಗುತ್ತದೆ ?

ಶ್ರೀ ಡಿ. ದೇವರಾಜ ಅರಸ್.—ನೀವು ಅಭಿಪ್ರಾಯ ಆ ರೀತಿ ಇಟ್ಟುಕೊಳ್ಳುವುದಕ್ಕೆ ನನ್ನ ಅಭ್ಯಂತರವಿಲ್ಲ. ಆದರೆ ನನ್ನ ಅಭಿಪ್ರಾಯದಲ್ಲಿ ಅದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಹೇಳಿದೆ. ಬಹುಶಃ ನಮ್ಮ ರಾಜ್ಯದ ನೀರಿನ ಹಕ್ಕುಬಾಧ್ಯತೆಗಳು ಏನಿವೆ, ಅವುಗಳನ್ನು ನಾವು ಕಾಪಾಡಿಕೊಂಡು ಬರಬಹುದೆಂಬುದರಲ್ಲಿ ತಾವು ನಂಬಿಕೆ ಇಡುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಯಾವುದೋ ಒಂದು ದಾಕ್ಷಿಣ್ಯಕ್ಕೆ ಅಥವಾ ವ್ಯಾಮೋಹಕ್ಕೆ ತುತ್ತಾಗಿ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ತರಬಾರದೆಂಬುದೇ ನಮ್ಮ ಅಭಿಪ್ರಾಯ.

ಶ್ರೀ ಡಿ. ದೇವರಾಜ ಅರಸ್.—ಅಂಥ ವ್ಯಾಮೋಹ ಏನೂ ನಮಗೆ ಇಲ್ಲ. ಆ ಕಾಲವೆಲ್ಲಾ ಕಳೆದು ಹೋಯಿತು. ಆದರೆ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ನಮಗೆ ಇರತಕ್ಕಂತಹ ಹಕ್ಕುಗಳನ್ನು ಕಾಪಾಡುವುದರಲ್ಲಿ ಯಾವ ರೀತಿಯಾದಂತಹ ದಾಕ್ಷಿಣ್ಯಗಳಿಗೂ ಒಳಗಾಗದೆ ಕಾಪಾಡಿಕೊಂಡು ಬರುವಂತಹ ಯೋಗ್ಯತೆ ನಮಗೆ ಇದೆ ಮತ್ತು ಮನಸ್ಸಿನ ಶಕ್ತಿಯೂ ಇದೆ ಎಂಬುದನ್ನು ನಮ್ರತೆಯಿಂದ ಹೇಳುತ್ತಿದ್ದೇವೆ. ಅದರ ಬಗ್ಗೆ ತಾವು ಅನುಮಾನ ಪಡಬೇಕಾದ ಅಗತ್ಯವಿಲ್ಲ. ಆದರೆ ಯಾವಾಗಲೂ ಅನುಮಾನ ಇಟ್ಟುಕೊಂಡಿರತಕ್ಕಂತಹ ಜನರಿಗೆ ಏನೂ ಮಾಡುವುದಕ್ಕಾಗುವುದಿಲ್ಲ ; ಮತ್ತು ಅದಕ್ಕೆ ಯಾವ ಮದ್ದೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ತಾವು (ಬಿ)ಗೆ ಉತ್ತರದಲ್ಲಿ ತುಂಗಭದ್ರಾನದೀ ನೀರಿನ ಅಂತಿಮ ಹಂಚಿಕೆಯ ಬಗ್ಗೆ ಕೃಷ್ಣಾ ನದೀ ನೀರಿನ ನ್ಯಾಯಮಂಡಲಿಯವರು ತೀರ್ಮಾನವನ್ನು ನೀಡಿದ ನಂತರವೇ ಈ ಯೋಜನೆಯನ್ನು ಕೈಕೊಳ್ಳಬಹುದಾಗಿದೆ ಎಂದು ಹೇಳಿದ್ದೀರಿ. ಇಂಟರ್ ಸ್ಟೇಟ್ ನೀರಿನ ವಿಷಯದಲ್ಲಿ ಈಗಿರತಕ್ಕಂತಹ ಜಿಜ್ಞಾಸೆಗಳನ್ನು ಪರಿಹಾರ ಮಾಡತಕ್ಕಂತಹ ದೃಷ್ಟಿಯಿಂದ ಕೇಂದ್ರ ತಾನೇ ಈ ವಿಷಯದಲ್ಲಿ ಆಸಕ್ತಿ ವಹಿಸಿ ಇತರ ರಾಜ್ಯಗಳೊಡನೆ ಸೂಕ್ತವಾದ ಸಮಾಲೋಚನೆ ನಡೆಸುತ್ತದೆ, ಮತ್ತು ಮಾತುಕತೆ ನಡೆಸುತ್ತದೆ ಎನ್ನುವುದು ಪತ್ರಿಕೆಗಳಲ್ಲಿಯೂ ವರದಿಯಾಗಿರುತ್ತದೆ. ಆ ತರಹ ಏನಾದರೂ ಅವರು ಆಸಕ್ತಿವಹಿಸಿ ನಮಗೆ ಎರಡು ಕಣಿವೆಗಳಲ್ಲಿ ಇರುವ ನೀರನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಇರತಕ್ಕ ಜಿಜ್ಞಾಸೆ ಏನಿದೆ, ಅದನ್ನು ಪರಿಹರಿಸುತ್ತೇವೆಂದು ಕೇಂದ್ರ ಸರ್ಕಾರದವರು ಜವಾಬ್ದಾರಿ ವಹಿಸಿಕೊಂಡರೆ, ಅದರ ಬಗ್ಗೆ ತಾವು ಪ್ರತಿಭಟನೆಯನ್ನು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದರ ವಿಚಾರದಲ್ಲಿ ತಾವು ಒಂದು ಅಂಶ ತಿಳಿದುಕೊಳ್ಳಬೇಕಾಗುತ್ತದೆ. ಈ ನೀರಿನ ಹಂಚಿಕೆಯ ವ್ಯವಹಾರಗಳು ಏನಿವೆ ಇವುಗಳನ್ನು ಒಂದು ಬ್ರಾಡರ್ ಪರ್‌ಸ್ಪೆಕ್ಟಿವ್‌ನಿಂದ ನೋಡಬೇಕೆಂಬುದನ್ನು ಕೇಂದ್ರಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಕಾರಣವೇನೆಂದರೆ, ಈ ನೀರಿನಲ್ಲಿ ನಮಗೆ ಇಷ್ಟು ಉಪಯೋಗ ಮಾಡುವ ಹಕ್ಕು ಇದೆ ಎಂದು ನಾವು ಹೇಳುತ್ತಿದ್ದೇವೆ. ಅದೇ ರೀತಿ ಪಕ್ಕದ ರಾಜ್ಯದವರು ನಮಗೆ ಇಷ್ಟು ಉಪಯೋಗ ಮಾಡುವಹಕ್ಕು ಇದೆ ಎಂದು ಅವರು ಹೇಳುತ್ತಿದ್ದಾರೆ. ಇದಕ್ಕೋಸ್ಕರ, ಕೇಂದ್ರದಲ್ಲಿ ಇತ್ತೀಚೆಗೆ ಏನು ಒಂದು ಆಲೋಚನೆ ಬಂದಿದೆ ಎಂದರೆ, ಉತ್ತರದಲ್ಲಿರತಕ್ಕಂತಹ ನದಿಗಳ ನೀರನ್ನು ದಕ್ಷಿಣಕ್ಕೆ ಬೇಕಾದರೆ ತರುವಂತಹ ವ್ಯವಸ್ಥೆಮಾಡುವುದಕ್ಕೆ ಸಾಧ್ಯತೆ ಇದೆ, ಮತ್ತು ಇದನ್ನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಇದೆ. ಈ ಕಾರಣಗಳಿಂದ ಕೇಂದ್ರದಲ್ಲಿ ಎಲೆಕ್ಟ್ರಿಸಿಟಿ ಬಗ್ಗೆ ಮತ್ತು ನೀರಿನ ಬಗ್ಗೆ ಒಂದು ಇಂಟಿಗ್ರೇಟೆಡ್ ನ್ಯಾಶನಲ್ ಗ್ರಿಡ್ ಎನ್ನತಕ್ಕಂಥದ್ದನ್ನು ಮಾಡುವುದು ಸೂಕ್ತವೆಂದು ಅವರು ಆಲೋಚನೆ ಮಾಡುತ್ತಿದ್ದಾರೆ. ತಮಗೆಲ್ಲಾ ಗೊತ್ತಿರುವ ಹಾಗೆ ಇಂಡಿಯಾ ದೇಶದ ಉತ್ತರ ಭಾಗಗಳಲ್ಲಿ ನೀರೆಲ್ಲಾ ಸಮುದ್ರಕ್ಕೆ ಹೋಗುತ್ತಿದೆ. ಅಲ್ಲದೆ ನೆರೆ ಹಾವಳಿಗಳಿಂದ ಕೋಟಿ ಕೋಟಿ ರೂಪಾಯಿಗಳ ಆಸ್ತಿಗಳು ನಷ್ಟವಾಗುತ್ತಿರುವುದನ್ನು ನಾವು ಬಿಹಾರಿನಲ್ಲಿ, ವೆಸ್ಟ್ ಬಂಗಾಳದಲ್ಲಿ ಹಾಗೂ ಮತ್ತಿತರ ಕಡೆಗಳಲ್ಲಿ ನೋಡುತ್ತಿದ್ದೇವೆ. ಆದರೆ, ದಕ್ಷಿಣ ಇಂಡಿಯಾದಲ್ಲಿ ನೀರಿನ ಅಭಾವ, ಕ್ಷಾಮಡಾಮರಗಳು ಆಗಿಂದಾಗ್ಗೆ ತಲೆದೋರುತ್ತಲೇ ಇವೆ. ಈ ಕಾರಣಗಳಿಂದ ಕೇಂದ್ರದ ಯೋಜನೆಗಾರರು ಮಾಡರ್ನ್

ಟೆಕ್ನಾಲಜಿ ಇಂಜಿನಿಯರಿಂಗ್ ಡೆವಲಪ್‌ಮೆಂಟ್ ಸ್ಕೀಂ ಪ್ರಕಾರ ಇದನ್ನು ಕಾರ್ಯಗತ ಮಾಡುವುದು ಅಗತ್ಯ ಮತ್ತು ಸಾಧ್ಯತೆ ಇದೆ ಎಂಬುದನ್ನು ಹೇಳಿದ್ದಾರೆ. ಮತ್ತು ಇದನ್ನು ಅನೇಕ ತಜ್ಞರು ಕೂಡ ತಮ್ಮ ವರದಿಯಲ್ಲಿ ಹೇಳಿದ್ದಾರೆ.

ಈ ಬಗ್ಗೆ ಕೇಂದ್ರದವರು ತೀವ್ರಾಲೋಚನೆಯಲ್ಲಿದ್ದಾರೆ. ಈಗ ಒಂದು ನ್ಯಾಷನಲ್ ಗ್ರಿಡ್ ಎಂದು ಏತಕ್ಕೆ ಮಾಡಬಾರದು ; ಹಿಂದೆ ನಮ್ಮದೇ ಪ್ರತ್ಯೇಕ ರಾಜ್ಯವೆಂದು ಹಿಂದಿನ ಪಾಳೆಯ ಗಾರಿಕೆಯ ಮನೋಭಾವದಿಂದ ಎಲ್ಲರೂ ವರ್ತಿಸುತ್ತಿದ್ದರು. ಆದರೆ ಈಗ ಆ ರೀತಿ ಮಾಡುವುದ ಕ್ಕಾಗುವುದಿಲ್ಲ, ನಮ್ಮ ದೇಶ ಒಂದೇ ದೇಶ ಎಂದು ಹೇಳಿದ ಮೇಲೆ ಎಲ್ಲರಿಗೂ ಒಂದೇ ಸಮನಾಗಿ ಅನುಕೂಲವಾಗುವ ರೀತಿಯಲ್ಲಿ ಒಂದು ಕ್ರಮವನ್ನು ಏತಕ್ಕೆ ತೆಗೆದುಕೊಳ್ಳಬಾರದೆಂದು ಅವರು ಅಭಿಪ್ರಾಯವುಳ್ಳವರಾಗಿದ್ದಾರೆ. ಅದಕ್ಕಾಗಿ ಇರ್ರಿಗೇಷನ್ ಬಗ್ಗೆ ಮತ್ತು ಎಲೆಕ್ಟ್ರಿಸಿಟಿ ಉತ್ಪಾದನೆಯ ಬಗ್ಗೆ ಒಂದು ನ್ಯಾಷನಲ್ ಗ್ರಿಡ್ ಮಾಡಬೇಕೆಂದು ಆಲೋಚನೆ ಮಾಡಿಕೊಂಡಿದ್ದಾರೆ.

9-30 A.M.

ಶ್ರೀ ಎಚ್. ಡಿ. ದೇವೇಗೌಡ.—ತಾವು ಈಗತಾನೇ ಭಾರತದೇಶದಲ್ಲಿ ನೀರಿನ ಮತ್ತು ಎಲೆಕ್ಟ್ರಿಸಿಟಿ ಬಗ್ಗೆ ಒಂದು ಇಂಟಿಗ್ರೇಟೆಡ್ ನ್ಯಾಷನಲ್ ಗ್ರಿಡ್ ಮಾಡಬೇಕೆಂದು ಕೇಂದ್ರದಲ್ಲಿ ಅಭಿಪ್ರಾಯವುಳ್ಳವರಾಗಿದ್ದಾರೆಂದು ಹೇಳಿದಿರಿ. ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಏನು ನಡೆಯಿತು, ಇದರ ಬಗ್ಗೆ ಏನು ಚರ್ಚೆ ನಡೆಸಿದ್ದೀರಿ ? ಸಮಗ್ರವಾಗಿ ಇದರ ಬಗ್ಗೆ ಅಲ್ಲಿ ಏನಾದರೂ ನಿರ್ಧಾರ ಮಾಡಿದ್ದಾರೆಯೇ ? ಏಕೆಂದರೆ ಈ ವಿಚಾರ ದೇಶಾದ್ಯಂತ ಇದೆಯೆಂದು ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಇದು ದೇಶಾದಾದ್ಯಂತ ಇದೆಯೇ ಇಲ್ಲವೇ ಎಂಬುದನ್ನು ಮುಂದೆ ನೋಡೋಣ. ಈ ವಿಷಯ ಅಲ್ಲಿ ಕಾನ್‌ಫರೆನ್ಸ್ ನಬ್ಜಕ್ಟಾಗಿ ಏನೂ ಬಂದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ದೃಷ್ಟಿಕೋನದಲ್ಲಿ ಅದನ್ನು ಮಾಡುತ್ತಿದ್ದಾರೆಂದು ಹೇಳಿದಿರಿ ? ಈಗ ನನ್ನ ಮನಸ್ಸಿನಲ್ಲಿರತಕ್ಕ ಸಂಶಯವನ್ನು ಕ್ಲಾರಿಫೈ ಮಾಡಿ.

ತುಂಗಭದ್ರಾ ಅಣೆಕಟ್ಟಿನ ನೀರನ್ನು ಆಂಧ್ರದವರಿಗೆ ಕೊಡುವುದಕ್ಕಾಗುವುದಿಲ್ಲವೆಂದು ಕ್ಯಾಬಿನೆಟ್‌ನಲ್ಲಿ ನಿರ್ಣಯವಾದ 4 ದಿನಗಳ ಮೇಲೆ ನ್ಯಾಷನಲ್ ಗ್ರಿಡ್ ವಿಷಯದ ಬಗ್ಗೆ ಕೇಂದ್ರ ಸರ್ಕಾರ ತನ್ನ ಆಲೋಚನೆಯನ್ನು ವ್ಯಕ್ತಪಡಿಸಿರುವುದು ಪತ್ರಿಕೆಗಳಲ್ಲಿ ಬಂದಿದೆ. ತಾವು ಅದರ ಹಿನ್ನೆಲೆ ಏನು ಎಂಬುದನ್ನು ತಿಳಿಸಬೇಕು. ಅವರ ನಿಲುವು ಏನೆಂಬುದನ್ನು ಸಹ ತಿಳಿಸಬೇಕು. ಒಂದೊಂದು ಸಾರಿ ಅವರು ಯಾರ ದಾಕ್ಷಿಣ್ಯ ಏತಕ್ಕೆ ಬೇಕು ; ನಾವೇ ಇದನ್ನು ನಮ್ಮ ಅಧಿಕಾರದ ಹಿಡಿತಕ್ಕೆ ತೆಗೆದುಕೊಂಡರೆ ಆಯಿತು, ರಾಜ್ಯಗಳನ್ನು ಕೇಳಿ ಕನ್‌ಸಿಡರ್ ಮಾಡುವ ಅವಶ್ಯಕತೆ ಇಲ್ಲವೆಂಬ ಧೋರಣೆಯಿಂದ ಮಾಡುತ್ತಿದ್ದಾರೆ ಎಂಬುದು ಒಂದು ಪ್ರಶ್ನೆ. ನೀರನ್ನು ಉತ್ತರದಿಂದ ದಕ್ಷಿಣಕ್ಕೆ ತರುವ ಪ್ರಶ್ನೆ ಬೇರೆ. ಈ ಪ್ರಶ್ನೆ ಬೇರೆ. ಇವತ್ತು ರಾಜ್ಯಸರ್ಕಾರ ತೆಗೆದುಕೊಂಡಿರತಕ್ಕ ಒಂದು ನಿಲುವಿನಿಂದ ಈ ಪ್ರಶ್ನೆ ಉದ್ಭವವಾಗಿದೆಯೆಂದು ನನಗನ್ನಿಸುತ್ತದೆ. ಆದ್ದರಿಂದ ಕಾವೇರಿ ನೀರಿನ ಬಗ್ಗೆ ಇರುವ ಜಟಿಲ ಸಮಸ್ಯೆ ಅಥವಾ ಪ್ರಶ್ನೆ ಪೂರ್ತಿಯಾಗಿ ಇತ್ಯರ್ಥವಾಗುವವರೆಗೂ ಇಂಥಾದ್ದಕ್ಕೆ ಅವಕಾಶ ಕೊಡಬಾರದೆಂದು ನಾನು ತಮಗೆ ಹೇಳುತ್ತಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಈಗ ತುಂಗಭದ್ರಾ ನದಿಯಿಂದ ನೀರು ಬಿಡಿಸುವುದಕ್ಕೂ ನ್ಯಾಷನಲ್ ಗ್ರಿಡ್ ಮಾಡುವುದಕ್ಕೂ ಏನೂ ಸಂಬಂಧವಿಲ್ಲ. ಅಕಸ್ಮಾತ್ತಾಗಿ ಹಾಗೆ ಬಂದಿದೆ. ಅದು ಕಾಕತಾಳ ನ್ಯಾಯವಾಗಿರಬಹುದು. ಆದ್ದರಿಂದ ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಸ್ವಲ್ಪ ದಿವಸಗಳವರೆಗೆ ನೀರು ಕೊಡಿ ಎಂದು ಹೇಳಿದ್ದರೆ ಆ ಮಾತು ಬೇರೆ. ಹಂಚಿಕೆಯೆಲ್ಲಾ ಅವರು ತೆಗೆದುಕೊಳ್ಳಬೇಕೆಂಬ ಉದ್ದೇಶವಲ್ಲ. ಪಶ್ಚಿಮ ಘಟ್ಟದಿಂದ ಅರಬ್ಬೀ ಸಮುದ್ರದವರೆಗೆ ಕೊಹಿನಾ ವಾಟರ್ಸ್ ಹೋಗುವುದರಿಂದ ಮಹಾರಾಷ್ಟ್ರದವರಿಗೆ ಪವರ್‌ಗೋಸ್ಕರವಾಗಿ ಆ ನೀರು ಉಪಯೋಗ ಮಾಡುತ್ತಿದ್ದಾರೆ. ಅದರಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತಿದ್ದಾರೆ. ನೀರು ನಮ್ಮ ಭಾಗಕ್ಕೆ ಹರಿಯುವುದಾಗಿದ್ದರೆ, ಆ ನದಿಯ ನೀರು ಪೂರ್ವದಿಕ್ಕಿಗೆ ಹೋಗುವುದನ್ನು ಪಶ್ಚಿಮ ದಿಕ್ಕಿಗೆ ತಿರುಗಿಸುವ ಹಾಗೆ ಡೈವರ್ಟ್ ಮಾಡುತ್ತಾರೆ. ನಮಗೆ ಆಗಿರತಕ್ಕ ತೊಂದರೆ ಇದರ ಬಗ್ಗೆ ಏನು ಎಂಬುದನ್ನು ನೋಡಬೇಕು. ಕೃಷ್ಣಾ ನದಿಯ ದಂಡೆಯಲ್ಲಿರತಕ್ಕ ಜನರು ನೀರಿಗಾಗಿ ಎಷ್ಟು ತೊಂದರೆಯನ್ನು ಅನುಭವಿಸುತ್ತಿದ್ದಾರೆಂಬುದನ್ನು ನೋಡಬೇಕು. ಈಗ ಮಹಾರಾಷ್ಟ್ರದವರಲ್ಲಿ ಸಂಧಾನ ಮಾಡಿ ನಮಗೆ ನೀರನ್ನು ಬಿಟ್ಟುಕೊಡಿ ಎಂದು ಕೇಳಿದ್ದಾರೆ. ಅವರು ಆ ನೀರನ್ನು ಬಿಡಬೇಕಾದರೆ ಆ ನೀರಿನ ಎಷ್ಟು ಭಾಗ ನಮ್ಮ ಕಡೆಗೆ ಬಿಡುತ್ತಾರೋ, ಅಷ್ಟು ಭಾಗದ ನೀರಿನಲ್ಲಿ ಎಷ್ಟು ವಿದ್ಯುಚ್ಛಕ್ತಿ ಉತ್ಪನ್ನವಾಗುತ್ತದೋ ಅಷ್ಟು ವಿದ್ಯುಚ್ಛಕ್ತಿಯನ್ನು ಕೊಡುತ್ತೀರಾ ಎಂದು ಕೇಳಿದರು.

(ಶ್ರೀ ಡಿ. ದೇವರಾಜ ಅರಸ್)

ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಈಗ ಅದಕ್ಕೆ ಲೆಕ್ಕಾಚಾರ ಹಾಕುತ್ತಿದ್ದಾರೆ, ನಮ್ಮ ಅಧಿಕಾರಿಗಳನ್ನೂ ಸಹ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಮಹಾರಾಷ್ಟ್ರ ಅಧಿಕಾರಿಗಳಲ್ಲಿ ಈ ವಿಚಾರದಲ್ಲಿ ಸಮಾಲೋಚನೆ ಮಾಡಿ ಬೇಗನೆ ಒಂದು ಇತ್ಯರ್ಥಕ್ಕೆ ಬರಬೇಕಾಗಿದೆ. ನೀರನ್ನು ನಮಗೆ ಬಿಟ್ಟು ಕೊಡುತ್ತೇವೆಂದು ಹೇಳಿದ್ದಾರೆ. ಎಷ್ಟು ಭಾಗ ನಮಗೆ ಕಡಿಮೆ ಬೀಳುತ್ತದೋ ಅಷ್ಟು ಭಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಮ್ಮ ಜನಗಳಿಗೆ ಇರುವ ಕಷ್ಟವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಇದನ್ನು ಒಪ್ಪೋಣ. ಇನ್ನೂ ಸ್ವಲ್ಪ ಭಾಗವನ್ನು ಬಿಟ್ಟು ಕೊಡಿ ಎಂದು ಕೇಳಿದ್ದೇವೆ. ಅದು ಬಹುಶಃ ನನ್ನ ಆಶೆ. ಇನ್ನು ಎರಡು ಮೂರು ದಿವಸಗಳಲ್ಲಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬಂದು ನೀರನ್ನು ಬಿಡಿಸಿಕೊಳ್ಳುತ್ತಿದ್ದೇವೆ. ನಮ್ಮ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಸಹಾನುಭೂತಿಯಿಂದ ಇದನ್ನು ನೋಡುತ್ತಿದ್ದಾರೆಂದು ನಮ್ಮ ನಂಬಿಕೆ. ಕೊಡಗಿನ ಒಂದು ಸ್ಥಳದಲ್ಲಿ ಪಶ್ಚಿಮಕ್ಕೆ ಹೋಗುವ ನೀರನ್ನು ದಕ್ಷಿಣದ ಕಡೆಗೆ ಹರಿಸುವುದಕ್ಕೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಇದೆ. ಆ ಹೊಳೆಯ ಹೆಸರು ನನಗೆ ಗೊತ್ತಿಲ್ಲ. ಡ್ಯಾಂ ಕನ್‌ಸ್ಟ್ರಕ್ಟ್ ಮಾಡಿ ನೀರನ್ನು ಡೈವರ್ಟ್ ಮಾಡಿದರೆ ಕನ್ನಂಬಾಡಿಯಲ್ಲಿ 8 ಅಥವಾ 9 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ತರುವುದಕ್ಕೆ ಸಾಧ್ಯವಿದೆ. ಇಂಥಾದ್ದನ್ನು ಮಾಡಬೇಕಾದರೆ ಸಮಗ್ರದೃಷ್ಟಿಯಿಂದ ನೋಡತಕ್ಕ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯ. ಹಾಗಿಲ್ಲದೆ ಹೋದರೆ ಪ್ರತಿಯೊಂದು ವಿಚಾರದಲ್ಲಿಯೂ ನಾವೇ ಬೇರೆ, ನೀವೇ ಬೇರೆ ಎಂದು ಹೇಳಬೇಕಾಗುತ್ತದೆ. ಇವರು ಮೈಸೂರು ರಾಜ್ಯದವರು, ಇವರು ಹೊರಗಡೆಯವರು ಎಂಬುದಾಗಿ ನೋಡಿಕೊಳ್ಳುವ ಒಂದು ದೃಷ್ಟಿಕೋಣದ ವ್ಯತ್ಯಾಸದಿಂದ ಇಡೀ ದೇಶದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೆ. ಈ ಕಾರಣದಿಂದ ಅವರು ಕೇವಲ ತುಂಗಭದ್ರಾ ನೀರನ್ನು ಕೊಡುವ ದೃಷ್ಟಿ ಮಾತ್ರ ಅವರಲ್ಲಿ ಈಗ ಉದ್ಭವಿಸಿದೆ ಎಂಬ ಅಪನಂಬಿಕೆಯನ್ನು ನಾವು ಇಟ್ಟುಕೊಳ್ಳುವ ಅಗತ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತುಂಗಭದ್ರಾ ನೀರಿನ ಅಂತಿಮ ಹಂಚಿಕೆಯ ಬಗ್ಗೆ ಕೃಷ್ಣಾ ಟ್ರಿಬ್ಯೂನಲ್ ಅವರಿಂದ ಅಂತ್ಯವಾಗಿ ನಿರ್ಧಾರವಾದ ಮೇಲೆ ಈ ಯೋಜನೆಯನ್ನು ಕೈಕೊಳ್ಳಬಹುದಾಗಿದೆ ಎಂಬುದಾಗಿ ಹೇಳಿದ್ದೀರಿ. ಈಗ ಕೃಷ್ಣಾ ಟ್ರಿಬ್ಯೂನಲ್ ಯಾವ ಸ್ಟೇಜಿನಲ್ಲಿ ಕೆಲಸ ಮಾಡುತ್ತಿದೆ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅದು ಕೊನೆಯ ಹಂತದಲ್ಲಿದೆ. ಅದಕ್ಕೆ ಉತ್ತರವನ್ನು ಈಗಾಗಲೇ ಹೇಳಿದ್ದೇನೆ.

MADAM SPEAKER.—Questions are over. Now Short Notice Question No. 2 by Sri J. P. Sarwesh but the hon. member is absent.

## SHORT NOTICE QUESTION FOR ANSWER

(but not taken up)

### Communal Disturbances in Gulbarga Town

4. Sri J. P. SARWESH (Sedum).—

Will the Chief Minister be pleased to state :—

(*a*) whether there were communal disturbances in Gulbarga Town from 28th February to 2nd March 1972 ;

(*b*) whether it is a fact that shops and houses of minority community people were burnt ;

(*c*) the total number of shops and houses burnt ;

(*d*) the number of people wounded and number of people died in the disturbances ;

(*e*) the estimated loss of property ;

(*f*) the number of persons arrested and the number of persons charge sheeted ?

Sri D. DEVARAJ URS (Chief Minister).—

(*a*) Yes.

(*b*) Shops and houses of members of minority community as also the members of other communities were burnt during these disturbances.

(*c*) 344.

(*d*) Number of persons wounded : 156 (including Police and Home Guards).

Number of persons died : Two.

(*e*) Rs. 3,29,725.

(*f*) Number of persons arrested : 140.

Number of persons charge sheeted : 31.

## Notice of Adjournment Motion *Re*: Strike at the Ruby Rubber Works, Bangalore.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಇವತ್ತು ಬೆಳಿಗ್ಗೆ ತಮಗೆ ಒಂದು ಅಡ್ಜರ್ನ್‌ಮೆಂಟ್‌ಮೋಷನ್ ಕಳುಹಿಸಿದ್ದೆ. ನಿನ್ನೆ ದಿವಸ ಒಂದು ಘಟನೆ ಬೆಂಗಳೂರಿನಲ್ಲಿ ನಡೆದಿದೆ. ರೂಬಿ ರಬ್ಬರ್ ವರ್ಕ್ಸ್ ಫ್ಯಾಕ್ಟರಿಯಲ್ಲಿ ಸುಮಾರು 200-250 ಜನರು ಕೆಲಸಮಾಡುತ್ತಿದ್ದಾರೆ. ಅಲ್ಲಿ ಐದಾರು ದಿವಸಗಳಿಂದಲೂ ಸ್ಟ್ರೈಕ್ ಮಾಡಿದ್ದಾರೆ. ಫ್ಯಾಕ್ಟರಿಯೊಳಗೆ ನಿನ್ನೆ ದಿವಸ ಅಲ್ಲಿನ ಸಾಮಾನುಗಳನ್ನು ಮಾಲೀಕ ಲಾರಿಯಲ್ಲಿ ಸಾಗಿಸಬೇಕೆಂದು ಯೋಚನೆ ಮಾಡಿ ಪೋಲೀಸ್‌ನವರನ್ನು ಸಹಾಯ ಮಾಡಬೇಕೆಂದು ಕೇಳಿಕೊಂಡನು. ಆದರಂತೆ ಪೋಲೀಸಿನವರು ಈ ವಿಚಾರದಲ್ಲಿ ಕುಮ್ಮಕ್ಕು ಕೊಟ್ಟು ಅಲ್ಲಿದ್ದವರಿಗೆ ಲಾಠಿ ಚಾರ್ಜ್ ಮಾಡಿ, ಅಲ್ಲಿದ್ದ ಟೆಂಟನ್ನು ಕಿತ್ತುಕೊಂಡು ಹೋಗಿ ಅನೇಕರಿಗೆ ಹೊಡೆದು ಸುಮಾರು 20 ಜನರಿಗೆ ಗಾಯಗಳಾಗಿವೆ. ಅವರಲ್ಲಿ ಕೆಲವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಶಾಂತರೀತಿಯಿಂದ ಇದ್ದಂಥ ಕಾರ್ಮಿಕರ ಮೇಲೆ ಪೋಲೀಸಿನವರು ಮಾಲೀಕನಿಗೆ ಕುಮ್ಮಕ್ಕು ಕೊಟ್ಟು ಹೊಡಿಸಿದರು. ಇದರಿಂದ ವಿರೋಧಾಭಾಸವುಂಟಾಗಿದೆ. ಶ್ರೀಮಾನ್ ಅಜೀಜ್ ಸೇಟ್ ಅವರು ಇಂದು ಪೋಲೀಸಿನವರ ನೀತಿಯ ಬಗ್ಗೆ ಮಾತನಾಡುತ್ತಾ ಕೈಗಾರಿಕೆ ಕ್ಷೇತ್ರದಲ್ಲಿ ಇಂತಹ ವೈಷಮ್ಯಗಳು ತಲೆದೋರಿದಾಗ ಕಾರ್ಮಿಕರು ಹಾಗೂ ಮಾಲೀಕರು ಶಾಂತ ರೀತಿಯಲ್ಲಿ ವರ್ತಿಸಬೇಕೆಂದು ಹೇಳಿದ್ದರೂ ಅವರ ಒಂದು ಹೇಳಿಕೆಯ ವಿರುದ್ಧವಾಗಿ ಅಲ್ಲಿ ಪೋಲೀಸಿನವರು ನಡೆದುಕೊಂಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಅಲ್ಲಿ ವೈಯಕ್ತಿಕವಾಗಿ ನಾನು ಒಬ್ಬರ ಮೇಲೆಯೇ ಮಾತನಾಡುತ್ತಿದ್ದೇನೆ ಎಂಬುದಾಗಿ ಯಾರೂ ತಿಳಿಯಬಾರದು. ಪೋಲೀಸ್ ಅಧಿಕಾರಿಗಳು ಈಗ ಯಾರು ಇದ್ದಾರೆ ಅವರು ಟ್ರಿಗ್ಗರ್ ಹ್ಯಾಪಿ ಅಂತಾರಲ್ಲ ಹಾಗೆ ಲಾಠಿ ಹ್ಯಾಪಿ ಪರ್ಸನಾಲಟಿಯ ಹಾಗೆ ಇದ್ದಾರೆ. ಆ ಫ್ಯಾಕ್ಟರಿಯಲ್ಲಿರುವ ಒಬ್ಬ ಮನುಷ್ಯ ಇದಕ್ಕೆಲ್ಲಾ ಕಾರಣಕರ್ತನಾಗಿದ್ದಾನೆ. ಒಬ್ಬ ಪೋಲೀಸ್ ಅಧಿಕಾರಿಯೂ ಕಾರಣ ಕರ್ತರಾಗಿದ್ದಾನೆ. ಆದ್ದರಿಂದ ಅಂತಹವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದೆ ಎನ್.ಜಿ.ಇ.ಎಫ್. ಬಗ್ಗೆ ಆ ಪೋಲೀಸ್ ಅಧಿಕಾರಿ ಯಾವ ವರ್ತನೆ ಮಾಡಿದ್ದನೋ ಅದೇ

(ಶ್ರೀ ಎಂ. ಎಸ್. ಕೃಷ್ಣನ್)

ವರ್ತನೆಯನ್ನು ಮತ್ತು ಈಗ ಈ ರೂಬಿ ರಬ್ಬರ್ ಕೆಲಸಗಾರರ ಬಗ್ಗೆಯೂ ಮಾಡಿದ್ದಾನೆ. ಇಂಥ ತಪ್ಪಿತಸ್ಥರನ್ನು ಸರ್ಕಾರದವರು ಕೂಡಲೆ ಡಿಸ್‌ಮಿಸ್ ಮಾಡಬೇಕೆಂದು ಹೇಳುತ್ತೇನೆ. ಅವರು ಯಾರು ಎನ್ನತಕ್ಕ ಬಗ್ಗೆ ಅವರ ಹೆಸರನ್ನು ಹೇಳುವುದಕ್ಕೂ ಕೂಡ ನಾನು ಸಿದ್ಧವಾಗಿದ್ದೇನೆ. ಇದು ಅತಿ ಮುಖ್ಯವಾದ ಹಾಗೂ ಅತಿ ಜರೂರಾದ ವಿಷಯ. ಸರ್ಕಾರದವರು ಅತಿ ಜರೂರಾಗಿ ಇದರ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಆದ್ದರಿಂದ ಇದರ ಬಗ್ಗೆ ಕೆಲವು ಮಾತುಗಳನ್ನಾಡುವುದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ತಾವು ಹೇಳುತ್ತಿರುವಹಾಗೆ ಇದು ಕೇವಲ ಒಂದು ಅಡ್ಜರ್ನ್‌ಮೆಂಟ್ ಮೋಷನ್ ತಂದು ಬಗೆಹರಿಸತಕ್ಕಂಥ ಸಮಸ್ಯೆಯಲ್ಲ. ಮಾನ್ಯ ಸದಸ್ಯರು ಅದಕ್ಕೆ ಸಂಬಂಧಪಟ್ಟ ವಿಷಯಗಳೇನು ಎಂಬುದನ್ನೆಲ್ಲಾ ತಿಳಿಸಲಿ. ಅನಂತರ ನಾನೂ ತತ್ಸಂಬಂಧದಲ್ಲಿ ವಿಚಾರ ವಿನಿಮಯ ಮಾಡಿ ಯಾರು ತಪ್ಪಿತಸ್ಥರು ಎಂಬುದನ್ನು ಕಂಡುಹಿಡಿದು ತಪ್ಪಿತಸ್ಥರನ್ನು ಅವರು ಯಾರೇ ಆಗಿರಲಿ ಶಿಕ್ಷೆ ಮಾಡೋಣ. ಅದನ್ನು ಮಾಡದೆ ಸುಮ್ಮನೆ ಏನೂ ವಿಷಯಗಳು ಗೊತ್ತಿಲ್ಲದೆ ಇದ್ದಾಗ ನನಗೆ ಅದರ ಬಗ್ಗೆ ಏನು ಹೇಳುವುದಕ್ಕೂ ಬರುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಎನ್.ಜಿ.ಇ.ಎಫ್. ವಿಚಾರದಲ್ಲಿ ಮಾನ್ಯ ಸಚಿವರು ಇದೇ ಸಭೆಯಲ್ಲಿ ಪೋಲೀಸರ ಒಂದು ವರದಿಯನ್ನು ಓದಿದರು. ವಿಚಾರವೇನು ಎಂಬುದನ್ನು ಕೂಲಂಕಷವಾಗಿ ತಿಳಿದುಕೊಂಡು ತಪ್ಪಿತಸ್ಥರಿಗೆ ಶಿಕ್ಷೆ ಮಾಡಲಿಲ್ಲ. ಹಾಗೆ ಇದರಲ್ಲೂ ಆಗಬಾರದು.

ಶ್ರೀ ಡಿ. ದೇವರಾಜ ಅರಸ್.—ಈಗ ಮಾನ್ಯ ಸದಸ್ಯರಾದರೂ ಅವರಿಗೆ ಯಾರೋ ಬಂದು ಹೇಳಿದ ಸುದ್ದಿಯ ಮೇಲೆ ಅವರಿಲ್ಲಿ ಮಾತನಾಡುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಆ ಕಾರ್ಮಿಕರು ತಂದು ಕೊಡತಕ್ಕ ಸುದ್ದಿಯನ್ನು ನಂಬುವುಕ್ಕಾಗದೆ ಇರುತ್ತದೆಯೇ? ಹಾಗೇ ಸರ್ಕಾರಕ್ಕೂ ಕೂಡ ಆ ಅಧಿಕಾರಿಗಳು ತಂದು ಕೊಡತಕ್ಕ ವಿಷಯಗಳನ್ನು ಅವರೂ ಕೂಡ ನಂಬಲೇ ಬೇಕಾಗುವುದು. ಈ ದಿವಸ ಕೇರಳ ರಾಜ್ಯದಲ್ಲಿ ಮಾನ್ಯ ಸದಸ್ಯರ ಪಕ್ಷ ಆಡಳಿತವನ್ನು ನಡೆಸುತ್ತಿದೆ. ಅವರ ಸರ್ಕಾರ ಅಲ್ಲಿದೆ. ಅವರಾದರೂ ಇಂಥ ವಿಷಯಗಳಲ್ಲಿ ಹೇಗೆ ನಡೆಯಬೇಕು ಅನ್ನುವುದಕ್ಕೆ ಒಂದು ಮಾದರಿಯನ್ನು ಹಾಕಿಕೊಟ್ಟಿದ್ದರೆ ಅದರಂತೆ ನಾವೂ ಸಹಾ ಇಲ್ಲಿ ನಡೆಯಬಹುದಾಗಿತ್ತು. ಆದರೆ ಮಾನ್ಯ ಸದಸ್ಯರು ಇಲ್ಲಿ ಹೇಳಿರತಕ್ಕ ವಿಷಯಗಳನ್ನು ನಾವು ಬ್ರಷ್ ಅಸೈಡ್ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಎಲ್ಲ ವಿಚಾರಗಳನ್ನೂ ಆಳವಾಗಿ ವಿಚಾರಮಾಡಿ ನೋಡೋಣ ಅಂತ ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ಒಂದು ಮಹತ್ವವಾದ ವಿಷಯವನ್ನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಆ ವಿಚಾರ ಈ ದಿವಸದ ಕನ್ನಡ ಪ್ರಭಾ ಮತ್ತು ಎಕ್ಸ್‌ಪ್ರೆಸ್ ದಿನ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದೇನೆಂದರೆ......

MADAM SPEAKER.—This is purely an administrative matter and a question of law and order. I do not think I can allow this adjournment motion.

## Raising the issue of the Mysore-Maharashtra Border

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಸ್ವಾಮಿ......

ಶ್ರೀ ಎಚ್. ಪುಟ್ಟದಾಸ (ಸಾತನೂರು).—ಅಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಈಗ ಮಾತನಾಡುವುದಕ್ಕೆ ಎದ್ದುನಿಂತಿರತಕ್ಕ ಶ್ರೀ ವಾಟಾಳ್ ಅವರು ಒಂದೊಂದು ದಿನ ಒಂದೊಂದು ಕಡೆಯಲ್ಲಿ ನಿಂತು ಮಾತನಾಡುತ್ತಿದ್ದಾರೆ. ಇದು ನಿಯಮಾವಳಿಗೆ ವಿರುದ್ಧವಾಗಿದೆ.

ಅಧ್ಯಕ್ಷರು.—ಆಫೀಸಿನಿಂದ ಜಾಗವನ್ನು ಸದಸ್ಯರುಗಳಿಗೆ ಇನ್ನೂ ನಿಗದಿ ಮಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಹಾರಾಷ್ಟ್ರ ಮತ್ತು ಮೈಸೂರು ರಾಜ್ಯಗಳ ಗಡಿ ವಿವಾದದ ಸಮಸ್ಯೆ ಈಗಾಗಲೇ ಈ ಸಭೆಯ ಮುಂದೆ ಮಹಾಜನ್ ವರದಿ ಚರ್ಚೆಗೆ ಬಂದಾಗ ವಿಮರ್ಶೆಯಾಗಿ ಆಗಲೇ ತೀರ್ಮಾನವಾಗಿದೆ. ಹಾಗಿದ್ದರೂ ಕೂಡ ಮತ್ತೆ ಈ ವಿಚಾರವನ್ನು ಮೈಸೂರಿನ ಮುಖ್ಯ ಮಂತ್ರಿಗಳೂ ಮತ್ತು ಮಹಾರಾಷ್ಟ್ರ ಮುಖ್ಯ ಮಂತ್ರಿಗಳೂ ಅದರ ತೀರ್ಮಾನವನ್ನು ಸಂಪೂರ್ಣವಾಗಿ

ಪ್ರಧಾನಿಯವರ ತೀರ್ಮಾನಕ್ಕೆ ಒಪ್ಪಿಸಿದ್ದಾರೆಂಬುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಪ್ರಧಾನಿಯವರಿಗೆ ಈ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳೇನಾದರೂ ಹೇಳಿದ್ದಾರೆಯೋ ? ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೇನಾದರೂ ಪ್ರಧಾನಿಯವರನ್ನು ಕಂಡಿದ್ದರೇ ? ಮತ್ತು ನಮ್ಮ ಮುಖ್ಯ ಮಂತ್ರಿಗಳೂ ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೂ ಕರೆತು ಈ ವಿಚಾರದಲ್ಲಿ ಮತ್ತೆ ಮಾತುಕತೆಗಳನ್ನು ನಡೆಸಿದ್ದಾರೆಯೇ ? ಈ ಹಿಂದೆ ಇದೇ ವಿಚಾರವನ್ನು ಲೋಕಸಭೆಯಲ್ಲಿ ತರಲಾಗಿತ್ತು, ಅದರ ವಿಚಾರವೇನಾಯಿತು ಎಂಬುದನ್ನೆಲ್ಲಾ ಮುಖ್ಯ ಮಂತ್ರಿಗಳು ಈ ಸಭೆಗೆ ತಿಳಿಸುವುದು ಅಗತ್ಯವೆಂದು ನಾನು ಅವರನ್ನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇ ನರಸೀಪುರ).—ಈ ವಿಚಾರದಲ್ಲಿ ಈ ಹಿಂದೆ ಇದೇ ಸಭೆ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಆದರೆ ಈ ದಿವಸ ಮೈಸೂರಿನಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಹಾಗೂ ಕೇಂದ್ರದಲ್ಲಿ ಒಂದೇ ಪಕ್ಷ ಆಡಳಿತ ನಡೆಸುತ್ತಿದೆ. ಹಾಗಿದ್ದರೂ ಈ ವಿಚಾರವನ್ನು ಪ್ರಧಾನಿಯವರಿಗೇ ತೀರ್ಮಾನ ಮಾಡಲು ಬಿಟ್ಟುಕೊಡಲಾಗಿದೆ ಎಂದರೆ ಯಾವ ನಿಯಮಾವಳಿ ಪ್ರಕಾರ ಉಭಯತ್ರರೂ ಹೋಗಬೇಕು ಎಂಬುದರ ಬಗ್ಗೆ ಏನು ತೀರ್ಮಾನವಾಗಿದೆ ಎಂಬುದನ್ನು ಸಭೆಗೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ನಾನೂ ಕೂಡ ಇದೇ ವಿಚಾರದಲ್ಲಿ ಅಧ್ಯಕ್ಷರ ಕಛೇರಿಗೆ ಒಂದು ಪತ್ರವನ್ನು ಬರೆದು ಕಳುಹಿಸಿದ್ದೇನೆ. ನಾನೂ ಕೂಡ ಈ ದಿವಸದ ಪತ್ರಿಕೆಗಳಲ್ಲಿ ಆ ವರದಿಯನ್ನು ಓದಿದೆ. ಒಂದಾವರ್ತಿ ಈ ಗಡೀ ವಿಷಯವನ್ನು ಪಾರ್ಲಿಯಮೆಂಟಿನ ಮುಂದೆ ತರಲಾಗಿತ್ತು. We repose complete confidence in Paliament. We had no option.

Sri D. DEVARAJ URS.—We have no option.

ಶ್ರೀ ಎಸ್. ಬಂಗಾರಪ್ಪ.—ಈ ಒಂದು ವಿಷಯ ದೆಹಲಿ ಎಡಿಷನ್ ಪತ್ರಿಕೆಯ ವರದಿಯಲ್ಲಿ ಬಂದಿದೆ. ಇದೇ ವಿಷಯ ಬೆಂಗಳೂರು ಎಡಿಷನ್ನಿನಲ್ಲೂ ಬಂದಿದೆ. ಇದೇ ವಿಷಯದಲ್ಲಿ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳವರು ಪ್ರಧಾನಿಯವರ ಬಳಿ ಮಾತನಾಡತಕ್ಕವರಿದ್ದಾರೆಂದು ಅದರಲ್ಲಿ ವರದಿಯಾಗಿದೆ. ಆ ವಿಷಯ ಹಾಗೆ ಪಾರ್ಲಿಯಮೆಂಟಿನ ಮುಂದಿರುವಾಗ ಇವರೆಲ್ಲರೂ ಪ್ರಧಾನಿಯವರ ಹತ್ತಿರ ಹೋಗಿ ಮಾತನಾಡತಕ್ಕದ್ದರ ಔಚಿತ್ಯವಾದರೂ ಏನಿದೆ ? ಹಾಗೆ ನಮ್ಮ ಮುಖ್ಯ ಮಂತ್ರಿಗಳು ಆ ಪ್ರಧಾನಿಯವರಲ್ಲಿ ಈ ಬಗ್ಗೆ ಮಾತುಕತೆಗಳನ್ನಾಡಿದ್ದರಲ್ಲಿ ಈ ಗಡೀ ವ್ಯವಹಾರ ಸಂಪೂರ್ಣವಾಗಿ ಪಾರ್ಲಿಯಮೆಂಟಿನಲ್ಲೇ ತೀರ್ಮಾನವಾಗಲಿ ಎಂದು ಮಾತುಗಳನ್ನಾಡಿರುವರೇ ? ಅಥವಾ ಇದೇ ವಿಚಾರದಲ್ಲಿ ತಾವು ಮತ್ತು ಶ್ರೀ ವಿ. ಪಿ. ನಾಯಕರೂ ಸೇರಿ ಮಾತುಗಳನ್ನಾಡಿದ್ದೀರಾ ? ಅಥವಾ ತಾವೂ ಮತ್ತು ಶ್ರೀ ವಿ. ಪಿ. ನಾಯಕ್ ಅವರೂ ಇಬ್ಬರೂ ಸೇರಿ ಪ್ರಧಾನಿಯವರ ಬಳಿ ಹೋಗಿ ಮಾತುಕತೆಗಳನ್ನಾಡಿದ್ದೀರಾ ? ಈ ಎಲ್ಲಾ ವಿವರಗಳನ್ನೂ ಮಾನ್ಯ ಮುಖ್ಯ ಮಂತ್ರಿಗಳು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ್).—ತಾವು ಅಂದರೆ ಮೈಸೂರಿನ ಮುಖ್ಯಮಂತ್ರಿಗಳೂ ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೂ ಈ ಮೈಸೂರು–ಮಹಾರಾಷ್ಟ್ರಗಳ ಗಡೀ ವಿಚಾರದಲ್ಲಿ ಕಲೆತು ಮಾತುಕತೆಗಳನ್ನಾಡಿದರು ಎಂದು ನಾನು ಪತ್ರಿಕೆಗಳಲ್ಲಿ ನೋಡಿದೆ. ಅದೇ ರೀತಿ ನಮ್ಮ ಮುಖ್ಯ ಮಂತ್ರಿಗಳು ಕಾಸರಗೋಡಿನ ಬಗ್ಗೆ, ಅದು ನಮಗೆ ಬರತಕ್ಕ ವಿಚಾರದಲ್ಲಿ ಕೇರಳದ ಮುಖ್ಯ ಮಂತ್ರಿಗಳ ಜೊತೆ ಮಾತುಕತೆಗಳನ್ನಾಡಿದರೇ ಎಂಬುದನ್ನೂ ಕೂಡ ಸಭೆಗೆ ತಿಳಿಸದೇಕೆಂದು ಕೇಳಿಕೊಳ್ಳುತ್ತೇನೆ.

Sri B. B. SAYANAK.—The Mahajan Commission Report was placed before the Parliament and Parliament is supreme to solve this question. Is it a fact ?

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ಮೈಸೂರು-ಮಹಾರಾಷ್ಟ್ರ ಗಡೀ ವಿಚಾರದಲ್ಲಿ ಒಂದು ವರದಿಯನ್ನು ಅಥವಾ ತೀರ್ಪನ್ನು ಅಥವಾ ಅವಾರ್ಡ್‌ನ್ನು ಕೊಟ್ಟಿರತಕ್ಕವರು ಭಾರತದ ಉಚ್ಚನ್ಯಾಯಾಲಯದ ಒಬ್ಬ ಶ್ರೇಷ್ಠ ನ್ಯಾಯಾಧೀಶರು. ಹಾಗೆ ಅವರು ಕೊಟ್ಟು ತೀರ್ಮಾನ ಮಾಡಿರತಕ್ಕ ವಿಷಯವನ್ನು ನಾವು ಮತ್ತೆ ಚರ್ಚೆಗೆ ಇಟ್ಟುಕೊಂಡರೆ ಅದರಿಂದ ಮುಂದೆ ದೊಡ್ಡ ಘಾತುಕಗಳಾಗಬಹುದು. ಇದು ರಾಷ್ಟ್ರದ ನಡವಳಿಕೆಗೇ ತೀರಾ ವಿರುದ್ಧವಾಗಿದೆ. ಮೊದಲು ಈ ಒನ್ ಮ್ಯಾನ್ ಕಮಿಷನ್ ನೇಮಕ ಮಾಡುವುದಕ್ಕೆ ಒತ್ತಾಯ ಮಾಡಿದವರೂ ಮರಾಠೆಯವರೇ. ಹಿಂದೆ, ಪ್ರಧಾನ ಮಂತ್ರಿಗಳಾಗಿರತಕ್ಕ ಶ್ರೀಮತಿ ಇಂದಿರಾ ಗಾಂಧಿಯವರು ಬೊಂಬಾಯಿನ ಅಧಿವೇಶನಕ್ಕೆ ಅಲ್ಲಿಗೆ ಹೋಗಿದ್ದಾಗ ಅವರ ಮೇಲೆ ಅಲ್ಲಸಲ್ಲದ

(ಶ್ರೀ ಕೋಣಂದೂರು ಲಿಂಗಪ್ಪ)

ಒತ್ತಾಯಗಳನ್ನು ತಂದು, ಬಲವಂತದ ಪ್ರದರ್ಶನಗಳನ್ನು ಮಾಡಿ ಅದನ್ನು ಮಾಡಿದ್ದಾರೆ. ಉಗ್ರ ಪ್ರತಿಭಟನೆ ಮಾಡುತ್ತೇವೆ ಎಂದು ಹೇಳಿ ಒನ್ ಮ್ಯಾನ್ ಕಮಿಷನ್‌ನನ್ನು ಅಪಾಯಿಂಟ್ ಮಾಡಿಸಿದವರು ಮಹಾರಾಷ್ಟ್ರೀಯರೇ. ಅವರ ಅಪೇಕ್ಷೆಯಂತೆ, ಅವರ ಅಭಿಪ್ರಾಯವಂತೆ ಮಹಾಜನ್ ಕಮಿಷನ್ ನೇಮಕ ಆಯಿತು. ಅದರ ತೀರ್ಮಾನದ ಬಗ್ಗೆ ಮತ್ತೆ ಪ್ರಶ್ನೆ ಮಾಡುವುದಿಲ್ಲ, ಅದರ ತೀರ್ಮಾನವನ್ನು ಇಬ್ಬರೂ ಒಪ್ಪಿಕೊಳ್ಳಬೇಕೆಂದು ಎರಡು ರಾಜ್ಯಸರ್ಕಾರಗಳ ಮುಖ್ಯ ಮಂತ್ರಿಗಳೂ ತೀರ್ಮಾನ ಮಾಡಿದ್ದರು.

† ಶ್ರೀ ಡಿ. ದೇವರಾಜ ಅರಸ್.—ನಮ್ಮ ಪಾಟೀಲರು ಇದರ ಬಗ್ಗೆ ಬಹಳ ಎಮೋಷನಲ್ ಆಗಬೇಕಾದ ಅಗತ್ಯ ಇಲ್ಲ, ಭಾವನಾಪರವಶರು ಆಗಬೇಕಾದ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಭಾವನಾಪರವಶರಾಗಿ ಹೀಗೆ ಮಾಡಿದ್ದಾರೆಂದು ಹೇಳುವವರು, ಇದನ್ನು ಒಪ್ಪಿಕೊಂಡಿದ್ದಾರೆ. ಅದು ನಮಗೆ ಬರುವ ಕಷ್ಟ. ಇನ್ನು ಮೇಲಾದರೂ ನಾವು ವಿಪರೀತವಾಗಿ ಭಾವನಾಪರವಶರಾಗುವುದಕ್ಕೆ ಯಾವ ಕಾರಣವೂ ಇಲ್ಲ, ರ್‍ಯಾಷನಲ್ ಆಗಿ ಹೋಗೋಣ.

ಶ್ರೀ ಎಚ್. ಡಿ. ದೇವೇಗೌಡ.—ನೀವೂ ಒಪ್ಪಬೇಕಾಗುತ್ತದೆ. ಸಂದರ್ಭ ಅಷ್ಟೇ.

ಶ್ರೀ ಡಿ. ದೇರಾಜ್ ಅರಸ್.—ಯಾವುದಕ್ಕೆ ಒಪ್ಪಬೇಕು ?

ಶ್ರೀ ಎಚ್. ಡಿ. ದೇವೇಗೌಡ.—I do not want to unnecessarily intervene. ಆವೊತ್ತು ನಿಜಲಿಂಗಪ್ಪನವರು ಒಪ್ಪಿದರು. ಮಹಾರಾಷ್ಟ್ರದಲ್ಲಿಯೂ ಇಲ್ಲಿಯೂ ಮತ್ತು ಕೇಂದ್ರದಲ್ಲಿಯೂ ಒಂದೇ ಪಕ್ಷದ ಸರ್ಕಾರವಿತ್ತು. ಅದೇ ರೀತಿ ಸರ್ಕಾರ ಈವೊತ್ತು ಇದೆ. ನಿಮ್ಮನ್ನು ಪ್ರಧಾನಿಗಳು ಒಪ್ಪಿಸುತ್ತಾರೆ ಅಷ್ಟೆ.

Sri D. DEVARAJ URS.—If you assume then, why did you ask me ? What is the point in asking ?

ಶ್ರೀ ಎಸ್. ಬಂಗಾರಪ್ಪ.—ಪೊಲಿಟಿಕಲ್ ಆಗಿ ಇತ್ಯರ್ಥವಾಗಬಹುದು.

ಶ್ರೀ ಡಿ. ದೇವರಾಜ ಅರಸ್.—ಪೊಲಿಟಿಕಲ್ ಆಗಿ ಮಾತ್ರವಲ್ಲ, ಬೇರೆ ರೀತಿಯಲ್ಲೂ ಈ ಸಮಸ್ಯ ಇದೆ. ಇದನ್ನು ಬರೀ ಪೊಲಿಟಿಕಲ್ ಆಗಿ ನೋಡುವುದು ಬೇಡ. ಈ ವಿಚಾರದಲ್ಲಿ ನಾನು ಪ್ರಧಾನ ಮಂತ್ರಿಯವರಿಗೆ ಬಿಟ್ಟು ಕೊಟ್ಟಿದ್ದೇನೆಂದು, ನಾನು ಹಾಗೆ ಹೇಳಿದ್ದೇನೆಂದು ಅವರು ಹೇಳಿದ್ದಾರೆ. ಪತ್ರಿಕೆಯಲ್ಲಿ ಹಾಗೆ ಬಂದಿದ್ದರೆ ಅದು ಸರಿಯಲ್ಲ. ಮತ್ತೆ ನಾನು ಆಗಲೇ ಪತ್ರಿಕೆಯವರಿಗೆ ಹೇಳಿದಂಥ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಈ ಸಮಸ್ಯೆ ಪಾರ್ಲಿಮೆಂಟಿನ ಮುಂದೆ ಇದೆ. ಅದರ ಬಗ್ಗೆ ಏನೂ ಹೇಳುವುದಕ್ಕೆ ಬರುವುದಿಲ್ಲ ಎಂದು ಹೇಳಿದೆ. ಅದನ್ನು ತಾವು ಪತ್ರಿಕೆಯಲ್ಲಿ ಓದಿದ್ದರೆ, ಜ್ಞಾಪಿಸಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಶ್ರೀ ವಿ. ಪಿ. ನಾಯಕರನ್ನು ಸಂದರ್ಶನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಈ ವಿಚಾರದಲ್ಲಿ ಶ್ರೀ ವಿ. ಪಿ. ನಾಯಕರೂ ನಾನೂ ಭೇಟಿ ಆಗಬಹುದು. ಈ ವಿಚಾರ ಬಂದರೆ ಭೇಟಿ ಆಗುವುದಕ್ಕೆ ಅಭ್ಯಂತರವಿಲ್ಲವೆಂದು ಹೇಳಿದ್ದೇನೆ. ಯಾವಾಗಲೂ ಸಮಸ್ಯೆ ಬಗ್ಗೆ ಮಾತನಾಡುವುದಕ್ಕೆ ಹಿಂಜರಿಯಬೇಕಾದ ಅವಶ್ಯಕತೆ ಇಲ್ಲ ಎಂದು ಸ್ಪಷ್ಟವಾಗಿ ಆಗಲೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. ಭೇಟಿ ಮಾಡಬೇಕಾಗಿಲ್ಲ ಎನ್ನುವುದು ನನ್ನ ದೃಷ್ಟಿಯಲ್ಲಿ ಸರಿಯಾದ ವಾದವಲ್ಲ. ನಾನು ಹೋಗಿ ಭೇಟಿಯಾಗಿ ಮಾತನಾಡುತ್ತೇನೆಂದು ಹೇಳಿಲ್ಲ. ಭೇಟಿ ಆಗಬಹುದು. ಯಾವುದೇ ಕಾರಣದಿಂದ ವಿಚಾರ ಬಂದರೆ ಭೇಟಿ ಆಗುವುದು, ಸಮಸ್ಯೆ ವಿಚಾರ ಮಾಡುವುದು ಏನೂ ತಪ್ಪಲ್ಲ. ಮತ್ತೆ ಪಾರ್ಲಮೆಂಟ್ ಮುಂದೆ ವರದಿ ಇರತಕ್ಕದ್ದು ತಮಗೆಲ್ಲಾ ಗೊತ್ತಿದೆ. ಮಹಾಜನ್ ಕಮೀಷನ್ ವರದಿ ಕೆಲವರು ಅವಾರ್ಡ್ ಎಂದು ಹೇಳಿದರು, ಇನ್ನು ಕೆಲವರು ರಿಪೋರ್ಟ್ ಎಂದು ಹೇಳುತ್ತಾರೆ. ಇದರ ಬಗ್ಗೆ ಅಂತ್ಯ ತೀರ್ಮಾನ ಕೊಡತಕ್ಕ ಅಧಿಕಾರ ಸಂವಿಧಾನ ರೀತ್ಯ ಪಾರ್ಲಿಮೆಂಟಿಗೆ ಇದೆ. ಅದು ತಮಗೂ ಗೊತ್ತಿದೆ. ಈ ಕಾರಣದಿಂದ ಎಷ್ಟೇ ಎಕ್ಸರ್ಟ್ ಮಾಡಿದರೂ, ನಾವೇ ಮಾಡಿಲಿ, ಇನ್ನೊಬ್ಬರೇ ಮಾಡಲಿ, ನಮ್ಮ ಎಕ್ಸರ್ಷನಿಂದ ಕಾನ್‌ಸ್ಟಿಟ್ಯೂಷನ್‌ನ್ನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲ. ಅವರು ಏನು ತೀರ್ಮಾನವನ್ನು ಕೊಡುತ್ತಾರೆ ಎಂದು ಕಾದುನೋಡೋಣ ಎಂದು ಮೊದಲೇ ಹೇಳಿದ್ದೇನೆ. ಇದರ ಬಗ್ಗೆ ಮತ್ತೆ ಹೆಚ್ಚಿಗೆ ಬೇರೆ ಏನೂ ಹೇಳಲಿಲ್ಲ. ಈಗಲೂ ಹೇಳುವ ಸಂದರ್ಭ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಲೋಕ ಸಭೆಯಲ್ಲಿ ಗಡಿ ಬಗ್ಗೆ ಯಾವ ಯಾವ ಪ್ರಶ್ನೆ ಇದೆ, ಅದರ ಬಗ್ಗೆ ರಾಜಕೀಯ ಮಾಡುವುದು ಬೇಡ ಎಂದು ಹೇಳಿದಿರಿ. ಲೋಕಸಭೆಯನ್ನು ನಡೆಸತಕ್ಕ ಬಹುಮತ ಇರುವ ಪಕ್ಷಕ್ಕೂ ಮತ್ತು ಅಲ್ಲಿ ಇರತಕ್ಕ ಪ್ರಧಾನಿಯವರಿಗೂ ಮತ್ತು ಮೈಸೂರಿನ ಆಡಳಿತ ನಡೆಸತಕ್ಕ ತಮ್ಮ ಪಕ್ಷಕ್ಕೂ ಹತ್ತಿರ ಸಂಬಂಧ ಇರುವುದರಿಂದ ಇದು ಸಂತೋಷವಾದ ರೀತಿಯಲ್ಲಿ ತೀರ್ಮಾನವಾಗುತ್ತದೆ ಎಂದು ನಂಬಿಕೊಳ್ಳಹುದೇ ?

ಶ್ರೀ ಡಿ. ದೇವರಾಜ ಅರಸ್.—ಈಗ ಹೀಗೆ ಹೇಳುತ್ತೀರಿ. ಮತ್ತೊಂದು ಸಂದರ್ಭದಲ್ಲಿ ಪ್ರಧಾನಿಯವರಿಗೆ ಬಿಟ್ಟುಕೊಟ್ಟಿದ್ದೀರಿ. ಆದ್ದರಿಂದ ಮಹಾರಾಷ್ಟ್ರದ ಕಡೆ ಅವರು ವಾಲಬಹುದು ಎಂದು ಹೇಳುತ್ತೀರಿ.

ಶ್ರೀ ವಾಟಾಳ್ ನಾಗರಾಜ್.—ಪಾರ್ಲಿಮೆಂಟಿನಲ್ಲಿ ನಿಮಗೆ ಬಹುಮತ ಇರುವುದರಿಂದ ಪ್ರಧಾನಿಯವರ ಪಕ್ಷಕ್ಕೇ ತಾವು ಸೇರಿರುವುದರಿಂದ ಈ ಒಂದು ಪ್ರಶ್ನೆಯಲ್ಲಿ ನಮಗೆ ನ್ಯಾಯ ದೊರಕಬಹುದು ಎಂದು ನಂಬಿಕೊಳ್ಳಬಹುದೇ ?

ಶ್ರೀ ಡಿ. ದೇವರಾಜ ಅರಸ್.—ನಮ್ಮದು ಹೇಗೆ ಬಹುಮತ ಇದೆಯೋ ಅದೇ ರೀತಿ ಪಾರ್ಲಿಮೆಂಟಿನಲ್ಲಿ ಬಹುಮತ ಮಹಾರಾಷ್ಟ್ರದವರದೂ ಇದೆ.

ಶ್ರೀ ವಾಟಾಳ್ ನಾಗರಾಜ್.—ಹೆಚ್ಚಿನ ಬಹುಮತ ಮೈಸೂರಿಗಿದ್ದು 27ಕ್ಕೆ 27 ಜನರನ್ನು ಗೆಲ್ಲಿಸಿದ್ದೀರಿ, ತಾವು ಸರ್ಕಾರ ರಚಿಸಿದ್ದೀರಿ, ನಿಮ್ಮ ಮಾತಿಗೆ ಬೆಲೆ ಇದೆಯೆಂದು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್ (ಅರಣ್ಯ ಮತ್ತು ವ್ಯವಸಾಯ ಶಾಖೆಗಳ ಮಂತ್ರಿಗಳು).—ಈಗಾಗಲೇ ಈ ಸದನ ವಿಚಾರ ಮಾಡಿ ನಿರ್ಣಯಕ್ಕೆ ಬಂದಿರುತ್ತದೆ. ಪ್ರಧಾನಿಗಳ ಮೇಲೆ ವಿಶ್ವಾಸ ಇದೆ, ಅವರ ಮುಖಾಂತರ ಪಾರ್ಲಿಮೆಂಟಿನಲ್ಲಿ ವಿಶ್ವಾಸ ಇದೆ. ಪಾರ್ಲಿಮೆಂಟಿನಿಂದ ಮೈಸೂರಿಗೆ ನ್ಯಾಯ ದೊರಕುತ್ತದೆ ಎಂದು ನಮಗೆ ವಿಶ್ವಾಸವಿದೆ.

10-00 A.M.

ಶ್ರೀ ಡಿ. ದೇವರಾಜ ಅರಸ್.—ತಮಗೆ ಗೊತ್ತಿರುವ ಹಾಗೆ ಮೈಸೂರಿನ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ 27 ಜನಕ್ಕೆ 27 ಜನರನ್ನೂ ಜನತೆ ಓಟು ಕೊಟ್ಟು ಗೆಲ್ಲಿಸಿದ್ದಾರೆ. ಮಹಾರಾಷ್ಟ್ರದಲ್ಲಿ 44 ಕ್ಕೆ 42 ಜನರನ್ನೂ ಓಟು ಕೊಟ್ಟು ಗೆಲ್ಲಿಸಿದ್ದಾರೆ. ನಮಗೆ ನ್ಯಾಯ ದೊರಕುತ್ತದೆ ಅಥವಾ ದೊರಕುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಸ್ನೇಹಿತರು ಹೇಳಿದ ಹಾಗೆ ನೀವೂ ಕೂಡ ಪಾರ್ಲಿಮೆಂಟ್ ವಿಷಯದಲ್ಲಿ ಏನೂ ಹೇಳುವುದಕ್ಕಾಗುವುದಿಲ್ಲ. ಪಾರ್ಲಿಮೆಂಟಿನಲ್ಲಿ ವಿಶ್ವಾಸ ಇರಲೇಬೇಕಾಗುತ್ತದೆ. ಪ್ರಧಾನ ಮಂತ್ರಿಯವರೂ ಕೂಡ ನಮ್ಮ ಮೇಲೆ ಬಹಳ ಅಭಿಮಾನ ಇಟ್ಟುಕೊಂಡಿದ್ದಾರೆ. ಹಾಗಿರುವಾಗ ನಮಗೆ ಅನ್ಯಾಯ ಮಾಡುವುದಿಲ್ಲ ಎಂದು ನಂಬಿಕೆ ಇಟ್ಟುಕೊಂಡಿದ್ದರೆ ಅದರಲ್ಲಿ ತಪ್ಪೇನಿಲ್ಲ. ಆದರೆ ಇನ್ನೊಬ್ಬರ ಮೇಲೆ ಅಭಿಮಾನ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ಸಮಸ್ಯೆಯನ್ನು ನಮಗೆ ಅನ್ಯಾಯವಾಗದ ರೀತಿಯಲ್ಲಿ ನೋಡಬೇಕು ಎಂದು ಹಿಂದಿನಿಂದಲೂ ಹೇಳಿಕೊಂಡು ಬಂದಿದ್ದೇವೆ. ಈಗಲೂ ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಈ ಗಡಿ ವಿವಾದದ ಸಮಿತಿಯಲ್ಲಿ ಅದರ ಛೇರ್ಮನ್ ಯಾರಾದರೂ ಇರಲಿ, ಅದರ ಬಗ್ಗೆ ಕಮಿಟಿ ಇರುವುದು ಆವಶ್ಯಕ. ನಾಳೆ ದಿವಸ ಪಾರ್ಲಿಮೆಂಟ್‌ನಲ್ಲಿ ಈ ಗಡಿ ವಿವಾದದ ಚರ್ಚೆ ಬಂದಾಗ ಅನೇಕ ಅಂಶಗಳನ್ನು ಒದಗಿಸಬೇಕಾಗುತ್ತದೆ. ಆದ್ದರಿಂದ ಅಧ್ಯಕ್ಷರನ್ನು ಬೇಕಾದರೆ ಬದಲಾಯಿಸಿ ಈ ಸಮಿತಿ ಇರುವುದು ಅವಶ್ಯಕ ಎಂದು ನನ್ನ ಅಭಿಪ್ರಾಯ.

ಶ್ರೀ ಡಿ. ದೇವರಾಜ ಅರಸ್.—ಅದು ತಮ್ಮ ಅಭಿಪ್ರಾಯ ಇರಬಹುದು, ಅದಕ್ಕೆ ನನ್ನ ತಕರಾರು ಏನೂ ಇಲ್ಲ. ಆ ಸಮಿತಿಯಿಂದ ಕೆಲವು ವರದಿಗಳು ಬಂದಿವೆ, ಅವರು ಏನೂ ಕೆಲಸ ಮಾಡಿಲ್ಲ ಅಂತ ಅಲ್ಲ. ಇನ್ನು ಮುಂದೆ ಅದರ ಅಗತ್ಯವಿಲ್ಲ. ಪಾರ್ಲಿಮೆಂಟ್ ಸದಸ್ಯರಿಗೆ ಏನು ಸಾಹಿತ್ಯ ಒದಗಿಸಬೇಕು, ಏನು ಬ್ರೀಫಿಂಗ್ ಒದಗಿಸಬೇಕು ಎನ್ನುವುದರ ಬಗ್ಗೆ ಹಿಂದೆ ಒಂದು ಸಾರಿ ಅನೇಕ ಸದಸ್ಯರು ದೆಹಲಿಗೆ ಹೋಗಿದ್ದಾಗ ಈ ಸಮಿತಿಯವರು ಒದಗಿಸಿದ್ದರು. ಮತ್ತೊಮ್ಮೆ ಅಂತಹ ಸಂದರ್ಭ ಬಿದ್ದಾಗ ಅಧಿಕಾರಿಗಳ ಮುಖೇನ ಒದಗಿಸೋಣ. ಅಂತಹ ಸಮಯ ಬಂದಾಗ ಮಾನ್ಯ ಸದಸ್ಯರನ್ನು ಕೆಲವರನ್ನು ಕಳುಹಿಸಿಸೋಣ. ಈ ಎರಡು ರೀತಿಯ ಕೆಲಸವನ್ನೂ ಮಾಡೋಣ.

ಶ್ರೀ ವಾಟಾಳ್ ನಾಗರಾಜ್.—ಶ್ರೀಮಾನ್ ಶಿವಪ್ಪನವರ ನಾಯಕತ್ವದಲ್ಲಿ ನಾವು ದೆಹಲಿಗೆ ಹೋದಾಗ ಲೋಕಸಭಾ ಸದಸ್ಯರನ್ನು ಕಂಡು ಮೈಸೂರಿನ ಕೇಸಿನ ಪರಿಣಾಮವನ್ನು ಹೇಳಿದೆವು. ಮಹಾರಾಷ್ಟ್ರ ಎಂ. ಎಲ್. ಎ. ಗಳು ಗುಂಪು ಕಟ್ಟಿಕೊಂಡು ಹೋಗಿ ಪ್ರತಿಯೊಂದು ವಿವರವನ್ನೂ ಒದಗಿಸಿದ್ದರು. ಮೈಸೂರು ಸರ್ಕಾರದ ಕೇಸು ಏನು ಎಂದು ಅಲ್ಲಿ ಹೇಳುವವರು ಯಾರು ಇರಲಿಲ್ಲ. ನಾವು ಅದಕ್ಕೆ ಸಂಬಂಧಪಟ್ಟ ವಿವರಗಳನ್ನು ಕೊಟ್ಟಮೇಲೆ ಮೈಸೂರಿನ ಕೇಸು ಏನು ಎನ್ನುವುದು ಆಗ ಅವರಿಗೆ ಅರ್ಥವಾಯಿತು.

ಶ್ರೀ ಡಿ. ದೇವರಾಜ ಅರಸ್.—I am glad you said it. ಅಂದಮೇಲೆ ಮೈಸೂರು ಸರ್ಕಾರದ ಕೇಸನ್ನು ಹೇಳುವವರು ಯಾರೂ ಇರಲಿಲ್ಲ. ಆ ಸಮಿತಿಯಿಂದ ಏನೂ ಕೆಲಸವಾಗಿರಲಿಲ್ಲ. ಎಂದು ಅರ್ಥವಾಯಿತಲ್ಲ.

ಶ್ರೀ ವಾಟಾಳ್ ನಾಗರಾಜ್.—ಮೈಸೂರು ಸರ್ಕಾರದ ವಾರ್ತಾ ಇಲಾಖೆ ಇದೆ, ಆ ವಿಚಾರ ಹೇಳುತ್ತಿದ್ದೇನೆ. ನಾನು ಸಮಿತಿ ಬಗ್ಗೆ ಆರೋಪಣೆ ಮಾಡಲಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಏನು ಒಂದು ಲೋಪ ಇತ್ತು ಎಂದು ಕಂಡುಬಂದಿದೆಯೋ ಆ ಲೋಪ ಇಲ್ಲದಹಾಗೆ ಮಾಡೋಣ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಶ್ರೀಮತಿ ಇಂದಿರಾ ಗಾಂಧಿಯವರು ಬಾಂಗ್ಲಾ ಸಮಸ್ಯೆಯನ್ನು ಕಷ್ಟಪಟ್ಟು ಸುಲಭವಾಗಿ ಬಗೆಹರಿಸಿದ್ದಾರೆ. ಆದರೆ ಈ ಸಮಸ್ಯೆಯನ್ನು ಈವರೆಗೆ ಏತಕ್ಕೆ ಬಗೆಹರಿಸಲಿಲ್ಲ ? ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

(ಉತ್ತರವಿಲ್ಲ)

## Collection of loan arrears

ಶ್ರೀ ಹೆಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಹೊರಗಡೆ ಒಂದು ಹೇಳಿಕೆಯನ್ನು ಕೊಟ್ಟಿರುವುದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಅದು ಏನೆಂದರೆ ಚಿತ್ರದುರ್ಗ ಸಹಕಾರ ಸಂಘಗಳ ಸಾಲ ಮತ್ತು ಸರ್ಕಾರಿ ಸಾಲಗಳನ್ನು ಕೊಡುವುದಕ್ಕೆ ಶಕ್ತಿ ಇಲ್ಲದೇ ಇರುವ ಜನಕ್ಕೆ ಮಾಫಿ ಮಾಡುವುದರ ಬಗ್ಗೆ ಲಿಸ್ಟ್ ಒಂದನ್ನು ತಯಾರಿಸಲು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಈಗ ನಮಗೆ ಅನಿಸುತ್ತದೆ. ಈ ಸಭೆ ಮುಗಿದ ತಕ್ಷಣ, ನಾವು ನಮ್ಮ ಊರುಗಳಿಗೆ ಹೋದ ತಕ್ಷಣ ಸಹಕಾರ ಸಂಘಗಳಿಂದ ಸಾಲ ಪಡೆದ ಜನ ನಾವೂ ಬಡವರೇ, ಲಿಸ್ಟ್‌ಗೆ ನಮ್ಮ ಹೆಸರೂ ಸೇರಿಸಿ, ನಮಗೆ ಕೊಡುವುದಕ್ಕೆ ಶಕ್ತಿ ಇಲ್ಲ ಎಂದು ಕೇಳುತ್ತಾರೆ. ನೀವು ಯಾವ ಆಧಾರದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೀರಿ ? ಇದು ಸರ್ಕಾರದ ನೀತಿಯೇ ! ಈ ಸದನ ನಡೆಯುತ್ತಾ ಇರುವಾಗ ಹೊರಗಡೆ ಹೋಗಿ ಹೀಗೆ ಹೇಳುತ್ತೀರಿ. ನಾವು ಜನಕ್ಕೆ ಏನು ಹೇಳಬೇಕು ! ರಾಜ್ಯದಲ್ಲಿ ಡಿಸ್ಟ್ರಿಕ್ಟ್ ಕೋ-ಆಪರೇಟೀವ್ ಸೆಂಟ್ರಲ್ ಬ್ಯಾಂಕ್, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಅನೇಕ ಸಹಕಾರ ಸಂಘಗಳು ಇವೆ. ಅನೇಕ ಸಹಕಾರ ಸಂಘಗಳ ಸಾಲ ಮತ್ತು ಸರ್ಕಾರಿ ಸಾಲ ಇವುಗಳ ಬಗ್ಗೆ ರೆಮಿಷನ್ ಕೊಡುವುದಕ್ಕೆ ಏನು ಹಕ್ಕು ಇದೆ ? ಯಾವರೀತಿ ಮಾಡುತ್ತೀರಿ ! ಇದರ ಬಗ್ಗೆ ಒಂದು ವಿವರಣೆಯನ್ನು ಕೊಡಬೇಕು ಎಂದು ನಾನು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಯಾವ ಪತ್ರಿಕೆಯಲ್ಲಿ ಬಂದಿದೆಯೋ ನನಗೆ ಗೊತ್ತಿಲ್ಲ. ಮಾಫಿ ಮಾಡುತ್ತೇವೆ ಎಂದು ಹೇಳಲಿಲ್ಲ. ಯಾರೇ ಆಗಲಿ ಮಾಫಿ ಮಾಡುವುದಕ್ಕಾಗುವುದಿಲ್ಲ. ಕೆಲವು ಕೇಸು ಕಾನೂನು ರೀತ್ಯ ಮಾಡುವುದಕ್ಕೆ ಸಾಧ್ಯ ಇರುವುದೂ ಇದೆ. ಸಾಲ ತೆಗೆದುಕೊಂಡು ವಾಪಸು ಕೊಡಬೇಕಾಗಿರುವಂಥಾವರು ಯಾರು ಯಾರು ಕೊಡಬೇಕೋ, ಹಾಗೆ ಕೊಡತಕ್ಕಂಥಾವರಲ್ಲಿ ಕೆಲವರು ನಿರ್ಗತಿಕರಾಗಿದ್ದಾರೆ. ಜಮೀನು ತೆಗೆದುಕೊಂಡು 3-4 ವರ್ಷವಾದರೂ ಮಳೆ ಬೆಳೆ ಇಲ್ಲದೇ ಪರಿತ ಸುತ್ತಾ ಏನೂ ಬೆಳೆ ಬೆಳೆಯದೇ ಸಾಲ ಕೊಡದೇ ಇರುವವರು ಇದ್ದಾರೆ, ಇವರು ಒಂದು ವರ್ಗ. ಎರಡನೇ ವರ್ಗ ತೋಟ ಮತ್ತು ಗದ್ದೆ ಇವೆಲ್ಲಾ ಇದ್ದು ಈ ಸಾಲವನ್ನೂ ಕೂಡ ಉಪಯೋಗಿಸಿಕೊಂಡಿದ್ದಾರೆ. ಅವರು ಸಾಲವನ್ನು ಹಿಂದಕ್ಕೆ ಕೊಟ್ಟಿಲ್ಲ. ನಿಜವಾಗಿಯೂ ಸಾಲವನ್ನು ಕೊಡುವುದಕ್ಕೆ ಅರ್ಹತೆ ಇಲ್ಲದೇ ಇರುವವರು ಯಾರು ಇದ್ದಾರೆ ಅವರ ಪಟ್ಟಿಯನ್ನು ಮಾಡಿ ಎನ್ನುವುದನ್ನು ಹೇಳಿದನೇ ಹೊರತು ಬಿಟ್ಟುಬಿಡುತ್ತೇವೆಂದು ಹೇಳಲಿಲ್ಲ.

ಕೋ-ಆಪರೇಟೀವ್ ಸೊಸೈಟಿಯನ್ನು ಬಿಟ್ಟು ನಮಗೆ ಲ್ಯಾಂಡ್ ರೆವಿನ್ಯೂ ಮತ್ತು ನೀರಾವರಿಯಿಂದ ಬರತಕ್ಕದ್ದೂ ಸೇರಿಕೊಂಡು 200 ಕೋಟಿ ಚಿಲ್ಲರೆ ರೂಪಾಯಿ ಬರಬೇಕಾದ ಹಣಕ್ಕೆ ಒಂದು ಕಡೆ 70 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಓವರ್‌ಡ್ರಾಫ್ಟ್ ಕೊಡಬೇಕಾಗಿರುವುದರಿಂದ ಈ ಪರಿಸ್ಥಿತಿಯಲ್ಲಿ ನನಗೆ ಕಂಡುಬಂದ ವಿಚಾರ ಏನೆಂದರೆ ಯಾರಿಗೆ ಸಾಲ ವಾಪಸ್ಸು ಕೊಡುವುದಕ್ಕೆ ಶಕ್ತಿ ಇದೆ ಅಂಥಾವರು ಅನೇಕ ಕಾರಣಗಳಿಂದ ಕೊಡದೇ ಹಾಗೆಯೇ ಬಿಟ್ಟುಕೊಂಡು ಬಂದಿದ್ದಾರೆ. ಅವರಿಗೆ ಸರ್ಕಾರದ ಯಾವುದೇ ಕಾನೂನು ಅನ್ವಯಿಸಿದ ಹಾಗೆ ಇಲ್ಲ. ಅಧಿಕಾರಿಗಳು ಆ ಜನರನ್ನು ಒತ್ತಾಯಪಡಿಸದೇ ಹಾಗೆಯೇ ಬಿಟ್ಟುಕೊಂಡು ಬಂದಿದ್ದಾರೆ ಎನ್ನುವ ನಿದರ್ಶನ ಇದೆ. ಅಂತಹ ಜನರ ಮೇಲೆ, ಶಕ್ತಿ ಇದ್ದು ಕೊಡದಿರುವವರ ಮೇಲೆ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನೂ ತೆಗೆದು ಕೊಂಡು ವಸೂಲ್ಮಾಡಬೇಕು ಎನ್ನುವ ಕಾರಣದಿಂದ ಹೇಳಿದ್ದೇನೆ. ಬಹುಶಃ ಈ ಮಾನ್ಯ ಸಭೆ ಅದನ್ನು ಒಪ್ಪಬಹುದು. ಈ ನಂಬಿಕೆಯಿಂದ ಈ ಒಂದು ಮಾತನ್ನು ಆಗಲೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ.

ಶ್ರೀ ಹೆಚ್. ಎಸ್. ಸಿದ್ದಪ್ಪ.—ತಾವು ಹೇಳಿದ ಹಾಗೆ ಕೊಡುವುದಕ್ಕೆ ಶಕ್ತಿ ಇದ್ದು, ಚೈತನ್ಯ ಇದ್ದರೂ ಕೂಡ ಇದುವರೆಗೆ ಬಿಟ್ಟುಕೊಂಡು ಬಂದಿದ್ದಾರಲ್ಲಾ, ಆ ಅಧಿಕಾರಿಗಳಿಂದಲೇ ಈ ಅರಿಯರ್ಸ್ ಲಿಸ್ಟನ್ನು ತಯಾರು ಮಾಡಿಸುತ್ತೀರಾ ! ಅಥವಾ ಬೇರೆ ಯಾವ ರೀತಿಯಿಂದ ಅರಿಯರ್ಸ್ ಲಿಸ್ಟನ್ನು ತಯಾರು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದಕ್ಕೆ ಎಲ್ಲರ ಸಹಕಾರವೂ ಬೇಕು, ಅಧಿಕಾರಿಗಳ ಸಹಕಾರ ಮಾತ್ರವಲ್ಲ, ಮಾನ್ಯ ಸದಸ್ಯರೂ ಇದಕ್ಕೆ ಸಹಾಯಮಾಡಬಹುದು. ಖಾಸಗಿ ಜನರೂ ಸಹ ವಿಚಾರ ತಿಳಿಸಬಹುದು. ಈ ವಿಚಾರ ತಿಳಿಯುವುದಕ್ಕೆ ಬರೀ ಅಧಿಕಾರಿಗಳು ಬೇಡ, ಖಾಸಗಿಯಾಗಿಯೂ ವಿಚಾರ ತಿಳಿಯುವುದಕ್ಕೆ ಸರ್ವ ಪ್ರಯತ್ನ ಸರಕ ರ ಮಾಡುವುದು. ಯಾರು ಸಾಲ ಕೊಡುವುದಕ್ಕೆ ಅರ್ಹರು, ಯಾರು ಅರ್ಹರಲ್ಲ ಎಂಬುದನ್ನು ತಿಳಿದುಕೊಳ್ಳಲಾಗುವುದು.

ಶ್ರೀ ಎಚ್. ಎಸ್. ಸಿದ್ದಪ್ಪ.—ಆಡಳಿತ ಮಂಡಲ ಅಭಿಪ್ರಾಯವನ್ನು ಸಹ ಪಡೆಯಬೇಕು.

## CALLING ATTENTION TO A MATTER OF URGENT PUBLIC IMPORTANCE

### *re* : Lockout at the Amalgamated Electricity Company, Belgaum

SRI B. B. SAYANAK (Belgaum).—I call the attention of the Minister for Labour to the lockout in the Amalgamated Electricity Company, Belgaum.

SRI AZEEZ SAIT (Minister for Labour).—Madam, the management of Amalgamated Electricity Company, Belgaum have declared illegal lockout from 25th March 1971, the lockout is still continuing even though prohibitory order under section 10, Clause 3 of Industrial Disputes Act and prosecution of management under section 26 (2) thereof have been issued. Over 100 employees who peacefully gheraoed company's officials to-day on the occassion of the anniversary of a illegal lockout demanded lifting of lockout. These employees have been arrested.

The Amalgamated Electricity Company Ltd., Belgaum is one of the 9 licensees in the State which have been granted licenses under section 3 of the Indian Electricity Supply Act, 1910 for distribution and supply of power in the repective licensed areas.

The management of Amalgamated Electricity Co., Ltd., Belgaum alleged on 25th March 1971 that the workmen had, suddenly, gone on

(SRI AZEEZ SAIT)

strike at 8 A.M. on that day, the reasons it was ascertained, being the dismissal of 7 workmen from service for misconduct and for imposing conditions calling on the workmen to give an undertaking that they would restore the workloads which were attended to by workmen before July 1970.

It is reported that the trouble actually started when the workmen started working to rule from 6th July 1970 which was resented to by the management. The management had requested for declaring the Electricity Company as an essential service. The question involved was of work load to be attended to by the workmen. After examination of the request in all its aspects, it was negatived.

The question of workload, which was pending settlement had culminated in a dispute. The management had adopted the stand that unless workload of pre July 1970 were restored by the workmen they would not be in a position to carry on the work of the establishment. After examination of the matter, the Government referred the dispute to the Industrial Tribunal for adjudication (*vide* their order No. FCL 341 LLD 71 dated 11th May 1971). The issues were as follows :—

I (a) Are the management of Amalgamated Electricity Co., Ltd., Belgaum Branch, Belgaum, justified in locking out their workmen from 25th March 1971 ?

(b) Is the lockout declared by the said management legal ?

(c) If not, to what relief are the said workmen entitled ?

II (a) Are the management justified in demanding that the workmen at various levels should undertake to execute workload as it existed prior to May 1970 ?

(b) If not, what should be the workload the various categories of workmen employed by the company should execute.

After the issue of orders making a reference, Government were satisfied that the management refused to take the workmen for employment and that a lockout had continued. The lockout was prohibited under section 10(3) of the Industrial Disputes Act with effect from 10th June 1971. Notwithstanding the prohibitory order the workers were not taken back to duty and lockout was not lifted. Hence, Government took action to authorise prosecution of the management on 23rd July 1971.

The complaint of contravention by the management of the provisions under section 26 (2) of the Industrial Disputes Act for not lifting the lockout was filed on 10th August 1971, in the Court of Judicial First Class Magistrate, Cantonment, Belgaum. It is reported that the management have obtained a stay order from the High Court of Mysore staying the proceeding in this above case.

It is reported that 64 employees have so far been taken to duty, and about 34 workmen in the undertaking have not been allowed to resume duty.

On 31st March 1972 about 54 employees of the establishment are reported to have staged a demonstration before the company. On 23rd March 1972, these employees were arrested, as reported, by the Police on charges of trespass into the chambers of the Resident Engineer. Again on 25th March 1972 the workers are alleged to have gheraoed the Resident Engineer, but due to intervention of the police, no untoward incidence took place. There was also another peaceful demonstration on 27th March 1972.

The situation at present is reported to be peaceful. It may be relevant to state here that the licence granted to the Amalgamated Electricity Company will expire on 10th May 1972. In pursuance of the provisions of Section 6 of the Indian Electricity Supply Act 1910, the Mysore State Electricity Board had exercised its option to purchase the undertaking after expiry of the license period and necessary notice has been issued to the undertaking with the approval of Government. The licensee has, however, challenged the notice issued by the Mysore State Electricity Board and the provisions of the Electricity Act, 1910, under which the notice is issued, in the High Court by a writ petition. The High Court has issued an interim stay order. Action is being taken to move for vacation of the stay order and for early disposal of the case.

No serious disruption of the supply of power to the consumers of Belgaum is reported now.

Sri B. B. SAYANAK.—The Minister was pleased to state that there was no disruption of the supply of power. It is incorrect because there are many interruptions of supply to the industries and people are suffering. I want to know from the Government why the workers have resorted to work to rule in Bangalore and what is the reason ?

Sri AZEEZ SAIT.—I said there is no disruption of power supply. If the members have got definite instances where there is disruption, I will look into the matter and take necessary action. As to why the workers have resorted to work to rule. I have already stated that the management wanted the workmen to give an undertaking that they would restore the workloads which were attended to by the workmen. It was also one of the causes of disharmony between management and labour.

Sri B.B. SAYANAK.—May I ask the Government why they have not insisted on the management to accept the National Industrial Tribunal's award which is the root cause for the workers resorting to work to rule ?

Sri AZEEZ SAIT.—The matter is pending before the High Court. I cannot go into the details.

Sri B.B. SAYANAK.—There is the National Industrial Tribunal's Award. That award is not respected by the management and so the workers have resorted to work to rule. Has this fact come to the notice of the Government.

Sri AZEEZ SAIT.—We have said that the management has not respected rules and law and therfore the matter ended in failure. The department has referred it to the Industrial Tribunal.

Sri B. B. SAYANAK.—May I know whether the Government is going to force the management to accept the award of the National Tribunal ?

Sri AZEEZ SAIT.—We have to do everything according to rules.

Sri M. S. KRISHNAN.—The management has not cared for any-body either the Government or the workers. The Government has also tried to take it over under the Indian Electricity Supply Act. 1910 ; but the management has challenged the same in the court of law. In view of this does it not lie within your powers to immediately withdraw all the concessions that are given to this Company by the Government?

Sri AZEEZ SAIT.—The Government is at it and has ordered for prosecution. We wanted to take it over also. Both the prosecution and take-over of the Company has been challenged by the Management in a criminal revision petition and an iterim stay has been obtained. We are trying our best to see that all the stays are vacated and the moment we get the matter to our grip we will certainly show to the company that the Government can competently deal with them.

Sri M. S. KRISHNAN.—Sir, the management wants to prolong the matters for years together and allow the workers to starve and also defeat the Government in its action. Even now such a company is being given several concessions. I would like to know whether you would stop forthwith all concessions given to the company ?

Sri AZEEZ SAIT.—After due examination if there are still any concessions given to this company, after all these happenings, we will certainly examine what best we could do. Secondly; the term of the lease is also going to expire on a particular date. We will examine as to how best we could solve this problem also.

Sri B. B. SAYANAK.—When there was an emergency the management employed 64 workers. But they have refused to allow about 34 workmen to resume their duties. Why is it so ? Is it not because the Government did not take any drastic action ?

Sri AZEEZ SAIT.—I am not prepared to pocket whatever the Hon'ble member says. Government made several attempts in the matter. Government is very alert and alive to the problem. If the Government had not taken any action I don't think the Hon'ble member would have brought up this call attention notice and also there would not have been any discipline in the company.

Sri M. S. KRISHNAN.—In view of the fact that the management did not allow about 34 workers to resume their duties, will the Hon'ble Minister be pleased to convene a meeting of the management and the employees union to discuss the matter straightaway; and will you please find out alternative employment to these people ?

Sri AZEEZ SAIT.—Regarding providing alternative employment to these employees I cannot assure the Hon'ble member. As regards convening of a joint meeting of the management and employees union, I will use all my good offices and will not allow anything left undone, in the matter-

Sri P. A. PAVASHE.—Why the Government is not authorising the workers union to prosecute the management ?

Sri AZEEZ SAIT.—We have already prosecuted the management.

Sri B. B. SAYANAK.—When the management has declared all illegal lockout and when they are continuously committing offenses, why Government is not authorising the Workers' Union to prosecute the management ?

Sri AZEEZ SAIT.—I will just examine it if there is any such request made from the Workers' Union.

Sri M. S. KRISHNAN.—Will the Government be pleased to assure that the police protection given at present to the company which is violating the rules will be withdrawn forthwith ?

Sri AZEEZ SAIT.—I would like to make it very clear that the police has to be there for maintenance of law and order but not in the way in which the police is reported to have got into the office rooms, bed rooms etc. It is a matter of policy and I would like to take up this matter with the Hon. Chief Minister who is incharge of Home affairs and I will see that as far as protection and maintenance of law and order is concerned there is some limitations, in the interest of workers and the management. Since it is a matter of policy I have to discuss it at great length and examine it.

Sri B. B. SAYANAK.—During the period of illegal lockout declared by the management *i.e.*, for one year, there were two police vans patrolling in the company. What was the necessity for this, Sir ?

Sri AZEEZ SAIT.—That question I cannot answer because I was not here during that period.

MADAM SPEAKER.—Next item, papers to be laid on the Table of the House.

## Papers Laid on the Table

Sri K. H. PATIL (Minister for Agriculture and Forests) [On behalf of Sri N. HUTCHAMASTHY GOWDA (Minister for Revenue)].—I beg to lay :

Notification No. S.O. 196 dated 27th December 1971 Regarding Remission of Land Revenue in Chikodi Taluk, Belgaum District for the revenue year 1967-68; as required under Section 194(2) of the Mysore Land Revenue Act, 1964.

Sri M. Y. GHORPADE (Minister for Finance).—I beg to lay :

Notification No. S.O. 99 dated 5th January 1972 *re* : reducing the Sales Tax on Shrimps; as required under Section 39 of the Mysore Sales Tax Act, 1957.

MADAM SPEAKER.—The Papers are laid on the table.

Mr. SECRETARY.—I beg to lay on the table of the house First list of Unstarred Questions and Answers.

## UNSTARRED QUESTIONS AND ANSWERS

### Breach of Peace during General Elections

2. Sri M. B. RAMASWAMY (Anekal).—

Will the Chief Minister be pleased to state :—

(*a*) names of the Assembly Constituencies in the State where assaults have taken place or breach of peace occurred at Polling Booths in the recent General Elections to the Mysore Assembly ;

(*b*) names of the constituencies in respect of which cases have been booked by the police for such occurrences ?

Sri D. DEVARAJ URS (Chief Minister).—

(*a*) Nil.

(*b*) Does not arise in view of reply to clause (*a*) above.

### Places of Tourist Interest in Ramanagaram Sub-Division

6. Sri S. KARIAPPA (Kanakapura).—

Will the Minister for Labour be pleased to state :—

(*a*) the names of Places in Ramanagaram Sub-Division which have been considered and listed as places of tourist's interest ;

(*b*) whether Devarabetta, which is considered to be a poor-man's Ooty and Chunchi in Kanakapura Taluk have been included in the list ;

(*c*) the progress of work of improvements done in the selected places and the amount of expenditure incurred thereon ?

Sri AZEEZ SAIT (Minister for Labour).—

(*a*) Kanva Reservoir and Mekedatu as picnic spots.

(*b*) Not included.

(*c*) No schemes have yet been taken up.

## General Hospital at Taluk Headquarters

7. Sri S. KARIAPPA (Kanakapura).—

Will the Minister for Health be pleased to state :—

(*a*) the names of Taluk Headquarters in the State where requests for sanction of General Hospitals have been made ;

(*b*) the population of each such towns and Taluk Headquarters ;

(*c*) the conditions required to be fulfilled for sanctioning of a General Hospital ;

(*d*) the names of places where the conditions are not strictly adhered to ;

(*e*) the names of places where the General Hospitals are in the process of being sanctioned ?

Sri H. SIDDAVEERAPPA (Minister for Health).—

*Vide* Statement 'A' appended.

*Vide* Statement 'B' appended.

*Vide* Statement 'C' appended.

*Vide* Statement 'D' appended.

*Vide* Statement 'E' appended.

(SRI H. SIDDAVEERAPPA)

## STATEMENT 'A'

List of Names of Taluk headquarters in the State where requests for sanction of General Hospitals have been made.

1. Channapatna
2. Kanakapura
3. Nelamangala
4. Ramanagaram
5. Devanahalli
6. Anekal
7. Chikkaballapur
8. Chinthamani
9. Gowribidanur
10. Bagepally
11. Channarayapatna
12. Belur
13. Hunsur
14. Chamarajanagar
15. Gundlupet
16. Malavalli
17. Nagamangala
18. K. R. Pet
19. Madhugiri
20. Pavagada
21. Sira
22. Turuvekere
23. Gubbi
24. Tarikere
25. Mudigere
26. Koppa
27. Sringeri
28. Narasimharajapura
29. Hiriyur
30. Hosadurga
31. Harihar
32. Challakere
33. Lingasugur
34. Channagiri
35. Shikaripur
36. Hosanagara
37. Yadgir
38. Athani
39. Chithapur
40. Alland
41. Bhalki
42. Basavanbagewadi.

---

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY

## STATEMENT 'B'

The Population of each of such towns and Taluk Headquarters.

| | | Population | | | Population |
|---|---|---|---|---|---|
| 1. | Channapatna | 32,597 | 22. | Turuvekere | 6,537 |
| 2. | Kanakapura | 20,257 | 23. | Gubbi | 9,541 |
| 3. | Nelamangala | 8,784 | 24. | Tarikere | 20,018 |
| 4. | Ramanagaram | 31,444 | 25. | Mudigere | 4,981 |
| 5. | Devanahalli | 11,976 | 26. | Koppa | 4,242 |
| 6. | Anekal | 12,627 | 27. | Sringeri | 3,746 |
| 7. | Chikkaballapur | 29,280 | 28. | Narasimharajapura | 5,915 |
| 8. | Chinthamani | 26,712 | 29. | Hiriyur | 17,363 |
| 9. | Gowribidanur | 12,827 | 30. | Hosadurga | 8,753 |
| 10. | Bagepally | 5,401 | 31. | Harihara | 33,896 |
| 11. | Channarayapatna | 10,294 | 32. | Challakere | 16,916 |
| 12. | Belur | 10,490 | 33. | Lingasugur | 12,328 |
| 13. | Hunsur | 19,993 | 34. | Chennagiri | 9,659 |
| 14. | Chamarajanagar | 31,070 | 35. | Shikaripur | 17,059 |
| 15. | Gundlupet | 14,739 | 36. | Hosanagara | 3,840 |
| 16. | Malavalli | 18,983 | 37. | Yadgir | 32,760 |
| 17. | Nagamangde | 8,615 | 38. | Athani | 24,354 |
| 18. | K. R. Pet | 9,636 | 39. | Chithapur | 14,227 |
| 19. | Madhugiri | 14,125 | 40. | Alland | 21,576 |
| 20. | Pavagada | 9,002 | 41. | Bhalki | 13,104 |
| 21. | Sira | 18,301 | 42. | Basavanbagewadi | 14,003 |

## STATEMENT 'C'

The Conditions required to be fulfilled for sanctioning of a General Hospital :

| | | |
|---|---|---|
| 1. | Capital :—New Building or additions and alterations to the existing dispensary or Hospital building costing about Rs. 3.00 lakhs (Appx.) | To be borne by Local Bodies including Donations. |
| 2. | Non-Recurring Equipment : | |
| | (a) X-Ray and Accessories including installaton. | To be borne by Local Bodies including Donations. |
| | (b) Other Equipments : | 50% by Government<br>50% by Local Bodies |

(SRI H. SIDDAVEERAPPA)

3. Recurring Expenditure :

| | | |
|---|---|---|
| Staff<br>Diet<br>Drugs<br>Contingencies | 50% by Government.<br>50% by Local Bodies. | (Town Municipal Council and Taluk Development Board). |

## STATEMENT 'D'

The names of places where the conditions are not strictly adhered to.

| Names of Taluk Places where General Hospitals have been sanctioned adhering to the conditions as noted under (c) | Names of Taluk places where General Hospitals have been sanctioned but conditions under (c) were not strictly adhered to |
|---|---|
| 1. Bhadravathi | 1. Humnabad |
| 2. Basava Kalyana | 2. Chincholi |
| 3. Chikkaballapur | 3. Kadur |
| 4. Bantwal | |
| 5. Shahapur | |
| 6. Guledgud Town (in Badami Taluk) | |

## STATEMENT 'E'

The names of places where the General Hospitals are in the proces of being sactioned.

1. Malavalli
2. K. R. Pet
3. Channapatna
4. Siddapura
5. Harihara
6. Hosanagar
7. Gowribidanur
8. Channarayapatna
9. Belur
10. Mudigere
11. Alland

MADAM SPEAKER.—Next item, Private Members' Bill for introduction.

## PRIVATE MEMBERS' BILL—CITY OF BANGALORE CORPORATION (AMENDMENT) BILL, 1972—Introduction

SRI T. R. SHAMANNA (Fort).—I beg to leave to introduce the City of Bangalore Municipal Corporation (Amendment) Bill, 1972.

10-30 A.M.

MADAM SPEAKER.—I will put the motion to the House. The question is :

"That leave be granted to introduce the City of Bangalore Municipal Corporation (Amendment) Bill, 1972.

*The motion was negatived*

MADAM SPEAKER.—Let us go to the next item...

SRI T. R. SHAMANNA.—I may be allowed to say a few words in this behalf. Rule 71 says :—

"If a motion for leave to introduce a Bill is opposed, the Speaker, after permitting, if he thinks fit, a brief explanatory statement from the member who moves and from the member who opposes the motion may, without further debate, put the question."

Under this rule, I request that I may be allowed to say a few words.

MADAM SPEAKER.—I cannot allow that now. That stage is over and the motion is lost. Let us go to the next item. Sri Gopinath R. Sandra may continue his speech on the non-official resolution.

## Private Members Resolutions :

### (*i*) *re* : Fall in the prices of Cotton, remmitting the hardship to the cultivators of Cotton etc.—*Debate Continued*

† ಶ್ರೀ ಗೋಪಿನಾಥ್ ಆರ್. ಸಾಂದ್ರ (ಹುಬ್ಬಳ್ಳಿ—ಗ್ರಾಮಾಂತರ).—ಮಾನ್ಯ ಅಧ್ಯಕ್ಷರೇ, ಇದೇ ತಿಂಗಳು ೬ನೇ ತಾರೀಖಿನ ದಿನ ಒಂದು ಖಾಸಗೀ ನಿರ್ಣಯವನ್ನು ತಂದು ಈ ಸಭೆಯ ಮುಂದೆ ಇಟ್ಟಿದ್ದೆ. ಆ ನಿರ್ಣಯದ ಬಗ್ಗೆ ನಾನು ಕೆಲವು ವಿಚಾರಗಳನ್ನು ಸರಕಾರಕ್ಕೆ ತಿಳಿಸಿ ಅವುಗಳ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದರೂ ಇದುವರೆಗೂ ಸರಕಾರ ಯಾವ ಕ್ರಮ ತೆಗೆದುಕೊಳ್ಳಲಿಲ್ಲ ಎಂದು ಹೇಳಲು ತುಂಬಾ ವಿಷಾದವಾಗಿದೆ. ಇದು ಹತ್ತು ಲಕ್ಷ ರೈತರ ಸಮಸ್ಯೆಯಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ಲಕ್ಷಾಂತರ ಜನ ರೈತರು ಹತ್ತಿ ಬೆಳೆದು ಅವರ ಹತ್ತಿಯನ್ನು ಮಾರಾಟ ಮಾಡಲು ಅನುಕೂಲವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ ಎಂದು ಸರಕಾರಕ್ಕೆ ಕಳಕಳಿಯಿಂದ ಇಲ್ಲಿ ಹೇಳಬೇಕಾಗಿದೆ. ನಮ್ಮ ದೇಶದಲ್ಲಿ ಎಂದರೆ ಮೈಸೂರು ರಾಜ್ಯದಲ್ಲಿ ಹತ್ತಿ ಸಾಕಷ್ಟು ಬೆಳೆದು ಬಂದಿದ್ದರೂ ಇದನ್ನು ಮಾರಾಟ ಮಾಡುವ ವ್ಯವಸ್ಥೆಯಾಗದೇ ಹಾಗೇ ಉಳಿದಿದೆ. ರೈತರು ಹತ್ತಿಯನ್ನು ಮಾರಾಟ ಮಾಡಲು ಪೇಟೆಗೆ ಹೋದರೆ ಅಲ್ಲಿನ ಜನ ಇವರನ್ನೆಲ್ಲಾ ಇಂದಿರಾ ಗಾಂಧಿಯವರ ಕಡೆಗೆ ಕೈ ತೋರಿಸಿ ಅವರು ಎಲ್ಲ ಅನುಕೂಲಗಳನ್ನು ಮಾಡಿ

(ಶ್ರೀ ಗೋಪಿನಾಥ್ ಆರ್. ಸಾಂದ್ರ)

ಕೊಡುತ್ತಾರೆ ಎಂದು ಹೇಳುತ್ತಿದ್ದಾರೆ. ಸರಕಾರ ಇಂತಹ ರೈತರ ಬಗ್ಗೆ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಆದರೆ ಇದುವರೆಗೆ ಏನನ್ನೂ ಮಾಡಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದು ನಮ್ಮ ಮಂತ್ರಿಮಂಡಲದ ಮುಂದೆ ಇದುವರೆಗೆ ಬಾರದೇ ಇದ್ದುದರಿಂದ ನಾನೇ ಮಾನ್ಯ ಕೃಷಿ ಮಂತ್ರಿಗಳಾದ ಶ್ರೀ ಕೆ. ಹೆಚ್. ಪಾಟೀಲರವರನ್ನು ಭೇಟಿ ಮಾಡಿ ಈ ಸಮಸ್ಯೆಯ ಪರಿಚಯವನ್ನು ಮಾಡಿಕೊಟ್ಟು ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ಮತ್ತು ಈ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಅವರನ್ನು ಕೇಳಿಕೊಂಡಿದ್ದೆ ಮತ್ತು ಇದನ್ನು ತ್ವರಿತ ಗತಿಯಿಂದ ಮಾಡಬೇಕು. ಕೇಂದ್ರದವರು ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾ ಎಂದು ಮಾಡಿದ್ದಾರೆ. ಅದರ ಮೂಲಕ ನಮ್ಮ ರಾಜ್ಯದ ರೈತರು ಬೆಳದಿರುವ ಹತ್ತಿಯನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸಲು ತಕ್ಕ ಪ್ರಯತ್ನ ಮಾಡಬೇಕು. ಇದಕ್ಕಾಗಿ ಇಲ್ಲ ಇಂತಹ ಒಂದು ನಿರ್ಣಯವನ್ನು ತಂದು ಮಂಡಿಸಿದ್ದೇನೆ. ಸರಕಾರ ಈ ಸಮಸ್ಯೆ ಕಡೆಗೆ ಗಮನ ಹರಿಸಿ ಸಹಾಯ ಮಾಡಬೇಕು. ಸುಮಾರು ಒಂದು ಲಕ್ಷದ ಅರವತ್ತು ಸಾವಿರ ಬೇಲುಗಳಷ್ಟು ಹತ್ತಿ ಇಂದು ಮಾರಾಟವಾಗದೆ ರೈತರಲ್ಲಿ ಉಳಿದಿದೆ. ಇವೆಲ್ಲವನ್ನೂ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ನಮ್ಮ ಸರಕಾರದ ಕಡೆಗೆ ರೈತರೆಲ್ಲ ಇಂದು ನೋಡುತ್ತಿದ್ದಾರೆ. ಇದು ಒಂದು ದೊಡ್ಡ ಸಮಸ್ಯೆಯಾಗಿರುವುದರಿಂದ ಇದರ ಬಗ್ಗೆ ತ್ವರಿತ ರೀತಿಯಾದ ಕ್ರಮಗಳನ್ನು ಸರಕಾರ ತೆಗೆದುಕೊಂಡು ರೈತರ ಕಷ್ಟಗಳನ್ನು ಪರಿಹರಿಸಬೇಕೆಂದು ಸಲಹೆ ಮಾಡುತ್ತೇನೆ. ಭಾರತ ಸರಕಾರದವರು ಇಂದು ಬಹಳ ದೊಡ್ಡ ಪ್ರಮಾಣದಲ್ಲಿ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೂಲಕ ಇತರ ರಾಜ್ಯಗಳಿಂದ ಹತ್ತಿ ತರಿಸಿ ಮಾರುತ್ತಿದ್ದಾರೆ. ಈ ಕಾರ್ಪೊರೇಷನ್‌ನವರು ಮೈಸೂರು ರಾಜ್ಯದಿಂದ ಬೆಳೆದು ಬರುವ ಹತ್ತಿಯನ್ನು ಕೊಂಡುಕೊಂಡು ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಇವರು ಎಷ್ಟು ದೊಡ್ಡ ಪ್ರಮಾಣದಲ್ಲ ಹತ್ತಿಯನ್ನು ಮಾರಾಟ ಮಾಡಬೇಕಾಗಿತ್ತೋ ಅದನ್ನು ಮಾಡಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ಇದಕ್ಕಾಗಿ ನಾನು ಇಂತಹ ಒಂದು ನಿರ್ಣಯವನ್ನು ಇಲ್ಲಿ ತಂದಿದ್ದೇನೆ ಮತ್ತು ಸರಕಾರ ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಟನ್ ಕಾರ್ಪೊರೇಷನ್‌ನವರು ಹತ್ತಿ ಮಾರಲಿಕ್ಕೆ ಸಾಕಷ್ಟು ಹಣದ ಸಹಾಯವನ್ನು ಕೇಂದ್ರ ಸರಕಾರದ ವತಿಯಿಂದ ಪಡೆದು ನಮ್ಮ ರಾಜ್ಯಕ್ಕೆ ಸಹಾಯ ಮಾಡುತ್ತಿಲ್ಲ. ಆದರೆ ಇದೇ ಕಾರ್ಪೊರೇಷನ್‌ನವರು ಗುಜರಾತಿನಲ್ಲಿ ಸ್ಟ್ಯಾಂಡರ್ಡ್ ಹತ್ತಿ ಇದೆ ಎಂದು ಮತ್ತು ಪಂಜಾಬು ರಾಜ್ಯದಲ್ಲಿರುವ ಹತ್ತಿಯನ್ನು ಖರೀದಿ ಮಾಡಿಕೊಳ್ಳಲು ಬೇಕಾದಷ್ಟು ಸಹಾಯ ಮಾಡುತ್ತಿದ್ದಾರೆ. ನಮ್ಮ ರಾಜ್ಯದಿಂದ ಹತ್ತಿಯನ್ನು ಖರೀದಿ ಮಾಡಿಕೊಂಡು ಕೊಳ್ಳಲು ಅವಕಾಶ ಕೊಡುತ್ತಿಲ್ಲ ರಾಜ್ಯ ಸರಕಾರ ಇದರ ಬಗ್ಗೆ ತ್ವರಿತ ಗತಿಯಿಂದ ಗಮನ ಕೊಟ್ಟು ನಮ್ಮ ರಾಜ್ಯದಲ್ಲ ಉಳಿದಿರುವ ಸುಮಾರು ಒಂದು ಲಕ್ಷ ಅರವತ್ತು ಸಾವಿರ ಬೇಲುಗಳಷ್ಟು ಹತ್ತಿಯನ್ನು ಮಾರುವ ವ್ಯವಸ್ಥೆ ಮಾಡಬೇಕೆಂದು ಕೇಳುತ್ತೇನೆ. ನಮ್ಮ ರಾಜ್ಯದಲ್ಲಿ ಇರುವ ಹತ್ತಿಯನ್ನು ಅಹಮದಾಬಾದು, ಕೇರಳ ಹಾಗೂ ಬೊಂಬಾಯಿ ಇಂತಹ ಜಾಗಗಳಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕಾಗಿದೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ನೂರರಲ್ಲಿ ತೊಂಬತ್ತೊಂಬತ್ತರಷ್ಟು ಬೆಳೆದ ಹತ್ತಿಯನ್ನು ಮಾರಾಟ ಮಾಡುತ್ತಿದ್ದಾರೆ. ಇವರ ಮೂಲಕ ನಮ್ಮ ರಾಜ್ಯದಲ್ಲಿರುವ ಹತ್ತಿಯನ್ನೂ ಮಾರಾಟ ಮಾಡುವ ವ್ಯವಸ್ಥೆಯನ್ನು ರಾಜ್ಯ ಸರಕಾರದವರು ಮಾಡಬೇಕು ಮತ್ತು ಅವರ ಮೇಲೆ ಒತ್ತಾಯ ತರಬೇಕು. ಈ ಕಾಟನ್ ಕಾರ್ಪೊರೇಷನ್‌ನವರು ಹತ್ತಿಯನ್ನು ಖರೀದಿ ಮಾಡದೇ ಇದ್ದರೆ ಇದರ ಬಗ್ಗೆ ಸರಕಾರ ಬೇರೆ ಏರ್ಪಾಡನ್ನಾದರೂ ಮಾಡಬೇಕು. ರಾಜ್ಯದಲ್ಲಿರುವ ಸ್ಟೇಟು ಮಾರ್ಕೆಟಿಂಗು ಸೊಸೈಟಿಯವರ ಮೂಲಕ ಹಾಗೂ ಇತರ ಕಡೆಗಳಲ್ಲಿರುವ ಮಾರ್ಕೆಟಿಂಗು ಕೋಆಪರೇಟೀವ್ ಸೊಸೈಟಿಗಳ ಮೂಲಕ ರಾಜ್ಯದಲ್ಲಿರುವ ಹತ್ತಿಯನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲವೇ ಕೇಂದ್ರ ಸರಕಾರದವರು ಕೊಡುತ್ತಿರುವ ಎಂ.ಸಿ.ಡಿ.ಸಿ. ಫಂಡುಗಳನ್ನು ರಾಜ್ಯ ಸರಕಾರ ಪಡೆದುಕೊಂಡು ರಾಜ್ಯದಲ್ಲಿರುವ ಸೊಸೈಟಿಗಳಿಗೆ ಷೇರು ಬಂಡವಾಳಕ್ಕೆ ಉಪಯೋಗಿಸಿಕೊಂಡು ಆ ಸೊಸೈಟಿಗಳ ಮೂಲಕ ಹತ್ತಿಯ ಮಾರಾಟ ಮಾಡುವ ವ್ಯವಸ್ಥೆ ಆರಂಭ ಮಾಡಬೇಕು. ನಾನು ಮಾನ್ಯ ಮಂತ್ರಿಗಳನ್ನು ಭೇಟಿ ಮಾಡಿ ಇನ್ನೂ ಅನೇಕ ಸಲಹೆಗಳನ್ನೂ ಈಗಾಗಲೇ ಕೊಟ್ಟಿದ್ದೇನೆ. ಇಂತಹ ಸಮಸ್ಯೆಗಳ ಕಡೆಗೆ ತ್ವರಿತ ಗತಿಯಿಂದ ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತಿದ್ದೇನೆ. ರಾಜ್ಯ ಸರಕಾರ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೇಲೆ ಒತ್ತಾಯ ತಂದು ಇದರ ಮೂಲಕ ಹತ್ತಿ ಮಾರಾಟ ಮಾಡುವ ವ್ಯವಸ್ಥೆ ಮಾಡಬೇಕು. ನಮ್ಮ ಕಡೆ ಇರುವ ಒಂದು ಸೊಸೈಟಿಯವರು ಮಾತ್ರ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರ ಸಲಹೆಯಂತೆ ಸ್ವಲ್ಪ ಹತ್ತಿ ಖರೀದಿ ಮಾಡಿ

ದ್ದಾರೆ. ಆದರೆ ಇದರ ಹಣವನ್ನು ಇನ್ನೂ ಕೊಟ್ಟಿಲ್ಲ. ಇದನ್ನು ಕೂಡಲೇ ಕೊಡುವ ವ್ಯವಸ್ಥೆ ಮಾಡಬೇಕು. ಇದರ ಹಣ ಬರುತ್ತದೆ ಎನ್ನುವ ನಂಬಿಕೆ ನಮಗೆ ಇದೆ. ಏಕೆಂದರೆ ಇದರ ಚೇರ್ಮನ್ನರಾಗಿರುವವರು ಫೆಡರೇಷನ್ ಚೇರ್ಮನ್‌ರೂ ಆಗಿರುವುದರಿಂದ ಇದರ ಹಣ ಬರುತ್ತದೆ. ಇದರ ಬಗ್ಗೆ ಸಂದೇಹಪಡಬೇಕಾಗಿಲ್ಲ. ಆದರೆ ಸರಿಯಾದ ವೇಳೆಯಲ್ಲಿ ಸಕಾಲವಲ್ಲಿ ರೈತರಿಗೆ ಹಣ ಸಿಗಲಿಲ್ಲ. ಇದಕ್ಕಾಗಿ ತಾವು ವ್ಯವಸ್ಥೆ ಮಾಡಬೇಕು. ಸರಕಾರ ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದ ಮೂಲಕವೇ ರಾಜ್ಯದಲ್ಲಿರುವ ಹತ್ತಿಯನ್ನೆಲ್ಲಾ ಇನ್ನೆಂಟು ದಿವಸಗಳಲ್ಲಿ ಖರೀದಿ ಮಾಡಬೇಕೆಂದು ಅವರ ಮೇಲೆ ಒತ್ತಾಯ ತರಬೇಕು ಮತ್ತು ಇಂತಹ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಸ್ಟೇಟು ಮಾರ್ಕೆಟಿಂಗ್ ಸೊಸೈಟಿ ಮೂಲಕವೂ ಇರುವ ಎಲ್ಲಾ ಹತ್ತಿಯನ್ನೂ ಖರೀದಿ ಮಾಡಲು ಪ್ರಯತ್ನ ಮಾಡಬೇಕು. ಇದನ್ನು ಖರೀದಿ ಮಾಡಲು ನಮ್ಮ ರಾಜ್ಯದಲ್ಲಿ ಸುಮಾರು 30 ಸೊಸೈಟಿಗಳು ಮುಂದೆ ಬಂದಿವೆ ಎಂದು ಕೇಳುತ್ತೇವೆ. ಇವುಗಳ ಮೂಲಕ ಹತ್ತಿ ಖರೀದಿ ಮಾಡುವ ವ್ಯವಸ್ಥೆ ಮಾಡಬಹುದು ಮತ್ತು ಸರಕಾರ ಹತ್ತಿ ಬೆಲೆಯನ್ನು ನಿರ್ದಿಷ್ಟ ಮಾಡಿ ಎಕ್ಸ್‌ಪೋರ್ಟು ಮಾಡಲಿಕ್ಕೆ ಕೂಡ ಸಹಾಯ ಮಾಡಬೇಕು. ಸರಿಯಾದ ಬೆಲೆ ಈಗ ಹತ್ತಿಗೆ ಸಿಗದೆ ಲುಕ್ಸಾನು ಆಗುವ ಸ್ಥಿತಿ ಬಂದಿದೆ. ಇದರ ಕಡೆಗೆ ಲಕ್ಷ ಕೊಡಬೇಕು. ಇಂದು ನಮ್ಮ ರಾಜ್ಯದಲ್ಲಿ ಕೆಲವು ಸೊಸೈಟಿಗಳು ಇವೆ. ಕೈಗಾರಿಕೆಗಳಿಗೆ ರಾಜ್ಯ ಸರಕಾರ ಹೇಗೆ ಧನ ಸಹಾಯ ಮಾಡಿ ಅನುಕೂಲ ಮಾಡಿಕೊಡುತ್ತಿದೆಯೋ ಅದೇ ರೀತಿಯ ಅನುಕೂಲಗಳನ್ನು ಸೊಸೈಟಿಗಳಿಗೂ ಕೊಟ್ಟು ಅವರು ಕೂಡ ಹತ್ತಿಯನ್ನು ಮಾರುವ ವ್ಯವಸ್ಥೆ ಮಾಡಬೇಕೆಂದು ಇಲ್ಲಿ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

[MR. CHAIRMAN (SRI SHARANAPPA) in the Chair]

ಇದೂ ಅಲ್ಲದೆ ಹತ್ತಿ ಸ್ಟ್ಯಾಂಡರ್ಡ್ ಬಗ್ಗೆ ಸರ್ಕಾರದವರು ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ರೈತರು ಹತ್ತಿಯನ್ನು ಸೊಸೈಟಿಗೆ ಖರೀದಿಗೆ ಕೊಡುವಾಗ ಸೊಸೈಟಿಯವರು ಅನೇಕ ರೀತಿಯ ತಪ್ಪುಗಳನ್ನು ಮಾಡಬಹುದು. ಆ ರೀತಿಯಾಗದಂತೆ ಸರ್ಕಾರದವರು ಮೇಲ್ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ 30 ಸೊಸೈಟಿಗಳು ಹತ್ತಿ ಖರೀದಿ ಮಾಡಲು ಏನು ಮುಂದೆ ಬಂದಿವೆ ಅವಕ್ಕೆ ಸಾಕಷ್ಟು ಹಣವನ್ನು ದೊರಕಿಸಿಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಈ ವರ್ಷದ ಹತ್ತಿಯನ್ನು ಕೊಂಡುಕೊಳ್ಳಬೇಕೆಂದು ಹತ್ತಿ ಕಾರ್ಪೊರೇಷನ್ನಿನವರನ್ನು ಕೇಳಿಕೊಳ್ಳಬಹುದು, ಆದರೆ ಇದು ಒಂದು ವರ್ಷದ ಸಮಸ್ಯೆಯಲ್ಲ, ಬಹುಕಾಲದವರೆಗೆ ಈ ಸಮಸ್ಯೆ ಇದ್ದೇ ಇರುತ್ತದೆ, ಆದ್ದರಿಂದ ಹತ್ತಿ ಬೆಳೆಯುವ ರೈತರಿಗೆ ಅನುಕೂಲವಾಗುವಂತೆ ಶಾಶ್ವತವಾದಂಥ ಒಂದು ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಒಂದು ವ್ಯವಸ್ಥೆ ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಇದೆ. ಅದರಂತೆ ಇಲ್ಲಿಯೂ ಮಾಡಿಕೊಡಬೇಕು. ಈಗ ಹತ್ತಿ ಬೆಲೆ ಶೇಖಡ 40ರಷ್ಟು ಕಡಿಮೆಯಾಗಿದೆ. ಇದನ್ನು ರೈತರು ಸಹಿಸುವುದಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ರೈತರು ಹತ್ತಿಯನ್ನು ಮುಂದೆ ಬೆಳೆಯುತ್ತಾರೋ ಇಲ್ಲವೋ ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಆದ್ದರಿಂದ ಈ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಬೇಕು. ನಮ್ಮ ಧಾರವಾಡ ಜಿಲ್ಲೆಯಲ್ಲಿ ಹತ್ತಿಯನ್ನು ಬೆಳೆಯತಕ್ಕಂಥ ರೈತರು ಬೇಕಾದಷ್ಟು ಮಂದಿ ಇದ್ದಾರೆ. ಈಗ 30-40 ಲಕ್ಷ ಬೇಲ್‌ಗಳಷ್ಟು ಹತ್ತಿಯನ್ನು ಬೆಳೆಯುತ್ತಿದ್ದಾರೆ. ಮತ್ತು ಹತ್ತಿಯನ್ನು ಬೆಳೆಯಲು ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಇವರಿಗೆ ಸಾಕಷ್ಟು ಸಹಾಯವನ್ನು ಎಲ್ಲ ಹಂತದಲ್ಲಿಯೂ ಒದಗಿಸಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಹತ್ತಿ ಬೆಲೆ ಬಗ್ಗೆ ಒಂದು ಖಚಿತವಾದ ಉಪಾಯವನ್ನು ಸರ್ಕಾರದವರು ಕಂಡುಹಿಡಿಯಬೇಕು. ಮಹಾರಾಷ್ಟ್ರ ಸರ್ಕಾರದವರು ಹತ್ತಿಯ ಒಂದು ಸ್ಟ್ಯಾಂಡರ್ಡ್ ಬೆಲೆಯನ್ನು ನಿಗದಿ ಮಾಡುವುದಕ್ಕಾಗಿ 1969, 1970 ಮತ್ತು 1971ನೇ ಇಸವಿಗಳಲ್ಲಿ ಯಾವ ಯಾವ ರೇಟ್ ಇತ್ತು ಆ ರೇಟ್‌ಗಳನ್ನೆಲ್ಲಾ ಕ್ರೋಢೀಕರಿಸಿ ಈ ವರ್ಷ ಒಂದು ಸಾಮಾನ್ಯವಾದ ನಾಮಿನಲ್ ಬೆಲೆಯನ್ನು ಗೊತ್ತು ಮಾಡಿದ್ದಾರೆ. ಈ ಒಂದು ನೀತಿಯನ್ನು ನಮ್ಮ ಸರ್ಕಾರದವರು ಯೋಗ್ಯವಾಗಿದ್ದರೆ ಅನುಸರಿಸಿ ನಮ್ಮ ರಾಜ್ಯದಲ್ಲಿಯೂ ಹತ್ತಿ ಬೆಲೆಯನ್ನು ಗೊತ್ತು ಮಾಡಬೇಕು. ಈ ರೀತಿ ನಾಮಿನಲ್ ಬೆಲೆಯನ್ನು ಗೊತ್ತು ಮಾಡುವ ಕಾಲಕ್ಕೆ ಅದು ರೈತರಿಗೆ ಅನುಕೂಲಕರವಾಗಿಲ್ಲದಿದ್ದರೆ, ಆ ಬೆಲೆಯ ಜೊತೆಗೆ 25 ಪರ್‌ಸೆಂಟ್ ಹೆಚ್ಚಿನ ಹಣವನ್ನು ರೈತರಿಗೆ ಸರ್ಕಾರದವರೇ ಒದಗಿಸಬೇಕೆಂದು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈ ಒಂದು ಸಮಸ್ಯೆಯನ್ನು ಬಗೆಹರಿಸುವ ಜವಾಬ್ದಾರಿ ಕೇಂದ್ರ ಸರ್ಕಾರದಮೇಲೂ ಇದೆ. ಕೇಂದ್ರ ಸರ್ಕಾರದವರು ಹತ್ತಿಯ ವಿಷಯದಲ್ಲಿ ಎಕ್ಸ್‌ಪೋರ್ಟ್ ನೀತಿಯನ್ನು ಸಡಿಲಗೊಳಿಸಬೇಕು. ಜಪಾನ್ ದೇಶದಲ್ಲಿ ನಮ್ಮ ರಾಜ್ಯದ ಹತ್ತಿಗೆ ಬಹಳ ಬೇಡಿಕೆಯಿದೆ. ಈ ಕಾರಣದಿಂದ ನಮ್ಮ ಸರ್ಕಾರದವರು

(ಶ್ರೀ ಗೋಪಿನಾಥ್ ಆರ್. ಸಾಂದ್ರ)

ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ನಮ್ಮ ರಾಜ್ಯದ ಹತ್ತಿಯನ್ನು ಜಪಾನ್ ದೇಶಕ್ಕೆ ಕಳಿಸುವ ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡಿದ್ದೇ ಆದರೆ ಈಗಿನ ಒಂದು ಸಮಸ್ಯೆಯನ್ನು ಬಗೆ ಹರಿಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಸಹಸ್ರಾರು ಎಕರೆಗಳಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿದೆ. ಷಾರ್ಟ್ ಸ್ಟ್ಯಾಪಲ್ ಹತ್ತಿಯನ್ನು ಹೆಚ್ಚಾಗಿ ರೈತರು ಬೆಳೆಯು ತ್ತಿದ್ದಾರೆ. ಇದನ್ನು ಹೆಚ್ಚಾಗಿ ಜಪಾನ್ ದೇಶಕ್ಕೆ ಕಳಿಸುವ ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ಜಪಾನ್ ದೇಶದಿಂದ ಹತ್ತಿಯನ್ನು ತರಿಸಬೇಕೆಂದು ಹೇಳು ತ್ತಿದ್ದೀರೋ ಅಥವಾ ಅಲ್ಲಿಗೆ ಹತ್ತಿಯನ್ನು ಕಳಿಸಬೇಕೆಂದು ಹೇಳುತ್ತಿದ್ದೀರೋ ?

ಶ್ರೀ ಗೋಪೀನಾಥ್ ಆರ್. ಸಾಂದ್ರ.—ಈಗ ಕೇಂದ್ರ ಸರ್ಕಾರದವರು ಹೊರದೇಶಗಳಿಂದ ಹತ್ತಿಯನ್ನು ನಮ್ಮ ದೇಶಕ್ಕೆ ತರಿಸಿಕೊಳ್ಳುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಆ ರೀತಿ ತರಿಸಿ ಕೊಳ್ಳುವುದನ್ನು ಕಡಿಮೆ ಮಾಡಿ ನಮ್ಮ ರಾಜ್ಯದ ಹತ್ತಿಯನ್ನೇ ಕೊಳ್ಳುವಂತೆ ವ್ಯವಸ್ಥೆ ಮಾಡ ಬೇಕು. ನಮ್ಮ ರಾಜ್ಯದಲ್ಲಿ ಅಲ್ಲದೇ ಇತರೇ ನಾಲ್ಕೈದು ರಾಜ್ಯಗಳಲ್ಲಿ ನೀರಾವರಿ ಅನುಕೂಲ ವಿರುವ ಕಡೆಗಳಲ್ಲಿ ಹೆಚ್ಚಾಗಿ ರೈತರು ಹತ್ತಿಯನ್ನು ಬೆಳೆಯುತ್ತಿದ್ದಾರೆ. ಈ ರೀತಿ ಬೆಳೆದಂಥ ಹತ್ತಿಯನ್ನು ಕೂಡಲೇ ರೈತರಿಂದ ಕೊಳ್ಳುವಂತಹ ಒಂದು ವ್ಯವಸ್ಥೆಯನ್ನು ಸರ್ಕಾರದವರು ಮಾಡ ಬೇಕು. ಮತ್ತು ಇದರ ಕಡೆಗೆ ಸರ್ಕಾರದವರು ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಈ ರೀತಿ ಮಾಡಿದರೆ ಈ ಸಮಸ್ಯೆ ಬಗೆಹರಿಯಬಹುದೆಂದು ನನಗೆ ಕಾಣುತ್ತದೆ. ಅನೇಕ ವಿಚಾರಗಳನ್ನು ಇದರ ಬಗ್ಗೆ ನನ್ನ ಮಿತ್ರರು ಹೇಳುವವರಿದ್ದಾರೆ. ಒಂದೇ ಒಂದು ಸಂತೋಷದ ವಿಷಯವೆಂದರೆ ಈ ಒಂದು ಸಮಸ್ಯೆಯ ಬಗ್ಗೆ ಖಾಸಗೀ ನಿರ್ಣಯವನ್ನು ಸಭೆಯ ಮುಂದೆ ಇಟ್ಟಾಗ ಈ ಸಮಸ್ಯೆ ಕೂಡಲೇ ಬಗೆಹರಿಯಬೇಕು ಮತ್ತು ಇದರ ಬಗ್ಗೆ ಸಭೆಯಲ್ಲಿ ಚರ್ಚೆಯಾಗಬೇಕು ಎಂಬುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡರು. ನಾವು ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಈ ಬಗ್ಗೆ ಚರ್ಚೆ ಮಾಡಿದ ಕೂಡಲೇ ಅವರು ಇದಕ್ಕೆ ಏನೇನು ಉಪಾಯಗಳನ್ನು ಮಾಡಬೇಕು ಎಂಬುದನ್ನು ಕಂಡು ಹಿಡಿಯಲು ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಜಿಲ್ಲೆಯ ಪರವಾಗಿ ಮತ್ತು ಹತ್ತಿ ಬೆಳೆಯುವ ರೈತರ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸರ್ಕಾರದವರು ಈ ಸಮಸ್ಯೆ ಯನ್ನು ಬಗೆಹರಿಸುವುದಕ್ಕೆ ಏನೇನು ಉಪಾಯಗಳನ್ನು ಕಂಡುಹಿಡಿದಿದ್ದಾರೆ ಎಂಬುದನ್ನು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಬೇಕು. ಸುಮಾರು 20–25 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವ ಹತ್ತಿ ನಮ್ಮ ರಾಜ್ಯದಲ್ಲಿ ಇದೆ. ಇದನ್ನು ಹತ್ತಿ ಕಾರ್ಪೋರೇಷನ್ನಿನವರು ಕೂಡಲೇ ಖರೀದಿ ಮಾಡುವಂತೆ ವ್ಯವಸ್ಥೆ ಮಾಡಿ ಆ ಹಣವನ್ನು ರೈತರಿಗೆ ಹಂಚಬೇಕು. ಇನ್ನು 8–10 ದಿವಸಗಳಲ್ಲಿ ಮಳೆ ಪ್ರಾರಂಭವಾಗಬಹುದು, ಆ ರೀತಿ ಮಳೆ ಬಂದರೆ ಹತ್ತಿ ಗಾಳಿ ಮತ್ತು ಮಳೆಗೆ ಸಿಕ್ಕಿ, ಈಗ ಅದರ ಬೆಲೆ ಏನಿದೆ, ಅದೂ ಕೂಡ ರೈತರಿಗೆ ಬಾರದೇ ಹೋದೀತು ಎಂಬ ಮಾತನ್ನು ಹೇಳುತ್ತಿದ್ದೇನೆ. ಈಗ ಹತ್ತಿಯನ್ನು ದಾಸ್ತಾನು ಮಾಡಲು ಸಾಕಷ್ಟು ಗೋಡೌನ್ ವ್ಯವಸ್ಥೆ ಇಲ್ಲ ವಾಗಿದೆ. ಆದ್ದರಿಂದ ಹತ್ತಿಯನ್ನು ಜಾಗ್ರತೆ ವಿಲೇವಾರಿ ಮಾಡಿಸಬೇಕು. ಆ ರೀತಿ ಮಾಡಿಸ ದಿದ್ದರೆ ಮುಂದೆ ರೈತರು ಹತ್ತಿಯನ್ನು ಬೆಳೆಯದೇ ಹೋಗಬಹುದು. ಆದ್ದರಿಂದ ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಸರ್ಕಾರದವರು ಬಗೆಹರಿಸಬೇಕು. ಸರ್ಕಾರದವರು ಯಾವಾಗಲೂ ರೈತರ ಕೈವಾರಿಗಳಾದ್ದರಿಂದ ಅವರ ಈ ಒಂದು ಸಮಸ್ಯೆಯನ್ನು ಕೂಡಲೇ ಬಗೆಹರಿಸುತ್ತಾರೆಂದು ನಾನು ನಂಬಿದ್ದೇನೆ. ಈ ನಿರ್ಣಯ ಇನ್ನೂ ಮೊದಲೇ ಚರ್ಚೆಗೆ ಬರಬೇಕಾಗಿತ್ತು. ಸ್ವಲ್ಪ ತಡವಾದರೂ ಸಹ ಈಗ ಸಭೆಯ ಮುಂದೆ ಚರ್ಚೆಗೆ ಈ ನಿರ್ಣಯವನ್ನು ತೆಗೆದುಕೊಂಡು ಬಂದಿದ್ದೇನೆ. ಮಾನ್ಯ ಮಂತ್ರಿಗಳು ಈ ವಿಷಯದಲ್ಲಿ ಇರುವ ತೊಂದರೆ ನಿವಾರಣೆ ಮಾಡಲು ಉಪಾಯವನ್ನು ಕಂಡು ಹಿಡಿಯುತ್ತಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸರ್ಕಾರದವರು ಈ ಸಮಸ್ಯೆಯನ್ನು ಲಘುವಾಗಿ ತಿಳಿದುಕೊಳ್ಳದೆ ಪರಿಹಾರ ಕೈಕೊಳ್ಳಬೇಕು ಮತ್ತು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†Sri C. ANDANEPPA (Hadagalli).—Mr. Speaker, Sir, today's resolution is about the marketing of cotton. Sri Sandra has rightly put it that it is a burning subject, it is a burning subject of a burning commodity. We are very glad that we have got a Minister who is the son of the soil, who has got a fund of commonsense and great courage. Therefore I am quite sure he will take up the subject immediately and try

to solve it as far as possible. My friend has only limited the subject to the marketing of cotton though it is not enough to limit it to such an extent only. But anyway since the resolution is about the marketing of cotton, it is very important to analyse it in the broader perspective. My friend has said that there is a big slump in the cotton market and therefore he has brought before this august House a resolution requesting the Government to solve this problem. But this is not the first time that such a slump has set in this market. It is therefore necessary to analyse the causes, the root cuases about such slump in cotton and other agricultural produce. Agriculture h s been accepted to be the biggest industry in India, but our Government has attached the least importance to this industry. We just now spent about half an hour on a problem of a lock out in a small factory in Belgaum. But no time has been allotted to the problems of 30 to 35 crores of people who are involved in various difficulties in agricultural sector. Our Government is not at all attaching importance to this very important problem. Our present Agricultural Minister has to take up this subject very seriously and should try to solve all these problems that have been pending with the Government and with the people, since a long time. Sir, this marketing of agricultural produce has become a very difficult problem both for the grower and the Government. But no arrangement has been made by the Government regarding the marketing of agricultural produce. It is a most disorganised industry if I am permitted to put it so. Absolutely no satisfactory arrangement has been made regarding the marketing of any of the agricultural produce whether it is cotton or groundnut or jowar or anything else. Therefore, I request the Hon. Minister for Agriculture to take up this particularly, marketing and the production of agricultural commodities very seriously and find out the root cause for this kind of lapses. Otherwise I am sure that both production and marketing relating to same agricultural produce will fail and probably the growers may not think of growing such commodities at all. For instance, the Maize is an attractive crop. Some time back the rate of Rs. 80 to 90 per quintal was prevailing. Now it has come down to Rs. 50. Therefore, the people have given up growing this maize and the Government have not at all thought over why this has happened. The reasons for the fall in price of Maize has not been found out. The rate of cotton last year was about Rs. 450 per quintal. Suddenly it came down to Rs. 300. Then the Governor rushed to the Centre and made a special request and did something in the matter. Due to this, the rates went up. But during this period, it was not the grower who was benefited but it was the merchant who was benefited. Again this year also the rates have come down to Rs. 200. Of course in some areas, it may be Rs. 300 per quintal. But the point is the rates are not uniform. The rates of other varieties are also varying from place to place. The staple cotton has also come down to Rs. 150. Under such circumstances, it may not be possible for the ryots to take up the cultivation of cotton in the future if such fluctuations are to continue in the cotton market. The root cause for this fluctutation may

(SRI C. ANDANEPPA)

be so many. It may be for the lack of proper control over the cotton market by the Government. It may be due to lack of organisation among the farmers. There may be so many other reasons. Therefore, the State Government should pay particular attention to this subject and see that something is done in the interests of the growers. As we see there is discrimination between agricultural industry and non-agricultural industry. When about 30 to 35 crores of people are involved in this industry, as I said earlier, much importance has not been attached to this industry. Even for a non-agricultural industry, where about 300 persons are involved, the Government has passed a legislation to look into the interests of those who are engaged in that industry and so many legislations have been passed to safeguard the interest of those people. But no such legislation has been passed in the interest of those persons who are involved in this agricultural industry. So many crores of people are involved in this agricultural sector. Quite a lot of people are involved in this industry as labourers. But in the case of non-agricultural industry even for about a few hundreds of people so many legislations have been passed and even minimum wages have been fixed. But no minimun wages have been fixed for agricultural labourer. It is not fair and it is not just to have discrimination between the agricultural industry and non-agricultural industry. Therefore, I request the Hon. Minister for Agriculture to take up this mater very seriously and see the interests of the ryots are safeguarded.

There is another important question and that is about the marketing of agricultural produce. There are only a few co-operative marketing societies which deal in the marketing or agricultural produce. Some societies at the taluk level do not deal in the marketing of agricultural produce. For many reasons these societies are not at all doing this business and if some are doing, they too do not do it on proper lines. These societies are meant for this purpose only. The State Government has no proper advice about this industry. It is guided by the Agricultural Department. This is not a healthy system. Therefore, I suggest that a permanent Commission may be constituted in order to get the advice on the policies of the Government to be carried out and also regarding planning marketing and growing of agricultural produce. Otherwise this state of affairs in the agricultural industry may continue for ever. Therefore it is high time that we should constitute a permanent body-like commission, to formulate the policies of the Government in regard to agriculture and marketing of agricultural produce and other connected problems like minimum wages etc. It is also necessary while constituting this Commission or committees to take into consideration the wishes and difficulties of the people concerned. No unions of the ryots have been organised in the State. If it is a non-agricultural industry, even for a small unit of

industry, labour unions are organised. Eventhough this is an industry involving crores of people no unions have been organised. This is a very sorrowful state of affairs.

11-00 A.M.

That is why I am placing the suggestion before the Hon. Minister, who is capable of doing all these things. I request him to take the suggestions of the hon. Members also. I am quite confident that he will do it. It is the duty of every hon. Member to pay attention to this and try to organise Farmers' Unions. While formulating the policies of the Government regarding agriculture, I would like to request the hon. Minister to invariably and compulsorily consult these Trade Unions. Then only a proper policy can be formulated. Otherwise, the policies that may be decided by only Officers will not at all be practicable. Therefore I am only suggesting how some policies can be formulated. I hope this will be appreciated by the Hon. Minister and he will take proper steps.

Regarding the present position of slump in the cotton market, I hope the Hon. Minister will take immediate steps to contact the Central Government and the Cotton Corporation of India and make arrangements for purchase of cotton in all the areas—not only in some areas like Gadag and Hubli, but everyhere in the State. For instance, only the day before yesterday, a meeting was called by the Director of Agriculture to fix the prices of hybrid cotton seeds and the Director could not definitely say anything in the matter at all. This is the difficulty that the officers of the Government are feeling, because the powers of the officer are limited and there is no body or Union of farmers agitate about these things. Therefore, I hope the Hon. Minister will solve this problem immediately, not only in respect of cotton but also in respect of other commodities, because such difficulties are there with regard to other commodities as well. I, therefore, once again request the Hon. Minister to take up, with the Central Government, the issue not only in respect of cotton but also with regard to other commodities and also to look into the matter of setting up a permanent body to formulate the permanent policies regarding agriculture.

I would like to make one more suggestion to the Hon. Minister that another body to review the prices of the agricultural produce be constituted. This body will have to review the prices of the past year and fix the prices for the future years. Then only the policy of the Government will be on the right lines and the security of the growers will be assured and the grower will think of taking up a particular crop for growing. Otherwise, the grower may give up certain crops and think of some other crops, which will be more beneficial to him and fetch him more money.

Therefore, once again, I request him to take immediate action on all these matters. With these words, I thank you, Sir.

SRI C. M. ARUMUGAM (K. G. F.).—This resolution is there before the House for the last two days. We have two more resolutions which are very important pertaining to slum clearance and also naming Mysore as Karnataka.

MADAM SPEAKER.—This is also as important as the other resolutions.

SRI C. M. ARUMUGAM.—This has been sufficiently discussed. Therefore, I request that priority may be given to them. Since these two resolutions are important, if the Government agrees and if the House were to agree, we can sit until Five of the Clock to-day or sit to-morrow also.

MADAM SPEAKER.—We will consider about it.

†ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ).—ಸ್ವಾಮಿ, ನಮ್ಮ ಬಿಜಾಪುರ ಜಿಲ್ಲೆಯ ಮುದ್ದೆಬಿಹಾಳ್‌ನಲ್ಲಿ ವಕ್ಕಲುತನದವರಿಗೆ ಹತ್ತಿಯನ್ನು ಮಾರಲು ತಕ್ಕ ವ್ಯವಸ್ಥೆ ಮಾಡದೆ ಬಹಳ ತೊಂದರೆಪಡುತ್ತಿದ್ದಾರೆ. ರೈತರು ಬೆಳೆದ ಹತ್ತಿಯನ್ನು ಮಾರ್ಕೆಟಿನಲ್ಲಿ ತೆಗೆದುಕೊಂಡು ಹೋದರೆ. ಅದಕ್ಕೆ ಯೋಗ್ಯ ಬೆಲೆಯೇ ಸಿಗುವುದಿಲ್ಲ. ಅಲ್ಲದೆ ಮಾರ್ಕೆಟಿನಲ್ಲಿ ಯಾರೂ ಇಟ್ಟುಕೊಳ್ಳುವುದಿಲ್ಲ. ಅದಕ್ಕಾಗಿ ಮಾನ್ಯ ಸ್ನೇಹಿತರು ಹೇಳಿದಂತೆ ಹತ್ತಿ ವ್ಯಾಪಾರವನ್ನು ಮಾಡುವುದಕ್ಕೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ 4-8 ಕೇಂದ್ರಗಳನ್ನು ತೆರೆದು ಅಲ್ಲಿಯ ರೈತರಿಗೆ ತಮ್ಮ ಹತ್ತಿಯನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅಲ್ಲದೆ ಮುದ್ದೆಬಿಹಾಳದಲ್ಲಿ ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ಹತ್ತಿ ಪೀಕನ್ನು ಸಂಗ್ರಹಿಸಿ ಇಡುತ್ತಾರೆ. ಆದಲ್ಲದೆ ವಕ್ಕಲಿಗರು ತಂದಂತಹ ಸಾಲವನ್ನು ಸಹಕಾರಿ ಸೊಸೈಟಿಗಳಿಗೆ ಕೊಡಬೇಕಾಗುತ್ತದೆ. ಅದ್ದರಿಂದ ವಕ್ಕಲಿಗರು ತಾವು ಬೆಳೆದಂತಹ ಹತ್ತಿಯನ್ನು ತಂದಾಗ ಅವರಿಗೆ ಸೊಸೈಟಿಯ ಮೂಲಕವಾಗಲೀ ಅಥವಾ ಬ್ಯಾಂಕುಗಳ ಮೂಲಕವಾಗಲಿ ತಕ್ಷಣ ಹಣ ದೊರೆಯುವಂತೆ ಒಂದು ವ್ಯವಸ್ಥೆಯನ್ನು ಮಾಡಬೇಕು. ಆ ನಂತರ ಸರಿಯಾದ ಧಾರಣೆ ಬಂದ ಮೇಲೆ ಅದನ್ನು ಸೊಸೈಟಿಯವರು ಮಾರಬಹುದು. ಇದರ ಬಗ್ಗೆ ಎ ಪಿ ಎಂ ಸಿ ಯವರು ಕ್ರಮ ಬದ್ಧವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಸರ್ಕಾರದವರು ಇದಕ್ಕೆ ಒಂದು ಹುಕುಂನ್ನು ಮಾಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಈಗಾಗಲೇ ನಿರ್ಣಯ ಆಗಬೇಕಾಗಿತ್ತು. ಏಕೆಂದರೆ ಮಾರ್ಚ್ ಏಪ್ರಿಲ್‌ನಲ್ಲಿ ಹತ್ತಿ ವ್ಯಾಪಾರ ಆಗಬೇಕಾಗಿದೆ. ಇವೊತ್ತಿನ ದಿವಸ ಸರಿಯಾದ ವ್ಯವಸ್ಥೆ ಇಲ್ಲದೆ, ರೈತನು ಈ ಹತ್ತಿಯನ್ನು ತನ್ನ ಮನೆಯಲ್ಲಿ ಇಟ್ಟುಕೊಂಡು ಗೋಳು ಇಡುತ್ತಿದ್ದಾನೆ. ಆದಲ್ಲದೆ ಈ ಹತ್ತಿಗೆ ಈಗ ಯೋಗ್ಯ ಬೆಲೆ ಕೂಡ ಸಿಗುತ್ತಾ ಇಲ್ಲ. ಹೋದ ಸಾರಿ ಕ್ವಿಂಟಾಲಿಗೆ 200 ರೂಪಾಯಿದ್ದದ್ದು ಈಗ 160–170 ರೂಪಾಯಿ ಆಗಿದೆ. ಇವತ್ತು ಜೀವನಾವಶ್ಯ ವಸ್ತುಗಳ ಬೆಲೆ ಏರುತ್ತಾ ಇದೆ. ಆದರೆ ಹತ್ತಿಯ ಬೆಲೆ ಏನೂ ಏರಿಲ್ಲ. ಹತ್ತಿ ಬೆಲೆ ಜಾಸ್ತಿಯಾದರೆ ರೈತರಿಗೆ ಒಳ್ಳೆಯದು. ಆದ್ದರಿಂದ ಅದನ್ನು ಸಂಬಂಧಪಟ್ಟ ಮಂತ್ರಿಯವರು ಗಮನಿಸಬೇಕೆಂದು ಹೇಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ರೈತರು ಈ ಹತ್ತಿಯನ್ನು ವ್ಯಾಪಾರಸ್ಥರ ಹತ್ತಿರ ತೆಗೆದುಕೊಂಡು ಹೋದಾಗ, ಅವರು ಒಂದು ಜಿಗುಪ್ಸೆಯಿಂದ ಈ ರೈತರನ್ನು ನೋಡುತ್ತಿದ್ದಾರೆ. ನೀವು ಇಂದಿರಾ ಗಾಂಧಿಯವರಿಗೆ ಓಟು ಹಾಕಿದ್ದೀರಿ, ಅವರ ಹತ್ತಿರ ಹೋಗಿ, ಮತ್ತು ನಿಮ್ಮ ಎಂ ಎಲ್ ಎ ಹತ್ತಿರ ಹೋಗಿ ಎಂದೆಲ್ಲಾ ಮೂದಲಿಕೆಯ ಮಾತನ್ನು ಆ ಜನರು ಆಡುತ್ತಿದ್ದಾರೆ. ಇದರಿಂದ ರೈತರನ್ನು ಸಮಾಧಾನ ಮಾಡುವುದಕ್ಕೆ ಸಾಧ್ಯವಿಲ್ಲದ ಹಾಗೆ ಆಗಿದೆ. ಅದಕ್ಕಾಗಿ ಅವರು ಜಿಗುಪ್ಸೆ ವಾತಾವರಣವನ್ನು ದಯವಿಟ್ಟು ಉಂಟು ಮಾಡುವುದಕ್ಕೆ ಹೋಗಬಾರದು. ಮತ್ತು ಅಳುಕು ಮಾತುಗಳನ್ನು ಆಡದೇ ಇರಲು ಪ್ರಯತ್ನ ಪಡಬೇಕು. ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ದಂಡಿ ಹತ್ತಿ, ಬಸವನಕೋಟಿ ಹತ್ತಿ—ಇವಕ್ಕೆ ಒಳ್ಳೆಯ ಬೆಲೆ ಇದೆ. ನಮ್ಮ ಹತ್ತಿಯನ್ನು ವಿಶೇಷವಾಗಿ ಮುಂಬೈ ವ್ಯಾಪಾರಸ್ತರು ಕೊಳ್ಳುತ್ತಿದ್ದುದರಿಂದ ಇದರ ಧಾರಣೆ ಹೆಚ್ಚಿಗೆ ಏಗದಿ ಮಾಡಲು ಸಾಧ್ಯ ವಾಗದೆ ಇರುವುದಕ್ಕೆ ಅವರೇ ಕಾರಣರು. ಆದುದರಿಂದ ಆ ಬಗ್ಗೆ ಯೋಗ್ಯ ರೀತಿಯಲ್ಲಿ ವಿಚಾರ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ಎಂ. ಬಂಗಿ (ಜಮಖಂಡಿ).—ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಮುಖ್ಯ ಮನಿ ಕ್ರಾಪ್ಸ್ ಅಂದರೆ ಹತ್ತಿ ಇದೆ. ಹತ್ತಿ ಬೆಳೆಯುವ ರೈತರಿಗೆ ಈ ದಿನಗಳಲ್ಲಿ ಸಾಕಷ್ಟು ಹಣದ ತೊಂದರೆಯಾಗಿದೆ. ಪ್ರತಿಯೊಬ್ಬ ರೈತನೂ ಸೊಸೈಟಿಗಳಿಂದ ಸದ್ಯಕ್ಕೆ ಸಾಲ ತೆಗೆದುಕೊಂಡಿದ್ದಾನೆ.

ಈ ತಿಂಗಳಿನಲ್ಲಿ ಹತ್ತಿ ವ್ಯಾಪಾರ ಮಾಡಿ ಹಣವನ್ನು ವಾಪಸ್ಸು ಕೊಡದಿದ್ದರೆ ಪ್ರತಿಯೊಂದು ಸೊಸೈಟಿಗೂ ಅವರು ಡಿಫಾಲ್ಟರ್ಸ್ ಆಗುತ್ತಾರೆ. ಪ್ರತಿಯೊಂದು ಸೊಸೈಟಿಯೂ ಡಿಸ್ಟ್ರಿಕ್ಟ್ ಕೊ-ಆಪರೇಟಿವ್ ಬ್ಯಾಂಕಿಗೆ ಡಿಫಾಲ್ಟ್ ಆಗಿ ಕೊನೆಗೆ ಅಪೆಕ್ಸ್ ಬ್ಯಾಂಕಿಗೆ ಡಿಫಾಲ್ಟ್ ಆಗಿ ಇಡೀ ರಾಜ್ಯದಲ್ಲಿಯೇ ಸಹಕಾರ ಕ್ಷೇತ್ರದಲ್ಲಿ ಒಂದು ಆರ್ಥಿಕ ಸಮಸ್ಯೆ ಉದ್ಭವವಾಗುತ್ತದೆ. ಸರ್ಕಾರದವರು ಈ ವಿಷಯದ ಕಡೆಗೆ ಹೆಚ್ಚು ಗಮನಕೊಟ್ಟು ಇಂಡಿಯಾ ಕಾಟನ್ ಕಾರ್ಪೊರೇಷನ್ ಅಥವಾ ಬೇರೆ ರೀತಿಯಲ್ಲಿ ಹಣ ನಿಗದಿಮಾಡಿ ರೈತರ ಕಡೆಯಿಂದಾ ಹತ್ತಿ ಕೊಳ್ಳುವ ವ್ಯವಸ್ಥೆ ಇದೇ ತಿಂಗಳಲ್ಲಿ ಆಗಬೇಕು. ಇಲ್ಲದಿದ್ದರೆ ಈ ಸಮಸ್ಯೆ ಬಹಳ ಜಟಿಲವಾಗುತ್ತದೆ. ಡಿ. ಸಿ. ಸಿ. ಬ್ಯಾಂಕ್‌ಗಳು, ಇಂಡಸ್ಟ್ರೀಸ್ ಬ್ಯಾಂಕಿನವರು, ಅಪೆಕ್ಸ್ ಬ್ಯಾಂಕಿನವರು ಸಹ ಡೆಫಾಲ್ಟ್ ಆಗಿ ಲಿಕ್ವಿಡೇಷನ್‌ಗೆ ಹೋಗುವ ಸಂಭವ ಇದೆ. ಆದ್ದರಿಂದ ಇದೇ ತಿಂಗಳಲ್ಲಿ ಕೋ-ಆಪರೇಟಿವ್ ಮೂಲಕವೋ ಅಥವಾ ಬೇರೆ ಯಾವ ರೀತಿಯಲ್ಲಿಯಾಗಲೀ ಯೋಗ್ಯ ಬೆಲೆಗೆ ಹತ್ತಿಯನ್ನು ಕೊಳ್ಳುವ ವ್ಯವಸ್ಥೆ ಮಾಡಬೇಕೆಂದು; ರೈತರಿಗೆ ಅದಕ್ಕಾಗಿ ಸರ್ಕಾರದವರು ಸಾಕಷ್ಟು ಹಣ ಸಹಾಯ ಕೊಡುವ ಯೋಚನೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ಎನ್. ಪಾಟೀಲ್ (ತಿಕೋಟ).—ಅಧ್ಯಕ್ಷರೇ, ಇದುವರೆಗೂ ನನ್ನ ಮಿತ್ರರು ಹತ್ತಿ ಮಾರ್ಕೆಟಿಂಗ್ ವಿಷಯದಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಮಾತನಾಡಿದ್ದಾರೆ. ನಾನು ನನ್ನ ಜಿಲ್ಲೆಯಲ್ಲಿ ಆಗುತ್ತಿರುವ ತೊಂದರೆಗಳನ್ನು ಈ ಸಭೆಯ ಅವಗಾಹನೆಗೆ ತಮ್ಮ ಮೂಲಕ ತರಬಯಸುತ್ತೇನೆ. ರಾಯಚೂರು ಜಿಲ್ಲೆ ತುಂಗಭದ್ರ ಅಚ್ಚುಕಟ್ಟಿಗೆ ಒಳಪಟ್ಟ ಪ್ರದೇಶ. ಇಲ್ಲಿ ಸುಮಾರು ಒಂದೂವರೆ ಲಕ್ಷ ಎಕರೆಯಷ್ಟು ಪ್ರದೇಶದಲ್ಲಿ ತುಂಗಭದ್ರಾ ಕೆಳಗೆ ಹತ್ತಿ ಬೆಳೆಯಾಗುತ್ತಿದೆ. ಇವತ್ತು ನನ್ನ ತಾಲ್ಲೂಕಿನಲ್ಲಿ 80 ಸಾವಿರ ಎಕರೆಯಷ್ಟು ನೀರಾವರಿ ಹತ್ತಿಯನ್ನು ಬೆಳೆದಿದ್ದಾರೆ. ಇಡೀ ಜಿಲ್ಲೆಯಲ್ಲಿ ಐದುವರೆ ಲಕ್ಷ ಎಕರೆ ಡ್ರೈ-ಲಕ್ಮಿ, ಸುಮಾರು 76 ಸಾವಿರ ಚಿಲ್ಲರೆ ಎಕರೆ ನೀರಾವರಿ ಹತ್ತಿ, ಸುಮಾರು 6 ಸಾವಿರ ಚಿಲ್ಲರೆ ಎಕರೆಯಷ್ಟು ಹೈಬ್ರಿಡ್ ನಂ. 4—ಹೀಗೆ ಈ ವರ್ಷ ಒಟ್ಟಿಗೆ ಸುಮಾರು 7 ಲಕ್ಷ ಎಕರೆಯಷ್ಟು ಹತ್ತಿ ನಮ್ಮ ಜಿಲ್ಲೆಯಲ್ಲಿ ಸಾಗುವಳಿಗೆ ಒಳಪಟ್ಟಿದೆ. ಈ ವರ್ಷದ ಇಳುವರಿ ನಮ್ಮ ಜಿಲ್ಲೆಯಲ್ಲಿ 10 ಲಕ್ಷ ಕ್ವಿಂಟಾಲ್ ಹತ್ತಿ ಬರಬಹುದು. ಅರಳೆ ಸುಮಾರು 2 ಲಕ್ಷ ಎಕರೆ ಮೇಲೆ ಆಗಬಹುದು. ಹೈಬ್ರಿಡ್ ಹತ್ತಿ ನಮ್ಮ ಜಿಲ್ಲೆಯಲ್ಲಿ ಮೊದಲನೆಯ ವರ್ಷ 1,500 ಎಕರೆ ಬೆಳೆದಿದ್ದಾರೆ, ಈ ವರ್ಷ 6 ಸಾವಿರ ಎಕರೆ ಬೆಳೆದಿದ್ದಾರೆ. ಈ ವರ್ಷದಲ್ಲಿ ನಮ್ಮ ಜಿಲ್ಲೆಯ ರೈತರು ಚೆನ್ನಾಗಿ ಬೀಜ ಮಾಡಿದ್ದಾರೆ. 45 ಸಾವಿರ ಎಕರೆಗಾಗುವಷ್ಟು ಬೀಜ ಉತ್ಪತ್ತಿಯಾಗುತ್ತಿದೆ. ಮುಂದಿನ ವರ್ಷ ಸುಮಾರು 28 ಸಾವಿರ ಎಕರೆಗೆ ಬೀಜ ಸರಿ ಹೋಗಬಹುದೆಂದು ನಮ್ಮ ಜಿಲ್ಲೆಯವರ ಅಂದಾಜು. ಆ 28 ಸಾವಿರ ಎಕರೆಯಲ್ಲಿ ಹೈಬ್ರಿಡ್ ಹತ್ತಿ ನಮ್ಮ ಜಿಲ್ಲೆಯಲ್ಲಿ ಬೆಳೆಯುತ್ತಾರೆ. ಒಂದು ಎಕರೆಗೆ 10 ಕ್ವಿಂಟಾಲ್ ಆವರೇಜ್ ಈಲ್ಡ್ ಬರುತ್ತದೆ ಅಂದರೆ ಎರಡು ಲಕ್ಷ ಎಕರೆಗೆ ಆಗುತ್ತದೆ. ಇತರ ಕಡೆಗಳಿಂದ 8 ಲಕ್ಷ ಎಕರೆ ಆಗುತ್ತದೆ. ಹೀಗಾಗಿ ನಮ್ಮ ಜಿಲ್ಲೆಯಲ್ಲಿ ಈ ವರ್ಷಕ್ಕಿಂತಲೂ ಮುಂದಿನ ವರ್ಷ ಹೆಚ್ಚು ಬೆಳೆಯುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ ಮಾರ್ಕೆಟಿಂಗ್ ಫ್ಯಸಿಲಿಟೀಸ್ ಇಂಪ್ರೂವ್ ಆಗಿಲ್ಲ. ನನಗೆ ತಿಳಿದಿರುವ ಹಾಗೆ ಜೂನ್ 30ನೇ ತಾರೀಖಿನೊಳಗಾಗಿ ರೈತರು ಸಾಲಕ್ಕಾಗಿ ಅರ್ಜಿಗಳನ್ನು ಕೋ-ಆಪರೇಟಿವ್ ಸೊಸೈಟಿಗಳಿಗೆ ಹಾಕಿಕೊಳ್ಳಬೇಕಾಗಿದೆ. ಸೊಸೈಟಿಗಳಿಗೆ ಸಾಲ ಜಿಲ್ಲಾ ಬ್ಯಾಂಕುಗಳಿಂದ ಅಪೆಕ್ಸ್ ಬ್ಯಾಂಕಿನಿಂದ ಮತ್ತು ರಿಜರ್ವ್ ಬ್ಯಾಂಕಿದಿಂದ ಸಿಗುತ್ತದೆ. ಸಾಲ ದೊರೆಯದಿದ್ದರೆ ಹತ್ತಿ ಬೆಳೆಯನ್ನು ಉಳಿಸುವುದಕ್ಕೆ ಬಹಳ ಕಠಿಣವಾಗುತ್ತದೆ. ಲಾಂಗ್ ಸ್ಟೇಪಲ್ ಕಾಟನ್, ಹೈಬ್ರಿಡ್ ನಂಬರ್ 4—ಇವುಗಳನ್ನು ಪಾಪುಲರ್ ಮಾಡಬೇಕು. ಅದನ್ನು ನಾವು ಬೆಳೆಯುತ್ತೇವೆ. ಒಂದು ಎಕರೆಗೆ ಒಂದು ಸಾವಿರ ಅಥವಾ ಒಂದು ಸಾವಿರದ ಐನೂರು ರೂಪಾಯಿಗಳವರೆಗೆ ಸಾಗುವಳಿ ಖರ್ಚಾಗುತ್ತದೆ. ಆವರೇಜ್ ಈಲ್ಡ್ ಇರುವುದು 10 ಕ್ವಿಂಟಾಲ್. ಹೈಬ್ರಿಡ್ ನಂ. 4 ಒಂದು ಎಕರೆ ಬೆಳೆದಿದ್ದಕ್ಕೆ 4 ಸಾವಿರ ರೂಪಾಯಿಗಳ ಖರ್ಚು ಬಂದಿದೆ. ರೈತರಿಗೆ ಇದರಿಂದ 10 ಕ್ವಿಂಟಾಲಿಗೆ ಎರಡೂವರೆ ಸಾವಿರ ಅಥವಾ 3 ಸಾವಿರ ಬೆಲೆ ಬರುತ್ತದೆ. 1,500 ರೂಪಾಯಿಗಳ ಸಾಗುವಳಿ ಖರ್ಚು ಒಂದನ್ನು ಕಳೆದರೆ ಕೇವಲ ಒಂದು ಸಾವಿರ ರೂಪಾಯಿಗಳೂ ಕೂಡ ವರಮಾನ ಬರುವುದಿಲ್ಲ. ಕೇವಲ 10 ಕ್ವಿಂಟಾಲ್ ಬೆಳೆಯೂ ಕೂಡ ಬರುವುದಿಲ್ಲ. ಡಿಸೆಂಬರ್ ತಿಂಗಳು ಮತ್ತು ನವಂಬರ್ ತಿಂಗಳ ಹತ್ತಿ ಬೆಳೆ ಈಗಾಗಲೇ ಬಂದಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಒಂದು ನಿರ್ಣಯದ ಬಗ್ಗೆ ಕಳೆದ ಐದಾರು ತಿಂಗಳುಗಳಿಂದಲೂ ಚರ್ಚೆಯಾಗದೆ ಈ ದಿವಸ ಚರ್ಚೆಯಾಗುತ್ತಿದೆ. ಅವರು ಯಾವ ಒಂದು ಉದ್ದೇಶದಿಂದ ಮಾತನಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಪ್ರತಿಯೊಂದು ನಿರ್ಣಯಕ್ಕೂ ಐವತ್ತೈದು ಘಂಟೆ ಕಾಲ ಕೊಡುವುದಕ್ಕೆ ತಾವು ತಯಾರಾಗಿದ್ದರೆ, ನಮ್ಮ ನಿರ್ಣಯಕ್ಕೂ ಹಾಗೆಯೇ ಕೊಡಬೇಕು.

ಶ್ರೀ ಪಿ. ಎಂ. ಬಂಗಿ.--ಅವರು ಘಂಟೆಗಟ್ಟಲೆ ತೆಗೆದುಕೊಂಡಿದ್ದಾರೆ. ಪ್ರತಿಯೊಂದು ನಿರ್ಣಯಕ್ಕೂ ನಾಲ್ಕೈದು ಘಂಟೆ ಕಾಲ ಚರ್ಚೆಮಾಡಲು ಅವಕಾಶ ಕೊಡುತ್ತೇವೆಂದು ಹೇಳಿದರೆ ಸಾಕು. ನಾನು ಒಪ್ಪುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.—ಮಾರ್ಕೆಟ್ಟಿನಲ್ಲಿ ಹತ್ತಿ ಬೆಲೆಯ ಬಗ್ಗೆ ಒಂದು ದೊಡ್ಡ ಅವಾಂತರ ವಾಯಿತು. ಅದೂ ಅಲ್ಲದೆ ಅಲ್ಲಿ ಬೆಂಕಿ ಆಕಸ್ಮಿಕ ಆಗಿದೆಯೆಂದು ಹೇಳಿದರು. ಆ ವಿಷಯ ವರ್ತಮಾನಪತ್ರಿಕೆಗಳಲ್ಲಿಯೂ ಬಂದಿತು. ನಮ್ಮ ಸೊಸೈಟಿಯ ಅಂಗಡಿ ಮುಂದೆ ಎಷ್ಟೋ ಭಾಗದಷ್ಟು ಹತ್ತಿ ಮಳೆಯಲ್ಲಿ ನೆಂದು ನಂತರ ಷಾರ್ಟ್ ಸರ್ಕೀಟ್ ಆಗಿ ನಾಶವಾಯಿತು. ಇದನ್ನು ಯಾರೋ ಉದ್ದೇಶ ಪೂರ್ವಕವಾಗಿ ಮಾಡಿದ್ದಾರೆಂದು ನನಗೆ ಸಮಾಚಾರ ಬರುತ್ತಿದೆ. ರೈತರು ಈಗ ತಮ್ಮ ಹತ್ತಿ ಮಾರಿ ದುಡ್ಡು ತೆಗೆದುಕೊಳ್ಳಬೇಕೆಂದಿದ್ದಾರೆ. ಇದಕ್ಕೆ ಇನ್‌ಷ್ಯೂರೆನ್ಸ್ ಇದೆಯೋ ಇಲ್ಲವೋ ಗೊತ್ತಿಲ್ಲ. ಇದರ ಬಗ್ಗೆ ಇರತಕ್ಕ ರೂಲ್ಸನ್ನು ಸ್ವಲ್ಪಮಟ್ಟಿಗೆ ಸಡಿಲಮಾಡಬೇಕಾದರೆ ಇನ್ನು ಸುಮಾರು ನಾಲ್ಕಾರು ತಿಂಗಳಾದರೂ ಆಗಬಹುದು. ಇದರಿಂದ ಬಡ ರೈತರಿಗೆ ದುಡ್ಡು ಸಿಗುವುದಿಲ್ಲ.

ಇನ್ನೊಂದು ವಿಷಯ. ಈಗ ಸಭೆಯಲ್ಲಿ ಮಾನ್ಯ ಕೋ-ಆಪರೇಟೀವ್ ಮತ್ತು ಮಾರ್ಕೆಟಿಂಗ್ ಸಚಿವರು ಇಲ್ಲೇ ಇದ್ದಾರೆ. ನಾನು ಅವರ ಅವಗಾಹನೆಗೆ ಒಂದು ವಿಚಾರವನ್ನು ತರಬೇಕಾಗಿದೆ. ನಮ್ಮ ಧಾರ್ವಾಡ ಮತ್ತು ಬಿಜಾಪುರದ ಸುತ್ತಮುತ್ತಲಿನ ರೈತರು ತಾವು ಬೆಳೆಯುತಕ್ಕ ಹತ್ತಿ ಸೇಂಗಾ ಇತ್ಯಾದಿ ಸಾಮಾನುಗಳನ್ನು ಮಾರುಕಟ್ಟೆಗೆ ತಂದಾಗ ಅಲ್ಲಿಯ ವರ್ತಕ ಮಂದಿ ಅವುಗಳನ್ನು ಮಾರಾಟ ಮಾಡದೆ ಹಾಗೆ ಇಡತಕ್ಕ ಸಂದರ್ಭ ಬಂದಾಗ ಆತನ ಮಾಲು ಎಷ್ಟಿರುತ್ತದೆಂದು ತೂಕ ಮಾಡಿ ಆ ಬಗ್ಗೆ ಒಂದು ಪಟ್ಟಿಯನ್ನು ಆ ರೈತನಿಗೆ ಕೊಡತಕ್ಕ ಪದ್ಧತಿ ಇರುವುದಿಲ್ಲ....

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಒಂದೊಂದು ನಿರ್ಣಯಕ್ಕೆ ತಾವು ಯಾವ ಕಾಲ ನಿಗದಿಯನ್ನೂ ಮಾಡಿದಂತೆ ಕಾಣಬರುತ್ತಿಲ್ಲ. ಅವರು ಮಾತನಾಡುತ್ತಿರುವ ನಿರ್ಣಯದ ಬಗ್ಗೆ ಚರ್ಚೆ ಪ್ರಾರಂಭವಾಗಿ 5 ಗಂಟೆಗಳ ಕಾಲಕ್ಕೂ ಹೆಚ್ಚಾಯಿತು. ಆದ್ದರಿಂದ ಬೇರೆ ನಿರ್ಣಯಗಳಿಗೂ ತಾವು ಇಷ್ಟೇ ಕಾಲಾವಕಾಶವನ್ನು ಕೊಡುತ್ತೀರಾ ಹೇಗೆ ತಿಳಿಸಬೇಕು. ಅಥವಾ ಇದಾದನಂತರ ಕರ್ಣಾಟಕ ಎಂದು ಹೆಸರನ್ನು ನಮ್ಮ ರಾಜ್ಯಕ್ಕೇ ಇಡಬೇಕೆಂಬ ನಿರ್ಣಯವಿದೆ. ಅದಕ್ಕೆ ಅವಕಾಶ ಕೊಡಬಾರದೆಂದು ಹೀಗೆ ಮಾಡಿದ್ದಾರೋ ?

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ನನಗೆ ಒಂದು ಪಾಯಿಂಟ್ ಆಫ್ ಇನ್‌ಫರ್ಮೇಷನ್ ಬೇಕಾಗಿದೆ. ಖಾಸಗೀ ನಿರ್ಣಯಗಳ ಬಗ್ಗೆ ತಾವೇನಾದರೂ ಕಾಲ ನಿಗದಿಮಾಡಿದ್ದೀರಾ ಇಲ್ಲವೇ ? ಹಾಗೆ ಮಾಡದಿದ್ದರೆ ಇದೇ ರೀತಿಯಾಗಿ ಎಲ್ಲರ ನಿರ್ಣಯಗಳಿಗೂ ಕಾಲಾವಕಾಶ ಕೊಡುತ್ತೀರಾ ಎಂಬುದನ್ನು ದಯಮಾಡಿ ಅಧ್ಯಕ್ಷರು ತಿಳಿಸಬೇಕು. ಅಥವಾ ಅವರು ಏನೋ ಒಂದು ಪಿತೂರಿಗಾಗಿ ಹೀಗೆ ಆ ಚರ್ಚೆಯನ್ನು ತಳ್ಳಿಕೊಂಡು ಬರುತ್ತಿದ್ದಾರೋ ?

ಅಧ್ಯಕ್ಷರು.—ಮಾನ್ಯ ಸದಸ್ಯರು 'ಪಿತೂರಿ' ಎಂದು ಪದಗಳನ್ನು ಬಳಸಬಾರದು.

ಶ್ರೀ ಕೆ. ಎಚ್. ಪಾಟೀಲ್.—ಕರ್ಣಾಟಕದ ವಿಚಾರದಲ್ಲಿ ಮಾನ್ಯ ಸದಸ್ಯರಿಗೆಷ್ಟು ಆಸಕ್ತಿ ಇದೆಯೋ ಅಷ್ಟು ಆಸಕ್ತಿ ನಮಗೂ ಇದೆ.

ಶ್ರೀ ವಾಟಾಳ್ ನಾಗರಾಜ್.—ಹಾಗಾದರೆ ಕರ್ಣಾಟಕ ಎಂದು ಹೆಸರಿಡಬೇಕು ಎಂಬ ನಿರ್ಣಯವನ್ನು ಚರ್ಚೆಗೆ ತೆಗೆದುಕೊಳ್ಳಿ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ನಾಗರಾಜ್ ಅವರಿಗೆ ಅವರ ನಿರ್ಣಯ ಎಷ್ಟು ಪ್ರಾಮುಖ್ಯವಾದುದೋ ಬೇರೆ ಸದಸ್ಯರಿಗೆ ಅವರವರ ನಿರ್ಣಯಗಳು ಅಷ್ಟೇ ಪ್ರಾಮುಖ್ಯವಾಗಿರುತ್ತವೆ. ಆದ್ದರಿಂದ ಸಭಾಧ್ಯಕ್ಷರು ಹೇಳುವವರೆಗೆ ಈ ವಿಚಾರದಲ್ಲಿ ಬೇರೆ ಯಾರೂ ಏನೂ ಹೇಳುವಂತಿಲ್ಲ.

ಶ್ರೀ ಜಿ. ಎನ್. ಪಾಟೀಲ್. —ಇನ್ನು ರಾಯಚೂರು ಜಿಲ್ಲಾ ಮಾರುಕಟ್ಟೆಗೆ ಮಾಲು ಬಂದರೆ ಅಲ್ಲಿ ಸಹಿತ ಮಾಲನ್ನು ತೂಕ ಮಾಡಿ ರೈತರಿಗೆ ಒಂದು ಪಟ್ಟಿಯನ್ನು ಕೊಡುವುದಿಲ್ಲ. ರೈತನು ತಾನು ಊರಿಗೆ ಹೋಗತಕ್ಕ ಮೊದಲು ಅಂಗಡಿಯವನಲ್ಲಿ 10 ದಿಂಡು ಹತ್ತಿ ಮತ್ತು 12 ಮೂಟೆ ಸೇಂಗಾ ಇಟ್ಟು ಹೋದರೆ ಅವನು ಮತ್ತೆ ಬರುವುದರೊಳಗೆ ಆ ಸಾಮಾನುಗಳಲ್ಲಿ ಹತ್ತಿಯಲ್ಲಿ 10 ದಿಂಡುಗಳಿದ್ದುದು 9 ದಿಂಡಿಗೆ ಇಳಿದಿರುತ್ತದೆ. 12 ಮೂಟೆ ಸೇಂಗಾ ಇದ್ದುದು 10 ಮೂಟೆಗೆ ಇಳಿದಿರುತ್ತೆ. ಆದರೆ ಆ ಬಡ ರೈತನಿಗೆ ಇದೆಲ್ಲಾ ಗೊತ್ತಿರುವುದಿಲ್ಲ. ಈ ಮಾರುಕಟ್ಟೆಗಳಲ್ಲಿ ಹೀಗೆಲ್ಲಾ ನಡೆಯು

ತ್ತಿರುವುದನ್ನು ಸರಕಾರದವರು ಕೂಡಲೆ ತಡೆಗಟ್ಟಬೇಕು. ಉತ್ತರ ಕರ್ಣಾಟಕದಲ್ಲಿ ಮಾರುಕಟ್ಟೆಗಳಲ್ಲಿ ತೂಕ ಮತ್ತು ರೀಫಿಲಿಂಗುಗಳು ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ಅಗ್ರಿಕಲ್ಚರಲ್ ಮಿನಿಷ್ಟರೂ ಮತ್ತು ಸಹಕಾರ ಸಚಿವರೂ ಸೇರಿ ಇದನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೊನ್ನೆತಾನೆ ಇಲ್ಲಿ ಶ್ರೀ ಕೆ. ಎಚ್. ಪಾಟೀಲರು—ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಆದರೆ ಅಲ್ಲಿ ಯಾವ ಮಾರುಕಟ್ಟೆಗಳಲ್ಲೂ ಹತ್ತಿ ಬೆಳೆಯತಕ್ಕ ರೈತನಿಗೆ ಸಹಾಯವಾಗುತ್ತಿಲ್ಲ. ನಮ್ಮಲ್ಲಿ ಆರ್.ಎ.ಪಿ.ಎಂ.ಸಿ.ಎಸ್. ಎಂಬ ಒಂದು ಸೊಸೈಟಿ ಇದೆ. ರೈತರು ತರತಕ್ಕ ಹತ್ತಿಯನ್ನು ಕೊಳ್ಳಲು ತನ್ನ ಕಾಲು ಮೇಲೆ ತಾನು ನಿಲ್ಲಲು ಅದಕ್ಕೆ ಸಾಧ್ಯವಿಲ್ಲ. ಆದರೆ ಎಲ್ಲಿಯೋ ಒಂದು ಕಡೆ ಆ ಸೊಸೈಟಿಗೆ ಬೆಂಕಿ ಹಚ್ಚಿದರಲ್ಲಾ ಹಾಗೇ ಈ ನಮ್ಮ ರಾಯಚೂರು ಸೊಸೈಟಿಗೆ ಬೆಂಕಿ ಹಚ್ಚಬಾರದು. ಗದಗಿನಲ್ಲಿ ಮಾಡಿರುವಂತೆ ಇಲ್ಲಿಯೂ ಮಾಡಿದರೆ ಅನುಕೂಲವಾಗುತ್ತದೆ. ಹತ್ತಿ ಬೆಳೆಗಾರರಿಗೆ ಒಂದು ಸಮರ್ಪಕವಾದ ಬೆಲೆ ಸಿಗುವಂತೆ ಮಾಡಬೇಕಾದ್ದು ಅತ್ಯಗತ್ಯ. ಅದಕ್ಕಾಗಿ ಕಾಟನ್ ಕಾರ್ಪೊರೇಷನ್ನಿನವರು ಅವರಿಗೆ ಒಂದು ಸಪೋರ್ಟಿಂಗ್ ಪ್ರೈಜನ್ನು ಕೊಡಬೇಕು. ಈ ದಿವಸ ಕೆಲವು ಡಿ.ಸಿ.ಸಿ. ಬ್ಯಾಂಕುಗಳಿಗೆ 25 ಕೋಟಿ ರೂಪಾಯಿಗಳ ತನಕ ಹಣವನ್ನು ಒದಗಿಸಿದ್ದಾರೆ. ಆದರೆ ಅವುಗಳು 25 ಲಕ್ಷ ರೂಪಾಯಿನ ಮಾಲನ್ನು ಏನಾದರೂ ಖರೀದಿ ಮಾಡಿದೆಯೇ? ಇದೇ ಸಂದರ್ಭದಲ್ಲಿ ಆ ಡಿ ಸಿ ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಉಪೇಂದ್ರ ಕೂಟ್ರೆ ಅವರು ಡೆಪ್ಯುಟಿ ಗೌರ್ನರ್ ಜನರಲ್ ಫಾರ್ ರಿಜರ್ವ್ ಬ್ಯಾಂಕ್ ಅವರ ಹತ್ತಿರ ಹೋಗಿ ಕಾಟನ್ ಧಾರಣೆ 500 ರೂಪಾಯಿಗಳಿದ್ದದ್ದು ಏಕೆ ಒಮ್ಮೆಲೆ 250—300 ರೂಪಾಯಿಗಳಿಗೆ ಇಳಿದಿದೆ ಎಂದು ಕೇಳಿದುದಕ್ಕೆ ನಾವು ಬ್ಯಾಂಕಿನವರು ಇರುವುದು ಹತ್ತಿಯ ಬೆಲೆಯನ್ನು ಇಳಿಸುವುದಕ್ಕೆ, ಅದು ನಮ್ಮ ಕೆಲಸ ಎಂದು ಅವರು ಹೇಳಿದರಂತೆ. ಹಾಗಾದರೆ ಅದರಿಂದ ಹತ್ತಿ ಬೆಳೆಯತಕ್ಕ ರೈತರಿಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ ಅವರು ಅದನ್ನು ಕೇಳಬೇಡಿ, ಅದು ನಮ್ಮ ಕೆಲಸವಲ್ಲ, ಅದನ್ನು ಸರಿಯಾಗಿ ನೋಡಿಕೊಳ್ಳಬೇಕಾದ್ದು ಸರಕಾರದ ಕೆಲಸ ಎಂದರಂತೆ.

ಇನ್ನು ಅಲ್ಲಿ ಮಾಡಿಯಂ ಟರ್ಮ್ ಲೋನುಗಳನ್ನು ಹಿಂದಕ್ಕೆ ಕೊಡತಕ್ಕ ಬಗ್ಗೆ ಮೊದಲು 2 ತಿಂಗಳ ಅವಧಿ ಇದ್ದುದನ್ನು—ಯಾರೋ ಕೆಲವರು ಅಲ್ಲಿ ಆಡಳಿತ ಕಾಂಗ್ರೆಸ್ಸಿಗೆ ಓಟನ್ನು ಕೊಡಲಿಲ್ಲ ಎಂದು ಒಂದು ತಿಂಗಳಿಗೆ ಇಳಿಸಲಾಯಿತಂತೆ. ಸಾಮಾನ್ಯವಾಗಿ ಜನರು ಗೆದ್ದ ಪಾರ್ಟಿಯನ್ನು ಸೇರತಕ್ಕದ್ದು ಸ್ವಾಭಾವಿಕ. ಹಾಗೇ ಅನೇಕರು ಈ ದಿವಸ ಶ್ರೀಮತಿ ಇಂದಿರಾಗಾಂಧಿಯವರ ಪಕ್ಷಕ್ಕೂ ಸೇರಿರಬಹುದು. ಆದರೆ ಅದು ಮುಖ್ಯವಾದುದಲ್ಲ. ರೈತನಿಗೆ ಒಂದು ಸಪೋರ್ಟಿಂಗ್ ಪ್ರೈಜನ್ನು ಕೊಟ್ಟೇಕೊಡಬೇಕು. ಇಂಥ ವಿಚಾರದಲ್ಲಿ ಯಾರೂ ರಾಜಕೀಯವನ್ನು ಬೆರೆಸಬಾರದು. ಇದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಇದು ಕೇಂದ್ರಕ್ಕೆ ಸಂಬಂಧಪಟ್ಟ ಪ್ರಶ್ನೆ. ಆದ್ದರಿಂದ ನಮ್ಮ ಸಚಿವರಾದ ಶ್ರೀ ಕೆ. ಎಚ್. ಪಾಟೀಲರು ರಿಜರ್ವ್ ಬ್ಯಾಂಕ್ ಅಧಿಕಾರಿಗಳ ಜೊತೆ ಮಾತನಾಡಿ ಈ ವಿಚಾರದಲ್ಲಿ ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬರಬೇಕು. ರೈತನ ಸ್ಥಿತಿ ಉತ್ತಮವಾಗಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಮಾನ್ಯ ಸಭಾಧ್ಯಕ್ಷರೇ, ಈಗಾಗಲೇ ಅನೇಕ ಮಾನ್ಯ ಸದಸ್ಯರು ಈ ಹತ್ತಿ ವ್ಯವಹಾರದ ವಿಷಯದಲ್ಲಿ ವಿವರಣಾ ಪೂರ್ವಕವಾದ ಭಾಷಣಗಳನ್ನು ಮಾಡಿದ್ದಾರೆ. ಆದರೆ ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕಾಗಿ ಕೆಲವು ಮಾತುಗಳಾಡಬೇಕಾಗಿದೆ. ನಮ್ಮ ತಾಲ್ಲೂಕಿನ ಸುತ್ತಮುತ್ತಲೂ ಹತ್ತಿಪ್ಪತ್ತೈದು ಸಾವಿರ ಎಕರೆಗಳಲ್ಲಿ ಹತ್ತಿ ಬೆಳೆಯಾಗುತ್ತಿದೆ. ಮೊದಲು ಅಲ್ಲಿ ಸಿ.ಒ.4 ಹತ್ತಿಯನ್ನು ಬೆಳೆಯಲಾಗುತ್ತಿತ್ತು. ಅದು ಜಾಸ್ತಿ ಈಲ್ಡನ್ನು ಕೊಡುತ್ತಿಲ್ಲ ಎಂದು ಅದನ್ನು ಬದಲಾಯಿಸಿ ಬೇರೆ ಎಂ. ಎ. 5. ಹತ್ತಿಯನ್ನು ಬೆಳೆಯುವುದಕ್ಕೆ ಪ್ರಾರಂಭಮಾಡಿದರು. ಇದಕ್ಕೆ ಲಾಂಗ್ ಸ್ಟೇಪಲ್ ಇರುತ್ತದೆಂದು ಹೇಳಲಾಗುತ್ತಿತ್ತು. ಇದರಿಂದ ಬರತಕ್ಕಷ್ಟು ಈಲ್ಡ್ ಬೇರೆ ಯಾವ ಹತ್ತಿಯಿಂದಲೂ ಬರುವುದಿಲ್ಲ ಎಂದು ಹೇಳಲಾಗುತ್ತಿತ್ತು. ಸ್ವಲ್ಪ ಕಾಲ ಬೆಳೆ ಮಾಡಿದನಂತರ ಅದನ್ನು ಕೈ ಬಿಟ್ಟರು. ನಂತರ ಅಲ್ಲಿ ಸಿ.ಐ. ಲ್ಯಾಂಡ್ ಹತ್ತಿಯನ್ನು ಬೆಳೆಯುವುದಕ್ಕೆ ಪ್ರಾರಂಭಮಾಡಿದರು. ಈ ಹೊಸ ಹತ್ತಿಯನ್ನು ಇಂಟ್ರಡ್ಯೂಸ್ ಮಾಡಿದ ನಂತರ ಅದರ ಏರು ಪೇರುಗಳನ್ನು ನೋಡಿಕೊಳ್ಳಲು ವ್ಯವಸಾಯದ ಇಲಾಖೆಯವರು ರೈತರಿಗೆ ಸೂಕ್ತ ಮಾರ್ಗದರ್ಶನ ಮಾಡಿಸುವಂತಾಯಿತು. ಆಗ ಹತ್ತೀ ಬಿತ್ತನೆ ಬೀಜವನ್ನು ವ್ಯವಸಾಯದ ಇಲಾಖೆಯವರೇ ಹಂಚುತ್ತಿದ್ದರು. ಆದರೆ ಈಗ ಆ ಎಂ. ಎ. 5. ಮತ್ತು ಸಿ. ಒ. 4. ಕಾಟನ್ ಬೆಲೆ ಬಹಳ ಕಡಿಮೆ ಇತ್ತು. ಆದರಿಂದ ಹತ್ತಿ ಬೆಳೆಯತಕ್ಕ ರೈತರು ಹಾಳಾಗಲಿಕ್ಕೆ ಹತ್ತಿದರು. ಆದರೆ ಇತ್ತೀಚೆಗೆ ನಮ್ಮ ಅರಸೀಕೆರೆಯಲ್ಲಿ ಒಂದು ಪ್ರಮುಖ ಸಹಕಾರ ಸಂಘವೊಂದನ್ನು ಸ್ಥಾಪನೆ ಮಾಡಿದ್ದಾರೆ.

(ಶ್ರೀ ಎಚ್. ಎಸ್. ಸಿದ್ದಪ್ಪ)

11-30 A.M.

ನಾನು ತಿಳಿದುಕೊಂಡಿರುವ ಹಾಗೆ ಖಾಸಗಿ ಜನ ಜೊತೆಯಾಗಿ ಸಹಕಾರ ಸಂಘ ಸ್ಥಾಪನೆ ಮಾಡಿ ಅದರ ಆಡಳಿತ ನಡೆಸುತ್ತಾರೆ. ಆದರೆ ಹತ್ತಿ ಬೆಳೆಗಾರರು ಸೇರಿ ಹತ್ತಿ ಬೆಳೆಗಾರರ ಸಹಕಾರ ಸಂಘ ಮಾಡಿದ್ದರೂ ಕೂಡ ಅದು ಬಹಳ ವಿಚಿತ್ರವಾಗಿದೆ. ಮಾನ್ಯ ಸಚಿವರು ಇದನ್ನು ಗಮನಿಸಬೇಕು. ಅರಸಿಕೆರೆಯ ಸೊಸೈಟಿಯ ನಡವಳಿಕೆಗಳಿಂದ ಕೋಟ್ಯಾಂತರ ರೂಪಾಯಿ ಮುಳುಗಿ ಹೋಗಿದೆ. ಬೆಳೆಗಾರರು, ವರ್ತಕರೂ ಸೇರಿ ಈ ಸಹಕಾರ ಸಂಘ ಮಾಡಿದ್ದಾರೆ. ಇದರಲ್ಲಿ ಸಹಕಾರ ಇಲಾಖೆಯವರ ಆಡಳಿತ ಇಲ್ಲ. ವ್ಯವಸಾಯ ಇಲಾಖೆಯವರು ಸಹಕಾರ ಸಂಘದ ಆಡಳಿತ ನಡೆಸುತ್ತಾರೆ. ಇನ್ನು ವಿಚಿತ್ರವಾದ ಪ್ರಸಂಗ ಎಂದರೆ ಜಿಲ್ಲಾಧಿಕಾರಿಗಳು ಈ ಸಹಕಾರ ಸಂಘದ ಅಧ್ಯಕ್ಷರು. ಆ ಜಿಲ್ಲಾಧಿಕಾರಿಗಳಿಗೆ ಉಸಿರು ಆಡುವುದಕ್ಕೂ ಬಿಡುವು ಇರುವುದಿಲ್ಲ. ಹತ್ತಿ ಸಹಕಾರ ಸಂಘದ ಆಡಳಿತ ನಡೆಸುವುದಕ್ಕೆ ಪುರುಸತ್ತೇ ಇಲ್ಲ. ಕಾರ್ಯದರ್ಶಿಗಳು ಏನೇನು ಬೇಕೋ ಅದನ್ನು ಬರೆದುಕೊಂಡು ಬಂದು ಜಿಲ್ಲಾಧಿಕಾರಿಯವರ ರುಜು ಹಾಕಿಸಿಕೊಂಡು ಬರುತ್ತಾರೆ. ಈ ರೀತಿ ಈ ದೊಡ್ಡ ಸಹಕಾರ ಸಂಘದ ಆಡಳಿತ ವ್ಯವಸ್ಥೆ ನಡೆಯುತ್ತಿದೆ. ಸರ್ಕಾರದವರು ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಹತ್ತಿ ಪ್ರೆಸ್ಸಿಂಗ್ ಮೆಷೀನನ್ನು ಮದ್ರಾಸಿನಿಂದ ತೆಗೆದುಕೊಂಡು ಬಂದು ಅರಸಿಕೆರೆ ಹತ್ತಿ ಸೊಸೈಟಿಗೆ ಕೊಟ್ಟರು. ಸರ್ಕಾರದವರು ಒಮ್ಮೆ ಸಾಲವಾಗಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ಒಮ್ಮೆ ಅದು ಸರ್ಕಾರದ್ದು ಎಂದು ಹೇಳುತ್ತಾರೆ. 20 ವರ್ಷದ ಹಿಂದೆ ಮೆಷಿನರಿ ಬಂದಿದ್ದರೂ ಅದು ಸರ್ಕಾರದ್ದೇ ಅಥವಾ ಸೊಸೈಟಿಯದೇ ಎಂದು ಇನ್ನು ನಿರ್ದಿಷ್ಟವಾಗಿ ಗೊತ್ತಿಲ್ಲ. ಈ ರೀತಿ ಈ ಸಹಕಾರ ಸಂಘದ ಪರಿಸ್ಥಿತಿ ಡೋಲಾಯಮಾನವಾಗಿದೆ. ಮಾನ್ಯ ಸಚಿವರು ತಕ್ಷಣ ಈ ಹತ್ತಿ ಸಹಕಾರ ಸಂಘದ ಬಗ್ಗೆ ವಿವರಣೆ ತರಿಸಿ ಸುವ್ಯವಸ್ಥೆ ಮಾಡದೆ ಹೋದರೆ, ಅರಸಿಕೆರೆ, ಹಳೇಬೀಡು, ಬೇಲೂರು ಮತ್ತು ಚಿಕ್ಕಮಗಳೂರು ಮುಂತಾದ ಭಾಗಗಳ ಹತ್ತಿ ಬೆಳೆಯುವ ರೈತರಿಗೆ ಕೊಡಲಿ ಪೆಟ್ಟು ಬಿದ್ದು ಅನ್ಯಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಈ ಸಹಕಾರ ಸಂಘದಲ್ಲಿ ಸುಮಾರು 500 ಜನ ಹೆಣ್ಣುಮಕ್ಕಳು ಕೆಲಸ ಮಾಡುತ್ತಾರೆ. ಒಂದು ಸಾರಿ ಸರ್‌ಪ್ರೈಸ್ ವಿಸಿಟ್ ಕೊಟ್ಟರೆ ಇವರ ಪರಿಸ್ಥಿತಿಯನ್ನು ಅರಿತುಕೊಳ್ಳಬಹುದು. ಕೂಲಿಗಾರರಿಗೆ ದಿನಕ್ಕೆ ಒಂದು ಸಾರಿ ಒಂದು ರೂಪಾಯಿ, ಒಂದೂವರೆ ರೂಪಾಯಿ ಮತ್ತೊಂದು ಸಾರಿ 2 ರೂಪಾಯಿ ಹೀಗೆ ಕೊಟ್ಟು ಅವ್ಯವಹಾರದ ಕೆಲಸ ಈ ಸಹಕಾರ ಸಂಘದಲ್ಲಿ ನಡೆಯುತ್ತಿದೆ ಹತ್ತಿ ಕೆಲಸ ಮಾಡುವ ಕಾಲದಲ್ಲಿ ಹತ್ತಿ ಜಿನ್ ಮಾಡುವಾಗ ಕೂಲಿಗಾರರ ಮೂಗಿನೊಳಗೆ ಹತ್ತಿ ಹೋಗಿ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇದರಿಂದ ಬಡ ಸಂಸಾರಗಳಿಗೆ ಬಹಳ ತೊಂದರೆಯಾಗಿದೆ. ಇದನ್ನೂ ವಿಮರ್ಶೆ ಮಾಡಬೇಕು. ಇಲ್ಲದಿದ್ದರೆ ಹತ್ತಿ ಸೊಸೈಟಿ ಮುಳಗಿ ಹೋಗುತ್ತವೆ ಎನ್ನುವ ಭಯ ಆ ಏರಿಯಾದವರಿಗೆ ಬಂದಿದೆ ಇನ್ನೊಂದು ಪ್ರಮುಖವಾದ ವಿಷಯ. ವ್ಯವಸಾಯ ಇಲಾಖೆಯವರು ಹತ್ತಿ ಬೀಜವನ್ನು ಮುಂಗಡವಾಗಿ ರೈತರಿಗೆ ಕೊಡುತ್ತಾರೆ ಮತ್ತು ಬೆಳೆದ ಹತ್ತಿ ಸೊಸೈಟಿಗೆ ಕೊಡಬೇಕು ಎಂದಿದೆ ಆದರೆ ಶೇಕಡ 50 ಪರ್ಸೆಂಟ್‌ಗಿಂತ ಹೆಚ್ಚಿಗೆ ಹತ್ತಿ ವರ್ತಕರಿಗೆ ಕೊಡುತ್ತಾರೆ. ಬೆಳೆದ ಹತ್ತಿ ಸಹಕಾರ ಸಂಘಕ್ಕೆ ಬಂದರೆ ರೈತರಿಗೆ ಉತ್ತಮ ಧಾರಣೆ ಸಿಗಬೇಕು. ಹಾಗಾಗದೆ ಖಾಸಗಿ ವರ್ತಕರು ಕೊಡುವ ಧಾರಣೆಗಿಂತಲೂ ಸಹಕಾರ ಸಂಘದಲ್ಲಿ ಕಮ್ಮಿ ಧಾರಣೆ ಕೊಡುತ್ತಿದ್ದಾರೆ. ಸಂಘದ ಅಧ್ಯಕ್ಷರು ನೇರವಾಗಿ ಬಾಂಬೆಗೆ ಕಳುಹಿಸಿದರೆ ಸಹಸ್ರಾರು ಬೇಲೆ ಹತ್ತಿ ಮಾರಾಟವಾಗುತ್ತದೆ, ಹಾಗೆ ಮಾಡಿ ಎಂದು ಹೇಳುತ್ತಾರೆ. ನನಗೆ ಜ್ಞಾಪಕ ಇರುವ ಹಾಗೆ 1964ರಲ್ಲಿ ನಾನು ಈ ಸಹಕಾರ ಸಂಘದ ಉಪಾಧ್ಯಕ್ಷನಾಗಿದ್ದೆ. ಆಗ ಎಂ. ಎ. 5 ಹತ್ತಿಯನ್ನು ನೇರವಾಗಿ ಬಾಂಬೆ ವರ್ತಕ ಸಂಘದವರಿಗೆ ರವಾನೆ ಮಾಡಿ ಧಾರಣೆ ಕೇಳಿದೆ, ಆಗ ಈ ಸಂಘಕ್ಕೆ ಅಗ್ರಿಕಲ್‌ಚರಲ್ ಇಲಾಖೆಯ ಡೈರೆಕ್ಟರ್ ಅಧ್ಯಕ್ಷರಾಗಿದ್ದರು ಅವರು ಯಾರೋ ಒಬ್ಬರು ಬಾಂಬೆ ರಾ ಕಾಟನ್ ಸಂಘದ ಅಧ್ಯಕ್ಷರಿಗೆ ನೇರವಾಗಿ ಮಾರಾಟ ಮಾಡಿಕೊಂಡು ಬಂದರು. ನಾನು ಸ್ವಂತ ವಿಚಾರಿಸಿದ ರೇಟಿಗಿಂತಲೂ 5-6 ರೂಪಾಯಿ ಕಮ್ಮಿ ಧಾರಣೆಗೆ ಸೊಸೈಟಿ ಹತ್ತಿ ಮಾರಿದರು. ಸರ್ಕಾರದ ಆಡಳಿತ ಈ ಹತ್ತಿ ಸೊಸೈಟಿ ಮೇಲೆ ವ್ಯವಸ್ಥಿತವಾಗಿಲ್ಲ. ಇದನ್ನು ನೋಡಿ ಸರಿಯಾಗಿ ವ್ಯವಸ್ಥೆ ಮಾಡಬೇಕು. ಎರಡನೇಯದು ಅಲ್ಲಿ ಕೆಲಸಮಾಡತಕ್ಕ 500 ಜನ ಮೇಲ್ಪಟ್ಟು ಹೆಣ್ಣುಮಕ್ಕಳಿಗೆ ಸುವ್ಯವಸ್ಥಿತವಾದ ಕೂಲಿ ಕೊಟ್ಟು ಅವರ ಜೀವನಕ್ಕೆ ವ್ಯವಸ್ಥೆ ಮಾಡತಕ್ಕ ಯೋಜನೆಯನ್ನು ಮಾನ್ಯ ಸಚಿವರು ಮಾಡಬೇಕು ಎಂದು ಮನವಿ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಇವೊತ್ತು ನಾನ್ ಅಫಿಷಿಯಲ್ ಡೇ. ಯಾವ ಯಾವ ನಿರ್ಣಯಗಳಿಗೆ ಎಷ್ಟೆಷ್ಟು ಕಾಲ ಎಂದು ನಿಗದಿ ಮಾಡಬೇಕಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಕಮಿಟಿ ಇದ್ದರೂ ಕೂಡ, ಸ್ಪೀಕರ್‌ರವರು ತಮಗೆ ಇರತಕ್ಕ ಅಧಿಕಾರವನ್ನು ಉಪಯೋಗ ಮಾಡಿ ಯಾವ ಯಾವ ನಿರ್ಣಯಗಳಿಗೆ ಎಷ್ಟೆಷ್ಟು ಕಾಲ ಎಂದು ನಿಗದಿ ಮಾಡಿದ್ದರೆ ಒಳ್ಳೆಯದಿತ್ತು. ಹತ್ತಿ ವಿಷಯ ಪ್ರಾಮುಖ್ಯತೆ ಇಲ್ಲ ಎಂದು ಹೇಳುವುದಿಲ್ಲ. ಇದಾದನಂತರ ಶ್ರೀ ಟಿ. ಆರ್. ಶಾಮಣ್ಣನವರ ರೆಸಲ್ಯೂಷನ್ ಇದೆ. ಅದು ಸ್ಲಂ ಕ್ಲಿಯರೆನ್ಸಿಗೆ ಸಂಬಂಧಪಟ್ಟಿದೆ. ಲ್ಯಾಂಡ್ ರಿಫಾರಮ್ಸ್ ಬಗ್ಗೆ ಶ್ರೀ ಬಿ. ವಿ. ಕಾಕ್ಕಿಲಾಯರವರ ನಿರ್ಣಯ ಇದೆ. ಅದಾದನಂತರ ಮೈಸೂರು ರಾಜ್ಯಕ್ಕೆ ಕರ್ಣಾಟಕ ಎಂದು ಹೆಸರನ್ನು ಇಡಬೇಕು ಎನ್ನುವುದು ನನ್ನ ನಿರ್ಣಯ. ಇದು ಬಹಳ ಪ್ರಾಮುಖ್ಯವಾದ ವಿಷಯ ಎಂದು ಒತ್ತಿ ಹೇಳಬೇಕಾಗಿಲ್ಲ. ಆದುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ, ಹತ್ತಿಗೆ ಸಂಬಂಧಪಟ್ಟ ಈ ನಿರ್ಣಯವನ್ನು ಆದಷ್ಟು ಕೂಡಲೇ ಗೆಳೆಯರು ಮುಗಿಸಿ ಮಾನ್ಯ ಮಂತ್ರಿಗಳಿಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡುವುದು ಒಳ್ಳೆಯದು.

ಕರ್ನಾಟಕ ಎಂದು ಹೆಸರು ಇಡಬೇಕೆಂದಿರುವ ನಿರ್ಣಯ ರೀಚ್ ಆಗುವ ಹಾಗೆ ಮಾಡಲು ಎಲ್ಲರೂ ಕೂಡ ಪ್ರಯತ್ನ ಮಾಡಿ. ಸಾಧ್ಯವಾದರೆ ತೆಗೆದುಕೊಳ್ಳೋಣ. I am speaking in the interest of Mysore. ದಯಮಾಡಿ ಬಣಕಾರ್ ಮತ್ತು ಇನ್ನು ಯಾರು ಗೆಳೆಯರು ಇದ್ದಾರೆ ಅವರನ್ನು ಸ್ಪೀಕರ್‌ರವರು ಕರೆಯಬಾರದು, ನಾವು ಅವರ ಮೇಲೆ ಒತ್ತಡ ಹೇರಿಸಿದರೆ ತಪ್ಪಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳು ಉತ್ತರ ಕೊಡುವುದಕ್ಕೆ ತಯಾರಾಗಿದ್ದಾರೆ. ಆದಷ್ಟು ಕೂಡಲೇ ಈ ನಿರ್ಣಯದ ಮೇಲೆ ಚರ್ಚೆಯನ್ನು ಮುಗಿಸಿ ಮಂತ್ರಿಗಳು ಉತ್ತರ ಕೊಡುವ ಹಾಗೆ ಏರ್ಪಾಡು ಮಾಡಬೇಕು. ಒಂದು ಗಂಟೆಗೆ ಈ ಸಭೆ ಮುಕ್ತಾಯವಾಗಬೇಕು. ಹಿಂದೆ ಈ ಅಸೆಂಬ್ಲಿ 5–6 ಗಂಟೆಯಿಂದ ಹಿಡಿದು 9 ಗಂಟೆಯವರೆಗೂ ನಡೆದಿರುವುದು ರಿಕಾರ್ಡ್‌ನಲ್ಲಿ ಇದೆ. ಈ ದೃಷ್ಟಿಯಿಂದ ಈ ಸಭೆಯನ್ನು 1 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ಮುಂದುವರೆಸಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಈ ಕರ್ನಾಟಕ ಎಂಬ ಹೆಸರಿನ ಬಗ್ಗೆ ಇರತಕ್ಕ ರೆಸಲ್ಯೂಷನ್ ರೀಚ್ ಆಗುವ ಹಾಗೆ ಮಾಡಿ ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ್).—ಕರ್ನಾಟಕ ರೆಸಲ್ಯೂಷನ್ ರೀಚ್ ಆಗುವ ಹಾಗೆ ಮಾಡಿದರೆ ಸಂತೋಷ. ಆದರೆ ಅಷ್ಟೇ ಪ್ರಾಮುಖ್ಯವಾದ ಮತ್ತು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ ಭೂಸುಧಾರಣೆಯ ಬಗ್ಗೆ ನನ್ನದೂ ಒಂದು ಸೂಚನೆ ಇದೆ.

ಅಧ್ಯಕ್ಷರು.—ಈ ನಿರ್ಣಯದ ಮೇಲೆ ಚರ್ಚೆ 10½ ಗಂಟೆಗೆ ಶುರುವಾಯಿತು. ಹೋದಸಾರ್ತಿ 5 ನಿಮಿಷ ತೆಗೆದುಕೊಂಡಿದ್ದಾರೆ. ಈಗ 1½ ಗಂಟೆ ತೆಗೆದುಕೊಂಡಿದ್ದಾರೆ. ತಮ್ಮ ರೆಸಲ್ಯೂಷನ್ ತೆಗೆದುಕೊಳ್ಳಬೇಕೆಂದು ತಮಗೆ ಆತುರತೆ ಇದೆ ನಿಜ. ಆದರೆ ಈ ನಿರ್ಣಯ ಬೆಳೆಗಾರರಿಗೆ, ವ್ಯವಸಾಯಗಾರರಿಗೆ, ವ್ಯಾಪಾರಗಾರರಿಗೆ ಸಂಬಂಧಪಟ್ಟದ್ದು. ಆದ್ದರಿಂದ ಇದನ್ನು ಇಷ್ಟಕ್ಕೇ ನಿಲ್ಲಿಸಿ ಎಂದು ಹೇಳುವುದಕ್ಕೆ ನನ್ನ ಅಧಿಕಾರ ಏನೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್.—ಒಂದೊಂದು ನಿರ್ಣಯಕ್ಕೆ ಇಷ್ಟಿಷ್ಟು ಕಾಲಾವಕಾಶ ಎಂದು ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು.—ಈಗಾಗಲೇ ಮಾಡದೇ ಇರುವುದನ್ನು ಈಗ ಮಾಡಿ ಎಂದು ಹೇಗೆ ಹೇಳುವುದು ?

ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರ್).—ಅಧ್ಯಕ್ಷಣಿಯವರೇ, ಹತ್ತಿ ಫಸಲಿನ ಮಾರಾಟದ ಬಗ್ಗೆ ಏನು ನಿರ್ಣಯ ತಂದಿದಾರೋ ಅದು ನಿಜವಾಗಿಯೂ ಬಹಳ ಮುಖ್ಯವಾದುದು. ನಮ್ಮ ರಾಜ್ಯದಲ್ಲಿ ಹತ್ತಿ ಕ್ಷೇತ್ರ ಸುಮಾರು 10½ ಲಕ್ಷ ಹೆಕ್ಟೇರ್ ಇದೆ. ಮೈಸೂರು ರಾಜ್ಯದಲ್ಲಿ ಇದು ಬಹಳ ಪ್ರಾಮುಖ್ಯವಾದುದು. ರಾಜ್ಯದ ಆರ್ಥಿಕ ಭದ್ರತೆ ಹತ್ತಿ ಬೆಳೆಯುವ ರೈತರನ್ನು ಅವಲಂಬಿಸಿದೆ, ಏತಕ್ಕೆಂದರೆ ಹತ್ತಿ ಫಸಲು ಬಿಟ್ಟರೆ ಬೇರೆ ಯಾವ ರೊಕ್ಕದ ಫಸಲೂ ಇಷ್ಟೊಂದು ಪ್ರಮಾಣದಲ್ಲಿ ಬೆಳೆಯುತ್ತಾ ಇಲ್ಲ. ಆದುದರಿಂದ ಇದು ಪ್ರಾಮುಖ್ಯವಾದುದು. ಹತ್ತಿ ಬೆಳೆಯನ್ನು ಮಾರಾಟ ಮಾಡಲಿಕ್ಕೆ ನಮ್ಮ ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ ಹತ್ತಿ ಕಾರ್ಪೊರೇಷನ್‌ನವರಾಗಲಿ ಸೂಕ್ತ ಕ್ರಮ ತೆಗೆದುಕೊಳ್ಳಲಿಕ್ಕೆ ನಿಜವಾಗಿಯೂ ಮುಂದಾಗಬೇಕು, ನೀವು ಈವೊತ್ತಿನ ದಿವಸ ಅವರ ಮೇಲೆ ಒತ್ತಾಯ ಮಾಡುವುದು ಪ್ರಾಮುಖ್ಯವಾದುದು. ಹತ್ತಿ ಬೆಳೆ ಮಾರಾಟವಾಗದೆ ಮೂಲೆಯಲ್ಲಿ ಬಿದ್ದಿವೆ. ಖರೀದಿ ಮಾಡುವ ಸಂಸ್ಥೆಗಳು ಮುಂದೆ ಬರುತ್ತಾ ಇಲ್ಲ. ರೈತರಿಗೆ ದೊಡ್ಡ ಪೆಟ್ಟು ಬೀಳುವ ಲಕ್ಷಣ ಇದೆ. ಮೊಟ್ಟ ಮೊದಲನೆಯದಾಗಿ ಬೆಳೆದ ಹತ್ತಿ ಮಾರಾಟ

(ಶ್ರೀ ಬಿ. ಜಿ. ಬಣಕಾರ್)

ವಾಗುತ್ತಾ ಇಲ್ಲ. ಮಾರಾಟವಾಗಿದ್ದರೂ ಬಹಳ ಕಡಿಮೆ ಬೆಲೆ ಇದೆ. 200 ರೂಪಾಯಿಗೂ ಹತ್ತಿ ಕೊಳ್ಳಲಿಕ್ಕೇ ತಯಾರಿಲ್ಲ. ಇಂತಹ ದಾರುಣ ಪ್ರಸಂಗದಲ್ಲಿ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡದೇ ಹೋದ ಪಕ್ಷದಲ್ಲಿ, ರೈತರಿಗೆ ದೊಡ್ಡ ಪೆಟ್ಟು ಬೀಳುತ್ತದೆ. ಸರ್ಕಾರಕ್ಕೂ ಕೂಡ ದೊಡ್ಡ ಪೆಟ್ಟು ಬೀಳುತ್ತದೆ. ಸರ್ಕಾರ ಸಾಲ ಕೊಟ್ಟಂಥ ದುಡ್ಡು ಕೋಟ್ಯಾಂತರ ರೂಪಾಯಿ ಇದ್ದು ಬ್ಯಾಂಕ್ ಮುಖಾಂತರ ಕೊಟ್ಟಿದೆ. ಹತ್ತಿ ಮಾರಾಟ ಆಗಿದಿದ್ದರೆ ರಾಜ್ಯದಲ್ಲಿ ಇರುವ ಅನೇಕ ಸಹಕಾರ ಸಂಘಗಳ ಮತ್ತು ಬ್ಯಾಂಕ್ ಹಣ ವಸೂಲಾಗದೆ ಇರುತ್ತದೆ ಎನ್ನುವುದನ್ನು ಮರೆಯತಕ್ಕದ್ದಲ್ಲ. ಹತ್ತಿ ಕಾರ್ಪೊರೇಷನ್ ಏನು ಇದೆ ಅದು ನಮ್ಮ ರಾಜ್ಯದಲ್ಲಿ ಸಮರ್ಪಕವಾದ ರೀತಿಯಲ್ಲಿ ಖರೀದಿ ಮಾಡುತ್ತಾ ಇಲ್ಲ. ಈ ಕಾರ್ಪೊರೇಷನ್ ಮಹಾರಾಷ್ಟ್ರ ಮತ್ತು ಗುಜರಾತ್, ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ ಪರಿಣಾಮಕಾರಿಯಾದ ರೀತಿಯಲ್ಲಿ ಖರೀದಿ ಮಾಡುತ್ತಾ ಇದೆ ಎಂದು ಕೇಳಿದ್ದೇನೆ. ದುರ್ದೈವದಿಂದ ಈ ರಾಜ್ಯದಲ್ಲಿರುವ ಹತ್ತಿ ಕಾರ್ಪೊರೇಷನ್ ಸಮರ್ಪಕವಾದ ರೀತಿಯಲ್ಲಿ ಖರೀದಿ ಮಾಡಿಲ್ಲ. ಈ ಒಂದು ಕಾರಣದಿಂದ ನಮ್ಮ ರಾಜ್ಯದಲ್ಲಿ ಹತ್ತಿ ಸಿಕ್ಕಾಪಟ್ಟೆ, ಬೇಕು ಬೇಕಾದಷ್ಟು ಬಿದ್ದಿವೆ. ಈ ಒಂದು ದಿಸೆಯಲ್ಲಿ ನಮ್ಮ ರಾಜ್ಯ ಸರ್ಕಾರದವರು ಇಂಡಿಯಾ ಸರ್ಕಾರದ ಮೇಲಾಗಲಿ, ಕಾಟನ್ ಕಾರ್ಪೊರೇಷನ್ ಮೇಲಾಗಲಿ ಒತ್ತಾಯ ತಂದು ಹತ್ತಿಗೆ ಹೆಚ್ಚಿನ ಬೆಲೆ ಕೊಡಿಸಿ, ರೈತರಿಗೆ ಅನುಕೂಲ ಮಾಡಬೇಕು ಎನ್ನುವ ಸೂಚನೆ ಏನು ಇದೆ ಅದನ್ನು ನಾನು ಸ್ವಾಗತಿಸುತ್ತೇನೆ. ಮತ್ತು ಈ ದಿಸೆಯಲ್ಲಿ ನಮ್ಮ ಅನುಭವಿತ ವ್ಯವಸಾಯ ಮಂತ್ರಿಗಳು ಮತ್ತು ಸಹಕಾರ ಮಂತ್ರಿಗಳು ವಿಚಾರ ವಿನಿಮಯ ಮಾಡಿ ಸಹಕಾರ ಸಂಘಗಳ ಮುಖಾಂತರವಾಗಲಿ, ಕಾಟನ್ ಕಾರ್ಪೊರೇಷನ್ ಮುಖಾಂತರವಾಗಲಿ ಪರಿಣಾಮಕಾರಿಯಾದ ರೀತಿಯಲ್ಲಿ ಹತ್ತಿ ಖರೀದಿ ಮಾಡಲಿಕ್ಕೆ ಏರ್ಪಾಡು ಮಾಡುತ್ತಾರೆ ಎನ್ನುವ ಆಸೆಯಿಂದ ಈ ಠರಾವು ತಂದಿದ್ದು ಏನು ಇದೆ ಅದನ್ನು ವಿನಯ ಪೂರ್ವಕವಾಗಿ ಬೆಂಬಲಿಸಿ ಸ್ವಾಗತ ಮಾಡುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ವ್ಯವಸಾಯ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈವರೆಗೆ ಮಾನ್ಯ ಸದಸ್ಯರು ಈ ಕಡೆಯವರು, ಆ ಕಡೆಯವರು ಆಡಿದ ಮಾತುಗಳನ್ನು ನಾನು ಕೇಳಿದೆ. ಒಕ್ಕಲಿಗರ ಹಿತಕ್ಕಾಗಿ ಅವರು ತಮ್ಮ ಹೃದಯವನ್ನು ಬಿಚ್ಚಿ ಆಡಿದ್ದಾರೆ. ನನ್ನ ಬಗ್ಗೆ ಮತ್ತು ಸರ್ಕಾರದ ದಕ್ಷ ಆಡಳಿತದ ಬಗ್ಗೆ ಅವರು ಆಡಿದ ಮಾತುಗಳಿಗಾಗಿ ನನ್ನ ಅಭಿನಂದನೆಗಳನ್ನು ಸಲ್ಲಿಸಿ ಅವರು ಆಡಿದ ಮಾತುಗಳೆಲ್ಲವನ್ನೂ ಸರ್ಕಾರದವರು ಚಾಚೂ ತಪ್ಪದೆ ಲಕ್ಷ ಪೂರ್ವಕವಾಗಿ ವಿಮರ್ಶೆ ಮಾಡಿ ಅವುಗಳಿಗೆ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಮಾತನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೊಟ್ಟ ಮೊದಲನೆಯದಾಗಿ ಈ ನಿರ್ಣಯವನ್ನು ಮಂಡಿಸಿದಂಥ ಶ್ರೀ ಗೋಪೀನಾಥ್ ಆರ್. ಸಾಂಧ್ರ ಅವರು ಅನೇಕ ಸಲಹೆಗಳನ್ನು ಮಾಡಿದ್ದಾರೆ. ಹತ್ತಿ ಪೇಟೆಯಲ್ಲಿ ಬಂದು ಬಿದ್ದಿದೆ. ಹತ್ತಿ ಖರೀದಿಗಾರರು ಇಲ್ಲದಂತಾಗಿದೆ. ಸಹಕಾರ ಸಂಘಗಳ ಮುಖಾಂತರ ಹತ್ತಿ ಮಾರಾಟಕ್ಕೆ ಬಂದನಂತರ ಸಹಕಾರ ಸಂಘಗಳಲ್ಲಿ ಸಹ ಖರೀದಿಗಾರರ ಅಭಾವ ಬಂದಂತಾಗಿದೆ. ನಿಜವಾಗಿಯೂ ಹೇಳುವುದಾದರೆ ರೈತನ ಮಾಲು ಇಂದು ಸರ್ಕಾರದ ಬೆಂಬಲದಿಂದ ಮಾರಾಟವಾಗಬೇಕಾದರೆ, ಪೇಟೆಯಲ್ಲಿ ಉತ್ತಮವಾದ ಧಾರಣೆ ಬರಬೇಕಾದರೆ, ಸಹಕಾರ ಸಂಘಗಳ ಸಂಪೂರ್ಣವಾದ ಸಹಕಾರ ಬೇಕಾಗುತ್ತದೆ. ವ್ಯಕ್ತಿಗತವಾದಂಥ ವ್ಯವಹಾರಸ್ಥರ ಹಿಡಿತದಿಂದ ರೈತನು ಮುಕ್ತನಾಗಬೇಕಾದರೆ ಸಹಕಾರ ಸಂಸ್ಥೆಗಳ ಮುಖಾಂತರ ಮಾರಾಟವಾಗುವುದು ಅತ್ಯಾವಶ್ಯಕ. ದುರ್ದೈವದಿಂದ ಸಹಕಾರೀ ರಂಗದಲ್ಲಿ ಕ್ರೆಡಿಟ್ ಆರ್ಗನೈಸೇಷನ್ ಇದೆ, ಮಾರ್ಕೆಟಿಂಗ್ ಆರ್ಗನೈಸೇಷನ್ ಇದೆ, ಆದರೆ ಪರ್ಚೇಸಿಂಗ್ ಆರ್ಗನೈಸೇಷನ್ ಅಭಾವ ಕಂಡುಬರುತ್ತಿದೆ. ಅಲ್ಲೊಂದು ಇಲ್ಲೊಂದು ಖರೀದಿಗಾರರ ಸಂಘವನ್ನು ಪ್ರಾರಂಭ ಮಾಡಿದ್ದರೂ ಸಹ ಈ ಸಂಘ ಸಾಕಷ್ಟು ರೈತರಿಗೆ ಉಪಯುಕ್ತವಾದ ರೀತಿಯಲ್ಲಿ ಮಾಲುಗಳನ್ನು ಖರೀದಿ ಮಾಡಲಿಕ್ಕೆ ಸಮರ್ಥನೀಯವಾಗಿ ಕೆಲಸ ಮಾಡಲಿಲ್ಲ ಎನ್ನುವ ಮಾತನ್ನು ನಾವು ಇಲ್ಲಿ ನೆನೆಯಬೇಕಾಗಿದೆ. ರೈತನ ಮಾಲು ಹುಬ್ಬಳ್ಳಿಯಲ್ಲಾಗಲಿ, ಗದಗಿನಲ್ಲಾಗಲಿ, ಬಳ್ಳಾರಿಯಲ್ಲಾಗಲಿ, ರಾಯಚೂರಿನಲ್ಲಾಗಲಿ, ಬಿಜಾಪುರದಲ್ಲಾಗಲಿ, ಅರಸೀಕೆರೆಯಲ್ಲಾಗಲಿ, ಎಲ್ಲಾ ಕಡೆಗೂ ಖರ್ಚಾಗದೆ ಸ್ವಲ್ಪ ಹೆಚ್ಚು ಕಡಿಮೆ ಒಂದೇ ತೆರನಾದ ರೀತಿಯಲ್ಲಿ ಅವರಿಗೆ ಕಷ್ಟ ಇದೆ. ಮೈಸೂರು ಸರ್ಕಾರದವರು ಈ ವಿಷಯವನ್ನು ತೀವ್ರವೇ ಗಮನಕ್ಕೆ ತೆಗೆದುಕೊಂಡು ಹಿಂದೂಸ್ಥಾನ ಸರ್ಕಾರದೊಂದಿಗೆ ಚರ್ಚೆ ಮಾಡಿ ಈ ಹತ್ತಿ ಖರೀದಿ ಮಾಡುವಂತೆ ಕಾಟನ್ ಕಾರ್ಪೊರೇಷನ್ನನ್ನು ಕೇಳಿದೆವು. ಫುಲ್ ಪ್ರೆಸ್ಡ್ ಬೇಲ್ ರೂಪದಲ್ಲಿ ಎಷ್ಟೋ ಹತ್ತಿಯನ್ನಾದರೂ ತೆಗೆದುಕೊಳ್ಳುವುದಕ್ಕೆ ಕಬೂಲ್ ಇದೆ ಎಂದು ಅವರು ಹೇಳಿದರೂ ನಮ್ಮ ರಾಜ್ಯದಲ್ಲಿ ರೈತನ ಸ್ವಭಾವ

ಕ್ಕನ್ನುಗುಣವಾಗಿ ಹತ್ತಿಯನ್ನು ಬೇಲ್ ಮಾಡಿ, ಜಿನ್ ಮಾಡಿಸಿ, ಪ್ರೆಸ್ ಮಾಡಿ ಮಾರುವಂಥ ಸಂಭವವಿಲ್ಲ. ನಾವು ಗುಜರಾತ್ ಮಾದರಿಯನ್ನು ಅನುಸರಿಸಬೇಕು. ಅದನ್ನು ಜಿನ್ ಮಾಡಿಸಿ, ಪ್ರೆಸ್ ಮಾಡಿದ ನಂತರ ನೇರವಾಗಿ ಮಿಲ್‌ನವರ ಜೊತೆ ಸಂಪರ್ಕ ಇಟ್ಟುಕೊಂಡು ಅವರಿಗೆ ಮಾರಾಟ ಮಾಡುವ ಸಂಪ್ರದಾಯ ಬಹು ದಿವಸಗಳಿಂದ ಹಾಕಿಕೊಂಡು ಬಂದಿದ್ದಾರೆ. ಇಲ್ಲಿ ಆ ರೀತಿ ಆಗ ಬೇಕಾದರೆ ನಮ್ಮ ಸಹಕಾರ ಸಂಘಗಳು ಹತ್ತಿ ಮಾರಾಟ ಮಾಡುವ ಸಾಯುಕ್ತತೆ ಪಡೆಯಬೇಕಾಗಿದೆ. ಆ ಸಾಯುಕ್ತತೆ ಬಂದಿಲ್ಲ. ಗ್ರೇಡಿಂಗ್ ಮಾಡಿದ ಹತ್ತಿಯ ಆಧಾರದ ಮೇಲೆ ಮಾರಾಟ ನಿಗದಿ ಮಾಡಬೇಕಾದರೆ, ರೈತರಲ್ಲಿ ಪರಸ್ಪರ ಅಚಲ ವಿಶ್ವಾಸಬೇಕಾಗುತ್ತದೆ. ಅಂಥಾದ್ದನ್ನು ಇಲ್ಲೂ ಸ್ಥಾಪನೆ ಮಾಡಲಿಕ್ಕೆ, ಸಹಕಾರ ಸಂಘಗಳ ಮುಖಾಂತರ, ರೆಗ್ಯುಲೇಟೆಡ್ ಮಾರ್ಕೆಟ್ ಮುಖಾಂತರ, ಉತ್ತಮ ಗ್ರೇಡಿಂಗ್ ಅನುಸರಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಾ ಇದೆ. ಈ ಪ್ರಯತ್ನಕ್ಕೆ ರೈತನ ಸಹಕಾರ ಅತ್ಯಂತ ಅವಶ್ಯಕ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕಾಟನ್ ಕಾರ್ಪೊರೇಷನ್ ಸರ್ಕಾರದ ವಿನಂತಿಯನ್ನು ಮನ್ನಿಸಿ ಈಪೊತ್ತಿನ ದಿವಸ ಹತ್ತಿಯನ್ನು ಇದ್ದಕ್ಕಿದ್ದ ಸ್ಥಿತಿಯಲ್ಲಿ ಶಕ್ಯವಾದಷ್ಟು ಪ್ರಮಾಣದಲ್ಲಿ ಕೊಳ್ಳಲಿಕ್ಕೆ ಮುಂದೆ ಬಂದಿದೆ. ಕಾಟನ್ ಕಾರ್ಪೊರೇಷನ್ನಿನವರು 70 ಸಾವಿರ ಬೇಲ್‌ಗಳನ್ನು ನಾವು ಖರೀದಿ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ರಾಯಚೂರಿನಲ್ಲಿ ಖರೀದಿ ನಡೆದಿದೆ. ಬಳ್ಳಾರಿಯಲ್ಲಿ ಖರೀದಿಗೆ ಹೋಗಬಹುದು. ಹುಬ್ಬಳ್ಳಿಯಲ್ಲಿ, ಗದಗ್‌ನಲ್ಲಿ ಖರೀದಿ ನಡೆದಿದೆ, ಬಿಜಾಪುರ್‌ನಲ್ಲಿ ಹೋಗಲಿಕ್ಕೆ ತಿಳಿಸಿದ್ದಾರೆ. ಎಲ್ಲಾ ಹತ್ತಿಯನ್ನೂ ಅವರೇ ಖರೀದಿ ಮಾಡುತ್ತಾರೆ. ಕಾಟನ್ ಕಾರ್ಪೊರೇಷನ್ ಹೊಸದಾಗಿ ಪ್ರಾರಂಭವಾಗಿರುವುದರಿಂದ ಟೆಕ್ನಿಕಲ್ ಹ್ಯಾಂಡ್ಸ್ ಅಭಾವ ಇದೆ. ಅವರು ಹೇಳುವುದು ಇಷ್ಟೆ, ನಮ್ಮ ಸಹಕಾರ ಸಂಘಗಳು ಮುಂದೆ ಬಂದು ಆ ಮೂಲಕ ಫುಲ್ ಪ್ರೆಸ್ಡ್ ಬೇಲ್ ಮಾಡಿ ಇಡಿಸಿದರೆ ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಸಹಕಾರ ಸಂಘಗಳಿಗೆ ಹಣದ ಕೊರತೆ ಇರುವುದರಿಂದ ಅವುಗಳಿಗೆ ಸ್ವಲ್ಪ ಕಷ್ಟವೆಂದು ಹೇಳಿದರು. ಸಹಕಾರ ಸಂಘಗಳಿಗೆ ಬೇಕಾಗುವ ಮಾರ್ಜಿನ್ ಮನಿ ವಿಷಯವಿದೆ, ಹತ್ತಿ ಖರೀದಿ ಮಾಡಲು ಅದರ ಸಲುವಾಗಿ ಬ್ಯಾಂಕಿನಿಂದ ಸಾಲ ಪಡೆಯಬೇಕು. ಆ ವಿಚಾರವನ್ನು ಶ್ರೀ ಸಿಂಧೆಯವರು ಬಂದಿದ್ದಾಗ ಪ್ರಸ್ತಾಪಮಾಡಿದೆ, ಸಹಕಾರ ಸಂಘಗಳಿಗೆ ಈ ಸಂಬಂಧವಾಗಿ ಬೇಕಾದ ಹಣ ಕೊಡುವುದಾಗಿ ಅವರು ಹೇಳಿದರು. ಹೀಗೆ ಎನ್ ಸಿ ಡಿ ಸಿ ಛೇರ್ಮನ್ ಶ್ರೀಮಾನ್ ಸಿಂಧೆಯವರು 20 ಲಕ್ಷ ರೂಪಾಯಿಗಳನ್ನು ಮಾರ್ಜಿನ್ ಮನಿ ಬೇಕಾದ ಸಹಕಾರ ಸಂಘಗಳಿಗೆ ಷೇರು ರೂಪವಾಗಿ ಕೊಡಲು ಒಪ್ಪಿದ್ದಾರೆ. ಈ ವಿಚಾರಕ್ಕೆ ರಿಸರ್ವ್ ಬ್ಯಾಂಕು ಕೂಡ ಒಪ್ಪಿಗೆ ನೀಡಿದೆ. ಬಳ್ಳಾರಿ ಮತ್ತು ರಾಯಚೂರಿನಲ್ಲಿ ಕಠಿಣ ಪರಿಸ್ಥಿತಿ ಇದೆ. ಅಲ್ಲಿ ಸೆಂಟ್ರಲ್ ಬ್ಯಾಂಕು ಸಹಕಾರ ಸಂಘಗಳಿಗೆ ಹಣ ಕೊಡಬೇಕೆಂದು ಶಿಫಾರಸು ಮಾಡಿದ್ದರೂ ಹಣ ತೆಗೆದುಕೊಳ್ಳಲು ಸಹಕಾರ ಸಂಘಗಳಿಗೆ ಶಕ್ತಿಯಿಲ್ಲದಿರುವುದರಿಂದ ಅವಕ್ಕೆ ಸಾಲ ಸಿಕ್ಕುತ್ತಿಲ್ಲ. ರಿಸರ್ವ್ ಬ್ಯಾಂಕು ಯಾವ ದೃಷ್ಟಿಯಿಂದ ನೋಡುವುದೋ ಆ ದೃಷ್ಟಿಯಿಂದ ನೋಡಿದಾಗ ಅಲ್ಲಿನ ಎರಡು ಸಂಘಗಳಿಗೆ ಸಾಲ ದೊರೆಯದೇ ಹೋಗಿದೆ. ಇದರಿಂದ ರೈತರಿಗೆ ತೊಂದರೆಯಾಗಿದೆ. ಈ ವಿಚಾರವನ್ನು ನಾನು ಸಹಕಾರಿ ಕ್ಷೇತ್ರದ ಮಂತ್ರಿಗಳೊಡನೆ ಚರ್ಚೆಮಾಡಿದೆ. ಅವರು ನನ ಸಲಹೆಗೆ ಒಪ್ಪಿದರು. ತೀವ್ರವಾಗಿ ರೈತರಿಗೆ ಹಿತ ಮಾಡಲು ಕ್ರಮ ಕೈಕೊಳ್ಳಬೇಕು, ರೈತರಿಗೆ ಹಣ ಸಹಾಯಮಾಡಲು ಅಥವಾ ಖರೀದಿ ಮಾಡಲು ಸಹಾಯ ದೊರಕಿಸಲು ಪ್ರಯತ್ನ ಮಾಡಿ ತಕ್ಕ ಕ್ರಮ ಕೈಕೊಳ್ಳಲಾಗುವುದು.

ಇಷ್ಟೇ ಅಲ್ಲ ಕಾಟನ್ ಕಾರ್ಪೊರೇಷನ್ನಿನ ಮುಂದೆ ಹೋಗಿ ರೈತರ ಹತ್ತಿ ಖರೀದಿ ಮಾಡಲು ಸಹಾಯ ಮಾಡಬೇಕೆಂದು ಕೇಳುವ ವಿಚಾರ ಸಹ ಇದೆ. ಹೀಗೆ ಮಾಡಿ ಎಲ್ಲ ಹತ್ತಿಯನ್ನೂ ಖರೀದಿ ಮಾಡಲು ಪ್ರಯತ್ನಮಾಡುತ್ತಿದ್ದೇವೆ.

ಆಮೇಲೆ ಆಮದು ಮತ್ತು ರಫ್ತು ಇದಕ್ಕೆ ಸಂಬಂಧಪಟ್ಟ ನೀತಿಯ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ಭಾರತ ಸರ್ಕಾರಕ್ಕೆ ಸಂಬಂಧಪಟ್ಟ ಪ್ರಶ್ನೆಯಾದುದರಿಂದ ಈ ವಿಚಾರ ಪ್ರಸ್ತಾಪಿಸುವುದಿಲ್ಲ. ನಮ್ಮಲ್ಲಿ ಹತ್ತಿ ಬೆಳೆ ಹೆಚ್ಚಾಗಿದೆ, ಹೊರಗಿನಿಂದ ತರಿಸುವುದನ್ನು ನಿಲ್ಲಿಸಿ ಇದನ್ನು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಇಲ್ಲಿನ ಹತ್ತಿಗೆ ಬೆಲೆ ಕಡಿಮೆಯಾಗುವುದು, ಇದಕ್ಕೆ ಯೋಗ್ಯ ವ್ಯವಸ್ಥೆಮಾಡಬೇಕು, ಹೊರಗಿನಿಂದ ತರಿಸುವುದನ್ನು ಬಂದುಮಾಡಿ, ಧಾರವಾಡ ಮತ್ತು ರಾಯಚೂರು ಕಡೆ ಹತ್ತಿ ಬೆಳೆ ಹೆಚ್ಚಾಗಿದೆ ಎಂದು ಭಾರತ ಸರ್ಕಾರಕ್ಕೆ ತಿಳಿಸಿದ್ದೇವೆ. ಇದಲ್ಲದೆ ಪ್ರತಿ ವರ್ಷ ಇಂಥ ಪರಿಸ್ಥಿತಿ ಬಂದರೆ ನಿವಾರಣೆಮಾಡಲು ರೈತರಿಗಿರುವ ತೊಂದರೆ ಪರಿಹರಿಸಲು ಈ ಸಭೆಯ ಅಭಿಪ್ರಾಯ ಪಡೆಯುವುದು ನಮ್ಮ ಕರ್ತವ್ಯ. ಕಾಟನ್ ಕಾರ್ಪೊರೇಷನ್ ಹೇಳಿರುವಂತೆ ನಮ್ಮ ಸಹಕಾರ ಸಂಘಗಳು ಹತ್ತಿಯನ್ನು ಫುಲ್ ಪ್ರೆಸ್ಡ್ ಬೇಲ್ ಆಗಿ ಮಾಡಿ ಮಾರಾಟಮಾಡಬೇಕಾಗುವುದು. ದಳ್ಳಾಳಿಗಳಿಗೆ ಲಾಭ ದೊರೆಯುವುದನ್ನು ಕಡಮೆಮಾಡಿ ಆ ಲಾಭ ನೇರವಾಗಿ

(ಶ್ರೀ ಕೆ. ಎಚ್. ಪಾಟೀಲ್)

ಒಕ್ಕಲಗರಿಗೆ ದೊರೆಯುವಂತೆ ನಂತರ ಕನ್‌ಸ್ಯೂಮರ್‌ಗೆ ಸಿಕ್ಕುವಂತೆ ಮಾಡಬೇಕೆಂಬ ಅಪೇಕ್ಷೆ ಇದೆ. ಇದಕ್ಕಾಗಿ ಮೈಸೂರು ಸರ್ಕಾರದವರು ಮುಂದಿನ ವರ್ಷ ಜಿನ್ನಿಂಗ್ ಫ್ಯಾಕ್ಟರಿ, ಪ್ರೆಸ್ಸಿಂಗ್ ಫ್ಯಾಕ್ಟರಿ ತೆರೆಯುವರು. ಸಾಕಷ್ಟು ಷೇರು ಹಾಕಲು ಮತ್ತು ಸಾಲ ಕೊಡಲು ಎನ್. ಸಿ. ಡಿ. ಸಿ. ಆಶ್ವಾಸನೆ ಕೊಟ್ಟಿದೆ. ಸಂಘಗಳು ಮುಂದೆ ಬಂದು ತೀವ್ರವಾಗಿ ಈ ಯೋಜನೆ ಕಾರ್ಯಗತ ಮಾಡ ಬೇಕಾಗಿದೆ. ಒಂದು ವೇಳೆ ಯಾವುದಾದರೂ ಭಾಗದಲ್ಲಿ ಇಂಥ ಫ್ಯಾಕ್ಟರಿಗಳನ್ನು ಸ್ಥಾಪಿಸದಿದ್ದರೆ ರೈತರು ಕಂಗಾಲಾಗಬೇಕಾಗಿಲ್ಲ. ಅಂಥ ಕಡೆ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಿಂದ ಫ್ಯಾಕ್ಟರಿ ತೆರೆಯುವಂತೆ ತಿಳಿಸಲಾಗಿದೆ. ಒಟ್ಟಾರೆ ಮುಂದಿನ ವರ್ಷದಲ್ಲಿ ಜಿನ್ನಿಂಗ್ ಮತ್ತು ಪ್ರೆಸಿಂಗ್ ಫ್ಯಾಕ್ಟರಿ ತೆರೆದರೆ ಕಾಟನ್ ಕಾರ್ಪೊರೇಷನ್ ಅಲ್ಲಿಗೆ ಹತ್ತಿ ಕಳಿಸಲು ಅವಕಾಶ ವಾಗುವುದು.

ಅರಸೀಕೆರೆಯ ಶ್ರೀ ಸಿದ್ದಪ್ಪನವರು ಅಲ್ಲಿನ ಆವಶ್ಯಕತೆ ವಿಚಾರ ಹೇಳಿದರು, ಅನೇಕ ಸಂಘಗಳು ರಾಜ್ಯದಲ್ಲಿವೆ, ರಾಯಚೂರು ಭಾಗದಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ಟಿದೆ. ಅದನ್ನು ಮಾಡುವ ಉದ್ದೇಶ ರೈತರಿಗೆ ಮೋಸವಾಗಬಾರದು, ಅವನ ಮಾಲಿಗೆ ರಶೀದಿ ದೊರೆಯಬೇಕು ಎಂಬುದು. ಆದರೆ ರೈತರ ಮಾಲನ್ನು ಸರಿಯಾಗಿ ತೂಕಮಾಡುವುದಿಲ್ಲ, ಪಾವತಿ ಕೊಡುವುದಿಲ್ಲ ಎಂದು ತಿಳಿಸಿ ದ್ದಾರೆ. ಇದನ್ನು ಸಹಕಾರ ಸಚಿವರಿಗೆ ತಿಳಿಸಿದಮೇಲೆ ಅವರು ತನಿಖೆ ಮಾಡುತ್ತಿದ್ದಾರೆ. ಸರಕಾರ ಅಂಥ ಕೆಲಸ ನಡೆಯುವ ಕಡೆ ಉಗ್ರ ಕ್ರಮ ತೆಗೆದುಕೊಂಡು ಸರಿಯಾಗಿ ರೆಗ್ಯುಲೇಟ್ ಮಾಡುವುದು, ರೈತರಿಗೆ ಹಿತವಾಗುವಂತೆ ಲಕ್ಷ್ಯ ಕೊಡುವುದು. ಅರಸೀಕೆರೆ ವಿಚಾರ ಹೇಳಿರುವುದು ಗೊತ್ತಿಲ್ಲ. ಅದನ್ನು ವಿಚಾರಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಹತ್ತಿ ವಿಷಯದಲ್ಲಿ ಕೈಕೊಳ್ಳಬೇಕಾದ ಕ್ರಮಗಳು ಇನ್ನೂ ಇವೆ, ಅನೇಕ ಸಮಸ್ಯೆಗಳಿವೆ. ಹವದ ಪರಿಸ್ಥಿತಿಯಮೇಲೆ ಬೆಳೆ ಯಾವಾಗ ಕೆಡುವುದು ಎಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಕಡೆ ರೈತರಿಗೆ ಹೆಚ್ಚು ಹಾನಿಯಾಗಿರಬಹುದು. ಇದರಮೇಲೆ ಅವಲಂಬಿಸಿ ಜೀವನ ನಡೆಸುವವರ ವಿಚಾರದಲ್ಲಿ ಸಾಕಷ್ಟು ಗಮನಕೊಡಬೇಕು. ಇದಕ್ಕಾಗಿ ಈಗಾಗಲೆ ಸುದೀರ್ಘ ನೋಟ್ ಕೇಂದ್ರ ಸರಕಾರಕ್ಕೆ ಕಳಿಸಿದ್ದೇವೆ. ಈಗ ಕಾಫಿ ಬೋರ್ಡ್ ಪರಮಾವಧಿ ಮತ್ತು ಕನಿಷ್ಠ ಬೆಲೆ ನಿಗದಿ ಮಾಡುವುದು. ಪ್ರತಿಯೊಬ್ಬರೂ ಬೆಳೆದ ಕಾಫಿ ಬೋರ್ಡಿಗೆ ಹೋಗುವುದು. ಅಂಥ ಕಾಯಿದೆ ಹತ್ತಿಗೆ ಸಂಬಂಧಿಸಿದಂತೆ ಇಲ್ಲ. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾಗಿರುವುರಿಂದ ಅವ ರಿಗೆ ಒಂದು ಬೋರ್ಡನ್ನು ರಚಿಸುವಂತೆ ತಿಳಿಸಲಾಗಿದೆ. ಕೇಂದ್ರ ಸರಕಾರ ಏನು ಮಾಡುವುದೆಂದು ಕಾದು ನೋಡಬೇಕು. ಅವರೊಡನೆ ದೀರ್ಘವಾಗಿ ಚರ್ಚೆಮಾಡಿದಾಗ ಕಾಟನ್ ಕಾರ್ಪೊರೇಷನ್ ಈ ಕೆಲಸ ಮಾಡಬಾರದೇ ಎಂದು ಹೇಳಿದರು. ಇದಕ್ಕೆ ಎಲ್ಲರ ಬೆಂಬಲವೂ ಬೇಕು. ಮುಖ್ಯವಾಗಿ ಹತ್ತಿಬೆಲೆ ನಿಗದಿಮಾಡಿ ಅವನ್ನು ಬೆಳೆಯುವ ರೈತರಿಗೆ ನಷ್ಟವಾಗದ ರೀತಿಯಲ್ಲಿ ಯೋಗ್ಯ ವ್ಯವಸ್ಥೆ ಯನ್ನು ಕೇಂದ್ರ ಸರಕಾರ ಮಾಡುವುದು.

ಈ ದಿವಸ ಹತ್ತಿ ಬೆಲೆ ಬಹಳ ಕೆಳಕ್ಕಿಳಿದಿದೆ, 200 ರೂಪಾಯಿಗಿಂತ ಕೆಳಗಿದೆ ಎಂದು ಕೆಲವರು ಹೇಳಿದರು. ಹತ್ತಿ ಬಹಳವಾಗಿ ಪೇಟೆಗೆ ಬಂದರೆ ಬೆಲೆ ಇಳಿಯುವುದು ಸ್ವಾಭಾವಿಕ. ಹತ್ತಿ ಬೇಕಾ ದಷ್ಟು ಬೆಳೆಯುತ್ತಿದೆ, ಆದರೆ ಅದಕ್ಕೆ ಸರಿಯಾದ ಬೆಲೆ ದೊರೆಯುತ್ತಿಲ್ಲ. ಯಾರೂ ಹೆದರಬೇಕಾಗಿಲ್ಲ. ಚುನಾವಣೆಯಾದಮೇಲೆ ಕೆಲವರು ವ್ಯಾಪಾರಸ್ಥರು ಇಂದಿರಾಗಾಂಧಿಯವರ ಸರಕಾರ ಅಧಿಕಾರಕ್ಕೆ ಬಂದಿರುವುದರಿಂದ ಹೀಗಾಗಿದೆ ಎಂದು ಹೇಳುತ್ತಿದ್ದಾರೆ.

12-00 NOON.

ಇಂದಿರಾಜಿ ಅವರು ಕಾಟನ್ ಕಾರ್ಪೊರೇಷನ್ ಮಾಡಿದ್ದಾರೆ, ರಿಸರ್ವ್ ಬ್ಯಾಂಕ್ ಕಂಟ್ರೋಲ್ ಮಾಡಿ ಹತ್ತಿ ಕೊಳ್ಳುವವರಿಗೆ ಬೇಕಾದಷ್ಟು ಹಣ ಸಿಕ್ಕುವುದಕ್ಕೆ ವ್ಯವಸ್ಥೆ ಮಾಡಿದ್ದಾರೆ. ಅವರು ತಗೆದುಕೊಂಡಿರುವ ಕ್ರಮಗಳಿಂದ ರೈತರ ಹಿತಕ್ಕೆ ಯಾವುದೇ ವಿಧವಾದ ವಿರೋಧವಾಗಲಿಕ್ಕೆ ಸಾಧ್ಯವಿಲ್ಲ. ರೈತರ ಹಿತಕ್ಕಾಗಿ, ಅವರ ಹಿತಕ್ಕೆ ಧಕ್ಕೆಯಾಗದ ರೀತಿಯಲ್ಲಿ ರಿಸರ್ವ್ ಬ್ಯಾಂಕ್ ತನ್ನ ನೀತಿಯನ್ನು ಮುಂದುವರಿಸಬೇಕು ಎನ್ನುವುದೇ ಉದ್ದೇಶವಾಗಿದೆ. ಹತ್ತಿಯನ್ನು ಖರೀದಿ ಮಾಡು ವುದಕ್ಕೆ ಎಂಟು ಹತ್ತು ಜನ ದೊಡ್ಡ ದೊಡ್ಡ ವ್ಯಾಪಾರಸ್ಥರು ಕೋಟಿಗಟ್ಟಲೆ ಹಣವನ್ನು ರಿಸರ್ವ್ ಬ್ಯಾಂಕಿನಿಂದ ತೆಗೆದುಕೊಳ್ಳುತ್ತಿದ್ದರು. ಅವರು ಖರೀದಿ ಮಾಡಿದ ಹತ್ತಿಗೆ ಕಡಮೆ ಬೆಲೆಯನ್ನು ಕೊಟ್ಟು, ಆ ಮಾಲಿನ ಮೇಲೆ ರಿಸರ್ವ್ ಬ್ಯಾಂಕಿನಿಂದ ಹಣವನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳುವು

ದಕ್ಕೆ ಅವಕಾಶವಿತ್ತು. ಅದನ್ನು ತಪ್ಪಿಸಿ ನೇರವಾಗಿ ರೈತರಿಗೆ ಮುಟ್ಟುವಂತೆ ವ್ಯವಸ್ಥೆಯನ್ನು ಮಾಡಿದ್ದಾರೆ. ರೈತರು ತಾವು ಬೆಳೆದ ಹತ್ತಿಯನ್ನು ವೇರ್‌ಹೌಸಸ್‌ನಲ್ಲಿ, ಸಹಕಾರ ಸಂಘಗಳಲ್ಲಿ ಇಟ್ಟು ಅದರಮೇಲೆ ಹಣವನ್ನು ಪಡೆಯುವ ಅನುಕೂಲತೆಯೂ ಇರುತ್ತದೆ. ಹತ್ತಿ ವ್ಯಾಪಾರದಲ್ಲಿ ತೊಡಗುತ್ತಿದ್ದ ದಳ್ಳಾಳಿಗಳು ತಮಗೆ ಬರುತ್ತಿದ್ದ ವರಮಾನಕ್ಕೆ ತೊಂದರೆಯಾಯಿತೆಂದು ಅಪಪ್ರಚಾರವನ್ನು ಪ್ರಾರಂಭಮಾಡಿ ರೈತರಮೇಲೆ ಹರಿಹಾಯಲಿಕ್ಕೆ ಹತ್ತಿದ್ದಾರೆ. ಮತ್ತು ಇಂದಿರಾ ಗಾಂಧೀಜಿ ಅವರಿಂದ ಎಲ್ಲ ತೊಂದರೆಗಳೂ ಆಗುತ್ತಿವೆ ಎಂದು ಹೇಳುತ್ತಿದ್ದಾರೆ. ಜನತೆ ಯಾವರೀತಿಯಲ್ಲೂ ಹೆದರಬೇಕಾದ್ದಿಲ್ಲ. ಅವರು ನಿಜವಾಗಿ ಸರ್ಕಾರದ ಧ್ಯೇಯ ಧೋರಣೆಗಳನ್ನು ಅರಿತು ಅದರಲ್ಲಿ ವಿಶ್ವಾಸವನ್ನು ಇಡಬೇಕೆಂದು ಹೇಳುತ್ತಿದ್ದೇನೆ.

ಈ ಹೊತ್ತಿನ ದಿವಸ ಹತ್ತಿಗೆ ಫ್ಲೋರ್ ಪ್ರೈಸ್ ನಿಗದಿ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅದಕ್ಕೆ ಒಂದು ಕಮಿಟಿಯನ್ನು ಮಾಡಿ ಫ್ಲೋರ್ ಪ್ರೈಸ್ ಮಾಡುವುದಕ್ಕೆ ಸಿಫಾರಸು ಆಗಿದೆ ಎಂದು ಕೇಳಿದ್ದೇನೆ. ಅದು ಫೈನಲೈಸ್ ಆಗಬೇಕು. ನಮಗೆ ತಿಳಿದು ಬಂದಿರುವ ಪ್ರಕಾರ ಕೆಲವು ಪ್ರಾಮುಖ್ಯವಾದ ವೆರೈಟಿಗಳಿಗೆ ಎಂದರೆ ಲಕ್ಷ್ಮಿ ಹತ್ತಿಗೆ 210 ರೂಪಾಯಿಗಳಿಗೆ ಕಡಮೆ ಎಂದೂ ಆಗಬಾರದು ಎಂದು ಫ್ಲೋರ್ ಪ್ರೈಸ್ ನಿಗದಿ ಮಾಡಿದ್ದಾರೆ. ಜಯಧರ ಹತ್ತಿಗೆ 200 ರೂಪಾಯಿ ಹಂಪಿ ಹತ್ತಿಗೆ 250 ರೂಪಾಯಿ, ಹೈಬ್ರಿಡ್ ಹತ್ತಿಗೆ 340 ರೂಪಾಯಿ, ಸೀ ಐಲೆಂಡ್ ಹತ್ತಿಗೆ 370 ರೂಪಾಯಿ ಗೊತ್ತು ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಈ ರೀತಿಯ ಸಿಫಾರಸನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಅದಕ್ಕಾಗಿ ನೇಮಕವಾಗಿದ್ದ ಎಕ್ಸ್‌ಪರ್ಟ್ ಕಮಿಟಿಯವರು ಮಾಡಿದ್ದಾರೆ. ಇಷ್ಟೇ ಅಲ್ಲ, ಕಾಟನ್ ಕಾರ್ಪೊರೇಷನ್ನಿನವರು ಹತ್ತಿಗೆ ಫ್ಲೋರ್ ಪ್ರೈಸ್ ಆಗಲೀ ಅಥವಾ ಮಾರುಕಟ್ಟೆಯಲ್ಲಿ ಅದಕ್ಕೆ ನೀಡುವ ದರವಾಗಲೀ, ಇವೆರಡರೊಳಗೆ ಯಾವುದು ಹೆಚ್ಚಾಗಿರುತ್ತದೆಯೋ ಆ ರೀತಿಯ ಹೆಚ್ಚಾದ ದರವನ್ನು ಕೊಟ್ಟು ಹತ್ತಿಯನ್ನು ಕೊಂಡುಕೊಳ್ಳುವುದಾಗಿ ನಿರ್ಣಯ ಮಾಡಿದ್ದಾರೆ. ಹತ್ತಿ ಬೆಳೆಯುತಕ್ಕ ರೈತರು ಯಾವುದೇ ರೀತಿಯ ಸಂಶಯವನ್ನೂ ಇಡುವುದು ಬೇಕಾಗಿಲ್ಲ. ಈ ರೀತಿ ಎಷ್ಟು ದಿವಸ ಕಾಟನ್ ಕಾರ್ಪೊರೇಷನ್ ಮೇಲೆ ಅವಲಂಬನೆ ಮಾಡುತ್ತೀರಿ ಎಂದು ಕೇಳಬಹುದು. ನಮ್ಮಲ್ಲಿ ಈಗ ಕೆಲವು ಸಹಕಾರಿ ಗಿರಣಿಗಳಿವೆ. ಅವು ಇನ್ನೂ ಪ್ರಭಾವಯುತವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಅವಶ್ಯಕವಾದರೆ, ಸಹಕಾರಿ ತತ್ವದ ಮೇಲೆ ಕೆಲವಾರು ಗಿರಣಿಗಳನ್ನು ಸ್ಥಾಪನೆಮಾಡಿ ಇನ್ನೂ ತೀವ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಗತ್ಯವಾದರೆ ಹೊಸ ಗಿರಣಿಗಳನ್ನು ಸಹ ಹಾಕುವುದರ ಸಲುವಾಗಿ ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚೆ ಮಾಡಿ ಹೊಸ ಗಿರಣಿಗಳನ್ನು ಹಾಕಿ ಹತ್ತಿ ಬೆಳೆಯುವವರಿಗೆ ಯಾವರೀತಿಯ ತೊಂದರೆಯೂ ಮುಂದಿನ ವರ್ಷದಿಂದ ಆಗಬಾರದು ಎನ್ನುವ ಪ್ರಯತ್ನ ಮಾಡಲಿಕ್ಕೆ ಹತ್ತಿದ್ದೇವೆ. ಸರ್ಕಾರದಿಂದ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿರುವುದರಿಂದ, ಮಾನ್ಯ ಸದಸ್ಯರು ಶಂಕಿಸಿದಂಥ ಅನೇಕ ಶಂಕೆಗಳು ನನ್ನ ಮಾತಿನಿಂದ ನಿವಾರಣೆಯಾಗಿರಬಹುದು ಎಂದು ತಿಳಿಯುತ್ತೇನೆ. ನಾನು ಮಾಡಿರತಕ್ಕ ಪ್ರಯತ್ನ ನಿಜವಾಗಿಯೂ ಪ್ರಾಮಾಣಿಕವಾದ ರೈತರ ಕಲ್ಯಾಣಕ್ಕೆ ಇರುವುದರಿಂದ ಈ ತರಹ ಠರಾವು ಬರುವುದು ಅಪ್ರಸ್ತುತ. ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ಯಾವ ಯಾವ ಸಲಹೆಗಳು ಬೇಕೋ, ಯಾವ ಯಾವ ಸೂಚನೆಗಳು ಬೇಕೋ ಅವನ್ನೆಲ್ಲ ಅಳವಡಿಸಿ ಸುದೀರ್ಘವಾದ ಠರಾವನ್ನು ತರುವಂಥ ಅವಶ್ಯವಿದ್ದರೆ ಅದನ್ನು ತರೋಣ. ಅದಕ್ಕಾಗಿ ಮಾನ್ಯ ಸದಸ್ಯರು ಈ ಠರಾವನ್ನು ವಾಪಸ್ಸು ಪಡೆಯಬೇಕು, ಅವರು ಮಾಡಿರುವ ಸಲಹೆಗಳನ್ನು ಮನಸ್ಸಿನಲ್ಲಿಟ್ಟು ಚಾಚೂ ತಪ್ಪದೆ ನಡೆಸುತ್ತೇನೆ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗೋಪಿನಾಥ ಆರ್. ಸಾಂಧ್ರ.—ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿರುವ ಮಾತುಗಳಿಂದ ನಾನು ಮಂಡಿಸಿರುವ ಠರಾವಿನ ಉದ್ದೇಶವನ್ನು ಈಡೇರಿಸಿದಂತಾಗಿದೆ ಎಂದು ತಿಳಿದು ಬಂದಿದೆ. ಅವರು ಈ ಸದನದ ಮುಂದೆ ರೈತನ ಹಿತವನ್ನು ಕಾಪಾಡುತ್ತೇವೆ. ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಬೇಕಾದ ಅನುಕೂಲಗಳನ್ನು ಒದಗಿಸಿಕೊಡುತ್ತೇವೆ, ಬೆಲೆಯನ್ನು ನಿರ್ದಿಷ್ಟಪಡಿಸುವುದಕ್ಕೆ ಕೂಡ ಪ್ರಯತ್ನ ಮಾಡುತ್ತಿದ್ದೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮುಂದಿನ ವರ್ಷದಿಂದ ಈ ಸಮಸ್ಯೆಗಳು ಬಾರದಂತೆ ನೋಡುತ್ತೇವೆನ್ನುವ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದಾರೆ. ನನ್ನ ನಿರ್ಣಯವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸಭೆಯ ಮುಂದೆ ಇಟ್ಟು ಪಾಸ್ ಮಾಡಿಸಬೇಕೆಂಬ ಉತ್ಕಟ ಇಚ್ಛೆ ಇದ್ದರೂ ಕೂಡ, ಮಾನ್ಯ ಮಂತ್ರಿಗಳು ಈಗಾಗಲೇ ನಮ್ಮ ಉದ್ದೇಶವನ್ನು ಅರಿತುಕೊಂಡಿದ್ದಾರೆ ಮತ್ತು ಈ ಉದ್ದೇಶವನ್ನು ಪರಿಶೀಲಿಸಿ ಪ್ರಯತ್ನ ಪಟ್ಟು ಸಾಕಷ್ಟು ಯಶಸ್ವಿಯಾಗಿದ್ದಾರೆ. ಆದುದರಿಂದ ನಾನು ಈ ನನ್ನ ನಿರ್ಣಯವನ್ನು ವಾಪಸು ಪಡೆಯಲು ಸಭೆಯ ಅನುಮತಿಯನ್ನು ಕೋರುತ್ತೇನೆ.

(ಶ್ರೀ ಟಿ. ಆರ್. ಶಾಮಣ್ಣ)

ದಿಲ್ಲ ಎಂದು ಅವರ ಪ್ರತಿಭಟನೆಯನ್ನೂ ಸೂಚಿಸಿದ್ದಾರೆ. ಇದರ ಬಗ್ಗೆ ಸರಕಾರ ಸರಿಯಾಗಿ ಯೋಚನೆ ಮಾಡಬೇಕು. ಇಂತಹ ಒಂದು ವಿಶೇಷವಾದ ಸಮಸ್ಯೆ ನಮ್ಮ ಮುಂದೆ ಬಂದಿದೆ. ಇದರ ಜೊತೆಗೆ ಇಂತಹ ಸ್ಲಂಸ್‌ಗಳು ಇನ್ನೂ ಮುಂದುವರಿಯುತ್ತಾ ಹೋಗುತ್ತಿರುವುದನ್ನು ತಡೆಗಟ್ಟಲು ಸರಕಾರಕ್ಕೆ ಆಗುತ್ತಿಲ್ಲ. ಇದನ್ನು ಬೇಗ ತಡೆಗಟ್ಟಬೇಕಾದುದು ಸರಕಾರದ ಮುಖ್ಯ ಕರ್ತವ್ಯ ಎಂದು ಹೇಳಿದರೆ ಅದು ಇಲ್ಲಿ ತಪ್ಪಾಗಲಾರದು.

ಇದರಲ್ಲಿ ಒಂದು ಗಮನಿಸಬೇಕಾದ ಅಂಶ ಏನೆಂದರೆ ಓಟನ್ನು ಪಡೆಯುವ ದೃಷ್ಟಿಯಿಂದ ನಾವು ಸ್ಲಂ ಇಟ್ಟುಕೊಂಡಿರುತ್ತೇವೆ. ರಾಜಕಾರಿಣಿಗಳು ಇದರಲ್ಲಿ ಪ್ರವೇಶ ಮಾಡಿ ಇವರಿಗೆ ಉತ್ತೇಜನ ಕೊಡುತ್ತಿದ್ದಾರೆ. ಸ್ಲಂ ಇರಲಿ, ಅವರು ನಮಗೆ ಓಟು ಕೊಡುತ್ತಾರೆಂಬ ಒಂದು ಮನೋಭಾವ ನಮ್ಮಲ್ಲಿ ಇದೆ. ಇದರ ಜೊತೆಗೆ ಸರ್ಕಾರದವರು ತಮ್ಮ ಭಾಷಣಗಳಲ್ಲಿ ಮತ್ತು ತಮ್ಮ ವರದಿಗಳಲ್ಲಿ ಈ ಸ್ಲಂ ಬಗ್ಗೆ ತಮ್ಮ ಸಹಾನುಭೂತಿಯನ್ನು ತೋರಿಸಿಕೊಂಡು ಬರುತ್ತಿದ್ದಾರೆಯೇ ಹೊರತು ಕಾರ್ಯತಃ ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ಇದುವರೆಗೆ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ಈ ಯೋಜನೆಗಳಲ್ಲಿ ಸ್ಲಂ ಕ್ಲಿಯರೆನ್ಸ್‌ಗಾಗಿ ಕೇಂದ್ರ ಸರ್ಕಾರದವರು 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಸಹ ಆ ಹಣವನ್ನು ರಾಜ್ಯಸರ್ಕಾರದವರು ಖರ್ಚು ಮಾಡಲಿಲ್ಲ. ಆ ಹಣ ಹಾಗೆಯೇ ಉಳಿಯಿತು. ಈ ಕಾರಣದಿಂದ ಕೇಂದ್ರ ಸರ್ಕಾರದಿಂದ ಈ ಬಾಬಿಗಾಗಿ ಬರುತ್ತಿದ್ದ ಗ್ರಾಂಟ್ ನಿಂತುಹೋಯಿತು. ಕೊಳಚೆ ನಿರ್ಮೂಲನ ಸಮಸ್ಯೆಯನ್ನು ಪರಿಹರಿಸಲು 124 ಲಕ್ಷ ರೂಪಾಯಿ ವೆಚ್ಚದ ಕೊಳಚೆ ನಿರ್ಮೂಲನ ಯೋಜನೆಯೊಂದನ್ನು ರೂಪಿಸಲಾಗಿದೆ ಎಂಬುದಾಗಿ ರಾಜ್ಯಪಾಲರ ಭಾಷಣದಲ್ಲಿಯೂ ಸಹ ಹೇಳಲಾಗಿದೆ. ಇದನ್ನು ಅಪ್ರೂವಲ್‌ಗಾಗಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಮತ್ತು ಕೇಂದ್ರ ಸರ್ಕಾರದಿಂದ ಕೂಡ ಸಹಾಯವನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಣವನ್ನು ಒದಗಿಸುವುದಕ್ಕಾಗಿ ಬೆಂಗಳೂರು ಕಾರ್ಪೋರೇಷನ್‌ನವರು 30 ಲಕ್ಷ ರೂಪಾಯಿಗಳನ್ನು, ಟ್ರಸ್ಟ್ ಬೋರ್ಡಿನವರು 30 ಲಕ್ಷ ರೂಪಾಯಿಗಳನ್ನು, ರಾಜ್ಯಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು, 90 ಲಕ್ಷ ರೂಪಾಯಿಗಳನ್ನು ಮ್ಯಾಚಿಂಗ್ ಗ್ರಾಂಟ್ ರೂಪದಲ್ಲಿ ಕೇಂದ್ರಸರ್ಕಾರದವರು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಈ ಒಂದು ಯೋಜನೆ ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದು ಸಂದೇಹವಾಗಿದೆ. ಈ ಸ್ಲಂ ನಿವಾರಣೆಯಾಗಬೇಕಾದರೆ ರಾಜ್ಯ ಸರ್ಕಾರದವರು ದೆಹಲಿಗೆ ಹೋಗಿ ಅಲ್ಲಿಯೇ ಕುಳಿತುಕೊಂಡು ಕೆಲಸ ಮಾಡಿಸಿಕೊಂಡು ಬರಬೇಕೇ ಹೊರತು, ಕೇಂದ್ರಸರ್ಕಾರಕ್ಕೆ ಕಾಗದ ಬರೆದರೆ ಈ ಕೆಲಸವಾಗುವುದಿಲ್ಲ. ಕೇಂದ್ರಸರ್ಕಾರದ ಮೇಲೆ ಸಾಕಷ್ಟು ಒತ್ತಡವನ್ನು ಇದರ ಬಗ್ಗೆ ತರಬೇಕು, ಇಲ್ಲದಿದ್ದರೆ ಈ ಸ್ಲಂಗಳ ಸಮಸ್ಯೆ ಪರಿಹಾರವಾಗುವುದಿಲ್ಲ. ಮದ್ರಾಸ್ ರಾಜ್ಯದಲ್ಲಿ ಡಿ.ಎಂ.ಕೆ. ಸರ್ಕಾರದವರು ಈ ಸ್ಲಮ್‌ಗಳ ಸಮಸ್ಯೆಯನ್ನು ಬಗೆಹರಿಸುವ ಕಡೆಗೆ ಹೆಚ್ಚಿನ ನಿಗಾ ಕೊಟ್ಟಿದ್ದಾರೆ. ಅದಕ್ಕಾಗಿಯೇ ಸ್ಲಮ್ ನಿವಾಸಿಗಳು ಅವರಿಗೆ ಓಟು ಕೊಡುತ್ತಿದ್ದಾರೆ. ಮದ್ರಾಸ್ ಸರ್ಕಾರದವರು ಅಲ್ಲಿರುವ ಸ್ಲಮ್‌ಗಳನ್ನು ಕ್ಲಿಯರ್ ಮಾಡುವುದಕ್ಕಾಗಿ ಪ್ರತಿ ವರ್ಷ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು ಇದಕ್ಕಾಗಿಯೇ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಎಂಬುದಾಗಿ ಇದೆ. ಆ ಬೋರ್ಡಿನಲ್ಲಿ ಒಬ್ಬರು ಚೀಫ್ ಇಂಜನಿಯರ್, ಇಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು, 7 ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಒಬ್ಬರು ರೆವಿನ್ಯೂ ಆಫೀಸರ್ ಇದ್ದಾರೆ. ಈಗಾಗಲೇ ಈ ಬೋರ್ಡಿನವರು ಸ್ಲಮ್ ನಿವಾಸಿಗಳಿಗೆ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಯಾವ ಒಂದು ಪ್ರಗತಿಯ ಕೆಲಸವನ್ನು ಇದುವರೆಗೆ ಮಾಡಿಸಿಲ್ಲ. ಬೆಂಗಳೂರು ನಗರದಲ್ಲಿ ಇನ್ನೂ 100 ಸ್ಲಮ್‌ಗಳು ಬರಲಿ, ನಾವು ಅದರ ಬಗ್ಗೆ ಗಮನ ಕೊಡುವುದಿಲ್ಲವೆಂದು ಹೇಳಿಬಿಟ್ಟರೆ ನಾವು ಇದರ ಬಗ್ಗೆ ಇನ್ನು ಮುಂದೆ ಮಾತನಾಡುವುದಿಲ್ಲ. ಕೆಲವು ದಿನಗಳ ಹಿಂದೆ ನಾನು ಕಾನ್ಪುರಕ್ಕೆ ಹೋಗಿದ್ದೆ. ಅಲ್ಲಿ ಸ್ಲಮ್ ಕ್ಲಿಯರ್ ಮಾಡುವ ಬಗ್ಗೆ ಬಹಳ ಶ್ರದ್ಧೆ ವಹಿಸಿದ್ದರು. ಅಲ್ಲಿಯ ಸರ್ಕಾರದವರು ಸ್ಲಮ್ ಕ್ಲಿಯರ್ ಮಾಡುವ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದರಂತೆ ಕೆಲಸ ಮಾಡುತ್ತಿದ್ದಾರೆ. ಸ್ಲಮ್ ನಿವಾಸಿಗಳಿಗೆ ಮೊದಲು ಒಂದು ತಾತ್ಕಾಲಿಕವಾದ ಜಾಗವನ್ನು ಗೊತ್ತುಮಾಡಿ ಅಲ್ಲಿಗೆ ಕಳಿಸಿ, ಅವರಿದ್ದ ಸ್ಥಳವನ್ನು ಬುಲ್ಡೋಜರ್ ಮೂಲಕ ಸಮ ಮಾಡಿಸಿ, ಒಳ್ಳೆಯ ಮನೆಗಳನ್ನು ಕಟ್ಟಿಸಿದ ಮೇಲೆ ತಾತ್ಕಾಲಿಕವಾಗಿ ಒದಗಿಸಿದ್ದ ಜಾಗದಿಂದ ಈ ಕಾಯಂ ಜಾಗಕ್ಕೆ ಅವರು ಬಂದು ವಾಸ ಮಾಡುವಂತೆ ಏರ್ಪಾಡು ಮಾಡುತ್ತಿದ್ದಾರೆ. ಈ ರೀತಿ ನಮ್ಮ ಸರ್ಕಾರದವರು ಕೂಡ ದಿಟ್ಟತನದಿಂದ ಒಂದು ಕಾರ್ಯಕ್ರಮ ಇಟ್ಟುಕೊಂಡು ಕೆಲಸ ಮಾಡಿದರೆ ಅನುಕೂಲವಾಗುತ್ತದೆಯೇ ಹೊರತು. ಬರೀ ಘೋಷಣೆಯಿಂದ ಕೆಲಸವಾಗುವುದಿಲ್ಲ

ದಕ್ಕೆ ಅವಕಾಶವಿತ್ತು. ಅದನ್ನು ತಪ್ಪಿಸಿ ನೇರವಾಗಿ ರೈತರಿಗೆ ಮುಟ್ಟುವಂತೆ ವ್ಯವಸ್ಥೆಯನ್ನು ಮಾಡಿದ್ದಾರೆ. ರೈತರು ತಾವು ಬೆಳೆದ ಹತ್ತಿಯನ್ನು ವೇರ್‌ಹೌಸ್‌ನಲ್ಲಿ, ಸಹಕಾರ ಸಂಘಗಳಲ್ಲಿ ಇಟ್ಟು ಅದರಮೇಲೆ ಹಣವನ್ನು ಪಡೆಯುವ ಅನುಕೂಲತೆಯೂ ಇರುತ್ತದೆ. ಹತ್ತಿ ವ್ಯಾಪಾರದಲ್ಲಿ ತೊಡಗುತ್ತಿದ್ದ ದಳ್ಳಾಳಿಗಳು ತಮಗೆ ಬರುತ್ತಿದ್ದ ವರಮಾನಕ್ಕೆ ತೊಂದರೆಯಾಯಿತೆಂದು ಅಪಪ್ರಚಾರವನ್ನು ಪ್ರಾರಂಭಮಾಡಿ ರೈತರಮೇಲೆ ಹರಿಹಾಯಲಿಕ್ಕೆ ಹತ್ತಿದ್ದಾರೆ. ಮತ್ತು ಇಂದಿರಾ ಗಾಂಧೀಜಿ ಅವರಿಂದ ಎಲ್ಲ ತೊಂದರೆಗಳೂ ಆಗುತ್ತಿವೆ ಎಂದು ಹೇಳುತ್ತಿದ್ದಾರೆ. ಜನತೆ ಯಾವರೀತಿಯಲ್ಲೂ ಹೆದರಬೇಕಾಗಿಲ್ಲ. ಅವರು ನಿಜವಾಗಿ ಸರ್ಕಾರದ ಧ್ಯೇಯ ಧೋರಣೆಗಳನ್ನು ಅರಿತು ಅದರಲ್ಲಿ ವಿಶ್ವಾಸವನ್ನು ಇಡಬೇಕೆಂದು ಹೇಳುತ್ತಿದ್ದೇನೆ.

ಈ ಹೊತ್ತಿನ ದಿವಸ ಹತ್ತಿಗೆ ಫ್ಲೋರ್ ಪ್ರೈಸ್ ನಿಗದಿ ಮಾಡಬೇಕೆಂದು ಕೇಳಿಕೊಂಡಿದ್ದೇವೆ. ಅದಕ್ಕೆ ಒಂದು ಕಮಿಟಿಯನ್ನು ಮಾಡಿ ಫ್ಲೋರ್ ಫ್ರೈಸ್ ಮಾಡುವುದಕ್ಕೆ ಸಿಫಾರಸು ಆಗಿದೆ ಎಂದು ಕೇಳಿದ್ದೇನೆ. ಅದು ಫೈನಲೈಸ್ ಆಗಬೇಕು. ನಮಗೆ ತಿಳಿದು ಬಂದಿರುವ ಪ್ರಕಾರ ಕೆಲವು ಪ್ರಾಮುಖ್ಯವಾದ ವೆರೈಟಿಗಳಿಗೆ ಎಂದರೆ ಲಕ್ಷ್ಮಿ ಹತ್ತಿಗೆ 210 ರೂಪಾಯಿಗಳಿಗೆ ಕಡಮೆ ಎಂದೂ ಆಗಬಾರದು ಎಂದು ಫ್ಲೋರ್ ಪ್ರೈಸ್ ನಿಗದಿ ಮಾಡಿದ್ದಾರೆ. ಜಯಧರ ಹತ್ತಿಗೆ 200 ರೂಪಾಯಿ ಹಂಪಿ ಹತ್ತಿಗೆ 250 ರೂಪಾಯಿ, ಹೈಬ್ರಿಡ್ ಹತ್ತಿಗೆ 340 ರೂಪಾಯಿ, ಸೀ ಐಲೆಂಡ್ ಹತ್ತಿಗೆ 370 ರೂಪಾಯಿ ಗೊತ್ತು ಮಾಡಬೇಕೆಂದು ಸಲಹೆ ಮಾಡಿದ್ದಾರೆ. ಈ ರೀತಿಯ ಸಿಫಾರಸನ್ನು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಅದಕ್ಕಾಗಿ ನೇಮಕವಾಗಿದ್ದ ಎಕ್ಸ್‌ಪರ್ಟ್ ಕಮಿಟಿಯವರು ಮಾಡಿದ್ದಾರೆ. ಇಷ್ಟೇ ಅಲ್ಲ, ಕಾಟನ್ ಕಾರ್ಪೊರೇಷನ್ನಿನವರು ಹತ್ತಿಗೆ ಫ್ಲೋರ್ ಪ್ರೈಸ್ ಆಗಲೀ ಅಥವಾ ಮಾರುಕಟ್ಟೆಯಲ್ಲಿ ಅದಕ್ಕೆ ನೀಡುವ ದರವಾಗಲೀ, ಇವೆರಡರೊಳಗೆ ಯಾವುದು ಹೆಚ್ಚಾಗಿರುತ್ತದೆಯೋ ಆ ರೀತಿಯ ಹೆಚ್ಚಾದ ದರವನ್ನು ಕೊಟ್ಟು ಹತ್ತಿಯನ್ನು ಕೊಂಡುಕೊಳ್ಳುವುದಾಗಿ ನಿರ್ಣಯ ಮಾಡಿದ್ದಾರೆ. ಹತ್ತಿ ಬೆಳೆಯತಕ್ಕ ರೈತರು ಯಾವುದೇ ರೀತಿಯ ಸಂಶಯವನ್ನೂ ಇಡುವುದು ಬೇಕಾಗಿಲ್ಲ. ಈ ರೀತಿ ಎಷ್ಟು ದಿವಸ ಕಾಟನ್ ಕಾರ್ಪೊರೇಷನ್ ಮೇಲೆ ಅವಲಂಬನೆ ಮಾಡುತ್ತೀರಿ ಎಂದು ಕೇಳಬಹುದು. ನಮ್ಮಲ್ಲಿ ಈಗ ಕೆಲವು ಸಹಕಾರಿ ಗಿರಣಿಗಳಿವೆ. ಅವು ಇನ್ನೂ ಪ್ರಭಾವಯುತವಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಅವಶ್ಯಕವಾದರೆ, ಸಹಕಾರಿ ತತ್ವದ ಮೇಲೆ ಕೆಲವಾರು ಗಿರಣಿಗಳನ್ನು ಸ್ಥಾಪನೆಮಾಡಿ ಇನ್ನೂ ತೀವ್ರವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಗತ್ಯವಾದರೆ ಹೊಸ ಗಿರಣಿಗಳನ್ನು ಸಹ ಹಾಕುವುದರ ಸಲುವಾಗಿ ಸಂಬಂಧಪಟ್ಟ ಮಂತ್ರಿಗಳೊಡನೆ ಚರ್ಚೆ ಮಾಡಿ ಹೊಸ ಗಿರಣಿಗಳನ್ನು ಹಾಕಿ ಹತ್ತಿ ಬೆಳೆಯುವವರಿಗೆ ಯಾವರೀತಿಯ ತೊಂದರೆಯೂ ಮುಂದಿನ ವರ್ಷದಿಂದ ಆಗಬಾರದು ಎನ್ನುವ ಪ್ರಯತ್ನ ಮಾಡಲಿಕ್ಕೆ ಹತ್ತಿದ್ದೇವೆ. ಸರ್ಕಾರದಿಂದ ಎಲ್ಲ ಕಾರ್ಯಕ್ರಮಗಳನ್ನೂ ತೆಗೆದುಕೊಂಡಿರುವುದರಿಂದ, ಮಾನ್ಯ ಸದಸ್ಯರು ಶಂಕಿಸಿದಂಥ ಅನೇಕ ಶಂಕೆಗಳು ನನ್ನ ಮಾತಿನಿಂದ ನಿವಾರಣೆಯಾಗಿರಬಹುದು ಎಂದು ತಿಳಿಯುತ್ತೇನೆ. ನಾನು ಮಾಡಿರತಕ್ಕ ಪ್ರಯತ್ನ ನಿಜವಾಗಿಯೂ ಪ್ರಾಮಾಣಿಕವಾದ ರೈತರ ಕಲ್ಯಾಣಕ್ಕೆ ಇರುವುದರಿಂದ ಈ ತರಹ ಠರಾವು ಬರುವುದು ಅಪ್ರಸ್ತುತ. ಇದಕ್ಕಿಂತ ಹೆಚ್ಚಿನ ರೀತಿಯಲ್ಲಿ ಯಾವ ಯಾವ ಸಲಹೆಗಳು ಬೇಕೋ, ಯಾವ ಯಾವ ಸೂಚನೆಗಳು ಬೇಕೋ ಅವನ್ನೆಲ್ಲ ಅಳವಡಿಸಿ ಸುದೀರ್ಘವಾದ ಠರಾವನ್ನು ತರುವಂಥ ಅವಶ್ಯವಿದ್ದರೆ ಅದನ್ನು ತರೋಣ. ಅದಕ್ಕಾಗಿ ಮಾನ್ಯ ಸದಸ್ಯರು ಈ ಠರಾವನ್ನು ವಾಪಸ್ಸು ಪಡೆಯಬೇಕು, ಅವರು ಮಾಡಿರುವ ಸಲಹೆಗಳನ್ನು ಮನಸ್ಸಿನಲ್ಲಿಟ್ಟು ಚಾಚೂ ತಪ್ಪದೆ ನಡೆಸುತ್ತೇನೆ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗೋಪಿನಾಥ ಆರ್. ಸಾಂದ್ರ.—ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿರುವ ಮಾತುಗಳಿಂದ ನಾನು ಮಂಡಿಸಿರುವ ಠರಾವಿನ ಉದ್ದೇಶವನ್ನು ಈಡೇರಿಸಿದಂತಾಗಿದೆ ಎಂದು ತಿಳಿದು ಬಂದಿದೆ. ಅವರು ಈ ಸದನದ ಮುಂದೆ ರೈತರ ಹಿತವನ್ನು ಕಾಪಾಡುತ್ತೇವೆ. ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಬೇಕಾದ ಅನುಕೂಲಗಳನ್ನು ಒದಗಿಸಿಕೊಡುತ್ತೇವೆ, ಬೆಲೆಯನ್ನು ನಿರ್ದಿಷ್ಟಪಡಿಸುವುದಕ್ಕೆ ಕೂಡ ಪ್ರಯತ್ನ ಮಾಡುತ್ತಿದ್ದೇವೆನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮುಂದಿನ ವರ್ಷದಿಂದ ಈ ಸಮಸ್ಯೆಗಳು ಬಾರದಂತೆ ನೋಡುತ್ತೇವೆನ್ನುವ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದಾರೆ. ನನ್ನ ನಿರ್ಣಯವನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸಭೆಯ ಮುಂದೆ ಇಟ್ಟು ಪಾಸ್ ಮಾಡಿಸಬೇಕೆಂಬ ಉತ್ಕಟ ಇಚ್ಛೆ ಇದ್ದರೂ ಕೂಡ, ಮಾನ್ಯ ಮಂತ್ರಿಗಳು ಈಗಾಗಲೇ ನಮ್ಮ ಉದ್ದೇಶವನ್ನು ಅರಿತುಕೊಂಡಿದ್ದಾರೆ ಮತ್ತು ಈ ಉದ್ದೇಶವನ್ನು ಪರಿಶೀಲಿಸಿ ಪ್ರಯತ್ನಪಟ್ಟು ಸಾಕಷ್ಟು ಯಶಸ್ವಿಯಾಗಿದ್ದಾರೆ. ಆದುದರಿಂದ ನಾನು ಈ ನನ್ನ ನಿರ್ಣಯವನ್ನು ವಾಪಸು ಪಡೆಯಲು ಸಭೆಯ ಅನುಮತಿಯನ್ನು ಕೋರುತ್ತೇನೆ.

MADAM SPEAKER.—Has the Member leave the House to withdraw his resolution.

*The Resolution was, by leave of the House, withdrawn.*

## (ii) *re* : steps to remove or to improve the slums in Bangalore City

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ,

"ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆ ಹಾಗೂ ಅನಾನುಕೂಲವಾಗುತ್ತಿರುವುದರಿಂದ ಅದನ್ನು ನಿರ್ಮೂಲ ಮಾಡಲು ಅಥವಾ ಉತ್ತಮ ಪಡಿಸಲು ಸರ್ಕಾರದವರು ತ್ವರಿತ ಕ್ರಮಗಳನ್ನು ಕೈಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯ ಪಡುತ್ತಾರೆ."

ಎಂಬ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

MADAM SPEAKER.—Resolution moved :

"That this Assembly is of the opinion that immediate steps be taken to remove or improve the existing slums in Bangalore City, which is causing hardship and inconvenience to the slum-dwellers."

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿರುವ ನಾಗರಿಕರಿಗೆ ಮುಖ್ಯವಾಗಿ ಬೇಕಾಗಿರುವುದು ಮೂರು ವಿಚಾರಗಳು. ಇದರಲ್ಲಿ ಮೊದಲನೆಯದು ನೀರಿನ ಕೊರತೆ ನಿವಾರಣೆ ಮಾಡುವುದು, ಎರಡನೆಯದು, ಸೊಳ್ಳೆಕಾಟ ನಿವಾರಣೆ ಮಾಡುವುದು ಮತ್ತು ಮೂರನೆಯದು ನಗರದ ಸೌಂದರ್ಯವನ್ನು ಕೆಡಿಸುತ್ತಿರುವ ಕೊಳಚೆ ಪ್ರದೇಶಗಳ ನಿರ್ಮೂಲನ ಮಾಡುವುದು. ನೀರಿನ ಸಮಸ್ಯೆ ಬಗ್ಗೆ ಸರಕಾರದವರು ಈಗ ಕಾವೇರಿ ಯೋಜನೆ ತೆಗೆದುಕೊಂಡಿದ್ದಾರೆ. ಮತ್ತು ಸೊಳ್ಳೆ ಕಾಟದ ಬಗ್ಗೆ ನಗರದಲ್ಲಿರುವ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸಲು ಈಗಾಗಲೇ ತಕ್ಕ ಕಾರ್ಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ ಈ ಸಮಸ್ಯೆಗಳು ಬೇಗನೆ ಬಗೆಹರಿಯಬಹುದು ಎನ್ನುವ ಒಂದು ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇನ್ನು ನಗರದ ಸಮಸ್ಯೆಗಳ ಪೈಕಿ ಅತಿ ಮುಖ್ಯವಾದ ಸಮಸ್ಯೆ ಎಂದರೆ ಕೊಳಚೆ ಪ್ರದೇಶಗಳನ್ನು ನಿರ್ಮೂಲ ಮಾಡುವುದು. ಇದರ ಬಗ್ಗೆ ಸರಕಾರದವರು ಅಗತ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕಾರ್ಪೊರೇಷನ್‌ನವರೂ ನಿರ್ಣಯ ಮಾಡಿದ್ದಾರೆ ಮತ್ತು ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವೂ ತೀರ್ಮಾನ ಕೈಗೊಂಡಿದೆ. ಇದನ್ನು ಬೇಗನೆ ಕಾರ್ಯ ರೂಪಕ್ಕೆ ತರಬೇಕೆಂದು ಇಲ್ಲಿ ನಾನು ಒಂದು ನಿರ್ಣಯವನ್ನು ಮಂಡಿಸಿದ್ದೇನೆ. ಕೊಳಚೆ ಪ್ರದೇಶಗಳು ನಮ್ಮ ನಗರದಲ್ಲಿ ಕ್ಯಾನ್ಸರ್ ರೋಗದಂತೆ ಹರಡಿಕೊಂಡಿವೆ ಮತ್ತು ನಮ್ಮ ನಗರಕ್ಕೆ ಕಳಂಕ ತರುವಂತೆ ಇದು ಬೆಳೆದು ಬರುತ್ತಿದೆ. ಇಂತಹ ಕೊಳಚೆ ಪ್ರದೇಶಗಳು ಮೊದಲು ಹೋಗಬೇಕು. ಬೆಂಗಳೂರು ನಗರದಲ್ಲಿ ಸುಮಾರು 120—130 ಸ್ಲಂ ಇವೆ. ಅವುಗಳಲ್ಲಿ ಸುಮಾರು ಮೂವತ್ತನಾಲ್ಕು ಸಾವಿರ ಸಂಸಾರಗಳು ಇದ್ದು ಸುಮಾರು 1 ಲಕ್ಷ 50 ಸಾವಿರ ಜನರು ವಾಸಮಾಡುತ್ತಾ ಇದ್ದಾರೆ. ಇವರು ಅತಿ ಬಡ ಜನರು ಇದ್ದಾರೆ. ಇವರನ್ನು ಬೇರೆ ಕಡೆಗೆ ವರ್ಗಾವಣೆ ಮಾಡುವಾಗ ಮಾನವೀಯತೆಯ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ. ನಗರದ ಸೌಂದರ್ಯವನ್ನು ಉತ್ತಮಪಡಿಸುವಾಗ ಇಲ್ಲಿರುವ ಸಮಸ್ಯೆಗಳನ್ನು ಮಾನವೀಯತೆ ದೃಷ್ಟಿಯಿಂದ ಬಗೆಹರಿಸಬೇಕು. ಈಗ ನಗರದಲ್ಲಿ ಸುಮಾರು 120—130 ಸ್ಲಂಸ್‌ಗಳಿವೆ. ಇವುಗಳಲ್ಲಿ ಕೆಲವು ಸರಕಾರದ ವಶದಲ್ಲಿರುವ ಜಮೀನುಗಳಲ್ಲಿವೆ ಮತ್ತು ಕೆಲವು ಖಾಸಗೀಯವರ ಜಮೀನುಗಳಲ್ಲಿವೆ. ಇವರ ಪರಿಸ್ಥಿತಿ ಹೇಗಿದೆ ಎಂದರೆ ಇದನ್ನು ಅಲ್ಲಿಗೆ ಹೋಗಿ ನೋಡಿದವರೇನೇ ಗೊತ್ತಾಗುತ್ತದೆ. ಒಂದು ಕಡೆಗಳಲ್ಲಿರುವ ಸ್ಲಂಗಳನ್ನು ತೆಗೆಸಿ ಅಲ್ಲಿರುವ ಜನರನ್ನು ಬೇರೆ ಕಡೆಗೆ ಬದಲಾಯಿಸಿ ಮತ್ತೆ ಅಲ್ಲೇ ಇನ್ನೊಂದು ಸ್ಲಂ ಬೆಳೆಸಲು ಅವಕಾಶ ಕೊಡಬಾರದು. ಮತ್ತು ಈಗ ಇರುವ ಕೊಳಚೆ ಪ್ರದೇಶದ ಜನರು

ಬಹಳ ಅಶುದ್ಧವಾದ ಸ್ಥಿತಿಯಲ್ಲಿದ್ದಾರೆ. ಇಲ್ಲಿಗೆ ಹೋಗಲು ಸರಿಯಾದ ರಸ್ತೆ ಇಲ್ಲ, ದೀಪ ಇಲ್ಲ, ಇದರ ಜೊತೆಗೆ ಇಲ್ಲಿನ ಜನರಿಗೆ ನೀರಿನ ಸೌಕರ್ಯ ಕೂಡ ಇಲ್ಲ. ಸಾವಿರ ಜನರಿಗೆ ಒಂದು ಕೊಳಾಯಿ ಇದೆ. ಇಲ್ಲಿ ಹೋಗಿ ನೀರು ತರಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ನೀರು ಅತಿ ಮುಖ್ಯವಾದುದು. ಇಲ್ಲಿ ಸಾವಿರಾರು ಗುಡಿಸಲುಗಳಿವೆ ಮತ್ತು ಒಂದರ ಪಕ್ಕದಲ್ಲಿ ಒಂದು ಇವೆ. ಇವರಿಗೆ ಲ್ಯಾವಟರಿಯ ಸೌಕರ್ಯವೇ ಇಲ್ಲ. ಇದರಲ್ಲಿರುವ ಗಂಡಸರು ಹೇಗೋ ಇರುತ್ತಾರೆ. ಆದರೆ ಇಲ್ಲಿರುವ ಹೆಂಗಸರಿಗೆ ಲ್ಯಾವಟರಿಗಳು ಇಲ್ಲದೇ ಇರುವುದರಿಂದ ಇವರಿಗೆ ಮರ್ಯಾದೆಯಿಂದ ಬಾಳಲು ಅವಕಾಶವಿಲ್ಲವಾಗಿದೆ. ಸ್ಲಂಗಳಲ್ಲಿರುವ ಬಡ ಜನರು ಜೀವನ ಮಾಡುವುದೇ ಕಷ್ಟವಾಗಿದೆ. ಇಂತಹ ಜನಕ್ಕೆ ನೀರಿನ ಸೌಕರ್ಯ ಹಾಗೂ ಲ್ಯಾವಟರಿಗಳನ್ನು ಮಾನವೀಯತೆ ದೃಷ್ಟಿಯಿಂದ ಮಾಡದೇ ಇದ್ದರೆ ಜನತೆಗೆ ಅಪರಾಧ ಮಾಡಿದಂತಾಗುತ್ತದೆ. ಸುಮಾರು ಒಂದು ಕೋಟಿ ರೂಪಾಯಿಗಳ ಖರ್ಚು ಮಾಡಿದರೂ ಹತ್ತು, ಇಪ್ಪತ್ತು ಸ್ಲಂಸ್‌ಗಳನ್ನು ಉತ್ತಮ ಪಡಿಸುವುದಕ್ಕೆ ಆಗುವುದಿಲ್ಲ ಮತ್ತು ಇವರು ಇರುವ ಜಾಗದಿಂದ ಬದಲಾವಣೆ ಮಾಡುವುದಕ್ಕೂ ಆಗುವುದಿಲ್ಲ. ಹಿಂದೆ ಸುಮಾರು ನೂರು ಸ್ಲಂಗಳು ಮಾತ್ರ ಇದ್ದುದು ಇಂದು 120 ರಿಂದ 145 ರವರೆಗೆ ಆಗಿದೆ. ಒಂದು ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡಿದರೂ ಇದನ್ನು ಉತ್ತಮಪಡಿಸುದಕ್ಕೆ ಸಾಧ್ಯವಿಲ್ಲ. ಇಂತಹ ಸಮಸ್ಯೆಯನ್ನು ಯಾವ ರೀತಿ ಪರಿಹಾರ ಮಾಡಬೇಕು ಎನ್ನುವುದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಇದಕ್ಕಾಗಿ ಈಗಾಗಲೇ ಸುಮಾರು ಒಂದು ಕೋಟಿರೂಪಾಯಿಗಳ ವರೆಗೆ ಖರ್ಚು ಮಾಡಿದ್ದರೂ ಸುಮಾರ 45 ಸ್ಲಂಗಳನ್ನು ಬದಲಾಯಿಸಲು ಸಾಧ್ಯವಾದರೂ ಇನ್ನೂ ಇವರ ಪರಿಸ್ಥಿತಿಯನ್ನು ಸುಧಾರಿಸಲು ಆಗಲಿಲ್ಲ. ಎಲ್ಲಿ ಸ್ಲಂಗಳನ್ನು ಬದಲಾವಣೆ ಮಾಡಲಾಯಿತೋ ಅಲ್ಲಿ ಮತ್ತೆ ಪುನಃ ಸ್ಲಂಗಳು ಆರಂಭವಾಗಿವೆ. ಇದರಿಂದಾಗಿ ಇದನ್ನು ನಿವಾರಣೆ ಮಾಡುವುದಕ್ಕಾಗುತ್ತಿಲ್ಲ. ಗುಡಿಸಲಿನಲ್ಲಿ ಬಂದು ವಾಸಿಸುವ ಜನರೆಲ್ಲಾ ಬಹುತೇಕ ತಮಿಳುನಾಡು ಮತ್ತು ಇನ್ನಿತರ ಕಡೆಗಳಿಂದ ಬಂದವರೇ ಹೆಚ್ಚಾಗಿರುತ್ತಾರೆ. ಇವರೆಲ್ಲಾ ಬಡ ಜನರು ಜೀವನಕ್ಕಾಗಿ ಇಲ್ಲಿಗೆ ಬಂದವರು ಕೂಲಿ ಕೆಲಸಗಳನ್ನು ಮಾಡುತ್ತಿದ್ದಾರೆ. ಇವರೆಲ್ಲ ಗುಡಿಸಲುಗಳನ್ನು ಕಟ್ಟಿಕೊಂಡು ಇಲ್ಲಿ ವಾಸ ಮಾಡುತ್ತಿದ್ದಾರೆ. ಒಂದೊಂದು ಗುಡಿಸಲಿನಲ್ಲಿ ಮೂರು ನಾಲ್ಕು ಸಂಸಾರಗಳು ವಾಸ ಮಾಡುತ್ತಿವೆ. ಇಲ್ಲಿರುವ ಜನ ಬಹು ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಇಂತಹ ಜನರ ಕಷ್ಟ ನಿವಾರಣೆಗಾಗಿ ಕಾರ್ಪೊರೇಷನ್‌ನವರೂ ಚರ್ಚೆ ಮಾಡಿ ಇದಕ್ಕಾಗಿ ಸುಮಾರು ಇನ್ನೂ ಹದಿನೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಇವರನ್ನು ಬದಲಾಯಿಸಲು ಸಾಧ್ಯವಾಗುವುದಿಲ್ಲ. ಇವೊತ್ತು ಒಂದು ಗುಡಿಸಲವರನ್ನು ಬದಲಾಯಿಸಿದರೆ ಮತ್ತೆ ಅದೇ ಜಾಗದಲ್ಲಿ ಇನ್ನೊಬ್ಬರು ಬಂದು ಗುಡಿಸಲು ಹಾಕಿ ಮತ್ತೆ ಈ ಸ್ಲಂಗಳು ಬೆಳೆಯಲು ಅವಕಾಶವಾಗಿದೆ. ಇದರ ನಿವಾರಣೆ ಹೇಗೆ ಮಾಡಬಹುದು ಎನ್ನುವುದನ್ನು ಸರಕಾರದವರು ತೀವ್ರವಾಗಿ ಯೋಚನೆ ಮಾಡಬೇಕು. ಕಳೆದ ಕೆಲವೇ ದಿನಗಳಲ್ಲಿ ಹೊಸೂರು ರೋಡಿನಲ್ಲಿ ಕೆಲವರು ಬಂದು ಗುಡಿಸಲು ಹಾಕಿಕೊಂಡರು. ಅಲ್ಲಿ ಸ್ಲಂ ಬೆಳೆಯಲು ಅಲ್ಲಿನ ಜನರೇ ಉತ್ತೇಜನ ಕೊಟ್ಟರು. ಇದನ್ನು ಸರಿಯಾಗಿ ಸರಕಾರ ಯೋಚನೆ ಮಾಡಬೇಕಾಗಿದೆ. ಇಂತಹ ಸ್ಲಂಗಳನ್ನು ಉತ್ತಮಪಡಿಸುವುದಕ್ಕೆ ಸರಿಯಾದ ಯೋಜನೆಗಳನ್ನು ಮಾಡಬೇಕಾದರೆ ಸರಕಾರಕ್ಕೆ ಸುಮಾರು 30 ಕೋಟಿ ರೂಪಾಯಿಗಳು ಬೇಕಾಗಬಹುದು. ಕಾರ್ಪೊರೇಷನ್‌ನವರು ಇಂದು 30 ಕೋಟಿ ರೂಪಾಯಿಗಳನ್ನು ಒದಗಿಸುವ ಸ್ಥಿತಿಯಲ್ಲಿಲ್ಲ. ಕಾರ್ಪೊರೇಷನ್ ಇದುವರೆಗೆ ಸ್ಲಂಗಳಿಗಾಗಿ ಖರ್ಚುಮಾಡಿರುವ ದುಡ್ಡು ಸಾಲದು. ಹೀಗೆ ಇದಕ್ಕಾಗಿ 30 ಕೋಟಿಯನ್ನು ಯಾವರೀತಿಯಾಗಿ ತರಬೇಕು. ಎನ್ನುವುದರ ಬಗ್ಗೆ ಸರಕಾರ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆ. ಇಂತಹ ಅನೇಕ ಅಡಚನೆಗಳಿಂದಾಗಿ ಕಳೆದ ಹತ್ತಾರು ವರ್ಷಗಳಿಂದಲೂ ಸ್ಲಂಗಳನ್ನು ಇಲ್ಲಿ ಕ್ಲಿಯರು ಮಾಡಲು ಆಗುತ್ತಿಲ್ಲ. ಸ್ಲಂಗಳಲ್ಲಿ ವಾಸ ಮಾಡತಕ್ಕ ಜನ ಬೆಂಗಳೂರು ನಗರದ ಪೇಟೆಗಳಲ್ಲಿ ಹಾಗೂ ಮಾರ್ಕೆಟ್ಟುಗಳಲ್ಲಿ ಅಥವಾ ಕೈಗಾರಿಕೆಗಳಲ್ಲಿ ಕೆಲಸ ಮಾಡಿ ಜೀವನ ಮಾಡುತ್ತಿರುವುದರಿಂದ ಇವರು ಸಾಧ್ಯವಾದಷ್ಟುಮಟ್ಟಿಗೂ ಎಲ್ಲಿ ಇವರು ಕೆಲಸ ಮಾಡುತ್ತಿದ್ದಾರೋ ಅಲ್ಲೇ ವಾಸಮಾಡಲು ಸೌಕರ್ಯವಾಗುತ್ತದೆ ಎಂದು ಅಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಅದು ಎಷ್ಟೇ ಕೊಳಚೆ ಪ್ರದೇಶವಾಗಿರಲಿ ಅಲ್ಲೇ ಇರಲು ಅಪೇಕ್ಷೆ ಪಡುತ್ತಾರೆ ಮತ್ತು ಹಾಗೆ ಇಂದು ಇಲ್ಲೇ ಅನೇಕರು ವಾಸ ಮಾಡುತ್ತಿದ್ದಾರೆ. ಈಚೆಗೆ ಕರಾಸಿಪಾಳ್ಯಂನಿಂದ ಕೆಲವು ಸ್ಲಂಗಳನ್ನು ಬದಲಾವಣೆ ಮಾಡಬೇಕೆಂದು ಇವರಿಗಾಗಿ ಮಲ್ಟೀ ಸ್ಟೋರೀಡ್ ಬಿಲ್ಡಿಂಗನ್ನು ಹೌಸಿಂಗ್ ಬೋರ್ಡಿನವರು ಕಟ್ಟಿಸಿಕೊಟ್ಟರೂ ಅಲ್ಲಿಗೆ ಹೆಚ್ಚು ಜನ ಹೋಗಲು ಆಸಕ್ತಿ ವಹಿಸುತ್ತಿಲ್ಲ. ಇದರಿಂದಾಗಿ ಈ ಸಮಸ್ಯೆ ಬಗೆಹರಿಯದೆ ಉಳಿದಿದೆ. ಕೆಲವು ಕಡೆಗಳಲ್ಲಿ ಮಹಡಿ ಮನೆಗಳಲ್ಲಿ ವಾಸ ಮಾಡಲು ಇಷ್ಟಪಡುತ್ತಿಲ್ಲ. ಮತ್ತು ಇದಕ್ಕೆ ಸುಮಾರು 18 ರೂಪಾಯಿಗಳಷ್ಟು ತಿಂಗಳಿಗೆ ಬಾಡಿಗೆ ಎಂದು ಗೊತ್ತುಮಾಡಿದ್ದಾರ. ಕೆಲವರು ಇಷ್ಟು ಬಾಡಿಗೆ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಇದರಿಂದಾಗಿ ಇಲ್ಲಿರುವ ಜನ ಮಲ್ಟಿಸ್ಟೋರೀಡ್ ಬಿಲ್ಡಿಂಗ್‌ಗೆ ಹೋಗುವು

(ಶ್ರೀ ಟಿ. ಆರ್. ಶಾಮಣ್ಣ)

ದಿಲ್ಲ ಎಂದು ಅವರ ಪ್ರತಿಭಟನೆಯನ್ನೂ ಸೂಚಿಸಿದ್ದಾರೆ. ಇದರ ಬಗ್ಗೆ ಸರಕಾರ ಸರಿಯಾಗಿ ಯೋಚನೆ ಮಾಡಬೇಕು. ಇಂತಹ ಒಂದು ವಿಶೇಷವಾದ ಸಮಸ್ಯೆ ನಮ್ಮ ಮುಂದೆ ಬಂದಿದೆ. ಇದರ ಜೊತೆಗೆ ಇಂತಹ ಸ್ಲಂಸ್‌ಗಳು ಇನ್ನೂ ಮುಂದುವರಿಯುತ್ತಾ ಹೋಗುತ್ತಿರುವುದನ್ನು ತಡೆಗಟ್ಟಲು ಸರಕಾರಕ್ಕೆ ಆಗುತ್ತಿಲ್ಲ. ಇದನ್ನು ಬೇಗ ತಡೆಗಟ್ಟಬೇಕಾದುದು ಸರಕಾರದ ಮುಖ್ಯ ಕರ್ತವ್ಯ ಎಂದು ಹೇಳಿದರೆ ಅದು ಇಲ್ಲಿ ತಪ್ಪಾಗಲಾರದು.

ಇದರಲ್ಲಿ ಒಂದು ಗಮನಿಸಬೇಕಾದ ಅಂಶ ಏನೆಂದರೆ ಓಟನ್ನು ಪಡೆಯುವ ದೃಷ್ಟಿಯಿಂದ ನಾವು ಸ್ಲಂ ಇಟ್ಟುಕೊಂಡಿರುತ್ತೇವೆ. ರಾಜಕಾರಿಣಿಗಳು ಇದರಲ್ಲಿ ಪ್ರವೇಶ ಮಾಡಿ ಇವರಿಗೆ ಉತ್ತೇಜನ ಕೊಡುತ್ತಿದ್ದಾರೆ. ಸ್ಲಂ ಇರಲಿ, ಅವರು ನಮಗೆ ಓಟು ಕೊಡುತ್ತಾರೆಂಬ ಒಂದು ಮನೋಭಾವ ನಮ್ಮಲ್ಲಿ ಇದೆ. ಇದರ ಜೊತೆಗೆ ಸರ್ಕಾರದವರು ತಮ್ಮ ಭಾಷಣಗಳಲ್ಲಿ ಮತ್ತು ತಮ್ಮ ವರದಿಗಳಲ್ಲಿ ಈ ಸ್ಲಂ ಬಗ್ಗೆ ತಮ್ಮ ಸಹಾನುಭೂತಿಯನ್ನು ತೋರಿಸಿಕೊಂಡು ಬರುತ್ತಿದ್ದಾರೆಯೇ ಹೊರತು ಕಾರ್ಯತಃ ಇದುವರೆಗೂ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದು ಬಹಳ ಶೋಚನೀಯವಾದ ವಿಚಾರ. ಇದುವರೆಗೆ ಮೂರು ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ಈ ಯೋಜನೆಗಳಲ್ಲಿ ಸ್ಲಂ ಕ್ಲಿಯರೆನ್ಸ್‌ಗಾಗಿ ಕೇಂದ್ರ ಸರ್ಕಾರದವರು 40 ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಸಹ ಆ ಹಣವನ್ನು ರಾಜ್ಯಸರ್ಕಾರದವರು ಖರ್ಚು ಮಾಡಲಿಲ್ಲ. ಆ ಹಣ ಹಾಗೆಯೇ ಉಳಿಯಿತು. ಈ ಕಾರಣದಿಂದ ಕೇಂದ್ರ ಸರ್ಕಾರದಿಂದ ಈ ಬಾಬಿಗಾಗಿ ಬರುತ್ತಿದ್ದ ಗ್ರಾಂಟ್ ನಿಂತುಹೋಯಿತು. ಕೊಳಚೆ ನಿರ್ಮೂಲನ ಸಮಸ್ಯೆಯನ್ನು ಪರಿಹರಿಸಲು 124 ಲಕ್ಷ ರೂಪಾಯಿ ವೆಚ್ಚದ ಕೊಳಚೆ ನಿರ್ಮೂಲನ ಯೋಜನೆಯೊಂದನ್ನು ರೂಪಿಸಲಾಗಿದೆ ಎಂಬುದಾಗಿ ರಾಜ್ಯಪಾಲರ ಭಾಷಣದಲ್ಲಿಯೂ ಸಹ ಹೇಳಲಾಗಿದೆ. ಇದನ್ನು ಅಪ್ರೂವಲ್‌ಗಾಗಿ ಕೇಂದ್ರ ಸರ್ಕಾರಕ್ಕೆ ಕಳಿಸಿಕೊಟ್ಟಿದ್ದಾರೆ. ಮತ್ತು ಕೇಂದ್ರ ಸರ್ಕಾರದಿಂದ ಕೂಡ ಸಹಾಯವನ್ನು ಕೇಳಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಣವನ್ನು ಒದಗಿಸುವುದಕ್ಕಾಗಿ ಬೆಂಗಳೂರು ಕಾರ್ಪೊರೇಷನ್‌ನವರು 30 ಲಕ್ಷ ರೂಪಾಯಿಗಳನ್ನು, ಟ್ರಸ್ಟ್ ಬೋರ್ಡಿನವರು 30 ಲಕ್ಷ ರೂಪಾಯಿಗಳನ್ನು, ರಾಜ್ಯಸರ್ಕಾರದವರು 30 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು, 90 ಲಕ್ಷ ರೂಪಾಯಿಗಳನ್ನು ಮ್ಯಾಚಿಂಗ್ ಗ್ರಾಂಟ್ ರೂಪದಲ್ಲಿ ಕೇಂದ್ರಸರ್ಕಾರದವರು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಈ ಒಂದು ಯೋಜನೆ ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ ಎಂಬುದು ಸಂದೇಹವಾಗಿದೆ. ಈ ಸ್ಲಂ ನಿವಾರಣೆಯಾಗಬೇಕಾದರೆ ರಾಜ್ಯ ಸರ್ಕಾರದವರು ದೆಹಲಿಗೆ ಹೋಗಿ ಅಲ್ಲಿಯೇ ಕುಳಿತುಕೊಂಡು ಕೆಲಸ ಮಾಡಿಸಿಕೊಂಡು ಬರಬೇಕೇ ಹೊರತು, ಕೇಂದ್ರಸರ್ಕಾರಕ್ಕೆ ಕಾಗದ ಬರೆದರೆ ಈ ಕೆಲಸವಾಗುವುದಿಲ್ಲ. ಕೇಂದ್ರಸರ್ಕಾರದ ಮೇಲೆ ಸಾಕಷ್ಟು ಒತ್ತಡವನ್ನು ಇದರ ಬಗ್ಗೆ ತರಬೇಕು. ಇಲ್ಲದಿದ್ದರೆ ಈ ಸ್ಲಂಗಳ ಸಮಸ್ಯೆ ಪರಿಹಾರವಾಗುವುದಿಲ್ಲ. ಮದ್ರಾಸ್ ರಾಜ್ಯದಲ್ಲಿ ಡಿ.ಎಂ.ಕೆ. ಸರ್ಕಾರದವರು ಈ ಸ್ಲಮ್‌ಗಳ ಸಮಸ್ಯೆಯನ್ನು ಬಗೆಹರಿಸುವ ಕಡೆಗೆ ಹೆಚ್ಚಿನ ನಿಗಾ ಕೊಟ್ಟಿದ್ದಾರೆ. ಅದಕ್ಕಾಗಿಯೇ ಸ್ಲಮ್ ನಿವಾಸಿಗಳು ಅವರಿಗೆ ಓಟು ಕೊಡುತ್ತಿದ್ದಾರೆ. ಮದ್ರಾಸ್ ಸರ್ಕಾರದವರು ಅಲ್ಲಿರುವ ಸ್ಲಮ್‌ಗಳನ್ನು ಕ್ಲಿಯರ್ ಮಾಡುವುದಕ್ಕಾಗಿ ಪ್ರತಿ ವರ್ಷ 4 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು, ಇದಕ್ಕಾಗಿಯೇ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಎಂಬುದಾಗಿ ಇದೆ. ಆ ಬೋರ್ಡಿನಲ್ಲಿ ಒಬ್ಬರು ಚೀಫ್ ಇಂಜನಿಯರ್, ಇಬ್ಬರು ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು, 7 ಜನ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಒಬ್ಬರು ರೆವಿನ್ಯೂ ಆಫೀಸರ್ ಇದ್ದಾರೆ. ಈಗಾಗಲೇ ಈ ಬೋರ್ಡಿನವರು ಸ್ಲಮ್ ನಿವಾಸಿಗಳಿಗೆ ಅನೇಕ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಯಾವ ಒಂದು ಪ್ರಗತಿಯ ಕೆಲಸವನ್ನು ಇದುವರೆಗೆ ಮಾಡಿಸಿಲ್ಲ. ಬೆಂಗಳೂರು ನಗರದಲ್ಲಿ ಇನ್ನೂ 100 ಸ್ಲಮ್‌ಗಳು ಬರಲಿ, ನಾವು ಅದರ ಬಗ್ಗೆ ಗಮನ ಕೊಡುವುದಿಲ್ಲವೆಂದು ಹೇಳಿಬಿಟ್ಟರೆ ನಾವು ಇದರ ಬಗ್ಗೆ ಇನ್ನು ಮುಂದೆ ಮಾತನಾಡುವುದಿಲ್ಲ. ಕೆಲವು ದಿನಗಳ ಹಿಂದೆ ನಾನು ಕಾನ್ಪುರಕ್ಕೆ ಹೋಗಿದ್ದೆ. ಅಲ್ಲಿ ಸ್ಲಮ್ ಕ್ಲಿಯರ್ ಮಾಡುವ ಬಗ್ಗೆ ಬಹಳ ಶ್ರದ್ಧೆ ವಹಿಸಿದ್ದರು. ಅಲ್ಲಿಯ ಸರ್ಕಾರದವರು ಸ್ಲಮ್ ಕ್ಲಿಯರ್ ಮಾಡುವ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದರಂತೆ ಕೆಲಸ ಮಾಡುತ್ತಿದ್ದಾರೆ. ಸ್ಲಮ್ ನಿವಾಸಿಗಳಿಗೆ ಮೊದಲು ಒಂದು ತಾತ್ಕಾಲಿಕವಾದ ಜಾಗವನ್ನು ಗೊತ್ತುಮಾಡಿ ಅಲ್ಲಿಗೆ ಕಳಿಸಿ, ಅವರಿದ್ದ ಸ್ಥಳವನ್ನು ಬುಲ್ಡೋಜರ್ ಮೂಲಕ ಸಮ ಮಾಡಿಸಿ, ಒಳ್ಳೆಯ ಮನೆಗಳನ್ನು ಕಟ್ಟಿಸಿದ ಮೇಲೆ ತಾತ್ಕಾಲಿಕವಾಗಿ ಒದಗಿಸಿದ್ದ ಜಾಗದಿಂದ ಈ ಕಾಯಂ ಜಾಗಕ್ಕೆ ಅವರು ಬಂದು ವಾಸ ಮಾಡುವಂತೆ ಏರ್ಪಾಡು ಮಾಡುತ್ತಿದ್ದಾರೆ. ಈ ರೀತಿ ನಮ್ಮ ಸರ್ಕಾರದವರು ಕೂಡ ದಿಟ್ಟತನದಿಂದ ಒಂದು ಕಾರ್ಯಕ್ರಮ ಇಟ್ಟುಕೊಂಡು ಕೆಲಸ ಮಾಡಿದರೆ ಅನುಕೂಲವಾಗುತ್ತದೆಯೇ ಹೊರತು. ಬರೀ ಘೋಷಣೆಯಿಂದ ಕೆಲಸವಾಗುವುದಿಲ್ಲ

ವೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಸಮಸ್ಯೆಯನ್ನು ಬಗೆಹರಿಸಲು ನನ್ನ ಒಂದು ಸಲಹೆ ಏನೆಂದರೆ, ಮೊದಲನೆಯದಾಗಿ ಹೊಸ ಹೊಸ ಸ್ಲಮ್‌ಗಳು ಬೆಂಗಳೂರು ನಗರದಲ್ಲಿ ಉದ್ಭವವಾಗುವುದಕ್ಕೆ ಅವಕಾಶವನ್ನು ಕೊಡದೆ ಅದನ್ನು ಎಲ್ಲ ರೀತಿಯಿಂದಲೂ ತಡೆಗಟ್ಟಬೇಕು. ಈಗ ವರ್ಷಕ್ಕೆ ಮೂರು ನಾಲ್ಕು ಹೊಸ ಸ್ಲಮ್‌ಗಳು ಉದ್ಭವವಾಗುತ್ತಿವೆ. ಸ್ಲಮ್ ಕ್ಲಿಯರ್ ಮಾಡುವ ಕಡೆಗೆ ಸರ್ಕಾರದವರು ಗಮನ ಕೊಡದಿದ್ದರೆ ಹೊಸ ಸ್ಲಮ್‌ಗಳು ತೀವ್ರಗತಿಯಿಂದ ಜಾಸ್ತಿಯಾಗುತ್ತಾ ಹೋಗುತ್ತವೆ. ಈ ಕಾರಣದಿಂದ ಯಾವುದೇ ಕಾರಣಕ್ಕೂ ಹೊಸ ಸ್ಲಮ್ ಉದ್ಭವವಾಗುವುದನ್ನು ನಿರ್ದಾಕ್ಷಿಣ್ಯವಾಗಿ ತಡೆಗಟ್ಟಬೇಕು. ಎರಡನೆಯದಾಗಿ ಈ ಸ್ಲಮ್ ಕ್ಲಿಯರೆನ್ಸ್ ಆಕ್ಟನ್ನು ಬದಲಾವಣೆ ಮಾಡಬೇಕು. ಇಲ್ಲದಿದ್ದರೆ ಆ ಜಾಗವನ್ನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನೆನ್ನೆತಾನೆ ಸಣ್ಣ ಹಿಡುವಳಿದಾರರಿಗೆ ಅನುಕೂಲ ಮಾಡಿಕೊಡಲು ಭೂಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು ಪಾಸ್ ಮಾಡಲಾಯಿತು. ಅದರಂತೆ ಸ್ಲಮ್ ಕ್ಲಿಯರೆನ್ಸ್ ಬಗ್ಗೆಯೂ ಒಂದು ಆಕ್ಟ್ ತೆಗೆದುಕೊಂಡು ಬಂದು ಅಕ್ವಿಜಿಷನ್ ಸುಲಭವಾಗಿ ಆಗುವುದಕ್ಕೆ ಅವಕಾಶ ಮಾಡಬೇಕು. ಇದು ಆಗತ್ಯವಾಗಿ ಆಗಬೇಕಾಗಿದೆ. ಮೂರನೆಯದು ಎಂದರೆ, ಈ ಸ್ಲಮ್‌ಗಳನ್ನು ಕ್ಲಿಯರ್ ಮಾಡಲು ದುಡ್ಡು ಬೇಕು. ದುಡ್ಡು ಇಲ್ಲದೆ ಯಾವ ಕೆಲಸವೂ ಆಗುವುದಿಲ್ಲ. ಅದರಂತೆ ಇದಕ್ಕೂ ಹಣವನ್ನು ಸಾಕಷ್ಟು ಖರ್ಚು ಮಾಡದಿದ್ದರೆ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಈ ಸ್ಲಮ್‌ಗಳು ಉದ್ಭವವಾಗುವುದಕ್ಕೆ ಕಾರಣ ಬೇರೆ ಬೇರೆ ರಾಜ್ಯಗಳಿಂದ ಬರುತ್ತಿರುವ ಜನರು ಇಲ್ಲಿಯೇ ನೆಲೆಸುತ್ತಿರುವುದು. ಇವರನ್ನು ಬೇರೆ ಕಡೆಗೆ ಕಳಿಸುವುದಕ್ಕೆ ಏರ್ಪಾಡು ಮಾಡಬೇಕು, ಇಲ್ಲದಿದ್ದರೆ ಯಾವ ಯಾವ ರಾಜ್ಯಗಳಿಂದ ಜನರು ಇಲ್ಲಿಗೆ ಬಂದು ನೆಲೆಸಿದ್ದಾರೋ, ಆ ರಾಜ್ಯಗಳಿಂದ ಹಣವನ್ನು ತರಿಸಿಕೊಂಡು ಇವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು. ಬಡವರನ್ನು ಉದ್ಧಾರ ಮಾಡುವವರು ನಾವು ಎಂದು ಸರ್ಕಾರದವರು ಹೇಳಿಕೊಂಡು ಅದರ ಒಂದು ಕ್ರೆಡಿಟ್ ತೆಗೆದುಕೊಳ್ಳುವಾಗ, ಅವರು ವಾಸ ಮಾಡುತ್ತಿರುವ ಸ್ಲಮ್‌ಗಳನ್ನು ಕ್ಲಿಯರ್ ಮಾಡುವುದಕ್ಕೂ ಆಸಕ್ತಿ ವಹಿಸಬೇಕು. ಕ್ರೆಡಿಟ್ ಬೇಕೆಂದು ಹೇಳುವಾಗ ಕೆಲಸವನ್ನು ಸಹ ಮಾಡಬೇಕು. ವರ್ಷಕ್ಕೆ 4 ಕೋಟಿ ರೂಪಾಯಿಗಳಂತೆ ಖರ್ಚು ಮಾಡಿದರೂ ಸಹ ಈಗಿರುವ ಸ್ಲಮ್‌ಗಳನ್ನು ಕ್ಲಿಯರ್ ಮಾಡಲು ಇನ್ನು 20 ವರ್ಷಗಳು ಸಹ ಸಾಕಾಗುವುದಿಲ್ಲ. ಆದ್ದರಿಂದ ಈ ಬಾಬಿಗೆ ಇನ್ನೂ ಹೆಚ್ಚಿನ ಹಣವನ್ನು ಒದಗಿಸುವ ಬಗ್ಗೆ ಕೂಡಲೇ ತೀರ್ಮಾನ ತೆಗೆದುಕೊಳ್ಳದಿದ್ದರೆ ಈ ಸಮಸ್ಯೆ ಖಂಡಿತ ಬಗೆಹರಿಯುವುದಿಲ್ಲವೆಂದು ಹೇಳುತ್ತೇನೆ. ಸ್ಲಮ್ ಕ್ಲಿಯರ್ ಮಾಡುವುದು ಕಾರ್ಪೋರೇಷನ್‌ನವರಿಂದಾಗಲೀ, ಅಥವಾ ಜನರಿಂದ ಓಟನ್ನು ಪಡೆದಿರುವ ಸದಸ್ಯರುಗಳಿಂದ ಕೂಡಿ ಸಮಿತಿಯಿಂದಾಗಲೀ ಸಾಧ್ಯವಿಲ್ಲ. ಹೆಚ್ಚು ಸರ್ಕಾರೀ ಅಧಿಕಾರಿಗಳೇ ಇರುವ ಸ್ವತಂತ್ರವಾದಂಥ ಒಂದು ಬೋರ್ಡನ್ನು ಇದಕ್ಕಾಗಿ ರಚನೆ ಮಾಡಬೇಕು. ನಮ್ಮಂಥ ಸದಸ್ಯರು ಬೋರ್ಡಿನಲ್ಲಿ ಇದ್ದರೆ ಯಾವ ಕೆಲಸವೂ ಆಗುವುದಿಲ್ಲ. ಈ ಬೋರ್ಡಿನಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಹೊರಗಡೆಯಿಂದ ಯಾರಿಂದಲೂ ಇನ್‌ಫ್ಲುಯೆನ್ಸ್ ಬರದಂತೆ ನೋಡಿಕೊಳ್ಳಬೇಕು. ಇಂತಹ ಒಂದು ಬೋರ್ಡನ್ನು ಕೂಡಲೇ ನೇಮಕ ಮಾಡಬೇಕು. ಇಲ್ಲದಿದ್ದರೆ ಇದನ್ನು ತಡೆಗಟ್ಟುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ಈಗಿರುವ ಸ್ಲಮ್‌ಗಳನ್ನು ಕೂಡಲೇ ಸರ್ಕಾರದವರು ಕ್ಲಿಯರೆನ್ಸ್ ಮಾಡುತ್ತಾರೆಂಬ ನಂಬಿಕೆ ನನಗಿಲ್ಲ. ಸ್ಲಮ್‌ಗಳನ್ನು ಕ್ಲಿಯರ್ ಮಾಡುವವರೆಗೆ ಅಲ್ಲಿ ವಾಸ ಮಾಡುವ ಬಡ ಜನರಿಗೆ ಅದರಲ್ಲೂ ಹೆಂಗಸರಿಗೆ ಅನುಕೂಲವಾಗುವಂತೆ ಲ್ಯಾವೆಟ್ರಿಯನ್ನು ಕಟ್ಟಿಸಿಕೊಡಬೇಕು. ಇಲ್ಲದಿದ್ದರೆ ಬಡ ಜನರಿಗೆ ಯಾವ ಒಂದು ಅನುಕೂಲವನ್ನೂ ಮಾಡಿಕೊಟ್ಟಂತಾಗುವುದಿಲ್ಲ. ಮನುಷ್ಯನ ಜೀವನಕ್ಕೆ ಅತಿ ಮುಖ್ಯವಾದುದು ನೀರು ಮತ್ತು ಲ್ಯಾವೆಟ್ರಿ. ಇವೆರಡನ್ನಾದರೂ ಒದಗಿಸಿಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಮುಂದೆ ಸ್ಲಮ್‌ಗಳನ್ನು ತೆಗೆಯಬೇಕಾದ ಸಂದರ್ಭ ಬಂದರೆ, ಈ ಜನರು ಒಂದೇಕಡೆ ಇರುವುದಕ್ಕೆ ಅವಕಾಶ ಕೊಡದೆ, ಬೇರೆ ಬೇರೆ ಕಡೆಗಳಲ್ಲಿ ಇದ್ದು ಜೀವನ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ನಾನು ಕನ್ನಡಿಗ. ನಾನು ಕನ್ನಡಿಗನಾಗಿ ಕೇಳಿಕೊಳುವುದೇನೆಂದರೆ, ನಮ್ಮ ಬೆಂಗಳೂರಿನಲ್ಲಿ ಕನ್ನಡಿಗರು ವಾಸ ಮಾಡುವುದಕ್ಕೆ ಮೊದಲು ಆದ್ಯತೆ ಕೊಡಬೇಕು. ನಂತರ ಬೇರೆಯವರಿಗೆ ಆದ್ಯತೆ ಕೊಡಬೇಕು. ನಮ್ಮ ತಮಿಳು ಸ್ನೇಹಿತರು ಬಹಳ ಬುದ್ಧಿವಂತರು. ತಮಗೆ ಬೇಕಾದಂಥ ಪರಿಹಾರಗಳನ್ನು ಪಡೆದುಕೊಳ್ಳುವುದರಲ್ಲಿ ಅವರು ಯಾವಾಗಲೂ ಮುಂದೆ ಇರುತ್ತಾರೆ. ಆದರೆ ನಮ್ಮ ಜನ ಯಾವಾಗಲೂ ಕುರಿಯಂತೆ ತಲೆ ಕೊಡುತಾರೆಯೇ ಹೊರತು ತಮ್ಮ ಹಕ್ಕನ್ನು ಸಾಧಿಸಿಕೊಳ್ಳುವುದಿಲ್ಲ. ನನ್ನ ಕ್ಷೇತ್ರದಲ್ಲಿ ಕೆಲವರು ಕನ್ನಡಿಗರು ಗುಡಿಸಲನ್ನು ಹಾಕಿಕೊಂಡಿದ್ದಾರೆ. ಅವರು ಬಹಳ ಬಡವರಿದ್ದಾರೆ. ಅಂತಹವರಿಗೆ ಜಾಗ ಖಾಲಿ ಮಾಡಬೇಕೆಂದು ನೋಟೀಸ್ ಕೊಟ್ಟಿದ್ದಾರೆ. ಹೊರಗಡೆಯಿಂದ ಬಂದ ಜನರು ಯಾರು ಹೊಸದಾಗಿ ಗುಡಿಸಲನ್ನು ಹಾಕಿಕೊಂಡು ಗಟ್ಟಿಯಾಗಿ ಕುಳಿತುಕೊಂಡಿದ್ದಾರೆ ಅಂತಹವರನ್ನು ಯಾರೂ ಕೇಳುತ್ತಿಲ್ಲ. ಆದರೆ ಬಹಳ ಕಾಲದಿಂದ

(ಶ್ರೀ ಟಿ. ಆರ್. ಶಾಮಣ್ಣ)

ಇದ್ದ ಕನ್ನಡಿಗರಿಗೆ ನೋಟೀಸ್ ಕೊಟ್ಟಿದ್ದಾರೆ. ತಮಿಳರಲ್ಲಿ ನನಗೆ ಮಮತೆ ಇದೆ. ಅವರನ್ನು ನಾನು ಯಾವತ್ತೂ ದೂರುವುದಿಲ್ಲ, ಆದರೆ ಕನ್ನಡಿಗರಿಗೆ ಅನಾನುಕೂಲ ಮಾಡಿ ಬೇರೆಯವರಿಗೆ ಅನುಕೂಲ ಮಾಡಿಕೊಡುವುದು ಸರಿಯಲ್ಲ ಎಂಬ ಮಾತನ್ನು ನಾನು ಒತ್ತಾಯಮಾಡಿ ಹೇಳುತ್ತೇನೆ. ಸ್ಲಮ್‌ಗಳನ್ನು ಕ್ಲಿಯರ್ ಮಾಡುತ್ತೇವೆಂದು ಘೋಷಣೆ ಮಾಡಿ. ಇಲ್ಲದಿದ್ದರೆ ಈ ಯೋಜನೆಗೆ ಬೆಂಕಿ ಹಚ್ಚಿಬಿಡಿ. ನಾವು ಸಹ ಮುಂದೆ ಮಾತನಾಡುವುದಿಲ್ಲ. ಮಾನವೀಯತೆ ದೃಷ್ಟಿಯಿಂದ, ಬೆಂಗಳೂರು ನಗರದ ಸೌಂದರ್ಯದ ದೃಷ್ಟಿಯಿಂದ ಈ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ಕೂಡಲೇ ಬಗೆಹರಿಸುವುದು ಒಳ್ಳೆಯದು. ಅದಕ್ಕಾಗಿ ಸರ್ಕಾರದವರು ಈಗಿರುವ ಆಕ್ಟ್‌ಗೆ ಕೆಲವು ತಿದ್ದುಪಡಿಗಳನ್ನು ಮಾಡಬೇಕು, ಮತ್ತು ಸಾಧ್ಯವಾದಷ್ಟು ಬೇಗ ಹಣದ ಏರ್ಪಾಡನ್ನು ಮಾಡಬೇಕು. ಇಲ್ಲದಿದ್ದರೆ ಸ್ಲಮ್ ಕ್ಲಿಯರ್ ಆಗುವುದಿಲ್ಲ, ಅದು ಕೇವಲ ಘೋಷಣೆಯಲ್ಲಿಯೇ ಇರುತ್ತದೆ. ಅದಕ್ಕೆ ಸರ್ಕಾರದವರು ಅವಕಾಶ ಕೊಡದೆ ಸ್ಲಮ್ ಕ್ಲಿಯರೆನ್ಸ್ ಬಗ್ಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

12–30 P.M.

†ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ)—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಶಾಮಣ್ಣನವರು ಈ ಸಭೆಯ ಮುಂದೆ ಬೆಂಗಳೂರು ನಗರದಲ್ಲಿರುವ ಗುಡಿಸಲು ವಾಸಿಗಳ ಅಭಿವೃದ್ಧಿಗಾಗಿ ಮತ್ತು ಬೆಂಗಳೂರು ನಗರದಲ್ಲಿರುವ ಕೊಳಚೆ ಪ್ರದೇಶಗಳಿಂದ ಅಲ್ಲಿನ ನಿವಾಸಿಗಳಿಗೆ ತೊಂದರೆ ಹಾಗೂ ಅನಾನುಕೂಲವಾಗುತ್ತಿರುವುದರಿಂದ ಅದನ್ನು ನಿರ್ಮೂಲ ಮಾಡಲು ತಂದಿರತಕ್ಕ ನಿರ್ಣಯದ ಬಗ್ಗೆ ನಾನು ಒಂದೆರಡು ಮಾತನ್ನು ಹೇಳುತ್ತೇನೆ. ಮೊಟ್ಟಮೊದಲನೆಯದಾಗಿ ಶ್ರೀಮಾನ್ ಶಾಮಣ್ಣನವರು ಅವರ ಭಾಷಣದಲ್ಲಿ ಆಡಳಿತ ಪಕ್ಷದ ಧೋರಣೆಯ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ, ಅದರ ಬಗ್ಗೆ ನಾನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಏನೇ ಇರಲಿ, ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ರಚನೆ ಮಾಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಆ ಬೋರ್ಡಿಗೆ ಪ್ರತ್ಯೇಕವಾದ ಒಂದು ಕಾನೂನು ರಚನೆಮಾಡಿ ಬೋರ್ಡ್‌ಗೆ ಕೆಲಸ ಮಾಡುವುದಕ್ಕೆ ಅವಕಾಶ ಇರಬೇಕು.

ಎರಡನೆಯದಾಗಿ ಆ ಬೋರ್ಡು ಒಂದು ವರ್ಷಕ್ಕೆ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾ ಒಂದು ಅವಕಾಶ ಇರಬೇಕು. ಇದಕ್ಕೆ ಕೇಂದ್ರ ಸರ್ಕಾರದಿಂದ ಅರ್ಧ ಹಣ ಪಡೆಯಬೇಕು, ಇನ್ನು ಉಳಿದ ಅರ್ಧಹಣವನ್ನು ಸ್ಥಳೀಯ ಸರ್ಕಾರ, ಮತ್ತು ಸ್ಥಳೀಯ ಸಂಸ್ಥೆಗಳು ಕೊಡಬೇಕು. ಈಗ ಕಾರ್ಪೊರೇಷನ್, ಟ್ರಸ್ಟ್‌ಬೋರ್ಡ್ ಮತ್ತು ಹೌಸಿಂಗ್ ಬೋರ್ಡ್ ಇವುಗಳೆಲ್ಲವೂ ಕೂಡ ಮನೆಕಟ್ಟತಕ್ಕಂಥಾ ಅಥವಾ ವಸತಿಯನ್ನು ಮಾಡಿಕೊಡತಕ್ಕ ಕೆಲಸವನ್ನು ಮಾಡಿಕೊಡತಕ್ಕಂಥಾ ಸಂಸ್ಥೆಗಳಾಗಿವೆ. ಈ ಹಿಂದೆ ಈ ಸಂಸ್ಥೆಗಳು ಜನಗಳಿಗೆ ಮನೆಗಳನ್ನು ಕಟ್ಟಿಕೊಟ್ಟು ಅನುಕೂಲ ಮಾಡಿಕೊಟ್ಟಿವೆ. ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ರಚನೆಯಾಗಿ ಅದಕ್ಕೆ ಹಣವನ್ನು ಒದಗಿಸುವಾಗ ರಾಜ್ಯಸರ್ಕಾರದವರು, ಹೌಸಿಂಗ್ ಬೋರ್ಡಿನವರು, ಮತ್ತು ಕಾರ್ಪೊರೇಷನ್‌ನವರು ಸೇರಿ ಅದಕ್ಕೆ ಹಣವನ್ನು ಒದಗಿಸುವ ಪದ್ಧತಿ ಈಗ ಬೊಂಬಾಯಿನಲ್ಲಿ ಇದೆ. ಮತ್ತು ಬೊಂಬಾಯಲ್ಲಿ ಇದೇ ತರಹ ಒಂದು ಬೋರ್ಡ್ ರಚನೆಯಾಗಿದೆ. ಆ ಬೋರ್ಡ್ ಏನಿದೆ ಅದು ಪ್ರತ್ಯೇಕವಾದ ಬೋರ್ಡ್ ಆಗಿದೆ. ಆರೀತಿ ಮಾಡುವುದಾದರೆ ಸ್ಲಮ್ ಕ್ಲಿಯರ್ ಮಾಡುವಾಗ ಕಾರ್ಪೊರೇಷನ್‌ನವರನ್ನೂ, ಸರ್ಕಾರದವರನ್ನೂ, ಮತ್ತು ಟ್ರಸ್ಟ್ ಬೋರ್ಡಿನವರನ್ನೂ ಕೇಳತಕ್ಕಂಥಾ ಪ್ರಶ್ನೆ ಉದ್ಭವವಾಗುವುದಿಲ್ಲ. ಏತಕ್ಕೆಂದರೆ ಅವರಿಗೆ ಅಲ್ಲಿ ಪ್ರತ್ಯೇಕವಾದ ಒಂದು ಕಾನೂನು ಇದೆ. ಈ ದೃಷ್ಟಿಯಿಂದ ನಮ್ಮಲ್ಲಿಯೂ ಸಹ ಒಂದು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ರಚನೆಮಾಡಿ, ಬೊಂಬಾಯಿನಲ್ಲಿ ಆ ಬೋರ್ಡಿಗೇ ಪ್ರತ್ಯೇಕವಾದ ಒಂದು ಕಾನೂನು ಯಾವ ರೀತಿ ಇದೆಯೋ ಅದೇ ರೀತಿ ನಮ್ಮಲ್ಲಿ ರಚನೆಯಾಗತಕ್ಕಂಥಾ ಬೋರ್ಡಿಗೂ ಒಂದು ಕಾನೂನು ಇರಬೇಕೆಂದು ಹೇಳುವವರಲ್ಲಿ ನಾನು ಒಬ್ಬ. ಶ್ರೀಮಾನ್ ಶಾಮಣ್ಣನವರು ಮಾತನಾಡುವಾಗ ಸರ್ಕಾರದವರು ಬರೀ ಒಂದು ಘೋಷಣೆಯನ್ನು ಮಾಡುತ್ತಾರೆಯೇ ವಿನಾ ಕಾರ್ಯತಃ ಏನೂ ಮಾಡಲಿಲ್ಲ ಎಂದು ಹೇಳಿದರು. ಅದು ಸರಿಯಲ್ಲ. ಶ್ರೀಮಾನ್ ಕೃಷ್ಣನ್ ಅವರ ಕ್ಷೇತ್ರಕ್ಕೆ ಸೇರಿದ ಮಲ್ಲೇಶ್ವರದಲ್ಲಿ ಹಟ್ಟಿಂಗ್ ಕಾಲೋನಿ ಎಂದು ಇತ್ತು, ಅಲ್ಲಿದ್ದವರಿಗೆ ಸರ್ಕಾರದವರು ಸುಮಾರು 14 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಹಾಗೇನೆ ಒಕಳೀಪುರಂನಲ್ಲಿ ಸುಮಾರು 5 ಲಕ್ಷ ರೂಪಾಯಿಗಳನ್ನು ಖರ್ಚು

ಮಾಡಿ ಸ್ಲಮ್ ಏರಿಯಾದವರಿಗೆ 3 ಅಂತಸ್ತಿನ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಇದನ್ನೆಲ್ಲಾ ಸರ್ಕಾರದವರೇ ಮಾಡಿದ್ದು. ಅದು ಬೇರೆಯವರು ಮಾಡಿದ್ದಲ್ಲ. ಅಶೋಕ ನಗರವನ್ನು ಕೂಡ ಸರ್ಕಾರದವರೇ ಮಾಡಿದ್ದು. ಸ್ಲಮ್‌ನಲ್ಲಿರತಕ್ಕವರ ಸಹಾಯದಿಂದ ಅಧಿಕಾರಕ್ಕೆ ಬರಬೇಕು ಎನ್ನುವ ದೃಷ್ಟಿಯಿಂದ ಕೆಲವು ಕಡೆ ಸ್ಲಮ್ ಕ್ರಿಯೇಟ್ ಮಾಡಿ ಆ ಭಾಗದಿಂದ ಕಾರ್ಪೊರೇಷನ್ನಿಗೆ ಕೌನ್ಸಿಲರ್ ಆಗಿ ಅನೇಕರು ಆಯ್ಕೆಯಾಗಿದ್ದಾರೆ. ಕಾರ್ಪೊರೇಷನ್ ಸದಸ್ಯರಾಗಿರತಕ್ಕ ಶ್ರೀಮಾನ್ ಶಾಮಣ್ಣ ನವರಿಗೆ ಯಾವ ಸದಸ್ಯರು ಯಾವ ಸ್ಲಮ್ ಏರಿಯಾದಿಂದ ಕಾರ್ಪೊರೇಷನ್ನಿಗೆ ಆಯ್ಕೆಯಾಗಿ ಬಂದಿದ್ದಾರೆ ಎಂಬುದು ಸ್ಪಷ್ಟವಾಗಿ ಗೊತ್ತಿದೆ. ಹೀಗಿರುವಾಗ ಆಡಳಿತ ಪಕ್ಷದಲ್ಲಿರತಕ್ಕವರು ಸ್ಲಮ್ ಏರಿಯಾದಿಂದ ಆಯ್ಕೆಯಾಗಿ ಬಂದವರು ಇಲ್ಲವೇ ಇಲ್ಲ ಎಂದು ಹೇಳಿದರೆ ಹೇಗೆ ? ಸ್ಲಮ್ ಕ್ಲಿಯರ್ ಮಾಡುವುದಕ್ಕೆ ಕಾರ್ಪೊರೇಷನ್ ಇದ್ದರೂ ಕೂಡ ಈ ಸಭೆಯಲ್ಲಿ ಕ್ಲಿಯರೆನ್ಸ್ ಬಗ್ಗೆ ನಿರ್ಣಯವನ್ನು ತಂದಿರುವುದು ಬಹಳ ಶೋಚನೀಯ. ಕಾರ್ಪೊರೇಷನ್‌ನಲ್ಲಿ ಸಮಾರು 9 ಕೋಟಿ ರೂಪಾಯಿಗಳನ್ನು ಎಂದರೆ ಕಾರ್ಪೊರೇಷನ್ ವರಮಾನದ ⅔ ಭಾಗದಷ್ಟು ಹಣವನ್ನು ಅಧಿಕಾರಿಗಳ ಸಂಬಳಕ್ಕಾಗಿ ಕೊಡುತ್ತಿದ್ದಾರೆ. ಈ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಾನು ಕಾರ್ಪೊರೇಷನ್‌ನಲ್ಲಿ ಹೇಳಿದ್ದೇನೆ. ನಾನು ಕಾರ್ಪೊರೇಷನ್‌ನಲ್ಲಿ 7 ವರ್ಷಗಳ ಕಾಲ ಕೌನ್ಸಿಲರ್ ಆಗಿ ಇದ್ದೆ. ಆಗ ನಾನು 5 ಸ್ಲಮ್ ಏರಿಯಾಗಳನ್ನು ಕ್ಲಿಯರ್ ಮಾಡಿಸಿದ್ದೇನೆ. 63 ಜನ ಕಾರ್ಪೊರೇಷನ್ ಸದಸ್ಯರು ಯಾರಿದ್ದಾರೆ ಅವರು ಸ್ಲಮ್ ಕ್ಲಿಯರೆನ್ಸ್ ಮಾಡಬೇಕು. ಗುಡಿಸಲುಗಳನ್ನೆಲ್ಲಾ ಹೋಗಲಾಡಿಸಿ ಅಲ್ಲಿ ವಾಸಮಾಡತಕ್ಕ ಜನಗಳಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡು ಅದಕ್ಕೆ ಬೇಕಾದ ಹಣವನ್ನು ಒದಗಿಸುವ ಪ್ರಯತ್ನವನ್ನು ಮಾಡಿದರೆ ಅವರು ಸರ್ಕಾರದಿಂದ ಸಹಾಯವನ್ನು ಪಡೆದುಕೊಂಡು 3 ವರ್ಷಗಳಲ್ಲಿ ಎಲ್ಲಾ ಸ್ಲಮ್‌ಗಳನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕೆ ಅವರು ಮನಸ್ಸು ಮಾಡಬೇಕು. ಸ್ಟೇಡಿಯಂ, ಮಿಲ್ಲರ್ ಟ್ಯಾಂಕ್ ಮುಂತಾದ ನಾಲ್ಕಾರು ಕಡೆ ಮನೆಗಳೂ ಇರಬೇಕು, ಕಾರ್ಖಾನೆಗಳೂ ಇರಬೇಕು ಎನ್ನುವ ದೃಷ್ಟಿಯಿಂದ ಜಮೀನನ್ನು ಒದಗಿಸಿಕೊಟ್ಟಿದ್ದಾರೆ. ಅಲ್ಲಿ ಸ್ಲಮ್ಸ್ ಇವೆಯೇ ವಿನಾ ಕಾರ್ಖಾನೆಗಳು ಇರುವ ಜಾಗ ಎಲ್ಲೂ ಇಲ್ಲ. ಆ ಪ್ರದೇಶದಿಂದ ಚುನಾಯಿತರಾಗಿ ಬಂದಿರತಕ್ಕವರು ಡಿ.ಎಂ.ಕೆ. ಪಕ್ಷದ ಸದಸ್ಯರು. ಆದರೆ ಶ್ರೀಮಾನ್ ಶಾಮಣ್ಣನವರು ಆಡಳಿತ ಪಕ್ಷದವರನ್ನು ಸುಲಭವಾಗಿ ಟೀಕೆ ಮಾಡಬಹುದು ಎನ್ನುವ ದೃಷ್ಟಿಯಿಂದ ಅವರು ಟೀಕೆ ಮಾಡುತ್ತಿದ್ದಾರೆ. ಅವರು ನಿಜವಾದ ಅಂಶವನ್ನು ಅರಿತು ಹೇಳಿದರೆ ನಾವು ಏನಾದರೂ ತಪ್ಪುಗಳನ್ನು ಮಾಡಿದ್ದರೆ ಅವುಗಳನ್ನು ತಿದ್ದಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಟೀಕೆಮಾಡಿ ಹೊರಟು ಹೋದರು. ಬೇರೆಯವರು ಹೇಳುವುದನ್ನು ಕೇಳುವುದಕ್ಕೆ ಅವರು ಸಭೆಯಲ್ಲಿ ಇರುವುದು ಒಳ್ಳೆಯದು.

ಶ್ರೀ ಕೆ. ಶ್ರೀರಾಮುಲು.— ಸ್ಲಮ್ ಏರಿಯಾದಲ್ಲಿ ಸಣ್ಣ ಸಣ್ಣ ಮನೆಗಳಿವೆ. ಈಗ ಕೋಲಾರ ಗೋಲ್ಡ್ ಫೀಲ್ಡ್‌ನಲ್ಲಿ ಕಟ್ಟಿರುವ ಮನೆಗಳು ಸರ್ಕಾರದವರೇ ಕಟ್ಟಿದ್ದು. ಸ್ಲಮ್ ಏರಿಯಾದಲ್ಲಿರತಕ್ಕವರಿಗೆ ಮನೆಗಳನ್ನು ಅಗತ್ಯವಾಗಿ ಕಟ್ಟಿಕೊಡಬೇಕು, ಅದು ಸರ್ಕಾರದ ಮುಖ್ಯ ಕರ್ತವ್ಯ. ಜನಗಳಿಗೆ ಅನೇಕ ತೊಂದರೆಗಳಿವೆ. ಈ ಸ್ಲಮ್ ಏನೂ ಹೊಸದಲ್ಲ. ಮೊದಲಿನಿಂದಲೂ ಸ್ಲಮ್ ಇದ್ದೇ ಇದೆ. ಈಗ ಯಾರಿಗಾದರೂ ಹೆಚ್ಚಿಗೆ ಜಮೀನು ಇದ್ದರೆ ಅದನ್ನು ಕಿತ್ತುಕೊಳ್ಳಬೇಕು ಎಂದು ಸರ್ಕಾರದವರು ಕಾನೂನು ಮಾಡುತ್ತಿದ್ದಾರೆ. ಸ್ಲಮ್‌ನಲ್ಲಿರತಕ್ಕ ಕೆಲವರು ಆ ಪ್ರದೇಶದಲ್ಲಿ ಜನಗಳಿಗೆ ವಾಸಮಾಡುವುದಕ್ಕೆ ಸಾಮಾನ್ಯವಾದ ವಸತಿಗಳನ್ನು ಕಟ್ಟಿಕೊಟ್ಟು ಸುಮಾರು 500 1,000 ರೂಪಾಯಿಗಳ ಬಾಡಿಗೆಯನ್ನು ವಸೂಲು ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಹೊಸಹೊಸ ಜಾಗಗಳಲ್ಲಿ ಎಲ್ಲಾ ಕಡೆಗಳಲ್ಲೂ ಸ್ಲಮ್‌ಗಳು ನಿರ್ಮಾಣವಾಗುತ್ತವೆ. ಮನೆ ಇಲ್ಲದೆ ತೊಂದರೆ ಪಡತಕ್ಕ ಜನಗಳೂ ಇದ್ದಾರೆ. ಜನಗಳನ್ನು ತೊಂದರೆಗೆ ಒಳಪಡಿಸಿ ಬಾಡಿಗೆಯನ್ನು ವಸೂಲು ಮಾಡತಕ್ಕ ಜನಗಳೂ ಇದ್ದಾರೆ. ಸ್ಲಮ್ ಏರಿಯಾದಲ್ಲಿ 15—20 ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ತಿಂಗಳಿಗೆ 500 –1,000 ರೂಪಾಯಿಗಳ ಬಾಡಿಗೆಯನ್ನು ವಸೂಲು ಮಾಡತಕ್ಕವರೂ ಇದ್ದಾರೆ. ಇದರ ಬಗ್ಗೆ ಸರ್ಕಾರದವರು ನಿಗಾ ಕೊಡಬೇಕು. ಈಗ ಕೆಲವರು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಕಾರ್ಖಾನೆಯವರು ಕ್ವಾರ್ಟರ್ಸ್ ಕೊಟ್ಟಿದ್ದಾರೆ. ಅವರಿಗೆ ಸ್ಲಮ್ ಏರಿಯಾದಲ್ಲಿ ಏನು ಮನೆಗಳು ಇವೆ ಅವುಗಳನ್ನು ಬಾಡಿಗೆಗೆ ಕೊಟ್ಟು ಅವುಗಳಿಂದ ಬಾಡಿಗೆಯನ್ನು ವಸೂಲು ಮಾಡುತ್ತಿದ್ದಾರೆ.

ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು ಅಥವ ಕಾರ್ಪೊರೇಷನ್‌ನವರು ಒಂದು ಬೋರ್ಡ್ ರಚನೆಮಾಡಿ ಹೊಸದಾಗಿ ಬರತಕ್ಕಂತಹ ಸ್ಲಮ್‌ಗಳನ್ನು ತಡೆಗಟ್ಟಬೇಕು. ಇವೊತ್ತಿನ ದಿವಸ

(ಶ್ರೀ ಕೆ. ಶ್ರೀರಾಮುಲು)

ಮೈಕೋ ಕಾರ್ಖಾನೆಯ ಹತ್ತಿರ ಮತ್ತು ಕಾರ್ಪೋರೇಷನ್ ಹತ್ತಿರ ಸುಮಾರು 500ಕ್ಕೂ ಹೆಚ್ಚು ಮನೆಗಳು ಸ್ಲಮ್‌ನಲ್ಲಿ ಇವೆ. ಅಲ್ಲಿ ಚುನಾವಣೆ ಬಂದರೆ ಕರುಣಾನಿಧಿ ಫ್ಲಾಗ್ ಹಾಕುತ್ತಿದ್ದಾರೆ, ಬಾಕಿ ಸಂದರ್ಭಗಳಲ್ಲಿ ನಮ್ಮ ರಾಷ್ಟ್ರಧ್ವಜವನ್ನು ಹಾಕಿರುತ್ತಾರೆ. ಅವರಿಗೆ ನಮ್ಮ ಕರ್ಣಾಟಕದ ಜಮೀನು ಆಗಬೇಕು, ಮತ್ತು ಕರ್ಣಾಟಕದ ಮನೆ, ಮತ್ತು ನೀರು ಆಗಬೇಕು. ಈ ಸ್ಲಮ್‌ಗಳಿಂದ ಇವತ್ತು ದಿನೇ ದಿನೇ ಜನಸಂಖ್ಯೆ ಹೆಚ್ಚಾಗುತ್ತಿದೆ. ಹಿಂದೆ 64 ಸ್ಲಮ್ಸ್ ಇದ್ದದ್ದು ಇವತ್ತು 144 ಸ್ಲಮ್ಸ್ ಆಗಿವೆ. ಇದರಿಂದ 30 ಸಾವಿರ ಜನಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ಈ ಸ್ಲಮ್‌ಗಳಲ್ಲಿ ವಾಸ ಮಾಡುವುದಕ್ಕೆ ಯಾವ್ಯಾವ ಭಾಗದಿಂದ ಎಷ್ಟೆಷ್ಟು ಜನರು ಬರುತ್ತಾರೆಂದು ತಿಳಿದರೆ ಒಳ್ಳೆಯದು. ನಾನು 1960ರಲ್ಲಿ ಟೌನ್ ಪ್ಲಾನಿಂಗ್ ಕಮಿಟಿಯಲ್ಲಿದ್ದಾಗ ಮದ್ರಾಸಿಗೆ ಹೋಗಿದ್ದೆ; ಮತ್ತು ಅಲ್ಲಿ ಒಂದು ವಾರ ಉಳಿದುಕೊಂಡಿದ್ದೆ. ಅಲ್ಲಿ ಕಾರ್ಪೋರೇಷನ್ನಿನವರ ಹತ್ತಿರ ಚರ್ಚೆ ಮಾಡಿದಾಗ, ಮದ್ರಾಸಿಗೆ ಯಾರೂ ಹೊರ ಕಡೆಯಿಂದ ಸ್ಲಮ್‌ಗಳಲ್ಲಿ ವಾಸಮಾಡುವುದಕ್ಕೆ ಬರುವುದಿಲ್ಲವೆಂದು ತಿಳಿಯಿತು. ಇವತ್ತು ನಮ್ಮ ಬೆಂಗಳೂರಿಗೆ 70 ಪರ್‌ಸೆಂಟ್ ಜನ ಮದ್ರಾಸಿನಿಂದ ಬರುತ್ತಿದ್ದಾರೆ. ಬೇರೆ ಯಾವ ಕಡೆಯಿಂದಲೂ ಹೆಚ್ಚಿಗೆ ಜನ ಬರುವುದಿಲ್ಲ. ಅದಲ್ಲದೆ ಈ ಮನೆಗಳಲ್ಲಿ ಹುಟ್ಟತಕ್ಕ ಮಕ್ಕಳು ಬಹಳ ಅನಾರೋಗ್ಯಕರ ವಾತಾವರಣದಲ್ಲಿ ಹುಟ್ಟುತ್ತಾರೆ. ಅಲ್ಲಿ ಹುಟ್ಟತಕ್ಕ ಮಕ್ಕಳು ಕೇವಲ 3-4 ಪೌಂಡ್ ಇರತಕ್ಕ ಮಕ್ಕಳು. ಇವು ಮುಂದೆ ದೇಶಕ್ಕೂ ಯಾವ ಪ್ರಯೋಜನಕ್ಕೆ ಬೀಳುವುದಿಲ್ಲ. 1956ನೇ ಇಸವಿಯಿಂದ ಈ ಜನರಿಗೆ ಇಲ್ಲಿ ಗಾಳಿ, ಬೆಳಕು, ನೀರು—ಇಷ್ಟನ್ನು ಕೊಡುತ್ತಿದ್ದಾರೆ. ಈಗ 10 ಕೋಟಿ ರೂಪಾಯಿ ಖರ್ಚುಮಾಡಿದರೂ ಅದರಿಂದ ಸರ್ಕಾರಕ್ಕೆ ಏನೂ ಲುಕ್ಸಾನು ಬರುವುದಿಲ್ಲ. ಉದಾಹರಣೆಗೆ ಶ್ರೀರಾಮಪುರಂ ಲೇಬರ್ ಕಾಲೋನಿ ಮಾಡಿದ್ದಾರೆ. ಅಲ್ಲಿಯೂ ಈಗ ನಾಲ್ಕು ರೂಪಾಯಿ ತನಕ ಕಂದಾಯ ಕಾರ್ಪೋರೇಷನ್ನಿಗೆ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಈಗ ಒಂದು ವಿಚಾರ ಹೇಳಬೇಕೆಂದಿದ್ದೇನೆ. ರೂಲ್ 322ರ ಪ್ರಕಾರ ಒಂದು ಪತ್ರವನ್ನು ತಮಗೆ ಕಳಿಸಿದ್ದೇನೆ. ರೂಲ್ 322 ಈ ರೀತಿ ಹೇಳುತ್ತದೆ :—

"Any member may, with the consent of the Speaker move that any rule may be suspended in its application to a particular motion before the Assembly and if the motion is carried the rule in question shall be suspended for the time being."

ಇವತ್ತು ಇರತಕ್ಕಂತಹ ನಾನ್ ಅಫಿಷಿಯಲ್ ಡೇ. ನನ್ನ ರಿಸೊಲ್ಯೂಷನ್ ಇವತ್ತು ರೀಚ್ ಆಗುವುದಿಲ್ಲ. ನಾನು ಆಗಲೇ ಹೇಳಿದ್ದೇನೆ, ಈಗ ಕರ್ಣಾಟಕ ಎಂದು ಹೆಸರು ಇಡಬೇಕೆಂದು ನಾನು ಒಂದು ನಿರ್ಣಯನ್ನು ಕಳಿಸಿದ್ದೇನೆ. ಅದು ಪ್ರಾಮುಖ್ಯವಾದ ವಿಚಾರವಾಗಿರುವುದರಿಂದ ತಮ್ಮ ಮೂಲಕ ಈ ಮನೆಯ ಮುಖಂಡರಿಗೆ ಅರಿಕೆ ಮಾಡಿಕೊಳ್ಳುವುದು ಇಷ್ಟೆ. ದಯವಿಟ್ಟು ತಾವು ಒಪ್ಪಿ ಈ ನಿರ್ಣಯವನ್ನು ಚರ್ಚೆಗೆ ತೆಗೆದುಕೊಂಡು ಇದರ ಮೇಲೆ ಚರ್ಚೆ ಮಾಡಲು ಇಡೀ ಸದನಕ್ಕೆ ಒಂದು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆದ್ದರಿಂದ ತಾವು ಈ ಸಭೆಯನ್ನು ಸಾಯಂಕಾಲ 5 ಗಂಟೆಯವರೆಗೆ ನಡೆಸಬೇಕು ಮತ್ತು ಇದನ್ನು ಚರ್ಚೆಗೆ ತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಸಭೆಯ ಅನುಮತಿಯನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಅನೇಕ ಸಾರಿ ಈ ಮನೆಯನ್ನು ಅಡ್ಜರ್ನ್ ಮಾಡಿ ಬೇರೆ ವಿಚಾರಗಳನ್ನು ತೆಗೆದುಕೊಂಡ ನಿದರ್ಶನಗಳು ಇವೆ. ನಾವು ರಾತ್ರಿ 8—9 ಗಂಟೆಯವರೆಗೆ ಕೂತ ಉದಾಹರಣೆಗಳು ಇವೆ. ಆ ದೃಷ್ಟಿಯಿಂದ ಇಡೀ ಸದನವನ್ನು ಕೇಳಿಕೊಳ್ಳುವುದೇನೆಂದರೆ, ಇವತ್ತು ಈ ಕರ್ಣಾಟಕ ರೆಸಲ್ಯೂಷನ್ ರೀಚ್ ಆಗುವ ಹಾಗೆ ಅವಕಾಶ ಮಾಡಿಕೊಡಬೇಕು. ರೂಲ್ 322ರ ಪ್ರಕಾರ ಈ ಸಭೆಯನ್ನು 5 ಗಂಟೆಯವರೆಗೆ ಕೂರುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೆನೆ.

**MADAM SPEAKER.**—Is it the pleasure of the House to sit upto 5 O' clock ?

**ALL HON. MEMBERS.**—No. ; No.

ಶ್ರೀ ಡಿ. ದೇವರಾಜ ಅರಸ್.—ಈ ಸಭೆ ಇವತ್ತು ಮಧ್ಯಾಹ್ನ ಮುಗಿಯಬೇಕೆಂದು ತೀರ್ಮಾನ ಮಾಡಿತ್ತು. ಈಗ ಮತ್ತೆ ಸಾಯಂಕಾಲದವರೆಗೆ ಕೂರುವುದು ಸ್ವಲ್ಪ ಕಷ್ಟವಾಗುತ್ತದೆ. ಅದಲ್ಲದೆ, ಸಾಯಂಕಾಲದವರೆಗೆ ಕೂತರೂ ಅವರ ರೆಸಲ್ಯೂಷನ್‌ಅದರೊಳಗೆ ಬರುತ್ತದೆಂಬ ಗ್ಯಾರಂಟಿ ಏನು ? ಈಗ ಇರತಕ್ಕಂತಹ ರೀತಿಯಲ್ಲಿ ನಾನು ಹೇಳುತ್ತಾ ಇರುವುದು ಈಗ 5 ಗಂಟೆಯ ವರೆಗೆ ಕೂತರೂ ಅವರ ರಿಸೊಲ್ಯೂಷನ್ ಬರುತ್ತದೆಂಬ ಗ್ಯಾರೆಂಟಿ ಇಲ್ಲದಿರುವುದರಿಂದ, ಮುಂದಕ್ಕೆ ಈ ಸಭೆ ಮತ್ತೆ ಸೇರಿದಾಗ ಅದನ್ನು ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ಮಾತನ್ನು ಹಿಂದೆ ನಿಜಲಿಂಗಪ್ಪನವರು ಸಹ ಹೇಳಿದ್ದರು. ಅವರು ಮತ್ತೆ ಬರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಕರ್ಣಾಟಕ ಎನ್ನತಕ್ಕಂತಹ ಹೆಸರು ಇಡತಕ್ಕ ಕಾಲ ಈಗ ಬಂದಿದೆ. ಇಂತಹ ಒಳ್ಳೆಯ ಕಾಲದಲ್ಲಿ ಹೆಸರನ್ನು ಇಡಬೇಕಾಗಿದೆ.

ಶ್ರೀ ಡಿ. ದೇವರಾಜ ಅರಸ್.—ತಾವು ಇದೇ ಸಮಯ ಎಂದು ತಾವು ಏನಾದರೂ ಲಗ್ನ ನೋಡಿಕೊಂಡು ಬಂದಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ಲಗ್ನವನ್ನು ಕೂಡ ತಾವು ಹಿಂದೆ ಕೊಟ್ಟಿದ್ದಿರಿ, ಆದರೆ ಆಗ ಅದನ್ನು ಮಾಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗ ಅವಕಾಶ ಇದೆ. ಅದನ್ನು ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಹಾಗಿದ್ದರೆ, ಜೂನ್ ತಿಂಗಳಲ್ಲಿ ಏನು ಬಜೆಟ್ ಸೆಷನ್ ಬರುತ್ತದೆ ಆ ಸಮಯದಲ್ಲಿ ಮೈಸೂರು ರಾಜ್ಯ ಸರ್ಕಾರ ತೀರ್ಮಾನ ಮಾಡಿ ಮೈಸೂರು ಎನ್ನುವ ಹೆಸರಿನ ಬದಲು ಕರ್ಣಾಟಕ ಎಂದು ಹೆಸರಿಡುವುದಕ್ಕೆ ವಾಗ್ದಾನ ಕೊಡುವುದಾದರೆ ನಾನು ನನ್ನ ರೆಸಲ್ಯೂಷನಿಗೆ ಪ್ರೆಸ್ ಮಾಡುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಇದರ ಬಗ್ಗೆ ಚರ್ಚೆ ಬೇಕಿಲ್ಲ, ಜೂನ್ ತಿಂಗಳಲ್ಲಿ ಈ ವಿಚಾರ ಬಂದಾಗ ಏನು ಮಾಡಬೇಕೆಂದು ಈ ಸಭೆ ತೀರ್ಮಾನ ಮಾಡಬಹುದೆಂದು ನಾನು ಹೇಳಿದ್ದು.

ಶ್ರೀ ವಾಟಾಳ್ ನಾಗರಾಜ್.—ಬೇಕಾದರೆ ದಯವಿಟ್ಟು ನಿಮ್ಮ ಪಾರ್ಟಿಯವರೇ ತೆಗೆದು ಕೊಂಡುಬನ್ನಿ. ಮುಖ್ಯಮಂತ್ರಿಯವರೇ ಈ ನಿರ್ಣಯವನ್ನು ಮಂಡಿಸಿದರೆ ಬಹಳ ಸಂತೋಷ.

ಶ್ರೀ ಡಿ. ದೇವರಾಜ ಅರಸ್.—ಈಗ 5 ಗಂಟೆಯವರೆಗೆ ಕೂತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ದಯವಿಟ್ಟು ತಾವು ಇದಕ್ಕೆ ಒಪ್ಪಬೇಕು.

ಶ್ರೀ ವಾಟಾಳ್ ನಾಗರಾಜ್.—ತಮಗೆ ಇದನ್ನು ಒಪ್ಪಿಕೊಳ್ಳುವುದರಲ್ಲಿ ಏನೂ ಕಷ್ಟವಿಲ್ಲ. ಆದರೆ ನಮಗೆ ಒಂದು ಭಯವಿದೆ. ಒಂದು ಘಂಟೆಗೆ ಅಧ್ಯಕ್ಷರು ಎದ್ದು ನಿಂತುಕೊಂಡು ಈ ಸಭೆ ಮುಂದಕ್ಕೆ ಹೋಗುತ್ತದೆಂದು ಹೇಳುತ್ತಾರೆ.

ಶ್ರೀ ಡಿ. ದೇವರಾಜ್ ಅರಸ್.—ಇದರಲ್ಲಿ ಒಂದು ಪ್ರೊಸೀಜರನ್ನು ಅಡಾಪ್ಟ್ ಮಾಡಬಹುದು. ನಿಮಗೆ ಇಷ್ಟಬಂದ ಹಾಗೆ ಈ ಸಭೆ ನಡೆಯಬೇಕೆಂದು ಹೇಳಿದರೆ ಅದು ಆಗುವುದಿಲ್ಲ ಮಧ್ಯದಲ್ಲಿ ನಿಮ್ಮ ನಿರ್ಣಯಗಳು ಬಂದೇ ಬರುತ್ತವೆ. ಈ ಸಮಯದಲ್ಲಿ ನಿಮ್ಮ ನಿರ್ಣಯಗಳು ಬಾರದೇ ಇದ್ದರೆ, ಅದಕ್ಕೆ ನಾನೇನು ಮಾಡಲಿ ! ಇವತ್ತು 5 ಘಂಟೆಯವರೆಗೂ ಕೂತುಕೊಂಡರೆ ನಿಮ್ಮ ನಿರ್ಣಯ ಬರುತ್ತದೋ ಇಲ್ಲವೋ ಎಂಬ ಗ್ಯಾರಂಟಿ ಕೊಡುವುದು ಹೇಗೆ ? ನಾವು ಏನು ಹೇಳುತ್ತಿದ್ದರೂ, ಸುಮ್ಮನೆ ಒತ್ತಾಯಮಾಡುತ್ತೇವೆಂದು ಹೇಳಿದರೆ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ನಾನು ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿ 322ನೇ ಸೆಕ್ಷನ್ ಪ್ರಕಾರ ಈ ವಿಚಾರವನ್ನು ರೈಜ್ ಮಾಡಿದ್ದೇನೆ. ಅಧ್ಯಕ್ಷರು ಒಂದು ಘಂಟೆಗೆ ಸರಿಯಾಗಿ ಎದ್ದು ಹೌಸ್ ಅಡ್ಜರ್ನ್ಡ್ ಎಂಬುದಾಗಿ ಹೇಳಿದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದು ಘಂಟೆಗೆ ಮುಂಚಿತವಾಗಿಯೇ ನಾವು ಪ್ರಯತ್ನಮಾಡಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹೌಸ್ ಅಡ್ಜರ್ನ್ಡ್ ಎಂಬುದಾಗಿ ಹೇಳಿದರೆ ನಿಜವಾಗಿ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಜೂನ್ ತಿಂಗಳೊಳಗೆ ಇದು ಪುನಃ ಬರುತ್ತದೆಂದು ಹೇಳಿದರೆ ಸಾಕು, ಸಂತೋಷ. ಇವತ್ತು 5 ಘಂಟೆಯವರೆಗೂ ಕೂತುಕೊಳ್ಳುವುದಕ್ಕೆ ಅವಕಾಶಕೊಡಿ. ಮೂರೂವರೆ ಕೋಟಿ ಜನಗಳಿಗೆ ಅನುಕೂಲವಾಗುವಂಥಹದಕ್ಕೆ ಅವಕಾಶಕೊಟ್ಟ ಇದೀ ಕೀರ್ತಿ ತಮಗೆ ಉಂಟಾಗಲಿ ಎಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕಳಳಿಯಿಂದ ಮೊದಲೇ ಬೇಡಿಕೊಂಡೆ. ಇಂಡಿಕೇಟ್ ಪಕ್ಷದ ಸದಸ್ಯರಿಗೆ ಕರ್ಣಾಟಕವೆಂದು ಹೆಸರಿಡುವ ಪ್ರಮುಖ ನಿರ್ಣಯಕ್ಕೆ ಅವಕಾಶವನ್ನು ಮಾಡಿ ಕೊಡುವ ಕಳಕಳಿಯು ಒಂದು ಭಾವನೆ ಬರಬೇಕಾಗಿತ್ತು. ಆ ರೀತಿ ಬಾರದೇ ಇರುವುದೇ ನಮಗೆ ವಿರೋಧವಾಗಿದೆ. ಇವರು ಈ ಒಂದು ಸಂದರ್ಭದಲ್ಲಿ ತಾಳಿರತಕ್ಕ ನಿಲುವು, ಕಾಂಗ್ರೆಸ್ ಪಕ್ಷದಲ್ಲಿ ನಾನು ಕಳುಹಿಸಿಕೊಟ್ಟಿರುವ ನಿರ್ಣಯದ ಬಗ್ಗೆ ಚರ್ಚೆಯಾಗಿರುವುದು, ಮತ್ತು ಶ್ರೀರಂಗಪಟ್ಟಣದಲ್ಲಿ ನೀವು ಮಾಡಿರುವ ಹೇಳಿಕೆ—ಇವನ್ನು ನೋಡಿದರೆ, ಈ ರಾಜ್ಯಕ್ಕೆ ಮೈಸೂರು ಎಂಬುದಾಗಿ ಹೆಸರಿರುವುದನ್ನು ತೆಗೆದುಹಾಕಿ ಕರ್ಣಾಟಕವೆಂದು ಹೆಸರಿಡುವ ಆಶೆ ಇವರಲ್ಲಿಲ್ಲವೆಂದು ಗೊತ್ತಾಗಿದೆ. ನಿಮ್ಮ ಈ ಒಂದು ಉದ್ಧಟತನಕ್ಕೆ ನನ್ನ ವಿರೋಧ ಸೂಚಿಸಿ, ನಾನು ಈಗ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ಎಸ್. ಬಂಗಾರಪ್ಪನವರು ಸಭಾತ್ಯಾಗಮಾಡಿದರು. ನಂತರ ಶ್ರೀ ಕಾಗೋಡು ತಿಮ್ಮಪ್ಪ ಮತ್ತು ಶ್ರೀ ಕೋಣಂದೂರು ಲಿಂಗಪ್ಪನವರೂ ಸಹ ಸಭಾತ್ಯಾಗ ಮಾಡಿದರು).

ಶ್ರೀ ಡಿ. ದೇವರಾಜ್ ಅರಸ್.—ನೀವು ನಮ್ಮನ್ನು ಹೆದರಿಸಿ ಜನತೆಯನ್ನು ಈ ರೀತಿಯಲ್ಲಿ ಮೆಚ್ಚಿಸುತ್ತೇವೆಂದು ಹೇಳಿಕೊಂಡು ಹೋದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ. ನೀವು ನಮ್ಮ ಕಡೆ ವಿರೋಧವಾಗಿ ಹೇಳಿ ನೀವೇನೂ ಮಾಡುವುದಕ್ಕಾಗುವುದಿಲ್ಲ. ನಿಮಗೇನೂ ಓಟು ಹೆಚ್ಚಿಗೆ ಕೊಟ್ಟಿಲ್ಲ. ಜೂನ್ ತಿಂಗಳಿನೊಳಗೆ ಬರುತ್ತದೆಯೇ ಇಲ್ಲವೇ ಎಂಬುದನ್ನು ನಮಗೆ ಸಮಯ ಬಂದಾಗ ತಿಳಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ನಾನು ಮತ್ತೊಮ್ಮೆ ಕಳಕಳಿಯಿಂದ ಪ್ರಾರ್ಥನೆಮಾಡುತ್ತೇನೆ. ಈ ವಿಚಾರ ಮತ್ತೆ ಜೂನ್ ತಿಂಗಳಿನ ಅಧಿವೇಶನದೊಳಗೆ ಬರುತ್ತದೆಯೇ ಇಲ್ಲವೇ ಎಂಬುದನ್ನು ದಯವಿಟ್ಟು ನಮಗೆ ತಿಳಿಸಬೇಕೆಂದು ನಾನು ಕ್ಷಮಾಗಿದು ಬೇಡಿಕೊಳ್ಳುತ್ತಿದ್ದೇನೆ. ಜೂನ್ ತಿಂಗಳಿನ ಅಧಿವೇಶನದೊಳಗೆ ಇದನ್ನು ತಾವು ತರುವುದಾದರೆ ಬಹಳ ಸಂತೋಷ. ನಮಗೆ ಅಷ್ಟು ಹೇಳಿದರೆ ಸಾಕು. ನಿಮ್ಮನ್ನು ಹೆದರಿಸುತ್ತೇವೆಂದು ಅಲ್ಲ. ಇದರಲ್ಲಿ ತಮಗೂ ಮನಸ್ಸು ಇದೆ. ಆದ್ದರಿಂದ ಈಗಲಾದರೂ ಜೂನ್ ತಿಂಗಳಲ್ಲಿ ಇದು ಬರುತ್ತದೆಂದು ಒಂದು ವಾಕ್ಯವನ್ನು ಈಗಲೇ ಹೇಳುವುದು ಒಳ್ಳೆಯದು.

ಶ್ರೀ ಡಿ. ದೇವರಾಜ್ ಅರಸ್.—ಈ ಸಭಾ ನಡೆವಳಿಕೆಗಳನ್ನು ನಡೆಸುತ್ತಿರುವಾಗ ಅವರಲ್ಲಿ ಕೆಲವರು, ಗುಂಪಾಗಿದ್ದುಕೊಂಡು ಒತ್ತಾಯಮಾಡಿದರೂ ಸರ್ಕಾರದವರು ಇದನ್ನು ಮಾಡದೆ ಹೋದರು, ಅದಕ್ಕಾಗಿ ನಾವು ಸಭೆಯಿಂದ ಹೊರಟುಹೋಗುತ್ತೇವೆಂದು ಹೇಳಿ ಹೊರಟುಹೋದರೆ ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಬೇರೆ ಯಾರೂ ಈ ಸಭೆಯಲ್ಲಿ ಇವತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬಾರದೆಂಬುದಾಗಿ ಅವರು ಹೇಳಿದರೆ, ಅದು ಅಷ್ಟುಚೆನ್ನಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಕರ್ಣಾಟಕದ ಬಗ್ಗೆ ನಾವು ಬೇಕಾದಷ್ಟು ಹೇಳಿದ್ದೇವೆ. ಅವರಿಗೆ ಎಷ್ಟು ಇದರ ಬಗ್ಗೆ ಅಭಿಮಾನವಿದೆಯೋ ಅದಕ್ಕಿಂತಲೂ ಹೆಚ್ಚಿಗೆ ಕರ್ಣಾಟಕ ಆಗಬೇಕೆಂಬ ಅಭಿಮಾನ ನಮಗೂ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ 5 ಘಂಟೆಯವರೆಗೂ ಕೂತುಕೊಳ್ಳುವುದಕಾಗುವುದಿಲ್ಲ. ಈಗ ಅಡ್ಜರ್ನ್ ಆಗುವುದರಿಂದ, ಮುಂದಿನಸಾರಿ ಇದು ಬರುವುದಕ್ಕೆ ಅವಕಾಶವಿದೆ. ಭೂಸುಧಾರಣೆಯ ಬಗ್ಗೆ ನನ್ನದೂ ಒಂದು ನಿರ್ಣಯವಿದೆ. ಅದೂ ಕೂಡ ಲ್ಯಾಪ್ಸ್ ಆಗುತ್ತದೋ ಏನೋ ಗೊತ್ತಿಲ್ಲ. ಆದ್ದರಿಂದ ಈ ಒಂದು ಕಾರಣದಿಂದ ಸದಸ್ಯರು ಸಭಾತ್ಯಾಗ ಮಾಡುವುದು ಸರಿಯಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಕಮ್ಯೂನಿಸ್ಟ್ ಸದಸ್ಯರಾಗಿ ಸರ್ಕಾರದ ಪರವಾಗಿ ಹೇಳುವುದು ಸರಿಯಿಲ್ಲ.

(ಶ್ರೀ ವಾಟಾಳ್ ನಾಗರಾಜ್ ಅವರೂ ಸಹ ಸಭಾತ್ಯಾಗ ಮಾಡಿದರು).

ಶ್ರೀ ಕೆ. ಶ್ರೀರಾಮುಲು.—ಈಗ 10 ಕೋಟಿ ರೂಪಾಯಿಗಳನ್ನು ಖರ್ಚುಮಾಡುವುದರಿಂದ ಈಗ ವಸೂಲು ಮಾಡುತ್ತಿರುವ ಕಂದಾಯಕ್ಕಿಂತ ಹೆಚ್ಚಿಗೆ ಕಂದಾಯ ವಸೂಲೂ ಮಾಡುವುದಕ್ಕೆ ಅವಕಾಶ ಇರುತ್ತದೆ; ಮತ್ತು ಬಡವರಿಗೆ ಒಳ್ಳೆಯಮನೆ ಕಟ್ಟಿಸಿಕೊಡುವುದಕ್ಕೆ ಅವಕಾಶವಾಗುತ್ತದೆ. ಈ ವರ್ಷದಲ್ಲಿ ಗುಡಿಸಲು ನಿವಾಸಿಗಳು ವಾಸಮಾಡತಕ್ಕ ಕಡೆಗಳಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವಾಗ ಅವರ ಮನೆಗಳಿಗೆ ಹೆಚ್ಚಿಗೆ ಬೆಳಕು, ಗಾಳಿ ಬರುವುದಕ್ಕೆ ತಕ್ಕ ವ್ಯವಸ್ಥೆ ಇರಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆಮಾಡುತ್ತೇನೆ. ಅದಕ್ಕಾಗಿ ಬಡ್ಜೆಟ್ಟಿನಲ್ಲಿ ಸಾಕಾದಷ್ಟು ಹಣವನ್ನು ಒದಗಿಸಿಕೊಡಬೇಕು. ಈ ವಿಚಾರದಲ್ಲಿ ಕೆಲವರು ವಿರೋಧಪಕ್ಷದವರೂ ಸಹ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತೆ ಕೆಲವರು ಟೀಕೆಗಳನ್ನೂ ಮಾಡಿದ್ದಾರೆ. ಆದರೂ ಆ ಕಾರ್ಯವನ್ನು ನಾವೇ ಮಾಡಿ ಮುಗಿಸಬೇಕೆಂದು ಒಪ್ಪಿಕೊಂಡಿದ್ದೇವೆ. ಅಲ್ಲದೆ ಈ ಸಂದರ್ಭದಲ್ಲಿ ಪ್ರತ್ಯೇಕವಾಗಿ ಒಂದು ಸ್ಲಂಕ್ಲಿಯರೆನ್ಸ್ ಬೋರ್ಡೂ ಸಹ ರಚನೆಯಾಗಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಮದ್ರಾಸಿನಲ್ಲಿ ಬಹಳ ಉತ್ತಮವಾದಂಥ ಕೆಲಸಗಳನ್ನು ಮಾಡಿದ್ದಾರೆಂದು ಕೆಲವರು ಹೇಳಿದರು. ನಾನು ಒಂದು ಮಾತನ್ನು ಹೇಳುತ್ತೇನೆ. ಮದ್ರಾಸ್ ಕಾರ್ಪೊರೇಷನ್ನಿಗೆ ನಾನು ಕಾರ್ಪೊರೇಷನ್ ಸದಸ್ಯನಾಗಿ ಒಂದು ಸಾರಿ ಹೋಗಿದ್ದೆ. ಇನ್ನು ಮುಂದೆಯೂ ಹೋಗಬೇಕಾದ ಸನ್ನಿವೇಶ ಈಗಲೂ ದೊರಕಿದೆ. ನಾನು ಹೇಳುವ ವಿಷಯ ಸತ್ಯಕ್ಕೆ ದೂರವಾದ ವಿಷಯವಲ್ಲ. ಮೌಂಟ್ ರೋಡಿನಲ್ಲಿ ಯಾರಾದರೂ ಹೋದರೆ ಅಲ್ಲಿ ಕಾಣಬಹುದು. ಕಾಂಗ್ರೆಸ್ಸಿನವರು ಅಧಿಕಾರದಲ್ಲಿದ್ದಾಗ ಒಂದು ಲಕ್ಷ ಜನರು ಫುಟ್‌ಫಾತ್‌ನಲ್ಲಿ ಮಲಗುತ್ತಿದ್ದವರಿಗೆ ವಸತಿ ಸೌಕರ್ಯ ಮಾಡಿಕೊಟ್ಟಿದ್ದರು. ಈಗ ಅಲ್ಲಿ ಸುಮಾರು 15 ಲಕ್ಷ ಜನರು ಫುಟ್‌ಫಾತ್‌ಗಳಲ್ಲಿ ಮಲಗುತ್ತಿದ್ದವರಿಗೆ ವಸತಿ ಸೌಕರ್ಯ ಮಾಡಿಕೊಡಲು ಅವಕಾಶವಾಗಿದೆಯೆಂಬುದು ಕಾಂಗ್ರೆಸ್ ಸರ್ಕಾರ ಬಿಟ್ಟು ಬೇರೆ ಯಾವುದೇ ಸರ್ಕಾರ ಬಂದರೂ ಹೆಚ್ಚು ಕೆಲಸಗಳನ್ನು ಮಾಡಬಹುದೆಂಬುದನ್ನು ಅವರು ತೋರಿಸುತ್ತಿದ್ದಾರೆ. ಆ ರೀತಿಯಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದಾರೆ. ನಾನು ಇನ್ನೂ ಮಾತನಾಡುವುದಕ್ಕೆ ಅನೇಕ ವಿಷಯಗಳು ಇದ್ದುವು. ಕಾಲಾವಕಾಶ ಹೆಚ್ಚು ಇಲ್ಲದಿದ್ದಕ್ಕಾಗಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

1-00 P.M.

## Statement by the Finance Minister *re*: Statement of the Chief Minister about collection of arrears, etc. from poor people.

ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನಶಾಖೆಯ ಮಂತ್ರಿಗಳು).—ಮಾನ್ಯ ಮುಖ್ಯ ಮಂತ್ರಿಗಳು ಈ ಹಿಂದೆ ಮಾಡಿರತಕ್ಕ ಕೆಲವು ಸ್ಟೇಟ್‌ಮೆಂಟುಗಳಲ್ಲಿ ಅವರೇನು ಒಂದು ಅಂಕೀ ಅಂಶಗಳನ್ನು ಕೊಟ್ಟಿದ್ದಾರೆ ಅವುಗಳ ಬಗ್ಗೆ ಕೆಲವು ವಿವರಣೆಗಳನ್ನು ಈ ಮಾನ್ಯ ಸಭೆಗೆ ನಾನು ಕೊಡಬೇಕಾದ್ದು ಅಗತ್ಯವೆಂದು ನಾನು ಭಾವಿಸಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಸಿದ್ಧಪ್ಪನವರು ಈ ಹಿಂದೆ ಮುಖ್ಯ ಮಂತ್ರಿಗಳು ಚಿತ್ರದುರ್ಗದಲ್ಲಿ ಬಂದು ಹೇಳಿಕೆಯನ್ನು ಕೊಡುತ್ತ ಕೋ-ಆಪರೇಟೀವ್ ಸೊಸೈಟಿಗಳಿಂದ ಹಾಲಿ ಯಾರು ಯಾರು ಸಾಲಗಳನ್ನು ಪಡೆದಿದ್ದಾರೋ ಅಂಥವರಲ್ಲಿ ಆ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಯಾರಿಗೆ ಶಕ್ತಿ ಇಲ್ಲವೋ ಅಂಥವರಿಗೆ ಆ ಸಾಲದ ಹಣವನ್ನು ವಸೂಲ್ಮಾಡದೆ ಹಾಗೆ ಬಿಟ್ಟುಬಿಡಲಾಗುತ್ತದೆಂದು ಹೇಳಿದ್ದಾರೆ ಎಂಬುದಾಗಿ ಅವರು ಹೇಳಿದರು. ಆದರೆ ಮುಖ್ಯ ಮಂತ್ರಿಗಳ ಭಾಷಣದ ಉದ್ದೇಶ ಅದಾಗಿರಲಿಲ್ಲ. ಅವರು ಹೇಳಿದ್ದರ ಉದ್ದೇಶ ಹಾಲ ಇರತಕ್ಕ ಓವರ್ ಡ್ಯೂಸ್ ಸಾಲಗಳ ಮೊತ್ತವನ್ನು ಸ್ಟ್ರಿಕ್ಟಾಗಿ ವಸೂಲ್ಮಾಡಲಾಗುತ್ತದೆ. ಆದರೆ ಹಾಗೆ ವಸೂಲ್ಮಾಡತಕ್ಕ ಕಾಲದಲ್ಲಿ ಯಾರಾದರೂ ಬಡವರಿದ್ದರೆ ಅಂಥವರಿಗೆ ತೊಂದರೆಯಾಗದಂತೆ ಅದನ್ನು ವಸೂಲ್ಮಾಡಲಾಗುತ್ತದೆಂದು ಅವರು ಹೇಳಿದ್ದಾರೆ. ಆಫೀಸಿನಲ್ಲಿ ಯಾರ್ಯಾರದು ಎಷ್ಟೆಷ್ಟು ಅರಿಯರ್ಸ್ ಇದೆ ಎಂಬುದನ್ನೆಲ್ಲಾ ಅನಾಲಿಸಿಸ್ ಮಾಡಿ, ಬಡವರಿಗೆ ತೊಂದರೆ ಆಗದಂತೆ ಈ ಓವರ್ ಡ್ಯೂಸುಗಳನ್ನು ವಸೂಲ್ಮಾಡಲಾಗುತ್ತದೆಂದು ಅವರು ಹೇಳಿದ್ದಾರೆ ಅಷ್ಟೇ ವಿನಾ ಆ ಸಾಲದ ಹಣವನ್ನು ಬಿಟ್ಟುಬಿಡುವುದಾಗಿ ಹೇಳಿಲ್ಲ ಎಂಬುದನ್ನು ಸಭೆಗೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಹಿಂದಿನಿಂದ ಸಾಲಗಳನ್ನು ಕೊಟ್ಟಿರತಕ್ಕ ಬಾಬಿನಲ್ಲಿ ವಸೂಲ್ಮಾಡಬೇಕಾಗಿರತಕ್ಕ ಹಣವೆಷ್ಟು ಬಾಕಿ ನಿಂತಿದೆ ಎಂದರೆ ಅದು ಸುಮಾರು 200 ಕೋಟಿರ ಪಾಯಿಗಳಾಗಬಹುದು. ಇದಕ್ಕೆ

(ಶ್ರೀ ಎಂ. ವೈ. ಘೋರ್ಪಡೆ)

ಸಂಬಂಧಪಟ್ಟ ಕ್ಲಾರಿಫಿಕೇಷನ್ನುಗಳನ್ನೆಲ್ಲ ಡೀಟೈಲ್ಡ್ ಸ್ಟೇಟ್‌ಮೆಂಟ್ ಆಫ್ ಲೋನ್ಸ್ ಅಂಡ್ ಅಡ್ವಾನ್ಸಸ್ಸ್ ಮೇಡ್ ಬೈ ಗೌರ್ನ್ಮಮೆಂಟ್ ಎಂಬ ಹೆಡ್ಡಿನಲ್ಲಿ ಫೈನಾನ್ಷಿಯಲ್ ಅಕೌಂಟ್ಸ್ ಫಾರ್ 1969—70, ಪುಟ 174 ರಲ್ಲಿ ತಮಗೆ ದೊರೆಯುತ್ತವೆ. ಅದರ ಪ್ರಕಾರ ನಮ್ಮಲ್ಲಿ ಒಟ್ಟು, ಪುಟ 34 ರಲ್ಲಿ ತೋರಿಸಿರುವಂತೆ ಲೋನ್ಸ್ ಅಂಡ್ ಅಡ್ವಾನ್ಸಸ್ ಬಗ್ಗೆ 1965—1966 ರಿಂದ ಮಾರ್ಚಿ 1970ರವರೆಗೂ ನಿಂತಿರತಕ್ಕ ಓವರ್ ಡ್ಯೂಸ್ ಮೊತ್ತ ಎಷ್ಟೆಂದರೆ 173 ಕೋಟಿ ರೂಪಾಯಿಗಳು. ಆದರೆ ಇತ್ತೀಚಿಗೆ ಇದಿನ್ನೂ ಸ್ವಲ್ಪ ಜಾಸ್ತಿಯಾಗುತ್ತದೆ. ಇದಲ್ಲದೆ ಇನ್ನೂ ಬೇರೆ ಸಾಲಗಳು ವಸೂಲ ಯಾಗದೆ ನಿಂತಿವೆ. 32 ಕೋಟಿ ರೂಪಾಯಿಗಳು ಟ್ಯಾಕ್ಸ್ ಅರಿಯರ್ಸ್ ಬಾಬಿನಲ್ಲಿ ಬಾಕಿ ನಿಂತಿದೆ. ಲೋನ್ಸ್ ಅಂಡ್ ಅಡ್ವಾನ್ಸಸ್ಸ್ ಬಗ್ಗೆ ನಿಂತಿರತಕ್ಕ ಬಾಕಿ 173 ಕೋಟಿ ರೂಪಾಯಿ ಮತ್ತು ಈ ಟ್ಯಾಕ್ಸ್ ಅರಿಯರ್ಸ್ ಬಗ್ಗೆ ನಿಂತಿರತಕ್ಕದ್ದು 32 ಕೋಟಿ ಹೀಗೆ ಇದು ಒಟ್ಟು 201 ಕೋಟಿ ರೂಪಾಯಿ ಆಗುತ್ತದೆ. ಆದರೆ ಇತ್ತೀಚೆಗೆ ಲೋನ್ಸ್ ಅಂಡ್ ಅಡ್ವಾನ್ಸಸ್ಸ್ ಬಗ್ಗೆ ನಿಂತಿರತಕ್ಕದ್ದು 12 ಕೋಟಿ ರೂಪಾಯಿಗಳು. ಟ್ಯಾಕ್ಸ್ ಅರಿಯರ್ಸ್ ಇದೂ ಸೇರಿ ಒಟ್ಟು 45 ಕೋಟಿ ರೂಪಾಯಿ ಆಗುತ್ತದೆ. ಈ ಅಂಶಗಳನ್ನೆಲ್ಲಾ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದಲ್ಲದೆ ಇನ್ನೂ ಕೋ-ಆಪರೇಟೀವ್ ಸೊಸೈಟಿಗಳಿಂದ ಬರಬೇಕಾದ ಅರಿಯರ್ಸ್ ಕೂಡ ಇದೆ. ಸರ್ಕಾರಕ್ಕೆ ಷಾರ್ಟ್ ಟರ್ಮ್ ಮತ್ತು ಮೀಡಿಯಂ ಟರ್ಮ್ ಸಾಲಗಳಿಂದ ಬರಬೇಕಾದ ಹಣ ತಾ. 30-6-1971ಕ್ಕೆ 14ಕೋಟಿ ರೂಪಾಯಿಗಳು. ಇನ್ನು ಇದರ ಜೊತೆಗೆ ಲಾಂಗ್ ಟರ್ಮ್ ಲೋನಿನಿಂದ ಬಾರಬೇಕಾದ್ದು, ತಾ. 15-3-1972ಕ್ಕೆ 4 ಕೋಟಿ 58 ಲಕ್ಷ ರೂಪಾಯಿಗಳು. ಹೀಗೆ ಇದೆಲ್ಲಾ ಒಟ್ಟು 18—19 ಕೋಟಿ ರೂಪಾಯಿಗಳ ಅರಿಯರ್ಸ್ ನಿಂತಿದೆ. ಇಷ್ಟು ಇದರಲ್ಲಿ ಓವರ್ ಡ್ಯೂಸ್ ಇದೆ. ಹೀಗೆ ಸರ್ಕಾರಕ್ಕೆ ಬರಬೇಕಾದ ಓವರ್ ಡ್ಯೂಸ್‌ಮೊಬಲಗು 173 ಕೋಟಿ ರೂಪಾಯಿಗಳುಮತ್ತು ಇನ್ನೊಂದು 45 ಕೋಟಿ ರೂಪಾಯಿಗಳು. ಇಷ್ಟು ಓವರ್ ಡ್ಯೂಸ್ ಐಟಂಗಳು ನಿಂತಿವೆ ಎಂಬುದನ್ನು ನಾನೀಗ ಸ್ಪಷ್ಟಪಡಿಸಿದ್ದೇನೆ.

ಈ ಎಲ್ಲಾ ಓವರ್ ಡ್ಯೂಸುಗಳನ್ನೂ ಎಫಿಶ್ಯೇಂಟಾಗಿ ವಸೂಲ್ಮಾಡುವುದಕ್ಕೆ ಕ್ರಮಗಳನ್ನು ಕೈಗೊಳ್ಳುವಾಗ ಬಡವರಿಗೆ ತೊಂದರೆ ಆಗದಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಈ ಓವರ್ ಡ್ಯೂಸ್ ಹಣದ ವಸೂಲಿಯ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಸಹಕಾರ ನೀಡುತ್ತಾರೆಂದು ನಾನು ನಂಬಿದ್ದೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ದಯಮಾಡಿ ನನಗೆ ಮಾನ್ಯ ಸಚಿವರು ಒಂದು ವಿಷಯವನ್ನು ಸ್ಪಷ್ಟೀಕರಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ಬಾಕೀ ನಿಂತಿರತಕ್ಕ ಹಣದ ವಸೂಲಿಯ ಬಗ್ಗೆ ಮಾತನಾಡುತ್ತಾ ಆ ಸಾಲವನ್ನು ಪಾವತಿಮಾಡುವುದಕ್ಕೆ ಯಾರಿಗೆ ಶಕ್ತಿ ಇಲ್ಲವೋ ಸಾಧ್ಯವಿಲ್ಲವೋ ಅಂಥವರಿಗೆ ಆ ಸಾಲವನ್ನು ಮಾಫೀ ಮಾಡಿ, ಸಾಲ ವಾಪಸ್ ಕೊಡುವುದಕ್ಕೆ ಯಾರಿಗೆ ಶಕ್ತಿ ಇದೆಯೋ ಅಂಥವರಿಂದ ಅದನ್ನು ವಸೂಲ್ಮಾಡುತ್ತೇವೆ ಎಂದು ಹೇಳಿದ್ದರು. ಅದರ ಬಗ್ಗೆ ನಾನು ಒಂದು ವಿವರಣೆಯನ್ನು ಕೇಳಿದಾಗ ಅವರು ನಾವೂ ನೀವು ಒಟ್ಟಿಗೆ ಸೇರಿ ಕುಳಿತುಕೊಂಡು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರೋಣ ಎಂತ ಹೇಳಿದ್ದರು. ಅವರು ಹಾಗೆ ಹೇಳಿರುವಾಗ ಮತ್ತೆ ಈಗ ತಾವು ಅವರು ಹೇಳಿದ್ದ ಹೇಳಿಕೆಗೆ ವ್ಯತಿರಿಕ್ತವಾಗಿರತಕ್ಕ ಇನ್ನೊಂದು ಹೇಳಿಕೆಯನ್ನು ಕೊಡುತ್ತಿರುವುದರ ಔಚಿತ್ಯವಾದರೂ ಏನು? ಮಾನ್ಯ ಮುಖ್ಯ ಮಂತ್ರಿಗಳು ಕೋ-ಆಪರೇಟೀವ್ ಸೊಸೈಟಿಗಳ ಸಾಲವನ್ನು ಕೊಡುವುದಕ್ಕೆ ಯಾರಿಗೆ ಶಕ್ತಿ ಇಲ್ಲವೋ ಅಂಥವರಿಗೆ ಅದನ್ನು ಮಾಫೀಮಾಡುದಾಗಿ ಹೇಳಿದ್ದಾರೆ. ಈಗ ಅದನ್ನು ಬದಲಾಯಿಸಿ ಮಾನ್ಯ ಅರ್ಥ ಸಚಿವರು ಹೀಗೆ ಒಂದು ಹೇಳಿಕೆ ಕೊಡತಕ್ಕದ್ದರ ಉದ್ದೇಶವಾದರೂ ಏನು? ತಾವು ದಯಮಾಡಿ ಆ ಹಿಂದಿನ ಪತ್ರಿಕಗಳನ್ನಾದರೂ ತೆಗೆದು ನೋಡಿ, ತಮಗೇ ಗೊತ್ತಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರ ಹೇಳಿಕೆಯನ್ನು ನೋಡಿದರೆ ಅದರಿಂದ ಸರ್ಕಾರದ ಬಾಕಿಯನ್ನು ವಸೂಲ್ಮಾಡುವುದಕ್ಕೆ ಒಂದು ದೊಡ್ಡ ಪೆಟ್ಟು ಬೀಳುವಂತೆ ಕಾಣುತ್ತದೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯ ಹಾಗಿರಲಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯಕ್ಕೂ ಸರ್ಕಾರದವರ ಅಭಿಪ್ರಾಯಕ್ಕೂ ವ್ಯತ್ಯಾಸವೇನಿಲ್ಲ. ಬಡವರಿಗೆ ತೊಂದರೆಯಾಗದಂತೆ ಬಾಕಿಯನ್ನು ವಸೂಲ್ಮಾಡಲಾಗುತ್ತೆ ಎಂದು ಹೇಳಿರತಕ್ಕದ್ದನ್ನು ಮಾನ್ಯ ಸದಸ್ಯರು ಮಾಫೀ ಎಂದು ಅರ್ಥಮಾಡಿ ಕೊಂಡಿದ್ದಾರೆ. ಆದರೆ ಸರ್ಕಾರದವರ ಅರ್ಥದಲ್ಲಿ ಅದು ಹಾಗಿಲ್ಲ. ಅಷ್ಟೇ ವ್ಯತ್ಯಾಸ. ಇದಕ್ಕಿಂತ ಹೆಚ್ಚಿನ ಹೇಳಿಕೆಯನ್ನು ಈ ಸಂದರ್ಭದಲ್ಲಿ ನಾನು ಕೊಡತಕ್ಕದ್ದು ಅನಗತ್ಯ.

## Statement by the Minister for Agriculture and Forests *re* : Fire Accident in the Cotton Market at Raichur.

ಶ್ರೀ ಕೆ. ಎಚ್. ಪಾಟೀಲ್.—ಕಳೆದ 10 ನೇ ತಾರೀಖಿನ ದಿವಸ ಮಾನ್ಯ ಮುಖ್ಯ ಮಂತ್ರಿಗಳು ರಾಯಚೂರಿನ ಕಾಟನ್ ಮಾರ್ಕೆಟ್‌ಯಾರ್ಡ್ ಬೆಂಕಿ ಆಕಸ್ಮಿಕದ ಘಟನೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದರು. ಆಗ ಅವರಲ್ಲಿ ಆ ಘಟನೆಗೆ ಸಂಬಂಧಪಟ್ಟ ವಿವರಗಳೆಲ್ಲಾ ಇರಲಿಲ್ಲ. ಆ ವೇಳೆಗೆ ಎಷ್ಟು ವಿವರಗಳಿತ್ತೊ ಅಷ್ಟನ್ನು ಆ ದಿವಸ ಅವರು ತಿಳಿಸಿದ್ದರು. ಇತ್ತೀಚೆಗೆ ತಿಳಿದು ಬಂದಿರತಕ್ಕ ಅಂಶಗಳ ಪ್ರಕಾರ ಆ ಅಕಸ್ಮಿಕದಲ್ಲಿ ಬೆಂಕಿಯಿಂದ ಸಂಭವಿಸಿರತಕ್ಕ ಲುಕ್ಸಾನು 12 ಲಕ್ಷ ರೂಪಾಯಿಗಳಿಗೆ ಮೀರದೆಂದು ತಿಳಿದುಬಂದಿದೆ. ಆದರೆ ಅದು ಎಲೆಕ್ಟ್ರಿಸಿಟಿಯ ಷಾರ್ಟ್ ಸರ್ಕ್ಯೂಟಿನಿಂದ ಆದ ಘಟನೆಯಲ್ಲ ಎಂದು ತಿಳಿದುಬಂದಿದೆ. ಅಲ್ಲಿ ಲುಕ್ಸಾನಿಗೆ ಒಳಗಾಗಿರತಕ್ಕ ಒಕ್ಕಲಿಗರಿಗೆ ಏನು ಮಾಡಬೇಕು ಎಂಬುದು ಸರ್ಕಾರದವರ ಪರಿಶೀಲನೆಯಲ್ಲಿದೆ. ಅಲ್ಲದೆ ಒಕ್ಕಲಿಗರು ಯಾರು ಯಾರು ಇನ್‌ಷ್ಯೂರ್ ಮಾಡಿದ್ದಾರೋ ಅಂಥವರಿಗೆ ಆ ಹಣ ಮುಟ್ಟುವಂತೆ ಮಾಡತಕ್ಕ ಧೋರಣೆ ಸರ್ಕಾರಕ್ಕಿದೆ.

## Election of Members to several Legislature Committees and the Senate of the Mysore University Results.

MADAM SPEAKER.—In connection with the elections to several Committees of the House and the Senate of the Mysore University as the number of nominations is equal to the number of Members, the following members are declared elected and there will be no election in this behalf.

### Committee on Public Accounts

Sriyuths :

1. K. H. Ranganath
2. M. Mallappa
3. K. N. Veerappa Gowda
4. H. B. Kenche Gowda
5. H. Puttadasa
6. Smt. Winnifred F. Fernandes

Sriyuths :

7. K. B. Shivaiah
8. G. Rame Gowda
9. R. Gundu Rao
10. H. D. Deve Gowda
11. S. Bangarappa
12. C. M. Arumugam

### Committee on Public Undertakings

Sriyuths :

1. B. Bhaskara Shetty
2. Subash Asture
3. C. N. Patil
4. B. Bhyrappaji
5. U T. Fareed

Sriyuths :

6. Prabhuraj Lingana Gowda
7. M. S. Krishnan
8. Bapu Gowda
9. B. B. Sayanak

(MADAM SPEAKER)

## Committee on Estimates

Sriyuths :

1. H. Linga Reddy
2. V. Masiyappa
3. M. M. Sajjan
4. B. Parameshwarappa
5. B. P. Kadam
6. K. F. Patil
7. B. E. Ramaiah
8. R. S. Patil
9. P. M. Bangi
10. M. H. Jayaprakash Narayan
11. J. P. Sarwesh
12. T. R. Shamanna
13. N. Basavaiah
14. R. Peeranna
15. Vatal Nagaraj

## Committee on Government Assurances

Sriyuths :

1. M. Nanje Gowda
2. T. V. Krishnappa
3. K. R. Honnappa
4. Smt. Damayanthi Boregowda
5. G. C. Patil
6. C. V. Venkatarayappa
7. Raja Pid Nayak
8. P. A. Pawashe

## Committee on Welfare of Scheduled Castes/Scheduled Tribes

Sriyuths :

1. Smt. Sumati Madiman
2. G. Puttaswamy
3. E. E. Waz
4. S. M. Lingappa
5. Smt. Renukarajendran
6. Subash S. Patil
7. D. Poosalingam
8. J. L. Kabade
9. B. Puttaswamaiah

## Committee of Privileges

Sriyuths :

1. Mohammed Ali
2. P. C. Shettar
3. D. Venkataramaiah
4. S. Chandrashekar

Sriyuths :

5. Sannadi Imam Goususaheb
6. N. S. Gurusiddappa
7. K. M. Naganna

## House Committee

Sriyuths :

1. S. Hameed Shah
2. M. R. Jayaram
3. K. R. Srinivasulu Naidu
4. H. R. Sriramulu

Sriyuths :

5. Smt. Addy Saldanha
6. Hanji Shivanna
7. Bettaswamy Gowda
8. H. S. Siddappa

## Committee on Subordinate Legislation

Sriyuths :

1. K. Puttaswamy
2. A. M. Belliappa
3. S. M. Yahya
4. B. G. Banakar

Sriyuths :

5. Prabhakar Telker
6. B. Satyanarayana Singh
7. K. D. Patil
8. P. B. Patil

## Senate of the Mysore University

Sriyuths :

1. S. Puttaswamy
2. C. H. Aswatha Reddy
3. A. M. Suryanarayana Gowda

Sriyuths :

4. M. Veerappa Moily
5. Konandur Lingappa
6. C. Byre Gowda

ಕರ್ನಾಟಕ ರಾಜ್ಯ ಪತ್ರಾಗಾರ ಗ್ರಂಥಾಲಯ
KARNATAKA STATE ARCHIVES LIBRARY



(MADAM SPEAKER)

## Committee on Private Members' Bills and Resolutions

Sriyuths :

1. B. T. Murnal
2. G. R. Sandra
3. Smt. Nagamma Keshava Murthy
4. Smt. Vijaya Desai
5. Digambara Rao Balawant Rao

Sriyuths :

6. T. Tare Gowda
7. Smt. Radha Bhat
8. Kagodu Thimmappa
9. K. M. Doreswamy Naidu
10. H. Mare Gowda.

The House will now adjourn *sine die*.

---

*The House adjourned* sine die *at Fifteen Minutes past One of the Clock.*

---

WD 17387—GPB—500—17 8-1972